

# ಡಾ. ಎಂ.ಎಂ.ಕಲಬುರ್ಗಿ
# ಸಮಗ್ರ ಸಾಹಿತ್ಯ

ಸಂಪುಟ
೧೫

## ವಚನ ಸಾಹಿತ್ಯ : ಭಾಗ-೨



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩



# ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

## ಸಂಪುಟ-೧೫ : ವಚನ ಸಾಹಿತ್ಯ : ಭಾಗ-೭

❖

• ಬಸವಣ್ಣನವರ ಟೀಕಿನ ವಚನಗಳು, ಭಾಗ-೧

❖

ಪ್ರಧಾನ ಸಂಪಾದಕರು

**ಡಾ. ವೀರಣ್ಣ ರಾಜೂರ**

ಧಾರವಾಡ

ಸಂಪಾದಕರು

**ಡಾ. ಪಂಡಿತ ರಾಠೋಡ**

ಧಾರವಾಡ


**ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೦

**COMPLETE WORK OF DR. M.M.KALBURGI**

**VOLUME - 15 :** VACHANA SAHITY : BHAGA-7

Edited by : Dr. Pandith Rathod, Dharwad

Published by : **Dr. P.G. Halakatti Research Centre**
B.L.D.E. Association, Vijayapur, Karnatak

©

First Edition : 2020
Pages : xxxiv + 712=746

Copies: 1000
Price Rs: 370/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : **The Print Point**, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

**ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೧೫–ವಚನ ಸಾಹಿತ್ಯ : ಭಾಗ–೭**

ಸಂಪಾದಕರು : ಡಾ. ಪಂಡಿತ ರಾಠೋಡ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೦
ಪುಟಗಳು: xxxiv + ೭೧೨=೭೪೬

ಪ್ರತಿಗಳು: ೧೦೦೦
ಬೆಲೆ ರೂ: ೩೭೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ಸಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

# ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

## ಸಲಹಾ ಸಮಿತಿ

❖

ಗೌರವಾಧ್ಯಕ್ಷರು

**ಡಾ. ಎಂ. ಬಿ. ಪಾಟೀಲ,** ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

**ಶ್ರೀ ಜಿ. ಕೆ. ಪಾಟೀಲ,** ವಿಜಯಪುರ

ಕಾರ್ಯದರ್ಶಿಗಳು

**ಡಾ. ಎಂ. ಎಸ್. ಮದಭಾವಿ,** ವಿಜಯಪುರ

ಪ್ರಧಾನ ಸಂಪಾದಕರು

**ಡಾ. ವೀರಣ್ಣ ರಾಜೂರ,** ಧಾರವಾಡ

ಯೋಜನಾ ಸಂಯೋಜಕರು

**ಡಾ. ಕೃಷ್ಣ ಕೊಲ್ಹಾರಕುಲಕರ್ಣಿ,** ವಿಜಯಪುರ

❖

ಸಲಹಾ ಸದಸ್ಯರು

**ಡಾ. ಗುರುಲಿಂಗ ಕಾಪಸೆ,** ಧಾರವಾಡ

**ಶ್ರೀ ಶ್ರೀವಿಜಯ ಕಲಬುರ್ಗಿ,** ಧಾರವಾಡ

**ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು**

❖❖

# ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

## ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

# ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

## ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

**ಜೀವನ–ಸಾಧನೆ :**

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹೆಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

**ಸಾಹಿತ್ಯ ರಾಶಿ :**

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು

ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ

ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

**ಸೃಜನ ಸಾಹಿತ್ಯ**

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

**ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :**

**ಶಾಸನ ಸಾಹಿತ್ಯ**

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

**ಶಾಸ್ತ್ರ ಸಾಹಿತ್ಯ**

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

**ಸಂಶೋಧನ ಸಾಹಿತ್ಯ**

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

**ಜಾನಪದ ಸಾಹಿತ್ಯ**

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

**ಲೇಖನ ಸಂಪುಟ**

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

**ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):**

**ಶಾಸನ ಸಾಹಿತ್ಯ**

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

**ದಾಖಲು ಸಾಹಿತ್ಯ**

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

**ವಚನ ಸಾಹಿತ್ಯ**

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

**ಕಾವ್ಯ ಸಾಹಿತ್ಯ**

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

**ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):**

**ಲೇಖನ ಸಂಗ್ರಹಗಳು :**

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

**ಜೀವನ ಚರಿತ್ರೆಗಳು**

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

**ಅಭಿನಂದನ ಗ್ರಂಥಗಳು**

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

**ಇತರೆ**

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

**ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :**

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

## I. ಸ್ವತಂತ್ರ ಕೃತಿ ಸಂಪುಟಗಳು

**ಸಂಪುಟ ೧ : ಶಾಸನ ಸಾಹಿತ್ಯ** **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

**ಸಂಪುಟ ೨ : ಶಾಸ್ತ್ರ ಸಾಹಿತ್ಯ** **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

**ಸಂಪುಟ ೩ : ಸಂಶೋಧನ ಸಾಹಿತ್ಯ** **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

**ಸಂಪುಟ : ೪ ಜನಪದ ಸಾಹಿತ್ಯ** **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ

೨. ಜನಪದ ಮಾರ್ಗ

**ಸಂಪುಟ : ೫ ಸೃಜನ ಸಾಹಿತ್ಯ** **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

## II. ಸಂಪಾದಿತ ಕೃತಿ ಸಂಪುಟಗಳು

**ಸಂಪುಟ ೬ : ಶಾಸನ ಸಾಹಿತ್ಯ** **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

**ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧** **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

**ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨** **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

**ಸಂಪುಟ : ೯ ವಚನ ಸಾಹಿತ್ಯ : ಭಾಗ–೧** **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

**ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨** **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

**ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩** **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

**ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪** **–ಸಂ. ಡಾ. ವೀರಣ್ಣ ರಾಜೂರ**

೧. ವಚನ

**ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫** **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

**ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬** **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

**ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭** **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

**ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮** **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

**ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯** **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

**ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦** **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

**ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧** **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

**ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨** **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

**ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩** **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

**ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪** **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

**ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫** **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

**ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬** **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

**ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭** **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

**ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮** **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

**ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ-೯** —ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

**ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ-೧೦** —ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ-೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ-೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ-೩

**ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ-೧** —ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬರೆಹ-ಬದುಕು

**ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ-೨** —ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

**ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ-೩** —ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

**ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ-೪** —ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

## III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

**ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ-೧** —ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

**ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ-೨** —ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

**ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩** **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

**ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪** **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

**ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫** **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

## IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

**ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧** **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

**ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨** **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

**ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩** **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ

ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

**ಕೃತಜ್ಞತೆಗಳು :**

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ

ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

# ಸಂಯೋಜಕರ ನುಡಿ

**ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳಸ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ

ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಪಂಡಿತ ರಾಠೋಡ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

## ಸಂಪಾದಕರ ನುಡಿ

**ಡಾ. ಪಂಡಿತ ರಾಠೋಡ**

ಜಾಗತಿಕ ಮಟ್ಟದ ಸಾಹಿತ್ಯಕ್ಕೆ ಮೌಲಿಕವಾದ ಕೊಡುಗೆ ನೀಡಿದ ಸಾಹಿತ್ಯ ವಚನಸಾಹಿತ್ಯ. ಇದಕ್ಕೆ ಭದ್ರವಾದ ಬುನಾದಿ ಹಾಕಿದವರು ಬಸವಾದಿ ಶರಣರು. ಇವರ ಗಂಭೀರ ಚಿಂತನೆ, ಹೋರಾಟದ ಫಲವಾಗಿ ಮೂಡಿಬಂದ ಈ ಸಾಹಿತ್ಯ ಕೇವಲ ಮನರಂಜನೆಗಾಗಿ ಅಥವಾ ಉಪದೇಶಕ್ಕಾಗಿರುವ ಸಾಹಿತ್ಯವಲ್ಲ. ಅದು ಹಿಂದಿನ, ಇಂದಿನ ಹಾಗೂ ಮುಂದಿನ ತಲೆಮಾರಿಗೆ ಮಾರ್ಗದರ್ಶನ ಮಾಡುವ ಕೈದೀವಿಗೆ. ಬಸವಾದಿ ಶರಣರು ಇದನ್ನು ಒಂದು ಸಾಹಿತ್ಯವೆಂದಾಗಲೀ, ಶಾಸ್ತ್ರವೆಂದಾಗಲೀ ರಚನೆ ಮಾಡಲಿಲ್ಲ. ಅದು ಪ್ರತಿವ್ಯಕ್ತಿಯ ಜೀವನಾನುಭವದ ಅನುಭಾವವಾಣಿಯಾಗಿ ಸಹಜವಾಗಿ ಹರಿದುಬಂದಿದೆ.

೧೨ನೆಯ ಶತಮಾನದಲ್ಲಿ ವಚನ ಸಾಹಿತ್ಯದ ಜೊತೆಜೊತೆಯಲ್ಲಿ ಅದಕ್ಕೆ ಬರೆದ ಟೀಕಾ ಸಾಹಿತ್ಯವೂ ಹುಟ್ಟಿಕೊಂಡಿತ್ತು ಎಂಬುದಕ್ಕೆ 'ಹತ್ತು ಸಾವಿರ ಗೀತವಹಾಡಿ ಅರ್ಥವಿಟ್ಟಲ್ಲಿ, ಫಲವೇನು? ಮುಟ್ಟುವ ತೆರನನರಿಯದನಕ್ಕ' ಎಂಬಂತಹ ಮಾತುಗಳು ಸೂಚನೆ ನೀಡುತ್ತವೆ. ಅದಕ್ಕೆ ನಿಶ್ಚಿತ ನಿದರ್ಶನವಾಗಿ ೧೫ನೇ ಶತಮಾನದ ನಂತರ ಅನೇಕ ಪುರಾವೆಗಳು ದೊರೆಯುತ್ತವೆ.

ವಿಜಯನಗರದ ಸಂಗಮ ವಂಶದ ಪ್ರೌಢದೇವರಾಯನ ಕಾಲದಲ್ಲಿ ಮಂತ್ರಿ ಜಕ್ಕಣ್ಣ ಮತ್ತು ಮಹಾಲಿಂಗದೇವರಂಥ ಗುರುಗಳ ಆಸಕ್ತಿ ಮತ್ತು ಶ್ರಮದ ಫಲವಾಗಿ ವಚನ ಸಂಗ್ರಹದ ಜೊತೆಗೆ ಸ್ಥಲಕಟ್ಟಿಗೆ ಅನುಗುಣವಾಗಿ ಜೋಡಿಸುವ ಅವುಗಳನ್ನು ಹಲವಾರು ವಿಷಯಾನುಸಾರವಾಗಿ ವಿಂಗಡಿಸಿಕೊಡುವ ಮತ್ತು ಅವುಗಳಿಗೆ ಟೀಕೆ ಬರೆಯುವಂತಹ ಕಾರ್ಯಗಳೂ ಭರದಿಂದ ಸಾಗಿದವು. ಹದಿನೈದನೆಯ ಶತಮಾನದಲ್ಲಿ ಬಂದ ಮಹಾಲಿಂಗದೇವನು (೧೪೨೫) ಪ್ರಭುದೇವರ ಷಟ್ಸ್ಥಲಜ್ಞಾನ ಚಾರಿತ್ರ್ಯದ ವಚನದ ಟೀಕೆ, ಕುಮಾರ ಬಂಕನಾಥನು(೧೪೫೦) ಪ್ರಭುದೇವರ ಷಟ್‌ಸ್ಥಲೋಪದೇಶ ಎಂಬ ವಚನಟೀಕಾಗ್ರಂಥಗಳನ್ನು ರಚಿಸಿದರೆ, ಕಲ್ಲುಮಠದ ಪ್ರಭುದೇವ ಲಿಂಗಲೀಲಾವಿಲಾಸ ಚಾರಿತ್ರ್ಯ ಸಂಯೋಜಿಸಿ ವಚನಗಳಿಗೆ ಟೀಕೆ ಬರೆದ. ಏಕೋತ್ತರಶತಸ್ಥಲ ಟೀಕೆ, ಷಟ್ಸ್ಥಲಸಾರಾಮೃತ ಟೀಕೆ ಹೀಗೆ ಮುಂದೆ ವಚನಟೀಕಾ ಸಾಹಿತ್ಯ ಬೆಳೆದು ಬಂದಿತು. ಅಂತೆಯೇ ಬಸವಣ್ಣನವರ ಷಟ್ಸ್ಥಲವಚನಗಳಿಗೆ ಐದು ಜನರು ಬರೆದ ಟೀಕೆಗಳು ದೊರೆಯುತ್ತವೆ.

ಡಾ.ಎಂ.ಎಂ. ಕಲಬುರ್ಗಿಯವರು ಈ ಐದು ಟೀಕೆಗಳನ್ನು ಒಂದೆಡೆ ಸೇರಿಸಿ ಎರಡು ಸಂಪುಟಗಳಲ್ಲಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇವು ವಚನಸಾಹಿತ್ಯ ಸಂಪಾದನೆಗೆ ಅವರು ಕೊಟ್ಟ ಬಹು ಮಹತ್ವಪೂರ್ಣ ಕೊಡುಗೆಗಳೆನಿಸಿವೆ. ಮೊದಲ ಸಂಪುಟದಲ್ಲಿ ಒಟ್ಟು ೧ ರಿಂದ ೫೨೭ ವಚನಗಳಿಗೆ ಬರೆದ ಟೀಕೆಗಳಿದ್ದರೆ, ಎರಡನೆಯ ಸಂಪುಟದಲ್ಲಿ ೫೨೮ ರಿಂದ ೯೬೧ ವಚನಗಳಿಗೆ ಬರೆದ ಟೀಕೆಗಳಿವೆ. ಜೊತೆಗೆ ಇಲ್ಲಿ ಲಿಂಗಲೀಲಾವಿಲಾಸ ಚಾರಿತ್ರ್ಯ, ಏಕೋತ್ತರಶತಸ್ಥಲ, ವಿಶೇಷಾನುಭವ ಷಟ್‌ಸ್ಥಲ ಕೃತಿಗಳಲ್ಲಿ ದೊರೆಯುವ ಹೆಚ್ಚಿನ ೯೦ ವಚನ ಟೀಕೆಗಳು ಇಂಬು ಪಡೆದಿವೆ. ಇದೆಲ್ಲವನ್ನು ಕೂಡಿಸಿದರೆ ಒಟ್ಟು ೧೦೫೧ ವಚನಗಳಿಗೆ ಟೀಕೆ ದೊರೆತಂತಾಗುತ್ತದೆ.

ಈ ಪೂರ್ವದಲ್ಲಿ ಬಸವಣ್ಣನವರ ವಚನಗಳಿಗೆ ಬರೆದ ಐದು ಟೀಕೆಗಳಲ್ಲಿ ಒಂದು ಮತ್ತು ನಾಲ್ಕನೆಯ ಟೀಕೆಗಳು ರಚನೆಯಾಗಿರುವುದು ಯಾರಿಗೂ ಗೊತ್ತಿರಲಿಲ್ಲ. ಒಂದು, ಮೂರು, ಐದನೆಯ ಟೀಕೆಗಳಿದ್ದ ವಿಷಯ ಗೊತ್ತಿದ್ದರೂ ಸಮಗ್ರವಾಗಿ ಪ್ರಕಟವಾಗಿರಲಿಲ್ಲ. ಒಂದನೆಯ ಟೀಕೆಯ ಆರಂಭದ ೧೦೩ ವಚನಗಳನ್ನು ಮಾತ್ರ ೧೯೫೪ರಲ್ಲಿ ಶ್ರೀವಿರೂಪಾಕ್ಷಪ್ಪ ಚೆನ್ನಪ್ಪ ಯಾಳಗಿ ಅವರು ಪ್ರಕಟಿಸಿದರೆ, ಡಾ. ಎಸ್.ಎಂ. ಹುಣಶ್ಯಾಳ ಅವರು ೧೯೬೧ರಲ್ಲಿ ಕೇವಲ ಭಕ್ತಸ್ಥಲವನ್ನು ಮಾತ್ರ ಪ್ರಕಟಿಸಿದ್ದರು. ಇದನ್ನು ಗಮನಿಸಿದ ಡಾ. ಕಲಬುರ್ಗಿಯವರು ಐದು ಟೀಕೆಗಳನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಎರಡು ಸಂಪುಟಗಳಲ್ಲಿ ಪ್ರಕಟಿಸಿದರು. ೧೯೭೭ರಲ್ಲಿ ಮೊದಲ ಸಂಪುಟ, ೧೯೮೧ರಲ್ಲಿ ಎರಡನೆಯ ಸಂಪುಟ ಶ್ರೀ ಮುರಗೋಡ ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ ಶ್ರೀಬಸವೇಶ್ವರ ಪೀಠದ ಅಡಿಯಲ್ಲಿ ಹೊರಬಂದವು. ಇದರಿಂದ ಬಸವಣ್ಣನ ವಚನಗಳಿಗೆ ಸಂಬಂಧಿಸಿದ ಸಮಗ್ರ ಟೀಕಾಸಾಹಿತ್ಯ ಒಂದೆಡೆ ಸಿಗುವಂತಾಯಿತು.

ಈ ಟೀಕಾ ಗ್ರಂಥಗಳನ್ನು I (ಕರ್ತೃ–?) II (ಕರ್ತೃ–?) III(ಸೋಮಶೇಖರ ಶಿವಯೋಗಿ) IV(ಗುರುಬಸವರಾಜು) V(ಪರ್ವತಶಿವಯೋಗಿ) ಎಂದು ರೋಮನ್ ಅಂಕಿಗಳ ಸಂಕೇತದಿಂದ ಗುರುತಿಸಿದ್ದಾರೆ. ಒಂದೊಂದು ವಚನದ ಕೆಳಗೆ ಟೀಕೆಗೆ ಸಂವಾದಿಯಾಗಿ ಭಿನ್ನಪಾಠಗಳನ್ನು ನೀಡಿದ್ದಾರೆ. ವಚನದ ಪಾಠಾಂತರ ಸೂಚನೆಗೆ ಇಂಗ್ಲಿಷ್ ಅಂಕಿ, ಟೀಕೆಯ ಪಾಠಾಂತರ ಸೂಚನೆಗೆ ಕನ್ನಡ ಅಂಕಿ ಬಳಸಿಕೊಂಡಿದ್ದಾರೆ. ಒಂದು ವಚನ ಮತ್ತು ಅದರ ಟೀಕೆಗಳನ್ನು ಇನ್ನೊಂದು ವಚನ ಮತ್ತು ಅದರ ಟೀಕೆಗಳಿಂದ ಬೇರ್ಪಡಿಸಲು ಸರಳ ರೇಖೆಯನ್ನು, ಟೀಕೆಯಿಂದ ಟೀಕೆಯನ್ನು ಬೇರ್ಪಡಿಸಲು ತುಂಡು ಸರಳ ರೇಖೆಯನ್ನು ಟೀಕೆಯಿಂದ ಪಾಠಾಂತರಗಳನ್ನು ಬೇರ್ಪಡಿಸಲು ಬಿಂದು ಸರಳ ರೇಖೆಯನ್ನು ಬಳಸಿಕೊಂಡಿದ್ದಾರೆ. ಪ್ರಾರಂಭದ ಪ್ರಸ್ತಾವನೆಯಲ್ಲಿ ಪ್ರಾಚೀನ ಟೀಕಾಸಾಹಿತ್ಯ, ಕನ್ನಡದಲ್ಲಿ ಟೀಕಾಸಾಹಿತ್ಯ, ವೀರಶೈವ ಟೀಕಾಸಾಹಿತ್ಯವನ್ನು ಕುರಿತು ವಿವೇಚಿಸಿ, ತರುವಾಯ ಪ್ರತಿಯೊಬ್ಬ ಟೀಕಾಕಾರನ ಹೆಸರು, ಕಾಲ, ದೇಶ, ಸ್ಥಳ ಮೊದಲಾದವನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಜೊತೆಗೆ ಆಯಾ ಟೀಕೆಗಳ ವೈಶಿಷ್ಟ್ಯಗಳನ್ನು ಸಾಧನೆಯನ್ನು ಹಲವಾರು ಉದಾಹರಣೆಗಳ ಮೂಲಕ ತಿಳಿಸಲಾಗಿದೆ. ಕಡೆಯಲ್ಲಿ ವಚನಗಳ ಟೀಕೆಯ ಅಂಕಿ ಅಂಶಗಳ ತೌಲನಿಕ ವಿವರಣೆ ನೀಡಿದ್ದಾರೆ. ಕೊನೆಯಲ್ಲಿ ಈ ಗ್ರಂಥದ ಪರಿಷ್ಕರಣೆ ಕುರಿತು ಬಳಸಿದ ಹಸ್ತಪ್ರತಿಗಳ ವಿವರಗಳನ್ನು ಕೊಡಲಾಗಿದೆ. ಹಾಗೆಯೇ ಗಮನಾರ್ಹವಾದ ಪದಕೋಶವನ್ನು ಎರಡೂ ಸಂಪುಟಗಳಲ್ಲಿ ನೀಡಿದ್ದಾರೆ.

## ಟೀಕಾಕೃತಿಗಳಿಗೆ ಬಳಸಿಕೊಂಡ ಹಸ್ತಪ್ರತಿಗಳ ವಿವರ

**ಮೊದಲನೆಯ ಟೀಕೆ:**

ಮೊದಲನೆಯ ಟೀಕಾಕೃತಿ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಭಾಂಡಾರದಲ್ಲಿರುವ ೪೮೧ನೆಯ ಕ್ರಮಾಂಕಿನ ಕೋರಿಕಾಗದ ಹಸ್ತಪ್ರತಿಯಿಂದ ಪರಿಷ್ಕರಣಗೊಂಡಿದೆ. ಇದರಲ್ಲಿ ೧ರಿಂದ ೪೧೪ ಪುಟಗಳಿವೆ. ಇದಕ್ಕೆ 'ಕ' ಎಂದು ಸಂಕೇತ ಕೊಡಲಾಗಿದೆ. ಇದರಲ್ಲಿ ೯೬೧ ವಚನಗಳಿಗೆ ಟೀಕೆ ಬರೆಯಲಾಗಿದೆ. (ಇದು ಕಲಬುರ್ಗಿಯ ಗುರುಬಸವ ಮಠಕ್ಕೆ ಸೇರಿದ್ದು) ಮತ್ತು ಇದೆ ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಾಂಡಾರದಲ್ಲಿರುವ ೨೭೯೪ ಕ್ರಮಾಂಕಿನ ಹಸ್ತಪ್ರತಿಯನ್ನು ಪಾಠಾಂತರ ಪ್ರತಿಯನ್ನಾಗಿ ಬಳಸಿಕೊಂಡಿದ್ದಾರೆ. ಇದರಲ್ಲಿ ೯೫೮ ವಚನಗಳಿಗೆ ಟೀಕೆ ಬರೆಯಲಾಗಿದೆ. ಇದಕ್ಕೆ 'ಗ' ಎಂದು ಸಂಕೇತಕೊಡಲಾಗಿದೆ.

ಪ್ರಸ್ತುತ ಈ ಟೀಕೆಯ ಕರ್ತೃ ಅಜ್ಞಾತವೆಂದು ಡಾ. ಕಲಬುರ್ಗಿಯವರು ಹೇಳಿದ್ದರು. ಆದರೆ ಅನಂತರ ಎಸ್. ಶಿವಣ್ಣನವರು ಇದರ ಟೀಕಾಕಾರ ಹುಮನಾಬಾದಿನ ನಿರಂಜನಸ್ವಾಮಿ ಎಂಬುದಾಗಿ ಗುರುತಿಸಿದರು.(ಡಾ. ಸಿ. ನಾಗಭೂಷಣ– ವೀರಶೈವ ಸಾಹಿತ್ಯದ ಕೆಲವು ಒಳನೋಟಗಳು –ಪುಟ–೧೮೦)

ಈ ಟೀಕೆಯಲ್ಲಿ ತುಂಗಭದ್ರೆ, ಹಂಪೆಯ ವಿರೂಪಾಕ್ಷ, ಕೊಟ್ಟೂರು ಮುಂತಾದ ಜಿಲ್ಲೆ, ತಾಲೂಕುಗಳಿಗೆ ಸಂಬಂಧಿಸಿದ ಪದಗಳ ಉಲ್ಲೇಖವನ್ನು ನೋಡಿದರೆ ಈ ಟೀಕಾಕಾರ ಮೂಲತಃ ಬಳ್ಳಾರಿ ಜಿಲ್ಲೆಯವನೆಂದು, ಈತ ಕೆಲ ಕಾಲದ ಬಳಿಕ ಹುಮನಾಬಾದಿನ ವಿರಕ್ತಮಠಕ್ಕೆ ಹೋಗಿರುವ ಸಾಧ್ಯತೆ ಇರುವುದನ್ನು, ಸಿದ್ಧವೀರಸ್ವಾಮಿ ಕೃತ ಮುಕ್ತಿಕಂಠಾಭರಣ ಹೆಸರಿನ ವಚನ ಸಂಕಲನ ಗ್ರಂಥವನ್ನು ಆಧರಿಸಿ ಕಲಬುರ್ಗಿಯವರು ತಮ್ಮ (ಮಾರ್ಗ: ಸಂಪುಟ–೧–ಪುಟ–೩೭೧) ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಹೀಗಾಗಿ ಈ ಟೀಕೆಯ ಕರ್ತೃ ಅಜ್ಞಾತನಾಗಿರದೆ ಹುಮನಾಬಾದ ನಿರಂಜನ ಸ್ವಾಮಿಯೆಂದು ಹೇಳಬಹುದಾಗಿದೆ.

**ಎರಡನೆಯ ಟೀಕೆ:**

ಈ ಟೀಕೆಯನ್ನು ಸಂಪಾದಿಸಲು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದ ೬೧೫ ನೆಯ ಕ್ರಮಾಂಕಿನ ತಾಳೆಪ್ರತಿ ಮತ್ತು ಎಸ್.ಆರ್. ಗುಂಜಾಳ ಅವರಲ್ಲಿದ್ದ ಕೋರಿಕಾಗದ ಪ್ರತಿಯನ್ನು ಬಳಸಿಕೊಂಡಿದ್ದಾರೆ. ಕನ್ನಡ ಅಧ್ಯಯನಪೀಠದ ಪ್ರತಿಗೆ 'ಚ' ಎಂದು ಸಂಕೇತಕೊಡಲಾಗಿದೆ. ಇದರಲ್ಲಿ ೯೫೬ ವಚನಗಳನ್ನು ಬರೆದಿದ್ದರೂ ಟೀಕೆ ಇರುವುದು ೩೧೪ ವಚನಗಳಿಗೆ ಮಾತ್ರ. ಈ ಟೀಕೆಯ ಹೆಸರು ಮತ್ತು ಟೀಕಾ ಕರ್ತೃವಿನ ಹೆಸರು ಇನ್ನೂ ನಿಗೂಢವಾಗಿದೆ ಎಂದು ಹೇಳಿದ್ದಾರೆ. 'ಚ' ಪ್ರತಿಯ ಆರಂಭದಲ್ಲಿ ಕವಿ ಮತ್ತು ಟೀಕೆಯ ಹೆಸರು ನಮೂದಾಗಿಲ್ಲ. ಈ ಪ್ರತಿಯ ಅಂತ್ಯದಲ್ಲಿ ಮಾತ್ರ ಷಟ್‌ಸ್ಥಲ ಆಚಾರ್ಯನಾದ ಸಿದ್ಧೇಶ್ವರಸ್ವಾಮಿ ಅವರ ಬೋಧಾಪುತ್ರರಾದ ಗೂಳೂರ ಸಿದ್ಧಲಿಂಗಸ್ವಾಮಿಗಳು ಅವರ ಬೋಧಾಪುತ್ರರಾದ ಕಟ್ಟಿಗೆಹಳ್ಳಿ ಸ್ವಾಮಿಗಳು ಅವರ ಬೋಧಾಪುತ್ರರಾದ ರೇವಣಸಿದ್ಧಸ್ವಾಮಿಗಳು ಎಂದು ಹೇಳಿದ ಬಳಿಕ ಕೃತಿ ನಿಂತು ಬಿಡುತ್ತದೆ.

**ಮೂರನೆಯ ಟೀಕೆ:**

ಈ ಟೀಕೆಯ ಕರ್ತೃ ಸೋಮಶೇಖರ ಶಿವಯೋಗಿ. ಇದರಲ್ಲಿ ೩೪೪ ವಚನಗಳಿಗೆ ಟೀಕೆ ಬರೆಯಲಾಗಿದೆ. ಇದನ್ನು ಸಂಪಾದಿಸಲು ದಾವಣಗೆರೆಯ ಎಸ್. ಉಮಾಪತಿ ಅವರ ಬಳಿ ಇದ್ದ 'ಟ' ಮತ್ತು 'ಡ' ಸಂಕೇತದ ಎರಡು ತಾಳೆಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಈ ಟೀಕಾಕಾರನೇ ತನ್ನ ಕೃತಿಯಲ್ಲಿ 'ಬಸವರಾಜದೇವರ ಷಟ್ಸ್ಥಲ ವಚನದ ಘಟ್ಟಿ ಘಟ್ಟಿ ನುಡಿಗಳ ಬರವುದಕ್ಕೆ ಶುಭಮಸ್ತು' ಎಂಬುದಾಗಿ ಹೇಳಿಕೊಂಡಿರುವುದರಿಂದ ಕೇವಲ ಘಟ್ಟಿ(ಬೆಡಗಿನ) ವಚನಗಳಿಗೆ ಮಾತ್ರ ಟೀಕೆಯನ್ನು ಬರೆದಿದ್ದಾನೆಂದು ತಿಳಿದುಬರುತ್ತದೆ. ಈತನ ಕಾಲದ ಬಗ್ಗೆ ಮತ್ತು ಊರಿನ ಬಗ್ಗೆ ಇರುವ ಭಿನ್ನಾಭಿಪ್ರಾಯಗಳನ್ನು ಕುರಿತು ಚರ್ಚಿಸಿದ್ದಾರೆ. ಈತನ ಟೀಕೆಯ ಮಾದರಿಗಳನ್ನು ಡಾ. ಕಲಬುರ್ಗಿಯವರು ಹೀಗೆ ಗುರುತಿಸಿದ್ದಾರೆ. ಶುದ್ಧವಾಚ್ಯಾರ್ಥದಲ್ಲಿರುವ ಪ್ರತಿಪದಾರ್ಥ, ವಾಚ್ಯಾರ್ಥದಲ್ಲಿರುವ ವಿವರಣ ರೂಪದ ಪ್ರತಿಪದದ ಅರ್ಥ, ತಾತ್ವಿಕ ಅರ್ಥ, ತಾತ್ಪರ್ಯಾರ್ಥ.

**ನಾಲ್ಕನೆಯ ಟೀಕೆ:**

ಈ ಟೀಕೆಯನ್ನು ಮಹಾಲಿಂಗಪುರದ ಮಹಾಲಿಂಗೇಶ್ವರ ಮಠಕ್ಕೆ ಸೇರಿದ ಸದ್ಯ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಲ್ಲಿ ಇರುವ ೧೦೭ ನೆಯ ಕ್ರಮಾಂಕದ ಏಕೈಕ ತಾಳೆಪ್ರತಿಯನ್ನು ಬಳಸಿಕೊಂಡು ಸಂಪಾದಿಸಿದ್ದಾರೆ. ಇದಕ್ಕೆ 'ತ' ಪ್ರತಿಯೆಂದು ಸಂಕೇತ ಕೊಟ್ಟಿದ್ದಾರೆ. ಇತಿವೃತ್ತದ ಕುರಿತಂತೆ ಹೆಚ್ಚಿನ ಮಾಹಿತಿಗಳು ಇದುವರೆಗೆ ಲಭ್ಯವಾಗಿಲ್ಲವೆಂದು ದಾಖಲಿಸಿದ್ದಾರೆ. ಆದರೆ ಇದರ ಟೀಕಾಕಾರನ ಹಸ್ತಪ್ರತಿಯ ಕೊನೆಯಲ್ಲಿ ಬರುವ 'ಶ್ರೀ ರಾಕ್ಷಸನಾಮ ಸಂವತ್ಸರದ ಪುಷ್ಯಮಾಸದ ಬಹುಳ ಆದಿಚತುರ್ದಶಿ ದಿವ್ಯವಾರದಲಿ ಟೀಕು ಸಮಾಪ್ತ ಮಂಗಳಮಹಾಶ್ರೀಶ್ರೀ' ಎಂಬ ಉಲ್ಲೇಖವು ಕಾಲನಿರ್ದೇಶನಕ್ಕೆ ನೆರವಾಗುತ್ತದೆಂದು ಹೇಳಿದ್ದಾರೆ. ಈತನು ಸೋಮಶೇಖರ ಶಿವಯೋಗಿಗೆ ಸ್ವಲ್ಪ ಪ್ರಾಚೀನನಾಗಿರುವನು. ಅಂದರೆ ೧೭ನೆಯ ಶತಮಾನಕ್ಕೆ ಸೇರಿದವನಾಗುತ್ತಾನೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದು ಬಸವಣ್ಣನವರ ಷಟ್ಸ್ಥಲ ವಚನಗಳು ಕೃತಿಯ ಪಿಂಡಸ್ಥಲದಿಂದ ಐಕ್ಯ ಸ್ಥಲದವರೆಗಿನ ೩೭೪ ವಚನಗಳನ್ನು ಆಯ್ದು ಸೇರಿಸಿದ ಸಂಕಲನ ಕೃತಿಯಾಗಿದೆ. ಇದನ್ನು ಡಾ. ರಾಜೂರ ಅವರು ಪ್ರತ್ಯೇಕಿಸಿ ಪರಿಷ್ಕರಿಸಿ ಸ್ವತಂತ್ರ ಕೃತಿರೂಪದಲ್ಲಿ ೨೦೧೧ರಲ್ಲಿ ಗದುಗಿನ ತೋಟದಾರ್ಯ ಮಠದಿಂದ ಪ್ರಕಟಿಸಿದ್ದಾರೆ.

**ಐದನೆಯ ಟೀಕೆ:**

ಪರ್ವತ ಶಿವಯೋಗಿಯ ಈ ಟೀಕೆಯನ್ನು ಕಲಬುರ್ಗಿಯವರು ಮೈಸೂರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿರುವ ೧೦೪೯ನೆಯ ಕ್ರಮಾಂಕದ ತಾಳೆಪ್ರತಿಯನ್ನು ಬಳಸಿಕೊಂಡು ಸಂಪಾದಿಸಿದ್ದಾರೆ. ಇದರಲ್ಲಿ ಒಟ್ಟು ೨೦೨ ವಚನಗಳಿಗೆ ಟೀಕೆ ಬರೆಯಲಾಗಿದೆ. ಇದರ ಪ್ರಸ್ತಾವನೆಯಲ್ಲಿ ಪರ್ವತಶಿವಯೋಗಿಯ ಪರಿಚಯವನ್ನು ಸ್ಥೂಲವಾಗಿ ಮಾಡಿಕೊಟ್ಟಿದ್ದಾರೆ. ಲಭ್ಯಹಸ್ತಪ್ರತಿಯ ೧೭ನೆಯ ಪತ್ರದಿಂದ ಮುಂದಿನ ಪತ್ರಗಳಲ್ಲಿ ಬಸವೇಶ್ವರನ ವಚನದ ನುಡಿಗಳು ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಾರಂಭವಾದ ಆಯ್ದ ಕೆಲವು ವಚನಗಳಿಗೆ ಬರೆದ ಬೇರೊಂದು ಬಗೆಯ ಅಸ್ಪಷ್ಟ ಟೀಕೆಯಿದೆ ಎಂದು ಹೇಳಿದ್ದಾರೆ. ಪ್ರಸ್ತುತ ಸಂಪಾದನೆಯಲ್ಲಿ ಈ ಅಸ್ಪಷ್ಟ ಟೀಕೆಯನ್ನು ಬಳಸಿಕೊಂಡಂತೆ ಕಾಣುವುದಿಲ್ಲ.

## ಬಸವಣ್ಣನವರ ಟೀಕಿನ ವಚನಗಳ ವೈಶಿಷ್ಟ್ಯ

ಒಟ್ಟಾರೆಯಾಗಿ, ಬಸವಣ್ಣನವರ ವಚನಗಳಿಗೆ ರಚನೆಯಾದ ಪಂಚಟೀಕೆಗಳು ಲೌಕಿಕದಿಂದ ಆರಂಭವಾದರೂ ಪಾರಮಾರ್ಥದಲ್ಲಿ ಮುಕ್ತಾಯಗೊಳ್ಳುತ್ತವೆ. ವಚನಗಳಲ್ಲಿಯ ಸೃಜನಶೀಲವಾದ ಭಾವಸ್ಪರ್ಶವುಳ್ಳ ರಸಾನುಭವ ಉಂಟುಮಾಡುವ ಅಂಶಗಳು ಟೀಕು ರಚನೆಯಿಂದಾಗಿ ಮೂಲಸ್ವಾರಸ್ಯವನ್ನು ಕಳಚಿಕೊಂಡು ನೀರಸಗೊಂಡಿವೆ. ಮೂಲ ವಚನದ ಓದಿನಲ್ಲಿ ಸಿಗುವ ಅನುಭವ ಸಂತೋಷ ಟೀಕಿನಿಂದಾಗಿ ಮಾಯವಾಗಿ ಅತೃಪ್ತಿಯನ್ನುಂಟು ಮಾಡುತ್ತದೆ. ಅಂದರೆ ಜಂಗಮರೂಪಿ ವಚನಗಳನ್ನು ಸ್ಥಾವರಗೊಳಿಸಿದಂತಹ ಅನುಭವ ಕೆಲವೊಂದು ಟೀಕುಗಳಿಂದ ವೇದ್ಯವಾಗುತ್ತದೆ. ಒಟ್ಟಾರೆಯಾಗಿ ಬಸವಣ್ಣನವರ ಟೀಕಿನ ವಚನಗಳಿಂದ ಲಿಂಗಾಯತಧರ್ಮದ ತಾತ್ವಿಕ ಸಿದ್ಧಾಂತವನ್ನು ಅರಿಯಲು ಸಹಾಯಕವಾಗಿದೆ. ವಚನಕಾರರ ವೈಚಾರಿಕ, ಐತಿಹಾಸಿಕ, ಸಾಂಸ್ಕೃತಿಕ ಒಳನೋಟವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ವೈವಿಧ್ಯತೆ ಇಲ್ಲದ ಟೀಕುಗಳಿಂದ ಓದುಗರಿಗೆ ಬೇಸರವೆನಿಸಿದರೂ ಶಬ್ದಾರ್ಥ, ವಾಕ್ಯಾರ್ಥ ಮಾದರಿಯ ಟೀಕುಗಳಿಂದ ಕನ್ನಡ ಭಾಷೆಯ ವೈಶಿಷ್ಟ್ಯ ಮತ್ತು ಶಬ್ದಭಂಡಾರದ ವಿಪುಲತೆಯನ್ನು ಅರಿಯಲು ನೆರವಾಗುತ್ತದೆ.

### ಪರಿಷ್ಕರಣೆ

ಡಾ. ಕಲಬುರ್ಗಿಯವರು ಸಂಪಾದಿಸಿದ ಬಸವಣ್ಣನವರ ಟೀಕಿನ ವಚನಗಳು ಕೃತಿಯ ಎರಡು ಸಂಪುಟಗಳನ್ನು ಯಥಾವತ್ತಾಗಿ ಮರು ಮುದ್ರಣಗೊಳಿಸಲಾಗಿದೆ. ಒಂದು ಮತ್ತು ಎರಡನೆಯ ಟೀಕುಗಳ ಕರ್ತೃ ಅಜ್ಞಾತವೆಂದು ಗುರುತಿಸಿದ್ದರು. ಇತ್ತೀಚಿನ ಸಂಶೋಧನೆಯ ಹಿನ್ನೆಲೆಯಲ್ಲಿ ಅವುಗಳ ಟೀಕಾಕಾರರು ಯಾರೆಂಬುದನ್ನು ಎಸ್. ಶಿವಣ್ಣ ಮತ್ತು ವೀರಣ್ಣ ರಾಜೂರ ಅವರು ಶೋಧಿಸಿ ತೆಗೆದಿದ್ದಾರೆ. ಅದನ್ನು ಇಲ್ಲಿ ಎತ್ತಿ ತೋರಿಸಲಾಗಿದೆ. ಅಲ್ಲಲ್ಲಿ ತಪ್ಪಾಗಿರುವ ಅಕ್ಷರಗಳನ್ನು ತಿದ್ದುಪಡಿ ಮಾಡಲಾಗಿದೆ. ಕಲಬುರ್ಗಿಯವರು ತುಂಬ ಪರಿಶ್ರಮದಿಂದ ಸಿದ್ಧಪಡಿಸಿದ ಮಹತ್ವದ ಸಂಪಾದನ ಕೃತಿಯಾಗಿರುವ ಇದನ್ನು ಬಹುಮಟ್ಟಿಗೆ ಶುದ್ಧರೂಪದಲ್ಲಿ ಪ್ರಕಟಿಸಲು ಪ್ರಯತ್ನಿಸಲಾಗಿದೆ.

### ಕೃತಜ್ಞತೆಗಳು

ಈ ಯೋಜನೆಯಲ್ಲಿ ನನಗೆ ಅವಕಾಶ ಕಲ್ಪಿಸಿ ಬಸವಣ್ಣನವರ ಟೀಕಿನ ವಚನಗಳು ಎರಡು ಸಂಪುಟಗಳನ್ನು ಸಂಪಾದಿಸಲು ಅನುವು ಮಾಡಿಕೊಟ್ಟ ಈ ಯೋಜನೆಯ ಪ್ರಧಾನ ಸಂಪಾದಕರಾದ ಮತ್ತು ವಚನ ಸಾಹಿತ್ಯ ಸಂಶೋಧಕರಾದ ಡಾ. ವೀರಣ್ಣ ರಾಜೂರ ಅವರಿಗೆ ಕೃತಜ್ಞತೆಗಳು. ಅಕ್ಷರ ಸಂಯೋಜನೆ ಮಾಡಿದ ಸಾಹಿತ್ಯ ದಂಪತಿಗಳಾದ ಡಾ. ಹನುಮಂತ ಮೇಲಿನಮನಿ ಮತ್ತು ಸರಸ್ವತಿದೇವಿ ಭಗವತಿ ಅವರಿಗೆ ಕರಡು ತಿದ್ದುವಲ್ಲಿ ನೆರವಾದ ಸಂಶೋಧನ ವಿದ್ಯಾರ್ಥಿ ರಾಜು ಕೂಡಗಿ ಇವರೆಲ್ಲರಿಗೂ ಪ್ರೀತಿಯಿಂದ ನೆನೆಯುತ್ತೇನೆ.

❖❖

# ಬಸವಣ್ಣನವರ ಟೀಕಿನ ವಚನಗಳು

[ಸಂಪುಟ : ಒಂದು]

ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಶ್ರೀ. ಮುರುಗೋಡ ಮಹಾಂತಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ
ಶ್ರೀ ಬಸವೇಶ್ವರಪೀಠ
ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೯

*

# ಪ್ರಸ್ತಾವನೆ

ಬಸವಣ್ಣನವರ ಚರಿತ್ರೆ–ಸಾಹಿತ್ಯಗಳನ್ನು ಅರ್ಥಮಾಡಿಕೊಳ್ಳಲು, ಅರ್ಥಮಾಡಿಕೊಡಲು ಕಳೆದ ಎಂಟುನೂರು ವರ್ಷಗಳಿಂದ ನಿರಂತರ ಪ್ರಯತ್ನಗಳು ನಡೆದಿವೆ. ಆದರೆ ಹೀಗೆ ಪ್ರಯತ್ನಮಾಡಿದವರ ವೈಯಕ್ತಿಕ ಪರಿಮಿತಿ ಮತ್ತು ಆಯಾ ಕಾಲದ ಸಮಾಲೋಚನದೃಷ್ಟಿ ಕಾರಣವಾಗಿ, ಈ ಕಾರ್ಯಗಳು ಇಂದಿಗೂ ಅಸಮರ್ಪಕ ಸ್ಥಿತಿಯಲ್ಲಿ ಉಳಿದುಕೊಂಡಿವೆ ಎಂಬುದನ್ನು ಮೊದಲು ಒಪ್ಪಿಕೊಳ್ಳಬೇಕು.

ಬಸವಣ್ಣನವರ ಚರಿತ್ರೆಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಹರಿಹರ, ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಾಥರಿಂದಾಗಿ ಎರಡು ವಿಭಿನ್ನ ಮಾರ್ಗಗಳು ರೂಪುಗೊಂಡವು. ಸಿಂಗಿರಾಜನದು ಈ ಎರಡರ ಸಮನ್ವಯ ಮಾರ್ಗ. ಹೀಗೆ ಮೂರು ವಿಧದಲ್ಲಿ ಸಿಗುವ ಬಸವಚರಿತ್ರೆಗಳಲ್ಲಿ ಪಾಲ್ಕುರಿಕೆ ಸೋಮನಾಥನ ಮಾರ್ಗವೇ ಹೆಚ್ಚು ಪ್ರಚಾರದಲ್ಲಿದೆ.

ಬಸವಣ್ಣನವರ ಚರಿತ್ರೆಯನ್ನು ಕೆಲವರು ಭಾಗಶಃ, ಕೆಲವರು ಇಡಿಯಾಗಿ ಚಿತ್ರಿಸಿದ್ದು, ಇವರು ಚರಿತ್ರೆಯೊಂದಿಗೆ ಪವಾಡ–ಅತ್ಯುಕ್ತಿಗಳನ್ನು ಬೆರಸಿದರು: ಕೆಲವರಂತೂ ಮತದ್ವೇಷ ಕಾರಣವಾಗಿ ವಿಕಾರಗೊಳಿಸಿದರು. ಹೀಗೆ ಅವರ "ವ್ಯಕ್ತಿಚರಿತ್ರೆ"ಯನ್ನು ಬರೆಯುವಲ್ಲಿ, ಅದೇ ರೀತಿ ಅವರ "ವ್ಯಕ್ತಿತ್ವಚಿತ್ರ"ವನ್ನು ಬಿಡಿಸುವಲ್ಲಿ ಎಲ್ಲ ಕೈಗಳೂ ಸೋತುಹೋಗಿವೆ. ಕಾರಣ ಬಸವಣ್ಣನವರನ್ನು ಸರ್ವಸಮಗ್ರವಾಗಿ, ಸರ್ವ ಸಮರ್ಪಕವಾಗಿ ಪ್ರಕಟಿಸುವ ಒಂದು ದಾರ್ಶನಿಕ ಮಹಾಕಾವ್ಯವೊಂದು ಇನ್ನೂ ಹುಟ್ಟಿಬರಬೇಕಾಗಿದೆ.

ಶಿವಶರಣರ ಸಾಹಿತ್ಯರಾಶಿಯಲ್ಲಿ ಬಸವಣ್ಣನವರ ಸಾಹಿತ್ಯ ತುಂಬ ಮಹತ್ವವುಳ್ಳದು. ಹೀಗಾಗಿ ಅದನ್ನು ಶಿವಕವಿಗಳು, ಶಿವಶರಣರು ಅಭ್ಯಸಿಸಿದ ಬಗೆ ಮೂರು ತೆರನಾಗಿದೆ:

೧. ವಚನಗಳಲ್ಲಿ ಮಿಂಚುವ ಸೂಚನೆಗಳನ್ನಾಧರಿಸಿ ಬಸವಣ್ಣನವರ ಜೀವನ ಘಟನೆಗಳನ್ನು ಹೆಣೆಯುವುದು. ಉದಾ: ಹರಿಹರನ ಬಸವರಾಜದೇವರ ರಗಳೆ, ಭೀಮಕವಿಯ ಬಸವಪುರಾಣ, ಸಿಂಗಿರಾಜನ ಸಿಂಗಿರಾಜಪುರಾಣ ಇತ್ಯಾದಿ.

೨. ಬಸವಣ್ಣನವರ ವಚನಗಳನ್ನು ಇಲ್ಲವೆ ಅವುಗಳೊಂದಿಗೆ ಮಿಕ್ಕವರ ವಚನಗಳನ್ನು ಒಂದು ಕ್ರಮದಲ್ಲಿ ಜೋಡಿಸಿ 'ಸಂಪಾದನ ಕಾರ್ಯ'ವನ್ನು ನಿರ್ವಹಿಸುವುದು. ಉದಾ: ಬಸವಣ್ಣನವರ ಷಟ್ಸ್ಥಲದ ವಚನಗಳು, ಶೂನ್ಯಸಂಪಾದನೆ, ಏಕೋತ್ತರ ಶತಸ್ಥಲ ಇತ್ಯಾದಿ.

೩. ಮೇಲೆ ಹೇಳಿದ ಸ್ವತಂತ್ರಸಂಕಲನ ಇಲ್ಲವೆ ಮಿಶ್ರಸಂಕಲನಗಳಿಗೆ ಟೀಕೆ, ಟಿಪ್ಪಣಿ, ವ್ಯಾಖ್ಯಾನಗಳನ್ನು ಬರೆಯುವುದು. ಉದಾ: ಬಸವಣ್ಣನವರ ವಚನ ಟೀಕೆ, ಲಿಂಗಲೀಲಾವಿಲಾಸ ಚಾರಿತ್ರ, ವಿಶೇಷಾನುಭವ ಷಟ್ಸ್ಥಲ ಇತ್ಯಾದಿ.

"ಬಸವಣ್ಣನವರ ಟೀಕಿನ ವಚನಗಳು" ಇವುಗಳಲ್ಲಿ ಮೂರನೆಯ ವಿಧಾನಕ್ಕೆ ಸಂಬಂಧಪಟ್ಟಿದ್ದು, ಈ ವರೆಗೆ ಐದು ಜನರು ಈ ಕ್ಷೇತ್ರದಲ್ಲಿ ದುಡಿದುದು ಬೆಳಕಿಗೆ ಬಂದಿದೆ.

## • ಟೀಕಾಸಾಹಿತ್ಯ •

ಸೃಜನಸಾಹಿತ್ಯವನ್ನು ಹಿಂಬಾಲಿಸಿ ಹುಟ್ಟುತ್ತದೆ, ವಿಮರ್ಶನ ಸಾಹಿತ್ಯ. ಅಂದರೆ ಅದು ಒಂದು ಕೃತಿಯ ಅರ್ಥ-ಭಾವ ಇತ್ಯಾದಿಗಳ ಪದರವನ್ನು ಬಿಚ್ಚಿಬಿಚ್ಚಿ ತೋರಿಸುತ್ತದೆ. ಇಂಥ ವಿಮರ್ಶನ ವರ್ಗಕ್ಕೆ ಸೇರುತ್ತದೆ, ಟೀಕಾಸಾಹಿತ್ಯ. ಕೃತಿಹೃದಯವನ್ನು ತೆರೆದು ತೋರಿಸುವ ಈ ಸಾಹಿತ್ಯದಲ್ಲಿ ಅನೇಕ ವಿಧಾನಗಳಿವೆ. ಅವುಗಳನ್ನು ಟೀಕೆ, ಟಿಪ್ಪಣಿ, ವ್ಯಾಖ್ಯಾನ, ಭಾಷ್ಯ, ವಿವರಣೆ ಎಂದು ಮುಂತಾಗಿ ಭಾರತೀಯರು ಹೆಸರಿಟ್ಟು ಕರೆದಿದ್ದು, ಇವುಗಳಲ್ಲಿಯೇ ಮತ್ತೆ ಒಳವಿಧಾನಗಳಿರುವುದನ್ನು ನೆನೆದರೆ ಗ್ರಂಥದುರ್ಗವನ್ನು ಪ್ರವೇಶಿಸುವವರಿಗೆ ಇವು ಮಹಾದ್ವಾರ-ಉಪದ್ವಾರಗಳಂತೆ ನೆರವಾಗುವವೆಂದು ಸ್ಪಷ್ಟವಾಗುತ್ತದೆ. ಇವುಗಳ ಸ್ವರೂಪ, ಉದ್ದೇಶ ಇತ್ಯಾದಿಗಳ ತಿಳಿವಳಿಕೆ ಒಂದು ಸ್ವತಂತ್ರ ಅಭ್ಯಾಸವೇ ಸರಿ.

ಭಾರತೀಯಸಾಹಿತ್ಯದಲ್ಲಿ ಸಂಸ್ಕೃತ ಪ್ರಾಕೃತಕೃತಿಗಳಿಗೆ ಬರೆದ ಟೀಕಾಸಾಹಿತ್ಯ ವಿಪುಲವೂ ಶ್ರೀಮಂತವೂ ಆಗಿದೆ. ಪತಂಜಲಿಯ ಮಹಾಭಾಷ್ಯ, ಸಾಯಣಾಚಾರ್ಯರ ವೇದಭಾಷ್ಯ, ಸಮಂತಭದ್ರನ ಗಂಧಹಸ್ತಿಮಹಾಭಾಷ್ಯ (ಅನುಪಲಬ್ಧ), ಮಲ್ಲಿನಾಥನ ಕಾಳಿದಾಸ ಕೃತಿ ಪಂಚಕಟೀಕಾ ಮೊದಲಾದುವು ಟೀಕಾಸಾಹಿತ್ಯದ ಸುಪ್ರಸಿದ್ಧ ಉದಾಹರಣೆಗಳೆನಿಸಿವೆ.

## • ಕನ್ನಡದಲ್ಲಿ ಟೀಕಾಸಾಹಿತ್ಯ •

ಸಮಗ್ರ ಕನ್ನಡಸಾಹಿತ್ಯದಲ್ಲಿ ಸೃಜನಸಾಹಿತ್ಯ, ಸಂಕಲನಸಾಹಿತ್ಯದ ಜೊತೆಗೆ ಟೀಕಾಸಾಹಿತ್ಯವೂ ಸಮೃದ್ಧವಾಗಿ ಬೆಳೆದುಬಂದಿದೆ. ಯಾವುದೇ ಭಾಷೆಯ ಸಾಹಿತ್ಯ, ಮೊದಲು ಅನುವಾದ-ಟೀಕೆಗಳ ಮೂಲಕ ಇನ್ನೊಂದು ಭಾಷೆಯಲ್ಲಿ ಪ್ರವೇಶ ಪಡೆದು, ಆಮೇಲೆ ಆ ಭಾಷೆಯಲ್ಲಿ ಸ್ವತಂತ್ರ ಸಾಹಿತ್ಯಸೃಷ್ಟಿಗೆ ನೆಲೆಯನ್ನು ಮಾಡಿಕೊಳ್ಳುತ್ತದೆ. ಈ ಮೇರೆಗೆ ಕನ್ನಡದಲ್ಲಿ ಸ್ವತಂತ್ರಸಾಹಿತ್ಯನಿರ್ಮಾಣವಾಗುವುದಕ್ಕೆ ಮೊದಲು, ಪಾಕೃತ ಸಂಸ್ಕೃತ ಭಾಷೆಗಳಲ್ಲಿರುವ ಜೈನಸಾಹಿತ್ಯಕ್ಕೆ ಕನ್ನಡದಲ್ಲಿ ಟೀಕೆ ಬರೆಯುವ ಕಾರ್ಯವೇ ನಡೆದಿರಬೇಕು. "ಉಭಯುಸಿದ್ಧಾಂತ" ಗಳಿಗೆ ಶ್ಯಾಮಕುಂದಾಚಾರ್ಯ-ತೆಂಬಳೂರಾಚಾರ್ಯರಿಂದ ವ್ಯಾಖ್ಯಾನ, ಉಮಾಸ್ವಾತಿಯ 'ತತ್ವಾರ್ಥಸೂತ್ರ'ಕ್ಕೆ ಅನಾಮಧೇಯನಿಂದ "ಚೂಡಾಮಣಿ' ಹೆಸರಿನ ವ್ಯಾಖ್ಯಾನ, ಆರಾಧನಾಸಾಹಿತ್ಯಕ್ಕೆ "ಆರಾಧನಾ ಕರ್ಣಾಟಟೀಕಾ" ಬರೆದುವೆಲ್ಲ ಸೃಜನಸಾಹಿತ್ಯಕ್ಕೆ ಪೂರ್ವಭಾವಿಯಾಗಿ ನಡೆದ ಪ್ರಯತ್ನಗಳಾಗಿರುವುದನ್ನು ಇಲ್ಲಿ ನೆನೆಯಬೇಕು.

ಹೀಗೆ ಸೆಲೆಯೊಡೆದ ಜೈನ ಟೀಕಾಸಾಹಿತ್ಯ ಅನ್ಯಭಾಷಾಕೃತಿಗಳಿಗೆ, ಕನ್ನಡ ಭಾಷಾಕೃತಿಗಳಿಗೆ ಬರೆದ ಟೀಕೆಗಳ ರೂಪದಲ್ಲಿ ಶತಮಾನದಿಂದ ಶತಮಾನಕ್ಕೆ ಕವಲು–ಕಾಲುವೆಯಾಗಿ ಹಬ್ಬಿನಿಂತಿದೆ.

ಬ್ರಾಹ್ಮಣರು ಈ ನಾಡಿನ ಪ್ರಮುಖ ಜನಾಂಗವಾದರೂ ಕನ್ನಡದ ಬಗ್ಗೆ ಅವರಿಗೆ ೧೫ನೆಯ ಶತಮಾನದ ವರೆಗೆ ಒಂದು ಬಗೆಯ ಉಪೇಕ್ಷಾಮನೋಭಾವವಿದ್ದ ಕಾರಣ, ಅನ್ಯಭಾಷಾಕೃತಿಗಳಿಗಾಗಲೀ ಕನ್ನಡಭಾಷಾಕೃತಿಗಳಿಗಾಗಲೀ ಅವರು ಈ ಅವಧಿಯಲ್ಲಿ ಕನ್ನಡ ಟೀಕೆಯನ್ನು ರಚಿಸಿರುವ ಸಾಧ್ಯತೆ ಕಡಿಮೆ. ೧೫ನೆಯ ಶತಮಾನದ ತರುವಾಯ ಅಲ್ಲೊಂದು ಇಲ್ಲೊಂದು ಕನ್ನಡ ಟೀಕಾಕೃತಿಗಳು ಇವರಿಂದ ಹುಟ್ಟಿಕೊಂಡವು; ಅದೂ ಸಾಮಾನ್ಯವಾಗಿ ಸಂಸ್ಕೃತ ಕೃತಿಗಳಿಗೆ. ಆದರೆ ಜೈನರಂತೆ ಕನ್ನಡಭಾಷೆಯ ಅಭಿಮಾನಿಗಳಾದ ವೀರಶೈವರಿಂದ ಮಾತ್ರ ಟೀಕಾಸಾಹಿತ್ಯ ಮೊದಲಿನಿಂದಲೂ ಅಧಿಕಪ್ರಮಾಣದಲ್ಲಿ ಸೃಷ್ಟಿಯಾಗುತ್ತ ಬಂದಿದೆ.

## • ವೀರಶೈವ ಟೀಕಾಸಾಹಿತ್ಯ •

ಕನ್ನಡನಾಡು ವೀರಶೈವದ ಮಾತೃಭೂಮಿ. ಈ ತಾಯಿನೆಲದ ಗರ್ಭಸತ್ವವನ್ನುಂಡು, ವಾತಾವರಣವನ್ನು ಮೈಗೂಡಿಸಿಕೊಂಡು ಬೆಳೆದ ವೀರಶೈವ ಜನಾಂಗಕ್ಕೆ ಕನ್ನಡತ್ವ ಉಸಿರೆನಿಸಿದೆ. ಇದನ್ನು ಗಮನಿಸಿದ ವಿದ್ವಾಂಸರೊಬ್ಬರು; ವೀರಶೈವಧರ್ಮವೆಂದರೆ ಕನ್ನಡಧರ್ಮ, ವೀರಶೈವ ಸಾಹಿತ್ಯವೆಂದರೆ ಕನ್ನಡಸಾಹಿತ್ಯ" ಎಂದು ಹೇಳಿದ ಮಾತು ಬಹುಮಟ್ಟಿಗೆ ಸತ್ಯವೇ ಸರಿ.

ಜೈನ, ವೀರಶೈವ, ಬ್ರಾಹ್ಮಣ–ಈ ಮೂರು ಕರ್ನಾಟಕವನ್ನು ಕಟ್ಟಿದ ಪ್ರಮುಖಜನಾಂಗಗಳು. ಇವುಗಳಲ್ಲಿ ಜೈನ, ಬ್ರಾಹ್ಮಣಮತಗಳು ತಮ್ಮ ಲೌಕಿಕವ್ಯವಹಾರಕ್ಕೆ ಕನ್ನಡವನ್ನು, ಧಾರ್ಮಿಕ ಆಲೋಚನೆಗೆ ಕ್ರಮವಾಗಿ ಪ್ರಾಕೃತ, ಸಂಸ್ಕೃತಗಳನ್ನು ಬಳಸಿಕೊಂಡರೆ ವೀರಶೈವವು ತನ್ನ ಲೌಕಿಕಧಾರ್ಮಿಕಗಳೆಂಬ ಉಭಯವ್ಯಾಪಾರಗಳಿಗೆ ಕನ್ನಡವನ್ನೆ ಪ್ರಮಾಣ ಭಾಷೆಯನ್ನಾಗಿ ಬಳಸಿತು. ಹೀಗಾಗಿ ಕರ್ನಾಟಕದ ಬ್ರಾಹ್ಮಣರ ಮಾತೃಭಾಷೆ ಕನ್ನಡ, ಧರ್ಮಭಾಷೆ ಸಂಸ್ಕೃತ; ಜೈನರ ಮಾತೃಭಾಷೆ ಕನ್ನಡ, ಧರ್ಮಭಾಷೆ ಪ್ರಾಕೃತ. ಆದರೆ ವೀರಶೈವರ ಧರ್ಮಭಾಷೆಯೂ ಕನ್ನಡ, ಮಾತೃಭಾಷೆಯು ಕನ್ನಡ. ಈ ಕನ್ನಡವನ್ನು ಕುರಿತು "ನೋಡಿರೆ ಕನ್ನಡವ, ನುಡಿಸಿರೆ ಕನ್ನಡವ, ತಲೆಯೊಲೆಯುತ ಬಂದು ಕುಣಿಯುವ ಕನ್ನಡವ" ಎಂದು ೧೬ನೆಯ ಶತಮಾನದ ಶರಣ ನಿಜಗುಣ, "ಬರಿ ಕನ್ನಡಭಾಷೆಯೆಂದೆನಲಾಗದಿಳೆಗಿದು ಲೇಸೆನಿಪ ವೇದಪ್ರಮಾಣವೆನಿಪುದು" ಎಂದು ೧೪ನೆಯ ಶತಮಾನದ ಭೀಮಕವಿ ನುಡಿದ ಮಾತುಗಳು ವೀರಶೈವರ ಕನ್ನಡ ಪ್ರೇಮಕ್ಕೆ ಕನ್ನಡಿಯೆನಿಸಿದೆ. ೧೬ನೆಯ ಶತಮಾನದ ಸುಮಾರಿಗೆ ಇದಕ್ಕೆ ವ್ಯತಿರಿಕ್ತವಾಗಿ ಬ್ರಾಹ್ಮಣರು ಮೃತಭಾಷೆಯಾದ ಸಂಸ್ಕೃತವನ್ನು ಬಳಸಿ ಮಡಿವಂತಿಕೆಯನ್ನು, ಜೈನರು ಗತಭಾಷೆಯಾದ ಹಳಗನ್ನಡವನ್ನು ಬಳಸಿ ಪಾಂಡಿತ್ಯವನ್ನು ಮೆರೆಯುವಲ್ಲಿ, ಜನತೆ ಸಾಹಿತ್ಯದಿಂದ ವಂಚಿತವಾಗಿದ್ದಿತು. ಈ ಪ್ರಸಂಗದಲ್ಲಿ ನಡುಗನ್ನಡವನ್ನು ಬಳಸಿ ಶ್ರೀಮಾನ್ಯ ಮತ್ತು ಸಾಹಿತ್ಯಗಳ ಮಧ್ಯ ಸೇತುವೆಯನ್ನು ನಿರ್ಮಿಸಿದ ಕೀರ್ತಿ ವೀರಶೈವ ವಚನಕಾರರಿಗೆ ಸಲ್ಲುತ್ತದೆ.

ಭಾಷೆಯ ಬಗ್ಗೆ ಇದ್ದ ಈ ಅಪಾರಗೌರವ, ವೀರಶೈವರಿಗೆ ವಿಪುಲವಾದ ಸೃಜನಸಾಹಿತ್ಯವನ್ನು, ಸಾಹಿತ್ಯಪ್ರಸಾರದ ವಿಧಾನವಾದ ಟೀಕಾಸಾಹಿತ್ಯವನ್ನು ನಿರ್ಮಿಸಲು ಪ್ರಚೋದಿಸಿತು. ಹೀಗೆ

ಬೆಳೆದುಬಂದ ವೀರಶೈವ ಟೀಕಾಸಾಹಿತ್ಯವನ್ನು ಅನ್ಯಭಾಷಾಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ, ಕನ್ನಡಭಾಷಾಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ ಎಂದು ವರ್ಗೀಕರಿಸಬಹುದು.

**ಅನ್ಯ ಭಾಷಾ ಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ:**

ಅನ್ಯ ಭಾಷಾ ಸಾಹಿತ್ಯಗಳಲ್ಲಿ ವೀರಶೈವರಿಂದ ಟೀಕೆ ಬರೆಯಿಸಿಕೊಂಡುದು ಸಂಸ್ಕೃತಸಾಹಿತ್ಯ. ಸಾಮಾನ್ಯವಾಗಿ ವೀರಶೈವವಿಚಾರಗಳನ್ನೊಳಗೊಂಡ ಸಂಸ್ಕೃತ ಆಗಮಾದಿಗಳಿಗೆ, ಕವಿಕೃತಿಗಳಿಗೆ ಉಭಯಭಾಷಾಪ್ರವೀಣರಾದ ವೀರಶೈವರು ಟೀಕೆಯನ್ನು ಬರೆದಿರುವರು.

ಬಸವಣ್ಣನವರಿಗೆ ಸಮಕಾಲೀನನಾದ ಶಿವಲೆಂಕಮಂಚಣ್ಣನ ತಂದೆ "ಕಾಮಿಕಾದ್ಯಖಿಳ ಶಿವಕಥಿತ ತಂತ್ರಾವಳಿಗಳಿಗೆ ಪ್ರೇಮದಿಂ ವೃತ್ತಿ ದೀಪಿಕೆಗಳಂ ಬಿತ್ತರಿಸಿದ" ನೆಂಬ ಮಾತು, ಸಂಸ್ಕೃತ ಕೃತಿಗಳಿಗೆ ಬರೆದ ಕನ್ನಡಟೀಕೆಯನ್ನೇ ಸೂಚಿಸುತ್ತಿರಬಹುದು. ಆಮೇಲೆ ವಾತುಲ ತಂತ್ರಟೀಕೆ, ವೀರಮಾಹೇಶ್ವರಾಚಾರಸಾರೋದ್ಧಾರ ಟೀಕೆ, ಸಿದ್ಧಾಂತಶಿಖಾಮಣಿ ಟೀಕೆ, ಶಿವಯೋಗಪ್ರದೀಪಿಕೆ ಟೀಕೆ, ಶ್ರೀರುದ್ರಭಾಷ್ಯ ಟೀಕು ಶಿವಾನುಭವಸೂತ್ರ ಟೀಕು, ಸಾರಸ್ವತವ್ಯಾಕರಣ ಟೀಕು, ಪುರುಷಸೂಕ್ತ ಟೀಕು, ನಮಕಚಮಕಟೀಕು, ಕೈವಲ್ಯಸಾರ ಟೀಕು, ಯಜುರ್ವೇದಭಾಷ್ಯ ಟೀಕು, ವೀರಮಾಹೇಶ್ವರಾಚಾರ ಸಂಗ್ರಹವ್ಯಾಖ್ಯಾನ, ವಿಶೇಷಾರ್ಥಪ್ರಕಾಶಿಕೆ ಟೀಕು, ಮಲಯರಾಜಸ್ತೋತ್ರ ಟೀಕು, ಮಲ್ಹಣಸ್ತೋತ್ರ ಟೀಕು, ಮಹಿಮ್ನಸ್ತೋತ್ರ ಟೀಕು ಇತ್ಯಾದಿ ಟೀಕಾಗ್ರಂಥಗಳು ಹುಟ್ಟಿಕೊಂಡಿವೆ. ಈ ಪ್ರತಿಯೊಂದರಲ್ಲಿ ಟೀಕಾಕರ್ತೃವಿನ ಉಭಯಭಾಷಾಪಾಂಡಿತ್ಯ, ವಿಷಯ ಪ್ರಭುತ್ವ, ನಿರೂಪಣಸಾಮರ್ಥ್ಯ, ಪರಿಕರಸಾಹಿತ್ಯದ ಪರಿಜ್ಞಾನಗಳು ಎದ್ದುತೋರುತ್ತವೆ. ಈ ಟೀಕಾಸಾಹಿತ್ಯ, ವೀರಶೈವದ ದ್ವಿತೀಯ ಘಟ್ಟವಾದ ನೂರೊಂದು ವಿರಕ್ತರ ಮತ್ತು ಏಳುನೂರೊಂದು ವಿರಕ್ತರ ಅವಧಿಯಲ್ಲಿ ವಿಪುಲವಾಗಿ ಬೆಳೆಯಿತು.

**ಕನ್ನಡ ಭಾಷಾಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ:**

ಸಂಸ್ಕೃತಸಾಹಿತ್ಯಕ್ಕೆ ಕನ್ನಡ ವ್ಯಾಖ್ಯಾನ ಜೋಡಿಸಲು ಭಾಷಾಭೇದ, ಅರ್ಥಜಟಿಲತೆಗಳು ಕಾರಣವಾದರೆ ಕನ್ನಡಸಾಹಿತ್ಯಕ್ಕೆ ಕನ್ನಡ ವ್ಯಾಖ್ಯಾನ ಜೋಡಿಸಲು ಕನ್ನಡಭಾಷೆಯ ಅವಸ್ಥಾಭೇದ, ಅರ್ಥಜಟಿಲತೆಗಳು ಕಾರಣವೆನಿಸಿವೆ.

ವೀರಶೈವರು ಸಾಹಿತ್ಯಕೃಷಿಗೆ ಕೈಹಾಕಿದ ಪ್ರಥಮದಲ್ಲಿ ಅಂದರೆ ೧೨ನೆಯ ಶತಮಾನದಲ್ಲಿಯೇ ಸೃಜನಸಾಹಿತ್ಯವನ್ನು ಹಿಂಬಾಲಿಸಿ ಟೀಕಾ ಸಾಹಿತ್ಯವೂ ಹುಟ್ಟಿರುವ ಸಾಧ್ಯತೆಯಿದೆ. ಶರಣರ ವಚನಗಳನ್ನು, ಅದರಲ್ಲಿಯೂ ಬೆಡಗಿನ ವಚನಗಳನ್ನು ಸಾಮಾನ್ಯರಿಗೆ ಅರ್ಥೈಸಿಕೊಡುವ ಪ್ರಯತ್ನಗಳು ಅಂದೇ ನಡೆದಿರುವುದಕ್ಕೆ "ಹತ್ತುಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು? ಮುಟ್ಟುವ ತೆರನನರಿಯದನ್ನಕ್ಕ" ಮೊದಲಾದ ವಚನಗಳು ಸೂಚನೆ ನೀಡುತ್ತವೆ, ಹೀಗೆ ವಚನಗಳಿಗೆ ಟೀಕೆ ಬರೆಯುವ ಸಂಪ್ರದಾಯ ಮುಂದುವರಿದಂತೆ ತರುವಾಯದಲ್ಲಿ ವೀರಶೈವ ಕಾವ್ಯಶಾಸ್ತ್ರಗಳಿಗೂ ಟೀಕೆ ಬರೆಯುವುದು ಬೆಳೆದುಬಂದಿತು. ಹೀಗಾಗಿ ವೀರಶೈವಟೀಕಾಸಾಹಿತ್ಯವನ್ನು ವಚನಟೀಕೆ, ಕಾವ್ಯಶಾಸ್ತ್ರಟೀಕೆಯೆಂದು ವರ್ಗೀಕರಿಸಬಹುದು. ಕೆಲವರಂತೂ ಜೀವನದುದ್ದಕ್ಕೂ ಕೇವಲ ಟೀಕಾಸಾಹಿತ್ಯ ನಿರ್ಮಾಣಕಾರ್ಯದಲ್ಲಿ ತೊಡಗಿದ್ದ ಕಾರಣ "ಟೀಕಿನ ಗುರುಪಾದದೇವ" ಎಂಬಂತಹ

ಅನ್ವರ್ಥಕನಾಮಗಳಿಂದ ಪ್ರಸಿದ್ಧಿಪಡೆದಿದ್ದಾರೆ. ಈ ಪರಂಪರೆಯಲ್ಲಿ ಪ್ರಭುದೇವರ ಟೀಕಿನ ವಚನ, ಬೆಡಗಿನ ವಚನಟೀಕೆ, ಅಕ್ಕಮಾದೇವಿಯ ಸೃಷ್ಟಿಯ ವಚನ ಟೀಕು, ಚೆನ್ನಬಸವೇಶ್ವರನ ಪದಮಂತ್ರಗೋಪ್ಯ ಟೀಕೆ, ಪ್ರಭುದೇವರ ಸೃಷ್ಟಿಯ ವಚನ ಟೀಕೆ, ಚೆನ್ನಬಸವೇಶ್ವರನ ಕರಣಹಸಿಗೆ ಟೀಕೆ, ಪ್ರಭುದೇವರ ಮಂತ್ರಗೋಪ್ಯ ಟೀಕು, ಚೆನ್ನಬಸವೇಶ್ವರನ ಮಿಶ್ರಾರ್ಪಣ ಟೀಕು, ಬಸವಣ್ಣನವರ ವಚನ ಟೀಕೆ, ಲಿಂಗಲೀಲಾವಿಲಾಸ ಗ್ರಂಥದ ವ್ಯಾಖ್ಯಾನ, ಏಕೋತ್ತರ ಶತಸ್ಥಲ ಟೀಕೆ, ಷಟ್ಸ್ಥಲಜ್ಞಾನಸಾರಾಮೃತ ಟೀಕೆ, ಮನೋವಿಜಯ ವ್ಯಾಖ್ಯಾನ, ಶತಕತ್ರಯ ವ್ಯಾಖ್ಯಾನ, ಪಂಚಗದ್ಯ ಟೀಕೆ, ಭಾವಚಿಂತಾರತ್ನ ಟೀಕೆ, ಬಸವೇಶ್ವರನ ಪಂಚಸ್ತೋತ್ರ ಟೀಕೆ, ಮಣ್ಣೇಶ್ವರನಾಂಧ್ಯದ ಟೀಕೆ, ಮರುಳದೇವರ ಕಂದಸಾರದ ಟೀಕೆ, ರಾಜಶೇಖರವಿಲಾಸದ ವ್ಯಾಖ್ಯಾನ, ಶಬ್ದಮಣಿದರ್ಪಣ ಟೀಕೆ, ಶೀಲವಂತಯ್ಯನ ತ್ರಿವಿಧಿ ಟೀಕೆ, ಕರಸ್ಥಲದ ನಾಗಲಿಂಗದೇವನ ತ್ರಿವಿಧಿ ಟೀಕೆ, ಕೈವಲ್ಯಪದ್ಧತಿ ಟೀಕೆ, ಗುರುಸ್ತೋತ್ರ ತ್ರಿವಿಧ ಟೀಕೆ, ವರತೆಯ ಸೋಮಣ್ಣನ ಪಂಚೀಕರಣ ಟೀಕೆ, ಪ್ರಭುಲಿಂಗ ಕಂದದ ಟೀಕೆ, ಪರಮಾರ್ಥಗೀತೆ ಟೀಕೆ–ಹೀಗೆ ದಟ್ಟವಾಗಿ ಹುಟ್ಟಿಬಂದ ವೀರಶೈವ ಟೀಕಾಸಾಹಿತ್ಯಸಮೂಹದಲ್ಲಿ ಬಸವಣ್ಣನವರ "ಷಟ್ಸ್ಥಲ ವಚನ" ಸಂಪುಟಕ್ಕೆ ಐದುಜನರು ಟೀಕೆ ಬರೆದುವಾಗಿ ಈವರೆಗೆ ತಿಳಿದುಬಂದಿದೆ. ಕನ್ನಡ ಸಾಹಿತ್ಯದಲ್ಲಿಯೇ ಬಸವಣ್ಣನವರನ್ನು ಕುರಿತು ಹುಟ್ಟಿದಷ್ಟು ಕೃತಿಗಳು ಬೇರೊಬ್ಬರ ವಿಷಯವಾಗಿ ಹುಟ್ಟಿಲ್ಲ. ಅದೇ ರೀತಿ ಅವರ ವಚನಸಂಪುಟಕ್ಕೆ ಬರೆದಷ್ಟು ಟೀಕೆಗಳು ಬೇರೊಬ್ಬರ ವಚನ ಸಂಪುಟಕ್ಕೆ ಬರೆಯಲಾಗಿಲ್ಲವೆಂಬುದು ಬಸವಣ್ಣನವರ ವ್ಯಕ್ತಿತ್ವ ಮತ್ತು ಸಾಹಿತ್ಯಗಳ ಘನತೆಯನ್ನು ಸಾರುತ್ತದೆ.

## • ಬಸವಣ್ಣನವರ ಟೀಕಿನ ವಚನಗಳು •

ಬಸವಣ್ಣನವರು ಲಕ್ಷದ ಮೇಲೆ ತೊಂಬತ್ತಾರುಸಾವಿರ ವಚನಗಳನ್ನು ಬರೆದರೆಂದು ಪರಂಪರಾಗತ ಪ್ರತೀತಿ. ಈ ವಿಪುಲಸಂಪತ್ತಿಯಿಂದ ಆಯ್ದ ೯೫೫ ವಚನಗಳನ್ನೊಳಗೊಂಡಿದೆ, ಬಸವಣ್ಣನವರ "ಷಟ್ಸ್ಥಲದ ವಚನಗಳು" ಹೆಸರಿನ ಕೃತಿ. ಬಹುಶಃ ತರುವಾಯದ ಅನುಭಾವಿಯೊಬ್ಬನು ಹೀಗೆ ಅವರ ವಚನಗಳನ್ನು ಷಟ್ಸ್ಥಲಕ್ರಮದಲ್ಲಿ ಜೋಡಿಸಿರಬಹುದು. ತುಂಬ ಪ್ರಚಾರದಲ್ಲಿರುವ ಈ "ಷಟ್ಸ್ಥಲದ ವಚನ" ಸಂಪುಟಕ್ಕೆ ಒಟ್ಟು ೫ ಜನ ಟೀಕೆ ಬರೆದಿರುವರು. ಹೀಗಾಗಿ ಈ ಷಟ್ಸ್ಥಲ ಕಟ್ಟು ಸಿದ್ಧವಾದ ತರುವಾಯದ ಕಾಲದಲ್ಲಿ ಈ ಟೀಕೆಗಳು ಹುಟ್ಟಿರುವುದು ಸಹಜ. I, II, III, IV ಮತ್ತು V ಹೀಗೆ ನಮ್ಮಿಂದ ಸಂಕೇತ ಕೊಡಲ್ಪಟ್ಟ ಈ ಐದೂ ಟೀಕೆಗಳ ಕರ್ತೃ, ಕಾಲ ಮೊದಲಾದ ಸಂಗತಿಯನ್ನು ಇಲ್ಲಿ ವಿವೇಚಿಸಬಹುದು.

### I ನೆಯ ಟೀಕೆ:

"ಶ್ರೀಗುರು ಬಸವರಾಜದೇವರು ನಿರೂಪಿಸಿದ ಷಟ್ಸ್ಥಲದ ವಚನವ್ಯಾಖ್ಯಾನ" ಎಂಬುದು ಇದರ ಹೆಸರು. ಈ ಗ್ರಂಥದ ಕರ್ತೃ ತನ್ನ ಹೆಸರಿನ ಬಗೆಗೆ ಮೌನತಾಳಿದ್ದಾನೆ. "ಶ್ರೀಗುರು ಬಸವಲಿಂಗಾಯನಮಃ" ಎಂಬ ವಾಕ್ಯಕ್ಕೆ ವಿಸ್ತಾರವಾದ ಟೀಕೆಯೊಂದಿಗೆ ಇದು ಪ್ರಾರಂಭವಾಗುತ್ತದೆ. ಹೀಗೆಯೇ ಪ್ರಾರಂಭವಾಗುವ ಟೀಕೆ–

೧. ಏಕೋತ್ತರಶತಸ್ಥಲ (ಮಹಲಿಂಗದೇವ?)

೨. ಕರಣಹಸಿಗೆ (ಚೆನ್ನಬಸವಣ್ಣ)

೩. ಕರಸ್ಥಲದ ನಾಗಲಿಂಗದೇವರ ತ್ರಿವಿಧಿ.

೪. ಕೈವಲ್ಯಪದ್ಧತಿ (ನಿಜಗುಣ ಶಿವಯೋಗಿ).

ಈ ಟೀಕಾಕೃತಿಗಳ ಆದಿಯಲ್ಲಿಯೂ ಬರುವುದರಿಂದ, ಇಲ್ಲಿ ಹೇಳಲಾದ ಬಸವಣ್ಣನವರ ಷಟ್ಸ್ಥಲದ ವಚನವ್ಯಾಖ್ಯಾನಕಾರ ಮತ್ತು ಈ ನಾಲ್ಕು ಕೃತಿಗಳ ವ್ಯಾಖ್ಯಾನಕಾರ ಒಬ್ಬನೇ ಎಂದು ಊಹಿಸಬಹುದು.

ಈ ವಚನಟೀಕೆಯಲ್ಲಿ ತುಂಗಭದ್ರೆ, ಹಂಪೆಯ ವಿರೂಪಾಕ್ಷ, ಕೊಟ್ಟೂರೇಶ್ವರ, ಕೊಟ್ಟೂರ ಇತ್ಯಾದಿ ಉಲ್ಲೇಖಗಳು ಆಗಾಗ ಬರುವುದರಿಂದ ಈತನು ಹಂಪೆಯ ಪ್ರದೇಶದವನಿರಬಹುದು. ಗುಳ್ಳಿರಾಮನ ಕೆರೆ, ಮರಗದ ಕೆರೆ, ಪಾಕಲಕೆರೆ, ಸೂಳೆಕೆರೆ ಇತ್ಯಾದಿ ಕೆರೆಗಳನ್ನು ಉಲ್ಲೇಖಿಸಿರುವುದರಿಂದ ಇವುಗಳ ನೆರೆಹೊರೆಯ ಗ್ರಾಮದವನಾಗಿರಬಹುದು. 'ಕ' ಪ್ರತಿಯ ಕೊನೆಯಲ್ಲಿ ಬರುವ "[ಪ್ರ]ಜೋತ್ಪತ್ತಿನಾಮ ಸಂವತ್ಸರ ವೈಶಾಖ ಶುದ್ಧ ೬ ಬುಧವಾರ ಬಸವರಾಜದೇವರ ವಚನಶಾಸ್ತ್ರ ಮುಗಿಸಿದ್ದು" ಎಂಬ ಹೇಳಿಕೆ ಈ ಕೃತಿರಚನೆಯ ಕಾಲನಿರ್ಣಯಕ್ಕೆ ನೆರವು ನೀಡುವುದಿಲ್ಲ. ಆದರೆ ಈ ಟೀಕೆಯ ಬೇರೊಂದು ಪ್ರತಿ (ಶ್ರೀ ಮಹಾಂತಯ್ಯನವರ ಪ್ರತಿ)*ಯ ಕೊನೆಯಲ್ಲಿಯ "ಶಕ ೧೭೯೨ ಪ್ರವರ್ತಮಾನೇ ಪ್ರಮೋದೂತ ಸಂವತ್ಸರ ಮಿತಿ ಮಾರ್ಗಶಿರ ಶುದ್ಧ ಪಂಚಮಿಯಲ್ಲಿ ಲೇಖನ ಸಮಾಪ್ತ" ಎಂಬುದು ಇದರ ಇತ್ತೀಚಿನ ಗಡುವನ್ನು ಕ್ರಿ.ಶ.೧೮೭೦ಕ್ಕೆ ನಿಲ್ಲಿಸುತ್ತದೆ. ಅದೇನೇ ಇದ್ದರೂ ಟೀಕೆಯುದ್ದಕ್ಕೂ ಬರುವ ಲುಕ್ಸಾನ, ಭಡೇದಾರ, ಭೋಪದಾರ, ಮಾಲದಾರ, ದುಕಾನ ಮೊದಲಾದ ಉರ್ದು ಪದಗಳ ನಿರರ್ಗಳ ಬಳಕೆ ಮತ್ತು ಕನ್ನಡಭಾಷೆಯ ಆಧುನಿಕತೆಗಳು ಈತನು ೧೯ನೆಯ ಶತಮಾನಕ್ಕೆ ಸಂಬಂಧಪಟ್ಟವನೆಂದು ಸೂಚಿಸುತ್ತವೆ. "ಮೊಗಲ ಪಠಾಣರು ದಕ್ಕಣಿಯರು" ಎಂಬಲ್ಲಿಯ ದಕ್ಕಣಿ (ಡೆಕ್ಕನ್) ಎಂಬುದೂ ಈ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ನಮ್ಮ ಗಮನಕ್ಕೆ ಬಂದ ಹಸ್ತ ಪ್ರತಿಗಳು ೧೯ನೆಯ ಶತಮಾನದಲ್ಲಿ ಲಿಪಿಸಿದವುಗಳೆಂಬುದನ್ನೂ ಇಲ್ಲಿ ನೆನೆಯಬೇಕು. ಅಲ್ಲಲ್ಲಿ 'ಜಂಗಮ', 'ಭಕ್ತ', 'ಶರಣ' ಪದಗಳಿಗೆ ತಾತ್ವಿಕ ಅರ್ಥದ ಜೊತೆ ಲೌಕಿಕ ಅರ್ಥವನ್ನು ಹೇಳುವಲ್ಲಿ 'ಜಂಗಮ'ದ ಬಗ್ಗೆ ಒಲವರ ಧ್ವನಿ ಕೇಳಿಬರುವುದರಿಂದ ಈತನು ಜಂಗಮನಾಗಿರುವ ಸಾಧ್ಯತೆಯಿದೆ. ಟೀಕೆಯ ಒಡಲಲ್ಲಿ ಆಗಾಗ ಬರುವ ಅಡ್ಡಕಥೆ, ಅತಿವಿವರ, ಅಗಾಧ ಲೋಕಾನುಭವ, ಮಾತನಾಡಿದಂತಿರುವ ಜಾನಪದ ಶೈಲಿ ಈತನು ವೃತ್ತಿಯಿಂದ ಪುರಾಣಿಕನಾಗಿರಬಹುದೆಂಬ ಭಾವ ಮೂಡಿಸುತ್ತವೆ. ವಚನಗಳಿಗೆ ಕೆಲವುಸಲ ವಾಚ್ಯಾರ್ಥವಲ್ಲದೆ ಇನ್ನೆರಡು ಬಗೆಯ ತಾತ್ವಿಕಾರ್ಥ–ಹೀಗೆ ಮೂರು ಬಗೆಯ ಅರ್ಥ (ವ ೫, ೬೨, ೮೫, ೮೬, ೧೧೮ ಇತ್ಯಾದಿ) ಬರೆಯುವನಾದರೂ ವಾಚ್ಯಾರ್ಥ ಮತ್ತು ತಾತ್ವಿಕಾರ್ಥಗಳೆಂಬ ಎರಡು ಬಗೆಯ ಅರ್ಥ ಬರೆದುದು ಸರ್ವಸಾಮಾನ್ಯ. ಕೆಲವೇ ಸಲ ಮಾತ್ರ ಕೇವಲ ವಾಚ್ಯಾರ್ಥ ಬರೆದಿರುವನು. ಉದಾ:

---

* ಹೈದರಾಬಾದಿನ ನಿಜಾಂ ಕಾಲೇಜಿನ ಪ್ರೊ ಎಂ.ಎಸ್. ಮಹಾಂತಯ್ಯನವರ ಪತ್ರ, ಇದು ಈಗ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಂಡಾರದಲ್ಲಿದೆ.

"ದಯವಿಲ್ಲದ ಧರ್ಮವದೇನಯ್ಯಾ : ದಯವಿಲ್ಲದ-ಕರುಣವಿಲ್ಲದ, ಧರ್ಮವು-ಸದ್ಧರ್ಮವು, ಅದೇನಯ್ಯಾ-ಅದೇನು ಪ್ರಯೋಜನವಯ್ಯಾ, ದಯವೇ ಬೇಕು-ಕರುಣವೇ ಬೇಕು, ಸರ್ವಪ್ರಾಣಿಗಳೆಲ್ಲಜಿಲ್ಲಿಯೂ-ಇರುವೆಯಾದಿಯಾಗಿ ಗಜವೇ ಕಡೆಯಾದ ಸಮಸ್ತ ಸ್ಥೂಲಸೂಕ್ಷ್ಮ ಜೀವರುಗಳಲ್ಲಿಯೂ, ದಯವೇ-ಕರುಣವೇ, ಧರ್ಮದ-ಸದ್ಧರ್ಮದ, ಮೂಲವಯ್ಯಾ-ಮೊದಲಯ್ಯಾ. ಕೂಡಲಸಂಗಯ್ಯ-ಪರಶಿವಲಿಂಗವು, ಅಂತಲ್ಲದೆ-ಹಂಗಲ್ಲದೆ, ಒಲ್ಲನಯ್ಯಾ-ಒಲಿದು ನಿಜಮೋಕ್ಷವನ್ನು ಕೊಡಲೊಲ್ಲನಯ್ಯಾ".

ಹೀಗೆ ಶುದ್ಧ ವಾಚ್ಯಾರ್ಥ ಬರೆಯುವನಾದರೂ ಕೆಲವು ಸಲ ಲೋಕಾನುಭವ, ಉಪಮೆಗಳನ್ನು ಬಳಸಿಕೊಂಡು ಇದನ್ನು ವಿವರಣ ರೂಪದಲ್ಲಿಯೂ ಹೇಳುವನು ಉದಾ:

"ಸಂಸಾರವೆಂಬುದೊಂದು ಗಾಳಿಯ ಸೊಡರು: ಸಂಸಾರವೆಂಬುದೊಂದು-ಹೊನ್ನು, ಹೆಣ್ಣು, ಮಣ್ಣೇ ಮುಖ್ಯವಾದ ಸಕಲಸಂಸಾರ ಪ್ರಪಂಚವೆಂಬುದೊಂದು, ಗಾಳಿಯ ಸೊಡರು-ದೀಪವೇನಾದರೂ ಚಾಟಿಗಿಟ್ಟರೆ ತಾಸು ಗಳಿಗೆ ಪಟುತರವಾಗಿ ಉರದೀತಲ್ಲದೆ ಗಾಳಿಗಿಟ್ಟರೆ ಚರ್‍ರೆಂದು ಆರಿಹೋಗುವುದು. ಹಾಂಗೆ, ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲಪ್ರಪಂಚವೆಂಬುವಂಥದು ದೀಪದೋಪಾದಿಯಲ್ಲಿ ವ್ಯರ್ಥಸ್ಯವಾಗಿರ್ಪುದು ಕಾಣಯ್ಯ. ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ-ಸಂತೆಪ್ಯಾಟಿಗೇನಾದರೂ ಗಾವುದ ಇಗ್ಗಾವುದ ಹರದಾರಿ ಕೂಗಳತೆಯಲ್ಲಿದ್ದಂಥ ಹಲವು ಆತ್ಮರುಗಳು ಬಂದು ತಾಸು ಎರಡು ತಾಸು ಮೂರು ತಾಸು ಪರಿಯಂತರ ಒಬ್ಬರ ಮಾತು ಒಬ್ಬರು ಕೇಳದ ಹಾಂಗೆ ಭೋರೆಂದು ಉಲಿಯುತ್ತಿಹುದು. ಸಾಯಂಕಾಲವಾದ ಮೇಲೆ ಕೈಗಳ ಕಡಲೆಕಾಳು ಹಾರಿಹೊಡೆದೋಪಾದಿಯಲ್ಲಿ ಎತ್ತಲವರತ್ತಲೇ ಹೋಗಿ ನೊಣಹೊಡೆವುದಕ್ಕೊಬ್ಬರೂ ದಿಕ್ಕಿಲ್ಲದ ಹಾಂಗೆ ಬರೆ ಬಾಜಾರವೆ ಉಳಿಯುತ್ತಿಹುದು. ಹಾಂಗೆ, ಸಿರಿಯೆಂಬುದು-ಅಷ್ಟಭೋಗ ಮಹದೈಶ್ವರ್‍ಯಯೆಂಬುವಂಥದು, ಸಂತೆಯ ಮಂದಿಯೋಪಾದಿಯಲ್ಲಿ ವ್ಯರ್ಥಸ್ಯವಾಗಿರ್ಪುದು ಕಾಣಯ್ಯ, ಇದ ನೆಚ್ಚಿ ಕೆಡೆಬೇಡ ಸಿರಿಯೆಂಬುದು: ಸಿರಿಯೆಂಬುದ ಹೊನ್ನು ಹೆಣ್ಣು ಮಣ್ಣು ಮೊದಲಾದ ಅಷ್ಟಭೋಗ ಅಷ್ಟೈಶ್ವರ್‍ಯವೆಂಬ ಭಾಗ್ಯವನ್ನು, ನಚ್ಚಿ-ನಂಬಿ, ಕೆಡಬೇಡ-ಶಿವತತ್ವವಳಿದು ಜೀವನಾಗಬೇಡ. ನಮ್ಮ ಕೂಡಲಸಂಗಮದೇವನ-ಇಷ್ಟಮಹಾಲಿಂಗವನ್ನು, ಮಱೆಯದೆ-ತ್ರಿಕಾಲಂಗಳಲ್ಲಿ ತಪ್ಪದೆ, ಪೂಜಿಸು-ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಹಡೆದುಕೋ".

ಶುದ್ಧ ಜಾನಪದೀಯವಾಗಿರುವ ಈ ಬಗೆಯ ವಿವರಣರೂಪದ ಟೀಕೆಗಳು ಬಹುಸಂಖ್ಯೆಯಲ್ಲಿ ಸಿಗುತ್ತವೆ. ಇಂಥಲ್ಲಿ ಈ ಟೀಕಾರನ ಮಾತಿನ ಶೈಲಿ, ಲೋಕಾನುಭವಗಳು ತುಂಬ ಕುತೂಹಲವನ್ನು ಹುಟ್ಟಿಸುತ್ತವೆ. ಹೀಗೆ ಕೇವಲ ವಾಚ್ಯಾರ್ಥದ ಟೀಕೆಗಳನ್ನಲ್ಲದೆ ಜೊತೆಗೆ ತಾತ್ವಿಕ ಅರ್ಥವನ್ನೂ ಜೋಡಿಸುತ್ತಾನೆ. ಉದಾ:

"ಕಾಡಬಸವನ-ಅಡವಿಯಲ್ಲಿರುವಂಥ ಗೂಳಿಬಸವನ, ಹುಲಿ-ವ್ಯಾಘ್ರನು, ಕೊಂಡೊಯ್ದಡೆ-ಮುರುಕೊಂಡು ತಿಂಬುವುದಕ್ಕೆ ತೆಗೆದುಕೊಂಡು ಹೋದರೆ, ಆರಯ್ಯಲಾಗದೆ-ಹುಲಿಯ ಬಾಯಿಂದ ಬಿಡಿಸಿ ಮನೆಗೆ ಹೊಡೆಕೊಂಡು ಹೋಗಿ ಹಾಕಿ ನೀರನ್ನು ಕುಡಿಸಿ ಸಂರಕ್ಷಣೆಯ ಮಾಡಲಾಗದೆ, ಕೂಡಲಸಂಗಮದೇವಾ-ಎಲೆ ಒಡೆಯನೆ ಎಂಬ ದೃಷ್ಟೋಪಮಾನದ ಹಾಂಗೆ.

ಕಾಡಬಸವನ ಭವಾರಣ್ಯಪ್ರವೇಶಿಯಾದ ಜೀವನ. ಹುಲಿ-ಕಾಲವ್ಯಾಘ್ರನು, ಕೊಂಡೊಯ್ವಡೆ-ಮರಣದಲ್ಲಿ ತಂದು ಸಂಹರಿಸುವರೆ, ಆರಯ್ಯಲಾಗದೆ-ಯಮನ ಬಾಧೆಯನ್ನು ನಷ್ಟವ ಮಾಡಿ ಗುರುವಿನಲ್ಲಿ ಉತ್ಪತ್ತಿ, ಲಿಂಗದಲ್ಲಿ ಸ್ಥಿತಿ, ಪರತತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಡಿಸಲಾಗದೆ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆಯೆಂದು, ಅದುಕಾರಣ ಪರಶಿವಲಿಂಗಕ್ಕುಪಾವಸ್ಥೆಯ ಮಾಡುತ್ತಿಹನು ಜ್ಞಾನಕಲಾತ್ಮನು."

ಇನ್ನು ಕೆಲವುಸಲ ಒಂದು ವಚನಕ್ಕೆ ಮೂರು ಬಗೆಯ ಅರ್ಥ ಹೇಳುತ್ತಿದ್ದು ಇವುಗಳ ತುಲನೆಗಾಗಿ "ಧರಣಿಯ ಮೇಲೆ ಹಿರಿದಪ್ಪ ಅಂಗಡಿಯನಿಕ್ಕಿ ಹರದ ಕುಳ್ಳಿರ್ದ ನಮ್ಮ ಮಹದೇವಸೆಟ್ಟಿ, ಒಮ್ಮನವಾದರೆ ನುಡಿವ, ಇಮ್ಮನವಾದರೆ ನುಡಿಯ" ಈ ವಾಕ್ಯಕ್ಕೆ ಬರೆದ ಟೀಕೆಯನ್ನು ನೋಡಬಹುದು.

"ಧರಣಿಯ ಮೇಲೆ-ಭೂಮಿಯ ಮೇಲೆ, ಒಂದು-ಏಕವಾದ, ಹಿರಿದಪ್ಪ-ದೊಡ್ಡಿತ್ತಾದ, ಅಂಗಡಿಯನಿಕ್ಕಿ-ದುಕಾನವ ಮಡಗಿಕೊಂಡು, ಹರದ-ಲಕ್ಷಸಂಖ್ಯೆಯ ದ್ರವ್ಯದ ಒಟ್ಟಗೆಯನುಳ್ಳ, ನಮ್ಮ ಮಹದೇವಸೆಟ್ಟಿ ಕುಳ್ಳಿರ್ದ-ನಮ್ಮ ಮಹದೇವನೆಂಬ ಸೆಟ್ಟಿಕಾರನು ಮೂರ್ತವ ಮಾಡಿಕೊಂಡಿರ್ದು ಸಮಸ್ತಾತ್ಮರುಗಳ ಕ್ರಯಕ್ಕೆ ತಕ್ಕ ತಕ್ಕ ಎಚ್ಚವನ್ನು ತೂಗಿ ಕೊಡುತ್ತಿಹನು. ಒಮ್ಮನವಾದಡೆ-ಒಂದೇ ಮನಸ್ಸಿನಿಂದ ಬಂದು ಎಚ್ಚವ ಕೇಳಿದರೆ, ಒಡನೆ ನುಡಿವನು-ಅವರ ಕೂಡ ಪ್ರಸಂಗವನಾಡಿ ಎಚ್ಚವನ್ನು ತೂಗಿಕೊಡುವನು, ಇಮ್ಮನವಾದರೆ-ಎರಡು ಮನಸ್ಸಿನಿಂದ ಬಂದು ಎಚ್ಚವ ಕೇಳಿದರೆ, ನುಡಿಯನು-ಅವರ ಕೂಡ ಪ್ರಸಂಗವನಾಡಿ ಎಚ್ಚವನ್ನು ತೂಗಿಕೊಡನು.

ಧರಣಿಯ ಮೇಲೆ-ಪಂಚಶತಕೋಟಿ ವಿಸ್ತೀರ್ಣವಾದ ಭೂಮಿಯ ಮೇಲೆ, ಒಂದು ಹಿರಿದಿಪ್ಪ-ಒಂದು ದೊಡ್ಡಿತ್ತಾದ, ಅಂಗಡಿಯನಿಕ್ಕಿ-ಹದಿನಾರು ಸಾವಿರ ಯೋಜನೆ ಭೂಮಿ ಒಳಯಕ್ಕೆ ನಟ್ಟು ಎಂಬತ್ತುನಾಲ್ಕು ಸಾವಿರ ಯೋಜನ ಭೂಮಿಯ ಮೇಲಕ್ಕೆ ಬೆಳೆದು ಅನಂತಲಕ್ಷ ಯೋಜನ ವಿಶಾಲೋನ್ನತವಾದ ಮಹಾಮೇರುಪರ್ವತವೆಂಬ ದುಕಾನವನುಂಟು ಮಾಡಿಕೊಂಡು, ಹರದ-ಬ್ರಹ್ಮಕೋಟಿ ವಿಷ್ಣುಕೋಟಿ ರುದ್ರ ಕೋಟಿ ಪ್ರಮಥನಾಯಕರು ಕೋಟಾನುಕೋಟಿಗಳಿಂದ ಓಲೈಸಿಕೊಳ್ಳುತ್ತ, ನಮ್ಮ ಕೂಡಲಸಂಗಮದೇವ-ನಮ್ಮ ಮಹಾದೇವಸೆಟ್ಟಿಯು ತಾನಾದ ಮಹೇಶ್ವರಮೂರ್ತಿಯು, ಕುಳ್ಳಿರ್ದ-ಬ್ರಹ್ಮವಿಷ್ಣ್ವಾದಿಗಳ ಮನದಲ್ಲಿ ಮೂರ್ತವ ಮಾಡಿಕೊಂಡಿರ್ದು ಅವರವರು ಮಾಡುವಂಥ ಜಪ ತಪಾರಾಧನೆ ಕ್ರಿಯೆಗಳ ಕೈಕೊಂಡು ಪ್ರಸನ್ನವಾಗಿ ಫಲಪದಂಗಳ ಕರುಣಿಸಿಕೊಡುತ್ತಿಹನು. ಒಮ್ಮನವಾದಡೆ-ಒಂದೇ ಮನಸ್ಸಿನಿಂದ ಜಪತಪಾರಾಧನೆ ಕ್ರಿಯೆಗಳ ಮಾಡಿದರೆ, ಒಡನೆ ನುಡಿವನು-ಜಪತಪರಾಧನೆ ಕ್ರಿಯೆಗಳ ಕೈಕೊಂಡು ಅವರಿಗೆ ಪ್ರಸನ್ನವಾಗಿ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು; ಇಮ್ಮನವಾದಡೆ-ಎರಡು ಮನಸ್ಸಿನಿಂದ ಜಪತಪಾರಾಧನೆ ಕ್ರಿಯೆಗಳ ಮಾಡಿದರೆ, ನುಡಿಯನು-ಆ ಜಪತಪಾರಾಧನೆ ಕ್ರಿಯೆಗಳ ಕೈಕೊಳ್ಳದೆ ಪ್ರಸನ್ನವಾಗದೆ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡದೆ ಸುಮ್ಮನಿರುತಿಹನು.

ಧರಣಿಯ ಮೇಲೆ, ಶರಣರ ಆಚಾರಾಂಗವೆಂಬ ಚಿತ್ತಶುದ್ಧಿಯ ಮೇಲೆ, ಒಂದು-ಅದ್ವಿತೀಯ ಸ್ವರೂಪವಾದ, ಹಿರಿದಪ್ಪ-ದೊಡ್ಡಿತ್ತಾದ, ಅಂಗಡಿಯನಿಕ್ಕಿ-ಸತ್ಕ್ರಿಯಾಚಾರವೆಂಬ ದುಕಾನವನ್ನು ನಿರ್ಮಿತವ ಮಾಡಿಕೊಂಡು, ಹರದ-ಸರ್ವಾಚಾರಸಂಪತ್ತಿನಾಚರಣೆ ಕ್ರಿಯೆಗಳ ಹರದವಟ್ಟಗೆಯನುಳ್ಳಂಥ, ನಮ್ಮ ಮಹಾದೇವಸೆಟ್ಟಿ-ನಮ್ಮ ಮಹೇಶ್ವರಮೂರ್ತಿಯೆ ತಾನಾದ ಇಷ್ಟಲಿಂಗಮೂರ್ತಿಯು, ಕುಳ್ಳಿರ್ದ-

ಭಕ್ತಮಹೇಶ್ವರರುಗಳ ಅಂಗಮನಪ್ರಾಣಂಗಳಲ್ಲಿ ನೆಲೆಗೊಂಡು ಅವರವರು ಮಾಡುವಂಥ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳನ್ನು ಕೈಕೊಂಡು ಪ್ರಸನ್ನವಾಗಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು. ಒಮ್ಮೆನವಾದಡೆ ಒಡನೆ ನುಡಿವನು–ಸಮರಸಭಾವದಿಂದ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿದರೆ ಅವರು ಮಾಡುವಂಥ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳನ್ನು ಕೈಕೊಂಡು ಪ್ರಸನ್ನವಾಗಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು, ಇಮ್ಮನವಾದಡೆ ನುಡಿಯನು–ಭಿನ್ನವಿಟ್ಟುಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿದರೆ ಅವರು ಮಾಡುವಂಥ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳನ್ನು ಕೈಕೊಳ್ಳದೆ ಪ್ರಸನ್ನವಾಗದೆ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿ ಕೊಡದೆ ಸುಮ್ಮನಿರುತ್ತಿಹನು."

ಈ ಬಗೆಯ ಯೋಜನೆಯನ್ನು ರೂಪಿಸಿಕೊಂಡು ಟೀಕೆ ಬರೆಯುತ್ತಿರುವ ಈತನು ಶಬ್ದಾರ್ಥ ಕೊಡುವಲ್ಲಿ, ಭಾವಾರ್ಥ ವಿವರಿಸುವಲ್ಲಿ ಕೆಲವು ಸಲ ಗೆಲುವಿನೊಂದಿಗೆ ಸೋಲನ್ನೂ ಅನುಭವಿಸಿದ್ದಾನೆ. ಉದಾ: "ಚಂದ್ರೋದಯಕ್ಕಂಬುಧಿ ಹೆಚ್ಚುವುದಯ್ಯಾ" ಎಂಬ ಮಾತಿಗೆ ಬರೆದ ಎರಡು ಅರ್ಥಗಳು ಹೀಗಿವೆ:

"ಚಂದ್ರೋದಯಕ್ಕೆ–ಪೌರ್ಣಮಿಚಂದ್ರನ, ಉದಯಕ್ಕೆ–ಆವಿರ್ಭಾವಕ್ಕೆ, ಅಂಬುಧಿ–ಸಮುದ್ರವು, ಹೆಚ್ಚುವುದಯ್ಯ–ನೊರೆತೆರೆಬುದ್ಬುದ ಶೀಕರಾದಿ ತುಂತುರ್ವನಿಗಳಿಂದ ಅದಲ್ಲದೆ ಹೆಣ್ಣುತೆರೆ ಗಂಡುತೆರೆಗಳಿಂದ ಭೋರ್ ಭೋರ್ ಎಂದು ಉಲಿಯುತ್ತಿಹುದಯ್ಯಾ."

"ಚಂದ್ರೋದಯಕ್ಕೆ–ಆತ್ಮನು ಉಂಬುತ್ತ ಉಡುವುತ್ತ ಸುಖಸಂತೋಷದಲ್ಲಿ ಇದ್ದುದಕ್ಕೆ, ಅಂಬುಧಿ–ದೇಹವು, ಹೆಚ್ಚುವುದಯ್ಯಾ–ಒಂದುಹೊರೆ ಎರಡುಹೊರೆ ಮೂರುಹೊರೆ ನಾಲ್ಕು ಹೊರೆ ಉಬ್ಬುತ್ತಿಹುದಯ್ಯಾ."

ಇಲ್ಲಿ ಎರಡನೆಯದು ಪ್ರತಿಯೊಂದು ವಚನಕ್ಕೂ ವಾಚ್ಯಾರ್ಥವಲ್ಲದೆ ತಾತ್ವಿಕಾರ್ಥವನ್ನೂ ಬರೆದೇ ತೀರಬೇಕೆಂದು ಹಟಹಿಡಿದು ಬರೆದಂತಾಗಿದೆ, ಇಂಥ ಪ್ರಸಂಗಗಳಲ್ಲಿ ಈತನ ಬರವಣಿಗೆ ತೀರ ಲಘುವಾಗಿ ತೋರುತ್ತದೆ. ಅಲ್ಲದೆ ನಾರಿವಾಣ–ಹರಿವಾಣ, ಇತ್ಯಾದಿಯಾಗಿ ತಪ್ಪು ಅರ್ಥ ಬರೆದುದೂ ಸ್ಪಷ್ಟವಾಗುತ್ತದೆ.

ಈತನ ಟೀಕೆಗಳು ತುಂಬಾ ವಿಸ್ತಾರವಾಗಿದ್ದು ಎಲ್ಲ ವಚನಗಳಿಗೂ ಬರೆಯಲಾಗಿದೆ. ಬೇಸರವಿಲ್ಲದೆ ವ್ಯಾಖ್ಯಾನಮಾಡುತ್ತ ಹೋದ ಇವನ ಶ್ರಮ, ನಿಷ್ಠೆ ಮೆಚ್ಚುವಂತಹದು. ಈತನ ಕಾಲದ ಜನಜೀವನದ ಅಧ್ಯಯನ ಮಾಡುವಷ್ಟರ ಮಟ್ಟಿಗೆ ಈ ಟೀಕೆ ಸಮಕಾಲೀನ ಜೀವನವನ್ನು ಹೊಸೆದುಕೊಂಡು ಮುಂದುವರಿದಿದೆ.

**II ನೆಯ ಟೀಕೆ:**

ಈ ಟೀಕೆ ಹೆಸರು ಮತ್ತು ಟೀಕಾಕರ್ತೃವಿನ ಹೆಸರು ಇನ್ನೂ ನಿಗೂಢವಾಗಿ ಉಳಿದಿದೆ. ನಾವು ಬಳಸಿದ 'ಜ' ಪ್ರತಿಯ ಕೊನೆಯಲ್ಲಿ ಬರುವ "ಶ್ರೀ ಬಸವೇಶ್ವರ ವಚನದೊಳಗೆ ಕಠಿಣವಾದ ಸಂಕ್ಷೇಪ ವಚನಕ್ಕೆ ಟಿಪ್ಪಣವಾಗಿ ಲಿಂಗಾಂಗಸಾಮರಸ್ಯವನ್ನು ಬಲ್ಲ ಷಟ್ಸ್ಥಲ ಸಮ್ಯಕ್‌ಜ್ಞಾನ

ಮಹಾನುಭಾವಿಗಳು ನಿರೂಪಿಸಿದುದು ಲಿಖಿಸಿ ಸಮಾಪ್ತಿಯಾಯಿತ್ತು" ಎಂಬ ಮಾತು ಕವಿನಾಮ, ಕೃತಿನಾಮಗಳನ್ನು ತಿಳಿಸುವುದಿಲ್ಲ. 'ಚ' ಪ್ರತಿಯ ಕೊನೆಯ ಗದ್ಯಖಂಡ "...ಪ್ರಥಮಾಚಾರ್ಯರಾದ ಸಿದ್ಧೇಶ್ವರಸ್ವಾಮಿಗಳು, ಅವರ ಬೋಧಾಪುತ್ರರಾದ ಬೋಳಬಸವೇಶ್ವರ ಸ್ವಾಮಿಗಳು, ಅವರ ಬೋಧಾಪುತ್ರರಾದ ಗುಮ್ಮಳಾಪುರದ ಸಿದ್ಧವೀರಣ್ಣಸ್ವಾಮಿಗಳು, ಅವರ ಬೋಧಾಪುತ್ರರಾದ ಗುಳೂರ ಸಿದ್ಧಲಿಂಗಸ್ವಾಮಿಗಳು, ಅವರ ಬೋಧಾ ಪುತ್ರರಾದ ಗಗನದಸ್ವಾಮಿಗಳು, ಅವರ ಬೋಧಾಪುತ್ರರಾದ ಕಟ್ಟಿಗೆಹಳ್ಳಿಸ್ವಾಮಿಗಳು, ಅವರ ಬೋಧಾಪುತ್ರರಾದ ಮುರಿಗೆಸ್ವಾಮಿಗಳು, ಅವರ ಬೋಧಾಪುತ್ರರಾದ ರೇವಣಸಿದ್ಧೇಶ್ವರಸ್ವಾಮಿಗಳು" ಎಂದು ತಟ್ಟನೇ ನಿಂತುಬಿಡುತ್ತದೆ. ಇದರಿಂದ ರೇವಣ ಸಿದ್ಧೇಶ್ವರಸ್ವಾಮಿಗಳು ಇದರ ಕರ್ತೃಗಳೆಂದು ಊಹಿಸಬಹುದಾದರೂ ಸಂದೇಹ ಉಳಿದುಕೊಳ್ಳುತ್ತದೆ. ಈ ಪರಂಪರೆಯನ್ನು ಗಮನಿಸಿದರೆ ಪ್ರಸ್ತುತ ಟೀಕೆ ಸುಮಾರು ೧೮ನೆಯ ಶತಮಾನದಲ್ಲಿ ಹುಟ್ಟಿರಬಹುದೆನಿಸುತ್ತದೆ. ನಾವು ಬಳಸಿದ 'ಜ' ಪ್ರತಿಯ ಕೊನೆಯಲ್ಲಿ ಬರುವ "೧೭೬೪ ಶುಭಕೃತನಾಮ ಸಂವತ್ಸರ ಕಾರ್ತಿಕ ಬಹುಳ ೧೩ ತದಿಗಿ ರವಿವಾರದೊಳಗೆ ಸಮಾಪ್ತಿಯಾಯಿತ್ತು" ಎಂಬ ಲೇಖನಮಿತಿ ಟೀಕಾಕಾರನ ಕಾಲನಿರ್ಣಯಕ್ಕೆ ನೆರವಾಗದಿರುವುದು ದುರ್ದೈವದ ಸಂಗತಿ.

ಈ ಟೀಕೆಯ ಪ್ರಾರಂಭದಲ್ಲಿ ಬರುವ "ಆದ್ಯರು, ವೇದ್ಯರು, ಸಾಧ್ಯರು..." ಎಂಬ ಸುದೀರ್ಘ ಪ್ರಸ್ತಾವನೆ ಜಕ್ಕಣಾರ್ಯನ ಸ್ವರಯೇಕೋತ್ತರಶತಸ್ಥಲದ ಟೀಕೆಗೂ ಇರುವುದರಿಂದ ಅದನ್ನೂ ಈತನೇ ಬರೆದಿರುವ ಸಾಧ್ಯತೆ ಇದೆ.

ಈತನು ಸಾಮಾನ್ಯವಾಗಿ ವಚನಕ್ಕೆ ಒಂದು ಅರ್ಥವನ್ನು ಬರೆಯುತ್ತಿದ್ದರೂ ಕ್ವಚಿತ್ತಾಗಿ ಎರಡು ಅರ್ಥಗಳನ್ನೂ ಬರೆಯುತ್ತಾನೆ (ವ-೮೬, ೧೦೪, ೧೧೪, ೧೧೭, ೧೧೯. ತೀರ ಕ್ವಚಿತ್ತಾಗಿ ಮೂರು ಅರ್ಥಗಳನ್ನು ಬರೆದಿದ್ದಾನೆ-೧೧೮). ಒಂದನೆಯದು ಶಬ್ದಗಳಿಗೆ ಬರೆದ ಪರಿಮಿತ ಅರ್ಥವಾಗಿದೆ ವಾಕ್ಯರೂಪದಲ್ಲಿ ಬರೆದ ಅರ್ಥವಾಗಿದ್ದರೆ, ಎರಡನೆಯದು ಗದ್ಯದಲ್ಲಿ ಬರೆದ ಸಾರರೂಪದ ಅರ್ಥವಾಗಿರದೆ. ಎರಡನೆಯ ಅರ್ಥವನ್ನು "ಮತ್ತಂ" ಎಂಬ ಪದದಿಂದ ಪ್ರಾರಂಭ ಮಾಡುತ್ತಾನೆ. ಇವೆರಡರ ಸ್ಪಷ್ಟತೆಗೆ ಒಂದು ಉದಾಹರಣೆಯನ್ನು ನೋಡಬಹುದು:

"ನಂಬರು-ಅಂತರಂಗದ ಪ್ರಾಣಲಿಂಗವೇ ಬಹಿಷ್ಕರಿಸಿ ಗುರುಮುಖದಿಂದಂಗದ ಮೇಲೆ ಇಷ್ಟಲಿಂಗವಾಯಿತ್ತೆಂದು ವಿಶ್ವಾಸಿಸರು, ನಚ್ಚರು-ಆ ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಯಿತ್ತೆಂದು ಹಾರೈಸರು, ಬಜಿದೆ ಕರೆವರು-ಸುಮ್ಮನೆ ಭಕ್ತಿಮುಖದಿಂದ ಆಹ್ವಾನಿಸುವರು, ಈ ಲೋಕದ ಮನುಜರು ನಂಬಲಜಿಯರು-ಈ ಜಗತ್ತಿನ ಮನುಷ್ಯರುಗಳು ವಿಶ್ವಾಸಿಸಲರಿಯರು ನಂಬಿ ಕರೆದಡೆ ಓ ಎನ್ನನೇ ಶಿವನು?-ಸೌಂದರನಂಬ್ಯಣ್ಣನು ಅಂತರಂಗದ ಪ್ರಾಣಲಿಂಗವೆ ಬಹಿರಂಗದಲ್ಲಿ ಇಷ್ಟಲಿಂಗವಾಗಿ ವಿಶ್ವಾಸಿಸಿ ಆಹ್ವಾನಿಸಿದರೆ ಪರಶಿವನು ಸ್ತೋತ್ರಕ್ಕೆ ಪಾತ್ರನಾಗನೆ? ನಂಬದೆ-ಅಂತರಂಗದ ಪ್ರಾಣಲಿಂಗವೆ ಬಹಿಷ್ಕರಿಸಿ ಗುರುಮುಖದಿಂದಂಗದ ಮೇಲೆ ಇಷ್ಟಲಿಂಗವಾಯಿತ್ತೆಂದು ವಿಶ್ವಾಸಿಸದೆ, ನಚ್ಚದೆ-ಆ ಇಷ್ಟಲಿಂಗದ ಚಿತ್ಕಲೆಯೆ ಅಂತರಂಗದಲ್ಲಿ ಪ್ರಾಣಲಿಂಗವಾಯಿತ್ತೆಂದು ಹಾರೈಸದೆ, ಬಜಿದ ಕರೆವರ-ಸುಮ್ಮನೆ ಭಕ್ತಿಮುಖದಿಂದ ಆಹ್ವಾನಿಸುವರುಗಳ.

ಮತ್ತಂ, ಒಂದೇ ವಸ್ತುವೇ ಗುರುಲಿಂಗಜಂಗಮವಾಗಿ ಬಂದಿತ್ತೆಂದು ವಿಶ್ವಾಸಿಸರು. ಆ ಗುರುಲಿಂಗಜಂಗಮವೆ ಒಂದು ವಸ್ತುವೆಂದು ಹಾರೈಸರು; ಸುಮ್ಮನೆ ಸ್ತೋತ್ರಮುಖದಿಂದ ಆಹ್ವಾನಿಸುವರು. ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿತ್ತೆಂದು ವಿಶ್ವಾಸಿಸಲರಿಯರು, ಈ ಜಗತ್ತಿನಲ್ಲಿ ಮನುಷ್ಯರುಗಳು. ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿತ್ತೆಂದು ವಿಶ್ವಾಸಿಸಿ ಸ್ತೋತ್ರಮುಖದಿಂದ "ಸ್ತನಶಂಕರಾ" ಎಂದು ಆಹ್ವಾನಿಸಿದರೆ ಪರಶಿವನು ಸ್ತೋತ್ರಕ್ಕೆ ಪಾತ್ರನಾಗನೆ? ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿತ್ತೆಂದು ವಿಶ್ವಾಸಿಸದ ಆ ಗುರುಲಿಂಗಜಂಗಮವೆ ಒಂದು ವಸ್ತುವೆಂದು ಹಾರೈಸದೆ ಸುಮ್ಮನೆ ಸ್ತೋತ್ರಮುಖದಿಂದ ಆಹ್ವಾನಿಸುವರುಗಳ, ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವಾ!–ಅಹಂಕಾರವೆಂಬ ಶೃಂಗವನು ಸಚ್ಚರಿತ್ರವೆಂಬ ಚರಣದಿಂದಧಸ್ಸು ಮಾಡಿ ತುಳಿದು ತನುಕರಣೇಂದ್ರಿಯ ಶಬ್ದಜಾಲಂಗಳನು ಕುಕಿಲಿರಿ ಎಂದು ಪರಮೇಶ್ವರನು ಮಾಯಾದೇವಿಗೆ ನಿರೂಪವ ಕೊಟ್ಟನೆಂಬುದರ್ಥ."

ಹೀಗೆ ಎರಡು ಅರ್ಥಗಳನ್ನು ಬರೆಯುವ ಪದ್ಧತಿಯನ್ನು ಇಟ್ಟುಕೊಂಡಿದ್ದು ಸಾಮಾನ್ಯವಾಗಿ ಇವು I ನೆಯ ಟೀಕೆಯ ಸಂಕ್ಷಿಪ್ತರೂಪಗಳಂತೆ ಆಗಾಗ ತೋರುತ್ತವೆ. ಈ ಮಾತಿಗೆ ೧೯೯ನೆಯ ವಚನ ಟೀಕೆಗಳನ್ನು ಹೋಲಿಸಿ ನೋಡಬಹುದು. ಒಂದುವೇಳೆ ಒಂದೇ ಅರ್ಥವನ್ನು ಬರೆದಿದ್ದಲ್ಲಿ ಅದು I ನೆಯ ಟೀಕೆಯ ಎರಡನೆಯ ಅರ್ಥವನ್ನು ಹೋಲುತ್ತದೆ. ಉದಾ:

"ಕರಿ ಘನ ಅಂಕುಶ ಕಿರಿದೆನ್ನಹುದೇ? ಬಾರದಯ್ಯ : ಕರಿ–ಅಷ್ಟಮದಂಗಳು, ಘನ–ಅಧಿಕವಾದಂಥವು, ಅಂಕುಶ–ಜ್ಞಾನವೆಂಬ ಶೃಣಿಯು, ಕಿಱಿದೆನ್ನಬಹುದೇ ಬಾರದಯ್ಯ–ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು......ಗಿರಿ ಘನ ವಜ್ರ ಕಿಱಿದೆನ್ನಬಹುದೆ? ಬಾರದಯ್ಯ :ಗಿರಿ–ಅಹಂಕಾರತ್ರಯಂಗಳು, ಘನ–ಅಧಿಕವಾದಂಥವು, ವಜ್ರ–ಅಭೇದ್ಯಜ್ಞಾನ, ಕಿಱಿದೆನ್ನಬಹುದೆ? ಬಾರದಯ್ಯ–ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು...ತಮಂಧ ಘನಜ್ಯೋತಿ ಕಿಱಿದೆನ್ನಬಹುದೇ? ಬಾರದಯ್ಯ: ತಮಂಧ–ಅಜ್ಞಾನ ಮಾಯಾತಮಸ್ಸು, ಘನ–ಅಧಿಕವಾದಂಥದು. ಜ್ಯೋತಿ–ಜ್ಞಾನವೆಂಬ ದೀವಿಗೆಯು, ಕಿಱಿದೆನ್ನಬಹುದೆ? ಬಾರದಯ್ಯ–ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು...ಮಱಹು ಘನ ನಿಮ್ಮ ನೆನೆವ ಮನ ಕಿರಿದೆನ್ನಬಹುದೆ? ಬಾರದಯ್ಯ: ಮರಹು–ಅಜ್ಞಾನವು, ಘನ–ಅಧಿಕವಾದಂಥದು, ನಿಮ್ಮ ನೆನೆವ ಮನ–ನಿಮ್ಮ ಲಿಂಗಧ್ಯಾನ, ಲಿಂಗಸ್ಮರಣೆಯೊಡನೆ ಕೂಡಲ್ಪಟ್ಟ ಉನ್ಮನಿ ಮನಸ್ಸುಳ್ಳ ಶರಣನು, ಕಿಱಿದೆನ್ನಬಹುದೆ? ಬಾರದಯ್ಯ–ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು....."

"ಕರಿಘನ ಅಂಕುಶ ಕಿಱಿದೆನ್ನಬಹುದೆ? ಬಾರದಯ್ಯ–ಅಷ್ಟಮದಯುಕ್ತವಾದ ಜೀವ ದೊಡ್ಡವನು, ಸುಜ್ಞಾನವೆಂಬ ಶೃಣಿಯು ಸೂಕ್ಷ್ಮವೆಂದು ನುಡಿಯಬಹುದು? ನುಡಿಯಬಾರದು.....ಗಿರಿ ಘನ ವಜ್ರ ಕಿಱಿದೆನ್ನಬಹುದೆ? ಬಾರದಯ್ಯ–ಮೂಲಾಹಂಕಾರವೆಂಬ ಪರ್ವತವು ದೊಡ್ಡದು, ಅಭೇದ್ಯಜ್ಞಾನವು ಸೂಕ್ಷ್ಮವೆಂದು ನುಡಿಯಬಹುದೆ? ನುಡಿಯಬಾರದಯ್ಯ...ತಮಂಧ ಘನ ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯ–ಮಾಯಾ ತಮಸ್ಸು ದೊಡ್ಡದು ಜ್ಞಾನದೀಪ್ತಿಯು ಸೂಕ್ಷ್ಮವೆಂದು ನುಡಿಯಬಹುದೇ? ನುಡಿಯಬಾರದಯ್ಯ....ಮರಹು ಘನ ನಿಮ್ಮ ನೆನೆವ ಮನ ಕಿಱಿದೆನ್ನಬಹುದೆ? ಬಾರದಯ್ಯ......ಅಜ್ಞಾನವು ದೊಡ್ಡದು....ನಿಮ್ಮ ಸ್ಮರಿಸುವ ಮನಸ್ಸು ಸೂಕ್ಷ್ಮವೆಂದು ನುಡಿಯಬಹುದೆ? ನುಡಿಯಬಾರದಯ್ಯ....."

ಈತನು ಕೆಲವು ಸಲ ವಚನದ ಒಂದೆರಡು ಸಾಲುಗಳಿಗೆ ಮಾತ್ರ ಅರ್ಥಹೇಳಿ "ಮುಂದಕ್ಕೆ ಕಾಣಬಂದರ್ಥ" ಎಂದು ಹೇಳಿ ಮುಗಿಸುತ್ತಾನೆ. ಒಟ್ಟಿನಲ್ಲಿ ಸಾಮಾನ್ಯವಾಗಿ ವಾಚ್ಯಾರ್ಥವನ್ನು ಬಿಟ್ಟು ಒಮ್ಮೆಲೆ ತಾತ್ವಿಕಾರ್ಥ ಹೇಳುವ ಧೋರಣೆ ಇಟ್ಟುಕೊಂಡಿದೆ, ಈ ಟೀಕೆ.

**III ನೆಯ ಟೀಕೆ:**

"ಬಸವರಾಜದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು" ಎಂಬುದು ಇದರ ಹೆಸರು. ಈ ಟೀಕೆಯ ಕರ್ತೃ ಸೋಮಶೇಖರ ಶಿವಯೋಗಿಯೆಂದು ಕೊನೆಗೆ ಬರುವ "ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ ಲೀಲಾವಿಗ್ರಹಮೂರ್ತಿಯಾದ ಶ್ರೀ ಸೋಮಶೇಖರಲಿಂಗಚರಣಾರವಿಂದಮಕರಂದರಸಪಾನಮತ್ತಮಧುಕರಾಯಮಾನ ಸೋಮಶೇಖರಶಿವಯೋಗಿಕೃತ ಬಸವರಾಜದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು ಪರಿಸಮಾಪ್ತ ಮಂಗಳಮಹಾ ಶ್ರೀ ಶ್ರೀ" ಎಂಬ ಗದ್ಯಖಂಡದಿಂದ ಸ್ಪಷ್ಟವಾಗುತ್ತದೆ. ಈತನ ಇನ್ನೊಂದು ಕೃತಿ ತೋಂಟದ ಸಿದ್ಧಲಿಂಗನ 'ಷಟ್ಸ್ಥಲಜ್ಞಾನಸಾರಾಮೃತದ ಬೆಡಗಿನ ವಚನ ಟೀಕೆ'. ಈ ಎರಡೂ ವಚನಸಂಕಲನಗಳು ಬೆಡಗಿನ ವಚನಗಳಿಗೆ ಮಾತ್ರ ಬರೆದ ಟೀಕೆಗಳಾಗಿದ್ದು, ಈತನು "ಬೆಡಗು" ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ.

ಷಟ್ಸ್ಥಲಜ್ಞಾನಸಾರಾಮೃತದ ಬೆಡಗಿನ ವಚನ ಟೀಕೆಯ ಆದಿಯಲ್ಲಿ ಬರುವ "...ತೋಂಟದ ಸಿದ್ಧೇಶ್ವರನೆಂಬ ದೇಶಿಕಶಿರೋಮಣಿಯ ಕರುಣಾಪ್ರಸಾದಪಾತ್ರರಾದ ಬೋಳಬಸವೇಶ್ವರನು, ಅವರ ಕರುಣಾಪ್ರಸಾದಪಾತ್ರರಾದ ಗೂಳೂರು ಸಿದ್ಧಲಿಂಗಯ್ಯನವರು, ಅವರ ಕೃಪಾಪ್ರಸಾದ ಪಾತ್ರರಾದ ಗಗನದಯ್ಯನವರು, ಅವರ ದಯಾನುಗ್ರಹಕ್ಕೆ ಯೋಗ್ಯರಾದ ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರನು, ಅವರನುಗ್ರಹಪಾತ್ರರಾದ ಮುರಿಗಾ ಶಾಂತವೀರೇಶ್ವರನು, ಅವರಿಂದ ಅನುಗ್ರಹವ ಪಡೆದ ಮುರಿಗಾ ಗುರುಸಿದ್ಧೇಶ್ವರನು, ಹೀಂಗೆ ಗುರುಸಂಪ್ರದಾಯವಿಡಿದು ಬಂದ ಬಸವಾದಿಪ್ರಮಥಗಣಂಗಳ ವಚನಾನುಭವವನು ಬೆಸಗೊಂಡ ಸೋಮಶೇಖರಶಿವಯೋಗಿ...."ಎಂಬ ಉಲ್ಲೇಖ ಈತನ ಶ್ರೀಮಂತ ಗುರುಪರಂಪರೆಯನ್ನು ಸಾರುತ್ತದೆ.

ತೋಂಟದಾರ್ಯನ ಕಾಲ ಕ್ರಿ.ಶ.೧೪೭೦ ಎಂದು ಭಾವಿಸಿ ಕವಿಚರಿತೆಕಾರರು ಅವನಿಂದ ಎಂಟನೆಯ ತಲೆಮಾರಿನವನಾದ ಸೋಮಶೇಖರ ಶಿವಯೋಗಿಯ ಕಾಲ ಕ್ರಿ.ಶ.೧೭೦೦ ಎಂದು ಹೇಳುತ್ತಾರೆ. ಆದರೆ ಇತ್ತೀಚಿನ ಸಂಶೋಧನೆಯಿಂದಾಗಿ ತೋಂಟದಾರ್ಯನ ಕಾಲ ಕ್ರಿ.ಶ.೧೬೦೦ ಎಂದು ಖಚಿತವಾಗಿದೆ.* ಕಾರಣ ಅವನಿಂದ ಎಂಟನೆಯ ತಲೆಮಾರಿನ ಸೋಮಶೇಖರ ಶಿವಯೋಗಿಯ ಕಾಲ ಕ್ರಿ.ಶ.ಸುಮಾರು ೧೮೦೦ ಆಗುತ್ತದೆ. ಇಷ್ಟೇ ಏಕೆ, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಮಾದಾಪುರಕ್ಕೆ ಸಂಬಂಧಿಸಿದ

---

* ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ(ಎಂ. ಎಂ. ಕಲಬುರ್ಗಿ ಮತ್ತು ಬಿ.ಆರ್.ಹಿರೇಮಠ) ಪ್ರಸ್ತಾವನೆ, ಪು.v-xix.

೧. ಶ್ರೀ ಮುರಿಗಾಸ್ವಾಮಿಗಳವರ

೨. ಚರಮೂರ್ತಿಗಳಾದಂಥ ಶಾಂತವೀರಸ್ವಾಮಿಗಳವರ ಕರಕಮಲಸಂಜನಿತವಾದ

೩. ದ ಸೋಮಶೇಖರಶಿವಯೋಗೀಶ್ವರನು ಕಲಿಸಂದ ೪೯೪೩ನೆಯ ಶೋಭನಕೃತ ಸಂವತ್ಸರದ ಕಾರ್ತಿಕ ಬ. ೨

೪. ಗುರುವಾರ ರೋಹಿಣೀ ನಕ್ಷತ್ರ ಪ್ರಾತಃಕಾಲ ಗಂಟೆ ೨ರ ಒಳಗೆ ೮ ಗದಿಗೆಯ ಮೇಲೆ ಕಳಶದ ಸ್ಥಾಪನ

೫. ಮಾಡಿದ್ದು.

ಎಂಬ ಈ ಶಾಸನ, ಪ್ರಸ್ತುತ ಟೀಕಾಕಾರ ಸೋಮಶೇಖರ ಶಿವಯೋಗಿಯನ್ನೇ ಸೂಚಿಸುವುದರಿಂದ ಈ ಶಾಸನದ ಕಾಲವಾದ ೨೫-೧೦-೧೮೪೩ರಲ್ಲಿ ಸೋಮಶೇಖರ ಶಿವಯೋಗಿ ಬದುಕಿದ್ದನೆಂಬುದು ಸ್ಪಷ್ಟ.

ಈತನು ಬಸವಣ್ಣನವರ 'ಷಟ್ಸ್ಥಲವಚನ' ಸಂಪುಟದಿಂದ ಬೆಡಗಿನ ವಚನಗಳನ್ನಾಯ್ದು ಟೀಕೆ ಬರೆದಿರುವನು. ತೀರ ಕ್ವಚಿತ್ತಾಗಿ ಒಂದು ವಚನಕ್ಕೆ ಎರಡು ಅರ್ಥ ಬರೆದುದೂ ಕಂಡುಬರುತ್ತದೆ (ವ-೪೨, ೪೯). ಸಾಮಾನ್ಯವಾಗಿ ಪ್ರತಿಪದಾರ್ಥ ಬರೆವ ಇಲ್ಲವೆ ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆವ ಟೀಕಾಲೇಖನ ಪದ್ಧತಿಯನ್ನು ಇಟ್ಟುಕೊಂಡಿದ್ದರೂ ಕೆಲವು ಸಲ ಇವುಗಳ ಮಿಶ್ರಣವೂ ಎಡೆಪಡೆದಿದೆ. ಈ ಮೂರಕ್ಕೂ ಉದಾಹರಣೆ:

೧. "ವಿಷಯವೆಂಬ-ಶಬ್ದಸ್ಪರ್ಶರೂಪರಸಗಂಧಗಳೆಂಬ, ಹಸುರಂ-ತೃಣಪತ್ರನು, ಎನ್ನ ಮುಂದೆ-ಜೀವನೆಂಬ ಪಶುವಿನಗ್ರದಲ್ಲಿ, ತಂದು ಆಗ ಮಾಡಿ, ಪಸರಿಸಿದೆಯಯ್ಯಾ-ವಿಸ್ತಾರವ ಮಾಡಿದೆಯಯ್ಯಾ, ಪಶುವೇನ ಬಲ್ಲುದು-ಜೀವನೇನ ತಿಳಿದೀತು, ಹಸುರೆಂದೆಳೆಸುವುದು-ತೃಣಪತ್ತೆಂದಿಚ್ಛೈಸುವುದು. ಭಕ್ತಿರಸವ-ಶಿವಲಿಂಗಶ್ರದ್ಧೆಯೆಂಬ ಸಾರವನು, ದಣಿಯ ಮೇಯಿಸಿ-ಸಾಕಾಗುವ ಹಾಂಗೆ ಅನುಭವಿಸಿಸಿ, ಸುಬುದ್ಧಿಯೆಂಬ-ಸುಜ್ಞಾನವೆಂಬ, ಉದಕವನೆರೆದು-ಜಲವನು ನೀಡಿ, ನೋಡಿ-ಕೃಪಾದೃಕ್ಕಿನಿಂದ ನಿರೀಕ್ಷಿಸಿ, ಸಲಹಯ್ಯಾ-ಸಂರಕ್ಷಿಸಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ".

೨. "ಪ್ರಕೋಷ್ಠ ಹಸ್ತದೊಳೊಪ್ಪುವ ರನ್ನಗಂಕಣಕ್ಕೆ ಕೈಪಿಡಿಯನು ಹಿಡಿದು ನೋಡುವ ಗಾಂಪರ ಹಾಂಗೆ ಪ್ರತ್ಯಕ್ಷ ನಿಷ್ಠಾಸ್ವರೂಪವಾದ ಗುರುಭಕ್ತಿಯನೊಲ್ಲದೆ ಭಿನ್ನಭಜನೆಯನಂಗೀಕರಿಸುವುದೆನ್ನ ಮನವು ಎಂಬುದೀಗ ಮುಂಗಯ್ಯ ಕಂಕಣಕ್ಕೆ ಕನ್ನಡಿಯ ತೋಱುವಂತೆ ಎಂಬ ಶಬ್ದಕ್ಕರ್ಥ. ಪೂರ್ವಫಲಪ್ರಾಪ್ತಿಯಿಂದ ದೊರಕೊಂಡ ಕಡವರವನೊಲ್ಲದೆ ಜಲಗರ ಮೃತ್ತಿಕೆಯನ್ನು ತೊಳೆದು ಹೊಟ್ಟೆಯ ಹೊಱೆವ ಗಾಂಪರ ಹಾಂಗೆ ಸುಜ್ಞಾನದ್ರವ್ಯಸ್ವರೂಪವಾದ ಜಂಗಮಭಕ್ತಿಯನೊಲ್ಲದೆ ಭಿನ್ನಭಾವವನಂಗೀಕರಿಸುವುದೆನ್ನ ಮನವೆಂಬುದೀಗ, ನಿಧಾನವನೊಲ್ಲದೆ ಜಲಗ ಮಚ್ಚಿತ್ತು ನೋಡಾ ಎಂಬ ಶಬ್ದಕ್ಕರ್ಥ. ಇಂದ್ರಿಯ ವಿಷಯಪ್ರಪಂಚನುಳ್ಳಾತ್ಮನಿಗೆ ಮುಕ್ತಿಫಲಭೋಗವು ದೊರಕೊಳ್ಳಲರಿಯದೆಂಬುದೀಗ, ನಾಯಿಗೆ ನಾರಿವಾಣವಕ್ಕುದೆ ಕೂಡಲಸಂಗಮದೇವ ಎಂಬ ಶಬ್ದಕ್ಕರ್ಥ."

೩. "ಇಂದ್ರಿಯ ವಿಷಯ ಪ್ರಪಂಚಿಗಿಚ್ಛಿಸಿ ಮುಂದಾಗುವ ಮುಕ್ತಿಯನು ಹೋಗಲಾಡಿಸಿಕೊಂಡಿತ್ತೆನ್ನ ಮನವು ಎಂಬುದೀಗ ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎಂಬ ಶಬ್ದಕ್ಕರ್ಥ. ಸಂಸಾರ–ಪುತ್ರಮಿತ್ರಕಳತ್ರಾದಿ ಸಂಸ್ಕೃತಿಯ ಸಂಗವಕೂಟನು, ಬಿಡದು ನೋಡಾ–ವಿಮೋಚನೆಯ ಮಾಡದಿರುವುದು ಕಂಡಾ, ಎನ್ನ ಮನವು–ನನ್ನ ಮನಸ್ಸು, ಈ ನಾಯಿತನವ–ಇಂದ್ರಿಯಂಗಳ ವ್ಯಾಪಾರವನ್ನು, ಮಾಣಿಸು–ಬಿಡಿಸು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ನಿಮ್ಮ ಧರ್ಮ–ನಿಮ್ಮ ದಯೆ".

ಕೆಲವು ಸಲ ಈತನು ವಚನದಿಂದ ಕೇವಲ ಒಂದೆರಡು ವಾಕ್ಯ ಇಲ್ಲವೆ ಒಂದೆರಡು ಪದಗಳನ್ನು ಎತ್ತಿಕೊಂಡು ಅರ್ಥ ಬರೆದುದೂ ಉಂಟು. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಸಂಗತಿಯೆಂದರೆ ಇಲ್ಲಿಯ ಕೆಲವೇ ಟೀಕೆಗಳು ಗುರುಬಸವರಾಜ ಟೀಕೆ (IV)ಗಳಾಗಿವೆ ಕೆಲವು ಅಲ್ಪಮಟ್ಟಿಗೆ ಅವುಗಳನ್ನು ಹೋಲುತ್ತವೆ; ಇನ್ನು ಕೆಲವು ಸಂಪೂರ್ಣ ಬೇರೆಯಾಗಿವೆ.

**IV ನೆಯ ಟೀಕೆ:**

ಈ ಟೀಕೆಯ ಹೆಸರು 'ಬಸವ ವಚನಸಾರಾಮೃತ'ವೆಂದೂ ಕರ್ತೃ ಗುರುಬಸವರಾಜದೇವನಾಗಿರಬಹುದೆಂದೂ ಪ್ರಾರಂಭದ "ಗುರುಬಸವರಾಜದೇವರು ಸೇರಿಸಿದ ಬಸವ ವಚನಸಾರಾಮೃತ" ಎಂಬ ವಾಕ್ಯ ಸ್ಪಷ್ಟಪಡಿಸುತ್ತದೆ. ಇಲ್ಲಿ ಬಸವಣ್ಣನವರ "ಷಟ್ಸ್ಥಲದ ವಚನಗಳು" ಸಂಪುಟಕ್ಕೆ ಸಂಬಂಧಿಸಿದ ೩೭೪ ವಚನಗಳಿಗೆ ಮಾತ್ರ ಟೀಕೆಯಿದೆ. ಇಲ್ಲಿಯ ಸುಮಾರು ೭೩ ವಚನ ಟೀಕೆಗಳು ಲಿಂಗಲೀಲಾವಿಲಾಸಚಾರಿತ್ರದಲ್ಲಿ, ಕೆಲವು ವಚನ ಟೀಕೆಗಳು ಸೋಮಶೇಖರ ಶಿವಯೋಗಿಯ (III) ಟೀಕೆಯಲ್ಲಿ, ಬೇರೆ ಕೆಲವು ವಚನ ಟೀಕೆಗಳು ಕಟ್ಟಿಗೆಹಳ್ಳಿಸ್ವಾಮಿಗಳು ಸೇರಿಸಿದ 'ಏಕೋತ್ತರ ಶತಸ್ಥಲಸಾರ'ದಲ್ಲಿ ಗೋಚರಿಸುತ್ತವೆ. ಇದಲ್ಲದೆ ಈ ನಾಲ್ಕೂ ಕೃತಿಗಳಲ್ಲಿ ಬಸವಣ್ಣನವರ ಇನ್ನೂ ಕೆಲವು ವಚನಗಳಿಗೆ ಟೀಕೆ ಇರುವುದರಿಂದ ಇವರಲ್ಲಿ ಪ್ರಾಚೀನನಾದ ಕಲ್ಲುಮಠದ ಪ್ರಭುದೇವನೇ ಬಸವಣ್ಣನವರ ಎಲ್ಲ ಷಟ್ಸ್ಥಲದ ವಚನಗಳಿಗೆ ಟೀಕೆಯನ್ನು ಬರೆದಿದ್ದನೇ? ಅಥವಾ ಇವರೆಲ್ಲರಿಗೂ ಮೂಲವಾದ ಬೇರೊಂದು ಟೀಕಾಗ್ರಂಥವಿದ್ದಿತ್ತೇ? ಎಂಬ ಸಂದೇಹ ಹುಟ್ಟುವುದಲ್ಲದೆ ಅದು ಕನಿಷ್ಠಪಕ್ಷ ಲಿಂಗಲೀಲಾವಿಲಾಸ ಚಾರಿತ್ರದಷ್ಟು ಹಿಂದಿನದೆಂದೂ ವೇದ್ಯವಾಗುತ್ತದೆ. ಆ ಕೃತಿಯಿಂದ ೩೭೪ ವಚನಟೀಕೆಗಳನ್ನು ಆಯ್ದುಕೊಂಡು ಇಲ್ಲಿ "ಸೇರಿಸಿದ" ಗುರುಬಸವರಾಜ ದೇವನ ಕಾಲ ೧೫ನೆಯ ಶತಮಾನದ ತರುವಾಯ ಎಲ್ಲಿ ನಿಲ್ಲುತ್ತದೆ? ಹೇಳುವುದು ಕಷ್ಟ. ಈ ಕಟ್ಟಿನಲ್ಲಿರುವ ಪ್ರಭುದೇವರ ವಚನಟೀಕೆಯ ಕೊನೆಗೆ ಬರುವ "ಶ್ರೀ ರಾಕ್ಷಸನಾಮ ಸಂವತ್ಸರದ ಪುಷ್ಯಮಾಸದ ಬಹುಳ ಆದಿಚತುರ್ದಶಿ ದಿವ್ಯವಾರದಲು ಟೀಕು ಸಮಾಪ್ತ ಮಂಗಳ ಮಹಾ" ಎಂಬುದೂ ಗುರುಬಸವರಾಜದೇವನ ಕಾಲ ನಿರ್ದೇಶನಕ್ಕೆ ನೆರವಾಗದು. ಆದರೆ ಈತನು ಸೋಮಶೇಖರಶಿವಯೋಗಿಗೆ ಸ್ವಲ್ಪ ಪ್ರಾಚೀನನಾಗಿರುವ ಅಂದರೆ ೧೭ನೆಯ ಶತಮಾನದವನಾಗಿರುವ ಸಂಭವವಿದೆ.

"ಬಸವ ವಚನಸಾರಾಮೃತ" ಎಂಬ ಶೀರ್ಷಿಕೆಯೇ ಹೇಳುವಂತೆ ವಚನಗಳ ಒಳತುಡಿತವನ್ನೇ ಸಾರವತ್ತಾದ, ಸಂಗ್ರಹವತ್ತಾದ ಗದ್ಯದಲ್ಲಿ ಇಲ್ಲಿಯ ಟೀಕೆಗಳು ವ್ಯಕ್ತಪಡಿಸುತ್ತವೆ. ಉದಾ: "ಗುರುವಚನ ಪ್ರಮಾಣವಿಡಿದು ಲಿಂಗಾಂಗ ಸಂಬಂಧಿಯಾಗಿ ಸುಜ್ಞಾನಕ್ರಿಯೆಯಿಂದ ಲಿಂಗವನರ್ಚಿಸಿ ಲಿಂಗವ

ಬೆಱದು ಲಿಂಗಾಂಗವಾಗಿಪ್ಪ ಭಕ್ತನೇ ಮಹಾಜ್ಞಾನಿ. ಅಂತಲ್ಲದೆ ಜ್ಞಾನವಿಲ್ಲದ ಅಜ್ಞಾನಿಯ ಅಂಗಕ್ಕೆ ಲಿಂಗೋಪದೇಶವ ಮಾಡಿದ ಗುರು ಆ ಶಿಷ್ಯನು ಉಭಯರೂ ಲಿಂಗಾಚಾರಬಾಹ್ಯರೆಂಬುದೀ ವಚನದ ತಾತ್ಪರ್ಯಾರ್ಥ."

ಹೀಗೆ ಪರಿಮಿತ ಗಾತ್ರದಲ್ಲಿ ವಚನಗಳ ಒಳತೋಟಿಯನ್ನು ಕಾಣಲು ಮಾಡಿದ ಶ್ರದ್ಧೆಯ ಪ್ರಯತ್ನ ಈ ಟೀಕೆಯಲ್ಲಿ ಎದ್ದು ತೋರುತ್ತದೆ.

**V ನೆಯ ಟೀಕೆ:**

"ಬಸವೇಶ್ವರದೇವರ ವಚನಸಾರಾರ್ಥ" ಎಂಬುದು ಈ ಕೃತಿಯ ಹೆಸರು. ಪರ್ವತಶಿವಯೋಗಿ ಇದರ ಕರ್ತೃ. ಈ ಅಂಶವನ್ನು ಭಕ್ತಸ್ಥಲದ ಅಂತ್ಯದಲ್ಲಿ ಬರುವ "ಶ್ರೀಮತ್ ಷಟ್ಸ್ಥಲಾದ್ವೈತವಿದ್ಯಾ ಪ್ರಮೋದಿತ ಶ್ರೀ ವೀರಮಾಹೇಶ್ವರ ಬಾಲೇಂದುಪುರದ ಹರೀಶ್ವರ ಶಾಂತವೀರೇಶ್ವರ ಚಿದ್ಗರ್ಭಸಂಭವ ಪರ್ವತಶಿವಯೋಗೀಶ್ವರ ವಿರಚಿತಮಪ್ಪ ಬಸವೇಶ್ವರದೇವರ ವಚನಸಾರಾರ್ಥ" ಎಂಬ ವಾಕ್ಯ ಸ್ಪಷ್ಟಪಡಿಸುತ್ತದೆ ಈತನು ಎಳಂದೂರ ಹರೀಶ್ವರ ಶಾಂತವೀರೇಶ್ವರನ ಶಿಷ್ಯನೆಂದು ಸೂಚಿಸುತ್ತದೆ. ಮುರಿಗೆಯ ಶಾಂತವೀರನ ಪ್ರಭುಲಿಂಗಕಂದದ ಟೀಕೆಯ ಕೊನೆಯಲ್ಲಿ "ಶ್ರೀಮತ್ಸರ್ವಜ್ಞತ್ವಾದಿ ಷಟ್ಛಕ್ತಿ ಷಡಂಗ ಸಂಯೋಗ ಷಟ್ಸ್ಥಲಬ್ರಹ್ಮಜ್ಞಾನಪಾರಂಗತ ವರ್ಣಾಶ್ರಮಾತೀತ ವೀರಮಾಹೇಶ್ವರಾಚಾರ್ಯ ಸಿದ್ಧಲಿಂಗಸ್ವಾಮಿಗಳ ಜ್ಞಾನೋಪದೇಶಪಾತ್ರನಾದ ಬಾಲೇಂದುಪುರದ ಹರೀಶ್ವರ ಶಾಂತವೀರೇಶ್ವರ ಕರಸರಸಿಜಾತ ಶ್ರೀ ವೀರ ಮಾಹೇಶ್ವರ ಪರ್ವತಶಿವಯೋಗಿ ವಿರಚಿತ" ಎಂದು ಹೇಳಿರುವುದರಿಂದ ಎಳಂದೂರ ಹರೀಶ್ವರ ಶಾಂತವೀರೇಶ್ವರನ ಶಿಷ್ಯನಾದ ಈತನು ಸಿದ್ಧಲಿಂಗನೆಂಬವನ ಶಿಷ್ಯನೆಂದೂ ವೇದ್ಯವಾಗುತ್ತದೆ.

ಈತನು ಬಸವೇಶ್ವರದೇವರ ವಚನಸಾರಾರ್ಥವನ್ನಲ್ಲದೆ ಮುರಿಗೆಯ ಶಾಂತವೀರನ ಪ್ರಭುಲಿಂಗಕಂದದ ಟೀಕೆ, ಕರಸ್ಥಲದ ನಾಗಲಿಂಗ ತ್ರಿಪದಿಯ ಟೀಕೆ, ಚೆನ್ನಮಲ್ಲನ ಗುರುಸ್ತೋತ್ರ ತ್ರಿಪದಿಯ ಟೀಕೆ, ಚೆನ್ನಬಸವಣ್ಣನವರ ಕರಣಹಸಿಗೆಯ ಟೀಕೆ, ಚೆನ್ನಬಸವಣ್ಣನವರ ಮಿಶ್ರಾರ್ಪಣ ಟೀಕೆ, ಭೋಜದೇವಕೃತ ತತ್ತ್ವಪ್ರಕಾಶಿಕಾ ಟೀಕೆ, ಏಕೋತ್ತರ ಶತಸ್ಥಲ ಟೀಕೆ, ಷಡ್ವಕ್ತ್ರಸ್ತೋತ್ರದ ಟೀಕೆ, "ಸಂಗಮೇಶ್ವರಾ" ಅಂಕಿತದ ಗುರು ಸ್ತೋತ್ರ ತ್ರಿವಿಧಿಯ ಟೀಕೆಗಳನ್ನೂ ಬರೆದಿರುವನು.

ತೋಂಟದಾರ್ಯನ ಕಾಲ ಕ್ರಿ.ಶ.೧೪೭೦ ಇವನ ಪರಂಪರೆಯ ಮುರಿಗೆಯ ಶಾಂತವೀರೇಶನ (ಕ್ರಿ.ಶ.೧೫೩೦) ಗ್ರಂಥಕ್ಕೆ ಟೀಕೆ ಬರೆದಿರುವುದರಿಂದ ಇವನ ಕಾಲ ಕ್ರಿ.ಶ.೧೬೫೦ ಎಂದು ಕವಿಚರಿತೆಕಾರರು ಹೇಳುತ್ತಾರೆ. ಆದರೆ ಮುರಿಗೆಯ ಶಾಂತವೀರನು ೫-೫-೧೭೦೩ರಲ್ಲಿ ಐಕ್ಯನಾದನೆಂದು ಶಿಷ್ಯ ಮುರಿಗೆಯ ಗುರುಸಿದ್ಧನ "ಮುರಿಗಾಶಾಂತವೀರೇಶ್ವರ" ತಾರಾವಳಿಯಿಂದ ತಿಳಿದುಬರುತ್ತದೆ. ಅಲ್ಲದೆ ಇತ್ತೀಚಿನ ಸಂಶೋಧನೆಯಿಂದಾಗಿ ತೋಂಟದಾರ್ಯರ ಕಾಲ ೧೦೦ವರ್ಷದಷ್ಟು ಮುಂದೆ ಬಂದಿದೆ. ಹೀಗಾಗಿ ಈ ಪರಂಪರೆಗೆ ಸಂಬಂಧಿಸಿದ ಪರ್ವತ ಶಿವಯೋಗಿ ಕಾಲವೂ ಬಂದಿದೆ. ಹೀಗಾಗಿ ಈ ಪರಂಪರೆಗೆ ಸಂಬಂಧಿಸಿದ ಪರ್ವತ ಶಿವಯೋಗಿಯ ಕಾಲವು ೧೦೦ವರ್ಷದಷ್ಟು ಮುಂದೆ ಬಂದು ಕ್ರಿ.ಶ.೧೭೫೦ ಆಗುತ್ತದೆ.

ಚತುರಾಸ್ಯಪುರಾಣದ ಕರ್ತೃ ಸಂಪಾದನೆಯ ಪರ್ವತೇಶ್ವರ, ವಿರಕ್ತ ತೋಂಟದಾರ್ಯನ ಗುರು ಪರ್ವತೇಂದ್ರ, ನನ್ನಯ್ಯಗಳ ಚಾರಿತ್ರದ ಕರ್ತೃ ಪರ್ವತದೇವ ಇವರಿಂದ ಭಿನ್ನನಾಗಿದ್ದಾನೆ, ಈ ಪರ್ವತಶಿವಯೋಗಿ.

ಗುರುಬಸವರಾಜನ ಟೀಕೆಯಂತೆ ಈತನ ಟೀಕೆಯದೂ ಈ ವರೆಗೆ ಒಂದೇ ಪ್ರತಿ ಸಿಕ್ಕಿದೆ. ಸಿಕ್ಕ ಒಂದು ಪ್ರತಿಯೂ ಬಹುಶಃ ಲಿಪಿಕಾರನ ಹೊಣೆಗೇಡಿತನದಿಂದಾಗಿ ಅಚ್ಚುಕಟ್ಟಾಗಿ ಲಿಪಿಸಲ್ಪಟ್ಟಿಲ್ಲ. ಕಾರಣ ಈತನ ಟೀಕೆ ಅಲ್ಲಲ್ಲಿ ಒಂದು ಬಗೆಯ ಅಪೂರ್ಣ ಸ್ಥಿತಿಯಲ್ಲಿ ನಿಂತಂತಾಗಿದೆ. ಈ ಟೀಕೆ ವಾಚ್ಯಾರ್ಥಕ್ಕಿಂತ ತಾತ್ವಿಕ ಅರ್ಥದತ್ತ ತನ್ನ ಒಲವನ್ನು ತೋರಿಸುತ್ತದೆ. ಉದಾ:

"ಬಿಳಿಯ ಕರಿಕೆಯೆಂದರೆ ಅಂತರಂಗದ ಸತ್ವಗುಣಸಂಬಂಧವಾದ ಸುಜ್ಞಾನವು. ಕಣಿಗಿಲೆಲೆಯೆನಲ್ ಬಹಿರಂಗದ ಸತ್ಕ್ರಿಯೆ. ತೊಱೆಯ ಮಳಲು ತಂದು ಎಂದರೆ ಮನಸ್ಸೆಂಬ ನದಿಯ ತಟದಲ್ಲಿರ್ದ ಚಿಲ್ಲಿಂಗವನಾಗುಮಾಡಿಕೊಂಡು ಎಂಬುದರ್ಥ. ಆ ಮಹಾಲಿಂಗವೇ ಇಷ್ಟವೆಂಬ ಪುರುಷನಾಗಬೇಕೆಂದು ಎಂಬುದೀಗ ಕೂಡಲಸಂಗಮದೇವನೆಂಬ ಗಂಡನಾಗಬೇಕೆಂದು ಎಂಬುದರ್ಥ. ಭಕ್ತಿ ಜವ್ವನವೆಱದಿರ್ದ ಪಂಚಶಕ್ತಿಯ ಕೂಡಿ ಎಂಬುದೀಗ ಚಿಕ್ಕಚಿಕ್ಕ ಮಕ್ಕಳೆಲ್ಲರು ನೆಱೆದು ಎಂಬುದರ್ಥ. ಚಿಚ್ಛಕ್ತಿಯ ವ್ರತವನಾಚರಿಸುವುದಕ್ಕೆಯ್ದಿರೆಂಬುದೀಗ ಗೌರಿಯ ನೋನುವ ಬನ್ನಿರೆ ಎಂಬುದರ್ಥ.

ಮೇಲಿನ ಎಲ್ಲ ವಿವರಣೆಯಿಂದ ಈ ಟೀಕೆಗಳಲ್ಲಿ I ನೆಯದು ೧೯ನೆಯ ಶತಮಾನದಲ್ಲಿ II ನೆಯದು ೧೮ನೆಯ ಶತಮಾನದಲ್ಲಿ ಹುಟ್ಟಿರಬಹುದು III ಮತ್ತು V ನೆಯವು ೧೮ನೆಯ ಶತಮಾನಗಳಲ್ಲಿ ಹುಟ್ಟಿವೆ. IV ನೆಯದು ಬಹುಶಃ ೧೭ನೆಯ ಶತಮಾನದಲ್ಲಿ ಸಂಕಲಿತವಾಗಿದ್ದರೂ ವಚನಟೀಕೆಗಳ ಸೃಷ್ಟಿ ೧೫ನೆಯ ಶತಮಾನದಲ್ಲಿ ಹುಟ್ಟಿದ ಲಿಂಗಲೀಲಾವಿಲಾಸಚಾರಿತ್ರಕ್ಕೆ ಪ್ರಾಚೀನವೆಂದು ಹೇಳಬಹುದು.

## • ಟೀಕೆಗಳ ಸಾಧನೆ •

ಒಂದು ಕೃತಿಗೆ ಬರೆದ ಟೀಕೆ, ಅದರ ಹೊರಮೈ ಇಲ್ಲವೆ ಒಳಮೈ ಇಲ್ಲವೆ ಇವೆರಡನ್ನೂ ಕುರಿತು ನಡೆಸಿದ ಅಧ್ಯಯನವಾಗಿರುತ್ತದೆ. ಇವುಗಳಲ್ಲಿ ಹೊರಮೈ ಅಧ್ಯಯನ ಶಬ್ದಾರ್ಥಪಾತಳಿಯಲ್ಲಿ ವ್ಯವಹರಿಸಿದರೆ ಒಳಮೈ ಅಧ್ಯಯನ ಭಾವಾರ್ಥ ಪಾತಳಿಯಲ್ಲಿ ವ್ಯವಹರಿಸುತ್ತದೆ.

ಟೀಕೆಯೆಂಬುದು ಸಾಹಿತ್ಯಕೃತಿಗೆ ಬರೆದ ಒಂದು ವಿಧದ ವಿಮರ್ಶೆಯೇ ಸರಿ. ಆದರೆ ಸಾಹಿತ್ಯವನ್ನು ವಿಮರ್ಶಿಸುವ ದೃಷ್ಟಿ ಜನಾಂಗದಿಂದ ಜನಾಂಗಕ್ಕೆ, ಕಾಲದಿಂದ ಕಾಲಕ್ಕೆ ಭಿನ್ನವಾಗುವುದು ಸಹಜ. ವಚನನಿಧಿಯನ್ನೇ ಕುರಿತು ಹೇಳುವುದಾದರೆ ಅದನ್ನು ಹರಿಹರಾದಿಗಳು ಸಾಹಿತ್ಯದೃಷ್ಟಿಯಿಂದ ನೋಡಿದರೆ ತರುವಾಯದ ನೂರೊಂದು ಮತ್ತು ಏಳು ನೂರೊಂದು ವಿರಕ್ತರು ತಾತ್ವಿಕದೃಷ್ಟಿಯಿಂದ ನೋಡಿದರು. ಇಂದು ಅದು ಸಾಮಾಜಿಕ ದೃಷ್ಟಿಯಿಂದ ತುಂಬ ಬೆಲೆಯುಳ್ಳುದಾಗಿ ಕಾಣಿಸತೊಡಗಿದೆ.

ಬಸವಣ್ಣನವರ ವಚನಗಳಿಗೆ ಟೀಕೆಗಳು ಹುಟ್ಟಿದುದು ವಚನಗಳನ್ನು ತಾತ್ವಿಕದೃಷ್ಟಿಯಿಂದ ನೋಡುತ್ತಲಿದ್ದ ಕಾಲದಲ್ಲಿ. ಹೀಗಾಗಿ ಸಾಹಿತ್ಯಿಕ, ಸಾಮಾಜಿಕ ದೃಷ್ಟಿಗಳಿಂದ ಈ ಟೀಕೆಗಳನ್ನು ನೋಡಬಯಸುವವರಿಗೆ ಇಲ್ಲಿ ನಿರಾಶೆ ಖಂಡಿತ. ಟೀಕಾಕಾರರ ಉದ್ದೇಶವೂ ಅದಾಗಿರಲಿಲ್ಲ. ಕಾರಣ ಈ ಟೀಕೆಗಳು ವಚನಗಳಿಗೆ ಬರೆದ ಸಾಹಿತ್ಯಿಕ ವಿಮರ್ಶೆ, ಸಾಮಾಜಿಕ ವಿಮರ್ಶೆಗಳಾಗಿರದೆ ಶಬ್ದಕ್ಕೆ ಅರ್ಥವನ್ನು ಕೊಡುತ್ತ ಬರೆದ ತಾತ್ವಿಕ ವಿವರಣೆ-ವಿಮರ್ಶೆಗಳಾಗಿವೆಯೆಂಬುದನ್ನು ಓದುಗರು ನೆನಪಿನಲ್ಲಿಟ್ಟುಕೊಳ್ಳಬೇಕು.

ಇನ್ನೊಂದು ಸಂಗತಿಯೆಂದರೆ, ಈ ಟೀಕೆಗಳು ಹುಟ್ಟಿದುದು ವೀರಶೈವವು ಧರ್ಮದ ತಿಳಿಜಲ ಪ್ರವಾಹಘಟ್ಟವನ್ನು ದಾಟಿ, ಒಂದು ವ್ಯವಸ್ಥೆಗೆ ಒಳಪಟ್ಟು ಮತೀಯ ತಟಾಕವಾಗಿದ್ದ ಮತ್ತು ಅದನ್ನೂ ದಾಟಿ ಜಾತಿಕೂಪವಾಗಿದ್ದ ಕಾಲದಲ್ಲಿ; ಪಾರಿಭಾಷಿಕ ಪದಗಳು ವಾಚ್ಯಾರ್ಥಕ್ಕೆ ಇಳಿಯುತ್ತಿದ್ದ ಕಾಲದಲ್ಲಿ. ಹೀಗಾಗಿ ಇವುಗಳಲ್ಲಿ ಶಕ್ತಿವಿಶಿಷ್ಟಾದ್ವೈತದ ಶುದ್ಧ ತಾತ್ವಿಕವಿವರಣೆ ಕೆಲವು ಸಲ ಕಂಡುಬರುವುದಿಲ್ಲ. ಅಂದರೆ ಆ ಕಾಲದಲ್ಲಿ ವಚನಗಳಿಗೆ ಹೇಳುತ್ತಿದ್ದ ಸಾಂಪ್ರದಾಯಿಕ ಅರ್ಥ ಮತ್ತು ಟೀಕಾಕಾರನ ವ್ಯಕ್ತಿಗತ ಪರಿಮಿತಿಗಳ ಹಿನ್ನೆಲೆಯಲ್ಲಿ ಈ ಟೀಕೆಗಳು ಹುಟ್ಟಿಕೊಂಡಿವೆ. ಈ ಮಾತು ಸ್ವಲ್ಪ ಹೆಚ್ಚು ಕಡಿಮೆ ಮಹಾಲಿಂಗದೇವಕೃತ ಪ್ರಭುದೇವರ ವಚನ ಟೀಕೆ, ಕಲ್ಲುಮಠದ ಪ್ರಭುದೇವಕೃತ ಲಿಂಗಲೀಲಾ ವಿಲಾಸ ಚಾರಿತ್ರ ಟೀಕೆ ಮೊದಲಾದವುಗಳಿಗೂ ಅನ್ವಯಿಸುತ್ತದೆ.

ವಚನಗಳು ಸಾಮಾನ್ಯ, ಶಾಸ್ತ್ರ, ಬೆಡಗು ಎಂದು ಮೂರು ವಿಧವಾಗಿವೆ. ಈ ಟೀಕಾಗ್ರಂಥಗಳು ಇವುಗಳ ವಿಷಯವಾಗಿ ನಡೆದುಕೊಂಡ ರೀತಿಯನ್ನು ಇಲ್ಲಿ ನೋಡಬಹುದು. ಸಾಮಾನ್ಯ ವಚನಗಳಿಗೆ ಬರೆದ ಟೀಕೆಗಳು ಹೀಗಿವೆ:

ಮುನಿದೆಯಾದಡೆ ಒಮ್ಮೆ ಜಱಿದಡೆ ಸಾಲದೆ? ಅಕಟಕಟಾ ಮದನಂಗೆ ಮಾಱುಗೊಡುವರೆ?
ಹಗೆಗೆ ಮಾಱುಗೊಟ್ಟು ನಿಮ್ಮವನೊಪ್ಪಿಸುವರೆ ಕೂಡಲಸಂಗಮದೇವಾ?

"ಮುನಿಯಾದಡೆ ಒಮ್ಮೆ ಜಱಿದಡೆ ಸಾಲದೆ? : ಮುನಿಯಾದಡೆ–"ಮುನಿ ಕೋಪೇ ತಪಸೇ ಚ" ಎಂದು ಕೋಪಿಸಿ, ಒಮ್ಮೆ–ಒಂದು ವೇಳೆ, ಜಱಿದಡೆ–ಜಱಿ ಧಿಕ್ಕಾರೇ" ಯೆಂದು ಧಿಕ್ಕರಿಸಿ ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚವನ್ನು ನಷ್ಟವ ಮಾಡಿಬಿಟ್ಟು ರಕ್ಷಣೆಯ ಮಾಡೇನೆಂದರೆ, ಸಾಲದೆ?–ಅಷ್ಟೇ ಸಾಲದೆ? ಅಷ್ಟೇ ಸಾಕು. ಅಕಟಕಟಾ ಮದನಂಗೆ ಮಾರುಗೊಡುವರೆ? :ಅಕಟಕಟಾ–ಅಯ್ಯಯ್ಯೊ, ಮದನಂಗೆ–ಮನ್ಮಥಂಗೆ, ಹಗೆಗೆ–ಶತ್ರುವಾದ ಕಾಮಾದಿ ಅರಿಷಡ್ವರ್ಗಂಗಳಿಗೆ, ಮಾಱುಗೊಟ್ಟು–ಒಪ್ಪಿಸಿಕೊಟ್ಟು, ನಿಮ್ಮವನ–ನಿಮ್ಮಂಶೀಭೂತನಾದ ಶಿವಶರಣನ, ಒಪ್ಪಿಸುವರೆ–ಜನನಮರಣಂಗಳಲ್ಲಿ ತಂದು ಸಂಹರಿಸುವರೆ ಎಂಬಲ್ಲಿ ಜನನ ಮರಣಂಗಳ ವರ್ತನೆಯನ್ನು ನಷ್ಟವ ಮಾಡಿ ಗುರುವಿನಲ್ಲಿ ಉತ್ಪತ್ಯ ಲಿಂಗದಲ್ಲಿ ಸ್ಥಿತಿ ಪರತತ್ತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಡಿಸು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು".

ಹೀಗೆ ನೇರ ಟೀಕೆಗಳು I ನೆಯದರಲ್ಲಿ ತಪ್ಪದೇ ಮಿಕ್ಕವುಗಳಲ್ಲಿ ಆಗಾಗ ಬಂದು ವಚನದ ವಾಚ್ಯಾರ್ಥವನ್ನು ವ್ಯಕ್ತಪಡಿಸುತ್ತವೆ. ಶಬ್ದಾರ್ಥ ಬಯಸುವವರಿಗೆ ಇವು ತುಂಬ ನೆರವಾಗುವಲ್ಲಿ ಸಂದೇಹವಿಲ್ಲ. 'ಶಾಸ್ತ್ರವಚನ'ಗಳಿಗೆ ಬಂದರೆ ಟೀಕೆ ಇನ್ನೂ ಅವಶ್ಯ. ಉದಾ:

ತನುವ ಕೊಟ್ಟು ಗುರುವನೊಲಿಸಬೇಕು, ಮನವ ಕೊಟ್ಟು ಲಿಂಗವನೊಲಿಸಬೇಕು,
ಧನವ ಕೊಟ್ಟು ಜಂಗಮವನೊಲಿಸಬೇಕು.

ಈ ತ್ರಿವಿಧವ ಹೊಱಗುಮಾಡಿ, ಹಱಿಯ ಹೊಯಿಸಿ ಕುಱುಹ ಪೂಜಿಸುವರ ಮೆಚ್ಚ ಕೂಡಲಸಂಗಮದೇವ.

"ತನುವ ಕೊಟ್ಟು-ಅಂಗದಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತ ಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯ ಮಾಡುವ ನೆವದಿಂದ ತನುಪದಾರ್ಥವ ಗುರುವಿಂಗೆ ಸಮರ್ಪಣೆಯ ಮಾಡಿ, ಗುರುವನೊಲಿಸಬೇಕು-ಗುರುಭಕ್ತಿಯನ್ನು ಮಾಡಿ ಗುರುವಿನ ಕರುಣವ ಹಡೆದುಕೊಳಬೇಕು. ಮನವ ಕೊಟ್ಟು-ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಆ ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಮಾಡುವ ನೆವದಿಂದ ಮನಃಪದಾರ್ಥವ ಲಿಂಗಕ್ಕೆ ಸಮರ್ಪಣೆಯ ಮಾಡಿ, ಲಿಂಗವನೊಲಿಸಬೇಕು-ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆದುಕೊಡಬೇಕು. ಧನವ ಕೊಟ್ಟು-ಪ್ರಾಣಜ್ಞಾನದಲ್ಲಿ ಜಂಗಮದ ಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಮಾಡುವ ನೆವದಿಂದ ಧನಪದಾರ್ಥವ ಜಂಗಮಕ್ಕೆ ಸಮರ್ಪಿಸಿ, ಜಂಗಮವನೊಲಿಸಬೇಕು-ಜಂಗಮಭಕ್ತಿಮಾಡಿ ಜಂಗಮದ ಕರುಣವ ಹಡೆದುಕೊಳಬೇಕು. ಈ ತ್ರಿವಿಧವ-ಈ ತನುಮನಧನವೆಂಬ ತ್ರಿವಿಧಪದಾರ್ಥವನ್ನು, ಹೊಜಗುಮಾಡಿ-ವಂಚಿಸಿಕೊಂಡು, ಹಜೆಯ ಹೊಯಿಸಿ-ಪಂಚಮಹಾವಾದ್ಯಂಗಳ ನುಡಿಸಿ, ಕುಜುಹ ಪೂಜಿಸುವರ-ಸ್ಥಾವರಲಿಂಗಪೂಜೆಯ ಮಾಡುವವರ, ಕೂಡಲಸಂಗಮದೇವ-ಪರಶಿವಲಿಂಗವು, ಮೆಚ್ಚ-ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕರುಣಿಸಿಕೊಡನು."

ವಚನಸಾಹಿತ್ಯದಲ್ಲಿ ರೂಪಕ ಉಪಮೆ ಮೊದಲಾದ ಅಲಂಕಾರಗಳ ಮೂಲಕ ಹೇಳಿದ ಇಂಥ ಇತರ ಶಾಸ್ತ್ರವಚನಗಳ ಸಂಖ್ಯೆ ಹೇರಳವಾಗಿದೆ. ಇವುಗಳ ಅಂತರಾರ್ಥವನ್ನರಿಯಲು ಟೀಕೆ ಅವಶ್ಯ.

ಬಸವಣ್ಣನವರ ವಚನಗಳಲ್ಲಿ, ಸಂಕೇತಮೂಲವಾದ ಬೆಡಗು ಕಡಿಮೆ. ಆದರೂ ಅಲ್ಲಲ್ಲಿ ಗೋಚರಿಸುವ ಇವುಗಳಿಗೆ ಟೀಕೆಯನ್ನುಳಿದರೆ "ಅನ್ಯಥಾ ಶರಣಂ ನಾಸ್ತಿ". ಸೋಮಶೇಖರಶಿವಯೋಗಿಯ "ಘಟ್ಟಿಘಟ್ಟಿ ವಚನಟೀಕೆ" ಸಾಮಾನ್ಯವಾಗಿ ಇಂಥವುಗಳನ್ನೇ ಗುರಿಯಿಟ್ಟು ಬರೆದುದಾಗಿದೆ. ಉದಾ:

"ಇಂದು ಹುಟ್ಟದ ಕೂಸಿಂಗೆ-ಈ ದೇಹಸಂಬಂಧಿಯಾದಂದು ಜ್ಞಾನೋದಯವಾದ ಜ್ಞಾನಕಲಾತ್ಮನಿಗೆ, ಅದಲ್ಲದೆ ಅಕ್ಕನಾಗಾಂಬಿಕೆಯ ಚಿದ್ಗರ್ಭದಿಂದುದಯವಾದ ಚೆನ್ನಬಸವೇಶ್ವರನೆಂಬ ಶಿಶುವಿಗೆ, ಇಂದೇ ಜವ್ವನವಾಯಿತ್ತಯ್ಯ-ಹುಟ್ಟುತ್ತಲೇ ಮರುಗದ ಗಿಡದೋಪಾದಿಯಲ್ಲಿ ಭಕ್ತಿಜ್ಞಾನವೈರಾಗ್ಯವು ವರ್ಧನವಾಯಿತ್ತಯ್ಯ. ಆ ಕೂಸು ಬೀದಿಯಲೊತ್ತೆಯಕೊಳ್ಳಲು ನಿಂದಿತ್ತಯ್ಯ-ಆ ಚೆನ್ನಬಸವೇಶ್ವರನೆಂಬ ಶಿಶುವು ಸರ್ವಾಚಾರಸಂಪತ್ತಿನಾಚರಣೆಯೆಂಬ ವೀಥಿಯಲ್ಲಿ ಭಕ್ತಿಪದಾರ್ಥವನು ಕೈಕೊಂಡು ಮಹಾನುಭಾವವನು ಬೋಧಿಸಲು ನೆಲಸಿತ್ತಯ್ಯ. ಇದರ ಸಂಗಸುಖದನುಭಾವವನು ಕೂಡಲಸಂಗಮದೇವ ತಾನೆ ಬಲ್ಲ-ಇಂತಿವರ ಸಂಪರ್ಕದ ಸೌಖ್ಯದ ಜ್ಞಾನಾನುಭಾವವನು ಪರಶಿವಲಿಂಗವು ತಾನೆ ಬಲ್ಲನೆಂಬುದರ್ಥ."

"ಇಂದು-ಈ ವರ್ತಮಾನಕಾಲದಲ್ಲಿ, ಹುಟ್ಟಿದ-ಶ್ರೀಗುರುಸ್ವಾಮಿಯ ಕರಗರ್ಭದಲ್ಲಿ ಉದಯವಾದ, ಕೂಸಿಂಗೆ-ಶಿಶುವಾದ ಜ್ಞಾನ ಕಲಾತ್ಮನಿಗೆ, ಇಂದೇ-ಈ ಶರೀರಸಂಬಂಧದಲ್ಲಿಯೇ ಜವ್ವನವಾಯಿತ್ತಯ್ಯ-ನವವಿಧಭಕ್ತಿಯ ವರ್ಧನ ಉಂಟಾಯಿತ್ತಯ್ಯ. ಆ ಕೂಸು-ಶರಣ ಸತಿಯು, ಬೀದಿಯಲ್ಲಿ-ಸಕಲಕರಣಂಗಳ ವ್ಯಾಪಾರವನುಳ್ಳ ಚಿದಂಗವೆಂಬ ಬಾಜಾರದಲ್ಲಿ, ಒತ್ತೆಗೊಳಲು ನಿಂದಿತ್ತಯ್ಯ-

ಸಕಲೇಂದ್ರಿಯ ಮುಖದಿಂದೆ ಬಂದ ವಿಷಯಪದಾರ್ಥಗಳನು ಲಿಂಗಕ್ಕೆ ಸಮರ್ಪಣೆಯ ಮಾಡುವುದಕ್ಕಭಿಮುಖವಾಗಿ ನೆಲಸಿತ್ತಯ್ಯ. ಇದಱ–ಈ ಲಿಂಗಾಂಗಸಂಬಂಧದ, ಸಂಗ ಸುಖದನುಭವವನು–ಸರಸಸಂಯೋಗದ ಭೋಗೋಪಭೋಗವನು, ಪರಶಿವಲಿಂಗಸ್ವರೂಪವಾದ ಶರಣರೇ ಬಲ್ಲರಲ್ಲದೆ ಮಿಕ್ಕಿನ ದ್ವೈತಾದ್ವೈತ ಮಾರ್ಗದ ಹಠಯೋಗಿಗಳರಿಯರು ಎಂಬುದೀಗ ಇದರಂಗ ಸುಖದನುಭಾವವನು ಕೂಡಲಸಂಗಮದೇವ ತಾನೇ ಬಲ್ಲನೆಂಬ ಶಬ್ದಕ್ಕರ್ಥ."

ಹೀಗೆ ಸಾಮಾನ್ಯ, ಶಾಸ್ತ್ರ, ಬೆಡಗುರೂಪದ ವಚನಗಳಿಗೆ ಕ್ರಮವಾಗಿ ಟೀಕೆಗಳ ಅವಶ್ಯಕತೆ ಹೆಚ್ಚುತ್ತ ಹೋಗುತ್ತದೆ. ಈ ರೀತಿ ನಮಗೆ ಪ್ರಯೋಜಕವಾಗುತ್ತಿದ್ದರೂ ಓದುಗನು ವಚನ ಓದಿ ಟೀಕೆಗೆ ಬಂದರೆ ಕೆಲವು ಸಲ ನೀರಿನಿಂದ ಹೊರಗೆ ಬಂದ ಮೀನಿನಂತಾಗುತ್ತಾನೆ. ಇದಕ್ಕೆ ಕಾರಣ: ವಚನಗಳಲ್ಲಿಯ ಸೊಗಸು ಟೀಕೆಯಲ್ಲಿ ಸೋರಿಹೋದುದು, ಉದ್ದುದ್ದ ವಾಕ್ಯಗಳು, ಕೃರ್ತಕರ್ಮಕ್ರಿಯಾಸಂಬಂಧ ತಪ್ಪಿದುದು, ಮಾತನಾಡಿದಂತೆ ವಾಕ್ಯರಚನೆ ಯೋಜಿಸಿದುದು. ನಮ್ಮ ಎಷ್ಟೋ ಜನ ವಿದ್ವಾಂಸರು 'ವಚನಟೀಕೆ'ಗಳ ಬಗ್ಗೆ ನಿರುತ್ಸಾಹ ತೋರಿಸಲು ಬಹುಶಃ ಈ ಸಂಗತಿಗಳು ಕಾರಣ. ಹೀಗಿದ್ದರೂ ಪ್ರಸ್ತುತ ಟೀಕಾಕಾರರು ಅಲ್ಲೊಂದು ಇಲ್ಲೊಂದು ರಸಾವಿಷ್ಟ ಟೀಕೆ ಬರೆದಿರುವರು. ಉದಾ:

೧. ನೀರಿಂಗೆ ನೈದಿಲೆಯೆ ಶೃಂಗಾರ; ಊರಿಂಗೆ ಆರವೆ ಶೃಂಗಾರ;
ಸಮುದ್ರಕ್ಕೆ ತೆರೆಯೆ ಶೃಂಗಾರ; ನಾರಿಗೆ ಗುಣವೆ ಶೃಂಗಾರ; ಗಗನಕ್ಕೆ ಚಂದ್ರಮನೆ ಶೃಂಗಾರ;
ನಮ್ಮ ಕೂಡಲಸಂಗನ ಶರಣರ ನೊಸಲಿಗೆ ವಿಭೂತಿಯೆ ಶೃಂಗಾರ.

"ನೀರಿಂಗೆ ನೈದಿಲೆಯೆ ಶೃಂಗಾರ: ನೀರಿಂಗೆ–ಉದಕಕ್ಕೆ, ನೈದಿಲೆಯ–ನೀಲೋತ್ಪಲವೆ, ಶೃಂಗಾರ–ಅಲಂಕಾರವೆಂಬಲ್ಲಿ ಕೆರೆಗಳಲ್ಲಾಗಲಿ ಬಾವಿಗಳಲ್ಲಾಗಲಿ ಕೊಳಗಳಲ್ಲಾಗಲಿ ಹೊಂದಾವರೆ ಮಂದಾವರೆ ತಾವರೆ ಕಮಲ ಚಂಗಣಗಿಲ ನೈದಲೆಹೂವು ಮೊದಲಾದಂಥವಿದ್ದರೆ ನೋಡುವರ ಕಣ್ಣಿಗೆ ಅಲಂಕಾರವಾಗಿರ್ಪುದು. ಅವೇನೂ ಇಲ್ಲದೆ ಬರೇ ಗುಂಭವಾಗಿ ನೀರೇ ತುಂಬಿಕೊಂಡಿದ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಭೋಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು.

ಊರಿಂಗೆ ಆಗರವೆ ಶೃಂಗಾರ: ಊರಿಂಗೆ–ಗ್ರಾಮಕ್ಕೆ, ಆರವೆ–ವನಾಂತರವೆ, ಶೃಂಗಾರ–ಅಲಂಕಾರವೆಂಬಲ್ಲಿ ತೆಂಗಿನ ತೋಟ ಅಡಿಕೆಯತೋಟ ಬಾಳಿಯ ತೋಟ ಕಬ್ಬಿನ ತೋಟ ನೆಲ್ಲಗದ್ದೆ ಮೊದಲಾದಂಥವಿದ್ದರೆ ನೋಡವಂಥವಿದ್ದರೆ ಕಣ್ಣಿಂಗೆ ಅಲಂಕಾರವಾಗಿರ್ಪುದು. ಅವೇನೂ ಇಲ್ಲದೆ ಮಹಾಬಯಲಲ್ಲಿ ಗ್ರಾಮವನ್ನು ಕಟ್ಟಿದ್ದರೆ ನೋಡುವಂಥವರ ಕಣ್ಣಿಂಗೆ ರಣರಣಾಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು.

ಸಮುದ್ರಕ್ಕೆ ತೆರೆಯೆ ಶೃಂಗಾರ : ಸಮುದ್ರಕ್ಕೆ ಅಬ್ಧಿಯೆ–ಕಲ್ಲೋಲಂಗಳೆ ಶೃಂಗಾರ–ಅಲಂಕಾರವೆಂಬಲ್ಲಿ ಸಮುದ್ರವು ನೊರೆ ತೆರೆಬುದ್ಬುದ ಸೀಕರಾದಿ ತಂತುರ್ವನಿಗಳಿಂದ ಹೆಣ್ಣುತೆರೆ ಗಂಡುತೆರೆಗಳಿಂದ ಭೋರೆಂದು ಉಲಿವುತ್ತಿದ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದು. ಅದೇನೂ ಇಲ್ಲದೆ ತೆಪ್ಪೆಗೆ ನೀರು ತುಂಬಿಕೊಂಡಿರ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಭೋಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು.

ನಾರಿಗೆ ಗುಣವೆ ಶೃಂಗಾರ: ನಾರಿಗೆ–ಸ್ತ್ರೀಯಳಿಗೆ, ಗುಣವೆ–ಸದ್ಗುಣವೆ, ಶೃಂಗಾರ–ಅಲಂಕಾರವೆಂಬಲ್ಲಿ ಮನೆಗೆ ಬಂದಂಥ ಭಕ್ತಮಾಹೇಶ್ವರರುಗಳಿಗೆ ಜಯಜೀಯಾ ಚಿತ್ತೈಸಿ ಬನ್ನಿ ಮೂರ್ತವ ಮಾಡಿರೆಂದು ಅಗ್ಗಣಿಯನ್ನು ಕೊಟ್ಟು ಅರ್ಚನಾರ್ಪಣಾದಿ ಕ್ರಿಯೆಗಳನ್ನು ಮಾಡಿಸುವಂಥದೆ ಸದ್ಗುಣವಲ್ಲದೆ ಮಿಂದು ಮಡಿಯನುಟ್ಟುಕೊಂಡು ಬಾಚಿ ಬೈತಲೆಯ ತೆಗೆದುಕೊಂಡು ಮಿಂಚಾಗಿರ್ದಲ್ಲಿ ಹೋ ಹೋ ಇವಳು ಹೊಗರಾಗೈದಾಳೆ ಎಂದು ನಕ್ಕು ಹಾಸ್ಯವ ಮಾಡುತ್ತಿಹರು.

ಗಗನಕ್ಕೆ ಚಂದ್ರಮನೆ ಶೃಂಗಾರ: ಗಗನಕ್ಕೆ–ಆಕಾಶಕ್ಕೆ, ಚಂದ್ರಮನೆ: ಪೌರ್ಣಮಿಚಂದ್ರನೆ, ಶೃಂಗಾರ–ಅಲಂಕಾರವೆಂಬಲ್ಲಿ ಬಹುನಕ್ಷತ್ರಂಗಳ ಮದ್ಯದಲ್ಲಿ ಪೌರ್ಣಮಿಚಂದ್ರನಿದ್ದರೆ ನೋಡುವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದು. ಅವೇನೂ ಇಲ್ಲದೆ ಅಮವಾಸ್ಯೆಯ ಕಾಲದಲ್ಲಿ ಗಡದಾಗಿ ಕಾವಳ ಬಿದ್ದಿದ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದೆ? ಇಲ್ಲವು, ರಣಾರಣಾಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು. ನಮ್ಮ ಕೂಡಲಸಂಗನ–ನಮ್ಮ ಪರಶಿವಲಿಂಗದಪರಾವತಾರಮೂರ್ತಿಗಳಾದ, ಶರಣರ–ಶಿವಶರಣರ, ಫಣಿಯಲ್ಲಿಯ–ನೊಸಲಲ್ಲಿಯ, ವಿಭೂತಿಯೆ–ಚಿದ್ವಿಭೂತಿಯೆ, ಶೃಂಗಾರ–ಅಲಂಕಾರವೆಂಬಲ್ಲಿ ಆಭರಣವಾಗಿ ಒಪ್ಪುತ್ತಿಹುದು".

೨. ಒಲವಿಲ್ಲದ ಪೂಜೆ! ಸ್ನೇಹವಿಲ್ಲದ ಮಾಟ!
ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ! ಚಿತ್ರದ ಕಬ್ಬು ಕಾಣಿರಣ್ಣಾ
ಅಪ್ಪಿದಡೇನು ಸುಖವಿಲ್ಲ, ಮೆಲಿದಡೇನು ಸವಿಯಿಲ್ಲ!
ಕೂಡಲಸಂಗಮದೇವಾ ಕೇಳಯ್ಯಾ, ನಿಜವಿಲ್ಲದವರ ಭಕ್ತಿಯಿಂತುಂಟು !

"ಒಲವಿಲ್ಲದ ಪೂಜೆ : [ಒಲವು–] ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಕ್ರೀ, ಇಲ್ಲದ–ಉಂಟಾಗಿಲ್ಲದ, ಪೂಜೆ–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಲಿಂಗಪೂಜೆಯು, ಸ್ನೇಹವಿಲ್ಲದ–ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವಿಲ್ಲದ, ಮಾಟ–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಜಂಗಮಭಕ್ತಿಯು, ಆ ಪೂಜೆಯು–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಲಿಂಗಪೂಜೆಯು, ಚಿತ್ರದ ರೂಹು ಕಾಣಿರಣ್ಣಾ–ಪಟಭಿತ್ತಿಗಳ ಮೇಲೆ ನಖನೇತ್ರದಂತಪಂಜ್ತಿ ಮೊಲೆಮುಡಿಗಳಿಂದ ಶುದ್ಧಾಂಗಸ್ವರೂಪವಾದ ಸ್ತ್ರೀರೂಪವನು ತಿದ್ದಿದ ಹಾಂಗೆ ಇಪ್ಪುದು ಕಾಣಿರಣ್ಣಾ. ಆ ಮಾಟವು–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಜಂಗಮಭಕ್ತಿಯು, ಚಿತ್ರದ ಕಬ್ಬು ಕಾಣಿರಣ್ಣಾ–ಪಟಭಿತ್ತಿಗಳ ಮೇಲೆ ಗರಿಗಳಿಂದೆ ಗಣಿಗಳಿಂದ ಕಬ್ಬು ತಿದ್ದಿದ ಹಾಂಗೆ ಇರ್ಪುದು, ಕಾಣಿರಣ್ಣಾ–ಕಂಡಿರಣ್ಣಾ.

ಅಪ್ಪಿದಡೇನು ಸುಖವಿಲ್ಲ–ಬಹಿರಂಗದಲ್ಲಿರುವಂಥ ಸ್ತ್ರೀಯರನ್ನು ತರ್ಕೈಸಿಕೊಂಡರೆ ಕ್ರೀಡಾವಿನೋದದ ಪರಿಣಾಮವು ತಟ್ಟುವುದಲ್ಲದೆ ಚಿತ್ರದಲ್ಲಿ ಬರೆದಂಥ ಸ್ತ್ರೀಯಳನು ತರ್ಕೈಸಿಕೊಂಡರೆ ಕ್ರೀಡಾವಿನೋದದ ಪರಿಣಾಮವು ತಟ್ಟೀತ್ತೇ? ತಟ್ಟಲರಿಯದು ಹಾಂಗೆ, ಸಮರಸಭಾವದಿಂದ ಲಿಂಗಪೂಜೆಯ ಮಾಡಿದರೆ, ಬಾಹ್ಯದಲ್ಲಿದ್ದಂಥ ಸ್ತ್ರೀಯಳ ತರ್ಕೈಸಿಕೊಂಡರೆ ಕ್ರೀಡಾವಿನೋದದ ಪರಿಣಾಮವು ತಟ್ಟಿದ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರೆಕೊಂಬುತ್ತಿಹುದು. ಅದಲ್ಲದೆ

ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡಿದರೆ ಪಟಭಿತ್ತಿಗಳ ಮೇಲೆ ಬರೆದಿದ್ದಂಥ ಸ್ತ್ರೀಯಳನು ತರ್ಕೈಸಿಕೊಂಡ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲ. ಮೆಲಿದಡೇನು ಸವಿಯಲ್ಲ!–ಬಹಿರಂಗದಲ್ಲಿದ್ದಂಥ ಕಬ್ಬನ್ನು ಮೆಲಿದರೆ ಸ್ವಾದವಾಗಿದ್ದಿತಲ್ಲದೆ ಚಿತ್ರದಲ್ಲಿ ಬರೆದಂಥ ಕಬ್ಬನು ಮೆಲಿದರೆ ಬಾಯಿಗೆ ಬರೇ ಮಣ್ಣು ಬರುವುದಲ್ಲದೆ ಸ್ವಾದ ತಟ್ಟೀತ್ತೇ? ತಟ್ಟಲರಿಯದು. ಹಾಂಗೆ ಸಮರಸಭಾವದಿಂದ ಜಂಗಮಭಕ್ತಿ ಮಾಡಿದರೆ ಬಾಹ್ಯದಲ್ಲಿದ್ದಂಥ ಕಬ್ಬನ್ನು ಮೆಲಿದರೆ ಸ್ವಾದವಾಗಿದ್ದ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರಕೊಂಬುತ್ತಿಹುದಲ್ಲದೆ ಕಂಡಕಂಡವರ ಕಂಡು ಭಿನ್ನವಿಟ್ಟುಕೊಂಡು ಜಂಗಮಭಕ್ತಿ ಮಾಡಿದಡೆ ಪಟಭಿತ್ತಿಗಳ ಮೇಲೆ ಬರೆದಂಥ ಕಬ್ಬನ್ನು ಮೆಲಿದರೆ ಬಾಯಿಗೆ ಬರೇ ಮಣ್ಣು ಬಂದ ಹಾಂಗಲ್ಲದೆ ಏತಕ್ಕೂ ಪ್ರಯೋಜನವಲ್ಲವು.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಆಲಿಸಯ್ಯಾ, ನಿಜವಿಲ್ಲದವರ ಭಕ್ತಿಯಿಂತುಂಟು [:ನಿಜ–] ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು, ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಕ್ರೀ ಸಮರಸಜ್ಞಾನ, ಇಲ್ಲದವರ–ಉಂಟಾಗಿಲ್ಲದವರ, ಭಕ್ತಿ–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಲಿಂಗಪೂಜೆ ಜಂಗಮಭಕ್ತಿಯು, ಇಂತುಂಟು–ಚಿತ್ರದ ರೂಹು, ಚಿತ್ರದ ರೂಹು, ಚಿತ್ರದ ಕಬ್ಬಿನ ಹಾಂಗೆ ವ್ಯರ್ಥಸ್ಯವಾಗಿರ್ಪುದು".

ಹೀಗೆ ಕೆಲವು ಟೀಕೆಗಳು ಸೃಜನಕ್ರಿಯೆಯಿಂದ ಕೂಡಿದ್ದು ತುಂಬ ಲವಲವಿಕೆಯಿಂದ ಶೋಭಿಸುತ್ತವೆ. ಇದಕ್ಕೆ ಹೆಚ್ಚಿನದಾಗಿ ಅಪರೂಪವಾದ ಶಬ್ದಾರ್ಥಗಳು ಹೀಗೆ ಬರೆಯಲ್ಪಟ್ಟಿವೆ.

ದಕ್ಕನುಂಗಿದವರಂತೆ–ಕೊಟ್ಟವರ ಸಾಲ ಕೊಡದೆ ಒಬ್ಬರ ಒಡವೆಯ ದಕ್ಕಹಾಕಿಸಿಕೊಂಡವನ ಹಾಂಗೆ, ಸಿಂಗಿ–ಸರ್ಪನೆಂಬಂಥದು ಸಾವಿರ ವರುಷ ತುಂಬಿದ ಬಳಿಕ ಉರಿಸಿಂಗಿಯಾಗಿ ಕಲ್ಲಮೇಲೆ ಹಾಯ್ದರೆ ಕಲ್ಲೇ ಒಡೆವುದು, ಮರದಮೇಲೆ ಹಾಯ್ದರೆ ಮರ ಉರಿವುದು, ಮತ್ತರ ಒಂದು ಮತ್ತರಕ್ಕೆ ನೂರುಮಾರೆನಿಸುವದೇ ಮತ್ತರ, ವಾಮಕ್ಷೇಮ–ನೆರತೆ ಕೊರತೆ, ಎಲವದ ಮರ–ಬೂರಿಗನ ಮರ, ಕಳ್ಳದಮ್ಮ–ಸಲ್ಲದ ದುಡ್ಡು, ಸಾದು–ಪರಿಮಳದ್ರವ್ಯ, ಎರದೆಲೆ–ಬೋರೆಎಲೆ, ಸಿನೆಹಾಳು–ಸುಡಗಾಡಿಗೆ ಸಮಾನವಾಗಿಪ್ಪುದು, ಕೊಂಡುಮಾರಿಂಗೆ ಹೋಹದು ತಪ್ಪದು–ಲೋಕದಲ್ಲಿ ಒಬ್ಬಾನೊಬ್ಬ ಆತ್ಮನು ಮೂರು ಹಣವ ಕೊಟ್ಟು ಒಂದು ಬಡಕೋಣವ ಕೊಂಡುಕೊಂಡು ಬಂದು ಹುಲ್ಲನ್ನು ಹಾಕಿ ನೀರನ್ನು ತೋರಿ ಸಂರಕ್ಷಣೆಯ ಮಾಡಿಕೊಂಡಿದ್ದಲ್ಲಿ ದಿನಕೊಂದು ರೀತಿಯಲ್ಲಿ ಕದರು ನುಂಗಿದ ಕರುವಿನೋಪಾದಿಯಲ್ಲಿ ಸಮೆದುಕೊಂಡುಹೋಗುವುದು. ಮತ್ತು ವರುಷಾರು ತಿಂಗಳಿಗೆ ತೆಗೆದುಕೊಂಡು ಹೋಗಿ ಮಾರಿದಲ್ಲಿ ಮೂರು ಹಣವಿಗೆ ಹೋಗುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ, ಕೋಡಂಗಿಯಾಟ–ಎಡದ ಹಸ್ತದಿಂದ ಬಲದ ಕಿವಿಯ ಹಿಡಿದುಕೊಂಡು, ಬಲದ ಹಸ್ತದಿಂದ ಎಡದ ಕಿವಿಯ ಹಿಡಿದುಕೊಂಡು ನರ್ತಿಸುವುದು–ಹೀಗೆ ಶಬ್ದಗಳಿಗೆ ಬರೆದ ಬಿಚ್ಚು ಅರ್ಥಗಳು ತುಂಬ ಸಹಾಯ ನೀಡುತ್ತವೆ.

ಇದಲ್ಲದೆ "ಬದುಕು ಬಾಳುಜೀವನೇ" "ಅಂಡಲೆ ಆಸನ್ನಪೀಡಾಯ", "ನುಂಗಿ ಗಿಳನೇ", "ಮುಚಿಲ್ ಮೋಚನೇ", "ಬಳಲು ಬಹು ದುಃಖೇ", "ಅಳಲು ಕ್ಲೇಶೇ", ಕೊಲ್ಲು ಸಂಹಾರೇ", "ಪೊರೆ ಪೋಷಣೇ", ಬೀಳು ಪತನೇ "ಮುನಿ ಕೋಪೇ ತಪಸೇಚೆ", "ಜಜಿ ಧಿಕ್ಕಾರೇ", "ಉಡು

ವಸ್ತ್ರ ಮೃಗಭೇದೇಚ", "ಅಳೆ ಪ್ರಮಾಣೇ", "ಒಲಿ ಪ್ರಸನ್ನೇ", "ಬಿದಿರು ದಾನೇ", "ಓಡು ಪಲಾಯನೇ", "ಮುಸುಕು ಆವರಣೇ"-ಹೀಗೆ ನೂರಾರು ಶಬ್ದಗಳ ಕೋಶವೊಂದು ಈ ಟೀಕೆಗಳಲ್ಲಿ ಅಡಗಿದೆ.

ಇದಕ್ಕೆ ಹೆಚ್ಚಿನದಾಗಿ ಕೇಣಸರ, ಉಸುಕುನೆ, ಸಪ್ಪೆದುಪ್ಪ, ಅಜ್ಜೆಹೂವು, ಎಂಗಿವರಹ, ದಿಮ್ಮನಿಸಿ (ಬಸಿರೆ), ಹಿರೇಕುಲದ ಭಕ್ತ (ಹೊಲೆಯ), ಗೆಳೆವೆಣ್ಣು ಇತ್ಯಾದಿ ಹೊಸ ಹೊಸ ದೇಶೀ ಪದಗಳು ಈ ಟೀಕೆಗಳ ಒಡಲಲ್ಲಿ ತೂರಿನಿಂತಿವೆ.

"ಭವಬಂಧನ ಭವಪಾಶವಾದ ಕಾರಣವೇನಯ್ಯಾ-ಜನ್ಮಸಂಸಾರದ ಸೆರೆಯು ಜನ್ಮಸಂಸಾರವೆಂಬ ನೇಣು ಇವು ಆತ್ಮನಿಗೆ ಉಂಟಾದ ನಿಮಿತ್ತವೇನಯ್ಯಾ", "ಎನ್ನನಳಲಿಸಿ ಕಾಡಿತ್ತು-'ಅಳಲು ಕ್ಲೇಶೇ' ಎಂದು ಕ್ಲೇಶವನ್ನು ಹುಟ್ಟಿಸಿ ಕಾಡಿತ್ತು-'ಬಳಲು ಬಹು ದುಃಖೇ' ಎಂದು ದುಃಖವನ್ನು ಹುಟ್ಟಿಸಿ ಕಾಡಿತ್ತು", "ಒಕ್ಕುದು-ಎಡೆಬಳಸಿ ಸೂಸಿದುದು, ಮಿಕ್ಕುದು-ಉಂಡುಳಿಸಿದುದು", "ಆಸೆ-ಅನ್ನಾಚ್ಛಾದನ ಹೊನ್ನು ಹೆಣ್ಣು ಮಣ್ಣಾಗಬೇಕೆಂಬ ಅಪೇಕ್ಷೆಯು, ಆಮಿಷ-ಹೊನ್ನಿದ್ದೂ ಹೊನ್ನಾಗಬೇಕು, ಹೆಣ್ಣಿದ್ದೂ ಹೆಣ್ಣಾಗಬೇಕು, ಮಣ್ಣಿದ್ದೂ ಮಣ್ಣಾಗ ಬೇಕು ಎಂಬುದೇ ಆಸೆಯೊಳ ಅತಿಕಾಂಕ್ಷೆಯು". "ಮಾರಿ-ಊರೊಳಗೆ ಗುಡಿಯ ಕಟ್ಟಿಸಿಕೊಂಡು ಪೂಜಿಸಿಕೊಂಡಿರುವಂಥದೇ ಮಾರಿ, ಮಸಣಿ-ಅಡವಿಯೊಳಗೆ ಗುಡಿಯ ಕಟ್ಟಿಸಿಕೊಂಡು ಪೂಜೆಯ ಕೈಕೊಂಬುವಂಥದೇ ಮಸಣಿ" ಮೊದಲಾದ ಪ್ರಸಂಗಗಳಲ್ಲಿ ವ್ಯಕ್ತಪಡಿಸಿದ ಅರ್ಥವ್ಯತ್ಯಾಸ ಟೀಕಾಕಾರರ ಸೂಕ್ಷ್ಮಮತಿಗೆ ಸಾಕ್ಷಿಯಾಗಿದೆ.

ಇದಲ್ಲದೆ ವಚನಗಳ ಒಡಲಲ್ಲಿ ಬರುವ ಸುಂದರ ವಾಕ್ಯಗಳು ಮರುಭೂಮಿಯಲ್ಲಿಯ ಒಯಾಸಿಸ್‌ದಂತೆ ಕಂಗೊಳಿಸುತ್ತವೆ. ಉದಾ: "ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ-ಎಳ್ಳಿಗೆ ಎಣ್ಣೆಯಾಗಿ, ಮುಳ್ಳಿಗೆ ಮೊನೆಯಾಗಿ, ಊರಿಗೆ ದಾರಿಯಾಗಿ, ದಾರಿಗೆ ಸಂಗಡವಾಗಿ, ಜನಿತಕ್ಕೆ ತಾಯಾಗಿ, ಮೋಹಕ್ಕೆ ಮಗಳಾಗಿ, ಕೂಟಕ್ಕೆ ಸ್ತ್ರೀಯಾಗಿ, ಅತ್ತೆಅತ್ತಿಗೆಯಾಗಿ, ಮತ್ತೆ ನಾದಿನಿಯಾಗಿ, ಹೆತ್ತವ್ವೆಯಾಗಿ, ಮೊಮ್ಮಗಳಾಗಿ, ಸೊಸೆಯಾಗಿ, ಹೊನ್ನು ಬಣ್ಣಗಳಾಗಿ, ಬಣ್ಣ ಭಜನೆಗಳಾಗಿ, ಕನ್ಯೆಯರಾಗಿ ಆ ಮೃತ್ಯುವು "ಅಣ್ಣಾನಿನ್ನೊಡಲು ಬಗೆವು" ದೆಂದು ಆವಾವ ಪರಿಯಲ್ಲಿ... ಪೀಡಿಸಿತ್ತು...ನಿನ್ನಿಂದುಂಟಾದ ಮಾಯಾಶಕ್ತಿಯು"(೧೫). "ಸರ್ವಗ್ರಾಸಿಯಾಗಿ-ಬ್ರಹ್ಮನ ನಾಲಿಗೆಯಲ್ಲಿ ಸರಸ್ವತಿಯಾಗಿ, ವಿಷ್ಣುವಿನ ಎದೆಗೂಡಿನಲ್ಲಿ ಲಕ್ಷ್ಮಿಯಾಗಿ, ರುದ್ರನ ಜಡೆತೊಡೆಗಳಲ್ಲಿ ಗಂಗೆಗೌರಿಯರೆಂಬ ಈರ್ವರು ಸ್ತ್ರೀಯರೆಂಬ ಸರ್ವಗ್ರಾಸಿಯಾಗಿ ಸಮಸ್ತರನು ಒಳಕೊಂಡು"(೯). "ರಕ್ಷಿಸಯ್ಯಾ-ದೇಹವಳಿದು ಆಚಾರಲಿಂಗವಾಗಿ, ಇಂದ್ರಿಯಂಗಳಳಿದು ಲಿಂಗೇಂದ್ರಿಯಂಗಳಾಗಿ ವಿಷಯಂಗಳಳಿದು ಲಿಂಗವಿಷಯಂಗಳಾಗಿ, ಜೀವವಳಿದು ಸಜ್ಜೀವ ಸ್ವರೂಪವಾಗಿ ಇವೆಲ್ಲವ ನಿವೃತ್ತಿಯಂ ಮಾಡಿ ಅಳವಡಿಸು" (೧೧). "ಆರಿಗೆ ಆರಿಲ್ಲ-ಆತ್ಮನಿಗೆ ದೇಹವಿಲ್ಲ ದೇಹಕ್ಕೆ ಆತ್ಮವಿಲ್ಲ, ತಂದೆಗೆ ಮಗನಿಲ್ಲ ಮಗನಿಗೆ ತಂದೆಯಿಲ್ಲ, ತಮ್ಮನಿಗೆ ಅಣ್ಣನಿಲ್ಲ ಅಣ್ಣನಿಗೆ ತಮ್ಮನಿಲ್ಲ, ಗುರುವಿಗೆ ಶಿಷ್ಯನಿಲ್ಲ ಶಿಷ್ಯನಿಗೆ ಗುರುವಿಲ್ಲವು"(೨೫).

ಇಂಥ ಸರಸ ವಾಕ್ಯಗಳು ಆಗಾಗ ಬಂದು ಓದುಗನ ಬೇಸರವನ್ನು ಕಳೆಯುತ್ತವೆ, "ಟೀಕೆ" ಯ ಸಾಮಾನ್ಯ ಲಕ್ಷಣ ಒಂದೇ ಬಗೆಯ ವಾಕ್ಯಗಳ ಪುನರಾವರ್ತನೆ. ಈ ಮಾತಿಗೆ ನೂರಾರು ಉದಾಹರಣೆಗಳು ಇಲ್ಲಿವೆ, ಉದಾ:

"ಎಂತಪ್ಪ ಕೋಡಗಲ್ಲನಾಯಿತ್ತಾದರೆಯೂ ವಜ್ರದುಳಿಯಿಂದ ಕಾಪನಿಕ್ಕಿ ಯಾಗಪ್ಪನ ಸೇರಿಸಿ ಅಹಲ್ಲಾಯೆಂಬ ಶಬ್ದದಿಂದ ಹಾರಿಯನೆತ್ತಿ ಹೊಡೆದಲ್ಲಿ ಭಯಂಬಟ್ಟು ಒಡೆದು ಛಿದ್ರವಾಗಿ ಕಂಬ ತೊಲೆ ಬೋದಿಗೆ ಮುಚ್ಚಳಗಲ್ಲ ಮೊದಲಾದವನು ಮಾಡಿಕೊಡುತಿರ್ದ ಕಾರಣ ಅಂತಪ್ಪ ವಜ್ರದುಳಿಯನ್ನೇ ಶ್ರೇಷ್ಠವೆಂದು ಹೇಳಬೇಕಲ್ಲದೆ" (೬). "ನುಡಿವಲ್ಲಿ–ಹತ್ತೆಂಟು ಕಥೆಕಾವ್ಯಂಗಳನು ಕಲಿತುಕೊಂಡು ಸೂತ್ರಾರ್ಥ, ಸ್ವರೂಪಾರ್ಥ, ಸಂಬಂಧಾರ್ಥ, ಚಿತ್ರಾರ್ಥ, ಪ್ರಣವಾರ್ಥ, ಭಾವಾರ್ಥ ಮೊದಲಾದುವನ್ನು ಹೇಳುವಲ್ಲಿ" (೪೦). "ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರು ಪ್ಯಾಟಿ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿಗೆ ಹೋಗಿ ಚೌಕಿಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನು ಮಾಡುತಿರ್ದಲ್ಲಿ ಅಲ್ಲಿಗೊಬ್ಬ ಉಪಾಧಿಕ ಬಂದು" (೪೧). "ಒಂದಾನೊಂದು ಭವಿಕುಲದಲ್ಲಿ ಆರು ದೊಡ್ಡ ಆರು ಸಣ್ಣ ಆರು ತಿಳಿಪೆಂದು ಮೂರಾರು ಹದಿನೆಂಟು ಕಳಾಸಂಪೂರ್ಣವನುಳ್ಳಂಥ ಸ್ತ್ರೀ" (೧೦೯) "ಹಸಿವೆಗೆ ಅನ್ನ, ಶಿಶುವಿಗೆ ಪಾಲ್ಬೆಣ್ಣೆ, ಬಸವಗೆ ಹುಲ್ಲು, ಇರುವೆಗೆ ಸಕ್ಕರಿ ಹಾಕಿಸುತ್ತಿದೇವಿ" (೨೦೭). "ಸ್ವಾಮಿ, ತನು ನಿಮ್ಮದು ಧನ ನಿಮ್ಮದು, ಅರ್ಥಪ್ರಾಣಾಭಿಮಾನ ನಿಮ್ಮದು, ನಾನು ನಿಮ್ಮ ತೊತ್ತು ತೊಂಡು ಸೇವಕನೆಂದು ಹೇಳಿಕೊಂಡಲ್ಲಿ" (೪೧). "ಶಿವಾನುಭಾವವನ್ನು ಶ್ರೋತ್ರಮುಖದಲ್ಲಿ ಕೇಳಿ, ಮನೋಮುಖದಲ್ಲಿ ಹಾರೈಸಿ, ಹೃದಯ ಮುಖದಲ್ಲಿ ಅಂಗವ ಮಾಡಿಕೊಂಡು" (೧೪೮). "ಕುರಿಯ ಹಿಂಡಿಗೆ ತೋಳ ಹೊಕ್ಕ ಹಾಂಗೆ, ಹುಲ್ಲೆ ಹಿಂಡಿಗೆ ಹುಲಿ ಹೊಕ್ಕ ಹಾಂಗೆ, ಆನೆ ಹಿಂಡಿಗೆ ಸಿಂಹ ಹೊಕ್ಕ ಹಾಂಗೆ, ಸಿಂಹನ ಹಿಂಡಿಗೆ ಗಂಡಭೇರುಂಡ ಹೊಕ್ಕ ಹಾಂಗೆ ಈಚೆಲಿಂದಾಚೆಗೆ ಆಚೆಲಿಂದೀಚೆಗೆ ಕಡಕೊಂತ ಬಂದು" (೧೫). "ಶಿವಶಾಸ್ತ್ರ ಶಿವಪುರಾಣ ಶಿವಾಗಮ ಆದ್ಯರ ವಚನದ ಕೇಳಿಕೆಯಲ್ಲದ ಹಾಳುಹರಟೆ ಸ್ಮರಲೀಲಾಪದ್ಯ ಕಾಳಗದ ವಾರ್ತೆ ಕಕೋಕ ಮೊದಲಾದ ಭಿನ್ನಶಾಸ್ತ್ರಂಗಳನು ಆಲಿಸದ ಹಾಂಗೆ" (೨೬೬). "ಸೂಚನೆ ಬಿನ್ನಹ, ಘಟ್ಟಿ ಬಿನ್ನಹವನ್ನು ಮಾಡುತ್ತ ಮೃಷ್ಟಾನ್ನ ಬಡಿಸುತ್ತ ಶಾಲುಶಕಲಾತಿ ಸಣ್ಣ ಕಂಬಳಿ ಬಣ್ಣದ ಹಚ್ಚಡ ಮೊದಲಾದುವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟಿಮಂಚ ಲೇಪು ಸುಪ್ಪತ್ತಿಗೆ ತುಪ್ಪಳವಾಸ ಪದಾರ್ಥಂಗಳನು ನೀಡಿ ಸಂತೃಪ್ತಿ ಮೊದಲಾದವರ ಮೇಲೆ ಮಲಗಿಸಿಕೊಂಡು ಪರಿಣಾಮ ಸಂಗಾತ ಮಡಗಿಕೊಂಡಿರುವನು" (೪೦). "ಅಷ್ಟಾವರಣವನ್ನೇ ಅಂಗವ ಮಾಡಿಕೊಂಡು, ಪಂಚಾಚಾರವ ಪ್ರಾಣವ ಮಾಡಿಕೊಂಡು, ಏಕಲಿಂಗ ನಿಷ್ಠಾಪರನಾಗಿ" (೧೪೨). 'ನೆನೆವ ಮನಕ್ಕೆ ಹೊನ್ನು ತೋರಿ, ನೋಡುವ ಕಣ್ಣಿಗೆ ಹೆಣ್ಣುದೋರಿ, ಪೂಜಿಸುವ ಹಸ್ತಕ್ಕೆ ಮಣ್ಣುದೋರಿ, ತ್ರಿವಿಧಕ್ಕೆ ತ್ರಿವಿಧವ ತೋರುತ್ತಿಹನು" (೧೮). "ಏನು ದಯೆ ಏನುಪಾಯ ಏನು ಜಪವ ಮಾಡಲೋ ಏನು ವ್ರತೋಪವಾಸ ಮಾಡಲೋ ಎಂದು ಚಿಂತಿಸುತ್ತಿರ್ದನು ಜ್ಞಾನಕಲಾತ್ಮನು" (೮).

ಇಂಥ ನೂರಾರು ವಾಕ್ಯಗಳು ಟೀಕೆಗಳ ಶರೀರದಲ್ಲಿ ಮತ್ತೆ ಮತ್ತೆ ಬರುತ್ತವೆ. ಇವುಗಳಿಗೆ ಕಳಸವಿಟ್ಟಂತೆ ಟೀಕಾಕಾರನ ಲೋಕಾನುಭವ ಬೆರಳು ಕಚ್ಚಿಸುತ್ತದೆ. ಉದಾ:

"ಹಲಗೆಯನ್ನು ಜೋಡಿಸಿ ಮುಂಭಾಗದಲ್ಲಿ ಎರಡು ಕಟ್ಟಿಗೆಯನ್ನು ನಿಂದಿರಿಸಿ, ಅದಕ್ಕೊಂದು ದಾರವನ್ನು ಕಟ್ಟಿ ಸಿಡಿಗಟ್ಟಿಗೆಯನ್ನು ಕೂಡಿ ಜಂಪಿನ ಕಡ್ಡಿಯನ್ನು ಅಡ್ಡ ಹಾಕಿ ಆ ಬೋನಿನೊಳಗೆ ಸೂಸಲನು ತಳಿದು ಬಿಟ್ಟಲ್ಲಿ ಇಲಿ ಹೆಗ್ಗಣಗಳೆಂಬಂಥವು ಎಂದಿನ ಹಾಂಗೆ ಬಂದು ಆ ಬೋನಿನೊಳಯಿಕ್ಕೆ

ಹೊಕ್ಕು ಸೂಸಲನು ತಿಂಬುವಂಥ ವೇಳೆಯಲ್ಲಿ ಜಂಪಿನ ಕಟ್ಟಿಗೆ ಸಿಡಿದು ಹಲಗೆಯನ್ನು ಮುಚ್ಚಿಕೊಂಡು ಬಿಡುತ್ತಿಹುದು" (೧೦). "ಸರ್ಪನಿಲ್ಲದ ಹುತ್ತವೇ ಚೂಪನಾಗಿರುವುದು. ಸರ್ವನಿರ್ದಂಥ ಹುತ್ತವೇ ಬೋಡಾಗಿರ್ಪುದು"(೧೨). "ಲೋಕದಲ್ಲಿ ಕೆಲವಾತ್ಮರುಗಳು ಕೆರೆಯನ್ನು ಕಟ್ಟಿಸಬೇಕಾದರೆ ಮುಂದೆ ನೀರು ನಿಲ್ಲುವುದಕ್ಕೆ ಅಂಗಳವನ್ನು ನೋಡಿ ಪೈರುವನೊಡ್ಡುವುದಕ್ಕೆ ಭೂಮಿಯನ್ನು ನೋಡಿ ಹಿಂಗಲ್ಲು ಮುಂಗಲ್ಲನ್ನು ಹಾಕಿ ಕೆರೆಯನ್ನು ಕಟ್ಟಿಸಿದಲ್ಲಿ"(೨೬). "ಗಂಟೆ ಜೌಕಳಿಯನ್ನು ಇಟ್ಟುಕೊಂಡು ಪದಕವನ್ನು ಹಾಕಿಕೊಂಡು ಮುಂಡಾಸವನ್ನು ಸುತ್ತಿಕೊಂಡು ಕೊರದ ವಿಭೂತಿಯನ್ನೂ ಹಚ್ಚಿಕೊಂಡು ಕಸ್ತೂರಿ ಮೊದಲಾದ ತಿಲಕವನ್ನು ಇಟ್ಟುಕೊಂಡು"(೩೧). "ಶುನಿಗೇನಾದರೂ ಅಂಬಲಿ ಗಂಜಿಯನು ಹೊಯ್ಯಬೇಕಾದರೆ ಮರದ ಡೋಣಿ ಮಣ್ಣಪಿನ್ನೆ ನೆಲವನ್ನು ತೆಗ್ಗ ತೋಡಿ ಹೊಯ್ಯಬೇಕಲ್ಲದೆ"(೩೧).

"ರಾವುತರಾಗಲಿ ರಾಣ್ಯದವರಾಗಲಿ ವಾಲ್ಮೀಕರಾಗಲಿ ಕತ್ತಿ ಕಠಾರಿ ಚೂರಿ ಬಾಕು ಮೊದಲಾದವನ್ನು ಮೂಲೆಗೆ ಬಿದ್ದಲ್ಲಿ ಕಸ ನಟ್ಟು ಕೆಟ್ಟು ಹೋದಾವಲಾಯೆಂದು ಸಾಣೆಗಾರರ ತಾವಕ್ಕೆ ಕೊಂಡೊಯ್ದು ಸಿಕಲಿಯನ್ನೂ ಹಿಡಿಸಿ ಸಪ್ಪೆದುಪ್ಪವನ್ನು ಹಚ್ಚಿಸಿ ಒಳ್ಳೇ ಬಿಸಿಲಿಗೆ ಇಟ್ಟಿದ್ದಲ್ಲಿ"(೩೫). "ಕುಟ್ಟುವಲು ಚಟ್ಟವಲು ದುಂಡುವಲು ಮೊಂಡವಲೆಂಬ ಅವಲಕ್ಕಿಯ ಸ್ವಾದವನ್ನು(೧೦೧). ನದಿಯೆಂಬಂಥಾದು ಮಾಗಿ ಮಳೆಗಾಲದಲ್ಲಿ ಎರಡುದಡ ತುಂಬಿತುಳುಕುತ್ತ ಹೋಗುತ್ತಿದ್ದಲ್ಲಿ ಪಥಮಾರ್ಗವೆತ್ತಿ ಬಂದಂಥ ಆತ್ಮರುಗಳು ಎಲೊ ಅಂಬಿಗರಣ್ಣಾ ರೊಟ್ಟಿ ಕೊಟ್ಟೇವು, ಬುತ್ತಿ ಕೊಟ್ಟೇವು ವಸ್ತ್ರಕಪ್ಪಟಂಗಳ ಕೊಟ್ಟೇವು.ದುಡ್ಡು ದುಗ್ಗಾಣಿಯಾದರೂ ಕೊಟ್ಟೇವು ನಮ್ಮನ್ನು ಪರಿಣಾಮ ಸಂಗಾತ ಆಚೆಗೆ ಹೊಳೆದಾಟಿಸೆಂದು ಹೇಳಿದಲ್ಲಿ ಅವನು ಪರಿಣಾಮಸಂಗಾತ ದಾಟಿಸುವನು (೧೩೦). ಹಾವು ತಿಂದವರ–ಸರ್ಪದಷ್ಟವಾದವರ, ನುಡಿಸಬಹುದು–ನಾರುಬೇರು ವಿಷೌಷಧ ಮೊದಲಾದವನ್ನು ಕುಡಿಸಿ ಗಾರುಡಮಂತ್ರ ಮೊದಲಾದುವನ್ನು ಮಂತ್ರಿಸಿ ನೀನಾರು? ಏನು? ಎಂತು? ಎಂದು ಕೇಳಿದಲ್ಲಿ ಆ ಸರ್ಪದಷ್ಟತ್ವವೆಲ್ಲಿ ನಷ್ಟವಾಗಿ ಹೋಗಿ ಎಚ್ಚರವಾಗಿ ಎದ್ದುಕುಳಿತುಕೊಂಡು ತಮ್ಮಲ್ಲಿದ್ದ ಇರಸ್ಥಿತಿಯನ್ನು ಹೇಳಿ ಪ್ರಸಂಗವನಾಡುತ್ತಿಹರು. ಗ್ರಹಹೊಡೆದವರ ನುಡಿಸಬಹುದು–ಭೂತಪ್ರೇತಪಿಶಾಚಿ ಬ್ರಹ್ಮರಾಕ್ಷಸ ಮೊದಲಾದಂಥವು ಬಂದು ಅವಗ್ರಹಿಸಿದಂಥವರ ನುಡಿಸಬಹುದು. ಅಘೋರಮಂತ್ರ ಭೈರವಮಂತ್ರ ವಡಬಮಂತ್ರ ವೀರಭದ್ರಸಹಸ್ರನಾಮ ಮೊದಲಾದ ಮಂತ್ರದಿಂದ ಮಂತ್ರಿಸಿದಲ್ಲಿ ಆ ಭೂತನ ವರ್ತನೆ ನಷ್ಟವಾಗಿ ಹೋಗಿ ಎಚ್ಚರವಾಗಿ ಎದ್ದು ಕುಳಿತುಕೊಂಡು ತಮ್ಮಲ್ಲಿದ್ದಂಥ ಇರಸ್ಥಿತಿಯನ್ನು ಹೇಳಿ ಪ್ರಸಂಗವನಾಡುತ್ತಿಹರು (೧೩೫). ನೆಗ್ಗಿಲಸವರಿ ಹುಗ್ಗಿ ಹೊಯ್ದು ಊರು ಕಟ್ಟಿದಾಗ ಬಂದಂಥ ಒಕ್ಕಲು, ತರಗೂಡಿಸಿ ಮನೆಕಟ್ಟಿದಾಗ ಬಂದಂಥ ಒಕ್ಕಲು(೧೪೯). ಕಾಡಸೊಪ್ಪುತಂದು–ಅಡವಿಯಲ್ಲಿರುವಂಥ ಹತ್ತರಕ್ಯಾನಪಲ್ಲೆ ನರಲುಮುಟ್ಟಿಯಪಲ್ಲೆ ಕಾರಿಪಲ್ಲೆ ಮೊದಲಾದುವನ್ನು ಆಗುಮಾಡಿಕೊಂಡುಬಂದು (೧೪೯). ಕೀಡಿಕುಂಡಿಲಿಗನಾಗದೆ ಅಯ್ಯ–ಕುರುಡಿ[ಕುತಾರ]ನೆಂಬಂಥದು ಹಸಿರುಹುಳವನ್ನು ಕಚ್ಚಿಕೊಂಡುಬಂದು ಮೇಲಕ್ಕೆ ಎತ್ತಿ ಬಿಟ್ಟಲ್ಲಿ ಅಧೋಮುಖವಾಗಿ ಬಿದ್ದಂಥ – ಹುಳವನ್ನು ಬಿಟ್ಟು ಊರ್ಧ್ವಮುಖವಾಗಿದ್ದಂಥ ಹುಳವನ್ನು ಕಚ್ಚಿಕೊಂಡು ಹೋಗಿ ತನ್ನ ಗೂಡಿನೊಳಗೆ ಪೂರ್ತಿಸಿ ಮೇಲೆ ಕುಳಿತುಕೊಂಡು ತನ್ನ ಕೊಕ್ಕಿನಿಂದ ಪಕ್ಕದದಿಂದ ಝುಂಕಿಸಿ ಮೇಲೆ ಮಣ್ಣು ಮುಚ್ಚಿಹೋದಲ್ಲಿ ಮತ್ತೂ ಬಂದು ಎಲ್ಲಿ ಕುಕ್ಕಿತೋ ಎಂದು ಅದೇ ಧ್ಯಾನದಿಂದಲ್ಲಿದ್ದ ಕಾರಣ ಟೊಂಕ ಸಣ್ಣನಾಗಿ ಕೊಕ್ಕು ಕೋಡುಗಳು ಬಂದು ಕುರುಡಿಕುಠಾರನಾಗೋದಿಲ್ಲವೇ? ಆಗುತ್ತಿಹುದು" (೧೪೪).

ಈ ಹೇಳಿಕೆಗಳಲ್ಲಿಯ ಟೀಕಾಕಾರನ ಸೂಕ್ಷ್ಮ ನಿರೀಕ್ಷೆ, ಲೋಕಾನುಭವ ಬೆರಗುಗೊಳಿಸುತ್ತವೆ. ಟೀಕೆಯುದ್ದಕ್ಕೂ ಬಿತ್ತುತ್ತ ನಡೆದ ಇಂಥ ಅನುಭವಗಳನ್ನು ಸಂಗ್ರಹಿಸಿ ಆ ಕಾಲದ ಸುಂದರ ಸಾಂಸ್ಕೃತಿಕ ಅಧ್ಯಯನ ನಡೆಸಬಹುದು.

ಹೀಗಿದ್ದರೂ ಶಬ್ದಾರ್ಥದ ದೃಷ್ಟಿಯಿಂದ ಹೇಳಬಹುದಾದ ದೋಷವೆಂದರೆ ಸರಳಪದಗಳಿಗೆ ಕಠಿಣ ಅರ್ಥ ಬರೆಯುವುದು. ಉದಾ: ರಾಹು–ವಿಧುಂತದ, ವಿಷ–ಕ್ಷ್ವೇಡ, ತಾಳಮರ–ಭಾರದ್ವಾಜವೃಕ್ಷ, ಒಲೆ–ಚುಲ್ಲಿ, ಮೊಲೆವಾಲು–ಕುಚಕ್ಷೀರ, ಅತ್ತಿಯ ಹಣ್ಣು–ಔದುಂಬರ ಫಲ, ಹಸಿವು–ದೀಪನ, ಅಂಕುಶ–ಶೃಣಿ, ಹೊಸ್ತಿಲ–ದೇಹಲಿ, ಕಾಗೆ–ವಾಯಸ. ಬಿಳಿಯ ಕರಿಕೆ–ದೂರ್ವಾಂಕರ, ಮಳಲ–ನಿರ್ಮಲವಾದ ಸೈಕತ, ಕಣಗಿಲೆಲೆ–ಕರವೀರಪರ್ಣ, ಹುತ್ತ–ವಾಲ್ಮೀಕ, ಕೊಯ್ಯಲಿಲ್ಲ–ಕೃಂತಿಸಲಿಲ್ಲ, ಮೊಲ–ಶಶಕ, ಕಿತ್ತು–ಲವಿತ್ರದಿಂದುತ್ಪಾಟಿಸು, ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ–ಘೃತದ ಆಸ್ವಾದನಕ್ಕೆ ಲೇಹ್ಯವ ಮಾಡುವ ಶುನಿಯ ಹಾಂಗೆ ಇತ್ಯಾದಿ. ಪ್ರತಿಯೊಂದು ಪದಕ್ಕೆ ಅರ್ಥ ಹೇಳುವ ಪರಿಕ್ರಮವನ್ನಿಟ್ಟುಕೊಂಡ ಕಾರಣ ಟೀಕಾಕಾರರು ಅನಿವಾರ್ಯವಾಗಿ ತಿಳಿದೂ ತಿಳಿದೂ ಈ ದೋಷವನ್ನುಂಟು ಮಾಡಿದ್ದಾರೆ–ಈಗ ಕನ್ನಡದ ಎಷ್ಟೋ ಸರಳ ಪದಗಳಿಗೆ ಇಂಗ್ಲಿಷದಲ್ಲಿ ಅರ್ಥ ಹೇಳುವಂತೆ. ಇದು ಇವರಿಗಷ್ಟೇ ಅಲ್ಲ, ಆ ಕಾಲದ ಎಲ್ಲ ಟೀಕಾಕಾರರಿಗೂ ಅನ್ವಯಿಸುವ ಮಾತು. ಇದಕ್ಕೆ ಹೆಚ್ಚಿನದಾಗಿ ಕೆಲವು ಸಲ ತಪ್ಪು ಅರ್ಥ ಬರೆದುದೂ ಕಾಣುತ್ತದೆ. ಉದಾ: ನಾರಿವಾಣ–ಹರಿವಾಣ, ನಿಮ್ಮ ಚರಣವ–ನಿಮ್ಮ ಪಾದಾರವಿಂದ ಸ್ವರೂಪವಾದ ಇಷ್ಟಲಿಂಗವ ಇತ್ಯಾದಿ. ಸಾವಿರ ಸಂಖ್ಯೆಯಷ್ಟು ಸಿಗುವ ಈ ದೋಷಗಳು ಸಹಜ.

ಇನ್ನು ಟೀಕೆಗಳಲ್ಲಿ ಎಷ್ಟೇ ಲೌಕಿಕ ಉದಾಹರಣೆಗಳಿದ್ದರೂ ಅದು ಗೌಣ, ತಾತ್ವಿಕ ವಿವರಣೆಯೇ ಪ್ರಧಾನ. ಕಾರಣ ಸಾಮಾನ್ಯವಾಗಿ ಎಲ್ಲ ಟೀಕೆಗಳು ಲೌಕಿಕದಿಂದ ಪ್ರಾರಂಭವಾದರೂ ವಿರಮಿಸುವುದು ಪಾರಮಾರ್ಥದಲ್ಲಿ. ಕೆಲವಂತೂ ಕೇವಲ ಪಾರಮಾರ್ಥಿಕ ಪ್ರಪಂಚದಲ್ಲಿಯೇ ವಿಹರಿಸುತ್ತವೆ. ಈ ಬಗೆಯ ಟೀಕೆಗಳು ವಚನಗಳಲ್ಲಿ ಮುಚ್ಚಿನಿಂತಿರುವ ಅರ್ಥವನ್ನು ಬಿಚ್ಚಿ ಹೇಳುತ್ತವೆಯೇ? ವೀರಶೈವತತ್ವದ ಸತ್ಯವನ್ನು ಎತ್ತಿತೋರಿಸುತ್ತವೆಯೇ? ತಿಳುವಳಿಕೆಯನ್ನು ವಿಸ್ತರಿಸುತ್ತವೆಯೇ? ಎಂಬುದೊಂದು ಪ್ರಶ್ನೆ. ಇದಕ್ಕೆ ಹೌದು, ಇಲ್ಲ ಎಂಬ ಎರಡೂ ಉತ್ತರ ಹೇಳಬೇಕಾಗುತ್ತದೆ.

ಯಾವುದೇ ಧರ್ಮದ ನಿಜತತ್ವದ ಸುತ್ತ ಕ್ರಮೇಣ ಪ್ರತಿಷ್ಠಿತರಿಂದ ಪಾಂಡಿತ್ಯಜ್ಞಾನ ಮತ್ತು ಪಾಮರರಿಂದ ವ್ಯಾವಹಾರಿಕಜ್ಞಾನಗಳು ಆವರಿಸುತ್ತ ಹೋಗುತ್ತವೆ. ವೀರಶೈವದ ಸುತ್ತ ಈ ಎರಡೂ ಪ್ರಕ್ರಿಯೆಗಳು ಜ್ವಲಂತವಾಗಿದ್ದ ಕಾಲದಲ್ಲಿ ಹುಟ್ಟಿದ ಕಾರಣ ಈ ಟೀಕೆಗಳಲ್ಲಿ ನಿಜತತ್ವಪ್ರಕಾಶನ ಕಾರ್ಯ ನಡೆದಿದ್ದರೂ ಕೆಲವು ಸಲ ಈ ಪಾಂಡಿತ್ಯಿಕ ಮತ್ತು ವ್ಯಾವಹಾರಿಕ ಅರ್ಥಗಳ ಹಾವಳಿಯೂ ಎಡೆವಡೆದಿವೆ. ಈ ಮೂರಕ್ಕೂ ಉದಾಹರಣೆ:

೧. ಕಲ್ಲನಾಗರ ದಿಟದ ನಾಗರವಾಗಿ ಬಂದಂತೆ ಲಿಂಗದ ಚಿತ್ಕಳೆಯೇ ಜಂಗಮವಾಗಿ ಬಂದರೆ, ಆ ಜಂಗಮಕ್ಕೆ ಭಕ್ತಿಯ ಮಾಡದೆ ಲಿಂಗಕ್ಕೆ ಪೂಜೆಯಮಾಡಿದರೆ ನಿರರ್ಥವೆಂಬುದೀ ವಚನದರ್ಥ(IV)

೨. ಕಲ್ಲನಾಗರ ಕಂಡರೆ ಹಾಲನೆಜೆಯೆಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ–ಅವರಂದರೂ ಆಡಿದರೂ ಅನಿಸಿಕೊಂಡಿರುವ ಪಾಷಂಡಿ ಜಂಗಮವ ಕಂಡರೆ ನಮ್ಮಯ್ಯ ಒಳ್ಳಾತ

ಕ್ಷೀರವ ನೀಡೆಂಬರು, ಗೋವ ಗುಲಾಮ ತೊಂಡ ನೀಚ ಎಂದು ಜರಿದು ಝುಂಕಿಸುವ ಮಹಾಜ್ಞಾನಿಜಂಗಮವ ಕಂಡರೆ ಈ ಜಂಗಮ ಬಲು ಕೆಟ್ಟವ ತಳ್ಳಿಬಿಡೆಂಬರಯ್ಯಾ(II).

೩. ಹಿರಿಯಯ್ಯ ಶ್ವಪಚಯ್ಯ–ನಿಃಕಲಬ್ರಹ್ಮವೇ ಕ್ರಿಯಾಘನಗುರುವಾಗಿ ಬಂದು ತನುವಿನಲ್ಲಿ ನೆಲೆಗೊಂಡಿಪ್ಪುದು. ಕಿಜೆಯಯ್ಯ ಡೋಹಾರ ಕಕ್ಕಯ್ಯ–ಶೂನ್ಯಬ್ರಹ್ಮವೇ ಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡಿಪ್ಪುದು. ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ–ನಿರಂಜನ ಬ್ರಹ್ಮವೇ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಂಡಿಪ್ಪುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರು ನಿಮ್ಮ ಗುರುಲಿಂಗಜಂಗಮಮೂರ್ತಿಗಳು, ಎನ್ನ ಸಲಹುವರಾಗಿ–ತಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣ್ಯವ ಮಾಡುವರಾಗಿ(II).

ಈ ಮೂರು ಟೀಕೆಗಳಲ್ಲಿ ಮೊದಲಿನದು ಸರಿ, ಎರಡನೆಯದು ತಪ್ಪು, ಮೂರನೆಯದು ಆಭಾಸ. ಈ ತಪ್ಪು ಆಭಾಸಗಳಲ್ಲಿ ಮೊದಲಿನದರ ಪ್ರಮಾಣ ಕಡಿಮೆ, ಎರಡನೆಯದರ ಪ್ರಮಾಣ ಹೆಚ್ಚು. ಇವೆರಡನ್ನು ಬದಿಗಿಟ್ಟು ನೋಡಿದರೆ ಈ "ಪಂಚ ಟೀಕೆಗಳು" ಬಸವಣ್ಣನವರ ವಚನಗಳ "ತಾತ್ವಿಕ ಮುಖ"ವನ್ನು ತೆರೆದು ತೋರಿಸುವಲ್ಲಿ ಬಹುಮಟ್ಟಿಗೆ ಸಾರ್ಥಕವಾಗಿವೆಯೆನ್ನಬಹುದು.

## • ಗ್ರಂಥಶಿಲ್ಪ •

ಬಸವಣ್ಣನವರ ವಚನಗಳಿಗೆ, ನಮ್ಮ ಪ್ರಯತ್ನದ ಫಲವಾಗಿ ಒಟ್ಟು ಐದು ಟೀಕೆಗಳು ಲಭ್ಯವಾದವು. ಇವುಗಳನ್ನು ಸ್ವತಂತ್ರವಾಗಿ ಪ್ರಕಟಿಸುವ ಯೋಜನೆಯೊಂದು ಮೊದಲು ಸುಳಿದು ಕೊನೆಗೆ "ಸಂಯುಕ್ತಸಂಪುಟ" ವೇ ಪರಮಪ್ರಯೋಜಕವೆನಿಸಿತು. ಕನ್ನಡದಲ್ಲಿ ಪ್ರತ್ಯೇಕವಾಗಿ ಒಂದೊಂದು ಗ್ರಂಥದ ಸಂಪಾದನೆಯನ್ನು ಕೈಕೊಳ್ಳಲಾಗುತ್ತಿರುವ ಇಂದಿನ ದಿನಗಳಲ್ಲಿ, ಈ ಐದನ್ನೂ ಸಂಯುಕ್ತವಾಗಿ ಸಂಪಾದಿಸುವುದು ಹೇಗೆ? ಎಂಬ ಸಮಸ್ಯೆ ಎದುರಾಯಿತು. ಮೂರು ನಾಲ್ಕು ರೀತಿಯಲ್ಲಿ ಯೋಚಿಸಿದ ತರುವಾಯ ಈ ಗ್ರಂಥಕ್ಕೆ ಅಳವಡಿಸಿರುವ ಪ್ರಸ್ತುತ ಯೋಜನೆಯ ಹೊಳಹು ಮೂಡಿನಿಂತಿತು.

ಐದೂ ಜನ ಟೀಕಾಕಾರರಲ್ಲಿ ಒಬ್ಬ ಎಲ್ಲ ವಚನಗಳಿಗೆ, ನಾಲ್ವರು ತಮಗೆ ಇಷ್ಟವೆನಿಸಿದ ವಚನಗಳಿಗೆ ಟೀಕೆ ಬರೆದಿರುವರು. ಹೀಗಾಗಿ ಎಲ್ಲ ವಚನಗಳಿಗೆ ಒಂದು ಟೀಕೆ, ಕೆಲವು ವಚನಗಳಿಗೆ ಎರಡು, ಮೂರು, ನಾಲ್ಕು ಇಲ್ಲವೆ ಐದೂ ಟೀಕೆಗಳು ಸಿಗುತ್ತವೆ. ಅವರವರಿಗೆ ಸಿಕ್ಕ ವಚನ ಪಾಠಗಳೇ ಭಿನ್ನವಾಗಿದ್ದು ಕಾಲಾಂತರದಲ್ಲಿ ಅವರ ವಚನಗಳಿಗೂ ಅವರು ಬರೆದ ಟೀಕೆಗಳಿಗೂ ಪಾಠಾಂತರ ಹುಟ್ಟಿಕೊಂಡಿವೆ. ಇಲ್ಲಿ ಪ್ರತಿಯೊಂದರ ವಚನಪಾಠ–ಟೀಕಾಪಾಠಗಳಲ್ಲಿ ಸಮನ್ವಯವನ್ನು ಸಾಧಿಸುತ್ತ ಐದರಲ್ಲಿಯೂ ಸಮನ್ವಯ ಸಾಧಿಸಬೇಕಾಗುತ್ತದೆ. ಈಗ ನಮಗೆ ಕಾಡಿದ ಸಮಸ್ಯೆಯನ್ನು ಬಗೆಹರಿಸಿಕೊಂಡುದು ಹೀಗೆ:

ಮೊದಲು ಈ ಐದು ಟೀಕಾಗ್ರಂಥಗಳನ್ನು ಕ್ರಮವಾಗಿ ೨(ಕ,ಗ), ೨(ಚ,ಜ), ೨(ಟ,ಡ), ೧(ತ), ೧(ಪ) ಹಸ್ತಪ್ರತಿಗಳ ಸಹಾಯದಿಂದ ಸ್ವತಂತ್ರವಾಗಿ ಪರಿಷ್ಕರಿಸಲಾಯಿತು. ಆಮೇಲೆ ಸ್ಥೂಲವಾಗಿ ಅರ್ವಾಚೀನದಿಂದ ಪ್ರಾಚೀನಕ್ರಮದಲ್ಲಿ ಅವುಗಳಿಗೆ I (ಕರ್ತೃ), II(ಕರ್ತೃ?), III

(ಸೋಮಶೇಖರ ಶಿವಯೋಗಿ) IV, (ಗುರುಬಸವರಾಜ ?) V (ಪರ್ವತ ಶಿವಯೋಗಿ) ಎಂದು ರೋಮನ್ ಅಂಕಿಗಳ ಸಂಕೇತವನ್ನು ಕೊಡಲಾಯಿತು. ಮೇಲೆ ವಚನ, ಕೆಳಗೆ ಲಭ್ಯವಾಗಿರುವ ಎಲ್ಲ ಟೀಕೆಗಳನ್ನು ಅಡಕಗೊಳಿಸಿದ್ದು ಪ್ರತಿಯೊಂದು ಟೀಕೆಯ ತಲೆಯ ಮೇಲೆ ವಚನಕ್ಕೆ ಸಂವಾದಿಯಾದ ಭಿನ್ನಪಾಠ, ಅಡಿಯ ಕೆಳಗೆ ಟೀಕೆಗೆ ಸಂವಾದಿಯಾದ ಭಿನ್ನಪಾಠಗಳನ್ನು ಯೋಜಿಸಲಾಗಿದೆ. ವಚನದ ಪಾಠಾಂತರ ಸೂಚನೆಗೆ ಇಂಗ್ಲಿಷ್ ಅಂಕಿ, ಟೀಕೆಯ ಪಾಠಾಂತರ ಸೂಚನೆಗೆ ಕನ್ನಡ ಅಂಕಿಗಳನ್ನು ಬಳಸಲಾಗಿದೆ. ಒಂದು ವಚನ ಮತ್ತು ಅದರ ಟೀಕೆಗಳನ್ನು ಇನ್ನೊಂದು ವಚನ ಮತ್ತು ಅದರ ಟೀಕೆಗಳಿಂದ ಬೇರ್ಪಡಿಸಲು ಸರಳರೇಖೆ(–) ಯನ್ನು, ಟೀಕೆಯಿಂದ ಟೀಕೆಯನ್ನು ಬೆರ್ಪಡಿಸಲು ತುಂಡು ಸರಳರೇಖೆಯನ್ನು (––––––), ಟೀಕೆಯಿಂದ ಪಾಠಾಂತರಗಳನ್ನು ಬೇರ್ಪಡಿಸಲು ಬಿಂದು ಸರಳರೇಖೆಯನ್ನು(......) ಉಪಯೋಗಿಸಲಾಗಿದೆ. ಈ ಯೋಜನೆಯ ಸ್ಪಷ್ಟ ತಿಳಿವಳಿಕೆಗೆ ೧೨ನೆಯ ವಚನವನ್ನೂ ಅದರ ಎಲ್ಲ ಟೀಕೆಗಳನ್ನೂ ನೋಡಬಹುದು. ಹೀಗೆ ರೂಪಗೊಂಡು ಪ್ರಸ್ತುತ ಶಿಲ್ಪ ಹೊಸಬಗೆಯದಾಗಿದ್ದರೂ ಓದುಗರಿಗೆ ಅಕ್ಲಿಷ್ಟವಾಗಿದೆಯೆಂದೇ ನಮ್ಮ ಭಾವನೆ.

## • ಗ್ರಂಥಪರಿಷ್ಕರಣ •

ಬಸವಣ್ಣನವರ ವಚನಗಳಿಗೆ ಬರೆದ ಈ ಐದು ಟೀಕೆಗಳಲ್ಲಿ II ಮತ್ತು IVನೆಯ ಟೀಕೆಗಳು ಇದ್ದ ವಿಷಯ ಯಾರಿಗೂ ಗೊತ್ತಿರಲಿಲ್ಲ. ಮಿಕ್ಕ I, III, Vನೆಯ ಟೀಕೆಗಳಿದ್ದ ವಿಷಯ ಗೊತ್ತಿದ್ದರೂ I ನೆಯದು ಮಾತ್ರ ಎರಡು ಸಲ ಭಾಗಶಃ ಪ್ರಕಟವಾಗಿದ್ದಿತು. ಅಂದರೆ ೧೯೫೪ರಲ್ಲಿ ಶ್ರೀ ವಿರೂಪಾಕ್ಷಪ್ಪ ಚನ್ನಪ್ಪ ಯಾಳಗಿ ಅವರು ಪ್ರಾರಂಭದ ೧೧೩ ವಚನಗಳನ್ನು ೧೯೭೧ರಲ್ಲಿ ಡಾ. ಎಸ್. ಎಂ. ಹುಣಸ್ಯಾಳ ಅವರು ಕೇವಲ ಭಕ್ತಸ್ಥಲವನ್ನು, ಪ್ರಕಟಿಸಿದ್ದರು. ಈಗ ಈ I ನೆಯ ಟೀಕೆಯನ್ನೊಳಗೊಂಡು ಐದೂ ಟೀಕೆಗಳು ಇಡಿಯಾಗಿ ಅದೂ ಒಂದೇ ಸಂಪುಟದಲ್ಲಿ ಅಚ್ಚಾಗುತ್ತಲಿವೆ.

ಸಾಮಾನ್ಯವಾಗಿ ಇಲ್ಲಿಯ ವಚನಪಾಠ ಮತ್ತು I ನೆಯ ಟೀಕೆಯ ಪಾಠಗಳಲ್ಲಿ ಹೊಂದಿಕೆ ಬರುವಂತೆ ನೋಡಿಕೊಳ್ಳಲಾಗಿದೆ. ಇದಕ್ಕೋಸುಗ ಸಾಧ್ಯವಿದ್ದಲ್ಲಿ I ನೆಯ ಟೀಕೆಯಂತೆ ವಚನಪಾಠವನ್ನು ತಿದ್ದಿಕೊಂಡಿದ್ದು, II, III, IV, V ನೆಯ ಟೀಕೆಗಳಿಗೆ ತೋರಿಬಂದ ವಚನ ಪಾಠಾಂತರಗಳನ್ನು ಅವುಗಳ ತಲೆಯ ಮೇಲೆ ಕೊಡಲಾಗಿದೆ. ಟೀಕೆಗಳಿಗೆ ತೋರಿಬಂದ ಪಾಠಾಂತರಗಳನ್ನು ಅವುಗಳ ಅಡಿಯಲ್ಲಿ ಅಡಕಗೊಳಿಸಲಾಗಿದೆ.

ಈ ಪ್ರಸಂಗದಲ್ಲಿ ಊಹಿತ ಪಾಠಗಳನ್ನು ಚೌಕ ಕಂಸಿನಲ್ಲಿ ಕೊಡಲಾಗಿದ್ದು ಅರ್ಥವಾಗದ ದೇಶಿ ಪದಗಳನ್ನು, ಆಯಾ ಕಾಲದ ಭಾಷಾ ಸ್ವರೂಪವನ್ನು, ಬರವಣಿಗೆಯ ರೀತಿಯನ್ನು ಮೂಲರೂಪದಲ್ಲಿಯೇ ಕಾಪಾಡಿದ್ದೇವೆ. ಸಂಸ್ಕೃತ ಉದ್ಧರಣೆಗಳನ್ನು ಪರಿಷ್ಕರಣೆಗಳನ್ನು ಪ್ರಯತ್ನಿಸಿದ್ದು, ಅವುಗಳಿಗೆ ಬರೆದ ಅರ್ಥವನ್ನು ತಿದ್ದುವ ಗೋಜಿಗೆ ಹೋಗಿಲ್ಲ, ಕೆಲವು ಸಲ ಮೇಲುನೋಟಕ್ಕೆ ತಪ್ಪುಭಾವನೆಯನ್ನು ಹುಟ್ಟಿಸಬಹುದಾಗಿದ್ದ ಭಾಗಗಳನ್ನು ಕತ್ತರಿಸಿ ತೆಗೆದು ಅಲ್ಲಿ ನಕ್ಷತ್ರಚಿಹ್ನಾಂತರ್ಗತ ಚೌಕ ಕಂಸನ್ನು ಬಳಸಲಾಗಿದ್ದು, ಇಷ್ಟು ಆಳವಾದ ಪರಿಷ್ಕರಣ ಗ್ರಂಥಸಂಪಾದನ ಶಾಸ್ತ್ರತತ್ವಕ್ಕೆ ವ್ಯತಿರಿಕ್ತವಾಗಿದ್ದರೂ ಸಾಹಿತ್ಯಕ್ಕಿಂತ ಸಮಾಜ ದೊಡ್ಡದು ಎಂಬ ಕಾರಣದಿಂದ ಹಾಗೆ ಮಾಡಲಾಗಿದೆ.

ಇಷ್ಟು ಎಚ್ಚರವಹಿಸಿದರೂ ಕಣ್ಣುತಪ್ಪಿಸಿ ಉಳಿದಿರಬಹುದಾದ ಇಂಥ ಇಲ್ಲವೆ ಯಾವುದೇ ರೂಪದ ದೋಷಗಳನ್ನು ಸಹೃದಯರು ಸೂಚಿಸಿದಲ್ಲಿ ತೆರೆದ ಮನಸ್ಸಿನಿಂದ ಸ್ವೀಕರಿಸಲಾಗುವುದು, ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳಲಾಗುವುದು,

## • ಹಸ್ತಪ್ರತಿಗಳು •

ವಚನಸಾಹಿತ್ಯದಂಥ ಜನಪ್ರಿಯ ವಾಙ್ಮಯವನ್ನು ಸಂಪಾದಿಸುವಲ್ಲಿ ಹಸ್ತಪ್ರತಿಗಳ ಆಯ್ಕೆ ತುಂಬ ಜಾಗರೂಕತೆಯಿಂದ ನಡೆಯಬೇಕಾಗುತ್ತದೆ. ಅಂದರೆ ಒಂದು ಕೃತಿಯ ಎಲ್ಲ ಕುಟುಂಬಗಳ ಒಂದೊಂದು ಉತ್ತಮ ಪ್ರತಿಗಳನ್ನು ಆಯ್ದುಕೊಳ್ಳುವುದಕ್ಕಿಂತ ಒಂದೇ ಕುಟುಂಬದ ಕೆಲವು ಉತ್ತಮ ಪ್ರತಿಗಳನ್ನು ಆಯ್ದುಕೊಳ್ಳುವುದು ಲೇಸು. ಇದಕ್ಕನುಗುಣವಾಗಿ ಮೊದಲಿನ ಮೂರು ಟೀಕೆಗಳಿಗೆ ಒಂದೇ ಕುಟುಂಬದ ಎರಡೆರಡು ಪ್ರತಿಗಳನ್ನು(ಅಧಿಕ ಸಂಖ್ಯೆಯಲ್ಲಿ ಸಿಗುತ್ತಿದ್ದರೂ) ಆಯ್ದುಕೊಳ್ಳಲಾಗಿದೆ. ನಾಲ್ಕು ಮತ್ತು ಐದನೆಯ ಟೀಕೆಗಳಿಗಾಗಿ ಲಭ್ಯವಿರುವ ಒಂದೊಂದೇ ಪ್ರತಿಯನ್ನು ಬಳಸಿಕೊಳ್ಳಲಾಗಿದೆ. ಹೀಗೆ ಬಳಸಿಕೊಂಡ ಒಟ್ಟು ಎಂಟು ಹಸ್ತಪ್ರತಿಗಳ ಸ್ವರೂಪ ಹೀಗಿದೆ:

I (ಕ) : ಕನ್ನಡ ಅಧ್ಯಯನಪೀಠದ 'ಹಸ್ತಪ್ರತಿ ಭಾಂಡಾರ' ದ ಕ್ರಮಾಂಕ ೪೮೧ನೆಯ ಕೋರಿಕಾಗದ ಪ್ರತಿ ಮೂಲತಃ ಕಲಬುರ್ಗಿಯ ಗುರುಬಸವ ಮಠಕ್ಕೆ ಸೇರಿದುದು. ಉದ್ದ ೧೨"x ಅಗಲ ೫.೨". ಪುಟ ೧-೪೧೪ ರ ವರೆಗೆ ಸಂಪೂರ್ಣವಿದ್ದು ಕೊನೆಯ ೫ ಪುಟಗಳು ತ್ರುಟಿತವಾಗಿವೆ. ಅಕ್ಷರಗಳು ಸಾಧಾರಣ. ಒಂದೊಂದು ಪುಟದಲ್ಲಿ ೮ ರಿಂದ ೧೨ ಸಾಲುಗಳಿವೆ. ಇದರಲ್ಲಿ ೯೬೧ ವಚನಗಳೂ ಅವುಗಳಿಗೆ ಟೀಕೆಯೂ ಇದೆ.

ಆದಿ: ಶ್ರೀಗುರು ಬಸವಲಿಂಗಾಯ ನಮಃ! ಶ್ರೀಗುರು ರೇವಣಸಿದ್ಧೇಶ್ವರಾಯ ನಮಃ! ಶ್ರೀ ಬಸವೇಶ್ವರದೇವರು ನಿರೂಪಿಸಿದ ಷಟ್‌ಸ್ಥಲ ವಚನ ಲಿಖಿಸುವುದಕ್ಕೆ ಶುಭಮಸ್ತು ! ಶೋಭನಮಸ್ತು!! ಪ್ರಥಮದಲ್ಲಿ ಭಕ್ತಿಸ್ಥಲದ ಪಿಂಡಸ್ಥಲ!!

ಅಂತ್ಯ: ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ....ರನೆಂಬ ಮಹಾಜ್ಞಾನ ಗುರುಮೂರ್ತಿಗಳು ನಿರೂಪಿಸಿದ ಉಪದೇಶಿಸಿದ ಷಟ್‌ಸ್ಥಲದ ವಚನ ಷಡ್ವಿಧ ಅಂಗ ಲಿಂಗ ಭ........ಮಾಹೇಶ್ವರರುಗಳು ಶ್ರೋತ್ರಮುಖದಲ್ಲಿಂಯೇ ಮುಕ್ತಾಯುವಾಯಿತ್ತು. ಮಂಗಳ-ಮಂಗಳವೆಂದರೆ ನಿರ್ಮಲವು.....ದೊಡ್ಡಿತ್ತಾದಂಥದು ಶ್ರೀ, ಶ್ರೀಯೆಂದರೆ ಜ್ಞಾನ ಮತ್ತು ಶ್ರೀಯೆಂದರೆ ಐಶ್ವರ್ಯ ಮತ್ತು ಶ್ರೀಯೆಂದರೆ.....ಬರೆದು ಪಾಠವ ಮಾಡಿಕೊಂಡು ಜ್ಞಾನಗುರುಮೂರ್ತಿಗಳಿದ್ದೆಡೆಗೆ ಹೋಗಿ ದೀರ್ಘದಂಡ ನಮಸ್ಕಾರ ಮುಂತಾದ.....ಅಭಿಪ್ರಾಯ ವರ್ಣಂಗಳನ್ನು ಶ್ರೋತ್ರಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯಮುಖದಲಿಂಬುಗೊಂಡು....ದಲಿ ಜೈಶ್ವರ್ಯವನು ಪಡೆದು ಬಾಳುತ್ತಿಹರೆಂಬುದೀ ಶಾಸ್ತ್ರದ ಫಲಶ್ರುತಿಯು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.....ಮಾಹೇಶ್ವರ ಸ್ಥಲಕ್ಕೆ ಸೇರಿದ ವಚನಂಗಳು ೨೪೦, ಪ್ರಸಾದಿಸ್ಥಲಕ್ಕೆ ಸೇರಿದ ವಚನಂಗಳು ೩೦, ಪ್ರಾಣಲಿಂಗಿಸ್ಥಲಕ್ಕೆ......ನಂಗಳು ....೬೫, ಐಕ್ಯಸ್ಥಲಕ್ಕೆ ಸೇರಿದ ವಚನಂಗಳು ೪೧ ಅಂತು ಏಕೂನ ೯೬೧ ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ........ಜೋತ್ಪತ್ತಿನಾಮ

ಸಂವತ್ಸರ ವೈಶಾಖಶುದ್ಧ ೬ ಬುಧವಾರ ಬಸವರಾಜದೇವರ ವಚನಶಾಸ್ತ್ರ ಮುಗಿಸಿದ್ದು. ಕಂದ॥ ತಪ್ಪಂಬರ.......ಲು ಬಿಡಿರಿ ತಪ್ಪಕ್ಕು ಶುದ್ದಮಕ್ಕುಂ! ತಪ್ಪುಳ್ಳಡೆ ತಿದ್ದಿಕೊಂಬುದುತ್ತಮಪುರುಷರ್॥೧॥.

I (ಗ) : ಕನ್ನಡ ಅಧ್ಯಯನಪೀಠದ 'ಹಸ್ತಪ್ರತಿ ಭಾಂಡಾರ' ದ ಕ್ರಮಾಂಕ ೨೭೮೪ನೆಯ ಕೋರಿಕಾಗದ ಪ್ರತಿ. ಉದ್ದ ೧೩.೨"xಅಗಲ ೪". "ಶ್ರೀಗುರು ಬಸವರಾಜದೇವರು ನಿರೂಪಿಸಿದ ಷಟ್‌ಸ್ಥಲದ ವಚನವ್ಯಾಖ್ಯಾನ" ಎಂದು ಕರೆಯಲ್ಪಟ್ಟಿದೆ. ಪುಟ ೧-೫೭೩ರವರೆಗೆ ಸಂಪೂರ್ಣವಿದ್ದು, ಪುಟ ೪೨೫ರಿಂದ ೫೧೮ರ ವರೆಗೆ ರಂಧ್ರಗಳಿದ್ದು, ೫೪೯ ರಿಂದ ೫೭೩ ರ ವರೆಗೆ ಮೇಲಿನ ಭಾಗ ತ್ರುಟಿತವಾಗಿದೆ. ಅಕ್ಷರಗಳು ದುಂಡಾಗಿದ್ದು ಒಂದೊಂದು ಪುಟದಲ್ಲಿ ೯ರಿಂದ೧೦ ಸಾಲುಗಳಿವೆ. ಈ ಪ್ರತಿಯಲ್ಲಿ ೯೫೮ ವಚನಗಳಿದ್ದು ಎಲ್ಲಕ್ಕೂ ಟೀಕೆ ಇದೆ.

**ಆದಿ:** ಶ್ರೀಗುರು ಬಸವಲಿಂಗಾಯ ನಮಃ। ಶ್ರೀ ಗುರುಭ್ಯೋ ನಮಃ। ಶ್ರೀ ಗಣಾಧಿಪತಯೇ ನಮಃ। ಶ್ರೀ ಸರ್ವಮಂಗಲಾಯೈ ನಮಃ! ಶ್ರೀಗುರು ಚೆನ್ನವೀರೇಂದ್ರಾಯ ನಮಃ। ಶ್ರೀಗುರು ಬಸವರಾಜದೇವರು ನಿರೂಪಿಸಿದ ಷಟ್‌ಸ್ಥಲದ ವಚನವ್ಯಾಖ್ಯಾನ ಸಹಿತ ಬರೆಯುವುದಕ್ಕೆ ಶುಭಮಸ್ತು ಶ್ರೀರಸ್ತು ನಿರ್ವಿಘ್ನಮಸ್ತು॥ ಪ್ರಥಮದಲ್ಲಿ ಭಕ್ತಿಸ್ಥಲದೊಳಗಣ ಪಿಂಡಸ್ಥಲಂ॥

**ಅಂತ್ಯ :** ಶ್ರೀ ಶ್ರೀ ಶ್ರೀ ಬಸವೇಶ್ವರದೇವ.....ರಾಧ್ಯರಾದ ಸಂಗನಬಸವೇಶ್ವರನೆಂಬ ಮಹಾಜ್ಞಾನ ಗುರುಮೂರ್ತಿಗಳು ನಿರೂಪಿಸಿದ-ಉಪದೇಶಿಸಿದ ಷಟ್‌ಸ್ಥಲದ ವಚನ. ಷಡ್ವಿಧ ಅಂಗ ಲಿಂಗ ಭಕ್ತಿಗಳನು ಹೇಳವಂಥಾ ವಾಕ್ಯಾನುಭಾವವು ಸಮಾಪ್ತ. ಎಲ್ಲಾ ಭಕ್ತಮಾಹೇಶ್ವರರುಗಳ ಶ್ರೋತ್ರಮುಖ....ಯಿತ್ತು. ಮಂಗಳ। ಮಂಗಳವೆಂದರೆ ನಿರ್ಮಲವು। ಮಹಾ। ಮಹಾವೆಂದರೆ ನಿರ್ಮಲವು। ಮತ್ತು ಮಹಾವೆಂದರೆ ದೊಡ್ಡಿತ್ತವಾದಂಥದು। ಶ್ರೀ ಶ್ರೀಯೆಂದರೆ ಜ್ಞಾನವು। ಮತ್ತು ಶ್ರೀಯೆಂದರೆ ಐಶ್ವರ್ಯ। ಮತ್ತು ಶ್ರೀಯೆಂದರೆ ಪೂಜ್ಯ. ಇಂತಪ್ಪ ಜ್ಞಾನೈಶ್ವರ್ಯ ಪೂಜ್ಯವನುಳ್ಳ ಶಾಸ್ತ್ರವನ್ನು ಬರೆದು ಪಾಠವ ಮಾಡಿಕೊಂಡು ಜ್ಞಾನಗುರುಮೂರ್ತಿಗಳಿದ್ದೆಡೆಗೆ ಹೋಗಿ ದೀರ್ಘದಂಡ ನಮಸ್ಕಾರ ಮುಂತಾದ ಭಕ್ತೋಪಚಾರಗಳಿಂದ ಅಡಿಗೆರಗಿ ಈ ಶಾಸ್ತ್ರದ ಅರ್ಥ ಅನ್ವಯ ಅಭಿಪ್ರಾಯ ವರ್ಣಂಗಳನ್ನು ಶ್ರೋತ್ರಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯಮುಖದಲ್ಲಿಂಬುಗೊಂಡು ಅಂಗವ ಮಾಡಿಕೊಂಡಾಚರಿಸುವಂಥಾ ಶಿವಶರಣರೆಲ್ಲರು ನಿರತಿಶಯ ಜ್ಞಾನದ ನಿಜೈಶ್ವರ್ಯವನು ಪಡದು ಬಾಳುತ್ತಿಹರೆಂಬುದೀ ಶಾಸ್ತ್ರದ ಫಲಶ್ರುತಿಯು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

ಶ್ರೀ ಶ್ರೀ ಶ್ರೀ ಶ್ರೀ ಗುರುಬಸವಲಿಂಗಾಯ ನಮಃ। ಅಂತು ಭಕ್ತಿಸ್ಥಲಕ್ಕೆ ಸೇರಿದ ವಚನ ೫೨೪, ಮಹೇಶ್ವರಸ್ಥಲಕ್ಕೆ ಸೇರಿಸಿದ ವಚನಂಗಳು ೨೪೦, ಪ್ರಸಾದಿಸ್ಥಲಕ್ಕೆ ಸೇರಿದ ವಚನಂಗಳು ೩೦, ಪ್ರಾಣಲಿಂಗಿಸ್ಥಲಕ್ಕೆ ಸೇರಿದ ವಚನಂಗಳು ೫೮, ಶರಣಸ್ಥಲಕ್ಕೆ ಸೇರಿದ ವಚನಂಗಳು ೬೫, ಐಕ್ಯಸ್ಥಲಕ್ಕೆ ಸೇರಿದ ವಚನಂಗಳು ೪೧ ಅಂತು ಏಕೂನ ೯೫೮ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀಗುರು ವೈರಾಗ್ಯ ಚೆನ್ನಬಸವೇಶ್ವರಾಯ ನಮಃ ಬಸವಾದಿ ಪ್ರಥಮಗಣಂಗಳ ಪಾದಕ್ಕೆ ನಮೋ ನಮೋ, ರುದ್ರಗಣಂಗಳ ಪಾದಕ್ಕೆ ನಮೋ ನಮೋ......ಪಾದಕ್ಕೆ ನಮೋ ನಮೋ ತ್ರಿಷಷ್ಟಿಪುರಾತರಿಗೆ ನಮೋ ನಮೋ ಶ್ರೀ ಸರ್ವಮಂಗಲಾಯೈ ನಮಃ ಶ್ರೀ ಕೈಲಾಸಪುರಾಧೀಶಾಯ ನಮಃ.....೩೪ ಪರಿಧಾವಿನಾಮ ಸಂವತ್ಸರೆ ದಕ್ಷಣಾಯನೆ ವರ್ಷಋತು ಶ್ರಾವಣಮಾಸ.....ಕೆ.......ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ

ಶ್ರೀ ಶ್ರೀ ಶ್ರೀಗುರು ಬಸವಲಿಂಗಾಯ ನಮಃ। ಈ ವಚನಶಾಸ್ತ್ರ.....ಪ್ಪನವರ ಕರಕಮಲ ಸಂಜಾತವಾದ ಷಡಕ್ಷರಪ್ಪ.....ಸ್ತೂರ ಖುದ್॥ ಯದ್ರುಶಿ ಪುಸ್ತಕ ದುಷ್ಟ॥ ತದ್ರುಶಿ ಲಿಖಿತಂ ಮಯ॥ ಅಬದ್ಧೋ ವ ಸುಬದ್ಧೋ ವ। ಮದುದೋಷ ನ ವಿದ್ಯ....॥ ತಪ್ಪಂ ಬರದವ ಕ.....ಡನಪ್ಪಾತಂ ಬರದನೆಂದು ಬೈಯ್ಯಲು ಬ್ಯಾಡಿರಿ!! ತಪ್ಪಕ್ಕು ಶುದ್ದಮಕ್ಕುಂ! ತಪ್ಪುಳ್ಳ.....ದುತ್ತಮ ಪುರುಷರ್ ॥೧॥ ಪ್ರತಿಯಿದ್ದಾಂಗ ಬರದೀನಿ! ನೀವು ಬಲ್ಲಂಥ ಜ್ಞಾನಿಗಳು ತಪ್ಪು ಇದ್ದರೆ ತಮ್ಮ ಬಾಲಕರ ಸರಿಯಂದ....ದಾರಿಸಿ ಓದುವದು. ಹಸ್ತದೋಷ ವಾಚ ದೋಷಂಗಳಿದ್ದರೆ ಬಲ್ಲಂಥ ಪ್ರಾಜ್ಞರು ಬಯ್ಯಲಾಗದು. ಸಾಂಬ ಗೌರೀರವ......ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀಗುರು ಬಸವಲಿಂಗಾಯನಮಃ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀಗುರು ಬಸವಲಿಂಗಾಯ ನಮಃ.

**ಆದಿ :** ಶ್ರೀಗುರು ಬಸವಲಿಂಗಾಯ ನಮಃ। ನಿರ್ವಿಘ್ನಮಸ್ತು। ಶುಭಮಸ್ತು। ಬಸವರಾಜದೇವರ ಷಟ್ಸ್ಥಲದ ವಚನ॥ ಭಕ್ತಿಸ್ಥಲ। ಪಿಂಡಸ್ಥಲ। ಆದ್ಯರು ವೇದ್ಯರು ಸಾದ್ಯರು ಆದಿಪಿಂಡ ಮಧ್ಯಪಿಂಡ ಅಂತ್ಯಪಿಂಡ ಮರ್ಕಟಜ್ಞಾನ ವಿಹಂಗಜ್ಞಾನ ಆದಿಗತಿ ಮಧ್ಯಗತಿ ತೀವ್ರಗತಿ!..........

**ಅಂತ್ಯ :** ಬಸವೇಶ್ವರನ ವಚನ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪವಾದ ಅನಾದಿಪರಮೇಶ್ವರನಂತರಂಗದಲ್ಲಿ ಆದಿವಾಹನವಾದ ನಂದೀಶ್ವರನೆಂಬ ಅನಾದಿಭಕ್ತನ ಹೃದಯವಾಸವಾದ ಪ್ರಾಣಲಿಂಗವೆಂಬ ಪರಮಜಂಗಮವೇ ಲಿಂಗಾಂಗಸಮರಸದ ಷಟ್ಸ್ಥಲಾಚರಣೆಯ ನಟಿಸಿ ಮರವೆನೆಂಬ ಲೀಲಾವಿನೋದವನು ಕುರಿತು ಪ್ರಭುವೆಂಬಭಿಧಾನದಿಂದ ಮರ್ತ್ಯಲೋಕಕ್ಕವತರಿಸಿ ಮಂಗಳವಾಡದೊಳಗಿರ್ದ ಬಸವಾದಿ ಪ್ರಮಥರ್ಗೆ ಭಾವಬ್ರಹ್ಮದಲ್ಲಿ ನಿಃಪತಿಯನೆಯ್ದುವ ನಿಜಲಿಂಗೈಕ್ಯವನರುಹಿಕೊಟ್ಟುದ್ಧರಿಸಿ, ಅಂತಪ್ಪ ಆದ್ಯರಾಚರಣೆಯನೊಳಕೊಂಡು ತಮ್ಮ ಕರಸ್ಥಲದಲ್ಲಿ ಬೆಳಗುತ್ತಿರ್ದ ಶೂನ್ಯೇಷ್ಟಬ್ರಹ್ಮದಲ್ಲಿ ಸಂದ ಪ್ರಭುಸ್ವಾಮಿಗಳೆ ವೇದ್ಯಗಣಂಗಳೊಡನಾಡಿಯಾಗಿ ವೇದ್ಯರಾಚರಣೆಯನೊಳಕೊಂಡು ಸಾಧ್ಯಗಣಂಗಳಿಗೆ ತಾ ಸಾಧ್ಯನಾಗಿ ಇಪ್ಪತ್ತೊಂದು ಗುರುಸಂಪ್ರದಾಯವಿಡಿದು ಬಂದ ಆಚಾರ್ಯಪೀಠದ ಚೆನ್ನಬಸವೇಶ್ವರನೆಂಬ ದಿವ್ಯಜ್ಞಾನ ಗುರುಮೂರ್ತಿಯ ಕರಕಮಲದೊಳುದಯವಾಗಿ ಸಿದ್ಧೇಶ್ವರನೆಂಬಭಿಧಾನವ ತಳೆದು ಸ್ಥಲವ ಬಿಟ್ಟು ಚರಸ್ಥಲದವರೊಡಗೂಡಿ ತಿರಣಾಮಲೆಯ ಅಣ್ಣಾಮಲ್ಲೇಶ್ವರನೆಂಬ ಲಿಂಗದ ಗುಡಿಗೆ ಬಂದು, ಆ ಲಿಂಗದ ಭಕ್ತಿಯಿಂದ ಮೌಕ್ತಿಕದ ಹಾರಗಳನು ಕೈಕೊಂಬಲ್ಲಿ ಷಟ್ಸ್ಥಲಬ್ರಹ್ಮನ ವೀರಾಗತಿಯನಾಚರಿಸಬೇಕೆಂದು ಅವರೊಳಗೆ ನಾವು ವಿರಕ್ತರೆಂದುಚ್ಚರಿಸಿ ಚರಸ್ಥಲವ ಬಿಟ್ಟು ಪರಸ್ಥಲದ ಪರಬ್ರಹ್ಮವಾಗಿ, ಅನೇಕ ದೇಶಚಾರಿತ್ರಂಗಳ ನೋಡಿಕೊಂಡು ಭೇಷಜ ಪರ್ವತಕ್ಕೆ ಬರಲು, ಅಲ್ಲಿರ್ದ ಸೀತಾಳ ಮಲ್ಲೇಶ್ವರನೆಂಬ ಲಿಂಗವು ಚರವೇಷವ ತಳೆದು ತಮ್ಮ ಕರಪಾತ್ರೆಯ ಭಿಕ್ಷವನು ಭಕ್ತಿಯಿಂ ನಮಿಸಿ ನೀಡಲದಂ ಸ್ವೀಕರಿಸಲು, ಆ ಲಿಂಗವು ಇನ್ನು ಶಿವಾನುಭಾವವ ಪ್ರತಿಪಾದನೆಯ ಮಾಡೆಂದು ನಿರೂಪಿಸಲು, ಆ ನಿರೂಪಣೆವಿಡಿದು ಷಟ್ಸ್ಥಲಾನುಭಾವವನು ಬೋಧಿಸುವಲ್ಲಿ ಪ್ರಥಮಾಚಾರ್ಯರಾದ ಸಿದ್ಧೇಶ್ವರಸ್ವಾಮಿಗಳು, ಅವರ ಬೋಧಾಪುತ್ರನಾದ ಗುಮ್ಮಳಾಪುರದ ಸಿದ್ಧವೀರಣ್ಣಸ್ವಾಮಿಗಳು, ಅವರ ಬೋಧಾಪುತ್ರರಾದ ಗೂಳೂರು ಸಿದ್ಧಲಿಂಗಸ್ವಾಮಿಗಳು, ಅವರ ಬೋಧಾಪುತ್ರರಾದ ಕಟ್ಟಿಗೆಹಳ್ಳಿ ಸ್ವಾಮಿಗಳು, ಅವರ ಬೋಧಾಪುತ್ರರಾದ ರೇವಣಸಿದ್ಧೇಶ್ವರ ಸ್ವಾಮಿಗಳು.

II (ಜ) : ಡಾ. ಎಸ್. ಆರ್. ಗುಂಜಾಳ ಅವರಿಂದ ದೊರೆತ ಕೋರಿಕಾಗದ. ಉದ್ದ ೧೧" x ಅಗಲ ೬". 'ಬಸವರಾಜದೇವರ ಷಟ್ಸ್ಥಲ ವಚನ' ಎಂದು ಹೆಸರಿಸಿದ ಇದು, ಪುಟ ೧-೨೫೩ ರ ವರೆಗೆ ಇದೆ. ೯೫೭ ವಚನಗಳನ್ನು ಬರೆದಿದ್ದರೂ ಟೀಕೆ ಇರುವುದು ೩೧೪ ವಚನಗಳಿಗೆ ಮಾತ್ರ. ಅಕ್ಷರಗಳು ಸಾಧಾರಣವಿದ್ದು ಒಂದೊಂದು ಪುಟದಲ್ಲಿ ೯-೧೦ ಸಾಲುಗಳಿವೆ. ಎಲ್ಲ ಪುಟಗಳೂ ಚೆನ್ನಾಗಿ ಇರುವವು.

**ಆದಿ :** ಶ್ರೀಮದ್ಗುರು ಮುರಿಗೇಂದ್ರಾಣಿ ವೀರಾಭ್ಯಾಂ ನಮಃ॥ ಬಸವರಾಜದೇವರ ಷಟ್ಸ್ಥಲದ ವಚನ ॥ ಭಕ್ತಿಸ್ಥಲ। ಪಿಂಡಸ್ಥಲ। ಅದ್ಯರು ವೇದ್ಯರು ಸಾಧ್ಯರು ಆದಿಪಿಂಡ ಮಧ್ಯಪಿಂಡ ಅಂತ್ಯಪಿಂಡ ಮರ್ಕಟಜ್ಞಾನ ಪಿಪೀಲಿಕಜ್ಞಾನ ಆದಿಗತಿ ಮಧ್ಯಗತಿ ತೀವ್ರಗತಿ..........

**ಅಂತ್ಯ :** ಭಕ್ತಿಸ್ಥಲಕ್ಕೆ ಸೇರಿಸಿದ ವಚನಂಗಳು ೫೨೫, ಮಾಹೇಶ್ವರಸ್ಥಲಕ್ಕೆ ಸೇರಿಸಿದ ವಚನಂಗಳು ೨೪೯, ಪ್ರಸಾದಿಸ್ಥಲಕ್ಕೆ ಸೇರಿಸಿದ ವಚನ ೩೦, ಪ್ರಾಣಲಿಂಗಿಸ್ಥಲಕ್ಕೆ ಸೇರಿಸಿದ ವಚನ ೫೮, ಶರಣಸ್ಥಲಕ್ಕೆ ಸೇರಿಸಿದ ವಚನ ೬೫, ಐಕ್ಯಸ್ಥಲಕ್ಕೆ ಸೇರಿಸಿಧ ವಚನ ೪೦, ಅಂತು ಸ್ಥಲ ೬ಕ್ಕಂ ಮಿ ೩೬ಕ್ಕಂ ಸೇರಿಸಿ ವಚನ ೯೫೭ಕ್ಕಂ ಮಂಗಳ ಮಹಾ ಶ್ರೀ ಶ್ರೀ ಬಸವೇಶ್ವರ ವಚನದೊಳಗೆ ಕಠಿಣವಾದ ಸಂಕ್ಷೇಪವಚನಕ್ಕೆ ಟಿಪ್ಪಣವಾಗಿ ಲಿಂಗಾಂಗಸಾಮರಸ್ಯವನು ಬಲ್ಲ ಷಟ್ಸ್ಥಲ ಸಮ್ಯಜ್ಞಾನ ಮಹಾನುಭಾವಿಗಳು ನಿರೂಪಿಸಿದುದು ಲಿಖಿಸಿ ಸಮಾಪ್ತಿಯಾಯಿತ್ತು. ಸಮಾಪ್ತ ಮಂಗಳಮಸ್ತು ಶುಭಮಸ್ತು । ಶೋಭನಮಸ್ತು । ಆಯುಷ್ಯಮಸ್ತು । ಶ್ರೀರಸ್ತು । ಈ ವಚನ ಪುಸ್ತಕ ಮುಗದುದು ೧೭೬೪ ಶುಭಕ್ರತುನಾಮ ಸಂವತ್ಸರ। ಕಾರ್ತಿಕ ಬಹುಳ ॥೩॥ ತದಿಗಿ ರವಿವಾರದೊಳಗೆ ಸಮಾಪ್ತಿಯಾಯಿತ್ತು. ಶ್ರೀಮದ್ಗುರು ಮುರಿಗೇಂದ್ರಾಣಿ ವೀರಾಭ್ಯಾಂ ನಮಃ। ಶ್ರೀ ಶಿವಮೂರ್ತಯೋ ನಮಃ। ಈ ವಚನಪುಸ್ತಕದಾರದೆಂದರೆ ಹೇರಲಗಿ ದಾನಪ್ಪನ ತನುಜಾತನಾದ ಶಾಂತವೀರಪ್ಪನು ಭಕ್ತಿಯಿಂದ ಬರಿಸಿಕೊಂಡನು. ಬರದವರು ಆರೆಂದರೆ ಪುರಾಣಿಕರೊಳಗೆ ಶ್ರೇಷ್ಠವಹ ಪ್ರಭುಸ್ವಾಮಿ ಆ ಪ್ರಭುಸ್ವಾಮಿಯ. ತನುಜಾತನಾದ ವೀರುಪಾಕ್ಷಪ್ಪ ಪುರಾಣಿಕರು, ಆ ಪುರಾಣಿಕರ ಕರಕಮಲಸಂಭವ ಪೌರಾಣಿಕ ಸಿದ್ಧಮಲ್ಲಪ್ಪನು ಲಿಖಿಸಿದನು, ಇದಕ್ಕೆ ಸಂದೇಹವಿಲ್ಲವು. ಈ ಮಾತು ಋಜು, ಸಹಜವು, ನಿಶ್ಚಯವು, ಶಾಶ್ವತವು.

III (ಟ) : ಎಸ್. ಉಮಾಪತಿ ಅವರಿಂದ ದೊರೆತ ತಾಳೆಪ್ರತಿ. ಉದ್ದ ೧೩.೫"x ಅಗಲ ೨.೨" "ಬಸವರಾಜದೇವರು ಷಟ್ಸ್ಥಲದ ವಚನದ ಘಟ್ಟಿ ಘಟ್ಟಿ ನುಡಿಗಳು" ಎಂದು ಕರೆಯಲಾದ ಇದು, ಪುಟ ೧೧೮ ರಿಂದ ೧೫೭ ರ ವರೆಗೆ ವ್ಯಾಪಿಸಿದೆ. ಕೆಲವು ಸಲ ಇಡೀ ವಚನ ಮತ್ತು ಅವುಗಳಿಗೆ ಟೀಕೆ ಇದ್ದರೆ ಇನ್ನು ಕೆಲವು ಸಲ ಕೇವಲ ಭಾಗಶಃ ಟೀಕೆ ಇದೆ. ಇದರಿಂದಾಗಿ ಇಲ್ಲಿ ೩೪೮ ವಚನಗಳಿಗೆ ಟೀಕೆ ಬರೆದಂತಾಗಿದೆ. ಅಕ್ಷರಗಳು ಸುಂದರವಾಗಿದ್ದು ಒಂದೊಂದು ಪುಟದಲ್ಲಿ ೧೦-೧೧ ಸಾಲುಗಳಿವೆ. ಎಲ್ಲ ಪುಟಗಳು ಸುಭದ್ರವಾಗಿವೆ.

**ಆದಿ :** ಶ್ರೀ ನಂದಿಕೇಶ್ವರಾಯನಮಃ। ಬಸವರಾಜದೇವರ ಷಟ್ಸ್ಥಲದ ವಚನದ ಘಟ್ಟಿಘಟ್ಟಿ ನುಡಿಗಳ ಬರುವುದಕ್ಕೆ ಶುಭಮಸ್ತು॥ವ॥

**ಅಂತ್ಯ :** ಇತಿ ಶ್ರೀಮದ್ಬಸವರಾಜದೇವರ ಷಟ್ಸ್ಥಲದ ವಚನದ ಗಟ್ಟಿಗಟ್ಟಿ ನುಡಿಗಳು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ

ಲೀಲಾವಿಗ್ರಹಮೂರ್ತಿಯಾದ ಶ್ರೀ ಸೋಮಶೇಖರಲಿಂಗ ಚರಣಾರವಿಂದ ಮಕರಂದ ರಸಪಾನಪೀನ ಮತ್ತಮಧುಕರಾಯಮಾನ ಸೋಮಶೇಖರ ಶಿವಯೋಗಿ ಕೃತ ಬಸವರಾಜದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು ಪರಿಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

III(ಡ) : ಎಸ್. ಉಮಾಪತಿ ಅವರಿಂದ ದೊರೆತ ತಾಳಪ್ರತಿ ಉದ್ದ ೧೭.೪"xಅಗಲ ೨.೧". "ಷಟ್ಸ್ಥಲಜ್ಞಾನಿ ಸೋಮಶೇಖರ ಶಿವಯೋಗಿಕೃತ ತೋಂಟದ ಸಿದ್ಧಲಿಂಗೇಶ್ವರನ ಷಟ್ಸ್ಥಲಜ್ಞಾನಸಾರಾಮೃತದ ಬೆಡಗಿನ ವಚನದ ಟೀಕೆ" ಪುಟ ೧ರಿಂದ ೨೨(ಅ), "ಬಸವರಾಜದೇವರ ಷಟ್ಸ್ಥಲದ ವಚನದ ಘಟ್ಟಿಘಟ್ಟಿ ನುಡಿಗಳು" ಪುಟ ೨೨(ಅ) ರಿಂದ ೪೬(ಅ)-ಹೀಗೆ ಎರಡು ಕೃತಿಗಳಿವೆ. ಇಲ್ಲಿ ವಚನಗಳಿಲ್ಲದೆ ಕೇವಲ ೩೪೮ ವಚನ ಟೀಕು ಇದೆ, ಅಕ್ಷರಗಳು ಸಣ್ಣವಿದ್ದು ಒಂದೊಂದು ಪುಟದಲ್ಲಿ ೧೧-೧೨ ಸಾಲುಗಳಿವೆ. ಎಲ್ಲ ಪುಟಗಳು ಚೆನ್ನಾಗಿವೆ.

**ಆದಿ** : ಶ್ರೀಗುರು ಬಸವಲಿಂಗಾಯ ನಮಃ। ಬಸವರಾಜದೇವರ ಷಟ್ಸ್ಥಲದ ವಚನದ ಘಟ್ಟಿಘಟ್ಟಿ ನುಡಿಗಳ ಬರವುದಕ್ಕೆ ಶುಭಮಸ್ತು ॥ವ॥ ಟೀಕು.

**ಅಂತ್ಯ** : ಇತಿ ಶ್ರೀಮದ್ಬಸವರಾಜದೇವರ ಷಟ್ಸ್ಥಲದ ವಚನದ ಘಟ್ಟಿ ಘಟ್ಟಿ ನುಡಿಗಳು ಸಂಪೂರ್ಣಂ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

IV(ತ) : ಕನ್ನಡ ಅಧ್ಯಯಪೀಠದ 'ಹಸ್ತಪ್ರತಿ ಭಾಂಡಾರ' ದ ಕ್ರಮಾಂಕ ೧೦೭ ತಾಳಪ್ರತಿ. ಮೂಲತಃ ಮಹಾಲಿಂಗಪುರದ ಮಹಾಲಿಂಗೇಶ್ವರ ಮಠಕ್ಕೆ ಸಂಬಂಧಿಸಿದುದು, ಉದ್ದ ೧೩"xಅಗಲ ೨".'ಜಕ್ಕಣಾರ್ಯನ ಏಕೋತ್ತರಶತಸ್ಥಲ' ಪುಟ ೧-೯೮, 'ಪ್ರಭುದೇವರ ಟೀಕಿನ ವಚನ' ಪುಟ-೯೯-೧೯೬, 'ಬಸವರಾಜದೇವರ ಷಡುಸ್ಥಲದ ವಚನದ ಕಥಾಸಾರ' ಪುಟ ೧-೨೭, 'ಬಸವ ವಚನಸಾರಾಮೃತ' ಪುಟ ೨೭-೫೬-ಹೀಗೆ ನಾಲ್ಕು ಕೃತಿಗಳಿವೆ. ಇವುಗಳಲ್ಲಿ ನಾಲ್ಕನೆಯದಾದ 'ಬಸವವಚನ ಸಾರಾಮೃತ'ದಲ್ಲಿ ೩೭೪ ವಚನಗಳಿದ್ದು ಅವೆಲ್ಲಕ್ಕೂ ಟೀಕೆ ಇದೆ. ಅಕ್ಷರಗಳು ಸಾಧಾರಣವಿದ್ದು ಪ್ರತಿಯೊಂದು ಪುಟದಲ್ಲಿ ೧೫-೧೬ ಸಾಲುಗಳಿದ್ದು ಎಲ್ಲ ಗರಿಗಳು ಚೆನ್ನಾಗಿವೆ.

ಆದಿ : ಶ್ರೀಗುರು ಬಸವಲಿಂಗಾಯನಮ। ಗುರುಬಸವರಾಜದೇವರು ಸೇರಿಸಿದ ಬಸವ ವಚನ ಸಾರಾಮೃತ। ಪ್ರಥಮದಲ್ಲಿ ಪಿಂಡಸ್ಥಲದ ವಚನ।

**ಅಂತ್ಯ** : ಭಕ್ತಿಸ್ಥಲಕ್ಕೆ ಸೇರಿಸಿದ ವಚನ ೧೭, ಮಾಹೇಶ್ವರಸ್ಥಲಕ್ಕೆ ವಚನ ೪೦, ಪ್ರಸಾದಿಸ್ಥಲಕ್ಕೆ ವಚನ ೨೫, ಪ್ರಾಣಲಿಂಗಿಸ್ಥಲಕ್ಕೆ ವಚನ ೨೯, ಶರಣಸ್ಥಲಕ್ಕೆ ವಚನ ೩೪, ಐಕ್ಯಸ್ಥಲಕ್ಕೆ ವಚನ ೨೧ ಅಂತು ವಚನ ೩೭೪ಕ್ಕಂ ಮಂಗಳ ವಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

V (ಪ) : ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನಸಂಸ್ಥೆಯ ಹಸ್ತಪ್ರತಿಭಂಡಾರಕ್ಕೆ ಸಂಬಂಧಿಸಿದ ೧೦೪೯ನೆಯ ಕ್ರಮಾಂಕ, ಕೆ ೧೮೮/೧ನೆಯ ಸಾಂಕೇತಿಕಾಂಕದ ತಾಳೆಗರಿ ಪ್ರತಿ. ಉದ್ದ ೧೭.೬"xಅಗಲ ೨". ಪತ್ರ ೧ ರಿಂದ ೧೮ರ ವರೆಗೆ ಈ ಕೃತಿ ವ್ಯಾಪಿಸಿದೆ. ಪ್ರತಿಯೊಂದು ಪತ್ರದಲ್ಲಿ ೧೨ಸಾಲುಗಳಿವೆ. ಕೃತಿಯ ಸ್ಥಿತಿ ಸಾಧಾರಣ. ೧ನೆಯ ಪತ್ರ ಲುಪ್ತವಾಗಿದೆ. ಅಲ್ಲಲ್ಲಿಯ ಕೆಲವು ವಚನಗಳಿಗೆ ಮಾತ್ರ ಟೀಕೆ ಬರೆಯಲಾಗಿದೆ, ೯ನೆಯ ಪತ್ರದಲ್ಲಿ ಭಕ್ತಸ್ಥಲದ ೧೦೯ನೆಯ

ವಚನದ ಟೀಕೆ ಮುಗಿಯುವಲ್ಲಿ "ಶ್ರೀಮತ್ಷಟ್ಸ್ಥಲಾದ್ವೈತ ವಿದ್ಯಾ ಪ್ರಮೋದಿತ ಶ್ರೀವೀರಮಾಹೇಶ್ವರ ಬಾಲೇಂದುಪುರದ ಹರೀಶ್ವರ ಶಾಂತವೀರೇಶ್ವರ ಚಿದ್ಗರ್ಭಸಂಭವ ಪರ್ವತಶಿಯೋಗೀಶ್ವರ ವಿರಚಿತಮಪ್ಪ ಬಸವೇಶ್ವರ ವಚನಸಾರಾರ್ಥ" ಎಂಬ ಹೇಳಿಕೆ ಇದೆ. ೧೭ನೆಯ ಪತ್ರದಿಂದ ಮುಂದಿನ ಪತ್ರಗಳಲ್ಲಿ "ಬಸವೇಶ್ವರನ ವಚನದ ನುಡಿಗಳನು" ಎಂಬ ಶೀರ್ಷಿಕೆಯಲ್ಲಿ ಪ್ರಾರಂಭದ ಆಯ್ದ ಕೆಲವು ವಚನಗಳಿಗೆ ಬರೆದ ಬೇರೊಂದು ಬಗೆಯ ಅಪೂರ್ಣ ಅಸ್ಪಷ್ಟ ಟೀಕೆಯಿದೆ. (ಪ್ರಸ್ತುತ ಸಂಪಾದನೆಯಲ್ಲಿ ನಾವು ಈ ಅಸ್ಪಷ್ಟ ಟೀಕೆಯನ್ನು ಬಳಸಿಕೊಂಡಿಲ್ಲ).

**ಆದಿ :** .........ರ ದೇವರ ವಚನಸಾರಾರ್ಥ ॥ಗ್ರಂ॥ ನಮಸ್ತ್ರಿಮೂರ್ತಿ ರೂಪಾಯ । ನಾದಬಿಂದು ಕಳಾತ್ಮನೇ। ನಮಃ ಷಟ್ಸ್ಥಲರೂಪಾಯ ಶಾಂತವೀರಾಯ ತೇ ನಮಃ ॥೧॥ ಬಸವೇಶ್ವರದೇವತಾ ವಚನಸಾರಾರ್ಥ ॥ ಪ್ರಥಮದಲ್ಲಿ ಪಿ.........ಂಚ್ಚಿನಂತಿದ್ದಿತ್ತು। ಸಸಿಯೊಳಗಣ ಸಸದ ರುಚಿಯಂತಿದ್ದಿತ್ತು। ಕೂಡಲಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು ॥ಟೀಕೆ॥ ಉದಕದಲ್ಲಿ ವಡಬಾಗ್ನಿಯಿರ್ದು।ಆವುದಕವನ ಶೋಷಣಂ ಗೆಯ್ಯದೆ......ಷಯ ರಸ ಸೀತಳೀಕೃತಮಪ್ಪ ಪಿಂಡದ ಮಧ್ಯದಲ್ಲಿ ಚಿದಗ್ನಿಸ್ವರೂಪವಾದ ವಸ್ತುವಿರ್ದುರಹಸ್ಯವಾಗಿರ್ಪುದೆಂಬುದೀಗ। ವುದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತೆಂಬ ಶಬ್ದಕ್ಕರ್ತ.........ಲ ತತ್ವಸ್ವರೂಪಮಪ್ಪ ಪಿಂಡದ ಮಧ್ಯದಲ್ಲಿ.

**ಅಂತ್ಯ :** ॥೨೩॥ ಆದಿಯಾಧಾರದ। ಶಿವಶಕ್ತಿಸ್ವರೂಪವಾದ ವಿಶ್ವಜೀವನು। ನಾರಾಯಣನ ಪ್ರಕೃತಿಯನು ಗೆದ್ದಂಥಾ। ಧನು ಜಿತನು। ಕಾಮಚಾಪವನು ಗೆದ್ದಂಥಾ। ಸ್ವರ್ಜಿತನು। ಸ್ವರ್ಗಪ್ರಪಂಚನು ಗೆದ್ದಂಥಾ । ಸೂತ್ರಾರ್ಜಿತನು । ಜ್ಞಾನಸೂತ್ರದಿಂದೆ ಪಡೆಯಲ್ಪಟ್ಟಂಥಾ । ನೃಜಿತನು । ಆತ್ಮರ ಪ್ರಪಂಚನು ಗೆದ್ದಂಥಾ। ವುರ್ವರಾಜಿತನು। ಭೂಪತಿಗಳ ಪ್ರಪಂಚನು ಗೆದ್ದಂಥಾ। ಗೋಜಿತನು। ಯಿಂದ್ರಿಯಂಗಳನು ಗೆದ್ದಂಥಂ। ಅಶ್ವಜಿತನು। ಪ್ರಾಣವಾಯುವಿನ ಪ್ರಕೃತಿಯನು ಗೆದ್ದಂಥಾ। ಅರ್ಜಿತನು। ಅರಿಷಡ್ವರ್ಗಂಗಳನು ಗೆದ್ದಂಥಾ। ಸುಸಂವೇದ್ಯನು। ಜ್ಞಾನದಿಂದೆ ತಿಳಿಯಿಸಿಕೊಳಲ್ತಕ್ಕಂಥಾ। ವೇದನಾದಾತೀತನು-ವೇದನಾದಂಗಳನು ಮೀಱಿದಂಥಾ। ತುರೀಯ। ಸಕಲತ ತ್ವತ್ತೋತ್ತೀರ್ನನಾದಂಥಾ। ಪರಾನಂದ। ಶ್ರೇಷ್ಠಾಸಂದವನುಳ್ಳಂಥಾ। ನಿರವಯ। ಅವಯವಂಗಳೇನು ಯಿಲ್ಲದೆಯಿರ್ದಂಥಾ। ಸೂರ್ಯಕೋಟಿ। ಅನೇಕಾದಿತ್ಯರುಗಳ ಪ್ರಭೆಯ ಸ್ಪುರಣೆ। ಬೆಳಗಿನ। ಪ್ರಕಾಶದ ಸಹಸ್ರಕಿರಣ। ಸಾವಿರಮಯೂಖಂಗಳ। ಅಗ್ರಪಟಲದ। ಅಗ್ರ। ವುಪರಿಯ। ಪಟಲದ। ಸಮೂಹದ। ಬೆಳಗು। ಚಿತ್ರಕಾಶವು ಕೂಡಲಸಂಗಯ್ಯ। ಪರಶಿವಲಿಂಗವು ॥೨೪॥ ಶ್ರೀಶ್ರೀಶ್ರೀಶ್ರೀ॥ ಶ್ರೀಗುರುವೇ ಗತಿ॥ ಬಸವೇಶ್ವರನ ವಚನದ ನುಡಿಗಳು॥ ಜಲಬುದ್ಬುದಾಕಾರಮಪ್ಪ ಪಿಂಡದ ಮಧ್ಯದಲ್ಲಿ.

* * *

ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆಂನ ಬಾಳುವೆಯೆಂಬ ಶಬ್ದಕ್ಕರ್ಥ॥ ವುಡುಹನ ಮಾಡಿತ್ತು। ಕ್ರಿಯಾಜ್ಞಾನ ರಹಿತನಾಗಿಸಿತ್ತು। ದೇಹಾತ್ಮರುಗಳಿಗೆ ಅಗಲಿಕೆಯಾಗಿ ಶರೀರವು ಭೂಮಿಯ ಮೇಲೆ ಪಥನವಾದ ಬಳಿಕ ಯೆಂಬುದೀಗ ಕೀಲಕಳದು ಕೆಡದ ಬಳಿಕಯೆಂಬ ಶಬ್ದಕ್ಕರ್ಥ। ತರಸಲೆವೋದನು।

## • ಕೃತಜ್ಞತೆ •

ಶ್ರೀ ಮುರಗೋಡ ಸಂಸ್ಥಾನ ಮಠಾಧೀಶರಾದ "ಶ್ರೀ. ನಿ. ಪ್ರ. ಸ್ವ. ಮಹಾಂತಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ ಶ್ರೀ ಬಸವೇಶ್ವರ ಪೀಠ", ಲಿಂಗಾಯತ ಸಮಾಜದ ಸರ್ವಪ್ರಜೆಗಳ ತ್ಯಾಗದ ಮೇಲೆ ನಿಂತ ಒಂದು ವಿಶೇಷ ಅಧಿಷ್ಠಾನ. ಈ ಅಧಿಷ್ಠಾನದ ಪುಣ್ಯಚೇತನ ಮುರಗೋಡದ ಲಿಂ. ಶ್ರೀ ನಿ. ಪ್ರ. ಸ್ವ. ಮಹಾಂತಶಿವಯೋಗಿಗಳು. ಪುಣ್ಯವೇ ಹಣ್ಣಾದಂತೆ ನೂರು ವರ್ಷಗಳ ನಿಡುಬಾಳನ್ನು ಬದುಕಿ ಮುಕ್ತಿಯಂತೆ ಮುಕ್ತರಾದ ಈ ಪೂಜ್ಯ ಶ್ರೀಗಳವರ ಸನ್ನಿಧಿಗೆ ಭಕ್ತಿಪೂರ್ವಕ ಪ್ರಣಾಮಗಳು. ಈ ಪೀಠವನ್ನು ಅನುಷ್ಠಾನಕ್ಕೆ ತರುವ ಕನಸು ಕಂಡು, ನನಸಾಗುವಂತೆ ಆಶೀರ್ವದಿಸಿದ ಧಾರವಾಡ ಶ್ರೀ ಮುರುಘಾಮಠದ ಶ್ರೀ ಮ. ನಿ. ಪ್ರ. ಸ್ವ. ಮಹಾಂತಸ್ವಾಮಿಗಳವರಲ್ಲಿ, ಶ್ರೀ ಬಸವೇಶ್ವರಪೀಠ'ದ ಬಗೆಗೆ ಅಪಾರ ಆಸಕ್ತಿಯಿಟ್ಟುಕೊಂಡಿರುವ ಮುರಗೋಡ ಮಠದ ಅಧಿಪತಿಗಳಾದ ಶ್ರೀ. ನಿ. ಪ್ರ. ಸ್ವ. ನೀಲಕಂಠ ಮಹಾಸ್ವಾಮಿಗಳವರಲ್ಲಿ ತ್ರಿಕರಣಪೂರ್ವಕ ಪ್ರಣಾಮಗಳು. ಶ್ರೀ ಮಹಾಂತಶಿವಯೋಗೀಶ್ವರ ಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾಗಿ 'ಶ್ರೀ ಬಸವೇಶ್ವರಪೀಠ'ವನ್ನು ಸ್ಥಾಪಿಸುವಲ್ಲಿ ನಾಯಕಪಾತ್ರ ವಹಿಸಿದ ಶ್ರೀ ಸಿದ್ಧರಾಮಣ್ಣ ಬೆಂಬಳಗಿ ಅವರಿಗೆ ವಂದನೆಗಳು.

ಈ ವರೆಗೆ ನಾಲ್ಕು ಕೃತಿಗಳನ್ನು ಪ್ರಕಟಿಸಿದ ಈ ಪೀಠ, ಈಗ ಐದು ಕೃತಿಗಳನ್ನು ಒಂದೇ ಸಂಪುಟದಲ್ಲಿ ಪ್ರಕಟಿಸುವ ಈ ವಿಸ್ತೃತ ಯೋಜನೆಯನ್ನು ಕೈಗೆತ್ತಿಕೊಂಡುದು ೧೯೭೬ ರಂದು. ಅಂದಿನಿಂದ ಪ್ರತಿಯೊಂದು ಕೃತಿಯನ್ನು ಹಸ್ತಪ್ರತಿಗಳ ಬಲದಿಂದ ಸ್ವತಂತ್ರವಾಗಿ ಪರಿಷ್ಕರಣ ಮಾಡುವ, ಅವುಗಳ ಶುದ್ಧಪ್ರತಿ ಬರೆಯುವ, ಕೊನೆಗೆ ಐದನ್ನೂ ಪಾಠಾಂತರ ಸಹಿತ ಒಂದೇ ಸಂಪುಟದಲ್ಲಿ ಯೋಜಿಸುವ, ಕೊನೆಗೆ ಅಚ್ಚಿಸುವ-ಈ ನಾಲ್ಕು ಹಂತಗಳಲ್ಲಿ ಮುಂದುವರಿದು ಬಂದಿದೆ, ಪ್ರಸ್ತುತ ಕಾರ್ಯ, ಇಷ್ಟು ವ್ಯಾಪಕವೂ ಸುದೀರ್ಘವೂ ಆದ ಈ ಯೋಜನೆಯನ್ನು ರೂಪಿಸಿ ಕೊಂಡ ಸಂದರ್ಭದಲ್ಲಿ 'ಅಸ್ತು' ಹೇಳಿ ಮುನ್ನಡೆಯುವಂತೆ ಪ್ರೇರೇಪಿಸಿದವರು ಅಂದು ಕುಲಪತಿಗಳಾಗಿದ್ದ ಡಾ. ಆರ್. ಸಿ. ಹೀರೆಮಠ ಅವರು.

ಈ ಯೋಜನೆಯ ಯೋಗಕ್ಷೇಮವನ್ನು ವಿಚಾರಿಸುತ್ತ ಸ್ಫೂರ್ತಿ ನೀಡಿದವರು ಇಂದು ಕುಲಪತಿಗಳಾಗಿರುವ ಶ್ರೀ ಎಸ್. ಎಸ್. ಒಡೆಯರ ಅವರು. ಕಾರ್ಯಪ್ರಗತಿಗಾಗಿ ಆಸಕ್ತಿಯಿಂದ ಸರ್ವ ಅನುಕೂಲತೆಗಳನ್ನು ಒದಗಿಸಿಕೊಟ್ಟವರು ಕನ್ನಡ ಅಧ್ಯಯನಪೀಠದ ನಿರ್ದೇಶಕರಾದ ಡಾ. ಎಂ. ಎಸ್. ಸುಂಕಾಪುರ ಅವರು. ಹೀಗೆ ಈ ಯೋಜನೆಯುದ್ದಕ್ಕೂ ನನಗೆ ಬೆಂಬಲನೀಡಿದ ಈ ಎಲ್ಲ ಹಿರಿಯರಿಗೆ ವಂದನೆಗಳು.

ಈ ಯೋಜನೆಯ ಎಲ್ಲ ಘಟ್ಟಗಳಲ್ಲಿ ನನ್ನ ಎಡಗೈ-ಬಲಗೈಯಂತೆ ನೆರವಾದವರು, 'ಶ್ರೀ ಬಸವೇಶ್ವರಪೀಠ'ದ ಸಿಬ್ಬಂದಿವರ್ಗದ ಪಂಡಿತ ಶ್ರೀ ನಾಗಭೂಷಣಶಾಸ್ತ್ರೀಗಳು, ಶ್ರೀ ಬಿ. ಆರ್. ಹೀರೆಮಠ, ಶ್ರೀ ಪಂಚಾಕ್ಷರಿ ಹೀರೆಮಠ, ಶ್ರೀ. ಎಸ್. ವ್ಹಿ. ಅಯ್ಯನಗೌಡರ. ಹೀಗಾಗಿ ಈ ಸಂಪುಟ ಒಂದರ್ಥದಲ್ಲಿ ಸಂಯುಕ್ತಶ್ರಮದ ಫಲವೆಂದು ಹೇಳಲು ಸಂತೋಷವೆನಿಸುತ್ತದೆ. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು.

ಇಂಥ ಕಾರ್ಯಗಳಿಗೆ 'ಹಸ್ತಪ್ರತಿ' ಗಳೇ ಮೂಲ ಧನ. ಇವುಗಳನ್ನು ಒದಗಿಸಿದವರು ಮಾನ್ಯರಾದ ಡಾ. ಹಾ. ಮಾ. ನಾಯಕ, ಶ್ರೀ. ಎಸ್. ಬಸವಾರಾಧ್ಯ, ಡಾ. ಎಸ್. ಆರ್. ಗುಂಜಾಳ, ಪ್ರೊ. ಎಸ್. ಉಮಾಪತಿ. ಇವರ ಔದಾರ್ಯಕ್ಕೆ ವಂದನೆಗಳು.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಉಪನಿರ್ದೇಶಕರಾದ ಶ್ರೀ. ಎಸ್. ಬಿ. ನಾಯಕ ಅವರೂ ಈ ಕೃತಿ ಪ್ರಕಟನೆಯ ವಿಷಯದಲ್ಲಿ ನೀಡಿದ ಸಲಹೆ–ಸಹಕಾರ ಅನನ್ಯವಾದುವು. ಮುದ್ರಣ ವಿಭಾಗದ ನಿರ್ದೇಶಕರಾದ ಶ್ರೀ. ಜಿ. ಬಿ. ಮನ್ವಾಚಾರ ಅವರೂ ಅವರ ಸಿಬ್ಬಂದಿವರ್ಗವೂ ಇದರ ಸರ್ವಾಂಗಸುಂದರ ಮುದ್ರಣಕ್ಕೋಸುಗ ಬೇಸರಪಟ್ಟುಕೊಳ್ಳದೆ ದುಡಿದಿದ್ದಾರೆ. ಇವರೆಲ್ಲರಿಗೆ ವಂದನೆಗಳು.

ಇಷ್ಟು ದೊಡ್ಡ ಸಂಪುಟವನ್ನು ಪರಿಷ್ಕರಿಸುವಲ್ಲಿ, ಪ್ರಕಟಿಸುವಲ್ಲಿ ಅನವಧಾನ, ಅಜ್ಞಾನ, ಅನ್ಯಥಾಜ್ಞಾನಗಳಿಂದಾಗಿ ಉಳಿದಿರಬಹುದಾದ ದೋಷಗಳನ್ನು "ನಡೆವರೆಡಹುವರೆ?" ಎಂಬ ಭಾವನೆಯಿಂದ ಸಹೃದಯರು ಮನ್ನಿಸಬೇಕು.

–ಎಂ. ಎಂ. ಕಲಬುರ್ಗಿ

ಕನ್ನಡ ಅಧ್ಯಯನಪೀಠ

೧ ನವ್ಹಂಬರ ೧೯೭೮ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

❖❖

*

# ಪರಿವಿಡಿ



**ಅನುಬಂಧ**

# ಭಕ್ತಸ್ಥಲ

## ಪೀಠಿಕೆ

---

**ಶ್ರೀಗುರುಬಸವಲಿಂಗಾಯ ನಮಃ ಬಸವೇಶ್ವರದೇವರ ಷಟ್ಸ್ಥಲದ ವಚನಂಗಳು. ಪ್ರಥಮದಲ್ಲಿ ಭಕ್ತಸ್ಥಲ.**

I – – – – – – – – – – – – – – – – – – – – – – – – – – – – – – –

ಶ್ರೀಗುರುಬಸವಲಿಂಗಾಯ ನಮಃ ಶ್ರೀ–ಷಡ್ಗುಣೈಶ್ವರ್ಯಸಂಪತ್ಕರವನುಳ್ಳಂಥ, ಗುರು–ಮುಕ್ತಿಪ್ರದಾಯಕನಾದಂಥ, ಗುರು–ಪೂಜ್ಯಕ್ಕೆ ಪ್ರಭುವಾದಂಥ, ಬಸವ–'ಬ'ಕಾರವೆ ಭವಹರಗುರು, 'ಸ' ಕಾರವೆ ಸಕಲಚೈತನ್ಯವಪ್ಪ ಲಿಂಗವು, 'ವ'ಕಾರವೆ ವಚಿಸುವುದಕ್ಕೆ ಕಾರಣವಾದ ಮಹಾನುಭಾವ ಮೂರ್ತಿಯಪ್ಪ ಜಂಗಮವು. ಇಂತೀ 'ಗುರುಲಿಂಗಜಂಗಮ' ಸ್ವರೂಪವಾದ, ಲಿಂಗ–ಲಯಗಮನಂಗಳಿಗಾಲಯವಾದ ಮಹಾಲಿಂಗವು, ಅಯ–ಅಂತಪ್ಪ ಇಷ್ಟಸ್ವರೂಪವಾದಾತನೇ ಬಸವೇಶ್ವರನು. ಅಂತಪ್ಪ ಸಂಗನಬಸವೇಶ್ವರಸ್ವಾಮಿಗಳೆಂಬ ಮಹಾಜ್ಞಾನಗುರುತತ್ತ್ವಕ್ಕೋಸ್ಕರ, ನಮಃ–ನಮಸ್ಕಾರವೆಂದು, ಆವುದಾನೊಂದು ಶಾಸ್ತ್ರವನೋದಬೇಕಾದರೂ ಕೇಳಬೇಕಾದರೂ ಅರ್ಥಾನ್ವಯ[೧]ಂಗಳ[೧] ಮಾಡಬೇಕಾದರೂ ಕವಿತಾಚಾತುರ್ಯ[೨]ಂಗಳ[೨] ಮಾಡಬೇಕಾದರೂ ಪ್ರಥಮದಲ್ಲಿ ಶಿವಾನುಭವ ಮಾಡಬೇಕಾದರೂ ಮೊದಲು ಗುರುನಮಸ್ಕಾರವೇ ಮುಖ್ಯ. ಆ ಗುರುನಮಸ್ಕಾರವಿಲ್ಲದೆ ಆವುದಾನೊಂದು ಶಾಸ್ತ್ರವನೋದಿದರೂ ಕೇಳಿದರೂ ಅರ್ಥಾನ್ವಯಂಗಳ ಮಾಡಿದರೂ ಕವಿತಾಚಾತುರ್ಯ[೩]ಂಗಳ[೩] ಮಾಡಿದರೂ ಪ್ರಥಮದಲ್ಲಿ ಶಿವಾನುಭವವ ಮಾಡಿದರೂ ಕಾಲಾಂ[೪]ತರದಲ್ಲಿ[೪] ವಿಘ್ನವಾಗಿ ಕೆಟ್ಟುಹೋಗುವುದು. ಅದು ಕಾರಣ ಗುರುನಮಸ್ಕಾರದಿಂದೆ ಏನಾಗುವುದಯ್ಯ ಸ್ವಾಮಿ? ಎಂದು ಶಿಷ್ಯೋತ್ತಮನು ಶ್ರೀಗುರುನಾಥನ ಶಂಕಿಸಿ ಬೆಸಗೊಂಡಡೆ ಎಂಬಲ್ಲಿ, [೫]ಶಾಸ್ತ್ರದ ಪರಿಸಮಾಪ್ತಿ, ಶಿಷ್ಯಪ್ರಶಿಷ್ಯಪ್ರವಾಹಪ್ರವರ್ತನೆ,[೫] ಕೇಳುವರ ಚಿತ್ತಸ್ವಾಸ್ಥ್ಯ[೬]–ಇವು ಮೂರು ಸಿದ್ಧಿ ಆಗುವವು. ಅದು ಕಾರಣ ಈ ಶಾಸ್ತ್ರದ ಪ್ರಥಮಪ್ರಾರಂಭದಲ್ಲಿ ಆಚಾರ್ಯರುಗಳು ಗುರುನಮಸ್ಕಾರವ ಮಾಡಿ [೭]ಉದ್ಧರಿಸಿ[೭] ನಿರೂಪಿಸುತ್ತಿ[೮][ರ್ದಪ][೮]ರು ಎಂಬುದೀಗ ಶ್ರೀಗುರುಬಸವಲಿಂಗಾಯ ನಮಃ ಎಂಬ ಶಬ್ದಕ್ಕರ್ಥ.

ಶ್ರೀಗುರುಬಸವಲಿಂಗಾಯ ನಮಃ ಃ

ಶ್ರೀ–ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರೀಯಃ।

ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಿತಃ॥

ಗುರು-ಗುಕಾರಸ್ತವರೂಪಂ ಚ ರುಕಾರೋ ಮಮರೂಪಕಃ।
ಉಭಯೋಸ್ಸಂಗಸೌಖ್ಯಂ ಚ ಗುರೋರ್ವರ್ಣಂ ಜಪೇತ್ಸುಧೀಃ॥

ಗುಕಾರಸ್ತೈಲವರ್ತಂ ಚ ರುಕಾರಂ ಜ್ವಲನಸ್ಸ್ಮೃತಃ।
ದ್ವಯೋರ್ಯೋಗಪ್ರಭಾವೇಣ ಸ್ವಯಂಜೋತಿರ್ಗುರುಸ್ಮೃತಃ॥

ನ ಮುಕ್ತಿರ್ನ ಚ ಧರ್ಮಶ್ಚ ನ ಪುಣ್ಯಂ ಚ ನ ಪಾಪಕಂ।
ನ ಕರ್ಮ ಜನ್ಮನಶ್ಚೈವ ಗುರುಪಾದನಿರೀಕ್ಷಣಾತ್॥

ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ।
ಗುರುದೈವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ॥

ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ।
ನಮಸ್ಸದ್ಗುರುನಾಥಾಯ ಷಟ್ಸ್ಥಲಬ್ರಹ್ಮಮೂರ್ತಯೇ॥

ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ ಪದಂ।
ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ ಗುರೋಃ ಕೃಪಾ॥

ಬಸವ-ಬಕಾರೋ ಗುರುರೂಪಂ ಚ ಸಕಾರೋ ಲಿಂಗರೂಪಕಃ।
ವಕಾರೋ ಚರರೂಪಂ ಚ ತ್ರಿವಿಧಂ ಬಸವಾಕ್ಷರಂ॥

ಬಕಾರೋ ನಾದರೂಪಂ ಚ ಸಕಾರೋ ಬಿಂದುರೂಪಕಃ।
ಕಲಾರೂಪಂ ವಕಾರಶ್ಚ ತ್ರಿವಿಧಂ ಬಸವಾಹ್ವಯಂ॥

ಬಕಾರೋ ಸತ್ವರೂಪಂ ಚ ಸಕಾರೋ ಚಿತ್ಸ್ವರೂಪಕಃ।
ಆನಂದತ್ವಂ ವಕಾರಶ್ಚ ತ್ರಿವಿಧಂ ಲಕ್ಷಣಂ ಶಿವೇ ॥ ಎಂಬುದೀಗ,

ಲಿಂಗ-ಲಿಕಾರೋ ಲಯಸಂಪ್ರೋಕ್ತೋ ಗಕಾರಃ ಸೃಷ್ಟಿರೇವ ಚ।
ಲಯನಾದ್ಗಮನಾಚ್ಚೈವ ಲಿಂಗಾಕಾರ ಇಹೋಚ್ಯತೇ॥

ಲೀಯತೇ ಗಮ್ಯತೇ ಯತ್ರ ಏತತ್ಸರ್ವಂ ಚರಾಚರಂ ।
ತದೇತಲ್ಲಿಂಗಮಿತ್ಯಾಹುರ್ಲಿಂಗತತ್ತ್ವಪರಾಯಣಾಃ ॥

ಆಕಾಶಂ ಲಿಂಗಮಿತ್ಯಾಹುಃ ಪೃಥ್ವೀ ತಸ್ಯಾದಿ ಪೀಠಿಕಾ।
ಆಲಯಂ ಸರ್ವಭೂತಾನಾಂ ಲಿಂಗಾಕಾರ ಇಹೋಚ್ಯತೇ॥

ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ।

ಲಿಂಗಬಾಹ್ಯಾತ್ ಪರಂ ನಾಸ್ತಿ ತಸ್ಮಾತ್ ಲಿಂಗಂ ಪ್ರಪೂಜಯೇತ್॥

ಎಂಬುದೀಗ, ಅಯ[೧೦]-ಇಷ್ಟಸ್ವರೂಪವಾದಾತನೇ [೧೧]ಸಂಗನ[೧೧]ಬಸವೇಶ್ವರನು, ಅಂತಪ್ಪ ಸಂಗನಬಸವೇಶ್ವರಸ್ವಾಮಿಗಳೆಂಬ ಮಹಾಜ್ಞಾನಗುರುತತ್ತ್ವಕ್ಕೋಸ್ಕರ, ನಮಃ-ನಮಸ್ಕಾರವೆಂದು ಈ ಶಾಸ್ತ್ರದ ಪ್ರಥಮ-ಪ್ರಾರಂಭದಲ್ಲಿ ಆಚಾರ್ಯರುಗಳು ಗುರುನಮಸ್ಕಾರವ ಮಾಡಿ ಉದ್ಧರಿಸಿ ನಿರೂಪಿಸುತ್ತಿ[೧೨]ರ್ದಪರು[೧೨] ಎಂಬುದೀಗ ಶ್ರೀಗುರುಬಸವಲಿಂಗಾಯ ನಮಃ ಎಂಬ [೧೩]ಶಬ್ದಕ್ಕರ್ಥ.[೧೩]

ಶ್ರೀಗುರುಬಸವಲಿಂಗಾಯ ನಮಃ : ಶ್ರೀ-ಪಂಚಾಚಾರಸ್ವರೂಪವಾಧಾರಲಿಂಗವು. ಗುರು-ಮಂತ್ರಮೂರ್ತಿಸ್ವರೂಪವಾದ ಗುರುಲಿಂಗವು. ಬ-[೧೪]ಈಳನ[೧೪] ಸ್ವರೂಪವಾದ ಪ್ರಸಾದಲಿಂಗವು. ಸ-ನಿರೀಕ್ಷಣ ಸ್ವರೂಪವಾದ ಶಿವಲಿಂಗವು. ವ-ಯಜನಸ್ವರೂಪವಾದ ಜಂಗಮಲಿಂಗವು. ಲಿಂಗ-[೧೫]ವೇದ[೧೫] ಸ್ವರೂಪವಾದ ಮಹಾಲಿಂಗವು. ಅಯ ನಮಃ-ಷಡಿಂದ್ರಿಯಂಗಳಲ್ಲಿ ಷಡ್ವಿಧಲಿಂಗವು, ಷಟ್ಕರಣಂಗಳಲ್ಲಿ ಷಡ್ವಿಧಲಿಂಗವು, ಷಟ್ಚಕ್ರಂಗಳಲ್ಲಿ ಷಡ್ವಿಧಲಿಂಗವು, ಷಟ್ಸ್ಥಾನಂಗಳಲ್ಲಿ ಷಡ್ವಿಧಲಿಂಗವನ್ನು ಸಂಬಂಧವ ಮಾಡಿಕೊಂಡು ಆಚರಿಸಲ್ಪಟ್ಟಾತನೆ ಬಸವೇಶ್ವರನು. ಅಂತಪ್ಪ ಸಂಗನ ಬಸವೇಶ್ವರಸ್ವಾಮಿಗಳೆಂಬ ಮಹಾಜ್ಞಾನಗುರುಮೂರ್ತಿಗಳಿಗೋಸ್ಕರ, ನಮಃ-ನಮಸ್ಕಾರವೆಂದು ಈ ಶಾಸ್ತ್ರದ ಪ್ರಥಮಪ್ರಾರಂಭದಲ್ಲಿ ಆಚಾರ್ಯರುಗಳು ಗುರುನಮಸ್ಕಾರವನ್ನು ಮಾಡಿ ಉದ್ಧರಿಸಿ ನಿರೂಪಿಸುತ್ತಿರ್ದಪರು ಎಂಬುದೀಗ ಶ್ರೀಗುರುಬಸವಲಿಂಗಾಯ ನಮಃ ಎಂಬ ಶಬ್ದಕ್ಕರ್ಥ.

ಬಸವೇಶ್ವರದೇವರ-ಜಗದಾರಾಧ್ಯರಾದ ಸಂಗನಬಸವೇಶ್ವರಸ್ವಾಮಿಗಳ, ಷಟ್ಸ್ಥಲದ[೧೬]-ಷಡ್ವಿಧ ಅಂಗ ಲಿಂಗಭಕ್ತಿಗಳ ಆಚರಣೆಯನ್ನು ಹೇಳುವಂಥ, ವಚನಂಗಳು-ವಾಕ್ಯಾನುಭಾವಂಗಳು. ಪ್ರಥಮದಲ್ಲಿ-ಮೊಟ್ಟ ಮೊದಲಲ್ಲಿ. ಭಕ್ತಸ್ಥಲ-ಭಕ್ತಸ್ಥಲಕ್ಕೆ ಸಂಬಂಧವಾದ ವಚನದರ್ಥವನ್ನು ನಿರೂಪಿಸಿಹರು.

..........................

"ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು..." ಈ ವಚನ ತರುವಾಯ. ಕ. ಗ. ಪ್ರತಿಗಳಲ್ಲಿ ಮೇಲಿನ ಎಲ್ಲ ವಿವರಣೆ ಬರುತ್ತದೆ(ಸಂ).

೧-೧x(ಕ). ೨-೨ ವ(ಕ). ೩-೩ ವ(ಕ) ೪-೪ ತ್ಯ(ಗ). ೫+ಈ(ಕ.ಗ) ೬+ಗಳು(ಕ,ಗ). ೭+ಕ್ಕ (ಕ,ಗ). ೮-೮x(ಕ,ಗ). ೯-೯ ರ್ದವ (ಕ,ಗ). ೧೦+ನಮಃ(ಗ). ೧೧-೧೧x(ಕ). ೧೨-೧೨ ಹ(ಗ). ೧೩-೧೩x(ಗ). ೧೪-೧೪ ಈಶ(ಗ). ೧೫-೧೫ ಧೆ(ಕ). ೧೬+ವಚನ(ಕ.ಗ).

❖❖

## ಪಿಂಡಸ್ಥಲ

I ----------------------------------------------------------------

ಪಿಂಡಸ್ಥಲ–ಪಿಂಡಪರ್ಯಾಯ ನಾಮವನುಳ್ಳ ಪರಬ್ರಹ್ಮಸ್ಥಲವು.

II- ---------------------------------------------------------------

ಆದ್ಯರು ವೇದ್ಯರು ಸಾಧ್ಯರು. ಆದಿಪಿಂಡ ಮಧ್ಯಪಿಂಡ ಅಂತ್ಯಪಿಂಡ. ಮರ್ಕಟಜ್ಞಾನ ವಿಹಂಗಜ್ಞಾನ ಪಿಪೀಲಿಕಜ್ಞಾನ. ಆದಿಗತಿ ಮಧ್ಯಗತಿ ತೀವ್ರಗತಿ. ಆದ್ಯರೆಂದರೆ: ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಮಡಿವಾಳಯ್ಯ, ಮೋಳಿಗೆ ಮಾರಯ್ಯ, ಹಡಪದಪ್ಪಣ್ಣ, ಸೊಡ್ಡಳಬಾಚರಸರು, ಮರುಳಶಂಕರದೇವರು, ಸಿದ್ಧರಾಮಯ್ಯ, ಕಿನ್ನರಯ್ಯ ಮೊದಲಾದ ಪೂರ್ವಾಚಾರ್ಯರುಗಳೆ ಆದ್ಯಗಣಂಗಳೆನಿಸುವರು. ವೇದ್ಯರೆಂದರೆ: ಕೋವಿ ಶಾಂತಯ್ಯ, ಕೋಲ ಶಾಂತಯ್ಯ, ಕುದುರೆ ಶಾಂತಯ್ಯ, ಗಿರಿಗಟಿ ಶಾಂತಯ್ಯ, ಸರವೆ ಶಾಂತಯ್ಯ ಮೊದಲಾದ ನೂರೊಂದು ವಿರಕ್ತರುಗಳೆ ವೇದ್ಯಗಣಂಗಳೆನಿಸುವರು. ಸಾಧ್ಯರೆಂದರೆ: ತೋಂಟದ ಸಿದ್ಧೇಶ್ವರಸ್ವಾಮಿಗಳು, ಬೋಳಬಸವೇಶ್ವರ ಸ್ವಾಮಿಗಳು, ಗುಮ್ಮಳಾಪುರದ ಸಿದ್ಧವೀರಸ್ವಾಮಿಗಳು, ಗಗನಸ್ವಾಮಿಗಳು, ಮರುಳಸ್ವಾಮಿಗಳು, ಸ್ವತಂತ್ರಸ್ವಾಮಿಗಳು, ಚೆನ್ನಂಜೇಸ್ವಾಮಿಗಳು, ಕಟ್ಟಿಗೆಹಳ್ಳಿ ಸ್ವಾಮಿಗಳು, ಮುರಿಗೇಸ್ವಾಮಿಗಳು ಮೊದಲಾದ ನೂತನಪುರಾತನರೆ ಸಾಧ್ಯಗಣಂಗಳೆನಿಸುವರು.

ಆದಿಪಿಂಡವೆಂದರೆ: ಅಷ್ಟತನುಮೂರ್ತಿಗಳೆಂದು ಉತ್ಪತ್ತಿಯಾದವು, ಅಂದಿಂದ ಭವಭವಂಗಳೊಳಗೆ ಬಂದು, ಶಿವಕೃಪೆಯಿಂದ ಭವಕಲ್ಪಿತ ತೀರಿ, ಶಿವವಾಸನಾಪಿಂಡ ಸ್ವರೂಪವನಂಗೀಕರಿಸಿದ ಜೀವಪಿಂಡವೆ ಆದಿಪಿಂಡವೆನಿಸೂದು. ಮಧ್ಯಪಿಂಡವೆಂದರೆ : ಶಿವಾಜ್ಞೆಯಿಂದ ಚಿತ್ತಿನಂಶವೇ ಸಾಕಾರವಾಗಿ, ಜಗಹಿತಾರ್ಥಕಾರಣ ಮರ್ತ್ಯಲೋಕದಲ್ಲಿ ಉದಯವಾಗಿ, ಶರೀರ[1]ಸಂಬಂಧಿಗಳಾಗಿಯೂ ಆ ಶರೀರದ ಗುಣಧರ್ಮಕರ್ಮಂಗಳ ಹೊದ್ದಿಯೂ ಹೊದ್ದದಿಪ್ಪುದು, ಅದೇನು ಕಾರಣವೆಂದರೆ, ಚಿದಂಶಕರಾದ ಕಾರಣ ಶರೀರವಿಡಿದರೆಯೂ ಆ ಶರೀರಸಂಬಂಧಿಗಳಲ್ಲ ಎಂಬುದಕ್ಕೆ ದೃಷ್ಟವಾವುದೆಂದರೆ, ಉರಿ ಬಂದು ಕರ್ಪುರವ ಸೋಂಕಲಾಗಿ[2] ಕರ್ಪುರದ ಗುಣಕೆಟ್ಟು ಉರಿಯಾದಂತೆ, ಪರುಷದ ಬಿಂದು ಬಂದು ಲೋಹವ ಸೋಂಕಲು ಆ ಲೋಹದ ಗುಣಕೆಟ್ಟು ಚಿನ್ನವಾದಂತೆ, ಆ ಶರಣರು ಬಂದು ಆ ಅಂಗವ ಸೋಂಕಲಾಗಿ, ಪಂಚಭೂತದ ಪ್ರಕೃತಿಕಾಯ ಹೋಗಿ ಪ್ರಸಾದಕಾಯವಾಯಿತ್ತಾಗಿ, ಇದು ಕಾರಣ ಬಸವ ಮೊದಲಾದ ಪ್ರಮಥರು ಧರಿಸಿದ ಶರೀರವೇ ಮಧ್ಯಪಿಂಡವೆನಿಸೂದು. ಅಂತ್ಯಪಿಂಡವೆಂದರೆ: ಇದು ಕಾರಣ ಪಂಚಭೂತಂಗಳ ಪವಿತ್ರವ

ಮಾಡಲೋಸ್ಕರವಾಗಿ ಧರಿಸಿದ ಪಿಂಡವಲ್ಲದೆ ವಾಸನಾಧರ್ಮ[೨]ದ ಪಿಂಡವಲ್ಲ; ಶುದ್ಧರೆ ಅಹುದು. ದೇಹಮಾತ್ರದ ವಾಸನಾಪಿಂಡವೆಂಬುದು ಅದು ಅಜ್ಞಾನ ನೋಡಾ. ಚಿತ್ಪಿಂಡವೆಂ[ಬು]ದು ಚಿನ್ನ ಬಣ್ಣದ ಹಾಂಗೆ, ಶಿವತತ್ತ್ವವ ಬಿಟ್ಟು ಎಂದೂ ಅಗಲದಿದ್ದಂಥದು. ಚಿದಂಗಸ್ವರೂಪವಾಗಿ ಚಿದ್ಘನಲಿಂಗಕ್ಕೆ ಚಿದ್ಭಾಂಡಸ್ಥಾನವಾದುದೇ ಅಂತ್ಯಪಿಂಡವೆನಿಸೂದು.

[೩]ಮರ್ಕಟಜ್ಞಾನ:[೩] ಮರ್ಕಟನು ಆವುದಾನೊಂದು ಮರದ ಶಾಖೆಯಿಂ ಮತ್ತೊಂದು ಶಾಖೆಗೆ ಲಂಘಿಸುವಲ್ಲಿ, ಲಾಗ ತಪ್ಪಿ ನೆಲಕ್ಕೆ ಬೀಳಲು ಏನಾರೂ ಕೈಯೊಳು ಸೊಪ್ಪುಹಿಡಿದುಕೊಂಡು ಬಿದ್ದುದಾಯಿ[೪]ತ್ತಾಯಿತ್ತೇ[೪] ಅದರ ಕುಲಕೋಟಿಗಳೆಲ್ಲ ನೆರೆದು ಆ ಎಲೆಯ ಕುರುಹ ನೋಡಿ ತಮ್ಮ ಕುಲದಲ್ಲಿ ಕೂಡಿಕೊಂಬವು. ಆ ಎಲೆಯ ಕುರುಹವೇನೂ ಇಲ್ಲದಲ್ಲಿ ತಮ್ಮ ಕುಲದಿಂದ ಹೇಂಗೆ ಹೊರಕೆ ಹಾಕಿಬಿಡುವವು ಹಾಂಗೆ, ಶೀಲವ್ರತಾಚಾರಸಮೇತರಾದ ಸದ್ಭಕ್ತಶರಣಜನಂಗಳನಂಗೀಕರಿಸಿ ತಮ್ಮ [೫]ಕಬಳಿಗೆ[೫] ಯೋಗ್ಯರ ಮಾಡಿಕೊಂಬರು. ಅದರಲ್ಲೇನಾದರೂ ಕಿಂಚಿತ್ತು ಕೊರತೆ ಕಂಡರೆ ಅನುಸರಣೆಯಿನಿತಂ ನೋಡದೆ ಕಳೆದುಬಿಡುವುದೇ ಮರ್ಕಟಜ್ಞಾನವೆನಿಸೂದು. ವಿಹಂಗಜ್ಞಾನ : ವಿಹಂಗನು ತಾನೊಂದೆಡೆಯಲ್ಲಿರ್ದರೆಯೂ ಹನ್ನೆರಡು ಯೋಜನಾಂತರ ಭೂಮಿಯಲ್ಲಿರ್ದ ಫಳರಸವನರಿದಿಪ್ಪುದು. ಅದು ಕಾರಣ ಆ ಫಲವಿದ್ದ ದಿಕ್ಕಿಗೆ ರೆಕ್ಕೆ[೬]ಯೆ[೬]ಳಸೂದು. ಆ ರೆಕ್ಕೆ ಎಳಸಿದಲ್ಲಿ ಹೋಗಿ ಆ ಫಲರಸವ ಸೇವಿಸಿ ಬೇಗ ಬಂದು ತನ್ನೆಡೆಯಲ್ಲಿ ಹೇಂಗೆ ತಪ್ಪದಿರ್ಪುದು ಹಾಂಗೆ, ತಾವಾವಾಚರಣೆವಿಡಿದಾಚರಿಸಿದಡೆಯೂ ಅನಾದಿಶಿವತತ್ತ್ವಜ್ಞಾನಸಂಧಾನವನರಿದು ಶಿವತತ್ತ್ವಭೋಗೋಗವನನುಭವಿಸಿ ಪೂರ್ವಾಚರಣೆವಿಡಿದೆಯ್ದಿ ಆ ಶಿವತತ್ತ್ವದಲ್ಲೇಕಾರ್ಥವಾಗಿರುವುದೇ ವಿಹಂಗಜ್ಞಾನವೆನಿಸೂದು. ಪಿಪೀಲಿಕಜ್ಞಾನ : ಪಿಪೀಲಿಕನು ಆವುದಾನೊಂದು ತರುವಿನ ಮೂಲದ ಮೂಸಿನೋಡಿ ಮೇಲೆ ಹಣ್ಣಿದೆ ಎಂಬುದ ಬಲ್ಲದು. ಆ ಹಣ್ಣಿಗೆಯ್ದುವಲ್ಲಿ ತನಗೆ ಶತ್ರು[ವಾ]ದ ಹಲ್ಲಿ, ಓತಿ ಮೊದಲಾದ ಪ್ರಾಣಿಗಳ ಕಂಟಕವುಂಟು; ಅವನ್ನು ಜಯಿಸಿ ಹೋಗಿ ಆ ಫಲರಸವ ಸೇವಿಸಿ ಹೇಂಗೆ ಸುಖದಲ್ಲಿರ್ಪುದು ಹಾಂಗೆ, ಶರಣನು ಶಿವಶಾಸ್ತ್ರಸಮ್ಮ[೭]ತ[೭]ನೀತಿವಿಡಿದೆಯ್ದಿದರೆ ಮುಕ್ತಿಯಹುದೆಂಬ ಶ್ರುತಜ್ಞಾನವ ಬಲ್ಲದು. ಅದು ಕಾರಣ ಜ್ಞಾನಕ್ರೀವಿಡಿದಾಚರಿಸುವಲ್ಲಿ ಕಲಿ [೮]ಕಾಲ[೮] ಕಾಮಮಾಯಾದಿಗಳ ಭೀತಿಬಂದು ತಟ್ಟಿದರೂ ಅದನತಿಗಳದು ಆ ಮುಕ್ತಿಫಳರಸವನು ಶಿವಾಗಮಾಸ್ತಿಕ ಜ್ಞಾನಾಚರಣೆಯಿಂದ ತಪ್ಪದನುಭವಿಸುವುದೇ ಪಿಪೀಲಿಕಜ್ಞಾನವೆನಿಸೂದು.

[೯]ಆದಿಗತಿ:[೯] ಷಡ್ವಿಧಾಂಗ ಷಡ್ವಿಧಲಿಂಗದಾಚರಣೆಯೇ ಆದಿಗತಿಯೆನಿಸೂದು. [೯]ಮಧ್ಯಗತಿ[೯]: ತ್ರಿವಿಧಾಂಗ ತ್ರಿವಿಧಲಿಂಗದಾಚರಣೆಯೇ ಮಧ್ಯಗತಿಯೆನಿಸೂದು. [೯]ತೀವ್ರಗತಿ[೯]: ನೂರೊಂದು ಸ್ಥಳಕುಳಂಗಳಾಚರಣೆಯೇ ತೀವ್ರಗತಿಯೆನಿಸೂದು. ಇಂತೀ ದ್ವಾದಶಾಚರಣೆಯನೊಳಕೊಂಡಿರ್ಪುದೇ ಪಿಂಡಸ್ಥಲವು.

..........................

೧–೧ ಲು(ಜ). ೨+ಧರ್ಮ(ಜ). ೩–೩x(ಜ). ೪–೪ತ್ತೆಂದೆರ(ಜ). ೫–೫ ಬಳಿಗೆ(ಚ). ೬–೬ ಯಎ(ಚ). ೭–೭ ತಿಯ(ಚ) ೮–೮x(ಚ). ೯–೯x(ಜ).

೧

**ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು; ಸಸಿಯೊಳಗಣ ರಸದ ರುಚಿಯಂತಿದ್ದಿತ್ತು; ನನೆಯೊಳಗಣ ಪರಿಮಳದಂತಿದ್ದಿತ್ತು; ಕೂಡಲಸಂಗಮದೇವ,[1] ಕನ್ನೆಯ ಸ್ನೇಹದಂತಿದ್ದಿತ್ತು.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು : ಉದಕದೊಳಗೆ ಮುನ್ನೀರ ಮಧ್ಯದಲ್ಲಿ, ಬೈಚಿಟ್ಟ–ಪ್ರಳಯಕಾಲಕ್ಕಾಗಬೇಕೆಂದು ಮಡಗಿದ, ಬಯಕೆಯ–ಇಚ್ಛೆಯ, ಕಿಚ್ಚಿನಂತೆ–ವಡಬಾಗ್ನಿಯ ಹಾಂಗೆ, ಇದ್ದಿತ್ತು ಎಂಬಲ್ಲಿ ಸಮುದ್ರದ ಮಧ್ಯದಲ್ಲಿ ಮಹಾವಡಬಾಗ್ನಿಯಡಗಿರ್ದು ಆ ಸಮುದ್ರವ ದಹಿಸಬೇಕೆಂಬ ಆಪ್ಯಾಯನವು ತನಗೆ ತಲೆದೋರದೆ ಆ ಸಮುದ್ರದ ಶೈತ್ಯದಿಂದ ತಾನು ಆರಿ ನಂದಿಹೋಗದೆ ಅದರಲ್ಲಿ ಹೇಂಗೆ ತದಾಕಾರವಾಗಿ ಇರುತ್ತಿಹುದೋ ಹಾಂಗೆ, ಇಲ್ಲಿ ಜಲಬುದ್ಬುದಮಯಸ್ವರೂಪವಾದ ಆತ್ಮನ ಪಿಂಡಮಧ್ಯದಲ್ಲಿ ಮಹಾಜ್ಞಾನಾಗ್ನಿಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮುನ್ನವೆ ಕುರುಹುಗಾಣಿಸಿಕೊಳ್ಳದೆ ಪಿಂಡದಲ್ಲಿ ಪಿಂಡಸ್ಥಲ[೧]ವಾಗಿ ಇದ್ದಿತ್ತು.

ಸಸಿಯೊಳಗಣ ರಸದ ರುಚಿಯಂತಿದ್ದಿತ್ತು : ಸಸಿಯೊಳಗಣ–ಚಂದ್ರನೊಳಗಣ, ರಸದ–ಷೋಡಶಕಲೆಗಳ, ರುಚಿಯಂತೆ–ಅಮೃತಕಿರಣದ ಹಾಂಗೆ, ಇದ್ದಿತ್ತು–ಒಪ್ಪುತ್ತಿದ್ದಿತ್ತು ಎಂಬಲ್ಲಿ ಚಂದ್ರಮನ ಮಧ್ಯದಲ್ಲಿ ಷೋಡಶಕಲೆಗಳು ಅಡಗಿರ್ಪವು. ಆ ಷೋಡಶಕಲೆಗಳ ಮಧ್ಯದಲ್ಲಿ ಅಮೃತಕಿರಣವಿದ್ದು ಅವಕ್ಕೆಲ್ಲ ಚೈತನ್ಯವಾಗಿರ್ದು ಅವಱ ಪ್ರಪಂಚಿನೊಳಗೆ ಬೆರೆಯದೆ, ಅವಱೊಳಗೆ ಹೇಂಗೆ ವಿಲಕ್ಷಣವಾಗಿರುತ್ತಿಹುದೋ ಹಾಂಗೆ ಇಲ್ಲಿ ಚಂದ್ರಮನ ಹಾಂಗೆ ದೇಹ, ಷೋಡಶಕಲೆಗಳ ಹಾಂಗೆ ಆತ್ಮನು, ಅಮೃತಕಿರಣದ ಹಾಂಗೆ ಪರಬ್ರಹ್ಮವು ದೇಹಮಧ್ಯಸ್ಥಾನವಾದಾತ್ಮರಸವನ್ನು ಬೇರ್ಪಡಿಸಿ ಚಿತ್ತ್ರಣವಲಿಂಗದ ಚಿತ್ತ್ರಕಾಶ[೨][ವೆಂಬ][೨] ಜ್ಞಾನೋದಯಕ್ಕೆ ಮುನ್ನವೆ ಕುರುಹುಗಾಣಿಸಿಕೊಳ್ಳದೆ [೩][ಪಿಂಡದಲ್ಲಿಯೇ][೩] ಪಿಂಡಸ್ಥಲವಾಗಿದ್ದಿತ್ತು.

ನನೆಯೊಳಗಣ ಪರಿಮಳದಂತಿದ್ದಿತ್ತು–ಇಂದು ನಾಳೆ ಸಂಜೆ ಮುಂಜಾನೆ ವೇಳೆಗೆ ವಿಕಸನವಾಗುವ ಕೋರಕ ಸಜ್ಜುಕಂಗಳ ಮಧ್ಯದಲ್ಲಿ ಸುಗಂಧವಡಗಿರ್ದು ವಿಕಸನವಾದಲ್ಲಿ ಕಾಣಿಸಿಕೊಂಡು, ವಿಕಸನ[೪]ವಾಗ[೪]ದಲ್ಲಿ ಕಾಣಿಸಿಕೊಳ್ಳದ ಅದರಲ್ಲಿ ಹೇಂಗೆ ಅತಿರಹಸ್ಯವಾಗಿರ್ಪುದೋ ಹಾಂಗೆ ಇಲ್ಲಿ ಭಕ್ತಿಪರಿ ಪಕ್ವತೆ ಇಲ್ಲದಾತ್ಮನ ಪಿಂಡಮಧ್ಯದಲ್ಲಿ ಶಿವಸದ್ವಾಸನಾಸ್ವರೂಪವಾದ ಪರಬ್ರಹ್ಮವಡಗಿರ್ದು ಜ್ಞಾನೋದಯಕ್ಕೆ ಮುನ್ನವೆ ಕುರುಹುಗಾಣಿಸಿಕೊಳ್ಳದೆ ಪಿಂಡದಲ್ಲಿಯೇ ಪಿಂಡಸ್ಥಲವಾಗಿದ್ದಿತ್ತು.

ಕೂಡಲಸಂಗಮದೇವ : ಕೂಡಲ–ಭಕ್ತರಂಗದಲ್ಲಿ ಕೂಡುವಂಥ ಕೂಟದಲ್ಲಿ ವಿಯೋಗವಿಲ್ಲದೆ ಸಂಯೋಗವಾದ, ಸಂಗಮದೇವ–ಭಕ್ತಮಹೇಶ್ವ[೫]ರರುಗಳ[೫] ಅಂಗಮನಪ್ರಾಣಂಗಳಲ್ಲಿ ಹೆರೆಹಿಗಂದೆ ಒಪ್ಪಲ್ಪಟ್ಟಂಥ ಎಲೆ ಪರಶಿವಲಿಂಗವೆ, ಕನ್ಯೆಯ ಸ್ನೇಹದಂತಿದ್ದಿತು–ವಿಷಯಸಂಗರತಿದೋರದ ಹಸುಳೆಯ ಮಧ್ಯದಲ್ಲಿ ಕಾಮಚಿಹ್ನವಡಗಿರ್ದು ಯೌವನವಾದಲ್ಲಿ ಕಾಣಿಸಿಕೊಂಡು ಯೌವನವಿಲ್ಲ[೬]ದಲ್ಲಿ[೬] ಕಾಣಿಸಿಕೊಳ್ಳದೆ ಅದರಲ್ಲಿ ಹೇಂಗೆ ಅತಿರಹಸ್ಯವಾಗಿರುತ್ತಿಹುದೋ ಹಾಂಗೆ, ಇಲ್ಲಿ ಪರಬ್ರಹ್ಮವು

ದೇಹಸಂಬಂಧವಾದಾತ್ಮರಸವನ್ನು ಬೇರ್ಪಡಿಸಿ, ಚಿತ್ಪ್ರಣವಲಿಂಗದ[೨] ಚಿತ್ಪ್ರಕಾಶ[೬][ವೆಂಬ][೬] [೮]ಜ್ಞಾನೋದಯಕ್ಕೆ ಮುನ್ನವೆ ಕುರುಹುಗಾಣಿಸಿಕೊಳ್ಳದೆ ಪಿಂಡದಲ್ಲಿ ಪಿಂಡಸ್ಥಲವಾಗಿರುವಂಥದನ್ನು ವಿವರಿಸಬಾರದೆಂಬಲ್ಲಿ ಕನ್ಯೆಯ ಸ್ನೇಹದಂತಿದ್ದಿತ್ತು.

.........................

೧x(ಕ). ೨-೨ ವು(ಕ,ಗ). ೩-೩x(ಕ). ೪-೪ ವಿಲ್ಲ(ಗ). ೫-೫ ರ(ಕ). ೬-೬ ದೆ(ಕ). ೭+ಲ್ಲಿ(ಕ). ೮-೮ ವು(ಕ,ಗ).

II - - - - - - - - - - - - - - - - - - - - - - - - - - - - - - - -

ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು-ಸಮುದ್ರದ ಮಧ್ಯದಲ್ಲಿ ವಡಬಾಗ್ನಿಯು ಅಡಗಿರ್ದು, ಆ ವಡಬಾಗ್ನಿಗೆ ಉದಕದಾಪ್ಯಾಯನ ತಲೆದೋರಿ ಆ ಸಮುದ್ರವನು ಪೀರದೆ ಆ ಸಮುದ್ರದ ಶೈತ್ಯದಲ್ಲಿ [೯]ತಾನು[೯] ನಂದಿಹೋಗದೆ ಆ ಸಮುದ್ರದ ತದಾಕಾರವಾಗಿರುವ ಹಾಂಗೆ, ಜಲಬುದ್ಬು[೧೦]ದ[೧೦] ಮಯವಪ್ಪ ಪಿಂಡದ ಮಧ್ಯದಲ್ಲಿ ಮಹಾಜ್ಞಾನಾಗ್ನಿಸ್ವರೂಪವಾದ ಪರಬ್ರಹ್ಮವಡಗಿರ್ದು ಆ ಪರಬ್ರಹ್ಮಕ್ಕೆ ಜ್ಞಾನದಾಪ್ಯಾಯನ ತಲೆದೋರಿ[೧೧]ದಲ್ಲಿ[೧೧] ಆ ಪಿಂಡವನು ದಹಿಸದೆ, ಆ ಪಿಂಡದ ಮರವೆಯಲ್ಲಿ ತಾನು ಗತವಾಗಿ ಹೋಗದೆ, ಜ್ಞಾನೋದಯಕ್ಕೆ ಮೊದಲೆ ಆ ಪಿಂಡದ ತದಾಕಾರವಾಗಿರ್ಪುದೆಂಬುದರ್ಥ.

ಸಸಿಯೊಳಗಣ ರಸದ ರುಚಿಯಂತಿದ್ದಿತ್ತು-ಭೂಮಿಯೊಳು ೧೮ ಧಾನ್ಯಂಗಳ ಬಿತ್ತಿದಲ್ಲಿ, ಅಂಕುರದೋರಿ ಸಸಿಯಾಗಿ ಫಲವಾಗಿ [೧೨]ಬೆಳಸಾಗಿ ರಸಪೂರಿತವಾಗಿ ಬಲಿತು ಹದಕ್ಕೆ ಬಂದಿರಲು, ಅವ ಕೊಯ್ದು ಒಕ್ಕಿ ತೂರಿ ರಾಸಿಯಂ ಮಾಡಿ ೧೮ ಧಾನ್ಯವೆಂದು ಕುರುಹಿಟ್ಟು ತನ್ನ ಗೃಹಕ್ಕೆ ಒಯ್ದು, ಪಂಚವಿಧಪದಾರ್ಥಂಗಳ ಮಾಡಿಸಿ ಉಂಡಲ್ಲಿ ಮಹಾರುಚಿಕರವಾಗಿ ಕಾಣಿಸೂದಲ್ಲದೆ ಅವೇನೂ ಇಲ್ಲದಲ್ಲಿ ಆ ರುಚಿಯು ಆ ಸಸಿಯ ಮಧ್ಯದಲ್ಲಿಯೇ ಅಡಗಿರುವ ಹಾಂಗೆ ಶಿವಾಂಶಿಕಮಪ್ಪ ಪಿಂಡದ ಮಧ್ಯದಲ್ಲಿ ಅಖಂಡಚಿದ್ರುಚಿಸ್ವರೂಪವಾದ ಪ್ರರಬ್ರಹ್ಮವಡಗಿರ್ಪುದೆಂಬುದರ್ಥ.

ನನೆಯೊಳಗಣ ಪರಿಮಳದಂತಿದ್ದಿತ್ತು-ಉದ್ಗಮದ ಮಧ್ಯದಲ್ಲಿ ಸದ್ಗಂಧವಡಗಿರ್ದು ವಿಕಸನವಾದಲ್ಲಿ ಪರಿಮಳ ತೋರುವುದಲ್ಲದೆ, ಇಲ್ಲದಲ್ಲಿ ಅದರ ಮಧ್ಯದಲ್ಲಿಯೇ ಅಡಗಿರುವ ಹಾಂಗೆ ಪಂಚೇಂದ್ರಿಯ ವಿಷಯಯುಕ್ತವಾದ ಪಿಂಡದ ಮಧ್ಯದಲ್ಲಿ ಸ್ವಾನುಭಾವಸದ್ವಾಸನಾಸ್ವರೂಪವಾದ ಪರಬ್ರಹ್ಮ ವಡಗಿರ್ಪುದೆಂಬುದರ್ಥ.

ಕೂಡಲಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು-ಒಬ್ಬಾನೊಬ್ಬ ಕೊಡಲಾದ ಏಳು ವರುಷದ ಕನ್ನಿಕೆಯ ಮಧ್ಯದಲ್ಲಿ ಕಾಮಕಲಾರತಿಯಡಗಿರ್ದು, ಆ ಕನ್ನಿಕೆಗೆ ಕಚುಕುಚಾದಿಗಳೊಗೆದು ಋತುವಡೆದು ಯೌವನವಾಗಲು ಅಲ್ಲಿ ಕಾಮಕಲಾಸುರತಕ್ರೀಡೆಯ ರತಿ[೧೩]ಯು[೧೩] ಕಾಣಿಸೂದಲ್ಲದೆ ಅದೇನೂ ಇಲ್ಲದಲ್ಲಿ ಆ ಕನ್ನಿಕೆಯ ಮಧ್ಯದಲ್ಲಿಯೇ ಕುರುಹುಗಾಣಿಸದಿರುವ ಹಾಂಗೆ, ಶೃಂಗಾರಮೋಹಿತವಾದ ಪಿಂಡದ ಮಧ್ಯದಲ್ಲಿ ಮಹಾಜ್ಞಾನ ಮೋಕ್ಷಾನಂದ ಕಾಮಕಲಾರತಿಸ್ವರೂಪವಾದ ಪರಬ್ರಹ್ಮವು ಜ್ಞಾನೋದಯಕ್ಕೆ ಮೊದಲೇ ಅಡಗಿರ್ಪುದೆಂಬುದರ್ಥ.

.........................

೯-೯x(ಜ). ೧೦_೧೦ ದಾಕಾರ (ಜ). ೧೧-೧೧x(ಜ). ೧೨ "ಬೆಳಸಾಗಿ....ಳು ಪುಟ್ಟದವು" (ವಚನ ೩) ಎಂಬಲ್ಲಿ ತೋರಿಸಿದಂತೆ ತೆರವಿದ್ದ ಸ್ಥಳದಲ್ಲಿಯ ಪಾಠವನ್ನೊಳಗೊಂಡ ಪುಟ 'ಜ' ಪ್ರತಿಯಲ್ಲಿ ಕಳೆದುಹೋಗಿದೆ. ೧೩-೧೩ ಯ (ಚ).

III- - - - - - - - - - - - - - - - - - - - - - - - - - - - - - - - - - - - - - - - - - -

ಉದಕದಲ್ಲಿ ಅಗ್ನಿಯು ಗೋಪ್ಯವಾಗಿರುವ ಹಾಂಗೆ, ಸಂಸಾರ ವಿಷಯ ಸ್ವರೂಪವಾದ ಪಿಂಡದ ಮಧ್ಯದಲ್ಲಿ ಚಿದಗ್ನಿಸ್ವರೂಪವಾದ ಪರಬ್ರಹ್ಮವಡಗಿರ್ದು ಕುರುಹುಗಾಣಿಸದೆ ರಹಸ್ಯವಾಗಿರ್ಪುದು ಎಂಬುದೀಗ, ಉದಕದೊಳಗೆ ಬಯಿಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು ಎಂಬ ಶಬ್ದಕ್ಕರ್ಥ.

ಸಸಿಯೊಳಗಣ ರಸದ ರುಚಿಯು ಇದಿರಿಟ್ಟು ಕಾಣಿಸದಿರುವ ಹಾಂಗೆ[ಶಿವಾಂಶಿಕಮಪ್ಪ ಪಿಂಡದ ಮಧ್ಯದಲ್ಲಿ] ಮಾಧುರ್ಯಾಯಮಾನಸ್ವೀಕಾರ ಸ್ನೇಹರಸಸ್ವರೂಪವಾದ ಪರಬ್ರಹ್ಮವಡಗಿರ್ಪುದು ಎಂಬುದೀಗ, ಸಸಿಯೊಳಗಣ ರಸದ ರುಚಿಯಂತಿದ್ದಿತ್ತು ಎಂಬ ಶಬ್ದಕ್ಕರ್ಥ.[೧೪]

ಕುಟ್ಮಳದೊಳಗಣ ಪರಿಮಳವು ಗೋಪ್ಯವಾಗಿರುವ ಹಾಂಗೆ, ಸಕಲತತ್ತ್ವಸಂಕುಚಿತಮಪ್ಪ ಪಿಂಡದ ಮಧ್ಯದಲ್ಲಿ ಸ್ವಾನುಭಾವ ಸದ್ವಾಸನಾ ಸ್ವರೂಪವಾದ ಪರಬ್ರಹ್ಮವಡಗಿರ್ಪುದು ಎಂಬುದೀಗ, ನನೆಯೊಳಗಣ ಪರಿಮಳದಂತಿದ್ದಿತ್ತು ಎಂಬ ಶಬ್ದಕ್ಕರ್ಥ.

ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ, ಕನ್ನೆಯ ಸ್ನೇಹದಂತಿದ್ದಿತ್ತು-ಗ್ರಂಥ ॥ ಅಷ್ಟವರ್ಷಾ ಭವೇದ್ಗೌರೀ ನವವರ್ಷಾ ತು ಕನ್ಯಕಾ ॥ ವರ್ಷೇ ತು ದ್ವಾದಶೇ ಪ್ರಾಪ್ತೇ ಕುಮಾರೀತ್ಯಭಿಧೀಯತೇ॥ ಎಂದು ನವವರುಷದ ಕನ್ನಿಕೆಯಲ್ಲಿ ಕಾಮಾಭಿಮಾನವು ಗೋಪ್ಯವಾಗಿರುವ ಹಾಂಗೆ, ನವವಿಧ ಭಕ್ತಿಯ ಗೋಪ್ಯವನುಳ್ಳ ಪಿಂಡದ ಮಧ್ಯದಲ್ಲಿ ಪೂರ್ಣಜ್ಞಾನಾಭಿಮಾನ ಸ್ವರೂಪವಾದ ಪರಬ್ರಹ್ಮವಡಗಿರ್ದು ಕುರುಹುಗಾಣಿಸದೆ ರಹಸ್ಯವಾಗಿರ್ಪುದು ಎಂಬುದೀಗ, ಕನ್ನೆಯ ಸ್ನೇಹದಂತಿದ್ದಿತ್ತು ಎಂಬ ಶಬ್ದಕ್ಕರ್ಥ.

.........................

೧೪+ಇನ್ನು, ಎಂಬುದೀಗ ಎಂಬಲ್ಲಿಗೆ ವಚನವನು ಹಿಮ್ಮೆಟ್ಟಿ ಹೇಳಿಕೊಂಬುದು (ಡ).

IV- - - - - - - - - - - - - - - - - - - - - - - - - - - - - - - - - - - - - - - - - - -

1+ರ ನಿಲವು (ತ).

.....................................

ಚಿತ್ಪರಮಲಿಂಗದ ತದಂಶವಾದ ಆತ್ಮನು ಶಿವಾಜ್ಞೆಯಿಂದ ಜಡಪಿಂಡಸಂಬಂಧಿಯಾಗಿ ತನ್ನ ನಿಜವ ಮರದಿಪ್ಪಲ್ಲಿ, ಆ ಆತ್ಮನ [ನಿಜದ ನಿಲವಪ್ಪ ಚಿತ್ಪರಮಲಿಂಗವು ಆ ಪಿಂಡರೂಪಾದ ಆತ್ಮಾಂತರ್ಗತವಾಗಿ ಜಡಪಿಂಡದಲ್ಲಿ ತದಾಕಾರವಾಗಿ ಗುಪ್ತದಲ್ಲಿಪ್ಪುದು. ಅದೆಂತೆಂದಡೆ, ದೃಷ್ಟ :

ಶಿವಾಜ್ಞೆಯಿಂದ ಸಮುದ್ರದಲ್ಲಿ ವಡಬಾಗ್ನಿಯಿರ್ದು, ಆ ಸಮುದ್ರವ ಗ್ರಹಿಸುವ ದೀಪನದೋಱದೆ ಜಲದಲ್ಲಿ ತದಾಕಾರವಾಗಿಪ್ಪಂತೆ ಚಿದಗ್ನಿ ಸ್ವರೂಪಮಪ್ಪ ಪರಮಲಿಂಗವು ಜಲಬುದ್ಬುದಪಿಂಡದಲ್ಲಿರ್ದು ಪಿಂಡವ ದಹಿಸದೆ ತದಾಕಾರವಾಗಿದ್ದಿತೆಂಬುದೀಗ, ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತೆ ಇದ್ದಿತ್ತು ಎಂಬ ಶಬ್ದಕ್ಕರ್ಥ.

ಚಂದ್ರಮನೊಳಗಣ ಅಮೃತಕಿರಣವು ಆ ಅಮೃತದಿಂದ ಬೇರ್ಪಡಿಸಿ ತೋಱದಂತೆ, ಪಿಂಡಮಧ್ಯದಲ್ಲಿಯಿಪ್ಪ ಆತ್ಮರಸ[೧೫][ವು ಪಿಂಡದಿಂದ ಬೇರ್ಪಟ್ಟು ತೋಱದಂತಿದ್ದಿತ್ತೆಂಬುದೀಗ, ಸಸಿಯೊಳಗಣ ರಸದ ರುಚಿಯಂತಿದ್ದಿತ್ತು ಎಂಬ ಶಬ್ದಕ್ಕರ್ಥ.

ನ[೧೫]]ನೆಯೊಳಗೆ ಸುವಾಸನೆದೋರದೆಯಿರ್ದ ಸುಗಂಧದಂತೆ ಆ ಚಿತ್ಪರಮಲಿಂಗವು ಪಿಂಡಮಧ್ಯದಲ್ಲಿರ್ದು ತನ್ನ ಶಿವಸದ್ವಾಸನಾಜ್ಞಾನ ತಲೆದೋರದೆ ಆ ಪಿಂಡಮಧ್ಯದಲ್ಲಿ ತದಾಕಾರವಾಗಿ ಅಡಗಿತ್ತೆಂಬುದೀಗ, ನನೆಯೊಳಗಣ ಪರಿಮಳದಂತೆ ಇದ್ದಿತ್ತೆಂಬ ಶಬ್ದಕ್ಕರ್ಥ.

ವಿಷಯಸಂಗಸುಖ, ಋತುವಾಗದೆ ಇರ್ದ ಹಸುಳೆಯಲ್ಲಿ ಮೈಗಾಣಿಸದೆ ಅಡಗಿದ್ದಂತೆ ಚಿತ್ಪರಮಲಿಂಗದ ಸುಖಾನಂದವು ಪಿಂಡಸ್ಥವಾಗಿರ್ದು ಮೈಗಾಣಿಸದೆ ಇದ್ದಿತ್ತೆಂಬುದೀಗ, ಕೂಡಲಸಂಗಮದೇವರ ನಿಲವು ಕನ್ಯೆಯ ಸ್ನೇಹದಂತೆ ಇದ್ದಿತ್ತು ಎಂಬ ಶಬ್ದಕ್ಕರ್ಥ.

..........................

೧೫-೧೫ ವ (ತ).

---

## ಪಿಂಡಜ್ಞಾನಸ್ಥಲ

I - - - - - - - - - - - - - - - - - - - - - - - - - - - - - - - - - - - - - - - - - - -

[ಪಿಂಡಜ್ಞಾನಸ್ಥಲ-] ನಿಃಕಲಬ್ರಹ್ಮಕ್ಕಂಗವಾದ ಚಿತ್ತನೇ ಆತ್ಮನ ಅಂತರಂಗದಲ್ಲಿ ಸಮ್ಯಕ್‌ಜ್ಞಾನವಾದ ಭೇದವನ್ನೇ ಹೇಳುತ್ತಿರ್ದ ಕಾರಣ ಪಿಂಡಜ್ಞಾನಸ್ಥಲವೆಂದು ಹೇಳಲ್ಪಟ್ಟಿತ್ತು.

---

೨

**ಕಾಳಿಯಕಂಕಾಳದಿಂದ ಮುನ್ನ, ತ್ರಿಪುರಸಂಹಾರದಿಂದ ಮುನ್ನ, ಹರಿವಿರಿಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ, ಮುನ್ನ, ಮುನ್ನಂದಂದಿಂಗೆಳೆಯ ನೀನು: ಹಳೆಯ ನಾನು. ಮಹಾದಾನಿ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಕಾಳಿಕಂಕಾಳದಿಂದ ಮುನ್ನ–'ಕಂಕಾಲಂ ಷೋಡಶಂ ಭವೇತ್' ಎಂದು ತ್ರಿವಿಕ್ರಮಾವತಾರವನುಳ್ಳ ನಾರಾಯಣನ ಬೆನ್ನಿಟ್ಟೆಲುವನ್ನು ಕಿತ್ತಿ ದಂಡಕೋಲ ಮಾಡಿ ಪಿಡಿದಂಥದೇ ಹದಿನಾರನೆಯ ಲೀಲೆ. ಅಂತಪ್ಪ ಲೀಲಾವಿಗ್ರಹಮೂರ್ತಿಗಳು ಹುಟ್ಟುವುದಕಿಂದ ಮೊದಲೇ.

ತ್ರಿಪುರಸಂಹಾರದಿಂದ ಮುನ್ನ–'ನವಮಂ ತ್ರಿಪುರಾರಿಶ್ಚ' ಎಂದು ತಾರಕಾಸುರನ ಮಕ್ಕಳಾದ ವೀರವಿದ್ಯುನ್ಮಾಲಿ ಕಮಲಲೋಚನ ತಾರಕಾಕ್ಷರೆಂಬ ಮೂವರು ದೈತ್ಯರು ಪಡೆದಂಥ ಹೇಮ, ರೌಪ್ಯ, ಕಾರ್ಬೊನ್ನೆಂಬ ಮುಪ್ಪುರಂಗಳನು ನೊಸಲಾಗ್ನಿಯಿಂದ ದಹಿಸಿದಂದಥದೇ ಒಂಬತ್ತನೆಯ ಲೀಲೆ. ಅಂತಪ್ಪ ಲೀಲಾವಿಗ್ರಹಮೂರ್ತಿಗಳು ಹುಟ್ಟುವುದಕಿಂದ ಮೊದಲೇ.

ಹರಿವಿರಿಂಚಿಗಳಿಂದ ಮುನ್ನ–'ಲಿಂಗೋದ್ಭಸ್ವರೂಪಂ ತು ಪಂಚವಿಂಶತ್ ಪ್ರಕೀರ್ತಿತಂ' ಎಂದು ಅಜಹರಿಗಳ ಮಧ್ಯದಲ್ಲಿ 'ಅಂಬ[ರ]ಸ್ಥಂ ದಶಯೋಜನಂ' ಎಂದು ಹತ್ತುಗಾವುದು ಬಳಸಿದ ಶರೀರವುಳ್ಳಾತನಾಗಿ ಭೂಮಿಗೂ ಆಕಾಶಕ್ಕೂ ಕೀಲುಕೊಟ್ಟೋಪಾದಿಯಲ್ಲಿ ಉರಿಲಿಂಗೋದ್ಭವ ಮೂರ್ತಿಯಾಗಿ ಜೋತಿರ್ಮಯಾಕಾರದಿಂ ಸ್ಥಾಣುಮೂರ್ತಿಯಾಗಿ ನೆಗಳಿದಂಥದೇ ಇಪ್ಪತ್ತೈದನೆಯ ಲೀಲೆ.[೩] ಅಂತಪ್ಪ ಲೀಲಾವಿಗ್ರಹಮೂರ್ತಿಗಳು ಹುಟ್ಟುವದಕಿಂದ ಮೊದಲೇ.

ಉಮೆಯ ಕಲ್ಯಾಣದಿಂದ ಮುನ್ನ–'ವಿವಾಹಂ ಪಂಚಮಂ ವಿಂದ್ಯಾತ್' ಎಂದು ಪಂಪಾಕ್ಷೇತ್ರದಲ್ಲಿ ಪಾರ್ವತಾದೇವಿಯನ್ನು ವಿವಾಹವಾದುದೇ ಐದನೆಯ ಲೀಲೆ. ಅಂತಪ್ಪ ಮಹಾದೇವಿಯನ್ನು ವಿವಾಹವಾಗುದಕಿಂದ ಮೊದಲೇ.

ಮುನ್ನ ಮುನ್ನ–ಷಟ್ಕಲಾಮೂರ್ತಿಗಳು ಹುಟ್ಟುವುದಕಿಂದ ಮೊದಲೇ. ಮುನ್ನ–ಷಟ್ಸಾದಾಖ್ಯಮೂರ್ತಿಗಳು ಹುಟ್ಟುವುದಕಿಂದ ಮೊದಲೇ, ಅಂದಂದಿಂಗೆ–ಆಯಾಯ ಕಾಲಕ್ಕೆ. ಎಳೆಯ ನೀನು–ಷೋಡಶಕಲಾಪ್ರಕಾಶವನುಳ್ಳ ಮಹಾಲಿಂಗಮೂರ್ತಿ ನೀನು. ಹಳೆಯ ನಾನು– ಆ ಮಹಾಲಿಂಗಕ್ಕೆ ಚಿಚ್ಛಕ್ತಿಯಿಂದಂಗವಾಗಿದ್ದಾತನು ನಾನು. ಮಹಾದಾನಿ–ಭಕ್ತರುಗಳಿಗೆ ಮಹದಾನಂದಸುಖವನ್ನು ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - -

ಕಾಳಿಯ ಕಂಕಾಳದಿಂದ ಮುನ್ನ–[೧][ಕಂಕಾಲ][೧] ಷೋಡಶಂ ಭವೇತ್" ಎಂದುದಾಗಿ, ವಿಷ್ಣುವಿನ ಪೃಷ್ಠಸ್ಥಲದ ನಿಟ್ಟೆಲುವನೆ ಕಂಕಾಳಾಯುಧವಾಗಿ ಪಿಡಿದುಕೊಂಡಿರ್ದ ೧೬ನೆಯ ಲೀಲೆ ಹುಟ್ಟುವುದಕ್ಕೆ ಮೊದಲೇ.

ತ್ರಿಪುರಸಂಹಾರದಿಂದ ಮುನ್ನ–"ನವಮಂ ತ್ರಿಪುರಾರಿಶ್ಚ" ಎಂದು ತ್ರಿಪುರಸಂಹಾರವ ಮಾಡಿದ ೯ನೆಯ ಲೀಲೆ ಹುಟ್ಟುವುದಕ್ಕೆ ಮೊದಲೇ.

ಹರಿವಿರಿಂಚಿಗಳಿಂದ ಮುನ್ನ–ಬ್ರಹ್ಮವಿಷ್ಣುಗಳಿಗೆ ಯುದ್ಧವಾದ ತದನಂತರದಲ್ಲಿ ಉರಿಲಿಂಗೋದ್ಭವವಾಗಿ ಒಡೆದು ಮೂಡಿದ ೨೫ನೆಯ ಲೀಲೆ ಹುಟ್ಟುವುದಕ್ಕೆ ಮೊದಲೇ.

ಉಮೆಯ ಕಲ್ಯಾಣದಿಂದ ಮುನ್ನ ಮುನ್ನ–[೨][ದ್ವಿತೀಯಂ][೨] ಉಮಾಸಹಿತಂ" ಎಂದು ಗಿರಿಜಾಕಲ್ಯಾಣವಾದ ೨ನೆಯ ಲೀಲೆ ಹುಟ್ಟುವುದಕ್ಕೆ ಮೊದಲೇ.

ಅಂದಿಂಗೆಳೆಯ ನೀನು_ಆ ಕಾಲಕ್ಕೆ ನಳನಳಿಸುವ ಕೋಮಲವಾದ ಮಹಾಲಿಂಗ ನೀನು, ಹಳೆಯ ನಾನು-ಆ ಮಹಾಲಿಂಗಕ್ಕಂಗವಾದ ಚಿಜ್ಜಠರ ಸ್ವರೂಪವಾದ ಶರಣ ನಾನು. ಮಹಾದಾನಿ ಕೂಡಲಸಂಗಮದೇವಾ-ಮೋಕ್ಷಾನಂದಪದವನು ಕರುಣಿಸಿ ಕೊಡಲ್ಪಟ್ಟಂಥ ಎಲೆ ಲಿಂಗವೇ.

..........................

೧-೧ ಕಾಳಿಮಂ (ಚ). ೨-೨ ದ್ವಿವಿಧಂ (ಚ).

III- - - - - - - - - - - - - - - - - - - - - - - - - - - - - - - - - - - - - - - - - - - -

ಕಾಳಿಯ ಕಂಕಾಳದಿಂದ ಮುನ್ನ-ವಿಷ್ಣುವಿನ ಪೃಷ್ಠಭಾಗದ ಇಪ್ಪತ್ತೈದು ಗ್ರಂಥಿಯನುಳ್ಳ ಕಶೇರ್ನಾಳವನು ಪರಿಗ್ರಹಿಸುವುದಕಿಂದ ಮೊದಲೇ, ಮತ್ತಂ ಮಾಯಾಶಕ್ತಿಯ ವಾಲೆಭಾಗ್ಯ ನಷ್ಟವಾಗುವುದಕಿಂದ ಮೊದಲೇ.

ತ್ರಿಪುರಸಂಹಾರದಿಂದ [೩]ಮುನ್ನ[೩]-ವೀರವಿದ್ಯುನ್ಮಾಲಿ ಕಮಲಾಕ್ಷ [ತಾರಕಾಕ್ಷ]ರುಗಳ ಹೇಮ ರೌಪ್ಯ ಕಾರ್ಬೊನ್ನಿನ ತ್ರಿಪುರಗಳು ನೊಸಲಾಗ್ನಿಯಿಂದ ದಹಿಸಿಹೋಗುವುದಕಿಂದ ಮೊದಲೇ, ಮತ್ತಂ ತನುತ್ರಯಂಗಳ ವರ್ತನೆಯು ಸುಜ್ಞಾನಾಗ್ನಿಯಿಂದ ನಾಶವಾಗುವುದಕಿಂದ ಮೊದಲೇ.

ಹರಿವಿರಿಂಚಿಗಳಿಂದ ಮುನ್ನ-ವಿಷ್ಣುವಿರಿಂಚಿಗಳ ಸೃಷ್ಟಿಸ್ಥಿತಿಗಳು ಉಂಟಾಗುವುದಕಿಂದ ಮೊದಲೇ, ಮತ್ತಂ ಜೀವಾತ್ಮ ಅಂತರಾತ್ಮರುಗಳು ಉತ್ಪತ್ಯವಾಗುವುದಕಿಂದ ಮೊದಲೇ.

ಉಮೆಯ ಕಲ್ಯಾಣದಿಂದ ಮುನ್ನ-ಗಿರಿಜಾದೇವಿಯ ವಿವಾಹವಾಗುವುದಕಿಂದ ಮೊದಲೇ, ಮತ್ತಂ ಜ್ಞಾನಶಕ್ತಿಯ ಉದಯವಾಗುವುದಕಿಂದ ಮೊದಲೇ.

ಮುನ್ನ ಮುನ್ನ-ಇವೇನೂ ತೋರುವುದಕ್ಕೆ ಮೊದಲಿಂಗೆ ಮೊದಲೇ. ಅಂದಂದಿಂಗೆ-ಆಯಾಯ ಕಾಲಕ್ಕೆ, ದಿನಕಾಲಕಲ್ಪಿತರಹಿತನಾದ ಚಿರತಾರುಣ್ಯ ಮೂರ್ತಿ ನೀನು ಎಂಬುದೀಗ ಎಳೆಯ ನೀನು ಎಂಬ ಶಬ್ದಕ್ಕರ್ಥ. ಅನಾದಿವೃದ್ಧಚಿದ್ರೂಪಚಿರಂತ[೪][ನ][೪] ಪುರುಷ ನಾನು ಎಂಬುದೀಗ ಹಳೆಯ ನಾನು ಎಂಬ ಶಬ್ದಕ್ಕರ್ಥ ಮಹಾದಾನಿ-ಹರಿವಿರಿಂಚಿಗಳಾರಾರಿಗೂ ಕೊಡಬಾರದೆ ಇರ್ದ ನಿತ್ಯಮುಕ್ತಿಯೆಂಬ ವರಗಳನು ಕೊಡುತ್ತಿರ್ದಂಥ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೩-೩x(ಟ). ೪-೪ ರ (ಟ, ಡ)

V- - - - - - - - - - - - - - - - - - - - - - - - - - - - - - - - - - - - - - - - - - - -

[೫]...ರುದ್ರಲೀಲೆ ಪಂಚದಶಂ (೧೫), ವಿಷ್ಣುವಿನ ಬೆನ್ನೆಲುವ ಸೆಳೆದು ಕಂಕಾಳದಂಡವಂ ಪಿಡಿದಿಹ ಅವತಾರವು ಷೋಡಶಂ(೧೬), ಚಂಡೇಶಾನುಗ್ರಹವು ಸಪ್ತದಶಂ (೧೭), ವಿಷವ ಧರಿಸಿದ ನೀಲಕಂಠಾವತಾರವು ಅಷ್ಟಾದಶಂ (೧೮), ವಿಷ್ಣುವಿಗೆ ಶಂಖಚಕ್ರವಂ ಕೊಟ್ಟು ಅವತಾರವಾಯಿತ್ತಾದೊಡೆ ಏಕೋ[ನ]ವಿಂಶತಿ ಹತ್ತೊಂಬತ್ತನೆಯದೆಂದು ಹೇಳಲ್ಪಟ್ಟಿತ್ತು (೧೯), ವಿಘ್ನೇಶ್ವರಂಗೆ ಪ್ರಸನ್ನವಾದವತಾರವು ಇಪ್ಪತ್ತನೆಯದು (೨೦), ಪ್ರಥಮಪರಿವೃತನಾಗಿ ಕುಮಾರನಿಂ

ತಾರಕನಂ ಸಂಹರಿಸಿದವತಾರವು (೨೧), ಏಕಪಾದಾವತಾರವು ದ್ವಾವಿಂಶತಿ (೨೨), ಸುಖಾವಹ ಮೂರ್ತಿಯು ತ್ರಯೋವಿಂಶತಿ(೨೩), ದಕ್ಷಿಣಾಮೂರ್ತಿರೂಪವಾಯಿತ್ತಾದೊಡೆ ಚತುರ್ವಿಂಶತಿ (೨೪), ಬ್ರಹ್ಮವಿಷ್ಣು ಗರ್ವಿಸಿ ಯುದ್ಧವ ಮಾಡುತ್ತಿರಲು ಇರ್ವರ ಮಧ್ಯದಲ್ಲಿ ಉರಿಲಿಂಗವಾಗಿರಲು ಗೃಧ್ನವರಾಹಪರಿತನುಗಳನೆಯ್ದಿ ಅಡಿಮುಡಿಯ ಕಾಣದೆ ಮರಳಿ ಸ್ತೋತ್ರವ ಮಾಡಲು ಪ್ರಸನ್ನವಾದುದು ಪಂಚವಿಂಶಂ, ಇಪ್ಪತ್ತೈದನೆಯ ೨೫ಲೀಲೆಯು. ಭೂತಭವಿಷ್ಯದ್ವರ್ತಮಾನ ಕಾಲಂಗಳಿಗೆ ಮೊದಲೆಂಬುದೀಗ ಅಂದಂದಿಗೆಯೆಂಬುದರ್ಥ.[೬] ದಿನಕಾಲಕಲ್ಪಿತರಹಿತವಾದ ಚಿರತಾರುಣ್ಯಮೂರ್ತಿ ನೀನೆಂಬುದಿದು ಎಳೆಯ ನೀನೆಂಬುದೀಗರ್ಥ. ಚಿದ್ರೂಪವಾದ ಚಿರಂತನಪುರುಷ ನಾನೆಂಬುದೀಗ ಹಳೆಯ ನಾನೆಂಬ ಶಬ್ದಕ್ಕರ್ಥ.

..........................

೫.ಪ್ರಾರಂಭದ ಗರಿ ಕಳೆದುಹೋಗಿದೆ(ಪ). ೬+ಯಳೆಯ ನೀನು(ಪ).

---

೩

**ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ, ನೀನು ನಾಂಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ, ನೀನು ಆಕಾರವಾಗಿರ್ದಲ್ಲಿ ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ, ಅಯ್ಯಾ, ನೀನೆನ್ನ ಭವವ ಕೊಂದಿಹೆನೆಂದು ಜಂಗಮಲಾಂಛನವಾಗಿ ಬಂದಡೆ, ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ–ಲಿಂಗವನು ತನ್ನತ್ತಭಿಮುಖವ ಮಾಡಿಕೊಂಡು ಆ ಲಿಂಗದೊಡನೆ ಬಿನ್ನೈಸುವಂಥ ಬಿನ್ನಪವು. ನೀನು ನಿರಾಕಾರವಾಗಿರ್ದಲ್ಲಿ–ನೀನು ನಿರವಯ ನಿರಾಳ ಅಗಮ್ಯ ಅಗೋಚರವಾದ ನಿಃಕಲಬ್ರಹ್ಮವಾಗಿರ್ದಲ್ಲಿ, ನಾನು ಜ್ಞಾನವೆಂಬ ವಾಹನವಾಗಿರ್ದೆ–ನಾನು ನಿಃಕಲಬ್ರಹ್ಮಕ್ಕೆ ಜ್ಞಾನಚಿತ್ತುವಿನಿಂದ ಅಂಗವಾಗಿರ್ದಾತನು, ಕಾಣಾ–ಕಂಡಾ, ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳ್ಳುತ್ತಿಹನು ಸಂಗನಬಸವೇಶ್ವರನು.

ಅಯ್ಯಾ–ಎಲೆ ಲಿಂಗವೆ, ನೀನು ನಾಂಟ್ಯಕ್ಕೆ ನಿಂದಲ್ಲಿ–ಸರ್ವಚೈತನ್ಯಸ್ವರೂಪವಾದ ಮಹಾಲಿಂಗಮೂರ್ತಿಯಾಗಿರ್ದಲ್ಲಿ, ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ–ನಾನು ಆ ಮಹಾಲಿಂಗಕ್ಕೆ ಚಿಚ್ಛಕ್ತಿಯಿಂದಂಗವಾಗಿರ್ದಾತನು, ಕಾಣಾ–ಕಂಡಾ, ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳ್ಳುತ್ತಿಹನು ಸಂಗನಬಸವೇಶ್ವರನು.

● ಅಯ್ಯಾ–ಎಲೆ ಲಿಂಗವೆ, ನೀನು ಆಕಾರವಾಗಿರ್ದಲ್ಲಿ–ನೀನು ಸಾಕಾರವಾದ ಸದಾಶಿವಮೂರ್ತಿಯಾಗಿರ್ದಲ್ಲಿ, ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ–ನಾನು ಆ

ಸದಾಶಿವಮೂರ್ತಿಗೆ ಸದ್ಧರ್ಮದಿಂದಂಗವಾಗಿರ್ದಾತನು, ಕಾಣಾ–ಕಂಡಾ, ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳ್ಳುತ್ತಿಹನು ಸಂಗನಬಸವೇಶ್ವರನು.

ಅಯ್ಯಾ–ಎಲೆ ಲಿಂಗವೆ, ನೀನೆನ್ನ ಭವವ–ಅನೇಕ ಜನ್ಮಂಗಳಲ್ಲಿ ಹುಟ್ಟಿಹುಟ್ಟಿ ಬರುವಂಥ ಉತ್ಪತ್ತ್ಯವನ್ನು, ಕೊಂದಿಹೆನೆಂದು–ಸಂಹರಿಸಿಹೆನೆಂದು, ಜಂಗಮಲಾಂಛನವಾಗಿ ಬಂದಡೆ–ಪ್ರಭುಸ್ವಾಮಿಗಳೆಂಬ ಮಹಾಜಂಗಮವಾಗಿ ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ–ನಾನು ಆ ಜಂಗಮಕ್ಕೆ ಭಕ್ತಿಯಿಂದಂಗವಾಗಿರ್ದಾತನು, ಕಾಣಾ–ಕಂಡಾ, ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳ್ಳುತ್ತಿಹನು ಸಂಗನಬಸವೇಶ್ವರನು ಎಂಬ ದೃಷ್ಟೋಪಮಾನದ ಹಾಂಗೆ.

ಅಯ್ಯಾ–ಎಲೆ ಲಿಂಗವೆ, ನೀನು ನಿರಾಕಾರವಾಗಿರ್ದಲ್ಲಿ–ನಿರವಯ ನಿರಾಳ ಅಗಮ್ಯ ಅಗೋಚರವಾದ ನಿಃಕಲಬ್ರಹ್ಮ[೧]ವಾಗಿರ್ದಲ್ಲಿ, ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ–ನಾನು ನಿಃಕಲಬ್ರಹ್ಮಕ್ಕೆ ಜ್ಞಾನಚಿತ್ತುವಿನಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವನ್ನು ಪರಾಮರಿಸಿಕೊಳ್ಳುತ್ತಿಹನು ಜ್ಞಾನಕಲಾತ್ಮನು.

● ಅಯ್ಯಾ–ಎಲೆ ಲಿಂಗವೆ, ನೀನು ನಾಂಟ್ಯಕ್ಕೆ ನಿಂದಲ್ಲಿ–ಸರ್ವಚೈತನ್ಯಸ್ವರೂಪವಾದ ಮಹಾಲಿಂಗಮೂರ್ತಿಯಾಗಿರ್ದಲ್ಲಿ, ನಾನು ಚೈತನ್ಯವೆಂಬವಾಹನವಾಗಿರ್ದೆ ಕಾಣಾ–ನಾನು ಆ ಮಹಾಲಿಂಗಕ್ಕೆ ಚಿಚ್ಛಕ್ತಿಯಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವ ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು.

ಅಯ್ಯಾ–ಎಲೆ ಲಿಂಗವೆ, ನೀನು ಆಕಾರವಾಗಿರ್ದಲ್ಲಿ–ನೀನು ಸಾಕಾರವಾದ ಸದಾಶಿವಮೂರ್ತಿಯಾಗಿರ್ದಲ್ಲಿ, ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ–ನಾನು ಸದಾಶಿವಮೂರ್ತಿಗೆ ಸದ್ಧರ್ಮದಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವನ್ನು ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು.

ಅಯ್ಯಾ–ಎಲೆ ಲಿಂಗವೆ, ನೀನೆನ್ನ ಭವವ ಕೊಂದಿಹೆನೆಂದು–ನೀನು ದೇಹ ಕರಣೇಂದ್ರಿಯ ವಿಷಯಂಗಳ ವರ್ತನೆಯ ನಷ್ಟವಮಾಡಿಹೆನೆಂದು, ಜಂಗಮಲಾಂಛನವಾಗಿ ಬಂದಡೆ–ಅಂತರಂಗದಲ್ಲಿ ಜ್ಞಾನೋದಯವಾಗಿ ಬಂದರೆ, ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ–ನಾನು ಜ್ಞಾನಕ್ರೀಯಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವನ್ನು ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧ + ಕ್ಕಂಗ (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ–ಎಲೆ ಲಿಂಗವೆ, ನೀನು ನಿಃಕಲ ಬ್ರಹ್ಮವಾಗಿರ್ದಲ್ಲಿ, ನಾನು ಜ್ಞಾನಕಲಾತ್ಮನು ಚಿತ್ತೆಂಬ ವರೂಥವಾಗಿರ್ದೆ ನೋಡಾ.

ಅಯ್ಯಾ, ನೀನು ನಾಂಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ–ಎಲೆ ನಿಃಕಲಬ್ರಹ್ಮವೆ ನಿನ್ನ ನೆನಹೇ ನಿರ್ಧರಿಸಿ ನಿಃಕಲಪರಾ ಶಕ್ತಿ ಹುಟ್ಟಿದಳು. ಆ ನಿಃಕಲಪರಾಶಕ್ತಿಯಿಂದ ಚಿನ್ನಾದ ಚಿದ್ಬಿಂದು ಚಿತ್ಕಲೆಯೆಂಬ ಬಸವಾಕ್ಷರತ್ರಯಂಗಳು ಪುಟ್ಟಿದವು. ಆ ಬಸವಾಕ್ಷರತ್ರಯಂಗಳೂ ಚಿತ್ತೆಂಬ ಚತುರ್ವಿಧವೂ ಘಟ್ಟಿಗೊಂಡು ಅಖಂಡಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು. ಆ ಮಹಾಲಿಂಗವು ಸಗುಣ ನಿರ್ಗುಣ ನಟನೆಯ ನಟಿಸುವುದಕ್ಕೆ ನೆಲಸಿದಲ್ಲಿ, ನಾನು ಶರಣನು ಪರಾಶಕ್ತಿಪ್ರ[೨]ರೂಢ[೨]ವೆಂಬ ವರೂಥವಾಗಿರ್ದೆ ನೋಡಾ.

ಅಯ್ಯಾ, ನೀನು ಆಕಾರವಾಗಿರ್ದಲ್ಲಿ ನಾನು ವೃಷಭನೆಂಬ ವಾಹನವಾಗಿರ್ದೆ–ಎಲೆ ಲಿಂಗವೆ, ನೀನು ಆ ಮಹಾಲಿಂಗದಂತರ್ಗತವಾದ ಚಿತ್ತೇ ಬಹಿಷ್ಕರಿಸಿ ಚಿಚ್ಛಕ್ತಿಯೆನಿಸಿತ್ತು. ಆ ಚಿಚ್ಛಕ್ತಿಯಿಂದ ಪರನಾದ ಪರಬಿಂದು ಪರಕಳೆಯೆಂಬ ಅಉಮಾಕ್ಷರತ್ರಯಂಗಳು ಪುಟ್ಟಿದವು.[೩] ಆ ಅಉಮಾಕ್ಷರತ್ರಯಂಗಳೂ ಚಿತ್ತೆಂಬ ಚತುರ್ವಿಧವೂ ಘಟ್ಟಿಗೊಂಡು ಪಂಚಮುಖ ದಶಪಂಚನೇತ್ರ ದಶಹಸ್ತ ದಶಾಯುಧ ಗಂಗೆಗೌರೀವಲ್ಲಭ ತನುವೇಕ ದ್ವಿಪಾದಶುದ್ಧಸ್ಫಟಿಕ ಶಂ[೪][ಖವರ್ಣ][೪]ವನುಳ್ಳ ಸದಾಶಿವತತ್ತ್ವ ಸಂಜನ್ಯವಾಯಿತ್ತು; ಆ ಸದಾಶಿವತತ್ತ್ವಮೂರ್ತಿಗೆ ನಾನು ಶರಣನು ಸದ್ಧರ್ಮವೆಂಬ ವರೂಥವಾಗಿರ್ದೆ ನೋಡಾ.

ಅಯ್ಯಾ, ನೀನೆನ್ನ ಭವವ ಕೊಂದಿಹೆನೆಂದು ಜಂಗಮಲಾಂಛನವಾಗಿ ಬಂದಡೆ ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ–ಎಲೆ ಸದಾಶಿವತತ್ತ್ವ ಮೂರ್ತಿಯೆ, ನೀನು ಮಧ್ಯಕಲ್ಪನೆಯ ಮರವೆಯಿಂದ ದೇಹವೆತ್ತಿ ಹುಟ್ಟಬರುವ ಜನ್ಮಸಂಸಾರವನು ಛೇದಿಸಿಹೆನೆಂದು ಸುಜ್ಞಾನ ಜಂಗಮಲಕ್ಷಣವನುಳ್ಳ ಚರಲಿಂಗವಾಗೆಯ್ದಿದರೆ, ನಾನು ಶರಣನು ಸುಜ್ಞಾನಗುರುಭಕ್ತನೆಂಬ ವರೂಥವಾಗಿದ್ದೆನು ನೋಡಾ.

............................

೨–೨ ರೋವ (ಚ). ೩ "ಬೆಳಸಾಗಿ...ಳು ಪುಟ್ಟಿದವು" (ವಚನ ೧) ಎಂಬಲ್ಲಿ ತೋರಿಸಿದಂತೆ ತೆರವಿದ್ದ ಸ್ಥಳದಲ್ಲಿಯ ಪಾಠವನ್ನೊಳಗೊಂಡ ಪುಟ 'ಜ' ಪ್ರತಿಯಲ್ಲಿ ಕಳೆದು ಹೋಗಿದೆ. ೪–೪ ಖಾವರಣ (ಕ,ಗ).

III- - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ–ಸಕಲತತ್ತ್ವಾಧೀಶ್ವರನಾದಂಥ ಎಲೈ ಸ್ವಾಮಿಯೆ, ನಿರಾಕಾರವಾಗಿರ್ದಲ್ಲಿ–ಲಲಾಟಲೋಚನ ಚಂದ್ರಕಳೆ ಚತುರ್ಭುಜ ಗಂಗೆಗೌರಿಯರೊಡನೆ ಕೂಡಲತ್ತಕ್ಕ ಸಗುಣಸ್ವರೂಪೇನೂ ಇಲ್ಲದೆ ನಿರ್ಗುಣಸ್ವರೂಪನಾಗಿದ್ದಲ್ಲಿ, ನಾನು–ಶರಣನು, ಜ್ಞಾನವೆಂಬ–ಅಜಿವೆಂಬ, ವಾಹನವಾಗಿರ್ದೆ ಕಾಣಾ–ವರೂಥನಾಗಿದ್ದೆನು ಕಂಡಾ.

ವ್ಯಾಳವ್ಯಾಘ್ರಗಜಾಂಧಕಾ[ಸು]ರಾದಿಗಳನು ಬೀಳ್ದುಳಿದು ನರ್ತನವಾಡುವಂದು ಪದಹತಿಯಿಂದ ನರ್ತನ ತಪ್ಪಿ ವ್ಯಕ್ತವಾಗದ ಹಾಂಗೆ ಎಂಬುದೀಗ ಅಯ್ಯಾ ನೀನು ನಾಂಟ್ಯಕ್ಕೆ ನಿಂದಲ್ಲಿ ಎಂಬ ಶಬ್ದಕ್ಕರ್ಥ. ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ–[೫]ಚೈತನ್ಯವೆಂಬ ವರೂಥವಾಗಿದ್ದೆನು ಕಂಡಾ.

ಅಯ್ಯಾ–ಎಲೆ ಸ್ವಾಮಿ, ನೀನಾಕಾರವಾಗಿರ್ದಲ್ಲಿ–ಪಂಚಮುಖ ದಶಭುಜ ದಶಪಂಚನೇತ್ರ ದಶಹಸ್ತ ದಶಾಯುಧಂಗಳ ಗಂಗೆಗೌರೀವಲ್ಲಭನಾದ ಸದಾಶಿವಮೂರ್ತಿಯಾಗಿದ್ದಲ್ಲಿ, ನಾನು–ಶರಣನು, ವೃಷಭನೆಂಬ–ಬಸವೇಶ್ವರನೆಂಬ, ವಾಹನವಾಗಿರ್ದೆ ಕಾಣಾ–ವರೂಥವಾಗಿದ್ದೆನು ಕಂಡಾ.

ಅಯ್ಯಾ–ಎಲೆ ಸ್ವಾಮಿ, ನೀಂ–ಲಿಂಗವು, ಎನ್ನ ಭವವ ಕೊಂದಿಹೆನೆಂದು–ನನ್ನ ಜನ್ಮವ ನಿವೃತ್ತೀಕರಿಸಿಹೆನೆಂದು, [೬]ಜಂಗಮಲಾಂಛನವಾಗಿ–ಜಡೆಮುಡಿ ಬೋಳುಲೋಚುದಿಗಂಬರ ಮೊದಲಾದ ಲಾಂಛನವನು ಧರಿಸಿ, [೭][ಬಂದಡೆ–][೭] ಚರಮೂರ್ತಿಯಾಗಿ ಆಗಮಿಸಿದರೆ, ನಾನು–ಶರಣನು, ಭಕ್ತನೆಂಬ–ಸದ್ಭಕ್ತನೆಂಬ, ವಾಹನವಾಗಿರ್ದೆ ಕಾಣಾ–ವರೂಥವಾಗಿದ್ದೆನು ಕಂಡಾ–ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

......................

೫ + ಚಿತ್ (ಡ). ೬ “ನಿವೃತ್ತಿ ಕರಿಸಿಹೆನೆಂದು...ದಿ ಹಲವು ಪ್ರಕಾರದ” (ವ. ೧೧) ಎಂಬಲ್ಲಿ ತೋರಿಸಿದಂತೆ ತೆರವಿದ್ದ ಸ್ಥಳದಲ್ಲಿಯ ಪಾಠವನ್ನೊಳಗೊಂಡ ೨ ಗರಿಗಳು ‘ಟ’ ಪ್ರತಿಯಲ್ಲಿ ಕಳೆದುಹೋಗಿವೆ. ೭–೭ x (ಟ, ಡ).

IV- - - - - - - - - - - - - - - - - - - - - - - - - - - - - - - - - - - - - - - - - - - - - - -

ಬಸವೇಶ್ವರದೇವರು ತಮ್ಮ ಪೂರ್ವಾಪರಜ್ಞಾನೋದಯದಿಂದ ನಿರೂಪಿಸಿದ ನಿರೂಪ : ನಿಃಕಲವಾಗಿರ್ದ ಪರಬ್ರಹ್ಮಕ್ಕೆರ[೮][ವು ಅಪ್ಪ][೮] ಜ್ಞಾನಪ್ರಕಾಶವೆ ಅಂಗ. ಆ ಅಂಗವೆಂಬುದೀಗ ಆಧಾರವೆನಿಸಿತ್ತು. ಅಂತು ಆಧಾರವೆನಿಸಿದ ಜ್ಞಾನಸ್ವರೂಪವೇ ಬಸವಣ್ಣನೆಂಬುದೀಗ, ಅಯ್ಯಾ ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ ಎಂಬ ಶಬ್ದಕ್ಕರ್ಥ.

ಅಂತು ನಿಃಕಲವಾಗಿದ್ದಲ್ಲಿ ಪರಶಿವಂಗೆ ತನ್ನ ಚಿತ್ತುವೇ ತನಗೆ ಅಂಗವಾಗಿರ್ದು, ಆ ಚಿಚ್ಚೈತನ್ಯಪ್ರಭಾಂಗವನೆ ಮುಂದುಗೊಂಡು ತನ್ನ ಸ್ವಲೀಲೆಯಿಂದ ಲಿಂಗಮೂರ್ತಿಯಾಯಿತ್ತೆಂಬುದೀಗ, ಅಯ್ಯಾ ನೀನು ನಾಂಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ ಎಂಬ ಶಬ್ದಕ್ಕರ್ಥ.

ಅಂತಿರ್ದ ಚಿಲ್ಲಿಂಗವು ತನ್ನ ಚಿಚ್ಚೈತನ್ಯವನೇ ಮುಂದುಗೊಂಡು ಆಕಾರವಾಗಿರ್ದಲ್ಲಿ ಆ ಚಿತ್ತು ವೃಷಭನೆಂಬ ವಾಹನವಾಯಿತ್ತೆಂಬುದೀಗ, ಅಯ್ಯಾ ನೀನು ಆಕಾರವಾಗಿರ್ದಲ್ಲಿ ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ ಎಂಬ ಶಬ್ದಕ್ಕರ್ಥ.

ಅಂತು ಸಾಕಾರವಾದ ಪರಶಿವಂಗೆ ವಾಹನವಾದ ಚಿಚ್ಚೈತನ್ಯದ ಚಿಂದಶವೇ ಆತ್ಮರುಗಳಾಗಲು, ಆ ಆತ್ಮರುಗಳ ಭವ ವಿಚ್ಛೇದನವ ಮಾಡದೇಕೆಂದು ಶಿವ ತಾನೇ ಜಂಗಮಸ್ವರೂಪವಾಗಿ ಬಂದಲ್ಲಿ ಆ ಆತ್ಮರುಗಳ ನಿಜಸ್ವರೂಪಮಪ್ಪ ಚಿತ್ಸ್ವರೂಪವೇ ಪ್ರಭಾವಿಸಿ ಭಕ್ತಿಯಂ ತಾಳಿತ್ತೆಂಬುದೀಗ ಅಯ್ಯಾ ನೀನೆನ್ನ ಭವವ ಕೊಂದಿಹೆನೆಂದು ಜಂಗಮವಾಗಿ ಬಂದಡೆ ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ ಎಂಬ ಶಬ್ದಕ್ಕರ್ಥ ಇಂತು ಚತುರ್ವಿಧವಾದ ವಾಹನವು ಚಿತ್ತುವೆ ಆಯಿತ್ತಾಗಿ ಆ ಚಿತ್ಸ್ವರೂಪವೇ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

......................

೮-೮ - ವಿಅಪು(ತ).

V- - - - - - - - - - - - - - - - - - - - - - - - - - - - - - - - - - - - - - - - - - - - - -

ವ್ಯಾಳವ್ಯಾಘ್ರಗಜಾಂಧಕಾಸುರಾದಿಗಳನು ತುಳಿದು ನರ್ತನವಾಡುವಲ್ಲಿ ಪದಹತಿಯಿಂದ ನರ್ತನ ತಪ್ಪಿ ವ್ಯಸ್ತವಾಗದ ಹಾಂ...ದೀಗ ನಾಟ್ಯಕ್ಕೆನಿಂದಲ್ಲಿ ಎಂಬುದರ್ಥ.

---

೪

**ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ ನಿಮ್ಮಾಣೆ. ನಿಮ್ಮ ಪ್ರಮಥರಾಣೆ! ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆಜೆಯೆನಯ್ಯಾ. ಪ್ರಥಮಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ. ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಕಾರುಣ್ಯವ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ. ಮೂರನೆಯ ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಲೀಲಾವಿನೋದದಿಂದೆನ್ನನಿರಿಸಿಕೊಂಡಿರ್ದಿರಯ್ಯಾ. ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಮನಃಪ್ರೇರಕನಾಗಲೆಂದು ಎನ್ನನಿರಿಸಿಕೊಂಡಿರ್ದಿರಯ್ಯಾ. ಐದನೆಯ ಭವಾಂತರದಲ್ಲಿ ಕಾಲಲೋಚನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ಸರ್ವಕಾಲ ಸಂಹಾರವ ಮಾಡಲೆಂದು ಎನ್ನನಿರಿಸಿಕೊಂಡಿರ್ದಿರಯ್ಯಾ. ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮಗೇರುವುದಕ್ಕೆ ವಾಹನವಾಗಲೆಂದೆನ್ನನಿರಿಸಿಕೊಂಡಿರ್ದಿರಯ್ಯಾ. ಏಳನೆಯ ಭವಾಂತರದಲ್ಲಿ ಬಸವನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದೆನ್ನನಿರಿಸಿಕೊಂಡಿರ್ದಿರಯ್ಯಾ. ಇದು ಕಾರಣ ಕೂಡಲಸಂಗಮದೇವಾ ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ.**

I - - - - - - - - - - - - - - - - - - - - - - - - - - - - - - -

ಅಯ್ಯಾ-ಲಿಂಗವನ್ನು ತನ್ನತ್ತ(ಭಿ)ಮುಖವ ಮಾಡಿಕೊಂಡು ಆ ಲಿಂಗದೊಡನೆ ಬಿನ್ನೈಸುವಂಥ ಬಿನ್ನಪವು, ಏಳೇಳು ಜನ್ಮದಲ್ಲಿ-ಸಪ್ತವಿಧ ಜನ್ಮದಲ್ಲಿ, ಶಿವಭಕ್ತನಾಗಿ ಬಾರದಿರ್ದಡೆ-ಶಿವಭಕ್ತನಾಗಿ ಬರಬೇಕು, ಶಿವಭಕ್ತನಾಗಿ ಬಂದರೆ ದೋಷವಿಲ್ಲ. ಶಿವಭಕ್ತನಾಗಿ ಹುಟ್ಟಿ ಹುಟ್ಟಿ ಬಾರದಿರ್ದರೆ, ನಿಮ್ಮಾಣೆ-ಸ್ವಾಮಿಗಳ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ ನಿಮ್ಮ ಏಳುನೂರೆಪ್ಪತ್ತು ಅಮರಗಣಂಗಳ ಮೇಲಣ ಪ್ರಜ್ಞೆಯು, ನಿಮ್ಮ ಪ್ರಸಾದಕ್ಕಲ್ಲದೆ-ನಿಮ್ಮ ಶುದ್ಧಸಿದ್ಧಪ್ರಸಿದ್ಧ ಪ್ರಸಾದವನನುಭವಿಸುವುದಕ್ಕಲ್ಲದೆ, ಬಾಯಿದೆಱೆಯೆನಯ್ಯಾ-ಮತ್ತೊಂದು ತತ್ತ್ವಾನ್ನ ತತ್ತ್ವೋದಕವನ್ನು ಪಡೆದನುಭವಿಸುವುದಕ್ಕೆ ಎನ್ನ ಜಿಹ್ವೆಯನು ತೆರೆಯೆನಯ್ಯಾ.

ಪ್ರಥಮ ಭವಾಂತರದಲ್ಲಿ-ಒಂದನೆಯ ಜನ್ಮದಲ್ಲಿ, ಶಿಲಾದನೆಂಬ ಗಣೇಶ್ವರನ ಮಾಡಿ-ಶಿಲಾದನೆಂಬ ಗಣಾಧೀಶ್ವರನ ಮಾಡಿ, ಹೆಸರಿಟ್ಟು-ಅಭಿಧಾನವಿಟ್ಟು, ಕರೆದು-ಆಹ್ವಾನಿಸಿ, ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ-ನಿಮ್ಮ ಸೇವಕನ ಮಾಡಿ ಎನ್ನ ಮಡಗಿಕೊಂಡಿರ್ದಿರಯ್ಯಾ ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳ್ಳುತ್ತಿಹನು ಸಂಗನಬಸವೇಶ್ವರನು.

ಎರಡನೆಯ ಭವಾಂತರದಲ್ಲಿ–ಎರಡನೆಯ ಜನ್ಮದಲ್ಲಿ, ಸ್ಕಂದನೆಂಬ ಗಣೇಶ್ವರನ ಮಾಡಿ–ಷಣ್ಮುಖನೆಂಬ ಗಣಾಧೀಶ್ವರನ ಮಾಡಿ, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ನಿಮ್ಮ ಕಾರುಣ್ಯವ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ–ನಿಮ್ಮ ಕೃಪೆಯುಳ್ಳಾತನಂ ಮಾಡಿ ಎನ್ನ ಮಡಗಿಕೊಂಡಿರ್ದಿರಯ್ಯಾ ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳುತ್ತಿಹನು ಸಂಗನಬಸವೇಶ್ವರನು.

ಮೂರನೆಯ ಭವಾಂತರದಲ್ಲಿ–ಮೂರನೆಯ ಜನ್ಮದಲ್ಲಿ, ನೀಲಲೋಹಿತನೆಂಬ ಗಣೇಶ್ವರನ ಮಾಡಿ–ಕಪ್ಪುಕಂಠನೆಂಬ ಗಣಾಧೀಶ್ವರನ ಮಾಡಿ, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ನಿಮ್ಮ ಲೀಲಾವಿನೋದದಿಂದೆನ್ನನಿರಿಸಿಕೊಂಡಿರ್ದಿರಯ್ಯಾ–ನಿಮ್ಮ ಲೀಲಾವಿನೋದದಿಂದೆನ್ನ ಮಡಗಿ ಕೊಂಡಿರ್ದಿರಯ್ಯಾ ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳ್ಳುತ್ತಿಹನು ಸಂಗನಬಸವೇಶ್ವರನು.

ನಾಲ್ಕನೆಯ ಭವಾಂತರದಲ್ಲಿ–ನಾಲ್ಕನೆಯ ಜನ್ಮದಲ್ಲಿ, ಮನೋಹರನೆಂಬ ಗಣೇಶ್ವರನ ಮಾಡಿ–ಮನೋಹರನೆಂಬ ಗಣಾಧಿಶ್ವರನ ಮಾಡಿ, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ನಿಮ್ಮ ಮನಃಪ್ರೇರಕನಾಗಲೆಂದು ಎನ್ನನಿರಿಸಿಕೊಂಡಿರ್ದಿರಯ್ಯಾ–ನಿಮ್ಮ ಮನಸ್ಸಿನ ಪ್ರೇಮವಿಶ್ವಾಸ ಉಳ್ಳಾತನಾಗಲೆಂದು ಎನ್ನ ಮಡಗಿಕೊಂಡಿರ್ದಿರಯ್ಯಾ ಎಂದು ತನ್ನ ಪರಾಮರಿಸಿಕೊಳುತ್ತಿಹನು ಸಂಗನಬಸವೇಶ್ವರನು.

ಐದನೆಯ ಭವಾಂತರದಲ್ಲಿ–ಐದನೆಯ ಜನ್ಮದಲ್ಲಿ, ಕಾಲಲೋಚನೆಂಬ ಗಣೇಶ್ವರನ ಮಾಡಿ–ಅಕ್ಷಪಾದನೆಂಬ ಗಣಾಧೀಶ್ವರನ ಮಾಡಿ, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ಸರ್ವಕಾಲಸಂಹಾರವ ಮಾಡಲೆಂದು ಎನ್ನನಿರಿಸಿಕೊಂಡಿರ್ದಿರಯ್ಯಾ : ಸರ್ವಕಾಲ–ಎಲ್ಲ ಕಾಲದಲ್ಲಿ, ಸಂಹಾರವ ಮಾಡಲೆಂದು–ವೈದಿಕ, ವೈಷ್ಣವ, ಬೌದ್ಧ, ಜೈನ, ಚಾರ್ವಾಕ, ಮಾಯಾವಾದಿಗಳೆಂಬ ಅನ್ಯಸಮಯಂಗಳನ್ನು ತಗ್ಗಲೊತ್ತಿಸಲೆಂದು, ಎನ್ನನಿರಿಸಿಕೊಂಡಿರ್ದಿರಯ್ಯಾ–ಎನ್ನ ಮಡಗಿಕೊಂಡಿರ್ದಿರಯ್ಯಾ ಎಂದು ತನ್ನ ಪೂರ್ವಪರವನ್ನು ಪೂರ್ವಾಪರವನ್ನು ಪರಾಮರಿಸಿಕೊಳ್ಳುತ್ತಿಹನು ಸಂಗನಬಸವೇಶ್ವರನು.

ಆರನೆಯ ಭವಾಂತರದಲ್ಲಿ–ಆರನೆಯ ್ಜನ್ಮ್ದಲ್ಲಿ. ವೃಷಭನೆಂಬ ಗಣೇಶ್ವರನ ಮಾಡಿ–ವೃಷಭನೆಂಬ ಗಣಾಧೀಶ್ವರನ ಮಾಡಿ, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ನಿಮಗೆ–ಸ್ವಾಮಿಗಳಿಗೆ, ಏರುವುದಕ್ಕೆ–ಆರೋಹಣವಾಗುವುದಕ್ಕೆ, ವಾಹನವಾಗಲೆಂದು–ವರೂಥವಾಗಲೆಂದು, ಎನ್ನನಿರಿಸಿಕೊಂಡಿರ್ದಿರಯ್ಯಾ–ಎನ್ನ ಮಡಗಿಕೊಂಡಿರ್ದಿರಯ್ಯಾ ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳುತ್ತಿಹನು ಸಂಗನಬಸವೇಶ್ವರನು.

ಏಳನೆಯ ಭವಾಂತರದಲ್ಲಿ–ಸಪ್ತಮ ್ಜನ್ಮ್ದಲ್ಲಿ, ಬಸವನೆಂಬ ಗಣೇಶ್ವರನ ಮಾಡಿ–ಬಸವೇಶ್ವರನೆಂಬ ಗಣಾಧೀಶ್ವರನ ಮಾಡಿ, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ನಿಮ್ಮ ಒಕ್ಕುದ ಮಿಕ್ಕುದಕ್ಕೆ–ನಿಮ್ಮ ಒಕ್ಕಮಿಕ್ಕ ಪ್ರಸಾದವನು ಪಡೆದನುಭವಿಸುವುದಕ್ಕೆ, ಯೋಗ್ಯನಾಗಲೆಂದು–

ಸೇವ್ಯವುಳ್ಳಾತನಾಗಲೆಂದು, ಎನ್ನನಿರಿಸಿಕೊಂಡಿರ್ದಿರಯ್ಯಾ-ಎನ್ನ ಮಡಗಿಕೊಂಡಿರ್ದಿರಯ್ಯಾ ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳುತ್ತಿಹನು ಸಂಗನಬಸವೇಶ್ವರನು.

ಇದು ಕಾರಣ-ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನೀವು ಬರಿಸಿದ-ನೀವು ಹುಟ್ಟಿಹುಟ್ಟಿ ಬರಿಸಿದ, ಭವಾಂತರದಲ್ಲಿ-ಸಪ್ತವಿಧಜನ್ಮದಲ್ಲಿ, ನಾನು ಬರುತಿರ್ದೆನಯ್ಯಾ-ನಾನು ಶಿವಭಕ್ತನಾಗಿ ಹುಟ್ಟಿಹುಟ್ಟಿ ಬರುತಿರ್ದೆನಯ್ಯಾ ಎಂಬ ದೃಷ್ಟೋಪಮಾನದ ಹಾಂಗೆ,

● ಅಯ್ಯಾ-ಎಲೆ ಲಿಂಗವೆ, ಏಳೇಳು ಜನ್ಮದಲ್ಲಿ-ಸಪ್ತವಿಧಲೀಲೆಗಳಲ್ಲಿ, ಶಿವಭಕ್ತನಾಗಿ ಬಾರದಿರ್ದಡೆ : ಶಿವಯೆಂದರೆ ಸಪ್ತವಿಧಲಿಂಗವು, ಭಕ್ತಯೆಂದರೆ-ಸಪ್ತವಿಧಚಿತ್ತು, ಆಗಿ ಬಾರದಿರ್ದಡೆ-ಸಪ್ತವಿಧಲಿಂಗಕ್ಕೆ ಸಪ್ತವಿಧಚಿತ್ತಿನಿಂದಂಗವಾಗಿ ಐತರಬೇಕು, ಐತರದಿರ್ದಡೆ; ನಿಮ್ಮಾಣೆ-ನಿಮ್ಮ ಲಿಂಗದ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ-ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳ ಮೇಲಣ ಪ್ರತಿಜ್ಞೆಯು. ನಿಮ್ಮ ಪ್ರಸಾದಕ್ಕಲ್ಲದೆ-ನಿಮ್ಮ ಲಿಂಗಜಂಗಮದ ಮಹಾಪ್ರಸಾದಕ್ಕಲ್ಲದೆ, ಬಾಯ್ದೆಱೆಯೆನಯ್ಯಾ-ಮತ್ತೊಂದು ತತ್ಸಾನ್ನ ತತ್ತೋದಕವನ್ನು ಅನುಭವಿಸುವುದಕ್ಕೆ ಎನ್ನ ಜಿಹ್ವೆಯನ್ನು ತೆರೆಯೆನಯ್ಯಾ.

ಪ್ರಥಮ ಭವಾಂತರದಲ್ಲಿ-ಒಂದನೆಯ ಲೀಲೆಯಲ್ಲಿ, ಶಿಲಾದನೆಂಬ ಗಣೇಶ್ವರನ ಮಾಡಿ-ನೀನು ನಿಃಕಲಬ್ರಹ್ಮವಾಗಿರ್ದಲ್ಲಿ ನಿನಗೆ ಜ್ಞಾನಚಿತ್ತುವಿನಿಂದಂಗವಾಗಿರ್ದಾತನೆಂದು, ಹೆಸರಿಟ್ಟು-ಅಭಿಧಾನವಿಟ್ಟು, ಕರೆದು-ಆಹ್ವಾನಿಸಿ, ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ-ಆ ನಿಃಕಲಬ್ರಹ್ಮಕ್ಕೆಜ್ಞಾನಚಿತ್ತುವಿನಿಂದಂಗವಾದಾತನಲಾ ಎಂದು ಜ್ಞಾನದಿಂದ ತನ್ನ ನಿಜವನ್ನು ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು.

ಎರಡನೆಯ ಭವಾಂತರದಲ್ಲಿ-ಎರಡನೆಯ ಲೀಲೆಯಲ್ಲಿ, ಸ್ಕಂದನೆಂಬ ಗಣೇಶ್ವರನ ಮಾಡಿ-ನೀನು ಮಹಾಲಿಂಗಮೂರ್ತಿಯಾಗಿರ್ದಲ್ಲಿ ನಿನಗೆ ಚಿಚ್ಛಕ್ತಿಯಿಂದಂಗವಾಗಿರ್ದಾತನೆಂದು, ಹೆಸರಿಟ್ಟು-ಅಭಿಧಾನವಿಟ್ಟು, ಕರೆದು-ಆಹ್ವಾನಿಸಿ, ನಿಮ್ಮ ಕಾರುಣ್ಯವ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ-ಆ ಮಹಾಲಿಂಗಮೂರ್ತಿಗೆ ಚಿಚ್ಛಕ್ತಿಯಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವನ್ನು ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು.

ಮೂರನೆಯ ಭವಾಂತರದಲ್ಲಿ-ಮೂರನೆಯ ಲೀಲೆಯಲ್ಲಿ, ನೀಲಲೋಹಿತನೆಂಬ ಗಣೇಶ್ವರನ ಮಾಡಿ-ನೀನು ಈಶ್ವರ ಮೂರ್ತಿಯಾಗಿರ್ದಲ್ಲಿ ನಿನಗೆ ಇಚ್ಛಾಶಕ್ತಿಯಿಂದಂಗವಾಗಿರ್ದಾತನೆಂದು, ಹೆಸರಿಟ್ಟು-ಅಭಿಧಾನವಿಟ್ಟು, ಕರೆದು-ಆಹ್ವಾನಿಸಿ, ನಿಮ್ಮ ಲೀಲಾವಿನೋದದಿಂದೆನ್ನನಿರಿಸಿ ಕೊಂಡಿರ್ದಿರಯ್ಯಾ-ಆ ಈಶ್ವರಮೂರ್ತಿಗೆ ಇಚ್ಛಾಶಕ್ತಿಯಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವನ್ನು ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು.

ನಾಲ್ಕನೆಯ ಭವಾಂತರದಲ್ಲಿ-ನಾಲ್ಕನೆಯ ಲೀಲೆಯಲ್ಲಿ, ಮನೋಹರನೆಂಬ ಗಣೇಶ್ವರನ ಮಾಡಿ-ನೀನು ಮಹೇಶ್ವರಮೂರ್ತಿಯಾಗಿರ್ದಲ್ಲಿ ನಿಮಗೆ ಉಮಾಶಕ್ತಿಯಿಂದಂಗವಾಗಿರ್ದಾತನಲಾ ಎಂದು, ಹೆಸರಿಟ್ಟು-ಅಭಿಧಾನವಿಟ್ಟು, ಕರೆದು-ಆಹ್ವಾನಿಸಿ, ನಿಮ್ಮ ಮನಃಪ್ರೇರಕನಾಗಲೆಂದು

ಎನ್ನನಿರಿಸಿಕೊಂಡಿರ್ದಿರಯ್ಯಾ–ಆ ಮಹೇಶ್ವರಮೂರ್ತಿಗೆ ಉಮಾಶಕ್ತಿಯಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವನ್ನು ಪರಾಮರಿಸಿಕೊಳ್ಳುತ್ತಿಹನು ಜ್ಞಾನಕಲಾತ್ಮನು.

ಐದನೆಯ ಭವಾಂತರದಲ್ಲಿ–ಐದನೆಯ ಲೀಲೆಯಲ್ಲಿ, ಕಾಲಲೋಚನನೆಂಬ ಗಣೇಶ್ವರನ ಮಾಡಿ–ನೀನು ರುದ್ರಮೂರ್ತಿಯಾಗಿರ್ದಲ್ಲಿ ನಿಮಗೆ ಕ್ರಿಯಾಶಕ್ತಿಯಿಂದಂಗವಾಗಿರ್ದಾತನಲಾ ಎಂದು, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ಸರ್ವಕಾಲಸಂಹಾರವ ಮಾಡಲೆಂದು ಎನ್ನನಿರಿಸಿಕೊಂಡಿರ್ದಿರಯ್ಯಾ–ಸರ್ವಾಚಾರಸಂಪತ್ತಿನಾಚರಣೆಯ ಕ್ರಿಯೆಗಳನುಂಟುಮಾಡಿಕೊಂಡು ವಿನೋದಿಸಲೆಂದು ಎನ್ನ ಮಡಗಿಕೊಂಡಿರ್ದಿರಯ್ಯಾ. ಆ ರುದ್ರಮೂರ್ತಿಗೆ ಕ್ರಿಯಾಶಕ್ತಿಯಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವ ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು.

ಆರನೆಯ ಭವಾಂತರದಲ್ಲಿ–ಆರನೆಯ ಲೀಲೆಯಲ್ಲಿ, ವೃಷಭನೆಂಬ ಗಣೇಶ್ವರನ ಮಾಡಿ–ನೀನು ಸದಾಶಿವಮೂರ್ತಿಯಾಗಿರ್ದಲ್ಲಿ ನಿಮಗೆ ಸದ್ಧರ್ಮದಿಂದಂಗವಾಗಿರ್ದಾತನೆಂದು, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ನಿಮಗೇರುವುದಕ್ಕೆ–ನಿಮಗಾರೋಹಣವಾಗುವುದಕ್ಕೆ, ವಾಹನವಾಗಲೆಂದು–ವರೂಥವಾಗಲೆಂದು, ಎನ್ನನಿರಿಸಿಕೊಂಡಿರ್ದಿರಯ್ಯಾ–ಆ ಸದಾಶಿವಮೂರ್ತಿಗೆ ಸದ್ಧರ್ಮದಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವ ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು.

ಏಳನೆಯ ಭವಾಂತರದಲ್ಲಿ–ಸಪ್ತ[೩][ಮ][೩] ಲೀಲೆಯಲ್ಲಿ, ಬಸವನೆಂಬ ಗಣೇಶ್ವರನ ಮಾಡಿ–ನೀನು ಜ್ಞಾನವಾಗಿರ್ದಲ್ಲಿ ನಿಮಗೆ ಕ್ರೀಯಿಂದಂಗವಾಗಿರ್ದಾತನಲಾ ಎಂದು, ಹೆಸರಿಟ್ಟು–ಅಭಿಧಾನವಿಟ್ಟು, ಕರೆದು–ಆಹ್ವಾನಿಸಿ, ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದು : ನಿಮ್ಮಯೆಂದರೆ ಗುರುಮೂರ್ತಿಗಳು, ಆ ಗುರುಮುಖದಿಂದೊಕ್ಕುದೇ ಇಷ್ಟಲಿಂಗ, ಮಿಕ್ಕುದೇ ಪ್ರಾಣಲಿಂಗ. ಒಕ್ಕುದೇ ಕ್ರಿಯಾ, ಮಿಕ್ಕುದೇ ಜ್ಞಾನ. ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರಿಯಾವಿಡಿದಾಚರಿಸುವುದಕ್ಕೆ, ಯೋಗ್ಯನಾಗಲೆಂದು–ಅರ್ಹನಾಗಲೆಂದು, ಎನ್ನನಿರಿಸಿಕೊಂಡಿರ್ದಿರಯ್ಯಾ–ಆ ಜ್ಞಾನಕ್ರೀಯಿಂದಂಗವಾಗಿರ್ದಾತನಲಾ ಎಂದು ಜ್ಞಾನದಿಂದ ತನ್ನ ನಿಜವ ಪರಾಮರಿಸಿಕೊಳುತ್ತಿಹನು ಜ್ಞಾನಕಲಾತ್ಮನು.

ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವು ಬರಿಸಿದ–ನೀವು ಉಂಟುಮಾಡಿದ, ಭವಾಂತರದಲ್ಲಿ–ಸಪ್ತವಿಧಲೀಲೆಗಳಲ್ಲಿ, ನಾನು ಬರುತಿರ್ದೆನಯ್ಯಾ–ಸಪ್ತವಿಧಲಿಂಗಕ್ಕೆ ಸಪ್ತವಿಧಚಿತ್ತುವಿನಿಂದಂಗವಾಗಿ ಐತರುತಿರ್ದೆನಯ್ಯಾ.

.......................

೧–೧x(ಗ) ೨–೨ ಲೀಲೆ (ಕ). ೩–೩ ವಿಧ (ಕ,ಗ).

II- - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ–ಸಪ್ತವಿಧಶಿವತತ್ತ್ವಸಂಭವಸೃಷ್ಟಿಯಲ್ಲಿ ಲಿಂಗಭಕ್ತನಾಗಿ ಬಾರದಿರ್ದಡೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ–ಎಲೆ ಶಿವನೆ

ನಿಮ್ಮ ಮೇಲೆ ಪ್ರಜ್ಞೆಯು, ನಿಮ್ಮ ಗಣಂಗಳ ಮೇಲೆ ಪ್ರತಿಜ್ಞೆಯು, ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆಗೆಯೆನಯ್ಯಾ-ಎಲೆ ಶಿವನೆ, ನಿಮ್ಮ ಸ್ವರೂಪವಾದ ಗುರುಲಿಂಗಜಂಗಮದ ಒಕ್ಕಮಿಕ್ಕ ಪ್ರಸಾದಕ್ಕಲ್ಲದೆ ಜಿಹ್ವೆ ಬಿಚ್ಚೆನಯ್ಯಾ.

ಪ್ರಥಮ ಭವಾಂತರದಲ್ಲಿ-ಮೊದಲೊಂದನೆಯ ಲೀಲಾವತಾರದಲ್ಲಿ, ಶಿಲಾದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು-ಶಿಲಾಚೂರ್ಣವನು ಸೇವಿಸಲ್ತಕ್ಕ ಮುನೀಶ್ವರನೆಂಬ ಗಣವರನ ಮಾಡಿ ಅಭಿಧಾನಮಂ ಕಲ್ಪಿಸಿ, ಕರೆದು-ಎಲೆ ಶಿಲಾದಮುನಿಶ್ವರಾ ಎಂದು ಆಹ್ವಾನಿಸಿ, ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿ ಕೊಂಡಿರ್ದಿರಯ್ಯಾ-ಎನ್ನ, ನಿಮ್ಮ ಬಂಟನ ಮಾಡಿ ಮಡಗಿಕೊಂಡಿರ್ದಿರಯ್ಯಾ.

ಎರಡನೆಯ ಭವಾಂತರದಲ್ಲಿ-ಉಭಯ ಶಿವತತ್ತ್ವ ಸಂಭವಸೃಷ್ಟಿಯಲ್ಲಿ, ಸ್ಕಂದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು-ಕುಮಾರಸ್ವಾಮಿಯೆಂಬ ಗಣವರನ ಮಾಡಿ ನಾಮಾಂಕಿತವನಿತ್ತು, ಕರೆದು-ಎಲೆ ಕುಮಾರಸ್ವಾಮಿ ಎಂದು ಆಹ್ವಾನಿಸಿ, ನಿಮ್ಮ ಕಾರುಣ್ಯವ ಮಾಡಿಕೊಂಡಿರ್ದಿರಯ್ಯಾ-ನಿಮ್ಮ ಕೃಪಾವಲೋಕನವ ಮಾಡಿಕೊಂಡಿದ್ದಿರಯ್ಯಾ.

ಮೂರನೆಯ ಭವಾಂತರದಲ್ಲಿ-ಮೂರನೆಯ ಶಿವತತ್ತ್ವ ಸಂಭವಸೃಷ್ಟಿಯಲ್ಲಿ, ನೀಲಲೋಹಿತನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು-ಕಪ್ಪುಗೊರಳ ಕೆಂಜೆಡೆಯನುಳ್ಳ ಸದಾಶಿವತತ್ತ್ವಮೂರ್ತಿಯೆಂಬ ಗಣವರನ ಮಾಡಿ ಅಭಿಧಾನವನಿತ್ತು, ಕರೆದು-ಎಲೆ ಸದಾಶಿವ ಎಂದು ಆಹ್ವಾನಿಸಿ, ನಿಮ್ಮ ಲೀಲಾ ವಿನೋದದಿಂದಿರಿಸಿಕೊಂಡಿರ್ದಿರಯ್ಯಾ-ನಿಮ್ಮ ಅವಹೇಳನೆಯ ವಿಲಾಸದಿಂದ ಮಡಗಿಕೊಂಡಿದ್ದಿರಯ್ಯಾ.

ನಾಲ್ಕನೆಯ ಭವಾಂತರದಲ್ಲಿ-ಚತುರ್ಥನೆಯ ಶಿವತತ್ತ್ವಸಂಭವಸೃಷ್ಟಿಯಲ್ಲಿ, ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು-ಬ್ರಹ್ಮವಿಷ್ಣುರುದ್ರ ಋಷಿಗಳಲ್ಲಿಗೆಲ್ಲ ಭಿಕ್ಷಾಟನೆ"ದಿ ಅಡಿ"ಯಿಟ್ಟು ಗಮನಿಸುವಂಥ ತಾಂಡವಮೂರ್ತಿಯೆಂಬ ಗಣವರನ ಮಾಡಿ ಅಭಿಧಾನವ ಕಲ್ಪಿಸಿ, ಕರೆದು-ಎಲೆ ತಾಂಡವಮೂರ್ತಿಯೆಂದು ಆಹ್ವಾನಿಸಿ, ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿರ್ದಿರಯ್ಯಾ-ನಿಮ್ಮ ಮನ ಧನ್ಯವಾಗಿರಲೆಂದಿರಿಸಿಕೊಂಡಿದ್ದಿರಯ್ಯಾ.

ಐದನೆಯ ಭವಾಂತರದಲ್ಲಿ-ಐದನೆಯ ಶಿವತತ್ತ್ವಸಂಭವಸೃಷ್ಟಿಯಲ್ಲಿ, ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು-ಯಮಧ್ವಂಸಿಯೆಂಬ ಗಣವರನ ಮಾಡಿ ಅಭಿಧಾನವನಿತ್ತು, ಕರೆದು-ಎಲೆ ಯಮಧ್ವಂಸಿಯೆಂದು ಆಹ್ವಾನಿಸಿ, ಸರ್ವಕಾಲ ಸಂಹಾರವ ಮಾಡಿಸುತಿರ್ದಿರಯ್ಯಾ-ಸಮಸ್ತ ಯುಗಾದಿಕಾಲಂಗಳ ಲಯವ ಮಾಡಿಸುತ್ತಿದ್ದಿರಯ್ಯಾ.

ಆರನೆಯ ಭವಾಂತರದಲ್ಲಿ-ಆರನೆಯ ಶಿವತತ್ತ್ವಸಂಭವಸೃಷ್ಟಿಯಲ್ಲಿ. ವೃಷಭನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು-ವೃಷಭೇಶ್ವರನೆಂಬ ಗಣವರನ ಮಾಡಿ ಅಭಿಧಾನವಿತ್ತು, ಕರೆದು-ಎಲೆ ವೃಷಭೇಶ್ವರಾ ಎಂದು ಆಹ್ವಾನಿಸಿ. ನಿಮಗೇಱಲು ವಾಹನವಾಗಲೆಂದಿರಿಸಿಕೊಂಡಿರ್ದಿರಯ್ಯಾ-ನಿಮಗಾರೋಹಿಸಲು ವರೂಥವಾಗಿರಿಸಿಕೊಂಡಿದ್ದಿರಯ್ಯಾ.

ಏಳನೆಯ ಭವಾಂತರದಲ್ಲಿ-ಸಪ್ತನೆಯ ಶಿವತತ್ತ್ವಸಂಭವಸೃಷ್ಟಿಯಲ್ಲಿ. ಬಸವನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು-ಬಸವದಂಡಾಧೀಶ್ವರನೆಂಬ ಗಣವರನ ಮಾಡಿ ಅಭಿಧಾನವನಿತ್ತು, ಕರೆದು-

ಬಸವದಂಡಾಧೀಶ ಎಂದು ಆಹ್ವಾನಿಸಿ, ನಿಮ್ಮೊಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿ ಕೊಂಡಿರ್ದಿರಯ್ಯಾ–ನಿಮ್ಮ ಹರಿವಾಣದ ಸುತ್ತ ಸೂಸಿ ಬೀಸರವಾಗಿ ಅವಶೇಷಿತವಾದ ಪ್ರಸಾದಕ್ಕೆ ಅರ್ಹನಾಗಿರಲೆಂದು ಮಡಗಿಕೊಂಡಿದ್ದಿರಯ್ಯಾ.

• ಮತ್ತಂ ಸಪ್ತವಿಧ ಲೀಲಾವತಾರದಲ್ಲಿ ಶಿವಭಕ್ತನಾಗಿ ಶಿವತತ್ತ್ವಾನುಭಾವಿಗಳಿಗೆ ಆಯಾಯ ಶಕ್ತಿಸ್ವರೂಪಿನಿಂದಂಗವಾಗಿ ಬಾರದಿರ್ದಡೆ ನಿಮ್ಮ ಮೇಲೆ ಪ್ರತಿಜ್ಞೆ, ನಿಮ್ಮ ಗಣಂಗಳ ಮೇಲೆ ಪ್ರತಿಜ್ಞೆಯು.

ಮೊದಲೊಂದನೆಯ ಅಜಾತ[೫] ಸ್ವಯಂಭೂಚಿದಂಗಸೃಷ್ಟಿಯ ಚಿಜ್ಜನ್ಮಾಂತರದಲ್ಲಿ ಚಿತ್ರಸ್ತ್ರ ಪ್ರಥಮಾಧೀಶ್ವರನೆಂದಡೂ ನಿಃಕಲಬ್ರಹ್ಮವೆಂದಡೂ ಏಕಪರ್ಯಾಯಾರ್ಥವು. ಅಂಥ ನಿಃಕಲಬ್ರಹ್ಮನೆಂಬ ಗಣವರನಾಗಿಸಿ, ನಿಃಕಲಬ್ರಹ್ಮವೆಂಬ ಅಭಿಧಾನವನಂಕಿಸಿ, ನಿಃಕಲಬ್ರಹ್ಮಾ ಎಂದು ಆಹ್ವಾನಿಸಿ ನಿಮ್ಮ ಚಿದ್ಭೃತ್ಯನ ಮಾಡಿ ಶರಣನ ಮಾಡಿ ಮಡಗಿಕೊಂಡಿದ್ದಿರಯ್ಯಾ.

ದ್ವಿತೀಯ ಅಜಾತಸ್ವಯಂಭೂಚಿದಂಗಸೃಷ್ಟಿಯ ಚಿಜ್ಜನ್ಮಾಂತರದಲ್ಲಿ ಚಿಚ್ಛಕ್ತಿವಲ್ಲಭನೆಂದಡೂ ಚಿನ್ನಾದನೆಂದಡೂ ಮಹಾಲಿಂಗವೆಂದಡೂ ಏಕಪರ್ಯಾಯಾರ್ಥವು. ಅಂಥ ಮಹಾಲಿಂಗವೆಂಬ ಗಣವರನಾಗಿಸಿ, ಮಹಾಲಿಂಗವೆಂಬ ಅಭಿಧಾನವನು ಅಂಕಿಸಿ, ಮಹಾಲಿಂಗಾ ಎಂದು ಆಹ್ವಾನಿಸಿ ನಿಮ್ಮ ಚಿತ್ ಕೃಪೆಯುಳ್ಳಾತನ ಮಾಡಿಕೊಂಡಿದ್ದಿರಯ್ಯಾ.

ತೃತೀಯ ಅಜಾತಸ್ವಯಂಭೂಚಿದಂಗಸೃಷ್ಟಿಯ ಚಿಜ್ಜನ್ಮಾಂತರದಲ್ಲಿ ಪರಾಶಕ್ತಿವಲ್ಲಭನೆಂದಡೂ ಸದಾಶಿವನೆಂದಡೂ ಕರಿಗೊರಳ ಕೆಂಜೆಡೆಯನುಳ್ಳ ಗಣಾಧೀಶ್ವರನೆಂದಡೂ ಏಕಪರ್ಯಾಯಾರ್ಥವು. ಅಂಥ ಸದಾಶಿವನೆಂಬ ಗಣವರನಾಗಿಸಿ, ಸದಾಶಿವನೆಂಬ ಅಭಿಧಾನವನಂಕಿಸಿ, ಸದಾಶಿವ ಎಂದು ಆಹ್ವಾನಿಸಿ ನಿಮ್ಮ ಅವಹೇಳನೆಯ ವಿಲಾಸದಿಂದ ಮಡಗಿಕೊಂಡಿದ್ದಿರಯ್ಯಾ.

ಚತುರ್ಥನೆಯ ಅಜಾತಸ್ವಯಂಭೂಚಿದಂಗಸೃಷ್ಟಿಯ ಚಿಜ್ಜನ್ಮಾಂತರದಲ್ಲಿ ಆದಿಶಕ್ತಿಮನೋಜ್ಞನೆಂದಡೂ ಈಶ್ವರಮೂರ್ತಿಯೆಂದಡೂ ಆದಿಶಕ್ತಿವಲ್ಲಭನೆಂದಡೂ ಏಕಪರ್ಯಾಯಾರ್ಥವು. ಅಂಥ ಈಶ್ವರನೆಂಬ ಗಣವರನಾಗಿಸಿ, ಈಶ್ವರನೆಂಬ ಅಭಿಧಾನವನಂಕಿಸಿ, ಈಶ್ವರನೆಂದು ಆಹ್ವಾನಿಸಿ ಆದಿಶಕ್ತಿಯ ಚಿತ್ತುವಿನಲ್ಲಿ ತುಂಬಿದಾತನಾಗಲೆಂದು ಮಡಗಿಕೊಂಡಿದ್ದಿರಯ್ಯಾ.

ಪಂಚನೆಯ ಅಜಾತಸ್ವಯಂಭೂಚಿದಂಗಸೃಷ್ಟಿಯಲ್ಲಿ ಇಚ್ಛಾಶಕ್ತಿವಲ್ಲಭನೆಂದಡೂ ರುದ್ರಮೂರ್ತಿಯೆಂದಡೂ ಏಕಪರ್ಯಾಯಾರ್ಥವು. ಅಂಥ ರುದ್ರನೆಂಬ ಗಣವರನಾಗಿಸಿ, ರುದ್ರನೆಂಬ ಅಭಿಧಾನವನಂಕಿಸಿ, ರುದ್ರಮೂರ್ತಿಯೆಂದು ಆಹ್ವಾನಿಸಿ ಸಮಸ್ತ ಅಜ್ಞಾನಕಾಲವನು ಸಂಹರಣೆಯ ಮಾಡಿಸುತ್ತಿದ್ದಿರಯ್ಯಾ.

ಷಷ್ಠನೆಯ ಅಜಾತಸ್ವಯಂಭೂಚಿದಂಗಸೃಷ್ಟಿಯ ಚಿಜ್ಜನ್ಮಾಂತರದಲ್ಲಿ ಜ್ಞಾನಶಕ್ತಿವಲ್ಲಭನೆಂದಡೂ ಮಾಹೇಶ್ವರಮೂರ್ತಿಯೆಂದಡೂ ಏಕಪರ್ಯಾಯಾರ್ಥವು. ಅಂಥ ಮಾಹೇಶ್ವರನೆಂಬ ಗಣವರನಾಗಿಸಿ, ಮಾಹೇಶ್ವರನೆಂಬ ಅಭಿಧಾನವನಂಕಿಸಿ, ಮಾಹೇಶ್ವರಾ ಎಂದು ಆಹ್ವಾನಿಸಿ ನಿಮಗಾರೋಹಿಸಲು ಸದ್ಧರ್ಮವೆಂಬ ವರೂಥವಾಗಲೆಂದು ಮಡಗಿಕೊಂಡಿದ್ದಿರಯ್ಯಾ.

ಸಪ್ತನೆಯ ಅಜಾತಸ್ವಯಂಭೂಚಿದಂಗಸೃಷ್ಟಿಯ ಚಿಜ್ಜನ್ಮಾಂತರದಲ್ಲಿ ಕ್ರಿಯಾಶಕ್ತಿವಲ್ಲಭನೆಂದಡೂ ಈಶಾನ್ಯಮೂರ್ತಿಯೆಂದಡೂ ಏಕಪರ್ಯಾಯಾರ್ಥವು. ಅಂಥ ಈಶಾನ್ಯಮೂರ್ತಿಯೆಂಬ ಗಣವರನಾಗಿಸಿ, ಈಶಾನ್ಯಮೂರ್ತಿಯೆಂಬ ಅಭಿಧಾನವನಂಕಿಸಿ, ಈಶ್ಯಾನಮೂರ್ತಿಯೆಂದು ಆಹ್ವಾನಿಸಿ ಅಂತರಂಗದ ಪ್ರಾಣಲಿಂಗವೇ ಬಹಿಷ್ಕರಿಸಿ ಗುರುಮುಖದಿಂದಂಗದ ಮೇಲೊಗೆದ ಶುದ್ಧಪ್ರಸಾದಸ್ವರೂಪವಾದ ಇಷ್ಟಲಿಂಗವು. ಆ ಇಷ್ಟಲಿಂಗದ ಚಿತ್ಕಲೆಯೇ ನೇತ್ರವೆಂಬ ಸೂತ್ರವನೊಳಕೊಂಡು ಹೃತ್ಕಮಲದಲ್ಲಿ ಸಿದ್ಧಪ್ರಸಾದಸ್ವರೂಪವಾದ ಪ್ರಾಣಲಿಂಗವು. ಈ ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರೀವಿಡಿದಾಚರಿಸುವುದಕ್ಕೆ ಅರ್ಹನಾಗಲೆಂದು ಮಡಗಿಕೊಂಡಿದ್ದಿರಯ್ಯಾ.

ಇದು ಕಾರಣ-ಇದು ನಿಮಿತ್ತವು, ಕೂಡಲಸಂಗಮದೇವಾ ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ-ತ್ರಿಕೂಟಸ್ಥಲದ ಚಿದಹಂಕಾರಾಧೀಶ್ವರನಾದ ಎಲೆ ಲಿಂಗವೆ, ನೀವಾಗತವಾಗಿಸಿದ ಶಿವತತ್ತ್ವಸಂಭವಸೃಷ್ಟಿಯಲ್ಲಿ ನಾ ಗಮಿಸುತ್ತಿರ್ದೆನೆಂಬುದರ್ಥ.

................................

೪-೪ ಡಿ (ಚ). ೫ + ಚಿದಂಗ(ಚ). ೬-೬ x (ಚ).

III- - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ-ಸಕಲತತ್ತ್ವಾಧೀಶ್ವರನಾದಂಥ ಎಲೆ ಪರಶಿವಲಿಂಗವೆ, ಏಳೇಳು ಭವಾಂತರದಲ್ಲಿ-ಏಳೇಳು ಜನ್ಮಾಂತರದಲ್ಲಿ, ಶಿವಭಕ್ತನಾಗಿ-ಅಂಗದ ಮೇಲೆ ಲಿಂಗಸಂಬಂಧವನುಳ್ಳ ಶಿವಶರಣನಾಗಿ, ಬಾರದಿರ್ದಡೆ-ಆಗಮಿಸದಿದ್ದರೆ, ನಿಮ್ಮಾಣೆ-ನಿಮ್ಮ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ-೬[ಪ್ರಕರ್ಷಂ ಮನಃ ಮಥ್ನಂತೀತಿ ಪ್ರಮಥಾಃ]೬ ಎಂದು ಮನೋವರ್ತನೆಯ ನಷ್ಟವ ಮಾಡಿದ ಪ್ರಮಥಗಣಂಗಳ ಮೇಲಣ ಪ್ರಜ್ಞೆಯು. ನಿಮ್ಮ ಪ್ರಸಾದಕ್ಕಲ್ಲದೆ-ನಿಮ್ಮ ಸಂಬಂಧವಾದ ಗುರುಲಿಂಗಜಂಗಮದ ಶುದ್ಧಸಿದ್ಧಪ್ರಸಿದ್ಧಪ್ರಸಾದಕ್ಕಲ್ಲದೆ, ಬಾಯ್ದೆರೆಯೆನಯ್ಯಾ-[ಮತ್ತೊಂದು] ತತ್ತ್ವಾನ್ನ ತತ್ತ್ವೋದಕಂಗಳಿಗೆ ಜಿಹ್ವೆಯನು ಬಿಡೆನಯ್ಯಾ.

ಪ್ರಥಮ ಭವಾಂತರದಲ್ಲಿ-ಪೂರ್ವಜನ್ಮದಲ್ಲಿ, ಶಿಲಾದನೆಂಬ-ಶಾಲಂಕಾಯ ಪುತ್ರನೆಂಬ, ಗಣೇಶ್ವರನ ಮಾಡಿ-ಗಣಪತಿಯಾಗಿಸಿ, ಹೆಸರಿಟ್ಟು ಕರೆದು-ಅಭಿಧಾನಾಂಕಿತವನು ಮಾಡಿ, ನಿಮ್ಮ ಭೃತ್ಯನ ಮಾಡಿ-ನಿಮ್ಮ ಸೇವಕನಾಗಿಸಿ, ಎನ್ನಂ-ನನ್ನನು, ಇರಿಸಿಕೊಂಡಿರ್ದಿರಯ್ಯಾ-ನಿಮ್ಮ ಮಹಾಲಿಂಗಕ್ಕೆ ಅಂಗವಾದ ಸಮರಸಭಕ್ತಿಯನುಳ್ಳ ಐಕ್ಯನ ಮಾಡಿ ಮಡಗಿಕೊಂಡಿದ್ದಿರಯ್ಯಾ.

ಎರಡನೆಯ ಭವಾಂತರದಲ್ಲಿ-ಎರಡನೆಯ ಜನ್ಮದಲ್ಲಿ, ಸ್ಕಂದನೆಂಬ ಗಣೇಶ್ವರನ ಮಾಡಿ-ಷಣ್ಮುಖನೆಂಬ ಗಣಪತಿಯಾಗಿಸಿ, ಹೆಸರಿಟ್ಟು ಕರೆದು-ಅಭಿಧಾನಾಂಕಿತವನು ಮಾಡಿ, ನಿಮ್ಮ ಕಾರುಣ್ಯವ ಮಾಡಿ-ನಿಮ್ಮ ಕರುಣದ ಕಂದನಾಗಿಸಿ, ಇರಿಸಿಕೊಂಡಿರ್ದಿರಯ್ಯಾ-ನಿಮ್ಮ ಪ್ರಸಾದಲಿಂಗಕ್ಕಂಗವಾದ ಆನಂದಭಕ್ತಿಯನುಳ್ಳ ಶರಣನ ಮಾಡಿ ಮಡಗಿಕೊಂಡಿದ್ದಿರಯ್ಯಾ.

ಮೂಱನೆಯ ಭವಾಂತರದಲ್ಲಿ–ಮೂರನೆಯ ಜನ್ಮದಲ್ಲಿ, ನೀಲಲೋಹಿತನೆಂಬ–ಕಂಠದಲ್ಲಿ ಕಪ್ಪು ಜಡೆಯಲ್ಲಿ ಕೆಂಪುಳ್ಳಾತನೆಂಬ, ಗಣೇಶ್ವರನ ಮಾಡಿ–ಗಣಶ್ರೇಷ್ಠನಾಗಿಸಿ, ಹೆಸರಿಟ್ಟು ಕರೆದು–ಅಭಿಧಾನಾಂಕಿತವನು ಮಾಡಿ, ನಿಮ್ಮ ಲೀಲಾವಿನೋದದಿಂದ–ನಿಮ್ಮ ಜಗದ್ವೈಭವದ ವಿಲಾಸದಿಂದ, ಇರಿಸಿಕೊಂಡಿರ್ದಿರಯ್ಯಾ–ನಿಮ್ಮ ಜಂಗಮಲಿಂಗಕ್ಕಂಗವಾದ ಅನುಭಾವಭಕ್ತಿಯನುಳ್ಳ ಪ್ರಾಣಲಿಂಗಿಯ ಮಾಡಿ ಎನ್ನ ಮಡಗಿಕೊಂಡಿದ್ದಿರಯ್ಯಾ.

ನಾಲ್ಕನೆಯ ಭವಾಂತರದಲ್ಲಿ–ನಾಲ್ಕನೆಯ ಜನ್ಮದಲ್ಲಿ, ಮನೋಹರನೆಂಬ–ಮಂಜುಲಸ್ವರೂಪನೆಂಬ, ಗಣೇಶ್ವರನ ಮಾಡಿ–ಗಣಪತಿಯಾಗಿಸಿ, ಹೆಸರಿಟ್ಟು ಕರೆದು–ಅಭಿಧಾನಾಂಕಿತವನು ಮಾಡಿ, ನಿಮ್ಮ–ನಿಮ್ಮ ಸಂಬಂಧವಾದ ಗುರುಲಿಂಗಜಂಗಮದಿಂದೆ, ಮನಃ–ಮನಸ್ಸನು, ಪ್ರೇರಕನಾಗಲೆಂದು–ಪ್ರೇರಿಸಿಕೊಳ್ಳಲು ತಕ್ಕಾತನಾಗಲಿಯೆಂದು, ಇರಿಸಿಕೊಂಡಿರ್ದಿರಯ್ಯಾ–ನಿಮ್ಮ ಶಿವಲಿಂಗಕ್ಕಂಗವಾದ ಸಾವಧಾನಭಕ್ತಿಯನುಳ್ಳ ಪ್ರಸಾದಿಯ ಮಾಡಿ ಮಡಗಿಕೊಂಡಿದ್ದಿರಯ್ಯಾ.

ಐದನೆಯ ಭವಾಂತರದಲ್ಲಿ–ಐದನೆಯ ಜನ್ಮದಲ್ಲಿ, ಕಾಲಲೋಚನನೆಂಬ–ಪಾದದಲ್ಲಿ ನೇತ್ರವನುಳ್ಳಾತನು ಎಂಬ, ಗಣೇಶ್ವರನ ಮಾಡಿ–ಗಣಪತಿಯಾಗಿಸಿ, ಹೆಸರಿಟ್ಟು ಕರೆದು–ಅಭಿಧಾನಾಂಕಿತವನು ಮಾಡಿ, ಸರ್ವಕಾಲ–ಸಮಸ್ತ ಭೂತಭವಿಷದ್ವರ್ತಮಾನಕಾಲಕಲ್ಪಿತಗಳನು, ಸಂಹಾರವ ಮಾಡಿ ಸುತ್ತ–ನಷ್ಟವ ಮಾಡಿಸುತ್ತ, ಇರ್ದಿರಯ್ಯಾ–ನಿಮ್ಮ ಗುರುಲಿಂಗಕ್ಕಂಗವಾದ ನೈಷ್ಠಿಕಾಭಕ್ತಿಯನುಳ್ಳ ಮಾಹೇಶ್ವರನ ಮಾಡಿ ಮಡಗಿಕೊಂಡಿದ್ದಿರಯ್ಯಾ.

ಆಱನೆಯ ಭವಾಂತರದಲ್ಲಿ–ಆಱನೆಯ ಜನ್ಮದಲ್ಲಿ, ವೃಷಭನೆಂಬ–ವೃಷಭೇಶ್ವರನೆಂಬ, ಗಣೇಶ್ವರನ ಮಾಡಿ–ಗಣಪತಿಯಾಗಿಸಿ, ಹೆಸರಿಟ್ಟು ಕರೆದು–ಅಭಿಧಾನಾಂಕಿತವನು ಮಾಡಿ, ನಿಮಗೇರಲು–ನಿಮಗೇರಿಕೊಂಬುವುದಕ್ಕೆ, ವಾಹನವಾಗಲೆಂದು–ವರೂಥವಾಗಲೆಂದು, ಇರಿಸಿಕೊಂಡಿರ್ದಿರಯ್ಯಾ–ನಿಮ್ಮಾಚಾರಲಿಂಗಕ್ಕಂಗವಾದ ಶ್ರದ್ಧಾಭಕ್ತಿಯನುಳ್ಳ ಭಕ್ತನ ಮಾಡಿ ಮಡಗಿಕೊಂಡಿದ್ದಿರಯ್ಯಾ.

ಏಳನೆಯ ಭವಾಂತರದಲ್ಲಿ–ಏಳನೆಯ ಜನ್ಮದಲ್ಲಿ, ಬಸವನೆಂಬ–ಬಸವೇಶ್ವರನೆಂಬ, ಗಣೇಶ್ವರನ ಮಾಡಿ–ಗಣಪತಿಯಾಗಿಸಿ, ಹೆಸರಿಟ್ಟು ಕರೆದು–ಅಭಿಧಾನಾಂಕಿತವನು ಮಾಡಿ, ನಿಮ್ಮ–ನಿಮ್ಮ ಸಂಬಂಧವಾದ ಗುರುಲಿಂಗಜಂಗಮದ, ಒಕ್ಕುದ–ಎಡೆ ಬಳಸಿ ಸೂಸಿದ, ಮಿಕ್ಕುದಕ್ಕೆ–ಉಂಡುಳಿಸಿದಂಥ ಶೇಷಕ್ಕೆ, ಯೋಗ್ಯನಾಗಲೆಂದು–ಅರ್ಹನಾಗಲಿಯೆಂದು, ಇರಿಸಿಕೊಂಡಿರ್ದಿರಯ್ಯಾ–ಎನ್ನನು ಸದ್ಭಕ್ತನ ಮಾಡಿ ಮಡಗಿಕೊಂಡಿದ್ದಿರಯ್ಯಾ.

ಇದು ಕಾರಣ–ಇದು ನಿಮಿತ್ತವಾಗಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವು ಬರಿಸಿದ–ನೀವು ಬರಮಾಡಿದ, ಭವಾಂತರದಲ್ಲಿ–ಏಳೇಳು ಭವಾಂತರದಲ್ಲಿ, ನಾನು ಬರುತಿರ್ದೆನಯ್ಯಾ–ನಾನು ನಿಮ್ಮ ಆಣತಿಯನು ಪರಿಗ್ರಹಿಸಿ, ಹುಟ್ಟಿಹುಟ್ಟಿ ಬರುತ್ತಿದ್ದೆನಯ್ಯಾ.

..........................

೭-೭ ಪ್ರಕರ್ಷಣ ಮನಂ ಮಥನಂತೀತಿ ಪ್ರಮಥಾಃ (ಡ). ೮ + ಕ್ಷೀರಕ್ಷಿಪ್ತ (ಟ,ಡ).

V- - - - - - - - - - - - - - - - - - - - - - - - - - - - - - - - - - - - - - - - - - - - - -

ಗ್ರಂಥ ॥ ದೂರ್ವಾಪೀಲಿಕಾಪಕ್ಷಿಜಲಸ್ಥ ಜಲಜಂತವಃ । ಚತುಷ್ಪಾನ್ಮಾನವಾ ದೇವಾ ಸಪ್ತಜನ್ಮ ಪ್ರಕೀರ್ತಿತಾ ॥ ಎಂಬ ಏಳು ಜನ್ಮದಲ್ಲಿ.

---

೫

**ಅಯ್ಯಾ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ ನೆನೆನೆನೆದು ಸುಖಿ'ಯಾಗಿ ಆನು ಬದುಕಿ'ದೆನಯ್ಯಾ ಅದೇನು ಕಾರಣ ತಂದೆಯೆಂದಜಿದೆನಯ್ಯಾ. ಎನ್ನ ಕಾರಣ ತಂದೆಯೆಂದಜಿದೆನಯ್ಯಾ. ಅಜಿದಜಿದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು ಕಣ್ದೆರದೆನಯ್ಯಾ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ-ಲಿಂಗವನು ತನ್ನತ್ತಭಿಮುಖವ ಮಾಡಿಕೊಂಡು ಆ ಲಿಂಗದೊಡನೆ ಬಿನ್ನೈಸುವಂಥ ಬಿನ್ನಪವು ಎಂಬಲ್ಲಿ ಪರಮೇಶ್ವರನು ಶ್ರೀಕೈಲಾಸದಲ್ಲಿ ನವರತ್ನಖಚಿತವಾದ ದಿವ್ಯಸಿಂಹಪೀಠದ ಮೇಲೆ ಮೂರ್ತವ ಮಾಡಿಕೊಂಡು ನವಕೋಟಿ ಬ್ರಹ್ಮರು ದಶಕೋಟಿ ನಾರಾಯಣರು ಏಕಾದಶಕೋಟಿ ರುದ್ರರು ಮೂವತ್ತುಮೂರುಕೋಟಿ ದೇವತೆಗಳು ಅರುವತ್ತಾರುಕೋಟಿ ರಾಕ್ಷಸರು ಎಂಬತ್ತೆಂಟುಕೋಟಿ ಯಮಿಜನಂಗಳು ಅಷ್ಟಕೋಟಿ ನಾಗರ್ಕಳು ಅನಂತಕೋಟಿ ಗರುಡಗಂಧರ್ವರು ಸಿದ್ಧವಿದ್ಯಾಧರರು ಕಿನ್ನರರು ಕಿಂಪುರುಷರುಗಳು ಗಂಗೆಮಳಲಿಗೆ ಸಮಾನವಾದ ರುದ್ರಗಣಪ್ರಮಥಗಣಂಗಳಿಂದ ಓಲೈಸಿಕೊಂಬುತ್ತಿದ್ದಲ್ಲಿ, ಆ ಓಲಗವೆಲ್ಲ ಹರಿದುಹೋದ ಮೇಲೆ ನಾರದ ಋಷೀಶ್ವರನು ವೀಣೆಯಂ ಬಾರಿಸುತ್ತ ಶಿವನ ಸನ್ನಿಧಿಯಲ್ಲಿ ನಿಂತುಕೊಂಡಿದ್ದಲ್ಲಿ, ಆ ಶಿವನು ಎಲ್ಲೆಲ್ಲಿ ಸಂಚಾರವ ಮಾಡಿಕೊಂಡು ಬಂದಿ ನಾರದ? ಎಂದು ಕೇಳಿದಲ್ಲಿ, ಸ್ವಾಮಿ! ಎಲ್ಲಾ ಲೋಕವ ಸಂಚಾರವ ಮಾಡಿಕೊಂಡು ಬಂದೆ. ಎಲ್ಲಾ ಲೋಕದಲ್ಲಿ ನಿಮ್ಮ ಮಹಿಮೆ ಪೂರಿತವಾಗ್ಯೆತೆ. ಮರ್ತ್ಯಲೋಕದಲ್ಲಿ ಜೈನಚಾರ್ವಾಕಬೌದ್ಧಮಾಯಾವಾದಿಗಳು ಹೆಚ್ಚಿ ಶಿವಾಚಾರವೆಲ್ಲ ಮಸಣಿಸಿ ಅನಾಚಾರಕ್ಕೊಳಗಾಗ್ಯೆತೆ. ಆ ಶಿವಾಚಾರವನುದ್ಧಾರವ ಮಾಡಬೇಕಾದರೆ ನಿಮಗಲ್ಲದೆ ಮತ್ತೊಬ್ಬರೊಂದಿಗೆ ಶಕ್ಯವಿಲ್ಲವೆಂದು ಹೇಳಿದಲ್ಲಿ ಆಗ ಬಲಭಾಗದೊಳಗಿರ್ದ ಅನಾದಿವೃಷಭೇಶ್ವರನ ಮುಖವಂ ನೋಡಿ ಆಜ್ಞಾಪಿಸಿ ಕರೆದು, ನೀವು ಮರ್ತ್ಯಲೋಕಕ್ಕೆ ಹೋಗಿ ಆ ಶಿವಾಚಾರವನ್ನು ಉದ್ಧಾರಮಾಡಿ ಬನ್ನಿಯೆಂದು ಅಪ್ಪಣೆಯನ್ನು ಕೊಟ್ಟಲ್ಲಿ, ಆ ವೃಷಭೇಶ್ವರನು ಸ್ವಾಮಿ! ಮರ್ತ್ಯಲೋಕವೆಂಬುವಂಥದು ಕರ್ತಾರನ ಕಮ್ಮಟದಂತೆ; ನಾನೆಂತೈದುವೆ ಎನ್ನ ಕೊಡಶಕ್ಯವೆಂದು ಗದಗದನೆ ನಡುಗಿದರು. ಅಲ್ಲಿ ನೀವೇಕೆ ಯೋಚನೆಯ ಮಾಡುತಿದ್ದೀರಿ. ನಿಮ್ಮ ತನುವಿನ ನೆಳಲಿನೋಪಾದಿಯಲ್ಲಿ ನಾವು ಇರುತ್ತೈದೀವಿ. ಏಳನೂರೆಪ್ಪತ್ತಮರಗಣಂಗಳನೆ ನಿಮ್ಮ ಎಡೆಯ ಒಕ್ಕಲವ ಮಾಡಿ ಕಳುಹಿಕೊಡುತ್ತೈದೀವಿ, ಕೈಲಾಸದ ಮಹಾಲಿಂಗಮೂರ್ತಿಯನೆ ಕಲ್ಯಾಣಪಟ್ಟಣಕ್ಕೆ ಚೆನ್ನಬಸವೇಶ್ವರಸ್ವಾಮಿಗಳ ಮಾಡಿ ಕಳುಹಿಕೊಡುತ್ತೈದೀವಿ ಹೋಗಿರಿಯೆಂದು ಅಪ್ಪಣೆಯಂ ಕೊಟ್ಟಲ್ಲಿ, ಆಗ ಮರ್ತ್ಯಲೋಕಕ್ಕೆ ಬಂದು, ಮಂಡಿಗೆಯ ಮಾದಲಾಂಬಿಕೆ ಮಾದರಸರಿಗೆ ಪ್ರಸನ್ನವಾಗಿ ಶಿಶುವಾಗಿ ವಿನೋದಿಸಿ, ಅಲ್ಲಿಂದ ಕಪ್ಪಡಿ ಸಂಗಮೇಶ್ವರನಲ್ಲಿಗೆ ಹೋಗಿ,

ಅಲ್ಲಿ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನು ಹಡೆದುಕೊಂಡು, ಅಲ್ಲಿಂದ ಕಲ್ಯಾಣಪಟ್ಟಣಕ್ಕೆ ಬಂದು ಕಲ್ಲಲಿಪಿಯನೋದಿ ನಿಕ್ಷೇಪದ್ರವ್ಯವನು ತೆಗಸಿ, ಬಿಜ್ಜಳನ ಪ್ರಧಾನಿಪಟ್ಟಕ್ಕೆ ಅರ್ಹನಾಗಿ, ಯೋಜನವರೆಯ ಅರಮನೆಯ ಕಟ್ಟಿಸಿ, ಬಲದೇವ ಮಂತ್ರಿಯ ಮಗಳಾದ ಗಂಗಾಬಿಕೆಯನ್ನು ವಿವಾಹವಾಗಿ ಒಂದು ದಿವಸಕ್ಕೆ ಎಂಬತ್ತೇಳು ಕೊಂಡಿಯರನು ಜಯಿಸುತ್ತ, ಎಂಬತ್ತೆಂಟು ಪವಾಡಂಗಳ ಮೆರೆವುತ್ತ ಒಂದೊಂದು ಪವಾಡಕ್ಕೆ ಹನ್ನೆರಡುಸಾವಿರ ವರಹ ಪಾದಗಾಣಿಕೆಯನು ತೆಗದುಕೊಂಬುತ್ತ ಅದರಿಂದ ಬಂದಂಥ ದ್ರವ್ಯವನ್ನು ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳಿಗೆ ಜಂಗಮಾರ್ಚನೆಯನ್ನು ಮಾಡುತ್ತ ಒಂದಾನೊಂದು ದಿವಸದಲ್ಲಿ ಲಿಂಗಪೂಜೆಗೆ ಕುಳಿತುಕೊಂಡು ತಮ್ಮ ಲಿಂಗದೊಡನೆ ಸೂಚಿಸುವಂಥ ಸೂಚನೆಯು ಎಂಬುದೀಗ ಅಯ್ಯಾ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ–ಕೈಲಾಸದ ಮಹಾಲಿಂಗಮೂರ್ತಿಯನ್ನೇ ಕಲ್ಯಾಣಪಟ್ಟಣಕ್ಕೆ ಚೆನ್ನಬಸವೇಶ್ವರಸ್ವಾಮಿಗಳ ಮಾಡಿ ಕಳುಹಿಕೊಟ್ಟಿಪ್ಪಿರಿಯಾಗಿ, ನೆನೆನೆನೆದು–ಚೆನ್ನಬಸವೇಶ್ವರಸ್ವಾಮಿಗಳ ಪದಕಮಲಂಗಳನ್ನು ಸ್ಮರಣೆಯ ಮಾಡಿ ಸ್ಮರಣೆಯ ಮಾಡಿ, ಸುಖಿಯಾಗಿ–ಪರಿಣಾಮಿಯಾಗಿ, ಆನು–ಸಂಗನಬಸವೇಶ್ವರನು, ಬದುಕಿದೆನಯ್ಯಾ–ಕೃತಾರ್ಥನಾದೆನಯ್ಯಾ.

ಅದೇನು ಕಾರಣ–ಅದೇನು ನಿಮಿತ್ತಾರ್ಥ, ತಂದೆಯೆಂದಜಿದೆನಯ್ಯಾ–ಕೈಲಾಸದ ಮಹಾಲಿಂಗಮೂರ್ತಿಯನೇ ಕಲ್ಯಾಣಪಟ್ಟಣಕ್ಕೆ ಚೆನ್ನಬಸವೇಶ್ವರಸ್ವಾಮಿಗಳ ಮಾಡಿ ಕಳುಹಿಕೊಟ್ಟಪ್ಪಿರಿಯೆಂದು, ಅಜಿದೆನಯ್ಯಾ–ತಿಳಿದೆನಯ್ಯಾ, ಎನ್ನ ಕಾರಣ–ಸಂಗನಬಸವೇಶ್ವರನು ಎನ್ನ ನಿಮಿತ್ತಾರ್ಥ, ತಂದೆಯೆಂದಜಿದೆನಯ್ಯಾ–ಕೈಲಾಸಮಹಾಲಿಂಗಮೂರ್ತಿಯನ್ನೇ ಕಲ್ಯಾಣಪಟ್ಟಣಕ್ಕೆ ಚೆನ್ನಬಸವೇಶ್ವರಸ್ವಾಮಿಗಳ ಮಾಡಿ ಕಳುಹಿಕೊಟ್ಟಪ್ಪಿರಿಯೆಂದು, ಅಜಿದೆನಯ್ಯಾ–ತಿಳಿದೆನಯ್ಯಾ.

ಅರಿದು–ಕೈಲಾಸದ ಮಹಾಲಿಂಗಮೂರ್ತಿಯನ್ನೇ ಕಲ್ಯಾಣಪಟ್ಟಣದ ಚೆನ್ನಬಸವೇಶ್ವರಸ್ವಾಮಿಗಳೆಂದು ತಿಳಿದು, ಅರೆದು–ಕಲ್ಯಾಣಪಟ್ಟಣದ ಚೆನ್ನಬಸವೇಶ್ವರಸ್ವಾಮಿಗಳೇ ಕೈಲಾಸದ ಮಹಾಲಿಂಗಮೂರ್ತಿಯೆಂದು ತಿಳಿದು, ನಿಮ್ಮ ಶರಣನು–ಚೆನ್ನಬಸವೇಶ್ವರನು, ಆಚರಿಸುವ–ಷಟ್‌ಸ್ಥಲಜ್ಞಾನ ಕ್ರೀವಿಡಿದು ಪ್ರವರ್ತಿಸುವ, ಆಚರಣೆಯ–ನಡಾವಳಿಯನ್ನು, ಕಂಡು–ನೋಡಿ, ಕಣ್ದೆಜಿದೆನಯ್ಯಾ–ಎನಗೂ ಷಟ್‌ಸ್ಥಲಜ್ಞಾನಕ್ರಿಯಾವಿಡಿದು ಪ್ರವರ್ತಿಸುವ, ಆಚರಣೆಯ–ನಡಾವಳಿಯನ್ನು, ಕಂಡು–ನೋಡಿ, ಕಣ್ದೇಜೀದೆನಯ್ಯಾ–ಎನಗೂ ಷಟ್‌ಸ್ಥಲಜ್ಞಾನಕ್ರಿಯಾವಿಡಿದು ಆಚರಿಸಬೇಕೆಂದು ಜ್ಞಾನ ಕಣ್ದೇಜವುಂಟಾಯಿತ್ತೆಲೆ ಸ್ವಾಮಿ ಎಂದು ತನ್ನ ಪೂರ್ವಾಪರವನ್ನು ಪರಾಮರಿಸಿಕೊಳುತ್ತಿಹನು ಸಂಗನಬಸವೇಶ್ವರನು.

• ಅಯ್ಯಾ–ಎಲೆ ಲಿಂಗವೆ ಎಂಬ ದೃಷ್ಟೋಪಮಾನದ ಹಾಂಗೆ, ಅಯ್ಯಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ : ನಿಮ್ಮ ಅಂದರೆ ನಿಃಕಲಬ್ರಹ್ಮವು. ಶರಣನೆಂದರೆ ಚಿತ್ತು, ಮರ್ತ್ಯಕ್ಕೆ ತಂದೆಯಾಗಿ–ನಿಃಕಲಬ್ರಹ್ಮಕ್ಕಂಗವಾದ ಚಿತ್ತನ್ನೇ ಆತ್ಮನ ಅಂತರಂಗದಲ್ಲಿ ಸಮ್ಯಕ್‌ಜ್ಞಾನವಾಗಿ ಅಳವಡಿಸಿಕೊಟ್ಟಿಪ್ಪಿರಿಯಾಗಿ, ನೆನೆನೆನೆದು–ಜ್ಞಾನೋದಯದಿಂದ ಸಕಲಸಂಸಾರಪ್ರಪಂಚವೆಲ್ಲ ಅನಿತ್ಯ, ನಾನೇ ನಿತ್ಯಸ್ವರೂಪನೆಂಬಂಥ ಜ್ಞಾನವನ್ನು ತಿಳಿತಿಳಿದು, ಸುಖಿಯಾಗಿ–ಪರಣಾಮಿಯಾಗಿ, ಆನು–ಜ್ಞಾನಕಲಾತ್ಮನು, ಬದುಕಿದೆನಯ್ಯಾ–'ಬದುಕು ಬಾಳು ಜೀವನೇ' ಎಂದು ಜೀವಿಸಿದೆನೆಯ್ಯಾ.

ಅದೇನು ಕಾರಣ–ಅದೇನು ನಿಮಿತ್ತಾರ್ಥ, ತಂದೆಯೆಂದಱಿದೆನಯ್ಯಾ–ಆ ನಿಃಕಲಬ್ರಹ್ಮಕ್ಕಂಗವಾದ ಚಿತ್ತನ್ನೇ ಆತ್ಮನ ಅಂತರಂಗದಲ್ಲಿ ಸಮ್ಯಕ್ ಜ್ಞಾನವಾಗಿ ಅಳವಡಿಸಿಕೊಟ್ಟಿಪ್ಪಿರಿಯೆಂದು ತಿಳಿದೆನಯ್ಯಾ. ಎನ್ನ ಕಾರಣ–ಜ್ಞಾನಕಲಾತ್ಮನು ಎನ್ನ ನಿಮಿತ್ತಾರ್ಥ, ತಂದೆಯೆಂದಱಿದೆನಯ್ಯಾ–ಆ ನಿಃಕಲಬ್ರಹ್ಮಕ್ಕಂಗವಾದ ಚಿತ್ತನ್ನೇ ಆತ್ಮನ ಅಂತರಂಗದಲ್ಲಿ ಸಮ್ಯಕ್‌ಜ್ಞಾನವಾಗಿ ಅಳವಡಿಸಿಕೊಟ್ಟಿಪ್ಪಿರಿಯೆಂದು, ಅಱಿದೆನಯ್ಯಾ–ತಿಳಿದೆನಯ್ಯಾ.

ಅಱಿದು–ಆ ನಿಃಕಲಬ್ರಹ್ಮಕ್ಕಂಗವಾದ ಚಿತ್ತನ್ನೇ ಆತ್ಮನ ಅಂತರಂಗದ ಸಮ್ಯಕ್‌ಜ್ಞಾನವೆಂದು ತಿಳಿದು, ಅಱಿದು–ಆತ್ಮನಂತರಂಗದ ಸುಜ್ಞಾನವೇ ನಿಃಕಲಬ್ರಹ್ಮಕ್ಕಂಗವಾದ ಚಿತ್ತವೆಂದು ತಿಳಿದು, ನಿಮ್ಮ ಶರಣನು–ನಿಮ್ಮ ಜ್ಞಾನಕಲಾತ್ಮನು, ಆಚರಿಸುವ–ಜ್ಞಾನೋದಯದಿಂದ ಸಕಲಸಂಹಾರ ಪ್ರಪಂಚೆಲ್ಲ ಅನಿತ್ಯ, ನಾನೇ ನಿತ್ಯಸ್ವರೂಪನೆಂದು ಪ್ರವರ್ತಿಸುವ, ಆಚರಣೆಯ–ನಡಾವಳಿಯನ್ನು, ಕಂಡು–ನೋಡಿ, ಕಣ್ದೆಱಿದೆನಯ್ಯಾ–ಜ್ಞಾನೋದಯದಿಂದ ಸಕಲಪ್ರಪಂಚೆಲ್ಲ ಅನಿತ್ಯ, ನಾನೇ ನಿತ್ಯಸ್ವರೂಪನೆಂಬಂಥ ಜ್ಞಾನ ಕಣ್ದೆರವುಂಟಾಯಿತ್ತೆಲೆ ಸ್ವಾಮಿ; ಕೂಡಲಸಂಗಮದೇವಾ–ಎಲೆ ಪರಶಿವಲಿಂಗಾ ಎಂಬ ದೃಷ್ಟೋಪಮಾನದ ಹಾಂಗೆ.

● ಅಯ್ಯಾ–ಎಲೆ ಲಿಂಗವೆ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ : ನಿಮ್ಮ ಅಂದರೆ ಗುರುಮೂರ್ತಿಗಳು, ಶರಣ ಎಂದರೆ ಆ ಗುರುವಿನ ದೀಕ್ಷಾತ್ರಯಂಗಳಿಂದುದಯವಾದಂಥದೇ ಇಷ್ಟಲಿಂಗವು, ಮರ್ತ್ಯಕ್ಕೆ ತಂದೆಯಾಗಿ–ಆ ಇಷ್ಟಲಿಂಗ ಚಿತ್ಕಲೆಯನ್ನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಅಳವಡಿಸಿಕೊಟ್ಟಿಪ್ಪಿರಿಯಾಗಿ, ನೆನೆನೆನೆದು–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗದ ಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರಿಯಾವಿಡಿದಾಚರಿಸಿ ಆಚರಿಸಿ, ಸುಖಿಯಾಗಿ–ಬ್ರಹ್ಮಾನಂದದ ಪರಮಪರಿಣಾಮಿಯಾಗಿ, ಆನು–ಶರಣನು, ಬದುಕಿದೆನಯ್ಯಾ–ಜನನಮರಣಂಗಳೆಂಬ ಅನಿತ್ಯತ್ವವಿಲ್ಲದೆ ಶಾಶ್ವತ ಸ್ವರೂಪನಾದೆನಯ್ಯಾ.

ಅದೇನು ಕಾರಣ–ಅದೇನು ನಿಮಿತ್ತಾರ್ಥ, ತಂದೆಯೆಂದಱಿದೆನಯ್ಯಾ–ಇಷ್ಟಲಿಂಗದ ಚಿತ್ಕಲೆಯನ್ನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಅಳವಡಿಸಿ ಕೊಟ್ಟಿಪ್ಪಿರಿಯೆಂದು ತಿಳಿದೆನಯ್ಯಾ. ಎನ್ನ ಕಾರಣ–ಶರಣನು ಎನ್ನ ನಿಮಿತ್ತಾರ್ಥ, ತಂದೆಯೆಂದರಿಲೆದೆನೆಯ್ಯಾ–ಇಷ್ಟಲಿಂಗದ ಚಿತ್ಕಲೆಯನ್ನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಅಳವಡಿಸಿಕೊಟ್ಟಿಪ್ಪಿರಿಯೆಂದು, ಅಱಿದೆನಯ್ಯಾ–ತಿಳಿದೆನಯ್ಯಾ.

ಅಱಿದು–ಬಹಿರಂಗದ ಇಷ್ಟಲಿಂಗದ ಚಿತ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವೆಂದು ತಿಳಿದು, ಅಱಿದು–ಅಂತರಂಗದ ಪ್ರಾಣಲಿಂಗವೇ ಬಹಿರಂಗದ ಇಷ್ಟಲಿಂಗವೆಂದರಿದು ತಿಳಿದು, ನಿಮ್ಮ ಶರಣನು–ನಿಮ್ಮ ಪರಬ್ರಹ್ಮದ ಚಿತ್ಪ್ರಭಾಂಗಸ್ವರೂಪನಾದ ಶಿವಶರಣನು, ಆಚರಿಸುವ–ಅಂಗ ಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗವ ಸಂಬಂಧಮಾಡಿಕೊಂಡು ಅವಿರಳಜ್ಞಾನಕ್ರಿಯಾವಿಡಿದು ಪ್ರವರ್ತಿಸುವ, ಆಚರಣೆಯ–ನಡಾವಳಿಯನ್ನು, ಕಂಡು–ನೋಡಿ, ಕಣ್ದೆಱಿದೆನು–ಎನಗೂ ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗವ ಸಂಬಂಧಮಾಡಿಕೊಂಡು ಅವಿರಳಜ್ಞಾನಕ್ರಿಯಾವಿಡಿದು ಆಚರಿಸಬೇಕೆಂಬ ಜ್ಞಾನ ಕಣ್ದೆರವೆ ಉಂಟಾಯಿತ್ತೆಲೆ ಸ್ವಾಮಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗದ.

I - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ-ಎಲೆ ಲಿಂಗವೆ ನಿಮ್ಮ ಚಿತ್ಕಳಾಂಗಸ್ವರೂಪವಾದ ಶಿವಶರಣನ ಭೂಲೋಕಕ್ಕೆ ಆಗತವ ಮಾಡಿಸಿದಿರಿಯಾಗಿ, ನೆನೆನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ-ಅವರ ಕ್ರಿಯಾಜ್ಞಾನಾಚರಣೆಯನು ಸ್ಮರಿಸಿಸ್ಮರಿಸಿ, ಅವರ ಪಾದೋದಕ ಪ್ರಸಾದವನು ಕೊಂಡು ಪರಿಣಾಮಿಯಾಗಿ ನಾನು ಕೃತಾರ್ಥನಾದೆನಯ್ಯಾ.

ಅದೇನು ಕಾರಣ ತಂದೆಯೆಂದಱಿದೆನಯ್ಯಾ-ಅದೇನುದ್ದೇಶವಾಗಿ ಅವತರಿಸಿದಿರಿಯೆಂದು ತಿಳಿ[ದೆ]ನಯ್ಯಾ ಎನ್ನ ಕಾರಣ ತಂದೆಯೆಂದಱಿದೆನಯ್ಯಾ-ನನ್ನುದ್ದೇಶವಾಗಿ ಅವತರಿಸಿದಿಯೆಂದು ತಿಳಿದೆನಯ್ಯಾ.

ಅಱಿದಱಿದು ನಿಮ್ಮ ಶರಣನಾಚರಿಸುವ ಆಚರಣೆಯ ಕಂಡು ಕಣ್ದೆಱೆದೆನಯ್ಯಾ-ಜ್ಞಾನಕ್ರೀಗಳನು ತಿಳಿದುತಿಳಿದು ನಿಮ್ಮ ಶಿವಶರಣನು ಕ್ರಿಯಾಜ್ಞಾನವಿಡಿದು ವರ್ತಿಸುವ ವರ್ತನೆಯ ನೋಡಿ ಕ್ರಿಯಾಜ್ಞಾನದೃಷ್ಟಿಯು ಪ್ರಭಾವಿಸಿತ್ತಯ್ಯಾ.

● ಮತ್ತಂ, ಎಲೆ ಲಿಂಗವೆ ನಿಮ್ಮಂಶೀಭೂತವಾದ ಜ್ಞಾನಕಲಾತ್ಮನ ಭೂಲೋಕಕ್ಕೆ ಬರಿಸಿದಿರಿಯಾಗಿ ಕ್ರಿಯಾಜ್ಞಾನಾನುಭಾವವನು ಸ್ಮರಿಸಿಸ್ಮರಿಸಿ ಪರಿಣಾಮಿಯಾಗಿ ಬಸವೇಶ್ವರನೆಂಬ ಜ್ಞಾನಕಲಾತ್ಮನು ಬಾಳಿದೆನಯ್ಯಾ. ಅದೇನು ನಿಮಿತ್ತಾರ್ಥವಾಗಿ ಬರಿಸಿದಿರಿಯೆಂದು ತಿಳಿದೆನಯ್ಯಾ. ನನ್ನಂಶೀಭೂತವಾದಾತ್ಮನು ನಿಜವ ಮರೆದು ಭವಕ್ಕೆ ಬಿದ್ದುಹೋದನಲಾ ಎಂದು ಬರಿಸಿದಿರಿಯೆಂದು ತಿಳಿದೆನಯ್ಯಾ. ಕ್ರಿಯಾಜ್ಞಾನಾಚರಣೆಯ ತಿಳಿದುತಿಳಿದು ನಿಮ್ಮಂಶೀಭೂತವಾದ ಜ್ಞಾನಕಲಾತ್ಮನು ನಡೆವ ನಡಾವಳಿಯ ನೋಡೆ ಕ್ರಿಯಾಜ್ಞಾನದೃಷ್ಟಿಪ್ರಭಾವಿಸಿತ್ತೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - - - - -

1–1 x (ಟ).

.............................

ಅಯ್ಯಾ-ಸಕಲತತ್ತ್ವಾಧೀಶ್ವರನಾದಂಥ ಎಲೆ ದೇವನೆ, ನಿಮ್ಮ ಶರಣನ-ನಿಮಗಂಗವಾಗಿ ಎರಡಳಿದ ನಿಜಶರಣನ, ಮರ್ತ್ಯಕ್ಕೆ ತಂದೆಯಾಗಿ-ಮಾನುಷ್ಯಲೋಕಕ್ಕೆ ಪ್ರಭುಸ್ವಾಮಿಯಾಗಿ ಅವತರಿಸಿದೆಯಾಗಿ, ನೆನೆನೆನೆದು-ನಿಮ್ಮ ಚರಣಾರವಿಂದವನು ಸ್ಮರಿಸಿಸ್ಮರಿಸಿ, ಮತ್ತಂ ನಿಮ್ಮ ಚರಣಾರವಿಂದ ಸ್ವರೂಪವಾದ ಇಷ್ಟಬ್ರಹ್ಮವನು ಧ್ಯಾನಿಸಿ ಧ್ಯಾನಿಸಿ; ಸುಖಿಯಾದೆನಯ್ಯಾ-ಮುಕ್ತಿಪರಿಣಾಮಿಯಾದೆನಯ್ಯಾ.

ಅದೇನು ಕಾರಣ-ಅದೇನು ನಿಮಿತ್ತವಾಗಿ, ತಂದೆಯೆಂದು-ಮರ್ತ್ಯಲೋಕಕ್ಕೆ ಗುರುಲಿಂಗಜಂಗಮವಾಗಿ ತೆಗತಂದೆಯೆಂದು, ಅಱಿದೆನಯ್ಯಾ-ಸ್ವಾನುಭಾವಜ್ಞಾನ ಗುರೂಪದೇಶದಿಂದೆ ತಿಳಿದೆನಯ್ಯಾ. ಎನ್ನ ಕಾರಣ-ಎನಗೆ ದೀಕ್ಷಾಶಿಕ್ಷಾಜ್ಞಾನಗುರೂಪದೇಶವ ಈವುದಕ್ಕೋಸ್ಕರ, ತಂದೆಯೆಂದು-ಗುರುಲಿಂಗಜಂಗಮವಾಗಿ ಅವತರಿಸಿದೆಯೆಂದು, ಅಱಿದೆನಯ್ಯಾ-ಸ್ವಾತ್ಮಜ್ಞಾನದಿಂದ ತಿಳಿದೆನಯ್ಯಾ.

ಅಱಿದಱಿದು-ಅಂತರಂಗ ಬಹಿರಂಗ ಕ್ರಿಯಾಜ್ಞಾನಂಗಳನು ತಿಳಿದೂ ತಿಳಿದೂ, ನಿಮ್ಮ ಶರಣನು-ನಿಮ್ಮ ಚಿತ್ತಿನ ಚಿದಂಗಸ್ವರೂಪವಾದ ಶಿವಶರಣನು, ಆಚರಿಸುವ-ನಡೆವ, ಆಚರಣೆಯ-ಸತ್ಕ್ರೀ ಸಮ್ಯಕ್‌ಜ್ಞಾನದ ಆಚರಣೆಯನು, ಕಂಡು-ನೋಡಿ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಕಣ್ದೆಱೆದೆನಯ್ಯಾ-ವಿಕಸನವಾಗಿಸಿದೆನಯ್ಯಾ.

---

೬

**ಕರಿ ಘನಃ ಅಂಕುಶ ಕಿರಿದೆನ್ನಬಹುದೆ? ಬಾರದಯ್ಯಾ. ಗಿರಿ ಘನಃ ವಜ್ರ ಕಿಱಿದೆನ್ನಬಹುದೆ? ಬಾರದಯ್ಯಾ. ತಮಂಧ ಘನಃ ಜ್ಯೋತಿ ಕಿಱಿದೆನ್ನಬಹುದೆ? ಬಾರದಯ್ಯಾ. ಮಱಹು ಘನಃ ನಿಮ್ಮ ನೆನೆವ ಮನ ಕಿಱಿದೆನ್ನಬಹುದೆ? ಬಾರದಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಕರಿ ಘನ, ಅಂಕುಶ ಕಿಱಿದೆನ್ನಬಹುದೆ? ಬಾರದಯ್ಯಾ : ಕರಿ-ಆನೆಯು ಆಳುವರೆ ಊಚನಾಗೈತೆ, ಮೇಲೆ ಮಾರಡ್ಡಗಲಾಗೈತೆ, ಘನ-ದೊಡ್ಡಿತ್ತಾದಂಥದು, ಅಂಕುಶ-ಶೃಣಿಯು, ಕಿಱಿದೆನ್ನಬಹುದೆ? ಬಾರದಯ್ಯಾ-ಗೇಣುದ್ದ ಚೋಟುದ್ದನಾಗೈತೆ, ಸ್ವಲ್ಪವೆಂದು ಹೇಳುವುದಕ್ಕಾದೀತೆ? ಆಗದು. ಎಂತಪ್ಪ ದೊಡ್ಡ ಮತ್ತಮದಹಸ್ತಿಯನಾಯಿತ್ತಾದರೂ ಅಂಕುಶದಿಂದೊತ್ತಿ ಕಡಿದಲ್ಲಿ ಭಯಂಬಟ್ಟು ಗಿರ್ರೆಂದು ಘೀಳೆಂದು ಬೆಳಗುಟ್ಟಿ ತನ್ನ ಗೊತ್ತಿಗೆ ತಂದು ನಿಲಿಸುತ್ತಿರ್ದ ಕಾರಣ ಅಂತಪ್ಪ ಅಂಕುಶವನ್ನೇ ಶ್ರೇಷ್ಠವೆಂದು ಹೇಳಬೇಕಲ್ಲದೆ, ಕರಿ-ಆನೆಯನು, ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಆಗದು, ಅಯ್ಯಾ-ಎಲೆ ಲಿಂಗವೆ.

ಗಿರಿ-ಘನ, ವಜ್ರ ಕಿಱಿದೆನ್ನಬಹುದೆ? ಬಾರದಯ್ಯಾ : ಗಿರಿ-ಪರ್ವತವು, ಗಾವುದ ಇಗ್ಗಾವುದ ನಿಡಿದಾಗೈತೆ ನಿಡಿದಾಗೈತೆ ಮೇಲೆ ಹರದಾರಿ ಕೂಗಳತಿ ಅಡ್ಡಗಲಾಗೈತೆ, ಘನ-ದೊಡ್ಡಿತ್ತಾದಂಥದು, ವಜ್ರ-ಕುಲಿಶದುಳಿಯನ್ನೇ, ಕಿಱಿದೆನ್ನಬಹುದೆ? ಬಾರದಯ್ಯಾ-ನಾಲ್ಕಂಗುಲ ಐದಂಗುಲ ಪ್ರಮಾಣವಾಗೈತೆ, ಸ್ವಲ್ಪವೆಂದು ಹೇಳುವುದಕ್ಕಾದೀತೆ? ಆಗದು. ಎಂತಪ್ಪ ಕೋಡಗಲ್ಲನಾಯಿತ್ತಾದರೆಯೂ ವಜ್ರದುಳಿಯಿಂದ ಕಾಪನಿಕ್ಕಿಯಾಗಪ್ಪನ ಸೇರಿಸಿ ಅಹಲ್ಲಾಯೆಂಬ ಶಬ್ದದಿಂದ ಹಾರಿಯನೆತ್ತಿ ಹೊಡೆದಲ್ಲಿ ಭಯಂಬಟ್ಟು ಒಡೆದು ಛಿದ್ರವಾಗಿ ಕಂಬ ತೊಲೆ ಬೋದಿಗೆ ಮುಚ್ಚಳಗಲ್ಲು ಮೊದಲಾದವನು ಮಾಡಿ ಕೊಡುತಿರ್ದ ಕಾರಣ ಅಂತಪ್ಪ ವಜ್ರದುಳಿಯನ್ನೇ ಶ್ರೇಷ್ಠವೆಂದು ಹೇಳಬೇಕಲ್ಲದೆ, ಗಿರಿ-ಪರ್ವತವನ್ನು, ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಆಗದು, ಅಯ್ಯಾ-ಎಲೆ ಲಿಂಗವೆ.

ತಮಂಧ ಘನ, ಜ್ಯೋತಿ ಕಿಱಿದೆನ್ನಬಹುದೆ? ಬಾರದಯ್ಯಾ : ತಮಂಧ-ಕಾವಳವು ಮಠಮನೆಗಳಲ್ಲಿ ತುಂಬಿಕೊಂಡೈತೆ ಜಗತ್ತನೆಲ್ಲ ಮುಸುಕಿಕೊಂಡೈತೆ, ಘನ-ದೊಡ್ಡಿತ್ತಾದಂಥಾದು, ಜ್ಯೋತಿ-ದೀಪವು ಕಿಱಿದೆನ್ನಬಹುದೆ? ಬಾರದಯ್ಯಾ-ಅಂಗುಷ್ಟಮಾತ್ರವಾಗೈತೆ ರತ್ನದ ಹರಳಿನೋಪಾದಿಯಲ್ಲೈತೆ ಸ್ವಲ್ಪವೆಂದು ಹೇಳುವುದಕ್ಕಾದೀತೆ? ಆಗದು, ಎಂತಪ್ಪ ದೊಡ್ಡ ಕಾವಳ ಮಠಮನೆಗಳಲ್ಲಾದರೂ ದೀಪವನ್ನು ಮುಟ್ಟಿಸಿದಲ್ಲಿ ಕಾವಳವೆಲ್ಲ ಭಯಂಬಟ್ಟು ಬಯಲಾಗಿ ಹೋಗಿ

ಬೆಳಗೇ ಪ್ರಭಾವಿಸುತಿರ್ದ ಕಾರಣ ಅಂತಪ್ಪ ಜ್ಯೋತಿಯನ್ನೇ ಶ್ರೇಷ್ಠವೆಂದು ಹೇಳಬೇಕಲ್ಲದೆ ಕಾವಳವನ್ನು ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಆಗದು, ಅಯ್ಯಾ-ಎಲೆ ಲಿಂಗವೆ.

ಮಱಹು ಘನ, ನಿಮ್ಮ ನೆನೆವ ಮನ ಕಿಱಿದೆನ್ನಬಹುದೆ? ಬಾರದಯ್ಯಾ: ಮರಹು-ಮಱವೆಯೊಡನೆ ಕೂಡಲ್ಪಟ್ಟ ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲ ಸಂಸಾರಪ್ರಪಂಚು, ಘನ-ದೊಡ್ಡಿತ್ತಾದಂಥದು, ನಿಮ್ಮ ನೆನೆವ ಮನ-ನಿಮ್ಮ ಸ್ಮರಣೆಯೊಡನೆ ಕೂಡಲ್ಪಟ್ಟ ಉನ್ಮನಿಯ ಮನಸ್ಸನುಳ್ಳ ಶರಣನ, ಕಿಱಿದೆನ್ನಬಹುದೆ ? ಬಾರದಯ್ಯಾ-ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು ಅಂತಪ್ಪ ಉನ್ಮನಿಯ ಮನಸ್ಸನುಳ್ಳ ಶರಣನೇ ಶ್ರೇಷ್ಠವೆಂದು ಹೇಳಬೇಕಲ್ಲದೆ ಮರವೆಯೊಡನೆ ಕೂಡಲ್ಪಟ್ಟ ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲಸಂಸಾರಪ್ರಪಂಚನ್ನು ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಆಗದು. ಆ ಮರವೆಯೊಡನೆ ಕೂಡಲ್ಪಟ್ಟ ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲಸಂಸಾರಪ್ರಪಂಚಿನ ವರ್ತನೆಯನ್ನು ನಷ್ಟವಮಾಡಿ ಅವನ್ನೆಲ್ಲ ನಿಃಸಂಸಾರವಾಗಿ ಅಳವಡಿಸಿಕೊಂಡಾಚರಿಸುವಂಥ ಉನ್ಮನಿಯ ಮನಸ್ಸನುಳ್ಳ ಶರಣನನ್ನೇ ಶ್ರೇಷ್ಠವೆಂದು ಹೇಳಬೇಕಲ್ಲದೆ ಮರವೆಯೊಡನೆ ಕೂಡಲ್ಪಟ್ಟ ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲಸಂಸಾರಪ್ರಪಂಚನ್ನು ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಆಗದು, ಅಯ್ಯಾ-ಎಲೆ ಲಿಂಗವೆ ಎಂಬ ದೃಷ್ಟೋಪಮಾನದ ಹಾಂಗೆ.

● ಕರಿ ಘನ, ಅಂಕುಶ ಕಿಱಿದೆನ್ನಬಹುದೆ ? ಬಾರದಯ್ಯಾ: ಕರಿ-ಅಷ್ಟಮದಂಗಳು, ಘನ-ಅಧಿಕವಾದಂಥವು, ಅಂಕುಶ-ಜ್ಞಾನವೆಂಬ ಶೃಣಿಯು, ಕಿಱಿದೆನ್ನಬಹುದೆ? ಬಾರದಯ್ಯಾ-ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು. ಅಷ್ಟಮದಂಗಳ ವರ್ತನೆಯನ್ನು ನಷ್ಟವ ಮಾಡಿ ಅವನೆಲ್ಲ ಅಷ್ಟವಿಧಭಕ್ತಿಗಳಾಗಿ ಅಳವಡಿಸಿಕೊಂಡಾಚರಿಸುವಂಥ ಜ್ಞಾನವೆಂಬ ಶೃಣಿಯನ್ನೇ ಶ್ರೇಷ್ಠವೆಂದು ಹೇಳಬೇಕಲ್ಲದೆ ಅಷ್ಟಮದಂಗಳನು ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಆಗದು, ಅಯ್ಯಾ-ಎಲೆ ಲಿಂಗವೆ.

ಗಿರಿ ಘನ, ವಜ್ರ ಕಿಱಿದೆನ್ನಬಹುದೆ? ಬಾರದಯ್ಯಾ: ಗಿರಿ-ಅಹಂಕಾರತ್ರಯಂಗಳು, ಘನ-ಅಧಿಕವಾದಂಥವು, ವಜ್ರ-ಅಭೇದ್ಯಜ್ಞಾನವು, ಕಿಱಿದೆನ್ನಬಹುದೆ? ಬಾರದಯ್ಯಾ-ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು. ಅಹಂಕಾರತ್ರಯಂಗಳನು ನಷ್ಟವ ಮಾಡಿ ಅವನೆಲ್ಲ ಶುದ್ಧಸಿದ್ಧ ಪ್ರಸಿದ್ಧಪ್ರಸಾದವಾಗಿ ಅಳವಡಿಸಿಕೊಂಡಾಚರಿಸುವಂಥ ಅಭೇದ್ಯಜ್ಞಾನವನ್ನೇ ಶ್ರೇಷ್ಠವೆಂದು ಹೇಳಬೇಕಲ್ಲದೆ ಅಹಂಕಾರತ್ರಯಂಗಳನು ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಆಗದು, ಅಯ್ಯಾ-ಎಲೆ ಲಿಂಗವೆ.

ತಮಂಧ ಘನ, ಜ್ಯೋತಿ ಕಿಱಿದೆನ್ನಬಹುದೆ? ಬಾರದಯ್ಯಾ: ತಮಂಧ-ಅಜ್ಞಾನಮಾಯಾತಪಸ್ಸು, ಘನ-ಅಧಿಕವಾದಂಥದು, ಜ್ಯೋತಿ-ಜ್ಞಾನವೆಂಬ ದೀವಿಗೆಯು, ಕಿಱಿದೇನ್ನಬಹುದೆ? ಬಾರದಯ್ಯಾ-ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು. ಅಜ್ಞಾನಮಾಯಾತಮಸ್ಸನ್ನು ನಷ್ಟವ ಮಾಡಿ ಶುದ್ಧವಿದ್ಯಾಶಕ್ತಿಯಾಗಿ ಅಳವಡಿಸಿಕೊಂಡಾಚರಿಸುವಂಥ ಜ್ಞಾನವೆಂಬ ಜ್ಯೋತಿಯನ್ನೇ ಶ್ರೇಷ್ಠವೆಂದು ಹೇಳಬೇಕಲ್ಲದೆ ಅಜ್ಞಾನಮಾಯಾ ತಮಸ್ಸನ್ನು ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಅಗದು, ಅಯ್ಯಾ-ಎಲೆ ಲಿಂಗವೆ.

ಮಱಹು ಘನ, ನಿಮ್ಮ ನೆನೆವ ಮನ ಕಿಱಿದೆನ್ನಬಹುದೆ? ಬಾರದಯ್ಯಾ : ಮಱಹು–ಅಜ್ಞಾನವು. ಘನ–ಅಧಿಕವಾದಂಥದು, ನಿಮ್ಮ ನೆನೆವ ಮನ–ನಿಮ್ಮ ಲಿಂಗಧ್ಯಾನ ಲಿಂಗಸ್ಮರಣೆಯೊಡನೆ ಕೂಡಲ್ಪಟ್ಟ ಉನ್ಮನಿಯ ಮನಸ್ಸನುಳ್ಳ ಶರಣನು, ಕಿಱಿದೆನ್ನಬಹುದೆ? ಬಾರದಯ್ಯಾ–ಸಾಮಾನ್ಯವ ಮಾಡಿ ಹೇಳುವುದಕ್ಕಾದೀತೆ? ಆಗದು. ಅಜ್ಞಾನವನ್ನು ನಷ್ಟವ ಮಾಡಿ ಸುಜ್ಞಾನವಾಗಿ ಅಳವಡಿಸಿಕೊಂಡಾಚರಿಸುವಂಥ ಉನ್ಮನಿಯ ಮನಸ್ಸನುಳ್ಳ ಶರಣನೇ ಶ್ರೇಷ್ಠವೆಂದು ಹೇಳಬೇಕಲ್ಲದೆ ಅಜ್ಞಾನವನ್ನು ಶ್ರೇಷ್ಠವೆಂದು ಹೇಳುವುದಕ್ಕಾದೀತೆ? ಆಗದು, ಅಯ್ಯಾ–ಎಲೆ ಲಿಂಗವೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧_೧ ಕಾಪಿಟ್ಟು (ಗ).

II- - - - - - - - - - - - - - - - - - - - - - - - - - - - - - - - - - - - - - - - - - - -

ಕರಿ ಘನ, ಅಂಕುಶ ಕಿಱಿದೆನ್ನಬಹುದೆ? ಬಾರದಯ್ಯಾ–ಅಷ್ಟಮದಯುಕ್ತವಾದ ಜೀವ ದೊಡ್ಡವನು; ಸುಜ್ಞಾನವೆಂದು ಶೃಣಿಯು ಸೂಕ್ಷ್ಮವೆಂದು ನುಡಿಯಬಹುದೆ? ನುಡಿಯಬಾರದು. ಏನು ಕಾರಣ? ಆ ಅಷ್ಟಮದಯುಕ್ತವಾದ ಜೀವನ ಈ ಸುಜ್ಞಾನವೆಂಬ ಶೃಣಿಯು ತನ್ನಿಂದೆ ನಷ್ಟವ ಮಾಡುತ್ತಿರ್ದ ಕಾರಣ. ಆ ಜೀವನೇ ಕೀಳೆಂದು ನುಡಿಯಬಹುದಲ್ಲದೆ, ಈ ಸುಜ್ಞಾನವೆಂಬ ಶೃಣಿಯು ಸೂಕ್ಷ್ಮವೆಂದು ನುಡಿಯಲಾಗದಯ್ಯಾ.

ಗಿರಿ ಘನ, ವಜ್ರ ಕಿರಿದೆನ್ನಬಹುದೆ? ಬಾರದಯ್ಯಾ–ಮೂಲಾಹಂಕಾರವೆಂದು ಪರ್ವತವು ದೊಡ್ಡದು; ಅಭೇದ್ಯಜ್ಞಾನವು ಸೂಕ್ಷ್ಮವೆಂದು ನುಡಿಯಬಹುದೆ? ನುಡಿಯಬಾರದಯ್ಯಾ ಏನು ಕಾರಣ? ಆ ಮೂಲಾಹಂಕಾರವನು ಈ ಅಭೇದ್ಯ ಜ್ಞಾನವು ತನ್ನಿಂದೆ ಸಂಹರಿಸುತ್ತಿರ್ದ ಕಾರಣ. ಆ ಮೂಲಹಂಕಾರವ ಕೀಳೆಂದು ನುಡಿಯಬಹುದಲ್ಲದೆ, ಈ ಅಭೇದ್ಯಜ್ಞಾನವು ಸೂಕ್ಷ್ಮವೆಂದು ನುಡಿಯಲಾಗದಯ್ಯಾ.

ತಮಂಧ ಘನ, ಜ್ಯೋತಿ ಕಿಱಿದೆನ್ನಬಹುದೆ? ಬಾರದಯ್ಯಾ–ಮಾಯಾತಮಸ್ಸು ದೊಡ್ಡದು; ಜ್ಞಾನದೀಪ್ತಿಯು ಸೂಕ್ಷ್ಮವೆಂದು ನುಡಿಯಬಹುದೆ? ನುಡಿಯಬಾರದಯ್ಯಾ. ಏನು ಕಾರಣ? ಆ ಮಾಯಾತಮಸ್ಸನು ಈ ಜ್ಞಾನದೀಪ್ತಿಯು ತನ್ನಿಂದೋಡಿಸುತ್ತಿರ್ದ ಕಾರಣ. ಆ ಮಾಯಾ ತಮಸ್ಸನ್ನೇ ಕೀಳೆಂದು ನುಡಿಯಬಹುದಲ್ಲದೆ, ಈ ಜ್ಞಾನದೀಪ್ತಿ ಸೂಕ್ಷ್ಮವೆಂದು ನುಡಿಯಲಾಗದಯ್ಯಾ.

ಮಱಹು ಘನ, ನಿಮ್ಮ ನೆನೆವ ಮನ ಕಿಱಿದೆನ್ನಬಹುದೆ? ಬಾರದಯ್ಯಾ; ಕೂಡಲಸಂಗಮದೇವಾ–ಅಜ್ಞಾನವು ದೊಡ್ಡದು; ಎಲೆ ಲಿಂಗವೆ ನಿಮ್ಮ ಸ್ಮರಿಸುವ ಮನಸ್ಸು ಸೂಕ್ಷ್ಮವೆಂದು ನುಡಿಯಬಹುದೆ? ನುಡಿಯಬಾರದಯ್ಯಾ. ಏನು ಕಾರಣ? ಆ ಅಜ್ಞಾನವನು ನಿಮ್ಮ ಸ್ಮರಿಸುವ ಮನಸ್ಸು ತನ್ನಿಂದೋಡಿಸುತ್ತಿರ್ದ ಕಾರಣ. ಅಜ್ಞಾನವೇ ಕೀಳೆಂದು ನುಡಿಯಬಹುದಲ್ಲದೆ, ಎಲೆ ಲಿಂಗವೆ ನಿಮ್ಮ ಸ್ಮರಿಸುವ ಈ ಮನಸ್ಸು ಸೂಕ್ಷ್ಮವೆಂದು ನುಡಿಯಬಹುದೆ? ನುಡಿಯಲಾಗದಯಯ್ಯಾ.

# ಸಂಸಾರಹೇಯಸ್ಥಲ

I - - - - - - - - - - - - - - - - - - - - - - - - - - - - - - - - - - - - - - - - - - - -

ಸಂಸಾರಹೇಯಸ್ಥಲ–ಹೊನ್ನು ಹೆಣ್ಣು ಮಣ್ಣು ಪುತ್ರಮಿತ್ರಕಳತ್ರಾದಿ ಸಕಲಸಂಸಾರಪ್ರಪಂಚನ್ನು ಕಾರಿದ ಕೂಳಿಗಿಂದಲೂ ಕ್ಷೀಣವೆಂದು ಕಂಡು ಬಿಡುವಂಥ ಭೇದವನ್ನೇ ಹೇಳುತಿರ್ದ‌ರಾದ ಕಾರಣ ಇದಕ್ಕೆ ಸಂಸಾರಹೇಯಸ್ಥಲವೆಂದು ಹೇಳಲ್ಪಟ್ಟಿತ್ತು.

---

೭

**ಭವ[1]ಬಂಧನ ಭವ[2]ಪಾಶವಾದ[2] ಕಾರಣವೇನಯ್ಯಾ? ಹಿಂದಣ ಜನ್ಮದಲ್ಲಿ ಲಿಂಗವ ಮಱೆ[3]ದೆನಾಗಿ, ಹಿಂದಣ ಸಿರಿಯಲ್ಲಿ ಜಂಗಮವ ಮಱೆ[3]ದೆನಾಗಿ. ಅಱಿದಡೀ ಸಂಸಾರವ ಹೊದ್ದಲೀವೆನೆ, ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - - - - - -

ಭವಬಂಧನ ಭವಪಾಶವಾದ ಕಾರಣವೇನಯ್ಯಾ? : ಭವ–ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಹುಟ್ಟಿ ಬರುವಂಥ ಉತ್ಪತ್ಯವು, ಬಂಧನ–ಕಾಲಕಾಮರ ಶಿಕ್ಷಾಬಾಧಕತ್ವವು, ಭವ–ಉತ್ಪತ್ಯವಾದ, ಪಾಶ–ನೇಣು, ಆದ–ಉಂಟಾದ, ಕಾರಣವೇನಯ್ಯಾ?–ನಿಮಿತ್ತವೇನಯ್ಯಾ, ಹಿಂದಣ ಜನ್ಮದಲ್ಲಿ ಲಿಂಗವ ಮಱೆ[3]ದೆನಾಗಿ : ಹಿಂದಣ ಜನ್ಮದಲ್ಲಿ–ಮೊದಲಜನ್ಮದಲ್ಲಿ, ಲಿಂಗವ ಮಱೆ[3]ದೆನಾಗಿ–ಗುರು ಕರುಣಿಸಿಕೊಟ್ಟಂಥ ಇಷ್ಟಮಹಾಲಿಂಗಕ್ಕಷ್ಟ ವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುವಂಥದನ್ನು, ಮಱೆ[3]ದೆನಾಗಿ–ವಿಸ್ಮೃತಿಯನೆಯ್ದುಬಿಟ್ಟೆನಾಗಿ, ಅದು ಕಾರಣ ಈಗ ಭವಬಂಧನ ಭವಪಾಶಂಗಳುಂಟಾದವೆಂದು ತಿಳಿದೆನು, ಹಿಂದಣ ಸಿರಿಯಲ್ಲಿ ಜಂಗಮವ ಮಱೆ[3]ದೆನಾಗಿ : ಹಿಂದಣ ಸಿರಿಯಲ್ಲಿ–ಶಿವನು ಅನಾದಿಯಲ್ಲಿ ಕರುಣಿಸಿಕೊಟ್ಟಂಥ ಅಷ್ಟಭೋಗ ಅಷ್ಟೈಶ್ವರ್ಯವೆಂಬ ಭಾಗ್ಯದಲ್ಲಿ, ಜಂಗಮವ ಮಱೆ[3]ದೆನಾಗಿ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಕ್ಕೆ ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷಿ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವಂಥದನು, ಮಱೆ[3]ದೆನಾಗಿ–ವಿಸ್ಮೃತಿಯನೈದುಬಿಟ್ಟೆನಾಗಿ, ಅದು ಕಾರಣ ಈಗ ಭವಬಂಧನ ಭವಪಾಶಂಗಳುಂಟಾದವೆಂದು ತಿಳಿದೆನು.

ಅಱಿದಡೆ–ಲಿಂಗಪೂಜೆ ಜಂಗಮದಾಸೋಹವನ್ನು ಮಾಡುವಂಥದನ್ನು ತಿಳಿದಡೆ, ಈ ಸಂಸಾರವ ಹೊದ್ದಲೀವೆನೆ–ಲಿಂಗಪೂಜೆ ಜಂಗಮ ದಾಸೋಹವಂ ಮಾಡುವಂಥದನ್ನು ತಿಳಿದ ನಿಮಿತ್ತ, ಸಂಸಾರಪ್ರಪಂಚವ ಸೋಂಕುಗೊಡುವೆನೆ, ಕೂಡಲಸಂಗಮದೇವಾ?–ಎಲೆಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - -

ಭವಬಂಧನ ಭವಪಾಶವಾದ ಕಾರಣವೇನಯ್ಯಾ?–ಜನ್ಮ ಸಂಸಾರದ ಸೆರೆಯು ಜನ್ಮಸಂಸಾರವೆಂಬ ನೇಣು ಇವು ಆತ್ಮನಿಗೆ ಉಂಟಾದ ನಿಮಿತ್ತವೇನಯ್ಯಾ, ಹಿಂದಣ ಜನ್ಮದಲ್ಲಿ

ಲಿಂಗವ ಮಱೆದೆನಾಗಿ–ಪೂರ್ವಭವದಲ್ಲಿ ಇಷ್ಟಲಿಂಗದ ಪೂಜೆಯನು ವಿಸ್ಮೃತಿಯ ಮಾಡಿದೆನಾಗಿ, ಹಿಂದಣ ಸಿರಿಯಲ್ಲಿ ಜಂಗಮವ ಮಱೆದೆನಾಗಿ–ಪೂರ್ವದ ಅಷ್ಟಭೋಗ ಅಷ್ಟೈಶ್ವರ್ಯದಲ್ಲಿ ಆ ಲಿಂಗದ ಪ್ರಾಣಕಳಾಚೈತನ್ಯಸ್ವರೂಪವಾದ ಜ್ಞಾನಿಜಂಗಮದ ಭಕ್ತಿಯನು ವಿಸ್ಮೃತಿಯ ಮಾಡಿದೆನಾಗಿ.

ಅರಿದಡೀ ಸಂಸಾರವ ಹೊದ್ದಲೀವೆನೆ–ನಿಃಕಲಲಿಂಗಕ್ಕೆ ಮೂಲಜ್ಞಾನಚಿತ್ತಿನಿಂದ ಅಂಗವಾಗಿದ್ದೆ, ಮಹಾಲಿಂಗಕ್ಕೆ ಪರಾಶಕ್ತಿಪ್ರಣವದಿಂದ ಅಂಗವಾಗಿದ್ದೆನಲಾ ಎಂಬುದನು ತಿಳಿದಡೆ, ಈ ಸಂಸೃತಿಯನು ಸೋಂಕಲೀವೆನೆ.

III- - - - - - - - - - - - - - - - - - - - - - - - - - - - - - - - - - - - - - - - - - -

1+ದ (ಡ). 2–2 ಪಾಶಂಗಳಾತ್ಮಂಗುಂಟಾದ (ಡ).

..........................

ಭವದ–ಜನ್ಮದ, ಬಂಧನ–ಕಟ್ಟಿನ, ಭವಪಾಶಂಗಳ್–ಭವಪಾಶ ಮೊದಲಾದ ಅಷ್ಟಪಾಶಂಗಳು, ಆತ್ಮ–ಆತ್ಮನಿಗುಂಟಾದ, ಕಾರಣವೇನಯ್ಯಾ–ನಿಮಿತ್ತವೇನು ಕಾರಣವಯ್ಯಾ ಎನಲಾಗಿ, ಹಿಂದಣಜನ್ಮದಲ್ಲಿ–ಪೂರ್ವಜನ್ಮದಲ್ಲಿ, [ಲಿಂಗವ–]ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಮಾಡುವುದನು, ಮಱೆದೆನಾಗಿ–ವಿಸ್ಮೃತಿಗೆಯ್ದೆನಾಗಿ ಎಂಬುದೀಗ ಲಿಂಗವ ಮಱೆದೆನಾಗಿ ಎಂಬ ಶಬ್ದಕ್ಕರ್ಥ. ಹಿಂದಣ ಸಿರಿಯಲ್ಲಿ–ಪೂರ್ವಜನ್ಮ ದಷ್ಟೈಶ್ವರ್ಯದಲ್ಲಿ, ಜಂಗಮವ ಮಱೆದೆನಾಗಿ–ಜಂಗಮಕ್ಕೆ ಅನ್ನಾಚ್ಛಾದನ ಅಲಂಕಾರಾದಿ ವಸ್ತುವನು ನಿರ್ವಂಚನೆಯಿಂದೆ ಸಮರ್ಪಣೆಯ ಮಾಡುವುದನು ವಿಸ್ಮೃತಿಗೈದೆನಾಗಿ ಎಂಬುದೀಗ, ಅಱೆದಡೆ–ಗುರುಲಿಂಗಜಂಗಮಕ್ಕೆ ತನುಮನಧನಂಗಳ ಸಮರ್ಪಿಸುವ ಭೇದವನು ತಿಳಿದಡೆ, ಸಂಸಾರವ–ಕಾಯಜೀವ ಪುತ್ರಕಳತ್ರಾದಿ ಸಂಸೃತಿಯೆಂಬ ಸಂಸಾರವನು, ಹೊದ್ದಲೀವೆನೆ–ಸಾರ್ಯೆಸುವೆನೆ? ಸಾರ್ಯೆಸೆನೆಂಬುದರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - -

[1]ಜ್ಞಾನೋದಯದಿಂದ ಶರಣ ತನ್ನ ಮುನ್ನಿನ ನಿಜವ ತಿಳಿದು ನೋಡಿ, ಅನಾದಿಯಲ್ಲಿ ತಾನು ಪರಶಿವನ ಚಿತ್ತುವಾಗಿರ್ದಲ್ಲಿ ಆ ಪರಶಿವನ ಚಿತ್ತುವಿಗೆ ಲೀಲೆದೋಱೆ ಸಾಕಾರವನವಲಂಬಿಸಿಕೊಂಡು ತೋಱೆದ ತೋಱೆಕೆ ಈಗ ಚಿತ್ತುವಿನ ಹಿಂದಣ ಪ್ರಥಮನ ಜನನ, ಅಂತು ಸಾಕಾರವನವಲಂಬಿಸಿಕೊಂಡು ಅಹಂಭಾವದಲ್ಲಿ ವಿಶ್ರಮಿಸಿ ತಾನು ಲಿಂಗವೆಂಬುದೀಗ ಚಿತ್ತುವಿನ ಹಿಂದಣ ಪ್ರಮನನ. ಅಂತು ಸಾಕಾರವನವಲಂಬಿಸಿಕೊಂಡು ಅಹಂಭಾವದಲ್ಲಿ ವಿಶ್ರಮಿಸಿ, ತಾನು ಲಿಂಗವೆಂಬುದ ಮಱದ ಮಱವೆಯೇ ಚಿತ್ಸ್ವರೂಪವಾದ ಶರಣಂಗೆ ದೇಹಸಂಸಾರದ ಭವಬಂಧನವಾಯಿತ್ತೆಂಬುದಿ ಭವಬಂಧನ ಭವಪಾಶವಾದ ಕಾರಣವೇನಯ್ಯಾ? ಹಿಂದಣ ಜನ್ಮದಲ್ಲಿ ಲಿಂಗವ ಮಱದೆನಾಗಿ ಹಿಂದಣ ಸಿರಿಯಲ್ಲಿ ಜಂಗಮವ ಮಱೆದೆನಾಗಿ ಎಂಬ ಶಬ್ದಕ್ಕರ್ಥ, ಅಂತು ಮರವೆಯಿಂದ ಜನ್ಮಜ್ಮನದ ದೇಹೇಂದ್ರಿಯ ವಿಷಯಭೋಗಸುಖಂಗಳ, ಲಿಂಗವ ಮಱದು ಭೋಗಿಸಿ ಭವಬಂಧನಕ್ಕೊಳಗಾದರು ಜೀವರು. ಇಂತೆಂಬುದನಱದು ಸರ್ವಭೋಗಂಗಳ ಲಿಂಗಕ್ಕರ್ಪಿಸಿ

ಲಿಂಗಭೋಗೋಪಭೋಗಿಯಾಗಿದ್ದಾತಂಗೆ ಭವಸಂಸಾರಬಂಧನವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

........................

೧+ಇನ್ನು ಸಂಸಾರಹೇಯಸ್ಥಲದ ವಚನ (ತ).

---

೮

**ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲಲೆವು[1]ತ್ತಿ[1]ದೆ. ಸಂಸಾರಸಾಗರ ಉರದುದ್ದವೆ? ಹೇಳಾ! ಸಂಸಾರಸಾಗರ ಕೊರಳುದ್ದವೆ? ಹೇಳಾ! ಸಂಸಾರಸಾಗರ ಶಿರದುದ್ದವಾದ ಬಳಿಕಯೇನ ಹೇಳವೆನಯ್ಯಾ! ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ, ಕೂಡಲಸಂಗಮದೇವಾ ನಾನೇವೆನೇವೆನಯ್ಯಾ!**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲಲೆವುತ್ತಿದೆ : ಸಂಸಾರ–ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲಸಂಸಾರ ಪ್ರಪಂಚೆಂಬ, ಸಾಗರದ–ಸಮುದ್ರದ, ತೆರೆ–ಷಡೂರ್ಮಿ ಷಡ್ವರ್ಗಂಗಳೆಂಬ ಕಲ್ಲೋಲಂಗಳು, ಕೊಬ್ಬಿ–ಹೆಚ್ಚಿ, ಮುಖದ ಮೇಲಲೆವುತ್ತಿದೆ–ಆತ್ಮಜ್ಞಾನಕ್ಕೆ ಕಂಟಕವಾಗುತ್ತಿದೆ.

ಸಂಸಾರಸಾಗರ ಉರದುದ್ದವೆ? ಹೇಳಾ!–ಲೋಕದಲ್ಲಿ ಆತ್ಮರುಗಳು ಹಳ್ಳ ಹೊಳೆ ಹಗರೆಗಳನ್ನು ದಾಂಟಬೇಕಾದರೆ ಟೊಂಕಮಟ್ಟ ಎದಿಮಟ್ಟ, ಕುತ್ತಿಗೆಮಟ್ಟ ಬಂದರೂ ದಾಂಟಿಹೋಗುವರಲ್ಲದೆ ಶಿರವನ್ನು ಮುಳುಗಿಸಿಕೊಂಡ ಮೇಲೆ ದಾಂಟೋದೇನೈತೆ? ಇಲ್ಲವೆಂಬುವ ಹಾಂಗೆ, ಇಲ್ಲಿ ಸ್ಥೂಲ ತನುವಿನ ಭಕ್ತಿ ಸೂಕ್ಷ್ಮತನುವಿನ ಜ್ಞಾನ ಕಾರಣತನುವಿನ ವೈರಾಗ್ಯದಿಂದ ದಾಂಟಿಹೆನೆಂದರೆ, ಸಂಸಾರ–ಸಂಸಾರಪ್ರಪಂಚವೆಂಬ, ಸಾಗರ–ಸಮುದ್ರವು, ಉರದುದ್ದವೆ? ಹೇಳಾ!: ಉರವೆಂದರೆ ಸ್ಥೂಲತನು. ಅಂತಪ್ಪ ಸ್ಥೂಲತನುವನೊಳಕೊಂಡಿತ್ತು, ಆ ಸ್ಥೂಲತನುವ ನೊಳಕೊಂಡಲ್ಲಿ ಸ್ಥೂಲತನುವಿನ ಭಕ್ತಿವೊಂದೇ ನಷ್ಟವಾಗಿ ಹೋಯಿತ್ತು, ಹೇಳಾ–ನಿರೂಪಿಸಾ.

ಸಂಸಾರಸಾಗರ ಕೊರಳುದ್ದವೆ? ಹೇಳಾ!–ಸ್ಥೂಲತನುವಿನ ಭಕ್ತಿವೊಂದೆ ನಷ್ಟವಾಗಿ ಹೋದಲ್ಲಿ ಮುಂದೆ ಸೂಕ್ಷ್ಮತನುವಿನ ಜ್ಞಾನ ಕಾರಣ ತನುವಿನ ವೈರಾಗ್ಯ ಎರಡು ಉಳಿದಿರ್ಪವು. ಸೂಕ್ಷ್ಮ ತನುವಿನ ಜ್ಞಾನ ಕಾರಣತನುವಿನ ವೈರಾಗ್ಯದಿಂದ ದಾಂಟಿಹೆನೆಂದರೆ, ಸಂಸಾರ–ಸಕಲಸಂಸಾರಪ್ರಪಂಚ, ಸಾಗರಸಮುದ್ರವು, ಕೊರಳುದ್ದವೆ? ಹೇಳಾ!: ಕೊರಳು ಎಂದರೆ ಸೂಕ್ಷ್ಮತನು. ಅಂತಪ್ಪ ಸೂಕ್ಷ್ಮ ತನುವನೊಳಕೊಂಡಿತ್ತು, ಆ ಸೂಕ್ಷ್ಮ ತನುವನೊಳಕೊಂಡಲ್ಲಿ ಸೂಕ್ಷ್ಮ ತನುವಿನ ಜ್ಞಾನವೊಂದೇ ನಷ್ಟವಾಗಿ ಹೋಯಿತ್ತು. ಹೇಳಾ–ನಿರೂಪಿಸಾ.

ಸಂಸಾರಸಾಗರ ಶಿರದುದ್ದವಾದ ಬಳಿಕ–ಸ್ಥೂಲತನುವಿನ ಭಕ್ತಿ ಸೂಕ್ಷ್ಮತನುವಿನ ಜ್ಞಾನ ಎರಡೂ ನಷ್ಟವಾಗಿ ಹೋದಲ್ಲಿ ಮುಂದೆ ಕಾರಣತನುವಿನ ವೈರಾಗ್ಯವೊಂದೇ ಉಳಿದಿರ್ಪುದು. ಕಾರಣತನುವಿನ ವೈರಾಗ್ಯದಿಂದ ದಾಂಟೇನೆಂದರೆ, ಸಂಸಾರ–ಸಕಲಸಂಸಾರಪ್ರಪಂಚೆಂಬ, ಸಾಗರ–

ಸಮುದ್ರವು, ಶಿರದುದ್ದವಾದ ಬಳಿಕ : ಶಿರವೆಂದರೆ ಕಾರಣತನು. ಅಂತಪ್ಪ ಕಾರಣತನುವನೊಳಕೊಂಡಿತ್ತು. ಆ ಕಾರಣತನುವನೊಳಕೊಂಡಲ್ಲಿ ಕಾರಣತನುವಿನ ವೈರಾಗ್ಯವೊಂದೇ ನಷ್ಟವಾಗಿ ಹೋಯಿತ್ತು, ಬಳಿಕ–ಆಮೇಲೆ, ಏನ ಹೇಳುವೆನಯ್ಯಾ–ಸಂಸಾರಪ್ರಪಂಚೆಂಬ ಸಮುದ್ರದ ಆ ಘೋರವನ್ನು ಏನೆಂದು ನಿರೂಪಿಸುವೆನಯ್ಯಾ.

ಅಯ್ಯಾ ಅಯ್ಯಾ–ಲಿಂಗವೆ ಲಿಂಗವೆ, ಎನ್ನ ಹುಯ್ಯಲ ಕೇಳಯ್ಯಾ–ಸಂಸಾರಪ್ರಪಂಚೆಂಬ ಸಮುದ್ರಕ್ಕೆ ಹೆದರಿ ಮೊರೆಯೊ ಮೊರೆಯೊ ಎಂದು ಹುಯ್ಯಲಿಡುವಂಥ ಮೊರೆಯನ್ನು, ಕೇಳಯ್ಯಾ–ಆಲಿಸಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಾನೇವೆನೇವೆನಯ್ಯಾ–ಏನು ದಯೆ, ಏನುಪಾಯ, ಏನು ಜಪವ ಮಾಡಲೋ ಏನು ತಪವ ಮಾಡಲೋ ಏನು ವ್ರತೋಪವಾಸವ ಮಾಡಲೋ ಎಂದು ಚಿಂತಿಸುತ್ತಿರ್ದನು ಜ್ಞಾನಕಲಾತ್ಮನು. ಅಯ್ಯಾ–ಎಲೆ ಲಿಂಗವೆ, ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚನ್ನು ನಷ್ಟವ ಮಾಡಿಬಿಟ್ಟು ನೀವೇ ಗುರುವಾಗಿ ಬಂದು ಲಿಂಗಾಂಗಸಂಬಂಧವ ಕರುಣಿಸಿಕೊಟ್ಟು ನಿಮ್ಮ ಪಾದೋದಕಪ್ರಸಾದವನಿತ್ತು ರಕ್ಷಣೆಯ ಮಾಡು, ಅಯ್ಯಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - - -

1–1 ತ್ತಲಿದ್ದೂ (ಚ.ಜ).

................................

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಲಿದ್ದೂದೆ–ಹೊನ್ನು ಹೆಣ್ಣು ಮಣ್ಣೆಂಬ ಸಂಸ್ಕೃತಿಯ ಸಮುದ್ರದೂರ್ಮೆಗಳು ಗರ್ವೀಕೃತವಾಗಿ ನೆನಹಿನ ವಕ್ತ್ರದ ಮೇಲೆ ಪೀಡಿಸುತ್ತೈದಾವೆ. ಸಂಸಾರಸಾಗರ ಉರದುದ್ದವೆ? ಹೇಳಾ–ಸಂಸ್ಕೃತಿಯೆಂಬ ಸಮುದ್ರವನು ಸ್ಥೂಲತನುವಿನ ಕ್ರಿಯಾಚರಣೆಯಿಂದ ಜಯಿಸಿಹೆನೆಂದಡೂ ಆ ಸ್ಥೂಲತನುವಿನ ಕ್ರಿಯಾಚರಣೆಯನೊಳಕೊಂಡಿತ್ತು. ಈ ಸಂಸ್ಕೃತಿಯ ಪ್ರಪಂಚು ನಿರೂಪಿಸಾ. ಸಂಸಾರಸಾಗರ ಕೊರಳುದ್ದವೆ? ಹೇಳಾ–ಈ ಪುತ್ರಮಿತ್ರಕಳತ್ರವೆಂಬ ಸಂಸ್ಕೃತಿಯ ಸಮುದ್ರವನು ಸೂಕ್ಷ್ಮತನುವಿನ ಜ್ಞಾನಾಚರಣೆಯಿಂದ ಜಯಿಸಿಹೆನೆಂದಡೂ ಆ ಸೂಕ್ಷ್ಮತನುವಿನ ಜ್ಞಾನಾಚರಣೆಯನೊಳಕೊಂಡಿತ್ತೀ ಪ್ರಪಂಚು ನಿರೂಪಿಸಾ. ಸಂಸಾರಸಾಗರ ಶಿರದುದ್ದವಾದ ಬಳಿಕ ಏನು ಹೇಳುವೆನಯ್ಯಾ? ಜಾತಿ ವರ್ಣಕುಲಗೋತ್ರ ಆಶ್ರಮನಾಮಂಗಳೆಂಬ ಸಂಸ್ಕೃತಿಯ ಸಮುದ್ರವನು ಕಾರಣತನುವಿನ ಮಹಾಜ್ಞಾನವೈರಾಗ್ಯಾಚರಣೆಯಿಂದ ಜಯಿಸಿಹೆನೆಂದಡೂ ಆ ಕಾರಣತನುವಿನ ಮಹಾಜ್ಞಾನವೈರಾಗ್ಯಾಚರಣೆಯನೊಳಕೊಂಡ ಮೇಲೆ ಈ ಸಂಸಾರದೇಳಿಗೆಯನೇನೆಂದುಪಮಿಸುವೆನಯ್ಯಾ.

ಅಯ್ಯಾ, ಅಯ್ಯಾ–ಎಲೆ ಗುರುವೆ ಎಲೆ ಗುರುವೆ, ಎನ್ನ ಹುಯ್ಯಲು ಕೇಳಯ್ಯಾ–ಎಲೆ ಲಿಂಗವೆ ಎನ್ನ ,ಬಿರುಸ್ತೋತ್ರವನು ಲಾಲಿಸಯ್ಯಾ, ಕೂಡಲಸಂಗಮದೇವಾ ನಾನೇವೆನೇವೆನಯ್ಯಾ–ಎಲೆ ಲಿಂಗವೆ ನಾನೇನು ಜಪವ ಮಾಡಲೋ ತಪವ ಮಾಡಲೋ ಧ್ಯಾನವ ಮಾಡಲೋ ಮೌನವ ಮಾಡಲೋ [1][ವ್ರತೋ][1]ಪವಾಸವ ಮಾಡಲೋ ಎಂದು ಚಿಂತಸುತ್ತಿಹನು ಜ್ಞಾನಕಲಾತ್ಮನೆಂಬುದರ್ಥ.

................................

೧-೧ ಕೃತ್ಯೂ (ಚ,ಜ)

III- - - - - - - - - - - - - - - - - - - - - - - - - - - - - - - - - - - - - - - - - - - - - - -

ಸಂಸಾರ ಸಾಗರದ-ಪುತ್ರಮಿತ್ರಕಳತ್ರಾದಿ ಕಾಯಜೀವಸಂಸ್ಕೃತಿಯೆಂಬ ಸಂಸಾರಸಾಗರದ, ತೆರೆ-ಷಡೂರ್ಮಿಗಳೆಂಬ ತರಂಗೋತ್ಪಾತದ ಘಾತವು, ಕೊಬ್ಬಿ-ಹೆಚ್ಚಿ, ಮುಖದ ಮೇಲೆ-ಸದ್ವಿವೇಕಸ್ವರೂಪವಾದ ವದನದ ಮೇಲೆ, ಅಲೆವುತ್ತಿದೆ-ಕರಕರಿಸಿ ಪೀಡಿಸುತ್ತಿದೆ.

V - - - - - - - - - - - - - - - - - - - - - - - - - - - - - - - - - - - - - -

ಜನನಮರದರೂಪ...ವಾಹವೆಂಬ, ಸಾಗರಣ-ಭವಾಂಬುಂಧಿಯ, ತೆರೆ_ಕ್ಷುತ್ತುಪಿಪಾಸಾದಿ ಷಡೂರ್ಮಿಗಳೆಂಬ ತರಂಗಂಗಳು, ಕೊಬ್ಬಿ_ಹೆಚ್ಚಿ, ಮುಖದ ಮೇಲೆ_ಆತ್ಮನ ಸದ್ವಿವೇಕವೆಂಬ ವದನದಲ್ಲಿ, ಅಲೆವುತ್ತಲಿದ್ದೂದೆ-"ಅಂಡಲೆ ಆಸನ್ನ ಪೀಡಾಯಾಂ" ಎಂದು ಪೀಡಿಸ.... ಸಂಸಾರಸಾಗರ ಉರದುದ್ದವೆ? ಹೇಳಾ! ಎಂದರೆ ಕ್ರಿಯಾಪಾದವ ಮುಳುಗಿಸುತ್ತದೆ ಎಂಬುದರ್ಥ. ಸಂಸಾರಸಾಗರ ಕೊರಳುದ್ದವೆ? ಹೇಳಾ! ಎಂದರೆ ಜ್ಞಾನಪಾದವ ನಾವರಿಸಿತ್ತೆಂಬುದರ್ಥ. ಶಿರದುದ್ದವಾದ ಬಳಿಕ-ಯೋಗಪಾದವನಾವರಿಸಿದ ಮೇಲೆ, ಕೇಳಯ್ಯಾ ಎಂದರೆ ಸಂಸಾರಸಾಗರ ತರಂಗದುತ್ಪಾತದ ಘಾತಿಯನು ಆಲಿಸಯ್ಯಾ.

---

೬

**ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ: ಸಂಸಾರವೆಂಬ ರಾಹು [1]ಸರ್ವಗ್ರಾಸಿಯಾಗಿ[1] ನುಂಗಿತ್ತಯ್ಯಾ! [2]ಇಂದೆನ್ನ[2] ದೇಹಕ್ಕೆ ಗ್ರಹಣವಾಯಿತ್ತು; [3]ಇನ್ನೆಂದಿಂಗೆ[3] ಮೋಕ್ಷವಹುದೊ, ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ: ಚಂದ್ರಮ-ಪೌರ್ಣಿಮೆಯ ಚಂದ್ರನಿಗೆ ಷೋಡಶಕಲೆಗಳು ದೊರೆಕೊಂಡರೇನಾಯಿತ್ತು ? ಅದಕ್ಕೊಂದು ಕಂಟಕವುಂಟು. ಮುರಾಸುರನೆಂಬ ರಕ್ಕಸನ ತಲೆಗಳೇ ರಾಹುಕೇತುಗಳಾಗಿ ಬಂದು ಪೀಡಿಸುತಿರ್ಪವು. ಹಾಂಗೆ ಇಲ್ಲಿ ಚಂದ್ರಮನ ಹಾಂಗೆ ದೇಹ, ಷೋಡಶಕಲೆಗಳ ಹಾಂಗೆ ಆತ್ಮ. ಆತ್ಮನಿಗೆ ಜ್ಞಾನೋದಯವಾದರೇನಾಯಿತ್ತು? ಅದಕ್ಕೊಂದು ಕಂಟಕವುಂಟು. ಎನಗೆ-ಜ್ಞಾನಕಲಾತ್ಮನಿಗೆ, ಸಂಸಾರವೆಂಬ-ಹೊನ್ನು ಹೆಣ್ಣುಮಣ್ಣುಮುಖ್ಯವಾದ ಸಕಲಸಂಸಾರಪ್ರಪಂಚವೆಂಬ, ರಾಹು-ಅಜ್ಞಾನಮಾಯಾಕಾಳೋರಗನು, ಸರ್ವಗ್ರಾಸಿಯಾಗಿ-ಬ್ರಹ್ಮನ ನಾಲಿಗೆಯಲ್ಲಿ ಸರಸ್ವತಿಯಾಗಿ ವಿಷ್ಣುವಿನ ಎದೆಗೂಡಿನಲ್ಲಿ ಲಕ್ಷ್ಮಿಯಾಗಿ ರುದ್ರನ ಜಡೆತೊಡೆಗಳಲ್ಲಿ ಗಂಗೆಗೌರಿಯರೆಂಬ ಈರ್ವರು ಸ್ತ್ರೀಯರುಗಳಾಗಿ ಸರ್ವಗ್ರಾಹಿಯಾಗಿ ಸಮಸ್ತರನು ಒಳಕೊಂಡು, ನುಂಗಿತ್ತಯ್ಯಾ-[೧]"ನುಂಗು ಗಿಳನೇ"[೧]ಯೆಂದು ಇಳೆಹಾಕಿತ್ತಯ್ಯಾ.

ಇಂದೆನ್ನ ದೇಹಕ್ಕೆ: ಇಂದು ಎಂದರೆ ಚಂದ್ರನು, ಚಂದ್ರನೆಂದರೆ ಜ್ಞಾನ. ಅಂತಪ್ಪ ಜ್ಞಾನೋದಯವಾದ ಜ್ಞಾನಕಲಾತ್ಮನ ದೇಹಕ್ಕೆ ಇಪ್ಪತ್ತೈದು ತತ್ತ್ವಯುಕ್ತವಾದ ಶರೀರಕ್ಕೆ, ಗ್ರಹಣವಾಯಿತ್ತು-

ಕಂಟಕವಾಯಿತ್ತು, ಇನ್ನೆಂದಿಂಗೆ ಮೋಕ್ಷವಹುದೊ-ಈ ಜನ್ಮದಲ್ಲಿ ನಿಜವ ಮರೆಯೆ ಮುಂದೆ ನಾಯಿನರಿಸೂಕರಾದಿಗಳಾಗಿ ಹೋಹುದ ನೀನರಿಯೆ, ಕಾಯಜನ ಬಾಣಕ್ಕೆ ಗುರಿಯೋ ನರಗುರಿಯೋ ಅರಿಯೋ ಮೊರೆಯೋ ಎಂದು ಈ ಜನ್ಮದಲ್ಲಿ ಜ್ಞಾನಿಯಾಗಿ ಆಚರಿಸಿದರೆ ಪರದಲ್ಲಿ ನಿಜಮೋಕ್ಷವೇ ದೊರಕೊಂಬುತ್ತಿಹುದು. ಈ ಜನ್ಮದಲ್ಲಿ ಅಜ್ಞಾನಿಯಾಗಿ ಆಚರಿಸಿದರೆ, ಇನ್ನೆಂದಿಂಗೆ ಮೋಕ್ಷವಹುದೊ-ಇನ್ನಾವ ಕಾಲಕ್ಕೆ ನಿಜಮೋಕ್ಷವು ದೊರಕೊಂಬುವುದೊ, ಕೂಡಲಸಂಗಮದೇವಾ?-ಎಲೆ ಪರಶಿವಲಿಂಗವೆ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧-೧ x (ಗ).

II- - - - - - - - - - - - - - - - - - - - - - - - - - - - - - - -

ಚಂದ್ರಮನಂತೆ-ಷೋಡಶಕಲಾಭರಿತವಾದ ಇಂದುವಿನ ಹಾಂಗೆ, ಎನಗೆ ಕಳೆ ಸಮನಿಸಿತ್ತು-ಆತ್ಮನಿಗೆ ಅಷ್ಟಭೋಗ ಅಷ್ಟೈಶ್ವರ್ಯವು ದೊರಕೊಂಡಿತ್ತು, ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯ!-ಸಂಸೃತಿಯೆಂಬ ವಿಧುಂತುದನು ಸಮಸ್ತಾಂಗವನು ಪಿಡಿದು ಒಳಕೊಂಡಿತ್ತಯ್ಯಾ.

ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು-ಈ ಜ್ಞಾನೋದಯವಾಗದ ಕಾಲದಲ್ಲಿ ಆತ್ಮನ ಶರೀರಕ್ಕೆ ದಷ್ಟವಾಯಿತ್ತು, ಇನ್ನೆಂದಿಂಗೆ ಮೋಕ್ಷವಹುದೊ ಕೂಡಲಸಂಗಮದೇವಾ?-ಮುಂದೆ ಆವ ಕಾಲಕ್ಕೆ ಅಂತರಂಗದಲ್ಲಿ ಜ್ಞಾನೋದಯವನಿತ್ತು, ಬಹಿರಂಗದಲ್ಲಿ ಕ್ರಿಯಾಘನಗುರುವಾಗಿ ಬಂದು ವೇಧಾಮಂತ್ರ ಕ್ರೀಯೆಂಬ ದೀಕ್ಷಾತ್ರಯವನು ಕರುಣಿಸಿ ನಿನ್ನ ಪಾದೋದಕಪ್ರಸಾದವನು ಕೊಟ್ಟು ಸದ್ಗತಿಯನೈದಿಸುವುದು ಆವ ಕಾಲಕ್ಕೋ?

III- - - - - - - - - - - - - - - - - - - - - - - - - - - - - - -

1-1 ಸರ್ವಗ್ರಾಹಿಯಾಗಿ(ಡ). 2-2 ಎನ್ನ(ಡ). 3-3 ಎಂದಿಂಗೆ(ಡ).

..........................

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ-ಷೋಡಶಕಲಾಭರಿತನಾದ ಶುಕ್ಲಪಕ್ಷದ ಪೌರ್ಣಮಿಚಂದ್ರನ ಹಾಂಗೆ ಸುಜ್ಞಾನವಿದ್ಯಾಸು[ಲ]ಕ್ಷಣಸಂಬಂಧವಾದ ಚಿತ್ಕಲೆ ಚಿದಾತ್ಮನಿಗೆ ದೊರೆಕೊಂಡಿತ್ತೆಂಬುದೀಗ, ಸಂಸಾರವೆಂಬ-ಕಾಯಜೀವಸಂಸೃತಿಯೆಂಬ, ರಾಹು-ವಿಧುಂತುದವು, ಸರ್ವಗ್ರಾಹಿಯಾಗಿ-ಸರ್ವಾಂಗವನು ಅವಗ್ರಹಿಸಲು ತಕ್ಕುದಾಗಿ, ನುಂಗಿತ್ತು-ಗಿಳನಂಗೆಯ್ದಿತ್ತು ಈ ಶರೀರಸಂಬಂಧದಲ್ಲಿ, ಎನ್ನ ದೇಹಕ್ಕೆ-ಎನ್ನ ಶರೀರಕ್ಕೆ, ಗ್ರಹಣವಾಯಿತ್ತು-ಗ್ರಹಿಸಲ್ತಕ್ಕುದಾಯಿತ್ತು, ಎಂದಿಂಗೆ-ಇನ್ನಾವ ಕಾಲಕ್ಕೆ, ಮೋಕ್ಷವಹುದೊ-'ಮುಚಿಲ್ ಮೋಚನೇ' ಎಂದು ಬಿಡುಗಡೆಯಾದಪುದೊ, ಕೂಡಲಸಂಗಮದೇವಾ?-ಎಲೆ ಪರಶಿವಲಿಂಗವೆ.

IV - - - - - - - - - - - - - - - - - - - - - - - - - - - - - -

ಜ್ಞಾನಕಲಾತ್ಮನ ಮಾಯಾದೇಹಸಂಸಾರವು ಗ್ರಹಿಸಿದಲ್ಲಿ ಜ್ಞಾನೋದಯದಿಂದ ತನ್ನ ನಿಜವ ತಿಳಿದು ನೋಡಿ ಮೋಕ್ಷನಾಗಿ ಸಂಸಾರದ ಬಿಡುಗಡೆಯ ಬಯಸಲು, ಆ ಬಯಸಿದ ಮಾತ್ರದಲ್ಲಿ ಬಿಡದಿಪ್ಪುದ ಕಂಡು ಜ್ಞಾನಿಗಳು ಜಪಿಸುತ್ತಿರ್ದರೆಂಬುದೀ ವಚನದ ತಾತ್ಪರ್ಯಾರ್ಥ.

V - - - - - - - - - - - - - - - - - - - - - - - - - - - - - - - - -

ಚಂದ್ರಮನಂತೆ-ಷೋಡಶಕಲಾಭರಿತವಾದ ಶುಕ್ಲಪಕ್ಷದ ಸೋಮನ ಹಾಂಗೆ ಸುಜ್ಞಾನವಿದ್ಯಾಸುಲಕ್ಷಣಸಂಬಂಧವಾದ ಚಿಕ್ಕಲೆ ಚಿದಾತ್ಮಂಗೆ ದೊರೆಕೊಂಡಿತ್ತೆಂಬುದೀಗ ಚಂದ್ರಮನಂತೆ ಕಳೆ ಸಮನಿಸಿತ್ತೆನಗೆಯೆಂಬ ಶಬ್ದಕ್ಕರ್ಥ. [ಸಂಸಾರವೆಂಬ] ಸಂಸ್ಕೃತಿಯೆಂಬ, ರಾಹು-ವಿಧುಂತುದ, ಇನ್ನೆಂದಿಂಗೆ-ಇನ್ನಾವ ಕಾಲಕ್ಕೆ, ಮೋಕ್ಷವಹುದೊ-ಸಂಸಾರವೆಂಬ ಮಾಯಾಕಾಳೋರಗನಿಂದೆ ಬಿಡಲ್ಪಟ್ಟಂಥಾತನಾಗಿ ಪಾಶಮುಕ್ತಪರಶಿವನಲ್ಲಿ ಇನ್ನೆಂದಿಂಗೆ ಮೋಕ್ಷ ದೊರಕೊಂಡೀತೋ ಎಂದು ಆತ್ಮನು ಗುರೂಪಾವಸ್ಥೆಯ ಮಾಡುತಿರ್ದನೆಂಬುದೀಗ ಇನ್ನೆಂದಿಂಗೆ ಮೋಕ್ಷವಹುದೋ.

---

೧೦

**ಇಲಿ ಗಡಹನೊಡ್ಡಿದಲ್ಲಿ ಇಪ್ಪಂತಾಯಿತೆನ್ನ ಸಂಸಾರ. ತನು ಕೆಡುವನ್ನಕ್ಕ ಮಾಣದು. ಹೆಜಿರ ಬಾಧಿಸು[1]ವುದು[1] ತನು ಕೆಡುವನ್ನಕ್ಕ ಮಾಣದು ಹೆರರ ಛಿದ್ರಿಸುವುದು ತನು ಕೆಡುವನ್ನಕ್ಕ ಮಾಣದು. ಅಕಟಕಟಾ, ಸಂಸಾರಕ್ಕೆ ಆಸತ್ತೆ[2] ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - -

ಇಲಿ ಗಡಹನೊಡ್ಡಿದಲ್ಲಿ ಇಪ್ಪಂತೆ ಎನ್ನ ಸಂಸಾರ-ಇಲಿ ಹೆಗ್ಗಣಗಳೆಂಬಂಥವು ಹೆಚ್ಚಿ ಕಣಜ ಪಣತಾದಿಗಳನು ಕಡಿದು ಬಹುರಂಬಾರೂಢಿಯನ್ನು ಮಾಡುತ್ತಿರ್ದಲ್ಲಿ ಲೋಕದಾತ್ಮರುಗಳು ಕಂಡು ಇದಕೊಂದುಪಾಯವನ್ನು ಜೋಡಿಸಬೇಕೆಂದು ಅದಕ್ಕೊಂದು ಬೋನನು ಮಾಡಿಸಿ ಹಲಗೆಯನ್ನು ಜೋಡಿಸಿ ಮುಂಭಾಗದಲ್ಲಿ ಎರಡು ಕಟ್ಟಿಗೆಯನ್ನು ನಿಂದಿರಿಸಿ ಅದಕ್ಕೊಂದು ದಾರವನ್ನು ಕಟ್ಟಿ ಸಿಡಿಗಟ್ಟಿಗೆಯನ್ನು ಹೂಡಿ ಜಂಪಿನ ಕಡ್ಡಿಯನ್ನು ಅಡ್ಡಹಾಕಿ ಆ ಬೋನಿನೊಳಗೆ ಸೂಸಲನು ತಳಿದು ಬಿಟ್ಟಿದ್ದಲ್ಲಿ ಇಲಿಹೆಗ್ಗಣಗಳೆಂಬಂಥವು ಎಂದಿನ ಹಾಂಗೆ ಬಂದು ಆ ಬೋನಿನೊಳಯಿಕ್ಕೆ ಹೊಕ್ಕು ಸೂಸಲನು ತಿಂಬುವಂಥ ವೇಳೆಯಲ್ಲಿ ಜಂಪಿನಕಟ್ಟಿಗೆ ಸಿಡಿದು ಹಲಗೆಯನು ಮುಚ್ಚಿಕೊಂಡುಬಿಡುತ್ತಿಹುದು. ಅಷ್ಟರೊಳಗೆ ಆತ್ಮರುಗಳು ಕಂಡು ಹೊಡೆದು ಕೊಂದುಬಿಡುತ್ತಿಹರು ಹಾಂಗೆ, ಇಲ್ಲಿ ಬೋನಿನ ಹಾಂಗೆ ದೇಹ ಹಲಗೆಯ ಹಾಂಗೆ ಮರವೆ ಕಟ್ಟಿಗೆಯ ಹಾಂಗೆ ಮೂಲ ಅಹಂಕಾರದಾರದ ಹಾಂಗೆ ಮಾಯಾಪಾಶ ಸಿಡಿಗಟ್ಟಿಗೆಯ ಹಾಂಗೆ ಇಂದ್ರಿಯಂಗಳು ಜಂಪಿನ ಕಡ್ಡಿಯ ಹಾಂಗೆ ವಿಷಯಂಗಳು ಸೂಸಲಿನ ಹಾಂಗೆ ಪ್ರಾರಬ್ಧಭೋಗ ಇಲಿಹೆಗ್ಗಣಗಳ ಹಾಂಗೆ ಜೀವನು ಆತ್ಮರುಗಳ ಹಾಂಗೆ ಕಾಲಕಾಮಮಾಯಾದಿಗಳು. ಈ ದೇಹವೆಂಬ ಗಡಹದಲ್ಲಿರ್ಪ ಮೂಲ ಅಹಂಕಾರವೆಂಬ ಕಟ್ಟಿಗೆ ನವಪಾಶವೆಂಬ ದಾರವನ್ನು ತೊಡರಿಸಿ ಇಂದ್ರಿಯಂಗಳೆಂಬ ಸಿಡಿಗಟ್ಟಿಗೆ ವಿಷಯಂಗಳೆಂಬ ಜಂಪಿನಕಡ್ಡಿಯನ್ನು ಅಡ್ಡಹಾಕಿ ಪ್ರಾರಬ್ಧಭೋಗವೆಂಬ ಸೂಸಲನು

ತಳೆದುಬಿಟ್ಟಿರ್ದಲ್ಲಿ ಈ ದೇಹ ಸಂಬಂಧವಾದ ಪ್ರಾರಬ್ಧಭೋಗವನು ಪಡದನುಭವಿಸಲ್ಪಟ್ಟಂಥ ಜೀವರುಗಳಿಗೆ ಕಾಲಕಾಮರ ಶಿಕ್ಷೆ ಉಂಟಾಗುತ್ತಿಹುದು, ಆಯಿತ್ತು-ಆ ರೀತಿಯಾಯಿತ್ತು, ಎನ್ನ ಸಂಸಾರ-ಎನ್ನ ದೇಹಸಂಸಾರದ ವರ್ತನೆ, ಕೆಡುವನ್ನಕ್ಕ-ನಷ್ಟವಾಗುವ ಪರಿಯಂತರವು, ಮಾಣದು-ಬಿಡುಗಡೆಯಾಗದು.

ಹೆಜಿರ ಬಾಧಿಸುವುದು-ಪರರುಗಳನ್ನು ಚಬಕು ಜೇರುಬಂದುಗಳಿಂದ ಹೊಡದು ಸೆರೆಸಂಕೋಲಿಯನ್ನು ಹಾಕಿಸಿ ಬಾಧೆ ಬಡಿಸುವಂಥದು, ತನು ಕೆಡುವನ್ನಕ್ಕ-ದೇಹದ ವರ್ತನೆ ನಷ್ಟವಾಗುವ ಪರಿಯಂತರ, ಮಾಣದು-ಬಿಡುಗಡೆಯಾಗದು. ಹೆಜಿರ ಛಿದ್ರಸುವುದು-ಪರರುಗಳ ಒಂದು ವಸ್ತುವನ್ನು ನೋಡಿಕೊಡಿ ಕಟ್ಟಿಕೊಡಿಯೆಂದು ಕೊಟ್ಟಲ್ಲಿ ತಸ್ಕರವೃತ್ತಿಯಿಂದ ಅಪಹರಿಸುವಂಥದು, ತನು ಕೆಡುವನ್ನಕ್ಕ-ದೇಹದ ವರ್ತನೆ ನಷ್ಟವಾಗುವ ಪರಿಯಂತರ, ಮಾಣದು-ಬಿಡದು.

ಅಕಟಕಟಾ-ಅಯ್ಯಯ್ಯೋ, ಸಂಸಾರಕ್ಕೆ-ದೇಹಸಂಸಾರಕ್ಕೆ, ಆಸತ್ತೆ-ಬಹು ಬೇಸರಂಬಟ್ಟೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II - - - - - - - - - - - - - - - - - - - - - - - - - - - - - - - -

ಇಲಿ ಗಡಹನೊಡ್ಡಿದಲ್ಲಿಪ್ಪಂತೆ-ಒಂದಾನೊಂದು ಮೂಷಕನಿಗೆ ಸಿಡಿಬಲೆಯನೊಡ್ಡಿ ಸೂಸಲವ[೧] ತಳಿದಿರ್ದಲ್ಲದರ ವಾಸನೆಗೆ ಹೋಗಿ ಅದನು ತಿಂದರೆ ಸತ್ತೇನು ಎಂಬುದ ಬಲ್ಲದು. ಬಲ್ಲಡೇನು ಬಿಟ್ಟು ಬಿಡಲಾರದು. ಹೀಂಗೆ ಅದನು ತಿಂದು ಸತ್ತುಹೋಗುವದು, ಹಾಂಗೆ ಈ ಜೀವನು ಮಲತ್ರಯಂಗಳ ನನುಭವಿಸಿದರೆ ಭವಕ್ಕೆ ಬಿದ್ದು ಹೋದೇನೆಂಬುದು ಬಲ್ಲನು. ಬಲ್ಲಡೇನು ಬಿಡಲಾರನೆಂಬುದರ್ಥ. ಎನ್ನ ಸಂ[illegible]ನು] ಕೆಡುವನ್ನಕ್ಕ ಮಾಣದು-ಎನ್ನ [೨][ಸಂಸ್ಕೃತಿಯು ಅಂಗ][೨] ನಷ್ಟವಾಗುವ ಪರಿಯಂತರವು ಬಿಡದು.

ಹೆಜಿರ ಬಾಧಿಸುವುದು ತನು ಕೆಡುವನ್ನಕ್ಕ ಮಾಣದು-ಅನ್ಯರುಗಳ ಜಡಿದು ಬಡಿದು ಬಾಧ್ಯಂಬಡಿಸುವಂಥದು ಅಂಗವು ಬಿದ್ದು ಹೋಗುವ ಪರಿಯಂತರವು ಬಿಡದು. ಹೆಜಿರ ಛಿದ್ರಿಸುವುದು ತನು ಕೆಡುವನ್ನಕ್ಕ ಮಾಣದು-ಅನ್ಯರುಗಳ ಧನಕನಕವಸ್ತುವಾಹನಾದಿಗಳನು ತಸ್ಕರವೃತ್ತಿಯಿಂದಪಹರಿಸಿಕೊಂಬುದು ಅಂಗವು ಬಿದ್ದುಹೋಗುವ ಪರಿಯಂತರವು ಬಿಡದು. ಅಕಟಕಟಾ ಸಂಸಾರಕ್ಕೆ ಆಸತ್ತೆ-ಅಯಿಲ ಆಯಿಲಾ ಈ ದೇಹಸಂಸ್ಕೃತಿಗೆ ಆಯಾಸಂಬಟ್ಟೆನೆಂಬುದರ್ಥ.

...............................

೧+ತಳಿದಿರುವರು (ಚ). ೨-೨ ದೇಹಸಂಸ್ಕೃತಿಯು (ಚ, ಜ).

III - - - - - - - - - - - - - - - - - - - - - - - - - - - - - - - -

1-1 ವದನು (ಡ). 2+ಆಸತ್ತೆ (ಡ).

.....................................

ಇಲಿ ಗಡಹನೊಡ್ಡಿದಲ್ಲಿಪ್ಪಂತೆನ್ನ ಸಂಸಾರ–ಮೂಷಕಂಗೆ ಸೂಸಲ ಹಾಕಿ ಬಿರಿಯನೊಡ್ಡಿದಲ್ಲಿ ಪತನವಾಗಿರುವ ಹಾಂಗೆ ಹೊನ್ನು ಹೆಣ್ಣು ಮಣ್ಣೆಂಬ ಮಾಯಾಸುಖದ ಪಾಶವು ಆತ್ಮಂಗೆ ಸಂಬಂಧವಾದಲ್ಲಿ ಪ್ರಪಂಚಿನಲ್ಲಿ ಮಗ್ನವಾಗಿರುತಿರ್ದಪನು ಎಂಬುದೀಗ, ತನು ಕೆಡುವನ್ನಕ್ಕ ಮಾಣದು_ದೇಹ ಭಾವದ ವ್ಯಾಪಾರವು ನಷ್ಟವಾಗುವತನಕಲೂ ಬಿಡದು. ಹೆಜಿರ–ಅನ್ಯರುಗಳ, ಬಾಧಿಸುವದನು–ಕೊಡುಯೆಂದು ಪೀಡಿಸುವದನು, ತನು ಕೆಡುವನ್ನಕ್ಕ ಮಾಣದು–ದೇಹ ವ್ಯಾಪಾರನಷ್ಟವಾಗುವ ಪರಿಯಂತರವು ಬಿಡದು. ಹೆಜಿರ–ಅನ್ಯರನು, ಛಿದ್ರಿಸುವದನು–ಸೂಕ್ಷ್ಮಾಲೋಚನೆಯಿಂದೆ ಅನ್ಯರ ದ್ರವ್ಯವನಪಹರಿಸುವದನು, ತನು ಕೆಡುವನ್ನಕ್ಕ–ಅಂಗದ ವ್ಯಾಪಾರ ನಷ್ಟವಾಗುವ ಪರ್ಯಂತರದಲು, [ಮಾಣದು–] ಬಿಡದು. ಅಕಟಕಟಾ_ಅಯ್ಯೋ ಅಯ್ಯೋ, ಸಂಸಾರಕ್ಕೆ–ಮನ ಮೊದಲಾದ ಕರಣಂಗಳ ವ್ಯಾಪಾರಕ್ಕೆ, ಆಸತ್ತೆ–ಅಲಸಿಗೆಯುಳ್ಳಾತನಾದೆನು, ಆಸತ್ತೆ–ನಿತ್ಯ ಕೃತ್ಯವ ಮಾಡಲಾರದೆ ಹತವಾದೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

V– – – – – – – – – – – – – – – – – – – – – – – – – – – – – – – – –

ಮೂಷಕಂಗೆ ಸೂಸಲ ಹಾಕಿ ಬಿರಿಯನೊಡ್ಡಿ ಕೆಡಹುವ ಹಾಂಗೆ ಹೊನ್ನುಹೆಣ್ಣುಮಣ್ಣು .......ಸುವದನು ಎಂಬುದೀಗ ಹೆಜಿರ ಛಿದ್ರಿಸುವದನು ಎಂಬುದರ್ಥ. ಶೀತೋಷ್ಣಾದಿಗಳುಂಟಾಗಿರುವ ಪರಿಯಂತರವು ಅನ್ಯರ ಪೀಡಿಸುವದನು ಎಂಬುದೀಗ ಹೆಜಿರ ಪೀಡಿಸುವದನು ಎಂಬ ಶಬ್ಧಕ್ಕರ್ಥ.

---

೧೫

**ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆನಗಾಯಿತ್ತಯ್ಯಾ! ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ! ಕರ್ತೃವೆ ಕೂಡಲಸಂಗಮದೇವಾ, ಇವ ತಪ್ಪಿಸಿ ಎನ್ನುವ ರಕ್ಷಿಸಯ್ಯಾ.**

I – – – – – – – – – – – – – – – – – – – – – – – – – – – – – – – – –

ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆನಗಾಯಿತ್ತಯ್ಯಾ!– ಕಪ್ಪೆಯೆಂಬಂಥದು ಮಾಗಿ ಮಳೆಗಾಲದಲ್ಲಿ ಹಳ್ಳ ಹೊಳೆ ಕೆರೆ ಬಾವಿ ಕುಂಟೆಗಳಲ್ಲಿ ನೀರನೆಳಲ ತಂಪನ್ನು ಆಶ್ರಯಿಸಿಕೊಂಡಿರುತ್ತಿಹುದು, ವಸಂತಕಾಲಕ್ಕೆ ಸೂರ್ಯನ ಆತಪಾಗ್ನಿಯು ತಾಳಲಾರದೆ ನೀರನೆಳಲ ತಂಪನ್ನು ಆಶ್ರಯಿಸಿಕೊಳಬೇಕೆಂದು ಹೋಗುತ್ತಿರುವಂಥ ವೇಳೆಯಲ್ಲಿ ವಸಂತಕಾಲದ ಮಧ್ಯಾಹ್ನವೇಳೆಯಲ್ಲಿ ಮಹಾಬಯಲಲ್ಲಿ ಸರ್ಪನೆಂಬುವಂಥದು ಹುತ್ತವನ್ನು ಬಿಟ್ಟು ಮೇಲಕ್ಕೆ ಬಂದು ಹೆಡೆಯನ್ನು ಎತ್ತಿಕೊಂಡು ಆಡುತ್ತಿರುವುದು. ಆ ಹೆಡೆ ಬುಡದಲಿ ಒಂದಿಷ್ಟು ತಂಪು ಇರುವುದು. ಆ ಕಪ್ಪೆಯೆಂಬಂಥದು ತಂಪನು ಕಂಡು ಆಶ್ರಯಿಸಿಕೊಳಬೇಕೆಂದು ಕುಪ್ಪಕುಪ್ಪಳಿಸುತ್ತ ಸಮೀಪಕ್ಕೆ ಬಂದಲ್ಲಿ ಆ ಸರ್ಪನು ಕಂಡು ಮುರಿದು ನುಂಗಿಬಿಡುತ್ತಿಹುದು. ಹಾಂಗೆ ಇಲ್ಲಿ ಸರ್ಪನ ಹಾಂಗೆ ದೇಹ ಹೆಡೆಯ ಹಾಂಗೆ ಇಂದ್ರಿಯಂಗಳು ತಂಪಿನ ಹಾಂಗೆ ವಿಷಯಂಗಳು ಕಪ್ಪೆಯ ಹಾಂಗೆ ಜೀವನು. ಆ ದೇಹೇಂದ್ರಿಯ ವಿಷಯಂಗಳ ತಂಪನು ಆಶ್ರಯಿಸಲ್ಪಟ್ಟಂಥ ಜೀವನಿಗೆ ಕಾಲಕಾಮರ ಶಿಕ್ಷೆ ಉಂಟಾಗುತ್ತಿಹುದು, ಎನಗಾಯಿತ್ತಯ್ಯಾ–ಎನಗಾರೀತಿ ಉಂಟಾಯಿತ್ತಯ್ಯಾ.

ಅಕಟಕಟಾ–ಲಿಂಗವೆ ಲಿಂಗವೆ, ಸಂಸಾರ–ಈ ದೇಹ ಸಂಸಾರ, ವೃಥಾ ಹೋಯಿತ್ತಲಾ!... ವ್ಯರ್ಥಸ್ಯವಾಗಿ ಹೋಯಿತ್ತಲ್ಲಾ. ಕರ್ತೃವೆ–ಪಂಚ ಕೃತ್ಯಂಗಳಿಗೊಡೆಯುನಾದಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಇವ ತಪ್ಪಿಸಿ_ಈ ದೇಹೇಂದ್ರಿಯ ವಿಷಯಂಗಳ ತಂಪನು ಆಶ್ರಯಿಸಿಕೊಳಲ್ಪಟ್ಟ ಜೀವನ ವರ್ತನೆಯನ್ನು ತೊಲಗಿಸಿ ನಷ್ಟವ ಮಾಡಿಸಿ, ಎನ್ನುವ–ನನ್ನನು, ರಕ್ಷಿಸಯ್ಯಾ–ದೇಹವಳಿದು ಆಚಾರಲಿಂಗವಾಗಿ ಇಂದ್ರಿಯಂಗಳಳಿದು ಲಿಂಗೇಂದ್ರಿಯಂಗಳಾಗಿ ವಿಷಯಂಗಳಳಿದು ಲಿಂಗವಿಷಯಂಗಳಾಗಿ ಜೀವವಳಿದು ಸಜ್ಜೀವಸ್ವರೂಪವಾಗಿ ಇವೆಲ್ಲವ ನಿವೃತ್ತಿಯಂ ಮಾಡಿ ಅಳವಡಿಸೆಲೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – – – – –

ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆನಗಾಯಿತ್ತಯ್ಯಾ !–ಮಂಡೂಕನು ಸರೀಸೃಪನ ಛಾಯದಲ್ಲಿ ಹೇಂಗೆ ಹೆದರಿ ನೆಲಕ್ಕೆ ಹತ್ತಿಕೊಂಡಿಹುದು ಹಾಂಗೆ ಈ ಜೀವನು ಮಲತ್ರಯಂಗಳನನುಭವಿಸಿದರೆ ಆ ಮಾಯಾಕಾಳೋರಗನಾವಾಗ ಬಂದು ಮುರಿದು [1]ಓದೀತೊ[1] ಎಂಬ ಭೀತಿಯು ಆತ್ಮನಿಗೆ ಉಂಟಾಯಿತ್ತಯ್ಯಾ. ಅಕಟಕಟಾ, ಸಂಸಾರ ವೃಥಾ [2]ಹೋಯಿತ್ತಲ್ಲಾ–ಅಯ್ಯಯ್ಯೋ ಈ ದೇಹಸಂಸ್ಕೃತಿಯು ಅಪ್ರಯೋಜನ ಪ್ರಾಪ್ತಿಗತವಾಯಿತ್ತಲ್ಲಾ. ಕರ್ತೃವೆ ಕೂಡಲಸಂಗಮದೇವಾ ಇವ ತಪ್ಪಿಸಿ ಎನ್ನುವ ರಕ್ಷಿಸಯ್ಯಾ–ಪಂಚಕೃತ್ಯಂಗಳಿಗಧಿಕಾರಿಯಾದ ಎಲೆ ಶಿವನೆ ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಕ್ರಿಯಾಘನಗುರುವಾಗಿ ಬಂದು ವೇಧಾಮಂತ್ರಕ್ರೀಯೆಂಬ ದೀಕ್ಷಾತ್ರಯಂಗಳಿಂದ ಈ ಮಲತ್ರಯಂಗಳನು ಹೊರಚ್ಚಮಾಡಿ ನಿನ್ನ ಪಾದೋದಕ ಪ್ರಸಾದವನು ಕೊಟ್ಟು ಎನ್ನನು ಸಲಹಯ್ಯಾ.

..............................................

೧–೧ ಮಾಡೀತೋ (ಚ). ೨+ಯ (ಚ).

III – – – – – – – – – – – – – – – – – – – – – – – – – – – – – – – –

ಮಂಡೂಕನು ಸೂರ್ಯತಾಪಕ್ಕಳ್ಕಿ ಘಟಸರ್ಪನ ಹೆಡೆಯ ನೆಳಲಲ್ಲಿರುವ ಹಾಂಗೆ ವಿಷಯವಿಕಾರಮಾಯಾಕಾಳೋರಗನ ಜ್ಞಾನಚ್ಛಾಯೆಯು ಆತ್ಮಂಗೆ ದೊರೆಕೊಂಡಿತ್ತೆಂಬುದೀಗ ಕಪ್ಪೆ ಸರ್ಪನ ನೆಳಲಲಿಪ್ಪಂತೆನಗಾಯಿತ್ತು ಎಂಬ ಶಬ್ದಕ್ಕರ್ಥ. ಅಕಟಕಟಾ–ಅಯ್ಯೋ ಅಯ್ಯೋ, ಸಂಸಾರ–ಕಾಯಜೀವಸಂಸಾರವು, ವೃಥಾಹೋಯಿತ್ತಲ್ಲಾ !–ಜನನಮರಣಕ್ಕೊಳಗಾಗಿ ವ್ಯರ್ಥವಾಗಿ ಹೋಯಿತ್ತಲಾ, ಕರ್ತೃವೆ–ಎನ್ನ ತನುಮನಪ್ರಾಣಂಗಳಿಗೆ ಇಷ್ಟಪ್ರಾಣಭಾವಲಿಂಗಸ್ವರೂಪಿನಿಂದ ಒಡೆಯುನಾದಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಇವ ತಪ್ಪಿಸಿ–ವಿಷಯವಿಕಾರಮಾಯಾ ಕಾಳೋರಗನಜ್ಞಾನಚ್ಛಾಯೆಯನು ಹೊರಚ್ಚಮಾಡಿ, ಎನ್ನುವ–ನನ್ನನು, ರಕ್ಷಿಸಯ್ಯಾ–ಪಾಲಿಸಯ್ಯಾ.

I – – – – – – – – – – – – – – – – – – – – – – – – – – – – – – – – –

ಮಂಡೂಕನು ಸೂರ್ಯತಪಕ್ಕಳ್ಕಿ ಘಟಸರ್ಪನ ಹೆಡೆಯು ನೆಳಲಲ್ಲಿಪ್ಪಂತೆ ವಿಷಯವಿಕಾರಮಾಯಾಕಾಳೋರಗನ ಛಾಯೆ ಆತ್ಮಂಗೆ ದೊರೆಕೊಂಡಿತ್ತೆಂಬುದೀಗ ಕಪ್ಪೆ ಹೆಡೆಯ ನೆಳಲಲ್ಲಿರ್ಪಂತೆನಗಾಯಿತ್ತೆಂಬುದೀಗರ್ಥ.

---

೧೨

**ಶೂಲದ ಮೇಲಣ 'ಭೋಗ'ವೇನಾದಡೇನೊ? ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ! ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ?**

V - - - - - - - - - - - - - - - - - - - - - - - - - - - -

ಶೂಲದ ಮೇಲಣ ಭೋಗವೇನಾದಡೇನೊ ?–ಪ್ಯಾಟಿ ಮನೆ ಪುರಪಟ್ಟಣಸ್ಥಾನಂಗಳಲ್ಲಿ ಕಳವು ಹಾದರವ ಮಾಡಿದಂಥ ಆತ್ಮರುಗಳನ್ನು ತಳವಾರರು ಕಂಡುಹಿಡಿದು, ನಮ್ಮಿಚ್ಛೆಯಲ್ಲಿ ಶಿಕ್ಷೆಯನ್ನು ಮಾಡಿದರೆ ರಾಜನಿಂದ ಆಜ್ಞೆ ಬಂದೀತೆಂದು ಹಿಡಿದುಕೊಂಡು ಹೋಗಿ ದೊರೆಗೆ ಒಪ್ಪಿಸಿಕೊಟ್ಟಲ್ಲಿ ಆ ದೊರೆಯು ನಾಲ್ವರ ಪಂಡಿತರ ಕರಸಿ ಕಳವು ಹಾದರವ ಮಾಡಿದವರಿಗೆ ಏನು ಶಿಕ್ಷೆಮಾಡಬೇಕೆಂದು ಧರ್ಮಶಾಸ್ತ್ರವ ತೆಗೆಸಿ ನೋಡಿದಲ್ಲಿ ಅದರೊಳಗೆ ಕಳವು ಹಾದರವ ಮಾಡಿದಂಥ ಆತ್ಮರುಗಳನ್ನು ಶೂಲಕ್ಕೆ ಹಾಕುವುದೆಂದು ಹೇಳುವರು. ಹೇಳಿದಲ್ಲಿ ಅ ದೊರೆಯು ಪ್ರಧಾನಿಯನ್ನು ಕರಸಿ ಇವನ ನಿನ್ನ ಮನೆಗೆ ಕರೆದುಕೊಂಡು ಹೋಗಿ ಒಂದು ದಿವಸ ಪರಿಯಂತರದಲ್ಲಿ ಮನೆಯಲ್ಲಿ ಮಡಗಿಕೊಂಡಿರ್ದು, ಅವನು ಉಂಡೇನೆಂಬಂತಹ ಅನ್ನವ ನೀಡಿಸಿ ಹೊದ್ದೇನೆಂಬಂತಹ ಹೊದಿಕೆಯನ್ನು ಕೊಡಿಸಿ ಮಲಗುವುದಕ್ಕೆ ಮಂಚವನ್ನು ಕೊಡಿಸಿ ಸ್ತ್ರೀಭೋಗ ಮೊದಲಾದ ಸಮಸ್ತ ಭೋಗವನ್ನು ಕೊಡಿಸಿ ಶೂಲಕ್ಕೆ ಹಾಕುವುದೆಂದು ಹೇಳಿದಲ್ಲಿ ಆ ಪ್ರಧಾನಿಯು ಅದೇ ರೀತಿಯಲ್ಲಿ ಅವನ ತನ್ನ ಮನೆಗೆ ಕರಕೊಂಡು ಹೋಗಿ ಒಂದು ದಿವಸ ಪರಿಯಂತರದಲ್ಲಿ ಮನೆಯೊಳಗೆ ಮಡಗಿಕೊಂಡು ಅವನು ಉಂಡೇನೆಂಬುವಂತಹ ಅನ್ನವ ನೀಡಿಸಿ ಹೊದ್ದೇನೆಂಬಂತಹ ಹೊದಿಕೆಯನ್ನು ಕೊಡಿಸಿ ಮಲಗುವುದಕ್ಕೆ ಮಂಚವ ಕೊಡಿಸಿ ಸ್ತ್ರೀಭೋಗ ಮೊದಲಾದ ಎಲ್ಲಾ ಭೋಗವನು ಕೊಡಿಸಿ ಬೆಳಗಾಗಿ ಇಂಡೆ ದಂಡೆ ಕುಸುಮಂಗಳಿಂದಲಂಕರಿಸಿ ಬೀದಿ ಬಾಜಾರದಲ್ಲಿ ಮೆರಸುತ್ತ ಶೂಲಕ್ಕೆ ಹಾಕುವುದಕ್ಕೆ ತೆಗೆದುಕೊಂಡು ಹೋಗುವಂಥ ವೇಳೆಯಲ್ಲಿ ಇನ್ನೊಂದು ಗಳಿಗೆಗೆ ಸತ್ತುಹೋಗುತ್ತೈದೀನಿ ಈ ಭೋಗವೆಂಬುವಂಥದು ಎನಗಾದಡೇನು? ಆಗದಿರ್ದಡೇನು? ಎಂಬುವನ ಹಾಂಗೆ ಇಲ್ಲಿ ಶೂಲದ ಹಾಂಗೆ ಮೂಲ ಅಹಂಕಾರ, ಭೋಗದ ಹಾಂಗೆ ಅಷ್ಟಭೋಗ ಮಲತ್ರಯಂಗಳು, ಕಳ್ಳನ ಹಾಂಗೆ ಜೀವನು, ಮೂಲ ಅಹಂಕಾರಸ್ವರೂಪವಾದ ಅಷ್ಟಭೋಗಮಲತ್ರಯಂಗಳನು ಪಡೆದನುಭವಿಸಲ್ಪಟ್ಟ ಜೀವರುಗಳಿಗೆ ಕಾಲಕಾಮರ ಶಿಕ್ಷೆ ಉಂಟಾಗುತ್ತಿಹುದು.

ನಾನಾವರ್ಣದ ಸಂಸಾರ–ಒಂದು ಕೆಂಪಿನ ಮಲ ಒಂದು ಬಿಳಿಪಿನ ಮಲ ಒಂದು ಕಪ್ಪಿನ ಮಲ, ಇವಲ್ಲದೆ ಷಡ್ವಿಧವರ್ಣಸ್ವರೂಪವಾದ ದೇಹಸಂಸಾರವು; ಹಾವು ಹಾವಡಿಗನ ಸ್ನೇಹದಂತೆ–ಒಬ್ಬಾನೊಬ್ಬ ಜಾಂಗುಲಿಕನೇನಾದರೂ ಹಾವಿನ ಬುಟ್ಟಿ ಹಾಲು ಬಟ್ಟಲು ನಾಗಸರಕಾಯಿ ಮೊದಲಾದವನ್ನು ತೆಗೆದುಕೊಂಡು ಹುತ್ತಗಳಿರುವಂಥ ಸ್ಥಾನಕ್ಕೆ ಹೋಗಿ ಸರ್ಪನಿಲ್ಲದ ಹುತ್ತವೇ

ಚೂಪನಾಗಿ ಇರುವುದು, ಸರ್ಪನಿರ್ದಂಥ ಹುತ್ತವೇ ಬೋಡಾಗಿ ಇರುವುದು, ಆ ಬೋಡನಾಗಿದ್ದ ಹುತ್ತದ [೧]ತಾವ[೧]ಕ್ಕೆ ಹೋಗಿ ಹಾವಿನ ಪುಟ್ಟಿಯನಿಟ್ಟು ಅದರೊಳಗೆ ಹಾಲುಬಟ್ಟಲನು ಮಡಗಿ ನಾಗಸರಕಾಯಿಯನು ಊದಿದಲ್ಲಿ ಆ ಸರ್ಪನೆಂಬಂಥದು ಶಬ್ದವನ್ನು ಕೇಳಿ ಗಾನಪ್ರಿಯನಾಗಿ ಭೋರೆಂದಾಡುತ್ತ ಮೇಲಕ್ಕೆ ಬಂದು ಹಾಲನು ಕುಡಿವುತಿರುವಂಥ ವೇಳೆಯಲ್ಲಿ ತಡೆಗಟ್ಟಿ ಯಂತ್ರದ ಕಡ್ಡಿಯಿಂದ ಒತ್ತಿ ಮೇಲೆ ಪುಟ್ಟಿಯನ್ನು ಮುಚ್ಚಿ ಮನೆಗೆ ತೆಗೆದುಕೊಂಡು ಬಂದು ನಾಲ್ಕೆಂಟುದಿವಸ ಮರೆಬಿಟ್ಟು ಪ್ಯಾಟಿ ಮನೆ ಪುರ ಪಟ್ಟಣಸ್ಥಾನಂಗಳಿಗೆ ತೆಗೆದುಕೊಂಡು ಹೋಗಿ ಆಡಿಸಿದಲ್ಲಿ ನೋಡಿದಂಥ ಆತ್ಮರುಗಳೊಳಗೆ ಕೆಲವಾತ್ಮರುಗಳು ದುಡ್ಡುದುಗ್ಗಾಣಿಯ ಕೊಡುವರು, ಕೆಲವರು ದವಸಧಾನ್ಯಂಗಳ ಕೊಡುವರು, ಕೆಲವರು ವಸ್ತ್ರ ಕಪ್ಪಟಂಗಳನು ಕೊಡುವರು. ಅದನ್ನು ತೆಗೆದುಕೊಂಡು ಹೋಗಿ ತಾನು ತನ್ನ ಹೆಂಡರುಮಕ್ಕಳು ಘಟ್ಟರಕ್ಷಣವ ಮಾಡಿಕೊಳ್ಳುತ್ತಿಹನು. ಆ ಸರ್ಪನಿಗೆ ಹಾಕಿರುವಂಥ ತಡೆಯನು ತನ್ನ ದೇಹಾವಸಾನ ಪರಿಯಂತರದಲ್ಲಿ ಬಿಡಬಾರದೆಂಬಂಥ ಭಾವವು ಆ ಜಾಂಗುಲಿಕನಲ್ಲಿ ಉಂಟಾಗಿರ್ಪುದು. ಆ ಸರ್ಪನೆಂಬಂಥದು ಇವನು ಹಾಕಿರುವಂಥ ತಡೆಯನ್ನು ತಪ್ಪಸಿ, ಇವನ ಕಚ್ಚಿ ವಿಷವನ್ನು ಉಗುಳಿ ಮರಣವನ್ನು ಐದಿಸಿ ಘೋರಾರಣ್ಯಕ್ಕೆ ಹೊರಟುಹೋಗಬೇಕೆಂಬಂಥ ಭಾವವು ಸರ್ಪನಲ್ಲಿ ಉಂಟಾಗಿರ್ಪುದು. ಇರ್ವರಿಗೂ ಅಸ್ತಂಬೆಸ್ತೋಪಾದಿಯಲ್ಲಿ ಹೇಂಗೆ ಕೂಡಿರುತ್ತಿಹುದೊ ಹಾಂಗೆ ಇಲ್ಲಿ ಸರ್ಪನ ಹಾಂಗೆ ಮನೋಕುಂಡಲಿ, ಜಾಂಗುಲಿಕನ ಹಾಂಗೆ ಜೀವನು, ಮನೋಕುಂಡಲಿಯ ಸಖತ್ವವನ್ನು ಮುಂದುಗೊಂಡು ಚರಿಸಲ್ಪಟ್ಟ ಜೀವನಿಗೆ ಕಾಲಕಾಮರ ಶಿಕ್ಷೆ ಉಂಟಾಗುತ್ತಿಹುದು.

ತನ್ನಾತ್ಮ ತನಗೆ_ಕರ್ತೃವಾದ ಪರಶಿವಲಿಂಗವು ತನಗೆ, ಹಗೆಯಾದ ಬಳಿಕ–ವೈರಿಯಾಗಿ ತನ್ನನೇ ಜನನಮರಣಂಗಳಲ್ಲಿ ತಂದು ಸಂಹರಿಸಿದ ಮೇಲೆ, ಬಿನ್ನಾಣವುಂಟೆ–ಬಿಡಿಸಿಕೊಂಬುವುದಕ್ಕೆ ಬ್ರಹ್ಮವಿಷ್ಣ್ವಾದಿಗಳಿಗಳವೆ, ಮಹಾದಾನಿ–ಭಕ್ತರುಗಳಿಗೆ ಮಹದಾನಂದ ಸುಖವನ್ನು ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ[೨] ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.[೨]

..........................

೧–೧ ಸ್ಥಾನ (ಗ), ೨–೨ x (ಕ).

II – – – – – – – – – – – – – – – – – – – – – – – – – – – – – – –

1–1 ವಿಭೋಗ (ಚ, ಜ).

..........................

ಶೂಲದ ಮೇಲಣ ವಿಭೋಗವೇನಾದಡೇನೊ ?–ಅಹಂಕಾರವೆಂಬ ದಾರುದಸಿಯ ಅಗ್ರದಲ್ಲಿಯ ಅಷ್ಟಭೋಗ ಪಂಚವಿಷಯ ಮಲತ್ರಯಂಗಳೆಂಬ ವಿಶೇಷವಾದ ಸುಖವು ಆವುದಾದರೇನು? ಆ ಮಲತ್ರಯಂಗಳನನುಭವಿಸಿ ಕಡೆ ಕಂಟಣಿಸಿ ಜನ್ಮದತ್ತ ಸಿಡಿದುಹೋಗುವುದೇ ಪ್ರಾಪ್ತಿಯಾಗಿರುವುದಲ್ಲದೆ ಅಲ್ಲೇನೂ ಪ್ರಯೋಜನವಿಲ್ಲವೆಂಬುದರ್ಥ ನಾನಾವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ–ಹಲವು ಪ್ರಕಾರವಾದ ಸಂಸ್ಕೃತಿಯು ಶಂಕಾ ವಿಷಸಂಬಂಧವಾದ

ಮಾಯಾ ಕಾಳೋರಗವು. ಆ ವಿಷಯಸುಖವನು ಪಡದನುಭವಿಸುವ ಜೀವನೆಂಬ ಜಾಂಗುಲಿಗ[೩][ನು][೩] ಈ ಮಲತ್ರಯಂಗಳನು ಸುಖದಲ್ಲಿ ಅನುಭವಿಸಿ, ಇದಕ್ಕೆ ಸಿಕ್ಕದೆ ತನ್ನ ತಪ್ಪಿಸಿಕೊಂಡು ಹೋಗಬೇಕೆಂಬ ಕೇಣಸರವು ಆ ಜೀವನಿಗುಂಟಾಗಿರ್ಪುದು. ಆ ಮಲತ್ರಯಂಗಳು ಇವನೆನ್ನ ಸುಖದಲ್ಲಿ ಅನುಭವಿಸಿ ಕಡೆಯಲ್ಲಿ ತನ್ನ ತಪ್ಪಿಸಿಕೊಳಬೇಕೆನುತ್ತೈದಾನೆ, ಇವನೆನ್ನೊಳಗಮಾಡಿಕೊಳಬೇಕೆಂಬ ಕೇಣಸರವು ಆ ಮಲತ್ರಯಂಗಳಗುಂಟಾಗಿರ್ಪುದೆಂಬುದರ್ಥ. ತನ್ನಾತ್ಮ ತನಗೇ ಹಗೆಯಾದ ಬಳಿಕ ಬಿನ್ನಾಣವುಂಟೆ– ಚೈತನ್ಯಸ್ವರೂಪವಾದ ವಸ್ತು ಆತ್ಮನಿಗೆ ಶತ್ರುವಾದ ಮೇಲೆ ಇನ್ನಾರಾದರೂ ಬಿಡಿಸಿಕೊಂಬವರಿದ್ದಾರೆ? ಇಲ್ಲವೆಂಬುದರ್ಥ.

............................

೩–೩+ ನ ಆ ಜೀವನು (ಚ, ಜ).

III – – – – – – – – – – – – – – – – – – – – – – – – – – – – – – –

1–1 ವಿಭೋಗ (ಡ).

..........................

ದಾದೋರ್ಚರದಸಿಯ ಮೇಲಣ ವಿಶೇಷವಾದಷ್ಟಮಹಾಭೋಗಂಗಳು ಎಷ್ಟು ದೊರಕೊಂಡರೂ ಮರಣ ತಪ್ಪದಿರುವ ಹಾಂಗೆ ಅಹಂಕಾರಯುಕ್ತವಾದ ದೇಹದ ಭಾಗಂಗಳು ಆತ್ಮನಿಗೆ ಎಷ್ಟು ದೊರಕೊಂಡಡೆಯೂ ತಾಪತ್ರಯದ ದುಃಖಕ್ಕೆ ಕಾರಣವಲ್ಲದೆ ಮುಕ್ತಿಗೆ ಹೊರತಾಗಿರ್ಪವೆಂಬುದೀಗ ಶೂಲದ ಮೇಲಣ ವಿಭೋಗವೇನಾದಡೇನೊ? ಎಂಬ ಶಬ್ದಕ್ಕರ್ಥ ನಾನಾವರ್ಣದ ಸಂಸಾರ–ಪುತ್ರಮಿತ್ರಕಳತ್ರಾ[೪]ದಿ ಹಲವು ಪ್ರಕಾರದ ಸಂಸ್ಕೃತಿಯು, ಸರ್ಪಜಾಂಗುಲಿಕರ ವಿಶ್ವಾಸದ ಹಾಂಗೆ ನಾನು ಮಾಯಾಪ್ರಪಂಚನು ಗೆದ್ದು ಹೋದೆಹೆನೆಂದೊಡೆ ಅದು ಗರುಡಮಂತ್ರದ ಹಾಂಗೆ ಮುಸುಕಿಕೊಂಡಿಪ್ಪುದು ಎಂಬುದೀಗ ಹಾವು ಹಾವಡಿಗನ ಸ್ನೇಹದಂತೆ ಎಂಬ ಶಬ್ದಕ್ಕರ್ಥ. ತನ್ನ ಸ್ವರೂಪವಾದ ಮನವು ತನ್ನ ಜ್ಞಾನಕ್ಕೆ ವೈರಿಯಾದ ಮೇಲೆ ಸುಜ್ಞಾನದ ಬಣಿತೆಯು ದೊರಕೊಳ್ಳಲಜಿಯದು ಎಂಬುದೀಗ ಮತ್ತಂ ತನ್ನ ಸುಕೃತದಿಂದ ತಾನೇ ಮೋಕ್ಷವ ಹಡೆಯಬೇಕೆಂಬ ಜ್ಞಾನ ಪ್ರಕೃತಿಯಿಂದೆ ವಿಕರಿಸಿ ಕೆಟ್ಟಬಳಿಕ ಸುಜ್ಞಾನದ ಬಣಿತೆ ಇನ್ನೆತ್ತಣದು ಎಂಬುದೀಗ ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೆ ಎಂಬ ಶಬ್ದಕ್ಕರ್ಥ. ಮಹಾದಾನಿ–ಆರಾರೂ ಕೊಡಬಾರದ ನಿತ್ಯಮುಕ್ತಿಯೆಂಬ ವರಗಳನ್ನು ಕೊಡುತ್ತಿರ್ದಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..................................................

೪ "ನಿವೃತ್ತಿಕರಿಸಿಹೆನೆಂದು (ವ ೩).....ದಿ ಹಲವು ಪ್ರಕಾರದ" ಎಂಬಲ್ಲಿ ತೋರಿಸಿದಂತೆ ತೆರವಿದ್ದ ಸ್ಥಳದಲ್ಲಿಯ ಪಾಠವನ್ನೊಳಗೊಂಡ ೨ ಗರಿಗಲು 'ಟ' ಪ್ರತಿಯಲ್ಲಿ ಕಳೆದು ಹೋಗಿವೆ.

IV– – – – – – – – – – – – – – – – – – – – – – – – – – – – – – –

1–1 ವಿಭೋಗ (ತ).

...........................

ಗಾರುಡಿಗನು ಹಾವಿನ ಸಂಗದಿಂದ ಸುಖವ ಪಡೆದೆನೆಂದು ಹಾವಿನ ಕೈಯಲ್ಲಳಿದಂತೆ ಆತ್ಮನು ಅಲ್ಪದೇಹಸಂಸಾರಸುಖಕ್ಕೆ ಮೆಚ್ಚಿ ಸತ್ತು ಹುಟ್ಟುತ್ತಿಹನೆಂಬುದೀಗ ಶೂಲದ ಮೇಲಣ ವಿಭೋಗವೇನಾದಡೇನೊ? ನಾನಾವರ್ಣದ ಸಂಸಾರಸುಖವು [ಹಾವು] ಹಾವಡಿಗನ ಸ್ನೇಹದಂತೆಯೆಂಬ ಶಬ್ದಕ್ಕರ್ಥ, ಅಂತಪ್ಪ ದೇಹಸಂಸಾರ ಆತ್ಮಂಗೆ ಎಂತು ಬಂದಿತ್ತೆಂದಡೆ ಶಿವನು ತನ್ನ ತದಂಶವನೇ ಆತ್ಮರ ಮಾಡಿ, ಆ ಆತ್ಮರುಗಳನು ಹುಸಿ ದೇಹ ಸಂಸಾರಸುಖಕ್ಕೆ ಮೆಚ್ಚಿಸಿ ಭವದುಃಖಕ್ಕೀಡುಮಾಡಿ, ಶಿವ ತಾನೇ ವೈರಿಯಾಗಿ ನೋಡಿ ವಿನೋದಿಸುತಿರ್ದ ಬಳಿಕ ಬಿಡಿಸುವರಾರುಂಟು ಎಂಬುದೀಗ ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೆಂಬ ಶಬ್ದಕ್ಕರ್ಥ. ಅಂತಪ್ಪ ಆತ್ಮರುಗಳಿಗೆ ಮರಳಿ ಶಿವ ತಾನೆ ತನ್ನ ಮಹದ ಸುಖದ ಕರುಣಿಸಿ ಕೊಟ್ಟಂದಿಗಹುದೆಂಬುದೀಗ ಮಹಾದಾನಿ ಕೂಡಲಸಂಗಮದೇವಾ ಎಂಬ ಶಬ್ದಕ್ಕರ್ಥ.

V - - - - - - - - - - - - - - - - - - - - - - - - - - - - - -

ಶ್ವೇತಪೀತಾದಿ ಬ್ರಾಹ್ಮಣ ಕ್ಷತ್ರಿಯಾದಿ ಸ್ತುತಿಯಶೋರೂಪಾದಿ ಹಲವು ವರ್ಣದ ಸಂಸಾರವೆಂಬುದೀಗ ನಾನಾವರ್ಣಯೆಂಬ [ಶಬ್ದ]ದರ್ಥ.

---

೧೩

**ಸಂಸಾರವೆಂಬ ಬಲೆಯಲ್ಲಿ ಸಿಲ್ಕಿ ಸದಿರಯ್ಯಾ, ಎನ್ನುವನು ಕಾಯಯ್ಯಾ, ಕಾಯಯ್ಯಾ, ಹುರುಳಿಲ್ಲ! ಹುರುಳಿಲ್ಲ! ಕೂಡಲಸಂಗಮದೇವಾ, ಶಿವಧೋ! ಶಿವಧೋ!**

I- - - - - - - - - - - - - - - - - - - - - - - - - - - - - -

ಸಂಸಾರವೆಂಬ ಬಲೆಯಲ್ಲಿ ಸಿಲ್ಕಿಸದಿತಯ್ಯಾ : ಸಂಸಾರವೆಂಬ-ಹೊನ್ನು ಹೆಣ್ಣು ಮಣ್ಣೇ ಮುಖ್ಯವಾದ ಸಕಲಸಂಸಾರ ಪ್ರಪಂಚೆಂಬ, ಬಲೆಯಲ್ಲಿ-ಪಾಶದಲ್ಲಿ, ಸಿಲ್ಕಿಸದಿರಯ್ಯಾ-ಮಧುಮಕ್ಷಿಕನ ಹಾಂಗೆ ವಶಗತನ ಮಾಡದಿರಯ್ಯಾ ಎನ್ನುವನು-ನನ್ನನು, ಕಾಯಯ್ಯಾ-ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚವನ್ನು ನಷ್ಟವಮಾಡಿಬಿಟ್ಟು ರಕ್ಷಣವ ಮಾಡಯ್ಯಾ, ಕಾಯಯ್ಯಾ-ನೀವೇ ಗುರುವಾಗಿ ಬಂದು ಲಿಂಗಾಂಗಸಂಬಂಧವ ಕರುಣಿಸಿಕೊಟ್ಟು ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣವ ಮಾಡಯ್ಯಾ. ಹುರುಳಿಲ್ಲ! ಹುರುಳಿಲ್ಲ!-ಎನ್ನಲ್ಲಿ ಭಕ್ತಿಯಿಲ್ಲ ಜ್ಞಾನವಿಲ್ಲ ವೈರಾಗ್ಯವಿಲ್ಲ, ಅರುಹು ಆಚರಣೆಗಳೊಂದೂ ಉಂಟಾಗಿಲ್ಲವು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಶಿವಧೋ! ಶಿವಧೋ!-ಅರಿಯೋ ಮೊರೆಯೋ ಎಂದು, ಅದು ಕಾರಣ ಪರಮಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೧೪

**ನಾನೊಂದ ನೆನೆದಡೆ ತಾನೊಂದ ನೆನೆವುದು. ನಾನಿತ್ತಲೆಳೆದಡೆ ತಾನತ್ತಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇಱೆ ಎನ್ನ ಬಳಲಿಸಿ ಕಾಡಿತ್ತು. ಕೂಡಲಸಂಗಮದೇವನ ಕೂಡಿಹೆನೆಂದಡೆ, ತಾನೆನ್ನ ಮುಂದುಗೆಡಿಸಿತ್ತು ಮಾಯೆ!.**

I - - - - - - - - - - - - - - - - - - - - - - - - - - - - - - - - - - -

ನಾನೊಂದ ನೆನೆದಡೆ ತಾನೊಂದ ನೆನೆವುದು : ನಾನೊಂದ ನೆನೆದಡೆ, ನಾನು–ಆತ್ಮನು, ಒಂದು ನೆನೆದಡೆ–ಶಿವಶಾಸ್ತ್ರ ಶಿವಾಗಮ ಶಿವಪುರಾಣ ಆದ್ಯರ ವಚನ ಮೊದಲಾದವನು ಕೇಳಬೇಕೆಂದು ಇಚ್ಛಿಸಿದರೆ, ತಾನೊಂದ ನೆನೆವುದು : ತಾನು–ಮಾಯಾಶಕ್ತಿಯು, ಒಂದ ನೆನೆವುದು–ಹಾಳುಹರಟೆ ಸ್ಮರಲೀಲಾಪದ್ಯ ಕಾಳಗವಾರ್ತೆಯನು ಕೇಳಬೇಕೆಂದು ಇಚ್ಛಿಸುವುದು.

ನಾನಿತ್ತಲೆಳೆದಡೆ ತಾನತ್ತಲೆಳೆವುದು : ನಾನಿತ್ತಲೆಳೆದಡೆ, ನಾನು–ಆತ್ಮನು, ಇತ್ತಲೆಳೆದಡೆ–ಸಚ್ಚರಿತ್ರ ಸದಾಚಾರ ಸನ್ಮಾರ್ಗದೊಡನೆ ಕೂಡಿ ಆಚರಿಸಬೇಕೆಂದು ಇಚ್ಛಿಸಿದರೆ, ತಾನತ್ತಲೆಳೆವುದು : ತಾನು–ಮಾಯಾಶಕ್ತಿಯು, ಅತ್ತಲೆಳೆವುದು–ದುಶ್ಚರಿತ್ರ ದುರಾಚಾರ ದುರ್ಮಾರ್ಗದೊಡನೆ ಕೂಡಿ ಚರಿಸುವುದಕ್ಕೆ ಮುಂದುವರಿವುದು.

ತಾ ಬೇಱೆ ಎನ್ನನಳಲಿಸಿ ಕಾಡಿತ್ತು : ತಾ ಬೇಱೆ–ಮಾಯಾಶಕ್ತಿಯು ಬೇರೆ, ಎನ್ನನಳಲಿಸಿ ಕಾಡಿತ್ತು–"ಅಳಲು ಕ್ಲೇಶೇ" ಯೆಂದು ಕ್ಲೇಶವನ್ನು ಹುಟ್ಟಿಸಿ ಕಾಡಿತ್ತು, ಎನ್ನ ಕರಕಟ ಕಾಡಿತ್ತು. ತಾ ಬೇಱೆ ಎನ್ನ ಬಳಲಿಸಿ ಕಾಡಿತ್ತು : ತಾ ಬೇಱೆ–ಮಾಯಾಶಕ್ತಿಯು ಬೇರೆ ಎನ್ನ ಬಳಲಿಸಿ ಕಾಡಿತ್ತು–"ಬಳಲು ಬಹುದುಃಖೇ" ಯೆಂದು ದುಃಖವನ್ನು ಹುಟ್ಟಿಸಿ ಕಾಡಿತ್ತು, ಕರಕಟ ಕಾಡಿತ್ತು.

ಕೂಡಲಸಂಗಮದೇವನ ಕೂಡಿಹೆನೆಂದಡೆ–ಶಿವಶಾಸ್ತ್ರ ಶಿವಪುರಾಣ ಶಿವಾಗಮ ಆದ್ಯರ ವಚನ ಮೊದಲಾದವನ್ನು ಕೇಳಿ ಸಚ್ಚರಿತ್ರ ಸದಾಚಾಗ ಸನ್ಮಾರ್ಗದೊಡನೆ ಕೂಡಿ ಪರಶಿವಲಿಂಗದಲ್ಲಿ ಬೆದರಿಹೆನೆಂದಡೆ, ತಾನು–ಮಾಯಾಶಕ್ತಿಯು, ಎನ್ನ ಮುಂದುಗೆಡಿಸಿತ್ತು–ಹಾಳಹರಟೆ ಸ್ಮರಲೀಲಾಪದ್ಯ ಕಾಳಗದ ವಾರ್ತೆ ಮೊದಲಾದವನ್ನು ಕೇಳಿಸಿ ದುಶ್ಚರಿತ್ರ ದುರಾಚಾರ ದುರ್ಮಾಗದೊಡನೆ ಕೂಡಿ ಚರಿಸಿ ಮುಂದಾಗುವಂಥ ನಿಜಮೋಕ್ಷಕ್ಕೆ ತಪ್ಪುಗನ ಮಾಡಿತ್ತು, ಮಾಯೆ–ನಿನ್ನಿಂದುಂಟಾದ ಮಾಯಾಶಕ್ತಿಯು ಎಂಬ ದೃಷ್ಟೋಪಮಾನದ ಹಾಂಗೆ.

● ನಾನೊಂದ ನೆನೆದಡೆ ತಾನೊಂದ ನೆನೆವುದು : ನಾನೊಂದ ನೆನೆದಡೆ, ನಾನು–ಶರಣನು, ಒಂದ ನೆನೆದಡೆ–ತನುವಿನಲ್ಲಿ ಗುರು ಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡಬೇಕೆಂದು ಇಚ್ಛಿಸಿದರೆ, ತಾನೊಂದ ನೆನೆವುದು : ತಾನು–ಮಾಯಾಶಕ್ತಿಯು, ಒಂದ ನೆನೆವುದು–ಉಣಬೇಕು ಉಡಬೇಕು ತೊಡಬೇಕು ಭೋಗಿಸಬೇಕು ಷಟ್ಪ್ರಕಾರವಾದ ಸ್ತ್ರೀಯರುಗಳನ್ನು ಸಂಸರ್ಗವ ಮಾಡಬೇಕೆಂದು ಇಚ್ಛಿಸುವುದು.

ನಾನಿತ್ತಲೆಳದಡೆ ತಾನತ್ತಲೆಳೆವುದು : ನಾನು–ಶರಣನು, ಇತ್ತಲೆಳದಡೆ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಬೇಕೆಂದು ಇಚ್ಛಿಸಿದರೆ, ತಾನತ್ತಲೆಳೆವುದು : ತಾನು–ಮಾಯಾಶಕ್ತಿಯು, ಅತ್ತಲೆಳೆವುದು–ಹಲವುನೆನಹ ಹಲವುಭಾಷೆ ಹಲವುವರ್ತನೆಯೊಡನೆ ಕೂಡಿ ಚರಿಸುವುದಕ್ಕೆ ಮುಂದುವರಿವುದು.

ತಾ ಬೇಱೆ ಎನ್ನನಳಲಿಸಿ ಕಾಡಿತ್ತು : ತಾ ಬೇಱೆ–ಮಾಯಾಶಕ್ತಿಯು ಬೇರೆ, ಎನ್ನನಳಲಿಸಿ ಕಾಡಿತ್ತು–ತನುಪ್ರಪಂಚದೊಡನೆ ಕೂಡಿ ಚರಿಸಿ "ಅಳಲು ಕ್ಲೇಶೇ"ಯೆಂದು ಕ್ಲೇಶೇವನ್ನು ಹುಟ್ಟಿಸಿ

ಕಾಡಿತ್ತು, ಕರಕಟ ಕಾಡಿತ್ತು. ತಾ ಬೇಜಿ ಎನ್ನ ಬಳಲಿಸಿ ಕಾಡಿತ್ತು : ತಾ ಬೇಜಿ-ಮಾಯಾಶಕ್ತಿಯು ಬೇರೆ, ಎನ್ನ ಬಳಲಿಸಿ ಕಾಡಿತ್ತು–ಮನೋವಿಕಾರದೊಡನೆ ಕೂಡಿ ಚರಸಿ "ಬಳಲು ಬಹುದುಃಖೇ"ಯೆಂದು ದುಃಖವನ್ನು ಹುಟ್ಟಿಸಿ ಕಾಡಿತ್ತು, ಕರಕಟ ಕಾಡಿತ್ತು.

ಕೂಡಲಸಂಗಮದೇವನ ಕೂಡಿಹೆನೆಂದಡೆ–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿ ಪರಶಿವಲಿಂಗದಲ್ಲಿ ಸಾಮರಸ್ಯವಾಗಿಹೆನೆಂದರೆ, ತಾನೆನ್ನ ಮುಂದುಗೆಡಿಸಿತ್ತು ಮಾಯೆ : ತಾನು ಮಾಯಾಶಕ್ತಿಯು, ಎನ್ನ ಮುಂದುಗೆಡಿಸಿತ್ತು–ತನುವಿನ ಪ್ರಪಂಚವನ್ನು ಮನೋವಿಕಾರದೊಡನೆ ಕೂಡಿ ಚರಿಸಿ ಮುಂದಾಗುವಂಥ ನಿಜಮೋಕ್ಷಕ್ಕೆ ತಪ್ಪುಗನ ಮಾಡಿತ್ತು, ಮಾಯೆ–ನಿನ್ನಿಂದುಂಟಾದ ಮಾಯಾಶಕ್ತಿಯು ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೧೫

**ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ; ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ; ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ, ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ. ಈ ಮಾಯೆಯ ಕಳೆವೊಡೆ ಎನ್ನಳವಲ್ಲ, ನೀವೇ ಬಲ್ಲಿರಿ ಕೂಡಲಸಂಗಮದೇವಾ!**

I – – – – – – – – – – – – – – – – – – – – – – – – – – – – – – – – – – – –

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ: ಜನಿತಕ್ಕೆ–ಪ್ರಸೂತಿಯಾಗುವುದಕ್ಕೆ, ತಾಯಾಗಿ–ಜನನಿಯಾಗಿ, ಹೆತ್ತಳು_ಹಡದಳು, ಮಾಯೆ–ನಿನ್ನಿಂದುಂಟಾದ ಮಾಯಾಶಕ್ತಿಯು. ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ : [ಮೋಹಕ್ಕೆ ] ಲಾಲಾಜಲ ದಟ್ಟಡಿ ತೊದಲ್ನುಡಿ ಮೊಳೆವಲ್ಲುಗಳಿಂದ ಮಮಕಾರವನ್ನು ಹುಟ್ಟಿಸುವುದಕ್ಕೆ, ಮಗುವಾಗಿ–[illegible]ಯಳಾಗಿ, ಹುಟ್ಟಿದಳು–ಉತ್ಪತ್ಯವಾದಳು, ಮಾಯೆ–ನಿನ್ನಿಂದುಂಟಾದ ಮಾಯಾಶಕ್ತಿಯು. ಕೂಟಕ್ಕೆ ಸ್ತ್ರಿಯಾಗಿ ಕೂಡಿದಳು ಮಾಯೆ : ಕೂಟಕ್ಕೆ–ಸಂಪರ್ಕವ ಮಾಡುವುದಕ್ಕೆ, ಸ್ತ್ರೀಯಾಗಿ–ಸತಿಯಳಾಗಿ, ಕೂಡಿದಳು–ಬೆರೆದಳು, ಮಾಯೆ_ನಿನ್ನಿಂದುಂಟಾದ ಮಾಯಾಶಕ್ತಿಯು.

ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ: ಇದಾವಾವ ಪರಿಯಲ್ಲಿ_ಎಳ್ಳಿಗೆ ಎಣ್ಣೆಯಾಗಿ ಮುಳ್ಳಿಗೆ ಮೊನೆಯಾಗಿ ಊರಿಗೆ ದಾರಿಯಾಗಿ ದಾರಿಗೆ ಸಂಗಡವಾಗಿ ಜನಿತಕ್ಕೆ ತಾಯಾಗಿ ಮೋಹಕ್ಕೆ ಮಗಳಾಗಿ ಕೂಟಕ್ಕೆ ಸ್ತ್ರೀಯಾಗಿ ಅತ್ತೆ ಅತ್ತಿಗೆಯಾಗಿ ಮತ್ತೆ ನಾದಿನಿಯಾಗಿ ಹೆತ್ತವ್ವೆಯಾಗಿ ಮೊಮ್ಮಗಳಾಗಿ ಸೊಸೆಯಾಗಿ ಹೊನ್ನು ಬಣ್ಣಗಳಾಗಿ ಬಣ್ಣ ಭಜನೆಗಳಾಗಿ ಕನ್ಯೆಯರಾಗಿ ಸುತರಾಗಿ ಆ ಮೃತ್ಯು ಅಣ್ಣ ನಿನ್ನೊಡಲು ಬಗೆವುದೆಂದು ಆವಾವ ಪರಿಯಲ್ಲಿ, ಕಾಡಿತ್ತು–ಪೀಡಿಸಿತ್ತು, ಮಾಯೆ–ನಿನ್ನಿಂದುಂಟಾದ ಮಾಯಾಶಕ್ತಿಯು.

ಈ ಮಾಯೆಯು ಕಳೆವೊಡೆ ಎನ್ನವಳಲ್ಲ : ಈ ಮಾಯೆಯು ಕಳೆವೊಡೆ–ಈ ಮಾಯಾಪ್ರಪಂಚಿನ ವರ್ತನೆಯನ್ನು ನಷ್ಟವ ಮಾಡಬೇಕಾದರೆ, ಎನ್ನಳವಲ್ಲ–ಎನ್ನ ಕೂಡ ಶಕ್ಯವಲ್ಲವು. ನೀವೆ ಬಲ್ಲಿರಿ ಕೂಡಲಸಂಗಮದೇವಾ!–ಈ ಮಾಯಾಶಕ್ತಿಯು ವರ್ತನೆಯ ನಷ್ಟವ ಮಾಡಿ

ಶುದ್ಧವಿದ್ಯಾಶಕ್ತಿಯಾಗಿ ಅಳವಡಿಸಿಕೊಂಡು ಆಚರಿಸುವಂಥದು ನೀವೆ ಬಲ್ಲಿರಿ ಪರಶಿವಲಿಂಗವೆ ನಿಮಗೆ ಅರಿಯಬರುವುದೆಂದು ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೧೬

**[1]ಕೊಡೆವಿಡೆಯೆ[1] ಕುದುರೆಯ ದೃಢವುಳ್ಳ ರಾವುತನೇಱಿ, ಕೊಡೆಕೋಟಿ [ಶೂ]ರರು ಹನ್ನಿಬ್ಬರಯ್ಯಾ! ಚಂದ್ರಕಾಂತದಗಿರಿಯ ಗಜ ಬಂದು ಮೂದಲಿಸೆ ಅರಿದು ಕೊಲುವೊಡೆ ರಿಪುಗಳ ಕಲಿತನವ ನೋಡಾ! [2]ಆವಿಗೆಯಲೊದಗಿದ[2] ಪುತ್ಥಳಿಯ ರೂಹಿನಂತಾಯಿತ್ತು, ಕೂಡಲಸಂಗಮದೇವಾ ನಿಮ್ಮ ಹೆಸರಿಲ್ಲದ ಹೆಸರು!**

I - - - - - - - - - - - - - - - - - - - - - - - - - - - - - - -

ಕೊಡೆವಿಡಿಯೆ ಕುದುರೆಯ ದೃಢವುಳ್ಳ ರಾವುತನೇಱಿ–ಕೊಡೆಯನ್ನು ಹಿಡಿಸಿಕೊಂಡು ಕುದುರೆಯನ್ನು ಹತ್ತಿಕೊಂಡು ಹೋಗುವಂಥದು ದೃಢವುಳ್ಳ ಭಟಂಗಲ್ಲದೆ ಹೇಡಿಗಾಗದು. ಕೊಡೆಕೋಟಿ[ಶೂ]ರರು ಹನ್ನಿಬ್ಬರಯ್ಯಾ–ಕೊಡೆಯನ್ನು ಹಿಡಿಸಿಕೊಂಡು ಕುದುರೆಯನ್ನು ಏರಿಕೊಂಡು ಹೋಗುವಂಥ ಅನೇಕ ಮನುಷ್ಯರೊಳಗೆ ದ್ವಾದಶಮಂದಿಯೇ ಮುಖ್ಯನಾಯಕರಾಗಿರುತ್ತಿಹರಯ್ಯಾ.

ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ–ಚಂದ್ರಕಾಂತದ ಶಿಲೆಯಿರುವಂಥ ಅದ್ರಿಯ ತಾವಕ್ಕೆ ಕಾಡಾನೆ ಬಂದು ನೋಡಲು ಅದರೊಳಗೆ ತನ್ನ ಪ್ರತಿಛಾಯೆಯು ಬಿಂಬಿಸಲು ನನ್ನ ಎದುರಿಗೆ ಮತ್ತೊಂದಾನೆ ಬರುತ್ತೈತೆಂದು ಸಿಟ್ಟಿನಿಂದ ಮುಂದಕ್ಕೆ ಮೂರು ಹೆಜ್ಜೆಯ ನಡೆದುಹೋಗುವುದು, ಅದೂ ನಡೆದುಬಂದಂತಾಗುವುದು. ಇದು ತಲೆಗೊಟ್ಟು ಹಾಯ್ವುದು, ಅದೂ ತಲೆಗೊಟ್ಟು ಹಾಯ್ದಂಗಾಗುವುದು. ಹಾಯ್ದಲ್ಲಿ ತಲೆ ಒಡೆದು ರಕ್ತ ಬಂದು ದುಃಖವಾಗುತ್ತಿಹುದು. ಅಷ್ಟರೊಳಗೆ ಸೂರ್ಯನಿಗೆ ಮೋಡ ಬಂದು ಮುಸುಕಲು ತನ್ನ ಪ್ರತಿಚ್ಛಾಯವದು ಅಡಗುವುದು. ಅಡಗಿದಲ್ಲಿ ಎನ್ನ ವೈರಿ ಹೋಯಿತ್ತಲಾ ಎಂದು ಹಿಂದಕ್ಕೆ ತಿರುಗಿ ಹೋಯಿತ್ತೆಂಬ ದೃಷ್ಟೋಪಮಾನದ ಹಾಂಗೆ.

● **ಕೊಡೆವಿಡಿಯೆ ಕುದುರೆಯ ದೃಢವುಳ್ಳ ರಾವುತನೇಱಿ :** ಕೊಡೆ–ಪಂಚಭೂತಯುಕ್ತವಾದ ದೇಹವು, ಹಿಡಿಯೆ–ಮೂಲ ಅಹಂಕಾರವು, ಕುದುರೆಯ–ದಶವಾಯುಗಳ ಬದ್ಧಕೃತವಾದ ದೇಹವೆಂಬ ವಾಜಿಯನು, ದೃಢವುಳ್ಳ ರಾವುತನೇಱಿ–ದೃಢವೆಂಬ ಕಂಟಕದೊಡನೆ ಕೂಡಿ ಸಕಲಕರ್ಣಂಗಳು ನಾನು ನನ್ನದೆಂಬಸ್ಥಿರಬುದ್ಧಿಯನುಳ್ಳ ಜೀವನೆಂಬ ವಾಜಿಕಾರನು, ಏಱಿ–ಆರೋಪಣವಾಗೆ, ಕೊಡೆಕೋಟಿ ಶೂರರು ಹನ್ನಿಬ್ಬರಯ್ಯಾ!–ಅಸುರಕರ್ಮ ಸಂಬಂಧವಾದ ಅನೇಕ ಕೋಟಿಕರಣಂಗಳೊಳಗೆ ದ್ವಾದಶ ಇಂದ್ರಿಯಂಗಳೇ ಮುಖ್ಯನಾಯಕರಾಗಿರುತ್ತಿಹರಯ್ಯಾ.

ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ : ಚಂದ್ರಕಾಂತದ [2][ಗಿರಿ][2]ಯ–ನಿರ್ಮಲಾಯಮಾನವಾದ ಆತ್ಮನಿಗೆ, ಗಜ ಬಂದು ಮೂದಲಿಸೆ–ಆತ್ಮಗೆ ಅಷ್ಟಮದ ಮೊದಲಾದ

ಸಕಲತತ್ತ್ವಂಗಳು ಬಂದು ಅವಗ್ರಹಿಸಲು, ಅರಿದು–ಆತ್ಮನು ಅಷ್ಟಮದ ಮೊದಲಾದ ಸಕಲತತ್ತ್ವಂಗಳ ವರ್ತನೆಗಳೊಡನೆ ಕೂಡಿ ಚರಿಸುವಂಥದನ್ನು ತಿಳಿದು, ಕೊಲುವೊಡೆ–"ಕೊಲ್ಲು ಸಂಹಾರೇ" ಎಂದು ಸಂಹರಿಸುವೊಡೆ, ರಿಪುಗಳ–ಪರಾಕ್ರಮಿಗಳಾದ ಕಾಮಾದಿ ಅರಿಷಡ್ವರ್ಗಂಗಳ, ಕಲಿತನವ ನೋಡಾ!–ಪರಾಕ್ರಮತ್ವವ ಕಂಡಾ.

ಆವಿಗೆಯಲೊದಗಿದ ಪುತ್ಥಳಿಯ ರೂಹಿನಂತೆ: ಆವಿಗೆಯಲ್ಲಿ–ಘಟದಗ್ಧಾಲಯದಲ್ಲಿ, ಒದಗಿದ–ಉತ್ಪತ್ಯವಾದ, ಪುತ್ಥಳಿಯ ರೂಹಿನಂತೆ–ಭಾಂಡಂಗಳ ಸಾಕಾರದ ಹಾಂಗೆ: ಆಯಿತ್ತು–ಆ ರೀತಿಯಾಯಿತ್ತು ಎಂಬಲ್ಲಿ, ಒಬ್ಬಾನೊಬ್ಬ ಕುಲಾಲನು ಏನಾದರೂ ಅಡವಿಗೆ ಹೋಗಿ ಮಣ್ಣನು ತೆಗೆದುಕೊಂಡು ಬಂದು ನಾಲ್ಕೆಂಟು ದಿವಸ ಕೊಳೆಯನಿಟ್ಟು, ಆ ಕೊಳೆತಂಥ ಮಣ್ಣನು ಕಾಲಲಿ ತುಳಿದು ಕೈಲಿ ಕಲಸಿ, ಮುದ್ದಿಯಂ ಮಾಡಿ ತಿರುಗುಣಿಯ ಮೇಲೆ ಹೂಡಿ ದಂಡದಿಂದ ತಿರಿವಿ ಗೋಳಾಕಾರದಿಂ ಮೇಲಕ್ಕೆಬ್ಬಿಸಿ ದಿನಸಾವರಿ ಭಾಂಡಂಗಳನು ನಿರ್ಮಿತವ ಮಾಡಿ ನೆರಳಲ್ಲಿ ಒಣಗಿಸಿ ಆವಿಗೆಯ ಕೊಟ್ಟಿಗೆಯಲ್ಲಿ ಒಟ್ಟಿ ಸುಟ್ಟು ಆ ಸುಟ್ಟಂಥ ಭಾಂಡಂಗಳನು ಪ್ಯಾಟಿ ಮನೆ ಪುರ ಪಟ್ಟಣಸ್ಥಾನಂಗಳಿಗೆ ಕೊಂಡ್ಹೋಗಿ, ವಿಕ್ರಯಿಸಿದಲ್ಲಿ ಕೆಲವು ಭಾಂಡಂಗಳನ್ನು ಶಿವಭಕ್ತರು ತೆಗೆದುಕೊಂಡು ಬರುವರು, ಕೆಲವು ಭಾಂಡಂಗಳನು ಭವಿಜನಾತ್ಮರುಗಳು ತೆಗೆದುಕೊಂಡು ಬರುವರು. ಆ ಶಿವಭಕ್ತರು ತೆಗೆದುಕೊಂಡಂಥ ಭಾಂಡಂಗಳೇ ಮಜ್ಜನಭೋಜನಪಾಕಪ್ರಯತ್ನಂಗಳ ಮಾಡುವುದಕ್ಕೂ ಹಾಲು ಮೊಸರು ತುಪ್ಪ ಮೊದಲಾದ ಸಾಧನದ್ರವ್ಯಂಗಳನು ತುಂಬುವುದಕ್ಕೂ ಬರುವವು. ಅವು ಪವಿತ್ರವಾದ ಭಾಂಡಂಗಳಾಗಿರ್ಪವು. ಭವಿಜನಾತ್ಮರು ತೆಗೆದುಕೊಂಡು ಬಂದಂಥ ಭಾಂಡಂಗಳೇ ಸುರೆಯ ತುಂಬುವುದಕ್ಕೂ ಮಾಂಸ ಕುದಿಸುವುದಕ್ಕೂ ಬರುವವು. ಅವು ಅಪವಿತ್ರವಾದ ಭಾಂಡಂಗಳಾಗಿರ್ಪವು. ಹಾಂಗೆ ಇಲ್ಲಿ ಪರಶಿವಲಿಂಗವೆಂಬ ಕುಲಾಲನು ದೇಹವೆಂಬ ತಿರುಗುಣಿಗೆ ಆತ್ಮನೆಂಬ ಮಣ್ಣನು ಹೂಡಿ ಮೂಲ ಅಹಂಕಾರವೆಂಬ ದಂಡದಿಂದ ತಿರಿವಿ ಸಕಲಾತ್ಮರುಗಳೆಂಬ ಭಾಂಡಂಗಳನು ನಿರ್ಮಿತವ ಮಾಡಲು, ಅದರೊಳಗೆ ಕೆಲವಾತ್ಮರುಗಳು ಗುರುಕಾರುಣ್ಯವಂ ಪಡೆದು ಲಿಂಗಾಂಗ ಸಂಬಂಧವನುಳ್ಳ ಶಿವಭಕ್ತರುಗಳಾಗುವರು. ಕೆಲವಾತ್ಮರುಗಳು ಅಂಗಕ್ಕೆ ಲಿಂಗೋಪ ದೇಶ, ಮನಕ್ಕೆ ಮಂತ್ರೋಪದೇಶವಿಲ್ಲದೆ ಭವಿಜನಾತ್ಮರುಗಳಾಗಿರುವರು. ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತರುಗಳೇ ಪವಿತ್ರವಾದ ಭಾಂಡದೋಪಾದಿಯಲ್ಲಿ ಪರಶಿವಲಿಂಗದಲ್ಲಿ ಕೂಡುವುದಕ್ಕೆ ಯೋಗ್ಯರಾಗಿರುತ್ತಿಹರು. ಅಂಗಕ್ಕೆ ಲಿಂಗೋಪದೇಶ, ಮನಕ್ಕೆ ಮಂತ್ರೋಪದೇಶವಿಲ್ಲದ ಭವಿಜನಾತ್ಮರುಗಳೇ ಅಪವಿತ್ರಭಾಂಡದೋಪಾದಿಯಲ್ಲಿ ಪರಶಿವಲಿಂಗದಲ್ಲಿ ಕೂಡುವುದಕ್ಕೆ ಅಯೋಗ್ಯರಾಗಿರುತ್ತಿಹರು. ನಿಮ್ಮ ಹೆಸರಿಲ್ಲದ ಹೆಸರು–ನಿಮ್ಮ ಹೆಸರಿನವರೇ ಜ್ಞಾನಕಲಾತ್ಮಶಿವಾಂಶಿಕಚತ್ತಿನ ಚಿದಂಶಿಕರು, ನಿಮ್ಮ ಹೆಸರಿಲ್ಲದವರೇ ಮಾಯಾಂಶಿಕ ಜಗಜ್ಜೀವಿ ಪ್ರಾಕೃತಾತ್ಮರುಗಳು; ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ ಸು (ಕ.ಗ). ೨–೨ ಶಿಲೆ (ಕ.ಗ).

II – – – – – – – – – – – – – – – – – – – – – – – – – – – – – – –

2–2 ಆವಿಗೆಯಲೊಗೆದ (ಚ, ಜ).

.........................

ಕೊಡೆವಿಡಿಯೆ ಕುದುರೆಯ–ದಶವಾಯುಗಳಿಂದ ಬದ್ಧೀಕೃತವಾದ ಶರೀರವೆಂಬ ಅಶ್ವವನು, ದೃಢವುಳ್ಳ ರಾವುತನೇಜಿ[೨]–ಅಷ್ಟಮದಮೂರ್ತಿಯ ಮದಂಗಳ ಬಳಿಷ್ಠತ್ವವನುಳ್ಳ ಜೀವನೆಂಬ ರಾವುತನಾರೋಹಿಸಲಾಗಿ, ಕೊಡೆ [೩][ಕೊಟಿ ಶೂರರು][೩] ಹನ್ನಿಬ್ಬರಯ್ಯಾ!–ಮೂಲಾಹಂಕಾರ ಸಂಬಂಧವಾದ ೬೬ ಕೋಟಿ ಕರಣಂಗಳುಂಟಾದವಯ್ಯಾ. ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ–ಸಂಸಾರವಿಷಯರಸ[೪]ಶೀ[೪]ತಳೀಕೃತವಾದ ಅಜ್ಞಾನಾಹಂಕಾರಪಿಂಡವೆಂಬ ಪರ್ವತವನು ಮಾಯಾಮೋಹಿನಿಗಜವೈದಿ ಆತ್ಮ[೫]ನ[೫]ಪಚಾರಿಸಲಾಗಿ, ಅರಿದು ಕೊಲುವೊಡೆ ರಿಪುಗಳ ಕಲಿತನವ ನೋಡಾ!–ತಿಳಿದು ಸಂಹರಿಸುವೊಡೆ ಕಾಮಾದಿ ಅರಿಷಡ್ವರ್ಗಂಗಗಳೆಂಬ ಶತ್ರುಗಳ ಪರಾಕ್ರಮವ ಕಂಡೆಯಾ. ಆವಿಗೆಯಲೊಗೆದ ಪುತ್ಥಳಿಯ ರೂಹಿನಂತಾಯಿತ್ತು–ಕುಂಬಾರನ ಒಲೆಯಲ್ಲಿ ಹುಟ್ಟಿದ ಹಾಹೆಯ ಆಕಾರದ ಹಾಂಗೆ ಅಜ್ಞಾನಸಂಬಂಧವಾದ ಜೀವಭಾವವುಂಟಾಯಿತ್ತು. ಕೂಡಲಸಂಗಮದೇವಾ, ನಿಮ್ಮ ಹೆಸರಿಲ್ಲದ ಹೆಸರು!–ಎಲೆ ಲಿಂಗವೆ, ನಿಮ್ಮ ಶಿವಾಂಶಿಕನೆಂಬ ಅಭಿಧಾನವಿಲ್ಲದ ಮಾಯಾಂಶಿಕನೆಂಬ ಅಭಿಧಾನವುಂಟಾಯಿತ್ತೆಂಬುದರ್ಥ.

.........................

೩–೩ ಕೋಟಿ ಸುರರು (ಚ). ಕೊಟ್ಟ ಸುರರು (ಜ) ೪–೪ x (ಚ). ೫–೫ ನು (ಜ).

III – – – – – – – – – – – – – – – – – – – – – – – – – – – – – –

1–1 ಕೊಡೆವಿಡಿಯ (ಟ,ಡ).

.........................

ಕೊಡೆವಿಡಿಯ–ಕೋ[೨]ಡೆ[೨]ವಿಡಿಯ ದೇಶದ, ಕುದುರೆಯ–ಘೋಟಕವನು ದೃಢವುಳ್ಳ–ಹರಣದಲ್ಲಿ ತ್ರಾಣವನುಳ್ಳ, ರಾವುತಂ–ಘೋಳಾಯ್ಲನು, ಏಜಿ–ಜಗಳಕ್ಕೆ ಏರಿ ಬರಲು, ಕೊಡೆಕೋಟಿ–ಅನೇಕ ಛತ್ರವನುಳ್ಳಂಥ, ಶೂರರು–ಪರಾಕ್ರಮಿಗಳು, ಹನ್ನಿಬ್ಬರಯ್ಯಾ!–ಅನೇಕರೆಂಬುವ ಹಾಂಗೆ, ದಶವಾಯುಗಳಿಂದ ಬದ್ಧೀಕೃತವಾದ ದೇಹವೆಂಬ ಘೋಟಕವನು ಪ್ರಪಂಚಿನಲ್ಲಿ ದಾರ್ಢ್ಯವನುಳ್ಳ ಜೀವನೆಂಬ ಘೋಳಾಯ್ಲನಾರೋಹಿಸಿದಲ್ಲಿ ಅತ್ಯಹಂಕಾರ ಪ್ರವೇಷ್ಟೀತವಾದ ಅನೇಕ ಕರಣಂಗಳ ವ್ಯಾಪಾರವರ್ಧನವಾಗಿಪ್ಪುದು ಎಂಬುದೀಗ.....

ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ–ಸಂಸಾರವಿಷಯರಸಶೀತಳೀಕೃತವಾದ ದೇಹವೆಂಬ ಪರ್ವತದಲ್ಲಿ ತೋಱುವ ಪ್ರಪಂಚ ನಿತ್ಯವೆಂದು ಅಷ್ಟಮದಯುಕ್ತವಾದ ಜೀವನೆಂಬ ಗಜವು ಹೋರಾಡಿದಲ್ಲಿ, ತಾಪತ್ರಯದ ದುಃಖ ಉಂಟಾಗುವುದಲ್ಲದೆ ನಿತ್ಯತ್ವದ ಸುಖವು ದೊರಕೊಳ್ಳಲರಿಯದೆಂಬುದೀಗ ಅರಿದು ಕೊಲುವೊ[೩]ಡೆ[೩] ರಿಪುಗಳ ಕಲಿತನವ ನೋಡಾ ಎಂಬ ಶಬ್ದಕ್ಕರ್ಥ. [೪][ಮತ್ತಂ][೪] ಅಂತಪ್ಪ ಜೀವನಿಗೆ ಕಾಕತಾಳನ್ಯಾಯ ಘುಣಾಕ್ಷರನ್ಯಾಯದಿಂದೆ ಕರಣಂಗಳ

ವರ್ತನೆಯನು ನಿವೃತ್ತಿಯ ಮಾಡಿಹೆನೆಂದರೆ ಮತ್ತೆ ಮತ್ತೆ ಬಂದು ಪೀಡಿಸುತ್ತಿರ್ದಪವು ಎಂಬುದೀಗ ಅರಿದು ಕೊಲುವೊಡೆ ರಿಪುಗಳ ಕಲಿತನವ ನೋಡಾ ಎಂಬ ಶಬ್ದಕ್ಕರ್ಥ.

ಅವಿದ್ಯೆಯಲ್ಲಿ ಹುಟ್ಟಿ ದೇಹಸಂಬಂಧವಾದಾತ್ಮನಿಗೆ ಅಜ್ಞಾನಾವೃತವಾಗಿ ಪರಮಾತ್ಮಾಭಿಧಾನವು ತೊಲಗಿ ಜೀವಾತ್ಮಾಭಿಧಾನವು ದೊರೆಕೊಂಡಿತ್ತೆಂಬುದೀಗ ಆವಿಗೆಯಲೊದಗಿದ ಪುತ್ಥಳಿಯ ರೂಹಿನಂತಾಯಿತ್ತೆಂಬ ಶಬ್ದಕ್ಕರ್ಥ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಹೆಸರಿಲ್ಲದ ಹೆಸರು!–ಶಿವಾಭಿಧಾನವಿಲ್ಲದ ಜೀವಾಭಿಧಾನವು ಎಂಬ ಶಬ್ದಕ್ಕರ್ಥ.

..........................

೬–೬ ಡಿ (ಟ). ೭–೭ x (ಟ). ೮–೮ x (ಟ, ಡ).

I – – – – – – – – – – – – – – – – – – – – – – – – – – – – – –

ಪಂಚಭೂತಾತ್ಮ ಕದೇಹಗರ್ಭೀಕೃತಪ್ರಾಣವಾಯು ಮಿಳಿ[ತ] ಮನಸ್ತುರಂಗವನು ಎಂಬುದೀಗ ಕೊಡೆವಿಡಿಯ ಕುದುರೆಯೆಂಬುದರ್ಥ. ದೇಹಾಭಿಮಾನವುಳ್ಳ ಜೀವನೆಂಬ ತುರಂಗಿಯು ಆರೋಹಿಸಲಿಕ್ಕಾಗಿಯೆಂಬುದೀಗ ದೃಢರಾವುತನೇಜಿಯೆಂಬುದರ್ಥ, ದೇಹಾಭಿಮಾನಿಗಳಾದ ದ್ವಾದಶೇಂದ್ರಿಯಂಗಳೆಂಬು[ವು] [ಕೊ]ಡೆಕೋಟಿ ಶೂರರು ಹನ್ನಿಬ್ಬರಯ್ಯಾ! ಎಂಬುದರ್ಥ ಪರಮಶಾಂತಿಸ್ವರೂಪಮಪ್ಪ ಚಿದಹಂಕಾರವೆಂಬ ಶಿಖರಿಯನ್ನು ಚಿದಹಂಕಾರಭಕ್ತಿಮದಗಜವು ಎಯ್ದಿ ಮಾರಾಂತು ಮಥನಿಸುತ್ತಿರಲು ಎಂಬುದೀಗ ಚಂದ್ರಕಾಂತದ ಗಿರಿಯ ಗಜ [ಬಂದು] ಮೂದಲಿಸೆಯೆಂಬುದರ್ಥ ಅದನ್ನು ತಿಳಿದು ಹತಿಯಿಸುವ ಕಾಮಾದ್ಯರಿಷಡ್ವರ್ಗಂಗಳ ಪರಾಕ್ರಮವನು ಕಂಡಾ ಎಂಬುದೀಗ ಅಜಿದು ಕೊಲುವೊ[ಡೆ] ರಿಪುಗಳ ಕಲಿತನವ ನೋಡಾ ಎಮಬುದರ್ಥ.

ಜೀವಾಭಿಧಾನವಾಯಿತ್ತಲ್ಲದೆ ಶಿವನೆಂಬಭಿಧಾನವಿಲ್ಲವೆಂಬುದೀಗ ನಿಮ್ಮ ಹೆಸರಿಲ್ಲದ ಹೆಸರು [ಎಂಬುದರ್ಥ]. ಕುಂಭಕಾರನ ಹಸಂತಿಕೆಯಲ್ಲಿ ಪ್ರಾದುರ್ಭವಿಸಿದ ಬೊಂಬೆಯಾಕಾರದ ಹಾಂಗೆ ಆತಂಗೆ ತಾಪತ್ರಯವಾಗ್ನಿ ಆವರಿಸಿತ್ತೆಂಬುದೀಗ ಆವಿಗೆಯಲೊದಗಿದ ಪುತ್ಥಳಿಯ [ರೂ]ಹಿನಂತಾಯಿತ್ತೆಂಬುದರ್ಥ, ಮತ್ತಂ ಶಿವಾಂಶವಾದಾತ್ಮಂಗೆ ಶಿವನ ವಿದ್ಯೆ ಆವರಿಸಿತ್ತೆಂಬುದರ್ಥ.

[೯]ಆತ್ಮಾಹಂಕಾರದಿಂದೆ ಗ್ರಹಿಸಲ್ಪಟ್ಟಂಥ ದೇಹವೆಂಬ ಘೋಟಕವನು ಅಗಣಿತಹಂಕಾರವುಳ್ಳ ದ್ವಾದಶೇಂದ್ರಿಯಂಗಳೆಂಬುದೀಗ, ಸಂಸಾರವಿಷಯ ರಸಶೀತಳೀಕೃತಮಪ್ಪ ಮೂಲಾಹಂಕಾರ ವೆಂಬದ್ರಿಯನು ಅನಾದಿಮಾಯಾವಾಹನವಾದ ಮೋಹಿನಿಗಜ ಉಪಚರಿಸಿ ಇರಿಯಲಿಕ್ಕಾಗೆ ಎಂಬುದೀಗ ಚಂದ್ರಕಾಂತದ ಗಿರಿಯ ಗಜಬಂದು ಮೂದಲಿಸೆ [ಎಂಬುದರ್ಥ]. ಅರಿದು–ಛೇದಿಸಿ, ಕೊಲುವ–ಹತಿಸುವ, ರಿಪುಗಳ–ಕಾಮಾದ್ಯರಿಷಡ್ವರ್ಗಂಗಳ, ಕಲಿತನವ ನೋಡಾ!–ಪರಾಕ್ರಮವನು ಕಂಡಾ, ಕುಲಾಲ ಶಾಲೆಯಲ್ಲಿ ಹುಟ್ಟಿದ ಬೊಂಬೆಯಾಕಾರದ ಹಾಂಗೆ ಆತ್ಮಂಗೆ ಮಾಯಾಕಳಂಕಾವರಿಸಿತ್ತೆಂಬುದೀಗ.[೯]

..........................

೯–೯ 'ಪ' ಪ್ರತಿಯಲ್ಲಿ 'ಇಂದಿಂಗೆಂತೊ ನಾಳಿಂಗೆಂತೊ...' ಎಂಬ ವಚನದ ಟೀಕೆಯ ನಂತರ ಈ ಟೀಕೆ ಇದೆ.

೧೭

**ಇಂದಿಂಗೆಂತೊ ನಾಳಿಂಗೆಂತೊ ಎಂದು ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ! ಈ ಸಂಸಾರದಿಂದೆ ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ! ಮುಂದೆ ಮುಕ್ತಿ ಯಾಗಬೇಕೆಂಬ ಯುಕ್ತಿಯಿಲ್ಲ! ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದಿಹುದಯ್ಯಾ ಈ ಮಾಯೆ, ಕೂಡಲಸಂಗಮದೇವಾ!**

I – – – – – – – – – – – – – – – – – – – – – – – – – – – – – – – –

ಇಂದಿಂಗೆಂತೊ ನಾಳಿಂಗೆಂತೊ ಎಂದು ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ : ಇಂದಿಂಗೆಂತೊ–ರಾತ್ರಿಕಾಲದಲ್ಲಿ ಶಿವಾರ್ಚನೆ ಮಾಡಿಕೊಂಡು ಶಿವಾರ್ಪಿತವ ಮಾಡಿಕೊಂಡು ಪವಡಿಸಿಕೊಂಡು ಬೆಳಗಾಗಿ ಎದ್ದು ಹಾಂಗೇ ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಲಿಲ್ಲ, ಇವತ್ತು ವೀಳ್ಯಫಲಾಹಾರಮೃಷ್ಟಾನ್ನಪದಾರ್ಥಂಗಳು ಹೇಂಗೆ ದೊರಕೊಂಡಾವು; ನಾಳಿಂಗೆಂತೊ ಎಂದು–ಇವತ್ತಿಗಂತೂ ಇದ್ದಕ್ಕಿದ್ದ ಹಾಂಗೇ ದೊರಕೊಂಡಾವು, ನಾಳೆ ವೀಳ್ಯಫಲಾಹಾರಮೃಷ್ಟಾನ್ನಪದಾರ್ಥಂಗಳು ಹೇಂಗೆ ದೊರಕೊಂಡಾವೆಂದು; ಬೆಂದ–ತಾಪತ್ರಯಾಗ್ನಿಯಿಂದ ದಗ್ಧವಾದ, ಒಡಲ–ಅಂಗವನ್ನು, ಹೊರೆಯ ಹೋಯಿತ್ತು–"ಪೊರೆ ಪೋಷಣೇ" ಎಂದು ಪೋಷಿಸುವುದಕ್ಕೆ ಎಯ್ದುಹೋಯಿತ್ತು, ಎನ್ನ ಸಂಸಾರ!–ಎನ್ನ ದೇಹಸಂಸಾರವು.

ಈ ಸಂಸಾರದಿಂದೆ ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ : ಈ ಸಂಸಾರದಿಂದೆ–ಈ ದೇಹಸಂಸಾರದಿಂದೆ, ಹಿಂದೆ–ಮೊದಲು, ನಾನಾ ಯೋನಿಯಲ್ಲಿ–ಎಲ್ಲಾ ಆತ್ಮರುಗಳು ಹುಟ್ಟಿಹುಟ್ಟಿ ಬರುವಂಥದೇ ಮನುಜಯೋನಿ, ಆಕಳ ಶರೀರ ದೇವತಾಜನ್ಮ ಇವಲ್ಲದೆ ನಿಕೃಷ್ಟವಾದ ಯೋನಿದ್ವಾರಂಗಳಲ್ಲಿ; ಬಂದೆನೆಂಬ_ನನ್ನ ನಿಜವಂ ಮರೆದು ಅಜ್ಞಾನದಿಂದ ಬ್ರಹ್ಮನ ಸೃಷ್ಟಿಗೊಳಗಾಗಿ ದೇವಸಂಬಂಧಿಯಾಗಿ ಹುಟ್ಟಿಬಂದೆನೆಂಬಂಥ, ಹೇಯವಿಲ್ಲ!–ಜಿಗುಪ್ಸೆಯುಂಟಾಗಿಲ್ಲವು. ಮುಂದೆ ಮುಕ್ತಿಯಾಗಬೇಕೆಂದು ಯುಕ್ತಿಯಿಲ್ಲ! : ಮುಂದೆ–ದೇಹಾಂತ್ಯದಲ್ಲಿ, ಮುಕ್ತಿ[ಯಾಗಬೇಕೆಂಬ–] ಮೋಕ್ಷವಾಗಬೇಕೆಂಬ, ಯುಕ್ತಿಯಿಲ್ಲ!–ಜ್ಞಾನವಿಲ್ಲವು.

ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದಿಹುದಯ್ಯಾ : ಎಂದೆಂದೂ–ಆವಾವಕಾಲಕ್ಕೆ, ಸದಾಶಿವನ_ಅನವರತ ಮಾಂಗಲ್ಯ ಸ್ವರೂಪವಾದ ಪರಶಿವಲಿಂಗವನ್ನು, ಕುಂದದೆ_ಬಿಡದೆ, ನೆನೆಯಲೀಯದೆ_ಸ್ಮರಣೆಯ ಮಾಡಗೊಡದೆ, ಕೊಂದಿಹುದಯ್ಯಾ–ಜನನಮರಣಂಗಳಲ್ಲಿ ತಂದು ಸಂಹರಿಸುತ್ತಿಹುದಯ್ಯಾ; ಈ ಮಾಯೆ–ನಿನ್ನಿಂದುಂಟಾದ ಮಾಯಾಶಕ್ತಿಯು, ಕೂಡಲಸಂಗಮದೇವಾ!_ಎಲೆ ಪರಶಿವಲಿಂಗವೆ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

I – – – – – – – – – – – – – – – – – – – – – – – – – – – – – – – –

ವರ್ತಮಾನಕಾಲದ ಘಟಪೋಷಣೆಗೆ ಹೇಂಗೆಂಬುದೀಗ ಇಂದಿಂಗೆಂತು, ಭವಿಷತ್ಕಾಲದಾತ್ಮಪೋಷಣೆಗೆ ಹೇಂಗೆಂಬುದೀಗ ನಾಳಿ[ಂ]ಗೆಂತೆಂಬುದರ್ಥ. ಪೂ[ರ್ವದ]ಲ್ಲಿ

ಶುನಿಸೂಕರಾದಿ ಹಲವು ತೆರನಾದ ನಿಕೃಷ್ಟ ಉತ್ಪತ್ತಿದ್ವಾರದಲ್ಲಿ ಹುಟ್ಟಿದೆನೆಂಬ ಹೇಸಿಕೆಯಿಲ್ಲವೆಂಬುದೀಗ ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲವೆಂಬುದರ್ಥ. ದೇಹಾಂತ್ಯದಲ್ಲಿ ೧ಪಶುಪತಿಯಲ್ಲಿ ಬೆರೆಯಬೇಕೆಂಬ ಜ್ಞಾನವಿಲ್ಲದೆ ಕ...ಲ್ಲವೆಂಬುದೀಗ ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲವೆಂಬುದರ್ಥ.

.........................

೧+ ಪಾಶ ಮತ್ತು (ಪ).

---

೧೮

**ದಿಟಪುಟಭಕುತಿಸಂಪುಟ ನೆಲೆಗೊಳ್ಳದಾಗಿ [1]ಟೀವಕ ಟಿಂಬಕನಾಡಿಸುತ್ತಿದ್ದಿತ್ತಯ್ಯಾ [1]ನಿನ್ನ ಮಾಯೆ, ಕೂಡಲಸಂಗಮದೇವಯ್ಯಾ, ಹೊನ್ನು ಹೆಣ್ಣು ಮಣ್ಣು ತೋರಿ!**

I – – – – – – – – – – – – – – – – – – – – – – – – – – – – – – –

ದಿಟಪುಟಭಕುತಿಸಂಪುಟ ನೆಲೆಗೊಳ್ಳದಾಗಿ: ದಿಟ_ನಿಶ್ಚಯವಾದ ಲಿಂಗವು, ಪುಟ–ವ್ಯಕ್ತವಾದ ಅಂಗವು, ಭಕುತಿ_ಶಿವಾದ್ವೈತಭಕ್ತಿಯು, ಸಂಪುಟ–ಅಂಗಲಿಂಗಭಕ್ತಿಗಳ ಎರಕದ ಕೂಟವು, ನೆಲೆಗೊಳ್ಳದಾಗಿ–ತನ್ನಲ್ಲಿಂಬುಗೊಳ್ಳದಾಗಿ, ಟೀವಕ ಟಿಂಬಕನಾಡಿಸುತ್ತಿದ್ದಿತ್ತಯ್ಯಾ : ಟೀವಕ–ಉದ್ದಿಮೆ ವ್ಯಾಪಾರಂಗಳ ಮಾಡಿಸುವುದಕ್ಕೆ ಘಟ್ಟ ಬೆಟ್ಟ ಕರಾವಳಿಯ ಹತ್ತಿಹೋಗುವಲ್ಲಿ ಉಸುರು ತೆರೆಗಟ್ಟಿಹೋಯಿಸುತ್ತಿಹುದಯ್ಯಾ, ಟಿಂಬಕನಾಡಿಸುತ್ತಿದ್ದಿತ್ತಯ್ಯಾ–ಘಟ್ಟ ಬೆಟ್ಟ ಕರಾವಳಿಗಳ ಇಳಿದು ಬರುವಲ್ಲಿ ಮೂಗಿನ ತೆಂಬೆಗಳು ಪಟಪಟನೆಂದು ಹಾರುವ ಹಾಂಗೆ ಮಾಡಿಸುತ್ತಿಹುದಯ್ಯಾ : ನಿನ್ನ ಮಾಯೆ_ನಿನ್ನಿಂದುಂಟಾದ ಮಾಯಾಶಕ್ತಿಯು.

ಕೂಡಲಸಂಗಮದೇವಯ್ಯಾ_ಪರಶಿವಲಿಂಗವು, ಹೊನ್ನು ಹೆಣ್ಣು ಮಣ್ಣು ತೋಱಿ–ನೆನೆವ ಮನಕ್ಕೆ ಹೊನ್ನು ತೋರಿ ನೋಡುವ ಕಣ್ಣಿಗೆ ಹೆಣ್ಣುದೋರಿ ಪೂಜಿಸುವ ಹಸ್ತಕ್ಕೆ ಮಣ್ಣುದೋರಿ ತ್ರಿವಿಧಕ್ಕೆ ತ್ರಿವಿಧವನು ತೋರಿಸುತ್ತಿಹುದೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – –

1–1 ಟಿಂಬಕವನಾಡಿಸುತ್ತಿದ್ದಿತ್ತಯ್ಯಾ (ಚ, ಜ).

.........................

ದಿಟಪುಟಭಕುತಿಸಂಪುಟ ನೆಲೆಗೊಳ್ಳದಾಗಿ–ಸತ್ಯಶುದ್ಧವಾದ ಶಿವಾದ್ವೈತಭಕ್ತಿಸಂಬಂಧವಿಂಬುಗೊಳ್ಳದಾಗಿ, ಕೂಡಲಸಂಗಮದೇವಯ್ಯಾ ನಿನ್ನ ಮಾಯೆ ಹೊನ್ನು ಹೆಣ್ಣು ಮಣ್ಣು ತೋರ!_ಎಲೆ ಲಿಂಗವೆ ನಿನ್ನ ಮನೋಮಾಯೆ ನೋಡುವ ಕಣ್ಣಿಗೆ ಹೆಣ್ಣು ತೋರೆ ನೆನೆವ ಮನಕ್ಕೆ ಹೊನ್ನು ತೋಱಿ ಪೂಜಿಸುವ ಕೈಗೆ ಮಣ್ಣು ತೋಱಿ, ಟೀವಕ ಟಿಂಬಕವನಾಡಿ ಸುತ್ತಿದ್ದಿತ್ತಯ್ಯಾ–ಉಸುರೆಡೆಯಾಟದೊಡನೆ ಕೂಡಿ ಎರಡು ಮೂಗಿನ ಸಿಂಬೆಗಳನೆ ಹೊಡದಾಡಿಸುತ್ತಿದ್ದಿತ್ತಯ್ಯಾ ನಿನ್ನ ೧ಮನೋಮಾಯೆ.

...........................

೧–೧ x (ಜ).

III – – – – – – – – – – – – – – – – – – – – – – – – – – – – – –

ತನ್ನ ನಿಜಶಿವತತ್ತ್ವವನಜೆದು ಕೂಡುವ ಕೂಟದ ನಿಜಭಕ್ತಿ ಹುಟ್ಟಿದು ಜೀವರಿಗೆಂಬುದೀಗ ದಿಟಪುಟಭಕುತಿಸಂಪುಟ ನೆಲೆಗೊಳ್ಳ[೨]ದಾಗಿ[೨] ಎಂಬ ಶಬ್ದಕ್ಕರ್ಥ. ಅಂತು ತನ್ನ ನಿಜಶಿವತತ್ತ್ವದಲ್ಲಿ ಕೂಟವಿಲ್ಲವಾಗಿ ಜೀವಂಗೆ ಹೊನ್ನು ಹೆಣ್ಣು ಮಣ್ಣು ಮೊದಲಾದ ದೇಹಸಂಸಾರಸುಖದ ಮಚ್ಚನಿಕ್ಕಿ ಭವಭವದಲ್ಲಿ ತಿರಿಗಿಸಿ ಜಿಹ್ವೆ ತುಟಿಗಳು ಮೂಗಿನ ಚೆಂಬೆಗಳು ಹೊಡದಾಡುವ ಉಸುರ ತೇಕಾಟದಲ್ಲಿ ಹೊಕ್ಕು ಹೊದಕುಳಿಗೊಳಿಸುತ್ತಿಹುದು ಶಿವಾಜ್ಞೆಯಿಂದ ಮಾಯೆ ಜೀವ[೩]ರನೆಂ[೩]ಬುದೀಗ ಟೀವಕ ಟಿಂಬಕನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ, ಕೂಡಲಸಂಗ[ಮದೇವಯ್ಯಾ] ಹೊನ್ನು ಹೆಣ್ಣು ಮಣ್ಣು ತೋರೆ ಎಂಬ ಶಬ್ದಕ್ಕರ್ಥ.

...........................

೨–೨ ವಾ (ಡ). ೩–೩ ರಿಗೆಂ (ಡ).

IV – – – – – – – – – – – – – – – – – – – – – – – – – – – – – –

ತನ್ನ ನಿಜಶಿವತತ್ತ್ವವನಜೆದು ಕೂಡುವ ಕೂಟ[ದ] ನಿಜಭಕ್ತಿತತಿ ಹುಟ್ಟುದು ಜೀವರಿಗೆಂಬುದೀಗ ದಿಟಪುಟಭಕ್ತಿಸಂಪುಟ ನೆಲೆಗೊಳ್ಳದಾಗಿಯೆಂಬ ಶಬ್ದಕ್ಕರ್ಥ ಅಂತು ತನ್ನ ನಿಜಶಿವತತ್ತ್ವದಲ್ಲಿ ಕೂಟವಿಲ್ಲವಾಗಿ ಜೀವಂಗೆ ಹೊನ್ನು ಹೆಣ್ಣು ಮಣ್ಣು ಮೊದಲಾದ ದೇಹಸಂಸಾರಸುಖವ ಮೆಚ್ಚಿ[ಸಿ] ಭವಭವದಲ್ಲಿ ತಿರುಗಿಸಿ ಜಿಹ್ವೆ ತುಟಿಗಳು ಮೂಗಿನ ಟೆಂಬೆಗಳು ಹೊಡದಾಡುವ ಉಸಿರ ಕಂಠದಲ್ಲಿ ತಾರದಲ್ಲಿ ಹೊಕ್ಕು ಹೊದಕುಳಿಗೊಳಿಸುತ್ತಿಹುದು ಶಿವಾಜ್ಞೆಯಿಂದ ಮಾಯೆ ಜೀವರನೆಂಬುದೀಗ ಟೀವಕಟಿಂಬಕನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ ಕೂಡಲಸಂಗಯ್ಯ ಹೊನ್ನು ಹೆಣ್ಣು ಮಣ್ಣು ತೋಜೆ ಶಬ್ದಕ್ಕರ್ಥ.

I – – – – – – – – – – – – – – – – – – – – – – – – – – – – – –

ದಿಟ–ನಿಚ್ಚಯವಾದ ಇಷ್ಟಲಿಂಗದ, ಪುಟ–ವ್ಯಕ್ತವಾದ ಪ್ರಾಣಲಿಂಗದ, ಭಕುತಿ–ಶ್ರದ್ಧೆಯು, ಸಂಪುಟ–ಕ್ರಿಯಾಜ್ಞಾನಂಗಳ ಸಂಬಂಧವು, ನೆಲೆಗೊಳ್ಳದಾಗಿ–ಇಂಬುಗೊಳ್ಳದಾಗಿ, ತುಟಿಕಟವಾಯಿಗಳ ಬಡಿದಾಟದಿಂದೆ ಮತ್ತೆ ಬೀಭತ್ಸಶಬ್ದದ ಕದನವನುಂಟುಮಾಡಿಸುತ್ತಿಹುದೆಂಬುದೀಗ ಟೀವಕ ಟಿಂಬಕವನಾಡಿಸುತ್ತಿದ್ದಿತ್ತಯ್ಯಾ ಎಂಬುದರ್ಥ.

---

೧೯

**[1]ಆಸತ್ತು ಅಲಸಿದೆನೆಂದಡೆ ಮಾಣದು; [2]ಬೇಸತ್ತು[2] ಬೆಂಬಿದ್ದೆನೆಂದಡೆ ಮಾಣದು; ಏವೆ ಏವೆನೆಂದಡೆ ಮಾಣದು; ಕಾಯದ ಕರ್ಮದ [3]ಫಲ[3]ಭೋಗವು! ಕೂಡಲಸಂಗನಶರಣರು ಬಂದು ಹೋ ಹೋ ಅಂಜದಿರೆಂದಡಾನು ಬದುಕುವೆನು!**

I - - - - - - - - - - - - - - - - - - - - - - - - - - - - - - - - - - - - -

ಆಸತ್ತು ಅಲಸಿದೆನೆಂದಡೆ ಮಾಣದು : ಆಸತ್ತು_ಸಂಸಾರಪ್ರಪಂಚಿಗೆ ಬಲು ಬೇಸರಂಬಟ್ಟು, ಅಲಸಿದೆನೆಂದಡೆ_ "ಅಳಲು ಕ್ಲೇಶೇ"ಯೆಂದು ಕ್ಲೇಶಂಬಟ್ಟೆನೆಂದರೆಯೂ, ಮಾಣದು–ಬಿಡದು; ಬೇಸತ್ತು ಬೆಂಬಿದ್ದೆನೆಂದಡೆ ಮಾಣದು : ಬೇಸತ್ತು–ಸಂಸಾರಪ್ರಪಂಚಿಗೆ ಬಲು ಬೇಸರಂಬಟ್ಟು, ಬೆಂಬಿದ್ದೆನೆಂದಡೆ_ಹೊದಕುಳಿಗೊಂಡೆನೆಂದರೆ, ಮಾಣದು_ಬಿಡದು; ಏವೆ ಏವೆನೆಂದಡೆ ಮಾಣದು: ಏವೆ ಏವೆನೆಂದಡೆ_ಏನಾದಾಯ ಏನುಪಾಯ ಏನು ಜಪವ ಮಾಡಲೊ ಏನು ತಪವ ಮಾಡಲೊ ಏನು ವ್ರತೋಪವಾಸವ ಮಾ[1][ಡುವೆ][1]ನೆಂದರೆ ಮಾಣದು–ಬಿಡದು; ಕಾಯದ ಕರ್ಮದ ಫಲಭೋಗವು: ಕಾಯದ_ದೇಹಸಂಬಂಧವಾದ, ಕರ್ಮದ_ಸಂಚಿತಾದಿ ಕರ್ಮತ್ರಯಂಗಳ, ಫಲ_ಚತುರ್ವಿಧ ಫಲಂಗಳ, ಭೋಗವು_ಅವರ ಅನುಭೋಗವು: ಕೂಡಲ ಸಂಗನಶರಣರು_ಜಂಗಮಮೂರ್ತಿಗಳು, ಬಂದು–ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದು, ಹೋ ಹೋ–ತಾಳು ತಾಳು, ಅಂಜದಿರೆಂದಡೆ–ಹೆದರಿಕೊಳ್ಳದಿರೆಂದು ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಿಹೆವೆಂದರೆ, ಆನು ಬದುಕುವೆನು–ಆನು ಜೀವಿಸುವೆನೆಂಬ ದೃಷ್ಟೋಪಮಾನದ ಹಾಂಗೆ.

● ಕೂಡಲಸಂಗನಶರಣರು–ಗುರು[2]ಲಿಂಗಜಂಗಮ[2] ಮೂರ್ತಿಗಳು ಬಂದು ದೀಕ್ಷಾತ್ರಯಂಗಳಿಂದುದಯವಾದ ಇಷ್ಟಪ್ರಾಣಭಾವಲಿಂಗಂಗಳು ತನುಮನಾತ್ಮಂಗಳಲ್ಲಿ ನೆಲೆಗೊಂಡು, ಹೋ ಹೋ–ತಾಳು ತಾಳು, ಅಂಜದಿರೆಂದಡೆ–ಹೆದರಿಕೊಳ್ಳದಿರೆಂದು ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪುರುಚಿ ತೃಪ್ತಿಗಳನ್ನು ಕೈಕೊಂಡು ತ್ರಿವಿಧಮುಖದಿಂದುಳುಮೆಯಾಗಿ ಬರಲ್ಪಟ್ಟ ಶುದ್ಧಸಿದ್ಧಪ್ರಸಿದ್ಧಪ್ರಸಾದವನು ಕರುಣಿಸಿಕೊಟ್ಟಿಹೆನೆಂದರೆ, ಆನು ಬದುಕುವೆನು–ನಾನು ಕೃತಾರ್ಥನಾಗುವೆನೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧_೧ ಡೆ (ಕ, ಗ). ೨_೨ x (ಗ).

II - - - - - - - - - - - - - - - - - - - - - - - - - - - - - - - - - - -

1–1 ಆಸತ್ತೆನಲಸಿದೆನೆಂದಡೆ (ಚ, ಜ). 2–2 ಬೇಸತ್ತೆ (ಚ, ಜ).

..........................

ಆಸತ್ತೆನಲಸಿದೆನೆಂದಡೆ ಮಾಣದು–ಆಯಾಸಂಬಟ್ಟೆ ಆತ್ಮಸತ್ವಗುಂದಿದೆನೆಂದರೂ ಬಿಡದು, ಬೇಸತ್ತೆ ಬೆಂಬಿದ್ದೆನೆಂದಡೆ ಮಾಣದು–ಗತಿಗೆಟ್ಟೆ ಮೊರೆ ಬಿದ್ದೆನೆಂದರೂ ಬಿಡದು, ಮುಂದಕ್ಕೆ ಕಾಣಬಂದರ್ಥ.

V- - - - - - - - - - - - - - - - - - - - - - - - - - - - - - - - - - - - - - - -

3–3 ಪ್ರಾಪ್ತಿಯ (ಪ).

..........................

ಆಸತ್ತೆಂ–ನಿತ್ಯಕೃತ್ಯವ ಮಾಡಲಾರದೆ ಹತವಾದೆನು, ಅಲಸಿದೆನೆಂದಡೆ–ಜನ್ಮಸಂಸಾರದಿಂದೆ ಮೃತವಾದೆನೆಂದರೆ, ಬೆಂಬಿದ್ದೆನೆಂದಡೆ–ಪೂರ್ವ ಶಕ್ತಿಯಲ್ಲಿ ಲೀನವಾದೆನೆಂದರೆ, ಅಂತರಂಗದಲ್ಲಿ ಏನುಮಾಡುವೆ ಬಹಿರಂಗದಲ್ಲಿ ಏನುಮಾಡುವೆನೆಂದರೆ ಎಂಬುದೀಗ ಏವೆನೇವೆನೆಂದಡೆ, ಕಾಯದ–ಅಂಗದ, ಕರ್ಮದ–ಸಂಚಿತಾದಿ ಕರ್ಮತ್ರಯದ, ಪ್ರಾಪ್ತಿಯ ಭೋಗವು–ಅನುಭವವು, ಕೂಡಲಸಂಗನಶರಣರು–ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರುಗಳು, ಬಂದು ಅಂಜದಿರೆಂದಡೆ–ಕಾಲಕಾಮರ ಭಯಕ್ಕೆ ಹೆದರದಿರು ಎಂದರೆ.

---

೨೦

**ಸಂಸಾರವೆಂಬ ಸರ್ಪ ಮುಟ್ಟಲು ಪಂಚೇಂದ್ರಿಯ ವಿಷಯವೆಂಬ ವಿಷದಿಂದ ಆನು ಮುಂದುಗೆಟ್ಟೆನಯ್ಯಾ; ಆನು ಹೊರಳಿ ಬೀಳುತ್ತಿರ್ದೆನಯ್ಯಾ! 'ಓಂ ನಮಃ ಶಿವಾಯ' ಎಂಬ ಮಂತ್ರವ ಜಪಿಸುತ್ತಿರ್ದೆನಯ್ಯಾ, ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – – – –

ಸಂಸಾರವೆಂಬ ಸರ್ಪ ಮುಟ್ಟಲು : ಸಂಸಾರವೆಂಬ_ಸಕಲಸಂಸಾರಪ್ರಪಂಚೆಂಬ, ಸರ್ಪ–ಅಜ್ಞಾನಮಾಯಾಕಾಳೋರಗನು, ಮುಟ್ಟಲು–ದಷ್ಟವಾಗಲು, ಪಂಚೇಂದ್ರಿಯ–ಐದಿಂದ್ರಯಂಗಳ, ವಿಷಯವೆಂಬ–ವಿಷಯಪ್ರಪಂಚೆಂಬ, ವಿಷದಿಂದ–ಕ್ಷ್ವೇಡದಿಂದ, ಆನು ಮುಂದುಗೆಟ್ಟೆನಯ್ಯಾ : ಆನು–ಆತ್ಮನು, ಮುಂದುಗೆಟ್ಟೆನಯ್ಯಾ_ಮುಂದಾಗುವಂಥ ನಿಜಮೋಕ್ಷಕ್ಕೆ ತಪ್ಪುಗನಾದೆನಯ್ಯಾ; ಆನು ಹೊರಳಿಬೀಳುತ್ತಿರ್ದೆನಯ್ಯಾ!: ಆನು–ಆತ್ಮನು, ಹೊರಳಿ–ಲುಠನಂಗೈದು, ಬೀಳುತ್ತಿರ್ದೆನಯ್ಯಾ–"ಬೀಳು ಪತನೇ" ಎಂದು ಪತನವಾಗುತ್ತಿರ್ದೆನಯ್ಯಾ.

'ಓಂ ನಮಃ ಶಿವಾಯ' ಎಂಬ ಮಂತ್ರವ ಜಪಿಸುತ್ತಿರ್ದೆನಯ್ಯಾ_ಲೋಕದಾತ್ಮರುಗಳಿಗೆ ಸರ್ಪದಷ್ಟವಾದಲ್ಲಿ ನಾರುಬೇರು ವಿಷೌಷಧ ಮೊದಲಾದವನು ಕುಡಿಸಿ ಗಾರುಡಮಂತ್ರ ಮೊದಲಾದವನು ಮಂತ್ರಿಸಿದಲ್ಲಿ ಆ ಸರ್ಪನ ದಷ್ಟತ್ವವು ಹೋಗುತ್ತಿಹುದು ಹಾಂಗೆ.

● ಇಲ್ಲಿ ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲಸಂಸಾರಪ್ರಪಂಚೆಂಬ ಅಜ್ಞಾನಮಾಯಾಕಾಳೋರಗನೆಂಬ ಸರ್ಪನು, ಮುಟ್ಟಲು–ದಷ್ಟವಾಗಲು, 'ಓಂ ನಮಃ ಶಿವಾಯ' ಎಂಬ [ಮಂತ್ರವ ಜಪಿಸುತ್ತಿರ್ದೆನಯ್ಯಾ–] ಶಿವಷಡಕ್ಷರಮಂತ್ರವನುಚ್ಚರಿಸಿದಷ್ಟಕ್ಕೆ ಸಕಲಸಂಸಾರಪ್ರಪಂಚೆಂಬ ಅಜ್ಞಾನಮಾಯಾಕಾಳೋರಗನೆಂಬ ಸರ್ಪನ ದಷ್ಟತ್ವವು ನಷ್ಟವಾಗಿ ಹೋಗುತ್ತಿಹುದಯ್ಯಾ, ಕೂಡಲಸಂಗಮದೇವಾ_ಎಲೆ ಪರಶಿವಲಿಂಗವೆ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

**ಅಜೆಯದೆ ಜನನಿಯ ಜಠರದಲ್ಲಿ '[1]ಜನಿಸಿದೆ,[1] ಬಾರದ ಭವಂಗಳಲ್ಲಿ ಬರಿಸಿದೆ ತಂದೆ! [2]ಹುಟ್ಟಿದ್ದೆ[2] ತಪ್ಪಾಯಿತ್ತೆ, ಎಲೆ ಲಿಂಗವೇ? ಮುನ್ನ ಹುಟ್ಟಿದುದಕ್ಕೆ [3]ಕೃಪೆಮಾಡು[3] ಲಿಂಗವೆ! ಇನ್ನು ಹುಟ್ಟಿದೆನಾದಡೆ ಕೂಡಲಸಂಗಮದೇವಾ, ನಿಮ್ಮಾಣೆ!**

I – – – – – – – – – – – – – – – – – – – – – – – – – – – – – –

ಅಜೆಯದೆ ಜನನಿಯ ಜಠರದಲ್ಲಿ ಜನಿಸಿದೆ: ಅಜೆಯದೆ–ನನ್ನ ನಿಜವನ್ನು ಮರೆದು ಅಜ್ಞಾನದಿಂದ ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಬಂದೆನೆಂಬಂಥದನ್ನು ತಿಳಿಯದೆ, ಜನನಿಯ–ತಾಯಿಯ, ಜಠರದಲ್ಲಿ–ಕುಕ್ಷಿಯಲ್ಲಿ, ಜನಿಸಿದೆ–ಹುಟ್ಟಿದೆ; ಬಾರದ ಭವಂಗಳಲ್ಲಿ ಬರಿಸಿದೆ ತಂದೆ! : ಬಾರದ ಭವಂಗಳಲ್ಲಿ–ಎಲ್ಲಾ ಆತ್ಮರುಗಳು ಹುಟ್ಟಿಹುಟ್ಟಿ ಬರುವಂಥದೇ ಮನುಜಯೋನಿ. ಆಕಳಶರೀರ ದೇವತಾಜನ್ಮ ಅದಲ್ಲದೆ ನಿಕೃಷ್ಟವಾದ ಯೋನಿದ್ವಾರದಲ್ಲಿ ಹುಟ್ಟಿಹುಟ್ಟಿ, ಬರಿಸಿದೆ ತಂದೆ!–ಎನ್ನಾತ್ಮಜನಕನಾದೆಲೆ ಪರಶಿವಲಿಂಗವೆ.

ಹುಟ್ಟಿದ್ದೆ ತಪ್ಪಾಯಿತ್ತೆ–ನನ್ನ ನಿಜವನ್ನು ಮರೆದು ಅಜ್ಞಾನದಿಂದ ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಬರುವಂಥದನೆ ತಪ್ಪುಮಾಡಿಕೊಂಡು ಈಗ ಜನನಮರಣಂಗಳಲ್ಲಿ ತಂದು ಸಂಹರಿಸುತಿದ್ದೆಯಲ್ಲಾ, ಹುಟ್ಟಿದ್ದೆ–ಉತ್ಪತ್ಯವಾದದ್ದೆ, ತಪ್ಪಾಯಿತ್ತೆ–ನಿಮಗೊಂದು ಅಪರಾಧವಾಯಿತ್ತೆ, ಎಲೆ ಲಿಂಗವೆ–ಎಲೆ ಪರಶಿವಲಿಂಗವೆ, ಮುನ್ನ ಹುಟ್ಟಿದುದಕ್ಕೆ–ಮೊದಲು ನನ್ನ ನಿಜವನು ಮರೆದು ಅಜ್ಞಾನದಿಂದ ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಉತ್ಪತ್ಯವಾ[ದು]ದಕ್ಕೆ, ಕೃಪೆಮಾಡು–ದಯಮಾಡು, ಲಿಂಗವೆ–ಎಲೆ ಪರಶಿವಲಿಂಗವೆ.

ಇನ್ನು ಹುಟ್ಟಿದೆನಾದಡೆ : ಇನ್ನು–ಒಂದು ವ್ಯಾಳೆದಲ್ಲಿ ನನ್ನ ನಿಜವನ್ನು ಮರದು ಅಜ್ಞಾನದಿಂದ ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ, ಹುಟ್ಟಿದೆನಾದಡೆ–ಉತ್ಪತ್ಯವಾದೆನಾದರೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮಾಣೆ!–ಸ್ವಾಮಿಗಳ ಮೇಲಣ ಪ್ರತಿಜ್ಞೆಯು ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

IV – – – – – – – – – – – – – – – – – – – – – – – – – – – – –

1–1 x (ತ). 2–2 ಹುಟ್ಟಿತ್ತೆ (ತ). 3–3 ಕೃಪೆಯ ಮಾಡು (ತ).

..........................

ಜ್ಞಾನೋದಯದಿಂ ತನ್ನಾದಿಯ ಶರಣ ತಿಳಿದುನೋಡಿ, ಶಿವ ತಾನೆ ತನ್ನ ನಿಜವ ಮಱಿಸಿ ತಾನೆ ಹುಟ್ಟಿಸಿದಲ್ಲಿ ಹುಟ್ಟಿದೆನಲ್ಲದೆ ಆ ಹುಟ್ಟಿದ ದೇಹಧರ್ಮದ ಮಱವೆಯ ತಪ್ಪನೊಮ್ಮಿಂಗೆ ನೋಡದೆ ಲಿಂಗವು ಕೃಪೆಯ ಮಾಡಿದರೆ ಮುಂದೆ ಭವದಲ್ಲಿ ಹುಟ್ಟೆನೆಂಬುದೀ ವಚನದ ತಾತ್ಪರ್ಯಾರ್ಥ.

೨೨

**ಎಂದೋ, ಸಂಸಾರದಂದುಗ ಹಿಂಗುವುದು? ಎಂದೋ, ಮನದಲ್ಲಿ ಪರಿಣಾಮವಹುದೆನಗೆಂದೋ? ಎಂದೋ ಕೂಡಲಸಂಗಮದೇವಾ, [1]ಎಂದೋ ಇನ್ನೆಂದೋ[1] ಇನ್ನೆಂದೋ ಪರಮ ಸಂತೋಷದಲ್ಲಿಹುದೆನಗೆಂದೋ?**

I – – – – – – – – – – – – – – – – – – – – – – – – – – – – – – –

ಎಂದೋ, ಸಂಸಾರದಂದುಗ ಹಿಂಗುವುದು? : ಸಂಸಾರ–ಸಂಸಾರಪ್ರಪಂಚಿನ, ದಂದುಗ_ಧಾವತೆಯು, ಹಿಂಗುವುದು_ತೊಲಗುವುದು, ಎಂದೋ–ಯಾವಕಾಲಕ್ಕೋ ಎಂದೋ ಮನದಲ್ಲಿ ಪರಣಾಮವಹುದೆನಗೆಂದೋ? : ಎಂದೋ–ಇನ್ನಾವ ಕಾಲಕ್ಕೋ, ಮನದಲ್ಲಿ–ಚಿತ್ತದಲ್ಲಿ, ಪರಣಾಮವಹುದು–ಸಂತೋಷವಾಗುವುದು, ಎನಗೆಂದೋ–ಎನಗಿನ್ನಾವಕಾಲಕ್ಕೋ ಎಂದೋ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎಂದೋ–ಇನ್ನಾವಕಾಲಕ್ಕೋ, ಇನ್ನಂದೋ–ಪರಮಸಂತೋಷದಲ್ಲಿಹುದೆನಗೆಂದೋ, ಇನ್ನೆಂದೋ–ಇನ್ನಾವಕಾಲಕ್ಕೋ, ಪರಮ ಸಂತೋಷದಲ್ಲಿಹುದು–ಲಿಂಗದ ಅಂಗದ ಸಮರಸಾನಂದದ ಪರಿಣಾಮದಲ್ಲಿ ಕೂಡಿರುವಂಥದು, ಎನಗೆಂದೋ?–ಎನಗಿನ್ನಾವಕಾಲಕ್ಕೋ ಎಂಬ ದೃಷ್ಟೋಪಮಾನದ ಹಾಂಗೆ.

● ಎಂದೋ ಸಂಸಾರ ದಂದುಗ ಹಿಂಗುವುದು? : ಎಂದೋ–ಇನ್ನಾವ ಕಾಲಕ್ಕೋ, ಸಂಸಾರದಂದುಗ ಹಿಂಗುವುದು : ಸಂಸಾರ–ಸಂಸಾರಪ್ರಪಂಚಿನ, ದಂದುಗ–ಧಾವತಿಯು, ಹಿಂಗುವುದು–ನಷ್ಟವಾಗುವುದು, ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡುವಂಥದು; ಎಂದೋ–ಇನ್ನಾವ ಕಾಲಕ್ಕೋ, ಮನದಲ್ಲಿ ಪರಿಣಾಮವಹುದೆನಗೆಂದೋ?–ಸುಖಸ್ವರೂಪವಾದ ಮನಸ್ಸಿನಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥದು, ಎಂದೋ_ಇನ್ನಾವಕಾಲಕ್ಕೋ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಇನ್ನೆಂದೋ_ಇನ್ನಾವ ಕಾಲಕ್ಕೋ, ಆನಂದಸ್ವರೂಪವಾದ ಜಂಗಮವನು ಪ್ರಾಣಜ್ಞಾನದಲ್ಲಿ ಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡುವಂಥದು ಇನ್ನಾವ ಕಾಲಕ್ಕೋ, ಪರಮಸಂತೋಷದಲ್ಲಿಹುದೆನಗೆಂದೋ?–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿ ಪರಮಪರಿಣಾಮದಲ್ಲಿ ಕೂಡುವಂಥದು, ಇನ್ನೆಂದೋ–ಇನ್ನಾವಕಾಲಕ್ಕೆ ದೊರಕೊಂಡಿತ್ತೋ ಎಂದು, ಅದು ಕಾರಣ ಪರಮಶಿವಲಿಂಗಕ್ಕು ಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

IV – – – – – – – – – – – – – – – – – – – – – – – – – – – – – – –

1–1 x (ತ).

............................

ಜ್ಞಾನೋದಯವಾದ ಶರಣನು ಸಂಸಾರಬಂಧನದುಃಖಕ್ಕಲಸಿ, ಶಿವಾನಂದಸುಖ ದೊರಕಿ ಪರಿಣಾಮದಲ್ಲಿಪ್ಪುದು ಎಂದಹುದೋ ಎಂದು ಮೋಕ್ಷಾಪೇಕ್ಷೆಯಲ್ಲಿರ್ದನೆಂಬುದೀ ವಚನದ ತಾತ್ಪರ್ಯಾರ್ಥ.

---

**ಲೇಸ ಕಂಡು ಮನ [1]ಬಯಸಿ ಬಯಸಿ ಆಸೆಮಾಡಿದಡಿಲ್ಲ ಕಂಡಯ್ಯಾ.[1] ತಾಳಮರಕ್ಕೆ ಕೈಯ ನೀಡಿ ಮೇಲೆ ನೋಡಿ ಗೋಣುನೊಂದುದಯ್ಯಾ, ಕೂಡಲಸಂಗಮದೇವಾ ಕೇಳಯ್ಯಾ ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ.**

I - - - - - - - - - - - - - - - - - - - - - - - - - - - - - - - -

ಲೇಸ ಕಂಡು ಮನ ಬಯಸಿ ಬಯಸಿ–ಉಂಬುತ್ತ ಉಡುವುತ್ತ ^ಭೋಗಿಸುತ್ತ^ ಸುಖಸಂತೋಷದಲ್ಲಿರಬೇಕೆಂಬಂಥ ಪರಿಣಾಮವನು ಇಚ್ಛೈಸಿ ಇಚ್ಛೈಸಿ; ಆಸೆ ಮಾಡಿದಡಿಲ್ಲ ಕಂಡಯ್ಯಾ: ಆಸೆ ಮಾಡಿದಡೆ–ಅಪೇಕ್ಷೆಯನ್ನು ಮುಂದುಗೊಂಡಿದ್ದರೆ, ಇಲ್ಲ ಕಂಡಯ್ಯಾ–ಉಂಟಾಗಿಲ್ಲ ಕಾಣಯ್ಯಾ ತಾಳಮರಕ್ಕೆ ಕೈಯ ನೀಡಿ ಮೇಲೆ ನೋಡಿ ಗೋಣ ನೊಂದುದಯ್ಯಾ : ತಾಳಮರಕ್ಕೆ–ಭಾರದ್ವಾಜವೃಕ್ಷಕ್ಕೆ, ಕೈಯ ನೀಡಿ–ಹಸ್ತವನು ಎಟಕ್ಕಿ, ಮೇಲೆ ನೋಡಿ–ಮೇಲಕ್ಕೆ ನಿರೀಕ್ಷಣೆಯ ಮಾಡಿ, ಗೋಣು ನೊಂದುದಯ್ಯಾ–ಕುತ್ತಿಗೆ ನೋವುತ್ತಿಹುದಯ್ಯಾ; ಕೂಡಲಸಂಗಮದೇವಾ–ಎಲೆ ತೋಟಿಗನೆ, ಕೇಳಯ್ಯಾ–ಆಲಿಸಯ್ಯಾ, ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ!–ನೀನು ಮರನೇರಿ ಕಾಯನು ಕೊಯ್ದುಕೊಡುವಂಥ ಕಾಲಕ್ಕೆ ಬಿದ್ದಿತ್ತಲ್ಲಗೆ ನಾನಾಗಿ ಬಯಸಿದರೆ ಬಿದ್ದೀತೆ? ಬೀಳಲರಿಯದೆಂಬ ದೃಷ್ಟೋಪಮಾನದ ಹಾಂಗೆ,

● ಲೇಸ ಕಂಡು ಮನ ಬಯಸಿ ಬಯಸಿ: ಲೇಸ ಕಂಡು–ತ್ರಿವಿಧಲಿಂಗಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥ ನಿರ್ವಂಚಕ ಸದ್ಭಕ್ತರ ಮೇಲುಪಂಕ್ತಿಯನ್ನು ನಿರೀಕ್ಷಣೆಯ ಮಾಡಿ, ಮನ–ಉಪಾಧಿಕನ ಹೀನ ಮನಸ್ಸು, ಬಯಸಿ ಬಯಸಿ–ನಾನು ಅವರ ಹಾಂಗೆ ತ್ರಿವಿಧಲಿಂಗದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ ಪರಿಣಾಮವನು ಇಚ್ಛೈಸಿ ಇಚ್ಛೈಸಿ, ಆಸೆಮಾಡಿದಡಿಲ್ಲ ಕಂಡಯ್ಯಾ : ಆಸೆ ಮಾಡಿದಡೆ–ಅಪೇಕ್ಷಂಬಟ್ಟರೆ, ಇಲ್ಲ ಕಂಡಯ್ಯಾ–ದೊರಕೊಳ್ಳದು ಕಾಣಯ್ಯಾ; ತಾಳಮರಕ್ಕೆ ಕೈಯ ನೀಡಿ : ತಾಳಮರಕ್ಕೆ–ಅತ್ಯುನ್ನತವಾದ ತ್ರಿವಿಧಲಿಂಗ ಭಕ್ತಿಗೆ, ಕೈಯ–ನೀಡಿ–ಕುಚಿತ್ತವೆಂಬ ಹಸ್ತವನ್ನು ಎಟಕ್ಕಿ; ಮೇಲೆ ನೋಡಿ–ತ್ರಿವಿಧಲಿಂಗದ ಭಕ್ತಿಯನ್ನು ಮಾಡಿ ಮುಕ್ತಿಯನು ಹಡೆದಂಥ ನಿರ್ವಂಚಕ ಸದ್ಭಕ್ತರ ಮೇಲುಪಂಕ್ತಿಯನ್ನು ನೋಡಿ, ನಿರೀಕ್ಷಣೆಯನ್ನು ಮಾಡಿ, ಗೋಣು ನೊಂದುದಯ್ಯಾ–ಕಕ್ಕುಲಾತಿಯೆ ಕೈಯ ತಟ್ಟುತ್ತಿಹುದಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಆಲಿಸಯ್ಯಾ, ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ–ನೀನು ತ್ರಿವಿಧಲಿಂಗ ಸಂಬಂಧವ ಮಾಡಿಕೊಂಡು ತ್ರಿವಿಧಭಕ್ತಿವಿಡಿದಾಚರಿಸಿ ಮುಕ್ತಿಯನ್ನು ಹಡೆಯಿರಯ್ಯಾ ಎಂದು, ನೀನು ಕರುಣಿಸಿಕೊಡುವಂಥ ವೇಳೆಗೆ ದೊರೆಕೊಂಡಿತ್ತಲ್ಲದೆ ನಾನು ತ್ರಿವಿಧಲಿಂಗದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ ಪರಿಣಾಮವನು ಇಚ್ಛೈಸಿದರೆ ದೊರಕೊಳ್ಳದು ಕಾಣಯ್ಯಾ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ + ಸುಖಸಂತೋಷದಲ್ಲಿರುವಂಥ ಆತ್ಮರುಗಳಂ ನೋಡಿ ಮನದಾರಿದ್ರನ ಹೀನಮನಸ್ಸು ಬಯಸಿ ಬಯಸಿ ನಾನು ಅವರ ಹಾಂಗೆ ಉಂಬುತ್ತ ಉಡುವುತ್ತ (ಗ).

II – – – – – – – – – – – – – – – – – – – – – – – – – – – – – – – – – –

ಲೇಸ ಕಂಡು ಮನ ಬಯಸಿ ಬಯಸಿ ಆಸೆ ಮಾಡಿದಡಿಲ್ಲ ಕಂಡಯ್ಯಾ–ಅಷ್ಟಭೋಗ ಪಂಚವಿಷಯ ಮಲತ್ರಯಂಗಳಲ್ಲಿ ಪರಿಣಾಮಿಸುವ ಆತ್ಮರುಗಳ ನೋಡಿ ಮಾನಸವು ಅದಾಗಬೇಕೆಂದು ಇಚ್ಛೈಸಿ ಇಚ್ಛೈಸಿ ಅಪೇಕ್ಷೆಬಟ್ಟರಿಲ್ಲ ನೋಡಯ್ಯಾ. ಅದಲ್ಲದೆ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವ ಮಾಡುವರುಗಳ ಹೆಚ್ಚಿಗೆಯನು ನೋಡಿ ತಾನೂ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವ ಮಾಡಿಹೆನೆಂದು ಇಚ್ಛೈಸಿ ಇಚ್ಛೈಸಿ ಅಪೇಕ್ಷೆಬಟ್ಟರಿಲ್ಲ ನೋಡಯ್ಯ. ತಾಳಮರಕ್ಕೆ ಕೈಯ ನೀಡಿ ಮೇಲೆ ನೋಡಿ ಗೋಣು ನೊಂದುದಯ್ಯಾ–ದೇಹಭಾವವೆಂಬ ಮದ್ಯಪಾನವೃಕ್ಷಕ್ಕೆ ಕುಚಿತ್ತವೆಂಬ ಹಸ್ತವನೆಟ್ಟಿಕ್ಕಿ ಎತ್ತರವಾದ ಫಲಪದಂಗಳ ನಿರೀಕ್ಷಿಸಿ ಅದೃಢವೆಂಬ ಕಂಠ ಗಾಸಿಯಾದುದಯ್ಯಾ, ಮುಂದಕ್ಕೆ ಕಾಣಬಂದರ್ಥ.

III – – – – – – – – – – – – – – – – – – – – – – – – – – – – – – – – –

1–1 ಬಯಸಿದಡಿಲ್ಲ ಕಂಡಯ್ಯಾ (ಡ).

..........................

ಲೇಸ ಕಂಡು–ಗುರುಲಿಂಗಜಂಗಮಕ್ಕೆ ಭಕ್ತಿದಾಸೋಹವ ಮಾಡಿ ಮುಕ್ತಿಯ ಪಡೆದಂಥ ಭಕ್ತರುಗಳನು ನಿರೀಕ್ಷಣೆಯ ಮಾಡಿ ತಾನು ಭಕ್ತಿಯ ಮಾಡಲಱಿಯದೆ ಮುಕ್ತಿಯಾಗಬೇಕೆಂದಿಚ್ಛೈಸಿದರೆ ಮೋಕ್ಷ ದೊರಕೊಳಲಱಿಯದೆಂಬುದೀಗ ಮನ ಬಯಸಿದಡಿಲ್ಲ ಕಂಡಯ್ಯಾ ಎಂಬ ಶಬ್ದಕ್ಕರ್ಥ. ಮರದ ಬುಡದಲ್ಲಿ ನಿಂತು ಮೇಲಕ್ಕೆ ಕೈಯ ನೀಡಿ ಮೇಲಣ ಫಲವ ನೋಡಿದಲ್ಲಿ ಗೋಣು ನೋವುದಲ್ಲದೆ ಹಣ್ಣು ದೊರಕೊಳ್ಳದೆ ಇರುವ ಹಾಂಗೆ ತಾಪತ್ರಯದ ದುಃಖ ತನಗೆ ದೊರಕೊಂಬುವದಲ್ಲದೆ ಮುಕ್ತಿಯಾಗಲರೆಯದೆಂಬುದೀಗ ತಾಳಮರಕ್ಕೆ ಕೈಯ ನೀಡಿ ಮೇಲೆ ನೋಡಿ ಗೋಣು ನೊಂದುದಯ್ಯಾ ಎಂಬ ಶಬ್ದಕ್ಕರ್ಥ. ನೀನೀವ ಕಾಲಕ್ಕಲ್ಲದೆ–ನೀನೊಲಿದು ಪ್ರಸನ್ನವಾಗಿ ಮುಕ್ತಿಯನು ಕರುಣಿಸುವ ವ್ಯಾಳ್ಯಕ್ಕಲ್ಲದೆ, ಇಲ್ಲ ಕಂಡಯ್ಯಾ–ಮೋಕ್ಷವು ದೊರಕೊಳ್ಳದು ಕಂಡ ಎಲೆ ಸ್ವಾಮಿ.

V– – – – – – – – – – – – – – – – – – – – – – – – – – – – – – – – – –

ಲೇಸು ಕಂಡು–ಸರ್ವಾಚಾರ ಸಂಪತ್ತಿನಲ್ಲಿ ಆಚರಿಸುವರ ಪರಿಣಾಮವನು ಕಂಡು, ಒಬ್ಬಾನೊಬ್ಬಾತನು ತಾಳಮರಕ್ಕೆ ಕೈಯ ನೀಡಿ ಮೇಲಕ್ಕೆ ನೋಡಿ ಅಲ್ಲಿರ್ದ ಹಣ್ಣ ಕೊಯ್ಕೊಂಡು ಮೆದ್ದು ಸುಖಬಡದೆ ಶಿರಸ್ಸು ನೊಂದ ಹಾಂಗೆ ಮ...ರಸಕ್ಕೆ ಕಾರಣವಾದ ದೇಹವೆಂಬ ವೃಕ್ಷದಲ್ಲಿರ್ದ ಷಟ್ಚಕ್ರಂಗಳಿಗುಪರಿಯಾದ ಬ್ರಹ್ಮರಂಧ್ರದಲ್ಲಿರ್ದ ವಿವೇಕವೃಕ್ಷವೆಂಬ ಪರಮಾಮೃತಫಳಸ್ವರೂಪವಾದ ನಿಃಕಲಲಿಂಗಕ್ಕೆ ಮನೋಹಸ್ತವ ಸಾರ್ಚಿಭಿನ್ನದೃಕ್ಕಿನಿಂದೆ ನೋಡಿ ಆ ವಸ್ತು ಸಾಧ್ಯವಾಗದೆ ವಿವೇಕವೆಂಬ ಶಿರಸ್ಸು[ವ್ಯಥೆ]ಗೊಂಡಿತ್ತೆಂಬುದರ್ಥ.

೨೪

**ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ ಇನ್ನು ಬಯಸಿದಡುಂಟೆ? ಭಕ್ತಿಯುಳ್ಳವರ ನೋಡಿನೋಡಿ ಬಯಸಿದಡುಂಟೆ, ಕೂಡಲಸಂಗಮದೇವರಲ್ಲಿ ಮುನ್ನ ವರವ ಹಡೆಯದನ್ನಕ್ಕ?**

I- - - - - - - - - - - - - - - - - - - - - - - - - - - - - - - - - - -

ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ : ಮುನ್ನ ಮಾಡಿದ–ಮೊದಲ ಜನ್ಮದಲ್ಲಿ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ ಯುಕ್ತಿಯಿಲ್ಲದೆ ದೂಷಣೆಯ ಮಾಡಿದಂಥ, ಪಾಪ–ದೋಷವು, ಬೆನ್ನ ಬಿಡದನ್ನಕ್ಕ–ತನ್ನ ಒಡಲ ಕಚ್ಚಿ ಬಿಡದೆ ಹೆರೆಹಿಂಗದೆ ಉಂಟಾಗಿರುವ ಪರಿಯಂತರವು; ಇನ್ನು ಬಯಸಿದಡುಂಟೆ?–ಈಗೇನಾದರೂ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ ಪರಿಣಾಮವನು ಇಚ್ಛೈಸಿದರೆ ದೊರಕೊಂಡೀತೆ? ದೊರಕೊಳ್ಳಲರಿಯದು.

ಭಕ್ತಿಯುಳ್ಳವರ ನೋಡಿ ನೋಡಿ–ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ ನಿರ್ವಂಚಕ ಸದ್ಭಕ್ತರ ಮೇಲು ಪಜ್ತೆಯನ್ನು ನಿರೀಕ್ಷಣೆಯ ಮಾಡಿ, ಬಯಸಿದಡುಂಟೆ–ನಾನು ಅವರ ಹಾಂಗೆ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ ಪರಿಣಾಮವನ್ನು ಇಚ್ಛೈಸಿದರೆ ಸಿದ್ಧಿಸೀತೆ? ಸಿದ್ಧಿಸಲರಿಯದು. ಕೂಡಲಸಂಗಮದೇವರಲ್ಲಿ–ಪರಶಿವಲಿಂಗದಲ್ಲಿ, ಮುನ್ನ ವರವ ಹಡೆಯದನ್ನಕ್ಕ?– ಮೊದಲೇನಾದರೂ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ ಇಷ್ಟಾರ್ಥ ಪರಿಣಾಮವನ್ನು, ಬಯಸಿದಡೆ–ಇಚ್ಛೈಸಿದರೆ ದೊರಕೊಂಡೀತೆ? ದೊರಕೊಳ್ಳಲರಿಯದೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೨೫

**ಚಂದ್ರೋದಯಕ್ಕಂಬುಧಿ ಹೆಚ್ಚುವುದಯ್ಯಾ, ಚಂದ್ರ ಕುಂದೆ ಕುಂದುವುದಯ್ಯಾ, ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತಯ್ಯಾ? ಅಂಬುಧಿಯ ಮುನಿ ಆಪೋಷಣಗೊಂಬಲ್ಲಿ ಆ ಚಂದ್ರಮನಡ್ಡಬಂದನೆ ಹೇಳಾ? ಆರಿಗೆ ಆರಿಲ್ಲ; ಕೆಟ್ಟವಂಗೆ ಕೆಳೆಯಿಲ್ಲ! ಜಗದ ನಂಟ ನೀನೆ ಅಯ್ಯಾ, ಕೂಡಲಸಂಗಮದೇವಾ!**

I- - - - - - - - - - - - - - - - - - - - - - - - - - - - - - - - - - -

ಚಂದ್ರೋದಯಕ್ಕಂಬುಧಿ ಹೆಚ್ಚುವುದಯ್ಯಾ : ಚಂದ್ರೋದಯಕ್ಕೆ–ಪೌರ್ಣಮಿಚಂದ್ರನ, ಉದಯಕ್ಕೆ–ಆವಿರ್ಭಾವಕ್ಕೆ, ಅಂಬುಧಿ–ಸಮುದ್ರವು, ಹೆಚ್ಚುವುದಯ್ಯಾ–ನೊರೆ ಬುದ್ಬುದಶೀಕರಾದಿ ತುಂತುರ್ವನಿಗಳಿಂದ ಅದಲ್ಲದೆ ಹೆಣ್ಣು ತೆರೆಗಳಿಂದ ಗಂಡು ತೆರೆಗಳಿಂದ ಭೋರ್ಭೋರೆಂದು ಉಲಿವುತ್ತಿಹುದಯ್ಯಾ.

ಚಂದ್ರ ಕುಂದೆ ಕುಂದುವುದಯ್ಯಾ : ಚಂದ್ರ ಕುಂದೆ–ಪೌರ್ಣಮಿಚಂದ್ರನಿಗೆ ದಿನಕೊಂದು ಕಳೆ ಕಡಿಮೆಯಾದಲ್ಲಿ ಹಾಂಗೇ ಸಮುದ್ರವು ತಗ್ಗುತ್ತಿಹುದಯ್ಯಾ, ಚಂದ್ರಂಗೆ ರಾಹು ಅಡ್ಡಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೆ : ಚಂದ್ರಂಗೆ–ಪೌರ್ಣಮಿಚಂದ್ರನಿಗೆ, ರಾಹು ಅಡ್ಡಬಂದಲ್ಲಿ–ಮುರಾಸುರನೆಂಬ ರಕ್ಕಸನ ತಲೆಯೇ ರಾಹು ಕೇತುಗಳಾಗಿ ಬಂದು ಪೀಡಿಸುವಲ್ಲಿ, ಅಂಬುಧಿ–ಸಮುದ್ರವು, ಬೊಬ್ಬಿಟ್ಟಿತ್ತೆ–ಚಂದ್ರ ನನ್ನ ಮಗ ನೀನೇನು ಕಾರಣಕ್ಕೆ ರಾಹು ಕೇತುಗಳಾಗಿ ಬಂದು ಪೀಡಿಸುತ್ತಿದ್ದೀ ಎಂದು ಮೊರೆಯಿಟ್ಟುಕೊಂಡು ಬಿಡಿಸಿಕೊಂಡಿತ್ತೆ? ಇಲ್ಲವು.

ಅಂಬುಧಿಯ ಮುನಿ ಆಪೋಷಣಗೊಂಬಲ್ಲಿ : ಅಂಬುಧಿಯ–ಸಮುದ್ರವನ್ನು, ಮುನಿ–ಅಗಸ್ತ್ಯಋಷಿಯು, ಆಪೋಷಣಗೊಂಬಲ್ಲಿ–ಒಕ್ಕುಡಿತೆ ಉದಕವ ಮಾಡಿ ಪಾನಂಗೆಯ್ವಲ್ಲಿ; ಆ ಚಂದ್ರಮನಡ್ಡಬಂದನೆ ಹೇಳಾ? : ಆ ಚಂದ್ರಮ–ಆ ಪೌರ್ಣಮಿಚಂದ್ರನು, ಅಡ್ಡಬಂದನೆ–ಸಮುದ್ರ ನಮ್ಮ ತಾಯಿ ನೀನೇನು ಕಾರಣಕ್ಕೆ ಒಕ್ಕುಡಿತೆ ಉದಕವನ್ನು ಮಾಡಿ ಪಾನಂಗೈವುತ್ತೀ? ಎಂದು ಅಡ್ಡಬಂದು ಬಿಡಿಸಿಕೊಂಡಾನೆ? ಇಲ್ಲವು ಹೇಳಾ–ನಿರೂಪಿಸಾ.

ಆರಿಗೆ ಆರಿಲ್ಲ–ಸಮುದ್ರಕ್ಕೆ ಚಂದ್ರನಿಲ್ಲ ಚಂದ್ರನಿಗೆ ಸಮುದ್ರವಿಲ್ಲ, ಕೆಟ್ಟವಂಗೆ–ದೇಶಕೋಶಬೊಕ್ಕಸಭಂಡಾರ ಚತುರಂಗಮಾರ್ಬಲವೆಲ್ಲ ಹೋಗಿ ನಿರ್ಧನಿಕನಾದಂಥ ರಾಜನಿಗೆ, ಕೆಳೆಯಿಲ್ಲ!– ಮೊದಲ ಹಾಂಗೆ ದೇಶಕೋಶಬೊಕ್ಕಸಭಂಡಾರ ಚತುರಂಗಮಾರ್ಬಲವನ್ನು ಕೊಟ್ಟು ಪರಿಣಾಮದಲ್ಲಿ ಸೈತಿಡುವಂಥ, ಕೆಳೆಯಿಲ್ಲ–ಸುಖರುಗಳುಂಟಾಗಿಲ್ಲವು.

ಜಗದ ನಂಟ ನೀನೆ ಅಯ್ಯಾ–ಎಂದಿನ ಹಾಂಗೆ ದೇಶಕೋಶಬೊಕ್ಕಸಭಂಡಾರ ಚತುರಂಗಮಾರ್ಬಲವನ್ನು ಕರುಣಿಸಿಕೊಟ್ಟು ಪರಿಣಾಮದಲ್ಲಿ ಸೈತಿಡುವಂಥದು ವಿಶ್ವಕುಟುಂಬಿಯಾದ ಪರಶಿವಲಿಂಗವೆ ನಿಮಗೆ ಅರಿಯಬಹುದಯ್ಯಾ ಎಂಬ ದೃಷ್ಟೋಪಮಾನದ ಹಾಂಗೆ.

● ಚಂದ್ರೋದಯಕ್ಕೆ–ಆತ್ಮನು ಉಂಬುತ್ತ ಉಡುವುತ್ತ ಸುಖಸಂತೋಷದಲ್ಲಿ ಇದ್ದುದಕ್ಕೆ, ಅಂಬುಧಿ–ದೇಹವು, ಹೆಚ್ಚುವುದಯ್ಯಾ–ಒಂದು ಹೊರೆ ಎರಡು ಹೊರೆ ಮೂರು ಹೊರೆ ನಾಲ್ಕು ಹೊರೆ ಉಬ್ಬುತ್ತಿಹುದಯ್ಯಾ, ಚಂದ್ರ ಕುಂದೆ ಕುಂದುವುದಯ್ಯಾ : ಚಂದ್ರ ಕುಂದೆ–ಆತ್ಮನಿಗೆ ಉಂಬುವುದಕ್ಕೆ ಉಡುವುದಕ್ಕೆ ಇಲ್ಲದೆ ದುಃಖದಲ್ಲಿದ್ದುದಕ್ಕೆ, ಕುಂದುವುದಯ್ಯಾ–ಸಪ್ತಧಾತುಗಳು ಸಣ್ಣಿಸಿ ಗಿಟಿಗಿಟಿಜಂತ್ರವಾಗುತ್ತಿಹುದಯ್ಯಾ, ಚಂದ್ರನಿಗೆ–ಆತ್ಮನಿಗೆ, ರಾಹು ಅಡ್ಡಬಂದಲ್ಲಿ–ಆಧಿವ್ಯಾಧಿ ವಿಪತ್ತುಗಳಾಗಿ ಬಂದು ಪೀಡಿಸುವಲ್ಲಿ, ಅಂಬುಧಿ–ದೇಹವು, ಬೊಬ್ಬಿಟ್ಟಿತ್ತೆ ಅಯ್ಯಾ?–ಆತ್ಮ ನನ್ನ ಮಗ ನೀವೇನು ಕಾರಣಕ್ಕೆ ಆಧಿವ್ಯಾಧಿ ವಿಪತ್ತುಗಳಾಗಿ ಬಂದು ಪೀಡಿಸುತಿದ್ದೀಯೆಂದು ಮೊರೆಯಿಟ್ಟು ಬಿಡಿಸಿಕೊಂಡಿತ್ತೆ? ಇಲ್ಲವು, ಅಯ್ಯಾ!–ಎಲೆ ಲಿಂಗವೆ.

ಅಂಬುಧಿಯ–ದೇಹವನ್ನು, ಮುನಿ–ಯಮರಾಜನು, ಆಪೋಷಣಗೊಂಬಲ್ಲಿ–ಮರಣದಲ್ಲಿ ತಂದು ಸಂಹರಿಸುವಲ್ಲಿ, [ಆ] ಚಂದ್ರಮ–ಆತ್ಮನು, ಅಡ್ಡಬಂದನೆ–ದೇಹ ನಮ್ಮ ತಾಯಿ ನೀವೇನು ಕಾರಣಕ್ಕೆ ಮರಣದಲ್ಲಿ ತಂದು ಸಂಹರಿಸುತಿದ್ದೀಯೆಂದು ಅಡ್ಡಬಂದು ಬಿಡಿಸಿಕೊಂಡಾನೆ? ಇಲ್ಲವು, ಹೇಳಾ–ನಿರೂಪಿಸಾ.

ಆರಿಗೆ ಆರಿಲ್ಲ-ಆತ್ಮನಿಗೆ ದೇಹವಿಲ್ಲ ದೇಹಕ್ಕೆ ಆತ್ಮನಿಲ್ಲವು, ತಂದೆಗೆ ಮಗನಿಲ್ಲ ಮಗನಿಗೆ ತಂದೆಯಿಲ್ಲವು, ತಾಯಿಗೆ ಮಗಳಿಲ್ಲ ಮಗಳಿಗೆ ತಾಯಿಯಿಲ್ಲವು, ತಮ್ಮನಿಗೆ ಅಣ್ಣನಿಲ್ಲ ಅಣ್ಣನಿಗೆ ತಮ್ಮನಿಲ್ಲವು, ಗುರುವಿಂಗೆ ಶಿಷ್ಯನಿಗೆ ಶಿಷ್ಯನಿಗೆ ಗುರುವಿಲ್ಲವು, ಕೆಟ್ಟವಂಗೆ–ಶಿವತತ್ತ್ವ ಕೆಟ್ಟು ಜೀವನಾದವಂಗೆ, ಕೆಳೆಯಿಲ್ಲ!–ಆತ್ಮ [2]ಜೀವನ ಜೀವತತ್ತ್ವವನ್ನು ನಷ್ಟವ ಮಾಡಿ ಸಜ್ಜೀವನಸ್ವರೂಪವಾಗಿ ಅಳವಡಿಸಿಕೊಡುವಂಥ, ಕೆಳೆಯಿಲ್ಲ!–ಸಖಿರುಗಳುಂಟಾಗಿಲ್ಲವು.

ಜಗದ ನಂಟ ನೀನೆ ಅಯ್ಯಾ, ಕೂಡಲಸಂಗಮದೇವಾ!–ಆತ್ಮ [2]ಜೀವನ ಜೀವತ್ವವನ್ನು ನಷ್ಟವ ಮಾಡಿ ಸಜ್ಜೀವನಸ್ವರೂಪವಾಗಿ ಅಳವಡಿಸಿಕೊಡುವಂಥದು ಜಗತ್ಕರ್ತೃವಾದ ಪರಶಿವಲಿಂಗವೆ ನಿಮಗೆ ಅರಿಯಬರುವುದಯ್ಯಾ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧+ ಉಬ್ಬುತ್ತಿಹುದಯ್ಯ (ಕ, ಗ). ೨+ನ (ಕ, ಗ).

---

೨೬

**ಒಲೆ [1]ಹೊತ್ತಿ[1] ಉರಿದಡೆ ನಿಲಬಹುದಲ್ಲದೆ ಧರೆ ಹೊತ್ತಿ ಉರಿದಡೆ [2]ನಿಲಬಾರದು![2] ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳವಡೆ, ತಾಯ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂಱುವೆನಯ್ಯಾ, ಕೂಡಲಸಂಗಮದೇವಾ?**

I – – – – – – – – – – – – – – – – – – – – – – – – – – – – – – – – – –

ಒಲೆ ಹೊತ್ತಿ ಉರಿದಡೆ ನಿಲಬಹುದಲ್ಲದೆ : ಒಲೆ–ಚುಲ್ಲಿಯು, ಹೊತ್ತಿ–ಪುಟುವಾಗಿ, ಉರಿದಡೆ–ಹೆಚ್ಚಿಗೆ ಕುರುಳು ಕಟ್ಟಿಗೆ ಹಾಕಿದಲ್ಲಿ ಧಗಧಗನೆಂದು ಪ್ರಭಾವಿಸಿದರೆ, ನಿಲಬಹುದಲ್ಲದೆ–ತಂದು ನೀರನು ಹೊಯಿದು ಆರಿಸಿ ಪ್ರಮಾಣಕ್ಕೆ ಉರಿಹಿಕೊಂಡು ಪಾಕಪ್ರಯತ್ನಂಗಳನು ಮಾಡಿಕೊಂಡು ಅನುಭವಿಸಬಹುದಲ್ಲದೆ; ಧರೆ ಹೊತ್ತಿ ಉರಿದಡೆ ನಿಲಬಾರದು: ಧರೆಹೊತ್ತಿ–ಕಾಡಗಿಚ್ಚು ಹೊತ್ತಿ, ಉರಿದಡೆ–ಧಗಧಗನೆಂದು ಪ್ರಭಾವಿಸಿದರೆ, ನಿಲಬಾರದು–ತಂದು ನೀರ ಹೊಯಿದು ಆರಿಸಿ ಪ್ರಮಾಣಕ್ಕೆ ಉರುಹಿಕೊಂಡೇನೆಂದರೆ ಅಶಕ್ಯವಾಗಿರ್ಪುದು.

ಏರಿ ನೀರುಂಬಡೆ–ಲೋಕದಲ್ಲಿ ಕೆಲವಾತ್ಮರುಗಳು ಕೆರೆಯನ್ನು ಕಟ್ಟಿಸಬೇಕಾದರೆ ಮುಂದೆ ನೀರು ನಿಲ್ಲುವುದಕ್ಕೆ ಅಂಗಳವನ್ನು ನೋಡಿ ಹಿಂದೆ ಪೈರುವನೊಡ್ಡುವುದಕ್ಕೆ ಭೂಮಿಯನ್ನು ನೋಡಿ ಹಿಂಗಲ್ಲು ಮುಂಗಲ್ಲನು ಹಾಕಿ ಕೆರೆಯನ್ನು ಕಟ್ಟಿಸಿದಲ್ಲಿ ಬಂದಂಥ ಉದಕವನ್ನು ತಡೆದುಕೊಂಡು ಸಮಸ್ತ ಫಲ ಪೈರುಗಳಿಗೂ ಸಮಸ್ತ ಪಶುಪಕ್ಷಿಪ್ರಾಣಿಗಳಿಗೆಯೂ ಸಮಸ್ತ ಆತ್ಮರುಗಳಿಗೂ ಉದಕವನ್ನು ಕೊಟ್ಟುಕೊಂಡು ಇರಬೇಕಲ್ಲದೆ ಬಂದಂಥ ನೀರನ್ನು ತಾನೆ ಒಳಕೊಂಡಲ್ಲಿ ಕಂಡು ಬಿಡಿಸೇನೆಂದರೆ ಅಶಕ್ಯವಾಗಿರ್ಪುದು.

ಬೇಲಿ ಕೆಯ್ಯ ಮೇವಡೆ–ಲೋಕದಲ್ಲಿ ಹಲಾಯುಧರುಗಳು ಹದಿನೆಂಟು ಧಾನ್ಯಾದಿಗಳನು ಭೂಮಿಯ ಮೇಲೆ ಬಿತ್ತಿದಲ್ಲಿ ಕಳ್ಳರುಕಾಕರು ಕಳ್ಳ ಪಶುಗಳು ಬಂದು ಮೇಯದ ಹಾಂಗೆ ಸುತ್ತ

ಬೇಲಿ ಬೆಳ್ಳಾರವನ್ನು ಕಟ್ಟಿಕೊಂಡಿದ್ದಲ್ಲಿ ಜೋಕೆಯ ಮಾಡಿಕೊಂಡಿರಬೇಕಲ್ಲದೆ ಆ ಬೇಲಿ ಎದ್ದು ಹೊಲವನ್ನು ಮೆಯ್ದರೆ ಕಂಡು ಬಿಡಿಸಿಕೊಂಡೇನೆಂದರೆ ಅಶಕ್ಯವಾಗಿರ್ಪುದು.

ನಾರಿ ತನ್ನ ಮನೆಯಲ್ಲಿ ಕಳವಡೆ–ಪರ ಕಳ್ಳನೇನಾದರೂ ಬಂದು ಮನೆಯ ಹೊಕ್ಕು ವಸ್ತು ಒಡವೆ ಆಭರಣಂಗಳನ್ನು ತೆಗೆದುಕೊಂಡು ಹೋಗುತ್ತಿದ್ದಲ್ಲಿ ಕಂಡುಹಿಡಿದು ಬಡಿದು ವಸ್ತು ಒಡವೆ ಆಭರಣಂಗಳನ್ನು ಕಸಕೊಂಡು ಉಳುಹಿಕೊಳಬೇಕಲ್ಲದೆ ಮನೆಯ ಸ್ತ್ರೀಯಳೇನಾದರೂ ಮನೆಯೊಳಗಿದ್ದಂಥ ಬದುಕನ್ನು ಕದ್ದು ನೆರಮನೆಗೆ ಹಾಕಿದರೆ ಕಂಡು ಬಿಡಿಸೇನೆಂದರಶಕ್ಯವಾಗಿರ್ಪುದು.

ತಾಯ ಮೊಲೆವಾಲು ನಂಜಾಗಿ ಕೊಲುವಡೆ : ತಾಯ–ಜನನಿಯ, ಮೊಲೆವಾಲು–ಕುಚಕ್ಷೀರವು, ನಂಜಾಗಿ–ವಿಷವಾಗಿ, ಕೊಲುವಡೆ–ಆ ಶಿಶುವಿನ ಪ್ರಾಣವನು ಸಂಹರಿಸುವರೆ; ಇನ್ನಾರಿಗೆ ದೂಱುವೆ–ಇನ್ನಾರಿಗೆ ಹೇಳಲಿ ಎಂಬ ದೃಷ್ಟೋಪಮಾನದ ಹಾಂಗೆ,

● ತಾಯ–ಪರಶಿವಲಿಂಗವೆಂಬ ಜನನಿಯ, ಮೊಲೆವಾಲು–ಪರಮಾಮೃತವೆಂಬ ಕುಚಕ್ಷೀರವು, ನಂಜಾಗಿ–ಹಾಳಾಹಳಕೂಟವಿಷವಾಗಿ, ಕೊಲುವಡೆ–ಮರಣದಲ್ಲಿ ತಂದು ಸಂಹರಿಸುವರೆ, ಇನ್ನಾರಿಗೆ ದೂಱುವೆ–ಇನ್ನಾರಿಗೆ ಉಪಾವಸ್ಥೆಯಂ ಮಾಡುವೆನು, ಕೂಡಲಸಂಗಮದೇವಾ?–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II- - - - - - - - - - - - - - - - - - - - - - - - - - - - - - - - - - - - - - - -

1–1 ಹತ್ತಿ (ಚ, ಜ). 2–2 ನಿಲಲುಬಾರದು (ಚ, ಜ).

..........................

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದಡೆ ನಿಲಲುಬಾರದು–ಅಂತರಂಗವೆಂಬ ಚುಲ್ಲಿಯು ಜ್ಞಾನಾಗ್ನಿಯಿಂದ ಪುಟವಾಗಿ ಜ್ವಲಿಸಿದರೆ ಜೀವಿಸಬಹುದಲ್ಲದೆ ಪೃಥ್ವಿತತ್ವಾಂಶೀಭೂತವಾದ ದೇಹವು ತಾಪತ್ರಯಾಗ್ನಿಯಿಂದ ಪುಟವಾಗಿ ಜ್ವಲಿಸಿದರೆ ನೆಲಸಲು ಬಾರದು. ಏಱಿ ನೀರುಂಬಡೆ–ತನುತ್ರಯವೆಂಬ ಏರಿ ಮನೋಜಲವನೀಂಟುವಡೆ, ಬೇಲಿ ಕೆಯ್ಯ ಮೇವಡೆ–ಇಂದ್ರಿಯಂಗಳೆಂಬ ಬೆಳ್ಳಾರವು ಸರ್ವಾಚಾರಸಂಪತ್ತಿನಾಚರಣೆಯ ಜನ್ಮ ಭೂಮಿಗೆ ಸ್ಥಾನವಾದ ಶರಣನಂಗವೆಂಬ ಭಕ್ತಿಕ್ಷೇತ್ರವನನುಭವಿಸುವಡೆ, ನಾರಿ ತನ್ನ ಮನೆಯಲ್ಲಿ ಕಳವಡೆ–ಜ್ಞಾನಶಕ್ತಿಯು ತನ್ನಂತರಂಗವೆಂಬ ಗೃಹದಲ್ಲಿ ಜ್ಞಾನವನಪಹರಿಸುವಡೆ, ತಾಯ ಮೊಲೆವಾಲು ನಂಜಾಗಿ ಕೊಲುವಡೆ–ಮಾತೃಸ್ಥಾನವಾದ ಚಿಚ್ಛಕ್ತಿಯ ಶಿವಾನುಭಾವವೆಂಬ ಕುಚಕ್ಷೀರವು ಸಂಕಲ್ಪರೂಪವಾಗಿ ಸಂಹರಿಸುವಡೆ, ಇನ್ನಾರಿಗೆ ದೂಱುವೆ–ಚೈತನ್ಯಸ್ವರೂಪವಾದ ವಸ್ತುವೇ ತನಗೆ ಹಗೆಯಾದ ಬಳಿಕ ಮುಂದಾರಿಗೆ ದೂರಿಡುವೆನೆಂಬುದರ್ಥ.

---

೨೭

**ಎನ್ನ ಗುಣಾವಗುಣವ ಸಂಪಾದಿಸುವೆ ಅಯ್ಯಾ! ಪ್ರತಿಯೆ, ಅಪ್ರತಿಮ ಮಹಿಮ, ನಿಮಗಾನು ಪ್ರತಿಯೆ? ಕೂಡಲಸಂಗಮದೇವಾ ನೀ ಮಾಡಲಾನಾದೆನು!**

I - - - - - - - - - - - - - - - - - - - - - - - - - - - - - - - -

ಎನ್ನ ಗುಣಾವಗುಣವ ಸಂಪಾದಿಸುವೆ ಅಯ್ಯಾ! : ಎನ್ನ ಗುಣ–ಎನ್ನ ಸದ್ಗುಣವು, ಅವಗುಣವ–ದುರ್ಗುಣವನ್ನು, ಸಂಪಾದಿಸುವೆ–ಪ್ರತಿಪಾದಿಸುವೆ, ಅಯ್ಯಾ!–ಎಲೆ ಲಿಂಗವೆ. ಪ್ರತಿಯೆ–ಸಮಾನವೆ, ಅಪ್ರತಿಮ–ಪ್ರತಿರಹಿತವಾದ, ಮಹಿಮ–ಮಹತ್ವಾತಿಶಯವನುಳ್ಳಂಥ ಎಲೆ ಪರಶಿವಲಿಂಗವೆ, ನಿಮಗೆ–ಸ್ವಾಮಿಗಳಿಗೆ, ಆನು ಪ್ರತಿಯೆ?–ನಾನು ಸಮಾನವೆ? ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀ ಮಾಡಲಾನಾದೆನು!– ನೀನೊಂದು ವೇಳೆ ದೇಹಸಂಬಂಧಿಯಾಗಿ ಹುಟ್ಟಿಸಲು ನಾನೊಂದು ವೇಳೆ ದೇಹಸಂಬಂಧಿಯಾಗಿ ಹುಟ್ಟಿದೆನೆಂದು, ಅದು ಕಾರಣ ಪರಮಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೨೮

**ಬೆದಕದಿರು ಬೆದಕದಿರು, ಬೆದಕಿದಡೆ ಹುರುಳಿಲ್ಲ! ಚಿತ್ತರಟ್ಟೆಯ ಕಾಯಲ್ಲಿ ಮತ್ತೇನನರಸುವಿರಯ್ಯಾ? ನಿಮ್ಮುತ್ತಮಿಕೆಯನೆ ಪೂರೈಸುವುದು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - -

ಬೆದಕದಿರು–ಈತನಲ್ಲಿ ಭಕ್ತಿಯುಂಟು ಜ್ಞಾನವುಂಟು ವೈರಾಗ್ಯವುಂಟು ಅರುಹು ಆಚರಣೆಗಳುಂಟೆಂದು ಹುಡುಕದಿರು ಹುಡುಕದಿರು, ಬೆದರಿಕಿದಡೆ–ಈತನಲ್ಲಿ ಭಕ್ತಿಯುಂಟು ಜ್ಞಾನವುಂಟು ವೈರಾಗ್ಯವುಂಟು ಅರುಹು ಆಚರಣೆಗಳುಂಟೆಂದು ಹುಡುಕಿದರೆ, ಹುರುಳಿಲ್ಲ–ಎನ್ನಲ್ಲಿ ಭಕ್ತಿಯಿಲ್ಲ ಜ್ಞಾನವಿಲ್ಲ ವೈರಾಗ್ಯವಿಲ್ಲ ಅರುಹು ಆಚರಣೆಗಳೊಂದೂ ಉಂಟಾಗಿಲ್ಲವು.

ಚಿತ್ತರಟ್ಟೆಯ ಕಾಯಲ್ಲಿ–ಲೊಟ್ಟೆಕಾಯಲ್ಲಿ, ಮತ್ತೇನನಱಸುವಿರಯ್ಯಾ?–ಒಡೆದು ನೋಡಿದರೆ ಮೂರು ಬೀಜವಲ್ಲದೆ ಒಳಗೆ ತಿರುಳುಂಟೆ? ಇಲ್ಲವು. ಹಾಂಗೆ, ಇಲ್ಲಿ ಚಿತ್ತರಟ್ಟೆಯ ಕಾಯಲ್ಲಿ–ಸ್ವಲ್ಪವಾದಾತ್ಮನು ಎನ್ನಲ್ಲಿ, ಮತ್ತೇನನಱಸುವಿರಿ–ಭಕ್ತಿಜ್ಞಾನವೈರಾಗ್ಯವನ್ನು ಏನು ಹುಡುಕುವಿರಿ, ಅಯ್ಯಾ–ಎಲೆ ಲಿಂಗವೆ.

ನಿಮ್ಮುತ್ತಮಿಕೆಯನೆ ಪೂರೈಸುವುದು ಕೂಡಲಸಂಗಮದೇವಾ:[ಕೂಡಲಸಂಗಮದೇವಾ_] ಎಲೆ ಪರಶಿವಲಿಂಗವೆ, ನಿಮ್ಮುತ್ತಮಿಕೆ–ನಿಮ್ಮಯೆಂದರೆ ನಿಃಕಲಲಿಂಗವು, ಉತ್ತಮಿಕೆಯಂದರೆ ಚಿತ್ತು, ಪೂರೈಸುವುದು–ಚಿತ್ತನಲ್ಲಿ ತನ್ನಂಗ ಚಿದ್ಘನಲಿಂಗದಲ್ಲಿ ತನ್ನ ಪ್ರಾಣವನ್ನು ಕೊಡಿ[ಸಿ] ಚಿತ್ತೇ ಅಂಗ ಚಿದ್ಘನಲಿಂಗವೇ ತನ್ನ ಪ್ರಾಣವಾಗಿ ಅಳವಡಿಸಿಕೊಂಡಾಚರಿಸುವುದೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೨೯

**ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ; [1]ವಿಚಾರಿಸಿ ನೋಡಿದಡೆ ಎನ್ನಲ್ಲಿ ಹುರುಳಿಲ್ಲವಯ್ಯಾ![1] ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪುಮಾಡಿ ನೀವಿರಿಸಿದಿರಿ ಕೂಡಲಸಂಗಮದೇವಾ!**

I – – – – – – – – – – – – – – – – – – – – – – – – – – – – – – –

ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ–ಔದುಂಬರಫಳವೆಂಬುವಂಥದು ಕಿಗ್ಗಾಳಿಯಲ್ಲಿ ಹೋಗುವಂಥ ಆತ್ಮರುಗಳ ನಾಸಿಕಕ್ಕೆ ಗಮಗಮನೆಂದು ಪರಿಮಳಿಸುವುದು. ಸಮೀಪಕ್ಕೆ ಹೋಗಿ ಬಿಚ್ಚಿನೋಡಿದಲ್ಲಿ ಬೀಜಕ್ಕೊಂದು ಹುಳವು ತಪ್ಪದೆ ಇರುವವು. ಅವನ್ನು ಉತ್ತಮಪುರುಷರು ಮೆಲುವುದಕ್ಕೆ ಬಂದಾವೆ? ಬರಲರಿಯವು ಹಾಂಗೆ.

● ಎನ್ನ–ಉಪಾಧಿಕನ, ಚಿತ್ತವು–ಮನಸ್ಸು, ಅತ್ತಿಯ ಹಣ್ಣು ನೋಡಯ್ಯಾ–ಬಹಿರಂಗದಲ್ಲಿ ಲಲಾಟದಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವನ್ನು ಧರಿಸಿಕೊಂಡಿದ್ದರೂ ಅಂತರಂಗದಲ್ಲಿ ವಂಚನೆ ಉಪಾಧಿಕ ಕುಹುಕಪ್ರಪಂಚೆಂಬ ಕಾಪಟ್ಯವೇ ಉಂಟಾಗಿರುತ್ತಿಹುದು, ವಿಚಾರಿಸಿ ನೋಡಿದಡೆ–ಈತನಲ್ಲಿ ಭಕ್ತಿಯುಂಟು ಜ್ಞಾನವುಂಟು ವೈರಾಗ್ಯವುಂಟು ಅರುಹು ಆಚರಣೆಗಳುಂಟೆಂದು ಪರಾಮರಿಸಿದರೆ, ಎನ್ನಲ್ಲಿ ಹುರುಳಿಲ್ಲವಯ್ಯಾ–ಎನ್ನಲ್ಲಿ ಭಕ್ತಿಯಿಲ್ಲ ಜ್ಞಾನವಿಲ್ಲ ವೈರಾಗ್ಯವಿಲ್ಲ ಅರುಹು ಆಚರಣೆಗಳುಂಟಾಗಿಲ್ಲವಯ್ಯಾ.

ಪ್ರಪಂಚಿನ–ತನುಪ್ರಪಂಚು ಮನಪ್ರಪಂಚು ಆತ್ಮನ ಇಂದ್ರಿಯ ವಿಷಯಪ್ರಪಂಚಿನ, ಡಂಬಿನಲ್ಲಿ–ಹಿರಿತನದ ಬೂಟಕತ್ವದಲ್ಲಿ, ಎನ್ನನೊಂದು ರೂಪು ಮಾಡಿ–ಎನ್ನನೊಂದು ಸಾಕಾರವ ಮಾಡಿ, ನೀವಿರಿಸಿದಿರಿ–ನೀವು ಸ್ಥೈತಿರಿಸಿದಿರಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

III – – – – – – – – – – – – – – – – – – – – – – – – – – – – – –

1–1 ವಿಚಾರಿಸಿದರೇನೂ ಹುರುಳಿಲ್ಲ (ಟ,ಡ).

.........................

ಔದುಂಬರಫಲ ಹೇಂಗೆ ಜಂತುಮಯವಾಗಿಪ್ಪುದೋ ಹಾಂಗೆನ್ನ ಮನವು ಪ್ರಪಂಚಿನಿಂದೆ ಹುಳುಕಾಗಿರ್ಪುದೆಂಬುದೀಗ ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ ಎಂಬ ಶಬ್ದಕ್ಕರ್ಥ.[೧] ಎನ್ನಂತರಂಗ ಬಹಿರಂಗದ ಪರೀಕ್ಷೆಯ ಮಾಡಿದರೇನೂ ಪ್ರಯೋಜನವಿಲ್ಲವೆಂಬುದೀಗ ವಿಚಾರಿಸಿದರೇನೂ ಹುರುಳಿಲ್ಲವೆಂಬ ಶಬ್ದಕ್ಕರ್ಥ.[೨] ಡಂಬಿನಲ್ಲಿ–ವಿಭೂತಿರುದ್ರಾಕ್ಷಿಲಿಂಗಲಾಂಛನ ಮೊದಲಾದ ವೇಷಾಡಂಬರದಲ್ಲಿ, ಎನ್ನನೊಂದು ರೂಹುಮಾಡಿ–ಎನ್ನನೊಬ್ಬ ಭಕ್ತನಾಗಿಸಿ, ಇರಿಸಿದಿರಿ–ಮಡುಗಿದಿರಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧+ಎನ್ನನೊಂದು ರೂಹುಮಾಡಿ (ಡ). ೨–೨ ಬುದರ್ಥ (ಡ).

V – – – – – – – – – – – – – – – – – – – – – – – – – – – – – – –

ಔದುಂಬರಫಳವು ಹೇಂಗೆ ಜಂತುಮಯವಾಗಿಪ್ಪುದು ಹಾಂಗೆ ಎನ್ನ ಮನವು ಸಕಲಪ್ರಪಂಚಿನಿಂದೆ ಹುಳುಕಾಗಿರ್ಪುದೆಂಬುದೀಗ ಎನ್ನ ಚಿತ್ತವು ಅತ್ತಿಯ ಹೆಣ್ಣೆಂಬುದರ್ಥ.

೩೦

**ಎನ್ನ ನಡೆಯೊಂದು ಪರಿ ಎನ್ನ ನುಡಿಯೊಂದು ಪರಿ; ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ ನುಡಿಗೆ ತಕ್ಕ ನಡೆಯ ಕಂಡಡೆ ಕೂಡಲಸಂಗಮದೇವಾ ತನ್ನೊಳಗಿಪ್ಪನಯ್ಯಾ.**

I - - - - - - - - - - - - - - - - - - - - - - - - - - - - - - -

ಎನ್ನ ನಡೆಯೊಂದು ಪರಿ: ಎನ್ನ–ಉಪಾಧಿಕನ, ನಡೆಯೊಂದು ಪರಿ–ಕೆಟ್ಟ ಸಕಲಸಂಸಾರಪ್ರಪಂಚಿನೊಡನೆ ಕೂಡಿ ಚರಿಸುವಂಥ ನಡಾವಳಿ ಬೇರೆಯಾಗಿರ್ಪುದು. ಎನ್ನ ನುಡಿಯೊಂದು ಪರಿ: ಎನ್ನ–ಉಪಾಧಿಕನ, ನುಡಿಯೊಂದು ಪರಿ–ಸ್ವಾಮಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ನುಡಿ ಬೇರೆಯಾಗಿರ್ಪುದು. ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ : ಎನ್ನೊಳಗೆ–ಉಪಾಧಿಕನ ಅಂತರಂಗದಲ್ಲಿ, ಏನೂ ಶುದ್ಧವಿಲ್ಲ ನೋಡಯ್ಯಾ–ನಡೆನುಡಿಯಲ್ಲಿ ಏನೂ ನಿರ್ಮಲತ್ವ ಇಲ್ಲ ಕಂಡಯ್ಯಾ.

ನುಡಿಗೆ ತಕ್ಕ ನಡೆಯ ಕಂಡಡೆ : ನುಡಿಗೆ ತಕ್ಕ–ಪ್ರಸಂಗಕ್ಕೆ ತಕ್ಕ, ನಡೆಯ ಕಂಡಡೆ–ಆಚರಣೆಯನ್ನು ನೋಡಿದರೆ, ಕೂಡಲಸಂಗಮದೇವ–ಪರಶಿವಲಿಂಗವು, ತನ್ನೊಳಗಿಪ್ಪನಯ್ಯಾ–ಅಂತಪ್ಪ ಸದ್ಭಕ್ತನ ತನ್ನೊಳಗೇಕಾರ್ಥವ ಮಾಡಿಕೊಂಬುತ್ತಿಹನೆಂಬ ದೃಷ್ಟೋಪಮಾನದ ಹಾಂಗೆ.

● ಎನ್ನ ನಡೆಯೊಂದು ಪರಿ : ಎನ್ನ–ಆಶಾಲಾಂಛನಿಯ, ನಡೆಯೊಂದು ಪರಿ–ಒಬ್ಬರ ಕೊಲ್ಲುತ್ತ ಬಡಿಯುತ್ತ ದುಡುಕು ದುಂಡಾವೃತ್ತಿಯೊಡನೆ ಕೂಡಿ ಚರಿಸುವಂಥ ನಡಾವಳಿ ಬೇರೆಯಾಗಿರ್ಪುದು. ಎನ್ನ ನುಡಿಯೊಂದು ಪರಿ : ಎನ್ನ–ಆಶಾಲಾಂಛನಿಯ, ನುಡಿಯೊಂದು ಪರಿ–ನಾವು ಜ್ಞಾನಿಗಳು ಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ಹೇಳಿಕೊಂಬುವಂಥ ನುಡಿ ಬೇರೆಯಾಗಿರ್ಪುದು; ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ : ಎನ್ನೋಳಗೆ–ಆಶಾಲಾಂಛನಿಯ ಅಂತರಂಗದಲ್ಲಿ, ಏನೂ ಶುದ್ಧವಿಲ್ಲ ನೋಡಯ್ಯಾ–ನಡೆನುಡಿಯಲ್ಲಿ ನಿರ್ಮಲತ್ವ ಉಂಟಾಗಿಲ್ಲ ಕಂಡಯ್ಯಾ.

ನುಡಿಗೆ ತಕ್ಕ ನಡೆಯ ಕಂಡಡೆ : ನುಡಿಗೆ ತಕ್ಕ–ಪ್ರಸಂಗಕ್ಕೆ ತಕ್ಕ, ನಡೆಯ ಕಂಡಡೆ–ಆಚರಣೆಯುಳ್ಳರೆ, ಕೂಡಲಸಂಗಮದೇವ–ಪರಶಿವಲಿಂಗವು, ತನ್ನೊಳಗಿಪ್ಪನಯ್ಯಾ–ಆತನ ಅಂತರಂಗದಲ್ಲಿ ಸದಾ ಸದಮಲಪ್ರಾಣಲಿಂಗವಾಗಿ ನೆಲೆಗೊಂಡಿಪ್ಪನಯ್ಯಾ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಪನು ಜ್ಞಾನಕಲಾತ್ಮನು.

**ಮುಂಗಯ್ಯ ಕಂಕಣಕ್ಕೆ ಕನ್ನಡಿಯ ತೋಱುವಂತೆ, ಎನ್ನ ಮನವು ನಿಧಾನವನೊಲ್ಲದೆ [1]ಜಲಗಕ್ಕೆ[1] ಮಚ್ಚಿತ್ತು ನೋಡಾ! ನಾಯಿಗೆ [2]ನಾರಿವಾಣವಕ್ಕುದೆ[2] ಕೂಡಲಸಂಗಮದೇವಾ?**

I- - - - - - - - - - - - - - - - - - - - - - - - - - - - - - - -

ಮುಂಗಯ್ಯ ಕಂಕಣಕ್ಕೆ ಕನ್ನಡಿಯ ತೋರುವಂತೆ-ಗಂಟಿಚೌಕುಳಿಯನ್ನು ಇಟ್ಟುಕೊಂಡು ಪದಕವನ್ನು ಹಾಕಿಕೊಂಡು ಮುಂಡಾಸವನ್ನು ಸುತ್ತಿಕೊಂಡು ಕೊರದು ವಿಭೂತಿಯನ್ನು ಧರಿಸಿಕೊಂಡು ಕಸ್ತೂರಿ ಮೊದಲಾದ ತಿಲಕವನ್ನು ಇಟ್ಟುಕೊಂಡು ಇವು ಕಾಣಬಾರದ ಸ್ಥಾನವೆಂದು ಕನ್ನಡಿಯನ್ನು ಹಿಡಿದುಕೊಂಡು ನೋಡಿಕೊಳಬೇಕಲ್ಲದೆ, ಮುಂಗಯ್ಯ ಕಂಕಣಕ್ಕೆ ಚಿನ್ನದ ಕಡಗ ಬೆಳ್ಳಿಯ ಕಡಗ ಪಚ್ಚದ ಕಡಗ ವಜ್ರದ ಕಡಗ ರುದ್ರಕಂಕಣ ಹೂವಿನ ಹಾರ ಮೊದಲಾದವನು ಹಾಕಿಕೊಂಡು ಹಾಂಗೇ ನೋಡಿ ಪರಿಣಾಮಿಸಬೇಕಲ್ಲದೆ ಇದು ಕಾಣಬಾರದ ಸ್ಥಾನವೆಂದು ಕನ್ನಡಿಯನ್ನು ಹಿಡಿದುಕೊಂಡು ನೋಡಿಕೊಂಬವನು ಅವನೊಬ್ಬ ಹೆಡ್ಡನು. ಹಾಂಗೆ ಸಕಲ ವೇದಶಾಸ್ತ್ರಾಗಮಪುರಾಣಂಗಳಲ್ಲಿ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿದರೆ ಮುಕ್ತಿಯಾಗುತೈತೆಂದು ಹೇಳಲು ಮ[1][ತ್ತೂ][1] ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿದರೆ ಮುಕ್ತಿ ಆಗುತೈತೋ ಇಲ್ಲವೋ ಎಂದು ಮತ್ತೊಬ್ಬರನು ಬೆಸಗೊಂಡು ಕೇಳುವಂಥವನು ಅವನೊಬ್ಬ ಹೆಡ್ಡನು. ಎನ್ನ ಮನವು ನಿಧಾನವನೊಲ್ಲದೆ ಜಲಗಕ್ಕೆ ಮಚ್ಚಿತ್ತು ನೋಡಾ : ಎನ್ನ ಮನವು-ನನ್ನ ಚಿತ್ತವು, ನಿಧಾನವನೊಲ್ಲದೆ : ನಿಧಾನವ-ನಿಕ್ಷೇಪದ್ರವ್ಯವನ್ನು, ಒಲ್ಲದೆ-ಪಡೆದನುಭವಿಸಲೊಲ್ಲದೆ, ಜಲಗಕ್ಕೆ ಮಚ್ಚಿತ್ತು ನೋಡಾ!-ಬೀದಿಬಾಜಾರದಲ್ಲಿ ಮಣ್ಣನ್ನು ತೆಗೆದುಕೊಂಡು ಬಂದು ಉದಕದೊಳಗೆ ಜಾಲಿಸಿದಲ್ಲಿ ಹಾಗ ಬೇಳೆ ತೂಕ ಚಿನ್ನ [2]ಬೆಳ್ಳಿ[2] ಹೊರಡುವುದು. ಅದನ್ನು [3]ತೆಗೆದುಕೊಂಡು ಹೋಗಿ[3] ಅಂಗಡಿಮನೆಗೆ ಉಪ್ಪುಗೂಡಿ ಒಂಬತ್ತನ್ನು [4]ತೆಗೆದುಕೊಂಡು ಬಂದು[4] ಪಾಕಪ್ರಯತ್ನಂಗಳ ಮಾಡಿ ಅನುಭವಿಸುವಂಥವ ಅವನೊಬ್ಬ ಹೆಡ್ಡನು. ಹಾಂಗೆ, ಇನ್ನ ಮನವು-ಉಪಾಧಿಕನ ಹೀನಮನಸ್ಸು, ನಿಧಾನವನ್ನೊಲ್ಲದೆ-ಬಳಸಬಾರದ ಕಡವರಸ್ವರೂಪವಾದ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಸಕಲಪಧಾರ್ಥವನ್ನು ಸಮರ್ಪಿಸಿ ಆ ಲಿಂಗಪ್ರಸಾದವನ್ನು ಪಡೆದನುಭವಿಸಲೊಲ್ಲದೆ, ಜಲಗಕ್ಕೆ ಮಚ್ಚಿತ್ತು ನೋಡಾ!-ಸಂಸಾರವಿಷಯವೆಂಬ ಜಲ[ಗ]ವನ್ನೇ ಮಮಕರಿಸುತ್ತಿಹುದು ಕಂಡಾ.

ನಾಯಿಗೆ ನಾರಿವಾಣವಕ್ಕುದೆ-ಶುನಿಗೇನಾದರೂ ಅಂಬಲಿಗಂಜಿಯನು ಹೊಯ್ಯಬೇಕಾದರೆ ಮರದ ಡೋಣಿ ಮಣ್ಣಪಿನ್ನೆ ನೆಲವನ್ನು ತೆಗ್ಗ ತೋಡಿ ಹೊಯ್ಯಬೇಕಲ್ಲದೆ ಮುಖ ಕಾಣಬರುವಂಥ ಹರಿವಾಣದೊಳಗೆ ಹಾಲು ಬೋನವನ್ನು ಕಲಿಸಿ ಹಾಕಿದರೆ ಸ್ವಸ್ಥವಾಗಿ ಸುಯಿದಾನದಿಂದೆ ತಿನಲೊಲ್ಲದೆ ಚೆಲ್ಲುವಷ್ಟು ಚೆಲ್ಲಿ ತಿಂಬೊಷ್ಟ ತಿಂದು ಮಿಕ್ಕುದನು ಕಚ್ಚಿಕೊಂಡು ಹೋಗಿ ಬೇಲಿಸಾಲಿನಲ್ಲಿ ಬಿಟ್ಟುಬಿಡುತ್ತಿಹುದು ಹಾಂಗೆ, ನಾಯಿಗೆ-ಪಂಚೇಂದ್ರಿಯಂಗಳೊಡನೆ ಕೂಡಿ ಚರಿಸುವಂಥ ಜೀವನೆಂಬ ಶುನಿಗೆ, ನಾರಿವಾಣವಕ್ಕುದೆ-ಪಂಚಾಚಾರವಿಡಿದಾಚರಿಸಿ ಪರಶಿವಲಿಂಗದಲ್ಲಿ ಕೂಡಬೇಕೆಂಬಂಥ ಕ್ರಿಯಾಸುಯಿದಾನವು ಅಳವಟ್ಟೀತೆ? ಅಳವಡದು. ಕೂಡಲಸಂಮುಗಮದೇವಾ?-ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

.........................

೧–೧ ತ್ತು (ಕ,ಗ). ೨–೨ x (ಗ). ೪–೪ ತಂದುಕೊಂಡು (ಗ).

II- - - - - - - - - - - - - - - - - - - - - - - - - - - - - - - - - - - - - -

1–1 ಜಲಗ (ಚ,ಜ). 2–2 ನಾರಿವಾಳವಕ್ಕುವುದೆ (ಚ, ಜ).

.........................

ಮುಂಗಯ್ಯ ಕಂಕಣಕ್ಕೆ ಕನ್ನಡಿಯ ತೋಱುವಂತೆ–ಪ್ರಕೋಷ್ಠಹಸ್ತದ ವಲಯಕ್ಕೆ ಕೈಪಿಡಿಯನು ಕಾಣಿಸುವ ಹಾಂಗೆ ಗುರುಲಿಂಗಜಂಗಮದ ಭಕ್ತಿಯನೊಲ್ಲದೆ ಬೇರೆ ವಸ್ತು ಉಂಟೆಂದು ಅರಸುತ್ತಿಹುದೆಂಬುದರ್ಥ. ಎನ್ನ ಮನವು ನಿಧಾನವನೊಲ್ಲದೆ ಜಲಗ ಮಚ್ಚಿತ್ತು ನೋಡಾ!–ಎನ್ನ ಮಾನಸವು ಗುರುಲಿಂಗಜಂಗಮದ ಭಕ್ತಿನಿಕ್ಷೇಪದ್ರವ್ಯವನೊಲ್ಲದೆ ಭಿನ್ನಕ್ರೀ ಭಿನ್ನಜ್ಞಾನವೆಂಬ ಜಲಗವನು ಮಮಕರಿಸಿತ್ತು ಕಂಡಾ, ನಾಯಿಗೆ ನಾರಿವಾಳವಕ್ಕುವುದೆ ?–ಇಂದ್ರಿಯಂಗಳ ಪ್ರಕೃತಿಯನುಳ್ಳ ಜೀವನೆಂಬ ಸುನಿಗೆ ಕ್ರಿಯಾಶಕ್ತಿವಲ್ಲಭನಾದ ಇಷ್ಟಲಿಂಗವು ಸಾಧ್ಯವಾಗುವುದೆ? ಆಗದೆಂಬುದರ್ಥ.

III – – – – – – – – – – – – – – – – – – – – – – – – – – – – –

1–1 ಜಲಗ (ಟ, ಡ).

.........................

ಪ್ರಕೋಷ್ಠಹಸ್ತದೊಳೊಪ್ಪುವ ರನ್ನಗಂಕಣಕ್ಕೆ ಕೈಪಿಡಿಯನು ಹಿಡಿದು ನೋಡುವ ಗಾಂಪರ ಹಾಂಗೆ ಪ್ರತ್ಯಕ್ಷ ನಿಷ್ಠಾಸ್ವರೂಪವಾದ ಗುರುಭಕ್ತಿಯನೊಲ್ಲದ ಭಿನ್ನಭಜನೆಯನಂಗೀಕರಿಸುವುದೆನ್ನ ಮನವು ಎಂಬುದೀಗ ಮುಂಗಯ್ಯ ಕಂಕಣಕ್ಕೆ ಕನ್ನಡಿಯ ತೋಱುವಂತೆ ಎಂಬ ಶಬ್ದಕ್ಕರ್ಥ. ಪೂರ್ವಫಲ ಪ್ರಾಪ್ತಿಯಿಂದ ದೊರಕೊಂಡ ಕಡವರನೊಲ್ಲದೆ [೫]ಜ[೫]ಲಗರ ಮೃತ್ತಿಕೆಯನು ತೊಳದು ಹೊಟ್ಟೆಯ ಹೊಱವ ಗಾಂಪರ ಹಾಂಗೆ ಸುಜ್ಞಾನದ್ರವ್ಯ ಸ್ವರೂಪವಾದ ಜಂಗಮ[೬] ಭಕ್ತಿಯನೊಲ್ಲದೆ ಭಿನ್ನಭಾವವನಂಗೀಕರಿಸುವುದೆನ್ನ ಮನವೆಂಬುದೀಗ ನಿಧಾನವನೊಲ್ಲದೆ ಜಲಗ[೭] ಮಚ್ಚಿತ್ತು ನೋಡಾ! ಎಂಬ ಶಬ್ದಕ್ಕರ್ಥ. ಇಂದ್ರಿಯವಿಷಯಪ್ರಪಂಚನುಳ್ಳಾತ್ಮನಿಗೆ ಮುಕ್ತಿಫಲಭೋಗವು ದೊಱಕೊಳ್ಳಲರಿಯದೆಂಬುದೀಗ ನಾಯಿಗೆ ನಾರಿವಾಣವಕ್ಕುದೆ ಕೂಡಲಸಂಗಮದೇವಾ ಎಂಬ ಶಬ್ದಕ್ಕರ್ಥ.

.........................

೫–೫ ಜಾ (ಡ). ೬+ದ (ಡ). ೭+ರ (ಡ).

V – – – – – – – – – – – – – – – – – – – – – – – – – – – – –

ಪ್ರಕೋಷ್ಠದಲ್ಲೊಪ್ಪುವ ರತ್ನಗಂಕಣಕ್ಕೆ ಕೈಪಿಡಿಯನು ಹಿಡಿದು ನೋಡುವ ಗಾಂಪನಂತೆ ಪ್ರತ್ಯಕ್ಷ ನಿಷ್ಠಾಸ್ವರೂಪವಾದ ಗುರುಭಕ್ತಿಯನೊಲ್ಲದೆ ಭಿನ್ನಭಜನೆಯನಂಗೀಕರಿಸಿತೆನ್ನ ಮನವು ಎಂಬುದೀಗ ಮುಂಗಯ್ಯ ಕಂಕಣಕ್ಕೆ ಕನ್ನಡಿಯ ತೋಱುವಂತೆ ಎಂಬುದರ್ಥ. ಪೂರ್ವಫಲಪ್ರಾಪ್ತಿಯಿಂದ ಪ್ರತ್ಯಕ್ಷವಾದ ಕಡವರ ದ್ರವ್ಯವನೊಲ್ಲದೆ ಜಲದಲ್ಲಿ ಮೃತ್ತಿಕೆಯನು ತೊಳೆದು ಹೊಟ್ಟೆಯ ಹೊಱುವ ಗಾಂಪನಂತೆ

ಸುಜ್ಞಾನಸ್ವರೂಪವಾದ ಜಂಗಮ ಭಕ್ತಿಯನೊಲ್ಲದೆ ಭಿನ್ನಭಾವವನಂಗೀಕರಿಸುವುದೆನ್ನ ಮನವೆಂಬುದೀಗ ನಿಧಾನವನೊಲ್ಲದೆ ಜಲಗ ಮಚ್ಚಿತ್ತು ಎನ್ನ ಮನವು ಎಂಬುದರ್ಥ. ಕುಕ್ಕುರಂಗೆ ತೆಂಗಿನಕಾಯ ಹಾಕಿದರೆ ತಿಂಬುದಕ್ಕೆ ಸಾಧ್ಯವಾಗದೆಂಬ ಹಾಂಗೆ ಇಂದ್ರಿಯಂಗಳ ವರ್ತನೆಯುಳ್ಳ ಜೀವಂಗೆ ಇಷ್ಟಾರ್ಥಫಳಸ್ವರೂಪವಾದ ಇಷ್ಟಲಿಂಗ ಭಕ್ತಿಯಳವಡದೆಂಬುದೀಗ ನಾಯಿಗೆ ನಾರಿವಾಣವಕ್ಕುದೆ ಎಂಬುದರ್ಥ.

---

೩೨

**ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು; ನಿಂದಲ್ಲಿ ನಿಲಲೀಯದೆನ್ನ ಮನವು; ಹೊಂದಿದಲ್ಲಿ ಹೊಂದಲೀಯದೆನ್ನ ಮನವು! ಕೂಡಲಸಂಗಮದೇವಾ, ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು, ನಿಮ್ಮ ಧರ್ಮ.**

I- - - - - - - - - - - - - - - - - - - - - - - - - - - - - - - - -

ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು–ಕಪಿಯೆಂಬಂಥದು ಈಚೆ ಕೊಂಬಿಲಿಂದಾಚೆ ಕೊಂಬಿಗೆ ಆಚೆ ಕೊಂಬಿಲಿಂದೀಚೆ ಕೊಂಬಿಗೆ ಹೇಂಗೆ ಲಂಘಿಸುತ್ತಿಹುದೊ ಹಾಂಗೆ ಇಲ್ಲಿ ಇಂದ್ರಿಯಂಗಳಲ್ಲಿ ಅಧಿಷ್ಠಿಸಿಕೊಂಡಿರುವ ಮನೋಮರ್ಕಟನು ಸಕಲತತ್ತ್ವಂಗಳೆಂಬ ಶಾಖೋಪಶಾಖೆಗಳೊಡನೆ ಕೂಡಿ ಚರಿಸುತಿರ್ಪುದು. ಎನ್ನ ಮನವು–ಎನ್ನ ಚಿತ್ತವು, ನಿಂದಲ್ಲಿ ನಿಲಲೀಯದು–ನೆಲ ನೀರು ಪತ್ರಪುಷ್ಪಂಗಳಿಂದ ಮಂಗಲವಾದ ಸ್ಥಾನದಲ್ಲಿ ನಿರ್ಮಲವಾಗಿ ಕುಳಿತುಕೊಂಡು ಲಿಂಗಪೂಜೆಯ ಮಾಡೇನೆಂದರೆ, ನಿಲಲೀಯದು–ಅಲ್ಲಿ ಸ್ವಸ್ಥವಾಗಿ ನಿಂದಿರಗೊಡದೆ ಮತ್ತೊಂದು ಸ್ಥಾನಕ್ಕೆ ಎಬ್ಬಿಸಿಕೊಂಡು ಹೋಗುತ್ತಿಹುದು, ಎನ್ನ ‘ಮನವು’–ಉಪಾಧಿಕನ ಹೀನಮನಸ್ಸು.

ಹೊಂದಿದಲ್ಲಿ ಹೊಂದಲೀಯದೆನ್ನ ಮನವು–ಗುರುಚರಮೂರ್ತಿಗಳ ಸಮೀಪದಲ್ಲಿ ಓದುತ್ತ ಹಾಡುತ್ತ ಅವರ ಶಿವಾನುಭಾವವನ್ನು ಬೆಸಗೊಂಡು ಕೇಳುತ್ತಿದ್ದಲ್ಲಿ ಇವರು ಅಂಬುತ್ತೈದಾರೆ ಆಡುತ್ತೈದಾರೆ ವ್ಯಾಳ್ಯಕ್ಕೆ ಓದು ಹೇಳೋದಿಲ್ಲ ಹಾಡು ಹೇಳೋದಿಲ್ಲ, ಇಲ್ಲಿನ್ನು ಇರಬಾರದೆಂದು ಈ ಊರುನೋಡಬೇಕು ಆ ಊರು ನೋಡಬೇಕು ಎಂದು ಅಲ್ಲಿ ಸ್ವಸ್ಥಿರವಾಗಿ ನಿಂದಿರಗೊಡದೆ ಮತ್ತೊಂದು ಗ್ರಾಮಕ್ಕೆ ಎಬ್ಬರಿಸಿಕೊಂಡು ಹೋಗುತ್ತಿಹುದು, ಎನ್ನ ಮನವು–ಆಶಾಲಾಂಭನಿಯ ಹೀನಮನಸ್ಸು.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು–ನಿಮ್ಮ ಕಾಂತಿವೆತ್ತ ಪದಕಮಲದಲ್ಲಿ, ಭ್ರಮರನಾಗಿ ರಿಸು–ಸೊಕ್ಕುದುಂಬಿಯಾಗಿ ಸೈತಿರಿಸು, ನಿಮ್ಮ ಧರ್ಮ–ಅದು ನಿಮ್ಮ ಕೃಪೆಯಯ್ಯಾ ಹಾಂಗೆ, ನಿಮ್ಮ ಚರಣಕಮಲದಲ್ಲಿ–ನಿಮ್ಮ ಪದಕಮಲಸ್ವರೂಪವಾದ ಇಷ್ಟಲಿಂಗದಲ್ಲಿ, ಭ್ರಮರನಾಗಿರಿಸು–ಪರಪೂರ್ಣಜ್ಞಾನಿಯಾಗಿ ಸೈತಿರಿಸುಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ ಚಿತ್ತ (ಕ, ಗ).

II – – – – – – – – – – – – – – – – – – – – – – – – – – – – – –

ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು–ವೃಕ್ಷದ ಶಾಖೆಯ ಮೇಲಣ ಕಪಿಯ ಹಾಂಗೆ ಎನ್ನ ಮಾನಸವು ಇಂದ್ರಿಯ ವಿಷಯಂಗಳಿಗೆ ಹಾರುವುದು. ನಿಂದಲ್ಲಿ ನಿಲಲೀಯದೆನ್ನ ಮನವು–ಕಾಲ್ಗೊಂಡು ಕ್ರಿಯಾಚರಣೆಯಲ್ಲಿ ಕಾಲ್ಗೊಳಿಸಲೀಸದು ಎನ್ನ ಮಾನಸವು.

ಹೊಂದಿದಲ್ಲಿ ಹೊಂದಲೀಯದೆನ್ನ ಮನವು!–ಸೋಂಕಿದ ಜ್ಞಾನಾಚರಣೆಯಲ್ಲಿ ಸೋಂಕಲೀಸದು ಎನ್ನ ಮಾನಸವು. ಕೂಡಲಸಂಗಮದೇವಾ ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು–ಎಲೆ ಲಿಂಗವೆ ನಿಮ್ಮ ಪದಕಮಲಸ್ಥರೂಪವಾದ ಇಷ್ಟಲಿಂಗದಲ್ಲಿ ಷಡಕ್ಷರಿಯ ಮಂತ್ರಸ್ವರೂಪವಾದ ಸೊಕ್ಕುದುಂಬಿಯಾಗಿ ಸೈತಿಡುವೆಂಬುದರ್ಥ.

III – – – – – – – – – – – – – – – – – – – – – – – – – – – – – –

ಮರದ ಕೊಂಬೆಯಲಿರ್ದ ಕಪಿಯು ಹಲವು ಕೊಂಬೆಗೆ ಹಂಬಲಿಸಿ ಲಂಘಿಸುವ ಹಾಂಗೆ ಶಿವಾಚಾರದಲ್ಲಿರ್ದು ಹಲವು ಮತಾಂತರಂಗಳಿಗೆ ಇಚ್ಛೈಸುವುದೆನ್ನ ಮನವೆಂಬುದೀಗ ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು ಎಂಬ ಶಬ್ದಕ್ಕರ್ಥ, ನಿಂದಲ್ಲಿ–ವೀರಶೈವಾಚಾರದ ದಾರಿ ಮೇರೆ ನೆಲಸಿದಲ್ಲಿ, ಎನ್ನ ಮನವು–ನನ್ನ ಮನಸ್ಸು, ನಿಲಲೀಯದು–ನಿಂದಿರಲೀಸದು.

ಹೊಂದಿದಲ್ಲಿ–ಲಿಂಗದ ಪೂಜಾಸ್ತೋತ್ರಧ್ಯಾನಸ್ಮರಣೆ ಕೂಡಿದಲ್ಲಿ, ಹೊಂದಲೀಯದು–ಆ ಲಿಂಗದಲ್ಲಿ ಏಕಾರ್ಥವಾಗಲೀಸದು, ಎನ್ನ ಮನವು–ನನ್ನ ಮನಸ್ಸು. ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ನಿಮ್ಮ ಚರಣಕಮಲದಲ್ಲಿ–ನಿಮ್ಮ ಪಾದಾರವಿಂದಸ್ವರೂಪವಾದ ಇಷ್ಟಲಿಂಗದಲ್ಲಿ, ಭ್ರಮರನಾಗಿರಿಸು ನಿಮ್ಮ ಧರ್ಮ–ಚಿದ್ಭ್ರಮರನಾಗಿ ಮಡಗು ನಿಮ್ಮ ದಯೆ.

V – – – – – – – – – – – – – – – – – – – – – – – – – – – – – –

ಮರಗೊಂಬಿನಲ್ಲಿರ್ದು ಹಲವು ಕೊಂಬಿಗೆ ಹಂಬಲಿಸಿ ಲೆಂಗಳಿಸುವ ಭ್ರಾಂತಮರ್ಕಟನಂತೆ ಶಿವಾಚಾರದಲ್ಲಿರ್ದು ಹಲವು ಮತಾಂತರಗಳಿಗಿಚ್ಛೈಸುವುದೆನ್ನ ಮನವು ಎಂಬುದೀಗ ಕೊಂಬಿನ ಮೇಲಣ ಮರ್ಕಟನಂತೆ ನಿಂದಲ್ಲಿ ನಿಲಿಲೀಯದೆನ್ನ ಮನವೆಂಬುದರ್ಥ, ಹೊಂದಿದಲ್ಲಿ–ಲಿಂಗಾಂಗ ಸಂಬಂಧದ ಪೊರ್ದುಗೆಯಲ್ಲಿ.

---

೩೩

**ಮರನೇಱಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯ್ವುತ್ತಿದ್ದೇನೆ; ಬೆಂದ ಮನವ ನಾನೆಂತು ನಂಬುವೆನಯ್ಯಾ? ಎಂತು ನಚ್ಚುವೆನಯ್ಯಾ? ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ!**

I – – – – – – – – – – – – – – – – – – – – – – – – – – – – – –

ಮರನೇಱಿದ ಮರ್ಕಟನಂತೆ–ಈ ಕಪಿಯೆಂಬುವಂಥದು ಈಚೆ ಮರದಿಂದಾಚೆ ಮರಕ್ಕೆ ಆಚೆ ಮರದಿಂದೇಚೆ ಮರಕ್ಕೆ ಹೇಂಗೆ ಲಂಘಿಸುತ್ತಿಹುದೊ ಹಾಂಗೆ ಇಲ್ಲಿ, ಮರ–ದೇಹವೆಂಬ ವೃಕ್ಷವನ್ನು, ಏಱಿದ–ಆರೋಹಣವಾದ, ಮರ್ಕಟನಂತೆ–ಮನೋಮರ್ಕಟನ ಹಾಂಗೆ, ಹಲವು ಕೊಂಬೆಗೆ ಹಾಯ್ವುತ್ತಿದ್ದೇನೆ–ಸಾಲಿಗ್ರಾಮ ಮೊದಲಾದ ಸಕಲದೇವತಾದಿಗಳ ಭಜನೆಯೊಡನೆ ಕೂಡಿ ಚಲಿಸುತ್ತಲಿರ್ದೇನೆ. ಬೆಂದ ಮನವ ನಾನೆಂತು ನಂಬುವೆನಯ್ಯಾ?: ಬೆಂದ–ತಾಪತ್ರಯಾಗ್ನಿಯಿಂದ ದಗ್ಧವಾದ, ಮನವ–ಹೀನಮನಸ್ಸು, ನಾನೆಂತು ನಂಬುವೆನಯ್ಯಾ?–ಇದರಿಂದ ಈ ಹೀನಮನಸ್ಸಿನಿಂದ ನನಗೆ ಜ್ಞಾನವು ಅಳವಟ್ಟಿತ್ತೆಂದು ಹೇಗೆ ವಿಸ್ವಾಸಿಸುವೆನಯ್ಯಾ. ನಾನೆಂತು ನಚ್ಚುವೆನಯ್ಯಾ?–ಇದರಿಂದ ಕ್ರೀ[೧][ಯೆಂತು][೧] ಅಳವಟ್ಟಿತ್ತೆಂದು ಹೇಂಗೆ ನಂಬುವೆನಯ್ಯಾ. ಎನ್ನ ತಂದೆ–ಎನ್ನಾತ್ಮಜನಕನಾದಂಥ, ಕೂಡಲಸಂಗಮದೇವನಲ್ಲಿಗೆ[೨]–ಪರಶಿವಲಿಂಗದಲ್ಲಿಗೆ, ಹೋಗಲೀಯದಯ್ಯಾಯೆಂದು ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ ಯವನು (ಕ, ಗ). ೨ + ಪರದಲ್ಲಿ–ಮಹಾಲಿಂಗದಲ್ಲಿ, ಬೆದರಿಹೆನೆಂದರೆ–ಕೂಡಿಹೆನೆಂದರೆ (ಕ, ಗ).

III – – – – – – – – – – – – – – – – – – – – – – – – – – – – – – –

ಮರಂ–ವೃಕ್ಷವನು, ಏಱಿದ–ಆರೋಹಿಸಿದ, ಮರ್ಕಟನಂತೆ–ವನಚರನ ಹಾಂಗೆ, ದೇಹಸಂಬಂಧವಾದ ನಾನಾ [೩][ನಾ]ಮ ವಿ[೩] ವಿಧೇಂದ್ರಿಯ ಪ್ರಪಂಚೆಂಬ ಶಾಖೋಪಶಾಖೆಗಳಿಗೆ ಇಚ್ಛೈಸುವುದೆನ್ನ ಮನವೆಂಬುದೀಗ ಮರನೇಱಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯ್ವುತ್ತಿದ್ದೇನೆ ಎಂಬ ಶಬ್ದಕ್ಕರ್ಥ. ಬೆಂದ–ತಾಪತ್ರಯಾಗ್ನಿಯಿಂದ ದ[೪]ಹಿ[೪]ತವಾದ, ಮನವಂ–ಮನಸ್ಸನು, ಆಂ–ನಾನು, ಎಂತು ನಂಬುವೆನಯ್ಯಾ?–ಹೇಂಗೆ ವಿಶ್ವಾಸಿಸುವೆನಯ್ಯಾ, ಎಂತು ನಚ್ಚುವೆನೆಯ್ಯಾ?–ಹೇಂಗೆ ದೃಢೀಕರಿಸುವೆನಯ್ಯಾ, ಎನ್ನ ತಂದೆ–ನನ್ನ ಜನಕನಾದಂಥ, ಕೂಡಲಸಂಗಮದೇವನಲ್ಲಿಗೆ–ಪರಶಿವಲಿಂಗದಲ್ಲಿಗೆ, ಹೋಗಲೀಯುದಯ್ಯಾ!–ಜ್ಞಾನಕ್ರೀವಿಡಿದಾಚರಿಸಿ ಆ ಲಿಂಗ[ದ]ಲ್ಲೇಕತ್ವವನೆಯ್ದಲೀಸದಯ್ಯಾ.

V – – – – – – – – – – – – – – – – – – – – – – – – – – – – – – –

ಫಲವಾದ ವೃಕ್ಷವನೇಱಿದ ಮರ್ಕಟನು ಹಲವು ಫಲಂಗಳಿಗೆ ಹಂಬಲಿಸಿ ಲೆಂಗಳಿಸಿ ನಾನಾ ಮತ ವಿವಿಧೇಂದ್ರಿಯಪ್ರಪಂಚೆಂಬ ಶಾಖೋಪಶಾಖೆಗಳಿಗೆ ಇಚ್ಛೈಸುವುದೆನ್ನ ಮನವು ಎಂಬುದೀಗ ಮರನನೇಱಿದ ಮರ್ಕಟನಂತೆ ಎಂಬುದರ್ಥ.

---

೩೪

**[1]ಅಂದಣವನೇಱಿದ[1] ಸೊಣಗನಂತೆ ಕಂಡಡೆ ಬಿಡದು ತನ್ನ ಮುನ್ನಿನ [2]ಸ್ವಭಾವವನು.[2] ಸುಡು! ಸುಡು! [3]ಮನವಿದು[3] ವಿಷಯಕ್ಕೆ ಹರಿವುದು. ಮೃಡ, ನಿಮ್ಮನನುದಿನ ನೆನೆಯಲೀಯದು, ಎನ್ನೊಡೆಯ ಕೂಡಲಸಂಗಮದೇವಾ, ನಿಮ್ಮ ಚರಣವ ನೆನೆವಂತೆ ಕರುಣಿಸು ಸೆಱಗೊಡ್ಡಿ ಬೇಡುವೆನು ನಿಮ್ಮ ಧರ್ಮ.**

I – – – – – – – – – – – – – – – – – – – – – – – – – – – – – – –

ಅಂದಣವನೇಱಿದ ಸೊಣಗನಂತೆ ಕಂಡಡೆ ಬಿಡುದು ತನ್ನ ಮುನ್ನಿನ ಸ್ವಭಾವವನು–ಕಿರಾತರಾದ ದೊರೆಗಳೇನಾದರೂ ನಾಲ್ಕೆಂಟು ನಾಯಿಗಳನ್ನು ಅಡವಿಗೆ ಕರಕೊಂಡು ಹೋಗಿ ಹುಲಿ ಕರಡಿಗಳ ಮೇಲೆ ಹುಸೆ ಬಿಟ್ಟಲ್ಲಿ ಅದರೊಳಗೆ ಕಡದಾಡಿ ಜಯಿಸಿ ಬಂದಂಥ ನಾಯಿಗೆ ಇದು 'ಸಜ್ಜೇನ ಸುಪ್ಪಾಣಿ'ಯೆಂದು ಹೆಸರಿಟ್ಟು ಅದರ ಕಿವಿಗೆ ಚಿನ್ನದ ಮುರುವನೂರಿಸಿ ಅದರ ಕಾಲಿಗೆ ಚಿನ್ನದ ಗಗ್ಗರಿಯನ್ನು ಹಾಕಿಸಿ ಅದಕೊಂದು ಶಕಲಾತಿಯ ಜೂಲವನ್ನು ಹೊಲಿಸಿ ತಾನು ಹೋದಲ್ಲಿಗೆ ಹೊಗಿ ಬಂದಲ್ಲಿಗೆ ಬಂದು ಕುಳಿತಲ್ಲಿ ಕುಳ್ಳಿರಿಸಿಕೊಂಡು ತಾನು ಉಂಬುವಂಥ ಅನ್ನವನು ಹಾಕಿಸಿ ಪರಿಣಾಮದಲ್ಲಿ ಮಡಗಿಕೊಂಡಿರುವನು. ಒಂದಾನೊಂದು ದಿವಸದಲ್ಲಿ ಆ ದೊರೆಯು ಸವಾರಿಯನ್ನು ಹೋಗಬೇಕಾದರೆ ತಾನೊಂದು ಅಂದಣದಲ್ಲಿ ಕುಳಿತುಕೊಂಡು ಆ ಶುನಿಯನೊಂದು ಅಂದಣದೊಳಗೆ ಕುಳ್ಳಿರಿಸಿಕೊಂಡು ಬೀದಿಬಾಜಾರದಲ್ಲಿ ಹೋಗುತಿರ್ದಲ್ಲಿ ಹಾಂಗೆ ಕಟಕರ ಕೇರಿಯಲ್ಲಿ ಹಾಯ್ವುದು. ಅಲ್ಲೊಂದು ಮಾಂಸದ ಗುದಿಯ ಕಟ್ಟಿರುವದು. ಆ ಶುನಿಯೆಂಬಂಥದು ಈ ದೊರೆಯು ನನ್ನ ಇಷ್ಟೊಂದು ಮಾನಮನ್ನಣೆಯಿಂದ ಮಡಗಿಕೊಂಡ್ಯೆದಾನೆ, ಈ ಮಾಂಸದ ಗುದಿಗೆ ಎರಗಬಾರದೆಂಬಂಥದನ್ನು ತಿಳಿಯದೆ ಟಣ್ಣನೆ ನೆಗೆದು ಪಕ್ಕನೆ ಎರಗಿದಲ್ಲಿ ಎಡಬಲದಲ್ಲಿದ್ದಂಥ ರಾಹುತರಾಣ್ಯ ಪ್ರಜಾಪರಿವಾರಕರೆಲ್ಲರೂ ಎಷ್ಟಾದರೂ ತನ್ನ ಶುನಿಯ ಬುದ್ಧಿಯ ಬಿಟ್ಟೀತೆ? ಬಿಡದೆಂದು ನಕ್ಕು ಹಾಸ್ಯವ ಮಾಡುತ್ತಿಹರು, ಹಾಂಗೆ, ಇಲ್ಲಿ ಅಂದಣದ ಹಾಂಗೆ ಅತ್ಯಂತ ಪೂಜ್ಯವಾದ ಗುರುಲಿಂಗಜಂಗಮದ ಭಕ್ತಿ,[೨] ಮಾಂಸದ ಗುದಿ ಹಾಂಗೆ[೧] ಅಷ್ಟಭೋಗಮಲತ್ರಯಂಗಳು, ಶುನಿಯ ಹಾಂಗೆ ಜೀವನು, ಅತ್ಯಂತ ಪೂಜ್ಯವಾದ ಗುರುಲಿಂಗಜಂಗಮದ ಭಕ್ತಿಯಲ್ಲಿ ಕೂಡಿದ್ದರೂ ಅನಿತ್ಯವಾದ ಅಷ್ಟಭೋಗಮಲತ್ರಯಂಗಳನೇ ಇಚ್ಛೈಸುತ್ತಿಹುದು.

ಸುಡು! ಸುಡು!–ದಹಿಸು ದಹಿಸು, ಮನವಿದು–ಉಪಾಧಿಕನ ಹೀನಮನಸ್ಸಿದು, ವಿಷಯಕ್ಕೆ ಹರಿವುದು–ಇಂದ್ರಿಯವಿಷಯಂಗಳ ಪ್ರಪಂಚಿನೊಡನೆ ಕೂಡಿ ಚರಿಸುವುದಕ್ಕೆ ಮುಂದುವರಿವುದು. ಮೃಡ ನಿಮ್ಮನುದಿನ ನೆನೆಯಲೀಯದು: [illegible]ಕ್ಷಣಕರ್ತನಾದಂಥ, ನಿಮ್ಮ–ಸ್ವಾಮಿಗಳ, ಅನುದಿನ–ಎಲ್ಲಾಗಳು, ನೆನೆಯಲೀಯದು–ಸ್ಮರಣೆಯ ಮಾಡಗೊಡದು.

ಎನ್ನೊಡೆಯ–ಎನ್ನ ಕರ್ತೃಸ್ವರೂಪವಾದ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಚರಣವ–ನಿಮ್ಮ ಪಾದಕಮಲಮಗಳ, ನೆನೆವಂತೆ–ಸ್ಮರಣೆಯ ಮಾಡುವ ಹಾಂಗೆ, ಕರುಣಿಸು–ಕೃಪೆಯ ಮಾಡು, ಸೆಱಗೊಡ್ಡಿ ಬೇಡವೆನು–ನಾನೇನಾದರೂ ಫಲಪದಮುಕ್ತಿಯನ್ನು ಬೇಡೋದಿಲ್ಲ ನಿಮ್ಮ ಪದಕಮಲಂಗಳ ಸ್ಮರಣೆಯ ಮಾಡುವಂಥ ಇದೇ ಒಂದಿಷ್ಟಾರ್ಥಸಿದ್ಧಿಯನ್ನು ಕರುಣಿಸಿ ಕೊಡುಯೆಂದು ಆಚಾರಾಂಗವೆಂಬ ಸೆರಗಾಂತು, ಬೇಡುವೆನು–ಯಾಚಿಸುವೆನು, ನಿಮ್ಮ ಧರ್ಮ–ಅದು ನಿಮ್ಮ ಕೃಪೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ x (ಗ). ೨+ಯಲ್ಲಿ (ಕ).

III– – – – – – – – – – – – – – – – – – – – – – – – – – – – – –

1–1 ಅಂದಳವನೇಱಿದ (ಟ, ಡ). 2–2 ಸ್ವಭಾವವ (ಟ, ಡ). 3–3 ಮನ ಇದರ (ಟ, ಡ).

..........................

ಅಂದಳವನೇಱಿಕೊಂಡು ಹೋಗುವ ಶ್ವಾನನು ಅಸ್ಥಿಮಾಂಸಚರ್ಮ ಮೊದಲಾದವನು ಕಂಡಲ್ಲಿಳಿದು ಹೋಗಿ ಕಚ್ಚಿಕೊಂಡು ತಿಂಬುವ ಹಾಂಗೆ, ಜಪತಪಪೂಜಾಕ್ರಿಯೆಗಳಲ್ಲಿರ್ದು ಹೊನ್ನುಹೆಣ್ಣುಮಣ್ಣು ಮೊದಲಾದ ಪ್ರಪಂಚ ಕಂಡಿಚ್ಛೈಸುವುದೆನ್ನ ಮನವು ಎಂಬುದೀಗ ಅಂದಳವನೇಱಿದ ಸೊಣಗನಂತೆ ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವ ಎಂಬ ಶಬ್ದಕ್ಕರ್ಥ.

ಸುಡು! ಸುಡು!–ಈ ಮನೋವರ್ತನೆಯನ್ನು ನಷ್ಟವಮಾಡು ನಷ್ಟವಮಾಡು, ಮನ–ಎನ್ನ ಮನಸ್ಸು, ಇದರ ವಿಷಯಕ್ಕೆ ಹರಿವುದು–ಮುಂ[೩]ಗಾಣಿಸುವ ವನಿತಾದಿ ಪ್ರಪಂಚಿಗಿಚ್ಛೈಸುವುದು. ಮೃಡ–ರಕ್ಷಣ್ಯಕ್ಕೆ ಕರ್ತೃವಾದಂಥ ಎಲೆ[೪]ದೇವನೆ.[೪] ನಿಮ್ಮ–ಲಿಂಗವನು, ಅನುದಿನ–ಎಲ್ಲಾಗಳು, ನೆನೆಯ[೫]ಲೀಯ[೫]ದು–ಧ್ಯಾನಿಸಲೀ[೬]ಸ[೬]ದು.

ಎನ್ನೊಡೆಯ–ಎನಗೆ ಕರ್ತೃವಾದಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಚರಣವ–ನಿಮ್ಮ ಪಾದಾರವಿಂದಸ್ವರೂಪವಾದ ಇಷ್ಟಲಿಂಗವನು, ನೆನೆವಂತೆ–ಸ್ಮರಿಸುವ ಹಾಂಗೆ, ಕರುಣಿಸು–ಕೃಪೆಮಾಡು, ಸೆರಗೊಡ್ಡಿ ಬೇಡುವೆ–ಕ್ರಿಯಾಜ್ಞಾನಂಗಳೆಂಬ ಅಂಚಲವನು ಅಂತು, ಬೇಡುವೆಂ–ಯಾಚಿಸುವೆನು, ನಿಮ್ಮ ಧರ್ಮ–ನಿಮ್ಮ ದಯೆ.

..........................

೩ + (ದು). ೪–೪ ಪರಶಿವನೆ (ಡ). ೫–೫ (ಡ). ೬–೬ ಯ (ಡ).

V – – – – – – – – – – – – – – – – – – – – – – – – – – – – – –

ಅಂದಳವನೇಱಿ ಹೋಗುವ ಸೊಣಗನು ಅಸ್ಥಿಮಾಂಸಚರ್ಮ ಮೊದಲಾದವ ಕಂಡಿಳಿದು ಹೋಗಿ ಕಚ್ಚಿ ತಿಂಬ ಹಾಂಗೆ, ಜಪತಪಪೂಜೆ ಆಚಾರಂಗಳ ಮಾಡುತಿರ್ದು ಪ್ರಪಂಚಿಗಿಚ್ಛೈಸೂದೆನ್ನ ಮನವೆಂಬುದೀಗ ಅಂದಳವ[ನೇಱಿ]ದ ಸೊಣಗನಂತೆ ಎಂಬುದರ್ಥ. ಆಚಾರಾಂಬರದ ಕ್ರಿಯಾಜ್ಞಾನಂಗಳೆಂಬ ಅಂಚಲವನು ಅಂತು ಎಂಬುದೀಗ ಸೆಱಗೊಡ್ಡಿ.

---

೩೫

**ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ [1][ಆಯಿತ್ತು][1] ಎನ್ನ ಬಾಳುವೆ! ಸಂಸಾರ [2]ಸಂಗವ[2] ಬಿಡದು ನೋಡೆನ್ನ ಮನವು, ಈ ನಾಯಿತನವ [3]ಮಾಣಿಸು[3] ಕೂಡಲಸಂಗಮದೇವಾ ನಿಮ್ಮ ಧರ್ಮ.**

I – – – – – – – – – – – – – – – – – – – – – – – – – – – – – –

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ–ರಾವುತರಾಗಲಿ ರಾಣ್ಯದವರಾಗಲಿ ವಾಲ್ಮೀಕರಾಗಲಿ ಕತ್ತಿ ಕಠಾರಿ ಚೂರಿ ಬಾಕು ಮೊದಲಾದವನ್ನು ಮೂಲಿಗೆ ಬಿದ್ದಿದ್ದಲ್ಲಿ ಕಸ ನಟ್ಟು ಕೆಟ್ಟುಹೋದಾವಲಾಯೆಂದು ಸಾಣಿಗಾರರ ತಾವಕ್ಕೆ ಕೊಂಡೊಯಿದು ಸಿಕಲಿಯನ್ನು ಹಿಡಿಸಿ ಸಪ್ಪೆದುಷ್ಟವನ್ನು ಹಚ್ಚಿಸಿ ಒಳ್ಳೇ ಬಿಸಿಲಿಗೆ ಇಟ್ಟಿದಲ್ಲಿ ಶುನಿಯೆಂಬಂಥದು ತುಪ್ಪದ ಗವಲವನ್ನು ಕಂಡು

ಕಚ್ಚಿಕೊಂಡು ಹೋಗಿ ನೆಕ್ಕಿದಲ್ಲಿ ನಾಲಿಗೆ ಹರಿದು ಸ್ವಲ್ಪ ರಕ್ತ ಬರುವುದು. ಆ ರಕ್ತವೂ ತುಪ್ಪವೂ ಕೂಡಲು ಮತ್ತೂ ಸ್ವಾದವಾಗುವುದು. ಮತ್ತೆ ಮತ್ತೆ ನೆಕ್ಕಿದಲ್ಲಿ ನಾಲಿಗೆ ಹರಿದು ಛಿದ್ರಛಿದ್ರವಾಗಿ ದುಃಖವಾಗುತ್ತಿಹುದು. ಹಾಂಗೆ, ಇಲ್ಲಿ ಅಲಗಿನ ಹಾಂಗೆ ಮೂಲ ಅಹಂಕಾರ, ತುಪ್ಪದ ಹಾಂಗೆ ಅಷ್ಟಭೋಗಮಲತ್ರಯಂಗಳು, ಶುನಿಯ ಹಾಂಗೆ ಜೀವನು. ಈ ಮೂಲ ಅಹಂಕಾರ ಸ್ವರೂಪವಾದ ಅಷ್ಟಭೋಗಮಲತ್ರಯಂಗಳನು ಪಡೆದು ಅನುಭವಿಸಲ್ಪಟ್ಟಂಥ ಜೀವನಿಗೆ ಕಾಲಕಾಮರ ಶಿಕ್ಷೆವುಂಟಾಗುತ್ತಿಹುದು. ಆಯಿತ್ತು–ಈ ರೀತಿಯಾಯಿತ್ತು, ಎನ್ನ ಬಾಳುವೆ!–ಎನ್ನ ಬದುಕು.

ಸಂಸಾರ ಸಂಗವ ಬಿಡದು ನೋಡೆನ್ನ ಮನವು: ಸಂಸಾರ ಸಂಗವ–ಸಕಲಸಂಸಾರ ಪ್ರಪಂಚಿನ ಕೂಟವನ್ನು, ಬಿಡದು–ಬಿಡುಗಡೆಯಾಗದು, ನೋಡಾ–ಕಂಡಾ, ಎನ್ನ ಮನವು–ಎನ್ನ ಚಿತ್ತವು. ಈ ನಾಯಿತನವ ಮಾಣಿಸು–ಪಂಚೇಂದ್ರಿಯಂಗಳೊಡನೆ ಕೂಡಿ ಚರಿಸುವಂಥ ಜೀವನೆಂಬ ಶುನಿಬುದ್ಧಿಯನ್ನು ಬಿಡಿಸು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಧರ್ಮ–ಅದು ನಿಮ್ಮ ಕೃಪೆಯು ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – – – – –

1–1 x (ಜ). 2–2 ತತ್ಸಂಗವ (ಚ, ಜ).

.........................

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ–ಘೃತದ ಆಸ್ವಾದಕ್ಕೆ ಶಸ್ತ್ರವನು ಲೇಹ್ಯವ ಮಾಡುವ ಶುನಿಯ ಹಾಂಗೆ ಇಂದ್ರಿಯಂಗಳ ಪ್ರಕೃತಿಯನುಳ್ಳ ಜೀವನು ಭವಕ್ಕೆ ಬಿದ್ದನೆಂಬುದನು ತಿಳಿಯದೆ ಮಲತ್ರಯಂಗಳೆಂಬ ದುಸ್ಸಾರದ ಆಸ್ವಾದಕ್ಕೆ [೧]ದೇಹ[೧]ಭಾವವನು ಲೇಹ್ಯವ ಮಾಡುತ್ತಿಹನೆಂಬುದರ್ಥ. ಎನ್ನ ಬಾಳುವೆ ಸಂಸಾರ ತತ್ಸಂಗವ ಬಿಡದು ನೋಡೆನ್ನ ಮನವು–ಆತ್ಮಾರ್ಥವು ಸಂಸೃತಿಯ ತತ್ಸಂಗವನು ಮಾಣದು, ನಿರೀಕ್ಷಿಸು ಎನ್ನ ಮಾನಸ[೨]ವ.[೨] ಈ ನಾಯಿತನವ ಮಾಣಿಸು–ಈ ಇಂದ್ರಿಯಂಗಳ ಪ್ರಕೃತಿಯನುಳ್ಳ ಜೀವನ ಹಿರಿಯತನವನು ಬಿಡಿಸುಯೆಂಬುದರ್ಥ.

.........................

೧–೧ x (ಜ). ೨–೨ ವು (ಜ).

III – – – – – – – – – – – – – – – – – – – – – – – – – – – – – – – –

1–1x (ಟ, ಡ). 3–3 ಬಿಡಿಸು (ಟ).

.........................

ಇಂದ್ರಿಯ ವಿಷಯಪ್ರಪಂಚಿಗಿಚ್ಛೈಸಿ ಮುಂದಾಗುವ ಮುಕ್ತಿಯನು ಹೋಗಲಾಡಿಕೊಂಡಿತ್ತೆನ್ನ ಮನವು ಎಂಬುದೀಗ ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎಂಬ ಶಬ್ದಕ್ಕರ್ಥ, ಸಂಸಾರ–ಪುತ್ರಮಿತ್ರಕಳತ್ರಾದಿ ಸಂಸೃತಿಯು, ಸಂಗವ–ಕೂಟವನು, ಬಿಡದು ನೋಡು–ವಿಮೋಚನೆಯ ಮಾಡದಿರುವುದು ಕಂಡ, ಎನ್ನ ಮನವು–ನನ್ನ ಮನಸ್ಸು. ಈ ನಾಯಿತನವ–ಇಂದ್ರಿಯವಿಷಯಂಗಳ

ವ್ಯಾಪಾರವನು, ಮಾಣಿಸು-ಬಿಡಿಸು, ಕೂಡಲ ಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಧರ್ಮ-ನಿಮ್ಮ ದಯೆ.

V - - - - - - - - - - - - - - - - - - - - - - - - - - - - - -

ಘೃತಲೇಪನವ ಮಾಡಿ ಬಿಸಿಲಿಗೇರಿಸಿದ ಶಸ್ತ್ರವನು ಕಂಡು ನಾಲಗೆ ಹರಿದೀತೆಂಬುದನು ತಿಳಿಯದೆ ಲೇಹನವ ಮಾಡುವ ಕುಕ್ಕುರನ ಹಾಂಗೆ ಪರಮಾಮೃತಸ್ವೀಕಾರ ಸ್ನೇಹಸ್ವರೂಪವಾದ ರಸನೆ ಹರಿದೀತೆಂಬುದನಜೆಯದೆ ದುರ್ಬುದ್ಧಿಯೆಂಬಾಯುಧವನಂಗೀಕರಿಸಿತ್ತೆನ್ನ ಮನವೆಂಬುದೀಗ ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎಂಬುದರ್ಥ.

---

೩೬

**ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ ಎನ್ನ ಬಿಡು ತನ್ನ ಬಿಡೆಂಬುದು ಕಾಯವಿಕಾರ, ಎನ್ನ ಬಿಡು ತನ್ನ ಬಿಡೆಂಬುದು ಮನವಿಕಾರ. ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ ಮನ ನಿಮ್ಮನೈದಿಸುಗೆ ಕೂಡಲಸಂಗಮದೇವಾ!**

I - - - - - - - - - - - - - - - - - - - - - - - - - - - - - -

ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ-ಕಿರಾತರುಗಳೇನಾದರೂ ಮೂರಾರು ನಾಯಿಗಳನ್ನು ಅಡವಿಗೆ ಕರಕೂಂಡು ಹೋಗಿ, ಆ ಗಿಡ ಬಡಿವುತ್ತ ಈ ಗಿಡ ಬಡಿವುತ್ತ ಕೊಲಲೋ ಎಂದು ಕೂಗಿದಲ್ಲಿ ಒಂದು ಗಿಡದ ಬುಡದಿಂದ ಮೊಲನೆಂಬುವಂಥದು ಬುಧೀನೇ ಎದ್ದು ಹೊಂಟಲ್ಲಿ, ಒಂದು ಮೊಲಕ್ಕೆ-ಒಂದು ಶಶಕನಿಗೆ, ನಾಯನೊಂಬತ್ತು ಬಿಟ್ಟಂತೆ-ಒಂಬತ್ತು ನಾಯಿಗಳನ್ನು ಒಂದೇವೇಳೆ 'ಹುಸೆ' ಬಿಟ್ಟಲ್ಲಿ, ಎನ್ನ ಬಿಡು ತನ್ನ ಬಿಡೆಂಬುದು-ನಾ ಮುಂದಾಗಿ ಹೋಗಿ ಹಿಡಿಯಬೇಕೆಂಬುವಂಥದು, ಕಾಯವಿಕಾರ-ಆ ಶುನಿಗಳ ತನುವಿನ ಉಬ್ಬು, ಎನ್ನ ಬಿಡು ತನ್ನ ಬಿಡೆಂಬುದು-ನಾ ಮುಂದಾಗಿ ಹಿಡಿಯಬೇಕು ತಾ ಮುಂದಾಗಿ ಹಿಡಿಯಬೇಕೆಂಬಂಥದು, ಮನವಿಕಾರ-ಆ ಶುನಿಗಳ ಮನದ ಉಬ್ಬು. ಕರಣೇಂದ್ರಿಯಂಗಳೆಂಬ-ಮೂರಾರು ನಾಯಿಗಳೆಂಬ, ಸೊಣಗ-ಶುನಿಗಳು, ಮುಟ್ಟದ ಮುನ್ನ-ಕಚ್ಚಿ ಉಚ್ಛಿಷ್ಟವ ಮಾಡಿ ತನ್ನೊಡೆಯನಿಗೆ ಕೊಡುವುದಕ್ಕಿಂದ ಮೊದಲೇ, ಮನ-ಶಶಕನ ಮನಸ್ಸು, ನಿಮ್ಮನೈದಿಸುಗೆ-ಶಶಕೇಶ್ವರಲಿಂಗದಲ್ಲಿ ಕೂಡಲಿ ಎಂದು, ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹುದೆಂಬ ದೃಷ್ಟೂಪಮಾನದ ಹಾಂಗೆ.

● ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ-ಇಲ್ಲಿ ಪರಶಿವಲಿಂಗವೆಂಬ ವ್ಯಾಧನು, ಒಂದು ಮೊಲಕ್ಕೆ-ಒಂದು ಜೀವನೆಂಬ ಶಶಕನಿಗೆ, ನಾಯನೊಂಬತ್ತು ಬಿಟ್ಟಂತೆ-ಚತುಃಕರಣ ಪಂಚೇಂದ್ರಿಯಂಗಳೆಂಬ ಶುನಿಗಳನುಂಟಮಾಡಿರ್ಪನು, ಎನ್ನ ಬಿಡು ತನ್ನ ಬಿಡೆಂಬುದು-ನಾ ಮುಂದಾಗಿ ವರ್ತಿಸಬೇಕು ತಾ ಮುಂದಾಗಿ ವರ್ತಿಸಬೇಕೆಂಬಂಥದು, ಕಾಯವಿಕಾರ-ದೇಹಸಂಬಂಧಿಯಾದ ಇಂದ್ರಿಯಂಗಳ ಉಬ್ಬು, ಎನ್ನ ಬಿಡು ತನ್ನ ಬಿಡೆಂಬುದು-ನಾ ಮುಂದಾಗಿ ವರ್ತಿಸಬೇಕು ತಾ ಮುಂದಾಗಿ ವರ್ತಿಸಬೇಕೆಂಬಂಥದು, ಮನವಿಕಾರ-ಮನಸಂಬಂಧವಾದ ಕರಣಂಗಳ ಉಬ್ಬು. ಕರಣೇಂದ್ರಿಯಂಗಳೆಂಬ-ಚತುಃಕರಣ ಪಂಚೇಂದ್ರಿಯಂಗಳೆಂಬ, ಸೊಣಗ-

ಶುನಿಗಳು, ಮುಟ್ಟದ ಮುನ್ನ-ಜೀವನನ್ನು ತನ್ನ ಪ್ರಪಂಚಿಗೆ ಒಳಗುಮಾಡಿಕೊಂಡು ಮರಣವನ್ನೈದಿಸುವದಕಿಂದ ಮೊದಲೆ, ಮನ-ಶರಣನ ಮನಸ್ಸು, ನಿಮ್ಮನೈದಿಸುಗೆ-ಪರಶಿವಲಿಂಗದಲ್ಲಿ ಕೂಡಲಿಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

V - - - - - - - - - - - - - - - - - - - - - - - - - - - - - - -

ಪೂರ್ವಾಪರದಾಸ್ಪದವಿಲ್ಲದ ಜೀವನೆಂಬ ಶಶಕ್ಕೆ ಎಂಬುದೀಗ ಒಂದು ಮೊಲಕ್ಕೆ.

---

೩೭

**ದಂದುಗ ಬಿಡದು ಮನದ ಸಂದೇಹ ಹಿಂಗದಾಗಿ, ಮುಂದೆ ಲಿಂಗವ ಕಂಡೇನೆಂಬುದು ಹುಸಿ ನೋಡಾ! ಬೆಂದ ಕರಣಂಗಳು ಒಂದೆ ಪಥವನರಿಯವು. ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ? ಎನ್ನ ತಂದೆ ಕೂಡಲಸಂಗಮದೇವಾ, ನಿಮ್ಮ ಶರಣರ ಬಳಿವಿಡಿದಡೆ ದಂದುಗ ಹಿಂಗುವುದು.**

I - - - - - - - - - - - - - - - - - - - - - - - - - - - - - - -

ದಂದುಗ ಬಿಡದು ಮನದ ಸಂದೇಹ ಹಿಂಗದಾಗಿ: ದಂದುಗ ಬಿಡದು-ಸಕಲಸಂಸಾರಪ್ರಪಂಚಿನ ಧಾವತಿಯು, ಬಿಡದು-ಬಿಡುಗಡೆಯಾಗದು, ಮನದ ಸಂದೇಹ ಹಿಂಗದಾಗಿ-ಇವರು? ಶಿವಸ್ವರೂಪಿಗಳು ಇವರು ವಸ್ತು ಸ್ವರೂಪಿಗಳು? ಪರಬ್ರಹ್ಮಸ್ವರೂಪಿಗಳಹುದೋ ಅಲ್ಲವೋ ಎಂಬಂಥ, ಮನದ-ಮನಸ್ಸಿನ, ಸಂದೇಹ-ಸಂಕಲ್ಪವು, ಹಿಂಗದಾಗಿ-ತೊಲಗದಾಗಿ, ಮುಂದೆ ಲಿಂಗವ ಕಂಡೇನೆಂಬುದು ಹುಸಿ ನೋಡಾ!: ಮುಂದೆ-ದೇಹಾಂತ್ಯದಲ್ಲಿ, ಲಿಂಗವ ಕಂಡೇನೆಂಬುದು-ಪರಶಿವಲಿಂಗದಲ್ಲಿ ಕೂಡುವಂಥ ಕೂಟವನ್ನು ಅರಿದೇನೆಂಬುದು, ಹುಸಿ ನೋಡಾ!- ಅನೃತ ಕಂಡಾ.

ಬೆಂದ ಕರಣಂಗಳು ಒಂದೆ ಪಥವನರಿಯವು: ಬೆಂದ-ತಾಪತ್ರಯಾಗ್ನಿಯಿಂದ ದಗ್ಧವಾದ, ಕರಣಂಗಳು-ಮನ ಮೊದಲಾದ ಸಕಲಕರಣಂಗಳು, ಒಂದೆ ಪಥವನರಿಯವು-ಲಿಂಗಕ್ಕುಪಾವಸ್ಥೆಯಂ ಮಾಡಿ ಲಿಂಗಕರಣಂಗಳಾಗಬೇಕೆಂಬ ಲಿಂಗಾಚಾರಮಾರ್ಗವನು ತಿಳಿಯವು.

ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ?-ಲಿಂಗಾಚಾರದ ಮಾರ್ಗವೆನಗೆ ಹೇಂಗೆ ದೊರಕೊಂಬುವದಯ್ಯಾ, ಎನ್ನ ತಂದೆ-ಲಿಂಗಯ್ಯನೆಂಬ ಎನ್ನಾತ್ಮಜನಕನೆ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಶರಣರ ಬಳಿವಿಡಿದಡೆ: ನಿಮ್ಮ ಶರಣರ-ನಿಮ್ಮ ಜಂಗಮಮೂರ್ತಿಗಳ, ಬಳಿವಿಡಿದಡೆ-ಪದಕಮಲದ ಭಕ್ತಿಯನು ದೃಢವಿಡಿದರೆ; ಎನ್ನ ದಂದುಗ ಹಿಂಗುವುದು-ಎನ್ನ ಸಂಸಾರಪ್ರಪಂಚಿನ ಧಾವತಿಯು, ಹಿಂಗುವುದು-ನಷ್ಟವಾಗುವದೆಂಬ ದೃಷ್ಟೋಪಮಾನದ ಹಾಂಗೆ.

● ನಿಮ್ಮ ಶರಣರ ಬಳಿವಿಡಿದಡೆ-ನಿಮ್ಮ ಅಂದರೆ ಗುರುಮೂರ್ತಿಗಳು, ಶರಣರೆಂದರೆ ಆ ಗುರುವಿನ ದೀಕ್ಷಾತ್ರಯಂಗಳಿಂದುದಯವಾದ ಇಷ್ಟಪ್ರಾಣ ಭಾವಲಿಂಗಂಗಳು, ಬಳಿವಿಡಿದಡೆ-ತ್ರಿವಿಧಲಿಂಗಾರ್ಚನೆ ಧ್ಯಾನ ಮನೋಲಯವೆಂಬ ಪೂಜಾಕ್ರೀಗಳ ದೃಢವಿಡಿದರೆ, ಎನ್ನ ದಂದುಗ-

ಎನ್ನ ಸಂಸಾರ ಪ್ರಪಂಚಿನ ಧಾವತಿಯು, ಹಿಂಗುವುದು–ನಷ್ಟವಾಗುವುದೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ ವಸ್ತು ಸ್ವರೂಪಿಗಳು ಶಿವಸ್ವರೂಪಿಗಳು (ಗ).

---

೩೮

**ತನ್ನ ವಿಚಾರಿಸಲೊಲ್ಲದು : ಇದಿರ ವಿಚಾರಿಸಹೋಹುದೀ ಮನವು! ಏನು ಮಾಡುವೆನೀ ಮನವನು! ಎಂತು ಮಾಡುವೆನೀ ಮನವನು! ಕೂಡಲಸಂಗನಶರಣರ ನಚ್ಚದ ಮಚ್ಚದ ಬೆಂದ ಮನವ ಕಿಚ್ಚಿನೊಳಗಿಕ್ಕು!**

I – – – – – – – – – – – – – – – – – – – – – – – – – – – – – – – – – – –

ತನ್ನ ವಿಚಾರಿಸಲೊಲ್ಲದು–ತನ್ನಂತರಂಗದಲ್ಲಿರುವಂಥ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವನು, ವಿಚಾರಿಸಲೊಲ್ಲದು–ತಾಂ ಪರಾಮರಿಸಿ ಬಿಡುಲೊಲ್ಲದು. ಇದಿರ ವಿಚಾರಿಸ ಹೋಹುದೀ ಮನವು!–ಪರರುಗಳನ್ನು ಅಜ್ಞಾನಿ ಸುಳ್ಳ ಕಳ್ಳ ಜಾರಚೋರನೆಂದು ದೂಷಣೆಯ ಮಾಡುವುದಕ್ಕೆ, ಹೋಹುದು–ಎಯ್ದು ಹೋಗುವುದು, ಈ ಮನವು–ಈ ಚಿತ್ತವು. ಏನು ಮಾಡುವೆನೀ ಮನವನು!: ಈ ಮನವನು–ಈ ಚಿತ್ತವನ್ನು, ಏನು ಮಾಡುವೆಂ–ಏನು ಜ್ಞಾನಾಗ್ನಿಯಿಂದ ದಹಿಸಲೊ; ಎಂತು ಮಾಡುವೆನೀ ಮನವನು!: ಈ ಮನವನು–ಈ ಚಿತ್ತವನ್ನು, ಎಂತು ಮಾಡುವೆಂ–ಏನು ಶಿವಾನುಭಾವವೆಂಬ ಅಗ್ನಿಯಿಂದ ದಹಿಸಲೋ.

ಕೂಡಲಸಂಗನಶರಣರ–ಜಂಗಮಮೂರ್ತಿಗಳ, ನಚ್ಚದ–ಇವರೇ ಸಾಕ್ಷಾತ್ಶಿವಸ್ವರೂಪಿಗಳೆಂದು ನಂಬದ, ಮಚ್ಚದ–ತನುಮನಧನಂಗಳು ಇವರೊಡವೆ ಇವರ ಪದಾರ್ಥವೆಂದು ಮಮಕರಿಸಿಕೊಂಡು ಭಕ್ತಿಯನ್ನು ಮಾಡಲೊಲ್ಲದ, ಬೆಂದ–ತಾಪತ್ರಯಾಗ್ನಿಯಿಂದ ದಗ್ಧವಾದ, ಮನವ–ಮನಸ್ಸುನು, ಕಿಚ್ಚಿನೊಳಗಿಕ್ಕು!–ಆಶಾಗ್ನಿಯಲ್ಲಿ ದಹಿಸಿಬಿಡು ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೩೯

**ತನ್ನಿಚ್ಛೆಯ ನುಡಿದಡೆ ಮಚ್ಚುವುದೆನ್ನ ಮನವು, ಇದಿರಿಚ್ಛೆಯ ನುಡಿದಡೆ ಮಚ್ಚದೆನ್ನ ಮನವು, ಕೂಡಲಸಂಗನ ಶರಣರ ನಚ್ಚದ ಮಚ್ಚದ ಬೆಂದ ಮನವ ಕಿಚ್ಚಿನೊಳಗಿಕ್ಕು.**

I – – – – – – – – – – – – – – – – – – – – – – – – – – – – – – – – – – –

ತನ್ನಿಚ್ಛೆಯ ನುಡಿದಡೆ ಮಚ್ಚುವುದೆನ್ನ ಮನವು–ಆಸಕರ ಕಂಡರೆ ನಿರಾಸಕರು ಪ್ರಪಂಚಿಗಳ ಕಂಡರೆ ನಿಃಪ್ರಪಂಚಿಕರು ಅಜ್ಞಾನಿಗಳ ಕಂಡರೆ ಸುಜ್ಞಾನಿಗಳೆಂದು ಮುಖದಾಕ್ಷಿಣ್ಯವೇ ಮುಂದುಗೊಂಡು

ಪ್ರಸಂಗವನಾಡಿದರೆ ಇವರು ಜ್ಞಾನಿಗಳು ಶಿವಸ್ವರೂಪರುಗಳು ಪರಬ್ರಹ್ಮಸ್ವರೂಪಿಗಳೆಂದು ಮಮಕರಿಸಿಕೊಂಡು ೧ಭಕ್ತಿ೧ಯನ್ನು ಮಾಡುವುದು, ಎನ್ನ ಮನವು-ಎನ್ನ ಚಿತ್ತವು, ಇದಿರಿಚ್ಛೆಯ ನುಡಿದಡೆ ಮಚ್ಚದೆನ್ನ ಮನವು-ಆಸಕರ ಕಂಡರೆ ಆಸಕರು ಪ್ರಪಂಚಿಗಳ ಕಂಡರೆ ಪ್ರಪಂಚಿಗಳು ಅಜ್ಞಾನಿಗಳ ಕಂಡರೆ ಅಜ್ಞಾನಿಗಳೆಂದು ನಿರ್ದಾಕ್ಷಿಣ್ಯವನು ಮುಂದುಗೊಂಡು ಪ್ರಸಂಗವನಾಡಿದರೆ ಈ ಅಯ್ಯನವರು ಮುಖವ ನೋಡೋದಿಲ್ಲ ಮೋರೆ ನೋಡೋದಿಲ್ಲ ಕಂಡದ್ದು ಕಂಡಹಾಂಗೆ ಕಡ್ಡಿಮುರದ ಹಾಂಗೆ ಆಡುತ್ತೈದಾರೆಯೆಂದು ಮಮಕರಿಸಿಕೊಂಡು ಭಕ್ತಿಯನ್ನು ಮಾಡೀತೆ? ಮಾಡಲೊಲ್ಲದು, ಎನ್ನ ಮನವು-ಎನ್ನ ಚಿತ್ತವು.

ಕೂಡಲಸಂಗನಶರಣರ-ಜಂಗಮಮೂರ್ತಿಗಳ, ನಚ್ಚದ-ಇವರೇ ಸಾಕ್ಷಾತ್ಶಿವಸ್ವರೂಪಿಗಳೆಂದು ನಂಬದ, ಮಚ್ಚದ-ತನುಮನಧನಂಗಳನು ಇವರೊಡವೆ ಇವರ ಪದಾರ್ಥವೆಂದು ಮಮಕರಿಸಿಕೊಂಡು ಭಕ್ತಿಯನ್ನು ಮಾಡದ, ಬೆಂದ-ಆಶಾಗ್ನಿಯಿಂದ ದಗ್ಧವಾದ, ಮನವ-ಹೀನಮನಸ್ಸು, ಕಿಚ್ಚಿನೊಳಗಿಕ್ಕು-ತಾಪತ್ರಯಾಗ್ನಿಯಲ್ಲಿ ಮಡಗಿಬಿಡು ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧_೧ ಯುಕ್ತಿ (ಕ).

---

## ೪೦

**ಸುಡಲೀ ಮನವೆನ್ನನುಡುಹನ ಮಾಡಿತ್ತು. ನಡೆವಲ್ಲಿ ನುಡಿವಲ್ಲಿ ಅಧಿಕನೆಂದೆನಿಸಿತ್ತು. ಬೆಡಗಿನ ಕೀಲ ಕಳೆದು ಕೆಡದ ಬಳಿಕ ಕಡುಗೂಪ ಮಡದಿ ತಾ ಮುಟ್ಟಲಮ್ಮಳು. ಒಡಲನುರಿ ಕೊಂಬುದು, ಒಡವೆಯನರಸು-ಕೊಂಬ, ಕಡುಗೂಪ ಮಡದಿಯ ಮತ್ತೊಬ್ಬ ಚೆನ್ನಿಗ ಕೊಂಬ! ಮುನ್ನ ಮಾಡಿದ ಪಾಪ ತನ್ನ ಬೆನ್ನ ಬಿಡದನ್ನಕ್ಕ ಇನ್ನು ಬಯಸಿದರೊಳವೆ ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - -

ಸುಡಲೀ ಮನವೆನ್ನನುಡುಹನ ಮಾಡಿತ್ತು : ತನುವಿನಲ್ಲಿ ನೆನಹು ರೂಪಾಗಿರುವ, ಮನವ-ಚಿತ್ತವನ್ನು, ಸುಡಲೀ-ತಾಪತ್ರಯಾಗ್ನಿಯಲ್ಲಿ ದಹಿಸಲಿ, ಎನ್ನನುಡುಹನ ಮಾಡಿತ್ತು-ಎನ್ನ ಭಕ್ತಿಬಾಹ್ಯನ ಮಾಡಿತ್ತು.

ನಡೆವಲ್ಲಿ-ಸಂತೆ ಪ್ಯಾಟಿಗೆ ಹೋಗಿ ಉದ್ದಿಮೆ ವ್ಯಾಪಾರಂಗಳನು ಮಾಡಿಕೊಂಡು ಬರುವಲ್ಲಿ, ನುಡಿವಲ್ಲಿ-ರಾಜಸಭೆ ದೇವಸಭೆಗಳಲ್ಲಿ ಕುಳಿತುಕೊಂಡು ನ್ಯಾಯನಿಗದಿಯನ್ನು ತಿದ್ದಿ ತೀರಿಸಿ ಹೇಳುವಲ್ಲಿ, ಅಧಿಕನೆಂದೆನಿಸಿತ್ತು-ಶ್ರೇಷ್ಠನೆಂದು ಹೇಳಿಕೊಂಡಿರ್ಪನು. ಹೀಂಗಿರುತಿರ್ದ ಹಾಂಗೆ ತಮ್ಮ ಕುಲದಲ್ಲೊಂದು ಕನ್ಯೆಯ ತೆಗೆದುಕೊಂಡು ಬಂದು ವಿವಾಹವನ್ನು ಮಾಡಿಕೊಂಡು ಒಂದು ಮಂದಿರವನ್ನು ಕಟ್ಟಿಕೊಂಡು ಉದ್ದಿಮೆ ವ್ಯಾಪಾರಂಗಳನು ಮಾಡಿಕೊಂಡು ಬದುಕನು ತಂದು ಮನೆಯೊಳಗೆ ಹಾಕಿದಲ್ಲಿ ಆ

ಸ್ತ್ರೀಯಳು ತಂದಂಥ ಬದುಕನ್ನು ಜೋಪಾನವ ಮಾಡಿಕೊಂಡು ಇರ್ವರೂ ಪರಿಣಾಮದಲ್ಲಿರುತ್ತಿಹರು, ಹೀಂಗಿರುತಿರ್ದ ಹಾಂಗೆ.

ಬೆಡಗಿನ ಕೀಲ ಕಳೆದು : ಬೆಡಗಿನ-ಕುಶಲತ್ವದ, ಕೀಲ-ಕೂಟವನ್ನು, ಕಳೆದು-ಉನಚಿ; ಕೆಡೆದ ಬಳಿಕ-ಆಧಿವ್ಯಾಧಿವಿಪತ್ತುಗಳಾಗಿ ಬಿದ್ದ ಮೇಲೆ, ಕಡುಗೂಪ ಮಡದಿ-ಅತ್ಯಂತ ಮನೋಕಾಪಟ್ಯವನುಳ್ಳ ಸ್ತ್ರೀಯಳು, ತಾ ಮುಟ್ಟಲಮ್ಮಳು-ಗಂಡನ ರೋಗವನ್ನು ನೋಡಿ ಆ ರೋಗಕ್ಕೆ ತಕ್ಕ ಔಷಧ ಕಷಾಯವನು ಕೊಟ್ಟು ಪಥ್ಯಪಾನಂಗಳಿಂದುಪಚರಿಸದೆ ಕಂಡೂ ಕಾಣದ ಹಾಂಗೆ ಹೊರಗಿಂದ್ವೊಳಗೆ ತಿರುಗುತ್ತಿಹಳು.

ಒಡಲನುರಿ ಕೊಂಬುದು-ಹಾಂಗೆ ತಿಂಗಳು ಹದಿನೈದು ದಿವಸ ಉಪೇಕ್ಷಮಾಡಿಬಿಟ್ಟಲ್ಲಿ ಅವ ಸತ್ತುಹೋಗುವನು. ಸತ್ತಮೇಲೆ ಎಡಬಲದಲ್ಲಿದ್ದಂಥ ನಂಟರು ನಲ್ಲರು ಬಂದು ನಿಕ್ಷೇಪವ ಮಾಡಿಬಿಟ್ಟಲ್ಲಿ, ಒಡಲ-ಅವನಂಗವನು, ಉರಿಕೊಂಬುದು-ಭೌಕ್ತಿಕಾಗ್ನಿ[೧] ಒಳಕೊಂಬುತ್ತಿಹುದು. ಒಡೆವೆಯನರಸುಕೊಂಬ-ಅವಳಿಗೇನಾದರೂ ಮಕ್ಕಳು ಮರಿಗಳು ಇಲ್ಲದಿದ್ದಲ್ಲಿ, ಒಡವೆಯ-ಅವಳ ವಸ್ತ್ರಾಭರಣ ಮೊದಲಾದ ಬದುಕನೆಲ್ಲವನು, ಅರಸು ಕೊಂಬ-ದೊರೆ ತೆಗೆದುಕೊಂಡು ಬಿಟ್ಟುಬಿಡುತ್ತಿಹನು. ಕಡುಗೂಪ ಮಡದಿಯ-ಅತ್ಯಂತ ಮನೋಕಾಪಟ್ಯವನುಳ್ಳ ಸ್ತ್ರೀಯಳ, ಮತ್ತೊಬ್ಬ ಚೆನ್ನಿಗ ಕೊಂಬ!-ಮತ್ತೊಬ್ಬ ಪಾಣ್ಬಪುರುಷನು ನನಗೆ ಹೆಂಡತಿಯಿಲ್ಲ ನಿನಗೆ ಗಂಡನಿಲ್ಲ ಇರ್ವರೂ ಕೂಡಿ ಬಾಳುವಂ ಬಾಯೆಂದು ಹತ್ತೆಂಟು ವರಹವನ್ನು ವೆಚ್ಚವ ಮಾಡಿ ಸೀರಿಯ ನುಡಿಸಿಕೊಂಡು ಆಳುತ್ತಿಹನು. ಮುನ್ನ ಮಾಡಿದ ಪಾಪ-ಮೊದಲೇನಾದರೂ ಗಂಡನಿಗೆ ಆಧಿವ್ಯಾಧಿವಿಪತ್ತುಗಳನ್ನು ನೋಡಿ ಆರೋಗ್ಯಕ್ಕೆ ತಕ್ಕ ಔಷಧ ಕಷಾಯವನ್ನು ಕೊಡದೆ ಪಥ್ಯಪಾನಂಗಳಿಂದುಪಚರಿಸದೆ ಉಪೇಕ್ಷವ ಮಾಡಿಕೊಂಡಂಥ, ಪಾಪ-ದೋಷವು. ತನ್ನ ಬೆನ್ನ ಬಿಡದನ್ನಕ್ಕ-ತನ್ನ ಒಡಲ ಕಚ್ಚಿ ಹೆರೆಹಿಂಗದೆ ಉಂಟಾಗಿರುವ ಪರಿಯಂತರ, ಇನ್ನು ಬಯಸಿದರೊಳವೆ-ಈಗೇನಾದರೂ ಒಂದು ಅರಗಾಲ ಬರಗಾಲನಾದರೂ ಬರುವದು, ಒಂದು ಅಡತನ ಬಡತನವಾದರೂ ಬರುವದು, ಬಂದಲ್ಲಿ ಈಗಿನ ಗಂಡನು ಕುಂತು ನಿಂತುದನು ತಪ್ಪುಮಾಡಿಕೊಂಡು ಗಂಟಿನ ಚಬುಕವನ್ನು ತೆಗೆದುಕೊಂಡು ಮೈಯನೆಲ್ಲ ಒಡೆಯ ಹೊಯ್ದಲ್ಲಿ ಮೊದಲ ಗಂಡನ ಪರಿಣಾಮವನ್ನು ಬಯಸಿದರೆ ಬಂದೀತೆ? ಬರಲರಿಯದು ಎಂಬ ದೃಷ್ಟೋಪಮಾನದ ಹಾಂಗೆ.

● ಸುಡಲೀ ಮನವೆನ್ನನುಡುಹನ ಮಾಡಿತ್ತು-ತನುವಿನಲ್ಲಿ ನೆನಹು ರೂಪಾಗಿರುವ, ಮನವ-ಚಿತ್ತವನ್ನು, ಸುಡಲೀ-ಆಶಾಗ್ನಿಯಿಂದ ದಹಿಸಲಿ, ಎನ್ನನುಡುಹನ ಮಾಡಿತ್ತು-ಎನ್ನ ಭಕ್ತಿಜ್ಞಾನವೈರಾಗ್ಯಗಳಿಗೆ ಬಾಹ್ಯನ ಮಾಡಿತ್ತು.

ನಡೆವಲ್ಲಿ-ಐವತ್ತಾರು ದೇಶದಲ್ಲಿ ದಿಗ್ದೇಶಾಂತರವನ್ನು ಮಾಡಿದಲ್ಲಿ, ನುಡಿದಲ್ಲಿ-ಹತ್ತೆಂಟು ಕಥೆ ಕಾವ್ಯಂಗಳನು ಕಲಿತುಕೊಂಡು ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಚಿತ್ರಾರ್ಥ ಪ್ರಣವಾರ್ಥ ಭಾವಾರ್ಥ ಮೊದಲಾದವು[ಗಳ]ನ್ನು ಹೇಳುವಲ್ಲಿ, ಅಧಿಕನೆಂದೆನಿಸಿತ್ತು-ಶ್ರೇಷ್ಠನೆಂದು ಹೇಳಿಸಿಕೊಂಡಿರ್ಪರು. ಹೀಂಗಿರುತಿರ್ದ ಹಾಂಗೆ ಅಲ್ಲೊಬ್ಬ ಭಕ್ತನು ಅವರ ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಚಿತ್ರಾರ್ಥ ಪ್ರಣವಾರ್ಥ ಭಾವಾರ್ಥಂಗಳಿಗೆ ಮಚ್ಚಿ, ಸ್ವಾಮಿ! ನಮ್ಮ ಸಮಯಾಚಾರಕ್ಕೆ

ಇರಬೇಕೆಂದು ಆಗಾಗ್ಗೆ ಸೂಚನೆಬಿನ್ನ, ಘಟ್ಟಿಬಿನ್ನವನ್ನು ಮಾಡುತ್ತ ಮೃಷ್ಟಾನ್ನ ಬಡಿಸುತ್ತ ಶಾಲು ಶಕಲಾತಿ ಸಣ್ಣಕಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟೆಮಂಚ ಲೇಪುಸುಪ್ಪತ್ತಿಗೆ ತುಪ್ಪಳವಾಸ ಪದಾರ್ಥಂಗಳನು ನೀಡಿ ಸಂತೃಪ್ತಿ ಮೊದಲಾದವರ ಮೇಲೆ ಮಲಗಿಸಿಕೊಂಡು ಪರಿಣಾಮ ಸಂಗಾತ ಮಡಗಿಕೊಂಡಿರುವನು ಹೀಂಗಿರುತಿದ್ದ ಹಾಂಗೆ.

ಬೆಡಗಿನ ಕೀಲ–ದೇಹಾತ್ಮರುಗಳ ಕೂಟವನ್ನು, ಕಳೆದು–ನಷ್ಟವಮಾಡಿ, ಕೆಡೆದ ಬಳಿಕ–ಆಧಿವ್ಯಾಧಿವಿಪತ್ತುಗಳಿಗೆ ಬಿದ್ದ ಮೇಲೆ, ಕಡಗೂಪ ಮಡದಿ–ಅತ್ಯಂತ ಮನೋವಂಚನೆಯುಳ್ಳ ಉಪಾಧಿಕ ಭಕ್ತನೆಂಬ ಪಾಣ್ಬಾಂಗನೆಯು, ತಾ ಮುಟ್ಟಲಮ್ಮಳು–ಸಮಯಾಚಾರಕ್ಕೆ ಮಡಗಿಕೊಂಡಂಥ ಜಂಗಮ ಮೂರ್ತಿಗಳಿಗೆ ಅಧಿವ್ಯಾಧಿವಿಪತ್ತುಗಳನು ನೋಡಿ ಆವಾವ ರೋಗಕ್ಕೆ ತಕ್ಕ ಔಷಧ ಕಷಾಯವನ್ನು ಕೊಟ್ಟು ಪಥ್ಯಪಾನಂಗಳಿಂದುಪಚರಿಸದೆ ಗೌಡಿ ಗುಲಾಮರಿಗೆ ಹಚ್ಚಿ ಹೊರಗಿಂದ್ಹೊರಗೆ ತಿರುಗುತ್ತಿಹನು.

ಒಡಲನುರಿ ಕೊಂಬುದು–ಹಾಂಗೆ ತಿಂಗಳು ಹದಿನೈದು ದಿವಸ ಉಪೇಕ್ಷವ ಮಾಡಿಬಿಟ್ಟಲ್ಲಿ ಆ ಅಯ್ಯನವರು ಐಕ್ಯಸ್ಥರಾಗುವರು, ಐಕ್ಯವಾದಲ್ಲಿ ಎಡಬಲದಲ್ಲಿ ಇದ್ದಂಥ ಭಕ್ತಮಾಹೇಶ್ವರರುಗಳು ಬಂದು ಕ್ರಿಯಾಸಮಾಧಿಯನ್ನು ಮಾಡಿ ನಿಕ್ಷೇಪವ ಮಾಡಿಬಿಟ್ಟಲ್ಲಿ, ಒಡಲ–ಅವರಂಗವನ್ನು, ಉರಿಕೊಂಬುದು–ಚಿದಗ್ನಿಸ್ವರೂಪವಾದ ಇಷ್ಟಲಿಂಗದೇವನು ಒಳಕೊಂಬುತ್ತಿಹನು. ಒಡವೆಯ–ಅವರ ಪ್ರಾಣವನ್ನು, ಅರಸು ಕೊಂಬ–ರಾಜಾಧಿರಾಜ ಕೂಡಲ ಸಂಗಮದೇವನೆಂಬ ಪ್ರಾಣಲಿಂಗದೇವನು ಒಳಕೊಂಬುತ್ತಿಹನು. ಕಡುಗೂಪ ಮಡದಿಯ–ಅತ್ಯಂತ ಮನೋವಂಚನೆಯನುಳ್ಳ ಉಪಾಧಿಕಭಕ್ತನೆಂಬ ಪಾಣ್ಬಾಂಗನೆಯನ್ನು, ಮತ್ತೊಬ್ಬ ಚೆನ್ನಿಗ ಕೊಂಬ!_ಅವನು ಸತ್ತುಹೋದ ಮೇಲೆ ಕಾಲಾಗ್ನಿರುದ್ರನ ಭಟರು ಬಂದು ಎಲೆ ಧಗಡಿ ನೀನು ಜಂಗಮ ಮೂರ್ತಿಗಳನ್ನು ಸಮಯಾಚಾರಕ್ಕೆ ಮಡಗಿಕೊಂಡಿದ್ದ [illegible] ಕಾರಣಕ್ಕೆ ಅವರಿಗೊಂದು ರೋಗ ರುಜೆ ಬಂದಲ್ಲಿ ಆ ರೋಗಕ್ಕೆ ತಕ್ಕ ಔಷಧ ಕಷಾಯಂಗಳನು ಕೊ[illegible]ಥ್ಯಪಾನಂಗಳಿದುಪಚರಿಸದೆ ಗೌಡಿ ಗುಲಾಮರ ಹಚ್ಚಿ ಉಪೇಕ್ಷವ ಮಾಡಿಕೊಂದ ಕಾರಣವೇನೆಂದು ಹಂಗಿಸಿ ಹಂಗಿಸಿ ಶಿಕ್ಷಿಸಿಕೊಂಬುವ, ಮುನ್ನ ಮಾಡಿದ ಪಾಪ–ಮೊದಲು ಜಂಗಮಮೂರ್ತಿಗಳ ರೋಗವನ್ನು ನೋಡಿ ಆ ರೋಗಕ್ಕೆ ತಕ್ಕ ಔಷಧ ಕಷಾಯವನ್ನು ಕೊಡದೆ ಪಥ್ಯಪಾನಂಗಳಿಂದುಪಚರಿಸದೆ ಗೌಡಿ ಗುಲಾಮರಿಗೆ ಹಚ್ಚಿ ಉಪೇಕ್ಷವ ಮಾಡಿ ಕೊಂದಂಥ, ಪಾಪ–ದೋಷವು, ತನ್ನ ಬೆನ್ನ ಬಿಡದನ್ನಕ್ಕ–ಆತ್ಮನ ಒಡಲ ಕಚ್ಚಿ ಹೆರೆಹಿಂಗದೆ ಉಂಟಾಗಿರುವ ಪರಿಯಂತರ, ಇನ್ನು ಬಯಸಿದರೊಳವೆ–ಈಗ ಏನಾದರೂ ಜಂಗಮಮೂರ್ತಿಗಳ ರೋಗವನ್ನು ನೋಡಿ ಆ ರೋಗಕ್ಕೆ ತಕ್ಕ ಔಷಧ ಕಷಾಯವನ್ನು ಕೊಟ್ಟು ಪಥ್ಯಪಾನಂಗಳಿಂದುಪಚರಿಸಿ ಎಂದಿನ ಹಾಂಗೆ ಅವರ ಶಿವಾನುಭಾವವನ್ನು ಬೆಸಗೊಂಡು ಕೇಳಬೇಕೆಂಬಂಥ ಪರಿಣಾಮವನ್ನು ಇಚ್ಛೈಸಿದರೆ ದೊರಕೊಂಡೀತೆ? ದೊರಕೊಳ್ಳಲರಿಯದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

.........................

೧ + ಯನ್ನು (ಕ, ಗ).

**ವಚನದ ಹುಸಿಯ ನುಸುಳೆಂತು ಮಾಂಬುದೊ? ಎನ್ನ ಮನದ ಮರ್ಕಟತನವೆಂತು ಮಾಂಬುದೊ? ಎನ್ನ ಹೃದಯದ ಕಲ್ಮಷವೆಂತು ಮಾಂಬುದೊ? ಎನ್ನ ಕಾಯವಿಕಾರಕ್ಕೆ ತಜೆಸಲುಹೋದೆನು, ಎನಗಿದು ವಿಧಿಯೆ ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - -

ವಚನದ ಹುಸಿಯ ನುಸುಳೆಂತು ಮಾಂಬುದೊ?-ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರು ಪ್ಯಾಟಿಮನೆಪುರಪಟ್ಟಣ ಸ್ಥಾನಂಗಳಲ್ಲಿಗೆ ಹೋಗಿ ಚೌಕಿಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನು ಮಾಡುತ್ತಿರ್ದಲ್ಲಿ ಅಲ್ಲಿಗೊಬ್ಬ ಉಪಾಧಿಕನು ಬಂದು ಅವರ ಶಿವಾನುಭಾವವನ್ನು ಬೆಸಗೊಂಡು ಕೇಳಿ ಸ್ವಾಮಿ ಇಷ್ಟು ದಿವಸಂತೂ ತನುಮನಧನಂಗಳನು ವಂಚಿಸಿಕೊಂಡದ್ದು ಹೋಗಲಿ. ಇನ್ನು ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡಲ್ಲಿ ಅದರೊಳಗೊಬ್ಬ ಜಂಗಮಮೂರ್ತಿಯು ಇವ ಬಹು ಹೇಳಿಕೊಂಬುತ್ತೈದಾನೆ, ಇವನ ಭಕ್ತಿಯನ್ನು ನೋಡಬೇಕೆಂದು ಸವರಿಸಿಕೊಂಡು ಹಿಂದಗುಂಟ ಹೋದಲ್ಲಿ, ಬೀದಿಬಾಜಾರದಲ್ಲಿ ಹೋಗುತಿರ್ದ ಹಾಂಗೆ ಗರಕ್‌ನೆ ಹಿಂದಕ್ಕೆ ತಿರುಗಿ ನೋಡಿದಲ್ಲಿ ಹೋ ಹೋ ಅಯ್ಯನವರು ಎನ್ನ ಮನೆಗೆ ಬರುತ್ತೈದಾರೆಂದು ಸಂದುಬಿದ್ದು ತಪ್ಪಿಸಿಕೊಂಡು ಹೋಗುವನು. ಅದೇ ಸಂದುಗುಂಟ ಇವರೂ ಹೋಗುವರು. ಅವನು ಕಡೆಬಾಗಿಲಿಗೆ ಹೋಗುವನು, ಇವರು ಸಮೀಪಕ್ಕೆ ಹೋಗುವರು. ಅವನು ಪಟ್ಟಸಾಲಿಗೆ ಹೋಗುವನು, ಇವರು ಕಡೆಬಾಗಿಲಿಗೆ ಹೋಗುವರು. ಅವನು ನಡುಮನೆಗೆ ಹೋಗುವನು, ಇವರು ಪಟ್ಟಸಾಲಿಗೆ ಹೋಗುವನು. ಅವನು ಕೊಟ್ಟಡಿಗೆ ಹೋಗುವನು, ಇವರು ನಡುಮನೆಗೆ ಹೋಗುವರು. ಅವನು ಹಿಂದಕ್ಕೆ ತಿರುಗಿ ನೋಡಿ ಹಿತ್ತಲಗೋಡೆಯನ್ನು ಧುಮುಕಿ ಸಂದುಬಿದ್ದು ತಪ್ಪಿಸಿಕೊಂಡು ಹೋಗುವಂಥ, ವಚನದ-ವಾಕ್ಯದ, ಹುಸಿಯ-ಅನೃತವ, ನುಸುಳೆಂತು ಮಾಂಬುದೊ?-ಸಂದುಬಿದ್ದು ತಪ್ಪಿಸಿಕೊಂಡು ಹೋಗುವಂಥದು ಹೇಂಗೆ ನಷ್ಟವಾಗುವದೊ?

ಎನ್ನ ಮನದ ಮರ್ಕಟತನವೆಂತು ಮಾಂಬುದೊ?-ನೂರಾರು ಭಕ್ತ ಮಾಹೇಶ್ವರರುಗಳ ಮಧ್ಯದಲ್ಲಿ ಒಂದು ಅರುಹು ಆಚರಣೆಯ ಪ್ರಸಂಗವು ಬಂದಲ್ಲಿ ಅವರ ಮಾತೇ ಗೆಲುತ್ತೈತೆ ನನ್ನ ಮಾತೇ ಸೋಲುತ್ತೈತೆಂದು ಅವರ ಮಾತನೇ ಸೋಲಿಸಿ ತನ್ನ ಮಾತನೇ ಗೆಲಿಸಿಕೊಂಡು ಅಹುದಾದುದನೆ ಅಲ್ಲ ಮಾಡಿ ಅಲ್ಲದಾದುದನೆ ಅಹುದುಮಾಡಿ ಅಹುದಲ್ಲಾ ಅಹುದಲ್ಲಾಯೆಂದು ಹಾವು ಹಿಡಿದ ಕಪಿಮುಷ್ಟಿಯೋಪಾದಿಯಲ್ಲಿ ಹಿಡಿದುದನೆ ಬಿಡದೆ ಹೋರುವಂಥ ಕಪಿಮುಷ್ಟಿಯು ಹೇಂಗೆ ನಷ್ಟವಾಗುವುದೊ?

ಎನ್ನ ಹೃದಯದ ಕಲ್ಮಷವೆಂತು ಮಾಂಬುದೊ?-ಎನ್ನಂತರಂಗದಲ್ಲಿರುವಂಥ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವು, ಎಂತು ಮಾಂಬುದೊ?-ಹೇಂಗೆ ನಷ್ಟವಾಗುವುದೊ? ಎನ್ನ ಕಾಯವಿಕಾರಕ್ಕೆ ತರೆಸಲು ಹೋದೆನು : ಎನ್ನ ಕಾಯವಿಕಾರಕ್ಕೆ-ಎನ್ನ ತನುವಿನ ಮನ್ಮಥನ ಉಪಟಳಕ್ಕೆ, ತರೆಸಲು-ಒಳಗುಮಾಡಲು, ಹೋದೆನು-ಒಳಗಾದೆನು. ಎನಗಿದು ವಿಧಿಯೆ_ಇದಕ್ಕೋಸ್ಕರ

ದೇಹ ಪ್ರಪಂಚದೊಡನೆ ಕೂಡಿ ಚರಿಸಿ ಭವಕ್ಕೆ ಹೋಗುವಂಥದು ಪ್ರಾಪ್ತಿಯೆ, ಕೂಡಲಸಂಗಮದೇವಾ?–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕು ಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ (ಗ).

---

೪೨

**ಅಂಗದ ನೋಟವು ಸಿಂಗದ ಗಾತ್ರವು, ಹಿಂಗದು ಮನದಲ್ಲಿ ನಾನಾ ವಿಕಾರವು. ಬಂದೆನೆಂದಱಿಯಲಿಕ್ಕಿಲ್ಲಾಗಿ ಸಂದೇಹಬಿಡದು, ಮುಂದುಗಾಣದು ಲೋಕ, ಬೆಂದ ಮಾಯಕ್ಕಂಜಿ ನಿಮ್ಮ ಮಱಿಹೊಕ್ಕೆನು, ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – – – –

ಅಂಗದ ನೋಟವು ಸಿಂಗದ ಗಾತ್ರವು–ಸಿಂಹನೆಂಬುವಂಥದು ತನಗಾಹಾರವಾದ ಆನೆಯನ್ನು ಹೊಡೆಯಬೇಕಾದರೆ ಎಡಕ್ಕೆ ತೋರಿ ಬಲಕ್ಕೆ, ಬಲಕ್ಕೆ ತೋರಿ ಎಡಕ್ಕೆ, ಹಿಂದಕ್ಕೆ ತೋರಿ ಮುಂದಕ್ಕೆ, ಮುಂದಕ್ಕೆ ತೋರಿ ಹಿಂದಕ್ಕೆ ಲಂಘಿಸಿ ಹಿಡಿವಲ್ಲಿ ಮಹಾಪರಾಕ್ರಮಿಯಾಗಿರ್ಪುದು. ಹಾಂಗೆ, ಇಲ್ಲಿ ತನುವೆನಲು ಮನೋದ್ರೃಕ್ಕೆಂದು ತನುವಿನ ಮನೋದ್ರೃಕ್ಕು ಆತ್ಮನ ಅಷ್ಟಮದ ಮೊದಲಾದ ಸಕಲತತ್ತ್ವಂಗಳ ವರ್ತನೆಯೊಡನೆ ಕೂಡಿ ಚರಿಸುವಲ್ಲಿ ಮಹಾಪರಾಕ್ರಮಿಯಾಗಿರ್ಪನು, ಹಿಂಗದು ಮನದಲ್ಲಿ ನಾನಾ ವಿಕಾರವು–ಮನವು ಹಲವು ನೆನದು ಹಲವು ಭಾವಿಸಿ ವರ್ತನೆಯೊಡನೆ ಕೂಡಿ ಚರಿಸುವಂಥ ಮನೋಪ್ರಪಂಚು, ಹಿಂಗದು–ತೊಲಗದು.

ಬಂದನೆಂದು ಅಱಿಯಲಿಕ್ಕಿಲ್ಲಾಗಿ–ನನ್ನ ನಿಜವನ್ನು ಮರದು ಅಜ್ಞಾನದಿಂದ ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಬಂದೆನೆಂಬಂಥದನ್ನು ಅರಿಯಲಿಕ್ಕಿಲ್ಲಾಗಿ, ಸಂದೇಹ ಬಿಡದು–ನಾನಾವಸ್ತುಸ್ವರೂಪವಹುದೋ ಅಲ್ಲವೋ ಎಂಬಂಥ ಮನಸ್ಸಿನ ಸಂಕಲ್ಪ ಬಿಡುಗಡೆಯಾಗದು. ಮುಂದುಗಾಣದು–ಮುಂದಾಗುವಂಥ ನಿಜಮೋಕ್ಷವನ್ನು, ಕಾಣದು–ಅರಿಯದು, ಲೋಕ–"ಲೊಕಸ್ತು ಭುವನೇ ಜನೇ"ಯೆಂದು ಜಗತ್ತು.

ಬೆಂದ–ತಾಪತ್ರಯಾಗ್ನಿಯಿಂದ ದಗ್ಧವಾದ, ಮಾಯಕ್ಕೆ–ಮಾಯಾಪ್ರಪಂಚೆಗೆ, ಅಂಜಿ–ಭಯಂಬಟ್ಟು, ಮಱಿಹೊಕ್ಕೆನು–ನಿಮ್ಮ ಸತ್ಕ್ರಿಯಾಚಾರದ ಸೈಪವನ್ನು ಆಶ್ರಯಿಸಿಕೊಂಡಿಪ್ಪೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – – –

ಅಂಗದ ನೋಟವು ಸಿಂಗದ ಗಾತ್ರವು, ಹಿಂಗದು ಮನದಲ್ಲಿ ನಾನಾ ವಿಕಾರವು–ಒಂದಾನೊಂದು ಸಿಂಹನು ನಾಲ್ಕು ಕಾಲಲ್ಲಿ ನಾಲ್ಕು ಆನೆ ಬಾಯಲೊಂದಾನೆ ಈ ಪಂಚಾನೆಯನು

ತೆಗೆದುಕೊಂಡು ಹೋಗುವಲ್ಲಿ ಮಹಾಪರಾಕ್ರಮಿಯಾಗಿಹುದು. ಅದಕ್ಕೆ ಪಂಚಾನನನೆಂಬ ಹೆಸರು, ಹಾಂಗೆ ಮಾಯಾಸಂಕಲ್ಪಸಂಭೂತಮಾದ ಮನಸ್ಸು ಅಷ್ಟಭೋಗ ಪಂಚವಿಷಯ ಮಲತ್ರಯಂಗಳನು ಗ್ರಹಿಸುವಲ್ಲಿ ಮಹಾಪರಾಕ್ರಮಿಯಾಗಿಹುದು. ಮಾನಸದಲ್ಲಿ ಹಲವು ವೈಕಾರ್ಯವು ಹೆರೆಸಾರದು.

ಬಂದೆನೆಂದಜೆಯಲಿಕ್ಕಿಲ್ಲಾಗಿ–ಶಿವಾಂಶಿಕನಾದಾತ್ಮನು ತನ್ನ ನಿಜವ ಮರದು ದೇಹವೆತ್ತಿ ಹುಟ್ಟಿಬಂದೆನೆಂಬುದು ತಿಳಿಯಲಿಕ್ಕಿಲ್ಲವಾಗಿ, ಸಂದೇಹ ಬಿಡದು–ನಾನೇನು ಜೀವನೋ ಪರಮನೋ ಎಂಬ ಅನುಮಾನವು ಮಾಣದು. ಮುಂದುಗಾಣದು ಲೋಕ–ಭವಿಷ್ಯದ ಮೋಕ್ಷಮಾರ್ಗವನರಿಯದು ಈ ಜಗತ್ತು. ಬೆಂದ ಮಾಯಕ್ಕಂಜಿ ನಿಮ್ಮ ಮಱೆಹೊಕ್ಕೆ–ತಾಪತ್ರಯಾಗ್ನಿಯಿಂದ ದಹನವಾದ ಅವಿದ್ಯಾಂಗನೆಗೆ ಅಳಿಕಿ ಶರಣುಹೊಕ್ಕೆನೆಂಬುದರ್ಥ.

III – – – – – – – – – – – – – – – – – – – – – – – – – – – – – – – –

ತನುಮನಂಗಳಿಗೆ ಭೇದವಿಲ್ಲವಾಗಿ ಮನೋದೃಕ್ಕೆಂಬುದೀಗ ಅಂಗದ ನೋಟವೆಂಬ ಶಬ್ದಕ್ಕರ್ಥ. ಅಂತಪ್ಪ ಮನೋದೃಕ್ಕು ತಾನು ಸೂಕ್ಷ್ಮವಾಗಿರ್ದಡೆಯೂ ಆ ಮನೋದೃಕ್ಕಿನ ಬಯಕೆ ಸರ್ವವು ನನ್ನದೆಂದು ಅಹಂಕರಿಸುತ್ತಿಪ್ಪ ಅಹಂಕಾರವೆಂಬ ಮದಕರಿಗಳ ಗ್ರಹಿಸುತ್ತಿಪ್ಪ ಘನತೆಯನುಳ್ಳುದೆಂಬುದೀಗ ಅಂಗದ ನೋಟವು ಸಿಂಗದ ಗಾತ್ರವು ಎಂಬ ಶಬ್ದಕ್ಕರ್ಥ. ಅಂತಪ್ಪ ಮನದ ಕರಣಂಗಳು ಹಲವು ಉಂಟಾಗಿ ಒಚ್ಚಿಹೊತ್ತು ನಿಲುಕಡೆಯಿಲ್ಲದೆ ವಿಕರಿಸುತ್ತಿಹುವೆಂಬುದೀಗ ಹಿಂಗದು ಮನದಲ್ಲಿ ನಾನಾ ವಿಕಾರವೆಂಬ ಶಬ್ದಕ್ಕರ್ಥ.

ಇಂತಪ್ಪ ಮನದ ಗುಣವಿಕಾರದಿಂದ ತಾನಾರು? ತಾನೆಲ್ಲಿಂದ ಬಂದೆನೆಂದ ತನ್ನ ನಿಜವ ಕಾಬ ಜ್ಞಾನವಿಲ್ಲವೆಂಬುದೀಗ ಬಂದೆನೆಂದಜೆಯಲಿಕ್ಕಿಲ್ಲಾಗಿ ಎಂಬ ಶಬ್ದಕ್ಕರ್ಥ. ಅಂತಪ್ಪ ತನ್ನ ನಿಜವ ಕಾಣದೆ ಮನದ ಸಂಕಲ್ಪ ಸಂಶಯ ಭ್ರಾಂತಿಗೊಳಗಾಗಿ ಮುಂದೆ ಬಪ್ಪ ಜನನಮರಣದ ಬಾಧೆಯಿಂದ ಮುಕ್ತಿಯ ಸಾಧಿಸಬೇಕೆಂಬ ಯುಕ್ತಿಯ ಕಾಣರು ಜೀವರೆಂಬುದೀಗ ಸಂದೇಹ ಬಿಡದು ಮುಂದುಗಾಣದು ಲೋಕವೆಂಬ ಶಬ್ದಕ್ಕರ್ಥ.

ಅಂತಪ್ಪ ಮನವೆ ಮಾಯೆ. ಆ ಮಾಯಾ ಮನವು ತಾಪತ್ರಯಾಗ್ನಿಗಳಲ್ಲಿ ಬೆಂದು ಅಳಿಯದೆ ಅಳುಕದೆ ಉಳಿದಿಹುದು ಮನ. ಆ ಮನದ ಕಾಟಕ್ಕಂಜಿ ಲಿಂಗವ ಮಱೆಹೊಕ್ಕೆನೆಂಬುದೀಗ ಬೆಂದ ಮಾಯಕ್ಕೆ ಅಂಜಿ ನಿಮ್ಮ ಮಱೆಹೊಕ್ಕೆನು ಕೂಡಲಸಂಗಮದೇವಾ ಎಂಬ ಶಬ್ದಕ್ಕರ್ಥ.

● ಮತ್ತಂ ಸಿಂಹದ ಹಾಂಗೆ ಮಧ್ಯವನುಳ್ಳ ಸ್ತ್ರೀಯಲ್ಲಿ ನೇತ್ರದ ನಿರೀಕ್ಷಣೆಯುಂಟಾಗಿರ್ಪುದು ಎಂಬುದೀಗ ಅಂಗದ ನೋಟವು ಸಿಂಗದ ಗಾತ್ರವು ಎಂಬ ಶಬ್ದಕ್ಕರ್ಥ. ಮನಸ್ಸಿನಲ್ಲಿ ಹಲವು ಪ್ರಕಾರದ ವಿಷಯವು ಜೀವನ ಅಪರಭಾಗೆಯಿಂದ ತೊಲಗಿ ಹೋಗಲಿಲ್ಲವೆಂಬುದೀಗ ಹಿಂಗದು ಮನದಲ್ಲಿ ನಾನಾವಿಕಾರವೆಂಬ ಶಬ್ದಕ್ಕರ್ಥ.

ನಾನು ಶಿವತತ್ತ್ವದಲ್ಲಿ ಶಿವಾಂಶಿಕನಾಗಿ ಹುಟ್ಟಿಬಂದೆನೆಂಬುದನು ತಿಳಿಯಲಿಲ್ಲವು ಎಂಬುದೀಗ ಬಂದೆನೆಂದಜೆಯಲಿಕ್ಕಿಲ್ಲಾಗಿ ಎಂಬ ಶಬ್ದಕ್ಕರ್ಥ. ನಾನಾರು? ನಾನೆತ್ತಲಿಂದ ಬಂದೆನೆಂಬ ಸಂಕಲ್ಪವು ತ್ಯಜಿಸಲಿಲ್ಲವು ಎಂಬುದೀಗ ಸಂದೇಹ ಬಿಡದು ಎಂಬ ಶಬ್ದಕ್ಕರ್ಥ. ಮುಂದಾಗುವ ಮೋಕ್ಷಮಾರ್ಗವನು

ಇದಿರಿಟ್ಟು ತಿಳಿಯಲಿಲ್ಲವು ಎಂಬುದೀಗ ಮುಂದುಗಾಣದು ಲೋಕ ಎಂಬ ಶಬ್ದಕ್ಕರ್ಥ. ಬೆಂದ-ತಾಪತ್ರಯಾಗ್ನಿಯಿಂದ ದಹನವಾದ, ಮಾಯಕ್ಕೆ-ಅಜ್ಞಾನಪ್ರಪಂಚಿಗೆ, ಅಂಜಿ-ಭಯಬಟ್ಟು, ಮಱೆಹೊಕ್ಕೆನು-ಶರಣಾಗತನಾದೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

IV - - - - - - - - - - - - - - - - - - - - - - - - - - - - - - - - - -

ತನುಮನಂಗಳಿಗೆ ಭೇದವಿಲ್ಲವಾಗಿ ಮನೋದೃಕ್ಕೆಂಬುದೀಗ ಅಂಗದ ನೋಟವೆಂಬ ಶಬ್ದಕ್ಕರ್ಥ. ಅಂತಪ್ಪ ಮನೋದೃಕ್ಕು ತಾನು ಸೂಕ್ಷ್ಮವಾಗಿದ್ದೆಡೆಯೂ ಆ ಮನೋದೃಕ್ಕಿನ ಬಯಕೆ ಸರ್ವವೂ ನನ್ನದೆಂದು ಅಹಂಕರಿಸುತ್ತಿಪ್ಪ ಅಹಂಕಾರವೆಂಬ ಮದಕರಿಗಳ ಗ್ರಹಿಸುತ್ತಿಪ್ಪ ಘನತೆಯನುಳ್ಳುದೆಂಬುದೀಗ ಅಂಗದ ನೋಟ ಸಿಂಗದ ಗಾತ್ರವೆಂಬ ಶಬ್ದಕ್ಕರ್ಥ. ಅಂತಪ್ಪ ಮನದ ಕರಣಂಗಳು ಹಲವುಂಟಾಗಿ ಒಚ್ಚೆಹೊತ್ತ ನಿಲುಕಡೆಯಿಲ್ಲದೆ ಧಿಕ್ಕರಿಸುತ್ತಿಹುದೆಂಬುದೀಗ ಹಿಂಗದು ಮನದಲ್ಲಿ ನಾನಾ ವಿಕಾರವೆಂಬ ಶಬ್ದಕ್ಕರ್ಥ.

ಇಂತಪ್ಪ ಮನಗುಣದ ವಿಕಾರದಿಂದ ತಾನಾರು? ತಾನೆಲ್ಲಿಂದ ಬಂದೆನೆಂಬ ತನ್ನ ನಿಜವ ಜ್ಞಾನವಿಲ್ಲವೆಂಬುದೀಗ ಬಂದೆನೆಂದಱಿಯಲಿಕ್ಕಿಲ್ಲಾಗಿಯೆಂಬ ಶಬ್ದಕ್ಕರ್ಥ. ಅಂತು ತನ್ನ ನಿಜವ ಕಾಣದೀ ಮನದ ಸಂಕಲ್ಪಸಂಶಯ ಭ್ರಾಂತಿಗೊಳಗಾಗಿ ಮುಂದೆ ಬಪ್ಪ ಜನನ ಮರಣದ ಬಾಧೆಯ ಕಾಣರು ಮುಕ್ತಿಯ ಸಾಧಿಸಬೇಕೆಂಬ ಯುಕ್ತಿಯ ಕಾಣರು ಜೀವರೆಂಬುದೀಗ ಸಂದೇಹ ಬಿಡದು ಮುಂದುಗಾಣದು ಲೋಕವೆಂಬ ಶಬ್ದಕ್ಕರ್ಥ. ಅಂತಪ್ಪ ಮನವೆ ಮಾಯೆ. ಆ ಮಾಯಾ ಮನವು ತಾಪತ್ರಯಾಗ್ನಿಗಳಲ್ಲಿ ಬೆಂದು ಬೆಂದು ಅಳಿಯದೆ ಅಳುಕದೆ ಉಳಿದಿಹುದು ಮನ. ಆ ಮನಕಾಟಕ್ಕಂಜಿ ಲಿಂಗದ ಮಱೆಹೊಕ್ಕ ಶರಣನೆಂಬುದೀಗ ಬೆಂದ ಮಾಯೆಗಂಜಿ ನಿಮ್ಮ ಮಱೆಹೊಕ್ಕೆನು ಕೂಡಲಸಂಗಮದೇವಾಯೆಂಬ ಶಬ್ದಕ್ಕರ್ಥ.

---

೪೩

**ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ, ಮತಿಗೆಟ್ಟೆನು ಮನದ ವಿಕಾರದಿಂದ, ಧೃತಿಗೆಟ್ಟೆನು ಕಾಯವಿಕಾರದಿಂದ, ಶರಣುಹೊಕ್ಕೆನು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - -

ವಿಕಳನಾದೆನು ಪಂಚೇದ್ರಿಯ ಧಾತುವಿನಿಂದ : ಪಂಚೇದ್ರಿಯಂಗಳ, ಐದಿಂದ್ರಿಯಂಗಳ ಧಾತುವಿನಿಂದ-ಸಪ್ತಧಾತು ಸಮ್ಮಿಶ್ರವಾದ ದೇಹಪ್ರಪಂಚಿನಿಂದ, ವಿಕಳನಾದೆನು-ವಿಕಾರಸಂಬಂಧಿಯಾದೆನು; ಮತಿಗೆಟ್ಟೆನು ಮನದ ವಿಕಾರದಿಂದ-ಮನವು ಹಲವು ನೆನಹು ಹಲವು ಭಾಷೆ ಹಲವು ವರ್ತನೆಯೊಡನೆ ಕೂಡಿ ಚರಿಸುವುದರಿಂದ, ಮತಿಗೆಟ್ಟೆನು-ಜ್ಞಾನಬಾಹ್ಯನಾದೆನು, ಧೃತಿಗೆಟ್ಟೆನು ಕಾಯವಿಕಾರದಿಂದ-ಉಣಬೇಕು ಉಡಬೇಕು ತೊಡಬೇಕು ಭೋಗಿಸಬೇಕು ಷಟ್ತ್ರಕಾರವಾದ ಸ್ತ್ರೀಯರುಗಳ ಸಂಪರ್ಕವ ಮಾಡಬೇಕೆಂಬಂಥ ತನುವಿನ ಮನ್ಮಥವಿಕಾರದಿಂದ, ಧೃತಿಗೆಟ್ಟೆನು-ಸಹಜಜ್ಞಾನ ಸತ್ವಗುಂದಿದೆನು, ಶರಣುಹೊಕ್ಕೆನು-ನಮಸ್ಕಾರವೆಂದು ನಮಸ್ಕರಿಸಿ ಮೊರೆಬಿದ್ದಿರ್ಪೆನು,

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೪೪

**ಮುನಿದೆಯಾದಡೆ ಒಮ್ಮೆ ಜಱಿದಡೆ ಸಾಲದೆ? ಅಕಟಕಟಾ ಮದನಂಗೆ ಮಾಱುಗೊಡುವರೆ? ಹಗೆಗೆ ಮಾಱುಗೊಟ್ಟು ನಿಮ್ಮವನೊಪ್ಪಿಸುವರೆ ಕೂಡಲಸಂಗಮದೇವಾ?**

I – – – – – – – – – – – – – – – – – – – – – – – – – – – – –

ಮುನಿದೆಯಾದಡೆ ಒಮ್ಮೆ ಜಱಿದಡೆ ಸಾಲದೆ? : ಮುನಿದೆಯಾದಡೆ–"ಮುನಿ ಕೋಪೇ ತಪಸೇ ಚ" ಯೆಂದು ಕೋಪಿಸಿ, ಒಮ್ಮೆ–ಒಂದು ವೇಳೆ, ಜಱಿದಡೆ–"ಜಱಿ ಧಿಕ್ಕಾರೇ" ಯೆಂದು ಧಿಕ್ಕರಿಸಿ ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚವನ್ನು ನಷ್ಟವ ಮಾಡಿ ಬಿಟ್ಟು ರಕ್ಷಣೆಯ ಮಾಡೇನೆಂದರೆ, ಸಾಲದೆ?–ಅಷ್ಟೇ ಸಾಲದೆ? ಅಷ್ಟೇ ಸಾಕು, ಅಕಟಕಟಾ ಮದನಂಗೆ ಮಾಱುಗೊಡುವರೆ? : ಅಕಟಕಟಾ–ಅಯ್ಯಯ್ಯೋ, ಮದನಂಗೆ–ಮನ್ಮಥಂಗೆ, ಮಾಱುಗೊಟ್ಟು–ಒಪ್ಪಿಸಿಕೊಟ್ಟು, ಹಗೆಗೆ–ಶತ್ರುವಾದ ಕಾಮಾದಿ ಅರಿಷಡ್ವರ್ಗಂಗಳಿಗೆ, ಮಾಱುಗೊಟ್ಟು–ಒಪ್ಪಿಸಿಕೊಟ್ಟು, ನಿಮ್ಮವನ–ನಿಮ್ಮಂಶೀಭೂತನಾದ ಶಿವಶರಣನ, ಒಪ್ಪಿಸುವರೆ–ಜನನ ಮರಣಂಗಳಲ್ಲಿ ತಂದು ಸಂಹರಿಸುವರೆ ಎಂಬಲ್ಲಿ–ಜನನ ಮರಣಂಗಳ ವರ್ತನೆಯನ್ನು ನಷ್ಟವ ಮಾಡಿ ಗುರುವಿನಲ್ಲಿ ಉತ್ಪತ್ಯ ಲಿಂಗದಲ್ಲಿ ಸ್ಥಿತಿ ಪರತತ್ತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಡಿಸು, ಕೂಡಲಸಂಗಮದೇವಾ_ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೪೫

**ನಾನೊಬ್ಬನು ಸುಡುವರೈವರು; ಮೇಲೆ ಕಿಚ್ಚು ಘನ; ನಿಲಲುಬಾರದು! ಕಾಡಬಸವನ ಹುಲಿ [2]ಕೊಂಡೊಯ್ವಡೆ[2] ಆರಯ್ಯಲಾಗದೆ ಕೂಡಲಸಂಗಮದೇವಾ?**

I – – – – – – – – – – – – – – – – – – – – – – – – – – – – –

ನಾನೊಬ್ಬನು, ಸುಡುವರೈವರು: ನಾನು–ಆತ್ಮನು, ಒಬ್ಬನು–ಒರ್ವನು, ಸುಡುವರು–ದಹಿಸುವರು, ಐವರು–ಪಂಚಾಗ್ನಿಗಳು; ಮೇಲೆ–ಆಮೇಲೆ, ಕಿಚ್ಚು–ಇಪ್ಪತ್ತೊಂದುತೆರದ ಅಗ್ನಿಯು, ಘನ–ಅಧಿಕವಾದಂಥದು, ನಿಲಲುಬಾರದು!–ನಿಂತು ಎದೆಗೊಟ್ಟು ಜಯಿಸೇನೆಂದರೆ ಎನ್ನಲ್ಲಿ ಭಕ್ತಿಯಿಲ್ಲ ಜ್ಞಾನವಿಲ್ಲ ವೈರಾಗ್ಯವಿಲ್ಲ ಅರುಹು ಆಚರಣೆಗಳು ಒಂದೂ ಉಂಟಾಗಿಲ್ಲವು.

ಕಾಡಬಸವನ–ಅಡವಿಯಲ್ಲಿರುವಂಥ ಗೂಳಿಬಸವನ, ಹುಲಿ–ವ್ಯಾಘ್ರನು, ಕೊಂಡೊಯ್ವಡೆ–ಮುರುಕೊಂಡು ತಿಂಬುವದಕ್ಕೆ ತೆಗೆದುಕೊಂಡು ಹೋದರೆ, ಆರಯ್ಯಲಾಗದೆ–ಹುಲಿಯ ಬಾಯಿಂದ

ಬಿಡಿಸಿ ಮನೆಗೆ ಹೊಡಕೊಂಡು ಹೋಗಿ ಹುಲ್ಲನ್ನು ಹಾಕಿ ನೀರನ್ನು ಕುಡಿಸಿ ಸಂರಕ್ಷಣೆಯ ಮಾಡಲಾಗದೆ, ಕೂಡಲಸಂಗಮದೇವಾ–ಎಲೆ ಒಡೆಯನೆಯೆಂಬ ದೃಷ್ಟೋಪಮಾನದ ಹಾಂಗೆ,

● ಕಾಡಬಸವನ–ಭವಾರಣ್ಯಪ್ರವೇಶಿಯಾದ ಜೀವನ, ಹುಲಿ–ಕಾಲವ್ಯಾಘ್ರನು, ಕೊಂಡೊಯ್ವಡೆ–ಮರಣದಲ್ಲಿ ತಂದು ಸಂಹರಿಸುವರೆ, ಅರಯ್ಯಲಾಗದೆ_ಯಮನ ಬಾಧೆಯನ್ನು ನಷ್ಟವ ಮಾಡಿ ಗುರುವಿನಲ್ಲಿ ಉತ್ಪತ್ಯ ಲಿಂಗದಲ್ಲಿ ಸ್ಥಿತಿ ಪರತತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಡಿಸಲಾಗದೆ, ಕೂಡಲಸಂಗಮದೇವಾ?_ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

III– – – – – – – – – – – – – – – – – – – – – – – – – – – – – – – –

1–1 ಆನು ಒಬ್ಬನು (ಟ, ಡ). 2–2 ಕೊಂಡೊಯಿದರೆ (ಟ, ಡ).

.........................

ಆನು ಒಬ್ಬನು_ಶರಣನು ಒರ್ವನು, ಸುಡುವರ್ಮೈವರು–ದಹಿಸುವಂಥ ಪಂಚಕರಣಂಗಳೈವರು, ಮೇಲೆ–ಆಮೇಲೆ, ಕಿಚ್ಚು ಘನ–ತಾಪತ್ರಯಾಗ್ನಿಯು ಅಧಿಕವು, ನಿಲಲುಬಾರದು!–ತಾಪತ್ರಯಾಗ್ನಿಯಲ್ಲಿ ತರಹರವಾಗುವದಕ್ಕಾಗುವುದಿಲ್ಲ.

ಕಾಡಲ್ಲಿದ್ದ ಬಸವ[೧]ನ[೧] ಹುಲಿ ಕೊಂಡೊಯ್ದಲ್ಲಿ ಬಿಡಿಸಿಕೊಂಡು ಬಂದು ಹುಲ್ಲ ನೀರ ಹಾಕಿ ಸಲಹಬಹುದೆಂಬ ಹಾಂಗೆ ಎಲೆ ಪರಶಿವನೆ ನೀನು, ಭವಾರಣ್ಯಪ್ರವೇಶವಾಗಿ ಕಾಲವ್ಯಾಘ್ರನ [೨]ವಶ[೨]ವಾದಾತ್ಮನನು ಬಿಡಿಸಿತಂದು ನಿಮ್ಮ ಗುರುಲಿಂಗಜಂಗಮದ ಪಾದತೀರ್ಥಪ್ರಸಾದವನು ಕೊಟ್ಟು ಸ[೩][ಂ][೩]ರಕ್ಷಣ್ಯವ ಮಾಡಬಾರದೆ? ಮಾಡಬಹುದೆಂಬುದೀಗ ಕಾಡಬಸವನ ಹುಲಿ ಕೊಂಡೊಯ್ವಡೆ ಆರಯ್ಯಲಾಗದೆ ಕೂಡಲಸಂಗಮದೇವಾ ಎಂಬ ಶಬ್ದಕ್ಕರ್ಥ.

.........................

೧–೧ ನು (ಟ) ೨–೨ x (ಡ) ೩–೩ ಮ (ಟ, ಡ).

---

೪೬

**ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹುಕ, ಕ್ಷುದ್ರತ್ವ, ಕ್ರೋಧ, ಮಿಥ್ಯೆ–ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ. ಅದೇಕೆಂದಡೆ : ನಿಮ್ಮತ್ತಲೆನ್ನ ಬರಲೀಯವು. ಇದು ಕಾರಣ, ಇವನೆಲ್ಲ ಕಳೆದು ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – – – – –

ಆಸೆ–ಅನ್ನಾಚ್ಛಾದನ ಹೊನ್ನು ಹೆಣ್ಣು ಮಣ್ಣಾಗಬೇಕೆಂಬ ಅಪೇಕ್ಷೆಯು, ಆಮಿಷ–ಹೊನ್ನಿದ್ದೂ ಹೊನ್ನಾಗಬೇಕು ಹೆಣ್ಣಿದ್ದೂ ಹೆಣ್ಣಾಗಬೇಕು ಮಣ್ಣಿದ್ದೂ ಮಣ್ಣಾಗಬೇಕು ಎಂಬುದೇ ಆಸೆಯೊಳಗಣ

ಅತಿಕಾಂಕ್ಷೆಯು, ತಾಮಸ–ಅಜ್ಞಾನವು, ಹುಸಿ–ಅನೃತವು, ವಿಷಯ–ಪ್ರಪಂಚು, ಕುಟಿಲ–ಕಾಪಟ್ಯವು, ಕುಹಕ–ಚಾಡಿಯು, ಕ್ಷುದ್ರತ್ವ–ತಸ್ಕರತ್ವವು ಕ್ರೋಧ–ಸಿಟ್ಟು, ಮಿಥ್ಯೆ–ಸಟೆಯು, ಇವನೆನ್ನ–ಇವು ಒಂಬತ್ತು ದುರ್ಗುಣಂಗಳೆನ್ನ, ನಾಲಗೆಯ ಮೇಲಿಂದ–ಎನ್ನ ರಸನೆಯ ಮೇಲಿಂದ, ಅತ್ತ–ಆಚೆಗೆ, ತೆಗೆದು–ಕಡೆಗೆ ಮಾಡಿ, ಕಳೆಯಯ್ಯಾ–ಬೇರ್ಪಡಿಸಯ್ಯಾ.

ಅದೇಕೆಂದಡೆ–ಅದೇನು ಕಾರಣವೆಂದು ಬೆಸಗೊಂಡಡೆ, ನಿಮ್ಮತ್ತ–ಸ್ವಾಮಿಗಳ ಕಡೆಗೆ, ಎನ್ನ ಬರಲೀಯವು–ಎನ್ನಭಿಮುಖವಾಗಗೊಡವು, ಇದು ಕಾರಣ–ಇದು ನಿಮಿತ್ತಾರ್ಥ, ಇವನೆಲ್ಲ–ಇವು ಒಂಬತ್ತು ದುರ್ಗುಣಂಗಳನೆಲ್ಲವನು, ಕಳೆದು–ನಷ್ಟವ ಮಾಡಿ, ಎನ್ನ ಪಂಚೈವರ–ಎನ್ನ ಪಂಚೇಂದ್ರಿಯಂಗಳನು, ಭಕ್ತರ ಮಾಡು–ಪಂಚವಿಧ ಲಿಂಗಕ್ಕೆ [೧]ಅಳವಡಿಸು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧+ ಲಿಂಗಭಕ್ತರ ಲಿಂಗೇಂದ್ರಿಯಂಗಳಾಗಿ (ಕ, ಗ).

---

## ೪೭

**ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯಾ? ಎಂತು ಶಿವಾಚಾರವೆನಗೆ ಸಾಧ್ಯವಪ್ಪುದಯ್ಯಾ? ಕಾಮ, ಕ್ರೋಧ, ಲೋಭ, ಮೋಹದಿಂದೆ ಕಟ್ಟುವಡೆದೆನು. ಹಸಿವು, ತೃಷೆ, ವ್ಯಸನದಿಂದ ಕುದಿವುತಿದ್ದೇನೆ. ಪಂಚೇಂದ್ರಿಯ, ಸಪ್ತಧಾತು ಹಜೆಹಂಚು ಮಾಡಿ ಕಾಡಿಸುತ್ತಿಹವು. ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ, ಕೂಡಲಸಂಗಮದೇವಾ ನಾನೇವೆನೇವೆನಯ್ಯಾ!**

I – – – – – – – – – – – – – – – – – – – – – – – – – – – – – – – – –

ಎಂತು ಶಿವಭಕ್ತಿಯ ನಾಮುಪಮಿಸುವೆನಯ್ಯಾ ? : ಶಿವಭಕ್ತಿ–ಶಿವಾದ್ವೈತಭಕ್ತಿಯನ್ನು, ನಾನು–ಸಂಗನಬಸವೇಶ್ವರನು, ಎಂತುಪಮಿಸುವೆನಯ್ಯಾ?–ಹೇಗೆಂದು ವಾಚ್ಯಕ್ಕೆ ತಂದು ಹೇಳುವೆನಯ್ಯಾ, ಎಂತು ಶಿವಾಚಾರವೆನಗೆ ಸಾಧ್ಯವಪ್ಪುದಯ್ಯಾ?–ಲಿಂಗಾಚಾರಮಾರ್ಗವೆನಗೆ ಹೇಂಗೆ ದೊರಕೊಂಬುವದಯ್ಯಾ, ಕಾಮ–ಬಯಕೆಯು, ಕ್ರೋಧ–ಸಿಟ್ಟು, ಲೋಭ–ಲುಬ್ಧತ್ವವು, ಮೋಹದಿಂದೆ–ಮಮಕಾರದಿಂದ, ಕಟ್ಟುವಡೆದೆನು–ಬಿಗಿವಡೆದೆನು.

ಹಸಿವು–ದೀಪನವು, ತೃಷೆ–ನೀರಡಿಕೆಯು, ವ್ಯಸನದಿಂದ_ವಿಷಯಪ್ರಪಂಚಿನಿಂದ, ಕುದಿವುತಿದ್ದೇನೆ–ಕೂಳು ಕುದಿಗೊಂಬುತಿದ್ದೇನೆ. ಪಂಚೇಂದ್ರಿಯ–ಐದೇಂದ್ರಿಯಂಗಳು, ಸಪ್ತಧಾತು–ಏಳು ಧಾತುಗಳು, ಹಜೆಹಂಚುಮಾಡಿ–ಒಡಕುಹಂಚಿನೋಪಾದಿಯಲ್ಲಿ ಯಾತಕ್ಕೂ ಸಲುವಳಿಯಲ್ಲದವನ ಮಾಡಿ, ಕಾಡಿಸುತ್ತಿಹವು–ಪೀಡಿಸುತ್ತಿಹವು, ಅಯ್ಯಾ ಅಯ್ಯಾ–ಲಿಂಗವೇ ಲಿಂಗವೇ, ಎನ್ನ ಹುಯ್ಯಲ ಕೇಳಯ್ಯಾ_ಇಂದ್ರಿಯ ವಿಷಯಂಗಳ ಪ್ರಪಂಚಿಗೆ ಹೆದರಿ ಅರಿಯೋ ಮೊರೆಯೋ

ಎಂದು ಹುಯ್ಯಲಿಡುವಂಥ ಮೊರೆಯನ್ನು, ಕೇಳಯ್ಯಾ-ಆಲಿಸಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಾನೇವೆನೇವೆನಯ್ಯಾ!_ನಾನೇನಾದಾಯ ಏನುಪಾಯ ಏನು ಜಪವ ಮಾಡಲೋ ಏನು ತಪವ ಮಾಡಲೋ ಏನು ವ್ರತೋಪವಾಸವ ಮಾಡಲೋ ಎಂದು ಚಿಂತಿಸುತಿರ್ಪನು ಜ್ಞಾನಕಲಾತ್ಮನು.

---

೪೮

**ಕಾಯವಿಕಾರ ಕಾಡಿಹುದಯ್ಯಾ; ಮನವಿಕಾರ ಕೂಡಿಹುದಯ್ಯಾ; ಇಂದ್ರಿಯ ವಿಕಾರ ಸುಳಿವುದಯ್ಯಾ; ಸುಳುಹಿನೊಳಗೆ ಸುಳಿಯುತ್ತಲಿದ್ದೇನೆ; ಸಿಲುಕಿಸದಿರಯ್ಯಾ! ಅನ್ಯಚಿತ್ತವೆರಸದಿರಯ್ಯಾ; ನಿಮ್ಮ ಚಿತ್ತವಿರಿಸಯ್ಯಾ! ಅನುಪಮ ಸುಖಸಾರಾಯ ಶರಣರಲ್ಲಿ ಇರಿಸಯ್ಯಾ! ಕೂಡಲಸಂಗಮದೇವಯ್ಯಾ, ಇದೇ ವರವ ಬೇಡವೆ ಬೇಡುವೆನಯ್ಯಾ!**

I - - - - - - - - - - - - - - - - - - - - - - - - - - - - - - -

ಕಾಯವಿಕಾರ ಕಾಡಿಹುದಯ್ಯಾ : ಕಾಯವಿಕಾರ_ಉಣಬೇಕು ಉಡಬೇಕು ಇಡಬೇಕು ತೊಡಬೇಕು ಭೋಗಿಸಬೇಕು ಷಟ್ಪ್ರಕಾರವಾದ ಸ್ತ್ರೀಯರುಗಳ ಸಂಪರ್ಕವ ಮಾಡಬೇಕೆಂಬಂಥ ತನುವಿನ ಮನ್ಮಥವಿಕಾರವು, ಕಾಡಿಹುದಯ್ಯಾ_ಪೀಡಿಸುತ್ತಿಹುದಯ್ಯಾ; ಮನವಿಕಾರ ಕೂಡಿಹುದಯ್ಯಾ: ಮನವಿಕಾರ-ಹಲವು ನೆನಹು ಹಲವು ಭಾಷೆ ಹಲವು ವರ್ತನೆಯೊಡನೆ ಕೂಡಿ ಚರಿಸಬೇಕೆಂಬಂಥ ಮನೋವಿಕಾರ ಪ್ರಪಂಚು, ಕೂಡಿಹುದಯ್ಯಾ_ಬೆರದಿಹುದಯ್ಯಾ; ಇಂದ್ರಿಯ ವಿಕಾರ ಸುಳಿವುದಯ್ಯಾ: [ಇಂದ್ರಿಯ ವಿಕಾರ] ಇಂದ್ರಿಯ ವಿಷಯಂಗಳ ಪ್ರಪಂಚು, ಸುಳಿವುದಯ್ಯಾ!_ಚರಿಸುವುದಯ್ಯಾ.

ಸುಳುಹಿನೊಳಗೆ ಸುಳಿಯುತ್ತಲಿದ್ದೇನೆ: ಸುಳುಹಿನೊಳಗೆ-ಸಂಚಾರದಲ್ಲಿ, ಸುಳಿಯುತ್ತಲಿದ್ದೇನೆ-ಸಂಚರಿಸುತ್ತಲಿದ್ದೇನೆ, ಸಿಲುಕಿಸದಿರಯ್ಯಾ!-ಇಂದ್ರಿಯವಿಷಯಂಗಳ ಪ್ರಪಂಚಿನಲ್ಲಿ ಮಧುಮಕ್ಷಿಕನ ಹಾಂಗೆ ವಶಗತವ ಮಾಡದಿರಯ್ಯಾ. ಅನ್ಯಚಿತ್ತವೆರಸದಿರಯ್ಯಾ-ಶಿವಾಚಾರಕ್ಕೆ ಬೇರಾದ ತಿಮ್ಮ, ಬೋಮ್ಮ, ಬೀರ, ಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯೊಡನೆ ಕೂಡಿ ಚರಿಸುವ ಹಾಂಗೆ ಮಾಡದಿರಯ್ಯಾ, ನಿಮ್ಮ ಚಿತ್ತವಿರಿಸಯ್ಯಾ!-ನಿಮ್ಮ ಲಿಂಗಧ್ಯಾನ ಲಿಂಗಸ್ಮರಣೆಯೊಡನೆ ಕೂಡಿ ಚರಿಸುವ ಹಾಂಗೆ ಮಾಡಯ್ಯಾ.

ಅನುಪಮ-ಉಪಮಿಸಬಾರದು, ಸಾರಾಯ-ಶ್ರೇಷ್ಠವಾದ, ಸುಖ_ಪರಿಣಾಮದಲ್ಲಿ ಕೂಡಲ್ಪಟ್ಟ, ಶರಣರಲ್ಲಿ-ತ್ರಿವಿಧ ಲಿಂಗಾನುಭಾವಿಗಳಾದ ಶಿವ ಶರಣರಲ್ಲಿ, ಇರಿಸಯ್ಯಾ-ಸ್ಥೈತಿರಿಸಯ್ಯಾ. ಕೂಡಲಸಂಗಮದೇವಯ್ಯಾ-ಎಲೆ ಪರಶಿವಲಿಂಗವೆ, ಇದೇ ವರವ ಬೇಡುವೆ-ನಿಮ್ಮಲ್ಲಿ ನಾನೇನಾದರೂ ಫಲಪದ ಮುಕ್ತಿಯನ್ನು ಬೇಡೋದಿಲ್ಲ. ನಿಮ್ಮ ತ್ರಿವಿಧಲಿಂಗಾನುಭಾವಿಗಳಾದ ಶಿವಶರಣರ ಶಿವಾನುಭಾವದ ಗೋಷ್ಠಿಯಲ್ಲಿ ಕೂಡಿರುವಂಥ ಇದೇ ಒಂದು ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡೆಂದು, ಬೇಡವೆನಯ್ಯಾ!-ಯಾಚಿಸುವೆನಯ್ಯಾ, ನಿಮ್ಮಲ್ಲಿ ಅಂತಪ್ಪ ಶರಣನು ಪರಶಿವಲಿಂಗದಲ್ಲಿ ಕೂಡಿರ್ಪನು ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೪೯

**ಬಂದ ಯೋನಿಯನಜೆದು ಸಲಹೆನ್ನ ತಂದೆ! ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು, ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು. ಎನ್ನ ತಂದೆ ಕೂಡಲಸಂಗಮದೇವಾ, ಇವ ಮಾಣಿಸು ಮಾಣಿಸು, ನಿಮ್ಮ ಧರ್ಮ! ನಿಮ್ಮ ಧರ್ಮ!!**

I – – – – – – – – – – – – – – – – – – – – – – – – – – – – – – – – –

ಬಂದ ಯೋನಿಯನಜೆದು ಸಲಹೆನ್ನ ತಂದೆ! : ಬಂದ_ನನ್ನ ನಿಜವನ್ನು ಮರೆದು ಅಜ್ಞಾನದಿಂದ ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಬಂದೆನೆಂಬಂಥದನು, ಅಜೆದು–ತಿಳಿದು, ಸಲಹು–ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣೆಯ ಮಾಡು, ಎನ್ನ ತಂದೆ–ಎನ್ನಾತ್ಮಜನಕನಾದಂಥ ಎಲೆ ಪರಶಿವಲಿಂಗವೆ. ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು : ಬೆಂದ–ತಾಪತ್ರಯಾಗ್ನಿಯಿಂದ ದಗ್ಧವಾದ, ಮನವು–ಮನಸ್ಸು, ಎನ್ನ ಗತಿಗೆಡಿಸಿ ಕಾಡಿತ್ತು : ಎನ್ನ ಗತಿಗೆಡಿಸಿ–ಎನ್ನ ಕ್ರಿಯಾಬಾಹ್ಯನ ಮಾಡಿ, ಕಾಡಿತ್ತು–ಪೀಡಿಸಿತ್ತು. ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು : ಬೆಂದ–ಆಶಾಗ್ನಿಯಿಂದ ದಗ್ಧವಾದ, ಮನವು–ಮನಸ್ಸು, ಎನ್ನ ಮತಿಗೆಡಿಸಿ–ಎನ್ನ ಜ್ಞಾನಬಾಹ್ಯನ ಮಾಡಿ, ಕಾಡಿತ್ತು_ಪೀಡಿಸಿತ್ತು.

ಎನ್ನ ತಂದೆ–ಎನ್ನಾತ್ಮಜನಕನಾದಂಥ, ಕೂಡಲಸಂಗಮದೇವಾ_ಎಲೆ ಪರಶಿವಲಿಂಗವೆ, ಇವ ಮಾಣಿಸು ಮಾಣಿಸು: ಇವ–ಈ ಭಿನ್ನಜ್ಞಾನ ಭಿನ್ನ ಕ್ರಿಯೆಗಳ, ಮಾಣಿಸು ಮಾಣಿಸು–ನಷ್ಟವ ಮಾಡಿ ಅಭಿನ್ನಜ್ಞಾನ ಅಭಿನ್ನಕ್ರಿಯಾಚಾರವಾಗಿ ಅಳವಡಿಸು ಅಳವಡಿಸು, ನಿಮ್ಮ ಧರ್ಮ! ನಿಮ್ಮ ಧರ್ಮ!– ಅದು ನಿಮ್ಮ ದಯೆ ನಿಮ್ಮ ಕೃಪೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೫೦

**[1]ಬೆಳೆವ[1] ಭೂಮಿಯಲೊಂದು ಪ್ರಳಯದ ಕಸಹುಟ್ಟಿ ತಿಳಿಯಲೀಯದು ಎಚ್ಚರಲೀಯದು ಎನ್ನವಗುಣವೆಂಬ ಕಸವಕಿತ್ತು [2]ಸಲಹಯ್ಯಾ[2] ಲಿಂಗತಂದೆ; ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – – – – – –

1–1 ಬೆಳೆಯದ (ಕ, ಗ).

..........................

ಬೆಳೆಯದ ಭೂಮಿಯಲೊಂದು ಪ್ರಳಯದ ಕಸಹುಟ್ಟಿ : ಬೆಳೆಯದ ಭೂಮಿಯಲ್ಲಿ_ಕಡಲೆ ಗೋದಿ ಬೆಳೆವಂಥ ಎರೆಭೂಮಿ ಮಡಿಭೂಮಿಯಲ್ಲಿ [ಒಂದು] ಪ್ರಳಯದ ಕಸಹುಟ್ಟಿ–ಕಣಗಿನ ನಟ್ಟು ಕರಕೆಯು ಹುಲ್ಲೆಂಬ ತೃಣವು, ಹುಟ್ಟಿ–ಉತ್ಪತ್ಯವಾಗಿ ತಿಳಿಯುಲೀಯುದು–ಅಂಕುರೋತ್ಪತ್ಯವಾಗಗೊಡದು, ಎಚ್ಚಱಲೀಯದು–ವರ್ಧನವಾಗಗೊಡದು.

ಎನ್ನವಗುಣವೆಂಬ ಕಸವಕಿತ್ತು–ಎನ್ನ ದುರ್ಗುಣಗಳೆಂಬ ಕಣಗಿನ ನಟ್ಟು ಕರಿಕೆಯ ಹುಲ್ಲೆಂಬ, ಕಸವ_ತೃಣವನ್ನು, ಕಿತ್ತು–ಲವಿತ್ರದಿಂದುತ್ಪಾಟಿಸಿ, ಸಲಹಯ್ಯಾ–ಕಳೆ ಮೊಳೆಯನ್ನು ತೆಗೆದು ಸಂರಕ್ಷಣವ ಮಾಡಯ್ಯಾ, ಲಿಂಗತಂದೆ–ಲಿಂಗಯ್ಯನೆಂಬ ಹಲಾಯುಧನೆ, ಸುಳಿದೆಗೆದು–ಸುಳಿದಿರಿಗಿ, ಬೆಳೆವೆನು_ಪೈರಾಗಿ ವರ್ಧನವಾಗುವೆನು, ಕೂಡಲಸಂಗಮದೇವಾ–ಎಲೆ ಹಲಾಯುಧನೆ ಎಂದು, ಆ ಪೈರು ಹಲಾಯುಧನ ಸ್ವಪ್ನದಲ್ಲಿ ಹೇಳುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ.

● ಬೆಳೆಯದ ಭೂಮಿಯಲ್ಲೊಂದು ಪ್ರಳಯದ ಕಸ ಹುಟ್ಟಿ: ಬೆಳೆಯದ ಭೂಮಿಯಲ್ಲಿ–ಶಿವಾದ್ವೈತ ಭಕ್ತಿಗಾಶ್ರಯವಾದ ಮೋಕ್ಷವೆಂಬ ಪೈರಿಗೆ ಕಾರಣವಾದ ಮನುಜದೇಹದಲ್ಲಿ, ಒಂದು ಪ್ರಳಯದ ಕಸಹುಟ್ಟಿ–ಮರಣರೂಪವಾದ ಅಜ್ಞಾನವೆಂಬರಗಸವು, ಹುಟ್ಟಿ–ಉತ್ಪತ್ಯವಾಗಿ, ತಿಳಿಯಲೀಯದು_ಜ್ಞಾನೋದಯದಿಂದ ಸಕಲಸಂಸಾರಪ್ರಪಂಚೆಲ್ಲ ಅನಿತ್ಯ ನಾನೇ ನಿತ್ಯಸ್ವರೂಪನೆಂಬಂಥ ಜ್ಞಾನವನ್ನು ಹುಟ್ಟಗೊಡದು, ಎಚ್ಚಱಲೀಯದು–ಸರ್ವಾಚಾರ ಸಂಪತ್ತಿನಾಚರಣೆಯ ಹಿಡಿದಾಚರಿಸಗೊಡದು.

ಎನ್ನವಗುಣವೆಂಬ–ಎನ್ನ ಅಜ್ಞಾನ ದುರ್ಗುಣವೆಂಬ, ಕಸವ–ಮರಣರೂಪವಾದ ಅಜ್ಞಾನವೆಂಬರಗಸವನು, ಕಿತ್ತು–ಸುಜ್ಞಾನವೆಂಬ ಲವಿತ್ರದಿಂದುತ್ಪಾಟಿಸಿ, ಸಲಹಯ್ಯಾ–ಸದ್ಗುಣವನ್ನು ಕೊಟ್ಟು ರಕ್ಷಣೆಯ ಮಾಡಯ್ಯ, ಲಿಂಗ ತಂದೆ–ಲಿಂಗಯ್ಯನೆಂಬ ಆತ್ಮಜನಕನೆ, ಸುಳಿದೆಗೆದು–ಜ್ಞಾನಕ್ರಿಯೆಗಳೆಂಬ ಎಲೆಗಳನಿಕ್ಕಿ, ಬೆಳೆವೆನು–ಮೋಕ್ಷವೆಂಬ ಪೈರಾಗಿ ವರ್ಧಮಾನವಾಗುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – – – –

ಬೆಳೆವ ಭೂಮಿಯಲೊಂದು–ಸುಕೃತ ಸೇರುವಿಗೆ ಕಾರಣವಾದ ಆಚಾರಾಂಗವೆಂಬ ಕ್ಷೇತ್ರದಲ್ಲಿ, ಒಂದು–ಏಕವಾದಂಥ, ಪ್ರಳಯದ ಕಸಹುಟ್ಟಿ–ಜನನ ಮರಣಕ್ಕೆ ಕಾರಣವಾದ ಅಜ್ಞಾನವೆಂಬ ಅರಗಸವು ಉದಯವಾಗಿ, ತಿಳಿಯಲೀಯದು–ನಿತ್ಯಾನಿತ್ಯ ವಿವೇಕವನರಿಯಲೀಸದು, ಎಚ್ಚರಲೀಯದು–ಶಿವತತ್ತ್ವಜ್ಞಾನಾನುಭಾವದಲ್ಲಿ ಜಾಗ್ರತನಾಗಲೀಸದು, ಎನ್ನವಗುಣವೆಂಬ ಕಸವ ಕಿತ್ತು–ಆತ್ಮನ ವಿಷಯಂಗಳೆಂಬ ಅರಗಸವನುತ್ಪಾಟನಂಗೆಯ್ದು, ಸಲಹಯ್ಯಾ ಲಿಂಗ ತಂದೆ_ಎಲೆ ಲಿಂಗವೆ ನಿನ್ನ ಪಾದೋದಕ ಪ್ರಸಾದವನು ಕೊಟ್ಟು ಕೃತಾರ್ಥನ ಮಾಡಯ್ಯಾ, ಸುಳಿದೆಗೆದು ಬೆಳೆವೆನು–ಸುಜ್ಞಾನವೆಂಬ ಆವರ್ತವು ಹೆಚ್ಚಿ ವರ್ಧನವಾಗುವೆನೆಂಬುದರ್ಥ.

III – – – – – – – – – – – – – – – – – – – – – – – – – – – – – – –

1–1 ಬೆಳೆಯ (ಟ, ಡ). 2–2 x (ಟ).

........................

ಬೆಳೆಯ ಭೂಮಿಯಲಿ–ಚಿತ್ಪೈರನುಳ್ಳ ಚಿದಂಗದಲ್ಲಿ, ಪ್ರಳಯದ_ನಾಶದ, ಕಸಹುಟ್ಟಿ–ವಿಷಯಪ್ರಪಂಚು ವರ್ಧನವಾಗಿ, ತಿಳಿಯಲೀಯದು_ನಿರ್ಮಲವಾಗಲೀಸದು, ಎಚ್ಚಱಲೀಯದು–

ಜ್ಞಾನದಿಂದೆ ಜಾಗ್ರತವಾಗಲೀಸದು. ಎನ್ನವಗುಣವೆಂಬ ಕಸವಕಿತ್ತು–ಎನ್ನ ವಾಮಾಚಾರದ ದುರ್ಗುಣವೆಂಬ ಸದೆಯನುತ್ಪಾಟನಂಗೆಯ್ದು, ಸಲಹಯ್ಯಾ–ಸುಜ್ಞಾನರಸವನೆರೆದು ಸಂರಕ್ಷಿಸಯ್ಯಾ, ಸುಳಿದೆಗೆದು ಬೆಳೆವೆನು_ಶಿವಾಚಾರವೆಂಬ ಸುಳಿ ವರ್ಧನವಾಗಿ ಹೆಚ್ಚುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

● ಮತ್ತಂ, ಮೋಕ್ಷದ ಫಲವ ಕೊಡುವ ಬೆಳಸಿಗ ಭಕ್ತಿ. ಅಂತಪ್ಪ ಭಕ್ತಿಯ ಬೆಳೆಗೆ ಸಾಧನ ಮನುಜನ ದೇಹವೆಂಬುದೀಗ ಬೆಳೆಯ ಭೂಮಿಯೆಂಬ ಶಬ್ದಕ್ಕರ್ಥ, ಅಂತು ಭಕ್ತಿಯ ಬೆಳೆಗೆ ಸಾಧನವಾದ ಮನುಜನ ದೇಹದಲ್ಲಿ ಅಜ್ಞಾನವೆಂಬ ಕಸವಡಿಗಡಿಗೆ ಹುಟ್ಟಿತ್ತು. ಭಕ್ತಿ ಜ್ಞಾನವ ಹುಟ್ಟಿಸಲೀಸದೆ ಕಂಟಕವಾಗಿಹುದೆಂಬುದೀಗ [೧]ಒಂದು[೧] ಪ್ರಳಯದ ಕಸಹುಟ್ಟಿ ಎಂಬ ಶಬ್ದಕ್ಕರ್ಥ. ಅಂತು ತನ್ನ ನಿಜವ ತಿಳಿದು ಎಚ್ಚತ್ತು ಶಿವಪದವ [೨]ಕು[೨]ಡುವ ಭಕ್ತಿಜ್ಞಾನಕ್ಕೆ ಕಂಟಕವಾಗಿಪ್ಪ ಅಜ್ಞಾನವ ಹುಟ್ಟಿಸಿದ ಶಿವನೇ, ಅಜ್ಞಾನವ ನಷ್ಟವ ಮಾಡಿ ಕರುಣಿಸಿದರೆ ಭಕ್ತಿಜ್ಞಾನಪ್ರಭಾವಿಸಿ ಮುಕ್ತಿಯ ಫಲವಪ್ಪುದೆಂಬುದೀಗ ತಿಳಿಯಲೀಯದು ಎಚ್ಚಱಲೀಯದು ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗತಂದೆ, ಸುಳಿದೆಗೆದು ಬೆಳೆವೆನು ಎಂಬ ಶಬ್ದಕ್ಕರ್ಥ.

..........................

೧–೧ x (ಡ). ೨–೨ ಕೂ (ಡ).

IV – – – – – – – – – – – – – – – – – – – – – – – – – – – – – –

1–1 ಬೆಳೆಯ (ತ).

..........................

ಮೋಕ್ಷದ ಫಲವ ಕೊಡುವ ಬೆಳಸಿಗ ಭಕ್ತಿ. ಅಂತಪ್ಪ ಭಕ್ತಿಯ ಬೆಳೆಗೆ ಸಾಧನ ಮನುಜನ ದೇಹವೆಂಬುದೀಗ ಬೆಳೆಯ ಭೂಮಿಯೆಂಬ ಶಬ್ದಕ್ಕರ್ಥ. ಅಂತು ಭಕ್ತಿಯ ಬೆಳೆಗೆ ಸಾಧನವಾದ ಮನುಜದೇಹದಲ್ಲಿ ಅಜ್ಞಾನವೆಂಬ ಕ[೩][ಳೆ][೩] ಅಡಿಗಡಿಗೆ ಹುಟ್ಟುತ ಭಕ್ತಿಜ್ಞಾನವ ಹುಟ್ಟಲೀಯದೆ ಕಂಟಕವಾಗಿಹುದೆಂಬುದೀಗ ಒಂದು ಪ್ರಳಯದ ಕಸಹುಟ್ಟಿಯೆಂಬ ಶಬ್ದಕ್ಕರ್ಥ. ಅಂತು ತನ್ನ ನಿಜ ತಿಳಿದು ಎಚ್ಚತ್ತು ಶಿವಪದವ ಕೊಡುವ ಭಕ್ತಿಜ್ಞಾನಕ್ಕೆ ಕಂಟಕವಾಗಿಪ್ಪ ಅಜ್ಞಾನವ ಹುಟ್ಟಿಸಿದ ಶಿವನೇ, ಅಜ್ಞಾನವ ನಷ್ಟವ ಮಾಡಿ ಕರುಣಿಸಿದರೆ ಭಕ್ತಿಜ್ಞಾನ ಪ್ರಭಾವಿಸಿ ಮುಕ್ತಿಯ ಫಲವಪ್ಪುದೆಂಬುದೀಗ ತಿಳಿಯ[ಲೀಯ]ದು ಎಚ್ಚಱಲೀಯದು. ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗತಂದೆ, ಸುಳಿದೆಗೆದು ಬೆಳೆವೆನುಯೆಂಬ ಶಬ್ದಕ್ಕರ್ಥ.

..........................

೩–೩ ಲ (ತ).

**ವಿಷಯವೆಂಬ ಹಸರ ಎನ್ನ ಮುಂದೆ ತಂದು ಪಸರಿಸಿದೆ ಅಯ್ಯಾ ; ಪಶುವೇನ ಬಲ್ಲುದು ಹಸರೆಂದೆಳಸುವುದು. ವಿಷಯ ರಹಿತನ ಮಾಡಿ, ಭಕ್ತಿರಸವ[1]ದಣಿಯಲುಣಿಸಿ,[1] ಸುಬುದ್ಧಿಯೆಂಬ ಉದಕವನೆಱೆದು ನೋಡಿ ಸಲಹಯ್ಯಾ ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – – – – – – –

ವಿಷಯವೆಂಬ ಹಸರ–ರಸಯುಕ್ತವಾದ ಹಸಿಯ ಹುಲ್ಲನ್ನು, ಎನ್ನ ಮುಂದೆ–ಆಕಳ ಮುಂದೆ, ತಂದು–ತೆಗೆದುಕೊಂಡು ಬಂದು, ಪಸರಿಸಿದೆ–ಹರಹಿದೆ, ಅಯ್ಯಾ–ಎಲೆ ಒಡೆಯನೆ, ಪಶುವೇನಬಲ್ಲುದು–ಆಕಳು ಏನ ಬಲ್ಲುದು, ಇದು ಕಡಲೆ ಹೊಲ ಅವರೆ ಹೊಲ ತೊಗರೆ ಹೊಲ ಇದು ಮೇಯಬೇಕು ಇದು ಮೇಯಬಾರದೆಂಬಂಥದನ್ನು, ಬಲ್ಲುದು?–ಅರಿಯದು, ಹಸರೆಂದೆಳಸುವುದು–ಹಸರು ಹುಲ್ಲನ್ನು ತಿನ್ನಬೇಕೆಂದು ಇಚ್ಛೈಸುವುದು.

ವಿಷಯರಹಿತ ಮಾಡಿ–ಒಬ್ಬರ ಹೊಲವನ್ನು ಮೇಯದ ಹಾಂಗೆ ಮಾಡಿ, ಭಕ್ತಿರಸವ ದಣಿಯ[1][ಲುಣಿಸಿ][1]–ತಾ ತಂದಂಥ ಹಸಿಯ ಹುಲ್ಲನ್ನು ಸಾಕು ಸಾಕೆಂಬುವ ಹಾಂಗೆ ದಣಿಯ[ಲುಣಿಸಿ], ಸುಬುದ್ಧಿಯೆಂಬ ಉದಕವನೆಱೆದು–ನಿರ್ಮಲೋದಕವನ್ನು ಕುಡಿಸಿ, ನೋಡಿ–ಎನ್ನಾಕಳೆಂದು ನಿರೀಕ್ಷಣೆಯ ಮಾಡಿ, ಸಲಹಯ್ಯಾ–ಮನೆಗೆ ಹೊಡಕೊಂಡು ಹೋಗಿ ಹುಲ್ಲನ್ನು ಹಾಕಿ ನೀರನ್ನು ಕುಡಿಸಿ ಸಂರಕ್ಷಣೆಯ ಮಾಡಯ್ಯಾ, ಕೂಡಲಸಂಗಮದೇವಾ–ಎಲೆ ಒಡೆಯನೆ ಎಂದು, ಆಕಳು ತನ್ನೊಡೆಯನಿಗೆ ಉಪಾವಸ್ಥೆಯಂ ಮಾಡುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ.

● ವಿಷಯವೆಂಬ ಹಸರ–ಮಲತ್ರಯಂಗಳೆಂಬ ತಂಪನ್ನು, ಎನ್ನ ಮುಂದೆ–ಆತ್ಮನ ಕ್ರಿಯಾದೃಷ್ಟಿಯ ಸಮ್ಮುಖದಲ್ಲಿ, ತಂದು–ಆಗುಮಾಡಿಕೊಂಡು ಬಂದು, ಪಸರಿಸಿದೆ–ಉಂಟುಮಾಡಿದೆ, ಅಯ್ಯಾ–ಎಲೆ ಲಿಂಗವೆ, ಪಶುವೇನಬಲ್ಲುದು : ಪಶು–ಜೀವನೆಂಬ ಆಕಳು, ಏನ ಬಲ್ಲದು–ಇಂದ್ರಿಯ ವಿಷಯ ಪ್ರಪಂಚಿನೊಡನೆ ಕೂಡಿ ಚರಿಸಬಾರದು, ಶಿವನಿಂದ ಶಿಕ್ಷೆಬಂದೀತೆಂಬಂಥದನು, ಬಲ್ಲುದು–ಅರಿಯದು, ಹಸರೆಂದೆಳಸುವುದು–ಇಂದ್ರಿಯಂಗಳ ಪ್ರಪಂಚಿನೊಡನೆ ಕೂಡಿ ಚರಿಸುವುದಕ್ಕೆ ಮುಂದುವರಿವುದು.

ವಿಷಯರಹಿತ ಮಾಡಿ–ಇಂದ್ರಿಯ ವಿಷಯಂಗಳ ಪ್ರಪಂಚಿಗೆ ವಿಲಕ್ಷಣ ಮಾಡಿ, ಭಕ್ತಿರಸವ ದಣಿಯ[1][ಲುಣಿಸಿ][1]–ತ್ರಿವಿಧ ಷಡ್ವಿಧ ನಾಲ್ವತ್ತೆಂಟು ತೆರದ ಭಕ್ತಿಗಳನು ಸಾಕುಸಾಕೆಂಬ ಹಾಂಗೆ ಅಂಗದಲ್ಲಿ ಅರುಹಿಕೊಟ್ಟು, ಸುಬುದ್ಧಿಯೆಂಬ ಉದಕವನೆರೆದು–ನಿಮ್ಮ ಕಾರುಣ್ಯಜಲವನ್ನು ಅಂತರಂಗದಲ್ಲಿ ಪರಿತೋಷವ ಮಾಡಿ, ನೋಡಿ–ನಿಮ್ಮ ಕೃಪಾದೃಷ್ಟಿಯಿಂದ ನಿರೀಕ್ಷಣೆಯ ಮಾಡಿ, ಸಲಹಯ್ಯಾ–ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣೆಯ ಮಾಡಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

........................

೧–೧ ಮೇಯಿಸಿ (ಕ, ಗ).

III – – – – – – – – – – – – – – – – – – – – – – – – – – – – – – – – – – –

..........................

1–1 ದಣಿಯಮೇಯಿಸಿ (ಟ, ಡ).

..........................

ವಿಷಯವೆಂಬ–ಶಬ್ದಸ್ಪರ್ಶರೂಪುರಸಗಂಧಂಗಳೆಂಬ, ಹಸುರಂ–ತೃಣ[೨][ಪತ್ರ][೨]ನು, ಎನ್ನ ಮುಂದೆ–ಜೀವನೆಂಬ ಪಶುವಿನಗ್ರದಲ್ಲಿ, ತಂದು–ಆಗ ಮಾಡಿ, ಪಸರಿಸಿದೆಯಯ್ಯಾ–ವಿಸ್ತಾರವ ಮಾಡಿದೆಯಯ್ಯಾ, ಪಶುವೇನಬಲ್ಲುದು–ಜೀವನೇನ ತಿಳಿದೀತು, ಹಸುರೆಂದೆಳಸೂದು–ತೃಣಪತ್ತೆಂದಿಚ್ಛೈಸೂದು ಭಕ್ತಿರಸವ–ಶಿವಲಿಂಗಶ್ರದ್ಧೆಯೆಂಬ ಸಾರವನು, ದಣಿಯ ಮೇಯಿಸಿ–ಸಾಕಾಗುವ ಹಾಂಗೆ ಅನುಭವಿಸಿಸಿ, ಸುಬುದ್ಧಿಯೆಂಬ–ಸುಜ್ಞಾನವೆಂಬ, ಉದಕವ[೩]ನೆರೆದು[೩]–ಜಲವನು ನೀಡಿ, ನೋಡಿ–ಕೃಪಾದೃಕ್ಕಿನಿಂದೆ [೪]ನೀರಿಕ್ಷಿಸಿ,[೪] ಸಲಹಯ್ಯಾ–ಸಂರಕ್ಷಿಸಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೨–೨ ಪ್ರತಿಪತ್ತ (ಟ, ಡ). ೩–೩ ನೀಡಿ (ಟ). ೪–೪ ನಿರಿಸಿ (ಟ).

IV– – – – – – – – – – – – – – – – – – – – – – – – – – – – – – – – – –

1–1 ದಣಿಯೆ ಮೇಯಿಸಿ (ತ).

..........................

ಆತ್ಮಂಗೆ ದೇಹೇಂದ್ರಿಯಸುಖಂಗಳ ಮುಂದುದೋಱಿ ಮೆಚ್ಚಿಸಿ ತನ್ನ ನಿಜವ ಮಱಿಸಿ ಪಶುವೆಂದೆನಿಸಿ ಭವಕ್ಕೆ ತಂದು ಕರ್ತೃವಾದ ಶಿವ[೫][ನೆ][೫] ಭಕ್ತಿ ಜ್ಞಾನವಿತ್ತು ಭವಸಂಸಾರವ ಕೆಡಿಸಿ ಸಲಹೆಂದು ಶಿವನ ಬೇಡಿದಯೆಂಬುದೀ ವಚನದ ತಾತ್ಪರ್ಯಾರ್ಥ.

...............................

೫–೫ ನು (ತ).

---

೫೨

**ಕೆಸರಲ್ಲಿ ಬಿದ್ದ ಪಶುವಿನಂತೆ ಆನು ದೆಸೆದೆಸೆಗೆ ಬಾಯಬಿಡುತಿದ್ದೇನಯ್ಯಾ! ಆರೈವರಿಲ್ಲ ಅಕಟಕಟ! ಪಶುವೆಂದೆನ್ನ ಕೂಡಲ ಸಂಗಮದೇವ ಕೊಂಬಹಿಡಿದೆತ್ತುವನ್ನಕ್ಕ.**

I – – – – – – – – – – – – – – – – – – – – – – – – – – – – – – – – – –

ಕೆಸಜಿಲ್ಲಿ ಬಿದ್ದ ಪಶುವಿನಂತೆ : ಕೆಸಜಿಲ್ಲಿ–ಪಂಕದಲ್ಲಿ, ಬಿದ್ದ–ಪತನವಾದ, ಪಶುವಿನಂತೆ–ಆಕಳಹಾಂಗೆ, ಆನು ದೆಸೆದೆಸೆಗೆ ಬಾಯಬಿಡುತಿದ್ದೇನೆ: ಆನು–ಆಕಳು, ದೆಸೆದೆಸೆಗೆ–ದಿಕ್ಕುದಿಕ್ಕಿಗೆ, ಬಾಯಬಿಡುತಿದ್ದೇನೆ–ಅಂಬಾಅಂಬಾಯೆಂದು ರಸನೆಯನ್ನು ತೆರೆಯುತ್ತಲಿರ್ದೇನೆ, ಅಯ್ಯಾ–ಎಲೆ ಒಡೆಯನೆ. ಆರೈವರಿಲ್ಲ–ಎನ್ನಾಕಳೆಂದು ಹುದಲಿನಿಂದ ಕಡೆಗೆ ತೆಗೆದು ಮೈದೊಳೆದು ಮನೆಗೆ ಹೊಡೆಕೊಂಡು ಹೋಗಿ ಹುಲ್ಲನ್ನು ಹಾಕಿ ನೀರನ್ನು ತೋರಿ ಸಂರಕ್ಷಣೆಯ ಮಾಡುವಂಥವರು ಉಂಟಾಗಿಲ್ಲವು, ಅಕಟಕಟ!–ಅಯ್ಯಯ್ಯೋ, ಎನ್ನ ಪಶುವೆಂದು–ಎನ್ನಾಕಳೆನುತ್ತ, ಕೂಡಲಸಂಗಮದೇವಾ–ಎಲೆ ತುರುವಳನೇ, ಕೊಂಬ ಹಿಡಿದೆತ್ತುವನ್ನಕ್ಕ–ಶೃಂಗವನು ಪಿಡಿದು ಪಂಕದಿಂದ ಊರ್ಜಿತವ ಮಾಡಬೇಕು, ಮಾಡದಿರುವ ಪರಿಯಂತರ ಆಕಳು ತನ್ನೊಡೆಯನಿಗೆ ಉಪಾವಸ್ಥೆಯಂ ಮಾಡುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ.

● ಕೆಸಜಿಲ್ಲಿ ಬಿದ್ದ ಪಶುವಿನಂತೆ: ಕೆಸಜಿಲ್ಲಿ–ಆಣವಾದಿ ಮಲಪಂಕದಲ್ಲಿ, ಬಿದ್ದ–ಪತನವಾದ, ಪಶುವಿನಂತೆ–ಜೀವನೆಂಬ ಆಕಳ ಹಾಂಗೆ, ಆನು–ಜೀವನು, ದೆಸೆದೆಸೆಗೆ ಬಾಯಬಿಡುತಿದ್ದೇನೆ: ದೆಸೆದೆಸೆಗೆ–ದಶದಿಕ್ಕುಗಳಲ್ಲಿ ಪರಿಪೂರ್ಣವಾಗಿ ನೆಲೆಗೊಂಡಿರುವಂಥ ಪರಶಿವಲಿಂಗವೆ ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರ ಪ್ರಪಂಚನು ನಷ್ಟವ ಮಾಡೆಲೆ ಪರಶಿವಲಿಂಗವೆಯೆಂದು, ಬಾಯಬಿಡುತಿದ್ದೇನಯ್ಯಾ–ಉಪಾವಸ್ಥೆಯಂ ಮಾಡುತ್ತಲಿದ್ದೇನಯ್ಯಾ. ಆರೈವರಿಲ್ಲ–ಬಹಿರಂಗದಲ್ಲಿ ಗುರುವಾಗಿ ಬಂದು ಲಿಂಗಾಂಗಸಂಬಂಧತ್ವವನ್ನು ಕರುಣಿಸಿಕೊಟ್ಟು ತಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣೆಯ ಮಾಡುವಂಥವರು ಒರ್ವರುಂಟಾಗಿಲ್ಲವು, ಅಕಟಕಟ!–ಲಿಂಗವೆ ಲಿಂಗವೆ, ಎನ್ನ ಪಶುವೆಂದು–ಎನ್ನ ಜ್ಞಾನ ಕಲಾತ್ಮನೆಂದು, ಕೂಡಲಸಂಗಮದೇವ–ಪರಶಿವಲಿಂಗವು, ಕೊಂಬ ಹಿಡಿದೆತ್ತುವನ್ನಕ್ಕ : ಕೊಂಬ–ಭಕ್ತಿ[೧]ನೈಷ್ಠೆಯೆಂಬ ಶೃಂಗವನು, ಹಿಡಿದು–ಕೃತ ನಿಶ್ಚಯವೆಂಬ ಹಸ್ತದಿಂದೆ ದೃಢವಿಡಿದು, ಎತ್ತುವನ್ನಕ್ಕ–ಆಣವಾದಿ ಮಲಪಂಕದಿಂದ ಊರ್ಜಿತನ ಮಾಡಬೇಕು. ಮಾಡೋ ಪರಿಯಂತರವು, ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧ + ಜ್ಞಾ (ಕ).

III – – – – – – – – – – – – – – – – – – – – – – – – – – – – – – – –

ಕೆಸಜಿಲ್ಲಿ ಬಿದ್ದ ಪಶುವಿನಂತೆ–ಕೊಗ್ಗೆಸರಲ್ಲಿ ಪತನವಾದ ಅನಡ್ವನ ಹಾಂಗೆ; ಮತ್ತಂ ಸತ್ವಹೀನವಾದ ಬಡಪಶುವು ಕೆಸರಲ್ಲಿ ಬಿದ್ದಲ್ಲಿ ಕೊಂಬಹಿಡಿದೆತ್ತಿ ಕಡೆದೆಗೆದು ಮೈದೊಳೆದು ಹುಲ್ಲ ನೀರ ಹಾಕಿ ಆರೈವ ಪರಿಯಂತರವು ಅಂಬೆಅಂಬೆಯೆಂದು ಒರಲುವ ಹಾಂಗೆ ಸುಜ್ಞಾನವರ್ಧನವಿಲ್ಲದ ಜ್ಞಾನಜೀವನು ಪುತ್ರಮಿತ್ರಕಳತ್ರಾದಿ ಕಾಯ [೨]ಸಂಸಾರ[೨] ಜೀವಸಂಸಾರವೆಂಬ ಕೊಳತ ಪಂಕದಲ್ಲಿ ಪತನವಾಗಿರ್ಪುದು ಎಂಬುದೀಗ ಕೆಸಜಿಲ್ಲಿ ಬಿದ್ದ ಪಶುವಿನಂತೆ ಎಂಬ ಶಬ್ದಕ್ಕರ್ಥ. ದೆಸೆದೆಸೆಗೆ–ಅನ್ಯಮತಾಂತರಂಗಳ ದಿಕ್ಕುದಿಕ್ಕಿಗೆ, ಬಾಯಬಿಡುತ್ತಿದೇನೆ–ಭಿನ್ನಾಪೇಕ್ಷೆಯೆಂಬ ಜಿಹ್ವೆಯನು ತೆಜವುತ್ತಲಿದೇನೆ. ಆರೈವರಿಲ್ಲ–ಕ್ರಿಯಾಜ್ಞಾನಂಗಳಿಂದ ವಿಚಾರಿಸುವ ದೀಕ್ಷಾ[೩]ಗುರು[೩] ಶಿಕ್ಷಾಗುರುಗಳುಂಟಾಗರು, ಅಕಟಕಟ!–ಅಯ್ಯಯ್ಯೊ, ಪಶುವೆಂದು–ನಿವೃತ್ತಿಮಾರ್ಗವನು ಕಾಣದೆ

ಹುಡುಕಾಡುವ ತಿರ್ಯಕ್‌ಪ್ರಾಣಿಯಾದ ಜೀವನೆಂದು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ಕೊಂಬ–ಅಹಂಕಾರ ಮಮಕಾರಗಳೆಂಬ ಶೃಂಗಂಗಳನು, ಹಿಡಿದು–ಸದ್ಭಾವಹಸ್ತದಿಂದ ಪರಿಗ್ರಹಿಸಿ, ಎತ್ತುವನ್ನಕ್ಕ–ಪರಶಿವಲಿಂಗವು ಶಿವಾಚಾರದಲ್ಲಿ ಉದ್ಧರಿಸಿ ತನ್ನೊಳಗೇಕಾರ್ಥವ ಮಾಡಿಕೊಂಬ ತನಕಲು, ಆನು–ಸಜ್ಜೀವನು, ಅಯ್ಯಾ–ಎಲೆ ಜ್ಞಾನಗುರುಸ್ವಾಮಿಯೆ, ದೆಸೆದೆಸೆಗೆ–ಕ್ರಿಯಾಜ್ಞಾನಗಳ ದಿಕ್ಕುದಿಕ್ಕಿಗೆ, ಬಾಯಬಿಡುತ್ತಿದೇನೆ–ಸೋಹಂಶಿವೋಹಂ ಎಂದು ಪ್ರಣವನಾದಂಗೆಯ್ವುತ್ತಿದೇನೆ ಎಂಬ ಶಬ್ದಕ್ಕರ್ಥ.

.........................

೨_೨ (ಡ). ೩_೩ (ಡ).

V – – – – – – – – – – – – – – – – – – – – – – – – – – – –

ಕೊಂಬ ಹಿಡಿದೆತ್ತಿ ಕಡೆಗೆ ತೆಗೆದು ಮೆಯ್ಯತೊಳೆದು [ಹೊಟ್ಟು] [ಹುಲ್ಲು] ನೀರ ಹಾಕಿ ಆರಯ್ವಪರಿಯಂತರ ಅಂಬೆ ಅಂಬೆಯೆಂದ ಹಾಂಗೆ ಸಂಸಾರವೆಂಬ ಪಂಕದಲ್ಲಿ ಪತಿತ[ನಾ]ದಾತನ ಅಹಂಕಾರ ಮಮಕಾರಂಗಳೆಂಬ ಕೊಂಬಹಿಡಿದೆತ್ತುವನ್ನಕ್ಕರಯೆಂಬುದೀಗ ಕೊಂಬ ಹಿಡಿದೆತ್ತುವನ್ನಕ್ಕ.

---

೫೩

**ಬಡಪಶು ಪಂಕದಲ್ಲಿ ಬಿದ್ದಡೆ ಕಾಲ ಬಡಿವುದಲ್ಲದೆ, ಬೇಜಿತೆ ಗತಿಯುಂಟೆ? ಶಿವಶಿವಾ! ಹೋದಿಹೆ ಹೋದಿಹೆನಯ್ಯಾ, ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ. ಪಶುವಾನು, [1]ಪಶುಪತಿ ನೀನು![1] ತುಡುಗುಣಿಯೆಂದೆನ್ನ ಹಿಡಿದು [2]ಪಾಶದಿ ಬಂಧಿಸಿ[2] ಬಡಿಯದ ಮುನ್ನ ಒಡೆಯ ನಿಮ್ಮ ಬಯ್ಯದಂತೆ ಮಾಡು, ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – –

ಬಡಪಶು ಪಂಕದಲ್ಲಿ ಬಿದ್ದಡೆ : ಬಡಪಶು–ಮೈಯಲ್ಲಿ ತ್ರಾಣವಿಲ್ಲದಿದ್ದಂಥ ಬಡ ಆಕಳು, ಪಂಕದಲ್ಲಿ–ಹುದುಲುಗೆಸರಿನಲ್ಲಿ, ಬಿದ್ದಡೆ–ಪತನವಾದರೆ, ಕಾಲಬಡಿವುದಲ್ಲದೆ–ಚರಣವನ್ನು ಪಟಪಟನೆಂದು ಬಡಿದುಕೊಂಬುವುದಲ್ಲದೆ, ಬೇಜಿತೆ ಗತಿಯುಂಟೆ?–ಪಂಕದಿಂದೆದ್ದು ಮೇಲಕ್ಕೆ ಬಂದೇನೆಂದರೆ ಗತಿಯುಂಟೆ? ಮೈಯಲ್ಲಿ ತ್ರಾಣವುಂಟೆ? ಇಲ್ಲವು, ಶಿವಶಿವಾ!–ಒಡೆಯನೆ ಒಡೆಯನೆ, ಹೋದಿಹೆ–ಸತ್ತುಹೋಗುತ್ತೈದೇನೆ, ಹೋದಿಹೆನಯ್ಯಾ–ಪಂಕದಿಂದ ಊರ್ಜಿತನ ಮಾಡಿದರೆ ಮುಂದಕ್ಕೆ ಮೂರು ಹೆಜ್ಜೆಯ ನಡೆದು ಹೋಗುವೆನಯ್ಯಾ.

ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ :ನಿಮ್ಮ ಮನದತ್ತ--ನಿಮ್ಮ ಮನೆಗೆ ಹೊಡಕೊಂಡು ಹೋಗಿ ಹುಲ್ಲನ್ನು ಹಾಕಿ ನೀರನ್ನು ಕುಡಿಸಿ ಸಂರಕ್ಷಣೆಯ ಮಾಡು, ಅಯ್ಯಾ–ಎಲೆ ಒಡೆಯನೆ, ಪಶುವಾನು ಪಶುಪತಿ ನೀನು : ಪಶುವಾನು–ಆಕಳು ನಾನು, ಪಶುಪತಿ ನೀನು–ಆಕಳಿಗೆ ಕರ್ತ ನೀನು, ತುಡುಗುಣಿಯೆಂದೆನ್ನ ಹಿಡಿದು [ಪಾಶದಿ ಬಂಧಿಸಿ] ಬಡಿಯದ ಮುನ್ನ : ತುಡುಗುಣಿಯೆಂದು–ಕಳ್ಳಾಕಳೆನ್ನುತ್ತ, ಎನ್ನ–ನನ್ನನು, ಹಿಡಿದು–ಹಿಡಿದುಕೊಂಡು, ಪಾಶದಿಂದ–ಹಗ್ಗದಿಂದ, ಬಂಧಿಸಿ–

ಬಿಗಿದುಕಟ್ಟಿ, ಬಡಿಯದ ಮುನ್ನ–ಕೋಲು ಗುದಿಗೆಯನ್ನು ತೆಗೆದುಕೊಂಡು ಸದೆಯದಕ್ಕಿಂತ ಮೊದಲೇ, ಒಡೆಯ–ಎಲೆ ಕರ್ತನೇ, ನಿಮ್ಮ ಬಯ್ಯದಂತೆ–ಇದು ಯಾವ ಹೊಲೆಯರ ಆಕಳೋ ಯಾವ ಮಾದಿಗರಾಕಳೋ ಎಂದು ದೂಷಣೆಯ ಮಾಡುವುದಕ್ಕಿಂತ ಮೊದಲೇ, ಮಾಡು–ನಿಮ್ಮ ಮನೆಗೆ ಹೊಡಕೊಂಡುಹೋಗಿ ಹುಲ್ಲನ್ನು ಹಾಕಿ ನೀರನ್ನು ಕುಡಿಸಿ ಸಂರಕ್ಷಣೆಯ ಮಾಡು, ಕೂಡಲಸಂಗಮದೇವಾ–ಎಲೆ ಒಡೆಯನೆ ಎಂದು, ಆಕಳು ತನ್ನೊಡೆಯನಿಗೆ ಉಪಾವಸ್ಥೆಯಂ ಮಾಡುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ,

● ಬಡಪಶು ಪಂಕದಲ್ಲಿ ಬಿದ್ದಡೆ : ಬಡಪಶು–ಭಕ್ತಿ ಜ್ಞಾನ ವೈರಾಗ್ಯದಲ್ಲಿ ಪುಷ್ಟಿಯಿಲ್ಲದಿದ್ದಂಥ ಜೀವನೆಂಬ ಆಕಳು, ಪಂಕದಲ್ಲಿ–ಆಣವಾದಿ ಮಲಪಂಕದಲ್ಲಿ, ಬಿದ್ದಡೆ–ಪತನವಾದರೆ, ಕಾಲಬಡಿವುದಲ್ಲದೆ–ದುಶ್ಚರಿತ್ರ ದುರಾಚಾರ ದುರ್ಮಾರ್ಗದೊಡನೆ ಕೂಡಿ ಚರಿಸುವುದಲ್ಲದೆ, ಬೇಱೆ ಗತಿಯುಂಟೆ?–ಸಚ್ಚರಿತ್ರ ಸದಾಚಾರ ಸನ್ಮಾರ್ಗದೊಡನೆ ಕೂಡಿ ಚರಿಸೇನೆಂದರೆ ತೆರಪುಂಟೆ? ಇಲ್ಲವು, ಶಿವಶಿವಾ!–ಲಿಂಗವೆ ಲಿಂಗವೆ, ಹೋದಿಹೆ–ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚನ್ನು ನಷ್ಟವಮಾಡಿ ಬಿಟ್ಟು ರಕ್ಷಣೆಯ ಮಾಡೇನೆಂದರೆ ಸತ್ಪಥಮಾರ್ಗವಿಡಿದು ಆಚರಿಸುತ್ತ ಎಯ್ದು ಹೋಗುವೆನು, ಹೋದಿಹೆನಯ್ಯಾ–ನೀವೆ ಗುರುವಾಗಿ ಬಂದು ಲಿಂಗಾಂಗ ಸಂಬಂಧವನ್ನು ಕರುಣಿಸಿ ಕೊಟ್ಟು ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣೆಯ ಮಾಡೇನೆಂದರೆ ಶಿವಸತ್ಕ್ರಿಯಾಚಾರವಿಡಿದಾಚರಿಸುತ್ತ ಎಯ್ದು ಹೋಗುವೆನಯ್ಯಾ ; ಅದಲ್ಲದೆ ಸತ್ಯಸದಾಚಾರ ಸನ್ಮಾರ್ಗವಿಡಿದಾಚರಿಸುತ್ತ ಎಯ್ದು ಹೋಗುವೆನಯ್ಯಾ.

ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ ನಿಮ್ಮ ಎಂದರೆ ನಿಃಕಲಲಿಂಗವು, ಮನವೆಂದರೆ ಚಿತ್ತು, ಅತ್ತಲೆ ತೆಗೆಯಯ್ಯಾ : ಅತ್ತಲೆಯೆಂದರೆ ಆ ಚಿತ್ತೇ ಅಂಗ, ಚಿದ್ಘನಲಿಂಗವೆ ತನ್ನ ಪ್ರಾಣವಾಗಿ ಅಳವಡಿಸಿಕೊಂಡಾಚರಿಸುವ ಹಾಂಗೆ ಮಾಡಯ್ಯಾ, ಪಶುವಾನು–ಜೀವನೆಂಬ ಆಕಳಾನು, ಪಶುಪತಿ ನೀನು–ಆ ಜೀವನಿಗೆ ಕರ್ತೃವಾದ ಪರಶಿವಲಿಂಗವು ನೀನು. ತುಡುಗುಣಿಯೆಂದು–ಸಕಲಪದಾರ್ಥಂಗಳನು ಲಿಂಗಾರ್ಪಣ ವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸಲ್ಪಟ್ಟಾತನೆಂದು, ಎನ್ನ ಹಿಡಿದು–ಎನ್ನ ಕೊರತೆಯನುಂಟುಮಾಡಿ, ಬಡಿಯದ ಮುನ್ನ–ಸಕಲ ಕರಣಂಗಳನು ದಂಡಿಸುವುದಕ್ಕಿಂದ ಮೊದಲೇ, ಒಡೆಯ–ಎಲೆ ಆತ್ಮನೇ, ನಿಮ್ಮ ಬಯ್ಯದಂತೆ–ಜನನ ಮರಣಂಗಳಲ್ಲಿ ಕೂಡಿ ಚರಿಸಿದರೆ ಶಿವನಿಂದೇನು ಶಿಕ್ಷೆ ಬಂದೀತೊ ಏನು ಕೊರತೆ ಬಂದೀತೊ ಎಂದು ಹಂಗಿಸಿ ಹಂಗಿಸಿ ಶಿಕ್ಷಿಸಿಕೊಳ್ಳದಕ್ಕಿಂದ ಮೊದಲೇ, ಮಾಡು–ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರ ಪ್ರಪಂಚುವನಷ್ಟವ ಮಾಡಿಬಿಟ್ಟು ರಕ್ಷಣೆಯ ಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – – –

2–2 x (ಚ, ಜ).

..........................

ಬಡಪಶು ಪಂಕದಲ್ಲಿ ಬಿದ್ದಡೆ ಕಾಲ ಬಡಿವುದಲ್ಲದೆ ಬೇಱೆ ಗತಿಯುಂಟೆ?– ಭವರೋಗದಿಂದ ಶಿವಜ್ಞಾನಸತ್ವವು ಸಣ್ಣಿಸಿದಂಥ ಜೀವನು ಸಂಸಾರವೆಂಬ ಕೆಸರಿನಲ್ಲಿ ಪತಿತವಾದರೆ

ಕರ್ಮೇಂದ್ರಿಯಂಗಳೆಂಬ ಚರಣತಾಡನಗೆಯ್ದುದಲ್ಲದೆ ಪೃಥಕ್ಕಾಗಿ ಸದ್ಗತಿ ಇದ್ದಹುದೆ? ಇಲ್ಲ, ಶಿವ ಶಿವಾ! ಹೋದೆಹೆ ಹೋದೆಹೆನಯ್ಯಾ-ಹರಹರಾ ಶಿವಾಚಾರವಾರ್ಗದತ್ತೆಯ್ದೆಹೆ, ಲಿಂಗಾಚಾರಮಾರ್ಗದತ್ತೆಯ್ದೆಹೆನಯ್ಯಾ.

ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ-ನಿಮ್ಮ ಮಾನಸದ ಕಡೆಗೆ ಆತ್ಮನ ಆಕರ್ಷಣವ ಮಾಡಯ್ಯಾ. ಪಶುವಾನು ಪಶುಪತಿ ನೀನು!-ಜೀವನು ನಾನು ಆ ಜೀವನುತ್ಪತ್ತಿಸ್ಥಿತಿಲಯಕ್ಕೆ ಕಾರಣವಾದ ಪರಮಾತ್ಮನು ನೀನು. ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ-ಪಂಚಮಹಾಪಾತಕಂಗಳ ತಸ್ಕರವೃತ್ತಿಯುಳ್ಳವನೆಂದು ಆತ್ಮನ ಕಲಿಕಾಲಕಾಮಮಾಯಾದಿಗಳು ಗ್ರಹಿಸಿ ಚರಣ ತಾಡನಂಗೆಯ್ವುದಕ್ಕೆ ಮೊದಲೇ, ಒಡೆಯ ನಿಮ್ಮ ಬಯ್ಯದಂತೆ ಮಾಡು-ಎಲೆ ಕರ್ತನಾದಂಥ ಪರಮೇಶ್ವರನೇ ನಿಮ್ಮನು ಪರಮೇಶ್ವರನು ಇಂಥ ದೊಡ್ಡಾತನು ತನ್ನಂಶವಾದಾತ್ಮನ ಕಲಿಕಾಲಕಾಮ ಮಾಯಾದಿಗಳಿಗೆ ಒಪ್ಪಿಸಿ ಕೊಟ್ಟನಲಾ ಎಂದು ದೂಷಣೆ ಮಾಡದ ಹಾಂಗೆ ಮಾಡುಯೆಂಬುದರ್ಥ.

III - - - - - - - - - - - - - - - - - - - - - - - - - - - - - - -

1-1 ಪತಿ ನೀನು (ಟ, ಡ). 2-2 x (ಟ, ಡ).

..........................

ಜ್ಞಾನಸಾಮರ್ಥ್ಯಹೀನವಾದ ಜಡಜೀವನು ಸಂಸಾರವೆಂಬ ಕೊಗ್ಗೆಸರಲ್ಲಿ ಪತನವಾದರೆ ದುಶ್ಚರಿತ್ರದಲ್ಲಿ ವರ್ತಿಸುವದಲ್ಲದೆ ಸನ್ಮಾರ್ಗದಲ್ಲಿ ಪ್ರವರ್ತಿಸುವದಕ್ಕೆ ಜ್ಞಾನಸಾಮರ್ಥ್ಯ ಉಂಟಾಗಲಜೆಯದೆಂಬುದೀಗ ಬಡಪಶು ಪಂಕದಲ್ಲಿ ಬಿದ್ದಡೆ ಕಾಲಬಡಿವುದಲ್ಲದೆ ಬೇಜ್ ಗತಿಯುಂಟೆ? ಎಂಬ ಶಬ್ದಕ್ಕರ್ಥ. ಶಿವಶಿವಾ!-ಹರಹರ, ಹೋದೆಹೆ ಹೋದೆಹೆನಯ್ಯಾ-ಭವಮಾರ್ಗಕ್ಕೆ ಹೋಗುತ್ತಿದೇನಯ್ಯಾ.

ನಿಮ್ಮ ಮನದತ್ತಲಿ-ಲಿಂಗದ ಪೂಜಾಸ್ತೋತ್ರ ಧ್ಯಾನಸ್ಮರಣೆಯ ಕಡೆಗೆ, ಎನ್ನ ತೆಗೆಯಯ್ಯಾ-ನನ್ನ ಬರಸೆಳಕೊಳ್ಳಯ್ಯ, ಪಶುವಾನು-ನಿವೃತ್ತಿ ಮಾರ್ಗವನು ಕಾಣದೆ ಹುಡುಕಾಡುವ ತಿರ್ಯಕ್ಪ್ರಾಣಿಯಾನು, ಪತಿ ನೀನು-ಜೀವಪಶುವಿಗೆ ಕರ್ತೃವಾದ ಪರಶಿವಲಿಂಗಮೂರ್ತಿ ನೀನು, ತುಡುಗುಣಿಯೆಂದು-ಪ್ರಪಂಚಿನ ಜೀವಭಾವದ ಭುಂಜನೆಯುಳ್ಳಾತನೆಂದು, ಎನ್ನ-ನನ್ನನು, ಹಿಡಿದು-ಕಾಲಕಾಮಾದಿಗಳು ಪರಿಗ್ರಹಿಸಿ, ಬಡೆಯದ ಮುನ್ನ-ಭವಭವದಲ್ಲಿ ಪೀಡಿಸುವದಕ್ಕಿಂದ ಮೊದಲೆ, ಒಡೆಯ-ಕರ್ತೃವಾದಂಥ ಎಲೆ ಪರಶಿವಲಿಂಗವೆ, ನಿಮ್ಮ ಬಯ್ಯದಂತೆ ಮಾಡು-ತನ್ನ ಸಂಬಂಧವಾದ ಶಿವಶರಣರಿಗೆಯು ಪ್ರಪಂಚನುಂಟುಮಾಡಿ ಭವಕ್ಕೊಳಗುಮಾಡಿದನೆಂದು ಅನ್ಯದೇವರ ಭಕ್ತರು ದೂಷಿಸದ ಹಾಂಗೆ ಎಸಗು ಎಂಬುದೀಗ ಒಡೆಯ ನಿಮ್ಮ ಬಯ್ಯದಂತೆ ಮಾಡು ಎಂಬ ಶಬ್ದಕ್ಕರ್ಥ.

IV - - - - - - - - - - - - - - - - - - - - - - - - - - - - - - -

೧-೧ x (ತ).

..........................

ನಿಮ್ಮ ನಿಜವ ಮಱಿಸಿ ಪಶುಜೀವನ ಮಾಡಿ ಸಂಸಾರವೆಂಬ ಕೆಸಱೊಳಗೆ ಕೆಡಹಿದ ಬಳಿಕ ಏಳುವ ಸ್ವತಂತ್ರವಿಲ್ಲವಯ್ಯಾ. ಪಶುಪತಿ ನೀ ಮಾಡಿದ ಸಂಸಾರಸುಖವ ನೀ ಮುಂತಾಗಿ ಭೋಗಿಸಿದೆ, ಭೋಗಿಸಿದ ಪಶುಜೀವನನು ಕಾಲನವರು ಕೊಲ್ಲುತ್ತ ಇರಲು ನಿನ್ನ ಬಿಡಿಸುವ ಒಡೆಯರಾರೊ ಎಂದೇ ಬೈವ ಬೈಗಳು ಶಿವ ನಿಮಗಿಲ್ಲದ ಮೊದಲೆ ಎನ್ನ ಭವಸಂಸಾರವ ಬಿಡಿಸಿ ನಿಮ್ಮತ್ತ ತೆಗೆದುಕೋ ಎಂದು ಶರಣರು ಶಿವಂಗೆ ವಾಸಿಯ ಹುಟ್ಟಿಸಿ ಬೇಡುತ್ತಿದ್ದರೆಂಬುದೀವಚನದ ತಾತ್ಪರ್ಯಾರ್ಥ.

V– – – – – – – – – – – – – – – – – – – – – – – – – – – – – – –

ಸತ್ತ್ವಹೀನವಾದ ಗೋವು ಜೀರ್ಣಪಂಕದಲ್ಲಿ ಪತಿತವಾದರೆಯೆಂಬುದೀಗ ಬಡಪಶು ಪಂಕದಲ್ಲಿ ಬಿದ್ದರೆಯೆಂಬುದರ್ಥ.

● ಜ್ಞಾನಸಾಪರ್ಥ್ಯವಿಲ್ಲದ ಜೀವನು ಸಂಸಾರಪಂಕದಲ್ಲಿ ಬಿದ್ದರೆ, ಕಾಲಬಡಿವುದಲ್ಲದೆ–ದುಶ್ಚರಿತ್ರದಲ್ಲಿ ವರ್ತಿಸುವುದಲ್ಲದೆ, ಸಂಸಾರ ಪ್ರಪಂಚ ತಿರಸ್ಕಾರವ ಮಾಡಿ ಗುರೂಪದೇಶವ ಹಡೆವ ಪ್ರ...ಕ್ತವಾದ ಜ್ಞಾನಸಾಮರ್ಥ್ಯವಿಲ್ಲವೆಂಬುದೀಗ ಬಡಪಶು ಪಂಕದಲ್ಲಿ ಬಿದ್ದರೆ.

---

೫೪

**ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ 'ಅಂಬೆ, ಅಂಬೆ' ಯೆಂದು ಕರೆವುತ್ತಲಿದ್ದೇನೆ; 'ಅಂಬೆ, ಅಂಬೆ'ಯೆಂದು ಒಱಲುತ್ತಲಿದ್ದೇನೆ ಕೂಡಲಸಂಗಮದೇವಾ 'ಬಾಳು ಬಾಳೆಂ'ಬನ್ನಕ್ಕ!**

I – – – – – – – – – – – – – – – – – – – – – – – – – – – – – –

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ–ಒಬ್ಬಾನೊಬ್ಬ ತುರುವಳನೇನಾದರೂ ಪ್ರಾತಃಕಾಲದಲ್ಲೆದ್ದು ಕೋರಿಯನ್ನು ಹೊದ್ದುಕೊಂಡು ಕೋಲನ್ನು ಪಿಡಿದುಕೊಂಡು ಬುತ್ತಿಯನ್ನು ಕಟ್ಟಿಕೊಂಡು ಗ್ರಾಮದ ನೂರಾರು ದನಗಳನು ಕೂಡಿಸಿಕೊಂಡು ಅಡವಿಗೆ ಹೊಡೆಕೊಂಡು ಹೋಗಿ, ಹುಲ್ಲಿದ್ದ ಸ್ಥಾನದಲ್ಲಿ ಮೇಯಿಸಿ, ನೀರಿದ್ದ ಸ್ಥಾನದಲ್ಲಿ ನೀರಕುಡಿಸಿ, ನೆರಳಿದ್ದ ಸ್ಥಾನದಲ್ಲಿ ತರಿಬಿಕೊಂಡಿದ್ದು, ಸಾಯಂಕಾಲವಾದ ಮೇಲೆ ಊರಿಗೆ ಹೊಡೆಕೊಂಡು ಬರುವಂಥ ವೇಳೆಯಲ್ಲಿ, ಅಡವಿಯೊಳಗೆ–ಅರಣ್ಯದಲ್ಲಿ, ಹೊಲಬುಗೆಟ್ಟ–ದಿಕ್ಕುತಪ್ಪಿದ, ಪಶುವಿನಂತೆ–ಆಕಳ ಹಾಂಗೆ, 'ಅಂಬೆ, ಅಂಬೆ' ಯೆಂದು–ಅಂಬಾ ಅಂಬಾಯೆಂದು, ಕರೆವುತ್ತಲಿದ್ದೇನೆ–ಕೂಗುತ್ತಲೈದೇನೆ, ಅಂಬೆ, ಅಂಬೆ'ಯೆಂದು–ಅಂಬಾ ಅಂಬಾಯೆಂದು, ಒಱಲುತ್ತಲಿದ್ದೇನೆ–ಅರಚುತ್ತಲೈದೇನೆ.

ಕೂಡಲಸಂಗಮದೇವಾ–ಎಲೆ ಒಡೆಯನೆ, 'ಬಾಳುಬಾಳೆಂ'ಬನ್ನಕ್ಕ!–[೧][ಬಾಳು ಬಾಳು ಎಂದು][೧] ಆಕಳನು ತನ್ನ ಸಮಿಪಕ್ಕೆ ಕರೆದು ತನ್ನ ಹಿಂಡನ್ನು ಕಲಸಿಕೊಂಬೊ ಪರಿಯಂತರ, ಆಕಳು ತನ್ನೊಡೆಯನಿಗೆ ಉಪಾವಸ್ಥೆಯಂ ಮಾಡುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ.

● ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ: ಅಡವಿಯೊಳಗೆ–ದೇಹವೆಂಬ ಭವಾರಣ್ಯದಲ್ಲಿ, ಹೊಲಬುಗೆಟ್ಟ–ಸತ್ಪಥಮಾರ್ಗದ [೨]ಹೋಬಳಿ[೨]ದಪ್ಪಿದ, ಪಶುವಿನಂತೆ–ಜೀವನೆಂಬ

ಆಕಳಿನ ಹಾಂಗೆ, 'ಅಂಬೆ, ಅಂಬೆ'ಯೆಂದು-ಲಿಂಗವೆ ಲಿಂಗವೆಯೆಂದು, ಕರೆವುತ್ತಲಿದ್ದೇನೆ-ಶಿವಶಕ್ತಿಸನ್ನದ್ಧವಾದ ಪರಶಿಲಿಂಗಕ್ಕುಪಾವಸ್ಥೆಯಂ ಮಾಡುತ್ತಲಿದ್ದೇನೆ.

ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, 'ಬಾಳು ಬಾಳೆಂ'ಬನ್ನಕ್ಕ!-ಇನ್ನಾವಾದ ಪ್ರಪಂಚಿಗೂ ನಾನ್ಯೆದನೆ ಹೆದರಬೇಡವೆಂಬುವಂಥ ಅಭಯ ಹಸ್ತದ ನಿಜಾಶೆಯನ್ನು ಅಂತರಂಗದಲ್ಲಿ ಕಾಣಿಸಿ ರಕ್ಷಣೆಯ ಮಾಡಬೇಕು, ಮಾಡುವ ಪರಿಯಂತರ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧-೧ ಬೆಳು ಬೇಳುಯೆಂದು (ಕ). ಬೆಳು ಬೆಳೆಯ (ಗ). ೨_೨ ಹೊಬ್ಬಳಿ (ಕ).

II - - - - - - - - - - - - - - - - - - - - - - - - - - - - - -

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ 'ಅಂಬೆ, ಅಂಬೆ'ಯೆಂದು ಕರೆಯುತ್ತಲಿದ್ದೇನೆ-ಕಾನನದಲ್ಲಿ ಮಾರ್ಗವು ತಪ್ಪಿದ ದನದ ಹಾಂಗೆ, ಭವಾರಣ್ಯದಲ್ಲಿ ಗುರುಮಾರ್ಗವು ತಪ್ಪಿದ ಜೀವನು, ಶಿದಧೋ ಎಂದು ಆಹ್ವಾನಿಸುತ್ತಿಹನು. ಕೂಡಲಸಂಗಮದೇವಾ, 'ಬಾಳು ಬಾಳೆಂಬ'ನ್ನಕ್ಕ!-ಪರಶಿವಲಿಂಗವು ಗುರುವಾಗಿ ಬಂದು ಬದುಕು ಮಗನೇ, ಬದುಕು ಮಗನೇ ಎಂದು ಮಸ್ತಕದ ಮೇಲೆ ಹಸ್ತವಿಡುವ ಪರಿಯಂತರವು. 'ಅಂಬೆ, ಅಂಬೆ' ಎಂದು ಒಱಲುತ್ತಲಿದ್ದೇನೆ-ಗುರುವೇ ಎಂದು ಗುರುಸ್ತೋತ್ರವ ಮಾಡುತ್ತಿಹೆನೆಂಬುದರ್ಥ.

III - - - - - - - - - - - - - - - - - - - - - - - - - - - - - -

1-1 + ನೀ (ಟ, ಡ).

..........................

ಭವಾರಣ್ಯಪ್ರವೇಶವಾಗಿ ಶಿವಾಚಾರದಿಗ್ಭ್ರಮಣೆಯಾದ ಜೀವನು, ಭಕ್ತಿಜ್ಞಾನವೈರಾಗ್ಯ ಉಂಟಾಗುವ ಪರಿಯಂತರಲು ಚಿನ್ಮಾತೆ ಚಿನ್ಮಾತೆಯೆಂದು ಆಹ್ವಾನಿಸುತ್ತಿದೆಯೆಂಬುದೀಗ ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ 'ಅಂಬೆ, ಅಂಬೆ'ಯಂದು ಕರೆವುತ್ತಿದೇನೆಯೆಂಬ ಶಬ್ದಕ್ಕರ್ಥ. 'ಅಂಬೆ, ಅಂಬೆ'ಯೆಂದು-ಚಿನ್ಮಾ[3]ತೆ[3] ಚಿನ್ಮಾತೆಯೆಂದು, ಒಱಲುತ್ತಿದೇನೆ-ಆಹ್ವಾನಿಸುತ್ಯೆದೇನೆ. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನೀವೆನಗೆ ಗುರುವಾಗಿ ಉಪದೇಶವನಿತ್ತು ಕ್ರಿಯಾಜ್ಞಾನವಿಡಿದಾಚರಿಸಿ ಲಿಂಗದಲ್ಲೇಕಾರ್ಥವನು ಹಡೆಯೆಂದು ಬೋಧಿಸುವ ಪರಿಯಂತರಲು ಎಂಬುದೀಗ ನೀ ಬಾಳು ಬಾಳೆಂಬನ್ನಕ್ಕ!

..........................

೩_೩ ತ್ರೆ (ಡ).

V - - - - - - - - - - - - - - - - - - - - - - - - - - - - - -

ಕಾಂತಾರದಲ್ಲಿ ತನ್ನ ವಂಶಾವಳಿಯ ಬೆಂಬಳಿದಪ್ಪಿದ ಗೋವಿನಂತೆ, ಭವಾರಣ್ಯದಲ್ಲಿ ಪ್ರವೇಶಿಯಾಗಿ ಶಿವಾಚಾರ ದಿಗ್ಭ್ರಮೆಯಾದಾತ್ಮನು ಶಕ್ತಿಪಾತ ಜ್ಞಾನವುಂಟಾಗುವ ಪರಿಯಂತರ, ಅಂಬೆ, ಅಂಬೆ'ಯೆಂದು-ಚಿನ್ಮಾತೆ ಚಿನ್ಮಾತೆಯೆಂದು ಗುರೂಪಾವಸ್ಥೆಯ ಮಾಡುತಿರ್ದಪನೆಂಬುದರ್ಥ.

**ಸಮುದ್ರದೊಳಗಣ ಸಿಂಪಿನಂತೆ [1]ಆನು[1] ಬಾಯಬಿಡುತ್ತಲಿದ್ದೇನಯ್ಯಾ! ನೀವಲ್ಲದೆ ಮತ್ತಾರೂ ಎನ್ನನಜಿವವರಿಲ್ಲ ನೋಡಯ್ಯಾ, ಕೂಡಲಸಂಗಮದೇವಾ, ನೀವಲ್ಲದೆ [2]ಎನ್ನ[2] ಒಳಕೊಂಬುವರಿಲ್ಲವಯ್ಯಾ!**

I - - - - - - - - - - - - - - - - - - - - - - - - - - - - - -

ಸಮುದ್ರದೊಳಗಣ ಸಿಂಪಿನಂತೆ : ಸಮುದ್ರದೊಳಗಣ–ಅಬ್ಧಿಯೊಳಗಣ, ಸಿಂಪಿನಂತೆ–ಶುಕ್ತಿಯ ಹಾಂಗೆ, ಆನು ಬಾಯಬಿಡುತ್ತಲಿದ್ದೇನಯ್ಯಾ!–ಆವಾಗ ತಾಮ್ರಪರ್ಣಿಯೆಂಬಂಥ ಹೊಳೆ ಬಂದೀತೋ, ಆವಾಗ ಚಿತ್ತಿ ಬಿಸಿಲು ಕಾದೀತೋ, ಆವಾಗ ಅಮೃತಗಳಿಗೆ ಬಂದೀತೋ, ಆವಾಗ ಸ್ವಾತಿವೃಷ್ಟಿ ಅಂಕುರಿಸಿ ಎನ್ನಲ್ಲಿ ಬಿದ್ದು ಮುತ್ತಾಗಿ ನೆಲೆಗೊಂಡೀತೋ ಎಂದು, ರಸನೆಯನ್ನು ತೆರವುತ್ತಲೈದೇನಯ್ಯಾ, ನೀವಲ್ಲದೆ–ಎನ್ನಲ್ಲಿ ಬಿದ್ದು ಮುತ್ತಾಗಿ ನೆಲೆಗೊಳ್ಳಬೇಕಾದರೆ ಸ್ವಾತಿ ಸಲಿಲವಲ್ಲದೆ, ಮತ್ತಾರು ಎನ್ನನಜಿವವರಿಲ್ಲ ನೋಡಯ್ಯಾ–ಮುನ್ನೂರರುವತ್ತು ದಿನ ನಕ್ಷತ್ರಂಗಳೊಳಗೆ ಮತ್ತೊಂದುಂಟಾಗಿಲ್ಲ ಕಂಡಯ್ಯಾ. ಕೂಡಲಸಂಗಮದೇವಾ ನೀವಲ್ಲದೆ–ಎನ್ನಲ್ಲಿ ಬಿದ್ದು ಮುತ್ತಾಗಿ ನೆಲೆಗೊಳ್ಳಬೇಕಾದರೆ ಸ್ವಾತಿಸಲಿಲವಲ್ಲದೆ, ಎನ್ನೊಳಕೊಂಬುವರಿಲ್ಲವಯ್ಯಾ–ಎನ್ನೊಳಕೋಬೇಕಾದರೆ ಸಮುದ್ರರಾಜನಲ್ಲದೆ ಮತ್ತೊಂದು ಕೆರೆಬಾವಿಗಳಲ್ಲವೆಂಬೋ ದೃಷ್ಟೋಪಮಾನದ ಹಾಂಗೆ.

● ಸಮುದ್ರದೊಳಗಣ ಸಿಂಪಿನಂತೆ : ಸಮುದ್ರದೊಳಗಣ–ಸಂಸಾರ ಪ್ರಪಂಚೆಂಬ ಅಬ್ಧಿಯೊಳಗಣ, ಸಿಂಪಿನಂತೆ–ಶುಕ್ತಿಯ ಹಾಂಗೆ ಜ್ಞಾನಕಲಾತ್ಮನು, ಸ್ವಾತಿಲಲಿದ ಹಾಂಗೆ ಪರಬ್ರಹ್ಮವು, ಸಂಸಾರ ಪ್ರಪಂಚೆಂಬ ಸಮುದ್ರದ ಮಧ್ಯದಲ್ಲಿರ್ಪ ಜ್ಞಾನಕಲಾತ್ಮನು, ಪರಮೋಜ್ವಲ ಸ್ವರೂಪವಾದ ಎಲೆ ಪರಶಿವಲಿಂಗವೇ, ಅಂತರಂಗದಲ್ಲಿ ಜ್ಞಾನೋದಯುವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚನ್ನು ನಷ್ಟವ ಮಾಡಿಬಿಟ್ಟು ರಕ್ಷಣೆಯ ಮಾಡೆಲೆ ಪರಶಿವಲಿಂಗವೆಯೆಂದು, ಆನು–ಜ್ಞಾನಕಲಾತ್ಮನು, ಬಾಯಿಬಿಡುತ್ತಲಿದ್ದೇನಯ್ಯಾ–ಉಪಾವಸ್ಥೆಯಂ ಮಾಡುತ್ತಲಿದ್ದೇನಯ್ಯಾ, ನೀವಲ್ಲದೆ ಎನ್ನನಜಿವವರಿಲ್ಲ ನೋಡಯ್ಯಾ : ನೀವಲ್ಲದೆ–ನೀವೇ ಗುರುವಾಗಿ ಬಂದು ಲಿಂಗಾಂಗಸಂಬಂಧವನ್ನು ಕರುಣಿಸಿಕೊಟ್ಟು ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣೆಯ ಮಾಡಬೇಕಾದರೆ, ನೀವಲ್ಲದೆ–ಪರಶಿವಲಿಂಗವಲ್ಲದೆ, ಮತ್ತಾರು ಎನ್ನನಜಿವವರಿಲ್ಲ ನೋಡಯ್ಯಾ–ಬ್ರಹ್ಮವಿಷ್ಣ್ವಾದಿಗಳೊಳಗೆ ಮತ್ತೊಬ್ಬರುಂಟಾಗಿಲ್ಲ ಕಂಡಯ್ಯಾ. ಕೂಡಲಸಂಗಮದೇವಾ ನೀವಲ್ಲದೆ ಎನ್ನ ಒಳಕೊಂಬುವರಿಲ್ಲವಯ್ಯಾ!–ಎನ್ನನ್ನು ನಿನ್ನೊಳಗೇಕಾರ್ಥವ ಮಾಡಿಕೊಳಬೇಕಾದರೆ ಪರಶಿವಲಿಂಗವಲ್ಲದೆ ಮತ್ತೊಬ್ಬರುಂಟಾಗಿಲ್ಲೆಂಬೋ ದೃಷ್ಟೋಪಮಾನದ ಹಾಂಗೆ.

● ಸಮುದ್ರದೊಳಗಣ ಸಿಂಪಿನಂತೆ ಆನು ಬಾಯಬಿಡುತ್ತಲಿದ್ದೇನಯ್ಯಾ–ಪರಮೋಜ್ವಲಸ್ವರೂಪವಾದ ಪರಶಿವಲಿಂಗವೇ ನೀವೇ ಗುರುವಾಗಿ ಬಂದು ತನುವಿನಲ್ಲಿ ನೆಲೆಗೊಂಡು ತನುಪದಾರ್ಥವನ್ನು ಸಮರ್ಪಿಸಿಕೋ ಎಂದು, ಬಾಯಬಿಡುತ್ತಲಿದ್ದೇನಯ್ಯಾ–ಉಪಾವಸ್ಥೆಯಂ ಮಾಡುತ್ತಲಿದ್ದೇನಯ್ಯಾ, ನೀವಲ್ಲದೆ ಮತ್ತಾರು ಎನ್ನನರೆವವರಿಲ್ಲ ನೋಡಯ್ಯಾ–ನೀವೇ ಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡು ಮನಪದಾರ್ಥವನ್ನು ಸಮರ್ಪಿಸಿಕೋಬೇಕಾದರೆ, ನೀವಲ್ಲದೆ–

ಪರಶಿವಲಿಂಗವಲ್ಲದೆ, ಮತ್ತಾರು ಎನ್ನನಜಿವವರಿಲ್ಲ ನೋಡಯ್ಯಾ–ಹಾಂಗೆ ಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡು ಮನ ಪದಾರ್ಥವನ್ನು ಸಮರ್ಪಿಸಿಕೊಂಬುವಂಥದನ್ನು ತಿಳಿಯುವಂಥವರು ಮತ್ತೊಬ್ಬರುಂಟಾಗಿಲ್ಲ ಕಂಡಯ್ಯಾ. ಕೂಡಲಸಂಗಮದೇವಾ ನೀವಲ್ಲದೆ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಂಡು ಪ್ರಾಣದ್ರವ್ಯಪದಾರ್ಥವನ್ನು ಸಮರ್ಪಿಸಿಕೊಳ್ಳಬೇಕಾದರೆ, ಕೂಡಲಸಂಗಮದೇವಾ ನೀವಲ್ಲದೆ–ಪರಶಿವಲಿಂಗವೆ ನಿಮ್ಮಿಂದಲ್ಲದೆ, ಎನ್ನನೊಳಕೊಂಬುವರಿಲ್ಲ ನೋಡಯ್ಯಾ–ಹಾಂಗೆ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಂಡು ಪ್ರಾಣದ್ರವ್ಯ ಪದಾರ್ಥವನ್ನು ಸಮರ್ಪಿಸಿಕೊಂಬುದನು ತಿಳಿವಂಥವರು ದ್ವೈತಾದ್ವೈತಿಗಳೊಳಗೆ ಮತ್ತೊಬ್ಬರುಂಟಾಗಿಲ್ಲ ಕಂಡಯ್ಯಾ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – –

1–1 x (ಜ) 2–2 x (ಜ).

.........................

ಸಮುದ್ರದೊಳಗಣ ಸಿಂಪಿನಂತೆ ಬಾಯಬಿಡುತ್ತಿದ್ದೇನಯ್ಯಾ!–ಸಾಗರದೊಳಗಣ ಶುಕ್ತಿಯ ಹಾಂಗೆ ಆತ್ಮನು ಶಿವತತ್ತ್ವವೆಂಬ ಮುಕ್ತಿಫಳಾನಂದ ಜಲಕ್ಕೆ ಜಿಹ್ವೆಯ ತೆರವುತ್ತಿರ್ದೇನೆಂಬುದರ್ಥ, ಮುಂದಕ್ಕೆ ಕಾಣಬಂದರ್ಥ.

III – – – – – – – – – – – – – – – – – – – – – – – – – – – – –

1–1x (ಟ, ಡ). 2–2 x (ಟ, ಡ).

.........................

ಸಾಗರದೊಳಗಣ ಸಿಂಪು ಸ್ವಾತಿಜಲಕ್ಕೆ ಬಾಯ ತೆರಕೊಂಡಿರುವ ಹಾಂಗೆ, ಪುತ್ರಮಿತ್ರಕಳತ್ರಾದಿ ಕಾಯಜೀವಸಂಸ್ಕೃತಿಯೆಂಬ ಸಂಸಾರಸಮುದ್ರದಲ್ಲಿ ಬಿದ್ದಾತ್ಮನು ಗುರೂಪದೇಶವೆಂಬ ಚಿದ್ರಸಕ್ಕೆ ಅಪೇಕ್ಷೆಯಿಂದ ಜಿಹ್ವೆಯನು ತೆಱವುತ್ತಿದ್ದೇನೆ ಎಂಬುದೀಗ ಸಮುದ್ರದೊಳಗಣ ಸಿಂಪಿನಂತೆ ಬಾಯ ಬಿಡುತ್ತಲಿದ್ದೇನೆ ಎಂಬ ಶಬ್ದಕ್ಕರ್ಥ. ನೀವಲ್ಲದೆ–ಎಲೆ ಪರಶಿವಲಿಂಗವೆ ನೀವಲ್ಲದೆ, ಮತ್ತಾರು–ಅನ್ಯಮತದ ದೇವರುಗಳು ಮತ್ತಾರಾಯಿತ್ತಾದೊಡೆಯು, ಎನ್ನಂ–ಶರಣವನ್ನು, ಅಱಿವಱಿಲ್ಲ ನೋಡಯ್ಯಾ–ತನ್ನ ಚಿದಂಶಿಕನೆಂದಱಿದು ತನ್ನೊಳಗೇಕಾರ್ಥವ ಮಾಡಿಕೊಂಬರುಂಟಾಗಲಱಿಯರು ಕಂಡಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವಲ್ಲದೆ–ಸ್ವಯವಲ್ಲದೆ, ಒಳಕೊಂಬವರಿಲ್ಲವಯ್ಯ–ತನ್ನೊಳಗೇಕಾರ್ಥವ ಮಾಡಿಕೊಂಬ ದೇವರುಗಳುಂಟಾಗಲಱಿಯರು ಎಂಬುದೀಗ ಒಳಕೊಂಬವರಿಲ್ಲಯ್ಯ ಎಂಬ ಶಬ್ದಕ್ಕರ್ಥ.

.........................

೧–೧ ತ (ಡ).

V – – – – – – – – – – – – – – – – – – – – – – – – – – – – – –

ಸಮುದ್ರದೊಳಗಣ ಸಿಂಪು ಸ್ವಾತಿಜಲಕ್ಕೆ ಬಾಯಬಿಟ್ಟುಕೊಂಡಿರ್ಪಂತೆ, ಸಂಸಾರಸಮುದ್ರದಲ್ಲಿ ಬಿದ್ದಾತ್ಮನು [ಗು]ರೂಪದೇಶವೆಂಬ ಚಿದ್ರಸಕ್ಕೆಶಿವಾಪೇಕ್ಷೆಯೆಂಬ ಬಾಯಬಿಡುತ್ತಿರ್ದೇನೆಯೆಂಬುದೀಗ.

---

೫೬

**ಅಯ್ಯಾ ಅಯ್ಯಾ ಎಂದು ಕರೆವುತ್ತಲಿದ್ದೇನೆ. ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ. ಓ ಎನಲಾಗದೇ ಅಯ್ಯಾ ? ಆವಾಗಲೂ ನಿಮ್ಮ ಕರೆವುತ್ತಲಿದ್ದೇನೆ, ಮೌನವೇಕೆ ಕೂಡಲಸಂಗಮದೇವಾ?**

I – – – – – – – – – – – – – – – – – – – – – – – – – – – – – – – –

ಅಯ್ಯಾ ಅಯ್ಯಾ ಎಂದು ಕರೆವುತ್ತಲಿದ್ದೇನೆ: ಅಯ್ಯಾ ಅಯ್ಯಾ ಎಂದು–ಲಿಂಗವೆ ಲಿಂಗವೆಯೆಂದು, ಕರೆವುತ್ತಲಿದ್ದೇನೆ–ಶಿವಶಕ್ತಿಸನ್ನದ್ಧವಾದ [೧]ಪರಶಿವಲಿಂಗಕ್ಕೆ[೧] ಉಪಾವಸ್ಥೆಯಂ ಮಾಡುತ್ತಲೈದೇನೆ. ಅಯ್ಯಾ ಅಯ್ಯಾ ಎಂದು ಒಱಲುತ್ತಲಿದ್ದೇನೆ: ಅಯ್ಯಾ ಅಯ್ಯಾ ಎಂದು–ಲಿಂಗವೇ ಎನುತ್ತ, ಒಱಲುತ್ತಲಿದ್ದೇನೆ–ಸತ್ಪ್ರಾಣವಸ್ವರೂಪವಾದ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಲೈದೇನೆ.

ಓ ಎನ್ನಲಾಗದೇ ಅಯ್ಯಾ ?–ಓ ಮಗನೆ ಬಾಯೆಂದು ಉತ್ತರಕ್ಕೆ ಪ್ರತ್ಯುತ್ತರವನು ಕೊಟ್ಟು ಪ್ರಸಂಗಿಸಲಾಗದೆ?, ಅಯ್ಯಾ ?_ಎಲೆ ಲಿಂಗವೆ, ಆವಾಗಲೂ–ಎಲ್ಲಾಗಳೂ, ನಿಮ್ಮ ಕರೆವುತ್ತಲಿದ್ದೇನೆ–ಸತ್ಪ್ರಾಣಮಜ್ಞಾನಸ್ವರೂಪವಾದ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಲೈದೇನೆ, ಮೌನವೇಕೆ–ನೀವು ದಕ್ಷಿಣಾಮೂರ್ತಿಯಾಗಿ ಶಿವಾನುಭಾವವನ್ನು ಬೋಧಿಸುವಾಗ ಎನ್ನ ಕೂಡ ಮಾತನಾಡಲಾಗದೆಂದು ಕೂಸ ಕೊಂದ ಭೂತನ ಹಾಂಗೆ ವಾಙ್ನಿಯಮವ ಮುಂದುಗೊಂಡು ಶಬ್ದಮುಗ್ಧವಾಗಿ ಸುಮ್ಮನಿರುವದು ಏಳು ಕಾರಣಕ್ಕಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ ಶಿವಂಗೆ (ಗ).

---

೫೭

**ನೀ ಹುಟ್ಟಿಸಿದಲ್ಲಿ ಹುಟ್ಟದೆ, ಎನ್ನ ವಶವೇ ಅಯ್ಯಾ? ನೀನಿರಿಸಿದಲ್ಲಿರದೆ ಎನ್ನ ವಶವೇ ಅಯ್ಯಾ? ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ? ಅಕಟಕಟಾ! ಎನ್ನವನೆನ್ನವನೆನಿಸಯ್ಯಾ ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – – – – –

ನೀ ಹುಟ್ಟಿಸಿದಲ್ಲಿ ಹುಟ್ಟದೆ ಎನ್ನ ವಶವೇ ಅಯ್ಯಾ? : ನೀ ಹುಟ್ಟಿಸಿದಲ್ಲಿ ಹುಟ್ಟದೆ–ನೀನು ಸುಖೋತ್ಪತ್ಯಕ್ಕೂ ಒಳಗುಮಾಡಿದರೂ ಒಳ್ಳೇದೇ, ನೀನು ದುಃಖೋತ್ಪತ್ಯಕ್ಕೂ ಒಳಗು ಮಾಡಿದರೂ ಒಳ್ಳೇದೇ, ಎನ್ನ ವಶವೇ?–ಎನ್ನ ಕೂಡ ಶಕ್ಯವೇ, ಅಯ್ಯಾ?–ಎಲೆ ಲಿಂಗವೆ, ನೀನಿರಿಸಿದಲ್ಲಿರದೆ ಎನ್ನ ವಶವೇ ಅಯ್ಯಾ? : ನೀನಿರಿಸಿದಲ್ಲಿರದೆ–ನೀನು ಉಂಬುವುದಕ್ಕೆ ಉಡುವುದಕ್ಕೆ ಕೊಟ್ಟು ಸುಖದಲ್ಲಿ ಸೈತಿರಿಸಿದರೂ ಒಳ್ಳೇದೇ, ನೀನು ಉಂಬುವುದಕ್ಕೂ ಉಡುವುದಕ್ಕೂ ಕೊಡದೆ ದುಃಖದಲ್ಲಿ ಸೈರಿಸಿದರೂ ಒಳ್ಳೇದೇ, ಎನ್ನವಶವೇ–ಎನ್ನ ಕೂಡ ಶಕ್ಯವೇ, ಅಯ್ಯಾ?–ಎಲೆ ಲಿಂಗವೆ.

ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ? : ನೀ ಕೊಂದಲ್ಲಿ ಸಾಯದೆ–ನೀನು ಸುಖದಲ್ಲಿ ಮರಣವನ್ನೈದಿಸಿದರೂ ಒಳ್ಳೇದೇ, ನೀನು ದುಃಖದಲ್ಲಿ ಮರಣವನ್ನೈದಿಸಿದರೂ ಒಳ್ಳೇದೇ, ಎನ್ನ ವಶವೇ–ಎನ್ನ ಕೂಡ ಶಕ್ಯವೇ, ಅಯ್ಯಾ?–ಎಲೆ ಲಿಂಗವೆಯೆಂಬ ದೃಷ್ಟೋಪಮಾನದ ಹಾಂಗೆ,

● ನೀ ಹುಟ್ಟಿಸಿದಲ್ಲಿ ಹುಟ್ಟದೆ, ಎನ್ನ ವಶವೇ ಅಯ್ಯಾ? : ನೀ ಹುಟ್ಟಿಸಿದಲ್ಲಿ ಹುಟ್ಟದೆ–ನೀನು ಬ್ರಹ್ಮನುತ್ಪತ್ಯವನ್ನು ನಷ್ಟವ ಮಾಡಿ ಗುರುವಿನಲ್ಲಿ ಉತ್ಪತ್ಯವಾಗಿ ಅಳವಡಿಸಿದರೂ ಒಳ್ಳೆದೇ, ಗುರುವಿನಲ್ಲಿ ಉತ್ಪತ್ಯವಾಗಿ ಅಳವಡಿಸದೆ ಬ್ರಹ್ಮನುತ್ಪತ್ಯಕ್ಕೂ ಒಳಗು ಮಾಡಿದರೂ ಒಳ್ಳೇದೆ, ಎನ್ನ ವಶವೇ–ಎನ್ನ ಕೂಡ ಶಕ್ಯವೆ, ಅಯ್ಯಾ?–ಎಲೆ ಲಿಂಗವೆ, ನೀನಿರಿಸಿದಲ್ಲಿರದೆ ಎನ್ನ ವಶವೇ ಅಯ್ಯಾ? : ನೀನಿರಿಸಿದಲ್ಲಿರದೆ–ನೀನು ವಿಷ್ಣುವಿನ ಸ್ಥಿತಿಭೋಗಕ್ಕೊಳಗು ಮಾಡಿದರೂ ಒಳ್ಳೇದೆ, ಎನ್ನ ವಶವೇ–ಎನ್ನ ಕೂಡ ಶಕ್ಯವೇ, ಅಯ್ಯಾ?–ಎಲೆ ಲಿಂಗವೆ.

ನೀ ಕೊಂದಲ್ಲಿ ಸಾಯದೆ–ನೀನು ರುದ್ರನ ಲಯಧರ್ಮದ ಹೊಡೆಗಿಚ್ಚು ನಷ್ಟವ ಮಾಡಿ ಪರತತ್ತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಡಿಸಿದರೂ ಒಳ್ಳೇದೆ, ಪರತತ್ತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಡಿಸಿದೆ ರುದ್ರನ ಲಯಧರ್ಮದ ಹೊಡೆಗಿಚ್ಚಿಗೊಳಗುಮಾಡಿದರೂ ಒಳ್ಳೇದೆ, ಅದಲ್ಲದೆ ಇಹದ ಫಲ ಪರದ ಫಲಂಗಳನು ನಷ್ಟವಮಾಡಿ ಇಹದ ಪ್ರಸಾದಭೋಗ ಪರದ ನಿಜಮೋಕ್ಷತ್ವದಲ್ಲಿ ಸೈತಿರಿಸಿದರೂ ಒಳ್ಳೇದೆ, ಇಹದ ಪ್ರಸಾದ ಭೋಗ ಪರದ ನಿಜಮೋಕ್ಷತ್ವದಲ್ಲಿ ಸೈತಿರಿಸದೆ ಇಹದ ಫಲ ಪರದ ಪದಂಗಳಿಗೊಳಗುಮಾಡಿದರೂ ಒಳ್ಳೇದೆ; ಎನ್ನವಶವೇ–ಎನ್ನ ಕೂಡ ಶಕ್ಯವೇ, ಅಯ್ಯಾ?–ಎಲೆ ಲಿಂಗವೆ ಅಕಟಕಟಾ!–ಲಿಂಗವೆ ಲಿಂಗವೆ, ಎನ್ನವನೆನ್ನವನೆನಿಸಯ್ಯಾ–ಎನ್ನ ಜ್ಞಾನಕಲಾತ್ಮಕ ಶಿವಾಂಶಿಕ ಚಿತ್ತಿನ ಚಿದಂಶಿಕನೆಂದು ಹೇಳಿಸಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

೫೮

**ನರವಿಂಧ್ಯದೊಳಗೆನ್ನ ಹುಲುಗಿಣಿಯ ಮಾಡಿ, ಸಲಹುತ್ತ ಶಿವಶಿವಾಯೆಂದೋದಿಸಯ್ಯಾ. ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – –

ನರವಿಂಧ್ಯದೊಳಗೆ–ಜನಾರಣ್ಯದಲ್ಲಿ, ಎನ್ನ ಹುಲುಗಿಣಿಯ ಮಾಡಿ–ನಿತ್ಯ ನಿತ್ಯ ವಿವೇಕವನು ಬಲ್ಲ ಜ್ಞಾನಕಲಾತ್ಮನ ಮಾಡಿ, ಸಲಹುತ್ತ–ನಿಮ್ಮ ಪಾದೋದಕ ಪ್ರಸಾದವನಿತ್ತು ಸಂರಕ್ಷಣೆಯ ಮಾಡುತ್ತ, ಶಿವಶಿವಾಯೆಂದೋದಿಸಯ್ಯಾ–ಶಿವೋಹಂ ಬ್ರಹ್ಮಾಹಂ ಪ್ರಣವೋಹಂ ಎಂದುಚ್ಚರಿಸುವ ಹಾಂಗೆ ಮಾಡಯ್ಯಾ. ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು: ಭಕ್ತಿಯೆಂಬ–ಶಿವಾದ್ವೈತಭಕ್ತಿಯೆಂಬ, ಪಂಜರದೊಳಗೆ–ಮಂದಾಸನದಲ್ಲಿ, ಇಕ್ಕಿ–ಮಡಗಿ, ಸಲಹು–ನಿಮ್ಮ ಪಾದೋದಕ ಪ್ರಸಾದವನಿತ್ತು ಸಂರಕ್ಷಣೆಯ ಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – – – – –

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ–ಜನಾರಣ್ಯ[೧]ದಲ್ಲಿ[೧] ಆತ್ಮನ ವಿಷಯತೃಣಶುಕನ ಮಾಡಿ ರಕ್ಷಿಸುತ್ತ, ಶಿವಶಿವಾ ಎಂದೋದಿಸಯ್ಯಾ–ಹರಹರಾ ಓಂ ನಮಶ್ಶಿವಾಯ ನಮಶ್ಶಿವಾಯ ಎಂದು ಪಾಠಿಸಯ್ಯಾ ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು–ಶಿವಾದ್ವೈತಭಕ್ತಿಯೆಂಬ ಮನೆಯಲ್ಲಿ ಮಡಗಿ ಎಲೆ ಲಿಂಗವೆ ನಿನ್ನ ಪಾದೋದಕಪ್ರಸಾದವನಿತ್ತು ಸಂರಕ್ಷಣೆಯ ಮಾಡೆಂಬುದರ್ಥ.

..........................

೧–೧ x (ಜ).

V – – – – – – – – – – – – – – – – – – – – – – – – – – – – – – – – –

ತೃಣಪತಿಪತ್ತಾದ ಬಡಶುಕನಾಗಿಸಿಯೆಂಬುದೀಗ ಹುಲುಗಿಣಿಯ ಮಾಡಿ ಎಂಬುದರ್ಥ.

---

೫೯

**ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ, ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ, ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯಾ ತಂದೆ, ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತಿರಿಸು ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – – – – – –

● ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ: ಅತ್ತಯೆಂದರೆ ಬೆಳವಲದೇಶ ಇತ್ತಯೆಂದರೆ ಮಲಯಾಳದೇಶ, ಅತ್ತಯೆಂದರೆ ಪುಣ್ಯ, ಇತ್ತಯೆಂದರೆ ಪಾಪ, ಅತ್ತಯೆಂದರೆ ಧರ್ಮ, ಇತ್ತಯೆಂದರೆ ಕರ್ಮ, ಅತ್ತಯೆಂದರೆ ಸುಖ, ಇತ್ತಯೆಂದರೆ ದುಃಖ, ಈ ಸುಖದುಃಖ ಪುಣ್ಯಪಾಪ ಧರ್ಮಕರ್ಮವೆಂಬ ಬಂದಮೋಕ್ಷದ್ವಂದ್ವಕರ್ಮಂಗಳಲ್ಲಿ ಕೂಡಿ ಚರಿಸಿ ಹೋಗದಂತೆ. ಅದಲ್ಲದೆ ಕೊಡುಕೊಂಬೋಸ್ಥಾನ ಕೂಟಮಾಟಸ್ಥಾನ ಇಕ್ಕೆರೆವಸ್ಥಾನಂಗಳಿಗೆ ಕುರುಹಿಟ್ಟುಕೊಂಡು ಎಯ್ದು ಹೋಗದ ಹಾಂಗೆ; ಹೆಳವನ ಮಾಡಯ್ಯಾ–ಪಂಗುಳನ ಮಾಡಯ್ಯಾ ಎಂಬಲ್ಲಿ, ಶಿವಸತ್ಕ್ರಿಯಾಚಾರದಲ್ಲಿ ಸೈತಿರಿಸಯ್ಯಾ, ತಂದೆ–ಎನ್ನಾತ್ಮಜನಕನಾದಂಥ ಎಲೆ ಪರಶಿವಲಿಂಗವೆ, ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ: ಸುತ್ತಿ–ಸ್ತ್ರೀಪ್ರಪಂಚಿನಲ್ಲಿ ಪ್ರವೇಷ್ಟಿಸಿ, ಸುಳಿದು–

ಅಲ್ಲೇ ಸಂಚರಿಸಿ, ನೋಡದಂತೆ–ಸ್ತ್ರೀಯರುಗಳ ಹಾವಭಾವವಿಲಾಸವಿಭ್ರಮಂಗಳನ್ನು ನಿರೀಕ್ಷಣೆಯ ಮಾಡದ ಹಾಂಗೆ, ಅಂಧಕನ ಮಾಡಯ್ಯಾ–ಕುರುಡನ ಮಾಡಯ್ಯಾ ಎಂಬಲ್ಲಿ, ಮಹಾಲಿಂಗವನ್ನೇ ಗುರುಮುಖದಿಂದಿಷ್ಟಲಿಂಗವಾಗಿ ಅಂಗದ ಮೇಲೆ ಸಂಬಂಧವ ಮಾಡಿಕೊಂಡು ಆ ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುವಂತೆ ಮಾಡಯ್ಯಾ, ತಂದೆ–ಎನ್ನಾತ್ಮಜನಕನಾದಂಥ ಎಲೆ ಪರಶಿವಲಿಂಗವೆ.

ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯಾ ತಂದೆ: ಮತ್ತೊಂದು ಕೇಳದಂತೆ–ಹಾಳುಹರಟೆ ಸ್ಮರಲೀಲಾಪದ್ಯ ಕಾಳಗದ ವಾರ್ತೆ ಮೊದಲಾದುವನ್ನು ಆಲಿಸದ ಹಾಂಗೆ, ಕಿವುಡನ ಮಾಡಯ್ಯಾ–ಬಧಿರನ ಮಾಡಯ್ಯಾ ಎಂಬಲ್ಲಿ, ಶಿವಶಾಸ್ತ್ರ ಶಿವಾಗಮ ಶಿವಪುರಾಣ ಆದ್ಯರ ವಚನ ಮೊದಲಾದುವನ್ನು ಕೇಳುವ ಹಾಂಗೆ, ಆಲಿಸುವ ಹಾಂಗೆ ಮಾಡಯ್ಯಾ, ತಂದೆ–ಎನ್ನಾತ್ಮಜನಕನಾದಂಥ ಎಲೆ ಪರಶಿವಲಿಂಗವೆ. ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತಿರಿಸು: ನಿಮ್ಮ ಶರಣರ–ನಿಮ್ಮ ಜಂಗಮಮೂರ್ತಿಗಳ, ಪಾದವಲ್ಲದೆ–ಪದಕಮಲದ ಭಕ್ತಿಯಲ್ಲದೆ, ಅನ್ಯ ವಿಷಯಕ್ಕೆಳಸದಂತೆ–ಶಿವಾಚಾರಕ್ಕೆಬೇರಾದ ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋಗದ ಹಾಂಗೆ, ಇರಿಸು–ನಿಮ್ಮ ಪದಕಮಲದ ಭಕ್ತಿಯಲ್ಲಿ ಸೈತಿರಿಸು; ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂಬ ದೃಷ್ಟೋಪಮಾನದ ಹಾಂಗೆ.

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ: ಅತ್ತಯೆಂದರೆ ದ್ವೈತಕ್ರಿಯೆ ಇತ್ತಯೆಂದರೆ ದ್ವೈತಜ್ಞಾನ, ಹೋಗದಂತೆ–ದ್ವೈತಕ್ರಿಯೆ ಅದ್ವೈತಜ್ಞಾನವೆಂಬ ಉಭಯ ಕವಲುಬಟ್ಟೆಯೊಡಗೂಡಿ ಚರಿಸಿ ಚಾಗಿಯಾಗಿ ಹೋಗದ ಹಾಂಗೆ, ಹೆಳವನ ಮಾಡಯ್ಯಾ–ಪಂಗುಳನ ಮಾಡಯ್ಯಾ ಎಂಬಲ್ಲಿ, ಮಹಾಲಿಂಗವನೆ ಗುರುಮುಖದಿಂದಿಷ್ಟಲಿಂಗವಾಗಿ ಅಂಗದಲ್ಲಿ ಸಂಬಂಧವ ಮಾಡಿಕೊಂಡು ಆ ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುವ ಹಾಂಗೆ ಮಾಡಯ್ಯಾ, ತಂದೆ–ಎನ್ನಾತ್ಮಜನಕನಾದಂಥ ಎಲೆ ಪರಶಿವಲಿಂಗವೆ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ: ಸುತ್ತಿ–ಭಿನ್ನಯೋಗಾಭ್ಯಾಸದ ಮರವೆಯಲ್ಲಿ ಪ್ರವೇಷ್ಟಿಸಿ, ಸುಳಿದು–ಅಲ್ಲೇ ಸಂಚರಸಿ, ನೋಡದಂತೆ–ಭ್ರೂಮಧ್ಯದ ತಾರಕಬ್ರಹ್ಮವನು ಬಿಂದುಲಕ್ಷ್ಯಯೋಗದಿಂದ ಭಿನ್ನವಿಟ್ಟುಕೊಂಡು ನಿರೀಕ್ಷಣೆಯ ಮಾಡದ ಹಾಂಗೆ, ಅಂಧಕನ ಮಾಡಯ್ಯಾ–ಇಷ್ಟಲಿಂಗದ ಚಿಕ್ಕಳೆಯನ್ನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧಿಸಿಕೊಂಡು ಆ ಪ್ರಾಣಲಿಂಗಕ್ಕೆ ಮಂತ್ರಜ್ಞಾನ ಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸುವ ಹಾಂಗೆ ಮಾಡಯ್ಯಾ, ತಂದೆ–ಎನ್ನಾತ್ಮಜನಕನಾದಂಥ ಎಲೆ ಪರಶಿವಲಿಂಗವೆ.

ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯಾ ತಂದೆ: ಮತ್ತೊಂದು ಕೇಳದಂತೆ–ಬ್ರಹ್ಮರಂಧ್ರದ ಚಿದ್ಘೋಷವನ್ನು ಕಳಾಲಕ್ಷ್ಯಯೋಗದಿಂದ ಭಿನ್ನವಿಟ್ಟುಕೊಂಡು ಆಲಿಸದ ಹಾಂಗೆ, ಕಿವುಡನ ಮಾಡಯ್ಯಾ–ಬಧಿರನ ಮಾಡಯ್ಯಾ ಎಂಬಲ್ಲಿ, ಆ ಪ್ರಾಣಲಿಂಗವನ್ನೇ ಆತ್ಮಾಂಗದಲ್ಲಿ ಭಾವಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಭಾವಲಿಂಗಕ್ಕೆ ಮನೋಲಯ ನಿರಂಜನ ಪೂಜಾಕ್ರಿಯೆಗಳಿಂದಾರಾಧಿಸುವ ಹಾಂಗೆ ಮಾಡಯ್ಯಾ, ತಂದೆ–ಎನ್ನಾತ್ಮಜನಕನಾದಂಥ ಎಲೆ ಪರಶಿವಲಿಂಗವೆ. ನಿಮ್ಮ ಶರಣರ ಪಾದವಲ್ಲದೆ: ನಿಮ್ಮ ಎಂದರೆ ಗುರುಮೂರ್ತಿಗಳು, ಶರಣರೆಂದರೆ

ಆ ಗುರುವಿನ ದೀಕ್ಷಾತ್ರಯಂಗಳಿಂದುದಯವಾದ ಇಷ್ಟಪ್ರಾಣಭಾವಲಿಂಗಗಳ, ಪಾದವಲ್ಲದೆ-ತ್ರಿವಿಧಲಿಂಗಕ್ಕೆ ಮಾಡುವ ಅರ್ಚನೆ ಧ್ಯಾನ ಸಗುಣ ನಿರ್ಗುಣ ಮನೋಲಯ ನಿರಂಜನ ಪೂಜಾಕ್ರಿಯೆಗಳಲ್ಲದೆ, ಅನ್ಯ ವಿಷಯಕ್ಕೆಳಸದಂತೆ-ಲಿಂಗಕ್ಕೆ ಬೇರಾದ ಇಂದ್ರಿಯವಿಷಯಂಗಳ ಪ್ರಪಂಚಿನೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋಗದ ಹಾಂಗೆ, ಇರಿಸು-ನಿಮ್ಮ ತ್ರಿವಿಧಲಿಂಗಪೂಜೆಯಲ್ಲಿ ಸ್ಥೈತಿರಿಸು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆಂಬೆಂದು, ಅದು ಕಾರಣ ಪರಶಿವಲಿಂಗಕ್ಕುಪಾವವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II - - - - - - - - - - - - - - - - - - - - - - - - - - - - - - -

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ-ಸಂಕಲ್ಪ ವಿಕಲ್ಪ ಜನನ ದ್ವೈತಾದ್ವೈತವೆಂಬ ಕವಲುವಟ್ಟೆಯತ್ತ ಗಮಿಸದ ಹಾಂಗೆ ಭಿನ್ನ ಕ್ರಿಯಾಚರಣವಿಲ್ಲದ ಅಭಿನ್ನಕ್ರಿಯಾಚರಣವುಳ್ಳಾತನ ಮಾಡಯ್ಯಾ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ-ಷಟ್ಚಕ್ರಂಗಳ ಬಳಸಿ ದಶನಾಡಿಗಳಲ್ಲಿ ಅಡ್ಡಾಡಿ ಚಿನ್ನದ ದೀಪ ರನ್ನದ ಮಾಲೆ ಚಿತ್ರಕಾಶ ಮಿಂಚಿನ ಗೊಂಚಲ ತಾರಕಿಶಶಿಗಳ ನಿರೀಕ್ಷಿಸದ ಹಾಂಗೆ ಭಿನ್ನಜ್ಞಾನದೃಷ್ಟಿಯಿಲ್ಲದ ಅಭಿನ್ನದೃಷ್ಟಿಯುಳ್ಳಾತನ ಮಾಡಯ್ಯಾ ಗುರುವೆ. ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯಾ ತಂದೆ-ಅಷ್ಟಮಹಾಕುಶಬ್ದಂಗಳ ಲಾಲಿಸದ ಹಾಂಗೆ ಅಶ್ರುತಕರ್ಣವಿಲ್ಲದ ನಿಜಾಶ್ರುತಕರ್ಣವುಳ್ಳಾತನ ಮಾಡಯ್ಯಾ ಗುರುವೆ ಮುಂದಕ್ಕೆ ಕಾಣಬಂದರ್ಥ.

III - - - - - - - - - - - - - - - - - - - - - - - - - - - - - - -

ಅತ್ತಲಿತ್ತ-ದ್ವೈತಾದ್ವೈತಿಗಳ ಭಿನ್ನಕ್ರೀ ಭಿನ್ನಜ್ಞಾನದ ಕಡೆಗೆ, ಹೋಗದಂತೆ-ವರ್ತಿಸದ ಹಾಂಗೆ, ಹೆಳವನ ಮಾಡಯ್ಯಾ ತಂದೆ-ಅಭಿನ್ನಜ್ಞಾನಕ್ರೀಯುಳ್ಳಾತನಾಗಿಸಯ್ಯಾ ಸುತ್ತಿ-ಭೂಪ್ರದಕ್ಷಿಣೆಯ ಮಾಡಿ, ಸುಳಿದು-ಆಯಾಯ ತೀರ್ಥಕ್ಷೇತ್ರಂಗಳಿಗೆ ಎಡೆಯಾಡಿ, ನೋಡದಂತೆ-ಅಲ್ಲಿ ಅಲ್ಲಿಯ ದೇವರುಗಳನು ನಿರೀಕ್ಷಣೆಯ ಮಾಡದ ಹಾಂಗೆ, ಅಂಧಕನ-ಕುರುಡನಾಗಿಸಯ್ಯಾ ¹ಭೇದನ ಚಾಲನ ದೋಹನ ಮುದ್ರಾಸನಾದಿ ಕರಣಂಗಳ ಭ್ಯಾಸದಿಂದ ಆಧಾರಸ್ಥಾನದಲ್ಲಾಕುಂಚನಂಗೆಯ್ದು ಮನಪವನಾಗ್ನಿಗಳ ಸಮಯೋಗಿಸಿ ಕಶೇರ್ನಾಳ ಷಟ್ಚಕ್ರದಳಂಗಳಲ್ಲಿ ರೋಹಾರೋಹಂಗಳಿಂದೆಡೆಯಾಡಿಸಿ ಎಂಬುದೀಗ ಸುತ್ತಿ ಎಂಬ ಶಬ್ದಕ್ಕರ್ಥ ²ರೇಚಕದಲ್ಲಿ ಹದಿನಾರಂಗುಲ ವಾಯುವ ಹೊರಸೂಸಿ ಪೂರಕದಲ್ಲಿ ಹನ್ನೆರಡಂಗುಲವ ತುಂಬಿ ಕುಂಭಕದಲ್ಲಿ ನೂಲೆಳೆಯ ಗಡುತರ ವಾಯುವನೂರ್ಧ್ವಗತಿಯಂ ಘಟದೊಳಗಣ ಭ್ರಮರನೋಪಾದಿಯಲ್ಲಿ ಸುಳಿಯಿಸಿ ಅಲ್ಲಿಯೆ ತಡದು ನಿಲ್ಲಿಸುವದೀಗ ಸುಳಿ³ದು⁴ ಎಂಬ ಶಬ್ದಕ್ಕರ್ಥ, ಅಂತಪ್ಪ ವಾಯುವನೂರ್ಧ್ವಗತಿಯನೆಯ್ದಿಸಿ ಲಂಬಿಕಾಯೋಗದಿಂದೆ ಬ್ರಹ್ಮರಂಧ್ರಕ್ಕೆ ನಾಲಗೆಯ ನಿಗುಚಿ ಭಿನ್ನ ದೃ⁵ಕ್ಕಂ⁶ಸಿಕ್ಕಿಸಿ ಅಲ್ಲಿ ತೋರುವ ನಾನಾ ಪ್ರಕಾಶವ ಕಂಡು ಮಹಾಲಿಂಗದ ಬೆಳಗೆಂದರೆಯದೆ ಭಿನ್ನಯೋಗಿಗಳಂತೆ ಭಿನ್ನವಿಟ್ಟು ನಿರೀಕ್ಷಿಸದಂತೆ ಮಾಡಯ್ಯಾ ಎಂಬುದೀಗ ನೋಡದಂತೆ ಮಾಡಯ್ಯಾ ಎಂಬ ಶಬ್ದಕ್ಕರ್ಥ.

ಮತ್ತೊಂದು ಕೇಳದಂತೆ-ಶಿವಸ್ತುತಿಯಲ್ಲದೆ ಅನ್ಯವಾದ ಕುಶಬ್ದ ಹಿಂಸಾಶಬ್ದ ಭಾಂಡಿಕಾಶಬ್ದ ಭೀಭತ್ಸಶಬ್ದ ಮೊದಲಾದಷ್ಟಮಹಾಶಬ್ದಂಗಳ ನಾಲಿಸದ ಹಾಂಗೆ, ಕಿವುಡನ ಮಾಡಯ್ಯಾ-ಶಿವಕೀರ್ತನೆಯನಾಲಿಸುವಲ್ಲಿ ಅನಾ⁷ಹ⁸ತ ಕರ್ಣದ್ವಾರವುಳ್ಳಾತನಾಗಿಸಯ್ಯಾ, ತಂದೆ-ಆತ್ಮಜನಕನಾದಂಥ,

ನಿಮ್ಮ ಶರಣರ–ನಿಮಗಂಗವಾಗಿ ಎರಡಳಿದಂಥ ನಿಜಶರಣರ, ಪಾದವಲ್ಲದೆ–ಅವರ ಅತ್ಮಿಯಾಸ್ವರೂಪವಾದಿಷ್ಟಲಿಂಗದ ಪೂಜಾಸ್ತೋತ್ರ ಧ್ಯಾನ ಸ್ಮರಣೆಯನಲ್ಲದೆ, ಅನ್ಯ ವಿಷಯಕ್ಕೆಳಸದಂತೆ–ಭಿನ್ನವಾದ ಮಾಯಾಪ್ರಪಂಚುಗಿಚ್ಛೈಸದ ಹಾಂಗೆ, ಇರಿಸಯ್ಯಾ–ಸನ್ಮಾರ್ಗಾಚರಣೆಯಲ್ಲಿ ನೆಲಸುವಂತೆ ಮಾಡಯ್ಯಾ.

.........................

೧ + ಸುತ್ತಿ (ಟ, ಡ). ೨ + ಸುಳಿಯ (ಟ, ಡ). ೩_೩ ಸಿ (ಡ). ೪_೪ ಕ್ಕ (ಡ). ೫ + ಕಿವುಡನ ಮಾಡಯ್ಯಾ (ಟ). ೬_೬ ಹು (ಟ).

V– – – – – – – – – – – – – – – – – – – – – – – – – – – – – – – –

ಭೇದನ ಚಾಲನ ದೋಹನ ಮುದ್ರಾಸನ ಕರಣಾದಿಗಳಭ್ಯಾಸದಿಂದೆ ಆಧಾ[ರಸ್ಥಾನ]ದಲ್ಲಾಕುಂಚನಂಗೆಯ್ದು ಮನಪವನಂಗಳ ಸಂಯೋಗಿಸಿ ಕಶೇರ್ನಾಳದ ಷಟ್ಚಕ್ರದಲ್ಲಿ ರೋಹಾರೋಹಂಗಳಿಂದ ಆಡಿಸಿ ಎಂಬುದೀಗ ಸುತ್ತಿ, ರೇಚಕದಲ್ಲಿ ರೇಚಿಸಿ ಪೂರಕದಲ್ಲಿ ಪೂರಿಸಿ ಕುಂಭದಲ್ಲಿ ಸುತ್ತಿಯೆಂಬುದೀಗ ಸುತ್ತಿ, ವಾಯುವನೂರ್ಧ್ವಗತಿಯನೆಯ್ದಿಸಿ ಲಂಬಿಕಾಯೋಗದಿಂದೆ ಬ್ರಹ್ಮರಂಧ್ರಕ್ಕೆ ನಾಲಗೆಯ ನಿಗುಚಿ ಭಿನ್ನದೃಕ್ಕ ಸಿಲಿಕಿಸಿ ನೋಡದಂತೆ ಎಂಬುದೀಗ ನೋಡದಂತೆ.

---

## ೬೦

**ಎನ್ನ ವಾಮಕ್ಷೇಮ ನಿಮ್ಮದಯ್ಯಾ, ಎನ್ನ ಹಾನಿವೃದ್ಧಿ ನಿಮ್ಮದಯ್ಯಾ, ಎನ್ನ ಮಾನಾಪಮಾನ ನಿಮ್ಮದಯ್ಯಾ, ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ?**

I – – – – – – – – – – – – – – – – – – – – – – – – – – – – – – –

ಎನ್ನ ವಾಮಕ್ಷೇಮ ನಿಮ್ಮದಯ್ಯಾ–ಎನ್ನ ವಾಮಯೆಂದರೆ ದುಃಖ, ಕ್ಷೇಮಯೆಂದರೆ ಸುಖವು, ನಿಮ್ಮದಯ್ಯಾ_ಎನ್ನ ಸುಖದುಃಖಂಗಳು ನಿಮ್ಮವಯ್ಯಾ, ಜಂಗಮಮೂರ್ತಿಗಳಾದಯ್ಯಾ ಎನ್ನ ಹಾನಿವೃದ್ಧಿ ನಿಮ್ಮದಯ್ಯಾ : ಹಾನಿಯೆಂದರೆ ಕಿರಿದು, ವೃದ್ಧಿಯೆಂದರೆ ಹಿರಿದು, ಎನ್ನ ಹಿರಿದು ಕಿರಿದು, ನಿಮ್ಮದಯ್ಯಾ–ಸ್ವಾಮಿಗಳದಯ್ಯಾ, ಎನ್ನ ಮಾನಾಪಮಾನ ನಿಮ್ಮದಯ್ಯಾ–ಎನ್ನ ಮಾನವೆಂದರೆ ಪೂಜ್ಯವು, ಅಪಮಾನವೆಂದರೆ ಅಪೂಜ್ಯವು ಎನ್ನ ಪೂಜ್ಯಾಪೂಜ್ಯವು, ನಿಮ್ಮಯ್ಯಾ–ಗುರುಮೂರ್ತಿಗಳದಯ್ಯಾ.

ಬಳ್ಳಿಗೆ ಕಾಯಿ ದಿಮ್ಮಿತ್ತೆ : ಬಳ್ಳಿಗೆ–ಕುಂಬಳಬಳ್ಳಿ ಸವತೆಬಳ್ಳಿ ಪಡುವಲಬಳ್ಳಿ ಹಾಗಲಬಳ್ಳಿ ಹೀರೆಬಳ್ಳಿ ಮೊದಲಾದುವಕ್ಕೆ, ಕಾಯಿ–ಸ್ವಲ್ಪಿತವಾದ ಶಲಾಟು, ದಿಮ್ಮಿತ್ತೆ–ಬಹುಭಾರವೆಂಬಲ್ಲಿ ಎಂತಪ್ಪ ಕಾಯಿಗಳಾದರೂ ತನ್ನ ರಸವನ್ನು ಕೊಟ್ಟು ವರ್ಧನವ ಮಾಡುವುದಲ್ಲದೆ ಇದು ಸ್ವಲ್ಪವೆಂದು ಬಿಡುತ್ತೈತೇ? ಇಲ್ಲವು ಹಾಂಗೆ, ಬಳ್ಳಗೆ–ತತ್ತ್ವಭುವನ ಬ್ರಹ್ಮಾಂಡಂಗಳನುಂಟುಮಾಡಿ ವಿನೋದಿಸುವಂಥ ಪರಶಿವಲಿಂಗಕ್ಕೆ, ಕಾಯಿ–ಸ್ವಲ್ಪವಾದಾತ್ಮನು, ದಿಮ್ಮಿತ್ತೆ–ಬಹುಭಾರವೆಂಬಲ್ಲಿ ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚನು ನಷ್ಟವ ಮಾಡಿ ರಕ್ಷಣೆಯ ಮಾಡು,

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನ ಕಲಾತ್ಮನು.

III – – – – – – – – – – – – – – – – – – – – – – – – – – – – – – –

ಎನ್ನ–ಶರಣನ, ವಾಮಕ್ಷೇಮ–ಕೊರತೆ ನೆರತೆಯು, ನಿಮ್ಮದಯ್ಯಾ–ನಿಮ್ಮ ಸಂಬಂಧವಾದಂತದಯ್ಯಾ, ಎನ್ನ ಹಾನಿವೃದ್ಧಿ–ಎನ್ನ ಬಡತನ ಸಿರಿತನವು, ನಿಮ್ಮದಯ್ಯಾ–ನಿಮ್ಮ ಸಂಬಂಧವಾದಂತದಯ್ಯಾ, ಎನ್ನ ಮಾನಾಪಮಾನವು–ಎನ್ನ ಪೂಜ್ಯಾಪೂಜ್ಯವು, ನಿಮ್ಮದಯ್ಯಾ–ನಿಮ್ಮ ಸಂಬಂಧವಾದಂತಯ್ಯಾ, ಬಳ್ಳಿಗೆ ಕಾಯಿ ದಿಮ್ಮಿತ್ತೆ?–ಬಳ್ಳಿ ಸಣ್ಣನಾಗಿ ಕಾಯಿ ತೋರನಾಗಿ ಹೊರಲಾಱೆನೆಂದು ಬೀಸಾಕಿತ್ತೆ? ಇಲ್ಲವೆಂಬ ಹಾಂಗೆ, ಅತಿ ಸೂಕ್ಷ್ಮವಾಗಿ ವಿಶ್ವಕುಟುಂಬಿಯಾಗಿ ಸರ್ವಾಂತರ್ಯಾಮಿಯಾದ ಎಲೆ ಪರಶಿವ[1]ಲಿಂಗ[1] ನಿನಗೆ ಪ್ರಪಂಚುರೂಪಾದ ಜಡಾತ್ಮ ನಾನು ಹೊಱೆಯೆ? ಹೊಱೆಯಲ್ಲವೆಂಬುದೀಗ ಬಳ್ಳಿಗೆ ಕಾಯಿ ದಿಮ್ಮಿತ್ತೆ? ಎಂಬ ಶಬ್ದಕ್ಕರ್ಥ.

........................

೧–೧ x (ಡ).

V – – – – – – – – – – – – – – – – – – – – – – – – – – – – – – –

ಬಳ್ಳಿ ಸಣ್ಣನಾಗೆ ಕಾಯಿ ತೋಱನಾಗೆ ಹೊಱಲಾರದಲಸಿ ಬಿಟ್ಟುರುಕರುತ್ತೆಯೆಂಬಂತೆ ಅತಿ ಸೂಕ್ಷ್ಮವಾಗಿ ವಿಶ್ವಕುಟುಂಬಿಯಾಗಿ ಸರ್ವಾಂತರ್ಯಾಮಿಯಾದ ಶಿವ ನೀನು, ಪ್ರಪಂಚುರೂಪಾದ ಜಡಾತ್ಮ ನಿನಗೆ ಭಾರ ಎಂಬುದೀಗ ಬಳ್ಳಿಗೆ ಕಾಯಿ ದಿಮ್ಮಿತ್ತೆ.

---

೬೧

**ಸಟೆಯಿಲ್ಲದಂತೆ ಪ್ರಪಂಚುಯಿಲ್ಲದಂತೆ ವೈಶಿಕವಿಲ್ಲದಂತೆ ನಡೆಸಯ್ಯಾ ಲಿಂಗತಂದೆ. ಒಂದು ನಿಮಿಷವಾದಡೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ, ಬೇರೆ ಅನ್ಯವ ತೋರದಿರಯ್ಯಾ, ಹೊಲಬುಗೆಟ್ಟೆನಯ್ಯಾ ಕೂಡಲಸಂಗಮದೇವಾ!**

I – – – – – – – – – – – – – – – – – – – – – – – – – – – – – – –

ಸಟೆಯಿಲ್ಲದಂತೆ–ಅನೃತಯಿಲ್ಲದ ಹಾಂಗೆ, ಪ್ರಪಂಚುವಿಲ್ಲದಂತೆ_ತನುಪ್ರಪಂಚು ಮನಪ್ರಪಂಚು ಆತ್ಮನ ಇಂದ್ರಿಯ ವಿಷಯಪ್ರಪಂಚಿಲ್ಲದ ಹಾಂಗೆ, ವೈಶಿಕವಿಲ್ಲದಂತೆ_ಕುರುಂಬುತನವಿಲ್ಲದ ಹಾಂಗೆ, ನಡೆಸಯ್ಯಾ_ನಿಸ್ಸಟಿಕನಾಗಿ ನಿಗರ್ವಿಯಾಗಿ ನಿಷ್ಪ್ರಪಂಚಿಕನಾಗಿ ಸೈತಿರಿಸಯ್ಯಾ, ಲಿಂಗತಂದೆ–ಲಿಂಗಯ್ಯನೆಂಬ ಆತ್ಮಜನಕನೆ. ಒಂದು ನಿಮಿಷವಾದಡೆಯೂ–ಒಂದು ನಿಮಿಷಾರ್ಧನಿಮಿಷವಾದರೆಯೂ, ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ–ನಿಮ್ಮ ತ್ರಿವಿಧ ಲಿಂಗಾನುಭಾವಿಗಳಾದ ಶಿವಶರಣರ ಶಿವಾನುಭಾವದ ಗೋಷ್ಠಿಯಲ್ಲಿ ಸೈತಿರಿಸಯ್ಯಾ, [1]ಬೇಱೆ ಅನ್ಯವ[1] ತೋರದಿರಯ್ಯಾ–ಶಿವಾಚಾರಕ್ಕೆ ಬೇರಾದ ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯಲ್ಲಿ ಸೈತಿರಿಸದಿರಯ್ಯಾ. [2]ಹೊಲಬು[2]ಗೆಟ್ಟೆನಯ್ಯಾ–ಸತ್ಪಥಮಾರ್ಗದ

ಹೋಬಳಿದಪ್ಪಿದೆನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

........................

೧ + ಅನ್ಯಚಿತ್ತವಿರಿಸದಿರಯ್ಯಾ (ಕ, ಗ). ೨–೨ ಹೊಬ್ಬುಳಿ (ಕ).

IV – – – – – – – – – – – – – – – – – – – – – – – – – – – – – – – – –

1 + ಮತ್ತೆ (ತ)

........................

ಶಿವಜ್ಞಾನೋದಯವಾದ ಶರಣ ೩[ರು ತಮ್ಮ]೩ ರವಿಂಗೆ ಕಂಟಕವಾಗಿಪ್ಪ ಅಜ್ಞಾನ ಗುಣಂಗಳು ಹೊದ್ದದಂತೆ, ಶರಣಸಂಗವ ಕರುಣಿಸಿ ನಿಜವ ಮರೆಯದಂತೆ ಇರಿಸಯ್ಯಾಯೆಂದು ಲಿಂಗವ ಬೇಡುತ್ತಿರ್ದರು ೪[ಎಂ]೪ಬುದೀ ವಚನದ ತಾತ್ಪರ್ಯಾರ್ಥ.

........................

೩–೩ ನು ತನ್ನ (ತ). ೪–೪ ಶರಣರೆ (ತ).

---

೬೨

**ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ; ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ**

I – – – – – – – – – – – – – – – – – – – – – – – – – – – – – – – – –

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ_ಇವ ಮಾಯಾಂಶಿಕ ಜಗಜ್ಜೀವ ಪ್ರಕೃತ್ಯಾತ್ಮನೆಂದು ಹೇಳಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ_ಇವ ನಮ್ಮ ಜ್ಞಾನಕಲಾತ್ಮ ಶಿವಾಂಶಿಕಚಿತ್ತಿನ ಚಿದಂಶಿಕನೆಂದು ಹೇಳಿಸಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಮನೆಯ_ನಿಮ್ಮ ಮಂದಿರದ, ಮಗನೆಂದೆನಿಸಯ್ಯಾ_ಕುಮಾರನೆಂದು ಹೇಳಿಸಯ್ಯಾ ಎಂಬ ದೃಷ್ಟೋಪಮಾನದ ಹಾಂಗೆ,

● ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ: ಇವನಾರವ–ಇವನು ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಲ್ಪಟ್ಟಾತನು, ಇವನಾರವ–ಇವನು ವಿಷ್ಣುವಿನ ದುರ್ಭೋಗದ ಸ್ಥಿತಿಯನ್ನು ಪಡದನುಭವಿಸಲ್ಪಟ್ಟಾತನು, ಇವನಾರವ ನೆಂದೆನಿಸದಿರಯ್ಯಾ–ಇವನು ರುದ್ರನ ಲಯಧರ್ಮದ ಹೊಡೆಗಿಚ್ಚಿಗೆ ಒಳಗಾಗಿ ಸತ್ತುಹೋಗಲ್ಪಟ್ಟಾತನೆಂದು ಹೇಳಿಸದಿರಯ್ಯಾ. ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ : ಇವ ನಮ್ಮವ_ಇವನು ಬ್ರಹ್ಮನುತ್ಪತ್ಯವನ್ನು ನಷ್ಟವಮಾಡಿ ಗುರುವಿನಲ್ಲಿ ಉತ್ಪತ್ಯವಾಗಿ ಅಳವಡಿಸಿಕೊಂಡಾಚರಿಸಲ್ಪಟ್ಟಾತನು, ಇವ ನಮ್ಮವ–ಇವನು ವಿಷ್ಣುವಿನ ದುರ್ಭೋಗದ ಸ್ಥಿತಿಯನ್ನು ನಷ್ಟವಮಾಡಿ ಲಿಂಗದಲ್ಲಿ ಸ್ಥಿತಿಭೋಗವಾಗಿ ಅಳವಡಿಸಿಕೊಂಡಾಚರಿ

ಸಲ್ಪಟ್ಟಾತನು, ಇವ ನಮ್ಮವ–ಇವನು ರುದ್ರನ ಲಯಧರ್ಮದ ಹೊಡೆಗಿಚ್ಚನು ನಷ್ಟವಮಾಡಿ ಪರತತ್ತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳಡಿಸಿಕೊಂಡಾಚರಿಸಲ್ಪಟ್ಟಾತನೆಂದು ಹೇಳಿಸಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಮನೆಯ–ನಿಮ್ಮ ಭಕ್ತಿಮಂದಿರದ, ಮಗನೆಂದೆನಿಸಯ್ಯಾ–ನಿಮ್ಮ ಕೃಪಾಪುತ್ರನೆಂದು ಹೇಳಿಸಯ್ಯಾ ಎಂಬ ದೃಷ್ಟೋಪಮಾನದ ಹಾಂಗೆ,

● ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ: ಇವನಾರವ–ಇವನು ಅಂಗ ಬೇರೆ ಲಿಂಗ ಬೇರೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾರಾಧಿಸುವಂಥ ಸಿದ್ಧಾಂತಿಯು, ಇವನಾರವ–ಇವನು ಸಕಲ ವೇದಶಾಸ್ತ್ರಾಗಮ ಪುರಾಣಂಗಳ ನೋಡಿಕೊಂಡು ಶ್ರುತಜ್ಞಾನಬಲದಿಂದ ಅರುಹಿನಿಂದ ನಿರವಯ ಬ್ರಹ್ಮವನ್ನೇ ಕುರುಹಿಟ್ಟುಕೊಂಡು "ಆತ್ಮಾ ಕೇವಲಶ್ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವಂಥ ವೇದಾಂತಿಯು, ಇವನಾರವನೆಂದೆನಿಸದಿರಯ್ಯಾ–ಇವನು ಉದಯ ಮಧ್ಯಾಹ್ನ ಸಾಯಂಕಾಲದಲ್ಲಿ ಹೃದಯ ಭ್ರೂಮಧ್ಯ ಬ್ರಹ್ಮರಂಧ್ರಸ್ಥಾನದಲ್ಲಿ ನಾದಲಕ್ಷ್ಯ ಬಿಂದುಲಕ್ಷ್ಯ ಕಳಾಲಕ್ಷ್ಯ ಯೋಗದಿಂದ ವಸ್ತುವನ್ನು ಕುರುಹಿಟ್ಟು ಧ್ಯಾನಿಸಿ ಧ್ಯಾನಮಂತ್ರದಿಂದಾವಸ್ತುವಿನಲ್ಲಿ ಕೂಡಿ ಧ್ಯಾನಿಸಿ ಆ ಧ್ಯಾನನಿಂದಲ್ಲಿ ವಸ್ತು ಭಿನ್ನವಾಗಿಪ್ಪುದೆಂದು ಹೇಳುವಂಥ ಭಿನ್ನಯೋಗಾಭ್ಯಾಸಿಯೆಂದು ಹೇಳಿಸದಿರಯ್ಯಾ.

● ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ : ಇವ ನಮ್ಮವ_ಇವನು ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಕ್ರೀವುಳ್ಳಾತನು, ಇವ ನಮ್ಮವ–ಇವನು ಇಷ್ಟಲಿಂಗದ ಚಿತ್ಕಳೆಯನ್ನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಪ್ರಾಣಲಿಂಗಕ್ಕೆ ಮಂತ್ರಜ್ಞಾನ ಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸುವಂಥ ಸಮರಸಜ್ಞಾನವುಳ್ಳಾತನು, ಇವ ನಮ್ಮವನೆಂದೆನಿಸಯ್ಯಾ_ಆ ಪ್ರಾಣಲಿಂಗವನೇ ಆತ್ಮಾಂಗದಲ್ಲಿ ಭಾವಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಭಾವಲಿಂಗಕ್ಕೆ ಮನೋಲಯ ನಿರಂಜನ ಪೂಜಾಕ್ರಿಯೆಗಳಿಂದಾರಾಧಿಸುವಂಥ ಮಹಾಜ್ಞಾನವುಳ್ಳಾತನೆಂದು ಹೇಳಿಸಯ್ಯಾ. ಕೂಡಲಸಂಗಮದೇವಾ_ಎಲೆ ಪರಶಿವಲಿಂಗವೆ, ನಿಮ್ಮ ಮನೆಯ ಮಗನೆಂದೆನಿಸಯ್ಯಾ : ನಿಮ್ಮ ಎಂದರೆ ನಿಃಷ್ಕಲಬ್ರಹ್ಮವು, ಮನೆಯೆಂದರೆ ಚಿತ್ತು, ಮಗನೆಂದೆನಿಸಯ್ಯಾ–ಚಿತ್ತಿನ ಚಿದ್ವಾರದಲ್ಲಿ ಹುಟ್ಟಲ್ಪಟ್ಟಾತನೆಂದು ಹೇಳಿಸಯ್ಯಾಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II – – – – – – – – – – – – – – – – – – – – – – – – – – – – – –

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ ಇವ ಬ್ರಹ್ಮನುತ್ಪತ್ಯದಲ್ಲಿ ಹುಟ್ಟಿದ ಜೀವನು, ಇವ ವಿಷ್ಣುವಿನ ದುರ್ಭೋಗಸ್ಥಿತಿಯಲ್ಲಿ ವರ್ಧನವಾದ ಜೀವನು, ಇವ ರುದ್ರನ ಲಯೋಧರ್ಮದ ಹೊಡೆಗಿಚ್ಚಿನೊಳಗಾದ ಜೀವನೆಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ_ಇವ ಶ್ರೀಗುರುವಿನ ಕರಕಮಲವೆಂಬ ನಿರ್ಯೋನಿಯಲ್ಲಿ ಜನಿಸಿದವನು, ಇವ ಶಿವಸುಖ ಪ್ರಸನ್ನೇತಿಪ್ರಸಾದದಲ್ಲಿ ವರ್ಧನವಾದವನು, ಇವ ಪರಶಿವತತ್ತ್ವಸ್ವರೂಪವಾದ ಜಂಗಮದಲ್ಯೈಕ್ಯನಾದವನೆಂದೆನಿಸಯ್ಯಾ. ಮತ್ತಂ ಇವ ತನುಪ್ರಕೃತಿಯುಳ್ಳವನು ಇವ ಮನಃಪ್ರಕೃತಿಯುಳ್ಳವನು ಇವ ಧನಪ್ರಕೃತಿಯುಳ್ಳವನೆಂದೆನಿಸದಿರಯ್ಯಾ, ಇವ ತನುವ ಗುರುವಿಗೆ

ಕೊಟ್ಟವನು ಇವ ಮನವ ಲಿಂಗಕ್ಕೆ ಕೊಟ್ಟವನು ಇವ ಧನವ ಜಂಗಮಕ್ಕೆ ಕೊಟ್ಟವನೆಂದೆನಿಸಯ್ಯಾ, ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ–ಎಲೆ ಲಿಂಗವೇ ನಿಮ್ಮ ಭಕ್ತಿಮಂದಿರದ ಚಿತ್ತುತ್ರನೆಂದೆನಿಸಯ್ಯಾ.

---

೬೩

**ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯ ಬಿಟ್ಟಡೆ ನಿಮ್ಮ ನಗುವರಯ್ಯಾ. ಶಿವಬಟ್ಟೆಯಲೆನ್ನನಿರಿಸಯ್ಯಾ ಹರನೆ, ಹೊಲಬುಗೆಟ್ಟೆನು ಬಟ್ಟೆಯ ತೋರಯ್ಯಾ! ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯಾ : ಕೂಡಲಸಂಗಮದೇವನೆನ್ನ ಕಾಡಿಹನಯ್ಯಾ!**

I – – – – – – – – – – – – – – – – – – – – – – – – – – – – – – – –

ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ : ಹುಟ್ಟೆಂದು–ಉತ್ಪತ್ತ್ಯವಾಗೆಂದು, ಲೋಕದಲ್ಲಿ–ಜಗತ್ತಿನಲ್ಲಿ, ಹುಟ್ಟಿಸಿ–ಉತ್ಪತ್ತ್ಯವ ಮಾಡಿ, ಇಳಿಯ ಬಿಟ್ಟಡೆ–ಸಕಲಪ್ರಪಂಚಿನೊಳಗುಮಾಡಿ ಕಾಡಿದರೆ, ನಿಮ್ಮ ನಗುವರಯ್ಯಾ–ಶಿವನು ತನ್ನಂಶವಾದಾತ್ಮನನು ಮರ್ತ್ಯಲೋಕದಲ್ಲಿ ದೇಹಸಂಬಂಧಿಯಾಗಿ ಹುಟ್ಟಿಸಿ ಸಕಲಪ್ರಪಂಚಿನೊಳಗುಮಾಡಿ ಕಾಡುತ್ತೈದಾನೆಂದು ಗಹಗಹಿಸಿ ನಗುವರಯ್ಯಾ. ಶಿವಬಟ್ಟೆಯಲೆನ್ನನಿರಿಸಯ್ಯಾ–ಲಿಂಗಾಚಾರಮಾರ್ಗದಲೆನ್ನ ಸ್ಥಿರಿಸಯ್ಯಾ, ಹರನೆ–ದುರಿತಧ್ವಂಸಿಯಾದಂಥ ದೇವನೇ, ಹೊಲಬುಗೆಟ್ಟೆನು–ಸತ್ಪಥಮಾರ್ಗದ [1]ಹೋಬಳಿ[1]ದಪ್ಪಿದೆನು, ಬಟ್ಟೆಯ ತೋರಯ್ಯಾ–ಮೋಕ್ಷ ಮಾರ್ಗವ ಕಾಣಿಸಯ್ಯಾ. ಕೂಡಲಸಂಗಮದೇವ–ಪರಶಿವಲಿಂಗವು, ಎನ್ನ ಕಾಡಿಹನಯ್ಯಾ!–ಎನ್ನ ಪೀಡಿಸುತ್ತಿಹನಯ್ಯಾ, ಹುಯ್ಯಲಿಟ್ಟೆನು–ಮೊರೆಯಿಟ್ಟೆನು, ಗಣಂಗಳು–ನಂದೀಶಾದಿ ಪ್ರಮಥಗಣಂಗಳು, ಕೇಳಿರಯ್ಯಾ–ಎನ್ನ ವಾಕ್ಯವನು ಪರಾಕಾಗಿ ಆಲಿಸಿ ನೀವೊಂದು ವಾಕ್ಯವನು ಶಿವನಿಗೆ ಹೇಳಿ ಬಿಡಿಸಿಕೊಳ್ಳಿರೆಂದು ಸಮ್ಮುಖದಲ್ಲಿ ನಿಂತುಕೊಂಡು ಹಸ್ತಾಂಜಲಿತನಾಗಿ ಬಿನ್ನವಿಸಿಕೊಳ್ಳುತ್ತಿಹನು ಸಂಗನಬಸವೇಶ್ವರನುಯೆಂದು, ಅದು ಕಾರಣ ಪರಶಿವಲಿಂಗಕ್ಕಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧–೧ ಹೊಬ್ಬುಳಿ (ಕ). ೨ + ನೀವು (ಕ, ಗ).

IV – – – – – – – – – – – – – – – – – – – – – – – – – – – – – – –

ತನ್ನ ತದಂಶವಾದ ಆತ್ಮನಿಗೆ ತಾನೇ ದೇಹಸಂಬಂಧಿಯ ಮಾಡಿ ಹುಟ್ಟಿಸಿ ತನ್ನ ನಿಜವ ಕೂಡುವ ಭಕ್ತಿಯ ಪಥವ ಮರಸಿ ಕಾಡುತ್ತಿರ್ದಾತ ಶಿವನೆಂದಱಿದು ಶರಣರು ತಮ್ಮ ನಿಜವ ಕೂಡುವ ಭಕ್ತಿಯ ಪಥವ ತೋಱೆ ಮುಕ್ತನ ಮಾಡೆಂದು ಶಿವಂಗೆ ಮೊರೆಯಿಟ್ಟು ಬೇಡುತ್ತಿರ್ದರೆಂಬುದೀ ವಚನದ ತಾತ್ಪರ್ಯಾರ್ಥ.

..........................

೨ + ಶಿವ(ತ). ೪ + ಅಂತು ವಚನ ೧೪೩ಕ್ಕಂ ಮಂಗಳ ಮಹಾಶ್ರೀ ಶ್ರೀ (ತ).

---

೬೪

**ಅಕಟಕಟಾ ಶಿವ ನಿನಗಿನಿತು ಕರುಣವಿಲ್ಲ! ಅಕಟಕಟಾ ಶಿವ ನಿನಗಿನಿತು ಕೃಪೆಯಿಲ್ಲ! ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ? ಪರಲೋಕ ದೂರನ? ಏಕೆ ಹುಟ್ಟಿಸಿದೆ ಕೂಡಲಸಂಗಮದೇವಾ ಕೇಳಯ್ಯಾ : ಎನಗಾಗಿ ಮತ್ತೊಂದು ತರುಮರಾದಿಗಳಿದ್ದಿಲ್ಲವೇ?**

I – – – – – – – – – – – – – – – – – – – – – – – – – – – – – – – –

ಅಕಟಕಟಾ–ಅಯ್ಯಯ್ಯೋ, ಶಿವ ನಿನಗೆ–ಮಾಂಗಲ್ಯಸ್ವರೂಪನಾದಂಥ ದೇವನಿಗೆ, ಇನಿತು–ಇಷ್ಟು, ಕರುಣವಿಲ್ಲ–ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚನ್ನು ನಷ್ಟವ ಮಾಡಿಬಿಟ್ಟು ರಕ್ಷಣೆಯ ಮಾಡಬೇಕೆಂಬಂಥ, ಕೃಪೆಯಿಲ್ಲವು–ದಯವುಂಟಾಗಿಲ್ಲವು. ಅಕಟಕಟಾ–ಅಯ್ಯಯ್ಯೋ, ಶಿವ ನಿನಗೆ–ಮಾಂಗಲ್ಯ ಸ್ವರೂಪನಾದಂಥ ದೇವನಿಗೆ, ಇನಿತು–ಇಷ್ಟು, ಕರಣವಿಲ್ಲ–ನೀವೇ ಗುರುವಾಗಿ ಬಂದು ಲಿಂಗಾಂಗಸಂಬಂಧತತ್ವವನ್ನು ಕರುಣಿಸಿಕೊಟ್ಟು ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣೆಯ ಮಾಡಬೇಕೆಂಬಂಥ, ಕೃಪೆಯುಂಟಾಗಿಲ್ಲವು.

ಇಹಲೋಕ ದುಃಖಿಯ–ಇಹದ ಅಷ್ಟಭೋಗ ಮಲತ್ರಯಂಗಳನು ಪಡೆದನುಭವಿಸಲ್ಪಟ್ಟ ದುಃಖಿ ಜೀವನ, ಏಕೆ ಹುಟ್ಟಿಸಿದೆ_ಏನು ಕಾರಣಕ್ಕೆ ದೇಹಸಂಬಂಧಿಯಾಗಿ ಉತ್ಪತ್ಯವ ಮಾಡಿದೆ, ಪರಲೋಕ ದೂರನ_ಪರದ ಸಾಲೋಕ್ಯಾದಿ ಚತುರ್ವಿಧ ಪದಂಗಳ ಪಡೆದನುಭವಿಸುವುದಕ್ಕೆ ಹುಟ್ಟುಗೊಳನಾದಂಥ ಜೀವನ, ಏಕೆ ಹುಟ್ಟಿಸಿದೆ–ಏನು ಕಾರಣಕ್ಕೆ ಉತ್ಪತ್ಯವ ಮಾಡಿದೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಆಲಿಸಯ್ಯಾ, ಎನಗಾಗಿ–ಸಂಗನಬಸವೇಶ್ವರನಿಗಾಗಿ, ಮತ್ತೊಂದು ತರುಮರಾದಿಗಳಿದ್ದಿಲ್ಲವೆ?–ಮತ್ತೊಂದು ಸಸಿವೃಕ್ಷಾದಿಗಳು ಹುಟ್ಟದೆ ಹೋದವೆಯೆಂಬಲ್ಲಿ ಸಣ್ಣಸಣ್ಣ ಗಿಡಗಳಾಗಿ ಹುಟ್ಟಿದರೆ ಹೂವು ಪತ್ರಗಳಾಗುವವು. ಅವುಗಳನ್ನು ತೆಗೆದುಕೊಂಡು ಬಂದು ಲಿಂಗಕ್ಕೆ ಧರಿಸಿದರೆ ಅವಕ್ಕೊಂದು ಗತಿಯಾಗುವುದು. ದೊಡ್ಡ ದೊಡ್ಡ ಹೆಮ್ಮರಗಳಾಗಿ ಹುಟ್ಟಿದರೆ ಸಮಸ್ತ ಪಶುಪಕ್ಷಿಪ್ರಾಣಿಗಳಿಗೆ ಮೆಲುವುದಕ್ಕೆ ಹಣ್ಣುಕಾಯಿಗಳಾಗೆ ಬರುವವು. ಸಮಸ್ತ ಆತ್ಮರುಗಳು ಕುಂದ್ರೋನಿಂದ್ರೋದಕ್ಕೆ ನೆರಳಾಗುವುದು ಅಥವಾ ಒಂದು ವೇಳೆ ಕಡಿದರೆ ಮಠಮನೆಗಳಿಗೆ ಬರುವವು. ಅದಕ್ಕೊಂದು ಗತಿಯಾಗುವದು. ಅದು ಕಾರಣ ಎನಗಾಗಿ, ಎನ್ನ ಹುಟ್ಟಿಸುವುದರಿಂದ ಬದಲು ಎಕ್ಕೆವೃಕ್ಷ ಬಿಲ್ವವೃಕ್ಷಾದಿಗಳು ಹುಟ್ಟದೆ ಹೋದವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

............................

೧–೧ ಯ (ಗ).

---

೬೫

[1]ನರ ಕೂರಂಬಿನಲೆಚ್ಚ ಅವಂಗೊಲಿದೆಯಯ್ಯಾ[1] ಅರಳಂಬಿನಲೆಚ್ಚ [2]ಕಾಮನನುರುಹಿದೆ.[2] ಇರುಳು ಹಗಲೆನ್ನದೆ ಪ್ರಾಣ ಘಾತಕವ ಮಾಡಿದ ಬೇಡನ ಕೈಲಾಸಕೊಯ್ದೆಯಯ್ಯಾ. ಎನ್ನನೇತಕೊಲ್ಲೆ, ಕೂಡಲಸಂಗಮದೇವಾ?

I - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ನರ ಕೂರಂಬಿನಲೆಚ್ಚ ಅವಂಗೊಲಿದೆಯಯ್ಯಾ: ನರ–ಅರ್ಜುನನು, ಕೂರಂಬಿನಲ್ಲಿ–ನಿಶಿತಾಸ್ತ್ರದಿಂದೆ, ಎಚ್ಚ–ಪ್ರಯೋಗಿಸಿದ, ಅವಂಗೆ–ಅಂತಪ್ಪ ಅರ್ಜುನಂಗೆ, ಒಲಿದೆಯಯ್ಯಾ:[ಒಲಿದೆ–] ಕೃಪೆಯಾಗಿ ಪಾಶುಪತಾಸ್ತ್ರ ಅಂಜನವನ್ನು ಕರುಣಿಸಿಕೊಟ್ಟೆ, ಅಯ್ಯಾ–ಎಲೆ ಲಿಂಗವೆ. ಅರಳಂಬಿನಲ್ಲಿ–ಪುಷ್ಪಬಾಣದಿಂದ, ಎಚ್ಚ–ಪ್ರಯೋಗಿಸಿದಂಥ, ಕಾಮನನು–ಮನ್ಮಥನನ್ನು, ಉರುಹಿದೆ–ನೊಸಲಾಗ್ನಿಯಿಂದ ದಹಿಸಿದೆ.

ಇರುಳು ಹಗಲೆನ್ನದೆ–ದಿವಾರಾತ್ರಿಗಳೆನ್ನದೆ, ಪ್ರಾಣಘಾತಕವ ಮಾಡಿದ–ಜೀವಹಿಂಸೆಯ ಮಾಡಿದ, ಬೇಡನ–ಬೇಡರ ಕನ್ನಪ್ಪಯ್ಯನ, ಕೈಲಾಸ ಕೊಯ್ದೆ–ಕಾಯದರಸಿಲೆ ಕೈಲಾಸಪುರಕ್ಕೆ ಕೊಂಡೊಯ್ದೆಯಯ್ಯಾ, ತೆಗೆದುಕೊಂಡು ಹೋದಿರಿ, ಅಯ್ಯಾ–ಎಲೆ ಲಿಂಗವೇ, ಎನ್ನನೇತಕೊಲ್ಲೆ–ಎನಗೇನು ಕಾರಣಕ್ಕೆ ಕೃಪೆಯಾಗಿ ನಿಜಮೋಕ್ಷವ ಕರುಣಿಸಿ ಕೊಡಲೊಲ್ಲಿ, ಕೂಡಲಸಂಗಮದೇವಾ?–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

II– – – – – – – – – – – – – – – – – – – – – – – – – – – – – – – – – – – –

1–1 ನರಕೂರಂಬಿನಲೆಚ್ಚವಂಗೊಲಿದಿರಯ್ಯಾ (ಚ, ಜ). 2–2 ಕಾಮನನುರುಹಿದೆಯಯ್ಯಾ (ಚ, ಜ).

.........................

ನರ ಕೂರಂಬಿನಲೆಚ್ಚವಂಗೊಲಿದಿರಯ್ಯಾ–ಅರ್ಜುನ ನಿಶಿತಾಸ್ತ್ರದಲ್ಲಿ ಬಾಣಪ್ರಯೋಗದ ಮಾಡಿದಂಡೆ ಅವನಿಗೆ ಮಚ್ಚಿದೆಲೆ ಸ್ವಾಮಿ ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ–ಅರವಿಂದಮಶೋಕಂ ಚ । ಚೂತಂ ಚ ನವಮಲ್ಲಿಕಾ ॥ ನೀಲೋತ್ಪಲಂ ಚ ಪಂಚೇತೇ । ಪಂಚಾಬಾ[೧]ಣಾಃ ಪ್ರಕೀರ್ತಿತಾಃ॥[೧] ಎಂದು [೨]ಇಂಥ[೨] ಪುಷ್ಪಬಾಣಪ್ರಯೋಗವ ಮಾಡಿದರೆ ಅದಕ್ಕೂ ಸುಮ್ಮನೆ ಇದ್ದಿರಿ. ಅಲ್ಲಿಂದ ಮದನ ಉನ್ಮದನ ವಶೀಕರಣ ಸಂತಾಪನ ಮೋಹನವೆಂಬ ಅಂತರಂಗದ ಪಂಚಬಾಣಪ್ರಯೋಗವ ಮಾಡಿದಾಗ ಪರಮೇಶ್ವರನೆಚ್ಚತ್ತು ಇವನಾರೋ ಎಂದು ಕೇಳಿದರೆ, ಕೇಳಿ ಸುಮ್ಮನೆ ನೋಡುತ್ತೈದಾನೆ. ಇವ [೩]ಈ[೩]ರಮಂಡಿಯ ಹೂಡಿಕೊಂಡು ಕುಳಿತಾನೆ. ಆಗ[೪] ನಾವು ಶಿವಯೋಗನಿದ್ರಾಮುದ್ರೆಯಲ್ಲಿದ್ದೆವು. ಸಂಚಲವ ಮಾಡಿದನೆಂದು ಸುಟ್ಟುಬಿಟ್ಟಿರಿ ಸ್ವಾಮಿ ಮುಂದಕ್ಕೆ ಕಾಣಬಂದರ್ಥ.

.......................

೧-೧ ಣಸ್ಯ ಸಾಯಕಾಃ (ಜ) ೨-೨ (ಚ). ೩-೩ ಇ (ಚ). ೪ + ದಗಡೆ (ಚ).

---

೬೬

**ನೀನೊಲಿದಡೆ ಕೊರಡು ಕೊನರುವುದಯ್ಯಾ. ನೀನೊಲಿದಡೆ ಬಱಡು ಹಯನಹುದಯ್ಯಾ. ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ. ನೀನೊಲಿದಡೆ ಸಕಲ ಪಡಿಪದಾರ್ಥ ಇದಿರಲ್ಲಿಪ್ಪವು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - -

ನೀನೊಲಿದಡೆ ಕೊಱಡು ಕೊನರುವುದಯ್ಯಾ : ನೀನೊಲಿದಡೆ-ನೀನು ಕೃಪೆಯಾದಂಥ ಶೂಲದ ಬಂಕಯ್ಯವನರಿಗೆ, ಕೊಱಡು ಕೊನರುವುದಯ್ಯಾ-ಬೇರು ಸಡಲಿ ಒಣಗಿ [1]ಕಟ[1]ಯಾದಂಥ ಸ್ಥಾಣು, ಕೊನರುವುದಯ್ಯಾ-ಮರಳಿ ಚಿಗಿತು ಎಲೆ ಹೂವು ಕಾಯಾಗಿ ಫಲವಾಗುತ್ತಿಹುದಯ್ಯಾ, ನೀನೊಲಿದಡೆ-ನೀನು ಕೃಪೆಯಾದಂಥ ಮೊರಟದ [2]ಬೊಮ್ಮಯ್ಯ[2]ಗಳಿಗೆ, ಬಱಡು-ಗೊಡ್ಡಾಕಳು, ಹಯನಹುದಯ್ಯಾ-ಮರಳಿ ವತ್ಸವನ್ನು ಹಾಕಿ ಕ್ಷೀರವನ್ನು ಕರೆವುತ್ತಿಹುದಯ್ಯಾ.

ನೀನೊಲಿದಡೆ-ನೀ ಕೃಪೆಯಾದಂಥ ಸಂಗನಬಸವೇಶ್ವರ-ಸ್ವಾಮಿಗಳಿಗೆ, ವಿಷವೆಲ್ಲ-ಕ್ಷ್ವೇಡವೆಲ್ಲ, ಅಮೃತವಹುದಯ್ಯಾ-ಸುಧೆಯಾಗುತ್ತಿಹುದಯ್ಯಾ. ನೀನೊಲಿದಡೆ-ನೀನು ಕೃಪೆಯಾದಂಥ ಮಹಾತ್ಮರಿಗೆ, ಸಕಲ-ಸಮಸ್ತವಾದ, ಪಡಿಪದಾರ್ಥವು-ವರುಷಗಟ್ಟಲೆ ಮಾಸಗಟ್ಟಲೆ ಅಳೆದಳೆದು ತೂಗಿ ಕೊಡುವಂಥ ಹತ್ತರಪಡಿ ಹನ್ನೊಂದರಪಡಿ ಇಪ್ಪತ್ತರಪಡಿ ಮೂವತ್ತರಪಡಿಯು, ಪದಾರ್ಥ-ಘೃತಮುಖ್ಯವಾದ ಮೃಷ್ಟಾನ್ನ ಪದಾರ್ಥವು ಇದಿರಲ್ಲಿಪ್ಪವು-ಸಮ್ಮುಖದಲ್ಲಿ ಉಂಟಾಗಿಪ್ಪವು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧-೧ ಗಿಟಿ ಗಿಟಿ (ಗ). ೨-೨ ಬಂಕಯ್ಯ (ಗ).

---

೬೭

**ಮೇರು ಗುಣವನಱಸುವುದೆ ಕಾಗೆಯಲ್ಲಿ? ಪರುಷ ಗುಣವನಱಸುವುದೆ ಕಬ್ಬುನದಲ್ಲಿ? [1]ಸಾದು[1] [2]ಗುಣವನಱಸುವುದೆ[2] ಅವಗುಣಿಯಲ್ಲಿ? ಚಂದನ ಗುಣವನಱಸುವುದೆ ತರುಗಳಲ್ಲಿ? ಸರ್ವಗುಣಸಂಪನ್ನ ಲಿಂಗವೆ[3]ನೀವೆನ್ನಲ್ಲಿ[3] [4]ಗುಣವನಱಸುವರೆ[4] ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - -

ಮೇರು ಗುಣವನಜಿಸುವುದೆ ಕಾಗೆಯಲ್ಲಿ? : ಮೇರು–ಮಹಾಮೇರುಪರ್ವತವು, ಕಾಗೆಯಲ್ಲಿ–ವಾಯಸನಲ್ಲಿ, ಗುಣವನರಸುವುದೆ–"ಪಕ್ಷೀಣಾಂ ಕಾಕಃ ಚಾಂಡಾಲಹಃ" ಎಂದು ಎಲ್ಲ ಪಕ್ಷಿಗಳೊಳಗೆ ಇದು ಬಹು ಕ್ಷೀಣವಾದ ಪಕ್ಷಿ. ಇದನ್ನೆ ಎನ್ನ ಮೇಲೆ ಕುಳ್ಳಿರಗೊಡಬಾರದೆಂದು ಬಿಡುತ್ತೈತೆ? ಇಲ್ಲವು. ಅಂಥ ಕ್ಷೀಣವಾದ ಪಕ್ಷಿಯನ್ನೇ ತನ್ನ ಮೇಲೆ ಕುಳಿತಾಕ್ಷಣಕ್ಕೆ ಸಾವಿರ ಪೊಂಬಣ್ಣದ ಸುವರ್ಣದ ಕಾಗೆಯ ಮಾಡಿಬಿಡುತ್ತಿಹದು.

ಪರುಷ ಗುಣವನಜಿಸುವುದೆ ಕಬ್ಬುನದಲ್ಲಿ? : ಪರುಷ–ಪರುಷದ ಖಣಿಯು, ಕಬ್ಬುನದಲ್ಲಿ–ಕಾರ್ಬೋನ್ನಿನಲ್ಲಿ, ಗುಣವನಜಿಸುವುದೆ?–ಎಲ್ಲ ಲೋಹದೊಳಗೆ ಇದು ಒಂದು ಬಹು ಕ್ಷೀಣವಾದ ಲೋಹವು. ಎನ್ನ ಸೋಂಕಿದಲ್ಲಿ ಸುವರ್ಣವಾಗುತ್ತೈತೆ; ಎನ್ನ ಸೋಂಕಗೊಡಬಾರದೆಂದು ಬಿಡುತ್ತೈತೆ? ಇಲ್ಲವು. ಎಂಥಾ ಕ್ಷೀಣವಾದ ಲೋಹವು ತನ್ನ ಸೋಂಕಿದಾಕ್ಷಣಕ್ಕೆ ಸಾವಿರ ಪೊಂಬಣ್ಣದ ಸುವರ್ಣದ ಕುಡವ ಮಾಡಿಬಿಡುತ್ತಿಹುದು.

ಸಾದು ಗುಣವನಜಿಸುವುದೆ ಅವಗುಣಿಯಲ್ಲಿ ? : ಸಾದು–ಪರಿಮಳದ್ರವ್ಯವು, ಅವಗುಣಿಯಲ್ಲಿ–ಅಜ್ಞಾನ ದುರ್ಗುಣಿಯಲ್ಲಿ, ಗುಣವನಜಿಸುವುದೆ–ಸದ್ಗುಣವುಳ್ಳವರು ಧರಿಸಿಕೊಂಡರೆ ಗಂಧ ಕೊಡಬೇಕು, ದುಗುರ್ಣವುಳ್ಳವರು ಧರಿಸಿಕೊಂಡರೆ ಗಂಧ ಕೊಡಬಾರದೆಂದು ಬಿಡುತ್ತೈತೆ? ಇಲ್ಲವು. ಸದ್ಗುಣವುಳ್ಳವರು ಧರಿಸಿಕೊಂಡರೂ ಗಂಧ ಕೊಡುವುದು, ದುರ್ಗುಣವುಳ್ಳವರು ಧರಿಸಿದರೂ ಗಂಧ ಕೊಡುವುದು.

ಚಂದನ ಗುಣವನಜಿಸುವದೆ ತರುಗಳಲ್ಲಿ? : ಚಂದನ–ಮಲಯಾಚಲದಲ್ಲಿರುವ ಶ್ರೀಗಂಧದ ವೃಕ್ಷವು, ತರುಗಳಲ್ಲಿ–ಜಾಲಿ ಬೊಬ್ಬುಲಿ ವೃಕ್ಷಂಗಳಲ್ಲಿ, ಗುಣವನಜಿಸುವುದೆ–ಎಲ್ಲಾ ವೃಕ್ಷಂಗಳೊಳಗೆ ಇದು ಒಂದು ಕ್ಷೀಣವಾದ ವೃಕ್ಷವು; ಎನ್ನ ಸೋಂಕಿದಲ್ಲಿ ಗಂಧವೇಧಿಸಿ ಗಂಧದ ವೃಕ್ಷಂಗಳಾಗುತ್ತೈದಾವೆ. ಗಂಧದ ವೃಕ್ಷಂಗಳಾಗಗೊಡಬಾರದೆಂದು ಬಿಡುತ್ತೈತೆ? ಇಲ್ಲವು. ತನ್ನ ಎಡಬಲದಲ್ಲಿ ಇದ್ದಂಥ ಕ್ಷೀಣವಾದ ವೃಕ್ಷಂಗಳಿಗಾಯಿತ್ತಾದರೂ ಗಂಧವೇಧಿಸಿ ಗಂಧದ ವೃಕ್ಷಂಗಳ ಮಾಡಿಬಿಡುತ್ತಿಹುದು.

ಸರ್ವಗುಣಸಂಪನ್ನ ಲಿಂಗವೆಂಬಲ್ಲಿ–ಗ್ರಂಥ॥ ಸತ್ಯಂ ಕ್ಷಮಾಧೃತಿಶ್ಚೈವಮಧಿಷ್ಠಾತ್ಮಂ ಚ ಬೋಧಯೋಃ। ಸೃಷ್ಟಿಶ್ಚ ವಿರಾಗಶ್ಚೇತಿ ತಪಸೋಮತಿಯ ಸ್ಮೃತಃ। ಈಶ್ವರಸ್ಯಮಿದಂ ಪ್ರೋಕ್ತಂ ದಶವಿಧ ಕಲ್ಯಾಣಮುಚ್ಯತೇ। ಎಂದು ದಶವಿಧಕಲ್ಯಾಣ ಮೊದಲಾದ ಸಮಸ್ತಸದ್ಗುಣಂಗಳಲ್ಲಿ, ಸಂಪನ್ನ–ಲೋಲುಪ್ತಿಯನುಳ್ಳಂಥ, ಲಿಂಗವೆ ನೀವು–ಪರಶಿವಲಿಂಗವು, ಎನ್ನಲ್ಲಿ–ಸಂಗನಬಸವೇಶ್ವರನಲ್ಲಿ, ಗುಣವನಜಿಸುವರೆ–ಸದ್ಗುಣ ದುರ್ಗುಣವ ಹುಡುಕುವುದಕ್ಕಾದೀತೆ? ಆಗದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

..........................

೧ + ಎಲ್ಲ ವೃಕ್ಷಂಗಳಲ್ಲಿ ಗುಣವನಜಿಸುವದೇ (ಕ).

II– – – – – – – – – – – – – – – – – – – – – – – – – – – – –

1–1 ಸಾಧು (ಚ,ಜ). 2–2 ಗುಣವನಜಿಸುವನೇ (ಚ,ಜ). 3–3 ನೀನೆನ್ನಲ್ಲಿ (ಚ,ಜ). 4_4 ಅವಗುಣವನಜಿಸುವರೆ (ಚ,ಜ).

..........................

ಮೇರು ಗುಣವನಱಸುವುದೇ ಕಾಗೆಯಲ್ಲಿ?–ಚಿತ್ತಿನ ಮಹದಹಂಕಾರ ಭೂಷಣವನುಳ್ಳ ಶರಣನು ಅಜ್ಞಾನದೃಷ್ಟಿಯನುಳ್ಳ ಜೀವನಲ್ಲಿ ಪ್ರಪಂಚ ಹುಡುಕುವುದಕ್ಕಾದೀತೆ? ಆಗದೆಂಬುದರ್ಥ. ಪರುಷ ಗುಣವನಱಸುವುದೇ ಕಬ್ಬುನದಲ್ಲಿ?–ಪರಮಪಾವನಪವಿತ್ರಸ್ವರೂಪವಾದ ಗುರು ಪಂಚಕರಣ ಸಪ್ತಧಾತುಗಳ ಪ್ರಕೃತಿಯನುಳ್ಳ ಜೀವರುಗಳಲ್ಲಿ ಕೆಟ್ಟ ಗುಣವ ಹುಡುಕುವುದಕ್ಕಾದೀತೆ? ಆಗದೆಂಬುದರ್ಥ.

ಸಾಧು ಗುಣವನರಸುವನೇ ಅವಗುಣಿಯಲ್ಲಿ?–ಸತ್ಪುರುಷನಾದಂಥ ಜ್ಞಾನಿಯು ಅನಾಚಾರವನುಳ್ಳ ಜೀವರುಗಳಲ್ಲಿ ದುರ್ಗುಣದ ಹುಡುಕುವುದಕ್ಕಾದೀತೆ? ಆಗದೆಂಬುದರ್ಥ. ಚಂದನ ಗುಣವನಱಸುವುದೇ ತರುಗಳಲ್ಲಿ?–ಸ್ವಾನುಭಾವ ಸದ್ವಾಸನಾಸ್ವರೂಪವಾದ ತ್ರಿವಿಧಲಿಂಗಾನುಭಾವಿಗಳು ಪಾಮರ ಜೀವರುಗಳಲ್ಲಿ ಸದ್ಗುಣವ ಹುಡುಕಲಾಗದು; ತಮ್ಮ ಸದ್ವಾಸನೆಯನೇ ಕೊಡುವುದೆಂಬುದರ್ಥ, ಸರ್ವಗುಣಸಂಪನ್ನಲಿಂಗವೆ ನೀನೆನ್ನಲ್ಲಿ ಅವಗುಣವನಱಸುವರೆ–ಅನಂತಕಲ್ಯಾಣಗುಣೈಶ್ವರ್ಯೋಽ ಪಲಕ್ಷಿತವಾದ ಎಲೆ ವಸ್ತುವೆ, ನೀನು ಆತ್ಮನಲ್ಲಿ ದುರ್ಗುಣವ ಹುಡುಕುವುದಕ್ಕಾದೀತೆ? ಆಗದೆಂಬುದರ್ಥ.

---

೬೮

**ಭವಭವದಲ್ಲಿ ಎನ್ನ ಮನವು ನೀವಲ್ಲದೆ, ಭವಭವದಲ್ಲೆನ್ನ ಮನವು ಸಿಲುಕದೆ? ಭವರಾಟಳದೊಳು ತುಂಬದೆ? ಕೆಡಹದೆ? ಭವರೋಗವೈದ್ಯ ನೀನು, ಭವವಿರಹಿತ ನೀನು–ಅವಧಾರು! ಕರುಣಿಸು, ಕೂಡಲಸಂಗಮದೇವಾ.**

I– – – – – – – – – – – – – – – – – – – – – – – – – – – – – – – – – –

ಭವಭವದಲ್ಲಿ : ಭವಯೆಂದರೆ ಉತ್ಪತ್ಯ ಮತ್ತಂ ಭವಯೆಂದರೆ ದೇಹ, ಅಲ್ಲಿ–ದೇಹವ ಧರಿಸಿಕೊಂಡು ಹುಟ್ಟಿಬಂದಲ್ಲಿ, ಎನ್ನ ಮನವು–ಎನ್ನ ಚಿತ್ತವು, ನೀವಲ್ಲದೆ–ಸ್ವಾಮಿಗಳಲ್ಲದೆ, ಭವಭವದಲ್ಲಿ: ಮತ್ತೆ ಭವಯೆಂದರೆ ಉತ್ಪತ್ಯ, ಭವವೆಂದರೆ ದೇಹವು, ಅಲ್ಲಿ–ದೇಹವ ಧರಿಸಿಕೊಂಡು ಹುಟ್ಟಿಬಂದಲ್ಲಿ, ಎನ್ನ ಮನವು–ಸಂಗನಬಸವೇಶ್ವರನ ಚಿತ್ತವು, ಸಿಲುಕದೆ–ಸಕಲಸಂಸಾರಪ್ರಪಂಚಿನಲ್ಲಿ ಮಧುಮಕ್ಷಿಕನ ಹಾಂಗೆ ವಶಗತವಾಗದೆ? ಭವರಾಟಳದೊಳು–ಉತ್ಪತ್ಯವೆಂಬ ಯಂತ್ರಾಳದೊಳು, ತುಂಬದೆ ಕೆಡಹದೆ; ತುಂಬುವುದೆ ಜನನ, ಕೆಡಹುವುದೆ ಮರಣವೆಂಬಲ್ಲಿ ದೇಹವೆಂಬ ಅಂಡಿಗೆ ಆತ್ಮನೆಂಬ ಉದಕವ ತುಂಬಿ ಇಹಪರವೆಂಬ ಸ್ತಂಭಕ್ಕೆ ಮಾಯಾಪಾಶವೆಂಬ ನೇಣು ತೊಡರಿಸಿ ತುಂಬುವುದೆ ಜನನ, ಕೆಡಹುವುದೆ ಮರಣ. ಅಂತಪ್ಪ ಜನನಮರಣಂಗಳಿಗೊಳಗು ಮಾಡದೆ, ಭವರೋಗವೈದ್ಯ ನೀನು–ಜನ್ಮರುಜಗಳಿಗೆ ಚಿಕಿತ್ಸಿಕ ನೀನು, ಭವವಿರಹಿತ ನೀನು–ಉತ್ಪತ್ಯಕ್ಕೆ ವಿಲಕ್ಷಣ ನೀನು, ಅವಧಾರು!–ಎನ್ನ ವಾಕ್ಯವನ್ನು ಪರಾಕಾಗಿ ಆಲಿಸಿ, ಕರುಣಿಸು–ಕೃಪೆಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕೆ ಉಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

---

**ಆಸೆಯೆಂಬ ಪಾಶದಲ್ಲಿ ಭವಬಂಧನನಾಗಿರ್ದೆನಯ್ಯಾ; ಸಕೃತು ನಿಮ್ಮ ನೆನೆಯಲು ಎನಗೆ ತೆಱಹಿಲ್ಲವಯ್ಯಾ! ಕರುಣಾಕರ, ಅಭಯಕರ, ವರದಾನಿ ಕರುಣಿಸಯ್ಯಾ; ಸಂಸಾರಬಂಧನವನು ಮಾಣಿಸಿ ಎನಗೆ ಕೃಪೆಮಾಡಿ, ನಿಮ್ಮ ಶ್ರೀಪಾದಪದ್ಮದಲ್ಲಿ ಭ್ರಮರನಾಗಿರಿಸು, ಭಕ್ತಜನಮನೋವಲ್ಲಭ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - -

ಆಸೆಯೆಂಬ ಪಾಶದಲ್ಲಿ ಭವಬಂಧನನಾಗಿರ್ದೆನಯ್ಯಾ: ಆಸೆಯೆಂಬ–ಸಮಸ್ತವಸ್ತುವಾಗಬೇಕೆಂಬ, ಪಾಶದಲ್ಲಿ–ನೇಣುವಿನಲ್ಲಿ, ಭವಬಂಧನನಾಗಿರ್ದೆನಯ್ಯಾ: ಭವ–ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ಯದಲ್ಲಿ, ಬಂಧನನಾಗಿರ್ದೆನಯ್ಯಾ–ಕಾಲ ಕಾಮರ ಶಿಕ್ಷಾಬಾಧತ್ವಕ್ಕೊಳಗಾದೆನಯ್ಯಾ. ಸಕೃತವು–ಅಷ್ಟಾದರೂ, ನಿಮ್ಮ ನೆನೆಯಲು–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಲು, ಎನಗೆ–ನನಗೆ, ತೆಱಹಿಲ್ಲವಯ್ಯಾ–ತೆರಪಿಲ್ಲವಯ್ಯಾ. ಕರುಣಾಕರ–ಕೃಪಾಕರನಾದ, ಅಭಯ–ನಂಬುಗೆಯುನ್ನು, ಕರ–ಮಾಡಲ್ಪಟ್ಟಂಥ, ವರ–ಇಷ್ಟಾರ್ಥವನ್ನು, ದಾನಿ–ಕೊಡಲ್ಪಟ್ಟಾತನು, ಕರುಣಿಸಯ್ಯಾ–ಕೃಪೆ ಮಾಡಯ್ಯಾ. ಸಂಸಾರ–ಸತಿಸುತಾದಿ ಪ್ರಪಂಚಿನ, ಬಂಧನವನು–ಬಾಧತ್ವವನ್ನು, ಮಾಣಿಸಿ–ಬಿಡಿಸಿ, ಎನಗೆ ಕೃಪೆಮಾಡಿ–ಎನಗೆ ದಯಮಾಡಿ, ನಿಮ್ಮ–ಸ್ವಾಮಿಗಳ, ಶ್ರೀಪಾದಪದ್ಮದಲ್ಲಿ–ಕಾಂಶಿವೆತ್ತ ಪದಕಮಲಂಗಳಲ್ಲಿ, ಭ್ರಮರನಾಗಿರಿಸು–ಸೊಕ್ಕುದುಂಬಿಯಾಗಿ ಸೈತಿರಿಸು.

ಮತ್ತಂ, ಪಾದಪದ್ಮದಲ್ಲಿ–ಪದಕಮಲಸ್ವರೂಪವಾದಿಷ್ಟಲಿಂಗದಲ್ಲಿ, ಭ್ರಮರನಾಗಿರಿಸು–ಪರಿಪೂರ್ಣಜ್ಞಾನಿಯಾಗಿ ಸೈತಿರಿಸು, ಭಕ್ತಜನ–ಸದ್ಭಕ್ತ ಶರಣಜನಂಗಳ, ಮನೋವಲ್ಲಭ–ಚಿತ್ತರಮಣನಾದಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲಸಂಸಾರಪ್ರಪಂಚವನ್ನು ನಷ್ಟವಮಾಡಿ, ನೀವೇ ಗುರುವಾಗಿ ಬಂದು ಲಿಂಗಾಂಗಸಂಬಂಧವನ್ನು ಕರುಣಿಸಿಕೊಟ್ಟು, ನಿಮ್ಮ ಪಾದೋದಕ ಪ್ರಸಾದವನ್ನಿತ್ತು ರಕ್ಷಣೆಯ ಮಾಡೆಲೆ ಪರಶಿವಲಿಂಗವೆಯೆಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಾಲಾತ್ಮನು.

........................

೧+ ಸಂಸಾರಹೇಯಸ್ಥಲ ಸಮಾಪ್ತ ॥ ಶ್ರೀ ಶ್ರೀ ॥ (ಕ,ಗ).

---

## ಗುರುಕರುಣಸ್ಥಲ

I - - - - - - - - - - - - - - - - - - - - - - - - - - - - - - - - - - - -

ಗುರುಕರುಣಸ್ಥಲ–ಶ್ರೀಗುರುನಾಥನ ಕೃಪೆಯಾದಂಥ ಭೇದವನ್ನೇ ಪೇಳುತ್ತಿಹುದಾದ ಕಾರಣ ಇದಕ್ಕೆ ಗುರುಕಱುಣಸ್ಥಲವೆಂದು ಹೇಳಲ್ಪಟ್ಟಿತ್ತು.

೭೦

**ಮಡಕೆಯ ಮಾಡುವಡೆ ಮಣ್ಣೆ ಮೊದಲು; ತೊಡಿಗೆಯ ಮಾಡುವಡೆ ಹೊನ್ನೆ ಮೊದಲು; ಶಿವಪಥವನರಿವಡೆ ಗುರುಪಥವೆ ಮೊದಲು; ನಮ್ಮ ಕೂಡಲಸಂಗಮದೇವರನರಿವಡೆ ಶರಣರ ಸಂಗವೆ ಮೊದಲು.**

I – – – – – – – – – – – – – – – – – – – – – – – – – – – – – – – –

ಮಡಕೆಯ ಮಾಡುವಡೆ ಮಣ್ಣೆ ಮೊದಲು : ಮಡಕೆಯ–ಭಾಂಡಂಗಳನು, ಮಾಡುವಡೆ–ಅನುಗೆಯ್ಯಬೇಕಾದರೆ, ಮಣ್ಣೆ ಮೊದಲು–ಮೃತ್ತಿಕೆಯ ಆದಿಯಾಗಿರ್ಪುದು, ತೊಡಿಗೆಯ ಮಾಡುವಡೆ ಹೊನ್ನೆ ಮೊದಲು: ತೊಡಿಗೆಯ–ಸಮಸ್ತಾಭರಣಂಗಳನು, ಮಾಡುವಡೆ–ಅನುಗೆಯ್ಯಬೇಕಾದರೆ, ಹೊನ್ನೆ ಮೊದಲು–ಸುವರ್ಣವೆ ಮುಖ್ಯವಾಗಿರ್ಪುದು.

ಶಿವಪಥವನರಿವಡೆ ಗುರುಪಥವೆ ಮೊದಲು: ಶಿವಪಥವನರಿವಡೆ–ಲಿಂಗಾಚಾರಮಾರ್ಗವನು ತಿಳಿಯಬೇಕಾದರೆ, ಗುರುಪಥವೆ ಮೊದಲು– ಶ್ರೀಗುರುನಾಥನ ವೇಧಾಮಂತ್ರಕ್ರಿಯೆಗಳೆಂಬ ದೀಕ್ಷಾತ್ರಯಂಗಳಿಂದ ಅಂಗಕ್ಕೆ ಲಿಂಗಸಂಬಂಧವ ಪಡಿಸುವಂಥದೆ ಮುಖ್ಯವಾಗಿರ್ಪುದು. ನಮ್ಮ ಕೂಡಲಸಂಗಮದೇವರನರಿವಡೆ–ಅಂತರಂಗದಲ್ಲಿ ಪ್ರಾಣಲಿಂಗಸಂಬಂಧವ ತಿಳಿಯಬೇಕಾದರೆ, ಶರಣರ ಸಂಗವೆ ಮೊದಲು–ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ ಶಿವಾನುಭವದ ಗೋಷ್ಠಿಯ ಸಂಪರ್ಕವೆ ಮುಖ್ಯವಾಗಿರ್ಪುದು.

II – – – – – – – – – – – – – – – – – – – – – – – – – – – – – – –

ಮಡಕೆಯ ಮಾಡುವಡೆ ಮಣ್ಣೆ ಮೊದಲು–ಅಂಗವೆಂಬ ಘಟವನು ನಿರ್ಮಿಸುವರೆ ವಿಷಯಮೃತ್ತಿಕೆಯೆ ಮೊದಲಾಗಿರ್ಪುದು. ತೊಡಿಗೆಯ ಮಾಡುವಡೆ ಹೊನ್ನೆ ಮೊದಲು–ಅಷ್ಟಾವರಣಗಳೆಂಬ ಆಭರಣವನೆಸಗುವರೆ ಚಿತ್ಪ್ರಕಾಶಜ್ಞಾನವೆ ಮೊದಲಾಗಿರ್ಪುದು. ಮುಂದಕ್ಕೆ ಕಾಣಬಂದರ್ಥ.

೭೧

**ನೋಡಿ ನೋಡಿ ಮಾಡುವ ನೇಮ ಸಲ್ಲವು! ಸಲ್ಲವು! ತನುವುದ್ದೇಶ, ಮನವುದ್ದೇಶವಾಗಿ ಮಾಡುವ ನೇಮ ಸಲ್ಲವು! ಸಲ್ಲವು! ಗುರುಪಥವ ಮೀರಿ ಮಾಡುವ ನೇಮ ಸಲ್ಲವು ! ಸಲ್ಲವು! ಕೂಡಲಸಂಗಮದೇವಯ್ಯಾ, ಇವು ನಿಮ್ಮ ನಿಜದೊಳಗೆ ನಿಲ್ಲವು, ನಿಲ್ಲವು.**

I – – – – – – – – – – – – – – – – – – – – – – – – – – – – – – – –

ನೋಡಿ ನೋಡಿ ಮಾಡುವ ನೇಮ ಸಲ್ಲವು! ಸಲ್ಲವು!– ತಾನೇನಾದರೂ ಜಪ ಶಿವಾರ್ಚನೆ ಶೀಲವ್ರತನೇಮಾಚಾರಂಗಳನು ಕಟ್ಟು ಮಾಡಿಕೊಂಡಾಚರಿಸಬೇಕಾದರೆ ಇಷ್ಟು ಕಟ್ಟು ಮಾಡಿಕೊಂಡರೆ ಪಾರವೈದಿಸೆನು, ಇಷ್ಟು ಕಟ್ಟು ಮಾಡಿಕೊಂಡರೆ ಪಾರವೈದಿಸಲಾರನೆಂಬ ಮಿತವನ್ನು ತಿಳಿಯದೆ.

ನೋಡಿ ನೋಡಿ-ಲೋಕದೊಳಗೆ ಜಪ ಶಿವಾರ್ಚನೆ ಶೀಲವ್ರತನೇಮಾಚಾರಂಗಳನು ಕಟ್ಟುಮಾಡಿಕೊಂಡಾಚರಿಸುವಂಥ ಭಕ್ತಮಾಹೇಶ್ವರರುಗಳ ಮೇಲುಪಜ್ಜೆಯನ್ನು ನಿರೀಕ್ಷಣೆಯ ಮಾಡಿ, ಮಾಡುವ-ತಾನು ಅವರ ಹಾಂಗೆ ಜಪ ಶಿವಾರ್ಚನೆ ಶೀಲವ್ರತನೇಮಾಚಾರಂಗಳನ್ನು ಕಟ್ಟುಮಾಡಿಕೊಂಡಾಚರಿಸುವ, [ನೇಮ]-ಕಟ್ಟಿನ ಕ್ರಿಯೆಗಳನು, ಸಲ್ಲವು!ಸಲ್ಲವು!-ಅವರ ಮಹಾಜ್ಞಾನ ಶೀಲಕ್ಕೆ ಸಲುವಳಿಯಾಗುವು, ಸಲುವಳಿಯಾಗವು.

ತನುವುದ್ದೇಶ, ಮನವುದ್ದೇಶವಾಗಿ ಮಾಡುವ ನೇಮ ಸಲ್ಲವು! ಸಲ್ಲವು!-ತನುವುದ್ದೇಶವಾಗಿ ತಾನೇನಾದರೂ ಜಪ ಶಿವಾರ್ಚನೆ ಶೀಲವ್ರತ ನೇಮಾಚಾರಂಗಳನ್ನು ಕಟ್ಟುಮಾಡಿಕೊಂಡಾ ಚರಿಸಬೇಕಾದರೆ ತನುವಿನಲ್ಲಿ ಶ್ರದ್ಧೆ ಮನದಲ್ಲಿ ವಿಶ್ವಾಸ ಮುಂದುಗೊಂಡು ಜಪ ಶಿವಾರ್ಚನೆ ಶೀಲವ್ರತ ನೇಮಾಚಾರಂಗಳನ್ನು ಕಟ್ಟುಮಾಡಿಕೊಂಡಾಚರಿಸಬೇಕಲ್ಲದೆ ತನುವಿನಲ್ಲಿ ಉಪೇಕ್ಷೆ ಮನದಲ್ಲಿ ಅವಿಶ್ವಾಸ ಮುಂದುಗೊಂಡು ಜಪ ಶಿವಾರ್ಚನೆ ಶೀಲವ್ರತ ನೇಮಾಚಾರಂಗಳನ್ನು ಕಟ್ಟುಮಾಡಿಕೊಂಡು, ಮಾಡುವ-ಅನುಗೈವ, ನೇಮ-ಕಟ್ಟಿನ ಕ್ರಿಯೆಗಳು, ಸಲ್ಲವು! ಸಲ್ಲವು!-ಅವರ ಮಹಾಜ್ಞಾನಶೀಲಕ್ಕೆ ಸಲುವಳಿಯಾಗವು, ಸಲುವಳಿಯಾಗವು.

ಗುರುಪಥವ ಮೀಜಿ ಮಾಡುವ ನೇಮ ಸಲ್ಲವು! ಸಲ್ಲವು!: ಗುರುಪಥವ ಮೀಜಿ-ತಾನೇನಾದರೂ ಶೀಲವ್ರತನೇಮಾಚಾರಂಗಳನ್ನು ಕಟ್ಟುಮಾಡಿಕೊಂಡಾಚರಿಸಬೇಕಾದರೆ ಜ್ಞಾನಗುರುಮೂರ್ತಿಗಳಿರುವಂಥ ಸ್ಥಾನಕ್ಕೆ ಹೋಗಿ ೧ದೀರ್ಘದಂಡ೧ ನಮಸ್ಕಾರ ಮುಖ್ಯವಾದ ಭಕ್ತಿಗಳಿಂದಡಿಗೆರಗಿ ಅವರಾವ ರೀತಿಯಿಂದ ಕಟ್ಟುಮಾಡಿಕೊಂಡಾಚರಿಸೆಂದು ಹೇಳತ್ತೈದಾರೋ ತಾನು ಅದೇ ರೀತಿಯಲ್ಲಿ ಕಟ್ಟುಮಾಡಿಕೊಂಡಾಚರಿಸಬೇಕಲ್ಲದೆ ತಾನು ಓದ ಹಾಡ ಕಲಿತುಕೊಂಡು ಗುರು ಹೇಳಿದರೂ ಇವನ್ನೇ ಹೇಳುವನಲ್ಲದೆ ಇನ್ನು ಬೇರೆ ಹೇಳುವನೆ? ಹೇಳಲರಿಯನೆಂದು ತನ್ನ ಮನಸ್ಸಿಗೆ ಬಂದ ಹಾಂಗೆ ಜಪಶಿವಾರ್ಚನೆ ಶೀಲವ್ರತನೇಮಾಚಾರಂಗಳನ್ನು ಕಟ್ಟುಮಾಡಿಕೊಂಡು, ಮಾಡುವ-ಅನುಗೆಯ್ವ, ನೇಮ-ಕಟ್ಟಿನ ಕ್ರಿಯೆಗಳು, ಸಲ್ಲವು! ಸಲ್ಲವು!-ಅವು ಮಹಾಜ್ಞಾನಶೀಲಕ್ಕೆ ಸಲುವಳಿಯಾಗವು, ಸಲುವಳಿಯಾಗವು.

ಕೂಡಲಸಂಗಮದೇವಯ್ಯಾ-ಎಲೆ ಪರಶಿವಲಿಂಗವೆ, ಇವು-ಹಿಂದೆ ಹೇಳಿದಂಥ ಜಪ ಶಿವಾರ್ಚನೆ ಶೀಲವ್ರತನೇಮಾಚಾರಂಗಳು, ನಿಮ್ಮ ನಿಜದೊಳಗೆ ನಿಲ್ಲವು, ನಿಲ್ಲವು-ಅವು ಮಹಾಜ್ಞಾನಶೀಲಕ್ಕೆ ನಿಲುಕಡೆಯಾಗವು, ನಿಲುಕಡೆಯಾಗವು.

..............................

೧-೧ ಸಾಷ್ಟಾಂಗ (ಗ).

II - - - - - - - - - - - - - - - - - - - - - - - - - - - - - - -

ನೋಡಿ ನೋಡಿ ಮಾಡುವ ನೇಮ ಸಲ್ಲವು! ಸಲ್ಲವು!-ಶೀಲವ್ರತಾಚಾರವುಳ್ಳವರುಗಳ ಕಂಡು ಕಂಡು ಭಿನ್ನವಿಟ್ಟುಮಾಡುವ ಖಂಡಿತಕ್ರಿಯಾನೇಮವು ಲಿಂಗಕ್ಕೆ ಮುಟ್ಟವು ೨ಮುಟ್ಟವು.೨

ತನುವುದ್ದೇಶ ಮನವುದ್ದೇಶವಾಗಿ ಮಾಡುವ ನೇಮ ಸಲ್ಲವು! ಸಲ್ಲವು!- ಅಂಗವನು ಗುರುವಿಗೆ ಭಕ್ತಿಯ ಮಾಡುವಲ್ಲಿ ಲಿಂಗವು ಬಳಲೀತೆಂದು ಅಂಗವು ಉಪೇಕ್ಷೆಯಾಗಿ ಭಕ್ತಿ ಮಾಡುವಣವು,

ಮನವನು ಲಿಂಗಕ್ಕೆ ಪೂಜೋಪಚಾರಂಗಳ ಮಾಡುವಲ್ಲಿ ಮನವು ಉಪೇಕ್ಷೆಯಾಗಿ ಭಕ್ತಿ ಮಾಡುವಣವು, ಹೀಗೆಸಗುವ ಖಂಡಿತಕ್ರಿಯಾನೇಮವು ಲಿಂಗಕ್ಕೆ ಮುಟ್ಟವು, ಮುಟ್ಟವು.

ಗುರುಪಥವ ಮೀಜಿ ಮಾಡುವ ನೇಮ ಸಲ್ಲವು! ಸಲ್ಲವು!–ಆಚಾರ್ಯಮಾರ್ಗವನತಿಕ್ರಮಿಸಿ ಭಿನ್ನವಿಟ್ಟು ಎಸಗುವ ಖಂಡಿತಕ್ರಿಯಾನೇಮವು ಲಿಂಗಕ್ಕೆ ಮುಟ್ಟವು ಮುಟ್ಟವು. ಕೂಡಲಸಂಗಮದೇವಯ್ಯಾ ಇವು ನಿಮ್ಮ ನಿಜದೊಳಗೆ ನಿಲ್ಲವು ನಿಲ್ಲವು–ಎಲೆ ಲಿಂಗವೆ ಈ ಖಂಡಿತಕ್ರೀಗಳು ನಿಮ್ಮ ನಿಜಾಚರಣೆಯಲ್ಲಿ ನೆಲಸವು ನೆಲಸವು.

..........................

೨–೨ x (ಚ).

III – – – – – – – – – – – – – – – – – – – – – – – – – – – – – – – –

ನೋಡಿ ನೋಡಿ–ಲಿಂಗನಿಷ್ಠಾಪರರು ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವ ಮಾಡುವುದನು ನಿರೀಕ್ಷಿಸಿ ನಿರೀಕ್ಷಿಸಿ, ಮಾಡುವ–ತಾನು ಅವರ ಹಾಂಗೆ ಎಸಗಬೇಕೆಂದು ಮಾಡುವ, ನೇಮ–ಕ್ರಿಯೆಗಳು, ಸಲ್ಲವು! ಸಲ್ಲವು!–ಲಿಂಗಕ್ಕೆ ಯೋಗ್ಯವಾಗಲರಿಯವು, ಯೋಗ್ಯವಾಗಲರಿಯವು.

ತನುವುಪ್ಪೇಕ್ಷ–ಲಿಂಗದಲ್ಲಿ ಉದಾಸೀನವು, ಮನವುದ್ದೇಶವಾಗಿ ಮಾಡುವ–ಮನಸ್ಸಿನಲ್ಲಿ ಉದಾಸೀನವಾಗಿ ಎಸಗುವ, ನೇಮ–ಕಟ್ಟಿನ ಕ್ರಿಯೆಗಳು, ಸಲ್ಲವು! ಸಲ್ಲವು!–ಸಲುವಳಿಯಾಗವು ಸಲುವಳಿಯಾಗವು. ಗುರುಪಥವ ಮೀಜಿ–ಶ್ರೀಗುರುದೇವನು ನಿರೂಪಿಸಿದ ಸನ್ಮಾರ್ಗಾಚರಣೆಯನತಿ ಕ್ರಮಿಸಿ, ಮಾಡುವ–ತಾನೆಸಗುವ, ನೇಮ–ಕಟ್ಟಿನ ಕೃತ್ಯವು, ಸಲ್ಲವು! ಸಲ್ಲವು!–ಲಿಂಗಕ್ಕೆ ಯೋಗ್ಯವಾಗಲರಿಯವು, ಯೋಗ್ಯವಾಗಲರಿಯವು.

ಕೂಡಲಸಂಗಮದೇವಯ್ಯಾ–ಎಲೆ ಪರಶಿವಲಿಂಗವೆ, ಇವು–ಪೂಜಾಕ್ರಿಯೆಗಳಿವು, ನಿಮ್ಮ ನಿಜದೊಳಗೆ–ಲಿಂಗದ ಸಮರಸಜ್ಞಾನದಲ್ಲಿ, ನಿಲ್ಲವು ನಿಲ್ಲವು–ಸಮರಸಭಕ್ತಿಸಂಬಂಧವಾದ ಜ್ಞಾನಕ್ರಿಯಾಚರಣೆಯಲ್ಲಿ ನೆಲಸವು ನೆಲಸವು.

---

೭೨

**'ಗುರುವಚನದಿಂದಲ್ಲದೆ' ಲಿಂಗವೆಂದೆನಿಸದು; ಗುರುವಚನದಿಂದಲ್ಲದೆ ನಿತ್ಯವೆಂದೆನಿಸದು; ಗುರುವಚನದಿಂದಲ್ಲದೆ ನೇಮವೆಂದೆನಿಸದು, ತಲೆಯಿಲ್ಲದಟ್ಟೆಗೆ ಪಟ್ಟವ ಕಟ್ಟುವ ಉಭಯಭ್ರಷ್ಟರ ಮೆಚ್ಚುವನೆ; ನಮ್ಮ ಕೂಡಲಸಂಗಮದೇವ?**

I – – – – – – – – – – – – – – – – – – – – – – – – – – – – – – – –

ಗುರುವಚನದಿಂದಲ್ಲದೆ ಲಿಂಗವೆಂದಿನಸದು–ಶ್ರೀಗುರುನಾಥನು ತನ್ನ ವಾಕ್ಯದಿಂದ ವೇಧಾಮಂತ್ರಕ್ರಿಯೆಗ"ಳೆಂಬ ದೀಕ್ಷಾತ್ರಯಂಗಳಿಂದ" ಅಂಗಕ್ಕೆ ಲಿಂಗಸಂಬಂಧವ ಕರುಣಿಸಿಕೊಟ್ಟು ಆ ಮಹಾಲಿಂಗವೆ ಈ ಲಿಂಗ, ಮಗನೇ ಎಂದು ಅರುಹಿಕೊಟ್ಟುಂಥದೆ ಚಿತ್ಕಳಾಲಿಂಗವೆಂದು ಹೇಳಿಸುವುದಲ್ಲದೆ ತಾನೊಂದು ಸಂತೆಪೇಟೆಗೆ ಹೋಗಿ ದುಡ್ಡು ಅಡ್ಡವನು ಕೊಟ್ಟು ತೆಗೆದುಕೊಂಡು

ಬಂದು ತನ್ನಿಚ್ಛೆಲಿ ತಾನೇ ಕಟ್ಟಿಕೊಂಡಂಥದು ಚಿತ್ಕಳಾಲಿಂಗವೆಂದು ಹೇಳಿಸುವುದೆ? ಹೇಳಿಸದು, ಗುರುವಚನದಿಂದಲ್ಲದೆ ನಿತ್ಯವೆಂದೆನಿಸದು–ಶ್ರೀಗುರುನಾಥನು ತನ್ನ ವಾಕ್ಯದಿಂದ ಗುರುಸ್ವರೂಪವಿದು ಲಿಂಗಸ್ವರೂಪವಿದು ಜಂಗಮ ಸ್ವರೂಪವಿದು ಮಗನೇ ಎಂದು ಅರುಹಿಕೊಟ್ಟಂಥದು ಜ್ಞಾನವೆಂದು ಹೇಳಿಸುವುದಲ್ಲದೆ ತನ್ನಿಚ್ಛೆಲಿ ತಾನೇ ತಿಳಿವಂಥದು ಜ್ಞಾನವೆಂದು ಹೇಳಿಸುವುದೆ? ಹೇಳಿಸದು.

ಗುರುವಚನದಿಂದಲ್ಲದೆ ನೇಮವೆಂದೆನಿಸದು–ಶ್ರೀಗುರುನಾಥನು ತನ್ನ ವಾಕ್ಯವಿಂದ ಗುರುಭಕ್ತ ಹೀಂಗ ಮಾಡಬೇಕು ಲಿಂಗಪೂಜೆ ಹೀಂಗ ಮಾಡಬೇಕು ಜಂಗಮ[೧]ದಾಸೋಹ[೧] ಹೀಂಗ ಮಾಡಬೇಕೆಂದು ಅರುಹಿಸಿಕೊಟ್ಟಂಥಾದ್ದೇ ಕಟ್ಟಿನ ಕ್ರಿಯೆಯೆಂದು ಹೇಳಿಸುವುದಲ್ಲದೆ ತನ್ನ ಮನಬಂದ ಹಾಂಗೆ ಮಾಡುವಂಥವು ಕಟ್ಟಿನ ಕ್ರಿಯೆಯೆಂದು ಹೇಳಿಸುವುದೆ? ಹೇಳಿಸದು.

ತಲೆಯಿಲ್ಲದಟ್ಟೆಗೆ ಪಟ್ಟವ ಕಟ್ಟುವ: ತಲೆಯಿಲ್ಲದ–ಜ್ಞಾನೋದಯವಿಲ್ಲದ, ಅಟ್ಟೆಗೆ–ಮಲಮಾಯಾಕರ್ಮಯುಕ್ತವಾದ ಪ್ರಾಕೃತಾತ್ಮನಿಗೆ, ಪಟ್ಟವ ಕಟ್ಟುವ–ಅಂಗಕ್ಕೆ ಲಿಂಗಸಂಬಂಧವ ಕರುಣಿಸಿಕೊಡುವ, ಉಭಯಭ್ರಷ್ಟರ–ಅವಾಂತರಯುಕ್ತರಾದ ಅಜ್ಞಾನಗುರು ಮಲಮಾಯಾಕರ್ಮಯುಕ್ತವಾದ ಪ್ರಾಕೃತಾತ್ಮರೆಂಬಿರ್ವರನ್ನು, ಕೂಡಲಸಂಗಮದೇವ–ಪರಶಿವಲಿಂಗವು, ಮೆಚ್ಚುವನೆ?–ಮಮಕರಿಸಿಕೊಂಡು ಮುಕ್ತಿಯನ್ನು ಕರುಣಿಸಿ ಕೊಟ್ಟಾನೆ? ಕೊಡನು.

..........................

೧–೧ x (ಗ). ೨–೨ ಭಕ್ತಿ (ಕ).

II – – – – – – – – – – – – – – – – – – – – – – – – – – – – – –

1–1 ಗುರುವಚನವಲ್ಲದೆ (ಚ,ಜ).

..........................

ಗುರುವಚನವಲ್ಲದೆ ಲಿಂಗವೆಂದೆನಿಸದು–ಸ್ವಯಂಜ್ಯೋತಿಸ್ವರೂಪವಾದಾಚಾರ್ಯನ ಮಂತ್ರಾನುಗ್ರಹಪ್ರಸಂಗವಲ್ಲದೆ ಇಷ್ಟಲಿಂಗವೆಂದೆನಿಸದು. ಗುರುವಚನವಲ್ಲದೆ ನಿತ್ಯವೆಂದೆನಿಸದು–ಗುಣಗಂಭೀರರುಚಿಯನುಳ್ಳಾಚಾರ್ಯನ ಮಂತ್ರವಾಕ್ಯಪ್ರಸಂಗವಲ್ಲದೆ ತ್ರಿಕಾಲಂಗಳಲ್ಲಿ ತಪ್ಪದೆ ಮಾಡುವ ಕ್ರೀಯೆಂದೆನಿಸದು. ಗುರುವಚನವಲ್ಲದೆ ನೇಮವೆಂದೆನಿಸದು–ಸ್ವಯಂಜೋತಿಸ್ವರೂಪವಾದಾಚಾರ್ಯನ ಮಂತ್ರಾನುಗ್ರಹಪ್ರಸಂಗವಲ್ಲದೆ ಅಕ್ರೋಧೋ ಗುರುಶುಶ್ರೂಷಾ ಶೌಚಂ ಲಾಘವಮೇವ ಚ। ಅಪಮಾನೋಽಪಿ ಪಂಚೈತೇ ನಿಯಮಾಃ ಪರಿಕೀರ್ತಿತಾಃ ॥ ಎಂಬ ಪಂಚನೇಮಯೆಂದೆನಿಸದು.

ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ–ಜ್ಞಾನವಿಲ್ಲದ ದೇಹ[೩]ಭಾವ[೩]ವನುಳ್ಳ ಜೀವನಿಗೆ ಲಿಂಗಾನುಗ್ರಹವೆಂಬ [೪]ಕ್ರಿಯಾವರ್ತನವ[೪] ಬಂಧಿಸುವ, ಉಭಯಭ್ರಷ್ಟರ ಮೆಚ್ಚುವನೆ–ಇಹದ ಪ್ರಸಾದಭೋಗ ಪರದ ನಿಜಮೋಕ್ಷವೆಂಬೆರಡಳಿದ ಅಜ್ಞಾನಗುರು ಅವಾಂತರಮುಕ್ತನೆಂಬ ಶಿಷ್ಯರುಗಳಿರ್ವರಿಗೊಲಿದು ಮುಕ್ತಿಯ ಕೊಡನೆಂಬುದರ್ಥ.

೩–೩ (ಜ). ೪–೪ ಚಕ್ರವರ್ತಿತನವ (ಚ).

III – – – – – – – – – – – – – – – – – – – – – – – – – – – – – –

1–1 ಗುರುವಚನವಲ್ಲದೆ (ಟ, ಡ).

.........................

ಶ್ರೀಗುರು[೫]ದೇವನ[೫] ವೇಧಾಮಂತ್ರಕ್ರಿಯೋಪದೇಶದಿಂದಲ್ಲದೆ ಇಷ್ಟಲಿಂಗವೆನಿಸದು [೬]ಎಂಬುದೀಗ ಗುರುವಚನವಲ್ಲದೆ [೬]ಲಿಂಗವೆಂದೆನಿಸದು ಎಂಬ ಶಬ್ದಕ್ಕರ್ಥ.[೬] ಶ್ರೀಗುರುಸ್ವಾಮಿಯ ವಚನಪ್ರಮಾಣದಿಂದಲ್ಲದೆ ಶಾಶ್ವತಪರಬ್ರಹ್ಮಸ್ವರೂಪವೆನಿಸದು ಎಂಬುದೀಗ [೭]ಗುರುವಚನವಲ್ಲದೆ ನಿತ್ಯವೆಂದೆನಿಸದು ಎಂಬ ಶಬ್ದಕ್ಕರ್ಥ.[೭] ಶ್ರೀಗುರುನಾಥ ವಾಕ್ಯಪ್ರಮಾಣದಿಂದಲ್ಲದೆ ಕಟ್ಟಿನ ಕೃತ್ಯವೆಂದೆನಿಸು ಎಂಬುದೀಗ [೮]ಗುರುವಚನವಲ್ಲದೆ ನೇಮವೆನಿಸದು ಎಂಬ ಶಬ್ದಕ್ಕರ್ಥ,[೮] ತಲೆಯಿಲ್ಲದ–ಸುಜ್ಞಾನಶಿರಸ್ಸು ಉಂಟಾಗದ, ಅಟ್ಟೆಗೆ–ಭೂತಕಾಯಸಂಬಂಧವಾದಾತ್ಮನಿಗೆ, ಪಟ್ಟವ ಕಟ್ಟುವ–ವಿಭೂತಿ ಧಾರಣ ಲಿಂಗಸಂಬಂಧವನು ಮಾಡುವ, ಉಭಯಭ್ರಷ್ಟರ–ಇಹಪರ ಭೋಗಮೋಕ್ಷಗಳಿಗೆ ಹೊಱತಾದವರನು, ಮೆಚ್ಚುವನೆ–ಅಹುದೆಂದಂಗೀಕರಿಸಿ ಪ್ರಸನ್ನವಾಗಿ ಭೋಗ ಮೋಕ್ಷಂಗಳೆಂಬಿಷ್ಟಾರ್ಥಗಳನು ಕೊಟ್ಟು ರಕ್ಷಿಸುವನೆ? ರಕ್ಷಿಸನೆಂಬುದರ್ಥ.

..............................

೫–೫ ವಚನ (ಡ). ೬–೬ (ಡ) ೭–೭ (ಡ) ೮–೮ (ಡ).

IV – – – – – – – – – – – – – – – – – – – – – – – – – – – – – – –

1–1 ಗುರುವಚನವಲ್ಲದೆ (ತ).

.........................

[೯]ಗುರುವಚನಪ್ರಮಾಣವಿಡಿದು ಲಿಂಗಾಂಗಸಂಬಂಧಿಯಾಗಿ ಸುಜ್ಞಾನಕ್ರಿಯೆಯಿಂದ ಲಿಂಗವನರ್ಚಿಸಿ ಲಿಂಗವ ಬೆರದು ಲಿಂಗಾಂಗವಾಗಿಪ್ಪ ಭಕ್ತನೆ ಮಹಾಜ್ಞಾನಿ, ಅಂತಲ್ಲದೆ ಜ್ಞಾನವಿಲ್ಲದ ಅಜ್ಞಾನಿಯ ಅಂಗಕ್ಕೆ ಲಿಂಗೋಪದೇಶವ ಮಾಡಿದ ಗುರು ಆ ಶಿಷ್ಯನು ಉಭಯರು ಲಿಂಗಾಚಾರಬಾಹ್ಯರೆಂಬುದೀ ವಚನದ ತಾತ್ಪರ್ಯಾರ್ಥ.[೧೦]

...................................

೯ + ಇನ್ನು ಗುರುಕರುಣಸ್ಥಲದ ವಚನ (ತ). ೧೦ + ಅಂತು ವಚನ ೧೫ಕ್ಕಂ ಮಂಗಳ ಮಹಾ ಶ್ರೀ ಶ್ರೀ (ತ).

V– – – – – – – – – – – – – – – – – – – – – – – – – – – – – – –

[೧೧]ಗುರುವಚನವಲ್ಲದೆ ಮಂತ್ರಸಂಸ್ಕಾರಗುರೂಪದೇಶವಿಲ್ಲದೆ ಎಂಬುದೀಗ...

.........................

೧೧ + ಶ್ರೀಗುರುಕರುಣಸ್ಥಲ (ಪ).

---

# ವಿಭೂತಿಸ್ಥಲ

I – – – – – – – – – – – – – – – – – – – – – – – – – – – – – –

ವಿಭೂತಿಸ್ಥಲ : ವಿಭೂತಿಯ ಮಹತ್ವವನ್ನೇ ಹೇಳುತ್ತಿಹುದಾದ ಕಾರಣ ಇದಕ್ಕೆ ವಿಭೂತಿಸ್ಥಲವೆಂದು ಹೇಳಲ್ಪಟ್ಟಿತ್ತು.

---

೭೩

**ಮುನ್ನ ಮಾಡಿದ ಪಾಪವೆಂತು ಹೋದುದೆಂದು ಚಿಂತಿಸಬೇಡ; ಕಹಿಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ ಸಿಹಿಯಾಗದೆ ಮೂಱು ದಿವಸಕ್ಕೆ ಅಯ್ಯಾ! ಹಲವು ಕಾಲ ಕೊಂದ ಸೂನೆಗಾಱನ ಕೈಯ ಕತ್ತಿಯಾದಡೇನು ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ? ಲಲಾಟದಲ್ಲಿ [1]ಶ್ರೀವಿಭೂತಿಯ ಬರೆಯಲಿಕ್ಕೆ[1] ಪಾಪ ಪಲ್ಲಟವಾಗದೆ, ಕೂಡಲಸಂಗಮದೇವಾ?**

I – – – – – – – – – – – – – – – – – – – – – – – – – – – – – –

ಮುನ್ನ ಮಾಡಿದ ಪಾಪ–ಮೊದಲಜನ್ಮದಲ್ಲಿ ಮಾಡಿಮಾಡಿ ಕೂಡಲಿಕ್ಕಿದಂಥ ದೋಷವು. ಎಂತು ಹೋಹುದೆಂದು–ಹೇಂಗೆ ಬಿಡುಗಡೆಯಾಯಿತ್ತೆನುತ್ತ, ಚಿಂತಿಸಬೇಡ–ಯೋಚಿಸಬೇಡವು. ಕಹಿಸೋರೆಯ ಕಾಯ ತಂದು–ವಿಷದ ಕುಂಬಳಕಾಯನಾಗುಮಾಡಿಕೊಂಡು ಬಂದು, ವಿಭೂತಿಯ ತುಂಬಿದಡೆ–ಒಳಗಿನ ತಿರುಳನೆಲ್ಲವ ತೆಗದು ಬೂದಿಯನ್ನು ಪೂರ್ತಿಸಿದರೆ, ಸಿಹಿಯಾಗದೆ_ವಿಷವೆಲ್ಲ ಹೋಗಿ ಸವಿಯಾಗದೆ ಇದ್ದೀತೆ? ಆಗುತ್ತಿಹುದು, ಮೂರು ದಿವಸಕ್ಕೆ–ಮೂರೆಂಬದಿವಸಕ್ಕೆ, ಅಯ್ಯಾ–ಎಲೆ ಲಿಂಗವೆ.

ಹಲವುಕಾಲ–ಅನೇಕಕಾಲ, ಕೊಂದ–ಹಿಂಸೆಯ ಮಾಡಿದ, ಸೂನೆಗಾರನ ಕೈಯ ಕತ್ತಿಯಾದಡೇನು–ಕಟುಕನ ಕರದಲ್ಲಿರುವಂಥ ಕಡುಗತ್ತಿಯಾದರೇನು, ಪರುಷ ಮುಟ್ಟಲಿಕೆ–ಪರುಷದ ಖಣಿ ಸೋಂಕಲಿಕ್ಕೆ, ಹೊನ್ನಾಗದೆ–ಸುವರ್ಣವಾಗದಿದ್ದೀತೆ? ಆಗುತ್ತಿಹುದು, ಅಯ್ಯಾ–ಎಲೆ ಲಿಂಗವೆ, ಲಲಾಟದಲ್ಲಿ–ಫಣೆಯಲ್ಲಿ, ಶ್ರೀವಿಭೂತಿಯ ಬರೆಯಲಿಕ್ಕೆ : ಶ್ರೀ–ಐಶ್ವರ್ಯೋಪಲಕ್ಷಿತವಾದ, [ವಿಭೂತಿಯ ಬರೆಯಲಿಕ್ಕೆ]–ಚಿದ್ವಿಭೂತಿಯನ್ನು ಮೂರು ರೇಖೆಯಾಗಿ ಧರಿಸಲಿಕ್ಕೆ, ಪಾಪಪಲ್ಲಟವಾಗದೆ?–ದೋಷ ಬಿಡುಗಡೆಯಾಗಿ ಅವೆಲ್ಲ ಭಕ್ತಿಸತ್ಕ್ರಿಯೆಗಳಾಗಿ ಅಳವಡುವುದಿಲ್ಲವೆ? ಅಳವಡುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II – – – – – – – – – – – – – – – – – – – – – – – – – – – – – –

1–1 ವಿಭೂತಿ ಬರಲಿಕೆ (ಚ,ಜ).

..........................

ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ–ಪೂರ್ವಜನ್ಮದಲ್ಲಿ ಮಾಡಿಮಾಡಿ ಕೂಡಲಿಕ್ಕಿದ ದೋಷವು ಹೇಂಗೆ ನಷ್ಟವಾಗುವುದೆಂದು ವ್ಯಾಕುಳಿಸದಿರು. ಕಹಿಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ ಸಿಹಿಯಾಗದೆ ಮೂರುದಿವಸಕ್ಕಯ್ಯಾ?–

ಹೀನಮನಸ್ಸನುಳ್ಳಾತ್ಮನಾಗಮಾಡಿಕೊಂಡು ಬಂದು ಮಂತ್ರಭಸ್ಮವನು ಪೂರವಿಸಿದರೆ ತ್ರಿವಿಧಾವಸ್ಥೆಗೆ ಮಂತ್ರಮಾಧುರ್ಯವುಳ್ಳವನಾಗುವನೆಂಬುದರ್ಥ.

ಹಲವು ಕಾಲ ಕೊಂದ ಸೂನೆಗಾರನ [ಕೈಯ] ಕತ್ತಿಯಾದಡೇನು ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ?–ಅನಂತದಿನ ಪ್ರಾಣಹಿಂಸೆಯ ಮಾಡಿದ ಜೀವನೆಂಬ ಕಟುಕನ ಕುಚಿತ್ತ[೨]ವೆಂಬ[೨] ಹಸ್ತದ ಅಜ್ಞಾನವೆಂಬ ಶಸ್ತ್ರವಾದರೆ ಪರಮಪಾವನ ಪವಿತ್ರಸ್ವರೂಪನಾದ ಗುರು ಸೋಂಕಲಾಗಿ ಚಿತ್ಪ್ರಕಾಶಜ್ಞಾನವಾಗುವುದೆಂಬುದರ್ಥ, ಲಲಾಟದಲ್ಲಿ ವಿಭೂತಿ ಬರಲಿಕೆ ಪಾಪ ಪಲ್ಲಟವಾಗದೆ?–ಭಕ್ತಿನೈಷ್ಠೆಯೆಂಬ ಘಣಿಯಲ್ಲಿ ಶಿವನ ಮೈಕಾಂತಿ ಸ್ವರೂಪವಾದ ಚಿದ್ವಿಭೂತಿ ಆಗತವಾಗಲಾಗಿ ಸಂಚಿತಾದಿ ದೋಷವು ವಿಭ್ರಾಂತಿಯಾಗುವುದೆಂಬುದರ್ಥ.

..........................

೨–೨ x (ಜ).

III–––––––––––––––––––––––––––––––––––––––––––

ಕಹಿಸೋರೆಯ ಕಾಯ–ವಿಷದುಂಬರ ಫಲವನು, ಪಾಪ–ಪಂಚಮಹಾಪಾತಕವು.

---

೭೪

**ನೀರಿಂಗೆ ನೈದಿಲೆಯೆ ಶೃಂಗಾರ; [1]ಊರಿಂಗೆ ಆರವೆ ಶೃಂಗಾರ,[1] ಸಮುದ್ರಕ್ಕೆ ತೆರೆಯೆ ಶೃಂಗಾರ; ನಾರಿಗೆ ಗುಣವೆ ಶೃಂಗಾರ; ಗಗನಕ್ಕೆ ಚಂದ್ರಮನೆ ಶೃಂಗಾರ; ನಮ್ಮ ಕೂಡಲಸಂಗನ [2]ಶರಣರ[2] [3]ನೊಸಲಿಗೆ[3] ವಿಭೂತಿಯೆ ಶೃಂಗಾರ.**

I– – – – – – – – – – – – – – – – – – – – – – – – – – – –

ನೀರಿಂಗೆ ನೈದಿಲೆಯ ಶೃಂಗಾರ: ನೀರಿಂಗೆ–ಉದಕಕ್ಕೆ, ನೈದಿಲೆಯೆ–ನೀಲೋತ್ಪಲವೆ, ಶೃಂಗಾರ–ಅಲಂಕಾರವೆಂಬಲ್ಲಿ ಕೆರೆಗಳಲ್ಲಾಗಲಿ ಬಾವಿಗಳಲ್ಲಾಗಲಿ ಕೊಳಗಳಲ್ಲಾಗಲಿ ಕಾಸಾರಂಗಳಲ್ಲಾಗಲಿ ಹೊಂದಾವರೆ ಮಂದಾವರೆ ತಾವರೆ ಕಮಲ ಚಂಗಣಗಿಲ ನೈದಲೆಹೂವು ಕೊಳೆಹೂವು ಮೊದಲಾದಂಥವಿದ್ದರೆ ನೋಡುವರ ಕಣ್ಣಿಂಗೆ ಅಲಂಕಾರವಾಗಿರ್ಪುದು. ಅವೇನೂ ಇಲ್ಲದೆ ಬರೇ ಗುಂಭವಾಗಿ ನೀರೇ ತುಂಬಿಕೊಂಡಿದ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಭೋಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು.

ಊರಿಂಗೆ ಆಗರವೆ ಶೃಂಗಾರ: ಊರಿಂಗೆ–ಗ್ರಾಮಕ್ಕೆ, ಆರವೆ–ವನಾಂತರವೆ, ಶೃಂಗಾರ–ಅಲಂಕಾರವೆಂಬಲ್ಲಿ ತೆಂಗಿನತೋಟ ಅಡಕೆಯತೋಟ ಬಾಳೆತೋಟ ಕಬ್ಬಿನತೋಟ ನೆಲ್ಲುಗದ್ದೆ ಮೊದಲಾದಂಥವಿದ್ದರೆ ನೋಡುವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದು. ಅವೇನೂ ಇಲ್ಲದೆ ಮಹಾಬಯಲಲ್ಲಿ ಗ್ರಾಮವನ್ನು ಕಟ್ಟಿದ್ದರೆ ನೋಡುವಂಥವರ ಕಣ್ಣಿಂಗೆ ರಣರಣಾಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು.

ಸಮುದ್ರಕ್ಕೆ ತೆರೆಯೆ ಶೃಂಗಾರ: ಸಮುದ್ರಕ್ಕೆ–ಅಬ್ಧಿಗೆ, ತೆರೆಯೆ–ಕಲ್ಲೋಲಂಗಳೆ, ಶೃಂಗಾರ–ಅಲಂಕಾರವೆಂಬಲ್ಲಿ ಸಮುದ್ರವು ನೊರೆ ತೊರೆಬುದ್ಬುದ ಸೀಕರಾದಿ ತುಂತುರ್ವನಿಗಳಿಂದ ಹೆಣ್ಣುತೆರೆ ಗಂಡುತೆರೆಗಳಿಂದೆ ಭೋರೆಂದು ಉಲಿವುತ್ತಿರ್ದಲ್ಲಿ ನೋಡುವಂಥರ ಕಣ್ಣಿಂಗೆ ಅಲಂಕಾರವಾಗಿರ್ಪುದು. ಅದೇನೂ ಇಲ್ಲದೆ ತೆಪ್ಪಗ ನೀರು ತುಂಬಿಕೊಂಡಿರ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಭೋಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು.

ನಾರಿಗೆ ಗುಣವೆ ಶೃಂಗಾರ: ನಾರಿಗೆ–ಸ್ತ್ರೀಯಳಿಗೆ, ಗುಣವೆ–ಸದ್ಗುಣವೆ, ಶೃಂಗಾರ–ಅಲಂಕಾರವೆಂಬಲ್ಲಿ ಮನೆಗೆ ಬಂದಂಥ ಭಕ್ತಮಾಹೇಶ್ವರರುಗಳಿಗೆ ಜಯಜೀಯಾ ಚಿತ್ತೈಸಿ ಬನ್ನಿ ಮೂರ್ತವಮಾಡಿರೆಂದು ಅಗ್ಗಣಿಯನ್ನು ಕೊಟ್ಟು ಅರ್ಚನಾರ್ಪಣಾದಿ ಕ್ರಿಯೆಗಳನು ಮಾಡಿಸುವಂಥದೆ ಸದ್ಗುಣವಲ್ಲದೆ ಮಿಂದು ಮಡಿಯನುಟ್ಟುಕೊಂಡು ಬಾಚಿ ಬೈತಲೆಯ ತೆಗೆದುಕೊಂಡು ಮಿಂಚಾಗಿರ್ದಲ್ಲಿ ಹೋ ಹೋ ಇವಳು ಹೊಗರಾಗೈದಾಳೆಯಾರನ ಸೌರಿಸಿಕೊಂಡೈದಾಳೋ ಎಂದು ನಕ್ಕು ಹಾಸ್ಯವ ಮಾಡುತ್ತಿಹರು.

ಗಗನಕ್ಕೆ ಚಂದ್ರಮನೆ ಶೃಂಗಾರ: ಗಗನಕ್ಕೆ–ಆಕಾಶಕ್ಕೆ, ಚಂದ್ರಮನೆ–ಪೌರ್ಣಮಿಚಂದ್ರನೆ, ಶೃಂಗಾರ–ಅಲಂಕಾರವೆಂಬಲ್ಲಿ ಬಹುನಕ್ಷತ್ರಂಗಳ ಮಧ್ಯದಲ್ಲಿ ಪೌರ್ಣಮಿಚಂದ್ರನಿದ್ದರೆ ನೋಡುವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದು. ಅವೇನೂ ಇಲ್ಲದೆ ಅಮವಾಸ್ಯೆಯ ಕಾಲದಲ್ಲಿ ಗಡದಾಗಿ ಕಾವಳ ಬಿದ್ದಿದ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದೆ? ಇಲ್ಲವು, ರಣಾರಣಾಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು. ನಮ್ಮ ಕೂಡಲಸಂಗನ–ನಮ್ಮ ಪರಶಿವಲಿಂಗದಪರಾವತಾರ ಮೂರ್ತಿಗಳಾದ, ಶರಣರ–ಶಿವಶರಣರ, ಫಣಿಯಲ್ಲಿಯ–ನೊಸಲಲ್ಲಿಯ, ವಿಭೂತಿಯೆ–ಚಿದ್ವಿಭೂತಿಯೆ, ಶೃಂಗಾರ–ಅಲಂಕಾರವೆಂಬಲ್ಲಿ ಆಭರಣವಾಗಿ ಅಲಂಕಾರವಾಗಿ ಒಪ್ಪುತ್ತಿಹುದು.

II – – – – – – – – – – – – – – – – – – – – – – – – – – – – – – –

1–1x (ಚ, ಜ) 2–2 ಶರಣರಿಗೆ (ಚ, ಜ) 3–3 ನೊಸಲ (ಚ,ಜ).

..........................

ನೀರಿಂಗೆ ನೈದಿಲೆಯೆ ಶೃಂಗಾರ–ಪ್ರಾಣಲಿಂಗಿಯ ಉನ್ಮಾನಸೋದಕಕ್ಕೆ ಜ್ಞಾನವೆಂಬ ಕುಮುದವೆ ಲಾವಣ್ಯವಾಗೊಪ್ಪುತ್ತಿಹುದು. ಸಮುದ್ರಕ್ಕೆ ತೆರೆಯ ಶೃಂಗಾರ–ಪರಶಿವಸಾಗರಕ್ಕೆ ಷಟ್ಸ್ಥಲಜ್ಞಾನಕ್ರಿಯಾಚರಣೆಯೆಂಬ ತರಂಗವೆ ಲಾವಣ್ಯವಾಗಿಹುದು. ನಾರಿಗೆ ಗುಣವೆ ಶೃಂಗಾರ–ಜ್ಞಾನಶಕ್ತಿಗೆ ಸತ್ಯಧೃತಿ ಮೊದಲಾದ ದಶವಿಧಕಲ್ಯಾಣಗುಣವೆ ಅಲಂಕಾರವಾಗಿಪ್ಪುದು.

ಗಗನಕ್ಕೆ ಚಂದ್ರಮನೆ ಶೃಂಗಾರ–ಆತ್ಮಾಕಾಶಕ್ಕೆ ಪರಮಶಾಂತಿಜ್ಞಾನವೆಂಬ ಇಂದುಮಂಡಲವೆ ಲಾವಣ್ಯವಾಗೊಪ್ಪುತ್ತಿಹುದು. ನಮ್ಮ ಕೂಡಲಸಂಗನಶರಣರಿಗೆ ನೊಸಲವಿಭೂತಿಯೆ ಶೃಂಗಾರ–ಪರಶಿವಲಿಂಗದ ಪರಮೂರ್ತಿಗಳಾದ ಶಿವಶರಣರುಗಳಿಗೆ ಭಕ್ತಿನೈಷ್ಠೆಯೆಂಬ ಫಣೆಯ ಚಿದ್ವಿಭೂತಿಯೆ ಅಲಂಕಾರವಾಗಿಪ್ಪುದು.

---

## ರುದ್ರಾಕ್ಷಿಸ್ಥಲ

೭೫

[1]ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಪಾವನವಯ್ಯಾ ಅಯ್ಯಾ ಎನಗೆ ರುದ್ರಾಕ್ಷಿಯೆ ಸರ್ವಸಿದ್ಧಿ. ಅಯ್ಯಾ ನಿಮ್ಮ ಪಂಚ ವಕ್ತ್ರಂಗಳೆ ಪಂಚಮುಖದ ರುದ್ರಾಕ್ಷಿಗಳಾದವಾಗಿ, ಅಯ್ಯಾ ಕೂಡಲಸಂಗಮದೇವಾ ಎನ್ನ ಮುಕ್ತಿಪಥಕ್ಕೆ ಶ್ರೀರುದ್ರಾಕ್ಷಿಸಾಧನವಯ್ಯಾ.[1]

I - - - - - - - - - - - - - - - - - - - - - - - - - - - - - - - - - - - - - - - - - - - - -

1–1 x (ಗ).

.........................

ಈ ವಚನ ಕಾಣಬಂದರ್ಥ.

---

೭೬

ಶ್ರೀರುದ್ರಾಕ್ಷಿಯ ಧರಿಸಿದಾತನ ಲಿಂಗವೆಂಬೆ, ಶ್ರೀರುದ್ರಾಕ್ಷಿಯ ಧರಿಸದ ಅಧಮರನೆ ಭವಿಯೆಂಬೆ, ಕೂಡಲಸಂಗಮದೇವಯ್ಯಾ, ಶ್ರೀರುದ್ರಾಕ್ಷಿಯ ಧರಿಸುವ ಭಕ್ತರ ನೀನೆಂಬೆ.

I – – – – – – – – – – – – – – – – – – – – – – – – – – – – – – –

1–1 x (ಗ).

.........................

ಈ ವಚನ ಕಾಣಬಂದರ್ಥ.

---

೭೭

[1]ಹಸ್ತಕಡಗ ಕೈಗಧಿಕ ನೋಡಾ: ಕೊಡಲಹುದು ಕೊಳಲಹುದು, ಬಾಹುಬಳೆ ತೋಳಿನಿಂದಧಿಕ ನೋಡಾ: ಪರವಧುವನಪ್ಪಲಾಗದು. ಕರ್ಣಕ್ಕೆ ರುದ್ರಾಕ್ಷಿಯೆ ಅಧಿಕ ನೋಡಾ : ಶಿವನಿಂದ್ಯವ ಕೇಳಲಾಗದು. ಕಂಠಮಾಲೆ ಕೊರಳಿನಿಂದಧಿಕ ನೋಡಾ : ಅನ್ಯದೈವಕ್ಕೆ ತಲೆಬಾಗಲಾಗದು, ಆವಾಗಳೂ ನಿಮ್ಮುವ ನೆನನೆನದು, ನಿಮ್ಮುವನೆ ಪೂಜಿಸಿ ಕೂಡಲಸಂಗಯ್ಯನ ಸದಾಸನ್ನಿಹಿತನಾಗಿಪ್ಪಡೆ ಲಿಂಗಶಿಖಾಮಣಿಯಯ್ಯಾ.[1]

I – – – – – – – – – – – – – – – – – – – – – – – – – – – – – –

1–1 x (ಗ).

.........................

ಈ ವಚನ ಕಾಣಬಂದರ್ಥ.

---

# ಪಂಚಾಕ್ಷರಿ ಸ್ಥಲ

I – – – – – – – – – – – – – – – – – – – – – – – – – – – – – – – – – –

ಪಂಚಾಕ್ಷರಿಸ್ಥಲ–ಪಂಚಾಕ್ಷರಿಯ ಮಹತ್ವವನ್ನೇ ಪೇಳುತ್ತಿಹುದಾದ ಕಾರಣ ಇದಕ್ಕೆ ಪಂಚಾಕ್ಷರಿಸ್ಥಲವೆಂದು ಹೇಳಲ್ಪಟ್ಟಿತ್ತು.

---

೭೮

**ಕರಿ ಅಂಜುವುದು ಅಂಕುಶಕ್ಕಯ್ಯಾ! ಗಿರಿ ಅಂಜುವುದು ಕುಲಿಶಕ್ಕಯ್ಯಾ! ತಮಂಧ ಅಂಜುವುದು ಜ್ಯೋತಿಗಯ್ಯಾ! ಕಾನನ ಅಂಜುವುದು ಬೇಗೆಗಯ್ಯಾ! ಪಂಚಮಹಾಪಾತಕ ಅಂಜುವುದು ನಮ್ಮ ಕೂಡಲಸಂಗನ ನಾಮಕ್ಕಯ್ಯಾ!**

I – – – – – – – – – – – – – – – – – – – – – – – – – – – – – – – – – –

ಕರಿ ಅಂಜುವುದು ಅಂಕುಶಕ್ಕಯ್ಯಾ! : ಕರಿ_ಘನಗಾತ್ರವಾದ ಆನೆಯು, ಅಂಕುಶಕ್ಕೆ_ಶೃಣಿಗೆ, ಅಂಜುವುದಯ್ಯಾ_ಎಂತಪ್ಪ ದೊಡ್ಡ ಮದಹಸ್ತಿಯ ನಾಯಿತ್ತಾದರೂ ಅಂಕುಶದಿಂದೊತ್ತಿ ಕಡಿದಲ್ಲಿ ಕಿರ್ರೆಂದು ಬೇಳೆಂದು ಬೆಳಗುಟ್ಟಿ ಭಯಂಬಟ್ಟು ತನ್ನ ಗೊತ್ತಿಗೆ ಬಂದು ನಿಂದಿರುತ್ತಿಹುದಯ್ಯಾ. ಗಿರಿ ಕುಲಿಶಕ್ಕಂಜುವುದಯ್ಯಾ! : ಗಿರಿ–ಪರ್ವತವು, ಕುಲಿಶಕ್ಕಂಜುವುದಯ್ಯಾ–ಎಂತಪ್ಪ ದೊಡ್ಡ ಕೋಡಗಲ್ಲನಾಯಿತ್ತಾದರೂ ವಜ್ರದುಳಿಯಿಂದ ಕಾಪನಿಕ್ಕಿಯಾಗಪ್ಪನ ಸೇರಿಸಿ ಅಹಲ್ಲಾಯೆಂಬ ಶಬ್ಧದಿಂದ ಹಾರಿಯನ್ನು ಎತ್ತಿ ಹೊಡೆದಲ್ಲಿ ಭಯಂಬಟ್ಟು ಒಡೆದು ಛಿದ್ರಛಿದ್ರವಾಗುತ್ತಿಹುದಯ್ಯಾ.

ತಮಂಧ ಅಂಜುವುದು ಜ್ಯೋತಿಗಯ್ಯಾ !: ತಮಂಧ–ಕಾವಳವು, ಜ್ಯೋತಿಗಂಜುವುದಯ್ಯಾ–ಎಂತಪ್ಪ ದೊಡ್ಡ ಕಾವಳವಾದ ಮಠಮನೆಗಳಲ್ಲಾದರೂ ದೀಪವನ್ನು ಮುಟ್ಟಿಸಿದಲ್ಲಿ ಕಾವಳವೆಲ್ಲ ಭಯಂಬಟ್ಟು ಬಯಲಾಗಿ ಹೋಗುತ್ತಿಹುದಯ್ಯಾ. ಕಾನನ ಅಂಜುವುದು ಬೇಗೆಗಯ್ಯಾ : ಕಾನನ–ಧುರಂಧರವಾಗಿ ಬೆಳೆದಂಥ ಅಡವಿಯು, ಬೇಗೆಗಂಜುವುದಯ್ಯಾ–ಕಾಡಗಿಚ್ಚು ಹತ್ತಿದಲ್ಲಿ ಭಯಂಬಟ್ಟು ಸುಟ್ಟು ಬೂದಿಯಾಗುತ್ತಿಹುದಯ್ಯಾ. ಪಂಚ ಮಹಾಪಾತಕ ಅಂಜುವುದು ನಮ್ಮ ಕೂಡಲಸಂಗನ ನಾಮಕ್ಕಯ್ಯಾ–ಶಿವನ ಅದ್ವಯ ಅಭಿದಾನವಾದ ಪ್ರಣವ ಪಂಚಾಕ್ಷರಿಮಂತ್ರೋಚ್ಚರಣೆ ಮಾಡಿದಷ್ಟಕ್ಕೆ ಪಂಚಮಹಾಪಾತಕವೆಲ್ಲ ಭಯಂಬಟ್ಟು ನಷ್ಟವಾಗಿ ಹೋಗಿತ್ತಿಹುದಯ್ಯಾ.

---

೭೯

**ಜಪತಪ ನಿತ್ಯನೇಮವೆನಗೆ ಉಪದೇಶ; ನಿಮ್ಮ ನಾಮವೆನಗೆ ಮಂತ್ರ; ಶಿವನಾಮವೆನಗೆ ತಂತ್ರ; ಕೂಡಲಸಂಗಮದೇವಯ್ಯಾ; ನಿಮ್ಮ ನಾಮ, ಕಾಮಧೇನುವೆನಗೆ.**

I – – – – – – – – – – – – – – – – – – – – – – – – – – – – – – – – – –

ಜಪತಪ ನಿತ್ಯನೇಮವೆನಗೆ ಉಪದೇಶ: ಜಪ–ಪವಳ ಪದ್ಮಾಕ್ಷಿ ಪುತ್ರಂಜ ಶಂಖ ಮೌಕ್ತಿಕ ಮೊದಲಾದ ಮಣಿಮಾಲಿಕೆಯನ್ನು ಪಿಡಿದುಕೊಂಡು ಸಪ್ತಕೋಟಿ ಮಹಾಮಂತ್ರ ಅನೇಕಕೋಟಿ ಉಪಮಂತ್ರಂಗಳೊಳಗೆ ಒಂದೊಂದು ಮಂತ್ರವನ್ನೇ ಕರುಹಿಟ್ಟುಕೊಂಡು ಯಾವಾಗಲೂ ತಪ್ಪದೆ ಮಾಡುವಂಥದೀಗ ಜಪ, ತಪ–ಊರು ತೊರೆದು ಘೋರಾರಣ್ಯಕ್ಕೆ ಹೋಗಿ ಫಲಾಹಾರ ಪವನಾಹಾರ ಪರ್ಣಾಹಾರ ಜಲಾಹಾರ ಶಿಲಾಹಾರ ಉಕ್ಕಿನಚೂರ್ಣ ಮೊದಲಾದವನ್ನು ತೆಗೆದುಕೊಂಡು ಕೋಡಗಲ್ಲ ಮೇಲೆ ಪಂಚಾಗ್ನಿಗಳ ಮಧ್ಯದಲ್ಲಿ ಏಕಪಾದಸ್ಥಿತನಾಗಿ ನಿಂದು ಉಗ್ರತಪಸ್ಸು ಮಾಡುವಂಥದೇ ತಪ, ನಿತ್ಯ–ತ್ರಿಕಾಲಂಗಳಲ್ಲಿ ತಪ್ಪದೇ ಮಾಡುವಂಥ ಕ್ರಿಯಾವಿಧಾನಂಗಳು, ನೇಮ–ಚಾಂದ್ರಾಯಣ ಕೃಚ್ಛ್ರಾಂದ್ರಾಯಣಾದಿ ವ್ರತಂಗಳು, ಎನಗೆ ಉಪದೇಶ–ಶ್ರೀಗುರುನಾಥನು ಶಿಷ್ಯನ ಕರ್ಣದ್ವಾರದಲ್ಲಿ ಉಪದೇಶಂಗೆಯ್ವಂಥ ಶಿವಷಡಕ್ಷರಮಂತ್ರಬೋಧೆಯು, ಎನಗೆ–ನನಗೆ, ಜಪ–ಅದೇ ಜಪದ ಫಲಂಗಳಾಗಿ ಅಳವಟ್ಟಿಪ್ಪುದು, ತಪ–ಅದೇ ಸಮಸ್ತತಪಂಗಳಾಗಿ ಅಳವಟ್ಟಿಪ್ಪುದು, ನಿತ್ಯ–ಅದೇ ತ್ರಿಕಾಲಂಗಳಲ್ಲಿ ತಪ್ಪದೇ ಮಾಡುವಂಥ ಪೂಜಾಕ್ರಿಯೆಗಳಾಗಿ ಅಳವಟ್ಟಿಪ್ಪುದು, ನೇಮ–ಅದೇ ಸಮಸ್ತವ್ರತಂಗಳಾಗಿ ಅಳವಟ್ಟಿಪ್ಪುದು.

ನಿಮ್ಮ ನಾಮ–ಶಿವನ ಅದ್ವಯ ಅಭಿಧಾನವಾದ ಪ್ರಣವಪಂಚಾಕ್ಷರಿಮಂತ್ರಸ್ಮರಣೆಯು, ಎನಗೆ–ನನಗೆ, ಮಂತ್ರ–ಅದೇ ಸಪ್ತಕೋಟಿ ಉಪಮಂತ್ರಂಗಳಾಗಿ ಅಳವಟ್ಟಿಪ್ಪುದು. ಶಿವನ ನಾಮ–ಶಿವನ ಅದ್ವಯ ಅಭಿಧಾನವಾದ ಪ್ರಣವಪಂಚಾಕ್ಷರಿಮಂತ್ರಸ್ಮರಣೆ, ಎನಗೆ–ನನಗೆ, ತಂತ್ರ–ಆ ಮಂತ್ರಶಾಸ್ತ್ರಂಗಳಲ್ಲಿ ಹೇಳಿದ ಹಾಂಗೆ ತಪ್ಪದೆ ಮಾಡುವಂಥ ಕ್ರಿಯಾವಿಧಾನಂಗಳಾಗಿ ಅಳವಟ್ಟಿಪ್ಪುದು.

ಕೂಡಲಸಂಗಮದೇವಯ್ಯಾ_ಎಲೆ ಪರಶಿವಲಿಂಗವೆ, ನಿಮ್ಮ ನಾಮ_ಶಿವನ ಅದ್ವಯ ಅಭಿಧಾನವಾದ ಪ್ರಣವ ಪಂಚಾಕ್ಷರ ಮಂತ್ರಸ್ಮರಣೆ ಮಾಡುವಂಥದೆ, ಎನಗೆ–ಶರಣಂಗೆ, ಕಾಮಧೇನು–ಕಾಮಿಸಿದಂಥವರಿಗೆ ಕಾಮಿತಾರ್ಥವನ್ನು ಕೊಡುವಂಥದೆ, ಎನಗೆ–ಶರಣನಿಗೆ, ಸುರಧೇನುವಾಗಿ ಅಳವಟ್ಟಿಪ್ಪುದು.

III– – – – – – – – – – – – – – – – – – – – – – – – – – – – – – –

ಜಪ–ಪವಳ ಪದ್ಮಾಕ್ಷಿ ೧ಪತ್ರ೧ಜಾಜಿ ಮುತ್ತು ಮಾಣಿಕ್ಯ ರುದ್ರಾಕ್ಷಿ ಮೊದಲಾದವರಿಂದೆ ಮಾಡುವಂಥ ಜಪವು, ತಪ–ಜಲ ಫಲ ಪರ್ಣ ಶಿಲಾ ಚೂರ್ಣ ಮೊದಲಾದವನು ಸೇವಿಸಿ ಮಾಡುವ ತನು ದಂಡನೆಯು.

........................

೧–೧ ಪುತ್ರ (ಟ, ಡ).

---

೮೦

**ಅಕಟಕಟಾ ಬೆಡಗು ಬಿನ್ನಾಣವೆಂಬುದೇನೊ! 'ಓಂ ನಮಃ ಶಿವಾಯ' ಎಂಬುದೇ ಮಂತ್ರ, 'ಓಂ ನಮಃ ಶಿವಾಯ' ಎಂಬುದೇ ತಂತ್ರ, ನಮ್ಮ ಕೂಡಲಸಂಗಮದೇವರ 'ಮಾಣಬೆ' ನೆನೆವುದೆ ಮಂತ್ರ.**

I - - - - - - - - - - - - - - - - - - - - - - - - - - - - - - - - - -

ಅಕಟಕಟಾ–ಲಿಂಗವೇ ಲಿಂಗವೇ, ಬೆಡಗು ಭಿನ್ನಾಣವೆಂಬುದೇನೊ!–ವಸ್ತುಕಶಾಸ್ತ್ರ ವರ್ಣಕಶಾಸ್ತ್ರಂಗಳನು ಓದಿ ಹಾಡಿ ಪರಿಣಾಮಿಸಬೇಕೆಂಬಂಥದೇನೊ. 'ಓಂ ನಮಃ ಶಿವಾಯ'ವೆಂಬುದೇ ಮಂತ್ರ: [ಓಂ ನಮಃ ಶಿವಾಯವೆಂಬುದೇ–] ಓಂ ನಮಃ ಶಿವಾಯ, ಓಂ ನಮಃ ಶಿವಾಯವೆಂಬ ಶಿವ ಷಡಕ್ಷರಮಂತ್ರಸ್ಮರಣೆಯ ಮಾಡುವಂಥದೇ, ಮಂತ್ರ–ಅದೇ ಸಪ್ತಕೋಟಿ ಮಹಾಮಂತ್ರ, ಅನೇಕಕೋಟಿ ಉಪಮಂತ್ರಗಳು 'ನ ಶೋಭಯೇತ್' ಶೋಭಿಸಲಾರವುಯೆಂಬಲ್ಲಿ ಸಮಾನಗಾಣಲರಿಯದೆ ಹೋದೆವು.

'ಓಂ ನಮಃ ಶಿವಾಯ'ವೆಂಬುದೇ ತಂತ್ರ–ಓಂ ನಮಃ ಶಿವಾಯವೆಂಬ ಶಿವಷಡಕ್ಷರಮಂತ್ರ ಸ್ಮರಣೆಯ ಮಾಡುವಂಥದೇ ತಂತ್ರ. ಆ ಮಂತ್ರ ಶಾಸ್ತ್ರಂಗಳಲ್ಲಿ ಹೇಳಿದ ಹಾಂಗೆ ತಪ್ಪದೆ ಮಾಡುವಂಥ ಕ್ರಿಯೆ ವಿಧಾನಂಗಳಾಗಿ ಅಳವಟ್ಟಿಪ್ಪುದು. ನಮ್ಮ ಕೂಡಲಸಂಗಮದೇವರ–ನಮ್ಮ ಇಷ್ಟಮಹಾಲಿಂಗವನ್ನು, ಮಾಣದೆ–ಬಿಡದೆ, ನೆನೆವುದೆ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದೆ, ಮಂತ್ರ–ಅದೇ ಸಪ್ತಕೋಟಿ ಮಂತ್ರ, ಅನೇಕಕೋಟಿ ಉಪಮಂತ್ರಗಳಾಗಿ ಅಳವಟ್ಟಿಪ್ಪುದು.

II - - - - - - - - - - - - - - - - - - - - - - - - - - - - - - - - -

1–1 x (ಚ,ಜ).

..........................

ಅಕಟಕಟಾ ಬೆಡಗು ಬಿನ್ನಾಣವೆಂಬುದೇನೊ!–ಅಯ್ಯಯ್ಯೋ ವೇದಶಾಸ್ತ್ರಾಗಮಪುರಾಣ ತರ್ಕತಂತ್ರ ಇತಿಹಾಸಾದಿ ನಾನಾ ಶಾಸ್ತ್ರಂಗಳ ಕುರಿತು ನುಣ್ಣಿಸಿ ಬಣ್ಣಿಸಿ ಹೇಳುವ ಬಣಿತೆಯ ಒಪ್ಪುಗಾರಿಕೆ ಎಂಬುದೇನೊ. ಅದಲ್ಲದೆ ಬೆಡಗೆಂದರೆ, ಬಿನ್ನಾಣವೆಂದರೆ ಛಂದಗಣನಿಯಮಂಗಳಿಂದ ಕವಿತ್ವವ ಮಾಡುವ ಕುಶಲಗಾರಿಕೆಯೆಂದೇನೊ ಮುಂದಕ್ಕೆ ಕಾಣಬಂದರ್ಥ.

III - - - - - - - - - - - - - - - - - - - - - - - - - - - - - - - -

1–1 x (ಟ,ಡ).

..........................

ಬೆಡಗು ಬಿನ್ನಾಣವೆಂಬುದೇನೊ!–ಕ್ರಿಯಾಚಾರ ಜ್ಞಾನಾಚಾರದ ಬಣಿತೆಯೆಂಬುದೇನಿದ್ದಿತೊ, ತಂತ್ರ ⌈[ಭೂರ್ಜ]⌉ ಪತ್ರಿಕೆ ಮೊದಲಾದವಱಿಂದೆ ಉಬ್ಧರಿಸುವ ಉದ್ಧರಣೆಯು.

..........................

೧–೧ ಬುಜ (ಟ,ಡ).

---

**ವಶ್ಯವ [1]ಬಲ್ಲೆವೆಂದೆಂಬಿರಯ್ಯಾ[1] ಬುದ್ಧಿಯನಱಿಯದ ಮನುಜರು [2]ನೀವು[2] ಕೇಳಿರಯ್ಯಾ; ವಶ್ಯವಾವುದೆಂದಱಿಯದೆ ಮರುಳುಗೊಂಬಿರೆಲೆ ಗಾವಿಲ ಮನುಜರಿರಾ! 'ಓಂ ನಮಃ ಶಿವಾಯ'ವೆಂಬ ಮಂತ್ರ ಸರ್ವಜನವಶ್ಯ, ಕೂಡಲಸಂಗಮದೇವಾ.**

I – – – – – – – – – – – – – – – – – – – – – – – – – – – – – – – –

ವಶ್ಯವ ಬಲ್ಲೆವೆಂದೆಂಬಿರಯ್ಯಾ : ವಶ್ಯ–ಜನವಶ್ಯ ರಾಜವಶ್ಯ ಸ್ತ್ರೀವಶ್ಯ ಮೊದಲಾದ ಸಮಸ್ತವಶ್ಯವನು ಅರಿದು ಬಲ್ಲೆವೆಂದು ಹೇಳಿಕೊಂಬಿರಯ್ಯಾ. ಬುದ್ಧಿಯನರೆಯದ–ಜ್ಞಾನವನ್ನು ತಿಳಿಯುದ, ಮನುಜರು–ಮನುಷ್ಯರು, ನೀವು ಕೇಳಿರಯ್ಯಾ–ನೀವು ಆಲಿಸಿರಯ್ಯಾ ವಶ್ಯವಾವುದೆಂದಱಿಯದೆ–ಜನವಶ್ಯ ರಾಜವಶ್ಯ ಸ್ತ್ರೀವಶ್ಯ ಮೊದಲಾದುವಾವುವೆಂದು ತಿಳಿಯದೆ, ಮರುಳುಗೊಂಬಿರೆಲೆ ಗಾವಿಲ ಮನುಜರಿರಾ–ಭ್ರಾಂತುಗೊಂಬಿರೆಲೆ ಗಾಂಪ ಮನುಷ್ಯರಿರಾ.

'ಓಂ ನಮಃ ಶಿವಾಯ'ವೆಂಬ ಮಂತ್ರ ಸರ್ವಜನವಶ್ಯ–'ಓಂ ನಮಃ ಶಿವಾಯಃ ಶಿವಾಯ'ವೆಂಬ ಶಿವಷಡಕ್ಷರಮಂತ್ರಸ್ಮರಣೆಯ ಮಾಡುವಂಥ ಶಿವಯೋಗೀಶ್ವರರುಗಳಿರುವ ಸ್ಥಾನಕ್ಕೆ ಸಮಸ್ತರಾಜರುಗಳು ಬಂದು ದೀರ್ಘದಂಡನಮಸ್ಕಾರ ಮೊದಲಾದ ಭಕ್ತಿಗಳಿಂದ ಹಸ್ತಾಂಜಲಿತರಾಗಿ ಸಮ್ಮುಖದಲ್ಲಿ ನಿಂತುಕೊಂಡು ಚರಣವನ್ನು ಜೋಡಿಸಿಕೊಂಡು ಸ್ವಾಮಿ, ನಮ್ಮ ಖಂಡೆಯದ ಕೈ ಜಯಿಸುವ ಹಾಂಗೆ ಮಾಡಬೇಕೆಂದು ಕೇಳಿಕೊಂಬುತ್ತಿಹರು. ಅದಲ್ಲದೆ ಸಮಸ್ತರಾಜರ ಸ್ತ್ರೀಯರು ಬಂದು ದೀರ್ಘದಂಡನಮಸ್ಕಾರ ಮೊದಲಾದ ಭಕ್ತಿಗಳಿಂದ ಹಸ್ತಾಂಜಲಿತರಾಗಿ ಸಮ್ಮುಖದಲ್ಲಿ ನಿಂತುಕೊಂಡು ಸ್ವಾಮಿ, ನಮಗೆ ವಾಲೆಭಾಗ್ಯವನ್ನು ಕೊಡಬೇಕೆಂದು ಕೇಳಿಕೊಂಬುತ್ತಿಹರು. ಅದಲ್ಲದೆ ಸಮಸ್ತ ಆತ್ಮರುಗಳು ಬಂದು ದೀರ್ಘದಂಡನಮಸ್ಕಾರ ಮೊದಲಾದ ಭಕ್ತಿಗಳಿಂದ ಹಸ್ತಾಂಜಲಿತರಾಗಿ ಸಮ್ಮುಖದಲ್ಲಿ ನಿಂತು ಚರಣವನ್ನು ಜೋಡಿಸಿಕೊಂಡು ಸ್ವಾಮಿ, ನಮಗೆ ಆಹಾರವ್ಯವಹಾರಭೋಗಭುಕ್ತಾದಿಗಳ ಕೊಟ್ಟು ರಕ್ಷಣೆಯ ಮಾಡಬೇಕೆಂದು ಕೇಳಿಕೊಂಬುತ್ತಿದ್ದ ಕಾರಣ ಅದೇ ಸಮಸ್ತ ಜನವಶ್ಯ ರಾಜವಶ್ಯ ಸ್ತ್ರೀವಶ್ಯವಾಗಿ ಅಳವಟ್ಟಿಪ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II – – – – – – – – – – – – – – – – – – – – – – – – – – – – – – –

1–1 ಬಲ್ಲೆವೆಂಬಿರಯ್ಯಾ (ಚ,ಜ). 2–2 x (ಚ, ಜ).

..........................

ವಶ್ಯವ ಬಲ್ಲೆವೆಂಬಿರಯ್ಯಾ, ಬುದ್ಧಿಯನಱಿಯದ ಮನುಜರು ಕೇಳಿರಯ್ಯಾ–ಸ್ತ್ರೀವಶ್ಯ, ರಾಜವಶ್ಯ ಸರ್ವಜನವಶ್ಯ ಮೊದಲಾದ ವಶೀಕರಣ ವಿದ್ಯೆಂಗಳನು ತಿಳಿದುಬಲ್ಲೆವೆಂಬಿರಿ ಶಿವತತ್ತ್ವಜ್ಞಾನಾನುಭಾವ ಬೋಧೆಯನು ತಿಳಿಯದ ಮನುಷ್ಯರುಗಳು ಬೆಸಗೊಳ್ಳಿರೊ, ಮುಂದಕ್ಕೆ ಕಾಣಬಂದರ್ಥ.

೮೨

**ಭವಬಂಧನ ದುರಿತಂಗಳ ಗೆಲುವಡೆ 'ಓಂ ನಮಃ ಶಿವಾಯ' ಶರಣೆಂದಡೆ ಸಾಲದೆ? ಹರಹರ ಶಂಕರ, ಶಿವಶಿವ ಶಂಕರ, ಜಯಜಯ ಶಂಕರ ಶರಣೆನುತಿದ್ದೇನೆ. ⁽ಎನ್ನ ಪಾತಕ ಪರಿಹಾರ ಕೂಡಲಸಂಗಮದೇವಂಗೆ ಶರಣೆನುತಿದ್ದೇನೆ.⁽**

I – – – – – – – – – – – – – – – – – – – – – – – – – – – – – –

ಭವಬಂಧನ ದುರಿತಂಗಳ ಗೆಲುವಡೆ : ಭವ–ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಹುಟ್ಟಿ ಬರುವಂಥ ಉತ್ಪತ್ಯವು, ಬಂಧನ–ಕಾಲಕಾಮರ ಶಿಕ್ಷಾಬಾಧಿತ್ವವು, ದುರಿತಂಗಳ–ಅಷ್ಟೋತ್ತರಶತವ್ಯಾಧಿಗಳ, ಗೆಲುವಡೆ–ಜಯಿಸುವೊಡೆ, 'ಓಂ ನಮಃ ಶಿವಾಯ' ಶರಣೆಂದಡೆ ಸಾಲದೆ?– ಓಂ ನಮಃ ಶಿವಾಯವೆಂಬ ಶಿವಷಡಕ್ಷರಮಂತ್ರಸ್ಮರಣೆಯಿಂದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕಾರವೆಂದು ನಮಸ್ಕರಿಸುವಂಥದು, ಸಾಲದೆ?–ಅಷ್ಟೇ ಸಾಲದೆ? ಸಾಕು.

ಹರಹರ ಶಂಕರ : ಹರ–ಕಾಲಕಾಮತ್ರಿಪುರದಕ್ಷಾಧ್ವರದುರಿತಧ್ವಂಸಿಯಾದಂಥ ದೇವನೆ, ಹರ–ಭಕ್ತಾದಿಗಳಿಗೆ ಬಂದಂಥ ಕಂಟಕಾದಿಗಳನು ಪರಿಹರಿಸುತಿದ್ದಂಥ ದೇವನೆ, "ಶಂಕರ–⁽[ಶಂ]⁽ ಕರೋತೀತಿ ಶಂಕರಃ" ಎಂದು, ಶಂ–ಸುಖವನ್ನು, ಕರ–ಮಾಡಲ್ಪಟ್ಟಂಥ ದೇವನೆ, ಶಿವಶಿವ ಶಂಕರ : ಶಿವ–ಮಾಂಗಲ್ಯಸ್ವರೂಪನಾದಂಥ ದೇವನೆ, ಶಿವ–ಭಸ್ಮೋದ್ಧೂಳಿತದಿಂದ ನಿರ್ಮಲೀಕೃತನಾದಂಥ ದೇವನೆ, ಶಂಕರ–⁽[ಶಂ]⁽ ಕರೋತೀತಿ ಶಂಕರಃ" ಎಂದು, ಶಂ–ಸುಖವನ್ನು, ಕರ–ಮಾಡಲ್ಪಟ್ಟಂಥ ದೇವನೆ, ಜಯಜಯ ಶಂಕರ : ಜಯಜಯ–ಸರ್ವೋತ್ಕರ್ಷನಾಗು ಸರ್ವೋತ್ಕರ್ಷನಾಗು, ಶಂಕರ–ಶಂ] ಕರೋತೀತಿ ಶಂಕರಃ" ಎಂದು, ಶಂ–ಸುಖವನ್ನು, ಕರ–ಮಾಡಲ್ಪಟ್ಟಂಥ ದೇವನೆ, ಶರಣೆನುತಿದ್ದೇನೆ–ಮಂತ್ರಸ್ಮರಣೆಯಿಂದ ಲಿಂಗಪೂಜೆಯ ಮಾಡಿ ಲಿಂಗ ನಮಸ್ಕಾರವೆಂದು ಲಿಂಗಕ್ಕೆ ನಮಸ್ಕರಿಸುತ್ತಿದ್ದೇನೆ.

ಎನ್ನ ಪಾತಕ–ಎನ್ನ ಪಂಚಮಹಾಪಾತಕವು, ಪರಿಹಾರ–ಬಿಡುಗಡೆಯು, ಕೂಡಲಸಂಗಮದೇವಂಗೆ–ಪರಶಿವಲಿಂಗಕ್ಕೆ, ಶರಣೆನುತಿದ್ದೇನೆ–ಮಂತ್ರಸ್ಮರಣೆಯಿಂದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕಾರವೆಂದು ನಮಸ್ಕರಿಸುತ್ತಿದ್ದೇನೆ.

.......................................

೧_೧ ಸುಖಂ (ಕ,ಗ).

II – – – – – – – – – – – – – – – – – – – – – – – – – – – – – –

1–1 ಪರಿಹರ, ಕೂಡಲಸಂಗಮದೇವಾ (ಚ,ಜ).

...........................

ಭವಬಂಧನ ದುರಿತಂಗಳ ಗೆಲುವಡೆ-ಜನ್ಮಸಂಸಾರದ ಸೆರೆಯನು ಅಷ್ಟೋತ್ತರಶತವ್ಯಾಧಿಗಳನು ಜಯಿಸುವರೆ, 'ಓಂ ನಮಃ ಶಿವಾಯ' ಶರಣೆಂದಡೆ ಸಾಲದೆ?-ಓಂ ಶಿವಾಯ ನಮಃ ಎಂದರೆ ಸಾಕು. ಹರ-ಕಾಲನ ಸಂಹರಿಸಿದಂಥ, ಹರ-ಕಾಮನ ಸಂಹರಿಸಿದಂಥ, ಶಂಕರ- "[ಶಂ][1] ಕರೋತೀತಿ ಶಂಕರಃ" ಎಂದು ಸರ್ವಜನಕ್ಕೂ ಸುಖವನುಂಟುಮಾಡುತ್ತಿರ್ದಂಥ, ಶಿವಶಿವ-ಮಾಂಗಲ್ಯಸ್ವರೂಪವಾದಂಥ ಮಾಂಗಲ್ಯಸ್ವರೂಪವಾದಂಥ, ಶಂಕರ-ಲಿಂಗಪ್ರಾಣತ್ವ ಪ್ರಾಣಲಿಂಗತ್ವ ಪ್ರಸಾದಮುಕ್ತತ್ವವನು ಕೊಡುತ್ತಿರ್ದಂಥ, ಜಯಜಯ-ಸರ್ವೋತ್ಕರ್ಷನಾಗು ಸರ್ವೋತ್ಕರ್ಷನಾಗು, ಶಂಕರ ಶರಣೆನುತ್ತಿರ್ದ್ದೇನೆ-ಷಟ್ಸ್ಥಲಬ್ರಹ್ಮಿಗಳಿಗೆ ಸುಖವನುಂಟು ಮಾಡಿಕೊಡುತ್ತಿರ್ದಂಥ ಎಲೆ ಲಿಂಗವೆ ನಿನಗೆ ನಮಸ್ಕಾರವೆನುತೈದಾನೆ. ಮುಂದಕ್ಕೆ ಕಾಣಬಂದರ್ಥ.

..........................

ಸುಖಂ (ಚ,ಜ).

---

೮೩

**ಎನ್ನ ಮನದಲ್ಲಿ ಮತ್ತೊಂದನಱಿಯೆನಯ್ಯಾ, 'ಓಂ ನಮಃ ಶಿವಾಯ', 'ಓಂ ನಮಃ ಶಿವಾಯ' ಎನುತಿರ್ದೆನಯ್ಯಾ. ಎನಗಿದೇ ಮಂತ್ರ, [1]ಎನಗಿದೇ ತಂತ್ರ[1] ಎನಗಿದೇ ಜಪ[2]ತಪ[2] ಕೂಡಲಸಂಗಮದೇವ [3]ನೀವೆ ಬಲ್ಲಿರೆಲೆ[3] ಲಿಂಗವೆ.**

I – – – – – – – – – – – – – – – – – – – – – – – – – – – – – –

ಎನ್ನ ಮನದಲ್ಲಿ ಮತ್ತೊಂದನಱಿಯೆನಯ್ಯಾ : ಎನ್ನ ಮನವು_ಎನ್ನ ಚಿತ್ತವು, ಲಿಂಗಧ್ಯಾನ ಲಿಂಗಸ್ಮರಣೆಯೊಡನೆ ಕೂಡಿಪ್ಪುದಲ್ಲದೆ, ಮತ್ತೊಂದನು_ಅನ್ಯಮಂತ್ರ ಅನ್ಯಸ್ಮರಣೆಯ ಮಾಡಬೇಕೆಂಬಂಥದನು, ಅರೆಯೆನಯ್ಯಾ-ತಿಳಿಯೆನಯ್ಯಾ. 'ಓಂ ನಮಃ ಶಿವಾಯ', 'ಓಂ ನಮಃ ಶಿವಾಯ' ಎನುತಿರ್ದೆನಯ್ಯಾ-ಓಂ ನಮಃ ಶಿವಾಯವೆಂಬ ಶಿವಷಡಕ್ಷರಮಂತ್ರಸ್ಮರಣೆಯಿಂದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುವಂಥದೆ, ಎನಗೆ-ಶರಣನಿಗೆ, ಇದೇ ಮಂತ್ರ ಇದೇ ತಂತ್ರ-ಆ ಮಂತ್ರಶಾಸ್ತ್ರಂಗಳಲ್ಲಿ ಹೇಳಿದ ಹಾಂಗೆ ತಪ್ಪದೆ ಮಾಡುವಂಥ ಕ್ರಿಯಾವಿಧಾನಂಗಳಾಗಿ ಅಳವಟ್ಟಿಪ್ಪುದು, ಎನಗೆ-ಶರಣನಿಗೆ, ಇದೇ ಜಪ-ಶಿವಷಡಕ್ಷರಮಂತ್ರಸ್ಮರಣೆಯಿಂದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುವಂಥದೆ ಜಪದ ಫಲವಾಗಿ ಅಳವಟ್ಟಿಪ್ಪುದು, ತಪ-ಇದೇ ಶಿವಷಡಕ್ಷರಮಂತ್ರಸ್ಮರಣೆಯಿಂದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುವಂಥದೆ ಸಮಸ್ತ ತಪಂಗಳಾಗಿ ಅಳವಟ್ಟಿಪ್ಪುದು, ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ, ನೀವೇ ಬಲ್ಲಿರಿ-ನಿಮಗೆ ತಿಳಿಯಬಂದಿಪ್ಪುದು, ಎಲೆ ಲಿಂಗವೆ-ಭೋ! ಎಲೆ ಪರಶಿವಲಿಂಗವೆ.

II – – – – – – – – – – – – – – – – – – – – – – – – – – – – – –

1–1x (ಚ, ಜ). 2–2 x (ಚ, ಜ). 3–3 ನೀನೆ ಬಲ್ಲೆ, ಎಲೆ (ಚ, ಜ).

..........................

ಎನ್ನ ಮನದಲ್ಲಿ ಮತ್ತೊಂದನಜೆಯೆನಯ್ಯಾ-ಎನ್ನ ಮಾನಸದಲ್ಲಿ ಸಂಕಲ್ಪವಿಕಲ್ಪ ವಂಚನೆ ಉದಾಸೀನ ಕ್ಷುದ್ರಮಿಥ್ಯಾ ಆತ್ಮತೇಜ ಅಹಂಕಾರವನು ತಿಳಿಯೆನಯ್ಯಾ. ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - -

1-1 x (ಟ,ಡ) 2-2 x (ಟ,ಡ) 3-3 ನೀನೆ ಬಲ್ಲೆ, ಎಲೆ (ಟ,ಡ).

..............................

ಮತ್ತೊಂದನಜೆಯೆನಯ್ಯಾ-ಅನ್ಯವಾದ ಭಿನ್ನವಿಷಯಪ್ರಪಂಚನು ಇದಿರಿಟ್ಟು ತಿಳಿಯೆನಯ್ಯಾ.

---

ೞ೪

**'ಓಂ ನಮಃ ಶಿವಾಯ'ವೆಂಬ ಮಂತ್ರವ ಮೀಱಲಮ್ಮದೆ ನಿಂದವು ವೇದ; 'ಓಂ ನಮಃ ಶಿವಾಯ'ವೆಂಬ ಮಂತ್ರವ ಮೀಱಲಮ್ಮದೆ ನಿಂದವು ಶಾಸ್ತ್ರ; 'ಓಂ ನಮಃ ಶಿವಾಯ'ವೆಂಬ ಮಂತ್ರವ ಮೀಱಲಮ್ಮದೆ ನಿಂದವು ತರ್ಕ; ಭಯಂಕರ ಭ್ರಮೆಗೊಂಡಿತ್ತು ಮಂತ್ರ-ತಂತ್ರ, ಶಿವನಂತುವನರಿಯದೆ ಚಿಂತಿಸುತಿದ್ದಿತ್ತು ಲೋಕ! ಕೂಡಲಸಂಗಮದೇವ ಶ್ವಪಚನ [1]ನೆಱಿದಡೆ[1] ಜಾತಿಭೇದವ [2]ಮಾಡಲಮ್ಮದೆ ನಿಂದ[2]ವು.**

I – – – – – – – – – – – – – – – – – – – – – – – – – – – – – –

'ಓಂ ನಮಃ ಶಿವಾಯ'ವೆಂಬ ಮಂತ್ರವ ಮೀಱಲಮ್ಮದೆ ನಿಂದವು ವೇದ: ವೇದ-ಋಗ್ಯಜುಸ್ಸಾಮಥರ್ವಣವೆಂಬ ನಾಲ್ಕು ವೇದಂಗಳು, 'ಓಂ ನಮಃ ಶಿವಾಯ'ವೆಂಬ ಮಂತ್ರವ ಮೀಱಲಮ್ಮದೆ ನಿಂದವು-'ಓಂ ನಮಃ ಶಿವಾಯ'ವೆಂಬ ಶಿವಾಯ'ವೆಂಬ ಶಿವಷಡಕ್ಷರಮಂತ್ರಸ್ಮರಣೆಯ ಮಾಡುವಂಥ ಜಾತಿ ವಿಜಾತಿಯನುಂಟುಮಾಡಿ ಹೇಳಿದರೆ ಶಿವನಿಂದ ಏನು ಶಿಕ್ಷೆ ಬಂದೀತೋ ಏನು ಕೊರತೆ ಬಂದೀತೋ ಎಂದು ಹೇಳುವುದಕ್ಕೆ ಹೆದರಿಕೊಂಡು ಶಬ್ದಮುಗ್ಧವಾಗಿ ವಾಜ್ಞೀಮವ ಮುಂದುಗೊಂಡು ಮೂಗುವಟ್ಟು ಸುಮ್ಮನಿರ್ಪವು.

ಶಾಸ್ತ್ರ-ಅನಂತಕ ಮೊದಲಾದ ಹದಿನಾರು ಧರ್ಮಶಾಸ್ತ್ರಂಗಳು, 'ಓಂ ನಮಃ ಶಿವಾಯ'ವೆಂಬ ಮಂತ್ರವ ಮೀರಲಮ್ಮದೆ ನಿಂದವು-'ಓಂ ನಮಃ ಶಿವಾಯ'ವೆಂಬ ಶಿವಷಡಕ್ಷರಮಂತ್ರಸ್ಮರಣೆಯ ಮಾಡುವಂಥ ಶಿವಶರಣರುಗಳಲ್ಲಿ ಪುಣ್ಯವ ಮಾಡಿದವರಿಗೆ ಪಾಪವ ಮಾಡಬೇಕು, ಪಾಪವ ಮಾಡಿದವರಿಗೆ ಪುಣ್ಯವ ಮಾಡಬೇಕು; ಸುಖವ ಮಾಡಿದವರಿಗೆ ದುಃಖವ ಮಾಡಬೇಕು, ದುಃಖವ ಮಾಡಿದವರಿಗೆ ಸುಖವ ಮಾಡಬೇಕು; ಧರ್ಮವ ಮಾಡಿದವರಿಗೆ ಕರ್ಮವ ಮಾಡಬೇಕು, ಕರ್ಮವ ಮಾಡಿದವರಿಗೆ ಧರ್ಮವ ಮಾಡಬೇಕೆಂದು-ಹೀಂಗೆ ಪುಣ್ಯ-ಪಾಪ ಧರ್ಮ-ಕರ್ಮ ಸುಖ-ದುಃಖವೆಂಬ ಬಂಧಮೋಕ್ಷ ದ್ವಂದ್ವಕರ್ಮಂಗಳನುಂಟುಮಾಡಿ ಹೇಳಿದರೆ ಶಿವನಿಂದೆ ಏನು ಶಿಕ್ಷೆ ಬಂದೀತೋ ಏನು ಕೊರತೆ ಬಂದೀತೋ ಎಂದು ಹೇಳುವುದಕ್ಕೆ ಹೆದರಿಕೊಂಡು ಶಬ್ದಮುಗ್ಧವಾಗಿ ವಾಜ್ಞೀಮವ ಮುಂದುಗೊಂಡು ಮೂಗುವಟ್ಟು ಸುಮ್ಮನಿರ್ಪವು.

ತರ್ಕ-ವೇದವೇದಾಂತ ಅಂತರ್ಭಾವೇ ಪ್ರಭಾಕರನ್ಯಾಯ ಮೀಮಾಂಸಿಕ ಎಂಬ ಷಟ್ತರ್ಕಂಗಳು, 'ಓಂ ನಮಃ ಶಿವಾಯ'ವೆಂಬ ಮಂತ್ರವ ಮೀಱಲಮ್ಮದೆ ನಿಂದವು-'ಓಂ ನಮಃ

ಶಿವಾಯ'ವೆಂಬ ಶಿವಷಡಕ್ಷರಮಂತ್ರಸ್ಮರಣೆಯ ಮಾಡುವಂಥ ಶಿವಶರಣರುಗಳಲ್ಲಿ ಹೌದಾದುದನೆ ಅಲ್ಲಮಾಡಿ ಅಲ್ಲಾದುದನೆ ಹೌದುಮಾಡಿ ಹೇಳುವಂಥದು ಉಂಟಾದರೆ ಶಿವನಿಂದ ಏನು ಶಿಕ್ಷೆ ಬಂದೀತೋ ಏನು ಕೊರತೆ ಬಂದೀತೋ ಎಂದು ಹೇಳುವುದಕ್ಕೆ ಹೆದರಿಕೊಂಡು ಶಬ್ದಮುಗ್ಧವಾಗಿ ವಾಙ್ಮೌನವ ಮುಂದುಗೊಂಡು ಮೂಗುವಟ್ಟು ಸುಮ್ಮನಿರ್ಪವು.

ಭಯಂಕರ–ಭೀತಿಯಿಂದ, ಭ್ರಮೆಗೊಂಡಿತ್ತು–ಭ್ರಾಂತುಗೊಂಡಿತ್ತು, ಮಂತ್ರ–ಸಪ್ತಕೋಟಿ ಮಹಾಮಂತ್ರ ಅನೇಕಕೋಟಿ ಉಪಮಂತ್ರಗಳು, ತಂತ್ರ–ಆ ತಂತ್ರ ಶಾಸ್ತ್ರಂಗಳಲ್ಲಿ ಹೇಳಿದ ಹಾಂಗೆ ತಪ್ಪದೆ ಮಾಡುವಂಥ ಕ್ರಿಯಾವಿಧಾನಂಗಳು, ಶಿವನ–ಪರಮೇಶ್ವರನ, ಅಂತುವನರೆಯದೆ–ಸ್ವಸ್ವರೂಪವನ್ನು ತಿಳಿಯದೆ, ಚಿಂತಿಸುತ್ತಿದ್ದಿತ್ತು–ವ್ಯಾಕುಲಿಸುತಿದ್ದಿತ್ತು, ಲೋಕ!–ಜಗತ್ತು.

ಕೂಡಲಸಂಗಮದೇವ_ಪರಶಿವಲಿಂಗವು, ಶ್ವಪಚನ ನೆಜೆದಡೆ–ಮಾದಾರ ಚನ್ನಯ್ಯಗಳೊಡನೆ ಕೂಡುಂಡು ಸಾಯುಜ್ಯಪದವಿಯನು ಕರುಣಿಸಿಕೊಟ್ಟಂದಿಂದ, ಸಂಗನಬಸವೇಶ್ವರಸ್ವಾಮಿಗಳು ಶ್ವಪಚನ ನೆರೆದರೆ ಶಿವನಾಗಮಯ್ಯಂಗಳ ಅಂಗುಲಿಗಳಲ್ಲಿ ಅಮೃತವ ಕರೆದಂದಿಂದ, ಜಾತಿಭೇದವ ಮಾಡಲಮ್ಮದೆ ನಿಂದವು–ಶಿವಶರಣರುಗಳಲ್ಲಿ ಜಾತಿವಿಜಾತಿಯನುಂಟುಮಾಡಿ ಹೇಳಿದರೆ ಶಿವನಿಂದೇನು ಶಿಕ್ಷೆ ಬಂದೀತೋ ಏನು ಕೊರತೆ ಬಂದೀತೋ ಎಂದು ಹೇಳುವುದಕ್ಕೆ ಹೆದರಿಕೊಂಡು ಶಬ್ದಮುಗ್ಧವಾಗಿ ವಾಙ್ಮೌನವ ಮುಂದುಗೊಂಡು ಮೂಗುವಟ್ಟು ಸುಮ್ಮನಿರ್ಪವು.

III – – – – – – – – – – – – – – – – – – – – – – – – – – – – – – – –

1–1 ಮೆಚಿದಡೆ (ಡ). 2–2 ಮಾಡಲಮ್ಮ (ಡ).

.........................

ಶ್ವಪಚನ ಮೆಚಿದಡೆ–ಮಾದಾರ ಚನ್ನಯ್ಯನನು ಪ್ರಕಟೀಕರಿಸಿದರೆ, ಜಾತಿಭೇದವ ಮಾಡಲಮ್ಮವು–ವೇದಾಗಮಂಗಳು ಜಾತಿಸೂತಕವನು ಹುಡುಕಾಡಲಮ್ಮವು.

---

೮೫

**ಬಿಳಿಯ ಕಜೆಕೆ, ಕಣಿಗಿಲೆಲೆಯ, ತೊಱೆಯ [1]ತಡಿಯ[1] ಮಳಲ ತಂದು ಗೌರಿಯ ನೋನುವ ಬನ್ನಿರೆ, ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು ಅನುಪಮ [2]ಮಹಾ[2]ದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು.**

I – – – – – – – – – – – – – – – – – – – – – – – – – – – – – – – –

ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು : ಚಿಕ್ಕ ಚಿಕ್ಕ ಮಕ್ಕಳೆಲ್ಲರು–ಏಳು ವರುಷದ ಕೊಡಗೂಸು ಎಂಟು ವರುಷದ ಗೌರಿ ಒಂಬತ್ತು ವರುಷದ ಕನ್ನಿಕೆ ಹನ್ನೆರಡು ವರುಷದ ಕುಮಾರಿತಿಯರಷ್ಟೂ, ನೆರೆದು–ಒಬ್ಬುಳಿಯಾಗಿ, ಬಿಳಿಯ ಕಜೆಕೆಯ–ಧವಳ ದೂರ್ವಾಂಕುರವನ್ನು, ಕಣಿಗಿಲೆಲೆಯ_ಕಣಿಗಿಲ ಹಣ್ಣೆಲೆಯ ಹಸಿರೆಲೆಯ, ತೊಱೆಯ–ಹರಿವ ನದಿಯ, ತಡಿಯ_ತೀರದಲ್ಲಿರುವ, ಮಳಲ–ನಿರ್ಮಲವಾದ ಸೈಕತವನ್ನು, ತಂದು_ಆಗುಮಾಡಿಕೊಂಡು ಬಂದು, ಅನುಪಮ_ಉಪಮಿಸಬಾರದ,

ಮಹಾದಾನಿ–ಭಕ್ತರುಗಳಿಗೆ ಮಹದಾನಂದಸುಖವನ್ನು ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗಮದೇವ–ಪರಶಿವಲಿಂಗವು, ಗಂಡನಾಗಬೇಕೆಂದು–ದೀರ್ಘಾಯುಷ್ಯ ದೀರ್ಘಭವಿಷ್ಯವನುಳ್ಳ ರಮಣನಾಗಬೇಕೆಂದು, ಗೌರಿಯ ನೋನುವ ಬನ್ನಿರೆ–ಗೌರಾದೇವಿಯ ಬೆಸಗೊಂಬ ಬನ್ನಿರೆಯೆಂದು ಆ ಕುಮಾರಿತಿಯರಷ್ಟೂ ತಮತಮಗೆ ಪ್ರಸಂಗಿಸಿಕೊಳುತ್ತಿಹರೆಂಬುದರ್ಥ.

● ಚಿಕ್ಕ ಚಿಕ್ಕ ಮಕ್ಕಳೆಲ್ಲರು–ಶರಣನ ಕ್ರಿಯಾದಿ ಚಿದಂತ್ಯಮಾದ ಷಡ್ವಿಧಶಕ್ತಿಯರಷ್ಟೂ, ನೆರೆದು–ಒಬ್ಬುಳಿಯಾಗಿ, ಬಿಳಿಯ ಕಜಿಕೆಯ–ಅಂತರಂಗದ ಶುದ್ಧ ಸಾತ್ವಿಕಜ್ಞಾನವನ್ನು, ಕಣಿಗಿಲೆಲೆಯ–ಬಹಿರಂಗದ ಕ್ರಿಯಾಚಾರವನ್ನು, ತೊಜೆಯ ತಡಿಯ–ಹೃದಯೇಂದ್ರಿಯದಲ್ಲಿ ನೆಲೆಸಿರುವ, ಮಳಲ–ನಿರ್ಮಲವಾದ ಸೈಕತಸ್ವರೂಪವಾದ ಪ್ರಾಣಲಿಂಗವನು, ತಂದು–ಅರುಹಿನ ಬಗೆಗೆ ಆಗುಮಾಡಿಕೊಂಡು ಬಂದು, ಅನುಪಮ–ಉಪಮಿಸಬಾರದ, ಮಹಾದಾನಿ–ಭಕ್ತರುಗಳಿಗೆ ಮಹದಾನಂದಸುಖವನ್ನು ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗಮದೇವ–ಪ್ರಾಣಲಿಂಗದೇವನು, ಗಂಡನಾಗಬೇಕೆಂದು–ಬಹಿರಂಗದಲ್ಲಿ ಕ್ರಿಯಾಶಕ್ತಿವಲ್ಲಭನಾದಿಷ್ಟಲಿಂಗದೇವನಾಗಿ ನೆಲೆಗೊಳ್ಳಬೇಕೆನುತ್ತ, ಗೌರಿಯ ನೋನುವ ಬನ್ನಿರೆ–ಗುರುದೇವತೆಯ ಬೆಸಗೊಂಬ ಬನ್ನಿರೆ; ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಸ್ವರೂಪವಾದ ಶ್ರೀಗುರುನಾಥನೊಡನೆ ಬಿನ್ನೈಸುವಂಥ ಬಿನ್ನಪವು ಎಂಬುದರ್ಥ.

● ಚಿಕ್ಕ ಚಿಕ್ಕ ಮಕ್ಕಳೆಲ್ಲರು–ಆತ್ಮನೊಡನೆ ಅನೇಕಕಾಲ ಕೂಡಿರುವಂಥ ಮನ ಮೊದಲಾದ ಸಕಲ ಕರಣಂಗಳಷ್ಟೂ, ನೆರೆದು–ಒಬ್ಬುಳಿಯಾಗಿ, ಬಿಳಿಯ ಕರೆಕೆಯ–ಅಂತರಂಗದ ಜ್ಞಾನವನ್ನು, ಕಣಿಗಿಲೆಲೆಯ–ಷಡಿಂದ್ರಿಯಂಗಳೆಂಬ ಪರ್ಣಂಗಳನು, ತೊರೆಯ ತಡಿಯ–ಹರಿವ ಮನಸ್ಸಿನಲ್ಲಿ ಸಂಬಂಧವಾಗಿರುವ, ಮಳಲ–ಷಡಕ್ಷರಮಂತ್ರವನು, ತಂದು–ಅರುಹಿನ ಬಗೆಗೆ ಆಗುಮಾಡಿಕೊಂಡು ಬಂದು, ಅನುಪಮ_ಹೋಲುವೆ ರಹಿತವಾದ, ಮಹಾದಾನಿ–ಭಕ್ತರುಗಳಿಗೆ ಮಹದಾನಂದಸುಖವನ್ನು ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗಮದೇವ–ಇಷ್ಟಲಿಂಗದೇವನು, ಗಂಡನಾಗಬೇಕೆಂದು–ಅಂತರಂಗದಲ್ಲಿ ಜ್ಞಾನಶಕ್ತಿವಲ್ಲಭನಾದ ಪ್ರಾಣಲಿಂಗದೇವನಾಗಿ ನೆಲೆಗೊಳ್ಳಬೇಕೆನುತ್ತ, ಗೌರಿಯ ನೋನವ ಬನ್ನಿರೆ–ಮಂತ್ರದೇವತೆಯ ಬೆಸಗೊಂಬುವ ಬನ್ನಿರೆ ಎಂದು ಆ ಕರಣಾದಿಗಳು ತಮತಮಗೆ ತಾವೆ ಬಿನ್ನವಿಸಿಕೊಳ್ಳುತ್ತಿಹವು.

II – – – – – – – – – – – – – – – – – – – – – – – – – – – – – – – –

ಬಿಳಿಯ ಕಜಿಕೆ–ಶ್ವೇತದುರ್ವಾಂಕುರವನು, ಕಣಿಗಿಲೆಲೆಯ_ಕರಿವೀರಪರ್ಣವನು, ತೊಜೆಯ ತಡಿಯ ಮಳಲ ತಂದು_ಹೊದ್ದೊರೆಯ ತೀರದ ಸೈಕತವನಾಗಮಾಡಿಕೊಂಡು ಬಂದು, ಅನುಪಮ–ಉಪಮಿಸಬಾರದ, ಮಹಾದಾನಿ–ಮೋಕ್ಷಾನಂದಸುಖವನು ಕರುಣಿಸಿಕೊಟ್ಟಲ್ಪಟ್ಟಂಥ, ಕೂಡಲಸಂಗಮದೇವ ಗಂಡನಾಗಬೇಕೆಂದು–ಪರಶಿವಲಿಂಗವು ವಲ್ಲಭನಾಗಬೇಕೆಂದು, ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು ಗೌರಿಯ ನೋನುವ ಬನ್ನಿರೆ–ಚಿಣ್ಣಚಿಣ್ಣ ವಟುಗಳೆಲ್ಲರೊಬ್ಬುಳಿಯಾಗಿ ಗೌರಿಯ ನೋಂಪಿಯ ನೋನುವ ಬನ್ನಿರೆ.

ಮತ್ತಂ, 'ಶುದ್ಧ ಸಾತ್ವಿಕಜ್ಞಾನವನು' ಸತ್ಕ್ರಿಯಾಚಕ್ಷುವೆಂಬ ಪರ್ಣವನು ಜ್ಞಾನಾಜ್ಞಾನಂಗಳಿಲ್ಲದ ಅಂತರಂಗವೆಂಬ ನದಿಯ ತೀರದ ಚಿತ್ಪ್ರಕಾಶ ಜ್ಞಾನವನಾಗಮಾಡಿಕೊಂಡು ಬಂದು,

ಮೋಕ್ಷಾನಂದಸುಖವನು ಕರುಣಿಸಿ ಕೊಡಲ್ಪಟ್ಟಂಥ ಪರಶಿವಲಿಂಗವು ವಲ್ಲಭನಾಗಬೇಕೆಂದು ಚಿಣ್ಣಚಿಣ್ಣ ಚಿದಾತ್ಮರುಗಳೆಲ್ಲರು ಒಬ್ಬುಳಿಯಾಗಿ ಗುರುಸ್ತೋತ್ರವ ಮಾಡುವ ಬನ್ನಿರೆ.

ಮತ್ತಂ, ಮನಃಚಕ್ಷುರಾದಿ ಇಂದ್ರಿಯಂಗಳೆಲ್ಲವನು ಧಿಕ್ಕರಿಸಿದ ನಿರಹಂಭಾವಭಕ್ತಿಮಾರ್ಗದ ಪುನರಪಿಯಾಗಿ ಚಿತ್ತಿನ ಚಿದ್ವಾರದಿಂದುದಯವಾದೆವು; ಶ್ರೀಗುರುವಿನ ಕರ[1]ಕಮಲ[1]ವೆಂಬ ನಿರ್ಯೋನಿಯಲ್ಲಿ ಸಂಜನ್ಯವಾದೆವೆಂಬ ಜ್ಞಾನವನು ಅರಿವಿನ ಮುಖಕ್ಕೆ ಆಗಮಾಡಿಕೊಂಡು ಬಂದು ಮೋಕ್ಷಾನಂದ ಸುಖವನು ಕರುಣಿಸಿಕೊಡಲ್ಪಟ್ಟಂಥ ಪರಶಿವಲಿಂಗವು ತಮ್ಮ ಪುರುಷನಾಗಬೇಕೆಂದು ಕ್ರಿಯಾದಿಚಿದಂತ್ಯಮಾದ ಷಡ್ವಿಧಶಕ್ತಿಯರುಗಳು ಗುರುಸ್ತೋತ್ರವ ಮಾಡುತ್ತಿಹರೆಂಬುದರ್ಥ.

..........................

೧-೧ ನಯನವನು (ಜ). ೨-೨ (ಜ).

III– – – – – – – – – – – – – – – – – – – – – – – – – – – – – – –

2–2 x (ಟ,ಡ)

..........................

ಬಿಳಿಯ ಕಱಿಕೆ–ಜ್ಞಾನಾಂಕುರವು, ಕಣಿಗಿಲೆಲೆಯ–ಕ್ರಿಯಾದಳಗಳನು, ತೊಱೆಯ ತಡಿಯ–ಪರಶಿವಸಮುದ್ರಸಂಬಂಧವಾದ ಕ್ರಿಯಾಜ್ಞಾನವೆಂಬ ಕರೆಗಳು, ಮಳಲ–ಚಿತರಣಂಗಳನು, ತಂದು–ಅಱಿವಿನ ಮುಖಕ್ಕೆ ಆಗಮಾಡಿಕೊಂಡು, ಚಿಕ್ಕ ಚಿಕ್ಕ ಮಕ್ಕಳೆಲ್ಲರು–ಸೂಕ್ಷ್ಮಜ್ಞಾನ ಕ್ರಿಯಾಚರಣೆಯನುಳ್ಳ ಷಟ್ಸ್ಥಲಜ್ಞಾನಿಗಳಾದ ಶರಣಗಣಂಗಳೆಲ್ಲರು, ನೆರೆದು–ಒಂದಾಗಿ, ಅನುಪಮದಾನಿ–ಹೋಲುವೆ ರಹಿತವಾದ ಮೋಕ್ಷಸಂಧಾನವನುಳ್ಳ, ಕೂಡಲಸಂಗಮದೇವ–ಸದ್ಭಕ್ತರಂಗಮನಃಪ್ರಾಣಂಗಳಲ್ಲಿ ಹೆಱೆಹಿಂಗದೆ ಪರಿಪೂರ್ಣವಾದ [illegible]ಲಿಂಗದೇವನು, ಗಂಡನಾಗಬೇಕೆಂದು–ಚಿತ್ತದೊಲ್ಲಭನಾಗಲಿಯೆಂದು, ಗೌರಿಯ ನೋನುವ ಬನ್ನಿ–ಲಿಂಗವ್ರತವನಾಚರಿಸುವ ಬನ್ನಿಯೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಸ್ವರೂಪವಾದ ಶ್ರೀಗುರುದೇವನೆಂಬ ಗೆಳೆವೆಣ್ಣ ಕೂಡೆ ಮಾಡುವ ಪ್ರಶ್ನೆಯೆಂಬ ಶಬ್ದಕ್ಕರ್ಥ.

V– – – – – – – – – – – – – – – – – – – – – – – – – – – – – – –

1–1 x (ಪ).

..........................

ಬಿಳಿಯ ಕಱಿಕೆ ಎಂದರೆ ಅಂತರಂಗದ ಸತ್ವಗುಣಸಂಬಂಧವಾದ ಸುಜ್ಞಾನವು, ಕಣಿಗಿಲೆಲೆಯೆನಲ್ ಬಹಿರಂಗದ ಸತ್ಕ್ರಿಯೆ, ತೊಱೆಯ ಮಳಲು ತಂದು ಎಂದರೆ ಮನಸ್ಸೆಂಬ ನದಿಯ ತಟದಲ್ಲಿರ್ದ ಚಿಲ್ಲಿಂಗವನಾಗಮಾಡಿಕೊಂಡು ಎಂಬುದರ್ಥ; ಆ ಮಹಾಲಿಂಗವೇ ಇಷ್ಟವೆಂಬ ಪುರುಷನಾಗಬೇಕೆಂದು ಎಂಬುದೀಗ ಕೂಡಲಸಂಗಮದೇವನೆಂಬ ಗಂಡನಾಗಬೇಕೆಂದು ಎಂಬುದರ್ಥ. ಭಕ್ತಿ ಜವ್ವನವೆಱದಿರ್ದ ಪಂಚಶಕ್ತಿಯ ಕೂಡಿ ಎಂಬುದೀಗ ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆಱೆದು ಎಂಬುದರ್ಥ. ಚಿಚ್ಛಕ್ತಿಯ ವ್ರತವನಾಚರಿಸುವುದಕ್ಕೆಯ್ದಿರೆಂಬುದೀಗ ಗೌರಿಯ ನೋನುವ ಬನ್ನಿರೆ ಎಂಬುದರ್ಥ.

೮೬

**'ನಮ್ಮವರು[1] ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ; ರಾಶಿಕೂಟ[2]ರಿಣಸಂಬಂಧವುಂಟೆಂದು[2] ಹೇಳಿರಯ್ಯಾ; ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ; ನಾಳಿನ ದಿನಕ್ಕಿಂದಿಂದಿನ [3]ದಿನ[3] ಲೇಸೆಂದು ಹೇಳಿರಯ್ಯಾ; ಕೂಡಲಸಂಗಮದೇವರ ಪೂಜಿಸಿದ ಫಲ ನಿಮ್ಮದಯ್ಯಾ!**

I - - - - - - - - - - - - - - - - - - - - - - - - - - - - - - - - - -

ನಮ್ಮವರು ಬೆಸಗೊಂಡಡೆ: ನಮ್ಮವರು–ನಮ್ಮ ಸಂಬಂಧವಾದ ತಂದೆತಾಯಿಗಳು, ಬೆಸಗೊಂಡಡೆ–ನಮ್ಮ ಮಕ್ಕಳ ವಿವಾಹವ ಮಾಡುವುದಕ್ಕೆ ಶುಭಮುಹೂರ್ತ ಶುಭಲಗ್ನ ಶುಭಸೂಚನೆ ಚೆಂದವಾಗೆಯ್ತೇ? ಎಂದು ಪುರೋಹಿತನ ಕೇಳಿದರೆ, ಶುಭಲಗ್ನವೆನ್ನಿರಯ್ಯಾ–ವಿವಾಹವ ಮಾಡುವುದಕ್ಕೆ ಬಹು ಶುಭಲಗ್ನ ಶುಭಮುಹೂರ್ತ ಒಳ್ಳೆಯ ಘಳಿಗೆ ಒಳ್ಳೆಯ ವೇಳೆಯೆಂದು ಹೇಳಿರಯ್ಯಾ. ರಾಶಿಕೂಟ ರಿಣಸಂಬಂಧವುಂಟೆಂದು ಹೇಳಿರಯ್ಯಾ: ರಾಶಿಕೂಟ–ಸ್ತ್ರೀ ಪುರುಷರಿರ್ವರಿಗೆ ಹನ್ನೆರಡು ರಾಶಿಕೂಟ ಚಂದವಾಗೆಯ್ದಾವೆ? ಎಂದು ಹೇಳಿರಯ್ಯಾ, ರಿಣಸಂಬಂಧವುಂಟೆಂದು ಹೇಳಿರಯ್ಯಾ–ಗಂಡಹೆಂಡರಿಗೆ ಅನ್ನೋದಕ ರಿಣಸಂಬಂಧ ಸಾಲಾವಳಿ ಚೆಂದವಾಗೆಯ್ದಾವೇ? ಎಂದು ಕೇಳಿದರೆ ಗಂಡಹೆಂಡರಿಗೆ ರಿಣಸಂಬಂಧ ಸಾಲಾವಳಿ ಚೆಂದವಾಗೆಯ್ತೆಂದು ಹೇಳಿರಯ್ಯಾ.

ಚಂದ್ರಬಲವುಂಟೆಂದು ಹೇಳಿರಯ್ಯಾ–ಚಂದ್ರಬಲ ಚೆಂದವಾಗೆಯ್ತೆ? ಎಂದು ಕೇಳಿದರೆ ಚಂದ್ರಬಲ ಚೆಂದವಾಗೆಯ್ತೆಂದು ಹೇಳಿರಯ್ಯಾ, ತಾರಾಬಲವುಂಟೆಂದು ಹೇಳಿರಯ್ಯಾ–ಇಪ್ಪತ್ತೇಳು ಮಳೆನಕ್ಷತ್ರಂಗಳ ಬಲ ಚೆಂದವಾಗೆಯ್ತೆ? ಎಂದು ಕೇಳಿದರೆ ಇಪ್ಪತ್ತೇಳು ಮಳೆನಕ್ಷತ್ರಂಗಳ ಬಲ ಚೆಂದವಾಗೆಯ್ತೆಂದು ಹೇಳಿರಯ್ಯಾ, ನಾಳಿನ ದಿನಕ್ಕಿಂದ–ನಾಳೆ ವಿವಾಹವ ಮಾಡುವುದಕ್ಕಿಂತಲೂ, ಇಂದಿನ ದಿನ ಲೇಸೆಂದು ಹೇಳಿರಯ್ಯಾ–ಇಂದೇ ವಿವಾಹ ಮಾಡಿಕೊಡುವಂಥದು ಬಹು ಚೆಂದವಾಗೆಯ್ತೆಂದು ಹೇಳಿರಯ್ಯಾ. ಕೂಡಲಸಂಗಮದೇವರ–ಮನೆದೇವರ, ಪೂಜಿಸಿದ–ಆರಾಧಿಸಿದ, ಫಲ–ಸುಕೃತವು, ನಿಮ್ಮದಯ್ಯಾ!–ನಿಮಗಾಗಲಿ ಪುರೋಹಿತನೇ ಎಂದು ಆ ಸ್ತ್ರೀ ಪುರುಷರಿರ್ವರು ಪುರೋಹಿತನೊಡನೆ ಹೇಳಿಕೊಂಬುತ್ತಿಹರೆಂಬ ದೃಷ್ಟೋಪಮಾನದ ಹಾಂಗೆ,

● ನಮ್ಮವರು–ನಮ್ಮ ಸಂಬಂಧವಾದ ಶರಣರ ಕ್ರಿಯಾದಿ ಚಿದಂತ್ಯಮಾದ ಷಡ್ವಿಧಶಕ್ತಿಯರು, ಬೆಸಗೊಂಡಡೆ–ಅಂಗಲಿಂಗ ಸಂಬಂಧವ ಕರುಣಿಸಿ ಕೊಡುವುದಕ್ಕೆ ಶುಭಲಗ್ನ ಶುಭಮುಹೂರ್ತ ಶುಭಸೂಚನೆ ಚೆಂದವಾಗೆಯ್ತೆ? ಶ್ರೀಗುರುನಾಥನೇ ಎಂದು ಕೇಳಿದರೆ, ಶುಭಲಗ್ನವೆನ್ನಿರಯ್ಯಾ–ಅಂಗಕ್ಕೆ ಲಿಂಗಸಂಬಂಧವ ಕರುಣಿಸಿಕೊಡುವುದಕ್ಕೆ ಶುಭಲಗ್ನ ಶುಭಮುಹೂರ್ತ ಶುಭಸೂಚನೆ ಚೆಂದವಾಗೆಯ್ತೆಂದು ಹೇಳಿರಯ್ಯಾ. ರಾಶಿಕೂಟವುಂಟೆಂದು ಹೇಳಿರಯ್ಯಾ–ಷಡ್ವಿಧಲಿಂಗಭಕ್ತಿಗಳಾಚರಣೆ ಚೆಂದವಾಗಳವಟ್ಟಿತ್ತೆ? ಎಂದು ಕೇಳಿದರೆ ಷಡ್ವಿಧಲಿಂಗಭಕ್ತಿಗಳಾಚರಣೆ ಚೆಂದವಾಗಿ ಅಳವಟ್ಟಿತ್ತೆಂದು ಹೇಳಿರಯ್ಯಾ, ರಿಣಸಂಬಂಧವುಂಟೆಂದು ಹೇಳಿರಯ್ಯಾ–ಶರಣ ಲಿಂಗಕ್ಕೆ ಸಾಲಾವಳಿ ಚೆನ್ನಾಗಿ ಅಳವಟ್ಟಿತ್ತೆ? ಎಂದು ಕೇಳಿದರೆ ಶರಣ ಲಿಂಗಕ್ಕೆ ಸಾಲಾವಳಿ ಚೆಂದವಾಗಿ ಅಳವಟ್ಟಿತ್ತೆಂದು ಹೇಳಿರಯ್ಯಾ.

ಚಂದ್ರಬಲ–ಚಂದ್ರಬಲವೆಂದರೆ ಜ್ಞಾನವು, ತಾರಾಬಲ–ತಾರಾಬಲವೆಂದರೆ ಕ್ರಿಯೆಯು, ಉಂಟೆಂದು ಹೇಳಿರಯ್ಯಾ–ಜ್ಞಾನ ಕ್ರಿಯೆಗಳು ಚೆಂದವಾಗಿ ಅಳವಟ್ಟಾವೆ? ಎಂದು ಕೇಳಿದರೆ

ಜ್ಞಾನಕ್ರಿಯೆಗಳು ಚೆಂದವಾಗಿ ಅಳವಟ್ಟಾವೆಂದು. ನಾಳಿನ ದಿನಕ್ಕಿಂದ–ನಾಳೆ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನು ಕರುಣಿಸಿಕೊಡುವುದಕಿಂದಲೂ, ಇಂದಿನ ದಿನ ಲೇಸೆಂದು ಹೇಳಿರಯ್ಯಾ–ಇವತ್ತು ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕರುಣಿಸಿಕೊಡುವಂಥದು ಬಹು ಚೆಂದವಾಗೆಯ್ತೆಂದು ಹೇಳಿರಯ್ಯಾ. ಕೂಡಲಸಂಗಮದೇವರ–ಇಷ್ಟಮಹಾಲಿಂಗವನ್ನು ಪೂಜಿಸಿದ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿದ, ಫಲ–ಸುಕೃತವು, ನಿಮ್ಮದಯ್ಯಾ–ನಿಮ್ಮದೆಲೆ ಶ್ರೀಗುರುನಾಥನೇ ಎಂದು ಆ ಕರುಣಂಗಳು ಶ್ರೀಗುರುನಾಥನೊಡನೆ ಬಿನ್ನೈಸುವಂಥ ಬಿನ್ನಪವು ಎಂಬುದರ್ಥ.

● ನಮ್ಮವರು–ನಮ್ಮ ಸಂಬಂಧವಾದ ಶ್ರೀಗುರುನಾಥನು, ಬೆಸಗೊಂಡಡೆ ಎಂಬಲ್ಲಿ ಆತ್ಮನೊಡನೆ ಅನೇಕ ಕಾಲ ಕೂಡಿರುವಂಥ ಮನ ಮೊದಲಾದ ಸಕಲಕರಣಂಗಳನು ಅಂತರಂಗಕ್ಕೆ ಪ್ರಾಣಲಿಂಗಸಂಬಂಧವಾಗಿ ಅಳವಡಿಸಿಕೊಡುವುದಕ್ಕೆ ಶುಭಲಗ್ನ ಶುಭಮುಹೂರ್ತ ಶುಭಸೂಚನೆ ಚೆಂದವಾಗೆಯ್ತೆ ಕರಣಂಗಳಿರಾ ಎಂದು ಕೇಳಿದರೆ, ಶುಭಲಗ್ನವೆನ್ನಿರಯ್ಯಾ–ಅಂತರಂಗಕ್ಕೆ ಪ್ರಾಣಲಿಂಗಸಂಬಂಧವನಳವಡಿಸಿಕೊಡುವುದಕ್ಕೆ ಶುಭಲಗ್ನ ಶುಭಮುಹೂರ್ತ ಶುಭಸೂಚನೆ ಚೆಂದವಾಗೆಯ್ತೆಂದು ಹೇಳಿರಯ್ಯಾ. ರಾಶಿಕೂಟವುಂಟೆಂದು ಹೇಳಿರಯ್ಯಾ–ದ್ವಾದಶಾಂಗೇಂದ್ರಿಯಂಗಳೆಲ್ಲ ದ್ವಾದಶಲಿಂಗೇಂದ್ರಿಯಂಗಳಾಗಿ ಅಳವಟ್ಟಾವೇ? ಎಂದು ಕೇಳಿದರೆ ದ್ವಾದಶಾಂಗೇಂದ್ರಿಯಂಗಳೆಲ್ಲ ದ್ವಾದಶಲಿಂಗೇಂದ್ರಿಯಂಗಳಾಗಿ ಅಳವಟ್ಟಾವೆಂದು ಹೇಳಿರಯ್ಯಾ. ರಿಣಸಂಬಂಧವುಂಟೆಂದು ಹೇಳಿರಯ್ಯಾ–ಆ ಲಿಂಗಕ್ಕೆ ಪಾದೋದಕಪ್ರಸಾದ ಚೆಂದವಾಗಿ ಅಳವಟ್ಟಿತ್ತೆ? ಎಂದು ಕೇಳಿದರೆ ಆ ಲಿಂಗಕ್ಕೆ ಪಾದೋದಕಪ್ರಸಾದ ಚೆಂದವಾಗಳವಟ್ಟಿತ್ತೆಂದು ಹೇಳಿರಯ್ಯಾ.

ಚಂದ್ರಬಲವುಂಟೆಂದು ಹೇಳಿರಯ್ಯಾ–ಆತ್ಮನ ಷೋಡಶಕಲೆಗಳೆಲ್ಲ ಲಿಂಗದ ಷೋಡಶಕಲೆಗಳಾಗಿ ಅಳವಟ್ಟಾವೇ? ಎಂದು ಕೇಳಿದರೆ ಆತ್ಮನ ಷೋಡಶಕಲೆಗಳೆಲ್ಲ ಲಿಂಗದ ಷೋಡಶಕಲೆಗಳಾಗಿ ಅಳವಟ್ಟಾವೆಂದು ಹೇಳಿರಯ್ಯಾ. ತಾರಾಬಲವುಂಟೆಂದು ಹೇಳಿರಯ್ಯಾ–ಇಪ್ಪತ್ತೇಳು ಅಂಗತತ್ತ್ವಂಗಳೆಲ್ಲಾ ಇಪ್ಪತ್ತೇಳು ಲಿಂಗತತ್ತ್ವಂಗಳಾಗಿ ಅಳವಟ್ಟಾವೆ? ಎಂದು ಕೇಳಿದರೆ ಇಪ್ಪತ್ತೇಳು ಅಂಗತತ್ತ್ವಗಳೆಲ್ಲ ಇಪ್ಪತ್ತೇಳು ಲಿಂಗತತ್ತ್ವಂಗಳಾಗಿ ಅಳವಟ್ಟಾವೆಂದು ಹೇಳಿರಯ್ಯಾ. ನಾಳಿನ ದಿನಕ್ಕಿಂದ–ಸತ್ತು ಮುಕ್ತಿಯ ಹಡೆವುದಕಿಂತಲೂ, ಇಂದಿನ ದಿನ ಲೇಸೆಂದು ಹೇಳಿರಯ್ಯಾ–ಬಾಳುತ್ತಲೇ ನಿಜಮೋಕ್ಷ ಸ್ವರೂಪವಾಗುವಂಥದು ಬಹು ಚೆಂದವಾಗೆಯ್ತೆಂದು ಹೇಳಿರಯ್ಯಾ. ಕೂಡಲಸಂಗಮದೇವರ–ಪ್ರಾಣಲಿಂಗವನು, ಪೂಜಿಸಿದ–ಮಂತ್ರಜ್ಞಾನ ಜಪಸ್ತೋತ್ರನಿರ್ಗುಣ ಪೂಜಾಕ್ರಿಯೆಗಂಳಿಂದಾರಾಧಿಸಿದ, ಫಲ–ಸುಕೃತವು, ನಿಮ್ಮದಯ್ಯಾ–ನಿಮ್ಮದಾಗಲಿ ಶ್ರೀಗುರುನಾಥನೇ ಎಂದು ಶರಣನು ಶ್ರೀಗುರುನಾಥನೊಡನೆ ಬಿನ್ನೈಸುವಂಥ ಬಿನ್ನಪವು.

II – – – – – – – – – – – – – – – – – – – – – – – – – – – – – –

1–1 ಎಮ್ಮವರು (ಚ,ಜ). 2–2 ಋಣಸಂಬಂಧವುಂಟೆಂದು (ಚ,ಜ). 3–3 ದಿನವೆ (ಚ, ಜ).

..........................

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ–ಎಮ್ಮ ಸಂಬಂಧವಾದ ತಂದೆತಾಯಿಗಳು ಎಲೆ ಉಪಾಧ್ಯರುಗಳಿರಾ ನಿಮ್ಮನು ಕೇಳಿದರೆ ಶುಭ ಸೂಚನೆಯೆಂದು ಹೇಳಿರಯ್ಯಾ. ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ–ಇಂದು ತುಲಾ ಕೂಡಿತು ವೃಶ್ಚಿಕ ಕೂಡಿತು ಮೀನ ಕೂಡಿತು ಮಕರ ಕೂಡಿತೆಂದು ಹೇಳಿ ಆ ಪುರುಷನ ಸೊಮ್ಮ ಸಂಬಂಧವೇ ಈ ಸ್ತ್ರೀಗುಂಟು; ಈ ಸ್ತ್ರೀಯ ಸೊಮ್ಮು ಸಂಬಂಧವೇ ಆ ಪುರುಷನಿಗುಂಟೆಂದು ಹೇಳಿರಯ್ಯಾ.

ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ–ಆ ಪುರುಷನಿಗೆ ಚಂದ್ರಬಲವುಂಟು ಈ ಸ್ತ್ರೀಯಳಿಗೆ ನಕ್ಷತ್ರಬಲವುಂಟೆಂದು ಹೇಳಿರಯ್ಯಾ. ನಾಳಿನ ದಿನಕ್ಕಿಂದಿಂದಿನ ದಿನವೆ ಲೇಸೆಂದು ಹೇಳಿರಯ್ಯಾ–ಮಾರನೆ ದಿವಸಕ್ಕಿಂತಲೂ ಇಂದಿನ ದಿವಸ ಮಹಾಶುಭವೆಂದು ಹೇಳಿರಯ್ಯಾ ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ–ನಾ ಮದುವೆಯಾಗಿ ಮಕ್ಕಳ ಹಡದರೆ ಆ ಸುಕೃತವು ನಿಮ್ಮದಯ್ಯಾ.

● ಮತ್ತಂ, ಎಮ್ಮ ಶಿವಗಣಂಗಳು ಎಲೆ ಮಹಾನುಭಾವ ಗುರುಮೂರ್ತಿಗಳಿರಾ, ನಿಮ್ಮನು ಕೇಳಿದರೆ ಶರಣನೆಂಬ ಸತಿಗೂ ಲಿಂಗವೆಂಬ ಪುರುಷನಿಗೂ ಕೈಗೂಡಿಸಿಕೊಡುವುದಕ್ಕೆ ತೆತ್ತಿಗರಾದ ಮಹಾನುಭಾವ ಗುರುಮೂರ್ತಿಗಳಿರಾ ಶುಭಸೂಚನೆಯೆಂದು ಹೇಳಿರಯ್ಯಾ. ಆದಿಲಿಂಗನಾದಿಶರಣನಾಚರಣೆಯ ಪೂರ್ವಪರಜ್ಞಾನಶಿವತತ್ತ್ವಮೊತ್ತದ ಸಮ್ಮೇಳನವು; ಶರಣಸತಿಯ ಸೊಮ್ಮುಸಂಬಂಧವೇ ಲಿಂಗವೆಂಬ ಪುರುಷನಿಗುಂಟು ಲಿಂಗವೆಂಬ ಪುರುಷನ ಸೊಮ್ಮುಸಂಬಂಧವೇ ಶರಣಸತಿಗುಂಟೆಂದು ಹೇಳಿರಯ್ಯಾ. ಲಿಂಗವೆಂಬ ಪುರುಷನಿಗೆ ಪರಮಶಾಂತಿಜ್ಞಾನ ಬಲವುಂಟು, ಆ ಶರಣಸತಿಗೆ ಚಿತ್ಪ್ರಕಾಶಜ್ಞಾನ ಬಲವುಂಟೆಂದು ಹೇಳಿರಯ್ಯಾ. ಈ ಜನ್ಮವೆಂಬುದು ಒಳ್ಳೇದಲ್ಲ, ಇನ್ನೊಂದು ಜನ್ಮದಲ್ಲಿ ಹುಟ್ಟಿ ಜ್ಞಾನೋದಯುವಾಗಿ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾಗೆಂದು ಹೇಳಬೇಡಿ. "ಏಕೇನ ಜನ್ಮನಾ ಮುಕ್ತಿ! ವೀರಾಣಾಂತು ಮಹೇಶ್ವರಿ!" ಎಂದು ಎತ್ತಿದ ಶರೀರವೊಂದರಲ್ಲಿಯೆ ಜ್ಞಾನೋದಯವಾಗಿ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾಗೆಂದು ನಿರೂಪಿಸಿರಯ್ಯಾ. ಪರಶಿವಲಿಂಗವನು ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂದರ್ಚಿಸಿದ ಲಿಂಗಪ್ರಾಣತ್ವ ಪ್ರಾಣಲಿಂಗತ್ವ ಪ್ರಸಾದಮುಕ್ತತ್ವವೆಂಬ ಪ್ರಯೋಜನದ್ರವ್ಯವು ಮಹಾನುಭಾವಗುರುಮೂರ್ತಿಗಳ ಸೊಮ್ಮುಸಂಬಂಧವಯ್ಯಾ.

III- - - - - - - - - - - - - - - - - - - - - - - - - - - - - - - - - - - - - - - - - - -

1–1 ಎಮ್ಮವರು(ಟ,ಡ) 2–2 ಋಣಸಂಬಂಧವುಂಟೆಂದು (ಟ.ಡ).

..........................

ಎಮ್ಮವರು-ಎಮ್ಮ ದೀಕ್ಷಾಗುರು ಶಿಕ್ಷಾ ಗುರು [1]ಜ್ಞಾನಗುರು[1] ಸ್ವಾಮಿಗಳು, ಬೆಸಗೊಂಡಡೆ–ಉಪದೇಶಕ್ರಮವನು ಪ್ರಶ್ನೆಯ ಮಾಡಿದರೆ, ಅಯ್ಯ–ಎಲೆ ಚತುರಾಚಾರ್ಯರೆ, ಶುಭಲಗ್ನವೆನ್ನಿರಿ–ಮಂಗಲಾಚರಣೆಯೆನ್ನಿರಿ. ಅಯ್ಯಾ–ಸಕಲತತ್ತ್ವಾಧೀಶ್ವರನಾದಂಥ ಎಲೆ ಸ್ವಾಮಿಯೆ, ರಾಶಿ–ದ್ವಾದಶೇಂದ್ರಿಯಂಗಳಲ್ಲಿ ಲಿಂಗಸಂಬಂಧವು, ಕೂಟ–ಲಿಂಗಾಂಗಸಮರಸಸಂಯೋಗದಾಚರಣೆಯು, ಋಣಸಂಬಂಧವುಂಟೆಂದು–ಪಾದತೀರ್ಥಪ್ರಸಾದದ ರಿಣಸಂಬಂಧ [2][ವೊ][2] ಳವುಯೆಂದು.

ಚಂದ್ರಬಲ-ಕ್ರಿಯಾಸಂಬಂಧವು, ತಾರಾಬಲ-ಜ್ಞಾನಸಂಬಂಧವು, ಉಂಟೆಂದು-ಒಳವೆಂದು, ಹೇಳಿರಯ್ಯಾ-ವಚಿಸಿರಯ್ಯಾ. ನಾಳಿನ ದಿನಕ್ಕೆ-ಮುಂದಣ ದಿನಕ್ಕಿಂದಲು, ಇಂದಿನ ದಿನ ಲೇಸೆಂದು- ಇದೇ ಜನ್ಮ ಒಳ್ಳಿತ್ತೆಂದು, ಹೇಳಿರಯ್ಯಾ-ಗುರೂಪದೇಶದಿಂದಂಗದ ಮೇಲೆ ಲಿಂಗಸಂಬಂಧವ ಮಾಡಿಕೊಂಡು ಕ್ರಿಯಾಜ್ಞಾನವಿಡಿದಾಚರಿಸಿ ನಿಜಮುಕ್ತಿಯಂ ಪಡೆವುದೊಳ್ಳಿತ್ತೆಂದು ವಚಿಸಿರಯ್ಯ. ಕೂಡಲಸಂಗಮದೇವರ-ಪರಶಿವಲಿಂಗವನು, ಪೂಜಿಸಿದ ಫಲ-ಸಗುಣನಿರ್ಗುಣದ ಪೂಜೋಪಚಾರಗಳೆಲ್ಲವು, ನಿಮ್ಮದಯ್ಯಾ-ನಿಮ್ಮದಯ್ಯಾ.

..........................

೧-೧ x (ಡ) ೨-೨ ವ (ಟ.ಡ).

V - - - - - - - - - - - - - - - - - - - - - - - - - - - - - - - - - - - - - - - - - - -

ಎಮ್ಮವರು ಬೆಸಗೊಂಡಡೆ-ಶಿವಸಂಸ್ಕಾರಿಗಳಾದ ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರುಗಳು ಜ್ಞಾನಿಗಳ ಬೆಸಕೊಂಡರೆ, [ಶುಭಲಗ್ನವೆನ್ನಿರಯ್ಯಾ-] ಮಾಂಗಲ್ಯವಾದ ಮುಹೂರ್ತವೆನ್ನಿರಯ್ಯಾ. ರಾಸಿಕೂಟ-ಶರಣಂಗಳ ಸಮೂಹವು, [ರಿಣಸಂಬಂಧವುಂಟೆಂದು ಹೇಳಿರಯ್ಯಾ-]ರಿಣಪ್ರಸಾದ ಸಂಬಂಧವುಂಟೆಂದು ಹೇಳಿರಯ್ಯಾ.

ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ-ಜ್ಞಾನಸಾಮರ್ಥ್ಯ ಕ್ರಿಯಾಸಾಮರ್ಥ್ಯವುಂಟೆಂದು ಹೇಳಿರಯ್ಯಾ. ಭವಿಷತ್ಕಾಲಸಂಬಂಧವಾದ ಇನ್ನೊಂದು ಜನ್ಮದಲ್ಲಿ ಬಂದು ಮುಕ್ತಿಯ ಪಡೆಯುವುದಕ್ಕಿಂದವು ವರ್ತಮಾನಕಾಲಸಂಬಂಧವಾದ ಈ ಮನುಷ್ಯ ಶರೀರವೆ ಉಪದೇಶವ ಪಡೆವುದಕ್ಕೆ ಒಳ್ಳಿತ್ತೆಂದು ಹೇಳಿರಯ್ಯ ಎಂಬುದೀಗ ನಾಳಿನ ದಿನಕ್ಕಿಂದಿಂದಿನ ದಿನವೇ ಲೇಸೆಂದು ಹೇಳಿರಯ್ಯಾ ಎಂಬುದರ್ಥ.

---

## ಲಿಂಗಧಾರಣಸ್ಥಲ

I- - - - - - - - - - - - - - - - - - - - - - - - - - - - - - - - - - - - - - - - - -

ಲಿಂಗಧಾರಣಸ್ಥಲ-ಅಂಗಕ್ಕೆ ಲಿಂಗಸಂಬಂಧವಾದ ಭೇದವನ್ನೇ ಪೇಳುತ್ತಿಹುದಾದ ಕಾರಣ ಇದಕ್ಕೆ ಲಿಂಗಧಾರಣಸ್ಥಲವೆಂದು ಹೇಳಲ್ಪಟ್ಟಿತ್ತು.

---

೮೭

**ಪಾತಕ ಶತಕೋಟಿಯನೊರೆಸಲು ಸಾಲದೆ ಒಂದು ಶಿವನ ನಾಮ? ಸಾಲದೆ ಒಂದು ಹರನ ನಾಮ? ಕೂಡಲಸಂಗಮದೇವಾ, ನಿಮ್ಮ ಉಂಡಿಗೆಯ ಪಶುವ ಮಾಡಿದಿರಾಗಿ.**

I- - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಪಾತಕ ಶತಕೋಟಿಯ–ನೂರುಕೋಟಿ ಪಂಚಮಹಪಾತಂಕಗಳನ್ನು, ಒರೆಸಲು–ತಿಕ್ಕಿಬಿಡುವುದಕ್ಕೆ, ಒಂದು–ಅದ್ವಿತೀಯಸ್ವರೂಪವಾದ, ಶಿವನ ಮಾಂಗಲ್ಯಸ್ವರೂಪನಾದ ಪರಮೇಶ್ವರನ, ನಾಮ–ಅದ್ವಯ ಅಭಿಧಾನವಾದ ಪ್ರಣವಪಂಚಾಕ್ಷರಿಮಂತ್ರಸ್ಮರಣೆಯು, ಸಾಲದೇ?–ಅಷ್ಟೆಸಾಲದೆ? ಸಾಕು. ಒಂದು ಅದ್ವಿತೀಯ ಸ್ವರೂಪವಾದ, ಹರನ–ಸಂಹಾರಕ್ಕೆ ಕಾರಣನಾದಂಥ ಪರಮೇಶ್ವರನ, ನಾಮ–ಅದ್ವಯ ಅಭಿಧಾನವಾದ ಹರಹರಾಯೆಂದು ಉಚ್ಚರಿಸುವ ಹರಮಂತ್ರಸ್ಮರಣೆಯು ಸಾಲದೆ?–ಅಷ್ಟೆ ಸಾಲದೆ? ಸಾಕು. ಕೂಡಲಸಂಗಮದೇವಾ– ಎಲೆ ಪರಶಿವಲಿಂಗವೆ, ನಿಮ್ಮ ಉಂಡಿಗೆಯ ಪಶುವ ಮಾಡಿದಿರಾಗಿ–ಅಂಗದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಲ್ಪಟ್ಟ ಜ್ಞಾನಕಲಾತ್ಮನ ಮಾಡಿದೆಯಾಗಿ.

III- - - - - - - - - - - - - - - - - - - - - - - - - - - - - - - - - - - - - - - - - - - - - - - - -

ಗ್ರಂಥ॥ ಉಪಪಾತಕ ಕೋಟೀನಾಂ । ಬ್ರಹ್ಮ ಹತ್ಯಶತೈರಪಿ ದಹತ್ಯಶೇಷ ಪಾಪಾನಿ। ಪಂಚಾಕ್ಷರ ಮಹಾಮನುಃ ಎಂದು ಪಾತಕ ಶತಕೋಟಿಯಂ– ಅನೇಕ ಕೋಟಿ ಪಾಪಂಗಳನು, ಒರೆಸಲು–ತಿಕ್ಕಲು, ಸಾಲದೆ?–ಸಾಕಾಗದೇ? ಒಂದು–ಏಕವಾದ, ಶಿವನ–ಪರಶಿವನ, ನಾಮ–ಮೂಲಾಭಿಧಾನವಾದ ಪಂಚಾಕ್ಷರ ಮಂತ್ರವು, ಸಾಲದೆ–ಸಾಕಾಗದೆ, ಒಂದು–ಏಕವಾದ, ಹರನ–ಪ್ರಕೃತಿಕಾರ್ಯಸಂಹಾರಕನಾದ ಪರಶಿವನ, ನಾಮ–ಅಭಿಧಾನವು, ಸಾಲದೆ?–ಸಾಕಾಗದೆ? ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನ್ನ–ನನ್ನನು, ನಿಮ್ಮ ಉಂಡಿಗೆಯ ಪಶುವ–ಗುರೂಪದೇಶದಿಂದಂಗದ ಮೇಲೆ ಲಿಂಗಸಾಹಿತ್ಯವನು, ಮಾಡಿದೆಯಾಗಿ–ಎಸಗಿದೆಯಾಗಿ.

---

೮೮

**ಲಿಂಗದುಂಡಿಗೆಯ ಪಶುವಾನಯ್ಯಾ, ವೇಷಧಾರಿಯಾನು, ಉದರಪೋಷಕ[1] ನಾನಯ್ಯಾ. ಕೂಡಲಸಂಗನಶರಣರ [2]ಮನೆಯ[2] ಧರ್ಮದ ಕವಿಲೆಯಾ [3]ನಯ್ಯಾ[3].**

I- - - - - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗದುಂಡಿಗೆಯ ಪಶುವಾನಯ್ಯಾ–ಅಂಗದ ಮೇಲೆ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಲ್ಪಟ್ಟ ಜ್ಞಾನಕಲಾತ್ಮ ನಾನಯ್ಯಾ. ವೇಷಧಾರಿಯಾನು–ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮುಂತಾದ ಭಕ್ತಿವೇಷವ ಧರಿಸಿಕೊಂಡಿಪ್ಪಾತ ನಾನು. ಉದರಪೋಷಕ ನಾನಯ್ಯಾ–ವೇಷವನ್ನು ತೋರಿ ಒಬ್ಬರಿಂದೊಂದು ವಸ್ತುವನು ಪಡದುಕೊಂಡು ಘಟರಕ್ಷಣೆಯ ಮಾಡುವಂಥ ಹೊಟ್ಟೆಹೋರಕ ನಾನಯ್ಯಾ. ಕೂಡಲಸಂಗನ–ಪರಶಿವಲಿಂಗದ, ಶರಣರ –ಏಳುನೂರೆಪ್ಪತ್ತಮರಗಣಂಗಳ, ಮನೆಯ ಭಕ್ತಿಮಂದಿರದ, ಧರ್ಮದ–ಸದ್ಧರ್ಮದ, ಕವಿಲೆಯಾನಯ್ಯಾ–ಕೃಪಾಪುತ್ರ ನಾನಯ್ಯಾ.

II- - - - - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗದ ಉಂಡಿಗೆಯ ಪಶು ನಾನಯ್ಯಾ–ಷಡಕ್ಷರಿಮಂತ್ರ ಸಂಕೀರ್ಣಮುದ್ರೆಯನುಳ್ಳಸಜ್ಜೀವನು ನಾನಯ್ಯಾ

III- - - - - - - - - - - - - - - - - - - - - - - - - - - - - - - - - - - - - - - - - - - - - - -

1 + ನ (ಟ, ಡ). 2–2 X (ಟ, ಡ). 3–3 ನು (ಟ,ಡ).

..........................

ಲಿಂಗದ ಉಂಡಿಗೆಯ ಪಶುವಾನಯ್ಯಾ–ಶ್ರೀಗುರುಸ್ವಾಮಿಯ ಅನುಗ್ರಹದಿಂದಂಗದ ಮೇಲೆ ಲಿಂಗಸಂಬಂಧವನುಳ್ಳ ಸಜ್ಜೀವನಾದ ಶರಣನನು ನಾನು, ಅಯ್ಯಾ–ಎಲೆ ಒಡೆಯನೆ, ವೇಷಧಾರಿಯಾನು–ಶಿವಲಾಂಛನದಾಡಂಬರವ ತೋಱಿ–ಹೊಟ್ಟೆಯ ಹೊರೆವ ಗ್ರಾಸಪೋಷಕನು ನಾನು, ಉದರ ಪೋಷಕನು ನಾನಯ್ಯಾ–ತಂದ ಪರಾಯಣನು ನಾನು. ಕೂಡಲಸಂಗನಶರಣರ–ಏಕಲಿಂಗನಿಷ್ಠಾಪರರಾದ ಶಿವಶರಣರುಗಳ, ಧರ್ಮದ ಕವಿಲೆಯಾನು–ಶಿವದರ್ಮವನುಳ್ಳ ಸಜ್ಜೀವನಾದ ಶರಣನು ನಾನೆಂಬುದರ್ಥ.

ಲಿಂಗಲಕ್ಷಣವ ತೋಱಿ–ಹೊಟ್ಟೆಯ ಹೊಱೆವ ವೇಷಧಾರಿಯಾನು.

---

೮೯

**ನಮಃಶಿವಾಯ ನಮಃಶಿವಾಯ [1]ನಮಃಶಿವಾಯ[1] ಶರಣೆಂದಿತ್ತು. ಲಲಾಟಲಿಖಿತ[2] ಬರೆದ ಬಳಿಕ [3]ಪಲ್ಲಟವ ಮಾಡಬಾರದಾರಿಗೆಯೂ.[3] [4]ಎನ್ನ ಉರದಲುಂಡಿಗೆ, ಶಿರದಲಕ್ಷರ[4] ಕೂಡಲಸಂಗಯ್ಯಾ ಶರಣೆಂದಿತ್ತು.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ನಮಃಶಿವಾಯ ನಮಃಶಿವಾಯ ನಮಃಶಿವಾಯ ಶರಣೆಂದಿತ್ತು–ನಮಃಶಿವಾಯ ನಮಃಶಿವಾಯ ನಮಃಶಿವಾಯವೆಂಬ ಪ್ರಣವಪಂಚಾಕ್ಷರಮಂತ್ರ ಸ್ಮರಣೆಯಿಂದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕಾರವೆಂದು ನಮಸ್ಕರಿಸುತ್ತಿದ್ದಿತ್ತು. ಲಲಾಟ ಲಿಖಿತವಬರೆದ ಬಳಿಕ–ಬ್ರಹ್ಮ ಬರೆಯಲ್ಪಟ್ಟ ಅಕವಿಯಿನಿ ಎಂಬಯ್ದಕ್ಷರಂಗಳನು ಶ್ರೀಗುರುನಾಥನು ಹಲಗೆ ಮೇಲಣ ಧೂಳಕ್ಷರವನ್ನು ದಟ್ಟಿಸಿದೋಪಾದಿಯಲ್ಲಿ ದಟ್ಟಿಸಿ, ಪ್ರಣವಪಂಚಾಕ್ಷರ ಮಂತ್ರವನ್ನು ಲೇಖನವಮಾಡಿದ ಮೇಲೆ, ಪಲ್ಲಟವ ಮಾಡಬಾರದು–ಪಂಚಾಕ್ಷರಮಂತ್ರವಿದ್ದ ಹಾಂಗೆ ಪಂಚಲಿಖಿತವನ್ನುಂಟು ಮಾಡಿಕೊಳಬಾರದು, ಆರಿಗೆಯೂ–ಬ್ರಹ್ಮ ವಿಷ್ಣ್ವಾದಿಗಳೊಳಗೊರ್ವರಿಗೆಯೂ.

ಎನ್ನ ಉರದಲುಂಡಿಗೆ–ಎನ್ನಂಗದಲ್ಲಿ ಸತ್ಕ್ರಿಯಾಸ್ವರೂಪವಾದಿಷ್ಟಲಿಂಗಸಂಬಂಧವಾಗಿಪ್ಪುದು, ಎನ್ನ ಶಿರದಲಕ್ಷರ–ಎನ್ನ ಮನದಲ್ಲಿ ಸುಜ್ಞಾನ ಸ್ವರೂಪವಾದ ಪ್ರಾಣಲಿಂಗಸಂಬಂಧವಾಗಿಪ್ಪುದು, ಕೂಡಲಸಂಗಯ್ಯಾ–ಎಲೆ ಪರಶಿವಲಿಂಗವೆ, ಶರಣೆಂದಿತ್ತು–ಎನ್ನತ್ಮಾಂಗದಲ್ಲಿ ಮಹಾಜ್ಞಾನಸ್ವರೂಪವಾದ ಭಾವಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುತ್ತಿದ್ದಿತ್ತು.

.........................

೧–೧ ಆ (ಗ).

III- - - - - - - - - - - - - - - - - - - - - - - - - - - - - - - - - - - - - - - - - - -

1–1 x (ಟ,ಡ). 2 + ವ (ಟ,ಡ). 3–3 ಆರಿಗೂ ಪಲ್ಲಟವ ಮಾಡಬಾರದು (ಟ, ಡ). 4–4 ಉರದಲ್ಲಿ ಉಂಡಿಗೆ, ಶಿರದಲ್ಲಿ ಅಕ್ಷರ (ಟ,ಡ).

.........................

ಲಲಾಟ–ಫಣೆಯಲ್ಲಿ, ಲಿಖಿತವ–ಓಂ ನಮಃಶಿವಾಯ ಎಂಬ ಲೇಖನವು, ಬರೆದ ಬಳಿಕ–ಶ್ರೀಗುರು ಕರುಣಿಸಿ ಸಂಬಂಧವಾದ ಮೇಲೆ, ಶಿವಾಯ–ಪರಶಿವಲಿಂಗಕ್ಕೋಸ್ಕರವು, ನಮಃ–ನಮಸ್ಕಾರವು, ಶಿವಾಯ–ಪರಶಿವಲಿಂಗಕ್ಕೋಸ್ಕರ, ನಮಃ–ನಮಸ್ಕಾರವು ಶರಣೆಂದಿತ್ತು–ಆತ್ಮನು ನಮಸ್ಕಾರವೆಂದು ನುಡಿದಿತ್ತು, ಆರಿಗೂ–ಹರಿಬ್ರಹ್ಮಾದಿಗಳಿಗಾದರೂ, ಪಲ್ಲಟವ ಮಾಡಬಾರದು–ವ್ಯತ್ಯಾಸವ ಮಾಡಲು ಶಕ್ಯವಲ್ಲವು, ಎನ್ನ–ಶರಣನ, ಉರದಲ್ಲಿ–ವಕ್ಷಸ್ಥಲದಲ್ಲಿ, ಉಂಡಿಗೆ–ಇಷ್ಟಲಿಂಗಸಂಬಂಧವು, ಶಿರದಲ್ಲಿ–ಎನ್ನ ಉತ್ತಮಾಂಗದಲ್ಲಿ, ಅಕ್ಷರ–ಮೂಲಷಡಕ್ಷರಿಯು, ಕೂಡಲಸಂಗಯ್ಯಾ–ಪರಶಿವಲಿಂಗಕ್ಕೆ, ಶರಣೆಂದಿತ್ತು–ನಮಸ್ಕಾರವೆನುತಿರ್ದುದು.

---

## ೯೦

**ಅಡ್ಡ ವಿಭೂತಿಯಿಲ್ಲದವರ ಮುಖ ಹೊಲ್ಲ, ನೋಡಲಾಗದು; ಲಿಂಗದೇವರಿಲ್ಲದ ಠಾವು ನರವಿಂಧ್ಯ, ಹೋಗಲಾಗದು; ದೇವ ಭಕ್ತರಿಲ್ಲದ ಊರು, ಸಿನೆ ಹಾಳು! ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - - - - -

ಅಡ್ಡ ವಿಭೂತಿಯಿಲ್ಲದವರ: ಅಡ್ಡ–ಅಡ್ಡಲಾಗಿ ಧರಿಸಲ್ಪಟ್ಟ, ವಿಭೂತಿ–ಚಿದ್ವಿಭೂತಿಯು, ಇಲ್ಲದವರ–ಉಂಟಾಗಿಲ್ಲದವರ, ಮುಖ–ವದನವು, ಹೊಲ್ಲ–ಬಹುಕ್ಷೀಣವು ನೋಡಲಾಗದು–ಅವನ ಮುಖವನ್ನು ಭಕ್ತಮಾಹೇಶ್ವರರುಗಳು ನಿರೀಕ್ಷಣೆಯ ಮಾಡಲಾಗದು. ಅವನ ಮುಖವು ನಾಯಿ ತಿಗಕ್ಕೆ ಸಮಾನವು. ಲಿಂಗದೇವರಿಲ್ಲದ ಠಾವು ನರವಿಂಧ್ಯ: ಲಿಂಗದೇವರು ಇಷ್ಟಮಹಾಲಿಂಗದೇವರು, [ಇಲ್ಲದ–] ಉಂಟಾಗಿಲ್ಲದ. ಠಾವು–ಸ್ಥಾನವು, ನರ ವಿಂಧ್ಯ–ಜನಾರಣ್ಯವು, ಹೋಗಲಾಗದು–ಭಕ್ತಮಹೇಶ್ವರರುಗಳು ಅವನ ಮನೆಯನ್ನು ಹೊಕ್ಕು ಅರ್ಚನಾರ್ಪಣಕ್ರಿಯೆಗಳನು ಮಾಡಲಾಗದು.

ದೇವಭಕ್ತರಿಲ್ಲಬ ಊರು ಸಿನೆ, ಹಾಳು : [ದೇವಭಕ್ತರಿಲ್ಲದ–] ಒಂದು ಗ್ರಾಮವಾದ ಮೇಲೆ ವೀರಣ್ಣ ಬಸವಣ್ಣ ಮಲ್ಲಿಕಾರ್ಜುನನ ಗುಡಿಯಾದರೂ ಇರಬೇಕು. ಅದಲ್ಲದೆ ವಶೀಕೃತ ಮಠಗಳಾದರೂ ಇರಬೇಕು. ಅದಲ್ಲದೆ ವಿರಕ್ತಮಠಗಳಾದರೂ ಇರಬೇಕು. ಅದಿಲ್ಲದಿದ್ದರೆ

ಶಿವಭಕ್ತರ ಗೃಹಗಳಾದರೂ ಇರಬೇಕು. ಇವೇನೂ ಇಲ್ಲದೆ ಇದ್ದಂಥ, ಊರು–ಗ್ರಾಮವು, ಸಿನೆ ಹಾಳು–ಸುಡುಗಾಡಿಗೆ ಸಮಾನವಾಗಿಪ್ಪುದು, ಕೂಡಲಸಂಗಮದೇವಾ–ಎಲೆ ಪರಶಿವ ಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - -

ಅಡ್ಡವಿಭೂತಿಯಿಲ್ಲದವರ ಮುಖ ಹೊಲ್ಲ, ನೋಡಲಾಗದು–ವೇದತ್ರಯ ಅಧಿದೈವತ್ರಯ ಅಕ್ಷರತ್ರಯವೆಂಬ ತಿರ್ಯಕ್ಕಾಗಿ ಧರಿಸುವಂಥ ಮೂರು ರೇಖೆಯಲ್ಲಿ ವಿಭೂತಿಯಿಲ್ಲದವರ ವಕ್ತ್ರವು ಕೆಟ್ಟಂಥಾದು, ನಿರೀಕ್ಷಿಸಲಾಗದು. ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - -

ಗ್ರಂಥ: ದಿಗ್ಭಸ್ಮರನಿತಂ ಭಾಲಂ। ಧಿಗ್ರಾಮಮಶಿವಾಲಯಂ। ಧಿಗಶಿವಾರ್ಚನಂ ಜನ್ಮ। ಧಿಗ್ವಿದ್ಯಾಮಶಿವಶ್ರಯಾಂ। ಎಂದು, ಅಡ್ಡವಿಭೂತಿಯಿಲ್ಲದವರ–ಲಲಾಟದಲ್ಲಿ ತಿರ್ಯಕ್ತ್ರಿಪುಂಡ್ರಧಾರಣ ಉಂಟಾಗದೆ ಇದ್ದವರುಗಳ, ಮುಖ–ವದನವು, ಹೊಲ್ಲ–ನಿಷೇಧವು, ನೋಡಲಾಗದು–ಅಂಥವರುಗಳ ನಿರೀಕ್ಷಣೆಯ ಮಾಡಲಾಗದು. ಲಿಂಗದೇವರಿಲ್ಲದ–ಶಿವಲಿಂಗಮೂರ್ತಿಯುಂಟಾಗದೆ ಇರ್ದ, ಠಾವು–ಸ್ಥಲವು, ನರವಿಂಧ್ಯ–ಜನಾರಣ್ಯವು, ಹೊಗಲಾಗದು–ಅಲ್ಲಿಗೆ ಭಕ್ತಮಾಹೇಶ್ವರರು ಹೋಗಿ ಲಿಂಗಾರ್ಚನೆಯ ಮಾಡಲಾಗದು. ದೇವಭಕ್ತರು–ಶಿವಭಕ್ತರುಗಳು, ಇಲ್ಲದ–ಉಂಟಾಗದೆ ಇರ್ದ, ಊರು–ಗ್ರಾಮವು, ಸಿನೆ ಹಾಳು–ನಷ್ಟಗ್ರಾಮವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

V- - - - - - - - - - - - - - - - - - - - - - - - - - - - - - - - - - - - - - - - - - - - -

ಸಕಲಜನಸಂಪದವುಂಟಾದೊಡೆಯೂಪುಣ್ಯಹೀನನಾದ[ಊರು] ನಷ್ಟಗ್ರಾಮವೆನಿಸೂದೆಂಬುದೀಗ ದೇವಭಕ್ತರಿಲ್ಲದೂರು ಸಿನೆ ಹಾಳೆಂಬುದರ್ಥ.

---

೯೧

**ಅಡ್ಡ ತ್ರಿಪುಂಡ್ರ [ವಿಭೂತಿಯ] ಮಣಿಮಕುಟದ ವೇಷದ ಶರಣರ ಕಂಡಡೆ ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು ಸಂದೇಹವಿಲ್ಲದೆ. ಇವಿಲ್ಲದವರ ಕಂಡಂಡೆ ನಂಬುವೆನೆ? ಕೂಡಲಸಂಗಮದೇವಾ?**

I- - - - - - - - - - - - - - - - - - - - - - - - - - - - - - - - - - - - - - - - - - - - -

ಅಡ್ಡ ತ್ರಿಪುಂಡ್ರ–ಅಡ್ಡ ತ್ರಿರೇಖೆಯಾಗಿ, ವಿಭೂತಿಯ–ಲಲಾಟದಲ್ಲಿ ಮೂರು ರೇಖೆಯಾಗಿವುಳ್ಳ ಚಿದ್ವಿಭೂತಿಯ, ಮಣಿಮಕುಟದ–ರುದ್ರಾಕ್ಷಿ ಮಣಿಗಳಿಂದ ತೆತ್ತಿಸಿದ ಕಿರೀಟದ, ವೇಷದ–ಇಂತಪ್ಪ ಶಿವವೇಷವನು ಧರಿಸಿಕೊಂಡಿರುವಂಥ, ಶರಣರ ಕಂಡಡೆ–ಜಂಗಮಮೂರ್ತಿಗಳ ದರುಶನವಾದರೆ, ಎನ್ನ ಮನವು–ಸಂಗನಬಸವೇಶ್ವರನ ಚಿತ್ತವು, ನಂಬುವುದು ಇವರೆ ಸಾಕ್ಷಾತ್ಶಿವಸ್ವರೂಪಿಗಳೆಂದು ವಿಶ್ವಾಸಿಸುವುದು, ಎನ್ನ ಮನವು–ಸಂಗನಬಸವೇಶ್ವರನ ಚಿತ್ತವು,ನಚ್ಚುವುದು–ತನುಮನದನಂಗಳೆಲ್ಲ ಅವರೊಡವೆ ಅವರ ಪದಾರ್ಥವೆಂದು ಮಮಕರಿಸಿಕೊಂಡು ಕೊಟ್ಟು ಭಕ್ತಿಯ ಮಾಡುವುದು, ಸಂದೇಹ ವಿಲ್ಲದೆ–ವರು ವಸ್ತುಸ್ವರೂಪಿಗಳು ಅಹುದೋ ಅಲ್ಲವೋ ಎಂಬ ಮನೋಸಂಕಲ್ಪವುಂಟಾಗದೆ,

ಎನ್ನ ಮನವು-ಎನ್ನ ಚಿತ್ತವು, ನಂಬುವುದು-ವಿಶ್ವಾಸಿಸುವುದು, ಇವಿಲ್ಲದವರ ಕಂಡಡೆ-ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷಪುಂಟಾಗಿಲ್ಲದವರ ದರುಶನವಾದರೆ, ನಂಬುವೆನೆ?-ವಿಶ್ವಾಸಿಸುವೆನೆ? ವಿಶ್ವಾಸಿಸೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.೧

..........................

೧+ ಲಿಂಗಧಾರಣಸ್ಥಲ ಸಮಾಪ್ತ (ಗ).

---

## ತಾಮಸನಿರಸನಸ್ಥಲ

I- - - - - - - - - - - - - - - - - - - - - - - - - - - - - - - - - - - - - - - -

ಅಂತರಂಗದಜ್ಞಾನವನೆ ತಿರಸ್ಕಾರವ ಮಾಡಿಬಿಡುವಂಥ ಭೇದವನ್ನೇ ಪೇಳುತ್ತಿಹುದಾದ ಕಾರಣ ಇದಕ್ಕೆ ತಾಮಸನಿರಸನಸ್ಥಲವೆಂದು ಹೇಳಲ್ಪಟ್ಟಿತ್ತು.

---

೬೨

**ಆರಾಧ್ಯ ಪ್ರಾಣಲಿಂಗವೆಂದಜೆದು, ಪೂರ್ವಗುಣವಳಿದು ಪುನರ್ಜಾತನಾದ ಬಳಿಕ ಸಂಸಾರಬಂಧುಗಳೆನ್ನವ೧ರೆಂದಡೆ, ನಂಟು ಭಕ್ತಿ ನಾಯಕನರಕ! ಇಂತೆಂದುದು ಕೂಡಲಸಂಗನ ವಚನ.**

I- - - - - - - - - - - - - - - - - - - - - - - - - - - - - - - - - - - - - - - -

ಆರಾಧ್ಯ-ಶ್ರೀಗುರುನಾಥನು, ಪ್ರಾಣಲಿಂಗವೆಂದಜೆದು-ಅಂತರಂಗದ ಪ್ರಾಣಲಿಂಗವೆ ಬಹಿರಂಗದಲ್ಲಿ ಇಷ್ಟಲಿ ೦ವಾಗಿ ಬಂದಿಪ್ಪುದೆಂದು ತಿಳಿದು, ಪೂರ್ವಗುಣವಳಿದು-ಜಾತಿ ವರ್ಣಾಶ್ರಮ ಕುಲಗೋತ್ರ ನಾಮಾಚಾರಂಗಳ ನಷ್ಟವ ಮಾಡಿಬಿಟ್ಟು ವೇಧಾಮಂತ್ರಕ್ರಿಯೆಗಳೆಂಬ ದೀಕ್ಷಾತ್ರಯ ದಿಂದ ಅಂಗಕ್ಕೆ ಲಿಂಗಸಂಬಂಧವನ್ನು ಹಡೆದುಕೊಂಡು, ಪುನರ್ಜಾತನಾದ ಬಳಿಕ: ಪುನಃ-ಮರಳಿ, ೧ಜಾತನಾದ ಬಳಿಕ-ಗುರುಪುತ್ರ೨ ನಾದ ಮೇಲೆ, ಸಂಸಾರಬಂಧುಗಳು-ಸತಿಸುತಾದಿ ಪ್ರಪಂಚಿನೊಡನೆ ಕೂಡಲ್ಪಟ್ಟ ಬಾಂಧವರುಗಳು, ಎನ್ನವರೆಂದಡೆ-ಎನ್ನಣ್ಣ ಎನ್ನ ತಮ್ಮ ಚಿಕ್ಕಪ್ಪ ದೊಡ್ಡಪ್ಪ ಸೋದರತ್ತೆ ಸೋದರಮಾವ ಮೊದಲಾದವರೆನ್ನ ಸಂಬಂಧವಾದ ಬಾಂಧವರುಗಳಾಗಿ ಬಂದಿರ್ಪರೆಂದು ಹೇಳಿದರೆ, ನಂಟುಭಕ್ತಿ, ನಾಯಕ ನರಕ!: ನಂಟುಭಕ್ತಿ- ಅವರ ನಂಟುತನದ ಪ್ರೀತಿಗೋಸ್ಕರವಾಗಿ ಈ ನಂಟನು ಆ ನಂಟನ ಮನೆಗೆ ಹೋಗಿ ಆ ನಂಟನು ಈ ನಂಟನ ಮನೆಗೆ ಬಂದು ಉಂಡುಟ್ಟು ಉಡುಗೊರೆ ಹೊದ್ದು ಉತ್ಸಾಹದಿಂದ ಪರಿಣಾಮಿಸಿದರೆ, ನಾಯಕ ನರಕ!-ಘೋರನಿರಯವೆ ಸಂಭವಿಸುತ್ತಿಹುದು, ಕೂಡಲಸಂಗನ ವಚನ-ಪರಶಿವ ಲಿಂಗದ ವಾಕ್ಯಾನುಭಾವವು, ಇಂತೆಂದುದು-ಹೀಗೆಂದು ಹೇಳುತ್ತಿಹುದು.

.........................

೧+ ಗುರುಕರ (ಕ.ಗ) ೨ + ಗುರುಕುಮಾರ (ಕ,ಗ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಆರಾಧ್ಯ ಪ್ರಾಣಲಿಂಗವೆಂದಱಿದು–ಆಗಮಾರ್ಥಾನುಸಂಧಾನಃ।ರಾಗದ್ವೇಷವಿಭಂಜನಃ। ಜ್ಞಾನವೈರಾಗ್ಯಸಂಪನ್ನಃ। ಆರಾಧ್ಯ ಇತಿ ಕಥ್ಯತೇ।

ಎಂದು, ಇಂಥಾಚಾರ್ಯನೇ ಅಸುಲಿಂಗವೆಂದು ತಿಳಿದು, ಪೂರ್ವಗುಣವಳಿದು–ಬಂದ ಬಟ್ಟೆಯ ನಷ್ಟವ ಮಾಡಿ, ಪುನರ್ಜಾತನಾದ ಬಳಿಕ–ಶ್ರೀಗುರುವಿನ ಕರಗರ್ಭವೆಂಬ ನಿರ್ಯೋನಿಯಲ್ಲಿ ಜನಿಸಿದಾತನಾದ ಮೇಲೆ, ಸಂಸಾರಬಂಧುಗಳೆನ್ನವರೆಂದಡೆ ನಂಟುಭಕ್ತಿ ನಾಯಕನರಕ!– ಸಂಸೃತಿ ಬಾಂಧವರು ತನ್ನ ಹೊಂದಿದವರು ಹೊಱೆದವರೆಂದು ಸಕಲಭಕ್ತಿಯ ಮಾಡಿದರೆ ದೊರೆನಿರಯವು ತಪ್ಪದು. ಏನು ಕಾರಣ ಬಸವೇಶ್ವರಸ್ವಾಮಿಗಳು ಬ್ರಾಹ್ಮಣರಲ್ಲಿ ಉದ್ಭವಿಸಿ ಅವರ ಪೂರ್ವವರ್ತನೆಯ ನಷ್ಟವ ಮಾಡಿ ಇತ್ತ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಗಳಾಗಿ ಗುರುಭಕ್ತಿ ಲಿಂಗಪೂಜೆ ಜಂಗಮ ದಾಸೋಹವ ಮಾಡುತ್ತಿಹರು. ಮಾಡುತ್ತಿರ್ದಲ್ಲಿ ಆ ಪೂರ್ವದವರು ಬಂದರೆ ಅವರಿಗೆ ನಮ್ಮವಂಶದವರು ಬಂದೈದಾರೆಂದು ಕಂಡು ಭಕ್ತಿಯ ಮಾಡಿದರೆ ತಮಗೆ ನಾಯಕನರಕವೆಂದು ಹೇಳಿಕೊಂಡರು. ಮತ್ತಂ ಇವರಾದರೂ ಸರಿ, ಲಿಂಗಾಂಗಸಂಬಂಧಿಗಳಾಗಿ ಬಂದ ಬಳಿಕ ನಮ್ಮ ಗುರುತಾಯಿ ನಮ್ಮ ಶಿವಸಹೋದರ ಎಂಬ ಪಕ್ಷವುಂಟಾಗಿ ಭಕ್ತಿಯ ಮಾಡಿದರೆ ಇವರಿಗೂ ಹಾಂಗೆ ದೊರೆನಿರಯವು ತಪ್ಪದೆಂದು ಹೇಳಿತ್ತು ಶಿವನ ವಾಕ್ಯವು.

III- - - - - - - - - - - - - - - - - - - - - - - - - - - - - - - - - - - - - - - - - - - - -

೧+ ರೆನ್ನವ (ಟ,ಡ).

.........................

ಆರಾಧ್ಯ–ಆಚಾರ್ಯನು, ಪ್ರಾಣಲಿಂಗವೆಂದು–ದೇವದಾನವಮಾನವಮನು[3] [ಮುನಿ] ಗಳಿಂದೆ ಪೂಜಿಸಿಕೊಳಲು ತಕ್ಕ ಪರಶಿವನೆ ಅಸುವಿನ ಚಿಲ್ಲಿಂಗ ವೆಂದು ತಿಳಿದು, ಪೂರ್ವಗುಣವಳಿದು–ಮೊದಲಜನ್ಮದ ಪ್ರಕೃತಿವರ್ತನೆಯ ಸ್ವರೂಪವನು ಗುರೂಪ[ದೇಶ] ದಿಂದ ನಿವೃತ್ತಿಯ ಮಾಡಿ, ಪುನರ್ಜಾತನಾದ ಬಳಿಕ–ಮರಳಿ ಶ್ರೀಗುರುಸ್ವಾಮಿಯ ಕರಗರ್ಭದಿಂದುದಯವಾದ ಮೇಲೆ, ಸಂಸಾರ–ಕಾಯ ಜೀವ ಸಂಸೃತಿ ಸಂಬಂಧವಾದ, ಬಂಧುಗಳು–ಬಾಂಧವರುಗಳು ಎನ್ನವರೆನ್ನವರೆಂದಡೆ–ನನ್ನ ಸಂಬಂಧವಾದಂಥವರು ನನ್ನ ಸಂಬಂಧವಾದಂಥವರುಯೆಂದರೆ, ನಂಟುಭಕ್ತಿ–ವಿಶ್ವಾಸ ಶ್ರದ್ಧೆಯು, ನಾಯಕ ನರಕ!–ಶ್ರೇಷ್ಠ ದುರ್ಗತಿಯು, ಇಂತೆಂದುದು–ಹೀಗೆಂದು ಹೇಳಿದುದು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

.........................

೩–೩ ಮನ (ಟ,ಚ).

V- - - - - - - - - - - - - - - - - - - - - - - - - - - - - - - - - - - - - - - - - - - - -

ಮನುಮುನೀಶ್ವರದೇವದಾನವಮಾನವಾದಿಗಳಿಂದರ್ಚಿಸಲ್ಪಟ್ಟ ಪ್ರಸಿದ್ಧ...ಶಿವನೆ ಪ್ರಾಣಲಿಂಗವೆಂಬುದೀಗ ಆರಾಧ್ಯಪ್ರಾಣವೆಂಬುದರ್ಥ. ಗ್ರಂ॥ ಶಿವಸ್ಯ ಪೂಜ್ಯತೇ ಲಿಂಗಂ ಸರ್ವದೇವೈಸ್ಸುರೈರ್ನರೈಃ ಶಿವೇನ ಪೂಜಿತಃ ಕೋವ ವದಂತು ಪ್ರತಿವಾದಿನಃ॥

---

೯೩

**ತಾಳಮರದ ಕೆಳಗೆ ಒಂದು ಹಾಲ ಹರವಿಯಿದ್ದಡೆ, ಅದು ಹಾಲಹರವಿಯೆನ್ನರು; ಸುರೆಯ ಹರವಿಯೆಂಬರು. ಈ ಭಾವನಿಂದೆಯ ಮಾಣಿಸು, ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - - - - - -

ತಾಳಮರದ ಕೆಳಗೆ–ವಾಲೆವೃಕ್ಷದ ೧ಕೆಳಗೆ೧, ಹಾಲಹರವಿಯಿದ್ದಡೆ–ಕ್ಷೀರದ ಪಡಗವನ್ನು ಮಡಗಿರ್ದರೆ, ಅದು ಹಾಲಹರವಿಯೆನ್ನರು–ಅದು ಕ್ಷೀರದ ಪಡಗವೆಂದು ಹೇಳರು, ಸುರೆಯ ಹರವಿಯೆಂಬರು–ಪಥಮಾರ್ಗವೆತ್ತಿ ಹೋಗುವಂಥಾತ್ಮರುಗಳು ಅಲ್ಲಿ ೨ಯಾವ೨ ಹರವಿ ಇದ್ದೀತೆಂದು ಮಾತನಾಡುತ್ತ ಹೋಗುವರು. ಅಲ್ಲಿರಬೇಕಾದರೆ ಸುರೆಯ ಹರವಿ ಇದ್ದೀತಲ್ಲದೆ ಕ್ಷೀರದ ಹರವಿ ಇದ್ದೀತೆಂದು ಹೇಳರು. ಈ ಭಾವ ನಿಂದೆಯ ಮಾಣಿಸು–ಹೀಗೆಂದಾಡುವಂತ ಭಿನ್ನಭಾವದ ದೂಷಣೆಯ ಬಿಡಿಸಾ ಎಂಬುದರ್ಥ.

● ತಾಳಮರದ ೧ಕೆಳಗೆ೧–ಅಷ್ಟಮದಂಗಳೆಂಬ ಮದ್ಯರಸಕ್ಕೆ ಕಾರಣವಾದ ಮೂಲ ಅಹಂಕಾರಸ್ವರೂಪವಾದ ದೇಹವೆಂಬ ವಾಲೆವೃಕ್ಷದ ಕಿಂದಣದಲ್ಲಿ, ಒಂದು ಹಾಲಹರವಿಯಿದ್ದಡೆ–ಒಂದು ಅಮೃತಕುಂಭಸ್ವರೂಪವಾದ ಇಷ್ಟಲಿಂಗವು ನೆಲೆಗೊಂಡಿದ್ದರೆ, ಅದು ಹಾಲಹರವಿಯೆನ್ನರು–ಅದು ಅಮೃತಕುಂಭ ಸ್ವರೂಪವಾದ ಚಿತ್ಕಲಾಲಿಂಗವೆಂದು ಹೇಳರು, ಸುರೆಯ ಹರವಿಯೆಂಬರು–ಇದು ಸೃಷ್ಟಿಗೆ ಹುಟ್ಟಿದ ಶಿಲೆ, ಕಲ್ಲುಕುಟಿಕನ ಕೈಯಿಂದ ಕಟಿಸಿಕೊಂಡಂಥ ಮೂರ್ತಿ ಗುರುವಿನ ಸಂಸ್ಕಾರದಿಂದ ಲಿಂಗವೆಂದು ಹೇಳುವರು. ಮತ್ತಂ, ಚಿತ್ಕಲಾಹೀನವಾದ ಜಡಲಿಂಗವೆಂದು ಹೇಳುವರು. ಈ ಭಾವನಿಂದೆಯ ಮಾಣಿಸು: [ಈ ಭಾವನಿಂದೆಯ] ಹೀಗೆಂದಾಡುವಂಥ ಭಿನ್ನವಾದ ದೂಷಣೆಯ, ಮಾಣಿಸು–ಉಂಟುಮಾಡಿ ಹೇಳದಿರು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ ಕೆಳಗೆ ಕಿಂದಣದಲ್ಲಿ (ಗ). ೨–೨ ಹಾಲ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - -

ತಾಳಮರದ ಕೆಳಗೊಂದು ಹಾಲಹರವಿ ಇದ್ದಡೆ–ಅಷ್ಟಮದಪೂರಿತವಾದ ಅಂಗವೆಂಬ ಅಧೋಮುಖವೃಕ್ಷದಡಿಯಲ್ಲಿ ಏಕವಹ ಶಿವಾಮೃತ ಪೂರಿತವಾದ ಜ್ಞಾನಘಟವಿದ್ದರೆ, ಅದ ಹಾಲಹರವಿಯೆನ್ನರು ಸುರೆಯ ಹರವಿಯೆಂಬರು–ಅದನ್ನು ಶಿವಾಮೃತಪೂರಿತವಾದ ಜ್ಞಾನ ಘಟವೆನ್ನರು, ಅಷ್ಟಮದಪೂರಿತವಾದ ದೇಹಘಟವೆಂಬರು. ಏನು ಕಾರಣ ಬಸವೇಶ್ವರಸ್ವಾಮಿಗಳು ಬಿಜ್ಜಳನಲ್ಲಿ ಪ್ರಧಾನಿಕೆಯ ಮಾಡುವರು? ಮಾಡಿದಲ್ಲಿ ಬಸವೇಶ್ವರನು ಸರಿ ಬಿಜ್ಜಳನು ಸರಿಯೆಂದು

ನುಡಿವರು. ಅವನೇ ಜಾತಿ ವರ್ಣಾಶ್ರಮ ಕುಲಗೋತ್ರನಾಮಂಗಳೊಡನೆ ಕೂಡಿದಾನೆ. ನಾನೇ ಶಿವಜಾತಿ ಶಿವವರ್ಣ ಶಿವಾಶ್ರಮ ಶಿವಕುಲ ಶಿವಗೋತ್ರ ಶಿವನಾಮಂಗಳೊಡನೆ ಕೂಡಿ ವರ್ತಿಸುತ್ತೈದೇನೆ. ಈ ಭಾವನಿಂದೆಯ ಮಾಣಿಸಾ–ಅವನು ಸರಿ, ನಾವು ಸರಿಯೆಂದು ಶರಣರು ನುಡಿದಾರು, ನಮ್ಮ ಲಿಂಗದಲ್ಲಿ ಅರುಹು ಹೊಳದೀತು. ಈ ಆತ್ಮದೂಷಣೆಯ ಬಿಡಿಸಾ.

III- - - - - - - - - - - - - - - - - - - - - - - - - - - - - - - - - - - - - - -

ಒಂದಾನೊಂದು ತಾಳೆಮರದ ಬುಡದಲ್ಲಿಯೊಂದು ಕ್ಷೀರದ ಕೊಡನಿರುತಿರ್ದೊಡೆ ಅದನ್ನು ಸುರಾಭಾಂಡವೆಂದು ಕುರುಹಿಡುವರಲ್ಲದೆ ಹಾಲಹರವಿಯೆನ್ನರೆಂಬ ಹಾಂಗೆ, ತನ್ನ ಅಂತರಂಗದಲ್ಲಿ ಸ್ವಾನುಭಾವಸದ್ವಾಸನೆಯನುಳ್ಳ ಪೂರ್ಣಜ್ಞಾನಿಯಾಗಿದ್ದರೂ ಬಹಿರಂಗದಲ್ಲಿ ಪೂರ್ವಾಚಾರದೊಡನೆ ಕೂಡಿ ವರ್ತಿಸಿದಲ್ಲಿ ಪ್ರಪಂಚುಜೀವಿಯೆಂಬರಲ್ಲದೆ ಸನ್ಮಾರ್ಗಾಚಾರಣೆಯುಳ್ಳ ಜ್ಞಾನಿಯೆನ್ನರು ಎಂಬುದೀಗ ತಾಳಮರದ ಕೆಳಗೆ ಒಂದು ಹಾಲಹರವಿಯಿದ್ದಡೆ ಅದ ಹಾಲಹರವಿಯೆನ್ನರು ಸುರೆಯ ಹರವಿಯೆಂಬರು ಎಂಬ ಶಬ್ದಕ್ಕರ್ಥ. ಈ ಭಾವನಿಂದೆಯ–ಈ ಸ್ವರೂಪಿನ ದೂಷಣೆಯನು, ಮಾಣಿಸಾ–ಭಿನ್ನಕ್ರೀ ಭಿನ್ನಜ್ಞಾನವ ಬಿಡಿಸಿ ಅಭಿನ್ನಕ್ರೀ ಅಭಿನ್ನಜ್ಞಾನವುಳ್ಳಾತನೆಂದು ಹೇಳಿಸಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೯೪

**ಸುಪಥಮಂತ್ರದುಪದೇಶವ ಕಲಿತು ಯುಕುತಿಗೆಟ್ಟು ನಡೆವಿರಯ್ಯಾ; 'ತತ್ವಮಸಿ'ಯೆಂಬುದನಜಿದು ಕತ್ತಲೆ [1]ಗೂ[1] ಡುವಿರಯ್ಯಾ. ವೇದವಿಪ್ರ [2]ರು[2] ವಿಚಾರಿಸಿ ನೋಡಲು ಉಪದೇಶಪರೀಕ್ಷೆ [3]ನಾಯಕ[3] ನರಕವೆಂದುದು ಕೂಡಲಸಂಗನ [4]ವಚನದ[4] ಸೂಚನೆ!**

I- - - - - - - - - - - - - - - - - - - - - - - - - - - - - - - - - - - - - - -

ಸುಪಥಮಂತ್ರದುಪದೇಶವ ಕಲಿತು–ನಂದಿಮುಖವಾಡ ವೃಷಭ [ನ]ಟಕ್ಕೆ ಭಸ್ಮರುದ್ರಾಕ್ಷಿಧಾರಣ ಗಾಯತ್ರಿಮಂತ್ರಯುಕ್ತವಾಗಿ ಶಿವಾಧಿಕ್ಯ ವಿಡಿದಾಚರಿಸಿ ಶಿವನ ಕರುಣವ ಹಡೆವಂಥಾದನು ಅಭ್ಯಸಿಸಿ, ಯುಕುತಿಗೆಟ್ಟು ನಡೆವಿರಯ್ಯಾ–ಶಿವನೆ ಪರವಾಗಿ ಆಚರಿಸುವಂಥದನು ಬಿಟ್ಟು ಒಣಗುವ ಮರ ಬತ್ತುವ ಜಲ ಸತ್ತು ಹುಟ್ಟುವ ನಾರಾಯಣನೇ ದೈವವೆಂದಾರಾಧಿಸುವಿರಯ್ಯಾ.

'ತತ್ವಮಸಿ' ಎಂಬುದನಜಿದು–'ತತ್' ಪದ 'ತ್ವಂ' ಪದ 'ಅಸಿ' ಪದಸ್ವರೂಪವನ್ನು ತಿಳಿದು, ಕತ್ತಲೆಗೊಡುವಿರಯ್ಯಾ–ಅಜ್ಞಾನ ಮರವಿಗೊಳಗಾಗುವಿರಯ್ಯಾ. ವೇದವಿಪ್ರರು–ನಾಲ್ಕು ವೇದವನ್ನು ಪಾರಂಗತವಾಗಿ ಬಲ್ಲಂಥ ಹಾರುವರು, ವಿಚಾರಿಸಿ ನೋಡಲು–ಪರಾಮರಿಸಿ ನೋಡಲು, ಉಪದೇಶ ಪರೀಕ್ಷೆ–ನಂದಿಮುಖವಾಡ ವೃಷಭನ ಟಕ್ಕೆ ಭಸ್ಮರುದ್ರಾಕ್ಷಿಧಾರಣ ಗಾಯತ್ರಿಮಂತ್ರಯುಕ್ತವಾಗಿ ಶಿವಾದಿಕ್ಯವಿಡಿದಾಚರಿಸಿ ಶಿವನ ಕರುಣವ ಹಡೆವಂಥದೆ ಬಹು ಚೆಂದವಾಗಿಪ್ಪುದು, ನಾಯಕ ನರಕವೆಂದುದು–ಅದನ್ನು ಬಿಟ್ಟು ಬತ್ತುವ ಜಲ ಒಣಗುವ ಮರ ಸತ್ತು ಹುಟ್ಟುವ ನಾರಾಯಣನೇ ದೈವವೆಂದಾರಾಧಿಸುತಿರ್ದ ಕಾರಣ, ನಾಯಕ ನರಕವೆಂದುದು ದೊರೆನಿರಯವೆ ಸಂಭವಿಸುತ್ತಿಹುದೆಂದು

ಹೇಳುತ್ತಿಹುದು, ಕೂಡಲಸಂಗನ ವಚನದ–ಪರಶಿವಲಿಂಗದ ವಾಕ್ಯನುಭಾವದ, ಸೂಚನೆ!–ಸಂಜ್ಞೆಯೆಂಬುದರ್ಥ.

● ಸುಪಥ–ಕಾರಣತನುವಿನ ಕಾರ್ಮಿಕಮಲಜೀವಭಾವದ ವಾಸನಾಧರ್ಮವನ್ನು ಏಳು ದೀಕ್ಷೆವೊಂದಾದ ವೇಧಾದೀಕ್ಷೆಯೆಂಬ ಅಗ್ನಿಯಿಂ ತ್ಯಜಿಸಿ ಅಲ್ಲಿ ಮಹಾಜ್ಞಾನಸ್ವರೂಪವಾದ ಭಾವಲಿಂಗಸಂಬಂಧವ ಮಾಡಿ, ಮಂತ್ರ–ಸೂಕ್ಷ್ಮತನುವಿನ ಮಯಾಮಲಮನೋಸಂಕಲ್ಪವಿಕಲ್ಪಂಗಳನ್ನು ಏಳು ದೀಕ್ಷೆವೊಂದಾದ ಮಂತ್ರದೀಕ್ಷೆಯೆಂಬ ಅಗ್ನಿಯಿಂ ತ್ಯಜಿಸಿ ಅಲ್ಲಿ ಸುಜ್ಞಾನಸ್ವರೂಪವಾದ ಪ್ರಾಣಲಿಂಗಸಂಬಂಧವ ಮಾಡಿ, ಉಪದೇಶವ–ಸ್ಥೂಲ ತನುವಿನ ಆಣವಮಲದೇಹಭಾವದ ಜಾಡ್ಯಗುಣವನ್ನು ಏಳು ದೀಕ್ಷೆವೊಂದಾದ ಕ್ರಿಯಾದೀಕ್ಷೆಯೆಂಬ ಅಗ್ನಿಯಿಂ ತ್ಯಜಿಸಿ ಅಲ್ಲಿ ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗಸಂಬಂಧವ ಮಾಡಿ, ಕಲಿತು–ತ್ರಿವಿಧದೀಕ್ಷೆಯಿಂದ ತ್ರಿವಿಧಂಗದಲ್ಲಿ ತ್ರಿವಿಧಲಿಂಗಸಂಬಂಧವ ಮಾಡಿಕೊಂಡು ಕ್ರಿಯಾಜ್ಞಾನಭಾವಾಚಾರವೆಂಬ ತ್ರಿವಿಧಭಕ್ತಿವಿಡಿದಾಚರಿಸುವಂತದನು ಅಭ್ಯಸಿಸಿ, ಯುಕುತಿಗೆಟ್ಟು ನಡೆವಿರಯ್ಯಾ–ತ್ರಿವಿಧಲಿಂಗವೆ ಪರವಾಗಿ ಆಚರಿಸುವಂಥದನು ಬಿಟ್ಟು ದೇಹ ಕರಣೇಂದ್ರಿಯ ವಿಷಯಂಗಳ ವರ್ತನೆಯೊಡನೆ ಕೂಡಿ ಅಂಗ ಬೇರೆ ಲಿಂಗ ಬೇರೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾಚರಿಸಿ ಮರವಿಗೊಳಗಾಗುವಿರಯ್ಯಾ.

'ತತ್ವಮಸಿ' ಯೆಂಬುದನಜಿದು 'ತ್ವಂ' ಪದಸ್ವರೂಪವಾದಂಗದಲ್ಲಿ 'ತತ್' ಪದಸ್ವರೂಪವಾದ ಲಿಂಗಸಂಬಂಧವ ಮಾಡಿಕೊಂಡು 'ಅಸಿ' ಪದ ಸ್ವರೂಪವಾದ ಭಕ್ತಿವಿಡಿದಾಚರಿಸುವಂಥದನ್ನು ತಿಳಿದು, ಕತ್ತಲೆಗೊಡುವಿರಯ್ಯಾ–ಅಜ್ಞಾನಕ್ಕೊಳಗಾಗಿ ದೇಹಕರಣೇಂದ್ರಿಯವಿಷಯಂಗಳ ವರ್ತನೆಯೊಡನೆ ಕೂಡಿ ಚರಿಸುವಿರಯ್ಯಾ. ವೇದವಿಪ್ರರು–ಶಿವಶಾಸ್ತ್ರ ಶಿವಾಗಮ ಶಿವಪುರಾಣ ಆದ್ಯರವಚನ ಮೊದಲಾದುವನ್ನು ಪಾರಂಗತವಾಗಿ ಬಲ್ಲಂಥ ಗುರುಮೂರ್ತಿಗಳು, ವಿಚಾರಿಸಿ ನೋಡಲು–ಜ್ಞಾನದಿಂದರಿದು ಪರಾಮರಿಸಿ ನೋಡಲು, ಉಪದೇಶಪರೀಕ್ಷೆ–ತ್ರಿವಿಧದೀಕ್ಷೆಯಿಂದ ತ್ರಿವಿಧಂಗದಲ್ಲಿ ತ್ರಿವಿಧಲಿಂಗವ ಸಂಬಂಧವ ಮಾಡಿಕೊಂಡು ಕ್ರಿಯಾಜ್ಞಾನಭಾವಾಚಾರವೆಂಬ ತ್ರಿವಿಧಭಕ್ತಿವಿಡಿದಾಚರಿಸುವಂಥ ಪರೀಕ್ಷೆ ಬಹು ಚೆಂದವಾಗಿರ್ಪುದು, ನಾಯಕ ನರಕವೆಂದುದು–ತ್ರಿವಿದಲಿಂಗವೆ ಪರವಾಗಿ ಆಚರಿಸುವಂಥಾದನೆ ಬಿಟ್ಟು ದೇಹಕರಣೇಂದ್ರಿಯ ವಿಷಯಂಗಳ ವರ್ತನೆಯೊಡನೆ ಕೂಡಿ ಅಂಗ ಬೇರೆ ಲಿಂಗ ಬೇರೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾಚರಿಸುತಿರ್ದ ಕಾರಣ, ನಾಯಕನರಕ–ದೊರೆನಿರಯವೆ ಸಂಭವಿಸುತ್ತಿಹುದೆಂದು ಹೇಳುತ್ತಿಹುದು ಕೂಡಲಸಂಗನ ವಚನದ–ಪರಶಿವಲಿಂಗದ ವಾಕ್ಯಾನುಭಾವದ, ಸೂಚನೆ!–ಸಂಜ್ಞೆಯು.

..........................

೧–೧ ನಾ (ಕ,ಗ).

III- - - - - - - - - - - - - - - - - - - - - - - - - - - - - - - - - - - - -

1–1 ದೊ (ಟ,ಡ). 2–2 x (ಟ,ಡ). 3–3 (ಟ,ಡ). 4–4 x (ಟ,ಡ).

..........................

ಸುಪಥಮಂತ್ರದುಪದೇಶವ ಕಲಿತು–ಸನ್ಮಾರ್ಗಆಚಾರ ಮಂತ್ರೋಪದೇಶವನು ಶ್ರೀಗುರುಮುಖದಿಂದಭ್ಯಸಿಸಿ, ಯುಕ್ತಿಗೆಟ್ಟು ನಡೆವಿರಯ್ಯಾ–ಜ್ಞಾನಶೂನ್ಯವಾಗಿ ವರ್ತಿಸುವಿರಯ್ಯಾ, 'ತತ್ತ್ವಮಸಿ' ಎಂಬುದನಜಿದು–'ತತ್' ಪದಸ್ವರೂಪವಾದ ಲಿಂಗದಲ್ಲಿ 'ತ್ವಂ' ಪದಸ್ವರೂಪವಾದಾತ್ಮನು 'ಅಸಿ' ಪದ ಜ್ಞಾನದಿಂದೆ ಸಮರವೆಂಬುದನು ಗುರುಮುಖದಿಂದೆ ತಿಳಿದು, ಕತ್ತಲೆಗೊಡುವಿರಯ್ಯಾ–ಮತ್ತೂ ಅಜ್ಞಾನದಿಂದೆ ಪೂರ್ವಾಚಾರವಿಡಿದು ಪ್ರವರ್ತಿಸುವಿರಯ್ಯಾ. ವೇದ–ನಿಗಮದಲ್ಲಿ, ವಿಪ್ರ–ಹಾರುವನ, ಉಪದೇಶಶೈವೋಪದೇಶವನು, ವಿಚಾರಿಸಿ ನೋಡಲು–ವೀರಶೈವರುಗಳ್ಗೆ ಯೋಗ್ಯವೆಂಬುದನ್ನು ಪರೀಕ್ಷೆಯ ಮಾಡಿ ನೋಡಲು, ಪರೀಕ್ಷೆ–ಆ ಶೈವೋಪದೇಶವು, ವೀರಶೈವರುಗಳಿಗೆ ಯೋಗ್ಯವಲ್ಲವು, ಕೂಡಲಸಂಗನ–ಪರಶಿವಲಿಂಗದ, ವಚನ ಸೂಚನೆ!–ವಾಕ್ಯದ ಸಂಜ್ಞೆಯು, ನರಕವೆಂದುದು – ನಿರಯವೆಂದು ಹೇಳಿದುದು.

V- - - - - - - - - - - - - - - - - - - - - - - - - - - - - - - - - - - - - - - -

ಸನ್ಮಾರ್ಗಆಚಾರ ಮಂತ್ರೋಪದೇಶವನಭ್ಯಸಿಸಿ ಅಹಂ ಬ್ರಹ್ಮವೆಂಬದ್ವೈತವಚನಾಚರಿಸಿಲು ಉಪದೇಶಪರೀಕ್ಷೆ ನರಕವೆಂದುದು.

---

೯೫

**ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟಡೆ ಕೊಳೆವುದಲ್ಲದೆ ಬಲುಹಾಗಬಲ್ಲುದೆ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟಡೆ ಭಕ್ತಿಯೆಂತಹು[1]ದೊ?[1] [2]ಮುನ್ನಿನಂತಲ್ಲದೆ[2] ಕೂಡಲಸಂಗಮದೇವಾ, ಮನಹೀನನ ಮೀಸಲ ಕಾಯ್ದಿರಿಸಿದಂತೆ!**

I- - - - - - - - - - - - - - - - - - - - - - - - - - - - - - - - - - - - - - - -

ಕುಂಬಳದ ಕಾಯಿಗೆ–ಲೋಕದಲ್ಲಿ ಹಲಾಯುದನೇನಾದರೂ ಹಿತ್ತಲದೊಳಗೆ ಕುಂಬಳವ ಬಿತ್ತಿದಲ್ಲಿ ಹರವಿಗಡತರ ಮೂಡೆಗಡತರ ಗುಡಾಣಗಡತರ ಕಾಯಿ ಬಿಟ್ಟಲ್ಲಿ ಇವು ನಾಡಿಗ ದೇಸಾಯಿ ಸೆಟ್ಟಿ ಚೌಧರಿ ಮೊದಲಾದವರಿಗೆ ಕೈಗಾಣಿಕೆಯನ್ನು ಕೊಡಬೇಕೆಂದು, ಕಬ್ಬುನದ ಕಟ್ಟು ಕೊಟ್ಟಡೆ–ಕಾರ್ಬೊನ್ನದಿಂದ ಬಂಧಿಸಿದರೆ, ಕೊಳೆವುದಲ್ಲದೆ–ಜೀರ್ಣಿಸುವವುದಲ್ಲದೆ, ಬಲುಹಾಗಬಲ್ಲುದೆ?–ಭದ್ರವಾಗಿದ್ದೀತೆ? ಇರಲರಿಯದೆಂಬ ದೃಷ್ಟೋಪಮಾನದ ಹಾಂಗೆ.

● ಕುಂಬಳದ ಕಾಯಿಗೆ–ಸಪ್ತಧಾತುಸಮ್ಮಿಶ್ರವಾದ ದೇಹಸಂಬಂಧಿಯಾದ ಜೀವನಿಗೆ, ಕಬ್ಬುನದ ಕಟ್ಟು ಕೊಟ್ಟಡೆ–ಅವಲೋಹಸ್ವರೂಪವಾದಷ್ಟ ಭೋಗ ಮಲತ್ರಯಂಗಳನಿತ್ತರೆ, ಕೊಳೆವುದಲ್ಲದೆ–ಅಹಂಕಾರ ಹಿರಿಯತನ ಆತ್ಮ ತೇಜ [?][ಸ್ಸುಗಳು][?] ಹೆಚ್ಚಿ ಭವಕ್ಕೆ ಹೋಗುವಂಥದೆ ಪ್ರಾಪ್ತಿಯಾಗಿಪ್ಪುದಲ್ಲದೆ, ಬಲುಹಾಗಬಲ್ಲುದೆ?–ಭಕ್ತಿಜ್ಞಾನವೈರಾಗ್ಯದಿಂದೆ ಪುಷ್ಟಿಯಾದೀತೆ? ಆಗಲರಿಯದು.

ಅಳಿಮನದವಂಗೆ–ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಸೆಯನ್ನು ಮುಂದುಗೊಂಡಾಚರಿಸಲ್ಪಟ್ಟಂಥ ಜೀವನಿಗೆ, ಶಿವದೀಕ್ಷೆಯ ಕೊಟ್ಟಡೆ–ವೇಧಾಮಂತ್ರಕ್ರಿಯಂಗಳೆಂಬ

ದೀಕ್ಷಾತ್ರಯಂಗಳಿಂದ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕರುಣಿಸಿಕೊಟ್ಟರೆ, ಭಕ್ತಿಯೆಂತಹುದೊ?–ಶಿವಾದ್ವೈತಭಕ್ತಿ ಹೇಂಗೆ ಅಳವಟ್ಟೀತೊ? ಅಳವಡಿದು, ಮುನ್ನಿನಂತಲ್ಲದೆ! – ಮೊದಲಿನ ಹಾಂಗೆ ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣನ ಅಲ್ಪಾಸೆಯನ್ನು ಮುಂದುಗೊಂಡಾಚರಿಸಿ ಭವಕ್ಕೆ ಹೋಗುವಂಥದೆ ಪ್ರಾಪ್ತಿಯಾಗಿಪ್ಪುದಲ್ಲದೆ, ಕೂಡಲಸಂಗಮದೇವಾ– ಎಲೆ ಪರಶಿವಲಿಂಗವೆ, ಮನಹೀನನ ಮೀಸಲ ಕಾಯ್ದಿರಿಸಿದಂತೆ!–ವೀರಣ್ಣ ಬಸವಣ್ಣಂಗೆಂದು ಗುರುಲಿಂಗಜಂಗಮಕ್ಕೆಂದು ಹಪ್ಪಳ ಸಂಡಿಗಿ ಗೌಲಿ ಬಟವಿ ಮೊದಲಾದಂಥವು ಮಾಡಿ ಮನೆಯೊಳಗೆ ಮೂಲಿಗಿಟ್ಟರೆ ಮುಗ್ಗುನಟ್ಟು ಕೆಟ್ಟುಹೋದಾವಲಾ ಎಂದು ಹಿತ್ತಲೊಳಗೆ ಮಡಿಪವಡವನ್ನು ಹಾಸಿ ಮೇಲೆ ಒಣ ಹರವಿ, ಶುನಿ ಮಾರ್ಜಾಲ ಮೂಷಕ ಮೊದಲಾದುವು ಮುಟ್ಟದ ಹಾಂಗೆ ಒಬ್ಬಾನೊಬ್ಬ ಅಲ್ಪಮನಸ್ಸನುಳ್ಳಾತ್ಮನನು ಕಾಯ್ದುಕೊಂಡಿರುಯೆಂದು ಇರಿಸಿದಲ್ಲಿ ಅವನು ಯಾರಿಗೆ ಕಾಣಗೊಡಬಾರದ ಹಾಂಗೆ ಅದರಾಗಿಷ್ಟು ತೆಗೆದುಕೊಂಡು ಬಾಯೊಳಗೆ ಹಾಕಿಕೊಳಲು ಅವು ದೇವತಾಕಾರ್ಯಕ್ಕೆ ಯೋಗ್ಯವಾಗದೆ ಹೇಂಗೆ ಉಚ್ಚಿಷ್ಟವಾಗಿ ಕೆಟ್ಟುಹೋಗುತ್ತಿಹವೋ ಹಾಂಗೆ, ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಸೆಯನ್ನು ಮುಂದುಗೊಂಡಾಚರಿಸಲ್ಪಟ್ಟಂಥ ಜೀವನಿಗೆ ಅಂಗಕ್ಕೆ ಲಿಮಗೋಪದೇಶ ಮನಕ್ಕೆ ಮಂತ್ರೋಪದೇಶವ ಕರುಣಿಸಿಕೊಟ್ಟರೆ ಅವನು ಆತ್ಮಾರ್ಪಣವನ್ನು ಲಿಂಗಕ್ಕೆ ಸಮರ್ಪಣೆಯ ಮಾಡಿ ಆ ಲಿಂಗಪ್ರಸಾದವನ್ನು ಪಡೆದನುಭವಿಸಲೊಲ್ಲದೆ ಸಕಲಪದಾರ್ಥವನು ಲಿಂಗಾರ್ಪಣವಿಹೀನನಾಗಿ ಆತ್ಮಾರ್ಪಣವಾಗಿ ಅನುಭವಿಸಿದಲ್ಲಿ ಅವನಂಗತತ್ತ್ವಪದಾರ್ಥಂಗಳೆಲ್ಲವೂ ಲಿಂಗಕ್ಕೆ ಸಮರ್ಪಣೆಯಾಗದೆ ಮಾಯಾ ಉಚ್ಚಿಷ್ಟವಾಗಿ ಕೆಟ್ಟು ಹೋಗುತ್ತಿಹವು.

..........................

೧–೧ ಸ್ಸನ್ನು (ಕ,ಗ).

II- - - - - - - - - - - - - - - - - - - - - - - - - - - - - - - - - - - - - - - - - -

1–1 ದು (ಚ,ಜ). 2–2 ಮುನ್ನಿನಂತೆ (ಚ,ಜ).

..........................

ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟಡೆ ಕೊಳೆವುದಲ್ಲದೆ ಬಲುಹಾಗಬಲ್ಲುದೆ?–ಆಸೆ ರೋಷ ಹರುಷಪೂರಿತವಾದ ವೇಷಡಂಬಕಜೀವನಿಗೆ ಸತ್ಕ್ರಿಯಾಚಾರವೆಂಬ ಬಂಧನವನ್ನು ಬಂಧಿಸಿದರೆ ಆಸೆ ರೋಷ ಹರುಷದಿಂದ ಜೀರ್ಣಿಸೂದಲ್ಲದೆ ಆಸೆ ರೋಷ ಹರುಷಪೂರಿತ ವೇಷಡಂಬಕಜೀವನ ಗುಣವು ನಷ್ಟವಾಗಿ ಆಚಾರಾಂಗವೆಂಬ ಬಲಿಷ್ಠತ್ವವಾಗದೆಂಬುದರ್ಥ.

ಅಳಿಮನದವಂಗೆ ದೀಕ್ಷೆಯ ಕೊಟ್ಟಡೆ ಭಕ್ತಿಯೆಂತಹುದು?–ಛಿದ್ರಮನಸ್ಸುಳ್ಳ ಜೀವನಿಗೆ ಲಿಂಗೋಪದೇಶವನಿತ್ತರೆ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹ ಹೇಂಗೆ ದೊರಕೊಂಬುದು? ದೊರಕೊಳ್ಳದೆಂಬುದರ್ಥ. ಮುನ್ನಿನಂತೆ ಕೂಡಲಸಂಗಯ್ಯಾ–ಒಂದು ಕೋಣನ ಮೂರು ಹಣವ ಕೊಟ್ಟು ಕೊಂಡುತಂದು ಅದಕ್ಕೆ ಹಿಂಡಿ ಕೊಟ್ಟು ಹತ್ತಿಕಾಳನು ಹಾಕಿ ಮತ್ತಮಾಡಿ ಮಾರೂದಕ್ಕೆ ಹೋದರೆ ಮತ್ತೂಮೂರು ಹಣವಿಗೆ ಬೇಡಿದರು; ಹಾಂಗೆ ಮೊದಲೂ ಜೀವನು ಮತ್ತೂ ಜೀವನು ಎಲೆ ಲಿಂಗವೆ. ಮನ ಹೀನನ ಮಿಸಲ ಕಾಯ್ದಿರಿಸಿದಂತೆ–ಕೆಟ್ಟ ಮನಸ್ಸುಳ್ಳವನ ಒಂದು ಸ್ಥಾವರ ಲಿಂಗಕ್ಕೆ ಮಾಡಿದ ಆರೋಪಿತ ದ್ರವ್ಯವನ್ನು ಕಾಯ್ದಿರಿಸಿದರೆ ಕದ್ದು ತಿಂದಲ್ಲದೆ ಸುಮ್ಮನಿದ್ದಾನೆ?

ಇರನು. ಹಾಂಗೆ ಆತ್ಮೋಪಹರವನು ಜ್ಞಾನಾಗ್ನಿಯಿಂದ ಸಮರಸಪಾಕವ ಮಾಡಿ ಲಿಂಗಕ್ಕೆ ನಿವೇದಿಸಿ, ಆ ಲಿಂಗಪ್ರಸಾದವನು ಸ್ವೀಕರಿಸೆಂದು ಕಾಪಿಟ್ಟರೆ ಇದ್ದಾನೆ? ಇರನೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - - -

1–1 ದು (ಟ,ಡ). 2–2 ಮುನ್ನಿನಂತೆ (ಟ,ಡ).

..........................

ಪ್ರಪಂಚಿನಿಂದ ಅದೃಢವಾದಾತ್ಮನಿಗೆ ಗುರೂಪದೇಶದಿಂದಂಗದ ಮೇಲೆ ಲಿಂಗಸಂಬಂಧವ ಮಾಡಲು ವೇಷಾಡಂಬರವಳವಡುವುದಲ್ಲದೆ ಲಿಂಗಭಕ್ತಿಯಲ್ಲಿ ದೃಢವು ಕರಿಗೊಳ್ಳಲರಿಯದೆಂಬುದೀಗ ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟಡೆ ಕೊಳೆವುದಲ್ಲದೆ ಬಲುಹಾಗಬಲ್ಲುದೆ? ಎಂಬ ಶಬ್ದಕ್ಕರ್ಥ.

ಅಳಿಮನದವಂಗೆ–ಬಡಮನದವಂಗೆ, ದೀಕ್ಷೆಯ ಕೊಟ್ಟಡೆ–ಶಿವೋಪದೇಶವನಿತ್ತರೆ, ಭಕ್ತಿ–ಶಿವಶ್ರದ್ಧೆಯು ಎಂತಹುದು?– ಹೆಂಗೆ ದೊರಕೊಂಬುದು, ಮುನ್ನಿನಂತೆ–[೨]ಮೊದಲ ಹಾಗೆಂಬುದರ್ಥ.[೨] ಕೂಡಲಸಂಗಮದೇವಯ್ಯ–ಎಲೆ ಪರಶಿವಲಿಂಗವೆ, ಮನಹೀನನ ಮೀಸಲ ಕಾಯ್ದಿರಿಸಿದಂತೆ–ಕೊಳಕಮನಸಿನವನನ ದೇವರಿಗೆಂದಾರೋಪಿಸಿದ ಮೀಸಲ ಸದ್ವಸ್ತುವಿಗೆ ಕಾವಲ ಮಡಗಿದರೆ[೩] ಮೀಸಲಳಿದು ಕೆಟ್ಟುಹೋಗುವ ಹಾಂಗೆ ಸಂಕಲ್ಪ ವಿಕಲ್ಪದೊಡನೆ ಕೂಡಿದ ಪ್ರಕೃತಿಯಾತ್ಮನಿಗೆ ಶಿವೋಪದೇಶವ ಮಾಡಿದಲ್ಲಿ ಲಿಂಗನಿಷ್ಠವಿಶ್ವಾಸ ಕರಿಗೊಳ್ಳದೆ ಪ್ರಪಂಚನಿಂದೆ ನಷ್ಟವಾಗುವುದೆಂಬುದೀಗ ಮನಹೀನನ ಮೀಸಲ ಕಾಯ್ದಿರಿಸಿದಂತೆ ಎಂಬ ಶಬ್ದಕ್ಕರ್ಥ.

..........................

೨–೨ ಮೊದಲಿನಂತೆಂಬುದರ್ಥ (ಡ). ೩+ ಆ (ಡ).

V- - - - - - - - - - - - - - - - - - - - - - - - - - - - - - - - - - - - - - - - - - - - - - -

ಮನಹೀನನ ಮೀಸಲ ಕಾಯ್ದಿರಿಸಿದಂತೆ–ಸಂಕಲ್ಪವಿಕಲ್ಪದೊಡನೆ ಕೂಡಿದ ವೇಷಾಡಂಬರವಳವಡುವುದಲ್ಲದೆ ಲಿಂಗನಿಷ್ಠಾವಿಶ್ವಾಸ ಕರಿಗೊಳ್ಳದೆಂಬುದರ್ಥ.

---

೯೬

**ಸಗಣಿಯ ಬೆನಕಂಗೆ [1]ಸಂಪಗೆಯ ಅರಳಿನಲ್ಲಿ[1] [2]ಪೂಜಿಸಿದಡೆ ರಂಜನೆಯಲ್ಲದೆ[2] ಅದರ ಗಂಜಳ ಬಿಡದಣ್ಣ! ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದಡೆ ನಿಚ್ಚ [3]ನಿಚ್ಚ[3] [4]ಕ್ಕೆ[4] ಕೆಸಱಹುದಲ್ಲದೆ ಅದರಚ್ಚುಗ ಬಿಡದಣ್ಣ! ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟಡೆ ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ?.**

V- - - - - - - - - - - - - - - - - - - - - - - - - - - - - - - - - - - - - - - - - - - - - - -

ಸಗಣಿಯ ಬೆನಕಂಗೆ–ಗೋಮಯದಿಂದ ಮಾಡಿದಂಥ ವಿನಾಯಕನಿಗೆ, ಸಂಪಗೆಯ ಅರಳಿನಲ್ಲಿ–ನಾಗಸಂಪಿಗೆ ಕೋಲಸಂಪಿಗೆ ದುಂಡಸಂಪಿಗೆ ಕೆಂಡಸಂಪಿಗೆ ಮೊದಲಾದ ಸಂಪಿಗೆ ಪುಷ್ಪಗಳಿಂದ ಪೂಜಿಸಿದಡೆ, ರಂಜನೆಯಲ್ಲದೆ–ಅಲಂಕಾರವಲ್ಲದೆ, ಅದಱ ಗಂಜಳ ಬಿಡದಣ್ಣ–

ಸಮೀಪಕ್ಕೆ ಹೋಗಿ ನೋಡಿದರೆ ಚಿಂಗ ಚಿಂಗ ನಾರುವಂಥದು ತಪ್ಪದು, ವಾರಿಯಾಗದು. ಅಣ್ಣ–ಎಲೆ ಹಿರಿಯನೇ ಎಂಬ ದೃಷ್ಟೋಪಮಾನದ ಹಾಂಗೆ.

● ಸಗಣಿಯ ಬೆನಕಂಗೆ–ಮಾಯಾಂಶಿಕನಾದ ಜೀವಂಗೆ, ಸಂಪಗೆಯ ಅರಳಿನಲ್ಲಿ ಪೂಜಿಸಿದಡೆ–ಸ್ವಾನುಭಾವ ಸದ್ವಾಸನೆಯನ್ನು ಬೋಧಿಸಿದರೆ, ರಂಜನೆಯಲ್ಲದೆ–ಬೋಧಿಸಿದಷ್ಟೇ ಅಲ್ಲದೆ, ಅದರ ಗಂಜಳ ಬಿಡದಣ್ಣ–ಮಾಯಾಂಶಿಕನಾದ ಜೀವನ ವರ್ತನೆಯು ನಷ್ಟವಾಗದು, ಅಣ್ಣ–ಎಲೆ ಹಿರಿಯನೆ.

ಮಣ್ಣಪುತ್ಥಳಿಯ–ಮೃತ್ತಿಕೆಯ ಬೊಂಬೆಯನ್ನು, ಮಾಣದೆ–ಬಿಡದೆ, ಜಲದಲ್ಲಿ–ಉದಕದಲ್ಲಿ, ತೊಳೆದಡೆ–ಪ್ರಕ್ಷಾಲಿಸಿದರೆ, ನಿಚ್ಚನಿಚ್ಚಕ್ಕೆ–ದಿನದಿನಂಪ್ರತಿಯಲ್ಲಿ, ಕೆಸಱಹುದಲ್ಲದೆ–ಮತ್ತೆ ಮತ್ತೆ ಪಂಕವರ್ಧನವಹುದಲ್ಲದೆ, ಅದರಚ್ಚುಗ ಬಿಡದಣ್ಣ–ಮಣ್ಣೆಂಬೋ ಎರಕವು ವಾರಿಯಾಗದು, ಅಣ್ಣ–ಎಲೆ ಹಿರಿಯನೇ ಎಂಬುದರ್ಥ.

ಮಣ್ಣಪುತ್ಥಳಿಯ–ಪೃಥ್ವಿತತ್ತ್ವಸಂಬಂಧವಾದ ದೇಹವನ್ನು, ಮಾಣದೆ–ಬಿಡದೆ, ಜಲದಲ್ಲಿ–ಜ್ಞಾನಾನಂದವೆಂಬ ಉದಕದಲ್ಲಿ, ತೊಳೆದಡೆ–ಪ್ರಕ್ಷಾಲಿಸಿದರೆ, ನಿಚ್ಚನಿಚ್ಚಕ್ಕೆ–ದಿನದಿನಂಪ್ರತಿಯಲ್ಲಿ, ಕೆಸಱಹುದಲ್ಲದೆ–ಮತ್ತೆ ಮತ್ತೆ ಮಲಪಂಕವರ್ಧನವಾಗುವುದಲ್ಲದೆ, ಅದರಚ್ಚುಗ ಬಿಡದಣ್ಣ–ಪೃಥ್ವಿ ತತ್ತ್ವಸ್ವರೂಪವಾದ ದೇಹದ ವರ್ತನೆ ನಷ್ಟವಾಗದು, ಅಣ್ಣ–ಎಲೆ ಹಿರಿಯನೆ.

ಲೋಕದ ಮಾನವಂಗೆ–ಈ ಲೋಕದಲ್ಲಿ ಹೊನ್ನೇಪ್ರಾಣ, ಹೆಣ್ಣೇಪ್ರಾಣ ಮಣ್ಣೇಪ್ರಾಣವಾಗಿರುವಂಥ ಜೀವನಿಗೆ, ಶಿವದೀಕ್ಷೆಯ ಕೊಟ್ಟಡೆ–ವೇಧಾ ಮಂತ್ರಕ್ರಿಯೆಗಳೆಂಬ ದೀಕ್ಷಾತ್ರಯಂಗಳಿಂದ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕರುಣಿಸಿ, ಕೆಟ್ಟವ–ಶಿವತತ್ತ್ವಗೆಟ್ಟು ಜೀವನಾದವ, ಏಕೆ–ಏನು ಕಾರಣಕ್ಕೆ, ಸದ್ಭಕ್ತನಹನು–ನಿರ್ವಂಚಕಸದ್ಭಕ್ತನಹನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - -

1–1 ಸಂಪಗೆಯರಳಲ್ಲಿ (ಚ,ಜ). 3+ಕ್ಕೆ (ಚ,ಜ).

..........................

ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದಡೆ ರಂಜನೆಯಲ್ಲದೆ ಅದಱ ಗಂಜಳ ಬಿಡದಣ್ಣ–ಮಲತ್ರಯಯುಕ್ತವಾದ ಜೀವನೆಂಬ ಪಿಳ್ಳಾರಿಗೆ ಸ್ವನುಭಾವಸದವಾಸನಾ ಕುಸುಮದಿಂದರ್ಚಿಸಿದರೆ ಇವ ಯಾರ ಶಿಷ್ಯ? ಯಾರ ತಾವ ಪಾಠವ ಮಾಡಿದ? ಯಾರ ತಾವ ಶಾಸ್ತ್ರಗಳ ಕೇಳಿದ? ಇಂಥವರ ಶಿಷ್ಯ, ಇಂಥವರ ತಾವ ಪಾಠವ ಮಾಡಿದ, ಇಂಥವರ ತಾವ ಶಾಸ್ತ್ರಗಳ ಕೇಳಿದೆನೆಂಬ ಲೋಕರಚನೆಯಾದುದಲ್ಲದೆ ಆ ಮಲತ್ರಯಂಗಳ ದುರ್ವಾಸನೆಯು ಮಾಣದಲೆ ಹಿರಿಯರುಗಳಿರಾ. ಮಣ್ಣಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದಡೆ ನಿಚ್ಚಕ್ಕೆ ನಿಚ್ಚಕ್ಕೆ ಕೆಸಱಹುದಲ್ಲದೆ ಅದರಚ್ಚುಗ ಬಿಡದಣ್ಣ! –ಪೃಥ್ವಿ ತ್ತ್ವಾಂಶೀಭೂತವಾದ ದೇಹಭಾವವನುಳ್ಳ ಜೀವನೆಂಬ ಹಾಹೆಯನು ಬಿಡದೆ ಶಿವಾನುಭಾವಜಲದಲ್ಲಿ ತೊಳೆದು ಕಳೆದು ಪ್ರಕ್ಷಾಲಿಸಿದರೆ ದಿನದಿನಕ್ಕೆ ಸಂಸಾರವಿಷಯಪಂಕ ಉದಿಸುವುದಲ್ಲದೆ ಆತ್ಮಮುದ್ರೆಯ ಗಮನವು ಮಾಣದಲೆ ಹಿರಿಯರುಗಳಿರಾ! ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - - - -

1–1 ಸಂಪಗೆಯರಳಿನಲ್ಲಿ (ಟ,ಡ). 2–2 ರಂಜನೆಯಹುದಲ್ಲದೆ (ಟ,ಡ). 4–4 x (ಟ,ಡ).

.........................

ಸಂಚಿತಕರ್ಮದ ವಾಸನೆಯುಳ್ಳಾತ್ಮನು ಬಹಿರಂಗದಲ್ಲಿ ಶಿವಲಾಂಛನವನಳವಡಿಸಿಕೊಂಡಲ್ಲಿ ಅಲಂಕಾರವಾಗಿ ಕಾಣುವುದಲ್ಲದೆ ಮಾಯಾ ದುರ್ವಾಸನೆ ನಷ್ಟವಾಗಲರಿಯದೆಂಬುದೀಗ ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದಡೆ ರಂಜನೆಯಹುದಲ್ಲದೆ ಅದರ ಗಂಜಳ ಬಿಡದಣ್ಣ ಎಂಬ ಶಬ್ದಕ್ಕರ್ಥ. ಪ್ರಾರಬ್ಧಕರ್ಮದ ವಾಸನೆಯುಳ್ಳಾತ್ಮನಿಗೆ ಶಿವೋಪದೇಶದಿಂದ ಮನಸನು ನಿರ್ಮಲವ ಮಾಡಿಹೆನೆಂದರೆ ನಿರ್ಮಲವಾಗಲರಿಯದೆಂಬುದೀಗ ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚ ನಿಚ್ಚ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣ ಎಂಬ ಶಬ್ದಕ್ಕರ್ಥ. ಲೋಕದ–ಜಗತ್ತಿನ, ಮಾನವಂಗೆ–ಮನುಷ್ಯನಿಗೆ, ಶಿವದೀಕ್ಷೆಯ ಕೊಟ್ಟಡೆ–ಶಿವೋಪದೇಶವನಿತ್ತರೆ, ಕೆಟ್ಟವಂ–ಏಳ್ ಕೇಡ ಕೆಟ್ಟವನು, ಏಕೆ ಸದ್ಭಕ್ತನಹನು–ಏನು ಕಾರಣದಿಂದೆ ಶಿವಭಕ್ತನಾದನು, ಕೂಡಲಸಂಗಮದೇವ--ಎಲೆ ಪರಶಿವಲಿಂಗವೆ.

---

೯೭

**ಕಬ್ಬುನದ ಕೋಡಗವ ಪರುಷ ಮುಟ್ಟಲು, ಹೊನ್ನಾದಡೇನು ಮತ್ತೇನಾದಡೇನು ತನ್ನ ಮುನ್ನಿನ ರೂಹು ಬಿಡದನ್ನಕ್ಕ? ಕೂಡಲಸಂಗಮದೇವಾ, ನಿಮ್ಮ ನಂಬಿಯೂ ನಂಬದ ಡಂಬಕ[1]ರಿಗಯ್ಯಾ![1]**

I- - - - - - - - - - - - - - - - - - - - - - - - - - - - - - - - - - - - - - - - - - - - - - -

ಕಬ್ಬುನದ ಕೋಡಗವ–ಕಾರ್ಬೋನ್ನದಿಂದ ಮಾಡಿದಂಥ ಕಪಿಯನ್ನು, ಪರುಷ ಮುಟ್ಟಲು–ಪರುಷದ ಖಣಿ ಸೋಂಕಲು, ಹೊನ್ನಾದಡೇನು–ಸುವರ್ಣವಾದರೇನು, ಮತ್ತೇನಾದಡೇನು–ಮತ್ತೆ ಕಾರ್ಬೋನ್ನಾದರೇನು, ತನ್ನ ಮುನ್ನಿನ ರೂಹು ಬಿಡದನ್ನಕ್ಕ?–ತನ್ನ ಮೊದಲಿನ ಕಪಿರೂಪವಳಿದು ಹೋಗಬೇಕು, ಹೋಗದಿರುವ ಪರಿಯಂತರವು ಎಂಬ ದೃಷ್ಟೋಪಮಾನದ ಹಾಂಗೆ.

● ಕಬ್ಬುನದ ಕೋಡಗವ–ಅವಲೋಹಸ್ವರೂಪವಾದ ಜೀವನಲ್ಲಿ, ಪರುಷ ಮುಟ್ಟಲು–ಪರಮಪಾವನ ಪವಿತ್ರಸ್ವರೂಪವಾದ ಮಹಾಲಿಂಗವೇ ಗುರೂಪದೇಶದಿಂದ ಇಷ್ಟಲಿಂಗವಾಗಿ ಬಂದು ಅಂಗದಲ್ಲಿ ಸಂಬಂಧವಾಗಲು, ಹೊನ್ನಾದಡೇನು–ಆಚಾರಾಂಗ ಜ್ಞಾನಕಾಯವಾದರೇನು, ಮತ್ತೇನಾದಡೇನು–ಭೂತಕಾಯ ಜಡಕಯವಾದರೇನು, ತನ್ನ ಮುನ್ನಿನ ರೂಹು ಬಿಡದನ್ನಕ್ಕ? ತನ್ನ ಮೊದಲಿನ ದೇಹಭಾವದ ಪ್ರಪಂಚವಳಿದು ನಷ್ಟವಾಗಿ ಹೋಗಬೇಕು, ಹೋಗದಿರುವ 'ಪರಿಯಂತರವೂ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ–ಇಷ್ಟ ಮಹಾಲಿಂಗವನ್ನು, ನಂಬಿಯೂ–ಈ ಲಿಂಗವೇ ಪ್ರಾಣ, ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು, ಈ ಲಿಂಗ ಹೋದರೆ ಲಿಂಗದೊಡನೆ ಪ್ರಾಣ ಕೊಟ್ಟೇನು, ಈ ಲಿಂಗವಲ್ಲದೆ ಅನ್ಯದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿಸಿಯೂ, ನಂಬದ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮದ

ಸಾಕ್ಷಾತ್ಶಿವಸ್ವರೂಪವೆಂದು ವಿಶ್ವಾಸಿಸದ, ಡಂಬಕರಿಗೆ-ಹಿರಿಯತನದ ಭೂಟಕತತ್ವವನುಳ್ಳ ಜೀವರುಗಳಿಗೆ ಶಿವಾದ್ವೈತಭಕ್ತಿ ದೊರಕೊಂಡೀತೆ? ದೊರಕೊಳ್ಳದು, ಅಯ್ಯಾ-ಎಲೆ ಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - - -

ಕಬ್ಬುನದ ಕೋಡಗವ ಪರುಷ ಮುಟ್ಟಲು, ಹೊನ್ನಾದಡೆನು ಮತ್ತೆನಾದಡೇನು ತನ್ನ ಮುನ್ನಿನ ರೂಹ ಬಿಡದನ್ನಕ್ಕರ?-ದೇಹಭಾವವನುಳ್ಳ ಜೀವನೆಂಬ ಮರ್ಕಟನ ಗುಣವು ಮಾಣದನ್ನಬರ, ಮತ್ತಂ ಪಂಚಕರಣ ಸಪ್ತಧಾತುಯುಕ್ತವಾದ ಜೀವನೆಂಬ ಮರ್ಕಟನು ಗುರುಸ್ಪರ್ಶನ ಪರಮಪಾವನ ಪವಿತ್ರವು ತಟ್ಟಲು ಜಂಗಮವಾದರೇನು? ಮರಳಿ ಭಕ್ತನಾದರೇನು? ತನ್ನ ಮೊದಲಿನ ಪಂಚಕರಣ ಸಪ್ತಧಾತುವನುಳ್ಳ ಜೀವನೆಂಬ ಮರ್ಕಟನ ಗುಣವು ನಷ್ಟವಾಗದನ್ನಬರವು. ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - - -

ಸಂಕಲ್ಪವಿಕಲ್ಪದೊಡನೆ ಕೂಡಿದ ಪ್ರಕೃತಿಯಾತ್ಮನು ವಿಭೂತಿ ರುದ್ರಾಕ್ಷಿ ಲಿಂಗಧಾರಣವನಳವಡಿಸಿಕೊಂಡಲ್ಲಿ ವೇಷಾಡಂಬರವಳವಡುವುದಲ್ಲದೆ ಲಿಂಗನಿಷ್ಠಾವಿಶ್ವಾಸವು ಕರಿಗೊಳ್ಳಲಿಲ್ಲವೆಂಬುದೀಗ ಕಬ್ಬುನದ ಕೋಡಗನ ಪರುಷ ಮುಟ್ಟಲು ಹೊನ್ನಾದಡೇನು ಮತ್ತೆನಾದಡೇನು ತನ್ನ ಮುನ್ನಿನ ರೂಹು ಬಿಡದನ್ನಕ್ಕರ ಎಂಬ ಶಬ್ದಕ್ಕರ್ಥ. ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ, ನಿಮ್ಮ-ಲಿಂಗವನು, ನಂಬಿಯು-ವಿಶ್ವಾಸಿಸಿಯು, ನಂಬದ-ವಿಶ್ವಾಸಿ೧[ಸ]೧ದ, ಡಂಬಕರಿಗಯ್ಯಾ-ಬೂಟಕರುಗಳೀಪ್ರಕಾರವಯ್ಯ.

..........................

೧-೧ x (ಟ,ಡ).

V- - - - - - - - - - - - - - - - - - - - - - - - - - - - - - - - - - - - - - - - - - - - - - -

1-1 ನಾನಯ್ಯ (ಪ).

..........................

ಸಂಕಲ್ಪವಿಕಲ್ಪದೊಡನೆ ಕೂಡಿದ ಪ್ರಕೃತ್ಯಾತ್ಮನು ವಿಭೂತಿ ರುದ್ರಾಕ್ಷಿಲಿಂಗಧಾರಣ ಮೊದಲಾದವನಳವಡಿಸಿಕೊಂಡೊಡೆ ವೇಷಾಡಂಬರವಳವಡುವುದಲ್ಲದೆ ಲಿಂಗನಿಷ್ಠಾವಿಶ್ವಾಸ ಕರಿಗೊಳ್ಳದೆಂಬುದೀಗ ನಂಬಿಯೂ ನಂಬದ ಡಾಂಬಿಕ ನಾನಯ್ಯ ಎಂಬುದರ್ಥ.

---

೯೮

**ತನುವಿನಲ್ಲೊಂದಿಟ್ಟು ಮನದಲ್ಲೆರಡಿಟ್ಟಡೆ ಬಲ್ಲನೊಲ್ಲನಯ್ಯಾ ಲಿಂಗವು, ಬಲ್ಲನೊಲ್ಲನಯ್ಯಾ ೧ಜಂಗಮವು.೧ ಪರ ೨ರ೨ ಚಿಂತೆಯನೊಲ್ಲನೊಲ್ಲ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ತನುವಿನಲ್ಲೊಂದಿಟ್ಟು-ಬಹಿರಂಗದ ಲಲಾಟದಲ್ಲಿ ವಿಭುತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವನ್ನು ಧರಿಸಿಕೊಂಡಿರ್ದು, ಮನದಲ್ಲೆರಡಿಟ್ಟಡೆ-ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವುಂಟಾಗಿದ್ದರೆ, ಬಲ್ಲನಯ್ಯಾ-ಅವರಂತರಂಗದ ಸ್ಥಿತಿಗತಿಯನ್ನು ಅರಿದು ಬಲ್ಲನಯ್ಯಾ, ಒಲ್ಲನಯ್ಯಾ-ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನಯ್ಯಾ, ಲಿಂಗವು-ಪರಶಿವಲಿಂಗವು, ಬಲ್ಲನಯ್ಯಾ-ಅವರಂತರಂಗದ ಸ್ಥಿತಿಗತಿಯನ್ನು ಅರಿದು ಬಲ್ಲನಯ್ಯ, ಒಲ್ಲನಯ್ಯಾ-ಅವರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಮರುಣಿಸಿಕೊಡಲೊಲ್ಲನಯ್ಯಾ, ಜಂಗಮವು-ಚರಜಂಗಮವು. ಪರರ ಚಿಂತೆಯನ್ನು-ಪರರುಗಳನ್ನು ಇವ ನಾಶಕ ಇವ ಅಜ್ಞಾನಿ ಕುಳ್ಳ ಸುಳ್ಳ ಜಾರ ಚೋರನೆಂದು ದೂಷಣೆಯ ಮಾಡುವಂಥವರ, ಒಲ್ಲನೊಲ್ಲ-ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನಯ್ಯಾ, ಕೂಡಲಸಂಗಮದೇವ-ಪರಶಿವಲಿಂಗವು.

II- - - - - - - - - - - - - - - - - - - - - - - - - - - - - - - - - - - - - - - - - -

1-1 x (ಚ,ಜ) 2-2 x (ಚ,ಜ).

..........................

ತನುವಿನಲ್ಲೊಂದಿಟ್ಟು ಮನದಲ್ಲೆರಡಿಟ್ಟಡೆ ಬಲ್ಲನೊಲ್ಲನಯ್ಯಾ-ಅಂಗದಲ್ಲಿ ಏಕವಾದಂಥ ಲಿಂಗಜಂಗಮದ ಭಕ್ತಿಯನು ಮಡಿಗಿಕೊಂಡು ಮಾನಸದಲ್ಲಿ ಸಂಕಲ್ಪ ವಿಕಲ್ಪವೆಂಬ ಭಯವಿಟ್ಟರೆ ಅವರಂತರಂಗದ ಸಂಕಲ್ಪವಿಕಲ್ಪವನು ತಿಳಿದುಬಲ್ಲವನಾಗಿ ಪರಶಿವಲಿಂಗವು ಅವರಿಗೊಲಿದು ಮುಕ್ತಿಯ ಕೊಡಲೊಲ್ಲನಯ್ಯಾ, ಪರಚಿಂತೆಯನೊಲ್ಲನೊಲ್ಲ ಕೂಡಲಸಂಗಮದೇವ-ಅನ್ಯಧನ ಅನ್ಯಸತಿಯರ ಮೇಲಣ ವ್ಯಾಕುಳವುಳ್ಳವರುಗಳಿಗೆ ಪರಶಿವಲಿಂಗವು ಒಲಿದು ಮುಕ್ತಿಯ ಕೊಡಲೊಲ್ಲನೆಂಬುದರ್ಥ.

---

೯೯

**ಒಳಗೆ ಕುಟಿಲ, ಹೊಱಗೆ ವಿನಯನಾಗಿ ಭಕ್ತರೆನಿಸಿಕೊಂಬವರ ಬಲ್ಲನೊಲ್ಲನಯ್ಯಾ ಲಿಂಗವು. ಅವರು ಸುಪಥಕ್ಕೆ ಸಲ್ಲರು ಸಲ್ಲರಯ್ಯಾ! ಒಳಹೊಱಗೊಂದಾಗದವರಿಗೆ ಅಳಿಯಾಸೆದೋಱೆ ಬೀಸಾಡುವನವರ ಜಗದೀಶ ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - - - - -

ಒಳಗೆ ಕುಟಿಲ, ಹೊಱಗೆ ವಿನಯನಾಗಿ: ಒಳಗೆ ಅಂತರಂಗದಲ್ಲಿ, ಕುಟಿಲ-ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವನು ಮುಂದುಗೊಂಡು, ಹೊಱಗೆ-ಬಹಿರಂಗದಲ್ಲಿ, ವಿನಯನಾಗಿ-ಸ್ವಾಮಿ, ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ವಿನಯವಾಕ್ಯವ ಮುಂದುಗೊಂಡು, ಭಕ್ತರೆನಿಸಿಕೊಂಬವರ-ನಿರ್ವಂಚಕಸದ್ಭಕ್ತರೆಂದು ಹೇಳಿಸಿ ಕೊಂಬಂಥವರ, ಲಿಂಗವು-ಪರಶಿವಲಿಂಗವು, ಬಲ್ಲನು ಅವರಂತರಂಗದ ಸ್ಥಿತಿಗತಿಯನ್ನು ತಿಳಿದಿಪ್ಪನು. ಒಲ್ಲನಯ್ಯಾ-ಒಲಿದು ನಿಜಮೋಕ್ಷವನ್ನು

ಕರುಣಿಸಿ ಕೊಡಲೊಲ್ಲನಯ್ಯಾ. ಅವರು–ಅಂತಪ್ಪ ಆಶಾಲಾಂಛನಿ ಉಪಾಧಿಕರು, ಸುಪಥಕ್ಕೆ–ಲಿಂಗಾಚಾರಮಾರ್ಗಕ್ಕೆ, ಸಲ್ಲರು ಸಲ್ಲರಯ್ಯಾ–ಸಲುವಳಿಯಾಗರು ಸಲುವಳಿಯಾಗರಯ್ಯಾ.

ಒಳಹೊಱಗೊಂದಾಗದವರಿಗೆ–ಬಹಿರಂಗದಲ್ಲಿ ಭಕ್ತಿವೇಷವ ಧರಿಸಿಕೊಂಡಿದ್ದ ಹಾಂಗೆ ಅಂತರಂಗದಲ್ಲಿ ನೈಷ್ಠೆಯಿರಬೇಕು. ಅಂತರಂಗದಲ್ಲಿ ನೈಷೆಯಿಲ್ಲದೆ ಬಹಿರಂಗದಲ್ಲಿ ಭಕ್ತಿವೇಷವ ಧರಿಸಿಕೊಂಡಿರುವಂಥವರ, ಅಳಿಯಾಸೆದೋಷಿ–ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಸೆಯನ್ನು ಮುಂದುಗಾಣಿಸಿ, ಜಗದೀಶ ಜಗತ್ತಿಗೆ ಕರ್ತೃವಾದ ಪರಶಿವಲಿಂಗವು, ಅವರ–ಅಂತಪ್ಪ ಆಶಾಲಾಂಛನಿ ಉಪಾಧಿಕರ ಬಿಸಾಡುವ–ಭವದತ್ತ ಹಾಕಿಬಿಡುವನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - -

1–1 ಸತ್ಪಥಕ್ಕೆ (ಚ,ಜ).

.........................

ಒಳಗೆ ಕುಟಿಲ–ಅಂತರಂಗದಲ್ಲಿ ಸಂಕಲ್ಪವಿಕಲ್ಪವೆಂಬ ಕಾಪಟ್ಯವು, ಹೊಱಗೆ ವಿನಯನಾಗಿ–ಬಹಿರಂಗದಲ್ಲಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದೆಂಬ ಭಕ್ತಿಮಾಧುರ್ಯವಾಗಿ, ಭಕ್ತರೆನಿಸಿಕೊಂಬುವರ ಬಲ್ಲನೊಲ್ಲನಯ್ಯಾ ಲಿಂಗವು–ಸುಮ್ಮನೆ ನಾವು ಗುರುಭಕ್ತರು ನಾವು ಲಿಂಗಭಕ್ತರು ನಾವು ಜಂಗಮ ಭಕ್ತರೆನಿಸಿಕೊಂಬವರುಗಳಿಗೊಲಿದು ಮುಕ್ತಿಯ ಕೊಡಲೊಲ್ಲ ಪರಶಿವಲಿಂಗವು. ಅವರು ಸತ್ಪಥಕ್ಕೆ ಸಲ್ಲರು, ಸಲ್ಲರಯ್ಯಾ–ಅಂಥವರು ಪ್ರಶಸ್ತವಾದ ಲಿಂಗಾಚಾರಮಾರ್ಗಕ್ಕೆ ಯೋಗ್ಯವಾಗರು ಯೋಗ್ಯವಾಗರಯ್ಯಾ.

ಒಳಹೊಱಗೊಂದಾಗದವರಿಗೆ–ಅಂತರಂಗದ ಸಂಕಲ್ಪವಿಕಲ್ಪ ಬಹಿರಂಗದ ಬಾಹ್ಯೋಪಚಾರವೆರಡು ನಷ್ಟವಾಗಿ ಏಕವಾಗದವರಿಗೆ, ಜಗದೀಶ ಕೂಡಲಸಂಗಮದೇವಾ–ಮೂರು ಲೋಕಂಗಳಿಗೊಡೆಯನಾದಂಥ ಪರಶಿವಲಿಂಗವು, ಅಳಿಯಾಸೆದೋಷಿ ಬೀಸಾಡುವನವರ–ನಷ್ಟದ್ರವ್ಯಕ್ಕೆ ಕಾರಣವಾದ ಫಲಪದಂಗಳಾದಪೇಕ್ಷೆಯನು ಕಾಣಿಸಿ ಅವರನು ಭವದತ್ತ ತಳ್ಳಿಹಾಕುವನೆಂಬುದರ್ಥ.

---

೧೦೦

**ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ? ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ? ತನುವಿ [1]ನಲ್ಲಿ[1] ಹುಸಿತುಂಬಿ, [2]ಮನದಲ್ಲಿ[2] ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವಾ!**

I- - - - - - - - - - - - - - - - - - - - - - - - - - - - - - - - - - - - - - - - - - - - -

ಮನೆಯೊಳಗೆ–ಗೃಹದಲ್ಲಿ, ಮನೆಯೊಡೆಯ–ಗೃಹದ ಕರ್ತನಾದ ಯಜಮಾನನು, ಇದ್ದಾನೊ–ಗೃಹದಲ್ಲಿದ್ದಾನೊ, ಇಲ್ಲವೊ?–ಒಳಗಿಲ್ಲವೊ?, ಹೊಸ್ತಿಲಲ್ಲಿ, ದೇಹಲಿನಲ್ಲಿ, ಹುಲ್ಲು ಹುಟ್ಟಿ–ತೃಣೋತ್ಪತ್ಯವಾಗಿ, ಮನೆಯೊಳಗೆ–ಗೃಹದಲ್ಲಿ, ರಜ ತುಂಬಿ–ಕಸಭರಿತವಾಗಿ, ಮನೆಯೊಳಗೆ–ಗೃಹದಲ್ಲಿ, ಮನೆಯೊಡೆಯ–ಗೃಹದ ಕರ್ತೃವಾದ ಯಜಮಾನನು, ಇದ್ದಾನೊ–ಒಳಗಿದ್ದಾನೊ, ಇಲ್ಲವೊ?–

ಒಳಗಿಲ್ಲವೊ? ತನುವಿನಲ್ಲಿ ಹುಸಿತುಂಬಿ–ಸ್ವಾಮಿ ತನು ನಿಮ್ಮದು ಮನ ನಿಮ್ಮದು ದನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ಸಟೆವುಂಟಾಗಿರ್ಪುದು, ಮನದಲ್ಲಿ ವಿಷಯ ತುಂಬಿ–ಹೊನ್ನಾಗಬೇಕು ಹೆಣ್ಣಾಗಬೇಕು ಮಣ್ಣಾಗಬೇಕು ಷಟ್ಕೃಷಿ ವ್ಯಾಪಾರಂಗಳ ಮಾಡಬೆಕೆಂಬ ವ್ಯಾಪ್ತಿ ಭರಿತವಾಗಿರ್ಪುದು, ಮನೆಯೊಳಗೆ–ಗೃಹದಲ್ಲಿ, ಮನೆಯೊಡೆಯ–ಗೃಹದ ಕರ್ತೃವಾದ ಯಜಮಾನನು ಇಲ್ಲ–ಒಳಗಿಲ್ಲವೆಂಬದರ್ಥ.

● ಮನೆಯೊಳಗೆ–ಅಂತರಂಗವೆಂಬ ನಿಳಯದಲ್ಲಿ, ಮನೆಯೊಡೆಯ–ಆಚಾರಾಂಗವೆಂಬ ನಿಳಯಕ್ಕೆ ಕರ್ತೃವಾದ ಇಷ್ಟಲಿಂಗದೇವನು, ಇದ್ದಾನೊ–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲಸಿದ್ದಾನೊ, ಇಲ್ಲವೊ?–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲಸಿಲ್ಲವೊ? ಹೊಸ್ತಿಲಲ್ಲಿ–ಇಂದ್ರಿಯಂಗಳೆಂಬ ದ್ವಾರಂಗಳಲ್ಲಿ, ಹುಲ್ಲುಹುಟ್ಟಿ–ವಿಷಯಂಗಳೆಂಬ ತೃಣೋತ್ಪತ್ಯವಾಗಿ, ಮನೆಯೊಳಗೆ ಅಂತರಂಗವೆಂಬ ನಿಳಯದಲ್ಲಿ, ರಜತುಂಬಿ–ಮರಣರೂಪವಾದ ಅಜ್ಞಾನವೆಂಬರೆಗಸಭರಿತವಾಗಿ ಮನೆಯೊಳಗೆ–ಅಂತರಂಗವೆಂಬ ನಿಳಯದಲ್ಲಿ, ಮನೆಯೊಡೆಯ–ಆಚಾರಾಂಗವೆಂವ ನಿಳಯಕ್ಕೆ ಕರ್ತನಾದ ಇಷ್ಟಲಿಂಗ ದೇವನು, ಇದ್ದಾನೊ–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲಸಿದ್ದಾನೊ, ಇಲ್ಲವೊ? ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲಸಿಲ್ಲವೊ? ತನುವಿನಲ್ಲಿ ಹುಸಿತುಂಬಿ–ಬಹಿರಂಗದ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೆಲೆ ಶಿವಲಿಂಗ ಮೊದಲಾದ ಭಕ್ತಿವೇಷವರ ಉಂಟಾಗಿರ್ಪುದು, ಮನದಲ್ಲಿ ವಿಷಯತುಂಬಿ–ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವೇ ಉಂಟಾಗಿರ್ಪುದು, ಮನೆಯೊಳಗೆ–ಅಂತರಂಗವೆಂಬ ನಿಳಯದಲ್ಲಿ, ಮನೆಯೊಡೆಯ–ಆಚಾರಾಂಗವೆಂಬ ನಿಳಯಕ್ಕೆ ಕರ್ತನಾದ ಇಷ್ಟಲಿಂಗದೇವನು, ಇಲ್ಲ–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲಸಿಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - -

1–1 ನೊಳಗೆ (ಚ,ಜ). 2–2 ಮನದೊಳಗೆ (ಚ,ಚ).

..........................

ಮನೆಯೊಳಗೆ–ಅಂತರಂಗವೆಂಬ ಗೃಹದಲ್ಲಿ, ಮನೆಯೊಡೆಯನಿದ್ದಾನೊ ಇಲ್ಲವೊ?–ಆ ಅಂತರಂಗವೆಂಬ ಗೃಹಕ್ಕೆ ಕರ್ತೃವಾದ ಪ್ರಾಣಲಿಂಗದೇವ ಮೂರ್ತಿಗೊಂಡಿದ್ದಾನೊ ಇಲ್ಲವೊ? ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಇಂದ್ರಿಯಗಳೆಂಬ ⁽ದೇಹಲಿ⁾ ಯಲ್ಲಿ ವಿಷಯತೃಣವು ಉದಿಸಿ, ಮನೆಯೊಳಗೆ ರಜ ತುಂಬಿ–ಅಂತರಂಗವೆಂಬ ಗೃಹದಲ್ಲಿ ಅಜ್ಞಾನವೆಂಬ ಅರಗಸವು ಪೂರವಿಸಿ, ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?–ಅಂತರಂಗವೆಂಬ ಗೃಹದಲ್ಲಿ ಪ್ರಾಣಲಿಂಗವಾಗಿದ್ದಾನೊ ಇಲ್ಲವೊ? ಮುಂದಕ್ಕೆ ಕಾಣಬಂದರ್ಥ.

..........................

೧–೧ ದೇಹಾಳಿ (ಚ,ಜ).

III- - - - - - - - - - - - - - - - - - - - - - - - - - - - - - - - - - - - - - - - - - -

2–2 ಮನದೊಳಗೆ (ಟ,ಡ).

ಮನೆಯೊಳಗೆ-ಅಂಗವೆಂಬ ಮಂದಿರದಲ್ಲಿ, ಮನೆಯೊಡೆಯ-ಮನೆಗೆ ಕರ್ತೃವಾದ ಇಷ್ಟಲಿಂಗದೇವನು, ಇದ್ದಾನೊ ಇಲ್ಲವೊ? -ಸಂಬಂಧವಾಗಿ ಇದ್ದಾನೊ ಇರನೊ? ಹೊಸ್ತಿಲಲ್ಲಿ -ಇಂದ್ರಿಯಂಗಳೆಂಬ ಬಾಗಿಲ್ವಾಡದಲ್ಲಿ, ಹುಲ್ಲುಹುಟ್ಟಿ-ವಿಷಯಪಂಚುವರ್ಧನವಾಗಿ, ಮನೆಯೊಳಗೆ-ಪಂಚಭೂತ ಯುಕ್ತವಾದ ಶರೀರದಲ್ಲಿ, ರಜತುಂಬಿ ಅಜ್ಞಾನದವಗುಣವೆಂಬ ಸದೆ ಹರಡಿ, ಮನೆಯೊಳಗೆ-ಮನವೆಂಬ ಮಂದಿರದಲ್ಲಿ, ಮನೆಯೊಡೆಯಂ-ಮನಃಕರ್ತೃ ವಾದಿಷ್ಟಮಹದೇವನು, ಇದ್ದಾನೊ ಇಲ್ಲವೊ?-ಸಂಬಂಧವಾಗಿದ್ದಾನೋ ಇರನೊ? ತನುವಿನಲ್ಲಿ-ಅಂಗದಲ್ಲಿ, ಹುಸಿ-ಅಬದ್ಧವು,ತುಂಬಿ-ಪೂರವಿಸಿ, ಮನದೊಳಗೆ-ಮನಸ್ಸಿನಲ್ಲಿ, ವಿಷಯ-ವಿಕಾರವು, ತುಂಬಿ-ಪೂರವಿಸಿ, ಮನೆಯೊಳಗೆ-ಅಂಗವೆಂಬ ಮಂದಿರದಲ್ಲಿ, ಮನೆಯೊಡೆಯ-ಮನೆಗೆ ಕರ್ತೃವಾದಿಷ್ಟ ಲಿಂಗದೇವರು, ಇಲ್ಲ-ಸಂಬಂಧವಾಗಿ ಇಲ್ಲವು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

---

೧೦೧

**ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ? ಕೋಡಗ ಬಲ್ಲುದೆ ಸೆಳೆಮಂಚದ ಸುಖವ? ಕಾಗೆ ನಂದನವನದೊಳಗಿದ್ದಡೇನು, ಕೋಗಿಲೆಯಾಗಬಲ್ಲುದೆ? ಹೇಳಾ. ಕೊಳನ ತಡಿಯಲೊಂದು ಹೊ[1][ಐ][1] ಸು ಕುಳ್ಳಿರ್ದಡೇನು ಕಳಹಂಸೆಯಾಗಬಲ್ಲುದೆ, ಕೂಡಲ ಸಂಗಮದೇವಾ?**

..........................

1-1 ಲ (ಕ,ಗ).

I- - - - - - - - - - - - - - - - - - - - - - - - - - - - - - - - - - - - - - - - - - - - -

ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ?-ಕುಟ್ಟವಲು ಚಟ್ಟವಲು ದುಂಡವಲು ಮೊಂಡವೆಂಬ ಅವಲಕ್ಕಿಯ ಸ್ವಾದವನ್ನು ಹುರಿವಂಥ ಆತ್ಮರುಗಳೇ ಬಲ್ಲರಲ್ಲದೆ, ಓಡೆತ್ತ ಬಲ್ಲುದು- ^ಹುರಿಗಾವಲಿ^ ಹಂಚೇನಾದರೂ ತಿಳಿದಿಪ್ಪುದೆ? ಅರಿಯದು. ಕೋಡಗ ಬಲ್ಲುದೆ ಸೆಳೆಮಂಚದ ಸುಖವ?-ತೂಗೋ ಮಂಚದ ಮೆಲೆ ಕುಳಿತುಕೊಂಡು ತೂಗಿಸಿಕೊಂಬಂಥ ಪರಿಣಾಮವನ್ನು ಭೋಗಾತ್ಮರುಗಳೇ ಬಲ್ಲರಲ್ಲದೆ ಕಪಿಯನ್ನು ಹಿಡಿದುಕೊಂಡು ಬಂದು ತೂಗೋ ಮಂಚದ ಮೇಲೆ ಕುಳ್ಳಿರಿಸಿ ತೂಗಿದಲ್ಲಿ ತನ್ನಂಗಚೇಷ್ಟೆಯ ಮಾಡಿ ಓಡಿಹೋಗುವುದಲ್ಲದೆ ಭೋಗಾತ್ಮರುಗಳ ಹಾಂಗೆ ಸ್ವಸ್ಥವಾಗಿ ಕುಳಿತುಕೊಂಡು ತೂಗಿಸಿಕೊಂಬಂಥ ಪರಿಣಾಮವನ್ನು ತಿಳಿದಿಪ್ಪುದೆ? ಅರಿಯದು.

ಕಾಗೆ-ವಾಯಸನು, ನಂದನವನದೊಳಗೆ-ಊರು ಬಿಟ್ಟು ಹರದಾರಿ ಕೂಗಳತೆಯಲ್ಲಿರುವ ಉದ್ಯಾನವನದಲ್ಲಿ, ಇದ್ದಡೇನು-ವಾಸವಾಗಿದ್ದರೇನು, ಕೋಗಿಲೆಯಾಗಬಲ್ಲುದೆ?-ಕೋಗಿಲೆಪಕ್ಷಿಯೆಂಬಂಥದು ತನ್ನ ತುಟಿಪಟುದಿಂದ ಮಾಂದಳಿರ ಕರ್ದುಂಕಿ ಪಂಚಮಧ್ವನಿಯಿಂದ ಸ್ವರವೆತ್ತಿ ಕೂಗಿದಲ್ಲಿ ಕೇಳಿದಂಥ ಆತ್ಮರುಗಳು ಎಂಥ ಚೆಲೋ ಪಕ್ಷಿ ಎಂಥಾ ಚೆಲೋತ್ನಾಗಿ ಕೂಗುತ್ತೈತೆಂದು ಕೇಳಿ ಪರಿಣಾಮಿಸುವರಲ್ಲದೆ ಕಾಗೆಯೆಂಬಂಥದು ಅದೇ[ಕೂಗ] ಕೂಗಬಲ್ಲುದೆ? ನಾನೇನು ಕೂಗಲರಿಯೆನೇ ಎಂದು ಒಂದು ಮರದ ಹರಿಯ ಮೇಲೆ ಕುಳಿತುಕೊಂಡು ಕರ್ರ ಕರ್ರ

ಎಂದು ಒದರುತ್ತಿರ್ದಲ್ಲಿ ಇದೇನು ಹೊಲೆಯನ ಹಕ್ಕಿಯೊ ಮಾದಿಗನ ಹಕ್ಕಿಯೊ ನಮ್ಮ ತಲೆಯನೆಲ್ಲ ಒಡೆವುತ್ತೈತೆ. ಒಂದು ವೇಳೆ ಮೇಲೆ ಕೆಡಿಸಿಗಿಡಿಸೀತೆಂದು ಕಲ್ಲು ಹಾಕಿ ಗದುಮಿಬಿಡುತ್ತಿಹರು. ಆ ಕೋಗಿಲಪಕ್ಷಿಗೆ ಸಮಾನವಾದೀತೆ? ಆಗಲರಿಯದು, ಹೇಳಾ–ನಿರೂಪಿಸಾ.

ಕೊಳನ ತಡಿಯಲ್ಲಿ–ಕಾಸಾರದ ತೀರದಲ್ಲಿ, ಒಂದು ಹೊ[೨][ಱ][೨] ಸು ಕುಳ್ಳಿರ್ದಡೇನು–ಒಂದು ಬಕಪಕ್ಷಿಯೆಂಬಂಥದು ವಾಸವಾಗಿರ್ದರೇನು, ಕಳಹಂಸೆಯಾಗಬಲ್ಲುದೆ?–ರಾಜಮರಾಳನೆಂಬಂಥದು ತಾವರೆ ತಂಡುಲವನ್ನು ಮೆಲ್ಲುತ್ತ ತಿಳಿನೀರನೀಂಟುತ್ತ ತಣ್ಮಳಲ ಮೇಲೆ ತನ್ನ ಮೆಲ್ಲಡಿಗಳಿಂದೆ ತಿರುಗಾಡಿ ಹೋದಲ್ಲಿ ನೋಡಿದಂಥ ಆತ್ಮರುಗಳು ಎಂಥ ಚೆಲೋ ಪಕ್ಷಿ ಎಂಥ ಚೆಲೋತ್ನಾಗಿ ತಿರುಗಾಡಿ ಹೋಗುತ್ತೈತೆಂದು ನೋಡಿ ಪರಿಣಮಿಸುವರಲ್ಲದೆ ಬಕಪಕ್ಷಿಯೆಂಬಂಥದು ಏಡಿ ಕಪ್ಪೆ ಮೀನುಗಳ ತಿಂಬುತ್ತ ಕಲಕನೀರು ಕುಡಿವುತ್ತ ಬಾಯಿ ಹೆಬ್ಬನಹಡಿಕೆ ನಾರಿಸಿಕೊಂಬುತ್ತ ತಿರುಗಾಡುವುದಲ್ಲದೆ ಆ ರಾಜಮರಾಳನ ಸಮಾನವಾದೀತೆ? ಆಗಲರಿಯದೆಂಬುದರ್ಥ.

● ಓಡು–ಅಜ್ಞಾನಜೀವನು, ಅವಲಕ್ಕಿಯ ಸವಿಯನೆತ್ತ ಬಲ್ಲುದು–ತನುತ್ರಯಂಗಳಲ್ಲಿ ಸತ್ತುವಿನ ನಿಜತಂಡುಲ ಸ್ವರೂಪವಾದ ಇಷ್ಟಪ್ರಾಣ ಭಾವಲಿಂಗಂಗಳನು ಸಂಬಧವ ಮಾಡಿಕೊಂಡು ಅ ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪುರುಚಿತೃಪ್ತಿಗಳನು ಇಷ್ಟಪ್ರಾಣಭಾವಲಿಂಗಂಗಳಿಗೆ ಸಮರ್ಪಿಸಿ ಅ ತ್ರಿವಿಧಲಿಂಗಮುಖದಿಂದುಳಿಮೆಯಾಗಿ ಬರಲ್ಪಟ್ಟ ಶುದ್ಧಸಿದ್ಧಪ್ರಸಿದ್ಧಪ್ರಸಾದವನ್ನು ಪಡೆದನುಭವಿಸುವಂಥ ಸ್ವಾದವನ್ನು ಯಾವ ಕಡೆಯಿಂದ ತಿಳಿದಿಪ್ಪುದು? ಅರಿಯದು, ತಿಳಿಯದು. ಕೋಡಗ–ಮನೋಮರ್ಕಟನು, ಸೆಳೆಮಂಚದ ಸುಖವ ಬಲ್ಲುದೆ? –ಚತುರ್ವಿಧಂಗದಲ್ಲಿ ಚತುರ್ವಿಧ ಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧಭಕ್ತಿವಿಡಿದಾಚರಿಸುವಂಥ ಪರಿಣಾಮವನ್ನು ತಿಳಿದಿಪ್ಪುದೆ? ಅರಿಯದು.

ಕಾಗೆ–ಆಶಾಲಾಂಛನಿಯು, ನಂದನವನದೊಳಗಿದ್ದಡೇನು–ಊರಿಗೆ ಕೂಗಳತೆ ದೂರವಾಗಿರುವ ಚೌಕಿಮಠಂಗಳಲ್ಲಿ [೩][ವಾಸಿಸಿ][೩] ಕೊಂಡಿರುವಂಥ ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ ಸನ್ನಿದಿಯಲ್ಲಿದ್ದುಕೊಂಡು ಓದುತ್ತ ಹಾಡುತ್ತ ಅವರ ಶಿವಾನುಭಾವವನ್ನು ಬೆಸಗೊಂಡು ಕೇಳಿದರೇನು, ಕೋಗಿಲೆಯಾಗಬಲ್ಲುದೆ?–ಮಲತ್ರಯಂಗಳನ್ನು ಬಿಟ್ಟು ಭಕ್ತಿಜ್ಞಾನವೈರಾಗ್ಯವಿಡಿದಾಚರಿಸಲ್ಪಟ್ಟ ಸತ್ತ್ರಾವ ಜ್ಞಾನಸ್ವರೂಪವಾದ ಜ್ಞಾನ ಜಂಗಮಮೂರ್ತಿಯಾದನೆ? ಆಗಲರಿಯನು, ಹೇಳಾ–ನಿರೂಪಿಸಾ.

ಕೊಳನ ತಡಿಯಲ್ಲಿ–ನಿರ್ವಂಚಕಸದ್ಭಕ್ತರ ಸಭಾಮಧ್ಯದಲ್ಲಿ, ಒಂದು ಹೊ [೨][ಱ][೨] ಸು ಕುಳ್ಳಿರ್ದಡೇನು–ಒಬ್ಬ ಉಪಾಧಿಕ ಕುಳಿತುಕೊಂಡಿರ್ದರೇನು, ಕಳಹಂಸೆಯಾಗಬಲ್ಲುದೆ?–ನಿರ್ವಂಚಸದ್ಭಕ್ತರುಗಳ ಹಾಂಗೆ ತನುಮನದನಂಗಳನ್ನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯಮಾಡುವಂಥ ನಿರ್ವಂಚಕರ ಸದ್ಭಕ್ತನಾದಾನೆ? ಆಗಲರಿಯನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

........................

೧–೧ ಹುರುಗೋಲ (ಕ,ಗ). ೨–೨ ಲ (ಕ,ಗ). ೩–೩ ಹಾಸಿ (ಕ,ಗ).

II- - - - - - - - - - - - - - - - - - - - - - - - - - - - - - - - - - - - - - - - - - -

ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ?–ದೇಹಭಾವ ಲೋಷ್ಟವನುಳ್ಳಂಥ ವಿಶ್ವಜೀವನು ಸತ್ತೆಂಬ ನಿಜತಂಡುಲ ಸ್ವರೂಪವಾದ ಇಷ್ಟಲಿಂಗದಷ್ಟವಿಧಾರ್ಚನೆ ಷೋಡಶೋಪಚಾರ ಪೂಜಾಕ್ರೀಗಳ ಸ್ವಾದವನು ಆವಕಡೆಯಲ್ಲಿ ತಿಳಿದುಬಲ್ಲುದು।? ಕೋಡಗ ಬಲ್ಲುದೆ ಸೆಳೆಮಂಚದ ಸುಖವ? ಸಂಕಲ್ಪವಿಕಲ್ಪವನುಳ್ಳ ಮ [೪]ನೋ[೪] ಮರ್ಕಟನು ಭಕ್ತಿಜ್ಞಾನವೈರಾಗ್ಯೈಶ್ವರ್ಯವೆಂಬ ಚತುರ್ವಿಧ ಕುಶಲಗೆಲಸದ ಪರ್ಯಂಕದ ಮೇಲಿರ್ದ ಪ್ರಾಣಲಿಂಗದಲ್ಲಿ ಕೂಡಿ ಆ ಪ್ರಾಣಲಿಂಗವೇ ತಾನಾಗಿ ಪರಿಣಾಮಿಸುವ ಪರಿಣಾಮವನಾವ ಕಡೆಯಲ್ಲಿ ತಿಳಿದುಬಲ್ಲುದೆ?

ಕಾಗೆ ನಂದನವನದೊಳಗಿದ್ದಡೇನು ಕೋಗಿಲೆಯಾಗಬಲ್ಲುದೆ? ಹೇಳಾ–ಪ್ರಪಂಚಾತ್ಮನು ಭಾವಲಿಂಗದ ಮನೋಲಯ ನಿರಂಜನ ಭಕ್ತಿಪೂಜಾಕ್ರೀಗಳೆಂಬ [೫]ವಿಂಧ್ಯಾ[೫] ವನದಲ್ಲಿದ್ದರೇನು ಆ ಭಾವಲಿಂಗವೆಂಬ ಪರಪುಟ್ಟನಾಗಬಲ್ಲುದೆ? ನಿರೂಪಿಸಾ.

ಕೊಳನ ತಡಿಯಲೊಂದು [೬]ಹೊಱಸು[೬] ಕುಳ್ಳಿರ್ದಡೇನು ಕಳಹಂಸೆಯಾಗಬಲ್ಲುದೆ?–ಶಿವಾನುಭಾವವೆಂಬ ಕಾಸಾರದ ತೀರದಲ್ಲಿ ಏಕವಾದಂಥ ಬಹಿರ್ವೇಷ ಹೃದಯಘಾತಕವನುಳ್ಳ ಜೀವನು ಅಧಿಷ್ಟಿಸಿಕೊಂಡಿದ್ದರೇನು ಶಿವನುಭಾವಿಯೆಂಬ ಚಕ್ರವಾಕಪಕ್ಷಿಯಾಗಬಲ್ಲುದೆ?

● ಮತ್ತಂ ಪ್ರಾಣವಾಯುವಿನ ಪ್ರಕೃತಿಯನುಳ್ಳಂಥ ಜೀವನು ಕಾಯಶೂನ್ಯಲಿಂಗ ಪ್ರಾಣಶೂನ್ಯಶರಣಭಾವಭೇದವಿಲ್ಲವಾಗಿ ಎಂದು ಬ್ರಹ್ಮ ರಂಧ್ರದ ಸಹಸ್ರದಳಕಮಲದಲ್ಲಿರ್ದ ನಿಃಕಲಲಿಂಗದಲ್ಲಿ ಶಿವಯೋಗಸಂಪತ್ತಿನ ಸಾಧನದಿಂದೆಯ್ದಿ ಕೂಡುವಂಥ ಸ್ವಾದವನಾವಕಡೆಯಲ್ಲಿ ತಿಳಿದುಬಲ್ಲುದು? ಸಪ್ತಧಾತು ಪಂಚಕರಣಯುಕ್ತವಾದ ಜೀವನೆಂಬ ಮರ್ಕಟನು ಸೂಸುವೆಲ್ಲವು ಪಂಚಾಕ್ಷರಿ ತುಂಬುವೆಲ್ಲವು ಷಡಕ್ಷರಿ ತಡೆದು ನಿಲಿಸುವೆಲ್ಲವು ಪರಶಕ್ತಿ ಪ್ರಣವವಾಗಿ ಇಂತೀ ಮಂತ್ರಯೋಗದ ಸಂಚವನರಿದಾಚರಿಸುವಂಥ ಪರಿಣಾಮವನಾವ ಕಡೆಯಲ್ಲಿ ತಿಳಿದುಬಲ್ಲುದು? ಅಜ್ಞಾನದೃಷ್ಟಿಯುನುಳ್ಳಂಥ ಮಾಯೆ ಮನಪವನವೆಂಬ ರೆಕ್ಕೆಯು ಮಾಡಿಕೊಂಡು ಷಡಾಧಾರಚಕ್ರದೈವತ್ತೆರಡು ದಳಕುಳ ಅಕ್ಷರವರ್ಣ ಅದಿದೇವತೆಗಳೆಂಬ [೫]ವಿಂಧ್ಯಾ[೫] ವನದಲ್ಲಿ ರೋಹಾರೋಹವಾಗಿ ಚರಿಸಾಡುತ್ತಿದ್ದರೇನು? ದಳಕುಳ ಅಕ್ಷರ ವರ್ಣಾಧಿದೇವತೆಗಳನು ಐವತ್ತೆರಡು ಮಂತ್ರಲಿಂಗ ಸ್ವರೂಪವ ಮಾಡಿಕೊಂಡಾಚರಿಸುವಂಥ ಸದ್ವಿದ್ಯೆಯೆಂಬ ಪರಪುಟ್ಟನಾಗಬಲ್ಲುದೆ? ಅಂತರಂಗವೆಂಬ ಮನೋಕಾಸಾರದ ತೀರದಲ್ಲಿ ಜೀವನೆಂಬ ಕೊಕ್ಕರನು ಅಧಿಷ್ಟಿಸಿಕೊಂಡಿರ್ದರೇನು? ಪರಮಾತ್ಮನೆಂಬ ಹಂಸೆಯಾಗಬಲ್ಲುದೆ, ಎಲೆ ಲಿಂಗವೆ?

..........................

೪–೪ ಹಾ(ಚ). ೫–೫ ವಿದ್ಯಾ (ಜ). ೬–೬ ಬಕ (ಜ).

III- - - - - - - - - - - - - - - - - - - - - - - - - - - - - - - - - - - - - - - - - - -

ನಿಸ್ಸಾರವಾಗಿ ಜ್ಞಾನಹೀನವಾದ ಜಡಾತ್ಮಂಗೆಸದ್ವಸ್ತುಸ್ವರೂಪವಾದ ಗುರುಭಕ್ತಿಯಳವಡ ದೆಂಬುದೀಗ ಓಡೆತ್ತ ಬಲ್ಲುದೊ ಅವಲಕ್ಕಿಯು ಸವಿಯು ಎಂಬ ಶಬ್ದಕ್ಕರ್ಥ.

ಕ್ರಿಯಾಜ್ಞಾನಚರ್ಯಾಯೋಗಸ್ವರೂಪವಾದ ಲಿಂಗಭಕ್ತಿಯ ಪರಿಣಾಮವನು ಸಂಚಲಬುದ್ಧಿಯನುಳ್ಳ ಅಜ್ಞಾನಿ ಜೀವನಱಿಯನೆಂಬುದೀಗ ಕೋಡಗ ಬಲ್ಲುದೆ ಸೆಳೆಮಂಚದ ಸುಖವ ಎಂಬ ಶಬ್ದಕ್ಕರ್ಥ.

ದುಸ್ಸಂಚಲಸ್ವರೂಪವಾದ ಜೀವಾತ್ಮನು ಪರಮಾಮೃತಫಲಸ್ವರೂಪವಾದ ಜಂಗಮಭಕ್ತಿಯನಱಿವ ಚಿದಾತ್ಮನಾಗಲಱಿಯನೆಂಬುದೀಗ ಕಾಗೆ ನಂದನವನದೊಳಗಿದ್ದಡೇನು ಕೋಗಿಲೆಯಾಗಬಲ್ಲುದೆ? ಹೇಳಾ ಎಂಬ ಶಬ್ದಕ್ಕರ್ಥ. ಪರಮಾಮೃತಸ್ವರೂಪವಾದ ಪ್ರಸಾದಭಕ್ತಿಯೆಂಬ ಪದ್ಮಾಕರದ ಕ್ರಿಯಾತಟದಲ್ಲಿರ್ದು ಮುಖ್ಯವಾದ ಪ್ರಸಾದಭಕ್ತಿಯ ನಿಲುಕಡೆಯನಱಿಯದ ಕೊಕ್ಕರೆ ಜೀವನು ಪ್ರಸಾದಿಸ್ಥಲದಲ್ಲಂಡುಗೊಂಡಿದ್ದರೇನು ಆ ಮಹಾಪ್ರಸಾದವ ಸ್ವೀಕರಿಸಿ ಪರಮಾತ್ಮನಾಗಲರಿಯ ನೆಂಬುದೀಗ ಕೊಳನ ತಡಿಯಲೊಂದು ಹೊಱಸು ಕುಳ್ಳಿದ್ದಡೇನು ಕಲಹಂಸೆಯಾಗಬಲ್ಲುದೆ ಎಂಬ ಶಬ್ದಕ್ಕರ್ಥ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಪೂರ್ವಕರ್ಮದಿಂದೆ ಭಗ್ನವಾಗಿ ಅಜ್ಞಾನ ಕಾಳಿಕೆಯನುಳ್ಳ ಜೀವಾತ್ಮಂಗೆ ಮಾಧುರ್ಯಾಯಮಾನನ ಸದವಸ್ತುಸ್ವರೂಪವಾದ ಗುರುಭಕ್ತಿಯಳವಡದೆಂಬುದೀಗ ಓಡೆತ್ತಬಲ್ಲುದು ಅವಲಕ್ಕಿಯ ಸವಿಯನೆಂಬುದರ್ಥ. ಕ್ರಿಯಾಪಾದ ಜ್ಞಾನಪಾದ ಚರ್ಯಾಪಾದ ಯೋಗಪಾದಂ ಗಳಿಂದಾಂದೋಳಗೆಯ್ವ ಲಿಂಗಭಕ್ತಿಪರಿಣಾಮವ ಮನೋಮರ್ಕಟನ ವರ್ತನೆಯುಳ್ಳಾತ್ಮನು ಅರಿಯನೆಂಬುದೀಗ ಕೋಡಗ ಬಲ್ಲುದೆ ಸೆಳೆಮಂಚದ ಸುಖವನೆಂಬುದರ್ಥ.

ಹೃದಯದಧೋಮುಖವಾದಷ್ಟದಳಂಗಳೆಂಬ ಕದಳೀವನದಲ್ಲಿ ಸಂಚರಿಸುತ್ತಿರ್ಪ ಅಜ್ಞಾನಾತ್ಮನು ಪರಮಾಮೃತಫಳಭರಿತ ಸ್ವಜ್ಞಾನಸ್ವರೂಪವಾದ ಜಂಗಮಭಕ್ತಿಯುನಱಿವ ಚಿದಾತ್ಮನಾಗಲರಿಯದೆಂಬುದೀಗ ಕಾಗೆ ನಂದನವನದೊಳಗಿದ್ದರೆ ಕೋಕಿಲೆಯಾಗಬಲ್ಲುದೆ ಯೆಂಬುದರ್ಥ. ಬಹಿರಂಗದಲ್ಲಿ ಸತ್ವಗುಣ ಸಂಬಂಧವಾಗಿ ಅಂತರಂಗದಲ್ಲಿ ಕಾಪಟ್ಯವುಳ್ಳಾತ್ಮನು ಪರಮಾಮೃತಸ್ವರೂಪವಾದ ಪ್ರಸಾದಭಕ್ತಿಯೆಂಬ ಪದ್ಮಾಕರದ ಸತ್ಕ್ರಿಯಾತಟದಲ್ಲಿ ಅಂಟಿಸಿಕೊಂಡಿರ್ದಡೇನು ಮುಖ್ಯವಾದ ಪ್ರಸಾದಸೇವನೆಯನಱಿವ ಪ್ರಮಾತ್ಮನಾಗಲಱಿಯದೆಂಬುದೀಗ ಕೊಳನ ತಡಿಯಲೊಂದು ಹೊರಸು ಕುಳಿರ್ದಡೇನು ಕಳಹಂಸೆಯಾಗಬಲ್ಲುದೆ [ಎಂಬ] ಶಬ್ದಕ್ಕರ್ಥ.

---

೧೦೨

**[1]ಎನಿಸು[1] ಕಾಲ ಕಲ್ಲು ನೀರೊಳಗಿದ್ದಡೇನು, ನೆನೆದು ಮೃದುವಾಗಬಲ್ಲುದೆ? ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ, ಮನದಲ್ಲಿ ದೃಢವಿಲ್ಲದನ್ನಕ್ಕ? ನಿಧಾನವ ಕಾಯ್ದಿರ್ದ ಬೆಂತಱನಂತೆ ಅದಱ ವಿಧಿ ಎನಗಾಯಿತ್ತು, ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - - - - - - - -

ಎನಿಸು ಕಾಲ–ಎಷ್ಟು ದಿವಸ ಪರಿಯಂತರವು, ಕಲ್ಲು–ಪಾಷಾಣವು, ನೀರೊಳಗಿದ್ದಡೇನು–ಉದಕದೊಳಗಿದ್ದರೇನು, ನೆನೆದು ಮೃದುವಾಗಬಲ್ಲುದೆ?–ಕಡಲೆಕಾಳು ಗೋದಿಕಾಳು ಉದ್ದಿನಕಾಳು ಹೆಸರಕಾಳಿನ ಹಾಂಗೆ ನೆನೆದು ಮೆತ್ತಗಾದೀತೆ? ಆಗಲರಿಯದು. ಹಾಂಗೆ,

● ಎನಿಸುಕಾಲ–ಎಷ್ಟು ದಿವಸ ಪರಿಯಂತರವು, [ಕಲ್ಲು ನೀರೊಳಗಿದ್ದಡೇನು]–ಕಲ್ಲು ಹೃದಯದವನುಳ್ಳ ಆತ್ಮನು ನೀರೊಳಗಿದ್ದರೇನು ಪರಮಾನಂದ ಜಲಸ್ವರೂಪವಾದ ಜ್ಞಾನಜಂಗಮಮೂರ್ತಿಗಳ ಸನ್ನಿದಿಯಲ್ಲಿದ್ದುಕೊಂಡು ಓದುತ್ತ ಹಾಡುತ್ತ ಅವರ ಶಿವಾನುಭಾವವನ್ನು ಬೆಸಗೊಂಡು ಕೇಳಿದರೇನು, ನೆನೆದು–ಕಲ್ಲು ಹೃದಯವೆಲ್ಲ ಹೋಗಿ, ಮೃದುವಾಗಬಲ್ಲುದೆ?–ಸದುಹೃದಯವನುಳ್ಳ ಜ್ಞಾನಕಲಾತ್ಮನಾದಾನೆ? ಆಗಲರಿಯನು.

ಎನಿಸು ಕಾಲ–ಎಷ್ಟು ದಿವಸ ಪರಿಯಂತರವು, ನಿಮ್ಮ–ಗುರುಮುಖದಿಂದ ಬಂದಂಥ ಇಷ್ಟಮಹಾಲಿಂಗವನ್ನು, ಪೂಜಿಸಿ–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಏವೆನಯ್ಯಾ–ಏನ ಮಾಡುವೆನಯ್ಯಾ, ಮನದಲ್ಲಿ–ಚಿತ್ತದಲ್ಲಿ, ದೃಢವಿಲ್ಲದನ್ನಕ್ಕ?–ಈ ಲಿಂಗವೆ ಪ್ರಾಣ ಲಿಂಗಕ್ಕೆ ನಾನೇ ಚಿದಂಗಸ್ವರೂಪನು ಈ ಲಿಂಗ ಹೋದರೆ ಈ ಲಿಂಗದೊಡನೆ ಪ್ರಾಣಕೊಟ್ಟೇನು; ಈ ಲಿಂಗವಲ್ಲದನ್ಯದೈವಂಗಳ ಭಜನೆಯ ಮಾಡಬಾರದೆಂಬಂಥ ನಿಷ್ಠೆ ಇರಬೇಕು, ಇಲ್ಲದಿರುವ ಪರಿಯಂತರವು.

ನಿಧಾನವ ಕಾಯ್ದಿರ್ದ ಬೆಂತಱನಂತೆ ಅದರ ವಿಧಿ ಎನಗಾಯಿತ್ತು–ಬೆಂತರನೆಂಬಂಥದು ಪುಣ್ಯತೀರ್ಥಂಗಳಲ್ಲಾಗಲಿ ಪುಣ್ಯಕ್ಷೇತ್ರಂಗಳಲ್ಲಾಗಲಿ ಅನೇಕ ಕಾಲ ಪರಿಯಂತರವು ನಿಕ್ಷೇಪದ್ರವ್ಯವನು ಕಾಯ್ದುಕೊಂಡಿರ್ದು ತನ್ನಾಯುಷ್ಯವು ಪೂರ್ತಿಯಾದಲ್ಲಿ ಹಿಮವತ್ಕೇದಾರೇಶ್ವರ ಇರುವಂಥ ಸ್ಥಾನಕ್ಕೆ ಹೋಗಿ ಸ್ವಾಮೀ ಇಂಥ ಕ್ಷೇತ್ರದಲ್ಲಿ ಇಂಥ ಸ್ಥಾನದಲ್ಲಿ ಇಂತಿಷ್ಟು ದ್ರವ್ಯ ಐತೆಂದು ಹೇಳಿ ತನ್ನ ದೇಹವನ್ನು ಸಾರ್ಥಕಮಾಡಿಕೊಂಬುತ್ತಿಹುದು. ಹಾಂಗೆ, ಒಬ್ಬ ಉಪಾಧಿಕನು ಅನೇಕ ದ್ರವ್ಯವನ್ನು ಗಳಿಸಿ ಕೂಡಲಿಟ್ಟು ತಾನುಣ್ಣದೆ ತನ್ನ ಹೆಂಡಿರು ಮಕ್ಕಳಿಗೆ ಕೊಡದೆ ಒಂದು ದಾನ ಧರ್ಮ ಪರೋಪಕಾರವನ್ನು ಮಾಡದೆ ವ್ಯರ್ಥವಾಗಿ ಸತ್ತು ಅರಮನೆಪಾಲ ಮಾಡುವಂಥ ಉಪಾಧಿಕನ ಇರುವ ಸ್ಥಿತಿಯೂ ಆ ಬೆಂತರನ ಇರುವ ಸ್ಥಿತಿಯೂ ಒಂದೇ ಆಗಿಪ್ಪುದು, ಅದರ ವಿಧಿ ಎನಗಾಯಿತ್ತು–ಅದರ ಪ್ರಾಪ್ತಿ ಎನಗುಂಟಾಯಿತ್ತು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - -

ಎನಿಸು ಕಾಲ ಕಲ್ಲು ನೀರೊಳಗಿದ್ದಡೇನು ನೆನೆದು ಮೃದುವಾಗಬಲ್ಲುದೆ?–ಎಷ್ಟೋ ದಿನ ಕರಣಮಥನ ಕರ್ಕಶ ಕಲುಷಹೃದಯಸ್ವರೂಪವಾದ ಜೀವನು ಶಿವಾನುಭಾವವೆಂಬ ಜಲದಲ್ಲಿ ಅಧಿಷ್ಠಿಸಿಕೊಂಡಿದ್ದರೇನು? ಆ ಶಿವಾನುಭಾವವು ಮನಕ್ಕೆ ವೇಧಿಸಿ ಕರಣಮಂಥನ ಕರ್ಕಶ ಕಲ್ಲು ಹೃದಯವು ನಷ್ಟವಾಗಿ ಹೋಗಿ ಮೆತ್ತಗಾಗಬಲ್ಲುದೆ? ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - -

1–1 ಏಸು (ಟ, ಡ).

.........................

ಏಸುಕಾಲ-ಎಷ್ಟುದಿನ ಪರಿಯಂತರಲು, ಕಲ್ಲು-ಶಿಲೆಯು, ನೀರೊಳಗಿದ್ದಡೇನು-೧ಉದಕದಲ್ಲಿದ್ದರೇನು೧ ಪ್ರಯೋಜನವು, ನೆನೆದು ಮೃದುವಾಗಬಲ್ಲುದೆ?-ತೊಯ್ದು ಮೆಲ್ಲಿತ್ತಾಗಲರಿಯದೆಂಬುವ ಹಾಗೆ, ಏಸುಕಾಲ-ಎಷ್ಟುದಿವಸವು, ನಿಮ್ಮ-ಲಿಂಗವನು, ಪೂಜಿಸಿ-ಅರ್ಚಿಸಿ, ಏವೆನಯ್ಯಾ-ಏನ ಮಾಡುವೆನಯ್ಯಾ, ಮನದಲ್ಲಿ-ಮನಸ್ಸಿನಲ್ಲಿ, ದೃಢವಿಲ್ಲದನ್ನಕ್ಕ?-ದೃಢವಿಶ್ವಾಸ ಉಂಟಾಗುವ ಪರಿಯಂತರಲು, ದೇವಮನುಷ್ಯರನು ಸೇರದೆ ಇರುವ ಅಂತರಪಿಶಾಚಿಯು ದ್ರವ್ಯವ ಕಾಯ್ದುಕೊಂಡಿರ್ದಡೆಯೂ ಆ ದ್ರವ್ಯವದಕ್ಕೆ ವಶಗತವಾಗದಿರುವ ಹಾಂಗೆ ಭಕ್ತಿಯ ಮಾಡಿದೊಡೆಯೂ ಮುಕ್ತಿಯೆಂಬ ದ್ರವ್ಯ ತನಗೆ ದೊರಕೊಳ್ಳಲಿಲ್ಲವೆಂಬುದೀಗ ನಿಧಾನವ ಕಾಯ್ದಿರ್ದ ಬೆಂತಱನಂತೆ ಅದರ ವಿಧಿ ಎನಗಾಯಿತ್ತು ಎಂಬ ಶಬ್ದಕ್ಕರ್ಥ. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

.........................

೧-೧ X (ಡ).

---

## ೧೦೩

**ಸಂತವಿದ್ದ ಮನೆಗೆ ಕೊಂತವ ತಂದಂತೆ ಇದನೆಂತು [1]ಸಂತೈಸುವೆನು?[1] ಸಂತೆಯ [2]ಗುಡಿಸಲ[2] ಸೂಳೆಗೆ ಕೊಂತವಳವಡುವುದು? ಕೂಡಲಸಂಗಮದೇವರ [3]ಮಹತ್ವ ಆರಿಗೆಯೂ[3] ಅಳವಡದು!**

I- - - - - - - - - - - - - - - - - - - - - - - - - - - - - - - - - - - - - - - - - - -

ಸಂತವಿದ್ದ ಮನೆಗೆ-ನಾಲ್ವರು ಅಣ್ಣ ತಮ್ಮರು ಮಕ್ಕಳು ಮೊಮ್ಮಕ್ಕಳು ಇದ್ದಂಥ ಬಹುಕುಟುಂಬದ ಮನೆತನಕ್ಕೆ, ಕೊಂತವ ತಂದಂತೆ-ಅದರೊಳಗೊಬ್ಬ ೧ಪೋಟ್ಟಿ೧ ಹುಟ್ಟಿ ಜಗಳವ ತಂದು ಮೇಲೆ ಹಾಕಿದಲ್ಲಿ, ಇದನೆಂತು ಸಂತೈಸುವೆನು?-ಇದ ನಾ ಹೇಂಗೆ ತರಹರ ಮಾಡಲಿ? ಸಂತೆಯ ಗುಡಿಸಲ ಸೂಳೆಗೆ-ಸಂತೆ ಪ್ಯಾಟಿಗಳಲ್ಲಿ ಹುಲ್ಲುಗುಡಿಸಲವ ಕಟ್ಟಿಕೊಂಡಿರುವಂಥ ವೇಶ್ಯಾಂಗನೆಗೆ, ಕೊಂತವಳವಡವುದೆ?-ಅವಳಿಗೇನಾದರೂ ಒತ್ತೆಯನ್ನು ಹಿಡಿಯಬೇಕಾದರೆ ಕತ್ತಿ ಕಠಾರಿ ಚೂರಿ ಬಾಕು ಮೊದಲಾದವನ್ನು ಅಡಕವಾಗುವಂಥ ವಸ್ತುವನ್ನು ಹಿಡಿಯಬೇಕಲ್ಲದೆ ಈಟಿಕಟ್ಟಿಗೆ ಒತ್ತೆ ಹಿಡಿವುದಕ್ಕಾದೀತೆ? ಆಗದು; ಎಂಬಲ್ಲಿ ಅಲ್ಲಿಗೊಬ್ಬ ವಿಟಪುರುಷರು ಬಂದು ಕೊಟ್ಟೇನೆಂದರೆ ಎನ್ನ ಕೈಯಾಗ ಹಣಕಾಸಿಲ್ಲವು. ಅಷ್ಟೊತ್ತಿಗೆ ನಮ್ಮ ದೊರೆಯಾದಂಥಾತ ಚಾವಡಿಯ ಮೇಲೆ ಸಂಬಳವ ಕೊಡುತ್ತೈದಾನೆ. ಬಂದದ್ದು ಕೊಟ್ಟೇನೆಂದು ತನ್ನನ ಕೈಯೊಳಗಿದ್ದಂಥ ಈಟಿಕಟ್ಟಿಗೆಯನ್ನು ಒತ್ತೆಯ ಮಡಗಿ ರತಿಕೂಟವನ್ನು ಕುಡಿ ಹೋಗುವನು. ಮತ್ತೆ ಬಂದಂಥ ವಿಟಪುರುಷರು ಆ ಈಟಿಕಟ್ಟಿಗೆಯನ್ನು ನೋಡಿ ಒಳಗೊಬ್ಬ ವಿಟಪುರುಷನೈದಾನೆಂದು ಹಿಂದಕ್ಕೆ ತಿರುಗಿ ಹೋಗುವರು. ಅವಳಿಗೆ ಬರುವಂಥ ಆದಾಯವು ನಷ್ಟವಾಗಿ ಹೋಗುತ್ತಿಹುದು. ಅವಳಾ ಈಟಿಕಟ್ಟಿಗೆಯನ್ನು ಸಾಯಂಕಾಲ ಪರಿಯಂತರ ನೋಡಿ ಸಾಯಂಕಾಲವಾದ ಮೇಲೆ ಗುಡಿಸಲೊಳಗೆ ಅಡ್ಡನಿಟ್ಟರೂ ಅಡಗದೆ ನೆಟ್ಟಗಿಟ್ಟರೂ ಅಡಗದೆ ಇದ್ದಲ್ಲಿ ಸಿಟ್ಟಿಗೆ ಬಂದು ಇದನೇನು ನೋಡುತ್ತೀರಿಯೆಂದು ಮುರಿದು ಒಲೆಯೊಳಗೆ ಹಾಕಿಬಿಡುತ್ತಿಹಳು.

ಕೂಡಲಸಂಗಮದೇವರ-ಪರಶಿವಲಿಂಗದ, ಮಹತ್ವ-ತತ್ತ್ವಭುವನ ಬ್ರಹ್ಮಾಂಡತಂಡಂಗಳ ನುಂಟುಮಾಡಿ ವಿನೋದಿಸುವಂಥ ಮಹಿಮಾತಿಶಯವು, ಅರಿಗೆಯೂ-ಬ್ರಹ್ಮವಿಷ್ಣ್ವಾದಿಗಳೊಳ ಗೊರ್ವರಿಗೆಯೂ, ಅಳವಡದು-ದೊರಕೊಳ್ಳದುಯೆಂಬುದರ್ಥ.

● ಸಂತವಿದ್ದ ಮನೆಗೆ-ಅನೇಕ ಸ್ಥಾವರಾದಿಗಳ ಭಜನೆಯಲ್ಲಿ ಸ್ವಸ್ಥಿರನಾಗಿದ್ದಂಥ ಸಿದ್ಧಾಂತಿಯ ಅಂಗಕ್ಕೆ, ಕೊಂತವ ತಂದಂತೆ-ವೀರಶೈವ ದೀಕ್ಷೆಯಿಂದೊಂದು ಇಷ್ಟಲಿಂಗಸಂಬಂಧವ ಕರುಣಿಸಿಕೊಡಲು, ಇದನೆಂತು ಸಂತೈಸುವೆನು?-ಈ ಒಂದು ಲಿಂಗದಲ್ಲೆನ್ನ ಮನಸ್ಸು ಹೇಂಗೆ ತರಹರವ ಮಾಡಲಿ? ಸಂತೆಯ ಗುಡಿಸಲ ಸೂಳೆಗೆ-ಸಂತೆಯೆಂದರೆ ಇಂದ್ರಿಯಂಗಳು, ಗುಡಿಸಲೆಂದರೆ ದೇಹ, ಸೂಳೆಯೆಂದರೆ ವಿಷಯಂಗಳು; ಈ ದೇಹೇಂದ್ರಿಯ ವಿಷಯಂಗಳ ವರ್ತನೆಯೊಡನೆ ಕೂಡಿ ಚರಿಸುವಂಥ ವಾಗದ್ವೈತಿಯಾದ ವೇದಾಂತಿಗೆ, ಕೊಂತವಳವಡವುದೆ?-ಇಷ್ಟಲಿಂಗಸಂಬಂಧತ್ವ ಅಳವಟ್ಟಿತ್ತೆ? ಅಳವಡದು.

ಕೂಡಲಸಂಗಮದೇವರ-ಇಷ್ಟಮಹಾಲಿಂಗದ ಮಹತ್ವ-ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗವ ಸಂಬಂಧವ ಮಾಡಿಕೊಂಡು ಅವಿರಳಜ್ಞಾನ ಕ್ರಿಯೆವಿಡಿದು ಆಚರಿಸುವಂಥ ಆಚರಣೆಯು, ಆರಿಗೆಯೂ-ದ್ವೈತಾದ್ವೈತಿಗಳಿಗೆಯೂ, ಅಳವಡದು-ದೊರಕೊಳ್ಳದು.

೧-೧ ಪೊಟಂಗ (ಗ).

II- - - - - - - - - - - - - - - - - - - - - - - - - - - - - - - - - - - - - - - -

1-1 ಸಂತವಿಸುವೆನು(ಚ,ಜ). 2-2 ಗುಡಿಲ(ಚ,ಜ).

.........................

ಸಂತವಿದ್ದ ಮನೆಗೆ ಕೊಂತವ ತಂದಂತೆ-ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವೆಂಬ ಭಕ್ತಿಗೃಹಕ್ಕೆ ೨ಸಂತಾಪ೨ ಹುಟ್ಟಿತ್ತು. ಇದನೆಂತು ಸಂತವಿಸುವೆನು?-ಇವರು ಗುರುಲಿಂಗಜಂಗಮಸ್ವರೂಪು ಅಹುದೋ ಅಲ್ಲವೋ ಎಂದು ಅನುಮಾನ ಹುಟ್ಟಿದಲ್ಲಿ ಇದನು ಹೇಂಗೆ ಸಮಾಧಾನವ ಮಾಡಬೇಕು?-ಸಂತೆಯ ಗುಡಿಸಲ ಸೂಳೆಗೆ ಕೊಂತವಳವಡುವುದೆ?-ಒಂದು ಕೊಟ್ಟು ಎರಡು ಹಡದುಕೊಳಬೇಕೆಂಬ ಉಪಾಧಿಭಕ್ತನೆಂಬ ಪಣ್ಯಾಂಗನೆಗೆ ಸಮರಭಕ್ತಿಯೆಂಬ ಕೊಂತವು ಅಂಗೀಕೃತವಾಗುವುದೆ? ಕೂಡಲಸಂಗಮದೇವರ ಮಹತ್ವ ಅರಿಗೆಯೂ ಅಳವಡದು-ಪರಶಿವಲಿಂಗದ ಮಹಿಮೆಯು ಜೀವರುಗಳಿಗಾರಿಗೆಯೂ ಅಂಗವಾಗದು.

.........................

೨-೨ ಸಂಕಲ್ಪ (ಚ).

III- - - - - - - - - - - - - - - - - - - - - - - - - - - - - - - - - - - - - - - -

2-2 ಗುಡಿಲ ( ಟ,ಡ).

.........................

ಸಂತವಿದ್ದ – ಕದನಕರ್ಕಶವಿಲ್ಲದೆ ಸಹಜಭಾವದಲ್ಲಿರ್ದ, ಮನೆಗೆ–ಗೃಹಕ್ಕೆ, ಕೊಂತವ ತಂದಂತೆ–ಈಟಿಯ ತೆಗೆದುಕೊಂಡುಬಂದಲ್ಲಿ ವಿರುದ್ಧ ಹುಟ್ಟುವ ಹಾಂಗೆ, ಪ್ರಪಂಚಿನ ತರಹರವನುಳ್ಳಂಗಕ್ಕೆ ಅಹಂಕಾರವೆಂಬಲಗುಂಟಾದಲ್ಲಿ ಜೀವತ್ರಯಂಗಳೆಂಬಣ್ಣತಮ್ಮಂಗಳ ಪ್ರಪಂಚು ವರ್ಧನವಾಗಿಪ್ಪುದೆಂಬುದೀಗ, ಮತ್ತಂ ಕರಣೇಂದ್ರಿಯಂಗಳ ತರಹರವನುಳ್ಳ ಚಿದಂಗಕ್ಕೆ ಜ್ಞಾನವೆಂಬಲಗು ಒಪ್ಪಿತ್ತು ಎಂಬುದೀಗ ಸಂತವಿದ್ದ ಮನೆಗೆ ಕೊಂತವ ತಂದಂತೆ ಎಂಬ ಶಬ್ದಕ್ಕರ್ಥ. ಇದಂ–ಈ ಪ್ರಪಂಚನು, ಎಂತು–ಹೇಂಗೆ, ಸಂತೈಸುವೆನು–ತರಹರಿಸುವೆನು.

ಹಲವು ದೈವದ [೩]ಭಜನೆಯುಳ್ಳ[೩] ಭಿನ್ನಭಕ್ತನಿಗೆ ಲಿಂಗಭಕ್ತಿಯ ನಿಷ್ಠೆ ಅಳವಡದೆಂಬುದೀಗ ಸಂತೆಯ [೪]ಗುಡಿಲ[೪] ಸೂಳೆಗೆ ಕೊಂತವಳವಡುವುದೆ ಎಂಬ ಶಬ್ದಕ್ಕರ್ಥ. ಕೂಡಲಸಂಗಮದೇವರ–ಪರಶಿವಲಿಂಗದ, ಮಹತ್ವ–ಮಹಿಮೆಯು, ಆರಿಗೂ–ದ್ವೈತಾದ್ವೈತ ಭಿನ್ನಭಕ್ತರುಗಳಿಗಾರಿಗಾಯಿತ್ತಾದೊಡೆಯೂ, ಅಳವಡದು–ಪ್ರಾಪ್ತಿಯಾಗದು.

..........................

೩–೩ ಭಿನ್ನಭಜನೆಯನುಳ್ಳ (ಡ). ೪–೪ x (ಡ).

V- - - - - - - - - - - - - - - - - - - - - - - - - - - - - - - - - - - - - - - - - - - -

ಕರಣೇಂದ್ರಿಯಾದಿಗಳ ತರಹರವುಳ್ಳ ಚಿದಂಗಕ್ಕೆ ಜ್ಞಾನವೆಂಬಲಗು ಒಪ್ಪಿತೆಂಬುದೀಗ ಸಂತವಿದ್ದ ಮನೆಗೆ ಕೊಂತವ ತಂದಂತೆ ಎಂಬ ಶಬ್ದಕ್ಕರ್ಥ.

ಹಲವು ದೈವಂಗಳ ಭಜನೆ [ಯುಳ್ಳ ಭಿನ್ನ] ಭಕ್ತಂಗೆ ಏಕಲಿಂಗನಿಷ್ಠವ್ರತವಳವಡದೆಂಬುದೀಗ [ಸಂತೆಯ ಗುಡಿಲ ಸೂಳೆಗೆ ಕೊಂತವ] ಳವಡುವುದೆ? ಎಂಬುದರ್ಥ.

---

೧೦೪

**ಕೊಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡಡೆ ಕೂಸಿಂಗಲ್ಲ; [1]ಭುಜಂಗಗಲ್ಲ[1]. ಕೂಸನೊಮ್ಮೆ [2]ಸಂತೈಸುವಳು[2] [3]ಭುಜಂಗನೊಮ್ಮೆ[3] ನೆರೆವಳು. ಧನದಾಸೆ ಬಿಡದು ಕೂಡಲಸಂಗಮದೇವಾ!**

I- - - - - - - - - - - - - - - - - - - - - - - - - - - - - - - - - - - - - - - - - - - -

ಕೂಸುಳ್ಳ ಸೂಳೆ–ಒಂದು ಶಿಶುವುಂಟಾದ ವೇಶ್ಯಾಂಗನೆಯು, ಧನದಾಸೆಗೆ–ದ್ರವ್ಯವನ್ನು ಗಳಿಸಬೇಕೆಂಬಂಥ ಅಪೇಕ್ಷೆಗೆ, ಒತ್ತೆಯ ಕೊಂಡಡೆ–ವರಹ ಹೊನ್ನು ರೂಪಾಯಿ ಸೀರೆ ಕುಪ್ಪಸ ಮೊದಲಾದವನ್ನು ಒತ್ತೆಯ ಹಿಡಿದರೆ, ಕೂಸಿಂಗಲ್ಲ–ತನ್ನ ಶಿಶುವಿಂಗೂ ಪರಿಣಾಮವಲ್ಲವು, ಭುಜಂಗಗಲ್ಲ!–ಬಂದಂಥ ವಿಟಪುರುಷರಿಗೂ ಪರಿಣಾಮವಲ್ಲವು.

ಕೂಸನೊಮ್ಮೆ ಸಂತೈಸುವಳು–ಶಿಶುವೇನಾದರೂ ಗರ್ರಗರ್ರೆಂದತ್ತಲ್ಲಿ ಎಣ್ಣೆ ಬೆಣ್ಣೆ ನೊರೆವಾಲು ಕುಚಕ್ಷೀರನುಣಿಸುತ್ತ ಬಿಸಿಯುದಕದಿಂದ ಮೈದೊಳೆದು ತೊಟ್ಟಿಲೊಳು ಮಲಗಿಸಿ ಚೌಬಡಿದು ಜೋಗುಳವ ಪಾಡುತ್ತ ಕೂಸನೊಮ್ಮೆ ಸಂತವಿಡುವಳು, ಭುಜಂಗನೊಮ್ಮೆ ನೆರೆವಳು–ಬಂದಂಥ ವಿಟಪುರುಷನು ಬಹಳ ಹೊತ್ತಾಯಿತ್ತು ನಾ ಹೋಗಬೇಕೆಂದಲ್ಲಿ ಅವನ ಬದಿಗೊಂದು ವೇಳೆ

ಹೋಗಿ ರತಿಕೂಟವನ್ನು ಕೂಡಿ ಅವನನೊಮ್ಮೆ ಸಂತವಿಟ್ಟು ಕಳುಹಿಸಿ ಕೊಡುತ್ತಿಹಳು, ಧನದಾಸೆ ಬಿಡದು–ಮತ್ತೆ ದ್ರವ್ಯವನ್ನು ಗಳಿಸಬೇಕೆಂಬಂಥ ಅಪೇಕ್ಷೆಯು ಬಿಡುಗಡೆಯಾಗದು, ಕೂಡಲಸಂಗಮದೇವಾ–ಎಲೆ ವಿಟಪುರುಷನೆಯೆಂಬ ದೃಷ್ಟೋಪಮಾನದ ಹಾಂಗೆ.

● ಕೂಸುಳ್ಳ ಸೂಳೆ; ಕೂಸು–ಗುರು ಕರುಣಿಸಿಕೊಟ್ಟಂಥ ಇಷ್ಟಲಿಂಗ, [ಸೂಳೆ] ಸಂಬಂಧವನುಳ್ಳ ಉಪಾಧಿಕಭಕ್ತನೆಂಬ ಪಣ್ಯಾಂಗನೆಯು, ಧನದಾಸೆಗೆ–ಚತುರ್ವಿಧಫಲಪದಂಗಳನು ಪಡೆದನುಭವಿಸಬೆಕೆಂಬಂಥ ಅಪೇಕ್ಷೆಗೆ, ಒತ್ತೆಯ ಕೊಂಡಡೆ–ಧೂರ್ಜಟಿ ವಿರೂಪಾಕ್ಷ ಅರುಣಾಚಲ ಗಂಗಾಧರೇಶ್ವರ ಮೊದಲಾದ ಸ್ಥಾವರಮೂರ್ತಿಗಳಿರುವಂಥ ಸ್ಥಾನಕ್ಕೆ ಹೋಗಿ ಎಣ್ಣೆ ಮಜ್ಜನವ ನೀಡಿಸಿ ಎಲೆಪೂಜೆಯನ್ನು ಕಟ್ಟಿಸಿ ಪರ್ವ ಪಾಡ್ಯವನ್ನು ಮಾಡಿಸಿ ದಾನ ದಕ್ಷಿಣೆಯನ್ನು ಕೊಟ್ಟು ಅಡ್ಡಡ್ಡ ಬಿದ್ದು ಆರಾಧಿಸಿದರೆ, ಕೂಸಿಂಗಲ್ಲ–ಗುರು ಕರುಣಿಸಿಕೊಟ್ಟಂಥ ಇಷ್ಟಲಿಂಗಕ್ಕೂ ಪರಿಣಮವಲ್ಲವು, ಭುಜಂಗಗಲ್ಲ–ಸ್ಥಾವರಮೂರ್ತಿಗಳೂ ಪರಿಣಾಮವಲ್ಲವು.

ಕೂಸನೊಮ್ಮೆ ಸಂತೈಸುವಳು–ಗುರು ಕರುಣಿಸಿಕೊಟ್ಟ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಕಂದ ವೃತ್ತ ಗದ್ಯ ಪದ್ಯ ಪ್ರಬಂಧಗಳಿಂದಾ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುತ್ತಿರ್ಪಳು, ಭುಜಂಗನೊಮ್ಮೆ ನೆರೆವಳು–ಧೂರ್ಜಟಿ ವಿರೂಪಾಕ್ಷ ಅರುಣಾಚಲ ಗಂಗಾಧರೇಶ್ವರನೆಂಬ ಸ್ಥಾವರಮೂರ್ತಿಗಳಿರುವ ಸ್ಥಾನಕ್ಕೆ ಹೋಗಿ ಎಣ್ಣೆ ಮಜ್ಜನವ ನೀಡಿಸಿ ಎಲೆಪೂಜೆಯನ್ನು ಕಟ್ಟಿಸಿ ಪರ್ವ ಪಾಡ್ಯವನ್ನು ಮಾಡಿಸಿ ದಾನದಕ್ಷಿಣೆಯನ್ನು ಕೊಟ್ಟು ಅಡ್ಡಡ್ಡ ಬಿದ್ದು ಆರಾಧಿಸುತ್ತಿರ್ಪಳು. ಧನದಾಸೆ ಬಿಡದು–ಮತ್ತೂ ಚತುರ್ವಿಧಫಲಪದಂಗಳ ಪಡದನುಭವಿಸಬೇಕೆಂಬಂಥ ಅಪೇಕ್ಷೆ ಬಿಡುಗಡೆಯಾಗದು, ಕೂಡಲಸಂಗಮದೇವಾ!–ಎಲೆ ಪರಸಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - -

1–1 ಬೊಜಗಂಗಲ್ಲ (ಚ,ಜ). 3–3 ಬೊಜಗನನೊಮ್ಮೆ (ಚ,ಜ).

..........................

ಕೂಸುಳ್ಳ–ಇಷ್ಟಲಿಂಗವೆಂಬ ಪುತ್ರನುಂಟಾದ, ಸೂಳೆ ಧನದಾಸೆಗೆ ಒತ್ತೆಯ ಕೊಂಡಡೆ–ಒಂದು ಕೊಟ್ಟು ಎರಡು ಹಡದುಕೊಳಬೇಕೆಂಬ ಉಪಾಧಿ ಭಕ್ತನೆಂಬ ಪಣ್ಯಾಂಗನೆಯು ಧರ್ಮಾರ್ಥಕಾಮಮೋಕ್ಷವೆಂಬ ಚತುರ್ವಿಧಪದಂಗಳಾಗಬೇಕೆಂಬ ವಾಂಛಿತಾರ್ಥವನು ತೆಗೆದುಕೊಂಡರೆ, ಕೂಸಿಂಗಲ್ಲ ಬೊಜಗಂಗಲ್ಲ!–ಉಪಾದಿ ಪೂಜಾಕ್ರೀಗಳು ಆ ಇಷ್ಟಲಿಂಗವೆಂಬ ಪುತ್ರನಿಗೂ ಅಲ್ಲ ಆ ಪರದೈವಂಗಳಿಗೂ ಅಲ್ಲ.

ಕೂಸನೊಮ್ಮೆ ಸಂತೈಸುವಳು–ಇಷ್ಟಲಿಂಗಕಷ್ಟವಿಧಾರ್ಚನೆ ಷೋಡಶೋಪಚಾರವನು ಮಾಡಿ ಅದನೊಂದು ವೇಳೆ ಸಮಾಧಾನ ಮಾಡುವಳು, ಬೊಜಗನನೊಮ್ಮೆ ನೆರೆವಳು–ಪರದೈವದಲ್ಲೊಂದು ವೇಳೆ ಹೋಗಿ ಭಕ್ತಿಯ ಮಾಡಿ ಕೂಡುವಳು. ದನದಾಸೆ ಬಿಡದು ಕೂಡಲಸಂಗಮದೇವಾ!–ಈ ಉಪಾಧಿಭಕ್ತಂಗೆ ಚತುರ್ವಿಧಫಲಪದಂಗಳ ಮೇಲಣ ಅಪೇಕ್ಷೆಯು ಮಾಣದೆಲೆ ಲಿಂಗವೆ.

● ಮತ್ತಂ ಇಷ್ಟಲಿಂಗವೆಂಬ ಮಗುವುಳ್ಳ ಒಂದು ಕೊಟ್ಟು ಎರಡು ಹಡದುಕೊಳ್ಳಬೇಕೆಂಬ ಪುಣ್ಯಾಂಗನೆಯು ಚತುರ್ವಿಧ ಫಲಪದವೆಂಬ ವಾಂಛಿತಾರ್ಥವನು ತೆಗೆದುಕೊಂಡರೆ ಆ ಇಷ್ಟಲಿಂಗಕ್ಕೂ ಅಲ್ಲ ಆ ಜಂಗಮಕ್ಕೂ ಅಲ್ಲ; ಆ ಇಷ್ಟಲಿಂಗವನೊಮ್ಮೆ ಸಂತೈಸುವಳು, ಆ ಜಂಗಮದಲ್ಲಿ ಕೂಡಿ ಒಮ್ಮೆ ಭಕ್ತಿಯ ಮಾಡುವಳು. ಇವಳಿಗೆ ಚತುರ್ವಿದ ಫಲಪದಂಗಳಪೇಕ್ಷೆ ಮಾಣದೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - -

1–1 ಭುಜಗಂಗಲ್ಲ (ಟ,ಡ). 2–2ಸಂತವಿಡುವಳು (ಟ,ಡ). 3–3 ಭುಜಗನನೊಮ್ಮೆ (ಟ,ಡ).

..........................

ಕೂಸುಳ್ಳ–ಮಗುವುಳ್ಳ, ಸೂಳೆ–ವೇಶ್ಯಾಸ್ತ್ರೀಯಳು, ಧನದಾಸೆ–ದ್ರವ್ಯದಾಪೇಕ್ಷೆಗೆ, ಒತ್ತೆಯ ಕೊಂಡಡೆ–ಬೆಲೆಯ–ತೆಗೆದುಕೊಂಡರೆ, ಕೂಸಿಂಗಲ್ಲ ಭುಜಗಂಗಲ್ಲ!–ಕೂಸಿಗೂ ಸುಖವಿಲ್ಲ ಭುಜಗನಿಗೂ ಸುಖವಿಲ್ಲದಿರುವ ಹಾಂಗೆ, ಶಿವಭಕ್ತನಾಗಿರ್ದು ಫಲಕಾಂಕ್ಷೆಯಿಂದ ಅನ್ಯದೈವದ ಭಜನೆಯನಂಗೀ ಕರಿಸಿದಲ್ಲಿ ಇಹದ ಸುಖ ಪರದ ಮುಕ್ತಿ ಪರಿಣಾಮವು ದೊರಕೊಳಲರಿಯ ದೆಂಬುದೀಗ.

..........................

೧–೧ + ದೇ(ಡ).

V- - - - - - - - - - - - - - - - - - - - - - - - - - - - - - - - - - - - - - - - - - - - - -

1–1 ಬೊಜಗಂಗಲ್ಲ (ಪ). 3–3 ಬೊಜಗನನೊಮ್ಮೆ (ಪ).

..........................

ಗುರೂಪದೇಶದಿಂದಂಗದ ಮೇಲೆ ಇಷ್ಟಲಿಂಗ ಸಂಬಂಧವಾದ ಭಿನ್ನಭಕ್ತನು ಎಂಬುದೀಗ, ಕೂಸುಳ್ಳ ಸೂಳೆಯೆಂಬುದರ್ಥ. ಫಲಪದಂಗಳ ಮೇಲಣ ವಾಂಛೆಗೆ ಎಂಬುದೀಗ, ಧನದಾಸೆಗೆ ಎಂಬುದರ್ಥ. ಭಿನ್ನದೈವಂಗಳ ಭಜನೆಯನಂಗೀಕರಿಸಿದರೆ ಎಂಬುದೀಗ ಒತ್ತೆಯ ಕೊಂಡಡೆ ಎಂಬುದರ್ಥ. ಇಷ್ಟ ಲಿಂಗದ ಪೂಜೆಯಳವಡಲಿಲ್ಲವೆಂಬುದೀಗ ಕೂಸಿಂಗಲ್ಲ, ಅನ್ಯದೈವದ ಭಜನೆಯಳವಡಲಿಲ್ಲವೆಂಬುದೀಗ ಬೊಜಗಂಗಲ್ಲ.

ಇಷ್ಟಲಿಂಗವನೊಂದು ವೇಳೆ ಪೂಜೋಪಚಾರಂಗಳಿಂದೆ ಸತ್ಕರಿಸುವಳು ಎಂಬುದೀಗ ಕೂಸನೊಮ್ಮೆ ಸಂತವಿಸುವಳು. ಭಿನ್ನದೈವಂಗಳ ಭಜನೆಯಲೊಂದು ವೇಳೆ ಸಂಯೋಗಿಸುವಳು ಎಂಬುದೀಗ ಬೊಜಗನನೊಮ್ಮೆ ನೆಜಿವಳು ಎಂಬುದರ್ಥ.

---

**ಎರದೆಲೆಯಂತೆ ಒಳಗೊಂದು ಹೊಱಗೊಂದಾದಡೆ [1]ಮ[1] ಚ್ಚುವನೆ ಶಿವನು? ಬಾರದ ಭವಂಗಳಲ್ಲಿ ಬರಿಸುವನಲ್ಲದೆ [1]ಮ[1]ಚ್ಚುವನೆ ಹರನು? ಅಘೋರ ನರಕವನುಣಿಸುವನಲ್ಲದೆ ಮಚ್ಚುವನೆ? ಉಡುವಿನ ನಾಲಗೆಯಂತೆ ಎರಡಾದಡೆ ಕೂಡಲಸಂಗಯ್ಯ [1]ಮ[1] ಚ್ಚುವನೆ?**

I- - - - - - - - - - - - - - - - - - - - - - - - - - - - - - - - - - - - - - - - - - - - - -

ಎರದೆಲೆಯಂತೆ ಒಳಗೊಂದು ಹೊಱಗೊಂದಾದಡೆ–ಬೋರೆ ಎಲೆಯೆಂಬಂಥದು ಹೊರಗೆ ನೋಡಿದರೆ ಬೆಳ್ಳಗಿರುವುದು ಒಳಗೆ ನೋಡಿದರೆ[೧] ಕರ್ರಗೆ ಇರುವುದು. ಹಾಂಗೆ, ಬಹಿರಂಗದಲ್ಲಿ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿ ಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವನ್ನು ಧರಿಸಿಕೊಂಡಿದ್ದರೂ ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕ ಪ್ರಪಂಚ ಕಾಪಟ್ಯವನು ಮುಂದುಗೊಂಡಿದ್ದರೆ; ಶಿವನು–ಪರಮೇಶ್ವರನು, ಮಚ್ಚುವನೆ? ಮಮಕರಿಸಿಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಾನೆ? ಕೊಡನು, ಬಾರದ ಭವಂಗಳಲ್ಲಿ–ಎಲ್ಲಾ ಆತ್ಮರುಗಳು ಹುಟ್ಟಿ ಹುಟ್ಟಿ ಬರುವಂಥದೆ ಮನುಜಯೋನಿ ದೇವತಾಜನ್ಮ ಆಕಳಶರೀರ ಅದಲ್ಲದೆ ನಿಕೃಷ್ಟಾದಿ ಯೋನಿದ್ವಾರಂಗಳಲ್ಲಿ, ಬರಿಸುವನಲ್ಲದೆ, ಹರನು–ಪರಮೇಶ್ವರನು, ಮಚ್ಚುವನೆ?–ಮಮಕರಿಸಿಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಾನೆ? ಕೊಡನು.

ಅಘೋರ ನರಕವನುಣಿಸುವನಲ್ಲದೆ–ಭಯಂಕರವಾದ ನಿರಯವನನುಭವಿಸುವ ಹಾಂಗೆ ಮಾಡುವನಲ್ಲದೆ, ಮಚ್ಚುವನೆ?–ಮಮಕರಿಸಿಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಾನೆ? ಕೊಡಲರಿಯನು. ಉಡುವಿನ ನಾಲಗೆಯಂತೆ ಎರಡಾದಡೆ–"ಉಡು ವಸ್ತ್ರ ಮಮೃಗಭೇದೇ ಚ" ಎಂದು ಎಲ್ಲಾ ಮೃಗಂಗಳಿಗೆ ಏಕನಾಲಗೆಯಾದರೆ ಉಡುವೆಂಬಂಥ ಮೃಗಕ್ಕೆ ಎರಡು ನಾಲಗೆ ಉಂಟಾಗಿರ್ಪವು. ಹಾಂಗೆ, ಸತ್ಯ ಅಸತ್ಯವೆಂಬ ದ್ವಿಜಿಹ್ವೆವುಂಟಾದರೆ, ಕೂಡಲಸಂಗಯ್ಯ–ಪರಶಿವಲಿಂಗವು, ಮಚ್ಚುವನೆ?–ಮಮಕರಿಸಿಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಾನೆ? ಕೊಡನು.

..........................

೧ +ಹಚ್ಚಗೆ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - - -

1–1ಮೆ (ಚ,ಜ)

..........................

ಎರದೆಲೆಯಂತೆ ಒಳಗೊಂದು ಹೊಱಗೊಂದಾದಡೆ ಮೆಚ್ಚುವನೆ?–ಬೋರೆಪರ್ಣದ ಹಾಂಗೆ, ಅಂತರಂಗದಲ್ಲಿ ಸಂಕಲ್ಪ ವಿಕಲ್ಪ ವಂಚನೆ ಉದಾಸೀನ ಕ್ಷುದ್ರ ಮಿಥ್ಯ ಆತ್ಮತೇಜ ಅಹಂಕಾರವು, ಬಹಿರಂಗದಲ್ಲಿ ತನು ನಿಮ್ಮದು ಮನ ನಿಮ್ಮದು, ಧನ ನಿಮ್ಮದು ನಾ ನಿಮ್ಮ ತೊತ್ತು ನಾ ನಿಮ್ಮ ಗೌಡಿ ಹೀಗುಂಟಾದರೆ ಎಂದೂ ಒಡಂಬಡನು. ಮುಂದಕ್ಕೆ ಕಾಣಬಂದರ್ಥ.

..........................

೨-೨ ಹಿಂಗುಪಾದಕಿ (ಜ). ೩-೩ ದು (ಚ,ಜ).

---

೧೦೬

**ಭಕ್ತರ ಕಂಡಡೆ ಬೋಳಪ್ಪಿರಯ್ಯಾ, ಶ್ರವಣರ ಕಂಡಡೆ ಬತ್ತಲೆಯಪ್ಪಿರಯ್ಯಾ, ಹಾರುವರ ಕಂಡಡೆ ಹರಿನಾಮವೆಂಬಿರಯ್ಯ, ಅವರವರ ಕಂಡಡೆ ಅವರವರಂತೆ. ಸೂಳೆಗೆ ಹುಟ್ಟಿದವರ ಎನಗೊಮ್ಮೆ ತೋಱದಿರಯ್ಯಾ ಕೂಡಲಸಂಗಮದೇವರ ಪೂಜಿಸಿ, ಅನ್ಯದೈವಂಗಳಿಗೆಱಗಿ ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ!**

I- - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತರ ಕಂಡಡೆ [ಬೋಳಪ್ಪಿರಯ್ಯಾ-] ನೂರಾರು ಶಿವಭಕ್ತರೇನಾದರೂ ದೀವಳಿಗೆ ಶಿವರಾತ್ರಿ ಯುಗಾದಿ ಪಾಡ್ಯ ತತ್ಕಾಲದಲ್ಲಿ ಪುಣ್ಯತೀರ್ಥ ಪುಣ್ಯಕ್ಷೇತ್ರಂಗಳಲ್ಲಾಗಲಿ ಚೌಕಿಮಠಂಗಳಲ್ಲಾಗಲಿ ಭಕ್ತರ ಗೃಹಂಗಳಲ್ಲಾಗಲಿ ಅಂಗಿ ಮುಂಡಾಸವನ್ನು ತೆಗೆದು ಜಳಕ ಜಂತಾವಳಿಗಳ ಮಾಡಿಕೊಂಡು ತತ್ತಸ್ಥಾನಕ್ಕೆ ವಿಭೂತಿ ರುದ್ರಾಕ್ಷಿಗಳ ಧರಿಸಿಕೊಂಡು ಜಪಶಿವಾರ್ಚನೆಯ ಮಾಡುತ್ತಿದ್ದಲ್ಲಿ ಅಲ್ಲಿಗೊಬ್ಬ ಉಪಾಧಿಕನು ಬಂದು ತಾನು ಅವರ ಹಾಂಗೆ ಅಂಗಿ ಮುಂಡಾಸವನ್ನು ತೆಗೆದು ಜಳಕ ಜಂತಾವಳಿಗಳ ಮಾಡಿಕೊಂಡು ತತ್ತಸ್ಥಾನಕ್ಕೆ ವಿಭೂತಿ ರುದ್ರಾಕ್ಷಿಗಳ ಧರಿಸಿಕೊಂಡು ಶಿವಕವಚ ರುದ್ರಕವಚ ಶಿವಸಹಸ್ರ ಗಣಸಹಸ್ರ ದೇವಿಸಹಸ್ರ ಮೊದಲಾದವನು ಕಲಿತುಕೊಂಡು ಅವರಿಗಿಂತ ಹೆಚ್ಚಾಗಿ ಜಪಶಿವಾರ್ಚನೆಯ ಮಾಡುತ್ತಿದ್ದಲ್ಲಿ ಅವರು ನೋಡಿ ನಮಗಿಂತ ಮಹಾನಿಷ್ಠಾಪರತ್ವವುಳ್ಳಾತ ಬಂದನೆಂದು ಮಿಗಿಲಾಗಿ ಒಂದು ವಸ್ತುವನ್ನು ಕೊಟ್ಟಲ್ಲಿ ಅದನ್ನು ತೆಗೆದುಕೊಂಡು ಬಂದು ತಾನು ತನ್ನ ಹೆಂಡರು ಮಕ್ಕಳು ಘಟರಕ್ಷಣೆಯ ಮಾಡಿಕೊಂಬುತ್ತಿಹನು.

ಶ್ರವಣರ ಕಂಡಡೆ ಬತ್ತಲೆಯಪ್ಪಿರಯ್ಯಾ-ನೂರಾರು ಜೈನರೇನಾದರೂ ಜಿನಾಲಯಕ್ಕೆ ಹೋಗಿ ಜಿನೇಶ್ವರನೇ ದೈವ ಅನಾದಿ ಬೌದ್ಧೇಶ್ವರನೇ ದೈವವೆಂದಾರಾಧಿಸುತ್ತಿದ್ದಲ್ಲಿ ಅದೇ ಉಪಾಧಿಕನು ತಟ್ಟನ್ನು ಉಟ್ಟುಕೊಂಡು ತಲೆಯನ್ನು ತರಿಸಿಕೊಂಡು ಹಸಿರುಗಿಡವನ್ನು ಬಗ್ಗಿಸುತ್ತ ಅದರ ಮೇಲೆ ಮಲಮೂತ್ರಂಗಳನು ವಿಸರ್ಜಿಸುತ್ತ ಹೊರಕಯ್ಯಲನ್ನವನ್ನು ಭುಂಜಿಸುವಂಥ ಆಚರಣೆಯನ್ನು ಕಟ್ಟುಮಾಡಿಕೊಂಡು, ಜಿನೇಶ್ವರನೇ ದೈವ ಅನಾದಿ ಬೌದ್ಧೇಶ್ವರನೇ ದೇವರೆಂದಾರಾಧಿಸುತ್ತ ಹೋದಲ್ಲಿ ಅವರು ನಮಗಿಂತ ಈತ ಬಹುನಿಷ್ಠಾಪರತ್ವವುಳ್ಳಾತನೆಂದು ಮಿಗಿಲಾಗಿ ಒಂದು ವಸ್ತುವನ್ನು ಕೊಟ್ಟಲ್ಲಿ ಅದನ್ನು ತೆಗೆದುಕೊಂಡು ಬಂದು ತಾನು ತನ್ನ ಹೆಂಡರು ಮಕ್ಕಳುಗಳ ಘಟರಕ್ಷಣೆಯ ಮಾಡಿಕೊಳ್ಳುತ್ತಿಹನು.

ಹಾರುವರ ಕಂಡಡೆ ಹರಿನಾಮವೆಂಬಿರಯ್ಯಾ-ನೂರಾರು ಹಾರುವರೇನಾದರೂ ತಮ್ಮ ವಿಷ್ಣ್ವಾಲಯಕ್ಕೆ ಹೋಗಿ ಸಮಾರಾಧನೆಯ ಮಾಡುತ್ತಿದ್ದಲ್ಲಿ ಅದೇ ಉಪಾಧಿಕನು ಜುಟ್ಟವನ್ನು ಬಿಟ್ಟುಕೊಂಡು ಜನಿವಾರವನ್ನು ಹಾಕಿಕೊಂಡು ಮಟ್ಟಿ ಮಣ್ಣಿನ ಪಟ್ಟೆನಾಮವನ್ನಿಟ್ಟುಕೊಂಡು ಮಟ್ಟಿಮಣ್ಣೇ

ಮಣ್ಣು ತುಲಸಿಮಣಿಯೇ ಮಣಿ ಗೋಪಾಲಮಂತ್ರವೇ ಮಂತ್ರ ನಾರಾಯಣನೆರ ದೈವವೆಂದು ಆರಾಧಿಸುದ್ದಲ್ಲಿ, ಅವರು ನಮಗಿಂತ ಮಹಾನಿಷ್ಠಾಪರತ್ವವುಳ್ಳಾತ ಬಂದನೆಂದು ಮಿಗಿಲಾಗಿ ಒಂದು ವಸ್ತುವನ್ನು ಕೊಟ್ಟಲ್ಲಿ ಅದನ್ನು ತೆಗೆದುಕೊಂಡು ಬಂದು ತಾನು ತನ್ನ ಹೆಂಡರು ಮಕ್ಕಳುಗಳ ಘಟರಕ್ಷಣೆಯ ಮಾಡಿಕೊಳ್ಳುತ್ತಿಹನು. ಅವರವರ ಕಂಡಡೆ ಅವರವರಂತೆ–ಭಕ್ತರ ಕಂಡರೆ ಬೋಳಾಗಿ, ಜಿನರ ಕಂಡರೆ ಬತ್ತಲೆಯಾಗಿ, ಹಾರುವರ ಕಂಡರೆ ಹರಿನಾಮದವರಾಗಿ ಅವರವರ ಕಂಡರೆ ಅವರವರಂತೆ ವೇಷವ ಧರಿಸಿಕೊಂಡು ಘಟರಕ್ಷಣೆಯ ಮಾಡಿಕೊಂಬಂಥ.

ಸೂಳೆಗೆ ಹುಟ್ಟಿದವರ ತೋಱದಿರಯ್ಯಾ–ಈ ಮಾಯಾಶಕ್ತಿಯೆಂಬ ಪಣ್ಯಾಂಗನೆಗೆ ಉತ್ಪತ್ಯವಾದಂಥ ಆಶಾಲಾಂಛನಿ ಉಪಾಧಿಕರುಗಳ, ಎನಗೆ–ನನಗೆ, ಒಮ್ಮೆ–ಒಂದುವೇಳೆ, ತೋಱದಿರಯ್ಯಾ–ಅವರ ದರುಶನವ ಕಾಣಿಸದಿರಯ್ಯಾ.

ಕೂಡಲಸಂಗಮದೇವರ ಪೂಜಿಸಿ–ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾದರಿಸಿ, ಅನ್ಯದೈವಂಗಳಿಗೆಱಗಿ–ಶಿವಾಚಾರಕ್ಕೆ ಬೇರಾದ ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ಕ್ಷಿಣದೈವಂಗಳಿಗೆ ತಲೆವಾಗಿ ನಮಸ್ಕರಿಸಿ, ಭಕ್ತರೆನಿಸಿಕೊಂಬ–ನಾವು ನಿರ್ವಂಚಕ ಸದ್ಭಕ್ತರೆಂದು ಹೇಳಿಸಿಕೊಂಬ, ಅಜ್ಞಾನಿಗಳ–ಮರವೆ ಜೀವಿಗಳ, ನಾನೇನೆಂಬೆನಯ್ಯಾ!–ನಾನೆಂತೆಂದು ಹೇಳುವೆನಯ್ಯಾ.

---

೧೦೭

**ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ! ಗಂಡ ಕೊಂಬುದು ಪಾದೋದಕ–ಪ್ರಸಾದ, ಹೆಂಡತಿ ಕೊಂಬುದು ಸುರೆಮಾಂಸ! ಭಾಂಡಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊಱಗೆ [1]ತೊಳೆದಂತೆ[1] ಕೂಡಲಸಂಗಮದೇವಾ!**

I- - - - - - - - - - - - - - - - - - - - - - - - - - - - - - - - - - - - - - - - - - - - -

ಗಂಡ ಶಿವಲಿಂಗದೇವರ ಭಕ್ತ : ಗಂಡ–ಆ ಸ್ತ್ರೀಯಳ ರಮಣನು, ಶಿವಲಿಂಗದೇವರ ಭಕ್ತ–ಮಾಂಗಲ್ಯಸ್ವರೂಪವಾದ ಲಿಂಗಪೂಜೆಯ ಮಾಡುವಲ್ಲಿ ಬಹುಶ್ರದ್ಧೆಯುಳ್ಳಾತನಾಗಿಪ್ಪನು. ಹೆಂಡತಿ–ಆ ಭಕ್ತನ ಸ್ತ್ರೀಯಳು, ಮಾರಿ ಮಸಣಿಯ ಭಕ್ತೆ–ಊರೊಳಗೆ ಗುಡಿಯ ಕಟ್ಟಿಸಿಕೊಂಡು ಪೂಜಿಸಿಕೊಂಡಿರುವಂಥದೆ ಮಾರಿ, ಅಡವಿಯೊಳಗೆ ಗುಡಿಯ ಕಟ್ಟಿಸಿಕೊಂಡು ಪೂಜೆಯ ಕೈಕೊಂಡಿರುವಂಥದೆ ಮಸಣಿ, ಈ ಮಾರಿ ಮಸಣಿಗೆ ನಡಕೊಂಬುವಲ್ಲಿ ಬಹು ಶ್ರದ್ಧೆಯುಳ್ಳಾಯಕಳಾಗಿರ್ಪಳು.

ಗಂಡ–ಆ ಸ್ತ್ರೀಯಳ ರಮಣನು, ಕೊಂಬುದು–ಅನುಭವಿಸುವಂಥದು, ಪಾದೋದಕ ಪ್ರಸಾದ–ಲಿಂಗಪೂಜೆಯಾದ ತದನಂತರದಲ್ಲಿ ಚೌಕಿ ಮಠಂಗಳಿಗೆ ಹೋಗಿ ಜಂಗಮಮೂರ್ತಿಗಳಿಗೆ ಬಿನ್ನಹವನ್ನು ಮಾಡಿ ಕರಕೊಂಡು ಬಂದು ಅವರ ಪಾದೋದಕ ಪ್ರಸಾದನವನ್ನು

ಪಡೆದನುಭವಿಸುತ್ತಿಹನು. ಹೆಂಡತಿ–ಆ ಭಕ್ತನ ಸ್ತ್ರೀಯಳು. ಕೊಂಬುದು–ಅನುಭವಿಸುವಂಥದು, ಸುರೆಮಾಂಸ–ಮನೆಯೊಳಗೆ ಮಾಡಿದಂಥ ಪಂಚಾಮೃತ ಪಾಯಸವನ್ನು ಕೊಂಡೊಯ್ದು ಮಾರಿ ಮಸಣಿಗೆ ನೈವೇದ್ಯ ಹಿಡಿದಲ್ಲಿ ಗಟ್ಟಿಗಟ್ಯಾಗಿದ್ದುದೆಲ್ಲಾ ಮಾಂಸಕ್ಕೆ ಸಮಾನ. ತೆಳ್ಳತೆಳ್ಳಗಿದ್ದುದೆಲ್ಲಾಸುರೆ[ಗೆ] ಸಮಾನವೆಂದು ನೈವೇದ್ಯ ಹಿಡಿದು ಅದನ್ನು ಪ್ರಸಾದವೆಂದು ಭುಂಜಿಸುತ್ತಿರ್ಪಳು.

ಭಾಂಡ ಭಾಜನ ಶುದ್ಧವಿಲ್ಲದವರ–ಮನೆಯೊಳಗೆ ಬಳಕೆಮಾಡುವಂಥ ಭಾಂಡಂಗಳನೇ ಗುಡಿಯೊಳಗೆ ಬಳಕೆಯ ಮಾಡುತಿರ್ಪಳು. ಗುಡಿಯೊಳಗೆ ಬಳಕೆಯ ಮಾಡಿದಂಥ ಭಾಂಡಂಗಳನೇ ಮನೆಯೊಳಗೆ ಬಳಕೆಯ ಮಾಡುತ್ತಿರ್ಪಳು. ಈ ಭಾಂಡ ಭಾಜನ, ಶುದ್ಧವಿಲ್ಲದವರ–ನಿರ್ಮಲವಿಲ್ಲದವರ, ಭಕ್ತಿ–ಭಿನ್ನಭಕ್ತಿಯು, ಹೆಂಡದ ಮಡಕೆಯ ಹೊಜಿಗೆ ತೊಳೆದಂತೆ–ಸುರೆಯ ಹರವಿಯೆಂಬಂಥದು ಹೊರಗೆ ತೊಳೆದು ಬೂದಿ ಕಟ್ಟನು ಹಾಕಿ ಗಂಧ ಕಸ್ತೂರಿ ಕುಂಕುಮ ಅರಿಷಿಣಬೊಟ್ಟು ಮೊದಲಾದವನ್ನು ಇಟ್ಟು ಮೇಲೊಂದು ಹೂವಿನ ಹಾರವನ್ನು ಹಾಕಿದಲ್ಲಿ ಹೊರಗೆ ನೋಡಿದರೆ ಘಮಘಮವೆಂದು ಪರಿಮಳಿಸಿ, ಒಳಗೆ ನೋಡಿದರೆ ಹೆಬ್ಬಾನ ಹಡಿಕೆ ನಾರುತ್ತಿಹುದು. ಹಾಂಗೆ, ಗಂಡ ಶಿವಲಿಂಗದೇವರ ಭಕ್ತನಾಗಿ ಹೆಂಡತಿ ಮಾರಿ ಮಸಣಿಯರ ಭಕ್ತೆಯಾದವರ ಸ್ಥಿತಿಯು, ಹೆಂಡದ ಗಡಿಗೆ ಹೊರಗೆ ತೊಳದು ಬೂದಿಕಟ್ಟನು ಕುಂಕುಮ ಅರಿಷಿಣ ಬೊಟ್ಟು ಮೊದಲಾದವನಿಟ್ಟು ಮೇಲೊಂದು ಹೂವಿನ ಹಾರವನ್ನು ಹಾಕಿದಲ್ಲಿ ಹೊರಗೆ ನೋಡಿದರೆ ಘಮಘಮವೆಂದು ಪರಿಮಳಿಸಿ ಒಳಗೆ ನೋಡಿದರೆ ಹೆಬ್ಬಾನ ಹಡಿಕೆ ನಾರಿದ ಸ್ಥಿತಿಯು ಎರಡೂ ಒಂದೇ ಆಗಿರ್ಪವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III- - - - - - - - - - - - - - - - - - - - - - - - - - - - - - - - - - - - - - - - - -

1–1 ತೊಳೆದಂತಯಿತ್ತು ಕಾಣಾ (ಟ,ಡ).

..........................

ಗಂಡ–ವಲ್ಲಭನು, ಕೊಂಬುದು–ತೆಗೆದುಕೊಂಬಂಥದು, ಪಾದೋದಕಪ್ರಸಾದ–ಚರಣಜಲಶೇಷವು, ಹೆಂಡತಿ–ಸ್ತ್ರೀಯಳು, ಕೊಂಬುದು–ತೆಗೆದುಕೊಂಬಂಥದು, ಸುರೆ ಮಾಂಸ–ಮದ್ಯ ಪಲಲವು. ಭಾಂಡ ಭಾಜನ–ಗಡಿಗೆ ಮಡಕೆಯು, ಶುದ್ಧವಿಲ್ಲದವರ–ಪವಿತ್ರ ಉಂಟಾಗದೆ ಇದ್ದಂಥವರುಗಳ, ಭಕ್ತಿ–ಶ್ರದ್ಧೆಯು, ಹೆಂಡತಿ ಗಡಿಗೆಯ ಹೊರಗೆ ತೊಳೆದು ಬೂದಿಯ ಬರದ ಹೂವಿನ ಮಾಲೆಯ ಹಾಕಿದರೆ ಅಲಂಕಾರವಾಗಿರುವುದಲ್ಲದೆ ಅದರೊಳಗಣ ದುರ್ವಾಸನೆ ಕೆಡದೆ ಇರುವ ಹಾಂಗೆ, ಹಲವುದೈವದ ಭಜನೆಯನುಳ್ಳ ಭಿನ್ನಭಕ್ತನು ವಿಭೂತಿ ರುದ್ರಾಕ್ಷಿ ಶಿವಲಿಂಗ ಲಾಂಛನವನಳವಡಿಸಿದಲ್ಲಿ ಅಲಂಕಾರವಾಗಿರುವುದಲ್ಲದೆ ಅಂತರಂಗದಲ್ಲಿ ಅನ್ಯದೈವದ ಭಜನೆಯು ಬಿಡಲರಿಯದೆಂಬುದೀಗ ಹೆಂಡದ ಮಡಕೆಯ ಹೊಜಿಗೆ ತೊಳೆದಂತಾಯಿತ್ತು ಎಂಬ ಶಬ್ದಕ್ಕರ್ಥ.

---

**ಹಾವಡಿಗನು ಮೂಕೊಜಿತಿಯು, ತನ್ನ ಕೈಯಲ್ಲಿ ಹಾವು. ಮಗನ ಮದುವೆಗೆ ಶಕುನವ ನೋಡಹೋಹಾಗ, ಇದಿರಲೊಬ್ಬ ಮೂಕೊಜಿತಿಯ ಹಾವಡಿಗನ ಕಂಡು ಶಕುನ ಹೊಲ್ಲೆಂ'ಬುತ್ತೆ' ತಿರುಗುವ ಚದುರನ ನೋಡಾ! ತನ್ನ ಸತಿ ಮೂಕೊಜಿತಿಯು ತನ್ನ ಕೈಯಲ್ಲಿ ಹಾವು! ತಾನು ಮೂಕೊರೆಯ! ತನ್ನ ಭಿನ್ನವ ತಾನಜಿ'ಯದೆ' ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲಸಂಗಮದೇವಾ?**

I- - - - - - - - - - - - - - - - - - - - - - - - - - - - - - - - - - - - - - - - - - -

ಹಾವಡಿಗನು–ಹಾವಾಡಿಸುವಂಥ ಗಾರುಡಿಗನು, ಮೂಕೊಜಿತಿಯು–ಮೊಲೆ ಮೂಗನು ಕೊಯ್ಸಿಕೊಂಡಂಥ ಜೋಗಿವೆಣ್ಣು, ತನ್ನ ಕೈಯಲ್ಲಿ–ಹಾವಾಡಿಗನ ಹಸ್ತದಲ್ಲಿ, ಹಾವು–ಹಾವಿನ ಪುಟ್ಟಿವುಂಟಾಗಿರ್ಪುದು, ಮಗನ ಮದುವೆಗೆ–ತನ್ನ ಕುಮಾರನ ವಿವಾಹವ ಮಾಡುವುದಕ್ಕೆ, ಶಕುನವ ನೋಡಹೋಹಾಗ–ಶುಭಾಶುಭಂಗಳ ಪರಾಮರಿಸುತ್ತೈದುವಾಗ, ಇದಿರಲ್ಲಿ–ಸಮ್ಮುಖದಲ್ಲಿ, ಒಬ್ಬ ಮೂಕೊಜಿತಿಯ–ಒಂದು ಮೊಲೆ ಮೂಗನ್ನು ಕೊಯ್ಸಿಕೊಂಡಂಥ ಜೋಗಿವೆಣ್ಣು ಹಾವಾಡಿಗನ–ಹಾವಾಡಿಸುವಂಥ ಗಾರುಡಿಗನ, ಕಂಡು–ನೋಡಿ, ಶಕುನ ಹೊಲ್ಲೆಂಬುತ್ತೆ–ನಮ್ಮ ಕುಮಾರನ ವಿವಾಹವ ಮಾಡುವುದಕ್ಕೆ ಶುಭಾಶುಭಂಗಳ ಪರಾಮರಿಸುತ್ತೈದುತ್ತಿದ್ದೀವಿ, ಒಂದು ಮೊಲೆ ಮೂಗನ್ನು ಕೊಯ್ಸಿಕೊಂಡಂಥ ಜೋಗಿವೆಣ್ಣು ಒಬ್ಬ ಗಾರುಡಿಗನ ದರುಶನವಾಯಿತ್ತು. ಶಕುನವಾಗಲಿಲ್ಲೆನುತ್ತೆ; ತಿರುಗುವ–ಹಿಮ್ಮುಖವಾಗುವ ಚದುರನ ನೋಡಾ! ಕುಶಲತ್ವವುಳ್ಳ ಗಾರುಡಿಗನ ಕಂಡಾ!

ತನ್ನ ಸತಿ ಮೂಕೊಜಿತಿಯು–ತನ್ನ ಸ್ತ್ರೀಯಳು ಮೊಲೆ ಮೂಗನ್ನು ಕೊಯ್ಸಿಕೊಂಡಿರ್ಪಳು, ತನ್ನನ ಕೈಯಲ್ಲಿ ಹಾವು!–ಗಾರುಡಿಗನ ಕೈಯಲ್ಲಿ ಹಾವಿನ ಪುಟ್ಟಿವುಂಟಾಗಿರ್ಪುದು. ತಾನು ಮೂಕೊಜೆತಿಯ–ತಾನು ಮೂಗು ಕೊಯ್ಸಿಕೊಂಡಿಪ್ಪನು, ತನ್ನ ಭಿನ್ನವ ತಾನಜಿಯದೆ–ತನ್ನ ಕೊರತೆಯ ತಾ ತಿಳಿಯದೆ, ಅನ್ಯರೆಂಬ–ಪರರನ್ನು ಒಂದು ಮೊಲೆ ಮೂಗು ಕೊಯ್ಸಿಕೊಂಡಂಥ ಜೋಗಿವೆಣ್ಣು ಗಾರುಡಿಗನಿದಿರಾದರೆ ನಿಂದಿಸುವ, ಕುನ್ನಿಯನೇನೆಂಬೆ–ಶುನಿಗೆ ಸಮಾನವಾದ ಗಾರುಡಿಗನ ಎಂತೆಂದು ಹೇಳುವೆನೆಂಬುದರ್ಥ.

● ಹಾವಾಡಿಗನು–ಇಂದ್ರಿಯಂಗಳ ವರ್ತನೆಯೊಡನೆ ಕೂಡಿ ಚರಿಸುವಂಥ ವಾಗದ್ವೈತಿಯು, ಮೂಕೊಜಿತಿಯು–ಭಿನ್ನಕ್ರಿಯ ಆಚಾರವನುಳ್ಳ ಸಿದ್ಧಾಂತಿಯು, ತನ್ನ–ವೇದಾಂತಿಯ, ಕೈಯಲ್ಲಿ–ಕುಚಿತ್ತವೆಂಬ ಹಸ್ತದಲ್ಲಿ, ಹಾವು–ಇಂದ್ರಿಯಂಗಳೆಂಬ ಸರ್ಪಂಗಳುಂಟಾಗಿಪ್ಪವು, ಮಗನ ಮದುವೆಗೆ–ತನ್ನಾತ್ಮನ ಮಹಾಲಿಂಗದಲ್ಲಿ ಕೂಡೋದಕ್ಕೆ, ಶಕುನ ನೋಡಹೋಹಾಗ, ಶುಭಾಶುಭಂಗಳ ಪರಾಮರಿಸುತ್ತೈದುವಾಗ, ಇದಿರಲ್ಲಿ–ಸಮ್ಮುಖದಲ್ಲಿ, ಒಬ್ಬ ಮೂಕೊಜಿತಿಯು–ಭಿನ್ನಕ್ರಿಯಾಚಾರವನುಳ್ಳ ಸಿದ್ಧಾಂತಿಯು, ಹಾವಾಡಿಗನ–ವಾಗದ್ವೈತಿಯನ್ನು, ಕಂಡು–ನೋಡಿ, ಶಕುನ ಹೊಲ್ಲೆಂಬುತ್ತೆ–ನಮ್ಮಾತ್ಮನ ಮಹಾಲಿಂಗದಲ್ಲಿ ಕೂಡೋದಕ್ಕೈದುತ್ತಿದ್ದೇವೆ. ಭಿನ್ನಜ್ಞಾನ ಭಿನ್ನಕ್ರಿಯಾಚಾರದವರ ದರುಶನವಾಯಿತ್ತು ಶಕುನವಾಗಲಿಲ್ಲೆನುತ್ತೆ, ತಿರುಗುವ–ಹಿಮ್ಮುಖವಾಗುವ ಚದುರನ ನೋಡಾ!–ಕುಶಲತ್ವವನುಳ್ಳ ದ್ವೈತಾದ್ವೈತಿಗಳ ಕಂಡಾ.

ತನ್ನ ಸತಿ ಮೂಕೊಱತಿಯು–ಸಿದ್ಧಾಂತಿ ಅಂಗದಲ್ಲಿ ಅಭಿನ್ನಕ್ರಿಯಾಚಾರವುಂಟಾಗಿಲ್ಲವು, ತನ್ನ–ವೇದಾಂತಿಯು. ಕೈಯಲ್ಲಿ–ಕುಚಿತ್ತವೆಂಬ ಹಸ್ತದಲ್ಲಿ, ಹಾವು–ಇಂದ್ರಿಯಂಗಳೆಂಬ ಸರ್ಪಂಗಳುಂಟಾಗಿರ್ಪವು, ತಾನು ಮೂಕೊಱೆಯ: ತಾನು–ವೇದಾಂತಿ, [ಮೂಕೊಱೆಯ] ಅಂಗದಲ್ಲಿ ಅಭಿಜ್ಞಾನವುಂಟಾಗಿಲ್ಲವು, ತನ್ನ ಭಿನ್ನವ ತಾನಱಿಯದೆ–ತನ್ನ ಕೊರತೆಯ ತಾ ತಿಳಿಯದೆ, ಅನ್ಯರನೆಂಬ –ಪರರುಗಳನ್ನು ದ್ವೈತಾದ್ವೈತಿಗಳೆಂದು ಹೇಳುವ, ಕುನ್ನಿಯನೇನೆಂಬ–ಶುನಿಗೆ ಸಮಾನವಾದ ದ್ವೈತಾದ್ವೈತಿಗಳ ಎಂತೆಂದು ಹೇಳುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - -

1–1 ಬ(ಚ.ಜ). 2–2 ಭಿನ್ನವನಱಿಯದೆ (ಚ,ಜ).

.........................

ಹಾವಾಡಿಗನು–ಶಂಕಾವಿಷಸಂಬಂಧ[೧]ವಾದ[೧] ಮನೋಪ್ರಕೃತಿಯನುಳ್ಳ ವೇದಾಂತಿಯು, ಮೂಕೊಱತಿಯು–ಭಿನ್ನಕ್ರೀಯನುಳ್ಳ ಸಿದ್ಧಾಂತಿಯು, ತನ್ನ ಕೈಯಲ್ಲಿ ಹಾವು–ಆತ್ಮಹಸ್ತದಲ್ಲಿ ಶಂಕಾವಿಷಸಂಬಂಧವಾದ ಮನೋಸರಿಸೃಪನು, ಮಗನ ಮದುವೆಗೆ ಶಕುನವ ನೋಡಹೋಹಾಗ–ಇಷ್ಟಲಿಂಗವೆಂಬ ಕುಮಾರನ ವಿವಾಹಕ್ಕೆ ತ್ರಿವಿಧಲಲಿಂಗಾನುಭಾವಿಗಳಿಂದ ಶಿವಾನುಭಾವವನು ಬೆಸಗೊಂಬುದಕ್ಕೆಯ್ದುವಾಗ, ಇದಿರಲೊಬ್ಬ ಮೂಕೊಱತಿಯ–ಸಮ್ಮುಖದಲ್ಲಿ ಓರ್ವನಾದಂಥ ಭಿನ್ನಕ್ರೀಯನುಳ್ಳ ಸಿದ್ಧಾಂತಿಯು ಹಾವಾಡಿಗನ ಕಂಡು–ಶಂಕಾವಿಷಸಂಬಂಧವಾದ ಮನೋಪ್ರಕೃತಿಯನುಳ್ಳ ವೇದಾಂತಿಯ ನೋಡಿ, ಶಕುನ ಹೊಲ್ಲೆಂಬ ಚದುರನ ನೊಡಾ!–ನಾವು ತ್ರಿವಿಧಲಿಂಗಾನುಭಾವಿಗಳ ಮುಖದಿಂದ ಶಿವಾನುಭಾವವನು ಬೆಸಗೊಂಬುದಕ್ಕೆ ಹೊಗುತ್ತಿರ್ದೆವು, ಶುಭವಾಗಲಿಲ್ಲ ಅಶುಭವಾಯಿತ್ತೆಂಬ ಅಜ್ಞಾನಕುಶಲನ ಕಂಡಾ.

ತನ್ನ ಸತಿ ಮೂಕೊಱತಿ ತನ್ನಂಗದಲ್ಲಿಯು ಭಿನ್ನಕ್ರೀ, ತನ್ನ ಕೈಯಲ್ಲಿ ಹಾವು–ಆತ್ಮಹಸ್ತದಲ್ಲಿ ಶಂಕಾವಿಷಸಂಬಂಧವಾದ ಮನೋಸರಿಸೃಪನು, ತಾನು ಮೂಕೊಱೆಯ!–ತಾನು ಭಿನ್ನಕ್ರೀಯುಳ್ಳವನು, ತನ್ನ ಭಿನ್ನವನಱಿಯದೆ ಅನ್ಯರನೆಂಬ ಕುನ್ನಿಯನೇನೆಂಬೆ–ತನ್ನ ಭೇದವನು ತಿಳಿಯದೆ ನಾವು ತ್ರಿವಿಧಲಿಂಗಾನುಭಾವಿಗಳ ಮುಖದಿಂದ ಶಿವಾನುಭಾವವನು ಬೆಸಗೊಂಬುದಕ್ಕೆ ಹೊಗುತ್ತಿರ್ದೆವು. ಈ ಪಾಪಿಗಳು ಇದಿರಾಗಿ ಬಂದರೆಂಬ ನಾಯಿಜೀವರುಗಳನೇನೆಂದು ಹೇಳುವೆನು? ಮತ್ತಂ ತನ್ನ ಲಿರ್ದವಗುಣಂಗಳನೆಲ್ಲವನಡಗ ಮೆಟ್ಟಿಕೊಂಡು ಒಬ್ಬರ ಗುಣಾವಗುಣಂಗಳನೆತ್ತಿ ದೂಷಣೆಯ ಮಾಡುವ ಇಂತೀ ವಾಗಿಂದ್ರಿಯವಿಷಯವ ತಡೆಯಲಾರದ ಜೀವನೆಂಬ ಸುನಿಯನೇನೆಂದು ಹೇಳುವೆನು.

೧–೧ (ಚ).

III- - - - - - - - - - - - - - - - - - - - - - - - - - - - - - - - - - - - - - - - - - - -

1–1 ಬ (ಡ). 2–2 ಭಿನ್ನವನಱಿಯದೆ (ಟ.ಡ).

.........................

ತನ್ನ ಭಿನ್ನವನಱಿಯದೆ–ತನ್ನ ಕ್ರಿಯಾಚಾರ ಜ್ಞಾನಾಚಾರಗಳನು ತಾ ತಿಳಿಯದೆ, ಅನ್ಯರನೆಂಬ–[೨]ಪರರನು[೨] ಆಚಾರಹೀನವಾದ ಭಿನ್ನಭಕ್ತರೆಂಬಂಥ, ಕುನ್ನಿಯಂ ಇಂದ್ರಿಯವಿಷಯಪ್ರಪಂಚನುಳ್ಳಾತ್ಮನನು, ಏನೆಂಬೆ–ಏನೆಂದು ಹೇಳಲಿ.

..........................

೨–೨ x (ಡ).

V- - - - - - - - - - - - - - - - - - - - - - - - - - - - - - - - - - - - - - - - -

1–1 ಬ (ಪ).

..........................

ಮನಃಕುಂಡಲಿಯ ವರ್ತನೆಯುಳ್ಳಂಥಾತ್ಮನು ಎಂಬುದೀಗ ಹಾವಡಿಗನು, ಆಚಾರಬಾಹ್ಯವಾದ ದೇಹವೆಂಬ ಸ್ತ್ರೀಯು ಎಂಬುದೀಗ ತನ್ನ [೩][ಸತಿ][೩] ಮೂಕೊಱತಿ, ಶರಣಸತಿ ಲಿಂಗಪತಿತ್ವದ ವಿವಾಹದಲ್ಲಿ ಆಚರಿಸುವಾಗ ಎಂಬುದೀಗ ತನ್ನ ಮಗನ ಮದುವೆಗೆ ಹೋಹಾಗ, ಮುಂಚಿನಲ್ಲಿ ಓರ್ವ ಆಚಾರಬಾಹ್ಯಳಾದ ಅಂಗವೆಂಬ ಪ್ರಕೃತಿಯನು ಮನಃಕುಂಡಲಿಯ ವರ್ತನೆಯುಳ್ಳಾತ್ಮನನು ನೋಡಿ ಅಶುಭವೆಂಬ ಗಾಂಪನ ನೋಡಾ ಎಂಬುದೀಗ ಇದಿರಲೊಬ್ಬ ಮೂಕೊಱತಿಯ ಹಾವಾಡಿಗ ಕಂಡು ಶಕುನ ಹೊಲ್ಲೆಂಬ ಚದುರನ ನೋಡಾ! ಎಂಬುದರ್ಥ.

..........................

೩–೩ ವಸತಿಯು (ಪ).

---

೧೦೯

**ಅಂಗದಿಚ್ಛೆಗೆ ಮದ್ಯಮಾಂಸವ ತಿಂಬುವರು, ಕಂಗಳಿಚ್ಛೆಗೆ ಪರವಧುವ ನೆರೆವರು, ಲಿಂಗಲಾಂಛನಧಾರಿಯಾದಲ್ಲಿ ಫಲವೇನು? ಲಿಂಗಪಥವ ತಪ್ಪಿ ನಡೆವರು [1]ಜಂಗಮಮುಖದಿಂದ ನಿಂದೆ ಬಂದಡೆ ಕೊಂಡ ಮಾಱಂಗೆ ಹೋಹುದು ತಪ್ಪದು, ಕೂಡಲ ಸಂಗಮದೇವಾ![1]**

I- - - - - - - - - - - - - - - - - - - - - - - - - - - - - - - - - - - - - - - - -

ಕಂಗಳಿಚ್ಛೆಗೆ–ನಾಡಿಗರಾಗಲಿ ದೇಸಾಯಿಗಳಾಗಲಿ ಸೆಟ್ಟಿ ಚೌದರಿಗಳಾಗಲಿ ಅಂತಪ್ಪ ಶಿವಾಚಾರವನುಳ್ಳ[ವರು] ನೂರಾರಕ್ಕೆ ಶಿವಭಕ್ತರಾಗಿರುವರು, ಒಂದಾನೊಂದು ಭವಿಕುಲದಲ್ಲಿ ಆರು ದೊಡ್ಡ ಆರು ಸಣ್ಣ ಅರು ತಿಳುಪೆಂದು ಮೂರಾರು ಹದಿನೆಂಟು ಕಳಾಸಂಪೂರ್ಣವನುಳ್ಳಂಥ ಸ್ತ್ರೀಯಳಿದ್ದಲ್ಲಿ, ಕಂಗಳಿಚ್ಛೆಗೆ–ಭಿನ್ನದೃಗ್ವಿಷಯಂಗಳ ಮೇಲಣ ಪ್ರೀತಿಗೆ, ಪರವಧುವ ನೆರೆವರು–ಆ ಭವಿಕುಲದ ಸ್ತ್ರೀಯಳ ಹಿಡಿತರಿಸಿ ಅವಳಿಗೊಂದು ಲಿಂಗವನ್ನು ಕಟ್ಟಿಸಿ ಆರೂ ಕಾಣಬರದ ಹಾಂಗೆ ಅವಳಿಗೆ ಒಳಗೆ ಹಾಕಿಕೊಂಡು ಆಳುತ್ತಿಹರು.⁽ ಅಂಗದಿಚ್ಛೆಗೆ–ದೇಹದ ಚಿಕಿತ್ಸಕ್ಕೆ, ಮದ್ಯಮಾಂಸವ ತಿಂಬುವರು–ಯಾರೂ ಕಾಣಬಾರದ ಹಾಂಗೆ ಸುರೆಮಾಂಸವ ತರಿಸಿಕೊಂಡು ಅನುಭವಿಸುತ್ತಿಪ್ಪರು.

ಲಿಂಗಲಾಂಛನಧಾರಿಯಾದಲ್ಲಿ ಫಲವೇನು?: [ಲಿಂಗಲಾಂಛನದಾರಿಯಾದಲ್ಲಿ-] ಅಂಗದ ಮೇಲೆ ಲಿಂಗವ ಧರಿಸಿಕೊಂಡು ಲಿಂಗಪೂಜೆಯ ಮಾಡುತ್ತಿದ್ದಲ್ಲಿ, ಫಲವೇನು?-ಪ್ರಯೋಜನವೇನು? ಲಿಂಗಪಥವ ತಪ್ಪಿ-ಲಿಂಗಾಚಾರಮಾರ್ಗವನ್ನು ತೊಲಗಿ, ನಡೆವರು-ಅಂಗದಿಚ್ಛೆಗೆ ಮದ್ಯಮಾಂಸವ ತಿಂಬುತ್ತ ಕಂಗಳಿಚ್ಛೆಗೆ ಪರವಧುವ ನೆರೆವುತ್ತ ಕೆಟ್ಟು ಸಕಲ ಸಂಸಾರ ಪ್ರಪಂಚಿನೊಡನೆ ಕೂಡಿ ಚರಿಸುತ್ತಿರ್ಪರು.

ಜಂಗಮಮುಖದಿಂದ ನಿಂದೆ ಬಂದಡೆ-ಜಂಗಮಮೂರ್ತಿಗಳು ತಾವಾದರೂ ಭಿನ್ನಮಾಡಿ ಕರಕೊಂಡಾದರೂ ಬಂದಿರುವರು ಅವರಾದರೂ ಭಿಕ್ಷಕ್ಕೆಂದು ಬಂದಿರುವರು. ನೀವು ಅಪ್ಪಂಥ ಶಿವಾಚಾರವನುಳ್ಳ ಶಿವಭಕ್ತರು ಅಂಗದಿಚ್ಛೆಗೆ ಮದ್ಯಮಾಂಸವ ತಿಂಬುತ್ತ ಕಂಗಳಿಚ್ಛೆಗೆ ಪರವಧುವ ನೆರೆವುತ್ತ ಕೆಟ್ಟ ಸಕಲ ಪ್ರಪಂಚಿನೊಡನೆ ಕೂಡಿ ಚರಿಸುವಂಥದು. ಛೀ! ಇದು ನಿಮಗೆ ನಡಾವಳಿಯೇ? ಎಂದು ಹೇಳಿದಲ್ಲಿ ಹೋ ಹೋ ಅಯ್ಯನವರೆ ನಮಗಾದರೂ ಹೇಳುತ್ತೈದಿರಿ ನಿಮ್ಮ ನಡಾವಳಿ ನಿಮಗೆ ಬಹು ಶುದ್ಧವೆ? ಎಂದು ದೂಷಣೆಯ ಮಾಡಿದಲ್ಲಿ, ಕೊಂಡ ಮಾಜಿಂಗೆ ಹೋಹುದು ತಪ್ಪದು-ಲೋಕದಲ್ಲಿ ಒಬ್ಬಾನೊಬ್ಬ ಆತ್ಮನು ಮೂರು ಹಣವ ಕೊಟ್ಟು ಒಂದು ಬಡಕೋಣವ ಕೊಂಡುಕೊಂಡುಬಂದು ಹುಲ್ಲನ್ನು ಹಾಕಿ ನೀರನ್ನು ತೋರಿ ಸಂರಕ್ಷಣೆಯ ಮಾಡಿಕೊಂಡಿದ್ದಲ್ಲಿ ದಿನಕೊಂದು ರೀತಿಯಲ್ಲಿ ಕದರು ನುಂಗಿದ ಕರುವಿನೋಪಾದಿಯಲ್ಲಿ ಸವೆದುಕೊಂಡು ಹೋಗುವದು. ಮತ್ತು ವರುಷಾರು ತಿಂಗಳಿಗೆ ತೆಗೆದುಕೊಂಡು ಹೋಗಿ ಮಾರಿದಲ್ಲಿ ಮೂರು ಹಣವಿಗೆ ಹೋಗುತ್ತಿಹುದು. ಮೂರು ಹಣವಿಗೆ ತಂದ ಕೋಣ ಮೂರು ಹಣವಿಗೆ ಹೋಗುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ.

● ಮೊದಲೇನಾದರೂ ಭವಿಜನ್ಮದಲ್ಲಿ ಹುಟ್ಟಬಂದಿರುವನು. ಇತ್ತ ಜಂಗಮಮೂರ್ತಿಗಳ ದರುಶನದಿಂದಲಾಗಲೀ ಸ್ಪರ್ಶನದಿಂದಲಾಗಲೀ ಅವರ ಶಿವಾನುಭಾವದ ಕೇಳಿಕೆಯಿಂದಲಾದರೂ ಆಗಲೀ ಶಿವಭಕ್ತನಾಗಿ ಹುಟ್ಟಬಂದಿರುವನು. ಬಂದಲ್ಲಿ ಹಾಂಗೆ ಶಿವಾಚಾರವಿಡಿದಾಚರಿಸದೆ ಕಂಗಳಿಚ್ಛೆಗೆ ಪರವಧುವ ನೆರೆವುತ್ತ ಅಂಗದಿಚ್ಛೆಗೆ ಮದ್ಯಮಾಂಸವ ತಿಂಬುತ್ತ ಕೆಟ್ಟು, ಸಕಲ ಸಂಸಾರಪ್ರಪಂಚಿನೊಡನೆ ಕೂಡಿ ಚರಿಸಿ ಜಂಗಮಮೂರ್ತಿಗಳ ಕಂಡಲ್ಲಿ ದೂಷಣೆಯ ಮಾಡುತ್ತಿದ್ದ ಕಾರಣ ಮೊದಲು ಜೀವನಾಗಿದ್ದು ಮತ್ತು ಮರ್ತ್ಯಜೀವನಾಗಿ ಭವಿಜನ್ಮದಲ್ಲಿ ಹುಟ್ಟಿಹುಟ್ಟಿ ಬರುವಂಥದು, ತಪ್ಪದು-ಓರೆಯಾಗದು, ಕೂಡಲಸಂಗಮದೇವಾ!-ಎಲೆ ಪರಶಿವಲಿಂಗವೆ.

..........................

೧+ಅಂಗದಿಚ್ಛೆಗೆ-ಅವಳಿಗೇನಾದರೂ ಬರಬಾರದಂಥ ಅತಿ ದುರ್ಘಟವಾದ ರೋಗ ಬಂದಲ್ಲಿ ನಾಲ್ವರು ಪಂಡಿತರ ಕರೆಸಿ ನೂರಾರು ವರಹ ವೆಚ್ಚವನ್ನು ಮಾಡಿ ಔಷಧಕಷಾಯವನ್ನು ಕುಡಿಸಿದಲ್ಲಿ, ಆ ರೋಗವು ಬಿಡುಗಡೆಯಾಗದೆ ಇದ್ದಲ್ಲಿ, ಆ ಸ್ತ್ರೀಯಳು ಈ ರೋಗಕ್ಕೆ ಮೊದಲು ನಮ್ಮ ಕುಲದಲ್ಲಿ ಮದ್ಯಮಾಂಸವ ತೆಗೆದುಕೊಂಡರೆ ಬಿಡುಗಡೆಯಾಯಿತ್ತೆಂದು ಹೇಳಿದಲ್ಲಿ ನಾವು ಅಪ್ಪಂಥ ಶಿವಾಚಾರವನುಳ್ಳ ಶಿವಭಕ್ತರು ಪ್ರಾಣಹೋದರೂ ಹಾಂಗೆ ಹೋಗಲೆಂದು ಬಿಡಲಿಲ್ಲ (ಕ, ಗ).

III- - - - - - - - - - - - - - - - - - - - - - - - - - - - - - - - - - - - - - - - - - -

1-1 'ಟ' ಪ್ರತಿಯಲ್ಲಿ ಇಷ್ಟು ಭಾಗ ಮಾತ್ರವಿದ್ದು ಟೀಕೆಯಿಲ್ಲ.

**ಶಿವಜನ್ಮದಲ್ಲಿ ಹುಟ್ಟಿ, ಲಿಂಗೈಕ್ಯರಾಗಿ, ತಮ್ಮಂಗದ ಮೇಲೆ ಲಿಂಗವಿರುತ್ತಿರಲು ಅನ್ಯರನೆ ಹಾಡಿ, ಅನ್ಯರನೆ ಹೊಗಳಿ, ಅನ್ಯರ ವಚನವ ಕೊಂಡಾಡಲು ಕರ್ಮ ಬಿಡವು, ಭವಬಂಧನ! ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು! ಇದು ಕಾರಣ, ಕೂಡಲಸಂಗಮದೇವಾ, ನಿಮ್ಮ ನಂಬಿಯೂ ನಂಬದ ಡಂಬಕರಿಗೆ ಮಳಲ ಗೋಡೆಯನಿಕ್ಕಿ ನೀರಲ್ಲಿ ತೊಳೆದಂತಾಯಿತ್ತು.**

I- - - - - - - - - - - - - - - - - - - - - - - - - - - - - - - - - - - - - - - - - -

ಶಿವಜನ್ಮದಲ್ಲಿ ಹುಟ್ಟಿ: [ಶಿವಜನ್ಮದಲ್ಲಿ–] ಸದ್ಗುರು ಪಾಣಿಜಾತಸ್ಯಯೆಂದು ಶ್ರೀಗುರುನಾಥನ ಕರಗರ್ಭದಲ್ಲಿ ಶಿವಲಿಂಗಪ್ರಾಣಿ ಶಿವಮಂತ್ರ ಶರೀರಿಯಾಗಿ, ಹುಟ್ಟಿ–ಉತ್ಪತ್ಯವಾಗಿ; ಲಿಂಗೈಕ್ಯರಾಗಿ–ಶಿಖಿಕರ್ಪುರಸಂಯೋಗದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟ ಶಿವಲಿಂಗೈಕ್ಯರಾಗಿ, ತಮ್ಮಂಗದ ಮೇಲೆ ಲಿಂಗವಿರುತ್ತಿರಲು–ಅಂಗದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುತ್ತಿರಲು, ಅನ್ಯರನೆ ಹಾಡಿ–ಶಿವಾಚಾರಕ್ಕೆ ಬೇರಾದ ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯ ಮಾಡಿ, ಅನ್ಯರನೆ ಹೊಗಳಿ–ಭವಿಗಳನೆ ಇಂದ್ರ ಚಂದ್ರ ಕರ್ಣ ಕುಬೇರನೆಂದು ಸ್ತೋತ್ರವ ಮಾಡಿ, ಅನ್ಯರ ವಚನವ ಕೊಂಡಾಡಲು–ಭವಿಗಳ ಮೇಲೆ ಮಾಡಿದ ಭಾರತ ರಾಮಾಯಣ ಛಂದಸ್ಸು ತರ್ಕ ವ್ಯಾಕರಣ ಮೊದಲಾದ ಭಿನ್ನಶಾಸ್ತ್ರಂಗಳನು ಇವು ನವರಸಯುಕ್ತವಾದಂಥವು ಬಹುಚೆಲೋ ಶಾಸ್ತ್ರವೆಂದು ಸ್ತೋತ್ರವ ಮಾಡಲು, ಕರ್ಮ–ಸಂಚಿತಾದಿಕರ್ಮತ್ರಯಂಗಳು, ಬಿಡವು–ಬಿಡುಗಡೆಯಾಗವು. ಭವ–ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ಯವು, ಬಂಧನ!–ಕಾಲಕಾಮರ ಶಿಕ್ಷಾಬಾಧತ್ವವು, ಶ್ವಾನಯೋನಿಯಲ್ಲಿ–ಶುನಿಗರ್ಭದಲ್ಲಿ, ಬಪ್ಪುದು ತಪ್ಪದು–ಹುಟ್ಟಿಹುಟ್ಟಿ ಬರುವಂಥದು ಓರೆಯಾಗದು.

ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಇಷ್ಟಮಹಾಲಿಂಗವನು, ನಂಬಿಯೂ–ಈ ಲಿಂಗವೇ ಪ್ರಾಣ, ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು, ಈ ಲಿಂಗ ಹೋದರೆ ಈ ಲಿಂಗದೊಡನೆ ಪ್ರಾಣವ ಕೊಟ್ಟೇನು. ಈ ಲಿಂಗವಲ್ಲದನ್ಯದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿಯೂ, ನಂಬದ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳನು ಇವರೇ ಸಾಕ್ಷಾತ್ಶಿವಸ್ವರೂಪರೆಂದು ವಿಶ್ವಾಸಿಸದ, ಡಂಬಕರಿಗೆ–ಹಿರೇತನದ ಬೂಟಕತ್ವವನುಳ್ಳ ಜೀವರುಗಳಿಗೆ, ಮಳಲ ಗೋಡೆಯನಿಕ್ಕಿ ನೀರಲ್ಲಿ ತೊಳೆದಂತಾಯಿತ್ತು–ಕಲ್ಲಿನಿಂದ ಗಚ್ಚಿನಿಂದ ಕಟ್ಟಿದಂಥ ಭಿತ್ತಿಯನು ಉದಕದಲ್ಲಿ ತೊಳೆದರೆ ನಿರ್ಮಲವಾಗಿ ನಿರ್ಧರವಾಗಿ ಇದ್ದೀತಲ್ಲದೆ ಮಳಲಲ್ಲಿ ಕಟ್ಟಿದಂಥ ಭಿತ್ತಿಯನು ಉದಕದಲ್ಲಿ ತೊಳೆದರೆ ತೊಳೆತೊಳೆದ ಹಾಂಗೆಲ್ಲ ಬುಡತನಕ ಸಣ್ಣಿಸಿಕೊಂಡು ಹೋಗುವುದಲ್ಲದೆ ನಿರ್ಮಲವಾಗಿ ನಿರ್ಧರವಾಗಿ ಇದ್ದೀತೆ? ಇರಲರಿಯದು, ಹಾಂಗೆ.

● ಲಿಂಗಪೂಜೆಯ ಮಾಡುತ್ತ ಜಂಗಮಭಕ್ತಿಯ ಮಾಡಿದರೆ, ಕಲ್ಲಿನಿಂದ ಗಚ್ಚಿನಿಂದ ಕಟ್ಟಿದಂಥ ಭಿತ್ತಿಯನು ಉದಕದಲ್ಲಿ ತೊಳೆದರೆ ನಿರ್ಮಲವಾಗಿ ನಿರ್ಧರವಾಗಿ ಇದ್ದಹಾಂಗೆ ನಿತ್ಯವಾದ ನಿಜಮೋಕ್ಷವೆ ದೊರಕೊಂಬುತ್ತಿಹುದು. ಜಂಗಮಭಕ್ತಿಬಾಹ್ಯವಾಗಿ ಅನ್ಯರನೆ ಹಾಡಿ ಅನ್ಯರನೆ ಹೊಗಳಿ ಅನ್ಯರ ವಚನವ ಕೊಂಡಾಡಿ ಭಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡಿದರೆ ಕಿಂಚಿನ್ಮಾತ್ರ

ಫಲಪದಂಗಳನು ಪಡೆದನುಭವಿಸಿ ಭವದಲ್ಲಿ ಹುಟ್ಟಿ ಹುಟ್ಟಿ ಬಂದು ದುಃಖಬಡುವಂಥವರ ಇರಸ್ಥಿತಿಯೂ ಮಳಲ ಗೋಡೆಯ ಕಟ್ಟಿ ಉದಕದಲ್ಲಿ ತೊಳೆದರೆ ತೊಳೆತೊಳೆದ ಹಾಂಗೆಲ್ಲ ಬುಡತನಕ ಸಣ್ಣಿಸಿಕೊಂಡು ಹೋಗುವಂಥವರ ಇರಸ್ಥಿತಿಯೂ ಎರಡೂ ಒಂದೇಯಾಗಿರ್ಪುದು, ಅಯಿತ್ತಯ್ಯಾ–ಆ ರೀತಿಯಾಯಿತ್ತಯ್ಯಾ.

---

೧೧೧

**ಅರ್ಥರೇಖೆ ಇದ್ದಲ್ಲಿ ಫಲವೇನು ಆಯುಷ್ಯರೇಖೆ ಇಲ್ಲದನ್ನಕ್ಕರ? ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು? ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು? ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು? ನಮ್ಮ ಕೂಡಲ ಸಂಗನ ಶರಣರನರಿಯದವರ ಕೈಯಲ್ಲಿ ಲಿಂಗವಿದ್ದು ಫಲವೇನು? ಶಿವಪಥವನರಿಯದನ್ನಕ್ಕರ!**

I- - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಅರ್ಥರೇಖೆ ಇದ್ದಲ್ಲಿ ಫಲವೇನು ಆಯುಷ್ಯರೇಖೆ ಇಲ್ಲದನ್ನಕ್ಕರ?–ಎಂಬತ್ತು ತೊಂಬತ್ತು ನೂರುವರುಷ ಬಾಳುವಂಥ ಆಯುಷ್ಯರೇಖೆ ಇದ್ದು ಲಕ್ಷಸಂಖ್ಯೆ ದ್ರವ್ಯವನ್ನು ಕಳಿಸುವಂಥ ಅರ್ಥರೇಖೆ ಇರಬೇಕು. ಎಂಬತ್ತು ಒಂಬತ್ತು ನೂರುವರುಷ ಬಾಳುವಂಥ ಆಯುಷ್ಯಪ್ರಮಾಣವಿಲ್ಲದೆ ಬರಿಯ ಲಕ್ಷಸಂಖ್ಯೆ ದ್ರವ್ಯವನ್ನು ಗಳಿಸುವಂಥ ಅರ್ಥರೇಖೆ ಇದ್ದಲ್ಲಿ, ಫಲವೇನು–ಪ್ರಯೋಜನವೇನು. ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು?–ರಣಾಗ್ರವನ್ನು ಕಂಡಾಕ್ಷಣಕ್ಕೆ ಮುಂದಲ ಕಾಲನ್ನು ಹಿಂದಕ್ಕಿಡದೆ ಹಿಡಿದ ಕತ್ತಿಯನ್ನು ಬಿಡದೆ ಕಡಿದಾಡಿ ಜಯಿಸಿಬರುವಂಥ ಪರಾಕ್ರಮಿಯ ಕೈಯಲ್ಲಿ ಚಂದ್ರಾಯುಧವಿದ್ದರೆ ಕಡಿದಾಡಿ ಜಯಿಸಿ ಬಂದಾನಲ್ಲದೆ ರಣಾಗ್ರವನ್ನು ಕಂಡಾಕ್ಷಣಕ್ಕೆ ಮುಂದಲ ಕಾಲನ್ನು ಹಿಂದಕ್ಕಿಟ್ಟು ಕೈಯಲ್ಲಿ ಹಿಡಿದಂಥ ಕತ್ತಿಯನ್ನು ಬಿಟ್ಟುಕೊಟ್ಟು ಮೊಣಕಾಲಮಂಡೆ ಒಡೆವ ಸುದ್ದಿಯನರಿಯದೆ ಓಡಿಹೋಗುವಂಥ ಹೆಂಬೇಡಿಯ ಕೈಯಲ್ಲಿ ಜರಿಯ ಮೇಲೆ ಹೊಡೆದರೂ ಹರಿವಂಥ ಫಿರಂಗಿ ಇದ್ದಲ್ಲಿ, ಫಲವೆನು?–ಪ್ರಯೋಜನವೆನು.

ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೆನು? ಕಣ್ಣುಳ್ಳ ಆತ್ಮರುಗಳ ಕೈಯಲ್ಲಿ ಕನ್ನಡಿಯನ್ನು ಕೊಟ್ಟರೆ ತಮ್ಮ ಮುಖದಲ್ಲಿ ಇರುವಂಥ ಕಂದುಕಲೆ ಹಾವಭಾವ ವಿಲಾಸವಿಭ್ರಮಗಳನ್ನು ನೋಡಿಕೊಂಡು ಪರಿಣಾಮಿಸುವರಲ್ಲದೆ ಕಣ್ಣಿಲ್ಲದ ಕುರುಡನ ಕೈಯಲ್ಲಿ ಕನ್ನಡಿಯನ್ನು ಕೊಟ್ಟರೆ ಕೈಯಲ್ಲಿ ಹಿಡಿದುನೋಡಿ ನುಣ್ಣಗೈತೆ ತೆಳ್ಳಗೈತೆ ಇದು ಹೆಂಚೋ ಕಲ್ಲೋ ಎಂದು ಒತ್ತಟ್ಟಿಗಿಟ್ಟುಬಿಡಹತ್ತಿಹನು, ಫಲವೇನು?–ಪ್ರಯೋಜನವೇನು. ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?–ಭೋಗಾತ್ಮರುಗಳೊಂದಿಗೆ ಮಾಣಿಕ್ಯವನ್ನು ಕೊಟ್ಟರೆ ಪದಕದಲ್ಲಿ ಹುದುಗೊಳಿಸಿ ಉರದಲ್ಲಿ ಹಾಕಿಕೊಂಡು ಪರಿಣಾಮಿಸುವರಲ್ಲದ ಕಪಿಯ ಕೈಯಲ್ಲಿ ಮಾಣಿಕ್ಯವನ್ನು ಕೊಟ್ಟರೆ ಮೂಸಿನೋಡಿದರೆ ಗಂಧವಿಲ್ಲ, ಕಡಿದುನೋಡಿದಲ್ಲಿ ಮೃದುವಿಲ್ಲದಿದ್ದಲ್ಲಿ ಇದು ಕಲ್ಲೋ ಹಳ್ಳೋ ಎಂದು ಬಿಟ್ಟುಬಿಡುತ್ತಿಹುದು, ಫಲವೇನು?–ಪ್ರಯೋಜನವೇನು.

ನಮ್ಮ ಕೂಡಲಸಂಗನಶರಣರ–ಜಂಗಮಮೂರ್ತಿಗಳು ಲಿಂಗಾರ್ಪಿತ ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದಲ್ಲಿ ಕಂಡಾಕ್ಷಣಕ್ಕೆದ್ದು ನಮಸ್ಕಾರವ ಮಾಡಿ ತಮ್ಮಲ್ಲಿದ್ದಂಥ ಸಕಲಪದಾರ್ಥವನ್ನು ನೀಡಿ ಸಂತೃಪ್ತಿಬಡಿಸುವಂಥದನು, ಅಱಿಯದ–ತಿಳಿಯದ, ಅವರ–ಅಂತಪ್ಪ ಆಶಾಲಾಂಛನಿ ಉಪಾಧಿಕರ, ಕೈಯಲ್ಲಿ ಲಿಂಗವಿದ್ದು ಫಲವೇನು–ಅವರ ಹಸ್ತದಲ್ಲಿ ಲಿಂಗವನ್ನು ಪಿಡಿದುಕೊಂಡು ಲಿಂಗಪೂಜೆಯಮಾಡುತ್ತಿದ್ದಲ್ಲಿ, ಫಲವೇನು–ಪ್ರಯೋಜನವೇನು, ಶಿವಪಥವನಱಿಯದನ್ನಕ್ಕರ!–ಸಮರಸಭಾವದಿಂದ ಲಿಂಗಪೂಜೆ ಜಂಗಮದಾಸೋಹವ ಮಾಡುವಂಥ ಲಿಂಗಾಚಾರಮಾರ್ಗವನ್ನು ತಿಳಿಯಬೇಕು, ತಿಳಿಯದೆ ಕಾಂಬುವರ ಕಂಡು ಭಿನ್ನವಿಟ್ಟುಕೊಂಡು ಲಿಂಗಪೂಜೆ ಜಂಗಮದಾಸೋಹ ಮಾಡಿ ಕಿಂಚಿನ್ಮಾತ್ ಫಲಪದಂಗಳ ಪಡೆದುಕೊಂಡು ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ಅರ್ಥರೇಖೆ ಇದ್ದು ಆಯುಷ್ಯರೇಖೆ ಇಲ್ಲದವನ ಇರಸ್ಥಿತಿಯೂ ಎರಡೂ ಒಂದೇ ಆಗಿರ್ಪುದು. ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದ ಇರಸ್ಥಿತಿಯೂ ಅಂಥಕನ ಕೈಯಲ್ಲಿ ದರ್ಪಣವಿದ್ದ ಇರಸ್ಥಿತಿಯೂ ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದ ಇರಸ್ಥಿತಿಯೂ ಒಂದೇ ಆಗಿರ್ಪುದು.

II- - - - - - - - - - - - - - - - - - - - - - - - - - - - - - - - - - - - - - - - - - - - -

ಅರ್ಥರೇಖೆ ಇದ್ದಲ್ಲಿ ಫಲವೇನು ಆಯುಷ್ಯರೇಖೆ ಇಲ್ಲದನ್ನಕ್ಕರ?–ಆಜ್ಞಾಸಿದ್ಧಾರ್ಥನಿರಂಜನ ಗೆರೆಯುಂಟಾಗಿರ್ದಲ್ಲಿ ಪ್ರಯೋಜನವೇನು ಭಕ್ತಿಕಾಲವರ್ಧನನಿರಂಜನ ಗೆರೆಯು ನಾಸ್ತಿಯಾದನ್ನಬರ? ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು?=ಭಕ್ತಿಜ್ಞಾನವೈರಾಗ್ಯವಿಹೀನವಾದ ಹೆಂಬೇಡಿಯಾದಾತ್ಮನ ಕುಚಿತ್ತವೆಂಬ ಕರದಲ್ಲಿ ಪರಮಶಾಂತಿಜ್ಞಾನವೆಂಬ ಪರಶುವುಂಟಾಗಿರ್ದು ಪ್ರಯೋಜನವೇನು?

ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?–ಜಾತ್ಯಂಧಕನಾದ ಜೀವನ ಕುಚಿತ್ತವೆಂಬ ಹಸ್ತದಲ್ಲಿ ಸತ್ಕ್ರಿಯಾ ಕೈಪಿಡಿಸ್ವರೂಪವಾದಿಷ್ಟಲಿಂಗವಿದ್ದು ಪ್ರಯೋಜನವೇನು? ಮರ್ಕಟನಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?–ಮನೋಮರ್ಕಟನ ಕರದಲ್ಲಿ ಅನರ್ಘ್ಯ ಉತ್ತಮನಾಯಕರತ್ನ ಸ್ವರೂಪವಾದ ಪ್ರಾಣಲಿಂಗವಿದ್ದು ಪ್ರಯೋಜನವೇನು? ಮುಂದಕ್ಕೆ ಕಾಣಬಂದರ್ಥ.

---

೧೧೨

**ಗಂಡನ ಮೆಲೆ ಸ್ನೇಹವಿಲ್ಲದ ಹೆಂಡತಿ, ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ ಶಿವಶಿವಾ! ಇದ್ದಡೇನು, ಹೋದಡೇನು? ಕೂಡಲಸಂಗಮದೇವಾ, ಊಡದ ಆವಿಂಗೆ ಉಣ್ಣದ ಕಱುವ ಬಿಟ್ಟಂತೆ!**

I- - - - - - - - - - - - - - - - - - - - - - - - - - - - - - - - - - - - - - - - - - - - - -

ಗಂಡನ ಮೇಲೆ–ಸ್ವಭರ್ತೃವಾದ ರಮಣನ ಮೇಲೆ, ಸ್ನೇಹವಿಲ್ಲದ ಹೆಂಡತಿ–ಗಂಡನೆಂಬಂಥದು ಪ್ಯಾಟಿ ಮನೆ ಪುರ ಪಟ್ಟಣಸ್ಥಾನಂಗಳಿಗೆ ಉದ್ದಿಮೆ ವ್ಯಾಪಾರಂಗಳಿಗೆ ಹೋಗಿಬರುವುದಕ್ಕೆ ತಡೆದರೆ ಆವಾಗ ಎನ್ನ ಗಂಡ ಉದ್ದಿಮೆ ವ್ಯಾಪಾರಂಗಳ ಮಾಡಿಕೊಂಡು ಬಂದಾನೋ ಆವಾಗ ಅನ್ನೋದಕ ಮೊದಲಾದ ಸರ್ವೋಪಚಾರದಿಂ ಸಂತೃಪ್ತಿಬಡಿಸೇನೋ ಎಂಬಂಥ ಸಖಿತ್ವವಿಲ್ಲದ ಸತಿಯು, ಲಿಂಗದ ಮೇಲೆ–ಗುರು ಕರುಣಿಸಿಕೊಟ್ಟಂಥ ಇಷ್ಟಮಹಾಲಿಂಗದಲ್ಲಿ,

ನಿಷ್ಠೆಯಿಲ್ಲದ–ಈ ಲಿಂಗವೆ ಪ್ರಾಣ, ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು. ಈ ಲಿಂಗ ಹೋದರೆ ಈ ಲಿಂಗದೊಡನೆ ಪ್ರಾಣಕೊಟ್ಟೇನು. ಈ ಲಿಂಗವಲ್ಲದನ್ಯದೈವಂಗಳ ಭಜನೆಯ ಮಾಡಬಾರದೆಂಬಂಥ ನಿಷ್ಠೆ ಇರಬೇಕು. ಇಲ್ಲದಿರುವಂಥ, ಭಕ್ತ–ಶಿವಭಕ್ತನು, ಇದ್ದಡೇನು–ನೂರಾರು ವರುಷ ಪರಿಯಂತರ ಉಂಬುತ್ತ ಉಡುವುತ್ತ ಸುಖಸಂತೋಸದಲ್ಲಿದ್ದರೇನು, ಶಿವಶಿವಾ!–ಲಿಂಗವೆ, ಲಿಂಗವೆ, ಹೋದಡೇನು? –ಇವತ್ತೇ ಸತ್ತುಹೋದರೇನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಊಡದ ಆವಿಂಗೆ ಕಱುವ ಬಿಟ್ಟಂತೆ!–ಲೋಕದಲ್ಲಿ ಒಂದು ಆಕಳು ಕರುವನ್ನು ಹಾಕಿ ಸತ್ತು ಹೋಗುವುದು. ಹೋದಲ್ಲಿ ಕರುವು ಸಾವುತೈತೆಂದು ಮತ್ತೊಂದಾಕಳಿಗೆ ಮೊಲೆ ಉಣ್ಣೋದಕ್ಕೆ ಬಿಡುವರು. ಬಿಟ್ಟಲ್ಲಿ ಆ ಆಕಳು ತನ್ನ ಕರುವಲ್ಲದೆ ಮತ್ತೊಂದು ಕರುವನುಣ್ಣಗೊಡದು. ಈ ಕರುವಾದಂಥದು ತನ್ನನ ತಾಯಲ್ಲದೆ ಮತ್ತೊಂದಾಕಳ ಮೊಲೆಯುಣ್ಣದು . ಹಾಂಗೆ,

● ಒಂದಕ್ಕೊಂದು ಅಸ್ತವ್ಯಸ್ತವಾಗಿಪ್ಪುದೆಂಬ ಹಾಂಗೆ ಅಂಗವಾದುದು ಲಿಂಗವಾದುದು ಪೂಜಾರೂಪವಾದುದು ಒಂದೇ ವಸ್ತುವೆಂದರಿದು ತಾನುತಾನಾಗಿ ಸಮರಸಭಾವದಿಂದೆ ಲಿಂಗಪೂಜೆಯ ಮಾಡಬೇಕೆಂಬಂಥದು ಉಪಾಧಿಭಕ್ತನೆಂಬ ಶಿಸುವಿಂಗುಂಟಾಗಿಲ್ಲವು. ಅ ಭಕ್ತನ ಭಕ್ತಿಯ ಕೈಕೊಂಡು ನಿಜಮೋಕ್ಷವನ್ನು ಕರುಣಿಸಿಕೊಡಬೇಕೆಂಬಂಥದು ಪರಶಿವಲಿಂಗವೆಂಬ ಜನನಿಗುಂಟಾಗಿಲ್ಲವು. ಎರಡಕ್ಕೂ ಅಸ್ತವ್ಯಸ್ತವಾಗಿಪ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III- - - - - - - - - - - - - - - - - - - - - - - - - - - - - - - - - - - - - - - - - - - - -

ಉದಾಸೀನದ ಭಕ್ತನ ಭಕ್ತಿಯ ನಿರಾಶಾಜಂಗಮವಂಗೀಕರಿಸನೆಂಬುದೀಗ ಊಡದ ಆವಿಂಗೆ ಉಣ್ಣದ ಕಱುವ ಬಿಟ್ಟಂತೆ ಎಂಬ ಶಬ್ದಕ್ಕರ್ಥ.

---

೧೧೩

**ಅವಳ ವಚನ ಬೆಲ್ಲದಂತೆ: ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ! ಕಂಗಳಲೊಬ್ಬನ ಕರೆವಳು, ಮನದಲೊಬ್ಬನ ನೆನೆವಳು! ಕೂಡಲಸಂಗಮದೇವ ಕೇಳಯ್ಯಾ, ಈ ಮಾನಸಗಳ್ಳಿಯ ನಂಬದಿರಯ್ಯಾ.**

I- - - - - - - - - - - - - - - - - - - - - - - - - - - - - - - - - - - - - - - - - - - - -

ಅವಳ–ಪಣ್ಯಾಂಗನೆಯ, ವಚನ–ವಾಕ್ಯದಲ್ಲಿ, ಬೆಲ್ಲದಂತೆ–ಮನೆಗೆ ಬಂದಂಥ ವಿಟಪುರುಷರಿಗೆ ಅಯ್ಯಾ ಜೀಯಾ ಬುದ್ಧೀ ಹಸಾದ ಚಿತ್ತೈಸಿ ಮೂರ್ತವ ಮಾಡಿರೆಂದು ಮಧುರೋಕ್ತಿ ವಾದಪ್ರಸಂಗವನಾಡುತಿರ್ಪಳು, ಹೃದಯದಲ್ಲಿಪ್ಪುದು–ಅಂತರಂಗದಲ್ಲಿರುವಂಥದು, ನಂಜು ಕಂಡಯ್ಯಾ!–ಅವನೇನಾದರೂ ಐಶ್ವರ್ಯವಂತನಾಗಿದ್ದಲ್ಲಿ ಇವನನ್ನು ಯಾವ ರೀತಿಯಿಂದಲಾದರೂ ಎನ್ನ ಪ್ರಪಂಚಿಗೆ ಒಳಗುಮಾಡಿಕೊಂಡು ಇವನ ಕೈಯಲ್ಲಿದ್ದಂಥ ದ್ರವ್ಯವೆಲ್ಲವ ಸೆಳೆದುಕೊಂಡು ಅವನ ತಲೆಯ ಮೇಲೆ ಚಾಪಿ ಪುಟ್ಟಿಯನ್ನು ಹೊರಿಸಿ ಕಳಿಸಿಕೊಡಬೇಕೆಂಬಂಥ ಕಾಪಟ್ಯವೇ ಉಂಟಾಗಿರ್ಪುದು, ಕಂಡಯ್ಯಾ–ಕಾಣಯ್ಯಾ.

ಕಂಗಳಲೊಬ್ಬನ ಕರೆವಳು–ಅವನ ಸಂಗಾತ ಪ್ರಸಂಗವಾಡುತಿದ್ದ ಹಾಂಗೆ ಮತ್ತೊಬ್ಬ ವಿಟಪುರುಷ ಕಣ್ಣಸನ್ನೆಯ ಮಾಡಿ ಕರೆವುತಿಪ್ಪಳು, ಮನದಲೊಬ್ಬನ ನೆನೆವಳು!–ಮತ್ತೊಬ್ಬ ದ್ರವ್ಯಸ್ಥನ ಸಂಗವ ಮಾಡಬೇಕೆಂದು ಸ್ಮರಿಸುತ್ತಿಪ್ಪಳು. ಕೂಡಲಸಂಗಮದೇವ–ಎಲೆ ವಿಟಪುರುಷನೆ, ಕೇಳಯ್ಯಾ–ಅಲಿಸಯ್ಯಾ, ಈ ಮಾನಸಗಳ್ಳಿಯ–ಈ ಮನೋಹಾದರಗಿತ್ತಿಯಾದ ಪಣ್ಯಾಂಗನೆಯ, ನಂಬದಿರಯ್ಯಾ!–ಎನಗೊಲಿದವಳೆಂದು ಹಿತೋಕ್ತವಾಗಿ ಪ್ರಸಂಗವನಾಡದಿರಯ್ಯಾಯೆಂದು ಮತ್ತೊಬ್ಬ ಸ್ತ್ರೀಯಳು ಅವಳ ಸಂಗಕ್ಕೊಳಗಾಗಬೇಡೆಂದು ಬುದ್ಧಿವಂತಿಕೆ ಹೇಳುತ್ತಿಹಳೆಂಬ ಲೋಕದ ದೃಷ್ಟೋಪಮಾನದ ಹಾಂಗೆ,

ಅವಳ–ಉಪಾಧಿಭಕ್ತನೆಂಬ ಪಣ್ಯಾಂಗನೆಯ, ವಚನ–ವಾಕ್ಯದಲ್ಲಿ, ಬೆಲ್ಲದಂತೆ–ಸ್ವಾಮಿ! ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬುವಂಥ ಮಧುರೋಕ್ತಿ ವಾದಪ್ರಸಂಗವುಂಟಾಗಿರ್ಪುದು. ಹೃದಯವಲ್ಲಿಪ್ಪುದು–ಅಂತರಂಗದಲ್ಲಿರುವಂಥದು, ನಂಜು ಕಂಡಯ್ಯಾ–ವಂಚನೆ ಉಪಾಧಿ ಕುಹಕ ಪ್ರಪಂಚವೆಂಬ ಕಾಪಟ್ಯವೆ ಉಂಟಾಗಿರ್ಪುದು ನೋಡಯ್ಯಾ.

ಕಂಗಳಲೊಬ್ಬನ ಕರೆವಳು–ಗುರು ಕರುಣಿಸಿಕೊಟ್ಟಂಥ ಇಷ್ಟಮಹಾಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ಕಂದ ವೃತ್ತ ಗದ್ಯ ಪದ್ಯ ಪ್ರಬಂಧಗಳಿಂದ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿ ಅನಿಮಿಷದೃಷ್ಟಿಯಿಂದ ನಿರೀಕ್ಷಣೆಯ ಮಾಡುತ್ತಿರ್ಪಳು. ಮನದಲೊಬ್ಬನ ನೆನೆವಳು–ಅ ಲಿಂಗಪೂಜೆಯಾದ ತದನಂತರದಲ್ಲಿ ವೀರಣ್ಣ ಬಸವಣ್ಣ ಮಲ್ಲಿಕಾರ್ಜುನ ಮೊದಲಾದ ದೊಡ್ಡ ದೊಡ್ಡ ದೇವರುಗಳೈದಾವೆ ಅವರವರ ಬಳಿಗೆ ಹೋಗಿ ಎಣ್ಣೆ ಮಜ್ಜನವ ನೀಡಿಸಿ ಎಲೆ ಪೂಜೆಯ ಕಟ್ಟಿಸಿ ಪರ್ವಪಾದ್ಯವ ಮಾಡಿಸಿ ದಾನದಕ್ಷಿಣವನ್ನು ಕೊಟ್ಟು ಅಡ್ಡಡ್ಡ ಬಿದ್ದು ಆರಾಧಿಸಬೇಕೆಂದು ಸ್ಮರಿಸುತ್ತಿರ್ಪಳು.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಅಲಿಸಯ್ಯಾ, ಈ ಮಾನಸಗಳ್ಳಿಯ–ಈ ಮನೋಹಾದರಗಿತ್ತಿಯಾದ ಉಪಾಧಿಕ ಭಕ್ತನೆಂಬ ಪಣ್ಯಾಂಗನೆಯನು, ನಂಬದಿರಯ್ಯಾ! ನಿಮ್ಮ ಚಿದಂಗಸ್ವರೂಪನೆಂದು ವಿಶ್ವಾಸಿಸಿ ನಿಜಮೋಕ್ಷವನ್ನು ಕರುಣಿಸಿಕೊಡದಿರಯ್ಯಾ.

III- - - - - - - - - - - - - - - - - - - - - - - - - - - - - - - - - - - - - - - - - - - - - - -

ಅವಳ–ಆ ಭಕ್ತನ, ವಚನ–ವಾಕ್ಯವು, ಬೆಲ್ಲದಂತೆ–ಗುಡದ ಹಾಂಗೆ ಮಧುರಾಯ ಮಾನವಾಗಿಪ್ಪುದು, ವಿಗಡ ದುಗುಡ ಕಳವು ಕ್ರೋಧ ಮೊದಲಾದ ವಿಷವಂತರಂಗದಲ್ಲಿರ್ಪುದೆಂಬುದೀಗ ಅವಳ ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ ಎಂಬ ಶಬ್ದಕ್ಕರ್ಥ. ಕಂಗಳಲ್ಲಿ–ನೇತ್ರಗಳಲ್ಲಿ, ಒಬ್ಬನ–ಇಷ್ಟಲಿಂಗ ದೇವನೊಬ್ಬನ, ಕರೆವಳು–ಪೂಜಿಸುವನು, ಮನದಲೊಬ್ಬನ–ಮನಸ್ಸಿನಲ್ಲಿ ಅನ್ಯದೈವದ ಭಜನೆವೊಂದನು, ನೆನೆವಳು–ಸ್ಮರಿಸುವ[ನು].

ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ, ಕೇಳಯ್ಯಾ-ಎನ್ನ ಬಿನ್ನಪವ ಆಲಿಸಿ ಅಂಗೀಕರಿಸಯ್ಯ, ಮಾನಸಗಳ್ಳಿಯ-ಮನಸ್ಸಿನಲ್ಲಿ ಅನ್ಯದೈವದ ಭಜನೆಯನುಳ್ಳ ಭಿನ್ನಭಕ್ತನನ್ನು, ನಂಬದಿರಯ್ಯಾ!-ನಚ್ಚದಿರಯ್ಯಾ.

V- - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ವಿಗಡ ದುಗಡ ಕಳವು ಕ್ರೋಧ ವಂಚನೆ ಮೊದಲಾದ ವಿಷವು ಚಿತ್ತದಲ್ಲಿರುವದೆಂಬುದೀಗ ಹೃದಯಲ್ಲಿಪ್ಪುದು ನಂಜು ಕಂಡ ಎಂಬುದರ್ಥ.

---

೧೧೪

**ಹಾದರಕ್ಕೆ ಹೋದಡೆ ಕಳ್ಳದಮ್ಮವಾಯಿತ್ತು, ಹಾಳುಗೋಡೆಗೆ ಹೋದಡೆ ಚೇಳೂಡಿತ್ತು, ಅಬ್ಬರವ ಕೇಳಿ ತಳವಾಱ ಉಟ್ಟ ಸೀರೆಯ ಸುಲಿದ, ನಾಚಿ ಹೋದಡೆ ಮನೆಯ ಗಂಡ ಬೆನ್ನಬಾರತನೆತ್ತಿದ, ಅರಸು ಕೂಡಲಸಂಗಮದೇವ ದಂಡವ ಕೊಂಡ!**

I- - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಹಾದರಕ್ಕೆ ಹೋದಡೆ-ಲೋಕದಲ್ಲಿ ಸ್ತ್ರೀಯರು ಜಾರತ್ವವನ್ನು ಮಾಡಿದರೆ ವರಹ ಹೊನ್ನು ರೂಪಾಯಿ ಸೀರೆ ಕುಪ್ಪಸ ವೊದಲಾದವನ್ನು ಕೊಡುತ್ತೈದಾರೆಂದು ಜಾರಭಾವವನ್ನು ಆಡುವದಕ್ಕೈದಿದರೆ, ಕಳ್ಳದಮ್ಮವಾಯಿತ್ತು ದೂಳಸಂಜೆಯಲ್ಲಿ ಒಬ್ಬ ವಿಟಪುರುಷ ಬಂದು ಒಂದು ಸಲ್ಲದ ದುಡ್ಡು ಕೊಟ್ಟು ಹೋದನು. ಹಾಳು ಗೋಡೆಗೆ ಹೋದಡೆ ಚೇಳೂಡಿತ್ತು-ಮನೆಯೊಳಗೆ ಅತ್ತಿಗೆ ನಾದುನಿ ಭಾವ ಮೈದುನ ಅತ್ತೆ ಮಾವ ಮೊದಲಾದವರ ಗದ್ದಲವ ಕಂಡು, ಹಾಳುಗೋಡೆಗೆ-ಪಾಳಾಶ್ರಯ ಭಿತ್ತಿಗೆ ಹೋದಡೆ-ಎಯ್ದುಹೋದರೆ, ಚೇಳೂತ್ತು-ಅಲ್ಲಿ ವೃಶ್ಚಿಕ ದಷ್ಟವಾಯಿತ್ತು.

ಅಬ್ಬರವ ಕೇಳಿ: [ಅಬ್ಬರವ-] ಅರಿಯೋ ಮೊರೆಯೋ ಎಂದು ಹುಯ್ಯಲಿಡುವಂಥ ಶಬ್ದವನು, ಕೇಳಿ-ಆಲಿಸಿ, ತಳವಾಱ ಪುರರಕ್ಷಕನು, ಉಟ್ಟ ಸೀರೆಯ ಸುಲಿದ-ಉಟ್ಟಂಥ ಸೀರೆ, ತೊಟ್ಟಂಥ ಕುಪ್ಪಸ ಇಟ್ಟೊಡವೆಯನ್ನು ಸೆಳದುಕೊಂಡನು. ನಾಚಿ-ಅಂಬರಕ್ಕೆ ಅಭಿಮಾನಿಸಿಕೊಂಡು, ಹೋದಡೆ-ಹಿಂದೆ ಮುಂದೆ ಕೈಮುಚ್ಚಿಕೊಂಡು ಮನೆಗೆಯ್ದು ಹೋದರೆ, ಮನೆಯ ಗಂಡ-ಆಲಯಕ್ಕೆ ಕರ್ತನಾದ ಯಜಮಾನನು, ಬೆನ್ನಬಾರನೆತ್ತಿದ-ಎಲೆ ತೊತ್ತೆ ಇಷ್ಟೊತ್ತಿನಾಗ ಎಲ್ಲಿಗೆ ಹೋಗಿದ್ದೀಯೆಂದು ಗಂಟಿನ ಚಬುಕವನ್ನು ತೆಗೆದುಕೊಂಡು ಮೈಯನೆಲ್ಲ ಒಡೆಬಡೆದನು. ಅರಸು ಕೂಡಲಸಂಗಮದೇವ ದಂಡವ ಕೊಂಡ!-ಬೆಳಗಾದ ಮೇಲೆ ತಳವಾರರು ದೊರೆಯ ಬದಿಗೆ ಹೋಗಿ ದೇವರು ಇಂಥ ಸೆಟ್ಟಿಕಾರನ ಹೆಂಡತಿ ಇಂಥ ಸ್ಥಳದಲ್ಲಿ ಹಾದರವನಾಡುತ್ತಿದ್ದಾಳು, ನಾವು ಕಂಡು ಹಿಡಿದು ಬಡಿದು ಉಟ್ಟುತೊಟ್ಟ ವಸ್ತ್ರಾಭರಣಗಳ ತೆಗೆದುಕೊಂಡು ಬಂದೆವೆಂದು ಮುಂದಿಟ್ಟು ಹೇಳಿದಲ್ಲಿ ಆ ದೊರೆಯಾದಂಥವನು ಆ ಸೆಟ್ಟಿಕಾರನ ಕರಿಸಿ ನಿನ್ನಂಥ ಸೆಟ್ಟಿಕಾರನು ನಿನ್ನ ಹೆಂಡತಿಯ ಹರಾಹುರಿ ಬಿಡಬಹುದೆಯೆಂದು ಸಾವಿರ ವರಹದ ಹರದನಾದರೆ ನೂರುವರಹ, ಎರಡು ಸಾವಿರ ವರಹದಹರದನಾದರೆ ಇನ್ನೂರು ವರಹ, ಅವರವರನುವರಿತು ಅಪರಾಧವ ತೆಗೆದುಕೊಂಡು ಬಿಡುತ್ತಿಹನೆಂಬ ದೃಷ್ಟೋಪಮಾನದ ಹಾಂಗೆ.

● ಹಾದರಕ್ಕೆ ಹೋದಡೆ–ಗುರು ಕರುಣಿಸಿಕೊಟ್ಟಂಥ ಇಷ್ಟಲಿಂಗವೆ ತನ್ನ ರಮಣನು. ಅಂತಪ್ಪ ತನ್ನ ರಮಣನಾದ ಇಷ್ಟಲಿಂಗಮೂರ್ತಿಯನ್ನು ಬಿಟ್ಟು ಧೂರ್ಜಟಿ ವಿರೂಪಾಕ್ಷ ಅರುಣಾಚಲ ಗಂಗಾಧರೇಶ್ವರ ಮೊದಲಾದ ಸ್ಥಾವರಮೂರ್ತಿಗಳಿರುವಂಥ ಸ್ಥಾನಕ್ಕೆ ಹೋಗಿ ಎಣ್ಣೆಮಜ್ಜನವ ನೀಡಿಸಿ ಎಲೆಪೂಜೆಯನ್ನು ಕಟ್ಟಿಸಿ ಪರ್ವಪಾಡ್ಯವನ್ನು ಮಾಡಿಸಿ ದಾನದಕ್ಷಿಣೆಯನ್ನು ಕೊಟ್ಟು ಅಡ್ಡಡ್ಡ ಬಿದ್ದು ಆರಾಧಿಸಿದಲ್ಲಿ, ಕಳ್ಳದಮ್ಮವಾಯಿತ್ತು–ನಿಜ ಮೋಕ್ಷಕ್ಕೆ ಸಲುವಳಿಯಲ್ಲದೆ ಚತುರ್ವಿದ ಫಲಪದಂಗಳುಂಟಾಯಿತ್ತು. ಹಾಳುಗೋಡೆಗೆ ಹೋದಡೆ–ಚತುರ್ವಿದ ಫಲಪದಂಗಳ ಪಡೆದನುಭವಿಸುವುದಕ್ಕೋಸ್ಕರ ವಿವೇಕ ಕರಣಂಗಳೆಡೆಯಾಟವಿಲ್ಲದಿರುವಂಥ ಪಾಳಾಶ್ರಯಸ್ವರೂಪವಾದ ದೇಹವ ಧರಿಸಿಕೊಂಡು ಎಯ್ದುಹೋದರೆ, ಚೇಳೂಡಿತ್ತು–ಅಲ್ಲಿ ಮಾಯಾಶಕ್ತಿಯೆಂಬ ವೃಶ್ಚಿಕ ದಷ್ಟವಾಯಿತ್ತು.

ಅಬ್ಬರವ ಕೇಳಿ–ಆ ದೇಹಕ್ಕೆ ಕರಣೇಂದ್ರಿಯಂಗಳಿಂದುಲಿವ ಸಂಚಲವನಾಲಿಸಿ, ತಳವಾಱ ಆ ದೇಹದಲ್ಲಿ ತಮ್ಮರಿವಿಂಗೆ ಮಾಯಾಪ್ರಪಂಚಿನ ಮರವೆ ಬಂದು ಅವಗ್ರಹಿಸದ ಹಾಂಗೆ ಏಕಾಗ್ರಚಿತ್ತದಿಂದೆಚ್ಚತ್ತಿರುವಂಥ ಶ್ರೀಗುರುನಾಥನು, ಉಟ್ಟ–ಸರ್ವಾಂಗಕ್ಕೆ ಆಚ್ಛಾದಿಸಿಕೊಂಡಂಥ, ಸೀರೆಯ–ಸತ್ಕ್ರೀಯಾಚಾರವೆಂಬ ಅಂಬರವನ್ನು, ಸುಲಿದ–ಸೆಳೆದುಕೊಂಡನು. ನಾಚಿಹೋದಡೆ–ಕ್ರೀಯನ್ನು ಬಿಟ್ಟು ಹೇಂಗೆ ಹೋಗಲೆಂದು ಅಭಿಮಾನಿಸಿಕೊಂಡು ಅಂತರಂಗವೆಂಬ ನಿಳಯಕೆಯ್ದಿದರೆ, ಮನೆಯ ಗಂಡ–ಆಚಾರಾಂಗವೆಂಬ ನಿಳಯಕ್ಕೆ ಕರ್ತನಾದಂಥ ಇಷ್ಟಲಿಂಗದೇವನು, ಬೆನ್ನಬಾರನೆತ್ತಿದ–ಕಾಲಕಾಮರ ಶಿಕ್ಷೆಯನುಂಟುಮಾಡಿದ. ಅರಸು ಕೂಡಲಸಂಗಮದೇವ ದಂಡವ ಕೊಂಡ!: ಅರಸು–ರಾಜಾಧಿರಾಜರುಗಳಿಗೆ ಕರ್ತನಾದಂಥ, ಕೂಡಲಸಂಗಮದೇವ–ಪ್ರಾಣಲಿಂಗದೇವನು, ದಂಡವಕೊಂಡ!–ಜ್ಞಾನವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡುತ್ತಿಹನು.

II- - - - - - - - - - - - - - - - - - - - - - - - - - - - - - - - - - - - - - - - - - -

ಹಾದರಕ್ಕೆ ಹೋದಡೆ ಕಳ್ಳದಮ್ಮವಾಯಿತ್ತು–ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾದ ಭಕ್ತನು ಅನ್ಯದೈವಂಗಳಿಗೆರಗಿದರೆ ಇವ ನೋಡಿದರೆ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾಗೈದಾನೆ ವಿಭೂತಿ ರುದ್ರಾಕ್ಷಿಗಳ ಧರಿಸಿರುತ್ತೈದಾನೆ ಅನ್ಯದೈವಂಗಳಿಗೂ ನಡೆವುತ್ತಾನೆ ಇವ ಎಂಥ ಶಿವಭಕ್ತ ನೋಡಿರೆ ಎಂಬ 'ಸುದ್ದಿ' ಹರೆಯಿತ್ತು. ಹಾಳುಗೋಡೆಗೆ ಹೋದಡೆ ಚೇಳೂಡಿತ್ತು–ಭಕ್ತಿಕಾಯವಿಹೀನವಾದ ಬರುಕಾಯವೆಂಬ ಕೀಲವಾಟಿಗೆಯ್ದಿದರೆ ಮಾಯಾವೃಶ್ಚಿಕನು ದಷ್ಟವಾಯಿತ್ತು.

ಅಬ್ಬರವ ಕೇಳಿ–ನಾಹಂ ಕೋಽಹಂ ಸೋಽಹಂ ಎಂಬ ಶಬ್ದವನಾಲಿಸಿ, ತಳವಾಱ ಶ್ರೀಗುರುದೇವನೆಂಬ ಗ್ರಾಮಶೋಧಕನು, ಉಟ್ಟ ಸೀರೆಯ ಸುಲಿದ–ಪ್ರವೇಷ್ಟಿಸಿಕೊಂಡಿರ್ದ ಕ್ರಿಯಾಂಬರವನಪಹರಿಸಿಕೊಂಡ. ನಾಚಿ ಹೋದಡೆ–ದೇಹಭಾವಕ್ಕೆ ಅಭಿಮಾನಿಸಿಯೆಯ್ದಿದರೆ, ಮನೆಯ ಗಂಡ ಬೆನ್ನ ಬಾರನೆತ್ತಿದ–ಅಂಗವೆಂಬ ಗೃಹಕ್ಕೆ ವಲ್ಲಭನಾದ ಇಷ್ಟಲಿಂಗವೆಂಬ ಪುರುಷನು ಪಶ್ಚಿಮಜ್ಞಾನವನಪಹರಿಸಿಕೊಂಡ. ಅರಸು ಕೂಡಲಸಂಗಮದೇವ ದಂಡವ ಕೊಂಡ!–ಚತುರ್ದಶಲೋಕಂಗಳಿಗೆ ವಿಭುವಾಗಿ ವಿರಾಜಿಸುವಂಥ ಪರಮೇಶ್ವರನು ಭಕ್ತಿಯನಪಹರಿಸಿಕೊಂಡ.

● ಮತ್ತಂ, ಪ್ರಾಣಲಿಂಗಸಂಬಂಧಿಯಾಗಬೇಕೆಂದೆಯ್ದಿದರೆ ಜ್ಞಾನವು ವರ್ಧನವಾಯಿತ್ತು. ನೆನಹು ನಿರ್ವಾಣತೆಯನುಕರಿಸಿದರೆ ಅರ್ಪಿತ ದಷ್ಟವು ತಲೆಗೇರಿತ್ತು. ತನುಕರಣೇಂದ್ರಿಯ ಶಬ್ದಜಾಲಂಗಳುಲುಹನಾಲಿಸಿ ಮನಸ್ಸು ಪ್ರವೇಷ್ಟಿಸಿಕೊಂಡಿರ್ದ ಜ್ಞಾನಾಂಬರವನಪಹರಿಸಿಕೊಂಡಿತ್ತು. ಅದಕ್ಕೆ ಅಭಿಮಾನಿಸಿಯೆಯ್ದಿದರೆ ಅಂತರಂಗವೆಂಬ ಗೃಹಕ್ಕೆ ವಲ್ಲಭನಾದ ಪ್ರಾಣಲಿಂಗವೆಂಬ ಪುರುಷನು ಪೂರ್ವಾಪರಜ್ಞಾನವ ಎಚ್ಚರಿಸಿಕೊಟ್ಟ. ಅಂತಪ್ಪ ಜ್ಞಾನಿಯ ಕೈಯಿಂದ ಮಹಾಜ್ಞಾನಿ ಜಂಗಮವು ನಮಸ್ಕಾರವ ಕೈಕೊಂಡನೆಂಬುದರ್ಥ.

..........................

೧-೧ ಶುದ್ಧಿ (ಚ.ಜ).

III- - - - - - - - - - - - - - - - - - - - - - - - - - - - - - - - - - - - - - - - - - - - - - -

ತಾನು ಶಿವಭಕ್ತನಾಗಿರ್ದು ಅನ್ಯದೈವದ ಭಜನೆಯ ಮಾಡಲಿಕ್ಕೆ ಹೋದಲ್ಲಿ ಸಹಜ ಶಿವಭಕ್ತರಾಗಿದ್ದವರು ತಿರಸ್ಕರಿಸಿ ನುಡಿದಪರೆಂಬುದೀಗ ಹಾದರಕ್ಕೆ ಹೋದಡೆ ಕಳ್ಳದಮ್ಮವಾಯಿತ್ತು ಎಂಬ ಶಬ್ದಕ್ಕರ್ಥ. ಚಿತರಣಂಗಳ ವ್ಯಾಪಾರವಿಲ್ಲ [೨]ದೆ[೨] ದೇಹಭಾವದೊಡನೆ ಕೂಡಿ ವರ್ತಿಸಿದಲ್ಲಿ ಮಾಯಾ ವೃಶ್ಚಿಕ ದಷ್ಟವಾಯಿತ್ತೆಂಬುದೀಗ ಹಾಳುಗೋಡೆಗೆ ಹೋದಡೆ ಚೇಳೂಜಿತು ಎಂಬ ಶಬ್ದಕ್ಕರ್ಥ.

ಅಂತಪ್ಪ ದೇಹಸಂಬಂಧವಾದಾತ್ಮನ ನಾಹಂ ಕೋऽಹಂ ಸೋऽಹಂ ಎಂಬ ಭಿನ್ನವಾಕ್ಯವ ಶ್ರೀಗುರುಸ್ವಾಮಿಯೆಂಬ ತಳವಾರನಾಲಿಸಿದಲ್ಲಿ ಕ್ರಿಯಾಚಾರವ ನಷ್ಟವ ಮಾಡಿದಪನೆಂಬುದೀಗ ಅಬ್ಬರವ ಕೇಳಿ ತಳವಾಱನುಟ್ಟ ಸೀರೆಯ ಸುಲಿದ ಎಂಬ ಶಬ್ದಕ್ಕರ್ಥ. ಅನ್ಯದೈವದ ಭಜನೆಗಭಿಮಾನಿಸಿ ಶಿವಾಚಾರದಿಕ್ಕಿ [೩][ಗೆ ವಿ][೩] ಮುಖವಾದಲ್ಲಿ ಸುಜ್ಞಾನಸ್ವರೂಪವಾದ ಜಂಗಮವು ಶಿಕ್ಷಿಪನೆಂಬುದೀಗ ನಾಚಿಹೋದಡೆ ಮನೆಯ ಗಂಡ ಬೆನ್ನಬಾರನೆತ್ತಿದನೆಂಬ ಶಬ್ದಕ್ಕರ್ಥ. ಅರಸು-ರಾಜನಾದಂಥ, ಕೂಡಲಸಂಗಮದೇವ-ಪರಶಿವಲಿಂಗವು, ದಂಡವ ಕೊಂಡ!-ಸುಜ್ಞಾನದ್ರವ್ಯವನಪರಹಿಸಿಕೊಂಡ ನೆಂಬುದರ್ಥ.

..........................

೨-೨ ದ (ಟ). ೩-೩ ಗಭಿ (ಟ,ಡ).

V- - - - - - - - - - - - - - - - - - - - - - - - - - - - - - - - - - - - - - - - - - - - - - -

ಗುರು ಕೊಟ್ಟ ಇಷ್ಟಲಿಂಗವನು ಬಿಟ್ಟು ಅನ್ಯದೈವಂಗಳ ಭಜನೆಯನಂಗೀಕರಿಸಿದರೆ ಎಂಬುದೀಗ ಹಾದರಕ್ಕೆ ಹೋದಡೆ, ಅನ್ಯದೈವದ ಭಜನೆ ಪ್ರಕಟವಾಯಿತ್ತೆಂಬುದೀಗ ಕಳ್ಳದಮ್ಮವಾಯಿತ್ತೆಂಬುದರ್ಥ. ಭೂತಕಾಯದಲ್ಲಿ ಆಚರಿಸಿದರೆ ಮಾಯಾವೃಶ್ಚಿಕನಾವರಿಸಿ ವಿಷಯವೆಂಬ ಕೊಂಡಿಯಿಂದ ದಷ್ಟವಾಯಿತ್ತೆಂಬುದೀಗ ಹಾಳಗೋಡೆಗೆ ಹೋದಡೆ ಚೇಳೂರಿತ್ತೆಂಬುದರ್ಥ.

ನಾಹಂ ಕೋऽಹಂ ಸೋऽಹಂ ಎಂಬ ಧ್ವನಿಯನಾಲಿಸಿಯೆಂಬುದೀಗ ಅಬ್ಬರವ ಕೇಳಿ ಎಂಬುದರ್ಥ. ಅಜ್ಞಾನ ಪ್ರವೇಶವಾದ ಹಾಂಗೆ ಎಚ್ಚತ್ತಿರ್ಪ ಏಕಾಗ್ರಚಿತ್ತಸ್ವರೂಪನಾದ ಶ್ರೀಗುರುದೇವನು ಅಂಗವನಾಶ್ರಯಿಸಿರ್ದ ಆಚಾರಂಬರನನಪಹರಿಸಿದನೆಂಬುದೀಗ ತಳವಾರ ಉಟ್ಟಸೀರೆಯ ಸುಲಿದ

ನೆಂಬುದರ್ಥ. ಪಂಚಪಾಶಂಗಳಲ್ಲಿ ವರ್ತಿಸಿದರೆ ಅಂಗಕ್ಕಧಿಪತಿಯಾದ ಇಷ್ಟಲಿಂಗದೇವನು ಕ್ರಿಯಾಚಾರವನಪಹರಿಸಿದನೆಂಬುದೀಗ ನಾಚಿಹೋದಡೆ ಮನೆಯ ಗಂಡ ಬೆನ್ನಬಾರನೆತ್ತಿದನೆಂಬುದರ್ಥ. ಆತ್ಮಂಗಧಿಪತಿಯಾದ ಪ್ರಾಣಲಿಂಗದೇವನು ಸುಜ್ಞಾನದ್ರವ್ಯವನಪಹರಿಸಿದನೆಂಬುದೀಗ ಅರಸು ಕೂಡಲಸಂಗಮದೇವ ದಂಡವ ಕೊಂಡನೆಂಬುದರ್ಥ.

---

೧೧೫

**ಗಜೆ ತೋಜಿ³ ಗಂಡರೆಂಬವರ ಕಾಣೆ: ನಿ[1]ಜೆ][1] [2]ಸೋಂಕಲು ಮುನಿಯಿಲ್ಲ[2] ನೋಡಯ್ಯಾ–ನಂಟುತನವೇನವನ? ಬಂಟತನವೇನವನ? ಹುಲ್ಲುಕಿಚ್ಚು ಹೊಲೆಯರ ಮೇಳಾಪ[3]ವಲ್ಲೇನು[3] ಹುರುಳಿಲ್ಲ, ಹುರುಳಿಲ್ಲ, [4]ಹುರುಳಿಲ್ಲ[4], ಕೂಡಲಸಂಗಮದೇವಾ.**

..........................

1–1 ಲಿ(ಕ,ಗ)

I- - - - - - - - - - - - - - - - - - - - - - - - - - - - - - - - - - - - - - - - - - - - - -

ಗಜೆ ತೋಜಿ³ ಗಂಡರೆಂಬವರ ಕಾಣೆ–ಆಚೆ ಕಡೆಯಲ್ಲಿ ಹತ್ತೆಂಟುಸಾವಿರ ಈಚೆ ಕಡೆಯಲ್ಲಿ ಹತ್ತೆಂಟುಸಾವಿರ ಬಲಾಬಲ ಕೂಡಿ ಕಡಿದಾಡುತಿರ್ದಲ್ಲಿ ಆಚೆಲಿಂದೊಬ್ಬ ಮೊನೆಗಾರ ಬಂದು ತೀರಿನಿಂದಿಟ್ಟಲ್ಲಿ ಅದು ಗರಿಸಹವಾಗಿ ಬಂದು ಎದೆಯಲ್ಲಿ ನಟ್ಟು ಬೆನ್ನಲ್ಲಿ ತಟ್ಟುಬ್ಜೆ ಹೋದಲ್ಲಿ ಅಲ್ಲೇ ಸುತ್ತಿಕೊಂಡು ಬಿದ್ದು ಪ್ರಾಣವಾದರೂ ಬಿಡುವರು, ಹಿಂದಕ್ಕಾದರೂ ಓಡಿಬರುವರಲ್ಲದೆ ಅದನ್ನು ಒತ್ತಿಕೊಂಡು ಪ್ರಾಣಹೋಗೋತನಕ ಯುದ್ಧವ ಮಾಡಿ ಜಯಿಸುವಂಥ ಪರಾಕ್ರಮಿಗಳೊಳಗೊರ್ವರನು ಕಂಡುದಿಲ್ಲವು. ನಿ⁽[ಜೆ]⁾ ಸೋಂಕಲು ಮುನಿಯಿಲ್ಲ ನೋಡಯ್ಯಾ–ಏಕಾಂತಸ್ಥಲದಲ್ಲಿ ಯತೀಶ್ವರರಿರುವಂಥ ಸ್ಥಾನಕ್ಕೆ ಸ್ತ್ರೀಯರು ಬಂದು ತಮ್ಮ ಹಾವಭಾವ ವಿಲಾಸವಿಭ್ರಮಗಳನ್ನು ತೋರಿ ತಕ್ಕೈಸಿಕೊಂಡಲ್ಲಿ ಪರಸ್ತ್ರೀಯರ ಸಂಸರ್ಗವ ಮಾಡಬಾರದೆಂದು ತಿರಸ್ಕಾರವ ಮಾಡಿಬಿಡುವಂಥ ಮುನಿಗಳೊಳಗೊರ್ವರೂ ಉಂಟಾಗಿಲ್ಲ ಕಂಡಯ್ಯಾ.

ನಂಟುತನವೇನವನ? ಏಕಾಂತಸ್ಥಾನದಲ್ಲಿ ಯತೀಶ್ವರರಿರುವಂಥ ತಾವಕ್ಕೆ ಸ್ತ್ರೀಯರು ಬಂದು ತಮ್ಮ ಹಾವಭಾವ ವಿಲಾಸವಿಭ್ರಮಗಳನು ತೋರಿ ತಕ್ಕೈಸಿಕೊಂಡಲ್ಲಿ ಪರಸ್ತ್ರೀಯರ ಸಂಸರ್ಗವನ್ನು ಮಾಡಬಾರದೆಂಬಂಥದು ತಿಳಿಯದೆ ನಾನಾಗಿ ಬಯಸಲಿಲ್ಲ ತಾನಾಗಿ ಬಂದಿತ್ತೆಂದು ಸಂರ್ಗವ ಮಾಡುವಂಥವನ, ನಂಟುತನವೇನವನ?–ಮುನಿತ್ವವೇನವನ, ಬಂಟತನವೇನವನ?–ಆಚೆ ಕಡೆಗೆ ಹತ್ತೆಂಟುಸಾವಿರ ಈಚೆ ಕಡೆಗೆ ಹತ್ತೆಂಟು ಸಾವಿರ ಬಲಾಬಲ ಕೂಡಿ ಕಡಿದಾಡುತ್ತಿದ್ದಲ್ಲಿ ಅಚೆಲಿಂದೊಬ್ಬ ಮೊನೆಗಾರ ಬಂದು ತೀರಿನಿಂದಿಟ್ಟಲ್ಲಿ ಅದು ಗರಿ ಸಹವಾಗಿ ಬಂದು ಎದೆಯಲ್ಲಿ ನಟ್ಟು ಬೆನ್ನಿನಲ್ಲಿ ತಟ್ಟುಚ್ಚಿದಲ್ಲಿ ಅಲ್ಲೇ ಬಿದ್ದು ಪ್ರಾಣವನ್ನಾದರೂ ಬಿಡುವರು, ಅಥವಾ ಹಿಂದಕ್ಕೆ ಓಡಿಯಾದರೂ ಬರುವರಲ್ಲದೆ ಅದನ್ನು ಒತ್ತಿಕೊಂಡು ಪ್ರಾಣಹೋಗುವ ಪರಿಯಂತರ ಯುದ್ಧವ ಮಾಡಬೇಕು, ಮಾಡಲಾರದಿರುವಂಥವನ; ಬಂಟತನವೇನವನ?–ಅವನ ಪರಾಕ್ರಮವೇನು ಪ್ರಯೋಜನವು.

ಹುಲ್ಲುಕಿಟ್ಟು ಹೊಲೆಯರ ಮೇಳಾಪವಲ್ಲೇನು ಹುರುಳಿಲ್ಲ ಹುರುಳಿಲ್ಲ; ಹುಲ್ಲುಕಿಟ್ಟು-ಕಟ್ಟಿಗೆ ಕುರುಳನ್ನು ಉರಿ ಹಚ್ಚಿದರೆ ತಾಸು ಘಳಿಗೆ ಪಟುತರವಾಗಿ ಉರಿದೀತಲ್ಲದೆ ಹುಲ್ಲನು ಉರಿ ಹಚ್ಚಿದರೆ ಬುರ್ರೆಂದು ಉರಿದು ಆರಿಹೋಗುವುದಲ್ಲದೆ ತಾಸು ಘಳಿಗೆ ಪಟುತರವಾಗಿ ಉರಿದೀತೆ? ಉರಿಯಲರಿಯದು ಎಂಬ ಹಾಂಗೆ, ಹೊಲೆಯರ ಮೇಳಾಪ-ಭರತಕಟ್ಟಳೆವಿದ್ಯೆಯವರೇನಾದರೂ ಸಂಗೀತರತ್ನಾಕರವನು ಕಲಿತುಕೊಂಡು ಗತ್ತುಗತ್ತಿಗೆರ ತಾಳವನು ಕಟೆಯುತ್ತ ಮದ್ದಳೆಯನ್ನು ನುಡಿಸುತ್ತ ಗಾನವನ್ನು ಪಾಡುತ್ತ ನರ್ತನವನ್ನು ಕುಣಿಯುತ್ತಿರ್ದಲ್ಲಿ ದೊರೆದಾತರು ಮಚ್ಚಿ ಸಪ್ತಾಂಗ ತ್ಯಾಗವನು ಕೊಟ್ಟಾರಲ್ಲದೆ ಹೊಲೆಯರೇನಾದರೂ ಹತ್ತೆಂಟಕ್ಕೆ ಮೇಳವನ್ನು ಮಾಡಿಕೊಂಡು ಡೋಲೊತಟ್ಟಿಗೆ ಬಡಿವುತ್ತ ಕೊಳಲೊತ್ತಟ್ಟಿಗೆ ಊದುತ್ತ ತಾವೊತ್ತಟ್ಟಿಗೆ ಕುಣಿದಲ್ಲಿ ಆ ಭರತಕಟ್ಟಳೆವಿದ್ಯೆಯವರ ಮುಂದೆ ಹಾಸ್ಯವಾಗಿರ್ಪುದು. ಅದಲ್ಲದೆ ದೊರೆತಾರು ಮಚ್ಚಿ ಸಪ್ತಾಂಗತ್ಯಾಗವನು ಕೊಟ್ಟಾರಲ್ಲದೆ ಹೊಲೆಯರೇನಾದರೂ ಹತ್ತೆಂಟಕ್ಕೆ ಮೇಳವನ್ನು ಮಾಡಿಕೊಂಡು ಡೋಲೊತ್ತಟ್ಟಿಗೆ ಬಡಿವುತ್ತ ಕೊಳಲೊತ್ತಟ್ಟಿಗೆ ಊದುತ್ತ ತಾವೊತ್ತಟ್ಟಿಗೆ ಕುಣಿದಲ್ಲಿ ಆ ಭರತಕಟ್ಟಳೆವಿದ್ಯೆಯವರ ಮುಂದೆ ಹಾಸ್ಯವಾಗಿರ್ಪುದು. ಅದಲ್ಲದೆ ದೊರೆದಾತರು ಮಚ್ಚಿ ಸಪ್ತಾಂಗತ್ಯಾಗವನು ಕೊಟ್ಟಾರೆ? ಕೊಡರು, ಅಲ್ಲಿ-ಹಿಂದೆ ಹೇಳಿದವರೊಳಗೊಂದರಲ್ಲಿ, ಹುರುಳಿಲ್ಲ, ಹುರುಳಿಲ್ಲ-ಪ್ರಯೋಜನವಿಲ್ಲ, ಪ್ರಯೋಜನವಿಲ್ಲವೆಂಬುದರ್ಥ.

● ಗಜೆ ತೋಜೆ ಗಂಡರೆಂಬವರ ಕಾಣೆ-ಭಿನ್ನಜ್ಞಾನೇಂದ್ರಿಯಂಗಳು ಬಂದು ವೇದಾಂತಿಯನವಗ್ರಹಿಸಲು ಆ ಭಿನ್ನಜ್ಞಾನೇಂದ್ರಿಯಂಗಳನು ನಷ್ಟವ ಮಾಡಿಬಿಟ್ಟು ಆ ಭಿನ್ನಜ್ಞಾನ ಲಿಂಗೇಂದ್ರಿಯಂಗಳಾಗಿ ಅಳವಡಿಸಿಕೊಂಡಾಚರಿಸುವಂಥ ವೇದಾಂತಿಗಳೊಳಗೊರ್ವರನು ಕಂಡುದಿಲ್ಲ. ನಿ[ಜೆ] ಸೋಂಕಲು ಮುನಿಯಿಲ್ಲ ನೋಡಯ್ಯಾ-ಭಿನ್ನಕ್ರಿಯಾಚಾರವು ಬಂದು ಸಿದ್ಧಾಂತಿಯನವಗ್ರಹಿಸಲು ಭಿನ್ನಕ್ರಿಯಾಚಾರವ ನಷ್ಟವ ಮಾಡಿಬಿಟ್ಟು ಅಭಿನ್ನ ಕ್ರಿಯಾಚಾರವಾಗಿ ಅಳವಡಿಸಿಕೊಂಡಾಚರಿಸುವಂಥ ಸಿದ್ಧಾಂತಿಗಳೊಳಗೊರ್ವರುಂಟಾಗಿಲ್ಲ ಕಂಡಯ್ಯಾ.

ನಂಟುತನವೇನವನ?-ಭಿನ್ನಕ್ರಿಯಾಚಾರ ಬಂದು ಸಿದ್ಧಾಂತಿಯನವಗ್ರಹಿಸಲು ಆ ಭಿನ್ನಕ್ರಿಯಾಚಾರವ ನಷ್ಟವ ಮಾಡಿಬಿಟ್ಟು ಅಭಿನ್ನಕ್ರಿಯಾಚಾರವಾಗಿ ಅಳವಡಿಸಿಕೊಂಡಾಚರಿಸದೆ ಇದ್ದಂಥ ಸಿದ್ಧಾಂತಿಯ ಕ್ರಿಯೆ ಏನವನ ಸಖಿತ್ವವೇನವನ, ಬಂಟತನವೇನವನ?-ಭಿನ್ನಜ್ಞಾನ ಲಿಂಗೇಂದ್ರಿಯಂಗಳು ಬಂದು ವೇದಾಂತಿಯನವಗ್ರಹಿಸಲು ಆ ಭಿನ್ನಜ್ಞಾನೇಂದ್ರಿಯಂಗಳ ವರ್ತನೆಯನು ನಷ್ಟವ ಮಾಡಿಬಿಟ್ಟು ಅಭಿನ್ನಜ್ಞಾನಲಿಂಗೇಂದ್ರಿಯಂಗಳಾಗಿ ಅಳವಡಿಸಿಕೊಂಡಾಚರಿಸದೆ ಇದ್ದಂಥ ವೇದಾಂತಿಯ ಜ್ಞಾನವೇನವನ ಸಾಮರ್ಥ್ಯವೇನವನ.

ಹುಲ್ಲುಕಿಚ್ಚು ಹೊಲೆಯರ ಮೇಳದೋಪಾದಿಯಲ್ಲಿ ಭಿನ್ನಕ್ರಿಯಾಚಾರ ಭಿನ್ನಜ್ಞಾನೇಂದ್ರಿಯಂಗಳುಳ್ಳ ದ್ವೈತಾದ್ವೈತಿಗಳ ನಡಾವಳಿಗಳನು, ಅಭಿನ್ನಕ್ರಿಯಾಚಾರ ಅಭಿನ್ನಜ್ಞಾನಲಿಂಗೇಂದ್ರಿಯಂಗಳುಳ್ಳ ಶಿವಶರಣರ ಮಧ್ಯದಲ್ಲಿ ಹಾಸ್ಯವಾಗಿರ್ಪುದು, ಅಲ್ಲೇನು-ದ್ವೈತಾದ್ವೈತಿಗಳಲ್ಲೇನು, ಹುರುಳಿಲ್ಲ ಹುರುಳಿಲ್ಲ-ಭಿನ್ನಕ್ರಿಯಾಚಾರವನುಳ್ಳ ಸಿದ್ಧಾಂತಿಗಳಲ್ಲಿ ಅಭಿನ್ನಕ್ರಿಯಾಚಾರವುಂಟಾಗಿಲ್ಲವು. ಭಿನ್ನಜ್ಞಾನೇಂದ್ರಿಯಂಗಳುಳ್ಳ ವೇದಾಂತಿಗಳಲ್ಲಿ ಅಭಿನ್ನಜ್ಞಾನ ಲಿಂಗೇಂದ್ರಿಯಂಗಳುಂಟಾಗಿಲ್ಲವು ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧–೧ ಲಿ(ಕ,ಗ)

II- - - - - - - - - - - - - - - - - - - - - - - - - - - - - - - - - - - - - - - -

1–1 2–2 ಸೋಂಕೆ ಮುನಿಸಿಲ್ಲ (ಜ). 3–3 ಅಲ್ಲಿ (ಜ). 4–4 x (ಜ).

..........................

ಗಜೆ ತೋಜ್‌ ಗಂಡರೆಂಬವರ ಕಾಣೆ–ಬತ್ತಿ ಬಾಣ ಕತ್ತಿ ಕೈದು ಈಟಿ ಮೊದಲಾದ ಮೂವತ್ತೆರಡು ಆಯುಧವನು ಕಾಣಿಸಲಾಗಿ ಅವನ್ನು ಜಯಿಸಿಬರುವಂಥ ಪಂಥಪರಾಕ್ರಮಿಗಳಾದ ಪುರುಷರುಗಳ ನೋಡಲಿಲ್ಲ. ನಿಜೆಸೋಂಕೆ ಮುನಿಸಿಲ್ಲ ನೊಡಯ್ಯಾ–ಇಂದ್ರಿಯಂಗಳೆಂಬ ನಿರಿಯು ತಟ್ಟಲಾಗಿ ಕೋಪವಿಲ್ಲ ಕಂಡಯ್ಯಾ.

ನಂಟುತನವೇನವನ? ಬಂಟತನವೇನವನ?–ಆ ಮೂವತ್ತೆರಡು ಆಯುಧಕ್ಕೆ ಎದೆಗೊಟ್ಟು ನಿಂದಿರದವನ ಪರಾಕ್ರಮವೇನು? ಇಂದ್ರಿಯಂಗಳೆಂಬ ನಿರಿಯನು ತಿರಸ್ಕರಿಸದವನ ಸಖತ್ವವೇನು? ಮತ್ತಂ, ಪ್ರಾಣವಾಯುವಿನ ಪ್ರಕೃತಿಯು ಕಾಣಿಸಲು ಅದನು ಜಯಿಸುವಂಥ ಯತಿವ್ರತಿಯೋಗಿಗಳೆಂಬ ಪಂಥಪರಾಕ್ರಮಿಗಳ ಕಾಣೆ. ಭಿನ್ನಕ್ರೀಯೆಂಬ ನಿರಿಯು ತಟ್ಟಲು ಕ್ರೋಧವಿಲ್ಲ ನೋಡಯ್ಯಾ. ಆ ಪ್ರಾಣವಾಯುವಿನ ಪ್ರಕೃತಿಯನು ಜಯಿಸದವನ ಪರಾಕ್ರಮವೇನು? ಆ ಭಿನ್ನಕ್ರೀಯೆಂಬ ನಿರಿಯನು ತಿರಸ್ಕರಿಸದವನ ಸಖತ್ವವೇನು?

ಹುಲ್ಲುಕಿಚ್ಚು ಹೊಲೆಯನ ಮೇಳಾಪ!–ವಿಷಯತೃಣವು ತಾಪತ್ರಯಾಗ್ನಿಯು ಸರ್ವಸೂತಕವನುಳ್ಳ ಜೀವನಕೂಟವು, ಅಲ್ಲಿ ಹುರುಳಿಲ್ಲ ಕೂಡಲಸಂಗಮದೇವಾ–ಎಲೆ ಲಿಂಗವೆ ಆ ಜೀವನಲ್ಲಿ ಭಕ್ತಿನೈಷ್ಠೆ ಜ್ಞಾನನೈಷ್ಠೆಯೆಂಬ ಪ್ರಯೋಜನದ್ರವ್ಯವಿಲ್ಲವೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - -

೩–೩–ಅಲ್ಲಿ (ಟ,ಡ). ೪–೪ (ಟ,ಡ)

..........................

ಪುಂಖ ಮುಳುಗುವ ಹಾಂಗೆ ಬಾಣಪ್ರಂಯೋಗವ ಮಾಡುವ ಪರಾಕ್ರಮಿಗಳಪೂರ್ವವೆಂಬುವ ಹಾಂಗೆ ಸತ್ಕ್ರಿಯಾಚಾರವನು ತಮ್ಮ ದೇಹಾವಸಾನ ಪರ್ಯಂತರಲು ಪಾರವೆಯ್ದಿಸುವ ಜ್ಞಾನಿಗಳಪೂರ್ವವೆಂಬುದೀಗ ಗಜೆತೋರೆ ಗಂಡರೆಂಬವರ ಕಾಣೆ ಎಂಬ ಶಬ್ದಕ್ಕರ್ಥ. ರೂಪು ಲಾವಣ್ಯ ಹಾವಭಾವ ವಿಭ್ರಮವಿಲಾಸವನುಳ್ಳ ಸ್ತ್ರೀಯರುಗಳ ಎದೆ ಬದಿ ತೋಳು ತೊಡೆ ಸ್ತನ ಮೊದಲದಂಗವು ಸೋಂಕಿದಲ್ಲಿ ಸೈರಿಸುವದಶಕ್ಯವೆಂಬೊ ಹಾಂಗೆ ಇಂದ್ರಿಯೋತ್ಪಾತವಾದಲ್ಲಿ ಸೈರಿಸುವ ಜ್ಞಾನಿಗಳಪೂರ್ವವೆಂಬುದೀಗ ನಿಜೆಸೋಂಕಲು ಮುನಿಯಿಲ್ಲ ನೋಡಯ್ಯ ಎಂಬ ಶಬ್ದಕ್ಕರ್ಥ.

ಅವನ–ಆ ಭಿನ್ನಭಕ್ತನ, ನಂಟುತನವೇನು?–ವಿಶ್ವಾಸವೇನು?, ಅವನ–ಕ್ರಿಯಾಚಾರಹೀನವಾದ ಭಿನ್ನಭಕ್ತನ, ಬಂಟತನವೇನು? ಪರಾಕ್ರಮವೇನು? ತಾಪತ್ರಯಾಗ್ನಿಮನಸ್ಸೂತಕವನುಳ್ಳ ಭಿನ್ನಭಕ್ತನಲ್ಲಿ ಕ್ರಿಯಾಜ್ಞಾನಗಳ ಪ್ರಯೋಜನವುಂಟಾಗದೆಂಬುದೀಗ ಹುಲ್ಲುಕಿಚ್ಚು ಹೊಲೆಯನ ಮೇಳಾಪ! ಅಲ್ಲಿ ಹುರುಳಿಲ್ಲ ಎಂಬ ಶಬ್ದಕ್ಕರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

V- - - - - - - - - - - - - - - - - - - - - - - - - - - - - - - - - - - - - - - - - -

ಇಂದ್ರಿಯಂಗಳುತ್ಪಾತವಾದರೆ ನಿಗ್ರಹಿಸುವ ಜ್ಞಾನಿಗಳಪೂರ್ವವೆಂಬುದೀಗ ಗಜೆದೋರೆ ಗಂಡರೆಂಬವರ ಕಾಣೆನೆಂಬುದರ್ಥ. ಆಚಾರವಳವಡಲಿಕ್ಕಾಗಿ ಕ್ರೋಧವೆಂಬುದೀಗ ನಿಜೆ ಸೋಂಕೆ ಮುನಿಯಿಲ್ಲ.

---

## ೧೧೬

**ಅಳೆವುತ್ತ ಅಳೆವುತ್ತ ಬಳಲುವರಲ್ಲದೆ ಕೊಳಗ ಬಳಲುವುದೆ [1]ಅಯ್ಯಾ[1]. ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ [1]ಅಯ್ಯಾ?[1] ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೆ [1]ಅಯ್ಯಾ?[1] [2]ನಿಮ್ಮ[2] ನಿಜವ ನಜೆಯದೆ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ ಅಯ್ಯಾ? ಕೂಡಲಸಂಗಮದೇವಾ ಅರಸಜೆಯದ ಬಿಟ್ಟಿ [3]ಯಂತೆ[3].**

I- - - - - - - - - - - - - - - - - - - - - - - - - - - - - - - - - - - - - - - - - -

ಅಳೆವುತ್ತ ಅಳೆವುತ್ತ ಬಳಲುವರಲ್ಲದೆ ಲೋಕದೊಳಗೆ ಹಲಾಯುಧನೇನಾದರೂ ಹದಿನೆಂಟು ಧಾನ್ಯಂಗಳನು ಬಿತ್ತಿ ಬೆಳೆದು ಕೊಯ್ದು ಒಕ್ಕಿ ತೂರಿ ರಾಸಿಯ ಮಾಡಿ ಕೈಯಲ್ಲಿ ಪ್ರಸ್ಥವನು ಪಿಡಿದು 'ಅಳೆ ಪ್ರಮಾಣೇ'ಯೆಂದು ಪ್ರಮಾಣಿಸುತ್ತ, ಬಳಲುವರಲ್ಲದೆ–ನಾಗಂಡಗಳದೀವಿ ಐಗಂಡಗಳದೀವಿ ಕೈ ನೋವುತಾವೆ ಕಾಲು ನೋವುತಾವೆಯೆಂದು ಆಯಾಸಂಬಡುವರಲ್ಲದೆ, ಕೊಳಗ ಬಳಲುವುದೆ–ಪ್ರಸ್ಥವೇನಾದರೂ ತಾಸು ಎರಡು ತಾಸು ನಾಗಂಡಗಳದಿರಿ ಐಗಂಡಗಳದಿರಿ ನನಗಾಯಾಸವಾಗ್ಯೆತೆ ಇನ್ನು ಅಳೆಯಬೇಡಿರೆಂದು ಹೇಳುತ್ಯೆತೆ? ಇಲ್ಲವು, ಅಯ್ಯಾ–ಎಲೆ ಲಿಂಗವೆ? ನಡೆವುತ್ತ ನಡೆವುತ್ತ –ದಾರಿಬಟ್ಟೆಗಳ ಗಮಿಸುತ್ತ ಗಮಿಸುತ್ತ, ಬಳಲುವರಲ್ಲದೆ–ಗಾವುದ ಇಗ್ಗಾವುದ ಮೂಗಾವುದ ನಾಗಾವುದ ನಡದೀವಿ ಕಾಲು ನೋವುತಾವೆ ಕೈ ನೋವುತಾವೆಯೆಂದು ಆಯಾಸಂಬಡುವರಲ್ಲದೆ, ಬಟ್ಟೆ ಬಳಲುವುದೆ–ನಡೆವಂಥ ಮಾರ್ಗವೇನಾದರೂ ಹೊತ್ತಾರೆ ಹಿಡಿದುಸಾಯಂಕಾಲ ಪರಿಯಂತರ ನಡೆದೀರಿ ನನಗಾಯಾಸವಾಗ್ಯೆತೆ ಇನ್ನು ನಮ್ಮ ಮೇಲೆ ನಡೆಯಬೇಡಿರಿ ವಾರಿಯಾಗಿ ನಡೆಯಿರೆಂದು ಹೇಳುತ್ಯೆತೆ? ಇಲ್ಲವು, ಅಯ್ಯಾ? ಎಲೆ ಲಿಂಗವೆ?

ಶ್ರವವ ಮಾಡುತ್ತ ಮಾಡುತ್ತ–ದಂಡಕೋಲ ತುದಿಗೆ ಮಸಿಯ ಮೊಟ್ಟಣವ ಕಟ್ಟಿ ಎದೆಗೆ ತಿವಿತೀನಿ ಬದಿಗೆ ತಿವಿತೀನಿ ಹಣೆಗೆ ತಿವಿತೀನಿ[ಎಂದು] ತಟ್ಟ್ಯಾಡುತ್ತ ತಟ್ಟ್ಯಾಡುತ್ತ, ಬಳಲುವರಲ್ಲದೆ–ತಾಸು ತಟ್ಟ್ಯಾಡಿದೀವಿ ಎರಡು ತಾಸು ತಟ್ಟ್ಯಾಡಿದಿವಿ ಕೈ ನೋವುತಾವೆ ಕಾಲು ನೋವುತಾವೆಯೆಂದು ಆಯಾಸಂಬಡುವರಲ್ಲದೆ, ಕೋಲು ಬಳಲುವುದೆ–ದಂಡ ಕೋಲೋನಾದರೂ ತಾಸ್ಹೊತ್ತು ತಟ್ಟ್ಯಾಡಿದಿರಿ

ನನಗಾಯಾಸವಾಗುತೈತೆ ಇನ್ನು ತಟ್ಟ್ಯಾಡಬೇಡಿರೆಂದು ಹೇಳುತೈತೆ? ಇಲ್ಲವು, ಅಯ್ಯಾ?–ಎಲೆ ಲಿಂಗವೆ. ನಿಮ್ಮ ನಿಜವನು–ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಕ್ರೀ ಸಮರಸಜ್ಞಾನವನ್ನು, ಅಱಿಯದ–ತಿಳಿಯದ, ಭಕ್ತ–ಉಪಾದಿಭಕ್ತನು, ಬಳಲುವನಲ್ಲದೆ–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಲಿಂಗ ಪೂಜೆ ಜಂಗಮದಾಸೋಹವನ್ನು ಮಾಡಿ ಕಿಂಚಿನ್ಮಾತ್ರ ಫಲಪದಂಗಳನು ಪಡೆದನನುಭವಿಸಿ ಭವಭವದಲ್ಲಿ ಹುಟ್ಟಿ ಹುಟ್ಟಿ ಬಂದು ದುಃಖವಂಬಡುವನಲ್ಲದೆ ಲಿಂಗ ಬಳಲುವುದೆ–ಇಷ್ಟ ಮಹಲಿಂಗವೇನಾದರೂ ಆ ಭಕ್ತನ ಪೂಜೆಗೆ ತಕ್ಕ ಹಾಂಗೆ ಕಿಂಚಿನ್ಮಾಮಾತ್ರ ಫಲಪದಂಗಳನು ಕೊಟ್ಟು ಸುಗ್ಗಿ ಬೆಳವನೋಪಾದಿಯಲ್ಲಿ ತನ್ನ ತಪ್ಪಿಸಿಕೊಂಡು ವಿಲಕ್ಷಣನಾಗುವನಲ್ಲದೆ ಆ ಭಕ್ತನೊಂದಿಗೆ ಭವಭವದಲ್ಲಿ ಹುಟ್ಟಿ ಹುಟ್ಟಿ ಬಂದು ಆಯಾಸಂಬಟ್ಟಿತ್ತೇ? ಬಡಲರಿಯದು.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಅರಸಱಿಯದ ಬಿಟ್ಟಿಯಂತೆ–ಲೋಕದಲ್ಲಿ ಯಾರಾದರೂ ಬಿಟ್ಟಿಯ ಮಾಡಬೇಕಾದರೆ ಅರಸನರಿಕೆಯಾಗಿ ಬಿಟ್ಟಿಯ ಮಾಡಿದರೆ ಇವನು ಮನಶುದ್ಧವಾಗಿ ಕಷ್ಟವ ಮಾಡುತ್ಯೆದಾನೆಯೆಂದು ತಿಳಿದು ತನ್ನಲ್ಲಿ ಚಾಕರಿಯನಾದರೂ ಮಡಗಿಕೊಂಬುವನು ಅಥವಾ ಹೆಚ್ಚಾಗಿ ಸಂಬಳವನಾದರೂ ಕೊಡುವನು. ಕೊಟ್ಟಲ್ಲಿ ಅವನಿಗೂ ಅವನ ಹೆಂಡಿರು ಮಕ್ಕಳಿಗೂ ಸುಖವಾಗುವದು. ದೊರೆಯರಿಕೆಯಿಲ್ಲದೆ ಭಡೆದಾರ ಚೋಪದಾರ ಮಾಲದಾರರು ಮೊದಲಾದವರು ಹಿಡಿದುಕೊಂಡು ಹೋಗಿ ಹೊತ್ತು ಮುಳುಗೋ ಪರಿಯಂತರ ಬಿಟ್ಟಿಯ ಮಾಡಿಸಿಕೊಂಡು ಬಿಟ್ಟುಕೊಟ್ಟಲ್ಲಿ ತಂದಂಥ ರೊಟ್ಟಿಬುತ್ತಿಯನ್ನು ಉಂಡುಕೊಂಡು ಚಾವಡಿ ಹೆಬ್ಬಾಗಿಲಲ್ಲಿ ಒರಗಿಕೊಂಡಿದ್ದು ಬೆಳಗಾಗೆದ್ದು ಮೆಗೆ ಹೋದಲ್ಲಿ ಆಯಾಸವೇ ಕೈದಟ್ಟುತ್ತಿಹುದು. ಹಾಂಗೆ ಲಿಂಗಪೂಜೆಯ ಮಾಡುತ್ತ ಜಂಗಮ ಭಕ್ತಿಯ ಮಾಡಿದರೆ ಅರಸನರಿಕೆಯಿಂದ ಬಿಟ್ಟಿಯ ಮಾಡಿದವನಿಗೆ ಸುಖವಾದ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರಕೊಂಬುತ್ತಿಹುದು. ಜಂಗಮಭಕ್ತಿ ಬಾಹ್ಯವಾಗಿ ಲಿಂಗಪೂಜೆಯ ಮಾಡಿದರೆ ಅರಸಿನ ಅರಿಕೆಯಿಲ್ಲದೆ ಬಿಟ್ಟಿಯ ಮಾಡಿದವನಿಗೆ ದುಃಖವಾದ ಹಾಂಗೆ ವ್ಯರ್ಥಸ್ಯವಾಗಿರ್ಪುದು.

II- - - - - - - - - - - - - - - - - - - - - - - - - - - - - - - - - - - - - - - - - - -

1–1 x (ಜ). 2–2 x (ಜ). 3–3 ಯೋ (ಜ).

..........................

ಅಳೆವುತ್ತ ಅಳೆವುತ್ತ ಬಳಲುವರಲ್ಲದೆ ಕೊಳಗ ಬಳಲುವುದೆ?–ಪರಿಮಿತವ ಮಾಡುತ್ತ ಶ್ರಮಂಬಡುವರಲ್ಲದೆ ಆ ಮಾನವು ಶ್ರಮಂಬಟ್ಟೀತೆ? ಅಂಗ ಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯನು ಗುರುವಿಗೆ ಭಿನ್ನವಿಟ್ಟು ಎಸಗುತ್ತೆ ಎಸಗುತ್ತೆ ಶ್ರಮಂಬಡುವರಲ್ಲದೆ ಆ ಮಹಾಜ್ಞಾನ ಬಳ್ಳಸ್ವರೂಪವಾದಾಚಾರ್ಯನು ಶ್ರಮಂಬಡನೆಂಬುದರ್ಥ. ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ?–ಮಾರ್ಗವನು ಚರಿಸುತ್ತ ಚರಿಸುತ್ತ ಆಯಾಸಂಬಡುವರಲ್ಲದೆ ಆ ಮಾರ್ಗವು ಆಯಾಸಂಬಟ್ಟೀತೆ? ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಂ

ಭಿನ್ನವಿಟ್ಟು ಎಸಗುತ್ತೆ ಎಸಗುತ್ತೆ ಶ್ರಮಂಬಡುವರಲ್ಲದೆ ಆ ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗವು ಶ್ರಮಂಬಡದೆಂಬುದರ್ಥ.

ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೆ-ಸಾಧಕವನೆಸಗುತ್ತ ಎಸಗುತ್ತ ದಣಿವರಲ್ಲದೆ ಆ ಬಂದಿಕೋಲು ಶ್ರಮಂಬಟ್ಟೀತೆ? ಜಂಗಮಕ್ಕೆ ಹದಿನೆಂಟು ತೆರದ ಭಕ್ತಿಯನು ಭಿನ್ನವಿಟ್ಟು ಎಸಗುತ್ತ ಎಸಗುತ್ತ ಶ್ರಮಂಬಡುವರಲ್ಲದೆ ಆ ಮಹಾಜ್ಞಾನದಂಡಸ್ವರೂಪವಾದ ಜಂಗಮವು ಶ್ರಮಂಬಡನೆಂಬುದರ್ಥ. ನಿಜವನಜಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ? -ಏಕಮೂರ್ತಿಃ ತ್ರಯೋಭಾಗಾಃ। ಗುರುರ್ಲಿಂಗಂತು ಜಂಗಮಃ ಜಂಗಮಶ್ಚ ಗುರುರ್ಲಿಂಗ। ತ್ರಿವಿಧಂ ಲಿಂಗಮುಚ್ಯತೇ। ಎಂಬ ಶ್ರುತ್ಯರ್ಥದಿಂ ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿತ್ತೆಂಬ ಸಹಜಸ್ವರೂಪವನು ತಿಳಿಯದ ಭಿನ್ನಭಕ್ತ ಶ್ರಮಂಬಡುವನಲ್ಲದೆ ಆ ಲಿಂಗವು ಶ್ರಮಂಬಡನೆಂಬುದರ್ಥ. ಮಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - - - -

೨-೨ x (ಟ,ಡ). ೩-೩ ಯೋ (ಟ,ಡ).

.........................

ಅಳೆವುತ್ತ ಅಳೆವುತ್ತ-ಪರಿಮಿತವ ಮಾಡುತ್ತ [೧]ಮಾಡುತ್ತ[೧] ಬಳಲುವರಲ್ಲದೆ-ಶ್ರಮಂಬಡುವರಲ್ಲದೆ, ಕೊಳಗ ಬಳಲುವುದೆ ಅಯ್ಯಾ-ದ್ರೋಣವು ಶ್ರಮಬಡುವುದೆ ಅಯ್ಯಾ? ಇಲ್ಲವೆಂಬ ಹಾಂಗೆ ಮಂತ್ರ ಧ್ಯಾನ ಜಪ ಸ್ತೋತ್ರಗಳ ಮಾಡುತ್ತ ಮಾಡುತ್ತ, ಬಳಲುವರಲ್ಲದೆ-ಶ್ರಮವಬಡುವರಲ್ಲದೆ ಕೊಳಗ ಬಳಲುವುದೆ-ಪ್ರಾಣಲಿಂಗ ಶ್ರಮಬಡುವುದೆ? ಇಲ್ಲವೆಂಬುದರ್ಥ. ನಡೆವುತ್ತ ನಡೆವುತ್ತ-ದಾರಿಯ ಗಮಿಸುತ್ತ ಗಮಿಸುತ್ತ, ಬಳಲುವರಲ್ಲದೆ-ಶ್ರಮಬಡುವರಲ್ಲದೆಬಟ್ಟೆ ಬಳಲುವುದೆ ಅಯ್ಯ?-ಮಾರ್ಗವು ಶ್ರಮಬಡುವುದೆ ಅಯ್ಯಾ? ಇಲ್ಲವೆಂಬ ಹಾಂಗೆ ಇಷ್ಟಲಿಂಗಕ್ಕಷ್ಟ ವಿಧಾರ್ಚನೆ ಷೋಡಶೋಪಚಾರಂಗಳಂ ಮಾಡುತ್ತ [೨]ಮಾಡುತ್ತ[೨] ಬಳಲುವರಲ್ಲದೆ-ಶ್ರಮಬಡುವರಲ್ಲದೆ, ಬಟ್ಟೆ ಬಳಲುವುದೆ?-ಇಷ್ಟಲಿಂಗ ಶ್ರಮಬಡುವುದೆ? ಇಲ್ಲವೆಂಬುದರ್ಥ.

ಶ್ರವವ ಮಾಡುತ್ತ ಮಾಡುತ್ತ-[೩]ಸಾಧ [೪][ನೆಯ][೪] ಮಾಡುತ್ತ ಮಾಡುತ್ತ[೩] ಬಳಲುವರಲ್ಲದೆ-ಶ್ರಮಬಡುವರಲ್ಲದೆ, ಕೋಲು ಬಳಲುವುದೆ ಅಯ್ಯಾ ? ಬಂದಿಕೋಲು ಶ್ರಮಬಡುವುದೆ? ಇಲ್ಲವೆಂಬೊ ಹಾಂಗೆ, ಮನೋಲಯ ನಿರಂಜನಪೂಜೆಯ ಮಾಡುತ್ತ ಮಾಡುತ್ತ, ಬಳಲುವರಲ್ಲದೆ-ಶ್ರಮಬಡುವರಲ್ಲದೆ, ಕೋಲು ಬಳಲುವುದೆ-ಭಾವಲಿಂಗ ಶ್ರಮಬಡುವುದೆ? ಇಲ್ಲವೆಂಬುದರ್ಥ. ನಿಜವಜಿಯದ ಭಕ್ತ ಬಳಲುವನಲ್ಲದೆ-ಚಿತ್ಕಲಾಲಿಂಗದ ಹೊಲಬನಜಿಯದ ಭಿನ್ನಭಕ್ತನು ಭವಭವದಲ್ಲಿ ಶ್ರಮಬಡುವನಲ್ಲದೆ, ಲಿಂಗ ಬಳಲುವುದೆ ಅಯ್ಯಾ-ಪರಶಿವಲಿಂಗವು ಶ್ರಮಬಡುವುದೆ ಅಯ್ಯಾ? ಇಲ್ಲವೆಂಬುದರ್ಥ.

ಕೂಡಲಸಂಗಮದೇವ-ಎಲೆ, ಪರಶಿವಲಿಂಗವೆ, ಅರಸ-ಯದ ಬಿಟ್ಟಿಯೋ-ಅರಸರಿಯದ ಬಿಟ್ಟಿ ಅಪ್ರಯೋಜನವೆಂಬ ಹಾಂಗೆ ಅಂತರಂಗದಲ್ಲಿ ಪ್ರಾಣಲಿಂಗಸಂಬಂಧವನು ತಿಳಿಯದೆ

ಬಹಿರಂಗದಲ್ಲಿಷ್ಟಲಿಂಗದ ಪೂಜೆಯನೆಷ್ಟು ಮಾಡಿದರೂ ಅಷ್ಟು ಫಲಪದಂಗಳ ಪ್ರಾಪ್ತಿ ದೊರಕೊಂಬುವದಲ್ಲದೆ ಲಿಂಗಾಂಗಸಮರಸತ್ವವು ದೊ-ಕೊಳಲರಿಯದೆಂಬುದರ್ಥ.

...........................

1–1 x (ಡ). 2–2 x (ಡ). 3–3 x (ಡ). 4–4 ಕವ (ಟ).

---

## ಭಕ್ತಜ್ಞಾನಿಸ್ಥಲ

I- - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನ ಜ್ಞಾನಿಸ್ಥಲ–ಭಕ್ತಸ್ಥಲದೊಳಗಣಜ್ಞಾನಿ ಸ್ಥಲದಾಚಣೆಯನ್ನು ನಿರೂಪಿಸುತ್ತಿಹರು.

---

೧೧೭

**ಒಲೆಯ ಬೂದಿಯ ಬಿಲಿಯಲು ಬೇಡ; ಒಲಿದಂತೆ ಪೂಸಿಕೊಂಡಿಪ್ಪುದು. ಪೂಸಿ ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕರ? ಒಂದನಾಡಹೋಗಿ ಒಂಬತ್ತನಾಡುವ ಡಂಬಕರ ಮೆಚ್ಚ ಕೂಡಲಸಂಗಮದೇವಾ!**

I- - - - - - - - - - - - - - - - - - - - - - - - - - - - - - - - - - - - - - - - - - - - -

ಒಲೆಯ ಬೂದಿಯ–ಚುಲ್ಲಿಯಲ್ಲಿರುವಂಥ ರಾಕವನ್ನು, ಬಿಲಿಯಲು ಬೇಡ–ದುಡ್ಡು ಅಡ್ಡವಕೊಟ್ಟು ತೆಗೆದುಕೊಂಡು ಬರಬೇಡವು; ಒಲಿದಂತೆ–ನಿನ್ನ ಮನಸ್ಸಿಗೆ ಪ್ರೀತಿಯಾದ ಹಾಂಗೆ, ಪೂಸಿಕೊಂಡಿಪ್ಪುದು–ಕ್ರಿಯೆಗೊಳಗುಮಾಡಿ ಧರಿಸಿಕೊಂಡಿರುವುದು.

ಪೂಸಿ ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕರ?–ಅಂತರಂಗದ ಚಿದ್ವಿಭೂತಿಯೇ ಬಹಿರಂಗದಲ್ಲಿ ಕ್ರಿಯಾವಿಭೂತಿಯಾಗಿ ಬಂದಿಪ್ಪುದು. ಈ ವಿಭೂತಿಯನ್ನು ಧರಿಸಿಕೊಂಡಂಥವರಿಗೆ ಮಹದೈಶ್ವರ್ಯವಾಗುವುದೆಂಬಂಥ ನಿಷ್ಠೆ ಇರಬೇಕು. ಇಲ್ಲದಿರುವ ಪರಿಯಂತರವು ಹೂಸಿ ಏನು ಫಲ? ಲಲಾಟ ಮೊದಲಾದ ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧರಿಸಿಕೊಂಡಿದ್ದರೂ ಬೂದಿಯೊಳಗೆ ಕತ್ತೆಹೊರಳಾಡಿದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲವು. ಒಂದನಾಡಹೋಗಿ–ಹಸ್ತದಲ್ಲಿ ವಿಭೂತಿಯನ್ನು ಪಿಡಿದುಕೊಂಡು ಜಲಪತ್ರಪುಷ್ಪಂಗಳಿಂದರ್ಚಿಸುತ್ತಿರ್ದು, ಒಂಬತ್ತನಾಡುವ–ಇದು ಗೂಳೂರ ವಿಭೂತಿ ತುಮಕೂರ ವಿಭೂತಿ ಇದು ಕೊಟ್ಟೂರ ವಿಭೂತಿ ಇದು ನಯವಾಗ್ಯೆತೆ ದೋರಗನಾಗ್ಯೆತೆ ಕರ‍್ರಗ್ಯೆತೆ ಬೆಳ್ಳಗ್ಯೆತೆ ಕೆಂಪಗ್ಯೆತೆಂದು ಗುಣಸಂಪಾದನೆಯ ಮಾಡುವನೆಂಬುದರ್ಥ.

● ಒಲೆಯ ಬೂದಿಯ–ತನುತ್ರಯಂಗಳಲ್ಲಿ ಪರಿಪೂರ್ಣವಾಗಿರುವಂಥ ಚಿದ್ವಿಭೂತಿಯಚಿದೈಶ್ವರ್ಯಸ್ವರೂಪವಾದ–ಪ್ರಾಣಲಿಂಗವನು, ಬಿಲಿಯಲು ಬೇಡ–ಆ ಪ್ರಾಣಲಿಂಗವು ಹೇಂಗ್ಯೆತೆಂದು ಶ್ರುತಿಗುರುಗಳಿಂದ ಬೆಸಗೊಂಡು ಕೇಳಬೇಡವು; ಒಲಿದಂತೆ–ಶ್ರೀಗುರುನಾಥನು ವೇಧಾಮಂತ್ರಕ್ರಿಯೆಗಳೆಂಬ ದೀಕ್ಷಾಯಂತ್ರಗಳಿಂದ ಅಂಗಕ್ಕೆ ಲಿಂಗಸಂಬಂಧವ ಮಾಡಿ ಅಂತರಂಗದ

ಪ್ರಾಣಲಿಂಗವೆ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದು ಮಗನೇ ಎಂದು ಕರುಣಿಸಿಕೊಟ್ಟರೆ, ಪೂಸಿಕೊಂಡಿಪ್ಪುದು–ಧರಿಸಿಕೊಂಡಿಪ್ಪುದು.

ಮನದಲ್ಲಿ–ಚಿತ್ತದಲ್ಲಿ, ಲೇಸಿಲ್ಲದನ್ನಕ್ಕರ–ಅಂತರಂಗದ ಪ್ರಾಣಲಿಂಗವೇ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದೆಂದು ತಿಳಿವಂಥ ನಿಷ್ಠೆ ಇರಬೇಕು. ಇಲ್ಲದಿರುವ ಪರಿಯಂತರವು, ಪೂಸಿ ಏನು ಫಲ? ಧರಿಸಿಕೊಂಡು ಏನು ಪ್ರಯೋಜನವು? ಒಂದನಾಡ ಹೋಗಿ–ಹಸ್ತದಲ್ಲಿ ಲಿಂಗವನು ಪಿಡಿದುಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುತ್ತಿರ್ದು, ಒಂಬತ್ತನಾಡುವ–ಇದು ಸೃಷ್ಟಿಗೆ ಹುಟ್ಟಿದ ಶಿಲೆ ಕಲ್ಲುಕುಟಿಕನ ಕೈಯಿಂದ ಕಟಿಸಿಕೊಂಡಂಥ ಮೂರ್ತಿ ಗುರುವಿನ ಸಂಸ್ಕಾರದಿಂದ ಲಿಂಗವಾಯಿತ್ತು. ಇದು ಶ್ರೀಶೈಲದ ಶಿಲೆ ಕೊಲ್ಲಿಪಾಕದ ಶಿಲೆ ಮಂಟೂರ ಶಿಲೆ ಕಾಶಿ ಶಿಲೆ ಹಸಿರು ಶಿಲೆ ಬಿಳಿಯ ಶಿಲೆ ಕರಿಯ ಶಿಲೆ ಡೊಂಕನಾಗೈತೆ ಡೊಸಕನಾಗೈತೆಂದು ಗುಣಸಂಪಾದನೆಯ ಮಾಡುವ, ಡಂಬಕರ–ಹಿರೇತನದ ಬೂಟಕತ್ವವ ನುಳ್ಳ ಜೀವರುಗಳ, ಕೂಡಲಸಂಗಮದೇವಾ–ಪರಶಿವಲಿಂಗವು, ಮಚ್ಚ–ಮಮಕರಿಸಿಕೊಂಡು ಮುಕ್ತಿಯನ್ನು ಕರುಣಿಸಿ ಕೊಟ್ಟಾನೆ? ಕರುಣಿಸಿಕೊಡನು.

II- - - - - - - - - - - - - - - - - - - - - - - - - - - - - - - - - - - - - - - - - - - -

ಒಲೆಯ ಬೂದಿಯ ಬಿಲಿಯಲುಬೇಡ–ತನುತ್ರಯ ಸಂಬಂಧವಾದ ಶಿವಾನುಭಾವವೆಂಬ ಚಿದ್ಭಸ್ಮವನು ಹತ್ತು ವಚನವ ಹೇಳಿ ಇಪ್ಪತ್ತು ವಚನವ ಹೇಳಿ ಎಂದು ವಿಕ್ರಯಿಸಲು ಬೇಡ; ಒಲಿದಂತೆ ಹೂಸಿಕೊಂಡಿಪ್ಪುದು–ಆ ಮಹಾನುಭಾವ ಗುರುಮೂರ್ತಿಗಳು ಎಷ್ಟು ತಮ್ಮ ಕರಣವಿಟ್ಟು ಹೇಳ್ಯಾರು ಅಷ್ಟನೆ ತನ್ನಂತರಂಗದ ಪ್ರಾಣಲಿಂಗವಾಗಿ ಧರಿಸಿಕೊಂಡಿರ್ಪುದು.

ಹೂಸಿ ಏನು ಫಲ–ಅಂತರಂಗದಲ್ಲಿ ಧರಿಸಿ ಏನು ಪ್ರಯೋಜನವು, ಮನದಲ್ಲಿ ಲೇಸಿಲ್ಲದನ್ನಕ್ಕ?–ಆ ಮನಸ್ಸಿನಲ್ಲಿ ಆ ಮಹಾನುಭಾವ ಗುರುಮೂರ್ತಿಗಳ ಭಕ್ತಿ ಪರಿಣಾಮವು ನಾಸ್ತಿಯಾದನ್ನಬರ? ಒಂದ ನಾಡಹೋಗಿ ಒಂಬತ್ತನಾಡುವ ಡಂಬಕರ ಮಚ್ಚ ಕೂಡಲಸಂಗಯ್ಯ–ಭಕ್ತಿ ಆಚಾರದ ಪ್ರಸಂಗವ ನೊಂದನಾಡಹೋಗಿ ನವಖಂಡಪೃಥ್ವಿಯ ಪ್ರಸಂಗವ ಮಾಡುವ,

- ಮತ್ತಂ, ಅಂತರಂಗವೆಂಬ ಚುಲ್ಲೆಯ ಪ್ರಾಣಲಿಂಗವೆಂಬ ಭಸ್ಮವನು, ಈಗ ಪ್ರಾಣಲಿಂಗಸಂಬಂಧಿಯಾಗೈದಾನೆ ಇನ್ನು ಇಷ್ಟಲಿಂಗಸಂಬಂಧಿಯಾಗಬೇಕೆಂದು ವಿಕ್ರಯಿಸಲು ಬೇಡ. ಆ ಶ್ರೀಗುರುಸ್ವಾಮಿಯು ಶಿಷ್ಯನ ಭಕ್ತಿಗೆ ಮೆಚ್ಚಿ "ಶಿಷ್ಯದೀಕ್ಷಾದಿ ಕಾರಣಾತ್" ಎಂದು ದೀಕ್ಷೆಯ ಮಾಡಲೋಸ್ಕರವಾಗಿ ಅಂತರಂಗದ ಪ್ರಾಣಲಿಂಗವನೆ ಬಹಿಷ್ಕರಿಸಿ ಅಂಗದ ಮೆಲೆ ಇಷ್ಟಲಿಂಗವಾಗಿ ಪ್ರತಿಷ್ಠೆಯ ಮಾಡಿಕೊಟ್ಟನು. ಅದನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಧರಿಸಿಹುದು. ಧರಿಸಿ ಏನು ಪ್ರಯೋಜನ? ಆ ಇಷ್ಟಲಿಂಗದ ಚಿತ್ಕಲೆಯೆ ಅಂತರಂಗದಲ್ಲಿ ಪ್ರಾಣಲಿಂಗವಾಯಿತ್ತಲಾ ಎಂಬ ಪರಿಣಾಮವಿಲ್ಲದನ್ನಬರ? ಇಷ್ಟಲಿಂಗದ ಪ್ರಸಂಗವನೊಂದನಾಡಹೋಗಿ ನವದ್ವಾರಯುಕ್ತವಾದ ದೇಹದ ಪ್ರಸಂಗವ ಮಾಡುವ ಬೂಟಕತ್ವವನುಳ್ಳವರ ಸೈ ಎಂದು ಒಡಂಬಡ ಪರಶಿವಲಿಂಗವು.

III- - - - - - - - - - - - - - - - - - - - - - - - - - - - - - - - - - - - - - - - - - -

ಒಲೆಯ ಬೂದಿಯ ಬಿಲಿಯಲುಬೇಡ-ಶ್ರೀಗುರುದೇವನ ಜ್ಞಾನೋಪದೇಶದಿಂ ದೊರಕೊಂಡ ತನುತ್ರಯಸಂಬಂಧವಾದ ತ್ರಿಪುಟಿಜ್ಞಾನದೇಕತ್ವದ ಪರಿಪೂರ್ಣಜ್ಞಾನವನು ಕಂಡಕಂಡಲ್ಲಿ ನಿಂದನಿಂದಲ್ಲಿ ಅನ್ನಾಚ್ಛಾದನಕ್ಕೋಸ್ಕರವಾಗಿ ಹೇಳಲು ಬೇಡವೆಂಬುದೀಗ, ಶ್ರೀಗುರುದೇವನ ವಾಕ್ಯಪ್ರಮಾಣಿಂದೆ ಅಂತರಂಗದಲ್ಲಿ ಅಳವಡಿಸಿಕೊಂಡಾಚರಿಸುವದೆಂಬುದೀಗ ಒಲಿದಂತೆ ಹುಸಿಕೊಮಡಿಪ್ಪುದು ಎಂಬ ಶಬ್ದಕ್ಕರ್ಥ.

ಹೂಸಿ ಏನು ಫಲ-ಅಂತರಂಗದಲ್ಲಿ ಅಳವಡಿಸಿಕೊಂಡೇನು ಪ್ರಯೋಜನವು, ಮನದಲ್ಲಿ ಲೇಸಿಲ್ಲದನ್ನಕ್ಕ?-ಮನಸ್ಸಿನಲ್ಲಿ ಶುಭವಾದ ಜ್ಞಾನಕ್ರಿಯಾಚಾರವುಂಟಾಗದೆ ಇರುವ ತನಕಲು? ಒಂದನಾಡಹೋಗಿ-ವೀರಶೈವಾಚಾರವೊಂದರಲ್ಲಿ ಪ್ರವರ್ತಿಸುತ್ತ ಹೋಗಿ, ಒಂಬತ್ತನಾಡುವ-ಹಲವು ಮತಾಂತರಂಗಳಲ್ಲಿ ವರ್ತಿಸಿಯಾಡುವ, ಬೂಟಕರಾದ ಭಿನ್ನಭಕ್ತರುಗಳಿಗೆ ಅಹುದೆಂದೊಲಿದು ಪ್ರಸನ್ನವಾಗಿ ಮುಕ್ತಿಯ ಕೊಡನು ಪರಶಿವಲಿಂಗವು ಎಂಬುದೀಗ ಒಂಬತ್ತನಾಡುವ ಡಂಬಕರ ಮಚ್ಚ ಕುಡಲಸಂಗಮದೇವಾ ಎಂಬ ಶಬ್ದಕ್ಕರ್ಥ.

---

೧೧೮

**ಧರಣಿಯ [1]ಮೇಲೊಂದು[1] ಹಿರಿದಪ್ಪ ಅಂಗಡಿಯನಿಕ್ಕಿ, ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ. ಒಮ್ಮನವಾದಡೆ ಒಡನೆ [2]ನುಡಿವನು[2], ಇಮ್ಮನವಾದಡೆ ನುಡಿಯನು. ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ, ಜಾಣ ನೋಡವ್ವಾ, ನಮ್ಮ ಕೂಡಲಸಂಗಮದೇವಾ!**

I- - - - - - - - - - - - - - - - - - - - - - - - - - - - - - - - - - - - - - - - - - -

ಧರಣಿಯ ಮೇಲೆ-ಭೂಮಿಯ ಮೇಲೆ, ಒಂದು-ಏಕವಾದ, ಹಿರಿದಪ್ಪ-ದೊಡ್ಡಿತ್ತಾದ, ಅಂಗಡಿಯನಿಕ್ಕಿ-ದುಕಾನವ ಮಡಗಿಕೊಂಡು, ಹರದ-ಲಕ್ಷಸಂಖ್ಯೆಯ ದ್ರವ್ಯದ ಒಟ್ಟಿಗೆಯನುಳ್ಳ, ನಮ್ಮ ಮಹಾದೇವಸೆಟ್ಟಿ ಕುಳ್ಳಿರ್ದ-ನಮ್ಮ ಮಹಾದೇವನೆಂಬ ಸೆಟ್ಟಿಕಾರನು ಮೂರ್ತವ ಮಾಡಿಕೊಂಡಿರ್ದು ಸಮಸ್ತಾತ್ಮರುಗಳ ಕ್ರಯಕ್ಕೆ ತಕ್ಕ ತಕ್ಕ ವೆಚ್ಚಗಳನ್ನು ತೂಗಿಕೊಡುತ್ತಿಹನು. ಒಮ್ಮನವಾದಡೆ-ಒಂದೇ ಮನಸ್ಸಿನಿಂದ ಬಂದು ಎಚ್ಚವ ಕೇಳಿದರೆ, ಒಡನೆ ನುಡಿವನು-ಅವರಗೂಡ ಪ್ರಸಂಗವಾಡಿ ಎಚ್ಚನ್ನು ತೂಗಿಕೊಡುವನು, ಇಮ್ಮನವಾದಡೆ-ಎರಡು ಮನಸ್ಸಿನಿಂದ ಬಂದು ಎಚ್ಚವ ಕೇಳಿದರೆ, ನುಡಿಯನು-ಅವರ ಕೂಡ ಪ್ರಸಂಗವನಾಡಿ ಎಚ್ಚನ್ನು ತೂಗಿಕೊಡನು.

ಕಾಣಿಯ ಸೋಲ-ಅವರಿಗೆ ಹೆಚ್ಚಾಗಿ ಎಚ್ಚವ ತೂಗಿಕೊಟ್ಟು ತಾ ಕಡಿಮೆಯಾಗಿ ರೊಕ್ಕವ ತೆಗೆದುಕೊಂಬಾತನಲ್ಲವು, ಅರ್ಧಗಾಣಿಯ ಗೆಲ್ಲ-ಅವರಿಗೆ ಕಡಿಮೆಯಾಗಿ ಎಚ್ಚವ ತೂಗಿಕೊಟ್ಟು ತಾನು ಹೆಚ್ಚಾಗಿ ರೊಕ್ಕವ ತೆಗೆದುಕೊಳ್ಳನು. ನಮ್ಮ ಕೂಡಲಸಂಗಮದೇವಾ-ನಮ್ಮ ಮಹಾದೇವ ಸೆಟ್ಟಿಯು, ಜಾಣ ನೋಡವ್ವಾ-ಅವರವರ ತಕ್ಕಹಾಂಗೆ ಎಚ್ಚವ ತೂಗಿಕೊಡುವಲ್ಲಿ ಪ್ರವೀಣನು ಕಂಡವ್ವಯೆಂದು ತನ್ನ ಪುರುಷನ ಚತುರತ್ವವನ್ನು ಮತ್ತೊಬ್ಬ ಸ್ತ್ರೀಯಳ ಕೂಡ ಹೇಳುತ್ತಿಹಳೆಂಬ ಲೋಕದ ದೃಷ್ಟೋಪಮಾದ ಹಾಂಗೆ.

● ಧರಣಿಯ ಮೇಲೆ–ಪಂಚಶತಕೋಟಿ ವಿಸ್ತೀರ್ಣವಾದ ಭೂಮಿಯ ಮೇಲೆ, ಒಂದು ಹಿರಿದಪ್ಪ–ಒಂದು ದೊಡ್ಡಿತ್ತಾದ, ಅಂಗಡಿಯನಿಕ್ಕಿ–ಹದಿನಾರುಸಾವಿರ ಯೋಜನ ಭೂಮಿಯ ಮೇಲಕ್ಕೆ ಒಳೆಯಕ್ಕೆ ನಟ್ಟು ಎಂಬತ್ನಾಲ್ಕು ಸಾವಿರ ಯೋಜನ ಭೂಮಿಯ ಬೆಳೆದು ಅನಂತಲಕ್ಷಯೋಜನ ವಿಶಾಲೋನ್ನತವಾದ ಮಹಾಮೇರುಪರ್ವತವೆಂದ ದುಕಾನವನುಂಟುಮಾಡಿಕೊಂಡು, ಹರದ–ಬ್ರಹ್ಮಕೋಟಿ ವಿಷ್ಣುಕೋಟಿ ರುದ್ರಕೋಟಿ ಪ್ರಮಥ ನಾಯಕರು ಕೋಟಾನುಕೋಟಿಗಳಿಂದ ಓಲೈಸಿಕೊಳುತ್ತ, ನಮ್ಮ ಕೂಡಲಸಂಗಮದೇವ–ನಮ್ಮ ಮಹಾದೇವಸೆಟ್ಟಿಯು ತಾನಾದ ಮಹೇಶ್ವರ ಮೂರ್ತಿಯು, ಕುಳ್ಳಿರ್ದು–ಬ್ರಹ್ಮವಿಷ್ಣ್ವಾದಿಗಳ ಮನದಲ್ಲಿ ಮೂರ್ತವ ಮಾಡಿಕೊಂಡಿರ್ದು ಅವರವರದು ಮಾಡುವಂಥ ಜಪತಪಾರಾಧನೆ ಕ್ರಿಯೆಗಳ ಕೈಕೊಂಡು ಪ್ರಸನ್ನವಾಗಿ ಫಲಪದಂಗಳ ಕರುಣಿಸಿಕೊಡುತ್ತಿಹುದು. ಒಮ್ಮನವಾದಡೆ–ಒಂದೇ ಮನಸ್ಸಿನಿಂದೆ ಜಪತಪಾರಾಧನೆ ಕ್ರಿಯೆಗಳ ಮಾಡಿದರೆ, ಒಡನೆ ಎರಡು ಮನಸ್ಸಿನಿಂದ ಜಪತಪಾರಾಧನೆ ಕ್ರಿಯೆಗಳ ಕೈಕೊಂಡು ಅವರಿಗೆ ಪ್ರಸನ್ನವಾಗಿ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು;ಇಮ್ಮನವಾದಡೆ, ಎರಡು ಮನಸ್ಸಿನಿಂದ ಜಪತಪಾರಾಧನೆ ಕ್ರಿಯೆಗಳ ಮಾಡಿದರೆ, ನುಡಿಯನು–ಆ ಜಪತಪಾರಾಧನೆ ಕ್ರಿಯೆಗಳ ಕೈಕೊಳ್ಳದೆ ಪ್ರಸ್ನನವಾಗದೆ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡದೆ ಸುಮ್ಮನಿರುತ್ತಿಹನು.

ಕಾಣಿಯ ಸೋಲ–ಅವರಿಂದ ಕಡಿಮೆಯಾಗಿ ಜಪತಪಾರಾಧನೆ ಕ್ರಿಯೆಗಳ ಕೈಕೊಂಡು ತನ್ನಿಂದ ಹೆಚ್ಚಾಗಿ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿ ಕೊಡುವಾತನಲ್ಲವು, ಅರ್ಥಗಾಣಿಯಗೆಲ್ಲ–ಅವರಿಂದ ಹೆಚ್ಚಾಗಿ ಜಪತಪಾರಾಧನೆ ಕ್ರಿಯೆಗಳ ಕೈಕೊಂಡು ತನ್ನಿಂದ ಕಡಿಮೆಯಾಗಿ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುವಾತನಲ್ಲವು. ನಮ್ಮ ಕೂಡಲಸಂಗಮದೇವಾ–ನಮ್ಮ ಮಹಾದೇವಸೆಟ್ಟಿಯೇ ತಾನಾದ ಮಹೇಶ್ವರಮೂರ್ತಿಯು, ಜಾಣ ನೋಡವ್ವಾ–ಬ್ರಹ್ಮವಿಷ್ಣು ಮೊದಲಾದವರುಗಳೆಲ್ಲರ ಮನದಲ್ಲಿ ನೆಲೆಗೊಂಡು ಅವರವರು ಮಾಡುವಂಥ ಜಪತಪಾರಾಧನೆ ಕ್ರಿಯೆಗಳ ಕೈಕೊಂಡು ಪ್ರಸನ್ನವಾಗಿ ಫಲಪದಂಗಳ ಕರುಣಿಸಿಕೊಡುವಲ್ಲಿ ಬಹುಪ್ರವೀಣ ಕಂಡವ್ವಾ ಎಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಸ್ವರೂಪವಾದ ಶ್ರೀಗುರುನಾಥನೊಡನೆ ಬಿನ್ನೈಸುವಂಥ ಬಿನ್ನಪವು ಎಂಬ ದೃಷ್ಟೋಪಮಾನದ ಹಾಂಗೆ.

● ಧರಣಿಯ ಮೇಲೆ–ಶರಣನ ಆಚಾರಾಂಗವೆಂಬ ಚಿತ್ಸ್ರುಥ್ವಿಯ ಮೇಲೆ, ಒಂದು–ಅದ್ವಿತಿಯ ಸ್ವರೂಪವಾದ, ಹಿರಿದಪ್ಪ–ದೊಡ್ಡಿತ್ತಾದ, ಅಂಗಡಿಯನಿಕ್ಕಿ–ಸತ್ಕ್ರಿಯಾಚಾರವೆಂಬ ದುಕಾನವನ್ನು ನಿರ್ಮಿತವ ಮಾಡಿಕೊಂಡು, ಹರದ–ಸರ್ವಾಚಾರಸಂಪತ್ತಿನಾಚರಣೆ ಕ್ರಿಯೆಗಳ ಹರದಟ್ಟಿಗೆಯನುಳ್ಳಂಥ, ನಮ್ಮ ಮಹಾದೇವಸೆಟ್ಟಿ–ನಮ್ಮ ಮಹೇಶ್ವರಮೂರ್ತಿಯೇ ತಾನಾದ ಇಷ್ಟಲಿಂಗ 'ಮೂರ್ತಿಯು', ಕುಳ್ಳಿರ್ದು–ಭಕ್ತಮಹೇಶ್ವರರುಗಳ ಅಂಗಮನಪ್ರಾಣಂಗಳಲ್ಲಿ ನೆಲೆಗೊಂಡು ಅವರವರು ಮಾಡುವಂಥ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳನು ಕೈಕೊಂಡು ಪ್ರಸನ್ನವಾಗಿ ಇಷ್ಟಾರ್ಥ ಸಿದ್ಧಿಯನ್ನು ಕರುಣಿಸಿಕೊಡುತ್ತಿಹನು. ಒಮ್ಮನವಾದಡೆ ಒಡನೆ ನುಡಿವನು–ಸಮರಸಭಾವದಿಂದೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿದರೆ ಅವರು ಮಾಡುವಂಥ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳನು ಕೈಕೊಂಡು ಪ್ರಸನ್ನವಾಗಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು, ಇಮ್ಮನವಾದಡೆ ನುಡಿಯನು–ಭಿನ್ನವಿಟ್ಟುಕೊಂಡು ಅಷ್ಟವಿಧಾರ್ಚನೆ

ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿದರೆ ಅವರು ಮಾಡುವಂಥ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳನು ಕೈಕೊಳ್ಳದೆ ಪ್ರಸನ್ನವಾಗದೆ ಇಷ್ಟಾರ್ಥಸಿದ್ಧಿಯನ್ನು ಕರುಣಿಕೊಡದೆ ಸುಮ್ಮನಿರುತ್ತಿಹನು.

ಕಾಣಿಯ ಸೋಲ–ಅವರಿಂದ ಕಡಿಮೆಯಾಗಿ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಕೈಕೊಂಡು ತನ್ನಿಂದ ಹೆಚ್ಚಾಗಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುವಾತನಲ್ಲವು, ಅರ್ಧಗಾಣಿಯ ಗೆಲ್ಲ–ಅವರಿಂದ ಹೆಚ್ಚಾಗಿ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳನು ಕೈಕೊಂಡು ತನ್ನಿಂದ ಕಡಿಮೆಯಾಗಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುವಾತನಲ್ಲವು. ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವಾ!–ನಮ್ಮ ಮಹೇಶ್ವರ ಮೂರ್ತಿಯೆ ತಾನಾದ ಇಷ್ಟಲಿಂಗದೇವನು ಭಕ್ತಮಹೇಶ್ವರರುಗಳ ಅಂಗದಲ್ಲಿ ನೆಲೆಗೊಂಡು ಅವರವರು ಮಾಡುವಂಥ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳನು ಕೈಕೊಂಡು ಪ್ರಸನ್ನವಾಗಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುವಲ್ಲಿ ಬಹುಪ್ರವೀಣನು ಕಂಡವ್ವಯೆಂದು ಕ್ರಿಯಾಸ್ವರೂಪವಾದ ಶರಣನು ಜ್ಞಾನಶಕ್ತಿಸ್ವರೂಪವಾದ ಶ್ರೀಗುರುನಾಥನೊಡನೆ ಬಿನ್ನೈಸುವಂಥ ಬಿನ್ನಪವು.

..........................

೧–೧ ದೇವನು (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - -

ಧರಣಿಯ ಮೇಲೆ–ಚತುರ್ದಶಲೋಕಗಳೆಂಬ ಪೃಥ್ವಿಯ ಮೇಲೆ, ಒಂದು–ಏಕವಾದ, ಹಿರಿದಪ್ಪ–ದೊಡ್ಡಿತ್ತಾದಂಥ, ಅಂಗಡಿಯನಿಕ್ಕಿ–ಮಹಾಮೇರುಪರ್ವತವೆಂಬ ಕೇಣಿಯನು ಹೂಡಿ, ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ–ದೇವದಾನವ ಮಾನವರುಗಳಿಂದೆ ವಾಲಗವನು ಕೈಕೊಂಡು ಫಲಪದಂಗಳನು ಕೊಡುವಲ್ಲಿ ಸಾವಕಾರನಾದಂಥ ಮಹಾದೇವನೆಂಬ ಸೆಟ್ಟಿಯು ಅಧಿಷ್ಠಿಸಿಕೊಂಡಿರ್ದ. ಒಮ್ಮನವಾದಡೆ ಒಡನೆ ನುಡಿವನು–ಅವರೆಲ್ಲರೂ ಒಂದೇ ಮನಸ್ಸಿನಲ್ಲಿ ಬಂದು ವಾಲೈಸಿದರೆ ಕೂಡಲೇ ಪ್ರಸಂಗವಮಾಡುವನು. ಇಮ್ಮನವಾದಡೆ ನುಡಿಯನು–ಎರಡು ಮನಸ್ಸಿನಲ್ಲಿ ವಾಲೈಸಿದರೆ ಪ್ರಸಂಗವ ಮಾಡನು.

ಕಾಣಿಯ ಸೋಲ–ಒಂದು ಕಾಸಿನಷ್ಟು ಫಲಪದಂಗಳನು ಹೆಚ್ಚಾಗಿ ಕೊಡುವಾತನಲ್ಲ; ಅರ್ಧಗಾಣಿಯ ಗೆಲ್ಲ–ಒಂದರೆ ಕಾಸಿನಷ್ಟು ಪೂಜೆಯನು ಹೆಚ್ಚಾಗಿ ಕೈಕೊಂಬಾತನಲ್ಲ. ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವಾ–ಮಹಾಕುಶಲನು ಕಂಡಾ ನಮ್ಮ ಪರಶಿವನು.

● ಮತ್ತಂ, ಪೃಥ್ವೀತತ್ತ್ವಾಂಶೀಭೂತವಾದ ಭಕ್ತನಂಗದ ಮೇಲೆ ಏಕಾಧಿಕವಾದಂಥ ಸತ್ಕ್ರಿಯಾಚಾರವೆಂಬ ಕೇಣಿಯನು ಹೂಡಿ, ಅಷ್ಟವಿಧಾರ್ಚನೆ ಷೋಡಶೋಪಚಾರಪೂಜಾಕ್ರೀಗಳನು ಕೈಕೊಂಡು ಇಷ್ಟಾರ್ಥಸಿದ್ಧಿಯನು ಕೊಡುವಲ್ಲಿ ಸಾವಕಾರನಾದಂಥ ನಮ್ಮ ಇಷ್ಟಮಹಾದೇವನೆಂಬ ಸೆಟ್ಟಿಯು ಅಧಿಷ್ಠಿಸಿಕೊಂಡಿರ್ದ. ಮಾಡುವಾತ ಕೈಕೊಳ್ಳುವಾತ ನಡುವೆ ಸಲುವ ಪೂಜಾದ್ರವ್ಯವು ಒಂದೇಯೆಂದರಿದು ಸಮರಸವಿಟ್ಟು ಪೂಜಾಕ್ರೀಗಳ ಮಾಡಿದರೆ ಕೂಡಲೆ ಪ್ರಸಂಗವ ಮಾಡುವನು. ತಾ ಬೇರೆ ಲಿಂಗ ಬೇರೆ ಪೂಜಾದ್ರವ್ಯವು ಬೇರೆಂದು ಭಿನ್ನವಿಟ್ಟು ಪೂಜಾಕ್ರೀಗಳ ಮಾಡಿದರೆ

ಕೂಡಲೆ ಪ್ರಸಂಗವ ಮಾಡುವನು. ಒಂದು ಕಾಸಿನಷ್ಟು ಫಲಪದಂಗಳನು ಹೆಚ್ಚಾಗಿ ಕೊಡುವಾತನಲ್ಲ; ಒಂದರೆಕಾಸಿನಷ್ಟು ಭಕ್ತಿಯನು ಹೆಚ್ಚಾಗಿ ಕೈಕೊಂಬಾತನಲ್ಲ.

● ಮತ್ತಂ, ಶರಣನಾಚಾರಾಂಗದ ಮೇಲೆ ಏಕಾಧಿಕವಾದಂಥ ಸುರುಚಿರ ಪಿಂಡಾದಿಜ್ಞಾನಶೂನ್ಯಾಂತಮಾದ ಸರ್ವಾಚಾರಸಂಪತ್ತಿನಾಚರಣೆಯೆಂಬ ಕೇಣಿಯನು [೨]ಮಾ[೨]ಡಿ ಶಿವಾನುಭಾವವನು ಬೋಧಿಸುವಲ್ಲಿ ಸಾವಕಾರನಾದಂಥ ಮಹಾದೇವನೆಂಬ ಮಹಾನುಭಾವ ಗುರುಮೂರ್ತಿಯು ಅಧಿಷ್ಠಿಕೊಂಡಿರ್ದ. ಕೇಳುವಂಥ ಶಿಷ್ಯನ ಮನಸ್ಸು ಹೇಳುವಂಥ ಗುರುಮೂರ್ತಿಯ ಮನಸ್ಸು ಏಕವಾದರೆ ಕೂಡಲೆ ಪ್ರಸಂಗವ ಮಾಡುವನು, ಕೇಳುವಂಥ ಶಿಷ್ಯನ ಮನಸ್ಸು ಬೇರೆ, ಹೇಳುವಂಥ ಗುರುಮೂರ್ತಿಯ ಮನಸ್ಸು ಬೇರೆ ಎರಡಾದಲ್ಲಿ ಒಡನೆ ಮಂತ್ರಪ್ರಸಂಗವ ಮಾಡನು. ಒಂದು ಕಾಸಿನಷ್ಟ ಶಿವಾನುಭಾವವನು ಹೆಚ್ಚಾಗಿ ಬೋಧಿಸುವಾತನಲ್ಲ. ಒಂದರೆ ಕಾಸಿನಷ್ಟು ಭಕ್ತಿಪೂಜೆಯನು ಹೆಚ್ಚಾಗಿ ಕೈಕೊಂಬಾತನಲ್ಲ. ಸುರುಚಿರ ಪಿಂಡಾದಿ ಜ್ಞಾನಶೂನ್ಯಾಂತಮಾದ ಸರ್ವಾಚಾರಸಂಪತ್ತಿನಾಚರಣೆಯಲ್ಲಿ ಕುಶಲನು ಕಂಡಾ ಮಾತೃಸ್ಥಾನವಾದ ಎಲೆ ಚಿಚ್ಛಕ್ತಿಯೆ ಎಂದು ಕ್ರಿಯಾಶಕ್ತಿ ಸ್ವರೂಪವಾದ ಶರಣನು ಜ್ಞಾನಶಕ್ತಿಯೊಡನೆ ಬಿನ್ನೈಸುತ್ತಿಹನೆಂಬುದರ್ಥ.

........................

೨-೨ ಹೂ (ಜ).

III- - - - - - - - - - - - - - - - - - - - - - - - - - - - - - - - - - - - - - - - - - - - - - - -

2-2 ಮಾಡುವ (ಟ).

........................

ಧರಣಿಯ ಮೆಲೆ-ಸ್ಥೂಲತನುವೆಂಬ ಪೃಥ್ವಿಯ ಮೇಲೆ, [೩][ಹಿರಿದಪ್ಪ-][೩] ಮುಖ್ಯವಾದ ಅಂಗಡಿಯ-ಸರ್ವಾಚಾರಸಂಪತ್ತಿನಾಚರಣೆಯೆಂಬ ವಿಪಣಿಯನು, ಇಕ್ಕಿ-ಸಂಬಂಧಿಸಿಕೊಂಡು, ನಮ್ಮ ಮಹಾದೇವಸೆಟ್ಟಿ-ನಮ್ಮ ಮಹಾಲಿಂಗದೇವನೆಂಬ ವರ್ತಕನು, ಕುಳ್ಳಿರ್ದಂ-ಸರ್ವಾಚಾರಸಂಪತ್ತಿ ನಾಚರಣೆಯಲ್ಲಿ ಅವಷ್ಟಂಭಿಸಿಕೊಂಡಿರ್ಪನು. ಒಮ್ಮನವಾದಡೆ-ಲಿಂಗದಲ್ಲೇಕಮನಸ್ಸುಂಟಾದರೆ, ಒಡನೆ ನುಡಿವನು-ಒಂದಿಗೆ ಪ್ರಸನ್ನವಾಗಿಷ್ಟಾರ್ಥ ಸಿದ್ಧಿಯನು ಕೊಡುವನು. ಇಮ್ಮನವಾದಡೆ- ಲಿಂಗದಲ್ಲಿ ಭಿನ್ನಮನಸ್ಸುಂಟಾದರೆ, ನುಡಿವನು-ಒಂದಿಗೆ ಪ್ರಸನ್ನವಾಗಿಷ್ಟಾರ್ಥ ಸಿದ್ಧಿಯನು ಕೊಡನು.

ಕಾಣಿಯ ಸೋಲ- ಸ್ವಲ್ಪ ಪೂಜೆಯ ಕೈಕೊಂಡು ಬಹುಫಲಂಗಳನು ಕೊಡನು; ಅರ್ಧಗಾಣಿಯ ಗೆಲ್ಲ-ಬಹಳವಾಗಿ ಪೂಜೆಯ ಕೈಕೊಂಡು ಸ್ವಲ್ಪ ಪದವಿಯನು ಕೊಡುವಾತನಲ್ಲವು, ನಮ್ಮ ಕೂಡಲಸಂಗಮದೇವ-ಪರಶಿವಲಿಂಗವು, ಕ್ರಿಯಾಜ್ಞಾನಗಳಲ್ಲಿ ಕುಶಲಿ ಕಂಡವ್ವಯೆಂದು ಕ್ರಿಯಾಶಕ್ತಿ ಸ್ವರೂಪವಾದ ಶರಣನು ಜ್ಞಾನಶಕ್ತಿಯ ಕೂಡೆ ಮಾಡುವ ಪ್ರಶ್ನೆಯು ಎಂಬುದೀಗ ಜಾಣನೋಡವ್ವ ಎಂಬ ಶಬ್ದಕ್ಕರ್ಥ.

........................

೩-೩-ಒಂದು (ಟ, ಡ).

V- - - - - - - - - - - - - - - - - - - - - - - - - - - - - - - - - - - - - - - - - - - - - -

1-1 ಮೇಲೆ (ಪ).

..........................

ಧರಣಿಯ ಮೇಲೆ ಹಿರಿದಿಪ್ಪ ಅಂಗಡಿಯನಿಕ್ಕಿ ಎಂದರೆ ಪಂಚಭೂತಾತ್ಮಕ ದೇಹದಲ್ಲಿ ಮುಖ್ಯವಾಗಿ ಅಧಿಕವಾದ ಸರ್ವಾಚಾರಸಂಪತ್ತೆಂಬ ಪಸರವನಿಕ್ಕಿಯೆಂಬುದರ್ಥ. ಆಯಾಯ ಪೂಜೆಯ ಕೈಕೊಂಡು ಆ ಪೂಜೆಗಳಿಗೆ ತಕ್ಕ ಫಲ[ಪ]ದಂಗಳ ಕೊಡುವ ವ್ಯಾಪಾರಿಕನಾದ ಮಹಲಿಂಗದೇವನೇ ಶರಣನಂಗದಲ್ಲಿ ಇಷ್ಟಲಿಂಗವಾಗಿ ಮೂರ್ತಿಗೊಂಡಿರ್ದನೆಂಬುದೀಗ ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ ಎಂಬುದರ್ಥ. ಆ ಲಿಂಗದಲ್ಲಿ ಏಕ ಮನಸ್ಸಾದರೆ ಆ ಭಕ್ತನ ಕೂಡೆ ಪ್ರಸಂಗಿಸುವನೆಂಬುದೀಗ ಒಮ್ಮನವಾದಡೆ ಒಡನೆ ನುಡಿವನೆಂಬುದರ್ಥ. ಎರಡು ಮನಸ್ಸಾದರೆ ಪ್ರಸಂಗಿಸನು.

ಹೆಚ್ಚಾಗಿ ಫಲಪದಂಗಳ ೪[ಕೊಡನೆಂಬುದೀಗ]೪ ಕಾಣಿಯ ಸೋಲ, ಹೆಚ್ಚಾಗಿ ಪೂಜೆಯ ಕೈಕೊಂಡು ಅಲ್ಪಪದವಿಯ ಕೊಡನು ಎಂಬುದೀಗ ಅರ್ಧಗಾಣಿಯಗೆಲ್ಲ, ಪರಶಿವನು ವಿಚಕ್ಷಣನಿಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಯೆಂಬ ಮಾಯೆಯ ಕೂಡೆ ಹೇಳುವ ಪ್ರಶ್ನೆಯೆಂಬುದೀಗ ಜಾಣನೋಡವ್ವಾ ಎಂಬುದರ್ಥ.

..........................

೪-೪ ಕೊಡುವನೆಂಬುದೀಗ.

---

೧೧೯

**[1]ನಂಬರು ನಚ್ಚರು ಬಱಿದೆ ಕರೆವರು, ನಂಬಲಱಿಯರೀ ಲೋಕದ ಮನುಜರು! ನಂಬಿ ಕರೆದಡೆ, ಓ ಎನ್ನನೆ ಶಿವನು? ನಂಬದೆ ನಚ್ಚದೆ ಬಱಿದೆ ಕರೆವರ ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವಾ!**

I- - - - - - - - - - - - - - - - - - - - - - - - - - - - - - - - - - - - - - - - - - - - - -

ನಂಬರು-ಅಂತರಂಗದ ಪ್ರಾಣಲಿಂಗವೇ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದೆಂದು ವಿಶ್ವಾಸಿಸರು, ನಚ್ಚರು-ಅಂತರಂಗದ ನಿರ್ಗುಣ ಪೂಜೆಯೇ ಬಹಿರಂಗದಲ್ಲಿ ಸಗುಣ ಪೂಜೆಯಾಗಿ ಬಂದಿಪ್ಪುದೆಂದು ನಂಬರು, ಬಱಿದೆ-ಸುಮ್ಮನೆ, ಕರೆವರು-ನಾವು ಲಿಂಗಪೂಜೆಯ ಮಾಡುತ್ತಿದ್ದೇವೆ ಶಿವನು ನಮಗೇನು ಕಾರಣಕ್ಕೆ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡಲೊಲ್ಲನೆಂದು ಕಂಡಕಂಡವರ ಮುಂದೆ ಹೇಳಿಕೊಂಬುವರು, ಈ ಲೋಕದ ಮನುಜರು- ಈ ಜಗತ್ತಿನಲ್ಲಿರುವಂಥ ಆತ್ಮರುಗಳು, ನಂಬಲಱಿಯರು-ಅಂತರಂಗದ ಪ್ರಾಣಲಿಂಗವೆ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದು. ಅಂತರಂಗದ ನಿರ್ಗುಣಪೂಜೆಯೇ ಬಹಿರಂಗದಲ್ಲಿ ಸಗುಣಪೂಜೆಯಾಗಿ ಬಂದಿಪ್ಪುದೆಂದು ವಿಶ್ವಾಸಿಸಿ ಲಿಂಗಪೂಜೆಯ ಮಾಡುವಂಥದನು, ಅರಿಯರು-ತಿಳಿಯರು, ಈ ಲೋಕದ-ಈ ಜಗತ್ತಿನ, ಮನುಜರು-ಮನುಷ್ಯರು.

ನಂಬಿ–ಸೌಂದರಗಣಾಧೀಶ್ವರನು, ಕರೆದಡೆ–'ಸ್ತನ ಶಂಕರಾ'ಯೆಂದು ಸ್ತೋತ್ರವ ಮಾಡಿದರೆ, ಓ ಎನ್ನನೆ ಶಿವನು–ಓ ಎಂದು ಪ್ರಸನ್ನನಾಗಿ ನಂದಿ ಮುದ್ರೆ ಪಡಿಹೊನ್ನು ಕರುಣಿಸಿಕೊಡಲಿಲ್ಲವೆ? ಕರುಣಿಸಿಕೊಟ್ಟನು; ನಂಬಿ–ಅಂತರಂಗದ ಪ್ರಾನಲಿಂಗವೇ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದೆಂ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ, ಕರೆದಡೆ–॥ಕಂದ॥ ನೀನೆ ನಿಧಿ ನೀನೇ ಮಂತ್ರ । ನೀನಾರ್ಚನೆ ನೀನೆ ಭಕ್ತಿ ನೀನುಪದೇಶಂ॥ ನೀನೆ ಜಪತಪವೆನಗಂ । ನೀನಿದನರಿಯಾ ಪ್ರಸನ್ನಶಂಕರಲಿಂಗಾ॥ ಎಂದು ಕಂದವೃತ್ತ ಗದ್ಯಪದ್ಯ ಪ್ರಬಂಧಗಳಿಂದ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿದರೆ, ಓ ಎನ್ನನೆ ಶಿವನು?–ಓ ಎಂದು ಪ್ರಸನ್ನವಾಗಿ ಇಷ್ಟಾರ್ಥಸಿದ್ಧಿಯನ್ನು [ಕರುಣಿಸಿಕೊಡನೆ?] ಕರುಣಿಸಿ ಕೊಡುತ್ತಿಹನು.

ನಂಬದೆ–ಅಂತರಂಗದ ಪ್ರಾಣಲಿಂಗವೇ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿರ್ಪುದೆಂದು ವಿಶ್ವಾಸಿಸದೆ, ನಚ್ಚದೆ–ಅಂತರಂಗದ ನಿರ್ಗುಣಪೂಜೆಯೇ ಬಹಿರಂಗದಲ್ಲಿ ಸಗುಣಪೂಜೆಯಾಗಿ ಬಂದಿಪ್ಪುದೆಂದು ನಂಬದೆ, ಬಜೆದೆ–ಸುಮ್ಮನೆ, ಕರೆವರ–ನಾವು ಲಿಂಗಪೂಜೆಯ ಮಾಡುತ್ತೈದೀವಿ ಶಿವನು ನಮಗೇನು ಕಾರಣ ಇಷ್ಟಾರ್ಥಸಿದ್ಧಿ'ಯನು' ಕರುಣಿಸಿಕೊಡಲೊಲ್ಲನೆಂದು ಕಂಡುಕಂಡವರ ಮುಂದೆ ಹೇಳಿಕೊಂಬುವರ, ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವಾ! ಅವರ ತನು 'ಗುಣಮಸ್ತಕ' ಮೆಟ್ಟಿ ಉಲಿದಾಡು ಮಾಯೆಯೆಂದು ಮಾಯೆಯ ಕರೆದು ಅಪ್ಪಣೆಯ ಕೊಡುತ್ತಿಹನು ಪರಮೇಶ್ವರನು ಎಂಬ ದೃಷ್ಟೋಪಮಾನದ ಹಾಂಗೆ,

● ನಂಬರು ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿಪ್ಪುದೆಂದು ವಿಶ್ವಾಸಿಸರು, ನಚ್ಚರು–ತನುಮನಧನಂಗಳೆಲ್ಲ ಅವರೊಡವೆ ಅವರ ಪದಾರ್ಥವೆಂದು ಮಮಕರಿಸಿ ಕೊಟ್ಟು ಭಕ್ತಿಯ ಮಾಡರು, ಬಜೆದೆ ಸುಮ್ಮನೆ, ಕರೆವರ–ನಾವು ಸಮರಸಭಾವದಿಂದೆ ಜಂಗಮಭಕ್ತಿ ಮಾಡುತ್ತೈದೀವಿ ಶಿವನು ನಮಗೇನು ಕಾರಣ ನಿಜಮೋಕ್ಷವನ್ನು ಕರುಣಿಸಿ ಕೊಡೋದಿಲ್ಲವೆಂದು ಕಂಡಕಂಡವರ ಮುಂದೆ ಹೇಳಿಕೊಂಬುವರ, ಈ ಲೋಕದ–ಈ ಜಗತ್ತಿನಲ್ಲಿರುವಂಥ, ಮನುಜರು–ಆತ್ಮರುಗಳು, ನಂಬಲಜೆ ಯರು–ಒಂದೇ ವಸ್ತುವೇ ಗುರುಲಿಂಗಜಂಗಮವಾಗಿ ಬಂದಿಪ್ಪುದೆಂದು ವಿಶ್ವಾಸಿಸಿ ತನುಮನ ಧನಂಗಳೆಲ್ಲ ಅವರೊಡವೆ ಅವರ ಪದಾರ್ಥವೆಂದು ಮಮಕರಿಸಿಕೊಂಡು ಕೊಟ್ಟು ಭಕ್ತಿಯ ಮಾಡಲರಿಯರು.

ನಂಬಿ–ಒಂದು ವಸ್ತುವೇ ಗುರುಲಿಂಗಜಂಗಮವಾಗಿ ಬಂದಿಪ್ಪುದೆಂದು ವಿಶ್ವಾಸಿಸಿ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡಿ, ಕರೆದಡೆ–'ಜಂಗಮಂ ಜಗದಾರಾಧ್ಯಂ। ಜಂಗಮಂ ಚ ಜಗತ್ಪತಿಃ । ಜಂಗಮಂ ಚ ಜಗತ್ಪೂಜ್ಯಂ। ಜಗತ್ಪಾವನ ಜಂಗಮಃ' ಎಂದು ಇವರು ಆದಿಭಕ್ತರ ಭಕ್ತಿಯ ಕೈಕೊಂಡು ಮುಕ್ತಿಯನೈದಿಸಿದಂಥವರು ಅನಾದಿ ಭಕ್ತರ ಭಕ್ತಿಯ ಕೈಕೊಂಡು ಮುಕ್ತಿಯನೈದಿಸಿದಂಥವರು ಭಕ್ತವತ್ಸಲರು ಮುಕ್ತಿಪ್ರದಾಯಕರು ನಿರಂಜನಗನಾಧೀಶ್ವರನ ಸಾಂಪ್ರದಾಯಕರೇ ಇವರೆಂದು ಜಂಗಮದ ಬಿರುದಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿದರೆ, ಓ ಎನ್ನನೆ ಶಿವನು?–ಓ ಎಂದು ಪ್ರಸನ್ನವಾಗಿ ನಿತ್ಯವಾದ ನಿಜಮೋಕ್ಷವ ಕರುಣಿಸಿಕೊಡನೆ? ಕೊಡುತ್ತಿಹನು.

ನಂಬದೆ–ಒಂದು ವಸ್ತುವೇ ಗುರುಲಿಂಗಜಂಗಮವಾಗಿ ಬಂದಿರ್ಪುದೆಂದು ವಿಶ್ವಾಸಿಸದೆ, ನಚ್ಚದೆ–ತನುಮನಧನಂಗಳೆಲ್ಲಾ ಅವರೊಡವೆ ಅವರ ಪದಾರ್ಥವೆಂದು ಮಮಕರಿಕೊಂಡು ಕೊಟ್ಟು ಭಕ್ತಿಯ ಮಾಡದೆ, ಬಚಿದೆ–ಸುಮ್ಮನೆ, ಕರೆವರ–ನಾವು ಸಮರಸಭಾವದಿಂದ ಜಂಗಮಭಕ್ತಿಯ ಮಾಡುತ್ತೈದೀವಿ ಶಿವನು ನಮಗೇನು ಕಾರಣ ನಿಜಮೋಕ್ಷವನ್ನು ಕರುಣಿಸಿಕೊಡೋದಿಲ್ಲವೆಂದು ಕಂಡಕಂಡವರ ಮುಂದೆ ಹೇಳಿಕೊಂಬುವರ ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವಾ!–ಅವರ ತನುಗುಣ ಮನದ ಮಸ್ತಕವ ಮೆಟ್ಟಿ ಉಲಿದಾಡು ಮಾಯೆಯೆಂದು ಮಾಯೆಯ ಕರೆದು ಅಪ್ಪಣೆಯ ಕೊಡುತ್ತಿಹನು ಪರಮೇಶ್ವರನು.

..........................

೧–೧ ಐಶ್ವರ್ಯವನ್ನು(ಕ). ೨–೨ ಮನಗುಣವ(ಕ).

II- - - - - - - - - - - - - - - - - - - - - - - - - - - - - - - - - - - - - - - - - - - - -

ನಂಬರು–ಅಂತರಂಗದ ಪ್ರಾಣಲಿಂಗವೆ ಬಹಿಷ್ಕರಿಸಿ ಗುರುಮುಖದಿಂದಂಗದ ಮೇಲೆ ಇಷ್ಟಲಿಂಗವಾಯಿತ್ತೆಂದು ವಿಶ್ವಾಸಿಸರು, ನಚ್ಚರು–ಆ ಇಷ್ಟಲಿಂಗದ ಚಿತ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಯಿತ್ತೆಂದು ಹಾರೈಸರು, ಬಚಿದೆ ಕರೆವರು–ಸುಮ್ಮನೆ ಭಕ್ತಿಮುಖದಿಂದ ಆಹ್ವಾನಿಸುವರು, ಈ ಲೋಕದ ಮನುಜರು ನಂಬಲಚಿಯರು–ಈ ಜಗತ್ತಿನ ಮನುಷ್ಯರುಗಳು ವಿಶ್ವಾಸಿಸಲರಿಯರು.

ನಂಬಿ ಕರೆದಡೆ ಓ ಎನ್ನನೆ ಶಿವನು?–ಸೌಂದರನಂಬ್ಯಣ್ಣನು ಅಂತರಂಗದ ಪ್ರಾಣಲಿಂಗವೆ ಬಹಿರಂಗದಲ್ಲಿ ಇಷ್ಟಲಿಂಗವಾಗಿ ವಿಶ್ವಾಸಿಸಿ ಆಹ್ವಾನಿಸಿದರೆ ಪರಶಿವನು ಸ್ತೋತ್ರಕ್ಕೆ ಪಾತ್ರನಾಗನೆ? ನಂಬದೆ–ಅಂತರಂಗದ ಪ್ರಾಣಲಿಂಗವೆ ಬಹಿಷ್ಕರಿಸಿ ಗುರುಮುಖದಿಂದಂಗದ ಮೇಲೆ ಇಷ್ಟಲಿಂಗವಾಯಿತ್ತೆಂದು ವಿಶ್ವಾಸಿಸದೆ, ನಚ್ಚದೆ–ಆ ಇಷ್ಟಲಿಂಗದ ಚಿತ್ಕಲೆಯೆ ಅಂತ ರಂಗದಲ್ಲಿ ಪ್ರಾಣಲಿಂಗವಾಯಿತ್ತೆಂದು ಹಾರೈಸದೆ, ಬಚಿದೆ ಕರೆವರ–ಸುಮ್ಮನೆ ಭಕ್ತಿಮುಖದಿಂದ ಆಹ್ವಾನಿಸುವರುಗಳ.

● ಮತ್ತಂ, ಒಂದೇ ವಸ್ತುವೆ ಗುರುಲಿಂಗಜಂಗಮವಾಗಿ ಬಂದಿತ್ತೆಂದು ವಿಶ್ವಾಸಿಸರು. ಆ ಗುರುಲಿಂಗಜಂಗಮವೇ ಒಂದು ವಸ್ತುವೆಂದು ಹಾರೈಸರು; ಸುಮ್ಮನೆ ಸ್ತೋತ್ರಮುಖದಿಂದ ಆಹ್ವಾನಿಸುವರು. ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿತ್ತೆಂದು ವಿಶ್ವಾಸಿಸಲರಿಯರು, ಈ ಜಗತ್ತಿನ ಮನುಷ್ಯರುಗಳು–ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿತ್ತೆಂದು ವಿಶ್ವಾಸಿಸಿ ಸ್ತೋತ್ರಮುಖದಿಂದ "ಸ್ತನಶಂಕರಾ" ಎಂದು ಆಹ್ವಾನಿಸಿದರೆ ಪರಶಿವನು ಸ್ತೋತ್ರಕ್ಕೆ ಪಾತ್ರನಾಗನೆ? ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿತ್ತೆಂದು ವಿಶ್ವಾಸಿಸದೆ ಆ ಗುರುಲಿಂಗಜಂಗಮವೆ ಒಂದು ವಸ್ತುವೆಂದು ಹಾರೈಸದೆ ಸುಮ್ಮನೆ ಸ್ತೋತ್ರಮುಕದಿಂದ ಆಹ್ವಾನಿಸುವರುಗಳ, ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವಾ!–ಅಹಂಕಾರವೆಂಬ ಶೃಂಗವನು ಸಚ್ಚರಿತ್ರವೆಂಬ ಚರಣದಿಂದಧಸ್ಸು ಮಾಡಿ ತುಳಿದು ತನುಕರಣೇಂದ್ರಿಯ ಶಬ್ದಜಾಲಂಗಳನು ಕುಕಿಲಿರಿ ಎಂದು ಪರಮೇಶ್ವರನು ಮಾಯಾದೇವಿಗೆ ನಿರೂಪವ ಕೊಟ್ಟನೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - - - - - - -

ನಂಬರು–ಅಂತರಂಗದಲ್ಲಿ ವಿಶ್ವಾಸಿಸರು, ನಚ್ಚರು-ಬಹಿರಂಗದಲ್ಲಿ ವಿಶ್ವಾಸಿಸರು, ಬಚಿದೆ ಕರೆವರು–ತನುಮನಧನಂಗಳ ದಂಡಿಸದೆ ಸುಮ್ಮನೆ ಶಿವಪ್ರಸನ್ನತೆಯಾಗಬೇಕೆಂದಿಚ್ಛೈಸುವರು, ಈ ಲೋಕದ ಮನುಜರು–ಈ ಜಗಜ್ಜನರು, ನಂಬಲರಿಯರು–ವಿಶ್ವಾಸವಾಸಿಸಲರಿಯರು. ನಂಬಿ–ಸೌಂದರನಂಬ್ಯಣ್ಣನು, ಕರೆದಡೆ–"ಸ್ತನಶಂಕರಾ" ಎಂದು ಆಹ್ವಾನಿಸಿದರೆ, ಶಿವನು–ಪರಶಿವನು ಓ ಎನ್ನನೆ? ಪರವೆನಾಚಿ ಸ್ತನದಲ್ಲಿ ಪ್ರಸನ್ನವಾಗಿ ಓಂಯೆಂದು ಪ್ರಣವನಾದಂಗೊಡನೆ? ನಂಬದೆ–ಅಂತರಂಗದಲ್ಲಿ ವಿಶ್ವಾಸಿಸದೆ, ನಚ್ಚದೆ–ಬಹಿರಂಗದಲ್ಲಿ ಮಮಕರಿಸದೆ, ಬಚಿದೆ ಕರೆವರ–ಸುಮ್ಮನೆ ಇದ್ದಕಿದ್ದ ಹಾಂಗೆ ಶಿವಪ್ರಸನ್ನತೆಯಾಗಬೇಕೆಂಬವರ, ಕೊಂಬ ಮೆಟ್ಟಿ–ಅಹಂಕಾರ ಮಮಕಾರಗಳೆಂಬ ಶೃಂಗಗಳನು ತುಳಿದು, ಕೂಡಲಸಂಗಮದೇವಾ–ಪರಶಿವಲಿಂಗವು, ಕೂಗೆಂದ–ನಾಹಂ ಕೋಹಂ ಸೋಹಂ ಎಂಬು ಭಿನ್ನವಾಕ್ಯವ ನುಡಿದು ಭವಕ್ಕೆ ಹೋಗೆಂದನು.

IV- - - - - - - - - - - - - - - - - - - - - - - - - - - - - - - - - - - - - - - - - - - - - - - - - -

1+ ಇನ್ನು ಭಕ್ತಜ್ಞಾನಿಯ ಸ್ಥಲದ ವಚನ (ತ).

..........................

ಗುರುಲಿಂಗಜಂಗಮವೆ ಪರಶಿವನೆಂದು ನಂಬಿದ ಸದ್ಭಕ್ತಂಗೆ ಶಿವನು ಪ್ರತ್ಯಕ್ಷವಾಗಿಹನು. ನಂಬುಗೆ ವಿಶ್ವಾಸವಿಲ್ಲದೆ ಪೂಜಿಸುವರ ಮನದ ತಲೆಯ ಮೆಟ್ಟಿ ಮಾಯೆ ಊ ಎಂದಾಡುತ್ತಿರೆಂದು ಮುನ್ನ ಶಿವ ಕೊಟ್ಟ ಅಪ್ಪಣೆಯೆಂಬುದೀ ವಚನದ ತಾತ್ಪರ್ಯಾರ್ಥ.

---

೧೨೦

**ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ ಅಯ್ಯಾ? ಅಘೋರ ತಪವ ಮಾಡಿದಡೇನು? ಅಂತರಂಗ ಆತ್ಮಶುದ್ಧಿಯಿಲ್ಲದವ[1]ರನಾನೆಂ[1]ತು ನಂಬು[2]ವೆ[2]ನಯ್ಯಾ, [3]ಕೂಡಲಸಂಗಮದೇವಾ[3] [4]ಇನ್ನೆಂತು ಮೆಚ್ಚುವೆನಯ್ಯಾ?[4]**

I - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ–ಕಡೆಯಲ್ಲಿ ತಿರುಗಾಡುವಂಥ ಸರ್ಪನ ಬಡಿದರೆ ಸತ್ತಿತ್ತಲ್ಲದೆ ಓಡಿಹೋಗಿ ಹುತ್ತವ ಹೊಕ್ಕಲ್ಲಿ, ಹುತ್ತವ–ವಾಲ್ಮೀಕವನ್ನು, ಬಡಿದಡೆ–ಕೋಲು ಗುದಿಗೆಗಳಿಂದ ಸದೆಬಡಿದರೆ, ಹಾವು ಸಾಯಬಲ್ಲುದೆ–ಒಳಗಿರುವಂಥ ಸರ್ಪವೇನಾದರೂ ಮೃತವಾದೀತೆ? ಆಗಲರಿಯದು. ಹಾಂಗೆ, ಹುತ್ತವ ಬಡಿದಡೆ: [ಹುತ್ತವ–] ನವನಾಳಯುಕ್ತವಾದ ದೇಹವನ್ನು, ಬಡಿದಡೆ–ತಪನಿಗ್ರಹಾದಿಗಳಿಂದ ದಂಡಿಸಿದರೆ, ಹಾವು ಸಾಯಬಲ್ಲುದೆ–ಅಧೋಕುಂಡಲಿಯಳಿದು ಊರ್ಧ್ವಕುಂಡಲಿಯಾದೀತೆ? ಆಗಲರಿಯದು, ಅಯ್ಯಾ–ಎಲೆ ಲಿಂಗವೆ.

ಅಘೋರ ತಪವ ಮಾಡಿದಡೇನು–ಭಯಂಕರವಾದ ಉಗ್ರತಪಸ್ಸನಾಚರಿಸಿದರೇನು, ಅಂತರಂಗ–ಹೃದಯವು, ಆತ್ಮಶುದ್ಧಿಯಿಲ್ಲದವರ–ಮನ ನಿರ್ಮಲವಿಲ್ಲದವರ, ನಾನೆಂತು

ನಂಬುವೆನಯ್ಯಾ–ಇವರು ಜ್ಞಾನಿಗಳು ಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ನಾ ಹೇಂಗೆ ವಿಶ್ವಾಸಿಸುವೆನಯ್ಯಾ ಕೂಡಲಸಂಗಮದೇವಾ–ಪರಶಿವಲಿಂಗವು, ಇನ್ನೆಂತು ಮೆಚ್ಚುವೆನಯ್ಯಾ–ಇನ್ನು ಹೇಂಗೆ ಮಮಕರಿಸಿ ನಿಜಮೋಕ್ಷವನ್ನು ಕರುಣಿಸಿ ಕೊಟ್ಟಾನೆ? [ಕರುಣಿಸಿ] ಕೊಡನು.

II- - - - - - - - - - - - - - - - - - - - - - - - - - - - - - - - - - - - - - - - - - - -

1–1 X (ಚ, ಜ). 2–2 ವ (ಜ). 3–3 ಸಂಗಮದೇವರು(ಜ). 4–4 X (ಜ).

..........................

ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ? – ನವದ್ವಾರಯುಕ್ತವಾದ ದೇಹಶೋಷಣೆಯ ಮಾಡಿದರೆ ಶಂಕಾವಿಷಸಂಬಂಧವಾದ ಮನೋಪ್ರಕೃತಿ ನಷ್ಟವಾಗಬಲ್ಲುದೆ? ಮುಂದಕ್ಕೆ ಕಾಣಬಂದರ್ಥ.

---

೧೨೧

**ಕಾಮವೇಕೋ, ಲಿಂಗಪ್ರೇಮಿಯೆನಿಸುವಂಗೆ? ಕ್ರೋಧವೇಕೋ, ಶರಣವೇದ್ಯನೆನಿಸುವಂಗೆ? ಲೋಭವೇಕೋ, ಭಕ್ತಿಲಾಭವನರಸುವಂಗೆ? ಮೋಹವೇಕೋ, ಪ್ರಸಾದವೇದ್ಯನೆನಿಸುವಂಗೆ? ಮದಮತ್ಸರವುಳವಂಗೆ ಹೃದಯಶುದ್ಧಿಯೆಲ್ಲಿಹುದೊ? ಹದುಳಿಗರಾದವರಲ್ಲಿಪ್ಪ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗಪ್ರೇಮಿಯೆನಿಸುವಂಗೆ–ಲಿಂಗದಲ್ಲಿ ಪ್ರೀತಿಪ್ರೇಮವುಳ್ಳಾತನೆಂದು ಹೇಳಿಸಿಕೊಂಬಾತಂಗೆ, ಕಾಮವೇಕೋ–ಇತರ ಕಾಮ್ಯಾರ್ಥದ ಬಯಕೆ ಸಲ್ಲದು. ಶರಣವೇದ್ಯನೆನಿಸುವಂಗೆ–ಶಿವಶರಣರುಗಳಲ್ಲಿ ಕೂಡಲ್ಪಟ್ಟಾತನೆಂದು, ಹೇಳಿಸಿಕೊಂಬಾತಂಗೆ ಕ್ರೋಧವೇಕೋ–ಶಿವಶರಣರ ಮೇಲೆ ಸಿಟ್ಟು ಮುಂದುಗೊಂಡಿರುವಂಥದೇತಕ್ಕೆ? ಸಲ್ಲದು. ಭಕ್ತಿ–ಶಿವಾದ್ವೈತಭಕ್ತಿಯ, ಲಾಭವ–ಆದಾಯವನ್ನು, ಅಜಿಸುವಂಗೆ–ಹುಡುಕುವಾತನೆಂದು ಹೇಳಲ್ಪಟ್ಟಾತಂಗೆ, ಲೋಭವೇಕೋ–ಲುಬ್ಧತ್ವವನ್ನು ಮುಂದುಗೊಂಡಿರುವಂಥದೇತಕ್ಕೆ? ಸಲ್ಲದು. ಪ್ರಸಾದವೇದ್ಯನೆನಿಸುವಂಗೆ–ಪ್ರಸಾದಸೇವನೆಯಲ್ಲಿ ಕೂಡಲ್ಪಟ್ಟಾತನೆಂದು ಹೇಳಿಸುವಾತಂಗೆ, ಮೋಹವೇಕೋ–ತನುವಿನ ಮೇಲಣ ಮಮಕಾರವನ್ನು ಮುಂದುಗೊಂಡಿರುವಂಥದೇತಕ್ಕೋ ಎಂಬುದರ್ಥ.

● ಶರಣವೇದ್ಯನೆನಿಸುವಂಗೆ–ತನುವಿನಲ್ಲಿ ⁽ಸದ್ರೂಪವಾದ⁾ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯಮಾಡಲ್ಪಟ್ಟಾತನೆಂದು ಹೇಳಿಸಿ ಕೊಂಬಾತಂಗೆ, ಕ್ರೋಧವೇಕೋ–ಭಕ್ತಮಾಹೇಶ್ವರರುಗಳ ಮೇಲೆ ಸಿಟ್ಟು ಮುಂದುಗೊಂಡಿರುವಂಥದೇತಕ್ಕೆ? ಸಲ್ಲದು. ಲಿಂಗಪ್ರೇಮಿಯೆನಿಸುವಂಗೆ–ಮನದಲ್ಲಿ ಚದ್ರೂಪವಾದ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಲ್ಪಟ್ಟಾತನೆಂದು ಹೇಳಿಸಿಕೊಂಬಾತಂಗೆ, ಕಾಮವೇಕೊ–ಇತರ ಕಾಮ್ಯರ್ಥದ ಬಯಕೆ ಸಲ್ಲದು. ಭಕ್ತಿಲಾಭವ–ಪ್ರಾಣದಲ್ಲಿ ಆನಂದಸ್ವರೂಪವಾದ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಆದಾಯವ, ಅರಸುವಂಗೆ–ಹುಡುಕುವಾತನೆಂದು ಹೇಳಿಸಿಕೊಂಬಾತಂಗೆ, ಲೋಭವೇಕೊ–ಪ್ರಾಣದ್ರವ್ಯದ ಮೇಲಣ ಲುಬ್ಧತ್ವವನ್ನು ಮುಂದುಗೊಂಡಿರುವಂಥದೇತಕೋ? ಸಲ್ಲದು.

ಪ್ರಸಾದವೇದ್ಯನೆನಿಸುವಂಗೆ–ಆತ್ಮಾಂಗದಲ್ಲಿ ಚಿತ್ಕಲಾಪ್ರಸಾದವ ಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯ ಮಾಡಲ್ಪಟ್ಟಾತನೆಂದು ಹೇಳಿಸುವಾತಂಗೆ, ಮೋಹವೇಕೊ–ಇದು ಹಳಸೈತೆ ಕೊಳಸೈತೆ ನೂಲಸಗಟ್ಟೈತೆ ಇದನು ತೆಗೆದುಕೊಂಡರೆ ಎನ್ನ ದೇಹಕ್ಕೆ ಒಡಂಬಡಿಕೆಯಾಗುತ್ತೈತೋ ಇಲ್ಲವೋ? ಎನ್ನ ಪ್ರಾಣ ಹೋದೀತೋ ಇದ್ದೀತೋ ಎಂಬಂಥ ಪ್ರಾಣದ ಮೇಲಣ ಮಮಕಾರವನ್ನು ಮುಂದುಗೊಂಡಿರುವಂಥದೇತಕೋ? ಸಲ್ಲದು. ಮದಗರ್ವವು, ಮತ್ಸರ–ಕೇಣಸರವು, ಉಳ್ಳವಂಗೆ–ಕಾಮಾದಿ ಅರಿಷಡ್ವರ್ಗಂಗಳ ವರ್ತನೆಯನ್ನು ಮುಂದುಗೊಂಡಾಚರಿಸುವಾತಂಗೆ, ಹೃದಯಶುದ್ಧಿಯೆಲ್ಲಿ ಹುದೋ–ಅಂತರಂಗದ ನಿರ್ಮಲವೆತತಣದೋ ಹದುಳಿಗರಾದವರಲ್ಲಿಪ್ಪ–ಸದುಹೃದಯವನುಳ್ಳ ಜ್ಞಾನಕಲಾತ್ಮರಲ್ಲಿ ಸದಮಲಪ್ರಾಣಲಿಂಗವಾಗಿ ನೆಲೆಗೊಂಡಿಪ್ಪನು, ಕೂಡಲಸಂಗಮದೇವ!–ಪರಶಿವಲಿಂಗವು.

..........................

೧–೧ x (ಕ).

IV- - - - - - - - - - - - - - - - - - - - - - - - - - - - - - - - - - - - - - - - - - - - -

ಅರಿಷಡ್ವರ್ಗಂಗಳುಳ್ಳವಂಗೆ ಗುರುಲಿಂಗಜಂಗಮವಿಲ್ಲವೆಂಬುದೀ ವಚನಾರ್ಥ.

---

೧೨೨

**ಸಾರ ! ಸಜ್ಜನರ ಸಂಗವ ಮಾಡುವುದು, ದೂರ ! ದುರ್ಜನರ ಸಂಗ ಬೇಡವಯ್ಯಾ, ಆವ ಹಾವಾದಡೇನು [1]ವಿಷವೆಲ್ಲವೊಂದೆ.[1] ಅಂತವರ ಸಂಗ ಬೇಡವಯ್ಯಾ. ಅಂತರಂಗ ಶುದ್ಧವಿಲ್ಲದವರ ಸಂಗ, ಸಿಂಗಿಕಾಳಕೂಟವಿಷವೋ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಸಾರ !–ಶ್ರೇಷ್ಠವಾದ, ಸಜ್ಜನರ–ಪಂಚಮಹಾಪತಕಂಗಳ ಬಿಟ್ಟು ಪಂಚಾಚಾರವಿಡಿದಾಚರಿಸಲ್ಪಟ್ಟ ಪರಮ ನಿರ್ಜರರಾದ ಶಿವಶರಣರ, ಸಂಗ–ಅವರು ಹೋದಲ್ಲಿ ಹೋಗಿ ಬಂದಲ್ಲಿ ಬಂದು ಕುಂತಲ್ಲಿ ಕುಳಿತಿರುವಂಥ ತತ್ಸಂಗವ, ಮಾಡುವುದು–ಅನುಗ್ರೈವುದು, ದೂರ!–ಹೊಲ್ಲವಾದ, ದುರ್ಜನರ–ಪಂಚಾಚಾರಕ್ಕೆ ತಪ್ಪಿ ಪಂಚಮಹಾಪಾತಕಂಗಳೊಡನೆ ಕೂಡಿ ಚರಿಸಿ ಕೆಟ್ಟವರುಗಳ, ಸಂಗ–ಅವರು ಹೋದಲ್ಲಿಗೆ ಹೋಗಿ ಬಂದಲ್ಲಿ ಬಂದು ಕುಂತಲ್ಲಿ ಕುಳಿತಿರುವಂಥ ತತ್ಸಂಗವ, ಬೇಡವಯ್ಯಾ–ಕರುಣಿಸಿಕೊಡಬೇಡವಯ್ಯಾ.

ಆವ ಹಾವಾದಡೇನು–ಸರ್ಪಂಗಳೊಳಗೆ ಸಣ್ಣ ಹಾವಾದರೇನು? ದೊಡ್ಡ ಹಾವಾದರೇನು? ಕೆರೆ ಹಾವಾದರೇನು? ದಾಸರ ಹಾವಾದರೇನು? ಹೆಬ್ಬಾವಾದರೇನು? ಕಚ್ಚಿ ವಿಷವನುಗುಳಿ ಪ್ರಾಣವನು ಕೊಲ್ಲುತಿರ್ದ ಕಾರಣ. ವಿಷವೆಲ್ಲವೊಂದೆ–ಕ್ಷ್ವೇಡವೆಲ್ಲ ಒಂದೆಯಾಗಿರ್ಪುದು. ಅಂತವರ–ಬಾಲವೃದ್ಧರೊಳಗಾರಾದರಾಗಲೀ ಅಂತಪ್ಪ ಅಜ್ಞಾನಿಗಳ, ಸಂಗ ಬೇಡವಯ್ಯಾ–ಅಂತವರುಗಳ ತತ್ಸಂಗವೆನಗೆ ಕರುಣಿಸಿಕೊಡಬೇಡವಯ್ಯಾ.

ಅಂತರಂಗ ಶುದ್ಧವಿಲ್ಲದವರ–ಮನನಿರ್ಮಲವಿಲ್ಲದವರ, ಸಂಗ–ಅವರ ತತ್ಸಂಗವು, ಸಿಂಗಿಕಾಳಕೂಟವಿಷವೋ–ಸರ್ಪನೆಂಬಂಥದು ಸಾವಿರ ವರುಷ ತುಂಬಿದ ಬಳಿಕ ಉರಿಸಿಂಗಿಯಾಗಿ ಕಲ್ಲಮೇಲೆ ಹಾಯ್ದರೆ ಕಲ್ಲೇಒಡೆವುದು, ಮರದ ಮೇಲೆ ಹಾಯ್ದರೆ ಮರ ಉರಿವುದು, ಹುಲ್ಲ ಮೇಲೆ ಹಾಯ್ದರೆ ಹುಲ್ಲೇ ಉರಿವುತ್ತಿರ್ದ ಕಾರಣ ಅಂತಪ್ಪ ಅಜ್ಞಾನಿಗಳ ಸಂಗ ಅದೇ ಹಾಳಾಹಳಕೂಟವಿಷವಾಗಿ ಜನನಮರಣಂಗಳಲ್ಲಿ ತಂದು ಸಂಹರಿಸುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - - -

1–1 ವಿಷವೊಂದೆ (ಜ).

.........................

ಸಾರ! ಸಜ್ಜನರ ಸಂಗವ ಮಾಡುವುದು–ನಿತ್ಯಾನಿತ್ಯ ವಿವೇಕದಲ್ಲಿ ಶ್ರೇಷ್ಠಾಯಮಾನವುಳ್ಳವರುಗಳ ತತ್ಸಂಗವನೆಸಗುವುದು. ಮುಂದಕ್ಕೆ ಕಾಣಬಂದರ್ಥ.

---

೧೨೩

**ಹಸಿದು ಎಕ್ಕೆಯ ಕಾಯ ಮೆಲಬಹುದೆ? ನೀರಡಿಸಿ ವಿಷವ ಕುಡಿಯಬಹುದೆ? ಸುಣ್ಣದ ತುಯ್ಯಲ ಬಣ್ಣವೊಂದೆ ಎಂದಡೆ ನಂಟುತನಕ್ಕುಣಬಹುದೆ? ಲಿಂಗಸಾರಾಯ [1]ಸಜ್ಜನರಲ್ಲದವರನೊಲ್ಲ ಕೂಡಲಸಂಗಮದೇವ.[1]**

I- - - - - - - - - - - - - - - - - - - - - - - - - - - - - - - - - - - - - - - - - - - - - - -

ಹಸಿದು ಎಕ್ಕೆಯ ಕಾಯ ಮೆಲಬಹುದೆ?–ಹಸಿವಾದದ್ದೇ ಉಂಟಾದರೆ ಮಾವಿನಕಾಯಿ ನೀರಲಕಾಯಿ ಹಲಸಿನಕಾಯಿ ತೆಂಗಿನಕಾಯಿ ಬಾಳೆಯಕಾಯಿ ಮೊದಲಾದವನ್ನು ತೆಗೆದುಕೊಂಡು ಕ್ಷುಧೆಯನ್ನು ಅಡಗಿಸಿಕೊಳಬೇಕಲ್ಲದೆ ಹಸಿವಾಯಿತ್ತೆಂದು ಅರ್ಕಫಲ ಮೆಲ್ಲುವುದಕ್ಕಾದೀತೆ? ಆಗದು. ಅಥವಾ ಒಂದುವೇಳೆಗೆ ಮೆದ್ದುದೇ ಉಂಟಾದರೆ ಹೊಟ್ಟೆಯೊಳಗೆ ದಾವಾಗ್ನಿ ಎದ್ದು ಕರುಳ ಹರಿದು ಪ್ರಾಣಹೋಗುತ್ತಿಹುದು. ನೀರಡಿಸಿ ವಿಷವ ಕುಡಿಯಬಹುದೇ?–ತೃಷೆಯಾದದ್ದೇ ಉಂಟಾದರೆ ಎಳನೀರು ತಿಳಿನೀರು [ತ] ನ್ನೀರು ಪನ್ನೀರು ಸ್ವಾದೋದಕ ತಕ್ರ ಚಿನಿಪಾಲು ಮೊದಲಾದವನ್ನು ತೆಗೆದುಕೊಂಡು ತೃಷೆಯನ್ನು ಅಡಗಿಸಿಕೊಳಬೇಕಲ್ಲದೆ ತೃಷೆಯಾಯಿತ್ತೆಂದು ಬ ಚನಾಭಿ ಪಾನ್ಯವ ಮಾಡುವುದಕ್ಕಾದೀತೆ? ಆಗದು. ಅಥವಾ ಒಂದುವೇಳೆಗೆ ಪಾನ್ಯವ ಮಾಡಿದ್ದೇ ಉಂಟಾದರೆ ಹೊಟ್ಟೆಯೊಳಗೆ ದಾವಾಗ್ನಿ ಎದ್ದು ಕರುಳ ಹರಿದು ಪ್ರಾಣಹೋಗುತ್ತಿಹುದು.

ಸುಣ್ಣದ ತುಯ್ಯಲ ಬಣ್ಣವೊಂದೆ ಎಂದಡೆ–ಲೋಕದಲ್ಲಿ ಈ ನಂಟನು ಆ ನಂಟನ ಮನೆಗೆ ಹೋದಲ್ಲಿ ಬಹಳ ದಿವಸಕ್ಕೆ ಬಂದಾನೆಂದು ತಿಂಗಳು ಹದಿನೈದು ದಿವಸ ಮಡಗಿಕೊಂಡಿರ್ದು ಹಾಲು ಪಾಯಸವ ಮಾಡಿ ನೀಡಿ ಉಡುಗೊರೆ ಉತ್ಸಹವ ಮಾಡಿ ಮಾನಮನ್ನಣೆಯಿಂದ ಕಳಿಸಿಕೊಡುವರು. ಮತ್ತೆ ಆ ನಂಟನು ಈ ನಂಟನ ಮನೆಗೆ ಬಂದಲ್ಲಿ ಬಹಳ ದಿವಸಕ್ಕೆ ಬಂದಾನೆಂದು ತಿಂಗಳು ಹದಿನೈದು ದಿವಸ ಮಡಗಿಕೊಂಡಿರ್ದು ಮನೆಯೊಳಗೆ ಹೆಂಡತಿಯೊಂದಿಗೆ ಹೋಗಿ ಇವರ ಮನೆಯೊಳಗೆ ಹಾಲು ಪಾಯಸವ ಮಾಡಿ ನೀಡಿದರು. ನೀನೂ ಹಾಲುಪಾಯಸವ

ಮಾಡಿ ನೀಡೆಂದು ಹೇಳಿದಲ್ಲಿ ಅವರ ಮನೆಯೊಳಗಂತೂ ಹಾಲಿತ್ತು ಹಯನಿತ್ತು ಮಾಡಿ ನೀಡಿದರು; ನಮ್ಮ ಮನೆಯೊಳಗೆ ಹಾಲಿಲ್ಲ ಹಯನಿಲ್ಲ. ಹೊಸತಾಗಿ ಸುಣ್ಣ ಹಾಕಿದ್ದೀವಿ ಅದರ ಉದಕವು ಆವಿನ ಹಾಲಿಗಿಂದ ಬೆಳ್ಳಗೈದಾವೆಂದು ಅದರೊಳಗೆ ಮೊನೆಮುರಿಯದ ಅಕ್ಕಿಯನ್ನುಯ ಹಾಕಿ ಹಾಲಪಾಯಸವೆಂದು ಮಾಡಿ ನೀಡಿದರೆ, ನಂಟುತನಕ್ಕುಣಬಹುದೆ?–ನಂಟಾಚಾರದ ಸಖತ್ವಕ್ಕೆ ಅನುಭವಿಸುವುದಕ್ಕಾದೀತೆ? ಆಗದು. ಅಥವಾ ಒಂದುವೇಳೆಗೆ ಅನುಭವಿಸಿದ್ದೇ ಉಂಟಾದರೆ ಹೊಟ್ಟೆಯೊಳಗೆ ದಾವಾಗ್ನಿಯೆದ್ದು ಕರುಳ ಹರಿದು ಪ್ರಾಣಹೋಗುತ್ತಿಹುದು. ಹಾಂಗೆ,

● ಹಸಿದು ಎಕ್ಕೆಯ ಕಾಯ ಮೆಲಬಹುದೆ?–ಜಂಗಮಮೂರ್ತಿಗಳು ಕ್ಷುಧೆಯಡಸಿ ಭಕ್ತರ ಮನೆಗೆ ಲಿಂಗಾರ್ಪಿತ ಭಿಕ್ಷಕ್ಕೆ ಹೋದಲ್ಲಿ ಅಂಬಲಿಯಾಗಲಿ ಅಮೃತವಾಗಲಿ ತಂಗುಳಾಗಲಿ ಬಿಸಿಯಾಗಲಿ ಲಿಂಗಾಣತಿಯಿಂದ ಬಂದ ಪದಾರ್ಥವ ಕೈಕೊಂಡನುಭವಿಸಬೇಕಲ್ಲದೆ ಅವರನು ಕಾಡಿ ಬೇಡಿ ಕರಕರಿಸಿ ಅವರನು ಭಂಡಮಾಡಿ ತಾನೂ ಭಂಡನಾಗಿ ಘಟರಕ್ಷಣ್ಯವ ಮಾಡಿಕೊಂಬಂಥವನ ಇರಸ್ಥಿತಿಯೂ ಹಸಿದು ಎಕ್ಕೆಯ ಕಾಯಿ ಮೆಲುವಾತನ ಇರಸ್ಥಿತಿಯೂ ಒಂದೇಯಾಗಿಪ್ಪುದು. ನೀರಡಿಸಿ ವಿಷವ ಕುಡಿಯಬಹುದೆ?–ಜಂಗಮಮೂರ್ತಿಗಳು ತಮಗೆ ವಿದ್ಯಾಯಾಪೇಕ್ಷೆ ತಲೆದೋರಿದ್ದೇ ಉಂಟಾದರೆ ಬಸವಣ್ಣ ಚೆನ್ನಬಸವಣ್ಣ ಮೋಳಿಗೆಯ ಮಾರಯ್ಯ ಕಕ್ಕಯ್ಯ ಚಿಕ್ಕಯ್ಯ ಮೊದಲಾದ ಪೂರ್ವಪ್ರಥಮಗಣಂಗಳು ಹಾಡಿದಂಥ ವಚನ ಶಾಸ್ತ್ರಂಗಳನೆ ಓದಿ ಹಾಡಿ ಪರಿಣಾಮಿಸಬೇಕಲ್ಲದೆ ಭವಿಗಳ ಮೇಲೆ ಮಾಡಿದ ರಾಮಾಯಣ ಭಾರತ ಛಂದಸ್ಸು ತರ್ಕ ವ್ಯಾಕರಣ ಮೊದಲಾದ ಭಿನ್ನ ಶಾಸ್ತ್ರಂಗಳನೆ ಓದಿ ಹಾಡಿ ಪರಿಣಮಿಸುವಂಥವನ ಇರಸ್ಥಿತಿಯೂ ನೀರಡಿಸಿ ವಿಷಯ ಕುಡಿವಂಥವನ ಇರಸ್ಥಿತಿಯೂ ಒಂದೇಯಾಗಿಪ್ಪುದು.

ಸುಣ್ಣದ ತುಯ್ಯಲ ಬಣ್ಣವೊಂದೆ ಎಂದಡೆ ನಂಟುತನಕ್ಕುಣಬಹುದೆ?–ಉಪಾಧಿ ಭಕ್ತನು ಭಕ್ತಿವೇಷವ ಧರಿಸಿಕೊಂಡಿರ್ಪನು. ನಿರ್ವಂಚಕ ಸದ್ಭಕ್ತನು ಭಕ್ತಿವೇಷವ ಧರಿಸಿಕೊಂಡಿರ್ಪನು. ಜ್ಞಾನಜಂಗಮಮೂರ್ತಿಗಳು ನಿರ್ವಂಚಕಸದ್ಭಕ್ತರ ಭಕ್ತಿಯನೆ ಕೈಕೊಂಡನುಭವಿಸಬೇಕಲ್ಲದೆ ಇವನ ಭಕ್ತಿ ನಮಗೆ ಎಟ್ಟಿಲ್ಲವೆಂದು ಉಪೇಕ್ಷತ್ವವ ಮಾಡಿಬಿಟ್ಟು ಉಪಾಧಿಕನ ಭಿನ್ನಭಕ್ತಿಯನ್ನು ಕೈಕೊಂಡನುಭವಿಸುವುದಕ್ಕಾದೀತೆ? ಆಗದು. ಲಿಂಗಸಾರಾಯ–ಶ್ರೇಷ್ಠವಾದ ಲಿಂಗಪೂಜೆಯಲ್ಲಿ ಕೂಡಲ್ಪಟ್ಟಂಥ, ಸಜ್ಜನರಲ್ಲದವರ–ಪಂಚಮಹಾಪಾತಕಂಗಳನು ಬಿಟ್ಟು ಪಂಚಾಚಾರವಿಡಿದಾಚರಿಸುವಂಥ ಪರಮ ನಿರ್ಜರತ್ವವುಂಟಾಗಿಲ್ಲದವರ, ಕೂಡಲಸಂಗಮದೇವ–ಪರಶಿವಲಿಂಗವು, ಒಲ್ಲ–ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು.

..........................

೧–೧ಕೆ (ಕ,ಗ). ೨–೨ ವ (ಗ).

II- - - - - - - - - - - - - - - - - - - - - - - - - - - - - - - - - - - - - - - -

1–1 ಸಜ್ಜನರಲ್ಲದವರ ಕೂಡಲಸಂಗಮದೇವನೆಂತೊಲಿವನು (ಜ).

..........................

ಹಸಿದು ಎಕ್ಕೆಯ ಕಾಯ ಮೆಲಬಹುದೆ?– ಕ್ಷುಧೆಯಡಗಿಸಿ ಉಪಾಧಿಭಕ್ತನ ಭಕ್ತಿಯನು ಕೈಕೊಳಬಹುದೆ? ನೀರಡಿಸಿ ವಿಷವ ಕುಡಿಯಬಹುದೆ?–ತೃಷೆಯಡಸಿ ಜ್ಞಾನಸಾರವಿಹೀನವಾದವನ ಭಕ್ತಿಯನು ಕೈಕೊಳಬಹುದೆ? ಸುಣ್ಣದ ತುಯ್ಯಲ ಬಣ್ಣ ವೊಂದೆಯೆಂದಡೆ ನಂಟುತನಕ್ಕೆ ಉಣಬಹುದೆ?–ಸಂಕಲ್ಪಶಾಸ್ತ್ರದ ಶಿವಾನುಭಾವಶಾಸ್ತ್ರದ ವರ್ಣ ಒಂದೇ, ಅದು ಶಾಸ್ತ್ರ ಎಂದರೆ ಆದ ಓದಿದ ಹಾಂಗೆ ಸಖತನಕ್ಕೆ ಈ ಸಂಕಲ್ಪಶಾಸ್ತ್ರವನೋದುದಕ್ಕಾದೀತೆ? ಆಗದೆಂಬುದರ್ಥ. ಲಿಂಗಸಾರಾಯ ಸಜ್ಜನರಲ್ಲದವರ–ಪರಶಿವಲಿಂಗ ಶ್ರೇಷ್ಠಾಯಮಾನ ಸತ್ಪುರುಷರಲ್ಲದವರ ತತ್ಸಂಗವನೇನಮಾಡಬೇಕು.

---

೧೨೪

**ಎಲವದ ಮರ [1]ಪೂತು[1] ಫಲವಾದ ತೆಱನಂತೆ: ಸಿರಿಯಾದಡೇನು ಶಿವಭಕ್ತಿಯಿಲ್ಲದನ್ನಕ್ಕ? ಫಲವಾದಡೇನು[2] ಹಾವು ಮೆಕ್ಕೆ?[3] ಕುಲವಿಲ್ಲದ ರೂಹು ಎಲ್ಲಿದ್ದಡೇನು? ಬಚ್ಚಲ ನೀರು ತಿಳಿದಲ್ಲಿ ಫಲವೇನು? ಅವಗುಣಿಗಳ [4]ಮಚ್ಚ[4] ಕೂಡಲಸಂಗಮದೇವ!**

I- - - - - - - - - - - - - - - - - - - - - - - - - - - - - - - - - - - - - - - - - - - - -

ಎಲವದ ಮರ ಪೂತು ಫಲವಾದ ತೆಱನಂತೆ–ಮಾವಿನಮರ ನೀರಲಮರ ತೆಂಗಿನಮರ ಹಲಸಿನಮರ ಬಾಳೆಮರ ಮೊದಲಾದಂಥವು ಫಲವಾದರೆ ಪಶುಪಕ್ಷಿ ಮೊದಲಾದ ಸಮಸ್ತಾತ್ಮರುಗಳಿಗೆ ಮೆಲುವುದಕ್ಕೆ ಹಣ್ಣುಕಾಯಿಗಳಾಗಿ ಬರುವವು.ಅದಲ್ಲದೆ ಸಮಸ್ತಾತ್ಮರುಗಳು ಕುಳ್ಳಿರು ನಿಂದಿರುವುದಕ್ಕೆ ನೆರಳಾಗುವುದು. ಬೂರಿಗನ ಮರನೆಂಬಂಥದು ಬಿತ್ತಿದ್ದೇ ಬೀಡಾಗಿ ತಳಿತಿದ್ದೇ ತಳಿರಾಗಿ ಕಾತದ್ದೇ ಕಾಯಾಗಿದ್ದಲ್ಲಿ ಸಮಸ್ತ ಪಶುಪಕ್ಷಿ ಪ್ರಾಣಿಗಳಿಗೆ ಮೆಲುವುದಕ್ಕೆ ಹಣ್ಣುಕಾಯಿಗಳು ಬಂದಾವೆ? ಬಾರವು. ಸಮಸ್ತಾತ್ಮರುಗಳಿಗೆ ಕುಳ್ಳಿರು ನಿಂದಿರುವುದಕ್ಕೆ ನೆರಳಾದೀತೆ? ಆಗದು. ಅಥವಾ ಇಂದು ವೇಳೆ ಹಣ್ಣಾದುದೇ ಉಂಟಾದರೆ ಬಿಸಿಲಿಗೆ ಬಿರಿದು ಮೂರು ಟಿಸಿಲಾಗಿ ಅರಳಿಯಾಗಿ ಗಾಳಿಗೆ ಬುರ್ರೆಂದು ಹಾರಿಹೋಗುವುದು. ಹಾಂಗೆ, ಸಿರಿಯಾದಡೇನು ಶಿವಭಕ್ತಿಯಿಲ್ಲದನ್ನಕ್ಕ–ನಿರ್ವಂಚಕಸದ್ಭಕ್ತ ಐಶ್ವರ್ಯವಂತನಾಗಿದ್ದರೆ ಮಾವಿನಮರ ನೀರಲಮರ ತೆಂಗಿನಮರ ಹಲಸಿನಮರ ಬಾಳೆಮರ ಮೊದಲಾದಂಥವು ಫಲವಾದ ಹಾಂಗೆ ಭಕ್ತ ಮಾಹೇಶ್ವರರುಗಳಿಗೆ ಸುಖವಾಗುವುದು. ಉಪಾಧಿಕನು ಐಶ್ವರ್ಯವಂತನಾಗಿರ್ದರೆ ಆ ಬೂರಿಗನ ಮರ ಫಲವಾದ ಹಾಂಗಲ್ಲದೆ ಭಕ್ತ ಮಾಹೇಶ್ವರರುಗಳಿಗೆ ಸುಖವಾದೀತೆ? ಆಗಲರಿಯದು.

ಫಲವಾದಡೇನು ಹಾವು ಮೆಕ್ಕೆ–ಸವತೆಬಳ್ಳಿ ಕುಂಬಳಬಳ್ಳಿ ಹೀರೇಬಳ್ಳಿ ಮೊಲದಾದಂಥವು ಕಾಯಿಗಳಾದರೆ ಪಚ್ಚಡಿ ಪದಾರ್ಥಂಗಳಿಗೆ ಬಂದಾವಲ್ಲದೆ ಇಂದ್ರವಾರುಣಿಬಳ್ಳಿಯೆಂಬಂಥದು ಹಿತ್ತಲೊಳಗೆ ಕೆರಸಿ ಅಡ್ಡಗಲ ಹಬ್ಬಿಕೊಂಡು ಎಲೆಗೊಂದುಂ ಹೂವು ಹೀಚು ಕಾಯಿಗಳಾಗಿ ಜಂಪನಿಕ್ಕಿದರೇನು ಪಚ್ಚಡಿ ಪದಾರ್ಥಂಗಳಿಗೆ ಬಂದಾವೆ? ಬರಲರಿಯವು. ಹಾಂಗೆ, ನಿರ್ವಂಚಕಸದ್ಭಕ್ತನೇನಾದರೂ ಐಶ್ವರ್ಯವಂತನಾಗಿದ್ದರೆ ಸವತೆಬಳ್ಳಿ ಕುಕಂಬಳಬಳ್ಳಿ ಹೀರೇಬಳ್ಳಿ

ಮೊದಲಾದಂಥವು ಫಲವಾದ ಹಾಂಗೆ ಭಕ್ತಮಾಹೇಶ್ವರರುಗಳಿಗೆ ಸುಖವಾಗುವುದಲ್ಲದೆ ಉಪಾಧಿಕನು ಐಶ್ವರ್ಯವಂತನಾಗಿದ್ದರೆ ಇಂದ್ರವಾರುಣಿಬಳ್ಳಿ ಫಲವಾದ ಹಾಂಗಲ್ಲದೆ ಭಕ್ತಮಾಹೇಶ್ವರರಿಗೆ ಸುಖವಾದೀತೆ? ಆಗಲರಿಯದು.

ಕುಲವಿಲ್ಲದ ರೂಹು ಎಲ್ಲಿದ್ದಡೇನು?–ಉತ್ತಮಕುಲದಲ್ಲಿ ರೂಪುಳ್ಳ ಸ್ತ್ರೀಯಳಿದ್ದರೆ ಭಕ್ತಮಾಹೇಶ್ವರರು ತೆಗೆದುಕೊಂಡು ಹೋಗಿ ವಿವಾಹವಾದಾರಲ್ಲದೆ ಕ್ಷೀಣಕುಲದಲ್ಲಿ ರೂಪುಳ್ಳ ಸ್ತ್ರೀಯಳಿದ್ದರೆ ಭಕ್ತಮಾಹೇಶ್ವರರು ವಿವಾಹವಾದಾರೆ? ಆಗಲರಿಯರು. ಹಾಂಗೆ, ನಿರ್ವಂಚಕ ಸದ್ಭಕ್ತನು ಐಶ್ವರ್ಯವಂತನಾಗಿದ್ದರೆ ಉತ್ತಮಕುಲದಲ್ಲಿ ರೂಪುಳ್ಳ ಸ್ತ್ರೀಯಳಿದ್ದ ಹಾಂಗೆ ಭಕ್ತಮಾಹೇಶ್ವರರುಗಳಿಗೆ ಸುಖವಾಗುವುದಲ್ಲದೆ ಉಪಾಧಿಕನು ಐಶ್ವರ್ಯವಂತನಾಗಿದ್ದರೆ ಕ್ಷೀಣಕುಲದಲ್ಲಿ ರೂಪುಳ್ಳ ಸ್ತ್ರೀಯಿದ್ದ ಹಾಂಗಲ್ಲದೆ ಭಕ್ತಮಾಹೇಶ್ವರರಿಗೆ ಸುಖವಾದೀತೆ? ಆಗಲರಿಯದು.

ಬಚ್ಚಲ ನೀರು ತಿಳಿದಲ್ಲಿ ಫಲವೇನು?–ಹಳ್ಳ ಹೊಳೆ ಕೆರೆ ಬಾವಿಗಳಲ್ಲಿರುವಂಥ ನೀರು ತಿಳಿಯಾಗಿದ್ದರೆ ಮಜ್ಜನ ಭೋಜನ ಪಾಕ ಪ್ರಯತ್ನವ ಮಾಡುವುದಕ್ಕೂ ವಸ್ತ್ರಕಪ್ಪಟಂಗಳನು ತೊಳೆವುದಕ್ಕೂ ಬಂದಾವಲ್ಲದೆ ಹೌತ್ಕಾನಿಗಳ ನೀರೇನಾದರೂ ಮುಖ ಕಾಣಬರುವ ಹಾಂಗೆ ತಿಳಿಯಾಗಿದ್ದರೇನು? ಮಜ್ಜನ ಭೋಜನ ಪಾಕಪ್ರಯತ್ನವ ಮಾಡುವುದಕ್ಕೂ ವಸ್ತ್ರಕಪ್ಪಟಂಗಳನು ತೊಳೆವುದಕ್ಕೂ ಬಂದಾವೆ? ಬರಲರಿಯವು. ಹಾಂಗೆ, ನಿರ್ವಂಚಕ ಸದ್ಭಕ್ತನು ಐಶ್ವರ್ಯವಂತನಾಗಿದ್ದರೆ ಬಚ್ಚಲ ನೀರು ತಿಳಿಯಾಗಿದ್ದ ಹಾಂಗಲ್ಲದೆ ಭಕ್ತಮಾಹೇಶ್ವರರುಗಳಿಗೆ ಸುಖವಾಗುವುದು. ಉಪಾಧಿಕನು ಐಶ್ವರ್ಯವಂತನಾಗಿದ್ದರೆ, ಬಚ್ಚಲ ನೀರು ತಿಳಿಯಾಗಿದ್ದ ಹಾಂಗಲ್ಲದೆ ಭಕ್ತಮಾಹೇಶ್ವರರುಗಳಿಗೆ ಸುಖವಾದೀತೆ? ಆಗಲರಿಯದು. ಅವಗುಣಿಗಳ–ಅಜ್ಞಾನ ದುರ್ಗುಣವನುಳ್ಳ ಆಶಾಲಾಂಛನಿ ಉಪಾಧಿಕರುಗಳ, ಕೂಡಲಸಂಗಮದೇವ–ಪರಶಿವಲಿಂಗವು, ಮಚ್ಚ–ಮಮಕರಿಸಿಕೊಂಡು ಮುಕ್ತಿಯ ಕರುಣಿಸಿಕೊಟ್ಟಾನೆ? ಕೊಡನು.

.........................

೧–೧ ಡು. (ಗ).

II- - - - - - - - - - - - - - - - - - - - - - - - - - - - - - - - - - - - - - - - - - -

1–1 ಹೂತು (ಜ). 2 + ಹೇಳಾ (ಜ). 3 + ಯ ಕಾಯಿ? (ಜ) 4–4 ಮೆಚ್ಚ (ಜ).

.........................

ಎಲವದ ಮರ ಹೂತು ಫಲವಾದ ತೆಱನಂತೆ–ಬೂರದ ವೃಕ್ಷವು ಹೂವಾಗಿ ಕಾಯಾದ ಮರಿಯಾದಿ ಹಾಂಗೆ ಭಕ್ತಿಯಿಲ್ಲದವನು ವಿಭೂತಿ ರುದ್ರಾಕ್ಷಿಯನು ಧರಿಸಿ ಗುರುಲಿಂಗಜಂಗಮದ ಭಕ್ತನಾಗಿ, ಸಿರಿಯಾದಡೇನು? ಭಕ್ತಿಯಿಲ್ಲದನ್ನಕ್ಕ?–ಅಷ್ಟಭೋಗ ಅಷ್ಟೈಶ್ವರ್ಯದಲ್ಲಿದ್ದರೇನು ಲಿಂಗಭಕ್ತಿ ಉಂಟಾಗದನ್ನಬರ. ಫಲವಾದಡೇನು ಹೇಳಾ ಹಾವು ಮೆಕ್ಕೆಯ ಕಾಯಿ?–ಶಂಕೆಯನುಳ್ಳ ಭಕ್ತನು ತನುಮನಧನವು ನಿಮ್ಮದೆಂದರೇನು? ಕೊಟ್ಟು ಭಕ್ತಿಯ ಮಾಡನೆಂಬುದರ್ಥ.

ಕುಲವಿಲ್ಲದ ರೂಹು ಎಲ್ಲಿದ್ದಡೇನು?–ಸತ್ಕುಲವಿಲ್ಲದಂಥ ಹೆಣ್ಣು ಆವ ಸ್ಥಾನದಲ್ಲಿದ್ದರೇನು? ಯಾತಕ್ಕೆ ಬಂದಾಳು? ಕುಲವಿದ್ದರೆ ಏನಾರೂ ಕಾರ್ಯಕ್ಕೆ ಬಂದಾಳು. ಕುಲವಿಲ್ಲದಲ್ಲಿ ಏನು

ಪ್ರಯೋಜನ? ಬಚ್ಚಲ ನೀರು ತಿಳಿದಲ್ಲಿ ಫಲವೇನು?–ಮಲತ್ರಯಯುಕ್ತವಾದ ಜೀವನು ನಿತ್ಯಾನಿತ್ಯ ವಿವೇಕವನರಿದಲ್ಲಿ ಪ್ರಯೋಜನವೇನು? ಮುಂದಕ್ಕೆ ಕಾಣಬಂದರ್ಥ.

---

೧೨೫

**ಬಚ್ಚಲ ನೀರು [1]ತಿಳಿಯಾದಡೇನು?[1] ಸಲ್ಲದ ಹೊನ್ನು [2]ಎಲ್ಲಿದ್ದಡೇನು?[2] ಆಕಾಶದ ಮಾವಿನ ಫಲವೆಂದಡೇನು? ಕೊಯ್ಯಲಿಲ್ಲ ಮೆಲ್ಲಲಿಲ್ಲ! ಕೂಡಲಸಂಗನ ಶರಣರನುಭಾವವಿಲ್ಲದವರು ಎಲ್ಲಿದ್ದಡೇನು, ಎಂತಾದಡೇನು?**

I- - - - - - - - - - - - - - - - - - - - - - - - - - - - - - - - - - - - - - - - - - - - - - - -

ಬಚ್ಚಲ ನೀರು ತಿಳಿಯಾದಡೇನು?–ಹಳ್ಳ ಹೊಳೆ ಕೆರೆ ಬಾವಿಗಳಲ್ಲಿರುವಂಥ ನೀರು ತಿಳಿಯಾಗಿದ್ದರೆ ಮಜ್ಜನ ಭೋಜನ ಪಾಕಪ್ರಯತ್ನಂಗಳ ಮಾಡುವುದಕ್ಕೂ ವಸ್ತ್ರಕಪ್ಪಟಂಗಳ ತೊಳೆವುದಕ್ಕೂ ಬಂದಾವಲ್ಲದೆ ಹೌತ್ಕಾನಿ ನೀರೇನಾದರೂ ಮುಖ ಕಾಣಬರುವ ಹಾಂಗೆ ತಿಳಿಯಾಗಿದ್ದರೆ ಮಜ್ಜನ ಭೋಜನ ಪಾಕಪ್ರಯತ್ನಂಗಳ ಮಾಡುವುದಕ್ಕೂ ವಸ್ತ್ರಕಪ್ಪಟಂಗಳನು ತೊಳೆವುದಕ್ಕೂ ಬಂದಾವೆ? ಬರಲರಿಯವು. ಹಾಂಗೆ, ನಿರ್ವಂಚಕಸದ್ಭಕ್ತನು ಭಕ್ತಿವೇಷವ ಧರಿಸಿಕೊಂಡಿದ್ದರೆ ಹಳ್ಳ ಹೊಳೆ ಕೆರೆ ಬಾವಿಗಳಲ್ಲಿರುವಂಥ ನೀರು ತಿಳಿಯಾಗಿದ್ದ ಹಾಂಗೆ ಪೂಜ್ಯವಾಗಿರುವುದು. ಉಪಾಧಿಕನು ಭಕ್ತಿವೇಷವ ಧರಿಸಿಕೊಂಡಿದ್ದರೆ ಹೌತ್ಕಾನಿ ನೀರು ತಿಳಿಯಾಗಿದ್ದ ಹಾಂಗಲ್ಲದೆ ಪೂಜ್ಯವಾಗಿದ್ದೀತೆ? ಇರಲರಿಯದು.

ಸಲ್ಲದ ಹೊನ್ನು–ಟಂಕಸಾಲೆಯ ಮನೆಯಲ್ಲಿ ನೋಟಕ್ಕೂ ತೂಕಕ್ಕೂ ಸಲುವಳಿಯಲ್ಲದ [೧]ವೆಂಗಿ[೧]ವರಹನು, ಎಲ್ಲಿದ್ದಡೇನು?–ಐವತ್ತಾರು ದೇಶದ ಪ್ಯಾಟಿ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ಮಳಿಗೆಮನೆಗಳಿಗೆ ತೆಗೆದುಕೊಂಡೊಯ್ದು ಕೊಟ್ಟು ಎಚ್ಚವನ್ನು ತೂಗಿ ಕೊಡೆಂದರೆ ಅದನು ತೆಗೆದುಕೊಂಡು ಎಚ್ಚವನು ತೂಗಿ ಕೊಟ್ಟಾರೆ? ಕೊಡರು. ಇದು ವೆಂಗಿವರಹ ಎಂದು ಹಿಂದಕ್ಕೆ ಬಿಡುತ್ತಿಹರು. ಹಾಂಗೆ, ಸಲ್ಲದ ಹೊನ್ನು–ಭಕ್ತಮಾಹೇಶ್ವರರ ಕವಳಿಗೆಗೆ ಯೋಗ್ಯವಾಗದ ಉಪಾಧಿಕನು, ಎಲ್ಲಿದ್ದಡೇನು?–ಐವತ್ತಾರುದೇಶದ ಪ್ಯಾಟಿ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ಮಳಿಗೆಮನೆಗಳ ಕಟ್ಟಿಕೊಂಡು ಉಂಬುತ್ತ ಉಡುವುತ್ತ ಸುಖಸಂತೋಷದಲ್ಲಿದ್ದರೂ ಸಲ್ಲದ ಹೊನ್ನಿದ್ದ ಹಾಂಗಲ್ಲದೆ ಭಕ್ತಮಾಹೇಶ್ವರರ ಕವಳಿಗೆಗೆ ಯೋಗ್ಯವಾದಾನೆ? ಆಗಲರಿಯನು.

ಆಕಾಶದ ಮಾವಿನ ಫಲವೆಂದಡೇನು?: ಆಕಾಶದ–ಅಂಬರದಲ್ಲಿ, ಮಾವಿನ ಫಲವೆಂದಡೇನು?–ಒಂದು ಜೊತೆ ಫಲವುಂಟಾಗ್ಯೆತೆಂದು ಹೇಳಿದರೇನು, ಕೊಯ್ಯಲಿಲ್ಲ–ಕೃಂತಿಸಲಿಲ್ಲವು, ಮೆಲ್ಲಲಿಲ್ಲ–ತಿಂಬುವುದಕ್ಕೆ ಬರಲಿಲ್ಲವು. ಹಾಂಗೆ, ಆಕಾಶದ ಮಾವಿನಫಲವೆಂದಡೇನು?–ಚಿದಾಕಾಶಸ್ವರೂಪವಾದ ನಿರ್ವಂಚಕ ಸದ್ಭಕ್ತನು ಅಂತರಂಗದಲ್ಲಿ ಒಂದು ಚೂತಫಲವೆಂದರೆ ಚಿದ್ರಸಸ್ವರೂಪವಾದ ಸಮರಸಭಕ್ತಿವುಂಟಾಗ್ಯೆತೆಂದು ಹೇಳಿದರೆ, ಕೊಯ್ಯಲಿಲ್ಲ–ಉಪಾಧಿಕನು ತನಗಂಗವ ಮಾಡಿಕೊಂಡು ಆಚರಿಸಲಿಲ್ಲವು, ಮೆಲ್ಲಲಿಲ್ಲ!–ಆ ಉಪಾಧಿಕಭಕ್ತನು ಸಮರಸಭಕ್ತಿಯಿಂದುಂಟಾದ ನಿಜಮೋಕ್ಷವನ್ನು ಸ್ವೀಕರಿಸಲಿಲ್ಲವು. ಕೂಡಲಸಂಗನ ಶರಣರ–ಜಂಗಮಮೂರ್ತಿಗಳ, ಅನುಭಾವ–

ಶಿವಾನುಭಾವದ ಕೇಳಿಕೆಯು, ಇಲ್ಲದವರು–ಉಂಟಾಗಿಲ್ಲದವರು, ಎಲ್ಲಿದ್ದಡೇನು?–ಯಾವಲ್ಲಿದ್ದರೇನು? ಎಂತಾದಡೇನು?–ಏನಾಗಿ ಹೋದರೇನು?

........................

ಯಂಗಿ (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - -

1–1 ತಿಳಿದಡೇನು (ಜ). 2–2 ಮತ್ತೆಲ್ಲಿದ್ದಡೇನು (ಜ).

........................

ಬಚ್ಚಲ ನೀರು ತಿಳಿದಡೇನು?–ಮಲತ್ರಯಂಗಳೆಂಬ ಕಿಸಕುಳದಲ್ಲಿ ಹೊದಕುಳಿಗೊಂಡ ಜೀವನು ಆತ್ಮಾನಾತ್ಮ ವಿಚಾರವನರಿದರೇನು? ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು?–ಅಜ್ಞಾನಿಯಾದ ಜೀವನು ಅದಲ್ಲದೆ ಮಂತ್ರಮುದ್ರೆವಿಹೀನವಾದಾತ್ಮನು ಮರಳಿ ಆವ ಠಾವಿನಲ್ಲಿದ್ದರೇನು?

ಆಕಾಶದ ಮಾವಿನ ಫಲವೆಂದಡೇನು?–ಆತ್ಮಾಕಾಶದಲ್ಲಿರ್ದ ಪರಬ್ರಹ್ಮವೆಂಬ ಪ್ರಯೋಜನವೆಂದರೇನು? ಕೊಯ್ಯಲಿಲ್ಲ–ಸುಚಿತ್ತವೆಂಬ ಹಸ್ತದಿಂದ ಲವನಂಗೆಯಲಿಲ್ಲ, ಮೆಲ್ಲಿಲಿಲ್ಲ!–ಶಿವಾಪೇಕ್ಷೆಯಿಂದ ಸ್ವೀಕರಿಸಲಿಲ್ಲ. ಕೂಡಲಸಂಗನಶರಣರ ಅನುಭಾವವಿಲ್ಲದವರು ಎಲ್ಲಿದ್ದಡೇನು?–ಪರಶಿವಲಿಂಗದ ಜ್ಞಾನಾನುಭಾವವು ನಾಸ್ತಿಯಾದವರು ಇಹಲೋಕದಲ್ಲಿದ್ದರೇನು, ಎಂತಾದಡೇನು?–ಹೆಂಗಾದರೇನು?

---

೧೨೬

**ಗಿಳಿವೋದಿ ಫಲವೇನು? ಬೆಕ್ಕು [1]ಬಾಹುದ[1] ಹೇಳಲಱಿಯದು. ಜಗವೆಲ್ಲ ಕಾಂಬ ಕಣ್ಣು, [2]ತನಗೆ[2] ಕೊಂಬ ಕೊಯಿಲೆಯ ಕಾಣಲಱಿಯದು. ಇದಿರಗುಣವ [3]ಬಲ್ಲೆನೆಂಬವರು,[3] ತಮ್ಮ ಗುಣವ ತಾವಱಿಯರು ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - - - - - - -

ಗಿಳಿವೋದಿ ಫಲವೇನು?: ಗಿಳಿ–ಶುಕನು, ಓದಿ–ಹರಹರ ಶಿವಶಿವಾ ಕೊಟ್ಟೂರಯ್ಯಾ ಕೋಲಶಾಂತಯ್ಯ ರಾಮಪ್ಪೊಡೆಯರೆ ಎಂದು ಪಠಿಸಿ, ಫಲವೇನು?–ಪ್ರಯೋಜನವೇನು? ಬೆಕ್ಕು ಬಾಹುದ ಹೇಳಲಱಿಯದು–ಮಾರ್ಜಾಲನು ತ ೧[ನಾಸ್ಯ] ದಿಂದ ಮುರುಕೊಂಡು ತಿಂಬುವುದಕ್ಕೆ ಎಯ್ದು ಬರುವಂಥನು ತನಗೆ ಹಾಲು ಹಣ್ಣನು ಹಾಕಿ ಸಲಹುವಂಥ ಒಡೆಯನಿಗೆ ಹೇಳಿ ಬಿಡಿಸಿಕೊಂಬುವಂಥದನು ತಿಳಿಯಲರಿಯದೆಂಬ ದೃಷ್ಟೋಪಮಾನದ ಹಾಂಗೆ, ಗಿಳಿವೋದಿ ಫಲವೇನು?: ಗಿಳಿ–ಜೀವನೆಂಬ ಶುಕನು, ಓದಿ–ಸಕಲವೇದಾಗಮಶಾಸ್ತ್ರಪುರಾಣಂಗಳ ಪಠಿಸಿ, ಫಲವೇನು?–ಪ್ರಯೋಜನವೇನು? ಬೆಕ್ಕು ಬಾಹುದ ಹೇಳಲಱಿಯದು–ಮಾಯಾಮಾರ್ಜಾಲ ಬಂದು ತನ್ನ ಪ್ರಪಂಚದೊಳಗುಮಾಡಿಕೊಂಡು ಮರಣದಲ್ಲಿ ತಂದು ಸಂಹರಿಸುವಂಥದನು ತನಗೆ ಕರ್ತನಾದ

ಪರಶಿವಲಿಂಗಕ್ಕುಪಾವಸ್ಥೆಯಂ ಮಾಡಿ ಆ ಮಾಯಾಶಕ್ತಿಯ ವರ್ತನೆಯ ನಷ್ಟವ ಮಾಡಿ ಶುದ್ಧ ವಿದ್ಯಾಶಕ್ತಿಯಾಗಿ ಅಳವಡಿಸಿಕೊಂಡಾಚರಿಸುವಂಥದನ್ನು ತಿಳಿಯಲರಿಯದು.

ಜಗವೆಲ್ಲ–ಲೋಕದಲ್ಲಿರುವಂಥ ಸಮಸ್ತಾತ್ಮರುಗಳನು, ಕಾಂಬ–ನೋಡುವ, ಕಣ್ಣು–ನಯನವು, ತನಗೆ ಕೊಂಬ–ತನಗೆ ಬಂದು ತಗಲುವ, ಕೊಯಿಲೆಯ–ಜೋಳದ ಕೊಯಿಲೆ ಹೊಡೆಮುಳ್ಳ ಮೊದಲಾದಂಥವನ್ನು, ಕಾಣಲಜಿಯದು–ತಿಳಿಯಲಜಿಯದು ಎಂಬಲ್ಲಿ ಲೋಕದಲ್ಲಿ ಕೆಲವಾತ್ಮರುಗಳು ಕಳವು ಹಾದರವ ಮಾಡಿ ಚಬುಕ ಚೇರಬಂದಿನಿಂದ ಬಡಿಸಿಕೊಂಡು ಸೆರೆ ಸಂಕೋಲೆಯ ಹಾಕಿಸಿಕೊಂಡು ಬಾಧೆಬಡುವಂಥದನ್ನು ಕಂಡು ಕಂಡು ನೋಡಿ ನಾವೂ ಕಳವು ಹಾದರ ಮಾಡಿದರೆ ನಮಗೂ ಹೀಂಗೆ ಬಾಧೆಯಾದೀತೆಂಬಂಥದನ್ನು ತಿಳಿಯದೆ ತಾವೂ ಹಾದರ ಕಳವು ಮಾಡಿ ಚಬುಕ ಚೇರಬಂದಿನಿಂದ ಬಡಿಸಿಕೊಂಡು ಸೆರೆ ಸಂಕೋಲೆಯನ್ನು ಹಾಕಿಸಿಕೊಂಬಂಥದನ್ನು ತಿಳಿಯಲರಿಯದು, ಅರಿಯಲರಿಯದು. ಇದಿರಗುಣವ ಬಲ್ಲೆನೆಂಬುವರು, ಮತ್ತೊಂದು ಕಳ್ಳರು ಸುಳ್ಳರು ಜಾರರು ಚೋರರು ಆಸಕರು ಅಜ್ಞಾನಿಗಳೆಂದು ದೂಷಣೆಯ ಮಾಡುವಂಥದನ್ನು ತಿಳಿದುಬಲ್ಲೆಂದು ಹೇಳಿಕೊಂಬುವರು ತಮ್ಮ ಗುಣವ ತಾವಜಿಯರು – ತಮ್ಮಂತರಂಗದಲ್ಲಿರುವಂಥ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವನು ಪರಾಮರಿಸಿ ಬಿಡಲರಿಯದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

........................

೧–೧ ನ್ಯಾಸಿಕ (ಕ,ಗ).

II- - - - - - - - - - - - - - - - - - - - - - - - - - - - - - - - - - - - - - - - - - -

1–1 ಬಹುದ (ಜ). 2–2 ತನ್ನ (ಜ). 3–3ಬಲ್ಲೆವೆಂಬರು (ಜ).

........................

ಗಿಳಿಯೋದಿ ಫಲವೇನು? ಬೆಕ್ಕು ಬಹುದ ಹೇಳಲಜಿಯದು–ಜೀವವೆಂಬ ಶುಕನು ವೇದಶಾಸ್ತ್ರಾಗಮಪುರಾಣಗಳನು ಪಠಿಸಿ ಪ್ರಯೋಜನವೇನು? ತನ್ನ ಮುರಿದು ಮೋದುವ ಮಾಯಾಮಾರ್ಜಾಲ ಬರುವಂಥದನು ತಿಳಿದು ಉಸುರಲರಿಯದು. ಜಗವೆಲ್ಲದ ಕಾಂಬ ಕಣ್ಣು ಕೊಂಬ ಕೊಯ್ಲೆಯ ಕಾಣಲಜಿಯದು–ತನುತ್ರಯಸಂಬಂಧವಾದ ಸಕಲಕರಣಂಗಳೆಂಬ ಜಗತ್ತೆಲ್ಲವನು ನೋಡುವ ಜ್ಞಾನದೃಷಿಯು ತನಗೆ ಬಂದು ತಟ್ಟುವಂಥ ಅಹಂಕಾರವೆಂಬ ದಾರುದೂರ್ದಸಿಯನು ನೋಡಲರಿಯದು. ಇದಿರಗುಣವ ಬಲ್ಲೆವೆಂಬರು ತಮ್ಮ ಗುಣವ ತಾವಜಿಯರು ಕೂಡಲಸಂಗಮದೇವಾ–ಅನ್ಯರುಗಳ ಅಂತರಂಗದ ಸಂಕಲ್ಪ ವಿಕಲ್ಪವನು ತಿಳಿದು ಬಲ್ಲೆವೆಂಬರು ತಮ್ಮಂತರಂಗದಲ್ಲಿರ್ದ ದುರ್ಗುಣವನು ತಾವು ತಿಳಿಯರು ಎಲೆ ಲಿಂಗವೆ.

---

## ೧೨೭

**ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ!**

I- - - - - - - - - - - - - - - - - - - - - - - - - - - - - - - - - - - - - - - - - - - -

ಲೋಕದ ಡೊಂಕ ನೀವೇಕೆ ತಿದ್ದುವಿರಿ?–ಲೋಕದಾತ್ಮರುಗಳ ಅಂತರಂಗದಲ್ಲಿರುವಂಥ ವಂಚನೆ ಉಪಾಧಿ ಕುಹಕಪ್ರಪಂಚ ಕಾಪಟ್ಯವನು ನೀವೇನು ಕಾರಣಕ್ಕೆ ತಿದ್ದಿ ತೀರ್ಚಿ ಒಪ್ಪವಿಟ್ಟು ಹೇಳುವಿರಯ್ಯಾ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ–ನಿಮ್ಮ ನಿಮ್ಮ ಅಂಗವನ್ನು ಇಷ್ಟಲಿಂಗದ ಸತ್ಕ್ರಿಯಾಚಾರದಲ್ಲಿ ತರಹರವ ಮಾಡಿಕೊಳ್ಳಿರಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ–ನಿಮ್ಮ ನಿಮ್ಮ ಮನಸ್ಸನ್ನು ಪ್ರಾಣಲಿಂಗದ ಸುಜ್ಞಾನದಲ್ಲಿ ತರಹರವ ಮಾಡಿಕೊಳ್ಳಿರಿ.

ನೆರೆಮನೆಯ ದುಃಖಕ್ಕೆ ಅಳುವವರ ತನ್ನ–ಮನೆಯೊಳಗೆ ಸತ್ತು [೧]ಗೊಂಟಿಗೆ[೧] ಕೂಡ್ರಿಸಿದ್ದರೆ ಎದೆ ಬದಿ ಬಸರು ಬಾಯನ್ನು ಬಡಿಸುಕೊಂಡು ಅಳಬೇಕಲ್ಲದೆ ನೆರೆಮೆನಯೊಳಗೆ ಸತ್ತು ಗೂಟಹೊಡೆದು ಗೋಡೆಗೆ ಕೂಡ್ರಿಸಿದಲ್ಲಿ ಎದೆ ಬದಿ ಬಸರು ಬಾಯನ್ನು ಬಡಿದುಕೊಂಡು ಅಳುವಂಥವರ, ಕೂಡಲಸಂಗಮದೇವ!–ಮನೆಯ ಗಂಡನು, ಮಚ್ಚ–ಮಮಕರಿಸುವನೆ? ಮಮಕರಿಸನೆಂಬ ದೃಷ್ಟೋಪಮಾನದ ಹಾಂಗೆ, ನೆರೆಮನೆಯ ದುಃಖಕ್ಕೆ ಅಳುವವರ ಮಚ್ಚ ಕೂಡಲಸಂಗಮದೇವ!–ತಮ್ಮಂತರಂಗದಲ್ಲಿರುವಂಥ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವನುಂಟುಮಾಡಿ ಹೇಳಬೇಕಲ್ಲದೆ ಮತ್ತೊಬ್ಬರನು ಆಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರು ಎಂದು ದೂಷಣೆಯ ಮಾಡುವಂಥವರುಗಳ, ಕೂಡಲಸಂಗಮದೇವ!–ಪರಶಿವಲಿಂಗವು, ಮೆಚ್ಚ–ಮಮಕರಿಸಿಕೊಂಡು ಮುಕ್ತಿಯನ್ನು ಕೊಟ್ಟಾನೆ? ಕೊಡನು.

..........................

೧–೧ ಗೂಟಿಂಗೆ (ಗ).

II- - - - - - - - - - - - - - - - - - - - - - - - - - - - - - - - - - - - - - - - - - - -

ಲೋಕದ ಡೊಂಕ ನೀವೇಕೆ ತಿದ್ದುವಿರಿ?–ಜಗದಾತ್ಮರುಗಳ ಕೌಟಿಲ್ಯಮಾರ್ಗವನು ನೀವು ಏನುಕಾರಣ ಹೇಳಿ ಕೇಳಿನೇರಿತ್ತವ ಮಾಡುತ್ತೈದೀರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ–ನಿಮ್ಮ ನಿಮ್ಮ ಅಂಗದ ಸತ್ಕ್ರೀಯನು ಇಷ್ಟಲಿಂಗದಲ್ಲಿ ಸಮಾಧಾನವ ಮಾಡಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ–ನಿಮ್ಮ ಮನಸ್ಸಿನ ಜ್ಞಾನವನ್ನು ಪ್ರಾಣಲಿಂಗದಲ್ಲಿ ಸಮಾಧಾನವ ಮಾಡಿಕೊಳ್ಳಿ.

ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ!–ಸೇರುವೆಯ ಗೃಹದವರ ದುಃಖಕ್ಕೆ ಮನಸ್ಸಿನಲ್ಲಿ ದುಃಖ ಹುಟ್ಟಿ ಕಣ್ಣಿಗೆ ನೀರ ತಂದು ಶೋಕಿಸಿದರೆ ಕರೆಯೆ? ಸುಮ್ಮನೆ ಮನಸ್ಸಿನಲ್ಲಿ ದುಃಖವಿಲ್ಲದೆ ಕಣ್ಣಿಗೆ ನೀರ ತಾರದೆ ಶೋಕಿಸಿದರೆ ಅದರಲೇನಾದೀತು? ಹಾಂಗೆ, ಪೂರ್ವಾಪರಜ್ಞಾನದ ನೆನಹಿಲ್ಲದೆ ಸುಮ್ಮನೆ ಅಯ್ಯಾ ಅಯ್ಯಾ ಎಂದು ಕೇಳಿ ಏನು ಮಾಡಬೇಕೆಲೆ ಲಿಂಗವೆ?

..........................

೧–೧ ರಿ (ಜ).

೧೨೮

ಏತ ತಲೆಬಾಗಿದಡೇನು ಗುರುಭಕ್ತನಾಗಬಲ್ಲುದೆ? ಇಕ್ಕಳ ಕೈಮುಗಿದಡೇನು? ಭೃತ್ಯಾಚಾರಿಯಾಗಬಲ್ಲುದೆ? ಗಿಳಿವೋದಿದಡೇನು ಲಿಂಗವೇದಿಯಾಗಬಲ್ಲುದೆ? ಕೂಡಲಸಂಗನಶರಣರು ಬಂದ ಬರವ, ನಿಂದ ನಿಲವ ಅನಂಗಸಂಗಿಗಳೆತ್ತ ಬಲ್ಲರು.

I- - - - - - - - - - - - - - - - - - - - - - - - - - - - - - - - - - - - - - - - - - - - - - - -

ಏತ ತಲೆಬಾಗಿದಡೇನು ಗುರುಭಕ್ತನಾಗಬಲ್ಲುದೆ?–ಯಾತದ ಮರದ ತುದಿಗೆ ಗಣೆಯನ್ನು ಕಟ್ಟಿ ಮೇಲೊಬ್ಬ ನಿಂತುಕೊಂಡು ಕೆಳಗೊಬ್ಬ ಪಿಡಿದು 'ಬಗ್ಗಿ'ಸಿದಲ್ಲಿ ತಲೆವಾಗಿದ ಹಾಂಗಾಗುವುದು. ಆದರೇನಾಯಿತ್ತು? ಕೆಳಯಕ್ಕೆ ಮೆಲಕ್ಕೆ ತಲೆಹಾಕಿದರೇನಾಯಿತ್ತು? ಗುರುಭಕ್ತನಾಗಬಲ್ಲುದೆ? ತನ್ನ ತಿದ್ದಿ ತೀರ್ಚಿ ಒಪ್ಪವಿಟ್ಟು ಮಾಡಿದಂಥ ಕಮ್ಮಾರನ ಕಂಡರೆ ಭೃತ್ಯಾಚಾರಿಯಾಗಿ ನಡಕೊಂಬುವಂಥದನು, ಬಲ್ಲುದೆ–ಅರಿಯದು. ಗಿಳಿ–ಶುಕನು ಓದಿದಡೇನು–ಹರಹರ ಶಿವಶಿವಾ ಕೊಟ್ಟೂರಯ್ಯಾ ಕೋಲುಶಾಂತಯ್ಯ ರಾಮಪ್ಪೊಡೆಯರೆ ಎಂದು ಪಠಿಸಿದರೇನು, ಲಿಂಗವೇದಿಯಾಗಬಲ್ಲುದೆ?–ಪರಶಿವಲಿಂಗದಲ್ಲಿ ಕೂಡುವಂಥ ಕೂಟವು ತಿಳಿದಿಪ್ಪುದೆ? ಅರಿಯದೆಂಬ ದೃಷ್ಟೋಪಮನದ ಹಾಂಗೆ,

● ಏತ–ಉಪಾಧಿಕನು, ತಲೆಬಾಗಿದಡೇನು–ಬೀದಿಬಾಜಾರದಲ್ಲಿ ಗುರುಚರಮೂರ್ತಿಗಳನು ಕಂಡಲ್ಲಿ ಹಾಂಗೆ ಸುಮ್ಮನೆ ಬೀಳ್ಕೊಂಡು ಹೋದರೆ ಸೋಮವಾರ ಮಂಗಳವಾರ ಬಾರದೆ ಹೋದಾರು. ಮಕ್ಕಳು ಮರಿಗಳಿಗೆ ಲಿಂಗವ ಕಟ್ಟುವುದಕ್ಕೆ ಬಾರದೆ ಹೋದಾರು. ಹಬ್ಬಹುಣ್ಣಿವೆ ಮದುವೆ ಮುಂಜಿ ದೇವತಾಕಾರ್ಯಕ್ಕೆ ಬಾರದೆ ಹೋದಾರೆಂದು ಶರಣು ಶರಣಾರ್ಥಿಯೆಂದು ತಲೆಬಾಗಿ ನಮಸ್ಕರಿಸಿದರೆ, ಗುರುಭಕ್ತನಾಗಬಲ್ಲುದೆ?–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುವಿಂಗೆ ಅಂಗ ಆಪ್ತಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯನು ಮುಂದುಗೊಂಡು ಆಚರಿಸುವಂಥ ನಿರ್ವಂಚಕ ಸದ್ಭಕ್ತನಾದಾನೆ? ಆಗಲರಿಯನು. ಇಕ್ಕಳ–ಉಪಾಧಿಕನು, ಕೈಮುಗಿದಡೇನು–ಬೀದಿಬಾಜಾರದಲ್ಲಿ ಮಳಿಗೆಮನೆಸಾಲುಗಳಲ್ಲಿ ಕುಳಿತುಕೊಂಡಿರ್ದಲ್ಲಿ ಗುರುಚರಮೂರ್ತಿಗಳು ಹೋಗಿಬರುವಂಥದನು ನೋಡಿ ಸುಮ್ಮನೆ ಹಾಂಗೆ ಬಿಕ್ಕೊಂಡು ಕುಳಿತಿದ್ದರೆ ಇವನು ಮಹಾಗರ್ವಿಷ್ಠನೆಂದಾರಲಾ ಎಂದು ಶರಣು ಶರಣಾರ್ಥಿಯೆಂದು ಹಸ್ತಾಂಜಲಿತನಾದರೇನು, ಭೃತ್ಯಾಚಾರಿಯಾಗಬಲ್ಲುದೆ?–ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡಲಪ್ಪ ಭಯಭಕ್ತಿ 'ಕಿಂಕರತ್ವವನುಳ್ಳ' ನಿರ್ವಂಚಕಸದ್ಭಕ್ತ ನಾದಾನೆ? ಆಗಲರಿಯನು.

ಗಿಳಿ–ಜೀವನೆಂಬ ಶುಕನು, ಓದಿದಡೇನು–ಸಕಲವೇದಶಾಸ್ತ್ರಾಗಮಪುರಾಣಂಗಳನು ಪಠಿಸಿದರೇನು, ಲಿಂಗವೇದಿಯಾಗಬಲ್ಲುದೆ?–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಮಂತ್ರ ಜ್ಞಾನ ಜಪ ಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸಿ ಪರಶಿವಲಿಂಗದಲ್ಲಿ ಕೂಡುವಂಥ ಕೂಟವ ತಿಳಿದಿಪ್ಪನೆ? ತಿಳಿಯಲರಿಯನು. ಕೂಡಲಸಂಗನಶರಣರು–ಜಂಗಮಮೂರ್ತಿಗಳು, ಬಂದ–ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದ, ಬರವ–ಚಮತ್ಕಾರವನ್ನು. ನಿಂದ–ಗೋವು ನೀರು ಕುಡಿವಷ್ಟು

ಹೊತ್ತು ನಿಂತುಕೊಂಡ, ನಿಲವ–ನಿಲುಕಡೆಯನು, ಅನಂಗಸಂಗಿಗಳೆತ್ತ ಬಲ್ಲರು–ಜಂಗಮಮೂರ್ತಿಗಳು ಕ್ಷುಧೆಯಾಗೆ ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡಾಕ್ಷಣವೇ ನಮಸ್ಕರಿಸಿ ತಮ್ಮಲ್ಲಿರ್ದ ಸಕಲಪದಾರ್ಥವ ನೀಡಿ ಸಂತೃಪ್ತಿಬಡಿಸುವಂಥ ನಿಲುಕಡೆಯನು, ಮತ್ತಲ್ಲದೆ, ನಿಂದ ನಿಲವ–ಪ್ಯಾಟಿಮನೆಪುರಪಟ್ಟಣಸ್ಥಾನಂಗಳಲ್ಲಿ ನೆಲ ನೀರು ಪತ್ರಿ ಪ್ರಸೂನಂಗಳಿಂದ ನಿರ್ಮಲವಾದಂಥ ಚೌಕಿಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನು ಮಾಡುತ್ತ ಆರು ಮೂರು ತಿಂಗಳು ತಡೆದಲ್ಲಿ ಇವರು ಇಲ್ಲೇ ತಡೆದರೆಂದು ಉಪೇಕ್ಷವ ಮಾಡಿಬಿಡದೆ ನಾಲ್ಕಕ್ಕೂ ಎಂಟಕ್ಕೂ ಬಿನ್ನಹವ ಮಾಡಿ ಕರಕೊಂಡು ಬಂದು ನೀಡಿ ಸಂತೃಪ್ತಿಯನು ಬಡಿಸುವಂಥ ನಿಲುಗಡೆಯನು, ಅನಂಗಸಂಗಿಗಳೆತ್ತ ಬಲ್ಲರು?–ಸೈರಿಸಬಾರದ ತನುವಿನ ಮನ್ಮಥವಿಕಾರದೊಡನೆ ಕೂಡಿ ಚರಿಸಲ್ಪಟ್ಟ ಅಜ್ಞಾನಜೀವಿಗಳಾವ ಕಡೆಯಿಂದ ತಿಳಿದಿಪ್ಪರು? ಅರಿಯರು.

..........................

೧–೧ ಜಗ್ಗಿ (ಗ). ೨–೨ ಭೃತ್ಯಾಚಾರವನುಳ್ಳ (ಗ).

II- - - - - - - - - - - - - - - - - - - - - - - - - - - - - - - - - - - - - - - -

ಏತ ತಲೆವಾಗಿದಡೇನು ಗುರುಭಕ್ತನಾಗಬಲ್ಲುದೆ?–ದೇಹಾಭಿಮಾನ ಕುಲ ಛಲ ಅಹಂಕಾರದೊಡನೆ ಕೂಡಿ ತೂಗಾಡುವಂಥಾತ್ಮನು ಹಸ್ತಾಂಜಲಿ ಪುಟೀಕೃತ[ನಾ] ಗಿ ಶಿರ ವಣಿಸಿದರೇನು ಗುರುಭಕ್ತಿಯುಳ್ಳಾತನಾಗಬಲ್ಲದೆ? ಇಕ್ಕಳ ಕೈಮುಗಿದಡೇನು ಭೃತ್ಯಾಚಾರಿಯಾಗಬಲ್ಲುದೆ?– ಸಂಕಲ್ಪ ವಿಕಲ್ಪವನುಳ್ಳ ಜೀವನು ಹಸ್ತಾಂಜಲಿಪುಟೀಕೃತವಾದರೇನು ಲಿಂಗಜಂಗಮಕ್ಕೆ ಬಂಟಾಚಾರಿಯಾಗಬಲ್ಲನೆ? ಗಿಳಿಯೋದಿದಡೇನು? ಲಿಂಗವೇದಿಯಾಗಬಲ್ಲುದೆ?–ಜೀವನೆಂಬ ಶುಕನು ವೇದಶಾಸ್ತ್ರಾಗಮಂಗಳ ಪಠಿಸಿದರೇನು ಲಿಂಗಸಮಬಂಧಿಯಾಗಬಲ್ಲುದೆ? ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - -

ಅಂತರಂಗದಲ್ಲಿ ದೃಢವಿಶ್ವಾಸವಿಲ್ಲದ ಭಿನ್ನಭಕ್ತನು ಬಹಿರಂಗದಲ್ಲಿ ಉಪಚಾರಕ್ಕೆ ಶರಣೆಂದರೆ ಗುರುಭಕ್ತಿ ದೊರಕೊಳಲರಿಯದೆಂಬುದೀಗ ಏತ ತಲೆವಾಗಿದಡೇನು ಗುರುಭಕ್ತನಾಗಬಲ್ಲುದೆ ಎಂಬ ಶಬ್ದಕ್ಕರ್ಥ. ಅಜ್ಞಾನಸ್ವರೂಪವಾದ ಜಡಾತ್ಮನು ಎಷ್ಟು ತಾನು ಬಹಿರಂಗದಲ್ಲಿ ವಂದನೆ ನಮಸ್ಕಾರಗಳ ಮಾಡಿದರೆಯೂ ಲಿಂಗಭಕ್ತಿಯ ಭೃತ್ಯತ್ವದಲ್ಲಿ ಮನವು ಕರಿಗೊಳ್ಳದೆಂಬುದೀಗ ಇಕ್ಕಳ ಕೈಮುಗಿದಡೇನು ಭೃತ್ಯಾಚಾರಿಯಾಗಬಲ್ಲುದೆ? ಎಂಬ ಶಬ್ದಕ್ಕರ್ಥ. ಮಲತ್ರಯ ಭುಂಜಕನಾದಾತ್ಮನು ಎಷ್ಟು ಶಾಸ್ತ್ರಜ್ಞಾನವ ತಿಳಿದಿರ್ದೊಡೆಯೂ ಸುಜ್ಞಾನಸ್ವರೂಪವಾದ ಜಂಗಮಭಕ್ತಿಯಲ್ಲಿ ಏಕತ್ವವ ನೆಯ್ದಲಱಿಯನೆಂಬುದೀಗ ಗಿಳಿಯೋದಿದಡೇನು ಲಿಂಗವೇದಿಯಾಗಬಲ್ಲುದೆ? ಎಂಬ ಶಬ್ದಕ್ಕರ್ಥ. ಕೂಡಲಸಂಗನ ಶರಣರು–ಶಿವಶರಣರುಗಳು, ಬಂದ ಬರವ–ಹಸಿದು ಬಳಲಿ ಬಂದಂಥ ಆಗಮನವನು, ನಿಂದ ನಿಲವ–ಆಚಾರವಿಚಾರಕ್ಕೋಸ್ಕರವಾಗಿ ನಿಂದಂಥ ನಿಲುಕಡೆಯನು, ಅನಂಗಸಂಗಿಗಳ್–ಮನ್ಮಥ ವಿಕಾರವುಳ್ಳವರು ತಾವು, ಎತ್ತ ಬಲ್ಲರು–ಯಾವ ಕಡೆಯ ತಿಳಿದಪರು.

೧೨೯

**ಒಲವಿಲ್ಲದ ಪೂಜೆ! ಸ್ನೇಹವಿಲ್ಲದ ಮಾಟ! ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ! ಚಿತ್ರದ ಕಬ್ಬು ಕಾಣಿರಣ್ಣಾ! [1]ಅಪ್ಪಿದಡೇನು[1] ಸುಖವಿಲ್ಲ, [2]ಮೆಲಿದಡೇನು[2] [3]ಸವಿಯಿಲ್ಲ![3] ಕೂಡಲಸಂಗಮದೇವಾ ಕೇಳಯ್ಯಾ ನಿಜವಿಲ್ಲದವರ ಭಕ್ತಿ[4]ಯಿಂತುಂಟು ![4]**

I- - - - - - - - - - - - - - - - - - - - - - - - - - - - - - - - - - - - - - - - - - - - -

ಒಲವಿಲ್ಲದ ಪೂಜೆ– ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಕ್ರೀ, ಇಲ್ಲದ–ಉಂಟಾಗಿಲ್ಲದ, ಪೂಜೆ–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಲಿಂಗಪೂಜೆಯು, ಸ್ನೇಹವಿಲ್ಲದ–ದೇವನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿಮಾಡುವಂಥ ಸಮರಸಜ್ಞಾನವಿಲ್ಲದ, ಮಾಟ–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಜಂಗಮ ಭಕ್ತಿ[?]ಯು[?], ಆ ಪೂಜೆಯು–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಲಿಂಗಪೂಜೆಯು, ಚಿತ್ರದ ರೂಹು ಕಾಣಿರಣ್ಣಾ–ಪಟಭಿತ್ತಿಗಳ ಮೇಲೆ ನಖನೇತ್ರದಂತಪಂಜ್ತ ಮೊಲೆಮುಡಿಗಳಿಂದ ಶುದ್ಧಾಂಗಸ್ವರೂಪವಾದ ಸ್ತ್ರೀರೂಪವನು ತಿದ್ದಿದ ಹಾಂಗೆ ಇಪ್ಪುದು ಕಾಣಿರಣ್ಣಾ. ಆ ಮಾಟವು–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಜಂಗಮಭಕ್ತಿ[?]ಯು[?], ಚಿತ್ರದ ಕಬ್ಬು ಕಾಣಿರಣ್ಣಾ–ಪಟಭಿತ್ತಿಗಳ ಮೇಲೆ ಗರಿಗಳಿಂದೆ ಗಣಿಗಳಿಂದೆ ಕಬ್ಬು ತಿದ್ದಿದ ಹಾಂಗೆ ಇರ್ಪುದು, ಕಾಣಿರಣ್ಣಾ–ಕಂಡಿರಣ್ಣಾ.

ಅಪ್ಪಿದಡೇನು ಸುಖವಿಲ್ಲ–ಬಹಿರಂಗದಲ್ಲಿರುವಂಥ ಸ್ತ್ರೀಯಳನ್ನು ತರ್ಕೈಸಿಕೊಂಡರೆ ಕ್ರೀಡಾವಿನೋದದ ಪರಿಣಾಮವು ತಟ್ಟುವುದಲ್ಲದೆ ಚಿತ್ರದಲ್ಲಿ ಬರೆದಂಥ ಸ್ತ್ರೀಯಳನು ತರ್ಕೈಸಿಕೊಂಡರೆ ಕ್ರಿಡಾವಿನೋದದ ಪರಿಣಾಮವು ತಟ್ಟಿತ್ತೇ? ತಟ್ಟಲರಿಯದು. ಹಾಂಗೆ, ಸಮರಸಭಾವದಿಂದ ಲಿಂಗಪೂಜೆಯ ಮಾಡಿದರೆ ಬಾಹ್ಯದಲ್ಲಿಕದ್ದಂಥ ಸ್ತ್ರೀಯಳ ತರ್ಕೈಸಿಕೊಂಡರೆ ಕ್ರೀಡಾವಿನೋದದ ಪರಿಣಾಮವು ತಟ್ಟಿದ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರಕೊಂಬುತ್ತಿಹುದು. ಅದಲ್ಲದೆ ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡಿದರೆ ಪಟಭಿತ್ತಿಗಳ ಮೇಲೆ ಬರೆದಿದ್ದಂಥ ಸ್ತ್ರೀಯಳನು ತರ್ಕೈಸಿಕೊಂಡ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲ. ಮೆಲಿದಡೇನು ಸವಿಯಿಲ್ಲ!–ಬಹಿರಂಗದಲ್ಲಿದ್ದಂಥ ಕಬ್ಬನ್ನು ಮೆಲಿದರೆ ಸ್ವಾದವಾಗಿದ್ದಿತಲ್ಲದೆ ಚಿತ್ರದಲ್ಲಿ [?]ಬರೆದಂಥ[?] ಕಬ್ಬನ್ನು ಮೆಲಿದರೆ ಬಾಯಿಗೆ ಬರೇ ಮಣ್ಣು ಬರುವುದಲ್ಲದೆ ಸ್ವಾದ ತಟ್ಟಿತ್ತೇ? ತಟ್ಟಲರಿಯದು. ಹಾಂಗೆ ಸಮರಸಭಾವದಿಂದ ಜಂಗಮ ಭಕ್ತಿ ಮಾಡಿದರೆ ಬಾಹ್ಯದಲ್ಲಿದ್ದಂಥ ಕಬ್ಬನ್ನು ಮೆಲಿದರೆ ಸ್ವಾದವಾಗಿದ್ದ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರೆಕೊಂಬುತ್ತಿಹುದಲ್ಲದೆ ಕಾಂಬರವ ಕಂಡು ಭಿನ್ನವಿಟ್ಟುಕೊಂಡು ಜಂಗಮಭಕ್ತಿಯ ಮಾಡಿದರೆ ಪಟಭಿತ್ತಿಗಳ ಮೇಲೆ ಬರೆದಂಥ ಕಬ್ಬನ್ನು ಮೆಲಿದರೆ ಬಾಯಿಗೆ ಬರೇ ಮಣ್ಣು ಬಂದ ಹಾಂಗಲ್ಲದೆ ಏತಕ್ಕೂ ಪ್ರಯೋಜನವಲ್ಲವು.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಆಲಿಸಯ್ಯಾ, ನಿಜವಿಲ್ಲದವರ ಭಕ್ತಿಯಿಂತುಂಟು–ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ದೇವನಾದದ್ದು ಭಕ್ತನಾದದ್ದು

ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ ಸಮರಸಕ್ರೀ ಸರಸಜ್ಞಾನ, ಇಲ್ಲದವರ-ಉಂಟಾಗಿಲ್ಲದವರ, ಭಕ್ತಿ-ಶಾಂಬವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಲಿಂಗಪೂಜೆ ಜಂಗಮಭಕ್ತಿಯು, ಇಂತುಂಟು-ಚಿತ್ರದ ರೂಹು ಚಿತ್ರದ ಕಬ್ಬಿನ ಹಾಂಗೆ ವ್ಯರ್ಥಸ್ಯವಾಗಿರ್ಪುದು.

..........................

೧-೧ ಮಾಟವು (ಕ). ೨-೨ ಇದ್ದಂಥ (ಕ).

IV- - - - - - - - - - - - - - - - - - - - - - - - - - - - - - - - - - - - - - - - - - - -

1-1 ಅಪ್ಪಿವಡೆ (ತ). 2-2 ಮೆಲಿದಡೆ (ತ). 3-3 ರುಚಿಯಿಲ್ಲ (ತ). 4-4 X (ತ).

..........................

ಮನದಲ್ಲಿ ರತಿಸುಖವಿಲ್ಲದವನ ಭಕ್ತಿ ಚಿತ್ರದ ಸತಿಯ ಕೂಟದಂತೆಯೆಂಬುದೀ ವಚನದರ್ಥ.

---

೧೩೦

**ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನಱಸುವರೆ ಅಯ್ಯಾ? ಹೂವು ಬಾಡಿದಲ್ಲಿ ಪರಿಮಳವನಱಸುವರೆ ಅಯ್ಯಾ? ಎನ್ನ ತಂದೆ ಕೂಡಲಸಂಗಮದೇವಾ, ತೊಱೆ [1]ಇಳಿದ ಬಳಿಕ[1] ಅಂಬಿಗಂಗೇನುಂಟು?**

I- - - - - - - - - - - - - - - - - - - - - - - - - - - - - - - - - - - - - - - - - - - -

ಸ್ನೇಹ ತಪ್ಪಿದ ಬಳಿಕ-ಲೋಕದಲ್ಲಿ[೧] ಈ ನಂಟನು ಆ ನಂಟನ ಮನೆಗೆ ಹೋಗಿ ಉಂಡುಟ್ಟು ಉಡುಗೊರೆ ಹೊದ್ದು ಉತ್ಸಾಹವನ್ನು ಕೈಕೊಂಡು ಬರುವಲ್ಲಿ ಬಹುಪರಿಣಾಮವಾಗಿರ್ಪುದು. ಆ ನಂಟನು ಈ ನಂಟನ ಮನೆಗೆ ಬಂದು ಉಂಡುಟ್ಟು ಉಡುಗೊರೆ ಹೊದ್ದು ಉತ್ಸಾಹವನ್ನು ಕೈಕೊಂಡು ಹೋಗುವಲ್ಲಿ ಬಹುಪರಿಣಾಮಕಾರಿಯಾಗಿರ್ಪುದ. ಹೀಂಗಿರುತಿದ್ದ ಹಾಂಗೆ ಆವುದಾನೊಂದು ಕೊಡುಕೊಂಬುವುದರಿಂದಲಾದರಾಗಲಿ ಒಂದು ಹೆಣ್ಣು ಗಂಡಿನಿಂದಲಾದರಾಗಲಿ ಒಂದು ಕಡಬಡ್ಡಿ ಸಾಲದಿಂದಲಾದರಾಗಲಿ ಒಂದು ನಂಟಾಚಾರದಿಂದಲಾದರಾಗಲಿ, ಒಬ್ಬರಿಗೊಬ್ಬರು ಕೆಟ್ಟು ಬಂದು, ಅವರ ಮನೆಗೆ ಇವರು ಹೋಗದೆ ಇವರ ಮನೆಗೆ ಅವರು ಬಾರದೆ ಹೊರಹೊರಗಾಗಿದ್ದಲ್ಲಿ, ಸ್ನೇಹ ತಪ್ಪಿದ-ಮೊದಲ ನಂಟಾಚಾರದ ಸಖಿತ್ವವು ತಪ್ಪಿದ,[೨] ಠಾವಿನಲ್ಲಿ-ಸ್ಥಾನದಲ್ಲಿ, ಗುಣವನಱಸುವರೆ ಅಯ್ಯಾ? – ಮೊದಲಿನ ನಂಟಾಚಾರದ ಸಖಿತ್ವವನ್ನು ಹುಡಿಕಿದರೆ ಉಂಟಾಗಿದ್ದೀತೆ? ಇಲ್ಲವು. ಹಾಂಗೆ, ಒಬ್ಬ ಭಕ್ತನೆನಾದರೂ ಸಮಯಾಚಾರಕ್ಕೊಬ್ಬ ಜಂಗಮಮೂರ್ತಿಗಳ ಮಡಗಿಕೊಂಡು ಆಗಾಗ್ಗೆ ಸೂಚನೆಬಿನ್ನಹಗಟ್ಟಿ ಬಿನ್ನಹವನ್ನು ಮಾಡುತ್ತ ಸಕಲ ಪದಾರ್ಥವ ನೀಡಿ ಸಂತೃಪ್ತಬಡಿಸುತ್ತ ಶಾಲುಸೆಕಲಾತಿ ಸಣ್ಣಕಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟಮಂಚ ಲೇಪು ಸುಪ್ಪತ್ತಿಗೆ[೩]ಯ[೩] ಮೇಲೆ ಮಲಗಿಸಿಕೊಂಡು ಪರಿಣಾಮಸಂಗಾತ ಮಡಗಿಕೊಂಡಿರುತ್ತಿದ್ದ ಹಾಂಗೆ, ಆ ಜಂಗಮಮೂರ್ತಿಗಳು ಆ ಭಕ್ತನಿಗೆ ಒಂದರಿವಾಚರಣೆ ಪ್ರಸಂಗವನು ಹೇಳಿದಲ್ಲಿ ಆ ಭಕ್ತನು

ಕೇಳದೆಯಿದ್ದಲ್ಲಿ ಒಬ್ಬರಿಗೊಬ್ಬರು ಕೆಟ್ಟು ಬಂದು, ಸ್ನೇಹ ತಪ್ಪಿದ-ಭಯ ಭಕ್ತಿ ವಿಶ್ವಾಸ ಶ್ರದ್ಧೆಯನು ತೊಲಗಿದ, ಠಾವಿನಲ್ಲಿ–ಸ್ಥಾನದಲ್ಲಿ, ಗುಣವನಱಿಸುವರೆ–ಮೊದಲ ಹಾಂಗೆ ಭಯ ಭಕ್ತಿ ವಿಶ್ವಾಸ ಶ್ರದ್ಧೆಯನು ಹುಡುಕಿದರೆ ಉಂಟಾಗಿದ್ದೀತೆ? ಇರಲರಿಯದು, ಅಯ್ಯಾ–ಎಲೆ ಲಿಂಗವೆ. ಹೂವು ಬಾಡಿದಲ್ಲಿ–[೪]ಅ[೪]ಜ್ಞೆ ಹೂವಿನಲ್ಲಿ, ಪರಿಮಳವನಱಿಸುವರೆ?–ಸದ್ವಾಸನೆಯನ್ನು ಹುಡುಕಿದರೆ ಉಂಟಾಗಿದ್ದೀತೆ? ಇರಲರಿಯದು. ಮತ್ತಂ, ಹೂವು ಬಾಡಿದಲ್ಲಿ–ಅಜ್ಞಾನಿಜೀವನಲ್ಲಿ, ಪರಿಮಳವನಱಿಸುವರೆ–ಜ್ಞಾನಸದ್ವಾಸನೆಯ ಹುಡುಕಿದರೆ ಉಂಟಾಗಿದ್ದೀತೆ? ಇರಲರಿಯದು, ಅಯ್ಯಾ–ಎಲೆ ಲಿಂಗವೆ.

ಎನ್ನ ತಂದೆ–ಎನ್ನಾತಯ್ಮಜನಕನಾದಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ತೊಱೆ[1] ಇಳಿದ ಬಳಿಕ ಅಂಬಿಗಂಗೇನುಂಟು– ನದಿಯೆಂಬಂಥದು ಮಾಗಿ ಮಳೆಗಾಲದಲ್ಲಿ ಎರಡು ದಡ ತುಂಬಿ ತುಳುಕುತ್ತ ಹೋಗುತ್ತಿದ್ದಲ್ಲಿ ಪಥಮಾರ್ಗವೆತ್ತಿ ಬಂದಂಥ ಆತ್ಮರುಗಳು ಎಲೊ ಅಂಬಿಗರಣ್ಣಾ ರೊಟ್ಟಿ ಕೊಟ್ಟೇವು ಬುತ್ತಿ ಕೊಟ್ಟೇವು ವಸ್ತ್ರಕಪ್ಪಟಂಗಳ ಕೊಟ್ಟೇವು ದುಡ್ಡುದುಗ್ಗಾಣಿಯಾದರು ಕೊಟ್ಟೇವು. ನಮ್ಮನ್ನು ಪರಿಣಾಮ ಸಂಗಾತ ಆಚೆಗೆ ದಾಂಟಿಸೆಂದು ಹೇಳಿದಲ್ಲಿ ಅವನು ಪರಿಣಾಮಸಂಗಾತ ದಾಂಟಿಸುವನು. ಅವನಿಗೂ ಅವನ ಹೆಂಡಿರೂ ಮಕ್ಕಳಿಗೂ ಪರಿಣಾಮವಾಗುವುದು. ವಸಂತಕಾಲದಲ್ಲಿ ಹೊಳೆಯೆಲ್ಲ ಬತ್ತಿ ಕಾಲಹೊಳೆಯಾಗಿರ್ದಲ್ಲಿ ಅಂಬಿಗನು ಮಡುವಿದ್ದ ಸ್ಥಾನದಲ್ಲಿ ಹರಿಗೋಲನು ಹಾಕಿಕೊಂಡಿರ್ದಲ್ಲಿ ಪಥಮಾರ್ಗವೆತ್ತಿ ಬಂದಂಥ ಆತ್ಮರುಗಳನ್ನು ಆಚೆಗೆ ದಾಂಟಿಸುವೆ ಬನ್ನಿರೆಂದು ಕರೆದಲ್ಲಿ ನಾವೇನು ದಾಂಟಲರಿಯವೆ? ಎಂದು ಕಾಲಹೊಳೆಯಿದ್ದಲ್ಲಿ ದಾಂಟಿಹೋಗುತ್ತಿಹರು. ಆಗೇನಾದರೂ ಅಂಬಿಗಂಗೆ ಪರಿಣಾಮವಾದೀತೇ? ಆಗಲರಿಯದು. ಹಾಂಗೆ, ಅಂಬಿಗನ ಹಾಂಗೆ, ಆಶಾಲಾಂಛನಿಗಳು ತೊರೆಯ ಹಾಂಗೆ ಉಪಾಧಿಕನು, ಆ ಉಪಾಧಿಕನಿಗೆ ಕಂಟಕಾದಿಗಳು ಬಂದರೆ ನೂರಕ್ಕೆ ಹಚ್ಚಡ ಕೊಟ್ಟೇವು, ಪಾದಪೂಜೆಯ ಮಾಡೇವು, ಸಹಸ್ರ ಭೋಜನವ ಮಾಡೇವೆಂದು ಬೇಡಿಕೊಂಡಲ್ಲಿ ಆಶಾಲಾಂಛನಿಗಳಿಗೆ ಸುಖವಾಗುವುದು. ಉಪಾಧಿಕರುಗಳಿಗೆ ಕಂಟಕಾದಿಗಳು ಬಾರದಿದ್ದರೆ ಆಶಾಲಾಂಛನಿಗಳಿಗೆ ಪರಿಣಾಮವಾದೀತೆ? ಆಗಲರಿಯದೆ. ಹಾಂಗೆ, ಅಂಬಿಗನ ಹಾಂಗೆ ಜ್ಞಾನಜಂಗಮಮೂರ್ತಿಗಳು, ತೊರೆಯ ಹಾಂಗೆ ನಿರ್ವಂಚಕಸದ್ಭಕ್ತನು, ಆ ನಿರ್ವಂಚಕಸದ್ಭಕ್ತನು ಐಶ್ವರ್ಯವಂತನಾಗಿದ್ದರೆ ಜ್ಞಾನಜಂಗಮಮೂರ್ತಿಗಳಿಗೆ ಸುಖವಾಗುವುದು. ನಿರ್ವಂಚಕಸದ್ಭಕ್ತನು ದರಿದ್ರನಾದರೆ ಜ್ಞಾನ ಜಂಗಮಮೂರ್ತಿಗಳಿಗೆ ಪರಿಣಾಮವಾದೀತೆ? ಆಗಲರಿಯದು. ಹಾಂಗೆ, ಅಂಬಿಗನ ಹಾಂಗೆ ಗುರುವು, ತೊರೆಯ ಹಾಂಗೆ ಶಿಷ್ಯ. ಶಿಷ್ಯನು ಜ್ಞಾನಿಯಾಗಿ ಆಚರಿಸಿದರೆ ಗುರುಗಳಿಗೆ ಕೀರ್ತಿ ಬರುವುದು, ಶಿಷ್ಯನು ಅಜ್ಞಾನಿಯಾಗಿ ಆಚರಿಸಿದರೆ ಗುರುಗಳಿಗೆ ಅಪಕೀರ್ತಿ ಬರುವುದು.

..........................

೧ ನಂಟನಂಟರೇನಾದರೂ (ಕ). ೨ ತೊಲಗಿದ (ಕ). ೩–೩ ತುಪ್ಪಳ ಹಾಸಿಗೆ (ಕ). ೪–೪ ಆ (ಕ).

II- - - - - - - - - - - - - - - - - - - - - - - - - - - - - - - - - - - - - - - -

1–1 ಇಳಿದಡೆ (ಜ).

..........................

ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನಱಸುವರೆ ಅಯ್ಯಾ?=ಗುರುಲಿಂಗಜಂಗಮದ ಭಕ್ತಿ ಪ್ರೀತಿ ಹೊಱಚ್ಚಾದ ಸ್ಥಾನದಲ್ಲಿ ಭಕ್ತಿಸದ್ಗುಣವ ಹುಡುಕುವರೆ ಸ್ವಾಮಿ? ಹೂವು ಬಾಡಿದಲ್ಲಿ ಪರಿಮಳವನಱಸುವರೆ ಅಯ್ಯಾ?-ಹೃದಯಕಮಲವು ಮಸಳಿಸಿದಲ್ಲಿ ಸದ್ವಾಸನೆಯ ಹುಡುಕುವರೆ ಸ್ವಾಮಿ? ಎನ್ನ ತಂದೆ-ಆತ್ಮಜನಕನಾದಂಥ, ಕೂಡಲಸಂಗಮದೇವಾ-ಎಲೆ ಲಿಂಗವೆ, ತೊಱೆ ಇಳಿದಡೆ ಅಂಬಿಗಂಗೇನುಂಟು?-ಭಕ್ತಿಪದಾರ್ಥವು ತೀರಿಹೋದರೆ ಜಂಗಮಕ್ಕೆ ಸುಖವಿಲ್ಲವೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - -

1-1 ಇಳಿದಡೆ (ಡ).

..........................

ಶಿವಭಕ್ತಿಯ ಮಹತ್ವವನು ಕಂಡು ಗುರುಲಿಂಗಜಂಗಮದ ಭಕ್ತಿಯ ಮಾಡುವ ಭಕ್ತನಿಗೆ ಆ ಭಕ್ತಿ ನಿಂದಲ್ಲಿ ಮುಂದಾಗುವ ಮುಕ್ತಿಲಬ್ಧಿ ದೊರಕೊಳಲರಿಯದೆಂಬುದೀಗ ತೊಱೆ ಇಳಿದಡೆ ಅಂಬಿಗಂಗೇನುಂಟೆಂಬ ಶಬ್ದಕ್ಕರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - -

1-1 ಇಳಿದಡೆ (ತ).

..........................

ಮನಕ್ಕೆ ಮನ ಸಂಗವಿಲ್ಲವಾಗಿ ಆಕಾರಣವೆಂಬುದೀ ವಚನದರ್ಥ.

---

೧೩೧

**ಆಸೆಗೆ ಹುಟ್ಟಿದ ಪ್ರಾಣಿ ಆಸೆಯ'ನೆ'[1] ಕಲಿತು ಪುಣ್ಯ[2] ಪದವಿಯ ಬಯಸಿದಡೆ, ಭವಮಾಲೆಯ ಬರವು ತಪ್ಪದು. ಬೇಡಲು ಹುಟ್ಟಿದ ಪ್ರಾಣಿಗೆ ಬೇಡಲು ವಿಧಿಯೇ? ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣಸಜ್ಜನವಪ್ಪುದೆ? ಲಿಂಗದುದಯ, ಶರಣನ ವಿಸ್ತಾರವು ಬಯಸಿದಡೊಳವೆ ಕೂಡಲಸಂಗಮದೇವಾ, [3]ನಿಮ್ಮಲ್ಲಿ ?[3]**

I - - - - - - - - - - - - - - - - - - - - - - - - - - - - - - - - - - - - - - - - - - -

ಆಸೆಗೆ ಹುಟ್ಟಿದ-ಒಬ್ಬರಿಗೊಂದು ವಸ್ತುವನ್ನು ಕೇಳಿಕೊಂಡರೆ ಕೊಟ್ಟಾರೋ ಕೊಡರೋ ಎಂಬಂಥ[೧] ಅಪೇಕ್ಷೆಗೆ, ಹುಟ್ಟಿದ-ಉತ್ಪತ್ಯವಾದ, ಪ್ರಾಣಿ ಜೀವನು, ಆಸೆಯನೆ ಕಲಿತು-ಒಬ್ಬರಿಂದ ಒಂದು ವಸ್ತುವನು ಕೇಳಿಕೊಂಡರೆ ಕೊಟ್ಟಾರೋ ಕೊಡರೋ ಎಂಬಂಥ ಅಪೇಕ್ಷವನೆ ಅಭ್ಯಸಿಸಿ, ಪುಣ್ಯಪದವಿಯ-ಮೋಕ್ಷಪದವಿಯನು, ಬಯಸಿದಡೆ-ಇಚ್ಛೈಸಿದರೆ, ಭವಮಾಲೆಯ-ಉತ್ಪತ್ಯವಾದ ಸರಮಾಲೆಯ, ಬರವು-ಆಗುವಂಥದು, ತಪ್ಪದು-ವಾರಿಯಾಗದು. ಬೇಡಲು-ಒಬ್ಬರಿಂದ ಒಂದು ವಸ್ತುವನ್ನು ಕೇಳಿಕೊಂಡು ಘಟರಕ್ಷಣೆ ಮಾಡಿಕೊಂಬುದಕ್ಕೆ, ಹುಟ್ಟಿದ-ಉತ್ಪತ್ಯವಾದ, ಪ್ರಾಣಿಗೆ-ಜೀವನಿಗೆ, ಬೇಡಲು-ಒಬ್ಬರಿಂದ ಒಂದು ವಸ್ತುವನ್ನು ಕೇಳಿಕೊಂಡು ಘಟರಕ್ಷಣ್ಯವ ಮಾಡಿಕೊಂಬಂಥದು, ವಿಧಿಯೇ?-ಪ್ರಾಪ್ತಿಯೇ?

ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣವಪ್ಪುದೆ–ಗರತಿ ೨[ಗೃಹ]೨ ಸ್ಥರಿಗೆ ಹುಟ್ಟಿದ ಮಕ್ಕಳೆ ಎದೆಬದಿಯನ್ನು ಮುಚ್ಚಿಕೊಂಡು ತಲೆತುಂಬ ಸೆರಗನ್ನು ಹೊದ್ದುಕೊಂಡು ಗರತಿಲಕ್ಷಣದಿಂದ ತಿರುಗಾಡುವರು. ಸೂಳೆಗೆ ಹುಟ್ಟಿದ ಮಕ್ಕಳೆ ತಲೆಯನ್ನು ಬಿಟ್ಟುಕೊಂಡು ಎದೆ ೩ಬದಿ೩ ಯನ್ನು ತೆರಕೊಂಡು ಕಣ್ಣು ಹುಬ್ಬು ಹಾರಿಸುತ್ತ ಹಲ್ಲಕಿಸಿವುತ್ತ ಅಂಗಚಾಷ್ಟಿಯೊಡನೆ ಕೂಡಿ ಚರಿಸುವರಲ್ಲದೆ ಗರತಿ ೨[ಗೃಹ]೨ ಸ್ಥರಿಗೆಹುಟ್ಟಿದ ಮಕ್ಕಳ ಹಾಂಗೆ ಸಹಜಸದ್ಗುಣ ಬಂದೀತೆ? ಬರಲರಿಯದು. ಲಿಂಗದ–ಮಹಾಲಿಂಗದಿಂದ, ಉದಯ–ಉತ್ಪತ್ಯವಾದ, ಶರಣನ–ಶಿವಶರಣನ, ವಿಸ್ತಾರ–ಸರ್ವಾಚಾರಸಂಪತ್ತಿನಾಚರಣೆ ಕ್ರಿಯೆಗಳ ವೈಶಾಲ್ಯವನ್ನು, ಬಯಸಿದಡೊಳವೆ–ಇಚ್ಛೈಸಿದೊಡೆ ದೊರಕೊಂಡತ್ತೇ? ದೊರಕೊಳ್ಳಲರಿಯದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮಲ್ಲಿ–೪ಪರಶಿವಲಿಂಗದಲ್ಲಿ೪ ಅಂತಪ್ಪಶರಣನು ಕೂಡಿಪ್ಪನಲ್ಲದೆ ಭಿನ್ನವಾಗಲುಂಟೇ? ಇಲ್ಲವು.

........................

೧+ಆಸೆಗೆ (ಕ). ೨–೨ ಗುರ (ಕ). ೨–೨ ಗುರು (ಗ). ೩–೩ X (ಗ). ೪–೪ ಸ್ವಾಮಿಗಳಲ್ಲಿ(ಗ).

III- - - - - - - - - - - - - - - - - - - - - - - - - - - - - - - - - - - - - - - -

ಹಲವು ದೈವದ ಭಜನೆಯನುಳ್ಳ ಭಿನ್ನಭಕ್ತನಿಗೆ ಸದ್ಗುಣಸತ್ಪುರುಷತ್ವವು ದೊರಕೊಳಲಱಿಯದೆಂಬುದೀಗ ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೆ ಎಂಬ ಶಬ್ದಕ್ಕರ್ಥ. ಲಿಂಗದಲ್ಲಿ ಉದಯವಾದ ಶರಣನ ಸಮರಸಜ್ಞಾನಕ್ರಿಯಾಚಾರವು ಭಿನ್ನಜೀವರಿಗೆ ದೊರಕೊಳ್ಳಲಱಿಯದೆಂಬುದೀಗ ಲಿಂಗದ ಉದಯ ಶರಣನ ವಿಸ್ತಾರವು ಬಯಸಿದಡೊಳವೆ ಎಂಬ ಶಬ್ದಕ್ಕರ್ಥ.

IV- - - - - - - - - - - - - - - - - - - - - - - - - - - - - - - - - - - - - - - -

1–1 ನೆಱೆ–(ತ). 2 X ದ (ತ). 3–3 (ತ).

........................

ಪುಣ್ಯಪಾಪದಿಂದ ಜನನಮರಣ ದೇಹೇಂದ್ರಿಯಂಗಳುಂಟಾಗಿ ಅಲ್ಲಿ ಸತ್ಯವಿಲ್ಲವೆಂಬುದೀ ವಚನದರ್ಥ.

---

೧೩೨

**ಹಬ್ಬಕ್ಕೆ ತಂದ ಹರಕೆಯ ಕುಱಿ ತೋರಣಕ್ಕೆ ತಂದ ತಳಿರ ಮೇಯಿತ್ತು, ಕೊಂದಹರೆಂಬುದನಱಿಯದೆ ಬೆಂದ ಒಡಲ [1]ಹೊರೆಯ ಹೋಯಿತ್ತು.[1] [2]ಅಂದಂದೆ[2] ಹುಟ್ಟಿತ್ತು, [2]ಅಂದಂದೆ[2] ಹೊಂದಿತ್ತು. ಕೊಂದವರುಳಿದರೆ ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - -

ಹಬ್ಬಕ್ಕೆ ತಂದ ಹರಕೆಯ ಕುಱಿ : ಹಬ್ಬಕ್ಕೆ ತಂದ–ಮಾರಿಮಸಣಿಯರ ಹಬ್ಬಕ್ಕೆಂದು ಆಗುಮಾಡಿಕೊಂಡು ಬಂದ, ಹರಕೆಯ ಕುಱಿ ಮಾರಿಮಸಣಿ ಯರಿಗಾರೋಪಿಸಿದ ಅಜಪಶು,

ತೋರಣಕ್ಕೆ ತಂದ-ವಂದನಮಾಲೆಗೆ ಆಗುಮಾಡಿಕೊಂಡು ಬಂದ, ತಳಿರ ಮೇಯಿತ್ತು-ಮಾವಿನ ತಳಿರು ನೀರಲತಳಿರು ಮೇಯಿತ್ತು, ಕೊಂದಹರೆಂಬುದನಱಿಯದೆ-ಇನ್ನೊಂದು "ಕ್ಷಣಹೊತ್ತಿಗೆ" ಕುತ್ತಿಗೆ ಕೊಯ್ಯುತ್ತಾರೆಂಬಂಥದನ್ನು ತಿಳಿಯದೆ, ಬೆಂದ-ಕ್ಷುಧಾಗ್ನಿಯಿಂದ ದಗ್ಧವಾದ ಒಡಲ-ಅಂಗವನು, ಹೊರೆಯುಹೋಯಿತ್ತು-"ಪೊರೆ ಪೋಷಣೇ" ಎಂದು ಪೋಷಣೆಯ ಮಾಡಿಕೊಂಬುವುದ ಕ್ಕೈದುಹೋಯಿತ್ತು.

ಅಂದಂದೆ ಹುಟ್ಟಿತ್ತು-ಮರಣವಾದಾಗಲೇ ಜನನವಾಯಿತ್ತು, ಅಂದಂದೆ ಹೊಂದಿತ್ತು-ಜನನವಾದಾಗಲೇ ಮರಣವಾಯಿತ್ತು, ಕೊಂದವರುಳಿದರೆ-ಅಜಪಶು ಸಂಹರಿಸಿದಂಥ ಕಿರಾತರು ಅವರೇನಾದರೂ ನಿತ್ಯರಾಗಿ ಉಳಿದರೆ? ಅವರು ಸತ್ತುಹೋದರೆಂಬುದರ್ಥ.

● ಹಬ್ಬಕ್ಕೆ ತಂದ ಹರಕೆಯ ಕುಱಿ ತೋರಣಕ್ಕೆ ತಂದ ತಳಿರ ಮೇಯಿತ್ತು; ಹಬ್ಬಕ್ಕೆ ತಂದ -ಪ್ರಾರಬ್ಧಭೋಗವನ್ನು ಪಡೆದನುಭವಿಸುವುದಕ್ಕೆ ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಬಂದ, ಹರಕೆಯ ಕುಱಿ-ಕಾಲಕಾಮಾದಿಗಳಿಗೆ ಆರೋಪಿಸಿದ ಜೀವನೆಂಬ ಅಜಪಶು, ತೋರಣಕ್ಕೆ ತಂದ-ಪ್ರಾರಬ್ಧಭೋಗವನ್ನು ಪಡೆದನುಭವಿಸುವುದಕ್ಕೋಸ್ಕರ ದೇಹಸಂಬಂಧಿಯಾಗಿ ಹುಟ್ಟಿಬಂದ, ತಳಿರಮೇಯಿತ್ತು-ಆ ಪ್ರಾರಬ್ಧಭೋಗವನ್ನು ಲಿಂಗಾರ್ಪಣವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸಿತ್ತು; ಕೊಂದಹರೆಂಬುದನಱಿಯದೆ-ಪ್ರಾರಬ್ಧಭೋಗವನ್ನು ಆತ್ಮಾರ್ಪಣವಾಗಿ ಅನುಭವಿಸಿದರೆ ಕಾಲಕಾಮಾದಿಗಳಿಂದ ಶಿಕ್ಷೆ ಬಂದೀತೆಂಬಂಥದನ್ನು ತಿಳಿಯದೆ, ಬೆಂದ ಒಡಲ ಹೊರೆಯ ಹೋಯಿತ್ತಲ್ಲ: ಬೆಂದ-ಆಶಾಗ್ನಿಯಿಂದದ್ಧವಾದ, ಒಡಲ-ಅಂಗವನ್ನು, ಹೊರೆಯ ಹೋಯಿತ್ತಲ್ಲ-"ಪೊರೆ ಪೋಷಣೇ" ಎಂದು ಪೋಷಿಸುವುದಕ್ಕೈದುಹೋಯಿತ್ತಲ್ಲ.

ಅಂದಂದೆ ಹುಟ್ಟಿತ್ತು-ಜನನವಾದಾಗಲೇ ಮರಣವಾಯಿತ್ತು, ಅಂದಂದೆ ಹೊಂದಿತ್ತು-ಮರಣವಾದಾಗಲೆ ಜನನವಾಯಿತ್ತು. ಕೊಂದವರುಳಿದರೆ?-ಸಂಹರಿಸಿದಂಥ ಕಾಲಕಾಮಾದಿಗಳೇನಾದರೂ ನಿತ್ಯವಾಗಿ ಉಳಿದರೆ? ಅವರು ಸತ್ತುಹೋದರೆಂಬುದರ್ಥ.

● ಹಬ್ಬಕ್ಕೆತಂದ ಹರಕೆಯ ಕುಱಿ ತೋರಣಕ್ಕೆ ತಂದ ತಳಿರ ಮೇಯಿತ್ತು: ಹಬ್ಬಕ್ಕೆ ತಂದ-ಅಷ್ಟಭೋಗ ಮಲತ್ರಯಂಗಳನು ಪಡೆದನುಭವಿಸುವುದಕ್ಕೋಸ್ಕರ ಶಿವಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಬಂದ, ಹರಕೆಯ ಕುಱಿ ಕರಣಂಗಳಿಗೆ ಆರೋಪಿಸಿದ ಆತ್ಮನೆಂಬ ಅಜಪಶು, ತೋರಣಕ್ಕೆ ತಂದ-ಅಷ್ಟಭೋಗಮಲತ್ರಯಂಗಳನು ಪಡೆದನುಭವಿಸುವುದಕ್ಕೋಸ್ಕರ ಹುಟ್ಟಿಬಂದ, ತಳಿರ-ಇಂದ್ರಿಯಂಗಳಲ್ಲಿ ತಳಿತು ಒರಗಲ್ಪಟ್ಟ ವಿಷಯಂಗಳೆಂಬ ತಳಿರನು, ಮೇಯಿತ್ತು-ಲಿಂಗಾರ್ಪಣವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸಿತ್ತು. ಕೊಂದಹರೆಂಬದುದನಱಿಯದೆ-ಇಂದ್ರಿಯಂಗಳಲ್ಲಿ ತಳಿತು ಒರಗಲ್ಪಟ್ಟ ವಿಷಯಗಳೆಂಬ ತಳಿರನ್ನು ಲಿಂಗಾರ್ಪಣವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸಿದರೆ ಶಿವನಿಂದ ಶಿಕ್ಷೆ ಬಂದೀತೆಂಬಂಥದನ್ನು ತಿಳಿಯದೆ, ಬೆಂದ ಒಡಲ ಹೊರೆಯಹೋಯಿತ್ತು: ಬೆಂದ-ತಾಪತ್ರಯಾಗ್ನಿಯಿಂದ ದಗ್ಧವಾದ, ಒಡಲ-ಅಂಗವನ್ನು, ಹೊರೆಯ ಹೋಯಿತ್ತಲ್ಲಾ-"ಪೊರೆ ಪೋಷಣೇ" ಎಂದು ಪೋಷಿಸುವುದಕ್ಕೈದುಹೋಯಿತ್ತಲ್ಲ.

ಅಂದಂದೆ ಹುಟ್ಟಿತ್ತು-ಜನನವಾದಾಗಲೇ ಮರಣವಾಯಿತ್ತು, ಅಂದಂದೆ ಹೊಂದಿತ್ತು-ಮರಣವಾದಾಗಲೇ ಜನನವಾಯತ್ತು, ಕೊಂದವರುಳಿದರೆ?-ಸಂಹರಿಸಿದಂಥ ಪರಮೇಶ್ವರನೇನಾದರೂ ನಿತ್ಯವಾಗಿ ಉಳಿದನಲ್ಲದೆ ಅವರೇನಾದರೂ ಉಳಿದರೆ? ಕೂಡಲಸಂಗಮದೇವಾ?-ಎಲೆ ಪರಶಿವಲಿಂಗವೆ.

..........................

೧-೧ ಗಳಿಗೆಗೆ (ಗ).

II- - - - - - - - - - - - - - - - - - - - - - - - - - - - - - - - - - - - - - - -

2-2 ಅಂದಂದೆ (ಚ,ಜ).

..........................

ಹಬ್ಬಕ್ಕೆ ತಂದ ಹರಕೆಯ ಕುಜಿ ಪ್ರಾರಬ್ಧಭೋಗವೆಂಬ ಒಸಗೆಗೆ ತೆಗೆದುಕೊಂಡು ಬಂದ ದೇವತಾರೋಪಿತಹವ ಜೀವನೆಂಬ ಪಶು, ತೋರಣಕ್ಕೆ ತಂದ ತಳಿರ ಮೇಯಿತ್ತು-ಇಂದ್ರಿಯಂಗಳೆಂಬ ವಂದನಮಾಲೆಗೆ ತಂದ ವಿಷಯಂಗಳೆಂಬ ಪರ್ಣವನನುಭವಿಸಿತ್ತು, ಕೊಂದಹರೆಂಬುದನಜಿಯದೆ-ಕಲಿಕಾಲಕಾಮಮಾಯಾದಿಗಳು ಸಂಹರಿಸಾರೆಂಬುದನು ತಿಳಿಯದೆ, ಬೆಂದ ಒಡಲ ಹೊಱೆಯ ಹೋಯಿತ್ತು-ತಾಪತ್ರಯಾಗ್ನಿಯಿಂದ ದಹನವಾದ ದೇಹವನು ರಕ್ಷಿಸಲೆಯ್ದಿತ್ತು. ಅದಂದೆ ಹುಟ್ಟಿತ್ತು-ಆ ಜೀವನು ಆವ ಕಾಲದೊಳ್ದೇಹವೆತ್ತಿ ಬ್ರಹ್ಮನುತ್ಪತ್ಯದಲ್ಲಿ ಉದಯವಾಯಿತ್ತು, ಅದಂದೆ ಹೊಂದಿತ್ತು-ಆ ಜೀವನು ಆ ಕಾಲದಲ್ಲಿಯೆ ರುದ್ರನ ಲಯೋಧರ್ಮದ ಹೊಡಗಿಚ್ಚಿಗೊಳಗಾಗಿ ಸತ್ತಿತ್ತು, ಕೊಂದವರುಳಿದರೆ ಕೂಡಲಸಂಗಮದೇವಾ?-ಆ ಜೀವನ ಸಂಹರಿಸಿದ ಕಲಿಕಾಲಕಾಮಮಾಯಾದಿಗಳುಳಿದರೆ? ಅವರೂ ಸತ್ತರೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - -

1-1ಹೊರವುತ್ತಿದೆ (ಡ). 2-2 ಅದಂದೆ (ಡ).

..........................

ಹಬ್ಬಕ್ಕೆ-ಮಾಯಾಪವರ್ತಕ್ಕೆ ತಂದ-ಆಗಮಾಡಿತಂದ, ಹರಕೆಯ-ಆರೋಪಣದ, ಕುಜಿ-ಜೀವನೆಂಬ ಅವಿಪಶುವು, ತೋರಣಕ್ಕೆ-ಜಗದ್ವೈಭವದ ವಿಲಾಸಕ್ಕೆ ತಂದ -ಆಗಮಾಡಿದ, ತಳಿರ-ವಿಷಯಪಲ್ಲವವನು, ಮೆಯಿತ್ತು-ಭಕ್ಷಿಸಿತ್ತು, ಕೊಂದಹರೆಂಬುದನಜಿಯದೆ-ಕಾಲಕಾಮಾದಿಗಳು ಭವಭವಾಂತರದಲ್ಲಿ ಹತಿಸಾರೆಂಬುದನು ಇದಿರಿಟ್ಟು ತಿಳಿಯದೆ, ತನ್ನ-ತನ್ನ ಸಂಬಂಧವಾದ, ಬೆಂದ-ತಾಪತ್ರಯಾಗ್ನಿಯಿಂದ ದ[ಿಗ್ಧ ]ವಾದ ಒಡಲ-ದೇಹಭಾವವನು, ಹೊರವುತ್ತಿದೆ-ರಕ್ಷಿಸುತ್ತಿದೆ. ಅದು-ಆ ಜೀವಪಶುವು, ಅಂದೆ ಹುಟ್ಟಿತ್ತು-ಮಾಯೆಗೆ ಜಗದ್ವೈಭವದ ವಿಲಾಸ ತೋರಿಸಿದಾಕ್ಷಣದಲ್ಲಿಯೇ ಉತ್ಪತ್ತಿಯಾಯಿತ್ತು, ಅದಂದೆ ಹೊಂದಿತ್ತು-ಆ ಜೀವಪಶುವು, ಮಾಯೆಗೆ ಜಗದ್ವೈಭವವು ಸಮಾಪ್ತಿಯಾದಲ್ಲಿಯೆ ಮರಣವಾಯಿತ್ತು. ಕೊಂದವರುಳಿದರೆ-ಹತಿಸಿದಂಥ ಕಾಲಕಾಮಾದಿಗಳವಶೇಷಿತವಾದರೆ, ಕೂಡಲಸಂಗಮದೇವಾ?-ಎಲೆ ಪರಶಿವಲಿಂಗವೆ.

..........................

೨-೨ ಹಕ (ಟ,ಡ).

IV- - - - - - - - - - - - - - - - - - - - - - - - - - - - - - - - - - - - - - - - - - - - -

1-1 ಹೊಙವುತ್ತಲಿದೆ (ತ).

..........................

ಮಾಯಾಸುಖವ ಮೆಚ್ಚಿದ ಮನುಷ್ಯರೆಲ್ಲರು ಕರಣಂಗಳಲ್ಲಿ ಅನಂದಿಸುತ್ತಿಹ ಪ್ರಾಣಿ,ಪ್ರಾಣನಿಂದಲೆ ಕೆಡುವುದೆಂಬರೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಪ್ರಾರಬ್ಧಕರ್ಮದವೈಭವಕ್ಕಾಗಮಾಡಿದ ಜೀವನೆಂಬ ಪಶುವುಯೆಂಬುದೀಗ ಹಬ್ಬಕ್ಕೆ ತಂದ ಹರಕೆಯ ಕುಱಿ, ಜ್ಞಾನಾಲಂಕಾರಕ್ಕಾಗಮಾಡಿದ ಸತ್ಕ್ರಿಯಾಚಾರವೆಂಬ ದಳವ ನಷ್ಟವ ಮಾಡಿತ್ತೆಂಬುದೀಗ ತಂದ ತಳಿರ ಮೇಯಿತ್ತೆಂಬುದರ್ಥ, ಕಾಲಕಾಮಾದಿಗಳು ಹತಿಸಾರೆಂಬುದನು ತಿಳಿಯದೆ ಎಂಬುದೀಗ ಕೊಂದಹರೆಂಬುದನಱಿಯದೆ ಎಂಬುದರ್ಥ. ಆ ತಾಪತ್ರಯಾಗ್ನಿಯಿಂದ ದಗ್ಧವಾದ ಘಟಪೋಷಣೆಯ ಮಾಡುವುದಕ್ಕೆ ಪ್ರವರ್ತಿಸಿತೆಂಬುದೀಗ ಬೆಂದ ಒಡಲ ಹೊಱೆಯ ಹೋಯಿತ್ತೆಂಬುದರ್ಥ. ಆ ಜೀವನೆಂಬ ಪಶುವು ಆ ಕಾಲಕಾಮಾದಿಗಳ ಬಾಧೆಗೊಳಗಾದಂತೆ ಜನಿಸಿತೆಂಬುದೀಗ ಅಂದಂದೆ ಹುಟ್ಟಿತ್ತು, ಆ ಜನನವಾದಾಗಲೆ ಮರಣವಾಯಿತ್ತೆಂಬುದೀಗ ಅಂದೆ ಹೊಂದಿತ್ತು. ಅ ಜೀವನ ಹಱಿಸಿದ ಕಾಲಕಾಮಾದಿಗಳು ಮರಣವಾದರೆಂಬುದೀಗ ಕೊಂದವರುಳಿದರೆ ಎಂಬುದರ್ಥ.

---

೧೩೩

**ಹಾವಿನ ಬಾಯ ಕಪ್ಪೆ ಹಸಿದು, ಹಾಱುವ ನೊಣಕ್ಕೆ [1]ಆಸೆಮಾಡುವಂತೆ[1] ಶೂಲವನೇಱುವ ಕಳ್ಳನು ಹಾಲು ತುಪ್ಪವ ಕುಡಿದು ಮೇಲೇಸು ಕಾಲ ಬದುಕುವನೊ? ಕೆಡುವ [2]ಒಡಲ[2] ನಚ್ಚಿ, ಕಡುಹುಸಿಯನೆ ಹುಸಿದು, ಒಡಲ ಹೊರೆವರ ಕೂಡಲ ಸಂಗಮದೇವನವರನೊಲ್ಲ ಕಾಣಿರಣ್ಣಾ!**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಹಾವಿನ ಬಾಯ ಕಪ್ಪೆ ಹಸಿದು ಹಾಱುವ ನೊಣಕ್ಕೆ ಆಸೆಮಾಡುವಂತೆ- ಸರ್ಪನೆಂಬಂಥದುಱ ಕೆರೆಗಳಲ್ಲಾಗಲಿ ಬಾವಿಗಳಲ್ಲಾಗಲಿ ಒಂದು ಕಪ್ಪೆಯನ್ನು ಹಿಡಿದುಕೊಂಡಿದ್ದಲ್ಲಿ ಅದರ ಬೆನ್ನಿನಲ್ಲಿ ತುಸು ಹುಳಿರಗುತ ಹೊರಟಿರುವದು. ಆ ರಗುತದ ಗವಲಿಗೆ ನೊಣಗಳೆಂಬಂಥವು ಹಾರಾಡುತಿಪ್ಪವು. ಆ ಕಪ್ಪೆಯೆಂಬಂಥದು ನೊಣನ ತಿನಬೇಕೆಂದು ಆಸೆಯ ಮಾಡಿಕೊಂಡಿರುವುದು. ಹಾಂಗೆ ಇಲ್ಲಿ ಕಾಲಸರ್ಪನ ಶಿಕ್ಷೆಗೆ ತಾ ಒಳಗಾಗಿ ಜಿಗುಪ್ಸೆ ಸ್ವರೂಪಮಾದ ಮಲತ್ರಯಂಗಳ ಮೇಲಣ ನೆನಹನೆ ಮುಂದುಗೊಂಡಿರುವಂಥ ಜೀವನ ಇರಸ್ಥಿತಿಯೂ ಆ ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆಮಾಡುವಂಥ ಇರಸ್ಥಿತಿಯೂ ಒಂದೇ ಆಗಿರ್ಪುದು. ಶೂಲವನೇಱುವ ಕಳ್ಳನು ಹಾಲು ತುಪ್ಪವ ಕುಡಿದು ಮೇಲೇಸುಕಾಲ ಬದುಕುವನೋ-ಪ್ಯಾಟಿಮನೆ ಪುರಪಟ್ಟಣ

ಸ್ಥಾನಂಗಳಲ್ಲಿ ಕಳವು ಹಾದರವ ಮಾಡಿದಂಥ ಆತ್ಮರುಗಳ ತಳವಾರರು ಕಂಡುಹಿಡಿದು ಶೂಲಕ್ಕೆ ಹಾಕುವುದಕ್ಕೆ ತೆಗೆದುಕೊಂಡು ಹೋಗುತ್ತಿದ್ದಲ್ಲಿ ನೀವಂತೂ ನನ್ನ ಶೂಲಕ್ಕೆ ಹಾಕುವುದಂತೂ ಹಾಕುತ್ತಿದ್ದೀರಿ. ಒಂದಿಷ್ಟು ಹಾಲು ತುಪ್ಪವ ಕುಡಿಸಿ ಹಾಕಬಾರದೆ? ಎಂದು ಹೇಳಿದಲ್ಲಿ ಹಾಲು ತುಪ್ಪವ ಕುಡಿದ ಮೇಲೆ ಏಸುಕಾಲ ಬದುಕುವನೋ ಎಂದು ಎಡಬಲದಲ್ಲಿದ್ದಂಥವರು ನಕ್ಕು ಹಾಸ್ಯವ ಮಾಡುತ್ತಿಹರು. ಹಾಂಗೆ ಇಲ್ಲಿ ಶೂಲದ ಹಾಂಗೆ ಮೂಲಾಹಂಕಾರ, ಹಾಲುತುಪ್ಪದ ಹಾಂಗೆ ಅಷ್ಟಭೋಗ ಮಲತ್ರಯಂಗಳು, ಕಳ್ಳನ ಹಾಂಗೆ ಜೀವನು. ಮೂಲ ಅಹಂಕಾರಸ್ವರೂಪವಾದ ಅಷ್ಟಭೋಗ ಮಲತ್ರಯಂಗಳನು ಪಡೆದನುಭವಿಸುವಂಥ ಜೀವನಿಗೆ ಕಾಲಕಾಮಾದಿಗಳ ಶಿಕ್ಷೆ ಉಂಟಾಗುತ್ತಿಹುದು.

ಕೆಡುವ–ನಾಶವಾಗುವ,ಒಡಲ–ಅಂಗವನು, ನಚ್ಚಿ–ನಂಬಿ, ಕಡು–ತೀಕ್ಷವಾದ, ಹುಸಿಯನೆ–ಸಟೆಯನೆ, ಹೊಸದು–ಜೋಡಿಸಿ, ಒಡಲ ಹೊರೆವ–ಪ್ಯಾಟಿಮನೆ ಪುರಪಟ್ಟಣಸ್ಥಾನಂಗಳಿಗೆ ಹೋಗಿ ನೂರಕ್ಕೆ ಹಚ್ಚಡವ ಕೊಡುತಿದ್ದೀವಿ, ಪಾದಪೂಜೆಯ ಮಾಡುತಿದ್ದೀವಿ, ಸಹಸ್ರಭೋಜನ ಮಾಡುತಿದ್ದೀವಿ ಎಂದು ಐವತ್ತನೂರು ವರಹವನ್ನು ತಿರಕೊಂಡು ಬಂದು ನೂರುವರಹವ ವೆಚ್ಚವ ಮಾಡಿ ಐವತ್ತು ವರಹ ತಮ್ಮ ದಡಕ್ಕೆ ಹಾಕಿಕೊಂಬಂಥವರ ಕೂಡಲಸಂಮಗದೇವ ಪರಶಿವಲಿಂಗವು, ಅವರ–ಅಂತಪ್ಪ ಆಶಾಲಾಂಛನಿ ಉಪಾಧಿಕರುಗಳ, ಒಲ್ಲ ಕಾಣಿರಣ್ಣಾ!–ಅವರಿಗೊಲಿದು ನಿಜಮೋಕ್ಷವ ಕರುಣಿಸಿಕೊಡಲೊಲ್ಲ ಕಂಡಿರಣ್ಣಾ!

II- - - - - - - - - - - - - - - - - - - - - - - - - - - - - - - - - - - - - - - - - - - - - -

ಹಾವಿನಬಾಯ ಕಪ್ಪೆ ಹಸಿದು ಹಾಱುವ ನೊಣಕ್ಕೆ ಆಸೆಮಾಡುವಂತೆ–ಶಂಕಾವಿಷಯಸಂಬಂಧವಾದ ಮನೋಸರೀಸೃಪನ ಭಿನ್ನಾಪೇಕ್ಷೆಯಲ್ಲಿ ಸಿಲ್ಕಿರ್ದ ಜೀವನೆಂಬ ಮಂಡೂಕನು ಕ್ಷುಧೆಯಡಸಿ ವಿಷಯಂಗಳನಿಚ್ಛೈಸುವ ಮಲತ್ರಯಂಗಳೆಂಬ ಮಕ್ಷಿಕಂಗೆ ಅಪೇಕ್ಷಿಬಡುತಿರ್ಪುದೆಂಬುದರ್ಥ. ಶೂಲವ ನೇಱುವ ಕಳ್ಳ ಹಾಲುತುಪ್ಪವ ಕುಡಿದು ಮೇಲೇಸುಕಾಲ ಬದುಕುವನೊ?–ಅಹಂಕಾರವೆಂಬ ದಾರುದೂರ್ದಸಿಯನಾರೋಹಿಸುವ ಜೀವನೆಂಬ ತಸ್ಕರನು ಸಂಸಾರವಿಷಯರಸವನು ಮಲತ್ರಯಂಗಳೆಂಬ ದುಸ್ಸಾರವನೀಂಟಿ ಆ ಅಹಂಕಾರವೆಂಬ ದಾರುದೂರ್ದಸಿಯ ಅಗ್ರದಲ್ಲಿ ಎಷ್ಟುದಿನ ಜೀವಿಸುವನೊ?

ಕೆಡುವೊಡಲ ನಚ್ಚಿ ಕಡುಹುಸಿಯನೆ ಹುಸಿದು–ಆಗ ತೋಱಿ ಬೇಗ ಅಡಗುವಂಥ ದೇಹಭಾವವನು ನಂಬಿ, ಭಕ್ತಮಾಹೇಶ್ವರರುಗಳಲ್ಲಿ ಅತ್ಯಂತ ಬದ್ಧವನೆ ಬಗಳಿ, ಒಡಲ ಹೊರೆವರ ಮೆಚ್ಚ ಕೂಡಲಸಂಗಮದೇವಾ–ಘಟವ ರಕ್ಷಿಸುವ ಘಟಸಂಸ್ಕಾರಿಗಳಿಗೆ ಪರಶಿವಲಿಂಗವು ಒಲಿದು ಮುಕ್ತಿಯ ಕೊಡನೆಂಬುದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - -

2–2 ಒಡಲನೆ (ತ).

..........................

ಅನಿತ್ಯದೇಹವಾಗಿಯೂ ಕಾಲನ ಬಾಧೆಗೆ ಸಿಕ್ಕಿಯೂ ಹುಸಿದು ಪರ ಕೆಡಿಸೇನೆಂಬ ಅನಿತ್ಯನಿಗೆ ಶಿವನಿಲ್ಲವೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - -

1-1 ಹಾರುವಂತೆ (ಪ).

..........................

ಮನಃಕುಂಡಲಿಯ ಭಿನ್ನಪೇಕ್ಷೆಯೆಂಬ ಜಿಹ್ವೆಯಲ್ಲಿ ಸಿಲುಕಿರ್ದ ಜೀವನೆಂಬ ಮರುಳನು ಎಂಬುದೀಗ ಹಾವಿನ ಬಾಯಲ್ಲಿ ಸಿಲುಕಿದ ಕಪ್ಪೆಯೆಂಬುದರ್ಥ, ಆಶಾಕ್ಷುಧೆಯಡಸಿ ಪ್ರಪಂಚಿಗಿಚ್ಛೈಸುವ ಮಾಯಾ ಮಕ್ಷಿಕಂಗೆ ಇಚ್ಛೈಸುವ ಹಾಂಗೆ ಎಂಬುದೀಗ ಹಸಿದು ಹಾರುವ ನೊಣಕ್ಕೆ ಹಾರುವಂತೆಯೆಂಬುದರ್ಥ. ಗರ್ವ ಸಮ್ಮಿಳಿತವಾದಂಗವೆಂಬ ದಾರದೂರ್ದಸಿಯನಾ ರೋಹಿಸುವ ತಸ್ಕರನಾದ ಜೀವನು ಸಂಸಾರವಿಷಯರಸವನೀಂಟಿಯೆಂಬುದೀಗ ಶೂಲವನೇಱುವ ಕಳ್ಳ ಹಾಲುತುಪ್ಪವ ಕುಡಿದುಯೆಂಬುದರ್ಥ.

---

೧೩೪

**ಆರತವಡಗದು, ಕ್ರೋಧ ತೊಲಗದು, ಕ್ರೂರ ಕುಭಾಷೆ ಕುಹಕ ಬಿಡದನ್ನಕ್ಕ ನೀನೆತ್ತಲು ಶಿವನೆತ್ತಲು ಹೋಗತ್ತ ಮರುಳೆ! ಭವರೋಗವೆಂಬ ತಿಮಿರ ತಿಳಿಯದನ್ನಕ್ಕ ಕೂಡಲಸಂಗಯ್ಯನೆತ್ತ, ನೀನೆತ್ತ ಹೋಗತ್ತ!**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಆರತವಡಗದು–ಒಬ್ಬರು ಒಂದು ವಸ್ತುವ ಕೊಟ್ಟಾರೋ ಎಂಬುವಂಥ ಅಪೇಕ್ಷೆಯು, ಅಡಗದು–ಲೀನವಾಗದು, ಕ್ರೋಧ–ಸಿಟ್ಟು, ತೊಲಗದು–ವಿಯೋಗವಾಗದು, ಕ್ರೂರ–ಕೆಟ್ಟಂಥದು, ಕುಭಾಷೆ–¹ಅಷ್ಟಮ ಕುಭಾಷೆ¹ ಅಷ್ಟಮ ಕುಶಬ್ದವು, ಕುಹಕ–ಚಾಡಿಯು. ಬಿಡದನ್ನಕ್ಕ–ನಷ್ಟವಾಗಬೇಕು, ನಷ್ಟವಾಗದಿರುವ ಪರಿಯಂತರವು; ನೀನೆತ್ತಲು–ಇಷ್ಟರೊಡನೆ ಕೂಡಿ ಚರಿಸಿ ಭವದತ್ತ ತಿರಿಗಿಹೋಗು, ಮರುಳೆ–ಎಲೆ ಭ್ರಾಂತಜೀವವೆ, ಭವರೋಗವೆಂಬ–ಉತ್ಪತ್ತಿರುಜೆಯೆಂಬ, ತಿಮಿರ–ಕಾವಳವು, ತಿಳಿಯದನ್ನಕ್ಕ–ತಿಳಿದು ನಷ್ಟವಾಗಬೇಕು, ನಷ್ಟವಾಗದಿರುವ ಪರಿಯಂತರವು; ಕೂಡಲಸಂಗಮದೇವನೆತ್ತ–ಇಷ್ಟಕ್ಕೂ ವಿಲಕ್ಷಣವಾದ ಪರಶಿವಲಿಂಗವು ಯಾವ ಕಡೆಯು, ನೀನೆತ್ತ–ಇಷ್ಟರೊಡನೆ ಕೂಡಿ ಚರಿಸುವಂಥಅಜ್ಞಾನಜೀವನಾವ ಕಡೆಯು.

..........................

೧–೧ x (ಗ).

IV- - - - - - - - - - - - - - - - - - - - - - - - - - - - - - - - - - - - - - - - - - - - - -

[ಅ]ಪ್ರಿಯ ಕ್ರೋಧ ಅಶಬ್ದ ಕುಹಕ ಅಜ್ಞಾನವಿರುತ್ತಿರಲು ಶಿವನು ದೂರವೆಂಬುದೀ ವಚನದರ್ಥ.

೧೩೫

**ಹಾವು ತಿಂದವರ ನುಡಿಸಬಹುದು; ಗ್ರಹ ಹೊಡೆದವರ ನುಡಿಸಬಹುದು; ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ! ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿವರಯ್ಯಾ, ಕೂಡಲಸಂಗಮದೇವಾ!**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಹಾವು ತಿಂದವರ ನುಡಿಸಬಹುದು: ಹಾವು ತಿಂದವರ–ಸರ್ಪದಷ್ಟವಾದಂಥವರ, ನುಡಿಸಬಹುದು–ನಾರುಬೇರು ವಿಷೌಷಧ ವೊದಲಾದುವನ್ನು ಕುಡಿಸಿ ಗಾರುಡಮಂತ್ರ ಮೊದಲಾದುವನ್ನು ಮಂತ್ರಿಸಿ ನೀನಾರು? ಏನು? ಎಂತು? ಎಂದು ಕೇಳಿದಲ್ಲಿ ಆ ಸರ್ಪದಷ್ಟತ್ವವೆಲ್ಲ ನಷ್ಟವಾಗಿ ಹೋಗಿ ಎಚ್ಚರವಾಗಿ ಎದ್ದು ಕುಳಿತುಕೊಂಡು ತಮ್ಮಲ್ಲಿದ್ದ ಇರಸ್ಥಿತಿಯನ್ನು ಹೇಳಿ ಪ್ರಸಂಗವನಾಡುತ್ತಿಹರು. ಗ್ರಹ ಹೊಡೆದವರ ನುಡಿಸಬಹುದು–ಭೂತ ಪ್ರೇತ ಪಿಶಾಚಿ ಬ್ರಹ್ಮರಾಕ್ಷಸ ಮೊದಲಾದಂಥವು ಬಂದು ಅವಗ್ರಹಿಸಿದಂಥವರ ನುಡಿಸಬಹುದು. ಅಘೋರಮಂತ್ರ ಭೈರವಮಂತ್ರ ವಡಬಮಂತ್ರ ವೀರಭದ್ರಸಹಸ್ರನಾಮ ಮೊದಲಾದ ಮಂತ್ರದಿಂದ ಮಂತ್ರಿಸಿದಲ್ಲಿ ಆ ಭೂತನ ವರ್ತನೆ ನಷ್ಟವಾಗಿ ಹೋಗಿ ಎಚ್ಚರವಾಗಿ ಎದ್ದುಕುಳಿತುಕೊಂಡು ತಮ್ಮಲ್ಲಿದ್ದಂಥ ಇರಸ್ಥಿತಿಯನ್ನು ಹೇಳಿ ಪ್ರಸಂಗವನಾಡುತ್ತಿಹರು. ಸಿರಿಗರ ಹೊಡೆದವರ–ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭೂತ ಅವಗ್ರಹಿಸಿದವರ, ನುಡಿಸಲು ಬಾರದಯ್ಯಾ–ಎಡಕ್ಕೆ ಹೋದರೆ ಬಲಕ್ಕೆ ಮೋರೆ ತಿರುಹುವರು, ಬಲಕ್ಕೆ ಹೋದರೆ ಎಡಕ್ಕೆ ಮೋರೆ ತಿರಹುವರು, ಹಿಂದಕ್ಕೆ ಹೋದರೆ ಮುಂದಕ್ಕೆ ಮೋರೆ ತಿರಹುವರು, ಮುಂದಕ್ಕೆ ಹೋದರೆ ಹಿಂದಕ್ಕೆ ಮೋರೆ ತಿರಹುವರು. ಯಾವ ಪ್ರಕಾರದಿಂದಲಾದರೂ ಪ್ರಸಂಗವನಾಡಿಸೇನೆಂದರೆ ಅಶಕ್ಯವಾಗಿರ್ಪುದು ಕಂಡಯ್ಯಾ.

ಬಡತನವೆಂಬ–ದರಿದ್ರವೆಂಬ, ಮಂತ್ರವಾದಿ ಹೊಗಲು–ಗಾರುಡಿಗನು ಪ್ರವೇಶವಾಗಲು, ಒಡನೆ ನುಡಿವರಯ್ಯಾ–ಮೊದಲು ನೀವು ಬಲ್ಲ ಹಾಂಗೆ ನಾವೆ ಹೇಂಗೆ ಇದ್ದಿವಿ, ಈಗ ಹೇಂಗಿದ್ದೀವಿ, ಎತ್ತಲ ಸಿರಿ ಎತ್ತಲು ಕತ್ತಲು ಎಂಬ ಹಾಂಗೆ ಆಯಿತ್ತೆಂದು ಅವರಾಗಿ ಮಾತನಾಡದೆ ವಾರಿಬಿದ್ದು ಹೋದರೂ ತಾನಾಗಿ ಬಂದು ಮೇಲೆ ಬಿದ್ದು ಮಾತನಾಡಿಸುತ್ತಿಹರಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೧೩೬

**ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ. ದಾರಿಸಂಗಡ ಬೇಡ, ದೂರ ನುಡಿಯಲು ಬೇಡ, ಕೂಡಲಸಂಗನಶರಣರಲ್ಲಿ ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದು ಕರ ಲೇಸಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಅರೆಭಕ್ತರಾದವರ-"ದಾಸಿ ಗೋಪಾಲ ಭೃತ್ಯಾನಾಂ ಗೃಹಸ್ಥೋ ಸತಿಸುತಾ ನಿ ಚ ! ಲಿಂಗಹೀನಂ ಚ ತದ್ವೇಷಾ ಸರ್ವಚಾಂಡಾಲಮುಚ್ಯತೇ॥" ಎಂದು ಒಂದು ಮನೆಯೊಳಗೆ ಗಂಡಗೆ ಲಿಂಗವಿದ್ದು ಹೆಂಡತಿಗೆ ಲಿಂಗವಿಲ್ಲದೆ, ಗಂಡಹೆಂಡಿರಿಬ್ಬರಿಗೂ ಲಿಂಗವಿದ್ದು ಮಕ್ಕಳು ಮರಿಗಳಿಗೆ ಲಿಂಗವಿಲ್ಲದೆ, ಮಕ್ಕಳು ಮರಿಗಳಿಗೆ ಲಿಂಗವಿದ್ದು ನಂಟರು ನಲ್ಲರಿಗೆ ಲಿಂಗವಿಲ್ಲದೆ, ನಂಟರು ನಲ್ಲರಿಗೆ ಲಿಂಗವಿದ್ದು ಗೌಡಿಗುಲಾಮರಿಗೆ ಲಿಂಗವಿಲ್ಲದೆ ಇರುವಂಥವರೆ ಅರೆಭಕ್ತರೆನಿಸುವರು. ಅಂತಪ್ಪ ಅರೆಭಕ್ತರಾದವರ, ನೆರೆ ಬೇಡ-ಅವರ ಹಿನ್ನೆರೆಯಲ್ಲಿ ಮನೆಯ ಕಟ್ಟಿಕೊಂಡು ಇರಬೇಡವು ಹೊರೆ ಬೇಡ-ಅವರ ಮುನ್ನೆರೆಯಲ್ಲಿ ಒಂದು ಮನೆಯ ಕಟ್ಟಿಕೊಂಡು ಇರಬೇಡವು. ದಾರಿ ಸಂಗಡ ಬೇಡ-ಅವರೂ ತಾವೂ ಒಂದೇ ಪಥವೆತ್ತಿ ಗಮನಿಸಬೇಡವು, ದೂರ ನುಡಿಯಲು ಬೇಡ-ದೂರದಲ್ಲಿ ಹೋಗುವಂಥವರನು ಹತ್ತಿರಕ್ಕೆ ಕರೆದು ಪ್ರಸಂಗವನಾಡಬೇಡವು.

ಕೂಡಲಸಂಗನಶರಣರಲ್ಲಿ-ಶಿವಶರಣರಲ್ಲಿ, ಅಚ್ಚಲಿಂಗೈಕ್ಯಂಗೆ-ಬಚ್ಚಬರಿಯ ಚಿತ್ಸ್ವರೂಪವಾದ ಪರಶಿವಲಿಂಗದಲ್ಲಿ ಕೂಡಲ್ಪಟ್ಟಾತಂಗೆ, ತೊತ್ತಾಗಿಹುದು-ಮೀಸಲಗೌಡಿ ಮೀಸಲಗುಲಾಮನಾಗಿರುವಂಥದು, ಕರ ಲೇಸಯ್ಯಾ-ಬಹುಪರಿಣಾಮವಯ್ಯಾ.

---

೧೩೭

**ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ. ದೂರ ದುರ್ಜನರ ಸಂಗವದು ಭಂಗವಯ್ಯಾ! ಸಂಗವೆರಡುಂಟು: ಒಂದು ಬಿಡು, ಒಂದು ಹಿಡಿ. ಮಂಗಳಮೂರ್ತಿ ನಮ್ಮ ಕೂಡಲ ಸಂಗನ ಶರಣರ.**

I - - - - - - - - - - - - - - - - - - - - - - - - - - - - - - - - - - - - - - - -

ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ : ಸಾರ-ಶ್ರೇಷ್ಠವಾದ, ಸಜ್ಜನರ-ಪಂಚಮಹಾಪಾತಕಂಗಳನು ಬಿಟ್ಟು ಪಂಚಾಚಾರವಿಡಿದಾಚರಿಸಲ್ಪಟ್ಟ ಪರಮನಿರ್ಜರರಾದ ಶಿವಶರಣರ, ಸಂಗ- ಅವರು ಹೋದಲ್ಲಿ ಹೋಗಿ ಬಂದಲ್ಲಿ ಬಂದು ಕುಳಿತಲ್ಲಿ ಕೂಡ್ರುವಂಥ ತತ್ಸಂಗವೇ, ಲೇಸು ಕಂಡಯ್ಯಾ-ಬಹುಪರಿಣಾಮವು ಕಾಣಯ್ಯಾ. ದೂರ-ಹೊಲ್ಲವಾದ, ದುರ್ಜನರ-ಪಂಚಾಚಾರಕ್ಕೆ ತಪ್ಪಿ ಪಂಚಮಹಾಪಾತಕಂಗಳೊಡನೆ ಕೂಡಿ ಚರಿಸಿ ಕೆಟ್ಟಂಥವರುಗಳ, ಸಂಗವದು-ಅವರು ಹೋದಲ್ಲಿಗೆ ಹೋಗಿ ಬಂದಲ್ಲಿಗೆ ಬಂದು ಕುಳೀತಲ್ಲಿ ಕೂಡ್ರುವಂಥ ತತ್ಸಂಗವದು, ಭಂಗವಯ್ಯಾ-ಅದೆ ಭವಭಂಗದ ಕೊರತೆಯಯ್ಯಾ. ಸಂಗ-ತತ್ಸಂಗವು, ಎರಡುಂಟು-ಉಭಯ ಪ್ರಕಾರವುಂಟಾಗಿರ್ಪುದು, ಒಂದು ಬಿಡು ಒಂದು ಹಿಡಿ: ಒಂದು ಬಿಡು; [ಒಂದು-] ದೂರದುರ್ಜನರ ಸಂಗವನ್ನು, ಬಿಡು-ಬಿಟ್ಟುಬಿಡು, ಒಂದು ಹಿಡಿ:[ಒಂದು-] ಸಾರಸಜ್ಜನರ ಸಂಗವನ್ನು, ಹಿಡಿ-ದೃಢವಿಡಿ. ಮಂಗಳಮೂರ್ತಿ ನಮ್ಮ ಕೂಡಲಸಂಗನಶರಣರ-ನಿರ್ಮಲ ಸ್ವರೂಪವಾದ ಜಂಗಮಮೂರ್ತಿಗಳನು.

II- - - - - - - - - - - - - - - - - - - - - - - - - - - - - - - - - - - - - - - -

ಸಾರಸಜ್ಜನರ ಸಂಗ ಲೇಸು ಕಂಡಯ್ಯಾ-ನಿತ್ಯಾನಿತ್ಯ ವಿವೇಕದಲ್ಲಿ ಶ್ರೇಷ್ಠಾಯಮಾನವುಳ್ಳವರುಗಳ ತತ್ಸಂಗವೆ ಪರಿಣಾಮ ನೋಡಯ್ಯಾ, ಮುಂದಕ್ಕೆ ಕಾಣಬಂದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ದೇಹೇಂದ್ರಿಯಂಗಳ ಸಂಗದಲ್ಲಿ ದುಃಖ; ದೇಹೇಂದ್ರಿಯಂಗಳ ಬಿಟ್ಟಡೆ ಪರಮಸುಖವೆಂಬುದೀ ವಚನದರ್ಥ.

---

೧೩೮

**ಹೊಲೆಯ ಹೊಲಬಿಗನಾದಡೆ, ಅವನ ಹೊರೆಯಲ್ಲಿಪ್ಪುದು ಕರ ಲೇಸಯ್ಯಾ. ಹೊಲಬುಗೆಡದೆ ಲಿಂಗಶರಣೆನ್ನಿರಯ್ಯಾ. ಹೊಲಬುಗೆಡಬೇಡ ಶಿವಶರಣೆನ್ನಿರಯ್ಯಾ. ನಮ್ಮ ಕೂಡಲಸಂಗನ ಮಹಾಮನೆಯಲು ಮಾದಾರಚನ್ನಯ್ಯ ಹೊಲಬಿಗನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಹೊಲೆಯ–ಊರಿಂದ ಹೊರಗೆ ಕಡೆಕೇರಿಯಲ್ಲಿ ಮನೆಯ ಕಟ್ಟಿಕೊಂಡಿರುವಂಥ ಹಿರೇಕುಲದ ಭಕ್ತನು, ಹೊಲಬಿಗನಾದಡೆ–ಜ್ಞಾನೋದಯವಾಗಿ ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತನಾದರೆ, ಅವನ ಹೊರೆಯಲ್ಲಿಪ್ಪುದು ಕರಲೇಸಯ್ಯಾ; ಅವನ: ಅಂತಪ್ಪ ಆರೂಢ ಮಲ್ಲಯ್ಯನ, ಹೊರೆಯಲ್ಲಿಪ್ಪುದು–ಹಿನ್ನೆರೆ ಮುನ್ನೆರೆಯಲ್ಲಿ ಒಂದು ಮನೆಯನ್ನು ಕಟ್ಟಿಕೊಂಡು ಅವನು ಹೇಳಿದ ಹಾಂಗೆ ಸೇವಕಾವೃತ್ತಿಯ ಮಾಡಿಕೊಂಡು ಇರುವಂಥದು, ಕರಲೇಸಯ್ಯಾ–ಬಹುಪರಿಣಾಮವಯ್ಯಾ. ಹೊಲಬುಗೆಡದೆ–ಸತ್ಪಥಮಾರ್ಗದ ಹೋಬಳಿದಪ್ಪದೆ ಲಿಂಗಶರಣೆನ್ನಿರಯ್ಯಾ–ಶಿವಸ್ವರೂಪವಾದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ಶರಣೆಂದು ನಮಸ್ಕರಿಸಿರಯ್ಯಾ, ಹೊಲಬುಗೆಡಬೇಡ–ಸತ್ಪಥಮಾರ್ಗದ ೧ಹೋಬಳಿ೧ದಪ್ಪಬೇಡ, ಶಿವಶರಣೆನ್ನಿರಯ್ಯಾ–ಆ ಲಿಂಗಕ್ಕೆ ಪ್ರಾಣಕಲಾಚೈತನ್ಯಸ್ವರೂಪವಾದ ಜಂಗಮವೇ ಸಾಕ್ಷಾತ್ಶಿವಸ್ವರೂಪವೆಂದು ವಿಶ್ವಾಸಿಸಿ ಜಂಗಮಭಕ್ತಿಮಾಡಿ ಜಂಗಮದ ಕೃಪೆಯನ್ನು ಹಡೆಯಿರಯ್ಯಾ. ನಮ್ಮ – ಷಟುಸ್ಥಲಬ್ರಹ್ಮಿಗಳಿಗೆ ಕರ್ತೃವಾದಂಥ, ಕೂಡಲಸಂಗನ–ಪರಶಿವಲಿಂಗದ, ಮಹಾಮನೆಯಲು–ಬ್ರಹ್ಮಾಂಡವೆಂಬ ಕ್ಷೇತ್ರದಲ್ಲಿ, ಮಾದಾರ ಚನ್ನಯ್ಯ–ನಮ್ಮ ಮಾದಾರ ಚನ್ನಯ್ಯನೆಂಬ ಹಿರೇಕುಲದ ಭಕ್ತನು, ಹೊಲಬಿಗನಯ್ಯಾ–ಜ್ಞಾನೋದಯವಾಗಿ ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತನಯ್ಯಾ.

..........................

೧–೧ ಹೊಬ್ಬುಳಿ (ಕ).

III- - - - - - - - - - - - - - - - - - - - - - - - - - - - - - - - - - - - - - - - - - - - - -

ಮಹಾಮನೆಯಲಿ – ಭಕ್ತಿಮಂದಿರದಲ್ಲಿ.

---

**ದೂಷಕನವನೊಬ್ಬ ದೇಶವ ಕೊಟ್ಟಡೆ, ಆಶೆಮಾಡಿ ಅವನ ಹೊರೆಯಲ್ಲಿರಬೇಡ; ಮಾದಾರ ಶಿವಭಕ್ತನಾದಡೆ, ಆತನ ಹೊರೆಯಲ್ಲಿ ಭೃತ್ಯಾಚಾರಿಯಾಗಿಪ್ಪುದು, ಕರ ಲೇಸಯ್ಯಾ! ತೊತ್ತಾಗಿಪ್ಪುದು ಕರ ಲೇಸಯ್ಯಾ! ಕಾಡಸೊಪ್ಪ ತಂದು ಓಡಿನಲ್ಲಿ ಹುರಿದಟ್ಟು ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನಶರಣರ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ದೂಷಕನವನೊಬ್ಬ ದೇಶವ ಕೊಟ್ಟಡೆ–ಜೈನ ಚಾರ್ವಾಕರಾಗಲಿ ಕಿರಾತರಾಗಲಿ ವೈಷ್ಣವರಾಗಲಿ ಹತ್ತೆಂಟು ^೧^ಲಕ್ಷ^೧^ ವರಹದ ರಾಜ್ಯವನಾಳಿ ಕೊಂಡಿರುವರು. ಆ ಗ್ರಾಮದಲ್ಲಿ ಅಪ್ಪಂತಹ ಶಿವಾಚಾರವನುಳ್ಳಂಥ ನೂರಾರು ಶಿವಭಕ್ತರಾಗಿರುವರು. ಆ ಊರು ದೊರೆಯಾದಂಥವನು ಇವರ ಗುರು ನರ, ಇವರ ಲಿಂಗ ಶಿಲೆ, ಇವರ ಜಂಗಮ ಮಾನವ, ಇವರ ಪಾದೋದಕ ನೀರು, ಇವರ ಪ್ರಸಾದ ಎಂಜಲು ಹೀಗೆಂದು ಅಷ್ಟಾವರಣ ಪಂಚಾಚಾರವನ್ನು ದೂಷಣೆಯ ಮಾಡಿದಲ್ಲಿ ಆ ಊರ ದೈವದವರಾದವರು ಕೇಳಿ, ಏನೋ ನಮ್ಮ ದೈವವಾದ ಅಷ್ಟಾವರಣ ಪಂಚಾಚಾರವನ್ನು ದೂಷಣೆಯ ಮಾಡುತ್ತೈದಾನಂತೆ. ಇವನ ದೇಶ ಯಾರಿಗೆ ಬೇಕು? ಇವನ ಕೋಶ ಯಾರಿಗೆ ಬೇಕು? ಇವನ ಭೂಮಿ ಯಾರಿಗೆ ಬೇಕು? ಸೀಮೆ ಯಾರಿಗೆ ಬೇಕು? ಎಂದು ಹೆಡಿಗೆ ಮೊರವನ್ನು ಕಟ್ಟಿಕೊಂಡು ಪರದೇಶಕ್ಕೆ ಹೋಗುತಿರ್ದಲ್ಲಿ, ಆ ದೊರೆ[ಯ] ಎಡಬಲದಲ್ಲಿದ್ದಂಥ ಮಂತ್ರಿಪ್ರಧಾನರು ದೇವರೂ ಈ ಊರ ದೈವದವರು ಊರಬಿಟ್ಟು ಹೋಗುತ್ತೈದಾರೆಂದು ಹೇಳಿದಲ್ಲಿ, ಯಾಕೆ ಹೋಗುತ್ತೈದಾರೆಂದು ಕೇಳುವನು. ನೀವೇನೋ ಅವರ ದೈವವಾದ ಅಷ್ಟಾವರಣ ಪಂಚಾಚಾರವನ್ನು ದೂಷಣೆಯ ಮಾಡುತ್ತೈದೀರಂತೆ ಅದಕ್ಕೋಸ್ಕರ ^೨^ಹೋಗುತ್ತೈದಾರೆ^೨^ , ನೆಗ್ಗಿಲ ಸವರಿ ಹುಗ್ಗಿ ಹೊಯ್ದು ಊರು ಕಟ್ಟಿದಾಗ ಬಂದಂಥ ಒಕ್ಕಲು, ತರಗೂಡಿಸಿ ಮನೆ ಕಟ್ಟಿದಾಗ ಬಂದಂಥ ಒಕ್ಕಲು, ನಿಮ್ಮ ಅಜ್ಜ ಆರುತರ ^೩^ಮುತ್ತ್ಯಾ^೩^ ಮೂರುತರ ಬಂದಂಥ ಒಕ್ಕಲು, ವರುಷಕ್ಕೆ ಅವರಿಂದ ಹತ್ತೆಂಟು ಸಾವಿರ ವರಹ ಅಧಿಕವಾಗುತ್ತೈತೆಂದು ಹೇಳಿದಲ್ಲಿ, ನಾನು ಇನ್ನು ಅಂಬೋಣಿಲ್ಲ ಆಡೋಣಿಲ್ಲ ಕರಕೊಂಡು ಬನ್ನಿರೆಂದು ಕಳಿಸಿ ಕೊಟ್ಟಲ್ಲಿ, ಅವರು ಹೋಗಿ ಕರೆದರೆ ಇವರು ಬಾರದಿರುವರು. ಬಾರದೆ ಇದ್ದಲ್ಲಿ ಅವರು ಆ ದೊರೆಯ ಬದಿಗೆ ಬಂದು ದೇವರು, ಆ ದೈವದವರು ಬರೋದಿಲ್ಲವೆಂದು ಹೇಳಿದಲ್ಲಿ, ಆದರೇನಾಯ್ತು ನನ್ನ ದೇಶದೊಳಗರ್ಧ ದೇಶವ ಕೊಡುತ್ತೈದೇನಿ, ನನ್ನ ಸೀಮೆಯೊಳಗರ್ಧ ಸೀಮೆಯ ಕೊಡುತ್ತೈದೇನೆ, ನನ್ನ ಭೂಮಿಯೊಳಗರ್ಧ ಭೂಮಿಯನ್ನು ಕೊಡುತ್ತೈದೇನಿ ಕರಕೊಂಡು ಬನ್ನಿರೆಂದು ಕಳಿಸಿಕೊಟ್ಟಲ್ಲಿ, ಇವರಾ ದೊರೆಯಾಡಿದ ವೃತ್ತಾಂತವೆಲ್ಲವನು ಹೇಳಿ ಕರೆದಲ್ಲಿ, ಆಗ ಆ ದೈವದವರಾದವರು ಆಡಿದರೇನಾಯಿತ್ತು ಅವನ ಪಾಪಕ್ಕೆ ಅವನೆ ಹೊಗುತ್ತೈದಾನೆಂದು ಆಸೆಮಾಡಿ ಅಪೇಕ್ಷಂಬಟ್ಟು ಹಿಂದಕ್ಕೆ ತಿರಿಗಿ ಬಂದು, ಅವನ ಹೊರೆಯಲ್ಲಿರಬೇಡ–ಅವನ ಹಿನ್ನೆರೆ ಮುನ್ನೆರೆಯಲ್ಲಿ ಮನೆಯ ಕಟ್ಟಿಕೊಂಡು ಇರಬೇಡವು, ಮಾದಾರ–ಊರಿಂದ ಹೊರಗಣ ಕೇರಿಯಲ್ಲಿ ಮನೆಯ ಕಟ್ಟಿಕೊಂಡಿರುವಂಥ ಹಿರೇಕುಲದ ಭಕ್ತನು, ಶಿವಭಕ್ತನಾದಡೆ–ಜ್ಞಾನೋದಯವಾಗಿ ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತನಾದರೆ, ಆತನ ಹೊರೆಯಲ್ಲಿ ಭೃತ್ಯಾಚಾರಿಯಾಗಿಪ್ಪುದು–ಆತನ ಹಿನ್ನೆರೆ ಮುನ್ನೆರೆಯಲ್ಲಿ ಮನೆಯ ಕಟ್ಟಿಕೊಂಡು ಅವನು ಹೇಳಿದ ಹಾಗೆ ಭಕ್ತಿಯ ಮಾಡಿಕೊಂಡಿರುವಂಥದು, ಕರಲೇಸಯ್ಯಾ–ಬಹುಪರಿಣಾಮವಯ್ಯಾ.

ತೊತ್ತಾಗಿಪ್ಪುದು–ಮೀಸಲಗೌಡಿ ಮೀಸಲಗುಲಾಮನಾಗಿರುವಂಥದು, ಕರಲೇಸಯ್ಯಾ–ಅವನು ಹೇಳಿದ ಹಾಂಗೆ ಸೇವಾ ಸತ್ಕಾರಂಗಳನು ಮಾಡಿ ಕೊಂಡಿರುವಂಥದು ಬಹುಪರಿಣಾ[ಮ]ವಯ್ಯಾ. ಕಾಡಸೊಪ್ಪು ತಂದು–ಅಡವಿಯಲ್ಲಿರುವಂಥ ಹತ್ತರಕ್ಯಾನಪಲ್ಲೆ, [೪]ನರಲುಮುಟ್ಟಿಯ[೪] ಪಲ್ಲೆ, ಕಾರಿಪಲ್ಲೆ ಮೊದಲಾದವನ್ನು ಆಗುಮಾಡಿಕೊಂಡು ಬಂದು, ಓಡಿನಲ್ಲಿ–ಹುರಿಗೋಲ ಹಂಚಿನಲ್ಲಿ, ಹುರಿದು–ಬತ್ತಿಸಿ, ಅಟ್ಟು–ಪಾಕವ ಮಾಡಿ, ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ–ನಮ್ಮ ಜಂಗಮಮೂರ್ತಿಗಳ ಕೂಡಿಕೊಂಡಿಪ್ಪುದು. ಎಂತಪ್ಪದೊಂದು ದೊಡ್ಡ ಅರಗಾಲ ಬರಗಾಲ ಬಂದಾಗಾದರೂ ಜಂಗಮಮೂರ್ತಿಗಳಿಗೊಂದು ಭೋಜ್ಯವ ನೀಡಿ ತಾವೊಂದು ಭೋಜ್ಯವನ್ನು ಸಲಿಸಿಕೊಂಡಿರುವಂಥ ಅಂತಪ್ಪ ನಿರ್ವಂಚ[ಕ] ಸದ್ಭಕ್ತರ ಭಕ್ತಿಯನೆ ಕೈಕೊಂಡನುಭವಿಸಬೇಕಲ್ಲದ ಇವರ ಭಕ್ತಿ ನಮಗೆ ನೈಷ್ಠೆವಿಲ್ಲವೆಂದು ಉದಾಸೀನವ ಮಾಡಿ ಬಿಡುವುದಕ್ಕಾದೀತೆ? ಆಗದು.

..........................

೧–೧ ಸಾವಿರ (ಗ). ೨–೨ x (ಗ). ೩–೩ x (ಕ). ೪–೪ ನರಮುಷ್ಟಿ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - - -

ದೂಷಕನವನೊಬ್ಬ ದೇಶದ ಕೊಟ್ಟಡೆ ಆಶೆಮಾಡಿ ಅವನ ಹೊರೆಯಲಿರಬೇಡ–ಗುರು ನರನು, ಲಿಂಗ ಶಿಲೆ, ಜಂಗಮ ಮಾನವ, ಪ್ರಸಾದ ಎಂಜಲು, ಪಾದೋದಕ ನೀರೆಂದು ಬಗಳುವ ದುರಾತ್ಮನೋರ್ವನು ಸೀಮೆ ಭೂಮಿ ಕೊಡುಗೆಮಾನ್ಯಗಳನಿತ್ತರೆ ಅದಕ್ಕೆ ಅಪೇಕ್ಷಂಬಟ್ಟು ಅವನ ಪಾರ್ಶ್ವದಲ್ಲಿ ನೆಲಸಿರಬೇಡ. ಮುಂದೆ ಕಾಣಬಂದರ್ಥ.

---

೧೪೦

**ಪರುಷ ಮುಟ್ಟಿದ ಬಳಿಕ ಕಬ್ಬುನವಾಗದು ನೋಡಾ! ಲಿಂಗವ ಮುಟ್ಟಿದ ಬಳಿಕ ಕುಚಿತಾಚಾರವಾಗದು ನೋಡಾ, ಕೂಡಲಸಂಗನಶರಣರು ಅನ್ಯವನಱಿಯರಾಗಿ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಪರುಷ ಮುಟ್ಟಿದ ಬಳಿಕ–ಪರುಷದ ಖಣಿ ಪಂಚಲೋಹಗಳನ್ನು ಸೋಂಕಿದ ಮೇಲೆ, ಕಬ್ಬುನವಾಗದು ನೋಡಾ!–ಸುವರ್ಣವಾಗುವುದಲ್ಲದೆ ಕಾರ್ಬೊನ್ನವಾದೀತೆ? ಆಗಲರಿಯದು ಕಂಡಾ, ಲಿಂಗವ–ಇಷ್ಟಮಹಾಲಿಂಗವನ್ನು, ಮುಟ್ಟಿದ ಬಳಿಕ–ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿದ ಮೇಲೆ, ಕುಚಿತಾಚಾರವಾಗದು ನೋಡಾ–ಅಮರಕಲ್ಪ ವಜ್ರಕಲ್ಪಂಗಳ ಸಾಧಿಸಲಾಗದು ಕಂಡಾ, ಕೂಡಲಸಂಗನಶರಣರು–ಚಿತ್ತಿನ ಚಿದಂಶಿಕರಾದ ಶಿವಶರಣರು ಅನ್ಯವನಱಿಯರಾಗಿ–ಇತರ ದೇವತಾಭಜನೆಯನ್ನು ಮಾಡುವಂಥಾದನ್ನು ತಿಳಿಯರಾಗಿ.

II- - - - - - - - - - - - - - - - - - - - - - - - - - - - - - - - - - - - - - - - - - - - - -

ಪರುಷ ಮುಟ್ಟಿದ ಬಳಿಕ ಕಬ್ಬುನವಾಗದು ನೋಡಾ!–ಗುರು ಶಬ್ದಸ್ಪರ್ಶ ಪರಮಪಾವನಪವಿತ್ರವು ಸೋಂಕಿದ ಮೇಲೆ ಪಂಚಕರಣ ಸಪ್ತಧಾತು ಯುಕ್ತವಾದ ಜೀವನಾಗನು

ಕಂಡಾ, ಲಿಂಗವ ಮುಟ್ಟಿದ ಬಳಿಕ ಕುಚಿತ್ತಾಚಾರವಾಗದು ನೋಡಾ– ಪರಶಿವಲಿಂಗವು ಸೋಂಕಿದ ಮೇಲೆ ಕೆಟ್ಟ ನಡಾವಳಿಯು ಅಳವಡದು ಕಂಡಾ, ಕೂಡಲಸಂಗನಶರಣರು ಅನ್ಯವನಜಿೞಯರಾಗಿ– ಪರಶಿವಲಿಂಗದ ಪರಮೂರ್ತಿಗಳಾದ ಶರಣರು ಪಂಚಮಪಾತಕಂಗಳನು ತಿಳಿಯರಾಗಿ.

III- - - - - - - - - - - - - - - - - - - - - - - - - - - - - - - - - - - - - - - - - - - - - - -

೧ಶ್ರೀಗುರುಕಾರುಣ್ಯದಿಂದ ಭೂತಕಾಯವಳಿದು ಮಂತ್ರಕಾಯವಾಯಿತ್ತಾಗಿ ಅನ್ಯಾಚಾರವಿಲ್ಲದೆ ಸದಾಚಾರವಾಯಿತ್ತಾಗಿ ಎಂಬುದೀಗ ಲಿಂಗ ಮುಟ್ಟಿದ ಬಳಿಕ ಕುಚಿತ್ತಾಚಾರವಾಗದು ನೋಡಾ ಎಂಬ ಶಬ್ದಕ್ಕರ್ಥ.

.........................

೧ + ಲಿಂಗ ಮುಟ್ಟಿದ ಬಳಿಕ ಕುಚಿತ್ತಾಚಾರವಾಗದು ನೋಡಾ (ಡ).

IV- - - - - - - - - - - - - - - - - - - - - - - - - - - - - - - - - - - - - - - - - - - - - - -

ಶ್ರೀಗುರುಕರುಣದಿಂದ ಭೂತಕಾಯವಳಿದು ಮಂತ್ರಕಾಯವಾಯಿತ್ತಾಗಿ ಅನ್ಯಾಚಾರವಿಲ್ಲ, ಸದಾಚಾರವಾಯಿತ್ತಾಗಿ ಎಂಬುದೀ ವಚನದರ್ಥ.

---

೧೪೧

**ಪಟ್ಟವ ಕಟ್ಟಿದ ಬಳಿಕ ಲಕ್ಷಣವನಱಸುವರೆ? ಲಿಂಗದೇವನ ಪೂಜಿಸಿ ಕುಲವನಱಸುವರೆ, ಅಯ್ಯಾ? ಕೂಡಲಸಂಗಮದೇವ ಭಕ್ತಕಾಯ ಮಮಕಾಯವೆಂದನಾಗಿ!**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಪಟ್ಟವ ಕಟ್ಟಿದ ಬಳಿಕ–ರಾಜಪಟ್ಟವನ್ನು ಕಟ್ಟಬೇಕಾದರೆ ಕರಚರಣಾದ್ಯವಯಂಗಳಲ್ಲಿ ಕುಂದುಕೊರತೆಯಿಲ್ಲದಿದ್ದಂಥ ಬಹು ಸುಲಕ್ಷಣವಾದ ಆತ್ಮನನು ತೆಗೆದುಕೊಂಡು ಬಂದು ರಾಜಗದ್ದುಗೆಯ ಮೇಲೆ ಕುಳ್ಳಿರಿಸಿ ಮುತ್ತಿನ ಶಾಸಿಯನಿಟ್ಟು ಶಿಖಾದುಂಗುರವನ್ನು ಕೊಟ್ಟು ಪಟ್ಟಾಭಿಷೇಕವ ಮಾಡಬೇಕಲ್ಲದೆ ಮೋಡಾ ಮೋಡದಿಂದ ಆವನೊಬ್ಬ ಆತ್ಮನನು ತೆಗೆದುಕೊಂಡು ಬಂದು ರಾಜಗದ್ದುಗೆಯ ಮೇಲೆ ಕುಳ್ಳಿರಿಸಿ ಮುತ್ತಿನ ಶಾಸಿಯನಿಟ್ಟು ಶಿಖಾದುಂಗುರವನ್ನು ಕೊಟ್ಟು ಪಟ್ಟಾಭಿಷೇಕವ ೧ಮಾಡಿದ ಮೇಲೆ, ಲಕ್ಷಣವನಱಸುವರೆ–ಕೈ ಬೆರಳು ಸೊಟ್ಟನಾಗೈತೆ ಕಾಲುಬೆರಳು ಸೊಟ್ಟನಾಗೈತೆ ಕಣ್ಣೊಳಗೆ ಹೂವು ಬಿದ್ದೈತೆ ಇವ ಬಹು ಕುರೂಪಿಪುರುಷನೆಂದು ಹೇಳುವುದಕ್ಕಾದೀತೆ? ಆಗದು. ಅಥವಾ ಒಂದುವೇಳೆ ಆಡಿದ್ದೇ ಉಂಟಾದರೆ ಪಟ್ಟಾಧಿಕಾರಿಯಾದಂಥ ದೊರೆ ಕೇಳಿ ಅವರ ಹಿಡತರಿಸಿ ಆನೆಕಾಲಿಗೆ ಕಟ್ಟಿ ಎಳಸಿ ಬಿಡುತ್ತಿಹನು. ಹಾಂಗೆ ಲಿಂಗದೇವನ–ಗುರುಮುಖದಿಂದ ಬಂದಂಥ ಇಷ್ಟಮಹಲಿಂಗವನ್ನು, ಪೂಜಿಸಿ–ಅಷ್ಟವಿಧಾರ್ಚನೆ ಷೋಡಶೋಪಚರಕ್ರಿಯೆಗಳಿಂದಾರಾಧಿಸಿ, ಕುಲವನಱಸುವರೆ?–ಜಂಗಮಮೂರ್ತಿಗಳನ್ನು ಅ ಜಾತಿಯವರು ಈ ಜಾತಿಯವರೆಂದು ಕುಲಸೂತಕವನ್ನು ಹಡುಕುವದಕ್ಕಾದೀತೆ? ಆಗದು. ಅಯ್ಯಾ–ಎಲೆ ಲಿಂಗವೆ, ಕೂಡಲಸಂಗಮದೇವ ಪರಶಿವಲಿಂಗವು, ಭಕ್ತಕಾಯ ಮಮಕಾಯವೆಂದನಾಗಿ: ಭಕ್ತನ–ನಿರ್ವಂಚಕ ಸದ್ಭಕ್ತನ, ಕಾಯ–

ದೇಹವು, ಮಮಕಾಯವೆಂದನಾಗಿ--ತನ್ನ ದೇಹವೆಂದು ಮಮಕರಿಸಿಕೊಂಡಿಪ್ಪನಾಗಿ ಎಂಬಲ್ಲಿ ಅವರಲ್ಲಿ ಕುಲಸೂತಕವನ್ನು ಹುಡುಕಿದರೆ ನನ್ನಲ್ಲಿ ಕುಲಸೂತಕವ ಹುಡುಕಿದ ಹಾಂಗಯಿತ್ತೆಂದು ಶಿವನು ಅವರನ್ನು ಕೋಪಿಸಿ ಭವಕ್ಕೆ ಹಾಕಿ ಬಿಡುತ್ತಿಹನು.

..........................

೧+ ನಿರ್ಮಿತವ (ಕ).

III- - - - - - - - - - - - - - - - - - - - - - - - - - - - - - - - - - - - - - - - - - - - - -

ಗುರುಲಿಂಗಜಂಗಮಸಾಹಿತ್ಯವಾದವಂಗೆ ಜಾತಿಸೂತಕ ಮೊದಲಾದಾವ ಸೂತಕವು ಇಲ್ಲವು ಎಂಬುದೀಗ ಲಿಂಗದೇವನ ಪೂಜಿಸಿ ಕುಲವನಳಿಸುವರೆ ಎಂಬ ಶಬ್ದಕ್ಕರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ಗುರುಲಿಂಗಜಂಗಮ ಸಾಹಿತ್ಯವಾದವಂಗೆ ಜಾತಿಸೂತಕ ಮೊದಲಾದ ಆವ ಸೂತಕವು ಇಲ್ಲಾಯೆಂಬುದೀ ವಚನದರ್ಥ.

---

೧೪೨

**ದೇವಲೋಕ ಮರ್ತ್ಯಲೋಕವೆಂಬುದು ಮತ್ತೆ ಬೇಱುಂಟೆ? ಈ ಲೋಕದೊಳಗೆ ಮತ್ತನಂತಲೋಕ! ಶಿವಲೋಕವೆ ಶಿವಾಚಾರವಯ್ಯಾ. ಶಿವಭಕ್ತರಿದ್ದ ಠಾವೆ ದೇವಲೋಕ, ಅಂತಪ್ಪ ಶಿವಭಕ್ತನಂಗಳವೆ ವಾರಣಾಸಿ; ಕಾಯವೇ ಕೈಲಾಸ ! ಇದು ಸತ್ಯ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ದೇವಲೋಕ–ಕೈಲಾಸಲೋಕವು, ಮರ್ತ್ಯಲೋಕವೆಂಬುದು–ಮನುಷ್ಯಲೋಕವೆಂಬಂಥದು, ಬೇಱೆ[೧]ಮತ್ತು ಬೇರೆ, ಉಂಟೆ?-ಇತರವಾಗುಂಟೆ? ಇಲ್ಲವು. [೧]ಈ[೧] ಲೋಕದೊಳಗೆ–ಈ ಮರ್ತ್ಯಲೋಕದೊಳಗೆ, ಮತ್ತನಂತಲೋಕ–ಮತ್ತೆ ಅನೇಕ ಲೋಕಂಗಳುಂಟಾಗಿರ್ಪವುಯೆಂಬಲ್ಲಿ ಬ್ರಹ್ಮನ ಕೂರ್ತು ತಪಸ್ಸು ಮಾಡಿದರೆ ಸತ್ಯಲೋಕವಾಗುವುದು, ವಿಷ್ಣುವಿನ ಕೂರ್ತು ತಪಸ್ಸು ಮಾಡಿದರೆ ವೈಕುಂಠಲೋಕವಾಗುವುದು, ರುದ್ರನ ಕೂರ್ತು ತಪಸ್ಸು ಮಾಡಿದರೆ ರುದ್ರಲೋಕವಾಗುವುದು, ಶಿವನ ಕೂರ್ತು ತಪಸ್ಸು ಮಾಡಿದರೆ ಶಿವಲೋಕವಾಗುವುದು. ಶಿವಲೋಕವೆ ಶಿವಾಚಾರವಯ್ಯಾ–ಅಷ್ಟಾವರಣವನ್ನೆ ಅಂಗವ ಮಾಡಿಕೊಂಡು ಪಂಚಾಚಾರವನ್ನೆ ಪ್ರಾಣವ ಮಾಡಿಕೊಂಡು ಏಕಲಿಂಗನಿಷ್ಠಾಪರನಾಗಿ ಆಚರಿಸುವಂಥದೇ ಸತ್ಕ್ರಿಯಾಚಾರವಯ್ಯಾ.

ಶಿವಭಕ್ತರು–ಹರಭಕ್ತ[೨] [ರು,ಇದ್ದ ಠಾವೆ–ಇರು][೨]ವಂಥ ಮನೆ, ಅವರು ಕಟ್ಟಿಕೊಂಡಿರ್ದಂಥ ಸ್ಥಾನವೆ, ದೇವಲೋಕ–ಅದೇ ಕೈಲಾಸಲೋಕವು ಭಕ್ತನ–ಶಿವಭಕ್ತನ, ಅಂಗಳವೆ–ರಾಜಾಂಗಣವೆ, ವಾರಣಾಸಿ–ಕಾಶಿಕ್ಷೇತ್ರಕ್ಕೆ ಸಮಾನವು. ಕಯವೆ–ಶಿವಭಕ್ತನ ದೇಹವೆ, ಕೈಲಾಸ–ಸಾಂಬಲೋಕವು, ಇದು ಸತ್ಯ–ಇದು ಯಥಾರ್ಥವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..................... .......

೧-೧ ಇಹ (ಕ,ಗ). ೨-೨ ರಿರು (ಕ,ಗ).

ಅಜ್ಞಾನವೇ ಮನುಷ್ಯಲೋಕ, ಶಿವಜ್ಞಾನ[3]ವೇ ದೇವಲೋಕ, ಶಿವಜ್ಞಾನ[ವೇ] ಶಿವನಾದ ಕಾರಣ ಶಿವನಿದ್ದುದೇ ಕೈಲಾಸಯೆಂಬುದೀ ವಚನದರ್ಥ.

............................

೩+ ಜೀ(ತ).

---

## ೧೪೩

**ಕಟ್ಟಿದಿರಿನಲ್ಲಿ ಶಿವಭಕ್ತನ ಕಂಡು ದೃಷ್ಟಿ[1][ಯಾ][1] ರೆ ಶರಣೆಂದಡೆ, ಹುಟ್ಟೇಳುಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ! ಮುಟ್ಟಿ ಚರಣಕ್ಕೆರಗಿದಡೆ, ತನು [2][ವೊ][2]ಪ್ಪಿದಂತಹುದು ಪರುಷ ಮುಟ್ಟಿದಂತೆ, ಕರ್ತೃ ಕೂಡಲಸಂಗನಶರಣರ ಸಂಗವು ಮತ್ತೆ ಭವಮಾಲೆಗೆ ಹೊದ್ದಲೀಯದು ನೋಡಾ!**

............................

1-1ವಾ (ಕ,ಗ). 2-2 ವ (ಕ,ಗ).

I - - - - - - - - - - - - - - - - - - - - - - - - - - - - - - - - - - - - - - - -

ಕಟ್ಟಿದಿರಿನಲ್ಲಿ-ಇಟ್ಟೆಡೆ ಮುಟ್ಟೆಡೆಗಳಲ್ಲಿ, ಶಿವಭಕ್ತನ-ತ್ರಿವಿಧಲಿಂಗಾರ್ಚಕನಾದ ನಿರ್ವಂಚಕ ಸದ್ಭಕ್ತನ, ದೃಷ್ಟಿ-ನೇತ್ರದಿಂದೆ, [ಆ]ರೆ -ಚೆನ್ನಾಗಿ, ಕಂಡು-ನೋಡಿ, ಶರಣೆಂದಡೆ-ನಮಸ್ಕಾರವೆಂದು ನಮಸ್ಕರಿಸಿದರೆ, ಹುಟ್ಟೇಳುಜನ್ಮದ-ಏಳೇಳು ಜನ್ಮದಲ್ಲಿ ಹುಟ್ಟಿಹುಟ್ಟಿ ಬಂದು [೧]ಮಾಡಿ ಕೂಡಲಿಕ್ಕಿದ,[೧] ಪಾಪ-ದೋಷವು, ಬಿಟ್ಟು-ಬಿಡುಗಡೆಯಾಗಿ, ಹಿಂಗುವುದು ನೋಡಾ!-ತೊಲಗುವುದು ಕಂಡಾ.

ಮುಟ್ಟಿ-ಮನಶುದ್ಧವಾಗಿ, ಚರಣಕ್ಕೆರಗಿದಡೆ-ನಮಸ್ಕಾರವೆಂದು ನಮಸ್ಕರಿಸಿದರೆ, ಪರುಷ-ಮುಟ್ಟಿದಂತೆ-ಪರುಷದ ಖಣಿ ಪಂಚಲೋಹಂಗಳನುಸೋಂಕಿದರೆ ಹೇಂಗೆ ಸುವರ್ಣವಾಗಹತ್ತಿಹುದೋ ಹಾಂಗೆ, ತನುವೊಪ್ಪಿದಂತಹುದು-ತನುವಿನಲ್ಲಿ ಶ್ರದ್ಧೆ ಮನದಲ್ಲಿ ವಿಶ್ವಾಸ ಮುಂದುಗೊಂಡು ನಮಸ್ಕರಿಸಿದರೆ ಭೂತಕಾಯ ಜಡಕಾಯವಳಿದು ಆಚಾರಾಂಗ ಜ್ಞಾನಕಾಯವಾಗುತ್ತಿಹುದು-ತನುವಿನಲ್ಲಿ ಉಪೇಕ್ಷೆ ಮನದಲ್ಲಿ ಅವಿಶ್ವಾಸ ಮುಂದುಗೊಂಡು ನಮಸ್ಕರಿಸಿದರೆ ಭೂತಕಾಯ ಜಡಕಾಯವಾಗುತ್ತಿಹುದು. ಕರ್ತೃ-ಪಂಚಕೃತ್ಯಂಗಳಿಗೆ ಒಡೆಯನಾದಂಥ, ಕೂಡಲಸಂಗನ ಶರಣರ-ಜಂಗಮಮೂರ್ತಿಗಳ, ಸಂಗ-ತತ್ಸಂಗವು, ಮತ್ತೆ-ಮರಳಿ, ಭವಮಾಲೆಗೆ-ಉತ್ಪತ್ಯವಾದ ಸರಮಾಲೆಗೆ, ಹೊದ್ದಲೀಯದು ನೋಡಾ-ಸೋಂಕಗೊಡದು ಕಂಡಾ,

೧-೧ ಮಾಡಿ ಕೂಡಲಿಕ್ಕಿದ (ಕ,ಗ).

IV- - - - - - - - - - - - - - - - - - - - - - - - - - - - - - - - - - - - - - - -

ಶಿವಭಕ್ತನ ದರುಶನ ಪರುಷ[೨]ದಿಂದ ಜನನಮರಣಂಗಳಳಿದು ನಿತ್ಯನಹನೆಂಬುದೀ ವಚನದರ್ಥ.

.........................

೨+ ನ (ತ).

---

೧೪೪

**ಆರಾರ ಸಂಗವೇನ ಮಾಡದಯ್ಯಾ? ಕೀಡಿ ಕುಂಡಲಿಗನಾಗದೆ ಅಯ್ಯಾ? ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ, ಬೇವು ಬೊಬ್ಬುಲಿ ತರಿಯ ಗಂಧಂಗಳಾಗವೆ? ನಮ್ಮ ಕೂಡಲಸಂಗನಶರಣರ ಸನ್ನಿಧಿಯಿಂದ ಕರ್ಮ ನಿರ್ಮಳವಾಗದಿಹುದೆ?**

I - - - - - - - - - - - - - - - - - - - - - - - - - - - - - - - - - - - - - - - -

ಆರಾರ ಸಂಗವೇನ ಮಾಡದಯ್ಯಾ?–ಅಜ್ಞಾನಿಗಳ ಸಂಗವ ಮಾಡಿದರೆ ಅಜ್ಞಾನವೆ ದೊರಕೊಂಬುತ್ತಿಹುದಯ್ಯಾ ಸುಜ್ಞಾನಿಗಳ ಸಂಗವ ಮಾಡಿದರೆ ಸುಜ್ಞಾನವೆ ದೊರಕೊಂಬುತ್ತಿಹುದಯ್ಯಾ. ದುರ್ಜನರ ಸಂಗವ ಮಾಡಿದರೆ ದುರ್ಜನತ್ವವೆ ದೊರಕೊಂಬುತ್ತಿಹುದಯ್ಯಾ, ಸಜ್ಜನರ ಸಂಗವ ಮಾಡಿದರೆ ಸಜ್ಜನತ್ವವೆ ದೊರಕೊಂಬುತ್ತಿಹುದಯ್ಯಾ. ಕೀಡಿ ಕುಂಡಲಿಗನಾಗದೆ ಅಯ್ಯಾ?–ಕುರುಡಿ [೧][ಕುತಾರ][೧] ನೆಂಬಂಥದು ಹಸಿರಹುಳವನ್ನು ಕಚ್ಚಿಕೊಂಡು ಬಂದು ಮೇಲಕ್ಕೆ ಎತ್ತಿ ಬಿಟ್ಟಲ್ಲಿ ಅಧೋಮುಖವಾಗಿ ಬಿದ್ದಂಥ ಹುಳವನ್ನು ಬಿಟ್ಟು ಊರ್ಧ್ವಮುಖವಾಗಿ ಬಿದ್ದಂಥ ಹುಳವನ್ನು ಕಚ್ಚಿಕೊಂಡು ಹೋಗಿ ತನ್ನ ಗೂಡಿನೊಳಗೆ ಪೂರ್ತಿಸಿ ಮೇಲೆ ಕುಳಿತುಕೊಂಡು ತನ್ನ ಕೊಕ್ಕಿನಿಂದ ಕುಕ್ಕಿ ಪಕ್ಕದಿಂದ [೨][ಝುಂಕಿಸಿ][೨] ಮೇಲೆ ಮಣ್ಣು ಮುಚ್ಚಿ ಹೋದಲ್ಲಿ ಮತ್ತೂ ಬಂದು ಎಲ್ಲಿ ಕುಕ್ಕೀತೋ ಎಂದು ಅದೇ ಧ್ಯಾನದಲ್ಲಿದ್ದ ಕಾರಣ ಟೊಂಕ ಸಣ್ಣಗಾಗಿ ಕೊಕ್ಕು ಕೋಡುಗಳು ಬಂದು ಕುರುಡಿಕುತಾರನಾಗೋದಿಲ್ಲವೇ? ಆಗುತ್ತಿಹುದು. ಅಯ್ಯಾ–ಎಲೆ ಲಿಂಗವೆ. ಚಂದನದ ಸನ್ನಿಧಿಯಲ್ಲಿ–ಮಲಯಾಚಲಪರ್ವತದಲ್ಲಿರುವಂಥ ಶ್ರೀಗಂಧದ ವೃಕ್ಷದ ಸಮೀಪದಲ್ಲೇ ಪರಿಮಳ ತಾಗಿ–ಗಂಧವೇಧಿಸಿ, ಬೇವು–ನಿಂಬವೃಕ್ಷವು, ಬೊಬ್ಬುಲಿ ಜಾಲಿವೃಕ್ಷವು, [೩]ತರಿಯ ಖದಿರೆ[೩] ವೃಕ್ಷವು ಗಂಧವೇಧಿಸಿ, ಗಂಧಗಳಾಗವೆ–ಗಂಧದ ವೃಕ್ಷಗಳಾಗೋದಿಲ್ಲವೇ? ಆಗುತ್ತಿಹವು. ನಮ್ಮ–ಷಟ್ಸ್ಥಲಬ್ರಹ್ಮೀಗಳಿಗೆ ಕರ್ತನಾದಂಥ, ಕೂಡಲಸಂಗನ ಶರಣರ ಸನ್ನಿಧಿಯಿಂದ–ತ್ರಿವಿಧಲಿಂಗಾರ್ಚಕರಾದ ನಿರ್ವಂಚಕ ಸದ್ಭಕ್ತರ ಸಮೀಪದಲ್ಲಿದ್ದುಕೊಂಡು ಅವರು ಹೇಳಿದ ಹಾಂಗೆ ಭಕ್ತಿಯ ಮಾಡಿಕೊಂಡಿರುವುದರಿಂದ, ಕರ್ಮ–ಸಂಚಿತಾದಿ ಕರ್ಮತ್ರಯಂಗಳು, ನಿರ್ಮಳವಾಗದಿಹುದೆ–ಸ್ವಚ್ಛವಾಗದಿದ್ದಾವೆ? ಆಗುತ್ತಿಹವು.

.........................

೧–೧ ಕೊತಾರ (ಕ), ಕುಟಾರ(ಗ). ೨–೨ ಝುಂಕರಿಸಿ (ಕ,ಗ) ೩–೩ ಖದಿರೆ ತರಿ (ಕ).

---

೧೪೫

**ಎಂತಹವನಾದಡೇನು? ಲಿಂಗವ ಮುಟ್ಟದವನೆ ಕೀಳುಜಾತಿಕುಲವಾಹುದು ತಪ್ಪದು. ಲಿಂಗವ ಮುಟ್ಟಲೊಡನೆ ಶಿವಕುಲವಾಹುದು ತಪ್ಪದು. ಪರುಷ ಮುಟ್ಟಲೊಡನೆ ಕಬ್ಬುನ ಹೊನ್ನಪ್ಪುದು ತಪ್ಪದು. ಇದನರಿದು ಕೂಡಲಸಂಗಮದೇವನೊಲ್ಲ ಸರ್ವಸಂದೇಹಿಗಳ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಎಂತಹವನಾದಡೇನು–ನೂರೊಂದುಕುಲ ಹದಿನೆಂಟುಜಾತಿಯೊಳಗಾವ ಕುಲದವನಾದರೇನು, ಲಿಂಗವ ಮುಟ್ಟದವನೆ–[೧]ಇಷ್ಟಮಹಾಲಿಂಗವನ್ನು[೧] ಮುಟ್ಟಿಮುಟ್ಟಿ ಆರಾಧಿಸದವನೆ, ಕೀಳುಜಾತಿಕುಲವಾಹುದು–ಕ್ಷೀಣಜಾತಿಕುಲವಾಗುವಂಥದು, ತಪ್ಪದು–ವಾರಿಯಾಗದು, ಲಿಂಗವ ಮುಟ್ಟಲೊಡನೆ–'ಇಷ್ಟಮಹಾಲಿಂಗವನ್ನು' ಮುಟ್ಟಿ ಮುಟ್ಟಿ ಆರಾಧಿಸಿದಷ್ಟಕ್ಕೆ, ಶಿವಕುಲವಾಹುದು–ಆ ಕ್ಷೀಣಕುಲವೆಲ್ಲ ಹೋಗಿ ಶಿವಕುಲವಾಗುವಂಥದು, ತಪ್ಪದು–ವಾರಿಯಾಗದು. ಪರುಷ ಮುಟ್ಟಲೊಡನೆ–ಪರುಷದ ಖಣಿ ಪಂಚಲೋಹವನ್ನು ಸೋಂಕಿದಷ್ಟಕ್ಕೆ, ಕಬ್ಬುನ–ಕಾರ್ಬೊನ್ನು, ಹೊನ್ನಹುದು–ಸುವರ್ಣವಾಗುವಂಥದು, ತಪ್ಪದು–ವಾರಿಯಾಗದು. ಇದನರಿದು–ಪರಮಪಾವನ ಪವಿತ್ರಸ್ವರೂಪವಾದ ಮಹಲಿಂಗವೆ ಗುರೂಪದೇಶದಿಂದ ಇಷ್ಟಲಿಂಗವಾಗಿ ಅಂಗದಲ್ಲಿ ಸಂಬಂಧವಾಗಲು ಭೂತಕಾಯ ಜಡಕಾಯವಳಿದು ಆಚಾರಾಂಗ ಜ್ಞಾನಕಾಯವಾಗುವಂಥದನು ತಿಳಿದು, ಸರ್ವಸಂದೇಹಿತಗಳ ಸಮಸ್ತ ಸಂಕಲ್ಪಭಾವವನುಳ್ಳ ಜೀವರುಗಳ, ಕೂಡಲಸಂಗಮದೇವ–ಪರಶಿವಲಿಂಗವು, ಒಲ್ಲ–ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು.

..........................

೧–೧ ಲಿಂಗವ (ಕ).

IV- - - - - - - - - - - - - - - - - - - - - - - - - - - - - - - - - - - - - - - - - - - - - -

[೨][ಮನ್ಮೂ][೨]ರ್ತಿಯಾಗಿ ಕರದಲ್ಲಿ ಲಿಂಗವಿದ್ದವನೆ ಶಿವನು ಇಲ್ಲದವನೆ ಕೀಳುಜಾತಿಯೆಂಬುದೀ ವಚನದರ್ಥ.

..........................

೨–೨ ಮಂಮೂ (ತ).

---

೧೪೬

**ಓದಿದಡೇನು, ಕೇಳಿದಡೇನು ಶಿವಪಥವನರಿಯದನ್ನಕ್ಕ ? ಓದಿತ್ತು ಕಾಣಿರೊ ಶುಕನು ಶಿವಜ್ಞಾನವನರಿಯದನ್ನಕ್ಕ; ಓದಿದ ಫಲವು ನಮ್ಮ ಮಾದಾರ ಚೆನ್ನಯ್ಯಂಗಾಯಿತ್ತು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಓದಿದಡೇನು–ಸಕಲವೇದಶಾಸ್ತ್ರಾಗಮಪುರಾಣಂಗಳನು ಪಠಿಸಿದರೇನು, ಕೇಳಿದಡೇನು–ಆ ಓದಿದಂಥ ಓದನ್ನು ಶ್ರುತಿಗುರುಗಳ ಮುಖದಿಂದ ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ

ಚಿತ್ರಾರ್ಥ ಪ್ರಣವಾರ್ಥ ಭಾವಾರ್ಥಂಗಳನ್ನು ಬೆಸಗೊಂಡು ಕೇಳಿದರೇನು, ಶಿವಪಥವನರಿಯದನ್ನಕ್ಕ –ಆ ಓದಿದ ಓದನ್ನು ಅಂಗವ ಮಾಡಿಕೊಂಡು ಸಮರಸಭಾವದಿಂದೆ ಲಿಂಗಪೂಜೆ ಜಂಗಮದಾಸೋಹ ಮಾಡುವಂಥ ಲಿಂಗಾಚಾರಮಾರ್ಗವ ತಿಳಿದಿರಬೇಕು, ತಿಳಿಯದಿರುವ ಪರಿಯಂತರವು, ಶುಕನು–ಜೀವನೆಂಬ ಗಿಳಿಯು, ಓದಿತ್ತು ಕಾಣಿರೊ–ಸಕಲವೇದಶಾಸ್ತ್ರಾಗಮಪುರಾಣಂಗಳನು ಪಠಿಸಿತ್ತು ಕಂಡಿರೊ, ಶಿವಜ್ಞಾನವನರಿಯದನ್ನಕ್ಕ ಆ ಓದಿದಂಥ ಓದನ್ನು ಅಂಗವ ಮಾಡಿಕೊಂಡು ಪರಶಿವ೧ಲಿಂಗ೧ದಲ್ಲಿ ಕೂಡುವಂಥ ಕೂಟವನ್ನು ತಿಳಿದಿರಬೇಕು. ತಿಳಿಯದಿರುವ ಪರಿಯಂತರವು, ಓದಿದ ಫಲವು–ಆ ಸಕಲವೇದಶಾಸ್ತ್ರಾಗಮಪುರಾಣಂಗಳನ್ನು ಪಠಿಸಿದಂಥ ಸುಕೃತವು, ಮಾದಾರ ಚೆನ್ನಯ್ಯಂಗಾಯಿತ್ತು–ಮಾದರ ಚೆನ್ನಯ್ಯನೇನಾದರೂ ಓದಿ ಹಾಡಿ ಮುಕ್ತನಾ೨ದ೨ನೆ? ಇಲ್ಲವು. ಜ್ಞಾನೋದಯವಾಗಿ ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧಿಯಾಗಿ ಭಕ್ತಿಯನ್ನು ಮಾಡಿ ಮುಕ್ತನಾದ ಕಾರಣ ಮಾದಾರ ಚೆನ್ನಯ್ಯನೆಂಬ ಶಿವಶರಣಂಗಳವಟ್ಟಿತ್ತು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ಜ್ಞಾನ (ಗ). ೨–೨ ದಾ (ಗ).

IV- - - - - - - - - - - - - - - - - - - - - - - - - - - - - - - - - - - - - - - - - - -

ಶಬ್ದಶಾಸ್ತ್ರವ ಕಲಿವರೆಲ್ಲರೂ ಪರಶಿವನೊಡಗೂಡಬಲ್ಲರೇನಱಿಯರು. ಒಡಗೂಡಿದರು ಮಹಾಲಿಂಗವನು ಪುರಾತನರೆಂಬುದೀ ವಚನದರ್ಥ.

---

೧೪೭

**ಹಾವಿನ ಡೊಂಕು ಹುತ್ತಕ್ಕೆ ಸಸಿನ; ನದಿಯ ಡೊಂಕು ಸಮುದ್ರಕ್ಕೆ ಸಸಿನ. ನಮ್ಮ ಕೂಡಲಸಂಗನಶರಣರ ಡೊಂಕು ಲಿಂಗಕ್ಕೆ ಸಸಿನ.**

IV- - - - - - - - - - - - - - - - - - - - - - - - - - - - - - - - - - - - - - - - - - -

ಹಾವಿನ ಡೊಂಕು ಹುತ್ತಕ್ಕೆ ಸಸಿನ: ಹಾವಿನ–ಸರ್ಪನ, ಡೊಂಕು–ಅಂಕಡೊಂಕವಾಗಿರುವಂಥ ವಕ್ರವು, ಹುತ್ತಕ್ಕೆ–ವಾಲ್ಮೀಕಕ್ಕೆ, ಸಸಿನ–ನೆರಿತ್ತಾಗಿರ್ಪುದು ಎಂಬಲ್ಲಿ ನೀವು ಅಂಕಡೊಂಕವಾಗಿ ಬರುತ್ತಿದ್ದೀರಿ, ಪಿಸಿತಾಹಾರವನು ತೆಗೆದುಕೊಂಡು ಬರುತ್ತಿದ್ದೀರಿ ಎನ್ನಲ್ಲಿ ಬರಬೇಡೆಂದು ಹಿಂದಕ್ಕಟ್ಟುತೈತೆ? ಇಲ್ಲವು, ಹೇಂಗೆ ಬಂದರೂ ತನ್ನಲ್ಲಿ ಒಳಕೊಂಬುತ್ತಿಹುದು. ನದಿಯ ಡೊಂಕು ಸಮುದ್ರಕ್ಕೆ ಸಸಿನ: ನದಿಯ–ತುಂಗಭದ್ರೆ ಮೊದಲಾದ ಹೊಳೆಗಳ, ಡೊಂಕು–ಅಂಕಡೊಂಕನಾಗಿ ಬರುವಂಥ ವಕ್ರವು, ಸಮುದ್ರಕ್ಕೆ–ಅಬ್ಧಿಗೆ, ಸಸಿನ–ನೇರಿತ್ತಾಗಿರ್ಪುದು ಎಂಬಲ್ಲಿ ನೀವು ಅಂಕಡೊಂಕವಾಗಿ ಬರುತ್ತಿದ್ದೀರಿ, ಗ್ರಾಮದ ಸಾರವೆಲ್ಲವನು ಬಳಕೊಂಡು ಬರುವ ನೀರನ್ನು ಒಳಕೊಂಡು ಬರುತಿದ್ದೀರಿ. ಎನ್ನಲ್ಲಿ ಬರಬೇಡಿರೆಂದು ಹಿಂದಕ್ಕಟ್ಟುತ್ತೈತೆ? ಇಲ್ಲವು. ಹೇಂಗೆ ಬಂದರೂ ತನ್ನಲ್ಲಿ ಒಳಕೊಂಬುತ್ತಿಹುದು. ನಮ್ಮ ಕೂಡಲಸಂಗನಶರಣರ–ಶಿವನ ಚಿತ್ಪ್ರಭಾಂಗಸ್ವರೂಪವಾದಂಥ ಶಿವಶರಣರ, ಡೊಂಕು–

ಆಚರಿಸುವಂಥ ಆಚರಣೆ ಕ್ರಿಯೆಗಳ ವಕ್ರವು, ಲಿಂಗಕ್ಕೆ– ಕೈಲಾಸದಲ್ಲಿ ನೆಲೆಗೊಂಡಿರುವ ಮಹಾಲಿಂಗದಲ್ಲಿ ಕೂಡುವುದಕ್ಕೆ ಸಮರಸವಾಗುವುದಕ್ಕೆ , ಸಸಿನ–ನೇರಿತ್ತಾಗಿರ್ಪುದೆಂಬಲ್ಲಿ ಆಭರಣವಾಗಿ ಅಲಂಕಾರವಾಗಿ ಒಪ್ಪುತ್ತಿಹುದು.

II- - - - - - - - - - - - - - - - - - - - - - - - - - - - - - - - - - - - - - - - - - - - -

ಹಾವಿನ ಡೊಂಕು ಹುತ್ತಕ್ಕೆ ಸಸಿನ–ಸತ್ತ್ರಾಣವಜ್ಞಾನಿಗಳಾಚರಣೆಯು ಆಚಾರಾಂಗವೆಂಬ ವಾಲ್ಮೀಕಕ್ಕೆ ನೇರಿತ್ತಾಗಿಪ್ಪುದು. ನದಿಯ ಡೊಂಕು ಸಮುದ್ರಕ್ಕೆ ಸಸಿನ–ಚಿದಾನಂದಜಲಸ್ವರೂಪವಾದ ಆಚರಣೆಯು ಪರಶಿವಸಾಗರಕ್ಕೆ ನೇರಿತ್ತಾಗ್ಗಿರ್ಪುದು. ನಮ್ಮ ಕೂಡಲಸಂಗನಶರಣರ ಡೊಂಕು ಲಿಂಗಕ್ಕೆ ಸಸಿನ–ಶಿವಶರಣರ ಕೌಟಿಲ್ಯಮಾರ್ಗವು ಪರಸಿವಲಿಂಗಕ್ಕೆ ನೇರಿತ್ತಾಗಿರ್ಪುದೆಂಬುದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - -

ಫಲಪದಮುಕ್ತಿಗಳೆಂಬವನೇನನೂ ಬಯಸದೆ ಶಿವಭಾವ ಘಟಿಸಿ ಮಾಡುವ ಸದ್ಭಕ್ತನ ಕ್ರಿಯಾಚಾರಿತ್ರ್ಯಂಗಳೇಂತಾದಡೆಯೂ ಲಿಂಗಕ್ಕೆ ಒಪ್ಪೆಂಬುದೀ ವಚನದದ ತಾತ್ಪರ್ಯಾರ್ಥ.

---

೧೪೮

**ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು, ಭಕ್ತದೇಹಿಕದೇವ ಅನಿಮಿಷನಾಗಿ! ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿರ್ಪನು.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು–ಗುರುತ[೧]ರ[೧]ದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರುಗಳು ಪ್ಯಾಟಿಮನೆ ಪುರಪಟ್ಟಣ ಸ್ಥಾನಂಗಳಲ್ಲಿ ಬಂದು ಚೌಕಿಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನು ಮಾಡುತ್ತಿದ್ದಲ್ಲಿ ಎಲ್ಲಾ ಭಕ್ತಮಾಹೇಶ್ವರರುಗಳು ಬಂದು ಭಕ್ತಿ ಬಿನ್ನಹವ ಮಾಡುವರು. ಅಲ್ಲೊಬ್ಬ ಬಡಭಕ್ತನಿರುವನು. ನೀನೊಂದು [೨]ಭಕ್ತಿ[೨] ಬಿನ್ನಹವನ್ನು ಮಾಡು, ನಿನಗೂ ಶಿವನ ಕೃಪೆಯಾಗುತ್ತೈತೆಂದು ಹೇಳಿದಲ್ಲಿ, ಅವನು ಅವರು ಹೇಳಿದ ಹಾಂಗೆ ಮಾಡುತಿರ್ದ ಕಾರಣ; ಭಕ್ತನ–ತ್ರಿವಿಧಲಿಂಗಾರ್ಚಕನಾದ ನಿರ್ವಂಚಕ ಸದ್ಭಕ್ತನ, ಮುಖದರ್ಪಣದಲ್ಲಿ–ಮುಖವಚನವೆಂಬ ಕನ್ನಡಿಯಲ್ಲಿ, ಲಿಂಗವ ಕಾಣಬಹುದು–ಕೈಲಾಸಕ್ಕಧಿಪತಿಯಾದ ಮಹಾಲಿಂಗದ ದರುಶನವಾಗಬಹುದು. ಭಕ್ತದೇಹಿಕ–ಭಕ್ತ[ನ]ನ್ನೇ ಅಂಗ [೩]ಮಾಡಿಕೊಂಡು[೩] ಚೈತನ್ಯಸ್ವರೂಪವಾದಾತನೇ, ದೇವ–ಪರಮೇಶ್ವರನು, ಅನಿಮಿಷನಾಗಿ–ಅನಿರ್ವಂಚಕಸದ್ಭಕ್ತನ ಅಂತರಂಗದಲ್ಲಿ ಪರಿಪೂರ್ಣವಾಗಿ ನೆಲೆಗೊಂಡಿಪ್ಪನಾಗಿ, ಕೂಡಲಸಂಗಮದೇವ–ಪರಶಿವಲಿಂಗವು, ಭಕ್ತನ ನುಡಿಯ ನಡುವೆ–ತ್ರಿವಿಧಲಿಂಗಾರ್ಚಕನಾದ ನಿರ್ವಂಚಕ ಸದ್ಭಕ್ತನ ಪ್ರಸಂಗದ ಮಧ್ಯದಲ್ಲಿ, ರಾಶಿಯಾಗಿರ್ಪನು– ನಿಜದ ನಿಧಿಯಾಗಿ [೪]ಒಪ್ಪುತ್ತಿರ್ಪನು[೪] ಎಂಬುದರ್ಥ.

● ಭಕ್ತನ–"ಲಿಂಗಭಕ್ತಶ್ಚ ಜಂಗಮಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳ, ಮುಖದರ್ಪಣದಲ್ಲಿ–ಶಿವಾನುಭಾವವನ್ನು ಬೆಸಗೊಂಡು ಕೇಳುವಂಥ ಮುಖವಚನವೆಂಬ ಕನ್ನಡಿಯಲ್ಲಿ, ಲಿಂಗವ ಕಾಣಬಹುದು–ಅವರ ಶಿವನುಭಾವವನ್ನು ಶ್ರೋತ್ರಮುಕದಲ್ಲಿ ಕೇಳಿ, ಮನೋಮುಖದಲ್ಲಿ

ಹಾರ್ೈಸಿ, ಹೃದಯಮುಖದಲ್ಲಿ ಅಂಗವ ಮಾಡಿಕೊಂಡು ತಮ್ಮಾದಿಮಧ್ಯಾವಸಾನವನರಿತು, ನಿತ್ಯಾನಿತ್ಯವಿವೇಕವ ತಿಳಿದು ಜ್ಞಾನಿಯಾಗಿ ಆಚರಿಸುವುದರಿಂದ, ಲಿಂಗವ ಕಾಣಬಹುದು–ಪರಶಿವಲಿಂಗದಲ್ಲಿ ಕೂಡುವಂಥ ಕೂಟವ ತಿಳಿಯಬಹುದು. ಭಕ್ತ[೩]ದೇಹಿಕ[೩]–ಭಕ್ತ[ನ]ನ್ನೇ ಅಂಗ ಮಾಡಿಕೊಂಡು[೬] ಚೈತನ್ಯ ಸ್ವರೂಪವಾದಾತನೇ, ದೇವ–ಪರಮೇಶ್ವರನು, ಅನಿಮಿಷನಾಗಿ–ಜ್ಞಾನಜಂಗಮಮೂರ್ತಿಗಳಂತರಂಗದಲ್ಲಿ ಪರಿಪೂರ್ಣವಾಗಿ ನೆಲೆಗೊಂಡಿಪ್ಪನಾಗಿ, ಕೂಡಲಸಂಗಮದೇವ–ಪರಶಿವಲಿಂಗವು, ಭಕ್ತನ ನುಡಿಯ ನಡುವೆ: ಭಕ್ತನ "ಲಿಂಗಭಕ್ತಶ್ಚ ಜಂಗಮಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳ, ನಡುವೆ–ಶಿವಾನುಭಾವವೆಂಬ ಪ್ರಸಂಗದ ಮಧ್ಯದಲ್ಲಿ, ರಾಶಿಯಾಗಿಪ್ಪನು–ಪರಿಪೂರ್ಣಜ್ಞಾನಿಯಾಗಿಪ್ಪನು.

..........................

೧–೧ X (ಕ). ೨–೨ X (ಗ). ೩+ದೇಹಿಕ–(ಕ). ೪–೪ X(ಕ). ೫–೫ X (ಕ). ೬+ದೇಹಿಕ(ಕ).

IV- - - - - - - - - - - - - - - - - - - - - - - - - - - - - - - - - - - - - - -

ತೆಱಹು ಮಱಹುಗಳಿಲ್ಲದೆ ಅಖಂಡಜ್ಞಾನದೃಕ್ಕನುಳ್ಳ ಲಿಂಗವು ಭಕ್ತನ ಸರ್ವಾಂಗದಲ್ಲಿ ಪರಿಪೂರ್ಣವಾಗಿಪ್ಪನು. ಅಂತು ಭಕ್ತನು ಸರ್ವಾಂಗಲಿಂಗಮಯವಾಗಿಪ್ಪನಾಗಿ ಆ ಸದ್ಭಕ್ತನು ತಾನನುಭವಿಸುತ್ತಿರ್ದ ಲಿಂಗಾನುಭಾವ ವರ್ತನೆಯ ನುಡಿಯಲು, ಆ ನುಡಿದ ವಚನಂಗಳೆಲ್ಲಾ ಲಿಂಗದ ಸಮ್ಯಗ್‌ಜ್ಞಾನ ಪ್ರಕಾಶ. ಅಂತಪ್ಪ ಸಮ್ಯಗ್‌ಜ್ಞಾನವೆಲ್ಲಾ ಲಿಂಗವೆಯಾಗಿಪ್ಪ ಕಾರಣ ಸದ್ಭಕ್ತರು ನುಡಿದ ವಚನಪ್ರಮಾಣಂಗಳಿಂದ ಅಱಿದಾತಂಗೆ ಲಿಂಗಪದವು ಸಾಧ್ಯವಹುದಲ್ಲದೆ ಮಿಕ್ಕಿನ ವೇದಾಗಮಗಳಿಂದ ಸಾಧಿಸೇನೆಂಬವರಿಗೆ ಲಿಂಗವು ಸಾಧ್ಯವಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

---

೧೪೯

**ಭಕ್ತಿ ಎಂತಹದಯ್ಯಾ? ದಾಸಯ್ಯ ಮಾಡಿದಂತಹದಯ್ಯಾ. ಭಕ್ತಿ ಎಂತಹದಯ್ಯಾ? ಸಿರಿಯಾಳ ಮಾಡಿದಂತಹದಯ್ಯಾ. ಭಕ್ತಿ ಎಂತಹದಯ್ಯಾ? ನಮ್ಮ ಸಿಂಧುಬಲ್ಲಾಳ ಮಾಡಿದಂತಹದಯ್ಯಾ. ಭಕ್ತಿ ಎಂತಹದಯ್ಯಾ? ಕೂಡಲಸಂಗಮದೇವಾ, ನೀ ಬಾಣನ ಬಾಗಿಲ ಕಾಯ್ದಂತಹದಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - -

ಭಕ್ತಿ ಎಂತಹದಯ್ಯಾ–ಶಿವಾದ್ವೈತಭಕ್ತಿ ಹೇಂಗಿರ್ಪುದೆಲೆ ಸ್ವಾಮಿ ಎಂದು ಬೆಸಗೊಂಡು ಕೇಳುವಂತಹದೇ ಅಮ್ಮನವರ ವಾಕ್ಯವು. ಹೀಂಗಿರ್ಪುದೆಂದು ಹೇಳುವಂತಹದೆ ಪರಮೇಶ್ವರನ ವಾಕ್ಯವು. ದಾಸಯ್ಯ–ಜಾಡರ ದಾಸಯ್ಯನು, ಮಾಡಿದಂತಹದಯ್ಯಾ–ಹನ್ನೆರಡುವರುಷ ನೆಯ್ದಂತಹ ಪಂಚವಣ್ಣಿಗೆಯ ದೇವಾಂಗವನ್ನು ಶಿವನಿಗೆ ಕೊಟ್ಟು ಶಿವನಿಂದ ತವನಿಧಿ ಧಾನ್ಯಂಗಳ ಪಡೆದುಕೊಂಡು ಜಂಗಮಭಕ್ತಿಯ ಮಾಡಿ ಮುಕ್ತಿಯ ಹಡೆದಂತಹದೆ ಶಿವಾದ್ವೈತ ಭಕ್ತಿಯು. ಭಕ್ತಿ ಎಂತಹದಯ್ಯಾ?–ಶಿವಾದ್ವೈತಭಕ್ತಿ ಹೇಂಗಿರ್ಪುದೆಲೆ ಸ್ವಾಮಿ ಎಂದು ಬೆಸಗೊಂಡು ಕೇಳುವಂತಹುದೇ ಚೆನ್ನಬಸವೇಶ್ವರನ ವಾಕ್ಯವು. ಹೀಂಗಿಪುದೆಂದರುಹಿ ಕೊಡುವಂತಹದೇ [೧]ಸಂಗನಬ[೧]ಸವೇಶ್ವರನ ವಾಕ್ಯವು. ಸಿರಿಯಾಳ–ಕಂಚಿಪಟ್ಟಣದಲ್ಲಿರುವಂತಹ ಸಿರಯಾಳಸೆಟ್ಟಿಯು, ಮಾಡಿದಂತಹದಯ್ಯಾ–ಏಳುವರುಷದ ಕುಮಾರನಾದ

ಚೇಲಾಳಯ್ಯನ ಕೊರೆದು ಬಾಣಸವ ಮಾಡಿ ನೀಡಿ ಪ್ರಾಣಪ್ರಸಾದವ ಪಡೆದಂತಹದೇ ಶಿವಾದ್ವೈತ ಭಕ್ತಿಯು. ಭಕ್ತಿ ಎಂತಹದಯ್ಯಾ?-ಶಿವಾದ್ವೈತಭಕ್ತಿ ಹೇಂಗಿರ್ಪುದೆಲೆ ಸ್ವಾಮಿ ಎಂದು ಬೆಸಗೊಂಡು ಕೇಳುವಂತಹದೇ ಶಿಷ್ಯನ ವಾಕ್ಯವು. ಹೀಂಗಿರ್ಪುದೆಂದು ಅರುಹಿಕೊಡುವಂತಹದೆ ಗುರುವಿನ ವಾಕ್ಯವು. ಸಿಂಧುಬಲ್ಲಾಳ ಸಿಂಧುಬಲ್ಲಾಳರಾಯನೆಂಬ ಶಿವಶರಣನು, ಮಾಡಿದಂತಹದಯ್ಯಾ-ಹನ್ನೆರಡು ವರುಷದ ಪಟ್ಟದಂಗನೆಯನ್ನು ಶಿವನಿಗೆ ಕೊಟ್ಟು ಸ್ವಯಂಲಿಂಗ ಪದವಿಯ ಪಡೆದಂತಹದೆ ಶಿವಾದ್ವೈತಭಕ್ತಿಯು. ಭಕ್ತಿ ಎಂತಹದಯ್ಯಾ?-ಶಿವಾದ್ವೈತಭಕ್ತಿ ಹೇಂಗಿಪುದೆಲೆ ಸ್ವಾಮಿಯೆಂದು ಬೆಸಗೊಂಡು ಕೇಳುವಂತಹದೆ ಭಕ್ತನ ವಾಕ್ಯವು. ಹೀಂಗಿರ್ಪುದೆಂದರುಹಿ ಕೊಡುವಂತಹದೆ ದೇವನ ವಾಕ್ಯವು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನೀನು ಬಾಣನ ಬಾಗಿಲ ಕಾಯ್ದಂತಹದಯ್ಯಾ-ಬಾನಾಸುರನ ಭಕ್ತಿಗೊಲಿದು ಅವನ ಕಡೆ ಬಾಗಿಲ ಕಾಯ್ದು ಸಾವಿರ ತೋಳು ಕರುಣಿಸಿಕೊಟ್ಟು ಅರ್ಚಿಸಿಕೊಂಡಂತಹದೆ ಶಿವಾದ್ವೈತಭಕ್ತಿಯು.

..........................

೧-೧ X (ಗ).

IV- - - - - - - - - - - - - - - - - - - - - - - - - - - - - - - - - - - - - - - - - - - - - - -

ದಾಸಿಮಯ್ಯ ಸಿರಿಯಾಳ ಬಲ್ಲಾಳ ಸತಿ ಸುತ ವಸ್ತ್ರ ಕೊಟ್ಟು ಶಿವನ ಪತ್ರತ್ಯಕ್ಷವ ಮಾಡಿಕೊಂಡುದು ಭಕ್ತಿಯೆಂಬುದೀ ವಚನದರ್ಥ.

---

೧೫೦

**ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ! ಬಲ್ಲಾಳನ ವಧುವಿನೊಡನೆ ಸರಸವನಾಡಿದಂದಿಂದ ಭಯ ಕಾಣಿರಣ್ಣಾ! ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ! ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ! ಅಘಟಿತಘಟಿತರು ವಿಪರೀಪಚರಿತರು ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ!.**

I - - - - - - - - - - - - - - - - - - - - - - - - - - - - - - - - - - - - - - - - - - - - - - - -

ಮುನ್ನಿನವರು-ಮೊದಲಿನ ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳರಾಯ ಮೊದಲಾದರುವತ್ತುಮೂರು ಪುರಾತರು, ಹೋದ-ವಸ್ತ್ರ ಸುತ ವಧುವನ್ನು ಕೊಟ್ಟು ಭಕ್ತಿಯ ಮಾಡಿ ಮುಕ್ತಿಯ ಹಡೆದು ಹೋದಂತಹ, ದಾರಿ-ಶಿವಾದ್ವೈತಭಕ್ತಿಮಾರ್ಗವು, ಭಯ ಕಾಣಿರಣ್ಣಾ-ಈಗಿನ ಭಕ್ತರು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದೆನೆಂದರೆ ಭೀತಿಯಾಗಿರ್ಪುದು ಕಾಣಿರಣ್ಣ. ಬಲ್ಲಾಳನ-ಸಿಂಧುಬಲ್ಲಾಳರಾಯನ, ವಧುವಿನೊಡನೆ-ಹನ್ನೆರಡು ವರುಷದ ಪಟ್ಟದಂಗನೆಯೊಂದಿಗೆ, ಸರಸವಾಡಿದಂದಿಂದ-ಶಿವನು ವಿಟಜಂಗಮವಾಗಿ ಬಂದು ಮಗ್ಗುಲೊಳಗೆ ಮಲಗಿಕೊಂಡು ಶಿಶುವಾಗಿ ವಿನೋದಿಸಿ ಸ್ವಯಲಿಂಗಪದವಿಯ ಕರುಣಿಸಿಕೊಟ್ಟಂದಿಂದೆ, ಭಯ ಕಾಣಿರಣ್ಣಾ-ಭೀತಿಯಾಗಿರ್ಪುದು ಕಂಡಿರಣ್ಣಾ. ಅದೇನು ಕಾರಣವೆಂದರೆ ಈಗಿನ ಭಕ್ತರು ಜಂಗಮಭಕ್ತಿಯ ಮಾಡಿದರೆ ಮಾಡಬಹುದು. ಈಗಿನ ಜಂಗಮಭಕ್ತಿಯ ಮಾಡಿದರೆ

ಸುಮ್ಮನೆ ಕೈಕೊಂಬುದಿಲ್ಲವು. ಭಕ್ತಿಯ ಮಾಡುತ್ತ ಹೋದರೆ**ಭೀತಿಯಾಗಿಪ್ಪುದು, ಕಾಣಿರಣ್ಣಾ-ಕಂಡಿರಣ್ಣಾ.

ಸಿರಿಯಾಳನ-ಕಂಚಿಪಟ್ಟಣದಲ್ಲಿರುವಂಥ ಸಿರಿಯಾಳಸೆಟ್ಟಿಯ, ಮಗನ-ಏಳು ವರುಷದ ಕುಮಾರನಾದ ಚೀಲಾಳಯ್ಯನ, ಬೇಡಿದಂದಿಂದ?-ಯಾಚಿಸಿ ತೆಗೆದುಕೊಂಡು ಕೊರೆದು ಬಾಣಸವ ಮಾಡಿ ಸೀಡಿಸಿಕೊಂಡು ಪ್ರಾಣಪ್ರಸಾದವ ಕರುಣಿಸಿಕೊಟ್ಟದ್ದಿಂದಿಂದೆ, ಭಯ ಕಾಣಿರಣ್ಣಾ-[ಭೀತಿಯಾಗಿರ್ಪುದು ಕಂಡಿರಣ್ಣಾ]. ಅದೇನು ಕಾರಣವೆಂದರೆ ಈಗಿನ ಭಕ್ತರು ಜಂಗಮಭಕ್ತಿಯ ಮಾಡಿದರೂ ಮಾಡಬಹುದಲ್ಲದೆ ಈಗಿನ ಜಂಗಮವು ಭಕ್ತಿಯ ಮಾಡಿದರೆ ಸುಮ್ಮನೆ ಕೈಕೊಂಬುದಿಲ್ಲವು. ಭಕ್ತಿಯ ಮಾಡುತ್ತ ಹೋದರೆ ಮಕ್ಕಳನೆ ಬೇಡುತ್ತೈದಾರೆ, ಮಕ್ಕಳನು ಕೊಟ್ಟು ಹೇಂಗೆ ಭಕ್ತಿಯ ಮಾಡಬೇಕು? ಮಕ್ಕಳೆ ಪ್ರಾಣವಾಗಿರುವಂಥವರಿಗೆ, ಭಯ ಕಾಣಿರಣ್ಣಾ-ಭೀತಿಯಾಗಿರ್ಪುದು ಕಂಡಿರಣ್ಣಾ. ದಾಸನ-ಜಾಡರ ದಾಸಿಮಯ್ಯನ, ವಸ್ತ್ರವ-ಹನ್ನೆರಡು ವರುಷ ನೇಯ್ದಂಥ ಪಂಚವರ್ಣಿಗೆಯ ದೇವಾಂಗನು, ಸೀಳಿದಂದಿಂದ-ಯಾಚಿಸಿ ತೆಗೆದುಕೊಂಡು ಪಾತಾಳಲೋಕದ ಬಣ್ಣವ ಪಾದಕ್ಕೆ ಸುತ್ತಿಕೊಂಡು ಮರ್ತ್ಯಲೋಕದ ಬಣ್ಣವ ಮೈಗೆ ಸುತ್ತಿಕೊಂಡು ದೇವಲೋಕದ ಬಣ್ಣವ ತಲೆಗೆ ಸುತ್ತಿಕೊಂಡು ಉಳಿದಾದುನೆಲ್ಲವ ಛಿದ್ರಛಿದ್ರವ ಮಾಡಿ ಹಾದಿಯವರಿಗಷ್ಟು ಬೀದಿಯವರಿಗಷ್ಟು ಕೊಟ್ಟು ಚಾಗಿಯ ಮಾಡಿದಂದಿಂದ ಭಯ ಕಾಣಿರಣ್ಣಾ-[ಭೀತಿಯಾಗಿರ್ಪುದು ಕಂಡಿರಣ್ಣಾ]. ಅದೇನು ಕಾರಣವೆಂದರೆ ಈಗಿನ ಭಕ್ತರು ಜಂಗಮಭಕ್ತಿಯ ಮಾಡಿದರೂ ಮಾಡಬಹುದಲ್ಲದೆ ಈಗಿನ ಜಂಗಮವು ಭಕ್ತಿಯ ಮಾಡಿದರೆ ಸುಮ್ಮನೆ ಕೈಕೊಂಬೋದಿಲ್ಲವು, ಭಕ್ತಿಯ ಮಾಡುತ್ತ ಹೋದರೆ ದುಕೂಲಂಗಳನೆ ಬೇಡುತ್ತೈದಾರೆ. ದುಕೂಲಂಗಳ ಕೊಟ್ಟು ಹೇಂಗೆ ಭಕ್ತಿಯ ಮಾಡಬೇಕು? ದುಕೂಲಂಗಳೇ ಪ್ರಾಣವಾಗಿರುವಂಥವರಿಗೆ, ಭಯ ಕಾಣಿರಣ್ಣಾ-ಭೀತಿಯಾಗಿರ್ಪುದು ಕಾಣಿರಣ್ಣಾ.

ಅಘಟಿತಘಟಿತರು-ಸಕಲಶಾಸ್ತ್ರಂಗಳಿಗೆ ಘಟಿಸಬಾರದಿದ್ದಂಥವರು, ವಿಪರೀತ ಚರಿತರು-ಆಶ್ಚರ್ಯವಾದ ನಡಾವಳಿಯನುಳ್ಳಂಥವರು, ಕೂಡಲಸಂಗನ-ಪರಶಿವಲಿಂಗದ, ಶರಣರು-ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳರಾಯ ಮೊದಲಾದ ಅರುವತ್ತುಮೂರು ಪುರಾತರುಗಳು, ನಡೆದ-ವಸ್ತ್ರ ಸುತ ವಧುವನ್ನು ಕೊಟ್ಟು ಭಕ್ತಿಯ ಮಾಡಿ ಮುಕ್ತಿಯ ಹಡೆದುಹೋದ, ದಾರಿ-ಶಿವಾದ್ವೈತಭಕ್ತಿಮಾರ್ಗವು, ಭಯ ಕಾಣಿರಣ್ಣಾ-ಈಗಿನ ಭಕ್ತರು ವಸ್ತ್ರ ಸುತ ವಧುವನ್ನು ಕೊಟ್ಟು ಭಕ್ತಿಯ ಮಾಡಿ ಮುಕ್ತಿಯನ್ನು ಹಡೆದೇನೆಂದರೆ ಭೀತಿಯಾಗಿರ್ಪುದು ಕಂಡಿರಣ್ಣಾ.

IV- - - - - - - - - - - - - - - - - - - - - - - - - - - - - - - - - - - - - - - - - -

ಸತಿ ಸುತ ಧನವ ಕೊಡಲಜಿ [೧ಯೆವಾ]ಗಿ೧, ಮುನ್ನಿನ ಶರಣರು ನಡೆದ ದಾರಿ ಭಯವೆಂಬುದೀ ವಚನದರ್ಥ.

..........................

೧-೧ ಯರಾ (ತ).

---

**ದೇವನೊಳ್ಳಿದನೆಂದು ಮುಯ್ಯಾನಲು ಬೇಡ: ತಱಿಕಟ ಕಾಡಿದನೊಳ್ಳಿದನೆ? ಅಳಿಸುವ ನಗಿಸುವನೊಳ್ಳಿದನೆ? ಬೆಚ್ಚದೆ ಬೆದಱದೆ ತೊತ್ತುಗೆಲಸವ ಮಾಡಲು, ತನ್ನನೀವ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - -

ದೇವನೊಳ್ಳಿದನೆಂದು: ದೇವ–ದಿವ್ಯಕಾಯಕಾಂತಿಲಾವಣ್ಯವನುಳ್ಳ ಪರಮೇಶ್ವರನು, ಒಳ್ಳಿದನೆಂದು–ಭಕ್ತರುಗಳಿಗೆ ಹಿತನಾಗಿ ತೆತ್ತಿಗನಾಗಿ ಆಪತ್ತಿಗನಾಗಿ ಸಹವಯ[೧]ನಾಗಿದ್ದಾತ[೧]ನೆನುತ್ತ, ಮುಯ್ಯಾನಲು ಬೇಡ–ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಬೇಡವು. ತಱಿಕಟ ಕಾಡಿದನೊಳ್ಳಿದನೆ?–ಪೊನ್ನಾಂಬಲೇಶ್ವರನೆಂಬ ಶಿವಕ್ಷೇತ್ರದಲ್ಲಿ ತಿರುನೀಲಕಂಠಯ್ಯಗಳೆಂಬ ಶಿವಶರಣರ ಮನೆಯಲ್ಲು ಕಪ್ಪರವ ಮಡಗಿ ಅದನ್ನು ಬಯಲು ಮಾಡಿ ಆರು ಮೂರು ತಿಂಗಳ ಮೇಲೆ ಬಂದು ಕಪ್ಪರವನ್ನು ಕೇಳಿದಲ್ಲಿ ಅ ಕಪ್ಪರವೆಲ್ಲಿಯೂ ಇಲ್ಲದೆ ಹೋದಲ್ಲಿ, ಆಣೆಕಟ್ಟಿ ಹಿಗ್ಗಾಮುಗ್ಗಾ ಎಳೆದಾಡಿ ಗಾರುಮಾಡಿ ಪೀಡಿಸಿದಂತಹ ಪರಮೇಶ್ವರನು, ಒಳ್ಳಿದನೆ–ಭಕ್ತರುಗಳಿಗೆ ಹಿತನಾಗಿ ತೆತ್ತಿಗನಾಗಿ ಆಪತ್ತಿಗನಾಗಿ ಸಹವಯನಾಗಿ ಇದ್ದಾತನೆ? ಅಲ್ಲವು. ಅಳಿಸುವ–ಸೌಂದರನಂಬೆಣ್ಣನು ತಿರುವಾಲೂರಲ್ಲಿ ಮಾಯಾಂಗನೆಯ ವಿವಾಹವಾಗುತ್ತಿದ್ದಲ್ಲಿ ಪರಮೇಶ್ವರನು ವೃದ್ಧಬ್ರಾಹ್ಮಣನಾಗಿ ಬಂದು ಇವನಿಗೇಕೆ ಹೆಣ್ಣುಕೊಟ್ಟಿರಿ? ಇವ ನಮ್ಮ ಗೌಡಿಯ ಮಗ ತೊತ್ತಿನ ಮಗ ಖರೀದಿ ಗುಲಾಮರ ಮಗ. ಅಷ್ಟು ಕೊಡಬೇಕು ಇಷ್ಟು ಕೊಡಬೆಕೆಂದು ಪತ್ರವನ್ನು ಮುಂದೆ ಹಾಕಿದಲ್ಲಿ ಇವನೇನ ನೋಡುತೀರಿಯೆಂದು ಪತ್ರವನ್ನು ಪರಿದು ಕುತ್ತಿಗೆಯ ಹಿಡಿದು ದಬ್ಬಿದಲ್ಲಿ ಎಡವುತ್ತ ಮುಗ್ಗುತ್ತ ಹಸೆಯ ಜಗುಲಿಯ ಒಡೆದುಳಿದು ಹಾಲಗಂಬವ ಮುರಿದು ಐರಾಣೆ ಗಡಿಗೆಯ ಒಡೆದು ಘೃತಕುಂಭವ ಭಗ್ನವ ಮಾಡಿ, ಅಳಿಸುವ–ಲಗ್ನಕ್ಕೆ ವಿಘ್ನವಾಗಿ ರೋದನಂಗೈಸುವ ನಗಿಸುವ–ಈಪತ್ರವ ಹರಿದರೇನಾಯಿತ್ತು? ಇನ್ನೊಂದು ಮೂಲಪತ್ರವುಂಟೆಂದು ಅಲ್ಲಿಂದ ಏಕಾಮ್ರೇಶ್ವರನೆಂಬ [೨]ದೇ[೨]ವಾಲಯಕ್ಕೆ ಕರಕೊಂಡು ಹೋಗಿ [೩]ಕೈಗೆ[೩] ಚಿನ್ನದ ತಾಳವನ್ನು ಕೊಟ್ಟು ತಿರುಪಾಟಗಾನವನ್ನು ಪಾಡಿಸಿಕೊಂಡು ನಂದಿಮುದ್ರೆ ಪಡಿಹೊನ್ನು ಕರುಣಿಸಿಕೊಟ್ಟು ಪಕಪಕನೆ ನಗಿಸುವಂಥ ಪರಮೇಶ್ವರನು, ಒಳ್ಳಿದನೆ–ಭಕ್ತರುಗಳಿಗೆ ಹಿತನಾಗಿ ತೆತ್ತಿಗನಾಗಿ ಆಪತ್ತಿಗನಾಗಿ ಸಹವಯನಾಗಿ ಇದ್ದಾತನೆ? ಅಲ್ಲವು. ಬೆಚ್ಚದೆ–ಅಂತರಂಗದಲ್ಲಿ ಭಯಂಬಡದೆ, ಬೆದಱದೆ–ಬಹಿರಂಗದಲ್ಲಿ ಹೆದರಿಕೊಳ್ಳದೆ, ತೊತ್ತುತನವ ಮಾಡಲು–ಲಿಂಗವೆ ಕರ್ತೃವಾಗಿ ತಾನೆ ಭೃತ್ಯನಾಗಿ ಕರ್ತೃಭೃತ್ಯಭಾವದಿಂದ ಲಿಂಗಪೂಜೆಯ ಮಾಡಲು, ತನ್ನನೀವ–ತಾ ಬೇಡಿದಿಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು, ಕೂಡಲಸಂಗಮದೇವ–ಪರಶಿವಲಿಂಗವು.

..........................

೧–೧ ನಿದ್ದಾತ(ಕ). ೨–೨ ಸಿ (ಗ). ೩–೩ ಕೆ ಯಲ್ಲಿ (ಗ).

IV- - - - - - - - - - - - - - - - - - - - - - - - - - - - - - - - - - - - - - - - - - - - - - - - -

ಸುಖದುಃಖ ಬಂದಲ್ಲಿ ಬೆದಱದೆ ಗುರುಲಿಂಗಜಂಗಮದ ಸೇವೆಯ ಮಾಡಿದರೆ ಶಿವ ತಾನೆಯಹನೆಂಬುದೀ ವಚನದರ್ಥ.

೧೫೨

ನೆಚಿ ನಂಬೋ ನೆಚಿ ನಂಬೋ [1]ಧರಂಧುರ[1]ವಿಲ್ಲದೆ ಸಾಮವೇದಿಗಳಂತೆ; ನೆಚಿ ನಂಬೋ ನೆಚಿ ನಂಬೋ ದಾಸದುಗ್ಗಳೆಯಂತೆ; ನೆಚಿ ನಂಬೋ ನೆಚಿ ನಂಬೋ ಸಿರಿಯಾಳ ಚಂಗಳೆಯರಂತೆ; ನೆಚಿ ನಂಬೋ ನೆಚಿ ನಂಬೋ ಸಿಂಧುಬಲ್ಲಾಳನಂತೆ. ನೆಚಿ ನಂಬಿದೆಯಾದಡೆ ತನ್ನನೀವ ಕೂಡಲಸಂಗಮದೇವ.

I - - - - - - - - - - - - - - - - - - - - - - - - - - - - - - - - - - - - - - - - - - -

ನೆಚಿ ನಂಬೋ ನೆಚಿ ನಂಬೋ–ಜಂಗಮವೆ ಸಾಕ್ಷಾತ್ ಶಿವಸ್ವರೂಪವೆಂದು ವಿಶ್ವಾಸಿಸಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೊ, ಧರಂಧುರವಿಲ್ಲದೆ–ತೂಳಮ್ಯಾಳವಿಲ್ಲದೆ, ಸಾಮವೇದಿಗಳಂತೆ–ಭತ್ತೀಸಪುರ ಸಹವಾಗಿ ಕೈಲಾಸಕ್ಕೆ ತೆಗೆದುಕೊಂಡು ಹೋಗಿದ್ದ ಸಾಮವೇದಿಗಳೆಂಬ ಶಿವಶರಣನ ಹಾಂಗೆ, ನೆಚಿ ನಂಬೋ ನೆಚಿ ನಂಬೋ–ಜಂಗಮವೆ ಸಾಕ್ಷಾತ್ ಶಿವಸ್ವರೂಪಿಗಳೆಂದು ವಿಶ್ವಾಸಿಸಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೊ, ದಾಸ ದುಗ್ಗಳೆಯರಂತೆ–ದಾಸ ದುಗ್ಗಳದೇವಿಯರ ಹಾಂಗೆ, ನೆಚಿ ನಂಬೋ ನೆಚಿ ನಂಬೋ–ಜಂಗಮವೆ ಸಾಕ್ಷಾತ್ ಶಿವಸ್ವರೂಪಿಗಳೆಂದು ವಿಶ್ವಾಸಿಸಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೊ, ಸಿರಿಯಾಳ ಚೆಂಗಳೆಯರಂತೆ–ಸಿರಿಯಾಳ ಸೆಟ್ಟಿ ಚೆಂಗಳೆಯರ ಹಾಂಗೆ, ನೆಚಿ ನಂಬೋ ನೆಚಿ ನಂಬೋ–ಜಂಗಮವೆ ಸಾಕ್ಷಾತ್ ಶಿವಸ್ವರೂಪಿಗಳೆಂದು ವಿಶ್ವಾಸಿಸಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೊ ಸಿಂಧು ಬಲ್ಲಾಳನಂತೆ–ಸಿಂಧುಬಲ್ಲಾಳರಾಯನೆಂಬ ಶಿವಶರಣ ಹಾಂಗೆ, ನೆಚಿ ನಂಬಿದೆಯಾದಡೆ–ಜಂಗಮವೆ ಸಾಕ್ಷಾತ್ ಶಿವಸ್ವರೂಪಿಗಳೆಂದು ವಿಶ್ವಾಸಿಸಿ ಸಕಲಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿದೆಯಾದರೆ, ತನ್ನನೀವ ಕೂಡಲಸಂಗಮದೇವ–ತಾನೇನು ಬೇಡಿದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು ಪರಶಿವಲಿಂಗವು.

III- - - - - - - - - - - - - - - - - - - - - - - - - - - - - - - - - - - - - - - -

1–1 ಧರಧುರ (ಡ). 2–2 x (ಟ).

..........................

ಧರಧುರವಿಲ್ಲದೆ–ಪ್ರಪಂಚದಲ್ಲಿ ಹೇವರಿಕೆಯುಂಟಾಗದೆ, ಸ್ವಪಚಯ್ಯನ ಸಾಮವೇದಿಗಳು ನಂಬಿ ಲಿಂಗಧಾರಣೋಪದೇಶವ ಪಡೆದು ಲಿಂಗಾಂಗ ಸಮರಸಜ್ಞಾನವಿಡಿದಾಚರಿಸಿ ಶಿವಪ್ರಸನ್ನತೆಯ ಹಡೆದು ತನ್ನ ಭತ್ತೀಸಪುರ ಸಹವಾಗಿ ಶಿವಲೋಕಗಾಮಿಯಾದ ಹಾಂಗೆ ಎಂಬುದೀಗ ಸಾಮವೇದಿಗಳಂತೆ ಎಂಬ ಶಬ್ದಕ್ಕರ್ಥ.

---

೧೫೩

ಬಲ್ಲಿದರೊಡನೆ ಬವರವಾದೊಡೆ ಗೆಲಲುಂಟು, ಸೋಲಲುಂಟು; ಕಳ್ಳರೊಡನೆ ಭಾಷೆಪೂರಾಯವಯ್ಯಾ. ಕೂಡಲಸಂಗನಶರಣರಿಗೆ ಮಾಡಿಮಾಡಿ ಧನವ ಸವೆದು ಬಡವನಾದಡೆ ಆ ಭಕ್ತನು ಆ ಲಿಂಗಕ್ಕೆ ಪೂಜ್ಯನಹನು.

I - - - - - - - - - - - - - - - - - - - - - - - - - - - - - - - - - - - - - - - - - - -

ಬಲ್ಲಿದರೊಡನೆ ಪರಾಕ್ರಮಿಗಳಾದ ಮೊಗಲಪಠಾನರು ದಕ್ಕಣೆ[೧]ಯರು[೧] ಕೌರವರು ಪಾಂಡವರು ಮೌಲಿ ಕದಂಬರೊಂದಿಗೆ, ಬವರವಾದೊಡೆ–ಪಂಥವನ್ನು ಹಾಕಿಕೊಂಡು ಯುದ್ಧಕ್ಕೆ ಹೋದರೆ, ಗೆಲಲುಂಟು–ಕುರಿಯ ಹಿಂಡಿಗೆ ತೋಳಹೊಕ್ಕ ಹಾಂಗೆ ಹುಲ್ಲೆ ಹಿಂಡಿಗೆ ಹುಲಿಹೊಕ್ಕ ಹಾಂಗೆ ಆನೆ ಹಿಂಡಿಗೆ ಸಿಂಹ ಹೊಕ್ಕ ಹಾಂಗೆ ಸಿಂಹನ ಹಿಂಡಿಗೆ ಗಂಡಭೇರುಂಡ ಹೊಕ್ಕಹಾಂಗೆ ಈಚಿಲಿಂದಾಚಿಗೆ ಆಚಿಲಿಂದೀಚಿಗೆ ಕಡಕೊಂತ ಬಂದು ಪರಾಕ್ರಮಿಯಾಗಿ ಯುದ್ಧವ ಮಾಡಿ ಜಯಿಸಿದರೆ ಇವನು ಪರಾಕ್ರಮಿಯೆಂದೆನಿಸಿಕೊಂಡು [೨]ಗೆ[೨]ದ್ದರೂ ಕೀರ್ತಿಯಾಗುತ್ತಿಹುದು, ಸೋಲಲುಂಟು–ಅವರೊಂದು ಆನೆ ಹಾಂಗೆ ತಾವೊಂದು ಆಡಿನ ಹಾಂಗೆ ಅವರ ಕೂಡ ಕೈಗೊಟ್ಟು ಯುದ್ಧವ ಮಾಡಿದ್ದು ಸಾಲದೆಯೆಂದು ಸೋತರೂ [೩]ಕೀರ್ತಿ ಬರುವುದು, ಕಳ್ಳರೊಡನೆ–ತಸ್ಕರರಾದ ಮಾರಾಟ[ರೊ]ಂದಿಗೆ ಭಾಷೆಪೂರಯವಯ್ಯಾ–ಪಂಥವ ಹಾಕಿಕೊಂಡು ಯುದ್ಧಕ್ಕೆ ಹೋದದ್ದೇ ಉಂಟಾದರೆ ಎಡಕ್ಕೆ ತೋರಿ ಬಲಕ್ಕೆ ಹೋಗುವರು ಬಲಕ್ಕೆ ಹೋಗುವರು ಬಲಕ್ಕೆ ತೋರಿ ಎಡಕ್ಕೆ ಹೋಗುವರು ಹಿಂದಕ್ಕೆ ತೋರಿ ಮುಂದಕ್ಕೆ ಹೋಗುವರು ಮುಂದಕ್ಕೆ ತೋರಿ ಹಿಂದಕ್ಕೆ[೪] ಹೋಗುವರು, ನಿಂತುಕೊಂಡು ಯುದ್ಧವನ್ನು ಮಾಡರು, ಹುಯ್ಯಲನು ಜಯಿಸರು.ಕಾಗೆ ಹಿಮಡಿಗೆ ಕೋಲಲಿಟ್ಟೋಪಾದಿಯಲ್ಲಿ ವ್ಯರ್ಥಸ್ಯವಾಗಿರ್ಪುದು. ಹಾಂಗೆ, ಬಲ್ಲಿದರೊಡನೆ–ಕಾಲಕಾಮಮಾಯಾದಿ ಪ್ರಪಂಚವನ್ನು ಜಯಿಸುವಲ್ಲಿ ಪರಾಕ್ರಮಿಗಳಾದ ಜಂಗಮಮೂರ್ತಿಗಳೊಂದಿಗೆ, ಬವರವಾದೊಡೆ–ಸಮರಸಭಾವದಿಂದ ಸಕಲಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿದರೆ, ಗೆಲಲುಂಟು–ನಿತ್ಯವಾದ ನಿಜಮೋಕ್ಷವನ್ನು ದೊರೆಕೊಂಬುತ್ತಿಹುದು, ಸೋಲಲುಂಟು–ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಿದರೆ ಕಿಂಚಿನ್ಮಾತ್ರ ಫಲಪದಂಗಳು ದೊರಕೊಂಡು [೫]ಕಡೆಗೆ[೫] ಭವದುಃಖವೆ ಉಂಟಾಗುತ್ತಿಹುದು. ಕಳ್ಳರೊಡನೆ–ಪಾರಮಾರ್ಥವಂಚಕರಾದ ಷಣತ [೬]ಷಡುದರುಶನದ[೬]ವರಿಗೆ, ಭಾಷೆಪೂರಾಯವಯ್ಯಾ–ಸಮರಸಭಾವ [೭]ವಿಲ್ಲದೆ[೭] ಸಕಲಪದಾರ್ಥವನ್ನು ಕೊಟ್ಟು ಭಕ್ತಿಯನ್ನು ಮಾಡಿದರೆ ನಿತ್ಯವಾದ ನಿಜ[೮]ಮೋಕ್ಷ[೮] ದೊರಕೊಳ್ಳದೆ ಫಲಪದಂಗ[೯][ಳು][೯] ದೊರಕೊಳ್ಳದೆ ವ್ಯರ್ಥಸ್ಯವಾಗಿರ್ಪುದು.

ಕೂಡಲಸಂಗನಶರಣರಿಗೆ–ಜಂಗಮಮೂರ್ತಿಗಳಿಗೆ, ಮಾಡಿಮಾಡಿ–ತನುಮನದನಂಗಳನು ಕೊಟ್ಟು ಭಕ್ತಿಯ ಮಾಡಿ ಮಾಡಿ, ದನವ–ದ್ರವ್ಯವನ್ನು, ಸವೆದು–ಸಮರ್ಪಣೆಯ ಮಾಡಿ, ಬಡವನಾದಡೆ–ನಿರ್ಧನಿಕನಾದರೆ. ಆ ಭಕ್ತನು–ಆ ನಿರ್ವಂಚಕಸದ್ಭಕ್ತನು, ಲಿಂಗಕ್ಕೆ–ಮಹಲಿಂಗಕ್ಕೆ, ಪೂಜ್ಯನಹನು–ಆಭರಣವಾಗಿ ಅಲಂಕಾರವಾಗಿ ಒಪ್ಪುತ್ತಿಹನು ಎಂಬಲ್ಲಿ ಪರಮೇಶ್ವರನ ಮಧ್ಯದಲ್ಲಿ ಎಲ್ಲಾ ಪ್ರಮಥಗಣಂಗಳು, ಈ ಭಕ್ತನು ಮರ್ತ್ಯಲೋಕದಲ್ಲಿ ತ್ರಿವಿಧಪದಾರ್ಥವನ್ನು ಹಿಡಿದು ಭಕ್ತಿಗೃಹವನ್ನು ಕಟ್ಟಿಕೊಂಡು ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿ ನಿರ್ಧನಿಕನಾಗಿ ಆಚರಿಸುತ್ತ ಬಂದಾನೆಂದು ತಮ್ಮ ಕವಳಿಗೆಗೆ ಯೋಗ್ಯನ ಮಾಡಿಕೊಳ್ಳುತ್ತಿಹರು.

..........................

೧–೧ ಹ(ಕ). ೨–೨ ಇ (ಕ). ೩+ಅಪ(ಕ). ೪+ಓಡಿ(ಕ). ೫–೫ x(ಗ). ೬–೬ x(ಕ). ೭–೭ ದಿಂದ (ಕ). ೮–೮ ಮೋಕ್ಷವ (ಗ). ೯–೯ ಳನು (ಕ.ಗ).

೧೫೪

**ಗಿರಿಗಳ ಮೇಲೆ ಹಲವು ತರುಮರಾದಿಗಳಿರ್ದು, ಶ್ರೀಗಂಧದ ಸನ್ನಿಧಿಯಲ್ಲು ಪರಿಮಳವಾಗವೆ? ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು. ಕೂಡಲಸಂಗಮದೇವಯ್ಯಾ, ಸಿರಿಯಾಳನ ಸಾರಿರ್ದ ನರರೆಲ್ಲಾ ಸುರರಾಗರೆ?**

I - - - - - - - - - - - - - - - - - - - - - - - - - - - - - - - - - - - - - - - -

ಗಿರಿಗಳ ಮೇಲೆ–ಮಲಯಾಚಲ ಪರ್ವತದ ಮೇಲೆ, ಹಲವು–ನಾನಾ ಪ್ರಕಾರವಾದ, ತರುಗಳು–ಸಣ್ಣ ಸಣ್ಣ ಗಿಡಗಳು, ಮರಾದಿಗಳು–ದೊಡ್ಡ ದೊಡ್ಡ ವೃಕ್ಷಾದಿಗಳು, ಶ್ರೀಗಂಧದ ಸನ್ನಿಧಿಯಲ್ಲಿರ್ದು–ಶ್ರೀಗಂಧದ ವೃಕ್ಷದ ಸಮೀಪದಲ್ಲಿರುತಿರ್ದು, ಪರಿಮಳವಾಗವೆ?–ಗಂಧವೇದಿಸಿ ಗಂಧದ ವೃಕ್ಷಂಗಳಾಗುವುದಿಲ್ಲವೆ? ಆಗುತ್ತಿಹವು. ಲಿಂಗವಂತನ–ತ್ರಿವಿಧಲಿಂಗಾರ್ಚಕನಾದ ನಿರ್ವಂಚಕಸದ್ಭಕ್ತನ, ಸನ್ನಿಧಿಯಿಂದ–ಆತನ ಸಮೀಪದಲ್ಲಿರ್ದುಕೊಂಡು ಸೇವಾ ಸತ್ಕಾರಂಗಳ ಮಾಡಿಕೊಂಡಿರುವುದರಿಂದೆ, ಹಿಂದಣ–ಮೊದಲಿನ, ದುಸ್ಸಂಗ–ದುರ್ವರ್ತನೆ, ಕೆಡುವುದು–ನಷ್ಟವಾಗುವುದು.

ಕೂಡಲಸಂಗಮದೇವಯ್ಯಾ–ಎಲೆ ಪರಶಿವಲಿಂಗವೆ, ಸಿರಿಯಾಳನ–ಕಂಚಿಪಟ್ಟಣದಲ್ಲಿರುವಂಥ ಸಿರಿಯಾಳಸೆಟ್ಟಿಯ, ಸಾರಿರ್ದ–"ಸಾರು ಸಮೀಪೇ" ಎಂದು ಸಮೀಪಸ್ಥರಾಗಿರ್ದ, ನರರೆಲ್ಲಾ–ಬಹುಮುಖದಾತ್ಮರಷ್ಟೂ, ಸುರುರಾಗರೆ?–ಕಾಯವೆರಸಿ ಕೈಲಾಸಕ್ಕೆ ಹೋಗಿ ಪರುಷದ ಖಣಿ ಚಿಂತಾಮಣಿ ಕಾಮಧೇನು ಕಲ್ಪವೃಕ್ಷ [1]ಪಿಯೂಷ[1] ಮೊದಲಾದವನ್ನು ಪಡೆದನುಭವಿಸಿ ದೇವತಾಶ್ರೇಷ್ಠರುಗಳಾಗಲಿಲ್ಲವೆ? [2]ಆದರು.[2]

............................

೧–೧ x (ಕ). ೨–೨ x (ಗ).

I - - - - - - - - - - - - - - - - - - - - - - - - - - - - - - - - - - - - - - - -

ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು ಶ್ರೀಗಂಧದ ಸನ್ನಿಧಿಯಲು ಪರಿಮಳವಾಗವೆ?–ಮೂಲಾಹಂಕಾರವೆಂಬದ್ರಿಯ ಅಗ್ರದಲ್ಲಿ [3]ಸಕಲ[3] ಅಜ್ಞಾನ ಜೀವರುಗಳು ಪಾಮರ ಜೀವರುಗಳು ಅಧಿಷ್ಠಿಸಿಕೊಂಡಿರ್ದು ಐಶ್ವರ್ಯೋಪಲಕ್ಷಿತವಹ ಸ್ವಾನುಭಾವಸದ್ವಾಸನೆಯುಳ್ಳ ತ್ರಿನಿಧಲಿಂಗಾನುಭಾವಿಗಳ ಸಮೀಪದಲ್ಲಿ ಅವರೆಲ್ಲ ಸದ್ವಾಸನೆಯುಳ್ಳವರಾದರು. ಮುಂದಕ್ಕೆ ಕಾಣಬಂದರ್ಥ.

............................

೩–೩ ಸಗ(ಚ).

---

೧೫೫

**ಪರುಷದ ಹೊರೆಯಲ್ಲಿ ಕಬ್ಬುನವಿರ್ದು ಹೊನ್ನಾಯಿತ್ತು, ನೋಡಿರೆ! ಅವ್ವ ಚೆಂಗಳೆ, ನೀ[1]ವಿ[1]ದ್ದೇಳು ಕೇರಿಯವರು ಲಿಂಗದ ನೋಂಪಿಯ ನೋಂತರೆ ಹೇಳಾ? ಕೂಡಲಸಂಗಮದೇವಂಗೆ, ಚೀಲಾಳನೆಂಬ ಬಾ[2]ಗಿ[2]ನವನಿಕ್ಕಿದರೆ, ಹೇಳಾ!**

II- - - - - - - - - - - - - - - - - - - - - - - - - - - - - - - - - - - - - - - - - - - - - - -

ಪರುಷದ ಹೊರೆಯಲ್ಲಿ-ಪರುಷದ ಖಣಿಯ ಪದರಿನಲ್ಲಿ, ಕಬ್ಬುನವಿರ್ದು-ಕಾರ್ಬೊನ್ನವಿರುತಿರ್ದು, ಹೊನ್ನಾಯಿತ್ತು ನೋಡಿರೆ!-ಸುವರ್ಣವಾಯಿತ್ತು ಕಂಡಿರೆ, ಅವ್ವ ಚೆಂಗಳೆ-ಜನನಿಯಾದ ಚೆಂಗುಳದೇವಿಯರೆ, ನೀವಿದ್ದೇಳು ಕೇರಿಯವರು-ನೀವಿರುತಿರ್ದ ಹಿಂದೇಳು [೧]ಕೇರಿಯವರು[೧] ಮುಂದೇಳುಕೇರಿಯವರು, ಲಿಂಗದ ನೋಂಪಿಯ ನೋಂತರೆ-ಏಕಾಮ್ರೇಶ್ವರನೆಂಬ ಲಿಂಗದ ಪೂಜೆಯ ಮಾಡಿದರೆ? [೨]ಇಲ್ಲವು.[೨] ಹೇಳಾ? -ನಿರೂಪಿಸಾ. ಕೂಡಲಸಂಗಮದೇವಂಗೆ ಪರಶಿವಲಿಂಗಕ್ಕೆ, ಚೀಲಾಳನೆಂಬ-ಏಳು ವರುಷದ ಕುಮಾರನಾದ ಚೀಲಾಳಯ್ಯನೆನಿಸುವನ, ಬಾಗಿನವನಿಕ್ಕಿದರೆ-ಕೊರೆದು ಬಾಣಸವ ಮಾಡಿ ನೀಡಿ ಪ್ರಾಣ ಪ್ರಸಾದವ ಪಡೆದರೆ? [೩]ಇಲ್ಲವು[೩]. [೪]ಹೇಳಾ? ನಿರೂಪಿಸಾ.[೪] ಏಕಾಮ್ರೈಶ್ವರ ಲಿಂಗಪೂಜೆಯ ಮಾಡಿದವರು ನೀವೆ. ಏಳುವರುಷದ ಕುಮಾರನಾದ ಚೀಲಾಳ್ಯನ ಕೊರೆದು ಬಾಣಸವ ಮಾಡಿ [೫]ನೀಡಿ ಪ್ರಾಣಪ್ರಸಾದವ ಪಡೆ[೫] ದವರು ನೀವೆ. ಅದು ಕಾರಣ ನೀವು ಮಾಡಿದ ನಿಮಿತ್ತಾರ್ಥವಾಗಿ ನಿಮ್ಮ ಎಡಬಲದಲ್ಲಿದ್ದಂಥ ಹಿಂದೇಳುಕೇರಿಯವರು ಮುಂದೇಳುಕೇರಿಯವರು ಕಾಯವೆರಸಿ ಕೈಲಾಸವಾಸಿಗಳಾಗಲಿಲ್ಲವೆ? [೬]ಆದರು.[೬]

..........................

೧-೧ X (ಗ). ೨-೨ X(ಗ). ೩-೩ X (ತೆ). ೪-೪ X (ಕ). ೫-೫ X (ಕ). ೬-೬ ಹೇಳಾ – ನಿರೂಪಿಸಾ(ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - - -

ಪರುಷದ ಹೊರೆಯಲ್ಲಿ ಕಬ್ಬುನವಿರ್ದು ಹೊನ್ನಾಯಿತ್ತು ನೋಡಿರೆ!-ಪರಮ ಪಾವನ ಪವಿತ್ರಸ್ವರೂಪವಾದ ಗುರುವಿನ ಪಾರ್ಶ್ವದಲ್ಲಿ ಸಂಕಲ್ಪ ವಿಕಲ್ಪವನುಳ್ಳ ಜೀವನಿರ್ದು ಚಿತ್ಪ್ರಕಾಶಜ್ಞಾನಿಯಾದನು ಕಂಡಿರೆ! ಮುಮದಕ್ಕೆ ಕಾಣಬಂದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - - - -

1-1 ನಿ(ತ). 2-2 ಯಿ (ತ).

..........................

ಪರುಷದ ಸೋಂಕಿನಿಂದ ಕಬ್ಬುನ ಹೊನ್ನಾದ ಹಾಂಗೆ ಅರ್ಥಪ್ರಾಣಾಭಿಮಾನಂಗಳ ಗುರುಲಿಂಗಜಂಗಮಕ್ಕೆ ವಂಚನೆಯಿಲ್ಲದೆ ಸಮರ್ಪಿಸುವ ಭಕ್ತನ ದರುಶನ ಸ್ಪರ್ಶನದಿಂದಲೂ ಆತನ ನೆರೆಹೊರೆಯಲ್ಲಿದ್ದವರೆಲ್ಲರೂ ಮುಕ್ತರೆಂಬುದೀ ವಚನದ ತಾತ್ಪರ್ಯಾರ್ಥ.

---

೧೫೬

**ಗೀತವ ಬಲ್ಲಾತ ಜಾಣನಲ್ಲ; ಮಾತು ಬಲ್ಲಾತ ಜಾಣನಲ್ಲ. ಜಾಣನು ಜಾಣನು ಆತ [1]ಜಾಣನು.[1] ಲಿಂಗವ ನೆಱೆನಂಬಿದಾತ [1]ಜಾಣನು.[1] ಜಂಗಮಕ್ಕೆ ಧನವ ಸವೆಸುವಾತ [1]ಜಾಣನು.[1] ಜವನ ಬಾಯ[2] ಬಾಲವ ಕೊಯ್ದು ಹೋದಾತ ಜಾಣನು. ನಮ್ಮ ಕೂಡಲಸಂಗನ [3]ಶರಣನು.[3]**

I - - - - - - - - - - - - - - - - - - - - - - - - - - - - - - - - - - - - - - - - - - - - -

ಗೀತವ ಬಲ್ಲಾತ ಜಾಣನಲ್ಲ–ಮೂವತ್ತೆರಡು ರಾಗ ಅರವತ್ತುನಾಲ್ಕು ಮಿಶ್ರಯುಕ್ತವಾಗಿ ಸಮಸ್ತ ಸ್ವರವಚನಂಗಳಿಂದ ಗಾನವ ಪಾಡುವಾತ, ಜಾಣನಲ್ಲ–ಪ್ರವೀಣನಲ್ಲವು; ಮಾತು ಬಲ್ಲಾತ ಜಾಣನಲ್ಲ–ಮಾತಿಗೆ ಮಾತನ್ನು ಕಲಿತುಕೊಂಡು ದೇವಸಭೆ ರಾಜಸಭೆಗಳಲ್ಲಿ ಕುಳಿತುಕೊಂಡು ನ್ಯಾಯನಿಗದಿಗಳನ್ನು ತಿದ್ದಿ ತೀರ್ಚಿ[೧] ಪರಿಹರಿಸಿಕೊಡುವಾತನು ಜಾಣನಲ್ಲ–ಪ್ರವೀಣನಲ್ಲವು.

ಜಾಣನು ಜಾಣನು–ಪ್ರವೀಣನು ಪ್ರವೀಣನು, ಆತ ಜಾಣನು–ಆತ ಪ್ರವೀಣನು. ಲಿಂಗವ–ಗುರುಮುಖದಿಂದ ಬಂದಂಥ ಇಷ್ಟಮಹಾಲಿಂಗವನ್ನು, ನೆಜಿ–ಚೆನ್ನಾಗಿ, ನಂಬಿದಾತ–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಬಲ್ಲಾತ, ಜಾಣನು–ಪ್ರವೀಣನು.

ಜಂಗಮಕ್ಕೆ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳಿಗೆ ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡೋ ನೆವದಿಂದ, ಧನವ–ದ್ರವ್ಯವನ್ನು, ಸವೆಸುವಾತ–ಸಮರ್ಪಣೆಯ ಮಾಡುವಾತನು, ಜಾಣನು–ಪ್ರವೀಣನು. ಜವನ ಬಾಯ ಬಾಲವ: ಜವನ–ಯಮನ, ಬಾಯ[೨] ಬಾಲವ–ಶಿಕ್ಷೆಯೆಂಬ ರಸನೆಗೆ ತುತ್ತಾಗಿರುವ ಮಲತ್ರಯಂಗಳ ಮೇಲಣ ವಾಂಛೆಯನ್ನು, ಕೊಯ್ದು ಹೋದಾತ–ಜ್ಞಾನವೆಂಬ ಶಸ್ತ್ರದಿಂದ ಛೇದಿಸಿ ಅವನೆಲ್ಲವ ನಿವೃತ್ತಿಯ ಮಾಡಿಕೊಂಡು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದಾತನು, ಜಾಣನು – ಪ್ರವೀಣನು. ನಮ್ಮ ಕೂಡಲಸಂಗನಶರಣನು–ಶಿವಶರಣನು.

..........................

೧+ ಒಪ್ಪವಿಟ್ಟು (ಗ). ೨+ ಲ್ಲಿ–ಶಿಕ್ಷೆಯೆಂಬ ರಸನೆಯಲ್ಲಿ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಗೀತವ ಬಲ್ಲಾತ ಜಾಣನಲ್ಲ–ಅರ್ಜುನಗೀತವೆಂದು ಶ್ರೀರುದ್ರಗೀತವೆಂದು ಹನುಮಾಣ್ಯಗೀತವೆಂದು ಇಂಥಾ ಗೀತವ ಬಲ್ಲಾತ ಚದುರನಲ್ಲ, ಮಾತ ಬಲ್ಲಾತ ಜಾಣನಲ್ಲ–ಐವತ್ತಾರು ದೇಶದ ಪ್ರಸಂಗವ ಬಲ್ಲಾತ [೩]ಕುಶಲ[೩]ನಲ್ಲ. ಮತ್ತ ೩೨ ರಾಗ ೬೪ ಮಿಶ್ರಿ[೪]ರಾಗ[೪] ಬಲ್ಲಾತ ಚದುರನಲ್ಲ. ಜಾಣನು ಜಾಣನು ಆತ ಜಾಣನು – ಚದುರನು ಚದುರನು ಆತ ಚದುರನು. ಲಿಂಗವ ನೆಜಿನಂಬಿದಾತ ಜಾಣನು–ಪರಶಿವಲಿಂಗವ ಚೆನ್ನಾಗಿ ವಿಶ್ವಾಸಿಸಿದವ ಚದುರನು. ಮುಂದಕ್ಕೆ ಕಾಣಬಂದರ್ಥ.

..........................

೩–೩ ಚದುರ (ಚ). ೪–೪ ವ (ಚ), ಜುವ (ಜ).

III- - - - - - - - - - - - - - - - - - - - - - - - - - - - - - - - - - - - - - - - - - - - -

ಜವನ–ಯಮನ, ಬಾಯಲು–ಭಿನ್ನಾಪೇಕ್ಷೆಯೆಂಬ ಜಿಹ್ವೆಯಲ್ಲಿ, ಬಾಲವ ಕೊಯ್ದು ಹೋದಾತ–ಭಿನ್ನಾಪೇಕ್ಷೆಯೆಂಬ ಪುಚ್ಛವನು ನಷ್ಟವ ಮಾಡಿ ಶಿವನೊಳಗೇಕಾರ್ಥವಾದಂತ ಶರಣನು,

ಮತ್ತಂ, ಬಾಲವ ಕೊಯಿದು ಹೋದಾತ–ಪುನರ್ಜನ್ಮವನು ನಷ್ಟವ ಮಾಡಿದಾತನು, ಜಾಣನು – ಕ್ರೀಯಲು ಕುಶಲಿ, ಜ್ಞಾನದಲ್ಲಿ ಕುಶಲಿಯು.

IV- - - - - - - - - - - - - - - - - - - - - - - - - - - - - - - - - - - - - - - - - - -

1–1 X (ತ). 2+ ಲ್ಲಿ (ತ). 3–3 ಶರಣರೆ ಜಾಣರು (ತ).

..........................

ಹಾಡಬಲ್ಲ ಓದಬಲ್ಲ ನುಡಿಯಬಲ್ಲವರು ಜಾಣರಲ್ಲ. ಗುರುಲಿಂಗಜಂಗಮಕ್ಕೆ ತನುಮನದನವ ಸಮರ್ಪಿಸಿ ದೇಹವಾಸನೆಯಳಿ[ದು] ಜವನ ಬಾಯಿಗೆ [ತು]ತ್ತು ಮಾಡುವ ಮಲಪಾಶಂಗಳ ಹಱಿದು ಜನನ ಮರಣವ ಬಯಸಿ ಲಿಂಗವಾದ ಶರಣನೇ ಜಾಣನೆಂಬುದೀ ವಚನದ ತಾತ್ಪರ್ಯಾರ್ಥ.

---

೧೫೭

**ಲೇಸೆನಿಸಿಕೊಂಡು ಐದುದಿನ ಬದುಕಿದಡೇನು? ಲೇಸೆನಿಸಿಕೊಂಡು ನಾಲ್ಕುದಿನ ಬದುಕಿದಡೇನು? ಲೇಸೆನಿಸಿಕೊಂಡು ಮೂರು ದಿನ ಬದುಕಿದಡೇನು? ಲೇಸೆನಿಸಿಕೊಂಡು ಎರಡುದಿನನ ಬದುಕಿದಡೇನು? ॥ಸಾಕ್ಷಿ ॥ ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ । ಅಜಕಲ್ಪಸಹಸ್ರೇಭ್ಯೋ ಭಕ್ತಿಹೀ [1][ನಾಸ್ತು][1] ಶಾಂಕರಿ॥ ಎಂದುದಾಗಿ, ಕೂಡಲಸಂಗನಶರಣರ ವಚನದಲ್ಲಿ ಲೇಸೆನಿಸಿಕೊಂಡು ಒಂದು ದಿನ ಬದುಕಿದಡೆ ಸಾಲದೆ?**

..........................

1–1 ನಂ (ಕ,ಗ).

I - - - - - - - - - - - - - - - - - - - - - - - - - - - - - - - - - - - - - - - - - - -

ಲೇಸೆನಿಸಿಕೊಂಡು–ಸಜ್ಜನ ಸಾತ್ವಿಕ ಸತ್ಪುರುಷನೆಂದೆನಿಸಿಕೊಂಡು, ಐದುದಿನ ಬದುಕಿದಡೇನು?–ಐದು ದಿವಸ ಬದುಕಿದರೆ ಸಾಲದೆ? ಅಷ್ಟೆ ಸಾಲದೆ? [ಅಷ್ಟೆ] ಸಾಕು. ಲೇಸೆನಿಸಿಕೊಂಡು–ಸಜ್ಜನ ಸಾತ್ವಿಕ ಸತ್ಪುರುಷನೆಂದೆನಿಸಿಕೊಂಡು, ನಾಲ್ಕುದಿನ ಬದುಕಿದಡೇನು?–[ನಾಲ್ಕುದಿನ ಬದುಕಿದರೆ] ಸಾಲದೆ? ಅಷ್ಟೆ ಸಾಲದೆ? [ಅಷ್ಟೆ] ಸಾಕು. ಲೇಸೆನಿಸಿಕೊಂಡು–ಸಜ್ಜನ ಸಾತ್ವಿಕ ಸತ್ಪುರುಷನೆಂದೆನಿಸಿಕೊಂಡು, ಮೂರು ದಿನ ಬದುಕಿದಡೇನು?–[ಮೂರು ದಿನ ಬದುಕಿದರೆ]ಸಾಲದೆ? ಅಷ್ಟೆ ಸಾಲೆದೆ? ಅಷ್ಟೆ ಸಾಕು. ಲೇಸೆನಿಸಕೊಂಡು–ಸಜ್ಜನ ಸಾತ್ವಿಕ ಸತ್ಪುರುಷನೆಂದೆನಿಸಿಕೊಂಡು, ಎರಡುದಿನ ಬದುಕಿದಡೇನು?–[ಎರಡು ದಿನ ಬದುಕಿದರೆ] ಸಾಲದೆ? ಅಷ್ಟೆ ಸಾಲದೆ? ಅಷ್ಟೆ ಸಾಕು ಎಂಬುದರ್ಥ.

● ಲೇಸೆನಿಸಿಕೊಂಡು–ಅಷ್ಟಾವರಣ ಅಂಗವ ಮಾಡಿಕೊಂಡು ಪಂಚಾಚಾರವೆ ಪ್ರಾಣವ ಮಾಡಿಕೊಂಡು ಆ ಪಂಚಾಚಾರಸ್ವರೂಪವಾದ ಪಂಚವಿಧ ಅಂಗದಲ್ಲಿ ಪಂಚವಿಧಲಿಂಗವ ಸಂಬಂಧವ ಮಾಡಿಕೊಂಡು ಪಂಚವಿಧಭಕ್ತಿವಿಡಿದಾಚರಿಸಿ ಪಂಚವಿಧಲಿಂಗಾಚರಣೆಯುಳ್ಳವರೆಂದು ಹೇಳಿಸಿಕೊಂಡು, ಐದುದಿನ ಬದುಕಿದಡೇನು?–ಐದುದಿವಸ ಬಾಳಿದರೇನು ಸಾಲದೆ? ಅಷ್ಟೆ ಸಾಲದೆ? ಅಷ್ಟೆ ಸಾಕು.

ಲೇಸೆನಿಸಿಕೊಂಡು–ಚತುರ್ವಿಧ ಅಂಗದಲ್ಲಿ ಚತುರ್ವಿಧಲಿಂಗವ ಸಂಬಂಧ ಮಾಡಿಕೊಂಡು ಚತುರ್ವಿಧಭಕ್ತಿಯನ್ನು ಮುಂದುಗೊಂಡಾಚರಿಸಿ ಚತುರ್ವಿಧಲಿಂಗದಾಚರಣೆ ಯುಳ್ಳವರೆಂದು ಹೇಳಿಸಿಕೊಂಡು, ನಾಲ್ಕುದಿನ ಬದುಕಿದಡೇನು?–[ನಾಲ್ಕುದಿನ ಬದುಕಿದರೆ] ಸಾಲದೆ? ಅಷ್ಟೆ ಸಾಕು. ಲೇಸೆನಿಸಿಕೊಂಡು–ತ್ರಿವಿಧಂಗದಲ್ಲಿ ತ್ರಿವಿಧಲಿಂಗಸಂಬಂಧವ ಮಾಡಿಕೊಂಡು ತ್ರಿವಿಧಭಕ್ತಿವಿಡಿದಾಚರಿಸಿ ತ್ರಿವಿಧಲಿಂಗದಾಚರಣೆಯುಳ್ಳವರೆಂದು ಹೇಳಿಸಿಕೊಂಡು, ಮೂಱುದಿನ ಬದುಕಿದಡೇನು?–[ಮೂಱುದಿನ ಬದುಕಿದರೆ] ಸಾಲದೆ? ಅಷ್ಟೇ ಸಾಲದೆ? ಅಷ್ಟೆ ಸಾಕು. ಲೇಸೆನಿಸಿಕೊಂಡು–ಅಂಗಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗವ ಸಂಬಂಧ ಮಾಡಿಕೊಂಡು ಅವಿರಳಜ್ಞಾನಕ್ರಿಯೆವಿಡಿದಾಚರಿಸಿ ಕ್ರಿಯಾಜ್ಞಾನಯುಳ್ಳವರೆಂದು ಹೇಳಿಸಿಕೊಂಡು, ಎರಡುದಿನ ಬದುಕಿದಡೇನು?–[ಎರಡುದಿನ ಬದುಕಿದರೆ] ಸಾಲದೆ? ಅಷ್ಟೆ ಸಾಲದೆ? ಅಷ್ಟೆ ಸಾಕು.

॥ಗ್ರಂಥ॥ ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು, ಶಾಂಕರಿ–ಎಲೆ ಸುಮುಖತ್ವವನುಳ್ಳ ಪಾರ್ವತಿಯೆ, ಶಿವಭಕ್ತಾನಾಂ–ಶಿವಭಕ್ತರುಗಳ, ಜೀವಿತಂ–ಬಾಳುವೆಯು, ಪಂಚದಿನಾನಿ ಚ–ಐದುದಿನ ಬದುಕಿರೇನು? ವರಂ–ಬಹು ಶ್ರೇಷ್ಠವು,,ಅಂತು–ಹಾಂಗೆ, ಭಕ್ತಿ ಹೀ[೧][ನಾಸ್ತು][೧]–ಭಕ್ತಿ ಬಹ್ಯರುಗಳು, ಅಜಕಲ್ಪ ಸಹಸ್ರೇಭ್ಯೋ–ಬ್ರಹ್ಮಕಲ್ಪ ಸಹಸ್ರ ವರುಷ ಪರಿಯಂತರವು ಬಾಳಿದರೂ ಹದ್ದು ಗೂಗಿ ಬಾಳಿದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಿಲ್ಲವೂ ಎಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಕೂಡಲಸಂಗನಶರಣರ–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರ, ವಚನದಲ್ಲಿ–ವಾಕ್ಯಾನುಭಾವದಲ್ಲಿ, ಲೇಸೆನಿಸಿಕೊಂಡು–ಸರ್ವಾಚಾರಸಂಪತ್ತುವಿಡಿದಾಚರಿಸಿ ಈ ಲಿಂಗವೆ ಪ್ರಾಣ, ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು. ಈ ಲಿಂಗ ಹೋದರೆ ಈ ಲಿಂಗದೊಡನೆ ಪ್ರಾಣವ ಕೊಟ್ಟೇನು. ಈ ಲಿಂಗವಲ್ಲದನ್ಯದೈವದ ಭಜನೆಯ ಮಾಡಬಾರದೆಂಬಂಥ ಏಕಲಿಂಗನೈಷ್ಠಾಪರತ್ವವುಳ್ಳಾತನೆಂದು ಹೇಳಿಸಿಕೊಂಡು, ಒಂದುದಿನ ಬದುಕಿದಡೆ ಸಾಲದೆ?–[ಒಂದುದಿನ ಬದುಕಿದರೆ ಸಾಲದೆ?] ಅಷ್ಟೆ ಸಾಲದೆ? ಅಷ್ಟೆ ಸಾಕು.

..........................

೧–೧ ನಂ (ಕ,ಗ).

---

೧೫೮

**ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ; ಇಲ್ಲಿ ಸಲ್ಲುವರು ಅಲ್ಲಿ ಸಲ್ಲುವರಯ್ಯಾ; ಇಲ್ಲಿ ಸಲ್ಲದವರು ಅಲ್ಲಿ[1] ಸಲ್ಲರಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - -

ಮರ್ತ್ಯಲೋಕವೆಂಬುದು–ಮಾನವಲೋಕವೆಂದು ಹೇಳುವಂತಹದು, ಕರ್ತಾರನ ಕಮ್ಮಟವಯ್ಯಾ–ಟೆಂಕಸಾಲೆಯ ಮನೆಯಾಗಿರ್ಪುದೆಂಬಲ್ಲಿ ದೊಡ್ಡ ದೊಡ್ಡ ದೊರೆಗಳಿರುವಂಥ ಪ್ಯಾಟಿ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ವರಹ ಹೊನ್ನು ರೂಪಾಯಿಗಳು ಹುಟ್ಟುವಂಥ ಟೆಂಕಸಾಲೆ ಮನೆಗಳಿರ್ಪುವು. ಇಲ್ಲಿ–ಟೆಂಕಸಾಲೆಯ ಮನೆಗಳಲ್ಲಿ, ಸಲ್ಲುವ–ವರಹ ಹೊನ್ನು

ರೂಪಾಯಿಗಳು ನೋಟಕ್ಕೂ ತೂಕಕ್ಕೂ ಸಲುವಳಿಯಾದ ನಿಜನಾಣ್ಯವು, ಅಲ್ಲಿ ಸಲ್ಲುವವಯ್ಯಾ–ಐವತ್ತಾರು ದೇಶದ ಪ್ಯಾಟಿ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ಮಳಿಗೆ ಮನೆಗಳಿಗೆ ಒಯ್ದು ಕೊಟ್ಟು ಎಚ್ಚವನ್ನು ತೂಗಿಕೊಡೆಂದು ಕೊಟ್ಟಲ್ಲಿ ಅದನ್ನು ತೆಗೆದುಕೊಂಡು ಎಚ್ಚವನ್ನು ತೂಗಿಕೊಡುತ್ತಿಹರಯ್ಯಾ. ಇಲ್ಲಿ–ಟೆಂಕಸಾಲೆಯ ಮನೆಯಲ್ಲಿ, ಸಲ್ಲದ–ವರಹ ಹೊನ್ನು ರೂಪಾಯಿಗಳು ನೋಟಕ್ಕೂ ತೂಕಕ್ಕೂ ಸಲುವಳಿಯಲ್ಲದ ವೆಂಗಿ ವರಹವು, ಅಲ್ಲಿ ಸಲ್ಲವಯ್ಯಾ–ಐವತ್ತಾರುದೇಶದ ಪ್ಯಾಟಿ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ಮಳಿಗೆ ಮನೆಗಳಿಗೆ ಒಯ್ದುಕೊಟ್ಟು ಎಚ್ಚವನ್ನು ತೂಗಿಕೊಡೆಂದು ಕೊಟ್ಟಲ್ಲಿ ಅದನ್ನು ತೆಗೆದುಕೊಂಡು ಎಚ್ಚವನ್ನು ತೂಗಿಕೊಟ್ಟಾರೆ? ತೂಗಿಕೊಡರು; ಇದು ವೆಂಗಿ ವರಹವೆಂದು ಕಳೆದು [೧]ಬಿಸುಟು[೧]ತ್ತಿಹರೆಂಬ ದೃಷ್ಟೋಪಮಾನದ ಹಾಂಗೆ,

● ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ ಎಂಬಲ್ಲಿ ಶಿವನು ತನ್ನಂಶವಾದಾತ್ಮನನು ಮರ್ತ್ಯಲೋಕದಲ್ಲಿ ದೇಹಸಂಬಂಧಿಯಾಗಿ ಹುಟ್ಟಿಸಿ ಸತ್ಯಸದಾಚಾರವಿಡಿದಾಚರಿಸಿ ಬನ್ನಿಯೆಂದು ಕಳಿಸಿಕೊಟ್ಟಿದ್ದಲ್ಲಿ; ಇಲ್ಲಿ ಸಲ್ಲುವರು–ಮರ್ತ್ಯಲೋಕದಲ್ಲಿ ಸತ್ಯಸದಾಚಾರವಿಡಿದಾಚರಿಸಿ ಭಕ್ತಮಾಹೇಶ್ವರರ ಕವಳಿಗೆ ಯೋಗ್ಯವಾದಂಥವರು, ಅಲ್ಲಿ ಸಲ್ಲುವರಯ್ಯಾ–ಕೈಲಾಸಲೋಕದಲ್ಲಿ ಸಲ್ಲಾ ಪ್ರಮಥಗಣಂಗಳು ಪರಮೇಶ್ವರನ ಸಭಾಮಧ್ಯದಲ್ಲಿ ಕುಳಿತುಕೊಂಡು ಈ ಭಕ್ತನು ಮರ್ತ್ಯಲೋಕದಲ್ಲಿ ಸತ್ಯಸದಾಚಾರವಿಡಿದಾಚರಿಸಿ ಭಕ್ತಮಾಹೇಶ್ವರರ ಕವಳಿಗೆ ಯೋಗ್ಯನಾಗಿ ಬಂದಾನೆಂದು ತಮ್ಮ ಕವಳಿಗೆಗೆ ಯೋಗ್ಯನ ಮಾಡಿಕೊಳುತ್ತಿಹರಯ್ಯಾ. ಇಲ್ಲಿ–ಮರ್ತ್ಯಲೋಕದಲ್ಲಿ, ಸಲ್ಲದವರು–ಮಾಡಬಾರದಂಥ ದೋಷದ್ರೋಹವ ಮಾಡಿ ಭಕ್ತ ಮಹೇಶ್ವರರುಗಳಿಂದ ಹೊರಗೆ ಹಾಕಿಸಿಕೊಂಡಂಥವರುಗಳು, ಅಲ್ಲಿ–ಕೈಲಾಸಲೋಕದಲ್ಲಿ, ಸಲ್ಲರಯ್ಯಾ ಪರಮೇಶ್ವರನ ಸಭಾಮಧ್ಯದಲ್ಲಿ ಕುಳಿತುಕೊಂಡಂಥ ಎಲ್ಲ ಪ್ರಮಥಗಣಂಗಳು ನೀನು ಮರ್ತ್ಯಲೋಕದಲ್ಲಿ ಮಾಡಬಾರದಂಥ ದೋಷದ್ರೋಹವನ್ನು ಮಾಡಿ ಎಲ್ಲ ಭಕ್ತಮಾಹೇಶ್ವರರುಗಳಿಂದೆ ಹೊರಗೆ ಹಾಕಿಸಿಕೊಂಡು ಬಂದಿದ್ದೀ, ನೀ ಅಲ್ಲೆ ಹೋಗಿ [೨]ಸೈ[೨]ಸಲ್ಲ ಮಾಡಿಕೊಂಡು ಬಾ ಹೋಗೆಂದು ಹಿಂದಕ್ಕೆ ತಿರಿಗಿಸಿ ಕಳುಹಿಸಿಕೊಡುತ್ತಿಹರಯ್ಯಾ, ಕೂಡಲಸಂಗಮದೇವಾ–ಪರಶಿವಲಿಂಗವೆ.

೧–೧ ಬಿಷ್ಟು (ಕ,ಗ). ೨–೨ ಸಯ್ಯ (ಕ).

IV- - - - - - - - - - - - - - - - - - - - - - - - - - - - - - - - - - - - - - - - -

..........................

1+ ಯೂ (ತ).

ಇಹದಲ್ಲಿ ಸತ್ಯವಾಗಿ ಗುರುಲಿಂಗಜಂಗಮವ ನಂಬಿದರೆ ಪರದಲ್ಲಿ ಆವ ಸಂದೇಹವಿಲ್ಲಯೆಂಬುದೀ ವಚನದರ್ಥ.

---

**ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು [1]ಸಗಣಿಗೆ[1] ಸಾವಿರ ಹುಳ ಹುಟ್ಟವೆ ದೇವಾ? ಕಾಡಮೃಗವೊಂದಾಗಿರಲಾಗದೆ, ದೇವಾ? ಊರ ಮೃಗವೊಂದಾಗಿರಲಾಗದೆ, [2]ಹರನೆ?[2] ನಮ್ಮಕೂಡಲಸಂಗನಶರಣರು ಇಲ್ಲದ ಊರು ದೇಶ ವನವಾಸ ನರವಿಂಧ್ಯ [3]ಕಾಣಿರಣ್ಣಾ ![3]**

I - - - - - - - - - - - - - - - - - - - - - - - - - - - - - - - - - - - - - - - - - - -

ಶಿವಚಿಂತೆ–ಲಿಂಗಧ್ಯಾನ ಲಿಂಗಸ್ಮರಣೆಯು, ಶಿವಜ್ಞಾನವು, ಪರಶಿವಜ್ಞಾನ ಮತ್ತಂ, ಶಿವಚಿಂತೆ–ಇಷ್ಟಲಿಂಗ ಸಂಬಂಧವಾದ ಸುಜ್ಞಾನವು, ಇಲ್ಲದ–ಉಂಟಾಗಿಲ್ಲದ, ಮನುಜರು ಮನುಷ್ಯರು, ಸಗಣಿಗೆ ಸಾವಿರ ಹುಳ ಹುಟ್ಟವೆ–ಗೋವುಯೆಂಬುವಂತಹದು ವಸಂತಕಾಲದಲ್ಲಿ ಆರುತಾಸು ಹೊತ್ತಿನಾಗ ಮಹಾಬಯಲಲ್ಲಿ ಸಗಣಿಯನ್ನು ಹಾಕಿದಲ್ಲಿ ಮೇಲೆ ಬಿಸಿಲು ಭಡಾಳಿಸಿ ಕಾಯ್ದಹಾಂಗೆಲ್ಲ ಹುಳಗಳು ಹುಟ್ಟುತ್ತಿಹವು. ಅಷ್ಟರೊಳಗೆ ಆತ್ಮರುಗಳು ಕಂಡು ಕಲಸಿ ಮುದ್ದಿಯನ್ನು ಮಾಡಿ ಕುರುಳು ಹಚ್ಚಿಬಿಟ್ಟಲ್ಲಿ ಹೇಂಗೆ ಲಯವಾಗುತ್ತಿಹವೋ ಹಾಂಗೆ, ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು ಪ್ಯಾಟಿ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ನೂರಾರಕ್ಕೆ ಹಿಂಡುಗಟ್ಟಿಕೊಂಡಿದ್ದರೂ ಸಗಣಿಗೆ ಸಾವಿರ ಹುಳ ಹುಟ್ಟಿ ಮಧ್ಯಾಹ್ನ ಕಾಲಕ್ಕೆ ಲಯವಾಗಿ ಹೋದಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲವು, ದೇವಾ?–ಎಲೆ ಒಡೆಯನೆ.

ಕಾಡಮೃಗವೊಂದಾಗಿರಲಾಗದೆ–ಅಡವಿಯೊಳಗಿರುದಂಥ ಹುಲಿ ಕರಡಿ ಕಾಡಾವು ಕಾಡೆಮ್ಮೆ ಚಿಗರಿ ಸಾರಂಗ ಮೊದಲಾದವು ನೂರಾರಕ್ಕೆ ಜೋಡುಗಟ್ಟಿಕೊಂಡು ಹೇಂಗೆ ತಿರುಗುತ್ತಿಹವೋ ಹಾಂಗೆ, ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು ನೂರಾರಕ್ಕೆ ಜೋಡುಗಟ್ಟಿಕೊಂಡು ಬೀದಿ ಬಾಜಾರದಲ್ಲಿ ತಿರುಗಾಡಿದರೂ ಆ ಕಾಡಮೃಗವೊಂದಾಗಿದ್ದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಿಲ್ಲವು, ದೇವಾ?–ಎಲೆ ಒಡೆಯನೆ. ಊರ ಮೃಗವೊಂದಾಗಿರಲಾಗದೆ–ಊರೊಳಗಿರುವಂಥ ಕುರಿ ಕುಕ್ಕಟ ಶುನಿ ಸೂಕರ ಖರ ಮಾರ್ಜಾಲ ಮೊದಲಾದಂಥವು ಹತ್ತೆಂಟಕ್ಕೆ ಜೋಡುಗಟ್ಟಿಕೊಂಡು ಹೇಂಗೆ ತಿರುಗುತ್ತಿಹವೊ ಹಾಂಗೆ, ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು ಹತ್ತೆಂಟಕ್ಕೆ ಜೋಡುಗಟ್ಟಿಕೊಂಡು ಓಣಿಸಾಲಲ್ಲಿ ತಿರುಗಾಡಿದರೂ ಆ ಊರ ಮೃಗವೊಂದಾಗಿದ್ದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಿಲ್ಲವು, ಹರನೆ?–ದುರಿತಧ್ವಂಸಿಯಾದಂಥ ದೇವನೆ. ನಮ್ಮ ಕೂಡಲಸಂಗನ ಶರಣರು–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರು, ಇಲ್ಲದ–ಉಂಟಾಗಿಲ್ಲದ, ಊರು–ಗ್ರಾಮವು, ದೇಶ–ರಾಷ್ಟ್ರವು, ವನವಾಸ–ಸುಡುಗಾಡಿಗೆ ಸಮಾನವು, ನರವಿಂಧ್ಯ ಕಾಣಿರಣ್ಣಾ!–ಜನಾರಣ್ಯ ಕಂಡಿರಯ್ಯಾ.

IV- - - - - - - - - - - - - - - - - - - - - - - - - - - - - - - - - - - - - - - - - - -

1–1 ಸಗಣಕ್ಕೆ (ತ). 2–2 ಗುರುವೆ (ತ). 3–3 ಕಾಣಾ (ತ).

ಪರಮಜ್ಞಾನಿಯಲ್ಲದ ಮನುಷ್ಯರು ರೋಗಿನರರಾಗಿ ಉಳಿದ ಯೋನಿಯಲ್ಲಿ ಕೋಟಿ ಹುಟ್ಟಿದರೆ ಫಲವಿಲ್ಲವೆಂಬುದೀ ವಚನದರ್ಥ.

# ೧೬೦

ಹೊತ್ತಾಜಿ[೧] ಎದ್ದು [1]ಲಿಂಗದೇವನ ದೃಷ್ಟಿ[2]ಯಾ[2]ರೆ ನೋಡದವನ ಸಂಸಾರವೇನವನ? ಬಾಳುವೆಣನ ಬೀಳುವೆಣನ ಸಂಸಾರವೇನವನ? ನಡೆವೆಣನ ನುಡಿವೆಣನ ಸಂಸಾರವೇನವನ? ಕರ್ತೃ ಕೂಡಲಸಂಗ[3]ಮದೇವಾ,[3] ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?

I - - - - - - - - - - - - - - - - - - - - - - - - - - - - - - - - - - - - - - - - - - - -

ಹೊತ್ತಾಜಿ ಎದ್ದು-ಪ್ರಾತಃಕಾಲದಲ್ಲಿ ಉತ್ಥಾನಂಗೆಯ್ದು, ಲಿಂಗದೇವನ-ಗುರುಮುಖದಿಂ ಬಂದಂಥ ಇಷ್ಟಮಹಾಲಿಂಗವನ್ನು, ದೃಷ್ಟಿ-ನೇತ್ರದಿಂದ, ಯಾರೆ-ಚೆನ್ನಾಗಿ, ನೋಡದವನ-ಅನಿಮಿಷದೃಷ್ಟಿಯಿಂ ನಿರೀಕ್ಷಣೆಯ ಮಾಡಬೇಕು,ಮಾಡದವನ; ಸಂಸಾರವೇನವನ?-ಅವನ ದೇಹ ಸಂಸಾರ [೧]ಪ್ರಪಂಚುಯಿದ್ದು[೧] ಯಾತಕ್ಕೂ ಪ್ರಯೋಜನವಲ್ಲವು. ಬಾಳುವೆಣನ-ಅವನು ಉಂಬುತ್ತ ಉಡುತ್ತ ಸುಖಸಂತೋಷದಲ್ಲಿದ್ದರೂ ಮೃತಘಟಜೀವಿಯು, ಬೀಳುವೆಣನ-ಅವನು ಪಟ್ಟಮಂಚ ಲೇಪು ಸುಪ್ಪತ್ತಿಗೆಯ ಮೇಲೆ ಬಿದ್ದುಕೊಂಡಿದ್ದರೂ ಮೃತಘಟಜೀವಿಯು, ಸಂಸಾರವೇನವನ?-ಅವನ ದೇಹ ಸಂಸಾರವಿದ್ದೂ ಯಾತಕ್ಕೂ ಪ್ರಯೋಜನವಲ್ಲವು.

ನಡೆವೆಣನ-ಅವನು ದಾರಿ ಬಟ್ಟೆಗಳ ಗಮಿಸುವಲ್ಲಿ ದಿಟಪುಟ ಚೈತನ್ಯವಾಗಿದ್ದರೂ ಮೃತಘಟ ಜೀವಿಯು, ನುಡಿವೆಣನ-ರಾಜಸಭೆ ದೇವಸಭೆಗಳಲ್ಲಿ ಕುಳಿತುಕೊಂಡು ನ್ಯಾಯನಿಗದಿಯನ್ನು ತಿದ್ದಿ ತೀರಿಸಿ ಒಪ್ಪವಿಟ್ಟು ಹೇಳುವಲ್ಲಿ ಪ್ರವೀಣನಾಗಿದ್ದರೂ ಮೃತಘಟ ಜೀವಿಯು, ಸಂಸಾರವೇನವನ?-ಅವನ ದೇಹಸಂಸಾರವಿದ್ದೂ ಯಾತಕ್ಕೆ ಪ್ರಯೋಜನ? ಪ್ರಯೋಜನವಲ್ಲವು. ಕರ್ತೃ-ಪಂಚಕೃತ್ಯಂಗಳಿಗೆ ಒಡೆಯನಾದ, ಕೂಡಲಸಂಗಮದೇವಾ-ಎಲೆ ಪರಶಿವ ಲಿಂಗವೆ ನಿಮ್ಮ- ಗುರುಮುಖದಿಂದ ಬಂದ ಇಷ್ಟಮಹಾಲಿಂಗದ, ತೊತ್ತುಗೆಲಸವ ಮಾಡದವನ-ಲಿಂಗವೇ ಕರ್ತೃವಾಗಿ ತಾನೇ ಭೃತ್ಯನಾಗಿ ಕರ್ತೃಭೃತ್ಯ ಭಾವವನ್ನು ಮುಂದುಗೊಂಡು ಲಿಂಗಪೂಜೆಯ ಮಾಡಬೇಕು. ಮಾಡದವನ, ಸಂಸಾರವೇನವನ?-ಅವನ ದೇಹಸಂಸಾರವಿದ್ದೂ ಯಾತಕ್ಕೆ ಪ್ರಯೋಜನ? ಪ್ರಯೋಜನವಲ್ಲವು.

..........................

೧-೧ ಏದ್ದು (ಗ).

III- - - - - - - - - - - - - - - - - - - - - - - - - - - - - - - - - - - - - - - - - - - -

2-2 ವಾ(ಟ). 3-3 X (ಟ).

..........................

ಹೊತ್ತಾಜಿ ಎದ್ದು-ಪ್ರಾತಃಕಾಲದಲ್ಲಿ ಉತ್ಥಾನಂಗೆಯ್ದು, ಲಿಂಗದೇವನ-ಪರಶಿವಲಿಂಗಮೂರ್ತಿಯನು, ದೃಷ್ಟಿವಾರೆ-ನೇತ್ರಪೂರಿತವಾಗಿ, ನೋಡದವನ-ನಿರೀಕ್ಷಣೆಯ ಮಾಡದಿರ್ದಾತನ, ಅವನ-ಆತನ, ಸಂಸಾರವೇನು?-ಬಾಳುವೆಯೇನು? [೨]ಅನೇಕಕಾಲ ಜೀವಿಸಿದೊಡೆಯು ಶಿವಪ್ರಸಾದ ಸೇವನೆ ಇಲ್ಲದ ಶ್ರವವನು ಎಂಬುದೀಗ [೩]ಬಾಳುವೆಣನ ಎಂಬ ಶಬ್ದಕ್ಕರ್ಥ.[೩] [೪]ಆತ್ಮಚೈತನ್ಯವಿರ್ದಡೂ ಶಿವಚೈತನ್ಯರಹಿತವಾದ [೫]ಶ್ರವವು ಎಂಬುದೀಗ[೫] ಬೀಳುವೆಣನ ಎಂಬ ಶಬ್ದಕ್ಕರ್ಥ. ಅವನ-ಅಂತಾತನ, ಸಂಸಾರವೇನು? -ಜೀವನಾರ್ಥವೇನು?[೨]

ಅಟಮಟಪಟುಗಮನತ್ವದಿಂದ ತಿರಿಗಾಡಿದರೆಯು ಶಿವೋಪದೇಶವಿಲ್ಲದ ಶ್ರವವು ಎಂಬುದೀಗ ನಡೆವಣನ ಎಂಬ ಶಬ್ದಕ್ಕರ್ಥ.[೭] ಬಹುಭಾಷಾಕಳಾ ಪ್ರಸಂಗವ ಮಾಡಿದರೆಯೂ ಶಿವಮಂತ್ರವಾಕ್ಯ ಚೈತನ್ಯರಹಿತವಾದ ಶ್ರವವು ಎಂಬುದೀಗ ನುಡಿವೇಣನ ಎಂಬ ಶಬ್ದಕ್ಕರ್ಥ. ಅವನ–ಅಂತಾತನ, ಸಂಸಾರವೇನು?--ಬಾಳುವೆಯೇನು? ಕರ್ತೃ ಒಡೆಯನಾದಂಥ, ಕೂಡಲಸಂಗ[೮]–ಎಲೆ ಪರಶಿವಲಿಂಗವೆ, ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?:[ನಿಮ್ಮ ತೊತ್ತುಗೆಲಸವ ಮಾಡದವನ–] ನಿಮ್ಮ ಸಂಬಂಧವಾದ ಗುರುಲಿಂಗಜಂಗಮದ ಭೃತ್ಯತ್ವವನೆಸಗದಿರ್ದಾತನ, ಸಂಸಾರವೇನು?--ಸಂಸ್ಕೃತಿಯೇನು?

.........................

೨+ ಬಾಳುವೆಣನ (ಟ). ೩–೩ X (ಡ). ೪+ ಬೀಳುವೆಣನ (ಟ). ೫–೫ ಶ್ರವವುಂಟೆಂಬುದೀಗ (ಡ). ೬+ ನಡೆವೆಣ (ಟ). ೭+ನುಡಿವೆಣನ (ಟ). ೮+ ಮದೇವಾ (ಡ).

IV- - - - - - - - - - - - - - - - - - - - - - - - - - - - - - - - - - - - - - - - - - - - -

1+ ಶಿವ(ತ). 2–2 ವಾ(ತ).

.........................

ತ್ರಿಸಂಧ್ಯಾಕಾಲದಲ್ಲಿ ಲಿಂಗವ ಪೂಜಿಸಿ ಲಿಂಗದಲ್ಲಿ ಮನವಡಗಿದ್ದೆ ಸತ್ಯ. ಉಳಿವನು ಹೀನನು ಎಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಸಕಲೈಶ್ವರ್ಯದಿಂದ ಬ[ದು]ಕುತ್ತಿರ್ದೊಡೆಯೂ ಇಷ್ಟಲಿಂಗದ ನಿರೀಕ್ಷಣೆಯೆಂಬ ಚೈತನ್ಯವಿಲ್ಲದ ಸಬವೆಂಬುದೀಗ ಬಾಳುವೆಣನ ಎಂಬ ಶಬ್ದಕ್ಕರ್ಥ. ಮಲತ್ರಯಂಗಳಲ್ಲಿ ಮಗ್ನವಾಗಿ ಪ್ರಾಣಲಿಂಗ ನಿರೀಕ್ಷಣೆಯೆಂಬ ಚೈತನ್ಯವಿಲ್ಲದ ಸಬವೆಂಬುದೀಗ ಬೀಳುವೆಣನ ಎಂಬುದರ್ಥ. ಇತರಾಚಾರದಲ್ಲಿ ವರ್ತಿಸುತೆ ಸತ್ಕ್ರಿಯಾಚಾರವೆಂಬ ಸಬವೆಂಬುದೀಗ ನಡೆವೆಣನ ಎಂಬುದರ್ಥ. ಬಹುಭಾಷಾ ಕಳಾಪ್ರಸಂಗವ ಮಾಡಿದೊಡೆಯೂ ಸಮ್ಯಗ್‌ಜ್ಞಾನಾಚಾರವೆಂಬ ಚೈತನ್ಯವಿಲ್ಲದ ಸಬವೆಂಬುದೀಗ ನಡೆವೆಣನ ಎಂಬುದರ್ಥ.

.........................

೧+ ಇದು ಹಿಂದಳ ವಚನ (ಪ) ಈ ಟೀಕು ೧೬೩ನೆ ವಚನದ ನಂತರ ಬಂದಿದೆ(ಸಂ).

---

೧೬೧

**ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ, ನೆಲನಾಳ್ವನ ಹೆಣನೆಂದಡೆ ಒಂದಡಕೆಗೆ ಕೊಂಬುವರಿಲ್ಲ ನೋಡಯ್ಯಾ! ಮೊಲನಿಂದ ಕರಕಷ್ಟ ನರನ ಬಾಳುವೆ! ಸಲೆ ನೆಂಬೊ ನಮ್ಮ ಕೂಡಲಸಂಗಮದೇವನ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ವ್ಯಾಧನೊಂದು ಮೊಲನ ತಂದಡೆ–ಒಬ್ಬಾನೊಬ್ಬ ಕಿರಾತನು ಅಡವಿಗೆ ಹೋಗಿ ಬೇಂಟೆಯನಾಡಿ ಒಂದು ಶಶಕನ ಕೊಂದು ಬೀದಿ ಬಾಜಾರಕ್ಕೆ ತೆಗೆದುಕೊಂಡುಬಂದರೆ, ಸಲುವ–ಸಲುವಳಿಯಾಗುವ, ಹಾಗಕ್ಕೆ–ನಾಲ್ಕು ದುಡ್ಡಿಗೆ, ಬಿಲಿವರಯ್ಯಾ–ನನಗಾಗಬೇಕು ತನಗಾಗಬೇಕೆಂದು ಓಡ್ಯಾಡಿ ತೆಗೆದು ಕೊಂಬುವರಯ್ಯಾ, ನೆಲನಾಳ್ವನ ಹೆಣನೆಂದಡೆ–ಪೃಥ್ವೀಪತಿಯಾದ ದೊರೆ ಸತ್ತು ಬಿದ್ದೈದಾನೆ ಹತ್ತೆಂಟು ಲಕ್ಷ ವರಹವ ಕೊಟ್ಟು ತೆಗೆದುಕೊಂಡು ಹೋಗಿರಿ ಎಂದು ಕರದಲ್ಲಿ ಅದಕ್ಕೂ ಒಲ್ಲೆವೆಂಬುವರು, ಆದರೆ ಹತ್ತೆಂಟು ಸಾವಿರ ರೂಪಾಯಿಗಳ ಕೊಟ್ಟು ತೆಗೆದುಕೊಳ್ಳಿರಿ ಎಂದಲ್ಲಿ ಅದಕ್ಕೂ ಒಲ್ಲೆನೆಂಬುವರು. ದಹನವ ಮಾಡಲ್ಪಟ್ಟ ದೇಹವಾಯಿತ್ತಾದೊಡೆ ಗಂಧದ ಕೊರಡು ಬೇಕಾಗುತ್ತೈತೆ ಎಣ್ಣೆಯು ಕೊಡಗಳು ಬೇಕಾಗುತ್ತೈದಾವೆ ಹತ್ತಿಪ್ಪತ್ತು ವರಹ ಖರ್ಚಾಗುತ್ತೈದಾವೆಯೆಂದು ಅದಕ್ಕೂ ಒಲ್ಲೆವೆಂಬುವರು. ನಿಕ್ಷೇಪವ ಮಾಡುವಂಥ ದೇಹವಾದರೆ ಗುಂಡಿಕೆ ತೆಗೆಸಬೇಕಾಗುತ್ತೈತೆ, ಒಲ್ಲೆವೆಂದು ಹೇಳುವರು. ಒಂದಡಕೆಗೆ ಕೊಂಬುವರಿಲ್ಲ ನೋಡಯ್ಯಾ!–ಕಟ್ಟಕಡೆಗೆ ಒಂದು ಗೋಟಡಕೆಯ ಕೊಟ್ಟಾದರೂ ತೆಗೆದುಕೊಂಡು ಹೋಗಿರೆಂದು ಹೇಳಿದರೆ ತೆಗೆದುಕೊಂಡು ಹೋದಾರೆ? ಹೊಗರಯ್ಯಾ.

ಮೊಲನಿಂದ–ಶಶಕನಿಗಿಂದಲೂ, ಕರಕಷ್ಟ–ಅತ್ಯಂತ ಕ್ಷೀಣವು, ನರನಬಾಳುವೆ!–ಮನುಷ್ಯನ ದೇಹವು, ಕೂಡಲಸಂಗಮದೇವನ–ಇಷ್ಟಮಹಾಲಿಂಗವನು, ಸಲೆ–ಚೆನ್ನಾಗಿ, ನಂಬೋ–ವಿಶ್ವಾಸಿಸಿ ಇಷ್ಟಾರ್ಥಸಿದ್ಧಿಯನ್ನು ಹಡದುಕೋ!

III- - - - - - - - - - - - - - - - - - - - - - - - - - - - - - - - - - - - - - - - - - - - - -

ನೆಲನಾಳ್ದನ–ರೂಪಾತಿಶಯ ವಿದ್ಯಾತಿಶಯ ಭಾಗ್ಯಾತಿಶಯ ಶ್ರೇಷ್ಠಾತಿಶಯವನುಳ್ಳ ರಾಜನ ಕುಣಪವೆಂದೊಡೆ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ರಕ್ತಮಾಂಸ ದೇಹದಲ್ಲಿ ಹಿರಿದಾದುದು. ಇದಱ ಸಂಗವ ತೊಲಗಿಸಿ ಲಿಂಗವ ಕೂ [೧][ಡುವು][೧] ದೆ ಅತಿಶಯವೆಂಬುದೀ ವಚನದರ್ಥ.

..........................

೧–೧ ಡ(ತ).

V- - - - - - - - - - - - - - - - - - - - - - - - - - - - - - - - - - - - - - - - - - - - - -

ವಿದ್ಯಾತಿಶಯ ಭಾಗ್ಯಾತಿಶಯ ಶ್ರೇಷ್ಠಾತಿಶಯವೆಂಬುದೀಗ ನೆಲನಾಳ್ವನ ಹೆಣನೆಂದಡೆ ಎಂಬುದರ್ಥ.

---

೧೬೨

**ಉತ್ಪತ್ತಿ ಶುಕ್ಲಶೋಣಿತದಿಂದಾದ ಲಜ್ಜೆ ಸಾಲದೆ? ಮತ್ತೆ ದುರಿತಂಗಳ ಹೊರುವ ಹೆಗ್ಗತನವೇಕಯ್ಯಾ? ಮೃತ್ಯುವಿನ ಬಾಯಿಗೆ [1]ಒಳಗಾಗಲೇಕೆ?[1] ಒತ್ತೊತ್ತೆಯ ಜನನವ ಗೆಲುವೊಡೆ ಕರ್ತನನ ಪೂಜಿಸು ನಮ್ಮ ಕೂಡಲಸಂಗಮದೇವನ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಉತ್ಪತ್ತಿ–ಬ್ರಹ್ಮನ ಸೃಷ್ಟಿಯು, ಶುಕ್ಲ–ತಂದೆಯ ರೇತಸ್ಸು, ಶೋಣಿತ[ದಿಂದ]– ತಾಯಿಯ ರುಧಿರದಿಂದ, ಆದ–ಉಂಟಾದ, ಲಜ್ಜೆ–ತಂದೆಯ ಶುಕ್ಲ ತಾಯಿಯ ಶೋಣಿತದಿಂದ ಘಟ್ಟಿಗೊಂಡು ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಬಂದಂಥ, ಲಜ್ಜೆ–ಅಭಿಮಾನವು, ಸಾಲದೆ? –ಅಷ್ಟೇ ಸಾಲದೆ? ಅಷ್ಟೆ ಸಾಕು. ಮತ್ತೆ–ಮರಳಿ, ದುರಿತಂಗಳ–ಅಷ್ಟೋತ್ತರಶತವ್ಯಾಧಿಗಳ, ಹೊರುವ–ಹೊತ್ತುಕೊಂಬುವಂಥ, ಹೆಗ್ಗತನವೇಕಯ್ಯಾ?–ಹೆಡ್ಡ ಬುದ್ಧಿಯೇನು ಕಾರಣಕಯ್ಯಾ? ಮೃತ್ಯುವಿನ ಬಾಯಿಗೆ–ಯಮನ ಶಿಕ್ಷೆಯೆಂಬ ರಸನೆಗೆ, ಒಳಗಾಗಲೇಕೆ?–ತುತ್ತಾಗುವಂಥದೇನು ಕಾರಣಕ್ಕೆ?

ಒತ್ತೊತ್ತೆಯ–ಮೇಲೆ ಮೇಲೆ ಸದೆಬಡೆವ, ಜನನವ–ಉತ್ಪತ್ತಿಯನ್ನು, ಗೆಲುವೊಡೆ–ಜಯಿಸುವೊಡೆ, ಕರ್ತನಾದ–ಪಂಚಕೃತ್ಯಂಗಳಿಗೊಡೆಯನಾದಂಥ, ಕೂಡಲಸಂಗಮದೇವನ–ಇಷ್ಟ ಮಹಾಲಿಂಗವನ್ನು, ಪೂಜಿಸು–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಹಡೆದುಕೊ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

1–1 ತುತ್ತಾಗಲೇಕಯ್ಯಾ (ತ).

........................

ಪ್ರತ್ಯಕ್ಷ ನರಕದೇಹವನನುಭವಿಸುತ್ತ ಮತ್ತೆಯೂ ಪಾಪವ ಮಾಡಿ ಕಾಲನ ಕೈಯ ಬಡಿಯಿಸಿಕೊಂಡು ನರಕಕ್ಕಿಳಿವುದು ಬುದ್ಧಿಯಲ್ಲ. ಜಗದ ಕರ್ತ ಶಿವನ ಪೂಜಿಸಿದಡೆ ಜನನ ಮರಣವಿಲ್ಲ ಮನುಜಾಯೆಂಬುದೀ ವಚನಾರ್ಥ.

---

೧೬೩

**ಮನವೆ ಸರ್ಪ, ತನುವೆ ಹೇಳಿಗೆ, ಹಾವಿನೊಡತಣ ಹುದುವಾಳಿಗೆ! ಇನ್ನಾವಾಗ ಕೊಂದಿಹುದೆಂದಜಿಯೆ; ಇನ್ನಾವಾಗ ತಿಂದಿಹುದೆಂದಜಿಯೆ! ನಿಚ್ಚ ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ ಅದೇ ಗಾರುಡ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಮನವೆ–ತನುವಿನಲ್ಲಿ ನೆನಹು ರೂಪವಾದ [1]ಚಿತ್ತವೆ,[1] ಸರ್ಪ–ಅದೇ ಮನೋಕುಂಡಲಿ ಸರ್ಪನು. ತನುವೆ–ದೇಹವೆ, ಹೇಳಿಗೆ–ಅ ಮನೋ ಕುಂಡಲಿಸರ್ಪನ ಮಡಗಿಕೊಂಡಿರುವುದಕ್ಕೆ

ಪುಟ್ಟಿಯಾಗಿರುವುದು. ಹಾವಿನೊಡತಣ ಹುದುವಾಳಿಗೆ–ಆ ಮನೋಕುಂಡಲಿಸರ್ಪನ ಸಖಿತ್ವವನ್ನು ಮುಂದುಗೊಂಡು ಚರಿಸಲ್ಪಟ್ಟ ಜೀವನಿಗೆ ಕಾಲಕಾಮರ ಶಿಕ್ಷೆವುಂಟಾಗುತ್ತಿಹುದು. ಇನ್ನಾವಾಗ ಕೊಂದಿಹುದೆಂದು–ಇನ್ನಾವಾಗ ಮರಣದಲ್ಲಿ ತಂದು ಸಂಹರಿಸುತೈತೆಂಬಂಥದನ್ನು, ಅಱಿಯೆ–ತಿಳಿಯೆನು. ಇನ್ನಾವಾಗ ತಿಂದಿಹುದೆಂದು–ಇನ್ನಾವಾಗ ಜನನದಲ್ಲಿ ತಂದು ಸಂಹರಿಸುತೈತೆಂಬಂಥದನ್ನು, ಅಱಿಯೆನು–ತಿಳಿಯೆನು.

ನಿಚ್ಚನಿಚ್ಚಕ್ಕೆ–ದಿನದಿನಂಪ್ರತಿಯಲ್ಲಿ, ನಿಮ್ಮ–ಸ್ವಾಮಿಗಳ, ಪೂಜಿಸಬಲ್ಲಡೆ–ಆರಾಧಿಸಬಲ್ಲಡೆ, ಅದೇ ಗಾರುಡ–ಆ ಮನೋಕುಂಡಲಿಸರ್ಪನ ವರ್ತನೆಯನ್ನು ನಷ್ಟ [೨]ವ ಮಾಡು[೨] ವುದಕ್ಕೆ ಅದೇ ಗಾರುಡಮಂತ್ರವಾಗಿರ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ ಮನಸ್ಸೇ (ಗ). ೨–೨ ವಾಗು (ಕ).

III- - - - - - - - - - - - - - - - - - - - - - - - - - - - - - - - - - - - - - - - - - - -

ಮನವೆ–ಮನಸ್ಸೇ, ಸರ್ಪ–ಉರಗನು, ತನುವೆ–ಲಿಂಗವೆ, ಹೇಳಿಗೆ–ಪೆಟ್ಟಿಗೆ, ಹಾವಿನೊಡತಣ–ಮನಃಕುಂಡಲಿಯೊಡನಾಟವು, ಆಳಿಗೆ–ಆತ್ಮನಿಗೆ, ಹುದುವು– [೩]ಹುದು[೩] ಗಾರಿಕೆಯು. ಇನ್ನಾವಾಗ ಕೊಂದಿಹುದೆಂದಱಿಯೆ–ಇನ್ನಾವಾಗ ಪ್ರಪಂಚಿನಿಂದ ಹತಿಸಿ ಭವಕ್ಕೆ ಹಾಕೀತೆಂದು ತಿಳಿಯೆನು, ಇನ್ನಾವಾಗ ತಿಂದಿಹುದೆಂದಱಿಯೆ–ಇನ್ನಾವಾಗ ಭಿನ್ನಾಪೇಕ್ಷೆಯೆಂಬ ಜಿಹ್ವೆಯಿಂದೆ ಭಕ್ಷಿಸಿತೆಂಬುದನು ತಿಳಿಯೆನು. ನಿಚ್ಚಕ್ಕೆ–ದಿನಂಪ್ರತಿಯಲ್ಲಿ, ನಿಮ್ಮ–ಲಿಂಗವನು, ಪೂಜಿಸಬಲ್ಲಡೆ–ಅರ್ಚಿಸಬಲ್ಲರೆ, ಅದೇ–ಅದು ತಾನೆ, ಗಾರುಡ–ಗಾರುಡ ಮಂತ್ರವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೩–೩ ಹದ(ಡ).

---

## ೧೬೪

**ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ; ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ; ಕಾಲ ಮೇಲೆ ಕೈಯನೂಱಿ ಕೋಲು ಹಿಡಿಯದ ಮುನ್ನ; ಮುಪ್ಪಿಂದೊಪ್ಪವಳಿಯದ ಮುನ್ನ; ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲಸಂಗಮದೇವನ.**

I - - - - - - - - - - - - - - - - - - - - - - - - - - - - - - - - - - - - - - - - - - - -

ನೆರೆಕೆನ್ನೆಗೆ–ಕೆನ್ನೆಯ ಮೇಲಿನ ಕಪ್ಪಿನ ಕೂದಲೆಲ್ಲ ಒಂದಾನೊಂದು ಹಂಜಿಯೋಪಾದಿಯಲ್ಲಿ ಬೆಳಗಾಗುವದಕ್ಕಿಂದ ಮೊದಲೆ, ತೆರೆ ಗಲ್ಲಕೆ–ಕನ್ನಡಿಯ ನುಣಪು [೧]ತನ[೧] ನಿಂಬಿಹಣ್ಣಿಗೆ ಸಮಾನವಾದ ಕದಪು ಒಂದಾನೊಂದು [೨]ಗಂಟು[೨] ಸೀಗಿಕಾಯ ಹಾಂಗೆ ಉತ್ತತ್ತಿಯೋಪಾದಿಯಲ್ಲಿ ಸುರ್ರನೆ ಸುಕ್ಕಿ ಸುಕ್ಕುಗಟ್ಟುವದಕಿಂದ ಮೊದಲೆ, ಶರೀರ ಗೂಡುವೋಗದ ಮುನ್ನ–ಒಂದಾನೊಂದು ಹಣಿತಿಯಿಡುವ ಗೂಡಿನೋಪಾದಿಯಲ್ಲಿ ಎದೆ ಗೂಡುಗಟ್ಟುವದಕಿಂದ ಮೊದಲೆ ಹಲ್ಲು ಹೋಗದ ಮುನ್ನ–ದಾಳಿಂಬರ

ಬೀಜಕ್ಕೆ ಸಮಾನವಾದ ದಂತಂಗಳು ಕವಡೆ ಚೀಲ ಕೆಡಹಿದೋಪಾದಿಯಲ್ಲಿ ಭಗ್ನವಾಗುವದಕಿಂದ ಮೊದಲೆ, ಬೆನ್ನು ಬಾಗುವದಕಿಂದ ಮುನ್ನ-ಒಂದಾನೊಂದು ಪಾಲಕಿ [೩]ಬೊಂಬಿ[೩] ನೋಪಾದಿಯಲ್ಲಿ ಟೊಂಕ ಬೊಗ್ಗುವದಕಿಂತ ಮೊದಲೆ, ಅನ್ಯರಿಗೆ-ಪರರಾದ ಹೆಂಡರು ಮಕ್ಕಳಿಗೆ, ಹಂಗಾಗದ ಮುನ್ನ-ನಾನು ಯೌವನದಲ್ಲಿದ್ದಾಗ ಉದ್ದಿಮೆ ವ್ಯಾಪಾರವ ಮಾಡಿ ದ್ರವ್ಯವನ್ನು ಗಳಿಸಿಕೊಂಡು ಬಂದು ನಿಮ್ಮನಂತೂ ಇಷ್ಟು ಸಾಕಿ ಸಲಹಿದ್ದೆ, ಈಗ ನಾನಂತೂ ಕುಂತೇಳಲಾರೆ ಎದ್ದು ಕೂಡಲಾರೆ ನಾನಿದ್ದ ಸ್ಥಾನಕ್ಕೆ ಆಗಾಗ ಬಿಸಿ ಅಗ್ಗಣಿ ಬಿಸಿ ಅನ್ನದಿಂದ ಉಪಚರಿಸುತ್ತ [೪]ಬನ್ನಿರೆಂದು ಅದಲ್ಲದೆ[೪] ಪ್ರತಿ ಪ್ರಸೂನಂಗಳ ತಂದು ಕೊಡಿರಿ ನಾನು ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆದುಕೊಂಬುತ್ತೈದೇನೆಂದು ಹೇಳಿಕೊಂಡಲ್ಲಿ ನಮ್ಮ ಬದುಕೇ ನಮಗೆ ಹಾಸಲುಂಟು ಹೊದೆಯಲುಂಟು ನಿನಗಾರು ಮಾಡುತ್ತೈದಾರೆ ಹೋಗತ್ತ ಮುದಿಸೂಳೆಯೆಂದು ಹಂಗಿಸಿ ಕೊಳ್ಳದಕಿಂದ ಮೊದಲೆ;

ಕಾಲ ಮೇಲೆ ಕೈಯನೂಜಿ [೫][ಕೋಲು ಹಿಡಿಯದ][೫] ಮುನ್ನ: ಕಾಲ ಮೇಲೆ-ಮೊಣಕಾಲಮಂಡಿಯ ಮೇಲೆ, ಕೈಯನೂಜಿ -ಹಸ್ತವನ್ನು ಎಟಿಕ್ಕಿ, ಕೋಲು ಹಿಡಿಯದ ಮುನ್ನ-ಕೈಯಲ್ಲಿ ಕೋಲನ್ನು ಹಿಡಿದುಕೊಂಡು ತಿರುಗಾಡುವುದಕಿಂದ ಮೊದಲೆ; ಮುಪ್ಪಿಂದೊಪ್ಪವಳಿಯದ ಮುನ್ನ-ದಿನಕಾಲ ಕಲ್ಪಿತಂಗಳು ತೀರಿ ವೃದ್ಧನಾಗುವದಕಿಂದ ಮೊದಲೆ ಮೃತ್ಯು ಮುಟ್ಟದ ಮುನ್ನ-ಯಮನು ಮರಣವನ್ನೈದಿಸುವದಕಿಂದ ಮೊದಲೆ, ಮೃತ್ಯು ಮುಟ್ಟದ ಮುನ್ನ-ಯಮನು ಮರಣವನ್ನೈದಿಸುವದಕ್ಕಿಂತ ಮೊದಲೆ ಕೂಡಲಸಂಗಮ ದೇವನ ಇಷ್ಟಮಹಾಲಿಂಗವನ್ನು, ಪೂಜಿಸು-ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಹಡೆದುಕೋ.

..........................

೧-೧ ತಂನ (ಕ). ೨-೨ ಗಂಟಿ (ಕ). ೩-೩ ಕೊಂಬಿ (ಕ). ೪-೪ x (ಕ). ೫-೫ ಏಳುವದಕಿಂತ (ಕ.ಗ).

---

೧೬೫

**ನೀರ ಬೊಬ್ಬುಳಿ[1]ಗೆ ಕಬ್ಬುನದ ಕಟ್ಟು ಕೊಟ್ಟು ಸುರಕ್ಷಿತವ ಮಾಡುವ ಭರವ[2] ನೋಡಾ! ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಬದುಕು ಕಾಯವ ನಿಶ್ಚೈಸದೆ.**

I - - - - - - - - - - - - - - - - - - - - - - - - - - - - - - - - - - - - - - -

ನೀರ ಬೊಬ್ಬುಳಿಗೆ- ಕೆರೆಗಳಲ್ಲಾಗಲಿ ಬಾವಿಗಳಲ್ಲಾಗಲಿ ಕೊಳನ ಕಾಸಾರ...ಗಳಲ್ಲಾಗಲಿ ಮುಂಗಾರಕಾಲದ ಕಾಲವೃಷ್ಟ್ಯಂಕುರಿಸಿದಲ್ಲಿ ಕಂಚಿಕಾಯು ಗಡತರ ದೊಡ್ಲಿಕಾ...ಯುಗಡತರ ನಿಂಬಿಕಾಯಗಡತರ ಗುಳ್ಳಿಗಳು ಹೊರಟಲ್ಲಿ, ಕಬ್ಬುನದ ಕಟ್ಟು ಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ!-ಕಾರ್ಬೊನ್ನದಿಂದ ಬಂಧಿಸಿದರೆ ಭದ್ರವಾಗಿದ್ದಾವೆ? ಇರಲರಿಯವು. ಹಾಂಗೆ: ನೀರಬೊಬ್ಬುಳಿಗೆ -ಸಪ್ತಧಾತು ಸಮ್ಮಿಶ್ರವಾದ ದೇಹಕ್ಕೆ, ಕಬ್ಬುನದ ಕಟ್ಟುಕೊಟ್ಟು-ಅವಲೋಹಸ್ವರೂಪವಾದ ಅಷ್ಟಭೋಗಮಲತ್ರಯಂಗಳನಿತ್ತು, ಸುರಕ್ಷಿತವ ಮಾಡುವ ಭರವ ನೋಡಾ! -ಹಸಿವಾದ ಕಾಲಕ್ಕನ್ನ ತೃಷೆಯಾದ ಕಾಲಕ್ಕೆ ಪಾನ್ಯ ಶೀತಗ್ರಹಿತವಾದ ಕಾಲಕ್ಕೆ ವಸ್ತ್ರ ಕಪ್ಪಟಂಗಳ ಕೊಟ್ಟು ಸಂರಕ್ಷಣೆಯ ಮಾಡುವ ಚಮತ್ಕಾರವನು ಕಂಡಾ!

ಮಹಾ–ಭಕ್ತರುಗಳಿಗೆ ಮಹಾದಾನಂದ ಸುಖವನ್ನು, ದಾನಿ–ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗಯ್ಯನ–ಇಷ್ಟಮಹಾಲಿಂಗವನ್ನು, ಪೂಜಿಸಿ–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆ ಗಳಿಂದಾರಾಧಿಸಿ, ಬದುಕು–ಕೃತಾರ್ಥನಾಗೋ, ಕಾಯವ–ದೇಹವ, ನಿಶ್ಚೈಸದೆ–ನಿತ್ಯಂನಿರುತಂ ಎಂದು ದೃಢೀಕರಿಸದೆ.

III- - - - - - - - - - - - - - - - - - - - - - - - - - - - - - - - - - - - - - - - - - - - -

1+ ಕೆ(ಟ). 2+ಸವ(ಟ).

..........................

ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟಕೊಟ್ಟಲ್ಲಿ ಅದೃಢವಾಗಿರುವ ಹಾಂಗೆ; ಅದೃಢವಾದ ದೇಹವ ನೆಚ್ಚಿ ಆತ್ಮಪ್ರಪಂಚಿನೊಡನೆ ಕೂಡಿ ವರ್ತಿಸಿದಲ್ಲಿ ಮುಂದೆ ಮುಕ್ತಿಲಬ್ಧಿಯಲ್ಲಿ ದೃಢವು ದೊರಕೊಳ್ಳಲರಿಯದೆಂಬುದೀಗ ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟಕೊಟ್ಟು ಸುರಕ್ಷಿತವ ಮಾಡುವ ಭರವಸವ ನೋಡಾ ಎಂಬ ಶಬ್ದಕ್ಕರ್ಥ. ಮತ್ತಂ, ಕರ್ಮದ ಬಲುಹು ಆತ್ಮನಿಗೆ ನಿತ್ಯವೆಂದು ಲಿಂಗಪೂಜಾವ್ರತವ ಬಿಟ್ಟಲ್ಲಿ ಮುಂದೆ ಮುಕ್ತಿಫಲರಹಿತವಾಗಿ ವ್ಯರ್ಥವಪ್ಪುದು ಎಂಬುದೀಗ ನೀರಬೊಬ್ಬುಳಿಕೆಗೆ ಕಬ್ಬುನದ ಕಟ್ಟುಕೊಟ್ಟು ಸುರಕ್ಷಿತವ ಮಾಡುವ ಭರವಸವ ನೋಡಾ ಎಂಬ ಶಬ್ದಕ್ಕರ್ಥ. ಮಹಾದಾನಿ, ಕಾಯವ–ಅಂಗವನು, ಇಚ್ಛೈಸದೆ–ನಿತ್ಯವಾದಂತಾದೆಂದು ದೃಢೀಕರಿಸದೆ, ಬದುಕು–ಶಿವಸಂಸ್ಕಾರವಿಡಿದು ಜೀವಿಸು.

---

## ೧೬೬

**ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೆ, ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ ನಿನ್ನ ಮನದಲ್ಲಿ! ಮಾಯಾಮಂಜರವು ಕೊಲುವೊಡೆ ನಿನ್ನ ಹಂಜರವು ಕಾಯ್ವುದೆ ಕೂಡಲಸಂಗಮದೇವನಲ್ಲದೆ?**

I - - - - - - - - - - - - - - - - - - - - - - - - - - - - - - - - - - - - - - - - - - - - -

ಹಂಜರ ಬಲ್ಲಿತ್ತೆಂದು–ಕಬ್ಬುನದ ಮಂದಾಸನ ಬೆತ್ತದ ಮಂದಾಸನ ಬಿದಿರ ಮಂದಾಸನ, ಬಲ್ಲಿತ್ತೆಂದು–ಭದ್ರವಾಗೈತೆಂದು, ಅಂಜದೆ–ಹೆದರದೆ, ಓದುವ–ಹರಹರ ಶಿವಶಿವ ಕೊಟ್ಟೂರಯ್ಯಾ ಕೋಲುಶಾಂತಯ್ಯ ರಾಮಪ್ಪೊಡೆಯರೆಯೆಂದು ಪಠಿಸುವ, ಗಿಳಿಯೆ–ಶುಕನೆ, ಎಂದೆಂದೂ–ಆವಾವ ಕಾಲಕ್ಕೆ, ಅಳಿಯೆನೆಂದು–ನಾಶವಾಗೆನೆನುತ್ತ, ಗುಡಿಗಟ್ಟಿದೆಯಲ್ಲಾ–ನಿನ್ನ ಪಂಜರವನೆ ಗುಡಿತೋರಣವಾಗಿ ಅಳವಡಿಸಿಕೊಂಡಿಯಲ್ಲಾ, ನಿನ್ನ ಮನದಲ್ಲಿ!–ನಿನ್ನ [1]ಚಿತ್ತದಲ್ಲಿ.[1] ಮಾಯಾಮಂಜರವು ಕೊಲುವೊಡೆ–ಮಾರ್ಜಾಲನೆಂಬಂಥದು ತನ್ನಾಸ್ಮಿಕದಿಂದ ಮುರುಕೊಂಡು ತಿಂಬುವದಕ್ಕೈದು ಬರುವೊಡೆ, ನಿನ್ನ ಹಂಜರವ ಕಾಯ್ವುದೆ ಕೂಡಲಸಂಗಮದೇವನಲ್ಲದೆ?: [ಕೂಡಲಸಂಗಮದೇವನಲ್ಲದೆ–] ನಿನಗೆ ಹಾಲು ಹಣ್ಣನ್ನು ಹಾಕಿ ಸಲಹುವಂಥ ಒಡೆಯನೆ ಬಿಡಿಸಿಕೊಂಡಾನಲ್ಲದೆ, ನಿನ್ನ ಹಂಜರವು ಕಾಯ್ವುದೆ?–ನಿನ್ನ ಮಂದಾಸನವೇನಾದರೂ ಬಿಡಿಸಿಕೊಂಬುವಂಥಾದನ್ನು ತಿಳಿದಿಪುದೆ? ಅರಿಯದೆಂಬುದರ್ಥ.

● ಹಂಜರ ಬಲ್ಲಿತ್ತೆಂದು ಹಂಜರ–ಪಂಚಭೂತಯುಕ್ತವಾದ ದೇಹವು, ಬಲ್ಲಿತ್ತೆಂದು–ಆಧಿವ್ಯಾಧಿಗಳಿಗೆ ಹೆದರೋದಿಲ್ಲ ಅಡತನ ಬಡತನ [೨]ಎಡರು ಕಂಟಕಾದಿಗಳಿಗೆಯೂ[೨] ಹೆದರೋದಿಲ್ಲ, ಬಹು ಬಲಿಷ್ಠವಾಗ್ಯೆತೆಂದು, ಅಂಜದೆ–ಅಧೈರ್ಯಂಬಡದೆ, ಓದುವ–ಸಕಲ ವೇದ ಶಾಸ್ತ್ರಾಗಮ [೩]ಪುರಾಣ[೩] ಂಗಳನೆ ಪಠಿಸುವ, ಗಿಳಿಯೆ–ಜೀವನೆಂಬ ಶುಕನೆ, ಎಂದೆಂದೂ–ಆವಾವ ಕಾಲಕ್ಕೆ, ಅಳಿಯೆನೆಂದು–ಅಂತರಂಗದಲ್ಲಿ ಮರಣವಿಲ್ಲೆನುತ್ತ, ಗುಡಿಗಟ್ಟಿದೆಯಲ್ಲಾ–ನಿನ್ನಂತರಂಗದ ಹರುಷಭಾವವನ್ನೇ ಗುಡಿತೋರಣವಾಗಿ ಅಳವಡಿಸಿಕೊಂಡೆಯಲ್ಲಾ, ನಿನ್ನ ಮನದಲ್ಲಿ!–ನಿನ್ನ ಚಿತ್ತದಲ್ಲಿ, ಮಾಯಾಮಂಜರವು ಕೊಲುವೊಡೆ–ಮಾಯಾ ಮಾರ್ಜಲವು ತನ್ನ ಪ್ರಪಂಚಿಗೆ ಒಳಗು ಮಾಡಿಕೊಂಡು ಮರಣದಲ್ಲಿ ತಂದು ಸಂಹರಿಸುವೊಡೆ, ಕೂಡಲಸಂಗಮದೇವನಲ್ಲದೆ–ಪರಶಿವಲಿಂಗವೆ ಆ ಮಾಯಾಶಕ್ತಿಯ ವರ್ತನೆಯನ್ನು ನಷ್ಟವ ಮಾಡಿ ಅವನೆಲ್ಲ ಶುದ್ಧವಿದ್ಯಾಶಕ್ತಿಯಾಗಿ ಅಳವಡಿಸಿಕೊಟ್ಟಾನಲ್ಲದೆ, ನಿನ್ನ ಹಂಜರವೇನಾದರೂ ಕಾಯ್ದುವೆ?–ನಿನ್ನ ಪಂಚಭೂತಯುಕ್ತವಾದ ದೇಹವೇನಾದರೂ ಆ ಮಾಯಾಶಕ್ತಿಯ ವರ್ತನೆಯನ್ನು ನಷ್ಟವಮಾಡಿ ಅವನೆಲ್ಲ ಶುದ್ಧವಿದ್ಯಾ ಶಕ್ತಿಯಾಗಿ ಅಳವಡಿಸಿ ಕೊಟ್ಟೀತೆ? ಕೊಡಲರಿಯದು.

.........................

೧–೧ ಮನಸ್ಸಿನಲ್ಲಿ (ಗ). ೨–೨ಕ್ಕೆ (ಗ). ೩–೩ X (ಗ).

III- - - - - - - - - - - - - - - - - - - - - - - - - - - - - - - - - - - - - - - - - - -

ಹಂಜರ ಬಲ್ಲಿತೆಂದು ದೇಹವು ನಿತ್ಯವಾದಂತಾದೆಂದು, ಅಂಜದೆ–ಕಾಲಕಾಮಾದಿಗಳ ಭೀತಿಗೆ ಹೆದಱದೆ, ಓದುವ ಗಿಳಿಯೆ–ನಾಹಂ ಕೋಽಹಂ ಸೋಽಹಮೆಂದು ಧ್ವನಿಗೆಯ್ವಂಥಾ ಎಲೆ ಆತ್ಮಶುಕವೆ, ಎಂದೆಂದೂ–ಆವಾವ ಕಾಲಕ್ಕೂ, ಅಳಿಯೆನೆಂದು–ಕಾಲಕಾಮಾದಿಗಳಿಂದೆ, ನಷ್ಟವಾಗೆನು ಎಂದು, ನಿನ್ನ ಮನದಲ್ಲಿ!–ನಿನ್ನ ಮನಸ್ಸಲ್ಲಿ, ಗುಡಿಗಟ್ಟಿದೆಯಲ್ಲಾ–ಪ್ರಪಂಚಿನ ಹರುಷಭಾವವನಂಗೀಕರಿಸಿದೆಯಲ್ಲಾ! ಮಾಯಾ– ಭೇದಜ್ಞಾನಶಕ್ತಿಯೆಂಬ, ಮಂಜರ–ಮಾರ್ಜಾಲನು, ಕೊಲುವಡೆ–ಪ್ರಪಂಚಿನಿಂದೆ ಹತಿಸಿದರೆ, ನಿನ್ನ ಹಂಜರ–ನಿನ್ನ ದೇಹವೆಂಬ ಗೂಡು, ಕಾವುದೆ ರಕ್ಷಿಸುವುದೆ, ಕೂಡಲಸಂಗಮದೇವನಲ್ಲದೆ.

V- - - - - - - - - - - - - - - - - - - - - - - - - - - - - - - - - - - - - - - - - - - -

ಈ ದೇಹವೇ ಸ್ಥಾವರವೆಂದು ಕಾಲಕಾಮರಿಗೆ ಹೆದರದೆ ನಾಹಂ ಕೋಽಹಂ ಸೋಽಹಮೆಂದು ಪ್ರಸಂಗಿಸುವ ಜೀವಹಂಸನೆಂಬುದೀಗ ಹಂಜರ ಬಲ್ಲಿತ್ತೆಂದು ಓದುವ ಗಿಳಿಯೆಂಬುದರ್ಥ. ಆವಾವ ಕಾಲಕ್ಕೂ ಮರಣವಾಗೆನೆಂದು ಸಂಭ್ರಮಿಸಿದೆಯಲ್ಲ ಎಂಬುದೀಗ ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಯೆಂಬುದರ್ಥ. ನಿನ್ನ ಮನಸ್ಸಿನಲ್ಲಿ ಪ್ರಕೃತಿ ಮಾರ್ಜಾಲನು ಹತಿಸಲಿಕ್ಕಾಗಿ ಮಾಯಾಮಂಜರ ಕೊಲುವಡೆ ಎಂಬುದರ್ಥ. ಆಧಿವ್ಯಾಧಿ ಕಂಟಕ ಕಾಲಕಾಮಾದಿಗಳ ನಷ್ಟವ ಮಾಡಿ ರಕ್ಷಿಸುವ ಪರಶಿವಲಿಂಗವಲ್ಲದೆ ಎಂಬುದೀಗ ಕೂಡಲಸಂಗಮದೇವನಲ್ಲದೆ ಎಂಬುದರ್ಥ. ನಿನ್ನ ದೇಹವು ಕಂಟಕಂಗಳ ಪರಿಹರಿಸಿ ರಕ್ಷಿಸಿ [೪][ತ್ತೇ ಎಂಬು][೪] ದೀಗ ನಿನ್ನ ಹಂಜರ ಕಾವುದೇ ಎಂಬುದರ್ಥ

.........................

೪–೪ ತ್ತೆಂಬು (ಪ).

೧೬೭

**ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ! ಇದ ನಚ್ಚಿ ಕೆಡಬೇಡ ಸಿರಿಯೆಂಬುದ! ಮಱೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಸಂಸಾರವೆಂಬುದೊಂದು ಗಾಳಿಯ ಸೊಡರು: ಸಂಸಾರವೆಂಬುದೊಂದು–ಹೊನ್ನು ಹೆಣ್ಣು ಮಣ್ಣೇ ಮುಖ್ಯವಾದ ಸಕಲಸಂಸಾರಪ್ರಪಂಚವೆಂಬುದೊಂದು ಗಾಳಿಯ ಸೊಡರು–ದೀಪವೇನಾದರೂ ಚಾಟಿಗಿಟ್ಟರೆ ತಾಸು ಗಳಿಗೆ ಪಟುತರವಾಗಿ ಉರದೀತಲ್ಲದೆ ಗಾಳಿಗಿಟ್ಟರೆ ಚರ್ರೆಂದು ಆರಿ ಹೋಗುವುದು. ಹಾಂಗೆ; ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲ ಸಂಸಾರ ಪ್ರಪಂಚೆಂಬುವಂಥದು ಗಾಳಿಗಿಟ್ಟ ದೀಪೋಪಾದಿಯಲ್ಲಿ ವ್ಯರ್ಥಸ್ಯವಾಗಿರ್ಪುದು ಕಾಣಯ್ಯಾ. ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ–ಸಂತಿಪ್ಯಾಟಿಗೇನಾದರು ಗಾವುದ ಇಗ್ಗಾವುದ ಹರದಾರಿ ಕೂಗಳತೆಯಲ್ಲಿದ್ದಂಥ ಹಲವು ಕೆಲವು ಆತ್ಮರುಗಳು ಬಂದು ತಾಸು ಎರಡು ತಾಸು ಮೂರು ತಾಸು ಪರಿಯಂತರ ಒಬ್ಬರ ಮಾತು ಒಬ್ಬರು ಕೇಳದ ಹಾಂಗೆ ಭೋರೆಂದು ಉಲಿವುತ್ತಿಹುದು. ಸಾಯಂಕಾಲವಾದ ಮೇಲೆ ಕೈಗಳ ಕಡಲೆಕಾಳು ಹಾರಿ ಹೊಡದೋಪಾದಿಯಲ್ಲಿ ಎತ್ತಲವರತ್ತಲೆ ಹೋಗಿ ನೊಣ ಹೊಡವುದಕ್ಕೊಬ್ಬರೂ ದಿಕ್ಕಿಲ್ಲದ ಹಾಂಗೆ ಬರೆ ಬಾಜಾರವೆ ಉಳಿಯುತ್ತಿಹುದು. ಹಾಂಗೆ; ಸಿರಿಯೆಂಬುದು–ಅಷ್ಟಭೋಗ ಅಷ್ಟಮಹದೈಶ್ವರ್ಯಯೆಂಬುವಂಥ ಭಾಗ್ಯವು, ಸಂತೆಯ ಮಂದಿ ಕಂಡಯ್ಯಾ–ಸಂತೆಯ ಮಂದಿಯೋಪಾದಿಯಲ್ಲಿ ವ್ಯರ್ಥಸ್ಯವಾಗಿರ್ಪುದು ಕಾಣಯ್ಯಾ.

ಇದ ನಚ್ಚಿ ಕೆಡಬೇಡ ಸಿರಿಯೆಂಬುದ!: ಸಿರಿಯೆಂಬುದ–ಹೊನ್ನು ಹೆಣ್ಣು ಮಣ್ಣು ಮೊದಲಾದ ಅಷ್ಟಭೋಗ ಅಷ್ಟೈಶ್ವರ್ಯವೆಂಬ ಭಾಗ್ಯವನ್ನು ನಚ್ಚಿ–ನಂಬಿ, ಕೆಡಬೇಡ–ಶಿವತತ್ತ್ವ [೧]ವಳಿದು[೧] ಜೀವನಾಗಬೇಡ. ನಮ್ಮ ಕೂಡಲಸಂಗಮದೇವನ–ಇಷ್ಟಮಹಲಿಂಗವನ್ನು, ಮಱೆಯದೆ–ತ್ರಿಕಾಲಂಗಳಲ್ಲಿ ತಪ್ಪದೆ, ಪೂಜಿಸು–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಹಡೆದುಕೋ.

೧–೧ ಗೆಟ್ಟು (ಗ).

III- - - - - - - - - - - - - - - - - - - - - - - - - - - - - - - - - - - - - - - - - - -

..........................

ಸಿರಿಯೆಂಬುದ ಮಱೆಯದೆ–ಗುರುಲಿಂಗಜಂಗಮದ ಭಕ್ತ್ಯೈಶ್ವರ್ಯವನು ವಿಸ್ಮೃತಿಗೆಯ್ಯದೆ.

---

೧೬೮

**ಎಲೆ ಎಲೆ ಮಾನವ, ಅಳಿಯಾಸೆ ಬೇಡವೋ, ಕಾಳಬೆಳುದಿಂಗಳು ಸಿರಿ ಸ್ಥಿರವಲ್ಲ! ಕೇಡಿಲ್ಲದ ಪದವಿ ಕೂಡಲಸಂಗಮದೇವನ ಮಱೆಯದೆ ಪೂಜಿಸು.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಎಲೆ ಎಲೆ ಮಾನವ–ಭೋ ಭೋ ಮನುಷ್ಯ, ಅಳಿಯಾಸೆ ಬೇಡವೋ ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಶೆಯನ್ನು ಮುಂದುಗೊಂಡು ಚರಿಸಲು ಬೇಡವೋ, ಕಾಳಬೆಳದಿಂಗಳು–ಪೌರ್ಣಿಮೆ ಬೆಳುದಿಂಗಳೇ ಬೆಳತನಕ ಸ್ಥಿರವಾಗಿದ್ದಿತ್ತಲ್ಲತದೆ ಅಷ್ಟಮಿ ಬೆಳುದಿಂಗಳು, ನವಮಿ ಬೆಳುದಿಂಗಳೇನಾದರೂ ಬೆಳತನಕ ಸ್ಥಿರವಾಗಿದ್ದಿತ್ತೆ? ಇರಲರಿಯದು. ಹಾಂಗೆ, ಸಿರಿ ಸ್ಥಿರವಲ್ಲ!–ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವು ಕಾಳಬೆಳದಿಂಗಳ ಹಾಂಗೆ ಅನಿತ್ಯವಾಗಿರ್ಪುದು. ಕೂಡಲಸಂಗಮದೇವನ–ಇಷ್ಟಮಹಾಲಿಂಗವನ್ನು, ಮಱೆಯದೆ ತ್ರಿಕಾಲಂಗಳಲ್ಲಿ ತಪ್ಪದೆ, ಪೂಜಿಸು–[೧]ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸು,[೧] ಕೇಡಿಲ್ಲದ–ಎಂದೆಂದೂ ನಾಶವಿಲ್ಲದ, ಪದವಿ–ಸರ್ವೋತ್ಕೃಷ್ಟ ಸಂಪೂರ್ಣವಾದ ಘನಲಿಂಗ ಪದವಿ ದೊರಕೊಂಬುತ್ತಿಹುದು.

..........................

೧–೧ ಆರಾಧಿಸು (ಗ).

---

೧೬೯

**ಎಂತಕ್ಕೆ ಎಂತಕ್ಕೆ ಹಡೆದ ಕಾಯ ಬೀಯವಾಗದ ಮುನ್ನ ಅಟ್ಟು [1]ಣ್ಣಿಭೋ[1] ! ಬೆರಣಿಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟು[1]ಣ್ಣಿಭೋ[1] ಮರಳಿ ಭವಕ್ಕೆ ಬಹೆ ಬಾರದಿಹೆ: ಕರ್ತೃ[2] ಕೂಡಲಸಂಗಮದೇವಂಗೆ ಶರಣೆ [3]ನ್ನಿಭೋ[3] !**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಎಂತಕ್ಕೆ ಎಂತಕ್ಕೆ–ಅಪೂರ್ವಕ್ಕೆ ಅಪೂರ್ವಕ್ಕೆ, ಹಡೆದ ಕಾಯ: ಹಡೆದ–ಪಡೆದ, ಕಾಯ–ದೇಹವು, ಬೀಯವಾಗದ ಮುನ್ನ–ನಷ್ಟವಾಗಿ ಹೋಗದಕಿಂದ ಮೊದಲೆ, ಅಟ್ಟುಣ್ಣಿಭೋ!–ಅಡಿಗೆಯನ್ನು ಮಾಡಿಕೊಂಡನುಭವಿಸೋ! ಬೆರಣಿಯುಳ್ಳಲ್ಲಿ–ಕಾಡಕುರುಳು ಉಂಟಾಗಿದ್ದಲ್ಲಿಯೇ, ಅಟ್ಟುಣ್ಣಿಭೋ!–ಅಡಿಗೆಯ ಮಾಡಿಕೊಂಡನುಭವಿಸೋ! ಹೊತ್ತು ಹೋಗದ ಮುನ್ನ–ವೇಳೆಯಾಗದಕಿಂದ ಮೊದಲೆ, ಅಟ್ಟುಣ್ಣಿಭೋ!–ಅಡಿಗೆಯ ಮಾಡಿಕೊಂಡನುಭವಿಸೋ! ಮರಳಿ ಭವಕ್ಕೆ ಬಹೆ–ತಿರುಗಿ ಅಡುವಿಗೆ ಬರುತಿದ್ದಿಯೋ ಇಲ್ಲವೋ ಕಾಣಬಾರದು, ಬಾರದಿಹೆ–ಅಡವಿಗೆ ಬಾರದೆ ಮನೆಯೊಳಗೆ ಇರುತಿದ್ದಿಯೋ ಏನೋ ತಿಳಿಯಬಾರದೆಂಬುದರ್ಥ.

● ಎಂತಕ್ಕೆ ಎಂತಕ್ಕೆ–ಕುರುಡ ಕಣ್ಣು ಪಡೆದುಕೊಂಡ ಹಾಂಗೆ ಬಂಜೆ ಮಕ್ಕಳ ಹಡದ ಹಾಂಗೆ ಹೆಳವ ಕಲು ಪಡೆದುಕೊಂಡ ಹಾಂಗೆ ನಿರ್ಧನಿಕ ನಿಕ್ಷೇಪ ದ್ರವ್ಯವ ಪಡೆದುಕೊಂಡ ಹಾಂಗೆ ಅಪೂರ್ವಕ್ಕೆ ಅಪೂರ್ವಕ್ಕೆ, ಹಡೆದ–ಪಡೆದ, ಕಾಯ–ದೇಹವು, ಬೀಯವಾಗದ ಮುನ್ನ–ದಿನಕಲ ಕಲ್ಪಿತಂಗಳು ತೀರಿ ವೃದ್ಧನಾಗುವುದಕಿಂದ ಮೊದಲೆ, ಅಟ್ಟುಣ್ಣಿಭೋ!–ಲಿಂಗಾಂಗಸಂಬಂಧವಾದ ಶಿವಸುಖವ ಪಡೆದನುಭವಿಸೋ! ಬೆರಣಿಯುಳ್ಳಲ್ಲಿ–ನಿಸ್ಸಾರ ಸ್ವರೂಪವಾದ ದೇಹವ ಧರಿಸಿಕೊಂಡು ಭವಭವದಲ್ಲಿ ಹುಟ್ಟಿ ಬಂದಲ್ಲಿ, ಅಟ್ಟುಣ್ಣಿಭೋ!–ಲಿಂಗಾಂಗಸಂಬಂಧವಾದ ಶಿವಸುಖವನ್ನು

ಪಡೆದನುಭವಿಸೋ! ಹೊತ್ತು ಹೋಗದ ಮುನ್ನ–ದಿನಕಾಲ ಕಲ್ಪಿತಂಗಳು ತೀರಿ ವೃದ್ಧನಾಗದಕಿಂದ ಮೊದಲೆ, ಅಟ್ಟುಣ್ಣಿಭೋ! ಲಿಂಗಾಂಗಸಂಬಂಧವಾದ ಶಿವಸುಖವನನುಭವಿಸೋ! ಮರಳಿ ಭವಕ್ಕೆ ಬಹೆ ತಿರಿಗಿ ಶಿವಭಕ್ತನಾಗಿ ಹುಟ್ಟಿಬರುತಿದ್ದಿಯೋ ಇಲ್ಲವೋ ಕಾಣಬಾರದು, ಬಾರದಿಹೆ–ಶಿವಭಕ್ತನಾಗಿ ಹುಟ್ಟಿಬಾರದೆ ಅತ್ತಲೇ ಹೋಗುತಿದ್ದಿಂಯೋ ಏಣೋ ಕಾಣಬಾರದು, ಕರ್ತೃ–ಪಂಚಕೃತ್ಯಂಗಳಿಗೊಡೆಯನಾದ, ಕೂಡಲಸಂಗಮದೇವಂಗೆ – ಪರಶಿವಲಿಂಗಕ್ಕೆ ಶರಣೆನ್ನಿಭೋ!–ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕಾರವೆಂದು ನಮಸ್ಕರಿಸಿ ಇಷ್ಟಾರ್ಥಸಿದ್ಧಿಯನ್ನು ಹಡೆದುಕೋ!

III- - - - - - - - - - - - - - - - - - - - - - - - - - - - - - - - - - - - - - - - - -

.........................

1–1 ಣ್ಣವೋ (ಟ). 2 + ವೆ (ಟ). 3–3 ನ್ನವೊ (ಟ).

[ಎಂತಕ್ಕೆ ಎಂತಕ್ಕೆ–] "ಬಹುಜನ್ಮಕೃತೈಃ ಪುಣ್ಯೈಃ। ಪ್ರಕ್ಷೀಣೇ ಪಾಪಪಂಜರೇ। ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ" ಎಂದು ಎತ್ತಾನು ಕಾಲಕ್ಕೆ, ಎತ್ತಾನು ಕಾಲಕ್ಕೆ, ಹಡೆದ–'ಕಾಕತಾಳನ್ಯಾಯ; 'ಘುಣಾಕ್ಷರನ್ಯಾಯ'ದಿಂದೆ ಪಡದಂಥ, ಕಾಯ–ಅಂಗವು, ಬೀಯವಾಗದ ಮುನ್ನ–ಕಾಲ ಕಾಮಾದಿಗಳಿಂದೆ ಚಾಗಿಯಾಗಿ ಹೋಗುವದಕಿಂದ ಮೊದಲೆ, ಬೆರಣಿಯುಳ್ಳಲ್ಲಿ–ಸಂಸಾರವಿಷಯರಸವಱಿತ ನಿಸ್ಸಂಸಾರ ಕಾಯವು ದೊಱಿಕೊಂಡಲ್ಲಿ, ಅಟ್ಟುಣ್ಣವೋ–ಸಕಲಪದಾರ್ಥವನು ಗುರುಲಿಂಗಜಂಗಮಕ್ಕೆ ಸಮರ್ಪಣೆಯ ಮಾಡಿ ಅವರ ಪ್ರಸಾದವ ಸ್ವೀಕರಿಸೋ; ಮತ್ತಂ, ಚಿದಂಗಸ್ವರೂಪವಾದ ಶರಣನ ಇಂದ್ರಿಯಂಗಳಿಗೆ ವಿಷಯ ಪದಾರ್ಥ ದೊರಕೊಂಡಲ್ಲಿ ಜ್ಞಾನಾಗ್ನಿಯಿಂದ ಸಮರಸ ಪಕವ ಮಾಡಿ ಆಚಾರಾದಿ ಲಿಂಗಗಳಿಗೆ ಸಮರ್ಪಿಸಿ ತತ್ಪ್ರಸಾದವನನು ಭವಿಸೂದೆಂಬುದೀಗ ಅಟ್ಟುಣ್ಣವೋ ಬೆರಣಿಯುಳ್ಳಲ್ಲಿ ಎಂಬ ಶಬ್ದಕ್ಕರ್ಥ. ಹೊತ್ತು ಹೋಗದ ಮುನ್ನ–ಕಾಲಕಾಮಾದಿಗಳು ಕೊಂಡೊಯ್ವದಕ್ಕಿಂದ ಮೊದಲೆ, ಮತ್ತಂ, ಜ್ಞಾನಕ್ರೀಗಳು ನಷ್ಟವಾಗುವದಕಿಂದ ಮೊದಲೆ, ಅಟ್ಟುಣವೋ–ಸಕಲಪದಾರ್ಥವನು ಗುರುಲಿಂಗಜಂಗಮಕ್ಕೆ ಸಮರ್ಪಿಸಿ ಆ ಗುರುಲಿಂಗ ಜಂಗಮದ ಪ್ರಸಾದವನು ಸ್ವೀಕರಿಸೋ. ಮರಳಿ–ಮತ್ತೆ, ಭವಕ್ಕೆ ಬಹೆ–ಪುಣ್ಯಾಧೀನದಿಂದ ಜನ್ಮವನೆತ್ತಿ ಬರುವೆಯು, ಬಾರದಿಹೆ–ಪಾಪಾಧೀನದಿಂದೆ ಹುಟ್ಟಿಬಾರದಿರವೆಯು, ಕರ್ತೃ೧–ಒಡೆಯನಾದಂಥ, ಕೂಡಲಸಂಗಂಗೆ–ಪರಶಿವಲಿಂಗಕ್ಕೆ, ಶರಣೆನಿಭೋ–ನಮಸ್ಕಾರವೆಂದೆನ್ನೋ.

.........................

೧+ ವು (ಟ,ಡ).

V- - - - - - - - - - - - - - - - - - - - - - - - - - - - - - - - - - - - - - - - - -

ಎತ್ತಾನು ಕಾಲಕ್ಕೆ ಎತ್ತಾನು ಕಾಲಕ್ಕೆ ಎಂಬುದೀಗ ಎಂತಕ್ಕೆ [ಎಂತಕ್ಕೆ]ಯೆಂಬುದರ್ಥ. ಪಡೆ[ದು] ಪಾರ್ಜಿಸಿದ ಕಾಯ ಅಂಗವು [ಹಡೆದ ಕಾಯವೆಂಬುದರ್ಥ]. ಬೀಯವಾಗದ ಮುನ್ನಮೆಂದರೆ ಇರಿದು ತರಿದು ಹುಳಿತು ಕೊಳೆತು ವೆಚ್ಚವಾಗುವುದಕ್ಕೆ ಮೊದಲೆಯೆಂಬುದರ್ಥ. ಅಟ್ಟುಣ್ಣ ವೊಯೆನಲ್ ಆ ದೇಹವನು ಜ್ಞಾನಾಗನಿಯುಲ್ಲಿ ಸಮರಸಪಾಕವ ಮಾಡಿ ಲಿಂಗಮುಖದಿಂದನುಭವಿಸೋಯೆಂಬುದರ್ಥ. ಬೆರಣಿಯುಳ್ಳಲ್ಲಿಯೆನೆ ಅಂತಪ್ಪಾಚಾರಂಗ

ದೊರಕೊಂಡಲ್ಲಿಯೆಂಬುದರ್ಥ. ಅಟ್ಟುಣ್ಣವೋಯೆನೆ ಕರ್ಮತ್ರಯಂಗಳ ಜ್ಞಾನಾಗ್ನಿಯಲ್ಲಿ ಪಾಕವ ಮಾಡಿ ಪ್ರಸಾದತ್ರಯಂಗಳ ಮಾಡಿಕೊಂಡು ಲಿಂಗಮುಖದಿಂದನುಭವಿಸೋಯೆಂಬುದರ್ಥ.

---

೧೭೦

**ಶಕುನವೆಂದೆಂಬೆ, ಅವಶಕುನವೆಂದೆಂಬೆ ನಿಮ್ಮವರು ಅಳಲಿಕೆ ಅಂದೇಕೆ ಬಂದೆ? ನಿಮ್ಮವರು ಅಳಲಿಕೆ ಇಂದೇಕೆ ಹೋದೆ? ನೀನು ಹೋಹಾಗಳಕ್ಕೆ! ನೀನು ಬಾಹಾಗಳಕ್ಕೆ! ಅಕ್ಕೆ ಬಾರದ ಮುನ್ನ ಪೂಜಿಸು, ಕೂಡಲಸಂಗಮದೇವನ.**

I - - - - - - - - - - - - - - - - - - - - - - - - - - - - - - - - - - - - - - - - -

ಶಕುನವೆಂದೆಂಬೆ–ಉದ್ದಿಮೆ ವ್ಯಾಪಾರಂಗಳ ಮಾಡೋದಕ್ಕೆ ಹೋಗುತ್ತಿದ್ದೆ ಕಡಬಡ್ಡಿ ಸಾಲವ ಕೊಟ್ಟಲ್ಲಿ ಎತ್ತಿಕೊಂಡು ಬರುವುದಕ್ಕೆ ಹೋಗುತ್ತಿದ್ದೆ. ಮಗನಿಗೆ ಹೆಣ್ಣು ನೋಡೋದಕ್ಕೆ ಹೋಗುತ್ತಿದ್ದೆ ಜೋಡುಕೊಡ ಬಂದವು ಜೋಡು ಹಾರುವರು ಬಂದರು ಮಾಂಸದ ಗುದಿ ಬಂತು ಸುರೆ ಹರವಿ ಬಂದಿತ್ತು ಇದು ಶುಭಸೂಚನೆ ಒಳಿತಾಗೈತೆಂದು ಹೇಳುವೆ, ಅವಶಕುನವೆಂದೆಂಬೆ–ಗುರು ಚರಮೂರ್ತಿಗಳಿಗೆ ಭಕ್ತಿ ಬಿನ್ನಹ ಮಾಡಿ ಕರಕೊಂಡು ಬರುವುದಕ್ಕೆ ಹೋಗುತ್ತಿದ್ದೆ ಭಕ್ತಮಾಹೇಶ್ವರರುಗಳ ಕರಕೊಂಡು ಬರೋದಕ್ಕೆ ಹೋಗುತ್ತಿದ್ದೆ ರೊಕ್ಕ ತೆಗೆದುಕೊಂಡು ಅಷ್ಟವಿಧಾರ್ಚನೆ [೧]ತರುವುದಕ್ಕೆ[೧] ಹೋಗುತ್ತಿದ್ದೆ ಒಂಟಿಕೊಡ ಬಂತು ಒಂಟಿ ಹಾರುವ ಬಂದ ಹೊಗೆ [೨]ಸುಟ್ಟಿ[೨] ಬಂತು ಕಟ್ಟಿಗೆ ಹೊರೆ ಬಂತು ಶುಭಸೂಚನೆ ಆಗಲಿಲ್ಲವೆಂದು ಹೇಳುವೆ.

ನಿಮ್ಮವರು–ನಿಮ್ಮ ತಾಯಿ ತಂದಿಗಳಾದ ಜನನಿ ಜನಕರುಗಳು, ಅಳಲಿಕ್ಕೆ–ನವಮಾಸ ಪೂರ್ಣೀಕರಿಸಿ ಹಡೆಯಲಾರದೆ ಬಹು ಆಯಾಸಂಬಡುತ್ಯೆದಾಳೆ ಹೇಂಗಾಗುತ್ಯೆತೋ ಕಾಣಬಾರದೆಂದು ರೋಧನವ ಮಾಡಲಿಕೆ, ಅಂದೇಕೆ ಬಂದೆ? –ಅಂದು ಅಪಶಕುನವಾಯಿತ್ತೆಂದು ಅತ್ತಲಾಗೆ ಇರಬೇಕು ಅಂದೇನು ಕಾರಣಕ್ಕೆ ಹುಟ್ಟಿಬಂದೆ? ನಿಮ್ಮವರು ಅಳಲಿಕ್ಕೆ–ದಿನಕಾಲ ಕಲ್ಪಿತಂಗಳು ತೀರಿ ವೃದ್ಧನಾಗಿ ಸತ್ತುಹೋದಲ್ಲಿ ಹೆಂಡಿರು ಮಕ್ಕಳು ಎಡಬಲದಲ್ಲಿ ಕುಳಿತು ಎದೆಬದಿ ಬಸಿರುಬಾಯನ್ನು ಬಡಕೊಂಡು ರೋದನವ ಮಾಡುವಲ್ಲಿ, ಇಂದೇಕೆ ಹೋದೆ?–ಇಂದು ಅಪಶಕುನವಾಯಿತ್ತೆಂದು ಇತ್ತಲಾಗೆ ಇರಬೇಕೊ ಈಗೇನು ಕಾರಣಕ್ಕೆ ವ್ಯರ್ಥಸ್ಯವಾಗಿ ಸತ್ತುಹೋದಿ. ನೀನು ಹೋಹಾಳಕ್ಕೆ! ನೀನು ಬಾಹಾಗಳಕ್ಕೆ!–ಎಲೆ ಆತ್ಮನೇ ನೀ ಹುಟ್ಟಿಬರುವಾಗಳೂ ಅಪಶಕುನವೇ? ನೀ ಸತ್ತು ಹೋಗುವಾಗಳೂ ಅಪಶಕುನವೇ? ಅಕ್ಕೆ ಬಾರದ ಮುನ್ನ–ಜನನ ಮರಣಂಗಳಲ್ಲಿ ಸತ್ತು ಸತ್ತು ಹುಟ್ಟುವುದಕಿಂದ ಮೊದಲೆ, ಕೂಡಲಸಂಗಮದೇವನ–ಇಷ್ಟಮಹಾಲಿಂಗವನ್ನು, ಪೂಜಿಸು–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಹಡೆದುಕೋ.

..........................

೧–೧ ತೆಗೆದುಕೊಂಡು ಬರೋದಕ್ಕೆ (ಕ). ೨–೨ ಸುಟ್ಟ (ಗ).

---

೧೭೧

**ನಿಮಿಷಾರ್ಧ ನಿಮಿಷಂ ಭೋ ಕ್ಷಣದೊಳಗರ್ಧಕ್ಷಣಂ ಭೋ, ಕಣ್ಣು ಮುಚ್ಚಿ ಬಿಚ್ಚುವಿನಿಸು ಬೇಗಂ ಭೋ, ಸಂಸಾರದಾಗುಂ ಭೋ! ಸಂಸಾರ ಹೋಗುಂ ಭೋ! ಸಂಸಾರದೊಪ್ಪುಂ ಭೋ! ಕೂಡಲಸಂಗಮದೇವಾ, ನೀ ಮಾಡಿದ ಮಾಯಂ ಭೋ, ಅಭ್ರಚ್ಛಾಯಂ ಭೋ!**

I - - - - - - - - - - - - - - - - - - - - - - - - - - - - - - - - - - - - - - - - - - - - -

ನಿಮಿಷಾರ್ಧ ನಿಮಿಷಂಭೋ!–ಹದಿನೆಂಟು ವೇಳೆ ಕಣ್ಣುಮುಚ್ಚಿ ಕಣ್ಣುತೆರೆವುದೇ ಒಂದು ನಿಮಿಷ. ಒಂಬತ್ತು ವೇಳೆ ಕಣ್ಣುಮುಚ್ಚಿ ಕಣ್ಣುತೆರೆವುದೇ ಅರ್ಧ ನಿಮಿಷ. ಆ ನಿಮಿಷಾರ್ಧ ನಿಮಿಷದೊಳಗೆ, ಸಂಸಾರದಾಗುಂಭೋ–ದೇಹಸಂಸಾರ ವರ್ಧನವಾಗುತ್ತಿಹುದು, ಕ್ಷಣದೊಳಗರ್ಧಕ್ಷಣಂಭೋ–ಶಿರ ಪೋಷಣಂಗೈವಂಥದೆ ಕ್ಷಣ. ಅರ್ಧಶಿರಪೋಷಣಂಗೈವಂಥದೆ ಅರ್ಧಕ್ಷಣ. ಈ ಕ್ಷಣಾರ್ಧಕ್ಷಣದೊಳಗೆ, ಸಂಸಾರದೊಪ್ಪುಂಭೋ–ದೇಹದ ಸ್ಥಿತಿ ಭೋಗವರ್ಧನ ವಾಗುತ್ತಿಹುದು, ಕಣ್ಣುಮುಚ್ಚಿ ಬಿಚ್ಚೆನಿಸು ಆಗುಂಭೋ!–ಕಣ್ಣುಮುಚ್ಚಿ ಕಣ್ಣುತೆರೆವದರೊಳಗೆ, ಸಂಸಾರ ಹೋಗುಂಭೋ–ದೇಹದ ವರ್ತನೆ ನಷ್ಟವಾಗಿ ಹೋಗುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀ ಮಾಡಿದ–ನೀ ಉಂಟುಮಾಡಿದ, ಮಾಯಂಭೋ–ಮಾಯಾಪ್ರಪಂಚು, ಅಭ್ರಚ್ಛಾಯಂಭೋ!–ಮೇಘದ ನೆರಳಿನೋಪಾದಿಯಲ್ಲಿ ತೋರಿಯಡಗುತ್ತಿಹುದು.

---

೧೭೨

**ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು, ಹರಿದು ಹೆದ್ದೊಱೆ ಕೆಱೆ ತುಂಬಿದಂತಹುದಯ್ಯಾ; ನೆರೆಯದ ವಸ್ತು ನೆರೆವುದು ನೋಡಯ್ಯಾ; ಅರಸು ಪರಿವಾರ ಕೈವಾರ ನೋಡಯ್ಯಾ! ಪರಮ ನಿರಂಜನ ಮಱೆದ ಕಾಲಕ್ಕೆ ತುಂಬಿದ ಹರವೆ ಕಲ್ಲುಗೊಂಡಂತೆ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಹರನೀವ ಕಾಲಕ್ಕೆ–ಪರಮೇಶ್ವರನು ಕರುಣಿಸಿಕೊಡುವಂಥ ವೇಳೆಗೆ, ಸಿರಿಯು–ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವು, ಬೆನ್ನಲಿ ಬಕ್ಕು–ಆತ್ಮನ ಬಳಿವಿಡಿದು ಬರುತ್ತಿಹದು, ಹರಿದು ಹೆದ್ದೊಱೆ ಕೆಱೆ ತುಂಬಿದಂತಹುದಯ್ಯಾ–ಗುಳ್ಳಿರಾಮನಕೆರೆ ಮರಗದಕೆರೆ ಪಾಕಲಕೆರೆ ಸೂಳೆಕೆರೆ ಮೊದಲಾದ ದೊಡ್ಡ ದೊಡ್ಡ ತಟಾಕಂಗಳು ನಾಲ್ಕೆಂಟು ವರುಷ ಮಳೆ ಹೋಗೆ ಮುಂಗಾರಿ ಕಾಲದ ಕಾರವೃಷ್ಟಿಯಂಕುರಿಸಿ ಹತ್ತೆಂಟು ದಿವಸ ಹೆದ್ದೊರೆಗಳು ಚರಿಸಿ ಕೆರೆತುಂಬಿ ಎರಡು ಕೋಡೆಯಲ್ಲಿ ಹೊರಸೂಸಿ ಹರಿದಲ್ಲಿ ಸಮಸ್ತಫಲ ಪೈರುಗಳಿಗೆಯೂ ಸಮಸ್ತಸಸಿವೃಕ್ಷಾದಿಗಳಿಗೆಯೂ ಸಮಸ್ತ ಪಶುಪಕ್ಷಿ ಪ್ರಾಣಿಗಳಿಗೆಯೂ ಎಷ್ಟೊಂದು ಸುಖವಾಗುತ್ತಿಹುದೋ ಹಾಂಗೆ.

ನೆರೆಯದ ವಸ್ತು ನೆರೆವುದು ನೋಡಯ್ಯಾ: [ನೆರೆಯದ ವಸ್ತು–] ಎಂದೆಂದುಕೂಡಲಿಕ್ಕಿದರೂ ಕೂಡಬಾರದಿದ್ದಂಥ ಏಕಮುಖ ರುದ್ರಾಕ್ಷೆ ಒಂಟಿ ಗಂಟಿನ ಬೆತ್ತ ಬಲಮುರಿ ಶಂಖ ನಾಗರಮರಿ ಕತ್ತಿ ಪಚ್ಚದ ಕಡಗ ಗಮನದ ಹಾವುಗೆ ಕೌಸ್ತುಭ ರತ್ನ ಮೊದಲಾದ ಅನರ್ಘ್ಯವಾದ ವಸ್ತುವು,

ನೆರೆವುದು ನೋಡಯ್ಯಾ-ಸಾಧ್ಯವಾಗುತ್ತಿಹುದು ಕಂಡಯ್ಯಾ. ಅರಸು-ಐವತ್ತಾರು ದೇಶದ ರಾಜರುಗಳು, ಕೈವಾರ-ಹಸ್ತವ ಜೋಡಿಸಿ ವಾಲೈಸುತ್ತಿಪ್ಪರು, ಪರಿವಾರ ನೋಡಯ್ಯಾ-ಎಡಬಲದಲ್ಲಿ ಮಾಗಧರು ನಿಂತುಕೊಂಡು "ಅರಿಗಿರಿ ವಜ್ರದಂಡ ⁽¹ಭೋಕ್ತೃ⁽¹ ಭುಜಂಗ ಮೂಲಕುದ್ದಾಲ"ವೆಂದು ಕರವೆತ್ತಿಹರು ಕಂಡಯ್ಯಾ. ಪರನಿರಂಜನ ಮಱೆದ ಕಾಲಕ್ಕೆ-ಪರಮೇಶ್ವರನ ದಯೆ ತೊಲಗಿದ ಕಾಲಕ್ಕೆ, ತುಂಬಿದ ಹರವೆ ಕಲ್ಲುಗೊಂಡಂತೆ-ತುಂಬಿದ ಹರವೆ ಏನಾದರೂ ಸವತಳದಲ್ಲಿರಿಸಿದರೆ ನೀರಿದ್ದವಲ್ಲದೆ ಮೊಳೆಗಲ್ಲ ಮೇಲೆ ತುಂಬಿದ ಹರವಿಯನಿರಿಸಿದರೆ ಕಲ್ಲುವೊತ್ತಿ ತೂತುಬಿದ್ದು ನೀರೆಲ್ಲ ಬಸಿದುಹೋಗಿ ಬರೇ ಹರವಿಯೇ ಉಳಿವುತ್ತಿಹುದು ಹಾಂಗೆ; ಪರಮೇಶ್ವರನ ಕೃಪೆ ತಪ್ಪಿದಂಥ ವೇಳೆಗೆ ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವೆಲ್ಲ ಬಯಲಾಗಿ ಹೋಗಿ ಮಿತ್ರರೇ ಶತ್ರುಗಳಾಗುತ್ತಿಹರು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ಭೆಕ್ತಾಯ (ಕ,ಗ).

---

೧೭೩

**ಹೊಯ್ದಡೆ ಹೊಯ್ಗಳು ಕೈಯಮೇಲೆ; ಬೈದಡೆ ಬೈಗಳು ಕೈಯಮೇಲೆ; ಹಿಂದಣ ಜನ್ಮವೇನಾದಡಾಗಲಿ ಇಂದಿನ ಭೋಗವು ಕೈಯಮೇಲೆ. ಕೂಡಲಸಂಗಮದೇವಯ್ಯಾ ನಿಮ್ಮ ಪೂಜಿಸಿದ ಫಲ ಕೈಯಮೇಲೆ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಹೊಯ್ದಡೆ ಹೊಯ್ಗಳು ಕೈಯಮೇಲೆ: [ಹೊಯ್ದಡೆ-] ತಾನೊಬ್ಬರನು ಕೋಲು ಗುದಿಗೆಗಳ ತೆಗೆದುಕೊಂಡು ಸದವಿದರೆ, ಹೊಯ್ಗಳು-ತಿರಿಗಿ ಅವರು ತನ್ನ ಬಡಿವಂಥದು, ಕೈಯಮೇಲೆ-ಪ್ರತ್ಯಕ್ಷ ಪ್ರಮಾಣವು. ಬೈದಡೆ-ತಾನೊಬ್ಬರನು ಅಚ್ಚಾ ಇಚ್ಚಿ ಛೀ ತೂ ಎಂದು ತಿಟ್ಟಿದರೆ, ಬೈಗಳು-ತಿರಿಗಿ ಅವರು ತನ್ನ ಬೈವಂಥವದು, ಕೈಯಮೇಲೆ-ಪ್ರತ್ಯಕ್ಷ ಪ್ರಮಾಣವು. ಹಿಂದಣ ಜನ್ಮವೇನಾದಡಾಗಲಿ -ಮೊದಲು ಜನ್ಮದಲ್ಲಿ ಮಾಡಿದ ಕೀಲು ⁽¹ಮೇಲಾದ⁽¹ ಪುಣ್ಯಾಪಾಪಂಗಳು ಇಲ್ಲದೇ ಆಗಿಹೋದರೂ ಹೋಗಲಿ, ಇಂದಿನ ಭೋಗವು ಕೈಯ್ಯಮೇಲೆ:[ಇಂದಿನ ಭೋಗವು-] ಈ ಜನ್ಮದಲ್ಲಿ ಮಾಡಿದ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವು, ಕೈಯಮೇಲೆ-ಪ್ರತ್ಯಕ್ಷ ಪ್ರಮಾಣವು. ಕೂಡಲಸಂಗಮದೇವಯ್ಯಾ-ಎಲೆ ಪರಶಿವಲಿಂಗವೆ, ನಿಮ್ಮ ಪೂಜಿಸಿದ-ಗುರು ಮುಖದಿಂದ ಬಂದ ಇಷ್ಟಮಹಾಲಿಂಗಕ್ಕಷ್ಟ ವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿದಂಥ ಫಲ-ಸುಕೃತವು, ಕೈಯಮೇಲೆ-ಪ್ರತ್ಯಕ್ಷ ಪ್ರಮಾಣವು.

..........................

೧-೧ ಮೊದಲಾದ (ಗ).

---

೧೭೪

**ಆದ್ಯರ ವಚನ ಪರುಷ ಕಂಡಣ್ಣಾ; ಸದಾಶಿವನೆಂಬ ಲಿಂಗವ ನಂಬುವುದು, ನಂಬಲೊಡನೆ ನೀ ವಿಜಯಿ ಕಂಡಣ್ಣಾ. ಅಧರಕ್ಕೆ ಕಹಿ ಉದರಕ್ಕೆ ಸಿಹಿ ಕೂಡಲಸಂಗನ ಶರಣರ ವಚನ ಬೇವು ಸವಿದಂತೆ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - -

ಆದ್ಯರ ವಚನ ಪರುಷ ಕಂಡಣ್ಣಾ–ಪರುಷದ ಖಣಿಯು ಪಂಚಲೋಹಂಗಳು ಸೋಂಕಲು ಹೇಂಗೆ ಸುವರ್ಣವಾಗುತ್ತಿಹುದೋ ಹಾಂಗೆ, ಪೂರ್ವ ಗಣಂಗಳು ಹೇಳಿದಂಥ ವಚನಶಾಸ್ತ್ರಂಗಳಲ್ಲಿ ತನುಮನಧನಂಗಳನು ಕೊಟ್ಟು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದರೆ ತನುಮನಧನಂಗಳ ವರ್ತನೆಯಲ್ಲ ನಷ್ಟವಾಗಿ ಹೋಗಿ ಆ ತನುಮನಧನಂಗಳೆಲ್ಲ ನಿತ್ಯವಾದ ಗುರುಲಿಂಗಜಂಗಮಸ್ವರೂಪ ವಾಗುತ್ತಿಹವೆಂದು ಹೇಳುವುದು. ಆ ವಚನ ಶಾಸ್ತ್ರಂಗಳಲ್ಲಿ ಹೇಳಿದ ಹಾಂಗೆ ತನುಮನದನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದಲ್ಲಿ ತನುಮನದನಂಗಳ ವರ್ತನೆಯಲ್ಲ ನಷ್ಟವಾಗಿ ಹೋಗಿ ನಿತ್ಯವಾದ ಗುರುಲಿಂಗಜಂಗಮವಾಗುತ್ತಿರ್ದಕಾರಣ, ಆದ್ಯರ–ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳರಾಯ ಮೊದಲಾದ ಅರುವತ್ತು ಮೂರು ಪುರಾತನರ, ವಚನ–ವಾಕ್ಯಾನುಭಾವವು, ಪರುಷ ಕಂಡಣ್ಣಾ–ಪರುಷದ ಖಣಿಗೆ ಸಮಾನವಾಗಿರ್ಪುದು ಕಂಡಾ, ಅಣ್ಣಾ–ಎಲೆ ಹಿರಿಯನೆ, ಸದಾಶಿವನೆಂಬ–ಅನವರತ ಮಾಂಗಲ್ಯಸ್ವರೂಪವಾದ, ಲಿಂಗವ–ಪರಶಿವಲಿಂಗವನು, ನಂಬುವುದು–ವಿಶ್ವಾಸಿಸುವುದು, ನಂಬಲೊಡನೆ–ವಿಶ್ವಾಸಿಸಿ ಲಿಂಗ ಪೂಜೆಯ ಮಾಡಿದಡಷ್ಟಕ್ಕೇ, ನೀ ವಿಜಯಿ ಕಂಡಣ್ಣಾ–ಸಕಲ ಸಂಸಾರ ಪ್ರಪಂಚಿನ ವರ್ತನೆಯು ನಷ್ಟವಾಗಿ ಹೋಗುತ್ತಿಹುದು, ಕಂಡಾ–ಕಾಣಾ, ಅಣ್ಣಾ– ಎಲೆ ಹಿರಿಯನೆ.

ಅಧರಕ್ಕೆ ಕಹಿ ಉದರಕ್ಕೆ ಸಿಹಿ ಕೂಡಲಸಂಗನಶರಣರ ವಚನ ಬೇವು ಸವಿದಂತೆ–ಬೇವನ್ನು ಸವಿಯಬೇಕಾದರೆ ತುಟಿಗೆ ರಸನೆಗೆ ಅತಿ ದುರ್ಘಟವಾಗಿರ್ಪುದು. ಅದನ್ನು ತರಹರಿಸಿಕೊಂಡು ಹೊಟ್ಟೆ ಒಳೆಯಕ್ಕೆ ತೆಗೆದುಕೊಂಡರೆ ಹೊಟ್ಟೆಯೊಳಗಿನ ಕಿಲಬುಹುಳವೆಲ್ಲ ಸತ್ತುಹೋಗಿ ಬಂಗಾರಕ್ಕೆ ಪುಟಕೊಟ್ಟ ಹಾಂಗೆ ದೇವ ವರ್ಧನವಾಗುತ್ತಿಹುದು; ಹಾಂಗೆ, ಪೂರ್ವಪುರಾತನರ ವಚನಶಾಸ್ತ್ರದಲ್ಲಿ ಹೇಳಿದ ಹಾಂಗೆ ಆಚರಿಸುವ ಪರಿಯಂತರ ಅತಿ ದುರ್ಘಟವಾಗಿರ್ಪುದು, ಆಚರಣೆಯ ಅಂತ್ಯದಲ್ಲಿ ಬೇವು ಸವಿದಂತೆ ನಿತ್ಯವಾದ ನಿಜ ಮೋಕ್ಷವೆ ದೊರೆಕೊಂಬುತ್ತಿಹುದು.

III- - - - - - - - - - - - - - - - - - - - - - - - - - - - - - - - - - - - - - - - - - - - - - -

ಬೇವ ಸವಿದಲ್ಲಿ ಅಧರಕ್ಕೆ ಕಹಿಯಾಗಿ ಉದರಕ್ಕೆ ಸಿಹಿಯಾಗಿರುವ ಹಾಂಗೆ ಶಿವಶರಣರ ವಚನಾನುಭಾವವು ಆಚರಿಸುವುದಕ್ಕೆ ಅಶಕ್ಯವಾದರೂ ಭವರೋಗವ ನಷ್ಟವ ಮಾಡುವ ಜ್ಞಾನಕ್ಕೆ ಸಾಧನವಾಗಿರ್ಪವು ಎಂಬುದೀಗ ಕೂಡಲಸಂಗನ ಶರಣರ ವಚನ ಬೇವು ಸವಿದಂತೆ ಎಂಬ ಶಬ್ದಕ್ಕರ್ಥ.

---

**ಹೊತ್ತಾಱೆ ಎದ್ದು ಅಗ್ಗವಣಿಯ ಪತ್ರೆಯ ತಂದು, ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ. ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರೊ? ಹೊತ್ತು ಹೋಗದ ಮುನ್ನ, ಮೃತ್ಯುವೊಯ್ಯದ ಮುನ್ನ ತೊತ್ತುಗೆಲಸವ ಮಾಡು ಕೂಡಲಸಂಗಮದೇವನ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಹೊತ್ತಾಱೆ ಎದ್ದು–ಪ್ರಾತಃಕಾಲದಲ್ಲಿ ಉತ್ಥಾನಂಗೆಯ್ದು, ಅಗ್ಗವಣಿಯ ಪತ್ರೆಯ ತಂದು–ಬಿಂದಿಗೆ ಕುಜಾಯಿಗಳನ್ನು ತೆಗೆದುಕೊಂಡು ಬಂದು ಹಳ್ಳ ಹೊಳೆ ಕೆರೆ ಬಾವಿಗಳಿಗೆ ಹೋಗಿ ನಿರ್ಮಲವಾದ ಉದಕವನ್ನು ಸೋಸಿಕೊಂಡು ಬಂದು ಹೂವಿನ ಕರಡಿಗೆ ಜೋಳಿಗೆ ಮೊದಲಾದವನ್ನು ತೆಗೆದುಕೊಂಡು ಹೂ ಪತ್ರೆ ವನಾಂತರಗಳಿರುವಂಥ ಸ್ಥಾನಕ್ಕೆ ಹೋಗಿ ಪತ್ರೆ ಪುಷ್ಪಂಗಳ ಶೋಧಿಸಿಕೊಂಡು ಬಂದು, ಹೊತ್ತು ಹೋಗದ ಮುನ್ನ–ವೇಳೆವಾಗದಕಿಂದ ಮೊದಲೇ, ಲಿಂಗವ–ಇಷ್ಟಮಹಾಲಿಂಗವನ್ನು, ಪೂಜಿಸು–ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸು. ಹೊತ್ತು ಹೋದ ಬಳಿಕ–ವೇಳೆವಾದ ಮೇಲೆ, ನಿನ್ನನಾರು ಬಲ್ಲರೋ?–ನಿನ್ನನಾರು ಸಡ್ಡೆ ಮಾಡಬಲ್ಲರು? ಹೊತ್ತು ಹೋಗದ ಮುನ್ನ–ದಿನಕಾಲ ಕಲ್ಪಿತಂಗಳು ತೀರಿ ವೃದ್ಧನಾಗುವುದಕಿಂದ ಮೊದಲೇ, ಮೃತ್ಯುವೊಯ್ಯದ ಮುನ್ನ–ಯಮನು ಮರಣವನ್ನೈದಿಸುವುದಕಿಂದ ಮೊದಲೇ, ಕೂಡಲಸಂಗಮದೇವನ ಜಂಗಮ ಮೂರ್ತಿಗಳಿಗೆ, ತೊತ್ತುಗೆಲಸವ ಮಾಡು–ಅವರೇ ಕರ್ತೃವಾಗಿ ತಾನೇ ಭೃತ್ಯನಾಗಿ ಕರ್ತೃಭೃತ್ಯಭಾವವನ್ನು ಮುಂದುಗೊಂಡು ಭಕ್ತಿಯನ್ನು ಮಾಡಿ ಮುಕ್ತಿಯ ಹಡದುಕೋ.

III- - - - - - - - - - - - - - - - - - - - - - - - - - - - - - - - - - - - - - - - - - - - -

ಹೊತಾಱೆ ಎದ್ದು–ಜ್ಞಾನೋದಯವಾದಕ್ಷಣದಲ್ಲಿಯೆ ಅವತರಿಸಿ, ಅಗ್ಗವಣಿಯ–ಶಾಂತಿವಾರಿಯ, ಪತ್ರೆಯ–ವೈರಾಗ್ಯವೆಂಬ ಪತ್ರೆ ಪುಷ್ಪಗಳನು, ತಂದು–ಅಜೀವಿನ ಮುಖಕ್ಕೆ ಆಗಮಾಡಿಕೊಂಡು, ಹೊತ್ತು ಹೋಗದ ಮುನ್ನ–ಜ್ಞಾನ ನಷ್ಟವಾಗುವುದಕಿಂದ ಮೊದಲೆ ಲಿಂಗವ ಪೂಜಿಸು–ಪ್ರಾಣಲಿಂಗಾರ್ಚನೆಯನು ಮಾಡು. ಹೊತ್ತು ಹೋದ ಬಳಿಕ–ಕಾಲಕಾಮಾದಿಗಳು ಪರಿಗ್ರಹಿಸಿ ಭವಕ್ಕೆ ಹಾಕುವುದಕಿಂದ ಮೊದಲೆ; ಮೃತ್ಯುವೊಯ್ಯದ ಮುನ್ನ–ಅಪಮೃತ್ಯು ಕಾಲಮೃತ್ಯು ತೆಗೆದುಕೊಂಡು ಹೋಗುವುದಕಿಂದ ಮೊದಲೆ, ಕೂಡಲಸಂಗಮದೇವನ–ಪರಸಿವಲಿಂಗದ, ತೊತ್ತುಗೆಲಸವ ಮಾಡು–ಭಕ್ತಿಸ್ಥಲದವರ ಮಿ೧[ಯಿ]೧ಸಿ ೨ಗೌ೨ ಡಿಯಾಗಿ ಗುರುಲಿಂಗಜಂಗಮದ ಭೃತ್ಯೋಪಚಾರವನು ಎಸಗು.

..........................

೧–೧ X (ಟ,ಡ). ೨–೨ ಗಾ (ಟ).

೧೭೬

**ಅಚ್ಚುಗವೇಕಯ್ಯಾ ಸಂಸಾರದೊಳಗೆ? ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದು; ಬೇಗ ಬೇಗ ಅರ್ಚನೆ ಪೂಜೆಯ ಮಾಡುವುದು ಕೂಡಲಸಂಗನ ಕೂಡುವುದು.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಸಂಸಾರದೊಳಗೆ–ಹೊನ್ನು ಹೆಣ್ಣು ಮಣ್ಣು ಮುಖ್ಯವಾದ ಸಕಲ ಸಂಸಾರ ಪ್ರಪಂಚಿನಲ್ಲಿ, ಅಚ್ಚುಗವೇಕಯ್ಯಾ?–ಎರಕವೆರೆದೋಪಾದಿಯಲ್ಲಿ ಕೂಡಿರುವಂಥದೇತಕ್ಕೆ? ಸಲ್ಲದಯ್ಯಾ. ನಿಚ್ಚ ನಿಚ್ಚ–ದಿನದಿನಂಪ್ರತಿಯಲ್ಲಲಿ, ಶಿವರಾತ್ರಿಯ ಮಾಡುವುದು–ಶಿವರಾತ್ರಿ ಸಂಕಣ್ಣಯ್ಯಗಳ ಹಾಂಗೆ ಬೇಡರ ಕಣ್ಣಪ್ಪಯ್ಯನೋಪಾದಿಯಲ್ಲಿ ಏಕಾಗ್ರ ಚಿತ್ತದಿಂದೆಚ್ಚತ್ತು ಲಿಂಗಪೂಜೆಯ ಮಾಡುವುದು, ಬೇಗ ಬೇಗ ಚಮತ್ಕಾರ ಚಮತ್ಕಾರದಿಂದ, ಅರ್ಚನೆ–ಹನ್ನೆರಡು ತೆರದಾರ್ಚನೆಯು, ಪೂಜೆಯ–ಇಪ್ಪತ್ತುನಾಲ್ಕುತೆರೆದ ಸತ್ಕಾರಗಳು, ಮಾಡುವುದು–ಅನುಗೈವುದು, ಕೂಡಲಸಂಗನ ೧ಕೂಡುವುದು೧–ಹೀಂಗೆ ಲಿಂಗಪೂಜೆ ಜಂಗಮದಾಸೋಹವ ಮಾಡಿ ಪರಶಿವಲಿಂಗದಲ್ಲಿ ಬೆರೆಯುವುದು.

.........................

೧–೧ ಮದೇವಾ (ಕ).

---

೧೭೭

**ಅಂದು ಇಂದು ಮತ್ತೊಂದೆನಬೇಡ; ದಿನವಿಂದೇ ಶಿವಶರಣೆಂಬುವಂಗೆ! ದಿನವಿಂದೇ ಹರಶರಣೆಂಬುವಂಗೆ! ದಿನವಿಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ!**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಅಂದು–ಮೊದಲ ಜನ್ಮದಲ್ಲಿ ಲಿಂಗಪೂಜೆಯ ಮಾಡಲಿಲ್ಲವೆಂದು ಹೇಳಬೇಡವು, ಇಂದು –ಈ ಜನ್ಮದಲ್ಲಿ ಲಿಂಗಪೂಜೆಯ ಮಾಡುವುದಕ್ಕೆ ಕೂಡೋದಿಲ್ಲವೆಂದು ಹೇಳಬೇಡವು, ಮತ್ತೊಂದೆನಬೇಡ–ಇನ್ನೊಂದು ಜನ್ಮಕ್ಕೆ ಲಿಂಗಪೂಜೆಯ ಮಾಡೇನೆಂದು ಹೇಳಬೇಡವು ಎಂಬುದರ್ಥ. ಅಂದು– ಬಾಲ್ಯದಲ್ಲಿ ಲಿಂಗಪೂಜೆಯ ಮಾಡೆಂದು ಭಕ್ತಮಾಹೇಶ್ವರರು ಹೇಳಿದಲ್ಲಿ ಈಗ ಚೆಂಡು ಬೊಗರಿ ಚಕ್ರ ೧ಗಜ೧ ಪಾಲಂಕಿ ಮೊದಲಾದವನ್ನು ಆಡುವದರಿಂದ ಈಗ ಲಿಂಗಪೂಜೆ ಮಾಡುವುದಕ್ಕೆ ಕೂಡೋದಿಲ್ಲ. ಯೌವನದಲ್ಲಾದರೆ ದಷ್ಟ ಪುಷ್ಟ ಚೈತನ್ಯವಾಗುತ್ಯೆದೀನಿ ಆಗ ಲಿಂಗಪೂಜೆಯ ಮಾಡೇನೆಂದು ಹೇಳಬೇಡವು, ಇಂದು–ಯೌವನದಲ್ಲಿ ಲಿಂಗಪೂಜೆಯ ಮಾಡೆಂದು ಭಕ್ತ ಮಾಹೇಶ್ವರರು ಹೇಳಿದಲ್ಲಿ ಈಗ ಷಟ್ಕೃಷಿವ್ಯಾಪಾರವ ಮಾಡುವುದರಿಂದ ಈಗ ಲಿಂಗಪೂಜೆಯ ಮಾಡುವುದಕ್ಕೆ ಕೂಡೋದಿಲ್ಲ. ಮುಪ್ಪಿನ ಕಾಲಕ್ಕೆ ಚಿತ್ತಸ್ವಸ್ಥವಾಗುತ್ಯೆತೆ. ಆಗ ಲಿಂಗಾರ್ಚನೆಯ ಮಾಡೇನೆಂದು ಹೇಳಬೇಡವು. ಮತ್ತೊಂದೆನಬೇಡ–ಮುಪ್ಪಿನಕಾಲದಲ್ಲಿ ಲಿಂಗಪೂಜೆಯ ಮಾಡೆಂದು ಭಕ್ತಮಾಹೇಶ್ವರರು ಹೇಳಿದಲ್ಲಿ ಈಗ ನಾನಂತೂ ಕೂಡ್ರಲಾರೆ ನಿಲ್ಲಲಾರೆ ಪತ್ರೆ ಪುಷ್ಪಾದಿಗಳ ತರಲಾರೆ ಈಗ ಲಿಂಗಪೂಜೆಯ ಮಾಡುವುದಕ್ಕೆ ಕೂಡೋದಿಲ್ಲವೆಂದು ಹೇಳಬೇಡವು.

ದಿನವಿಂದೇ ಶಿವಶರಣೆಂಬುವಂಗೆ: [ಶಿವಶರಣೆಂಬುವಂಗೆ–] ಶಿವಸ್ವರೂಪವಾದ ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆವಾತಂಗೆ, ದಿನವಿಂದೇ ತಾನು ದೇಹಸಂಬಂಧಿಯಾಗಿ ಹುಟ್ಟಿಬಂದಂಥದೇ ಅದೇ ಶುಭದಿನ ಶುಭವೇಳೆಯು. ದಿನವಿಂದೇ ಹರಶರಣೆಂಬುವಂಗೆ: [ಹರಶರಣೆಂಬುವಂಗೆ–] ಶಿವಸ್ವರೂಪವಾದ ಲಿಂಗಪೂಜೆಯ ಮಾಡಿ ಲಿಂಗದ ಕರುಣವನ್ನು ಹಡೆವಾತಂಗೆ, ದಿನವಿಂದೇ–ತಾನು ದೇಹಸಂಬಂಧಿಯಾಗಿ ಹುಟ್ಟಿ ಬಂದದ್ದೇ ಅದೇ ಶುಭದಿನ ಶುಭ ವೇಳೆ ಶುಭ ಮೂಹೂರ್ತವು. ದಿನವಿಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ– ಇಷ್ಟಮಹಾಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ "ನೀನೆ ನಿಧಿ ನೀನೆ ಮಂತ್ರಂ। ನೀನಾರ್ಚನೆ ನೀನೆ ಭಕ್ತಿ ನೀನುಪದೇಶಂ॥ ನೀನೆ ಜಪತಪವೆನಗಂ। ನೀನಿದನರಿಯಾ ಪ್ರಸನ್ನ ಶಂಕರ ಲಿಂಗಾ॥" ಎಂದು ಕಂದ ವೃತ್ತ ಗದ್ಯಪದ್ಯ ಪ್ರಬಂಧಗಳಿಂದ ಲಿಂಗದ ಕುಲಾವಳಿಯನೆತ್ತೆತ್ತಿಕೊಂಡು ಸ್ತೋತ್ರವ ಮಾಡಿ ಲಿಂಗದ ಕರುಣವ ಹಡೆವಾತಂಗೆ, ದಿನವಿಂದೇ– ತಾನು ದೇಹಸಂಬಂಧಿಯಾಗಿ ಹುಟ್ಟಿಬಂದಂಥದ್ದೇ ಅದೇ ಶುಭದಿನ ಶುಭವೇಳೆ ಶುಭಮೂಹೂರ್ತವು ಎಂಬ ದೃಷ್ಟೋಪಮಾನದ ಹಾಂಗೆ.

● ಅಂದು–ಗುರು "ತರ" ದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರು ಪೇಟೆ ಮನೆ ಪುರ ಪಟ್ಟಣ ಸ್ಥಾನಂಗಳಿಗೆ ಬಂದು ಚೌಕಿಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನ್ನು ಮಾಡುತ್ತಿದ್ದಲ್ಲಿ ಎಲ್ಲ ಭಕ್ತಮಾಹೇಶ್ವರರು ಬಂದು ಭಕ್ತಿ ಬಿನ್ನಹವನ್ನು ಮಾಡುವರು. ಅಲ್ಲೊಬ್ಬ ಉಪಾಧಿಕನಿರುವನು. ನೀನೊಂದು ಭಕ್ತಿ ಬಿನ್ನಹವನ್ನು ಮಾಡೆಂದು ಹೇಳುವರು; ಹೇಳಿದಲ್ಲಿ ನೀವೆಲ್ಲ ಹೇಳುತ್ತಿದ್ದೀರಿ ನಾನೇನು ಮಾಡಲಾರದವನೆ? ಮನೆಯೊಳಗೊಂದಿಷ್ಟು "ಅನನುಕೂಲ" ವಾಗ್ಯೆತೆ ಈಗ ಮಾಡುವುದಕ್ಕೆ ಕೂಡೋದಿಲ್ಲ. ದೀವಳಿಗೆ ಬಂದರೆ ಸೂಚನೆ ಬಿನ್ನಹ ಘಟ್ಟಿಬಿನ್ನಹವನ್ನು ಮಾಡಿ ಜಳಕ ಜಂತಾವಳಿಗಳನ್ನು ಮಾಡಿಸಿ ಮೃಷ್ಟಾನ್ನ ಪದಾರ್ಥವನ್ನು ನೀಡಿ ಸಂತೃಪ್ತಿಬಡಿಸಿ ದೀವಳಿಗೆ ಹಚ್ಚಡವ ಕೊಟ್ಟು ಭಕ್ತಿಯ ಮಾಡೇನೆಂದು ಹೇಳಬೇಡವು, ಇಂದು–ಆ ಜಂಗಮ ಮೂರ್ತಿಗಳು ಹಾಂಗೆ "ನಾಲ್ಕೊಪ್ಪತ್ತು" ದೇಶಾಂತರವ ಮಾಡಿಕೊಳುತ್ತ ದೀವಳಿಗೆಗೆ ಬಂದಲ್ಲಿ ಸ್ವಾಮಿ ನಾನು ಹೇಳಿದ್ದು ಸಹಜ ನೀವು ಬಂದದ್ದು ಸಹಜ. ಆದರೇನಾಯಿತ್ತು, ಮಗನಿದ್ದರೆ ಘಟ್ಟಕ್ಕೆ ಹೋಗ್ಯೆದಾನೆ. ಹೆಂಡತಿ ಇದ್ದರೆ ದಿಮ್ಮನಿಸಿ ಆಗ್ಯೆದಾಳೆ ಸೊಸಿ ಇದ್ದರೆ ತವರಮನಿಗೆ ಹೋಗ್ಯೆದಾಳೆ; ಈಗ ಮಾಡೋದಕ್ಕೆ ಕೂಡೋದಿಲ್ಲ. ಶಿವರಾತ್ರಿಗೆ ಬಂದರೆ ಸೂಚನೆ ಬಿನ್ನಹ ಘಟ್ಟಿಬಿನ್ನಹವನ್ನು ಮಾಡಿ ಜಳಕ ಜಂತಾವಳಿಗಳನ್ನು ಮಾಡಿಸಿ ಮೃಷ್ಟಾನ್ನ ಪದಾರ್ಥವನ್ನು ನೀಡಿ ಸಂತೃಪ್ತಿಬಡಿಸಿ ದೀವಳಿಗೆ ಹಚ್ಚಡ, ಶಿವರಾತ್ರಿಯ ಪಾವಡವಕೊಟ್ಟು ಭಕ್ತಿಯ ಮಾಡೇನೆಂದು ಹೇಳುಬೇಡವು, ಮತ್ತೊಂದೆನಬೇಡ–ಆ ಜಂಗಮ ಮೂರ್ತಿಗಳು "ಹಾಂಗೆ ನಾಲ್ಕೊಪ್ಪತ್ತು" ದೇಶಾಂತರ ಮಾಡಿಕೊಳ್ಳುತ್ತ ಶಿವರಾತ್ರಿಗೆ ಬಂದಲ್ಲಿ ಸ್ವಾಮಿ ನಾನಂದದ್ದು ಸಹಜ ನೀವು ಬಂದ್ದು ಸಹಜ. ಆದರೇನಾಯಿತ್ತು; ಮಗನಿದ್ದರೆ ಘಟ್ಟಕ್ಕೆ ಹೋಗಿಬಂದು ದಣಿವಾಗಿ ಬಿದ್ದ್ಯೆದಾನೆ. ಹೆಂಡತಿ ಇದ್ದರೆ ಹಡದ್ಯೆದಾಳೆ. ಸೊಸಿ ಇದ್ದರೆ ದಿಮ್ಮನಿಸಿ ಆಗ್ಯೆದಾಳೆ. ಈಗ ಮಾಡುವುದಕ್ಕೆ ಕುಡೋದಿಲ್ಲ. ಉಗಾದಿಗೆ ಬಂದರೆ ಸೂಚನೆ ಬಿನ್ನಹ ಘಟ್ಟಿಬಿನ್ನಹವನ್ನು ಮಾಡಿ ಜಳಕ ಜಂತಾವಳಿಗಳನ್ನು ಮಾಡಿಸಿ ಮೃಷ್ಟಾನ್ನ ಪದಾರ್ಥಂಗಳ ನೀಡಿ

ಸಂತೃಪ್ತಿಬಡಿಸಿ ದೀವಳಿಗೆ ಹಚ್ಚಡ ಶಿವರಾತ್ರಿ ಪಾವುಡ ಉಗಾದಿ ಶಲ್ಯವ ಕೊಟ್ಟು ಭಕ್ತಿಯ ಮಾಡೇನೆಂದು ಹೇಳಬೇಡವು.

ದಿನವಿಂದೇ ಶಿವಶರಣೆಂಬುವಂಗೆ: [ಶಿವಶರಣೆಂಬುವಂಗೆ–] ಜಂಮಭಕ್ತಿಯಮಾಡಿ ಜಂಗಮದ ಕರುಣವ ಹಡೆದುಕೊಂಬಾತಂಗೆ, ದಿನವಿಂದೇ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದಂಥದೇ ಅದೇ ಶುಭದಿನ ಶುಭವೇಳೆ ಶುಭಮೂಹೂರ್ತವು. ದಿನವಿಂದೇ ಹರಶರಣೆಂಬುವಂಗೆ: [ಹರಶರಣೆಂಬುವಂಗೆ– ದುರಿತಧ್ವಂಸಿಯಾದ ಜಂಗಮಭಕ್ತಿಯ ಮಾಡಿ ಜಂಗಮದ ಕರುಣವ ಹಡೆವಾತಂಗೆ, ದಿನವಿಂದೇ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥದೇ ಅದೇ ಶುಭದಿನ ಶುಭವೇಳೆ ಶುಭಮುಹೂರ್ತವು. ದಿನವಿಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ– ಜಂಗಮಭಕ್ತಿ ಮಾಡಿ ‖ಗ್ರಂಥ‖ ಜಂಗಮೋ ಜಗದಾರಾಧ್ಯಃ ಜಂಗಮಶ್ಚ ಜಗತ್ತಿಃ ಜಂಗಮಶ್ಚ ಜಗತ್ಪೂಜ್ಯಃ ಜಗತ್ಪಾವನಜಂಗಮ ಎಂದು ಇವರು ಆದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಅನಾದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಭಕ್ತವತ್ಸಲರು ಮುಕ್ತಿ ಪ್ರದಾಯಕರು ನಿರಂಜನ ಗಣಾಧೀಶ್ವರನ ಸಂಪ್ರದಾಯಕರೇ ಇವರೆಂದು ಜಂಗಮದ ಬಿರುದಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿ ಜಂಗಮದ ಕರುಣವ ಹಡೆವಾತಂಗೆ, ದಿನವಿಂದೇ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದಂಥದೇ ಅದೇ ಶುಭದಿನ ಶುಭವೇಳೆ ಶುಭಮುಹೂರ್ತವಾಗಿರ್ಪುದು.

.........................

೧–೧ x (ಗ). ೨–೨ x(ಕ). ೩–೩ ತಾ (ಕ). ೪–೪ ಅನು (ಕ). ೫–೫ x (ಕ). ೬–೬ x (ಕ).

---

೧೭೮

**ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದು; ಮಾಡಿದ ಪೂಜೆಯ ನೋಡುವುದಯ್ಯಾ. ಶಿವತತ್ತ್ವಗೀತವ ಪಾಡುವುದು; ಶಿವನ ಮುಂದೆ ನಲಿದಾಡುವುದಯ್ಯಾ. ಭಕ್ತಿ ಸಂಭಾಷಣೆಯ ಮಾಡುವುದು; ನಮ್ಮ ಕೂಡಲಸಂಗನ ಕೂಡುವುದು.**

I - - - - - - - - - - - - - - - - - - - - - - - - - - - - - - - - - - - - - - - - - -

ಅಷ್ಟವಿಧಾರ್ಚನೆ–ಎಂಟುತೆರದಾರ್ಚನೆಯು, ಷೋಡಶೋಪಚಾರವ–ಅರ್ಘ್ಯಾದಿ ಪ್ರದಕ್ಷಿಣಾಂತ್ಯಮಾದ ಹದನಾರು ತೆರದ ಸತ್ಕಾರಂಗಳನು, ಮಾಡುವುದು; ಅನಗೈವುದು; ಮಾಡಿದ–ಇಂಡೆದಂಡಿಗಳಿಂದಲಕರಿಸಿದ, ಪೂಜೆಯ–ಅರ್ಚನೆಯ, ನೋಡುವುದಯ್ಯಾ–ಅನಿಮಿಷದೃಷ್ಟಿಯಿಂ ನಿರೀಕ್ಷಣೆಯ ಮಾಡುವುದಯ್ಯಾ. ಶಿವತತ್ತ್ವಗೀತವ ಪಾಡುವುದು–ಶಿವನ ಇಪ್ಪತ್ತೈದು ಲೀಲಾಮಹಿಮೆಯಲ್ಲಿ ಹೇಳುವ ಕಂದ ವೃತ್ತ ಗದ್ಯ ಪದ್ಯ ಪ್ರಬಂಧಂಗಳಿಂದಾ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುವುದು; ಶಿವನ ಮುಂದೆ ನಲಿದಾಡುವುದಯ್ಯಾ–ಇಷ್ಟಮಹಾಲಿಂಗದ ಸಮ್ಮುಖದಲ್ಲಿ ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆದಾಡುವುದಯ್ಯಾ.

ಭಕ್ತಿ ಸಂಭಾಷಣೆಯ ಮಾಡುವುದು–ಆ ಲಿಂಗಪೂಜೆಯಾದ ತದನಂತರದಲ್ಲಿ ಚೌಕಿಮಠಗಳಿಗೆ ಹೋಗಿ ಜಂಗಮಮೂರ್ತಿಗಳಿಗೆ ಬಿನ್ನಹವ ಮಾಡಿ ಕರಕೊಂಡು ಬಂದು ಸಕಲ ಪದಾರ್ಥವನ್ನು ನೀಡಿ ಸಂತೃಪ್ತಿಬಡಿಸಿ ಅವರು ಸಲಿಸಿದ ಬಳಿಕ ತಾಂಬೂಲವನ್ನು ಮಡಚಿಕೊಡುತ್ತ ॥ಗ್ರಂಥ॥ ಜಂಗಮೋ ಜಗದಾರಾಧ್ಯಃ ಜಂಗಮಶ್ಚ ಜಗತ್ಪತಿಃ ಜಂಗಮಸ್ತು ಜಗತ್ಪೂಜ್ಯಃ ಜಗತ್ಪಾವನಜಂಗಮಃ॥ ಎಂದು ಇವರು ಆದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಅನಾದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಭಕ್ತಿವತ್ಸಲರು ಮುಕ್ತಿ ಪ್ರದಾಯಕರು ನಿರಂಜನ ಗಣಾಧೀಶ್ವರನ ಸಾಂಪ್ರದಾಯಕರೇ ಇವರೆಂದು ಜಂಗಮದ ಬಿರುದಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುತ್ತ ಅವರ ಶಿವಾನುಭಾವಗೋಷ್ಠಿ ಸಂಪರ್ಕವನನುಗೈವುದು, ನಮ್ಮ ಕೂಡಲಸಂಗನ ಕೂಡುವುದು–ಹೀಂಗೆ ಲಿಂಗಪೂಜೆ ಜಂಗಮದಾಸೋಹ ಮಾಡುತ್ತ ಪರಶಿವ ಲಿಂಗದಲ್ಲಿ ಬೆರೆಯುವುದು.

---

### ೧೭೯

**ಆಳಿಗೊಂ [1]ಡಿ[1] ಹರೆಂದು ಅಂಜಲದೇಕೆ? [2]ನಾಸ್ತಿಕವಾಡಿಹರೆಂದು[2] ನಾಚಲದೇಕೆ? ಆರಾದಡಾಗಲಿ ಶ್ರೀಮಹಾದೇವಂಗೆ ಶರಣೆನ್ನಿ. [3]ಏನೇನು[3] ಅಱಿಯೆನೆಂದು ಮೌನಗೊಂಡಿರಬೇಡ. [4]ಕೂಡಲಸಂಗನ ಶರಣರ[4] ಮುಂದೆ ದಂಡಣದತ್ತಣವೆನ್ನಿ.[5]**

I - - - - - - - - - - - - - - - - - - - - - - - - - - - - - - - - - - - - - - - - - - - - -

ಆಳಿಗೊಂಡಿಹರೆಂದು–ಒಬ್ಬ ಭಕ್ತನೇನಾದರೂ ಸಮಯಾಚಾರಕ್ಕೆ ಜಂಗಮಮೂರ್ತಿಗಳನು ಕಟ್ಟುಮಾಡಿಕೊಂಡು ಆಗಾಗ್ಗೆ ಸೂಚನೆ ಬಿನ್ನಹ ಘಟ್ಟಬಿನ್ನಹವನ್ನು ಮಾಡುತ್ತ ಮೃಷ್ಟಾನ್ನ ಪದಾರ್ಥವ ನೀಡಿ ಸಂತೃಪ್ತಿ ಬಡಿಸುತ್ತ ಶಾಲು ಸೆಕಲಾತಿ ಸಣ್ಣಗಂಬಳಿ ಬಣ್ಣದ ಪಚ್ಚಡ ಮೊದಲಾದವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟೆಮಂಚ ಲೇಪು ಸುಪ್ಪತ್ತಿಗೆಯ ಮೇಲೆ [೧]ಮಲಗಿಸಿಕೊಂಡು[೧] ಪರಿಣಾಮ ಸಂಗಾತ ಮಡಗಿಕೊಂಡಿರ್ದಲ್ಲಿ ಊರೊಳಗೆ [೨]ಅವನಿಗೆ ಆಗಿ[೨] ಬಾರದಂಥ ಜೈನಚಾರ್ವಾಕ ಮಾಯಾವಾದಿಗಳು ಸಮಯಾಚಾರದ ಜಂಗಮವೆಂದು ಮಿಸೆಮಿಂಡಳನ ಮನೆಯೊಳಗೆ ಮಡಗಿಕೊಂಡೈದಾನೆ ಮನೆಯೊಳಗೆ ಪ್ರಾಯದ ಹೆಂಡರು ಪ್ರಾಯದ ಮಕ್ಕಳು ಪ್ರಾಯದ ಸೊಸ್ತೇರು ಮೊದಲಾದವರೈದಾರೆ ಅವರಿಗೆ ಬಿಟ್ಟಾನೆ? ಬಿಡಲರಿಯನೆಂದು ಆಡಿಕೊಂಡಾರೆನುತ್ತೆ, ಅಂಜಲದೇಕೆ?– ಹೆದರಿಕೊಂಡು ಜಂಗಮಭಕ್ತಿ ಮಾಡುವಂಥದನು ಬಿಡೋದೇನು ಕಾರಣಕ್ಕೆ? ಸಲ್ಲದು.

ನಾಸ್ತಿಕವಾಡಿಹರೆಂದು–ಒಬ್ಬ ಭಕ್ತನೇನಾದರೂ ಪ್ರಾತಃಕಾಲದಲ್ಲೆದ್ದು ಹೂವಿನಕರಡಿಗೆ ಜೋಡಿಗೆ ಮೊದಲಾದವನ್ನು ತೆಗೆದುಕೊಂಡು ಪುಷ್ಪದವನಾಂತರ ಇರುವ ಸ್ಥಾನಕ್ಕೆ ಹೋಗಿ ಪತ್ರೆಪುಷ್ಪಾದಿಗಳ ಶೋಧಿಸಿಕೊಂಡು ಬಂದು ಹಸ್ತಪಾದಂಗಳ ತೊಳೆದುಕೊಂಡು ಜಳಕಜಂತಾವಳಿಗಳ ಮಾಡಿಕೊಂಡು [೩]ಕಟಿಸ್ನಾನ ಕಂಠಸ್ನಾನ ಮಂಡೆಸ್ನಾನ ಮೊದಲಾದವನ್ನು ಮಾಡಿಕೊಂಡು[೩] ಷಡುಸಮ್ಮಾರ್ಜನೆಯ ಮಾಡಿಕೊಂಡು ರಂಗವಾಲಿಯ ತುಂಬಿಕೊಂಡು ಕಡ್ಡಿ [೪]ಬತ್ತಿಯನ್ನು ಸುತ್ತಿ[೪] ಕೊಂಡು ಧೂಪ ದೀಪ ಮೊದಲಾದವನ್ನು ಮಡಗಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದ

ಲಿಂಗಪೂಜೆಯ ಮಾಡುತ್ತಿದ್ದಲ್ಲಿ [೫]ತನ್ನ[೫] ಮನೆಯೊಳಗೆ [೬]ಅವನಿಗೆ ಆಗಿ[೬] ಬಾರದಂಥ ಅತ್ತಿಗೆ ನಾದಿನಿ ಭಾವ ಮೈದುನ ಮೊದಲಾದವರು ಮುಂಜಾನೆದ್ದು ಪತ್ರೆಪುಷ್ಪಾದಿಗಳ ತರುತ್ತೇನೆಂದು ತಮ್ಮಟಿಗನ ಹಾಂಗೆ ತೋಟತೋಟವ ತಿರುಗುತ್ತೈದಾನೆ. ಷಡುಸಮ್ಮಾರ್ಜನೆಯ ಮಾಡುತ್ತೆನೆಂದು ಮನೆಯನೆಲ್ಲವ ಸಾರಿಸುತ್ತೈದಾನೆ. ರಂಗಾವಲಿಯ ತುಂಬುತ್ತೇನೆಂದು ಮನೆಯನೆಲ್ಲವ ಬೆಳ್ಳಗಮಾಡುತ್ತೈದಾನೆ. ಕಡ್ಡಿ ಬತ್ತಿಯ ಸುತ್ತುತ್ತೇನೆಂದು ಹಂಜಿಯನೆಲ್ಲ ಹಾಳುಮಾಡುತ್ತೈದಾನೆ. ಅಷ್ಟವಿಧಾರ್ಚನೆಯ ತರುತ್ತೇನೆಂದು ರೊಕ್ಕವೆಲ್ಲವ ಹಾಳುಮಾಡುತ್ತೈದಾನೆ. ಹೀಂಗೆ ಲಿಂಗಪೂಜೆಯ ಮಾಡಿ ಏನು? ಅನಿಮಿಷಯ್ಯಗಳ ಹಾಂಗೆ ಗೊಲ್ಲಾಳಯ್ಯಗಳ ಹಾಂಗೆ ಬಳ್ಳೇಶ ಮಲ್ಲಯ್ಯಗಳ ಹಾಂಗೆ ಕಾಯಧರಿಸಿ ಕೈಲಾಸಕ್ಕೆ ಹೋಗುತ್ತೈದಾನೋ ಕೈಲಾಸವೇನು ಸೂರೆಗೊಂಬುತ್ತೆದಾನೋ ಏನೋ? ಲಿಂಗದಲ್ಲಿ ನಿರವಯಲಾಗಿ ನಿಜಸಮಾಧಿಯೊಡವೆರದಾನೊ? ತಿಳಿಯಬಾರದೆಂದು ಹಾಸ್ಯವ ಮಾಡಿಯಾರೆನುತ್ತ, ನಾಚಲದೇಕೆ?–ನಾಚಿಕೊಂಡು ತಾ ಮಾಡುವಂಥ ಲಿಂಗಪೂಜೆಯ ಬಿಡೋದೇನು ಕಾರಣಕ್ಕೆ? ಸಲ್ಲದು.

ಆರಾದಡಾಗಲಿ–ಬಾಲವೃದ್ಧರೊಳಗಾರಾದಡಾಗಲಿ, ಶ್ರೀಮಹಾದೇವಂಗೆ–ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಶರಣೆನ್ನಿ–ಲಿಂಗಕ್ಕೆ ನಮಸ್ಕಾರವೆಂದು ನಮಸ್ಕರಿಸಿ. ಏನೇನು ಅರಿಯೆನೆಂದು– ಕಂದ ವೃತ್ತ ಗದ್ಯ ಪದ್ಯ ಪ್ರಬಂಧಗಳಿಂದ ಸ್ತೋತ್ರವ ಮಾಡುವುದಕ್ಕೆ ಬರೋದಿಲ್ಲವೆಂದು, ಮೌನಗೊಂಡಿರಬೇಡ–ಮುಗ್ಧನಾಗಿರಬೇಡವು. ಕೂಡಲ ಸಂಗನ ಶರಣರ ಮುಂದೆ–ಶಿವಶರಣರ ಸಮ್ಮುಖದಲ್ಲಿ ದಂದಣದತ್ತಣವೆನ್ನಿ–ದಂದಣದತ್ತಣವೆಂದು ಮುಗ್ಧಸ್ತೋತ್ರವ ಮಾಡಿ ಶಿವನ ಕರುಣವ ಹಡೆದುಕೊಳ್ಳಿ.

..........................

೧–೧ x (ಕ). ೨–೨ ತನಗಾಗಿ (ಗ). ೩–೩ x (ಗ). ೪–೪ x (ಕ). ೫–೫ x (ಗ). ೬–೬ ತನಗಾಗಿ(ಗ).

III- - - - - - - - - - - - - - - - - - - - - - - - - - - - - - - - - - - - - - - - - - - - -

1–1 ಡ (ಟ,ಡ). 2–2 ನಾಸ್ತಿಕವ ಮಾಡಿಹರೆಂದು (ಟ, ಡ). 3–3 ಏನನೂ (ಟ,ಡ).4–4 ಕೂಡಲಸಂಗಮದೇವರ (ಟ,ಡ). 5+ ಭೋ (ಟ, ಡ).

..........................

ಅಳಿಗೊಂಡಹರೆಂದು–ಆರಾದರು ಹಳಿದು ಹಾಸ್ಯವ ಮಾಡ್ಯಾರುಯೆಂದು ಅಂಜಲದೇಕೆ? ಭಯಬಡುವುದೇನು ಕಾರಣಕ್ಕೆ? ನಾಸ್ತಿಕವ ಮಾಡಿಹರೆಂದು–ತಿರಸ್ಕರಿಸಿ ನುಡಿದಾರುಯೆಂದು, ಏನನೂ ಅರಿಯೆನೆಂದು–ಶ್ರೀರುದ್ರ ಶಿವಕವಚ ಮೊದಲಾದವನೇನನೂ ತಿಳಿಯೆನೆಂದು, ದಂದಣದತ್ತಣಯೆನ್ನಿಭೋ!–ಷಡಕ್ಷರಿಮಂತ್ರವನುಚ್ಚರಿಸಿ ಜ್ಞಾನೈಶ್ವರ್ಯವನು ಕೊಡು ಜ್ಞಾನೈಶ್ವರ್ಯವನು ಕೊಡುಯೆಂದು ಸ್ತೋತ್ರವ ಮಾಡಿರೋ.

**ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಶಿವಲಿಂಗವ ನೆನೆದಡೆ, ತಪ್ಪುವವು ಅಪಮೃತ್ಯು ಕಾಲಮೃತ್ಯು ಕಾಲಕರ್ಮಂಗಳಯ್ಯಾ. ದೇವಪೂಜೆಯ ಮಾಟ, ದುರಿತಬಂಧನದೋಟ! ಶಂಭು ನಿಮ್ಮಯ ನೋಟ, ಹಿಂಗದ ಕಣ್ಬೇಟ! ಸದಾ ಸನ್ನಿಹಿತನಾಗಿ ಶರಣೆಂದು ನಂಬೋದು. ಜಂಗಮಾರ್ಚನೆಯ ಮಾಟ ಕೂಡಲಸಂಗನ ಕೂಟ!**

I ------------------------------------------------

ಸುಪ್ರಭಾತ ಸಮಯದಲ್ಲಿ–ಬೆಳಗು ಮೂರು ಜಾವದಲ್ಲಿ, ಅರ್ತಿಯಲ್ಲಿ– ಬಹು ಪ್ರೀತಿಯಿಂದ, ಶಿವಲಿಂಗವ–ಮಾಂಗಲ್ಯಸ್ವರೂಪವಾದ ಇಷ್ಟಮಹಾಲಿಂಗವನ್ನು, ನೆನೆದಡೆ–ಲಿಮಗಧ್ಯಾನ ಲಿಂಗಸ್ಮರಣೆಯ ಮಾಡಿದರೆ, ಅಪಮೃತ್ಯು–ಇಪ್ಪತ್ತು ಇಪ್ಪತ್ತೈದು ಮೂವತ್ತು ಮೂವತ್ತೈದು ವರುಷಕ್ಕೆ ಸತ್ತುಹೋಗುವಂಥದೆ ಅಪಮೃತ್ಯು, ಕಾಲಮೃತ್ಯು–ಎಂಬತ್ತು ತೊಂಬತ್ತು ನೂರುವರುಷಕ್ಕೆ ಸತ್ತುಹೋಗುವಂಥದೆ ಕಾಲಮೃತ್ಯು, ಕಾಲ–ಯಮನ ಸಂಬಂಧವಾದಂಥದು, ಕರ್ಮ[ಂಗಳು] ಸಂಚಿತಾದಿ ಕರ್ಮತ್ರಯಂಗಳು, ಈ ಅಪಮೃತ್ಯು ಕಾಲಮೃತ್ಯು ಕಾಲಕರ್ಮಂಗಳು, ತಪ್ಪುವವಯ್ಯಾ–ತೊಲಗುತ್ತಿಹವಯ್ಯಾ. ದೇವಪೂಜೆಯ ಮಾಟ–ಇಷ್ಟಮಹಾಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುವಂಥದೆ ದೇವಪೂಜೆಯ ಮಾಟ, ದುರಿತ–ಅಷ್ಟೋತ್ತರಶತವ್ಯಾಧಿಗಳು, ಬಂಧನ–ಕಾಲಕಾಮರ ಶಿಕ್ಷೆಯ ಬಾಧತ್ವವು, ಓಟ!–ಪಲಾಯನವು.

ಶಂಭು ನಿಮ್ಮಯ ನೋಟ–ಒಂದಾನೊಂದು ತೆಂಗು ಪೋಟಾಡುವನೋಪಾದಿಯಲ್ಲಿ ಎಡಕ್ಕೆ ಬಲಕ್ಕೆ ಹಿಂದಕ್ಕೆ ಮುಂದಕ್ಕೆ ನೋಡದೆ ಪ್ರಭು ನಟ್ಟದೃಷ್ಟಿಯಿಂ ನಿರೀಕ್ಷಿಸೆಂದನಾ ದೇಸಿಕೇಂದ್ರನೆಂದು ಅನಿಮಿಷದೃಷ್ಟಿಯಿಂ ನಿರೀಕ್ಷಿಸುವಂಥ ನಿರೀಕ್ಷಣೆಯು, ಹಿಂಗದ ಕಣ್ಬೇಟ!–ಇಷ್ಟಲಿಂಗದಲ್ಲಿ ದೃಗ್ಮನ ಭಾವಂಗಳು ಕೀಲಿಸಿರ್ಪವು. ಸದಾ–ಆವಾಗಲೂ, ಸನ್ನಹಿತನಾಗಿ–ಲಿಂಗದಲ್ಲಿ ಕೇಡಿಲ್ಲದೆ ಕೂಡಲ್ಪಟ್ಟಾತನಾಗಿ, ಶರಣೆಂದು ನಮಸ್ಕಾರವೆಂದು ನಮಸ್ಕರಿಸಿ, ನಂಬೋದು–ವಿಶ್ವಾಸಿಸಿ ಲಿಂಗಪೂಜೆಯ ಮಾಡುವುದು. ಜಂಗಮಾರ್ಚನೆಯ ಮಾಟ–ಲಿಂಗಪೂಜೆಯಾದ ತದನಂತರದಲ್ಲಿ ಚೌಕಿಮಠಗಳಿಗೆ ಹೋಗಿ ಜಂಗಮಮೂರ್ತಿಗಳಿಗೆ ಬಿನ್ನಹಮಾಡಿ ಕರಕೊಂಡು ಬಂದು ಸಕಲಪದಾರ್ಥವ ನೀಡಿ ಸಂತೃಪ್ತಿಬಡಿಸಿ ಅವರು ಸಲಿಸಿಯಾದ [೧]ಬಳಿಕ[೧] ವೀಳ್ಯವ ಮಡಿಚಿ ಕೊಡುತ್ತ ॥ಗ್ರಂಥ॥ ಜಂಗಮೋ ಜಗದಾರಾಧ್ಯಃ ಜಂಗಮಶ್ಚ ಜಗತ್ಪತಿಃ ಜಂಗಮಸ್ತು ಜಗತ್ಪೂಜ್ಯಃ ಜಗತ್ಪಾವನಜಂಗಮಃ॥ ಎಂದು ಇವರು ಆದಿ ಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಅನಾದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಅನಾಧಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡುವಂಥವರು. ಭಕ್ತಿವತ್ಸಲರು ಮುಕ್ತಿಪ್ರದಾಯಕರು ನಿರಂಜನ ಗಣಾಧೀಶ್ವರನ ಸಾಂಪ್ರದಾಯಕರೇ ಇವರೆಂದು ಜಂಗಮದ ಬಿರುದಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುವುದು, ಕೂಡಲಸಂಗನ [೨][ಕೂಟ!][೨]–ಹೀಂಗೆ ಲಿಂಗಪೂಜೆ ಜಂಗಮದಾಸೋಹ ಮಾಡಿ ಪರಶಿವಲಿಂಗದಲ್ಲಿ ಸಾಮರಸ್ಯವಾಗುವುದು.

..........................

೧–೧ ಮೇಲೆ (ಕ). ೨–೨ ಕೂಡುವುದು (ಕ,ಗ).

**ಅಂಕ ಕಳನೇಱಿ ಕೈಮಱೆದಿರ್ದಡೆ, ಮಾಱಂಕ ಬಂದಿಱಿ[1]ಯದೆ[1] ಮಾಣ್ಬನೆ? ನಿಮ್ಮ [2]ನೆನೆವ[2] ಮತಿ ಮಱೆದಿರ್ದಡೆ, ಪಾಪ ತನುವನಂಡಲೆವುದು ಮಾಣ್ಬುದೆ? ಕೂಡಲಸಂಗಯ್ಯನ ನೆನೆದಡೆ, ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಅಂಕ–ಪರಾಕ್ರಮಿಯು, ಕಳನೇಱಿ–ಯುದ್ಧಾಂಗಣದಲ್ಲಿ ನಿಂದು, ಕೈಮಱೆದಿರ್ದಡೆ–ವೈರಿಹಾಕುವಂಥ ಪೆಟ್ಟನ್ನು ಹಾರಿ ಹೊಡೆದು ತಾ ಪೆಟ್ಟನ್ನು ಹಾಕುವಂಥ ಸಾಧಕಾಂಗದ ಕೈಯನ್ನು ಮರೆದು ಹೌಹೊಡೆದ ಹಾಂಗೆ ಸುಮ್ಮನೆ ನಿಂತುಕೊಂಡಿದ್ದರೆ, ಮಾಱೊಂಕ–ಪ್ರತಿವೈರಿಯು, ಬಂದು–ಐದು ಬಂದು, ಇಱಿಯದೆ ಮಾಣ್ಬನೆ?–ತಲೆ ಹೊಯ್ದುಕೊಂಡು ಹೋಗದೆ ಬಿಟ್ಟಾನೆ? ಬಿಡನು ಎಂಬ ದೃಷ್ಟೋಪಮಾನದ ಹಾಂಗೆ; ಅಂಕ–ಭಕ್ತನೆಂಬ ವೀರಮಾಸಾಳನು, ಕಳನೇಱಿ ಶಿವಾದ್ವೈತ ಭಕ್ತಿಯೆಂಬ ರಣಾಂಗಣದಲ್ಲಿ ನಿಂದು, ಕೈಮಱೆದಿರ್ದಡೆ–ಭಕ್ತನೆಂಬ ವೀರಮಾಸಾಳು ಇದ್ದೆಡೆಗೆ ಜಂಗಮವೆಂಬ ಮಹಾವೀರ ಮಾಸಾಳು ಬಂದು ಎಲೋ ಭಕ್ತಾ ತನುವ ಕೊಡು ಮನವ ಕೊಡು ಧನವ ಕೊಡು ಎಂದು ಕೇಳಿದಲ್ಲಿ ಆ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದರೆ, ಮಾಱೊಂಕ–ಪ್ರತಿ ವೈರಿಯಾದ ಜ್ಞಾನಜಂಗಮಮೂರ್ತಿಯು, ಬಂದು–ಭಿಕ್ಷಕ್ಕೆಂದು ಬಿಜಯಂಗೈದು ಬಂದು, ಇಱಿಯದೆ ಮಾಣ್ಬನೆ?–ಇಚ್ಛಾಪದಾರ್ಥವನ್ನು ಬೇಡಿ ಹಿಮ್ಮೆಟ್ಟಿಸದೆ ಬಿಟ್ಟಾನೆ? ಬಿಡನು.

ನಿಮ್ಮ ನೆನೆವ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವ, ಮತಿ–ಜ್ಞಾನವು, ಮಱೆದಿರ್ದಡೆ – ವಿಸ್ಮೃತಿಯನೈದಿಸಿ ಬಿಟ್ಟರೆ, ಪಾಪ–ದೋಷವು, ತನುವನಂಡಲೆವುದು ಮಾಣ್ಬುದೆ?–ದೇಹವನ್ನು ಪೀಡಿಸುವಂಥದು ಬಿಟ್ಟೀತೆ? ಬಿಡದು. ಕೂಡಲಸಂಗಯ್ಯನ ನೆನೆದಡೆ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಿದರೆ, ಪಾಪ–ದೋಷವು, ಉರಿಗೊಡ್ಡಿದ ಅರಗಿನಂತೆ ಕರಗುವುದಯ್ಯಾ–ಲಾಕ್ಷವನ್ನು ಅಗ್ನಿಗೆ ಹಿಡಿದರೆ ಹೇಂಗೆ ಸೀತಳವಾಗಿ ಕರಗಿ ನೀರಾಗುತ್ತಿಹುದೋ ಹಾಂಗೆ ಪಾಪವೆಲ್ಲ ಪಲ್ಲಟವಾಗಿ ಭಕ್ತಿ ಸತ್ಕ್ರಿಯೆಗಳಾಗಿ ಅಳವಡೋದಿಲ್ಲವೆ? ಅಳವಡುತ್ತಿಹುದಯ್ಯಾ.

II- - - - - - - - - - - - - - - - - - - - - - - - - - - - - - - - - - - - - - - - - - - - -

1–1 ವುದ (ಚ,ಜ). 2–2 ನೆನಹ (ಚ,ಜ).

.........................

ಅಂಕ ಕಳನೇಱಿ ಕೈಮಱೆದಿರ್ದಡೆ ಭಕ್ತಿಬಿರುದಂಕನು ಗುರುಭಕ್ತಿ ಲಿಂಗಪೂಜೆ ಜಂಗಮ ದಾಸೋಹವೆಂಬ ರಣಾಂಗಳವನಡರಿ ಆ ತನುಮನಧನವನು ಗುರುಲಿಂಗಜಂಗಮಕ್ಕೆ ಸಮರ್ಪಣೆಯ ಮಾಡಬೇಕೆಂಬ ಸ್ಮರಣೆಯನು ವಿಸ್ಮೃತಿಯ ಮಾಡಿರ್ದರೆ, ಮಾಱಾಂಕ ಬಂದಿರಿವುದ ಮಾಬನೆ?–ಪ್ರತಿ ಬಿರುದಾಂಕ ನಾದ ಜಂಗಮವು ಆಗತವಾಗಿ ತನುವ ತಾ ಮನವ ತಾ ಧನವ ತಾ ಎಂದು ಶಿಕ್ಷಾಬೋಧೆಯಿಂದ ದಣಿಸೂದ ಬಿಟ್ಟನೆ? ನಿಮ್ಮ ನೆನಹ ಮತಿ ಮಱೆದಿರ್ದಡೆ ಪಾಪ ತನುವನಂಡಲೆವುದ ಮಾಬುದೆ?–ಎಲೆ ಲಿಂಗವೆ ನಿನ್ನ ಸ್ಮರಿಸುವ ಜ್ಞಾನವು ವಿಸ್ಮೃತಿಯಾಗಿರ್ದರೆ ಪಂಚಮಹಾದೋಷವು ದೇಹವನು ಪೀಡಿಸೂದ ಬಿಟ್ಟವೆ? ಮುಂದಕ್ಕೆ ಕಾಣಬಂದರ್ಥ.

---

**ಆಡಿಹರಯ್ಯಾ [1]ಪಾ[1]ಡಿಹರಯ್ಯಾ ಮನಬಂದ ಪರಿಯಲಿ! ಶಿವಶರಣರ ಮುಂದೆ ಆಡಿಹರಯ್ಯಾ [1]ಪಾ[1]ಡಿಹರಯ್ಯಾ! ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿ[2]ದ[2]ನೀವ, ನಮ್ಮ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಆಡಿಹರಯ್ಯಾ–ಹಸ್ತದಲ್ಲಿ ಲಿಂಗವನ್ನು ಪಿಡಿದುಕೊಂಡು ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆದಾಡುತ್ತಿಹರಯ್ಯಾ, ಪಾಡಿಹರಯ್ಯಾ–ಕಂದ ವೃತ್ತ ಗದ್ಯ ಪದ್ಯ ಪ್ರಬಂಧಗಳಿಂದ ಆ ಲಿಂಗದ ಕುಲಾವಳಿಯನೆತ್ತಿಲೊಂಡು ಸ್ತೋತ್ರವ ಮಾಡಿಹರಯ್ಯಾ, ಮನಬಂದ ಪರಿಯಲಿ!–ಮನಸಿಗೆ ಪ್ರೀತಿ ಬಂದ ಹಾಂಗೆ, ಶಿವಶರಣರ ಮುಮದೆ–ಜಂಗಮ ಮೂರ್ತಿಗಳ ಸಮ್ಮುಖದಲ್ಲಿ, ಆಡಿಹರಯ್ಯಾ–ಸೂಚನೆ ಬಿನ್ನಹ ಮಾಡುವದಕ್ಕೊಂದು ವೇಳೆ ಘಟ್ಟಿ ಬಿನ್ನಹ ಮಾಡುವದಕ್ಕೊಂದು ವೇಳೆ ಘಟ್ಟಿ ಬಿನ್ನಹ ಮಾಡುವುದಕ್ಕೊಂದು ವೇಳೆ ಕರಕೊಂಡು ಬರುವದಕ್ಕೊಂದು ವೇಳೆ ಅಗ್ಘವಣಿಯ ಕೊಡುವದಕ್ಕೊಂದು ವೇಳೆ ಪದಾರ್ಥವ ನೀಡುವದಕ್ಕೊಂದು ವೇಳೆ ನಮಸ್ಕಾರವ ಮಾಡುವದಕ್ಕೊಂದು ವೇಳೆ ಹೀಂಗೆ ಹಿಂದಕ್ಕೆ ಮುಮದಕ್ಕೆ ಎಡತಾಕಿಹರಯ್ಯಾ, ಪಾಡಿಹರಯ್ಯಾ–ಆ ಜಂಗಮ ಮೂರ್ತಿಗಳು ಸಲಿಸಿಯಾದ ಬಳಿಕ ತಾಂಬೂಲವನ್ನು ಮಡಚಿಕೊಡುತ್ತ ॥ಗ್ರಂಥ॥ ಜಂಗಮೋ ಜಗದಾರಾಧ್ಯಃ ಜಂಗಮಶ್ಚ ಜಗತ್ಪತೀಃ। ಜಂಗಮಸ್ತು ಜಗತ್ಪೂಜ್ಯಃ ಜಗತ್ಪಾವನಜಂಗಮಃ॥ ಎಂದು ಇವರು ಆದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಅನಾಧಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಭಕ್ತಿವತ್ಸಲರು ಮುಕ್ತಿದಾಯಕರು ನಿರಂಜನ ಗಣಾಧೀಶ್ವರರ ಸಾಂಪ್ರದಾಯಕರೇ ಇವರೆಂದು ಜಂಗಮದ ಬಿರುದಾವಳಿಯನೆತ್ತಿಕೊಂಡು ಸ್ತೋತ್ರ ಮಾಡಿಹರಯ್ಯಾ.

ಕೋಡಂಗಿಯಾಟವನಾಡಿದ ಭಕ್ತಂಗೆ–ಜಂಗಮಮೂರ್ತಿಗಳ ಸಮ್ಮುಖದಲ್ಲಿ ಎಡದ ಹಸ್ತದಿಂದ ಬಲದ ಕಿವಿಯ ಹಿಡಿದುಕೊಂಡು ಬಲದಹಸ್ತದಿಂದ ಎಡದ ಕಿವಿಯನ್ನು ಹಿಡಿದುಕೊಂಡು ನರ್ತಿಸಿ ನರ್ತಿಸಿ ಪಕಪಕನೆ ನಗಿಸಿದಂಥ ನಿರ್ವಂಚಕ ಸದ್ಭಕ್ತಂಗೆ, ಬೇಡಿದನೀವ–ತಾನೇನ ಬೇಡಿದಂಥ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು, ನಮ್ಮ ಕೂಡಲಸಂಗಮದೇವ–[ನಮ್ಮ] ಪರಶಿವಲಿಂಗವು.

III- - - - - - - - - - - - - - - - - - - - - - - - - - - - - - - - - - - - - - - - - - - - - - -

1–1 ಹಾ (ಟ). 2–2 ತ್ತ (ಟ).

.........................

ಆಡಿಹರಯ್ಯ–ಗುರುಲಿಂಗಜಂಗಮಕೆ ತನುಮನಧನಂಗಳ ಸಮರ್ಪಣೆಯ ಮಾಡಬೇಕೆಂದು ವಚಿಸುವರಯ್ಯ, ಹಾಡಿರಯ್ಯ–ಗುರುಲಿಂಗಜಮಗಮದ ಸ್ತೋತ್ರ ಮಂತ್ರ ಧ್ಯಾನ ಸ್ಮರಣೆಯ ಮಾಡುವರಯ್ಯ, ಮನಬಂದ ಪರಿಯಲಿ–ಮನಸ್ಸಿಗೆ ಬಂದ ಪ್ರಕಾರದಲ್ಲಿ, ಶಿವಶರಣರ ಮುಂದೆ–ಹರಶರಣರಗ್ರದಲ್ಲಿ, ಆಡಿಹರಯ್ಯ–ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವನು ಮಾಡಬೇಕೆಂದು ವಚಿಸುವರಯ್ಯ, ಹಾಡಿಹರಯ್ಯ–ಪ್ರಾಣಲಿಂಗದ ಪೂಜಾ ಸ್ತೋತ್ರ ಧ್ಯಾನಸ್ಮರಣೆಯನು ಮಾಡುವರಯ್ಯ.

ಕೋಡಂಗಿಯಾಟವನಾಡಿದ ಭಕ್ತಂಗೆ-ಹಸಾದ, ಏನಮಾಡಲಿ ಸ್ವಾಮಿಯೆಂದು ದಿಂಡುಡುಗೆಯ ಸುತ್ತಿಕೊಂಡು ಪರಶಿವಲಿಂಗದ ಮುಂದೆ ಕೋಡಂಗಿಯಾಟವನಾಡಲು, ಬೇಡಿತ್ತನೀವ-ಬೇಡಿದಂತಾ ಇಷ್ಟಾರ್ಥಸಿದ್ಧಿಯನು ಕೊಡುವನು, ನಮ್ಮ ಕೂಡಲಸಂಗಮದೇವ-ನಮ್ಮ ಪರಶಿವಲಿಂಗವು.

---

೧೮೩

**ಹೊಲಬುಗೊಂಡಜಿಸಲು ಬೇಡ, ಬಿಲಿದು ತರಬೇಡ; ಒಲಿದರೊಮ್ಮೆ ಶಿವಶರಣೆನ್ನಿರಯ್ಯಾ. ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ, ಕೂಡಲಸಂಗಮದೇವ ಭಕ್ತಿಲಂಪಟನಾಗಿ!**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಹೊಲಬುಗೊಂಡಜಿಸಲು ಬೇಡ-ಸಾವಿರ ಅಯ್ಯಗಳಿಗೆ ಹೋಳು ಪಾವಡವ ಕೊಟ್ಟೇವು ಎರಡುಸಾವಿರಯ್ಯಗಳಿಗೆ ಹಚ್ಚಡ ಕಂಬಳಿ ಕೊಟ್ಟೇವು ಮೂರುಸಾವಿರಯ್ಯಗಳಿಗೆ ಕೊಡೆ ಪಾದರಕ್ಷೆಗಳ ಕೊಟ್ಟೇವು ಎಂದು, ಹೊಲಬುಗೊಂಡು-ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವನುಭಾವಿಗಳು ಒಂಟಿಗಾರ ವಿರಕ್ತರು ಯಾವಲ್ಲೈದಾರೋ ಯಾವದೇಶದಲ್ಲೈದಾರೋ ಯಾವ ದೊರೆದಾತುರಗಳಲ್ಲೈದಾರೋ ಯಾವ ಪೇಟೆ ಮನೆ ಪುರ ಪಟ್ಟಣ ಸ್ಥಾನಂಗಳಲ್ಲೈದಾರೋ ಯಾವ ಚೌಕಿಮಠಗಳಲ್ಲೈದಾರೋ ಎಂದು ರೊಟ್ಟಿಬುತ್ತಿಯ ಕಟ್ಟಿಕೊಂಡು ಬಲತ್ಕಾರದಿಂದ ಹೋಗಿ ಅಲ್ಲಲ್ಲಿ ಹುಡಿಕಿ ಬಿನ್ನಹ ಮಾಡಿ ಕರಕೊಂಡುಬರುಬೇಡವು, ಬಿಲಿದು ತರಬೇಡ-ಈ ಪದಾರ್ಥವಲ್ಲದೆ ಇನ್ನು ಬೇರೆ ಪದಾರ್ಥವಾಗಬೇಕೆಂದು ಕಡಬಡ್ಡಿ ಸಾಲವ ಮಾಡಿ ತರಬೇಡವು, ಒಲಿದರೊಮ್ಮೆ ಶಿವಶರಣೆನ್ನಿರಯ್ಯಾ: ಒಲಿದರೆ-ಜಂಗಮಮೂರ್ತಿಗಳು ತಾವಾಗಿ ಕೃಪೆಯಾಗಿ, ಒಮ್ಮೆ-ಒಂದು ವೇಳೆ ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಶಿವಶರಣೆನ್ನಿರಯ್ಯಾ-ಶಿವಸ್ವರೂಪವಾದ ಜಂಗಮಭಕ್ತಿಯ ಮಾಡಿ ಜಂಗಮದ ಕೃಪೆಯನ್ನು ಹಡೆಯಿರಯ್ಯಾ.

ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ-ಜಂಗಮ ಮೂರ್ತಿಗಳು ಕ್ಷುಧೆಯಾಗಿ ಲಿಂಗಾರ್ಪಿತ ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡಾಕ್ಷಣವೇ ನಮಸ್ಕಾರವ ಮಾಡಿ ಇಚ್ಛಾಪದಾರ್ಥವನ್ನು ನೀಡಿ ಸಂತೃಪ್ತಿಬಡಿಸಿದರೆ, ಮುಕ್ತಿ-ಮೋಕ್ಷವು, ಸಿದ್ಧಿ-ಸಾಧ್ಯವಾಗುತ್ತಿಹುದು, ಕೂಡಲಸಂಗಮದೇವ-ಪರಶಿವಲಿಂಗವು, ಭಕ್ತಿಲಂಪಟನಾಗಿ!-ಭಕ್ತಿಯುಳ್ಳ ಭಕ್ತರುಗಳಲ್ಲಿ ಅತ್ಯಂತ [೧]ಮರುಕತ್ವ[೧] ವುಳ್ಳಾತನಾಗಿ.

..........................

೧-೧ ಮಮಕಾರತ್ವ (ಗ).

---

೧೮೪

**ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲವಯ್ಯಾ. ವೇದಪ್ರಿಯ ಶಿವನೆಂಬರು, ವೇದಪ್ರಿಯು ಶಿವನಲ್ಲವಯ್ಯಾ. ನಾದವ ಮಾಡಿದ ರಾವಣಂಗೆ ಅರೆ ಆಯುಷ್ಯವಾಯಿತ್ತು. ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು. ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ, ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - -

ನಾದ–ಸಾಮವೇದಗಾನ ಮಹಾಶೇಷಗಾನ ನಾರದಋಷಿಗಾನ ಹನುಮಾನ್ಯಗಾನ ಮೊದಲಾದ ಗಾನಂಗಳಲ್ಲಿ, ಪ್ರಿಯ–ಪ್ರೀತಿಯುಳ್ಳಾತ, ಶಿವನೆಂಬರು–ಪರಮೇಶ್ವರನೆಂದುಹೇಳುವರು, ನಾದ–ಸಾಮವೇದಗಾನ ಮಹಾಶೇಷಗಾನ ನಾರದಋಷಿಗಾನ ಹನುಮಾನ್ಯಗಾನ ಮೊದಲಾದ ಗಾನಂಗಳಲ್ಲಿ, ಪ್ರಿಯ–ಪ್ರೀತಿಯುಳ್ಳಾತ, ಶಿವನಲ್ಲವಯ್ಯಾ–ಪರಮೇಶ್ವರನಲ್ಲವಯ್ಯಾ. ವೇದ–ಋಗ್ಯಜುಸ್ಸಾಮಾಥರ್ವಣವೆಂಬ ನಾಲ್ಕು ವೇದಂಗಳ ಉಗ್ಘಡಣೆಯಲ್ಲಿ, ಪ್ರಿಯ–ಪ್ರೀತಿಯುಳ್ಳತನು, ಶಿವನೆಂಬರು–ಪರಮೇಶ್ವರನೆಂದು ಹೇಳುವರು. ವೇದ–ನಾಲ್ಕು ವೇದಂಗಳ ಉಗ್ಘಡಣೆಯಲ್ಲಿ, ಪ್ರಿಯ–ಪ್ರೀತಿಯುಳ್ಳಾತನು, ಶಿವನಲ್ಲವಯ್ಯಾ–ಪರಮೇಶ್ವರನಲ್ಲವಯ್ಯಾ.

ನಾದವ ಮಾಡಿದ–ಹತ್ತು ತಲೆಯೊಳಗೊಂದು ತಲೆಯ ತೆಗದು ಬುರುಡಿಯ ಮಾಡಿ ಇಪ್ಪತ್ತುತೋಳಿನೊಳಗೊಂದು ತೋಳತೆಗೆದು ಕೈರವ ಮಾಡಿ ನರವ ತೆಗದು ತಂತಿಯಮಾಡಿ ಬೆರಳು ತೆಗದು ಬಿರಡಿಯ ಮಾಡಿ ರಾವಣ ಹಸ್ತವ ನುಡಿಸಿದ, ರಾವಣಂಗೆ–ರಾವಣಾಸುರಂಗೆ, ಅರೆ ಆಯುಷ್ಯವಾಯಿತ್ತು–ಆರುವರೆ ಕೋಟಿ ಆಯುಷ್ಯವೆಲ್ಲ ಹೋಗಿ ಅರೆಕೋಟಿ ಆಯುಷ್ಯ ಪ್ರಾಪ್ತಿಯಾಯಿತ್ತು. ವೇದವನೋದಿದ–ನಾಲ್ಕು ವೇದಂಗಳ ಪಠಿಸಿದಂಥ, ಬ್ರಹ್ಮನ–ಆಜನ, ಶಿರಹೋಯಿತ್ತು–ಅಧೋನ್ಮತಿ ಅಧೋಬುದ್ಧಿ ಅಹಂಕೃತಿ ಅಹಂಮಮತೆ ಅಧಸ್ಸೆಂಬ ಪಂಚಶಿರಸ್ಸಿನೊಳಗೆ ಅಧಸ್ಸೆಂಬ ಶಿರಸ್ಸು ಛೇದನವಾಗಿ ಹೋಯಿತ್ತು. ನಾದ–ಸಾಮವೇದಗಾನ ಮಹಾಶೇಷಗಾನ ನಾರದಋಷಿಗಾನ ಹನುಮಾನ್ಯಗಾನ ರಾವಣೇಶ್ವರಗಾನ ಮೊದಲಾದ ಗಾನಂಗಳಲ್ಲಿ, ಪ್ರಿಯ–ಪ್ರೀತಿಯುಳ್ಳಾತನು, ಶಿವನಲ್ಲ–ಪರಮೇಶ್ವರನಲ್ಲವು. ವೇದ–ನಾಲ್ಕು ವೇದಂಗಳ ಉಗ್ಘಡನೆಯಲ್ಲಿ ಪ್ರಿಯ–ಪ್ರೀತಿಯುಳ್ಳಾತ, ಶಿವನಲ್ಲ–ಪರಮೇಶ್ವರನಲ್ಲವು; ಭಕ್ತಿಪ್ರಿಯ–ಭಕ್ತಿಯುಳ್ಳ ಭಕ್ತರುಗಳಲ್ಲಿ ಅತ್ಯಂತ ೧ಮರುಕತ್ವ೧ ವುಳ್ಳಾತನು, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು.

೧–೧ ಮಮಕಾರ (ಗ).

IV- - - - - - - - - - - - - - - - - - - - - - - - - - - - - - - - - - - - - - - - - - - - - - -

ಸಂಗೀತ ಸಾಹಿತ್ಯವ ಕಲಿತ ರಾವಣಂಗೆ ಬ್ರಹ್ಮಂಗೆ ಹಾನಿಯಾಯಿತ್ತು. ಭಕ್ತಿಯಮಾಡಿದ ಪುರಾತನರು ನಿತ್ಯರಾದರೆಂಬುದೀ ವಚನದರ್ಥ.

---

೧೮೫

**ಹಸಿವಾದಡುಂಬುದನು, ಸತಿಯ ಸಂಭೋಗವನು ಆನಾಗಿ ನೀ ಮಾಡೆಂಬುವರುಂಟೆ? ಮಾಡುವುದು ಮಾಡುವುದು ಮನಮುಟ್ಟಿ, ಮಾಡುವುದು ಮಾಡುವುದು ತನುಮುಟ್ಟಿ, ತನುಮುಟ್ಟಿ ಮನಮುಟ್ಟದಿದ್ದಡೆ ಕೂಡಲಸಂಗಮದೇವ ಯಾತಜಲ್ಲಿಯೂ ಮೆಚ್ಚ!**

I - - - - - - - - - - - - - - - - - - - - - - - - - - - - - - - - - - - - - - - - - - - - - - - -

ಹಸಿವಾದಡುಂಬುದನು–ಕ್ಷುಧೆಯಾದಡನುಭವಿಸುವಂಥ ಅನ್ನೋದಕಾದಿಗಳು, ಸತಿಯ ಸಂಭೋಗವನು–ಸ್ತ್ರೀ ೧ಸಂಯೋಗ ಮೊದಲಾದವನ್ನು,೧ ಆನಾಗಿ ನೀ ಮಾಡೆಂಬುವರುಂಟೆ?–

ನನಗೆ ಹಸಿವಾಗ್ಯೆತೆ ನಾನುಂಬುವಂಥ ಅನ್ನವ ನೀ ಉಣ್ಣು ನನಗೆ ^೨^ವ್ಯಸನ^೨^ ದೋರ್‍ಯೆತೆ ನಾ ಹೋಗುವಂಥ ಸ್ತ್ರೀಯಳನು ನೀ ಹೇಗೆಂದು ಹೇಳುವಂಥವರುಂಟಾಗಿದ್ದಾರೆ? ಇಲ್ಲವು.

ಮನಮುಟ್ಟಿ–ಮನದಲ್ಲಿ ನೈಷ್ಠೆಯನ್ನು ಮುಂದುಗೊಂಡು ಲಿಂಗಪೂಜೆಯ[ನ್ನು], ಮಾಡುವುದು ಮಾಡುವುದು–ಅನುಗ್ಯೆವುದು ಅನುಗ್ಯೆವುದು, ತನುಮುಟ್ಟಿ–ತನುವಿನಲ್ಲಿ ಶ್ರದ್ಧೆ ಮುಂದುಗೊಂಡು ಗುರುಭಕ್ತಿಯನ್ನು, ಮಾಡುವುದು ಮಾಡುವುದು–ಅನುಗ್ಯೆವುದು ಅನುಗ್ಯೆವುದು. ತನುಮುಟ್ಟಿ ಮನ ಮುಟ್ಟದಿದ್ದಡೆ–ತನುವಿನಲ್ಲಿ ಶ್ರದ್ಧೆ ಮನದಲ್ಲಿ ನೈಷ್ಠೆಯನ್ನು ಮುಂದುಗೊಂಡು ಗುರುಭಕ್ತಿ ಲಿಂಗಪೂಜೆಯ ಮಾಡಬೇಕು ಮಾಡದಿದ್ದರೆ, ಕೂಡಲಸಂಗಮದೇವ–ಪರಶಿವಲಿಂಗವು, ಯಾತಲ್ಲಿಯೂ ಮಚ್ಚ–ತಾನೆಷ್ಟೊಂದು ಜಪ ತಪ ಆರಾಧನೆ ಕ್ರಿಯೆಗಳ ಮಾಡಿದರೆಯೂ ಮಮಕರಿಸಿಕೊಂಡು ನಿಜ ಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕೊಡಲರಿಯನು.

........................

೧–೧ ಭೋಗ (ಗ). ೨–೨ ಆಯಾಸ (ಗ).

---

೧೮೬

**ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು ಬೇಱೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ? ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ ಬೇಱೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ? ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ, ನಿಮ್ಮನೆತ್ತಬಲ್ಲರು ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - - - - - -

ತನ್ನಾಶ್ರಯದ–ತನ್ನ ಮಂದಿರದ, ರತಿಸುಖವನು–ಸ್ತ್ರೀಭೋಗದ ಪರಿಣಾಮವನ್ನು, ತಾನುಂಬ–ತಾನನುಭವಿಸುವಂಥ ಊಟವನು–ಅನ್ನೋದಕಾದಿಗಳನ್ನು, ಬೇಱೆ–ಪೃಥಕ್ಕಾಗಿ, ಮತ್ತೊಬ್ಬರ ಕೈಯಲ್ಲಿ–ಇನ್ನೊಬ್ಬರ ^೧^ಹಸ್ತ^೧^ದಿಂದ, ಮಾಡಿಸಬಹುದೆ?–ಅನುಗ್ಯೆಸುವುದಕ್ಕಾದೀತೆ? ಆಗದು, ಹಾಂಗೆ, ತನ್ನ ಲಿಂಗಕ್ಕೆ ಗುರುಮುಖದಿಂ ಬಂದ ಇಷ್ಟಮಹಾಲಿಂಗಕ್ಕೆ, ಮಾಡುವ–ತ್ರಿಕಾಲದಲ್ಲಿ ಅನುಗ್ಯೆವ, ನಿತ್ಯನೇಮವ–ಆವಾಗಲೂ ಮಾಡುವ ಕಟ್ಟಿನ ಕ್ರಿಯೆಗಳನ್ನು, ತಾ ಮಾಡಬೇಕಲ್ಲದೆ–ಎಂತಪ್ಪ ದೊಡ್ಡ ಆಧಿವ್ಯಾಧಿ ವಿಪತ್ತುಗಳು ಬಂದಾಗಾದರೂ ತಾನೇ ಅನುಗ್ಯೆಯಬೇಕಲ್ಲದೆ, ಬೇಱೆ–ಪೃಥಕ್ಕಾಗಿ, ಮತ್ತೊಬ್ಬರ ಕೈಯಲ್ಲಿ–ಇನ್ನೊಬ್ಬರ ಹಸ್ತಾಂತರದಿಂದ, ಮಾಡಿಸಬಹುದೆ? ಅನುಗ್ಯೆಸುವುದಕ್ಕಾದೀತೆ? ಆಗದು. ಕೆಮ್ಮನೆ ಉಪಚಾರಕ್ಕೆ–ಎಂತಪ್ಪ ದೊಡ್ಡ ಆಧಿವ್ಯಾಧಿವಿಪತ್ತುಗಳು ಬಂದಾಗಾದರೂ ಎಡಬಲದಲ್ಲಿ ಆತ್ಮರುಗಳ ಕುಳ್ಳಿರಿಸಿಕೊಂಡು ಎದೆಯ ಮೇಲೆ ಹಸ್ತವ ಮಡಗಿಸಿಕೊಂಡು ಬಿಡದೆ ಜಪತಪಾರಾಧನೆ ಕ್ರಿಯೆಗಳ ಮಾಡಿಸಿಕೊಳುತ್ಯೆದಾರೆಂದು ಹೇಳಿಸಿಕೊಂಬಂಥ ಸುಮ್ಮನೆ ಲೋಕೋಪಚಾರಕ್ಕೆ ಮಾಡುವರಲ್ಲದೆ–ಅನುಗ್ಯೆವರಲ್ಲದೆ, ನಿಮ್ಮನೆತ್ತ ಬಲ್ಲರು–ಎಂತಪ್ಪ ದೊಡ್ಡ ಆಧಿವ್ಯಾಧಿ ವಿಪತ್ತುಗಳು ಬಂದಾಗಾದರೂ ಸಮರಸಭಾವದಿಂದ ಲಿಂಗಪೂಜೆಯ ಮಾಡಬೆಕೆಂಬಂಥದನ್ನು ಯಾವ ಕಡೆ ^೨^ಯಿಂದ^೨^ ತಿಳಿದಿಪ್ಪರು, ಕೂಡಲಸಂಗಮದೇವಾ?–ಎಲೆ ಪರಶಿವಲಿಂಗವೆ?

.........................

೧-೧ ಹಸ್ತಾಂತರ (ಕ). ೨-೨ ಯೆಂದು (ಕ).

---

೧೮೭

**ಬಂಡಿ ತುಂಬಿ ಪತ್ರೆಯ ತಂದು ಕಂಡಕಂಡಲ್ಲಿ ಮಜ್ಜನಕ್ಕೆಱೆವಿರಿ, ತಾಪತ್ರಯವ ಕಳೆದು ಪೂಜಿಸಿ ತಾಪತ್ರಯವ ಲಿಂಗನೊಲ್ಲ. ಕೂಡಲಸಂಗಮದೇವ ಬಱೆಯುದಕದಲ್ಲಿ ನೆನೆವನೆ?**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಬಂಡಿ ತುಂಬಿ ಪತ್ರೆಯ ತಂದು-ಕರಡಿಗೆಗಳಲ್ಲಿ ಜೋಳಿಗೆಗಳಲ್ಲಿ ತಂದ ಪತ್ರಿಪುಷ್ಪಾದಿಗಳು ನಮ್ಮ ಲಿಂಗಕ್ಕೆ ಸಾಲುವುದಿಲ್ಲವೆಂದು ಹೊಸದಾಗಿ ಒಂದು ಶಕಟವನ್ನು ತರಿಸಿ ಅದರ ಮೇಲೆ ಮಡಿಪಾವಡವ ಹಾಸಿ ಹರದಾರಿ ಕೂಗಳತೆ ಪ್ರಮಾಣ ಹೋಗಿ ಪತ್ರಿಪುಷ್ಪಾದಿಗಳ ಶೋಧಿಸಿಕೊಂಡುಬಂದು, ಕಂಡಕಂಡಲ್ಲಿ-ಬಿಂದಿಗೆಗಳಿಂದ ಕುಜಾಯಿಗಳಿಂದ ತಂದಂಥ ಉದಕವು ನಮ್ಮ ಲಿಂಗಕ್ಕೆ ಸಾಲುವುದಿಲ್ಲವೆಂದು ಹಳ್ಳ ಹೊಳೆ ಕೆರೆ ಬಾವಿಗಳ ಕಂಡಲ್ಲಿ, ಮಜ್ಜನಕ್ಕೆಱೆವಿರಿ-ಸುಮ್ಮನೆ ಹತ್ತೆಂಟು ಕೊಡ ಉದಕವನ್ನು ೧ಲಿಂಗಕ್ಕೆ೧ ಅಭಿಷೇಕವ ನೀಡುವಿರಿ, ತಾಪತ್ರಯವ ಕಳೆದು-ಹಸಿವು ತೃಷೆ ಶೀತೋಷ್ಣಾದಿಗಳ ಬೇರ್ಪಡಿಸಿ, ಪೂಜಿಸಿ-ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ತಾಪತ್ರಯವ-ಹಸಿವು ತೃಷೆ ಶೀತೋಷ್ಣಾದಿಗಳ ಮುಂದುಗೊಂಡು ಮಾಡುವಂಥ ಲಿಂಗಪೂಜೆಯನು, ಲಿಂಗ-ಪರಶಿವಲಿಂಗವು, ಒಲ್ಲ-ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು ಕೂಡಲಸಂಗಮದೇವ-ಪರಶಿವಲಿಂಗವು, ಬರಿಯ ಉದಕದಲ್ಲಿ ನೆನೆವನೆ?-ನೈಷ್ಠೆಯಿಲ್ಲದೆ ಸುಮ್ಮನೆ ಹತ್ತೆಂಟು ಕೊಡ ಉದಕವನ್ನು ಅಭಿಷೇಕವ ನೀಡಿದರೆ ಕಡಲೆಕಾಳು ಗೋದಿಕಾಳು ಉದ್ದಿನಕಾಳು ಹೆಸರುಕಾಳಿನ ಹಾಂಗೆ ನೆನೆದು ಮೆತ್ತಗಾಗಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡಲರಿಯನು.

.........................

೧-೧ X (ಕ).

---

೧೮೮

**ಭಕ್ತನಾಗಿ ಲಿಂಗ ಜಂಗಮವ ಪೂಜಿಸಬೇಕು. ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದು ಎಂತಯ್ಯಾ? ಸ್ವಾಮಿಭೃತ್ಯ ಸಂಬಂಧವೆಂತಯ್ಯಾ [1]ಪೂರೈಸದು?[1] ಕೂಡಲಸಂಗಮದೇವಾ, ಕಣ್ಣಕಟ್ಟಿ [2]ಕನ್ನಡಿಯ[2] ತೋಱುವಂತೆ!**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನಾಗಿ-ಜ್ಞಾನೋದಯವಾಗಿ ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತನಾಗಿ, ಲಿಂಗಜಂಗಮವ ಪೂಜಿಸಬೇಕು-ಲಿಂಗಪೂಜೆ ಜಂಗಮದಾಸೋಹವನ್ನು

ಅನುಗ್ರಹಿಯುಬೇಕು. ಭಕ್ತನಾಗಿ-ಶಿವಭಕ್ತನಾಗಿ ತನ್ನ ತಾ ಪೂಜಿಸಕೊಂಬುದು ತನಗೆ ತಾನರ್ಚಿಸಿಕೊಂಬುವಂಥದು, ಎಂತಯ್ಯಾ? ಅದು ಹೇಂಗಯ್ಯಾ? ಸ್ವಾಮಿಭೃತ್ಯ ಸಂಬಂಧವೆಂತಯ್ಯಾ: [ಸ್ವಾಮಿ ಭೃತ್ಯಸಂಬಂಧ-] ಗುರುಲಿಂಗಜಂಗಮವೇ ಕರ್ತೃವಾಗಿ ತಾನೇ ಭೃತ್ಯನಾಗಿ ಕರ್ತೃಭೃತ್ಯ ಭಾವವನ್ನು ಮುಂದುಗೊಂಡು ಮಾಡುವಂಥ ಸಂಬಂಧ ಸ್ವಾಯತವು, ಎಂತಯ್ಯಾ-ಅದು ಹೇಂಗಯ್ಯಾ, ಪೂರೈಸದು?-ಪಾರವೇದಿಸಿ ನಿಜಮೋಕ್ಷವನ್ನು ಕರುಣಿಸಿಕೊಟ್ಟೀತೆ? ಕೊಡಲರಿಯದು.

ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಕಣ್ಣಕಟ್ಟಿ ಕನ್ನಡಿಯ ತೋಱುವಂತೆ-[೧]ಲೋಕದಲ್ಲಿ[೧] ಕಣ್ಣಿದ್ದಾತ್ಮರುಗಳ ಕೈಯಲ್ಲಿ ಕನ್ನಡಿಯನ್ನು ಕೊಟ್ಟರೆ ತನ್ನ ಮುಖದಲ್ಲಿರುವಂಥ ಕಂದುಕಲೆ ಹಾವಭಾವ ವಿಲಾಸವಿಭ್ರಮಂಗಳು ಕಾಣಬಂದಾವಲ್ಲದೆ ಕಣ್ಣುಗಳೆರಡನ್ನೂ ಬಿಗಿದುಕಟ್ಟಿ ಕೈಯಲ್ಲಿ ಕನ್ನಡಿಯನ್ನು ಕೊಟ್ಟರೆ ಮುಖದಲ್ಲಿದ್ದಂಥ ಹಾವಭಾವ ವಿಲಾಸವಿಭ್ರಮಂಗಳು ಕಾಣಬಂದಾವೆ? ಬರಲರಿಯವು. ಹಾಂಗೆ, ಜ್ಞಾನದರ್ಪಣ ಸ್ವರೂಪವಾದ ಲಿಂಗವನ್ನು ಹಸ್ತದಲ್ಲಿ ಪಿಡಿದುಕೊಂಡು ಅಂಗವಾದುದು ಲಿಂಗವಾದುದು ಪೂಜಾರೂಪವಾದುದು ದೇವನಾದುದು ಭಕ್ತನಾದುದು ಪದಾರ್ಥವಾದುದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವನು ಅಂತರಂಗದಲ್ಲಿ ಸಂಬಂಧಿಸಿ ಬಹಿರಂಗದಲ್ಲಿ ಬರಿಯ ಭಕ್ತಿ ಮಾಡಲೆಂದು ಬೋಧಿಸಿದರೆ ಅಳವಟ್ಟೀತೆ? ಅಳವಡದು.

..........................

೧-೧ X (ಗ).

III- - - - - - - - - - - - - - - - - - - - - - - - - - - - - - - - - - - - - - - - - - - -

1-1 ಪೂರಯಿಸುವುದು (ಟ,ಡ). 2-2 ಕನ್ನೆಯ (ಡ).

..........................

ಜ್ಞಾನಹೀನವಾಗಿ ಕ್ರಿಯೆಗಳನೆಷ್ಟು ಮಾಡಿದೊಡೆಯೂ ಕರ್ಮಫಲಪ್ರಾಪ್ತಿಯಲ್ಲದೆ ಸ್ವರೂಪಜ್ಞಾನವ ತಿಳಿದು ಲಿಂಗದಲ್ಲಿ ಸಮರಸವಾಗುವ ಮುಕ್ತಿದೋಜಿ ಕೊಳಲರಿಯದೆಂಬುದೀಗ ಕೂಡಲಸಂಗಮದೇವ ಕಣ್ಣಕಟ್ಟಿ ಕನ್ನಡಿಯ ತೋಱುವಂತೆ ಎಂಬ ಶಬ್ದಕ್ಕರ್ಥ.

೨-೨ ಕನ್ನೆಯ (ಡ).

IV- - - - - - - - - - - - - - - - - - - - - - - - - - - - - - - - - - - - - - - - - - - -

1-1 ಪೂರಯಿಸುವುದು (ತ).

..........................

ಸತ್ತುಚಿತ್ತಾನಂದವಾದ ಗುರುಲಿಂಗಜಂಗಮವ ಪೂಜಿಸಿ ಪರಬ್ರಹ್ಮವನ್ನೈದಿದರು. ಆತ್ಮದೇವ [೩][ನೆಂದು][೩] ಅನಂತರೂ ಅಜ್ಞಾನಿಗಳಾದರೆಂಬುದೀ ವಚನದರ್ಥ.

೩-೩ ವೆಂಪುದು (ತ).

ಭೂಮಿಯೊಳಗೆ ನಿಧಾನವಿದ್ದುದ ಅಂಜನವುಳ್ಳವರು ತೋಱಿರಯ್ಯಾ. ಅಂಜಲು ಬೇಡ ಕಂಡಾ; ಮನದಲ್ಲಿ ಸಂದೇಹವ ಮಾಡದಿರಾ. ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬುಗೆಯುಳ್ಳಡೆ ತನ್ನ ತೋಱುವ ಕೂಡಲಸಂಗಮದೇವ.

I ---------------------------------------------

ಭೂಮಿಯೊಳಗೆ – ಪೃಥ್ವಿಯೊಳಗೆ, ನಿಧಾನವಿದ್ದುದ–ನಿಕ್ಷೇಪದ್ರವ್ಯವಿರುವಂಥದನ್ನು, ಅಂಜನವುಳ್ಳವರು–ದ್ರವ್ಯಾಂಜನ ದಿಕ್ಕಂಜನ ಭೂತಾಂಜನ ಪಾತಾಳಾಂಜನ ಮೊದಲಾದಂಜನ ಉಂಟಾದವರು, ತೋಱಿರಯ್ಯಾ–ನಿಕ್ಷೇಪದ್ರವ್ಯವನ್ನು ಕಾಣಿಸಿಕೊಡಿರಯ್ಯಾ. ಅಂಜಲು ಬೇಡ ಕಂಡಾ–ನಿಕ್ಷೇಪದ್ರವ್ಯ ತೋರಿದರೆ ಅಲ್ಲಿ ಭೂತ ಪ್ರೇತ ಪಿಶಾಚಿ ಬ್ರಹ್ಮರಾಕ್ಷಸ ಮೊದಲಾದಂಥವು ಇರುವುದುಂಟು. ನಮಗೆಲ್ಲಿ ಅವಗ್ರಹಿಸಿಕೊಂಡಾವೊ ಎನ್ನುತ್ತ ಹೆದರಲುಬೇಡ ಕಂಡಾ, ಮನದಲ್ಲಿ – ಚಿತ್ತದಲ್ಲಿ ಸಂದೇಹವ ಮಾಡದಿರಾ–ಈ ದ್ರವ್ಯವನು ಇವನಿಗೆ ತೋರಿಕೊಟ್ಟರೆ ನಮಗೆ ಕೊಟ್ಟಾನೋ ಕೊಡನೋ ಎಂಬ ಸಂಕಲ್ಪಭಾವವನ್ನು ಮುಂದುಗೊಳ್ಳದಿರಾ ಎಂಬುದರ್ಥ.

● ಭೂಮಿಯೊಳಗೆ–ಚಿತ್ಪೃಥ್ವಿಸ್ವರೂಪವಾದ ಭಕ್ತನಾಚಾರಾಂಗದಲ್ಲಿ, ನಿಧಾನವಿದ್ದುದ–ಬಳಸಬಾರದ ಕಡವರ ಸ್ವರೂಪವಾದ ಇಷ್ಟಲಿಂಗಸಂಬಂಧವಾಗಿರುವಂಥದನ್ನು, ಅಂಜನವುಳ್ಳವರು–ನಿತ್ಯಾನಿತ್ಯ ವಿವೇಕವನ್ನು ಬಲ್ಲಂಥ ಜ್ಞಾನಾಂಜನ ಉಂಟಾದವರು, ತೋಱಿರಯ್ಯಾ–ಇಷ್ಟಲಿಂಗಸಂಬಂಧವನ್ನು ಅರುಹಿಕೊಡಿರಯ್ಯಾ. ಅಂಜಲು ಬೇಡ ಕಂಡಾ–ಇಷ್ಟಲಿಂಗ ಸಂಬಂಧತ್ವವನ್ನು ಅರುಹಿಕೊಟ್ಟರೆ ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಭಕ್ತಿ ಮಾಡಬೇಕಾಗುತ್ತೈತೆ, ಆ ಜಂಗಮದ ಗಳಗರ್ಜನೆ ದುಡುಕು ದುಂಡಾಚಾರ ಕೋಳಾಟ ಕೊಂಡಾಟ ಮೊದಲಾದವನ್ನು ಸೈರಿಸಿಕೊಳಬೇಕಾಗುತ್ತೈತೆಂದು ಹೆದರಲು ಬೇಡ ಕಂದಾ; ಮನದಲ್ಲಿ–ಚಿತ್ತದಲ್ಲಿ, ಸಂದೇಹವ ಮಾಡದಿರಾ–ಜಂಗಮಭಕ್ತಿಯ ಮಾಡಿದರೆ ಮುಕ್ತಿಯಾಗುತ್ತೈತೋ ಇಲ್ಲವೋ ಎಂದು ಸಂಕಲ್ಪ ಭಾವವನ್ನು ಮುಂದುಗೊಳ್ಳದಿರಾ.

ಜಂಗಮದೊಳಗೆ–ಜಂಗಮಭಕ್ತಿಯಲ್ಲಿ, ಲಿಂಗಯ್ಯನಿದ್ದಾನೆಂದು–ಪರಮೇಶ್ವರನು ಸನ್ನಹಿತನಾಗಿಹನೆನಿಪ, ನಂಬುಗೆಯುಳ್ಳಡೆ–ವಿಶ್ವಾಸವುಂಟಾಗಿದ್ದರೆ, ತನ್ನ ತೋಱುವ ತಾನೇನ ಬೇಡಿದಿಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು, ಕೂಡಲಸಂಗಮದೇವ–ಪರಶಿವಲಿಂಗವು.

II---------------------------------------------

ಭೂಮಿಯೊಳಗೆ ನಿಧಾನವಿದ್ದುದ ಅಂಜನವುಳ್ಳವರು ತೋಱಿರಯ್ಯಾ–ಶರಣನಾಚಾರಾಂಗವೆಂಬ ಚಿದ್ಭೂಮಿಯಲ್ಲಿ ಸರ್ವಾಚಾರಸಂಪತ್ತಿನಾಚರಣೆಯನ್ನುಳ್ಳ ಪ್ರಾಣಲಿಂಗವೆಂಬ ನಿಕ್ಷೇಪದ್ರವ್ಯವಡಗಿರ್ದುದನು ಮಹಾಜ್ಞಾನ ಕಜ್ಜಳವನುಳ್ಳವರುಗಳು ಅರುಹಿಕೊಡಿರಿ ಅಯ್ಯಾ, ಮುಂದಕ್ಕೆ ಕಾಣಬಂದರ್ಥ.

III---------------------------------------------

ಭೂಮಿಯೊಳಗೆ–ಪಂಚಭೂತಯುಕ್ತವಾದ ಶರೀರವೆಂಬ ಧರಣಿಯಲ್ಲಿ, ನಿಧಾನವಿದ್ದುದ–ನಿಕ್ಷೇಪದ್ರವ್ಯಸ್ವರೂಪವಾದ ಪ್ರಾಣಲಿಂಗಸಂಬಂಧವಾಗಿರುವದನು, ಅಂಜನವುಳ್ಳವರು–ಶಿವಜ್ಞಾ೧ನಾಂಜ೧ನವುಳ್ಳಂಥಾ ಶರಣರುಗಳು, ತೋಱಿರಯ್ಯಾ–ಸ್ವಸ್ವರೂಪವನು ತಿಳಿಯಬೇಕೆಂದು ಶರಣಾಗತರಾದಂಥ ಸದ್ಭಕ್ತಶರಣಜನಂಗಳಿಗೆ ಉಪದೇಶಿಸಿರಯ್ಯ. ಅಂಜಲುಬೇಡ ಕಂಡಾ;–ಮುಂದೆ ಕಲಕಾಮಾದಿಗಳ ಭೀತಿಯುಂಟೆಂದು ಮನದಲ್ಲಿ ಹೆದರಬೇಡ ಕಂಡಿರೇ ಎಂದು ನಿರಾಪಾಧಿಭಕ್ತನು ಉಪಾಧಿಭಕ್ತನಿಗೆ ಬೋಧಿಸುವ ಉಪದೇಶವು ಎಂಬುದೀಗ ಮನದಲ್ಲಿ ಸಂದೇಹವ ಮಾಡದಿರಾ ಎಂಬ ಶಬ್ದಕ್ಕರ್ಥ.

ಜಂಗಮದೊಳಗೆ–ಜಂಗಮದ ಭಕ್ತಿದಾಸೋಹದೊಳಗೆ, ಲಿಂಗಯ್ಯನಿದ್ದಾನೆಂದು–ಪರಶಿವಲಿಂಗವು ಸಾಕ್ಷಾತ್ಕಾರವಾಗಿ ನೆಲೆಸಿರುವನೆಂದು, ನಂಬುಗೆಯುಳ್ಳಡೆ–ವಿಶ್ವಾಸವುಂಟಾಗಿದ್ದರೆ, ಕೂಡಲಸಂಗಮದೇವ–ಪರಶಿವಲಿಂಗವು, ತೋಱುವ–ಅವರಿಗೆ ತನ್ನ ಸ್ವಸ್ವರೂಪವನು ಕಾಣಿಸುವನು.

..........................

೧–೧ x (ಡ).

---

## ೧೯೦

**ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೆ; ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ. 'ಸ್ಥಾವರ ಜಂಗಮ ಒಂದೇ' ಎಂದುದು ಕೂಡಲಸಂಗನ ವಚನ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಕನ್ನಡಿಯ ನೊಡುವ ಅಣ್ಣಗಳಿರಾ: [ಕನ್ನಡಿಯ ನೋಡುವ] ಜ್ಞಾನದರ್ಪಣಸ್ವರೂಪವಾದ ಇಷ್ಟಮಹಾಲಿಂಗವನ್ನು ಹಸ್ತದಲ್ಲಿ ಪಿಡಿದುಕೊಂಡು ಆ ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುವ, ಅಣ್ಣಗಳಿರಾ–ಭಕ್ತರೆಂಬ ಹಿರಿಯರುಗಳಿರಾ, ಜಂಗಮವ ನೋಡಿರೆ ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮದ ಭಕ್ತಿಯ ೧[ಮಾಡಿರೆ]೧ ಜಂಗಮದೊಳಗೆ–ಆ ಜಂಗಮಭಕ್ತಿಯಲ್ಲಿ, ಲಿಂಗಯ್ಯ ಸನ್ನಹಿತನಾಗಿಪ್ಪ ಪರಮೇಶ್ವರನು ಸದಾ ಸನ್ನಹಿತನಾಗಿ ಕೂಡಿಪ್ಪನು. ಸ್ಥಾವರಜಂಗಮ: ಸ್ಥಾವರ–ಇಷ್ಟಲಿಂಗವು. ಜಂಗಮ–ಚರ ೨ಲಿಂಗ೨ವು, ಒಂದೇ ಎಂದುದು–ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳೆಯೆಂದು ಹೇಳುತ್ತಿಹುದು, ಕೂಡಲಸಂಗನ ವಚನ–ಪರಶಿವಲಿಂಗದ ವಾಕ್ಯಾನುಭಾವವು.

..........................

೧–೧ ಮಾಡಿದರೆ (ಕ,ಗ) ೨–೨ ಜಂಗಮ (ಕ).

IV- - - - - - - - - - - - - - - - - - - - - - - - - - - - - - - - - - - - - - - - - - - -

ಜ್ಞಾನಮುಕುರವ ನೋಡದೆ ಜ್ಞಾನಾತೀತವಾದ ಜಂಗಮವ ನೋಡೂದು. ಆ ಜಂಗಮವೂ ಲಿಂಗವೂ ಒಂದೇಯೆಂದೀ ವಚನದರ್ಥ.

---

೯೯೧

**ಗೀತವ ಹಾಡಿದಡೇನು, ಶಾಸ್ತ್ರಪುರಾಣವ ಕೇಳಿದಡೇನು ವೇದವೇದಾಂತವನೋದಿದಡೇನು? ಮನವೊಲಿದು ಲಿಂಗಜಂಗಮವ ಪೂಜಿಸಲರಿಯದವರು ಎಲ್ಲರಲ್ಲಿ ಅನುಭಾವಿಯಾದಡೇನು? ಭಕ್ತಿಯಿಲ್ಲದವರನೊಲ್ಲ, ಕೂಡಲಸಂಗಮದೇವ!**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಗೀತವ ಹಾಡಿದಡೇನು–ಮೂವತ್ತೆರಡು ರಾಗ ಅರುವತ್ತುನಾಲ್ಕು ಮಿಶ್ರಯುಕ್ತವಾಗಿ ಸಮಸ್ತ ಸ್ವರವಚನಂಗಳನು ಪಾಡಿದರೇನು, ಶಾಸ್ತ್ರ–ಅನಂತ ಕೌಮುದಿ ಮೊದಲಾದ ಹದಿನಾರು ಧರ್ಮಶಾಸ್ತ್ರಂಗಳ, ಪುರಾಣ, ಬ್ರಹ್ಮಾದ್ಯಷ್ಟಾದಶ ಪುರಾಣಂಗಳ, ಕೇಳಿದಡೇನು–ಶ್ರುತಿ ಗುರುಗಳ ಮುಖದಿಂದ ಬೆಸಗೊಂಡಾಲಿಸಿದರೇನು, ವೇದ–ಋಗ್ಯಜುಸ್ಸಾಮಾಥರ್ವಣವೆಂಬ ನಾಲ್ಕು ವೇದಂಗಳ, ವೇದಾಂತವ–ನಿಗಮಶಿರೋಭಾಗಿಯಾದ ಮೂವತ್ತೆರಡು ಉಪನಿಷದ್ವಾಕ್ಯಂಗಳನು, ಓದಿದಡೇನು?–ಪಠಿಸಿದರೇನು? ಮನವೊಲಿದು–ಚಿತ್ತವಿಟ್ಟು, ಲಿಂಗಜಂಗಮವ ಪೂಜಿಸಲರಿಯದವರು–ಲಿಂಗಪೂಜೆ ಜಂಗಮ ದಾಸೋಹವುಂಟಾಗಿರಬೇಕು; ಉಂಟಾಗಿಲ್ಲದವರು, ಎಲ್ಲರಲ್ಲಿ–ಹಿಂದೆ ಹೇಳಿದ ಸಕಲ ವೇದಾಗಮ ಶಾಸ್ತ್ರ ಪುರಾಣಂಗಳಲ್ಲಿ, ಅನುಭಾವಿಯಾದಡೇನು?–ಅರ್ಥಾನ್ವಯಂಗಳನು ಬಲ್ಲಂಥವರಾದರೇನು? ಭಕ್ತಿಯಿಲ್ಲದವರ–ಗುರುಲಿಂಗಜಂಗಮದ ಭಕ್ತಿದಾಸೋಹವುಂಟಾಗಿರಬೇಕು; ಇಲ್ಲದವರ, ಕೂಡಲಸಂಗಮದೇವ–ಪರಶಿವಲಿಂಗವು,ಒಲ್ಲ– ಒಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ಗುರುಲಿಂಗಜಂಗಮದಲ್ಲಿ ಭಕ್ತಿಯಿಲ್ಲದವರು ಗೀತ ಪುರಾಣ ಉಪನಿಷತ್ತುಗಳ ನೇನನೋದಿದರೆಯೂ ವ್ಯರ್ಥವೆಂಬುದೀ ವಚನದರ್ಥ.

---

೯೯೨

**ಲಿಂಗವ ಪೂಜಿಸಿದ ಬಳಿಕ, ಜಂಗಮಕ್ಕಂಜಲೇ ಬೇಕು; ದಕ್ಕ ನುಂಗಿದಂತೆ ಬೆಜ್ಜಿತುಕೊಂಡಿರಬೇಡ. ಬೀಗಿ ಬೆಳೆದ ಕೊನೆವಾಳೆಯಂತೆ ಬಾಗಿಕೊಂಡಿದ್ದಡೆ, ಬೇಡಿದ ಪದವಿಯನೀವ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗವ ಪೂಜಿಸಿದ ಬಳಿಕ; ಲಿಂಗವ–ಗುರುಮುಖದಿಂ ಬಂದಂಥ ಇಷ್ಟಮಹಾಲಿಂಗವನ್ನು, ಪೂಜಿಸಿದ ಬಳಿಕ–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿದ ಮೇಲೆ, ಜಂಗಮಕ್ಕಂಜಲೇಬೇಕು–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳಿಗೆ ಹೆದರಿಕೊಂಡು ಭಕ್ತಿಯ ಮಾಡಲೇಬೇಕು. ದಕ್ಕ ನುಂಗಿದಂತೆ–ಕೊಟ್ಟವರ ಸಾಲವ ಕೊಡದೆ ಒಬ್ಬರೊಡವೆಯ ದಕ್ಕ ಹಾಕಿಕೊಂಡವನ ಹಾಂಗೆ, ಬೆಜ್ಜಿತುಕೊಂಡಿರಬೇಡ–ಸೆಟೆದುಕೊಂಡಿರಬೇಡವು. ಬೀಗಿ ಬೆಳೆದ ಕೊನೆವಾಳೆಯಂತೆ–ಗೊನೆಬಿಟ್ಟ ಬಾಳಿಯ ಹಾಂಗೆ, ಬಾಗಿಕೊಂಡಿದ್ದಡೆ–ನಯ ಭಯದಿಂದ ತಲೆಯನ್ನು ಬಾಗಿಕೊಂಡಿದ್ದರೆ, ಬೇಡಿದ ಪದವಿಯನೀವ ತಾನೇನು ಯಾಚಿಸಿದಂಥ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು, ಕೂಡಲಸಂಗಮದೇವ–ಪರಶಿವಲಿಂಗವು.

.........................

೧ + ಕೊನೆವಾಳೆ ನೆಲ್ಲಿನ ಹಾಂಗೆ (ಕ,ಗ).

---

೧೯೩

**ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು; ವರ್ಮವನಱಿಯದ ಮಾಟ ಸಯಿದಾನದ ಕೇಡು. ಬಂದ ಸಮಯೋಚಿತವನಱಿಯದಿದ್ದಡೆ ನಿಂದಿರಲೊಲ್ಲ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು: ಹಮ್ಮಿನ ಭಕ್ತಿ–ನಾ ಮಾಡುತ್ತೈದೇನೆ ಇವರು ಕೈಕೊಂಬುತ್ತೈದಾರೆ ಸಲುವ ಪದಾರ್ಥವೆನ್ನದು ಎನ್ನಿಂದಲೇ ಲಿಂಗಜಂಗಮಕ್ಕೆ ಸುಖವಾಗುತ್ತೈತೆಯೆಂದು ಅಹಂಕಾರವನ್ನು ಮುಂದುಗೊಂಡು ಮಾಡುವಂಥ[೧] ಭಿನ್ನ ಭಕ್ತಿಯು, ಕರ್ಮಕ್ಕೆ ಮೊದಲು–ಅದು ಪಾಪಕ್ಕೆ ಗುರಿಯಾಗಿರ್ಪುದು; ವರ್ಮವನಱಿಯದೆ–ಹಸಿವಾಗಿ ಬಂದ ಜಂಗಮಕ್ಕೆ ಅನ್ನ ತೃಷೆಯಾಗಿ ಬಂದ ಜಂಗಮಕ್ಕೆ ಪಾನ್ಯ ಶೀತಗೃಹೀತವಾಗಿ ಬಂದ ಜಂಗಮಕ್ಕೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯನ್ನು ಮಾಡುವಂಥ ವರ್ಮವನಱಿಯದ [೨]ಅದರ ಕೀಲ[೨] ವನು ತಿಳಿಯದ, ಮಾಟ–ಕಾಂಬವರ ಕಂಡುಭಿನ್ನಪಿಟ್ಟುಕೊಂಡು ಮಾಡುವಂಥ ಜಂಗಮಭಕ್ತಿ ಮಾಟವು, ಸಯಿದಾನದ ಕೇಡು–ದ್ರವ್ಯಹಾನಿ, ಪದಾರ್ಥ ಚಾಗಿಯಾಗಿರ್ಪುದು.

ಬಂದ ಸಮಯೋಚಿತವನಱಿಯದಿದ್ದಡೆ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ಸಮಯಕಾಲ ಉಚಿತಕಾಲವನರಿದು ಕಂಡಾಕ್ಷಣಕ್ಕೆ ನಮಸ್ಕಾರವ ಮಾಡಿ ಇಚ್ಚಾಪದಾರ್ಥವನ್ನು ನೀಡಿ ಸಂತೃಪ್ತಿಬಡಿಸುವಂಥದನ್ನು ತಿಳಿದಿರಬೇಕು. ತಿಳಿಯದಿರ್ದರೆ, ಕೂಡಲಸಂಗಮದೇವ–ಪರಶಿವಲಿಂಗವು, ನಿಂದಿರಲೊಲ್ಲ–ಅವರಂಗದಲ್ಲಿ ಚಿತ್ಕಲಾಲಿಂಗವಾಗಿ ನೆಲೆಗೊಳಲೊಲ್ಲನು.

.........................

೧+ ಭಕ್ತಿ (ಕ,ಗ). ೨–೨ ಸಕೀಲ (ಗ).

IV- - - - - - - - - - - - - - - - - - - - - - - - - - - - - - - - - - - - - - - - - - - - - - -

ನಾ ಮಾಡಿದೆನೆಂಬುದು ಅಜ್ಞಾನ. ಜಂಗಮ ಬಂದ ಬರವನಱಿತು ಮಾಡದಿಪ್ಪುದು ಸಯಿದಾನದ ಕೇಡೆಂಬುದೀ ವಚನದರ್ಥ.

---

೧೯೪

**ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ ನಮ್ಮ ಶರಣರಿಗುರಿಗರಗಾಗಿ ಕರಗದನ್ನಕ್ಕ, ಸ್ಥಾವರ ಜಂಗಮವೊಂದೆ ಎಂದು ನಂಬದನ್ನಕ್ಕ? ಕೂಡಲಸಂಗಮದೇವಾ, ಬಱಿಯ ಮಾತಿನ ಮಾಲೆಯಲೇನಹುದು?**

I - - - - - - - - - - - - - - - - - - - - - - - - - - - - - - - - - - - - - - - - - - - - - -

ದ್ವೈತಾದ್ವೈತವನೋದಿ: [ದ್ವೈತಾದ್ವೈತವನು-] ವೇದಾಂತ ಸಿದ್ಧಾಂತವನ್ನು, ಓದಿ-ಪಠಿಸಿ, ಏನ ಮಾಡುವಿರಯ್ಯಾ-[೧]ಏನೇನು[೧] ಗೈವಿರಯ್ಯಾ, ನಮ್ಮ ಶರಣರಿಗೆ-ನಮ್ಮ ಜಂಗಮಮೂರ್ತಿಗಳಿಗೆ, ಉರಿಗರಗಾಗಿ ಕರಗದನ್ನಕ್ಕ ಲಾಕ್ಷವನ್ನು ಅಗ್ನಿಗೆ ಹಿಡಿದರೆ ಹೇಂಗೆ ಶೀತಳವಾಗಿ ಕರಗಿ ನೀರಾಗುತ್ತಿಹುದೋ ಹಾಂಗೆ; ಅಹಂಕಾರ ಹಿರೇತನ ಆತ್ಮತೇಜಸ್ಸು ನಷ್ಟವಾಗಿ ಹೋಗಿ ನಿರಹಂಕಾರ ನಿರಹಂಭಾವ ಮುಂದುಗೊಂಡು ಜಂಗಮಭಕ್ತಿಯ ಮಾಡಬೇಕು, ಮಾಡದಿರುವ ಪರಿಯಂತರವು, ಸ್ಥಾವರ ಜಂಗಮ: ಸ್ಥಾವರ-ಇಷ್ಟಲಿಂಗವು, ಜಂಗಮ-ಚರ[೨]ಲಿಂಗವು,[೨] ಒಂದೇ ಎಂದು-ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳಾಸ್ವರೂಪವೆಂದು, ನಂಬದನ್ನಕ್ಕ?-ವಿಶ್ವಾಸಿಸಬೇಕು; ವಿಶ್ವಾಸಿಸದ ಪರಿಯತರವು, ಕೂಡಲಸಂಗಮದೇವಾ-ಪರಶಿವಲಿಂಗವು, ಬರಿಯ-ವ್ಯರ್ಥಸ್ಯವಾದ, ಮಾತಿನ-ಪ್ರಸಂಗದ, ಮಾಲೆಯಲೇನಹುದು?-ಸುಮ್ಮನೆ ಸ್ವಾಮಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ವಾಕ್ಯದ ಸರಮಾಲೆಯಲ್ಲೇನಾದೀತೋ?

.........................

೧-೧ ಏನನು (ಕ). ೨-೨ ಜಂಗಮ (ಕ).

IV- - - - - - - - - - - - - - - - - - - - - - - - - - - - - - - - - - - - - - - - - - - - - -

ಗುರುಲಿಂಗಜಂಗಮದಲ್ಲಿ ತನುಮನಧನವಳಿದು ದಾಸೋಹವ ಮಾಡದೆ ಅದ್ವೈತವ ನುಡಿವುದು ಅಜ್ಞಾನವೆಂಬುದೀ ವಚನದರ್ಥ.

---

೧೯೫

**ಲಾಂಛನ ಹೊಱಗೆ ಬಂದು [1]ನಿಂದಿರಲು[1] ಒಳಗೆ ಲಿಂಗಾರ್ಚನೆ ಎಂತಯ್ಯಾ? ಮುಖದಲ್ಲಿ ಕಟ್ಟಿದ ಕನ್ನಡಿ, ಮೂಗಿನ ಮೇಲಣ ಕತ್ತಿ! ಸಮಯಾಚಾರವೆಂತುಟಯ್ಯಾ? ಕೂಡಲಸಂಗಮದೇವ ಮೂಗಕೊಯ್ಯದೆ ಮಾಣ್ಬನೆ ಹೇಳಯ್ಯಾ**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಲಾಂಛನ ಹೊಱಗೆ ಬಂದು ನಿಂದಿರಲು: ಲಾಂಛನ-ಶಿವಲಾಂಛನಸಮೇತರಾದ ಜಂಗಮಮೂರ್ತಿಗಳು, ಹೊಱಗೆ-ಭಕ್ತನ ಭಕ್ತಿಗೃಹಕ್ಕೆ ಭಿಕ್ಷಕ್ಕೆಂದು ಬಿಜಯಂಗೈದು, ಬಂದು ನಿಂದಿರಲು-ಅಂಗಳದಲ್ಲಿ ಗೋವು ನೀರುಕುಡಿವ ಪ್ರಮಾಣ ನಿಂತುಕೊಂಡಿರಲು, ಒಳಗೆ ಲಿಂಗಾರ್ಚನೆ ಎಂತಯ್ಯಾ?-ಕೇಳಿದಾಕ್ಷಣಕ್ಕೆ ಸತಿಸುತಾದಿಗಳ ಕೊಟ್ಟು ಕಳುಹಿ ನಮಸ್ಕರಿಸಿ ಅಗ್ಘವಣಿಯನ್ನು ಕೊಟ್ಟು ಹಾವುಗೆಯ ಕೊಟ್ಟು ಹಸ್ತಲಾಘವವನ್ನು ಕೊಟ್ಟು ಮನೆ ಒಳಯಕ್ಕೆ ಕರಕೊಂಡು ಬಂದು [೧]ಉನ್ನತವಾದ[೧] ಗದ್ದುಗೆಯ ಮೇಲೆ [೨]ಕುಳ್ಳಿರಿಸಿ[೨] ಸಕಲಪದಾರ್ಥವನ್ನು ನೀಡಿ ಸಂತೃಪ್ತಿಬಡಿಸಬೇಕಲ್ಲದೆ ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಕೋಣೆಮನೆಯೊಳಗೆ ಕುಳಿತುಕೊಂಡು ಮಾಡುವಂಥ ಲಿಂಗಾರ್ಚನೆ, ಎಂತಯ್ಯಾ? ಅದು ಹೇಂಗಯ್ಯಾ?

ಮುಖದಲ್ಲಿ ಕಟ್ಟಿದ ಕನ್ನಡಿ ಮೂಗಿನ ಮೇಲಣ ಕತ್ತಿ!–ತನ್ನ ಮುಖದೆದುರಿಗೆ ಒಂದು ಕನ್ನಡಿಯನ್ನು ಮಡಗಿಕೊಂಡು ಮೂಗಿನ ಸರತಕ್ಕೆ ಒಂದು ಕತ್ತಿಯನ್ನು ಕಟ್ಟಿಕೊಂಡು ಸಾಧನೆಯ ಮಾಡುತಿದ್ದ ಹಾಂಗೆ ಅಲಗಿನ ಸೂತ್ರ ತಪ್ಪಿ ಮೂಗಿನ ಮೇಲೆ ಬಿದ್ದಲ್ಲಿ ಮೂಗು ಹರಿದುಕೊಂಡು ಹೋಗುವುದು. ಮುಖದೆದುರಿಗೆ ಮಡಗಿಕೊಂಡಂಥ ಕನ್ನಡಿಯೊಳಗೆ ನೋಡಿಕೊಂಡಲ್ಲಿ ಅವನಿಗೆ ಎಷ್ಟೊಂದು ದುಃಖಾಭಿಮಾನವುಂಟಾಗುತ್ತಿಹುದೋ ಹಾಂಗೆ; ಮುಖದಲ್ಲಿ ಕಟ್ಟಿದ ಕನ್ನಡಿಹಾಂಗೆ ಆ ಭಕ್ತ ಮಾಡುವಂಥ ಲಿಂಗಾರ್ಚನೆಯು, ಮೂಗಿನ ಮೇಲಣ ಕತ್ತಿಯ ಹಾಂಗೆ ಆಚಾರಾಂಗವೆಂಬ ಘ್ರಾಣವನಪಹರಿಸಿ ಮಾನ ಭಂಗವ ಮಾಡಿ ಭವಕ್ಕೆ ಹಾಕಿಬಿಡುವಂಥ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥದೇ ಮೂಗಿನ ಮೇಲಣ ಕತ್ತಿಯಾಗಿರ್ಪುದು.

ಸಮಯಾಚಾರವೆಂತುಟಯ್ಯಾ?–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಿದ್ದರು; ನಿಂತು ನಿಂತು ಬೇಸರ ಮಾಡಿಕೊಂಡು ಹೋ[೩][ದ][೩] ರೆಂದು ಹೇಳಿದಲ್ಲಿ ಹೋದರೇನಾಯಿತು? ನಮ್ಮ ಸಮಯಾಚರ ಜಂಗಮಮೂರ್ತಿಗಳು ಇಲ್ಲವೆ ? ಎಂದು ಹೇಳುವಂಥದು, ಎಂತಯ್ಯಾ?–ಅದು ಹೇಂಗಿರ್ಪುದಯ್ಯಾ? ಕೂಡಲಸಂಗಮದೇವ–ಪರಶಿವಲಿಂಗವು, ಮೂಗು ಕೊಯ್ಯದೆ ಮಾಣ್ಬನೆ?–ಮೂಗೆಂದರೆ ಆಚಾರ. ಅಂತಪ್ಪ ಆಚಾರ [೪]ಲಿಂಗ[೪] ವೆಂಬ ಘ್ರಾಣವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕದೆ ಬಿಟ್ಟಾನೆ? [೫]ಹಾಕುತ್ತಿಹನು,[೫] ಹೇಳಯ್ಯಾ?–[೬]ನಿರೂಪಿಸಯ್ಯಾ?[೬] ಎಂಬುದರ್ಥ.

● ಲಾಂಛನ ಹೊಱಗೆ ಬಂದು ನಿಂದಿರಲು–ಅಲ್ಲಮಪ್ರಭುಸ್ವಾಮಿಗಳು ಸೊನ್ನಲಾಪುರಕ್ಕೆ ಹೋಗಿ ಸಿದ್ಧರಾಮೇಶ್ವರನ ಕೂಡಿಕೊಂಡು ಕಲ್ಯಾಣ ಪಟ್ಟಣಕ್ಕೆ ಬಂದು ಬಸವೇಶ್ವರಸ್ವಾಮಿಗಳರಮನೆಗೆ ಭಿಕ್ಷಕ್ಕೆಂದು ಬಿಜಯಂಗೈದು ಬಂದು ಅಂಗಳದಲ್ಲಿ ನಿಂದಿರಲು, ಒಳಗೆ ಲಿಂಗಾರ್ಚನೆ ಶಬ್ದವನು ಕೇಳಿದಾಕ್ಷಣಕ್ಕೆ ಎದ್ದುಬಂದು [೭]ದೀರ್ಘದಂಡ[೭] ನಮಸ್ಕಾರ ಮೊದಲಾದ ಭಕ್ತಿಗಳಿಂದ ನಮಸ್ಕರಿಸಿ ಅರ್ಘ್ಯವಣಿಯ ಕೊಟ್ಟು ಹಾವುಗೆಯ ಕೊಟ್ಟು ಹಸ್ತಲಾಘವ ಕೊಟ್ಟು ಅರಮನೆಯ ಒಳಯಕ್ಕೆ ಕರಕೊಂಡು ಹೋಗಿ ಉನ್ನತಾಸನದ ಮೇಲೆ ಮೂರ್ತವ ಮಾಡಿಸಿ ಸಕಲಪದಾರ್ಥವ ನೀಡಿ ಸಂತೃಪ್ತಿಬಡಿಸಬೇಕಲ್ಲದೆ ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಅರಮನೆಯೊಳಗೆ ಕುಳಿತುಕೊಂಡು ಮಾಡುವ ಲಿಂಗಾರ್ಚನೆ ಎಂತಯ್ಯಾ?–ಅದು ಹೇಂಗಿರ್ಪುದಯ್ಯಾ?

ಮುಖದಲ್ಲಿ ಕಟ್ಟಿದ ಕನ್ನಡಿ ಮೂಗಿನ ಮೇಲಣ ಕತ್ತಿ!–ಮುಖದೆದುರಿಗೆ ಕನ್ನಡಿಯ ಮಡಗಿಕೊಂಡು ಮೂಗಿನ ಸರತಕ್ಕೆ ಕತ್ತಿಯ ಕಟ್ಟಿಕೊಂಡು ಸಾಧನೆಯ ಮಾಡುತ್ತಿದ್ದ ಹಾಂಗೆ ಅಲಗಿನ ಸೂತ್ರ ತಪ್ಪಿ ಮೂಗಿನ ಮೇಲೆ ಬಿದ್ದಲ್ಲಿ ಮೂಗು ಹರಕೊಂಡು ಹೋಗುವುದು. ಆ ಇದಿರಲ್ಲಿದ್ದ ಕನ್ನಡಿಯಲ್ಲಿ ನೋಡಿಕೊಂಡಲ್ಲಿ ಆಗವನಿಗೆಷ್ಟೊಂದು ದುಃಖಾಭಿಮಾನ ಹುಟ್ಟುತ್ತಿಹುದೋ ಹಾಂಗೆ; ಮುಖದಲ್ಲಿ ಕಟ್ಟಿದ ಕನ್ನಡಿ ಹಾಂಗೆ ಬಸವೇಶ್ವರಸ್ವಾಮಿಗಳು ಮಾಡುವಂಥ ಲಿಂಗಾರ್ಚನೆಯು, ಮೂಗಿನ ಮೇಲಣ ಕತ್ತಿಯ ಹಾಂಗೆ ಆಚಾರಾಂಗ [೮]ಲಿಂಗ[೮] ವೆಂಬ ಘ್ರಾಣವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡುವಂಥ ಪ್ರಭುಸ್ವಾಮಿಗಳು ಭಿಕ್ಷಕ್ಕೆಂದು ವಿಜಯಂಗೈದು ಬಂದಂಥದೇ ಮೂಗಿನ ಮೇಲಣ ಕತ್ತಿಯಾಗಿರ್ಪುದು.

ಸಮಯಾಚಾರವೆಂತುಟಯ್ಯಾ?-ಪ್ರಭುಸ್ವಾಮಿಗಳು ಬಂದಿದ್ದರು. ನಿಂತು ನಿಂತು ಬೇಸರಮಾಡಿಕೊಂಡು ಹೋದರೆಂದು ಹೇಳಿದಲ್ಲಿ ಹೋದರೇನಾಯಿತ್ತು? ನಮ್ಮ ಸಮಯಾಚಾರಕ್ಕೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳಿಲ್ಲವೆ? ಎಂದು ಹೇಳುವಂಥದು, ಎಂತಯ್ಯಾ? ಅದು ಹೇಂಗಿರ್ಪುದಯ್ಯಾ? ಕೂಡಲಸಂಗಮದೇವ-ಪರಶಿವಲಿಂಗವು, ಮೂಗು ಕೊಯ್ಯದೆ ಮಾಣ್ಬನೆ?-ಆಚಾರಾಂಗವೆಂಬ ಘ್ರಾಣವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕದೆ ಬಿಟ್ಟಾನೆ? ಬಿಡನು; ಹೇಳಯ್ಯಾ? -ನಿರೂಪಿಸಯ್ಯಾ.

..........................

೧-೧ ಉನ್ನತಾಸನ (ಗ). ೨-೨ ಮೂರ್ತವ ಮಾಡಿಸಿ (ಗ). ೩-೩-ದಾ (ಕ.ಗ ). ೪-೪ x(ಕ). ೫-೫ ಬಿಡನು (ಗ). ೬-೬ ಪೇಳಯ್ಯ (ಕ). ೭-೭ ಸಾಷ್ಟಾಂಗ (ಗ). ೮-೮ x (ಕ).

IV- - - - - - - - - - - - - - - - - - - - - - - - - - - - - - - - - - - - - - - - - - - - -

1-1 ಬಂದಿರಲು (ತ). 2+ಯ್ಯ (ತ)

..........................

ಲಿಂಗದ ಪ್ರಾಣ ಜಂಗಮವೆಂದಱಿಯದವರು, ಪ್ರಾಣವಿಲ್ಲದ ದೇಹಕ್ಕೆ ಉಪಚಾರವ ಮಾಡಿದರೇನಹುದು. ಮೂಗ ಕೊಯ್ದು ಕನ್ನಡಿಯ ತೋಱಿದ ಹಾಂಗಿಹುದೆಂಬುದೀ ವಚನದರ್ಥ

..........................

೯+ ಆ (ತ).

V- - - - - - - - - - - - - - - - - - - - - - - - - - - - - - - - - - - - - - - - - - - - -

ಆಚಾರವೆಂಬ ಘ್ರಾಣದಲ್ಲಿ ಮೂಱು ಕತ್ತಿಯಿವೆ. ಗುರುಶಿವಚರವೆಂಬ ತ್ರಿವಿಧಶಸ್ತ್ರಂಗಳಿರುತ್ತೈದಾವೆ ಎಂಬುದೀಗ ಮೂಗಿನ ಮೇಲೆ ಮೂಱು ಕತ್ತಿಯಿವೆ ಎಂಬುದರ್ಥ.

---

## ೧೯೬

**ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ: ಅದು ಬೇಡದು ಬೆಸಗೊಳ್ಳದು ತಂದೊಮ್ಮೆ ನೀಡಬಹುದು. ಕಾಡುವ ಬೇಡುವ ಜಂಗಮ ಬಂದಡೆ, ನೀಡಲು ಬಾರದು ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಆಡುತ್ತ-ಹಸ್ತದಲ್ಲಿ ಲಿಂಗವನು ಪಿಡಿದುಕೊಂಡು ಎಡಕ್ಕೆ ಬಲಕ್ಕೆ ಹಿಂದಕ್ಕೆ ಮುಂದಕ್ಕೆ ತೊನೆತೊನೆದಾಡುತ್ತ, ಹಾಡುತ್ತ-ಕಂದ ವೃತ್ತ ಗದ್ಯ ಪದ್ಯ ಪ್ರಬಂಧಗಳಿಂದ ಆ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುತ್ತ, ಲಿಂಗಕ್ಕೆ – ಗುರುಮುಖದಿಂ ಬಂದಂಥ ಇಷ್ಟಮಹಾಲಿಂಗಕ್ಕೆ, ಭಕ್ತಿಯ ಮಾಡಬಹುದು-ಅಷ್ಟವಿಧಾರ್ಚನೆ ಷೋಡಶೋಪಚಾರ

ಕ್ರಿಯೆಗಳಿಂದಾರಾಧಿಸಬಹುದು. ಅದು–ಇಷ್ಟಮಹಾಲಿಂಗವು, ಬೇಡದು–ಪ್ರಾತಃಕಾಲದಲ್ಲೆದ್ದು ಬಿಂದಿಗೆ ಕುಜಾಯವನ್ನು ತೆಗೆದುಕೊಂಡು ಹಳ್ಳ ಹೊಳೆ ಕೆರೆ ಬಾವಿಗಳೆದ್ದೆಡೆಗೆ ಹೋಗಿ ಹತ್ತೆಂಟು ಕೊಡ ಉದಕವನ್ನು ಮೊಗೆದುಕೊಮಡು ಬಂದು ಅಭಿಷೇಕವ ಮಾಡು, ನಿರ್ಮಲವಾದ ಪತ್ರಪುಷ್ಪಾದಿಗಳನು ಎತ್ತಿಕೊಂಡುಬಂದು ಧರಿಸೆಂದು ಬೇಡದು, ಬೆಸಗೊಳ್ಳದು–ನೀ ಮಾಡಿದ ಪೂಜೆಯನಂತು ಕೈಕೊಂಡೆನಲ್ಲಾ ನಿನಗೇನು ಕೊಟ್ಟರೆ ವರವು? ಇಟ್ಟರೆ ಶಾಪಾನುಗ್ರಹದ ಸಾಮರ್ಥ್ಯತ್ವ ಬೇಕೋ? ಅಂಗಲಿಂಗತ್ವ ಲಿಂಗಪ್ರಾಣತ್ವ ಪ್ರಸಾದಮುಕ್ತತ್ವ ಬೇಕೋ? ಇಹದ ಫಲ ಪರದ ಪದಂಗಳು ಬೇಕೊ? ಇಹದ ಪ್ರಸಾದ ಭೋಗ ಪರದ ನಿಜಮೋಕ್ಷತ್ವ ಬೇಕೊ? ಎಂದು ಬೆಸಗೊಂಡು ಕೇಳದು, ತಂದೊಮ್ಮೆ ನೀಡಬಹುದು–ಹೀಂಗೆ ಆ ಲಿಂಗದಲ್ಲಿ ಬೇಡೋದು ಬೆಸಗೊಳ್ಳೋದುಂಟಾದರೆ, ತಂದು–ನಿರ್ಮಲವಾದ ಪತ್ರಪುಷ್ಪಾದಿಗಳನಾಗುಮಾಡಿ ಕೊಂಡು ಬಂದು, ಒಮ್ಮೆ–ಒಂದು ವೇಳೆ ಧರಿಸಬಹುದು, ನೀಡಬಹುದು–ನಿರ್ಮಲವಾದ ಹತ್ತೆಂಟು ಕೊಡ ಉದಕ ತಂದು ಅಭಿಷೇಕವ ನೀಡಬಹುದು.

ಬೇಡುವ–ಎಲೋ ಭಕ್ತ ತನುವ ಕೊಡು ಮನವ ಕೊಡು ಧನವ ಕೊಡು ಎಂದು ಒರೆದೊರೆದು [೧]ಬೇ[೧]ಡುವ, ಕಾಡುವ–ಕೊಡದೆ ಇದ್ದಲ್ಲಿ ಆಣೆಕಟ್ಟಿ ಹಿಗ್ಗಾ ಮುಗ್ಗಾ ಎಳೆದಾಡಿ [೨]ಗಾ[೨]ರುಮಾಡುವ, ಜಂಗಮ, – ಚರ [೩]ಲಿಂಗ[೩]ವು, ಬಂದಡೆ–ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ನೀಡಲು ಬಾರದು–ಸಕಲ ಪದಾರ್ಥವನ್ನು ಸಮರಸಭಾವದಿಂದೆ ಕೊಟ್ಟು ಭಕ್ತಿಯ ಮಾಡೇನೆಂದರೆ ಅಶಕ್ಯವಾಗಿರ್ಪುದು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

........................

೧–೧ ನೋ (ಕ). ೨–೨ ಪಾ (ಕ). ೩–೩ ಜಂಗಮ(ಕ).

IV- - - - - - - - - - - - - - - - - - - - - - - - - - - - - - - - - - - - - - - - - - -

ನಿಃಕಲಲಿಂಗಕ್ಕೆ ಆಡುತ್ತ ಹಾಡುತ್ತ ಪೂಜೆಯಮಾಡಬಹುದು; ಕಲೆಯುಳ್ಳ ಜಂಗಮಕ್ಕೆ ಭಕ್ತಿಯ ಮಾಡಬಾರದೆಂಬುದೀ ವಚನದರ್ಥ.

---

### ೧೯೭

**ಕಲ್ಲನಾಗರ ಕಂಡಡೆ ಹಾಲನೆಱೆಯೆಂಬರಯ್ಯಾ. ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ. ಉಂಬುವ ಜಂಗಮ ಬಂದಡೆ ನಡೆಯೆಂಬರಯ್ಯಾ. ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ. ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ, ಕಲ್ಲತಾಗಿದ ಮಿಟ್ಟೆಯಂತಪ್ಪರಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಕಲ್ಲನಾಗರ ಕಂಡಡೆ ಹಾಲನೆಱೆಯೆಂಬರಯ್ಯಾ.: ಕಲ್ಲನಾಗರ ಕಂಡಡೆ–ಶಿಲಾಸರ್ಪನ ದರುಶನವಾದರೆ, ಹಾಲನೆಱೆಯೆಂಬರಯ್ಯಾ–ನಾಗರಪಂಚಮಿ ಬಂತು ತನಿವಾಲನೆರೆದು ಹಂಗನೂಲನು ಹಾಕಿ ನೆನಗಡಲಿ ಚಿಗಳಿ ತಂಬಿಟ್ಟು ಗೊನೆಬಾಳೆಹಣ್ಣು ಮೊದಲಾದವನ್ನು ನೈವೇದ್ಯವ ಹಿಡಿಯೆಂಬರು.

ದಿಟದ ನಾಗರ ಕಂಡಡೆ – ಸರ್ಪನೆಂಬಂಥದು ನನ್ನ ರೂಪ ಕಂಡರೆ ಎಷ್ಟೊಂದು ಮನ್ನಿಸುತ್ತೈದಾರೆ ನಾ ಹೋದರೆ ಎಷ್ಟೊಂದು ಮನ್ನಿಸಿಯಾರೊ ಎಂದು ಬೆಳಗಾಗಿ ಕಡೆಬಾಗಿಲಿಗೆ ಬಂದಲ್ಲಿ ಕೊಲ್ಲೆಂಬರಯ್ಯಾ–ಇದು ಹೊಲೆಯನ ಸರ್ಪ ಮಾದಿಗನ ಸರ್ಪ ನಮ್ಮ ಕಚ್ಚೀತು ನಮ್ಮ ಮಕ್ಕಳ ಮರಿಗಳ ಕಚ್ಚೀತೆಂದು ಕೊಲ್ಲು ಬಡಿಯೆಂದು ಹೇಳುವರಯ್ಯಾ. ಉಂಬುವ ಜಂಗಮ ಬಂದಡೆ– ಸಕಲಪದಾರ್ಥವನ್ನು ಲಿಂಗಕ್ಕೆ ಸಮರ್ಪಣೆಯ ಮಾಡಿ ಆ ಲಿಂಗಪ್ರಸಾದವ ಪಡೆದನುಭವಿಸಲ್ಪಟ್ಟ ಜಂಗಮಮೂರ್ತಿಗಳು, ಬಂದಡೆ–ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ನಡೆಯೆಂಬರಯ್ಯಾ– ನಮ್ಮ ಮನೆಯೊಳಗಿನ್ನೂ ಅಡಿಗೆ ಆಗಿಲ್ಲ. ಹೆಂಗಸರಿದ್ದರೆ ನೀರಿಗೆ ಹೋಗ್ಯೈದಾರೆ. ನಿಮಗೆ ನೀಡುವಂಥ ನಾಡಿಗ ದೇಸಾಯಿ ಸೆಟ್ಟಿ ಚೌದರಿ ವ್ರತಶೀಲವಂತರ ಮನೆಗಳು ಮುಂದಕ್ಕೈದಾವೆ ಅತ್ತ ಸನ್ನಿರೆಂದು ಹೇಳುವರಯ್ಯಾ. ಉಣ್ಣದ ಲಿಂಗಕ್ಕೆ–ರೂಪುಮಾತ್ರವಾಗಿ ಗ್ರಹಿಸಲ್ಪಟ್ಟ ಸ್ಥಾವರಲಿಂಗಕ್ಕೆ. ಬೋನವ ಹಿಡಿಯೆಂಬರಯ್ಯಾ–ಸೋಮವಾರ ಮಂಗಳವಾರ ಹುಣ್ಣಿವೆ ಅಮವಾಸಿ ಹಬ್ಬ ತಿಥಿಗಳು ಬಂದಲ್ಲಿ ಸಕಲ ಪದಾರ್ಥವನ್ನು ಹರಿವಾಣದಲ್ಲಿ ಗಡಣಿಸಿ ನೈವೇದ್ಯವ ಹಿಡಿಯೆಂದು ಹೇಳುವರಯ್ಯಾ.

ನಮ್ಮ ಕೂಡಲಸಂಗನ ಶರಣರ–ನಮ್ಮ ಜಂಗಮಮೂರ್ತಿಗಳ, ಕಂಡೂ ಉದಾಸೀನವ ಮಾಡಿದಡೆ–ಕಂಡು ಕಾಣದ ಹಾಂಗೆ [೧]ಕೇಳೀ ಕೇಳದ ಹಾಂಗೆ[೧] ಉಪೇಕ್ಷವ ಮಾಡಿಬಿಟ್ಟರೆ, ಕಲ್ಲತಾಗಿದ ಮಿಟ್ಟಿಯಂತ್ತಪ್ಪರಯ್ಯಾ–ಮಿಟ್ಟಿಯೆಂಬುದೇನಾದರೂ ಗುರಿಯಿಡಬೇಕಾದರೆ ಮಳಲ ಗುಂಪಿಗಾಗಲಿ ಕೆಸರ ಮುದ್ದಿಗಾಗಲಿ ಗುರಿಯಿಟ್ಟರೆ ಇಟ್ಟ ಗುರಿ ನಟ್ಟುಕೊಂಡೀತಲ್ಲದೆ ಗೋಡೆಗೆ ಮರಕ್ಕೆ ಕಲ್ಲಿಗೆ ಇಟ್ಟರೆ ಹಿಂದಕ್ಕೆ ಸಿಡಿದುಬಂದು ತನಗಾದರೂ ಬಡಿವುದು; ಅಥವಾ [೨][ಹಾಳೆ ಹಾರಿ][೨] ದ ಹಾಂಗೆ ಎತ್ತಲಾದರೂ ಅಣಿದು ಹೋಗುವುದಲ್ಲದೆ ಇಟ್ಟ ಗುರಿ ನಟ್ಟುಕೊಂಡಿತ್ತೆ? ನಟ್ಟುಕೊಳ್ಳದು. ಹಾಂಗೆ, ಅವನು ಕೆಲವು ಪಾಪವ ಮಾಡಿರುವನು. ಕೆಲವು ಪುಣ್ಯವ ಮಾಡಿರುವನು. ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಕ್ಷಣವೆ ನಮಸ್ಕಾರವ ಮಾಡಿದರೆ ಅವರು ಅಲ್ಲೇ ಮೂರ್ತವ ಮಾಡುವರು. ಅವನು ಮಾಡಿದಂಥ ಪುಣ್ಯವೆಲ್ಲ ಉಳಿವುದು. ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡೂ ಕಾಣದ ಹಾಂಗೆ ಕೇಳಿ ಕೇಳದ ಹಾಂಗೆ ಉಪೇಕ್ಷವ ಮಾಡಿಬಿಟ್ಟರೆ ಅವರು ಎತ್ತಲಾದರೂ ಸಿಡಿದುಹೋಗುವರು. ಅವನು ಮಾಡಿದಂಥ ಪುಣ್ಯವು ಅವರ ಹಿಂದುಗುಂಟ ಹೋಗುವುದು. ಪಾಪವೆಲ್ಲಾ ಅವನಲ್ಲೇ ಉಳಿವುದು. ಆ ಪಾಪದ ದೆಸೆಯಿಂದ ಭವದತ್ತ ತೆರಳಿ ಹೋಗುತ್ತಿಹನು.

.........................

೧–೧ x (ಕ). ೨–೨ ಹಾಹರಿ (ಕ). ಹಾಳೆಹಾರ (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಕಲ್ಲನಾಗರ ಕಂಡಡೆ ಹಾಲನೆಜೆಯೆಂಬರು, ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ– ಅವರಂದ[೧][ರೂ][೧] ಆಡಿದ[೧][ರೂ][೧] ಅನಿಸಿಕೊಂಡಿರುವ ಪಾಷಂಡಿ ಜಂಗಮವ ಕಂಡರೆ, ನಮ್ಮಯ್ಯ ಒಳ್ಳಾತ ಕ್ಷೀರವ ನೀಡೆಂಬರು. ಗೋವ ಗುಲಾಮ ತೊಂಡ ನೀಚ ಎಂದು ಜರಿದು ಝುಂಕಿಸುವಂಥ ಮಹಾಜ್ಞಾನಿ ಜಂಗಮವ ಕಂಡರೆ, ಈ ಜಂಗಮ ಬಲು ಕೆಟ್ಟವ ತಳ್ಳಿಬಿಡೆಂಬರಯ್ಯಾ. ಮುಂದಕ್ಕೆ ಕಾಣಬಂದರ್ಥ.

.........................

೧-೧ ರು (ಚ,ಜ).

IV- - - - - - - - - - - - - - - - - - - - - - - - - - - - - - - - - - - - - - - - -

ಕಲ್ಲನಾಗರ ದಿಟದ ನಾಗರಾಗಿ ಬಂದಂತೆ ಲಿಂಗದ ಚಿತ್ಕಳೆಯು ಜಂಗಮವಾಗಿ ಬಂದರೆ ಆ ಜಂಗಮಕ್ಕೆ ಭಕ್ತಿಯ ಮಾಡದೆ ಲಿಂಗಕ್ಕೆ ಪೂಜೆಯ ಮಾಡಿದರೆ ನಿರರ್ಥವೆಂಬುದೀ ವಚನದರ್ಥ.

---

೧೯೮

**ನಾಗಂಗೆ ಹೊಸತಹನಿಕ್ಕಿಹೆವೆಂಬರು; ನಾಗ ಬಂದಡೆ ಕೋಲ ತಳೆದು ಕೊಲ್ಲೆಂಬುವರಯ್ಯಾ ಆಗದಯ್ಯಾ! ಜಂಗಮಲಿಂಗವೆಂಬ ಶಬ್ದ '೧ಸ್ವಯ೧'ವಾಗದಯ್ಯಾ! ಕೂಡಲಸಂಗಮದೇವರಲ್ಲಿ ಸಿಂಧುಬಲ್ಲಾಳಂಗಲ್ಲದೆ ಆಗದಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - -

1-1 x (ಗ).

.........................

ನಾಗಂಗೆ ಹೊಸತಹನಿಕ್ಕಿಹೆವೆಂಬರು: ನಾಗಂಗೆ-ಶೀತಾಳ ಸಿಡಿದು ಚಳಿಜ್ವರ ಚಾತುರ್ಜ್ವರ ಮೊದಲಾದವು ಕಾಡುತಿದ್ದಲ್ಲಿ ಕಣಿಹೇಳುವರ ತಾವಕ್ಕೆ ವೀಳ್ಯ ಫಲಾಹಾರ ಧೂಪಗಾಣಿಕೆ ಮೊದಲಾದುವನ್ನು ತೆಗೆದುಕೊಂಡು ಹೋಗಿ ಮುಂದಿಟ್ಟು ಕೇಳಿದಲ್ಲಿ ಅವರು ಮತ್ತೇನಲ್ಲ ನಾಗಪ್ಪನ ಕಾಟವೈತೆ, ಆ ನಾಗಂಗೆ ಮಾಡಿದಲ್ಲಿ ಬಿಡುಗಡೆಯಾಗುತ್ಯೆತೆಂದು ಹೇಳಿದಲ್ಲಿ, ನಾಗಂಗೆ-ಶಿಲಾಸರ್ಪನಿಗೆ, ಹೊಸತಹನಿಕ್ಕಿಹೆವೆಂಬರು-ಹೊಸ ಮುಂಡಾಸ ಹೊಸ[ಅ]ಂಗಿ ಹೊಸ ಧೋತರ ಉಂಗುರ ಉಡದಾರವನ್ನು ಏರಿಸೇವೆಂದು ಹೇಳುವರು. ನಾಗ ಬಂದಡೆ-ಸರ್ಪನೆಂಬಂಥದು ನನ್ನ ರೂಪ ಕಂಡರೆ ಎಷ್ಟೊಂದು ಮನ್ನಿಸುತ್ಯೆದಾರೆ. ನನ್ನ ಕಂಡರೆ ಎಷ್ಟೊಂದು ಮನ್ನಿಸಿಯಾರೋ ಎಂದು ಬೆಳಗಾಗಿ ಬಾಗಿಲಿಗೆ ಬಂದರೆ, ಕೋಲ ತಳೆದು ಕೊಲ್ಲೆಂಬುವರಯ್ಯಾ- ಇದು ಹೊಲೆಯನ ಸರ್ಪ ಮಾದಿಗನ ಸರ್ಪ ನಮ್ಮ ಕಚ್ಚೀತು ನಮ್ಮ ಮಕ್ಕಳಮರಿಗಳ ಕಚ್ಚೀತೆಂದು ಕೋಲು ಗುದಿಗೆಗಳ ತೆಗದುಕೊಂಡು ಸದೆಬಡಿಯೆಂದು ಹೇಳುವರಯ್ಯಾ.

ಆಗದಯ್ಯಾ-ಶಿಲಾಸರ್ಪನ ಪೂಜಿಸಿದ ಹಾಂಗೆ ದಿಟದ ಸರ್ಪನ ಪೂಜಿಸೇನೆಂದರೆ ಅಶಕ್ಯವಾಗಿರ್ಪುದಯ್ಯಾ, ಜಂಗಮಲಿಂಗವೆಂಬ ಶಬ್ದ ೧ಸ್ವಯ೧ ವಾಗದಯ್ಯಾ-ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ 'ಲಿಂಗಾರ್ಪಿತ ಭಿಕ್ಷಾ' ಯೆಂಬ ಶಬ್ದವನ್ನು ಕೇಳಿದಾಕ್ಷಣಕ್ಕೆ ನಮಸ್ಕರಿಸಿ ಇದ್ದಂಥ ಪದಾರ್ಥವನ್ನು ನೀಡಿ ಸಂತೃಪ್ತಿಬಡಿಸುವಂಥದು ಅಳವಡದಯ್ಯಾ. ಕೂಡಲಸಂಗಮದೇವರಲ್ಲಿ-ಪರಶಿವಲಿಂಗದ ಪಾದಾರವಿಂದದೊಳಗೆ, ಸಿಂಧು ಬಲ್ಲಾಳಂಗಲ್ಲದೆ-ಜಂಗಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದು 'ಲಿಂಗಾರ್ಪಿತ ಭಿಕ್ಷಾ' ಯೆಂಬ ಶಬ್ದವ ಕೇಳಿದಾಕ್ಷಣವೆ ಬಂದು ನಮಸ್ಕರಿಸಿ ಇಚ್ಛಾಪದಾರ್ಥವ ನೀಡಿ ಸಂತೃಪ್ತಿಬಡಿಸುವಂಥದು

ಸಿಂಧುಬಲ್ಲಾಳರಾಯನೆಂಬ ಶಿವಶರಣಂಗಲ್ಲದೆ, ಆಗದಯ್ಯಾ–ಮಿಕ್ಕಿನ ಆಶಾಲಾಂಛನಿ ಉಪಾಧಿಕರುಗಳಿಗಳವಡದಯ್ಯಾ.

.........................

೧–೧ x (ಗ)

---

೧೯೯

**ಎಱೆದಡೆ ನೆನೆಯದು; ಮಱೆದಡೆ ಬಾಡದು. ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ. ಕೂಡಲಸಂಗಮದೇವಾ, ಜಂಗಮಕ್ಕೆಱೆದಡೆ ಸ್ಥಾವರ ನೆನೆಯಿತ್ತು.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಎಱೆದಡೆ ನೆನೆಯದು: ಎಱೆದಡೆ ಹತ್ತೆಂಟುಕೊಡ ಉದಕವನ್ನು ಅಭಿಷೇಕವ ನೀಡಿದರೆ, ನೆನೆಯದು–ಕಡಲೆಕಾಳು ಗೋದಿಕಾಳು ಉದ್ದಿನಕಾಳು ಹೆಸರುಕಾಳು ತೊಯ್ದು ಮೆತ್ತಗಾದ ಹಾಂಗೆ ನೆನೆದು ಇಷ್ಟಾರ್ಥಸಿದ್ಧಿಯನ್ನು ಕರುಣಿಸಿ ಕೊಟ್ಟಿತ್ತೆ? ಕೊಡಲರಿಯದು. ಮಱೆದಡೆ ಬಾಡದು : ಮಱೆದಡೆ– ತ್ರಿಕಾಲಂಗಳಲ್ಲಿ ಮಾಡುವಂಥ ಲಿಂಗಪೂಜೆಯನ್ನು ವಿಸ್ಮೃತಿಯನ್ನೈದಿಸಿ ಬಿಟ್ಟರೆ, ಬಾಡದು–ಸಸಿವೃಕ್ಷಾದಿಗಳು ಬಾಡಿ ಬತ್ತಿದ ಹಾಂಗೆ ಬಾಡಿ ಬತ್ತದು. ಲಿಂಗಾರ್ಚನೆ–ಲಿಂಗಪೂಜೆ, ಹುರುಳಿಲ್ಲ ಹುರುಳಿಲ್ಲ–ಪ್ರಯೋಜನವಿಲ್ಲ ಪ್ರಯೋಜನವಿಲ್ಲವು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಜಂಗಮಕ್ಕೆಱೆದಡೆ – ಜಂಗಮಮೂರ್ತಿಗಳಿಗೆ ಜಳಕ ಜಂತಾವಳಿಗಳ ಮಾಡಿಸಿ ಮೃಷ್ಟಾನ್ನ ಪದಾರ್ಥವನ್ನು ನೀಡಿ ಸಂತೃಪ್ತಿಬಡಿಸಿದರೆ, ಸ್ಥಾವರ ನೆನೆಯಿತ್ತು–ಭಕ್ತನಂಗದಲ್ಲಿ ಸಂಬಂಧವಾದ ಇಷ್ಟಲಿಂಗಕ್ಕೆ ಮಹಿಮಾಪದ ಚಿತ್ಕಲೆ ಹೆಚ್ಚುತ್ತಿಹುದು.

IV- - - - - - - - - - - - - - - - - - - - - - - - - - - - - - - - - - - - - - - - - - - - -

ಪರಮ ಚಿತ್ಕಳೆಯಾದ ಜಂಗಮಕ್ಕೆ ಭಕ್ತಿಯ ಮಾಡಿದರೆ ಲಿಂಗಕ್ಕೆ ತೃಪ್ತಿ. ಲಿಂಗಕ್ಕೆ ಮಾಡಿದರೇನು ಮಾಡದಿದ್ದರೇನೆಂಬುದೀ ವಚನದರ್ಥ.

---

೨೦೦

**ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ; ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ; ಜಂಗಮವಾಪ್ಯಾಯನವಾದಡೆ ಲಿಂಗ ಸಂತುಷ್ಟಿಯಹುದಯ್ಯಾ; ॥ಸಾಕ್ಷಿ॥ ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯ ಚ ಜಂಗಮಃ । ಅಹಂತೃಪ್ತೋ ಮಹಾದೇವಿ ಉಭಯೋರ್ಲಿಂಗ ಜಂಗಮಃ॥ ಎಂದುದಾಗಿ, ಇದು ಕಾರಣ ಕೂಡಲಸಂಗಮದೇವರಲ್ಲಿ ಜಂಗಮವಾಪ್ಯಾಯನವಾದಡೆ ಲಿಂಗಸಂತುಷ್ಟಿ.**

I-----------------------------------------------------------------------

ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ: ಅಗ್ನಿಯಾಧಾರದಲ್ಲಿ–ಪಾವಕನಾಸ್ಪದದಲ್ಲಿ, ಕಬ್ಬುನ–ಕಾರ್ಬೊನ್ನು, ನೀರುಂಬುದಯ್ಯಾ–ಕಾದ ಕಬ್ಬುನವನ್ನು ಉದಕದಲ್ಲಿ ಓಡಿದರೆ ಒಂದು ಪಡಿ ಎರಡು ಪಡಿ ಉದಕವನ್ನು ಹೀರುತ್ತಿಹುದು. ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ: ಭೂಮಿಯಾಧಾರದಲ್ಲಿ–ಪೃಥ್ವಿಯಾಸ್ಪದದಲ್ಲಿ, ವೃಕ್ಷ–ಪಾದಪವು, ನೀರುಂಬುದಯ್ಯಾ–ಭೂಮಿಯನ್ನು ಅಗಿದು ಪಾತಿಯ ಮಾಡಿ ಗೊಬ್ಬರ ಕೆಮ್ಮಣ್ಣು ಹಾಕಿ ನೀರಬಿಟ್ಟರೆ ಹತ್ತೆಂಟು ಕೊಡ ಉದಕವನ್ನು ಹೀರುತ್ತಿಹುದಯ್ಯಾ. ಜಂಗಮವಾಪ್ಯಾಯನವಾದಡೆ–ಜಂಗಮಮೂರ್ತಿಗಳು ಕ್ಷುಧೆಯಾಗಿ ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ ಕಂಡಾಕ್ಷಣಕ್ಕೆ ನಮಸ್ಕಾರವ ಮಾಡಿ ಜಳಕಜಂತಾವಳಿಗಳನ್ನು ಮಾಡಿಸಿ ಸಕಲಪದಾರ್ಥವನ್ನು ಎಡೆಮಾಡಿ ಸಂತೃಪ್ತಿ ಬಡಿಸಿದರೆ, ಲಿಂಗಸಂತುಷ್ಟಿಯಹುದಯ್ಯಾ–ಆ ಭಕ್ತನಂಗದಲ್ಲಿ ಸಂಬಂಧವಾದ ಇಷ್ಟಲಿಂಗಕ್ಕೆ ಮಹಿಮಾಪದ ಚಿತ್ಕಲೆ ಹೆಚ್ಚುತ್ತಿಹುದಯ್ಯಾ.

ಗ್ರಂಥ: ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. ವೃಕ್ಷಸ್ಯ ವದನಂ ಭೂಮಿಃ ವೃಕ್ಷಸ್ಯ–ಪಾದಪಂಗಳಿಗೆ, ಭೂಮಿಃ–ಪೃಥ್ವಿಯೇ ಮುಖವಾಗಿರ್ಪುದು. ಸ್ಥಾವರಸ್ಯ ಚ ಜಂಗಮಃ ಸ್ಥಾವರಸ್ಯ ಚ–ಇಷ್ಟಲಿಂಗಕ್ಕೆ, ಜಂಗಮಃ–ಚರ [1]ಲಿಂಗ[1]ವು, ವದನಂ–ಮುಖವಾಗಿಪ್ಪುದು. ಮಹಾದೇವಿ–ಎಲೆ ಪಾರ್ವತಿಯೇ, ಉಭಯೋರ್ಲಿಂಗ ಜಂಗಮಃ–ಗಂಡಭೇರುಂಡ ಪಕ್ಷಿಯಂಬಂಥದಕ್ಕೆ ಕೊಕ್ಕು ಎರಡು ದೇಹ ಒಂದು. ಯಾವ ಕೊಕ್ಕಿನಿಂದಲಾದರೂ ಆಹಾರವ ತೆಗೆದುಕೊಂಡರೂ ದೇಹಕ್ಕೆ ತೃಪ್ತಿಯಾಗುತ್ತಿಹುದು. ಹಾಂಗೆ, ಎನಗೆ ಲಿಂಗಜಂಗಮವೆಂದು ಎರಡು ಮುಖವಾಗಿರ್ಪವು. ಲಿಂಗಕ್ಕೆ ಸಕಲ ಪದಾರ್ಥವ ಸಮರ್ಪಿಸಿದರೆ, ಅಹಂ ತೃಪ್ತಃ–ಎನಗೆ ಸಂತುಷ್ಟಿಯಾಗುತ್ತಿಹುದು. ಜಂಗಮಕ್ಕೆ ಸಕಲಪದಾರ್ಥವ ನೀಡಿ ಸಂತೃಪ್ತಿ ಬಡಿಸಿದರೆ ಅಹಂ ತೃಪ್ತಃ–ಎನಗೆ ಸಂತುಷ್ಟಿಯಾಗುತ್ತಿಹುದು. ಎಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವರಲ್ಲಿ–ಪರಶಿವಲಿಂಗದ ಪಾದಾರವಿಂದದಲ್ಲಿ, ಜಂಗಮವಾಪ್ಯಾಯನವಾದಡೆ–ಜಂಗಮಮೂರ್ತಿಗಳು ಕ್ಷುಧೆಯಾಗಿ ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡಾಕ್ಷಣವೆ ನಮಸ್ಕಾರವಂ ಮಾಡಿ ಜಳಕಜಂತಾವಳಿಗಳಂ ಮಾಡಿಸಿ ಸಕಲ ಪದಾರ್ಥವ ನೀಡಿ ಸಂತುಷ್ಟಿ ಬಡಿಸಿದರೆ, ಲಿಂಗಸಂತುಷ್ಟಿ–ಆ ಭಕ್ತನಂಗದಲ್ಲಿ ಸಂಬಂಧವಾದ ಇಷ್ಟಲಿಂಗಕ್ಕೆ ಮಹಿಮಾಪದ ಚಿತ್ಕಲೆ ಹೆಚ್ಚುತ್ತಿಹುದಯ್ಯಾ.

.............................

೧–೧ ಜಂಗಮ (ಕ).

---

೨೦೧

**ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು. ಕಳ್ಳನಾಣ್ಯ ಸಲುಗೆಗೆ ಸಲ್ಲದು, ಕಳ್ಳನಾಣ್ಯವ ಸಲ್ಲಲೀಯರಯ್ಯಾ. ಭಕ್ತಿಯೆಂಬ ಭಾಂಡಕ್ಕೆ ಜಂಗಮವೆ ಸುಂಕಿಗ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಭಾಂಡವ ತುಂಬಿದ ಬಳಿಕ–ಒಬ್ಬಾನೊಬ್ಬ ವಣಿಜನು ಸಾವಿರಸಂಖ್ಯೆ ದ್ರವ್ಯವನ್ನು ಕಟ್ಟಿಕೊಂಡು

ನೂರಾರು ಎತ್ತುಗಳ ಹೊಡೆದುಕೊಂಡು ವಾಳ್ಯೆದ ಮನೆಗಳಿಗೆ ಹೋಗಿ ಶುಂಠಿ ಮೆಣಸು ಅಡಕೆ ಲವಂಗ ಯಾಲಕ್ಕಿ ಜಾಜಿಕಾಯಿ ಜಾಪತ್ರಿ ಮೊದಲಾದವನ್ನು ಮೂಲಿಯ ಮಾಡಿದ ಮೇಲೆ, ಸುಂಕವ ತೆತ್ತಲ್ಲದೆ–ತಳಸುಂಕ ಮೇಲುಸುಂಕ ಮಾರ್ಗಸುಂಕ ¹ಮೊದಲಾದ¹ವನು ತೆತ್ತಲ್ಲದೆ ವಿರಹಿತ ಹೋಗಬಾರದು–ತಪ್ಪಿಸಿಕೊಂಡು ಹೋಗವುದಕ್ಕಾದೀತೆ? ಆಗದು. ಅಥವಾ ಒಂದುವೇಳೆ ತಪ್ಪಿಸಿಕೊಂಡುಹೋದದ್ದೇ ಉಂಟಾದರೆ ಹಿಡಿದು ಹಾಕಿಕೊಂಡು ಹಿಂದಲ ಮುಂದಲ ಲೆಕ್ಕವೆಲ್ಲವ ತೀರಿಸಿಕೊಂಡು ಬಿಡುತ್ತಿಹರು. ಕಳ್ಳನಾಣ್ಯ ಸಲುಗೆಗೆ ಸಲ್ಲದು–ಟಂಕಸಾಲೆಯ ಮನೆಯಲ್ಲಿ ನೋಟಕ್ಕೂ ತೂಕಕ್ಕೂ ಸಲುವಳಿಯಲ್ಲದ ಯಂಗಿ ವರಹವನ್ನು ಸಲ್ಲಲೀಯರಯ್ಯಾ. ಮಳಿಗೆಮನೆಗಳಿಗೆ ತೆಗೆದುಕೊಂಡು ಹೋಗಿ ಎಚ್ಚವನ್ನು ತೂಗಿಕೊಡೆಂದು ಕೊಟ್ಟರೆ ತೆಗೆದುಕೊಂಡು ಎಚ್ಚವನ್ನು ತೂಗಿಕೊಟ್ಟಾರೆ? ಕೊಡರು. ಕಳ್ಳನಾಣ್ಯವ–ನೋಟಕ್ಕೂ ತೂಕಕ್ಕೂ ಸಲುವಳಿಯಲ್ಲದ ಯಂಗಿ ವರಹವನು, ಸಲುಗೆಗೆ ಸಲ್ಲಲೀಯರಯ್ಯಾ–ಐವತ್ತಾರುದೇಶದ ಪುರ ಪಟ್ಟಣ ಸ್ಥಾನಂಗಳಲ್ಲಿ ಮಳಿಗೆಮನೆಗೆ ತೆಗೆದುಕೊಂಡು ಹೋಗಿ ಕೊಟ್ಟು ಎಚ್ಚವನ್ನು ತೂಗಿಕೊಡೆಂದು ಕೇಳಿದರೆ ತೆಗೆದುಕೊಂಡು ಎಚ್ಚವನ್ನು ತೂಗಿಕೊಟ್ಟಾರೆ? ಕೊಡರು. ಇದು ²ಯಂಗಿ² ವರಹವೆಂದು ಹಿಂದಕ್ಕೆ ಬಿಟ್ಟು ಬಿಡುತ್ತಿಹರೆಂಬ ದೃಷ್ಟೋಪಮಾನದ ಹಾಂಗೆ,

ಭಾಂಡವ ತುಂಬಿದ ಬಳಿಕ–ತನುತ್ರಯಂಗಳಲ್ಲಿ ಸತ್ವನಿಜತಂಡುಲಸ್ವರೂಪವಾದ ಇಷ್ಟಪ್ರಾಣಭಾವಲಿಂಗಂಗಳ ಸಂಬಂಧವ ಮಾಡಿಕೊಂಡು ಕ್ರಿಯಾಜ್ಞಾನಭಾವಾಚಾರಂಗಳ ವಿಡಿದಾಚರಿಸುತಿರ್ದ ಮೇಲೆ, ಸುಂಕವ ತೆತ್ತಲ್ಲದೆ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಭಕ್ತಿ ಮಾಡಿದಲ್ಲದೆ, ವಿರಹಿತ ಹೋಗಬಾರದು–ಜಂಗಮಭಕ್ತಿ ಬಾಹ್ಯನಾಗಿ ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆದೇನೆಂದರೆ ಅಶಕ್ಯವಾಗಿರ್ಪುದು. ಕಳ್ಳನಾಣ್ಯ–ಭಕ್ತಮಾಹೇಶ್ವರರ ಕವಳಿಗೆಗೆ ಯೋಗ್ಯವಲ್ಲದ ಉಪಾಧಿಕನ, ಸಲುಗೆಗೆ ಸಲ್ಲದು–ಭಕ್ತಮಾಹೇಶ್ವರರು ತಮ್ಮ ಕವಳಿಗೆ ಯೋಗ್ಯನ ಮಾಡಿ ಕೊಂಡಾರೆ? ಮಾಡಿಕೊಳ್ಳರು. ಕಳ್ಳನಾಣ್ಯವ–ಆಚಾರಭ್ರಷ್ಟನ, ಸಲ್ಲಲೀಯರಯ್ಯಾ–ಭಕ್ತಮಾಹೇಶ್ವರರು ತಮ್ಮ ಪಜ್ತಿ ಪಾದಾರ್ಚನೆಯಲ್ಲಿ ಬೆರೆಯಗೊಟ್ಟಾರೆ? ಬೆರೆಯಗೊಡರಯ್ಯಾ. ಭಕ್ತಿಯೆಂಬ ಭಾಂಡಕ್ಕೆ–ಶಿವಾದ್ವೈತಭಕ್ತಿಯೆಂಬ ದ್ರವ್ಯಕ್ಕೆ, ಜಂಗಮವೆ–ಚರಲಿಂಗವೆ, ಸುಂಕಿಗ–ಮೊದಲಿಗನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ x(ಕ). ೨–೨ ವೆಂಗಿ(ಕ).

II- - - - - - - - - - - - - - - - - - - - - - - - - - - - - - - - - - - - - - - -

1–1 ಭಂ (ಚ,ಜ). 2–2 x (ಚ,ಜ).

..........................

ಭಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ಹೋಗಬಾರದು–ಅಷ್ಟಾವರಣಂಗಳೆಂಬ ಸರಕವನು ಪೂರವಿಸಿದ ಮೇಲೆ ಭಕ್ತಿಯ ಮಾಡಿ ಮುಕ್ತಿ ಹಡೆದಲ್ಲದೆ ವಿಲಕ್ಷಣವಾಗೆಯ್ದಬಾರದು. ಮುಂದಕ್ಕೆ ಕಾಣಬಂದರ್ಥ.

III--------------------------------------------------------------------------

1–1 ಭಂ (ಡ).

........................

ಭಂಡವ ತುಂಬಿದ ಬಳಿಕ–ಸರಕನು ಮೂಲೆಯ ತುಂಬಿದ ಮೇಲೆ, ಸುಂಕವ ತೆತ್ತಲ್ಲದೆ–ಜಕಾತಿಯನು ಕೊಟ್ಟಲ್ಲದೆ.

---

೨೦೨

**ಮಾಡಿ ನೀಡಿ ಲಿಂಗಜಂಗಮವ ಪೂಜಿಸಿಹೆನೆಂಬವರು ನೀವೆಲ್ಲ ಕೇಳಿರಣ್ಣಾ: ಹಾಗದ ಕೆರಹ ಹೊಜಿಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರವ ಮಾಡುವನಂತೆ ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ. ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು. ಕೂಡಲಸಂಗನಶರಣರಿಗೆ ಧನವ ಸವೆಸಲೇಬೇಕು.**

I - - - - - - - - - - - - - - - - - - - - - - - - - - - - - - - - - - - - - - - - - - - -

ಮಾಡಿ–ತ್ರಿಕಾಲದಲ್ಲಿ ಲಿಂಗಪೂಜೆಯನನುಗೈದು, ನೀಡಿ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯ ಸ್ವರೂಪವಾದ ಜಂಗಮಕ್ಕೆ ತನುಮನಧನಂಗಳನು ಎಡೆ ಮಾಡಿ, ಲಿಂಗಜಂಗಮವ ಪೂಜಿಸಿಹೆನೆಂಬವರು–ಲಿಂಗಪೂಜೆ ಜಂಗಮದಾಸೋಹವನ್ನು ಮಾಡುತ್ತೈದೇವಿಯೆಂದು ಹೇಳುವಂಥವರು, ನೀವೆಲ್ಲ–ಉಪಾಧಿಕರಷ್ಟೂ, ಕೇಳಿರಣ್ಣಾ–ಆಲಿಸಿರಣ್ಣಾ. ಹಾಗದ ಕೆರಹ–ನಾಲ್ಕು ದುಡ್ಡಿನ ಎಕ್ಕಡವನ್ನು, ಹೊಜಿಗೆ ಕಳೆದು–ಪೌಳಿ ಹೊರಗೆ ಬಿಟ್ಟು, ದೇಗುಲಕ್ಕೆ ಹೋಗಿ–ದೇವಸ್ಥಾನದ ಒಳಯಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವಾಗ್ಗೆ ಲಿಂಗಕ್ಕೆ ವಂದನೆಗೈವಾಗ್ಗೆ, ತನ್ನ ಕೆರಹಿನ ಧ್ಯಾನವಲ್ಲದೆ–ನನ್ನ ನಾಲ್ಕು ದುಡ್ಡಿನ ಎಕ್ಕಡವನ್ನು ಹೊರಗೆ ಬಿಟ್ಟಿದೆ ಯಾರು ತೆಗೆದುಕೊಂಡು ಹೋದಾರೋ ಎಂದು ತನ್ನ ಕೆರಹಿನ ಮೇಲಣ ಧ್ಯಾನವಲ್ಲದೆ, ದೇವರ ಧ್ಯಾನವಿಲ್ಲ–ಏಕಾಗ್ರಚಿತ್ತದಿಂದೆಚ್ಚತ್ತು ಲಿಂಗಪೂಜೆಯ ಮಾಡಬೇಕೆಂಬಂಥ ಲಿಂಗಧ್ಯಾನ ಲಿಂಗಸ್ಮರಣೆ ಉಂಟಾಗಿಲ್ಲವು. ಧನವನಿರಿಸದಿರಾ–ದ್ರವ್ಯವನ್ನು ಗಳಿಸಿ ಗುಡ್ಡಿ ಹಾಕದಿರಾ, ಇರಿಸಿದಡೆ–ದ್ರವ್ಯವನು ಗಳಿಸಿ ಗಳಿಸಿ ಗುಡ್ಡಿ ಹಾಕಿದರೆ, ಭವ–ಬ್ರಹ್ಮಸೃಷ್ಟಿಯೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಬರುವಂಥ ಉತ್ಪತ್ಯವು, ಬಪ್ಪುದು–ಬರುವಂಥದು, ತಪ್ಪದು–ವಾರಿಯಾಗದು, ಕೂಡಲಸಂಗನಶರಣರಿಗೆ–ಜಂಗಮಮೂರ್ತಿಗಳಿಗೆ, ಧನವ ಸವೆಸಲೇಬೇಕು–ಅರ್ಥ [೧]ಪ್ರಾಣವು ಇದ್ದಾಗಲೆ[೧] ಉಂಟಾಗಿರುವಾಗಲೆ, ಸವೆಸಲೇಬೇಕು–ಸಮರ್ಪಣೆಯ ಮಾಡಲೇಬೇಕು.

........................

೧–೧ ಇದ್ದಾಗಲೇ (ಗ).

---

೨೦೩

**ಉಂಡುದು ಬಂದೀತೆಂಬ ಸಂದೇಹಿಮಾನವ ನೀ ಕೇಳಾ: ಉಂಡುದೇನಾಯಿತೆಂಬುದ ನಿನ್ನ ನೀ ತಿಳಿದುನೋಡಾ! ಉಂಡುದಾಗಳೇ ಅಪ್ಯಾಯನವಾಯಿತ್ತು. ಆ ಉಂಡುದ ಉಣಬಂದ ಹಂದಿಬಾಳುವೆಯವರ ಕಂಡು ಆನು ಮಱುಗುವೆನಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಉಂಡುದು ಬಂದೀತೆಂಬ–ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಒಂಟಿಗಾರವಿರಕ್ತರು ಶಿವಾನುಭಾವಿಗಳು ಪೇಟೆ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ಬಂದು ಚೌಕಿಮಠಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನ್ನು ಮಾಡುತಿರ್ದಲ್ಲಿ ಎಲ್ಲಾ ಭಕ್ತಮಾಹೇಶ್ವರರು ಬಂದು ಭಕ್ತಿ ಭಿನ್ನಹವನ್ನು ಮಾಡುವರು. ಅಲ್ಲೊಬ್ಬ ಉಪಾಧಿಕನಿರುವನು, ಎಲೋ [೧]ತಮ್ಮಾ[೧] ನೀನೊಂದು ಭಕ್ತಿಬಿನ್ನಹವ ಮಾಡೆಂದು ಹೇಳುವರು. ಹೇಳಿದಲ್ಲಿ ಇವರಿಗೆ ಮಾಡಿದರೇನು ಬಂದೀತು? ಇವರಿಗೆ ನೀಡಿದರೇನು ಬಂದೀತು? ನಾನುಂಡರೆ ಬಂದೀತು. ನನ್ನ ಹೆಂಡರು ಮಕ್ಕಳು ಉಂಡರೆ ಬಂದೀತು. ನನ್ನ ನಂಟರು ನಲ್ಲರು ಬಂಧುಬಳಗ ಉಂಡರೆ ಬಂದೀತೆಂಬ, ಸಂದೇಹಿಮಾನವ ನೀ ಕೇಳಾ–ಮನಸ್ಸಂಕಲ್ಪವನುಳ್ಳ ಉಪಾದಿಭಕ್ತನೆಂಬ ಮನುಷ್ಯನೆ ನೀನಾಲಿಸಾ. ಉಂಡುದು–ಭಕ್ತಿಬಾಹ್ಯನಾಗಿ ಅನುಭವಿಸಿದಂಥ ಅನ್ನೋದಕಾದಿಗಳು, ಏನಾಯಿತೆಂಬುದ–ಏನಾಗಿ ಹೋಯಿತ್ತೆಂಬಂಥದನ್ನು ನಿನ್ನ ನೀ ತಿಳಿದು ನೋಡಾ–ನಿನ್ನ ಜ್ಞಾನದಿಂದ ವಿಚಾರಿಸಿ ನೋಡಾ, ಉಂಡುದು–ನೀನು ಭಕ್ತಿಬಾಹ್ಯನಾಗಿ ಅನುಭವಿಸಿದಂಥ ಅನ್ನೋದಕಾದಿಗಳು, ಆಗಳೇ–ಆ ಕ್ಷಣಕ್ಕೇ, ಅಪ್ಯಾಯನವಾಯಿತ್ತು–ಅಪವಿತ್ರವಾಯಿತ್ತು. ಉಂಡುದ–ನವಚೋಳರು ನವಬಲ್ಲಾಳರು ಷಡುಚಕ್ರವರ್ತಿಗಳು ಷೋಡಶಮಹಾರಾಯರು ಮೊದಲಾದಂಥವರು ಅನುಭವಿಸಿ ಬಿಟ್ಟುಹೋದಂಥ [೨]ಎಂಜಲಾದ[೨] ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ಮಲವನ್ನು, ಉಣಬಂದ–ಅನುಭವಿಸಬೇಕೆಂದು ದೇಹವ ಧರಿಸಿಕೊಂಡು ಐದು ಬಂದ, ಹಂದಿಬಾಳುವೆಯವರ ಕಂಡು–ಗ್ರಾಮಸೂಕರನ ಬಾಳುವೆಗೆ ಸಮಾನವಾದ ಜೀವರುಗಳ ನೋಡಿ, ಆನು ಮಱುಗುವೆನಯ್ಯಾ–ವೃಥಾ ಶಿವತತ್ವಕ್ಕೆ ವಿಲಕ್ಷಣವಾಗಿ ಭವದತ್ತ ತೆರಳಿ ಹೋಗುತ್ತೈದಾರಲಾ ಇವರಿಗೇನು ಗತಿಯೆಂದು ನಾನು ಚಿಂತಿಸುವೆನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

........................

೧–೧ x (ಕ). ೨–೨ x (ಗ).

IV- - - - - - - - - - - - - - - - - - - - - - - - - - - - - - - - - - - - - - - - - - - - -

1–1 ಅಪೇಯವಾಯಿತ್ತು (ತ).

........................

ದೇಹಭಾವವಳಿದು ಬ್ರಹ್ಮದಲ್ಲಿ ಕೂಡದೆ, ಕರಣೇಂದ್ರಿಯಂಗಳಿಂದ ಅನುಭವಿಸಿದ ಸುಖವ ಮರಳಿ ಅನುಭವಿಸೇವೆಂಬವರು ಹಂದಿಯ ಜನ್ಮವೆಂಬುದೀ ವಚನದರ್ಥ.

---

**ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡಗುವಿರಿ: ಆಯುಷ್ಯ ತೀರಿ ಪ್ರಳಯ ಬಂದಡೆ ಅರ್ಥವನುಂಬವರಿಲ್ಲ. ನೆಲನಗಿದು ಮಡುಗದಿರಾ; ನೆಲ ನುಂಗಿದಡುಗುಳುವುದೆ? ಕಣ್ಣಿನಲ್ಲಿ ನೋಡಿ ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ! ನಿನ್ನ ಮಡದಿಗಿರಲೆಂದಡೆ ನಿನ್ನ ಮಡದಿಯ ಕೃತಕ ಬೇಱೆ : ನಿನ್ನ ಒಡಲು ಕೆಡೆಯಲು ಮತ್ತೊಬ್ಬನಲ್ಲಿಗೆ ಅಡಕದೆ ಮಾಣ್ಬಳೆ? ಹೆಱಿರಿಗಿಕ್ಕಿ ಹೆಗ್ಗುಱಿಯಾಗಿ ಕೆಡಬೇಡ ನಮ್ಮ ಕುಡಲಸಂಗನಶರಣರಿಗೆ ಒಡನೆ ಸವೆಸುವುದು.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಆಯುಷ್ಯವುಂಟು-ಸಾಮುದ್ರಿಕೆಶಾಸ್ತ್ರವನು ತಾನಾದರೂ ಓದಿಕೊಂಡಿರುವನು ಅಥವಾ ಬಲ್ಲವರಿಂದಾದರೂ ಕೇಳಿಕೊಂಡಿರುವರು. ನನಗಂತೂ ಎಂಬತ್ತು ತೊಂಬತ್ತು ನೂರುವರುಷ ದಾಯುಷ್ಯ [1]ಪೂರಿತ[1]ವಾಗೈತೆ, ಪ್ರಳಯವಿಲ್ಲೆಂದು-ಅಷ್ಟು ಪರಿಯಂತರ ಎನಗೆ ಮರಣವಿಲ್ಲೆಂದು, ಅರ್ಥವ ಮಡಗುವಿರಿ-ದ್ರವ್ಯವನ್ನು ಗಳಿಸಿಗಳಿಸಿ ಗುಡ್ಡೆ ಹಾಕುವಿರಿ. ಆಯುಷ್ಯ ತೀರಿ-ಅನಾದಿಯಲ್ಲಿ ಸಂಬಂಧಿಸಿಕೊಂಡುಬಂದಂಥ ಆಯುಷ್ಯ ಪ್ರಮಾಣವೆಲ್ಲ ತೀರ್ಕಡೆಯಾಗಿ, ಪ್ರಳಯ ಬಂದಡೆ-ಮಧ್ಯದಲ್ಲಿ ಮರಣ ಬಂದೊದಗಿದರೆ, ಅರ್ಥವನುಂಬುರಿಲ್ಲ ನೀ ಗಳಿಸಿ ಗಳಿಸಿ ಗುಡ್ಡೆಹಾಕಿದಂಥ ದ್ರವ್ಯವನ್ನು ಅನುಭವಿಸುವರಿಲ್ಲವು.

ನೆಲನಗಿದು ಭೂಮಿಯ ತೆಗ್ಗನ್ನು ತೋಡಿ, ಮಡುಗದಿರಾ--ನಿಕ್ಷೇಪವ ಮಾಡದಿರಾ. ನೆಲ ನುಂಗಿದಡುಗುಳುವುದೆ-ನೀ ಭೂಮಿ ತೆಗ್ಗ ತೋಡಿ ಹೂಳಿಬಿಟ್ಟಂಥ ದ್ರವ್ಯವನ್ನು ತೆಗೆದುಕೊಂಬೋದಕ್ಕೆ ಹೋದರೆ ನಿನ್ನ ಕೊಡು ನಿನ್ನ ಮಗಳ ಕೊಡು ನಿನ್ನ ಕಿರಿಬೆರಳು ಕೊಡುಯೆಂದು ಕೇಳುವುದಲ್ಲದೆ ಹಾಂಗೇ ಕೊಟ್ಟತ್ತೇ? ಕೊಡದು. ಕಣ್ಣಿನಲ್ಲಿ ನೋಡಿ-ಮತ್ತು ಹೀಂಗಿದ್ದರೆ ಹೀಂಗಾಗುತ್ತೈತೆಂದು ಘಟ್ಟಬೆಟ್ಟ ತುರಾವಳಿಗೆ ಹೋಗಿ ಉದ್ದಿಮೆ ವ್ಯಾಪಾರವನ್ನು ಮಾಡಿ ಅನೇಕ ದ್ರವ್ಯವನ್ನು ಗಳಿಸಿಕೊಂಡು ಬಂದು ಕಾವಳದ ಮನೆಯಲ್ಲಿ ರಾಶಿಯ ಹೊಯ್ದು [2]ಕಣ್ಣುತುಂಬಿ[2] ನಿರೀಕ್ಷಣೆಯ ಮಾಡಿ, ಮಣ್ಣಿನಲ್ಲಿ ನೆರಹಿ-ಮತ್ತು ಹೀಂಗಿದ್ದರೆ ರಾಜಭಯ ಚೋರಭಯ ಅಗ್ನಿಭಯದಿಂದ ಎಲ್ಲಾದರೂ ನಾಶವಾಗಿ ಹೋದೀತಲಾಯೆಂದು ಟೊಂಕಮಟ್ಟಮ ಎದೆಮಟ್ಟ ಕುತ್ತಿಗೆಮಟ್ಟ ತೆಗ್ಗನ್ನು ತಗದು ಗಚ್ಚಿನಿಂದ ಗಾರಿಯನ್ನು ಮಾಡಿಸಿ ಮೇಲೊಂದು ಕಬ್ಬುನದ ಸಲಾಕೆಯನ್ನು ಅಡ್ಡಹಾಕಿ ಆ ದ್ರವ್ಯವನ್ನು ತಂಬಿಗಿ ತಪೇಲಿ ಕೊಡಪಾನಂಗಳಲ್ಲಿ ತುಂಬಿ ಅದಕ್ಕೊಂದು ಸರಪಳಿಯನ್ನು ತೊಡರಿಸಿ ಆ ಗಾರಿ ಒಳಯಕ್ಕೆ ಇಳಿಯಬಿಟ್ಟು ಮೇಲೆ ಮಣ್ಣು ಮುಚ್ಚಿಬಿಟ್ಟು, ಉಣ್ಣದೆ-ನೀನು ಗಳಿಸಿ ಗಳಿಸಿ ಗುಡ್ಡೆ ಹಾಕಿದಂಥ ದ್ರವ್ಯವನ್ನು ಅನುಭವಿಸದೆ, ಹೋಗದಿರಾ-ವ್ಯರ್ಥಸ್ಯವಾಗಿ ಸತ್ತುಹೋಗದಿರಾ.

ನಿನ್ನ ಮಡದಿಗಿರಲೆಂದಡೆ-ನಾಸತ್ತರೇನಾಯಿತ್ತು ನನ್ನ ಹೆಂಡಿರು ಮಕ್ಕಳು ಇರೋದಿಲ್ಲ? ಎಂದರೆ, ಆ ಮಡದಿಯ ಕೃತಕ ಬೇಱೆ-ನಿನ್ನ ಸ್ತ್ರೀಯಳ ಕಾಪಟ್ಯ ಬೇರೆಯಾಗಿರ್ಪುದು. ನಿನ್ನ ಒಡಲು ಕೆಡೆಯಲು-ನೀ ಸತ್ತು ನಿನ್ನ [3]ಒಡಲು[3] ಭೂಗತವಾಗಲು, ಮತ್ತೊಬ್ಬನಲ್ಲಿಗೆ-ಮತ್ತೊಬ್ಬ ಪಾಣ್ಬಪುರುಷನಲ್ಲಿಗೆ, ಅಡಕದೆ ಮಾಣ್ಬಳೆ?-ಒಯ್ದು ಕೊಡದೆ ಬಿಟ್ಟಾಳೆ? ಬಿಡಳು. ಹೆಱಿರಿಗಿಕ್ಕಿ-[4]ಪರರಾದ[4] ಹೆಂಡಿರುಮಕ್ಕಳಿಗೆ ಮಡಗಿ, ಹೆಗ್ಗುಱಿಯಾಗಿ-ಭವದ ಕುರಿಯಾಗಿ, ಕೆಡಬೇಡ-ಶಿವತತ್ತ್ವವಳಿದ

ಜೀವನಾಗಬೇಡ, ಕೂಡಲಸಂಗನಶರಣರಿಗೆ –ಜಂಗಮಮೂರ್ತಿಗಳಿಗೆ, ಒಡನೆ ಸವೆಸುವುದು–ಅರ್ಥಪ್ರಾಣವಿದ್ದ ಕೂಡಲೇ ಸಮರ್ಪಣೆಯ ಮಾಡೋದು.

........................

೧–೧ ಪೂರ (ಗ). ೨–೨ x (ಕ). ೩–೩ ದೇಹ (ಗ). ೪–೪ ಅನ್ಯವಾದ (ಗ).

IV------------------------------------------------------------------------

ತನು ನಿತ್ಯವೆಂದು ಧನವ ಗಳಿಸಿ ನೆಲದಲ್ಲಿ ಇರಿಸಬಾರದು. ಸತಿಗಿರಿಸಿದರೆ ಪುರುಷರಿಗೀವಳು ಮರಣವಾದರೆ, ಲಿಂಗಜಂಗಮಕ್ಕೆ ಮಾಡೂದು ತಥ್ಯವೆಂಬುದೀ ವಚನದರ್ಥ.

---

೨೦೫

**ತನುಮನಧನವ ಹಿಂದಿಕ್ಕಿಕೊಂಡು ಮಾತಿನ ಬಣಬೆಯ ಒಳಲೊಟ್ಟಿಯ ನುಡಿವರು, ನೀವೆಲ್ಲ ಕೇಳಿರಿ. [1]ತಲೆಯಿಲ್ಲದ[1] ಕೋಲು ಹೊಳ್ಳು ಹಾಱುವುದಲ್ಲದೆ ಗುಱಿಯ ತಾಗಬಲ್ಲುದೆ? ಮಾಯಾಪಾಶ ಹಿಂಗಿ ಮನದ ಗಂಟು ಬಿಡದನ್ನಕ್ಕ ಕೂಡಲಸಂಗಮದೇವ ಎಂತೊಲಿವನಯ್ಯಾ.**

I------------------------------------------------------------------------

ತನುಮನಧನವ ತನುಮನಧನವೆಂಬ ತ್ರಿವಿಧಪದಾರ್ಥಂಗಳನ್ನು, ಹಿಂದಿಕ್ಕಿಕೊಂಡು–ಅಂಡಿನ ಕೆಳಗೆ ಹಾಕಿಕೊಂಡು, ಮಾತಿನ–ಪ್ರಸಂಗದ, ಬಣಬೆಯ–ಒಪ್ಪದ, ಒಳಲೊಟ್ಟಿಯ–ಸಟೆಪ್ರಸಂಗವನು, ನುಡಿವರು–ಸ್ವಾಮಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥವರು, ನೀವೆಲ್ಲ–ಉಪಾಧಿಕರಷ್ಟೂ, ಕೇಳಿರೆ–ಆಲಿಸರೆ, ತಲೆಯಿಲ್ಲದ–ತುದಿಬುಡ ಶುದ್ಧವಾಗಿದ್ದಂಥ ಕೋಲಿನಿಂದ ಗುರಿಯಿಟ್ಟರೆ ಇಟ್ಟ ಗುರಿ ನಟ್ಟುಕೊಂಡಿತ್ತಲ್ಲದೆ ತುದಿ ಬುಡ ಶುದ್ಧವಿಲ್ಲದಂಥ ಕೋಲಿನಿಂದ ಗುರಿಯಿಟ್ಟರೆ, ಹೊಳ್ಳು ಹಾಱುವುದಲ್ಲದೆ–ತಾ ಒತ್ತಟ್ಟಿಗಿಟ್ಟರೆ ಅದು ಒತ್ತಟ್ಟಿಗಣಿದು ಹೋಗುವುದಲ್ಲದೆ, ಗುಱಿಯ ತಾಗಬಲ್ಲುದೆ? ತಾನು ಗುರುತಿಟ್ಟಂಥ ಗುರಿಗೆ ನಟ್ಟುಕೊಂಡಿತ್ತೇ? ನಟ್ಟುಕೊಳ್ಳಲರಿಯದು. ಹಾಂಗೆ, ತಲೆಯಿಲ್ಲದ–ದೇವಭಕ್ತಪದಾರ್ಥವಾದುದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ [೧]ಸಮರಸ[೧] ಜ್ಞಾನವಿಲ್ಲದ, ಕೋಲು–ಉಪಾಧಿಕನು, ಹೊಳ್ಳುಹಾಱುವುದಲ್ಲದೆ–ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಿದರೆ ಕಿಂಚಿನ್ಮಾತ್ರ ಫಲ ಪದಂಗಳನು ಪಡೆದನುಭವಿಸಿ ಭವದಲ್ಲಿ ಹುಟ್ಟಿ ಹುಟ್ಟಿ ಬಂದು ದುಃಖಬಡವನಲ್ಲದೆ, ಗುಱಿಯ ತಾಗಬಲ್ಲುದೆ–ಮಹಾಲಿಂಗದಲ್ಲಿ ಕೂಡುವಂಥ ಕೂಟವನು ದೊರೆಕೊಂಡಿತ್ತೇ? ದೊರಕೊಳ್ಳಲರಿಯದು. ಮಾಯಪಾಶ ಹಿಂಗಿ–ಅವಿದ್ಯಾನೇಣು ತೊಲಗಿ, ಮನದ ಗಂಟು ಬಿಡದನ್ನಕ್ಕ–ಅಂತರಂಗದವ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವು ನಷ್ಟವಾಗಬೇಕು, ಆಗದಿರುವ ಪರಿಯಂತರವು. ಕೂಡಲಸಂಗಮದೇವ–ಪರಶಿವಲಿಂಗವು, ಎಂತೊಲಿವನಯ್ಯಾ–ಹೇಂಗೆ ಕೃಪೆಯಾಗಿ ನಿಜಮೋಕ್ಷವ ಕರುಣಿಸಿ ಕೊಟ್ಟಾನು? ಕರುಣಿಸಿ ಕೊಡನಯ್ಯಾ.

........................

೧–೧ x (ಕ).

III-----------------------------------------------------------------

1–1 ತಲಹಿಲ್ಲದ (ಡ)

ಒಳಲೊಟ್ಟೆಯ ನುಡಿದವರು–ಅಂತರಂಗದಲ್ಲಿ ಜ್ಞಾನಹೀನವಾಗಿ ಬಹಿರಂಗದಲ್ಲಿ ಕ್ರಿಯಾಚಾರಹೀನವಾಗಿ ಪ್ರಸಂಗಿಸುವರೆಂಬುದೀಗ, ಮನಸ್ಸಿಗೆ ಬಾರದ ಹಳಸ ಮಾತನಾಡುವರುಯೆಂಬುದೀಗ, ಅಲಗಿಲ್ಲದಂಬು ಎಂಬುದೀಗ ತಲಹಿಲ್ಲದ ಕೋಲೆಂಬರ್ಥ.[೨]

..........................

೨ ಈ ಟೀಕೆಯಲ್ಲಿ ಅಪೂರ್ಣತೆ ಕಾಣುತ್ತದೆ (ಸಂ).

VI- - - - - - - - - - - - - - - - - - - - - - - - - - - - - - - - - - - - - - - - - - - -

1–1 ತಲಹಿಲ್ಲದ (ತ).

..........................

ತನುಮನಧನಂಗಳ ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯಮಾಡದೆ ಬಜೆಯ ಮಾತನಾಡುವ ಅಜ್ಞಾನಿಗಳಿಗೆ ಪರತತ್ತ್ವವಿಲ್ಲವೆಂಬುದೀ ವಚನದರ್ಥ.

---

೨೦೬

**ತನುಮನಧನವೆಂಬ ಮೂಱು ಕತ್ತಿಯಿವೆ ಸಲೆ ಮೂಗಿನ ಮೇಲೆ ಅಯ್ಯಾ, ಲಿಂಗಜಂಗಮಕ್ಕೆ ಮಾಡೆನೆಂಬವಂಗೆ! ಇದು ಕಾರಣ ಕೂಡಲಸಂಗನಶರಣರಿಗೆ ಅಂಜಲೇಬೇಕು.**

I- - - - - - - - - - - - - - - - - - - - - - - - - - - - - - - - - - - - - - - - - - - -

ತನುಮನಧನವೆಂಬ: ತನು–ತನುಪದಾರ್ಥವು, ಮನ–ಮನಪದಾರ್ಥವು, ಧನ–ಧನಪದಾರ್ಥವು, ಎಂಬ–ಹೀಗೆಂದು ಹೇಳುವ, ಮೂಱುಕತ್ತಿಯಿವೆ–ಇವೇ ಇಮ್ಮುಕೀಚಿದ ಅಲಗಾಗಿರ್ಪವು. ಸಲೆ ಮೂಗಿನ ಮೇಲೆ ಅಯ್ಯಾ–ಸಮರಸಭಾವದಿಂದ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡಿದರೆ ಆಚಾರವನುದ್ಧರಿಸಿ ನಿಜಮೋಕ್ಷವನ್ನು ಕರುಣಿಸಿಕೊಡುವುದಕ್ಕೆ ಇವೇ ಕಾರಣವಾಗಿರ್ಪವು. ಭಿನ್ನವಿಟ್ಟುಕೊಂಡು ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡಿದರೆ ಆಚಾರವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡುವುದಕ್ಕೆ ಇವೇ ಕಾರಣವಾಗಿರ್ಪವು. ಅಯ್ಯಾ–ಎಲೆ ಲಿಂಗವೆ, ಲಿಂಗಜಂಗಮಕ್ಕೆ ಮಾಡೆನೆಂಬವಂಗೆ–ಲಿಂಗಪೂಜೆ ಜಂಗಮದಾಸೋಹವನನುಗ್ಗೈವೆನೆಂದು ಹೇಳುವಾತಂಗೆ, ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗನಶರಣರಿಗೆ ಜಂಗಮಮೂರ್ತಿಗಳಿಗೆ, ಅಂಜಲೇಬೇಕು–ಹೆದರಿಕೊಂಡು ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡಲೇಬೇಕು.

IV- - - - - - - - - - - - - - - - - - - - - - - - - - - - - - - - - - - - - - - - - - - -

ತನುಮನಧನ ನನ್ನದೆಂಬ ಅಹಂಕಾರದಿಂದ ಮೂಗು ಹೋಯಿತ್ತಾಗಿ, ಜಂಗಮಕ್ಕೆ ಅಂಜಿ ಭಕ್ತಿಯ ಮಾಡಬೇಕೆಂಬುದೀ ವಚನದರ್ಥ.

V-------------------------------------------------------------------

ಆಚಾರವೆಂಬ ಪ್ರಾಣದಲ್ಲಿ ಮೂಱು ಕತ್ತಿಯಿವೆ. ಗುರುಶಿವಚರಣವೆಂಬ ತ್ರಿವಿಧ ಶಸ್ತ್ರಂಗಳಿರುತೈದಾವೆಯೆಂಬುದೀಗ ಮೂಗಿನ ಮೇಲೆ ಮೂಱು ಕತ್ತಿಯಿವೆ ಎಂಬುದರ್ಥ.

---

೨೦೭

**ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು: ತನುಮನಧನವ ಗುರುಲಿಂಗಜಂಗಮಕ್ಕೆ ಸವೆಸಲೇಬೇಕು. ಇದು ಕಾರಣ ನಮ್ಮ ಕೂಡಲಸಂಗನ ಶರಣರಿಗಂಜಲೇಬೇಕು.**

I- - - - - - - - - - - - - - - - - - - - - - - - - - - - - - - - - - - - - - - - - - -

ಸರ್ವಭೂತಾತ್ಮನೆಂಬ–ಹಸಿವೆಗೆ ಅನ್ನ ಶಿಶುವಿಗೆ ಪಾಲ್ಬೆಣ್ಣೆ ಬಸವಗೆ ಹುಲ್ಲು ಇರುವೆಗೆ ಸಕ್ಕರೆ ಹಾಕಿಸುತಿದ್ದೇವಿ. ಪಕ್ಷಿಗಳಿಗೆ ಕಾಳು ಚೆಲ್ಲಿಸುತ್ತಿದ್ದೇವಿ. ಅನ್ನಛತ್ರ ಅರವಂಟಿಗೆ ವನಾಂತರಂಗಳ ಹಾಕಿಸುತಿದ್ದೇವಿ. ಹಸಿದುಬಂದೇವೆಂಬ ಶಬ್ದವ ಕಿವಿಯಲ್ಲಿ ಕೇಳೋದಿಲ್ಲ. ಸರ್ವಜೀವದಯಾಚಿತ್ತಕಾರುಣ್ಯರಸ ಭರಿತತ್ವವನ್ನು ಮುಂದುಗೊಂಡು ಸಮಸ್ತ ಪ್ರಾಣಿಗಳ ಮೇಲೆ ಕರುಣವುಳ್ಳವರು ನಾವೆಂದು ಹೇಳಿಕೊಂಬಂಥ, ೧[ಮಾತಿನ ಮಾತಿನಲ್ಲಿ–ನುಡಿದ ನುಡಿಯಲ್ಲಿ],೧ ಹೋಗದು–ತಾ ಮಾಡಿದಂಥ ದೋಷ ಬಿಡುಗಡೆಯಾಗದು. ತನುಮನಧನವ–ತನುಮನಧನವೆಂಬ ತ್ರಿವಿಧಪದಾರ್ಥಂಗಳನು, ಗುರುಲಿಂಗ ಜಂಗಮಕ್ಕೆ–ಜಂಗಮಮೂರ್ತಿಗಳಿಗೆ, ಸವೆಸಲೇಬೇಕು–ಸಮರ್ಪಣೆಯ ಮಾಡಲೇಬೇಕು. ಇದು ಕಾರಣ–ಇದು ನಿಮಿತ್ತಾರ್ಥ, ನಮ್ಮ ಕೂಡಲಸಂಗನ ಶರಣರಿಗೆ–ಜಂಗಮಮೂರ್ತಿಗಳಿಗೆ, ಅಂಜಲೇಬೇಕು–ಹೆದರಿಕೊಂಡು ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡಲೇಬೇಕು.

.........................

೧–೧ ನುಡಿದ ನುಡಿಯಲ್ಲಿ–ಮಾತಿನ ಮಾತಿನಲ್ಲಿ (ಕ,ಗ).

---

೨೦೮

**ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ, ಹಲವು ಪರಿಯಲ್ಲಿ ವಿಭೂತಿಯ ಧರಿಸಿ ಗಣಾಡಂಬರದ ನಡುವೆ ನಲಿನಲಿದಾಡಿ ಉಂಡು, ತಾಂಬೂಲಂಗೊಂಡು ಹೋಹುದಲ್ಲ. ತನುಮನಧನವ ಸಮರ್ಪಿಸದವರ ಕೂಡಲಸಂಗಮದೇವನೆಂತೊಲಿವ?**

I- - - - - - - - - - - - - - - - - - - - - - - - - - - - - - - - - - - - - - - - - - -

ಹಲವು ಪರಿಯಲ್ಲಿ-ನಾನಾಪ್ರಕಾರದಿಂದ, ವಿಭೂತಿಯ ಧರಿಸಿ-ಲಲಾಟ ಮೊದಲಾದ ನಾಲ್ವತ್ತೆಂಟು ಸ್ಥಾನಂಗಳಲ್ಲಿ,[೧] ಚಿದ್ವಿಭೂತಿಯ ಧಾರಣವ ಮಾಡಿ, ಹಲವು ಮಣಿಯ ಕಟ್ಟಿ-ಏಕಮುಖ ರುದ್ರಾಕ್ಷಿ ಮೊದಲಾದ ಹರಾಕ್ಷಿಮಣಿಗಳನು ಕಟ್ಟಿ, ತತ್ತಸ್ಥಾನಕ್ಕೆ ಧಾರಣವ ಮಾಡಿ; ಕುಣಿಕುಣಿದಾಡಿ-ಎಡದ ಹಸ್ತದಿಂದ ಬಲದ ಕಿವಿಯ ಬಲದ ಹಸ್ತದಿಂದ ಎಡದ ಕಿವಿಯ ಹಿಡಿದುಕೊಂಡು ನರ್ತಿಸಿ ನರ್ತಿಸಿ ಘಕಘಕನೆ ನಗಿಸಿ, ಗಣಾಡಂಬರದ ನಡುವೆ-ಇತ್ತಂದಲ್ಲಿ ಮೂರ್ತವ ಮಾಡಿದ್ದ ಭಕ್ತಮಾಹೇಶ್ವರರ ಜವಳಿ ಪಂಙ್ತಿಯ ಮಧ್ಯದಲ್ಲಿ ನಲಿನಲಿದಾಡಿ ಮಜ್ಜನವ ನೀಡಿಸುವುದಕ್ಕೊಂದು ವೇಳೆ ವಿಭೂತಿಯ ಕೊಡುವುದಕ್ಕೊಂದು ವೇಳೆ ಪತ್ರೆಪುಷ್ಪಗಳ ಕೊಡುವುದಕ್ಕೊಂದು ವೇಳೆ ಧೂಪದೀಪವ ಕೊಡುವುದಕ್ಕೊಂದು ವೇಳೆ ಓಂಗೆ ಹಿಂದಕ್ಕೆ ಮುಂದಕ್ಕೆ ತೊನೆತೊನೆದಾಡಿ ಉಂಡು ತಾಂಬೂಲಗೊಂಡು ಎಂಬಲ್ಲಿ, ಒಬ್ಬ ಭಕ್ತನೇನಾದರೂ ಗುರುಚರಮೂರ್ತಿಗಳಿ [೨]ಗೊಂದು[೨] ಭಕ್ತಿಬಿನ್ನಹವನ್ನು ಮಾಡಿ ಆ ಭಕ್ತಿನಿಗೆ ಊಟಕ್ಕೆ ಹೇಳಿ ಮನೆಗೆ ಕರಕೊಂಡು ಬಂದಿದ್ದಲ್ಲಿ, ಸಲ್ಲಿಸಿ ನೀಡಲಿಕ್ಕೆ ಆರೂ ಇಲ್ಲವೆಂದಲ್ಲಿ ನೀವೇಕೆ ಯೋಚನೆಯ ಮಾಡುತಿದ್ದೀರಿ ನಾನ್ಯೆದೇನೆಂದು ಟೊಂಕಕ್ಕೆ ಸೆಲ್ಲೆವ ಸುತ್ತಿಕೊಂಡು ಹೆಚ್ಚು ಹೆಚ್ಚಾಗಿ ನೀಡಿದಲ್ಲಿ ಇಷ್ಟೊಂದು ನಾವು ಸಲಿಸಲಾರೆವು ಎಂದಲ್ಲಿ ನೀವೇಕೆ ಯೋಚನೆಯ ಮಾಡುತ್ತಿದ್ದೀರಿ ಸ್ವಾಮಿ. ನಿಮ್ಮ ಒಕ್ಕಮಿಕ್ಕಪ್ರಸಾದಕ್ಕೆ ನಾನೇ ಐದೇನೆಂದು ಮತ್ತೂಮತ್ತೂ ಹೆಚ್ಚುಹೆಚ್ಚಾಗಿ ಹತ್ತಿಪ್ಪತ್ತು ಹೋಳಿಗೆ ನೀಡಿದಲ್ಲಿ, ನಾವು ಸಲಿಸಲಾರೆವು ಬಾ ಭಕ್ತಾಯೆಂದು ಕರೆದಲ್ಲಿ ಆಗ ಅಡ್ಡಬಿದ್ದು ಬಂದು ಅವರೊಕ್ಕಮಿಕ್ಕಪ್ರಸಾದವನ್ನು ಕಂಠಕ್ಕೆ ಏಕವಾಗುವ ಹಾಂಗೆ ಯಥೇಷ್ಟವಾಗಿ ಅನುಭವಿಸಿ, ತಾಂಬೂಲಂಗೊಂಡು ವೀಳ್ಯವನ್ನು ಮಡಿಚಿಕೊಡುವುದಕ್ಕಾರೂ ಇಲ್ಲವೆಂದಲ್ಲಿ ನೀವೇಕೆ ಯೋಚನೆಯ ಮಾಡುತ್ತಿದ್ದೀರಿ ನಾನ್ಯೆದೇನೆಂದು ಹೆಚ್ಚು ಹೆಚ್ಚಾಗಿ ವೀಳ್ಯವ ಮಡಚಿಕೊಟ್ಟಲ್ಲಿ, ಇಷ್ಟೊಂದು ನಾವು ನೀಡಿಕೊಳಲಾರೆವೆಂದು ನೀವೇಕೆ ಯೋಚನೆಯ ಮಾಡುತಿದ್ದೀರಿ ಸ್ವಾಮಿ ನಾನ್ಯೆದೇನೆಂದು ಮತ್ತೂ ನೂರಾರು ವೀಳ್ಯವನ್ನು ಮಡಿಚಿಕೊಟ್ಟಲ್ಲಿ, ನಾವು ನೀಡಿಕೊಳಲಾರೆವು ಬಾ ಭಕ್ತಾಯೆಂದು ಕರೆದಲ್ಲಿ ಆಗ ಅಡ್ಡ ಬಿದ್ದು ಬಂದು ಅವರ ತಾಂಬೂಲ ಪ್ರಸಾದವನ್ನು ಎರಡೂ ದವಡೆ ತುಂಬಿ ಸೂಸುವ ಹಾಂಗೆ ಒತ್ತಿಕೊಂಡು ಕೈಜಾಡಿಸಿಕೊಂಡು ತನ್ನ ಮನೆಗೆ ತಾ ಹೋಗುವಂಥದು ಅಲ್ಲ. ಅದು ಭಕ್ತಿಯೊಳಗೆ[೩] ಭಕ್ತಿಯೊಳಗಲ್ಲವು. ತನುಮನಧನವ ಸಮರ್ಪಿಸದವರ-ತನುಮನಧನಂಗಳನ್ನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯು ಮಾಡಬೇಕು, ಮಾಡದವರ;ಕೂಡಲಸಂಗಮದೇವ-ಪರಶಿವಲಿಂಗವು, ಎಂತೊಲಿವ?-"ಒಲಿ ಪ್ರಸನ್ನೇ" ಯೆಂದು ಪ್ರಸನ್ನವಾಗಿ ನಿಜಮೋಕ್ಷ ಹೇಂಗೆ ಕರುಣಿಸಿ ಕೊಟ್ಟಾನು? ಕೊಡನಯ್ಯಾ.

.........................

೧+ ವಿಭೂತಿ (ಕ). ೨-೨ಗೆ (ಕ). ೩+ ಅದು (ಕ).

IV- - - - - - - - - - - - - - - - - - - - - - - - - - - - - - - - - - - - - -

ಗುರುಲಿಂಗಜಂಗಮಕ್ಕೆ ತನುಮನಧನವ ಸವೆಯದೆ ಮಾಹೇಶ್ವರರ ಮಧ್ಯದಲ್ಲಿ ವಿಭೂತಿರುದ್ರಾಕ್ಷಿಯ ಕಟ್ಟಿ ಕೊಂಡಾಡಿ ಉಂಡುಹೋಹ ಪರಿಯಲ್ಲಿ ಎಂಬುದೀ ವಚನದರ್ಥ.

---

೨೦೯

**ತನುವ ಕೊಟ್ಟು ಗುರುವನೊಲಿಸಬೇಕು, ಮನವ ಕೊಟ್ಟು ಲಿಂಗವನೊಲಿಸಬೇಕು, ಧನವ ಕೊಟ್ಟು ಜಂಗಮವನೊಲಿಸಬೇಕು. ಈ ತ್ರಿವಿಧವ ಹೊಱಗುಮಾಡಿ, ಹಱೆಯ ಹೊಯಿಸಿ ಕುಱುಹ ಪೂಜಿಸುವರ ಮೆಚ್ಚ ಕೂಡಲಸಂಗಮದೇವ.**

I------------------------------------------------------------------------

ತನುವ ಕೊಟ್ಟು–ಅಂಗದಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗಆಪ್ತಸ್ಥಾನಸದ್ಭಾವವೆಂಬ ಚತುರ್ವಿಧಭಕ್ತಿಯ ಮಾಡುವ ನೆವದಿಂದ ತನು ಪದಾರ್ಥವ ಗುರುವಿಂಗೆ ಸಮರ್ಪಣೆಯ ಮಾಡಿ, ಗುರುವನೊಲಿಸಬೇಕು–ಗುರುಭಕ್ತಿಯನ್ನು ಮಾಡಿ ಗುರುವಿನ ಕರುಣವ ಹಡದುಕೊಳಬೇಕು. ಮನವ ಕೊಟ್ಟು–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಆ ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಮಾಡುವ ನೆವದಿಂದ ಮನಃಪದಾರ್ಥವ ಲಿಂಗಕ್ಕೆ ಸಮರ್ಪಣೆಯ ಮಾಡಿ, ಲಿಂಗವನೊಲಿಸಬೇಕು–ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆದುಕೊಳಬೇಕು. ಧನವ ಕೊಟ್ಟು–ಪ್ರಾಣಜ್ಞಾನದಲ್ಲಿ ಜಂಗಮದ ಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಮಾಡುವ ನೆವದಿಂದ ಧನಪದಾರ್ಥವ ಜಂಗಮಕ್ಕೆ ಸಮರ್ಪಿಸಿ, ಜಂಗಮವನೊಲಿಸಬೇಕು–ಜಂಗಮಭಕ್ತಿಮಾಡಿ ಜಂಗಮದ ಕರುಣವ ಹಡದುಕೊಳಬೇಕು. ಈ ತ್ರಿವಿಧವ –ಈ ತನುಮನಧನವೆಂಬ ತ್ರಿವಿಧಪದಾರ್ಥವನ್ನು, ಹೊಱಗುಮಾಡಿ–ವಂಚಿಸಿಕೊಂಡು, ಹಱೆಯ ಹೊಯಿಸಿ–ಪಂಚಮಹಾವಾದ್ಯಂಗಳ ನುಡಿಸಿ, ಕುಱುಹ ಪೂಜಿಸುವರ –ಸ್ಥಾವರಲಿಂಗಪೂಜೆಯ ಮಾಡುವವರ ಕೂಡಲಸಂಗಮದೇವ–ಪರಶಿವಲಿಂಗವು, ಮೆಚ್ಚ ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿ ಕೊಟ್ಟಾನೆ? ಕರುಣಿಸಿಕೊಡನು.

IV- - - - - - - - - - - - - - - - - - - - - - - - - - - - - - - - - - - - - - - -

ತ್ರಿವಿಧವು ತ್ರಿವಿಧಲಿಂಗಕ್ಕೆ ಸಲ್ಲದೆ ಇಷ್ಟಲಿಂಗದ ಪೂಜೆಯಲ್ಲಿ ಬೊಬ್ಬಾಟವೇಕೆಂಬುದೀ ವಚನದರ್ಥ.

---

೨೧೦

**ಆಡಿದಡೇನು ಹಾಡಿದಡೇನು? ಓದಿದಡೇನು ತ್ರಿವಿಧದಾಸೋಹವಿಲ್ಲದನ್ನಕ್ಕ? ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ? ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.**

I- - - - - - - - - - - - - - - - - - - - - - - - - - - - - - - - - - - - - - - -

ಆಡಿದಡೇನು–ಹಸ್ತದಲ್ಲಿ ಲಿಂಗವ ಪಿಡಿದುಕೊಂಡು ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆದಾಡಿದರೇನು?, ಹಾಡಿದಡೇನು–ಕಂದ ವೃತ್ತ ಗದ್ಯ ಪದ್ಯ ಪ್ರಬಂಧಗಳಿಂದ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿದರೇನು?, ಓದಿದಡೇನು–ಸಕಲವೇದಶಾಸ್ತ್ರಾಗಮ ಪುರಾಣಂಗಳ ಪಠಿಸಿದರೇನು?, ತ್ರಿವಿಧದಾಸೋಹವಿಲ್ಲದನ್ನಕ್ಕ?–ಗುರುಭಕ್ತಿ ಲಿಂಗಪೂಜೆ

ಜಂಗಮದಾಸೋಹ ಉಂಟಾಗಿರಬೇಕು, ಇಲ್ಲದಿರುವ ಪರಿಯಂತರವು; ನವಿಲು–ಚಾತಕಪಕ್ಷಿಯು, ಆಡದೆ–ಮುಂಗಾರಕಾಲದಲ್ಲಿ ಗುಡುಗುಧ್ವನಿಯನ್ನು ಕೇಳುತ್ತ ಕಾರಮೇಘದ ತೋರವನಿಯನ್ನು ಸೇವಿಸುತ್ತ ಪಕ್ಕವನ್ನು ಪಸರಿಸಿಕೊಂಡು ನರ್ತಿಸೋದಿಲ್ಲವೆ? ನರ್ತಿಸುತ್ತಿಹುದು. ಆದರೇನಾಯಿತ್ತು? ಗುರುಲಿಂಗಜಂಗಮದ ಭಕ್ತಿದಾಸೋಹವಲ್ಲದವನು ಹಸ್ತದಲ್ಲಿ ಲಿಂಗವ ಹಿಡಿದುಕೊಂಡು ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆದಾಡಿದರೆಯೂ ಆ ನವಿಲು ಆಡಿದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲವು. ಹಾಡದೆ ತಂತಿ?– ಕಿನ್ನರವೇಣಿ ಕಿಂಪುರುಷವೇಣಿ ರುದ್ರವೇಣಿ ರಾವಣಹಸ್ತ ರಬಾಬು ಮೊದಲಾದುದಕ್ಕೆ ಪಂಚಲೋಹದ ತಂತಿಗಳಾಗಲಿ ⁽೧⁾ಪಟ್ಟೆ⁽೧⁾ ನೂಲುದಾರವಾಗಲಿ ಬಂಧಿಸಿ ನಖಾಗ್ರದಿಂದೊತ್ತಿ ನಡುಸಿದಲ್ಲಿ ಪಲಬಗೆಯ ಶಬ್ದ ಹುಟ್ಟೋದಿಲ್ಲವೆ? ಹುಟ್ಟುತ್ತಿಹುದು,. ಆದರೇನಾಯಿತ್ತು? ಗುರುಲಿಂಗಜಂಗಮ ಭಕ್ತಿದಾಸೋಹವಿಲ್ಲದವರು ಮೂವತ್ತೆರಡು ರಾಗ ಅರುವತ್ತುನಾಲ್ಕು ಮಿಶ್ರಯುಕ್ತವಾದ ಸಮಸ್ತ ಸ್ವರವಚನಂಗಳನು ಹಾಡಿದರೆ ಆ ತಂತಿ ಹಾಡಿದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಿಲ್ಲವು. ಓದದೆ ಗಿಳಿಯು?–ಶುಕನೆಂಬಂಥದು ಹರಹರ ಶಿವಶಿವಾ ಕೊಟ್ಟೂರಯ್ಯಾ ಕೋಲಶಾಂತಯ್ಯಾ ರಾಮಪ್ಪೊಡೆಯರೆ ಎಂದು ಪಠಿಸೋದಿಲ್ಲವೆ? ಪಠಿಸುತ್ತಿಹುದು. ಆದರೇನಾಯಿತ್ತು? ಗುರುಲಿಂಗಜಂಗಮ ಭಕ್ತಿದಾಸೋಹವಿಲ್ಲದವರು ಸಕಲವೇದ ಶಾಸ್ತ್ರಾಗಮಪುರಾಣಂಗಳ ಓದಿದರೆಯೂ ಆ ಗಿಳಿ ಓದಿದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲವು. ಭಕ್ತಿಯಿಲ್ಲದವರ – ಗುರುಲಿಂಗಜಂಗಮ ಭಕ್ತಿದಾಸೋಹವುಂಟಾಗಿಲ್ಲದವರ, ಕೂಡಲಸಂಗಮದೇವ–ಪರಶಿವಲಿಂಗವು, ಒಲ್ಲ–ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು.

..........................

೧–೧ ಪಟ್ಟ (ಗ).

IV- - - - - - - - - - - - - - - - - - - - - - - - - - - - - - - - - - - - - - - - - - -

ತ್ರಿವಿಧಲಿಂಗದಲ್ಲಿ ಭಕ್ತಿಯಿಲ್ಲದೆ, ಆಡಿ ಹಾಡಿ ಓದಿದವರು ಗಿಳಿನವಿಲುತಂತಿಯಂತೆಯೆಂಬುದೀ ವಚನದರ್ಥ.

---

೨೧೧

**ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತದೆ! ವೇದ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತದೆ! ಶ್ರುತಿ ಘನವೆಂಬೆನೆ? ಮುಂದಿಟ್ಟಱಸುತ್ತದೆ! ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವನ!**

I- - - - - - - - - - - - - - - - - - - - - - - - - - - - - - - - - - - - - - - - - - -

ಶಾಸ್ತ್ರ–ಅನಂತಕ ಮೊದಲಾದ ಹದಿನಾರು ಧರ್ಮಶಾಸ್ತ್ರಂಗಳನು, ಘನವೆಂಬೆನೆ?–ಬಹುಶ್ರೇಷ್ಠವೆಂದು ಹೇಳುವೆನೆ? ಕರ್ಮವ ಭಜಿಸುತ್ತದೆ–ಪುಣ್ಯವ ಮಾಡಿದವರಿಗೆ ಪಾಪವ ಮಾಡಬೇಕು, ಪಾಪವ ಮಾಡಿದವರಿಗೆ ಪುಣ್ಯವ ಮಾಡಬೇಕು, ಧರ್ಮವ ಮಾಡಿದವರಿಗೆ ಕರ್ಮವ ಮಾಡಬೇಕು, ದುಃಖವ ಮಾಡಿದವರಿಗೆ ಸುಖವ ಮಾಡಬೇಕೆಂದು ಹೀಂಗೆ ಸುಖದುಃಖ ಪುಣ್ಯಪಾಪ

[1]ಧರ್ಮಕರ್ಮ[1] ಬಂಧಮೋಕ್ಷ ದ್ವಂದ್ವ ಕರ್ಮಂಗಳನೇನುಂಟು ಮಾಡಿ ಹೇಳುವುದಲ್ಲದೆ ಅಲ್ಲೇನಾದರೂ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೆಂದು ಹೇಳುತೈತೆ? ಇಲ್ಲವು. ವೇದ ಘನವೆಂಬೆನೆ?–ನಾಲ್ಕು ವೇದಂಗಳು ಬಹು ಶ್ರೇಷ್ಠವೆಂದು ಹೇಳುವೆನೆ? ಪ್ರಾಣಿವಧೆಯ ಹೇಳುತ್ತದೆ–ಕೃತಯುಗದಲ್ಲಿ ಕುಂಜರಯಾಗ ತ್ರೇತಾಯುಗದಲ್ಲಿ ಮಹಿಷಿಯಾಗ ದ್ವಾಪರದಲ್ಲಿ ಅಶ್ವಯಾಗ ಕಲಿಯುಗದಲ್ಲಿ ಅಜಪೆಯಾಗವೆಂದು ಈ ನಾಲ್ಕು ಯುಗದಲ್ಲಿ ಹುಟ್ಟಿಹುಟ್ಟಿ ಬಂದು ನಾಲ್ಕು ದಿನಸಿನ ಪ್ರಾಣಿಗಳ ಕೊಂದು ತಿನ್ನೆಂದು ಹೇಳುವುದಲ್ಲದೆ ಅಲ್ಲೇನಾದರೂ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೆಂದು ಹೇಳುತೈತೇ? ಇಲ್ಲವು.

ಶ್ರುತಿ ಘನವೆಂಬೆನೆ?–ಶ್ರೀರುದ್ರೋಪನಿಷತ್ತು, ಮೊದಲಾದ ಮೂವತ್ತೆರಡುಪನಿಷದ್ವಾಕ್ಯಂಗಳೇ ಬಹು ಶ್ರೇಷ್ಠವೆಂದು ಹೇಳುವೆನೆ? ಮುಂದಿಟ್ಟಜಿಸುತ್ತದೆ–ಸಾಕಾರದೈವವಲ್ಲ ನಿರಾಕಾರದೈವವೆಂದು ಹೇಳುತ್ತಿಹುದು. ಅದಲ್ಲದೆ "ಅತ್ಯತಿಷ್ಠದ್ದಶಾಂಗುಲಂ" ಎಂದು ಅರಿದೆನೆಂಬವರರಿವಿಂಗೆ ಹತ್ತಂಗುಲಪ್ರಮಾಣ ಮೀರಿ ತೋರುತ್ತದೆಯೆಂದು ಭಿನ್ನವಿಟ್ಟುಕೊಂಡು ಹೇಳುವುದಲ್ಲದೆ ಅಲ್ಲೇನಾದರೂ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನು ಹಡೆಯಿರೆಂದು ಹೇಳುತೈತೇ? ಇಲ್ಲವು. ಅಲ್ಲೆಲ್ಲಿಯೂ–ಹಿಂದೆ ಹೇಳಿದ ಸಕಲವೇದಶಾಸ್ತ್ರಾಗಮ ಪುರಾಣಂಗಳಲ್ಲಿಯೂ, ನೀವಿಲ್ಲದ ಕಾರಣ–ನಿಮ್ಮ ಕೃಪೆಯುಂಟಾಗಿಲ್ಲದ ನಿಮಿತ್ತ, ತ್ರಿವಿಧದಾಸೋಹದಲ್ಲಲ್ಲದೆ–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹದಲ್ಲಲ್ಲದೆ, ಕೂಡಲಸಂಗಮದೇವನ–ಪರಶಿವಲಿಂಗವನು, ಕಾಣಬಾರದು–ಸ್ವ ಸ್ವರೂಪವನರಿಯಬಾರದು.

..........................

೧–೧ x (ಕ).

IV- - - - - - - - - - - - - - - - - - - - - - - - - - - - - - - - - - - - - - - - - - -

ತ್ರಿವಿಧಲಿಂಗಕ್ಕೆ ತ್ರಿವಿಧವ ಕೊಡದೆ ಕರ್ಮ ಪ್ರಾಣಿವಧೆ ದೂರವೆಂದಜಿಸುವ ಶಾಸ್ತ್ರ ವೇದ ಉಪನಿಷತ್ತುಗಳಿಂದ ಕಾರಣವಿಲ್ಲವೆಂಬುದೀ ವಚನದರ್ಥ.

---

೨೧೨

**ವೇದದಂತುಟಲ್ಲ, ಶಾಸ್ತ್ರದಂತುಟಲ್ಲ, ಗೀತಮಾತಿನಂತುಟಲ್ಲ ಕೇಳಯ್ಯಾ. ಮಾತಿನ ಮಾತಿನ ಕವಳುಕೋಲ ಶ್ರವದಲ್ಲಿ ಸತ್ತವರೊಳರೆ ಅಯ್ಯಾ? ದಿಟದಲಗಿನ ಕಾಳಗ [1][ಇ][1]ತ್ತದಲ್ಲಿದ್ದುದೇ ಕೂಡಲಸಂಗನಶರಣರು ಬಂದಲ್ಲಿ!**

I- - - - - - - - - - - - - - - - - - - - - - - - - - - - - - - - - - - - - - - - - - -

1–1 ಯಿ (ಕ,ಗ)

..........................

ವೇದದಂತುಟಲ್ಲ–ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದು ವೇದದಂತುಟಲ್ಲ. ನಾಲ್ಕು ವೇದಂಗಳು ಓದಿ ಹಾಡಿ ಪರಿಣಮಿಸಿದ ಹಾಂಗಲ್ಲವು. ಶಾಸ್ತ್ರದಂತುಟಲ್ಲ–

ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದು ಶಾಸ್ತ್ರದಂತುಟಲ್ಲವು. ಹದಿನಾರು ಧರ್ಮಶಾಸ್ತ್ರಂಗಳನು ಓದಿ ಹಾಡಿ ಪರಿಣಾಮಿಸಿದ ಹಾಂಗಲ್ಲವು. ಗೀತದಂತುಟಲ್ಲ–ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದು ಗೀತದಂತುಟಲ್ಲವು ಮೂವತ್ತೇರಡು ರಾಗ ಅರವತ್ತುನಾಲ್ಕು ಮಿಶ್ರಯುಕ್ತವಾದ ಸಮಸ್ತ ಸ್ವರವಚನಗಳನ್ನು ಓದಿ ಹಾಡಿ ಪರಿಣಾಮಿಸಿದ ಹಾಂಗಲ್ಲವೂ. ಮಾತಿನಂತುಟಲ್ಲ–ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದು ಮಾತಿನಂತಲ್ಲ, ಮಾತಿಗೆ ಮಾತನ್ನು ಕಲಿತುಕೊಂಡು ರಾಜಸಭೆ ದೇವಸಭೆಯಲ್ಲಿ ಕುಳಿತುಕೊಂಡು ನ್ಯಾಯನಿಗದಿಯನ್ನು ತಿದ್ದಿ ತೀರ್ಚಿ ಒಪ್ಪವಿಟ್ಟು ಹೇಳಿದ ಹಾಂಗಲ್ಲವು. ಕೇಳಯ್ಯಾ–ಆಲಿಸಯ್ಯಾ.

ಮಾತಿನ ಮಾತಿನ–ನುಡಿದ ನುಡಿಯ, ಕವಳುಕೋಲ ಶ್ರವದಲ್ಲಿ ಸತ್ತವರೊಳರೆ–ದಾಂ [೧]ಡ[೧] ಕೋಲ ತುದಿಗೆ ಮಸಿ ಪೊಟ್ಟಣವನ್ನು ಕಟ್ಟಿ ಎದೆಗೆ ತಿವಿತೀನಿ ಬದಿಗೆ ತಿವಿತೀನಿ ಹಣೆಗೆ ತಿವಿತೀನಿ ಫಣೆಗೆ ತಿವಿತೀನಿಯೆಂದು ತಟ್ಯಾಡುತ್ತ ತಟ್ಯಾಡುತ್ತ, ಸತ್ತವರೊಳರೆ–ಮೃತವಾದಂಥವರಿದ್ದಾರೆ? ಇಲ್ಲವು, ಅಯ್ಯಾ–ಎಲೆ ಲಿಂಗವೆ, ಕೂಡಲಸಂಗನಶರಣರು ಬಂದಲ್ಲಿ ದಿಟದಲಗಿನ ಕಾಳಗ ಇತ್ತದಲ್ಲಿದ್ದುದೇ–ಇತ್ತಲಿಂದೊಬ್ಬ ಐಗಾರವಿದ್ದ ತಾವಕ್ಕೆ ಅತ್ತಲಿಂದೊಬ್ಬ ಐಗಾರ ಬಂದು ಪಟ್ಟೆಯನ್ನು ಬರಕೊಂಡು ಪಂಥವನು ಹಾಕಿಕೊಂಡು ಐಗೇಣು ಆರುಗೇಣಿನ ಕತ್ತಿಯನ್ನು ಹಿಡಿದುಕೊಂಡು ಯುದ್ಧವ ಮಾಡುವಾಗ ಆವಾವಸ್ಥಾನಕ್ಕೆ ಇರಿದರೆ ಸತ್ತುಹೋಗುವನಲ್ಲದೆ ದಾಂ [೨]ಡ[೨] ಕೋಲಿನ ಸಾಧಕತ್ವದಲ್ಲಿ ಸತ್ತವರುಂಟೆ? ಇಲ್ಲವೆಂಬ ದೃಷ್ಟೋಪಮಾನದ ಹಾಂಗೆ,

● ಮಾತಿನ ಮಾತಿನ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡ ಪ್ರಸಂಗದಲ್ಲಿ, ಕವಳುಕೋಲ–ಉಪಾಧಿಕನು, ಶ್ರವದಲ್ಲಿ–ಭಿನ್ನಭಕ್ತಿ ಅಭ್ಯಾಸದಲ್ಲಿ, ಸತ್ತವರೊಳರೆ–ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಹೋದಂಥವರು ಇದ್ದಾರೆ? ಇಲ್ಲವು, ಅಯ್ಯಾ–ಎಲೆ ಲಿಂಗವೆ. ಕೂಡಲಸಂಗನಶರಣರು ಬಂದಲ್ಲಿ ದಿಟದಲಗಿನ ಕಾಳಗ [೩][ಇ][೩] ತ್ತ ದಲ್ಲಿದ್ದುದೆ–ಭಕ್ತನೆಂಬ ವೀರಮಾಸಾಳು ಇದ್ದೆಡೆಗೆ ಜಂಗಮ [೪]ವೆಂಬ[೪] ಮಹಾವೀರ ಮಾಸಾಳು ಬಂದು ಎಲೆ ಭಕ್ತಾ ತನುವ ಕೊಡು ಮನವ ಕೊಡು ಧನವ ಕೊಡು ಎಂದು ಕೇಳಿದಲ್ಲಿ [೫]ನಿರ್ವಂಚಕಸದ್ಭಕ್ತರಾದವರು ದೇವಭಕ್ತ ಪದಾರ್ಥವಾದುದು[೫] ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ ಸಮರಸ ಜ್ಞಾನವೆಂಬಾಯುಧವನ್ನು ಪಿಡಿದುಕೊಂಡು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡುಹೋದಂಥರಿದ್ದಾರಲ್ಲದೆ ಸುಮ್ಮನೆ ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡಹೋದಂಥವರುಂಟೇ? ಇಲ್ಲವು.

---

೧–೧ ಟು (ಗ). ೨–೨ ಡು (ಕ), ಟು (ಗ). ೩–೩ ವಿ (ಕ), ಯಿ (ಗ). ೪–೪ x(ಕ). ೫–೫ ನಿರ್ವಂಚನೆಯಿಂದ ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು (ಗ).

III- - - - - - - - - - - - - - - - - - - - - - - - - - - - - - - - - - - - - - - - - -

ಕವಳುಕೋಲ–ದಾಂಡುಕೋಲಿನ, ಶ್ರವದಲ್ಲಿ–ಸಾಧಕದಲ್ಲಿ.

---

೨೧೩

**ಮಾತಿನ ಮಾತಿನಲ್ಲಪ್ಪುದೇ ಭಕ್ತಿ? ಮಾಡಿ ತನು ಸವೆಯದನ್ನಕ್ಕ ಅಪ್ಪುದೇ ಭಕ್ತಿ? ಮನ ಸವೆಯದನ್ನಕ್ಕ ಅಪ್ಪುದೇ ಭಕ್ತಿ? ಧನ ಸವೆಯದನ್ನಕ್ಕ ಅಪ್ಪುದೇ ಭಕ್ತಿ? ಕೂಡಲಸಂಗಮದೇವ ಎಲುದೋಱಿ ಸರಸವನಾಡುವನು: ಸೈರಿಸದನ್ನಕ್ಕ ಅಪ್ಪುದೇ ಭಕ್ತಿ?**

I- - - - - - - - - - - - - - - - - - - - - - - - - - - - - - - - - - - - - - - - - -

ಮಾತಿನ ಮಾತಿನಲ್ಲಿ–ಸುಮ್ಮನೆ ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ನುಡಿದ ನುಡಿಯಲ್ಲಿ, ಅಪ್ಪುದೇ ಭಕ್ತಿ?–ಶಿವಾದ್ವೈತಭಕ್ತಿಯೆಂಬಂಥದು ಅಳವಟ್ಟಿತ್ತೇ? ಅಳವಡದು. ಮಾಡಿ ತನು ಸವೆಯದನ್ನಕ್ಕ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತಸ್ಥಾನಸದ್ಭಾವವೆಂಬ ಚತುರ್ವಿಧಭಕ್ತಿಯ ಮಾಡುವ ನೆವದಿಂದ ತನುಪದಾರ್ಥವ ಗುರುವಿಂಗೆ ಸಮರ್ಪಣೆಯ ಮಾಡಬೇಕು, ಮಾಡದಿರುವ ಪರಿಯಂತರವು; ಅಪ್ಪುದೇ ಭಕ್ತಿ?–ಗುರುಭಕ್ತಿಯೆಂಬಂಥದು ಅಳವಟ್ಟಿತ್ತೇ? ಅಳವಡದು. ಮನ ಸವೆಯದನ್ನಕ್ಕ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಮಾಡುವ ನೆವದಿಂದ ಮನಪದಾರ್ಥವು ಲಿಂಗಕ್ಕೆ ಸಮರ್ಪಣೆಯಾಗಬೇಕು.ಆಗದಿರುವ ಪರಿಯಂತರವು;ಅಪ್ಪುದೇ ಭಕ್ತಿ? ಲಿಂಗಭಕ್ತಿಯೆಂಬಂಥದು ಅಳವಟ್ಟಿತ್ತೇ? ಅಳವಡದು. ಧನ ಸವೆಯದನ್ನಕ್ಕ–ಪ್ರಾಣಜ್ಞಾನದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವ ನೆವದಿಂದ ಧನಪದಾರ್ಥವು ಜಂಗಮಕ್ಕೆ ಸಮರ್ಪಣೆಯಾಗಬೇಕು, ಆಗದಿರುವ ಪರಿಯಂತರವು;ಅಪ್ಪುದೇ ಭಕ್ತಿ?–ಜಂಗಮಭಕ್ತಿಯೆಂಬಂಥದು ಅಳವಟ್ಟಿತ್ತೇ? ಅಳವಡದು.

ಕೂಡಲಸಂಗಮದೇವ–ಜಂಗಮಮೂರ್ತಿಗಳು, ಎಲುದೋಱಿ ಸರಸವನಾಡುವನು–ಅಸ್ಥಿಗಳು ಬೆಳ್ಳಗೆ ಕಾಣಬರುವ ಹಾಂಗೆ ಕತ್ತಿ ಕಠಾರಿ ಚೂರಿ ಚಾಕು ಮೊದಲಾದವುಗಳಿಂದೆ ಕಡಿದಿರಿದು ನೋಡಿದರೂ, ಸೈರಿಸದನ್ನಕ್ಕ–ಅದನ್ನು ತರಹರಿಸಿಕೊಂಡು ಗುರುಭಕ್ತಿಯನ್ನು ಮಾಡಬೇಕು, ಮಾಡದಿರುವ ಪರಿಯಂತರವು;ಅಪ್ಪುದೇ ಭಕ್ತಿ? – ಗುರುಭಕ್ತಿಯೆಂಬಂಥದು ಅಳವಟ್ಟಿತ್ತೇ? ಅಳವಡದು. ಕೂಡಲಸಂಗಮದೇವ–ಪರಶಿವಲಿಂಗವು, ಎಲುದೋಱಿ ಸರಸವನಾಡುವನು–ಸಪ್ತಧಾತುಗಳೆಲ್ಲ ಸಣ್ಣಿಸಿ ಗಿಟಿಗಿಟಿ ಜಂತ್ರವಾಗುವ ಹಾಂಗೆ ಮಾಡಿನೋಡುವನ್ನು, ಸೈರಿಸದನ್ನಕ್ಕ–ಅದನ್ನು ತರಹರಿಸಿಕೊಂಡು ಲಿಂಗ ಪೂಜೆಯ ಮಾಡಬೇಕು, ಮಾಡದಿರುವ ಪರಿಯಂತರ; ಅಪ್ಪುದೇ ಭಕ್ತಿ? – ಲಿಂಗಭಕ್ತಿಯೆಂಬಂಥದು ಅಳವಟ್ಟಿತ್ತೇ? ಅಳವಡದು. ಕೂಡಲಸಂಗಮದೇವ–ಪರಶಿವಲಿಂಗವು, ಎಲುದೋಱಿ ಸರಸವನಾಡುವನು–ಆಧಿವ್ಯಾಧಿವಿಪತ್ತುಗಳನುಂಟುಮಾಡಿ ನೋಡುವನು.

ಸೈರಿಸದನ್ನಕ್ಕ–ಅದನ್ನು ತರಹರಿಸಿಕೊಂಡು ಜಂಗಮಭಕ್ತಿಯನ್ನು ಮಾಡಬೇಕು, ಮಾಡದಿರುವ ಪರಿಯಂತರವು;ಅಪ್ಪುದೇ ಭಕ್ತಿ? –ಜಂಗಮಭಕ್ತಿಯೆಂಬಂಥದು ಅಳವಟ್ಟಿತ್ತೇ ? ಅಳವಡದು.

IV-----------------------------------------------------------------------------

ತನುವಳಿದರೂ ಭಕ್ತಿಯ ಬಿಡದೆ ಮಾಡೂದೆ ಭಕ್ತಿ. ಮಾತಿನಲ್ಲಿ ಭಕ್ತಿಯಾಗದೆಂಬುದೀ ವಚನದರ್ಥ.

---

೨೧೪

**ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟಬಾರದಯ್ಯಾ. ನುಡಿದಂತೆ ನಡೆಯಲುಬಾರದಯ್ಯಾ; ಕೂಡಲಸಂಗನಶರಣರ ಭಕ್ತಿ, ಬಾಳ ಬಾಯಿಧಾರೆ!**

I- - - - - - - - - - - - - - - - - - - - - - - - - - - - - - - - - - - - - - - - -

ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟಬಾರದಯ್ಯಾ–ಹಾವಸೆಯಿಲ್ಲದಂಥ ಪಾಷಾಣ ತುಳಿದರೆ ಆಚೆಗೆ ದಾಂಟಿಹೋಗಿ ಒಂದು ಗೊತ್ತಿಗೆ ಮುಟ್ಟಿಯಾನಲ್ಲದೆ ಹಾವಸೆಯಿದ್ದಂಥ ಪಾಷಾಣವ ತುಳಿದರೆ ಮಧ್ಯದಲ್ಲಿ ಕಾಲುಜಾರಿ ಕಡಕೊಂಡುಬಿದ್ದು ಕೈಕಾಲು ಮುರಕೊಂಡು ದು:ಖಬಡುವನಲ್ಲದೆ ಆಚೆಗೆ ದಾಂಟಿಹೋಗಿ ಒಂದು ಗೊತ್ತಿಗೆ ಮುಟ್ಟಿಯಾನೆ? ಮುಟ್ಟಲರಿಯನೆಂಬ ದೃಷ್ಟೋಪಮಾನದ ಹಾಂಗೆ,

- ಹಾವಸೆಗಲ್ಲ ಮೆಟ್ಟಿ–ಮಲತ್ರಯಂಗಳ ಹಿಡಿದು ಮಲಪಾಶಕ್ಕೆ ತಾ ಒಳಗಾಗಿ, ಹರಿದು–ಭಿನ್ನವಿಟ್ಟುಕೊಂಡು ಭಕ್ತಿಯಮಾಡಿ ಗುರುಲಿಂಗ ಜಂಗಮಕ್ಕೆ ನೀಡಿ ಮಾಡಿ, ಗೊತ್ತಮುಟ್ಟಬಾರದಯ್ಯಾ–ಪರಶಿವಲಿಂಗದಲ್ಲಿ ಬೆರೆದಿಹೆನೆಂದರೆ ಅಶಕ್ಯವಾಗಿರ್ಪುದಯ್ಯಾ. ನುಡಿದಂತೆ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡ ಹಾಂಗೆ, ನಡೆಯಲು ಬಾರದಯ್ಯಾ–ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡೇನೆಂದರೆ ಅಶಕ್ಯವಾಗಿರ್ಪುದಯ್ಯಾ. ಕೂಡಲಸಂಗನಶರಣರ–ಶಿವಶರಣರ, ಭಕ್ತಿ–ಶಿವಾದ್ವೈತಭಕ್ತಿಯು, ಬಾಳ ಬಾಯಿಧಾರೆ–ಅಲಗಿನ ಮೊನೆಯ ಮೇಲೆ ನಡೆದಾಡಬೇಕಾದರೆ ಗರಿಗಟ್ಟು ಮೊನೆಗಟ್ಟು ದಿಕ್ಕುಗಟ್ಟು ದಾರಿಗಟ್ಟು ಮುದಲಾದವಂಥವು ಬಲ್ಲವರೇ ಅಲಗಿನ ಮೊನೆಯ ಮೇಲೆ ನೆಡೆದಾಡಿಯಾರಲ್ಲದೆ ಗರಿಗೆಟ್ಟು ಮೊನೆಗೆಟ್ಟು ದಿಕ್ಕುಗೆಟ್ಟು ದಾರಿಗೆಟ್ಟು ಮೊದಲಾದಂಥವನ್ನು ಅರಿಯದವರಿಗೆ ಅಲಗಿನ ಮೊನೆಯ ಮೇಲೆ ನಡೆದಾಡೇನೆಂದರೆ ಅಶಕ್ಯವಾಗಿರ್ಪುದು. ಹಾಂಗೆ ಅಷ್ಟಾವರಣ ಅಂಗವ ಮಾಡಿಕೊಂಡು ಪಂಚಾಚಾರವ ಪ್ರಾಣವ ಮಾಡಿಕೊಂಡು ಏಕಲಿಂಗನೈಷ್ಠಿಕಾವ್ರತವ ಮುಂದುಗೊಂಡಾಚರಿಸುವಂಥದು ಕ್ರಿಯಾಚಾರದಲ್ಲಿ ಸುಯಿದಾನಿಯಾದಂಥ ಶಿವಶರಣರಿಗೆ ಸಾಧ್ಯವಪ್ಪುದಲ್ಲದೆ ಮಿಕ್ಕಿನ ಆಶಾಲಾಂಛನಿ ಉಪಾಧಿಕರುಗಳಿಗೆ ಅಲಗಿನ ಮೊನೆಯ ಹಾಂಗೆ [೧]ಅಶಕ್ಯ[೧] ವಾಗಿರ್ಪುದು

..........................

೧–೧ ಹಾಸ್ಯ (ಗ).

II-----------------------------------------

ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟಬಾರದಯ್ಯಾ-ಭಿನ್ನಭಕ್ತಿಯೆಂಬ [೨]ಸ್ಯೆವಾಳ[೨] ಪಾಷಾಣವನು ತಿಳಿದು ಚರಿಸಿ, ಸಮರಸಭಕ್ತಿಯೆಂಬ ಗೊತ್ತ ಸೋಂಕಬಾರದು. ಮುಂದಕ್ಕೆ ಕಾಣಬಂದರ್ಥ.

.........................

೨-೨ ಸೆವಳ (ಜ).

III-----------------------------------------

ಹಾವಸೆಗಲ್ಲ-ಜತ್ತುಳ ಪಾಷಾಣವನು.

IV-----------------------------------------

ನುಡಿಯಬಹುದು, ನಡೆಯಬಾರದು. ಮಾಯೆಯೆಂಬ ಹಾವಸೆಯಾ[೩][ಗೆ][೩] ಜಂಗಮದ ಮಾಟ ಬಾಳಬಾಯಿಧಾರೆಯೆಂಬುದೀ ವಚನದರ್ಥ.

.........................

೩-೩ ಗಿ (ತ).

V-----------------------------------------

ಮಾಯಾಪಾಶವೆಂಬ ಶೈವಾಲವಾವೃತವಾದ ಜಡದೇಹದಲ್ಲಿ ವರ್ತಿಸಿ ಲಿಂಗೈಕ್ಯವಾಗುವದಕ್ಕಾಗದೆಂಬುದೀಗ, ಹಾವಸೆಗಲ್ಲ ಮೆಟ್ಟಿ ಹರಿದು, ಗೊತ್ತ ಮುಟ್ಟಬಾರದುಯೆಂಬುದೀ ವಚನದರ್ಥ.

---

೨೧೫

**ಭಕ್ತಿಯೆಂಬುದ ಮಾಡಬಾರದಯ್ಯಾ ಕರಗಸದಂತೆ ಹೋಗುತ್ತ ಕೊರೆವುದು, ಬರುತ್ತ ಕೊರೆವುದು. ಘಟಸರ್ಪನಲ್ಲಿ ಕೈ ದುಡುಕಿದರೆ ಹಿಡಿಯದೆ ಮಾಂಬುದೆ ಕೂಡಲಸಂಗಮದೇವಾ?**

I-----------------------------------------

ಭಕ್ತಿಯೆಂಬುದ-ಶಿವಾದ್ವೈತಭಕ್ತಿಯೆಂಬಂಥದನ್ನು, ಮಾಡಬಾರದಯ್ಯಾ-ಅನುಗ್ರೈಯಬಾರದಯ್ಯಾ, ಕರಗಸದಂತೆ ಹೋಗುತ್ತ ಕೊರೆವುದು ಬರುತ್ತ ಕೊರೆವುದು-ಕರಗಸವೆಂಬಂಥದು ಮರನ ಕೊಯ್ವಲ್ಲಿ ಹೋಗುತ್ತಲೂ ಕೊಯ್ದುಕೊಂಡುಹೋಗುವುದು, ಬರುತ್ತಲೂ ಕೊಯ್ದುಕೊಂಡು ಬರುವುದು. ಹಾಂಗೆ ಜಂಗಮಕ್ಕೆ ತನುಮನಧನಂಗಳನು ಸವೆದುಹೋಗುವಲ್ಲಿ ಅದು ಒಂದು ಕೊಯಿತರವಾಗಿಪ್ಪುದು. ಅದಲ್ಲದೆ ಅವರೊಂದಿಗೆ ಎಲೋ ತಲೋ ಗೋವಾ ಗುಲಾಮಾ ಎಂದು ಜಡಿದು ಝುಂಕರಿಸಿ ನುಡಿಸಿಕೊಂಬುದು ಅದೊಂದು ಕೊಯಿತರವಾಗಿಪ್ಪುದು. ಅದಲ್ಲದೆ ತ್ರಿವಿಧ ಪದಾರ್ಥವನ್ನು

ಹಿಡಿದು ಭಕ್ತಿಗೃಹವನ್ನು ಕಟ್ಟಿ ಭಕ್ತಿಮಾಡುತ್ತಿರ್ದ ಹಾಂಗೆ ಆ ದೇಶದಿಂದೆ ಈ ದೇಶಕ್ಕೆ ಬರುವಂಥ ಜಂಗಮಾಮೂರ್ತಿಗಳು ಸೂಚನೆ ಬಿನ್ನಹ ಗಟ್ಟಿಬಿನ್ನಹವನ್ನು ಕೈಕೊಂಡು ಮೃಷ್ಟಾನ್ನ ಪದಾರ್ಥವನ್ನು ಪಡೆದನುಭವಿಸಿ ಶಾಲು ಸೆಕಲಾತಿ ಸಣ್ಣಗಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಕೈಕೊಂಡುಹೋಗುವರು, ಅದೊಂದು ಕೊಯಿತರವಾಗಿರ್ಪುದು. ಮತ್ತೀ ದೇಶದಿಂದಾ ದೇಶಕ್ಕೆ ಹೋಗುವಂಥ ಜಂಗಮಮೂರ್ತಿಗಳು ಸೂಚನೆ ಬಿನ್ನಹ ಗಟ್ಟಿಬಿನ್ನಹವನ್ನು ಕೈಕೊಂಡು ಮೃಷ್ಟಾನ್ನಪದಾರ್ಥವನ್ನು ಪಡೆದನುಭವಿಸಿ ಶಾಲು ಸಕಲಾತಿ ಸಣ್ಣಗಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಕೈಕೊಂಡು ಹೋಗುವರು, ಅದೊಂದು ಕೊಯಿತವಾಗಿರ್ಪುದು. ಅದಲ್ಲದೆ ಮನೆಯೊಳಗೆ ಹೆಂಡಿರುಮಕ್ಕಳೆಲ್ಲರು ದ್ರವ್ಯವೆಲ್ಲ ಜಂಗಮಕ್ಕೆ ಕೊಟ್ಟು ಚಾಗಿಯ ಮಾಡುತ್ಯೆದಾನೆಂದು ಆಡಿಕೊಂಬುತ್ತಿಹರು, ಅದೊಂದು ಕೊಯಿತರವಾಗಿರ್ಪುದು. ಹೀಂಗೆ ಜಂಗಮಭಕ್ತಿ ಮಾಡಿದರೆ ದ್ರವ್ಯವೆಲ್ಲ ಚಾಗಿಯಾಗಿ ನಿರ್ಧನಿಕ[1]ನಾಗಿ[1]ರ್ದಲ್ಲಿ ಎಂದಿನ ಹಾಂಗೆ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡಾಕ್ಷಣಕ್ಕೆ ನಮಸ್ಕಾರವನ್ನು ಮಾಡಿ ಹಳೆತಟ್ಟು ಹರಕುಚಾಪಿ ಮೊದಲಾದವನ್ನು ಕುಳ್ಳಿರಲು ಹಾಕಿ ನುಚ್ಚು ಕಚ್ಚು ಮೊದಲಾದ ಶುಷ್ಕಾನ್ನಪಾನಂಗಳನು ನೀಡಿದಲ್ಲಿ ಇವನು ಮೊದಲೆಲ್ಲ ಹಟಗಾರ ತೂಳಗವೆದ್ದು ಪಡುಗದೊಳಗೆ ವಿಭೂತಿಯ ಕಲಸಿದ ಹಾಂಗೆ ಭಕ್ತಿಯ ಮಾಡಿದ. ಈಗಿನ ಭಕ್ತಿ ಬರನಾಯಿತ್ತೆಂದು ಜಂಗಮಮೂರ್ತಿಗಳು ಆಡಿಕೊಂಬುವರು, ಅದೊಂದು ಕೊಯಿತರವಾಗಿಪ್ಪುದು. ಹಾಂಗೆ, ಜಂಗಮಭಕ್ತಿಯೆಂಬಂಥದು ಹರಿವ ಕರಗಸದ ಹಾಂಗೆ ಅತಿ ದುರ್ಘಟವಾಗಿರ್ಪುದು.

ಘಟಸರ್ಪದಲ್ಲಿ–ದೊಡ್ಡಿತ್ತಾದ ಫಣಿಯಲ್ಲಿ, ಕೈದುಡುಕಿದರೆ–ಹಸ್ತವ ಹಾಕಿ ಹಿಡಿಯಲಿಕ್ಕೆ ಹೋದರೆ, ಹಿಡಿಯದೆ ಮಾಂಬುದೆ–ಕಚ್ಚಿ ವಿಷವನುಗುಳಿ ಪ್ರಾಣವ ಕೊಲ್ಲದೆ ಬಿಟ್ಟೀತೆ? ಬಿಡದು. ಹಾಂಗೆ, ಘಟಸರ್ಪನಲ್ಲಿ–ಸತ್ತ್ರಣವಜ್ಞಾನ ಸ್ವರೂಪವಾದ ಜ್ಞಾನಜಂಗಮಮೂರ್ತಿಗಳಲ್ಲಿ, ಕೈದುಡುಕಿದರೆ–ಪದಾರ್ಥ ವಂಚಿಸಿಕೊಂಡರೆ, ಹಿಡಿಯದೆ ಮಾಂಬುದೆ–ತನಗೆ ಕೊರತೆಯನುಂಟುಮಾಡಿ ಭವಕ್ಕೆ ಹಾಕದೆ ಬಿಟ್ಟಾರೆ? ಬಿಡರು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ ನೀನಿ (ಕ).

IV- - - - - - - - - - - - - - - - - - - - - - - - - - - - - - - - - - - - - - - - - - - -

ಸತ್ಯವಾದ ಭಕ್ತಿಯಾದರೆ ಮುಕ್ತಿಯಹುದು, ಅಸತ್ಯವಾದರೆ ಕರಗಸದಂತೆ ಕೊಯ್ವುದು ಎಂಬುದೀ ವಚನದರ್ಥ.

---

೨೧೬

**ಹಲವು ಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯ ಒಂದು ಮಿಡಿಕಿಡಿಯಲ್ಲಿ ಬೇವಂತೆ ಸಲೆ ನೆಲೆ ಸನ್ನಿಹಿತನಾಗಿಪ್ಪ ಶರಣನ ಭಕ್ತಿ[1] ಒಂದನಾಯಾಸದಿಂದ[1] ಕೆಡುವಂತೆ, ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ ಅಧರ್ಮದಲ್ಲಿ ಕೆಡಿಸುವ ಸುತನಂತೆ ಶಿವನ ಸೊಮ್ಮು ಶಿವಂಗೆ ಮಾಡದೆ ಅನ್ಯಕ್ಕೆ ಮಾಡಿದಡೆ ತನ್ನ ಭಕ್ತಿ ತನ್ನನೆ ಕೆಡಿಸುವುದಯ್ಯಾ, ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - - - - - - -

ಹಲವು ಕಾಲ–ಅನೇಕಕಾಲದಿವಸಪರಿಯಂತರ, ಧಾವತಿಗೊಂಡು–ಕಷ್ಟಂಬಟ್ಟು, ಒಟ್ಟಿರ್ದ–ಪುಂಜೀಕರಿಸಿರ್ದ, ಹಿರಿದೆಯ–ದೊಡ್ಡದೊಂದು ಬಣಮೆಯನು, ಇಂದು ಮಿಡಿಕಿಡಿಯಲ್ಲಿ–ಒಂದು ಸ್ವಲ್ಪವಾದಗ್ನಿಯಿಂಗಳದಲ್ಲಿ, ಬೇವಂತೆ–ದಹಿಸುವ ಹಾಂಗೆ, ಸಲೆ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡುವ, ನೆಲೆ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವ. ಸನ್ನಿಹಿತನಾಗಿರ್ಪ–ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಜಂಗಮಭಕ್ತಿಯಲ್ಲಿ ಕೂಡಿರುವಂಥ, ಶರಣನ–ಶಿವಶರಣನ, ಭಕ್ತಿ–ತಾ ಮಾಡುವಂಥ ಶಿವಾದ್ವೈತಭಕ್ತಿಯು, ಒಂದನಾಯಾಸದಿಂದ ಕೆಡುವಂತೆ--ಒಂದು ಅನಾಚಾರದಿಂದ ನಾಶವಾಗುವ ಹಾಂಗೆ, ಸ್ವಧರ್ಮದಿಂದ– ಸತ್ಯಶುದ್ಧ ಕಾಯಕದಿಂದ, ಗಳಿಸಿದ ಗಳಿಸಿ ಗಳಿಸಿ ಕೂಡಲಿಕ್ಕಿದ; ಪಿತನ–ತಂದೆಯ, ಧನವ–ದ್ರವ್ಯವನ್ನು, ಅಧರ್ಮದಲ್ಲಿ–ಅಪಾತ್ರದಲ್ಲಿ, ಕೆಡಿಸುವ–ಸೂಳೆ ಬಸವಿ ದಾಸಿ ವೇಸಿ ಬೋಳಭಟ್ಟರಿಗೆ ಕೊಟ್ಟು ಚಾಗಿಯ ಮಾಡುವ, ಸುತನಂತೆ–ಅಪರಬುದ್ಧಿಯನುಳ್ಳ ಕುಮಾರನ ಹಾಂಗೆ, ಶಿವನ ಸೊಮ್ಮು– ಗುರುಲಿಂಗಜಂಗಮದೊಡವೆಯಾದ ತನುಮನಧನಂಗಳನು, ಶಿವಂಗೆಮಾಡದೆ–ಶಿವಸ್ವರೂಪವಾದ ಜಂಗಮಮೂರ್ತಿಗಳಿಗೆ ಸಮರ್ಪಣೆಯ ಮಾಡದೆ, ಅನ್ಯಕ್ಕೆ ಮಾಡಿದರೆ–ಸೂಳೆ ಬಸವಿ ದಾಸಿ ವೇಸಿ ಬೋಳಭಟ್ಟರು ಮೊದಲಾದ ಷಡುದರುಶನದವರಿಗೆ ಕೊಟ್ಟು ಚಾಗಿಯ ಮಾಡಿದರೆ, ತನ್ನ ಭಕ್ತಿ–ತಾ ಮಾಡುವಂಥ ಭಿನ್ನಭಕ್ತಿಯು, ತನ್ನ ಕೆಡಿಸುವುದು–ತನ್ನನೇ ಜನನ ಮರಣಂಗಳಲ್ಲಿ ತಂದು ಸಂಹರಿಸುತ್ತಿಹುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

V- - - - - - - - - - - - - - - - - - - - - - - - - - - - - - - - - - - - - - - - - - - - -

1–1 ಒಂದನಾಯತದಿಂದ (ಪ).

........................

ಅನೇಕ ದಿನ ಮಾಡಿದ ಭಕ್ತಿ ಒಂದಯೋಗ್ಯವಾ[ದ] ಕ್ರಿಯಾಕಂಟಕದಿಂದ ನಷ್ಟವಾಗುವುದೆಂಬುದೀಗ ಭಕ್ತಿ ಒಂದನಾಯತದಿಂದ ಕೆಡುವುದೆಂಬುದರ್ಥ.

---

೨೧೭

**ನಚ್ಚಿದೆನೆಂದಡೆ ಮಚ್ಚಿದೆನೆಂದಡೆ ಸಲೆ ಮಾಱುಹೋದೆನೆಂದಡೆ ತನುವನಲ್ಲಾಡಿಸಿ ನೋಡುವೆ, ನೀನು. ಮನವನಲ್ಲಾಡಿಸಿ ನೋಡುವೆ, ನೀನು. ಧನವನಲ್ಲಾಡಿಸಿ ನೋಡುವೆ, ನೀನು. ಇವೆಲ್ಲಕ್ಕಂಜದಿದ್ದಡೆ ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ.**

I- - - - - - - - - - - - - - - - - - - - - - - - - - - - - - - - - - - - - - - - - - - - -

ನಚ್ಚಿದೆನೆಂದಡೆ–ತನುವಿನಲ್ಲಿ ಸದ್ರೂಪವಾದ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತಸ್ಥಾನಸದ್ಭಾವನೆಂಬ ಚತುರ್ವಿಧಭಕ್ತಿಯಿಂದ ತನುಪದಾರ್ಥವ ಗುರುವಿಂಗೆ ಸಮರ್ಪಿಸಿದಲ್ಲಿ ಆ

ಗುರುವರ್ಪಿಸಿಕೊಂಡಂ[1]ಥ[1] ತನುಪದಾರ್ಥವೆಲ್ಲ ಗುರುಸ್ವರೂಪವಾಯಿತ್ತೆಂದು ನಂಬಿದನೆಂದರೆ ಮೆಚ್ಚಿದೆನೆಂದಡೆ–ಮನದಲ್ಲಿ ಚಿದ್ರೂಪವಾದ ಲಿಂಗಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾ ಮನಪದಾರ್ಥವ ಲಿಂಗಕ್ಕೆ ಸಮರ್ಪಿಸಿದಲ್ಲಿ ಆ ಲಿಂಗವರ್ಪಿಸಿಕೊಂಡಂಥ ಮನಪದಾರ್ಥವೆಲ್ಲವು ಲಿಂಗಸ್ವರೂಪವಾಯಿತ್ತೆಂದು ಮಮಕರಿಸಿದೆನೆಂದರೆ, ಸಲೆ ಮಾಱುಹೋದೆನೆಂದಡೆ–ಪ್ರಾಣಜ್ಞಾನದಲ್ಲಿ ಆನಂದಸ್ವರೂಪವಾದ ಜಂಗಮವ ಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳಿಂದ ಪ್ರಾಣದ್ರವ್ಯಪದಾರ್ಥವೆಲ್ಲವೂ ಜಂಗಮದಲ್ಲಿ ಕೂಡಿ ವಶಗತವಾದೆನೆಂದರೆ, ನೀನು–ಪರಶಿವಲಿಂಗವು. ತನುವನಲ್ಲಾಡಿಸಿ ನೋಡುವೆ–ಸಿಂಧುಮರಾಳರಾಯದ ತನುಪದಾರ್ಥವ ಸಮರ್ಪಿಸಿಕೊಂಡ ಹಾಂಗೆ ತನುಪದಾರ್ಪವ ಕೊಡು ಕೊಡು ಭಕ್ತಾಯೆಂದೊರೆದೊರೆದು ನೋಡುವೆ, ನೀನು–ಪರಶಿವಲಿಂಗವು. ಮನವನಲ್ಲಾಡಿಸಿ ನೋಡುವೆ ಸೇದಿರಾಜಯ್ಯಗಳ ಮನಪದಾರ್ಥವ ಸಮರ್ಪಿಸಿಕೊಂಡ ಹಾಂಗೆ ಮನಪದಾರ್ಥವ ಕೊಡುಕೊಡು ಭಕ್ತಾಯೆಂದು ಒರೆದೊರೆದು ನೋಡುವೆ, ನೀನು–ಪರಶಿವಲಿಂಗವು. ಧನವನಲ್ಲಾಡಿಸಿ ನೋಡುವೆ–ಇಮ್ಮಡಿ ಮೊನೆಧರರಾಯನ ಪ್ರಾಣದ್ರವ್ಯಪದಾರ್ಥವ ಸಮರ್ಪಿಸಿಕೊಂಡ ಹಾಂಗೆ ಧನಪದಾರ್ಥವ ಕೊಡುಕೊಡು ಭಕ್ತಾಯೆಂದು ಒರೆದೊರೆದು ನೋಡುವೆ, ನೀನು–ಪರಶಿವಲಿಂಗವು. ಇವೆಲ್ಲಕ್ಕೆ–ಈ ತನುಮನಧನಂಗಳಿಗೆ, ಅಂಜದಿದ್ದಡೆ–ಹೆದರಿಕೊಳ್ಳದೆ ಕೊಟ್ಟು ಭಕ್ತಿಯ ಮಾಡಿದರೆ, ಭಕ್ತಿಕಂಪಿತ–ಭಕ್ತಿಯುಳ್ಳ ಭಕ್ತರುಗಳಲ್ಲಿ ಅತ್ಯಂತ ಮರುಕತ್ವವುಳ್ಳಾತನು, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು.

..........................

೧–೨ ಲ್ಲಿ (ಕ).

IV-----------------------------------------------------------------------

ನಚ್ಚಿದೆ ಮೆಚ್ಚಿದೆನೆಂದರೆ ಶಿವನು ಕಾಡಿ ನೋಡುವ, ತನುಮನಧನವ ಕೊಟ್ಟಡೆ ತನ್ನನೀವ ಲಿಂಗವೆಂಬುದೀ ವಚನದರ್ಥ.

೨ "ಹಸಿದುಬಂದ ಗಂಡಂಗೆ........" ಎಂಬ ಮುಂದಿನ ವಚನ (೨೨೦)ದ ಟೀಕೆ ಲಿಪಿಕಾರನ ಕಣ್ತಪ್ಪಿ ಇಲ್ಲಿ ಬಂದಿದ್ದು ಅದು ಹೀಗಿದೆ: ಪ್ರಾಣ ಜಂಗಮ, ದೇಹ ಭಕ್ತನಾಗಿ ಸೇವೆಯ ಮಾಡದೆ; ಬಱಿದು ಮಾತನಾಡೂದೆಲ್ಲವೂ ಹಗರಣಿಗನ ಅಕ್ಕೆಯ ತೆಱನೆಂಬುದೀ ವಚನದರ್ಥ.

---

೨೧೮

**ಕವಳುಗೋಲು ಹಿಡಿದು ಶ್ರವವ ಮಾಡಬಹುದಲ್ಲದೆ ಕಳನೇಱಿ ಕಾದುವುದರಿದು ನೋಡಾ. ಬಣ್ಣವಿಟ್ಟು ನುಡಿದಲ್ಲಿ ಫಲವೇನು? ಚಿನ್ನಗಯ್ಯುವ ಮಾಡುವನಂತೆ ಬಂದ ಸಮಯವನಱಿದು ಇದ್ದುದ ವಂಚಿಸದಿದ್ದಡೆ, ಕೂಡಲಸಂಗಮದೇವ ಒಲಿದು ಸಲಹುವನು.**

I-----------------------------------------------------------------------

ಕವಳುಗೋಲು ಹಿಡಿದು–ದಾಂಡುಕೋಲಿನ ತುದಿಗೆ ಮಸಿಯ ಪೊಟ್ಟಣವನ್ನು ಕಟ್ಟಿಕೊಂಡು ಎದೆಗೆ ತಿವಿತ್ಯೈದೇನಿ ಬದಿಗೆ ತಿವಿತ್ಯೈದೇನಿ ಹಣೆಗೆ ತಿವಿತ್ಯೈದೇನಿ ಫಣಿಗೆ ತಿವಿತ್ಯೈದೇನಿ ಎಂದು ತಟ್ಟಾಡುತ್ತ, ತಟ್ಟಾಡುತ್ತ ಶ್ರವವ ಮಾಡಬಹುದಲ್ಲದೆ–ಸಾಧನೆಯನನುಗೈಯಬಹುದಲ್ಲದೆ, ಕಳನೇಜಿ ಭಕ್ತಿಯೆಂಬ ರಣಾಂಗಣದಲ್ಲಿ ನಿಂದು, ಕಾದುವುರಿದು ನೋಡಾ–ಸಮರಸಭಾವದಿಂದ ಭಕ್ತಿಯ ಮಾಡೇನೆಂದರೆ ಅಶಕ್ಯವಾಗಿರ್ಪುದು ಕಂಡಾ. ಬಣ್ಣವಿಟ್ಟು–ಒಪ್ಪವಿಟ್ಟು, ನುಡಿದಲ್ಲಿ–ಸ್ವಾಮಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡಲ್ಲಿ ಫಲವೇನು?–ಪ್ರಯೋಜನವೇನು?

ಚಿನ್ನಗಯ್ಯುವ ಮಾಡುವನಂತೆ–ಲೋಕದಾತ್ಮರುಗಳು ಕಾರಕನೊಂದಿಗೈದು ಇದು ಗುರುವಿನೊಡವೆ ಲಿಂಗದೊಡವೆ ಜಂಗಮದೊಡವೆ ಈರಣ್ಣನೊಡವೆ ಬಸವಣ್ಣನೊಡವೆ ಮಲ್ಲಿಕಾರ್ಜುನನೊಡವೆ ಹೊ[೧][ಸದಾಗಿ][೧] ನಗವನ್ನು ಮಾಡಿಕೊಡು. ಇದರೊಳಗೇನೇನೂ ಕದಿಯಬೇಡ, ಆದರೆ ಹೆಚ್ಚಾಗಿ ಕೂಲಿ ತೆಗೆದುಕೋ ಎಂದು ಹೇಳಿಕೊಟ್ಟಲ್ಲಿ [೨]ನಾನೇಕೆ ಕದ್ದೇನೆಂದು[೨] ಅದನ್ನು ತೆಗೆದುಕೊಂಡು ಮುಸಿಯೊಳಗೆ ಹಾಕಿ ಅಗ್ನಿಯಲ್ಲಿ ಮಡಗಿ ಕಾಸಿ ಕರಗಿಸಿ ಅದರೊಳಗೆ [೩][ಹಾಗ][೩] ಬೇಳೆತೂಕ ಚಿನ್ನವನ್ನು ವಂಚಿಸಿಕೊಂಡು ನಗವನ್ನು ಮಾಡಿ ಒಪ್ಪವಿಟ್ಟು ಕೂಲಿಯನ್ನು ತೆಗೆದುಕೊಂಡು ತೂಗಿಕೊಡುತ್ತಿಹನು ಹಾಂಗೆ, ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರು ಪೇಟೆಮನೆ ಪುರ ಪಟ್ಟಣ ಸ್ಥಾನಂಗಳಲ್ಲಿಗೆ ಹೋಗಿ ಚೌಕಿಮಠಂಗಳಲ್ಲಿ ಹಾಸಿಕೊಂಡು ಒದುತ್ತ ಹಾಡುತ್ತ ಶಿವಾನುಭವವನು ಮಾಡುತಿರ್ದಲ್ಲಿ ಅಲ್ಲಿಗೊಬ್ಬ ಉಪಾಧಿಕನು ಬಂದು ಅವರ ಶಿವನುಭಾವವನ್ನು ಬೆಸಗೊಂಡು ಕೇಳಿದಲ್ಲಿ ಸ್ವಾಮ್ಮಿ, ಇಷ್ಟು ದಿವಸಂತೂ ತನುಮನಧನಂಗಳನು ವಂಚಿಸಿಕೊಂಡದ್ದು ಹೋಗಲಿ, ಇನ್ನು ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡು ಹೋಗಿ ಮತ್ತೂ ಎಂದಿನ ಹಾಂಗೆ ತನುಮನಧನಂಗಳನು ವಂಚಿಸಿಕೊಂಬಂಥ ಉಪಾಧಿಕನ ಇರಸ್ಥಿತಿಯೂ ಅ ಚಿನ್ನಗಯ್ಯುವ ಮಾಡುವಂಥ ಕಾರಕನ ಇರಸ್ಥಿತಿಯೂ ಒಂದೆಯಾಗಿಪ್ಪುದು. ಬಂದ ಸಮಯವನಜಿದು ಜಂಗಮ ಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ಸಮಯಕಾಲ ಉಚಿತ ಕಾಲವನರಿದು, ಇದ್ದುದ–ಮನೆಯೊಳಗಿದ್ದಂಥ ತಂಗಳಾಗಲಿ ಬಿಸಿಯಾಗಲಿ ಇದ್ದ ಪದಾರ್ಥವನ್ನು, [ವಂಚಿಸದಿದ್ದಡೆ] ವಂಚನೆಯ ಮಾಡದೆ ನಿರ್ವಂಚಕತ್ವದಿಂದ ನೀಡಿ ಸಂತೃಪ್ತಿ ಬಡಿಸಿದರೆ, ಕೂಡಲಸಂಗಮದೇವ–ಪರಶಿವಲಿಂಗವು, ಒಲಿದು – ಕೃಪೆಯಾಗಿ, ಸಲಹುವ–ತನ್ನ ಪಾದೋದಕ ಪ್ರಸಾದವನಿತ್ತು ರಕ್ಷಣ್ಯವ ಮಾಡುತ್ತಿಹನು.

..........................

೧–೧ ಸ್ತಾಗಿ (ಕ,ಗ). ೨–೨ (ಕ). ೩–೩ ಹಾಕ (ಕ). ಹಾಗು (ಗ).

II--------------------------------------------------------------------

ಕವಳುಗೋಲು ಹಿಡಿದು ಶ್ರವವ ಮಾಡಬಹುದಲ್ಲದೆ ಕಳನೇಜಿ ಕಾದುವುದರಿದು ನೋಡಾ–ಭಿನ್ನಭಕ್ತಿಯೆಂಬ ದಂಡವನ್ನು ಗ್ರಹಿಸಿ ಭಿನ್ನಭಕ್ತಿಯ ಸಾಧಕನೆಸಗಬಹುದಲ್ಲದೆ, ಗುರುಲಿಂಗಜಂಗಮದ ಭಕ್ತಿರಣಾಂಗಳವನಡರಿ ಭಕ್ತಿಯುದ್ಧವ ಮಾಡೂದು ಆಶ್ಚರ್ಯವು ಕಂಡಾ. ಮುಂದಕ್ಕೆ ಕಾಣಬಂದರ್ಥ.

**ಅರ್ಥಪ್ರಾಣಾಭಿಮಾನದಲ್ಲಿ ವಂಚನೆಯಿಲ್ಲದ ಭಕ್ತಿ, ಸಮಯಾಚಾರದ ಜಂಗಮವೆ ಲಿಂಗವೆಂಬುದಕ್ಕೆ ಏನು ಗುಣ ಮನದ ಲಂಪಟತನ ಹಿಂಗದಾಗಿ? ಒಡೆಯರ ಬರವಿಂಗೆ ಕುನ್ನಿ ಬಾಲವ ಬಡಿದಡೆ ವೆಚ್ಚವೇನು ಹತ್ತದು, ಕೂಡಲಸಂಗಮದೇವಾ.**

I---------------------------------------------------------------------------

ಅರ್ಥಪ್ರಾಣಾಭಿಮಾನದಲ್ಲಿ : ಅರ್ಥ–ತಾ ಗಳಿಸಿದಂಥ ದ್ರವ್ಯವು, ಪ್ರಾಣ–ಪ್ರಾಣಸ್ವರೂಪವಾಧ ಪುತ್ರರು, ಅಭಿಮಾನದಲ್ಲಿ–ತನ್ನ ಸ್ತ್ರೀಯಳಲ್ಲಿ, ವಂಚನೆಯಿಲ್ಲದ–ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಂಬಂಥ ಮಾಜೋ ಬುದ್ಧಿಯಿಲ್ಲದ,[೧] ಭಕ್ತಿ–ಅದೇ ಶಿವಾದ್ವೈತ ಭಕ್ತಿಯು. ಸಮಯಾಚಾರದ ಜಂಗಮವೆ ಲಿಂಗವೆಂಬುದಕ್ಕೆ–ತನ್ನ ಸಮಯಾಚಾರಕ್ಕೆ ಮಡಗಿಕೊಂಡಿರುವಂಥ ಜಂಗಮಮೂರ್ತಿಗಳು ಇವರೇ ಸಾಕ್ಷಾತ್ ಶಿವಸ್ವರೂಪವೆಂದು ಹೇಳುವುದಕ್ಕೆ, ಏನು ಗುಣ–ಅದೇ ಭಕ್ತಿಸದ್ಗುಣವು ಮನದ ಲಂಪಟತನ–ಅಂತರಂಗದಲ್ಲಿರುವಂಥ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವು, ಹಿಂಗದಾಗಿ–ತೊಲಗದಾಗಿ, ಒಡೆಯರ ಬರವಿಂಗೆ–ಒಬ್ಬಾನೊಬ್ಬ ಆತ್ಮನು ಒಂದು ನಾಯಿಯನ್ನು ಸಾಕಿಕೊಂಡಿರುವನು. ತಾನೊಂದು ಊರುಕೇರಿಗೆ ಹೋಗಿಬರುವ ಚಮತ್ಕಾರಕ್ಕೆ, ಕುನ್ನಿ– ಶುನಿಯೆಂಬಂಥದ್ದು, ಬಾಲವ ಬಡಿದಡೆ – ಕಾಲಮೇಲೆ ಬಿದ್ದು ತನ್ನ ಬಾಲವ ಗುಂಡಾಡಿಸಿದರೆ, ವೆಚ್ಚವೇನು ಹತ್ತದು–ಬಿಸಿನೀರ ಕಾಸಿ ಜಳಕವ ಮಾಡಿಸಿ ಊಟೋಪಚಾರವ ಮಾಡಿಸಿ ಕೈಕಲ ಮೈಯನ್ನು ಒತ್ತಿ ಸಂತೋಷಂಬಡಿಸುವಂಥ ಲುಕ್ಸಾನವೇನಾದರೂ ಆದೀತೇ? ಆಗಲರಿಯದೆಂಬ ದೃಷ್ಟೋಪಮಾನದ ಹಾಂಗೆ.

● ಒಡೆಯರ–ಅರ್ಥಪ್ರಾಣಾಭಿಮಾನಂಗಳಿಗೆ ಕರ್ತೃವಾದ ಜಂಗಮಮೂರ್ತಿಗಳ, ಬರವಿಂಗೆ–ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ಚಮತ್ಕಾರಕ್ಕೆ, ಕುನ್ನಿ–ಶುನಿಗೆ ಸಮಾನವಾದ ಉಪಾಧಿಕನು, ಬಾಲವ ಬಡಿದಡೆ – ಸ್ವಾಮೀ ಹಸಿದಿರಿ ಬಳಲಿದಿರಿ ಕಂಗೆಟ್ಟಿರೆಂದು ಹಿತೋಕ್ತವಾದ ಪ್ರಸಂಗವನಾಡಿ ಆಚೆ ಕೇರಿಗೆ ಹೋಗಿರಿ ಈಚೆ ಕೇರಿಗೆ ಹೋಗಿರಿ ಆ ಮನೆಗೆ ಹೋಗಿರಿ ಈ ಮನೆಗೆ ಹೋಗಿರಿಯೆಂದು ಹೇಳಿದಲ್ಲಿ, ವೆಚ್ಚವೇನು ಹತ್ತದು–ಕಂಡಾಕ್ಷಣಕ್ಕೆ ನಮಸ್ಕಾರವ ಮಾಡಿ ಅಕ್ಕಿ ಕಣಕ ಬೇಳೆ ಬೆಲ್ಲ ತುಪ್ಪ ಸಕ್ಕರಿ ಕಾಯಿ ಸೊಪ್ಪು ಮೊದಲಾದ ಸಮಸ್ತ ಶೋಭಾಸತ್ಕಾರವನ್ನು ತೆಗೆದುಕೊಂಡು ಬಂದು ಪಾಕ ಪ್ರಯತ್ನವ ಮಾಡಿ ನೀಡಿ ಸಂತೃಪ್ತಿಬಡಿಸುವಂಥ ಲುಕ್ಸಾನವೇನಾದರೂ ಬಿದ್ದೀತೇ? ಬೀಳಲರಿಯದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧ + ಉಂಟಾಗಿರುವುದಲ್ಲದೆ (ಕ,ಗ).

IV---------------------------------------------------------------------------

ಜಂಗಮವೆ ಲಿಂಗವೆಂದೆಂಬುವರು ಪ್ರಾಣ ಧನವ [ಸವೆಸ] ಬೇಕಲ್ಲದೆ, ಸವೆಸದೆ ಅಯ್ಯಾ! ಹಸಾದವೆಂದರೆ ಕುನ್ನಿ ಬಾಲವ ಬಡಿದಂತೆಯೆಂಬುದೀ ವಚನದರ್ಥ.

೨೨೦

**ಹಸಿದುಬಂದ ಗಂಡಂಗೆ ಉಣಲಿಕ್ಕದೆ, ಬಡವಾದಿರೆಂದು ಮಱುಗುವ ಸತಿಯ ಸ್ನೇಹದಂತೆ ಬಂದುದನಱಿಯಳು, ಇದ್ದುದ [1]ಸವೆಯಳು[1] [2]ದುಃಖವಿಲ್ಲದೆ[2] ಮರುಗುವ ಹಗರಣಿಗನ ತೆಱನಂತೆ ಕೂಡಲಸಂಗಮದೇವಾ.**

I-----------------------------------------------------------------------------------

ಹಸಿದುಬಂದ–ಉದ್ದಿಮೆ ವ್ಯಾಪಾರಂಗಳನು ಮಾಡಿ ಕ್ಷುಧೆಯಾಗಿ ಬಳಲಿ ಬಂದಂಥ ಗಂಡಂಗೆ–ಮದುವೆಯಾದ ರಮಣನಿಗೆ, ಉಣಲಿಕ್ಕದೆ–ಇದ್ದಂಥ ಪದಾರ್ಥವನ್ನು ಉಂಬೋದಕ್ಕೆ ನೀಡದೆ, ಬಡವಾದಿರೆಂದು–ಉದ್ದಿಮೆ ವ್ಯಾಪಾರಂಗಳನು ಮಾಡುವುದರಿಂದ ಬಹು ಹರಿಗೆಟ್ಟಿರೆನುತ್ತ, ಮಱಗುವ– ಚಿಂತಿಸುವ, ಸತಿಯ ಸ್ನೇಹದಂತೆ–ಸ್ತ್ರೀಯಳ ಸಖತ್ವದ ಹಾಂಗೆ ಅದು ವ್ಯರ್ಥಸ್ಯವಾಗಿರ್ಪುದು. ಬಂದುದನಱಿಯಳು–ಉದ್ದಿಮೆ ವ್ಯಾಪಾರಂಗಳನು ಮಾಡಿ ಹಸಿದು ಬಳಲಿ ಬಂದಂಥದನ್ನು ತಿಳಿಯಳು. ಇದ್ದುದ ಸವೆಯಳು–ಇದ್ದಂಥ ಪದಾರ್ಥವ ನೀಡಿ ಸಂತುಷ್ಟಿಬಡಿಸಳು. ದುಃಖವಿಲ್ಲದೆ ಮಱುಗುವ–ಅಂತರಂಗದಲ್ಲಿ ಮರುಕತ್ವವಿಲ್ಲದೆ ಬಹಿರಂಗದಲ್ಲಾಡುವ ಉಪಚಾರವು, ಹಗರಣಿಗನ ತೆಱನಂತೆ–ಬಹುರೂಪಗಾರನು ನಾನಾ ಪ್ರಕಾರವಾದ ವೇಷ ಧರಿಸಿಕೊಂಡು ಸಭಾಮಧ್ಯದಲ್ಲಿ ಬಂದು ಆಟವನ್ನು ಆಡುತಿರ್ದಲ್ಲಿ ಆ ಆಟವನ್ನು ಮರೆಸಿ ಮತ್ತೊಂದಾಟವನ್ನು ತಂದು ನಿಂದಿರಿಸಿದಲ್ಲಿ ಅಲ್ಲಿದ್ದಂಥವರು ಹೇಂಗೆ ನಕ್ಕು ಹಾಸ್ಯವ ಮಾಡುತ್ತಿಹರೋ ಹಾಂಗೆ, ಈ ಸ್ತ್ರೀಯಳಾಡುವಂಥ ಪ್ರಸಂಗವು ಮತ್ತೊಬ್ಬ ಪತಿವ್ರತಾಂಗನೆಯರ ಮುಂದೆ ಹಾಸ್ಯವಾಗಿರ್ಪುದೆಂಬ ದೃಷ್ಟೋಪಮಾನದ ಹಾಂಗೆ.

● ಹಸಿದು–ಕ್ಷುಧೆಯಡಸಿ, ಬಂದ–ಭಿಕ್ಷಕ್ಕೆಂದು ಬಿಜಯಂಗೈದುಬಂದ, ಗಂಡಂಗೆ–ಕಾಲ ಕಾಮ ಮಾಯಾಪ್ರಪಂಚವನ್ನು ಜಯಿಸುವಲ್ಲಿ ಪರಾಕ್ರಮಿಗಳಾದ ಒಡೆಯರಿಗೆ,ಉಣಲಿಕ್ಕದೆ–ತ್ರಿವಿಧಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡದೆ, ಬಡವಾದಿರೆಂದು–ಸ್ವಾಮೀ, ಯಾವ ದೇಶವ ತಿರಿಸಿ ಬಹುಬಡವಾದಿರೆನುತ್ತ, ಮಱಗುವ–ಚಿಂತಿಸುವ, ಸತಿಯ ಸ್ನೇಹದಂತೆ–ಉಪಾಧಿಕನೆಂಬ ಪಣ್ಯಾಂಗನೆಯ ಸಖತ್ವದ ಹಾಂಗೆ ವ್ಯರ್ಥಸ್ಯವಾಗಿರ್ಪುದು. ಬಂದುದನಱಿಯಳು–ಜಂಗಮಮೂರ್ತಿಗಳು ನಾಲ್ಕಾರೂರು ತಿರುಗಿ ಹಸಿದು ಬಳಲಿ ಬಂದಂಥದನ್ನು ತಿಳಿಯಳು, ಇದ್ದುದ ಸವೆಯಳು–ಮನೆಯೊಳಗಿರ್ದಂಥ ಪದಾರ್ಥವ ಕೊಟ್ಟು ಭಕ್ತಿಯ ಮಾಡಳು. ದುಃಖವಿಲ್ಲದೆ ಮಱುಗುವ–ಅಂತರಂಗದಲ್ಲಿ ಮರುಕತ್ವವಿಲ್ಲದೆ ಬಹಿರಂಗದಲ್ಲಾಡುವ ಉಪಚಾರವು, ಹಗರಣಿಗನ ತೆಱನಂತೆ–ಬಹುರೂಪಗಾರನು ನಾನಾಪ್ರಕಾರವಾದ ವೇಷವ ಧರಿಸಿಕೊಂಡು ಸಭಾಮಧ್ಯದಲ್ಲಿ ಬಂದು ಆಟವನ್ನು ಆಡುತ್ತಿದ್ದಲ್ಲಿ ಆ ಆಟವನ್ನು ಮರೆಸಿ ಮತ್ತೊಂದಾಟವನ್ನು ತಂದು ನಿಂದಿರಿಸಿದಲ್ಲಿ ಸಮಸ್ತಾತ್ಮರುಗಳು ಹೇಂಗೆ ಗಹಗಹಿಸುತ್ತಿಹರೋ ಹಾಂಗೆ ಈ ಉಪಾಧಿಕನಾಡುವಂಥ ಪ್ರಸಂಗವು ಮತ್ತೊಬ್ಬ ನಿರ್ವಂಚಕ ಸದ್ಭಕ್ತರ ಮುಂದೆ ಹಾಸ್ಯವಾಗಿರ್ಪುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III-----------------------------------------------------------------------

ಭಿನ್ನಭಕ್ತನು ಮಾಡುವ ಭಕ್ತಿಯು ಬಹಿರಂಗದುಪಚಾರವಲ್ಲದೆ ಅಂತರಂಗದಲ್ಲಿ ದೃಢವಿಶ್ವಾಸ ಕರಿಗೊಳ್ಳಲಿಲ್ಲವೆಂಬುದೀಗ ಹಗರಣಿಗನ ತೆಜಿನಂತೆಯೆಂಬ ಶಬ್ದಕ್ಕರ್ಥ.

IV-----------------------------------------------------------------------

1-1 ಸವೆಸಳು (ತ). 2-2 ದುಃಖವಿಲ್ಲದ ಅಕ್ಕೆ (ತ).

.........................

ಪ್ರಾಣಜಂಗಮ, ದೇಹಭಕ್ತನಾಗಿ ಸೇವೆಯ ಮಾಡದೆ ಬಜೆಯ ಮಾತನಾಡೂದೆಲ್ಲವು ಹಗರಣಿಗನ ಅಕ್ಕೆಯ ತೆಜಿನೆಂಬುದೀ ವಚನದರ್ಥ.

---

೨೨೧

**ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು. ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕಠಿಣವಾಯಿತ್ತು. ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು; ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು. ಇನು ಕಾರಣ ಕೂಡಲಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯಾ!**

I-----------------------------------------------------------------------

ಉದಯದ ಮಾಗಿಯ ಬಿಸಿಲು: ಉದಯದ – ಪ್ರಾತಃಕಾಲದ, ಮಾಗಿಯ–ಮಾಗಿಕಾಲದ, ಬಿಸಿಲು–ಸೂರ್ಯನ ಆತಪಾಗ್ನಿಯು, ಅಂಗಕ್ಕೆ–ದೇಹಕ್ಕೆ, ಹಿತವಾಯಿತ್ತು–ತಿರುತಿರುಗಿ ಕಾಸಿಕೊಂಡ ಹಾಂಗೆಲ್ಲ ಅತ್ಯಂತ ಪ್ರಿಯವಾಗಿರ್ಪುದು. ಮಧ್ಯಾಹ್ನದ–ಮಧ್ಯಾಹ್ನಕಾಲದ, ಬಿಸಿಲು–ಸೂರ್ಯನ ಆತಪಾಗ್ನಿಯು, ಅಂಗಕ್ಕೆ–ದೇಹಕ್ಕೆ, ಕಠಿಣವಾಯಿತ್ತು–ತಿರುತಿರುಗಿ ಕಾಸಿಕೊಂಡ ಹಾಂಗೆ ಕಣ್ಣಕತ್ತಲೆ ಕವಿದು ಬವಳಿಬಂದು ಶೈತ್ಯ ಉದ್ರೇಕವಾಗುತ್ತಿಹುದು. ಮೊದಲಲ್ಲಿ–ಪ್ರಾಃತಕಾಲದಲ್ಲಿ, ಲಿಂಗಭಕ್ತಿ–ಲಿಂಗಪೂಜೆ ಮಾಡುವಂಥದು,ಹಿತವಾಯಿತ್ತು–ಬಹುಪ್ರೀತಿಯಾಗಿರ್ಪುದು. ಕಡೆಯಲ್ಲಿ–ಆ ಲಿಂಗಪೂಜೆಯಾದ ತದನಂತರದಲ್ಲಿ, ಜಂಗಮಭಕ್ತಿ–ಆ ಲಿಂಗಕ್ಕೆ ಪ್ರಾಣಕಳಚೈತನ್ಯಸ್ವರೂಪವಾದ ಜಂಗಮಮೂರ್ತಿಗಳಿರುವಂಥ ಚೌಕಿಮಠಂಗಳಿಗೆ ಹೋಗಿ ಬಿನ್ನಹವ ಮಾಡಿ ಕರಕೊಂಡುಬಂದು ಸಕಲಪದಾರ್ಥವ ಸಮರಸಭಾವದಿಂದ ನೀಡಿ ಸಂತುಷ್ಟಿಬಡಿಸೇನೆಂದರೆ, ಕಠಿಣವಾಯಿತ್ತು–ಬಹು ದುರ್ಘಟವಾಗಿರ್ಪುದು. ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವ–ಪರಶಿವಲಿಂಗವು, ಅವರ–ಅಂತಪ್ಪ ಆಶಾಲಾಂಛನಿ ಉಪಾಧಿಕರುಗಳ, ಬಲ್ಲನಾಗಿ–ಅವರಂತರಂಗದ ಸ್ಥಿತಿಗತಿಯನ್ನು ತಿಳಿದಿರ್ಪನಾಗಿ, ಒಲ್ಲನಯ್ಯಾ!– ಅವರಿಗೊಲಿದು ನಿಜಮೋಕ್ಷವ ಕರುಣಿಸಿ ಕೊಡಲೊಲ್ಲನಯ್ಯ.

II-----------------------------------------------------------------------

ಉದಯುದ ವಾಗಿಯು ಬಿಸಿಲು ಅಂಗಕ್ಕೆ ಹಿತವಾಯಿತ್ತು–ಶ್ರೀಗುರುವಿನ ಕರಕಮಲದಲ್ಲುತ್ಪತ್ಯವಾದ ಇಷ್ಟಲಿಂಗದ ಸತ್ಕ್ರಿಯಾಪ್ರಕಾಶವು ಶರೀರಕ್ಕೆ ಪ್ರೀತಿಯಾಯಿತ್ತು, ಅದಲ್ಲದೆ

ವಿಭೂತಿರುದ್ರಾಕ್ಷೆಯನು ಧರಿಸಿಕೊಂಡು ಆ ಲಿಂಗವ ನೋಡುವಲ್ಲಿ ಪ್ರೀತಿಯಾಯಿತ್ತು. ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕಠಿಣವಾಯಿತ್ತು-ಆ ಲಿಂಗದ ಪ್ರಾಣಕಳಾಚೈತನ್ಯರೂಪವಾದ ಜ್ಞಾನಿಜಂಗಮದ ಭಕ್ತಿ ಶರೀರಕ್ಕೆ ಕರ್ಕಶವಾಯಿತ್ತು. ಏನು ಕಾರಣ? ಗೋವಗುಲಾಮ ತೊಂಡ ನೀಚಯೆಂದು ಜರಿದು ಝುಂಕಿಸುತಿರ್ದ ಕಾರಣ ಅತ್ಯಂತ ಕಷ್ಟವಾಯಿತ್ತು. ಮುಂದಕ್ಕೆ ಕಾಣಬಂದರ್ಥ,

IV------------------------------------------------------------------------

ದೇಹೇಂದ್ರಿಯಂಗಳಳಿಯದೆ ಲಿಂಗಭಕ್ತಿ ಸುಖವಾಯಿತ್ತು. ಪ್ರಾಣೇಂದ್ರಿಯಂಗಳಳಿವ ಜಂಗಮಭಕ್ತಿ ದುಃಖವೆಂಬುದೀ ವಚನದರ್ಥ.

---

೨೨೨

**ಬರಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ: ಮೊದಲದಿನ ಹಣೆಮುಟ್ಟಿ, ಮಱುದಿನ [1]ಕರಮುಟ್ಟಿ[1] ಮೂಱ[2]ಂಬೋ[2] ದಿನಕ್ಕೆ ತೂಕಡಿಕೆ ಕಾಣಿರಣ್ಣಾ! ಹಿಡಿದುದ ಬಿಡದಿರ್ದಡೆ ಕಡೆಗೆ ಚಾಚುವ, ಅಲ್ಲದಿರ್ದಡೆ ನಡುನೀರಲ್ಲದ್ದುವ ನಮ್ಮ ಕೂಡಲಸಂಗಮದೇವ.**

I-------------------------------------------------------------------------

ಬರಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ: ಬರಬರ ಭಕ್ತಿ-ಭಕ್ತಿ ಮಾಡುತ್ತ ಮಾಡುತ್ತಿರ್ದ ಹಾಂಗೆ, ಅರೆ ಆಯಿತ್ತು-ಅರ್ಧಭಕ್ತಿಯಾಯಿತ್ತು, ಕಾಣಿರಣ್ಣಾ-ಕಂಡಿರಣ್ಣಾ. ಮೊದಲ ದಿನ-ಪ್ರಥಮದಿವಸದಲ್ಲಿ, ಹಣೆ ಮುಟ್ಟಿ-ಬೀದಿಬಾಜಾರದಲ್ಲಿ ಜಂಗಮಮೂರ್ತಿಗಳ ಕಂಡಲ್ಲಿ ಲಲಾಟಮುಟ್ಟಿ ನಮಸ್ಕರಿಸುತ್ತಿಹನು. ಮಱುದಿನ-ಮರಳಿ ಮರುದಿವಸಕ್ಕೆ. ಕರಮುಟ್ಟಿ-ಬೀದಿಬಾಜಾರದಲ್ಲಿ ಜಂಗಮಮೂರ್ತಿಗಳ ಕಂಡಲ್ಲಿ ಒಂದಾನೊಂದು ಬಿದ್ದ ಕಡಲೆಕಾಳು ಆಯ್ವನೋಪಾದಿಯಲ್ಲಿ ನನ್ನ ಹಣೆಯ ಬರಹ ಇಷ್ಟಾಯಿತ್ತೆಂದು ಅವರ ಪಾದದ ಮೇಲೆ ಹಸ್ತವನೂರಿ ತನ್ನ ಹಣೆಗೆ ಒತ್ತಿಕೊಳುತ್ತಿಹನು. ಮೂಱಂಬೊ ದಿನಕ್ಕೆ-ಮೂರನೆಯ ದಿವಸಕ್ಕೆ, ತೂಕಡಿಕೆ ಕಾಣಿರಣ್ಣಾ-ಬೀದಿಬಾಜಾರದಲ್ಲಿ ಜಂಗಮಮೂರ್ತಿಗಳ ಕಂಡಲ್ಲಿ ಒಂದಾನೊಂದು [೧][ಕ್ರಕರ][೧] ನೋಪಾದಿಯಲ್ಲಿ ಓತಿ ತಲೆಹಾಕಿದೋಪಾದಿಯಲ್ಲಿ ತೂಕಡಿಸಿ ಬೀಳುವನೋಪಾದಿಯಲ್ಲಿ ಶರಣುಶರಣಾರ್ಥಿಯೆಂದು ತಾ ಕುಳಿತಂಥ ಸ್ಥಾನದಲ್ಲಿ ತಲೆಹಾಕುತ್ತಿಹನು, ಕಾಣಿರಣ್ಣಾ-ಕಂಡಿರಣ್ಣಾ. ಹಿಡಿದುದ ಬಿಡದಿರ್ದಡೆ-ತಾನು ಗಣಸಾಕ್ಷಿಯಾಗಿ ಪರಿಗ್ರಹಿಸಿದಂಥ ಶೀಲವ್ರತನೇಮಾಚಾರಂಗಳನು ಬಿಟ್ಟುಕೊಟ್ಟು ವ್ರತಭ್ರಷ್ಟನಾಗದೆ ದೇಹಾವಸಾನ ಪರಿಯಂತರ ಪಾರವೇದಿಸಿದರೆ. ಕಡೆಗೆ ಚಾಚುವ-ಭವಾಂಬುಧಿಯಿಂದ ಕಡೆಗೆ ದಾಂಟಿಸುವನು, ಅಲ್ಲದಿರ್ದಡೆ-ಹಾಂಗಲ್ಲದಿದ್ದರೆ, ನಡುನೀರಲದ್ದುವ-ಸಂಸಾರವಿಷಯವೆಂಬ ಭವಸಮುದ್ರದಲ್ಲಿ ಮುಳುಗಿಸಿಬಿಡುವನು, ಕೂಡಲಸಂಗಮದೇವ-ಪರಶಿವಲಿಂಗವು.

..........................

೧-೧ ಕ್ರೂರಕ (ಕ,ಗ). ೨+ಕಂಟಕಾದಿಗಳು ಬಂದು ಮಧ್ಯಕಲ್ಪನೆಯಲ್ಲಿ (ಕ,ಗ).

V-------------------------------------------------------------------------

1-1 (ಪ್ರ) ಕೈ ಮುಟ್ಟ 2-2 ಉ(ಅ).

..........................

ಒಂದನೆಯದಾದ ಗುರುಭಕ್ತಿಸಂಬಂಧವಾಯಿತ್ತೆಂಬುದೀಗ ಮೊದಲದಿನ ಹಣೆಮುಟ್ಟೆಯೆಂಬುದರ್ಥ. ಎರಡನೆಯದಾದ ಲಿಂಗಭಕ್ತಿಯಲ್ಲಿ ಸದ್ಭಾವವೆಂಬ ಹಸ್ತಸಂಬಂಧವಾಗಿಯೆಂಬುದೀಗ ಮಱುದಿನ ಕೈಮುಟ್ಟೆಯೆಂಬುದರ್ಥ. ಮೂಱನೆಯದಾದ ಜಂಗಮಭಕ್ತಿಯಲ್ಲಿ ಪರವಶವಾಯಿತ್ತೆಂಬುದೀಗ ಮೂಱುದಿನಕ್ಕೆ ತೂಕಡಿಕೆ ಕಾಣಿರಣ್ಣಾಯೆಂಬ ಶಬ್ದಕ್ಕರ್ಥ. ಪರಿಗ್ರಹಿಸಿದ ಶೀಲವ್ರತಾದಿಗಳನ್ನು ಅವಾಂತರದಲ್ಲಿ ಚಾಗೆ ಮಾಡದಿದ್ದರೆ ಸಂಸಾರಶರಧಿಯ ದಾಟಿಸುವನುಯೆಂಬುದೀಗ ಹಿಡಿದುದ ಬಿಡದಿರ್ದಡೆ ಕಡೆಗೆ ಚಾಚುವೆನೆಂಬುದರ್ಥ. ಹಾಂಗಲ್ಲದಿದ್ದರೆ ಘಾತವ ಕಾಣಬಾರದ ಭವಾಂಬುಧಿಯಲ್ಲಿ ಮುಳಿಗಿಸುವೆನೆಂಬುದೀಗ ಅಲ್ಲದಿರ್ದಡೆ ನಡುನೀರಲ್ಲದ್ದುವನೆಂಬುದರ್ಥ.

---

೨೨೩

**ಬಿದಿರಲಂದಣಮಕ್ಕು, ಬಿದಿರಲಿ ಸತ್ತಿಗೆಯಕ್ಕು, ಬಿದಿರಲಿ ಗುಡಿಗುಡಾರಮಕ್ಕು, ಬಿದಿರಲಿ ಸಕಲಸಂಪದಮಕ್ಕು, ಎಲ್ಲಾ ಬಿದಿರಿಂ ಭೋ ಬಿದಿರಿಂ ಭೋ ಬಿದಿರದವರ ಮೆಚ್ಚ ನಮ್ಮ ಕೂಡಲಸಂಗಮದೇವ.**

I-----------------------------------------------------------------------

ಬಿದಿರಲಿ-ವೇಣುವಿನಿಂದ, ಅಂದಣಮಕ್ಕು-ಪಾಲಿಕೆ ಬೊಂಬಾಗುತ್ತಿಹುದು. ಬಿದಿರಲಿ-ವೇಣುವಿನಿಂದ, ಸತ್ತಿಗೆಯಕ್ಕು-ಛತ್ರಿಕೆ ಕಾವಾಗುತ್ತಿಹುದು. ಬಿದಿರಲಿ-ವೇಣುವಿನಿಂದ, ಗುಡಿಗುಡಾರಮಕ್ಕುಂ-ರಾಯಢೇರೆ ಗುಡಿಗುಡಾರಗಳ ಕೋಲಾಗುತ್ತಿಹುದು. ಬಿದಿರಲಿ-ವೇಣುವಿಇಂದ, ಸಕಲಸಂಪದಮಕ್ಕು-ಸಮಸ್ತಸಾಧನಂಗಳಾಗುತ್ತಿಹುದು. ಎಲ್ಲಾ ಬಿದಿರಿಂ ಭೋ-ಸಮಸ್ತವೆಲ್ಲವು ಬಿದಿರಿನಿಂದಾಗುತ್ತಿಹವು. ಬಿದಿರದವರ-ಬಿದಿರಿನ ಮಹತ್ವಾತಿಶಯವ ಹೇಳದವರ, ಕೂಡಲಸಂಗಮದೇವ-ಮೇದಾರ ಕೇತಯ್ಯನು, ಮೆಚ್ಚ-ಮಮಕರಿಸನೆಂಬ ದೃಷ್ಟೋಪಮಾನದ ಹಾಂಗೆ.

● ಬಿದಿರಲಿ- "ಬಿದಿರು ದಾನೇ" ಯೆಂದು ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದರೆ, ಅಂದಣಮಕ್ಕು-ಪಾಲಿಕೆಯನೇರುವಂಥ ಪದವಿಯಾಗುತ್ತಿಹುದು. ಬಿದಿರಲಿ- "ಬಿದಿರು ದಾನೇ" ಯೆಂದು ತನುಮನದನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದರೆ, ಸತ್ತಿಗೆಯಕ್ಕು-ಏಕಚಕ್ರಾಧೀಶ್ವರನಾಗಿ ಹುಟ್ಟುವಂಥ ಪದವಿಯಾಗುತ್ತಿಹುದು. ಬಿದಿರಲಿ- "ಬಿದಿರು ದಾನೇ" ಯೆಂದು ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದರೆ, ಗುಡಿಗುಡಾರಮಕ್ಕು-ಸಾಲೋಕ್ಯಾದಿ ಚತುರ್ವಿಧಪದಂಗಳಾಗುತ್ತಿಹವು. ಬಿದಿರಲಿ- "ಬಿದಿರು ದಾನೇ"ಯೆಂದು ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದರೆ, ಸಕಲಸಂಪದಮಕ್ಕು-ಸಮಸ್ತ ಐಶ್ವರ್ಯಗುತ್ತಿಹವು. ಎಲ್ಲಾ ಬಿದಿರಿಂ ಭೋ-ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದರೆ ಎಲ್ಲಾ ಮೋಕ್ಷ ಸಾಧ್ಯವಾಗುತ್ತಿಹುದು.

ಬಿದಿರದವರ–ತನುಮನಧನಂಗಳನು ವಂಚಿಸಿಕೊಂಡವರ, ಕೂಡಲಸಂಗಮದೇವ–ಪರಶಿವಲಿಂಗವು, ಮೆಚ್ಚ–ಮಮಕರಿಸಿಕೊಂಡು ನಿಜಮೋಕ್ಷವ ಕರುಣಿಸಿಕೊಟ್ಟಾನೆ? ಕೊಡಲರಿಯನು.

II------------------------------------------------------------------------

ಬಿದಿರಲಂದಣಮಕ್ಕು–ತನುಮನಧನವನು ಗುರುಲಿಂಗಜಂಗಮಕ್ಕೆ ಬಿದಿರಿ ಭಕ್ತಿಯ ಮಾಡಿದಲ್ಲಿ ಪಲ್ಲಕ್ಕಿಪದವು ದೊರಕೊಂಬುತ್ತಿಹುದು. ಮುಂದಕ್ಕೆ ಕಾಣಬಂದರ್ಥ೧

.........................

೧+ ಶಿವಭಕ್ತಿಮತಿಕ್ರಮ್ಯ ಯದ್ಧಾನಂ ಚ ವಿಧೀಯತೇ ನಿಷ್ಫಲಂತು ಭವೇದ್ದಾನಂ ರೌರವಂ ನರಕಂ ವ್ರಜೇತ್ – ಆವನಾನೊಬ್ಬನು ಲಿಂಗಭಕ್ತಿಯನುಲ್ಲಂಘಿಸಿ ದಾನವ ಮಾಡುತ್ತಿದ್ದಾನು; ಆ ದಾನವು ಫಲವಿಲ್ಲದಂಥಾದು. ಕೇಡಿಲ್ಲದ ನರಕವನೆಯ್ದುತ್ತಿಹನು.

V------------------------------------------------------------------------

ತ್ರಿವಿಧಭಕ್ತಿಯ ಮಾಡಿದಲ್ಲಿ ನರವಾಹನ ದೊರೆಕೊಂಬುದೀಗ ಬಿದಿರಲಂದಣಮಕ್ಕು ಯೆಂಬುದರ್ಥ. ತ್ರಿವಿಧಭಕ್ತಿಯ ಮಾಡಿದಲ್ಲಿ ಕ್ರೋಧ ತಾಪಾದಿಗಳಳಿದು ಶಾಂತಿ ಯಸಸ್ಸು ದೊರೆಕೊಂಬುದು ಮತ್ತಂ ಆತಪತ್ರವಾಗುವುದೆಂಬುದರ್ಥ.

---

## ೨೨೪

**ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ, ಬಂಧುಗಳು ಬಂದಾಗಳಿಲ್ಲೆನ್ನ. ಲಿಂಗಕ್ಕಿಲ್ಲೆಂಬ, ಜಂಗಮಕ್ಕಿಲ್ಲೆಂಬ, ಬಂದ ಪುರಾತರಿಗಿಲ್ಲೆಂಬ, ಸಾವಾಗ ದೇಹವ ದೇಗುಲಕ್ಕೊಯ್ಯೆಂಬ, ದೇವರಿಗೆ ಹೆಣಬಿಟ್ಟಿ ಹೇಳಿತ್ತೇ? ಕೂಡಲಸಂಗಮದೇವಾ?**

I------------------------------------------------------------------------

ಉಂಬಾಗಳಿಲ್ಲೆನ್ನ–ಸೋಮವಾರ ಮಂಗಳವಾರ ಹುಣ್ಣಿಮೆ ಅಮವಾಸ್ಯೆ ಹಬ್ಬ ತಿಥಿಗಳು ಬಂದಲ್ಲಿ ಲೋಕದಾತ್ಮರುಗಳು ಅಕ್ಕಿ ಕಣಕ ಬೇಳೆ ಬೆಲ್ಲ ತುಪ್ಪ ಸಕ್ಕರೆ ಮೊದಲಾದಂಥವನ್ನು ತೆಗೆದುಕೊಂಡು ಮೃಷ್ಟಾನ್ನಪದಾರ್ಥಂಗಳನ್ನು ಮಾಡಿಕೊಂಡನುಭವಿಸುವರು, ತಾನು ಬಡವನಾಗಿ ಕೈಯಲ್ಲಿ ಕಾಸಿಲ್ಲವೆಂದು ಸುಮ್ಮನಿರಬಾರದೆ? ಸಾಲಸೋಲನಾದರೂ ಮಾಡಿ ಅಕ್ಕಿ ಕಣಕ ಬೇಳೆ ಬೆಲ್ಲ ತುಪ್ಪ ಸಕ್ಕರಿ ಮೊದಲಾದವನ್ನು ತೆಗೆದುಕೊಂಡು ಬಂದು ಮೃಷ್ಟಾನ್ನಪದಾರ್ಥಂಗಳನು ಮಾಡಿಕೊಂಡನುಭವಿಸುವಾಗಳೂ ಇಲ್ಲವೆಂದು ಹೇಳನು. ಉಡುವಾಗಳಿಲ್ಲೆನ್ನ–ಚೌತಿ ದೀವಳಿಗೆ ಶಿವರಾತ್ರಿ ಯುಗಾದಿ ಮೊದಲಾದ ಹಬ್ಬತಿಥಿಗಳು ಬಂದಲ್ಲಿ ಲೋಕದಾತ್ಮರುಗಳು ಜಳಕಜಂತಾವಳಿಗಳ ಮಾಡಿಕೊಂಡು ಹೊಸಹಚ್ಚಡ ಹೊಸಧೋತ್ರ ಹೊಸಮುಂಡಾಸ ಮೊದಲಾದವನ್ನು ತೆಗೆದುಕೊಂಡುಬಂದು ಧರಿಸಿಕೊಂಬುವರು. ತಾನು ಬಡವನಾಗಿ ಕೈಯಲ್ಲಿ ಕಾಸಿಲ್ಲವೆಂದು ಸುಮ್ಮನಿರಬಾರದೆ? ಸಾಲಸೋಲನಾದರೂ ಮಾಡಿ ಹೊಸಹಚ್ಚಡ ಹೊಸಧೋತ್ರ ಹೊಸಮುಂಡಾಸ ಮೊದಲಾದವನ್ನು ಕೊಂಡುತಂದು ಧರಿಸಿಕೊಂಬಾಗಳೂ ಇಲ್ಲವೆಂದು ಹೇಳನು. ಬಂಧುಗಳು

ಬಂದಾಗಳಿಲ್ಲೆನ್ನ: ಬಂಧುಗಳು ಬಂದಾಗ-ಬಾಂಧವರು ತನ್ನ ಮಂದಿರಕ್ಕೆ ಐದುಬಂದಾಗ, ಇಲ್ಲೆನ್ನ-ನನಗೆ ಉಂಬೋದಕ್ಕಿಲ್ಲ ಉಡೋದಕ್ಕಿಲ್ಲ ನೀವೇಕೆ ಬಂದಿದ್ದೀರಿ? ಹಿಂದಕ್ಕೆ ತಿರುಗಿಹೋಗರಿಯೆಂದು ಹೇಳದೆ ಸಾಲಸೋಲನಾದರೂ ಮಾಡಿ ಅಕ್ಕಿ ಕಣಕ ಬೇಳೆ ಬೆಲ್ಲ ತುಪ್ಪ ಸಕ್ಕರಿ ಮೊದಲಾದವನ್ನು ತೆಗದುಕೊಂಡುಬಂದು ಅಡಿಗೆಯನ್ನು ಮಾಡಿ ಅವರಿಗೆ ನೀಡಿ ತಾ ಉಂಬಾಗಳು ಇಲ್ಲವೆಂದು ಹೇಳನು.

ಲಿಂಗಕ್ಕಿಲ್ಲೆಂಬ-ಮುರು೧[ಕ ಆ]೧ ಡಿನ ಕಾಲು ಬಂಧಿಸಿದ ಹಾಂಗೆ ಹಳೆಯ ಅರಿವೆಯನು ಸುತ್ತಿಕೊಂಡಿರುವುದನು ನಿರ್ವಂಚಕ ಸದ್ಭಕ್ತರಾಗಲಿ ಅಪ್ಪಂಥ ಗುರುಚರಮೂರ್ತಿಗಳಾಗಲಿ ಕಂಡು, ಲಿಂಗಕ್ಕೆ ಅಪ್ಪಂಥ ಪಾವಡವನ್ನು ಧರಿಸಬಾರದೆ? ಎಂದು ಹೇಳಿದಲ್ಲಿ ನನಗೆ ಉಂಬೋದಕ್ಕಿಲ್ಲ ಉಡೋದಕ್ಕಿಲ್ಲ ಲಿಂಗಕ್ಕೆಲ್ಲಿಂದ ತರಲಿಯೆಂದು ದಾಂಟಿಸಿಬಿಡುವನು. ಜಂಗಮಕ್ಕಿಲ್ಲೆಂಬ-ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರುಗಳು ಪೇಟೆ ಮನೆ ಪುರ ಪಟ್ಟಣಸ್ಥಾನಂಗಳಿಗೆ ಬಂದು ಚೌಕಿಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನ್ನು ಮಾಡುತ್ತಿದ್ದಲ್ಲಿ ಎಲ್ಲ ಭಕ್ತಮಾಹೇಶ್ವರರೊಂದು ಭಕ್ತಿಬಿನ್ನಹವನ್ನು ಮಾಡುವರು. ಅಲ್ಲೊಬ್ಬ ಉಪಾಧಿಕನಿರುವನು. ನೀನೊಂದು ಭಕ್ತಿಬಿನ್ನಹ ಮಾಡೆಂದು ಹೇಳಿದಲ್ಲಿ ನನಗೆ ಉಂಬೋದಕ್ಕಿಲ್ಲ ಉಡುವುದಕ್ಕಿಲ್ಲ ನಾನೆಲ್ಲಿಂದ ಮಾಡಲಿಯೆಂದು ಅವರನು ದಾಂಟಿಸಿಬಿಡುವನು. ಬಂದ ಪುರಾತರಿಗಿಲ್ಲೆಂಬ; ಬಂದ-ತನ್ನ ಗೃಹಕ್ಕೆ ಕಾಯಕಕ್ಕೆಂದು ಐದುಬಂದಂಥ, ಪುರಾತರಿಗೆ-ಕಾಯಕದ ಶೀಲವಂತರಿಗೆ, ಇಲ್ಲೆಂಬ-ನಮಗೆ ಕಾಯಕವನೊಪ್ಪಿಸಬೇಡರಿ, ಕೊಡೊದಕ್ಕೇನೂ ಇಲ್ಲವು. ನಿಮಗೆ ಕೊಡುವಂಥ ನಾಡಿಗ ದೇಸಾಯಿ ಸೆಟ್ಟಿ ಚೌಧರಿ ವ್ರತಶೀಲವಂತರ ಮನೆಗಳು ಮುಂದಕ್ಕೈದಾವೆ ಹೋಗಿರಿ ಎಂದು ಅವರನು ದಾಂಟಿಸಿಬಿಡುವನು. ಸಾವಾಗ ದೇಹವ ದೇಗುಲಕ್ಕೊಯ್ಯೆಂಬ: ಸಾವಾಗ-ತಾನು ಮರಣವಾಗುವಾಗ, ದೇಹವ-ಅಂಗವನು, ದೇಗುಕ್ಕೊಯ್ಯೆಂಬ-ಶಿವಾಲಯದಲ್ಲಿ ತೆಗೆದುಕೊಂಡು ಹೋಗಿ ನಿಕ್ಷೇಪವ ಮಾಡೆಂದು ಹೇಳುವನು. ದೇವರಿಗೆ ಹೆಣಬಿಟ್ಟಿ ಹೇಳಿತ್ತೇ?-ಇಂಥ ಪಾಪಾತ್ಮನ ದೇಹವನ್ನು ಸುಡುಗಾಡದ ಅಪವಿತ್ರವಾದ ಭೂಮಿಯಲ್ಲಿ ಒಯ್ದು ಹೋಗಿ ಹುಗಿಯಬೇಕಲ್ಲದೆ ಶಿವಾಲಯದಲ್ಲಾಗಲೀ ಪುಷ್ಪದ ತೋಟದಲ್ಲಾಗಲೀ ನಿಕ್ಷೇಪವ ಮಾಡಬೇಕೆಂಬಂಥ ಶಾಸ್ತ್ರವೇನಾದರುಂಟೇ? ಇಲ್ಲವು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

........................

೧-೧ ಕಾ (ಕ,ಗ).

IV-----------------------------------------------------------

ದೇಹೇಂದ್ರಿಯಕ್ಕೆ ಜನನಸ್ಥಾನವಾದ ಲಿಂಗಜಂಗಮಕ್ಕೆ ಇಲ್ಲದೆ ಅನಿತ್ಯವಾದ ಬಂಧುಗಳಿಗೆ ಮಾಡೇನೆಂಬವನು ನರಕಿಯೆಂಬುದೀ ವಚನದರ್ಥ.

---

**ಪಾಪಿಯ ಧನವು ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ! ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ! ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯಾ.**

I------------------------------------------------------------------------

ಪಾಪಿಯ ಧನವು–ಪಾಪಾತ್ಮ ಗಳಿಸಿದಂಥ ದ್ರವ್ಯವು, ಪ್ರಾಯಶ್ಚಿತ್ತಕ್ಕಲ್ಲದೆ–ತಾನು ಮಾಡಿದಂಥ ಪಾಪ ಕಳಕೊಂಬುದಕ್ಕಲ್ಲದೆ, ಸತ್ಪಾತ್ರಕ್ಕೆ ಸಲ್ಲದಯ್ಯಾ–ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವುದಕ್ಕೆ ಯೋಗ್ಯವಾಗದಯ್ಯಾ. ನಾಯಹಾಲು–ಶುನಿಯ ಕೆಚ್ಚಲಲ್ಲಿರುವಂಥ ಕ್ಷೀರವು. ನಾಯಿಗಲ್ಲದೆ–ಶುನಿಯ ಮರಿಗನುಭವಿಸುವುದಕ್ಕೆ ಯೋಗ್ಯವಲ್ಲದೆ, ಪಂಚಾಮೃತಕ್ಕೆ ಸಲ್ಲದಯ್ಯಾ– "ಇಕ್ಷುಕ್ಷೀರಗವಃಕ್ಷೀರನಾರಿಕೇಳಮಧುಸ್ತಥಾ! ರಂಭಾಫಲ ಮಿತ್ಯುಕ್ತಂ ಪಂಚಾಮೃತಃ ಪ್ರಕೀರ್ತಿತಃ॥" ಎಂದು ಪಂಚಾಮೃತದಲ್ಲಿ ಬೆರಸಿ ಲಿಂಗಕ್ಕೆ ಅಭಿಷೇಕವ ನೀಡುವುದಕ್ಕೆ ಯೋಗ್ಯವಾಗದಯ್ಯಾ.

ನಮ್ಮ ಕೂಡಲಸಂಗನ ಶರಣರಿಗಲ್ಲದೆ–ಶಿವನ ಚಿತ್ಪ್ರಭಾಂಗಸ್ವರೂಪರಾದ ಜಂಗಮಮೂರ್ತಿಗಳಿಗಲ್ಲದೆ, ಮಾಡುವ ಭೂಸುರರಿಗೆ ಕೊಟ್ಟು ಭಕ್ತಿಯ ಮಾಡುವ, ಅರ್ಥ–ದ್ರವ್ಯ,[೧] ವ್ಯರ್ಥ ಕಂಡಯ್ಯಾ–ಅದು ವ್ಯರ್ಥಸ್ಯವಾಗಿಪ್ಪುದು ಕಾಣಯ್ಯಾ.

..........................

೧+ ವನ್ನು (ಕ, ಗ).

IV ------------------------------------------------------------------------

ಭೂತದೇಹಿಗಳ ಧನವು ಭೂತಗಳಿಗಲ್ಲದೆ, ಪರಂಜ್ಯೋತಿಸ್ವರೂಪವಾದ ಜಂಗಮಕ್ಕೆ ಸಲ್ಲದು. ನಾಯಹಾಲು ಪಂಚಾಮೃತಕ್ಕೆ ಸಲ್ಲದೆಂಬುದೀ ವಚನದರ್ಥ.

---

೨೨೬

**ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ, ಶಿಬಿಯ ಮಾಂಸ ವೃಥಾಹೋಯಿತ್ತಲ್ಲಾ. ॥ಸಾಕ್ಷಿ॥ ಶಿವಭಕ್ತಿಮತಿಕ್ರಮ್ಯಯದ್ದಾನಂ ಚ ವಿಧೀಯತೇ । ನಿಷ್ಫಲಂ ತು ಭವೇದ್ದಾನಂ ರೌರವಂ ನರಕಂ ವ್ರಜೇತ್ ॥ ಎಂದುದಾಗಿ ಕೂಡಲಸಂಗನ ಶರಣರನಱಿಯದೆ ಕೀರ್ತಿವಾರ್ತೆಗೆ ಮಾಡುವಾತನ ಧನವು ವೃಥಾ ಹೋಯಿತ್ತಲ್ಲಾ!**

I------------------------------------------------------------------------

ಬಲಿಯ–ಬಲಿಚಕ್ರವರ್ತಿಯ, ಭೂಮಿ–ಮೂರಡಿ ಭೂಮಿಯು, ಕರ್ಣನ–ಕರ್ಣನೆಂಬ ದೊರೆಯ, ಕವಚ–ವಜ್ರಾಂಗಿಯು, ಖಚರನ–ಖಚರನೆಂಬ ಸಿದ್ಧನ, ಅಸ್ಥಿ–[೧][ಶಲ್ಯ][೧]ವು ಶಿಬಿಯ–ಶಿಬಿ ಚಕ್ರವರ್ತಿಯ, ಮಾಂಸ–ಪಲಾಲವು, ವೃಥಾ ಹೋಯಿತ್ತಲ್ಲಾ!–ವ್ಯರ್ಥಸ್ಯವಾಗಿ ಹೋಯಿತ್ತಲ್ಲಾ. ॥ಗ್ರಂಥ॥ ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. ಶಿವಭಕ್ತಿಂ–ಶಿವಾದ್ವೈತ

ಭಕ್ತಿಯನ್ನು, ಅತಿಕ್ರಮ್ಯ ಬಿಟ್ಟುಕೊಟ್ಟು, ಯತ್-ಆವುದಾನೊಂದು ದಾನಂ-ಷೋಡಶಮಹಾದಾನವನು, ವಿಧೀಯತೇ-ವಿಧಾನೋಕ್ತವಾಗಿ ಜಂಗಮಕ್ಕೆ ಮಾಡುವಂಥದನು ಬಿಟ್ಟುಕೊಟ್ಟು ಭೂಸುರರುಗಳಿಗೆ ದಾನಂ-ಷೋಡಶಮಹಾದಾನಂಗಳನು ಕೊಟ್ಟು ಭಕ್ತಿಯ ಮಾಡಿದರೆ, ನಿಷ್ಫಲಂ-ಫಲವಿಲ್ಲವೆಂದು ಹೇಳುವಂಥದು. ಭವೇತ್-ಆಗುವುದು, ರೌರವಂ-ರವರವಯೆಂಬ ನರಕಂ-ನಿರವಯವನ್ನು, ವ್ರಜೇತ್-ಐದುತ್ತಿಪರು. ಎಂದುದಾಗಿ- ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಕೂಡಲಸಂಗನ ಶರಣರನಜೆಯದೆ-ಜಂಗಮಮೂರ್ತಿಗಳಿಗೆ ಸಕಲಪದಾರ್ಥವನ್ನು ನೀಡಿ ಸಂತುಷ್ಟಿಬಡಿಸುವಂಥದನ್ನು ತಿಳಿಯದೆ, ಕೀರ್ತಿ-ಐವತ್ತಾರು ದೇಶದವರು ಕೇಳಲೆಂದು ಮಾಡುವಂಥದೇ ಕೀರ್ತಿ, ವಾರ್ತೆಗೆ-ಐವತ್ತಾರು ದೇಶದವರು ಕೇಳಿಬಂದು ತೆಗೆದುಕೊಂಡು ಹೋಗಲೆಂಬುವಂಥದೇ ವಾರ್ತೆ ಮಾಡುವಾತನ-ಈ ಕೀರ್ತಿ ವಾರ್ತೆಗಾಗಿ ತೂಳಮೇಳದಿಂದ ಕೊಟ್ಟು ಭಕ್ತಿಮಾಡುವಂಥವನ, ಧನವು-ದ್ರವ್ಯವು. ವೃಥಾ ಹೋಯಿತ್ತಲ್ಲಾ!-ವ್ಯರ್ಥಸ್ಯವಾಗಿ ಹೋಯಿತ್ತಲ್ಲಾ!

..........................

೧-೧ ಶಾಲ್ಯ (ಕ,ಗ).

---

೨೨೭

**ಹತ್ತು ಮತ್ತರ ಭೂಮಿ, ಬತ್ತದ ಹಯನ, ನಂದಾದೀವಿಗೆ ನಡೆಸಿಹೆವೆಂಬವರ ಮುಖವ ನೋಡಲಾಗದು, ಅವರ ನುಡಿಯ ಕೇಳಲಾಗದು. ಅಂಡಜ, ಪಿಂಡಜ, ಸ್ವೇದಜ, ಉದ್ಭಿಜವೆಂಬ ಪ್ರಾಣಿಗಳಿಗೆ ಭವಿತವ್ಯವ ಕೊಟ್ಟವರಾರೊ? ಒಡೆಯರಿಗೆ ಉಂಡಿಗೆಯ ಮುಜಿದಿಕ್ಕಿದಂತೆ ಎನ್ನಿಂದಲೆ ಆಯಿತ್ತು, ಎನ್ನಿಂದಲೆ ಹೋಯಿತ್ತೆಂಬವನ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ, ಕೂಡಲಸಂಗಮದೇವ?**

I-----------------------------------------------------------------------------

ಹತ್ತು ಮತ್ತರ ಭೂಮಿ-ಒಂದು ಮತ್ತರಕ್ಕೆ ನೂರುಮಾರವೆನಿಸುವಂಥದೆ ಒಂದು ಮತ್ತರ. ಅಂಥ ಹತ್ತು ಮತ್ತರ ಭೂಮಿಯನ್ನು, ಬತ್ತದ ಹಯನ-ಒಂದಾಕಳು ಕೊಡುತ್ತಿದ್ದ ಹಾಂಗೆ ಮತ್ತೊಂದಾಕಳ ತಂದು ನಿಂದರಿಸುವಂಥದೆ ಬತ್ತದ ಹಯನ, ನಂದಾದೀವಿಗೆ ನಡೆಸಿಹೆವೆಂಬವರ- ಅಚ್ಚೆಳ್ಳೆಣ್ಣೆ ತುಪ್ಪದ ನಂದಾದೀವಿಗೆಯನ್ನು ದೇಹಾವಸಾನ ಪರಿಯಂತರ ಬಿಡದೆ ಪಾರವೇದಿಸೇನೆಂಬವರ, ಮುಖವ-ವದನವನ್ನು, ನೋಡಲಾಗದು-ನಿರೀಕ್ಷಣೆಯ ಮಾಡಲಾಗದು. ಅವರ ನುಡಿಯ-ಅವರಾಡುವಂಥ ಮಾತು ಕಥೆ ಪ್ರಸಂಗವನು, ಕೇಳಲಾಗದು- ಕಿವಿಗೊಟ್ಟಾಲಿಸಲಾಗದು. ಅಂಡಜ-ತತ್ತಿ ಒಡೆದು ಹುಟ್ಟಲ್ಪಟ್ಟ ಸರ್ಪ ಮೊದಲಾದ ಪ್ರಾಣಿಗಳು ಇಪ್ಪತ್ತೊಂದು ಲಕ್ಷ. ಪಿಂಡಜ-ಆತ್ಮರುಗಳ ಮಾಂಸ ಬಿಂದು ಪ್ರವೇಶದಿಂದ ಹುಟ್ಟಲ್ಪಟ್ಟ ನರ ಪಶು ಮೊದಲಾದ ಪ್ರಾಣಿಗಳು ಇಪ್ಪತ್ತೊಂದು ಲಕ್ಷ, ಉದ್ಭಿಜ-ಭೂಮಿಯ ತಂಗಲಲ್ಲಿ ಹುಟ್ಟಲ್ಪಟ್ಟ ಪಿಪೀಲಿಕಾದಿ ಪ್ರಾಣಿಗಳು ಇಪ್ಪತ್ತೊಂದು ಲಕ್ಷ, ಸ್ವೇದಜ-ಬೆವರುಬಿಂದುಗಳಿಂದ ಹುಟ್ಟಲ್ಪಟ್ಟ ಹೇನು ಕೂರಿಗಳು ಮೊದಲಾದ ಪ್ರಾಣಿಗಳು ಇಪ್ಪತ್ತೊಂದು ಲಕ್ಷ, ಎಂಬ-ಹೀಗೆಂದು ಹೇಳುವಂಥ, ಪ್ರಾಣಿಗಳಿಗೆ-ಜೀವರುಗಳಿಗೆ, ಭವಿತವ್ಯವ ಕೊಟ್ಟವರಾರೊ?-ಆಹಾರ ವ್ಯವಹಾರ ಭೋಗಭುಕ್ತಾದಿಗಳ ಕೊಟ್ಟು ರಕ್ಷಣ್ಯವ ಮಾಡಿದವರಾರೊ?

ಒಡೆಯರಿಗೆ ಉಂಡಿಗೆಯ ಮುಜಿದಿಕ್ಕಿದಂತೆ–ಒಬ್ಬಾನೊಬ್ಬ ರಾಜನು ತನ್ನ ಕೈಕೆಳಗೆ ಸೇವಕವೃತ್ತಿಯ ಮಾಡಿಕೊಂಡಿರುವಂಥ ಭೃತ್ಯನೊಂದಿಗೆ, ಎಲೊ ತಮ್ಮಾ ನಾವಾದಂಥ [ವರು][1] ಇವತ್ತು ಇಂಥ ದಿಕ್ಕಿನ ಕಡೆಗೆ ಸವಾರಿ ಹೋಗುತ್ತಿದ್ದೇವೆ. ಬೋನದ ಗುಂಡಿಗೆಯನ್ನು ತೆಗೆದುಕೊಂಡು ಬಾಯೆಂದು ಹೇಳಿ ತಾನು ಊರಿಂದ ಮೂಡಲ ಕಡೆಗೆ ಸವಾರಿ ಹೋಗಿಬಂದು ಉದ್ಯಾನದಲ್ಲಿ ಕುಳಿತುಕೊಂಡಿದ್ದಲ್ಲಿ ಈ ಭೃತ್ಯನಾದಂಥವನು ಬೋನದ ಗುಂಡಿಗೆಯನ್ನು ತೆಗೆದುಕೊಂಡು ಹೋಗಿ, ಒಡೆಯರಿಗೆ–ರಾಜರಿಗೆ, ಉಂಡಿಗೆಯ ಮುಜಿದಿಕ್ಕಿ–ಮೊಸರುಬೋನದ ಬುತ್ತಿ ಅರಿಷಿಣಬೋನದ ಬುತ್ತಿ ಸಾಸಿವೆಬೋನದ ಬುತ್ತಿ ಕಡಬು ಕಜ್ಜಾಯ ಬೆಲ್ಲದ ಚಕ್ಕುಲಿ ಕರಜಿಕಾಯಿ ಗಾರಿಗೆ ಹೂರಿಗೆ ಉದ್ದಿನೊಡೆ ಮೊದಲಾದವನ್ನು ಮುರಿಮುರಿದು ನೀಡಿ, ಎನ್ನಿಂದಲೆ ಆಯಿತ್ತು–ನಾ ತಂದ ಕಾರಣ ನಿನ್ನ ಕ್ಷುಧೆಯಡಗಿತ್ತು. ಎನ್ನಿಂದಲೆ ಹೋಯಿತ್ತು–ನಾ ತಾರದಿದ್ದರೆ ಇನ್ನೊಂದು ಗಳಿಗೆಗೆ ನೀ ಹಸಿಹಸಿದು ಸತ್ತುಹೋಗುತ್ತಿದ್ದೆಲ್ಲಾ. ನಾ ತಂದ ಕಾರಣ ನಿನ್ನ ಪ್ರಾಣ ಉಳಿದಿತ್ತು. ಎಂಬವನ–ಹೀಗೆಂದು ಹೇಳುವಂಥ ಭೃತ್ಯನ, ಬಾಯಲ್ಲಿ–ಕವಳಕದಲ್ಲಿ, ಮೆಟ್ಟಿ–ಅಡ್ಡ [2]ನೀಳವಾಗಿ[2] ತುಳಿದು, ಹುಡಿಯ ಹೊಯ್ಯದೆ ಮಾಣ್ಬನೆ–ಎನ್ನ [3][ನ್ನು][3] ಎನ್ನ ಭೃತ್ಯ ಎನ್ನ ಪದಾರ್ಥವನೆಗೆ ನೀಡಿ ಎನ್ನಮೇಲೆ ಇಷ್ಟೊಂದು ಅಹಂಕಾರವನ್ನು ಮುಂದುಗೊಂಡು ಮಾತಾಡುತಾನಲಾಯೆಂದು ಬಾಯಲ್ಲಿ ಬುಗ್ಗಿಯ ಹೊಯಿಸದೆ ಬಿಟ್ಟಾನೆ? ಬಿಡನು. ಹಾಂಗೆ;

● ಒಡೆಯರಿಗೆ–ಅರ್ಥಪ್ರಾಣಾಭಿಮಾನಂಗಳಿಗೆ ಕರ್ತೃವಾದ ಜಂಗಮಮೂರ್ತಿಗಳಿಗೆ, ಉಂಡಿಗೆಯ ಮುಜಿದಿಕ್ಕಿದಂತೆ–ಸಕಲಪದಾರ್ಥವನ್ನು ನೀಡಿ ಸಂತುಷ್ಟಿಬಡಿಸುವಂಥದು, ಎನ್ನಿಂದಲೆ ಆಯಿತ್ತು–ಹತ್ತು ಮತ್ತರ ಭೂಮಿ ಬತ್ತದ ಹಯನ ನಂದಾದೀವಿಗೆ ಜಂಗಮಮೂರ್ತಿಗಳಿಗೆ ಸಕಲ ಪದಾರ್ಥವ ನೀಡಿ ಸಂತುಷ್ಟಿಬಡಿಸುವಂಥದು ಎನ್ನಿಂದಲೆ ಉಂಟಾಯಿತ್ತು. ಎನ್ನಿಂದಲೆ ಹೋಯಿತ್ತೆಂಬವನ–ಹತ್ತುಮತ್ತರ ಭೂಮಿ ಬತ್ತದ ಹಯನ ನಂದಾದೀವಿಗೆ ಜಂಗಮಮೂರ್ತಿಗಳಿಗೆ ಸಕಲಪದಾರ್ಥವ ನೀಡಿ ಸಂತುಷ್ಟಿಬಡಿಸುವಂಥದು ನಾ ಸತ್ತುಹೋದ ಮೇಲೆ ಇನ್ನಾರು ಮಾಡುತ್ತೈದಾರೆ ನನ್ನ ತಲೆಯಲ್ಲೇ ಹೋಯಿತ್ತು, ಎಂಬವನ–ಹೀಗೆಂದು ಹೇಳಿಕೊಂಬಂಥ ಉಪಾಧಿಕನ, ಬಾಯಲ್ಲಿ–ಭಿನ್ನಾಭಿಪೇಕ್ಷೆಯೆಂಬ ರಸನೆಯಲ್ಲಿ, ಮೆಟ್ಟಿ–ಅಡ್ಡ ನೀಳವಾಗಿ ತುಳುಸಿ, ಹುಡಿಯಹೊಯ್ಯದೆ ಮಾಣ್ಬನೆ–ಭವರೋಗವೆಂಬ ಬುಗ್ಗಿಯ ಹೊಯ್ಯದೆ ಬಿಟ್ಟಾನೆ? ಬಿಡನು. ಕೂಡಲಸಂಗಮದೇವ–ಪರಶಿವಲಿಂಗವು.

..........................

೧–೧ದು (ಕ). ೨–೨ ನೀಳಕ (ಕ). ೩–೩ ನ್ನ (ಕ,ಗ).

---

೨೨೮

**ಅನವರತ ಮಾಡಿ [1]ನೀಡಿ[1]ಹೆನೆಂದು ಉಪ್ಪರಗುಡಿಯ ಕಟ್ಟಿ ಮಾಡುವ ಭಕ್ತನ ಮನೆಯದು [2][ಲ][2]ಂದಣಗಿತ್ತಿಯ ಮನೆ! ಸರ್ವಜೀವದಯಾಪಾರಿಯೆಂದು ಭೂತ [3]ದೇಹ[3] ಕಿಕ್ಕುವನ ಮನೆ ಸಯಿದಾನದ ಕೇಡು! ಸೂಳೆಯ ಮಗ ಮಾಳವ ಮಾಡಿದಡೆ ತಾಯ [4]ಹೆಸರಾಯಿತ್ತಲ್ಲದೆ[4] ತಂದೆಯ ಹೆಸರಿಲ್ಲ ಕೂಡಲಸಂಗಮದೇವಾ!**

..........................

2–2 ಅ (ಕ.ಗ).

I-------------------------------------------------------------------------------

ಅನವರತ–ಎಲ್ಲಾಗಳೂ, ಮಾಡಿ–ತ್ರಿಕಾಲಲಿಂಗಪೂಜೆಯನ್ನು ಅನುಗೈದು, ನೀಡಿಹೆನೆಂದು–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮ ಮೂರ್ತಿಗಳಿಗೆ ತನುಮನಧನಂಗಳನು ಎಡೆಯಮಾಡಿಹೆನೆಂದು, ಉಪ್ಪರಗುಡಿಯ ಕಟ್ಟಿ–ಉನ್ನತವಾದ ಭಕ್ತಿಮಂದಿರವನ್ನು ರಚಿಸಿ, ಮಾಡುವ–ದೀವಳಿಗೆ ಶಿವರಾತ್ರಿ ಯುಗಾದಿಪಾಡ್ಯ ತತ್ಕಾಲದಲ್ಲಿ ನೂರಾರಕ್ಕೆ ಜಂಗಮಮೂರ್ತಿಗಳ ನೆರಹಿಕೊಂಡು ತೋಳಮೇಳದಿಂದ ಕೊಟ್ಟು ಭಕ್ತಿಯ ಮಾಡುವ, ಭಕ್ತನ–ಶಿವಭಕ್ತನ, ಮನೆ – ಮಂದಿರವು, ಅದು [1][ಲ][1]ಂದಣಗಿತ್ತಿಯ ಮನೆ! ಅದು ಅಡು [ಗೂಳ]ಜ್ಜಿ ಮನೆಗೆ ಸಮಾನವಾಗಿರ್ಪುದು ಎಂಬಲ್ಲಿ ಅಡು [2][ಗೂಳ][2] ಜ್ಜಿ ಎಂಬಂಥವಳು ದೊಡ್ಡ ದೊಡ್ಡ ದೊರೆಗಳಿರುವಂಥ ಪೇಟೆ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ಒಂದು ಮನೆಯನ್ನು ಕಟ್ಟಿಕೊಂಡಿರುವಳು, ಅವಳ ಮನೆಗೆ ಕಳ್ಳರು ಸುಳ್ಳರು ಹಾದರಿಗರು ಮೊದಲಾದಂಥವರು ಬಂದು ಉಂಡುಟ್ಟು ಪರಿಣಾಮಿಸಿ ಹೋಗುತ್ತಿಹರು. ಹಾಂಗೆ ಈ ಭಕ್ತನು ದೀವಳಿಗೆ ಶಿವರಾತ್ರಿ ಯುಗಾದಿಪಾಡ್ಯ ತತ್ಕಾಲದಲ್ಲಿ ನೂರಾರಕ್ಕೆ ನೆರಹಿಕೊಂಡು ತೂಳಮೇಳದಿಂದ ಕೊಟ್ಟು ಭಕ್ತಿಯ ಮಾಡುತಿದ್ದಲ್ಲಿ ಅಲ್ಲಿ ಆಸಕರು ನಿರಾಸಕರು ಪ್ರಪಂಚಿಗಳು ನಿಃಪ್ರಪಂಚಿಗಳು ಬಂದಿರುತಿರ್ದ ಕಾರಣ, ಅದು [3][ಲ][3]ಂದಣಗಿತ್ತಿಯ ಮನೆ–ಅದು ಅಡು [ಗೂಳ]ಜ್ಜಿ ಮನೆಗೆ ಸಮಾನವಾಗಿರ್ಪುದು.

ಸರ್ವಜೀವದಯಾಪಾರಿಯೆಂದು–ಹಸಿವೆಗನ್ನು ಶಿಶುವಿಗೆ ಪಾಲ್ಬೆಣ್ಣೆ ಬಸವಗೆ ಹುಲ್ಲು ಇರುವಿಗೆ ಸಕ್ಕರಿ ಹಾಕಿಸುತ್ತಿದ್ದೇವಿ; ಪಕ್ಷಿಗಳಿಗೆ ಕಾಳು ಚೆಲ್ಲಿಸುತ್ತಿದ್ದೇವಿ; ಅನ್ನ ಛತ್ರ ಅರವಟಿಗೆ ವನಾಂತರ ಮೊದಲಾದವನ್ನು ಹಾಕಿಸುತ್ತದ್ದೇವಿ; ಹಸಿದು ಬಳಲಿದೆವೆಂಬ ಶಬ್ದವ ಕಿವಿಯಲ್ಲಿ ಕೇಳ್ಲೋದಿಲ್ಲ, ಸರ್ವಜೀವದಯಾಚಿತ್ತ ಕಾರುಣ್ಯರಸಭರಿತತ್ವವನ್ನು ಮುಂದುಗೊಂಡು ಸಮಸ್ತಪ್ರಾಣಿಗಳ ಮೇಲೆ ಕೃಪೆಯುಳ್ಳವರು ನಾವೆಂದು, ಭೂತದೇಹಕಿಕ್ಕುವನ–ಭವಿಜನಾತ್ಮರುಗಳಿಗೆ ಸಕಲಪದಾರ್ಥವ ನೀಡಿ ಸಂತುಷ್ಟಿಬಡಿಸುವಂಥವನ, ಮನೆ–ಮಂದಿರವು, ಸಯಿದಾನದ ಕೇಡು–ಅರ್ಥಹಾನಿ ಪದಾರ್ಥವೆಲ್ಲ ಚಾಗಿಯಾಗಿ ವ್ಯರ್ಥಸ್ಯವಾಗಿರ್ಪುದು. ಸೂಳೆಯ ಮಗ– ವಾರಾಂಗನೆಯ ಕುಮಾರನು, ಮಾಳವ ಮಾಡಿದಡೆ–ತಾಳ ಮೇಳ ಪಾತ್ರ ಮೊದಲಾದ ಪಂಚ ಮಹಾವಾದ್ಯಂಗಳಿಂದ ಮಾಳದ ಹಬ್ಬವನ್ನು ಅನುಗೈದರೆ, ತಾಯ ಹೆಸರಾಯಿತ್ತಲ್ಲದೆ–ಕೇಳಿದಂಥ ಆತ್ಮರುಗಳು ತಾಳ ಮೇಳ ಪಾತ್ರ ಮೊದಲಾದ ಪಂಚ ಮಹಾವಾದ್ಯಂಗಳಿಂದ ಮಾಳದ ಹಬ್ಬವನ್ನು ಯಾರು ಮಾಡುತ್ತೈದಾರೆಂದು ಕೇಳಿದರೆ ತಿಮ್ಮಾದೇವಿಯ ಮಗ ಬೊಮ್ಮಾದೇವಿಯ ಮಗ ಮಾಡುತೈದಾನೆಂದು ಹೇಳುವರಲ್ಲದೆ. ತಂದೆಯ ಹೆಸರಿಲ್ಲ–ತಿಮ್ಮಣ್ಣನ ಮಗ ಬೊಮ್ಮಣ್ಣನ ಮಗ ಮಾಡುತ್ತೈದಾನೆಯೆಂದು ಹೇಳುವುದಕ್ಕೆ ಅಭಿಧಾನವುಂಟೆ? ಇಲ್ಲವು, ಹಾಂಗೆ.

● ಸೂಳೆಯ ಮಗ–ಮಾಯಾಂಶಿಕವಾದ ಜೀವನು, ಮಾಳವ ಮಾಡಿದಡೆ–ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಿದರೆ, ತಾಯ ಹೆಸರಾಯಿತ್ತಲ್ಲದೆ–ಮಾಯಾಸಂಬಂಧವಾದ

ಚತುರ್ವಿಧ ಫಲಪದಂಗಳುಂಟಾಯಿತ್ತಲ್ಲದೆ, ತಂದೆಯ ಹೆಸರಿಲ್ಲ–ಶಿವಸಂಬಂಧವಾದ ನಿಜಮೋಕ್ಷವುಂಟಾಗಿದ್ದಿತ್ತೆ? ಇಲ್ಲವು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ ಅ (ಕ.ಗ). ೨–೨ ಗೋಲ (ಕ,ಗ). ೩–೩ ಅ (ಕ,ಗ).

III---------------------------------------------------------------------------------

4–4 ಹೆಸರಾಯಿತ್ತು (ಟ,ಡ)

.........................

ಲಂದಣಗಿತ್ತಿಯ–ಅಡುಗೂಳಜ್ಜಿಯ, ಅನ್ಯದೈವದ ಭಜನೆಯನುಳ್ಳ ಭಿನ್ನಭಕ್ತನು ಮಾಡುವ ಭಕ್ತಿ ಪರಶಿವನಿಗೆ ಯೋಗ್ಯವಿಲ್ಲದೆ ಹೋಯಿತ್ತು ಎಂಬುದೀಗ ಸೂಳೆಯ ಮಗ ಮಾಳವ ಮಾಡಿದರೆ ತಾಯ ಹೆಸರಾಯಿತ್ತು ತಂದೆಯ ಹೆಸರಿಲ್ಲವೆಂಬ ಶಬ್ದಕ್ಕರ್ಥ.

IV---------------------------------------------------------------------------------

1–1 x (ತ). 3–3 ದಯ (ತ).

.........................

ಪತಿವ್ರತಾಭಾವದಲ್ಲಿ ಜಂಗಮವೇ ಲಿಂಗವೆಂದು ಜಂಗಮವೇ ಪತಿಯೆಂದು ತನುಮನಧನವ ಸವೆಯದೆ ಕೀರ್ತಿವಾರ್ತೆ ಭೂತದಯಕೆ ನೆರಹಿ ಮಾಡೂದು ಅಜ್ಞಾನವೆಂಬುದೀ ವಚನದರ್ಥ.

---

೨೨೯

**ಕಾಲಾಗ್ನಿರುದ್ರನ ಮೇಳಾಪವಜೆಯದವರು ಕಾಳು [1][ಬೇಳೆ][1]ನುತಿಪ್ಪರಯ್ಯಾ; [2]ಕಾನನದೊಳಗಣ[2] ಕಿಚ್ಚು ಬಾ[3]ಳ[3]ವೆ ಯಾಗಿ [4]ಮಿಕ್ಕಡೊಙಿಲುವ[4] ಬಳ್ಳುವಿನಂತಿಪ್ಪರಯ್ಯಾ ಮನುಜರು ನರವಿಂದ್ಯದೊಳಗೆ. ತತ್ಕಾಲ ಪ್ರೇಮವನಜೆಯದೆ ವಿಭವಕ್ಕೆ ಮಾಡುವವನ ಭಕ್ತಿ ಇರುಳು ಸತ್ತಿಗೆ ಹಿಡಿಸಿಕೊಂಡಂತೆ ಕೂಡಲಸಂಗಮದೇವಾ.**

.........................

1–1 ಬೀಳೆ (ಕ,ಗ)

I---------------------------------------------------------------------------------

ಕಾಲಾಗ್ನಿರುದ್ರನ ಮೇಳಾಪವ–ಲೋಕದಲ್ಲಿ ಭವಿಜನಾತ್ಮರುಗಳಿಗೆ ಯಮಶಿಕ್ಷೆ ಶಿವಭಕ್ತರುಗಳಿಗೆ ಕಾಲಾಗ್ನಿರುದ್ರನ ಭಟಾಳಿಗಳಿಂದ ಶಿಕ್ಷೆಯಾಯಿತ್ತೆಂಬಂಥದನ್ನು, ಅಜೆಯದವರು–ತಿಳಿಯದವರು, ಕಾಳು [೧][ಬೇಳೆ][೧] ನುತಿಪ್ಪರಯ್ಯಾ–ಮಾಡಬಾರದ ಪಾಪವ ಮಾಡಿ ಕಾಲಾಗ್ನಿರುದ್ರನ ಭಟಾಳಿಗಳಿಂದ ಬಡಿ ಹೋರಿಯಾಗಿ ಅರಿಯೋ ಮೋರಿಯೋ ಎಂದು ಹುಯ್ಯಲಿಡುತಿಪ್ಪರಯ್ಯಾ. ಕಾನನದೊಳಗಣ–ದುರ್ಧರವಾಗಿ ಬೆಳದಿರುವಂಥ ಅಡವಿಯಲ್ಲಿ, ಕಿಚ್ಚು–ಅಗ್ನಿಯು, ಬಾಳವೆಯಾಗಿ–ವೆಗ್ಗಳವಾಗಿ,

ಮಿಕ್ಕಡೊಱಲುವ: ಮಿಕ್ಕಡೆ–ಎಲ್ಲ ಸುಟ್ಟು ನಡುವೆ ಕಳದಡ್ಡಗಲ ಉಳಿದಿರುವುದು; ಅದರೊಳಗೆ ಸಿಕ್ಕಿಕೊಂಡು, ಒಱಲುವ–ಕೂಗುವ, ಬಳ್ಳುವಿನಂತೆ–ಮುದಿಬಳ್ಳುವಿನ ಹಾಂಗೆ, ಮನುಜರು–ನರಮನುಷ್ಯರು, ಇಪ್ಪರಯ್ಯಾ–ಮಾಡಬಾರದ ಪಾಪವ ಮಾಡಿ ಕಾಲಾಗ್ನಿ ರುದ್ರನ ಭಟಾಳಿಗಳಿಂದ ಬಡಿ ಹೋರಿಯಾಗಿ ಬಡಿಸಿಕೊಳುತ್ತ ಅರಿಯೋ ಮೊರಿಯೋ ಎಂದು ಹುಯ್ಯಲಿಡುತಿಪ್ಪರಯ್ಯಾ.

ನರವಿಂದ್ಯದೊಳಗೆ–ಜನಾರಣ್ಯದಲ್ಲಿ. ತತ್ಕಾಲಪ್ರೇಮವನಱಿಯದೆ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ಸಮಯಕಾಲ ಉಚಿತಕಾಲವನ್ನು ತಿಳಿದು ತಮ್ಮಲ್ಲಿದ್ದಂಥ ಪದಾರ್ಥವನ್ನು ನೀಡಿ ಸಂತುಷ್ಟಿಬಡಿಸಬೇಕೆಂಬಂಥದನ್ನು ತಿಳಿಯದೆ, ವಿಭವಕ್ಕೆ ಮಾಡುವವನ–ಕೀತಿವಾರ್ತೆಗೆ ಅನುಗೈವಂಥನ, ಭಕ್ತಿ–ಭಿನ್ನಭಕ್ತಿಯು, ಇರುಳು ಸತ್ತಿಗೆ ಹಿಡಿಸಿಕೊಂಡಂತೆ–ಹಗಲೊತ್ತಿನೊಳಗ ಸತ್ತಿಗೆಯನ್ನು ಹಿಡಿಸಿಕೊಂಡು ಹೋದರೆ ಇವನು ನಾಡಿಗರ ಮಗನೊ? ದೇಸಾಯಿಗಳ ಮಗನೊ? ಏನು ದೊರೆದಾತರ ಮಗನೊ? ಎಂಥ ಪುಣ್ಯಾತ್ಮನಿದ್ದಾನೊ, ಸತ್ತಿಗೆಯ ಹಿಡಿಸಿಕೊಂಡು ಅದರ ನೆರಳಲ್ಲಿ ಹೋಗುತ್ತೈದಾನೆಂದು ಆಶ್ಚರ್ಯಂಬಟ್ಟು ನೋಡುವರು. ಅದಲ್ಲದೆ ರಾತ್ರಿಯಲ್ಲಿ ಸತ್ತಿಗೆಯ ಹಿಡಿಸಿಕೊಂಡು ಹೋದರೆ ಇವ ಯಾವನೋ ಬಹು ವಿಡಾಯಗಾರನೈದಾನೆ. ತಂಪೊತ್ತಿನೊಳಗೆ ಸತ್ತಿಗೆ ಹಿಡಿಸಿಕೊಂಡು ಹೋಗುತ್ತೈದಾನೆಂದು ನಕ್ಕು ಹಾಸ್ಯವ ಮಾಡಿ ಬಿಡುವರೆಂಬ ಹಾಂಗೆ; ಸಮರಸಭಾವದಿಂದ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡಿದರೆ ಹಗಲೊತ್ತಿನೊಳಗೆ ಸತ್ತಿಗೆಯ ಹಿಡಿಸಿಕೊಂಡು ಹೋದವನ ಹಾಂಗೆ ಸುಖವಾದ ಹಾಂಗೆ ನಿತ್ಯವಾದ ನಿಜಮೋಕ್ಷವೆ ಉಂಟಾಗುತ್ತಿಹುದು. ಅದಲ್ಲದೆ ಕೀರ್ತಿವಾರ್ತೆಗೋಸ್ಕರವಾಗಿ ಭಕ್ತಿ ಮಾಡಿದರೆ ಇರುಳೊತ್ತಿನೊಳಗೆ ಸತ್ತಿಗೆ ಹಿಡಿಸಿಕೊಂಡು ಹೋಗುವಂಥವನ ನೋಡಿ ನಕ್ಕು ಹಾಸ್ಯವ ಮಾಡಿದ ಹಾಂಗೆ ವ್ಯರ್ಥಸ್ಯವಾಗಿರ್ಪುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ಬೋಳೆ (ಕ,ಗ).

II ---------------------------------------------------------------

2–2 ಕಾನನದಡವಿಯಲ್ಲಿ (ಚ,ಜ). 3–3 ಳು (ಚ,ಜ).4–4 ಹೊಕ್ಕದೊಱಲುವ (ಚ,ಜ)

..........................

ಕಾಲಾಗ್ನಿ ರುದ್ರನ ಮೇಳಾಪವನಱಿಯದವರು ಕಾಳುಬೇಳೆನುತಿಪ್ಪರಯ್ಯಾ–ತ್ರಿಕಾಲಪೂಜಾಕ್ರೀಗಳ ಕೈಕೊಂಡೊಪ್ಪುವ ಇಷ್ಟಲಿಂಗದಷ್ಟವಿಧಾರ್ಚನೆ ಷೋಡಶೋಪಚಾರಂಗಳ ಸಮರಸವನು ತಿಳಿಯದವರು ಜನನಮರಣಂಗಳಲ್ಲಿ ಎಡೆಯಾಡುತ್ತಿಪ್ಪರಯ್ಯಾ. ಕಾನನದಡವಿಯಲ್ಲಿ ಕಿಚ್ಚು ಬಾಳುವೆಯಾಗಿ–ಭವಾರಣ್ಯವೆಂಬ ವಿಪಿನದಲ್ಲಿ ಪಂಚಾಗ್ನಿ ತಾಪತ್ರಯಾಗ್ನಿಯೆ ಬದುಕಾಗಿ, ಹೊಕ್ಕದೊಱಲುವ ಬಳ್ಳುವಿನಂತೆ ಇಪ್ಪರಯ್ಯಾ–ಮೋಕ್ಷಮಾರ್ಗವನು ಕಾಣದೆ ಭವಾರಣ್ಯಪ್ರವೇಶಿಯಾಗಿ ಶಿವಧೋ ಎಂದು ಮೊರೆಯಿಟ್ಟು ಸತ್ತುಹೋಗುತ್ತಿರ್ಪರು. ಮುಂದಕ್ಕೆ ಕಾಣಬಂದರ್ಥ.

---

೨೩೦

**ಹರಸಿ ಮಾಡುವುದು ಹರಕೆಯ ದಂಡ; ನೆರಹಿ ಮಾಡುವುದು ಡಂಬಿನ ಭಕ್ತಿ; ಹರಸಬೇಡ, ನೆರಹಬೇಡ, ಬಂದಬರವನಜಿತಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವನ.**

I----------------------------------------------------------------------------------

ಹರಸಿ ಮಾಡುವುದು–ಸಾವಿರಯ್ಯಗಳಿಗೆ ಪಾವಡ ಕೊಟ್ಟೇವು. ಎರಡುಸಾವಿರ ಅಯ್ಯಗಳಿಗೆ ಹಚ್ಚಡ ಕಂಬಳಿ ಕೊಟ್ಟೇವು. ಮೂರಸಾವಿರಯ್ಯಗಳಿಗೆ ಕೊಡೆ ಪಾದರಕ್ಷೆ ಕೊಟ್ಟೇವೆಂದು ಹರಸಿಕೊಂಡನುಗ್ಯೆವಂಥದನ್ನು, ಹರಕೆಯ ದಂಡ–ದಂಡವ ತೆತ್ತವನೋಪಾದಿಯಲ್ಲಿ ಆಡಿದ್ದಕ್ಕೂ ಮಾಡಿದ್ದಕ್ಕೂ ಸಮಾನವಾಗಿಪ್ಪುದು. ನೆರಹಿ ಮಾಡುವುದು–ದೀವಳಿಗೆ ಶಿವರಾತ್ರಿ ಯುಗಾದಿಪಾಡ್ಯ ತತ್ಕಾಲದಲ್ಲಿ ನೂರಾರು ಜಂಗಮಮೂರ್ತಿಗಳ ನೆರಹಿಕೊಂಡು ಅನುಗ್ಯೆವಂಥದು, ಡಂಬಿನ ಭಕ್ತಿ–ಅದು ಭೂಟಕತ್ವದ ಭಕ್ತಿಯು. ಹರಸಬೇಡ–ಹರಕೆಯನ್ನು ಮಾಡಿಕೊಂಡು ಭಕ್ತಿಯನನುಗ್ಯೆಯ ಬೇಡವು. ನೆರಹಬೇಡ–ನೂರಾರಕ್ಕೆ ನೆರಹಿಕೊಂಡು ಭಕ್ತಿಯನನುಗ್ಯೆಯ ಬೇಡವು. ಬಂದ ಬರವನಜಿ ತಡೆ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗ್ಯೆದು ಬಂದಂಥ ಚಮತ್ಕಾರವನ್ನು ತಿಳಿದು ತಮ್ಮಲ್ಲಿದ್ದಂಥ ಪದಾರ್ಥವ ನೀಡಿ ಸಂತುಷ್ಟಿಬಡಿಸಿದರೆ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಕೂಡಿಕೊಂಡಿಪ್ಪ–ಅಂತಪ್ಪ ಸದ್ಭಕ್ತನು ತನ್ನಲ್ಲೇಕಾರ್ಥವ ಮಾಡಿಕೊಂಡಿಪ್ಪನು.

IV--------------------------------------------------------------------------------

ಪರಂಜ್ಯೋತಿಯಾದ ಜಂಗಮದಲ್ಲಿ ಪ್ರಾಣವ ಸಮರ್ಪಿಸಲಜಿಯದೆ ಹರಸಿ ನೆರಹಿ ಮಾಡೂದು ಹಗರಣವೆಂಬುದೀ ವಚನದರ್ಥ.

---

೨೩೧

**ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು. ಬಂದಡೊಂದು ಲೇಸು, ಬಾರದಿದ್ದಡೆರಡು ಲೇಸು. ಅಲ್ಲಿದ್ದಡೆಯೂ ಲಿಂಗಕ್ಕೆ ಬೋನ, ಇಲ್ಲಿದ್ದಡೆಯೂ ಲಿಂಗಕ್ಕೆ ಬೋನ. ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂಬ ದುಃಖವಿಲ್ಲ. ಇದು ಕಾರಣ ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು.**

I----------------------------------------------------------------------------------

ಹಡದೊಡವೆ–ತಾ ಗಳಿಸಿದಂಥ ಹೊನ್ನು ಹಣ ವಸ್ತ್ರಾಭರಣಂಗಳನು, ವಸ್ತ್ರವನು–ಹದಿನೆಂಟು ಧಾನ್ಯಂಗಳನ್ನು ಮೃಡಭಕ್ತರಿಗಲ್ಲದೆ–ರಕ್ಷಣ್ಯಕ್ಕೆ ಕರ್ತೃವಾದ ಶಿವಭಕ್ತರಿಗಲ್ಲದೆ. ಕಡ–ಕೈಗಡ ಕುರುಹುಗಡ, ಬಡ್ಡಿಯ–ಹಾಗಬಡ್ಡಿ ಬೇಳೆಬಡ್ಡಿ ವೀಸಬಡ್ಡಿಯನ್ನು, ಕೊಡಲಾಗದು–ಭವಿಜನಾತ್ಮರುಗಳಿಗೆ ಕೊಟ್ಟು ವ್ಯವಹರಿಸಲಾಗದು. ಬಂದಡೆ–ಶಿವಭಕ್ತರ ಮೇಲೆ ಕೊಟ್ಟಂಥ ಗಂಟು ಬಡ್ಡಿಸಹವಾಗಿ ಹರಿದು ಬಂದರೆ, ಒಂದು ಲೇಸು–ಒಂದನೆಯ ಪರಿಣಾಮವು, ಬಾರದಿದ್ದಡೆ–ಶಿವಭಕ್ತರ ಮೇಲೆ ಕೊಟ್ಟಂಥ ಗಂಟು ಬಡ್ಡಿ ಸಹವಾಗಿ ಹರಿದು ಬಾರದಿದ್ದರೆ, ಎರಡು ಲೇಸು–ಎರಡನೆಯ ಪರಿಣಾಮವು.

ಅಲ್ಲಿದ್ದಡೆಯೂ–ಆ ಭಕ್ತರಲ್ಲಿದ್ದರೆಯೂ ಜಂಗಮಾರ್ಚನೆಗುತಿರ್ದ ಕಾರಣ, ಲಿಂಗಕ್ಕೆ ಬೋನ–ಶಿವನಿಗೆ ಸಮರ್ಪಣೆಯಾಗುತ್ತಿಹುದು. ಇಲ್ಲಿದ್ದಡೆಯೂ–ತಮ್ಮ ಮನೆಯೊಳಗಿರ್ದರೆಯೂ ಜಂಗಮಾರ್ಚನೆಯಾಗುತಿರ್ದ ಕಾರಣ, ಲಿಂಗಕ್ಕೆ ಬೋನ–ಶಿವನಿಗೆ ಸಮರ್ಪಣೆಯಾಗುತ್ತಿಹುದು. ಲಿಂಗದೊಡವೆ–ಶಿವನೊಡವೆಯಾದ ಹೊನ್ನು ಹಣ ಹದಿನೆಂಟು ಧಾನ್ಯವು, ಲಿಂಗಕ್ಕೆ ಸಾರಿತ್ತಾಗಿ–ಶಿವನಿಗೆ ಸಮರ್ಪಣೆಯಾಯಿತ್ತಾಗಿ, ಬಂದಿತ್ತೆಂಬ–ಶಿವಭಕ್ತರ ಮೇಲೆ ಕೊಟ್ಟಂಥ ಗಂಟು ಬಡ್ಡಿ ಸಹವಾಗಿ ಹರಿದು ಬಂದಿತ್ತೆಂಬ, ಪರಿಣಾಮವಿಲ್ಲ–ಸಂತೋಷವಿಲ್ಲವು, ಬಾರದೆಂಬ–ಶಿವಭಕ್ತರ ಮೇಲೆ ಕೊಟ್ಟಂಥ ಗಂಟುಬಡ್ಡಿ ಸಹವಾಗಿ ಹರಿದು ಬಾರದೆಂಬ, ದುಃಖವಿಲ್ಲ–ವ್ಯಥೆಯಿಲ್ಲವು. ಇದು ಕಾರಣ– ಇದು ನಿಮಿತ್ತಾರ್ಥ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗಲ್ಲದೆ–ರಕ್ಷಣ್ಯಕ್ಕೆ ಕರ್ತೃವಾದ ಶಿವಭಕ್ತರುಗಳಿಗಲ್ಲದೆ, ಕಡಬಡ್ಡಿಯ ಕೊಡಲಾಗದು: ಕಡ–ಕೈಗಡ ಕುರುಹುಗಡ, ಬಡ್ಡಿಯ ಹಾಗಬಡ್ಡಿ ಬೇಳೆಬಡ್ಡಿ ವೀಸಬಡ್ಡಿಯನ್ನು, ಕೊಡಲಾಗದು–ಭವಿಜನಾತ್ಮರುಗಳಿಗೆ ಕೊಟ್ಟು ವ್ಯವಹರಿಸಲಾಗದು.

..........................

೧+ ವು (ಕ,ಗ).

IV---------------------------------------------------------------------------

ಲಿಂಗದಿಂದಲಾದ ಧನವು ಲಿಂಗಕ್ಕೆ ಸಲ್ಲಬೇಕು, ಕೊಂಬ ಕೊಡವ ಎಡೆಯಲ್ಲಿ ಲಿಂಗಕ್ಕೆ ಸಂದರೆ ಪವಿತ್ರವೆಂಬುದೀ ವಚನದರ್ಥ.

---

೨೩೨

**ಓಡಲಾಱದ ಮೃಗವು ಶ್ವಾನಂಗೆ ಮಾಂಸವ ಕೊಡುವಂತೆ ಮಾಡಲಾಗದು ಭಕ್ತ, ಮಾಡಿಸಿಕೊಳ್ಳಲಾಗದು ಜಂಗಮವು; ಹಿರಿಯರು ನರಮಾಂಸವ ಭುಂಜಿಸುವರೆ? ತನುವುಕ್ಕಿ ಮನವುಕ್ಕಿ ಮಾಡಬೇಕು ಭಕ್ತನು, ಮಾಡಿಸಿಕೊಳಬೇಕು ಜಂಗಮ, ಕೂಡಲಸಂಗಮದೇವಾ.**

I ---------------------------------------------------------------------------

ಓಡಲಾಱದ–ಮುನ್ನೊಂದು ದಿವಸದಲ್ಲಿ ಒಂದು ರೋಗರುಜೆ ಏನಾದರೂ ಬಂದಿರುವುದು, ಒಂದು ಕಲ್ಲುಪೆಟ್ಟಾದರೂ ತಗುಲಿರುವುದು, ಒಂದು ಬಾಣಪ್ರಯೋಗವಾದರೂ ಆಗಿರುವುದರಿಂದ ಓಡಲಾರದ "ಓಡು ಪಲಾಯನೇ"ಯೆಂದು ಪಲಾಯನ ಆಗಲಾರದ, ಮೃಗವು – ಎರಳೆಯು, ಶ್ವಾನಂಗೆ– ಶುನಕನಿಗೆ, ಮಾಂಸವ ಕೊಡುವಂತೆ – ನಾನೆಷ್ಟಾದರೂ ಸಜ್ಜನನ ಪ್ರಾಣಿ ನೀನೆಷ್ಟಾದರೂ ದುರ್ಜನಪ್ರಾಣಿ, ನಾನೇನಾದರೂ ಓಡಲಾರದಿದ್ದೇನೆ. ಎನ್ನ ದೇಹದ ಪಾಲಾಲವನ್ನು ತಿನ್ನು ತಿನ್ನು ಎಂದು ತಿನಗೊಡುವಂತೆ, ಮಾಡಲಾಗದು ಭಕ್ತ: ಭಕ್ತ–ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರುಗಳು ಪೇಟೆ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ಬಂದು ಚೌಕಿಮಠಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವ ಮಾಡುತ್ತಿದ್ದಲ್ಲಿ ಎಲ್ಲಾ ಭಕ್ತಮಾಹೇಶ್ವರರೊಂದು ಭಕ್ತಿಬಿನ್ನವನ್ನು ಮಾಡುವರು. ಅಲ್ಲೊಬ್ಬ ಉಪಾಧಿಕ

ಭಕ್ತನಿರುವನು. ನೀನೊಂದು ಭಕ್ತಿಬಿನ್ನಹ ಮಾಡಲೆಂದು ಹೇಳಿದಲ್ಲಿ ನಾನೆಲ್ಲಿ ಮಾಡಲಿ ಎಂದು ಹೇಳುವನು. ಅಲ್ಲಿದ್ದ ಭಕ್ತಮಾಹೇಶ್ವರರು, ನಿನ್ನ ಪಜ್ತಿ ಪಾದಾರ್ಚನೆಯಲ್ಲಿ ಬರುಗೊಡೋದಿಲ್ಲ, ನಿನ್ನ ಹೊರಗಿಡುತ್ತೇವೆಂದಲ್ಲಿ ಬಲಾತ್ಕಾರದಿಂದ ಭಕ್ತಿಯನು, ಮಾಡಲಾಗದು–ಅನುಗ್ಯೆಯಲಾಗದು, ಭಕ್ತ–ಶಿವಭಕ್ತನು. ಮಾಡಿಸಿ ಕೊಳಲಾಗದು– ಬಲಾತ್ಕಾರದಿಂದ ಮಾಡಿದಂಥ ಭಕ್ತಿಪದಾರ್ಥವನ್ನು ಕೈಕೊಂಡನುಭವಿಸಲಾಗದು, ಜಂಗಮವು–ಜ್ಞಾನಜಂಗಮಮೂರ್ತಿಗಳು.

ಹಿರಿಯರು–ಜ್ಞಾನಿಗಳು, ನರಮಾಂಸವ ಭುಂಜಿಸುವರೆ?–ಬಲಾತ್ಕಾರದಿಂದ ಮಾಡಿದಂಥ ಭಕ್ತಿಪದಾರ್ಥವೇ ನರಮಾಂಸಕ್ಕೆ ಸಮಾನವು. ಆ ನರಮಾಂಸಕ್ಕೆ ಸಮಾನವಾದ ಪದಾರ್ಥವನ್ನು ಕೈಕೊಂಡನುಭವಿಸುವರೆ? ಅನುಭವಿಸಲಾಗದು, ತನುವುಕ್ಕಿ ಮನವುಕ್ಕಿ ಮಾಡಬೇಕು ಭಕ್ತನು–ತನುವಿನಲ್ಲಿ ಶ್ರದ್ಧೆ ಮನದಲ್ಲಿ ವಿಶ್ವಾಸವನು ಮುಂದುಗೊಂಡನುಗ್ಯೆಯಬೇಕು, ಭಕ್ತನು–ಶಿವಭಕ್ತನು, ಮಾಡಿಸಿಕೊಳಬೇಕು ಜಂಗಮ–ತನುವಿನಲ್ಲಿ ಶ್ರದ್ಧೆ ಮನದಲ್ಲಿ ವಿಶ್ವಾಸ ಮುಂದುಗೊಂಡು ಮಾಡುವಂಥ ಭಕ್ತಿಪದಾರ್ಥವ ಕೈಕೊಂಡನುಭವಿಸಬೇಕು, ಜಂಗಮ–ಜ್ಞಾನಜಂಗಮಮೂರ್ತಿಗಳೂ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೨೩೩

**ಬಂದುದ ಕೈಕೊಳಬಲ್ಲೊಡೆ ನೇಮ, ಇದ್ದುದ ವಂಚನೆಯ ಮಾಡದಿದ್ದಡೆ ನೇಮ, ನಡೆದು ತಪ್ಪದಿದ್ದಡೆ ಅದು ನೇಮ, ನುಡಿದು ಹುಸಿಯದಿದ್ದಡೆ ಅದು ನೇಮ, ನಮ್ಮ ಕೂಡಲಸಂಗನ ಶರಣರು ಬಂದಡೆ ಒಡೆಯರಿಗೊಡವೆಯನೊಪ್ಪಿಸುವುದೇ ನೇಮ.**

I-----------------------------------------------------------------

ಬಂದುದ ಕೈಕೊಳಬಲ್ಲಡೆ ನೇಮ–ಜಂಗಮಮೂರ್ತಿಗಳು ಭಕ್ತರ ಮನೆಗೆ ಭಿಕ್ಷಕ್ಕೆ ಹೋದಲ್ಲಿ ಅಂಬಲಿಯಾಗಲಿ ಅಮೃತವಾಗಲಿ ತಂಗಳಾಗಲಿ ಬಿಸಿಯಾಗಲಿ ಕಂಬಳಿಯಾಗಲಿ ಕಡುಸಣ್ಣವಾಗಲಿ ಲಿಂಗಾಣತಿಯಿಂದ ಬಂದ ಪದಾರ್ಥವನ್ನು ಕೈಕೊಂಡನುಭವಿಸಬಲ್ಲರೆ ನೇಮ. ಅದು ಜ್ಞಾನಜಂಗಮ ಸ್ಥಲದಾಚರಣೆಯು. ಇದ್ದುದ ವಂಚನೆಯ ಮಾಡದಿದ್ದಡೆ–ಅಂಬಲಿಯಾಗಲಿ ಅಮೃತವಾಗಲಿ ತಂಗಳಾಗಲಿ ಬಿಸಿಯಾಗಲಿ ಕಂಬಳಿಯಾಗಲಿ ಕಡುಸಣ್ಣವಾಗಲಿ ಇದ್ದಂಥ ಪದಾರ್ಥವನ್ನು ವಂಚಿಸಿಕೊಳ್ಳದೆ ನಿರ್ವಂಚನೆಯಿಂದ ನೀಡಿ ಸಂತುಷ್ಟಿಬಡಿಸಬಲ್ಲರೆ, ಅದು ನೇಮ–ಅದು ಭಕ್ತಿಸ್ಥಲದಾಚರಣೆಯು. ನಡೆದು–ಭಕ್ತಿಜ್ಞಾನವೈರಾಗ್ಯದಿಂದ ಐವತ್ತಾರು ದೇಶದಲ್ಲಿ ದಿಗ್ದೇಶಾಂತರವ ಮಾಡಿ, ತಪ್ಪದಿದ್ದಡೆ–ಮಧ್ಯದಲ್ಲಿ ಚೌಕಿಮಠಗಳಲ್ಲಿ ನಿಂತುಕೊಂಡು ಮಲತ್ರಯಂಗಳನು ಹಿಡಿದು ತಾ ಮಲಪಾಶಕ್ಕೊಳಗಾಗದಿದ್ದರೆ, ಅದು ನೇಮ–ಅದು ಜ್ಞಾನಜಂಗಮಸ್ಥಲದಾಚರಣೆಯು. ನುಡಿದು–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡು, ಹುಸಿಯದಿದ್ದಡೆ–ಭಕ್ತಮಾಹೇಶ್ವರರ ಮಧ್ಯದಲ್ಲಿ ನಾನೆಲ್ಲಿ ಹೇಳಿದೆ ಇಲ್ಲವೆಂದು ಸಟೆಯನಾಡದಿರುವುದೇ, ಅದು ನೇಮ–ಅದು ಭಕ್ತಿಸ್ಥಲದಾಚರಣೆಯು. ನಮ್ಮ ಕೂಡಲಸಂಗನ ಶರಣರು–ಜಂಗಮಮೂರ್ತಿಗಳು, ಬಂದಡೆ–ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಒಡೆಯರಿಗೆ–ಅರ್ಥಪ್ರಾಣಾಭಿಮಾನಂಗಳಿಗೆ ಕರ್ತರಾದ ಜ್ಞಾನಜಂಗಮಮೂರ್ತಿಗಳಿಗೆ,

ಒಡವೆಯ–ಅವರೊಡವೆಯಾದ ಹೊನ್ನು** ಮಣ್ಣನ್ನು, ಒಪ್ಪಿಸುವುದೇ–ಸಮರ್ಪಣೆಯ ಮಾಡುವುದೇ, ನೇಮ– ಅದೇ ಭಕ್ತಿಸ್ಥಲದಾಚರಣೆಯು,

..........................

೧–೧ ಗೇಕರ್ಥ (ಕ).

---

೨೩೪

**ಹಾಲ ನೇಮ, ಹಾಲ ಕೆನೆಯ ನೇಮ, ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮ! ಅಂಬಲಿಯ ನೇಮದವರಾರದನೂ ಕಾಣೆ. ಕೂಡಲಸಂಗನ ಶರಣರಲ್ಲಿ ಅಂಬಲಿಯ ನೇಮ ಮಾದಾರ ಚೆನ್ನಯ್ಯಂಗಾಯಿತ್ತು.**

I--------------------------------------------------------------------------------

ಹಾಲನೇಮ–ಏಳುನೂರೆಪ್ಪತ್ತಮರಗಣಂಗಳು ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳೊಳಗೆ ¹ಹಾಲನೇಮ¹ ಕಟ್ಟುಮಾಡಿ ಕೊಂಡು ²ಹಾಲನೇ² ಅನುಭವಿಸಿಕೊಂಡಿರುವಂಥವರು ಕೆಲವರು, ಹಾಲ ಕೆನೆಯ ನೇಮ–ಹಾಲನು ನೀಡುತ್ತಿದ್ದಲ್ಲಿ ಅದರಾಗಷ್ಟು ಕೆನೆ ಬೀಳುವುದು. ಅದನ್ನು ಸಲಿಸುತ್ತಿದ್ದಲ್ಲಿ ಸ್ವಾದದೋರಿ ಮತ್ತಷ್ಟು ಬೇಡುತ್ತಿಹರು; ಬೇಡಿದಲ್ಲಿ, ಸ್ವಾಮಿ ದಮ್ಮಯ್ಯ ಹಾಲಕೆನೆಯ ನೇಮವ ಮಾಡಿಕೊಂಡಿದ್ದೀರಾ? ಎಂದಲ್ಲಿ ಅಹುದು ನಮಗೆ ಹಾಲಕೆನೆಯ ನೇಮ ಉಂಟೆಂದು ಹಾಲಕೆನೆಯ ನೇಮವನೆ ಕಟ್ಟು ಮಾಡಿಕೊಂಡನುಭವಿಸುವಂಥವರು ಕೆಲವರು. ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ– ಜಂಗಮಮೂರ್ತಿಗಳು ಭಕ್ತರ ಮನೆಗೆ ಲಿಂಗಾರ್ಪಿತಭಿಕ್ಷಕ್ಕೆ ಹೋದಲ್ಲಿ ನಮ್ಮ ಮನೆಯೊಳಗಂತೂ ಹಾಲಿಲ್ಲ ಹಯನಿಲ್ಲ ಹೆಸರಬೇಳೆ ತೊಗರೆಬೇಳೆ ಮೊದಲಾದವನ್ನು ಹಾಕಿ ಕಿಚ್ಚಡಿಯನ್ನು ಮಾಡಿದ್ದೇವೆಂದು ಹೇಳಿದಲ್ಲಿ ಅಹುದು ನಮಗೆ ³ಕಿಚ್ಚಡಿಯ ನೇಮವೈತೆಂದು³ ಕಿಚ್ಚಡಿಯನೇ ನೇಮಮಾಡಿಕೊಂಡು ಅನುಭವಿಸುವಂಥವರು ಕೆಲವರು.

ಬೆಣ್ಣೆಯ ನೇಮ–ಸ್ವಾಮೀ ನಿಮಗೆ ಬೆಣ್ಣೆ ನೇಮವೈತೆ? ಎಂದು ಕೇಳಿದಲ್ಲಿ ಅಹುದು ನಮಗೆ ಬೆಣ್ಣೆಯ ನೇಮ ಉಂಟೆಂದು ಕಂಚಿಕಾಯಿ ಗಡತರ ತೆಂಗಿನಕಾಯಿ ಗಡತರ ಸೇರು ಎರಡು ಸೇರಿನಷ್ಟು ಬೆಣ್ಣೆಯನೆ ಕಟ್ಟುಮಾಡಿಕೊಂಡು ಅನುಭವಿಸುವಂಥವರು ಕೆಲವರು. ಬೆಲ್ಲದ ನೇಮ–ಅಚ್ಚು ಬೆಲ್ಲ ಹಲಗೆ ಬೆಲ್ಲ ಗಟ್ಟಿಮುದ್ದಿ ಬೆಲ್ಲ ಒಂದು ಸೇರು ಎರಡು ಸೇರಿನಷ್ಟು ಬೆಲ್ಲವನೆ ಕಟ್ಟುಮಾಡಿಕೊಂಡನುಭವಿಸುವಂಥವರು ಕೆಲವರು. ಅಂಬಲಿಯ ನೇಮದವರಾರನೂ ಕಾಣೆ– ಅಗುಳಂಬಲಿ ರುಬ್ಬಂಬಲಿ ರಾಗ್ಯಂಬಲಿಯೆಂದು ಅಂಬಕಳವನ್ನು ಕಟ್ಟುಮಾಡಿಕೊಂಡನುಭವಿಸು ವಂಥವರನು ಒರ್ವರನು ಕಂಡುದಿಲ್ಲವು. ಕೂಡಲಸಂಗನ ಶರಣರಲ್ಲಿ –ಶಿವನ ಚಿತ್ರಭಾಂಗಸ್ವರೂಪರಾದ ಶಿವಶರಣರಲ್ಲಿ, ಅಂಬಲಿಯ ನೇಮ ಮಾದಾರ ಚೆನ್ನಯ್ಯಂಗಾಯಿತ್ತು–ಅಗುಳಂಗಲಿ ರುಬ್ಬಂಬಲಿ ರಾಗ್ಯಂಬಲಿಯೆಂದು ಅಂಬಲಿಯನೆ ಕಟ್ಟುಮಾಡಿಕೊಂಡನುಭವಿಸಿ ಶಿವನ ಕರುಣವನ್ನು ಹಡೆವಂಥ ⁴[ದು]⁴ ಮಾದಾರ ಚೆನ್ನಯ್ಯನೆಂಬ ಶಿವಶರಣಂಗುಂಟಾಯಿತ್ತು.

.........................

೧-೧ ಹಾಲನೇ (ಕ). ೨-೨ ಹಾಲನೇಮ (ಕ). ೩-೩ x (ಕ). ೪-೪ ದನ್ನು (ಕ,ಗ).

III---------------------------------------------------------------------------

ಹಾಲಕೆನೆಯ-ಕ್ಷೀರಸಂತಾನದ.

---

೨೩೫

**ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ; ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ! ಮಾಡುವ ನೀಡುವ ನಿಜಗುಣವುಳ್ಳಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.**

I---------------------------------------------------------------------------

ಮನವಿಲ್ಲದೆ-ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ ಸಮರಸಕ್ರೀಯಿಲ್ಲದೆ, ಮಾಡಿಮಾಡಿ- ಅಂಗಬೇರೆ ಲಿಂಗಬೇರೆ ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ಆರಾಧಿಸಿ, ಕೆಟ್ಟರು-ಶಿವತತ್ವವಳಿದು ಜೀವರಾದರು. ನಿಜವಿಲ್ಲದೆ-ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವಿಲ್ಲದೆ, ನೀಡಿ ನೀಡಿ-ದೇವಬೇರೆ ಪದಾರ್ಥಬೇರೆಂದು ಭಿನ್ನವಿಟ್ಟುಕೊಂಡು ತನುಮನಧನಂಗಳನು ಎಡೆಯ ಮಾಡಿ. ಕೆಟ್ಟರು-ಶಿವತತ್ವವಳಿದು ಜೀವರಾದರು.

ಮಾಡುವ-ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಸಮರಸಜ್ಞಾನದಿಂದ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುವ, ನೀಡುವ-ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಸಮರಸಭಾವದಿಂದ ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವ, ನಿಜಗುಣವುಳ್ಳಡೆ-ಸಹಜ ಸದ್ಗುಣವುಂಟಾದರೆ, ಕೂಡಿಕೊಂಡಿಪ್ಪ-ಅಂತಪ್ಪ ಭಕ್ತನು ತನ್ನಲ್ಲೇಕಾರ್ಥವ ಮಾಡಿಕೊಂಡಿಪ್ಪನು. ನಮ್ಮ ಕೂಡಲಸಂಗಮದೇವ-ನಮ್ಮ ಪರಶಿವಲಿಂಗವು.

IV---------------------------------------------------------------------------

ಮಾಡಿ ಪರಬ್ರಹ್ಮದಲ್ಲಿ ಕೂಡಬಲ್ಲರೆ ಮಾಟ, ಮಾಡಿ ಕೂಡಲಜಿಯರಾಗಿ ಮಾಡಿ ಮಾಡಿ ಮನವಿಲ್ಲದೆ ಕೆಟ್ಟರೆಂಬುದೀ ವಚನದರ್ಥ.

---

೨೩೬

**ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ ಏಡಿಸಿ ಕಾಡಿತ್ತು ಶಿವನ ಡಂಗುರ. ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ, ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ, ಬೇಡಿದ ಪದವಿಯನೀವ ಕೂಡಲಸಂಗಮದೇವ.**

I-----------------------------------------------------------------------

ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ–ನಾ ಮಾಡಿದೆ ಇವರು ಕೈಕೊಂಡರು. ಸಲುವ ಪದಾರ್ಥವೆನ್ನದು ಎನ್ನಿಂದಲೇ ಲಿಂಗಜಂಗಮಕ್ಕೆ ಸುಖವಾಗುತ್ತೈತೆಂಬಂಥ ಅಹಂಕಾರ ಮನದಲ್ಲಿ ಕುರುಹುಗಾಣಿಸಿದರೆ, ಶಿವನ ಡಂಗುರ–ಪರಮೇಶ್ವರನ ಬಿರುದಿನ ಪ್ರತಾಪವನುಳ್ಳ ಮಾಯಾಶಕ್ತಿಯು, ಏಡಿಸಿ ಕಾಡಿತ್ತು–ಯಾರ ಒಡವೆ ಯಾರ ಪದಾರ್ಥ ನೀ ಯಾರಿಗೆ ಕೊಟ್ಟೆ? ನಿನ್ನ ಸ್ವತಂತ್ರವೆ? ಎಂದು ಹಾಸ್ಯೋಪಮಾನವೆಂದು ಹಾಸ್ಯಕ್ಕೊಳಗು ಮಾಡಿ, ಕಾಡಿತ್ತು–ಪೀಡಿಸಿತ್ತು. ಮಾಡಿದೆನೆನ್ನದಿರಾ ಲಿಂಗಕ್ಕೆ–ಅಂಗದಲ್ಲಿ ಸಂಬಂಧವಾದ ಇಷ್ಟಮಹಾಲಿಂಗಕ್ಕೆ, ಮಾಡಿದೆನೆನ್ನದಿರಾ–ತ್ರಿಕಾಲಂಗಳಲ್ಲಿ ಲಿಂಗಪೂಜೆಯನನುಗೈದೆನೆಂದು ಹೇಳಿಕೊಳ್ಳದಿರಾ, ಮಾಡಿದೆನೆನ್ನದಿರಾ ಜಂಗಮಕ್ಕೆ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳಿಗೆ, ಮಾಡಿದೆನೆನ್ನದಿರಾ–ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯನನುಗೈದೆನೆಂದು ಹೇಳಿಕೊಳ್ಳದಿರಾ. ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ–ನಾಮಾಡಿದೆ ಇವರು ಕೈಕೊಂಡರು. ಸಲುವ ಪದಾರ್ಥವೆನ್ನದು ಎನ್ನಿಂದಲೇ ಲಿಂಗಜಂಗಮಕ್ಕೆ ಸುಖವಾಗುತ್ತೈತೆಂಬ ಮೂಲ ಅಹಂಕಾರವು ಮನದಲ್ಲಿ ಕುರುಹು ಕಾಣಿಸಿಕೊಳ್ಳದಿದ್ದರೆ, ಬೇಡಿದ ಪದವಿಯನೀವ–ತಾನೇನ ಬೇಡಿದ ಇಷ್ಟಾರ್ಥಸಿದ್ಧಿಯನು ಕರುಣಿಸಿ ಕೊಡುತ್ತಿಹನು, ಕೂಡಲಸಂಗಮದೇವ–ಪರಶಿವಲಿಂಗವು.

IV-----------------------------------------------------------------------

1–1 ಬೇಡಿತ್ತನೀವ (ತ).

........................

ಮಾಡಿದೆನೆಂಬ ಅಹಂಕಾರವು ಮನದಲ್ಲಿ ಉಳ್ಳವರಿಗೆ ಶಿವನ ಮಾಯೆ ಕಾಡೂದು. ಮಾಡಿದೆನೆಂಬ ಅಹಂಕಾರವಿಲ್ಲದಿದ್ದರೆ ಪರಮಪದವೆಂಬುದೀ ವಚನದರ್ಥ.

---

೨೩೭

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.**

I-----------------------------------------------------------------------

ಕಳಬೇಡ–ಪರರೊಡವೆಯಾದ ಚಿನ್ನ ಬೆಳ್ಳಿ ವಸ್ತ್ರ ಕಪ್ಪಟಂಗಳನು ತಸ್ಕರವೃತ್ತಿಯಿಂ ಅಪಹರಿಸಬೇಡವು. ಕೊಲಬೇಡ–ನಿರಪರಾಧಿ ಪ್ರಾಣಿಗಳ ಜೀವಹಿಂಸೆಯ ಮಾಡಬೇಡವು. ಹುಸಿಯ ನುಡಿಯಲು ಬೇಡ–ಭಕ್ತಮಹೇಶ್ವರರ ಮಧ್ಯದಲ್ಲಿ ಅನೃತ ಗಳಹಲು ಬೇಡವು. ಮುನಿಯಬೇಡ–ಒಬ್ಬರ ಮೇಲೆ ಕೋಪವ ಮಾಡಬೇಡವು. ಅನ್ಯರಿಗೆ ಅಸಹ್ಯಪಡಬೇಡ–ಒಬ್ಬರುಂಬುತ್ತ ಉಡುವುತ್ತ ಭೋಗಿಸುತ್ತ ಸುಖಸಂತೋಷದಲ್ಲಿರುವಂಥದನ್ನು ಕಂಡು ಮನದಲ್ಲಿ ಸೈರಿಸಲಾರದೆ ಇದಿರುದಂಡವ

ಕೊಳಬೇಡ. ಇವರ ಮನೆ ಬೇಯಲಿ, ಇವರ ದನಕರುಗಳನ್ನೆಲ್ಲ ಕಳ್ಳರು ಹಿಡಕೊಂಡು ಹೋಗಲಿ, ಇವರ ಹೆಂಡರು ಮಕ್ಕಳು ಸಾಯಲಿ, ಇವರ ಐಶ್ವರ್ಯವೆಲ್ಲ ಹಾಳಾಗಿ ಹೋಗಲಿ ಎಂಬಂಥ ಕುರುಂಬತ್ವ ಮುಂದುಗೊಂಡಿರಬೇಡವು. ತನ್ನ ಬಣ್ಣಿಸಬೇಡ–ತನ್ನ ಕೀರ್ತಿಯಶಸ್ಸನ್ನು ಒಪ್ಪವಿಟ್ಟುಕೊಂಡು ಹೇಳಬೇಡವು. ಇದಿರು ಹಳಿಯಲು ಬೇಡ–ಮತ್ತೊಬ್ಬರನು ಕಳ್ಳರು ಸುಳ್ಳರು ಜಾರರು ಚೋರರು ಆಸಕರು ಅಜ್ಞಾನರೆಂದು ದೂಷಣೆಯ ಮಾಡಬೇಡವು. ಇದೇ ಅಂತರಂಗ ಶುದ್ಧಿ–ಇದೇ ಅಂತರಂಗದಲ್ಲಿ ಪ್ರಾಣಲಿಂಗಸಂಬಂಧತ್ವವನ್ನು ತಿಳಿವಂಥ ಜ್ಞಾನಸಾಧ್ಯತ್ವವು. ಇದೇ ಬಹಿರಂಗ ಶುದ್ಧಿ–ಇದೇ ಬಹಿರಂಗದಲ್ಲಿ ಇಷ್ಟಲಿಂಗಸಂಬಂಧತ್ವವನ್ನು ತಿಳಿವಂಥ ಕ್ರಿಯಾಸಾಧ್ಯತ್ವವು. ಇದೇ–ಹೀಂಗಾಚರಿಸುವಂಥದೇ, ನಮ್ಮ ಕೂಡಲಸಂಗಮದೇವರ–ನಮ್ಮ ಪರಶಿವಲಿಂಗವನು, ಒಲಿಸುವ ಪರಿ–"ಒಲಿ ಪ್ರಸನ್ನೇ" ಎಂದು ಪ್ರಸನ್ನವ ಮಾಡಿಕೊಂಬಂಥ ನಿಲುಕಡೆಯು.

---

೨೩೮

**[1]ಕೆಡು[1] ನಡೆಯದೆ, [1]ಕೆಡು[1] ನುಡಿಯದೆ ಅನ್ಯರ ಪ್ರತಿಪಾದಿಸದಿದ್ದಡೆ ಏನ [2]ಮಾಡುವನಯ್ಯಾ[2] ಲಿಂಗವು? [3]ಏನ ಕೊಡುವ ನಯ್ಯಾ[3] ಲಿಂಗವು? [4]ತಾನೇನ[4] ಬೇಡಿ[5]ದ[5]ನೀವನಾಗಿ ನಂಬಿಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ, ಕೂಡಲಸಂಗಮದೇವಾ.**

I------------------------------------------------------------------

ಕೆಡು ನಡೆಯದೆ–ಒಬ್ಬರ ಕೊಲ್ಲುತ್ತ ಬಡಿವುತ್ತ ಪರಧನ ಪರಸ್ತ್ರೀಯರನ್ನು ತೆಗದುಕೊಂಡು ದಿಂಡಾವೃತ್ತಿಯಿಂದ ಕೆಟ್ಟು ಚರಿಸದೆ. ಕೆಡು ನುಡಿಯದೆ–ಒಬ್ಬರ ಮನ ಕಂದಿ ತನು ಕರಗಿ ಮುಖ ಮುದುಡಿ ಚಿತ್ತವಿಭ್ರಮಣೆಯಾಗುವ ಹಾಂಗೆ ಕೆಟ್ಟು ಬಯ್ಯದೆ, ಅನ್ಯರ–ಪರರನ್ನು, ಪ್ರತಿಪಾದಿಸದಿದ್ದಡೆ–ಇವನಾಶಕ ಅಜ್ಞಾನಿ ಕಳ್ಳ ಸುಳ್ಳ ಜಾರನೆಂದು ದೂಷಣೆಯ ಮಾಡದಿದ್ದರೆ, ಲಿಂಗವು–ಪರಶಿವಲಿಂಗವು, ಏನ ಮಾಡುವನಯ್ಯಾ–ಇಟ್ಟರೆ ವರವು ಕೊಟ್ಟರೆ ಶಾಪಾನುಗ್ರಹದ ಸಾಮರ್ಥ್ಯವು ಬೇಕೆಂದರೂ ಕರುಣಿಸಿಕೊಡುತ್ತಿಹನು. ಲಿಂಗವು–ಪರಶಿವಲಿಂಗವು, ಏನ ಕೊಡುವನಯ್ಯಾ–ಅಂಗಲಿಂಗತ್ವ ಲಿಂಗಪ್ರಾಣತ್ವ ಪ್ರಸಾದಮುಕ್ತತ್ವವು ಬೇಕೆಂದರೂ ಕರುಣಿಸಿಕೊಡುತ್ತಿಹನು. ತಾನು–ಪರಶಿವಲಿಂಗವು, ಏನಬೇಡಿದನೀವನಾಗಿ–ತಾನೇನು ಬೇಡಿದಂಥ ಇಷ್ಟಾರ್ಥಸಿದ್ಧಿಯನ್ನು ಕರುಣಿಸಕೊಡುತ್ತಿಹನಾಗಿ, ನಂಬಿಗೆಯುಳ್ಳ–ವಿಶ್ವಾಸವುಂಟಾದ, ಶಿವಭಕ್ತಂಗೆ–ಹರಭಕ್ತಂಗೆ, ಕೂಡಲಸಂಗದೇವಾ–ಎಲೆ ಪರಶಿವಲಿಂಗವೆ,ಇದೇ ದಿಬ್ಯ–ಹುಸಿ ದಿಟವೆಂಬುದಕ್ಕೆ ಇದೇ ತಾರ್ಕಣ್ಯವು.

IV------------------------------------------------------------------

1–1 ಕೆಡೆ (ತ). 2–2 ಮಾಡನಯ್ಯಾ (ತ). 3–3 ಕೊಡನಯ್ಯಾ (ತ). 4–4 ಏನ (ತ). 5–5 + ದು (ತ).

.........................

ಆದ್ಯರು ನಡೆದ ಪಥದಲ್ಲಿಯೇ ನಡೆದು ಸತ್ಯವ ನುಡಿದರೆ ಬೇಡಿದ ಪದವಿಯ ಶಿವಕೊಡುವನೆಂಬುದೀ ವಚನದರ್ಥ.

---

**ಸ್ವಾಮಿಭೃತ್ಯಸಂಬಂಧಕ್ಕೆ ಆವುದು ಪಥವೆಂದಡೆ, ದಿಟವ ನುಡಿವುದು ನುಡಿದಂತೆ ನಡೆವುದು. ನುಡಿದು ಹುಸಿವ ನಡೆದು ತಪ್ಪುವ [1]ಪ್ರಪಂಚಿಗಳನೊಲ್ಲ[1] ಕೂಡಲಸಂಗಮದೇವ.**

I-----------------------------------------------------------------------

ಸ್ವಾಮಿಭೃತ್ಯಸಂಬಂಧಕ್ಕೆ-ಗುರುಲಿಂಗಜಂಗಮವೇ ಕರ್ತೃವಾಗಿ ತಾನೇ ಭೃತ್ಯನಾಗಿ ಕರ್ತೃ ಭೃತ್ಯಭಾವವನ್ನು ಮುಂದುಗೊಂಡು ಆಚರಿಸುವುದಕ್ಕೆ ಆವುದು ಪಥವೆಂದಡೆ-ಆವುದು ಮಾರ್ಗವೆಲೆ ಸ್ವಾಮಿಯೆಂದು ಶಿಷ್ಯೋತ್ತಮನು ಶ್ರೀ ಗುರುನಾಥನ ಬೆಸಗೊಂಡು ಕೇಳಿದರೆ, ದಿಟವ ನುಡಿವುದು-ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿ ಕೊಂಬುವುದು, ನುಡಿದಂತೆ-ಹೇಳಿಕೊಂಡ ಹಾಗೆ, ನಡೆವುದು-ಕೊಟ್ಟು ಭಕ್ತಿಯ ಮಾಡುವುದು. ನುಡಿದು-ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು, ನಾನು ನಿಮ್ಮಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡು, ಹುಸಿವ-ಭಕ್ತಮಾಹೇಶ್ವರರ ಮಧ್ಯದಲ್ಲಿ ನಾನೆಲ್ಲಿ ಹೇಳಿದ್ದೆ? ಇಲ್ಲವೆಂದು ಸಟೆಯನಾಡುವ, ನಡೆದು-ಭಕ್ತಿಜ್ಞಾನವೈರಾಗ್ಯವನ್ನು ಮುಂದುಗೊಂಡು ಐವತ್ತಾರು ದೇಶದಲ್ಲಿ ದಿಗ್ದೇಶಾಂತರವ ಮಾಡುತ್ತ, ತಪ್ಪುವ-ಮಧ್ಯದಲ್ಲಿ ಚೌಕಿಮಠಗಳಲ್ಲಿ ನಿಂತುಕೊಂಡು ಮಲತ್ರಯಂಗಳನ್ನು ಹಿಡಿದು ಮಲಪಾಶಕ್ಕೆ ತಾ ಒಳಗಾಗುವ, ಪ್ರಪಂಚಿಗಳ-ತನು ಪ್ರಪಂಚು ಮನಪ್ರಪಂಚು ಆತ್ಮನ ಇಂದ್ರಿಯ ವಿಷಯಪ್ರಪಂಚನುಳ್ಳ ಜೀವರುಗಳ, ಒಲ್ಲ-ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು. ಕೂಡಲಸಂಗಮದೇವ-ಪರಶಿವಲಿಂಗವು.

IV-----------------------------------------------------------------------

1-1 ಪ್ರಪಂಚಿಗಳನೊಲ್ಲ (ತ).

ಗುರುಶಿಷ್ಯಸಂಬಂಧಕ್ಕೆ ನುಡಿದಂತೆ ನಡೆವುದು, ನುಡಿದು ಹುಸಿವವನ ಶಿವನೊಲ್ಲನೆಂಬುದೀ ವಚನದರ್ಥ.

---

೨೪೦

**ಸತ್ಯವುಳ್ಳ [1]ಭಾಂಡವ[1] [2]ತುಂಬುವುದಯ್ಯಾ.[2] ಸುಯಿದಾನ[3] ಸುಯಿದಾನವಯ್ಯಾ ! ಮನ ಧಾರೆವಟ್ಟಲು ಕೂಡಲಸಂಗನ ಶರಣರು ಹಿಡಿಯದ [4]ಭಂಡನ[4] ಆರಾದಡಾಗಲಿ ಹೋಗಲಿಯರಯ್ಯಾ!**

I-----------------------------------------------------------------------

ಸತ್ಯವುಳ್ಳ ಭಾಂಡವ ತುಂಬುವುದಯ್ಯಾ-ಪಾರಮಾರ್ಥಿಕಗಳಾದ ಜ್ಞಾನಜಂಗಮಮೂರ್ತಿಗಳಿಗೆ ಸಕಲಪದಾರ್ಥವ ನೀಡಿ ಸಂತುಷ್ಟಿಬಡಿಸುವುದಯ್ಯಾ. ಸುಯಿದಾನ ಸುಯಿದಾನವಯ್ಯಾ!-ಅಷ್ಟಾವರಣವನ್ನೇ ಅಂಗವ ಮಾಡಿಕೊಂಡು ಪಂಚಾಚಾರವನ್ನೇ ಪ್ರಾಣವ

ಮಾಡಿಕೊಂಡು ಏಕಲಿಂಗ ನೈಷ್ಠಾಪರತ್ವವಿಡಿದು ಆಚರಿಸುವಲ್ಲಿ ಅತ್ಯಂತ ಸಾವಧಾನ ಸಾವಧಾನವಯ್ಯಾ. ಮನ ಧಾರೆವಟ್ಟಲು-ಶೋಧನೆಬಟ್ಟಲೆಂಬಂಥದನ್ನು ಪಡುಗ ಗುಡಾಣದ ಮೇಲೆ ಮಡಗಿ ಔಷಧ ಕಷಾಯ ಪಾನಕ ಪನ್ನೀರು ಹಾಲು ಮೊಸರು ತುಪ್ಪ ಮೊದಲಾದ ಸಾಧನದ್ರವ್ಯಂಗಳನು ಶೋಧಿಸಿದಲ್ಲಿ ರಸವನ್ನು ಒಳೆಯಕ್ಕೆ ಬಿಟ್ಟು ಮೇಲೆ ಕಸವನ್ನು ದೃಢವಿಡಿವುತ್ತಿಹುದು, ಹಾಂಗೆ ಚಿದ್ರಸಸ್ವರೂಪವಾದ ಗುರುಲಿಂಗ ಜಂಗಮದ ಭಕ್ತಿಯನ್ನು ಬಿಟ್ಟು ಕಸಮಲಯುಕ್ತವಾದ ಹೊನ್ನು ಹೆಣ್ಣು ಮಣ್ಣನ್ನು ಧೃಢವಿಡಿವುತ್ತಿವುದು, ಎನ್ನ ಮನವು-ಉಪಾಧಿಕನ ಮನಸ್ಸು. ಕೂಡಲಸಂಗನ ಶರಣರು-ಜಂಗಮಮೂರ್ತಿಗಳು, ಹಿಡಿಯದ-ನಮ್ಮವನೆಂದು ಅಂಗೀಕರಿಸದ, ಭಂಡನ-ಆಚಾರಭ್ರಷ್ಟನ, ಆರಾದಡಾಗಲಿ-ಭಕ್ತಮಾಹೇಶ್ವರರೊಳಗಾರಾದಡಾಗಲಿ, ಹೋಗಲೀಯರಯ್ಯಾ!-ತಮ್ಮ ಪಜ್ತಿ ಪಾದಾರ್ಚನೆಯಲ್ಲಿ ಬೆರೆಯಗೊಡರಯ್ಯಾ.

II------------------------------------------------------------------------

1-1 ಭಂಡವ (ಚ, ಜ). 2-2 ತುಂಬೂದಯ್ಯಾ (ಚ, ಜ). 3 + ವಯ್ಯಾ (ಚ,ಜ). 4-4 ಭಂಡವನು (ಚ. ಜ).

..........................

ಸತ್ಯವುಳ್ಳ ಭಂಡವ ತುಂಬೂದಯ್ಯಾ-ಭಯಭಕ್ತಿಕರುಣಕಿಂಕುರ್ವಾಣ ದಾಸೋಹ ನಯಭೃತ್ಯಭಾವ ಸಜ್ಜನ ಸತ್ಯಸಮತೆಯೆಂಬ ಮೂಲದ್ರವ್ಯವ ಪೂರವಿಸೂದಯ್ಯಾ. ಸುಯಿದಾನವಯ್ಯಾ ಸುಯಿದಾನವಯ್ಯಾ!-ಕ್ರಿಯಾಜ್ಞಾನವು ಸಂಕಲ್ಪವಿಕಲ್ಪದಿಂದೆ ಸೂಸಿವೀಸರಾಗಿ ಹೋಗುತ್ತೈತೆ ಎಚ್ಚರಿಕೆ, ಎಚ್ಚರಿಕೆಯಯ್ಯಾ. ಮುಂದಕ್ಕೆ ಕಾಣಬಂದರ್ಥ.

III------------------------------------------------------------------------

[೧]ಕಸವ ಹಿಡಿದು ರಸವ ಬಿಡುವ ಜರಡಿಯ ಹಾಂಗೆ, ಮನಸ್ಸು ಪ್ರಪಂಚಿನಲ್ಲಿ ಎರಕವಾಗಿಪ್ಪುದು ಎಂಬುದೀಗ ಮನಧಾರೆವಟ್ಟಲು ಎಂಬ ಶಬ್ದಕ್ಕರ್ಥ.

..........................

೧+ ಧಾರೆವಟ್ಟಲು (ಟ,ಡ).

IV ------------------------------------------------------------------------

1-1 ಭಂಡವ (ತ). 2-2 ತುಂಬಿರಯ್ಯಾ (ತ). 4-4 ಭಂಡವ (ತ). 5-5 ಅವರಾರಾದಡಾಗ (ತ).

..........................

ಕಸವನೆ ಹಿಡಿದು ರಸವನೆ ಕಳದು ಬಿಡುತಿಹಂಥ ಧಾರೆವಟ್ಟಲಂತೆ, ಮನಸ್ಸು ಸತ್ಯವಾದ ಲಿಂಗದ ಭಕ್ತಿಯನೆ ಬಿಟ್ಟು ಅಸತ್ಯವಾದ ಅನ್ಯದೈವದ ಭಕ್ತಿ ಮೊದಲಾದ ದುರ್ಗುಣಂಗಳ ಹಿಡಿದು ಬಿಡದಿಹುದೆಂಬುದೀಗ ಮನಧಾರೆವಟ್ಟಲುಯೆಂಬ ಶಬ್ದಕ್ಕರ್ಥ ಅದು ಕಾರಣ ಸತ್ತುಚಿತ್ತಾನಂದವುಳ್ಳ ಲಿಂಗವ ಅಂಗಪ್ರಾಣಂಗಳಲ್ಲಿ ಪರಿಪೂರ್ಣವಾಗಿ ಧರಿಸಿಕೊಂಡು ಹಿಂಗದೆ ಶ್ರದ್ಧಾಭಕ್ತಿಯಿಂದ ಸಾವಧಾನಿಯಾಗಿ ಮನದಲ್ಲಿ ಅವಿಶ್ವಾಸ ಹುಟ್ಟದಿರಬೇಕೆಂಬುದೀಗ ಸತ್ಯವುಳ್ಳ ಭಂಡವ ತುಂಬಿರಯ್ಯಾ ಸುಯಿಧಾನ ಸುಯಿಧಾನವಯ್ಯವೆಂಬ ಶಬ್ದಕ್ಕರ್ಥ. ಅಂತು ಲಿಂಗಾಂಗಸಂಬಂಧವಾಗಿಪ್ಪ ಭಕ್ತಿಕ್ರೀಯನುಳ್ಳ

ಶರಣರು ತಮ್ಮಂತೆ ಇಲ್ಲದೆಯಿರ್ದು ಭವಿಗಳು ನೊಸಲಗಣ್ಣ ಚತುರ್ಭುಜದವರಾದಡೆಯೂ ಕೂಡಿಕೊಳ್ಳರೆಂಬುದೀಗ ಶರಣರು ಹಿಡಿಯುದ ಭಂಡವ ಅವರಾರಾದರೂ ಆಗಲಿ ಹೋಗಲೀಯರಯ್ಯಾ ಎಂಬ ಶಬ್ದಕ್ಕರ್ಥ.

---

೨೪೧

**ದೇವಲೋಕ ಮರ್ತ್ಯಲೋಕವೆಂಬುದು ಬೇಜಿಲ್ಲ ಕಾಣಿರೊ! ಸತ್ಯವ ನುಡಿವುದೆ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯ ಲೋಕ. ಆಚಾರವೆ ಸ್ವರ್ಗ; ಅನಾಚಾರವೆ ನರಕ ಕೂಡಲಸಂಗಮದೇವಾ, ನೀವೇ ಪ್ರಮಾಣು.**

I ------------------------------------------------------------------------

ದೇವಲೋಕ–ಕೈಲಾಸಲೋಕವು. ಮರ್ತ್ಯಲೋಕವೆಂಬುದು ಮನುಷ್ಯಲೋಕವೆಂಬುದು ಹೇಳುವಂಥದು, ಬೇಜಿಲ್ಲ ಕಾಣಿರೋ–ಭಿನ್ನವಿಲ್ಲ ಕಂಡಿರೇ. ಸತ್ಯವ ನುಡಿವುದೆ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ! ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥದೆ, ದೇವಲೋಕ–ಕೈಲಾಸ ಲೋಕವು; ಮಿಥ್ಯವ ನುಡಿವುದೆ –ಭಕ್ತಮಾಹೇಶ್ವರರ ಮಧ್ಯದಲ್ಲಿ ನಾನೆಲ್ಲಿ ಹೇಳಿದ್ದೆ? ಇಲ್ಲಾಯೆಂದು ಸಟೆಯನಾಡುವಂಥದೆ, ಮರ್ತ್ಯಲೋಕ–ಅದೇ ಮಾನವಲೋಕ. ಆಚಾರವೆ–ಅಷ್ಟಾವರಣವೆ ಅಂಗವಮಾಡಿಕೊಂಡು ಪಂಚಾಚಾರವನ್ನೇ ಪ್ರಾಣವ ಮಾಡಿಕೊಂಡು ಏಕಲಿಂಗನೈಷ್ಠಾಪರತ್ವವಿಡಿದಾಚರಿಸುವಂಥದೆ, ಸ್ವರ್ಗ–ಕೈಲಾಸಪದವಿಯು, ಅನಾಚಾರವೆ–ಪಂಚಾಚಾರಕ್ಕೆ ತಪ್ಪಿ ಪಂಚಮಹಾಪಾತಕಂಗಳೊಡನೆ ಕೂಡಿ ಚರಿಸುವಂಥದೆ, ನರಕ–ಅದೇ ನಿರಯವು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವೇ ಪ್ರಮಾಣು–ಹುಸ ದಿಟವೆಂಬುದಕ್ಕೆ ನೀವೇ ಸಾಕ್ಷಿಯು.

---

೨೪೨

**ಪುಣ್ಯ ಪಾಪವೆಂಬುವು ತಮ್ಮ ಇಷ್ಟ ಕಂಡಿರೋ. 'ಅಯ್ಯಾ' ಎಂದಡೆ ಸ್ವರ್ಗ, 'ಎಲವೊ' ಎಂದಡೆ ನರಕ! 'ದೇವಾ, ಭಕ್ತ ಜಯಜೀಯಾ'ಯೆಂಬ ನುಡಿಯೊಳಗೆ [1]ಕೈಲಾಸವೈದುದು[1] ಕೂಡಲಸಂಗಮದೇವಾ.**

I------------------------------------------------------------------------

ಪುಣ್ಯ–ಯಜ್ಞಾದಿ ಕೃತ್ಯಂಗಳಿಂದಾಗುವಂಥದೆ ಪುಣ್ಯವು. ಪಾಪ–ಹಿಂಸಾದಿಕೃತ್ಯಂಗಳಿಂದಾಗುವಂಥದೆ ಪಾಪವು. ಎಂಬುವು–ಹೀಗೆಂದು ಹೇಳುವಂಥವು. ತಮ್ಮಿಷ್ಟ ಕಂಡಿರೊ–ತಮಗೆ ಪ್ರೀತಿಯಾಗಿರುವವು ಕಾಣಿರೊ, ಅಯ್ಯಾ ಎಂದಡೆ–ಅಯ್ಯಾ ಜೀಯಾ ಚಿತ್ತೈಸಿ ಬನ್ನಿ ಮೂರ್ತವ ಮಾಡಿಯೆಂಬಂಥ ಮಧುರೋಕ್ತವಾದ ಪ್ರಸಂಗವನಾಡಿದರೆ, ಸ್ವರ್ಗ–ಕೈಲಾಸಪದವಿಯಾಗುತ್ತಿಹುದು. ಎಲವೊ ಎಂದಡೆ–ಎಲೋ ತಲೋ ಗೋವಾ ಗುಲಾಮ ತೊಂಡ ನೀಚಾಯೆಂದರೆ, ನರಕ!–ನಿರಯವಾಗುತ್ತಿಹುದು. ದೇವಾ–ಜಂಗಮಮೂರ್ತಿಗಳು, ⌜ಭಕ್ತ⌝–ಭಕ್ತನ

ತನುಮನಧನಂಗಳನು ಹಿಡಿದಲ್ಲಿ, ಜಯಾ–ಸರ್ವೋತ್ಕರ್ಷನಾಗಲಿ, ಜೀಯಾಯೆಂಬ–ಎನ್ನೊಡೆಯರೇ ಎನ್ನ ಕರ್ತರೇ ಪ್ರಾಣದೊಲ್ಲಭರೇ ನಿಮ್ಮೊಡವೆನಿಮ್ಮ ಪದಾರ್ಥವ ನಿಮಗೆ ಸಮರ್ಪಣೆಯಾಗಲೆಂಬ, ನುಡಿಯೊಳಗೆ–ವಾಕ್ಯದಲ್ಲಿ, ಕೈಲಾಸವೈದುದು–ಸಾಂಬಲೋಕದಲ್ಲಿ ಆಗುವಂಥ ನಿಜಮೋಕ್ಷ ಸಾಧ್ಯವಾಗುತ್ತಿಹುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ (ಕ).

IV-----------------------------------------------------------------------------------

1–1 ಕೈಲಾಸವಿದ್ದೂದೆ (ತ).

.........................

ನರರು ಸುರರು ಪುಣ್ಯಪಾಪದಿಂದ ಆದರು. 'ದೇವಾ ಭಕ್ತ ಜಯಾ ಜೀಯಾ'ವೆಂಬುದೇ ಮುಕ್ತಿಯೆಂಬುದೀ ವಚನರ್ದ.

---

೨೪೩

**ಏನಿ ಬಂದಿರಿ, ಹದುಳವಿದ್ದಿರೆ ಎಂದೊಡೆ ನಿಮ್ಮ [1]ಐಶ್ವರ್ಯ[2] ಹಾಜಿ ಹೋಹುದೆ? ಕುಳ್ಳಿರೆಂದೊಡೆ ನೆಲ ಕುಳಿಹೋಹುದೆ? ಒಡನೆ ನುಡಿದಡೆ [2]ಸಿರಿ[2] ಹೊಟ್ಟೆಯೊಡೆವುದೆ? ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ, ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವ.**

I-----------------------------------------------------------------------------------

ಏನಿ ಬಂದಿರಿ–ಆವಾಗ ಚಿತ್ತೈಸಿದಿರಿ, ಏನು ಕಾರಣ ದಯಪಾಲಿಸಿದಿರಿ, ಹದುಳವಿದ್ದರೆ ಎಂದೊಡೆ–ಪರಿಣಾಮದಲ್ಲಿದ್ದಿರಾ? ಎಂದು ಕೇಳಿದರೆ, ನಿಮ್ಮ ಐಶ್ವರ್ಯ ಹಾಜಿ ಹೋಹುದೆ? : ನಿಮ್ಮ ಐಶ್ವರ್ಯ–ನಿಮ್ಮ ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವು, ಹಾಜಿ ಹೋಹುದೆ?–ಚಾಗಿಂವಾಗಿ ಹೋಹುದೆ? ಕುಳ್ಳಿರೆಂದೊಡೆ–ಮೂರ್ತವ ಮಾಡಿರಿ ಎಂದೊಡೆ. ನೆಲಕುಳಿಹೋಹುದೆ?–ಗಚ್ಚುಗಾರಿಗಳಿಂದ ಮಾಡಿದಂಥ ಜಗಲಿ ಪಟ್ಟಸಾಲೆಗಳು ಗೇಣುದ್ದ ಚೋಟುದ್ದ ತಗ್ಗು ಬಿದ್ದಾವೆ? ಒಡನೆ ನುಡಿದಡೆ–ಅವರೊಂದಿಗೆ ಪ್ರಸಂಗವನಾಡಿದರೆ, ಸಿರಿಹೊಟ್ಟೆಯೊಡೆವುದೆ?–ನಿಮ್ಮ ಡೊಳ್ಳು ಹೊಟ್ಟೆ ಬಿಚ್ಚುವುದೆ? ಕೊಡಲಿಲ್ಲದಿದ್ದಡೆ–ಕೊಡುವುದಕ್ಕೇನೂ ಗತಿಯಿಲ್ಲ ಗತಿಯಿಲ್ಲವೆಂದು ಹೇಳಿದರೆ, ಒಂದು ಗುಣವಿಲ್ಲ [೧][ದಿದ್ದಡೆ][೧]–ಬೆಲ್ಲಯಿಲ್ಲವೇನೊ ಸೆಟ್ಟಿಯೆಂದರೆ ಬೆಲ್ಲದಂತಹ ಮೂರು ಮಾತಿಲ್ಲವೆ? ಬಾ ಎಂಬ ಹಾಂಗೆ ಅಂತಪ್ಪ ಪ್ರಸಂಗವನಾಡದಿರ್ದರೆ, ಕೆಡಹಿ–ಅಡ್ಡ ನೀಳವಾಗಿ ತುಳಿಸಿ, ಮೂಗ ಕೊಯ್ಯದೆ ಮಾಣ್ಬನೆ?–ಆಚಾರಾಂಗವೆಂಬ ಘ್ರಾಣವನಪಹರಿಸಿ ಮಾನಭಂಗವಮಾಡಿ ಭವಕ್ಕೆ ಹಾಕದೆ ಬಿಟ್ಟಾನೆ? ಬಿಡನು. ಕೂಡಲಸಂಗಮದೇವ–ಪರಶಿವಲಿಂಗವು.

.........................

೧-೧ ವೆಂಬಲ್ಲಿ (ಕ, ಗ).

IV---------------------------------------------------------------------------------

1-1 ಮೈಸಿರಿ (ತ). 2-2 ಸಿರ (ತ).

..........................

ಶರಣರಲ್ಲಿ ಅಂಯ್ಯಾ ಹಸಾದವೆಂಬುದೇ ಕಾರಣ. ಅಹಂಕಾರವಾದರೆ ಮಹಾಪಾತಕವೆಂಬುದೀ ವಚನದರ್ಥ.

---

೨೪೪

**ಭಕ್ತಿಯೆಂಬ ನಿಧಾನವ ಸಾಧಿಸುವಡೆ ಶಿವಪ್ರೇಮವೆಂಬ ಅಂಜನವ [1]ಹಚ್ಚಿ[1] ಕೊಂಬುದು. ಭಕ್ತನಾದವಂಗೆ ಇದೇ ಪಥವಾಗಿರಬೇಕು. ನಮ್ಮ ಕೂಡಲಸಂಗನ ಶರಣರ [2]ಅನುಭಾವವೆ[2] ಗಜವೈದ್ಯ**

I ---------------------------------------------------------------------------------

ಭಕ್ತಿಯೆಂಬ ನಿಧಾನವ ಸಾಧಿಸುವಡೆ: ಭಕ್ತಿಯೆಂಬ-ಶಿವಾದ್ವೈತಭಕ್ತಿಯೆಂದೆನಿಸುವಂಥ, ನಿಧಾನವ-ನಿಕ್ಷೇಪದ್ರವ್ಯವನ್ನು, ಸಾಧಿಸುವಡೆ-ಅಭ್ಯಾಸವ ಮಾಡಬೇಕಾದರೆ, ಶಿವ ೧ಪ್ರೇಮವೆಂಬ೧ -ಲಿಂಗದಲ್ಲಿ ಅತಿರತಿ ಪ್ರೀತಿ ಪ್ರೇಮ ವಿಶ್ವಾಸವೆಂಬ, ಅಂಜನವ-ಕಾಡಿಗೆಯನ್ನು, ಹಚ್ಚಿಕೊಂಬುದು-ಆತ್ಮನ ಮೂಲಜ್ಞಾನದೃಷ್ಟಿಗೆ ಅಳವಡಿಸಿಕೊಂಬುದು. ಭಕ್ತನಾದವಂಗೆ-ಶಿವಭಕ್ತನಾದವಂಗೆ, ಇದೇ ಪದಾರ್ಥವಾಗಿರಬೇಕು-ಇದೇ ಮಾರ್ಗವುಂಟಾಗಿರಬೇಕು. ನಮ್ಮ ಕೂಡಲಸಂಗನ ಶರಣರನುಭಾವವೆ ಗಜವೈದ್ಯ-ಆನೆಗೇನಾದರೂ ಬರಬಾರದತಿದುರ್ಘಟವಾದ ರೋಗರುಜಾದಿಗಳು ಬಂದಲ್ಲಿ ಆ ರೋಗಕ್ಕೆ ತಕ್ಕ ಔಷಧ ಕಷಾಯವನ್ನು ಕೊಟ್ಟು ಆನೆಯ ಪ್ರಾಣವನ್ನು ಉಳುಹಿಕೊಳಬೇಕಾದರೆ ಎತ್ತಲಾನಿಕೊಬ್ಬ ರಾಜಪಂಡಿತಂಗೆ ಅರಿಯಬರುವುದಲ್ಲದೆ ಮಿಕ್ಕಿನ ಹುಲ್ಲು ಮನುಜರಿಗೆ ಅಶಕ್ಯವಾಗಿಪ್ಪುದೆಂಬ ಹಾಂಗೆ, ಜ್ಞಾನಜಂಗಮಮೂರ್ತಿಗಳ ಶಿವಾನುಭಾವವನ್ನು ಶ್ರೋತ್ರಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯಮುಖದಲ್ಲಿ ಅಂಗವ ಮಾಡಿಕೊಂಡು ತಮ್ಮಾದಿ ಮಧ್ಯಾವಸಾನ ನಿತ್ಯನಿತ್ಯ ವಿವೇಕವನ್ನು ತಿಳಿದುಕೊಂಡು ಜ್ಞಾನಿಗಳಾಗಿ ಆಚರಿಸುವಂಥದು ಚಿತ್ತಿನ ಚಿದಹಂಕಾರ ಚಿದ್ಭೂಷಣಸ್ವರೂಪರಾದ ಶಿವಶರಣರಿಗೆ ಅಳವಡವುದಲ್ಲದೆ ಮಿಕ್ಕಿನ ದ್ವೈತಾದ್ವೈತಗಳಿಗೆ ಶಿವನುಭಾವವು ಗಜವೈದ್ಯದ ಹಾಂಗೆ ಅಶಕ್ಯವಾಗಿರ್ಪುದು.

..........................

೧-೧ + ನ ಕೃಪೆಯೆಂಬ (ಕ,ಗ).

III---------------------------------------------------------------------------------

ಅನಾದಿಮಾಯಾವಾಹನವಾದ ಜ್ಞಾನಗಜಕ್ಕೆ ಭೈಷಜವಾಗಿರ್ಪುದು ಎಂಬುದೀಗ ಗಜವೈದ್ಯ ಎಂಬ ಶಬ್ದಕ್ಕರ್ಥ. ೨ತಸ್ಕರತನ ಮಾಡಿ ನಂಬುಗೆ ವಾಕ್ಯವ ನುಡಿದು-ತಸ್ಕರತನವ ಮಾಡುವ

ಹೇಮತಾಟಕನ ಹಾಂಗೆ ಬಹಿರಂಗದಲ್ಲಿ ಗುರುಲಿಂಗಜಂಗಮಕೆ ತನುಮನಧನಂಗಳ ಸಮರ್ಪಿಸಬೇಕೆಂದು ನುಡಿದು, ಅಂತರಂಗದಲ್ಲಿ ಅಪಲಾಪನಾಭಾವದೊಡನೆ ಕೂಡಿರ್ಪನು ಭಿನ್ನಭಕ್ತನೆಂಬುದೀಗ ಹೇಮತಾಟಕನಂತೆ ಎಂಬ ಶಬ್ದಕ್ಕರ್ಥ.[೨]

..............................................

೨-೨ ಇಷ್ಟು ಪಾಠ ಹಿಂದಿನ ಇಲ್ಲವೆ ಮುಂದಿನ ವಚನದ ಭಾಗವೋ ಸ್ವತಂತ್ರ ವಚನದ ಭಾಗವೋ ಸ್ಪಷ್ಟವಾಗುವುದಿಲ್ಲ. ಇಲ್ಲಿಯ ವಾಕ್ಯಗಳನ್ನೊಳಗೊಂಡ ವಚನ ಈಗ ಅಚ್ಚಾದ ಯಾವ ಆವೃತ್ತಿಯಲ್ಲಿಯೂ ಇಲ್ಲ (ಸಂ).

IV-----------------------------------------------------------------------

1-1 ನೆಚ್ಚು (ತ). 2-2 ಅನುಭಾವವೆ (ತ).

..........................

ಪ್ರೀತಿ ಪ್ರೇಮ ಸತ್ಯವೇ ಕಾರಣ ಭಕ್ತಗೆ. ಇಂಥ ಭಕ್ತನೆ ಜಗತ್ಪಾವನನೆಂಬುದೀ ವಚನದರ್ಥ.

---

೨೪೫

**ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ? ನಗುವುದು ನುಡಿವುದು ಶಿವಭಕ್ತರೊಡನೆ. ಸುಮ್ಮನೆ ಹಮ್ಮು ಬಿಮ್ಮಾಗಿರಲೇಕಯ್ಯಾ? "ಅಭ್ಯಾಸೇನ ವಿಹೀನಸ್ಯ ತಸ್ಯ ಜನ್ಮ ನಿರರ್ಥಕಂ । ಗುರಾವಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ" ಎಂದುದಾಗಿ, ಸಮ್ಮ ಕೂಡಲಸಂಗನ ಶರಣರೊಡನೆ ಮನದೆಱೆದು ಮಾತನಾಡುವುದಯ್ಯಾ.**

I-----------------------------------------------------------------------

ಸಂಸಾರದಲ್ಲಿ-"ಸದ್ಗುರುಪಾಣಿಜಾತಸ್ಯ"ಯೆಂದು ಶ್ರೀಗುರುನಾಥನ ಕರಗರ್ಭದಲ್ಲಿ ಶಿವಲಿಂಗಪಾಣಿ ಶಿವಮಂತ್ರಶರೀರಿಯಾಗಿ, ಹುಟ್ಟಿ-ಉತ್ಪತ್ಯವಾಗಿ, ಮತ್ತೊಂದ ಬಯಸಲೇಕಯ್ಯಾ? -ಅನ್ಯವಾದ ಹೊನ್ನು ಹೆಣ್ಣು ಮಣ್ಣಿಗಿಚ್ಛೈಸುವುದೇನು ಕಾರಣಕ್ಕಯ್ಯಾ? ಶಿವಭಕ್ತರೊಡನೆ-"ಲಿಂಗ ಭಕ್ತಸ್ಯ ಜಂಗಮಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳೊಂದಿಗೆ, ನಗುವುದು ನುಡಿವುದು-ನಗೆನುಡಿ ಸರಸವಿರಸ ಸಲ್ಲಾಪನಾಡುವದು, ಸುಮ್ಮನೆ-ಉಸಕನೆ, ಹಮ್ಮು-ಅಹಂಕಾರದಿಂದ, ಬಿಮ್ಮಾಗಿರಲೇಕಯ್ಯಾ?-ಬಿಕ್ಕೊಂಡಿರುವುದೇನು ಕಾರಣಕ್ಕಯ್ಯಾ?

ಗ್ರಂಥ ॥ ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. ಅಭ್ಯಾಸೇನ ವಿಹೀನಸ್ಯ : ಅಭ್ಯಾಸೇನ-ಗುರುಲಿಂಗಜಂಗಮದ ಭಕ್ತಿ ಸಾಧನವು, ವಿಹೀನಸ್ಯ-ಇಲ್ಲದೆ ಇರುವಂಥ, ತಸ್ಯ ಜನ್ಮ ನಿರರ್ಥಕಂ: ತಸ್ಯ-ಅವನ, ಜನ್ಮ-ಉತ್ಪತ್ಯವು, ನಿರರ್ಥಕಂ-ವ್ಯರ್ಥಸ್ಯವು. ಗುರಾವಪಿ ಸಮಂ ಹಾಸ್ಯಂ: ಗುರಾವಪಿ-ಗುರುಗಳೊಂದಿಗೆ, ಸಮಂ-ಸಮಾನವಾಗಿ, ಹಾಸ್ಯಂ-ರಸಹಾಸ್ಯದಿಂದ, ಕರ್ತವ್ಯಂ ಕುಟಿಲಂ ವಿನಾ-ತಾನೆಷ್ಟು ಅರಿಯದವನಾಗಿದ್ದರೂ ತಾನೇ ಬಲ್ಲವನಾಗಿ ಗುರುಗಳೆಷ್ಟು ಬಲ್ಲವರಾದರೂ [illegible]ನ್ನು ಅರಿಯದವರ ಮಾಡಿಕೊಂಡು, ಅವರನೇ ಕೀಳು ಗದ್ದುಗೆಯ ಮೇಲೆ ಕುಳ್ಳಿರಿಸಿ ತಾನೇ ಮೇಲುಗದ್ದುಗೆಯ ಮೇಲೆ ಕುಳಿತುಕೊಂಡು ಅವರೊಂದಿಗೆ ನಗೆನುಡಿ

ಸರಸಸಲ್ಲಾಪದಿಂದ ಪ್ರಸಂಗವನಾಡುವಂಥದು ಕುಟಿಲಂ–ಕಾಪಟ್ಯವು, ವಿನಾ–ಇವು ಹೊರತಾಗಿ ಗುರುಗಳೆಷ್ಟು ಅರಿಯದವರಾದರೆಯೂ ತಾನೆಷ್ಟು ಬಲ್ಲವನಾದರೂ ಅವರನೇ ಬಲ್ಲವರನೆ ಮಾಡಿ ತಾನೇ ಅರಿಯದವನಾಗಿ, ಅವರನೇ ಮೇಲುಗದ್ದುಗೆಯ ಮೇಲೆ ಕುಳ್ಳಿರಿಸಿ ತಾನೇ ಕೆಳಗದ್ದುಗೆಯ ಮೇಲೆ ಕುಳಿತುಕೊಂಡು ನಗೆನುಡಿ ಸರಸಸಲ್ಲಾಪದಿಂದ ವಿನೋದಿಸುವಂಥದು, ಕರ್ತವ್ಯಂ–ಅದು ಸೇವ್ಯವು. ಎಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ನಮ್ಮ ಕೂಡಲಸಂಗನ ಶರಣರೊಡನೆ–ಜ್ಞಾನಜಂಗಮಮೂರ್ತಿಗಳೊಂದಿಗೆ, ಮನದೆಱೆದು–ಮನಶುದ್ಧವಾಗಿ, ಮಾತನಾಡುವುದಯ್ಯಾ–ಶಿವತತ್ವಜ್ಞಾನಾನುಭಾವ ಪ್ರಸಂಗವುವನನುಗ್ಗೈವುದಯ್ಯಾ.

II------------------------------------------------------------------------

ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ?–ಭವಸಂಸ್ಕೃತಿಯಲ್ಲಿ ಉದಿಸಿ ಮರಳೇಕವಾದ ಮೋಕ್ಷಮಾರ್ಗವನಿಶ್ಚೈಸಲೇನು ಕಾರಣ? ಮುಂದಕ್ಕೆ ಕಾಣಬಂದರ್ಥ.

---

೨೪೬

**ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ, ಮೃದುವಚನವೆ ಸಕಲ ಜಪಂಗಳಯ್ಯಾ, ಮೃದುವಚನವೆ ಸಕಲ ತಪಂಗಳಯ್ಯಾ ಸದುವಿನಯವೆ ಸದಾಶಿವನ ಒಲುಮೆಯಯ್ಯಾ, ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ**

I------------------------------------------------------------------------

ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ: ಕಂಡ–ಬೀದಿಬಾಜಾರದಲ್ಲಿ ದರುಶನವಾದ, ಭಕ್ತರಿಗೆ–ಶಿವಭಕ್ತರಿಗೆ, ಕೈಮುಗಿವಾತನೆ–ಶರಣುಶರಣಾರ್ಥಿಯೆಂದು ಹಸ್ತಾಂಜಲಿತನಾಗುವಾತನೆ, ಭಕ್ತ–ಆತನೆ ಶಿವಭಕ್ತನು. ಮೃದುವಚನವೆ–ಅಯ್ಯಾ ಜೀಯಾ ಚಿತ್ತೈಸಿ ಬನ್ನಿ, ಮೂರ್ತವ–ಮಾಡಿರೆಂದು ಮಧುರೋಕ್ತವಾಗಿ ಪ್ರಸಂಗವನಾಡುವಂಥದೆ; ಸಕಲ ಜಪಂಗಳಯ್ಯಾ–ಅದೇ ಸಮಸ್ತಜಪದ ಫಲಂಗಳಾಗಿ ಅಳವಟ್ಟಿಪ್ಪುದಯ್ಯಾ, ಮೃದುವಚನವೆ–ಅಯ್ಯಾ ಜೀಯಾ ಚಿತ್ತೈಸಿ ಆವಾಗ ದಯಪಾಲಿಸಿದಿರಿ, ಬನ್ನಿ ಮೂರ್ತವ ಮಾಡಿರೆಂದು ಮಧುರೋಕ್ತವಾದ ಪ್ರಸಂಗವನಾಡುವಂಥದೆ, ಸಕಲ ತಪಂಗಳಯ್ಯಾ–ಅದೇ ಸಮಸ್ತತಪಂಗಳ ಫಲವಾಗಿ ಅಳವಟ್ಟಿಪ್ಪುದಯ್ಯಾ.

ಸದುವಿನಯವೆ–ಒಳ್ಳಿತ್ತಾದ ಜ್ಞಾನಾನುಭಾವ ಪ್ರಸಂಗವೆ, ಸದಾಶಿವನ–ಅನವರತ ಮಾಂಗಲ್ಯಸ್ವರೂಪವಾದ ಪರಶಿವಲಿಂಗದ, ಒಲುಮೆಯಯ್ಯಾ–ಕೃಪೆಯಯ್ಯಾ, ಕೂಡಲಸಂಗಯ್ಯನು–ಪರಶಿವಲಿಂಗವು, ಅಂತಲ್ಲದೆ–ಹಾಂಗಲ್ಲದೆ, ಒಲ್ಲನಯ್ಯಾ–ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನಯ್ಯಾ.

IV------------------------------------------------------------------------

ದೇಹ ಹಲವಾದರೇನು ಪರಂಜ್ಯೋತಿ ಲಿಂಗವೊಂದೇಯಾದ ಕಾರಣ, ನಮಸ್ಕಾರ ಪ್ರೇಮವಾಕ್ಯವಿನಯ ಶಿವನ ಒಲುಮೆಯೆಂಬುದೀ ವಚನದರ್ಥ.

---

೨೪೭

**ಇತ್ತ ಬಾರಯ್ಯಾ ಇತ್ತ ಬಾರಯ್ಯಾ ಎಂದು ಭಕ್ತರೆಲ್ಲರೂ ಕೂರ್ತು ಹತ್ತೆಗರೆವುತ್ತಿರಲು, ಮತ್ತೆ ಕೆಲಕ್ಕೆ ಹೋಗಿ ಶರಣೆಂದು ಹಸ್ತ ಬಾಯನೆ ಮುಚ್ಚಿ, ಕಿಜೆದಾಗಿ ಭೃತ್ಯಾಚಾರವ ನುಡಿದು ವಿನಯ ತದ್ಧ್ಯಾನವುಳ್ಳಡೆ ಎತ್ತಿಕೊಂಬನಯ್ಯಾ ನಮ್ಮ ಕೂಡಲಸಂಗಮದೇವ, ಪ್ರಮಥರ ಮುಂದೆ.**

I ------------------------------------------------------------------------

ಇತ್ತ ಬಾರಯ್ಯಾ ಇತ್ತ ಬಾರಯ್ಯಾ ಎಂದು–ಒಂದು ಕಥಾನುಸಾರವನಾದರೂ ಆಗಲಿ ಬಸವೇಶ್ವರಪುರಾಣವನಾದರೂ ಆಗಲಿ ಕಲಹಕ್ಯಾತ ಶೀಲವಂತರನಾಗಲಿ ನೂರಾರು ಶಿವಭಕ್ತರು ಸಭೆಯ ಮಾಡಿಕೊಂಡು ಓದಿಸುತ್ತ ಕುಳಿತುಕೊಂಡಿದ್ದಲ್ಲಿ, ಅಲ್ಲಿಗೊಬ್ಬ ಬಡಭಕ್ತ ಬರಲು ಈಚೆಗೆ ಬನ್ನಿರಯ್ಯಾ ಈಚೆಗೆ ಬನ್ನಿರಯ್ಯಾಯೆಂದು, ಭಕ್ತರೆಲ್ಲರೂ–ಅಲ್ಲಿ ಕುಳಿತುಕೊಂಡಿದ್ದಂಥ ಶಿವಭಕ್ತರಷ್ಟೂ, ಕೂರ್ತು–ಸ್ನೇಹದಿಂದ, ಹತ್ತೆಗರೆವುತ್ತಿರಲು–ಸಮೀಪಕ್ಕೆ ಆಹ್ವಾನಿಸುತ್ತಿರಲು, ಮತ್ತೆ–ಮರಳಿ, ಕೆಲಕ್ಕೆ ಹೋಗಿ–ಕೆಳಗಡೆಗೆ ಸಾರ್ದು, ಶರಣೆಂದು–ನಮಸ್ಕಾರವೆಂದು ನಮಸ್ಕರಿಸಿ, ಹಸ್ತ ಬಾಯನೆ ಮುಚ್ಚಿ–ಕರಗಳಿಂದ ಜಿಹ್ವೆಯನು ಬಾಸಣಿಸಿಕೊಂಡು, ಕಿಜೆದಾಗಿ–ಕಿಂಕರನಾಗಿ, ಭೃತ್ಯಾಚಾರವ ನುಡಿದು–ನಿಮ್ಮ ಗೋವ ಗುಲಾಮ ನಿಮ್ಮ ತೊತ್ತು ನಿಮ್ಮ ಸೇವಕನೆಂದು ಭಯಭಕ್ತಿ ಭೃತ್ಯಾಚಾರದ ಪ್ರಸಂಗವನಾಡಿ, ವಿನಯ ತದ್ಧ್ಯಾನವುಳ್ಳಡೆ–ಈ ಸಭೆಯೆ ಶಿವಸಭೆ. ಇಲ್ಲಿ ಕರ್ತೃವಾಗಿ ಮೂರ್ತಮಾಡಿಕೊಂಡಿರುವಂಥ ಜಂಗಮಮೂರ್ತಿಗಳೇ ಪರಮೇಶ್ವರನಿಗೆ ಸಮಾನ. ಇಲ್ಲಿ ನಾಂಟ್ಯವನಾಡುವಂಥವರೇ ಭೃಂಗೀಶ್ವರಗೆ ಸಮಾನ. ಇಲ್ಲಿ ಮದ್ದಳೆಯ ನುಡಿಸುವಂಥವರೇ ನಂದೀಶ್ವರಗೆ ಸಮಾನ. ಈ ಶೀಲವಂತಯ್ಯಗಳೆ ಕಲಹಕ್ಯಾತ ಬ್ರಹ್ಮಯ್ಯಗಳಿಗೆ ಸಮಾನವೆಂಬಂಥ ಶಿವಸ್ಮರಣೆ ತನ್ನಲ್ಲಿ, ಉಳ್ಳಡೆ–ಉಂಟಾಗಿದ್ದರೆ, ನಮ್ಮ ಕೂಡಲಸಂಗಮದೇವ–ಪರಶಿವಲಿಂಗವು, ಪ್ರಮಥರ ಮುಂದೆ–ಪ್ರಮಥಗಣಂಗಳ ಸಮ್ಮುಖದಲ್ಲಿ, ಎತ್ತಿಕೊಂಬನಯ್ಯಾ–ಅಂತಪ್ಪ ಸದ್ಭಕ್ತನ ತನ್ನಲ್ಲೇಕಾರ್ಥವ ಮಾಡಿಕೊಳುತ್ತಿಪ್ಪನಯ್ಯಾ.

---

೨೪೮

**ಭಕ್ತ ಭಕ್ತನ ಮನೆಗೆ ಬಂದಡೆ ಭೃತ್ಯಾಚಾರವ ಮಾಡಬೇಕು; ಕರ್ತನಾಗಿ ಕಾಲ ತೊಳೆಸಿಕೊಂಡಡೆ ಹಿಂದೆ ಮಾಡಿದ ಭಕ್ತಿಗೆ ಹಾನಿ! ಲಕ್ಷಗಾವುದ ದಾರಿಯ ಹೋಗಿ ಭಕ್ತನು ಭಕ್ತನ ಕಾಂಬುದು ಸದಾಚಾರ. ಅಲ್ಲಿ ಕೂಡಿ ದಾಸೋಹವ ಮಾಡಿದಡೆ ಕೂಡಿಕೊಂಬನು ನಮ್ಮ ಕೂಡಲಸಂಗಮದೇವ.**

I ------------------------------------------------------------------------

ಭಕ್ತ ಭಕ್ತನ ಮನೆಗೆ ಬಂದಡೆ–ಒಬ್ಬ ಭಕ್ತನೇನಾದರೂ ಗುರುಚರಮೂರ್ತಿಗಳಿಗೆ ಭಕ್ತಿಭಿನ್ನಹವನ್ನು ಮಾಡಿ ಆ ಭಕ್ತನಿಗೆ ನೀನೂ ಊಟಕ್ಕೆ 'ಬಾ' ಯೆಂದು ಹೇಳಿ ಕರಕೊಂಡು ಮನೆಗೆ ಬಂದಲ್ಲಿ, ಭೃತ್ಯಾಚಾರವ ಮಾಡಬೇಕು–ಅವರು ಅಗ್ಘವಣಿಯ ಕೊಟ್ಟರೆ ತಾನು ಹಾವುಗೆಯ ಕೊಡಬೇಕು. ಅವರು ಹಾವುಗೆಯ ಕೊಟ್ಟರೆ ತಾನು ಅಗ್ಘವಣಿಯ ಕೊಡಬೇಕು. ಹೀಂಗೆ ಆವುದಾನೊಂದು ಭಕ್ತಿಸತ್ಕ್ರಿಯೆಯೊಡನೆ ಕೂಡಿರಬೇಕಲ್ಲದೆ ನಮ್ಮ ಮನೆಯೊಳಗೆ ನಾ ಮಾಡಬೇಕು. ಇವನ ಮನೆಯೊಳಗೆ

ನಾನೇಕೆ ಮಾಡಬೇಕೆಂದು, ಕರ್ತನಾಗಿ-ಶ್ರೇಷ್ಠನಾಗಿ, ಕಾಲ ತೊಳೆಸಿಕೊಂಡಡೆ-ಪರ್ಯಂಕದ ಮೇಲೆ ಕುಳಿತುಕೊಂಡು ಚರಣವನ್ನು ಪ್ರಕ್ಷಾಲಿಸಿಕೊಂಡರೆ, ಹಿಂದೆ ಮಾಡಿದ-ಮೊದಲ ಜನ್ಮದಲ್ಲಿ ಅನುಗೈವಂಥ, ಭಕ್ತಿಗೆ-ಶಿವಾದ್ವೈತ ಭಕ್ತಿಗೆ, ಹಾನಿ-ಕೊರತೆ ಬರುತ್ತಿಹುದು. ಲಕ್ಷಗಾವುದ ದಾರಿಯ ಹೋಗಿ-ಒಂದು ಲಕ್ಷಯೋಜನ ಪಥವನಾದರೂ ಐದುಹೋಗಿ, ಭಕ್ತನು-ಶಿವಭಕ್ತನು, ಭಕ್ತನ-ನಿರ್ವಂಚಕ ಸದಭಕ್ತನ, ಕಾಂಬುದು-ನೋಡುವುದು, ಸದಾಚಾರ-ಸತ್ಪಥಾಚಾರವು.

ಅಲ್ಲಿ-ಹೋದಲ್ಲಿ, ಕೂಡಿ-ಬೆರೆದು, ದಾಸೋಹವ ಮಾಡಿದಡೆ-ಅಕ್ಕಿ ಕಣಕ ಬೇಳೆ ಬೆಲ್ಲ ತುಪ್ಪ ಸಕ್ಕರಿ ಕಾಯಿ ಸೊಪ್ಪು ಮೊದಲಾದ ಸಮಸ್ತ ಸೋಬಸ್ಕರವನು ತೆಗೆದುಕೊಂಡು ಬಂದು ಪಾಕಪ್ರಯತ್ನಂಗಳ ಮಾಡಿ ಗುರುಲಿಂಗಜಂಗಮದ ದಾಸೋಹವನನುಗೈದರೆ ಕೂಡಿಕೊಂಬನು-ಅಂತಪ್ಪ ಭಕ್ತನ ತನ್ನಲೇಕಾರ್ಥವ ಮಾಡಿಕೊಳ್ಳುತ್ತಿಹನು, ನಮ್ಮ ಕೂಡಲಸಂಗಮದೇವ-ನಮ್ಮ ಪರಶಿವಲಿಂಗವು.

---

೨೪೯

**ದಯವಿಲ್ಲದ ಧರ್ಮವದೇನಯ್ಯಾ? ದಯವೇ ಬೇಕು ಸರ್ವಪ್ರಾಣಿಗಳೆಲ್ಲಅಲ್ಲಿಯು. ದಯವೇ ಧರ್ಮದ ಮೂಲವಯ್ಯಾ ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.**

I ----------------------------------------------------------------------------

ದಯವಿಲ್ಲದ ಧರ್ಮವದೇನಯ್ಯಾ: ದಯವಿಲ್ಲದ-ಕರುಣವಿಲ್ಲದ, ಧರ್ಮವು-ಸದ್ಧರ್ಮವು, ಅದೇನಯ್ಯಾಜಅದೇನು ಪ್ರಯೋಜನವಯ್ಯಾ. ದಯವೇ ಬೇಕು-ಕರುಣವೇ ಬೇಕು, ಸರ್ವಪ್ರಾಣಿಗಳೆಲ್ಲ-ಲ್ಲಿಯು-ಇರುವೆಯಾದಿಯಾಗಿ ಗಜವೇ ಕಡೆಯಾದ ಸಮಸ್ತ ಸ್ಥೂಲಸೂಕ್ಷ್ಮಜೀವರುಗಳಲ್ಲಿಯು, ದಯವೇ-ಕರುಣವೇ, ಧರ್ಮದ-ಸದ್ಧರ್ಮದ, ಮೂಲವಯ್ಯಾ-ಮೊದಲಯ್ಯಾ, ಕೂಡಲಸಂಗಯ್ಯ-ಪರಶಿವಲಿಂಗವು, ಅಂತಲ್ಲದೆ-ಹಾಂಗಲ್ಲದೆ, ಒಲ್ಲನಯ್ಯಾ-ಒಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನಯ್ಯಾ.

---

೨೫೦

**ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ? ತನಗಾದ ಆಗೇನು? ಅವರಿಗಾದ ಚಾಗೇನು? ತನುವಿನ ಕೋಪ ತನ್ನ ಹಿರಿತನದ ಕೇಡು! ಮನದ ಕೋಪ ತನ್ನ ಅರುಹಿನ ಕೇಡು! ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆ ಬೇವುದೆ ಕೂಡಲಸಂಗಮದೇವಾ!**

I----------------------------------------------------------------------------

ತನಗೆ ಮುನಿವವರಿಗೆ-ತನ್ನ ಮೇಲೆ ಕೋಪಿಸುವವರಿಗೆ, ತಾ ಮುನಿಯಲೇಕಯ್ಯಾ?-ತಾ ಕೋಪಿಸುವಂಥದೇನು ಕಾರಣಕ್ಕಯ್ಯಾ. ತನಗಾದ-ತನಗುಂಟಾದ, ಆಗೇನು-ಆದಾಯವೇನು? ಅವರಿಗಾದ-ಅವರಿಗುಂಟಾದ, ಚಾಗೇನು-ಲುಕ್ಸಾನವೇನು? ತನುವಿನ ಕೋಪ ತನ್ನ ಹಿರಿತನದ

ಕೇಡು–ನಾಲ್ವರ ಮುಂದೆ ಅವನಾನೊಬ್ಬನ ಬಡಿವುದಕ್ಕೆ ಹೋದಲ್ಲಿ ನೀ ನೋಡು ನಿನ್ನ ಹೊಟ್ಟೆಯ ನೋಡು ನಿನ್ನ ಗಡ್ಡ ನೋಡೆಂದು ಛೀ ಹಾಕಿದಲ್ಲಿ ತನ್ನ ಹಿರಿತನದಭಿಮಾನ ಹೋಗದೆ ಇದ್ದಿತ್ತೇ ಹೋಗುತ್ತಿಹುದು. ಮನದ ಕೋಪ ಹೀಂಗಿದ್ದರೆ ಹೀಂಗಾಗುತೈತಲಾಯೆಂದು ಇಟ್ಟೆಡೆ ಮುಟ್ಟೆಡೆಗಳಲ್ಲಿ ಸಿಕ್ಕಿಸಿಕೊಂಡು ಇರಿದುಕೊಲ್ಲಬೇಕೆಂಬ ಮನಸ್ಸಿನ ಸಿಟ್ಟು, ತನ್ನ ಅರುಹಿನ ಕೇಡು–ಅವರಂಗದಲ್ಲಿ ಪ್ರಾಣಲಿಂಗಸಂಬಂಧತ್ವವನ್ನು ತಿಳಿವಂಥ ಜ್ಞಾನಕ್ಕೆ ಕೊರತೆಯು. ಮನೆಯೊಳಗಣ–ಗೃಹದಲ್ಲಿರುವಂಥ, ಕಿಚ್ಚು–ಅಗ್ನಿಯು, ಮನೆಯ ಸುಟ್ಟಲ್ಲದೆ–ತನ್ನ ಮಂದಿರವ ದಹಿಸಿದಲ್ಲದೆ, ನೆರೆಮನೆ ಬೇವುದೆ–ಮತ್ತೊಬ್ಬರ ಮನೆಯ ಸುಟ್ಟಿತ್ತೇ? ಸುಡಲರಿಯದೆಂಬ ಹಾಂಗೆ, ಮನೆಯೊಳಗಣ–ಅಂತರಂಗವೆಂಬ ಗೃಹದೊಳಗಿರುವಂಥ, ಕಿಚ್ಚು–ಕೋಪಾಗ್ನಿಯು, ಮನೆಯ ಸುಟ್ಟಲ್ಲದೆ–ತನ್ನಂತರಂಗದಲ್ಲಿರುವಂಥ ಭಕ್ತಿಜ್ಞಾನವೈರಾಗ್ಯವನ್ನು ದಹಿಸಿದಲ್ಲದೆ, ನೆರೆಮನೆ ಬೇವುದೆ–ಮತ್ತೊಬ್ಬರಂತರಂಗದಲ್ಲಿರುವಂಥ ಭಕ್ತಿಜ್ಞಾನವೈರಾಗ್ಯವನ್ನು ದಹಿಸಿತ್ತೇ? ದಹಿಸಲರಿಯದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

........................

೧+ ಮತ್ತು (ಗ).

---

೨೫೧

**ಅರ್ಥಕ್ಕೆ ತಪ್ಪಿದಡೇನು ಪ್ರಾಣಕ್ಕೆ ತಪ್ಪಿದಡೇನು, ಅಭಿಮಾನಕ್ಕೆ ತಪ್ಪಿದಡೇನು? ಶರಣರು ಶರಣರಲ್ಲಿ ಗುಣವನಱಸುವರೆ? ಕೂಡಲಸಂಗನಶರಣರು [1]ನೊಂದರೆ[1] ಸೈರಿಸಬೇಕು.**

I-----------------------------------------------------------------------

ಅರ್ಥಕ್ಕೆ ತಪ್ಪಿದಡೇನು–ಒಬ್ಬ ಭಕ್ತನೇನಾದರೂ ಸಮಯಾಚಾರಕ್ಕೆ ಜಂಗಮಮೂರ್ತಿಗಳ ಕಟ್ಟುಮಾಡಿಕೊಂಡು ಆಗಾಗ್ಗೆ ಸೂಚನೆ ಬಿನ್ನಹ ಘಟ್ಟಿಬಿನ್ನಹವನ್ನು ಮಾಡುತ್ತ ಮೃಷ್ಟಾನ್ನಪದಾರ್ಥವನ್ನು ನೀಡಿ ಸಂತುಷ್ಟಿಬಡಿಸುತ್ತ ಶಾಲುಶಕಲಾತಿ ಸಣ್ಣಕಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟಮಂಚ ಲೇಪು ಸುಪ್ಪತ್ತಿಗೆಯ ಮೇಲೆ ಮಲಗಿಸಿಕೊಂಡು ಪರಿಣಾಮದಲ್ಲಿ ಮಡಗಿಕೊಂಡಿರುವವನು. ಹೀಂಗಿರುತಿದ್ದ ಹಾಂಗೆ ಆ ಅಯ್ಯನವರು [1]ದ್ರವ್ಯವನ್ನು[1] ತೆಗದುಕೊಂಡುಹೋದರೇನು? ಪ್ರಾಣಕ್ಕೆ ತಪ್ಪಿದಡೇನು–ಪ್ರಾಣಸಂಬಂಧವಾದ ಪುತ್ರರುಗಳನ್ನು ಕೊಂದು ಬಡಿದು ಘಾಸಿಮಾಡಿದರೇನು? ಅಭಿಮಾನಕ್ಕೆ ತಪ್ಪಿದಡೇನು?–ತನ್ನ [*ಅಭಿಮಾನಕ್ಕೆ *] ಅಳುಪಿದಡೇನು? ಶರಣರು–ನಿರ್ವಂಚಕ ಸದ್ಭಕ್ತರು, ಶರಣರಲ್ಲಿ–ಜಂಗಮಮೂರ್ತಿಗಳಲ್ಲಿ, ಗುಣವನಱಸುವರೆ–ಇವರು ಅರ್ಥಕ್ಕೆ ತಪ್ಪಿದರು, ಪ್ರಾಣಕ್ಕೆ ತಪ್ಪಿದರು, ಅಭಿಮಾನಕ್ಕೆ ತಪ್ಪಿದರು ಎಂದು ಗುಣ ಅವಗುಣವ ಹುಡುಕುವುದಕ್ಕಾದೀತೆ? ಆಗದು. ಕೂಡಲಸಂಗನ ಶರಣರು–ನಿರ್ವಂಚಕ ಸದ್ಭಕ್ತರು, ನೊಂದರೆ ಸೈರಿಸಬೇಕು–ಅದನ್ನು ತರಹರಿಸಿಕೊಂಡು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕು.[2]

........................

೧+ ಅರ್ಥಕ್ಕೆ ತಪ್ಪಿದಡೇನು (ಕ,ಗ). ೨+ ಶ್ರೀ ಶ್ರೀ ಶ್ರೀ (ಗ).

IV-----------------------------------------------------------------------

1–1 ನೊಂದು (ತ).

..........................

ಅಸತ್ಯವನೆ ಬಿಟ್ಟು ಸತ್ಯವಾದ ಶರಣರನೆ ಹಿಡಿವುದೆಂಬುದೀ ವಚನದರ್ಥ.[೩]

..........................

೩+ ಅಂತು ವಚನವು ॥ ೩॥ ಭಕ್ತನ ಜ್ಞಾನಿಯ ಸ್ಥಲ ಸಮಾಪ್ತಿ॥ ಮಂಗಳ ಮಹಾ ಶ್ರೀ॥ ಶ್ರೀ॥ ಶ್ರೀ॥ (ತ).

---

# ಭಕ್ತನ ಭಕ್ತಸ್ಥಲ

I------------------------------------------------------------------------

[ಭಕ್ತನ] ಭಕ್ತಸ್ಥಲ–ಭಕ್ತಸ್ಥಲದೊಳಗಣ ಭಕ್ತಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

---

೨೫೨

**ಭಕ್ತನು ಕಾಣದ ಠಾವಿನಲ್ಲಿ ಜಜೆದರೆಂದಡೆ ಕೇಳಿ ಪರಿಣಾಮಿಸಬೇಕು. ಅದೇನು ಕಾರಣವೆಂದಡೆ ಕೊಡದೆ ಕೊಳ್ಳದೆ ಅವರಿಗೆ ಸಂತೋಷವಹುದಾಗಿ ! ಎನ್ನಮನದ ತದ್ವೇಷವಳಿದು ನಿಮ್ಮ ಶರಣರಿಗೆ ಶರಣಾಣೆಂಬುದ ಕರುಣಿಸು, ಕೂಡಲಸಂಗಮದೇವ.**

I ------------------------------------------------------------------------

ಭಕ್ತನು ಕಾಣದ ಠಾವಿನಲ್ಲಿ–ಒಬ್ಬ ಭಕ್ತನೇನಾದರೂ ಸಮಯಾಚಾರಕ್ಕೆ ಜಂಗಮಮೂರ್ತಿಗಳ ಮಡಗಿಕೊಂಡು ಆಗಾಗ್ಗೆ ಸೂಚನೆ ಬಿನ್ನಹ ಗಟ್ಟಿ ಬಿನ್ನಹವನ್ನು ಮಾಡುತ್ತ ಮೃಷ್ಟಾನ್ನಪದಾರ್ಥವ ನೀಡಿ ಸಂತುಷ್ಟಿಬಡಿಸುತ್ತ ಶಾಲು ಸೆಕಲಾತಿ ಸಣ್ಣಗಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟೆಮಂಚ ಲೇಪು ಸುಪ್ಪತ್ತಿಗೆಯ ಮೇಲೆ ಮಲಗಿಸಿಕೊಂಡು ಪರಿಣಾಮದಲ್ಲಿ ಹೀಂಗಿರುತಿರ್ದ ಹಾಂಗೆ, ಆ ಅಯ್ಯನವರು ಇಲ್ಲಿಗೆ ಹತ್ತೆಂಟು ಗಾವುದದಲ್ಲಿ ಒಬ್ಬ ನಿರ್ವಂಚಕ ಸದ್ಭಕ್ತನೈದಾನೆಂಬಂಥ ಸುದ್ದಿಯನ್ನು ಕೇಳಿ ಅವನ ಭಕ್ತಿಯನ್ನು ನೋಡಬೇಕೆಂದು ಈ ಭಕ್ತನೊಂದಿಗೆ ಪಂಚರಾತ್ರಿ ದೇಶಾಂತರವ ಮಾಡಿಬರುತ್ತೇವೆಂದು ಹೇಳಿ ಈ ಊರಿಂದಾವೂರು ಆ ಊರಿಂದಾಭಕ್ತನಿರುವಂಥ ಗ್ರಾಮಕ್ಕೆ ಬಂದು ಮಜ್ಜನವ ನೀಡಿಕೊಂಡು ಶಿವಪೂಜೆಯ ಮಾಡಿಕೊಂಡು ಆ ಭಕ್ತನ ಮನೆಗೆ ಭಿಕ್ಷಕ್ಕೆ ಹೋದಲ್ಲಿ ಕಂಡಾಕ್ಷಣಕ್ಕೆ ನಮಸ್ಕಾರವ ಮಾಡಿ ಅಗ್ಗಣಿಯ ಕೊಟ್ಟು ಹಾವುಗೆಯ ಕೊಟ್ಟು ಹಸ್ತಲಾಘವ ಕೊಟ್ಟು ಒಳೆಯಕ್ಕೆ ಕರಕೊಂಡು ಹೋಗಿ ಉನ್ನತಾಸನದಲ್ಲಿ ಮೂರ್ತಗೊಳಿಸಿ ಸಕಲ ಪದಾರ್ಥವ ನೀಡಿ ಸಂತುಷ್ಟಿಬಡಿಸಿ ಅವರು ಸಲಿಸಿಯಾದ ಬಳಿಕ ವೀಳ್ಯವ ಮಡಿಚಿಕೊಡುತ್ತ ಎಲ್ಲಿಂದ ಚಿತ್ತೈಸಿದಿರಿ ಸ್ವಾಮಿಯೆಂದು ಕೇಳಿದಲ್ಲಿ, ಇಲ್ಲಿಗೆ ಹತ್ತೆಂಟು ಗಾವುದದಲ್ಲೊಬ್ಬ ಸದ್ಭಕ್ತನೈದಾನೆ. ಆತನ ಭಕ್ತಿಯಲ್ಲಿದ್ದೀವಿ, ಅಲ್ಲಿಂದ ಬಂದೆವೆಂದು ಹೇಳಿದಲ್ಲಿ ಅವನ ಸುದ್ದಿಯ ಇಲ್ಲೇನು ಹೇಳುತ್ತಿದ್ದೀರಿ ಸ್ವಾಮಿ, ಅವನು ಮಹಾ ತನುವಂಚಕ ಮನವಂಚಕ

ಧನವಂಚಕನೆಂದು ದೂಷಣೆಯ ಮಾಡಿದಲ್ಲಿ ಆ ಅಯ್ಯನವರು ಹಾಂಗೆ ನಾಲ್ಕೊಪ್ಪತ್ತಿದ್ದು ಆ ಭಕ್ತನೊಂದಿಗೆ ಪಂಚರಾತ್ರಿ ದೇಶಾಂತರವ ಮಾಡಿಬರುತ್ತೇವೆಂದು ಹೇಳಿ ಆ ಊರಿಂದ ಈ ಊರು ಈ ಊರಿಂದ ಮೊದಲ ಭಕ್ತನ ಗ್ರಾಮಕ್ಕೆ ಬಂದು ಮಜ್ಜನವ ನಿಡಿಕೊಂಡು ಶಿವಪೂಜೆಯ ಮಾಡಿಕೊಂಡು ಆ ಭಕ್ತನ ಮನೆಗೆ ಭಿಕ್ಷಕ್ಕೆ ಹೋದಲ್ಲಿ ಕಂಡಾಕ್ಷಣಕ್ಕೆ ನಮಸ್ಕಾರವ ಮಾಡಿ ಅಗ್ಗಣಿಯ ಕೊಟ್ಟು ಹಾವುಗೆಯ ಕೊಟ್ಟು ಹಸ್ತಲಾಘವ ಕೊಟ್ಟು ಒಳೆಯಕ್ಕೆ ಕರಕೊಂಡು ಹೋಗಿ ಉನ್ನತಾಸನದಲ್ಲಿ ಕುಳ್ಳಿರಿಸಿ ಸಕಲಪದಾರ್ಥವ ನೀಡಿ ಸಂತುಷ್ಟಿಬಡಿಸಿ ಸಲಿಸಿಯಾದ ಬಳಿಕ ವೀಳ್ಯವ ಮಡಿಚಿಕೊಡುತ್ತ ಎಲ್ಲೆಲ್ಲಿ ದೇಶಾಂತರವ ಮಾಡಿ ಬಂದಿರಿ ಸ್ವಾಮಿ ಎಂದು ಕೇಳಿದಲ್ಲಿ, ಇಲ್ಲಿಗೆ ಹತ್ತೆಂಟು ಗಾವುದದಲ್ಲಿ ಒಬ್ಬ ನಿರ್ವಂಚಕ ಸದ್ಭಕ್ತನೈದಾನೆಂಬಂಥ ಸುದ್ದಿಯನ್ನು ಕೇಳಿ ಆತನ ಭಕ್ತಿಯನ್ನು ನೊಡುವುದಕ್ಕೆ ಹೋಗಿದ್ದೆವಿ. ಹೀಂಗಿರುತಿದ್ದ ಹಾಂಗೆ ಅಲ್ಲೊಂದು ಮಾತುಕತೆ ಪ್ರಸಂಗ ಬಂತು; ಕಾಣದ–ಕಣ್ಣಿನಲ್ಲಿ ಕಾಣದ ಕಿವಿಯಲ್ಲಿ ಕೇಳದ, ಠಾವಿನಲ್ಲಿ–ಸ್ಥಾನದಲ್ಲಿ, ಜಜಿದರೆಂದಡೆ–ನಿನ್ನ ತನುವಂಚಕ ಮನವಂಚಕ ಧನವಂಚಕನೆಂದು ದೂಷಣೆಯ ಮಾಡಿದನೆಂದು ಹೇಳಿದರೆ, ಕೇಳಿ–ಆಲಿಸಿ, ಪರಿಣಾಮಿಸಬೇಕು–ಆದರೇನಾಯಿತ್ತು ಸ್ವಾಮಿ ಎನ್ನಲ್ಲಿ ತನುವಂಚನೆ ಮನವಂಚನೆ ಧನವಂಚನೆ ಇದ್ದಕಾರಣ ಆಡಿದರಷ್ಟೇ, ಎನ್ನ ಮೈಮಲಿನ ಹೋಯಿತ್ತು. ಎನ್ನ ಮನದ ಪಾಪವೆಲ್ಲ ತೊಲಗಿತ್ತೆಂದು ಸಂತೋಷಬಡಬೇಕು.

ಅದೇನು ಕಾರಣವೆಂದಡೆ–ಅದೆಂತಿರ್ಪುದೆಲೆ ಸ್ವಾಮಿಯೆಂದು ಬೆಸಗೊಂಡು ಕೇಳಿದರೆ, ಕೊಡದೆ–ತನ್ನಿಂದೊಂದೊಸ್ತುವನ್ನು ಅವರಿಗೆ ಕೊಡದೆ, ಕೊಳ್ಳದೆ–ಅವರಿಂದೊಸ್ತುವನ್ನು ತಾ ತೆಗೆದುಕೊಳ್ಳದೆ, ಅವರಿಗೆ ಸಂತೋಷವಹುದಾಗಿ–ಅವರಿಗೆ ಇರುತ್ತಿಹುದಾಗಿ, ಎನ್ನ ಮನದ ತದ್ವೇಷವಳಿದು–ಮತ್ತು ವರುಷಾರುತಿಂಗಳ ಮೇಲೆ ತೋವೆ, ಜಾತ್ರೆ, ಕಟ್ಟೆಮನೆ ಸ್ಥಾನಂಗಳಲ್ಲಿ ಈ ಭಕ್ತನು ಆ ಭಕ್ತನು ಕೂಡಿದಲ್ಲಿ ಆಗ ತನ್ನ ತನುವಂಚಕ ಮನವಂಚಕ ಧನವಂಚಕನೆಂದು ದೂಷಣೆಯ ಮಾಡಿದ್ದಾನಷ್ಟೇ, ಈಗಿವನ ಮೂದಲಿಸಬೇಕೆಂಬಂಥ, ಎನ್ನ ಮನದ–ಎನ್ನ ಚಿತ್ತದ, ತದ್ವೇಷವಳಿದು–ಸಿಟ್ಟನ್ನು ನಷ್ಟವ ಮಾಡಿ, ನಿಮ್ಮ ಶರಣರಿಗೆ–ನಿಮ್ಮ ಜಂಗಮಮೂರ್ತಿಗಳಿಗೆ, ಶರಣೆಂಬುದ–ನಮಸ್ಕಾರವೆಂದು ನಮಸ್ಕರಿಸಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದನೆ, ಕರುಣಿಸು–ಕೃಪೆಮಾಡು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

---

೨೫೩

**[1]ಕರಗಿಸಿ ಎನ್ನ ಮನ[2]ವ[2] ಕಾಳಿಕೆಯ ಕಳೆಯಯ್ಯಾ; [3]ಒರೆಗೆ[3] ಬಣ್ಣಕ್ಕೆ [4]ತಂದೆನ್ನ[4] ಪುಟವಿಕ್ಕಿ ನೋಡಯ್ಯಾ ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕ[5]ಡಿಯಾ[5]ಣೆಯ ಮಾಡಿ ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು ಕೂಡಲಸಂಗಮದೇವಾ!**

I-----------------------------------------------------------------------

ಎನ್ನ ಮನವ–ಎನ್ನ ಚಿತ್ತವನ್ನು, ಕರಗಿಸಿ–ಮೂಸೆಯೊಳಗೆ ಹಾಕಿ ಅಗ್ನಿಯಲ್ಲಿಟ್ಟು ಕಾಸಿ ಕರಗಿಸಿ, ಕಾಳಿಕೆಯ–ಕಲ್ಮಷವನ್ನು, ಕಳೆಯಯ್ಯಾ–ನಷ್ಟವ ಮಾಡಯ್ಯಾ. ಒರೆಗೆ–ಮಚ್ಚಗಲ್ಲ ಮೇಲಿಟ್ಟು ಒರೆದೊರೆದು ನೋಡಿ, ಬಣ್ಣಕ್ಕೆ ತಂದೆನ್ನ–ಎನ್ನ ಹತ್ತು ಬಣ್ಣ ಹನ್ನೆರಡು ಬಣ್ಣ ಹದಿನಾಲ್ಕು ಬಣ್ಣ

ಹದಿನಾರು ಬಣ್ಣಕ್ಕೆ ಆಗುಮಾಡಿಕೊಂಡು ಬಂದು, ಪುಟವಿಕ್ಕಿ-ಪುಟವನ್ನು ಹಾಕಿ, ನೋಡಯ್ಯಾ ಇದು ಎಟ್ಟಿ ಚಿನ್ನವೋ ಮೃದುಚಿನ್ನವೋ ಎಂದು ಮಚ್ಚಗಲ್ಲ ಮೆಲಿಟ್ಟು ಒರೆದೊರೆದು ನೋಡಯ್ಯಾ. ಕಡಿಹಕ್ಕೆ – ಉಳಿಗಳಿಂದ ಕಡಿಕಡಿದು, ಬಡಿಹಕ್ಕೆ-ಸುತ್ತಿಗೆಯಿಂದ ಬಡಿಬಡಿದು, ತಂದು-ಹತ್ತು ಬಣ್ಣ ಹನ್ನೆರಡು ಬಣ್ಣ ಹದಿನಾಲ್ಕು ಬಣ್ಣ ಹದಿನಾರು ಬಣ್ಣಕ್ಕೆ ಆಗುಮಾಡಿಕೊಂಡು ಬಂದು, ಎನ್ನ ಕಡಿಯಾಣಿಯ ಮಾಡಿ-ಎನ್ನ ಪುತ್ಥಳಿ ಚಿನ್ನವ ಮಾಡಿ, ನಿಮ್ಮ ಶರಣರ-ನಿಮ್ಮ ರಾಜರ, ಪಾದಕ್ಕೆ-ಚರಣಕ್ಕೆ, ತೊಡಿಗೆಯ ಮಾಡಿ-ನೂತನವಾದಾಭರಣಂಗಳ ಮಾಡಿ, ಸಲಹು-ರಕ್ಷಣ್ಯವ ಮಾಡು, ಕೂಡಲಸಂಗಮ ದೇವಾ-ಎಲೆ ಕಾರಕನೆ ಎಂಬ ದೃಷ್ಟೋಪಮಾನದ ಹಾಂಗೆ.

● ಎನ್ನ ಮನವ-ಎನ್ನ ಚಿತ್ತವ, ಕರಗಿಸಿ-ಶಿವಾನುಭಾವವೆಂಬ ಅಗ್ನಿಯಿಂದ ಕರಗಿಸಿ ಸೀತಲವ ಮಾಡಿ, ಕಾಳಿಕೆಯ-ಅಜ್ಞಾನವೆಂಬ ಕಲ್ಮಷವನ್ನು,ಕಳೆಯಯ್ಯಾ- ನಷ್ಟವ ಮಾಡಯ್ಯಾ. ಒರೆಗೆ-ಬಹಿರಂಗದಲ್ಲಿ ಎಲೊ ಭಕ್ತ ತನುವ ಕೊಡು ಮನವ ಕೊಡು ಧನವ ಕೊಡು ಎಂದು ಒರೆದೊರೆದು ಕೇಳಿ, ಬಣ್ಣಕ್ಕೆ ತಂದು-ಅಂತರಂಗದಲ್ಲಿ ಶಿವಾದ್ವೈತ ಭಕ್ತಿಯೆಂಬ ಬಣ್ಣಕ್ಕಾಗುಮಾಡಿಕೊಂಡು ಬಂದು, ಎನ್ನ ಪುಟವಿಕ್ಕಿ-ಎನ್ನ ಸಮರಸಜ್ಞಾನವುಳ್ಳಾತನ ಮಾಡಿ, ನೋಡಯ್ಯಾ-ನಾನು ಮಾಡುವಂಥ ಭಕ್ತಿಯನ್ನು ಉಪಾಧಿಯೋ ನಿರುಪಾಧಿಯೋ ಸಹಜಮಾಟವೋ ಉಪಾಧಿಮಾಟವೋ ಎಂದು ನಿರೀಕ್ಷಣೆಯ ಮಾಡಯ್ಯಾ. ಕಡಿಹಕ್ಕೆ-ಇಮ್ಮಡಿ ಮೊನೆಧರರಾಯನ ಜೀವರತ್ನವನು ಕುಠಾರದಿಂದ ಕಡಿಕಡಿದು ತೆಗೆದುಕೊಂಡ ಹಾಂಗೆ ಕತ್ತಿ ಕಠಾರಿ ಚೂರಿ ಬಾಕು ಮೊದಲಾದವರಿಂದ ಕಡಿದಿರಿದು ನೋಡಿದರೂ, ಬಡಿಹಕ್ಕೆ-ಸೇದಿರಾಜಯ್ಯಗಳ ಮನಪದಾರ್ಥವನು ಅಲಗಿನಿಂದ ಘಾತಿಸಿ ತೆಗೆದುಕೊಂಡ ಹಾಂಗೆ ಕೋಲು ಗುದಿಗೆಗಳಿಂದ ಸದೆವಿದರೂ, ತಂದು-ಅಂತರಂಗದಲ್ಲಿ ಶಿವಾದ್ವೈತಭಕ್ತಿಯೆಂಬ ಬಣ್ಣಕ್ಕಾಗಿ ಮಾಡಿಕೊಂಡು ಬಂದು, ಕಡಿಯಾಣಿಯ ಮಾಡಿ-ಚಿದಹಂಕಾರವುಳ್ಳಾತನ ಮಾಡಿ, ನಿಮ್ಮ ಶರಣರ-ನಿಮ್ಮ ಜಂಗಮಮೂರ್ತಿಗಳ, ಪಾದಕ್ಕೆ-ಪದಕಮಲಂಗಳಿಗೆ, ತೊಡಿಗೆಯ ಮಾಡಿ-ಚಿದಾಭರಣವ ಮಾಡಿ, ಸಲಹು-ರಕ್ಷಣ್ಯವ ಮಾಡು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - -

2-2ದ (ಚ,ಜ). 3-3 ಒರೆ (ಚ,ಜ). 5-5 ಡೆಯಾ (ಚ,ಜ).

..........................

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ-ಸ್ಥೂಲತನುವೆಂಬ ಕುಪ್ಪಟ್ಟಿಗೆಯಲ್ಲಿ ಸೂಕ್ಷ್ಮತನುವೆಂಬ ಮೂಸೆಯನೊಡ್ಡಿ ಕರಣಂಗಳೆಂಬ ಇದ್ದಿಲು ಹಾಕಿ ಜ್ಞಾನವೆಂಬ ವಹ್ನಿಯನಿಟ್ಟು ಶಿವಾನುಭಾವದುಸುರಿನಿಂದೂಡಿ ಕಾಸಿ ಸತ್ಕ್ರಿಯೆಂಬ ಅಡಿಗಲ್ಲ ಮೇಲಿಕ್ಕಿ ಶಿಕ್ಷಾಬೋಧೆಯೆಂಬ ಸುತ್ತಿಗೆಯಿಂದ ಬಡಿದು ನೈಷ್ಠೆಯೆಂಬ ತಂಡಸದಿಂ ಪಿಡಿದು ಸುವಿವೇಕವೆಂಬ ಸರಳಿಂದ ತಿರುಹಿ ಇಂತೀ [1]ಉಪಕರಣ[1]ಕ್ಕಧಿಕಾರಿಯಾದ ಮಹಾನುಭಾವ ಗುರೂತ್ತಮನೆಂಬ [2]ಬಿನ್ನಾಣಿಗನೆ[2] ಲೀನವಮಾಡಿ ಎನ್ನ ಮನಸ್ಸಿನ ಸಂಕಲ್ಪ ವಿಕಲ್ಪವೆಂಬ ಕಳಂಕವನು ಕಡೆಗೆ ಮಾಡಯ್ಯಾ. ಒರೆ ಬಣ್ಣಕ್ಕೆ ತಂದು-ನಿತ್ಯಾನಿತ್ಯವಿವೇಕವನು ಇರುಳು ಹಗಲೆನ್ನದನವರತ ಬೋಧಿಸುವ ಮೆಲ್ಲಾಹಿಗೆ ತಂದು, ಎನ್ನ ಪುಟವಿಕ್ಕಿ ನೋಡಯ್ಯಾ-ಎನಗೆ ಮಹಾಜ್ಞಾನ ಪುಟವನರುಹಿಕೊಟ್ಟು ನಿರೀಕ್ಷಿಸಯ್ಯಾ. ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ-ಸತ್ಕ್ರಿಯಾದಂಡಣೆಗೆ ಸುಜ್ಞಾನವೆಂಬ ಶಿಕ್ಷಾಬೋಧೆಗೆ

ಆಗತವ ಮಾಡಿ ಆತ್ಮನ ಸಮರಸ ಭಕ್ತಿಯ ಟೆಂಕಣಿಗನ ಮಾಡಿ, ನಿಮ್ಮ ಶರಣರ ಪಾದಕ್ಕೆ ತೊಡಿಗೆಯಮಾಡಿ ಸಲಹು–ನಿಮ್ಮ ಶಿವಶರಣರ ಚರಣಕ್ಕೆ ಆಭರಣವ ಮಾಡಿ ರಕ್ಷಿಸು.

..........................

೧–೧ ಉಪಕಷ್ಟಕರಣ (ಜ). ೨–೨ ಚಿನ್ನಾಣಿಗನೇ (ಜ).

III------------------------------------------------------------------------

2–2 ದ (ಟ,ಡ). 4–4 ತಂದು (ಟ, ಡ). 5–5 ಡೆಯಾ (ಟ, ಡ).

ಸದ್ಭಕ್ತನು ತನ್ನ ಮನೋವ್ಯಾಪಾರವ ನಷ್ಟವ ಮಾಡಿ ಮನಸನು ಮಂತ್ರಲಿಂಗಸ್ಮರಣೆಯಲ್ಲಿ ಲೀನವಾಗಿಸಿ 'ಅಜ್ಞಾನ ಕಾಳಿಕೆಯ ನಷ್ಟವಮಾಡು' ಎಂದು ಲಿಂಗದ ಕೊಡೆ ಮಾಡುವ ಪ್ರಶ್ನೆಯೆಂಬುದೀಗ ಕರಗಿಸಿ ಎನ್ನ [೩]ಮನದ[೩] ಕಾಳಿಕೆಯ ಕಳೆಯಯ್ಯಾ ಎಂಬ ಶಬ್ದಕ್ಕರ್ಥ. ಒರೆಗೆ–ಜ್ಞಾನಾಚಾರದ ಪರೀಕ್ಷೆಗೆ, ಬಣ್ಣಕ್ಕೆ–ಸುವರ್ಣಮಂತ್ರಸ್ಮರಣೆಗೆ, ತಂದು–ಆಗಮಾಡಿ ತಂದು, ಎನ್ನ–ನನ್ನನು, ಪುಟವಿಕ್ಕಿ–ಜ್ಞಾನಾಚರಣೆಯೆಂಬ ಅಗ್ನಿಯಿಂದೆ ತಪ್ತವಾಗಿಸಿ, ನೋಡಯ್ಯಾ–ಪರೀಕ್ಷಿಸಯ್ಯಾ. ಕಡಿಹಕ್ಕೆ–ಕ್ರಿಯಾಖಂಡನೆಗೆ, ಬಡಿಹಕ್ಕೆ [೪]–ಜ್ಞಾನದ ಕಟ್ಟಳೆಗೆ, ತಂದು–ಆಗಮಾಡಿ ತಂದು, ಕಡೆಯಾಣಿಯ ಮಾಡಿ–ಅಷ್ಟಾದಶಜಾತಿಯಿಂದೆ ಉಪರಿಯಾದ ವೀರಶೈವಸಿದ್ಧಾಂತದ ನಿರ್ಣಯಕ್ಕಾಗಮಾಡಿ, ನಿಮ್ಮ [೫]ಶರಣರ ಪಾದಕ್ಕೆ–ನಿಮ್ಮ ಶಿವಶರಣರ ಚರಣಂಗಳಿಗೆ, ತೊಡಿಗೆಯ ಮಾಡಿ–ಕ್ರಿಯಾಜ್ಞಾನಗಳೆಂಬಾಭರಣ ವಾಗಿಸಿ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ಸಲಹು–ರಕ್ಷಿಸು.

..........................................................

೩–೩ x (ಟ). ೪+ ಬಡಿಹಕ್ಕೆ (ಟ). ೫+ಶಿವ (ಟ,ಡ).

IV------------------------------------------------------------------------

1+ ಇನ್ನು ಭಕ್ತಿಸ್ಥಲದ ವಚನ (ತ). 2–2 ದ (ತ).3–3 ಒರೆ (ತ).5–5ಡೆಯಾ (ತ).

..........................

ದೇಹೇಂದ್ರಿಯಮನಃಪ್ರಾಣವಳಿದು ಪರತತ್ತ್ವದಲ್ಲಿ ಕೂಡುವಂತೆ ಮಾಡು ಗುರುವೆಂಬುದೀ ವಚನದರ್ಥ.

V ------------------------------------------------------------------------

1+ ಭಕ್ತಿಸ್ಥಲ (ಪ). 2–2 ದ (ಪ). 5–5 ಡೆಗಾ (ಪ).

..........................

ಎನ್ನ ಮನಸ್ಸಿನ ಅವಗುಣದ ಅಜ್ಞಾನದ ಘಟ್ಟಿಯ ಕಿಲುಬನು ಜ್ಞಾನಾಗ್ನಿಯಲ್ಲಿ ಲೀನವಮಾಡಿ ನಷ್ಟವ ಮಾಡಯ್ಯಾ ಎಂಬುದೀಗ ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ. ಎಂಬುದರ್ಥ. ಜ್ಞಾನಾಚಾರದ ಪರೀಕ್ಷೆಗೆ ಸುವರ್ಣಮಂತ್ರಸ್ಮರಣೆಗೆ ಆಗಮಾಡಿ ಒಪ್ಪವಿಟ್ಟು ನಿರೀಕ್ಷಿಸಯ್ಯಾ ಎಂಬುದೀಗ ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾಯೆಂಬ ಶಬ್ದಕ್ಕರ್ಥ. ಕ್ರಿಯಾಚಾರದ ಕಂಡ [ರ] ಣೆಗೆ ಜ್ಞಾನಾಚಾರದ ಮರ್ದನೆಗೆ ಎಂಬುದೀಗ ಕಡಿಹಕ್ಕೆ ಎಂಬುದರ್ಥ. ಅಷ್ಟಾದಶಜಾತಿಯಿಂದು

ಪರಿಯಾದ ವೀರಶೈವ ಸಿದ್ಧಾಂತದ ನಿರ್ಣಯಕ್ಕಾಗಮಾಡಿಯೆಂಬುದೀಗ ಕಡೆಗಾಣಿಯ ಮಾಡಿ ಎಂಬುದರ್ಥ.

---

೨೫೪

॥ ಗ್ರಂಥ॥ "ವೇದಾದಿ ನಾಮ ನಿರ್ನಾಮಂ। ಮಹತ್ವಂ ಮಹದೀಶ್ವರಂ । ಗುರೂಕ್ತ ಮಂತ್ರಮಾರ್ಗೇಣ। ಇಷ್ಟಲಿಂಗಂ ತು ಶಾಂಕರಿ" ಎಂದುದಾಗಿ, ವಚನಪಾತಕವೆನ್ನ ವಚನದೋಷಂಗಳೆನ್ನ ಕಾಡಿ ಕಾಡಿ ಕೆಡಿಸಿಹುದೆನ್ನ! ಕೂಡಲಸಂಗಮದೇವಾ, 'ಅಹಂ' ಎಂಬ ಅಹಂಕಾರವೆನ್ನ!

I-----------------------------------------------------------------------

॥ಗ್ರಂಥ॥ ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. ವೇದಾದಿ ನಾಮ ನಿರ್ನಾಮಂ: ವೇದ–ನಿಗಮಂಗಳಿಗೆ, ಆದಿ–ಮೊದಲಾದವರುಗಳಲ್ಲಿ, ನಾಮ ನಿರ್ನಾಮಂ–ನಾಮರೂಪಕ್ರಿಯೆಗಳಿಗೆ ಬಾರದಿರ್ದಂಥ, ಮಹತ್ವಂ–ಮಹಿಮಾಪದವನುಳ್ಳಂಥ, ಮಹದೀಶ್ವರಂ–ಮಹದಾದಿ ತತ್ತ್ವಂಗಳಿಗೆ ಈಶ್ವರಂ–ಒಡೆಯನಾದಂಥ, ಗುರು–ಶ್ರೀಗುರುನಾಥನು, ಉಕ್ತಂ–ಬೋಧಿಸಿದ, ಮಂತ್ರಮಾರ್ಗೇಣ–ಶಿವಷಡಕ್ಷರಮಂತ್ರಬೋಧೆಯಿಂದ, ಶಾಂಕರಿ–ಎಲೆ ಸುಮುಖತ್ವನುಳ್ಳಂಥ ಪಾರ್ವತಿಯೆ, ಇಷ್ಟಲಿಂಗಂ ತು–ಇಷ್ಟಲಿಂಗವಾಗಿ ಉದಯವಾಯಿತ್ತು. ಎಂದುದಾಗಿ–ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ವಚನಪಾತಕವೆನ್ನ–ಸಿದ್ಧಾಂತಕ್ರಿಯೆಯೆನ್ನ, ವಚನದೋಷಂಗಳೆನ್ನ–ವೇದಾಂತಜ್ಞಾನವೆನ್ನ, ಕಾಡಿ ಕಾಡಿ–ಭಿನ್ನಕ್ರೀ ಭಿನ್ನಜ್ಞಾನಕ್ಕೊಳಗುಮಾಡಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, 'ಅಹಂ' ಎಂಬ–"ಆತ್ಮಾವೈ ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವ, ಅಹಂಕಾರ–ನಾಹಂ ನಾಹಂ ಎಂಬ ಮೂಲ ಅಹಂಕಾರವು, ಎನ್ನ ಕೆಡಿಸಿಹುದು–ಎನ್ನ ನಷ್ಟವ ಮಾಡುತ್ತಿಹುದು.

---

೨೫೫

ಅವರಿವರೆನ್ನದೆ ಚರಣಕ್ಕೆಱಗಲು ಅಯ್ಯತನವೇಱ ಬೆಬ್ಬನೆ [1][ಬಿಱ][1]ವೆ [2]ನಾನಯ್ಯಾ.[2] [3]ಎನ್ನ ಹೃದಯದಲ್ಲಿ[3] ಕೆಚ್ಚು ಬೆಳೆಯಿತ್ತಯ್ಯಾ! ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ [4]ಬೆಳಗಾ[4]ರದಂತೆ ಮಾಡು ಕೂಡಲಸಂಗಮದೇವಾ.

........................

1–1 ಬೆಱ (ಕ,ಗ ).

I-----------------------------------------------------------------------

ಅವರಿವರೆನ್ನದೆ–ಭಕ್ತಮಾಹೇಶ್ವರರೊಳಗಾರಾದರಾಗಲಿ, ಚರಣಕ್ಕೆ–ಪಾದಕಮಲಂಗಳಿಗೆ, ಎಱಗಲು ತಲೆವಾಗಿ ನಮಸ್ಕರಿಸಲು, ಅಯ್ಯಗಳು ನಮಸ್ಕಾರವ ಮಾಡಿದರೆ ಮರಳಿ ತಾ ನಮಸ್ಕಾರವ ಮಾಡಬೇಕು. ಭಕ್ತರು ನಮಸ್ಕಾರವ ಮಾಡಿದರೆ ಬಹಿರಂಗದಲ್ಲಿ ನಮಸ್ಕಾರವ ಮಾಡದಿರ್ದರೂ

ಅಂತರಂಗದಲ್ಲಾದರೂ ಶರಣುಶರಣಾರ್ಥಿಯೆಂದು ತಲೆವಾಗಬೇಕು. ಅಯ್ಯತನವೇಜಿ – ನಾವು ಪಟ್ಟದದೇವರು ಚರಂತಿದೇವರು ಅತೀತದೇವರು ಆರಾಧ್ಯದೇವರುಯೆಂದು ಶ್ರೇಷ್ಠತನದಿಂದ ಹಿರೇತನದ ಅಭಿಮಾನ ಹೆಚ್ಚಿ, ಬೆಬ್ಬನೆ [1][ಬಿ]ಜೆ[1]–ವೆ ನಾನಯ್ಯಾ–ವೃಥಾ ಗರ್ವಿಸಿದೆನಯ್ಯಾ, ಎನ್ನ ಹೃದಯದಲ್ಲಿ–ಎನ್ನಂತರಂಗದಲ್ಲಿರುವ, ಕೆಚ್ಚು–ಮೂಲ ಅಹಂಕಾರವೆಂಬ ಗಟ್ಟಿಯು, ಬೆಳೆಯಿತ್ತಯ್ಯಾ!– ವರ್ಧನವಾಯಿತ್ತಯ್ಯಾ, ಆ ಕೆಚ್ಚಿಂಗೆ–ಆ ಮೂಲಹಂಕಾರವೆಂಬ ಗಟ್ಟಿಗೆ, ಕಿಚ್ಚನಿಕ್ಕಿ–ಜ್ಞಾನಾಗ್ನಿಯನ್ನು ಪಟುತರವ ಮಾಡಿ, ಸುಟ್ಟು–ಸಮ್ಯಕ್‌ಜ್ಞಾನವೆಂಬ ಅಗ್ನಿಯಿಂದ ದಹಿಸಿ, ಬೆಳ್ಳುಕನ ಮಾಡಿ– ಚಿದಹಂಕಾರವುಳ್ಳಾತನ ಮಾಡಿ,ಬೆಳಗಾಱಿದಂತೆ ಮಾಡು–ಸಮರಸಜ್ಞಾನವುಳ್ಳಾತನ ಮಾಡು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

.........................

೧–೧ ಬೇಜೆ (ಕ,ಗ).

III-----------------------------------------------------------------------

ಬೆಳ್ಳುಕನ ಮಾಡಿ–ಸತ್ವಗುಣವುಳ್ಳಾತನಾಗಿಸಿ, ಬೆಳುಗಾರದಂತೆ–ಮುರುಕ ಚಿನ್ನವನು ಬೆಳಗಾಱುವ ಬಿಟ್ಟು ಸಂದುಗೂಡಿದಲ್ಲಿ ಒಂದಾಗುವ ಹಾಂಗೆ, ಲಿಂಗಾಂಗಸಮರಸೈಕ್ಯದಲ್ಲೇಕೀಕರಿಸು ಎಂಬುದೀಗ ಬೆಳುಗಾಱಿದಂತೆ ಮಾಡು ಎಂಬ ಶಬ್ದಕ್ಕರ್ಥ.

IV-----------------------------------------------------------------------

1–1 ಬೆಜೆ (ತ). 2–2 ನಾನು (ತ).3–3 x (ತ).

.........................

ಶರಣೆಂದರೆ ಅಹಂಕಾರವಾಯಿತ್ತು. ಅಹಂಕಾರವ ಕೆಡಿಸಿ ಮಹಾಜ್ಞಾನಪ್ರಕಾಶವ ಕೊಡು ಎಂಬುದೀ ವಚನದರ್ಥ.

V-----------------------------------------------------------------------

4–4 ಬೆಳುಗ (ಪ).

.........................

ಮುಱುಕು ಚಿನ್ನವನು ಬೆಳುಗರದಿಂದೆ ಬೆಚ್ಚಿರೆ ಸಂದುಗೂಡಿ ಏಕವಾಗುವ ಹಾಂಗೆ, ಲಿಂಗಾಂಗಸಮರಸೈಕ್ಯದಿಂದೇಕವಾಗಿಸು ಎಂಬುದೀಗ ಬೆಳುಗರದಂತೆ ಬೆಳ್ಳುಕನ ಮಾಡು ಎಂಬುದರ್ಥ.

---

೨೫೬

**ನಡೆಯ ಕಂಡಾ ನಂಬಿ, ನುಡಿಯೆಲ್ಲಾ ಉಪಚಾರ! ಮಿಗಿಲೊಂದು ಮಾತು ಬಂದಡೆ ಸೈರಿಸಲಾಱೆನು. ತುಯ್ಯಲಾದಡೆ ಉಂಬೆ; ಹುಯ್ಯಲಾದಡೆ ಓಡುವೆ! ಆಳು ಬೇಡಿದಡೆ ಆಳ್ದನೇನನೀವನಯ್ಯಾ? ಆಳಾಗಿ ಹೊಕ್ಕು ಅರಸಾಗಿ ನಡೆದಡೆ ಆಳಿಕೊಂಡಿತ್ತೆನ್ನ, ಕೂಡಲಸಂಗನ ಭಕ್ತಿ!**

I-----------------------------------------------------------------------------------------

ನಡೆಯ ಕಂಡಾ ನಂಬಿ: ನಂಬಿ-ಒಂದು ವಸ್ತುವೇ ಗುರುಲಿಂಗಜಂಗಮವಾಗಿ ಬಂದಿಪ್ಪುದೆಂದು ವಿಶ್ವಾಸಿಸಿ, ನಡೆಯ ಕಂಡಾ-ಆಚರಿಸಲೊಲ್ಲ ಕಂಡಾ, ನುಡಿ [೧]ಯೆಲ್ಲಾ[೧]-ವಾಕ್ಯ[೨]ವೆಲ್ಲವು,[೨] ಉಪಚಾರ-ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ಬಣ್ಣಿಗೆ ಪ್ರಸಂಗವುಂಟಾಗಿರ್ಪುದು. ಮಿಗಿಲೊಂದು ಮಾತು ಬಂದಡೆ-ಆ ಗುರುಲಿಂಗ ಜಂಗಮಮೂರ್ತಿಗಳಿಂದ ಹೆಚ್ಚಾಗಿ ಒಂದು ಅರುಹು ಆಚರಣೆ ಪ್ರಸಂಗ ಬಂದಲ್ಲಿ ಅವರ ಮಾತೇ ಗೆಲುತೈತೆ, ನನ್ನ ಮಾತೇ ಸೋಲುತೈತೆಂದು ಅವರ ಮಾತನೆ ಸೋಲಿಸಿ ತನ್ನ ಮಾತನೆ ಗೆಲಿಸಿಕೊಂಡು ಅಹುದಾದುದನೆ ಅಲ್ಲಮಾಡಿ ಅಲ್ಲಾದುದನೆ ಅಹುದುಮಾಡಿ ಅಹುದಲಾ ಅಹುದಲಾ ಎಂದು ಹಿಡಿದುದನೆ ಬಿಡದೆ ತರ್ಕಮರ್ಕನೋಪಾದಿಯಲ್ಲಿ ಹೋರುವೆನಲ್ಲದೆ, ಸೈರಿಸಲಾಜಿಸೆ-ಅದನ್ನು ತರಹರಿಸಿಕೊಂಡು ಭಕ್ತಿಯ ಮಾಡಲಾರೆನು.

ತುಯ್ಯಲಾದಡೆ ಉಂಬೆ-ದೊರೆಗಳ ಪಙ್ತಯಲ್ಲಿ ಕುಳಿತುಕೊಂಡು ಹಾಲುಬೋನವನಾದರೆ ಊಟವ ಮಾಡುವೆನು. ಹುಯ್ಯಲಾದಡೆ ಓಡುವೆ-ಹೂಲಿಬಂದಲ್ಲಿ ಸಂದುಬಿದ್ದು ತಪ್ಪಿಸಿಕೊಂಡೋಡುವೆನು. ಆಳು-ಭೃತ್ಯನು, ಬೇಡಿದಡೆ-ಸಂಬಳವನ್ನು ಕೊಡೆಂದು ಕೇಳಿದರೆ, ಆಳ್ದ-ಕರ್ತನಾದಂಥ ದೊರೆಯು, ಏನನೀವನಯ್ಯಾ?-ಸಂಬಳವನ್ನು ಕೊಟ್ಟಾನೆ? ಕೊಡನಯ್ಯಾ. ಆಳಾಗಿ ಹೊಕ್ಕು-ಭೃತ್ಯನಾಗಿ ಸೇವಾಸತ್ಕಾರ ಮಾಡುತ್ತಿರ್ದು, ಅರಸಾಗಿ ನಡೆದಡೆ-ದೊರೆಯಾಗಿ ರಾಜದುರ್ಗೆಯ ಮೇಲೆ ಕುಳಿತುಕೊಂಡು ಸಮಸ್ತರಾಹುತ ರಾಣ್ಯಪ್ರಜಾಪರಿವಾರಕದಿಂದ ಸಲಾಮ ತೆಗೆದುಕೊಳುತ್ತಿದ್ದರೆ, ಆಳಿಗೊಂಡಿತ್ತೆನ್ನ ಕೂಡಲಸಂಗನ ಭಕ್ತಿ- ದೊರೆಗೆ ಸೇವೆಮಾಡುವಂಥ ಭೃತ್ಯನು ಹಾಸ್ಯವ ಮಾಡುತಾನಲಾಯೆಂದು ಮೈಯನೆಲ್ಲ ಒಡೆಬಡಿಸಿ ಸಂಬಳ ಚಿಲ್ತವ ಮೂಡಿಸಿ ಅಟ್ಟಿಸಿಬಿಡುತ್ತಿಹರೆಂಬ ದೃಷ್ಟೋಪಮಾನದ ಹಾಂಗೆ,

● ತುಯ್ಯಲಾದಡೆ ಉಂಬೆ-ಒಬ್ಬ ಭಕ್ತನೇನಾದರೂ ಗುರುಚರಮೂರ್ತಿಗಳಿಗೆ ಭಕ್ತಿಬಿನ್ನಹವನ್ನು ಮಾಡಿ ಮನೆಗೆ ಕರೆಕೊಂಡು ಹೋಗುತ್ತಿದ್ದಲ್ಲಿ ಅವರ ಬೆಂಬಳಿವಿಡಿದು ಹೋಗಿ ಅವರ ಪಾದೋದಕಪ್ರಸಾದವ ಪಡೆದನುಭವಿಸುವೆನು. ಹುಯ್ಯಲಾದಡೆ ಓಡುವೆನು-ನೀನೊಂದು ಭಕ್ತಿಬಿನ್ನಹ ಮಾಡೆಂದು ಹೇಳಿದಲ್ಲಿ ತನುಮನಧನಂಗಳನು ವಂಚಿಸಿ [೩]ಕೊಂಡು[೩] ಹಿಮ್ಮೆಟ್ಟುವೆನು. ಆಳು-ಭೃತ್ಯನಾದ ಭಕ್ತನು, ಬೇಡಿದಡೆ-ಫಲಪದಮುಕ್ತಿಯನ್ನು ಕರುಣಿಸಿಕೊಡೆಂದು ಕೇಳಿದರೆ, ಆಳ್ದನು, -ಕರ್ತನಾದ ಪರಶಿವಲಿಂಗವು, ಏನನೀವನಯ್ಯಾ?-ಫಲಪದಮುಕ್ತಿಯನ್ನು ಕರುಣಿಸಿಕೊಟ್ಟಾನೆ? ಕೊಡನಯ್ಯಾ. ಆಳಾಗಿ ಹೊಕ್ಕು-ಭಕ್ತನಾಗಿ ಭಕ್ತಿಮಾಡುತ್ತಿರ್ದು, ಅರಸಾಗಿ ನಡೆದಡೆ-ಗುರುವಾದರೆ ಹೀಂಗಿರಬೇಕು, ಲಿಂಗವಾದರೆ ಹೀಂಗಿರಬೇಕು, ಜಂಗಮವಾದರೆ ಹೀಂಗಿರಬೇಕೆಂದು ಮೇಲುಯುಕ್ತಿ ಮೇಲುವಿಚಾರವನ್ನು ಪರಾವಲಂಬಿಸುತೈದಿದರೆ, ಕೂಡಲಸಂಗನ-ಪರಶಿವಲಿಂಗದ, ಭಕ್ತಿ-ಶಿವಾದ್ವೈತಭಕ್ತಿಯು, ಆಳಿಗೊಂಡಿತ್ತು-ಅಂಗವಾಗದೆ ಹಾಸ್ಯೋಪಮಾನವೆಂದು ಹಾಸ್ಯಕ್ಕೊಳಗುಮಾಡಿ ಬಿಟ್ಟಿತ್ತು.

........................

೧-೧ ಯೆಲ್ಲಿ (ಕ). ೨-೨ ದಲ್ಲಿ (ಕ). ೩-೩ x (ಕ).

೨೫೭

**ಇಜೆಸಿಕೊಂಡು ಭಕ್ತರಾದರೆಮ್ಮವರು. ತಜೆಸಿಕೊಂಡು ಭಕ್ತರಾದರೆಮ್ಮವರು. ಕೊಜೆಸಿಕೊಂಡು ಭಕ್ತರಾದರೆಮ್ಮವರು. ಜಜೆಸಿಕೊಂಡು ಭಕ್ತರಾದರೆಮ್ಮವರು. ಕೂಡಲಸಂಗನ ಶರಣರಿಗೆ ಮುನಿಸು ತಾಳಿ ಎನ್ನ ಭಕ್ತಿ ಅರೆಯಾಯಿತ್ತು !**

I -------------------------------------------

ಇಜೆಸಿಕೊಂಡು ಭಕ್ತರಾದವರು–ಅಲಗಿನಿಂದ ಘಾತಿಸಿ ಘಾತಿಸಿ ನೋಡಿದರೂ ಅದಕ್ಕೂ ಹೆದರಿಕೊಳ್ಳದೆ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದರು, ಎಮ್ಮವರು–ಎಮ್ಮ ಸಂಬಂಧವಾದ ಸೇದಿರಾಜಯ್ಯಗಳು. ತಜೆಸಿಕೊಂಡು ಭಕ್ತರಾದವರು–ಕುಠಾರದಿಂದ ಕಡಿಕಡಿದು ನೋಡಿದರೂ ಅದಕ್ಕೂ ಅದರಿಕೊಳ್ಳದೆ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದರು, ಎಮ್ಮವರು–ಎಮ್ಮ ಸಂಬಂಧವಾದ ಮೊನೆವಿಡಿರಾಯರು. ಕೊಜೆಸಿಕೊಂಡು ಭಕ್ತರಾದವರು–ಕರಗಸದಿಂದ ಕೊರೆಕೊರೆದು ನೋಡಿದರೂ ಅದಕ್ಕೂ ಹೆದರಿಕೊಳ್ಳದೆ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದರು, ಎಮ್ಮವರು–ಎಮ್ಮ ಸಂಬಂಧವಾದ ಸಿಂಧುಮರಾಳರಾಯರು.

ಜಜೆಸಿಕೊಂಡು ಭಕ್ತರಾದವರು–ಆಣೆಕಟ್ಟಿ ಹಿಗ್ಗಾಮುಗೂ ಎಳೆದಾಡಿ ಪಾರಮಾಡಿ ನೋಡಿದರೂ ಅದಕ್ಕೂ ಹೆದರಿಕೊಳ್ಳದೆ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದರು,ಎಮ್ಮವರು–ಎಮ್ಮ ಸಂಬಂಧವಾದ ತಿರುನೀಲಕಂಠಯ್ಯಗಳು. ಕೂಡಲಸಂಗನ ಶರಣರಿಗೆ– ಜಂಗಮಮೂರ್ತಿಗಳಿಗೆ, ಮುನಿಸುತಾಳಿ–ಸಿಟ್ಟುಮಾಡಿ, ಎನ್ನ ನಿಭಕ್ತಿ–ನಾ ಮಾಡುವಂಥ ಭಿನ್ನಭಕ್ತಿಯು, ಅರೆಯಾಯಿತ್ತು–ಅರ್ಧಭಕ್ತಿಯಾಯಿತ್ತು.

---

೨೫೮

**ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ! ಕುಂದು ಹೆಚ್ಚು ನುಡಿವೆ, ಒಂದು ಮಾತಿನ ಗೆಲಕ್ಕೆ ಹಿಡಿದು ಹೋರುವೆ; ಕೂಡಲಸಂಗನ ಶರಣರೆನ್ನಾಳ್ದರೆಂಬೆ!**

I -------------------------------------------

ಮನಕ್ಕೆ ನಾಚದ ವಚನ: ಮನಕ್ಕೆ–ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವನ್ನು ಮುಂದುಗೊಂಡಿರುವಂಥ ಮನಸ್ಸಿಗೆ, ನಾಚದ–ಅಭಿಮಾನಿಸಿಕೊಳ್ಳದ, ವಚನ–ವಾಕ್ಯದಲ್ಲಿ ಸ್ವಾಮಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬುತ್ತಿಹನು. ವಚನಕ್ಕೆ ನಾಚದ ಮನ ವಚನಕ್ಕೆ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ವಾಕ್ಯಕ್ಕೆ, ನಾಚದ–ಅಭಿಮಾನಿಸಿ ಕೊಳ್ಳದ, ಮನ–ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವುಂಟಾಗಿರ್ಪುದು.

ಕುಂದು ಹೆಚ್ಚು ನುಡಿವೆ-ಭಕ್ತಮಾಹೇಶ್ವರರ ಮಧ್ಯದಲ್ಲಿ ಹೆಚ್ಚು ಕುಂದು ಹಿರಿದು ಕಿರಿದು ಉಂಟುಮಾಡಿ ಹೇಳುವೆನು; ಒಂದು ಮಾತಿನ ಗೆಲಕ್ಕೆ ಹಿಡಿದು ಹೋರುವೆ-ಭಕ್ತಮಾಹೇಶ್ವರರ ಮಧ್ಯದಲ್ಲಿ ಒಂದರಿವು ಆಚರಣೆ ಪ್ರಸಂಗ ಬಂದಲ್ಲಿ ಅವರ ಮಾತೇ ಗೆಲುತ್ತೈತೆ ನನ್ನ ಮಾತೇ ಸೋಲುತ್ತೈತೆ. ಅವರ ಮಾತನೇ ಸೋಲಿಸಿ ನನ್ನ ಮಾತನೇ ಗೆಲಿಸಿಕೊಳಬೇಕೆಂದು ಅಹುದಾದುದನೆ ಅಲ್ಲಮಾಡಿ ಅಲ್ಲಾದುದನೆ ಅಹುದು ಮಾಡುತ್ತ ಇದು ಅಹುದಲಾ ಇದು ಅಹುದಲಾಯೆಂದು ಹಾವು ಹಿಡಿದ ಕಪಿಯೋಪಾದಿಯಲ್ಲಿ ಹಿಡಿದುದನೆ ಬಿಡದೆ ಹೋರುವೆನು. ಕೂಡಲಸಂಗನ ಶರಣರ-ಜಂಗಮಮೂರ್ತಿಗಳ, ಎನ್ನಾಳ್ದರೆಂಬೆ!-ಎನ್ನ ಒಡೆಯರು ಎನ್ನ ಕರ್ತರು ಎನ್ನ ಪ್ರಾಣದೊಲ್ಲಭರೆಂದು ಹೇಳುವೆನು.

---

೨೫೯

**ಇಲ್ಲವೆಯ ಮೇಲೆ ಕಂಚೊಡೆದಂತೆ ಬಡ ಮನವೆನ್ನ ಕಾಡಿತ್ತಯ್ಯಾ. ಮತಿಯಿಲ್ಲದ ಮರುಳ ನಾನಯ್ಯಾ; ಭಕ್ತಿಯಿಲ್ಲದ ಬಡವ ನಾನಯ್ಯಾ. ನಿಮ್ಮ ನೆನಹಿಲ್ಲಿದೆ ನಿರ್ಭಾಗ್ಯನಾದೆನು. ಎನಗೆ ನೀ ಕರುಣಿಸು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಇಲ್ಲವೆಯ ಮೇಲೆ ಕಂಚೊಡೆದಂತೆ-ಆಗ ತಂದು ಆಗ ಕಾಣಸಿಕೊಂಡು ಕುಡಿವಂಥ ನಿರ್ಧನಿಕನೇನಾದರೂ ಉಂಬೋದಕ್ಕೊಂದು ತಳಿಗೆಯ ಮಾಡಿ ಕೊಂಡಿರುವನು. ಬೆಳಗಿ ತೊಳೆದು ಚೆಲ್ಲಬೇಕೆಂಬಂಥ ಸಮಯದಲ್ಲಿ ಕೈಜಾರಿ ಕಲ್ಲಮೇಲೆ ಬಿದ್ದು ಕಂಚೊಡೆದಲ್ಲಿ ಇನ್ನವನ ದರಿದ್ರತ್ವವನ್ನು ಉಪಮಿಸಬಾರದೆಂಬ ಹಾಂಗೆ; ಮೊದಲೇನಾದರೂ ಭಕ್ತಿಬಾಹ್ಯನಾಗಿರುವವ ಇತ್ತ ಜಂಗಮಮೂರ್ತಿಗಳ ದರುಶನದಿಂದಾಗಲೀ ಸ್ಪರುಶನದಿಂದಾಗಲೀ ಶಿವಾನುಭಾವ ಕೇಳಿಕೆಯಿಂದಾಗಲೀ ಭಕ್ತಿ ಮಾಡುವುದಕ್ಕೆ ತೊಡಗಿರುವ ಹಾಂಗೆ ಭೃತ್ಯನಾಗಿ ಭಕ್ತಿಮಾಡದೆ ಜಂಗಮಮೂರ್ತಿಗಳ ಕಂಡಲ್ಲಿ ದೂಷಣೆಯ ಮಾಡುತ್ತಿರ್ದ ಕಾರಣ ಇವನ ಭಕ್ತಿ ಬಾಹ್ಯತ್ವವನ್ನು ಉಪಮಿಸಬಾರದು. ಬಡ ಮನ-ಭಕ್ತಿಜ್ಞಾನವೈರಾಗ್ಯದಲ್ಲಿ ಪುಷ್ಟಿಯಿಲ್ಲದೆ ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಶೆಯನ್ನು ಮುಂದುಗೊಂಡು ಚರಿಸುವಂಥ ದರಿದ್ರನ ಹೀನಮನಸ್ಸು, ಎನ್ನಕಾಡಿತ್ತಯ್ಯಾ-ಎನ್ನ ಪೀಡಿಸುತ್ತಿಹುದಯ್ಯಾ. ಮತಿಯಿಲ್ಲದ- ಜ್ಞಾನವಿಲ್ಲದ, ಮರುಳ ನಾನಯ್ಯಾ-ಭಕ್ತಿವೇಷಧಾರಿ ನಾನಯ್ಯಾ, ಭಕ್ತಿಯಿಲ್ಲದ-ಶಿವಾದ್ವೈತ ಭಕ್ತಿವುಂಟಾಗಿಲ್ಲದ, ಬಡವ ನಾನಯ್ಯಾ-ನಿರ್ಧನಿಕ ನಾನಯ್ಯಾ. ನಿಮ್ಮ ನೆನಹಿಲ್ಲದೆ-ಲಿಂಗಧ್ಯಾನ ಲಿಂಗಸ್ಮರಣೆ ಉಂಟಾಗಿಲ್ಲದೆ, ನಿರ್ಭಾಗ್ಯನಾದೆನು-ಜ್ಞಾನೈಶ್ವರ್ಯವಿಲ್ಲದಾತನಾದೆನು. ಎನಗೆನೀ ಕರುಣಿಸು-ಎನಗೆ ನೀ ಕೃಪೆಮಾಡು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

---

೨೬೦

**ಲಿಂಗವ ನಚ್ಚದೀ ಮನವು, ಜಂಗಮವ [1]ನಚ್ಚದೀ[1] ಮನವು, ಕೂಪರ ಕಂಡಡೆ ಒಲ್ಲದೀ ಮನವು. ಈ ಮನದ ಭ್ರಮೆಯನೆಲ್ಲವ ಮಜೆಸಿ ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗವ ನಚ್ಚದೀ ಮನವು : [ಲಿಂಗವ ನಚ್ಚದು ] ಲಿಂಗಪೂಜೆಯ ಮಾಡಿ ಕರುಣವ ಹಡೆಯಲೊಲ್ಲದು, ಈ ಮನವು– ಈ ಚಿತ್ತವು, ಜಂಗಮವ ನಚ್ಚದೀ ಮನವು : [ಜಂಗಮವ ನಚ್ಚದು–] ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮದ ಭಕ್ತಿಯ ಮಾಡಿ ಜಂಗಮದ ಕೃಪೆಯನ್ನು ಹಡೆಯಲೊಲ್ಲದು, ಈ ಮನವು–ಈ ಚಿತ್ತವು ಕೂಪರ ಕಂಡಡೆ ಒಲ್ಲದೀ ಮನವು: [ಕೂಪರ ಕಂಡಡೆ–] ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡುವಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿದ್ದಂಥ ಜಂಗಮಮೂರ್ತಿಗಳ ನೋಡಿದರೆ, ಒಲ್ಲದು–ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಲೊಲ್ಲದು, ಈ ಮನವು–ಈ ಚಿತ್ತವು. ಈ ಮನದ–ಈ ಚಿತ್ತದ, ಭ್ರಮೆಯನೆಲ್ಲವ–ಜೀವಭಾವದ ಭ್ರಾಂತಿಯಷ್ಟನ್ನೂ, ಮಱಿಸಿ–ವಿಸ್ಮೃತಿಯನೈದಿಸಿಬಿಟ್ಟು, ನಿಮ್ಮ ಜಂಗಮಮೂರ್ತಿಗಳಿಗೆ, ಶರಣೆಂಬುದ–ನಮಸ್ಕಾರವೆಂದು ನಮಸ್ಕರಿಸಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದನೆ, ಕರುಣಿಸು–ಕೃಪೆಮಾಡು, ಕೂಡಲಸಂಗಮದೇವಾ– ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - - -

1–1 ನಂಬದೀ (ತ).

.........................

ಲಿಂಗಜಂಗಮವೇ ಸತ್ಯ [೧][ವೆಂದು][೧] ಪರಮಾರ್ಥವಾಗಿ ನಂ[೨][ಬ][೨]ದು ಮನವು. ನಂಬದ ಮಱವೆಯ ಮಾಣಿಸೆಂಬುದೀ ವಚನದರ್ಥ.

.........................

೧–೧ ವಾದ (ತ). ೨–೨ ಬೂ (ತ).

---

೨೬೧

**ಅಶನ ಕುಂದದು, ವ್ಯಸನ ಮಾಣದು. ಆರತವಡಗದು, ಬೆವಹಾರ ಮಾಣದು. ಮಜ್ಜನಕ್ಕೆ [1]ಂತೆ[1]ಱಿ[1]ವೆನಯ್ಯಾ, ಕಾಯವಿಕಾರಿಯಾನು. ಮಜ್ಜನಕ್ಕೆಂತಱಿ[1]ವೆನಯ್ಯಾ, ಜೀವವಿಕಾರಿಯಾನು. ಮಜ್ಜನಕ್ಕೆಂತೆಱಿ[1]ವೆನಯ್ಯಾ, ಶರಣನಲ್ಲ, ಲಿಂಗೈಕ್ಯನಲ್ಲ! ಕೂಡಲಸಂಗಮದೇವರಲ್ಲಿ ಅಂತರ ಬೆಂತಱ ನಾನಯ್ಯಾ**

I - - - - - - - - - - - - - - - - - - - - - - - - - - - - - - - - - - - - - - - - - - - - -

ಅಶನ ಕುಂದದು: ಅಶನ–ಜಿಹ್ವಾಲಂಪಟವು, ಕುಂದದು–ತಗ್ಗದು, ವ್ಯಸನ ಮಾಣದು: ವ್ಯಸನ ಗುಹ್ಯಲಂಪಟವು, ಮಾಣದು–ಬಿಡದು. ಆರತವಡಗದು: ಆರತವು ಒಬ್ಬರೊಂದು ವಸ್ತುವನ್ನು ಕೊಟ್ಟಾರೋ ಕೊಡರೋ ಎಂಬಂಥ ಅಪೇಕ್ಷೆಯು, ಅಡಗದು–ಲೀನವಾಗದು. ಬೆವಹಾರ–ಷಟ್ಕೃಷಿ ವ್ಯಾಪಾರ ಮಾಡಬೇಕೆಂಬಂಥದು, ಮಾಣದು–ಬಿಡದು. ಮಜ್ಜನಕ್ಕೆಂತೆಱಿ[1]ವೆನಯ್ಯಾ–ಹತ್ತೆಂಟು ಕೊಡ ಉದಕವ ತಂದು ಲಿಂಗಕ್ಕೆ ಅಭಿಷೇಕವ ನೀಡಿ ಲಿಂಗಪೂಜೆ ಹೇಂಗೆ ಮಾಡುವೆನಯ್ಯಾ, ಕಾಯವಿಕಾರಿಯಾನು–ಉಣಬೇಕು ಉಡಬೇಕು ಇಡಬೇಕು ತೊಡಬೇಕು ಷಟ್ಪ್ರಕಾರವಾದ

ಸ್ತ್ರೀಯರುಗಳ ಸಂಸರ್ಗವ ಮಾಡಬೇಕೆಂಬಂಥ ತನುವಿನ ಮನ್ಮಥವಿಕಾರವುಳ್ಳಾತ ನಾನು. ಮಜ್ಜನಕ್ಕೆಂತೆಜೆವೆನಯ್ಯಾ–ಹತ್ತೆಂಟು ಕೊಡ ಉದಕ ತಂದು ಲಿಂಗಕ್ಕೆ ಅಭಿಷೇಕವ ನೀಡಿ ಲಿಂಗಪೂಜೆ ಹೇಂಗೆ ಮಾಡುವೆನಯ್ಯಾ, ಜೀವವಿಕಾರಿಯಾನು–ದಳ ಪ್ರಕೃತಿಯಲ್ಲಿ ಚರಿಸಲ್ಪಟ್ಟ ಜೀವನ ವರ್ತನೆಯುಳ್ಳಾತ ನಾನು.

ಮಜ್ಜನಕ್ಕೆಂತೆಜೆವೆನಯ್ಯಾ–ಹತ್ತೆಂಟು ಕೊಡ ಉದಕವ ತಂದು ಲಿಂಗಕ್ಕೆ ಅಭಿಷೇಕವ ನೀಡಿ ಲಿಂಗಪೂಜೆಯ ಹೇಂಗೆ ಮಾಡುವೆನಯ್ಯಾ, ಶರಣನಲ್ಲ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಶರಣಸ್ಥಲದಾಚರಣೆಯುಳ್ಳಾತ ನಾನಲ್ಲವು, ಲಿಂಗೈಕ್ಯನಲ್ಲ!–ಶಿಖಿಕರ್ಪುರ ಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟಂಥ ಐಕ್ಯಸ್ಥಲದಾಚರಣೆಯುಳ್ಳಾತ ನಾನಲ್ಲವು. ಕೂಡಲಸಂಗಮದೇವರಲ್ಲಿ–ಪರಶಿವ ಲಿಂಗದಲ್ಲಿ, ಅಂತರ ಬೆಂತಱ ನಾನಯ್ಯಾ!– ಬೆಂತರನೆಂಬಂಥದು ಮರದ ಮೇಲೆ ಮೊರಡಿಗಳ ಮೇಲೆ ಅಂತರಂತರದಲ್ಲೆ ಹಾರಾಡುತ್ತಿಹುದು. ಹಾಂಗೆ, ಹಿಡಿದು ಸಂಸಾರಿಯಲ್ಲದೆ ಬಿಟ್ಟು ವಿರಕ್ತನಲ್ಲದೆ ನಿಂದು ಭಕ್ತನಲ್ಲದೆ ಸುಳಿದು ದೇವನಲ್ಲದೆ ಹಿಡಿವುತ್ತ ಬಿಡವುತ್ತ ಹಿಡತಿ ಬಿಡತಿಯೊಡನೆ ಕೂಡಿ ಚರಿಸುವಂಥ ಎನ್ನ ಉಪಾಧಿಕನ ಇರಸ್ಥಿತಿಯೂ ಆ ಬೆಂತರನ ಇರಸ್ಥಿತಿಯೂ ಒಂದೇಯಾಗಿರ್ಪುದು.

III- - - - - - - - - - - - - - - - - - - - - - - - - - - - - - - - - - - - - - - - - - - -

ಅಂತರ–ದೇವ ಮನುಷ್ಯರನು ಹೊಂದದೆ ಇರುವ ಅಂತರಪಿಶಾಚಿ ನಾನೆಂಬುದರ್ಥ, ಕೆರೆಬಾವಿ ಮೊದಲಾದವರ ಸಮೀಪದಲ್ಲಿರ್ದು ಕಜೆವೆಮ್ಮೆ ಕಿಜೆಗೂಸು ಬಸುರಬಾಣತಿ ಮೊದಲಾದವರನು ಹಿಡಿದು ಪೀಡಿಸಿ ಕಜೆಯ ಕೂಳ ಹಾಕಿಸಿಕೊಂಡು ತಿಂಬಂಥ ಬೆಂತಱ ಪಿಶಾಚಿ ನಾನು ಎಲೆ ಸ್ವಾಮಿ.

IV- - - - - - - - - - - - - - - - - - - - - - - - - - - - - - - - - - - - - - - - - - - -

1–1 x (ತ).

..........................

ದೇಹೇಂದ್ರಿಯ ಮನಃಪ್ರಾಣಗು[ಣ]ವಳಿಯದೆ, ಭಕ್ತನಾಗಿ ಲಿಂಗಪೂಜೆಯ ಮಾಡಿದರೆ ಲಿಂಗೈಕ್ಯನಲ್ಲಾಯೆಂಬುದೀ ವಚನದರ್ಥ.

---

೨೬೨

**ಕುದುರವನೇಸು [1]ಕಾಲ[1] ತೊಳೆದಡೆಯೂ ಕೆಸಱು ಮಾಂಬುದೆ? ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು ಕೃಪೆ[2] ಮಾಡಯ್ಯಾ. ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೇ, ಎನ್ನ ಮನ! ಕೂಡಲಸಂಗಮದೇವಾ, ನಿಮಗೆ ಶರಣೆಂದು ಶುದ್ಧ ಕಾಣಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಕುದುರವನೇಸು ಕಾಲ ತೊಳೆದಡೆಯೂ ಕೆಸಱು ಮಾಂಬುದೆ?–ಕಲ್ಲಿನಿಂದ ಗಚ್ಚಿನಿಂದ ಕಟ್ಟಿದಂಥ ಭಿತ್ತಿಯನ್ನು ಉದಕದಲ್ಲಿ ತೊಳೆದರೆ ನಿರ್ಮಲವಾಗಿ ನಿರ್ಧರವಾಗಿದ್ದಿತ್ತಲ್ಲದೆ ಮಣ್ಣಿನಿಂದ ಕಲ್ಲಿನಿಂದ ಕಟ್ಟಿದಂಥ ಭಿತ್ತಿಯನ್ನು ಉದಕದಿಂದ ತೊಳೆದರೆ ಮತ್ತೆ ಮತ್ತೆ ಪಂಕವರ್ಧನವಾಗುವುದಲ್ಲದೆ ಮಣ್ಣೆಂಬೋ ಭಾವವನ್ನು ಬಿಟ್ಟು ನಿರ್ಮಲವಾಗಿದ್ದಿತ್ತೆ? ಇರಲರಿಯದೆಂಬ ದೃಷ್ಟೋಪಮಾನದ ಹಾಂಗೆ; ಕುದುರವನು–ಪೃಥ್ವಿ ತತ್ವಸ್ವರೂಪವಾದ ದೇಹವನ್ನು, ಏಸು ಕಾಲ ತೊಳೆದರೆ–ಎಷ್ಟು ಜ್ಞಾನಾನಂದ ಜಲದಿಂದ ಪ್ರಕ್ಷಾಲಿಸಿದರೆ, ಕೆಸಱು ಮಾಂಬುದೆ? – ಜಡಸ್ವರೂಪವಾದ ದೇಹದೊರ್ತನೆ ನಷ್ಟವಾದೀತೆ? ಆಗದು. ಎನ್ನ ಕಾಯದಲುಳ್ಳ–ಎನ್ನ ದೇಹದಲ್ಲುಂಟಾದ, ಅವಗುಣಂಗಳ–ಅಜ್ಞಾನ ದುರ್ಗುಣಂಗಳನು, ಕಳೆದು ನಷ್ಟವಮಾಡಿ, ಕೃಪೆ ಮಾಡಯ್ಯಾ– ಸದ್ಗುಣವನಿತ್ತು ರಕ್ಷಣ್ಯವ ಮಾಡಯ್ಯಾ.

ಕಂಬಳಿಯಲ್ಲಿ ಕಣಕವ ನಾದಿದಂತೆ–ಕಣಕವ ನಾದಬೇಕಾದರೆ ಮೊರದಲ್ಲಾಗಲಿ ಕೊಣಮಿಗೆಯಲ್ಲಾಗಲಿ ಕಲ್ಲಮೇಲಾಗಲಿ ಕಣಕವ ನಾದಿ ರೊಟ್ಟಿಯ ಮಾಡಿ ಸುಟ್ಟರೆ ಚೊಲೊತ್ನಾಗಿ ಕಾಣಬಂದಾವಲ್ಲದೆ ಕರಿಯ ಕಂಬಳಿ ನಯವಾಗೈತೆಂದು ಕಣಕವ ನಾದಿ ರೊಟ್ಟಿಯ ಮಾಡಿ ಸುಟ್ಟರೆ ಮೇಲೆ ನೋಡಿದರೆ ನಿರ್ಮಲವಾಗಿರುವುದು. ಮುರಿದು ನೋಡಿದರೆ ಬರೇ ಕೂದಲೇ ಬರುವವು. ಹಾಂಗೆ; ಬಹಿರಂಗದಲ್ಲಿ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೂ ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವೆ ಉಂಟಾಗಿರ್ಪುದು, ಕಾಣಿರೇ–ಕಂಡಿರೇ, ಎನ್ನ ಮನ–ಎನ್ನ ಚಿತ್ತವು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮಗೆ–ಸ್ವಾಮಿಗಳಿಗೆ, ಶರಣೆಂದು–ನಮಸ್ಕಾರವೆಂದು ನಮಸ್ಕರಿಸಿ, ಶುದ್ಧ ಕಾಣಯ್ಯಾ–ಕಡಲೆ ಮೆದ್ದ ಕೈ ತೊಳೆಯಲಿಲ್ಲವೆಂಬ ಹಾಂಗೆ ನಿರ್ಮಲವಾಗಿಪ್ಪೆನು ಕಂಡಯ್ಯಾ.

III- - - - - - - - - - - - - - - - - - - - - - - - - - - - - - - - - - - - - - - - - - -

ಕುದುರ–ಗೋಡೆಯನು, ಕಂಬಳಿಯಲಿ ಕಣಕವ ನಾದಿದರೆ ಕೂದಲುಮಯವಾಗಿ ಕೆಡುವ ಹಾಂಗೆ, ಎನ್ನ ಮನಃಪ್ರಪಂಚಿನೊಡನೆ ಕೂಡಿದಲ್ಲಿ ನಷ್ಟವಾಗಿರ್ಪುದೆಂಬುದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - -

1–1 x (ತ). 2+ ಯ (ತ).

ಹುಸಿವಿಷಯ ಸಾವನ್ನಕ್ಕ ಬಿಡದಾಗಿ ಕುದುರನೇಸು ತೊಳದರೆ ಕೆಸರು ಮಾಣದೆಂದ ಪರಿ. ಮಾಯೆಯ ಕೂಡಿದ ಮನವಾಗಿ ಕಂಬಳಿಯಲ್ಲಿ ಕಣಕವ ನಾದಿದಂತೆ. ಲಿಂಗವೆ ತನ್ನಾದಿಯಾದ ಕಾರಣ ಅನಾದಿಯಾದ ಜಂಗಮಪ್ರೇಮಿಯೆಂಬುದೀ ವಚನದರ್ಥ.

---

೨೬೩

**ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾಱೆನಯ್ಯಾ. ನಿಮ್ಮ ಪೂಜಿಸಿ ಭವಬಂಧನ ಬಿಡದೇಕಯ್ಯಾ? ಹಿಂದಣ ಜನ್ಮದ ಚಿಹ್ನ ಬಿಡದನ್ನಕ್ಕ ನಿಮ್ಮ ಪೂಜಿಸಿ ಏವೆನಯ್ಯಾ? ಎನ್ನ ಮನದವಗುಣವ ಕಳೆದು ನಿಮ್ಮಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಕಾಮಧೇನು ನಿಮ್ಮ ಸಾರಿರಲು : [ಕಾಮಧೇನು–] ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಪರುಷ ಪಿಯೂಷ ಮೊದಲಾದಂಥವು ನಿಮ್ಮ ಸಾರಿರಲು–ಪರಶಿವಲಿಂಗದ ಸಮೀಪಸ್ಥವಾಗಿರಲು, ಪರರ ಬೇಡಲಾಜಿನಯ್ಯಾ–ನಿಮ್ಮಿಂದ ಪಡೆದುಕೊಂಡಂಥ ಬ್ರಹ್ಮ ವಿಷ್ಣ್ವಾದಿಗಳ ಕೇಳಿ ಘಟರಕ್ಷಣ್ಯವ ಮಾಡಿಕೊಳಲಾರೆನಯ್ಯಾ; ಕಾಮಧೇನು ನಿಮ್ಮ ಸಾರಿರಲು–ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಪರುಷ ಪಿಯೂಷ ಮೊದಲಾದವನೊಳಕೊಂಡು ತೋರುವಂಥ ಮಹಾಲಿಂಗವೆ ಗುರೂಪದೇಶದಿಂದ ಇಷ್ಟಲಿಂಗವಾಗಿಬಂದು ಅಂಗದಲ್ಲಿ ಸಂಬಂಧವಾಗಿರಲು, ಪರರ ಬೇಡಲಾಜಿನಯ್ಯಾ–ಶಿವಾಚಾರಕ್ಕೆ ಬೇರಾದ ತಿಮ್ಮ ಬೊಮ್ಮ ಬೀರಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯ ಮಾಡಿ ಇಷ್ಟಾರ್ಥವನ್ನು ಕೊಡಿರೆಂದು ಯಾಚಿಸಲಾರೆನಯ್ಯಾ. ನಿಮ್ಮ–ಇಷ್ಟಮಹಾಲಿಂಗವನ್ನು, ಪೂಜಿಸಿ–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಭವ–ಬ್ರಹ್ಮನ ಸೃಷ್ಟಿಗೊಳಗಾಗಿ ದೇಹ ಸಂಬಂಧಿಯಾಗಿ ಹುಟ್ಟಿಬರುವಂಥ ಉತ್ಪತ್ಯವು, ಬಂಧನ–ಕಾಲ ಕಾಮರ ಶಿಕ್ಷೆಯ ಬಾಧತ್ವವು, ಬಿಡದು–ಬಿಡುಗಡೆಯಾಗದು, ಏಕಯ್ಯಾ?–ಏನು ಕಾರಣಕ್ಕಯ್ಯಾ.

ಹಿಂದಣ ಜನ್ಮದ ಚಿಹ್ನ–ಮೊದಲ, ಜನ್ಮದಲ್ಲಿ ಮಾಡಿದಂಥ ಪಾಪದ ಕುರುಹು, ಬಿಡದನ್ನಕ್ಕ–ನಷ್ಟವಾಗಬೇಕು. ಆಗದಿರುವ ಪರಿಯಂತರವು, ನಿಮ್ಮ–ಇಷ್ಟಮಹಾಲಿಂಗವನ್ನು, ಪೂಜಿಸಿ–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಏವೆನಯ್ಯಾ?–ಏನು ಮಾಡಲಯ್ಯಾ? ಎನ್ನ ಮನದ–ಎನ್ನ ಚಿತ್ತದ, ಅವಗುಣವ–ಅಜ್ಞಾನ ದುರ್ಗುಣಂಗಳನು ಕಳೆದು–ನಷ್ಟಮಾಡಿ, ನಿಮ್ಮ ಶರಣರಿಗೆ–ನಿಮ್ಮ ಜಂಗಮಮೂರ್ತಿಗಳಿಗೆ, ಶರಣೆಂಬುದ–ನಮಸ್ಕಾವೆಂದು ನಮಸ್ಕರಿಸಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದನ್ನೇ, ಕರುಣಿಸು–ಕೃಪೆಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೨೬೪

**ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ ಎನ್ನ, ಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯಾ. 'ಅವಶ್ಯಮನುಭೋಕ್ತವ್ಯಂ' ಎಂದೆನಿಸದಿರಯ್ಯಾ ಕೂಡಲಸಂಗಮದೇವಾ, ಸೆಜಿಗೊಡ್ಡಿ ಬೇಡುವನು.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ದುರ್ವ್ಯಸನಿ–ಸೈರಿಸಬಾರದ ತನುವಿನ ಮನ್ಮಥ ವಿಕಾರವುಳ್ಳಾತನು, ದುರಾಚಾರಿ ಎಂದೆನಿಸದಿರಯ್ಯಾ–ಕೆಟ್ಟನಡಾವಳಿ ಉಳ್ಳಾತನೆಂದು ಹೇಳಿಸದಿರಯ್ಯಾ, ಎನ್ನ–ನನ್ನ, ಲಿಂಗವ್ಯಸನಿ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಲ್ಪಟ್ಟಾತನು, ಜಂಗಮಪ್ರೇಮಿ ಎಂದೆನಿಸಯ್ಯಾ–ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡಲ್ಪಟ್ಟಾತನೆಂದು ಹೇಳಿಸಯ್ಯಾ. 'ಅವಶ್ಯಮನುಭೋಕ್ತವ್ಯಂ' ಎಂದೆನಿಸದಿರಯ್ಯಾ–ಪೂರ್ವಕರ್ಮ ಶುಭಾಶುಭವೆಂದು ಮೊದಲ ಜನ್ಮದಲ್ಲಿ ಮಾಡಿದ ಕೀಳು ಮೊದಲಾದ ಪುಣ್ಯಾಪಾಪಂಗಳನನುಭವಿಸಿದಲ್ಲದೆ ಬಿಡೋದಿಲ್ಲವೆಂದು ಹೇಳಿಸದಿರಯ್ಯಾ, ಕೂಡಮಸಂಗಮದೇವಾ–ಎಲೆ ಪರಶಿವಲಿಂಗವೆ, ಸೆಜಿಗೊಡ್ಡಿ

ಬೇಡುವೆನು: [ಸೆಜೆಗೊಡ್ಡಿ–] ನಾನೇನು ಫಲಪದ ಮುಕ್ತಿಯನ್ನು ಬೇಡೋದಿಲ್ಲ; ಪೂರ್ವಜನ್ಮದಲ್ಲಿ ಮಾಡಿದ ಕೀಳು ಮೇಲಾದ ಪುಣ್ಯಪಾಪಂಗಳನು ಅನುಭವಿಸಿದಲ್ಲದೆ ಬಿಡೋದಿಲ್ಲವೆಂದು ಹೇಳಿಸದಿರೆಂಬಂಥ ಇದೇ ಒಂದಿಷ್ಟಾರ್ಥ ಸಿದ್ಧಿಯನ್ನು ಕರುಣಿಸಿ ಕೊಡಿರಯ್ಯಾ ಎಂದು ಆಚಾರಾಂಗವೆಂಬ ಸೆರಗಾಂತು, ಬೇಡುವೆನು–ಯಾಚಿಸುವೆನು.

---

೨೬೫

**ಧೃತಿಗೆಟ್ಟು ಅನ್ಯರ ಬೇಡದಂತೆ, ಮತಿಗೆಟ್ಟು ಪರರ ಹೊಗಳದಂತೆ, ಪರಸತಿಯರ ರತಿಗೆ ಮನವೆಳಸದಂತೆ, ಶಿವಪಥವಲ್ಲದವರ ಒಡನಾಡದಂತೆ, ಅನ್ಯಜಾತಿಯ ಸಂಗವ ಮಾಡದಂತೆ, ಎನ್ನ ಪ್ರತಿಪಾಲಿಸು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಧೃತಿಗೆಟ್ಟು–ಜಲ ವನ ಗಿರಿ ಮಸ್ತಕದ ಮೇಲಿದ್ದರೂ ಬರುವಂಥದು ತಪ್ಪದೆಂಬ ಸಹಜಜ್ಞಾನ ಸತ್ವಗುಂದಿ, ಅನ್ಯರ ಬೇಡಿದಂತೆ ಒಬ್ಬರನೂ ಒಂದು ವಸ್ತುವನ್ನು ಕೊಡು ಎಂದು ಯಾಚಿಸದ ಹಾಂಗೆ ಮತಿಗೆಟ್ಟು–ಜ್ಞಾನಬಾಹ್ಯನಾಗಿ ಪರರ ಹೊಗಳದಂತೆ ಭವಿಗಳ ಇಂದ್ರ ಚಂದ್ರ ಕರ್ಣ ಕುಬೇರನೆಂದು ಕೀರ್ತಿಸದ ಹಾಂಗೆ, ಪರಸತಿಯರ–"ಪರನಾರೀ ಕುಚಗ್ರಾಹ್ಯಂ । ಚುಂಬನಾಲಿಂಗನಾರತಂ । ಯಃ ಕರೋತಿ ಮನೋವಾಚಂ । ರೌರವಂ ನರಕಂ ವ್ರಜೇತ್ ।" ಎಂದು ಅನ್ಯವಾದ ಷಟ್ಪ್ರಕಾರ ಸ್ತ್ರೀಯರ, ರತಿಗೆ–ಕ್ರೀಡಾವಿನೋದಕ್ಕೆ, ಮನವೆಳಸದಂತೆ–ಮನ ಇಚ್ಛೈಸದ ಹಾಂಗೆ, ಶಿವಪಥವಲ್ಲದವರ–ಲಿಂಗಚಾರ ಮಾರ್ಗವಿಲ್ಲದವರ, ಒಡನಾಡದಂತೆ–ಸಂಸರ್ಗವ ಮಾಡದ ಹಾಂಗೆ, ಅನ್ಯಜಾತಿಯ ಸಂಗವಮಾಡದಂತೆ–ಶಿವಾಚಾರಕ್ಕೆ ಬೇರಾದ ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯೊಡನೆ ಕೂಡಿ ಚರಿಸದ ಹಾಂಗೆ, ಎನ್ನ–ನನ್ನ, ಪ್ರತಿಪಾಲಿಸು–ನಿರ್ವಂಚಕ ಸದ್ಭಕ್ತ ಜ್ಞಾನಜಂಗಮ ಮೂರ್ತಿಗಳ ಸಹವಾಸವನೇ ಕೊಟ್ಟು ರಕ್ಷಣ್ಯವ ಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೨೬೬

**ಮತ್ತೊಂದ ಕಾಣದಂತೆ; ಮತ್ತೊಂದ ಕೇಳದಂತೆ ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತಿರಿಸಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಮತ್ತೊಂದ ಕಾಣದಂತೆ–ಶರಣ ಕಾಣುವಂಥದೇ ಲಿಂಗನಿರೀಕ್ಷಣೆ. ಜಂಗಮ ದರುಶನವಲ್ಲದೆ ಸ್ತ್ರೀಯರ ಹಾವಭಾವ ವಿಲಾಸ ವಿಭ್ರಮಂಗಳನು ನಿರೀಕ್ಷಣೆಯ ಮಾಡದ ಹಾಂಗೆ, ಮತ್ತೊಂದ ಕೇಳದಂತೆ–ಶರಣರು ಕೇಳುವಂಥದೆ ಶಿವಶಾಸ್ತ್ರ ಶಿವಪುರಾಣ ಶಿವಾಗಮ ಆದ್ಯರ ವಚನದ ಕೇಳಿಕೆಯಲ್ಲದೆ ಹಾಳುಹರಟೆ ಸ್ಮರಲೀಲಾಪದ್ಯ ಕಾಳಗದ ವಾರ್ತೆ 'ಕಕೋಕ' ಮೊದಲಾದ ಭಿನ್ನಶಾಸ್ತ್ರಂಗಳನು

ಆಲಿಸದ ಹಾಂಗೆ, ನಿಮ್ಮ ಶರಣರ ಪಾದವಲ್ಲದೆ-ನಿಮ್ಮ ಜಂಗಮಮೂರ್ತಿಗಳ ಪದಕಮಲಂಗಳ ಭಕ್ತಿಯಲ್ಲದೆ, ಅನ್ಯವಿಷಯಕ್ಕೆಳಸದಂತೆ-ಬೇರಾದ ಇಂದ್ರಿಯ ವಿಷಯ ಪ್ರಪಂಚಿನೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋಗದ ಹಾಂಗೆ, ಇರಿಸಯ್ಯಾ-ಗುರುಲಿಂಗಜಂಗ [ಮ] ದ ಭಕ್ತಿಯಲ್ಲಿ ಸೈತಿರಿಸಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ ಎಂಬ ದೃಷ್ಟೋಪಮಾನದ ಹಾಂಗೆ,

● ಮತ್ತೊಂದ ಕಾಣದಂತೆ-ಭ್ರೂಮಧ್ಯದಲ್ಲಿ ತಾರಕಬ್ರಹ್ಮವನು ಬಿಂದುಲಕ್ಷ್ಯಯೋಗದಿಂದ ಭಿನ್ನವಿಟ್ಟುಕೊಂಡು ನಿರೀಕ್ಷಣೆಯ ಮಾಡದ ಹಾಂಗೆ, ಮತ್ತೊಂದ ಕೇಳದಂತೆ-ಬ್ರಹ್ಮರಂಧ್ರದಲ್ಲಿ ನಿಷ್ಕಲಬ್ರಹ್ಮದ ಚಿದ್ಘೋಷವನು ಕಳಾಲಕ್ಷ್ಯಯೋಗದಿಂದ ಭಿನ್ನವಿಟ್ಟುಕೊಂಡು ಆಲಿಸದ ಹಾಂಗೆ, ನಿಮ್ಮ ಶರಣರ-ನಿಮ್ಮ ಅಂದರೆ ಗುರುಮೂರ್ತಿಗಳು, ಶರಣರೆಂದರೆ ಆ ಗುರುವಿನ ದೀಕ್ಷಾತ್ರಯಗಳಿಂದುದಯವಾದ ಇಷ್ಟ ಪ್ರಾಣ ಭಾವಲಿಂಗಗಳು, ಪಾದವಲ್ಲದೆ-ತ್ರಿವಿಧ ಲಿಂಗಕ್ಕೆ ಮಾಡುವ ಅರ್ಚನೆ ಧ್ಯಾನ ಮನೋಲಯವೆಂಬ ತ್ರಿವಿಧ ಪೂಜಾಕ್ರಿಯೆಗಳಲ್ಲದೆ, ಅನ್ಯವಿಷಯಕ್ಕೆಳಸದಂತೆ-ಶಿವಾಚಾರಕ್ಕೆ ಬೇರಾದ ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋಗದ ಹಾಂಗೆ, ಇರಿಸಯ್ಯಾ-ತ್ರಿವಿಧ ಲಿಂಗಾರ್ಚನೆಯಲ್ಲಿ ಸೈತಿರಿಸಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ x (ಗ).

IV- - - - - - - - - - - - - - - - - - - - - - - - - - - - - - - - - - - - - - - - -

ದುರ್ಗುಣಂಗಳ ಕಳದು ಶರಣರ ಸಂಗದಲ್ಲಿರಿಸೆಂಬುದೀ ವಚನದರ್ಥ.

---

೨೬೭

**ಮತಿಮಂದನಾಗಿ ಗತಿಯ ಕಾಣದಿದ್ದೆನಯ್ಯಾ, ಹುಟ್ಟುಗುರುಡನ ಕೈಯಲ್ಲಿ ಕೋಲು ಕೊಟ್ಟು ನಡೆಸುವಂತೆ ನಡೆಸಯ್ಯಾ ಎನ್ನ. ನಿಮ್ಮ ಅಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು ಮಚ್ಚಿಸು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - -

ಮತಿಮಂದನಾಗಿ-ಜ್ಞಾನಬಾಹ್ಯನಾಗಿ, ಗತಿಯ-ಸದ್ಗತಿಯ, ಕಾಣದಿದ್ದೆನಯ್ಯಾ-ಅರಿಯದಿದ್ದೆನಯ್ಯಾ, ಹುಟ್ಟುಗುರುಡನ-ಹುಟ್ಟುತ್ತಲೇ ಕಣ್ಣಿಲ್ಲದಂಥ ಅಂಧಕನ, ಕೈಯಲ್ಲಿ-ಹಸ್ತದಲ್ಲಿ. ಕೋಲುಕೊಟ್ಟು-ದಂಡವನು ಇತ್ತು, ನಡೆಸುವಂತೆ ನಡೆಸಯ್ಯಾ-ಇಲ್ಲಿ ತಗ್ಗೈತೆ ತೆವರೈತೆ ಎಂದು ನಡೆಸಿಕೊಂಡು ಹೋಗುವ ಹಾಂಗೆ ನಡೆಸಯ್ಯಾ ಎಂಬ ದೃಷ್ಟೋಪಮಾನದ ಹಾಂಗೆ,

● ಹುಟ್ಟುಗುರುಡನ-ಜಾತ್ಯಂಧನಾದ ಜೀವನ, ಕೈಯಲ್ಲಿ-ಸುಚಿತ್ತವೆಂಬ ಹಸ್ತದಲ್ಲಿ, ಕೋಲುಕೊಟ್ಟು-ಅಂಗವಾದದ್ದು ಲಿಂಗವಾದದ್ದು ಪೂಜಾ ರೂಪವಾದದ್ದು ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ ಸಮರಸ [1]ಕ್ರಿಯಾ ಸಮರಸ [2]ಜ್ಞಾನವೆಂಬ ದಂಡವನು ಇತ್ತು, ನಡೆಸುವಂತೆ ನಡೆಸಯ್ಯಾ-ಸಮರಸಭಾವದಿಂದ ಕೊಟ್ಟು

ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವ ಹಾಂಗೆ ಮಾಡಯ್ಯಾ. ಎನ್ನ–ನನ್ನನ್ನು. ನಿಮ್ಮ [ಅಚ್ಚ] ಶರಣರ–ನಿಮ್ಮ ಜಂಗಮಮೂರ್ತಿಗಳ, ಒಕ್ಕುದ ಮಿಕ್ಕುದ : [ಒಕ್ಕುದ–] ಅವರು ಸಲಿಸುವಾಗ ಹರಿವಾಣದ ಸುತ್ತಮುತ್ತ ಹೊರಸೂಸಿ ಚೆಲ್ಲಿದಂಥದೆ ಒಕ್ಕಪ್ರಸಾದವು, ಮಿಕ್ಕುದ–ಅವರು ಸಲಿಸಲಾರದೆ ಭಾಂಡಭಾಜನದಲ್ಲಿ ಉಳಿದಂಡವೆ ಮಿಕ್ಕಪ್ರಸಾದವನು, ನಚ್ಚಿಸು–ಅಂತರಂಗದಲ್ಲಿ ವಿಶ್ವಾಸವನು ಮುಂದುಗೊಂಡು ಅನುಭವಿಸುವ ಹಾಂಗೆ ಮಾಡು, ಮಚ್ಚಿಸು–ಬಹಿರಂಗದಲ್ಲಿ ಶ್ರದ್ಧೆಯನ್ನು ಮುಂದುಗೊಂಡನುಭವಿಸುವ ಹಾಂಗೆ ಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೧–೧ x(ಕ).

---

## ೨೬೮

**ಕಾಣದುದನೆಲ್ಲವ ಕಾಣಲಾಜಿಸಿನಯ್ಯಾ, ಕೇಳದುದನೆಲ್ಲವ ಕೇಳಲಾಜಿಸಿನಯ್ಯಾ. ದ್ರೋಹಮಿಲ್ಲ ಎಮ್ಮ ಶಿವನಲ್ಲಿ, ಸೀಮೆಯಯ್ಯಾ. ಒಲೆಯ ಮುಂದಿರ್ದು ಮಾಡದ ಕನಸ ಕಾಂಬವರವನೊಲ್ಲನಯ್ಯಾ,, ಕೂಡಲಸಂಗಮದೇವ.**

I-------------------------------------------------------------------------

ಕಾಣದುದನೆಲ್ಲವ ಕಾಣಲಾಜಿಸಿನಯ್ಯಾ–ಶರಣ ಕಾಣುವಂಥದೆಲ್ಲ ಲಿಂಗನಿರೀಕ್ಷಣೆ ಜಂಗಮದರುಶನವಲ್ಲದೆ ಸ್ತ್ರೀಯರುಗಳ ಹಾವಭಾವ ವಿಲಾಸ ವಿಭ್ರಮಂಗಳನು ನೋಡಲಾರೆನಯ್ಯಾ, ಕೇಳುದುದನೆಲ್ಲವ ಕೇಳಲಾಜಿನಯ್ಯಾ–ಶರಣ ಕೇಳುವಂಥದೆ ಶಿವಶಾಸ್ತ್ರ ಶಿವಪುರಾಣ ಶಿವಾಗಮ ಆದ್ಯರ ವಚನದ ಕೇಳಿಕೆಯಲ್ಲದೆ ಹಾಳುಹರಟೆ ಸ್ಮರಲೀಲಾಪದ್ಯ ಕಾಳಗದ ವಾರ್ತೆ ೧ಕಕೋಕ೧ ಮೊದಲಾದವನ್ನು ಕೇಳಲಾರೆನಯ್ಯಾ. ದ್ರೋಹಮಿಲ್ಲ–ಅಪರಾಧವಿಲ್ಲವು, ಎಮ್ಮ ಶಿವನಲ್ಲಿ–ಎಮ್ಮ ಪರಮೇಶ್ವರನಲ್ಲಿ, ಸೀಮೆಯಯ್ಯಾ–ಆಶಾಲಾಂಛನಿ ಉಪಾಧಿಕರುಗಳ ಭವದಲ್ಲಿ ತಂದು ಸಂಹರಿಸುವಂಥ ಮೇರೆ ಕಟ್ಟುಂಟಾಗಿರ್ಪುದಯ್ಯಾ. ಒಲೆಯ ಮುಂದಿರ್ದು–ಆಗ ತಂದು ಆಗ ಕಾಸಿಕೊಂಡು ಕುಡಿವಂಥ ನಿರ್ಧನಿಕನೇನಾದರೂ ಒಲೆಯಮುಂದೆ ಒಂದು ಹಳೆಯ ಕೋರಿಯನ್ನು ಹಾಸಿಕೊಂಡು ಒರಗಿಕೊಂಡಿರ್ದು, ಮಾಡದ ಕನಸ ಕಾಂಬವರನೊಲ್ಲನಯ್ಯಾ–ಬೆಳಗಾಗಿ ಕಟ್ಟಿಗೆ ಕುರುಳಿಗೆ ಹೋಗುವರೊಂದಿಗೆ ನಾನು ರಾತ್ರಿಯಲ್ಲಿ ಸ್ವಪ್ನದೊಳಗೆ ಅರಸನಾಗಿ ಮಂತ್ರಿಯಾಗಿ ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವನನುಭವಿಸಿದೆನೆಂದು ಹೇಳಿದಲ್ಲಿ ನಿನ್ನಂಥ ಬಡ ಆತ್ಮನಿಗೇಕೆ ಬಂದಿತ್ತೆಂದು ನಕ್ಕು ಹಾಸ್ಯವ ಮಾಡುತ್ತಿಹರೆಂಬ ದೃಷ್ಟೋಪಮಾನದ ಹಾಂಗೆ,

● ಕಾಣದುದನೆಲ್ಲವ ಕಾಣಲಾಜಿಸಿನಯ್ಯಾ–ಭ್ರೂಮಧ್ಯದಲ್ಲಿ ತಾರಕಬ್ರಹ್ಮವನ್ನು ಬಿಂದುಲಕ್ಷ್ಯಯೋಗದಿಂದ ಭಿನ್ನವಿಟ್ಟುಕೊಂಡು ನಿರೀಕ್ಷಣೆಯ ಮಾಡಲಾರನಯ್ಯಾ. ಕೇಳದುದನೆಲ್ಲವ ಕೇಳಲಾಜಿಸಿನಯ್ಯಾ–ಬ್ರಹ್ಮರಂಧ್ರದಲ್ಲಿಯ ನಿಃಕಲಬ್ರಹ್ಮದ ಚಿದ್ಘೋಷವನ್ನು ಕಳಾಲಕ್ಷ್ಯಯೋಗದಿಂದ ಭಿನ್ನವಿಟ್ಟುಕೊಂಡು ಆಲಿಸಲಾರೆನಯ್ಯಾ. ದ್ರೋಹವಿಲ್ಲ–ಅಪರಾಧವಿಲ್ಲವು, ಎಮ್ಮ ಶಿವನಲ್ಲಿ–ಎಮ್ಮ ಪರಮೇಶ್ವರನಲ್ಲಿ, ಸೀಮೆಯಯ್ಯಾ–ದ್ವೈತಾದ್ವೈತಿಗಳನ್ನು ಭವದಲ್ಲಿ ತಂದು ಸಂಹರಿಸುವಂಥ ಮೇರೆ ಕಟ್ಟುಂಟಾಗಿರ್ಪುದಯ್ಯಾ. ಎಲೆಯ ಮುಂದಿರ್ದು–ಇಂದ್ರಿಯಂಗಳ ವಿಷಯ ಪ್ರಪಂಚಿನ ಸಂಗಸುಖಕ್ಕೆ

ತಾ ಒಳಗಾಗಿರ್ದು, ಮಾಡದ ಕನಸ ಕಾಂಬವರ-ಷಡಾಧಾರ ಚಕ್ರಂಗಳಿಗೆ ಉಪರಿಯಾಗಿರ್ಪುದೇ ಬ್ರಹ್ಮರಂಧ್ರ. ಆ ಬ್ರಹ್ಮರಂಧ್ರದಲ್ಲಿ ನೆಲೆಗೊಂಡಿಪ್ಪುದೇ ನಿಃಕಲಲಿಂಗವು. ಆ ನಿಃಕಲಲಿಂಗದಲ್ಲಿಗೆ ಶಿವಯೋಗ ಸಾಧನ ಸಂಪತ್ತಿನಿಂದ ಐದು ಹೋಗಿ ಕೂಡಲ್ಪಟ್ಟಂಥವರೇ ನಾವೆಂದು ಹೇಳಿಕೊಂಬುವಂಥವರ, ಕೂಡಲಸಂಗಮದೇವ-ಪರಶಿವಲಿಂಗವು, ಒಲ್ಲನಯ್ಯಾ-ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನಯ್ಯಾ.

೧-೧ x(ಕ).

III- - - - - - - - - - - - - - - - - - - - - - - - - - - - - - - - - - - - - - - - - - - - - -

ತನುತ್ರಯಸಂಬಂಧವಾದ ತ್ರಿಪುಟಿಜ್ಞಾನದಲ್ಲಿರುತಿರ್ದು ಷಡಾಧಾರ ಚಕ್ರಂಗಳಲ್ಲಿ ಸ್ವಪ್ನಗತವಾದ ವಸ್ತುವನು ಅಂತರ್ಲಕ್ಷಾನುಸಂಧಾನದಿಂದ ನಿರೀಕ್ಷಣೆಯ ಮಾಡುವಂಥವರನಂಗೀಕರಿಸಿ ಮುಕ್ತಿಯ ಕೊಡಲೊಲ್ಲ ಪರಶಿವಲಿಂಬವೆಂಬುದೀಗ, ಒಲೆಯ ಮುಂದಿರ್ದು ಮಾಡದ ಕನಸ ಕಾಂಬವರ ನೊಲ್ಲನಯ್ಯಾ ಕೂಡಲಸಂಗಮದೇವ ಎಂಬ ಶಬ್ದಕ್ಕರ್ಥ.

---

೨೬೯

**ಕಾಣಬಹುದೆ ಪರುಷದ ಗಿರಿ ಅಂಧಕಂಗೆ ? ಅಜೆಯಬಹುದೆ ರಸದ ಬಾವಿ ನಿರ್ಭಾಗ್ಯಂಗೆ ತೆಗೆಯಬಹುದೆ ಕಡವರವು ದರಿದ್ರಂಗೆ? ಕಱೆಯಬಹುದೆ ಕಾಮಧೇನು ಅಶುದ್ಧಂಗೆ ? ಹೊನ್ನೆ ಹುಳವ ಕಂಡು ನರಿ ತನ್ನ ಬಾಲವ ಹುಣ್ಣು ಮಾಡಿಕೊಂಡಡೆ ಹೋಲಬಹುದೆ ? ಎನ್ನೊಡೆಯ ಕೂಡಲಸಂಗನ ಶರಣರ ಪುಣ್ಯವಿಲ್ಲದೆ ಕಾಣಬಹುದೆ ?**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಅಂಧಕಂಗೆ-ಕುರುಡನಿಗೆ, ಪರುಷದ ಗಿರಿ-ಪರುಷವಿರುವಂಥ ಅದ್ರಿಯು, ಕಾಣಬಹುದೆ? ದರುಶನವಾದೀತೆ? ಆಗಲರಿಯದು. ನಿರ್ಭಾಗ್ಯಂಗೆ-ನಿರ್ಧನಿಕಂಗೆ, ರಸದ ಬಾವಿ-ಸಿದ್ಧರಸವಿರುವಂಥ ಕೂಪವು, ಅಜೆಯಬಹುದೆ?-ತಿಳಿಯಬಂದೀತೆ? ಬರಲರಿಯದು. ದರಿದ್ರಂಗೆ-ಎಂದೆಂದೂ ಐಶ್ವರ್ಯವಿಲ್ಲದಂಥ ದಟ್ಟದರಿದ್ರಂಗೆ, ಕಡವರವು-ನಿಕ್ಷೇಪದ್ರವ್ಯವನ್ನು, ತೆಗೆಯಬಹುದೆ?-ತೆಗೆದುಕೊಂಬುದಕ್ಕೆ ಬಂದಿತ್ತೆ? ಬರಲರಿಯದು. ಕಱೆಯಬಹುದೆ ಕಾಮಧೇನು ಅಶುದ್ಧಂಗೆ?-ಕಾಮಧೇನು ಎಂಬಂಥದು ಕರೆಯಬೇಕಾದರೆ ದೇವತಾದಿ ಋಷಿಗಳಿಗೆ ಕರೆವುದಲ್ಲದೆ ವಡ್ಡರು ಕೊರವರು ಮೊದಲಾದ ಕ್ಷೀಣಾತ್ಮರಿಗೆ ಕರೆದೀತೆ?-ಕರೆಯಲರಿಯದು. ಹೊನ್ನೆ ಹುಳವ ಕಂಡು_ಖದ್ಯೋತ ಕೀಡಿಯ ನೋಡಿ, ನರಿ-ಜಂಬುಕನು, ತನ್ನ ಬಾಲವ ಹುಣ್ಣು ಮಾಡಿಕೊಂಡಡೆ-ಅಮಾವಾಸ್ಯೆ ಕಾಲದಲ್ಲಿ ಗಾಢಾಂಧಕಾವಳ ಬಿದ್ದಿದ್ದಲ್ಲಿ ಏಡಿ ಮೀನು ಕಪ್ಪೆ ತಿನ್ನೋದಕ್ಕೆ ಕಣ್ಣು ಕಾಣಬರೋದಿಲ್ಲವೆಂದು ತಾನು ಹೊನ್ನೆ ಹುಳುವಿನ ಹಾಂಗೆ ಮಾಡಿಕೊಳಬೇಕೆಂದು ಸುಡುಗಾಡದಲ್ಲೊಂದು ಹೆಣವ ಸುಡುವಂಥದನ್ನು ಕಂಡು ಅದರೊಳಗೆ ತನ್ನ ಬಾಲವನಿಟ್ಟು ತಿರುತಿರುಗಿ ಕಾಸಿಕೊಂಡರೆ ಸುಟ್ಟು ಜುರುತು ಹುಣ್ಣಾಗಿ ದುಃಖವಾಗುವುದಲ್ಲದೆ, ಹೋಲಬಹುದೆ? -ಆ ಖದ್ಯೋತ ಕೀಡಿಯ ಹೋಲ್ಪಡೆಯಾದೀತೆ? ಆಗಲರಿಯದೆಂಬ ದೃಷ್ಟೋಪಮಾನದ ಹಾಂಗೆ,

● ಕಾಣಬಹುದೆ ಪರುಷದ ಗಿರಿ ಅಂಧಕಂಗೆ? – ಜಾತ್ಯಂಧನಾದ ಜೀವನಿಗೆ ತನುವಿನಲ್ಲಿ ಪರಮಪಾವನಸ್ವರೂಪವಾದ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡುವಂಥದು ಅಳವಟ್ಟಿತ್ತೆ? ಅಳವಡದು. ನಿರ್ಭಾಗ್ಯಂಗೆ–ಜ್ಞಾನೈಶ್ವರ್ಯವಿಲ್ಲದಿರುವಾತಂಗೆ, ಅಜೆಯಬಹುದೆ ರಸದ ಬಾವಿ?–ಮನದಲ್ಲಿ ಚಿದ್ರಸಸ್ವರೂಪವಾದ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥದು ಅಳವಟ್ಟಿತ್ತೆ? ಅಳವಡದು. ದರಿದ್ರಂಗೆ–ಭಕ್ತಿಸುಕೃತವಿಲ್ಲದಿರುವಂಥ ಉಪಾಧಿಕಂಗೆ, ತೆಗೆಯಬಹುದೆ ಕಡವರವು ?–ಪ್ರಾಣಜ್ಞಾನದಲ್ಲಿ ಆನಂದಸ್ವರೂಪವಾದ ಜಂಗಮವ ಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡುವಂಥದು ಅಳವಟ್ಟಿತ್ತೆ? ಅಳವಡದು. ಅಶುದ್ಧಂಗೆ–ಪವಿತ್ರವಾದ ಅಜ್ಞಾನಜೀವನಿಗೆ, ಕಾಮಧೇನು ಕಜೆಯಬಹುದೆ?–ಆನಂದಸ್ವರೂಪವಾದ ಆತ್ಮಾಂಗದಲ್ಲಿ ಚಿತ್ಕಲಾಪ್ರಸಾದವ ಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯ ಮಾಡುವಂಥದಳವಟ್ಟಿತ್ತೆ? ಅಳವಡದು. ಹೊನ್ನೆ ಹುಳವ ಕಂಡು–ಚತುರ್ವಿಧ ಅಂಗದಲ್ಲಿ ಚತುರ್ವಿಧ ಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧ ಭಕ್ತಿವಿಡಿದಾಚರಿಸುವಂಥ ನಿರ್ವಂಚಕ ಸದ್ಭಕ್ತರ ಮೇಲು ಪಜ್ಜೆಯ ನೋಡಿ, ನರಿ–ಉಪಾಧಿಕನು, [ತನ್ನ] ಬಾಲವ ಹುಣ್ಣು ಮಾಡಿಕೊಂಡಡೆ–ತಾನು ನಿರ್ವಂಚಕ ಸದ್ಭಕ್ತರ ಹಾಂಗೆ ಚತುರ್ವಿಧ ಅಂಗದಲ್ಲಿ ಚತುರ್ವಿಧ ಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧ ಭಕ್ತಿವಿಡಿದಾಚರಿಸೇನೆಂದರೆ ಅಳವಟ್ಟಿತ್ತೆ? ಅಳವಡದು. ಎನ್ನೊಡೆಯ–ಎನ್ನ ಕರ್ತೃಸ್ವರೂಪನಾದಂಥ, ಕೂಡಲಸಂಗನ ಶರಣರ–ನಿರ್ವಂಚಕ ಸದ್ಭಕ್ತರುಗಳ, ಪುಣ್ಯವಿಲ್ಲದೆ–ಸುಕೃತವುಂಟಾಗದೆ, ಕಾಣಬಹುದೆ? –ದರುಶನವಾದೀತೆ? ಆಗಲರಿಯದು.

II- - - - - - - - - - - - - - - - - - - - - - - - - - - - - - - - - - - - - - - - - - - - -

ಕಾಣಬಹುದೆ ಪರುಷದ ಗಿರಿ ಅಂಧಕಂಗೆ?–ಜಾತ್ಯಂಧಕನಾದ ಜೀವನಿಗೆ ಪರಮಪಾವನಮಹಾಜ್ಞಾನಪಾಂಡುರಾದ್ರಿಯ ನೋಡೂದಕ್ಕೆ ಬಂದೀತೆ? ಅಜೆಯಬಹುದೆ ರಸದ ಬಾವಿ ನಿರ್ಭಾಗ್ಯಂಗೆ ?– ಶಿವಾನುಭಾವ ಚಿದ್ರಸಪೂರಿತವಾದ ಕೂಪವು ಭಕ್ತಿಭಾಗ್ಯನಾಗದಂಥವನಿಗೆ ತಿಳಿವುದಕ್ಕೆ ಬಂದೀತೆ? ತೆಗೆಯಬಹುದೆ ಕಡವರವು ದರಿದ್ರಂಗೆ?–ಜ್ಞಾನವಿಹೀನವಾದ ರಿಕ್ತಪುರುಷನಿಗೆ ಸುರಚಿರಪಿಂಡಾದಿ ಜ್ಞಾನಶೂನ್ಯಾಂತಮಾದ ಸರ್ವಾಚಾರಸಂಪತ್ತಿನಾಚರಣೆಯ ಜ್ಞಾನದ್ರವ್ಯವು ತೆಗೆವುದಕ್ಕೆ ಬಂದೀತೆ? ಕರೆಯಬಹುದೆ ಕಾಮಧೇನು ಅಶುದ್ಧಂಗೆ ? – ಅಪವಿತ್ರವನುಳ್ಳಂಥ ಜೀವನಿಗೆ ಮಹಾನುಭಾವಿಗಳು ತಮ್ಮ ಶಿವಾನುಭಾವವನು ಬೋಧಿಸಬಹುದೆ? ಹೊನ್ನೆ ಹುಳವು ಕಂಡು ನರಿ ತನ್ನ ಬಾಲವ ಹುಣ್ಣು ಮಾಡಿಕೊಂಡಡೆ ಹೋಲಬಹುದೆ ?–ಚಿತ್ಪ್ರಕಾಶಜ್ಞಾನಿಗಳನು ನೋಡಿ ಮಲತ್ರಯಂಗಳೊಡನೆ ಕೂಡಿರುವ ಜೀವನೆಂಬ ಜಂಬುಕನು ಅವರ ಜ್ಞಾನವನು ತೆಗೆದುಕೊಳಬೇಕೆಂದು ಮಥನಿಸಿದರೆ ಅವರಿಗೆ ಸಮಾನವಾದಾನೆ ? ಎನ್ನೊಡೆಯ ಕೂಡಲಸಂಗನ ಶರಣರ ಪುಣ್ಯವಿಲ್ಲದೆ ಕಾಣಬಹುದೆ?–ಪರಶಿವಲಿಂಗವನು ಸುಕೃತವಿಲ್ಲದೆ ನೋಡಬಹುದೆ?

V- - - - - - - - - - - - - - - - - - - - - - - - - - - - - - - - - - - - - - - - - - - - - -

ಅಜ್ಞಾನಿಗೆ ಚಿದದ್ರಿಸ್ವರೂಪವಾದ ಗುರುಭಕ್ತಿಯನಜೆವುದಕ್ಕಾಗದೆಂಬುದೀಗ ಕಾಣಬಹುದೆ ಪರುಷದಗಿರಿ ಅಂಧಕಂಗೆ ಎಂಬ ಶಬ್ದದರ್ಥ. ಸದ್ಭಕ್ತಿ ಹೀನಂಗೆ ಚಿದ್ರೂಪ ದ್ರವ್ಯಸ್ಥಸ್ವರೂಪವಾದ ಲಿಂಗಭಕ್ತಿಯನು ತಿಳಿವುದಕ್ಕಾಗದೆಂಬುದೀಗ ನಿರ್ಭಾಗ್ಯಂಗೆ ರಸದ ಬಾವಿಯನಜೆಯಬಹುದೆ

ಎಂಬುದರ್ಥ. ಸುಜ್ಞಾನ ದ್ರವ್ಯಹೀನಂಗೆ ನಿಕ್ಷೇಪದ್ರವ್ಯಸ್ವರೂಪವಾದ ಜಂಗಮ ಭಕ್ತಿಯಳವಡದೆಂಬುದೀಗ ತೆಗೆಯಬಹುದೆ ಕಡವರ [ವು] ದರಿದ್ರಂಗೆ ಎಂಬುದರ್ಥ. ಚಿತ್ಸುಖಿಸ್ವರೂಪವಾದ ಪ್ರಸಾದ ಭಕ್ತಿಯನಾಗಮಾಡಿಕೊಂಬುದಕ್ಕಾಗದೆಂಬುದೀಗ ಅಶುದ್ಧಂಗೆ ಕರೆಯಬಹುದೆ ಕಾಮಧೇನುವೆಂಬುದರ್ಥ.

---

## ೨೭೦

**ಎಂತಕ್ಕೆ [1]ಎಂತಕ್ಕೆ[1] ನಾ[2]ನು[2] ನಿಮ್ಮ ದೇವರೆಂದಜಿದೆನು. [3]ಅಂ[3] ತಾಗಿ ನೀವೆನ್ನನಾರೆಂದಜಿಯಿರಿ! ನಂಬಲರಿಯೆ, ನಂಬಿಸ [4]ಲಾನ[4] ಜಿಯೆ, ಒಲಿಯಲಜಿಯೆ, ಒಲಿಸ [4]ಲಾನ[4] ಜಿಯೆ ॥ಸಾಕ್ಷಿ॥ "ಯಥಾ ಭಾವಸ್ತಥಾ ಲಿಂಗಂ। ಸತ್ಯಂ ಸತ್ಯಂ ನ ಸಂಶಯಃ ಯಥಾ ಭಕ್ತಿಸ್ತಥಾ ಸಿದ್ಧಿಃ। ಸತ್ಯಂ ಸತ್ಯಂ ನ ಸಂಶಯಃ॥ ಎಂದುದಾಗಿ, ಕೂಡಲಸಂಗಮದೇವಾ ಕೇಳಯ್ಯಾ? ಆ, ಕೋಟಿ ಕೋಟಿ ವರುಷ ಕೋಟಲೆಗೊಂಡರೇನಯ್ಯಾ!**

I - - - - - - - - - - - - - - - - - - - - - - - - - - - - - - - - - - - - - - - - - -

ಎಂತಕ್ಕೆ ಎಂತಕ್ಕೆ–ಕುರುಡ ಕಣ್ಣು ಪಡೆದುಕೊಂಡ ಹಾಂಗೆ ನಿರ್ಧನಿಕ ನಿಕ್ಷೇಪ ದ್ರವ್ಯವ ಪಡೆದುಕೊಂಡ ಹಾಂಗೆ ಹೆಳವ ಕಾಲು ಪಡೆದುಕೊಂಡ ಹಾಂಗೆ ಬಂಜೆ ಮಕ್ಕಳ ಪಡೆದುಕೊಂಡ ಹಾಂಗೆ ಅಪೂರ್ವಕ್ಕೆ ಅಪೂರ್ವಕ್ಕೆ, ನಾನು–ವೇದಾಂತಿಯು, ನಿಮ್ಮ ದೇವರೆಂದಜಿದೆನು "ಆತ್ಮಾವೈ ಕೇವಲಃ ಶಿವಃ" ಎಂದು ಆತ್ಮನೇ ಬ್ರಹ್ಮವೆಂದರಿದೆನು. ಅಂತಾಗಿ–ಹಾಂಗಾಗಿ ತಿಳಿದಿದ್ದು, ನೀವೆನ್ನನಾರೆಂದಜಿಯಿರಿ : ನೀವು–ಪರಶಿವಲಿಂಗವು, ಎನ್ನನಾರೆಂದಜಿಯಿರಿ–ನಾನು [೧][ಸ್ವಾ][೧] ಧೀನ ಮುಕ್ತನಲ್ಲದೆ ಪರಾಧೀನ ಮುಕ್ತನಲ್ಲದ ಕಾರಣ ನಿಮ್ಮ ಚಿದಂಗಸ್ವರೂಪನೆಂದು ತಿಳಿಯಿರಿ. ನಂಬಲಜಿಯೆ–ವಿಶ್ವಾಸಿಸಿ ಲಿಂಗಪೂಜೆಯ ಮಾಡುವಂಥದನ್ನು ತಿಳಿಯೆ, ನಂಬಿಸಲಾನಜಿಯೆ–ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಕ್ರಿಯೆಯನು ನೀವು ಕಾಣಿಸಿಕೊಡಲರಿಯಿರಿ; ಒಲಿಯಲಜಿಯೆ–ವಿಶ್ವಾಸಿಸಿ ಜಂಗಮಭಕ್ತಿಯ ಮಾಡುವಂಥದನ್ನು ತಿಳಿಯೆನು, ಒಲಿಸಲಾನಜಿಯೆ–ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸ ಜ್ಞಾನವನ್ನು ನೀವು [೨]ಕರುಣಿಸಿ[೨] ಕೊಡಲರಿಯಿರಿ.

ಗ್ರಂಥ॥ ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. ಯಥಾಭಾವಸ್ತಥಾಲಿಂಗಂ: ಯಥಾ–ಹೇಂಗೆ, ಭಾವಃ–ಮನದಲ್ಲಿ ಲಿಂಗ ಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥದು, ತಥಾ–ಹಾಂಗೆ, ಲಿಂಗಂ ಚಿದ್ಘನಲಿಂಗವು ಸಿದ್ಧಿಃ–ಸಾಧ್ಯವಾಗುತ್ತಿಹುದು. ಸತ್ಯಂ ಸತ್ಯಂ–ಯಥಾರ್ಥ ಯಥಾರ್ಥವು, ನ ಸಂಶಯಃ–ಈ ಅರ್ಥದಲ್ಲಿ ಸಂದೇಹವಿಲ್ಲವು. ಯಥಾ ಭಕ್ತಿ ಸ್ತಥಾ ಸಿದ್ಧಿಃ : ಯಥಾ–ಹೇಂಗೆ, ಭಕ್ತಿ–ಪ್ರಾಣ ಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಜಂಗಮ ಭಕ್ತಿಮಾಡುತ್ತಿಹನೋ, ತಥಾ–ಹಾಂಗೆ, ಸಿದ್ಧಿಃ–ನಿಜಮೋಕ್ಷ ಸಾಧ್ಯವಾಗುತ್ತಿಹುದು. ಸತ್ಯಂ ಸತ್ಯಂ–ಯಥಾರ್ಥ ಯಥಾರ್ಥವು, ನ ಸಂಶಯಃ–ಈ ಅರ್ಥದಲ್ಲಿ ಸಂದೇಹವಿಲ್ಲವು. ಎಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಆಲಿಸಯ್ಯಾ, ಕೋಟಿಕೋಟಿ ವರುಷ–ಕೋಟ್ಯನುಕೋಟಿ ವರುಷ, ಕೋಟಲೆಗೊಂಡರೇನಯ್ಯಾ–ಆಯಾಸಂಬಟ್ಟಡೇನಯ್ಯಾ.

.........................

೧–೧ ಸ್ವಯಾ (ಕ,ಗ). ೨–೨ ಕಾಣಿಸಿ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - - -

1–1 x (ಚ,ಜ). 2–2 x (ಚ,ಜ). 3–3 ಇಂ (ಚ,ಜ). 4–4 ಲ (ಚ,ಜ).

.........................

ಎಂತಕ್ಕೆ ನಾ ನಿಮ್ಮ ದೇವರೆಂದಱಿದೆನು–ಶಿವನು ತನ್ನಂಶೀಭೂತವಾದ ಆತ್ಮನಿಗೆ ದೇಹಸಂಬಂಧಿಸಿದಲ್ಲಿ ಆ ದೇಹದ ಮರವೆಯಿಂ ತನ್ನ ನಿಜವ ಮರದು ಎಂಬತ್ತುನಾಲ್ಕುಲಕ್ಷ ಯೋನಿಮುಖದಲ್ಲಿ ಹುಟ್ಟಿಹುಟ್ಟಿ ಬರುವಲ್ಲಿ ಎತ್ತಾನುಕಾಲಕೊಂದು ವೇಳೆ ಹೆಳವನಿಗೆ ಕಾಲ ಬಂದ ಹಾಂಗೆ ಕುರುಡನಿಗೆ ಕಣ್ಣು ಬಂದಹಾಗೆ ಪಂಚಭೂತ ಸಮ್ಮಿಶ್ರವಾದ ದೇಹವಿಡಿದು ಹುಟ್ಟಿ ಎಲೆ ಶಿವನೆ ನಿಮ್ಮನು ಸಧರ್ಮದಿವ್ಯಕಾಂತಿಸ್ವರೂಪವಾದ ವಸ್ತುವೆಂದು ತಿಳಿದೆನು. ಇಂತಾಗಿ ನೀವೆನ್ನನಾರೆಂದಱಿಯಿರಿ–ಹೀಂಗಾಗಿ ಎಲೆ ಶಿವನೆ ನೀವು ಎನ್ನನು ನಿಮ್ಮಂಶೀಭೂತವಾದ ಜ್ಞಾನಕಲಾತ್ಮನೆಂದು ತಿಳಿಯಿರಿ. ನಂಬಲಱಿಯೆ–ಗುರುಲಿಂಗಜಂಗಮವೊಂದೆ ಎಂದು ವಿಶ್ವಾಸಿಸಲರಿಯೆ, ನಂಬಿಸಲಱಿಯೆ–ಅವರ ನಾನು ಒಲಿಸಿಕೊಳಲರಿಯೆ, ಒಲಿಯಲಱಿಯೆ – ಆ ಗುರುಲಿಂಗ'ಜಂಗಮಕ್ಕೆ ಮಚ್ಚಲರಿಯೆ, ಒಲಿಸಲಱಿಯೆ–ಗುರುಲಿಂಗಜಂಗಮದ ಮಚ್ಚಿಸಲರಿಯೆ, ಮುಂದಕ್ಕೆ ಕಾಣಬಂದರ್ಥ.

---

೨೭೧

**ಅರಿಸಿಣವನೆ ಮಿಂದು, ಹೊಂದೊಡಿಗೆಯನೆ ತೊಟ್ಟು, ಪುರುಷನ ಒಲವಿಲ್ಲದ ಲಲನೆಯಂತಾ ನಿರ್ದೆನಯ್ಯಾ. ವಿಭೂತಿಯನೆ ಧರಿಸಿ ರುದ್ರಾಕ್ಷಿಯನೆ ಕಟ್ಟಿ, ಶಿವ ನಿಮ್ಮ ಒಲವಿಲ್ಲದಂತಾನಿರ್ದೆನಯ್ಯಾ. ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ ನೀನೊಲಿದಂತೆ ಸಲಹಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಅರಸಿಣವನೆ ಮಿಂದು–ಎಣ್ಣೆ ಅರಿಸಿಣವ ಹಚ್ಚಿ ಮೈದೊಳೆಕೊಂಡು, ಹೊಂದೊಡಿಗೆಯನೆ ತೊಟ್ಟು–ಚಿನ್ನದಾಭರಣಂಗಳನಿಟ್ಟುಕೊಂಡು, ಪುರುಷನ–ಮದುವೆಯಾದಂಥ ಗಂಡನ, ಒಲವಿಲ್ಲದ–ಸಂಗವಿಲ್ಲದ, ಲಲನೆಯಂತೆ–ಸ್ತ್ರೀಯಳ ಹಾಂಗೆ, ಅನಿರ್ದೆನಯ್ಯಾ–ನಾನಿರುತಿರ್ದೆನಯ್ಯಾ. ವಿಭೂತಿಯನೆ ಧರಿಸಿ–ಶಿವನ ಮೈಕಾಂತಿಸ್ವರೂಪವಾದ ಲೀಲಾಭಸಿತವನೆ ಲಲಾಟ ಮೊದಲಾದ ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧಾರಣವ ಮಾಡಿ, ರುದ್ರಾಕ್ಷಿಯನೆ ಕಟ್ಟಿ–ಹರಾಕ್ಷಿಮಣಿಗಳನೆ ತತ್ತಸ್ಥಾನದಲ್ಲಿ ಧಾರಣವ ಮಾಡಿ, ಶಿವ–ಮಾಂಗಲ್ಯಸ್ವರೂಪವಾದ ದೇವನೆ, ನಿಮ್ಮ ಒಲವಿಲ್ಲದಂತೆ–ನಿಮ್ಮ ಕೃಪೆಯಿಲ್ಲದ ಹಾಂಗೆ, ನಿಮ್ಮ ಕೃಪೆಯೇ ನಿಜಮೋಕ್ಷ. ಆ ನಿಜಮೋಕ್ಷ ಉಂಟಾಗಿಲ್ಲದೆ, ಅನಿರ್ದೆನಯ್ಯಾ–ಆ ರೀತಿಯಲ್ಲಿ ನಾನು ವ್ಯರ್ಥಸ್ಯವಾಗಿರುತಿರ್ದೆನಯ್ಯಾ, ಎಮ್ಮವರ ಕುಲದಲ್ಲಿ–ನಮ್ಮ ಸಂಬಂಧವಾದ ಶಿವಶರಣರಂಶದಲ್ಲಿ, ಕೆಟ್ಟು–ಶಿವತತ್ತ್ವವಳಿದು, ಬಾಳುವರಿಲ್ಲ–ಜೀವಿಸುವಂಥವರಿಲ್ಲವು, ನೀನೊಲಿದಂತೆ–ನಿನ್ನ ಕೃಪೆಯಾದಹಾಂಗೆ, ಸಲಹಯ್ಯಾ–ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಣ್ಯವ ಮಾಡಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - -

ಅರಿಸಿನವನೆ ಮಿಂದು–ಚಿತ್ಪ್ರಕಾಶಜ್ಞಾನವನೆ ಎಷ್ಟೋ ಕಾಲ ಸ್ನಾನವ ಮಾಡಿ, ಹೊಂದೊಡಿಗೆಯನೆ ತೊಟ್ಟು–ಅಷ್ಟಾವರಣಂಗಳೆಂಬ ಅಲಂಕರಣಂಗಳನೆ ಅಲಂಕರಿಸಿಕೊಂಡು, ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ–ಇಷ್ಟಲಿಂಗವೆಂಬ ವಲ್ಲಭನ ಭಕ್ತಿಸ್ನೇಹವಿಲ್ಲದ ಉಪಾಧಿಭಕ್ತನಾಗಿರ್ದೆನು. ಮುಂದಕ್ಕೆ ಕಾಣಬಂದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಬಹಿರಂಗದಲ್ಲಿ ಸತ್ಕ್ರಿಯವನಳವಡಿಸಿಕೊಂಡು ಎಂಬುದೀಗ ಅರಿಸಿನವನೆ ಮಿಂದು ಎಂಬುದರ್ಥ. ಸುವರ್ಣ ಮಂತ್ರಾವರಣವ ಮಾಡಿಕೊಂಡು ಎಂಬುದೀಗ ಹೊಂದೊಡಿಗೆಯನೆ ತೊಟ್ಟು ಎಂಬುದರ್ಥ. ಪುರುಷನ ಒಲವಿಲ್ಲದ ಲಲನೆಯಂತೆ ನಿಮ್ಮ ಪ್ರಸನ್ನತ್ವವಿಲ್ಲದೆ ಲಿಂಗದಲ್ಲಿ ಅಭೀಷ್ಟೆವುಳ್ಳಾತ ನಾಗಿರ್ದೆನಯ್ಯ ವೀರಶೈವಾಚಾರ ಜಾತಿಯಲ್ಲಿ ಎಂಬುದೀಗ ಎಮ್ಮವರ ಕುಲದಲ್ಲಿ ಎಂಬುದರ್ಥ. ಶೀಲವ್ರತಾದಿಗಳಲ್ಲಿ ಆಚಾರಭ್ರಷ್ಟರಾಗಿ ಜೀವಿಸುವಂಥವರಿಲ್ಲವೆಂಬುದರ್ಥ.

---

## ೨೭೨

**ಉದಯಾಸ್ತಮಾನವೆನ್ನ ಬೆಂದ ಬಸುಱಿಂಗೆ ಕುದಿವೆನಲ್ಲದೆ ನಿಮ್ಮ ನೆನೆಯಲು ತೆಱಹಿಲ್ಲವಯ್ಯಾ. ಎನಗೆ ಎಂತಯ್ಯಾ ಲಿಂಗತಂದೆ, ಎನ್ನ ಪೂರ್ವದ ಲಿಖಿತ? ಬೆರಣಿಯನಾಯಲಲ್ಲದೆ ಅಟ್ಟುಣ್ಣ ತೆಱಹಿಲ್ಲೆನಗೆ; ನೀ ಕರುಣಿಸು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಉದಯಾಸ್ತಮಾನವೆನ್ನ ಬೆಂದ ಬಸುಱಿಂಗೆ ಕುದಿವೆನಲ್ಲದೆ: ಉದಯಾಸ್ತಮಾನ–ಹೊತ್ತಾರೆಯಿಂದ ಹಿಡಿದು ಸಾಯಂಕಾಲ ಪರಿಯಂತರವು, ಬೆಂದ–ಆಶಾಗ್ನಿಯಿಂದ ದಗ್ಧವಾದ , ಎನ್ನ ಬಸುಱಿಂಗೆ–ಎನ್ನ ಘಟರಕ್ಷಣ್ಯವ ಮಾಡಿಕೊಂಬುದಕ್ಕೆ, ಕುದಿವೆನಲ್ಲದೆ–ಕೂಳುಗುದಿಗೊಂಬೆನಲ್ಲದೆ, ನಿಮ್ಮ ನೆನೆಯಲು–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಲು, ತೆಱಹಿಲ್ಲವಯ್ಯಾ–ತೆರಪುಂಟಾಗಿಲ್ಲವಯ್ಯಾ ಎನಗೆ–ನನಗೆ, ಎಂತಯ್ಯಾ ಲಿಂಗತಂದೆ: [ಲಿಂಗದಂತೆ–] ಲಿಂಗಯ್ಯನೆಂಬ ಆತ್ಮಜನಕನೆ, ಎಂತಯ್ಯಾ–ಹೇಂಗಯ್ಯಾ, ಎನ್ನ ಪೂರ್ವದ ಲಿಖಿತ?–ಎನ್ನ ಮುನ್ನಿನ ಹಣೆಯಬರಹವು. ಬೆರಣಿಯನಾಯಲಲ್ಲದೆ–ನಿಸ್ಸಾರಸ್ವರೂಪವಾದ ದೇಹವ ಧರಿಸಿಕೊಂಡು ಭವದಲ್ಲಿ ಹುಟ್ಟಿಬಂದಲ್ಲದೆ, ಅಟ್ಟುಣ್ಣ ತೆಱಹಿಲ್ಲ–ಲಿಂಗಾಂಗಸಂಬಂಧವಾದ ಶಿವಸುಖವ ಪಡೆದು ಅನುಭವಿಸುವುದಕ್ಕೆ ತೆರಪುಂಟಾಗಿಲ್ಲವು; ಎನಗೆ ನೀ ಕರುಣಿಸು–ಎನಗೆ ನೀ ಕೃಪೆಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III- - - - - - - - - - - - - - - - - - - - - - - - - - - - - - - - - - - - - - - - - - - - -

ಜ್ಞಾನಸಾರಹೀನವಾದ ದೇಹಭಾವದೊಡನೆ ಕೂಡಿ ವರ್ತಿಸುವೆನಲ್ಲದೆ ಸಕಲಕರಣಂಗಳನು ಲಿಂಗಮುಖವ ಮಾಡಿ ಆ ಲಿಂಗಮುಖದಿಂದ ಬಂದ ಪ್ರಸಾದವ ಸ್ವೀಕರಿಸಿ ಲಿಂಗದಲ್ಲೇಕಾರ್ಥವಾಗುವ ಲಬ್ಧಿ ದೊರಕೊಳಲಿಲ್ಲವೆಂಬುದೀಗ ಬೆರಣಿಯನಾಯ್ವೆನಲ್ಲದೆ ಅಟ್ಟುಣ ತೆಱಹಿಲ್ಲೆನಗೆ ಎಂಬ ಶಬ್ದಕ್ಕರ್ಥ.

೨೭೩

**ತಾಮಸ ಮುಸುಕಿ ಕಂಗಳ ಕೆಡಿಸಿತ್ತೆನ್ನ ಭಕ್ತಿ; ಕಾಮವೆಂಬ [1]ಅಗ್ನಿಯ[2]ಲ್ಲಿ[2] ಮುಳಿದಿಕ್ಕಿತ್ತೆನ್ನ ಭಕ್ತಿ[1]; ಉದರಕ್ಕೆ [3]ಕುದಿ[3] ಕುದಿದು ಮುಂದುಗೆಡಿಸಿತ್ತೆನ್ನ ಭಕ್ತಿ; [4]ಇದಿರನಾಶ್ರಯಿಸ[5]ಹೋಯಿತ್ತೆನ್ನ ಭಕ್ತಿ![4] ಹೆಣ [6]ಮೂಲಿಗ[6] ನಾನು, ಕೂಡಲಸಂಗಮದೇವ[7]ರಲ್ಲಿ[7] ಕ್ಷಣ ಹದುಳವಿರದೆ ಬಾಯ ಟೊಣೆದು ಹೋಯಿತ್ತೆನ್ನ ಭಕ್ತಿ.**

I-----------------------------------------------------------------------

ತಾಮಸ ಮುಸುಕಿ ಕಂಗಳ ಕೆಡಿಸಿತ್ತೆನ್ನ ಭಕ್ತಿ: ತಾಮಸ–ಅಜ್ಞಾನವು, ಮುಸುಕಿ– "ಮುಸುಕು ಆವರಣೇ" ಯೆಂದು ಆವರ್ತಿಸಿ, ಕಂಗಳ–ಲಿಂಗಪೂಜೆಯ ಮಾಡಿ ಲಿಂಗ ನಿರೀಕ್ಷಣೆಯ ಮಾಡುವಂಥ ಸುಜ್ಞಾನವೆಂಬ ಚಕ್ಷುವನ್ನು ಕೆಡಿಸಿತ್ತು–ನಷ್ಟವ ಮಾಡಿತ್ತು, ಎನ್ನ ಭಕ್ತಿ–ನಾ ಮಾಡುವಂಥ ಭಿನ್ನ ಭಕ್ತಿಯು. ಕಾಮವೆಂಬ–ಇತರ ಕಾಮ್ಯಾರ್ಥದ ಮೇಲಣ ಬಯಕೆಯೆಂಬ ಅಗ್ನಿಯಲ್ಲಿ – ವಹ್ನಿಯಲ್ಲಿ, ಮುಳಿದಿಕ್ಕಿತ್ತು–ವಶಗತನ ಮಾಡಿತ್ತು, ಎನ್ನ ಭಕ್ತಿ–ನಾ ಮಾಡುವಂಥ ಭಿನ್ನಭಕ್ತಿಯು. ಉದರಕ್ಕೆ–ಘಟರಕ್ಷಣ್ಯವ ಮಾಡಿಕೊಂಬೋದಕ್ಕೆ, ಕುದಿಕುದಿದು–ಕೂಳುಗುದಿಗೊಂಡು ಮುಂದುಗೆಡಿಸಿತ್ತು–ಮುಂದಾಗುವಂಥ ನಿಜಮೋಕ್ಷಕ್ಕೆ ತಪ್ಪುಗನ ಮಾಡಿತ್ತು, ಎನ್ನ ಭಕ್ತಿ–ನಾ ಮಾಡುವಂಥ ಭಿನ್ನ ಭಕ್ತಿಯು. ಇದಿರನಾಶ್ರಯಿಸ ಹೋಯಿತ್ತು–ಒಬ್ಬರು ಒಂದು ವಸ್ತುವನ್ನು ಕೊಟ್ಟಾರೋ ಕೊಡರೋ ಎಂದು ಆಶ್ರಯಿಸ ಹೋಯಿತ್ತು, ಎನ್ನ ಭಕ್ತಿ– ನಾ ಮಾಡುವಂಥ ಭಿನ್ನಭಕ್ತಿಯು. ಹೆಣಮೂಲಿಗ ನಾನು–ಎಲ್ಲಾ ಮರ್ತ್ಯಘಟಪ್ರಾಣಿಗಳೊಳಗೆ ಮುಖ್ಯವಾಗಿದ್ದಾತ ನಾನು, ಕೂಡಲಸಂಗಮದೇವರಲ್ಲಿ–ಪರಶಿವಲಿಂಗದ ಪಾದಾರವಿಂದದಲ್ಲಿ, ಕ್ಷಣ ಹದುಳವಿರದೆ–ಒಂದು ಕ್ಷಣಾರ್ಧಕ್ಷಣವಾದರೆಯೂ ಸದುಹೃದಯವುಳ್ಳವನಾಗಿರದೆ, ಬಾಯ ಟೊಣೆದು–ಶಿವಾಪೇಕ್ಷೆಯೆಂಬ ಜಿಹ್ವೆಯನಪಹರಿಸಿ ಭಿನ್ನಾಪೇಕ್ಷೆಯೆಂಬ ರಸನೆಯೊಳಗುಮಾಡಿ ತನ್ನ ತಪ್ಪಿಸಿಕೊಂಡು ವಿಲಕ್ಷಣವಾಗಿ ಹೋಯಿತ್ತು, ಎನ್ನ ಭಕ್ತಿ–ನಾ ಮಾಡುವಂಥ ಭಿನ್ನಭಕ್ತಿಯು.

IV- - - - - - - - - - - - - - - - - - - - - - - - - - - - - - - - - - - - - - - - - - - -

2–2 x (ತ). 3–3 x (ತ).5+ ಲು (ತ). 6–6 ಮೂಲ(ತ) 7–7 x (ತ).

..........................

ಅಜ್ಞಾನದಿಂದ ಇಂದ್ರಿಯಂಗಳಿಂದ ಭಕ್ತಿದೊರಕೊಳ್ಳದೆಂಬುದೀ ವಚನದರ್ಥ.

V-----------------------------------------------------------------------

1–1 ಗ್ನಿಗೆ ಮುರಿದು ಹಾಕಿತ್ತು. (ಪ). 4–4 ಅನ್ಯರನಾಶ್ರಯಿಸಿತ್ತು (ಪ). 6–6 ಮೂಲ (ಪ).

..........................

ಭಕ್ತಿಯು ಜ್ಞಾನವ ನಷ್ಟವ ಮಾಡಿತ್ತೆಂಬುದೀಗ ಎನ್ನ ಭಕ್ತಿ ಕಂಗಳ ಕೆಡಿಸಿತ್ತೆಂಬುದರ್ಥ. ಆಸೆಯೆಂಬಗ್ನಿಯಲ್ಲಿ ಚಿದಾತ್ಮನನ ಮೋಟನಂಗೆಯ್ದು ಭವಕ್ಕೆ ಹಾಕಿತ್ತೆಂಬುದೀಗ ಕಾಮವೆಂಬಗ್ನಿಗೆ

ಮುರಿದು ಹಾಕಿತ್ತು ಎಂಬುದರ್ಥ. ಉತ್ತರೋತ್ತರವಾದ ಮೋಕ್ಷಮಾರ್ಗವ ನಷ್ಟವ ಮಾಡಿತ್ತು ಎಂಬುದೀಗ ಮುಂದುಗೆಡಿಸಿತ್ತು ಎಂಬುದರ್ಥ. ಅಂಗದ ಮೇಲೆ ಲಿಂಗವಿಲ್ಲದ ಭವಿಗಳ ಸೇರಿ ಬದುಕೆನೆಂದಿಚ್ಛೈಸಿತ್ತು ಎಂಬುದೀಗ ಅನ್ಯರನಾಶ್ರಯಿಸಿತ್ತು ಎಂಬುದರ್ಥ. ಅಚೇತನವಾದ ದೇಹವೇ ಆದಿಯಾಗುಳ್ಳ ನಾನುಯೆಂಬುದೀಗ ಹೆಣಮೂಲ ನಾನು ಎಂಬುದರ್ಥ.

---

೨೭೪

**ಏನಿದ್ದಡೇನಿದ್ದಡೊಲ್ಲದು ನಿಮ್ಮನುಭಾವಕ್ಕೆನ್ನ ಮನವು, ಡಂಬಕನೆಂಬವ ನಾನು ಕಂಡಯ್ಯಾ, ಕೂಡಲಸಂಗಮದೇವರ ಪೂಜಿಸಿ, ಮಾನವರಾಸೆ ಬಿಡದಾಗಿ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಏನಿದ್ದಡೇನಿದ್ದಡೊಲ್ಲದು ನಿಮ್ಮನುಭಾವಕ್ಕೆನ್ನ ಮನವು: ಏನಿದ್ದಡೇನಿದ್ದಡೊಲ್ಲದು [ನಿಮ್ಮನುಭಾವಕ್ಕೆ]–ಸುಧೆಯಿದ್ದು ಸುರೆ ಇಚ್ಛೈಸುವಂತೆ ಕಣಕವಿದ್ದು ಅಡಗ ಇಚ್ಛೈಸುವಂತೆ ನಿಕ್ಷೇಪದ್ರವ್ಯಯಿರ್ದು ಜರಗ ತೊಳೆವವನಂತೆ ಅತ್ಯಂತ ಪೂಜ್ಯವಾದ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಅವರ ಪಾದೋದಕ ಪ್ರಸಾದವನ್ನು ಪಡೆದನುಭವಿಸಿ ಅವರ ಶಿವಾನುಭಾವವನ್ನು ಬೆಸಗೊಂಡು ಕೇಳಲೊಲ್ಲದೆ ಅನಿತ್ಯವಾದ ಹೊನ್ನು ಹೆಣ್ಣು ಮಣ್ಣೇ ಮುಖ್ಯವಾದ ಸಕಲ ಸಂಸಾರ ಪ್ರಪಂಚದೊಡನೆ ಕೂಡಿ ಚರಿಸಿ ಹಾಳು ಹರಟೆ ಸ್ಮರಲೀಲಾಪದ್ಯ ಕಾಳಗದ ವಾರ್ತೆ [೧]ಕಕ್ಕೋಕ[೧] ಮೊದಲಾದವನ್ನು ಆಲಿಸುವುದಕ್ಕೆ ಇಚ್ಛೈಸುತ್ತಿಹುದು, ಎನ್ನ ಮನವು–ಎನ್ನ ಚಿತ್ತವು. ಡಂಬಕನೆಂಬವ ನಾನು ಕಂಡಯ್ಯಾ – ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷ ಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿರುವಂಥ ಹಿರೇತನದ ಬೂಟಕತ್ವವುಳ್ಳಾತ ನಾನು ಕಂಡಯ್ಯಾ, ಕೂಡಲಸಂಗಮದೇವರ–ಇಷ್ಟಮಹಾಲಿಂಗವನ್ನು, ಪೂಜಿಸಿ–ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಮಾನವರಾಸೆ ಬಿಡದಾಗಿ–[೨]ಮನುಷ್ಯರೊಂದು ವಸ್ತು[೨]ವನ್ನು [೩]ಕೇಳಿದರೆ[೩] ಕೊಟ್ಟಾರೋ ಕೊಡರೋ ಎಂಬಂಥ ಅಪೇಕ್ಷೆ [೪]ಬಿಡದಾಗಿ.[೪]

..........................

೧–೧ x (ಗ). ೨–೨ ಲೋಕದಾತ್ಮರ ಒಂದೊಸ್ತು (ಗ). ೩–೩ x (ಕ). ೪–೪ ಬಿಡುಗಡೆಯಾಗದಾಗಿ (ಗ).

---

೨೭೫

**ಬೆಲ್ಲವ ತಿಂದ ಕೋಡಗ[1]ದಂ[1]ತೆ ಸಿಹಿಯ ನೆನೆಯದಿರಾ, ಮನವೆ. ಕಬ್ಬ ತಿಂದ ನರಿಯಂತೆ ಹಿಂದ [2]ನೆನೆ[2]ಸದಿರಾ, ಮನವೆ. ಗಗನವನಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ, ಮನವೆ. ಕೂಡಲಸಂಗನ ಶರಣರ ಕಂಡು ಲಿಂಗವೆಂ [3]ದು[3] ನಂಬು [4]ಕಂಡಾ[4] ಮನವೆ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಬೆಲ್ಲವ ತಿಂದ ಕೋಡಗದಂತೆ ಸಿಹಿಯ ನೆನೆಯದಿರಾ, ಮನವೆ: ಬೆಲ್ಲವ ತಿಂದ ಕೋಡಗದಂತೆ– ಲೋಕದಲ್ಲಿ ಹಲಾಯುಧರುಗಳೇನಾದರೂ ಕೆರೆ ಬಾವಿಗಳ ಹಿಂಭಾಗದಲ್ಲಿ ಕಬ್ಬನ್ನು ಬಿತ್ತಿದಲ್ಲಿ ವರ್ಧನವಾಗಿ ಬೆಳೆದ ಬಳಿಕ ಆ ಕಬ್ಬನ್ನು ಕಡಿದು ಆಲಿಯಾಡಿ ಬೆಲ್ಲವ ಮಾಡಿ ಅಟ್ಟಲ ಮೇಲೆ ಒಣಗಿಟ್ಟಲ್ಲಿ ಕಪಿಯೆಂಬಂಥದು ಬಿದಿರ ಇಂಡಿಲಲ್ಲಿ ಸೇರಿಕೊಂಡಿರ್ದು ಸಂಜೆ ಮುಂಜಾನೆ ವೇಳೆಯಲ್ಲಿ ಬಂದು ಅಟ್ಟಲವನ್ನು ಹತ್ತಿ ಬೆಲ್ಲವ ತಿಂದು ವೇಳೆಗಳೆದುಕೊಂಡು ಹೋಗುತ್ತಿಹುದು. ಕಬ್ಬನೆಲ್ಲವ ಕಡಿದು ಆಲಿಯಾಡಿ ಬೆಲ್ಲವ ಮಾಡಿ ಮನೆಗೆ ತೆಗೆದುಕೊಂಡು ಹೋಗಿರ್ದಲ್ಲಿ ಆ ಕಪಿಯೆಂಬಂಥದು ಎಂದಿನ ಹಾಂಗೆ ಬಂದು ಅಟ್ಟಲವನ್ನು ಹತ್ತಿ ಬೆಲ್ಲವ ನೋಡಿದಲ್ಲಿ ಬೆಲ್ಲವಿಲ್ಲದಿದ್ದಲ್ಲಿ ಆಗ ಹಣ್ಣು ಕಾಯಿಗಳ ತಿಂಬೋದಕ್ಕೆ ಇಚ್ಛೆಬಾರದೆ ಆವಾಗ ಕಬ್ಬು ಬಿತ್ತ್ಯಾರೋ ಆವಾಗ ವರ್ಧನವಾಗಿ ಬೆಳೆದೀತೋ ಆವಾಗ ಕಬ್ಬು ಕಡಿದು ಆಲಿಯಾಡಿ ಬೆಲ್ಲವ ಮಾಡಿ ಅಟ್ಟಲದ ಮೇಲೆ ಒಣಗಿಟ್ಟಾರೋ ಆವಾಗ ತಿಂದೇನೋ ಎಂದು ಅದೇ ವ್ಯಾಕುಲದೊಡನೆ ಕೂಡಿಪ್ಪುದಲ್ಲದೆ ಆ ಬೆಲ್ಲವನ್ನು ಮರೆತು ಬಿಟ್ಟಿತ್ತೆ? ಬಿಡದೆಂಬ ಹಾಂಗೆ; ಒಬ್ಬ ಶೀಲವಂತನು ಷಡ್ರುಚಿಗಳನು ನಿಷೇಧವೆಂದು ಬಿಟ್ಟು ಸಪ್ಪೆಯನೆ ನೇಮಮಾಡಿಕೊಂಡಿರುವನು. ಆ ಊರು ದೈವದರಾದಂಥವರು ಒಂದಾನೊಂದು ದಿವಸ ವನಭೋಜನ ಮಾಡಿದ್ದಲ್ಲಿ ಶೀಲವಂತರೆ ನೀವು ಊಟಕ್ಕೆ ಬರಬೇಕೆಂದು ಹೇಳಿದಲ್ಲಿ, ನಾವೆಲ್ಲ ಬಂದೇವು, ನಮ್ಮಾಚರಣೆ ಹೀಂಗೈತೆಂದು ಹೇಳುವನು. ಆದರೇನಾಯಿತ್ತು ? ನಿಮ್ಮಾಚರಣೆ ಇದ್ದ ಹಾಂಗೆ ನಡಸಿಕೊಡುತ್ತೈದೀವಿ ಬನ್ನಿರೆಂದು ಕರಕೊಂಡು ಹೋಗಿ ತಾವೆಲ್ಲ ಷಡ್ರುಚಿ ಪದಾರ್ಥಂಗಳನು ಚಪ್ಪಚಪ್ಪರಿಸಿ ಸಲಿಸುತಿರ್ದಲ್ಲಿ ಇವರಿಗೆ ಬೇರೆ ಸಪ್ಪಯನೇ ಮಾಡಿ ನೀಡಿದಲ್ಲಿ ಅವರು ಸಲಿಸುವಂಥ ಷಡ್ರುಚಿಗಳ ಕಂಡು ಬಾಯಿಗೆ ನೀರು ಬಂದು ನಾನು ಷಡ್ರುಚಿಗಳನು ಬಿಟ್ಟುದಿ 'ಲ್ಲವಲ್ಲಾ' ಎಂಬು ಬಿಟ್ಟಂಥ ಷಡ್ರುಚಿಗಳನು ಇಚ್ಛೈಸದಿರಾ ಮನವೆ–ಉಪಾಧಿಕನ ಹೀನಮನಸ್ಸೇ.

ಕಬ್ಬ ತಿಂದ ನರಿಯಂತೆ ಹಿಂದನೆಣಿಸದಿರಾ ಮನವೆ: ಲೋಕದಲ್ಲಿ ಹಲಾಯುಧರುಗಳೇನಾದರೂ ಕೆರೆ, ಬಾವಿಗಳ ಹಿಂಭಾಗದಲ್ಲಿ ಕಬ್ಬನ್ನು ಬಿತ್ತಿದಲ್ಲಿ ವರ್ಧನವಾಗಿ ಬೆಳೆದ ಬಳಿಕ ನರಿಯೆಂಬಂಥದು ಗುದ್ದುಗಳಲ್ಲಿ ಸೇರಿಕೊಂಡು ಸಂಜೆ ಮುಂಜಾನೆ ವೇಳೆಯಲ್ಲಿ ಬಂದು ಕಬ್ಬನ್ನು ತಿಂದು ವೇಳೆಗಳಕೊಂಡು ಹೋಗುತ್ತಿಹುದು. ಕಬ್ಬನೆಲ್ಲವ ಕಡಿದು ತೋಟವೆಲ್ಲ ಹಾಳಾಗಿ ಹೋಗಿದ್ದಲ್ಲಿ ನರಿಯೆಂಬಂಥದು ಎಂದಿನ ಹಾಂಗೆ ಬಂದು ಕಬ್ಬನ್ನು ನೊಡಿದಲ್ಲಿ ಕಬ್ಬಿಲ್ಲದೆ ಇದ್ದಲ್ಲಿ ಆಗ ಏಡಿ ಕಪ್ಪೆ ಮೀನುಗಳನು ತಿಂಬೋದಕ್ಕೆ ಇಚ್ಛೆಬಾರದೆ ಆವಾಗ ಕಬ್ಬು ಬಿತ್ತ್ಯಾರೋ ಆವಾಗ ವರ್ಧನವಾಗಿ ಬೆಳೆದೀತೋ ಆವಾಗ ತಿಂದೇನೋ ಎಂದು ಅದೇ ವ್ಯಾಕುಲದೊಡನೆ ಕೂಡಿರ್ಪುದಲ್ಲದೆ ಕಬ್ಬನ್ನು ಮರೆತು ಬಿಟ್ಟಿತ್ತೆ? ಬಿಡಲರಿಯದು. ಹಾಂಗೆ ಒಬ್ಬ ಭಕ್ತನೇನಾದರೂ ಸಮಯಾಚಾರಕ್ಕೆ ಜಂಗಮಮೂರ್ತಿಗಳನು ಕಟ್ಟುಮಾಡಿಕೊಂಡು ಆಗಾಗ್ಗೆ ಸೂಚನೆ ಬಿನ್ನಹ ಗಟ್ಟಿ ಬಿನ್ನಹವನ್ನು ಮಾಡುತ್ತ ಮೃಷ್ಟಾನ್ನ ಪದಾರ್ಥಂಗಳನು ಎಡೆಮಾಡಿ ಸಂತುಷ್ಟಿಬಡಿಸುತ್ತ ಶಾಲು ಸೇಕಲಾತಿ ಸಣ್ಣ ಕಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟಮಂಚ ಲೇಪು [ಸುಪ್ಪ]ತ್ತಿಗೆಯ ಮೇಲೆ ಮಲಗಿಸಿಕೊಂಡು ಪರಿಣಾಮದಲ್ಲಿ ಹೀಂಗಿರುತಿರ್ದ ಹಾಂಗೆ ಆ ಭಕ್ತನಿಗೆ ಕಂಟಕಾದಿಗಳ ಬಂದಲ್ಲಿ ಆ ಭಕ್ತನೊತ್ತಟ್ಟಿಗೆ ಹೋಗಿ ಆ ಭಕ್ತನ ಹೆಂಡರು ಮಕ್ಕಳು ಒತ್ತಟ್ಟಿಗೆ ಹೋಗಿ ಆ ಅಯ್ಯನವರು ಒತ್ತಟ್ಟಿಗೆ ಬಂದು ಹಾಳುಗುಡಿ ಬೀಳುಮಂಟಪದಲ್ಲಿ

ಹಾಸಿಕೊಂಡಿದ್ದಲ್ಲಿ ಬುಡಕ ಧೂಳುದುಮ್ಮ ತೆಗ್ಗು ತೆವರು ಹಂಚುಹರಳು ಮೊದಲಾದವು ಒತ್ತಿದಲ್ಲಿ ಅಲ್ಲಿ ಪಟ್ಟಮಂಚ ಲೇಪು ಸುಪ್ಪತ್ತಿಗೆಯ ಮೇಲೆ ಪವಡಿಸಿಕೊಂಡವರು ಇಲ್ಲಿ ಮಲಗುವದಕ್ಕೆ ಇಚ್ಛೈಬಾರದು, ಇಲ್ಲಿ ಭಕ್ತರ ಮನೆಗೆ ಲಿಂಗಾರ್ಪಿತ ಭಿಕ್ಷಕ್ಕೆ ಹೋದಲ್ಲಿ ನುಚ್ಚು ಕಚ್ಚು ಮೊದಲಾದ ಶುಷ್ಕನ್ನು ಪಾನಂಗಳನು ನೀಡಿದಲ್ಲಿ ಅಲ್ಲಿ ಮೃಷ್ಟಾನ್ನ ಪದಾರ್ಥಂಗಳು ಸಲಿಸಿದವರು ಇದನು ಸಲಿಸುವದಕ್ಕೆ ಇಚ್ಛೈಬಾರದು. ಇಲ್ಲಿ ದೊರಗುವಸ್ತ್ರ ಕಪ್ಪಟಂಗಳನು ಕೊಟ್ಟಲ್ಲಿ ಅಲ್ಲಿ ದಿವ್ಯ ದುಕೂಲಂಗಳನು ಹೊದ್ದುಕೊಂಡಂಥವರು ಇದನು ಹೊರುವುದಕ್ಕೆ ಇಚ್ಛೈಬಾರದೆ ಆವಾಗ ನನ್ನ ಭಕ್ತ ಗ್ರಾಮಕ್ಕೆ ಹೊಂದಿಕೆಯಾದಾನೋ ಆವಾಗ ತನ್ನ ಹೆಂಡಿರು ಮಕ್ಕಳ ಕರಸಿಕೊಂಡಾನೋ ಆವಾಗ ನನ್ನ ಭಕ್ತನ ಭಕ್ತಿಗೆ ಹೋಗಿ ಪರಿಣಾಮದಲ್ಲಿದ್ದೇನೋ ಎಂದು ಹೋದಂಥ ಇಚ್ಛೈಸದಿರಾ, ಮನವೆ– ಎಲೆ ಆಶಾಲಾಂಛನಿಯ ಹೀನ ಮನಸ್ಸೇ.

ಗಗನವ–ಆಕಾಶವ, ಅಡರಿದ–ಆರೋಹಣವಾದ, ಕಾಗೆಯಂತೆ–ವಾಯಸನ ಹಾಂಗೆ, ದೆಸೆದೆಸೆಗೆ–ಪೂರ್ವಕ್ಕೆ ಹೋಗಲೋ ಪಶ್ಚಿಮಕ್ಕೆ ಹೋಗಲೋ ಉತ್ತರಕ್ಕೆ ಹೋಗಲೋ ದಕ್ಷಿಣಕ್ಕೆ ಹೋಗಲೋ ಎಂದು ದಿಕ್ಕುದಿಕ್ಕಿಗೆ ಹಂಬಲಿಸುತ್ತಿಹುದೆಂಬ ಹಾಂಗೆ, ಗಗನವ–ಹೃದಯಾಕಾಶವನ್ನು, ಅಡರಿದ–[೧]"ಏರು ಆರೋಹಣೇ" ಯೆಂದು[೧] ಆರೋಹಣವಾದ, ಕಾಗೆಯಂತೆ–ಆಶಾಲಾಂಛನಿಯ ಹಾಂಗೆ, ದೆಸೆದೆಸೆಗೆ ಹಂಬಲಿಸದಿರಾ–ಬೇರಾರ ಇಂದ್ರಿಯ ವಿಷಯ ಪ್ರಪಂಚದೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋಗದಿರಾ, ಮನವೆ–ಎಲೆ ಚಿತ್ತವೆ. ಕೂಡಲಸಂಗನ ಶರಣರ–ಜಂಗಮಮೂರ್ತಿಗಳ, ಕಂಡು ನೋಡಿ, ಲಿಂಗವೆಂದು ನಂಬು ಕಂಡಾ–ಇವರೆ ಸಾಕ್ಷಾತ್ಶಿವ ಸ್ವರೂಪರೆಂದು ವಿಶ್ವಾಸಿಸು ಕಂಡಾ, ಮನವೆ–ಎಲೆ ಚಿತ್ತವೆ.

..........................

೧–೧ವಲ್ಲಾ (ಗ). ೨–೨ x (ಗ)

II- - - - - - - - - - - - - - - - - - - - - - - - - - - - - - - - - - - - - - - -

1–1 ನಂ (ಟ,ಜ). 2–2 ಕ್ಕೆಳ (ಚ,ಜ).

..........................

ಬೆಲ್ಲವ ತಿಂದ ಕೋಡಗನಂತೆ ಸಿಹಿಯ ನೆನೆಯದಿರಾ ಮನವೆ–ಗುಡವನು ಭಕ್ಷಿಸಿದ ಮರ್ಕಟನ ಹಾಂಗೆ ಷಡ್ರುಚಿ ಸ್ವಾದುವನಿಚ್ಛೈಸದಿರಾ ಎಲೆ ಮಾನಸವೆ. ಕಬ್ಬ ತಿಂದ ನರಿಯಂತೆ ಹಿಂದಕ್ಕೆಳಸದಿರಾ ಮನವೆ–ಇಕ್ಷುದಂಡವನು ಭಕ್ಷಿಸಿದ ಜಂಬುಕನ ಹಾಂಗೆ ಭಿನ್ನಭಕ್ತಿಯೆಂಬ ದಂಡಕಿಚ್ಛೈಸದಿರಾ ಮಾನಸವೆ. ಗಗನವನಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ ಮನವೆ–ಆಕಾಶವನೇರಿದ ವಾಯಸನ ಹಾಂಗೆ ನಾನಾ ಮತಾಂತರಜ್ಞಾನಶಾಸ್ತ್ರ ಕಿಚ್ಛೈಸದಿರಾ ಮಾನಸವೆ. ಮುಂದಕ್ಕೆ ಕಾಣಬಂದರ್ಥ.

IV- - - - - - - - - - - - - - - - - - - - - - - - - - - - - - - - - - - - - - - -

2–2 ಕ್ಕೆಳ (ತ). 3–3 ದೆ ( ತ). 4–4 x (ತ).

..........................

ಎಲ್ಲಾ ವಿಕಾರವ ಬಿಟ್ಟು ಜಂಗಮವನೆ ನಂಬೆಂಬುದೀ ವಚನದರ್ಥ.

---

೨೭೬

**ಒಡೆಯರ ಕಂಡಡೆ ಕಳ್ಳನಾಗದಿರು ಮನವೆ, ಭವದ [1]ಬಾಧೆ[1]ಯ ತಪ್ಪಿಸಿ[2]ಕೊಂಬುವಡೆ[2] ನೀನು ನಿಯತನಾಗಿ, ಭಯಭರಿತನಾಗಿ ಅಹಂಕಾರಿಯಾಗದೆ ಶರಣೆನ್ನು, ಮನವೆ. ಕೂಡಲಸಂಗನ ಶರಣರಲ್ಲಿ ಭಕ್ತಿಯ [3]ನೋನು[3]ವಡೆ ಕಿಂಕಲನಾಗಿ ಬದುಕು ಮನವೆ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಒಡೆಯರ ಕಂಡಡೆ–ಅರ್ಥಪ್ರಾಣಾಭಿಮಾನಂಗಳಿಗೆ ಕರ್ತೃವಾದ ಜಂಗಮಮೂರ್ತಿಗಳ ದರುಶನವಾದರೆ, ಕಳ್ಳನಾಗದಿರು ಮನವೆ–ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟದಿರೆಲೆ ಚಿತ್ತವೆ, ಭವದ–ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ತ್ಯವು, ಬಾಧೆಯ–ಕಾಲಕಾಮರ ಶಿಕ್ಷಾಬಂಧನಂಗಳನು, ತಪ್ಪಿಸಿಕೊಂಬುವಡೆ–ತೊಲಗಿಸಿಕೊಳ್ಳಬೇಕಾದರೆ, ನೀನು ನಿಯತನಾಗಿ–ನೀನು ಯಥಾರ್ಥನಾಗಿ, ಭಯ ಭರಿತನಾಗಿ–ಭಯಭಕ್ತಿ ಭೃತ್ಯಾಚಾರದಲ್ಲಿ ತುಂಬಲ್ಪಟ್ಟಾತನಾಗಿ, ಅಹಂಕಾರಿಯಾಗದೆ–ನಾಹಂ ನಾಹಂ ಎಂಬ ಮೂಲಾಹಂಕಾರವುಳ್ಳಾತನಾಗದೆ, ಶರಣೆನ್ನು–ನಮಸ್ಕಾರವೆಂದು ನಮಸ್ಕರಿಸು, [ಮನವೆ–ಎಲೆ ಚಿತ್ತವೆ]. ಕೂಡಲಸಂಗನ ಶರಣರಲ್ಲಿ–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರಲ್ಲಿ, ಭಕ್ತಿಯ–ಶಿವಾದ್ವೈತ ಭಕ್ತಿಯನು, ನೋನುವಡೆ–ಹಡೆದುಕೊಳಬೇಕಾದರೆ, ಕಿಂಕಲನಾಗಿ–[ಚ]ಕಿತ ಹೃದಯವುಳ್ಳಾತನಾಗಿ, ಬದುಕು–ಕೃತಾರ್ಥನಾಗು, ಮನವೆ–ಎಲೆ ಚಿತ್ತವೆ.

IV- - - - - - - - - - - - - - - - - - - - - - - - - - - - - - - - - - - - - - - - - - - - -

1–1 ಭಾರಿ (ತ). 2–2 ಕೊಂಬಡೆ (ತ). 3–3 ನೊಲು (ತ).

..........................

ಲಿಂಗಜಂಗಮದಲ್ಲಿ ತಪ್ಪಿದರೆ ಜನನ ಮರಣ; ಲಿಂಗಜಂಗಮದಲ್ಲಿ ತಪ್ಪದಿದ್ದರೆ ಜನನ ಮರಣವಿಲ್ಲ. ಲಿಂಗಜಂಗಮದಲ್ಲಿ ಭಕ್ತಿಯಾದರೆ ನಿತ್ಯವಹನೆಂಬುದೀ ವಚನದರ್ಥ.

---

೨೭೭

**ಕೋ[1]ಟಾ[1]ನುಕೋಟಿ ಜಪವ ಮಾಡಿ ಕೋಟಲೆಗೊಳ್ಳ[2]ಲೇಕೆ[2] ಮನವೆ? ಕಿಂಚಿದ್ಗೀತ ಒಂದನಂತಕೋಟಿ ಜಪ [3]ದ ಫಲ.[3] ಜಪವೆಂಬುದೇ[4]ನೋ[4] ಮನವೆ? ಕೂಡಲಸಂಗನ ಶರಣರ ಕಂಡು ಆಡಿ ಹಾಡಿ ಬದುಕು ಮನವೆ?**

I-----------------------------------------------------------------------------

ಕೋಟಾನುಕೋಟಿ ಜಪವಮಾಡಿ-ಪವಳ ಪದ್ಮಾಕ್ಷಿ ಪುತ್ರಜೀವಿ ಶಂಖ ಮೌಕ್ತಿಕ ಕುಶಗ್ರಂಥಿ ಮೊದಲಾದವನು ಸರಗೊಳಿಸಿ ನೂರು ಇನ್ನೂರು ಮುನ್ನೂರು ಸಾವಿರ ಹತ್ತುಸಾವಿರ ಹನ್ನೆರಡು ಸಾವಿರ ಜಪವ ಮಾಡಿ, ಕೋಟಲೆಗೊಳ್ಳಲೇಕೆ-ಆಯಾಸಂಬಡುವಂಥದೇನು ಕಾರಣಕ್ಕೆ, ಮನವೆ? – ಎಲೆ ಚಿತ್ತವೆ ? ಕಿಂಚಿದ್ಗೀತ ಒಂದನಂತಕೋಟಿ ಜಪದ ಫಲ-ಕಿಂಚಿದ್ದಳ ಚುಳಕೋದಕಂಗಳಿಂದೆ ಲಿಂಗಪೂಜೆಯ ಮಾಡಿ ಕಂದ ವೃತ್ತ ಗದ್ಯ ಪದ್ಯ ಪ್ರಬಂಧಗಳಿಂದ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿದರೆ ಅದೇ ಒಂದನಂತಕೋಟಿ ಜಪದ ಫಲಂಗಳಾಗಿ ಅಳವಟ್ಟಿಪ್ಪುದು.

ಜಪವೆಂಬುದೇನೋ ಮನವೆ?-ಜಪಂಗಳನ್ನು ಅನುಗೆಯ್ಯಬೇಕೆಂಬಂಥದೇನೋ ಚಿತ್ತವೆ? ಕೂಡಲಸಂಗನ ಶರಣರ-ಜಂಗಮಮೂರ್ತಿಗಳ, ಕಂಡು ನೋಡಿ, ಆಡಿ-ಸೂಚನೆ ಬಿನ್ನಹ ಮಾಡೋದಕ್ಕೊಂದು ವೇಳೆ ಗಟ್ಟಿ ಬಿನ್ನಹವನ್ನು ಮಾಡುವುದಕ್ಕೊಂದು ವೇಳೆ ಕರಕೊಂಡು ಬರುವುದಕ್ಕೊಂದು ವೇಳೆ ಅಗ್ಗಣಿಯ ಕೊಡುವುದಕ್ಕೊಂದು ವೇಳೆ ಹಾವುಗೆಯ ಕೊಡುವುದಕ್ಕೊಂದು ವೇಳೆ ಹಸ್ತಲಾಘವ ಕೊಡುವುದಕ್ಕೊಂದು ವೇಳೆ ಪದಾರ್ಥವ ನೀಡುವುದಕ್ಕೊಂದು ವೇಳೆ ಶರಣಾರ್ಥಿಯೆಂಬುದಕ್ಕೊಂದು ವೇಳೆ ಹೀಂಗೆ ಹಿಂದಕ್ಕೆ ಮುಂದಕ್ಕೆ ತೊನೆತೊನೆದಾಡಿ, ಹಾಡಿ- ಅವರು ಸಲಿಸಿಯಾದ ಬಳಿಕ ವೀಳ್ಯವ ಮಡಿಚಿಕೊಡುತ್ತ "ಜಂಗಮೋ ಜಗದಾರಾಧ್ಯ ಃ। ಜಂಗಮಶ್ಚ ಜಗತ್ಪತಿಃ। ಜಂಗಮಸ್ತು ಜಗತ್ಪೂಜ್ಯಃ । ಜಗತ್ಪಾವನ ಜಂಗಮಃ।" ಎಂದು ಇವರು ಆದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು, ಅನಾದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು ಭಕ್ತವತ್ಸಲರು ಮುಕ್ತಿಪ್ರದಾಯಕರು ನಿರಂಜನಗಣಾಧೀಶ್ವರನ ಸಾಂಪ್ರದಾಯಕರೆ ಇವರೆಂದು ಜಂಗಮದ ಬಿರುದಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿ, ಬದುಕು-ಕೃತಾರ್ಥನಾಗು, ಮನವೆ?-ಎಲೆ ಚಿತ್ತವೆ?

IV------------------------------------------------------------------

1-1 ಟ್ಯ (ತ). 2-2 ಲದೇಕೆ (ತ). 3-3 x (ತ). 4-4 ಕೆ (ತ).

.........................................

ಮಂತ್ರಾತೀತವಾದ ಪರಬ್ರಹ್ಮವಾದ ಶರಣರ ಆಡಿ ಹಾಡಿ ಬದುಕು ಮನವೆಂಬುದೀ ವಚನದರ್ಥ.

---

೨೭೮

**ಮನವೆ, ನಿನ್ನ ಜನ್ಮದ ಪರಿಭವವ ಮಱೆದೆಯಲಾ. ಮನವೆ, ಲಿಂಗವ ನಂಬು ಕಂಡಾ. ಎಲೆ ಮನವೆ, ಜಂಗಮವ ನಂಬು ಕಂಡಾ. ಮನವೆ, ಕೂಡಲಸಂಗಮದೇವರ ಬಿಡದೆ ಬೆಂಬತ್ತು ಕಂಡಾ.**

I------------------------------------------------------------------

ಮನವೆ-ಎಲೆ ಚಿತ್ತವೆ, ನಿನ್ನ ಜನ್ಮದ-ನಿನ್ನ ಉತ್ಪತ್ಯದ, ಪರಿಭವವ-ಪರಿತಃ ಎಲ್ಲ ಎಡೆಯಲ್ಲಿ ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ಯವನ್ನು, ಮಱೆದೆಯಲಾ-ವಿಸ್ಮೃತಿಯನೈದಿಸಿಬಿಟ್ಟೆಯಲಾ, ಮನವೆ-

ಎಲೆ ಚಿತ್ತವೆ, ಲಿಂಗವ ನಂಬು ಕಂಡಾ–ಗುರುಮುಖದಿಂದ ಬಂದಂಥ ಇಷ್ಟಮಹಾಲಿಂಗವೇ ಪ್ರಾಣ, ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು. ಈ ಲಿಂಗ ಹೋದರೆ ಈ ಲಿಂಗದೊಡನೆ ಪ್ರಾಣವ ಕೊಟ್ಟೇನು. ಈ ಲಿಂಗವಲ್ಲದನ್ಯ ದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿಸಿ ಲಿಂಗಪೂಜೆಯನ್ನು ಮಾಡಿ ಲಿಂಗದ ಕರುಣವನ್ನು ಹಡೆ ಕಂಡಾ, ಎಲೆ ಮನವೆ–ಎಲೆ ಚಿತ್ತವೆ. ಜಂಗಮವ ನಂಬು ಕಂಡಾ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯರೂಪವಾದ ಜಂಗಮವೇ ಸಾಕ್ಷಾತ್ಶಿವಸ್ವರೂಪವೆಂದು ವಿಶ್ವಾಸಿಸಿ ತನುಮನಧನಂಗಳನು ಕೊಟ್ಟು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆ ಕಂಡಾ, ಮನವೆ–ಎಲೆ ಚಿತ್ತವೆ. ಕೂಡಲಸಂಗಮದೇವರ – ಪರಶಿವಲಿಂಗವನು, ಬಿಡದೆ–ವಿಸರ್ಜಿಸದೆ, ಬೆಂಬತ್ತು ಕಂಡಾ–ಹೀಂಗೆ ಲಿಂಗಪೂಜೆ ಜಂಗಮದಾಸೋಹವ ಮಾಡಿ ಬೆಂಬಳಿವಿಡಿದು ಕೂಡು ಕಂಡಾ.

IV --------------------------------------------------------------------------------

ಜನನ ಮರಣವ ಗೆಲುವರೆ ಸತ್ತುಚಿತ್ತಾನಂದವಾದ ಗುರುಲಿಂಗಜಂಗಮವ ನಂಬೆಂಬುದೀ ವಚನದರ್ಥ.

---

೨೭೯

**ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ, ಬಜಿದೆ ಧೃತಿಗೆಡಬೇಡ ಮನವೆ! ಆರನಾದಡೆಯೂ ಬೇಡಿ ಬೇಡಿ ಬಜಿದೆ ಧೃತಿಗೆಡಬೇಡ ಮನವೆ! ಕೂಡಲಸಂಗಮದೇವನಲ್ಲದೆ ಆರ ಬೇಡಿದಡಿಲ್ಲ, ಮನವೆ!**

I--------------------------------------------------------------------------------

ಸುರರ ಬೇಡಿದಡಿಲ್ಲ: ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡಬೇಕಾದರೆ ಪರಮೇಶ್ವರನೇ ಕರುಣಿಸಿ ಕೊಟ್ಟಾನಲ್ಲದೆ, ಸುರರ ಬೇಡಿದರಿಲ್ಲ–ಮೂವತ್ತುಮೂರು ಕೋಟಿ ದೇವತೆಗಳನು ಕೇಳಿದರೆ ಕರುಣಿಸಿ ಕೊಟ್ಟಾರೆ? ಕೊಡಲರಿಯರು. ನರರ ಬೇಡಿದರಿಲ್ಲ–ಬಹುಮುಖದಾತ್ಮರುಗಳ ಕೇಳಿದರೆ ಕರುಣಿಸಿ ಕೊಟ್ಟಾರೆ? ಕೊಡಲರಿಯರು. ಬಜಿದೆ–ಸುಮ್ಮನೆ, ಧೃತಿಗೆಡಬೇಡ–ಸಹಜಜ್ಞಾನಸತ್ವಗುಂದಲಿಬೇಡ, ಮನವೆ–ಎಲೆ ಚಿತ್ತವೆ. ಆರನಾದಡೆಯೂ–ನರಸುರಾದಿಗಳೊಳಗೊರ್ವರನಾದರೂ, ಬೇಡಿ ಬೇಡಿ–ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡಿರೆಂದು ಯಾಚಿಸಿ ಯಾಚಿಸಿ, ಬಜಿದೆ–ಸುಮ್ಮನೆ, ಧೃತಿಗೆಡಬೇಡ–ಸಹಜಜ್ಞಾನಸತ್ವಗುಂದಲಿಬೇಡವು, ಮನವೆ–ಎಲೆ ಚಿತ್ತವೆ. ಕೂಡಲಸಂಗಮದೇವನಲ್ಲದೆ–ಪರಶಿವಲಿಂಗದೇವನಲ್ಲದೆ, ಆರ ಬೇಡಿದಡಿಲ್ಲ–ನಿನಗೇನಾದರೂ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿ ಕೊಡಬೇಕಾದರೆ ಪರಮೇಶ್ವರನೇ ಕರುಣಿಸಿಕೊಟ್ಟಾನಲ್ಲದೆ ನರಸುರಾದಿಗಳೊಳಗೊರ್ವರನಾದರೂ ಬೇಡಿದರೆ ಕೊಟ್ಟಾರೆ? ಕೊಡಲರಿಯರು, ಮನವೆ–ಎಲೆ ಚಿತ್ತವೆ.

IV- - - - - - - - - - - - - - - - - - - - - - - - - - - - - - - - - - - - - - - -

ಪರಂಜ್ಯೋತಿ ಲಿಂಗವಲ್ಲದೆ, ನರರು ಸುರರಿಗೆ ತಮಗಿಲ್ಲ ಇದಿರಿಗೇನ ಕೊಡುವರೆಂಬುದೀ ವಚನದರ್ಥ.

---

೨೮೦

**ಆಡಿ ಅಳುಪದಿರಾ, ಲೇಸುಮಾಡಿ ಮಱುಗದಿರಾ, ಎಲೆ ಮನವೆ! ಕೂಡಿ ತಪ್ಪದಿರಾ, ನಿನ್ನ ಬೇಡಿದವರಿಗೆ ಇಲ್ಲೆನ್ನದಿರು ಕಂಡಾ, ನಾಡ ಮಾತನಾಡಬೇಡ. ಸೆಱಗೊಡ್ಡಿ ಬೇಡುವೆ ಕೂಡಲಸಂಗನ ಶರಣರ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಆಡಿ ಅಳುಪದಿರಾ : ಆಡಿ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡು, ಅಳುಪದಿರಾ–ತನುಮನಧನಂಗಳನು ವಂಚಿಸಿಕೊಂಡು ಭಕ್ತಮಾಹೇಶ್ವರರ ಮಧ್ಯದಲ್ಲಿ ನಾನೆಲ್ಲಿ ಹೇಳಿದೆ? ಇಲ್ಲ ಎಂದು ಸಟೆಯನಾಡಿ ಹಿಮ್ಮೆಟ್ಟದಿರಾ, ಲೇಸುಮಾಡಿ–ತೂಳಮೇಳದಿಂದ ಕೊಟ್ಟು ಭಕ್ತಿಯ ಮಾಡಿ, ಮಱುಗದಿರಾ–ಪದಾರ್ಥವೆಲ್ಲಾ ಚಾಗಿಯಾಗಿ ಹೋಯಿತ್ತೆಂದು ಚಿಂತಿಸದಿರಾ, ಎಲೆ ಮನವೆ–ಎಲೆ ಚಿತ್ತವೆ. ಕೂಡಿ–ನಿರ್ವಂಚಕ ಸದ್ಭಕ್ತರ ಭಕ್ತಿಯಲ್ಲಿ ಬೆರೆದು, ತಪ್ಪದಿರಾ–ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟದಿರಾ, ನಿನ್ನ ಬೇಡಿದವರಿಗೆ–ನೀನೊಂದು ವಸ್ತುವನ್ನು ಕೊಡೆಂದು ಕೇಳಿದವರಿಗೆ. ಇಲ್ಲೆನ್ನದಿರು ಕಂಡಾ–ಅಷ್ಟರೊಳಗಷ್ಟನಾದರೂ ಕೊಟ್ಟು ಸಂತೋಷಬಡಿಸಬೇಕಲ್ಲದೆ ಇಲ್ಲ ಇಲ್ಲವೆಂದು ಆಚೆಗೆ ದಾಂಟಿಸಿಬಿಡದಿರು ಕಂಡಾ.

ನಾಡಮಾತನಾಡಬೇಡ–ನಾವು "ಸಕಲಾಗಮಶಾಸ್ತ್ರ" ಪುರಾಣಂಗಳ ಬಲ್ಲೆವೆಂದು ಕಂಡಕಂಡವರ ಮುಂದೆ ವಾಗ್ಜಾಲವನು ಹೇಳಿಕೊಂಡು ಶೋಭಿಸಬೇಡ, ಕೂಡಲಸಂಗನ ಶರಣರ–ಜಂಗಮಮೂರ್ತಿಗಳನು, ಸೆಱಗೊಡ್ಡಿ–ನಾನೇನಾದರೂ ಫಲಪದಮುಕ್ತಿಯನ್ನು ಬೇಡೋದಿಲ್ಲ; ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥ ಇದೇ ಒಂದಿಷ್ಟಾರ್ಥಸಿದ್ಧಿಯನೆ ಕರುಣಿಸಿಕೊಡಿರೆಂದು ಆಚಾರಾಂಗವೆಂಬ ಸೆರಗಾಂತು, ಬೇಡುವೆ–ಯಾಚಿಸುವೆನು.

..................................................

೧–೧ ಸಕಲ ವೇದಶಾಸ್ತ್ರಾಗಮ (ಗ).

---

೨೮೧

**ಹೃದಯದಿ ಕತ್ತರಿ ತುದಿನಾಲಿಗೆ ಬೆಲ್ಲಂಬೋ ! ಆಡಿಹೆವೆಂಬೋ ಹಾಡಿಹೆವೆಂಬೋ! ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಹೆವೆಂಬೋ! ನಾನು ನಿನ್ನಂತೆ, ಮನವು ಮನದಂತೆ, ಕೂಡಲಸಂಗಮದೇವ ತಾನು ತನ್ನಂತೆ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಹೃದಯುದಿ ಕತ್ತರಿ-ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವುಂಟಾಗಿರ್ಪುದು, ತುದಿನಾಲಿಗೆ ಬೆಲ್ಲೆಂಬೋ-ರಸನೆಯ ತುದಿಯಲ್ಲಿ ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂಬ ಮಧುರೋಕ್ತವಾದ ಪ್ರಸಂಗವನಾಡುತ್ತಿಹನು. ಆಡಿಹೆವೆಂಬೋ-ಹಸ್ತದಲ್ಲಿ ಲಿಂಗವನು ಪಿಡಿದುಕೊಂಡು ಎಡಕ್ಕೆ ಬಲಕ್ಕೆ ಹಿಂದಕ್ಕೆ ಮುಂದಕ್ಕೆ ತೊನೆ ತೊನೆದಾಡಿಹೆನೆಂದು ಹೇಳಿಕೊಂಬೆನು. ಹಾಡಿಹೆವೆಂಬೋ-ಕಂದವೃತ್ತಗದ್ಯಪದ್ಯಪ್ರಬಂಧಗಳಿಂದ ಆ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿಹೆನೆಂದು ಹೇಳುವೆನು. ನಿಚ್ಚನಿಚ್ಚ-ದಿನದಿನಂಪ್ರತಿಯಲ್ಲಿ, ಶಿವರಾತ್ರಿಯ ಮಡಿಹೆವಂಬೋ ಶಿವರಾತ್ರಿಯ ಸಂಕಣ್ಣಯ್ಯಗಳ ಹಾಂಗೆ ಬೇಡರ ಕಣ್ಣಪ್ಪಯ್ಯಗಳ ಹಾಂಗೆ ಏಕಾಗ್ರಚಿತ್ತದಿಂದೆಚ್ಚತ್ತು ಲಿಂಗಪೂಜೆಯ ಮಾಡಿಹೆನೆಂದು ಹೇಳುವೆನು.

ನಾನು ನನ್ನಂತೆ-ಎನ್ನ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿಪ್ಪೆನು. ಮನವು ಮನದಂತೆ- ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವೇ ಉಂಟಾಗಿರ್ಪುದು. ಕೂಡಲಸಂಗಮದೇವ-ಪರಶಿವಲಿಂಗವು, ತಾನು ತನ್ನಂತೆ-ಆ ಲಿಂಗವೇನಾದರೂ ಭಕ್ತನ ಪೂಜೆಯನ್ನು ಕೈಕೊಂಡು ಆ ಪೂಜೆಗೆ ತಕ್ಕಷ್ಟು ಕಿಂಚಿನ್ಮಾತ್ರ ಫಲಪದಂಗಳನು ಕರುಣಿಸಿಕೊಟ್ಟು ಸುಗ್ಗಿ ಬೆಳವನ ಹಾಂಗೆ ತನ್ನ ತಪ್ಪಿಸಿಕೊಂಡು ವಿಲಕ್ಷಣವಾಗಿ ಹೋಗುವನಲ್ಲದೆ ಆ ಭಕ್ತನ ಹಾಂಗೆ ಭವದಲ್ಲಿ ಹುಟ್ಟಿಬಂದು ದುಃಖಬಟ್ಟಿತ್ತೆ? ಬಡಲರಿಯದು.

---

೨೮೨

**ಒಳ್ಳೆಯ ಮೈಲಾರನೊಳಗೆಲ್ಲ ಸಣಬು, ಹೊಱಗಣ ಬಣ್ಣ ಕರ ಲೇಸಾಯಿತ್ತಯ್ಯಾ ! ಶ್ವಾನನ ನಿದ್ರೆ, ಅಜ್ಞಾನಿಯ ತಪದಂತಾಯಿತ್ತಯ್ಯಾ ಎನ್ನ ಮತಿ, ಕೂಡಲಸಂಗಮದೇವಾ.**

I------------------------------------------------------------------------

ಒಳ್ಳೆಯ ಮೈಲಾರನ ಇಂಪಾಗಿ ಸೊಂಪಾಗಿ ನುಂಪಾಗಿ "ತಂಪಾಗಿ" ರುವಂಥ ಮಣ್ಣು ಮೈಲಾರನ, ಒಳಗೆಲ್ಲ-ಹೊಟ್ಟೆಯೊಳಗೆಲ್ಲ, ಸಣಬು-ಗೊಬ್ಬರ "ಮುಂಡಿ" ನಾರೇ ತುಂಬಿರ್ಪುದು. ಹೊಱಗಣ ಬಣ್ಣ ಕರಲೇಸಾಯಿತ್ತಯ್ಯಾ-ಬಾಹ್ಯದಲ್ಲಿ ಹಳದಿ ಹಸಿರು ಬಿಳಿದು ಕೆಂಪು ಕಪ್ಪು ಮೊದಲಾದ ಪಂಚವರ್ಣಿಗೆ ಬಣ್ಣವೆತ್ತಿರುವಂಥದು ನೋಡುವರ ಕಣ್ಣಿಗೆ ಬಹು ಪ್ರೀತಿಯಾಗಿರ್ಪುದು. ಹಾಂಗೆ, ಒಳ್ಳೆಯ ಮೈಲಾರನ-ಉಪಾಧಿಕನ ಒಳಗೆಲ್ಲ ಸಣಬು-ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವೇ ಉಂಟಾಗಿರ್ಪುದು. ಹೊಱಗಣ ಬಣ್ಣ ಕರಲೇಸಾಯಿತ್ತಯ್ಯಾ-ಬಹಿರಂಗದಲ್ಲಿ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿರುವಂಥ ಉಪಾಧಿಕನ ಇರಸ್ಥಿತಿಯೂ ಆ ಮಣ್ಣು ಮೈಲಾರನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಶ್ವಾನನ ನಿದ್ರೆ-ಶುನಿಯೆಂಬಂಥದು ಬೂದಿಗುಂಡಿಗೆಯಲ್ಲಿ ಮಲಗಿರುವಾಗ ನಿದ್ರೆ ಬಂದು ತನ್ನ ಜಾತಿಸ್ಮರತ್ವ ತಲೆದೋರಿ ನಾನು ಮೊದಲ ಜನ್ಮದಲ್ಲಿ ರಾಜನಾಗಿರ್ದೆ ಮಂತ್ರಿಯಾಗಿರ್ದೆ ಅಷ್ಟಭೋಗ ಅಷ್ಟಮಹದೈಶ್ವರ್ಯವನ್ನು ಪಡೆದನುಭವಿಸಿಕೊಂಡಿರ್ದೆನು. ನಾನು ಮಾಡಬಾರದ ಪಾಪವ ಮಾಡಿದ ಕಾರಣ ಈಗ ಶುನಿಜನ್ಮ ಪ್ರಾಪ್ತಿಯಾಯಿತ್ತು. ಇನ್ನಾದರೂ ಒಬ್ಬರ ಕಚ್ಚಬಾರದು ಬೊಗಳಬಾರದು ಪಿಸಿತಾಹಾರವನ್ನು ತಿನ್ನಬಾರದು. ಪುಣ್ಯತೀರ್ಥ ಪುಣ್ಯಕ್ಷೇತ್ರಂಗಳಲ್ಲಾಗಲಿ ಚೌಕಿಮಠಂಗಳಲ್ಲಾಗಲಿ ಭಕ್ತರ ಗೃಹವನ್ನಾಗಲಿ ಆಶ್ರಯಿಸಿಕೊಂಡು ಅವರು ಹಾಕಿದಂಥ ಅನ್ನವ ತಿಂದುಕೊಂಡಿರ್ದು ಈ ಶುನಿಜನ್ಮವನ್ನು ಹಿಂಗಿಕೊಳಬೇಕೆಂದು ಧ್ಯಾನಿಸುತ್ತಿಹುದು. ಆಮೇಲೆ ನಿದ್ರೆತಿಳಿದೆಚ್ಚತ್ತು ಆ ಬೂದಿಗುಂಡಿಗೆಲಿಂದೆದ್ದು ಮುಂದಕ್ಕೆ ಮೂರು ಹೆಜ್ಜೆಯ ನಡೆದುಹೋಗಿ ಎರಡು ಕಿವಿಗಳನು ಲಟಪಟನೆ ಜಾಡಿಸಿಕೊಂಡಲ್ಲಿ ಹಿಂದಣ ಜಾತಿಸ್ಮರತ್ವದ ಎಚ್ಚರವನ್ನು ಮರೆದು ಮತ್ತೂ ಒಬ್ಬರ ಕಚ್ಚಬೇಕು ಬೊಗಳಬೇಕು ಪಿಸಿತಾಹಾರವನ್ನು ತಿನಬೇಕೆಂದು ಧ್ಯಾನಿಸುತ್ತಿಹುದು. ಹಾಂಗೆ; ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರು ಪೇಟೆಮನೆಪುರಪಟ್ಟಣಸ್ಥಾನಂಗಳಲ್ಲಿ ಹೋಗಿ ಚೌಕೀಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನ್ನು ಮಾಡುತ್ತಿರ್ದಲ್ಲಿ ಅಲ್ಲಿಗೊಬ್ಬ ಉಪಾಧಿಕನು ಬಂದು ಅವರ ಶಿವಾನುಭಾವವನ್ನು[೩] ಬೆಸಗೊಂಡು ಕೇಳಿದಲ್ಲಿ ಸ್ವಾಮೀ ಇಷ್ಟು ದಿವಸಂತೂ ತನುಮನಧನಂಗಳನು ವಂಚಿಸಿಕೊಂಡದ್ದು ಹೋಗಲಿ. ಇನ್ನು ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡು ಹೋಗಿ ಮತ್ತೆ ಎಂದಿನ ಹಾಂಗೆ ತನುಮನಧನಂಗಳನು ವಂಚಿಸಿಕೊಂಬಂಥ ಉಪಾಧಿಕನ ಇರಸ್ಥಿತಿಯೂ ಆ ಶ್ವಾನನ ನಿದ್ರೆಯ ಇರಸ್ಥಿತಿಯೂ ಒಂದೇಯಾಗಿರ್ಪುದು. ಅಜ್ಞಾನಿಯ ತಪದಂತೆ-ಜ್ಞಾನಿಯಾದ ಪುರುಷನು ಊರನ್ನು ತೊರೆದು ಘೋರಾರಣ್ಯಕ್ಕೆ ಹೋಗಿ ಫಳಾಹಾರ ಜಲಾಹಾರ ಪರ್ಣಾಹಾರ ಪವನಾಹಾರ ಶಿಲಾಚೂರ್ಣ ಉಕ್ಕಿನಚೂರ್ಣ ಮೊದಲಾದವನ್ನು ಸೇವಿಸಿ ಕೋಡಗಲ್ಲ ಮೇಲೆ ಪಂಚಾಗ್ನಿಗಳ ಮಧ್ಯದಲ್ಲಿ ಏಕಪಾದಸ್ಥಿತನಾಗಿ ನಿಂದು ಶಿವನಕುರಿತು ಉಗ್ರತಪಸ್ಸನಾಚರಿಸಿದರೆ ಶಿವನು ಪ್ರತ್ಯಕ್ಷನಾಗಿ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿ ಕೊಟ್ಟಾನಲ್ಲದೆ ಅಜ್ಞಾನಿ ಪುರುಷನೇನಾದರೂ ಎಡಬಲ ಗ್ರಾಮದಲ್ಲಿ ಹೆಂಡಿರು ಮಕ್ಕಳ ಮಡಗಿಕೊಂಡು ರಾತ್ರಿಕಾಲದಲ್ಲಿ ತಲೆಗೆ ಮಸಿಪಟ್ಟವನ್ನು ಕಟ್ಟಿಕೊಂಡು ಪೇಟೆಮನೆಪುರಪಟ್ಟಣಸ್ಥಾನಂಗಳಲ್ಲಿಗೆ ಹೋಗಿ [೪]ಮಳಿಗೆ[೪] ಮನೆಗಳ ಕನ್ನವಿಕ್ಕಿ ಮಲಗಿದಂಥವರ ಮೇಲೆ ಜವೆಬೂದಿಯನ್ನು ತಳಿದು ವಸ್ತ್ರ ಒಡವೆ ಆಭರಣಂಗಳನ್ನು ತೆಗೆದುಕೊಂಡು ಬಂದು ಮನೆಯೊಳಗೆ ಅಡಕಿ[೫] ಟ್ಟು ಬೆಳಗಾದಮೇಲೆ ಮೈಗೆ ಬೂದಿಯನ್ನು ಹೂಸಿಕೊಂಡು ಕೈಯಲ್ಲಿ ಕುಂಬಳ ಬುರುಡೆ ಮೈಯಲ್ಲಿ ಹುಲಿಚರ್ಮವನ್ನು ಹೊದ್ದುಕೊಂಡು ಪೇಟೆಮನೆಪುರಪಟ್ಟಣಸ್ಥಾನಂಗಳ ಬೀದಿಬಾಜಾರಕ್ಕೆ ಹೋಗಿ ಕಾಲು ಮೇಲು ತಲೆ ಕೆಳಗು ಮಾಡಿ ತಪಸ್ಸು ಮಾಡುತ್ತಿದ್ದಲ್ಲಿ ನೋಡಿದಂಥ ಆತ್ಮರುಗಳು ದುಡ್ಡು ದುಗ್ಗಾಣಿಯನ್ನು ಕೊಡುವುದಕ್ಕೆ ಹೋದಲ್ಲಿ ಅವ ಹಿಡಿಯದಿರುವ, ಅವನು ಹಿಡಿಯದೇ ಇದ್ದಲ್ಲಿ ಇವನು ಮಹಾತಪಸ್ವಿಯೆಂದು ಮಾನಮನ್ನಣೆಯನ್ನು ಮಾಡುವರು. ಹಾಂಗೆ; ಒಬ್ಬಾನೊಬ್ಬ ಆಶಾಲಾಂಛನಿಗೆ ಜ್ಞಾನಗುರು ಮೂರ್ತಿಗಳು ಶಿವಾನುಭಾವವನ್ನು ಬೋಧಿಸುವಲ್ಲಿ ಮಲತ್ರಯಂಗಳನ್ನು ಹಿಡಿಯಬಾರದೆಂದು

ಬೋಧಿಸುವರು. ಬೋಧಿಸಿದಲ್ಲಿ ಬಿಟ್ಟಿರುವನು. ಬಿಟ್ಟಿರುವಂಥ ಆಶಾಲಾಂಛನಿಗೆ ನೂರಾರು ಭಕ್ತರುಗಳೊಂದು [*ವಸ್ತು*] ವಸ್ನು ತೆಗೆದುಕೊಂಡು ಬಂದು ಪಾದವಿಡಿದಲ್ಲಿ ಬಿಟ್ಟಂಥ ಮಲತ್ರಯಂಗಳನ್ನು ಮರಳಿ ಹಿಡಿವುತ್ತೈದಾನೆ. [೪][ಛೀ, * ][೬] ಯೆಂದು ಅವರ ಮುಂದೆ ಧಿಃಕರಿಸಿಬಿಟ್ಟು ಮತ್ತೂ ಏಕಾಂತಸ್ಥಾನದಲ್ಲಿ ಮೂಷಕನ ಕಂಡ ಮಾರ್ಜಾಲನ ಹಾಂಗೆ ಅವಗ್ರಹಿಸಿ ಹಿಡಿದಂಥ ಆಶಾಲಾಂಛನಿಯ ಇರಸ್ಥಿತಿಯೂ ಅಜ್ಞಾನಿಯ ತಪದ ಇರಸ್ಥಿತಿಯೂ ಒಂದೇಯಾಗಿರ್ಪುದು. ಆಯಿತ್ತಯ್ಯ–ಆ ರೀತಿ ಆಯಿತ್ತಯ್ಯ, ಎನ್ನ ಮತಿ–ಎನ್ನ ಜ್ಞಾನವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ + (ಗ). ೨–೨ ಪುಡಿ (ಗ). ೩+ ಮಾಡುತಿರ್ದಲ್ಲಿ ಅಲ್ಲಿಗೊಬ್ಬ ಉಪಾಧಿಕನು ಬಂದು ಅವರ ಶಿವಾನುಭಾವವನ್ನು (ಕ). ೪–೪ x (ಗ). ೫+ ಕೊ (ಕ). ೬–೬ ಛಿ ಜಾಳೆ (ಕ,ಗ).

---

೨೮೩

**ಲೋಕೋಪಚಾರಕ್ಕೆ ಮಜ್ಜನಕ್ಕೆಱೆವೆನಯ್ಯಾ, ಮನದ ತಾಮಸ ಬಿಡದು, ಮನದ ಕಪಟ ಬಿಡದಯ್ಯಾ, ಶಿವಶರಣೆಂಬುದು ಒಪ್ಪಚ್ಚಿ ಅಳವಡದಯ್ಯಾ, ಎನ್ನ ಮನದಲ್ಲೆರಡುಳ್ಳನ್ನಕ್ಕ ಕೂಡಲಸಂಗಮದೇವನೆಂತೊಲಿವ?**

I ------------------------------------------------------------------------

ಲೋಕೋಪಚಾರಕ್ಕೆ ಮಜ್ಜನಕ್ಕೆಱೆವೆನಯ್ಯಾ: ಲೋಕೋಪಚಾರಕ್ಕೆ–ಲೋಕದಲ್ಲಿ ಕೆಲವಾತ್ಮರುಗಳೊಡನೆ ಬಹುಲಿಂಗಪೂಜೆಯ ಮಾಡುತ್ತೈದಾನೆಂದು ಹೇಳಿಸಿಕೊಂಬುವಂಥ ಲೋಕದ ಬಾಹ್ಯೋಪಚಾರಕ್ಕೆ, ಮಜ್ಜನಕೆಱೆವೆನಯ್ಯಾ–ಹತ್ತೆಂಟು ಕೊಡ ಉದಕವನ್ನು ಲಿಂಗಕ್ಕಭಿಷೇಕವ ನೀಡಿ ಲಿಂಗಪೂಜೆಯ ಮಾಡುವೆನಯ್ಯಾ. ಮನದ–ಚಿತ್ತದ, ತಾಮಸ–ಅಜ್ಞಾನವು, ಬಿಡದು–ಬಿಡುಗಡೆಯಾಗದಯ್ಯಾ. ಮನದ ಕಪಟ ಬಿಡದಯ್ಯಾ: [ಮನದ ಕಪಟ–] ಅಂತರಂಗದಲ್ಲಿರುವಂಥ ವಂಚನೆ ಉಪಾಧಿಕುಹಕ ಪ್ರಪಂಚೆವೆಂಬ ಕಾಪಟ್ಯವು, ಬಿಡದಯ್ಯಾ–ನಷ್ಟವಾಗದಯ್ಯಾ. ಶಿವಶರಣೆಂಬುದು–ಶಿವಸ್ವರೂಪವಾದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುವಂಥದು, ಒಪ್ಪಚ್ಚಿ–ಅಷ್ಟಾದರೂ, ಅಳವಡದಯ್ಯಾ–ದೊರಕೊಳ್ಳದಯ್ಯಾ. ಎನ್ನ ಮನದಲ್ಲಿ–ಎನ್ನ ಚಿತ್ತದಲ್ಲಿ, ಎರಡುಳ್ಳನ್ನಕ್ಕ–ಸ್ಥಾವರಲಿಂಗದ ಭಜನೆ ಇಷ್ಟಲಿಂಗದ ಪೂಜೆಯೆಂಬ ಭಿನ್ನವುಂಟಾಗಿರುವ ಪರಿಯಂತರವೂ, ಕೂಡಲಸಂಗಮದೇವ–ಪರಶಿವಲಿಂಗವು, ಎಂತೊಲಿವ?–ಹೇಂಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕೊಡಲರಿಯನು.

IV------------------------------------------------------------------------

ಲಿಂಗದಲ್ಲಿ ಮನವಳಿದು ಪೂಜೆಯ ಮಾಡಲೊಲ್ಲದೆ ನರರು ಮೆಚ್ಚಬೇಕೆಂದು ಮಾಡುವ ಪೂಜೆ ಅಜ್ಞಾನವೆಂಬುದೀ ವಚನದರ್ಥ.

೨೮೪

**ಮಜ್ಜನಕ್ಕೆಱೆವೆನಲ್ಲದೆ ಸಜ್ಜನವೆನ್ನಲ್ಲಿಲ್ಲವಯ್ಯಾ! ಎನ್ನಲೇನನಱಸುವೆ ? ನಂಬಿಯೂ ನಂಬದ ಡಂಬಕ ನಾನಯ್ಯಾ, ಹಾವ ತೋಱೆ ಹವಿಯ ಬೇಡುವಂತೆ, ಕೂಡಲಸಂಗಮದೇವಾ.**

I---------------------------------------------------------------------------------------

ಮಜ್ಜನಕ್ಕೆಱೆವೆನಲ್ಲದೆ ಸಜ್ಜನವೆನ್ನಲಿಲ್ಲವಯ್ಯಾ : ಮಜ್ಜನಕ್ಕೆಱೆವೆನಲ್ಲದೆ–ಹತ್ತೆಂಟು ಕೊಡ ಉದಕವ ಲಿಂಗಕ್ಕೆ ಅಭಿಷೇಕವ ನೀಡಿ ಲಿಂಗಪೂಜೆಯ ಮಾಡುವೆನಲ್ಲದೆ, ಸಜ್ಜನವೆನ್ನಲಿಲ್ಲವಯ್ಯಾ : ಸಜ್ಜನವು–ಊರೊಳಗಿರಲಿ ಅಡವಿಯೊಳಗಿರಲಿ ಹತ್ತಿರ ಮಧ್ಯದಲ್ಲಿರಲಿ ^ಒರ್ವನಿರಲಿ^ ಸಮರಸಭಾವದಿಂದ ಲಿಂಗಪೂಜೆಯ ಮಾಡುವಂಥದು, ಎನ್ನಲ್ಲಿ–ನನ್ನಲ್ಲಿ, ಇಲ್ಲವಯ್ಯ–ಉಂಟಾಗಿಲ್ಲವಯ್ಯಾ, ಎನ್ನಲ್ಲೇನನಱಸುವೆ? – ಎನ್ನಲ್ಲಿ ಭಕ್ತಿಜ್ಞಾನವೈರಾಗ್ಯಂಗಳನು ಏನ ಹುಡುಕುವೆ? ನಂಬಿಯೂ–ಈ ಲಿಂಗವೇ ಪ್ರಾಣ ಈ ಲಿಂಗಕ್ಕೆ ನಾನೆ ಚಿದಂಗಸ್ವರೂಪವನು. ಈ ಲಿಂಗವಲ್ಲದನ್ಯದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿಸಿ, ನಂಬದ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮವೇ ಸಾಕ್ಷಾತ್ಶಿವಸ್ವರೂಪವೆಂದು ವಿಶ್ವಾಸಿಸದ, ಡಂಬಕ ನಾನಯ್ಯಾ–ಹಿರೇತನದ ಬೂಟಕತ್ವವುಳ್ಳಾತ ನಾನಯ್ಯಾ.

ಹಾವ ತೋಱೆ ಹವಿಯ ಬೇಡುವಂತೆ–ಒಬ್ಬಾನೊಬ್ಬ ಜಾಂಗುಳಿಕನಾದಂಥವನು ಹಾವಿನಪುಟ್ಟಿ ಹಾಲುಬಟ್ಟಲು ನಾಗಸರಬುರುಡೆ ಮೊದಲಾದವನು ತೆಗೆದುಕೊಂಡು ಹುತ್ತುಗಳಿರುವಂಥ ಸ್ಥಾನಕ್ಕೆ ಹೋಗಿ ಹಾವಿರುವಂಥ ಹುತ್ತೇ ಬೋಡಾಗಿರುವದು, ಹಾವಿಲ್ಲದಂಥ ಹುತ್ತೇ ಚೂಪಾಗಿರುವದು. ಚೂಪಾಗಿರುವಂಥ ಹುತ್ತವ ಬಿಟ್ಟು ಬೋಡಾಗಿರುವಂಥ ಹುತ್ತದ ಸಮೀಪಕ್ಕೆ ಹೋಗಿ ಹಾವಿನ ಪುಟ್ಟಿಯನ್ನಿಟ್ಟು ಆ ಪುಟ್ಟಿಯೊಳಗೆ ಹಾಲ ಬಟ್ಟಲ ಮಡಗಿ ನಾಗಸಾಗರ ಬುರುಡೆ^ತೆಗದುಕೊಂಡು ಊದಿದಲ್ಲಿ ಆ ಸರ್ಪನೆಂಬಂಥದು ^ಆಗ^ ನಾಗಸ್ವರದ ಶಬ್ದವನ್ನು ಕೇಳಿ ಗಾನಪ್ರಿಯನಾಗಿ ಭೋರೆಂದಾಡುತ್ತ ಮೇಲಕ್ಕೆ ಹೊರಟುಬಂದು ಬಟ್ಟಲೊಳಗಿರುವಂಥ ಹಾಲನ್ನು ಕುಡಿವಂಥ ವೇಳೆಯಲ್ಲಿ ತಡೆಗಟ್ಟಿ ಯಂತ್ರಕಡ್ಡಿಯಿಂದೊತ್ತಿ ಮೇಲೆ ಪುಟ್ಟಿ ಮುಚ್ಚಿ ಮನೆಗೆ ತೆಗೆದುಕೊಂಡು ಬಂದು ನಾಲ್ಕೆಂಟು ದಿವಸ ಮರೆಬಿಟ್ಟು ಮತ್ತಾ ನಾಲ್ಕೆಂಟು ದಿವಸದ ಮೇಲೆ ಪೇಟೆಮನೆ ಪುರಪಟ್ಟಣ ಸ್ಥಾನಂಗಳಿಗೆ ತೆಗೆದುಕೊಂಡು ಹೋಗಿ ಆಡಿಸಿದಲ್ಲಿ ನೋಡಿದಂಥ ಕೆಲವಾತ್ಮರುಗಳು ವಸ್ತ್ರ ಕಪ್ಪಟಂಗಳ ಕೊಡುವರು. ಕೆಲವಾತ್ಮರುಗಳು ದುಡ್ಡು ದುಗ್ಗಾಣಿ ದವಸಧಾನ್ಯಂಗಳ ಕೊಡುವರು. ಅದನ್ನು ತೆಗೆದುಕೊಂಡು ಬಂದು ತಾನು ತನ್ನ ಹೆಂಡಿರುಮಕ್ಕಳು ಘಟರಕ್ಷಣ್ಯವ ಮಾಡಿಕೊಳ್ಳುತ್ತಿಹರು. ಹಾಂಗೆ, ನಾ ಮಾಡುವಂಥ ಲಿಂಗಪೂಜಾನಿರೀಕ್ಷಣೆಯ ಮಾಡುವಂಥ ನಾಡಿಗ ದೇಸಾಯಿ ಸೆಟ್ಟಿ ಚೌದರಿ ದೊರೆ ದಾತರು ಮೊದಲಾದಂಥವರಿದ್ದರೆ ಅಡ್ಡಣಿಗೆ ಪಾಚಾಲಿ ಬಿಂದಿಗಿ ಹರಿವಾಣ ಗೋಮುಖದ ತಟ್ಟಿ ಶ್ರೀರುದ್ರತಟ್ಟಿ ಅರ್ಘ್ಯತಟ್ಟಿ ಮೊದಲಾದ ರಚನೆ ಕ್ರಿಯೆಗಳ ಹರವಿಕೊಂಡು ತಾಸು ಎರಡು ತಾಸು ಭಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡಿ ಊರುಂ ^[ಬ]^ಳಿ ಸ್ವಾಸ್ತಿವೃತ್ತಿ ಮಠಮಾನ್ಯ ಮೊದಲಾದವನ್ನು ಪಡೆದನುಭವಿಸುತ್ತ ಘಟರಕ್ಷಣ್ಯ ಮಾಡಿಕೊಂಬಂಥ ಎನ್ನ ಉಪಾಧಿಕನ ಇರಸ್ಥಿತಿಯೂ ಆ ಜಾಂಗುಳಿಕನ ಇರಸ್ಥಿತಿಯೂ ಒಂದೇಯಾಗಿರ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

........................

೧-೧ x (ಕ). ೨+ಮೊದಲಾದವನು (ಕ). ೩-೩ x (ಗ). ೪-೪ ಮ (ಕ,ಗ).

IV---------------------------------------------------------------------------

ಪೂಜೆಯ ಮಾಡಿ ಪರವ ಕೂಡದೆ, ಪೂಜೆಯ ಮಾಡಿ [ಅಂ]ಗವ ಹೊರೆದೆನೆಂಬುದು ಹಾವತೋಳಿ ಹವಿಯ ಬೇಡುವನ ಪರಿಯೆಂಬುದೀ ವಚನದರ್ಥ.

---

೨೮೫

**ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ? ಕೈಮುಟ್ಟಿ ಪೂಜಿಸುವಡೆ, ಎನ್ನ ಕೈ ಶುದ್ಧವಿಲ್ಲವಯ್ಯಾ. ಮನಮುಟ್ಟಿ ಪೂಜಿಸುವಡೆ ಎನ್ನ ಮನ ಶುದ್ಧವಿಲ್ಲವಯ್ಯಾ. ಭಾವ ಶುದ್ಧವಾದಡೆ, ಕೂಡಲಸಂಗಯ್ಯನು ಇತ್ತ ಬಾಯೆಂದೆತ್ತಿ ಕೊಳ್ಳನೇಕಯ್ಯಾ?**

I---------------------------------------------------------------------------

ಕೆಲಕ್ಕೆ ಶುದ್ಧನಾದೆನಲ್ಲದೆ ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ : ಕೆಲಕ್ಕೆ ಶುದ್ಧನಾದೆನಲ್ಲದೆ – ಲೋಕದಾತ್ಮರುಗಳೊಂದಿಗೆ ಬಹುಲಿಂಗಪೂಜೆಯ ಮಾಡುವಂಥಾತನೆಂದು ಹೇಳಿಸಿಕೊಂಬೋದಕ್ಕೆ ಶುದ್ಧನಲ್ಲದೆ ತನುವಿನಲ್ಲಿ ನಿರ್ಮಲತ್ವವನ್ನು ಮುಂದುಕೊಂಡು ಲಿಂಗಪೂಜೆಯ ಮಾಡುವೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನು–ಮನೋಮೂರ್ತಿಯಪ್ಪ ಲಿಂಗವು ಮಮಕರಿಸಿಕೊಂಡು ಮುಕ್ತಿಯನ್ನು ಕರುಣಿಸಿಕೊಡುವ ಹಾಂಗೆ ಎನ್ನ ಮನದಲ್ಲಿ ನಿರ್ಮಲತ್ವವನ್ನು ಮುಂದುಗೊಂಡು ಲಿಂಗಪೂಜೆಯ ಮಾಡಲೊಲ್ಲೆನು, ಏಕಯ್ಯಾ–ಏನು ಕಾರಣಕ್ಕಯ್ಯಾ. ಕೈಮುಟ್ಟಿ ಪೂಜಿಸುವಡೆ ಎನ್ನ ಕೈ ಶುದ್ಧವಿಲ್ಲವಯ್ಯಾ: ಕೈಮುಟ್ಟಿ ಪೂಜಿಸುವಡೆ–ಹಸ್ತಮುಟ್ಟಿ ಆರಾಧಿಸೇನೆಂದರೆ, ಎನ್ನ ಕೈ ಶುದ್ಧವಿಲ್ಲವಯ್ಯಾ: ಎನ್ನ ಕೈ–ಕಲ್ಲ ಮೇಲೆ ಕಲ್ಲನಿಟ್ಟು ಒಡೆವಂಥದು ಗಂಗಾಳ ಬಾರಿಸುವಂಥದು ಎರಡು ಕೈಯಲ್ಲಿ ಮಸ್ತಕವ ತುರಿಸಿಕೊಂಬಂಥದು ಸ್ತ್ರೀಯರ [*ಸ್ಪರ್ಶಿಸು*]ವಂಥದು ಎನ್ನ ಹಸ್ತವು, ಶುದ್ಧವಿಲ್ಲವಯ್ಯಾ–ನಿರ್ಮಲತ್ವವಿಲ್ಲವಯ್ಯಾ.

ಮನಮುಟ್ಟಿ ಪೂಜಿಸುವಡೆ ಎನ್ನ ಮನ ಶುದ್ಧವಿಲ್ಲವಯಾ : ಮನಮುಟ್ಟಿ ಪೂಜಿಸುವಡೆ–ಮನಶುದ್ಧವಾಗಿ ಆರಾಧಿಸೇನೆಂದರೆ, ಎನ್ನ ಮನವು ಹಲವು ನೆನೆದು ಹಲವು ಭಾವಿಸಿ ವರ್ತನೆಯೊಡನೆ ಕೂಡಿ ಚರಿಸುವಂಥದು ಎನ್ನ ಚಿತ್ತವು, ಶುದ್ಧವಿಲ್ಲವಯ್ಯಾ–ನಿರ್ಮಲತ್ವವಿಲ್ಲವಯ್ಯಾ. ಭಾವ ಶುದ್ಧವಾದಡೆ–ಮನನಿರ್ಮಲವಾದರೆ, ಕೂಡಲಸಂಗಯ್ಯನು–ಪರಶಿವಲಿಂಗವು, ಇತ್ತ ಬಾಯೆಂದೆತ್ತಿಕೊಳ್ಳನೇಕಯ್ಯಾ?: ಇತ್ತ ಬಾಯೆಂದು–ಇತ್ತಿತ್ತ ಬಾರೋ ಮಗನೆ ಎಂದು, ಎತ್ತಿಕೊಳ್ಳನು–ತನ್ನೊಳಗೇಕಾರ್ಥವ ಮಾಡಿಕೊಳನು, ಏಕಯ್ಯಾ?–ಏನು ಕಾರಣಕ್ಕಯ್ಯಾ. ಎನ್ನ ಭಾವ ಶುದ್ಧವಾಗಿದ್ದರೆ ತನ್ನೊಳಗೇಕಾರ್ಥವ ಮಾಡಿಕೊಂಬುವನು. ಎನ್ನಲ್ಲಿ ಭಾವ ಶುದ್ಧವಿಲ್ಲದ ಕಾರಣ ತನ್ನಲ್ಲೇಕಾರ್ಥವ ಮಾಡಿಕೊಳ್ಳನು, ಏಕಯ್ಯಾ–ಏನು ಕಾರಣಕಯ್ಯಾ.

IV---------------------------------------------------------------------------

ತನುಮನಪ್ರಾಣಕ್ಕೆ ಭಾವವೆ ಕಾರಣವಾದ ಕಾರಣ, ಭಾವವಳಿವುದೆ ಪೂಜೆ, ಉಳಿದಶುದ್ಧವೆಲ್ಲವು ಭ್ರಾಂತೆಂಬುದೀ ವಚನದರ್ಥ.

---

೨೮೬

**'ಕುಲಮದಕ್ಕೆ ಹೋಜಿ ಜಂಗಮಭೇದವ ಮಾಡುವೆ, ಫಲವೇನು? ನಿತ್ಯಲಿಂಗಾರ್ಚನೆ ಪ್ರಾಯಶ್ಚಿತ್ತ! ಛಲಮದಕ್ಕೆ ಹೋಜಿ ಲಿಂಗಭೇದವ ಮಾಡುವೆ ಫಲವೇನು? ಜಂಗುಳಿಯ ಕಾವ ಗೋವಳ ಹಲವು ಪಶುವ ನಿವಾರಿಸುವಂತೆ! ತನು ಭಕ್ತನಾಯಿತ್ತೆನ್ನ ಮನ ಭವಿ ಕೂಡಲಸಂಗಮದೇವಾ'**

I------------------------------------------------------------------------

ಕುಲಮದಕ್ಕೆ ಹೋಜಿ ಜಂಗಮಭೇದವ ಮಾಡುವೆ : ಕುಲಮದಕ್ಕೆ ಹೋಜಿ ಒಬ್ಬ ಭಕ್ತನೇನಾದರೂ ಜಂಗಮಭಕ್ತಿಯನ್ನು ಮಾಡುತ್ತಿದ್ದಲ್ಲಿ ಭಕ್ತಮಹೇಶ್ವರರುಗಳು ನೀನು ಹೇಗಾದರೂ ಜಂಗಮಭಕ್ತಿಯನ್ನು ಮಾಡುತ್ತಿದ್ದೀ. ಆ ಜಂಗಮದಲ್ಲಿ ಜಾತಿವಿಜಾತಿಯನುಂಟುಮಾಡಿ ಹೇಳಬೇಡೆಂದು ಹೇಳಿದಲ್ಲಿ ನಾನೇಕೆ ಬಿಟ್ಟೇನೆಂದು ಕುಲಮದಕ್ಕೆ ಹೋರಿ, [ಜಂಗಮಭೇದವ ಮಾಡುವೆ–] ತರ್ಕಿಸಿ ಜಂಗಮದ ಜಾತಿವಿಜಾತಿಯನುಂಟುಮಾಡಿ ಹೇಳುವೆನು, ಫಲವೇನು?–ಪ್ರಯೋಜನವೇನು? ನಿತ್ಯಲಿಂಗಾರ್ಚನೆ ಪ್ರಾಯಶ್ಚಿತ್ತ : ನಿತ್ಯ ಲಿಂಗಾರ್ಚನೆ–ತ್ರಿಕಾಲಂಗಳಲ್ಲಿ ಮಾಡುವಂಥ ಲಿಂಗಪೂಜೆಯು, ಪ್ರಾಯಶ್ಚಿತ್ತ–ಅದೇ ಬಿಡುಗಡೆಯು, ಛಲಮದಕ್ಕೆ ಹೋಜಿ, ಲಿಂಗಬೇಧವಮಾಡುವೆ: ಛಲ ಮದಕ್ಕೆ ಹೋಜಿ –ಲಿಂಗಪೂಜೆಯ ಮಾಡುತ್ತಿರ್ದಲ್ಲಿ ಭಕ್ತಮಾಹೇಶ್ವರುಗಳು ನೀನು ಹೇಂಗಾದರೂ ಲಿಂಗಪೂಜೆಯ ಮಾಡುತಿದ್ದೀ. ಆ ಲಿಂಗದಲ್ಲಿ ಶಿಲಾಭಾವವನುಂಟುಮಾಡಿ ಹೇಳಬೇಡೆಂದು ಹೇಳಿದಲ್ಲಿ ನಾನೇಕೆ ಬಿಟ್ಟೇನೆಂದು ಛಲಮದಕ್ಕೆ ಹೋರಿ, [ಲಿಂಗಭೇದವ ಮಾಡುವೆ–] ತರ್ಕಿಸಿ ಆ ಲಿಂಗದಲ್ಲಿ ಶಿಲಾಭಾವವನುಂಟುಮಾಡಿ ಹೇಳುವೆನು. ಫಲವೇನು?–ಪ್ರಯೋಜನವೇನು?

ಜಂಗುಳಿಯ ಕಾವ ಗೋವಳ ಹಲವು ಪಶುವ ನಿವಾರಿಸುವಂತೆ–ಒಬ್ಬಾನೊಬ್ಬ ತರುವಾಳನೇನಾದರೂ ಕೋರಿಯನ್ನು ಹೊದ್ದುಕೊಂಡು ಕೋಲನ್ನು ಪಿಡಿದುಕೊಂಡು ಬುತ್ತಿಯನ್ನು ಕಟ್ಟಿಕೊಡು ಕೆರವನ್ನು ಮೆಟ್ಟಿಕೊಂಡು ಗ್ರಾಮದ ನೂರಾರು ದನಗಳನ್ನು ಅಡವಿಗೆ ಹೊಡಕೊಂಡು ಹೋಗಿ ಹುಲ್ಲಿದ್ದ ಸ್ಥಾನದಲ್ಲಿ ಮೇಯಿಸಿ ನೀರಿದ್ದ ಸ್ಥಾನದಲ್ಲಿ ನೀರಕುಡಿಸಿ ನೆರಳಿದ್ದ ಸ್ಥಾನದಲ್ಲಿ ತರುಬಿಕೊಂಡಿರ್ದು ಸಾಯಂಕಾಲಕ್ಕೆ ಊರಿಗೆ ಹೊಡಕೊಂಡು ಬಂದು ಅವರವರ ದನಗಳನ್ನು ಅವರವರ ಮನೆಗೆ ಹೊಡೆದು ಅವರವರು ಕೊಟ್ಟಂಥ ಕೂಲಿಗೆ ಪ್ರಾಪ್ತನಲ್ಲದೆ ಆ ದನಕರುಗಳಿಂದುಂಟಾದ ಹಾಲು ಮೊಸರು ತುಪ್ಪ ಮೊದಲಾದಂಥ ಸಾಧನದ್ರವ್ಯವನುಂಡು ಪರಿಣಾಮಿಸುವುದಕ್ಕೆ ಬಂದೀತೆ? ಬರಲರಿಯದು. ಹಾಂಗೆ, ಕುಲಮದಕ್ಕೆ ಹೋರಿ ಜಂಗಮವ ಭೇದಮಾಡಿ ಛಲಮದಕ್ಕೆ ಹೋರಿ ಲಿಂಗಭೇದ ಮಾಡಿ ಭಿನ್ನವಿಟ್ಟುಕೊಂಡು ಲಿಂಗಪೂಜೆ ಜಂಗಮದಾಸೋಹವ ಮಾಡಿ ಕಿಂಚಿನ್ಮಾತ್ರ ಫಲಪದಂಗಳ ಪಡೆದನುಭವಿಸಿ ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ಆ ಹಲವು ಗೋವ ಕಾವ ಗೋವಳನ ಇರಸ್ಥಿತಿಯೂ ಒಂದೇ ಆಗಿರ್ಪುದು. ತನು ಭಕ್ತನಾಯಿತ್ತೆನ್ನ ಮನ ಭವಿ: ತನು ಭಕ್ತನಾಯಿತ್ತು–ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಮಾಲೆ ಅಂಗದ ಮೇಲೆ ಶಿವಲಿಂಗ

ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೂ, ಎನ್ನ ಮನಭವಿ–ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವೇ ಉಂಟಾಗಿರ್ಪುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II-----------------------------------------------------------------------

1–1 x (ಚ,ಜ).

ಹಿಂದಕ್ಕೆ ಕಾಣಬಂದರ್ಥ. ಜಂಗುಳಿಯ ಕಾವ ಗೋವ ಹಲವು ಪಶುವ ನಿವಾರಿಸುವಂತೆ–ಆವನಾನೊಬ್ಬ ಗೋವುಗಳ ಕಾವವನು ಸಮಸ್ತ ಪಶುಗಳನು ಕರೆದು ಮೈಮೇಲೆ ಮೋರೆಯ ಮೇಲೆ ಕೈಯೆಳೆವನು. ಏನುಕಾರಣ ಎಳೆವನು? ಕ್ಷೀರವ ಕೊಡಲೆಂದು ಎಳೆವನು. ಹಾಂಗೆ ಮನಸ್ಸು ಫಲ ಪದಂಗಳ ಪಡೆದನುಭವಿಸುವ ಭವಿತ್ವಕ್ಕೆ ಕಾರಣವಾಗಿಪ್ಪುದು. ಮುಂದಕ್ಕೆ ಕಾಣಬಂದರ್ಥ.

---

೨೮೭

**ಲಿಂಗದಲ್ಲಿ ಕಠಿಣವುಂಟೆ? ಜಂಗಮದಲ್ಲಿ ಕುಲವುಂಟೆ? ಪ್ರಸಾದದಲ್ಲಿ ಅ'ನು'[1] ರುಚಿಯುಂಟೆ? ಈ ತ್ರಿವಿಧದಲ್ಲಿ ಭಾವಭೇದವನಱಿಸುವೆನು; ಕೂಡಲಸಂಗಮದೇವಾ ಧಾರೆವಟ್ಟಲೆನ್ನಭಕ್ತಿ!**

I-----------------------------------------------------------------------

ಲಿಂಗದಲ್ಲಿ ಕಠಿಣವುಂಟೆ?: ಲಿಂಗದಲ್ಲಿ –ಗುರುಮುಖದಿಂ ಬಂದಂಥ ಇಷ್ಟಮಹಾಲಿಂಗದಲ್ಲಿ, ಕಠಿಣವುಂಟೆ?–ಚಿತ್ಕಲಾಲಿಂಗವಾಗಿಪ್ಪುದಲ್ಲದೆ ಶಿಲಾ ಭಾವವನ್ನುಂಟಾಗಿದ್ದಿತ್ತೆ? ಇಲ್ಲವು. ಜಂಗಮದಲ್ಲಿ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಚರಲಿಂಗದಲ್ಲಿ, ಕುಲವುಂಟೆ?–ಶಿವಕುಲವುಂಟಾಗಿಪ್ಪುದಲ್ಲದೆ ಜಾತಿವಿಜಾತಿಯೆಂಬಂಥದುಂಟಾಗಿದ್ದಿತ್ತೇ? ಇಲ್ಲವು. ಪ್ರಸಾದದಲ್ಲಿ ಅನುರುಚಿಯುಂಟೆ? : ಪ್ರಸಾದದಲ್ಲಿ–ಲಿಂಗಜಂಗಮವೆರಡರ ಮುಖದಿಂದುಳುಮೆಯಾಗಿ ಬಂದಂಥ ಚಿತ್ಕಲಾಪ್ರಸಾದ ಸೇವನೆಯಲ್ಲಿ, ಅನುರುಚಿಯುಂಟೆ?–ಸುರುಚಿ ಕುರುಚಿಯುಂಟೆ? ಇಲ್ಲವು.

ಈ ತ್ರಿವಿಧದಲ್ಲಿ – ಈ ಲಿಂಗಜಂಗಮಪ್ರಸಾದದಲ್ಲಿ, ಭಾವಭೇದವನಱಿಸುವೆನು–ಲಿಂಗದಲ್ಲಿ ಶಿಲಾಭಾವ ಜಂಗಮದಲ್ಲಿ ಜಾತಿವಿಜಾತಿ ಪ್ರಸಾದದಲ್ಲಿ ಸುರುಚಿ ಕುರುಚಿಯನುಂಟುಮಾಡಿ ಹೇಳುವೆನು, ಕೂಡಲಸಂಗಮದೇವಾ– ಎಲೆ ಪರಶಿವಲಿಂಗವೆ, ಎನ್ನ ಭಕ್ತಿ–ನಾ ಮಾಡುವಂಥ ಭಿನ್ನಭಕ್ತಿಯು, ಧಾರೆ ವಟ್ಟಲು– ಶೋಧನೆಬಟ್ಟಲೆಂಬಂಥದು. ಪಡುಗ ಗುಡಾಣದ ಮೇಲೆ ಮಡಗಿ ಔಷಧ ಕಷಾಯ ಪಾನಕ ಪನ್ನೀರು ಹಾಲು ಮೊಸರು ತುಪ್ಪ ಮೊದಲಾದ ಸಾಧನದ್ರವ್ಯಂಗಳನು ಶೋಧಿಸಿದಲ್ಲಿ ರಸವನ್ನು ಒಳೆಯಕ್ಕೆ ಬಿಟ್ಟು ಮೇಲೆ ಕಸವನ್ನು ಹೇಂಗೆ ದೃಢವಿಡಿವುತ್ತಿಹುದೋ ಹಾಂಗೆ, ಚಿದ್ರಸಸ್ವರೂಪವಾದ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದನ್ನು ಬಿಟ್ಟು ಕಸಮಲಯುಕ್ತವಾದ ಮಲತ್ರಯಂಗಳನು ದೃಢವಿಡಿವಂಥ ಎನ್ನ ಉಪಾಧಿಕನ ಇರಸ್ಥಿತಿಯೂ ಆ ಶೋಧನೆಬಟ್ಟಲದ ಇರಸ್ಥಿತಿಯೂ ಒಂದೇಯಾಗಿರ್ಪುದು.

IV-----------------------------------------------------------------------

1-1 x (ತ).

.........................

ಸತ್ತುಚಿತ್ತಾನಂದನಿತ್ಯವೆಂದು ಗುರುಲಿಂಗಜಂಗಮಪ್ರಸಾದವ ಕಾಣದೆ ಇವರಲ್ಲಿ ಗುಣವನಜಿಸೂದು ಅಜ್ಞಾನವೆಂಬುದೀ ವಚನದರ್ಥ.

---

೨೮೮

**ಲೌಕಿಕರ ಕಂಡು ಆಡುವೆ ಹಾಡುವೆ, ತಾರ್ಕಿಕರ ಕಂಡು ಆಡುವೆ ಹಾಡುವೆ, ಸಹಜಗುಣವೆನ್ನಲ್ಲಿಲ್ಲವಯ್ಯಾ; ನಿಜಭಕ್ತಿಯೆನಗಿಲ್ಲವಯ್ಯಾ ತಂದೆ. ಏಕೋಭಾವ ಎನಗುಳ್ಳಡೆ ಏಕೆ ನೀ ಕರುಣಿಸೆ ? ಕೂಡಲಸಂಗಮದೇವಾ.**

I------------------------------------------------------------------------

ಲೌಕಿಕರ ಕಂಡು ಆಡುವೆ ಹಾಡುವೆ: ಲೌಕಿಕರ ಕಂಡು–ಲೋಕದಲ್ಲಿ ಲಿಂಗಪೂಜೆಯ ಮಾಡುವಂಥ ಭಕ್ತಮಾಹೇಶ್ವರರುಗಳ ಮೇಲು ಪಜ್ತಿಯ ನೋಡಿ, ಆಡುವೆ–ನಾನು ಅವರ ಹಾಂಗೆ ಹಸ್ತದಲ್ಲಿ ಲಿಂಗವ ಪಿಡಿದುಕೊಂಡು ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆದಾಡುವೆನು, ಹಾಡುವೆ–ಕಂದವೃತ್ತಗದ್ಯಪದ್ಯಪ್ರಬಂಧಗಳಿಂದ ಆ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುವೆನು. ತಾರ್ಕಿಕರ ಕಂಡು–ಭರತಕಟ್ಟಳೆ ವಿದ್ಯೆಯವರ ನೋಡಿ, ಆಡುವೆ–ಚಿನ್ನದ ತೇರು ಬೆಳ್ಳಿಯ ತೇರು ಬೆತ್ತದ ತೇರು ಪರಂಗಿಪೀಠ ಮೊದಲಾದವರಲ್ಲಿ ಲಿಂಗವನ್ನು ಮೂರ್ತವ ಮಾಡಿಸಿ ಕೊಂಡು ಕೈಯಲ್ಲಿ ಸೂತ್ರವನ್ನು ಪಿಡಿದುಕೊಂಡು ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ಎಡಕ್ಕೆ ಬಲಕ್ಕೆ ಹಿಂದಕ್ಕ ಮುಂದಕ್ಕೆ ಚೌಕದಟ್ಟಿ ಚಪ್ಪಳಿಯನಿಕ್ಕುತ್ತ ನರ್ತನ ಮಾಡುವೆನು. ಹಾಡುವೆನು–ಮೂವತ್ತೆರಡು ರಾಗ ಅರುವತ್ತುನಾಲ್ಕು ಮಿಶ್ರಯುಕ್ತವಾದ ಸಮಸ್ತಸ್ವರವಚನಂಗಳಿಂದ ರಾಗ ರಚನೆಯನ್ನು ಮಾಡಿ ಪಾಡುವೆನು.

ಸಹಜಗುಣವೆನ್ನಲ್ಲಿಲ್ಲವಯ್ಯಾ–ಊರೊಳಗಿರಲಿ ಅಡವಿಯೊಳಗಿರಲಿ ಹತ್ತಿರ ಮಧ್ಯದಲ್ಲಿರಲಿ ಒರ್ವನಿರಲಿ ತಾನುತಾನಾಗಿ ಲಿಂಗಪೂಜೆಯ ಮಾಡುವಂಥ ಸಮರಸಕ್ರಿಯೆ ಎನ್ನಲ್ಲುಂಟಾಗಿಲ್ಲವಯ್ಯಾ. ನಿಜಭಕ್ತಿಯೆನಗಿಲ್ಲವಯ್ಯಾ–ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ ಸಮರಸಜ್ಞಾನವು ಎನ್ನಲ್ಲುಂಟಾಗಿಲ್ಲವಯ್ಯಾ, ತಂದೆ–ಎನ್ನಾತ್ಮಜನಕನಾದ ಎಲೆ ಪರಶಿವಲಿಂಗವೆ. ಏಕೋಭಾವ ಎನಗುಳ್ಳಡೆ–ಒಂದೇ ಶಿವಭಾವ ಎನ್ನಲ್ಲುಂಟಾಗಿದ್ದರೆ, ನೀನೆಕೆ ಕರುಣಿಸೆ?–ಏನು ಕಾರಣಕ್ಕೆ ನೀನು ಕೃಪೆಯಾಗಿ ಇಷ್ಟಾರ್ಥಪರಿಣಾಮವನ್ನು ಕರುಣಿಸಿಕೊಡಲೊಲ್ಲೆ? ಎನ್ನಲ್ಲಿ ಏಕೋಭಾವವುಂಟಾಗಿದ್ದರೆ ನೀನು ಕೃಪೆಯಾಗಿ ಇಷ್ಟಾರ್ಥಪರಿಣಾಮವನ್ನು ಕರುಣಿಸಿಕೊಡುವೆ. ಎನ್ನಲ್ಲಿ ಏಕೋಭಾವವುಂಟಾಗಿಲ್ಲಿದ ಕಾರಣ ನೀನು ಕೃಪೆಯಾಗಿ ಇಷ್ಟಾರ್ಥ ಪರಿಣಾಮವನ್ನು ಕರುಣಿಸಿಕೊಡಲೊಲ್ಲೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೨೯೯

**ಓತಿ ಬೇಲಿವರಿ'ದ'ಂತೆನ್ನ ಮನವಯ್ಯಾ. ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು: ಬಾವುಲ ಬಾಳುವೆಯಂತೆನ್ನ ಮನವು! ನಡುವಿರುಳೆದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ [2]ನೀ[2]ನಿಲ್ಲದ ಭಕ್ತಿ ಬಯಸಿದಡುಂಟೆ, ಕೂಡಲಸಂಗಮದೇವಾ?**

I-----------------------------------------------------------------------

ಓತಿ ಬೇಲಿವರಿದಂತೆನ್ನ ಮನವಯ್ಯಾ: [ಓತಿ ಬೇಲಿವರಿದಂತೆ–] ಓತಿಕಾಟನೆಂಬುವಂಥದು ಬೇಲಿಯ ಮೇಲೆ ಹೋಗುತ್ತಿದ್ದಲ್ಲಿ ಆತ್ಮರುಗಳ ಕಂಡು ತಲೆಯನ್ನು ಹಾಕುತ್ತಿಹುದು. ಸಮೀಪಕ್ಕೆ ಹೋಗಿ ಹರಳ ಒಗೆದಲ್ಲಿ ಬೇಲಿ ಒಳಯಕ್ಕೆ ಹೊಕ್ಕೊಂಬುತ್ತಿಹುದು. ಹಾಂಗೆ, ಉಪಾಧಿಕನು ಬೀದಿಬಾಜಾರದಲ್ಲಿ ಕುಳಿತುಕೊಂಡಿದಲ್ಲಿ ಗುರುಚರಮೂರ್ತಿಗಳು ಹೋಗಿ ಬರುವಂಥದನ್ನು ಕಂಡು ಶರಣುಶರಣಾರ್ಥಿಯೆಂದು ತಲೆಬಾಗಿ ನಮಸ್ಕರಿಸುವನು. ಅದರೊಳಗೊಬ್ಬ ಜಂಗಮವು ಇವ ಬಹುಶ್ರದ್ಧೆಯುಳ್ಳಾತ ಕಾಣುತ್ಯೆದನೆಂದು ಆತನ ಹಿಂದಗುಂಟ ಹೋದಲ್ಲಿ ಹೋಹೋ ಇವರು ನಮ್ಮ ಮನೆಗೆ ಬರುತ್ತೈದಾರೆಂದು ಸಂದುಬಿದ್ದು ತಪ್ಪಿಸಿಕೊಂಡು ಹೋಗುವಂಥ ಉಪಾಧಿಕನ ಇರಸ್ಥಿತಿಯೂ ಆ ಓತಿಕಾಟನ ಇರಸ್ಥಿತಿಯೂ ಒಂದೇಯಾಗಿರ್ಪುದು, ಎನ್ನ ಮನವಯ್ಯಾ–ಎನ್ನ ಚಿತ್ತವಯ್ಯಾ.

ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು–ಊಸರವಳ್ಳಿಯೆಂಬಂಥದು ಪ್ರಾತಃಕಾಲದಲ್ಲಿ ಹಚ್ಚಗಾಗುವುದು ಮಧ್ಯಾಹ್ನ ⌜ಕಾಲ⌝ ಕ್ಕೆ ತುಸು ನಸುಗೆಂಪಾಗಿರುವುದು ಸಾಯಂಕಾಲಕ್ಕೆ ಕರ್ರನೆ ಕಂದುವುದು ಹಾಂಗೆ, ನಿರ್ಮಲಾಯಮಾನವಾದ ಆತ್ಮಂಗೆ ಮಾಯಾಪ್ರಪಂಚಿನ ಮರವೆ ಬಂದು ಮುಸುಕಲು ಅಷ್ಟೊತ್ತು ಪ್ರಪಂಚಿಯಾಗಿ, ⌜ಅಷ್ಟೊತ್ತು ನಿಃಪ್ರಪಂಚಿಯಾಗಿ⌝ ಅಷ್ಟೊತ್ತು ಅಜ್ಞಾನಿಯಾಗಿ ಅಷ್ಟೊತ್ತು ಜ್ಞಾನಿಯಾಗಿ ಹೀಂಗೆ ಅರುಹು ಮರಹು ಜ್ಞಾನಾಜ್ಞಾನದೊಡನೆ ಕೂಡಿ ಚರಿಸುವಂಥ ಎನ್ನ ಇರಸ್ಥಿತಿಯೂ ಆ ಊಸರವಳ್ಳಿಯ ಇರಸ್ಥಿತಿಯೂ ಒಂದೇಯಾಗಿರ್ಪುದು, ಎನ್ನ ಮನವು–ಎನ್ನ ಚಿತ್ತವು.

ಬಾವುಲ ಬಾಳುವೆಯಂತೆನ್ನ ಮನವು–ತೊಗಲಬಾವುಲಿಯೆಂಬುವಂಥದು ಅದೇ ಬಾಯಿಲೆ ತಿಂಬುವುದು ಅದೇ ಬಾಯಿಲೆ ವಿಷ್ಟಿಸುವುದು. ಹಾಂಗೆ, ಜಂಗಮಮೂರ್ತಿಗಳನು ಇವರು ಜ್ಞಾನಿಗಳು ಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ಸ್ತೋತ್ರವ ಮಾಡುತ್ತ ಮತ್ತು ಅದೇ ಜಿಹ್ವೆಯಲ್ಲಿ ಇವರು ಆಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರೆಂದು ದೂಷಣೆಯ ಮಾಡುವಂಥ ಎನ್ನ ಇರಸ್ಥಿತಿಯೂ ಆ ತೊಗಲಬಾವುಲಿಯ ಇರಸ್ಥಿತಿಯೂ ಒಂದೇಯಾಗಿರ್ಪುದು, ಎನ್ನ ಮನವು–ಎನ್ನ ಚಿತ್ತವು.

ನಡುವಿರುಳೆದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ: ನಡುವಿರುಳೆದ್ದ–ರಾತ್ರಿ ಆರು ತಾಸಿನಲ್ಲಿ ಉತ್ಥಾನಂಗೆಯ್ದು, ಕುರುಡಂಗೆ–ಅಂಧಕಂಗೆ, ಅಗಸೆಯಲ್ಲಿ ಬೆಳಗಾದಂತೆ–ಆ ಸಂದುಬಿದ್ದು ಈ ಸಂದುಬಿದ್ದು ಕಡೆ ಹೆಬ್ಬಾಗಿಲಿಗೆ ಬರುವುದರೊಳಗೆ ಅರುಣೋದಯವಾಗುವುದು. ಮುಂದಕ್ಕೊಂದು

ಊರು ಕೇರಿಗೆ ಹೋಗಿ ಉದ್ದಿಮೆ ವ್ಯಾಪಾರವನ್ನು ಮಾಡಿಕೊಂಡು ಬರಬೇಕೆಂಬಂಥಾದುಂಟಾಗಿದ್ದಿತ್ತೆ? ಇಲ್ಲವು. ಹಾಂಗೆ, ಸವರ್ಯಾಡುತ್ತ ತನ್ನ ಗೊತ್ತಿಗೆ ಬರುತ್ತಿಹನೆಂಬುವ ಹಾಂಗೆ, ನಡುವಿರುಳಿದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ : ನಡುವಿರುಳೆದ್ದ–ಅಜ್ಞಾನದಿಂದ ತ್ರಿವಿಧಲಿಂಗದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ, ಕುರುಡಂಗೆ–ಜಾತ್ಯಾಂಧನಾದ ಜೀವಂಗೆ, ಅಗಸೆಯಲ್ಲಿ ಬೆಳಗಾದಂತೆ–ಅಗಸೆಯೆಂದರೆ ಇಂದ್ರಿಯಂಗಳು, ಆ ಇಂದ್ರಿಯ ವಿಷಯಪ್ರಪಂಚಿನೊಡನೆ ಕೂಡಿ ಚರಿಸಿ ಭವಕ್ಕೆ ಹೋಗುವಂಥದೇ ಪ್ರಾಪ್ತಿಯಾಗಿಪ್ಪುದಲ್ಲದೆ ತ್ರಿವಿಧಲಿಂಗದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದುಂಟಾಗಿದ್ದಿತ್ತೆ? ಇಲ್ಲವು. ನೀನಿಲ್ಲದ–ನಿನ್ನ ಕೃಪೆಯುಂಟಾಗಿಲ್ಲದ, ಭಕ್ತಿ–ಶಿವಾದ್ವೈತಭಕ್ತಿಯು, ಬಯಸಿದಡುಂಟೆ? ಇಚ್ಛೈಸಿದರೆ ದೊರಕೊಂಡಿತ್ತೆ? ದೊರಕೊಳ್ಳಲರಿಯದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

........................

೧–೧ x (ಗ). ೨–೨ x (ಕ).

II--------------------------------------------------------------------

ಓತಿ ಬೇಲಿವರಿದಂತೆನ್ನ ಮನವಯ್ಯಾ–ದೊಣ್ಣೆಕಾಟನು ಬೆಳ್ಳಾರದಲ್ಲಿ ಚರಿಸುವುದು. ಅದು ಏನು ಕಾರಣ ಚರಿಸೂದು ? ಹುಳುಹುಪ್ಪಟಿಯ ನಾಯಿಕೊಂಡು ತಿಂಬೂದಕ್ಕೆ ಚರಿಸೂದು. ಹಾಂಗೆ ಮನಸ್ಸು ಇಂದ್ರಿಯ ವಿಷಯಂಗಳತ್ತ ಚರಿಸುತ್ತಿಪ್ಪುದು.. ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು–ಊಸರವಳ್ಳಿಯು ಉದಯಕ್ಕೆ ಹಚ್ಚಗಾಗುತೈತೆ ಮಧ್ಯಾಹ್ನಕ್ಕೆ ಬೆಳ್ಳಗಾಗುತೈತೆ ಬಯ್ಗೆ ಕೆಂಪಾಗುತೈತೆ ಕ್ಷಣಕ್ಕೊಂದು ಪ್ರಕಾರವಾಗುತೈತೆ. ಹಾಂಗೆ ಎನ್ನ ಮನಸ್ಸು ಒಚ್ಚೊತ್ತು ಉಪಾಧಿಭಕ್ತನಾಗುತೈತೆ, ಒಚ್ಚೊತ್ತು ನಿರುಪಾಧಿಕಭಕ್ತನಾಗುತೈತೆ. ಒಚ್ಚೊತ್ತು ಸಹಜಭಕ್ತನಾಗುತೈತೆ, ಒಷ್ಟೊತ್ತು ಭಕ್ತಿಯ ಮುಂದುಗೊಂಡಿರುತೈತೆ. ಒಷ್ಟೊತ್ತು ಜ್ಞಾನವ ಮುಂದುಗೊಂಡಿರುತೈತೆ, ಒಷ್ಟೊತ್ತು ವೈರಾಗ್ಯವ ಮುಂದುಗೊಂಡಿರುತೈತೆ ಎನ್ನ ಮಾನಸವು. ಬಾವುಲ ಬಾಳುವೆಯಂತೆನ್ನ ಮನವು–ತೊಗಲಬಾವಲಿಗಳು ಬಾಯಿಲೆ ತಿಂದು ಬಾಯಿಲೆ ಕೆಡಸುತೈದಾವೆ. ಹಾಂಗೆ ಶಿವಶಾಸ್ತ್ರವ ಬೆಸಗೊಂಬುದು ಅದೇ ಬಾಯಿ ದೂಷಣೆಯ ಮಾಡೂದು ಅದೇ ಬಾಯಿಯಾಗಿಪ್ಪುದೆನ್ನ ಮಾನಸವು. ನಡುವಿರುಳೆದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ–ಅಜ್ಞಾನದಲ್ಲುದಿಸಿದ ಜಾತ್ಯಂಧಕನಾದ ಜೀವನಿಗೆ ಇಂದ್ರಿಯಜ್ಞಾನ ಉಂಟಾಯಿತ್ತು. ಮುಂದಕ್ಕೆ ಕಾಣಬಂದರ್ಥ.

III--------------------------------------------------------------------

1–1ವ (ಟ,ಡ). 2–2 ನಾ (ಟ,ಡ).

........................

ಸರಟನು ಬೇಲಿಯ ಮೇಲೆ ಓಡಾಡುವ ಹಾಂಗೆನ್ನ ಮನವು ಹಲವು ಪ್ರಪಂಚಿನಲ್ಲಿ ಹರಿದಾಡುವುದೆಂಬುದೀಗ ಓತಿ ಬೇಲಿವರಿವಂತೆ ಎನ್ನ ಮನವಯ್ಯ ಎಂಬ ಶಬ್ದಕ್ಕರ್ಥ. ವ್ಯಾಳ್ಯವ್ಯಾಳ್ಯಕ್ಕೊಂದು ಪ್ರಕಾರವಾಗುವ ಊಸರವಳ್ಳಿಯ ಹಾಂಗೆನ್ನ ಮನಸ್ಸು ನಾನಾ ಪ್ರಪಂಚಿಗಿಚ್ಛೈಸುವುದೆಂಬುದೀಗ ಹೊತ್ತಿಕೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು ಎಂಬ

ಶಬ್ದಕ್ಕರ್ಥ.  ಬಾಯಲ್ಲಿ ತಿಂದು ಬಾಯಲ್ಲಿ ಕೆಡಿಸುವ ತೊಗಲಬಾವಲೆಯ ಹಕ್ಕಿ ಹಾಂಗೆ ಪ್ರಪಂಚವನುಭವಿಸಿ ಪ್ರಪಂಚಿನಲ್ಲಿಯೆ ಹೊಕ್ಕು ಹೊದಕುಳಿಗೊಳುತ್ತಿಹುದೆಂಬುದೀಗ ಬಾವಲ ಬಾಳವೆಯಂತೆನ್ನ ಮನವು ಎಂಬ ಶಬ್ದಕ್ಕರ್ಥ.  ಸುಜ್ಞಾನದಲ್ಲಿ ಆತ್ಮನು ಕಿಂಚಿತು ಎಚ್ಚತ್ತಡೆಯೂ ಸತ್ಕ್ರಿಸಮ್ಯಕ್‌ಜ್ಞಾನಾಚರಣೆಯ ವರ್ಧನತ್ವದಿಂದೆ  ಮುಕ್ತಿಮಾರ್ಗನೆಯ್ದಲರಿಯದೆ ಇಂದ್ರಿಯವಿಷಯ ಪ್ರಪಂಚಿನಲ್ಲಿಯೇ ಜಾಗ್ರತವಾಗಿಪ್ಪುದು ಎಂಬುದೀಗ ನಡುವಿರಳೆದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ ಎಂಬ ಶಬ್ದಕ್ಕರ್ಥ. ನಾಹಂಭಾವ ನಷ್ಟವಾದ ಚಿದಹಂಕಾರ ಭಕ್ತಿಗಿಚ್ಛೈಸಿದರೆ ದೊರಕೊಳುವುದೆ?  ದೊರಕೊಳಲಜೆಯದೆಂಬುದೀಗ ನಾನಿಲ್ಲದ ಭಕ್ತಿಯ ಬಯಸಿದರುಂಟೆ ಎಂಬ ಶಬ್ದಕ್ಕರ್ಥ.  ಕೂಡಲಸಂಗಮದೇವ– ಎಲೆ ಪರಶಿವಲಿಂಗವೆ.

V ---------------------------------------------------------------

ಇಂದ್ರಿಯಂಗಳಲ್ಲಿ ಎನ್ನ ಮನವು ವರ್ತಿಸಿತೆಂಬುದೀಗ ಓತಿ ಬೇಲಿವರಿದಂತೆನ್ನ ಮನವು ಎಂಬುದರ್ಥ.  ಬಾಯಲ್ಲಿ ತಿಂದು ಬಾಯಲ್ಲಿ  ಮಲವಿಸರ್ಜನೆಯಂ ಮಾಡುವ ತೋಲಬಾವುಲಿಯ ಹಾಂಗೆ ಅಣವಾದಿ ಮಲತ್ರಯಂಗಳಲ್ಲಿ ವರ್ತಿಸಿತ್ತೆನ್ನ ಮನವು ಎಂಬುದೀಗ ಬಾವಲ ಬಾಳುವೆಯಂತೆನ್ನ ಮನವೆಂಬುದರ್ಥ.   ಸಂಕಲ್ಪವಿಕಲ್ಪದಿಂದ ವರ್ತಿಸಿತ್ತೆನ್ನ ಮನವು ಎಂಬುದೀಗ ಹೊತ್ತಿಕೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು  ಎಂಬುದರ್ಥ ಅಜ್ಞಾನದಲ್ಲಿ ಎಚ್ಚತ್ತ ಅಜ್ಞಾಗಿಗೆ ಇಂದ್ರಿಯಂಗಳಲ್ಲಿ ಜ್ಞಾನೋದಯವಾಯಿತ್ತೆಂಬುದೀಗ ಇರುಳೆದ್ದಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ ಎಂಬುದರ್ಥ.

---

## ೨೯೦

**ಸತ್ಯ ಸಂಬಂಧ 'ಸ್ವ'ಯವಾದ ಭತ್ಯಾಚಾರವೆನಗಿಲ್ಲವಯ್ಯಾ, ಅನುದಿನ ನಿಮ್ಮ  ನೆನೆಯಲು ಭಕ್ತಿಯಿಲ್ಲವಯ್ಯಾ ಎನಗೆ, ಕೂಡಲ ಸಂಗಮದೇವಾ  ಕರುಣಿ^ಸಿ^  ಕೃಪೆ^ ಮಾಡಯ್ಯಾ**

I ---------------------------------------------------------------

ಸತ್ಯಸಂಬಂಧ ಸ್ವಯವಾದ  ಭೃತ್ಯಾಚಾರವೆನಗಿಲ್ಲವಯ್ಯಾ: ಸತ್ಯ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡುವುದು, ಸಂಬಂಧ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವುದು, ಸ್ವಯವಾದ–ಪ್ರಾಣಜ್ಞಾನದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡುವಂಥ, ಭೃತ್ಯಾಚಾರವೆನಗಿಲ್ಲವಯ್ಯಾ–ಭಯಭಕ್ತಿ ಭೃತ್ಯಾಚಾರದಿಂದ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹ ಮಾಡುವಂಥವರು.  ಮತ್ತಂ, ಸತ್ಯ–"ಆಯತಂ ಇಷ್ಟಲಿಂಗಂ ಚ" ಎಂದು ಅಂಗದಲ್ಲಿ ಇಷ್ಟಲಿಂಗಸಂಬಂಧವ ಮಾಡಿಕೊಂಬುವುದು.  ಸಂಬಂಧ–"ಸ್ವಾಯತಂ ಪ್ರಾಣಲಿಂಗಂ ಚ"  ಎಂದು ಮನದಲ್ಲಿ ಪ್ರಾಣಲಿಂಗಸಂಬಂಧವ ಮಾಡಿಕೊಂಬುವುದು, ಸ್ವಯವಾದ– "ಸಂಯೋಗಂ ಭಾವಲಿಂಗಂ ಚ" ಎಂದು ಆತ್ಮಾಂಗದಲ್ಲಿ ಭಾವಲಿಂಗಸಂಬಂಧವ ಮಾಡಿಕೊಂಬುವಂಥ ಭೃತ್ಯಾಚಾರವೆನಗಿಲ್ಲವಯ್ಯಾ– ತ್ರಿವಿಧಾಂಗದಲಿ ತ್ರಿವಿಧಲಿಂಗ ಸಂಬಂಧವ ಮಾಡಿಕೊಂಡು ತ್ರಿವಿಧಲಿಂಗದ ಭಕ್ತಿವಿಡಿದಾಚರಿಸುವಂಥ  ಭೃತ್ಯಾಚಾರವೆನಗುಂಟಾಗಿಲ್ಲವಯ್ಯಾ.  ಅನುದಿನ–ಎಲ್ಲಾಗಳೂ,  ನಿಮ್ಮ

ನೆನೆಯಲು-ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಲು, ಭಕ್ತಿಯಿಲ್ಲವಯ್ಯಾ-ಶಿವಾದ್ವೈತಭಕ್ತಿ ಎನ್ನಲ್ಲುಂಟಾಗಿಲ್ಲವಯ್ಯಾ. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಎನಗೆ-ನನಗೆ, ಕರುಣಿಸಿ-ರಕ್ಷಣ್ಯವ ಮಾಡಿ, ಕೃಪೆಮಾಡಯ್ಯಾ-ದಯಮಾಡಯ್ಯಾ.

IV------------------------------------------------------------------------

1-1 ಸ (ತ). 2-2 x (ತ). 3+ ಯ (ತ)

..........................

ಪರವೇ ಗುರು, ಅಪರವೇ ಶಿಷ್ಯನೆಂದು ಮನದಲ್ಲಿ ನೆನೆವ ಭಕ್ತಿಯ ಕೊಡು ಎಂಬುದೀ ವಚನದರ್ಥ.

---

೨೯೧

**ಶಬ್ದಸಂಭಾಷಣೆಯ ನುಡಿಯ ವರ್ತಿಸಿ ನುಡಿವೆ, ತೊಡಹದ [1]ಕೆಲಸದ ಬಣ್ಣದಂತೆ[1] ಕಡಿಹಕ್ಕೆ ಒರೆಗೆ ಬಾರದು ನೋಡಾ! ಎನ್ನ ಮನದಲೊಂದು ಹೃದಯದಲೊಂದು ವಚನದಲೊಂದು ನೋಡಾ. ಕೂಡಲಸಂಗಮದೇವಾ, ಆನು ಭಕ್ತನೆಂಬ ಹುಸಿಯ ಮಸಕವ ನಾನೇನ ಬಣ್ಣಿಸುವೆನಯ್ಯಾ?**

I ------------------------------------------------------------------------

ಶಬ್ದಸಂಭಾಷಣೆಯ ನುಡಿಯ ವರ್ತಿಸಿ ನುಡಿವೆ: ಶಬ್ದಸಂಭಾಷಣೆಯ-ಶಿವತತ್ವ ಜ್ಞಾನಾನುಭಾವ ಪ್ರಸಂಗವನ್ನು, ವರ್ತಿಸಿ-ಅವಗ್ರಹಿಸಿ, ನುಡಿವೆ-ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬೆನು. ತೊಡಹದ ಕೆಲಸದ ಬಣ್ಣದಂತೆ-ಪೆಟ್ಟಿಗೆಗಳ ಮೇಲಾಗಲಿ ಸಂದುಗಳ ಮೇಲಾಗಲಿ ಕದಗಳ ಮೇಲಾಗಲಿ ಲಾಜಾವರ ಬಣ್ಣವ ಮಾಡಿದಲ್ಲಿ, ಕಡಿಹಕ್ಕೆ-ಉಳಿಗಳಿಂದ ಕಡಿಕಡಿದು ನೋಡಿದರೂ, ಬಡಿಹಕ್ಕೆ-ಚಮ್ಮಟಿಗೆಯಿಂದ ತದಿತದಿಕಿ ನೋಡಿದರೂ, ಒರೆಗೆ-ಮಚ್ಚಗಲ್ಲ ಮೇಲಿಟ್ಟು ಒರೆದೊರೆದು ನೋಡಿದರೂ, ಬಾರದು ನೋಡಾ! ಅದರೊಳಗೆ ಹಾಗ ಬೇಳೆ ತೂಕ ಚಿನ್ನವಾದರೂ ಹೊರಟೀತೆ? ಹೊರಡದು ಕಂಡಾ ಎಂಬ ದೃಷ್ಟೋಪಮಾನದ ಹಾಂಗೆ,

● ತೊಡಹದ ಕೆಲಸದ ಬಣ್ಣದಂತೆ-ಬಹಿರಂಗದಲ್ಲಿ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೂ ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವೇ ಉಂಟಾಗಿರ್ಪುದು. ಕಡಿಹಕ್ಕೆ-ಸೇದಿರಾಜಯ್ಯಗಳ ಮನಪದಾರ್ಥವನ್ನು ಅಲಗಿನಿಂದ ಘಾತಿಸಿ ಘಾತಿಸಿ ತೆಗೆದುಕೊಂಡ ಹಾಂಗೆ, ಬಡಿಹಕ್ಕೆ-ಇಮ್ಮಡಿ ಮೊನೆ ⁽ವಿಡಿ⁾ ರಾಯರ ಜೀವರತ್ನವನ್ನು ಕುಠಾರದಿಂದ ಕಡಿಕಡಿದು ತೆಗೆದುಕೊಂಡ ಹಾಂಗೆ, ಒರೆಗೆ ಬಾರದು ನೋಡಾ!-ಬಹಿರಂಗದಲ್ಲಿ ಎಲೋ ಭಕ್ತ ತನುವ ಕೊಡು ಮನವ ಕೊಡು ಧನವ ಕೊಡುಯೆಂದು ಒರೆದೊರೆದು ⁽ಕೇಳಿ⁾ ನೋಡಿದರೂ ಅಂತರಂಗದಲ್ಲಿ ಶಿವಾದ್ವೈತಭಕ್ತಿಯೆಂಬ ಬಣ್ಣಕ್ಕೆ ಬಂದೀತೆ? ಬರಲರಿಯದು ಕಂಡಾ.

ಎನ್ನ ಮನದಲ್ಲೊಂದು–"ಮನವೆನಲು ತನುವಕ್ಕುಂ" ಎಂದು ತನುವಿನಲ್ಲಿ ಲಲಾ[ಟ]ದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿರ್ಪೆನು. ಹೃದಯದಲೊಂದು–ಅಂತರಂಗದಲ್ಲಿ ವಂಚನೆ ಉಪಾಧಿ ಕುರಹಕ ಪ್ರಪಂಚೆಂಬ ಕಾಪಟ್ಯವೇ ಉಂಟಾಗಿರ್ಪುದು. ವಚನದಲೊಂದು ನೋಡಾ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬುವೆನು ನೋಡಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಆನು ಭಕ್ತನೆಂಬ–ನಾನು ನಿರ್ವಂಚಕ ಸದ್ಭಕ್ತನೆಂದು ಹೇಳುವ, ಹುಸಿಯ–ಅನೃತದ, ಮಸಕವ–ಉರವಣಿಯನು, ನಾನೇನ ಬಣ್ಣಿಸುವೆನಯ್ಯಾ?–ನಾನೆಂತೆಂದು ಒಪ್ಪವಿಟ್ಟು ಹೇಳವಯ್ಯಾ.

..........................

೧–೧ + ಧರ (ಗ). ೨–೨ x (ಗ).

IV------------------------------------------------------------

1–1 ಬಣ್ಣದ ಕೆಲಸದಂತೆ (ತ). 2–2 x (ತ).

..........................

ಶಬ್ದ ಬ್ರಹ್ಮವನೆ ನುಡಿವೆ, ಅಂತರಂಗ ಬಹಿರಂಗ ಒಂದಾಗದೆ ಭಕ್ತನೆಂದೆಂಬುದು ಹುಸಿಯೆಂಬುದೀ ವಚನದರ್ಥ.

---

೨೯೨

**ಹಾಲ ತೊಱೆಗೆ ಬೆಲ್ಲದ ಕೆಸಱು, ಸಕ್ಕರೆಯ ಮಳಲು, ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು, ಬೇಱೆ ಬಾವಿಯ ತೋಡಿ, ಉಪ್ಪನೀರನುಂಬವನ ವಿಧಿಯಂತಾಯಿತ್ತೆನ್ನ ಮತಿ, ಕೂಡಲಸಂಗಮದೇವಾ.**

I------------------------------------------------------------

ಹಾಲ ತೊಱೆಗೆ ಬೆಲ್ಲದ ಕೆಸಱು : ಹಾಲತೊಱೆಗೆ–ಕ್ಷೀರ ಹರಿವಂಥ ನದಿಗೆ, ಬೆಲ್ಲದ–ಗೂಡದ, ಕೆಸಱು–ಪಂಕವು, ಸಕ್ಕರೆಯ ಮಳಲು : ಸಕ್ಕರೆಯ–ಚಿನ್ನಿಸಕ್ಕರಿ ರಾಯಪುರಿ ಸಕ್ಕರಿ ಮೊಗದುಮ್ಮಿ, ಸಕ್ಕರಿಯ, ಮಳಲು–ಸೈಕತವು, ತವರಾಜದ ನೊರೆ ತೆರೆಯಂತೆ–ನಾಬತ್ತು ಸಕ್ಕರಿಯ ಹಾಂಗೆ, ಆದ್ಯರ ವಚನ–ಪೂರ್ವಗಣಂಗಳು ಹಾಡಿಕೊಂಡಂಥ ವಚನಶಾಸ್ತ್ರಂಗಳು, ಇರಲು–ಉಂಟಾಗಿರುತ್ತಿರಲು, ಬೇಱೆ ಬಾವಿಯ ತೋಡಿ ಉಪ್ಪನೀರನುಂಬವನ ವಿಧಿಯಂತೆ–ಕ್ಷುಧೆಯಾದುದೇ ಉಂಟಾದರೆ ಹಾಲನ್ನು ಕುಡಿದುಕೊಂಡು ಬೆಲ್ಲವನ್ನು ತಿಂದುಕೊಂಡು ಸಕ್ಕರೆಯನ್ನು ಮುಕ್ಕಿಕೊಂಡು ತವರಾಜದ ನೊರೆ ತೊರೆಯನ್ನು ಮೆದ್ದುಕೊಂಡು ತೃಷೆಯನ್ನು ಅಡಗಿಸಿಕೊಳಬೇಕಲ್ಲದೆ, ಬೇಱೆ –ಪೃಥಕ್ಕಾಗಿ, ಬಾವಿಯ ತೋಡಿ–ಕೂಪವನ್ನು ಖನನಂಗೈದು ಉಪ್ಪನೀರ ಕುಡಿಯುವುದಕ್ಕಾದೀತೆ? ಆಗದು. ಹಾಂಗೆ,

ಹಾಲತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು ತವರಾಜದ ನೊರೆ ತೆರೆಯಂತೆ ಪೂರ್ವಗಣಂಗಳು ಹಾಡಿದಂಥ ವಚನಶಾಸ್ತ್ರವಿರಲು ಆ ವಚನ ಶಾಸ್ತ್ರವನ್ನೇ ಓದಿ ಹಾಡಿ ಪರಿಣಾಮಿಸಬೇಕಲ್ಲದೆ ಅವನ್ನು ಬಿಟ್ಟು ಉಪ್ಪುನೀರಿಗೆ ಸಮಾನವಾದ ಭಾರತ ರಾಮಾಯಣ ತರ್ಕ ವ್ಯಾಕರಣ ಛಂದಸ್ಸು ಮೊದಲಾದ ಭಿನ್ನಶಾಸ್ತ್ರಂಗಳು ನವರಸಯುಕ್ತವಾಗ್ಯೆದಾವೆ? ಬಹು ಚೆಲೋ ಶಾಸ್ತ್ರವೆಂದು ಓದಿ ಹಾಡಿ ಪರಿಣಾಮಿಸವಂಥವನ ಇರಸ್ಥಿತಿಯೂ ಹಾಲು ತೊರೆಗೆ ಬೆಲ್ಲದ ಕೆಸರು ಸಕ್ಕರಿಯ ಮಳಲು ತವರಾಜದ ನೊರೆತೆರೆಯನ್ನು ಬಿಟ್ಟು ಬೇರೆ ಬಾವಿಯ ತೋಡಿ ಉಪ್ಪನಿರನುಂಬವನ ಇರಸ್ಥಿತಿಯೂ ಒಂದೇಯಾಗಿಪ್ಪುದು, ಆಯಿತ್ತು–ಆ ರೀತಿಯಾಯಿತ್ತು, ಎನ್ನಮತಿ–ಎನ್ನ ಬುದ್ಧಿಯು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II--------------------------------------------------------------------------

ಹಾಲತೊಱಗೆ ಬೆಲ್ಲದ ಕೆಸಱು–ಭಕ್ತ್ಯಮೃತವೆಂಬ ಸಮುದ್ರಕ್ಕೆ ನಿತ್ಯಾನಿತ್ಯ ವಿಚಾರವನರಿವಂಥ ಜ್ಞಾನವೆಂಬ ಗುಡಪಂಕವು, ಸಕ್ಕರೆಯ ಮಳಲು–ವೈರಾಗ್ಯವೆಂಬ ಮಧುರಚೂರ್ಣದ ಸೈಕತವು, ತವರಾಜದ ನೊರೆತೆರೆಯಂತೆ–ಮಹಾಜ್ಞಾನದ ಜ್ಞಾನಕ್ರೀಗಳೆಂಬ ಡಿಂಡೀರ ತರಂಗಗಳು ಮತ್ತಂ ಜ್ಞಾನಾಮೃತ ಶರಧಿಗೆ ಅದಕ್ಕೆ ತಕ್ಕ ಜ್ಞಾನದ ಪ್ರಸಂಗವ ಮಾಡೂದು ಸರ್ವಾಚಾರ ಸಂಪತ್ತಿನಾಚರಣೆ ಸೈತಕವು. ಪೂರ್ವಾಪರ ಜ್ಞಾನಾಚರಣೆಯೆಂಬ ನೊರೆ ತೆರೆಗಳುಳ್ಳ, ಆದ್ಯರ ವಚನವಿರಲು–ಪೂರ್ವಾಚಾರ್ಯರುಗಳ ವಾಕ್ಯಾಮೃತವಿರಲು, ಬೇರೆ ಬಾವಿಯ ತೋಡಿ ಉಪ್ಪುನೀರನುಂಬವನ ವಿಧಿಯಂತೆ ಆಯಿತ್ತೆನ್ನ ಮತಿ–ಅದ ಬಿಟ್ಟು ಪೃಥಕ್ಕಾಗಿ ನಾನಾಶಾಸ್ತ್ರವನೋದಿ ಛಂದಗಣನೇಮಗಳಿಂದ ತನುಬಳಲಿ ಮನಬಳಲಿ ಆತ್ಮಬಳಲಿ ಕಬ್ಬಗಳ ಮಾಡುವನ ಮಾಟದ ಹಾಂಗಾಯಿತ್ತೆನ್ನ ಜ್ಞಾನವು.

IV--------------------------------------------------------------------------

ಗುರುವಾಕ್ಯ ಪರಮಮಂತ್ರ, ಪರಮಾಮೃತವೆಂದು ನಂಬದೆ ಒಂದೊಂದ ಹೇಳೂದೆಲ್ಲಾ ಹೆಡ್ಡರೆಂಬುದೀ ವಚನದರ್ಥ.

---

೨೯೩

**ಜನ್ಮ ಹೊಲ್ಲೆಂಬೆನೆ ? ಜನ್ಮವ ಬಿಡಲಹೆ[1]ನು,[1] ಭಕ್ತರೊಲವ ಪಡೆವೆನೆ? ಭಕ್ತಿಯ ಪಥವನಱವೆ[1]ನು[1] ಲಿಂಗವೆಂದು ಬಲ್ಲೆನೆ? ಜಂಗಮವೆಂದು [3]ಕಾಂಬೆ[1]ನು[1]; ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ ? ಕೈಲಾಸವ ಕಾಣಬಲ್ಲೆ[1]ನು[1], ಎನ್ನಲ್ಲಿ [4]ಈ[4] ನಡೆಯಿಲ್ಲವಾಗಿ ನಾನು ಭಕ್ತನೆಂತಪ್ಪನಯ್ಯಾ ಕೂಡಲಸಂಗಮದೇವಾ?**

I---------------------------------------------------------------------------

ಜನ್ಮ ಹೊಲ್ಲೆಂಬೆನೆ? ಜನ್ಮವ ಬಿಡಲಹೆನು: ಜನ್ಮ–ಅನೇಕ ಜನ್ಮಂಗಳಲ್ಲಿ ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ಯವನ್ನು, ಹೊಲ್ಲೆಂಬೆನೆ? –ಬಹು ಕ್ಷೀಣವೆಂದು ತಿಳಿವೆನೆ? ಜನ್ಮವ ಬಿಡಲಹೆನು–ಉತ್ಪತ್ಯವನು ನಷ್ಟವ ಮಾಡುವಂಥದನು ಅರಿಯೆನು. ಅನೇಕ ಜನ್ಮಂಗಳಲ್ಲಿ ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ಯವ ಬಹುಕ್ಷೀಣವೆಂದು ತಿಳಿಯದ ನಿಮಿತ್ತ ಉತ್ಪತ್ಯವ ಮಾಡುವಂಥದನು ಅರಿಯೆನು.

ಭಕ್ತರೊಲವ ಪಡೆವೆನೆ?: ಭಕ್ತರ–ಶಿವಭಕ್ತರ ಒಲವ–ಕೃಪೆಯನು, ಪಡೆವೆನೆ?–ಹಡೆದುಕೊಂಬುವೆನೆ, ಭಕ್ತಿಯ ಪಥವನಜೆವೆನು–ಭಕ್ತಿಯ ಮಾರ್ಗವನ್ನು ತಿಳಿವೆನು. ಭಕ್ತರ ಕೃಪೆಯನ್ನು ಹಡೆಯುವಂಥದನು ತಿಳಿಯದ ನಿಮಿತ್ತ ಭಕ್ತಿಯ ಮಾಡುವಂಥ ಮಾರ್ಗವನ್ನು ಅರಿಯೆನು. ಲಿಂಗವೆಂದು ಬಲ್ಲೆನೆ? ಜಂಗಮವೆಂದು ಕಾಂಬೆನು: ಲಿಂಗವೆಂದು ಬಲ್ಲೆನೆ? ಲಿಂಗಪೂಜ ಮಾಡುವಂಥದನು ಅರಿವೇನೆ? ಜಂಗಮವೆಂದು ಕಾಂಬೆನು–ಜಂಗಮಭಕ್ತಿ ಮಾಡುವಂಥ ಮಾರ್ಗವನ್ನು ತಿಳಿವೆನು. ಲಿಂಗಪೂಜೆಯ ಮಾಡುವಂಥದನು ತಿಳಿಯದ ನಿಮಿತ್ತ ಜಂಗಮಭಕ್ತಿ ಮಾಡುವಂಥ ಮಾರ್ಗವನ್ನು ಅರಿಯೆನು.

ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ? : ನಿಚ್ಚ ನಿಚ್ಚ–ದಿನದಿನಂಪ್ರತಿಯಲ್ಲಿ, ಶಿವರಾತ್ರಿಯ ಮಾಡಬಲ್ಲೆನೆ?–ಶಿವರಾತ್ರಿಯ ಸಂಕಣ್ಣಯ್ಯಗಳ ಹಾಂಗೆ ಬೇಡರ ಕಣ್ಣಪ್ಪಯ್ಯಗಳ ಹಾಂಗೆ ಏಕಾಗ್ರಚಿತ್ತದಿಂದೆಚ್ಚತ್ತು ಲಿಂಗಪೂಜೆಯ ಮಾಡುವಂಥದನು ಅರಿವೆನೆ? ಕೈಲಾಸವ ಕಾಣಬಲ್ಲೆನು–ಕೈಲಾಸಕ್ಕಧಿಪತಿಯಾದ ಮಹಾಲಿಂಗದಲ್ಲಿ ಕೂಡುವಂಥ ಕೂಟವನು ಅರಿವೆನು. ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವಂಥದನು ತಿಳಿಯದ ನಿಮಿತ್ತ ಕೈಲಾಸಕ್ಕಧಿಪತಿಯಾದ ಮಹಾಲಿಂಗದಲ್ಲಿ ಕೂಡುವಂಥ ಕೂಟವನ್ನು ತಿಳಿಯೆನು. ಎನ್ನಲ್ಲಿ ಈ ನಡೆಯಿಲ್ಲವಾಗಿ : ಎನ್ನಲ್ಲಿ–ಸಂಗನಬಸವೇಶ್ವನಲ್ಲಿ, ಈ ನಡೆಯಿಲ್ಲವಾಗಿ–ಜನ್ಮ ಹೊಲ್ಲೆಂಬುದು ಜನ್ಮವ ಬಿಡುವುದು ಭಕ್ತರ ಕೃಪೆಯನ್ನು ಹಡೆವಂಥದನು ಅರಿವುದು ಭಕ್ತಿಯ ಮಾಡುವಂಥ ಮಾರ್ಗವನ್ನು ತಿಳಿವುದು ಲಿಂಗಪೂಜೆಯ ಮಾಡುವಂಥದನು ಅರಿವುದು ಜಂಗಮಭಕ್ತಿ ಮಡುವಂಥ ಮಾರ್ಗವನ್ನು ತಿಳಿವುದು ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವಂಥದನು ಅರಿವುದು ಕೈಲಾಸಕ್ಕಧಿಪತಿಯಾದ ಮಹಾಲಿಂಗದಲ್ಲಿ ಕೂಡುವಂಥ ಕೂಟವನ್ನು ತಿಳಿವುದು. ಇಂತಪ್ಪ ಆಚರಣೆ ಎನ್ನಲ್ಲುಂಟಾಗಿಲ್ಲವಾಗಿ, ನಾನು ಭಕ್ತನೆಂತಪ್ಪೆನಯ್ಯಾ–ನಾನು ನಿರ್ವಂಚಕ ಸದ್ಭಕ್ತ ಹೇಂಗಾದೇನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II--------------------------------------------------------------------------

1–1 ನೇ (ಚ,ಜ).

.........................

ಜನ್ಮ ಹೊಲ್ಲೆಂಬೆನೆ? ಜನ್ಮವ ಬಿಡಲಹೆನೇ?–ಆದ್ಯರ ವಚನವು ಮನಕ್ಕೆ ವೇದಿಸಿ ಸತ್ಯಸದಾಚಾರಸನ್ಮಾರ್ಗದಲ್ಲಿ ಆಚರಿಸಬಲ್ಲೆನೆ? ಜನ್ಮವ ಕಷ್ಟವ ಮಾಡುವೆನು.

IV--------------------------------------------------------------------------

2–1 ತೊಜೆವೆನು (ತ). 3–1ಕಾಬೆನೆ (ತ). 4–4 x (ತ).

.........................

ಗುರುಲಿಂಗಜಂಗಮಭಕ್ತರೊಳಗಿದ್ದರೆ ಜನನ ಕೆಡುವುದು. ಭಕ್ತನಾಗಿ ಮುಕ್ತನಹನೆಂಬುದೀ ವಚನದರ್ಥ.

---

ಉಡುವಿನ ಭಾವದಲ್ಲಿ ಹಡೆದರೆಮ್ಮವರು, ಊಸರವಳ್ಳಿಯಂತೆ ಎನ್ನಿರಲು, ಬಾವುಲ ಬಾಳುವೆಯ ತೆಱನಂತೆ ! ಹೊತ್ತಾಱೆ ಎದ್ದ ಕುರುಡಂಗೆ ಅಗಸೆಯಲ್ಲಿ ಅಸ್ತಮಾನವಾದಂತೆ ಆನು ಭಕ್ತಿಯ ಬಯಸಿದಡಹುದೆ ಕೂಡಲಸಂಗಮದೇವಾ?

I ------------------------------------------------------------------------------

ಉಡುಪಿನ ಭಾವದಲ್ಲಿ ಹಡೆದರೆಮ್ಮವರು: ಉಡುವಿನ ಭಾವದಲ್ಲಿ–ದುರ್ಭಾವದಲ್ಲಿ, ಹಡೆದರು–ಪಡೆದರು, ಎಮ್ಮವರು–ಎಮ್ಮ ಜನನಿಜನಕರು, ಊಸರವಳ್ಳಿಯಂತೆನ್ನಿರವು–ಗೋಸುಂಬೆಯೆಂಬವಂಥದು ಹೊತ್ತಾರೆ ಹಚ್ಚಗಿರುವುದು ಮಧ್ಯಾಹ್ನಕ್ಕೆ ತುಸು ನಸುಕೆಂಪಾಗಿರುವುದು ಸಾಯಂಕಾಲಕ್ಕೆ ಕರ್ರನೆ ಕಂದಿ ಕಪ್ಪಾಗುವುದು ಹಾಂಗೆ, ನಿರ್ಮಲಾಯಮಾನವಾದ ಆತ್ಮನಿಗೆ ಮಾಯಾಪ್ರಪಂಚಿನ ಮರವೆ ಬಂದು ಮುಸುಕಿರಲು ಅಷ್ಟೊತ್ತು ಪ್ರಪಂಚಿಯಾಗಿ ಅಷ್ಟೊತ್ತು ನಿಃಪ್ರಪಂಚಿಯಾಗಿ ಅಷ್ಟೊತ್ತು ಜ್ಞಾನಿಯಾಗಿ ಅಷ್ಟೊತ್ತು ಅಜ್ಞಾನಿಯಾಗಿ ಹೀಂಗೆ ಅರಹುಮರಹು ಜ್ಞಾನ ಅಜ್ಞಾನದೊಡನೆ ಕೂಡಿ ಚರಿಸುವಂಥ ಎನ್ನ ಇರಸ್ಥಿತಿಯೂ ಆ ಊಸರವಳ್ಳಿಯ ಇರಸ್ಥಿತಿಯೂ ಒಂದೇ ಆಗಿರ್ಪುದು. ಬಾವುಲ ಬಾಳುವೆಯ ತೆಱನಂತೆ–ತೊಗಲಬಾವುಲಿಯೆಂಬಂಥದು ಕಾಲುಮೇಲುಮಾಡಿ ತಲೆ ಕೆಳಗಾಗಿ ನೇತುಹಾಕಿಕೊಂಡಿರುವುದು. ಅದು ಬಾಯಲ್ಲೇ ತಿಂಬುವುದು ಬಾಯಲ್ಲೇ ವಿಷ್ಟಿಸುವುದು. ಹಾಂಗೆ, ಜಂಗಮಮೂರ್ತಿಗಳನು ಇವರು ಜ್ಞಾನಿಗಳು ಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ಸ್ತೋತ್ರವ ಮಾಡಿ ಮತ್ತೂ ಅದೇ ಬಾಯಲ್ಲೇ ಇವರು ಆಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರೆಂದು ದೂಷಣೆಯ ಮಾಡುವಂಥ ಎನ್ನ ಇರಸ್ಥಿತಿಯೂ ಆ ತೊಗಲಬಾವುಲಿ ಇರಸ್ಥಿತಿಯೂ ಒಂದೇಯಾಗಿರ್ಪುದು.. ಹೊತ್ತಾಱೆ ಎದ್ದ ಕುರುಡಂಗೆ ಅಗಸೆಯಲ್ಲಿ ಅಸ್ತಮಾನವಾದಂತೆ: ಹೊತ್ತಾಱೆ ಎದ್ದ–ಪ್ರಾತಃಕಾಲದಲ್ಲಿ ಉತ್ಥಾನಂಗೈದ, ಕುರುಡಂಗೆ–ಅಂಧಕಂಗೆ, ಅಗಸೆಯಲ್ಲಿ ಅಸ್ತಮಾನವಾದಂತೆ: ಆವುದಾನೊಂದು ಊರುಕೇರಿಗೆ ಹೋಗಬೇಕೆಂದು ರೊಟ್ಟಿಬುತ್ತಿಯನ್ನು ಕಟ್ಟಿಕೊಂಡು ಹೋಗುವಾಗ ಆ ಸಂದು ಈ ಸಂದು ಬಿದ್ದು ಕಡೆಗೆ ಹೆಬ್ಬಾಗಿಲಿಗೆ ಬರುವಷ್ಟೊತ್ತಿಗೆ ಸಾಯಂಕಾಲವಾಗುವದು. ಹಾಂಗೆ, ಕುಂತು ನಿಂತಲ್ಲಿ ಹೊತ್ತುಗಳೆಯಬಾರದು ಹುಳುಹುಪ್ಪಡಿ ಕಡಿದಾವೆಂದು ಹಾಂಗೆ ಸವರಾಡುತ್ತ ತನ್ನ ಗೊತ್ತಿಗೆ ಬರುತ್ತಿಹನೆಂಬ ಹಾಂಗೆ.

ಹೊತ್ತಾಱೆ ಎದ್ದ–ಕಿಂಚಿತ್ ಜ್ಞಾನೋದಯದಿಂದ ಗುರುಲಿಂಗಜಂಗಮದ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥ, ಕುರುಡಂಗೆ–ಜಾತ್ಯಂಧಕನಾದ ಜೀವನಿಗೆ, ಅಗಸೆಯಲ್ಲಿ ಅಸ್ತಮಾನವಾದಂತೆ–ಅಗಸೆಯೆಂದರೆ ಇಂದ್ರಿಯಂಗಳು. ಆ ಇಂದ್ರಿಯ ವಿಷಯ ಪ್ರಪಂಚದೊಡನೆ ಕೂಡಿ ಚರಿಸಿ ಭವಕ್ಕೆ ಹೋಗುವಂಥದೇ ಪ್ರಾಪ್ತಿಯಾಗಿಪ್ಪುದು. ಅನು–ಸಂಗನಬಸವೇಶ್ವರನು, ಭಕ್ತಿಯ–ಶಿವಾದ್ವೈತಭಕ್ತಿಯನ್ನು, ಬಯಸಿದಡಹುದೆ?–ಇಚ್ಛೈಸಿದರೆ ದೊರೆಕೊಂಡಿತ್ತೆ? ದೊರಕೊಳ್ಳದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II------------------------------------------------------------------------------

ಉಡುವಿನ ಭಾವದಲ್ಲಿ ಹಡೆದರೆಮ್ಮವರು–ಗುರುಲಿಂಗಜಂಗಮವೊಂದೇ ಎಂದು ಭಕ್ತಿಯ ಮಾಡಿ ಮುಕ್ತಿಯನೆಯ್ದಿ ಹೋದರು ಎಮ್ಮ ಶಿವಗಣಂಗಳು.

III--------------------------------------------------------------------------------

ಸೂಕ್ಷ್ಮಜ್ಞಾನದಲ್ಲಿ ಆತ್ಮನು ಕಿಂಚಿತ್ತು ಜಾಗ್ರ ಉಂಟಾದರೆಯೂ ಸಮ್ಯಜ್ಞಾನಾಚರಣೆಗಳ ವರ್ಧನತ್ವದಿಂದೆ ಮುಕ್ತಿಯನೆಯ್ದಲಱಿಯದೆ ಇಂದ್ರಿಯಂಗಳ ಪ್ರಪಂಚಿನಲ್ಲಿಯೆ ಅಜ್ಞಾನ ಉಂಟಾಗಿಪ್ಪುದು ಎಂಬುದೀಗ ಹೊತ್ತಾರೆ ಎದ್ದ ಕುರುಡಂಗೆ ಅಗಸೆಯಲ್ಲಿ ಅಸ್ತಮಾನವಾದಂತೆ ಎಂಬ ಶಬ್ದಕ್ಕರ್ಥ.

---

೨೯೫

**ಬಸುಱ ಬಾಳುವೆಗೆ ನಿಮ್ಮಲ್ಲಿ ಮಸಿಯ ಹೂಸಿ [1]ನೇಱಲ ಹಣ್ಣೆಂದು ಮಾಱುವನಂತೆ[1] ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮಱಹೊಕ್ಕೆನಯ್ಯಾ. ಆವುದ ಹುಸಿಯೆಂಬೆ? ಆವುದ ಕಿರಿದೆಂಬೆ? ಇದ ನೀನೆ ಬಲ್ಲೆಯಯ್ಯಾ ಕೂಡಲಸಂಗಮದೇವಾ, ನಾನು ಉದರಪೋಷಕನಯ್ಯಾ.**

I--------------------------------------------------------------------------------

ಬಸಿಱ ಬಾಳುವೆಗೆ–ಗೇಣುದ್ದ ಚೋಟುದ್ದ ಹೊಟ್ಟೆಯನ್ನು ಹೊರಕೊಂಬುದಕ್ಕೆ, ನಿಮ್ಮಲ್ಲಿ–ರಾಜರಲ್ಲಿ, ಮಸಿಯ ಹೂಸಿ ನೀಱಲಹಣ್ಣೆಂದು ಮಾಱುವನಂತೆ–ಒಬ್ಬಾನೊಬ್ಬ ಕಿರಾತನೇನಾದರೂ ಅಡವಿಗೆ ಹೋಗಿ ನೀರಲ ಕೆಂಗಾಯನ್ನು ಕೊಯ್ದುಕೊಂಡು ಬಂದು ಧೂಳಸಂಜೆಯಲ್ಲಿ ಇದ್ದಲ್ಲಿ ಮಸಿಯನ್ನು ಹೂಸಿ, ನೀಱಲಹಣ್ಣೆಂದು ಮಾಱುವನಂತೆ–ಜಂಬೂಫಳವೆಂದು ವಿಕ್ರಯಿಸಿಕೊಟ್ಟು ಅದರಿಂದ ಬಂದಂಥ ಹದಿನೆಂಟು ಧಾನ್ಯಂಗಳನು ತಂದುಕೊಂಡು ಘಟರಕ್ಷಣ್ಯ ಮಾಡಿಕೊಂಬಂಥ ಕಿರಾತನ ಹಾಂಗೆ ಎಂಬಲ್ಲಿ, ಕಾಲ ಸಾಲ ದಾರಿದ್ರ್ಯಕ್ಕಂಜಿ : ಕಾಲ–ಅರಗಾಲ ಬರಗಾಲ, ಸಾಲ–ರಿಣವು, ದಾರಿದ್ರ್ಯಕ್ಕೆ–ಬಡತನಕ್ಕೆ, ಅಂಜಿ–ಹೆದರಿಕೊಂಡು, ನಿಮ್ಮ ಮಱಹೊಕ್ಕೆನಯ್ಯಾ–ಈ ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮರೆಬಿದ್ದಿರ್ಪೆನಯ್ಯಾ. ಆವುದ ಹುಸಿಯೆಂಬೆ?–ಈ ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮರೆಬಿದ್ದಿರುವಂಥದು ಆವುದು ⌜ಸಟೆಯೆಂದು ಹೇಳುವೆನು, ಆವುದ ಕಿಱದೆಂಬೆ? – ಈ ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮರೆಬಿದ್ದಿರುವಂಥದು ಆವುದು⌝ ಸ್ವಲ್ಪವೆಂದು ಹೇಳುವೆನು. ಇದ ನೀನೆ ಬಲ್ಲೆಯಯ್ಯಾ–ಈ ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮರೆಬಿದ್ದಿರುವಂಥದನ್ನು ಪರಶಿವಲಿಂಗವೇ ನಿಮಗೆ ಅರಿಯಬರುವುದೆಂಬ ದೃಷ್ಟೋಪಮಾನದ ಹಾಂಗೆ,

● ಬಸುಱ ಬಾಳುವೆಗೆ–ಅಂಗದಾಚಾರಕ್ಕೆ, ನಿಮ್ಮಲ್ಲಿ–ಪರಶಿವಲಿಂಗದಲ್ಲಿ, ಮಸಿಯ ಹೂಸಿ–ಇಲ್ಲದ ಗುರುತ್ವವನ್ನು ಉಂಟುಮಾಡಿಕೊಂಡು, ನೀಱಲ ಹಣ್ಣೆಂದು ಮಾಱುವನಂತೆ–ಹಾಗದ ಕಾಸಿನ ಲಿಂಗಕ್ಕೆ ಹಣದಷ್ಟ ಕೂಲಿಯ ತೆಗೆದುಕೊಂಬುವನ ಹಾಂಗೆ ಮೋಕ್ಷಫಲಸ್ವರೂಪವಾದ ಇಷ್ಟಮಹಾಲಿಂಗವನ್ನು ಮಲಮಾಯಾಕರ್ಮಯುಕ್ತವಾದ ಪ್ರಕೃತಾತ್ಮರುಗಳ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕೊಟ್ಟು ಅವರಿಂದೇನಾದರೊಂದು ವಸ್ತುವನ್ನು ಪಡೆದುಕೊಂಡು ಹೊಟ್ಟೆಯ ಹೊರೆಕೊಂಬುವಂಥ ಅಜ್ಞಾನಿಯಾದ ಗುರುವಿನ ಇರಸ್ಥಿತಿಯೂ ಒಂದೇಯಾಗಿರ್ಪುದು. ಕಾಲ ಸಾಲ ದಾರಿದ್ರ್ಯಕ್ಕಂಜಿ : ಕಾಲ–ಯಮ ಸಂಬಂಧವಾದ, ಸಾಲ–ರಿಣವು, ದಾರಿದ್ರ್ಯಕ್ಕೆ–ಬಡತನಕ್ಕೆ, ಅಂಜಿ–ಹೆದರಿಕೊಂಡು, ನಿಮ್ಮ ಮಱಹೊಕ್ಕೆನಯ್ಯಾ–ನಿಮ್ಮ ಸತ್ಕ್ರಿಯಾಚಾರದ ಸೈಪವನ್ನು ಆಶ್ರಯಿಸಿಕೊಂಡಿರ್ಪೆನಯ್ಯ. ಆವುದ ಹುಸಿಯೆಂಬೆ ?– ಲಿಂಗವೇ ಶ್ರೇಷ್ಠ ಜಂಗಮವೇ ಸಾಮಾನ್ಯವೆಂದು

ಹೇಳುವೆನೆ ? ಹೇಳೆನು. ಆವುದ ಕಿರಿದೆಂಬೆ?-ಜಂಗಮವೇ ಶ್ರೇಷ್ಠ ಲಿಂಗವೇ ಸಾಮಾನ್ಯವೆಂದು ಹೇಳುವೆನೆ ? ಹೇಳೆನು. ಇದ ನೀನೆ ಬಲ್ಲೆಯಯ್ಯಾ-ಲಿಂಗವೇ ಶ್ರೇಷ್ಠ ಜಂಗಮವೇ ಸಾಮಾನ್ಯ, ಜಂಗಮವೇ ಶ್ರೇಷ್ಠ ಲಿಂಗವೇ ಸಾಮಾನ್ಯವೆಂದು ಹೇಳುವಂಥದು ಪರಶಿವಲಿಂಗವೇ ನಿಮಗರಿಯಬರುವುದಯ್ಯ ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಾನು ಉದರಪೋಷಕನಯ್ಯಾ !- ನಾನು ಹೊಟ್ಟೆಹೊರಕಗಯ್ಯಾ!

..........................

1-1 x (ಗ).

II------------------------------------------------------------------------

1-1 ನೇಜೆಲಹಣ್ಣ ಮಾಜುವಂತೆ (ಚ,ಜ).

..........................

ಬಸುಱ ಬಾಳುವೆಗೆ ನಿಮ್ಮಲ್ಲಿ ಮಸಿಯ ಹೂಸಿ ನೇಜೆಲಹಣ್ಣ ಮಾಜುವಂತೆ-ಅಪವಾದ ವಿಷಯಸುಖದ ಲುಬ್ಧತ್ವವು ಅನಂತಕೋಟಿ ಜನ್ಮಂಗಳಲ್ಲಿ ಹುಟ್ಟಿ ಹುಟ್ಟಿ ಬಂದು ಬಂದನಂತಕೋಟಿ ತೀರ್ಥಕ್ಷೇತ್ರಂಗಳಿಗೆ ಹೋಗಿ ಸ್ನಾನಪಾನಾದಿಗಳಂ ಮಾಡಿದರೂ, ಜಪತಪನಿತ್ಯನೇಮ ಕೃತ್ಯೋಪವಾಸ ಧ್ಯಾನ ಮೌನ ಅನುಷ್ಠಾನಕ್ರೀಗಳ ಮಾಡಿದರೂ ದೊರಕೊಳ್ಳದಿದ್ದಂಥ ನಿಜಮೋಕ್ಷಪದವೆಂಬ ಲಬ್ಧಿಯನು ನಷ್ಟವ ಮಾಡಿದಂಥದನು ನಾ ತಿಳಿದರೇನಯ್ಯಾ.

IV------------------------------------------------------------------------

೧-೧ ನೇಜೆಲಹಣ್ಣ ಮಾಜುವಂತೆ (ತ).

..........................

ಅಜ್ಞಾನದಿಂದ ದೇಹೇಂದ್ರಿಯಂಗಳ ದುಃಖಕ್ಕಾಱದೆ ನಿಮ್ಮ ಮಱೆಹೊಕ್ಕೆನಲ್ಲದೆ ಸತ್ಯವಾಗಿ ನಿಮ್ಮ ಭೃತ್ಯನಾದುದಿಲ್ಲಾಯೆಂಬುದೀ ವಚನದರ್ಥ.

---

೨೯೬

**ಮೂಗ ಕಂಡ ಕನಸಿನಂತಾಯಿತ್ತೆನ್ನ ಭಕ್ತಿ: ಗುಣವ ಹೇಳಬಾರದಾರಿಗೆಯೂ ; ಕೆಳಲಂತೂ ಬಾರದು! ಎನ್ನ ಹೆಗ್ಗತನವ ಮಾಣಿಸು, ಕೂಡಲಸಂಗಮದೇವಾ.**

I------------------------------------------------------------------------

ಮೂಗಕಂಡ ಕನಸಿನಂತಾಯಿತ್ತೆನ್ನ ಭಕ್ತಿ- ಶಿಶುವೆಂಬಂಥದು ಸುಖದುಃಖ ಮೊದಲಾದ ಸ್ವಪ್ನಂಗಳನು ಕಂಡು ಮತ್ತೊಬ್ಬರ ಕೂಡ ಹೇಳುವುದಕ್ಕೆ ವಾಕ್ಪಟುತ್ವವಿಲ್ಲದೆ ಆ ಶಿಶುವಿನಲ್ಲೇ ಹೇಂಗೆ ಅತಿ ರಹಸ್ಯವಾಗಿರುತ್ತಿಹುದೋ ಹಾಂಗೆ. ಆಯಿತ್ತು-ಆ ರೀತಿ ಆಯಿತ್ತು, ಎನ್ನಭಕ್ತಿ-ನಾ ಮಾಡುವಂಥ

ಭಿನ್ನಭಕ್ತಿಯು. ಗುಣವ ಹೇಳಬಾರದಾರಿಗೆಯೂ–ಎನ್ನ ಭಿನ್ನ ಭಿನ್ನಭಕ್ತಿಯ ಗುಣವನ್ನು ಭಕ್ತಮಾಹೇಶ್ವರರೊಂದಿಗೆ ಹೇಳುವುದಕ್ಕೆ ಹೋದಲ್ಲಿ ನಿನ್ನ ಭಕ್ತಿ ನಡಾವಳಿಯನು ಇಲ್ಲೇನು ಹೇಳುತಿದ್ದೀ ಎಂದು ಕೇಳದಲೆ ಇರುವರು. ಕೇಳಲಂತೂಬಾರದು–ಎನ್ನ ಭಿನ್ನಭಕ್ತಿಗುಣವನ್ನು ನೀವು ಕೇಳಲೊಲ್ಲಿರಲ್ಲ, ಭಕ್ತಿಯ ಮಾಡುವಂಥ ನಿಲುಕಡೆ ಹೇಗೆಂದು ಬೆಸಗೊಂಡು ಕೇಳಿದಲ್ಲಿ ನೀನು ಭಕ್ತಿ ಬಾಹ್ಯ ನಿನಗ ಬೋಧಿಸಬಾರದೆಂದು ಬೋಧಿಸದೆ ಇರುವರು. ಎನ್ನ ಹೆಗ್ಗತನವ ಮಾಣಿಸು–ಎನ್ನ ಭಿನ್ನಭಕ್ತಿಗುಣವನ್ನು ಭಕ್ತಮಾಹೇಶ್ವರರೊಂದಿಗೆ ಹೇಳಿಹೆನು ಎಂಬುವಂಥ ಹೆಡ್ಡಬುದ್ಧಿಯನ್ನು ಬಿಡಿಸು, ಕೂಡಲಸಂಗಮ ದೇವಾ–ಎಲೆ ಪರಶಿವಲಿಂಗವೆ.

---

೨೯೭

**ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನಱಿಯೆನಯ್ಯಾ. ಭಕ್ತಿಯ ಕುಳವನಾನಱಿಯದೆ ಮತಿಗೆಟ್ಟ ಪರಿಯ ನಾನಱಿಯೆನಯ್ಯಾ. ಕೂಡಲಸಂಗನ ಶರಣರ ಸಂಗದಿಂದಱಿದಡೆ ನಾನು ಬದುಕುವೆನಯ್ಯಾ.**

I--------------------------------------------------------------------------

ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನಱಿಯೆನಯ್ಯಾ. : ಕಾಣಿಯ ಲೋಭ–ಒಬ್ಬಾನೊಬ್ಬ ವಾಣಿಜನೇನಾದರೂ ಸಾವಿರ ಸಂಖ್ಯೆಯ ದ್ರವ್ಯವ ಕಟ್ಟಿಕೊಂಡು ನೂರಾರು ಎತ್ತನ್ನು ಹೊಡೆದುಕೊಂಡು ವಾಳೆದ ಮನೆಗೆ ಹೋಗಿ ಸುಂಠಿ ಮೆಣಸು ಜಾಜಿಕಾಯಿ ಜಾಪತ್ರಿ ಅಡಿಕಿ ಲವಂಗ ಯಾಲಕ್ಕಿ ಮೊದಲಾದವನ್ನು ಮೂಲಿಯಮಾಡಿ ಎತ್ತುಗಳನ್ನು ಮುಂದಕ್ಕೆ ಸಾಗಿಸಿ ತಾನು ಲೆಕ್ಕವನು ತೀರಿಸುವುದಕ್ಕೆ ಹಿಂದುಳಿದು ಲೆಕ್ಕವೆಲ್ಲ ತೀರಿಸಿ ಪಥಮಾರ್ಗವೆತ್ತಿ ಬರುವಂಥ ವೇಳೆಯಲ್ಲಿ ದಾರಿತಪ್ಪಿ ದನಕಾಯೋ ಹುಡುಗರನು ಎಲೋ ತಮ್ಮಾ ದಾರಿ ಯಾವುದೆಂದು ಕೇಳಿದಲ್ಲಿ ನಮಗೆ ಹೊಗೆಸೊಪ್ಪಿಗೆ ದುಡ್ಡುದುಗ್ಗಾಣಿ ಕೊಡೆಂದು ಕೇಳಿದಲ್ಲಿ ಇಷ್ಟಕ್ಕೆಲ್ಲ ದುಡ್ಡುದುಗ್ಗಾಣಿ ಕೊಡಬೇಕೆ? ಎಂದು ಕೊಡದೆ ಇದ್ದಲ್ಲಿ ಅವರು ನಿಜದಾರಿಯನ್ನು ಬಿಟ್ಟು ಕಳ್ಳದಾರಿಯ ತೋರಿದಲ್ಲಿ ಅದೇ ದಾರಿಗುಂಟ ಬರುತಿರ್ದಲ್ಲಿ ಅಲ್ಲಿ ನುಚ್ಚುಗಳ್ಳರು ಪಂಜಗಳ್ಳರು ಮೊದಲಾದವರು ಹಿಡಿದು ಬಡಿದು ವಸ್ತು ಒಡವೆ ಆಭರಣ ಲೆಕ್ಕದ ಕಡತ ಮೊದಲಾದವನ್ನು ಕಸಕೊಂಡು ಅಟ್ಟಿಸಿಬಿಟ್ಟಲ್ಲಿ ಆಗ ತನ್ನ ಮನೆಗೆ ಬಂದು ಕುಳಿತುಕೊಂಡು ನಾನು ಕಾಣಿಯಷ್ಟು ವಂಚಿಸಿ ಕೊಂಡಂಥ, ಲೋಭ–ಲುಬ್ಧತ್ವವು, ಕೋಟಿಯ ಲಾಭವ– ಕೋಟ್ಯಂತರ ಆದಾಯವನ್ನು, ಕೆಡಿಸಿದುದ–ನಷ್ಟವಾದಂಥದನು, ನಾನಱಿಯೆನಯ್ಯಾ–ನಾ ತಿಳಿಯೆನಯ್ಯಾ ಎಂಬುವ ಹಾಂಗೆ, ಒಬ್ಬ ಭಕ್ತನೇನಾದರೂ ಜಂಗಮಕ್ಕೆ ಸಕಲ ಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡುತ್ತಿದ್ದಲ್ಲಿ ಕಾಣಿಯಷ್ಟು ತನುಮನಧನಂಗಳನು ವಂಚಿಸಿಕೊಂಡಂಥ, ಲೋಭ–ಲುಬ್ಧತ್ವವು, ಕೋಟಿಯಲಾಭ–ಕೋಟ್ಯಂತರ ನಿಜಮೋಕ್ಷದಾದಾಯ ?[ವ],? ಕೆಡಿಸಿದುದ– ನಷ್ಟವಾಗಿಹೋದಂಥದನು, ನಾನಱಿಯೆನಯ್ಯಾ–ನಾ ತಿಳಿಯೆನಯ್ಯಾ.

ಭಕ್ತಿಯ–ಶಿವಾದ್ವೈತಭಕ್ತಿಯ, ಕುಳವ–ಸಮೂಹವನ್ನು, ನಾನಱಿಯದೆ–ನಾ ತಿಳಿಯದೆ. ಮತಿಗೆಟ್ಟ–ಜ್ಞಾನಬಾಹ್ಯನಾದ, ಪರಿಯ–ವಿಚಾರವನ್ನು, ನಾನಱಿಯೆನಯ್ಯಾ–ನಾ ತಿಳಿಯೆನಯ್ಯಾ, ಕೂಡಲಸಂಗನ ಶರಣರ ಸಂಗದಿಂದ–ತ್ರಿವಿಧ ಲಿಂಗಾನುಭಾವಿಗಳಾದ ಶಿವಶರಣರ ಶಿವಾನುಭಾವವನ್ನು

ಬೆಸಗೊಂಡು ಕೇಳುವುದರಿಂದ, ಅಱಿದಡೆ–ಲಿಂಗಪೂಜೆ ಜಂಗಮದಾಸೋಹವನ್ನು ಮಾಡುವಂಥದನ್ನು ತಿಳಿದರೆ, ನಾನು ಬದುಕುವೆನಯ್ಯಾ: ನಾನು–ಸಂಗನಬಸವೇಶ್ವರನು, ಬದುಕುವೆನಯ್ಯಾ–ಕೃತಾರ್ಥನಾಗುವೆನಯ್ಯಾ.

IV------------------------------------------------------------------------

ಶಿವಾಂಶಿಕನಾದ ಆತ್ಮನು ಶಿವಾಜ್ಞೆಯಿಂದ ದೇಹಸಂಬಂಧಿಯಾದಲ್ಲಿ, ಆ ಅಲ್ಪದೇಹೇಂದ್ರಿಯ ವಿಷಯಸುಖಕ್ಕೆ ಆಸೆಮಾಡಿ, ತನ್ನ ನಿಜವಪ್ಪ ಘನತರದ ಶಿವನಲ್ಲಿ ಬೆರಸಿ ಶಿವಸುಖವ ಪಡೆದಿಪ್ಪ ಭಕ್ತಿಜ್ಞಾನವ ಮಱಿದು ಕೆಟ್ಟಿರ್ದ ಜೀವಾತ್ಮಂಗೆ, ಶಿವಶರಣರ ಸಂಗವ ಬಿಡದೆ ಮಾಡಿದರೆ ಭಕ್ತಿ ನೆಲೆಗೊಂಡು ಮುಕ್ತಿಯಹುದೆಂಬುದೀ ವಚನದ ತಾತ್ಪರ್ಯಾರ್ಥ.

---

೧೯೮

**ಏನನೋದಿ ಏನಕೇಳಿ ಏನಮಾಡಿ[1] ಫಲವೇನು, ನಿಮ್ಮವರೊಲಿಯದನ್ನಕ್ಕ[2]ರ[2] ? ಶಿವಶಿವಾ, ಮಹಾದೇವಾ, ಬಾಳಿಲ್ಲದವಳ [3]ವಾ[3]ಲೆಯಂತಾಯಿತ್ತೆನಗೆ, ಕೂಡಲಸಂಗಮದೇವಾ.**

I-------------------------------------------------------------------------

ಏನನೋದಿ–ಎಷ್ಟೊಂದು [1]ವೇದ ಶಾಸ್ತ್ರಾಗಮ[1] ಪುರಾಣಂಗಳ ಪಠಿಸಿ, ಏನಕೇಳಿ–ಆ ಓದಿದಂಥ ಶಾಸ್ತ್ರವನ್ನು ಶ್ರುತಿಗುರುಗಳ ಮುಖದಿಂದ ಸೂತ್ರಾರ್ಥ ಸ್ವರೂಪಾರ್ಥ ಸಂಬಂದಾರ್ಥ ಚಿತ್ರಾರ್ಥ ಪ್ರಣವಾರ್ಥ ಭಾವಾರ್ಥಂಗಳನು ಕೇಳಿ ಬೆಸಗೊಂಡಾಲಿಸಿದರೇನು, ಏನಮಾಡಿ–ಅಷ್ಟಾಂಗಯೋಗಾಭ್ಯಾಸವನನುಗೈದು, ಫಲವೇನು–ಪ್ರಯೋಜನವೇನು, ನಿಮ್ಮವರು–ಜಂಗಮಮೂರ್ತಿಗಳು, ಒಲಿಯದನ್ನಕ್ಕರ–" ಒಲಿ ಪ್ರಸನ್ನೇ" ಯೆಂದು ಪ್ರಸನ್ನವಾಗಿ ನಿಜಮೋಕ್ಷವನ್ನು ಕರುಣಿಸಿಕೊಡಬೇಕು. ಕರುಣಿಸಿಕೊಡೋ ಪರಿಯಂತರವು, ಶಿವಶಿವಾ–ಲಿಂಗವೆ ಲಿಂಗವೆ, ಮಹಾದೇವಾ–ಎಲ್ಲ ದೇವರಿಗೆ ವಲ್ಲಭನಾದಂಥ ದೇವನೆ, ಬಾಳಿಲ್ಲದವಳ ವಾಲೆಯಂತೆ–ಗಂಡನಿದ್ದಂಥ ಸ್ತ್ರೀಯಳೇನಾದರೂ ವಸ್ತ್ರಾಭರಣವನಿಟ್ಟು ತೊಟ್ಟುಕೊಂಡಿದ್ದರೆ ಅಲಂಕಾರವಾಗಿಪ್ಪುದಲ್ಲದೆ ಗಂಡನಿಲ್ಲದಂಥ ವಿಧವಾಸ್ತ್ರೀಯಳು ಹಸ್ತಕಡಗ ಹರಳವಾಲೆ ಬುಗಡಿ ಕೊಪ್ಪುಸರಿಗಿ ಚಿಂತಾಕ ಹಿಂಬಳೆ ಮುಂಬಳೆ ಮೊದಲಾದವನು ಇಟ್ಟು ತೊಟ್ಟಿದ್ದ ಹಾಳುಹಾಳಬಡಿವುದಲ್ಲದೆ ಅಲಂಕಾರವಾಗಿ ಇದ್ದಿತ್ತೇ? ಇರಲರಿಯದು. ಹಾಂಗೆ, ನಿರ್ವಂಚಕ ಸದ್ಭಕ್ತನು ಭಕ್ತಿವೇಷವ ಧರಿಸಿಕೊಂಡಿದ್ದರೆ ಪೂಜ್ಯವಾಗಿದ್ದಿತ್ತಲ್ಲದೆ ಉಪಾಧಿಕನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೆ ಆ ವಿಧವಾಸ್ತ್ರೀಯಳ ಹಾಂಗಲ್ಲದೆ ಪೂಜ್ಯವಾಗಿದ್ದಿತ್ತೆ ಇರಲರಿಯದು, ಎನಗೆ–ನನಗೆ, ಆಯಿತ್ತು–ಹಾಂಗೆ ವ್ಯರ್ಥಸ್ಯವಾಯಿತ್ತು, ಕೂಡಲಸಂಗಮದೇವಾ– ಎಲೆ ಪರಶಿವಲಿಂಗವೆ.

..........................

೧–೧ ಶಾಸ್ತ್ರಾಗಮ (ಗ).

IV---------------------------------------------------------------------------

1+ ಯೂ (ತ). 2–2 x (ತ). 3–3 ಓ (ತ)

.........................

ಲಿಂಗದಲಿ ಅಂಗವ ಕೂಡದೆ, ಓದಿ ಕೇಳಿದರೇನು ಫಲವಿಲ್ಲಾ ಎಂಬುದೀ ವಚನದರ್ಥ.

---

೨೯೯

**ಮುನ್ನೂಱಱುವತ್ತು ದಿನ ಶ್ರವವ ಮಾಡಿ, ಕಳನೇಱಿ ಕೈಮಱೆದಂತಾಯಿತ್ತೆನ್ನ ಭಕ್ತಿ ! ಎನಿಸುಕಾಲ ಲಿಂಗಾರ್ಚನೆಯ ಮಾಡಿ, ಏವೆನಯ್ಯಾ ಮನದಲ್ಲಿ ದೃಢವಿಲ್ಲದನ್ನಕ್ಕ? ಕೊಡನ ತುಂಬಿದ ಹಾಲ ಕೆಡಹಿ ಉಡುಗಲೆನ್ನಳವೆ, ಕೂಡಲಸಂಗಮದೇವಾ?**

I---------------------------------------------------------------------------

ಮುನ್ನೂಱಱುವತ್ತು ದಿನ ಶ್ರವವ ಮಾಡಿ ಕಳನೇಱಿ ಕೈಮಱೆದಂತಾಯಿತ್ತೆನ್ನ ಭಕ್ತಿ: ಮುನ್ನೂಱಱುವತ್ತು ದಿನ–ಮುನ್ನೂಱಱುವತ್ತು ದಿವಸ ಪರಿಯಂತರವು, ಶ್ರವವ ಮಾಡಿ–ಸಾಧಕವನಭ್ಯಾಸಿಸಿ, ಕಳನೇಱಿಯುದ್ಧಾಂಗಣದಲ್ಲಿ ನಂದು, ಕೈಮಱೆದಂತಾಯಿತ್ತು–ವೈರಿ ಹಾಕುವಂಥ ಪೆಟ್ಟನ್ನು ಹಾರಿಹೊಡೆದು ಅವನ ಮೇಲೆ ಪೆಟ್ಟುಹಾಕುವಂಥ ಸಾಧಕದ ಕೈಯನ್ನು ಮರೆದು "ಹೌ" "ಹೊ"ಡೆದ ಹಾಂಗೆ ಸುಮ್ಮಗೆ ನಿಂತುಕೊಂಡಿದ್ದರೆ ತನ್ನ ವೈರಿಯಾದ ಪಟುಭಟನು ಪ್ರಾಣವ ಕೊಂದುಬಿಡುತ್ತಿಹನು ಹಾಂಗೆ, ಮುನ್ನೂಱಱುವತ್ತು ದಿನ–ಮುನ್ನೂರರುವತ್ತು ದಿವಸ ಪರಿಯಂತರವು, ಶ್ರವವ ಮಾಡಿ–ಶಿವಾದ್ವೈತಭಕ್ತಿ ಅಭ್ಯಾಸವನನುಗ್ರೈದು, ಕಳನೇಱಿ–ಭಕ್ತ್ಯಂಗಣದಲ್ಲಿ ನಿಂದು ಕೈಮಱೆದಂತೆ–ಭಕ್ತನೆಂಬ ವೀರಮಾಸಾಳುವಿದ್ದೆಡೆಗೆ ಜಂಗಮವೆಂಬ ಮಹಾವೀರ ಮಾಸಾಳು ಬಂದು ತನುಮನದನಂಗಳನು ಕೇಳಿದಲ್ಲಿ ಆ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದ ಹಾಂಗೆ, ಆಯಿತ್ತು–ಆ ರೀತಿಯಾಯಿತ್ತು, ಎನ್ನ ಭಕ್ತಿ–ನಾ ಮಾಡುವಂಥ ಭಿನ್ನಭಕ್ತಿಯು.

ಎನಿಸುಕಾಲ–ಎಷ್ಟುದಿವಸ ಪರಿಯಂತರವು, ಲಿಂಗಾರ್ಚನೆಯ ಮಾಡಿ–ಲಿಂಗಪೂಜೆಯನನುಗ್ರೈದು, ಏವೆನಯ್ಯಾ–ಏನು ಮಾಡಲಯ್ಯಾ ಮನದಲ್ಲಿ–ಚಿತ್ತದಲ್ಲಿ, ದೃಢವಿಲ್ಲದನ್ನಕ್ಕ?–ಈ ಲಿಂಗವೆ ಪ್ರಾಣ ಲಿಂಗಕ್ಕೆ ನಾನೇ ಚಿದಂಗಸ್ವರೂಪನು. ಈ ಲಿಂಗಹೋದರೆ ಈ ಲಿಂಗದೊಡನೆ ಪ್ರಾಣವ ಕೊಟ್ಟೇನು. ಈ ಲಿಂಗವಲ್ಲದನ್ಯ ದೈವಂಗಳ ಭಜನೆಯ ಮಾಡಬಾರದೆಂಬಂಥ ಏಕಲಿಂಗನಿಷ್ಠಾಪರತ್ವವುಂಟಾಗಿರಬೇಕು. ಇಲ್ಲದಿರುವ ಪರಿಯಂತರವು, ಕೊಡನ ತುಂಬಿದ–ಕುಂಭಭರಿತವಾದ, ಹಾಲ–ಕ್ಷೀರವನ್ನು, ಕೆಡಹಿ–ಉರುಳಿಸಿಬಿಟ್ಟು, ಉಡುಗಲೆನ್ನಳವೆ–ಮರಳಿ ಬಳಿದು ಒಬ್ಬುಳಿಯ ಮಾಡಿ ತುಂಬೇನೆಂದರೆ ನಿರ್ಮಲವಾಗಿ ಬಂದಾವೆ? ಬರಲರಿಯವೆಂಬೋ ಹಾಂಗೆ :

● ಕೊಡನ ತುಂಬಿ–ಆಚಾರಾಂಗವೆಂಬ ಭಾಂಡದಲ್ಲಿ ಭರಿತವ ಮಾಡಿಕೊಂಡ, ಹಾಲ–ತ್ರಿವಿಧ ಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ ಶಿವಾನುಭಾವವೆಂಬ ಪರಮಾಮೃತವನ್ನು,

ಕೆಡಹಿ–ಸ್ವಾಮೀಸೂತ್ರಾರ್ಥವಾದರೂ ಸ್ವರೂಪಾರ್ಥವಾದರೂ ಸಂಬಂಧಾರ್ಥವಾದರೂ ಚಿತ್ರಾರ್ಥವಾದರೂ ಪ್ರಣವಾರ್ಥವಾದರೂ ಭಾವಾರ್ಥವಾದರೂ ಇಷ್ಟೇ ಸೈಯೆಂದು ಅವರ ಕೂಡ ಉತ್ತರಕ್ಕುತ್ತರವ ಕೊಟ್ಟು ಪ್ರಸಂಗಮಾಡಿ ಅವರ ಮನಸು ಬೇಸರ ಹುಟ್ಟಿಸಿ, ಉಡುಗಲೆನ್ನಳವೆ–ಮರಳಿ ಅವರಿದ್ದಂಥ ಸ್ಥಾನಕ್ಕೆ ಹೋಗಿ ಬಿನ್ನಹಮಾಡಿ ಕರಕೊಂಡು ಬಂದು ಸಕಲ ಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿ ಮೊದಲಿನ ಹಾಂಗೆ ಶಿವಾನುಭಾವವನ್ನು ಬೋಧಿಸೆಂದರೆ ಬೋಧಿಸ್ಯಾರೆ ? ಬೋಧಿಸರು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ ಹ (ಕ).

IV---------------------------------------------------------------------------

ಹಲವು ಕಾಲ ಪೂಜಿಸಿದರೂ ಹಲವು ಕಾಲ ನೆನೆದರೂ ಮನವು ಘನದೊಳಗಡಗದೆ ಒಡಲು ಕೆಡದರೆ ವ್ಯರ್ಥವೆಂಬುದೀ ವಚನದರ್ಥ.

---

೩೦೦

**ಶಬ್ದಸುಖಕ್ಕೆ ಮೆಚ್ಚಿ, ಮಾತಿಂಗೆ[1]ಮಾತು[1] ಕೊಟ್ಟು ಕೆಟ್ಟೆನಯ್ಯಾ! ಅನುಭಾವ [2]ಅಕ್ಕೆ[2]ಯಾಗದೆ, ಬಿಬ್ಬನೆ ಬಿಜಿದೆನಯ್ಯಾ! ಅಮೃತ[3]ವ[3] ಕೊಡನ ತುಂಬಿ ಒಡೆ[4]ಯ[4]ಹೊಯ್ದು ಅಬಿಸಲುಂಟೆ? ಸ್ವಾಮಿಭೃತ್ಯ ಸಂಬಂಧವೆನ್ನ ಭಕ್ತಿ, ಪ್ರತ್ಯುತ್ತರ ನಾಯಕ ನರಕ ಕೂಡಲಸಂಗಮದೇವಾ!**

I---------------------------------------------------------------------------

ಶಬ್ದಸುಖಕ್ಕೆ ಮಚ್ಚಿ ಮಾತಿಂಗೆ ಮಾತು ಕೊಟ್ಟು ಕೆಟ್ಟೆನಯ್ಯಾ!; ಶಬ್ದಸುಖಕ್ಕೆ–ಒಬ್ಬ ಜಂಗಮಮೂರ್ತಿಗಳೇನಾದರೂ ಹತ್ತೆಂಟು ಕಥೆ ಕಾವ್ಯಂಗಳನು ಕಲಿತುಕೊಂಡು ಸೂತ್ರಾರ್ಥ ಸ್ವರೂಪಾರ್ಥ ಚಿತ್ರಾರ್ಥ ಪ್ರಣವಾರ್ಥ ಭಾವಾರ್ಥ ಮೊದಲಾದವನ್ನು ಹೇಳುತಿದ್ದಲ್ಲಿ ಅಲ್ಲೊಬ್ಬ [1]ಉಪಾಧಿಕನು,[1] ಅವರ ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಪ್ರಣವಾರ್ಥ ಚಿತ್ರಾರ್ಥ ಭಾವಾರ್ಥಂಗಳಿಗೆ, ಮಚ್ಚಿ–ಮಮಕರಿಸಿ, ಸ್ವಾಮೀ ನಮ್ಮ ಸಮಯಾಚಾರಕ್ಕಿರಬೇಕೆಂದು ಆಗಾಗ್ಗೆ ಸೂಚನೆ ಬಿನ್ನಹವನ್ನು ಮಾಡುತ್ತ ಮೃಷ್ಟಾನ್ನ ಪದಾರ್ಥವ ನೀಡಿ ಸಂತುಷ್ಟಿಬಡಿಸುಸುತ್ತ ಶಾಲುಸೆಕಲಾತಿ ಸಣ್ಣಕಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟೆಮಂಚ ಲೇಪುಸುಪ್ಪತ್ತಿಗೆಯ ಮೇಲೆ ಪರಿಣಾಮದಲ್ಲಿ ಮಲಗಿಸಿಕೊಂಡು ಹೀಂಗಿರುತಿದ್ದ ಹಾಂಗೆ, ಮಾತಿಂಗೆ, ಮಾತುಕೊಟ್ಟು–ಸ್ವಾಮೀ ನಿಮ್ಮ ಸೂತ್ರಾರ್ಥವಾದರೂ ಇಷ್ಟೇ ಸರಿಯೇ, ಸ್ವರೂಪಾರ್ಥವಾದರೂ ಇಷ್ಟೇ ಸರಿಯೇ, ಸಂಬಂಧಾರ್ಥವಾದರೂ ಇಷ್ಟೇ ಸರಿಯೇ, ಪ್ರಣವಾರ್ಥವಾದರೂ ಇಷ್ಟೇ ಸರಿಯೇ, ಚಿತ್ರಾರ್ಥ ಭಾವಾರ್ಥವಾದರೂ ಇಷ್ಟೇ ಸರಿಯೇಯೆಂದು ಉತ್ತರಕ್ಕುತ್ತರವಕೊಟ್ಟು ಕೆಟ್ಟೆನಯ್ಯಾ–ಶಿವತತ್ವವಳಿದು ಜೀವನಾದೆನಯ್ಯಾ. ಅನುಭಾವ–ಶಿವಾನುಭಾವವು, ಅಕ್ಕೆಯಾಗದೆ–ಅಂಗವಾಗದೆ, ಬಿಬ್ಬನೆ ಬಿಜಿದೆ ನಯ್ಯಾ–ವೃಥಾ ಗರ್ವಿಸಿದೆನಯ್ಯಾ.

ಅಮೃತವ–ಸುಧೆಯನ್ನು, ಕೊಡನತುಂಬಿ–ಕುಂಭದಲ್ಲಿ ಪೂರ್ಣೀಕರಿಸಿ, ಒಡೆಯ ಹೊಯ್ತು–ಎತ್ತಿ ಒಡೆಹಾಕಿ, ಆಱಿಸಲುಂಟೆ?–ಮರಳಿಗೂಡಿಸಿ ಗುಡ್ಡೆಮಾಡಿ ತುಂಬೇನೆಂದರೆ ಬಂದಾವೆ? ಬರಲರಿಯವು ಹಾಂಗೆ; ಅಮೃತವ–ಶಿವಾನುಭಾವವೆಂಬ ಸುಧೆಯನ್ನು, ಕೊಡನತುಂಬಿ–ಆಚಾರಾಂಗವೆಂಬ ಭಾಂಡದಲ್ಲಿ ಪೂರ್ಣೀಕರಿಸಿ, ಒಡೆಯ ಹೊಯ್ದು–ಶಿವಾನುಭಾವವನ್ನು ಬೋಧಿಸುವಂಥ ಜಂಗಮಮೂರ್ತಿಗಳನು ಉಪೇಕ್ಷವ ಮಾಡಿಬಿಟ್ಟು, [2][ಅಱಿಸಲುಂಟೆ][2]–ಬೇಸರಾದಂಥ ಜಂಗಮಮೂರ್ತಿಗಳಿದ್ದೆಡೆಗೆ ಹೋಗಿ ಬಿನ್ನಹವನ್ನು ಮಾಡಿ ಕರಕೊಂಡುಬಂದು ಸಕಲಪದಾರ್ಥದನ್ನು ನೀಡಿ ಸಂತುಷ್ಟಿ ಬಡಿಸಿ ಎಂದಿನ ಶಿವಾನುಭಾವವನ್ನು ಬೆಸಗೊಂಡು ಕೇಳುವಂಥ ಪರಿಣಾಮವನ್ನು ಇಚ್ಛೈಸಿದರೆ ದೊರೆಕೊಂಡಿತ್ತೆ? ದೊರಕೊಳ್ಳದು. ಸ್ವಾಮಿಭೃತ್ಯ ಸಂಬಂಧವು: [ಸ್ವಾಮಿಭೃತ್ಯ–] ಗುರುಲಿಂಗಜಂಗಮವೆ ಕರ್ತೃವಾಗಿ ತಾನು ಭೃತ್ಯನಾಗಿರುವಂಥ, ಸಂಬಂಧವೇ–ಸ್ವಾಯತವೇ, ಎನ್ನ ಭಕ್ತಿ–ನಾ ಮಾಡುವಂಥ ಜಂಗಮಭಕ್ತಿಯು, ಪ್ರತ್ಯುತ್ತರ ನಾಯಕನರಕ: [ಪ್ರತ್ಯುತ್ತರ–] ಉತ್ತರಕ್ಕುತ್ತರವ ಕೊಟ್ಟು ಪ್ರಸಂಗವನಾಡಿದರೆ, ನಾಯಕನರಕ–ದೊರೆ ನಿರಯವೆ ಸಂಭವಿಸುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ ಉಪಾಧಿ ಭಕ್ತನು (ಗ). ೨–೨ ಉಡುಗಲೆನ್ನಳವೆ (ಕ, ಗ).

IV---------------------------------------------------------------------------

1–1 ಮಾತನೆ (ತ). 2–2 ಅಕ್ಕವೆ (ತ). 3–3 x (ತ). 4–4 ಯೆ (ತ).

.........................

ಮಾತಿನ ಅಹಂಕಾರದಿಂದ ತಮ್ಮ ತಾವಱಿಯದೆ ನುಡಿವರಿಗೆ ಸ್ವಾಮಿಭೃತ್ಯ ಸಂಬಂಧವಿಲ್ಲವಾಗಿ ಅಮೃತದ ಕೊಡನು ಒಡೆದು ಹೊಯಿತ್ತೆಂಬುದೀ ವಚನದರ್ಥ.

---

ಜ೦೧

**ಅಂಕವೋಡಿದಡೆ ತೆತ್ತಿಗಂಗೆ ಭಂಗವಯ್ಯಾ: ಕಾದಿ ಗೆಲಿಸಯ್ಯಾ ಕೂಡಲಸಂಗಮದೇವಾ ಎನ್ನ ತನುಮನಧನಂಗಳಲ್ಲಿ ವಂಚನೆಯಿಲ್ಲದೆ.**

I---------------------------------------------------------------------------

ಅಂಕವೋಡಿದಡೆ ತೆತ್ತಿಗಂಗೆ ಭಂಗವಯ್ಯಾ : ಅಂಕ–ಪರಾಕ್ರಮಿಯು. ಓಡಿದಡೆ–[೧]'ಓಡು ಪಲಾಯನೇ'ಯೆಂದು[೧] ರಣಾಗ್ರವನ್ನು ಕಂಡಾಕ್ಷಣಕ್ಕೆ ಮುಂದಲ ಕಾಲನ್ನು ಹಿಂದಕ್ಕಿಟ್ಟು ಕೈಗಳ ಕತ್ತಿಯನ್ನು ಬಿಟ್ಟುಕೊಟ್ಟು ಮಣಕಾಲಮಂಡೆಯೊಡೆಯೋ ಸುದ್ದಿಯನರಿಯದೆ[೨] ಪಲಾಯನವಾಗಿ ಬಂದರೆ, ತೆತ್ತಿಗಂಗೆ–ಸಾಧಕವ ಕಲಿಸಿದಂಥ ಐಗಾರಂಗೆ, ಭಂಗವಯ್ಯಾ–ಕೊರತೆ ಬರುತ್ತಿಹುದಯ್ಯಾ; ಎನ್ನ–ನನ್ನನು, ಕಾದಿ ಗೆಲಿಸಯ್ಯಾ–ಪರಾಕ್ರಮದಿಂದ ಯುದ್ಧವ ಮಾಡಿ ರಣಾಗ್ರವನ್ನು ಜಯಿಸಿಬರುವ

ಹಾಂಗೆ ಮಾಡಯ್ಯಾ. ಕೂಡಲಸಂಗಮದೇವಾ–ಎಲೆ ಐಗಾರನೆ, ಎನ್ನ ತನುಮನಧನದಲ್ಲಿ ವಂಚನೆಯಿಲ್ಲದೆ–ಎನ್ನ ಹೆಂಡಿರುಮಕ್ಕಳ ಮೇಲೆ ಅಭಿಲಾಷೆಯಿಲ್ಲದೆ, ಕಾದಿ ಗೆಲಿಸಯ್ಯಾ–ಪರಾಕ್ರಮದಿಂದ ಯುದ್ಧವ ಮಾಡಿ ಜಯಿಸಿ ಬರುವ ಹಾಂಗೆ ಮಾಡಯ್ಯುಯೆಂಬ ದೃಷ್ಟೋಪಮಾನದ ಹಾಂಗೆ.

● ಅಂಕವೋಡಿದಡೆ ತೆತ್ತಿಗಂಗೆ ಭಂಗವಯ್ಯಾ : ಅಂಕವೋಡಿದಡೆ–ಭಕ್ತನೆಂಬ ವೀರಮಾಸಾಳುವಿದ್ದೆಡೆಗೆ ಜಂಗಮವೆಂಬ ಮಹಾವೀರಮಾಸಾಳು ಬಂದು ತನುಮನಧನಂಗಳನು ಕೇಳಿದರೆ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದರೆ, ತೆತ್ತಿಗಂಗೆ–ಭಕ್ತಿಸಾಧಕವ ಕಲಿಸಿದ ನಿರ್ವಂಚಕ ಸದ್ಭಕ್ತಂಗೆ, ಭಂಗವಯ್ಯಾ–ಕೊರತೆ ಬರುತ್ತಿಹುದಯ್ಯಾ. ಕಾದಿ ಗೆಲಿಸಯ್ಯಾ–ಸಮರಸಭಾವದಿಂದ ಕೊಟ್ಟು ಭಕ್ತಿಯಮಾಡಿ ಮುಕ್ತಿಯನ್ನು ಹಡೆವ ಹಾಂಗೆ ಮಾಡಯ್ಯಾ. ಎನ್ನನು–ನನ್ನನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. ಎನ್ನ ತನುಮನಧನದಲ್ಲಿ ವಂಚನೆಯಿಲ್ಲದೆ–ಎನ್ನ ತನುಮನಧನಂಗಳನು ಗುರುಲಿಂಗ ಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಳಬೇಕೆಂಬಂಥ ವಾಜೋ ಬುದ್ಧಿಯಿಲ್ಲದ ಹಾಂಗೆ, ಕಾದಿ ಗೆಲಿಸಯ್ಯಾ–ಸಮರಸಭಾವದಿಂದ ಕೊಟ್ಟು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಕಡೆವ ಹಾಂಗೆ ಮಾಡಯ್ಯಾ.

..........................

೧–೧ x (ಗ). ೨ + ಓಡು ಪಲಾಯನೇಯೆಂದು (ಗ).

IV------------------------------------------------------------

ತನುಮನಧನದಲ್ಲಿ ವಂಚನೆಯಿಲ್ಲದೆ ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತನಾದೇನೆಂದಡೆ ಆರಿಯೂ ಶಕ್ಯವಿಲ್ಲ. ಅಂತಪ್ಪ ಶಿವಭಕ್ತಗೆ ಶಿವನು ಸಹಾಯವಾದಲ್ಲದೆ ಆಗದೆಂಬುದೀ ವಚನದ ತಾತ್ಪರ್ಯಾರ್ಥ.

---

೩೦೨

**ಹೇಡಿ ಬಿರಿದ ಕಟ್ಟಿದಂತಾಯಿತ್ತೆನ್ನ ವೇಷ : ಕಾದಬೇಕು ಕಾದುವಡೆ ಮನವಿಲ್ಲ. ಆಗಳೆ ಹೋಯಿತ್ತೆನ್ನ ಬಿರಿದು; ಹಗರಣಿಗನ ನಗೆಗೇಡಾಯಿತ್ತು![1] ಮಾಬಿಂಕ ಜಂಗಮ ಮನೆಗೆ ಬಂದಡೆ ಕಾಣದಂತಡ್ಡ ಮುಸುಡಿಟ್ಟಡೆ ಕೂಡಲಸಂಗಮದೇವ ಜಾಣ ಮೂಗು ಕೊಯ್ವ, ಹಲ್ಲುದೋಱಲು.**

I------------------------------------------------------------

ಹೇಡಿ ಬಿರಿದ ಕಟ್ಟಿದಂತಾಯಿತ್ತೆನ್ನ ವೇಷ : ಹೇಡಿ–ಹೆಂಬೇಡಿಯು, ಬಿರಿದ ಕಟ್ಟಿದಂತೆ–ಹೊಕ್ಕುಳಗಂಟೆ ಹುಲಿಚರ್ಮ ಹತ್ತೆಕಟ್ಟು ಮುತ್ತಿನ ತುರಾಯಿ ಕಾಲಗಗ್ಗರಿ ಕಾಲಪೆಂಡೆ ಹಳದಿಪಾವುಡ ಹೆಸರುಪಾವುಡ ಉಡಾಸಪಾವುಡ ಹುಲ್ಲಸರವೆ ಹಗಲುದೀವಟಿಗೆ ಮೊದಲಾದ ಬಿರಿದ ಬಾವಲಿಯ ಕಟ್ಟಿದಂತೆ, ಆಯಿತ್ತು–ಆ ರೀತಿ ಆಯಿತ್ತು, ಎನ್ನ ವೇಷ–ನಾ ಕಟ್ಟಿಕೊಂಡಂಥ ಬಿರಿದುಬಾವಲಿಯು. ಕಾದಬೇಕು–ಪರಾಕ್ರಮತ್ವವನ್ನು ಮುಂದುಗೊಂಡು ಯುದ್ಧವ ಮಾಡಬೇಕು, ಕಾದುವಡೆ–ಪರಾಕ್ರಮತ್ವವನ್ನು ಮುಂದುಗೊಂಡು ಯುದ್ಧವ ಮಾಡೇನೆಂದರೆ, ಮನವಿಲ್ಲ–ಮನದಲ್ಲಿ ಧೈರ್ಯವಿಲ್ಲವು ಆಗಳೆ ಹೋಯಿತ್ತೆನ್ನ ಬಿರಿದು–ನಾನು ಹಾಕಿರುವಂಥ ಬಿರಿದುಬಾವಲಿಯನು ಮತ್ತೊಬ್ಬ ಪಟುಭಟನು

ಬಂದು ಕಸಗೊಂಡಾಕ್ಷಣಕ್ಕೇ ಹೋಯಿತ್ತು ನಾ ಕಟ್ಟಿದಂಥ ಬಿರಿದು. ಹಗರಣಿಗನ ನಗೆಗೇಡಾಯಿತ್ತು-ಬಹುರೂಪಗಾರನು ಆಟವನಾಡುತ್ತಿದ್ದಲ್ಲಿ ಆ ಆಟವನ್ನು ಮರೆಸಿ ಮತ್ತೊಂದಾಟವನ್ನು ತಂದಲ್ಲಿ ಅಲ್ಲಿದ್ದಂಥ ಆತ್ಮರುಗಳೆಲ್ಲರೂ ಗಹಗಹಿಸುತ್ತಿಹರೆಂಬ ಹಾಂಗೆ ಈ ಪಟುಭಟನಾಡುವಂಥ ಪ್ರಸಂಗವು ಮತ್ತೊಬ್ಬ ಪಟುಭಟನ ಮುಂದೆ ಹಾಸ್ಯವಾಗಿಪ್ಪುದೆಂಬೊ ದೃಷ್ಟೋಪಮಾನದ ಹಾಂಗೆ,

● ಹೇಡಿ ಬಿರಿದ ಕಟ್ಟಿದಂತಾಯಿತ್ತೆನ್ನ ವೇಷ : ಹೇಡಿ-ಉಪಾಧಿಕನು, ಬಿರಿದ ಕಟ್ಟಿದಂತೆ-ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವನ್ನು ಧರಿಸಿಕೊಂಡಿರುವಂಥದು ಹೇಡಿ ಬಿರಿದ ಕಟ್ಟಿದ ಹಾಂಗೆ, ಆಯಿತ್ತು-ಆ ರೀತಿ ಆಯಿತ್ತು, ಎನ್ನ ವೇಷ-ನಾ ಧರಿಸಿಕೊಂಡಿರುವಂಥ ಶಿವವೇಷವು, ಕಾದಬೇಕು-ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡಲೇಬೇಕು, ಕಾದುವಡೆ-ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡೇನೆಂದರೆ, ಮನವಿಲ್ಲ-ಮನದಲ್ಲಿ ನೈಷ್ಠೆಯಿಲ್ಲವು. ಆಗಳೇ ಹೋಯಿತ್ತು ಬಿರಿದು-ಭಕ್ತನೆಂಬ ವೀರಮಾಸಾಳು ಇದ್ದೆಡೆಗೆ ಜಂಗಮವೆಂಬ ಮಹಾವೀರ ಮಾಸಾಳು ಬಂದು ತನುಮನಧನಂಗಳನು ಕೇಳಿದಲ್ಲಿ ಆ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದಾಗಳೆ, ಬಿರಿದು-ಭಕ್ತನೆಂಬ ಕೀರ್ತಿವಿಶೇಷವು, ಹೋಯಿತ್ತು-ನಷ್ಟವಾಗಿಹೋಯಿತ್ತು, ಹಗರಣಿಗನ ನಗೆಗೇಡಾಯಿತ್ತು-ಬಹುರೂಪಗಾರನು ಆಟವನಾಡುತಿದ್ದಲ್ಲಿ ಆ ಆಟವನು ಮರೆಸಿ ಮತ್ತೊಂದಾಟವ ತಂದಲ್ಲಿ ಅಲ್ಲಿದ್ದಂಥ ಆತ್ಮರುಗಳೆಲ್ಲರೂ ಗಹಗಹಿಸುತ್ತಿಹರು ಹಾಂಗೆ ಈ ಉಪಾಧಿಕನಾಡುವಂಥ ಪ್ರಸಂಗವು ನಿರ್ವಂಚಕ ಸದ್ಭಕ್ತರ ಮುಂದೆ ಹಾಸ್ಯವಾಗಿರ್ಪದು. ಮಾಱಂಕ-ಪ್ರತಿವೈರಿಯಾದ, ಜಂಗಮ-ಚರಲಿಂಗವು, ಬಂದಡೆ-ಭಕ್ತನ ಭಕ್ತಿಮಂದಿರಕ್ಕೆ ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಕಾಣದಂತೆ-ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ, ಅಡ್ಡಮುಸುಡಿಟ್ಟಡೆ-ಅಡ್ಡಮೋರೆಯ ಹಾಕಿಕೊಂಡು ಸುಮ್ಮನಿದ್ದರೆ, ಕೂಡಲಸಂಗಮದೇವ-ಪರಶಿವಲಿಂಗವು, ಮೂಗು ಕೊಯ್ವ ಹಲ್ಲುದೋಱಲು, ಮೂಗು-ಅಚಾರಾಂಗವೆಂಬ ಪ್ರಾಣವನ್ನು, ಕೊಯ್ವ ಹಲ್ಲು ದೋಱಲು-ರದನಗಳ ಕುರುಹುಗಾಣಿಸುವ ಹಾಂಗೆ ಚಿತ್ಕರಣಂಗಳನ್ನು ಅಪಹರಿಸಿ ದುಷ್ಕರಣಂಗಳಿಗೊಳಗುಮಾಡಿ ಮಾನಭಂಗವ ಮಾಡಿ ಭವಕ್ಕೆ ಹಾಕಿ ಬಿಡುವಲ್ಲಿ, ಜಾಣ-ಪ್ರವೀಣನು.

III-------------------------------------------------------

ಹಲ್ಲುದೋಱಲು-ಕರಣಂಗಳ ವರ್ತನೆಯುಂಟಾಗಲು, ಮೂಗುಕೊಯ್ವ-ಆಚಾರಹೀನವಾದನಾಚಾರಿಯಾಗಿಸಿ ಭವಕ್ಕೆ ಹಾಕಿಬಿಡುವನು.

IV-------------------------------------------------------

1-1 ಹಗರಣ ನಗಗೆಡೆಯಾಯಿತ್ತು. (೧೦೭)

..........................

ದೇಹೇಂದ್ರಿಯಂಗಳ ಗೆಲದೆ ಜಂಗಮ ಲಿಂಗವೆಂದು ನಂಬದೆ ಕಾಣುತ್ತ ಹಿಂದು ಮುಂದಾದರೆ ಮೂಗ ಕೊಱೆ[ವ]ನೆಂಬುದೀ ವಚನದರ್ಥ.

..........................

೧-೧ ಯ (ತ).

---

೩೦೩

**ಅಚ್ಚ ಶರಣರು ನಿಮ್ಮ ನಿಚ್ಚ ನಿಚ್ಚ ನೆನೆವರು; ಬಚ್ಚಬಜೆಯ ಮಾತನಾಡುವೆ. ಒಪ್ಪಚ್ಚಿ ಅರೆಭಕ್ತಿ ನಿಮ್ಮ ನೆನೆಯಲೀಯದು. ಎನ್ನ ಮಚ್ಚರು ನಿಮ್ಮವರು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಅಚ್ಚಶರಣರು ನಿಮ್ಮ ನಿಚ್ಚನಿಚ್ಚ ನೆನೆವರು : ಅಚ್ಚ ಶರಣರು–ಬಚ್ಚಬರಿಯ ಚಿತ್ಸ್ವರೂಪವಾದ ಶಿವಶರಣರು, ನಿಮ್ಮ–ಸ್ವಾಮಿಗಳ, ನಿಚ್ಚನಿಚ್ಚ–ದಿನದಿನಂಪ್ರತಿಯಲ್ಲಿ, ನೆನೆವರು–ಸ್ಮರಣೆಯ ಮಾಡುವರು. ಬಚ್ಚಬಜೆಯ–ಅಚ್ಚ ವಿಷಯವಾದ, ಮಾತನಾಡುವೆ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬೆನು. ಒಪ್ಪಚ್ಚಿ–ಅಷ್ಟಾದರೂ, ಅರೆಭಕ್ತಿ–ನಾ ಮಾಡುವಂಥ ಭಿನ್ನಭಕ್ತಿಯು, ನಿಮ್ಮ–[೧]ಸ್ವಾಮಿಗಳ[೧], ನೆನೆಯಲೀಯದು–ಸ್ಮರಣೆಯ ಮಾಡಗೊಡದು. ಎನ್ನ–ನನ್ನ, ನಿಮ್ಮವರು–ನಿಮ್ಮ ಸಂಬಂಧವಾದ ಶರಣರು, ಮಚ್ಚರು–ಮಮಕರಿಸರು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧-೧ ಗುರುಮೂರ್ತಿಗಳ (ಗ)

IV- - - - - - - - - - - - - - - - - - - - - - - - - - - - - - - - - - - - - - - - - - - - -

ಸದಾ ನೆನೆವರು ಶರಣ[೨][ರು.ಅ][೨]ಲ್ಲದವ[೩][ರ][೩] ಬಜೆ ಮಾತನಾಡುವರ ಮೆಚ್ಚರು ಭಕ್ತರೆಂಬುದೀ ವಚನದರ್ಥ.

..........................

೨-೨ ರ (ತ). ೩-೩ ರು (ತ).

---

೩೦೪

**ಆಡುವುದಳವಟ್ಟಿತ್ತು, ಹಾಡುವುದಳವಟ್ಟಿತ್ತು; ಅರ್ಚನೆಯಳವಟ್ಟಿತ್ತು, ಪೂಜನೆಯಳವಟ್ಟಿತ್ತು; ನಿತ್ಯಲಿಂಗಾರ್ಚನೆ ಮುನ್ನವೆ ಅಳವಟ್ಟಿತ್ತು. ಕೂಡಲಸಂಗನಶರಣರು ಬಂದಡೆ, [1]ಏಗೈದು ಬೆಸನೆಂದು[1] ಒಪ್ಪಚ್ಚಿ ಅಳವಡದು!**

I - - - - - - - - - - - - - - - - - - - - - - - - - - - - - - - - - - - - - - - - - - - - -

ಆಡುವುದಳವಟ್ಟಿತ್ತು–ಹಸ್ತದಲ್ಲಿ ಲಿಂಗವನ್ನು ಪಿಡಿದುಕೊಂಡು ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆದಾಡುವಂಥದು, ಅಳವಟ್ಟಿತ್ತು–ಸಂಬಂಧವಾಯಿತ್ತು, ಹಾಡುವುದಳವಟ್ಟಿತ್ತು–ಕಂದವೃತ್ತಗದ್ಯಪದ್ಯಪ್ರಬಂಧಗಳಿಂದಾ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುವಂಥದು, ಅಳವಟ್ಟಿತ್ತು–ಸಂಬಂಧವಾಯಿತ್ತು, ಅರ್ಚನೆ ಅಳವಟ್ಟಿತ್ತು: ಅರ್ಚನೆ–ಹನ್ನೆರಡು ತೆರನಾದರ್ಚನೆಯು, ಅಳವಟ್ಟಿತ್ತು–ಸಂಬಂಧವಾಯಿತ್ತು. ಪೂಜನೆಯ ಯಳವಟ್ಟಿತ್ತು–ಇಪ್ಪತ್ತುನಾಲ್ಕು ತೆರೆದ ಪೂಜೆಯು,

ಅಳವಟ್ಟಿತ್ತು–ಸಂಬಂಧವಾಯಿತ್ತು. ನಿತ್ಯಲಿಂಗಾರ್ಚನೆ ಮುನ್ನವೆ ಅಳವಟ್ಟಿತ್ತು : ನಿತ್ಯಲಿಂಗಾರ್ಚನೆ–ತ್ರಿಕಾಲಂಗಳಲ್ಲಿ ತಪ್ಪದೆ ಮಾಡುವಂಥ ಲಿಂಗಪೂಜೆಯು, ಮುನ್ನವೆ ಅಳವಟ್ಟಿತ್ತು–ಮೊದಲೇ ಸಂಬಂಧವಾಯಿತ್ತು. ಕೂಡಲಸಂಗನಶರಣರು–ಜಂಗಮಮೂರ್ತಿಗಳು, ಬಂದಡೆ–ಭಕ್ತನ ಭಕ್ತಿಮಂದಿರಕ್ಕೆ ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದರೆ, ಏಗೈದು–ಆವಾಗ ಚಿತ್ತೈಸಿದಿರಿ, ಬೆಸನೆಂದು–ಸ್ವಾಮೀ ಅಪ್ಪಣೆಯೇನೆಂದು ಬೆಸಗೊಂಡು ಕೇಳುವಂಥದು, ಒಪ್ಪಚ್ಚಿ–ಅಷ್ಟಾದರೂ, ಅಳವಡದು–ದೊರೆಕೊಳ್ಳದು.

IV-------------------------------------------------------------------

1–1 ಏಗೂದೇ ಬೆಸನೆಂಬನೆಂಬುದು (ತ)

..........................

ಆಡಿ ಹಾಡಿ ಪೂಜಿಸೂದು ಅಳವಟ್ಟಿತ್ತು: ಪರಂಜ್ಯೋತಿಯಾದ ಜಂಗಮಕ್ಕೆ ಮಾಡುವುದಳವಡದೆಂಬುದೀ ವಚನದರ್ಥ.

---

೩೦೫

**ಒಡೆಯರಿಗೆ ಒಡವೆಯನೊಪ್ಪಿಸಲಾರದೆ ಮೊಜಿಯಿಡುವ ಮಾನವನ ನಾನೇನೆಂಬೆನಯ್ಯಾ? ನೆತ್ತಿಯಲ್ಲಿ ಅಲಗ ತಿರುಹುವಂತಪ್ಪ ವೇದನೆಯಹುದೆನಗೆ! ಕೊಯ್ದ ಮೂಗಿಂಗೆ ಕನ್ನಡಿಯ ತೋಱುವಂತಪ್ಪ ವೇದನೆಯಹುದೆನಗೆ ! ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ ವೇದನೆಯಹುದೆನಗೆ! ಕೂಡಲಸಂಗಮದೇವ ಮಾಡಿ ನೋಡುವ ಹಗರಣವ ನಾ ಮಾಡಿಹೆನೆಂದಡೆ ಮನಕ್ಕೆ ಮನ ನಾಚದೆ ಅಯ್ಯಾ?**

I - - - - - - - - - - - - - - - - - - - - - - - - - - - - - - - - - - - - - - - - - - - -

ಒಡೆಯರಿಗೆ ಒಡವೆಯನೊಪ್ಪಿಸಲಾಱದೆ–ಲೋಕದಲ್ಲಿ ತಸ್ಕರರಾದಂಥವರು ಪರರೊಡವೆಯಾದ ದ್ರವ್ಯವನ್ನು ತೆಗೆದುಕೊಂಡು ಹೋಗುವರು, ಹೋದಲ್ಲಿ ಸೋಹಿಯನ್ನು ಹಿಡಿದುಕೊಂಡು ಹೋಗಿ ನಮ್ಮ ಒಡವೆಯನು ನಮಗೆ ಕೊಡೆಂದು ಕೇಳುವರು. ಕೇಳಿದಲ್ಲಿ ನಿಮ್ಮ ಒಡವೆ ನಾವೆಲ್ಲಿಂದ ತಂದೀವೆಂದು ಹಾರಿಸಿ ಬಿಟ್ಟಲ್ಲಿ ಎಡಬಲದಲ್ಲಿದ್ದಂಥ ಆತ್ಮರುಗಳು ಅವರೊಡವೆಯ ಅವರಿಗೆ ಕೊಡುವುದಕ್ಕೆ ನೀನೇಕೆ ದುಃಖಮಾಡುತ್ತಿದ್ದೀ? ಕೊಡೆಂದು ಹೇಳಿದಲ್ಲಿ, ಮೊಜಿಯಿಡುವ–ಅರಿಯೋ ಮೊರಿಯೋ ಎಂದು ಆರ್ಭಟಿಸಿ ಹುಯ್ಯಲಿಡುವಂಥ, ಮಾನವನ ಸ್ವಲ್ಪವಾದ ಮನುಷ್ಯನ, ನಾನೇನೆಂಬೆನಯ್ಯಾ?–ಆ ತಸ್ಕರನ ಅತಿಶಯವನು ನಾನೆಂತೆಂದು ಹೇಳುವೆನಯ್ಯಾ? ಎಂಬುದರ್ಥ.

ಒಡೆಯರಿಗೆ–ತನುಮನಧನಂಗಳಿಗೆ ಕರ್ತರಾದ ಗುರುಲಿಂಗಜಂಗಮಮೂರ್ತಿಗಳಿಗೆ, ಒಡವೆಯನು–ತನುಮನಧನಂಗಳನು, ಒಪ್ಪಿಸಲಾಱದೆ–ನಿರ್ವಂಚನೆಯಿಂದ ಕೊಟ್ಟು ಭಕ್ತಿಯ ಮಾಡಲಾರದೆ, ಮೊಜಿಯಿಡುವ–'ಗುರುಲಿಂಗಜಂಗಮಮೂರ್ತಿಗಳು' ಬಂದು ಎಲೋ ಭಕ್ತ ತನುವಕೊಡು ಮನವ ಕೊಡು ಧನವ ಕೊಡುಯೆಂದು ಕೇಳುವರು. ಕೇಳಿದಲ್ಲಿ ನಾನೆಲ್ಲಿ ಕೊಟ್ಟು ಭಕ್ತಿಯ ಮಾಡಲೆಂದು ಕಂಡ ನಿಂದವರ ಮುಂದೆ ಹೇಳುವಂಥ, ಮಾನವನ–ಉಪಾಧಿಕನಾದ ಮನುಷ್ಯನ, ನಾನೇನೆಂಬೆನಯ್ಯಾ?–ಅವ ಕೆಟ್ಟಂಥ ಕೇಡು ನಾ ಎಂತೆಂದು ಹೇಳವೆನಯ್ಯಾ? ನೆತ್ತಿಯಲ್ಲಿ ಅಲಗುತಿರುಹುವಂತಪ್ಪ ವೇದನೆಯಹುದೆನಗೆ !– ಲೋಕದಲ್ಲಿ ಕೆಲವಾತ್ಮರುಗಳು ಜಾರತ್ವ ಚೋರುತನವ

ಮಾಡಿದಲ್ಲಿ ದೊರೆ ದಾತರು ಹಿಡಿತರಿಸಿ ಅವರ ತಲೆಯ ಮೇಲೆ ಅಂಬಿನಗಣಿಯ ನಿಟ್ಟು ಹೊಸಸುವರು. ಹೊಸಸಿದಲ್ಲಿ ಅವರಿಗೆಷ್ಟೊಂದು ದುಃಖ ಉಂಟಾಗುತ್ತಿಹುದೋ ಹಾಂಗೆ ಜಂಗಮಮೂರ್ತಿಗಳು ಬಂದು ತನುಮನಧನಂಗಳನು ಕೇಳಿದಲ್ಲಿ ನನಗೆ ಅಷ್ಟೊಂದು ದುಃಖ ಉಂಟಾಗುತ್ತಿಹುದು. ಕೊಯ್ದ ಮೂಗಿಂಗೆ ಕನ್ನಡಿಯ ತೋಱುವಂತಪ್ಪ ವೇದನೆಯಹುದೆನಗೆ!– ಲೋಕದಲ್ಲಿ ಕಳವು ಹಾದರಮಾಡಿದಂಥ ಆತ್ಮರುಗಳ ದೊರೆದಾತರು ಹಿಡಿತರಿಸಿ ಕಿವಿಮೂಗವನು ಕೊಯ್ಸಿ ಕನ್ನಡಿಯನ್ನು ತೋರಿದಲ್ಲಿ ಅದರೊಳಗೆ ತನ್ನ ಕೊರತೆಯ ಕಂಡಲ್ಲಿ ಅವರಿಗೆ ಎಷ್ಟೊಂದು ದುಃಖವಾಗುತ್ತಿಹುದೋ ಹಾಂಗೆ ಜಂಗಮಮೂರ್ತಿಗಳು ಬಂದು ತನುಮನಧನಂಗಳನು ಕೇಳಿದಲ್ಲಿ ನನಗೆ ಅಷ್ಟೊಂದು ದುಃಖ ಉಂಟಾಗುತ್ತಿಹುದು.

ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ ವೇದನೆಯಹುದೆನಗೆ–ಅಗ್ನಿಯಲ್ಲಿ ದಗ್ಧವಾದ ವ್ರಣವನು ಬಿದಿರ ದಬ್ಬಿಯಲ್ಲಿ ಬಾಚಿದಲ್ಲಿ ಅವನಿಗೆ ಎಷ್ಟೊಂದು ದುಃಖವುಂಟಾಗುತ್ತಿಹುದೋ ಹಾಂಗೆ ಜಂಗಮಮೂರ್ತಿಗಳು ಬಂದು ತನುಮನಧನಂಗಳನು ಕೇಳಿದಲ್ಲಿ ನನಗೆ ಅಷ್ಟೊಂದು ದುಃಖವುಂಟಾಗುತ್ತಿಹುದು, ಕೂಡಲಸಂಗಮದೇವ–ಪರಶಿವಲಿಂಗವು. ಮಾಡಿ–ಅಂತರಂಗದಲ್ಲಿ ವಂಚನೆ ಉಪಾಧಿ ಕುಟಿಲಕುಹಕ ಪ್ರಪಂಚೆಂಬ ಕಾಪಟ್ಯವನು ಉಂಟು ಮಾಡಿ, ನೋಡುವ–ಬಹಿರಂಗದಲ್ಲಿ ಎಲೋ ಭಕ್ತ ತನುವ ಕೊಡು ಮನವ ಕೊಡು ಧನವ ಕೊಡುಯೆಂದು ಒರೆದೊರೆದು ನೋಡುವವನು. ಮಾಟ–ಅವನು ಮಾಡುವಂಥ ಭಿನ್ನಭಕ್ತಿಮಾಟವು, ಹಗರಣವ ಹಾಸ್ಯರಸವ ತಿಳಿದಿದ್ದು, ನಾ ಮಾಡಿಹೆನೆಂದಡೆ–ಗುರುಲಿಂಗಜಂಗಮಕ್ಕೆ ನಿರ್ವಂಚನೆಯಿಂದ ತನುಮನಧನಂಗಳನು ಕೊಟ್ಟು ಭಕ್ತಿ ಮಾಡೇನೆಂದರೆ, ಮನಕ್ಕೆ ಮನ ನಾಚದೆ ಅಯ್ಯಾ? –ಅಂತರಂಗದಲ್ಲಿ ವಂಚನೆ ಉಪಾಧಿ ಕುಟಿಲಕುಹಕ ಪ್ರಪಂಚೆಂಬ ಕಾಪಟ್ಯವ ಮುಂದುಗೊಂಡಿರುವಂಥ ಮನಸ್ಸಿಗೂ ಬಹಿರಂಗದಲ್ಲಿ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡೇನೆಂಬಂಥ ಮನಸ್ಸಿಗೂ ಅಭಿಮಾನಿಸಿಕೊಳ್ಳದೆಯಿದ್ದಿತ್ತೆ? ಅಭಿಮಾನಿಸಿಕೊಳುತ್ತಿಹುದು. ಅಯ್ಯಾ–ಎಲೆ ಲಿಂಗವೆ.

.........................

೧–೧ x (ಗ).

III- - - - - - - - - - - - - - - - - - - - - - - - - - - - - - - - - - - - - - - - - - -

ಲೋಕದ ಚರ್ಚನೆಯನುಂಟುಮಾಡಿ ಭಕ್ತಿಯುಂಟೊ ಇಲ್ಲವೊ ಎಂದು ಪರೀಕ್ಷೆಯ ಮಾಡಿ ನೋಡುವವನು ಎಂಬುದೀಗ ೨ ಹಗರಣ ೨ ವನುಂಟುಮಾಡಿದನೆಂಬ ಶಬ್ದಕ್ಕರ್ಥ.

.........................

೨–೨ ಹರಣ (ಡ).

IV- - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗದ ಧನವ ಲಿಂಗಕ್ಕೊಪ್ಪಿಸಲಾಱದೆ ಅಂಗ ವಿಷಯಕ್ಕೆ ಮಾಡಿದರೆ ಕೊಯ್ದ ಮೂಗಿಂಗೆ ಕನ್ನಡಿಯ ತೋಱಿದಂತಪ್ಪುದೆಂಬುದೀ ವಚನದರ್ಥ.

**ಹೊಜೆಸಿಕೊಂಡು ಹೋದ ನಾಯಿ ಮೊಲನ ಏನ ಹಿಡಿವುದಯ್ಯಾ ? ಇಜೆಯದ ವೀರ ಇಲ್ಲದ ಸೊಬಗ ಹೇಳುವುದೇ ನಾಚಿಕೆ! ಆನು ಭಕ್ತನೆಂತಪ್ಪೆನಯ್ಯಾ, ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಹೊಜೆಸಿಕೊಂಡು ಹೋದ ನಾಯಿ ಮೊಲನ ಏನ ಹಿಡಿವುದಯ್ಯಾ–ಲೋಕದಲ್ಲಿ ಮ್ಲೇಂಛರಾಗಲಿ ಕಿರಾತರಾಗಲಿ ಹತ್ತೆಂಟು ನಾಯಿಗಳನ್ನು ಸಾಕಿ ಕೊಂಡಿರುವರು. ಅದರೊಳಗೊಂದು ಕಳ್ಳನಾಯಿ ಇರುವುದು. ಅವರೇನಾದರೂ ಬೇಂಟೆಗೆ ಹೋಗುವಾಗ್ಗೆ ಸೋ[ಹ] ನಾದರೂ ತಿಳಿದು ಬರುವವು, ಚಿಟಕಿಯನಾದರೂ ಹಾಕಿ ಕರೆದರೂ ಬರುವವು, ಸಿಳ್ಳನಾದರೂ ಹಾಕಿ ಕರೆದರೂ ಬರುವವು, ಅಥವಾ ಹಾಸಕಟ್ಟಿಯ ಕಟ್ಟಿ ಹಿಡಿದುಕೊಂಡುಹೋದರೂ ಬರುವವು. ಆ ಕಳ್ಳನಾಯಿಯೆಂಬಂಥದು ತಾನು ಸೋ[ಹ]ನಾದರೂ ತಿಳಿದುಬಾರದು, ಚಿಟಕಿಯಹಾಕಿ ಕರೆದರೂ ಬಾರದು, ಸಿಳ್ಳನು ಹಾಕಿ ಕರೆದರೂಬಾರದು, ಹಾಸಕಟ್ಟಿಯ ಕಟ್ಟಿಹಿಡಿದುಕೊಂಡುಹೋದರೂ ಬಾರದೆ ಅಲ್ಲೇ ಉರುಳಿಕೊಂಡು ಬೀಳುವುದು. ಬಿದ್ದಲ್ಲಿ ಇದನೇನ ನೋಡುತೀರಿ ಕಾಲಕಟ್ಟಿ ಹೊತ್ತುಕೊಳ್ಳಿರೆಂದು ಹೇಳಿದಲ್ಲಿ ಕಾಲಕಟ್ಟಿ ಹೊರಿಸಿಕೊಂಡು ಹೋದ ನಾಯಿ. ಮೊಲನ ಹಿಡಿವುದೆ ಅಯ್ಯಾ ?– ಅಡವಿಗೆ ಹೊತ್ತುಕೊಂಡು ಹೋಗಿ ಚಿಗರಿ ಮೊಲಗಳ ಮೇಲೆ ಹುಸಿ ಬಿಟ್ಟಲ್ಲಿ ಅಲ್ಲೇ ಸುತ್ತಿಕೊಂಡಾದರೂ ಬೀಳುವುದು. ಹಿಂದಕ್ಕೆ ಓಡಿಯಾದರೂ ಬರುವುದಲ್ಲದೆ ಮೊಲವನ್ನು ಹಿಡಿದುಕೊಟ್ಟಿತ್ತೆ? ಹಿಡಿದುಕೊಡದೆಂಬ ಹಾಂಗೆ ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರು ಪೇಟೆ ಮನೆ ಪುರಪಟ್ಟಣ ಸ್ಥಾನಂಗಳಲ್ಲಿಗೆ ಬಂದು ಚೌಕಿಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನ್ನು ಮಾಡುತ್ತಿದ್ದಲ್ಲಿ ಎಲ್ಲ ಭಕ್ತಮಾಹೇಶ್ವರರೊಂದು ಭಕ್ತಿ ಬಿನ್ನಹವನ್ನು ಮಾಡುವರು. ಅಲ್ಲೊಬ್ಬ ಉಪಾಧಿಕನಿರುವನು. ತಾನಾದರೂ ತಿಳಿದುಮಾಡದೆ ಸಂಜ್ಞೆಯು ಕಂಡಾದರೂ ಮಾಡದೆ ಇದ್ದಲ್ಲಿ ನಿರ್ವಂಚಕ ಸದ್ಭಕ್ತ ಮಾಹೇಶ್ವರರೊಳಗಾರಾದರೂ ನೀನೊಂದು ಭಕ್ತಿಬಿನ್ನಹವನ್ನು ಮಾಡೆಂದು ಹೇಳಿದರೂ ಮಾಡದೆ ಇರುವಂಥ ಉಪಾಧಿಕನ ಇರಸ್ಥಿಯೂ ಕಾಲುಕಟ್ಟಿ ಹೊರಿಸಿಕೊಂಡುಹೋದ ಕಳ್ಳನಾಯಿ, ಚಿಗರಿ ಮೊಲನ ಹಿಡಿದುಕೊಡದೆಯಿದ್ದ ಇರಸ್ಥಿತಿಯೂ ಒಂದೇಯಾಗಿರ್ಪುದು, ಅಯ್ಯಾ–ಎಲೆ ಲಿಂಗವೆ.

ಇಜೆಯದ ವೀರ ಇಲ್ಲದ ಸೊಬಗ ಹೇಳುವುದೆ ನಾಚಿಕೆ : ಇಜೆಯದ–ಯುದ್ಧವ ಮಾಡದ. ವೀರ–ಬಂಟನು, ಇಲ್ಲದ–ತನ್ನಲ್ಲಿ ಉಂಟಾಗಿಲ್ಲದ, ಸೊಬಗ–ರಣಾಗ್ರದೊಪ್ಪವನ್ನು, ಹೇಳುವುದೆ ನಾಚಿಕೆ--ಚಾವಡಿಗಳಲ್ಲಿ ಹೆಬ್ಬಾಗಿಲಗಳಲ್ಲಿ ಕುಳಿತುಕೊಂಡು ತನಗೆ ಸಖರಾದ ಹತ್ತೆಂಟು ವಾಲೆಕಾರರ ಮುಂದೆ ನಾನು ಕುರಿಯ ಹಿಂಡಿಗೆ ತೋಳ ಹೊಕ್ಕ ಹಾಂಗೆ ಹುಲ್ಲೆ ಹಿಂಡಿಗೆ ಹುಲಿ ಹೊಕ್ಕ ಹಾಂಗೆ ಆನೆ ಹಿಂಡಿಗೆ ಸಿಂಹ ಹೊಕ್ಕ ಹಾಂಗೆ ಸಿಂಹನ ಹಿಂಡಿಗೆ ಗಂಢಭೇರುಂಡ ಹೊಕ್ಕ ಹಾಂಗೆ ಈಚೆಲಿಂದಾಚೆಗೆ ಆಚೆಲಿಂದೀಚೆಗೆ ಕಡಿದುಕೊಂಡು ಹೊದೇನೆಂದು ಹೇಳಿಕೊಂಬುವಂಥದೆ; ನಾಚಿಕೆ–ಅಭಿಮಾನವು. ಹಾಂಗೆ ಇಜೆಯದ–ಇಚ್ಛಾಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡದ, ವೀರ–ಉಪಾಧಿಕನು, ಇಲ್ಲದ–ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡುವಂಥದು ತನ್ನಲ್ಲಿ ಉಂಟಾಗಿಲ್ಲದ ಸೊಬಗ–ಭಕ್ತಿವೇಷದ ಒಪ್ಪವನ್ನು, ಹೇಳುವುದೆ–ಭಕ್ತಮಾಹೇಶ್ವರರೊಂದಿಗೆ ನಾನು ಜಂಗಮಕ್ಕೆ ತನುವ

ಕೊಡುತ್ತೈದೇನಿ ಮನವ ಕೊಡತ್ತೈದೇನಿ ಧನವ ಕೊಡುತ್ತೈದೇನೆಂದು ಹೇಳಿಕೊಂಬಂಥದೆ, ನಾಚಿಕೆ-ಅಭಿಮಾನವು. ನಾನು ಭಕ್ತನೆಂತಪ್ಪೆನಯ್ಯಾ-ನಾನು ನಿರ್ವಂಚಕಸದ್ಭಕ್ತ ಹೇಂಗಾದೇನಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ಯಿ (ಕ. ಗ). ೨-೨ ಹಿ (ಕ. ಗ) ೩-೩ ಸೇ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - - - - - -

ಹೊಱೆಸಿಕೊಂಡು ಹೋದನಾಯಿ ಮೊಲನೇನ ಹಿಡಿವುದಯ್ಯಾ?- ನಿರಪರಾಧಿಗಳ ಕೊಲುವಂಥದ್ದು ಸದ್ಧರ್ಮ ವೈರಾಗ್ಯವನೇನ ಗ್ರಹಿಸೂದಯ್ಯಾ?, ಇಱೆಯದ ವೀರ ಇಲ್ಲದ ಸೊಬಗುವ ಹೇಳುವುದೇ ನಾಚಿಕೆ- ಒಬ್ಬರ ಕೂಡೆ ಹೇಳಿ ಕೇಳಿ ಛೀ ಎನಿಸಿಕೊಂಡು ಹೋದವ ಭಕ್ತಿಯನೇನು ಮಾಡು[ವ]ನಯ್ಯಾ? ಮುಂದಕ್ಕೆ ಕಾಣಬಂದರ್ಥ.

IV----------------------------------------------------------------------------------------------

ತನ್ನಲ್ಲಿ ಮಾಡಬೇಕೆಂಬ ಕಾಮವಿಲ್ಲದೆ, ಹೇ[ಳೆ] ಮಾಡಿದಡಹುದೆ? ಇಱೆಯದ ವೀರ, ಇಲ್ಲದ ಸೊಬಗಿನ ಪರಿಯೆಂತೆಂಬುದೀ ವಚನದರ್ಥ.

---

೩೦೭

**ಎನ್ನ ಭಕ್ತನೆಂದೆಂಬರು, ಎನ್ನ ಹೊಱಹಂಚೆ [1]ಒಳಬೋಳತನ[1]ವನಱೆಯರಾಗಿ. ಎನ್ನ ಮಾನಾಪಮಾನವು ಶರಣರಲ್ಲಿ, ಎನ್ನ ಜಾತಿವಿಜಾತಿಯು ಶರಣರಲ್ಲಿ, ಎನ್ನ ತನುಮನಧನವು ಶರಣರಲ್ಲಿ, ವಂಚನೆಯುಳ್ಳ ಡಂಭಕ ನಾನು, ತಲೆ ಒಡೆಯಂಗೆ ಕಣ್ಣ ಬೈಚಿಡುವಂತೆ ಕೂಡಲಸಂಗಮದೇವಾ.**

I----------------------------------------------------------------------------------------------

ಎನ್ನ ಭಕ್ತನೆಂದೆಂಬರು : ಎನ್ನ-ಸಂಗನಬಸವೇಶ್ವರನ, ಭಕ್ತನೆಂದೆಂಬರು-ನಿರ್ವಂಚಕ ಸದ್ಭಕ್ತನೆಂದು ಹೇಳುವರು. ಎನ್ನ ಹೊಱಹಂಚೆ ಒಳಬೋಳ ತನವನಱೆಯರಾಗಿ: ಎನ್ನ ಹೊರಹಂಚೆ-ಎನ್ನ ಬಹಿರಂಗದ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷದ ಧರಿಸಿಕೊಂಡಿರ್ಪೆನು. ಒಳಬೋಳತನವನಱೆಯರಾಗಿ-ಅಂತರಂಗದಲ್ಲಿ ವಂಚನೆ ಉಪಾಧಿ ಕುಟಿಲಕುಹಕಪ್ರಪಂಚೆಂಬ ಕಾಪಟ್ಯವೇ ಉಂಟಾಗಿರುವಂಥದನ್ನು ತಿಳಿಯರಾಗಿ; ಶರಣರಲ್ಲಿ-ಜಂಗಮಮೂರ್ತಿಗಳಲ್ಲಿ, ಎನ್ನ ಮಾನಾಪಮಾನವು-ಎನ್ನ ಪೂಜ್ಯಾಪೂಜ್ಯತ್ವವನ್ನುಂಟುಮಾಡಿ ಹೇಳುವೆನು, ಶರಣರಲ್ಲಿ-ಜಂಗಮಮೂರ್ತಿಗಳಲ್ಲಿ. ಎನ್ನ ಜಾತಿವಿಜಾತಿಯು-ಎನ್ನ ಕುಲ [೧]ಅಕುಲ[೧]ವನ್ನುಂಟುಮಾಡಿ ಹೇಳುವೆನು. ಶರಣರಲ್ಲಿ-ಜಂಗಮಮೂರ್ತಿಗಳಲ್ಲಿ, ಎನ್ನ ತನುಮನಧನವು-ಎನ್ನ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಂಥದನು ಉಂಟುಮಾಡಿ ಹೇಳುವೆನು. ಶರಣರಲ್ಲಿ-ಜಂಗಮಮೂರ್ತಿಗಳಲ್ಲಿ, ವಂಚನೆಯುಳ್ಳ-ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಳಬೇಕೆಂಬಂಥ

ಮಾಜೋಬುದ್ದಿಯ, ಉಳ್ಳ-ಉಂಟಾದ, ಡಂಭಕ ನಾನಯ್ಯಾ-ಹಿರೇತನದ ಬೂಟಕತ್ವವುಳ್ಳಾತ ನಾನಯ್ಯಾ.

ತಲೆ ಒಡೆಯಂಗೆ ಕಣ್ಣ ಬೈಚಿಡುವಂತೆ-ಒಬ್ಬಾನೊಬ್ಬ ದೊರೆಯೇನಾದರೂ ತನ್ನ ಕೈಕೆಳಗೆ ಸೇವಕವೃತ್ತಿಯ ಮಾಡಿಕೊಂಡಿರುವಂಥ ಭೃತ್ಯನೊಂದಿಗೆ ಎಲೋ ತಮ್ಮಾ ನನಗೆ ನಿನ್ನ ಕಣ್ಣು ಬೇಕಾಗೈತೆ ಕೊಟ್ಟೀಯಾ? ಎಂದು ಕೇಳಿದಲ್ಲಿ, ಸ್ವಾಮಿ ತಲೆ ಕೊಟ್ಟರೂ ಕೊಟ್ಟೇನಲ್ಲದೆ ಕಣ್ಣು ಕೊಡಲಾರೆನೆಂದು ಹೇಳಿದಲ್ಲಿ ಕಣ್ಣು ಕೊಡಲಾರದವ ೨ ತಲೆ ಕೊಡುವುದು ೨ ಬದ್ಧವೇ? ಅಬದ್ಧವೆಂದು ನಕ್ಕು ಹಾಸ್ಯಮಾಡುತ್ತಿಹರು. ಹಾಂಗೆ ತಲೆ ಒಡೆಯಂಗೆ-ತಲೆಯೆಂದರೆ ಜ್ಞಾನ, ಅಂತಪ್ಪಜ್ಞಾನಕ್ಕೆ ಕರ್ತರಾದ ಜಂಗಮಮೂರ್ತಿಗಳಿಗೆ, ಕಣ್ಣ ಬೈಚಿಡುವಂತೆ-ಅಂತರಂಗದಲ್ಲಿ ಆತ್ಮಪದಾರ್ಥವ ವಂಚಿಸಿಕೊಂಡು ಬಹಿರಂಗದ ಪದಾರ್ಥವ ಕೊಟ್ಟು ಭಕ್ತಿಯ ಮಾಡಿದರೆ ಮುಕ್ತಿಯಾದೀತೆ ? ಆಗಲರಿಯದು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

.........................

೧-೧ ಅಕ್ಕುಲ (ಕ. ಗ). ೨-೨ x (ಕ).

III- - - - - - - - - - - - - - - - - - - - - - - - - - - - - - - - - - - - - - - - - - - -

1-1 ಒಳಬೊಳ್ಳೆತನ (ಟ).

.........................

ಹೊಱಹಂಚೆ-ಬಹಿರಂಗದಲಿ ಭಕ್ತಿಯ ರಚನೆಯು, ಒಳಬೊಳ್ಳೆತನವ-ಅಂತರಂಗದಲ್ಲಿ ಜ್ಞಾನಸಾರರಹಿತವಾಗಿರುವಂಥದನು, ತಲೆಯೊಡೆಯಂಗೆ-ಶಿರಃಪ್ರಧಾನವಾದ ಜಂಗಮಲಿಂಗಕ್ಕೆ, ಕಣ್ಣ ಬೈಚಿಡುವೆ-ಸುಜ್ಞಾನದ್ರವ್ಯವನಪಹರಿಸಿಕೊಂಬೆನು.

IV- - - - - - - - - - - - - - - - - - - - - - - - - - - - - - - - - - - - - - - - - - - -

1-1 ಒಳಬೊಳ್ಳೆತನ (ತ).

.........................

ತನುಮನದಭಿಮಾನ ಜಾತಿಧನ ನನ್ನದೆಂಬ ಅಭಿಮಾನವು ಬಿಡದಾಗಿ ಪರದಲ್ಲಿ ಕೂಟವಿಲ್ಲಾಯೆಂಬುದೀ ವಚನದರ್ಥ.

---

೩೦೮

**[1]ಎನ್ನಲ್ಲಿ[1] ಭಕ್ತಿ ಎಳ್ಳನಿತಿಲ್ಲ, ಯುಕ್ತಿಶೂನ್ಯನಯ್ಯಾ ನಾನು. [2]ತನುವಂಚಕನಯ್ಯಾ ನಾನು. ಮನವಂಚಕನಯ್ಯಾ ನಾನು. ಧನವಂಚಕನಯ್ಯಾ ನಾನು[2] ಕೂಡಲಸಂಗಮದೇವಾ ಒಳಲೊಟ್ಟೆ ಎನ್ನ ಮಾತು !**

I——————————————————————————————

ಎನ್ನಲ್ಲಿ ಭಕ್ತಿ ಎಳ್ಳನಿತಿಲ್ಲ : ಎನ್ನಲ್ಲಿ–ಸಂಗನಬಸವೇಶ್ವರನಲ್ಲಿ, ಭಕ್ತಿ–ಶಿವಾದ್ವೈತಭಕ್ತಿಯು, ಎಳ್ಳನಿತಿಲ್ಲ–ಒಂದು ತಿಲಾಂಶದಷ್ಟೂ ಉಂಟಾಗಿಲ್ಲವು. ಯುಕ್ತಿ ಶೂನ್ಯನಯ್ಯಾ ನಾನು–ಒಂದು ವಸ್ತುವೇ ಗುರುಲಿಂಗಜಂಗಮವಾಗಿ ಬಂದಿಪ್ಪುದೆಂದರಿವಂಥ ಜ್ಞಾನವಿಲ್ಲದಿರುವಾತ ನಾನಯ್ಯ. ತನುವಂಚಕನಯ್ಯಾ ನಾನು–ತನುಪದಾರ್ಥವನ್ನು ಗುರುವಿಗೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಳಬೇಕೆಂಬೊ ಮಾಜೋಬುದ್ಧಿಯುಳ್ಳಾತನಯ್ಯಾ ನಾನು. ಮನ ವಂಚಕನಯ್ಯಾ ನಾನು–ಮನಪದಾರ್ಥವ ಲಿಂಗಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಳಬೇಕೆಂಬೋ ಮಾಜೋಬುದ್ಧಿಯುಳ್ಳಾತನಯ್ಯಾ ನಾನು. ಧನವಂಚಕನಯ್ಯಾ ನಾನು–ಧನಪದಾರ್ಥವನ್ನು ಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಳಬೇಕೆಂಬೋ ಮಾಜೋಬುದ್ಧಿಯುಳ್ಳಾತನಯ್ಯಾ ನಾನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನ್ನ ಮಾತು--ನಾನಾಡುವಂಥ ಪ್ರಸಂಗವು, ಒಳಲೊಟ್ಟೆ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥದು ಸಟೆಪ್ರಸಂಗವು.

II- - - - - - - - - - - - - - - - - - - - - - - - - - - - - - - - - - - - - - - - - - -

1–1 (ಚ, ಜ).

.........................

ಭಕ್ತಿ ಎಳ್ಳನಿತಿಲ್ಲ ಯುಕ್ತಿಶೂನ್ಯನಯ್ಯಾ ನಾನು–ತ್ರಿವಿಧ ಷಡ್ವಿಧ ನವವಿಧಭಕ್ತಿ ಹೆಚ್ಚಿಗೆಯನೆಸಗುವರೆ ದಶೇಂದ್ರಿಯಂಗಳುಂಟು, ದಶವಿಧ ಕಲ್ಯಾಣ ಗುಣವುಂಟು. ಸತ್ಕ್ರೀಯನು ಹರಹಿ ಕ್ರೀಯನಾಚರಿಸಿದಡೇನು ? ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - -

ಒಳಲೊಟ್ಟೆ ಎನ್ನಮಾತು–ಎನ್ನ ಪ್ರಸಂಗವು ಜ್ಞಾನಸಾರಹೀನವಾದಂಥದ್ದು.

IV- - - - - - - - - - - - - - - - - - - - - - - - - - - - - - - - - - - - - - - - - - -

1–1 X (ತ). 2–2 ತನುವಂಚಕ ಧನವಂಚಕ ಧನವಂಚಕನಯ್ಯಾ ನಾನು (ತ).

.........................

ನಿತ್ಯದಲ್ಲಿ ಕೊಡುವ ಭಕ್ತಿಯಿಲ್ಲದೆ ತನುವಂಚಕ ಮನವಂಚಕ ಧನವಂಚಕರಿಗೆ ಮಾತಲ್ಲದ ಸಹಜವಿಲ್ಲಾ ಎಂಬುದೀ ವಚನದರ್ಥ.

---

೩೦೯

**ನೋಡುವರುಳ್ಳಡೆ ಮಾಡುವೆ ದೇಹಾರವ. ಎನಗೊಂದು ನಿಜವಿಲ್ಲ, ಎನಗೊಂದು ನಿಃಪತಿಯಿಲ್ಲ ! ಲಿಂಗವ ತೋಜೆ ಉದರವ ಹೊರೆವ [1]ಭಂಗಗಾಜ[1] ನಾನು ಕೂಡಲಸಂಗಮದೇವಾ!**

I - - - - - - - - - - - - - - - - - - - - - - - - - - - - - - - - - - - - - - - - - - -

ನೋಡುವರುಳ್ಳಡೆ ಮಾಡುವೆ ದೇಹಾರವ: ನೋಡುವರುಳ್ಳಡೆ-ನಾ ಮಾಡುವಂಥ ಪೂಜೆಯನು ನಿರೀಕ್ಷಣೆಯ ಮಾಡುವಂಥ ನಾಡಿಗ ದೇಸಾಯಿ ಸೆಟ್ಟಿ ಚೌದರಿ ದೊರೆ ದಾತರುಗಳುಂಟಾಗಿದ್ದರೆ, ಮಾಡುವೆ ದೇಹಾರವ-ಅಡ್ಡಣಿಗೆ ಹರಿವಾಣ ಬಿಂದಿಗಿ ಪಾಚಾಲಿ ಗಂಟೆ ದರ್ಪಣ ಗೋಮುಖತಟ್ಟೆ ಅರ್ಘ್ಯತಟ್ಟೆ ಶ್ರೀರುದ್ರತಟ್ಟೆ ಚಿನ್ನಕಹಳೆ ಮಾನ್ಯದ ಕಹಳೆ ಮೊದಲಾದ ರಂಜನ ಪೂಜಾಕ್ರಿಯೆಗಳ ಹರಹಿಕೊಂಡು ತಾಸು ಎರಡುತಾಸು ಭಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡುವೆನು. ಎನಗೊಂದು ನಿಜವಿಲ್ಲ-ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ಊರಲ್ಲಿರಲಿ ಅಡವಿಯಲ್ಲಿರಲಿ ಹತ್ತರಮಧ್ಯದಲ್ಲಿರಲಿ ಒರ್ವನಿರಲಿ ಕಿಂಚಿ[೧][ತ್ತಳ][೧] ಚುಳಕೋದಕಂಗಳಿಂದ ತಾನುತಾನಾಗಿ ಮಾಡುವಂಥ ಸಮರಸಕ್ರೀ ಎನ್ನಲ್ಲುಂಟಾಗಿಲ್ಲವು. ಎನಗೊಂದು ನಿಃಪತ್ತಿಯಿಲ್ಲ-ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ ಸಮರಸಜ್ಞಾನವೆನ್ನಲ್ಲುಂಟಾಗಿಲ್ಲವು.

ಲಿಂಗವ ತೋಜಿ ಉದರವ ಹೊರೆವ ಭಂಗಗಾಱ ನಾನು-ನಾ ಮಾಡುವಂಥ ಲಿಂಗಪೂಜೆಯನ್ನು ನಾಡಿನ ದೇಸಾಯಿ ಸೆಟ್ಟಿ ಚೌಧರಿ ದೊರೆ ದಾತರು ಮೊದಲಾದವರಿಗೆ ಕಾಣಿಸಿ ಊರುಂಬಳಿ ಸ್ವಾಸ್ತಿವೃತ್ತಿ ಮಠಮಾನ್ಯ ಮೊದಲಾದವನು ಹಡೆದುಕೊಂಡು ಘಟರಕ್ಷಣ್ಯವ ಮಾಡಿಕೊಂಬಂಥ, ಭಂಗಗಾಱ ನಾನು-ಕೇಣೆಕಾಯಕದವನು ನಾನು ಎಂಬಲ್ಲಿ ಒಬ್ಬಾನೊಬ್ಬ ಕೇಣೆದ ಕಾಯಕದವನೇನಾದರೂ ಬೈತನಕ ಹಾಲುಮಣಿ ಹಸರುಮಣಿ ದಟ್ಟಿಪಟ್ಟಿ ಕುಡ ಕಬ್ಬಿಣ ಮೊದಲಾದ ಎಚ್ಚವನಿಟ್ಟು ಸಾಯಂಕಾಲವಾದ ಮೇಲೆ ಅವನೆಲ್ಲ ಕಂಟಲೆಯೊಳಗೆ ತುಂಬಿಕೊಂಡುಬಂದು ತಲೆಗಿಂಬಿಗೆ ಇಟ್ಟುಕೊಂಡು ಕಾಲ ಮೇಲೆ ಕಾಲುಹಾಕಿಕೊಂಡು ಒರಗಿಕೊಂಬುತ್ತಿಹನು. ಹಾಂಗೆ ನಾ ಮಾಡುವಂಥ ಲಿಂಗಪೂಜೆಯನ್ನು ನಿರೀಕ್ಷಣೆಯ ಮಾಡುವಂಥ ನಾಡಿಗ ದೇಸಾಯಿ ಸೆಟ್ಟಿ ಚೌದರಿ ದೊರೆ ದಾತರುಗಳುಂಟಾಗಿದ್ದರೆ ಅಡ್ಡಣಿಗೆ ಹರಿವಾಣ ಪಾಚಾಲಿ ಬಿಂದಿಗೆ ಗೋಮುಖತಟ್ಟೆ ಶ್ರೀರುದ್ರತಟ್ಟೆ ಅರ್ಘ್ಯತಟ್ಟೆ ಮೊದಲಾದವನ್ನು ಹರಹಿಕೊಂಡು ತಾಸು ಎರಡುತಾಸು ಲಿಂಗಪೂಜೆಯನ್ನು ಮಾಡುವೆನು. ಅವನೇನು ನಿರೀಕ್ಷಣೆಯ ಮಾಡುವಂಥ ನಾಡಿಗ ದೇಸಾಯಿ ಸೆಟ್ಟಿ ಚೌದರಿ ದೊರೆ ದಾತರು ಇಲ್ಲದೆ ಇದ್ದರೆ ಅವನೆಲ್ಲವ ಕಂಟಲೆಯೊಳಗೆ [೨]ಹಮ್ಮಿ[೨]ಕೊಂಡು ತಲೆಗಿಂಬಿಗೆ ಇಟ್ಟುಕೊಂಡು ಒಂದಾನೊಂದು ಟೀಂವನಹಕ್ಕಿಯೋಪಾದಿಯಲ್ಲಿ ಕಾಲಮೇಲೆ ಕಾಲುಹಾಲುಹಾಕಿಕೊಂಡು ಒರಗಿಕೊಂಬುವಂಥ ಎನ್ನ ಇರಸ್ಥಿತಿಯೂ ಆ ಕೇಣೆಕಾಯಕದವನ ಇರಸ್ಥಿತಿಯೂ ಒಂದೇ ಆಗಿರ್ಪುದು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ದ್ದಳ (ಕ.ಗ). ೨-೨ ಹಾಕಿ (ಗ).

III- - - - - - - - - - - - - - - - - - - - - - - - - - - - - - - - - - - - - -

1-1 ಭಂಗುರ (ಡ).

..........................

ದೇಹಾರವ–ಇಷ್ಟಲಿಂಗಪೂಜೆಯನು. ನಿಃಪತ್ತಿಯಿಲ್ಲ–ಲಿಂಗದಲ್ಲಿ ಏಕತ್ವವುಂಡಾಗದು. ಭಂಗುರ ನಾನು–ಭಂಗಗೇಡಿಯು ನಾನು.

IV- - - - - - - - - - - - - - - - - - - - - - - - - - - - - - - - - - - - - - - - -

ಮನವು ಪರಬ್ರಹ್ಮದಲ್ಲಿ ಅಡಗದೆ ಅಂಗದ ಕೈಯಲು ಲಿಂಗವ ಹಿಡಿದು ಪೂಜಿಸುವವರಿಗೆ ನಿಜವಿಲ್ಲ ನಿಃಪತ್ತಿಯಿಲ್ಲಯೆಂಬುದೀ ವಚನದರ್ಥ.

---

೩೧೦

**ತನು ನಿಮ್ಮದೆಂಬೆ ಮನ ನಿಮ್ಮದೆಂಬೆ ಧನ ನಿಮ್ಮದೆಂಬೆ; ಮತ್ತೂ ವಂಚನೆಯು ಮಾಣದಯ್ಯಾ. ಲಿಂಗವೆ ಜಂಗಮವೆಂಬೆ ಜಂಗಮವೆ ಲಿಂಗವೆಂಬೆ; ಮತ್ತೆಯೂ ವಂಚನೆಯು ಮಾಣದಯ್ಯಾ. ಒಡಲೊಡವೆ ಹಡೆದರ್ಥ ನಿಮ್ಮದೆಂದಜಿಯದೆ ಕೆಮ್ಮನೆ ಕೆಟ್ಟೆನಯ್ಯಾ ಕೂಡಲಸಂಗಮದೇವಾ!**

I - - - - - - - - - - - - - - - - - - - - - - - - - - - - - - - - - - - - - - - -

ತನು ನಿಮ್ಮದೆಂಬೆ–ತನುಪದಾರ್ಥವು ಗುರುವಿನ ವಾರಕದೊಡೆವೆಯೆಂದು ಹೇಳುವೆನು, ಮನ ನಿಮ್ಮದೆಂಬೆ–ಮನಪದಾರ್ಥವು ಲಿಂಗದ ವಾರಕ ದೊಡೆವೆಯೆಂದು ಹೇಳಿಕೊಂಬೆನು, ಧನ ನಿಮ್ಮದೆಂಬೆ–ಧನಪದಾರ್ಥವು ಜಂಗಮದ ವಾರಕದೊಡವೆಯೆಂದು ಹೇಳಿಕೊಂಬೆನು. ಮತ್ತೆಯೂ ವಂಚನೆಯು ಮಾಣದಯ್ಯಾ–ಮತ್ತೆಯೂ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಳಬೇಕೆಂಬಂಥ ಮಾಜೋ ಬುದ್ಧಿಯು, ಮಾಣದಯ್ಯಾ–ಬಿಡುಗಡೆಯಾಗದಯ್ಯಾ, ಲಿಂಗವೆ ಜಂಗಮವೆಂಬೆ–ಲಿಂಗವೆ ಜಂಗಮದಂಗವೆಂದು ಹೇಳುವೆ, ಜಂಗಮವೆ ಲಿಂಗವೆಂಬೆ–ಜಂಗಮವೆ ಲಿಂಗದ ಪ್ರಾಣಕಳೆಯೆಂದು ಹೇಳುವೆನು. ಮತ್ತೆಯೂ ವಂಚನೆಯು ಮಾಣದಯ್ಯಾ–ಮತ್ತೆಯೂ ಜಂಗಮಭಕ್ತಿಬಾಹ್ಯನಾಗಿ ಲಿಂಗಪೂಜೆಯು ಮಾಡುವಂಥ ಮಾಜೋ ಬುದ್ಧಿಯು, ಮಾಣದಯ್ಯಾ–ಬಿಡುಗಡೆಯಾಗದಯ್ಯಾ. ಒಡಲು–ಲಿಂಗವು, ಒಡವೆ–ಇಟ್ಟುತೊಡುವಂಥ ವಸ್ತ್ರಾಭರಣಂಗಳು, ಹಡೆದ–ಪಡೆದ, ಅರ್ಥ–ದ್ರವ್ಯ ಮೊದಲಾದ ಹದಿನೆಂಟು ಧಾನ್ಯಂಗಳು, ನಿಮ್ಮದೆಂದಜಿಯದೆ–ಗುರುಲಿಂಗಜಂಗಮದ ವಾರಕದೊಡವೆಯೆಂದು ತಿಳಿಯದೆ, ಕೆಮ್ಮನೆ–ಉಸಕನೆ ಕೆಟ್ಟೆನಯ್ಯಾ– “ಮೇ ಸ್ತ್ರೀ ಮೇ ಧನಂ ಮೇ ಗೃಹ”ಮೆಂಬ ಭಾವದಿಂದ ಶಿವತತ್ತ್ವವಳಿದು ಜೀವನಾದೆನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - -

ತನು ನಿಮ್ಮದೆಂಬೆ ಮನ ನಿಮ್ಮದೆಂಬೆ ಧನ ನಿಮ್ಮದೆಂಬೆ ಮತ್ತೆಯೂ ವಂಚನೆ ಮಾಣದಯ್ಯಾ–ಜ್ಞಾನಕ್ಕೆ ಕರ್ತೃವಾದಂಥ ಗುರುಲಿಂಗಜಂಗಮಕ್ಕೆ ಆತ್ಮಜ್ಞಾನದೃಷ್ಟಿಯನು ಮಾಜಿ ಮಡುಗುವುದು ಬಿಡದಯ್ಯಾ. ಮುಂದಕ್ಕೆ ಕಾಣಬಂದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ದೇಹೇಂದ್ರಿಯಮನಧನ[ವು] ಲಿಂಗದ ಒಡವೆ ಎಂದು ಲಿಂಗಕ್ಕೆ ಸೇರಿಸಲಱಿಯದೆ, ಲಿಂಗಜಂಗಮ ಜಂಗಮಲಿಂಗವೆಂಬ ಮಾತು ಸಂದೇಹವೆಂಬುದೀ ವಚನದರ್ಥ.

---

೩೧೧

**ಊರ ಸೀರೆಗೆ ಅಗಸ [1]ತಡಬಡಿ ಹಡೆದಂತೆ[1] ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದೆಂದು ಮರುಳಾದೆ. ನಿಮ್ಮನಱಿಯದ ಕಾರಣ ಕೆಮ್ಮನೆ ಕಟ್ಟೆ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಊರ ಸೀರೆಗೆ ಅಗಸ ತಡಬಡಿ ಹಡೆದಂತೆ : ಊರ ಸೀರೆಗೆ–ಗ್ರಾಮದೊಳಗಿರುವಂಥಾತ್ಮರುಗಳು ಉಟ್ಟು ತೊಟ್ಟು ಬಿಟ್ಟಂಥ ಮಲಿನಾಂಬರಕ್ಕೆ, ಅಗಸ–ರಜಕನು, ತಡಬಡಿಹಡೆದಂತೆ–ಪ್ರಾತಃಕಾಲದಲೆದ್ದು ಇವರು ನಮ್ಮ ಒಕ್ಕಲು ಅವರು ನಮ್ಮ ಒಕ್ಕಲುಯೆಂದು ಅವರವರ ಮನೆಗೆ ಹೋಗಿ ಮಡಿಯನ್ನು ಕೊಟ್ಟು ಮಲಿನಾಂಬರವ ಹಾಕಿಸಿಕೊಂಡು ತಂಗಳುಬಂಗಳು ಕೂಳನ್ನು ಹಾಕಿಸಿಕೊಂಡು ಹಳ್ಳಹೊಳೆ ಕೆರೆಬಾವಿ[1][ಕೊಳನ][1] ತಡಿಗಳಿಗೆ ತೆಗೆದು ಕೊಂಡುಹೋಗಿ ಉದಕದಲ್ಲಿ ಜಾಲಿಸಿ ಸವುಳು ಸಬಕಾರವನ್ನು ಹಚ್ಚಿ ತೊಳೆತೊಳೆದು ಬಿಸಿಲು [2]ದಿಬ್ಬಿಗೆ[2] ಹಾಕಿ ಒಂದಾನೊಂದು ಕಾಯಭಾಗದೋಪಾದಿಯಲ್ಲಿ ಬೆಳ್ಳಕ್ಕಿಯೋಪಾದಿಯಲ್ಲಿ ಮುತ್ತಿನೋಪಾದಿಯಲ್ಲಿ ಮಲ್ಲಿಗೆಹೂವಿನೋಪಾದಿಯಲ್ಲಿ ಬೆಳ್ಳಗೆ ಮಾಡಿಕೊಂಡು ಬಂದು ಅವರವರ ಮಡಿ ಅವರವರ ಮನೆಗೆ ಕೊಟ್ಟು ಅವರು ಕೊಟ್ಟಂಥ ಕೂಲಿಯನ್ನು ಅನುಭವಿಸಿಕೊಂಡಿಪ್ಪನಲ್ಲದೆ ಅವರ ಮನೆಯಲ್ಲಿರುವಂಥ ಹೊದಕೆಯನೇನಾದರೂ ಹರಿದು ಹೋಗುವ ಪರಿಯಂತ ಉಟ್ಟು ತೊಟ್ಟು ಪರಿಣಾಮಿಸಬಲ್ಲನೆ? ಅರಿಯನೆಂಬ ಹಾಂಗೆ, ಹೊನ್ನೆನ್ನದು– "ರಾಜವಿತ್ತಂ ಚ" ಎಂದು ಎಂದಿಗಿದ್ದರು ಹೊನ್ನು ದೊರೆಗಳದು,ತಾನು ತನ್ನದಲ್ಲದ ಹೊನ್ನನು ನಾನು ನನ್ನದೆಂದು ಮಮಕರಿಸಿಕೊಂಡಿರ್ಪೆನು, ಹೆಣ್ಣೆನ್ನದು – ಕಾಮಿನೀ ಕಾಮು[3][ಕ][3] ವಸ್ಯಾ" [4]ಎಂದು[4] ಎಂದಿಗಿದ್ದರೂ ಕಾಯಕಾಂತಿ ರೂಪಲಾವಣ್ಯವನುಳ್ಳ ಸ್ತ್ರೀಯಳು ಕಾಮಕಲಾಪುರುಷರದು. ತಾನು ತನ್ನದಲ್ಲದ ಹೆಣ್ಣನು ನಾನು ನನ್ನದೆಂದು ಮಮಕರಿಸಿಕೊಂಡಿರ್ಪೆನು. ಮಣ್ಣೆನ್ನದು–"ಪೃಥ್ವೀ ಚ ವೀರಭೋಗ್ಯಾ ಚ" ಎಂದು ಎಂದಿಗಿದ್ದರೂ ಪೃಥ್ವಿ ಪರಾಕ್ರಮಿಗಳದು. ತಾನು ತನ್ನಲ್ಲದ ಮಣ್ಣನು ನಾನು ನನ್ನದೆಂದು ಮಮಕರಿಸಿಕೊಂಡಿರ್ಪೆನು, ಎಂದು–ಹೀಂಗೆಂದು ಮಚ್ಚಿ ನನ್ನ ಹೊನ್ನು ನನ್ನ ಹೆಣ್ಣು ನನ್ನ ಮಣ್ಣೆಂದು ನಿರಂತರದಲ್ಲಿ ಮಮಕರಿಸಿ, ಮರಳಾದೆ–ಹುಚ್ಚಾದೆ, ನಿಮ್ಮನಱಿಯದ ಕಾರಣ–ಈ ತನು ಮನಂಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದು ತಿಳಿಯದ ನಿಮಿತ್ತ, ಕೆಮ್ಮನೆ–ಉಸಕನೆ, ಕಟ್ಟೆ–"ಮೇ ಸ್ತ್ರೀ ಮೇ ಧನಂ ಮೇ ಗೃಹ"ಮೆಂಬ ಭಾವದಿಂದ ಶಿವತತ್ವವಳಿದು ಜೀವನಾದೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

........................

೧–೧ ಕೊಣಲ (ಕ.ಗ). ೨–೨ಬ್ಬಿಗೆ(ಕ). ೩–೩ ಖ (ಕ).ಖ(ಗ). ೪–೪ x(ಕ).

III- - - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಬಡಿವಡದಂತೆ-ಸಡಗರಿಸುವ ಹಾಂಗೆ.

IV-----------------------------------------------

1-1 ಬಡಿವೊಡದಂತೆ (ತ)

........................

ಹೊನ್ನು ಹೆಣ್ಣು ಮಣ್ಣೆಂಬ ಅನಿತ್ಯವು ತನ್ನವೆಂಬ ಮಾಯಾಸಂಬಂಧದಿಂದ ನಾನೇ ದುಃಖಿಯಾದೆ, ನಿಮ್ಮನಜಿಯದೆ ಎಂಬುದೀ ವಚನದರ್ಥ.

---

೩೧೨

**ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ : ಮತ್ತೆಯೂ ಆಸೆ ಬಿಡದನ್ನಕ್ಕ ಭಕ್ತನೆಂತಪ್ಪೆನಯ್ಯಾ? ಶರಣನೆಂತೆನಿಸುವೆನಯ್ಯಾ[1] ಕೂಡಲಸಂಗನಶರಣರ ಸಕಲರತಿಗೆ ಸಲ್ಲದನ್ನಕ್ಕ?**

I -----------------------------------------------

ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ; ಅರ್ಥ-ತಾನು ಗಳಿಸಿದಂಥ ದ್ರವ್ಯವು, ಪ್ರಾಣ-ತನ್ನ ಪ್ರಾಣಸ್ವರೂಪವಾದ ಪುತ್ರರು, ಅಭಿಮಾನ-ತನ್ನ [*ಅಭಿಮಾನ*], ನಿಮ್ಮದೆಂಬೆ-ಗುರುಲಿಂಗಜಂಗಮದ ವಾರಕದ ಒಡವೆಯೆಂದು ಹೇಳುವೆನು. ಮತ್ತೆಯೂ ಆಸೆ ಬಿಡದನ್ನಕ್ಕ-ಮತ್ತೆಯೂ ತನುಮನ ಧನಂಗಳನು, ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ಅರ್ಥವೆನ್ನದು ಮಕ್ಕಳೆನ್ನವರು [*ಅಭಿಮಾನ*]ವೆನ್ನದೆಂಬಂಥ ಅಪೇಕ್ಷೆಯು ನಷ್ಟವಾಗಬೇಕು, ಆಗದಿರುವ ಪರಿಯಂತವು; ಭಕ್ತನೆಂತಪ್ಪನಯ್ಯಾ ? ನಿರ್ವಂಚಕ ಸದ್ಭಕ್ತ ನಾ ಹೇಂಗಾದೇನಯ್ಯಾ, ಶರಣನೆಂತೆನಿಸುವೆನಯ್ಯಾ-ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿ ಭಾವವಿಡಿದಾಚರಿಸುವಂಥ ಶರಣಸ್ಥಲದಾಚರಣೆಯುಳ್ಳಾತ ನಾ ಹೇಂಗಾದೇನಯ್ಯಾ. ಕೂಡಲಸಂಗನಶರಣರ-ಜಂಗಮಮೂರ್ತಿಗಳ, ಸಕಲರತಿಗೆ-ಸಮಸ್ತ ಪದಾರ್ಥವನ್ನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಬೇಕೆಂಬಂಥ ಪ್ರೀತಿಗೆ. ಸಲ್ಲದನ್ನಕ್ಕ-ಸಮರ್ಪಣೆಯಾಗಬೇಕು. ಸಮರ್ಪಣೆಯಾಗದಿರುವ ಪರಿಯಂತರವು.

IV-----------------------------------------------

1 + ಆನು ಲಿಂಗೈಕ್ಯನೆಂತೆನಿಸುವೆನಯ್ಯಾ ? (ತ).

........................

ಪ್ರಾಣಾಭಿಮಾನಧನ ನನ್ನದೆಂಬ ಅಭಿಮಾನಿಗೆ ಭಕ್ತಿಸ್ಥಲವಿಲ್ಲ, ಶರಣಸ್ಥಲವಿಲ್ಲ, ಪರದಲ್ಲಿ ಕೂಟವಿಲ್ಲ ಎಂಬುದೀ ವಚನದರ್ಥ.

---

**ನಾನು ನಿಮ್ಮ ಭಕ್ತಿಯಲ್ಲಿ ಧರಂಧುರನೆಂಬೆ. ದಿಟಕ್ಕೆ ಬಂದಡೆ[1] ಅಡ್ಡಮುಖವನಿಕ್ಕುವೆ; ಗರುಡಂಗೆ ಘಟಸರ್ಪನ [2]ತೋರುವಂತೆ![2] ಶಿವಶರಣೆಂದಡೆ ಕಿವಿಗೇಳದಂತಿಹೆನು; ಮನಕ್ಕೆ ಮನ ಸಾಕ್ಷಿಯಯ್ಯಾ ಕುಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ನಾನು ನಿಮ್ಮ ಭಕ್ತಿಯಲ್ಲಿ ಧರಂಧುರನೆಂಬೆ : ನಾನು_ಸಂಗನಬಸವೇಶ್ವರನು, ನಿಮ್ಮ ಭಕ್ತಿಯಲ್ಲಿ_ಗುರುಲಿಂಗಜಂಗಮಕ್ಕೆ ಮಾಡುವಂಥ ಶಿವಾದ್ವೈತ ಭಕ್ತಿಯಲ್ಲಿ, ಧರಂಧುರನೆಂಬೆ_ಅತ್ಯಂತ ಅವಸ್ಥೆಯುಳ್ಳಾತನೆಂದು ಹೇಳುವೆನು, ದಿಟಕ್ಕೆ ಬಂದಡೆ_ಗುರುಲಿಂಗಜಂಗಮಮೂರ್ತಿಗಳೇ ಸಾಕ್ಷಾತ್ಕಾರವಾಗಿ ಬಂದು ಎಲೋ ಭಕ್ತ ತನುವ ಕೊಡು ಮನವ ಕೊಡು ಧನವ ಕೊಡುಯೆಂದು ಕೇಳಿದರೆ, ಅಡ್ಡಮೋರೆಯನಿಕ್ಕುವೆ_ ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಅಡ್ಡಮೋರೆಯ ಹಾಕುವೆನು, ಗರುಡಂಗೆ ಘಟಸರ್ಪನ ತೋಱುವಂತೆ; ಗರುಡಂಗೆ–ಖಗೇಶ್ವರಂಗೆ, ಘಟಸರ್ಪನ ತೋಱುವಂತೆ–ದೊಡ್ಡಿತ್ತಾದ ಫಣಿಯನ್ನು ತೋರಿದಲ್ಲಿ ಮುಂದಕ್ಕೆ ಹೋಗದೆ ಹೆಡೆಯನ್ನು ಎತ್ತದೆ ಹಿಂದಕ್ಕೆ ಹೇಂಗೆ ಸರಿಯುತ್ತಿಹುದೋ ಹಾಂಗೆ, ಶಿವಶರಣೆಂದಡೆ–ಶಿವಸ್ವರೂಪವಾದ ಜಂಗಮಮೂರ್ತಿಗಳು ಗೃಹಕ್ಕೆ ಭಿಕ್ಷಕ್ಕೆಂದು ಬಿಜಯಂಗೈದು ಬಂದು "ಲಿಂಗಾರ್ಪಿತ ಭಿಕ್ಷಾ"ಯೆಂದು ಶಬ್ದವನ್ನು ಹಾಕಿದರೆ, ಕಿವಿಗೇಳದಂತಿಹೆನು–ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಅಡ್ಡಮೋರೆಯ ಹಾಕಿಕೊಂಡು ಸುಮ್ಮನಿರುವೆನು. ಮನಕ್ಕೆ ಮನಸಾಕ್ಷಿಯಯ್ಯಾ–ನಾನು ಜಂಗಮಕ್ಕೆ ತನುವ ಕೊಡುತ್ತೈದೇನೆ ಮನವ ಕೊಡುತ್ತೈದೇನೆ ಧಾನವ ಕೊಡುತ್ತೈದೇನೆಂದು ಹೇಳಿಕೊಂಬಂಥ ಮನಸ್ಸಿಗೂ ಹೇಳಿಕೊಂಬುತಿದ್ದಲ್ಲಿ ಎಂದಿನ ಹಾಂಗೆ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಅಡ್ಡೆಮೋರೆಯ ಹಾಕಿಕೊಂಡು ಸುಮ್ಮನಿರುವಂಥ ಮನಸ್ಸಿಗೂ[೧], ಸಾಕ್ಷಿಯಯ್ಯಾ–ತಾರ್ಕಣ್ಯವಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧ + ಮನಕ್ಕೆ ಮನವೆ (ಕ).

III- - - - - - - - - - - - - - - - - - - - - - - - - - - - - - - - - - - - - - - - - - - -

ಧರಂಧುರನೆಂಬೆ–ತ್ವರಿತವುಳ್ಳಾತನೆಂಬೆನು.

IV- - - - - - - - - - - - - - - - - - - - - - - - - - - - - - - - - - - - - - - - - - - -

1 + ಕಾಣದಂತೆ (ತ). 2–2 ತೋಜಿದಂತೆ (ತ).

.........................

ಮಾತಿನ[೨][ಲ್ಲಲ್ಲದೆ][೨] ದೇಹೇಂದ್ರಿಯಂಗ [೩][ಳಲ್ಲಿಲ್ಲ][೩]. ಭಕ್ತನೆಂಬರು ಮುಟ್ಟಿದರೆ ಭವಿಯಂತಿಹರು, ಹೇಳಿದರೆ ಕೇಳದಂತಿಪ್ಪರು ಎಂಬುದೀ ವಚನದರ್ಥ.

.............................

೨-೨ ಲ್ಲಿ (ತ). ೩-೩ ೪ಲ್ಲ (ತ).

---

೩೧೪

**ಆದ್ಯರ ವಚನ ಪರುಷವೆಂದೆಂಬೆನು; ಆ ಪರುಷ ಎನಗೆಂತು ದೊರೆಕೊಂಬುದಯ್ಯಾ? ತನುಮನಧನವ ವಿವರಿಸಿ ನುಡಿವೆ, ಸೋಂಕಿಂಗೆ ಸೈರಿಸಲಾಱೆ. ಹೊಲೆಯರ ಮದ್ದಳೆಯಂತೆ ನುಡಿವ ಡಂಬಕ ನಾನಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಆದ್ಯರ ವಚನ ಪರುಷವೆಂದೆಂಬೆನು-ಪರುಷದ ಖಣಿಯು ಪಂಚಲೋಹಂಗಳ ಸೋಂಕಲು ಹೇಂಗೆ ಸುವರ್ಣವಾಗುತ್ತಿಹುದೊ ಹಾಂಗೆ ಪೂರ್ವ ಗಣಂಗಳು ನಿರೂಪಿಸಿದ ವಚನಶಾಸ್ತ್ರಂಗಳಲ್ಲಿ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದರೆ ತನುಮನಧನಂಗಳ ವರ್ತನೆ ನಷ್ಟವಾಗಿ ಹೋಗಿ ಆ ತನುಮನಂಗಳೆಲ್ಲ ನಿತ್ಯವಾದ ಗುರುಲಿಂಗಜಂಗಮಸ್ವರೂಪವಾಗುತ್ತಿಹುದೆಂದು ಹೇಳಿರುವರು. ಆ ವಚನಶಾಸ್ತ್ರಂಗಳಲ್ಲಿ ಹೇಳಿದ ಹಾಂಗೆ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡಿದಲ್ಲಿ ಆ ತನುಮನಧನಂಗಳೆಲ್ಲ ನಿತ್ಯವಾದ ಗುರುಲಿಂಗಜಂಗಮಸ್ವರೂಪ ವಾಗುತಿರ್ದ ಕಾರಣ, ಆದ್ಯರ-ದಾಸಿದೇವ ಸಿರಿಯಾಳಸೆಟ್ಟಿ. ಸಿಂಧುಬಲ್ಲಾಳರಾಯ ಮೊದಲಾದರುವತ್ತುಮೂರು ಪುರಾತರ, ವಚನ-ವಚನಶಾಸ್ತ್ರವು, ಪರುಷವೆಂದೆಂಬೆನು-ಪರುಷದ ಖಣಿಗೆ ಸಮಾನವೆಂದು ಹೇಳವೆನು. ಆ ಪರುಷದ ಖಣಿಗೆ ಸಮಾನವಾದ ವಚನಶಾಸ್ತ್ರಂಗಳಲ್ಲಿ ಹೇಳಿದ ಹಾಂಗೆ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಂಥದು, ಎನಗೆ-ನನಗೆ, ಎಂತು ದೊರೆಕೊಂಬುದಯ್ಯಾ-ಹೇಂಗೆ ಸಿದ್ಧಿಸೀತಯ್ಯಾ, ತನುಮನಧನವ-ತನುಮನಧನವೆಂಬ ತ್ರಿವಿಧಪದಾರ್ಥವನು, ವಿವರಿಸಿ ನುಡಿವೆ-ತನುವೆಲ್ಲ ಗುರುವಿನೊಡವೆ ಮನವೆಲ್ಲ ಲಿಂಗದೊಡವೆ ಧನವೆಲ್ಲ ಜಂಗಮದೊಡವೆಯೆಂದು ವಿವರಿಸಿ ಹೇಳುವೆನು. ಸೋಂಕಿಗೆ-ಆ ಗುರುಲಿಂಗಜಂಗಮ ಮೂರ್ತಿಗಳು ತನುಮನಧನಂಗಳನು ಹಿಡಿವುತ್ತ ಬಂದರೆ, ಸೈರಿಸಲಾಱೆ-ಅದನ್ನು ತರಹರಿಸಿಕೊಂಡು ಭಕ್ತಿಯನ್ನು ಮಾಡಲಾರೆನು.

ಹೊಲೆಯರ ಮದ್ದಳೆಯಂತೆ ನುಡಿವ-ಭರತಕಟ್ಟಳೆ ವಿದ್ಯೆಯವರೇನಾದರೂ ಸಂಗೀತರತ್ನಾಕರವನ್ನು ಕಲಿತುಕೊಂಡು ಗತ್ತುಗತ್ತಿಗೆ ತಾಳವ ಕಟವುತ್ತ ಮದ್ದಳೆಯನ್ನು ನುಡಿಸುತ್ತ ಗಾನವ ಪಾಡುತ್ತ ನರ್ತನವ ಕುಣಿದಲ್ಲಿ ದೊರೆ ದಾತರು ಮೆಚ್ಚಿ ಸಪ್ತಾಂಗತ್ಯಾಗವ ಕೊಡುವರು. ಹೊಲೆಯರೇನಾದರೂ ಹತ್ತೆಂಟಕ್ಕೆ ಮೇಳವ ಮಾಡಿಕೊಂಡು ಡೋಲೊತ್ತಟ್ಟಿಗೆ ಬಡಿವುತ್ತ ಕೊಳಲೊತ್ತಟ್ಟಿಗೆ ಊದುತ್ತ ತಾವೊತ್ತಟ್ಟಿಗೆ ಕುಣಿದಲ್ಲಿ ದೊರೆ ದಾತರು ಮೆಚ್ಚಿ ಸಪ್ತಾಂಗತ್ಯಾಗವನ್ನು ಕೊಟ್ಟಾರೆ? ಕೊಡಲರಿಯರು. ನುಡಿವ-ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ,

ಡಂಬಕ ನಾನಯ್ಯಾ–ಹಿರೇತನದ ಬೂಟಕತ್ವವನುಳ್ಳಾತ ನಾನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - -

ಗುರುವಾಕ್ಯವೆ ಪರಮಮಂತ್ರವೆಂದೆಂಬೆ, ಗುರುವಿನಲ್ಲಿ ತನುಮನವಂಚನೆಯಾಗಿರ್ದು ನುಡಿವವರು ಹೊಲೆಯರ ಮದ್ದಳೆಯೆಂಬುದೀ ವಚನದರ್ಥ.

---

೩೧೫

**ಕಾಂಚನವೆಂಬ ನಾಯ ನಚ್ಚಿ ಮಚ್ಚಿ ನಿಮ್ಮ ನಾನು ಮಱೆದೆನಯ್ಯಾ; ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ. ಹಡಕೆಗೆ ಮಚ್ಚಿದ ಸೊಣಗ ಅಮೃತದ ರುಚಿಯ ಬಲ್ಲುದೆ ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - -

ಕಾಂಚನವೆಂಬ ನಾಯ ನಚ್ಚಿ ಮಚ್ಚಿ ನಿಮ್ಮ ನಾನು ಮಜೆದೆನಯ್ಯಾ : ಕಾಂಚನವೆಂಬ–ಐಶ್ವರ್ಯವೆಂಬ, ನಾಯ–ಶುನಿಯನ್ನು ನಚ್ಚಿ–ನಂಬಿ, ಮಚ್ಚಿ–ಮಮಕರಿಸಿ, ನಿಮ್ಮ ನಾನು ಮಜೆದೆನಯ್ಯಾ : ನಿಮ್ಮ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದನು, ನಾನು ಮಱೆದೆನಯ್ಯಾ–ನಾನು ವಿಸ್ಮೃತಿಯನೈದಿಸಿಬಿಟ್ಟೇನಯ್ಯಾ. ಕಾಂಚನಕ್ಕೆ ವೇಳೆಯಲ್ಲದೆ–ಉದ್ದಿಮೆ ವ್ಯಾಪಾರಂಗಳ ಮಾಡುವುದಕ್ಕೆ ಹೊತ್ತುಹೋಗುವುದಲ್ಲದೆ, ಲಿಂಗಕ್ಕೆ ವೇಳೆಯಿಲ್ಲ–ಲಿಂಗಪೂಜೆಯ ಮಾಡಿ ಲಿಂಗದ ಕರುಣವನ್ನು ಹಡೆದೇನೆಂದರೆ, ವೇಳೆಯಿಲ್ಲ–ಹೊತ್ತಿಲ್ಲವು. ಹಡಕೆಗೆ–ಅಮೇಧ್ಯಕ್ಕೆ, ಮಚ್ಚಿದ–ಮಮಕರಿಸಿದಂಥ, ಸೊಣಗ–ಶುನಿಯು, ಅಮೃತದ ರುಚಿಯ ಬಲ್ಲುದೆ?–ಹಾಲುಬೋನದ ಸ್ವಾದವನ್ನು ತಿಳಿದಿಪ್ಪುದೆ? ಅರಿಯದೆಂಬ ಹಾಗೆ, ಹಡಕೆಗೆ–ಜಿಗುಪ್ಸಾಸ್ವರೂಪವಾದ ಮಲತ್ರಯಂಗಳಿಗೆ, ಮಚ್ಚಿದ–ಮಮಕರಿಸಿದ, ಸೊಣಗ–ಶುನಿಗೆ ಸಮಾನವಾದ ಉಪಾಧಿಕನು, ಅಮೃತದ ರುಚಿಯ ಬಲ್ಲುದೆ?–ಪರಮಾಮೃತಸ್ವರೂಪವಾದ ಗುರುಲಿಂಗಜಂಗಮದ ಭಕ್ತಿಯಮಾಡಿ, ಅವರ ಪಾದೋದಕಪ್ರಸಾದವನ್ನು ಪಡೆದನುಭವಿಸುವಂಥದನು ತಿಳಿದಿಪ್ಪನೆ? ಅರಿಯನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ

---

೩೧೬

**ಒಲಿದ ಗಂಡನೊಮ್ಮೆ ಒಲ್ಲದಿಪ್ಪ ಕಂಡವ್ವ. ತಪ್ಪೆನ್ನದು ತಪ್ಪೆನ್ನದು! ತನುಮನಧನದಲ್ಲಿ ಮಾಟಕೂಟವೆಂದನಱೆಯದ ತಪ್ಪೆನ್ನದು ತಪ್ಪೆನ್ನದು! ಕಡೆಯಿಲ್ಲದ ಹುಸಿಯೆನ್ನದು ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - -

ಒಲಿದ ಗಂಡನೊಮ್ಮೆ ಒಲ್ಲದಿಪ್ಪ ಕಂಡವ್ವ: ಒಲಿದ ಗಂಡನು–ತನ್ನ ಮೇಲೆ ಅತ್ಯಂತ ಮರುಕತ್ವ ಮುಂದುಗೊಂಡಿರುವಂಥ ರಮಣನು, ಒಮ್ಮೆ–ಒಂದುವೇಳೆ, ಒಲ್ಲದಿಪ್ಪ ಕಂಡವ್ವ–ಸಂಪರ್ಕಕ್ಕೆ ಬಾರದೆ ಹೊರಹೊರಗೆ ತಿರುಗಾಡುತ್ತಿಹನು ಕಾಣವ್ವ, ತನುವಿನಲ್ಲಿ–ಆತನ ಕೂಡುವಲ್ಲಿ, ಮನದಲ್ಲಿ–

ಆತನ ಒಲಿಸುವಲ್ಲಿ, ಧನದಲ್ಲಿ–ಆತ ಗಳಿಸುವಂಥ ದ್ರವ್ಯವನ್ನು ಜೋಪಾನವ ಮಾಡುವಲ್ಲಿ, ತಪ್ಪೆನ್ನದು ತಪ್ಪೆನ್ನದು–ಅಪರಾಧವೆನ್ನಲ್ಲುಂಟಾಗಿರ್ಪುದು, ಅಪರಾಧವೆನ್ನಲ್ಲುಂಟಾಗಿರ್ಪುದು. ಮಾಟ–ಆತಗೆ ಉಪಚರಿಸುವಂಥ ಉಪಚಾರವು, ಕೂಟ–ಆತನಲ್ಲಿ ಮನವೊಲಿದು ಕೂಡುವಂಥ ಕೂಟವು, ಎಂದಜೆಯದ–ಹೀಂಗೆಂದು ತಿಳಿಯದ, ತಪ್ಪೆನ್ನದು ತಪ್ಪೆನ್ನದು–ಅಪರಾಧವೆನ್ನಲ್ಲುಂಟಾಗಿರ್ಪುದು ಅಪರಾಧವೆನ್ನಲ್ಲುಂಟಾಗಿರ್ಪುದು, ಕಡೆಯಿಲ್ಲದ–ಅಂತ್ಯವಿಲ್ಲದ, ಹುಸಿಯುನ್ನದು–ಸಟೆಯನ್ನಲ್ಲುಂಟಾಗಿರ್ಪುದು ಎಂದು ಮತ್ತೊಬ್ಬ ಸ್ತ್ರೀಯಳ ಕೂಡೆ ಹೇಳುತ್ತಿಹಳೆಂಬೋ ಲೋಕದ ದೃಷ್ಟೋಪಮಾನದ ಹಾಂಗೆ.

● ಒಲಿದ ಗಂಡನು–ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡುವಂಥ ರಮಣನಾದ ಜಂಗಮಮೂರ್ತಿಗಳು, ಒಮ್ಮೆ–ಒಂದುವೇಳೆ, ಒಲ್ಲದಿಪ್ಪ ಕಂಡವ್ವ–ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡಲೊಲ್ಲದೆ ಉಪೇಕ್ಷತ್ವವನ್ನು ಮುಂದುಗೊಂಡಿರ್ಪನು ನೋಡವ್ವ, ತನುವಿನಲ್ಲಿ–ತನುಪದಾರ್ಥವನ್ನು ಗುರುವಿಂಗೆ ಸಮರ್ಪಣೆಯ ಮಾಡುವಲ್ಲಿ, ಮನದಲ್ಲಿ–ಮನಪಾರ್ಥವನ್ನು ಲಿಂಗಕ್ಕೆ ಸಮರ್ಪಣೆಯ ಮಾಡುವಲ್ಲಿ, ಧನದಲ್ಲಿ–ಪ್ರಾಣಾದಿದ್ರವ್ಯಪದಾರ್ಥವ ಜಂಗಮಕ್ಕೆ ಸಮರ್ಪಣೆಯ ಮಾಡುವಲ್ಲಿ, ಮಾಟ–ತನು ಗುರುವಿಂಗೆ ಮನ ಲಿಂಗಕ್ಕೆ ಧನ ಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಂಥ ಭಕ್ತಿಮಾಟವು, ಕೂಟ–ತನು ಗುರುವಿನಲ್ಲಿ ಮನ ಲಿಂಗದಲ್ಲಿ ಧನ ಜಂಗಮದಲ್ಲಿ ಕೂಡಿರುವಂಥ ಕೂಟವು, ಎಂದಜೆಯದ–ಹೀಂಗೆಂದು ತಿಳಿಯದ, ತಪ್ಪೆನ್ನದು ತಪ್ಪೆನ್ನದು–ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದಂಥ ಅಪರಾಧವೆನ್ನಲ್ಲುಂಟಾಗಿರ್ಪುದು, ಅಪರಾಧವೆನ್ನಲ್ಲುಂಟಾಗಿರ್ಪುದು; ಕಡೆಯಿಲ್ಲದ–ಅಂತ್ಯವಿಲ್ಲದ, ಹುಸಿಯೆನ್ನದು–ಅನೃತವೆನ್ನಲ್ಲುಂಟಾಗಿರ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ಡದ (ಕ).

IV- - - - - - - - - - - - - - - - - - - - - - - - - - - - - - - - - - - - - - - - -

ಗುರುಲಿಂಗಜಂಗಮಕ್ಕೆ ಮಾಡಿದರೆ ಪರಬ್ರಹ್ಮದಲ್ಲಿ ಕೂಟವುಂಟು, ಮಾಟ ತಪ್ಪಿದರೆ ಕೂಟವಿಲ್ಲ, ಲಿಂವೊಲ್ಲನೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - -

ಪ್ರಸನ್ನವಾಗಿ ಮೋಕ್ಷವ ಕೊಡುವ ಇಷ್ಟಲಿಂಗದೇವನು ಎನ್ನ ಕಂಡಿತ ಪೂಜೆಯ ಕೈಕೊಂಡು ಮೋಕ್ಷವ ಕೊಡದಿರ್ಪನೆಂಬುದೀಗ ಒಲಿವ ಗಂಡನೊಮ್ಮೆ ಒಲ್ಲದಿಪ್ಪ ಕಂಡವ್ವಯೆಂಬುದರ್ಥ.

---

೩೧೭

**ಕಾಣುತ್ತ ಕಾಣುತ್ತ ಕಡೆಗಣಿಸಿ ಕೆಡಿಸಿ ಅಜಿಸುವ ಮತಿಭ್ರಷ್ಟ ನಾನು ಲಿಂಗಯ್ಯಾ ತನುಲೋಭ ಮನಲೋಭ ಧನಲೋಭ ಮುಂದುಗೆಡಿಸಿ ಕಾಡಿಹವೆನ್ನ, ತನುಮನಧನವ ನಿವೇದಿಸಿದವರ ಮನೆಯ ಮಗ ನಾನಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಕಾಣುತ್ತ ಕಾಣುತ್ತ–ಗುರುಚರಮೂರ್ತಿಗಳು ಬೀದಿಬಜಾರದಲ್ಲಿ ಭಿಕ್ಷಕ್ಕೆಂದು ಬಿಜಯಂಗೈದು ಬರುವಂಥದನು ಕಂಡುಕಂಡು, ಕಡೆಗಣಿಸಿ–ಸಂದಬಿದ್ದು ತಪ್ಪಿಸಿಕೊಂಡು, ಕೆಡಿಸಿ–ಅವರ ಮನ ಬೇಸರ ಹುಟ್ಟಿಸಿ, ಅಱಸುವ–ಸೋಮವಾರ ಮಂಗಳವಾರ ಹುಣ್ಣಿವೆ ಅಮವಾಸೆ ಹಬ್ಬತಿಥಿಗಳಲ್ಲಿ ಒಳ್ಳೆಗುರುತರದ ಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರುಗಳು ಯಾವ ಪೇಟೆ ಮನೆ ಪುರಪಟ್ಟಣಸ್ಥಾನಂಗಳವೈದಾರೆ, ಯಾವ ದೊರೆದಾತ ಭಕ್ತಿಯವೈದಾರೋ ಯಾವ ಚೌಕಿಮಠಂಗಳಲ್ಲಿ ಹಾಸಿಕೊಂಡೈದಾರೋ ಎಂದು ಹುಡುಕುವ, ಮತಿಭ್ರಷ್ಟ ನಾನು–ಜ್ಞಾನಬಾಹ್ಯ ನಾನು, ಲಿಂಗಯ್ಯಾ–ಎಲೆ ಪರಶಿವಲಿಂಗವೆ. ತನುಲೋಭ–ತನುಪದಾರ್ಥ ಗುರುವಿಗೆ ಸಮರ್ಪಣೆಯ ಮಾಡುವಲ್ಲಿ, ಲೋಭ–ಲುಬ್ಧತ್ವವು, ಮನಲೋಭ–ಮನಪದಾರ್ಥ ಲಿಂಗಕ್ಕೆ ಸಮರ್ಪಣೆಯ ಮಾಡುವಲ್ಲಿ, ಲೋಭ–ಲುಬ್ಧತ್ವವು, ಧನಲೋಭ–ಪ್ರಾಣದಿದ್ರವ್ಯಪದಾರ್ಥವ ಜಂಗಮಕ್ಕೆ ಜಂಗಮಾರ್ಪಣೆಯ ಮಾಡುವಲ್ಲಿ, ಲೋಭ–ಲುಬ್ಧತ್ವವು. ಮುಂದುಗೆಡಿಸಿ–ಮುಂದಾಗುವಂಥ ನಿಜಮೋಕ್ಷಕ್ಕೆ ತಪ್ಪುಗನಮಾಡಿ, ಎನ್ನ–ನನ್ನ, ಕಾಡಿಹವು–ಪೀಡಿಸಿಹವು. ತನುಮನಧನವ–ತನುಮನಧನವೆಂಬ ತ್ರಿವಿಧಪದಾರ್ಥವನು, ನಿವೇದಿಸಿದವರ–ನಿರ್ವಂಚನೆಯಿಂದ ಗುರುಲಿಂಗಜಂಗಮಕ್ಕೆ ಸಮರ್ಪಿಸಿದ ನಿರ್ವಂಚಕ ಸದ್ಭಕ್ತರ, ಮನೆಯ–ಅವರ ಭಕ್ತಿಮಂದಿರದ, ಮಗ ನಾನಯ್ಯಾ–ಕುಮಾರ ನಾನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ಶಿವನ ಚಿದಂಗವೆ ಆತ್ಮನಾಗಿ, ತನ್ನ ನಿಜವ ಮಱೆದು ದೇಹೋಹಽಮೆಂದು ದೇಹಸಂಬಂಧಿಯಾಗಿ, ಅಜ್ಞಾನವೆಡೆಗೊಂಡು ಜೀವನೆನಸಿ ಕೆಟ್ಟಲ್ಲಿ ಮರಳಿ ತನ್ನ ನಿಜವನಱೆದು ಕೂಡಿಹೆನೆಂದಡೆ ತನುಮನಧನಂಗಳ ಆಸೆ ಹಿಡಿದುಬಿಡದೆ ಕಾಡುತ್ತಿಪ್ಪುದಾಗಿ ನಿಜವ ಕೂಡಬಾರದಾರಿಗೆಯೂ. ಅಂತಪ್ಪ ತನುಮನಧನಂಗಳ ಗುರುಲಿಂಗಜಂಗಮಕ್ಕೆ ಸಮರ್ಪಿಸಿದ ಸದ್ಭಕ್ತಂಗಲ್ಲದೆ ಮುಕ್ತಿಯಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಜಂಗಮವನು ನಿದರ್ಶನವ ಮಾಡುತ್ತ ಹೊರಚ್ಚಮಾಡಿಯೆಂಬುದೀಗ ಕಾಣುತ್ತ ಕಡೆಗಣಿಸಿ ಎಂಬುದರ್ಥ. ಭಕ್ತಿಯ ನಷ್ಟಮಾಡಿ ಹೋಗಬಿಟ್ಟು ಹುಡುಕುವನೆಂಬುದೀಗ ಕೆಡಿಸಿ ಅಱಸುವನೆಂಬುದರ್ಥ.

---

೩೧೮

**ಹಗೆಯದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ? ಕೋಳದ ಮೇಲೆ ಸಂಕಲೆಯನಿಕ್ಕುವರೆ? ಬೆಂದ ಹುಣ್ಣ ಕಂಬಿಯಲ್ಲಿ ಕೀಚುವರೆ? ಕೂಡಲಸಂಗಯ್ಯಾ ಕಾಡುವ ಕಾಟ ಸಿರಿಯಾಳಂಗಲ್ಲದೆ ಸೈರಿಸಬಹುದೆ?**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಹಗೆಯದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ?: ಹಗೆಯದಲ್ಲಿ ಬಿದ್ದವರ ಮೇಲೆ–ಧೂಳಸಂಜೆಯಲ್ಲಿ ಕಣ್ಣುಗಾಣದೆ ಹಾಳಹಗೆಯದಲ್ಲಿ ಪತಿತವಾದಾತ್ಮರುಗಳ ಮೇಲೆ, ಒರಳ ನೂಂಕುವರೆ–ಆಪ್ತರಾದಂಥವರು ನೂಲಹಗ್ಗ ನಿಚ್ಚಣಿಕೆಯನಾಗಲಿ ಕೊಟ್ಟು ಕಡೆಗೆ ತೆಗೆದು ಜೋಪಾನವ ಮಾಡಬೇಕಲ್ಲದೆ, ಹಾಳಹಗೆಯದಲ್ಲಿ ಬಿದ್ದಂಥಾತ್ಮರುಗಳು ಬದುಕೋದುಂಟೆ? ಎಂದು ಅಲ್ಲೊಂದು ಒರಳಕಲ್ಲಿರುವದು, ಆ ಒರಳಕಲ್ಲ ತಂದು ಮೇಲೆ ದೂಡಿಬಿಟ್ಟು ಕೊಲ್ಲಬಹುದೆ? ಕೊಲ್ಲಬಾರದು. ಕೋಳದ ಮೇಲೆ ಸಂಕಲೆಯನಿಕ್ಕುವರೆ: ಕೋಳದ ಮೇಲೆ–ಲೋಕದಲ್ಲಿ ಕೆಲವಾತ್ಮರುಗಳು ಕಳವು ಹಾದರವ ಮಾಡಿದಲ್ಲಿ ದೊರೆ ದಾತರು ಹಿಡಿತರಿಸಿ ಕೋಳವ ಹಾಕಿದಲ್ಲಿ, ಸಂಕಲೆಯನಿಕ್ಕುವರೆ–ಆಪ್ತರಾಗಲಿ ಸತ್ಪುರುಷರಾಗಲಿ ನೋಡಿ ಇದಾವ ದೊಡ್ಡ ತಪ್ಪೆಂದು ಬಿಡಿಸಿಕೊಳಬೇಕಲ್ಲದೆ ಇದಕ್ಕೆ ಇವ ಬಗ್ಗೋದಿಲ್ಲ ಬಾಯೆಂದು ಮೇಲೆ ಬೇಡಿಯನ್ನು ಜೋಡಿಸಿರೆಂದು ಹೇಳುವುದಕ್ಕಾದೀತೆ? ಆಗದು. ಬೆಂದ ಹುಣ್ಣ ಕಂಬಿಯಲ್ಲಿ ಕೀಚುವರೆ : ಬೆಂದ–[೧]ಅಗ್ನಿ[೧]ಯಿಂದ ದಗ್ಧವಾದ, ಹುಣ್ಣ–ವ್ರಣವನ್ನು, ಕಂಬಿಯಲ್ಲಿ ಕೀಚುವರೆ–ಸೊಂಟಿ ಸಪ್ಪೆದುಪ್ಪ ನೆಲ್ಲಿಚಟ್ಟನಾದರೂ ಹಚ್ಚಿ ಮಾಯಿಸಬೇಕಲ್ಲದೆ ಬಿದಿರುದಬ್ಬೆ [೨]ಅಡಕೆದಬ್ಬೆ[೨]ಯ ತೆಗೆದುಕೊಂಡು ಕೆದರಿ ಮತ್ತಷ್ಟು ಹುಣ್ಣು ಮಾಡುವುದಕ್ಕಾದೀತೆ? ಆಗದು.

ಕೂಡಲಸಂಗಮದೇವ–ಪರಶಿವಲಿಂಗವು, ಕಾಡುವ–ಪರಮೇಶ್ವರನೇ ಚರಮೂರ್ತಿಯಾಗಿ ಪ್ರಮಥಗಣಂಗಳೇ ಜಂಗಮಮೂರ್ತಿಗಳಾಗಿ ಕಂಚಿ ಪಟ್ಟಣಕ್ಕೆ ಬಂದು ಸಿರಿಯಾಳಸೆಟ್ಟಿಯ ಮನೆಯಲ್ಲಿ ಹಾಸಿಕೊಂಡು ಇಪ್ಪತ್ತೊಂದು ದಿವಸ ಪರಿಯಂತರವು ಮಳೆಗರಿಸಿದಲ್ಲಿ ಕಟ್ಟಿಗೆ ಕುರುಳನ್ನು ತರಿಸೋದಕ್ಕೆ ಶಕ್ಯವಾಗದಿದ್ದಲ್ಲಿ ಮನೆಯೊಳಗಿರುವಂಥ ಚೀನಿ ಚೀನಾಂಬರ ಪಟ್ಟೆ ಪಟ್ಟಾವಳಿ ತೋಪುಶಕಲಾತಿ ತುಪ್ಪಳ[೩]ವಾಸನ[೩] ಮೊದಲಾದವನು ಹುರಿಮಾಡಿ ಎಣ್ಣೆಯಲ್ಲದ್ದಿ ಬೆಂಕಿಯ ಮಾಡಿ ನೀಡಿದಲ್ಲಿ ಇದಕ್ಕೂ ಇವನು ಬಗ್ಗೋದಿಲ್ಲ ಬಾಯೆಂದು ನಮಗೆ ಕಬ್ಬು ಪ್ರೀತ್ಯಾಗೈತಿ ತಾಯೆಂದು ಕೇಳಿದಲ್ಲಿ ಆಗ ತುಂಬಿದ ಹೊಳೆಯ ಮೇಲೆ ಹೋಗಿ ಕಬ್ಬನ್ನು ತರಿಸಿಕೊಂಡು, ಕಾಡುವ–ಪೀಡಿಸುವ, ಕಾಟ–ಪೀಡನೆಯು, ಸಿರಿಯಾಳಂಗಲ್ಲದೆ–ಸಿರಿಯಾಸೆಟ್ಟಿಯೆಂಬ ನಿರ್ವಂಚಕಸದ್ಭಕ್ತಂಗಲ್ಲದೆ, ಸೈರಿಸಬಹುದೆ–ಮಿಕ್ಕಿನ ಹೊನ್ನೇ ಪ್ರಾಣ ಹೆಣ್ಣೇ ಪ್ರಾಣ ಮಣ್ಣೇ ಪ್ರಾಣವಾಗುಳ್ಳ ಆಶಾಲಾಂಛನಿ ಉಪಾಧಿಕರುಗಳಿಗೆ ದೊರೆಕೊಳ್ಳದೆಂಬ ದೃಷ್ಟೋಪಮಾನದ ಹಾಂಗೆ.

● ಹಗೆಯದಲ್ಲಿ ಬಿದ್ದವರ ಮೇಲೆ–ದೇಹಭಾವದ ಪ್ರಪಂಚದೊಡನೆ ಕೂಡಿ ಚರಿಸುವವರಿಗೆ, ಒರಳ ನೂಂಕುವರೆ–ದೇಹಭಾವದ ಪ್ರಪಂಚಿನ ವರ್ತನೆಯನ್ನು ನಷ್ಟವ ಮಾಡಿ ಆಚಾರಾಂಗವಾಗಿ ಅಳವಡಿಸಿಕೊಡಬೇಕಲ್ಲದೆ ಮಲತ್ರಯಂಗಳ ವರ್ತನೆಗೆ ಒಳಗುಮಾಡುವುದಕ್ಕಾದೀತೆ? ಆಗದು. ಕೋಳದ ಮೇಲೆ–ಇಂದ್ರಿಯಂಗಳ ವರ್ತನೆಯೊಡನೆ ಕೂಡಿ ಚರಿಸುವಂಥದನು ನಷ್ಟವ ಮಾಡಿ ಬಿಟ್ಟು ಲಿಂಗೇಂದ್ರಿಯಂಗಳಾಗಿ ಅಳವಡಿಸಿಕೊಡಬೇಕಲ್ಲದೆ, ಸಂಕೋಲೆಯನಿಕ್ಕುವರೆ–ವಿಷಯಂಗಳ ವರ್ತನೆಗೆ ಒಳಗುಮಾಡುವುದಕ್ಕಾದೀತೆ? ಆಗದು. ಬೆಂದ–ತಾಪತ್ರಯಾಗ್ನಿಯಿಂದ ದಗ್ಧವಾದ, ಹುಣ್ಣ–ಆತ್ಮನ, ಕಂಬಿಯಲ್ಲಿ ಕೀಚುವರೆ–ಆತ್ಮನ ವರ್ತನೆಯನ್ನು ನಷ್ಟವ ಮಾಡಿ ಚಿದಾತ್ಮನಾಗಿ ಅಳವಡಿಸಿಕೊಡಬೇಕಲ್ಲದೆ ದೇಹಕರಣಂಗಳ ವರ್ತನೆಗೆ ಒಳಗುಮಾಡುವುದಕ್ಕಾದೀತೇ? ಆಗದು.

ಕೂಡಲಸಂಗಮದೇವ-ಪರಶಿವಲಿಂಗವು, ಕಾಡುವ-ದೇಹಕರಣೇಂದ್ರಿಯ ವಿಷಯಂಗಳಿಗೆ ಒಳಗುಮಾಡಿ ಪೀಡಿಸುವ, ಕಾಟವು-ಪೀಡನೆಯು, ಸಿರಿಯಾಳಂಗಲ್ಲದೆ-ದೇಹಭಾವವಳಿದು ಆಚಾರಾಂಗವಾಗಿ ಇಂದ್ರಿಯಂಗಳಳಿದು ಲಿಂಗೇಂದ್ರಿಯಂಗಳಾಗಿ ವಿಷಯಂಗಳಳಿದು ಲಿಂಗವಿಷಯಂಗಳಾಗಿ ಕರಣಂಗಳಳಿದು ಲಿಂಗಕರಣಂಗಳಾಗಿ ಅವನೆಲ್ಲವ ನಿವೃತ್ತಿಯ ಮಾಡಿ ಅಳವಡಿಸಿಕೊಂಡಾಚರಿಸುವಂಥದು ಸಿರಿಯಾಳಸೆಟ್ಟಿಯೆಂಬ ಜ್ಞಾನಕಲಾತ್ಮನಿಗಲ್ಲದೆ, ಸೈರಿಸಬಹುದೆ-ಮಿಕ್ಕಿನ ವೇದಾಂತಿ ಸಿದ್ಧಾಂತಿಗಳೆಂಬ ದ್ವೈತಾದ್ವೈತಿಗಳಿಗೆ ಅಳವಟ್ಟಿತ್ತೆ? ಅಳವಡದು.

..............................

೧-೧ ಆಶಾಗ್ನಿ (ಕ). ೨-೨ x (ಕ). ೩-೩ ವಾಸ (ಗ).

III- - - - - - - - - - - - - - - - - - - - - - - - - - - - - - - - - - - - - - - - - - - -

ಕೋಳದ ಮೇಲೆ-ಕಮಲದ ಮೇಲೆ, ಸಂಕಲೆಯನಿಕ್ಕುವರೆ-ಶೃಂಖಲೆಯನು ಬಂಧಿಸುವರೆ.

V- - - - - - - - - - - - - - - - - - - - - - - - - - - - - - - - - - - - - - - - - - - - -

ಭವವೆಂಬ ಕಮರಿಯಲ್ಲಿ ಪತಿತವಾದವರ ಮೇಲೆ ಜಡದೇಹವನಾಗುಮಾಡುವರೇ ಎಂಬುದೀಗ ಹಗೆಯದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆಯೆಂಬುದ[ಕ್ಕ]ರ್ಥ. ಪಂಚಪಾಶದಲ್ಲಿ ಮಾಯಾಪಾಶವೆಂಬ ಶೃಂಖಲವ ತೊಡಚುವರೇ ಎಂಬುದೀಗ ಕೋಳದ ಮೇಲೆ ಸಂಕಲೆಯನಿಕ್ಕುವರೆಯೆಂಬುದ[ಕ್ಕ]ರ್ಥ. ತಾಪತ್ರಯಾಗ್ನಿಯಲ್ಲಿ ದಗ್ಧವಾದ ಮನೋವ್ಯಥೆಯೆಂಬ ವ್ರಣವನು ಅಜ್ಞಾನವೆಂಬ ಹಗರುಗಡ್ಡಿಯಲ್ಲಿ ಘರ್ಷಣಂಗೆಯ್ವರೆಯೆಂಬುದೀಗ ಬೆಂದಹುಣ್ಣು ಕಂಜಿಂಗಲ್ಲಿ ಕೀಸುವರೆ ಎಂಬುದ[ಕ್ಕ]ರ್ಥ.

---

೩೧೯

**ಸೋಲಬಲ್ಲರು ಅವರು ಗೆಲಲಜಿಯರಯ್ಯಾ. ತನುಮನಧನದಲ್ಲಿ ವಂಚನೆಯನಜಿಯರಯ್ಯಾ ದಾಸಿದೇವ ಸಿರಿಯಾಳನವರು. ಕೂಡಲಸಂಗನಶರಣರು ಉಪಚಾರವನಜಿಯರಯ್ಯ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಅವರು-ದಾಸಿದೇವ ಸಿರಿಯಾಳಸೆಟ್ಟಿ ಮೊದಲಾದರುವತ್ತುಮೂರು ಪುರಾತನರು, ಸೋಲ ಬಲ್ಲರು-ವಸ್ತ್ರ [* *]ಸುತರನ್ನು ಕೊಟ್ಟು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬಲ್ಲರು. ಗೆಲಲಜಿಯರಯ್ಯ-ಆ ಭಕ್ತಿಯಿಂದ ಒಂದು ಇಷ್ಟಾರ್ಥ ಫಲಪದಸಿದ್ಧಿಯನ್ನು ಹಡೆವಂಥದನ್ನು, ಅಜಿಯರಯ್ಯಾ-ತಿಳಿಯರಯ್ಯಾ. ತನುಮನಧನದಲ್ಲಿ-ತನುಮನಧನವೆಂಬ ತ್ರಿವಿಧಪದಾರ್ಥವನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ, ದಾಸಿದೇವ ಸಿರಿಯಾಳನವರು-ದಾಸಿದೇವ ಸಿರಿಯಾಳಸೆಟ್ಟಿ [* *], ವಂಚನೆಯನಜಿಯರಯ್ಯಾ-ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಂಬಂಥ ಮಾಜೋಬುದ್ಧಿಯ ತಿಳಿಯರಯ್ಯಾ, ಕೂಡಲಸಂಗನಶರಣರು-ಅರುವತ್ತುಮೂರು ಪುರಾತರು, ಉಪಚಾರನವಜಿಯರಯ್ಯಾ-ನುಡಿದಂತೆ

ನಡೆದು, ನಡೆದಂತೆ ನುಡಿದು ತೋರುವರಲ್ಲದೆ ಸುಮ್ಮನೆ ಸ್ವಾಮಿ, ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥ ಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ಬಣ್ಣಿಗೆ ಪ್ರಸಂಗವ ತಿಳಿಯರಯ್ಯ.

I ------------------------------------------------

ತ್ರಿವಿಧ ಪದಾರ್ಥವ ಸಮರ್ಪಣೆಯ ಮಾಡಬಲ್ಲರುಯೆಂಬುದೀಗ ಸೋಲಬಲ್ಲರುಯೆಂಬುದರ್ಥ. ಫಲ[ಪದಂ]ಗಳ ಪಡೆಯಲರಿಯರೆಂಬುದೀಗ ಗೆಲಲರಿಯರೆಂಬುದರ್ಥ.

---

೩೨೦

**ಮಾತಿನಲ್ಲಿ ಶ್ರೋತ್ರಸುಖವ ನುಡಿಯಬಹುದಲ್ಲದೆ ಮಾಡುವ ಸತ್ಕ್ರಿಯೆಯಿಂದ ಭಕ್ತನೆನಿಸಲುಬಾರದು. ಅರ್ಥಪ್ರಾಣಾಭಿಮಾನವಾರಿಗೆಯೂ ಸಮನಿಸದು, ಲಿಂಗಮುಖದಲುದಯವಾದ ಶರಣಂಗಲ್ಲದೆ ಉಳಿದವರಿಗಾಗದಯ್ಯಾ. ಕೂಡಲಸಂಗನಶರಣರ ಭಕ್ತಿಭಂಡಾರವು ಎನಗೆಂತು ಸಾಧ್ಯವಪ್ಪುದು ಹೇಳೆನ್ನ ತಂದೆ.**

I ------------------------------------------------

ಮಾತಿನಲ್ಲಿ ಶ್ರೋತ್ರಸುಖವ ನುಡಿಯಬಹುದಲ್ಲದೆ: ಮಾತಿನಲ್ಲಿ–ಪ್ರಸಂಗದಲ್ಲಿ, ಶ್ರೋತ್ರಸುಖವ–ಜಂಗಮಮೂರ್ತಿಗಳ ಶ್ರವಣಕ್ಕೆ ಇನಿದಾಗುವ ಹಾಂಗೆ, ನುಡಿಯಬಹುದಲ್ಲದೆ–ಸ್ವಾಮೀ, ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತುತೊಂಡ ಸೇವಕನೆಂದು ಹೇಳಿಕೊಳಬಹುದಲ್ಲದೆ; ಮಾಡುವ ಸತ್ಕ್ರಿಯೆಯಿಂದ ಭಕ್ತನೆನಿಸಲುಬಾರದು: ಮಾಡುವ ಸತ್ಕ್ರಿಯೆಯಿಂದ–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹ ಮಾಡುವುದರಿಂದ, ಭಕ್ತನೆನಿಸಲುಬಾರದು–ನಿರ್ವಂಚಕಸದ್ಭಕ್ತನೆಂದು ಹೇಳಿಸಿಕೊಳಬಾರದು. ಅರ್ಥ–ತಾ ಗಳಿಸಿದಂಥ ದ್ರವ್ಯವು, ಪ್ರಾಣ–ಪ್ರಾಣಸಂಬಂಧವಾದ ಪುತ್ರರುಗಳು, ಅಭಿಮಾನ–ತನ್ನ[*ಅಭಿಮಾನ*] ಮೊದಲಾದ[ವು*]ಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಂಥದು, ಆರಿಗೆಯೂ ಸಮನಿಸದು–ಮಿಕ್ಕಿನ ಆಶಾಲಾಂಛನಿ ಉಪಾಧಿಕರುಗಳಿಗೆ ದೊರೆಕೊಂಡಿತ್ತೇ? ದೊರೆಕೊಳ್ಳದು. ಲಿಂಗಮುಖದಲುದಯವಾದ ಶರಣಂಗಲ್ಲದೆ: ಲಿಂಗ–ಎಂದರೆ ನಿಃಕಲಬ್ರಹ್ಮವು, ಮುಖ–ಎಂದರೆ ಚಿತ್ತು, ಉದಯವಾದ–ಚಿದ್ಘನಲಿಂಗದಲ್ಲಿ ಉತ್ಪತ್ಯವಾದ, ಶರಣಂಗಲ್ಲದೆ–ಚಿತ್ಸ್ವರೂಪವಾದ ಶಿವಶರಣಂಗಲ್ಲದೆ, ಅಯ್ಯಾ–ಎಲೆ ಲಿಂಗವೆ, ಕೂಡಲಸಂಗನಶರಣರ–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರ, ಭಕ್ತಿ–ಶಿವಾದ್ವೈತಭಕ್ತಿಯೆಂಬಂಥ, ಭಂಡಾರವು–ಕಡವರವು, ಎನಗೆಂತು ಸಾಧ್ಯವಪ್ಪುದು ಹೇಳೆನ್ನ ತಂದೆ–ನನಗೆ ಹೇಂಗೆ ಸಿದ್ಧಿಸಿತ್ತು, ಹೇಳಾ–ನಿರೂಪಿಸಾ, ಎನ್ನ ತಂದೆ–ಎನ್ನಾತ್ಮಜನಕನಾದಲೆ ಪರಶಿವಲಿಂಗವೆ.

IV- ------------------------------------------------

ಮಾತಿನ ಅದ್ವೈತವ ನುಡಿವರಲ್ಲದೆ ಭಕ್ತಿಯ ಮಾಡಬಾರದು. ಭಕ್ತಿಯೆಂಬುದು ಅರ್ಥಪ್ರಾಣಅಭಿಮಾನವು ಸವೆಯಬೇಕು. ಗುರುವಿನ ಕಾರುಣ್ಯವುಳ್ಳವರಿಗಲ್ಲದೆ ಅಳವಡದೆಂಬುದೀ ವಚನದರ್ಥ.

---

೩೨೧

**ಬಾಣಮಯೂರನಂತೆ ಬಣ್ಣಿಸಬಲ್ಲೆನೆ? ಸಿರಿಯಾಳನಂತೆ ಉಣಲಿಕ್ಕಬಲ್ಲೆನೆ? ದಾಸಿಮಯ್ಯನಂತೆ ಉಡಕೊಡಬಲ್ಲೆನೆ? ಉಂಡುಟ್ಟು ಕೊಟ್ಟಡೆ ಮುಯ್ಯಿಗೆ ಮುಯ್ಯೆಂದೆನಿಸಿತ್ತು; ಎನಗೆ ಕೊಟ್ಟಡೆ ನಿಮ್ಮ ಧರ್ಮ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಬಾಣಮಯೂರನಂತೆ ಬಣ್ಣಿಸಬಲ್ಲೆನೆ: ಬಾಣ–[೧]ಬಾಣ[೧]ನೆಂಬ ಕವೀಶ್ವರನು, ಮಯೂರನಂತೆ–ಮಯೂರನೆಂಬ ಕವೀಶ್ವರನ ಹಾಂಗೆ, ಬಣ್ಣಿಸಬಲ್ಲೆನೆ–ಕಂದವೃತ್ತಗದ್ಯಪದ್ಯಪ್ರಬಂಧಗಳಿಂದಾನು[೨] ಬಣ್ಣಿಸಿ ಒಪ್ಪವಿಟ್ಟು ಸ್ತೋತ್ರವ ಮಾಡಬಲ್ಲೆನೆ, ಸಿರಿಯಾಳನಂತೆ ಉಣಲಿಕ್ಕಬಲ್ಲೆನೆ: ಸಿರಿಯಾಳನಂತೆ–ಕಂಚಿಪಟ್ಟಣದ ಸಿರಿಯಾಳಸೆಟ್ಟಿಯ ಹಾಂಗೆ, ಉಣಲಿಕ್ಕ ಬಲ್ಲೆನೆ–ಏಳುವರುಷದ ಕುಮಾರನಾದ ಚೀಲಾಳಯ್ಯನ ಬಾಣಸವ ಮಾಡಿ ನೀಡಿದ ಹಾಂಗೆ ನೀಡಬಲ್ಲೆನೆ, ದಾಸಿಮಯ್ಯನಂತೆ ಉಡಕೊಡಬಲ್ಲೆನೆ: ದಾಸಿಮಯ್ಯನಂತೆ–ಜಾಡರ ದಾಸಿಮಯ್ಯನ ಹಾಂಗೆ ಹನ್ನೆರಡು ವರುಷ ನೆಯ್ದಂಥ ಪಂಚವಣ್ಣಿಗೆ ದೇವಾಂಗವನು ಆಚ್ಛಾದಿಸಿಕೊಂಬುವುದಕ್ಕೆ ಕೊಟ್ಟ ಹಾಂಗೆ ಈಯಬಲ್ಲೆನೆ?, ಉಂಡುಟ್ಟು : ಉಂಡು–ಸಿರಿಯಾಳಸೆಟ್ಟಿಯ ಮನೆಯಲ್ಲಿ ಅನುಭವಿಸಿ, ಉಟ್ಟು–ದಾಸಿಮಯ್ಯನ ವಸ್ತ್ರವನ್ನು ಆಚ್ಛಾದಿಸಿಕೊಂಡು, ಕೊಟ್ಟಡೆ–ಸಿರಿಯಾಳಸೆಟ್ಟಿಗೆ ಪ್ರಾಣಪ್ರಸಾದವನು ಜಾಡರ ದಾಸಿಮಯ್ಯಂಗೆ ತವನಿಧಿಯ ಪ್ರಸಾದವನು ಕರುಣಿಸಿ ಕೊಟ್ಟರೆ, ನಿಮ್ಮ ಧರ್ಮ–ನಿಮ್ಮ ಶಿವಸದ್ಧರ್ಮವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ಬಾಣಾಸುರ (ಕ). ೨+ಣ್ಣಿಸಿ (ಕ, ಗ).

---

೩೨೨

**ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಪ್ರಸಾದವ ಪಡೆದ. ಸಿರಿಯಾಳ ತನ್ನ ಮಗನನಿತ್ತು ಪ್ರಾಣಪ್ರಸಾದವ ಪಡೆದ. ಬಲ್ಲಾಳ ತನ್ನ ವಧುವನಿತ್ತು ಸಮತೆಪ್ರಸಾದವ ಪಡೆದ. ಇವರೆಲ್ಲರು ತಮತಮಗೆ ಮಾಡಿ ಪಡೆದರು ಸಮ್ಯಕ್‌ಪದವಿಯನು. ನಾನೇನೂ ಅಱಿಯದ ಭಕ್ತಿಯ ಬಡವಂಗೆ ಕರುಣಿಸು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ದಾಸಿದೇವ–ಜಾಡರದಾಸಿಮಯ್ಯನು, ತನ್ನ ವಸ್ತ್ರವ–ತಾನು ಹನ್ನೆರಡುವರುಷ ನೆಯ್ದಿದ್ದಂಥ ಪಂಚವಣ್ಣಿಗೆ ದೇವಾಂಗವನ್ನು, ಇತ್ತು–ಶಿವನಿಗೆ ಆಚ್ಛಾದಿಸಿಕೊಂಬುವುದಕ್ಕೆ ಕೊಟ್ಟು, ತವನಿಧಿಪ್ರಸಾದವ

ಪಡೆದ–ಎಂದೆಂದಿಗೂ ಸವೆಯದಿರುವಂಥ ತವನಿಧಿಧಾನ್ಯಂಗಳನು ಪಡೆದುಕೊಂಡನು. ಸಿರಿಯಾಳ–ಕಂಚಿಪಟ್ಟಣದಲ್ಲಿ ಇರುವಂಥ ಸಿರಿಯಾಳಸೆಟ್ಟಿಯು, ಮಗನ–ಏಳುವರುಷದ ಕುಮಾರನಾದ ಚೀಲಾಳಯ್ಯನ, ಇತ್ತು–ಶಿವನಿಗೆ ಬಾಣಸವ ಮಾಡಿನೀಡಿ. ಪ್ರಾಣಪ್ರಸಾದವ ಪಡೆದ–ಪ್ರಾಣಲಿಂಗದ ಪ್ರತ್ಯಕ್ಷತ್ವವನ್ನು ಹಡೆದುಕೊಂಡನು. ಬಲ್ಲಾಳ–ಸಿಂಧುಬಲ್ಲಾಳರಾಯನು, ತನ್ನ ವಧುವ–ತನ್ನ ಹನ್ನೆರಡುವರುಷದ ಪಟ್ಟದಂಗನೆಯನ್ನು, ಇತ್ತು–[*ಕೊಟ್ಟು*]ಭಕ್ತಿಯಮಾಡಿ, ಸಮತೆಪ್ರಸಾದವ ಪಡೆದ–ತಿರುಣಾಮಲೆಯಲ್ಲಿ ಅರುಣಾಚಲೇಶ್ವರನೆಂಬ ಸ್ವಯಲಿಂಗಪದವಿಯ ಪಡೆದನು.

ಇವರೆಲ್ಲರು–ಹಿಂದೆ ಹೇಳಿದ ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳರಾಯ ಮೊದಲಾದ ಅರುವತ್ತುಮೂರು ಪುರಾತರು, ತಮತಮಗೆ–ತಮ್ಮ ತಮ್ಮ ಅರುಹಿಗೆ ತಕ್ಕ ಹಾಂಗೆ ಮಾಡಿ ವಸ್ತ್ರ, ಸುತ, ವಧುವನ್ನು ಕೊಟ್ಟು ಭಕ್ತಿಯ ಮಾಡಿ, ಸಮ್ಯಕ್‌ಪದವಿಯ ಪಡೆದರು–ಲೇಸಾದ ಮೋಕ್ಷ ಪದವಿಯನ್ನು ಹಡೆದುಕೊಂಡರು. ನಾನು–ಸಂಗನಬಸವೇಶ್ವರನು, ಏನೂ ಅಱಿಯದ–ಅವರ ಹಾಂಗೆ ಒಂದೊಂದು ಪದಾರ್ಥವ ಕೊಟ್ಟು ಭಕ್ತಿಯ ಮಾಡುವಂಥದನು ತಿಳಿಯದ, ಭಕ್ತಿಯಲ್ಲಿ–ಶಿವಾದ್ವೈತಭಕ್ತಿಯುಲ್ಲಿ, ಬಡವಂಗೆ–ನಿರ್ಧನಿಕನಾದಾತಂಗೆ, ಕರುಣಿಸು–ಕೃಪೆಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - - -

ಸತಿಸುತವಸ್ತ್ರವನಿತ್ತ ದಾಸಬಲ್ಲಾಳಸಿರಿಯಾಳ೧[ರು]೧ ನಿತ್ಯರಾದರು. ಇಂತಪ್ಪ ಭಕ್ತಿಯ ಕೊಡಯ್ಯಾ ಎಂಬುದೀ ವಚನದರ್ಥ.

..........................

೧–೧ ನವರು ಕೊಟ್ಟು (ತ).

---

೩೨೩

**ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಗ ನಾನಯ್ಯಾ. ಒಮ್ಮಿಂಗೆ ಕರುಣಿಸಯ್ಯಾ, ಇದನಱಿದು ಇನ್ನು ತಪ್ಪಿದೆನಾದಡೆ ನೀವು ಮಾಡಿತ್ತೇ ಸಲುವುದು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಗ ನಾನಯ್ಯಾ: ತ್ರಿವಿಧ–ತನುಮನಧನವೆಂಬ ತ್ರಿವಿಧಪದಾರ್ಥವು, ತ್ರಿವಿಧದಲ್ಲಿ–ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ: ತಪ್ಪಿದ–ವಂಚಿಸಿಕೊಂಡಂಥ, ತಪ್ಪುಗ ನಾನಯ್ಯಾ–ಅಪರಾಧಕ ನಾನಯ್ಯಾ. ಒಮ್ಮಿಂಗೆ–ಒಂದು ವೇಳೆಗೆ, ಕರುಣಿಸಯ್ಯಾ–ಬಿನ್ನಹವನ್ನು ಕೈಕೊಂಡು ಅರಮನೆಗೆ ಚಿತ್ತೈಸಿರಯ್ಯಾ. ಇದನಱಿದು–ಪ್ರಭುಸ್ವಾಮಿಗಳು ನಾನು ಪದಾರ್ಥ ವಂಚಿಸಿಕೊಂಡಂಥದನ್ನು ತಿಳಿದು ಬಿನ್ನಹವನ್ನು ಕೈಕೊಳ್ಳದೆ ಕಾಡುತ್ತೈದಾರೆಂಬಂಥದನ್ನು ತಿಳಿದು, ಇನ್ನು ತಪ್ಪಿದೆನಾದಡೆ–ಇನ್ನೊಂದು ವೇಳೆ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಂಡು ಹಿಮ್ಮೆಟ್ಟಿದೆನಾದರೆ, ನೀವು ಮಾಡಿತ್ತೇ ಸಲುವುದು–

ಕರ್ಮವಾಸನೆಯಿಂದ ಜನ್ಮಜನ್ಮಾಂತರ ಗತಿಗಳಲ್ಲಿ ತಂದು ಸಂಹರಿಸುವಂಥದೆ, ಸಲುವುದು–ನಿಮಗದೇ ತಕ್ಕುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - - -

ತನುಮನಧನವ ಗುರುಲಿಂಗಜಂಗಮಕ್ಕೆ ಕೊಡದ ತಪ್ಪುಕ ನಾನೆಂಬುದೀ ವಚನದರ್ಥ.

---

೩೨೪

**ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೇ ದಿಬ್ಯ, ಕೂಡಲಸಂಗಮದೇವಾ ನಿಮ್ಮ ಪ್ರಮಥರ ಮುಂದೆ ಕಿನ್ನರಿಯ ಬೊಮ್ಮಣ್ಣನೆ ಸಾಕ್ಷಿ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ: ಎನ್ನ–ಸಂಗನಬಸವೇಶ್ವರನ, ತಪ್ಪು–ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಂಡಂಥ ಅಪರಾಧವು. ಅನಂತಕೋಟಿ–ಅನೇಕ ಕೋಟಿಯು. ನಿಮ್ಮ ಸೈರಣೆಗೆ–ಅದನ್ನು ತರಹರಿಸಿಕೊಂಡು ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡುವಂಥ ಜಂಗಮಮೂರ್ತಿಗಳ ಕೃಪೆಯೆಂಬ ಸಮಾಧಾನಕ್ಕೆ, ಲೆಕ್ಕವಿಲ್ಲ–ಅಷ್ಟಿಷ್ಟೆಂಬ ಗಣನೆಯಿಲ್ಲವು. ಇನ್ನು ತಪ್ಪಿದೆನಾದಡೆ–ಇನ್ನೊಂದುವೇಳೆ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದೆನಾದರೆ, ನಿಮ್ಮ ಪಾದವೆ ದಿಬ್ಯ–ನಿಮ್ಮ ಪಾದಕಮಲವೇ ತಾರ್ಕಣ್ಯವು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. ನಿಮ್ಮ ಪ್ರಮಥರ ಮುಂದೆ–ನಿಮ್ಮ ಏಳುನೂರೆಪ್ಪತ್ತಮರಗಣಂಗಳ ಸಮ್ಮುಖದಲ್ಲಿ, ಕಿನ್ನರಿಯ ಬೊಮ್ಮಣ್ಣನೆ ಸಾಕ್ಷಿ–ಇನ್ನೊಂದುವೇಳೆ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದೆನಾದರೆ ಬುದ್ಧಿಯನ್ನು ಹೇಳಿ ಭಕ್ತಿಯನ್ನು ಮಾಡಿಸುವುದಕ್ಕೆ ಕಿನ್ನರಿಯ ಬೊಮ್ಮಯ್ಯಂಗಳೇ ತಾರ್ಕಣ್ಯವು.

---

೩೨೫

**ಅಡಿಗಡಿಗೆನ್ನ ಮನವ [1]ಜರಿದು[1] ನೋಡದಿರಯ್ಯಾ, ಬಡವನೆಂದೆನ್ನ ಕಾಡದಿರಯ್ಯಾ. ಎನಗೆ ಒಡೆಯರುಂಟು ಕೂಡಲಸಂಗನಶರಣರು, [2]ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ.[2]**

I - - - - - - - - - - - - - - - - - - - - - - - - - - - - - - - - - - - - - - - - - - - -

ಅಡಿಗಡಿಗೆನ್ನ ಮನವ ಜರಿದು ನೋಡದಿರಯ್ಯಾ: ಹೆಜ್ಜೆಹೆಜ್ಜೆಗೆ, ಎನ್ನ ಮನ–ಸಂಗನಬಸವೇಶ್ವರನ ಚಿತ್ತವನ್ನು, ಜರಿದು– "ಜರೇ ಧಿಕ್ಕಾರೇ"ಯೆಂದು ಧಿಕ್ಕರಿಸಿ, ನೋಡದಿರಯ್ಯಾ–ನಿರೀಕ್ಷಣೆಯ ಮಾಡದಿರಯ್ಯಾ. ಬಡವನೆಂದೆನ್ನ ಕಾಡದಿರಯ್ಯಾ: ಬಡವನೆಂದು–ನಿರ್ಧನಿಕನೆಂದು, ಎನ್ನ ಕಾಡದಿರಯ್ಯಾ–ಎನ್ನ ಪೀಡಿಸದಿರಯ್ಯಾ. ಎನಗೊಡೆಯರುಂಟು: ಎನಗೆ–ಸಂಗನಬಸವೇಶ್ವರನಿಗೆ, ಒಡೆಯರುಂಟು–ಕರ್ತೃಸ್ವರೂಪವಾದ ಜಂಗಮಮೂರ್ತಿಗಳುಂಟಾಗಿರ್ಪರು.

ಕೂಡಲಸಂಗನಶರಣರು-ಜಂಗಮಮೂರ್ತಿಗಳು, ತಮ್ಮ ಒಕ್ಕುದನಿಕ್ಕಿ-ತಮ್ಮ ಒಕ್ಕಮಿಕ್ಕಿ ಪ್ರಸಾದವನ್ನು ಕರುಣಿಸಿ ಕೊಟ್ಟು, ಸಲಹುವರಾಗಿ-ರಕ್ಷಣ್ಯವ ಮಾಡುತ್ತಿಹರಾಗಿ.

IV- - - - - - - - - - - - - - - - - - - - - - - - - - - - - - - - - - - - - - - - - - - - - - - - - -

1-1 ಜಡಿದು (ತ). 2-2 x (ತ).

..........................

ಮನದ ವಿಕಾರವ ಮಾಡದಿರಾ, ಹರನೇ ಮನವ ಮಾಣಿಸುವಡೆ ಶರಣರುಂಟೆಂಬುದೀ ವಚನದರ್ಥ.

---

೩೨೬

**ಭಕ್ತಿವಿಶೇಷವಾಗಿ ಮಾಡುವಡೆ ಹತ್ತು ಬೆರಳುಂಟು; ಹಾಸಿ ದುಡಿದಡೆ ತನಗುಂಟು, ತನ್ನ ಪ್ರಮಥರಿಗುಂಟು. ಮಾರಿ ತಂದೆಗಳಂತೆ ಎನಗೇಕಹುದಯ್ಯಾ, ರನ್ನ ಸಂಕಲೆಯನಿಕ್ಕಿ ಕಾಡಿಹ ಕೂಡಲಸಂಗಮದೇವ ಶಿವಧೋ ಶಿವಧೋ!**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತಿವಿಶೇಷವಾಗಿ ಮಾಡುವಡೆ: ಭಕ್ತಿ-ಶಿವಾದ್ವೈತಭಕ್ತಿಯು, ವಿಶೇಷವಾಗಿ-ವೆಗ್ಗಳವಾಗಿ; ಮಾಡುವ ಡೆ-ಅನುಗೆಯ್ಯಬೇಕಾದರೆ, ಹತ್ತು ಬೆರಳುಂಟು-ದಶಾಂಗುಲಿಗಳುಂಟಾಗಿರ್ಪವು. ಅದಲ್ಲದೆ ಜ್ಞಾನಕರ್ಮೇಂದ್ರಿಯಂಗಳುಂಟಾಗಿರ್ಪವು. ಹಾಸಿ ದುಡಿದಡೆ-ಅಡವಿಗೆ ಹೋಗಿ ಐದುಕಟ್ಟು ಆರುಕಟ್ಟು ಏಳುಕಟ್ಟನ್ನು ಹಾಕಿ ಕಟ್ಟಿಗೆ ಹೊರೆಯನ್ನು ಕಟ್ಟಿ ಶಿರದ ಮೇಲೆ ಹೊತ್ತುಕೊಂಡು ಬಂದು ಶಿವಶರಣರ ಮನೆಗೆ ಹಾಕಿ ಸಲುವ ಹಾಗದ ಕಾಯಕವ ತೆಗದುಕೊಂಡು ಬಂದಲ್ಲಿ, ತನಗುಂಟು-ತನ್ನ ಸತಿಯರಿಗೂ ತನ್ನ ಸಮಯಾಚಾರದ ಜಂಗಮಮೂರ್ತಿಗಳಿಗೂ ಪದಾರ್ಥ ಯಥೇಚ್ಛವೊಳವು ಪ್ರಮಥರಿಗುಂಟು-ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ಜಂಗಮಮೂರ್ತಿಗಳಿಗೆ ಪದಾರ್ಥ ಯಥೇಚ್ಛವೊಳವು.

ಮಾರಿತಂದೆಗಳಂತೆ-ಮೋಳಿಗೆಯ ಮಾರಯ್ಯಗಳ ಹಾಂಗೆ, ಎನಗೇಕಹುದಯ್ಯಾ-ನನಗೆ ಹೇಂಗೆ ದೊರಕೊಂಡಿತ್ತು? ದೊರಕೊಳ್ಳದಯ್ಯ. ಕೂಡಲಸಂಗಮದೇವ-ಪರಶಿವಲಿಂಗವು. ರನ್ನ ಸಂಕಲೆಯನಿಕ್ಕಿ-ಬೇಡಿಗಳೊಳಗೆ ಕಬ್ಬುನ ಬೇಡಿಯ ಕ್ಷೀಣತ್ವವೇನು? ಬಂಗಾರ ಬೇಡಿಯ ಅಧಿಕತ್ವವೇನು? ಬಾಧೆಯಲ್ಲಿ ಒಂದೇಯಾಗಿರ್ಪುದು, ಹಾಂಗೆ, ರನ್ನ ಸಂಕಲೆಯನಿಕ್ಕಿ-ಅಹಂಕಾರ ಹಿರೇತನದ ಆತ್ಮತೇಜಸ್ಸಿಗೊಳಗು ಮಾಡಿ, ಕಾಡಿಹ-ಪೀಡಿಸುತ್ತಿಹನು, ಶಿವಧೋ ಶಿವಧೋ!-ಅರಿಯೋ ಮೊರಿಯೋ ಎಂದು, ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಸಂಗನಬಸವೇಶ್ವರನು.

III- - - - - - - - - - - - - - - - - - - - - - - - - - - - - - - - - - - - - - - - - - - - - - - - - -

x (ಟ).

..........................

ಹಾಸಿ–ವಿಸ್ತಾರವಾಗಿ, ದುಡಿದರೆ–ಉದ್ಯೋಗವನು ಮಾಡಿದರೆ, ತನಗುಂಟು–ತನಗುಂಬೋದಕ್ಕೆ ಒಳವು.

V-----------------------------------------------------------------------

ದಶವಿಧೇಂದ್ರಿಯಂಗಳುಂಟು ಮತ್ತಂ ದಶವಿಧ ಪಾದೋದಕವುಂಟೆಂಬುದೀಗ ಹತ್ತು ಬೆರಳುಂಟೆಂಬುದರ್ಥ. ಆಚಾರಾಂಬರವನು ಆಂತು ಎಂಬುದೀಗ ಹಾಸಿ ಎಂಬುದರ್ಥ. ಗಳಿಸುವುದಕ್ಕೆ ಎಂಬುದೀಗ ದುಡಿದರೆ, ಮೋಕ್ಷವುಂಟೆಬುದೀಗ ತನಗುಂಟು. ಹೊನ್ನು ಹೆಣ್ಣು ಮಣ್ಣೆಂಬ ಶೃಂಕಳವನು ತೊಡಚಿ ಎಂಬುದೀಗ ರತ್ನ ಸಂಕಳೆಯನಿಕ್ಕಿ.

---

೩೨೭

**ಮನೆ ನೋಡೆ ಬಡವರು; ಮನ ನೋಡೆ ಘನ. ಸೋಂಕಿನಲ್ಲಿ ಸುಖಿ, ಸರ್ವಾಂಗ ಕಲಿಗಳು. ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕುಂಟು. ಕೂಡಲಸಂಗನಶರಣರು ಸ್ವತಂತ್ರಧೀರರು.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಮನೆ ನೋಡೆ ಬಡವರು: ಮನೆ ನೋಡೆ–ಮೋಳಿಗೆ ಮಾರಯ್ಯಗಳ ಗೃಹವನ್ನು ಪರಾಂಬರಿಸಿ ವಿಚಾರಿಸಿ ನೋಡಲು, ಬಡವರು–ನಿರ್ಧನಿಕರೋಪಾದಿಯಲ್ಲಿ ಒಂದಂಕಣದ ಮನೆಯೇ ಉಂಟಾಗಿರ್ಪುದು. ಮನ ನೋಡೆ ಘನ: [ಮನ ನೋಡೆ–] ಅವರ ಮನವನ್ನು ಪರಾಂಬರಿಸಿದರೆ, ಘನ–ಅಧಿಕತರವಾದ ಬ್ರಹ್ಮವೇ ತಾವಾಗಿರುವರು, ಸೋಂಕಿನಲ್ಲಿ–ಜಂಗಮಮೂರ್ತಿಗಳು ತನುಮನಧನಂಗಳನು ಹಿಡಿವುತ್ತ ಬಂದಲ್ಲಿ, ಸುಖಿ–ಅವರೊಡವೆ ಅವರಿಗೆ ಸಮರ್ಪಣೆಯ ಮಾಡಿ ಪರಿಣಾಮಿಗಳಾಗಿರ್ಪರು. ಸರ್ವಾಂಗ ಕಲಿಗಳು–ಶಿವನುಂಟುಮಾಡಿದ ಸಕಲಪ್ರಪಂಚವನ್ನು ಜಯಿಸುವಲ್ಲಿ ಪರಾಕ್ರಮಿಗಳು.

ಪಸರಕ್ಕನುವಿಲ್ಲ–ಮನೆಯಲ್ಲಿ ಅಂಬಕಳಕ್ಕೆ ಗತಿಯಿಲ್ಲ. ಅದಲ್ಲದೆ ಹೇರುಹೆಡಿಗೆ ಗುಮ್ಮಿಗಾದಿಗೆ ಮೊದಲಾದವನ್ನು ಮಡಗಿಕೊಂಬುವುದಕ್ಕೆ ತೆರಪಿಲ್ಲವು. ಬಂದ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದ, ತತ್ಕಾಲಕ್ಕೆ–ಸಮಯಕಾಲ ಉಚಿತಕಾಲಕ್ಕೆ, ಉಂಟು–ಮನೆಯಲ್ಲಿ ಪದಾರ್ಥವು ಯಥೇಚ್ಛವಾಗಿ ಒಳವು. ಕೂಡಲಸಂಗನಶರಣರು–ಮೋಳಿಗೆ ಮಾರಿತಂದೆಗಳು, ಸ್ವತಂತ್ರಧೀರರು–ಇಹದಲ್ಲಿದ್ದರೆ ಮಾಯಾಧೀನರಹಿತರು. ಪರದಲ್ಲಿದ್ದರೆ ಪರಾಧೀನರಹಿತರು. ಇಹಪರವೆರಡೂ ತಮ್ಮಾಧೀನವಾಗಿ ಸ್ವತಂತ್ರ ಪರತಂತ್ರರಹಿತವಾದ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾವಾಗಿರ್ಪರು.

---

ತತ್ವವನಜಿ¹ದಿಹೆ¹ನೆಂದು ಮೃತ್ಯುವ ಕರೆದುಕೊಂಡೆನಯ್ಯಾ ನಾನೆತ್ತ ಬಲ್ಲೆ ನಿಮ್ಮ ಶರಣರಂತುವನು? ನಾನೆತ್ತ ಬಲ್ಲೆ ನಿಮ್ಮ ಪ್ರಮಥರಂತುವನು? ಸರ್ವಾಪರಾಧಿ ನಾನು. ಎನ್ನ ಮನದ ಕೊನೆಯ ಸೂತಕ ಹಿಂಗದು ಕೂಡಲಸಂಗಮದೇವಾ.

I - - - - - - - - - - - - - - - - - - - - - - - - - - - - - - - - - - - - - - - - - - - - -

ತತ್ವವನಜಿದಿಹೆನೆಂದು–ಮೋಳಿಗೆ ಮಾರಿತಂದೆಗಳ ಸ್ವಸ್ವರೂಪವ ತಿಳಿಯಬೇಕೆಂದು, ಮೃತ್ಯುವ ಕರಕೊಂಡೆನಯ್ಯಾ–ಮಜ್ಜನಸಾಲೆ ಕೆಳಗೆ ಎರಡು ಜಾಳಿಗೆ ಹೊನ್ನು ಮಡಗಿ ಇಲ್ಲದ ದೂಷಣೆಯನುಂಟುಮಾಡಿಕೊಂಡೆನಯ್ಯಾ. ನಾನೆತ್ತ ಬಲ್ಲೆ ನಿಮ್ಮ ಶರಣರಂತುವನು: ನಿಮ್ಮ ಶರಣರ–ಮೋಳಿಗೆಮಾರಿ ತಂದೆಗಳ, ಅಂತುವನು–ಸ್ವಸ್ವರೂಪದ ನಿಲುಕಡೆಯನು, ನಾನೆತ್ತ ಬಲ್ಲೆ–ನಾನಾಕಡೆಯಿಂದ ತಿಳಿದಿಪ್ಪೆನು, ಅರಿಯೆನು. ನಾನೆತ್ತ ಬಲ್ಲೆ ನಿಮ್ಮ ಪ್ರಮಥರಂತುವನು: ನಿಮ್ಮ ಪ್ರಮಥರ–ನಿಮ್ಮ ಅರುವತ್ತುಮೂರು ಪುರಾತನರ, ಅಂತುವನು–ಸ್ವಸ್ವರೂಪದ ನಿಲುಕಡೆಯನು, ನಾನೆತ್ತ ಬಲ್ಲೆ–ನಾನಾವಕಡೆಯಿಂದ ತಿಳಿದಿಪ್ಪೆನು, ಅರಿಯೆನು. ಸರ್ವಾಪರಾಧಿ ನಾನು–ತನುಮನಧನಂಗಳನು ವಂಚಿಸಿಕೊಂಡಂಥ ತಪ್ಪುಗ ನಾನಯ್ಯ, ಎನ್ನ ಮನದ ಕೊನೆಯ ಎನ್ನ ಮನಸ್ಸಿನಗ್ರದಲ್ಲಿರುವ, ಸೂತಕ–ಭಿನ್ನಸೂತಕವು, ಹಿಂಗದು–ತೊಲಗದೆಂಬ ದೃಷ್ಟೋಪಮಾನದ ಹಾಂಗೆ.

● ತತ್ವವನಜಿದಿಹೆನೆಂದು–ಶಿವತತ್ವದ ನಿಲುಕಡೆಯ ತಿಳಿಯಬೇಕೆಂದು, ಮೃತ್ಯುವ ಕರಕೊಂಡೆನಯ್ಯಾ–ಯಮನ ಬಾಧೆಯನುಂಟುಮಾಡಿಕೊಂಡೆನಯ್ಯಾ. ನಾನೆತ್ತ ಬಲ್ಲೆ ನಿಮ್ಮ ಶರಣರಂತುವನು: [ಶರಣರ–] ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳ, ಅಂತುವನು–ಸ್ವಸ್ವರೂಪವನು, ನಾನೆತ್ತ ಬಲ್ಲೆ–ನಾನಾವ ಕಡೆಯಿಂದ ತಿಳಿದಿಪ್ಪೆನು? ಅರಿಯೆನು. ನಾನೆತ್ತ ಬಲ್ಲೆ ನಿಮ್ಮ ಪ್ರಮಥರಂತುವನು: [ಪ್ರಮಥರ–] ಏಳುನೂರೆಪ್ಪತ್ತಮರಗಣಂಗಳ, ಅಂತುವನು–ಸ್ವಸ್ವರೂಪವನು, ನಾನೆತ್ತ ಬಲ್ಲೆ–ನಾನಾವಕಡೆಯಿಂದ ತಿಳಿದಿಪ್ಪೆನು? ಅರಿಯೆನು. ಸರ್ವಾಪರಾಧಿ ನಾನು–ಸಮಸ್ತರಲ್ಲಿ ತಪ್ಪಿದ ತಪ್ಪುಗ ನಾನು. ಎನ್ನ ಮನದ ಕೊನೆಯ ಸೂತಕ ಹಿಂಗದು : ಎನ್ನ ಮನದ[ಕೊನೆಯ]–ಮನೋಹರವಾದ ರಮಣೀಯವಾದ ನೆನಹಿನಗ್ರದ, ಸೂತಕ–ಭಿನ್ನ ಸೂತಕವು, ಹಿಂಗದು–ತೊಲಗದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III- - - - - - - - - - - - - - - - - - - - - - - - - - - - - - - - - - - - - - - - - - - - -

1-1 ದೆ (ಟ, ಡ).

..........................

ತತ್ವವನರಿದನೆಂದು–ಮೋಳಿಗೆ ಮಾರಯ್ಯಗಳ ಬಡತನವ ತಿಳಿದೆನೆಂದು, ಕೊನೆಯ–ಧ್ಯಾನಾಗ್ರದ, ಸೂತಕ–ಸಂಕಲ್ಪದ ಹೊಲೆಯು.

IV- - - - - - - - - - - - - - - - - - - - - - - - - - - - - - - - - - - - - - - - - - - - -

ಬ್ರಹ್ಮವು ತಾನೆಂಬುದು ಅಜ್ಞಾನ. ಆ ಅಜ್ಞಾನವೆಂಬುದು ಮನಸ್ಸು. ಆ ಮನಸ್ಸು ಅನಾದಿಯಾದ ಶರಣರಿಂದಲ್ಲದೆ ಹೊಗದೆಂಬುದೀ ವಚನದರ್ಥ.

---

೩.೨೯

**ಆಮಿಹಿಲಾಳು ಭೋಜದೇವ ಬಲ್ಲಾಳು. ಆನು ಸೂಳೆ, ಅಮ್ಮಕ್ಕನೂ ಸೂಳೆ. ಬೆಳ್ಳಿಗೆ ಆವಿನ ಕಱುವೆಂದಡೆ ಬಳ್ಳವಾಲು ಕಱೆಪುದೆ? ಕೂಡಲಸಂಗನಶರಣರ ಮುಂದೆ ನಾನು ಕಾದೆನು ಬಾ ಬಿಸಿಲೆ.**

I - - - - - - - - - - - - - - - - - - - - - - - - - - - - - - - - - - - - - - - - - - -

ಆಮಿಹಿಲಾಳು ಭೋಜದೇವ ಬಲ್ಲಾಳು–ಒಬ್ಬಾನೊಬ್ಬ ರಾಜನ ಬದಿಯಲ್ಲಿ ಆ ಮಿಹಿಲಾಳನೆಂಬ ಪಟುಭಟನು, ಭೋಜದೇವ ಬಲ್ಲಾಳನೆಂಬ ಪಟುಭಟನು ಎಡದ ಕೈಗೆ ಸಾವಿರ ಬಲದ ಕೈಗೆ ಸಾವಿರ ಸಂಬಳವನುಂಡುಕೊಂಡಿರುವರು. ಹೀಂಗಿರುತ್ತಿದ್ದ ಹಾಂಗೆ ಒಂದಾನೊಂದು ದಿವಸದಲ್ಲಿ ರಾಜನು ಸದರಿನಲ್ಲಿ ಕುಳಿತುಕೊಂಡಿದ್ದಾಗ ಚಿನ್ನದ ಠಾಣಾ ದೀವಿಗೆಯ ಮೇಲಿನ ದೀಪವು ನಂದಿಹೋಗುವಂಥದು ದೊರೆ ನೋಡಿ ಎಲೋ ಆಮಿಹಿಲಾಳು ದೀಪವು ನಂದುತೈತೆ ಚಾಚೆಂದು ಹೇಳಿದಲ್ಲಿ ಸ್ವಾಮೀ, ನನ್ನಂಥ ಪಟುಭಟನು ದೀಪವ ಚಾಚಬೇಕೆ? ಎಂದು ಚಾಚದೆ ಇರುವನು, ಚಾಚದೆ ಇದ್ದಲ್ಲಿ ಎಲೋ ಭೋಜದೇವ ಬಲ್ಲಾಳು ನೀನೆಂದು ಕೇಳಿದಲ್ಲಿ ಸ್ವಾಮೀ, ಸ್ವಲ್ಪವಾದರೂ ಕರ್ತರ ಸೇವೆ ದೊಡ್ಡದಾದರೂ ಕರ್ತರ ಸೇವೆಯೆಂದು ಎದ್ದುಹೋಗಿ ದೀಪವ ಚಾಚುವನು. ಮತ್ತು ವರುಷಾರುತಿಂಗಳ ಮೇಲೆ ಪರರಾಜರ ದಂಡುಬಂದಲ್ಲಿ ಎಲೋ [ಆ]ಮಿಹಿಲಾಳು, ಮಂದಿ ಕುದುರೆಯನ್ನು ತೆಗೆದುಕೊಂಡುಹೋಗಿ ಯುದ್ಧವ ಮಾಡಿ ಹಿಮ್ಮೆಟ್ಟಿಸಿ ಜಯಿಸಿ ಬಾಯೆಂದು ಹೇಳಿದಲ್ಲಿ ಸ್ವಾಮೀ. ಆವತ್ತು ದೀಪವ ಚಾಚಲಾರದವನು ಇವತ್ತು ಮಂದಿ ಕುದುರೆಯನ್ನು ತೆಗೆದುಕೊಂಡು ಹೋಗಿ ಯುದ್ಧವ ಮಾಡಿ ಹಿಮ್ಮೆಟ್ಟಿಸಿ ಜಯಿಸಿಬರುವಂಥದಾದೀತೆ? ಎಂದು ಹೇಳಿದಲ್ಲಿ, ಆಗವನ ಸಂಬಳವ ಚಿಲತವ ಮಾಡಿಸಿ ಮೈಯನೆಲ್ಲ ಒಡೆಬಡಿಸಿ ಅಟ್ಟಿಸಿಬಿಡುತ್ತಿಹರು. ನೀನು ಭೋಜದೇವ ಬಲ್ಲಾಳುಯೆಂದು ಕೇಳಿದಲ್ಲಿ ಸ್ವಾಮೀ, ಹಸಾದ ಅಪ್ಪಣೆಯನ್ನು ಪಾಲಿಸಬೇಕೆಂದು ದೊರೆಯಿಂದ ವೀಳ್ಯವನು ಹಿಡಿದು ಮಂದಿ ಕುದುರೆಯನ್ನು ತೆಗೆದುಕೊಂಡು ಹೋಗಿ ಯುದ್ಧವ ಮಾಡಿ ಹಿಮ್ಮೆಟ್ಟಿಸಿ ಜಯಿಸಿಬಂದು ಉಡುಗೊರೆ ಉತ್ಸಾಹ ಮಾನ ಮನ್ನಣೆಯನ್ನು ಹಡೆದುಕೊಂಡಂಥ ಭೋಜದೇವ ಬಲ್ಲಾಳನೇ ಪಟುಭಟನೆಂದು ಹೇಳಬೇಕಲ್ಲದೆ ಸಂಬಳವನ್ನು ಚಿಲತವ ಮಾಡಿಸಿಕೊಂಡು ಮೈಯನೆಲ್ಲ ಒಡೆಬಡಿಸಿಕೊಂಡು ಅಟ್ಟಿಸಿಕೊಂಡು ಹೋದಂಥ ಆಮಿಹಲಾಳನ ಪಟುಭಟನೆಂದು ಹೇಳುವುದಕ್ಕಾದೀತೆ? ಆಗದು. ಹಾಂಗೆ; [ಆ]ಮಿಹಿಲಾಳನೆಂದರೆ ಉಪಾಧಿಕನು, ಭೋಜದೇವ ಬಲ್ಲಾಳನೆಂದರೆ ನಿರ್ವಂಚಕ ಸದ್ಭಕ್ತನು. ಅಂತಪ್ಪ ನಿರ್ವಂಚಕ ಸದ್ಭಕ್ತನೇ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದನೆಂದು ಹೇಳಬೇಕಲ್ಲದೆ ಉಪಾಧಿಕನು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದನೆಂದು ಹೇಳುವುದಕ್ಕಾದೀತೆ? ಆಗದು.

ಆನು ಸೂಳೆ ಅಮ್ಮಕ್ಕನೂ ಸೂಳೆಯೆಂದರೆ; ಆನು ಸೂಳೆಯೆಂದರೆ ಮಾಯಾಶಕ್ತಿ, ಅಮ್ಮಕ್ಕನೂ ಸೂಳೆಯೆಂದರೆ ಚಂಡಸೋಮಮ್ಮನು. ಆ ಚಂಡಸೋಮಮ್ಮನು ಕಲ್ಯಾಣಪಟ್ಟಣದಲ್ಲಿ

ಒಂದಾನೊಂದು ದಿವಸ ಮಸ್ತಕಕ್ಕೆ ತೈಲಾಭ್ಯಂಗನವ ಮಾಡಿಕೊಳುತಿದ್ದಲ್ಲಿ ಒಬ್ಬ ಚರಮೂರ್ತಿಗಳು ಭಿಕ್ಷಕ್ಕೆ ಬಂದಲ್ಲಿ ಕಂಡಾಕ್ಷಣಕ್ಕೆ ನಮಸ್ಕಾರವ ಮಾಡಿ ಕಂಬಳಿ ಗದ್ದುಗೆಯ[೨] ಹಾಕಿ ಮೂರ್ತವ ಮಾಡಿಸಿದಲ್ಲಿ, ನಾವು ಹೊತ್ತಿರಲಿಕ್ಕೆ ಹೋಗಬೇಕು ನಮಗೆ ನಿಮ್ಮ ಪ್ರಮಥಗಣಂಗಳ ಶಿಕ್ಷೆ ಬಂದೀತೆಂದು ಹೇಳಿದಲ್ಲಿ ಆ ಚಂಡಸೋಮಮ್ಮನು ಹೊರಗೆ ಬಂದು ಸೂರ್ಯನ ನೋಡಿದಲ್ಲಿ, ಆಗ ಹೊತ್ತು ಮುಳುಗುವುದಕ್ಕೆ ಒಂದು ತಾಸು ಹೊತ್ತಿರುವುದು. ನೀ ಹೋಗಬೇಡ, ನಿನಗೆ ಬಸವಾದಿ ಪ್ರಮಥಗಣಂಗಳ ಪಾದಮೇಲಣ ಪ್ರತಿಜ್ಞೆವೈತೆಂದು ಪ್ರತಿಜ್ಞೆಯನ್ನು ಹಾಕಿ ಒಳಯಕ್ಕೆ ಹೋಗಿ ಜಳಕ ಜಂತಾವಳಿಗಳ ಮಾಡಿಕೊಂಡು ಅಂಬರವನುಟ್ಟುಕೊಂಡು ಕೇಶವನು ಆರಿಸಿಕೊಂಡು ಪಾಕಪ್ರಯತ್ನವ ಮಾಡಿ ಅಯ್ಯನವರಿಗೆ ಅಗ್ಗಣಿಯ ಕೊಟ್ಟು ಹಾವುಗೆಯ ಕೊಟ್ಟು ಹಸ್ತಲಾಘವ ಕೊಟ್ಟು ಒಳೆಯಕ್ಕೆ ಕರಕೊಂಡು ಹೋಗಿ ಉನ್ನತಾಸನದ ಮೇಲೆ ಕುಳ್ಳಿರಿಸಿ ಸಕಲ ಪದಾರ್ಥವ ನೀಡಿ ಸಂತುಷ್ಟಿಬಡಿಸಿ ಸಲಿಸಿಯಾದ ಬಳಿಕ ತಾಂಬೂಲವನು ಮಡಿಚಿಕೊಟ್ಟು [* *] ಕಳಿಸಿಕೊಡುವಷ್ಟೊತ್ತಿಗೆ ನಾಲ್ಕು ತಾಸಾಗುವುದು. ಆಗ ಹೊರಗೆ ಬಂದು ಸೂರ್ಯನಿಗೆ [೩][ಆಜ್ಞೆಯ][೩] ಬಿಟ್ಟಲ್ಲಿ ಒಂದಾನೊಂದು ರಾಮಬಾಣವೆಸೆದೋಪಾದಿಯಲ್ಲಿ ಸೂರ್ಯ ಅಸ್ತಂಗತವಾಗುವನು. [೪]ಇ[೪]ತ್ತ ಬಿಜ್ಜಳಾಂಕನ ಸಭೆಯಲ್ಲಿ ಗಳಿಗೆಬಟ್ಟಲು ಹಾಕಿಕೊಂಡಿರುವಂಥವರು ದೇವರು ಇವತ್ತು ಗಳಿಗೆ ಹೆಚ್ಚುಕಡಿಮೆಯಾದವು. ಹನ್ನೆರಡುತಾಸು ಹೋಗಿ ಹದಿನಾರು ತಾಸು ಆಯಿತ್ತೆಂದು ಹೇಳಿದಲ್ಲಿ ಆಗ ಬಿಜ್ಜಳರಾಯನು ಏನು ಕಾರಣ ಬಸವಣ್ಣಾ ಎಂದು ಕೇಳಿದಲ್ಲಿ, ಅಹುದು ನಮ್ಮ ಶಿವಶರಣೆಯರು ಒಬ್ಬ ಚರಮೂರ್ತಿಗಳಿಗೋಸ್ಕರವಾಗಿ ಸೂರ್ಯನಿಗೆ ಆಣೆಕಟ್ಟಿ ತಡೆದು ನಿಂದಿರಿಸಿದ್ದುದು ಬದ್ಧವೆಂದು ಹೇಳಿದಲ್ಲಿ, ಎಲ್ಲಿಯ ಮಾತು ಎತ್ತಣ ಮಾತು, ಲಕ್ಷಗಾವುದದಲ್ಲಿ ಸೂರ್ಯನೈದಾನೆ ಭೂಲೋಕದಲ್ಲಿ ಇವರೈದಾರೆ ಅವರ ಕರೆಸಿ ಪರಾಂಬರಿಸಬೇಕೆಂದು ಹೇಳಿದಲ್ಲಿ ಅವರು, ಶಿವಶರಣರು ನಿಮ್ಮ ತಾವಕ್ಕೆ ಬರೋದಿಲ್ಲವೆಂದು ಹೇಳಿದಲ್ಲಿ ಆಗ ಬಿಜ್ಜಳರಾಯನು ಚತುರಂಗಮಾರ್ಬಲ ಸಹವಾಗಿ ಬಸವೇಶ್ವರಸ್ವಾಮಿಗಳ ಕೂಡಿಕೊಂಡು ಆ ಚಂಡಸೋಮಮ್ಮನ ಮನೆಗೆ ಹೋದಲ್ಲಿ ಆ ಚಂಡಸೋಮಮ್ಮನು ಜವನಿಕೆಯ ಮರೆಯಲ್ಲಿ ನಿಂತುಕೊಂಡಿರುವಳು. ಆಗ ಬಸವೇಶ್ವರಸ್ವಾಮಿಗಳು ಚಂಡಸೋಮಮ್ಮ ನೀನು ಸೂರ್ಯನಿಗೆ ಆಣೆಯ ಕಟ್ಟಿ ತಡೆದು ನಿಂದರಿಸಿದ್ದದು ಬದ್ಧವೆ? ಎಂದ ಕೇಳಿದಲ್ಲಿ, ಅಹುದು ಒಬ್ಬ ಚರಮೂರ್ತಿಗೋಸ್ಕರವಾಗಿ ಸೂರ್ಯನಿಗೆ ಆಣೆಕಟ್ಟಿನಿಂದರಿಸಿದ್ದುದು ಬದ್ಧವೆಂದು ಹೇಳಿದಲ್ಲಿ, ಆಗ ಬಿಜ್ಜಳಾಂಕನು ಉಡುಗರೆ ಉತ್ಸಾಹವನ್ನು ಹೊದಿಸಿ ಮಾನಮನ್ನಣೆಯನ್ನು ಮಾಡಿ ಹಿಂದಕ್ಕೆ ತಿರುಗಿ ಹೋಗುವಾಗ್ಗೆ ನೋಡಿದಂಥ ಪರಿಜನ ಪುರಜನವೆಲ್ಲ ಆಶ್ಚರ್ಯಂಬಡುವರು.

ಕೂಡಲಸಂಗನಶರಣರ ಮುಂದೆ [೫]ನಾನು[೫] ಕಾದೆನು ಬಾ ಬಿಸಿಲೆ-ಈ ವಾರ್ತೆಯನು ತಮ್ಮ ತಂಗಿಯಾದ ಮಾಯಾಶಕ್ತಿ ಕೇಳಿ ನಾನು ಸೂರ್ಯನಿಗೆ ಆಣೆಕಟ್ಟಿ ತಡೆದು ನಿಂದರಿಸಿ ಬಿಜ್ಜಳನಿಂದ ಉಡುಗೊರೆ ಉತ್ಸಾಹ ಮಾನಮನ್ನಣೆಯನ್ನು ಹಡೆದುಕೊಳಬೇಕೆಂದು ಆರು ಮೂರು ತಿಂಗಳು ಮರೆಬಿಟ್ಟು ಬೀದಿ ಬಾಜಾರದಲ್ಲಿ ಒಬ್ಬ ಗಂಟು ಜೋಳಿಗೆಯ ಜಂಗಮನ ಕಂಡು ಬಿನ್ನಹಮಾಡಿ ಕರೆಕೊಂಡು ಬಂದು ಗದ್ದುಗೆಯ ಹಾಕಿ ಕುಳ್ಳಿರಿಸಿ ಹೊರಗೆ ಬಂದು ಸೂರ್ಯನಿಗೆ ಆಣೆಯ ಕಟ್ಟಿದಲ್ಲಿ ಎಂದಿನ ಹಾಂಗೆ ಸೂರ್ಯನು ಅಸ್ತಂಗತವಾಗುವನು. ನೆರದಂಥ ಪರಿಜನ ಪುರಜನವೆಲ್ಲ ನಕ್ಕು ಹಾಸ್ಯವ ಮಾಡುತ್ತಿಹರು. ಸೂರ್ಯನಿಗೆ ಆಣೆಕಟ್ಟಿ ತಡೆದು ನಿಂದರಿಸಿ ಬಿಜ್ಜಳಾಂಕನಿಂದ ಉಡುಗೊರೆ ಉತ್ಸಾಹ ಹೊದಿಸಿಕೊಂಡು ಮಾನ ಮನ್ನಣೆಯನ್ನು ಪಡೆದುಕೊಂಡಂಥ

ಚಂಡಸೋಮಮ್ಮನೇ ವಾರಾಂಗನೆಯೆಂದು ಹೇಳಬೇಕಲ್ಲದೆ ಸೂರ್ಯನಿಗೆ ಆಣೆಕಟ್ಟಿ ತಡೆದು ನಿಂದರಿಸದೆ ಬಿಜ್ಜಳಾಂಕನಿಂದ ಉಡುಗೊರೆ ಉತ್ಸಾಹ ಹೊದ್ದುಕೊಂಡು ಮಾನ ಮನ್ನಣೆಯನ್ನು ಪಡೆದುಕೊಳ್ಳದೆ ಪರಿಜನ ಪುರಜನದಿಂದ ಹಾಸ್ಯೋಪಮಾನವೆಂದು ಹಾಸ್ಯವ ಮಾಡಿಸಿಕೊಂಡಂಥ ಮಾಯಾಶಕ್ತಿಗೆ ವಾರಾಂಗನೆಯೆಂದು ಹೇಳುವುದಕ್ಕಾದೀತೆ? ಆಗದು. ಹಾಂಗೆ; ನಿರ್ವಂಚಕ ಸದ್ಭಕ್ತನನ್ನೇ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಪಡೆದುಕೊಂಡು ಹೋದನೆಂದು ಹೇಳಬೇಕಲ್ಲದೆ ಉಪಾಧಿಕನು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದನೆಂದು ಹೇಳುವುದಕ್ಕಾದೀತೆ? ಆಗದು.

ಬೆಳ್ಳಿಗೆ ಆವಿನ ಕಱುವೆಂದಡೆ–ಕಾಮಧೇನುವಿನ ತಳಿಯೇ ಈ ನಮ್ಮ ಬಿಳಿ ಆಕಳೆಂದರೆ, ಬಳ್ಳವಾಲು ಕರೆವುದೆ?–ಮೊಲೆಗೊಕ್ಕಳ ಹಾಲು ಕರೆದೀತೆ? ಕರೆಯಲರಿಯದು. ಹಾಂಗೆ; ಬೆಳ್ಳಿಗೆ ಆವಿನ ಕಱುವೆಂದಡೆ–ನಿರ್ವಂಚಕ ಸದ್ಭಕ್ತರ ಸಾಂಪ್ರದಾಯಕರೇ ಈ ಉಪಾಧಿಕರೆಂದು ಹೇಳಿದರೆ, ಬಳ್ಳವಾಲು ಕರೆವುದೆ?–ನಿರ್ವಂಚಕ ಸದ್ಭಕ್ತರನ್ನೇ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದರೆಂದು ಹೇಳಬೇಕಲ್ಲದೆ ಉಪಾಧಿಕರು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದರೆಂದು ಹೇಳುವುದಕ್ಕಾದೀತೆ? ಆಗದು.

.........................

೧–೧ ಅ (ಗ). ೨+ನ್ನು (ಕ, ಗ). ೩–೩ ಆಗ್ನೇಯ (ಕ). ಅಗ್ನಿಯ (ಗ). ೪–೪ ಮ (ಕ). ೫–೫ ನಾನೇನು (ಕ). ೬+ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. (ಕ, ಗ).

III- - - - - - - - - - - - - - - - - - - - - - - - - - - - - - - - - - - - - - - - -

ನಿರಾಶಾನಿರ್ವಂಚನೆಯುಳ್ಳ ಮೋಳಿಗೆಮಾರಯ್ಯಗಳು ಮಾಡಿದ ಪರಮಾಮೃತಸ್ವರೂಪವಾದ ಜಂಗಮಭಕ್ತಿಯು ಎನಗೆ ದೊರಕೊಳ್ಳಲಿಲ್ಲವೆಂಬುದೀಗ ಬೆಳ್ಳಿಗೆಯಾವಿನ ಕಱುವೆಂದರೆ ಬಳ್ಳವಾಲ ಕಱೆವುದೆ ಎಂಬ ಶಬ್ಧಕ್ಕರ್ಥ.

---

## ೩೩೦

**ಆನೆಯು ಆ ದಾರಿಯಲ್ಲಿ ಹೋಯಿತ್ತೆಂದಡೆ, ಆಡು ಆ ದಾರಿಯಲ್ಲಿ ಹೋಯಿತೆನ್ನಬಹುದೆ? ಸಂಗನ ಶರಣರಿಗಾನು ಸರಿಯೆಂದು ಗಳಹಲುಬಹುದೆ? ಜಂಗಮಕ್ಕೆ ಮಾಡುವ ಭಕ್ತರಿಗಾನು ಸರಿಯೆ ಹೇಳಾ, ಕೂಡಲಸಂಗಮದೇವಾ? [1]ಸದ್ಭಕ್ತರ ಹೋಲಲರಿಯೆನು.[1]**

I - - - - - - - - - - - - - - - - - - - - - - - - - - - - - - - - - - - - - - - - - -

ಆನೆಯು ಆ ದಾರಿಯಲ್ಲಿ ಹೋಯಿತ್ತೆಂದಡೆ: ಆನೆಯು–ಮತ್ತಮದಹಸ್ತಿಯು [illegible]
ಹೊಯಿತ್ತೆಂದಡೆ–ಮದವೇರಿ ನಿಗಳವನ್ನು ಕಿತ್ತಿಕೊಂಡು ತಲೆಯ ತುರಿ[illegible]
ಹೋಗುತ್ತೈತೆಂದು ಹೇಳಿದಲ್ಲಿ ಕೇಳಿದಂಥ ಆತ್ಮರುಗ[illegible] [illegible]ರಯಲ್ಲಿ
ಮರಿಗಳ ಬಡೆದು ಕೊಂದೀತೆಂದು [illegible] [illegible]ತು ಬೀದಿಬಾಜಾರ[illegible]
ಆಡು ಆ ದಾರಿಯ[illegible] [illegible] ನಮ್ಮ ಬಡಿದು [illegible]ದೀತು ನಮ್ಮ ಮಕ್ಕಳ
[illegible]ಹೋಗಿ ಕದಗಳ ಮುಚ್ಚಿಕೊಂಡು ಭಯಂಬಟ್ಟಿಹರಲ್ಲದೆ,
[illegible]ಯಿತ್ತೆನ್ನಬಹುದೆ?–ಆನೆಗೆ ತಂದಂಥ ಹುಲ್ಲು ಸೊಪ್ಪನ್ನು ತಿಂದುಕೊಂಡು

ತೊತ್ತಿನ ಹಾಂಗೆ ಇರುವಂಥ ಅಜಪಶುವು ಆ ದಾರಿಯಲ್ಲಿ ಹೋಯಿತ್ತೆನಬಹುದೆ? ತಾನು ಹಾಂಗೆ ಸೊಕ್ಕಿ ಮದಹತ್ತಿದ ಆನೆ ಹಾಂಗೈತಿ ಎಂಬಂಥ ಸುದ್ದಿಯ ಕೇಳಿ ಆನೆ ಹೋದರೆ ಅಷ್ಟೊಂದು ಭಯಂಬಟ್ಟರು. ನಾ ಹೋದರಿನ್ನೆಷ್ಟೊಂದು ಹೆದರುತ್ತೈದಾರೋ ಎಂದು ಗೂಟನ ಕಿತ್ತಿಕೊಂಡು ಕಣ್ಣಿಯ ಕಡಿದುಕೊಂಡು ಬೀದಿಬಾಜಾರಗುಂಟ ತಲೆತುರಿಸಿಕೊಂಡು ಮಳಿಗೆ ಮನೆಗಳ ಕದಗಳನು ತನ್ನ ಕೊಂಬಿಲಿಂದ ಚಿಮ್ಮಿಕೊಂತ ಹೋಗುತ್ತೈತೆ ಎಂದು ಹೇಳಿದಲ್ಲಿ ಸಕಲಾತ್ಮರುಗಳು ಭಯಂಬಟ್ಟು ನಮ್ಮನ್ನು ಕೊಂದೀತು ನಮ್ಮ ಮಕ್ಕಳ ಮರಿಗಳ ಕೊಂದೀತೆಂದು ಓಡಿಹೋಗಿ ಮಳಿಗೆ ಮನೆ ಕದಗಳ ಮುಚ್ಚಿಕೊಂಡಾರೆ? ಮುಚ್ಚಿಕೊಳ್ಳರು. ಅಥವಾ ಒಂದುವೇಳೆ ಕಟಕರಗೇರಿ ಹೊಕ್ಕದ್ದೇ ಉಂಟಾದರೆ ಆ ಕಟಕರು ಹಿಡಿದುಕೊಂಡು ಗೋಣ ಮುರಿದು ತಿಂದುಬಿಡುತ್ತಿಹರು. ಅಜಪಶು ದಾರಿಯಲ್ಲಿ ಹೋಯಿತ್ತು ಸಕಲಾತ್ಮರುಗಳು ಭಯಂಬಟ್ಟಾರೆಂದು ಹೇಳುವುದಕ್ಕಾದೀತೆ? ಆಗದೆಂಬ ದೃಷ್ಟೋಪಮಾನದ ಹಾಂಗೆ.

● ಆನೆಂಯು ಆ ದಾರಿಂಯುಲ್ಲಿ ಹೋಯಿತ್ತೆಂದಡೆ: ಆನೆಂಯು–ಚಿತ್ತಿನ ಚಿದಹಂಕಾರಚಿದ್ಭೂಷಣಸ್ವರೂಪವಾದ ನಿರ್ವಂಚಕಸದ್ಭಕ್ತನು, ಆ ದಾರಿಯಲ್ಲಿ ಹೋಯಿತ್ತೆಂದಡೆ– ಅವರು ಸಮರಸಭಾವದಿಂದ ಭಕ್ತಿಯ ಮಾಡಿ ಸತ್ಪಥಮಾರ್ಗವಿಡಿದಾಚರಿಸುತ್ತ ಹೋದರೆಂದು ಹೇಳಿದರೆ, ಆಡು ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ?: ಆಡು–ಮೂಲ ಅಹಂಕಾರಸ್ವರೂಪವನುಳ್ಳ ಉಪಾಧಿಕನು, ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ?–ಸಮರಸಭಾವದಿಂದ ಭಕ್ತಿಯ ಮಾಡಿ ಸತ್ಪಥಮಾರ್ಗವಿಡಿದಾಚರಿಸುತ್ತ ಹೋದಾನೆಂದು ಹೇಳುವುದಕ್ಕಾದೀತೆ? ಆಗದು. ಆನು–ಸಂಗನಬಸವೇಶ್ವರನು, ಸರಿಯೆಂದು–ಸಮಾನವೆಂದು, ಗಳಹಲುಬಹುದೆ?–ಬೊಗಳಲುಬಹುದೆ? ಜಂಗಮಕ್ಕೆ–ಚರಲಿಂಗಕ್ಕೆ, ಮಾಡುವ–ಸಮರಸಭಾವದಿಂದ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡುವ, ಭಕ್ತರಿಗೆ–ನಿರ್ವಂಚಕಸದ್ಭಕ್ತರುಗಳಿಗೆ, ಆನು–ನಾನು, ಸರಿಯೆ–ಸಮಾನವೆ, ಹೇಳಾ–ನಿರೂಪಿಸಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - -

1–1 x (ತ).

.........................

[* *] ಸುತರು ಮೊದಲಾದವರ ಜಂಗಮಕ್ಕೆ ಕೊಟ್ಟು ಸಾಯುಜ್ಯವಾದ ಶರಣರಿಗಾನು ಸರಿಯಲ್ಲಾ ಎಂಬುದೀ ವಚನದರ್ಥ.

---

೩೩೧

**ಆ ಕರಿಯಾಕೃತಿಯ ಸೂಕರನ ಹೋಲಿಸಿದಡೆ ಆ ಕರಿಯಾಗ ಬಲ್ಲುದೆ? ಭೂನಾಗನಾಕೃತಿಯ ವ್ಯಾಳೇಶನ ಹೋಲಿಸಿದಡೆ ವ್ಯಾಳೇಶನಾದಾನೆ? ನಾನು ಭಕ್ತನಾದಡೇನಯ್ಯಾ, ನಮ್ಮ ಕೂಡಲಸಂಗಮದೇವರ ಸದ್ಭಕ್ತರ ಹೋಲುವೆನೆ?**

I - - - - - - - - - - - - - - - - - - - - - - - - - - - - - - - - - - - - - - - - - - - - -

ಆ ಕರಿಯಾಕೃತಿಯ ಸೂಕರನ ಹೋಲಿಸಿದಡೆ: ಆ ಕರಿಯ–ಆ ಆನೆಯ, ಆಕೃತಿಯ–ಆಕಾರವನ್ನು, ಸೂಕರನ–ಗ್ರಾಮಸೂಕರನ, ಹೋಲಿಸಿದಡೆ–ಅದೂ ಕರ್ರಗೈತೆ ಇದೂ ಕರ್ರಗೈತೆ, ಅದಕ್ಕೂ ಕೋರೆಗಳೈದಾವೆ ಇದಕ್ಕೂ ಕೋರೆಗಳೈದಾವೆ. ಅದಕ್ಕೂ ಬಾಲ ಚೂಪನಾಗೈತೆ ಇದಕ್ಕೂ ಬಾಲ ಚೂಪನಾಗೈತೆ. ಅದಕ್ಕೂ ಸೊಂಡಿಲವೈತೆ ಇದಕ್ಕೂ ಮೋತಿ ಚೂಪನಾಗೈತೆಯೆಂದು ಹೋಲ್ಪಡಿ ಮಾಡಿ ಹೇಳಿದರೆ, ಆ ಕರಿಯಾಗ ಬಲ್ಲುದೆ?–ಆ ಆನೆಯಾದೀತೆ? ಆಗಲರಿಯದೆಂಬೊ ಹಾಂಗೆ; ಆ ಕರಿಯ–ಚಿತ್ತಿನ ಚಿದಹಂಕಾರಚಿದ್ಭೂಷಣಸ್ವರೂಪವಾದ ನಿರ್ವಂಚಕಸದ್ಭಕ್ತರುಗಳ, ಆಕೃತಿಯ–ಸ್ವಸ್ವರೂಪವನು, ಸೂಕರನ ಹೋಲಿಸಿದಡೆ–ಮೂಲ ಅಹಂಕಾರಸ್ವರೂಪವಾದ ಉಪಾಧಿಕನ ನಿರ್ವಂಚಕಸದ್ಭಕ್ತರಿಗೆ ಹೋಲ್ಪಡಿ ಮಾಡಿದರೆ, ಆ ಕರಿಯಾಗ ಬಲ್ಲುದೆ?–ಆ ನಿರ್ವಂಚಕ ಸದ್ಭಕ್ತನಾದಾನೆ? ಆಗಲರಿಯನು.

ಭೂನಾಗನಾಕೃತಿಯ : [ಭೂನಾಗನ–]ಭೂಮಿಯಲ್ಲಿರುವಂಥ ಹುಲ್ಲು ಸರ್ಪನ, ಆಕೃತಿಯ–ಆಕಾರವನು. ವ್ಯಾಳೇಶನ ಹೋಲಿಸಿದಡೆ–ಮಹಾಶೇಷನಿಗೂ ಹಡೆಗಳೈದಾವೆ ಇದಕ್ಕೂ ಹೆಡೆಯೈತೆ ಅದಕ್ಕೂ ಪದ್ಮಗಳೈದಾವೆ ಇದಕ್ಕೂ ಪದ್ಮವೈತೆ ಅದಕ್ಕೂ ಬಾಲ ಚೂಪನಾಗೈತೆ ಇದಕ್ಕೂ ಚೂಪನಾಗೈತೆ ಎಂದು ಈ ಭೂನಾಗನ ಮಹಾಶೇಷನಿಗೆ ಸಮಾನಮಾಡಿ ಹೇಳಿದರೆ ಆ ಮಹಾಶೇಷನಿಗೆ ಸಮಾನವಾದೀತೆ? ಆಗಲರಿಯದು. ಹಾಂಗೆ; ಭೂನಾಗನಾಕೃತಿಯ–ಮೂಲ ಅಹಂಕಾರಸ್ವರೂಪವನುಳ್ಳ ಆಶಾಲಾಂಛನಿಯ, ವ್ಯಾಳೇಶನ ಹೋಲಿಸಿದಡೆ–ಸತ್ವಗುಣಸ್ವರೂಪವಾದ ಜ್ಞಾನಜಂಗಮಮೂರ್ತಿಗಳಿಗೆ ಸಮಾನಮಾಡಿ ಹೇಳಿದರೆ, ವ್ಯಾಳೇಶನಾದಾನೆ–ಜ್ಞಾನಜಂಗಮಮೂರ್ತಿಯಾದಾನೆ? ಆಗಲರಿಯನು. ನಾನು ಭಕ್ತನಾದಡೇನಯ್ಯಾ: ನಾನು–ಸಂಗನ ಬಸವೇಶ್ವರನು, ಭಕ್ತನಾದಡೇನಯ್ಯಾ–ನಿರ್ವಂಚಕಸದ್ಭಕ್ತನಾದರೇನಯ್ಯಾ. ನಮ್ಮ ಕೂಡಲಸಂಗಮದೇವರ–ನಮ್ಮ ಪರ ಶಿವಲಿಂಗದೇವರ, ಸದ್ಭಕ್ತರ ಹೋಲುವನೆ? : ಸದ್ಭಕ್ತರ–"ಲಿಂಗಭಕ್ತಾಶ್ಚ ಜಂಗಮಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳ ಸಮಾನವಾದಾನೆ? ಆಗಲರಿಯನು.

---

೩೩೨

**ಮೋಟನ ಮೌಳಿ, ಮೂಕೊಇಜಿತಿಯ ಶೃಂಗಾರ, ಬೇಟ ಕುರುಡಂಗೆ ನಗೆಗೇಡಾಯಿತ್ತು. ನಮ್ಮ ಕೂಡಲಸಂಗನಶರಣರ ಮುಂದೆ ಆನು ಭಕ್ತನೆಂಬ ನಾಚಿಕೆ ಸಾಲದೆ?**

I - - - - - - - - - - - - - - - - - - - - - - - - - - - - - - - - - - - - - - - - - - - - -

ಮೋಟನ ಮೌಳಿ–ಲೋಕದಲ್ಲಿ ಕಳವು ಹಾದರವ ಮಾಡಿದಂಥ ಆತ್ಮರುಗಳ ದೊರೆದಾ ಹಿಡಿತರಿಸಿ ಕೈಕಾಲು ಕಡಿಸಿ ಅಡವಿಯಲ್ಲಿ ಬಿಟ್ಟು ಬರುವರು; ಬಿಟ್ಟುಬಂದಲ್ಲಿ ನಾಚಿಕೊಂಡು ಸುಮ್ಮನಿರದೆ ಏನಾದರೊಂದು ವ್ಯಾಪ್ತಿಯ ಮಾಡಿಕೊಂಡು ಅರಿವೆ ಅಂಚಟಿ ಚಿನ್ನ ಚಿಗರನು ಗಳಿಸಿಕೊಂಡು ಗಂಟೆ ಚೌಕುಳಿಯನಿಟ್ಟುಕೊಂಡು ಪದಕವನ್ನು ಹಾಕಿಕೊಂಡು ಅಂಗಿಯನ್ನು

ತೊಟ್ಟುಕೊಂಡು ಮುಂಡಾಸವನ್ನು ಸುತ್ತಿಕೊಂಡು ಕಸ್ತೂರಿ ಮೊದಲಾದ ತಿಲಕವನ್ನು ಇಟ್ಟುಕೊಂಡು ಸಂಜೆ ಮುಂಜಾನೆ ವ್ಯಾಳೆ ಬೀದಿ ಬಾಜಾರದಲ್ಲಿ ತನ್ನ ಮೋಟಗೈ ಮೋಟಗಾಲು ಮುಚ್ಚಿಕೊಂಡು ಮೋಜುಮಾಡುತ್ತ ಕುಳಿತುಕೊಂಡಿದ್ದಲ್ಲಿ ಅರಿಯದಿದ್ದಂಥ ಆತ್ಮರುಗಳೇ ಏನಿವ ನಾಡಿಗನ ಮಗನೊ ದೇಸಾಯಿಗಳ ಮಗನೋ ಎಂದು ಆಶ್ಚರ್ಯಂಬಟ್ಟು ನೋಡುವರು. ಬಲ್ಲಂಥವರೆ ಇವನು ಕೈಕಾಲು ಕಡಿಸಿಕೊಂಡಂಥ ಮೋಟನಲ್ಲವೆ? ತನ್ನ ಮೋಟಗೈ ಮೋಟಗಾಲು ಮುಚ್ಚಿಕೊಂಡು ಮೋಜುಮಾಡುತ್ತ ಕುಳಿತುಕೊಂಡೈದಾನೆ ಎಂದು ನಕ್ಕು ಹಾಸ್ಯವ ಮಾಡುತ್ತಿಹರು. ಹಾಂಗೆ, ನಿರ್ವಂಚಕಸದ್ಭಕ್ತರುಗಳು ಭಕ್ತಿವೇಷವ ಧರಿಸಿಕೊಂಡಿದ್ದರೆ ಪೂಜ್ಯವಾಗಿಪ್ಪುದಲ್ಲದೆ ಉಪಾಧಿಕನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೆ ಆ ಮೋಟನ ಮೌಳಿಯ ಹಾಂಗೆ ನಿರ್ವಂಚಕಸದ್ಭಕ್ತರ ಮುಂದೆ ಹಾಸ್ಯವಾಗಿರ್ಪುದು. ಮೂಕೊಜಿತಿಯ ಶೃಂಗಾರ–ಲೋಕದಲ್ಲಿ ಕಳವು ಹಾದರವ ಮಾಡಿದಂಥತ್ಮಾರುಗಳ ದೊರೆದಾತರು ಹಿಡಿತರಿಸಿ ಮೊಲೆ ಮೂಗ ಕೊಯ್ಸಿಬಿಡುವರು. ಬಿಟ್ಟಲ್ಲಿ ನಾಚಿಕೊಂಡು ಸುಮ್ಮನಿರದೆ ಯಾರಲ್ಲಾದರೂ ಸೇರಿಕೊಂಡು ಬಾಚಿ ಬೈತಲೆಯ ತೆಗೆದುಕೊಂಡು ಹೊಂಬ್ಣಿತ್ತಾಳೆ ಆಭರಣವ ಮಾಡಿಸಿಕೊಂಡು ಸೀರೆ ಮಾಸಿದ್ದರೆ ತಿರುಗು ಹೊರಗಾಗಿ ಉಟ್ಟುಕೊಂಡು ಅಲಂಕರಿಸಿಕೊಂಡು ಸಂಜೆ ಮುಂಜಾನೆ ವ್ಯಾಳೆ ಬೀದಿಬಾಜಾರದಲ್ಲಿ ತಿರುಗಾಡುತ್ತಿದಲ್ಲಿ ಅರಿಯದಾತ್ಮರುಗಳೇ ಅಹಾ! ಎಂಥಾತನ ಮಗಳೋ? ಎಂಥಾತನ ಸೊಸಿಯೊ? ಎಂದು ಆಶ್ಚರ್ಯಂಬಟ್ಟು ನೋಡುವರು. ಬಲ್ಲವರೆ ಇವಳು ಮೊಲೆ ಮೂಗು ಕೊಯ್ಸಿಕೊಂಡಂಥ ಜೋಗಿವೆಣ್ಣಲ್ಲವೆ? ಎಂದು ನಕ್ಕು ಹಾಸ್ಯವ ಮಾಡುತ್ತಿಹರು. ಹಾಂಗೆ, ನಿರ್ವಂಚಕಸದ್ಭಕ್ತರು ಭಕ್ತಿವೇಷವ ಧರಿಸಿಕೊಂಡಿದ್ದರೆ ಪೂಜ್ಯವಾಗಿರುವುದಲ್ಲದೆ ಉಪಾಧಿಕನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೆ ಆ ಜೋಗಿವೆಣ್ಣಿನ ಹಾಂಗೆ ನಿರ್ವಂಚಕಸದ್ಭಕ್ತರ ಮುಂದೆ ಹಾಸ್ಯವಾಗಿರ್ಪುದು.

ಬೇಟ ಕುರುಡಂಗೆ ನಗೆಗೇಡಾಯಿತ್ತು–ಕರಚರಣಾದ್ಯವಯಂಗಳಲ್ಲಿ ಶುದ್ಧನಾಗಿ ಸ್ವರಲಯ ಶುದ್ಧವಿದ್ದಾತ್ಮರುಗಳೇನಾದರೂ ಕಾಮಕಲಾಪವ ಕಲಿತುಕೊಂಡು ಬೀದಿಬಜಾರದಲ್ಲಾಗಲಿ ನೀರು ಹೊಳೆ ದಾರಿಗಳಲ್ಲಾಗಲಿ ಕುಳಿತುಕೊಂಡು ರಾಗವೆತ್ತಿ ಹಾಡಿದಲ್ಲಿ ಕೇಳಿದಾತ್ಮರುಗಳು ಸಂತೋಷಂಬಡುವರು; ಅದಲ್ಲದೆ ಸ್ತ್ರೀಯರು ಒಲಿದು ಬರುವರು. ಮುಖ ಶುದ್ಧವಿಲ್ಲದ ಸ್ವರಲಯವಿಲ್ಲದಿದ್ದಂಥ ಅಂಧಕನೇನಾದರೂ ಕಾಮಕಲಾಪವ ಕಲಿತುಕೊಂಡು ನೀರು ಹೊಳೆಯ ದಾರಿಯಲ್ಲಿ ಕುಳಿತುಕೊಂಡು ಕೈಕಾಲು ಕುಣಿಸುತ್ತ ಕಣ್ಣುಹುಬ್ಬನು ಹಾರಿಸುತ್ತ ಹರಳಿನಿಂದ ಕೊಡಕ್ಕೆ ಮೀಂಟಿದಲ್ಲಿ ಕುರುಡಮುಕ್ಕ ತನಗ್ಯಾರು ಮಚ್ಚಿಬರುವರು. ಇಷ್ಟೇಕೆ ನ^ಲ^ಗು ಮಾಡುತ್ತೈದಾನೆಂದು ನಕ್ಕು ಹಾಸ್ಯವ ಮಾಡುತ್ತಿಹರು. ಹಾಂಗೆ, ನಿರ್ವಂಚಕಸದ್ಭಕ್ತರು ಭಕ್ತಿವೇಷವ ಧರಿಸಿಕೊಂಡಿದ್ದರೆ ಪೂಜ್ಯವಾಗಿರುವುದಲ್ಲದೆ ಉಪಾಧಿಕನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೆ ಆ ಕುರುಡನ ಬೇಟದ ಹಾಂಗೆ ನಿರ್ವಂಚಕಸದ್ಭಕ್ತರ ಮುಂದೆ ಹಾಸ್ಯವಾಗಿರ್ಪುದು. [ನಮ್ಮ] ಕೂಡಲ ಸಂಗನ ಶರಣರ ಮುಂದೆ– ನಮ್ಮ ಏಳೂನೂರೆಪ್ಪತ್ತಮರಗಣಂಗಳ ಸಮ್ಮುಖದಲ್ಲಿ, ಆನು ಭಕ್ತನೆಂಬ–ನಾನು ನಿರ್ವಂಚಕಸದ್ಭಕ್ತನೆಂದು ಹೇಳುವ, ನಾಚಿಕೆ–ಅಭಿಮಾನವು, ಸಾಲದೆ?–ಅಷ್ಟೆ ಸಾಲದೆ? ಅಷ್ಟೇ ಸಾಕು.

.........................

೧-೧ x (ಕ).

---

೩೩೩

**ಮೂಗಿಲ್ಲದ ಮುಖಕ್ಕೆ ಶೃಂಗಾರವೆ? ವಿಕೃತವೇಷಧಾರಿಯಾನು, ಭಂಡನು! ಲಜ್ಜೆಭಂಡನು! ಕೂಡಲಸಂಗನ ಶರಣರಲ್ಲಿ ಹಾವ ತೋಜೆ ಹವಿಯ ಬೇಡುವಂತೆ.**

I - - - - - - - - - - - - - - - - - - - - - - - - - - - - - - - - - - - - - - - - - - -

ಮೂಗಿಲ್ಲದ ಮುಖಕ್ಕೆ ಶೃಂಗಾರವೆ?–ಕಣ್ಣು ಮೂಗಿನಲ್ಲಿ ಶುದ್ಧವಾದಾತ್ಮರುಗಳು ಹಸ್ತಕಡಗ ಹತ್ತೆಕಟ್ಟು ಮುತ್ತಿನ ತುರಾಯಿ ಮೊದಲಾದವನ್ನು ಅಲಂಕರಿಸಿಕೊಂಡಿದ್ದರೆ ನೋಡುವಂಥವರಿಗೆ ಶೃಂಗಾರವಾಗಿಪ್ಪುದು; ಮೂಗಿಲ್ಲದಿದ್ದಂಥ ಮೂಕೊರೆಯನು ಸಕಲಾಭರಣವನ್ನು ಅಲಂಕರಿಸಿಕೊಂಡಿರ್ದಲ್ಲಿ ಎಡಬಲಕ್ಕೆ ನೋಡಿದಂಥವರಿಗೆ ಶೃಂಗಾರವಾಗಿಪ್ಪುದು; ಮೂಗ ನೋಡಿದರೆ ಹಾಸ್ಯವಾಗಿಪ್ಪುದೆಂಬುವ ಹಾಂಗೆ, ಮೂಗೆಂದರೆ ಆಚಾರವು. ಆಚಾರಶುದ್ಧವಾಗಿರ್ದ ನಿರ್ವಂಚಕಸದ್ಭಕ್ತರು ಭಕ್ತಿವೇಷವ ಧರಿಸಿಕೊಂಡಿದ್ದರೆ ಪೂಜ್ಯವಾಗಿಪ್ಪುದಲ್ಲದೆ ಆಚಾರಶುದ್ಧವಿಲ್ಲದಿದ್ದಂಥ ಉಪಾಧಿಕನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೆ ನಿರ್ವಂಚಕ ಸದ್ಭಕ್ತರ ಮುಂದೆ ಹಾಸ್ಯವಾಗಿರ್ಪುದು. ವಿಕೃತವೇಷಧಾರಿಯಾನು–ವಿಕಾರಸಂಬಂಧವಾದ ಭಕ್ತಿವೇಷವ ಧರಿಸಿಕೊಂಡಿರುವಂಥ ಬೂಟಕತ್ವವುಳ್ಳಾತ ನಾನು, ಭಂಡನು!–ಕ್ರಿಯಾಬಾಹ್ಯನು, ಲಜ್ಜೆಭಂಡನು!–ಜ್ಞಾನಬಾಹ್ಯನು.

ಕೂಡಲಸಂಗನ ಶರಣರಲ್ಲಿ–ಏಳುನೂರೆಪ್ಪತ್ತಮರಗಣಂಗಳೊಳಗೆ, ಹಾವತೋಜೆ ಹವಿಯ ಬೇಡುವಂತೆ–ಲೋಕದಲ್ಲಿ ಗಾರುಡಿಗನು ಮನೆ ಮನೆಗೆ ಹಾವನಾಡಿಸಿ ಅದರಿಂದ ಬಂದಂಥ ಹದಿನೆಂಟು ಧಾನ್ಯವ ತಂದು ಹೇಂಗೆ ಘಟರಕ್ಷಣ್ಯವ ಮಾಡಿಕೊಳುತ್ತಿಹನೋ ಹಾಂಗೆ, ಸತ್ತ್ರಾಣವಜ್ಞಾನ ಸ್ವರೂಪವಾದಾತನು ಮಾಡುವ ಲಿಂಗಪೂಜೆಯನ್ನು ನಾಡಿಗ ದೇಸಾಯಿ ಸೆಟ್ಟಿ ಚೌಧರಿ ದೊರೆದಾತರು ಮೊದಲಾದವರಿಗೆ ಅರುಹಿಸಿಕೊಟ್ಟು ಊರುಂಬಳಿ ಸ್ವಾಸ್ತಿವೃತ್ತಿ ಮಠಮಾನ್ಯಂಗಳ ಪಡದನುಭವಿಸಿಕೊಂಡು ಘಟರಕ್ಷಣ್ಯ ಮಾಡಿಕೊಂಬಂಥ ಆಶಾಲಾಂಛನಿಯ ಇರಸ್ಥಿತಿಯೂ ಆ ಗಾರುಡಿಗನ ಇರಸ್ಥಿತಿಯೂ ಒಂದೇ ಆಗಿರ್ಪುದು.

---

೩೩೪

**ಮಾವಿನ ಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯಾ. ಆನು ಭಕ್ತನೆಂತೆಂಬೆ ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ! ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ?**

I - - - - - - - - - - - - - - - - - - - - - - - - - - - - - - - - - - - - - - - - - - -

ಮಾವಿನ ಕಾಯೊಳಗೊಂದು ಎಕ್ಕೆಯಕಾಯಿ ನಾನಯ್ಯಾ-ಲೋಕದಲ್ಲಿ ಆತ್ಮರುಗಳು ಮಾವಿನಗಿಡಕ್ಕೆ ಹೋಗಿ ಒಂದು ಪುಟ್ಟಿ ಕಾಯನ್ನು ಕೊಯ್ದು ತಲೆಮೇಲೆ ಹೊತ್ತುಕೊಂಡು ಬರುವಾಗ ನಡುದಾರಿಯಲ್ಲಿ ಎಕ್ಕೆಯಗಿಡಕ್ಕೆ ಕಾಯಾದಂಥದನು ಕಂಡು ಇದು ಮಾವಿನಫಲದ ಹಾಂಗ್ಯೆತೆಂದು ಒಂದು ಕಾಯನ್ನು ಕೊಯ್ದು ಪುಟ್ಟಿ ಮಾವಿನ ಕಾಯೊಳಗೆ ಬೆರಸಿಕೊಂಡು ಬರುವರು. ಬಂದಲ್ಲಿ ಆ ಮಾವಿನಕಾಯಿ ಹಣ್ಣಾಗಿ ಮೆಲುವುದಕ್ಕೆ ಬರುವವು. ಅದಲ್ಲದೆ ಪಚ್ಚಡಿ ಪದಾರ್ಥಂಗಳಿಗೆ ಉಪ್ಪಿನಕಾಯಿ ಹಾಕುವದಕ್ಕೆ ಬರುವವು. ಈ ಅರ್ಕಫಲವೇನಾದರೂ ಹಣ್ಣಾಗಿ ಮೆಲುವುದಕ್ಕೆ ಬಂದೀತೆ? ಅದಲ್ಲದೆ ಪಚ್ಚಡಿ ಪದಾರ್ಥಂಗಳಿಗೆ ಬಂದೀತೆ? ಬಾರದೆಂಬ ಹಾಂಗೆ; ಪ್ಯಾಟಿಮನೆ ಪುರಪಟ್ಟಣ ಸ್ಥಾನಂಗಳಲ್ಲಿ ಹತ್ತೆಂಟಕ್ಕೆ ನಿರ್ವಂಚಕಸದ್ಭಕ್ತರು ಕುಳಿತುಕೊಂಡು ಶಿವಶಾಸ್ತ್ರ ಶಿವಪುರಾಣ ಶಿವಾಗಮ ಆದ್ಯರ ವಚನ ಮೊದಲಾದವನು ಓದಿಸುತ್ತಿದಲ್ಲಿ ಅದರೊಳಗೊಬ್ಬ ಉಪಾಧಿಕನು ಕುಳಿತುಕೊಂಡಿರುವನು. ಇದ್ದರೇನು? ಆ ಮಾವಿನಕಾಯೊಳಗೊಂದು ಎಕ್ಕೆಯಕಾಯಿ ಇದ್ದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲವು. ಆನು ಭಕ್ತನೆಂತೆಂಬೆ-ನಾನು ನಿರ್ವಂಚಕಸದ್ಭಭಕ್ತನೆಂದು ಹೇಂಗೆ ಹೇಳುವೇನು? ನಿಮ್ಮ ಶರಣರ ಮುಂದೆ-ನಿಮ್ಮೇಳುನೂರೆಪ್ಪತ್ತರಮರಗಣಂಗಳ ಸಮ್ಮುಖದಲ್ಲಿ, ನಾಚಿಕೆಯಿಲ್ಲದೆ-ಅಭಿಮಾನವಿಲ್ಲದೆ, ಕೂಡಲಸಂಗನ ಶರಣರ ಮುಂದೆ-ಏಳನೂರೆಪ್ಪತ್ತಮರಗಣಂಗಳ ಸಮ್ಮುಖದಲ್ಲಿ, ನಾನೆಂತು ಭಕ್ತನಪ್ಪೆನಯ್ಯಾ?-ನಾ ಹೇಂಗೆ ನಿರ್ವಂಚಕ್ತ ಸದ್ಭಕ್ತನಾದೇನಯ್ಯಾ?

III- - - - - - - - - - - - - - - - - - - - - - - - - - - - - - - - - - - - - - - - - -

ಮಹಿಮಾತಿಶಯವನುಳ್ಳ ಶರಣರ ಮಧ್ಯದಲ್ಲಿ ನಿಸ್ಸಾರ ⁽¹ದುಃಸ್ಪರ್ಶನ¹⁾ ಜ್ಞಾನಸಾರ ಹೀನವಾದ ದುರಾತ್ಮ ನಾನು ಎಂಬುದೀಗ ಮಾವಿನಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯ ಎಂಬ ಶಬ್ದಕ್ಕರ್ಥ.

..........................

೧-೧ ದುಃಸ್ಪರುಷನ (ಟ, ಡ).

---

**೩೩೫**

**ಮರದ ನೆರಳಲ್ಲಿರ್ದು ತನ್ನ ನೆರಳನಱಸಬಹುದೆ? ನಿಮ್ಮ ಶರಣರ ಮುಂದೆ ನಾನೇತಱ ಭಕ್ತನಯ್ಯಾ? ನಿಮ್ಮ ಶರಣರ ಮುಂದೆ ನಾನೇತಱ ಯುಕ್ತನಯ್ಯಾ? ಆನು ಭಕ್ತನೆಂಬ ನುಡಿ ಸುಡದಿಹುದೆ ಕೂಡಲಸಂಗಮದೇವಾ?**

II - - - - - - - - - - - - - - - - - - - - - - - - - - - - - - - - - - - - - - - - - -

ಮರದ ನೆರಳಲ್ಲಿರ್ದು ತನ್ನ ನೆರಳನಱಸಬಹುದೆ?-ಕಡೆಯಲ್ಲಿ ನಿಂತುಕೊಂಡು ತನ್ನ ನೆಳಲನ್ನು ಹುಡುಕಿದರೆ ಕಾಣಬಂದಿತ್ತಲ್ಲದೆ ಆಲದಮರ ಅರಳಿಮರ ಗೋಣಿಮರ ಮೊದಲಾದ ವೃಕ್ಷದ ಬುಡದಲ್ಲಿ ನಿಂತುಕೊಂಡು ತನ್ನ ನೆಳಲನ್ನು ಹುಡಿಕಿದರೆ ಕಾಣಬಂದೀತೆ? ಬರಲರಿಯದು. ಎಂಬಲ್ಲಿ ಲೋಕದಲ್ಲಿ ಕೆಲವಾತ್ಮರುಗಳು ಬೇಸಗೆ ದಿವಸ ವಸಂತಕಾಲದಲ್ಲಿ ಪಥಶ್ರಮವಾಗಿ ಬರುವಾಗ ನಡುದಾರಿಯೊಳಗೊಂದು ವೃಕ್ಷವನ್ನು ಕಂಡು ಅದರ ನೆರಳಲ್ಲಿ ನಿಂತುಕೊಂಡು ನಾನು ದಾರಿಯಲ್ಲಿ ನಡೆದುಬರುವಾಗ ನನ್ನ ನೆರಳು ಕಾಣಬರುತ್ತಿದ್ದಿತ್ತು. ಈಗೇಕೆ ಕಾಣೋದಿಲ್ಲವೆಂದು ಮರದ ನೆರಳಲ್ಲಿ

ನಿಂತುಕೊಂಡು ತನ್ನ ನೆರಳ ಹುಡುಕುವಾತ ಬಲು ಹೆಡ್ಡನೆಂಬ ಹಾಂಗೆ; ಮರದ ನೆರಳಲ್ಲಿರ್ದು– ನೂರಾರು ನಿರ್ವಂಚಕಸದ್ಭಕ್ತರ ಭಕ್ತಿಯಲ್ಲಿ ಬೆರದಿರ್ದು, ತನ್ನ ನೆರಳವನಱಸಬಹುದೆ?–ತನ್ನ ಕೀರ್ತಿವಿಶೇಷವನ್ನು ಹುಡುಕುವಾತ ಅವನೊಬ್ಬ ಹೆಡ್ಡನು. ಹಾಂಗೆ, ನಿಮ್ಮ ಶರಣರ ಮುಂದೆ–ನಿಮ್ಮ ಜಂಗಮಮೂರ್ತಿಗಳ ಸಮ್ಮುಖದಲ್ಲಿ, ನಾನೇತಱ ಭಕ್ತನಯ್ಯಾ?–ನಾನಾವ ಕಡೆಯಿಂದ ನಿರ್ವಂಚಕ ಸದ್ಭಕ್ತನಾಗುವೆನಯ್ಯಾ, ನಿಮ್ಮ ಶರಣರ ಮುಂದೆ–ನಿಮ್ಮ ಜಂಗಮಮೂರ್ತಿಗಳ ಸಮ್ಮುಖದಲ್ಲಿ, ನಾನೇತಱ ಭಕ್ತನಯ್ಯಾ?–ನಾನಾವ ಕಡೆಯಿಂದ ನಿರ್ವಂಚಕ ಸದ್ಭಕ್ತನಾಗುವೆನಯ್ಯಾ, ನಿಮ್ಮ ಶರಣರ ಮುಂದೆ–ನಿಮ್ಮ ಜಂಗಮಮೂರ್ತಿಗಳ ಸಮ್ಮುಖದಲ್ಲಿ, ನಾನೇತಱ ಯುಕ್ತನಯ್ಯಾ?–ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿಪ್ಪುದೆಂದರಿವಂಥ ಜ್ಞಾನವುಳ್ಳಾತ ನಾ ಹೇಂಗಾಗುವೆನಯ್ಯಾ, ಆನು ಭಕ್ತನೆಂಬ–ನಾನು ನಿರ್ವಂಚಕಸದ್ಭಕ್ತನೆಂದೆನಿಸುವ, ನುಡಿ–ಪ್ರಸಂಗವು, ಸುಡದಿಹುದೆ–ಅದೇ ಒಂದಗ್ನಿಯಾಗಿ ದಹಿಸದೆ ಬಿಟ್ಟಿತ್ತೆ? ದಹಿಸುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೩೩೬

**ಎನಗಿಂದ ಕಿಱಿಯರಿಲ್ಲ, ಶಿವಭಕ್ತರಿಗಿಂದ ಹಿರಿಯರಿಲ್ಲ, ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ! ಕೂಡಲಸಂಗಮದೇವಾ, ಎನಗಿದೇ ದಿಬ್ಯ.**

I - - - - - - - - - - - - - - - - - - - - - - - - - - - - - - - - - - - - - - -

ಎನಗಿಂದ ಕಿಱಿಯರಿಲ್ಲ–ಎಲ್ಲಾ ಭಕ್ತರೊಳಗೆ ನಾನೇ ಸಾಮಾನ್ಯವಲ್ಲದೆ ಎನ್ನಬಿಟ್ಟು ಸಾಮಾನ್ಯರಿನ್ನೋರ್ವರಿಲ್ಲವು, ಶಿವಭಕ್ತರಿಗಿಂದ ಹಿರಿಯರಿಲ್ಲ–ಜ್ಞಾನೋದಯವಾಗಿ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾಗಿ ಆಚರಿಸಲ್ಪಟ್ಟಂಥ ನಿರ್ವಂಚಕಸದ್ಭಕ್ತರೆ ಎಲ್ಲರೊಳಗೆ ಶ್ರೇಷ್ಠರಲ್ಲದೆ ಅವರ ಬಿಟ್ಟು ಶ್ರೇಷ್ಠರಿನ್ನೊಬ್ಬರಿಲ್ಲವು. ನಿಮ್ಮ ಪಾದಸಾಕ್ಷಿ–ಹುಸಿ ದಿಟವೆಂಬುದಕ್ಕೆ ನಿಮ್ಮ ಪದಕಮಲವೆ ತಾರ್ಕಣ್ಯವು, ಎನ್ನ ಮನ ಸಾಕ್ಷಿ!–ಎನ್ನ ಮನವೆ ತಾರ್ಕಣ್ಯವು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನಗೆ–ನನಗೆ, ಇದೇ ದಿಬ್ಯ–ಹುಸಿದಿಟವೆಂಬುವುದಕ್ಕೆ ಇದೇ ೧[ನಿಮಿತ್ತವು]೧.

.........................

೧–೧ ಮಿಥವು (ಕ, ಗ).

IV- - - - - - - - - - - - - - - - - - - - - - - - - - - - - - - - - - - - - - -

ಭಕ್ತರೆ ಪರಕ್ಕೆ ಪರ, ನಾನೇ ಭೃತ್ಯನು. ಇದು ಸತ್ಯವೆಂಬುದೀ ವಚನದರ್ಥ.

---

೩೩೭

**ಆನು ಭಕ್ತನಲ್ಲಯ್ಯಾ; ಆನು ವೇಷಧಾರಿಯಯ್ಯಾ; ಕಾಟುಗ ಕೇತುಗ ಪೋಲುಗನೆಂಬುದೆನ್ನ ಹೆಸರು! ಕೂಡಲಸಂಗಮದೇವಾ, ನಿಮ್ಮ ಶರಣರ ಮನೆಯ ಮಗ ನಾನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಆನು ಭಕ್ತನಲ್ಲಯ್ಯಾ–ನಾನು ನಿರ್ವಂಚಕ ಸದ್ಭಕ್ತನಲ್ಲವಯ್ಯಾ, ಆನು ವೇಷಧಾರಿಯಯ್ಯಾ–ನಾನು ಹುಸಿರೂಪಮಾದ ಭಕ್ತಿವೇಷವ ಧರಿಸಿಕೊಂಡಿರುವಂಥ ಬೂಟಕ ನಾನಯ್ಯಾ, ಕಾಟುಗ ಕೇತುಗ ಪೊಲುಗನೆಂಬುದೆನ್ನ ಹೆಸರು: ಕಾಟುಗ–ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳು ಏಳುನೂರೆಪ್ಪತ್ತಮರಗಣಂಗಳು ಅರುವತ್ತುಮೂರುಪುರಾತರೊಳಗೆ ವೃಷಾಧಿನಾಯಕರೆ ಶರಣಾಧಿವಲ್ಲಭರೆ ದ್ವಿತೀಯಶಂಭುವೆ ಹಿರಿಯದಂಡನಾಯಕರೆ ಎಂದು ಕರೆವುತ್ತಿದ್ದಲ್ಲಿ ಸ್ವಾಮಿ ನನ್ನ ಹೀಂಗೆ ಕರೆಯಬೇಡಿರಿ. ಅಹಂಕಾರ ಹಿರೇತನ ಆತ್ಮತೇಜಸ್ಸುಗಳು ಹೆಚ್ಚಿ ಭವಕ್ಕೆ ಹೋದೇನು. ಕಾಟುಗ ಕೇತುಗ ಪೋಲುಗನೆಂದೆನ್ನ ಕರೆಯಿರೆಂದಲ್ಲಿ ಇಂತಪ್ಪ ಹೆಸರು ಎಲ್ಲುಂಟೆಂದು ಕೇಳಿದಲ್ಲಿ ವಡ್ಡರು ಕೊರಚರಲ್ಲಿ ಉಂಟಾಗಿರ್ಪುದೆಂದು ಹೇಳಿದಲ್ಲಿ ಆದರೇನಾಯಿತ್ತು, ಸ್ವಾಮಿ ಇದರ ಅಭಿಪ್ರಾಯ ಬೇರೆಯೈತೆಂದು ಹೇಳಿದಲ್ಲಿ ಅದು ಹೇಂಗೆಂದೊಡೆ: ಕಾಟುಗ–ನಿಮ್ಮ ಪಾದೋದಕ ಪ್ರಸಾದವನ್ನು ಕರುಣಿಸಿಕೊಡಿರೆಂದು ಕಾಡುವಂಥದೆ ಕಾಟುಗ, ಕೇತುಗ–ಶಿವಾದ್ವೈತ ಭಕ್ತಿಯಲ್ಲಿ ಧ್ವಜವುಳ್ಳಾತನೆ ಕೇತುಗ, ಪೋಲುಗನೆಂಬುದು–ಸಕಲಸಂಸಾರಪ್ರಪಂಚಿಗೆ ವಿಲಕ್ಷಣವಾದಾತನೇ ಪೋಲುಗಯೆಂಬುವುದು, ಹೀಂಗೆಂದು ಹೇಳುವಂಥದು, ನನ್ನ ಹೆಸರು–ನನ್ನಭಿದಾನವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರ–ನಿಮ್ಮ ಏಳೂನೂರೆಪ್ಪತ್ತುಮರಣಂಗಳ, ಮನೆಯ–ಅವರ ಭಕ್ತಿಮಂದಿರದ, ಮಗ ನಾನಯ್ಯಾ–ಕೃಪಾಪುತ್ರ ನಾನಯ್ಯಾ.

III- - - - - - - - - - - - - - - - - - - - - - - - - - - - - - - - - - - - - - - - - - - - -

ದುಃಸಂಚಲಪ್ರಕೃತಿವರ್ತನೆಯನುಳ್ಳ ದುರಾತ್ಮ ನಾನು ಎಂಬುದೀಗ ಕಾಟುಕನೆಂಬುದ[ಕ್ಕ]ರ್ಥ. ಅಹಂಕಾರಯುಕ್ತವಾದ ಜಡಾತ್ಮ ನಾನು ಎಂಬುದೀಗ ಕೇತುಗನೆಂಬುದ[ಕ್ಕ]ರ್ಥ. ಮುಕ್ತಿ ಫಲರಹಿತವಾದ ದತ್ತಪುತ್ರ ನಾನು ಎಂಬುದೀಗ ಪೋಲುಗನೆಂಬುದ[ಕ್ಕ]ರ್ಥ.

..........................

೧–೧ x (ಟ, ಡ).

---

೩೩೮

**ಡಂಬು ಡಳಹು ಎನ್ನದಯ್ಯಾ; ಡಂಬಕನೆಂಬವ ನಾನಯ್ಯಾ. ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಡಂಬು–ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿರುವಂಥ ಬೂಟಕತ್ವವು. ಡಳಹು–ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕಪ್ರಪಂಚೆವೆಂಬ ಕಾಪಟ್ಯವು. ಎನ್ನದಯ್ಯಾ–ಎನ್ನಲುಂಟಾಗಿರ್ಪುದಯ್ಯಾ. ಡಂಬಕನೆಂಬವ ನಾನಯ್ಯಾ–ಸ್ವಾಮಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು. ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ಬೂಟಕತ್ವ ಉಳ್ಳಾತ ನಾನಯ್ಯಾ.

ನಿಮ್ಮ-ಗುರುಮುಖದಿಂ ಬಂದಂಥ ಇಷ್ಟಮಹಾಲಿಂಗವನ್ನು, ನಂಬಿದ-ಈ ಲಿಂಗವೇ ಪ್ರಾಣ, ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು. ಈ ಲಿಂಗವಲ್ಲದನ್ಯ ದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿಸಿದ, ಶರಣರ-ಏಳುನೂರೆಪ್ಪತ್ತಮರಗಣಂಗಳ, ಡಿಂಗರಿಗ ನಾನು-ಅವರ ಕೈಕೆಳಗೆ ಸೇವಕಾವೃತ್ತಿಯ ಮಾಡಿಕೊಂಡಿರುವಂಥ ಭೃತ್ಯ ನಾನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - -

ನಾನು ಡಂಬಕ; ನಿಮ್ಮ ನಂಬಿದ ಭಕ್ತರ ಬಂಟನೆಂಬುದೀ ವಚನದರ್ಥ.

---

೩೩೯

**ಚೆನ್ನ [1]ಚಾರಮರಾಯರ[1] ಬಂಟ ನಾನಯ್ಯಾ. ಎನ್ನ [2]ಚಾಂಗುಬೊಲ್ಲನ[2] ಕಾವ ಗೋವನೆಂಬರು. ಕೂಡಲಸಂಗನ ಶರಣರು ಒಡೆಯರಾಗಿ ತಮ್ಮ ತೊತ್ತಿನ ಮಗನೆಂದು ಒಲಿದಂತೆ ನುಡಿವರು.**

I - - - - - - - - - - - - - - - - - - - - - - - - - - - - - - - - - - - - - - - - - - -

ಚೆನ್ನ ಚಾರಮರಾಯರ ಬಂಟ ನಾನಯ್ಯಾ: ಚೆನ್ನ-ಮಾದಾರ ಚೆನ್ನಯ್ಯನ, ಚಾರಮರಾಯ-ಕೇರಳಾಧೀಶ್ವರನ, ಬಂಟ ನಾನಯ್ಯ-ಅವರು ಹೇಳಿದಂಥ ಸೇವಾಸತ್ಕಾರಂಗಳ ಮಾಡಿಕೊಂಡಿರುವಂಥ ಭೃತ್ಯ ನಾನಯ್ಯ. ಎನ್ನ ಚಾಂಗುಬೊಲ್ಲನ ಕಾವ ಗೋವನೆಂಬರು-ಹಣೆಚುಕ್ಕಿ ಹೂಬಾಲ ಹಣೆಮೆಟ್ಟಿನ ಕುದರೆಯನ್ನು ಹುಲ್ಲು ನೀರು ಹೊಯ್ದು ಉದ್ದಿ ಬರಸಿ ಜೋಪಾನಮಾಡಿಕೊಂಡಿರುವಂಥ ತುರುವಳನೆಂದು ಗುಲಾಮನೆಂದು ಹೇಳುವರು. ಕೂಡಲಸಂಗನಶರಣರು-ಜಂಗಮಮೂರ್ತಿಗಳು, ಒಡೆಯರಾಗಿ-ಕರ್ತೃಸ್ವರೂಪಿಗಳಾಗಿ, ತಮ್ಮ ತೊತ್ತಿನ ಮಗನೆಂದು-ತಮ್ಮ ಭೃತ್ಯಳ ಕುಮಾರನೆನುತ್ತ, ಒಲಿದಂತೆ-ತಮ್ಮ ಮನಸ್ಸಿಗೆ ಪ್ರೀತಿಯಾದ ಹಾಂಗೆ, ನುಡಿವರು-ಪ್ರಸಂಗಿಸುವರು.

II- - - - - - - - - - - - - - - - - - - - - - - - - - - - - - - - - - - - - - - - - - -

1–1 ಚೇರಮರ (ಚ. ಜ).

.........................

ಚೆನ್ನ ಚೇರಮರ ಬಂಟ ನಾನಯ್ಯಾ-ಚಿದೈಶ್ವರ್ಯ ಚೆಲ್ವಿಕೆಯನುಳ್ಳಂಥ ಪ್ರಾಣಲಿಂಗದ ಸತ್ಕ್ರಿಯಾಮನೋಹರ ಮಾತೃಸ್ಥಾನವಾದಿಷ್ಟಲಿಂಗದ ಭೃತ್ಯನಾನಯ್ಯಾ. ಎನ್ನ ಚಾಂಗುಬೊಲ್ಲನ ಕಾವಗೋವನೆಂಬರು-ಸತ್ತ್ರಾಣವಜ್ಞಾನಸ್ವರೂಪವಾದ ತೃಪ್ತಿಲಿಂಗವನು ಮನೋರ್ಲಯನಿರಂಜನ ಭಕ್ತಿಪೂಜಾಕ್ರೀಗಳಿಂದ ರಕ್ಷಿಸುವ ಲಿಂಗೇಂದ್ರಿಯ ವಿಷಯುವನುಳ್ಳವನೆಂಬರು. ಕೂಡಲಸಂಗನಶರಣರೊಡೆಯರಾಗಿ ತಮ್ಮ ತೊತ್ತಿನ ಮಗನೆಂದು ಒಲಿದಂತೆ ನುಡಿವರು-ಶಿವಶರಣರು ಕರ್ತೃಗಳಾಗಿ ವಿಜ್ಞಾನ ರಕ್ಷಾಕಾರಿಯಾದಂಥ ಕ್ರಿಯಾಶಕ್ತಿಸ್ವರೂಪವಹ ಗುರುಪುತ್ರನೆಂದು ವಚಿಸುವರು.

III- - - - - - - - - - - - - - - - - - - - - - - - - - - - - - - - - - - - - - - - - - -

1–1 ಚಾರಮನ (ಟ, ಡ). 2–2 ಚಾಗುಬೊಲ್ಲವ (ಟ, ಡ).

..........................

ಚೆನ್ನ ಚಾರಮನ–ದೀಕ್ಷಾ[೧]ಗುರು[೧] ಶಿಕ್ಷಾಗುರು ಸ್ವಾಮಿಗಳ, ಬಂಟ ನಾನಯ್ಯಾ–ಭಾತ್ರ ನಾನಯ್ಯಾ, ಎನ್ನ–ಸ[೨]ಕಲ[೨] ಕರ್ಮಾವಶೇಷಿತನಾದ ಅಂತೇವಾಸಿಯನು, ಚಾಗುಬೊಲ್ಲವ ಕಾವಗೋವನೆಂಬರು–ಸತ್ತ್ವಣವ ಘೋಟಕವನು ರಕ್ಷಿಸುವ ಗೋವಳನೆಂದು ಹೇಳುವರು. ಕೂಡಲಸಂಗನಶರಣರು–ಶಿವಶರಣರು, ಒಡೆಯರಾಗಿ–ಎನಗೆ ಕರ್ತೃವಾಗಿ, ತಮ್ಮ ತೊತ್ತಿನ ಮಗನೆಂದು–ತಮ್ಮ ಗೌಡಿಪುತ್ರನೆಂದು, ಮತ್ತಂ ತಮ್ಮ ಕ್ರಿಯಾಶಕ್ತಿಯ ಚಿತ್ಪುತ್ರನೆಂದು ಒಲಿದಂತೆ–ಕ್ರಿಯಾಜ್ಞಾನಂಗಳಲ್ಲಿ ಒಪ್ಪಿಗೆಯಾದ ಹಾಂಗೆ, ನುಡಿವರು–ಪ್ರಸಂಗವ ಮಾಡುವರು.

೧–೧ x (ಡ). ೨–೨ x (ಡ).

..........................

IV- - - - - - - - - - - - - - - - - - - - - - - - - - - - - - - - - - - - - - -

1–1 ಚೇರಮ (ತ).

..........................

ಪುರಾತರೆ ಒಡೆಯರಾಗಿ ನಾನೇ ಅವರ ಮಗನಾಗಿ ಕರದಂತೆ ದುಡಿವೆನೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - -

ಸತ್ತ್ರಣವಘೋಟಕವ ರಕ್ಷಣ್ಯವ ಮಾಡುವ ಪಶುಪತಿಯೆಂಬರು ಎಂಬುದೀಗ ಎನ್ನ ಚಾಂಗುಬೊಲ್ಲನ ಕಾವ ಗೋವನೆಂಬರು ಎಂಬದುರ್ಥ.

---

## ೩೪೦

**ಕಾಲಿಲೊದೆದು ಬಡಿದು ಜಡಿವರಯ್ಯಾ, ಭಕ್ತಿಯೆಯ್ದದೆಂದೆನ್ನ ಜಜೆವರಯ್ಯಾ ನುಡಿವರಯ್ಯಾ ಕೂಡಲಸಂಗನಶರಣರು ಒಡೆಯರಾಗಿ.**

I - - - - - - - - - - - - - - - - - - - - - - - - - - - - - - - - - - - - - - - -

ಕಾಲಿಲೊದೆದು: ಕಾಲಿಲಿ–ಚರಣದಿಂದ, ಒದೆದು– "ಒದೆ ಪಾದಪ್ರಹರಣೇ" ಯೆಂದು ಪಾದಪ್ರಹರಣಂಗೈದು, ಬಡಿದು–ಕೋಲುಗುದಿಗೆಗಳಿಂದ ಸದೆಬಡಿದು, ಜಡಿವರಯ್ಯಾ–ಅದ್ದ[೧]ಲಿ[೧]ಸಿ ನೋಡುವರಯ್ಯಾ, ಭಕ್ತಿಯೆಯ್ದದು–ನೀ ಮಾಡುವಂಥ ಭಕ್ತಿ ನಮಗೆ ಸಾಲದೆನುತ್ತೆ, ಎನ್ನ ಜಜೆವರಯ್ಯಾ–[* *] ಸಿರಿಯಾಳನ ಹಾಂಗೆ ಮಗನ ಕೊಟ್ಟೆಯೋ ಜಾಡರ ದಾಸಿಮಯ್ಯನ ಹಾಂಗೆ ವಸ್ತ್ರವ ಕೊಟ್ಟೆಯೋ ಎಂದು, ಜಜೆವರಯ್ಯಾ–"ಜಜೆ ಧಿಕ್ಕಾರೇ" ಎಂದು ಧಿಕ್ಕರಿಸಿ ಬಿಡುವರಯ್ಯಾ. ಕೂಡಲಸಂಗನಶರಣರು–ಗುರುಲಿಂಗಜಂಗಮಮೂರ್ತಿಗಳು, ಒಡೆಯರಾಗಿ–ಕರ್ತೃಗಳಾಗಿ, ನುಡಿವರಯ್ಯ–ಮನಬಂದ ಪರಿಯಲ್ಲಿ ಪ್ರಸಂಗಿಸುವರಯ್ಯಾ.

..........................

೧-೧ ೩ (ಗ).

IV- - - - - - - - - - - - - - - - - - - - - - - - - - - - - - - - - - - - - - - - - - -

ಹೊಯ್ಯುವರು ಬಯ್ಯುವರು ಅಲ್ಲಾ ಎಂಬರು ಪರಮವಿದ್ಯೆಯ ಕಲಿಸುವರು ಗುರುವಾಗಿಯೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - -

ಸತ್ಕ್ರಿಯಾಚರಣ ತಾಡನಂಗೆಯ್ದು ಎಂಬುದೀಗ ಕಾಲಲೊದೆದು ಎಂಬುದರ್ಥ. ದೇಹದಂಡನೆಯ ಮಾಡುವರಯ್ಯಾ ಎಂಬುದೀಗ ಬಡಿವರಯ್ಯಾ ಎಂಬುದರ್ಥ. ಷಡ್ವಿಧಭಕ್ತಿ ಷಡ್ವಿಧಲಿಂಗಂಗಳಲಿ ಪ್ರಾಪ್ತಿಯಾಗದೆಂದೆನ್ನ ತಿರಸ್ಕರಿಸುವರಯ್ಯಾ ಎಂಬುದೀಗ ಭಕ್ತಿಯೆಯ್ದದೆಂದೆನ್ನ ಜಜೆವರಯ್ಯಾ ಎಂಬುದರ್ಥ.

---

## ೩೪೧

**ನಡೆವರಯ್ಯಾ ಒಡೆಯರು ತನುಮನಧನದ ಮೇಲೆ. ನುಡಿವರಯ್ಯಾ ಒಡೆಯರು ಒಂದು ನಿಮಿಷ ಬಾರದಿದ್ದಡೆ, ಜಜೆವರಯ್ಯಾ ಒಡೆಯರು ಮನಬಂದ ಪರಿಯಲ್ಲಿ. ಶಿವಶಿವಾ! ಅಣೆವರಯ್ಯಾ ಮಂಡೆಯನೂಜೆ ಎನ್ನ ಪ್ರಾಣದೊಡೆಯರಯ್ಯಾ, ಕೂಡಲಸಂಗಮದೇವಾ ನಿಮ್ಮ ಶರಣರು.**

I - - - - - - - - - - - - - - - - - - - - - - - - - - - - - - - - - - - - - - - - - - -

ನಡೆವರಯ್ಯಾ ಒಡೆಯರು ತನುಮನಧನದ ಮೇಲೆ: ಒಡೆಯರು-ಕರ್ತೃಸ್ವರೂಪವಾದ ಜಂಗಮಮೂರ್ತಿಗಳು, ತನುಮನಧನದ ಮೇಲೆ-ತನುಮನಧನಂಗಳನು ಸಮರ್ಪಿಸಿಕೊಂಡ ಮೇಲೆ, ನಡೆವರಯ್ಯಾ-ಆಚರಿಸುವರಯ್ಯಾ, ನುಡಿವರಯ್ಯಾ ಒಂದು ನಿಮಿಷ ಬಾರದಿದ್ದಡೆ-ಒಂದು ನಿಮಿಷಾರ್ಥವಾದರೂ ಬಿಜ್ಜಳಾಂಕನ ಸಭೆಯಿಂದ ಬರುವಂಥದು ತಡವಾದರೆ, ನುಡಿವರಯ್ಯಾ-ಯಾರೂ ಮಾಡಬಾರದ ಕಾರಭಾರ ನೀನೇ ಮಾಡುತಿದ್ದಿಯೋ ಇಷ್ಟೊತ್ತು ಪರಿಯಂತರ ನೀನೇನು ಮಾಡುತಿದ್ದಿ? ಮಧ್ಯಾಹ್ನವಾಯಿತ್ತು, ನಾವು ಹಸಿದೀವಿ ಬಳಲಿದೀವಿಯೆಂದು ವಚಿಸುವರಯ್ಯಾ, ಜಜೆವರಯ್ಯಾ ಒಡೆಯರು-ನೀನೇನು ಸಿರಿಯಾಳನ ಹಾಂಗೆ ಮಗನ ಕೊಡುತಿದ್ದಿಯೋ ದಾಸಿಮಯ್ಯನ ಹಾಂಗೆ ವಸ್ತ್ರವ ಕೊಡುತಿದ್ದಿಯೋ [* *] ಎಂದು ಜಜೆವರಯ್ಯಾ-ಧಿಕ್ಕರಿಸುವರಯ್ಯಾ, ಒಡ್ಡೆಯರು-ಕರ್ತೃಸ್ವರೂಪವಾದ ಜಂಗಮಮೂರ್ತಿಗಳು, ಮನಬಂದ ಪರಿಯಲ್ಲಿ-ತಮ್ಮ ಮನಸ್ಸಿಗೆ ಪ್ರೀತಿಯಾದ ಹಾಂಗೆ. ಶಿವಶಿವಾ-ಲಿಂಗವೇ, ಲಿಂಗವೇ ಅಣೆವರಯ್ಯಾ ಮಂಡೆಯನೂಜೆ: [ಮಂಡೆಯನೂಜೆ-] ಮಸ್ತಕದ ಮೇಲೆ ಹಸ್ತವನ್ನಿಟ್ಟು, ಅಣೆವರಯ್ಯಾ-ಟೊಣ್ಣೆಂದು [ನೊಣೆ]ವರಯ್ಯಾ, ಎನ್ನ ಪ್ರಾಣದೊಡೆಯರಯ್ಯಾ-ಎನ್ನ ಹರಣಕ್ಕೆ ಕರ್ತೃವಾದ ಜಂಗಮಮೂರ್ತಿಗಳಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಶರಣರು-ನಿಮ್ಮ ಜಂಗಮಮೂರ್ತಿಗಳು.

IV- - - - - - - - - - - - - - - - - - - - - - - - - - - - - - - - - - - - - - - - - - -

ಅರ್ಥಪ್ರಾಣಾಭಿಮಾನದ ಮೇಲೆ ನಡೆವರು ನುಡಿವರು, ಮೋಹವೆಂಬ ಮಱವೆಯ ಕೆಡಿಸಿ ಪರದಲ್ಲಿ ಕೂಡಿಹರೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - -

ಒಂದು ಕಣ್ಣೆವೆ ಹಳಚುವಷ್ಟೊತ್ತು ಲಿಂಗದಲ್ಲಿ ಮನಸ್ಸೇಕವಾಗಿಸದಿದ್ದರೆ ಎಂಬುದೀಗ ಒಂದು ನಿಮಿಷ ಬಾರದಿದ್ದಡೆ, ಮನೋಪ್ರಪಂಚ ತಿರಸ್ಕರಿಸುವರಯ್ಯಾ ಎಂಬುದೀಗ ಜಱೆವರಯ್ಯಾ.

---

೩೪೨

**ಅರ್ಥಪ್ರಾಣಾಭಿಮಾನಕ್ಕೊಡೆಯರು ಸದ್ಭಕ್ತರಲ್ಲದೆ ಎನಗಾರೂ ಇಲ್ಲವಯ್ಯಾ. "ಭೃತ್ಯಾಪರಾಧಃ ಸ್ವಾಮಿನೋ ದಂಡಃ" ಕೂಡಲಸಂಗಮದೇವಾ ನೀವೆ ಪ್ರಮಾಣು.**

I - - - - - - - - - - - - - - - - - - - - - - - - - - - - - - - - - - - - - - - - - -

ಅರ್ಥಪ್ರಾಣಾಭಿಮಾನಕ್ಕೊಡೆಯರು ಸದ್ಭಕ್ತರಲ್ಲದೆ ಎನಗಾರೂ ಇಲ್ಲವಯ್ಯಾ : ಅರ್ಥ–ತಾನು ಗಳಿಸಿದಂಥ ದ್ರವ್ಯಕ್ಕೆ, ಪ್ರಾಣ–[೧]ತನ್ನ[೧]ಪ್ರಾಣ ಸಂಬಂಧವಾದ ಪುತ್ರರುಗಳಿಗೆ, ಅಭಿಮಾನಕ್ಕೆ–ತನ್ನ [*ಅಭಿಮಾನಕ್ಕೆ*]. ಒಡೆಯರು–ಕರ್ತೃಸ್ವರೂಪಿಗಳು, ಸದ್ಭಕ್ತರಲ್ಲದೆ–"ಲಿಂಗಭಕ್ತಾಶ್ಚ ಜಂಗಮಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳಲ್ಲದೆ, ಎನಗಾರೂ ಇಲ್ಲವಯ್ಯಾ–ಅತಃಪರ ಮತ್ತೊಬ್ಬರುಂಟಾಗಿಲ್ಲವಯ್ಯಾ. "ಭೃತ್ಯಾಪರಾಧಃ ಸ್ವಾಮಿನೋ ದಂಡಃ"–ಒಬ್ಬಾನೊಬ್ಬ ರಾಜನ ಕೈಕೆಳಗೆ ಸೇವಕವೃತ್ತಿಯ ಮಾಡಿಕೊಂಡಿರುವಂಥ ಭೃತ್ಯನ ತಪ್ಪು ಆವುದಾನೊಂದು ಅಪರಾಧವನು ಮಾಡಿ, ನಾನು ಮಾಡಿದ್ದು ತಪ್ಪಾಯಿತ್ತು ಸ್ವಾಮೀ ಎಂದು ದಂಡದೋಪಾದಿಯಲ್ಲಿ ಉದ್ದಕ್ಕೆ ಅಡ್ಡಬಿದ್ದಲ್ಲಿ ಅವನು ಮಾಡಿದಂಥ ಅಪರಾಧವನ್ನು ಕ್ಷಮೆಮಾಡಿ ಮೊದಲಿನ ಹಾಂಗೆ ಸೇವಾಸತ್ಕಾರಂಗಳನು ಮಾಡಿಸಿಕೊಳ್ಳುತ್ತಿಹರೋ ಹಾಂಗೆ ಒಬ್ಬ ಭಕ್ತನೇನಾದರೂ ಸಕಲಪದಾರ್ಥಂಗಳನು ಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುತ್ತಿದ್ದಲ್ಲಿ ತನುಮನಧನಂಗಳೊಳಗಷ್ಟಿಷ್ಟನ್ನು ವಂಚಿಸಿಕೊಂಡಂಥದು ಎನ್ನಿಂದ ಅಪರಾಧವಾಯಿತ್ತೆಂದು ಉದ್ದಕ್ಕೆ ದಂಡದೋಪಾದಿಯಲ್ಲಿ ಅಡ್ಡಬಿದ್ದಲ್ಲಿ ಅದನ್ನು ತರಹರಿಸಿಕೊಂಡು ಎಂದಿನ ಹಾಂಗೆ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡುತ್ತಿಹರು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವೆ ಪ್ರಮಾಣು–ಹುಸಿದಿಟವೆಂಬುದಕ್ಕೆ ನೀವೇ [೨][ನಿಮಿತ್ತವು].[೨]

..........................

೧–೧ x (ಕ). ೨–೨ ಮಿಥ್ಯವು (ಕ, ಗ).

---

೩೪೩

**ಅರ್ಚಿಸಲಱೆಯೆ ಪೂಜಿಸಲಱೆಯೆ, ನಿಚ್ಚನಿಚ್ಚ ಶಿವರಾತ್ರಿಯ ಮಾಡಲಱೆಯೆ! ಕಪಟವೇಷದಿಂದಾನು ಬಂದಾಡುವೆ, ಕಪಟವೇಷದಿಂದ! ಈಶ, ನಿಮ್ಮ ದಾಸರ ದಾಸಿಯ ದಾಸ ನಾನಯ್ಯಾ, ನಿಮ್ಮ ವೇಷಧಾರಿಯ**

**ಮನೆಯ ಪಂಗುಳ ನಾನಯ್ಯಾ, ಕೂಡಲಸಂಗಮದೇವಾ, ನಿಮ್ಮ ಲಾಂಛನವ ಧರಿಸಿಪ್ಪ ಉದರಪೋಷಕ ನಾನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - -

ಅರ್ಚಿಸಲಱಿಯೆ–ಹನ್ನೆರಡು ತೆರೆದ ಅರ್ಚನೆಯ ಮಾಡಲರಿಯೆನು, ಪೂಜಿಸಲಱಿಯೆ–ಇಪ್ಪತ್ತುನಾಲ್ಕು ತೆರದ ಪೂಜನೆಯ ಮಾಡಲರಿಯೆನು, ನಿಚ್ಚನಿಚ್ಚ–ದಿನದಿನಂಪ್ರತಿಯಲ್ಲಿ, ಶಿವರಾತ್ರಿಯ ಮಾಡಲಱಿಯೆ–ಶಿವರಾತ್ರಿ ಸಂಕಣಯ್ಯಗಳ ಹಾಂಗೆ ಬೇಡರ ಕಣ್ಣಪ್ಪಯ್ಯಗಳ ಹಾಂಗೆ ಏಕಾಗ್ರಚಿತ್ತದಿಂದೆಚ್ಚೆತ್ತು ಲಿಂಗಪೂಜೆಯ ಮಾಡುವಂಥದನ್ನು ತಿಳಿಯಲರಿಯೆನು. ಕಪಟವೇಷದಿಂದ–ಹುಸಿರೂಪವಾದ ಭಕ್ತಿವೇಷವ ಧರಿಸಿಕೊಂಡಿರುವುದರಿಂದ, ಆನು–ಸಂಗನಬಸವೇಶ್ವರನು, ಬಂದು–ಎಯ್ದು ಬಂದು, ಆಡುವೆ–ಕಂದವೃತ್ತ ಗದ್ಯಪದ್ಯ ಪ್ರಬಂಧಗಳಿಂದ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುವೆನು. ಕಪಟವೇಷದಿಂದ–ಕುಟಿಲವೇಷವನ್ನು ಧರಿಸಿಕೊಂಡಿರುವುದರಿಂದ, ಈಶ–ಚಿದೈಶ್ವರ್ಯಕ್ಕೆ ಕರ್ತೃವಾದೆಲೆ ಪರಮೇಶ್ವರನೇ, ನಿಮ್ಮ ದಾಸರ–ನಿಮ್ಮ ಭೃತ್ಯರಾದ ನಿರ್ವಂಚಕಸದ್ಭಕ್ತರುಗಳ, ದಾಸಿಯ–ಅವರ ಕೈಕೆಳಗೆ ಸೇವಕವೃತ್ತಿಯ ಮಾಡಿಕೊಂಡಿರುವಂಥ ಗೌಡಿಯ, ದಾಸ ನಾನಯ್ಯಾ–ಅವಳು ಹೇಳಿದ ಹಾಂಗೆ ಸೇವಾಸತ್ಕಾರಂಗಳ ಮಾಡಿಕೊಂಡಿರುವಂಥ ಗುಲಾಮ ನಾನಯ್ಯಾ. ನಿಮ್ಮ ವೇಷಧಾರಿಯ–ನಿಮ್ಮ ಭಕ್ತಿವೇಷವ ಧರಿಸಿಕೊಂಡಿರುವಂಥ ನಿರ್ವಂಚಕಸದ್ಭಕ್ತರುಗಳ, ಮನೆಯ–ಅವರ ಭಕ್ತಿಮಂದಿರದ, ಪಂಗುಳ ನಾನಯ್ಯಾ–ಕಡೆಬಾಗಿಲವ ಕಾಯ್ದುಕೊಂಡಿರುವಂಥ ಹೆಳವ ನಾನಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಲಾಂಛನವ ಧರಿಸಿಪ್ಪ–ನಿಮ್ಮ ಶಿವಲಾಂಛನವ ತಳೆದುಕೊಂಡಿರುವ, ಉದರಪೋಷಕ ನಾನಯ್ಯಾ–ಆ ವೇಷವ ತೋರಿ ಒಬ್ಬರಿಂದೊಂದೊಸ್ತುವನ್ನು ಪಡೆದುಕೊಂಡು ಘಟರಕ್ಷಣ್ಯವ ಮಾಡಿಕೊಂಬಂಥ ಹೊಟ್ಟೆ ಹೊರಕ ನಾನಯ್ಯಾ.

---

**೩೪೪**

**ಅಪ್ಪನು ಡೋಹರಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದಡೆ ಆನು [1]ಬದುಕುವೆನು.[1] ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವ [2]ನಾನಱಿ[3]ವೆ[4]ನಯ್ಯಾ.[2] ಕಷ್ಟಜಾತಿಯ ಜನ್ಮದಲ್ಲಿ ಹುಟ್ಟಿದೆ. ಎನಗಿದು ವಿಧಿಯೇ ಕೂಡಲಸಂಗಮದೇವಾ.**

......................................

**3–3 ಯೆ (ಕ).**

I - - - - - - - - - - - - - - - - - - - - - - - - - - - - - - - - - - - - - - -

ಅಪ್ಪನು ಡೋಹಾರಕಕ್ಕಯ್ಯನು–ಡೋಹರಕಕ್ಕಯ್ಯನೇ ತಂದೆಯಾಗಿ, ಮುತ್ತಯ್ಯ ಚೆನ್ನಯ್ಯನಾದಡೆ–ಮಾದಾರ ಚೆನ್ನಯ್ಯನೇ ತಂದೆಯಾದರೆ, ಆನು ಬದುಕುವೆನು–ನಾನು ಕೃತಾರ್ಥನಾಗುವೆನು. ಮತ್ತಾ ಶ್ವಪಚಯ್ಯನ–ಶ್ರೀಶೈಲದಲ್ಲಿ ಸಾಮವೇದಿಗಳಿಗೆ ಗುರುವಾದ ಶ್ವಪಚಯ್ಯಗಳ,

ಸನ್ನಿಧಿಯಿಂದ–ಅವರ ಸಮೀಪದಲ್ಲಿದ್ದುಕೊಂಡಿನುವುದರಿಂದ, ಭಕ್ತಿಯ–ಶಿವಾದ್ವೈತಭಕ್ತಿಯ, ಸದ್ಗುಣವ–ಲೇಸಾದ ನಡಾವಳಿಯನ್ನು, ನಾನಜಿವೆನಯ್ಯಾ–ನಾ ತಿಳಿವೆನಯ್ಯಾ. ಕಷ್ಟಜಾತಿಯ ಜನ್ಮದಲ್ಲಿ–ಎಲ್ಲಕ್ಕೂ ಕ್ಷೀಣವಾದ ವಿಪ್ರಜಾತಿಯಲ್ಲಿ, ಜನಿಸಿದೆ–ಉತ್ಪತ್ಯವಾದೆ, ಎನಗಿದು ವಿಧಿಯೇ–ಪ್ರಾಪ್ತಿಯೇ ಎಂಬ ದೃಷ್ಟೋಪಮಾನದ ಹಾಂಗೆ.

● ಅಪ್ಪನು ಡೋಹಾರಕಕ್ಕಯ್ಯನಾಗಿ–ರುದ್ರಮೂರ್ತಿಯೇ ಕ್ರಿಯಾಘನಗುರುವಾಗಿ ಬಂದು ತನುವಿನಲ್ಲಿ ನೆಲೆಗೊಂಡು ಲಿಂಗಾಂಗಸಂಬಂಧತ್ವವನ್ನು ಕರುಣಿಸಿಕೊಡುತ್ತಿಹನು, ಮುತ್ತಯ್ಯ ಚೆನ್ನಯ್ಯನಾದಡೆ–ಮಹೇಶ್ವರಮೂರ್ತಿಯೇ ಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡು ಮಂತ್ರಜ್ಞಾನಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳನು ಕೈಕೊಂಡು ಶೋಭಿಸಿದರೆ, ಆನು ಬದುಕುವೆನು–ನಾನು ಕೃತಾರ್ಥನಾಗುವೆನು. ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ–ಈಶ್ವರಮೂರ್ತಿಯೇ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಂಡು ಶಿವಾನುಭಾವವನ್ನು ಬೋಧಿಸಲು ಅವರ ಶಿವಾನುಭಾವವನ್ನು ಬೆಸಗೊಂಡು [ಕೇಳುವುದರ ದೆಸೆಯಿಂದ, ಭಕ್ತಿಯ–ತ್ರಿವಿಧ ಷಡ್ವಿಧ ನಾಲ್ವತ್ತೆಂಟು ತೆರದ ಭಕ್ತಿಯ, ಸದ್ಗುಣವ–ಒಳ್ಳಿತ್ತಾದ ನಡಾವಳಿಯನ್ನು, ನಾನಜಿ೧ವೆ೧ನಯ್ಯಾ–ನಾ ತಿಳಿವೆನಯ್ಯಾ, ಕಷ್ಟಜಾತಿಯ ಜನ್ಮದಲ್ಲಿ ಎಲ್ಲಕ್ಕೂ ಶ್ರೇಷ್ಠವಾದ ಚಿತ್ತಿನ ಚಿದ್ವಾರದಲ್ಲಿ, ಹುಟ್ಟಿದೆ–ಉತ್ಪತ್ಯವಾದೆ. ಎನಗಿದು–ಎಲ್ಲಕ್ಕೂ ಶ್ರೇಷ್ಠವಾದ ಚಿತ್ತಿನ ಚಿದ್ವಾರದಲ್ಲಿ ಜನಿಸಿದೆನೆಂದು ಹೇಳಿಕೊಂಬಂಥದು, ವಿಧಿಯೇ–ಪ್ರಾಪ್ತಿಯೇ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ಯೆ (ಕ).

II- - - - - - - - - - - - - - - - - - - - - - - - - - - - - - - - - - - - - - - - -

1–1 ಬದುಕನೆ (ಚ, ಜ). 2–2 ನಾನಜಿದೆನಯ್ಯಾ (ಚ, ಜ).

..........................

ಅಪ್ಪನು ಡೋಹಾರ ಕಕ್ಕಯ್ಯನಾಗಿ–ನಿಃಕಲಬ್ರಹ್ಮವೇ ಕ್ರಿಯಾಘನಗುರುವಾಗಿ, ಮುತ್ತಯ್ಯ ಚೆನ್ನಯ್ಯನಾದಡೆ ಆನು ಬದುಕೆನೆ?–ನಿರಂಜನ ಬ್ರಹ್ಮವೇ ಗರುಲಿಂಗಕ್ಕೆ ಕರ್ತೃವಾದಂಥ ಮಹಾಜ್ಞಾನಜಂಗಮವಾಗಿ ಬಂದರೆ, ಗುರುಭಕ್ತಿ ಲಿಂಗಭಕ್ತಿ, ಜಂಗಮಭಕ್ತಿಯನು ಮಾಡಿ ನಾನು ಕೃತಾರ್ಥನಾಗೆನೆ? ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವನು ನಾನಜಿದೆನಯ್ಯಾ–ಮರಳಿ ಶೂನ್ಯಬ್ರಹ್ಮವೇ ಇಷ್ಟಲಿಂಗವಾಗಿ ಬರಲು ಆ ಇಷ್ಟಲಿಂಗದ ಸತ್ಕ್ರಿಯಾ ಸಮೀಪಸ್ತದಿಂದ ಅಷ್ಟವಿಧಾರ್ಚನೆ ಷೋಡಶೋಪಚಾರ ಭಕ್ತಿಕ್ರೀಗಳನು ಆನು ತಿಳಿದೆನಯ್ಯಾ. ಕಷ್ಟಜಾತಿ ಜನ್ಮದಲ್ಲಿ ಹುಟ್ಟಿದೆ ಎನಗಿದು ವಿಧಿಯೇ–ಜಾತಿವರ್ಣಾಶ್ರಮಕುಲಗೋತ್ರ ನಾಮಸೀಮೆಗಳೆಲ್ಲವು ನಷ್ಟವಾದ ಶಿವಜಾತಿವರ್ಣಾಶ್ರಮ ಕುಲಗೋತ್ರನಾಮಸೀಮೆಗಳಲ್ಲಿ ಹುಟ್ಟಿದೆ, ಎನ್ನ ಗುರುಮಠವೇ ಸರಿ.

III- - - - - - - - - - - - - - - - - - - - - - - - - - - - - - - - - - - - - - - -

1–1 ಬದುಕೆನೆ (ಟ, ಡ).

..........................

ಡೋಹಾರ ಕಕ್ಕಯ್ಯಂ–ಡೋಹರ ಕಕ್ಕಯ್ಯನೆಂಬ ಶಿವಶರಣನು. ಅಪ್ಪನು ಆಗಿ–ದೀಕ್ಷಾಗುರುವಾಗಿ, ಚೆನ್ನಯ್ಯಂ–ಮಾದಾರ ಚೆನ್ನಯ್ಯನೆಂಬ ಶಿವಶರಣನು, ಮುತ್ತಯ್ಯನಾದಡೆ–ಜ್ಞಾನಗುರುವಾದಡೆ, ಆನು–ಶರಣನು, ಬದುಕೆನೆ–ಜನ್ಮಜರಾಮರಣಶೋಕಮೋಹಾದಿಗಳಳಿದು ನಿತ್ಯಶಿವಸುಖಿಯಾಗಿ ಬಾಳೆನೆ? ಮತ್ತೆ–ಬಳಿಕ, ಆ ಶ್ವಪಚಯ್ಯನ–ಆ ಶ್ವಪಚಯ್ಯನೆಂಬ ಶಿಕ್ಷಾಗುರುಸ್ವಾಮಿಯ, ಸನ್ನಿಧಿಯಿಂದ–ಸಮೀಪದ ಕ್ರಿಯಾಜ್ಞಾನಗಳೊಡನಾಟದಿಂದ, ಭಕ್ತಿಯ–ಗುರುಲಿಂಗಜಂಗಮದ ತ್ರಿವಿಧಶ್ರದ್ಧೆಯನು, ಸದ್ಗುಣವಂ–ಪ್ರಶಸ್ತವಾದ ಶುಭಗಣಂಗಳನು, ಆನಱಿ೨[ವೆ]೨ನಯ್ಯಾ–ನಾನು ತಿಳಿ೨[ವೆ]ನಯ್ಯಾ. ಕಷ್ಟಜಾತಿ–ಕನಿಷ್ಠಜಾತಿಯ, ಜನ್ಮದಲ್ಲಿ–ಉತ್ಪತ್ಯದಲ್ಲಿ, ಹುಟ್ಟಿದೆ–ಜನಿಸಿದೆನು ಎನಗಿದು ವಿಧಿಯೇ–ಎನಗಿದು ಪ್ರಾಪ್ತಿಯೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೨–೨ ಯ (ಟ, ಡ).

II- - - - - - - - - - - - - - - - - - - - - - - - - - - - - - - - - - - - - - - - - - - - - -

1–1 ಬದುಕೇನು (ತ).

..........................

ಅಜಾತನನೊಲಿಸಿದಾತನೆ ಜಾತಿಯುಳ್ಳವ, ಅಜಾತನನೊಲಸದಾತನೆ ಕೀಳುಜಾತಿ. ಅಜಾತನನೊಲಿಸಿದ ಶರಣರ ಸಂಗದಲ್ಲಿ ಭಕ್ತಿಯ ಕಲಿಯುವೆನೆಂಬುದೀ ವಚನದರ್ಥ.

---

೩೪೫

**ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊಱೆಯ ಹೊಱಿಸದಿರಯ್ಯಾ. ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ. ದಾಸಯ್ಯ ಶಿವದಾನವನೆಱೆಯ ನೋಡಯ್ಯಾ. ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ. ಉನ್ನತ ಮಹಿಮ ಕೂಡಲಸಂಗಮದೇವಾ ಶಿವಧೋ! ಶಿವಧೋ!**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಉತ್ತಮಕುಲದಲ್ಲಿ ಹುಟ್ಟಿದೆನೆಂಬ–ಎಲ್ಲಕ್ಕೂ ಶ್ರೇಷ್ಠವಾದ ೧ಬ್ರಾಹ್ಮಣಕುಲದಲ್ಲಿ೧ ಉತ್ಪತ್ಯವಾದೆನೆಂದು ಹೇಳಿಸಿಕೊಂಬ, ಕಷ್ಟತನದ ಹೊಱೆಯ ಹೊಱಿಸದಿರಯ್ಯ: ಕಷ್ಟತನದ–ಕ್ಷೀಣತ್ವದ, ಹೊಱೆಯ–ಭಾರವನ್ನು, ಹೊಱಿಸದಿರಯ್ಯಾ–ಅಹಂಕಾರದೂಷಣೆಯನ್ನುಂಟುಮಾಡದಿರಯ್ಯಾ. ಕಕ್ಕಯ್ಯ–ಡೋಹಾರ ಕಕ್ಕಯ್ಯ, ಒಕ್ಕುದನಿಕ್ಕ ನೋಡಯ್ಯಾ–ತನ್ನ ಒಕ್ಕುಮಿಕ್ಕಪ್ರಸಾದವ ಕರುಣಿಸಿಕೊಡಲೊಲ್ಲ ಕಾಣಯ್ಯಾ. ದಾಸಯ್ಯ–ಜಾಡರ ದಾಸಿಮಯ್ಯ, ಶಿವದಾನವನೆಱೆಯ ನೋಡಯ್ಯಾ–ಅಂಬಕತಳತಕ್ರ ಮೊದಲಾದವನ್ನು ನೀಡ ಕಂಡಯ್ಯಾ. ಮನ್ನಣೆಯ [ಚೆನ್ನಯ್ಯ]–ಎಲ್ಲರಿಂದ ಮಾನಮನ್ನಣೆಯನ್ನು ಪಡೆದುಕೊಂಡಂಥ ಮಾದಾರ ಚೆನ್ನಯ್ಯನು, ಎನ್ನ ಮನ್ನಿಸ–ನನ್ನ ಮಾನಮನ್ನಣೆಯ ಮಾಡ, ಉನ್ನತ–ಅಧಿಕವಾದ, ಮಹಿಮ–ಮಹತ್ವಾತಿಶಯವನುಳ್ಳಂಥ, ಕೂಡಲಸಂಗಮದೇವಾ–ಎಲೆ

ಪರಶಿವಲಿಂಗವೆ, ಶಿವಧೋ! ಶಿವಧೋ!–ಅರಿಯೋ ಮೊರಿಯೋ ಎಂದು ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿರ್ಪನು ಸಂಗನಬಸವೇಶ್ವರನೆಂಬ ದೃಷ್ಟೋಪಮಾನದ ಹಾಂಗೆ.

● ಉತ್ತಮಕುಲದಲ್ಲಿ–ಎಲ್ಲಕ್ಕೂ ಶ್ರೇಷ್ಠವಾದ ಚಿತ್ತಿನ [1]ಚಿದ್ವಾರ[1]ದಲ್ಲಿ, ಹುಟ್ಟಿದನೆಂಬ–ಉತ್ಪತ್ಯವಾದೆನೆಂಬ ಹೇಳವ, ಕಷ್ಟತನದ–ಶ್ರೇಷ್ಠತನದ, ಹೊಜೆಯ–ಚಿದಹಂಕಾರವೆಂಬ ಭಾರಣೆಯನು, ಹೊಜಿಸದಿರಯ್ಯಾ–ಉಂಟುಮಾಡದಿರಯ್ಯಾ. ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ: ಕಕ್ಕಯ್ಯನೆಂದರೆ ಸದಾಶಿವಮೂರ್ತಿ, ಆ ಸದಾಶಿವಮೂರ್ತಿಯೇ ಗುರುಮೂರ್ತಿಯು; ಒಕ್ಕುದನಿಕ್ಕ ನೋಡಯ್ಯಾ–ಆ ಗುರುಮುಖದಿಂದೊಕ್ಕುದೇ ಇಷ್ಟಲಿಂಗವು, ಆ ಇಷ್ಟಲಿಂಗಸಂಬಂಧವನ್ನು ಕರುಣಿಸಿಕೊಡಲೊಲ್ಲನು ಕಂಡಯ್ಯಾ. ದಾಸಯ್ಯ ಶಿವದಾನವನೆಜೆಯ ನೋಡಯ್ಯಾ–ದಾಸಯ್ಯನೆಂದರೆ ಮಹಾಲಿಂಗವು, ಆ ಮಹಾಲಿಂಗವೇ ಪ್ರಾಣಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡು ಜ್ಞಾನಾನಂದರಸವನ್ನು ಕರುಣಿಸಿಕೊಡಲೊಲ್ಲನು ಕಾಣಯ್ಯಾ. ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ–ಸಕಲತತ್ತ್ವಂಗಳಿಗೆ ಮೊದಲಾದ ತತ್ತ್ವವೇ ಶಿವತತ್ತ್ವವು. ಆ ಶಿವತತ್ತ್ವವೇ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲಗೊಂಡು, ಎನ್ನುವ ಮನ್ನಿಸ–ಎನ್ನನು ಮಾನಮನ್ನಣೆಯಿಂದ ಶಿವಾನುಭಾವವನ್ನು ಬೋಧಿಸಲೊಲ್ಲನು ಕಾಣಯ್ಯ. ಉನ್ನತ–ಅಧಿಕವಾದ, ಮಹಿಮ–ಮಹಾತ್ವಾತಿಶಯವನುಳ್ಳಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಶಿವಧೋ! ಶಿವಧೋ!–ಅರಿಯೋ ಮೊರಿಯೋ ಎಂದು ಅದು ಕಾರಣ ಪರಶಿವಲಿಂಗಕ್ಕುಪಾವಸ್ಥೆಯಂ ಮಾಡುತ್ತಿಹನು ಜ್ಞಾನಕಲಾತ್ಮನು.

.......................................

೧–೧ ಬ್ರಹ್ಮದಲ್ಲಿ ಕೂಡಿ (ಕ). ೨–೨ x (ಗ).

II- - - - - - - - - - - - - - - - - - - - - - - - - - - - - - - - - - - - - - - -

ಉತ್ತಮಕುಲದಲ್ಲಿ ಹುಟ್ಟಿದೆನೆಂಬ–ಪವಿತ್ರವಾದ ಬ್ರಾಹ್ಮಣಜಾತಿಯಲ್ಲಿ ಉದಯವಾದೆನೆಂಬ, ಕಷ್ಟತನದ ಹೊಜೆಯ ಹೊಜಿಸಿದಿರಯ್ಯಾ–ಕೆಟ್ಟಂಥ ಬ್ರಹ್ಮಾಕಾರದ ಧುರೀಣವನು ಭಾರೈಸದಿರಯ್ಯಾ, ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ–ಶಿವತತ್ತ್ವವೇ ಗುರುವಾಗಿ ಬಂದು ಮಹಾಲಿಂಗವನೆ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಡ ನೋಡಯ್ಯಾ, ದಾಸಯ್ಯ ಶಿವದಾನವನೆಜೆಯ ನೋಡಯ್ಯಾ–ಸದಾಶಿವತತ್ತ್ವವೇ ಮಹಾಲಿಂಗವಾಗಿ ಬಂದು ಪ್ರಣವ ಮಂತ್ರಾಚಾರವನು ಅನಾಹತಕರ್ಣಾಂತರಾಳ ಮುಖದ್ವಾರದಲ್ಲಿ ಬೋಧಿಸನು ಕಂಡಯ್ಯಾ. ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ–ಮಹಾಜ್ಞಾನ ಬಹುಮಾನವನುಳ್ಳ ಮಹೇಶ್ವರತತ್ತ್ವವೇ ಜಂಗಮವಾಗಿ ಬಂದು ತ್ರಿವಿಧಲಿಂಗಾನುಭಾವವನು ಬೋಧಿಸಿ ತನ್ನ ಮಹಾಜ್ಞಾನಬಹುಮಾನವ ಮಾಡಿಕೊಡನಯ್ಯಾ. ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - -

ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಶ್ರೇಷ್ಠವಾದ ಬ್ರಾಹ್ಮಣ ಕುಲದಲ್ಲಿ ಜನಿಸಿದೆನೆಂದು ಹೇಳುವ, ಕಷ್ಟತನದ–ನಿಕೃಷ್ಟತನದ, ಹೊಜೆಯ–ಭಾರವನು, ಹೊಜಿಸದಿರಯ್ಯಾ–ಹೇರದಿರಯ್ಯಾ. ಕಕ್ಕಯ್ಯಂ–ಕಕ್ಕಯ್ಯನೆಂಬ ದೀಕ್ಷಾಗುರುಸ್ವಾಮಿಯು, ಒಕ್ಕುದ–ಅಂತರಂಗದಿಂದೆ ಬಹಿರ್ಗತವಾದ ಪ್ರಾಣಲಿಂಗವನು,

ಇಕ್ಕ ನೋಡಯ್ಯಾ–ಎನ್ನ ಬಹಿರಂಗದಲ್ಲಿಷ್ಟಲಿಂಗವಾಗಿ ವೇಧಾಮಂತ್ರಕ್ರಿಯೋಪದೇಶದಿಂದದೆ ಸಂಬಂಧವ ಮಾಡ ಕಂಡಯ್ಯಾ. ದಾಸಯ್ಯ–ದಾಸಯ್ಯನೆಂಬ ದೀಕ್ಷಾಗುರುದೇವನು, ಶಿವದಾನವನೆಱೆಯ ನೋಡಯ್ಯಾ–ಪರಮಾಮೃತಸ್ವರೂಪಾದ ಪ್ರಸಾದಭಕ್ತಿಯನು ಕರುಣಿಸ ಕಂಡಯ್ಯಾ. ಮನ್ನಣೆಯ–ಬಹುಮಾನವನುಳ್ಳಂಥ, ಚೆನ್ನಯ್ಯಂ–ಚೆನ್ನಯ್ಯನೆಂಬ ಜ್ಞಾನಗುರುಸ್ವಾಮಿಯು, ಎನ್ನುವ–ಶರಣನನ್ನು, ಮನ್ನಿಸ–ಜ್ಞಾನೋಪದೇಶವ ಮಾಡಿ ತನ್ನೊಳಗೇಕಾರ್ಥವ ಮಾಡಿಕೊಳ್ಳಲೊಲ್ಲನು, ಉನ್ನತ–ಊರ್ಜಿತವಾದ, ಮಹಿಮ–ಮಹತ್ವನುಳ್ಳಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಶಿವಧೋ!–ಶಿವಧೋ!–ಅರಿಯೋ ಮೊರಿಯೋ.

---

೩೪೬

**ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹಾರನೆಂಬನೆ ಕಕ್ಕಯ್ಯನ? ಮಾದಾರನೆಂಬೆನೆ ಚೆನ್ನಯ್ಯನ? ಆನು ಹಾರುವನೆಂದಡೆ ಕೂಡಲಸಂಗಮದೇವ ನಗುವನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಸಿರಿಯಾಳನ–ಕಂಚಿಪಟ್ಟಣದಲ್ಲಿರುವಂಥ ಸಿರಿಯಾಳಸೆಟ್ಟಿಯ, ಸೆಟ್ಟಯೆಂಬೆನೆ–ಎಲ್ಲ ವಣಿಜರೊಳಗೆ ಇವನೊಬ್ಬ ವಣಿಜನೆಂದು ಹೇಳುವೆನೆ? ಹೇಳೆನು. ಮಾಚಯ್ಯನ–ಮಡಿವಾಳ ಮಾಚಯ್ಯನ, ಮಡಿವಾಳನೆಂಬೆನೆ–ಎಲ್ಲ ರಜಕರೊಳಗೆ ಇವನೊಬ್ಬ ರಜಕನೆಂದು ಹೇಳುವೆನೆ? ಹೇಳೆನು. ಕಕ್ಕಯ್ಯನ–ಡೋಹಾರ ಕಕ್ಕಯ್ಯನ, ಡೋಹಾರನೆಂಬೆನೆ–ಎಲ್ಲ ಡೋಹಾರರೊಳಗಿವನೊಬ್ಬ ಡೋಹಾರನೆಂದು ಹೇಳುವೆನೆ? ಹೇಳೆನು. ಚೆನ್ನಯ್ಯನ–ಮಾದಾರ ಚೆನ್ನಯ್ಯನ, ಮಾದಾರನೆಂಬೆನೆ–ಎಲ್ಲ ಮಾದಿಗರೊಳಗೆ ಇವನೊಬ್ಬ ಮಾದಿಗನೆಂದು ಹೇಳುವೆನೆ? ಹೇಳೆನು. ಆನು ಹಾರುವನೆಂದಡೆ–ನಾನು ಬ್ರಾಹ್ಮಣಕುಲದಲ್ಲಿ ಹುಟ್ಟಿದೆನೆಂದು ಹೇಳಿದರೆ, ಕೂಡಲಸಂಗಮದೇವ–ಪರಶಿವಲಿಂಗವು, ನಗುವನಯ್ಯಾ–ಗಹಗಹಿಸುವನೆಂಬ ದೃಷ್ಟೋಪಮಾನದ ಹಾಂಗೆ,

● ಸೆಟ್ಟಿಯೆಂಬೆನೆ ಸಿರಿಯಾಳನ–ನಿಃಕಲಬ್ರಹ್ಮವೇ ಕ್ರಿಯಾಘನಗುರುವಾಗಿ ಬಂದು ತನುವಿನಲ್ಲಿ ನೆಲೆಗೊಳ್ಳಲು ಎಲ್ಲ ತಾಮಸಗುರುಗಳೊಳಗೆ ಈತನೊಬ್ಬ ತಾಮಸಗುರುವೆಂದು ಹೇಳುವೆನೆ? ಹೇಳೆನು. ಮಡಿವಾಳನೆಂಬೆನೆ ಮಾಚಯ್ಯನ–ಶೂನ್ಯಬ್ರಹ್ಮವೇ ಇಷ್ಟಲಿಂಗವಾಗಿ ಬಂದು ಮನದಲ್ಲಿ ನೆಲೆಗೊಳ್ಳಲು ಎಲ್ಲ ಶಿಲಾಲಿಂಗಗಳೊಳಗೆ ಇದೂ ಒಂದು ಶಿಲಾಲಿಂಗವೆಂದು ಆ ಲಿಂಗದಲ್ಲಿ ಶಿಲಾಭಾವವನ್ನುಂಟುಮಾಡಿ ಹೇಳುವೆನೆ? ಹೇಳೆನು. ಡೋಹಾರನೆಂಬೆನೆ ಕಕ್ಕಯ್ಯನ–ನಿರಂಜನಬ್ರಹ್ಮವೇ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಳ್ಳಲು ಎಲ್ಲ ಆಶಾಲಾಂಛನಿಗಳೊಳಗೆ ಈತನೊಬ್ಬ ಆಶಾಲಾಂಛನಿಯೆಂದು ಆ ಜಂಗಮದಲ್ಲಿ ಜಾತಿವಿಜಾತಿಯನ್ನುಂಟುಮಾಡಿ ಹೇಳುವೆನೆ? ಹೇಳೆನು. ಮಾದಾರನೆಂಬನೆ ಚೆನ್ನಯ್ಯನ–ಚಿತ್ಕಲಾಪ್ರಸಾದವೇ ಕ್ರಿಯಾಪ್ರಸಾದವಾಗಿ ಬಂದು ಆತ್ಮಾಂಗದಲ್ಲಿ ನೆಲೆಗೊಳ್ಳಲು ಎಲ್ಲ ಉಚ್ಛಿಷ್ಟದೊಳಗೆ ಇದೂ ಒಂದು ಉಚ್ಛಿಷ್ಟವೆಂದು ಆ ಪ್ರಸಾದದಲ್ಲಿ ಉಚ್ಛಿಷ್ಟಭಾವವನ್ನುಂಟುಮಾಡಿ ಹೇಳುವೆನೆ? ಹೇಳೆನು. ಆನು ಹಾರುವನೆಂದಡೆ–ನಾನು ಚತುರ್ವಿಧ ಅಂಗದಲ್ಲಿ ಚತುರ್ವಿಧಲಿಂಗ ಸಂಬಂಧವ ಮಾಡಿಕೊಂಡು ಚತುರ್ವಿಧಭಕ್ತಿವಿಡಿದಾಚರಿಸಲ್ಪಟ್ಟಾತನೆಂದು

ಹೇಳಿದರೆ, ಕೂಡಲಸಂಗಮದೇವ-ಪರಶಿವಲಿಂಗವು, ನಗುವನಯ್ಯಾ-ಗಹಗಹಿಸಿ ಹಾಸ್ಯೋಪಮಾನವ ಮಾಡುವನಯ್ಯಾ.

II- - - - - - - - - - - - - - - - - - - - - - - - - - - - - - - - - - - - - - - - -

ಸೆಟ್ಟಿಯೆಂಬೆನೆ ಸಿರಿಯಾಳನ?-ರುದ್ರತತ್ತ್ವವೇ ಕ್ರಿಯಾಘನಗುರುಶ್ರೇಷ್ಠನಾಗಿ ಬಂದಲ್ಲಿ ಅಜ್ಞಾನಗುರುಗಳೊಳಗೆ ಈತನೊಬ್ಬ ಅಜ್ಞಾನಗುರುವೆನಬಹುದೆ?, ಮಡಿವಾಳನೆಂಬೆನೆ ಮಾಚಯ್ಯನ?-ಶಿವತತ್ತ್ವವೇ ಇಷ್ಟಲಿಂಗವಾಗಿ ಬಂದಲ್ಲಿ ಎಲ್ಲ ಜಡಸಾಕಾಲಿಂಗಂಗಳೊಳಗೆ ಇದೂ ಒಂದು ಜಡಸಾಕಾರ ಲಿಂಗವೆನಬಹುದೆ?. ಡೋಹಾರನೆಂಬೆನೆ ಕಕ್ಕಯ್ಯನ-ಮಾಹೇಶ್ವರತತ್ತ್ವವೇ ಜಂಗಮವಾಗಿ ಬಂದಲ್ಲಿ ಎಲ್ಲ ಆಶಾಲಾಂಛನದೊಳಗೆ ಈತನೊಬ್ಬ ಆಶಾಲಾಂಛನಜಂಗಮವೆನಬಹುದೆ?. ಮಾದಾರನೆಂಬೆನೆ ಚೆನ್ನಯ್ಯನ?-ನಿರಂಜನಬ್ರಹ್ಮವೆ ಮಹಾಜ್ಞಾನಜಂಗಮವಾಗಿ ಬಂದು ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವೆಂಬ ತ್ರಿವಿಧಲಿಂಗಾನುಭಾವವನು ಭೇದಿಸಿತ್ತು, ಅಂತಾತನ ಸೂತಕದೇಹಿಯೆನಬುದೆ?. ಆನು ಹಾರುವನೆಂದಡೆ ಕೂಡಲಸಂಗಮದೇವ ನಗುವನಯ್ಯಾ-ನಾನು ಗುರುಲಿಂಗಜಂಗಮದ ಶುದ್ಧಸಿದ್ಧಪ್ರಸಿದ್ಧ ಪ್ರಸಾದವನಿಚ್ಛೈಸುವೆನೆಂದರೆ ತ್ರಿವಿಧಲಿಂಗವನೊಳಕೊಂಡು ತೋಱುವ ಮಹಾಲಿಂಗವು ಪರಿಣಾಮಿಸುವುದಯ್ಯಾ.

V- - - - - - - - - - - - - - - - - - - - - - - - - - - - - - - - - - - - - - - - -

ಸೆಟ್ಟಿಯೆಂಬೆನೆ ಸಿರಿಯಾಳನಯೆಂದರೆ ಜ್ಞಾನೈಶ್ವರ್ಯಾಧಿಪತಿಯಾದ ಶರಣನ, ಒಂದ ಕೊಟ್ಟು ಎಱಡ ಪಡೆವ ವ್ಯಾಪಾರಿಕನೆಂದು ಹೇಳಲಮ್ಮೆನು. ಮಲತ್ರಯಂಗಳ ನಷ್ಟವ ಮಾಡುವ ಶಿಕ್ಷಾಗುರುವನು ರಜಕನೆಂದು ಹೇಳಲಮ್ಮೆನು ಎಂಬುದೀಗ ಮಡಿವಾಳನೆಂಬೆನೆ ಮಾಚಯ್ಯನ. ಪ್ರಕೃತಿ ಚರ್ಮವ ಖಂಡಿಸುವ ದೀಕ್ಷಾಗುರುವನು ಡೋಹಾರನೆಂಬೆನೆ ಕಕ್ಕಯ್ಯನ. ಜ್ಞಾನೈಶ್ವರ್ಯದಲ್ಲಿ ಪ್ರೀತಿಯನುಳ್ಳ ಸರ್ವಾಚಾರ ಸಂಪತ್ತನಾರೋಹಿಸುವ ಜ್ಞಾನಗುರುವನು ಮಾದಾರನೆಂಬೆನೆ? ಎನಲಮ್ಮೆನು. ಕ್ರಿಯಾಜ್ಞಾನಭಾವಾಚಾರವ ನಿಶ್ಚೈಸುವನೆಂಬುದೀಗ ಆನು ಹಾರುವನೆಂದಡೆ.

---

೩೪೭

**ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು ಇವರಿಬ್ಬರು ಹೊಲದಲ್ಲಿ ⁽ಬೆರಣೆಯನಾಯಹೋಗಿ⁾ ಸಂಯೋಗವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನಯ್ಯಾ ಕೂಡಲಸಂಗಮದೇವಾ, ನೀ ಸಾಕ್ಷಿಯಾಗಿ.**

I - - - - - - - - - - - - - - - - - - - - - - - - - - - - - - - - - - - - - - - - -

ಚೆನ್ನಯ್ಯನ ಮನೆಯ-ಮಾದಾರ ಚೆನ್ನಯ್ಯನ ಭಕ್ತಿಮಂದಿರದ, ದಾಸನ ಮಗನು-ಅವರ ಮನೆಯಲ್ಲಿ ಹೇಳಿದಂಥ ಸೇವಾಸತ್ಕಾರಂಗಳ ಮಾಡಿಕೊಂಡಿರುವಂಥ ಗುಲಾಮನ ಕುಮಾರನು, ಕಕ್ಕಯ್ಯನ ಮನೆಯ-ಡೋಹಾರ ಕಕ್ಕಯ್ಯನ ಮಂದಿರದ, ದಾಸಿಯ ಮಗಳು-ಅವರ ಕೈಕೆಳಗೆ ಸೇವಕವೃತ್ತಿಯ ಮಾಡಿಕೊಂಡಿರುವ ಗೌಡಿಯ ಕುಮಾರತಿಯು, ಇವರಿಬ್ಬರು-ಚೆನ್ನಯ್ಯನ ಮನೆಯ ದಾಸನ ಮಗ ಕಕ್ಕಯ್ಯನ ಮನೆಯ ದಾಸಿಯ ಮಗಳೆಂಬಿರ್ವರು, ಹೊಲದಲ್ಲಿ-ತ⁽[ಕ್ಕಿ]⁾ಲದಲ್ಲಿ,

ಬೆಣೆಯನಾಯಹೋಗಿ–ಕಾಡಕುರುಳನಾಯ್ವುದಕ್ಕೈದುಹೋಗಿ, ಸಂಗವ ಮಾಡಿದರು–ಸಂ¹ಪರ್ಕ¹ವನನುಗೈದರು. ಇವರಿಬ್ಬರಿಗೆ–ದಾಸನ ಮಗ ದಾಸಿಯ ಮಗಳೆಂಬಿರ್ವರಿಗೆ, ಹುಟ್ಟಿದ–ಉತ್ಪತ್ಯವಾದ, ಮಗ ನಾನಯ್ಯಾ–ಕುಮಾರ ನಾನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀ ಸಾಕ್ಷಿಯಾಗಿ–ನೀ ತಾರ್ಕಣ್ಯವಾಗಿಯೆಂಬ ದೃಷ್ಟೋಪಮಾನದ ಹಾಂಗೆ,

● ಚೆನ್ನಯ್ಯನ ಮನೆಯ : ಚೆನ್ನಯ್ಯನೆಂದರೆ–ನಿಃಕಲಬ್ರಹ್ಮವು, ಮನೆಯೆಂದರೆ–ಚಿತ್ತು. ದಾಸನ ಮಗನು : ದಾಸನೆಂದರೆ–ಮಹಾಲಿಂಗವು, ಮಗನೆಂದರೆ–ಆ ಮಹಾಲಿಂಗದಂಶವಾದಾತ್ಮನು. ಕಕ್ಕಯ್ಯನ ಮನೆಯ : ಕಕ್ಕಯ್ಯನೆಂದರೆ–ಸದಾಶಿವಮೂರ್ತಿಯು, ಮನೆಯೆಂದರೆ–ಪರಾಶಕ್ತಿ, ದಾಸಿಯೆಂದರೆ–ಮಾಯಾಶಕ್ತಿ, ಮಗಳೆಂದರೆ–ಆ ಮಾಯಾಶಕ್ತಿ ಅಂಶವಾದ ದೇಹವು, ಇವರಿಬ್ಬರು–ಈ ದೇಹಾತ್ಮರುಗಳೆಂಬಿರ್ವರು, ಹೊಲದಲ್ಲಿ–ಬ್ರಹ್ಮಾಂಡವೆಂಬ ಕ್ಷೇತ್ರದಲ್ಲಿ, ಬೆರಣೆಯನಾಯಹೋಗಿ–ನಿಸ್ಸಾರಸ್ವರೂಪವಾದ ದೇಹವ ಧರಿಸಿಕೊಂಡು ಭವದಲ್ಲಿ ಹುಟ್ಟಿಬಂದು, ಸಂಗವ ಮಾಡಿದರು–ದೇಹಸ್ವರೂಪವಾದ ಶಿಷ್ಯನು ಆತ್ಮಸ್ವರೂಪವಾದ ಗುರುವಿಂಗೆ ಉಪಾವಸ್ಥೆಯ ಮಾಡಲು, ಆತ್ಮಸ್ವರೂಪವಾದ ಗುರುವು ದೇಹಸ್ವರೂಪವಾದ ಶಿಷ್ಯನಿಗೆ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕರುಣಿಸಿಕೊಡಲು, ಇವರಿಬ್ಬರಿಗೆ–ಈ ಗುರುಶಿಷ್ಯರೆಂಬಿರ್ವರಿಗೆ, ಹುಟ್ಟಿದ–ಉತ್ಪತ್ಯವಾದ, ಮಗ ನಾನು–ಇಷ್ಟಲಿಂಗವೆಂಬ ಕುಮಾರಕ ನಾನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀ ಸಾಕ್ಷಿಯಾಗಿ–ನೀ ತಾರ್ಕಣ್ಯವಾಗಿ.

..........................

೧–೧ ಕ್ಕ (ಕ,ಗ). ೨–೨ ಸರ್ಗ (ಗ).

II- - - - - - - - - - - - - - - - - - - - - - - - - - - - - - - - - - - - - - - - - - -

1-1 ಬೆರಣೆಗೆ ಹೋಗಿ (ಚ, ಜ).

..........................

ಚೆನ್ನಯ್ಯನ ಮನೆಯ ದಾಸನ ಮಗನು–ಶಿವತತ್ತ್ವದ ಪರಾಶಕ್ತಿಯ ಮಂದಿರದ ಸದಾಶಿವತತ್ತ್ವದ ಪುತ್ರನಾದ ಆತ್ಮನು, ಕಕ್ಕಯ್ಯನ ಮನೆಯ ದಾಸಿಯ ಮಗಳು–ಮಹೇಶ್ವರತತ್ತ್ವದ ಇಚ್ಛಾಶಕ್ತಿಯ ಮಂದಿರದ ಜ್ಞಾನಶಕ್ತಿಯ ಪುತ್ರಿಯಾದ ಕ್ರಿಯಾಶಕ್ತಿಸ್ವರೂಪಾದಂಗವು, ಇವರಿಬ್ಬರು–ಈ ಶಿವಶಕ್ತಿಗಳಿರ್ವರು, ಹೊಲದಲ್ಲಿ ಬೆರಣಿಗೆ ಹೋಗಿ–ಬ್ರಹ್ಮಾಂಡವೆಂಬ ಕ್ಷೇತ್ರದಲ್ಲಿ ದೇಹಸಂಬಂಧಿಗಳಾಗೈದಿ. ಸಂಗವ ಮಾಡಿದರು–ಶಿವಶಕ್ತಿಗಳಿರ್ವರು ಸಂಪರ್ಕವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನಯ್ಯಾ–ಈ ಶಿವಶಕ್ತಿಗಳಿರ್ವರಿಗೆ ಉದಯವಾದ ಆತ್ಮನೆಂಬ ಪುತ್ರ ನಾನಯ್ಯಾ. ಮತ್ತಂ ನಿರಂಜನಬ್ರಹ್ಮದ ಪರಿಪೂರ್ಣಜ್ಞಾನಚಿನ್ಮಂದಿರದ ಶೂನ್ಯಬ್ರಹ್ಮದ ಪುತ್ರನಾದ ನಿಃಕಲಬ್ರಹ್ಮವೆಂಬ ಕ್ರಿಯಾಘನಗುರುವು ಮಾಹೇಶ್ವರತತ್ತ್ವದ ಇಚ್ಛಾಶಕ್ತಿಯ ಚಿನ್ಮಂದಿರದ ಜ್ಞಾನಶಕ್ತಿಯ ಪುತ್ರಿಯಾದ ಕ್ರಿಯಾಶಕ್ತಿಯ ಸ್ವರೂಪವಹ ಜ್ಞಾನಕಲಾತ್ಮನು ಈ ಗುರುಶಿಷ್ಯರಿರ್ವರು ಭಕ್ತಿಯೆಂಬ ಕ್ಷೇತ್ರಕ್ಕೈಯ್ದಿ ಹಸ್ತಮಸ್ತಕಸಂಯೋಗವಸಂಪರ್ಕವ ಮಾಡಿದರು. ಈ ಗುರುಶಿಷ್ಯರಿಗೆ ಉದಯವಾದ ಇಷ್ಟಲಿಂಗಕ್ಕಂಗವಾದಾತ ನಾನು, ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - - - -

1–1 ಬೆರಣಿಗೆ ಹೋಗಿ (ಟ, ಡ).

..........................

ಚೆನ್ನಯ್ಯನ–ಮಹಾಲಿಂಗದೇವನ, ಮನೆಯ–ಆಜ್ಞಾಚಕ್ರದ, ದಾಸನ–ಸದಾಶಿವನ. ಮಗನು–ಈಶ್ವರನು, ಕಕ್ಕಯ್ಯನ–ಶಿವಲಿಂಗದ, ಮನೆಯ–ಮಣಿಪೂರಕಚಕ್ರದ, ದಾಸಿಯ–ಇಚ್ಛಾಶಕ್ತಿಯ, ಮಗಳು–ಜ್ಞಾನಶಕ್ತಿಯು, ಇವರಿಬ್ಬರು–ಈಶ್ವರ ಜ್ಞಾನಶಕ್ತಿಯರಿರ್ವರು, ಹೊಲದಲ್ಲಿ–ಸರ್ವಾಚಾರ ಸಂಪತ್ತಿನಾಚರಣೆಯೆಂಬ ಕ್ಷೇತ್ರದಲ್ಲಿ, ಬೆರಣಿಗೆ ಹೋಗಿ–ಮುಕ್ತಿಯನು ಸಂಪಾದಿಸುವುದಕ್ಕೆ ಆಚರಿಸಿ, ಸಂಗವ ಮಾಡಿದರು–ಸಮರಸಯೋಗವನೆಸಗಿದರು. ಇವರಿಬ್ಬರಿಗೆ–ಈಶ್ವರಜ್ಞಾನಶಕ್ತಿಯವರಿರ್ವರಿಗೆ, ಹುಟ್ಟಿದ ಮಗ ನಾನು–ಜನಿಸಿದಂಥ ಲಿಂಗಪುತ್ರನು ನಾನು, ಕೂಡಲಸಂಗಮದೇವ ಸಾಕ್ಷಿಯಾಗಿ–ಪರಶಿವಲಿಂಗವು ತಾರ್ಕಣೆಯಾಗಿ.

V- - - - - - - - - - - - - - - - - - - - - - - - - - - - - - - - - - - - - - - - - - - - - - -

ಚಿದಾನಂದ ಸ್ವರೂಪವಾದ ಮಹಾಲಿಂಗದ ಆಜ್ಞಾಚಕ್ರದ ಸದಾಶಿವತತ್ತ್ವ ಎಂಬುದೀಗ ಚೆನ್ನಯ್ಯನ ಮನೆಯ ದಾಸನ ಎಂಬ ಶಬ್ದಕ್ಕರ್ಥ. ಈಶ್ವರತತ್ತ್ವವು ಎಂಬುದೀಗ ಮಗನು, ಶಿವಲಿಂಗ ಎಂಬುದೀಗ ಮಣಿಪೂರಕಚಕ್ರದ ಕಕ್ಕಯ್ಯನ ಮನೆಯ, ಇಚ್ಛಾಶಕ್ತಿಯೆಂಬುದೀಗ ದಾಸಿಯ ಜ್ಞಾನಶಕ್ತಿಯು. ಇಬ್ಬರು–ಈಶ್ವರತತ್ತ್ವ ಜ್ಞಾನಶಕ್ತಿಯರಿರ್ವರು, ಹೊಲದಲ್ಲಿ–ಶಿವಾಚಾರವೆಂಬ ಕ್ಷೇತ್ರದಲ್ಲಿ, ಬೆರಣಿಯುನಾಯುಹೋಗಿ–ಚಿದಂಗದಲ್ಲಿ ಆಚರಿಸಲಿಕ್ಕಾಗಿ, ಸಂಗವಮಾಡಿದರೆನಲ್–ಲಿಂಗಾಂಗಸಂಬಂಧವಾಯಿತ್ತು. ಇವರಿಬ್ಬರಿಗೆ ಹುಟ್ಟಿದ–ಆ ಶಿವಶಕ್ತಿಯರಿರ್ವರಲ್ಲಿ ಜನಿಸಿದ, ಮಗ ನಾನು–ಭಕ್ತಿಸ್ಥಲದ ಕ್ರಿಯಾಶಕ್ತಿಸ್ವರೂಪವಾದ ಚಿತ್ಪುತ್ರ ನಾನುಯೆಂಬುದರ್ಥ.

---

೩೪೮

**ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದಡೆಯೂ ಅಯ್ಯಾ ಅಯ್ಯಾ ಎನಲಾಜಿನಯ್ಯಾ. ಚೆನ್ನಯ್ಯನೆಮ್ಮಯ್ಯನು, ಚೆನ್ನಯ್ಯನ ಮಗ ನಾನು, [1]ಕೂಡಲಸಂಗಮದೇವರ[1] ಮಹಾಮನೆಯಲ್ಲಿ [2]ಧರ್ಮದ ಸಂತಾನದ[2] ಭಂಡಾರಿ ಬಸವಣ್ಣನು.**

I- - - - - - - - - - - - - - - - - - - - - - - - - - - - - - - - - - - - - - - - - - - - - - -

ಸೂಳೆಗೆ ಹುಟ್ಟಿದ ಕೂಸಿನಂತೆ: ಸೂಳೆಗೆ–ವೇಶ್ಯಾಸ್ತ್ರೀಯಳಿಗೆ, ಹುಟ್ಟಿದ–ಉತ್ಪತ್ಯವಾದ, ಕೂಸಿನಂತೆ–ಅರ್ಭಕನ ಹಾಂಗೆ, ಆರನಾದಡೆಯೂ–ಬೀದಿಬಾಜಾರದಲ್ಲಿ ಹೋಗುವಂಥವರ ಒರ್ವರನಾದಡೆಯೂ, ಅಯ್ಯಾ ಅಯ್ಯಾ ಎನಲಾಜಿನಯ್ಯಾ–ಅಪ್ಪಾ ಅಪ್ಪಾ ಎಂದು ಕರೆಯಲಾರೆನಯ್ಯಾ ಚೆನ್ನಯ್ಯನು–ಮಾದಾರ ಚೆನ್ನಯ್ಯನು, ಎಮ್ಮಯ್ಯ–ಎನ್ನ ಕರ್ತನು, ಚೆನ್ನಯ್ಯನ–ಮಾದಾರಚೆನ್ನಯ್ಯನ, ಮಗ ನಾನು–ಕುಮಾರಕ ನಾನು. ಕೂಡಲಸಂಗಮದೇವರ–ಪರಶಿವಲಿಂಗದ, ಮಹಾಮನೆಯಲ್ಲಿ–ಬ್ರಹ್ಮಾಂಡವೆಂಬ ಕ್ಷೇತ್ರದಲ್ಲಿ, ಧರ್ಮದ–ಸದ್ಧರ್ಮದ, ಸಂತಾನ–ಕೃಪಾಪುತ್ರನಾದ; ಭಂಡಾರಿ–

ಬಳಸಬಾರದ ಕಡವರ ಸ್ವರೂಪವಾದ, ಬಸವಣ್ಣನು–ಸಂಗಬಸವೇಶ್ವರನು ಎಂಬ ದೃಷ್ಟೋಪಮಾನದ ಹಾಂಗೆ,

ಸೂಳೆಗೆ ಹುಟ್ಟಿದ–ಮಾಯಾಶಕ್ತಿಯೆಂಬ ಪಣ್ಯಾಂಗನೆಗೆ ಉತ್ಪತ್ಯವಾದ, ಕೂಸಿನಂತೆ–ಜೀವನೆಂಬ ಅರ್ಭಕನ ಹಾಂಗೆ, ಆರನಾದಡೆಯೂ ಅಯ್ಯಾ ಅಯ್ಯಾ ಎನಲಾಜೆನಯ್ಯಾ–ಸಾಲಿಗ್ರಾಮ ಮೊದಲಾದ ಸಕಲ ದೇವತಾದಿ ಭಜನೆಯೊಡನೆ ಕೂಡಿ ಚರಿಸಲಾರೆನಯ್ಯಾ. ಚೆನ್ನಯ್ಯನೆಮ್ಮಯ್ಯ: ಚೆನ್ನಯ್ಯ–ಸರ್ವಸೂತಕ ವಿರಹಿತವಾದ ಶ್ರೀಗುರುಮೂರ್ತಿಯು, ನಮ್ಮಯ್ಯ–ನಮ್ಮ ಕರ್ತನು. ಚೆನ್ನಯ್ಯನ–ಸರ್ವಸೂತಕವಿರಹಿತವಾದ ಶ್ರೀಗುರುಮೂರ್ತಿಯ ಮಗನಾನು–ಇಷ್ಟಲಿಂಗವೆಂಬ ಕುಮಾರ ನಾನು. ಕೂಡಲಸಂಗಮದೇವರ–ಪರಶಿವಲಿಂಗದ, ಮಹಾಮನೆಯಲ್ಲಿ–ಬ್ರಹ್ಮಾಂಡವೆಂಬ ಭಕ್ತಿಮಂದಿರದಲ್ಲಿ, ಧರ್ಮದ–ಶಿವಸದ್ಧರ್ಮದ, ಸಂತಾನ–ಕೃಪಾಪಾತ್ರನಾದ, ಭಂಡಾರಿ–ತ್ರಿವಿಧ ಷಡ್ವಿಧ ನಾಲ್ವತ್ತೆಂಟುತೆರದ ಭಕ್ತಿಯನ್ನು ತುಂಬಿಕೊಂಡಿರುವುದಕ್ಕೆ, ಭಂಡಾರಿ ಬಸವಣ್ಣನು–ಅಧಿಷ್ಠಾನ ಕರ್ತನಾದ ಶ್ರೀಗುರು ಬಸವೇಶ್ವರನು.

II- - - - - - - - - - - - - - - - - - - - - - - - - - - - - - - - - - - - - - - - -

1–1 ಕೂಡಲಸಂಗನ (ಚ, ಜ). 2–2 ಧರ್ಮಸಂತಾನ (ಚ, ಜ).

........................

ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದಡೆಯೂ ಅಯ್ಯಾ ಅಯ್ಯಾ ಎನಲಾಜೆನಯ್ಯಾ–ಬಹುಮುಖಾತ್ಮರುಗಳಲ್ಲಿ ವರ್ತಿಸುವ ಮಾಯೆಯೆಂಬ ಪಣ್ಯಾಂಗನೆಗೆ ಉದಯವಾದಾತ್ಮನು ಹಲವು ಮತತಂತ್ರಂಗಳಾರಿಗಾದರೆಯೂ ಗುರುವೆ ಗುರುವೆ ಎನಲಾರೆನಯ್ಯಾ, ಚೆನ್ನಯ್ಯನೆಮ್ಮಯ್ಯನು–ನಿರಂಜನ ಬ್ರಹ್ಮವೆಂಬ ಮಹಾಜ್ಞಾನಗುರುಮೂರ್ತಿಯೇ ಎನ್ನ ಶ್ರೀಗುರುದೇವನು. ಚೆನ್ನಯ್ಯನ ಮಗ ನಾನು–ಆ ಮಹಜ್ಞಾನಗುರುವಿನ ಭಕ್ತಿಪುತ್ರ ನಾನು. ಕೂಡಲಸಂಗನ ಮಹಾಮನೆಯಲ್ಲಿ ಧರ್ಮಸಂತಾನ–ಮಹಾಜ್ಞಾನಭಕ್ತಿಮಂದಿರದಲ್ಲಿ ಸದ್ಧರ್ಮಪುತ್ರನಾದಂಥ, ಭಂಡಾರಿ ಬಸವಣ್ಣನು–ತ್ರಿವಿಧ ಷಡ್ವಿಧ ನವವಿಧ ಭಕ್ತಿಯನು ಬಳಸುವುದಕ್ಕೆ ಕಡವರವಾದಂಥಾತನು ಬಸವೇಶ್ವರನು.

---

೩೪೯

**ಹರನು ಮೂಲಿಗನಾಗಿ, ಪುರಾತರೊಳಗಾಗಿ, ಬಳಿಬಳಿಯಲ್ಲಿ ಬಂದ ಮಾದಾರನ ಮಗ ನಾನಯ್ಯಾ. ಕಳದ ಹೊಲೆಯನೆಮ್ಮಯ್ಯ, ಜಾತಿಸೂತಕ.[೧] ಮಾದಾರನ ಮಗ ನಾನಯ್ಯಾ. ಪನ್ನಗಭೂಷಣ ಕೂಡಲಸಂಗಯ್ಯಾ, ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - -

ಹರನು ಮೂಲಿಗನಾಗಿ–ಪರಮೇಶ್ವರನೇ ಮೊದಲಿಗನಾಗಿ, ಪುರಾತರೊಳಗಾಗಿ–ಅರುವತ್ತುಮೂರು ಪರಾತರೇ ಕಡೆಯಾಗಿ, ಬಳಿಬಳಿಯಲ್ಲಿ ಬಂದ–ಅವರ ಬೆಂಬಳಿವಿಡಿದು ಬಂದ, ಮಾದಾರನ–ಮಾದಾರ ಚೆನ್ನಯ್ಯನ, ಮಗ ನಾನಯ್ಯಾ–ಕುಮಾರ ನಾನಯ್ಯಾ. ಕಳದ ಹೊಲೆಯನೆಮ್ಮಯ್ಯ

೧ಜಾತಿ ಸೂತಕ- "ಜಾತಿರ್ಜನ್ಯ ರಜೋಚ್ಛಿಷ್ಟಂ। ಪ್ರೇತಂ ಚ ಸೂತಕಸ್ತಥಾ। ಪಂಚಸೂತಕ ಸಂಯುಕ್ತಂ! ಇತ್ಯೇತಜ್ಜೀವವರ್ತಕಂ" ಎಂದು೧ ಜಾತಿಸೂತಕ ಜನನ ಸೂತಕ ರಜಸ್ಸೂತಕ ಉಚ್ಛಿಷ್ಟಸೂತಕ ಪ್ರೇತಸೂತಕವೆಂಬ ಪಂಚಸೂತಕಂಗಳ, ಹೊಲೆಯ-ಹೊಲೆಯತ್ವವನ್ನು, ಕಳದ-ನಷ್ಟವ ಮಾಡಿದ, ನಮ್ಮಯ್ಯ-ನಮ್ಮ ಕರ್ತನು. ಮಾದಾರನ-ಮಾದಾರ ಚೆನ್ನಯ್ಯನ, ಮಗ ನಾನಯ್ಯಾ-ಕುಮಾರ ನಾನಯ್ಯಾ, ಪನ್ನಗಭೂಷಣ-ಸರ್ಪಾಭರಣನಾದ, ಕೂಡಲಸಂಗಯ್ಯಾ-ಎಲೆ ಪರಶಿವಲಿಂಗವೆ, ಚೆನ್ನಯ್ಯನೆನ್ನ ಮುತ್ತಯ್ಯ-ಮಾದಾರ ಚೆನ್ನಯ್ಯನೇ ತಂದೆಯ ತಂದೆಯು. ಅಜ್ಜನಪ್ಪನಯ್ಯಾ-ಶ್ವಪಚಯ್ಯನೇ ಮೂರನೆಯ ತಂದೆಯು ಎಂಬ ದೃಷ್ಟೋಪಮಾನದ ಹಾಂಗೆ.

● ಹರನು ಮೂಲಿಗನಾಗಿ ಪುರಾತರೊಳಗಾಗಿ ಬಳಿಬಳಿಯಲ್ಲಿ ಬಂದ: ಹರನು ಮೂಲಿಗನಾಗಿ-ರುದ್ರಮೂರ್ತಿಯೇ ಕಡೆಯಾಗಿ, ಬಳಿಬಳಿಯಲ್ಲಿ ಬಂದ-ಸಪ್ತವಿಧಲಿಂಗಕ್ಕೆ ಸಪ್ತವಿಧಚಿತ್ತುವಿನಿಂದಂಗವಾಗಿ ಎಯ್ತಂದ, ಮಾದಾರನ ಮಗ ನಾನಯ್ಯಾ : ಮಾದಾರನ-ಸರ್ವಸೂತಕವಿರಹಿತವಾದ ಶ್ರೀಗುರುಮೂರ್ತಿಯ, ಮಗ ನಾನಯ್ಯಾ-ಇಷ್ಟಲಿಂಗವೆಂಬ ಕುಮಾರ ನಾನಯ್ಯಾ. ಕಳದ ಹೊಲೆಯನೆಮ್ಮಯ್ಯ ಜಾತಿಸೂತಕ : ॥ಗ್ರಂಥ॥ ಜಾತಿರ್ಜನ್ಮರಜೋಚ್ಛಿಷ್ಟಂ ಪ್ರೇತಂ ಚ ಸೂತಕಸ್ತಥಾ । ಪಂಚಸೂತಕ ಸಂಯುಕ್ತಂ । ಇತ್ಯೇತಜ್ಜೀವವರ್ತಕಂ॥ ಎಂದು ಜಾತಿಸೂತಕ ಜನನಸೂತಕ ರಜಸ್ಸೂತಕ ಪ್ರೇತಸೂತಕ ಎಂಜಲಸೂತಕಂಗಳೆಂಬ ಪಂಚಸೂತಕಂಗಳ, ಹೊಲೆಯ-ಹೊಲೆಯತ್ವವನ್ನು, ಕಳದ-ನಷ್ಟವ ಮಾಡಿದ, ನಮ್ಮಯ್ಯ-ನಮ್ಮ ಕರ್ತನು. ಮಾದಾರನ-ಸರ್ವಸೂತಕವಿರಹಿತವಾದ ಶ್ರೀಗುರುಮೂರ್ತಿಯ, ಮಗ ನಾನಯ್ಯಾ-ಇಷ್ಟಲಿಂಗವೆಂಬ ಕುಮಾರ ನಾನಯ್ಯಾ. ಪನ್ನಗಭೂಷಣ-ಸರ್ಪಾಭರಣನಾದ, ಕೂಡಲಸಂಗಯ್ಯಾ-ಎಲೆ ಪರಶಿವಲಿಂಗವೆ, ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ-ರುದ್ರಮೂರ್ತಿಯೇ ಗುರುವಾಗಿ ಬಂದು ತನುವಿನಲ್ಲಿ ನೆಲೆಗೊಂಡಿರ್ಪನು. ಚೆನ್ನಯ್ಯನೆನ್ನ ಮುತ್ತಯ್ಯ-ಮಹೇಶ್ವರಮೂರ್ತಿಯೇ ಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡಿರ್ಪನು. ಅಜ್ಜನಪ್ಪನಯ್ಯಾ-ಈಶ್ವರಮೂರ್ತಿಯೇ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಂಡಿರ್ಪನು.

..........................

೧-೧ x (ಗ).

II- - - - - - - - - - - - - - - - - - - - - - - - - - - - - - - - - - - - - - - - - - -

೧ + ದ (ಚ, ಜ).

..........................

ಹರನು ಮೂಲಿಗನಾಗಿ-ಮೂಲಜ್ಞಾನಪ್ರಕೃತಿಯನು ಸಂಹರಿಸುವ ಈಶ್ವರನು ಮೊದಲಿಗನಾಗಿ, ಪುರಾತರೊಳಗಾಗಿ ಬಳಿಬಳಿಯಲಿ ಬಂದ-ರುದ್ರಾದಿ ನಿರಂಜನಾಂತಮಾದ ನವವಿಧಲಿಂಗಂಗಳೊಳಗಾಗಿ ಆಯಾಯ ತತ್ತ್ವಂಗಳ ಹೆಜ್ಜೆಹೆಜ್ಜೆಯಲ್ಲಿ ಆಯಾಯ ತತ್ತ್ವಂಗಳಿಗೆ ಆಯಾಯ ಚಿತ್ತುವಿನಿಂದಂಗವಾಗಿ ಬಂದ, ಮಾದಾರನ ಮಗ ನಾನಯ್ಯಾ-ನಿರಂಜನಬ್ರಹ್ಮವೆಂಬ ಮಹಾಜ್ಞಾನಜಂಗಮದ ಭಕ್ತಿಪುತ್ರ ನಾನಯ್ಯಾ. ಜಾತಿಸೂತಕದ ಹೊಲೆಯ ಕಳದ ನಮ್ಮಯ್ಯಾ-

ನಮ್ಮ ಸ್ವಾಮಿ ಮಹಾಜ್ಞಾನ ಗುರುಮೂರ್ತಿಯಾಗಿ ಬಂದು ಕುಲಸೂತಕದ ಹೊಲೆಯ ಕಡೆಗೆ ಮಾಡಿದ. ಮಾದಾರನ ಮಗ ನಾನಯ್ಯಾ-ತ್ರಿಪುಟಿರಹಿತವಾದ ಚಿಚ್ಛಕ್ತಿಸ್ವರೂಪವೇ ನೀನೆಂದರುಹಿ ಕೊಟ್ಟ ಮಹಾಜ್ಞಾನಗುರುವಿನ ಭಕ್ತಿಪುತ್ರ ನಾನಯ್ಯಾ. ಪನ್ನಗಭೂಷಣ ಕೂಡಲಸಂಗಯ್ಯಾ-ಸತ್ತ್ವಣವಜ್ಞಾನವೆಂಬ ಸರೀಸೃಪನೆ ಅಲಂಕರಣವಾಗುಳ್ಳಂಥ ಶಿವತತ್ತ್ವವೆ, ಚೆನ್ನಯ್ಯನು-ನಿರಂಜನಬ್ರಹ್ಮವೆಂಬ ಮಹಾಜ್ಞಾನಜಂಗಮವು, ಎನ್ನ ಮುತ್ತಯ್ಯನಜ್ಜನಪ್ಪನಯ್ಯಾ-ಆ ಮಹಾಜ್ಞಾನಜಂಗಮವೆ ಮಹಾಲಿಂಗದ ಮುತ್ತೊಡೆ ದೇವರಾದ ಶೂನ್ಯಲಿಂಗವು. ಆ ಶೂನ್ಯಲಿಂಗದ ತಂದೆಯಾದ ನಿರಂಜನಬ್ರಹ್ಮವಯ್ಯಾ.

III- - - - - - - - - - - - - - - - - - - - - - - - - - - - - - - - - - - - - - - - - - - - -

ಹರನು-ಪರಶಿವನು, ಮೂಲಗನಾಗಿ-ಆದಿಗನಾಗಿ, ಪುರಾತರೊಳಗಾಗಿ-ಪ್ರಾಚೀನಪುರುಷರು ಸಹವಾಗಿ, ಬಳಿಬಳಿಯಲು-ಗುರುಸಂಪ್ರದಾಯದಲ್ಲು, ಬಂದ-ಹುಟ್ಟಿಬಂದಂಥ, ಮಾದಾರನ-ಮಾದಾರಚೆನ್ನಯ್ಯನೆಂಬ ದೀಕ್ಷಾಗುರುವಿನ, ಮಗ ನಾನಯ್ಯಾ-ಕ್ರಿಯಾಭಾತ್ರ ನಾನಯ್ಯಾ. ಕಳದ-ಸರ್ವಾಚಾರ ಸಂ[ಂ]ಪತ್ತಿನಾಚರಣೆಯೆಂಬ ಕಣದ, ಹೊಲೆಯಂ-[೧]ಹೊಲೆಯರ ಹೊನ್ನೆಯನು,[೧] ಎಮ್ಮಯ್ಯಂ-ಎಮ್ಮ ದೀಕ್ಷಾಗುರುಸ್ವಾಮಿಯು. ಮತ್ತಂ ಜಾತಿಸೂತಕ-ಕುಲಸೂತಕವು, ಹೊಲೆಯಂ-ಪ್ರಕೃತಿನಿಷೇಧವನು, ಕಳದ-ದೀಕ್ಷಾತ್ರಯದಿಂದ ನೀಗಲಾಡಿದ, ಮಾದಾರನ-ಮಾದಾರಚೆನ್ನಯ್ಯನ, ಮಗ ನಾನಯ್ಯಾ-ಪುತ್ರ ನಾನಯ್ಯಾ, ಪನ್ನಗಭೂಷಣ-ಸರ್ಪಾಭರಣವನುಳ್ಳಂಥ, ಕೂಡಲಸಂಗಯ್ಯಾ-ಎಲೆ ಪರಶಿವಲಿಂಗವೆ, ಚೆನ್ನಯ್ಯಂ-ಮಾದಾರಚೆನ್ನಯ್ಯನು, ಮುತ್ತಯ್ಯಂ-ಶಿಕ್ಷಾಗುರುಸ್ವಾಮಿಯು, ಅಯ್ಯಾ-ಎಲೆ ಸ್ವಾಮಿ, ಅಜ್ಜನಪ್ಪಂ-ಜ್ಞಾನಗುರುಸ್ವಾಮಿಯಾದಪನು.

..........................

೧-೧ ಹೊಲೆರ ಹೊಲೆಯನಯ್ಯನು (ಡ).

---

೩೫೦

**ಅಪ್ಪನು ನಮ್ಮ ಮಾದಾರ ಚೆನ್ನಯ್ಯ; ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ; ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ; ಅಣ್ಣನು ನಮ್ಮ ಕಿನ್ನರಿಯ ಬೊಮ್ಮಯ್ಯ; ಎನ್ನನೇತಕ್ಕೆ ಅಱಿಯಿರಿ ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಮಾದಾರ ಚೆನ್ನಯ್ಯ-ಮಾದಾರ ಚೆನ್ನಯ್ಯನೆಂಬ ಸದ್ಭಕ್ತನು, ಅಪ್ಪನು-ಎನ್ನ ಜನಕನು. ನಮ್ಮ ಡೋಹಾರ ಕಕ್ಕಯ್ಯ-ಸಿದ್ಧಿಗೆಕಾಯಕದ ಡೋಹಾರ ಕಕ್ಕಯ್ಯಗಳೆಂಬ ಶಿವಶರಣನು, ಬೊಪ್ಪನು-ತಂದೆಯ ತಂದೆಯಾದ ಹಿರಿಯಪ್ಪನು. ಚಿಕ್ಕಯ್ಯ-ನಿಜಲಿಂಗಚಿಕ್ಕಯ್ಯನು, ನಮ್ಮಯ್ಯ ಕಾಣಯ್ಯ-ನಮ್ಮ ಕರ್ತನು ಕಂಡಯ್ಯಾ. ಅಣ್ಣನು-ಎನ್ನ ಅಗ್ರಜನು, ನಮ್ಮ ಕಿನ್ನರಿಯ ಬೊಮ್ಮಯ್ಯ-ಕಿನ್ನರಿಯ ಬೊಮ್ಮಯ್ಯನೆಂಬ ಶಿವಶರಣನು. ಎನ್ನನೇತಕ್ಕಱಿಯಿರಿ-ಇಂಥವರುಗಳೇ ನಮ್ಮ ಬಾಂಧವರಾಗಿರುತ್ತಿರಲು ನಿಮ್ಮ ಚಿದಂಗಸ್ವರೂಪನೆಂದು ಏನು ಕಾರಣಕ್ಕೆ ತಿಳಿಯಿರಿಯೆಂಬುದರ್ಥ.

ಅಪ್ಪನು ಮಾದಾರಚೆನ್ನಯ್ಯ–ನಿಃಕಲಬ್ರಹ್ಮವೇ ಕ್ರಿಯಾಘನಗುರುವಾಗಿ ಬಂದು ತನುವಿನಲ್ಲಿ ನೆಲೆಗೊಂಡಿರ್ಪನು. ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ–ಶೂನ್ಯಬ್ರಹ್ಮವೇ ಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡಿರ್ಪನು. ಚಿಕ್ಕಯ್ಯ ನಮ್ಮಯ್ಯ ಕಾಣಯ್ಯಾ–ನಿರಂಜನಬ್ರಹ್ಮವೇ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಂಡಿರ್ಪನು. ಅಣ್ಣನು ನಮ್ಮ ಕಿನ್ನರಿಯಬೊಮ್ಮಯ್ಯ–ಚಿತ್ಕಲಾಪ್ರಸಾದವೇ ಕ್ರಿಯಾಪ್ರಸಾದವಾಗಿ ಬಂದು ಆತ್ಮಾಂಗದಲ್ಲಿ ನೆಲೆಗೊಂಡಿರ್ಪುದು. ಎನ್ನನೇತಕ್ಕಱಿಯಿರಿ–ಚತುರ್ವಿಧಾಂಗದಲ್ಲಿ ಚತುರ್ವಿಧಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧಭಕ್ತಿವಿಡಿದಾಚರಿಸಲ್ಪಟ್ಟ ಜ್ಞಾನಕಲಾತ್ಮನ ನಿಮ್ಮ ಚಿದಂಗಸ್ವರೂಪನೆಂದು ಏನು ಕಾರಣಕ್ಕೆ ತಿಳಿಯಿರಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - -

ಅಪ್ಪನು ನಮ್ಮ ಮಾದಾರ ಚೆನ್ನಯ್ಯ–ನಿರಂಜನಬ್ರಹ್ಮವೇ ತಮ್ಮ ತಂದೆ. ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ–ನಿಃಕಲಬ್ರಹ್ಮವೇ ನಮ್ಮ ಮುತ್ತಯ್ಯನು. ಚಿಕ್ಕಯ್ಯನೆಮ್ಮಯ್ಯ ಕಾಣಯ್ಯಾ–ಇಷ್ಟಲಿಂಗದ ಚಿಕ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಕಲಕರಣಂಗಳನು ಶಿಕ್ಷಿಸಿ ಸುಜ್ಞಾನಾಮೃತವನು ಕುಡಿಹಿಕೊಡುವಂಥ ಶಿಕ್ಷಾಗುರುಮೂರ್ತಿಯು ನೋಡಯ್ಯಾ. ಅಣ್ಣನು ನಮ್ಮ ಕಿನ್ನರಿಯ ಬೊಮ್ಮಯ್ಯ–ಪ್ರಣವಧ್ಯಾನವನುಳ್ಳ ಮಹಾಜ್ಞಾನಜಂಗಮವೆ ನಮ್ಮಗ್ರಜನು. ಎನ್ನನೇತಕ್ಕಱಿಯಿರಿ ಕೂಡಲಸಂಗಯ್ಯಾ?–ಗುರುತ್ರಯತತ್ವ ಭಕ್ತ್ಯಂಶೀಭೂತನು ಲಿಂಗತ್ರಯತತ್ವ ಭಕ್ತ್ಯಶೀಭೂತನು ಜಂಗಮತ್ರಯತತ್ತ್ವ ಭಕ್ತ್ಯಂಶೀಭೂತನು, ಗುರುಭಕ್ತಿಯುಳ್ಳಾತನು ಲಿಂಗಭಕ್ತಿಯುಳ್ಳಾತನು ಜಂಗಮಭಕ್ತಿಯುಳ್ಳಾತನು ಎನ್ನನೇನು ಕಾರಣ ನಿಮ್ಮವನೆಂದು ತಿಳಿಯಿರೆಲೆ ಶಿವನೆ !

III- - - - - - - - - - - - - - - - - - - - - - - - - - - - - - - - - - - - - - - - - - - -

ಮಾದಾರ ಚೆನ್ನಯ್ಯ–ಮಾದಾರ ಚೆನ್ನಯ್ಯನು, ಅಪ್ಪನು–ಪಂಡಿತಾರಾಧ್ಯರು. ನಮ್ಮ ಡೋಹಾರ ಕಕ್ಕಯ್ಯ–ನಮ್ಮ ಡೋಹಾರ ಕಕ್ಕಯ್ಯನು, ಬೊಪ್ಪನು–ಏಕೋರಾಮಿತಂದೆಯು. ಚಿಕ್ಕಯಂ–ಚಿಕ್ಕಯ್ಯನೆಂಬ ಶಿವಶರಣನು, ಎಮ್ಮಯ್ಯ ಕಾಣಯ್ಯಾ–ಮರುಶಂಕರದೇವರು ಕಾಣಯ್ಯಾ. ಕಿನ್ನರಿಯ ಬೊಮ್ಮಯ್ಯ–ಕಿನ್ನರಬೊಮ್ಮಯ್ಯನೆಂಬ ಶಿವಶರಣನು, ಅಣ್ಣನು–ನಮ್ಮಗ್ರಜನಾದಂಥ ರೇವಣಸಿದ್ಧೇಶ್ವರನು, ಎನ್ನನೇತಕ್ಕಱಿಯಿರಿ–ಎನ್ನನೇನುಕಾರಣಕ್ಕೆ ತಿಳಿಯಿರಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - - -

ಪುರಾತನರೆಲ್ಲ ಬಂಧುಗಳು, ಇಂತಪ್ಪ ಬಂಧುಗಳೆಲ್ಲ ಇದ್ದು ಎನ್ನನೇಕೆ ಒಲ್ಲಿರೆ ಲಿಂಗವೆಯೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - -

ಚೆನ್ನಯ್ಯನೆಂದರೆ ಗುರುಭಕ್ತಿ. ಬೊಪ್ಪನು ಡೋಹಾರ ಕಕ್ಕಯ್ಯನೆಂದರೆ ಲಿಂಗಭಕ್ತಿ. ಚಿಕ್ಕಯ್ಯನೆಮ್ಮಯ್ಯನೆಂದರೆ ಜಂಗಮಭಕ್ತಿ. ಅಣ್ಣನು ಕಿನ್ನರಿಯ ಬೊಮ್ಮಯ್ಯನೆಂದರೆ ಪ್ರಸಾದಭಕ್ತಿ. ಅದಲ್ಲದೆ ಚೆನ್ನಯ್ಯ ಪಂಡಿತಾರಾಧ್ಯರು. ಬೊಪ್ಪನು ಏಕೋರಾಮಿದೇವರು. ಚಿಕ್ಕಯ್ಯ ಮರುಳಸಿದ್ಧೇಶ್ವರನು. ೧[ಅಣ್ಣನು]೧ ರೇವಣಸಿದ್ಧೇಶ್ವರನು.

..........................

೧-೧ ಚಿಕ್ಕಯ್ಯನೆಮ್ಮಯ್ಯ.

---

೩೫೧

**ಭಕ್ತಿಯಿಲ್ಲದ ಬಡವ ನಾನಯ್ಯಾ. ಕಕ್ಕಯ್ಯನ ಮನೆಯಲೂ ಬೇಡಿದೆ; ದಾಸಯ್ಯನ ಮನೆಯಲೂ ಬೇಡಿದೆ, ಚೆನ್ನಯ್ಯನ ಮನೆಯಲೂ ಬೇಡಿದೆ. ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತಿಯಿಲ್ಲದ ಬಡವ ನಾನಯ್ಯಾ : ಭಕ್ತಿ-ಶಿವಾದ್ವೈತಭಕ್ತಿಯು, ಇಲ್ಲದ-ಉಂಟಾಗಿಲ್ಲದ, ಬಡವ ನಾನಯ್ಯಾ-ನಿರ್ಧನಿಕ ನಾನಯ್ಯಾ. ಕಕ್ಕಯ್ಯನ ಮನೆಯಲೂ ಬೇಡಿದೆ : ಕಕ್ಕಯ್ಯನ-ಡೋಹಾರ ಕಕ್ಕಯ್ಯನ, ಮನೆಯಲೂ-ಭಕ್ತಿಮಂದಿರದಲ್ಲೂ, ಬೇಡಿದೆ-ಭಕ್ತಿಭಿಕ್ಷವನು ಯಾಚಿಸಿದೆನು. ದಾಸಯ್ಯನ-ಜಾಡರ ದಾಸಿಮಯ್ಯನ, ಮನೆಯಲ್ಲೂ-ಮಂದಿರದಲ್ಲೂ, ಬೇಡಿದೆ-ಭಕ್ತಿಭಿಕ್ಷವನು ಯಾಚಿಸಿದೆನು. ಚೆನ್ನಯ್ಯನ-ಮಾದಾರ ಚೆನ್ನಯ್ಯನ, ಮನೆಯಲೂ-ಮಂದಿರದಲ್ಲೂ, ಬೇಡಿದೆ-ಭಕ್ತಿಭಿಕ್ಷವನು ಯಾಚಿಸಿದೆನು. ಎಲ್ಲಾ ಪುರಾತರು-ಕಕ್ಕಯ್ಯ ಚೆನ್ನಯ್ಯ ದಾಸಯ್ಯ ಮೊದಲಾದ ಅರುವತ್ತುಮೂರು ಪುರಾತನರು, ನೆರೆದು-ಒಬ್ಬುಳಿಯಾಗಿ, ಭಕ್ತಿಭಿಕ್ಷವನಿಕ್ಕಿದಡೆ-ಭಕ್ತಿ ವ[ರ]ವನು ಕರುಣಿಸಿಕೊಟ್ಟರೆ, ಎನ್ನ ಪಾತ್ರೆ ತುಂಬಿತ್ತು-ಎನ್ನ ಸರ್ವಾಂಗದಲ್ಲಿ ಭರಿತನಾಗಿರ್ಪುದೆಂಬುದರ್ಥ.

ಭಕ್ತಿಯಿಲ್ಲದ ಬಡವ ನಾನಯ್ಯಾ : ಭಕ್ತಿಯಿಲ್ಲದ-ತ್ರಿವಿಧ ಷಡ್ವಿಧ ನಾಲ್ವತ್ತೆಂಟುತೆರದ ಭಕ್ತಿಯುಂಟಾಗಿಲ್ಲದ, ಬಡವ ನಾನಯ್ಯಾ-ನಿರ್ಧನಿಕ ನಾನಯ್ಯಾ. ಕಕ್ಕಯ್ಯನ ಮನೆಯಲೂ ಬೇಡಿದೆ: ಕಕ್ಕಯ್ಯನೆಂದರೆ ಇಷ್ಟಲಿಂಗವು, ಮನೆಯೆಂದರೆ ತ್ಯಾಗಾಂಗವು, ಬೇಡಿದೆ-ತ್ಯಾಗಾಂಗದಲ್ಲಿ ನೆಲೆಗೊಂಡಿರುವ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೊಡಶೋಪಚಾರಕ್ರಿಯೆಗಳಿಂದಾರಾಧಿಸಿ ಆ ಇಷ್ಟಲಿಂಗಮುಖದಿಂದುಳುಮೆಯಾಗಿ ಬರಲ್ಪಟ್ಟ ಶುದ್ಧಪ್ರಸಾದವನು ಪಡೆದನುಭವಿಸುವೆನು. ಚೆನ್ನಯ್ಯನ ಮನೆಯಲೂ ಬೇಡಿದೆ : ಚೆನ್ನಯ್ಯನೆಂದರೆ ಪ್ರಾಣಲಿಂಗವು, ಮನೆಯೆಂದರೆ ಭೋಗಾಂಗವು, ಬೇಡಿದೆ-ಭೋಗಾಂಗದಲ್ಲಿ ನೆಲೆಗೊಂಡಿರುವಂಥ ಪ್ರಾಣಲಿಂಗಕ್ಕೆ ಮಂತ್ರಧ್ಯಾನ ಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸಿ ಆ ಪ್ರಾಣಲಿಂಗದಿಂದುಳುಮೆಯಾಗಿ ಬರಲ್ಪಟ್ಟ ಸಿದ್ಧಪ್ರಸಾದವ ಪಡೆದನುಭವಿಸುವೆನು. ದಾಸಯ್ಯನ ಮನೆಯಲೂ ಬೇಡಿದೆ : ದಾಸಯ್ಯನೆಂದರೆ ಭಾವಲಿಗವು, ಮನೆಯೆಂದರೆ ಯೋಗಾಂಗವು, ಬೇಡಿದೆ-ಯೋಗಾಂಗದಲ್ಲಿ ನೆಲೆಗೊಂಡಿರುವಂಥ ಭಾವಲಿಂಗಕ್ಕೆ ಮನೋಲಯ ನಿರಂಜನಪೂಜಾಕ್ರಿಯೆಗಳಿಂದಾರಾಧಿಸಿ, ಆ ಭಾವಲಿಂಗದುಳುಮೆಯಾಗಿ ಬರಲ್ಪಟ್ಟ ಪ್ರಸಿದ್ಧಪ್ರಸಾದವ ಪಡೆದನುಭವಿಸುವೆನು. ಎಲ್ಲಾ ಪುರಾತರು-ತ್ರಿವಿಧ ಷಡ್ವಿಧ ಅಂಗಲಿಂಗ ಭಕ್ತಿಗಳೆಲ್ಲವು, ನೆರೆದು-ಒಬ್ಬುಳಿಯಾಗಿ, ಭಕ್ತಿ ಭಿಕ್ಷವನಿಕ್ಕಿದಡೆ-ತ್ರಿವಿಧ ಷಡ್ವಿಧ ನಾಲ್ವತ್ತೆಂಟು ತೆರದ ಭಕ್ತಿಯನ್ನು ಕರುಣಿಸಿಕೊಟ್ಟರೆ, ಎನ್ನ ಪಾತ್ರೆ ತುಂಬಿತ್ತು-ತ್ರಿವಿಧ ಷಡ್ವಿಧ ೧ಅಂಗದಲ್ಲಿ ತ್ರಿವಿಧ ಷಡ್ವಿಧ೧ ಲಿಂಗವು ಭರಿತವಾಯಿತ್ತು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

.........................

೧-೧ ದನ (ಕ, ಗ). ೨-೨ x (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತಿಯಿಲ್ಲದ ಬಡವ ನಾನಯ್ಯಾ-ಭಿನ್ನಭಕ್ತಿನಾಸ್ತಿಯಾದ ಕೃಹಿಶನಾಹಿದಾತ ನಾನಯ್ಯಾ. ಕಕ್ಕಯ್ಯನ ಮನೆಯಲೂ ಬೇಡಿದೆ-ಇಷ್ಟಲಿಂಗದ ಸಾವಧಾನ ಮೂಲಸೂತ್ರವಾದಾಚಾರಾಂಗವೆಂಬ ಗೃಹದಲ್ಲಿ, ಆ ಇಷ್ಟಲಿಂಗದ ಶುದ್ಧಪ್ರಸಾದಾಮೃತವನು ಯಾಚಿಸಿದೆ. ಚೆನ್ನಯ್ಯನ ಮನೆಯಲೂ ಬೇಡಿದೆ-ಪ್ರಾಣಲಿಂಗದ ಮೂಲಜ್ಞಾನ ಸೂತ್ರವಾದ ಅಂತರಂಗವೆಂಬ ಗ್ರಹದಲ್ಲಿ ಪ್ರಾಣಲಿಂಗದ ಸಿದ್ಧಪ್ರಸಾದಾಮೃತವನ್ನು ಯಾಚಿಸಿದೆ, ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವಕ್ಕಿದಡೆ ಎನ್ನ ಪಾತ್ರೆ ತುಂಬಿತ್ತು-ಸಮಸ್ತ ಸ್ಥೂಲಕರಣ ಸೂಕ್ಷ್ಮಕರಣ ಕಾರಣಕರಣಂಗಳೆಂಬ ಲಿಂಗಕರಣಗಣಂಗಳು ಲಿಂಗಾಂಗಸಂಬಂಧಕ್ಕೆ ಅನುಗುಣಂಗಳಾಗಿ ಶಿವಾದ್ವೈತಭಕ್ತಿಭಿಕ್ಷವನ್ನು ಲಿಂಗಕ್ಕೆ ನಿವೇದಿಸಿದರೆ ಎನ್ನ ಚಿತ್ತೆಂಬ ಕರ್ಪರವು ವಸ್ತುಸಂಪೂರಿತವಾಯಿತ್ತು, ಮತ್ತಂ ರುದ್ರತತ್ತ್ವವೆ ಕ್ರಿಯಾಘನಗುರುವಾಗಿ ಬಂದಿತ್ತು; ಆ ಕ್ರಿಯಾಘನಗುರುವಿನ ದೀಕ್ಷಾನುಗ್ರಹವೆಂಬ ಮಂದಿರದಲ್ಲಿ ಇಷ್ಟಲಿಂಗವನು ಯಾಚಿಸಿದೆನು. ಸದಾಶಿವತತ್ತ್ವವೆ ಜ್ಞಾನಗುರುಮೂರ್ತಿಯಾಗಿ ಬಂದಿತ್ತು ; ಆ ಜ್ಞಾನಗುರುಮೂರ್ತಿಯ ಶಿವಾನುಗ್ರಹವೆಂಬ ಮಂದಿರದಲ್ಲಿ ಪ್ರಾಣಲಿಂಗವನು ಯಾಚಿಸಿದೆನು. ನಿಃಕಲಬ್ರಹ್ಮವೆಂಬ ಮಹಾಜ್ಞಾನಚಾರ್ಯನ ವೇಧಾದೀಕ್ಷೆಯಿಂದ ಕ್ರೀಡಿಸಿ ಪ್ರಾಣನ ಪ್ರಕೃತಿಯ ನಷ್ಟವಮಾಡಿ ಚಿತ್ಪ್ರಾಣಸ್ವರೂಪವನೆಯ್ದಿಸಿ, ಆ ಚಿದಾತ್ಮವೆಂಬ ಭಕ್ತಿಭಿಕ್ಷವನು ಭಾವಲಿಂಗಕ್ಕೆ ಸಮರ್ಪಿಸಿದರೆ ಎನ್ನ ತ್ಯಾಗಭೋಗಯೋಗಾಂಗವೆಂಬ ಪಾತ್ರೆಯು ವಸ್ತುಸಂಪೂರ್ಣವಾಯಿತ್ತು. ಅದಲ್ಲದೆ ತ್ರಿಪುಟರಹಿತವಾದ ಚಿಚ್ಛಕ್ತಿಸ್ವರೂಪನೆ ನೀನೆಂದರುಹಿಕೊಡುವಂಥ ಮಹಾಜ್ಞಾನಭಕ್ತಿಭಿಕ್ಷವನುಂಬ ಭಾವಲಿಂಗವನು ಆತ್ಮಂಗೆ ನಿವೇದಿಸಿದರೆ ತನುತ್ರಯ ಎಂಬ ಪಾತ್ರೆಯು ವಸ್ತುಸಂಪೂರಿತವಾಯಿತ್ತು.

.........................

೩-೩ ಷಿಯಾ (ಚ, ಜ).

IV- - - - - - - - - - - - - - - - - - - - - - - - - - - - - - - - - - - - - - - - - - - - -

ಆದ್ಯರ ಕರುಣದಿಂದ ಭಕ್ತಿಯಾಯಿತ್ತು, ಭಕ್ತಿಯಿಂದ ಮಹಾ ಆನಂದವಾಯಿತ್ತು, ಆನಂದದಿಂದ ತೃಪ್ತಿಯಾಯಿತ್ತೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಕಕ್ಕಯ್ಯನ ಮನೆಯಲು ಬೇಡಿದೆನೆಂದರೆ ದೀಕ್ಷಾಗುರುವಿನಲ್ಲಿ ಕ್ರಿಯಾಚರಣೆಯನೇಚಿಸಿದೆ. ಚೆನ್ನಯ್ಯನ ಮನೆಯಲು ಬೇಡಿದೆನೆನೆಗೆ ಜ್ಞಾನಾಚಾರವ ನೇಚಿಸಿದೆ. ಎಲ್ಲಾ ಪುರಾತರು-ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರುಗಳು, ನೆರೆದು-ಕೂಡಿ, ಬಕ್ತಿಭಿಕ್ಷವನಿಕ್ಕಿದರೆ-ಶಿವಭಕ್ತಿಸ್ವರೂಪವಾದ ಇಷ್ಟಲಿಂಗ ಸಂಬಂಧವ ಮಾಡಿದರೆ ಎನ್ನ ಪಾತ್ರೆ ತುಂಬಿತ್ತು-ಎನ್ನ ಹೃದಯವೆಂಬ ಚಿತ್ಪಾತ್ರೆ ತುಂಬಿತ್ತು.

---

೩೫೨

**ಹಿರಿಯಯ್ಯ ಶ್ವಪಚಯ್ಯ, ಕಿಜೆಯಯ್ಯ ಡೋಹಾರ ಕಕ್ಕಯ್ಯ, ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ; ಕೂಡಲಸಂಗಮದೇವಾ, ನಿಮ್ಮ ಶರಣರು ಎನ್ನ ಸಲಹುವರಾಗಿ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಶ್ವಪಚಯ್ಯ–ಸಾಮವೇದಿಗಳಿಗೆ ಗುರುವಾದ ಶ್ವಪಚಯ್ಯಗಳೇ, ಹಿರಿಯಯ್ಯ–ದೊಡ್ಡಪ್ಪನು, ಕಕ್ಕಯ್ಯ–ಡೋಹಾರ ಕಕ್ಕಯ್ಯಗಳೇ, ಕಿಜೆಯಯ್ಯ–ಚಿಕ್ಕಪ್ಪನು, ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ–ನಮ್ಮ ಮಾದಾರಚೆನ್ನಯ್ಯನೇ ಕರ್ತರಿಗೆ ಕರ್ತನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರು–ಶ್ವಪಚಯ್ಯ ಕಕ್ಕಯ್ಯ ಚೆನ್ನಯ್ಯ ಮೊದಲಾದವರು, ಎನ್ನ ಸಲಹುವರಾಗಿ–ಎನ್ನ ರಕ್ಷಣ್ಯವ ಮಾಡುವರಾಗಿಯೆಂಬುದರ್ಥ.

ಹಿರಿಯಯ್ಯ ಶ್ವಪಚಯ್ಯ–ನಿಃಕಲಬ್ರಹ್ಮವೇ ಕ್ರಿಯಾಘನಗುರುವಾಗಿ ಬಂದು ತನುವಿನಲ್ಲಿ ನೆಲಗೊಂಡಿ೧[ಪ್ಪುದು],೧ ಕಿಜೆಯಯ್ಯ ಡೋಹಾರ ಕಕ್ಕಯ್ಯ–ಶೂನ್ಯಬ್ರಹ್ಮವೇ ಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡಿ೧[ಪ್ಪುದು],೧ ಅಯ್ಯಗಳಯ್ಯ ನಮ್ಮ ಮಾದಾರಚೆನ್ನಯ್ಯ–ನಿರಂಜನಬ್ರಹ್ಮವೇ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಂಡಿ೧–[ಪ್ಪುದು],೧ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರು–ನಿಮ್ಮ ಗುರುಲಿಂಗ ಜಂಗಮಮೂರ್ತಿಗಳು, ಎನ್ನ ಸಲಹುವರಾಗಿ–ತಮ್ಮ ಪಾದೋದಕಪ್ರಸಾದವನಿತ್ತು ರಕ್ಷಣ್ಯವ ಮಾಡುವರಾಗಿ.

..........................

೧–೧ ರ್ಪರು (ಕ. ಗ).

II- - - - - - - - - - - - - - - - - - - - - - - - - - - - - - - - - - - - - - - - - - - -

ಹಿರಿಯಯ್ಯ ಶ್ವಪಚಯ್ಯ–ಆ ನಿಃಕಲಬ್ರಹ್ಮವೇ ಕ್ರಿಯಾಘನಗುರುವಾಗಿ ಬಂದಿತ್ತು. ಕಿಜೆಯಯ್ಯ ಡೋಹಾರ ಕಕ್ಕಯ್ಯ–ಆ ಮಹಾಲಿಂಗವೆ ಇಷ್ಟಲಿಂಗವಾಗಿ ಬಂದಿತ್ತು. ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ–ಗುರುಲಿಂಗದ್ವಯಕರ್ತಾಯೆಂದು ಗುರುಲಿಂಗದ್ವಯಕ್ಕೆ ಕರ್ತೃವಾದ ನಿರಂಜನಬ್ರಹ್ಮವೇ ಮಹಾಜ್ಞಾನಜಂಗಮವಾಗಿ ಬಂದಿತ್ತು. ಕೂಡಲಸಂಗಮದೇವಾ ನಿಮ್ಮ ಶರಣರು ಎನ್ನ ಸಲಹುವರಾಗಿ–ಎಲೆ ಶಿವನೆ ನಿಮ್ಮ ಸಂಬಂಧವಾದ ಇಷ್ಟಪ್ರಾಣಭಾವಲಿಂಗಗಳೆಂಬ ಶಿವಶರಣರು ಶುದ್ಧಸಿದ್ಧಪ್ರಸಿದ್ಧ ಪ್ರಸಾದವನು ಕೊಟ್ಟು ಸಂರಕ್ಷಣೆಯ ಮಾಡುವರಾಗಿ.

---

೩೫೩

**ಎಮ್ಮ ತಾಯಿ ನಿಂಬವ್ವೆ ನೀರನೆರೆದುಂಬುವಳು, ನಮ್ಮಯ್ಯ ಚೆನ್ನಯ್ಯರಾಯ ಕಂಪಣವ ಹೊಜುವ, ನಮಗಾರೂ ಇಲ್ಲವೆಂಬಿರಿ–ನಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು; ನಮಗಾರೂ ಇಲ್ಲವೆಂಬಿರಿ. ೧ನಮ್ಮಜ್ಜರಜ್ಜರಜ್ಜರು೧ ಹಡದ ಭಕ್ತಿಯ ನಿಮ್ಮ ಕೈಯಲು ಕೊಂಬೆ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಎಮ್ಮ ತಾಯಿ ನಿಂಬವ್ವೆ-ನಮ್ಮ ಜನನಿಯಾದ ನೀ[೧]ಲ[೧]ನೂರು ನಿಂಬವ್ವೆ, ನೀರನೆಱೆದುಂಬುವಳು-ಕೊಟ್ಟಣವ ಕುಟ್ಟಿ ನೀರು ಹೊಯ್ದು ಹಾಗದ ಕಾಯಕವ ತಂದು ಜಂಗಮಾರ್ಚನೆಯ ಮಾಡಿ ಅವರ ಪಾದೋದಕ ಪ್ರಸಾದವ ಪಡೆದನುಭವಿಸುತ್ತಿರ್ಪಳು. ನಮ್ಮಯ್ಯ ಚೆನ್ನರಾಯ-ನಮ್ಮ ಕರ್ತನಾದಂಥ ಮಾದಾರ ಚೆನ್ನಯ್ಯನು, ಕಂಪಣವ ಹೊಱುವ-ಕರಿಕಾಳಚೋಳನ ಮನೆಗೆ ಕಟ್ಟಿಗೆಹೊರೆಯ ತಂದು ಕೊಟ್ಟಿಗೆಯ ಬದುಕನ್ನು ಮಾಡಿಕೊಂಡಿರುವನು. ನಮಗಾರೂ ಇಲ್ಲವೆಂಬಿರಿ-ನಮಗೆ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿರುವಂಥವರೊರ್ವರೂ ಉಂಟಾಗಿಲ್ಲವೆಂದು ಹೇಳುವಿರಿ. ನಮ್ಮಕ್ಕ-ನಮ್ಮಗ್ರಜಳಾದ ಚೆಂಗಳೆದೇವಿಯು, ಕಂಚಿಯಲ್ಲಿ-ಕಂಚಿಪಟ್ಟಣದಲ್ಲಿ, ಬಾಣಸವ ಮಾಡುವಳು-ಏಳು ವರುಷದ ಕುಮಾರನಾದ ಚೀಲಾಳಯ್ಯನ ಕೊರೆದು ಬಾಣಸವ ಮಾಡಿ ನೀಡಿದಳು. ನಮಗಾರೂ ಇಲ್ಲವೆಂಬಿರಿ-ನಮಗೆ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿರುವಂಥವರೊರ್ವರೂ ಉಂಟಾಗಿಲ್ಲವೆಂದು ಹೇಳುವಿರಿ, ನಮ್ಮಜ್ಜರಜ್ಜರು-ನಿಂಬವ್ವೆ ಚೆನ್ನರಾಯ ಚೆಂಗಳೆದೇವಿಯರು, ಹಡದ-ಪಡೆದ, ಭಕ್ತಿಯ-ಶಿವಾದ್ವೈತಭಕ್ತಿಯನು, ನಿಮ್ಮ ಕೈಯಲ್ಲು-ನಿಮ್ಮ ಹಸ್ತಾಂತರದಿಂದಿರಲು, ಕೊಂಬೆ-ತೆಗೆದುಕೊಂಬೆನು [೨]ಎಂಬ[೨] ದೃಷ್ಟೋಪಮಾನದ ಹಾಂಗೆ.

ಎಮ್ಮ ತಾಯಿ ನಿಂಬವ್ವೆ-ನಮ್ಮ ಜನನಿಯು [೩]ಚಿಚ್ಛಕ್ತಿ[೩]ಸ್ವರೂಪವಾದ ಶ್ರೀಗುರುನಾಥನು, ನೀರನೆಱೆದುಂಬುವಳು-ಸುಜ್ಞಾನೋದಯವಾಗಿ ಅಡಿಗೆರಗಿ ಬಂದಂಥ ಶಿಷ್ಯರಿಗೆ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶ ಕರುಣಿಸಿಕೊಟ್ಟು, ಆ ಶಿಷ್ಯರುಗಳ ಭಕ್ತಿಮುಖದಿಂದ ಬರಲ್ಪಟ್ಟ ಪದಾರ್ಥವ ಲಿಂಗಕ್ಕೆ ಸಮರ್ಪಣೆಯ ಮಾಡಿ ಆ ಲಿಂಗಮುಖದಿಂದ ಬರಲ್ಪಟ್ಟ ಪ್ರಸಾದವನನುಭವಿಸುತ್ತಿಹರು. ನಮ್ಮ ಚೆನ್ನರಾಯ ಕಂಪಣವ ಹೊಱುವ-ನಮ್ಮ ಕರ್ತನಾದಂಥ ಮಹಾಲಿಂಗಮೂರ್ತಿಯೇ ಇಷ್ಟಲಿಂಗವಾಗಿ ಬಂದು ಅಂಗದಲ್ಲಿ ನೆಲೆಗೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಕೈಕೊಂಡು ಸರ್ವಾಚಾರಸಂಪತ್ತಿನಾಚರಣೆಯ ಪ್ರೇರಣಿಸಿ ಕೊಡುತ್ತಿಹರು. ನಮಗಾರೂ ಇಲ್ಲವೆಂಬಿರಿ-ನಮಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲವೆಂದು ಹೇಳುವಿರಿ, ನಮ್ಮಕ್ಕ-ನಮ್ಮಗ್ರಜಳಾದ ಜ್ಞಾನಶಕ್ತಿಯು, ಕಂಚಿಯಲ್ಲಿ-ಕಾರಣತನುವಿನಲ್ಲಿ, ಬಾಣಸವ ಮಾಡುವಳು-ಆತ್ಮಾಂಗದಲ್ಲಿ ಭಾವಲಿಂಗವಾಗಿ ನೆಲೆಗೊಂಡು ಆತ್ಮನ ವರ್ತನೆ ನಷ್ಟವಮಾಡಿ ಚಿದಾತ್ಮನಾಗಿ ಅಳವಡಿಸಿಕೊಡುವಳು.[೪] ನಮ್ಮಜ್ಜರು-ಏಳುನೂರೆಪ್ಪತ್ತಮರಗಣಂಗಳು, ಅಜ್ಜರಜ್ಜರು-ಅರುವತ್ತುಮೂರು ಪುರಾತರು, ಹಡದ-ಪಡೆದುಕೊಂಡಂಥ, ಭಕ್ತಿಯ-ಶಿವಾದ್ವೈತಭಕ್ತಿಯನು, ನಿಮ್ಮ ಕೈಯಲ್ಲು-ನಿಮ್ಮ ಹಸ್ತದಲು, ಕೊಂಬೆ-ತೆಗೆದುಕೊಂಬೆ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

.............................................

೧-೧ ರ (ಗ). ೨-೨ ಎಂಬುದರ್ಥ (ಗ). ೩-೩ ಇಚ್ಛಾಶಕ್ತಿ (ಗ). ೪ + ನಮಗಾರೂ ಇಲ್ಲವೆಂಬಿರಿ-ನಮಗೆ ಗುರುವಿಲ್ಲ ಜಂಗಮವಿಲ್ಲವೆಂಬಿರಿ (ಕ, ಗ).

II- - - - - - - - - - - - - - - - - - - - - - - - - - - - - - - - - - - - - - - - - -

೧-೧ ಎಮ್ಮ ಅಜ್ಜರ ಅಜ್ಜರು (ಚ, ಜ).

.............................

ಎಮ್ಮ ತಾಯಿ ನಿಂಬವ್ವೆ ನೀರನೆಱೆದುಂಬಳು–ಮಾತೃಸ್ಥಾನವಹ ಚಿಚ್ಛಕ್ತಿಸ್ವರೂಪವಾದ ಮಹಾಜ್ಞಾನೇಚ್ಛೆಯನುಳ್ಳಂಥ ಮಹಾನುಭಾವ ಗುರುಮೂರ್ತಿಯು ತನ್ನನಾಶ್ರಯಿಸಿದ ಶಿಷ್ಯಭಕ್ತರ್ಗೆ ಪರಮಾನಂದಜಲವನು ಐಸಿಸಿ ಭಕ್ತಿಪದಾರ್ಥವನು ಕೈಕೊಂಡು ಅನುಭವಿಸುತ್ತಿಹನೆಂಬದರ್ಥ. ಎಮ್ಮಯ್ಯ ಚೆನ್ನರಾಯ ಕಂಪಣವ ಹೊಱುವ–ಸುಜ್ಞಾನದಿಂದರಸಾದಂಥ ಪ್ರಾಣಲಿಂಗವು ಸರ್ವಾಚಾರಸಂಪತ್ತಿನಾಚರಣೆಯೆಂಬ ಧುರೀಣವನು ಭಾರೈಸುತ್ತಿಹನೆಂಬುದರ್ಥ. ನಮ್ಮಕ್ಕ ಕಂಚಿಯಲಿ ಬಾಣಸವ ಮಾಡುವಳು–ನಮ್ಮಗ್ರಜಳಾದಂಥ ಚಿಚ್ಛಕ್ತಿಯು ಕಾರಣತನುವಿನಲ್ಲಿ ಆತ್ಮಪ್ರಕೃತಿನಿರ್ದೋಷವಪ್ಪಂತೆ ಜ್ಞಾನಾಗ್ನಿಯಿಂದ ಸಮರಸಪಾಕವ ಮಾಡುವಳು. ನಮಗಾರೂ ಇಲ್ಲವೆಂಬಿರಿ–ನಮಗೆ ಮೋಕ್ಷಮಾರ್ಗವನರುಹಿಕೊಡುವಂಥ ಸಾಹಿಗಳಾರೂ ಇಲ್ಲವೆಂಬಿರಿ. ನಮ್ಮ ಅಜ್ಜರ ಅಜ್ಜರು ಹಡದ ಭಕ್ತಿಯ ನಿಮ್ಮ ಕೈಯಲ್ಲು ಕೊಂಬೆ–ಮಾರ್ಗಕ್ರಿಯಾತ್ರಿವಿಧಭಕ್ತರು ಪಡೆದ ಶಿವಾದ್ವೈತಭಕ್ತಿಯನು ಎಲೆ ಲಿಂಗವೆ ನಿಮ್ಮ ಹಸ್ತದಿಂದ ತೆಗೆದುಕೊಂಬೆ. ಮತ್ತಂ ಆದ್ಯರು ವೇದ್ಯರು ಸಾಧ್ಯರು ಮಾಡಿದ ಭಕ್ತಿಯನು ಲಿಂಗದ ಹಸ್ತದಲ್ಲಿ ತೆಗೆದುಕೊಂಬೆ.

V- - - - - - - - - - - - - - - - - - - - - - - - - - - - - - - - - - - - - - - - - - - - - -

1–1 ಅಜ್ಜಜ್ಜರು (ಏ).

.............................

ಎಮ್ಮ ತಾಯಿ–ಚಿನ್ಮಾತೆಯು, ಕಂಚಿಯಲ್ಲಿ–ಚಿದಂಗದಲ್ಲಿ, ನೀರನೆಱೆದುಂಬಳು–ಮನಸ್ಸನು ಪ್ರಾಣಲಿಂಗದಲ್ಲಿ ಸಮರ್ಪಣೆಯ ಮಾಡಿ, ಆ ಪ್ರಾಣಲಿಂಗಪ್ರಸಾದವನನುಭವಿಸುವಳು. ಚೆನ್ನರಾಯ–ಜ್ಞಾನಗುರುವು, ಕಂಪಣವ ಹೊಱುವ–ಸರ್ವಾಚಾರಸಂಪತ್ತನಾರೋಹಿಸುವನು. ನಮ್ಮಕ್ಕ–ಜ್ಞಾನಶಕ್ತಿಯು, ಕಂಚಿಯಲಿ–ಚಿತ್ತದಲ್ಲಿ, ಬಾಣಸವ ಮಾಡುವಳು–ಆತ್ಮದ್ರವ್ಯವ ಜ್ಞಾನಾಗ್ನಿಯಲ್ಲಿ ಪಾಕವ ಮಾಡಿ ಪರಶಿವಲಿಂಗಕ್ಕೆ ಸಮರ್ಪಣೆಯ ಮಾಡುವಳು. ಅಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲ್ಲು ಕೊಂಬೆ–ದೀಕ್ಷಾಗುರು ಜ್ಞಾನಗುರುಗಳು ಹಡೆದ ಭಕ್ತಿಯ ಕ್ರಿಯಾಚಾರ ಭಾವಾಚಾರ ಜ್ಞಾನಾಚಾರವನ್ನು ನಿಮ್ಮ ಹಸ್ತದಲಿ ತೆಗೆದುಕೊಂಬೆ.

---

೩೫೪

**ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು. ಬಾಣನವ ನಾನು, ಮಯೂರನವ ನಾನು, ಕಾಳಿದಾಸನವ ನಾನು! ಕಕ್ಕಯ್ಯ ಹಿರಿಯಯ್ಯ ಚಿಕ್ಕಯ್ಯ ಚೆನ್ನಯ್ಯ ಎತ್ತಿ ಮುದ್ದಾಡಿದರೆನ್ನ, ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - - - - - - - -

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು–ಎನಗೆ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿ ಯಾರೂ ಇಲ್ಲವೆಂದು ಹೇಳವರು. ಬಾಣನವ ನಾನು–ಬಾಣನಂಶೀಭೂತದವ ನಾನು, ಮಯೂರನವ ನಾನು–ಮಯೂರನಂಶೀಭೂತದವ ನಾನು. ಕಾಳಿದಾಸನವ ನಾನು–

ಕಾಳಿದಾಸನಂಶೀಭೂತದವ ನಾನು. ಕಕ್ಕಯ್ಯ-ಡೋಹಾರ ಕಕ್ಕಯ್ಯನು, ಹಿರಿಯಯ್ಯ-ದೊಡ್ಡಪ್ಪನು. ಚೆನ್ನಯ್ಯ-ಮಾದಾರ ಚೆನ್ನಯ್ಯ, ಚಿಕ್ಕಯ್ಯ-ಚಿಕ್ಕಪ್ಪನು, ಎತ್ತಿ ಮುದ್ದಾಡಿದರು : [ಎತ್ತಿ]-ತಮ್ಮ ಬಗಲಲ್ಲಿ ಎತ್ತಿಕೊಂಡು, ಮುದ್ದಾಡಿದರೆನ್ನ-ಎನ್ನ ಲಾಲನೆಯ ಮಾಡಿದರೆಂಬುದರ್ಥ.

ಬಾಣನವ ನಾನು-ಬಾಣನು ತನ್ನ ಭಕ್ತಿಯಿಂದ ಶಿವನ ಕೂರ್ತು ಜಪತಪರಾಧನೆ ಕ್ರಿಯೆಗಳಿಂದಾರಾಧಿಸಿ ಶಿವನ ಕೃಪೆಯನ್ನು ಹಡೆದುಕೊಂಡನು. ಅಂತಪ್ಪ ಬಾಣನ ಭಕ್ತಿಯ ಎನ್ನಂಗದಲ್ಲಿ ಸಂಬಂಧವ ಮಾಡಿಕೊಂಡು ಆಚರಿಸಲ್ಪಟ್ಟಾತ 'ನಾನು,' ಮಯೂರನವ ನಾನು-ಮಯೂರನು ತನ್ನ ಜ್ಞಾನದಿಂದ ಶಿವನ ಕೂರ್ತು ಜಪತಪಾರಾಧನೆ ಕ್ರಿಯೆಗಳಿಂದರ್ಚಿಸಿ ಶಿವನ ಕೃಪೆಯನ್ನು ಪಡೆದುಕೊಂಡನು. ಅಂತಪ್ಪ ಮಯೂರನ ಜ್ಞಾನವನ್ನು ಮನದಲ್ಲಿ ಸಂಬಂಧವ ಮಾಡಿಕೊಂಡು ಆಚರಿಸಲ್ಪಟ್ಟಾತ 'ನಾನು' ಕಾಳಿದಾಸನವ ನಾನು-ಕಾಳಿದಾಸನು ತನ್ನ ವೈರಾಗ್ಯದಿಂದ ಶಿವನ ಕೂರ್ತು ಜಪತಪಾರಾಧನೆ ಕ್ರಿಯೆಗಳಿಂದರ್ಚಿಸಿ ಶಿವನ ಕೃಪೆಯನ್ನು ಪಡೆದುಕೊಂಡನು. ಅಂತಪ್ಪ ಕಾಳಿದಾಸನ ವೈರಾಗ್ಯವನ್ನು ಕರಣಂಗಳಲ್ಲಿ ಸಂಬಂಧವ ಮಾಡಿಕೊಂಡು ಆಚರಿಸಲ್ಪಟ್ಟಾತ ನಾನು. ಕಕ್ಕಯ್ಯ ಹಿರಿಯಯ್ಯನೆಂದರೆ ಇಷ್ಟಲಿಂಗವು, ಚೆನ್ನಯ್ಯ ಚಿಕ್ಕಯ್ಯನೆಂದರೆ ಪ್ರಾಣಲಿಂಗವು, ಎತ್ತಿ-ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗಾಂಗಳಾಗಿ ನೆಲೆಗೊಂಡು, ಮುದ್ದಾಡಿದರೆನ್ನ-ಅಲ್ಲಿ ಬರುವ ರೂಪು ರುಚಿ ತೃಪ್ತಿತಗಳನು ಕೈಕೊಂಡು ಶುದ್ಧಸಿದ್ಧಪ್ರಸಿದ್ಧಪ್ರಸಾದವನು ಕೊಟ್ಟು ರಕ್ಷಣ್ಯವ ಮಾಡುತ್ತಿಹರೆನ್ನ. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ನು (ಕ).

II- - - - - - - - - - - - - - - - - - - - - - - - - - - - - - - - - - - - - - - - -

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು-ನನಗೆ ನಿವೃತ್ತಿಮಾರ್ಗವ ತೋಱುವರಾರೂ ನಾಸ್ತಿ, ನನಗೆ ಮೋಕ್ಷಮಾರ್ಗವ ತೋಱುವರಾರೂ ನಾಸ್ತಿಯೆಂಬರು. ಬಾಣನವ ನಾನು-ಸ್ಥೂಲಪಂಚಾಕ್ಷರಿಸ್ವರೂಪವಾದ ಗುರುಭಕ್ತಿಯುಳ್ಳವ ನಾನು. ಮಯೂರನವ ನಾನು-ಸೂಕ್ಷ್ಮಪಂಚಾಕ್ಷರಿಸ್ವರೂಪವಾದ ಲಿಂಗಭಕ್ತಿಯುಳ್ಳವ ನಾನು. ಕಾಳಿದಾಸನವ ನಾನು-ಕಾರಣಪಂಚಾಕ್ಷರಿಸ್ವರೂಪವಾದ ಜಂಗಮಭಕ್ತಿಯುಳ್ಳವ ನಾನು. ಕಕ್ಕಯ್ಯ ಹಿರಿಯಯ್ಯ-ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗವು, ಚಿಕ್ಕಯ್ಯ ಚೆನ್ನಯ್ಯ-ಸುಜ್ಞಾನಲಾವಣ್ಯವನುಳ್ಳಂಥ ಪ್ರಾಣಲಿಂಗದೇವನು. ಎತ್ತಿ ಮುದ್ದಾಡಿದರೆನ್ನ-ಎನ್ನನೆಗಹಿ ಮಂತ್ರಲಾಲನೆಯ ಮಾಡಿದರು.

---

೩೫೫

**ಅಯ್ಯಾ ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ. ಅವನ ತೊತ್ತಿನ ಮಗ ನಾನಯ್ಯಾ, ಬಳಿದೊತ್ತು ಬಳಗದೊತ್ತು ವಂಶದೊತ್ತು ನಾನಯ್ಯ! ಕೂಡಲಸಂಗಮದೇವಾ, ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತುತನಕ್ಕೆ 'ಕೇಡಿಲ್ಲ.'**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ–ಎಲೆ ಲಿಂಗವೆ, ನಿಮ್ಮ ವಂಶಾವಳಿಯಲು : ನಿಮ್ಮ–ರಾಜರ, [ವಂಶಾವಳಿಯಲು–] ವಂಶಾಬ್ಧಿಯಲ್ಲಿ, ಒಬ್ಬ ತೊತ್ತಿನ ಮಗ ಹುಟ್ಟಿದ–ಒಬ್ಬ ಭೃತ್ಯಳ ಕುಮಾರ ಪುಟ್ಟಿದನು. ಅವನ ತೊತ್ತಿನ ಮಗ ನಾನಯ್ಯಾ–ಅವನ ಭೃತ್ಯಳ ಕುಮಾರ ನಾನಯ್ಯಾ ಬಳಿದೊತ್ತು–ಅವರ ಬೆನ್ನಬಳಿವಿಡಿದು ಬಂದ ಗೌಡಿ ನಾನು, ಬಳಗದೊತ್ತು–ಅವರ ಬಂಧುಬಳಗಕ್ಕೆಲ್ಲ ಗೌಡಿಯಾಗಿಪ್ಪೆನು, ವಂಶದೊತ್ತು–ಅವರ ವಂಶಾಬ್ಧಿಗೆಲ್ಲ ಗೌಡಿ ನಾನಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಒಡೆತನಕ್ಕೆ–ನಿಮ್ಮ ಕರ್ತೃತ್ವಕ್ಕೆ, ಕೇಡಿಲ್ಲವಾಗಿ–ನಾಶವಿಲ್ಲವಾಗಿ, ಎನ್ನ ತೊತ್ತುತನಕ್ಕೆ–ಎನ್ನ ಭೃತ್ಯತನಕ್ಕೆ, ಕೇಡಿಲ್ಲ–ಲುಕ್ಸಾನವು ಇಲ್ಲವು ಎಂಬ ದೃಷ್ಟೋಪಮಾನದ ಹಾಂಗೆ,

ಅಯ್ಯಾ–ಲಿಂಗವನು ತನ್ನತ್ತಲಭಿಮುಖವ ಮಾಡಿಕೊಂಡು ಆ ಲಿಂಗದೊಡನೆ ಬಿನ್ನೈಸುವಂಥ ಬಿನ್ನಪವು, ನಿಮ್ಮ ವಂಶಾವಳಿಯಲು–ನಿಮಲೀಲಾಸಂಪ್ರದಾಯದಲ್ಲಿ, ಒಬ್ಬ ತೊತ್ತಿನ ಮಗ ಹುಟ್ಟಿದ–ಒಬ್ಬನೆಂದರೆ ನಿಃಕಲ[೧]ಬ್ರಹ್ಮವು[೧], ತೊತ್ತೆಂದರೆ ಚಿತ್ತು, ಮಗ ಹುಟ್ಟಿದನೆಂದರೆ ಆ ಚಿತ್ತಿನಿಂದ್ಮಚಿನ್ನಾದ ಬಿಧ್ಬಿಂದು ಚಿತ್ಕಲೆಗಳು ಪುಟ್ಟಿದವು. ಆ ಚಿನ್ನಾದ ಚಿದ್ಬಿಂದು ಚಿತ್ಕಲೆ ಮೂಲಚಿತ್ತು ಚತುರ್ವಿಧವು ಗಟ್ಟಿಗೊಂಡು ಅಖಂಡ ಗೋಳಕಾಕಾರತೋಜೇಮೂರ್ತಿಯಪ್ಪ ಮಹಾಲಿಂಗವು ಉದಯವಾಯಿತ್ತು. ಅವನ ತೊತ್ತಿನ ಮಗ ನಾನಯ್ಯ–ಅವನೆಂದರೆ ಮಹಾಲಿಂಗವು, ತೊತ್ತೆಂದರೆ ಪರಾಶಕ್ತಿ, ಮಗ ನಾನಯ್ಯಾ–ಪರಾಶಕ್ತಿಯಿಂದ ಪರನಾದ ಪರಬಿಂದು ಪರಕಳೆ ಪುಟ್ಟಿದವು. ಆ ಪರಾನಾದ, ಪರಬಿಂದು, ಪರಕಳೆ, ಪರಾಶಕ್ತಿ ಚತುರ್ವಿಧವು ಗಟ್ಟಿಗೊಂಡು ಸಾಕಲ್ಯಪ್ರಣವಸ್ವರೂಪವಾದ ಸದಾಶಿವಮೂರ್ತಿ ಪುಟ್ಟಿದನು, ಆ ಸದಾಶಿವಮೂರ್ತಿಯ ಕುಮಾರ ನಾನಯ್ಯಾ. ಬಳಿದೊತ್ತು–ನಿಃಲಬ್ರಹ್ಮಕ್ಕೆ ಜ್ಞಾನಚಿತ್ತುವಿನಿಂದ ಅಂಗವಾಗಿರ್ಪೆನು. ಬಳಗದೊತ್ತು–ಮಹಾಲಿಂಗಕ್ಕೆ ಚಿಚ್ಛಕ್ತಿಯಿಂದ ಅಂಗವಾಗಿರ್ಪೆನು. ವಂಶದೊತ್ತು ನಾನಯ್ಯಾ–ಸದಾಶಿವಮೂರ್ತಿಗೆ ಸದ್ಧರ್ಮದಿಂದಂಗವಾಗಿರ್ದಾತ ನಾನಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಒಡೆತನಕ್ಕೆ–ನಿಃಕಲಬ್ರಹ್ಮದ ಮಹಾಲಿಂಗಕ್ಕೆ, ಸದಾಶಿವಮೂರ್ತಿಯ ಕರ್ತೃತ್ವಕ್ಕೆ, ಕೇಡಿಲ್ಲವಾಗಿ–ನಾಶವಿಲ್ಲವಾಗಿ, ಎನ್ನ ತೊತ್ತುತನಕ್ಕೆ–ನಿಃಕಲಬ್ರಹ್ಮಕ್ಕೆ ಜ್ಞಾನಚಿತ್ತುವಿನಿಂದ, ಮಹಾಲಿಂಗಕ್ಕೆ ಚಿಚ್ಛಕ್ತಿಯಿಂದ, ಸದಾಶಿವಮೂರ್ತಿಗೆ ಸದ್ಧರ್ಮದಿಂದಂಗವಾಗಿರ್ದಂಥ, ಭಕ್ತನ–ನಿರ್ವಂಚಕ ಸದ್ಭಕ್ತನ, ಭೃತ್ಯಕ್ಕೆ–ತೊತ್ತುತನಕ್ಕೆ, ಕೇಡಿಲ್ಲ–ಲುಕ್ಸಾನವಿಲ್ಲವು.

........................

೧–೧ ಲಿಂಗವು (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - - - - -

೧–೧ ಕೇಡಿಲ್ಲವಯ್ಯಾ (ಚ, ಜ).

........................

ಅಯ್ಯಾ ನಿಮ್ಮ ವಂಶಾವಳಿಯಲು–ಸರ್ವಕಳಾವಿಶ್ರಾಂತಿಸ್ಥಾನವಾದ ಎಲೆ ಲಿಂಗವೆ, ನಿಮ್ಮಂಶೀಭೂತವಾದ ೨೫ ತತ್ತ್ವಮೂರ್ತಿಗಳ ಸಮೂಹದಲ್ಲಿ, ಒಬ್ಬ ತೊತ್ತಿನ ಮಗ ಹುಟ್ಟಿದ–

ಒರ್ವಳಾದಂಥ ಚಿಚ್ಛಕ್ತಿಯ ಚಿತ್ಪುತ್ರನಾದ ಮಹಾಲಿಂಗ ಉದಯವಾಯಿತ್ತು. ಆತನ ತೊತ್ತಿನ ಮಗ ನಾನಯ್ಯಾ-ಆ ಮಹಾಲಿಂಗದ ದಾಸಿಯಾದ ಪರಾಶಕ್ತಿಯ ಪುತ್ರನಹ ಸದಾಶಿವಸ್ವರೂಪ ನಾನಯ್ಯಾ. ಬಳಿದೊತ್ತು-ಗುರುಸ್ಥಲ ೧೮ ಭಕ್ತ್ಯಂಶೀಭೂತನು, ಬಳಗದೊತ್ತು-ಲಿಂಗಸ್ಥಲ ೧೮ ಭಕ್ತ್ಯಂಶೀಭೂತನು, ವಂಶದೊತ್ತು ನಾನಯ್ಯಾ-ಜಂಗಮಸ್ಥಲ ೧೮ ಭಕ್ತ್ಯಂಶೀಭೂತನು, ಅದಲ್ಲದೆ ಗುರುಭಕ್ತಿಯುಳ್ಳಾತನು, ಲಿಂಗಭಕ್ತಿಯುಳ್ಳಾತನು ಜಂಗಮಭಕ್ತಿಯುಳ್ಳಾತನು ಶರಣ [೨]ನಾನಯ್ಯಾ[೨] ಕೂಡಲಸಂಗಮದೇವಾ ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತುತನಕ್ಕೆ ಕೇಡಿಲ್ಲವಯ್ಯಾ-ಎಲೆ ಮಹಾಲಿಂಗವೇ, ನಿಮ್ಮ ಕರ್ತವ್ಯಕ್ಕೆ ಅನಿತ್ಯವಿಲ್ಲವಾಗಿ ಎನ್ನ ದಾಸಿತನಕ್ಕೆ ಅನಿತ್ಯವಿಲ್ಲವಯ್ಯಾ.

.........................

೨-೨ x(ಚ).

III- - - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ-ಸಕಲತತ್ತ್ವಾಧೀಶ್ವರನಾದಂಥ ಎಲೆ ಸ್ವಾಮಿಯೆ, ನಿಮ್ಮ-ನಿಮ್ಮ ಸಂಬಂಧವಾದ, ವಂಶಾವಳಿಯಲು-ಲಿಂಗಗಳ ಸಂಪ್ರದಾಯದಲ್ಲು, ಒಬ್ಬ ತೊತ್ತಿನ-ಒರ್ವ ಚಿಚ್ಛಕ್ತಿಯ, ಮಗ-ಸದಾಶಿವನು, ಹುಟ್ಟಿದ-ಉದಯವಾದನು. ಆತನ-ಆ ಸದಾಶಿವನ, ತೊತ್ತಿನ-ಪರಾಶಕ್ತಿಯ, ಮಗ-ಈಶ್ವರನು, ನಾನಯ್ಯಾ-ಸ್ವಯವಯ್ಯಾ. ಬಳಿದೊತ್ತು-ಆದಿಶಕ್ತಿಯು, ಬಳಗದೊತ್ತು-ಇಚ್ಛಾಶಕ್ತಿಯು, ವಂಶದೊತ್ತು ನಾನಯ್ಯಾ-ಕ್ರಿಯಾಶಕ್ತಿಯು ನಾನಯ್ಯಾ. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮೊಡೆತನಕ್ಕೆ-ನಿಮ್ಮ ಕರ್ತವ್ಯತನಕ್ಕೆ, ಕೇಡಿಲ್ಲವಾಗಿ-ನಷ್ಟವಿಲ್ಲವಾಗಿ, ಎನ್ನ ತೊತ್ತುತನಕ್ಕೆ-ಎನ್ನ ಅಂಗತತ್ತ್ವಸಂಬಂಧದ ಗೌಡಿತನಕ್ಕೆ, ಕೇಡಿಲ್ಲ-ನಷ್ಟವಿಲ್ಲವು.

V-----------------------------------------------------------------------

ಅಯ್ಯಾ ನಿಮ್ಮ ವಂಶಾವಳಿಯಲು-ನಿರಂಜನಶೂನ್ಯನಿಃಕಲಲಿಂಗಗಳ ಸಮೂಹದಲ್ಲಿ [೩][ಒಬ್ಬನ][೩]-ಏಕವಾದ ಮಹಾಲಿಂಗದ, ತೊತ್ತಿನ-ಚಿಚ್ಛಕ್ತಿಯ, ಮಗ ಹುಟ್ಟಿದ-ಪುತ್ರನಾದ ಲಿಂಗವುದಯವಾಯಿತ್ತು. ಆತನ-ಆ ಪ್ರಸಾದಲಿಂಗದ, ತೊತ್ತಿನ-ಪರಾಶಕ್ತಿಯ, ಮಗ ನಾನಯ್ಯಾ-ಪುತ್ರನಾದ ಜಂಗಮಲಿಂಗಸ್ವರೂಪ ನಾನಯ್ಯಾ. ಬಳಿದೊತ್ತು-ಆ ಜಂಗಮಲಿಂಗದ ಬಳಿವಿಡಿದು ಬಂದಾದಿಶಕ್ತಿಯಿದೆ ಹುಟ್ಟಿದ ಗುರುಲಿಂಗದ ಜ್ಞಾನಶಕ್ತಿಯು ನಾನೆಂಬುದೀಗ ವಂಶದೊತ್ತು ನಾನಯ್ಯಾ. ಕೂಡಲಸಂಗಮದೇವಾ ನಿಮ್ಮೊಡೆತನಕ್ಕೆ ಆಚಾರಲಿಂಗಸ್ವರೂಪವಾದ ಇಷ್ಟಲಿಂಗಧಿಕತ್ವಕ್ಕೆ ಕೇಡಿಲ್ಲವಾಗಿ-ನಾಶವಿಲ್ಲವಾಗಿ, ಕ್ರಿಯಾಶಕ್ತಿಸ್ವರೂಪವಾದ ಭಕ್ತಿಸ್ಥಲದ ಭೃತ್ಯತ್ವಕ್ಕೆ ನಾಶವಿಲ್ಲ.

.........................

೩-೩ ಜಲ್ಪನ (ಪ).

**ಕೈಯ ಬೋ[1]ರಿಗೆ, ಮಂಡೆಯ ಮೇಲೆ ಸಿಂಬೆ, ಸಿಂಬಕನ ಮನೆಯ ಮಗ [2]ನಾನಯ್ಯಾ.[2] ಕೂಡಲಸಂಗಮದೇ[3]ವಾ,[3] ನಿಮ್ಮ ಮಂಚದ [4]ಕೂ[4]ಡೇಜಿ ಬಂದ ತೊತ್ತಿನ ಮಗ ನಾನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಕೈಯ ಬೋರಿಗೆ ಮಂಡೆಯ ಮೇಲೆ ಸಿಂಬೆ : ಕೈಯ–ಹಸ್ತದಲ್ಲಿ, ಬೋರಿಗೆ–ಚಿಲಕರಿಯನು ಪಿಡಿದುಕೊಂಡು, ಮಂಡೆಯ ಮೇಲೆ–ಮಸ್ತಕದ ಮೇಲೆ, ಸಿಂಬೆ–ತಲೆಸುತ್ತನ್ನು ಮಡಗಿಕೊಂಡ, ಸಿಂಬಕನ ಮನೆಯ ಮಗ ನಾನಯ್ಯಾ : ಸಿಂಬಕನ–ಕಸಮುಸುರಿಯನ್ನು ತೆಗೆದುಕೊಂಡು ನೀರುನಿಡಿಯನ್ನು ತಂದುಕೊಂಡಿರುವಂಥ ಗೌಡಿಯ ಗುಲಾಮಿಯ, ಮನೆಯ–ಮಂದಿರದ, ಮಗ ನಾನಯ್ಯಾ–ಕುಮಾರ ನಾನಯ್ಯಾ. ಕೂಡಲಸಂಗಮದೇವಾ–ಎಲೆ ರಾಜನೆ, ನಿಮ್ಮ ಮಂಚದ ಕೂಡೇಜಿ ಬಂದ ತೊತ್ತಿನ ಮಗ ನಾನಯ್ಯಾ : ಲೋಕದಲ್ಲಿ ಧನಸಂಪನ್ನರೇನಾದರೂ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ತನಯಳನ್ನು ವಿವಾಹ ಮಾಡಿಕೊಡಬೇಕಾದರೆ ಪಟ್ಟೆಮಂಚ ಠಾಣಾದೀವಿಗೆ ಕರು ಎಮ್ಮೆ ಭೃತ್ಯರ ಮೊದಲಾದಂಥವನ್ನು ಕಳಿಸಿಕೊಟ್ಟಿದ್ದಲ್ಲಿ, ಮಂಚದ ಕೂಡೇಜಿಬಂದ–ಪರಿಯಂಕದೊಂದಿಗೆ ಒದಗಿಬಂದ, [ತೊತ್ತಿನ ಮಗ ನಾನಯ್ಯಾ–] ಭೃತ್ಯಳ ಕುಮಾರ ನಾನಯ್ಯ ಎಂಬ ದೃಷ್ಟೋಪಮಾನದ ಹಾಂಗೆ,

● ಕೈಯ ಬೋರಿಗೆ ಮಂಡೆಯ ಮೇಲೆ ಸಿಂಬೆ : ಕೈಯ–ಸುಚಿತ್ತವೆಂಬ ಹಸ್ತದಲ್ಲಿ, ಬೋರಿಗೆ–ಸತ್ಕ್ರಿಯಾಚಾರವೆಂಬ ಚಿಲಕರಿಯನ್ನು ಪಿಡಿದುಕೊಂಡು, ಮಂಡೆಯ ಮೇಲೆ–ಆತ್ಮಾಂಗದಲ್ಲಿ, ಸಿಂಬೆ–ಜ್ಞಾನವೆಂಬ ತಲೆಸುತ್ತನ್ನು ಮಡಗಿಕೊಂಡ ಸಿಂಬಕನ [ಮನೆಯ] ಮಗ ನಾನಯ್ಯಾ : [ಸಿಂಬಕನ ಮನೆಯ–] ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗವ ಸಂಬಂಧವ ಮಾಡಿಕೊಂಡು ಜ್ಞಾನಕ್ರಿಯೆವಿಡಿದಾಚರಿಸುವಲ್ಲಿ ಭಯಭಕ್ತಿ ಭೃತ್ಯಾಚಾರವನುಳ್ಳ ಶ್ರೀಗುರುಮೂರ್ತಿಯ, ಮಗ ನಾನಯ್ಯ–ಇಷ್ಟಲಿಂಗವೆಂಬ ಕುಮಾರ ನಾನಯ್ಯ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಮಂಚದ ಕೂಡೇಜಿ–ಚತುರ್ವಿಧ ಅಂಗದಲ್ಲಿ ಚತುರ್ವಿಧ ಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧ ಭಕ್ತಿವಿಡಿದಾಚರಿಸುತ್ತ, ಬಂದ–ಎಯ್ದುಬಂದ, ತೊತ್ತಿನ ಮಗ ನಾನಯ್ಯಾ:[ತೊತ್ತಿನ–] ಜ್ಞಾನಕ್ರೀವಿಡಿದಾಚರಿಸುವಲ್ಲಿ ಭಯಭಕ್ತಿ ಭೃತ್ಯಾಚಾರವನುಳ್ಳ ಶ್ರೀಗುರುಮೂರ್ತಿಯ, ಮಗ ನಾನಯ್ಯಾ–ಇಷ್ಟಲಿಂಗವೆಂಬ ಕುಮಾರ ನಾನಯ್ಯಾ.

II- - - - - - - - - - - - - - - - - - - - - - - - - - - - - - - - - - - - - - - - - - -

1 + ಹ (ಚ, ಜ). 3–3 ವರ (ಚ, ಜ). 4–4 ಕೋ (ಚ, ಜ).

.........................

ಕೈಯ ಬೋಹರಿಗೆ–ಸದ್ಭಾವವೆಂಬ ಹಸ್ತದಲ್ಲಿ ಸಕಲಪ್ರಪಂಚವನು ಬೋಹರಿಸಿ ನೆಲಕ್ಕೆ ನೂಂಕುವ ಶಿಕ್ಷಾಬೋಧೆಯು, ಮಂಡೆಯ ಮೇಲೆ ಸಿಂಬೆ–ಶುದ್ಧಜ್ಞಪ್ತಿಯೆಂಬ ಶಿರಸ್ಸಿನಲ್ಲಿ ಕ್ರಿಯಾಧಾರವು. ಸಿಂಬಕನ ಮನೆಯ ಮಗ ನಾನಯ್ಯಾ–ಜ್ಞಾನಶಕ್ತಿಗಳಿಗೆ ಕರ್ತೃವಾದಂಥ ಶ್ರೀಗುರುದೇವನ ಚಿನ್ಮಂದಿರದ ಭಕ್ತಿಪುತ್ರ ನಾನಯ್ಯಾ. ಕೂಡಲಸಂಗಮದೇವರ ಮಂಚದ ಕೂಡೇಜಿ ಬಂದ ತೊತ್ತಿನ ಮಗ

ನಾನಯ್ಯಾ–ತ್ರಿವಿಧಲಿಂಗವನೊಳಕೊಂಡು ತೋಱುವ ಮಹಾಲಿಂಗದ ಶಮೆ ದಮೆ ಶಾಂತಿ ದಾಂತಿ ಎಂಬ ಚತುರ್ವಿಧ ಕೆಲಸವನುಳ್ಳ ಪರ್ಯಂಕದ ಆತ್ಮಶುದ್ಧಿ ಭಾವಶುದ್ಧಿ ಎಂಬ ಶೃಂಗವನಡರಿ, ಮತ್ತಂಸ್ವಸ್ಥಾನ ಸ್ವಸ್ಥಿರ ಸುಮನಮಂಟಪವನಡರಿ ಸಮಾಗಮವಾದ ಚಿಚ್ಛಕ್ತಿಯ ಭಕ್ತಿಪುತ್ರ ನಾನಯ್ಯಾ.

III- - - - - - - - - - - - - - - - - - - - - - - - - - - - - - - - - - - - - - - - - - -

1 + ಹ (ಟ, ಡ). 3–3 ವರ (ಟ, ಡ). 4–4 ಕೋ (ಟ, ಡ).

..........................

ಕೈಯ–ಅಂಗದ ಕ್ರಿಯಾಹಸ್ತದಲ್ಲಿಯ, ಬೋಹರಿಗೆ–ಸಕಲಕರ್ಮಂಗಳ ನಿವಾರಿಸಲ್ಪಟ್ಟಿಷ್ಟಲಿಂಗದ ಸತ್ಕ್ರಿಯಾಚರಣೆಯು, ಮಂಡೆಯ ಮೇಲೆ–ಸದ್ವಿವೇಕಸ್ವರೂಪವಾದ ಶಿರಸ್ಸಿನ ಮೇಲೆ, ಸಿಂಬಿ–ಜ್ಞಾನಾಂಬರವು, ಸಿಂಬಕನ–ಸತ್ಕ್ರಿಸಮ್ಯಕ್‌ಜ್ಞಾನವುಳ್ಳ ಶರಣನ, ಮನೆಯ–ಭಕ್ತಿಮಂದಿರದ, ಮಗ ನಾನಯ್ಯ–ಕ್ರಿಯಾಜ್ಞಾನವನುಳ್ಳ ಪುತ್ರ ನಾನಯ್ಯಾ. ಕೂಡಲಸಂಗಮದೇವರ–ಪರಶಿವಲಿಂಗದ, ಮಂಚದ–ಚತುರ್ವಿಧಭಕ್ತಿಯೆಂಬ ಪರ್ಯಂಕದ, ಕೂಡೇಱೆ–ಶೃಂಗಾರವನಾರೋಹಿಸಿ, ಬಂದ–ಸತ್ಕ್ರಿಸಮ್ಯಕ್‌ಜ್ಞಾನಜ್ಞಾನವಿಡಿದಾಚರಿಸಿ ಬಂದ, ತೊತ್ತಿನ–ಶರಣಸತಿಯ, ಮಗ ನಾನಯ್ಯ–ಕ್ರಿಯಾಪುತ್ರ ನಾನಯ್ಯ.

V- - - - - - - - - - - - - - - - - - - - - - - - - - - - - - - - - - - - - - - - - - - -

1 + ಹ (ಪ). 2–2 ನಾನು (ಪ). 3–3 ವರ (ಪ).

..........................

ಕೈಯ–ಕರಸ್ಥಲದಲ್ಲಿರ್ದಂಥ, ಬೋಹರಿಗೆ–ಸಕಲಕರ್ಮಂಗಳ ನಿವಾರಿಸುವ ಇಷ್ಟಲಿಂಗವು. ಮಂಡೆಯ ಮೇಲೆ–ಜ್ಞಾನದಲ್ಲಿ, ಸಿಂಬಿ–ಆಧಾರಸ್ವರೂಪವಾದ ಪ್ರಾಣಲಿಂಗವು, ಸಿಂಬಕನು–ಮಹೇಶ್ವರನು, ಮನೆಯ–ಸ್ವಾಧಿಷ್ಠಾನಚಕ್ರದ, ಮಗ ನಾನು–ಜ್ಞಾನಶಕ್ತಿಯ ಕ್ರಿಯಾಶಕ್ತಿಸ್ವರೂಪವಾದ ಪುತ್ರ ನಾನು. ಕೂಡಲಸಂಗಮದೇವರ–ತ್ರಿಕೂಟಸ್ಥಾನದಲ್ಲಿ ಸಂಬಂಧವಾದ ಮಹಾಲಿಂಗದ, ಮಂಚದ–ಕ್ರಿಯಾಪಾದ ಜ್ಞಾನಪಾದ ಯೋಗಪಾದ ಚರ್ಯಾಪಾದಂಗಳುಳ್ಳ ಚಿದಂಗದ, ಕೋಡೇಱೆ ಬಂದ–ಚಿದೈಶ್ವರ್ಯವನಾರೋಹಿಸಿ ಎಯ್ದಿದ, ತೊತ್ತಿನ ಮಗ ನಾನಯ್ಯ–ಚಿಚ್ಛಕ್ತಿಯ ಪುತ್ರ ನಾನಯ್ಯ.

---

೩೫೨

**ಅರಸರ ಮನೆಯಲ್ಲಿ ಅರಸಿಯಾಗಿಪ್ಪುದಕಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ. [1]ತಾ[1]ರೋ ಅಗ್ಗಣೆಯ, ನೀ[2]ಡೋ[2] ಪತ್ರೆಯ, ಹಿಡಿಯೋ ಲಿಂಗಕ್ಕೆ [3]ಬೋನವೆಂಬರು.[3] [4]ಕೂಡಲಸಂಗನ ಶರಣರ[4] ಮಹಾಮನೆಯಲ್ಲಿ ಒಕ್ಕುದನುಣ್ಣೋ ತೊತ್ತೇ ಎಂಬರು.**

I - - - - - - - - - - - - - - - - - - - - - - - - - - - - - - - - - - - - - - - - - - - -

ಅರಸರ ಮನೆಯಲ್ಲಿ–ರಾಜಮಂದಿರದಲ್ಲಿ, ಅರಸಿಯಾಗಿಪ್ಪುದಕಿಂದ–ಪಟ್ಟದಂಗನೆಯಾಗಿರುವದಕಿಂದಲೂ, ಭಕ್ತರ–ನಿರ್ವಂಚಕ ಸದ್ಭಕ್ತರ, ಮನೆಯಲ್ಲಿ–ಅವರ ಭಕ್ತಿಮಂದಿರದಲ್ಲಿ,

ತೊತ್ತಾಗಿಪ್ಪುದು–ಮೀಸಲಗೌಡಿ ಮೀಸಲಗುಲಾಮಿಯಾಗಿರುವಂಥದು, ಕರಲೇಸಯ್ಯಾ–ಅತ್ಯಂತ ಪರಿಣಾಮವಯ್ಯಾ. ತಾರೋ ಅಗ್ಗಣೆಯ–ಪ್ರಾತಃಕಾಲದಲೆದ್ದು ಹಳ್ಳ ಹೊಳೆ ಕೆರೆ ಬಾವಿ ಕೊಣಲ ತಡಿಗಳಿಗೆ ಬಿಂದಿಗೆ ಕುಜಾಯಿಗಳ ತೆಗದುಕೊಂಡು ಹೋಗಿ ನಿರ್ಮಲವಾದ ಹತ್ತೆಂಟು ಕೊಡ ಉದಕವನ್ನು ಮೊಗೆದುಕೊಂಡು ಬಂದು ಅಭಿಷೇಕವ ಮಾಡೋ, ನೀಡೋ ಪತ್ರೆಯ–ಕರಡಿಗೆ ಜೋಳಿಗೆಗಳ ತೆಗೆದುಕೊಂಡು ಪತ್ರೆ [೧]ಪುಷ್ಪದ[೧] ವನಾಂತರಂಗಳಿಗೆ ಹೋಗಿ ನಿರ್ಮಲವಾದ ಪತ್ರೆ ಪುಷ್ಪಾದಿಗಳನ್ನು ಶೋಧಿಸಿಕೊಂಡು ಬಂದು ಲಿಂಗಕ್ಕೆ ಧರಿಸೋ, ಹಿಡಿಯೋ ಲಿಂಗಕ್ಕೆ ಬೋನವೆಂಬರು–ಸೋಮವಾರ ಮಂಗಳವಾರ ಬಂತು ಹಬ್ಬ ಹುಣ್ಣಿವೆ ಬಂತು ಸಕಲಪದಾರ್ಥವ ಹರಿವಾಣದೊಳಗೆ ಗಡಣಿಸಿಕೊಂಡು ಆ ಲಿಂಗಕ್ಕೆ ನೈವೇದ್ಯವ ಹಿಡಿಯೋ ಎಂದು ಹೇಳುವರು, ಕೂಡಲಸಂಗನ ಶರಣರ–ಶಿವಶರಣರ, ಮಹಾಮನೆಯಲ್ಲಿ–ಶ್ರೇಷ್ಠತರವಾದ ಭಕ್ತಿಮಂದಿರದಲ್ಲು, ಒಕ್ಕುದನುಣ್ಣೋ ತೊತ್ತೇ ಎಂಬರು–ಅವರೊಕ್ಕಮಿಕ್ಕ ಪ್ರಸಾವನನುಭವಿಸೆಲೆ ಭೃತ್ಯಳೇಯೆಂದು ಹೇಳುವರು.

● ಅದು ಕಾರಣ–ಅದು ನಿಮಿತ್ತಾರ್ಥವಾಗಿ ಅರಸರ ಮನೆಯ ಅರಸಿಯಾಗಿದ್ದಲ್ಲಿ ಅರಸಗೆಷ್ಟೊಂದು ಅಧಿಕಾರವುಂಟೋ ಅವಳಿಗಷ್ಟೊಂದು ಅಧಿಕಾರವುಂಟಾದ ಹಾಂಗಾಗಿ ತಾನು ಒಬ್ಬರ ಕೊಲ್ಲಿಸುತ್ತ ಬಡಿಸುತ್ತ ದಿಂಡಾವೃತ್ತಿಯೊಡನೆ ಕೂಡಿ ಚರಿಸುವಳು. ಅವಳಿಗೆ ಭವದುಃಖವೇ ಉಂಟಾಗುತ್ತಿಹುದು. ಭಕ್ತರ ಮನೆಯಲ್ಲಿ–ನಿರ್ವಂಚಕಸದ್ಭಕ್ತರ ಮಂದಿರದಲ್ಲಿ, [೨][ತೊತ್ತಾಗಿಪ್ಪುದು–][೨] ತೊತ್ತುಗೆಲಸ ಮಾಡಿಕೊಂಡಿ[೩][ಪ್ಪುದು][೩], ತಾರೋ ಅಗ್ಗಣೆಯ ನೀಡೋ ಪತ್ರೆಯ ಹಿಡಿಯೋ ಲಿಂಗಕ್ಕೆ ಬೋನ[ವೆಂಬರು]–ಸಕಲ ಪದಾರ್ಥವ ಹರಿವಾಣದಲ್ಲಿ ಗಡಣಿಸಿ ತಂದು ಲಿಂಗಕ್ಕೆ ನೈವೇದಿಸಿ ಆ ಲಿಂಗಪ್ರಸಾದವನು ಪಡೆದನುಭವಿಸೊ ತೊತ್ತೇ ಎಂದು ಹೇಳುವರು. ಅದು ಕಾರಣ ತಂಗಟೂರ [೪]ಮಾ[ರಯ್ಯ]ರುಗಳ[೪] ಮನೆಯಲ್ಲಿರುವಂಥ ಭೃತ್ಯಳಿಗೆ ಮುಕ್ತಿಯಾಯಿತ್ತು. ಅದಲ್ಲದೆ ಹಾವಿನಹಾಳ ಕಲ್ಲಪ್ಪಯ್ಯಗಳ ಮನೆಯಲ್ಲಿರುವಂಥ ಭೃತ್ಯಳಿಗೆ ಮುಕ್ತಿಯಾಯಿತ್ತು.

..........................

೧–೧ ಪ್ರಸೂನ (ಗ). ೨–೨ ಭೃತ್ಯನಾಗಿದ್ದರೆ (ಕ, ಗ). ೩–೩ ದ್ದರೆ (ಕ, ಗ). ೪–೪ ತಂಗಟೂರ ಮಾರಾಭ್ಯರುಗಳ (ಕ), ತಂಗಟೂರಯ್ಯ ಮಾರಾಭ್ಯರುಗಳ (ಗ).

V- - - - - - - - - - - - - - - - - - - - - - - - - - - - - - - - - - - - - - - - - - - -

1–1 ತೋ (ಪ). 2–2 ಡೌ (ಪ). 3–3 ಬೋನವ (ಪ). 4–4 ಮದೇವನ (ಪ).

..........................

ತೋರೋ ಅಗ್ಘವಣಿಯ–ಮನಸ್ಸನ್ನು ಪ್ರಾಣಲಿಂಗದಲ್ಲಿ ತರಹರವ ಮಾಡೊ, ಪತ್ರೆಯ–ಷಟ್ಚಕ್ರಂಗಳಲ್ಲಿಯ ಷಡ್ದಳಂಗಳನು, ಲಿಂಗಕ್ಕೆ–ಷಡ್ವಿಧಲಿಂಗಂಗಳಲ್ಲಿ. ನೀಡೌ–ಸಮರ್ಪಣೆಯ ಮಾಡೊ. ಬೋನವ ಹಿಡಿಯೊ–ಆತ್ಮದ್ರವ್ಯವ ಭಾವಲಿಂಗಕ್ಕೆ ಸಮರ್ಪಣೆಯ ಮಾಡೊ, ಕೂಡಲಸಂಗಮದೇವನ ಮಹಾಮನೆಯಲು–ಮಹಾಲಿಂಗದಂತರಂಗದಿಂದೆ, ಒಕ್ಕುದ–ಬಹಿಷ್ಕರಿಸಿದ ಇಷ್ಟಲಿಂಗವನು, ತೊತ್ತೇ–ಭೃತ್ಯಾಚಾರಿಯಾದ ಭಕ್ತನೇ, ಉಣ್ಣೋ–ಕ್ರೀಯಲ್ಲಿ ಸಂಬಂಧವ ಮಾಡಿಕೊಳ್ಳೋ.

---

## ೩೫೮

**ಅನುದಿನ ಮನಮುಟ್ಟಿ ಧನ್ಯನಯ್ಯಾ ದಮ್ಮಯ್ಯಾ! ದಮ್ಮಯ್ಯಾ! ನಿಮ್ಮ ಧರ್ಮದ ಕವಿಲೆಯಾನಯ್ಯಾ ಕೂಡಲಸಂಗಮದೇವಾ, ನಿಮ್ಮ ಶರಣರ ಮನೆಯ ಮಗ ನಾನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಅನುದಿನ ಮನಮುಟ್ಟಿ ಧನ್ಯನಯ್ಯಾ: ಅನುದಿನ–ಎಲ್ಲಾಗಳೂ, ಮನಮುಟ್ಟಿ–ಮನಶುದ್ಧವಾಗಿ ಆರಾಧಿಸಿ, ಧನ್ಯನಯ್ಯಾ–ಕೃತಾರ್ಥನಯ್ಯಾ, ದಮ್ಮಯ್ಯಾ! ದಮ್ಮಯ್ಯಾ!–ಲಿಂಗವೇ ಲಿಂಗವೇ ಎಂದು ಅತ್ಯಂತ ಭಯಭಕ್ತಿಯ ಭೃತ್ಯಾಚಾರದಿಂದ ಬಸವೇಶ್ವರಸ್ವಾಮಿಗಳು ಲಿಂಗದೊಡನೆ ಬಿನ್ನೈಸಿಕೊಳುತ್ತಿಹರು. ನಿಮ್ಮ ಧರ್ಮದ ಕವಿಲೆಯಾನಯ್ಯಾ–ನಿಮ್ಮ ಕೃಪಾಪುತ್ರ ನಾನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರ–ನಿಮ್ಮ ನಿರ್ವಂಚಕ ಸದ್ಭಕ್ತರ, ಮನೆಯ–ಅವರ ಭಕ್ತಿ ಮಂದಿರದ, ಮಗ ನಾನಯ್ಯಾ–ಕುಮಾರ ನಾನಯ್ಯಾ.

V- - - - - - - - - - - - - - - - - - - - - - - - - - - - - - - - - - - - - - - - - - - - - - -

ಮನಮುಟ್ಟಿ ಧನ್ಯನಯ್ಯಾ–ಲಿಂಗದಲ್ಲಿ ಮನಸ್ಸೆರಕನಾಗಿ ಕೃತಾರ್ಥನಯ್ಯಾ. ದಮ್ಮಯ್ಯ–ಕ್ರೀಯಲ್ಲಿ ಸುಯಿಧಾನವಯ್ಯ. ದಮ್ಮಯ್ಯ–ಜ್ಞಾನದಲ್ಲಿ ಸುಯಿಧಾನವನ್ನು. ನಿಮ್ಮ ಧರ್ಮದ–ನಿಮ್ಮ ಸದ್ಧರ್ಮದ, ಸಜ್ಜೀವ ನಾನಯ್ಯ ಎಂಬುದೀಗ ನಿಮ್ಮ ಧರ್ಮದ ಕವಿಲೆಯಾನಯ್ಯ ಎಂಬುದರ್ಥ.

---

## ೩೫೯

**ಆನು ನಿಮ್ಮ ಶರಣರಿಗೆ, ಮಂಡೆಯು ಬೋಳಿಸಿಕೊಂಡು ಗಂಡುದೊತ್ತಾದೆನಯ್ಯಾ, ಕೂಡಲಸಂಗಮದೇವಾ ನಿಮ್ಮ ಶರಣರಿಗೆ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಆನು–ಸಂಗನಬಸವೇಶ್ವರನು, ನಿಮ್ಮ ಶರಣರಿಗೆ–ನಿಮ್ಮ ಜಂಗಮಮೂರ್ತಿಗಳಿಗೆ, ಮಂಡೆಯ ಬೋಳಿಸಿಕೊಂಡು–ಪತ್ರೆಪುಷ್ಪಾದಿಗಳ ಎಡೆಮಾಡುವಲ್ಲಿ [1]ಪದಾರ್ಥಗಳ ಎಡೆಮಾಡುವಲ್ಲಿ[1] ಗಡ್ಡ ಮಂಡೆ ಕೂದಲು ಝಳಪಿಸಿ ಬಿದ್ದಾವಲಾಯೆಂದು ಗಡ್ಡ ಮಂಡೆಯ ಕೂದಲನು ವಪನಕ್ರಿಯೆಗಳ ಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗೆ–ನಿಮ್ಮ ಶಿವಶರಣರಿಗೆ. ಮಾಡಿಸಿಕೊಂಡು, ಗಂಡುದೊತ್ತಾದೆನಯ್ಯಾ–ಮೀಸಲುಗೌಡಿ ಮೀಸಲು ಗುಲಾಮಿಯಾಗಿ ಅತ್ಯಂತ ಪರಾಕ್ರಮದಿಂದ ಭಕ್ತಿಯ ಮಾಡಿತ್ತಿಪ್ಪೆನಯ್ಯಾ ಕೂಡಲಸಂಗಮದೇವ.

..........................

೧–೧ x (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - - -

ಆನು ನಿಮ್ಮ ಶರಣರಿಗೆ ಮಂಡೆಯ ಬೋಳಿಸಿಕೊಂಡು ಗಂಡುದೊತ್ತಾದೆನಯ್ಯಾ-ಜ್ಞಾನಕಲಾತ್ಮನು ನಾನು. ನಿಮ್ಮ ಚಿತ್ಪ್ರಭಾಂಗಸ್ವರೂಪವಾದ ಗುರುಲಿಂಗಜಂಗಮಕ್ಕೆ ಕರಣಂಗಳೆಂಬ ಕೇಶವನು ಕತ್ತರಿಸಿಕೊಂಡು ಪುರುಷಭೃತ್ಯನಾದೆನಯ್ಯಾ. ಮುಂದಕ್ಕೆ ಕಾಣಬಂದರ್ಥ.

---

## ೩೬೦

**ಕಾಮವ ತೊಱೆದಾತ, ಹೇಮವ ಜಱೆದಾತ, ಭಾನುವಿನುದಯಕ್ಕೆ ಒಳಗಾಗದ ಶರಣನು! ಆವಾಗಳೂ ನಿಮ್ಮ ಮಾಣದೆ ನೆನೆವರ ಮನೆಯಲು ಶ್ವಾನನಾಗಿರಿಸು, ಮಹಾದಾನಿ ಕೂಡಲಸಂಗಮದೇವಾ.**

II- - - - - - - - - - - - - - - - - - - - - - - - - - - - - - - - - - - - - - - - - - - -

ಕಾಮವ ತೊಱೆದಾತ : ಕಾಮವ-ಮನ್ಮಥ ವಿಕಾರವ ಮತ್ತಂ ಇತರ ಕಾಮ್ಯಾರ್ಥದ ಮೇಲಣ ಬಯಕೆಯನ್ನು, ತೊಱೆದಾತ-"ತೊಱೆವಿಡಂಬೇ ನದಿಭೇದೇ ಚ" ಯೆಂದು ವಿಡಂಬಿಸಿ ಬಿಟ್ಟಾತ, ಹೇಮವ-ಐಶ್ವರ್ಯವನ್ನು, ಜಱೆದಾತ "ಜಱೆ ದಿಕ್ಕಾರೇ" ಎಂದು ಧಿಃಕಾರವ ಮಾಡಿಬಿಟ್ಟಾತನು ಭಾನುವಿನುದಯಕ್ಕೆ-ಸೂರ್ಯನ ರೋಷಾಗ್ನಿಗೆ, ಒಳಗಾಗದ-ವಶಗತವಾಗದ, ಶರಣನು-ಶಿವಶರಣನು, ಆವಾಗಲೂ-ಎಲ್ಲಾಗಳೂ, ನಿಮ್ಮ ಸ್ವಾಮಿಗಳ, ಮಾಣದೆ-ಬಿಡದೆ, ನೆನೆವರ-ಲಿಂಗಧ್ಯಾನ ಲಿಂಗಸ್ಮರಣೆಗಳ ಮಾಡಲ್ಪಟ್ಟಂಥವರುಗಳ, ಮನೆಯಲು-ಭಕ್ತಿಮಂದಿರದಲ್ಲು, ಶ್ವಾನನಾಗಿರಿಸು-ಗೃಹ ^೧^ಗಾ^೧^ಹಿಯಾಗಿ ಸೈರಿರಿಸು.^೨^ ಮಹಾದಾನಿ : [ಮಹಾ-] ಭಕ್ತರುಗಳಿಗೆ ಮಹದಾನಂದ ಸುಖವನ್ನು, ದಾನಿ-ಕರುಣಿಸಕೊಡಲ್ಪಟ್ಟಂಥ, ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ.

.........................

೧-೧ ಗ್ರಾ. (ಕ). ೨ + ಅಲ್ಲದೆ ಸ್ವಾ-ಎನ್ನನು, ಅನುದಿನ-ಎಲ್ಲಾಗಳು. ಇರಿಸು-ಅವರ ಭಕ್ತಿಗೃಹದ ಕಡೆಬಾಗಿಲಲ್ಲಿ ಸೈತಿರಿಸು.

III- - - - - - - - - - - - - - - - - - - - - - - - - - - - - - - - - - - - - - - - - - -

ಭಾನುವಿನುದಯಕ್ಕೆ-ಪ್ರಾಣವಾಯುವಿನ ವರ್ತನೆಗೆ.

---

## ೩೬೧

**[1]ಕೀಳಾಗಲಲ್ಲದೆ, ಮೇಲಾಗಲೊಲ್ಲೆನು.[1] ಕೀಳಿಂಗಲ್ಲದೆ ಹಯನ ಕಱೆವುದೆ? ಮೇಲಾಗಿ ನರಕದಲ್ಲಿ ಓಲಾಡಲಾಱೆ; ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು, ಮಹಾದಾನಿ. ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಕೀಳಾಗಲಲ್ಲದೆ-ನಿರಹಂಕಾರ ನಿರಹಂಭಾವದಿಂದ ಭಯಭಕ್ತಿ ಭೃತ್ಯಾಚಾರವನ್ನು ಮುಂದುಗೊಂಡು ಭಕ್ತಿಯ ಮಾಡುವೆನಲ್ಲದೆ, ಮೇಲಾಗಲೊಲ್ಲೆನು-ಅಹಂಕಾರ ಹಿರೇತನ ಆತ್ಮತೇಜಸ್ಸು ಮುಂದುಗೊಂಡು ಭಕ್ತಿಯ ಮಾಡಲೊಲ್ಲೆನು. ಕೀಳಿಂಗಲ್ಲದೆ ಹಯನ ಕಱೆವುದೆ?-ಆಕಳಿಗೆ ಹಾಲನ್ನು

ಕರೆದುಕೊಳಬೇಕಾದರೆ ಮೈಯನ್ನು ತೊಳೆದು ಮಡ್ಡ ಮುರುಹು ಮೊದಲಾದವನ್ನು ಇಟ್ಟು ಕೆಳಗೆ ಕುಳಿತುಕೊಂಡು ಹಾಲನ್ನು ಕರೆದುಕೊಂಡರೆ ಕೊಟ್ಟತ್ತಲ್ಲದೆ, ನಾನು ನಾಡಿಗನ ಹೆಂಡತಿ ದೇಸಾಯಿಯ ಹಂಡತಿ ಗೌಡನ ಹೆಂಡತಿ ನನ್ನಂಥಾಕಿ ಕೆಳಗೆ ಕುಳಿತುಕೊಂಡು ಕರೆಯ ಬೇಕೆ? ಎಂದು ಮೇಲೆ ಕುಳಿತುಕೊಂಡು ಮೊಲೆಯನ್ನು ಜಗ್ಗಿದಲ್ಲಿ ಟಣ್ಣನೆ ನೆಗೆದು ಕೆಳಯಕ್ಕೆ ಕೆಡಹಿ ಸೊಣ[೧]ಲು[೧] ತಪ್ಪಿಸಿ ಬಿಡುವುದು. ಮೇಲೆ ಕುಳಿತು ಬಿದ್ದಲ್ಲಿ ಮೊಣಕಾಲು ಮೊಣಕೈ ಮುರಿದಲ್ಲಿ ಅವಳಿಗೆ ದುಃಖವೇ ಉಂಟಾಗುತ್ತಿಹುದು. ಹಾಂಗೆ, ನಿರಹಂಕಾರ ನಿರಹಂಭಾವದಿಂದ ಭಯಭಕ್ತಿ ಭೃತ್ಯಾಚಾರವನ್ನು ಮುಂದುಗೊಂಡು ಭಕ್ತಿಯಮಾಡಿದರೆ ನಿತ್ಯವಾದ ನಿಜಮೋಕ್ಷ[೨] ದೊರೆಕೊಂಬುವುದಲ್ಲದೆ ಅಹಂಕಾರ ಹಿರೇತನ ಆತ್ಮ ತೇಜಸ್ಸು ಮುಂದುಗೊಂಡು ಭಯಭಕ್ತಿಯ ಮಾಡಿದರೆ ಮುಕ್ತಿಯಾದೀತೆ? ಆಗಲರಿಯದು. ಮೇಲಾಗಿ–ಶ್ರೇಷ್ಠನಾಗಿ, ನರಕದೊಳಗೆ–ನಿರಯದಲ್ಲಿ, ಓಲಾಡಲಾಜೆ–ಅಳುತ್ತ ಮುಳುಗುತ್ತ ಸದಾ ಕ್ರೀಡಾಪರನಾಗಿ ಕಷ್ಟಪಡಲಾರೆನು. ನಿಮ್ಮ ಶರಣರ–ನಿಮ್ಮ ಜಂಗಮಮೂರ್ತಿಗಳ, ಪಾದಕ್ಕೆ–ಅವರ ಪಾದಕಮಲಂಗಳ ಭಕ್ತಿಗೆ, ಕೀಳಾಗಿರಿಸು–ನಿರಹಂಕಾರ ನಿರಹಂಭಾವ ಭಯಭಕ್ತಿ ಭೃತ್ಯಾಚಾರದಲ್ಲಿ ಸೈತಿರಿಸು. ಮಹಾದಾನಿ : [ಮಹಾ] ಭಕ್ತರುಗಳಿಗೆ ಮಹದಾನಂದಸುಖವನ್ನು, ದಾನಿ–ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ಲ (ಗ). ೨– + ವನ್ನು (ಕ, ಗ).

II- - - - - - - - - - - - - - - - - - - - - - - - - - - - - - - - - - - - - - - - - - - -

1-1 ಮೇಲಾಗಲೊಲ್ಲೆ ಕೀಳಾಗಲಲ್ಲದೆ(ಚ,ಜ)

..........................

ಮೇಲಾಗಲೊಲ್ಲೆ ಕೀಳಾಗಲೊಲ್ಲದೆ, ಕೀಳಿಂಗಲ್ಲದೆ ಹಯನು ಕಱೆವುದೆ?–ಭಕ್ತಿಯಿಂದಡಿಗೆರಗಿದಲ್ಲಿ ತಮ್ಮ ಶಿವಾನುಭಾವವನು ಬೋಧಿಸುವರು, ಗರ್ವಿಸಿದಲ್ಲಿ ಬೋಧಿಸರು. ಮುಂದಕ್ಕೆ ಕಾಣಬಂದರ್ಥ.

V------------------------------------------------------------

ಕೀಳಾಗಲಲ್ಲದೆ–ಭಯಭಕ್ತಿ ಕಿಂಕುರ್ವಾಣವುಳ್ಳ ಭೃತ್ಯಾಚಾರಿಯಾಗುವೆನಲ್ಲದೆ ಗುರುಲಿಂಗಜಂಗಮದ ಸಹಪಙ್ತಿಯಲ್ಲಿ ಪರ್ಯಂಕ ಮೊದಲಾದುನ್ನತಾಸನದಲ್ಲಿ ಕುಳ್ಳಿರಲಂಜುವೆನು, ಕೀಳಿಂಗಲ್ಲದೆ–ಭೃತ್ಯಾಚಾರಕ್ಕಲ್ಲದೆ, ಹಯನು ಕಱೆವುದೆ?–ಪರಮಾಮೃತಸ್ವರೂಪವಾದ ಭಕ್ತಿ ದೊರೆಕೊಂಡೀತೆ?

---

೩೬೨

**ಬ್ರಹ್ಮಪದಮಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆನಯ್ಯಾ. ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನಱಿದಿಪ್ಪ ಮಹಾಪದವಿಯ ಕರುಣಿಸಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಬ್ರಹ್ಮಪದವಿಯನೊಲ್ಲೆ–ಸತ್ಯಲೋಕಕ್ಕೆ ದೊರೆಯಾಗಿ ಪದ್ಮಮುದ್ರೆಯುಕ್ತವಾಗಿ ಸರಸ್ವತಿಯ ರಮಣನಾಗಿ ನವಕೋಟಿಬ್ರಹ್ಮರಿಂದ ವಾಲೈಸಿಕೊಂಬುತ್ತ ಪ್ರಾತಃಕಾಲದಲೆದ್ದು ಶರೀರಶುದ್ಧತೆಯ ಮಾಡಿಕೊಂಡು ಶುಚಿರ್ಭೂತವಾಗಿ ರತ್ನಗಂಬಳಿಯ ಗದ್ದುಗೆಯ ಮೇಲೆ ಕುಳಿತುಕೊಂಡು ಭವನೆಂಬ ಮೂರ್ತಿಯ ಧ್ಯಾನಿಸಿ ಕ್ಷೋಣಿಪ್ರಾಣಿಗಳ ಸೃಷ್ಟಿಸುವಂಥದೇ ಬ್ರಹ್ಮಪದವಿ. ಅಂಥ ಬ್ರಹ್ಮಪದವಿಯ ಕರುಣಿಸಿಕೊಟ್ಟರೆ ನಾನೊಲ್ಲೆನು. ವಿಷ್ಣುಪದವಿಯನೊಲ್ಲೆ–ವೈಕುಂಠಲೋಕಕ್ಕೆ ದೊರೆಯಾಗಿ ಶಂಖಚಕ್ರಮುದ್ರೆಯುಕ್ತನಾಗಿ ಲಕ್ಷ್ಮೀರಮಣನಾಗಿ ದಶಕೋಟಿನಾರಾಯಣರಿಂದೆ ವಾಲೈಸಿಕೊಳ್ಳುತ್ತ ಮಧ್ಯಾಹ್ನ ಕಾಲದಲ್ಲಿ ಸಾಂಗೋಪಾಂಗ ಶರೀರಶುದ್ಧತೆಯ ಮಾಡಿಕೊಂಡು ಶುಚಿರ್ಭೂತನಾಗಿ ಶ್ಯಾಮವರ್ಣದ ಕಂಬಳಿಯ ಗದ್ದುಗೆಯ ಮೇಲೆ ಕುಳಿತುಕೊಂಡು ಮೃಡನೆಂಬ ಮೂರ್ತಿಯ ಧ್ಯಾನಿಸಿ ಆ ಬ್ರಹ್ಮನಿಂದ ಉತ್ಪತ್ಯವಾದ ಕ್ಷೋಣಿಪ್ರಾಣಿಗಳಿಗೆ ಆಹಾರ ವ್ಯವಹಾರ ಭೋಗ [೧]ಭುಕ್ತಾದಿಗಳ[೧] ಕೊಟ್ಟು ರಕ್ಷಣ್ಯವ ಮಾಡುವಂಥದೇ ವಿಷ್ಣುಪದವಿ. ಅಂಥ ವಿಷ್ಣುಪದವಿಯನ್ನು ಕರುಣಿಸಿಕೊಟ್ಟರೂ ನಾನೊಲ್ಲೆನು. ರುದ್ರಪದವಿಯನೊಲ್ಲೆ–ರುದ್ರಲೋಕಕ್ಕೆ ದೊರೆಯಾಗಿ ವೃಷಭಮುದ್ರೆಯುಕ್ತನಾಗಿ ಕ್ರಿಯಾಶಕ್ತಿರಮಣನಾಗಿ ಏಕಾದಶಕೋಟಿರುದ್ರರಿಂದ ವಾಲೈಸಿಕೊಳುತ್ತ ಸಾಯಂಕಾಲದಲ್ಲಿ ಸಾಂಗೋಪಾಂಗ ಶರೀರಶುದ್ಧತೆಯ ಮಾಡಿಕೊಂಡು ಶುಚಿರ್ಭೂತನಾಗಿ ಕರೇಕಂಬಳಿಯ ಗದ್ದುಗೆಯ ಮೇಲೆ ಕುಳಿತುಕೊಂಡು ಹರನೆಂಬ ಮೂರ್ತಿಯ ಧ್ಯಾನಿಸಿ ಬ್ರಹ್ಮನಿಂದ ಸೃಷ್ಟಿಯಾಗಿ ವಿಷ್ಣುವಿನಿಂದ ಸ್ಥಿತಿಭೋಗವನನುಭವಿಸಿ ಸೊಕ್ಕಿದಂಥ ಪ್ರಾಣಿಗಳ ಒಂದುವೇಳೆ ಖಂಡೆಯವ ತೆಗೆದುಕೊಂಡು ಝಳಪಿಸಿ ಕ್ಷೋಣಿ ಪ್ರಾಣಿಗಳ ಲಯವ ಮಾಡುವಂಥದೇ ರುದ್ರಪದವಿ. ಅಂತಪ್ಪ ರುದ್ರಪದವಿಯನ್ನು ಕರುಣಿಸಿಕೊಟ್ಟರೂ ನಾನೊಲ್ಲೆನು. ಮತ್ತಾವ ಪದವಿಯನೊಲ್ಲೆನಯ್ಯಾ–ಇವು ಮೊದಲಾದ ಎರಡೆಂಬತ್ತುಕೋಟಿ ಪದವಿಗಳೊಳಗೆ ಯಾವ ಪದವಿಯನಾದರೂ ಕರುಣಿಸಿಕೊಟ್ಟರೂ ನಾನೊಲ್ಲೆನಯ್ಯಾ.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಸದ್ಭಕ್ತರ– "ಲಿಂಗಭಕ್ತಾಶ್ಚ ಜಂಗಮಾಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳ, ಪಾದವನರ್ಜಿದಿಪ್ಪ–ಪಾದಕಮಲದ ಭಕ್ತಿಯ [೨]ನೆಲೆ[೨] ತಿಳಿದಿರುವಂಥ, ಮಹಾಪದವಿಯ–ಸರ್ವೋತ್ತರ ಸಂಪೂರ್ಣವಾದ ಘನಲಿಂಗಪದವಿಯನು, ಕರುಣಿಸಯ್ಯಾ–ಕೃಪೆಮಾಡಯ್ಯಾ.

..........................

೧–೧ ಗಳನು (ಗ). ೨–೨ ನೇ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - -

ಬ್ರಹ್ಮಪದವಿಯನೊಲ್ಲೆ–ಬ್ರಹ್ಮನು ಸತ್ಯಲೋಕದಲ್ಲಿ ಸರಸ್ವತಿ ಸಮೇತನಾಗಿ ಕೆಂಪಿನ ಕಂಬಳಿಯ ಗದ್ದುಗೆಯ ಮೇಲೆ ಕುಳಿತುಕೊಂಡು ನವಕೋಟಿ ಬ್ರಹ್ಮರುಗಳಿಂದೆ ವಾಲಗವ ಕೈಕೊಂಬುತ್ತೆ ಕೈಯಲ್ಲಿ ವಾಲೆ ಕಂಠವ ಪಿಡಿಯಲು ಅನಂತಪ್ರಾಣಿಗಳು ಸೃಷ್ಟಿಯಾಗುತ್ತಿಹರು, ಅಂಥದೆ ಬ್ರಹ್ಮಪದವಿಯು; ಆ ಪದವಿಯನು ನಾನೊಲ್ಲೆ. ವಿಷ್ಣುಪದವಿಯನೊಲ್ಲೆ–ನಾರಾಯಣನು ವೈಕುಂಠಲೋಕದಲ್ಲಿ

ಲಕ್ಷ್ಮೀಕಾಂತನಾಗಿ ಶ್ವೇತಕಂಬಳಿಯ ಗದ್ದುಗೆಯ ಮೇಲೆ ಕುಳಿತುಕೊಂಡು ದಶಕೋಟಿನಾರಾಯಣರಿಂದೆ ವಾಲಗವ ಕೈಕೊಂಬುತ್ತೆ ಕಣ್ಣುಮುಚ್ಚಿ ತೆರೆಯಲು ಸಮಸ್ತಪ್ರಾಣಿಗಳು ಸ್ಥಿತಿಯವಡೆದನುಭವಿಸುತ್ತಿಹರು. ಅಂಥದೆ ವಿಷ್ಣುಪದವಿಯು; ಆ ಪದವಿಯನು ನಾನೊಲ್ಲೆ. ರುದ್ರಪದವಿಯನೊಲ್ಲೆ–ರುದ್ರನು ರುದ್ರಲೋಕದಲ್ಲಿ ರುದ್ರಾಣಿಸಮೇತನಾಗಿ ಕರಿಯ ಕಂಬಳಿಯ ಗದ್ದುಗೆಯ ಮೇಲೆ ಕುಳಿತುಕೊಂಡು ಏಕಾದಶಕೋಟಿರುದ್ರರುಗಳಿಂದೆ ವಾಲಗವ ಕೈಕೊಂಬುತ್ತೆ ಕೈಯಲ್ಲಿ ಖಡ್ಗವನು ಪಿಡಿದು ಜಳ್ಪಿಸುವ ಸಮಸ್ತ ಪ್ರಾಣಿಗಳು ಮಡಿದುಹೋಗುತ್ತಿಹರು. ಅಂಥದೆ ರುದ್ರಪದವಿಯು; ಆ ಪದವಿಯನು ನಾನೊಲ್ಲೆ. ನಾನು–ಶರಣನು, ಮತ್ತೆ–ಮರಳಿ, ಆವ ಪದವಿಯನೊಲ್ಲೆನಯ್ಯಾ–ಸಾಧಾರಣ ಪದವಿಯೆ ಆದಿಯಾಗಿ ಮನುಷ್ಯಪದವಿಯೆ ಅಂತ್ಯಮಾದ ಎರಡೆಂಬತ್ತುಕೋಟಿ ಪದವಿಯೊಳಗಾವುದಾನೊಂದು ಪದವಿಯನು ನಾನೊಲ್ಲೆನಯ್ಯಾ, ಮುಂದಕ್ಕೆ ಕಾಣಬಂದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ತ್ರಿದೇವತೆಗಳ ಪದವಿ ಅನಿತ್ಯವಾಗಿ ಭಕ್ತಿಯೆ ನಿತ್ಯಪದವಾದ ಕಾರಣ, ನಿತ್ಯಪದವ ಕೊಡುಯೆಂಬುದೀ ವಚನದರ್ಥ.

---

೩೬೩

**ಕಾಗೆ ವಿಷ್ಟಿಸುವ ಹೊನ್ನಕಲಶವಾಹುದುದಜೆಂದ ಒಡೆಯರು ಜೋಗೈ^ಸು^ವ ಚಮ್ಮಾವುಗೆಯ ಮಾಡಯ್ಯಾ. ಅಯ್ಯಾ, ಅಯ್ಯಾ ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯಾ! ಕರ್ಮಾವಲಂಬನಂ ಕೇಚಿತ್ ಕೇಚಿತ್ ಜ್ಞಾನಾವಲಂಬನಂ । ವಯಂ ತು ಶಿವಭಕ್ತಾನಾಂ ಪಾದುಕಸ್ಯಾವಲಂಬನಂ ॥ ಎಂದುದಾಗಿ, ಕೂಡಲಸಂಗಮದೇವಾ ನಿಮ್ಮ ಸೆರಗೊಡ್ಡಿ ಬೇಡುವುದಿದೊಂದೊರವ ಕರುಣಿಸಯ್ಯಾ.**

..........................

೧–೧ x (ಗ).

ಕಾಗೆ ವಿಷ್ಟಿಸುವ ಹೊನ್ನ ಕಲಶವಾಹುದಜೆಂದ–ಲೋಕದಲ್ಲಿ ^ಐಶ್ವರ್ಯವುಳ್ಳಂಥವರು^ ಗುಡಿಗೋಪುರಂಗಳನು ಕಟ್ಟಿಸಿ ಗಚ್ಚುಗಾರಿಯನ್ನು ಮಾಡಿಸಿ ಮೇಲೊಂದು ಸುವರ್ಣದ ಕಲಶವನ್ನು ಇಟ್ಟಿದ್ದಲ್ಲಿ ದೂರದಲ್ಲಿ ನಿಂತುಕೊಂಡು ನೋಡುವಂಥವರಿಗೆ ಅಲಂಕಾರವಾಗಿಪ್ಪುದು. ಸಮೀಪಕ್ಕೆ ಬಂದು ನೋಡಿದಲ್ಲಿ ಕಾಗೆ ಗೂಗೆ ಹದ್ದುಗಳು ಕುಂತು ಕೆಡಿಸಿಬಿಟ್ಟಿದ್ದಲ್ಲಿ ಅಮಂಗಲವಾಗಿರ್ಪುದು. ಹಾಂಗೆ, ಉಪಾಧಿಕನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿದ್ದರೂ ಆ ಕಾಗೆ ಗೂಗೆ ಹದ್ದು ಕುಂತು ಕೆಡಿಸಿದಂಥ ಹೊನ್ನ ಕಲಶದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲವು. ಒಡೆಯರು–ಅರ್ಥಪ್ರಾಣಾಭಿಮಾನಗಳಿಗೆ ಕರ್ತೃಸ್ವರೂಪವಾದ ಜಂಗಮಮೂರ್ತಿಗಳು, ಜೋಗೈಸುವ–ಒತ್ತಿಮೆಟ್ಟಿ ಜಾಗೈಸಿ ಜಗ್ಗಿದುಳಿವ, ಚಮ್ಮಾವುಗೆಯ ಮಾಡಯ್ಯಾ–ಪಾದರಕ್ಷೆಯ ಮಾಡಿ ಸೈತಿಡಯ್ಯಾ. ಅಯ್ಯಾ ಅಯ್ಯಾ–ಲಿಂಗವೆ ಲಿಂಗವೆ, ನಿಮ್ಮ ಶರಣರ–ನಿಮ್ಮ ಚಿತ್ರಭಾಂಗಸ್ವರೂಪವಾದ ಜಂಗಮಮೂರ್ತಿಗಳ, ಪಾದಕ್ಕೆ–ಪದಕಮಲಂಗಳ ಭಕ್ತಿಗೆ, ಚಮ್ಮಾವುಗೆಯ ಮಾಡಯ್ಯಾ–ಪಾದರಕ್ಷೆಯಾಗಿರುವಂಥದನೆ ಕರುಣಿಸಯ್ಯಾ.

ಗ್ರಂಥ । ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. ಕೇಚಿತ್–ಕೆಲವು ಸಿದ್ಧಾಂತಿಗಳು, ಕರ್ಮಾವಲಂಬನಂ–ಭಿನ್ನಕ್ರಿಯೆಗಳನೇ ಅವಲಂಬಿಸಿಕೊಂಡಿರ್ಪರು. ಕೇಚಿತ್–ಕೆಲವು ವೇದಾಂತಿಗಳು, ಜ್ಞಾನಾವಲಂಬನಂ–ಭಿನ್ನಜ್ಞಾನವನೇ ಅವಲಂಬಿಸಿಕೊಂಡಿರ್ಪರು. ವಯಂತು–ನಾನಾಯಿತ್ತಾದರೂ, ಶಿವಭಕ್ತಾನಾಂ–ಹರಭಕ್ತರುಗಳ, ಪಾದುಕಸ್ಯ–ಪದಕಮಲದ ಭಕ್ತಿಯನ್ನು. ಅವಲಂಬನಂ–ವಹಿಸಿಕೊಂಡಿರ್ಪೆನು, ಎಂದುದಾಗಿ–ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಇದೇ ಒಂದೊರವ ಕರುಣಿಸಯ್ಯಾ–ನಾನೇನಾದರೂ ಫಲಪದ ಮುಕ್ತಿಯನ್ನು ಬೇಡೋದಿಲ್ಲ. ನಿಮ್ಮ–ಜಂಗಮಮೂರ್ತಿಗಳ ಪದಕಮಲಂಗಳ ಭಕ್ತಿಯನ್ನೇ ಅವಲಂಬಿಸಿಕೊಂಡಿರುವಂಥ ಇದೇ ಒಂದಿಷ್ಟಾರ್ಥ ಸಿದ್ಧಿಯನ್ನೇ ಕರುಣಿಸಿಕೊಡಿರೆಂದು, ಸೆರಗೊಡ್ಡಿ–ಆಚಾರಾಂಗವೆಂಬ ಸೆರಗಾಂತು, ಬೇಡುವೆ–ಯಾಚಿಸುವೆನು.

..........................

೧–೧ ಧನಸಂಪನ್ನರಾದಂಥವರು (ಗ).

---

೩೬೪

**ಆವಾವ ಭಾವದಲ್ಲಿ ಮಾಡಿ ಕೂಡಿಹೆನೆಂಬರ ಬಾಗಿಲ ತೋಱಯ್ಯಾ. ತನುವನೊಪ್ಪಿಸಿದವರ ಮನವೊಪ್ಪಿಸಿದವರ ಧನವನೊಪ್ಪಿಸಿದವರ ಬಾಗಿಲ ತೋಱಯ್ಯಾ. ಇವನೆಲ್ಲವ ಒಪ್ಪಿಸಿ ಜಂಗಮವೆನ್ನವರೆನ್ನವರೆಂಬರ ಕೆರಹ ಹೊತ್ತಿರಿಸೆನ್ನನು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಆವಾವ ಭಾವದಲ್ಲಿ–ಆವುದಾನೊಂದು ಶಿವಭಾವದಲ್ಲಿ, ಮಾಡಿ–ಲಿಂಗಪೂಜೆ ಜಂಗಮದಾಸೋಹವನನುಗೈದು, ಕೂಡಿಹೆನೆಂಬವ–ಪರಶಿವಲಿಂಗದಲ್ಲಿ ಒಡವೆರದೆನೆಂಬವರ. ಬಾಗಿಲ ತೋಱಯ್ಯಾ–ಅವರ ಭಕ್ತಿಮಂದಿರದ ಕೆಡೆದ್ವಾರವ ಕಾಣಿಸಯ್ಯಾ. ತನುವನೊಪ್ಪಿಸಿದವರ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯ ಮಾಡೋ ನೆವದಿಂದ ತನುಪದಾರ್ಥವ ಗುರುವಿಗೆ ಸಮರ್ಪಣೆಯ ಮಾಡಿದವರ, ಮನವನೊಪ್ಪಿಸಿದವರ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುವ ನೆವದಿಂದ ಮನ ಪದಾರ್ಥವ ಲಿಂಗಕ್ಕೆ ಸಮರ್ಪಣೆಯ ಮಾಡಿದವರ, ಧನವನೊಪ್ಪಸಿದವರ–ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವ ನೆವದಿಂದ ದ್ರವ್ಯಪದಾರ್ಥವ ಜಂಗಕ್ಕೆ ಕೊಟ್ಟು [೧]ಸಮರ್ಪಣೆಯ[೧] ಮಾಡುವರ, ಬಾಗಿಲ ತೋಱಯ್ಯಾ–ಅವರ ಭಕ್ತಿಮಂದಿರದ ಕಡೆದ್ವಾರವ ಕಾಣಿಸಯ್ಯಾ.

ಇವನೆಲ್ಲವ–ಈ ತನುಮನಧನವೆಂಬ ತ್ರಿವಿಧ ಪದಾರ್ಥವನು, ಒಪ್ಪಿಸಿ–ಸಮರ್ಪಣೆಯ ಮಾಡಿ, ಜಂಗಮವ–ಜಂಗಮಮೂರ್ತಿಗಳನು, ಎನ್ನವರೆನ್ನವರೆಂಬುವರ–ಎನ್ನ ಒಡೆಯರು ಎನ್ನ

ಕರ್ತರು ಎನ್ನ ಪ್ರಾಣದೊಲ್ಲಭರೆಂದು ಹೇಳುವವರ. ಕೆರಹ ಹೊತ್ತಿರಿಸೆನ್ನನು–ಅವರ ಪಾದರಕ್ಷೆಯನ್ನು ಮನೋಮಸ್ತಕದಲ್ಲಿ ತಳೆದುಕೊಂಡು ಅವರ ಭಕ್ತಿಮಂದಿರದ ಕಡೆದ್ವಾರದಲ್ಲಿ ಸೈತರಿಸೆನ್ನನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ ಭಕ್ತಿಯ (ಗ).

IV- - - - - - - - - - - - - - - - - - - - - - - - - - - - - - - - - - - - - - - - - - - -

ಜ್ಞಾನಾನಂದವಾದ ಜಂಗಮಕ್ಕೆ ತನುಮನಧನವ ಕೊಟ್ಟವರ ಬಾಗಿಲಕಾವ ಬಂಟನಾಗಿಸೆಂಬುದೀ ವಚನದರ್ಥ.

---

೩೬೫

**ಆಯತ, ಸ್ವಾಯತದನುಭಾವವ ನಾನೆತ್ತಬಲ್ಲೆನು? ಲಿಂಗಜಂಗಮಕ್ಕೆ ಮಾಡಿನೀಡುವ ಅಚ್ಚ ಶರಣರ ಮನೆಯಲು ಭೃತ್ಯನಾಗಿಪ್ಪೆನಯ್ಯಾ; ಇದು ಕಾರಣ, ಕೂಡಲಸಂಗನಶರಣರಲ್ಲದೆ ಅನ್ಯವನರಿಯೆನಾಗಿ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಆಯತ ಸ್ವಾಯತದನುಭಾವವ ನಾನೆತ್ತಬಲ್ಲೆನು? : ಆಯತ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡುವುದು. ಸ್ವಾಯತ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವುದು, ಅನುಭಾವವ–ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಜಂಗಮಭಕ್ತಿ ಮಾಡುವುದು, ನಾನೆತ್ತಬಲ್ಲೆನು?–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವ ಮಾಡುವಂಥದನು ನಾನಾವಕಡೆಯಿಂದ ತಿಳಿದಿಪ್ಪೆನು? ಅರಿಯೆನು. ಮತ್ತಂ, "ಆಯತಂ ಇಷ್ಟಲಿಂಗಂ ಚ" ಎಂದು ಅಂಗದಲ್ಲಿ ಇಷ್ಟಲಿಂಗಸಂಬಂಧವಾಗಿರ್ಪುದು, "ಸ್ವಾಯತಂ ಪ್ರಾಣಲಿಂಗಂ ಚ" ಎಂದು ಅಂತರಂಗದಲ್ಲಿ ಪ್ರಾಣಲಿಂಗಸಂಬಂಧವಾಗಿರ್ಪುದು. ಅನುಭಾವ– "ಸಂಯೋಗೋ ಭಾವಲಿಂಗಂ ಚ" ಎಂದು ಆತ್ಮಾಂಗದಲ್ಲಿ ಭಾವಲಿಂಗಸಂಬಂಧವಾಗಿರ್ಪುದನು, ನಾನೆಂತು ಬಲ್ಲೆನು?–ತ್ರಿವಿಧಾಂಗದಲ್ಲಿ ತ್ರಿವಿಧಲಿಂಗಸಂಬಂಧವ ಮಾಡಿಕೊಂಡು ತ್ರಿವಿಧಭಕ್ತಿವಿಡಿದಾಚರಿಸುವಂಥದನು ನಾನಾವಕಡೆಯಿಂದ ತಿಳಿದಿಪ್ಪೆನು? ಅರಿಯೆನು.

ಲಿಂಗಜಂಗಮಕ್ಕೆ ಮಾಡಿ : ಲಿಂಗ–ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗವು, ಜಂಗಮಕ್ಕೆ– ಆನಂದಸ್ವರೂಪವಾದ ಚರಲಿಂಗಕ್ಕೆ, ಮಾಡಿ–ತ್ರಿಕಾಲಲಿಂಗಪೂಜೆಯನನುಗೈದು, ನೀಡುವ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಕ್ಕೆ ತನುಮನಧನಂಗಳನು ಎಡೆಮಾಡುವ, ಅಚ್ಚ ಶರಣರ– ಬಚ್ಚಬರಿಯ ಚಿತ್ಸ್ವರೂಪರಾದ ಶಿವಶರಣರ, ಮನೆಯಲು–ಭಕ್ತಿಮಂದಿರದಲ್ಲಿ, ಭೃತ್ಯನಾಗಿಪ್ಪೆನಯ್ಯಾ– ಅವರು ಹೇಳಿದ ಹಾಂಗೆ ಭಕ್ತಿಯ ಮಾಡಿಕೊಂಡಿರ್ಪೆನಯ್ಯಾ. ಇದು ಕಾರಣ–ಇದು ನಿಮಿತ್ತಾರ್ಥವಾಗಿ, ಕೂಡಲಸಂಗನಶರಣರಲ್ಲದೆ–ಜಂಗಮಮೂರ್ತಿಗಳಿಗೆ ಸಕಲಪದಾರ್ಥವ ಕೊಟ್ಟು ಭಕ್ತಿಯ ಮಾಡುವೆನಲ್ಲದೆ, ಅನ್ಯವನರಿಯೆನಾಗಿ–ಷಡುದರಶನದವರಿಗೆ ಕೊಟ್ಟು ಭಕ್ತಿಯ ಮಾಡುವಂಥದನು ತಿಳಿಯೆನಾಗಿ.

IV- - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಬ್ರಹ್ಮಾನಂದವು ನಾನೆಂಬ ಅನುಭಾವ ಬೇಡ, ಲಿಂಗಜಂಗಮಕ್ಕೆ ಮಾಡುವರ ಮನೆಯ ಬಂಟನಾಗಿಪ್ಪೆನೆಂಬುದೀ ವಚನದರ್ಥ.

---

೩೬೬

**ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ; ಅಂಬುಜಕೆ ಭಾನುವಿನುದಯದ ಚಿಂತೆ; ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ; ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೇ ಚಿಂತೆ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ : ಚಕೋರಂಗೆ–ಜೊನ್ನವಕ್ಕಿಗೆ, ಚಂದ್ರಮನ ಬೆಳಗಿನ ಚಿಂತೆ–ಪೌರ್ಣಮಿಚಂದ್ರಮನು ಆವಾಗ ಪೂರ್ವಾದ್ರಿಯಿಂದ ಉದಯವಾದಾನೋ ಆವಾಗ ತನ್ನ ಷೋಡಶಕಲೆಗಳ ಪ್ರತಿಬಿಂಬಿಸ್ಯಾನೋ ಆವಾಗ ಅಮೃತ ಕಿರಣವ ಸೇವಿಸೇನೋ ಎಂದು ಅದೇ ವ್ಯಾಕುಲದೊಡನೆ ಕೂಡಿರುತ್ತಿಹುದಲ್ಲದೆ ಚಂದ್ರಮನ ಮರೆತುಬಿಟ್ಟೀತೆ? ಮರೆತುಬಿಡದು. ಅಂಬುಜಕೆ ಭಾನುವಿನ ಉದಯದ ಚಿಂತೆ : ಅಂಬುಜಕೆ–ತಾವರೆಯ ಕಮಲಕ್ಕೆ, ಭಾನುವಿನುದಯದ ಚಿಂತೆ–ಆವಾಗ ಸೂರ್ಯನು ಪೂರ್ವಾದ್ರಿಯಿಂದ ಉದಯವಾದಾನೋ ಆವಾಗ ತನ್ನ ಕಿರಣವನ್ನು ಪ್ರತಿಬಿಂಬಿಸ್ಯಾನೋ ಆವಾಗ ವಿಕಸನವಾದೇನೋ ಎಂದು ಅದೇ ವ್ಯಾಕುಲದೊಡನೆ ಕೂಡಿರುತ್ತಿಹುದಲ್ಲದೆ ಆ ಸೂರ್ಯನ ಏನಾದರೂ ಮರೆತುಬಿಟ್ಟೀತೆ? ಮರೆತುಬಿಡದು.

ಭ್ರಮರಂಗೆ–ತುಂಬಿಗೆ, ಪರಿಮಳದ ಬಂಡುಂಬ ಚಿಂತೆ–ಆವಾಗ ಕಮಲ ವಿಕಸನವಾದೀತೋ ಆವಾಗ ಅದರ ಪರಾಗಮ್ನ ಸೇವಿಸೇನೋ ಎಂದು ಅದೇ ವ್ಯಾಕುಲದೊಡನೆ ಕೂಡಿರುತ್ತಿಹುದಲ್ಲದೆ ಆ ಕಮಲವೇನಾದರೂ ಮರೆತುಬಿಟ್ಟೀತೆ? ಮರೆತುಬಿಡದು. ಎನಗೆ–ಸಂಗನಬಸವೇಶ್ವರನಿಗೆ, ನಮ್ಮ ಕೂಡಲಸಂಗಮದೇವರ–ನಮ್ಮ ಪರಶಿವಲಿಂಗದೇವರ, ನೆನೆವುದೇ ಚಿಂತೆ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದೇ ವ್ಯಾಕುಲವುಂಟಾಗಿರ್ಪುದು.

II- - - - - - - - - - - - - - - - - - - - - - - - - - - - - - - - - - - - - - - - - - - - - - - - -

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ–ಜೊನ್ನವಕ್ಕಿಗೆ ಚಂದ್ರನಾವಾಗ ಬಂದಾನೋ ಆತನ ಶೀತಕಿರಣವನಾವಾಗ ಸೇವಿಸೇನೋ ಎಂಬ ವ್ಯಾಕುಳವದಕ್ಕೆ ಉಂಟಾಗಿಪ್ಪುದು. ಅಂಬುಜಕೆ ಭಾನುವಿನ ಉದಯದ ಚಿಂತೆ–ತಾವರೆಯ ಕಮಲಕ್ಕೆ ಸೂರ್ಯನಾವಾಗ ಉದಯವಾದಾನೋ ಆವಾಗ ಕಮಲ ವಿಕಸನವಾದೇನೋ ಎಂಬ ವ್ಯಾಕುಳವದಕ್ಕೆ ಉಂಟಾಗಿಪ್ಪುದು. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ–ತುಂಬಿಗೆ ಕುಸುಮವು ಆವಾಗ ವಿಕಸನವಾದೀತೋ ಆ ಸದ್ವಾಸನೆಯನಾವಾಗ ಸೇವಿಸೇನೋ ಎಂಬ ವ್ಯಾಕುಳವದಕ್ಕೆ ಉಂಟಾಗಿಪ್ಪುದು. ಹಾಂಗೆ,

ಜ್ಞಾನಕಲಾತ್ಮನಿಗೆ ಪರಮಶಾಂತಿಜ್ಞಾನಾವಾಗ ಉದಯವಾದೀತೋ ಎಂಬ ವ್ಯಾಕುಳವುಂಟಾಗಿಪ್ಪುದು. ಶರಣನ ಹೃದಯಕಮಲಕ್ಕೆ ಚಿದಾದಿತ್ಯನುತ್ಪತ್ಯವಾದ ವ್ಯಾಕುಳವುಂಟಾಗಿಪ್ಪುದು.

ಷಡಕ್ಷರಿಮಂತ್ರಸ್ವರೂಪವಾದ ಶರಣನಿಗೆ ಸ್ವಾನುಭಾವ ಸದ್ವಾಸನೆಯ ತೆಗೆದುಕೊಳಬೇಕೆಂಬ ವ್ಯಾಕುಳವುಂಟಾಗಿಪ್ಪುದು. ಮುಂದಕ್ಕೆ ಕಾಣಬಂದರ್ಥ.

---

೩೬೭

**ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ, ಬಳಿದಪ್ಪಿದ ಪಶು ತನ್ನ ಹಿಂಡನಱಸುವಂತೆ, ಬಯಸುತಿರ್ದೆನಯ್ಯಾ ನಿಮ್ಮ ಶರಣರ ಬರವನು, ಬಯಸುತಿರ್ದೆನಯ್ಯಾ ನಿಮ್ಮ ಭಕ್ತರ ಬರವನು. ದಿನಕರನ ಉದಯಕ್ಕೆ ಕಮಲವಿಕಸನವಾದಂತೆ ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - -

ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ–ಒಬ್ಬಾನೊಬ್ಬ ಜನನಿಯಾದಂಥಾಕಿ ವರುಷಾರುತಿಂಗಳದ ಕೂಸನ್ನು ಕರಕೊಂಡು ತೋಪುಜಾತ್ರೆ ಕಟ್ಟಿಮನೆಯ ಸ್ಥಾನಂಗಳಿಗೆ ಹೋದಲ್ಲಿ ಒಂದಾನೊಂದು ಇಟ್ಟಡೆ ಮುಟ್ಟಡೆ ನೂಕುನುಗ್ಗಿನಲ್ಲಿ ಒತ್ತಟ್ಟಿಗಾದಲ್ಲಿ ಆ ಕೂಸಾದಂಥದು ದುಃಖಿಸಿ ದುಃಖಿಸಿ ಅಳುತ್ತ ಆವಾಗ ನಮ್ಮ ಜನನಿ ಬಂದೆತ್ತಿಕೊಂಡಾಳೋ ಆವಾಗ ಕುಚಕ್ಷೀರಪಾನವ ಮಾಡೇನೊ ಎಂಬಂಥದೇ ವ್ಯಾಕುಲವುಂಟಾಗಿರ್ಪುದಲ್ಲದೆ ಆ ತಾಯನೇನಾದರೂ ಮರೆತುಬಿಟ್ಟಿತ್ತೆ? ಮರೆತುಬಿಡದು. ಬಳಿದಪ್ಪಿದ ಪಶು ತನ್ನ ಹಿಂಡನಱಸುವಂತೆ–ಒಬ್ಬಾನೊಬ್ಬ ತುರವಳನೇನಾದರೂ ಪ್ರಾತಃಕಾಲದಲ್ಲೆದ್ದು ಕೋರಿಯನ್ನು ಹೊದ್ದುಕೊಂಡು ಕೋಲನ್ನು ಪಿಡಿದುಕೊಂಡು ರೊಟ್ಟಿಯನ್ನು ಕಟ್ಟಿಕೊಂಡು ಗ್ರಾಮದ ನೂರಾರು ದನಗಳನ್ನು ಕೂಡಿಸಿಕೊಂಡು ಅಡವಿಗೆ ಹೊಡೆದುಕೊಂಡು ಹೋಗಿ ಹುಲ್ಲಿದ್ದ ಸ್ಥಾನದಲ್ಲಿ ಮೇಯಿಸಿ, ನೀರಿದ್ದ ಸ್ಥಾನದಲ್ಲಿ ಕುಡಿಸಿ, ನೆರಳಿದ್ದ ಸ್ಥಾನದಲ್ಲಿ ತರುಬಿಕೊಂಡಿರ್ದು ಸಾಯಂಕಾಲ ವೇಳೆಯಲ್ಲಿ ಊರಿಗೆ ಹೊಡೆದುಕೊಂಡು ಬರುವಾಗೆ, ಬಳಿದಪ್ಪಿದ–ದಿಕ್ಕುತಪ್ಪಿದ, ಪಶು–ಆಕಳು, ತನ್ನ ಹಿಂಡನಱಸುವಂತೆ–ಹೂಂಕರಿಸುತ್ತ ಹೂಂಕರಿಸುತ್ತ ಹುಲ್ಲನ್ನು ಮೇಯದೆ ನೀರನ್ನು ಕುಡಿಯದೆ ಆವಾಗ ತನ್ನ ಹಿಂಡನ್ನು ಕೂಡೇನೋ ಎಂದು ಅದೇ ವ್ಯಾಕುಲದೊಡನೆ ಕೂಡಿರುವುದಲ್ಲದೆ ತನ್ನ ಹಿಂಡನ್ನು ಮರೆತುಬಿಟ್ಟೀತೆ? ಮರೆತುಬಿಡದು.

ಬಯಸುತಿರ್ದೆನಯ್ಯಾ ನಿಮ್ಮ ಶರಣರ ಬರವನು–ಕಾಯಕದ ಶೀಲವಂತರು ಸಮಯಾಚಾರ ಜಂಗಮಮೂರ್ತಿಗಳು ಸಹವಾಗಿ ಕಾಯಕಕ್ಕೆ ಬಿಜಯಂಗೈದು ಬರುವಂಥ, ಬರವ–ಚಮತ್ಕಾರವನು, ಬಯಸುತಿರ್ದೆನಯ್ಯಾ–ಆವಾಗ ಕಾಯಕದ ಶೀಲವಂತರು ಕಾಯಕಕ್ಕೆ ಬಿಜಯಂಗೈದು ಬಂದಾರೋ ಆವಾಗ ಕಾಯಕವನ್ನು ಕೊಟ್ಟು ಭಕ್ತಿಯನ್ನು ಮಾಡೇನೋ ಎಂದು, ಬಯಸುತಿರ್ದೆನಯ್ಯಾ ನಿಮ್ಮ ಭಕ್ತರ ಬರವನು : ನಿಮ್ಮ ಭಕ್ತರ–"ಲಿಂಗಭಕ್ತಾಶ್ಚ ಜಂಗಮಾಃ" ಎಂದು ನಿಮ್ಮ ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳ, ಬರವನು–ಭಿಕ್ಷಕ್ಕೆಂದು 'ಬಿಜಯಂಗೈದು' ಬರುವಂಥ ಚಮತ್ಕಾರವನ್ನು, ಬಯಸುತಿರ್ದೆನಯ್ಯಾ–ಆವಾಗ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಾರೋ ಆವಾಗವರ ಪಾದಾರ್ಚನೆಯ ಮಾಡೇನೋ ಆವಾಗ ತಮ್ಮ ಪಾದೋದಕಪ್ರಸಾದವ ಕರುಣಿಸಿ ಕೊಟ್ಟಾರೋ ಎಂದು, ಬಯಸುತಿರ್ದೆನಯ್ಯಾ–ಇಚ್ಛೈಸುತಿರ್ದೆನಯ್ಯಾ. ದಿನಕರನ ಉದಯಕ್ಕೆ–ಸೂರ್ಯನ ಆವಿರ್ಭಾವಕ್ಕೆ, ಕಮಲ ವಿಕಸನವಾದಂತೆ–ತಾವರೆಯ ಕಮಲ ಅರಳಿದ ಹಾಂಗೆ,

ಎನಗೆ–ಸಂಗನಬಸವೇಶ್ವರನಿಗೆ, ನಿಮ್ಮ ಶರಣರ ಬರವು–ನಿಮ್ಮ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬರುವಂಥ ಚಮತ್ಕಾರಕ್ಕೆ ಎನ್ನ ಹೃದಯಕಮಲ ವಿಕಸನವಾಗುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ x (ಗ).

II- - - - - - - - - - - - - - - - - - - - - - - - - - - - - - - - - - - - - - - - - - - -

ಹೊಲಬುಗೆಟ್ಟ ಶಿಶು ತನ್ನ ತಾಯನಜಿಸುವಂತೆ–ತನ್ನ ಪೂರ್ವಾಪರಜ್ಞಾನ ಬೆಂಬಳಿವುಳಿದ ಜ್ಞಾನಕಲಾತ್ಮನು ಮಾತೃಸ್ಥಾನವಾದ ಚಿಚ್ಛಕ್ತಿಸ್ವರೂಪವಹ ಗುರುಮೂರ್ತಿಯನು ಹುಡುಕುತ್ತಿಹನು. ಬಳಿದಪ್ಪಿದ ಪಶು ತನ್ನ ಹಿಂಡನಜಿಸುವಂತೆ–ಶಿವಾಚಾರಮಾರ್ಗದ ಬೆಂಬಳಿದಪ್ಪಿದ ಜೀವನು ಮಹಾನುಭಾವ ಗುರುಮೂರ್ತಿಗಳ ಹುಡುಕುತ್ತಿಹನು. ಬಯಸುತಿರ್ದೆನಯ್ಯಾ ನಿಮ್ಮ ಶರಣರ ಬರವನು–ಮಾರ್ಗಕ್ರೀಯನೊಳಕೊಂಡು ಮೀರಿದ ಕ್ರಿಯಾಸ್ವರೂಪವಾದ ಪ್ರಾಣಲಿಂಗಸಂಬಂಧದಾಗತವನಿಚ್ಛೈಸುತಿರ್ದೆನಯ್ಯಾ. ದಿನಕರನುದಯಕ್ಕೆ ಕಮಲ ವಿಕಸಿತವಾದಂತೆ–ಸೂರ್ಯನುತ್ಪನ್ನತ್ವಕ್ಕೆ ತಾವರೆಯು ಅರಳುವ ಹಾಂಗೆ, ಚಿದಾದಿತ್ಯನುತ್ಪನ್ನತ್ವಕ್ಕೆ ಶರಣನ ಹೃದಯಕಂಜವು ವಿಜೃಂಭಿಸುತ್ತಿಹುದು. ಮುಂದಕ್ಕೆ ಕಾಣಬಂದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - -

ಸೂರ್ಯನ ಬರವಿಂಗೆ ಕಮಲವಿಕಸಿತವಾದಂತೆ ನಿಮ್ಮ ಶರಣರ ಬರವ ಬಯಸುತ್ತಿರ್ದೆನೆಂಬುದೀ ವಚನದರ್ಥ.

---

೩೬೮

**ಸೂರ್ಯನುದಯ ತಾವರೆಗೆ ಜೀವಾಳ, ಚಂದ್ರಮನುದಯ ನೈದಿಲೆಗೆ ಜೀವಾಳ, ಕೂಪರ ಠಾವಿನಲ್ಲಿ ಕೂಟವೇ ಜೀವಾಳ, ಒಲಿದ ಠಾವಿನಲ್ಲಿ ನೋಟವೇ ಜೀವಾಳ, ಕೂಡಲಸಂಗನಶರಣರ ಬರವೆನಗೆ ಪ್ರಾಣಜೀವಾಳ ಕಂಡಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಸೂರ್ಯನುದಯ ತಾವರೆಗೆ ಜೀವಾಳ–ತಾವರೆ ಕಮಲವೆಂಬುವಂಥದು ಇರುಳು ನಾಲ್ಕುಜಾವ ಸತ್ತಶ್ರವದೋಪಾದಿಯಲ್ಲಿ ಬಾಯಮುಚ್ಚಿಕೊಂಡಿರುವುದು. ದಿವಾಕಾಲದಲ್ಲಿ ಸೂರ್ಯನು ಪೂರ್ವಾದ್ರಿಯಲ್ಲಿ ಉದಯವಾಗಲು ಹೋದಪ್ರಾಣ ಬಂದೋಪಾದಿಯಲ್ಲಿ ವಿಕಸನವಾಗುತ್ತಿಹುದು. ಚಂದ್ರಮನುದಯ ನೈದಿಲೆಗೆ ಜೀವಾಳ–ನೀಲೋತ್ಪಲವೆಂಬುವಂಥದು ಹಗಲು ನಾಲ್ಕುಜಾವ ಸತ್ತಶ್ರವದೋಪಾದಿಯಲ್ಲಿ ಬಾಯಮುಚ್ಚಿಕೊಂಡಿರುವುದು. ನಿಶಾಕಾಲದಲ್ಲಿ ಪೌರ್ಣಮಿಚಂದ್ರಮನುದಯವಾಗಲು ಹೋದಪ್ರಾಣ ಬಂದೋಪಾದಿಯಲ್ಲಿ ವಿಕಸನವಾಗುತ್ತಿಹುದು. ಕೂಪರ ಠಾವಿನಲ್ಲಿ ಕೂಟವೇ ಜೀವಾಳ–ನಾಲ್ವರು ಗೆಳೆಬಾಂಧವರೇನಾದರೂ ಒಬ್ಬರಿಗೊಬ್ಬರು

ಅಗಲದೆ ಕೂಡಿರುತ್ತಿದ್ದ ಹಾಂಗೆ ದಿನಂಪ್ರತಿಯಲ್ಲಿ ದಿಕ್ಕುದಿಕ್ಕಿಗೊಬ್ಬರು ಹೋಗಿ ನಾಲ್ಕೆಂಟು ವರುಷದ ಮೇಲೆ ತೋಪು ಜಾತ್ರೆ ಕಟ್ಟಮನೆಸ್ಥಾನದಲ್ಲಿ ಕೂಡಿದಲ್ಲಿ ಒಬ್ಬರ ಮುಖವೊಬ್ಬರು ನೋಡುತ್ತ ನಗೆನುಡಿ ಸರಸಸಲ್ಲಾಪ ಪ್ರಸಂಗವನಾಡಿದಲ್ಲಿ ಆಗ ಹೋದಪ್ರಾಣ ಬಂದೋಪಾದಿಯಲ್ಲಿ ಜೀವಚೈತನ್ಯವಾಗುತ್ತಿಹುದು.

ಒಲಿದ ಠಾವಿನಲ್ಲಿ ನೋಟವೇ ಜೀವಾಳ-ಸ್ತ್ರೀಯಳಿಗೆ ಪುರುಷನೊಲಿದು ಬಂದು ಪುರುಷನಿಗೆ ಸ್ತ್ರೀಯಳೊಲಿದು ಬಂದು, ಸ್ತ್ರೀಯಳ ಕಾಮಕಲಾದೃಷ್ಟಿ ಪುರುಷನ ಮೇಲೆ ಬಿದ್ದು ಪುರುಷನ ಕಾಮಕಲಾದೃಷ್ಟಿ ಸ್ತ್ರೀಯಳ ಮೇಲೆ ಬಿದ್ದು ಒಬ್ಬರಿಗೊಬ್ಬರು ಕಾಮಕಲಾದೃಷ್ಟಿಯಿಂದ ನಿರೀಕ್ಷಣೆಯ ಮಾಡಿದಲ್ಲಿ ಆಗ ಹೋದಪ್ರಾಣ ಬಂದೋಪಾದಿಯಲ್ಲಿ ಜೀವಚೈತನ್ಯವಾಗುತ್ತಿಹುದು. ಕೂಡಲಸಂಗನಶರಣರ-ಜಂಗಮಮೂರ್ತಿಗಳ, ಬರವು-ಭಿಕ್ಷಕ್ಕೆಂದು ಬಿಜಯಂಗೈದು ಬರುವಂಥ ಚಮತ್ಕಾರವು, ಎನಗೆ-ಸಂಗನಬಸವೇಶ್ವರನಿಗೆ, ಪ್ರಾಣಜೀವಾಳ ಕಂಡಯ್ಯಾ-ಹೋದಪ್ರಾಣ ಬಂದೋಪಾದಿಯಲ್ಲಿ ಅತ್ಯಂತ ಹರುಷವಾಗಿಪ್ಪುದು ಕಾಣಯ್ಯಾ.

II- - - - - - - - - - - - - - - - - - - - - - - - - - - - - - - - - - - - - - - - - - - - -

ಸೂರ್ಯನುದಯ ತಾವರೆಗೆ ಜೀವಾಳ-ಚಿದಾದಿತ್ಯನುತ್ಪತ್ಯವು ಶರಣನ ಹೃದಯಕಮಲಕ್ಕೆ ಪ್ರಾಣಕಳೆಯಾಗಿಪ್ಪುದು. ಚಂದ್ರಮನುದಯ ನೆಯ್ದಿಲೆಗೆ ಜೀವಾಳ-ಪರಮಶಾಂತಿಜ್ಞಾನಚಂದ್ರಮನುತ್ಪತ್ಯವು ಜ್ಞಾನಕುಮುದಕ್ಕೆ ಪ್ರಾಣಕಳೆಯಾಗಿಪ್ಪುದು. ಕೂಪರ ಠಾವಿನಲ್ಲಿ ಕೂಟ ಜೀವಾಳವಯ್ಯಾ-ಆತ್ಮಬಂಧುಕರ್ಮಿಗಳಾದ ಮಹಾನುಭಾವಿಗಳ ಸ್ಥಾನದಲ್ಲಿ ಆವಾಗ ಹೋಗಿ ಕೂಡೇನೆಂಬ ವ್ಯಾಕುಳವೇ ಪ್ರಾಣಕಳೆಯಾಗಿಪ್ಪುದಯ್ಯಾ. ಮತ್ತಂ ಪಿಂಗಳನಾಡಿಯಲ್ಲಿ ೧೨ ಅಂಗುಲ ವಾಯುವ ಪೂರೈಸುವುದಕ್ಕೆ ಓಂಕಾರಮಂತ್ರವೇ ಹರಣಕಳೆಯಾಗಿಪ್ಪುದು. ಇಡಾನಾಡಿಯಲ್ಲಿ ೧೬ ಅಂಗುಲ ವಾಯುವ ಹೊಱಹೊಱಡಿಸುವುದಕ್ಕೆ ನಮಃಶಿವಾಯ ಎಂಬ ಪಂಚಾಕ್ಷರಿಮಂತ್ರವೇ ಪ್ರಾಣಕಳೆಯಾಗಿಪ್ಪುದು, ಕೂರ್ಮೆಯಾದಂಥ ಸ್ಥೂಲಸೂಕ್ಷ್ಮಕರಣಂಗಳ ಸ್ಥೂಲಸೂಕ್ಷ್ಮ ತನುವಿನಲ್ಲಿ, ಸ್ಥೂಲಕರಣಂಗಳೆ ಇಷ್ಟಲಿಂಗದಲ್ಲಿ, ಸೂಕ್ಷ್ಮಕರಣಂಗಳೆ ಪ್ರಾಣಲಿಂಗದಲ್ಲಿ ಕೂಡುವ ಸಮರಸವೆ ಪ್ರಾಣಕಳೆಯಾಗಿಪ್ಪುದಯ್ಯಾ. ಮಚ್ಛಿರಸ್ಥಾನದೃಷ್ಟಿಯೆ ಪ್ರಾಣಕಳೆಯಾಗಿಪ್ಪುದು. ಅದಲ್ಲದೆ ಅಂಗದ ಮೇಲಿರ್ದ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವನು ಮಾಡಿ, ವ್ಯಾಪ್ರದೃಷ್ಟಿ ಕುರಂಗ ದೃಷ್ಟಿಸಂಚಾರದೃಷ್ಟಿ ಭಯಂಕರದೃಷ್ಟಿ ಮೊದಲಾದ ಛತ್ತೀಸದೃಷ್ಟಿಗಳಿಲ್ಲದೆ ಅರೆವಿರಿದ ತಾವರೆಯೋಪಾದಿಯಲ್ಲಿ ಶ್ರೇಷ್ಠಾನಿಮಿಷ ದೃಷ್ಟಿಯಿಂದ ನಿರೀಕ್ಷಿಸಲು, ಆ ಇಷ್ಟಲಿಂಗದ ಚಿತ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಯಿತ್ತೆಂಬುದೇ ಪ್ರಾಣಕಳೆಯಾಗಿಪ್ಪುದಯ್ಯಾ. ಸೂಸುವೆಲ್ಲವು ಪಂಚಾಕ್ಷರಿ, ತುಂಬುವೆಲ್ಲವು ಷಡಕ್ಷರಿ, ತಡೆದು ನಿಲಿಸುವೆಲ್ಲವು ಪರಾಶಕ್ತಿಪ್ರಣವಸ್ವರೂಪವಾಗಿ ಇಂತೀ ಮಂತ್ರಯೋಗದ ಸಂಚಾರವನರಿದಾಚರಿಸುವಂಥ ಶಿವಯೋಗಿಗಳ ಸಮಾಗಮವೇ ಎನಗೆ ಪ್ರಾಣವಯ್ಯಾ.

IV- - - - - - - - - - - - - - - - - - - - - - - - - - - - - - - - - - - - - - - - - - - - -

ಸೂರ್ಯ ತಾವರೆಗೆ, ಚಂದ್ರ ನೈದಿಲೆಗೆ ಹೇಂಗೆ ಜೀವಾಳ ಹಾಂಗೆ ಶರಣರ ಬರವ ಹಾರುತ್ತಿರ್ದನೆಂಬುದೀ ವಚನದರ್ಥ.

---

**ಜಲವ ತಪ್ಪಿದ ಮತ್ಸ್ಯ ಬದುಕುವುದೆ ಸೋಜಿಗ. ಗಣತಿಂಥಿಣಿಯೊಳಗಿರಿಸೆನ್ನ [1]ಲಿಂಗವೆ,[1] ಶಿವಶಿವಾ ಕೂಡಲಸಂಗಮದೇವಾ ಸೆಱಗೊಡ್ಡಿ ಬೇಡುವೆ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಜಲವ ತಪ್ಪಿದ ಮತ್ಸ್ಯ–ಮೀನೆಂಬಂಥದು ಉದಕವನ್ನೇ ಹಾಸಿಕೊಂಡು ಉದಕವನ್ನೇ ಹೊದ್ದುಕೊಂಡು ಉದಕವನ್ನೇ ಜೀವಚೈತನ್ಯವ ಮಾಡಿಕೊಂಡಿಪ್ಪುದು, ಜಲವ–ಉದಕವನ್ನು, ತಪ್ಪಿದ–ತೊಲಗಿದ, ಮತ್ಸ್ಯ–ಮೀನ, ಬದುಕುವುದೆ ಸೋಜಿಗ–ಜೀವಿಸುವುದೆ ಆಶ್ಚರ್ಯವು. ಗಣತಿಂಥಿಣಿಯೊಳಗೆ–ಏಳುನೂರೆಪ್ಪತ್ತಮರಗಣಂಗಳ ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳ ಮಧ್ಯದಲ್ಲಿ, ಅವರ ಸಭಾಮಧ್ಯದಲ್ಲಿ; ಇರಿಸೆನ್ನ ಲಿಂಗವೆ–ಸೈತಿರಿಸೆನ್ನ ಪರಶಿವಲಿಂಗವೆ, ಶಿವಶಿವಾ–ಲಿಂಗವೇ ಲಿಂಗವೇ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಸೆಱಗೊಡ್ಡಿ ಬೇಡುವೆ–ನಾನೇನೂ ಫಲಪದ ಇಷ್ಟಾರ್ಥಸಿದ್ಧಿಯನ್ನು ಬೇಡ್ಡೋದಿಲ್ಲ. ಏಳನೂರೆಪ್ಪತ್ತಮರಗಣಂಗಳ ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳ ಸಭಾಮಧ್ಯದಲ್ಲಿರುವಂಥದಿದೇ ಒಂದಿಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡಿರೆಂದು, ಸೆಱಗೊಡ್ಡಿ–ಆಚಾರಾಂಗವೆಂಬ ಸೆರಗಾಂತು, ಬೇಡುವೆ–ಯಾಚಿಸುವೆನು.

II- - - - - - - - - - - - - - - - - - - - - - - - - - - - - - - - - - - - - - - - - - - - - - -

..........................

1–1 ತಂದೆ (ಚ,ಜ).

ಜಲವ ತಪ್ಪಿದ ಮತ್ಸ್ಯ ಬದುಕುವುದೆ ಸೋಜಿಗ–ಶಿವಾನುಭಾವಜಲವು ಹೊಱಚ್ಚಾದ ಜ್ಞಾನಕಲಾತ್ಮನು ಆ ಶಿವಾನುಭಾವಜಲದಿಂದ ಹೊಱಚ್ಚಾಗಿ ಜೀವಿಸೂದೆ ಆಶ್ಚರ್ಯವು. ಗಣತಿಂಥಿಣಿಯೊಳಗಿರಿಸೆನ್ನ ತಂದೆ–ಎಲೆ ಲಿಂಗವೆ ಶಿವಗಣಂಗಳ ಸಮೂಹದಲ್ಲಿ ಶರಣನ ಮಡಗು. ಶಿವಶಿವಾ ಕೂಡಲಸಂಗಮದೇವಾ ಸೆಱಗೊಡ್ಡಿ ಬೇಡುವೆ–ಹರಹರಾ ಎಲೆ ಲಿಂಗವೆ, ಭಕ್ತ್ಯಾಚಾರವೆಂಬ ಸೆರಗೊಡ್ಡಿ ಲಿಂಗಪ್ರಾಣತ್ವ ಪ್ರಾಣಲಿಂಗತ್ವ ಪ್ರಸಾದ ಮುಕ್ತತ್ವವನು ಯಾಚಿಸುವೆನೆಂಬುದರ್ಥ.

---

೩೭೦

**ಅಯ್ಯಾ, ನಿಮ್ಮ ಮಹಾವ್ರತಿಗಳನಗಲಿ ಬದುಕಲಾಱೆನು. ಶಿವಧೋ ಶಿವಧೋ ಕಂಗಳಶ್ರುಗಳಲ್ಲಿ ಮುಂದುಗಾಣೆನು. ಲಿಂಗಸಂಗಿಗಳನಗಲಿ ನಾನೆಂತು ಬದುಕುವೆ ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ–ಲಿಂಗವನು ತನ್ನತ್ತಭಿಮುಖವ ಮಾಡಿಕೊಂಡು ಆ ಲಿಂಗದೊಡನೆ ಬಿನ್ನೈಸುವಂಥ ಬಿನ್ನಪವು, ಅಯ್ಯಾ–ಎಲೆ ಲಿಂಗವೆ, ನಿಮ್ಮ ಮಹಾವ್ರತಿಗಳ–ಹಾಲನೇಮ ಬೆಣ್ಣೆಯ ನೇಮ ಮೊದಲಾದವನ್ನು ಕಟ್ಟುಮಾಡಿಕೊಂಡಿರುವಂಥ ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳು ಏಳುನೂರೆಪ್ಪತ್ಮರಗಣಂಗಳು ಅರುವತ್ತುಮೂರು ಪುರಾತರುಗಳನು, ಅಗಲಿ–

ವಿಯೋಗವಾಗಿ, ಬದುಕಲಾಜೆನು–ಜೀವಿಸಲಾರೆನು. ಶಿವಧೋ ಶಿವಧೋ–ಮೊರೆಯೋ ಮೊರೆಯೋ, ಕಂಗಳಶ್ರುಗಳಲ್ಲಿ–ಅಂತರಂಗದಲ್ಲಿ ಉಕ್ಕಿದ ಹರುಷಾನಂದಜಲವೇ ಬಹಿರಂಗದ ಎರಡು ನೇತ್ರದ ಕುಣಿಕೆಯಲ್ಲಿ ಧಾರಾವೃಷ್ಟಿಯಾಗಿ ಸುರಿದಂಥ ದುಃಖಜಲಂಗಳಲ್ಲಿ, ಮುಂದುಗಾಣೆನು–ಎಡಬಲ ಹಿಂದುಮುಂದಿರುವಂಥವರ ತಿಳಿಯೆನು. ಅದಲ್ಲದೆ ಮುಂದಾಗುವಂಥ ನಿಜಮೋಕ್ಷವನು ತಿಳಿಯೆನು. ಲಿಂಗಸಂಗಿಗಳ–ಮಹಾಲಿಂಗದಲ್ಲಿ ಕೂಡಲ್ಪಟ್ಟಂಥ ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳ ಏಳುನೂರೆಪ್ಪತ್ತಮರಗಣಂಗಳ ಅರುವತ್ತುಮೂರು ಪುರಾತರುಗಳ, ಅಗಲಿ–ವಿಯೋಗವಾಗಿ, ನಾನೆಂತು ಬದುಕುವೆ–ನಾನು ಹೇಂಗೆ ಜೀವಿಸುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - - - -

ಶರಣರೆ ಪ್ರಾಣವಾಗಿ, ಪ್ರಾಣನಗಲಬಾರದಾಗಿ ಎಂಬುದೀ ವಚನದರ್ಥ.

---

೩೭೧

**ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆನು ನೋಡಯ್ಯಾ! ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು ನೋಡಯ್ಯಾ! ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು ನೋಡಯ್ಯಾ, ಕೂಡಲಸಂಗಮದೇವಾ ನಿಮ್ಮ ಶರಣರನಗಲಿದ ಕಾರಣ!**

I - - - - - - - - - - - - - - - - - - - - - - - - - - - - - - - - - - - - - - - - - - - - -

ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆನು ನೋಡಯ್ಯಾ–ತನು ಬಡವಾಯಿತ್ತು ಮನ ಬಡವಾಯಿತ್ತು ಪ್ರಾಣ ಬಡವಾಯಿತ್ತು ಕಂಡಯ್ಯಾ. ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು ನೋಡಯ್ಯಾ–ತನುವಿಬ್ಭಾಗವಾಯಿತ್ತು, ಮನವಿಬ್ಭಾಗವಾಯಿತ್ತು, ಪ್ರಾಣವಿಬ್ಭಾಗವಾಯಿತ್ತು ಕಂಡಯ್ಯಾ. ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು ನೋಡಯ್ಯಾ–ತನು ಗುರುವಿನಲ್ಲಿ ನೆಲೆಗೊಳ್ಳದೆ ತನುವಂದೇ ಅವಶೇಷಿತವಾಯಿತ್ತು, ಮನ ಲಿಂಗದಲ್ಲಿ ನೆಲೆಗೊಳ್ಳದೆ ಮನವಂದೇ ಅವ^೧^ಶೇಷಿತ^೧^ವಾಯಿತ್ತು, ಪ್ರಾಣವು ಜಂಗಮದಲ್ಲಿ ನೆಲೆಗೊಳ್ಳದೆ ಪ್ರಾಣವಂದೇ ಅವ^೧^ಶೇಷಿತ^೧^ವಾಯಿತ್ತು ಕಾಣಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರ–ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳ ಏಳುನೂರೆಪ್ಪತ್ತಮರಗಣಂಗಳ ಅರುವತ್ತುಮೂರು ಪುರಾತರುಗಳನು, ಅಗಲಿದ ಕಾರಣ–ವಿಯೋಗವಾದ ನಿಮಿತ್ತು.

..........................

೧–೧ ಶೇಷ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - - -

ಜಜ್ಜನೆ ಜರಿದೆನು–ಶೀಘ್ರದಿಂದ ತನುವಿಳಿದೆನು, ಜಜ್ಜನೆ ಜರಿದೆನು–ಶೀಘ್ರದಿಂದ ಮನಹರುಷಗುಂದಿದೆನು, ಜಜ್ಜನೆ ಜರಿದೆನು ನೋಡಯ್ಯಾ–ಶೀಘ್ರದಿಂದ ಆತ್ಮಹರುಷಗುಂದಿದೆನು ಕಂಡಾ ಸ್ವಾಮಿ. ಬಿಬ್ಬನೆ ಬಿರಿದೆನು–ಶೀಘ್ರದಿಂದ ತನುವಾಗಣಿಸಿತ್ತು, ಬಿಬ್ಬನೆ ಬಿರಿದೆನು–ಶೀಘ್ರದಿಂದ ಮನವಿಪ್ಪೋಳಾಯಿತ್ತು, ಬಿಬ್ಬನೆ ಬಿರಿದೆನು ನೋಡಯ್ಯಾ–ಶೀಘ್ರದಿಂದ ಆತ್ಮವಿಜೃಂಭಣವಾಯಿತ್ತು ಕಂಡಾ ಸ್ವಾಮಿ. ನಾನೊಬ್ಬನೆ ಉಳಿದೆನು–ಅಂಗವೆಲ್ಲವು ಇಷ್ಟಲಿಂಗ ಸ್ವರೂಪವಾಗಿ ಉಳಿಯಿತ್ತು, ನಾನೊಬ್ಬನೆ ಉಳಿದೆನು–ಮನವೆಲ್ಲವು ಪ್ರಾಣಲಿಂಗಸ್ವರೂಪವಾಗಿ ಉಳಿಯಿತ್ತು, ನಾನೊಬ್ಬನೆ ಉಳಿದೆನು–ಆತ್ಮವೆಲ್ಲವು ಭಾವಲಿಂಗಸ್ವರೂಪವಾಗಿ ಉಳಿಯಿತ್ತು. ಮತ್ತಂ ಶೀಘ್ರದಿಂದ ಜಾಗ್ರದಲ್ಲಿ ಕಳವಳಗೊಂಡೆನು, ಶೀಘ್ರದಿಂದ ಸ್ವಪ್ನದಲ್ಲಿ ಕಳವಳಗೊಂಡೆನು, ಶೀಘ್ರದಿಂದ ಸುಷುಪ್ತಿಯಲ್ಲಿ ಕಳವಳಗೊಂಡೆನು. ಶೀಘ್ರದಿಂದ ವಾಚಕದಲ್ಲಿ ವಿಭ್ರಮೆಗೊಂಡೆನು, ಮಾನಸದಲ್ಲಿ ವಿಭ್ರಮೆಗೊಂಡೆನು, ಕಾಯಕದಲ್ಲಿ ವಿಭ್ರಮೆಗೊಂಡೆನು; ತನುಪ್ರಕೃತಿ ಒಂದೇ ಉಳಿಯಿತ್ತು, ಮನಪ್ರಕೃತಿ ಒಂದೇ ಉಳಿಯಿತ್ತು, ಆತ್ಮಪ್ರಕೃತಿ ಒಂದೇ ಉಳಿಯಿತ್ತು, ಕೂಡಲಸಂಗಮದೇವಾ ನಿಮ್ಮ ಶರಣರನಗಲಿದ ಕಾರಣ–ಎಲೈ ಲಿಂಗವೆ ನಿಮ್ಮ ಶರಣರ ಬಿಟ್ಟು ವಿಯೋಗವಾದ ನಿಮಿತ್ತವು.

V- - - - - - - - - - - - - - - - - - - - - - - - - - - - - - - - - - - - - - - - - - - -

ಜಜ್ಜನೆ ಜಜಿದೆನು–ಸ್ಥೂಲತನುವಿನ ಪ್ರಪಂಚ ನಷ್ಟವ ಮಾಡಿದೆನು, ಜಜ್ಜನೆ ಜ?ದೆನು–ಸೂಕ್ಷ್ಮತನುವಿನ ಪ್ರಪಂಚ ನಷ್ಟವ ಮಾಡಿದೆನು, ಜಜ್ಜನೆ ಜಜಿದೆನು–ಕಾರಣತನುವಿನ ಪ್ರಪಂಚ ನಷ್ಟವ ಮಾಡಿದೆನು. ಬಿಬ್ಬನೆ ಬಿಜಿದೆನು–ವಿಶ್ವಜೀವನಪ್ರಪಂಚ ನಿವೃತ್ತಿಯ ಮಾಡಿದೆನು, ಬಿಬ್ಬನೆ ಬಿಜಿದೆನು–ತೈಜಸಜೀವನಪ್ರಪಂಚ ನಿವೃತ್ತಿಯ ಮಾಡಿದೆನು, ಬಿಬ್ಬನೆ ಬಿಜಿದೆನು–ಪ್ರಜ್ಞಜೀವನಪ್ರಪಂಚ ನಿವೃತ್ತಿಯ ಮಾಡಿದೆನು. ನಾನೊಬ್ಬನೆ ಉಳಿದೆನು–ಸ್ಥೂಲತನುವಿನ ವಿಶ್ವಜೀವನಲ್ಲಿ ಇಷ್ಟಲಿಂಗಸಂಬಂಧವ ಮಾಡಿದೆನು, ನಾನೊಬ್ಬನೆ ಉಳಿದೆನು–ಸೂಕ್ಷ್ಮತನುವಿನ ತೈಜಸಜೀವನಲ್ಲಿ ಪ್ರಾಣಲಿಂಗಸಂಬಧವ ಮಾಡಿದೆನು, ನಾನೊಬ್ಬನೆ ಉಳಿದೆನು–ಕಾರಣತನುವಿನ ಪ್ರಾಜ್ಞಜೀವನಲ್ಲಿ ಭಾವಲಿಂಗಸಂಬಂಧವ ಮಾಡಿದೆನು.

---

೩೭೨

**ಕಂಡಡೆ ಮನೋಹರವಯ್ಯಾ, ಕಾಣದಿದ್ದಡೆ ಅವಸ್ಥೆ, ನೋಡಯ್ಯಾ! ಹಗಲಿರುಳಹುದು, ಇರುಳು ಹಗಲಹುದು! ಎಂತಯ್ಯಾ? ಅಳವಾಡಿ ಕಳೆವೆನು? ಒಂದು ^ಯುಗ^ಜುಗ ಮೇಲೆ ಕೆಡದಂತೆ! ಕೂಡಲಸಂಗನಶರಣರನಗಲುವ ಥಾವತಿಗಿಂದ ಮರಣವೇ ಲೇಸು ಕಂಡಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಕಂಡಡೆ ಮನೋಹರವಯ್ಯಾ–ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳ ಏಳುನೂರೆಪ್ಪತ್ತಮರ ಗಣಂಗಳ ಅರುವತ್ತುಮೂರು ಪುರಾತನರ, ಕಂಡಡೆ–ದರುಶನವಾದರೆ, ಮನೋಹರವಯ್ಯಾ–ಮನಸ್ಸಿಗೆ ಅತ್ಯಂತ ರಮಣೀಯವಾಗಿಪ್ಪುದಯ್ಯ. ಕಾಣದಿದ್ದಡೆ ಅವಸ್ಥೆ ನೋಡಯ್ಯಾ–ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳ

ಏಳುನೂರೆಪ್ಪತ್ತಮರಗಣಂಗಳ ಅರುವತ್ತುಮೂರು ಪುರಾತನರ, ಕಾಣದಿದ್ದಡೆ-ದರುಶನವಾಗದಿದ್ದರೆ, ಅವಸ್ಥೆ ನೋಡಯ್ಯಾ-ಅತ್ಯಂತ ದುಃಖಾವಸ್ಥೆ ಉಂಟಾಗಿರ್ಪುದು ಕಂಡಯ್ಯಾ. ಹಗಲಿರುಳಹುದು-ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳ ಏಳುನೂರೆಪ್ಪತ್ತಮರ ಗಣಂಗಳ ಅರುವತ್ತುಮೂರು ಪರಾತನರ, ಕಾಣದಿದ್ದಡೆ-ದರುಶನವಾಗದಿದ್ದರೆ, ದಿವಾಕಾಲವೆ ನಿಶಾಕಾಲವಾಗುವುದು, ಇರುಳು ಹಗಲಹುದು-ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳ ಏಳುನೂರೆಪ್ಪತ್ತಮರ ಗಣಂಗಳ ಅರುವತ್ತುಮೂರು ಪುರಾತರುಗಳ, ಕಂಡಡೆ-ದರುಶನವಾದರೆ, ನಿಶಾಕಾಲವೆ ದಿವಾಕಾಲವಾಗುತ್ತಿಹುದು. ಎಂತಯ್ಯಾ?-ಹೇಂಗಯ್ಯಾ?. ಆಳವಾಡಿ ಕಳೆವೆನು-ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವನ್ನು ಏಳುನೂರೆಪ್ಪತ್ತಮರ ಗಣಂಗಳು ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳಿಗೆಂದು ಕೂಡಲಿಕ್ಕುವೆನಲ್ಲದೆ ಅವರೇ ಬೇಸರವಾಗಿ ಹೋದಬಳಿಕ ಈ ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವನ್ನು ಇದು ಆರಿಗಾಗಬೇಕೆಂದು ಸೂರೆಯೋ ಸೂರೆಯೋ ಎಂದು ಸೂರೆಗೊಟ್ಟು ಬಿಡುವೆನು.

ಒಂದು ಯುಗ ಜುಗ ಮೇಲೆ ಕೆಡದಂತೆ-ಕೃತಯುಗ ತ್ರೇತಾಯುಗ ದ್ವಾಪರಯುಗ ಕಲಿಯುಗವೆಂಬ ಚತುರ್ವಿಧವು ಹದಿನೆಂಟು ವೇಳೆ ತಿರುತಿರುಗಿ ಬಂದಲ್ಲಿ ಒಂದು ಜುಗವೆನಿಸುವುದು. ಅಂತಪ್ಪ ಯುಗಜುಗ ದಿನಕಾಲ ಕಲ್ಪಿತಂಗಳು ಆತ್ಮರುಗಳ ಮೇಲೆ ಬಿದ್ದಲ್ಲಿ ಎಷ್ಟೊಂದು ದುಃಖವುಂಟಾಗುತ್ತಿಹುದೋ ಹಾಂಗೆ ನನಗಷ್ಟೊಂದು ದುಃಖ ಉಂಟಾಗುತ್ತಿಹುದು. ಕೂಡಲಸಂಗನಶರಣರ-ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳ ಏಳುನೂರೆಪ್ಪತ್ತರ ಗಣಂಗಳ ಅರವತ್ತುಮೂರು ಪರಾತನರ, ಅಗಲುವ-ಬಿಟ್ಟು ವಿಯೋಗವಾಗುವ, ಧಾವತಿಗಿಂದ-ಕಷ್ಟಕ್ಕಿಂದಲೂ, ಮರಣವೆ ಲೇಸು ಕಂಡಯ್ಯಾ-ಐಕ್ಯವಾಗುವಂಥದೇ ಬಹು ಪರಿಣಾಮ ಕಾಣಯ್ಯ.

II- - - - - - - - - - - - - - - - - - - - - - - - - - - - - - - - - - - - - - - - - - - -

1–1 x (ಚ, ಜ).

..........................

ಕಂಡಡೆ ಮನೋಹರವಯ್ಯಾ-ಆ ಗುರುಲಿಂಗಜಂಗಮವನು ನೋಡಿದರೆ ಸಂತೋಷ ಹುಟ್ಟುತ್ತಿಹುದಯ್ಯಾ. ಕಾಣದಿದ್ದಡೆ ಅವಸ್ಥೆ ನೋಡಯ್ಯಾ-ಆ ಗುರುಲಿಂಗಂಗಮವನು ನೋಡದಿದ್ದರೆ ಪ್ರಾಣ ಸೈರಿಸಬಾರದು ನೋಡಯ್ಯಾ. ಹಗಲಿರುಳಹುದು. ಇರುಳು ಹಗಲಹುದು ಎಂತಯ್ಯಾ?-ದಿವಸವೆ ರಾತ್ರಿಯಾಗೂದು: ರಾತ್ರಿಯೆ ದಿವಸವಾಗೂದು. ಅದಲ್ಲದೆ ಜ್ಞಾನವೆ ಅಜ್ಞಾನವಾಗೂದು ಹೇಂಗಯ್ಯಾ. ಆಳವಾಡಿ ಕಳೆವೆನು-ಹಾಸ್ಯೋಪಮಾನವ ಮಾಡಿಬಿಡುವೆನು. ಒಂದು ಜುಗ ಮೇಲೆ ಕೆಡದಂತೆ-ನಾಲ್ಕು ಯುಗಂಗಳು ತಿರುತಿರುಗಿ ಬರುವುದೆ ಒಂದು ಜುಗ. ಅಂಥ ಜುಗವು ಮೇಲೆ ಬಿದ್ದ ಹಾಂಗೆ ಆಗುವದು. ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - -

ಆಳವಾಡಿ ಕಳೆವೆನು-ಹಳಿದು ಹಾಸ್ಯವ ಮಾಡಿ ವ್ಯಾಳ್ಯವ ಕಳೆವೆನು.

---

## ೩೭೩

**ಅಂಗೈ ತಿಂದುದೆನ್ನ, ಕಂಗಳು ಕೆತ್ತಿಹವಯ್ಯಾ ಬಂದಹರಯ್ಯಾ ಪುರಾತನ[೧]ರೆನ್ನ ಮನೆಗೆ, ಬಂದಹರಯ್ಯಾ [೨]ಶರಣೆಯ[೨]ರೆನ್ನ ಮನೆಗೆ! ಕಂಡ ಕನಸು ದಿಟವಾಗಿ ಜಂಗಮ ಎನ್ನ ಮನೆಗೆ ಬಂದಡೆ, [೩][ಶಿವಾ]ರ್ಚನೆಯ[೩] ಮಾಡಿಸುವೆ ಕೂಡಲಸಂಗಮದೇವಾ, ನಿಮ್ಮ ಮುಂದೆ.**

........................

3–3 ಲಿಂಗಾ (ಕ, ಗ).

I - - - - - - - - - - - - - - - - - - - - - - - - - - - - - - - - - - - - - - - - - - - -

ಅಂಗೈ ತಿಂದುದೆನ್ನ–ಪ್ರಭುಸ್ವಾಮಿಗಳು ಬರುವ ಚಮತ್ಕಾರಕ್ಕೆ ಆವಾಗಳೂ ಪ್ರಭುಸ್ವಾಮಿಗಳು ಭೀಕ್ಷಕ್ಕೆಂದು ಬಿಜಯಂಗೈದು ಬಂದಾರೋ ಆವಾಗ ಅವರ ಪಾದಾರ್ಚನೆಯ ಮಾಡೇನೋ ಆವಾಗ ಅವರ ಪಾದೋದಕ ಪ್ರಸಾದವ ಪಡೆದನುಭವಿಸೇನೋ ಎಂದು ಎನ್ನ ಅರೆ ಹಸ್ತವು ತಿಮಿರಿಕ್ಕುತ್ತಿಹುದಯ್ಯಾ. ಎನ್ನ ಕಂಗಳು ಕೆತ್ತಿಹವಯ್ಯಾ–ಆವಾಗ ಪ್ರಭುಸ್ವಾಮಿಗಳ ಮೂರ್ತಿವಿಗ್ರಹವನ್ನು ನಿರೀಕ್ಷಣೆಯ ಮಾಡೇವೋ ಎಂದು ಎರಡು ನೇತ್ರಂಗಳು ಪಟಪಟನೆ ಹಾರುತ್ತಿಹವಯ್ಯಾ. ಬಂದಹರಯ್ಯಾ ಪುರಾತರೆನ್ನ ಮನೆಗೆ: ಪುರಾತರು–ಅರುವತ್ತುಮೂರು ಪುರಾತನರು. ಎನ್ನ ಮನೆಗೆ–ಸಂಗನಬಸವೇಶ್ವರ ಅರಮನೆಗೆ, ಬಂದಹರಯ್ಯಾ–ಪ್ರಭುಸ್ವಾಮಿಗಳ ಸೇವಾಸತ್ಕಾರಂಗಳ ಮಾಡುವುದಕ್ಕೆ ಎಯ್ತಂದಹರಯ್ಯಾ. ಬಂದಹರಯ್ಯಾ ಶರಣೆಯರೆನ್ನ ಮನೆಗೆ: ಶರಣೆಯರು–ಅರುವತ್ತುಮೂರು ಪುರಾತನರ ಸ್ತ್ರೀಯರುಗಳು, ಎನ್ನ ಮನೆಗೆ–ಸಂಗನಬಸವೇಶ್ವರನ ಅರಮನೆಗೆ, ಬಂದಹರಯ್ಯಾ–ಪ್ರಭುಸ್ವಾಮಿಗಳಿಗೆ ಏಕಾರತಿ ದ್ವ್ಯಾರತಿ ತ್ರ್ಯಾರತಿ ಚತುರಾರತಿ ನಿರಂಜನಾರತಿ ಕಲಿಗಣಾರತಿ ಪಂಚಾರತಿ ಪಂಚಕಲಶ ಮೊದಲಾದವನು ಬೆಳಗುವುದಕ್ಕೆ ಎಯ್ತಂದಹರಯ್ಯಾ.

ಕಂಡ ಕನಸು ದಿಟವಾಗಿ: ಕಂಡ ಕನಸು–ರಾತ್ರಿಯಲ್ಲಿ ಕಂಡಂಥ ಸ್ವಪ್ನವು, ದಿಟವಾಗಿ–ನಿಶ್ಚಯವಾಗಿ, ಜಂಗಮವು ಎನ್ನ ಮನೆಗೆ ಬಂದಡೆ: [ಜಂಗಮವು] ಪ್ರಭುಸ್ವಾಮಿಗಳೆಂಬ ಜಂಗಮವು, ಎನ್ನ ಮನೆಗೆ–ಸಂಗನಬಸವೇಶ್ವರನ ಅರಮನೆಗೆ, ಬಂದಡೆ–ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಕೂಡಲಸಂಗಮದೇವಾ–ಎಲೆ ಚಿಕ್ಕದಣ್ಣಾಯಕರೇ, ನಿಮ್ಮ ಮುಂದೆ–ನೀವು ಮುಂತಾಗಿ, [೧][ಶಿವಾ][೧]ರ್ಚನೆಯ ಮಾಡಿಸುವೆ–ಶಿವಪೂಜೆ ಶಿವಾರ್ಪಣವನನುಗ್ರೈಸುವೆ.

........................

೧–೧ ಲಿಂಗಾ (ಕ, ಗ).

II- - - - - - - - - - - - - - - - - - - - - - - - - - - - - - - - - - - - - - - - - - - -

1 + ನ (ಚ, ಜ). 2–2 ಶರಣ (ಚ. ಜ).

........................

ಅಂಗೈ ತಿಂದುದೆನ್ನ ಕಂಗಳು ಕೆತ್ತಿಹವಯ್ಯಾ–[೨] [ನೇತ್ರಂ ನಿರ್ಮಲಿನಂ ಯಸ್ಯ । ತಥಾ ಮಾನಸಮೇವ ಚ । ಏವಂ ಚಕ್ಷುರ್ಮಾನಸಂ ಚ । ಸಯೋಗೀತಿ ಪ್ರಕೀರ್ತಿತಃ][೨] ಎಂದು ಅರೆ ಹಸ್ತುವು ಭಕ್ತಿ [೩]ತಿಂದಿತ್ತು[೩]; ಎನ್ನ ನೇತ್ರಗಳು ನೆಗದಾಡಿಹವಯ್ಯಾ. ಬಂದಹರಯ್ಯಾ ಪುರಾತನರೆನ್ನ ಮನೆಗೆ–ಸ್ಥೂಲಕರಣಂಗಳು ಆಚಾರಾಂಗವೆಂಬ ಗೃಹಕ್ಕೆ ಅಗತವಾದವಯ್ಯಾ. ಬಂದಹರಯ್ಯಾ ಶರಣರೆನ್ನ ಮನೆಗೆ–ಶಿವಶರಣರು ಮಾರ್ಗಕ್ರೀಯನೊಳಕೊಂಡು ಮೀರಿದ ಕ್ರೀಯಿಂದೆ ಪ್ರಾಣಲಿಂಗಸಂಬಂಧಕ್ಕೆ ಅಗತವಾದರಯ್ಯಾ. ಕಂಡ ಕನಸು ದಿಟವಾಗಿ ಜಂಗಮ ಮನೆಗೆ ಬಂದಡೆ–ನೋಡಿದಂಥ ಸುಜ್ಞಾನವೆಂಬ ಸ್ವಪ್ನವು ನಿಶ್ಚಯವಾಗಿ ಇಷ್ಟಲಿಂಗದ ಚಿತ್ಕಲೆಯೇ ಅಂತರಂಗದಲ್ಲಿ ಸುಜ್ಞಾನಸ್ವರೂಪವಹ ಪ್ರಾಣಲಿಂಗವಾಗಿ ಆಗತವಾದರೆ, ಶಿವಾರ್ಚನೆಯ ಮಾಡಿಸುವೆ–ಮಂತ್ರಧ್ಯಾನ ಜಪಸ್ತೋತ್ರ ನಿರ್ಗುಣ ಪೂಜಾಕ್ರಿಯೆಗಳ ಮಾಡಿಸುವೆನು. ಮುಂದಕ್ಕೆ ಕಾಣಬಂದರ್ಥ.

............................

೨–೨ ನೇತ್ರಂ ನಿರ್ಮಲನಂ ನಿತ್ಯಂ । ನಿತ್ಯೇಂದು ನಿಲನಸ್ತಥಾ । ಏವನಾ ಮಾನಸಚಕ್ಷು । ಲೇಸಯೋಗಿರಾಟ. ೩–೩ ತಿಪ್ಪಿದ್ದಿತ್ತು (ಚ).

V - - - - - - - - - - - - - - - - - - - - - - - - - - - - - - - - - - - - - - - - -

ಅಂಗೈ ತಿಂದುದೆನ್ನ–ಎನ್ನ ಕರಸ್ಥಲದಲ್ಲಿರ್ದು ಇಷ್ಟಲಿಂಗವು ತಿಂದೂದು, ಸ್ಥೂಲತನುವಿನ ವರ್ತನೆಯ ನಷ್ಟವ ಮಾಡಿತ್ತು. ಕಂಗಳು ಕೆತ್ತಿಹವಯ್ಯಾ–ಜ್ಞಾನಸ್ವರೂಪವಾದ ಪ್ರಾಣಲಿಂಗ ಭಾವಲಿಂಗಂಗಳು ಸೂಕ್ಷ್ಮತನು ಕಾರಣತನುವಿನ ಪ್ರಪಂಚವನುತ್ಪಾಟನಂಗೆಯ್ವುತ್ತಿಹವಯ್ಯಾ. ಪ್ರತ್ಯಕ್ಷವಾದ ಜ್ಞಾನವು ದಿಟವಾಗಿ ನಿಶ್ಚಯವಾಗಿ ಎಂಬುದೀಗ ಕಂಡಕನಸು ದಿಟವಾಗಿ ಎಂಬ ಶಬ್ದಕ್ಕರ್ಥ.

---

## ೩೭೪

**ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ ಸುಖವ ಕೊಡು ಕಂಡಾ ಲಿಂಗವೇ. ಪರಮಸುಖವ ಕೊಡು ಕಂಡಾ ಲಿಂಗವೇ. ಕೂಡಲಸಂಗಮದೇವಾ, ಇದೇ ವರವ ಬೇಡುವೆ ನಿಮ್ಮಲ್ಲಿ.**

I - - - - - - - - - - - - - - - - - - - - - - - - - - - - - - - - - - - - - - - - -

ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ ಸುಖವ ಕೊಡು ಕಂಡಾ, ಲಿಂಗವೆ: ಲಿಂಗವ ಪೂಜಿಸುತ್ತ–ಗುರುಮುಖದಿಂದ ಬಂದಂಥ ಇಷ್ಟಮಹಾಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುತ್ತ, ಜಂಗಮ ಮುಖವ ನೋಡುತ್ತಿಪ್ಪ–ಲಿಂಗಪೂಜೆಯ ಮಾಡುತ್ತ ದಕ್ಷಿಣಭಾಗದಲ್ಲಿ ಜಂಗಮಮೂರ್ತಿಗಳ ಮೂರ್ತವ ಮಾಡಿಸಿಕೊಂಡು, ಅವರ ಮೂರ್ತಿವಿಗ್ರಹವನ್ನು ನಿರೀಕ್ಷಣೆಯ ಮಾಡುವಂಥ, ಸುಖವ ಕೊಡು–ಪರಿಣಾಮವನ್ನು ಕರುಣಿಸಿಕೊಡು, ಕಂಡಾ ಲಿಂಗವೆ–ಎಲೆ ಪರಶಿವಲಿಂಗವೆ. ಪರಮಸುಖವ ಕೊಡು ಕಂಡಾ ಲಿಂಗವೆ: [ಪರಮ ಸುಖವ ಕೊಡು–] ಲಿಂಗಪೂಜೆಯ ಮಾಡುವಾಗ್ಗೆ ದಕ್ಷಿಣಭಾಗದಲ್ಲಿ ಗದ್ದುಗೆಯನ್ನು ಹಾಕಿಸಿ ಜಂಗಮಮೂರ್ತಿಗಳ ಮೂರ್ತವ ಮಾಡಿಸಿ ಆ ಜಂಗಮಮೂರ್ತಿಯ ವಿಗ್ರಹವನ್ನು ನಿರೀಕ್ಷಣೆಯ

ಮಾಡುವಂಥದೇ ಪರಮ೧ಪರಿಣಾಮ೧ವೆನಿಸಿಕೊಂಬುತ್ತಿಹುದು, ಅಂತಪ್ಪ ಪರಮಪರಿಣಾಮವನ್ನು ಕರುಣಿಸಿಕೊಡು, ಕಂಡಾ ಲಿಂಗವೆ–ಎಲೆ ಪರಶಿವಲಿಂಗವೆ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಇದೇ ವರವ ಬೇಡುವೆ ನಿಮ್ಮಲ್ಲಿ–ನಾನೇನಾದರೂ ಫಲಪದಮುಕ್ತಿಯನ್ನು ಬೇಡೋದಿಲ್ಲ. ಲಿಂಗಪೂಜೆಯ ಮಾಡುತ್ತ ದಕ್ಷಿಣಭಾಗದಲ್ಲಿ ಜಂಗಮಮೂರ್ತಿಗಳ ಮೂರ್ತವ ಮಾಡಿಸಿಕೊಂಡು ಅವರ ಮೂರ್ತಿವಿಗ್ರಹವನ್ನು ನಿರೀಕ್ಷಣೆಯ ಮಾಡುವಂಥ, ಇದೆ ಒಂದಿಷ್ಟಾರ್ಥ ಪರಿಣಾಮವನ್ನು ಕರುಣಿಸಿಕೊಡು ಎಂದು, ಬೇಡುವೆ–ಯಾಚಿಸುವೆನು.

..........................

೧–೧ ಸುಖ (ಕ).

IV- - - - - - - - - - - - - - - - - - - - - - - - - - - - - - - - - - - - - - - - - - - - -

ಕರಸ್ಥಲದಲ್ಲಿ ಲಿಂಗವ ಹಿಡಿದು ಲಿಂಗಕ್ಕೆ ಕಳೆಯಾದ ಜಂಗಮ[ವ] ಜ್ಞಾನದೃಷ್ಟಿಯಿಂದಲು ನೋಡುವ ಸುಖವ ಕೊಡು ಎಂಬುದೀ ವಚನದರ್ಥ.

---

೩೭೫

**ಮನೆದೈವ, ಕುಲದೈವ, ಎನಗೆ ನಿಮ್ಮವರಯ್ಯಾ! ತನು ಮೀಸಲು, ಮನ ಮೀಸಲು, ನಯನ ಮೀಸಲು ಎನ್ನ, ಕೂಡಲಸಂಗಮದೇವಾ, ನಿಮ್ಮ ಶರಣರಿಗೆ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಮನೆದೈವ, ಕುಲದೈವ, ಎನಗೆ ನಿಮ್ಮವರಯ್ಯಾ ! : ಮನೆದೈವ–ದೇವರ ಜಗುಲಿಯ ಮೇಲೆ ಮೂರ್ತವ ಮಾಡಿಕೊಂಡು ಪೂಜೆಯ ಕೈಕೊಂಬುವಂಥವರು. ನಿಮ್ಮವರಯ್ಯಾ–ನಿಮ್ಮ ಜಂಗಮಮೂರ್ತಿಗಳಯ್ಯಾ, ಕುಲದೈವ–ಕುಲಕುಟುಂಬದಲ್ಲಿ ನೆಲೆಗೊಂಡು ಪೂಜೆಯ ಕೈಕೊಂಬುವಂಥವರು. ನಿಮ್ಮವರಯ್ಯಾ–ನಿಮ್ಮ ಜಂಗಮಮೂರ್ತಿಗಳಯ್ಯಾ, ಎನಗೆ–ಸಂಗನಬಸವೇಶ್ವರನಿಗೆ, ತನು ಮೀಸಲು–ಅವರ ಸೇವಾಸತ್ಕಾರಂಗಳ ಮಾಡುವುದಕ್ಕೆನ್ನಂಗವು ನಿರ್ಮಲವಾಗಿಪ್ಪುದು, ಮನ ಮೀಸಲು–ಅವರ ಶಿವಾನುಭಾವವನ್ನು ಬೆಸಗೊಂಡು ಕೇಳುವುದಕ್ಕೆನ್ನ ಮನವು ನಿರ್ಮಲವಾಗಿಪ್ಪುದು, ನಯನ ಮೀಸಲು–ಅವರ ಮೂರ್ತಿವಿಗ್ರಹವನ್ನು ನಿರೀಕ್ಷಣೆಯ ಮಾಡುವುದಕ್ಕೆನ್ನ ನೇತ್ರಂಗಳು ನಿರ್ಮಲವಾಗಿಪ್ಪವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗೆ–ನಿಮ್ಮ ಜಂಗಮಮೂರ್ತಿಗಳಿಗೆ, ತನುಮನನಯನಂಗಳು ನಿರ್ಮಲ ವಾಗಿರ್ಪವೆಂಬುದರ್ಥ.

● ಮನೆದೈವ–ಅಂಗದಲ್ಲಿ ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗವು ಸಂಬಂಧವಾಗಿರ್ಪುದು. ಕುಲದೈವ–ಮನದಲ್ಲಿ ಸುಜ್ಞಾನಸ್ವರೂಪವಾದ ಪ್ರಾಣಲಿಂಗವು ಸಂಬಂಧವಾಗಿರ್ಪುದು. ಎನಗೆ–ಜ್ಞಾನಕಲಾತ್ಮನಿಗೆ, ನಿಮ್ಮವರಯ್ಯಾ–ಆತ್ಮಾಂಗದಲ್ಲಿ ಮಹಾಜ್ಞಾನಸ್ವರೂಪವಾದ ಭಾವಲಿಂಗವು ಸಂಬಂಧವಾಗಿರ್ಪುದಯ್ಯಾ. ತನು ಮೀಸಲು–ಅಂಗದಲ್ಲಿ ಬರಲ್ಪಟ್ಟ ರೂಪುಪದಾರ್ಥವನ್ನು

ಇಷ್ಟಲಿಂಗಕ್ಕೆ ಸಮರ್ಪಣೆಯ ಮಾಡುವುದಕ್ಕೆನ್ನಂಗವು ಇಷ್ಟಲಿಂಗಕ್ಕೆ ಭಕ್ತನಾಗಿಪ್ಪುದು. ಎನ್ನ ಮೀಸಲು–ಮನದಲ್ಲಿ ಬರಲ್ಪಟ್ಟ ರುಚಿಪದಾರ್ಥವನ್ನು ಪ್ರಾಣಲಿಂಗಕ್ಕೆ ಸಮರ್ಪಣೆಯ ಮಾಡುವುದಕ್ಕೆನ್ನ ಮನವು ಪ್ರಾಣಲಿಂಗಕ್ಕೆ ಭಕ್ತನಾಗಿರ್ಪುದು ಎನ್ನ ನಯನ ಮೀಸಲು ಆತ್ಮಾಂಗದಲ್ಲಿ ಬರಲ್ಪಟ್ಟ ತೃಪ್ತಿಪದಾರ್ಥವನ್ನು ಭಾವಲಿಂಗಕ್ಕೆ ಸಮರ್ಪಣೆಯ ಮಾಡುವುದಕ್ಕೆ ಮನ ಆತ್ಮಾಂಗವು ಭಾವಲಿಂಗಕ್ಕೆ ಭಕ್ತನಾಗಿರ್ಪುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗೆ–ನಿಮ್ಮ ತ್ರಿವಿಧಲಿಂಗಕ್ಕೆನ್ನ ತ್ರಿವಿಧಾಂಗದಲ್ಲಿ ಬರಲ್ಪಟ್ಟ ತ್ರಿವಿಧಪದಾರ್ಥವನ್ನು ಸಮರ್ಪಣೆಯ ಮಾಡುವುದಕ್ಕೆನ್ನ ತ್ರಿವಿಧಾಂಗವು ಭಕ್ತನಾಗಿರ್ಪುದು.

II- - - - - - - - - - - - - - - - - - - - - - - - - - - - - - - - - - - - - - - - - - - -

ಕೂಡಲಸಂಗಮದೇವಾ ನಿಮ್ಮ ಶರಣರಿಗೆ–ಎಲೆ ಲಿಂಗವೆ ನಿಮ್ಮ ಶೀವಶರಣರಾದ ಆಚಾರಾದಿ ಮಹಾಲಿಂಗಗಳಿಗೆ, ಮನೆದೈವ–ಅಂಗವೆಂಬ ಗೃಹಕ್ಕೆ ಸದ್ಧರ್ಮದಿವ್ಯಕಾಂತಿಮೂರ್ತಿಯೆ ಇಷ್ಟಲಿಂಗವು. ಕುಲದೈವ ಎನಗೆ ನಿಮ್ಮವರಯ್ಯಾ–ಷಟ್ಕರಣಂಗಳ ಸಮೂಹಕ್ಕೆ ಪ್ರಾಣಲಿಂಗದೊಡನೆ ಕೂಡಿ[೧]ದ[೧] ಷಡ್ವಿಧಲಿಂಗವಯ್ಯಾ. ತನು ಮೀಸಲು–ಅಂಗವು ಇಷ್ಟಲಿಂಗಕ್ಕೆ ಆರೋಪಿತವು, ಮನ ಮೀಸಲು–ಮನವು ಪ್ರಾಣಲಿಂಗಕ್ಕೆ ಆರೋಪಿತವು, ನಯನ ಮೀಸಲು ಎನ್ನ–ಮಹಾಲಿಂಗವೆ ಷಡ್ವಿಧಲಿಂಗವು. ಆ ಷಡ್ವಿಧ ಲಿಂಗವೆ ತ್ರಿವಿಧಲಿಂಗವು. ಆ ತ್ರಿವಿಧಲಿಂಗವೆ ಮಹಾಲಿಂಗವೆಂದು ನಿರೀಕ್ಷಿಸುವುದಕ್ಕೆನ್ನ ನೇತ್ರ ಆರೋಪಿತವು.

..........................

೧–೧ x (ಜ).

IV- - - - - - - - - - - - - - - - - - - - - - - - - - - - - - - - - - - - - - - - - - - -

ಮನೋಮಧ್ಯದಲ್ಲಿದ್ದ ಪರಂಜ್ಯೋತಿಯು ನೀನೆ. ಮನ ಮೊದಲಾದ ಇಂದ್ರಿಯಂಗಳು ನಿನ್ನವಾಗಿ ಕುಲದೈವ ನೀನು. ತನುಮನಧನ ನಿಮ್ಮನಲ್ಲದೆ ಅನ್ಯವನಱಿಯವಾಗಿ, ಮೀಸಲೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - -

[೧]ಮನೆದೈವ–ಸ್ಥೂಲತನುವಿನ ಇಷ್ಟಲಿಂಗ,ಕುಲದೈವ–ಸಕಲೇಂದ್ರಿಯವಿಷಯಂಗಳಿಗಧಿಪತಿಯಾದ ಪ್ರಾಣಲಿಂಗವು, [ತನು ಮೀಸಲು–] ಇಷ್ಟಲಿಂಗದ ಸತ್ಕ್ರಿಯೋಪಚಾರದಲ್ಲಿ ಅಂಗವು ಸಂಬಂಧವಾಗಿರ್ಪುದು, ಮನ ಮೀಸಲು–ಪ್ರಾಣಲಿಂಗದ ಮಂತ್ರಧ್ಯಾನ ಜಪಸ್ತೋತ್ರಾದಿಗಳಲ್ಲಿ ಮನಸ್ಸು ಸಂಬಂಧವಾಗಿರ್ಪುದು.

..........................

೧ + ಇವೆಱಡಱ ಹಿಂದಳದು (ಪ). ಈ ಟೀಕು ಈ ಪ್ರತಿಯಲ್ಲಿ ೩೭೭ನೆಯ ವಚನದ ನಂತರ ಬಂದಿದೆ (ಸಂ).

**ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆಱೆದು, ಬತ್ತಿಯನಿಕ್ಕಿ ಬರವ ಹಾರುತಿರ್ದೆನೆಲೆಗವ್ವಾ. ತಱಗೆಲೆ ಗಿಱುಕೆಂದಡೆ ಹೊಱಗನಾಲಿಸುವೆ. ಅಗಲಿದ'ನೆಂ'ದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ ! ಕೂಡಲಸಂಗನಶರಣರು ಬಂದು, ಬಾಗಿಲ ಮುಂದೆ ನಿಂದು [2]ಶಿವೇ[2] ಎಂದೊಡೆ ಸಂತೋಷಬಟ್ಟೆನೆಲೆಗವ್ವಾ !**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಗಿಳಿಯ ಹಂಜರವಿಕ್ಕಿ–ಲೋಕದಲ್ಲಿ ಸ್ತ್ರೀಪುರುಷರೀರ್ವರೂ ಗಂಡಭೇರುಂಡಪಕ್ಷಿಯ ಹಾಂಗೆ ದೇಹವೆರಡು ಪ್ರಾಣವೊಂದಾಗಿ ಒಬ್ಬರಿಗೊಬ್ಬರು ಅಗಲದೆ ಕೂಡಿರುವರು. ತಮ್ಮ ತಮ್ಮೊಳಗೆ ಹೊತ್ತು ಹೋಗುವುದಕ್ಕೆ ಒಂದು ಗಿಳಿಯನ್ನು ಸಾಕಿಕೊಂಡಿರುವರು. ಹೀಂಗಿರುತ್ತಿದ್ದ ಹಾಂಗೆ ಆ ಪುರುಷನಾದಂಥವನು ಒಂದೂರುಕೇರಿಗೆ ಹೋಗಿಬರುವಂಥ ವೇಳೆಯಲ್ಲಿ ಆ ಸ್ತ್ರೀಯಳಾದಂಥಾಕಿ ಹಗಲು ಬೈತನಕ ಗಿಳಿಗೂಡ ಹೊತ್ತುಗಳೆದು ಸಾಯಂಕಾಲವಾದ ಮೇಲೆ, ಗಿಳಿಯ–ಶುಕನನ್ನು, ಹಂಜರವಿಕ್ಕೆ–ಮಂದಾಸನದಲ್ಲಿ ಮಡಗಿ, ಸೊಡರಿಂಗೆ–ಪ್ರಣತಿಗೆ, ಎಣ್ಣೆಯನೆಱೆದು–ತೈಲವ ನೀಡಿ, ಬತ್ತಿಯನಿಕ್ಕಿ–ರಜ್ಜನ್ನು ಹಾಕಿ, ಬರವ–ಪುರುಷ ಬರುವಂಥ ಚಮತ್ಕಾರವನ್ನು, ಹಾರುತಿರ್ದೆ–ಇಚ್ಛೈಸುತಿರ್ದೆ, ಎಲೆಗವ್ವಾ–ಭೋ ಎಲೆ ತಾಯೆ.

ತಱಗೆಲೆ ಗಿಱುಕೆಂದಡೆ–ಮನೆಯ ಮುಂದಿರುವಂಥ ಆಲದ ಮರ ಅರಳೆಮರ ಗೋಣಿಮರ ಮೊದಲಾದವು ಗಾಳಿಗೆ ಗಲಗಲನೆಂದು ಅಲುಗಾಡಿ ಶಬ್ದವ ಮಾಡಿದರೆ, ಹೊಱಗನಾಲಿಸುವೆ–ಪುರುಷ ಬರುತಾನೋ ಏನೋ ಎಂದು ಬಾಗಿಲ ಹೊರಗೆ ನಿಂತು ಕಿವಿಗೊಟ್ಟಾಲಿಸುವೆನು. ಅಗಲಿದನೆಂದು–ಎನ್ನ ಬಿಟ್ಟು ವಿಯೋಗವಾದನೆನುತ್ತ, ಎನ್ನ ಮನ–ಸತಿಯಳ ಚಿತ್ತವು, ಧಿಗಿಲೆಂದಿತ್ತು–ಅತ್ಯಂತ ಭಯದೊಡನೆ ಕೂಡಿರ್ಪುದು, ಎಲೆಗವ್ವಾ–ಭೋ ಎಲೆ ತಾಯೆ. ಕೂಡಲಸಂಗನಶರಣರು ಬಂದು–ಮಾವನ ಮಗ ಬಂದು, ಬಾಗಿಲ ಮುಂದೆ ನಿಂದು, 'ಶಿವೇ' ಎಂದಡೆ–'ಶಿವೇ' ಬಾಗಿಲ ತೆರಿ ಕಾಲಿಗೆ ನೀರು ತಾಯೆಂದರೆ, ಸಂತೋಷಬಟ್ಟೆನು–ಹರುಷಂಬಟ್ಟೆನು, ಎಲೆಗವ್ವಾ, –ಭೋ ಎಲೆ ತಾಯೇ ಎಂದು ಆ ಸ್ತ್ರೀಯಳು ತಮ್ಮ ತಾಯಿಯೊಡನೆ ಹೇಳುತ್ತಿಹಳೆಂಬ ದೃಷ್ಟೋಪಮಾನದ ಹಾಂಗೆ.

● ಗಿಳಿಯ ಹಂಜರವಿಕ್ಕಿ : ಗಿಳಿಯ–ಪರಮಹಂಸಸ್ವರೂಪವಾದ ಪ್ರಾಣಲಿಂಗವನು, ಹಂಜರವಿಕ್ಕಿ–ಪಂಚಭೂತಯುಕ್ತವಾದ ದೇಹದಲ್ಲಿ ಸಂಬಂಧವ ಮಾಡಿಕೊಂಡು, ಸೊಡರಿಂಗೆ–ಆತ್ಮನೆಂಬ ಪ್ರಣತಿಗೆ, ಎಣ್ಣೆಯನೆಱೆದು–ಸದ್ವಿವೇಕವೆಂಬ ತೈಲವನ್ನು ಪರಿತೋಷವ ಮಾಡಿ, ಬತ್ತಿಯನಿಕ್ಕಿ–ಜ್ಞಾನವೆಂಬ ರಜ್ಜನ್ನು ಪಟುತರವ ಮಾಡಿ, ಬರವ–ಅಂತರಂಗದ ಪ್ರಾಣಲಿಂಗವೆ ಬಹಿರಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಳಬೇಕೆಂಬಂಥ ತೀವ್ರವನ್ನು, ಹಾರುತಿರ್ದೆನು–ಇಚ್ಛೈಸುತಿರ್ದೆನು, ಎಲೆಗವ್ವಾ–ಭೋ ಎಲೆ ಶರಣಸತಿಯಳೆ.

ತಱಗೆಲೆ ಗಿಱುಕೆಂದಡೆ–ಷಡೀಂದ್ರಿಯಂಗಳೆಂಬ ಶುಷ್ಕಪರ್ಣಂಗಳು ವಿಷಯಂಗಳೊಡನೆ ಕೂಡಿ ಚರಿಸಿದರೆ, ಹೊಱಗನಾಲಿಸುವೆ–ಬಹಿರಂಗದಲ್ಲಿ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದ ಭಿನ್ನವಿಟ್ಟುಕೊಂಡಾರಾಧಿ[ಸುವೆ]. ಅಗಲಿದನೆಂದು–ಇಷ್ಟಲಿಂಗದ

ಚಿತ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳದೆ ವಿಯೋಗವಾಯಿತ್ತೆನುತ್ತೆ, ಎನ್ನ ಮನ-ಶರಣಸತಿಯಳ ಮನಸ್ಸು, ಧಿಗಿಲೆಂದಿತ್ತು-ಅತ್ಯಂತ ವ್ಯಾಕುಲಗೊಂಡಿತ್ತು, ಎಲೆಗವ್ವಾ-ಭೋ ಎಲೆ ಶರಣಸತಿಯಳೆ. ಕೂಡಲಸಂಗನಶರಣರು ಬಂದು-ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡು, ಬಾಗಿಲ ಮುಂದೆ ನಿಂದು-ಆ ಪ್ರಾಣಲಿಂಗವೇ ಷಡೇಂದ್ರಿಯಂಗಳಲ್ಲಿ ಷಡ್ವಿಧಲಿಂಗವಾಗಿ ನೆಲೆಗೊಂಡು, ಶಿವೇ ಎಂದಡೆ-ಷಡೇಂದ್ರಿಯಂಗಳಲ್ಲಿ ಬರಲ್ಪಟ್ಟ ಷಡ್ವಿಧವಿಯಪದಾರ್ಥಂಗಳನು ಸಮರ್ಪಿಸಿಕೊಂಡು ಷಡ್ವಿಧಲಿಂಗಪ್ರಸಾದವ ಕರುಣಿಸಿಕೊಟ್ಟರೆ, ಸಂತೋಷಬಟ್ಟೆ-ಹರುಷಂಬಟ್ಟೆನು, ಎಲೆಗವ್ವಾ-ಭೋ ಎಲೆ ತಾಯೇ ಎಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಸ್ವರೂಪವಾದ ಶ್ರೀಗುರುನಾಥನೊಡನೆ ಬಿನ್ನೈಸುವಂಥ ಬಿನ್ನಪವು.

II- - - - - - - - - - - - - - - - - - - - - - - - - - - - - - - - - - - - - - - - - - - - - - -

1-1 ರಂ (ಚ, ಜ). 2-2 ಶಿವಶಿವಾ (ಚ, ಜ).

..........................

ಗಿಳಿಯ ಹಂಜರವಿಕ್ಕಿ-ಪರಮಾತ್ಮನೆಂಬ ಶುಕ[ನ] ದೇಹವೆಂಬ ಹಂಜರವನು ಬಂಧಿಸಿ, ಸೊಡರಿಂಗೆಣ್ಣೆಯನೆಱೆದು-ಆತ್ಮದೀಪ್ತಿಗೆ ಸದ್ವಿವೇಕವೆಂಬ ತೈಲವನು ಪೋಷಿಸಿ, ಬತ್ತಿಯನಿಕ್ಕಿ-ನೈಷ್ಠೆಯೆಂಬ ಕಾರ್ಪಾಸದ ರಜ್ಜುವ ಹಾಕಿ, ಬರವ ಹಾರುತ್ತಿದ್ದನೆಲೆಗವ್ವಾ-ಇಷ್ಟಲಿಂಗದ ಚಿತ್ಕಲೆಯೆ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಬರಬೇಕೆಂಬಂಥ ತ್ವರಿತವನಿಚ್ಛೈಸುತ್ತಿದ್ದೆನೆಲೆ ಮಾತೃಸ್ಥಾನವಾದ ಚಿಚ್ಛಕ್ತಿಯೆ ಎಂದು ಕ್ರಿಯಾಶಕ್ತಿಸ್ವರೂಪನಾದ ಶರಣನು ಜ್ಞಾನಶಕ್ತಿಯೊಡನೆ ಬಿನ್ನೈಸುತ್ತಿಹನು. ತಱಗೆಲೆ ಗಿಱುಕೆಂದಡೆ ಹೊಱಗನಾಳಿಸುವೆ-ಜ್ಞಾನಸಾರವಿಹೀನವಾದ ಇಂದ್ರಿಯಂಗಳೆಂಬ ಶುಷ್ಕಪರ್ಣವು ತನುಕರಣೇಂದ್ರಿಯ ಶಬ್ದಜಾಲವೆಂದರೆ ಬಹಿರಂಗದ ಕ್ರೀಯನೆ ಬೆಸಗೊಂಬೆ.

ಅಗಲಿದರೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ-ಬಹಿರಂಗದ ಕ್ರೀಗೋಸ್ಕವಾಗಿ ಅಂತರಂಗದ ಪ್ರಾಣಲಿಂಗವೆ ಗುರುಮುದಿಂದ ಬಹಿಷ್ಕರಿಸಿ ವಿಯೋಗವಾದನೆಂದರೆ ಎನ್ನ ಮಾನಸವು ಹೆದರಿತ್ತು. ಎಲೆ ಮಾತೃಸ್ಥಾನವಾದ ಚಿಚ್ಛಕ್ತಿಯೆ ಎಂದು ಕ್ರಿಯಾಶಕ್ತಿಸ್ವರೂಪನಾದ ಶರಣನು ಜ್ಞಾನಶಕ್ತಿಯೊಡನೆ ಬಿನ್ನೈಸುತ್ತಿಹನು. ಕೂಡಲಸಂಗನಶರಣರು ಬಂದು ಬಾಗಿಲ ಮುಂದೆ ನಿಂದು ಶಿವಶಿವಾ ಎಂದಡೆ-ಷಡ್ವಿಧಲಿಂಗಗಳು ಆಯಾಯ ವಿಷಯ ಪದಾರ್ಥವನು ಕೈಕೊಂಬುದಕ್ಕೆಯ್ದಿ, ಆಯಾಯ ಇಂದ್ರಿಯಂಗಳೆಂಬ ಬಂಕದ್ವಾರದ ಮುಂದೆಸೆಯಲ್ಲಿ ನೆಲಸಿ, ಘ್ರಾಣಪಾಯುವಿನಲ್ಲಿ ಆಚಾರಲಿಂಗ, ಜಿಹ್ವೆಗುಹ್ಯೆಯಲ್ಲಿ ಗುರುಲಿಂಗ, ನೇತ್ರಪಾದದಲ್ಲಿ ಶಿವಲಿಂಗ, ತ್ವಕ್ಕುಪಾಣಿಯಲ್ಲಿ ಜಂಗಮಲಿಂಗ, ಶ್ರೋತ್ರವಾಕಿನಲ್ಲಿ ಪ್ರಸಾದಲಿಂಗ, ಹೃದಯಮಾನಸದಲ್ಲಿ ಮಹಾಲಿಂಗವೆಂದರೆ, ಸಂತೋಷಬಟ್ಟೆನೆಲೆಗವ್ವಾ-ಶಿವಾನುಭಾವದಲ್ಲಿ ಸಂತೃಪ್ತಿವಟ್ಟೆನೆಲೆ ಮಾತೃಸ್ಥಾನವಾದ ಚಿಚ್ಛಕ್ತಿಯೆ ಎಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಯೊಡನೆ ಬಿನ್ನೈಸುತ್ತಿಹನೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - -

ಗಿಳಿಯ-ಆತ್ಮಶುಕನ, ಹಂಜರವಿಕ್ಕಿ-ದೇಹವೆಂಬ ಪಂಜರದಲ್ಲಿ ಸಂಬಂಧಿಸಿ, ಸೊಡರಿಂಗೆ-ಜ್ಞಾನಜ್ಯೋತಿಗೆ, ಎಣ್ಣೆಯಂ-ಭಕ್ತಿಸಾರವನು, ಎರೆದು-ನೀಡಿ, ಬತ್ತಿಯನಿಕ್ಕಿ-ಸುಬುದ್ಧಿಯೆಂಬ

ವರ್ತಿಯನು ಸಂಬಂಧಿಸಿ, ಪ್ರಾಣಲಿಂಗದ ಪ್ರಸನ್ನತ್ವದಾಗಮನವನು ಇಚ್ಛೈಸುತ್ತಿರ್ದೆಯೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಯ ಕೂಡೆ ಮಾಡುವ ಪ್ರಶ್ನೆಯು ಎಂಬುದೀಗ ಬರವ ಹಾರುತ್ತಿರ್ದನೆಲೆಗವ್ವಾ ಎಂಬ ಶಬ್ದಕ್ಕರ್ಥ. ತರಗೆಲೆ–ಇಂದ್ರಿಯಂಗಳೆಂಬ ಪರ್ಣಗಳು, ಗಿರಕೆಂದಡೆ–ವಿಷಯದ ದಿಕ್ಕಿಗಭಿಮುಖವಾದರೆ. ಪೊರಗನಾಲಿಸುವೆ–ಬಹಿರಂಗದಲ್ಲಿ ಸಂಬಂಧವಾದಿಷ್ಟಲಿಂಗದ ಪೂಜಾಕ್ರಿಯೆಗಳಲ್ಲಿ ಎರಕವಾಗಿರುವೆನು. ಅಗಲಿದೆನೆಂದು–ಲಿಂಗದಿಂದ ವಿಯೋಗವಾದೆನೆಂದು, ಎನ್ನ ಮನ–ನನ್ನ ಮನಸ್ಸು, ಧಿಗಿಲೆಂದಿತ್ತೆಲೆಗವ್ವಾ–ಬೆಚ್ಚಿತ್ತು ಎಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಯ ಕೂಡೆ ಮಾಡುವ ಪ್ರಶ್ನೆಯು.

V- - - - - - - - - - - - - - - - - - - - - - - - - - - - - - - - - - - - - - - - - - - -

ಪರಮಾತ್ಮಂಗೆ ದೇಹಸಂಬಂಧವ ಮಾಡಿ ಎಂಬುದೀಗ ಗಿಳಿಯ ಹಂಜರವನಿಕ್ಕಿ ಎಂಬುದರ್ಥ. ಸೊಡರಿಂಗೆ–ಜ್ಞಾನಜ್ಯೋತಿಗೆ, ಎಣ್ಣೆಯನೆಱೆದು–ಭಕ್ತಿಯೆಂಬ ತೈಲವ ನೀಡಿ, ಬತ್ತಿಯನಿಕ್ಕಿ–ಮನಸ್ಸೆಂಬ ಕಾರ್ಪಾಸರಜ್ಜುವನಿಕ್ಕಿ, ಬರವ ಹಾರುತಿರ್ದೆಂ–ಇಷ್ಟಲಿಂಗದಾಗಮನವನು ಅಂತರಂಗದಲ್ಲಿ ಇಚ್ಛೈಸುತ್ತಿರ್ದೆನೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಮಾತೃಸ್ಥಾನವಾದ ಜ್ಞಾನಶಕ್ತಿಯ ಕೂಡೆ ಹೇಳುವ ಪ್ರಶ್ನೆ ಎಂಬುದೀಗ ಬರವ ಹಾರತ್ತಿರ್ದನೆಲೆಗವ್ವಾ ಎಂಬುದರ್ಥ. ತಱಗೆಲೆ ಗಿಱುಕೆಂದಡೆ–ಇಂದ್ರಿಯಂಗಳು ಪ್ರಪಂಚಿನಲ್ಲಿ ವರ್ತಿಸಿದರೆ, ಹೊಱಗನಾಲಿಸುವೆ–ಬಹಿರಂಗದ ಇಷ್ಟಲಿಂಗದಲ್ಲಿ ಸಂಬಂಧಿಸುವೆನು. ಅಗಲಿದೆನೆಂದು ಸುಜ್ಞಾನಸ್ವರೂಪವಾದ ಜಂಗಮಲಿಂಗದಿಂದ ಹೊರಚ್ಚಾದೆನೆಂದು, ಎನ್ನ ಮನಸ್ಸು ಧಿಗಿಲೆಂದಿತ್ತು–ಕಂಪನವಾಯಿತ್ತು.

---

೩೭೭

**ಅಡವಿ[1]ಯೊಳಗೊಬ್ಬ[1] ಕಡು ನೀರಡಸಿ ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ ! ಕುರುಡ ಕಣ್ಣ ಪಡೆದಂ[2]ತೆ[2], ಬಡವ ನಿಧಾನವ ಕಂಡಂತಾಯಿತ್ತಯ್ಯಾ ! ನಮ್ಮ ಕೂಡಲಸಂಗನಶರಣರ ಬರವೆನಗೆ ಪ್ರಾಣ ಕಂಡಯ್ಯಾ !**

I - - - - - - - - - - - - - - - - - - - - - - - - - - - - - - - - - - - - - - - - - - -

ಅಡವಿಯೊಳಗೊಬ್ಬ ಕಡು ನೀರಡಿಸಿ ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ: ಅಡವಿಯೊಳಗೆ–ಅರಣ್ಯದಲ್ಲಿ, ಒಬ್ಬ–ಓರ್ವ ದೇವದತ್ತ ಪುರುಷನು, ಕಡು ನೀರಡಿಸಿ–ಅತ್ಯಂತ ತೃಷೆಯಾಗಿ, ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ–ಮಧ್ಯದಲ್ಲಿ ಹಳ್ಳ ಹೊಳೆ ಕೆರೆ ಬಾವಿಗಳ ಕಂಡಲ್ಲಿ ಒಳೆಯಕ್ಕಿ ಇಳಿದು ಹಸ್ತಪಾದವ ತೊಳೆದುಕೊಂಡು ಉದಕವನ್ನು ಮೊಗೆದುಕೊಂಡು ಮೇಲಕ್ಕೆ ಬಂದು ಸಸಿವೃಕ್ಷಾದಿಗಳ ನೆರಳಲ್ಲಿ ಕುಳಿತುಕೊಂಡಲ್ಲಿ ಎಷ್ಟೊಂದು ಸಂತೋಷವಾಗುತ್ತಿಹದೋ ಹಾಂಗೆ, ಜಂಗಮಮೂರ್ತಿಗಳು ಭಿಕ್ಷಕ್ಕೆ ಬಂದು ತನುಮನಧನಂಗಳನು ಕೇಳಿದರೆ ಎನಗಷ್ಟೊಂದು ಸಂತೋಷವಾಗುತ್ತಿಹುದಯ್ಯಾ.

ಕುರುಡ [ಕಣ್ಣ ಪಡೆದಂತೆ–] ಹುಟ್ಟುತ್ತಲೇ ಕಣ್ಣ ಕಾಣದಂಥ ಅಂಧಕನಿಗೆ ಮಧ್ಯದಲ್ಲಿ ಕಣ್ಣು ಬಂದರೆ ಎಷ್ಟೊಂದು ಸಂತೋಷವಾಗುತ್ತಿಹುದೋ ಹಾಂಗೆ, ಜಂಗಮಮೂರ್ತಿಗಳು

ಬಿಜಯಂಗೈದು ಬಂದು ತನುಮನಧನಂಗಳನು ಕೇಳಿದರೆ ಎನಗಷ್ಟೊಂದು ಸಂತೋಷವಾಗುತ್ತಿಹದು, ಬಡವ ನಿಧಾನವ ಕಂಡಂತಾಯಿತ್ತಯ್ಯಾ-ಎಂದೆಂದೂ ಐಶ್ವರ್ಯವಿಲ್ಲದಂಥ ನಿರ್ಧನಿಕಂಗೆ ಮಧ್ಯದಲ್ಲಿ ಐಶ್ವರ್ಯ ಬಂದರೆ ಎಷ್ಟೊಂದು ಸಂತೋಷವಾಗುತ್ತಿಹುದೋ ಹಾಂಗೆ, ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದು ತನುಮನಧನಂಗಳನು ಕೇಳಿದರೆ ಎನಗಷ್ಟೊಂದು ಸಂತೋಷವಾಗುತ್ತಿಹುದಯ್ಯಾ.

ಕೂಡಲಸಂಗನಶರಣರ-ಜಂಗಮಮೂರ್ತಿಗಳ, ಬರವು-ಭಿಕ್ಷಕ್ಕೆಂದು ಬರುವಂಥ ಚಮತ್ಕಾರವು, ಎನಗೆ-ಸಂಗನಬಸವೇಶ್ವರನಿಗೆ, ಪ್ರಾಣ ಕಂಡಯ್ಯಾ !-ಹೋದ ಪ್ರಾಣ ಬಂದೋಪಾದಿಯಲ್ಲಿ ಅತ್ಯಂತ ಹರುಷವಾಗಿರ್ಪುದು ಕಾಣಯ್ಯಾ.

II- - - - - - - - - - - - - - - - - - - - - - - - - - - - - - - - - - - - - - - - -

1-1 ಯಲೊ (ಜ, ಜ).

..........................

ಅಡವಿಯಲ್ಲೊಬ್ಬ-ಭವಾರಣ್ಯದಲ್ಲಿ ಓರ್ವನಾದಾತ್ಮನು, ಕಡು ನೀರಡಸಿ-ಅತ್ಯಂತ ಶಿವಾನಂದಜಲಾಪೇಕ್ಷಿತನಾಗಿ, ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ-ಮಧ್ಯಕಲ್ಪನೆಯಲ್ಲಿ ಶಿವಾನಂದಜಲವ ನೋಡಿದನೆಂಬುದರ್ಥ. ಕುರುಡ ಕಣ್ಣ ಹಡದಂತೆ-ಜಾತ್ಯಂಧಕನಾದ ಜೀವನು ಜ್ಞಾನದೃಷ್ಟಿಯ ಪಡೆದನೆಂಬುದರ್ಥ. ಬಡವ ನಿಧಾನವ ಹಡದಂತಾಯಿತ್ತಯ್ಯಾ-ಜ್ಞಾನವಿಹೀನವಾದಾತ್ಮನು ಸರ್ವಾಚಾರಸಂಪತ್ತಿನಾಚರಣೆಯೆಂಬ ನಿಕ್ಷೇಪದ್ರವ್ಯವ ಪಡೆದನೆಂಬುದರ್ಥ. ಮುಂದಕ್ಕೆ ಕಾಣಬಂದರ್ಥ.

V- - - - - - - - - - - - - - - - - - - - - - - - - - - - - - - - - - - - - - - - -

1-1 ಯಲೊ (ಪ). 2-2 ತಾಯಿತ್ತು (ಪ).

..................................................

ಅಡವಿಯಲ್ಲಿ-ಭವಾರಣ್ಯದಲ್ಲಿ, ಒಬ್ಬ-ಓರ್ವ ಜೀವನು, ಕಡು ನೀರಡಸಿ-ಅತ್ಯಂತ ಶಿವಾಪೇಕ್ಷೆ ಮುಂದುಗೊಂಡು ಗುರುಕರುಣವ ಪಡೆದು, ಎಡೆಯಲ್ಲಿ-ತೆಱಪಿನಲ್ಲಿ, ನೀರ ಕಂಡಂತಾಯಿತಯ್ಯಾ-ಚಿದ್ರಸಸ್ವರೂಪವಾದ ಇಷ್ಟಲಿಂಗಸಂಬಂಧವಾಯಿತ್ತಯ್ಯಾ. ಕುರುಡ ಕಣ್ಣ ಪಡೆದಂತಾಯಿತ್ತು-ಅಂತರಂಗದಜ್ಞಾನವಳಿದು ಪ್ರಾಣಲಿಂಗಸಂಬಂಧವಾಯಿತ್ತು, ನಿಧಾನವ ಕಂಡಂತಾಯಿತ್ತಯ್ಯಾ-ಆತ್ಮನಲ್ಲಿ ನಿಕ್ಷೇಪದ್ರವ್ಯಸ್ವರೂಪವಾದ ಭಾವಲಿಂಗ ಸಂಬಂಧವಾಯಿತ್ತು.

---

೩೭೮

**ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು ಗುಡಿತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ, ರಂಗವಾಲಿಯನಿಕ್ಕಿ, ಉಘೇ ಚಾಂಗು ಭಲಾಯೆಂಬೆ, ಕೂಡಲಸಂಗನಶರಣರು ತಮ್ಮೊಕ್ಕುದನಿಕ್ಕಿ ಸಲಹುವರಾಗಿ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು : ಇಂದು–ಇವತ್ತು, ಎನ್ನ ಮನೆಗೆ–ಸಂಗನಬಸವೇಶ್ವರನ ಅರಮನೆಗೆ, ಪ್ರಮಥರು ಬಂದಹರೆಂದು–ಬಸವೇಶ್ವರ ಮಾಡುವಂಥ ಭಕ್ತಿಯನ್ನು ನೋಡಬೇಕೆಂದು ಐವತ್ತಾರು ದೇಶದ ಭಕ್ತಮಾಹೇಶ್ವರರು ಎಯ್ದುಬಂದಹರೆನುತ್ತ, ಗುಡಿತೋರಣವ ಕಟ್ಟಿ–ಗುಡಿಗುಡಾರ ರಾಯಢೇರೆ ಮೊದಲಾದವನ್ನು ಹೊಯ್ಸಿ, ತೋರಣವ ಕಟ್ಟಿ–ತಳಿಗೆತೋರಣ ತಳಿರುತೋರಣ ಮಕರತೋರಣ ಮುಕುರತೋರಣ ಮೊದಲಾದವನ್ನು ಬಂಧಿಸಿ, ಷಡುಸಮ್ಮಾರ್ಜನೆಯ ಮಾಡಿ– ॥ಗ್ರಂಥ॥ ಗೋಮಯಂ ರೋಚನಂ ಮೂತ್ರಂ । ದಧಿ ಕ್ಷೀರಂ ಘೃತಂ ಗವಾಂ । ಷಡಂಗಾನಿ ಪವಿತ್ರಾಣಿ । ಷಣಮಾರ್ಜನಮಿತಿಸ್ಮೃತಂ ॥ ಎಂದು ಷಡುಸಮ್ಮಾರ್ಜನೆಯ ಮಾಡಿ, ರಂಗವಾಲಿಯನಿಕ್ಕಿ–॥ ಗ್ರಂಥ ॥ ಯಾವ ಗೋಧೂಮಪಿಷ್ಟವರ್ಾ । ಮೌಕ್ತಿಕಂ ತಂಡುಲಂ ತಥಾ । ಮರಕತಂ ಪ್ರಸ್ತರವ್ಯಾಪಿ । ರಂಗವಲ್ಲೀ ಇತಿಸ್ಮೃತಾ ॥ ಗೋರಕಲ್ಲು ಹಿಟ್ಟು ಮೊದಲಾದ ಕುಂಡಮಂಡಲಾಕಾರದಿಂದ ರಂಗವಾಲಿಯ ನಿರ್ಮಿತವ ಮಾಡಿ. ಉಘೇ–॥ ಗ್ರಂಥ ॥ ಉಕಾರಶ್ಯಾತ್ ಮಹಾದೇವೀ । ಘೇಕಾರಃ ಪರಮೇಶ್ವರಃ ॥ ಉಮಾಪರಶೀವಾಯೋಗೇ । ಉಘೇ ಶಬ್ದ ಇಹೋಚ್ಯತೇ ॥ ಎಂದು ನಾ ಮಾಡುವಂಥ ಭಕ್ತಿಯು ಶಿವಭಕ್ತಿಸನ್ನದ್ಧವಾದ ಶಿವಂಗೆ ಸಮರ್ಪಣೆಯಾಗಲೆಂದು, ಚಾಂಗು–ಒಪ್ಪಲ್ಪಟ್ಟ, ಭಲಾಯೆಂಬೆ–ಭಲರೇ ಭಾಪುರೇ ಎಂದು ಸ್ತೋತ್ರವ ಮಾಡುವೆನು. ಕೂಡಲಸಂಗನ ಶರಣರು–ಏಳುನೂರೆಪ್ಪತ್ತಮರಗಣಂಗಳು ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳು, ತಮ್ಮೊಕ್ಕುದನಿಕ್ಕಿ–ತಮ್ಮಕ್ಕಮಿಕ್ಕ ಪ್ರಸಾದವ ಕರುಣಿಸಿಕೊಟ್ಟು, ಸಲಹುವರಾಗಿ–ರಕ್ಷಣ್ಯವ ಮಾಡುವರಾಗಿ ಎಂಬುದರ್ಥ.

● ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು : ಇಂದುಯೆಂದರೆ ಚಂದ್ರ, ಚಂದ್ರನೆಂದರೆ ಜ್ಞಾನ, ಜ್ಞಾನೋದಯವಾದ ಜ್ಞಾನಕಲಾತ್ಮನು ಎನ್ನ ಮನೆಗೆ–ಎನ್ನಂತರಂಗವೆಂಬ ನಿಳಯಕ್ಕೆ, ಪ್ರಮಥರು ಬಂದಹರೆಂದು–ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳಬೇಕೆನುತ್ತ: ಗುಡಿತೋರಣವ ಕಟ್ಟಿ–ಅಂತರಂಗದ ಹರುಷಭಾವವನ್ನೇ ಗುಡಿತೋರಣವಾಗಿ ಅಳವಡಿಸಿಕೊಂಡು, ಷಡುಸಮ್ಮಾರ್ಜನೆಯ ಮಾಡಿ–ಷಡ್ಭೂತಂಗಳ ವರ್ತನೆಯನ್ನು ನಷ್ಟವ ಮಾಡಿಬಿಟ್ಟು ಅವನ್ನೆಲ್ಲ ಷಡಕ್ಷರಮಂತ್ರಂಗಳಾಗಿ ಅಳವಡಿಸಿಕೊಂಡು, ರಂಗವಾಲಿಯನಿಕ್ಕಿ–ಮನ ಮೊದಲಾದ ಸಕಲಕರಣಂಗಳನು ಶಿವಾನುಭಾವವೆಂಬ ಒನಕೆಯಿಂದ ಹೋಳುಗುಟ್ಟಿ ಅವನ್ನೆಲ್ಲ ಲಿಂಗಕರಣಂಗಳಾಗಿ ಅಳವಡಿಸಿಕೊಂಡಾಚರಿಸಿ, ಉಘೇ–ಉಕಾರಶ್ಯಾತ್ ಮಹಾದೇವೀ । ಘೇಕಾರಃ ಪರಮೇಶ್ವರಃ । ಉಮಾಪರಶಿವಾಯೋಗೇ ॥ ಉಘೇ ಶಬ್ದ ಉಹೋಚ್ಯತೇ ॥ ಎಂದು ನಾ ಮಾಡುವಂಥ ಭಕ್ತಿಯು ಸತ್ಪ್ರಣವಜ್ಞಾನಸ್ವರೂಪವಾದ ಪರಶಿವಲಿಂಗಕ್ಕೆ ಸಮರ್ಪಣೆಯಾಗಲೆಂದು, ಚಾಂಗು–ಒಪ್ಪಲ್ಪಟ್ಟ, ಭಲಾಯೆಂಬೆ–ಭಲರೇ ಭಾಪುರೇ ಎಂದು ಸ್ತೋತ್ರವ ಮಾಡುವೆನು. ಕೂಡಲಸಂಗನ ಶರಣರು : ಕೂಡಲಸಂಗನೆಂದರೆ ಇಷ್ಟಲಿಂಗವು. ಶರಣರೆಂದರೆ ಪ್ರಾಣಲಿಂಗವು, ತಮ್ಮೊಕ್ಕುದನಿಕ್ಕಿ–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗವಾಗಿ ನೆಲೆಗೊಂಡು ಅಲ್ಲಿ ಬರುವ ರೂಪು ರುಚಿ ತೃಪ್ತಿಗಳನ್ನುಕೈಕೊಂಡು ತಮ್ಮ ಶುದ್ಧಸಿದ್ಧಪ್ರಸಿದ್ಧಪ್ರಸಾದವ ಕರುಣಿಸಿಕೊಟ್ಟು ಸಲಹಿದರಾಗಿ–ರಕ್ಷಣ್ಯವ ಮಾಡುತ್ತಿಹರಾಗಿ.

II- - - - - - - - - - - - - - - - - - - - - - - - - - - - - - - - - - - - - - - - - - - - - - -

ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು ಗುಡಿತೋರಣವ ಕಟ್ಟಿ- ಈ ಜ್ಞಾನೋದಯುದಲ್ಲಿ ಎನ್ನಂತರುಗವೆಂಬ ಗೃಹಕ್ಕೆ ಪೂರ್ವಕ್ರಿಯಾಕರಣಂಗಳು ಮಾರ್ಗಕ್ರೀಯನೊಳಕೊಂಡು ಮೀರಿದ ಕ್ರೀಯಿಂದೆ ಪ್ರಾಣಲಿಂಗಸಂಬಂಧಕ್ಕಾಗತವಾದರೆಂದು ಹರುಷಭಾವವೆಂಬ ಗುಡಿಯನು ಬಂಧಿಸಿ, ಮಂತ್ರವಾಕ್ಯವೆಂಬ ವಂದನಮಾಲೆಗಳನು ರಚಿಸಿ; ಷಡುಸಮ್ಮಾರ್ಜನೆಯ ಮಾಡಿ–ಷಡ್ವಿಧಭೂತಗುಣವನು ಶುದ್ಧತಿಯ ಮಾಡಿ, ರಂಗವಾಲೆಯನಿಕ್ಕಿ– ಷಟ್ಕರಣಂಗಳನು ಸದ್ಭಾವವೆಂಬ ದಡಿಯಿಂದ ಪೋಳ್ಗುಟ್ಟುವುದೆ ಗೃಹಚಿತ್ರಲತೆಯಾಗಿ ರಚಿಸಿ, ಉಘೇ ಚಾಂಗು ಭಲಾ ಎಂಬೆ–ತ್ರಿವಿಧ ಷಡ್ವಿಧ ನವವಿಧ ಲಿಂಗಂಗಳಿಂದುತ್ಪನ್ನವಾದ ಲಿಂಗಪ್ರಾಣತ್ವ ಪ್ರಾಣಲಿಂಗತ್ವ ಪ್ರಸಾದಮುಕ್ತತ್ವವನು ಕೊಡುವಲ್ಲಿ ತ್ಯಾಗಗುಣವುಳ್ಳಾತನೆಂಬೆ. ಅದಲ್ಲದೆ ತ್ರಿವಿಧ ಷಡ್ವಿಧ ನವವಿಧಲಿಂಗದ ಪ್ರಸಾದವನು ಕೊಡುವಲ್ಲಿ ತ್ಯಾಗಗುಣವುಳ್ಳಾತನೆಂಬೆ, ಮತ್ತಂ ಸುರುಚಿರ ಪಿಂಡಾದಿ ಜ್ಞಾನಶೂನ್ಯಾಂತಮಾದ ಸರ್ವಾಚಾರಸಂಪತ್ತಿನಾಚರಣೆಯಲ್ಲಿ ಬಲಾತ್ಕಾರವುಳ್ಳಾತನಾಗು ಎಂಬೆ. ಕೂಡಲಸಂಗನಶರಣರು ತಮ್ಮೊಕ್ಕುದನಿಕ್ಕಿ ಸಲಹುವರಾಗಿ–ಸಕಲಲಿಂಗಕರಣಂಗಳು ತಮ್ಮ ಒಕ್ಕಮಿಕ್ಕ ಶುದ್ಧಸಿದ್ಧಪ್ರಸಿದ್ಧಪ್ರಸಾದವನು ನೀಡಿ ಸಂರಕ್ಷಣೆಯ ಮಾಡುವರಾಗಿ, ಮತ್ತೆ ಈ ಜ್ಞಾನೋದಯವಾದ ಆದ್ಯಸಾಂಪ್ರದಾಯದಲ್ಲಿ ಎನ್ನಂತರಂಗವೆಂಬ ಚಿದಾಲಯಕ್ಕೆ ಪ್ರಕಾಶಜ್ಞಾನಮಥನವನುಳ್ಳ ಪ್ರಾಣಲಿಂಗದೇವರು ಆಗತವಾದರೆಂದು ಲಿಂಗಧ್ಯಾನವೆಂಬ ಗುಡಿಯನು ಬಂಧಿಸಿ, ನಮಸ್ಕಾರವೆಂಬ ವಂದನ ಮಾಲೆಗಳನು ರಚಿಸಿ, ಷಡ್ವಿಧಭಕ್ತಿಯನು ಅನುಗೊಳಿಸಿ, ಷಡಾಧಾರಚಕ್ರ ದಳಕುಳ ಅಕ್ಷರಂಗಳನು ೫೨ ಮಂತ್ರಲಿಂಗಸ್ವರೂಪವಾಗಿ ಆಚರಿಸೂದೆ ಗೃಹಚಿತ್ರಲತೆಯಾಗಿ ರಚಿಸಿ, ಶಿವೋऽಹಂ ಬ್ರಹ್ಮಾಹಂ ಪ್ರಣವೋऽಹಂ ಎಂಬ ಸಕಲಲಿಂಗಕರಣಂಗಳು ತಮ್ಮ ಒಕ್ಕಮಿಕ್ಕ ಚಿದಮೃತವನು ನೀಡಿ ಸಂರಕ್ಷಣೆಯ ಮಾಡುವರಾಗಿ.

..........................

೧ + ವಾ (ಜ).

IV- - - - - - - - - - - - - - - - - - - - - - - - - - - - - - - - - - - - - - - - - - - - - - -

ಹರುಷವೆಂಬ ಗುಡಿತೋರಣವ ಕಟ್ಟಿ, ಅರಿಷಡ್ವರ್ಗವ ತೊಡದು, ಸಮ್ಮಾರ್ಜನೆಯಂ ಮಾಡಿ, ಶಿವಮಂತ್ರಗಳೆಂಬ ಶಬ್ದಂಗಳಿಂದ ಪ್ರಮಥರ ಬರವ ಹಾರಿದೆ, ಪರಿಣಾಮವೆಂಬ ಪ್ರಸಾದವನಿಕ್ಕಿ ಸಲಹಿದರೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - - -

ಸದ್ಭಾವವೆಂಬ ಗುಡಿಯು, ತೋರಣವ ಕಟ್ಟಿ–ಜ್ಞಾನಾಲಂಕಾರವ ಮಾಡಿ, ಷಡುಸಮ್ಮಾರ್ಜನೆಯಂ ಮಾಡಿ–ಷಡ್ವಿಧಭಕ್ತಿಯನಳವಡಿಸಿ, ರಂಗವಾಲಿಯನಿಕ್ಕಿ–ಸತ್ಕ್ರೀಯನಳವಡಿಸಿ, ಉಘೇ ಚಾಂಗು ಭಲಾಯೆಂದೆಂಬೆ–ಶಿವಶಕ್ತಿಸಂಬಂಧವಾದ ಮಂತ್ರವನುಚ್ಚಿರುಸುವೆ.

---

**ಸಾಸಿವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ, ಆನಂದದಿಂದ ನಲಿನಲಿದಾಡುವೆನು. ಆನಂದದಿಂದ ಕುಣಿ ಕುಣಿದಾಡುವೆನು, ಕೂಡಲಸಂಗನಶರಣರು ಬಂದಡೆ ಉಬ್ಬಿ ಕೊಬ್ಬಿ ಹರುಷದೊಳಾಡುವೆ !**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಸಾಸಿವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ–ಸಮುದ್ರವೆಂಬಂಥದು ಗುಡ್ಡಗಳ ಮೇಲೆ [೧]ಮಟ್ಟಿ[೧]ಗಳ ಮೇಲೆ ಮರಗಳ ಮೇಲೆ ಮೇರೆದಪ್ಪಿ ಚರಿಸಿದರೆ ಅಷ್ಟಿಷ್ಟೇನಾದರೂ ಕಾಣಬಂದಾವಲ್ಲದೆ ಸಾಸಿವೆಯ ಮೇಲೆ ಮೇರೆದಪ್ಪಿ ಚರಿಸಿದರೆ ಎತ್ತಹೋಯಿತ್ತೋ ಕಾಣಬಾರದೆಂಬೋ ಹಾಂಗೆ ನಾನು ಮಾಡುವಂಥ ಭಕ್ತಿಯು ಸಾಸಿವೆಯ ಕಾಳಿಗಿಂತ ಅತಿಸೂಕ್ಷ್ಮವಾಗಿಪ್ಪುದು, ನಾ ಮಾಡುವಂಥ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡುವಂಥ ಜಂಗಮಮೂರ್ತಿಗಳ ಕೃಪೆಯೆಂಬಂಥದೆ ಸಮುದ್ರ ಮೇರೆದಪ್ಪಿ ಚರಿಸಿದ ಹಾಂಗೆ ಅತ್ಯಂತ ಘನತರವಾಗಿಪ್ಪುದು. ಹಾಂಗೆ ನಾ ಮಾಡುವಂಥ ಅತಿಸೂಕ್ಷ್ಮವಾದ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡುವಂಥ ಜಂಗಮಮೂರ್ತಿಗಳ ಕೃಪೆಯೆಂಬಂಥ ಸಮುದ್ರದೊಳಗೆ ಅಡಗಿ ಕಾಣಬಾರದೆ ಹೋದೆನು. ಆಯಿತ್ತಯ್ಯಾ–ಹಾಂಗಾಯಿತ್ತಯ್ಯಾ. ಆನಂದದಿಂದ–ಸಂತೋಷದಿಂದ, ನಲಿನಲಿದಾಡುವೆ–ಸೂಚನೆ ಬಿನ್ನಹ ಮಾಡುವುದಕ್ಕೊಂದು ವೇಳೆ ಗಟ್ಟಿ ಬಿನ್ನಹ ಮಾಡುವುದಕ್ಕೊಂದು ವೇಳೆ ಕರಕೊಂಡು ಬರುವುದಕ್ಕೊಂದು ವೇಳೆ ಅಗ್ಘವಣೆಯ ಕೊಡುವುದಕ್ಕೊಂದು ವೇಳೆ ಹಾವಿಗೆಯ ಕೊಡುವುದಕ್ಕೊಂದು ವೇಳೆ ಹಸ್ತಲಾಘವ ಕೊಡುವುದಕ್ಕೊಂದು ವೇಳೆ ಪದಾರ್ಥವ ನೀಡುವುದಕ್ಕೊಂದು ವೇಳೆ ಶರಣಾರ್ಥಿಯೆಂದು ನಮಸ್ಕರಿಸುವುದಕ್ಕೊಂದು ವೇಳೆ ಹೀಂಗೆ ಹಿಂದಕ್ಕೆ ಮುಂದಕ್ಕೆ ತೊನೆತೊನೆದಾಡುವೆನು.

ಆನಂದದಿಂದ ಕುಣಿಕುಣಿದಾಡುವೆನು: ಆನಂದದಿಂದ–ಸಂತೋಷದಿಂದ, ಕುಣಿಕುಣಿದಾಡುವೆನು–ಎಡದಹಸ್ತದಿಂದ ಬಲದಕಿವಿಯನು ಪಿಡಿದುಕೊಂಡು ಬಲದ ಹಸ್ತದಿಂದ ಎಡದ ಕಿವಿಯ ಪಿಡಿದುಕೊಂಡು ನರ್ತಿಸಿನರ್ತಿಸಿ ಕೋಡಂಗಿ ಆಟವನೆ ಆಡಿ ಪಕಪಕನೆ ನಗಿಸುವೆನು. ಕೂಡಲಸಂಗನಶರಣರು–ಜಂಗಮಮೂರ್ತಿಗಳು. ಬಂಡಡೆ–ಭಿಕ್ಷಕ್ಕೆಂದು ಬಿಜಯಂಗೈದುಬಂದರೆ, ಉಬ್ಬಿ–ಒಂದು ಹೊರೆ ಎರಡು ಹೊರೆ ಮೂರು ಹೊರೆ ನಾಲ್ಕು ಹೊರೆ ಉಬ್ಬಿ, ಕೊಬ್ಬಿ–ಹೆಚ್ಚಿ, ಹರುಷದೊಳಾಡುವೆ–ಸಂತೋಷದಲ್ಲಿ ಅಳುತ್ತ ಮುಳುಗುತ್ತ ಸದಾಕ್ರೀಡಾಪರನಾಗಿ ವಿನೋದಿಸುವೆನು.

..........................

೧–೧ ಪು (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - -

ಸಾಸಿವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ–ಭಕ್ತಿಯೆಂಬ ಸರೀಸೃಪದ ಮೇಲೆ ಗುರುಲಿಂಗಜಂಗಮವೆಂಬ ಪರಶಿವಸಮುದ್ರವು ಪ್ರವಾಹವಾಗಲಾಗಿ, ಆನಂದದಿಂದ ನಲಿದಾಡುವೆ–ಕ್ರಿಯಾಹ್ಲಾದದಿಂದ ಕ್ರೀಯಲ್ಲಿ ನರ್ತಿಸಿ ನರ್ತಿಸಿ ಆಡುವೆನು ಆಡುವೆನು. ಆನಂದದಿಂದ ಕುಣಿಕುಣಿದಾಡುವೆ–ಜ್ಞಾನಾಹ್ಲಾದದಿಂದ ಜ್ಞಾನದಲ್ಲಿ ನರ್ತಿಸಿ ಆಡುವೆನು. ಕೂಡಲಸಂಗನಶರಣರು ಬಂದಡೆ ಉಬ್ಬಿಕೊಬ್ಬಿ ಹರುಷದಲ್ಲೋಲಾಡುವೆ–ಪರಶಿವಲಿಂಗದ ಪರಮೂರ್ತಿಗಳಾದ

ಗುರುಲಿಂಗಜಂಗಮವು ಭಕ್ತಿಮಂದಿರಕ್ಕಾಗತವಾದರೆ ತನು ಒಂದು ಹೊಜಿ ಎರಡು ಹೊಜಿ, ಮೂರು ಹೊಜಿ ಆರೋಹಿಸಿ ಅಷ್ಟ ಸಾತ್ವಿಕಂಗಳು ಹೆಚ್ಚಿ ಸಂತೋಷದಲ್ಲಿ ಆಂದೋಳನಂಗೆಯ್ವೆನು.

V- - - - - - - - - - - - - - - - - - - - - - - - - - - - - - - - - - - - - - - - - - - - - - - -

ಸಾಸಿವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ-ಸಿದ್ಧಾರ್ಥಸ್ವರೂಪವಾದ ಆತ್ಮನಲ್ಲಿ ಭಕ್ತ್ಯಂಬುಧಿಯಾವರಿಸಿತ್ತಯ್ಯಾ. ಆನಂದದಿಂದ ನಲಿದಾಡುವೆ-ಇಷ್ಟಲಿಂಗದ ಸತ್ಕ್ರಿಯೋಪಚಾರದ ಪರಿಣಾಮದಿಂದ ವಿನೋದಿಸುವೆನು. ಆನಂದದಿಂದ ಕುಣಿದಾಡುವೆ-ಪ್ರಾಣಲಿಂಗದ ಮಂತ್ರಧ್ಯಾನಜಪಸ್ತೋತ್ರದ ಸಂತೋಷದಿಂದ ವಿನೋದಿಸುವೆನುಯೆಂಬುದೀಗ ಕುಣಿದಾಡುವೆ, ಉಬ್ಬಿ-ಕ್ರೀಯಲ್ಲಿ ಹೆಚ್ಚಿ, ಕೊಬ್ಬಿ-ಜ್ಞಾನದಲ್ಲಿ ನಿಮಿರ್ದು, ಹರುಷದೊಳೋಲಾಡುವೆ-ಭಾವಲಿಂಗದ ಮನೋಲಯನಿರಂಜನಪೂಜೆಯಲ್ಲಿ ಆಂದೋಳನಂಗೆಯ್ವೆನು.

..........................

ಈ ಟೀಕೆ ಮುಂದಿನ "ಮನ ಮನೆ ಬೆರಸಿದಲ್ಲಿ................" ವಚನದ ಟೀಕೆಯ ನಂತರವಿದೆ (ಸಂ).

---

## ೩೮೦

**ಮನಮನ ಬೆರಸಿದಲ್ಲಿ ತನು ಕರಗದಿದ್ದಡೆ, ಸೋಂಕಿನಲ್ಲಿ ಪುಳಕಂಗಳು ಪೊಱಪೊಣ್ಮದಿದ್ದಡೆ, ಕಂಗಳಶ್ರುಜಲಂಗಳು ಸುರಿಯದಿದ್ದಡೆ, ನುಡಿಯಲ್ಲಿ ಗದ್ಗದಂಗಳು ಪೊಱಪೊಣ್ಮದಿದ್ದಡೆ, ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ. ಎನ್ನಲ್ಲಿ ಇವಿಲ್ಲವಾಗಿ, ಆನು ಡಂಭಕ ಕಾಣಿರೋ!**

I - - - - - - - - - - - - - - - - - - - - - - - - - - - - - - - - - - - - - - - - - - - - - - - -

ಮನಮನ ಬೆರಸಿದಲ್ಲಿ-ದೇವನ ಮನಸ್ಸೇ ಭಕ್ತನ ಮನಸ್ಸಿನಲ್ಲಿ ಭಕ್ತನ ಮನಸ್ಸೇ ದೇವನ ಮನಸ್ಸಿನಲ್ಲಿ ಕೂಡಿ ಭಕ್ತಿಯ ಮಾಡುತ್ತಿದ್ದಲ್ಲಿ ಆ ಜಂಗಮಮೂರ್ತಿಗಳು ಬೇಸರವಾಗಿ ವರುಷಾರುತಿಂಗಳು ದೇಶಾಂತರ ಹೋಗಿ ಬಾರದೇ ತಡವಾದಲ್ಲಿ ಅವರಿಗೋಸ್ಕರವಾಗಿ, ತನು ಕರಗದಿದ್ದಡೆ-ಉಂಬುವುದಕ್ಕೆ ಉಡುವುದಕ್ಕೆ ಇಚ್ಛೆಬಾರದೆ ದೇಹ ಬಡವಾಗಬೇಕು ಬಡವಾಗದಿದ್ದರೆ, ಸೋಂಕಿನಲ್ಲಿ ಪುಳಕಂಗಳು ಪೊಱಪೊಣ್ಮದಿದ್ದಡೆ-ಅವರು ಬಂದಾರೆಂಬಂಥ ಸುದ್ದಿಯನ್ನು ಕೇಳಿದಾಕ್ಷಣಕ್ಕೆ ತನುವಿನ ಮೂರುವರೆಕೋಟಿ ರೋಮಂಗಳು ನೆಟ್ಟನೆ ನಿಗುರ್ದು ದಬ್ಬಳಾಕೃತಿಯಾಗಬೇಕು. ದಬ್ಬಳಾಕೃತಿಯಾಗದಿರ್ದರೆ, ಕಂಗಳಶ್ರುಜಲಂಗಳು ಸುರಿಯದಿದ್ದಡೆ-ಅವರ ಪಾದಕ್ಕೆ ಹೋಗಿ ನಮಸ್ಕಾರವ ಮಾಡುವಾಗ್ಗೆ ಏನು ಪಾದಾರ್ಚನೆಯ ಮಾಡುತಾನೋ ಭಕ್ತನೆಂಬೋ ಹಾಂಗೆ ಅಂತರಂಗದಲ್ಲಿ ಉಕ್ಕಿದ ಹರುಷಾನಂದಜಲಂಗಳು ಎರಡು ಲೋಚನಾಗ್ರದಲ್ಲಿ ಧಾರಾವೃಷ್ಟಿಯಾಗಿ ಅಂಕುರಿಸಬೇಕು, ಧಾರಾವೃಷ್ಟಿಯಾಗಿ ಅಂಕುರಿಸದಿರ್ದರೆ; ನುಡಿಯಲ್ಲಿ ಗದ್ಗದಂಗಳು ಪೊರಪೊಣ್ಮದಿದ್ದಡೆ-ಅವರ ಕೂಡೆ ಮಾತುಕಥೆಪ್ರಸಂಗವನಾಡುವಲ್ಲಿ ನುಡಿತೊಡಂಬೆಯಾಗಿ ಕಂಠಸ್ಥಾನದಲ್ಲಿ ಕ್ಷಣ ಕಡಲೆಕಾಳು ಗಡುತರ ಉದ್ದಿನಕಾಳು ಗಡುತರ ಹೆಸರುಕಾಳು ಗಡುತರ ಗೋದಿಕಾಳು ಗಡುತರ ಗ್ರಂಥಿಗಳೇಳಬೇಕು. ಗ್ರಂಥೀಗಳೇಳದಿದ್ದರೆ; ಕೂಡಲಸಂಗಮದೇವರ-ಪರಶಿವಲಿಂಗದ, ಭಕ್ತಿಗೆ-ಶೀವಾದ್ವೈತಭಕ್ತಿಗೆ, ಇದು ಚಿಹ್ನ-ಇದು ಕರುಹು.[೧] ಎನ್ನಲ್ಲಿ

ಸಂಗನಬಸವೇಶ್ವರನಲ್ಲಿ, ಇವಿಲ್ಲವಾಗಿ–ಇವು ಮೊದಲಾದಾಚರಣೆಗಳುಂಟಾಗಿಲ್ಲವಾಗಿ, ಆನು ಡಂಭಕ ಕಾಣಿರೋ–ನಾನು ಬೂಟಕತ್ವವುಳ್ಳಾತನು ಕಂಡಿರೋ.

........................

೧ + ಎನ್ನಲಿಲ್ಲವಾಗಿ : ಎನ್ನಲ್ಲಿ ಸಂಗನಸವೇಶ್ವರನಲ್ಲಿ, ಇಲ್ಲವಾಗಿ–ದೇವನ ಮನಸ್ಸೇ ಭಕ್ತನ ಮನಸ್ಸಿನಲ್ಲಿ ಭಕ್ತನ ಮನಸ್ಸೇ ದೇವನ ಮನಸ್ಸಿನಲ್ಲಿ ಕೂಡಿ ಭಕ್ತಿಯ ಮಾಡುತ್ತಿದ್ದಲ್ಲಿ. ಆ ಜಂಗಮಮೂರ್ತಿಗಳು ವರುಷಾರುತಿಂಗಳು ಬೇಸರವಾಗಿ ಹೋಗಿ ಬಾರದೆ ತಡವಾದಲ್ಲಿ ಅವರಿಗೋಸ್ಕರವಾಗಿ ಉಂಬುವುದಕ್ಕೆ ಉಡುವುದಕ್ಕೆ ಇಚ್ಚೆಬಾರದೆ ದೇಹ ಬಡವಾಗುವಂಥದು. ಅವರು ಬಂದಹರೆಂಬಂಥ ಸುದ್ದಿಯ ಕೇಳಿದಾಕ್ಷಣಕ್ಕೆ ತನುವಿನ ಮೂರುಕೋಟಿರೋಮಂಗಳು ನೆಟ್ಟಗೆ ನಿಗುರ್ದು ದಬ್ಬಳಾಕೃತಿಯಾಗುವಂಥದು. ಅವರ ಪಾದಕ್ಕೆ ಹೋಗಿ ನಮಸ್ಕಾರವ ಮಾಡುವಾಗ್ಗೆ ಏನು ಪಾದಾರ್ಚನೆಯ ಮಾಡುತಾನೋ ಭಕ್ತನೆಂಬುವ ಹಾಂಗೆ ಅಂತರಂಗದಲ್ಲಿ ಉಕ್ಕಿದ ಹರುಷಾನಂದಜಲಂಗಳು ಎರಡು ಲೋಚನಾಗ್ರದಲ್ಲಿ ಧಾರಾವೃಷ್ಟಿಯಾಗಿ ಅಂಕುರಿಸವಂಥದನು. ಅವರ ಕೂಡ ಮಾತುಕಥೆಪ್ರಸಂಗವನಾಡುವಾಗ್ಗೆ ನುಡಿತೊಡಂಬೆಯಾಗಿ ಕಂಠಸ್ಥಾನದಲ್ಲಿ ಕ್ಷಣ [ಕಡೆಲೆ]ಕಾಳು ಗಡುತರ ಉದ್ದಿನಕಾಳು ಗಡುತರ ಹೆಸರುಕಾಳು ಗಡುತರ ಗೋದಿಕಾಳು ಗಡುತರ ಏಳುವಂಥದು. (ಕ. ಗ).

V- - - - - - - - - - - - - - - - - - - - - - - - - - - - - - - - - - - - - - - -

ಮನಮನ ಬೆರಸಿದಲ್ಲಿ–ಶರಣನ ಮನಸ್ಸು ಲಿಂಗದ ಮನಸ್ಸು ಏಕವಾದಲ್ಲಿ, ತನು ಕರಗದಿದ್ದಡೆ–ಅಂಗವು ಲೀನವಾಗಿದಿದ್ದರೆ, ಸೋಂಕಿನ ಸುಖದಲ್ಲಿ–ಲಿಂಗಾಂಗಸಂಬಂಧವಾದ ಪರಿಣಾಮದಲ್ಲಿ, ಪುಳಕಂಗಳು–ರೋಮೋದ್ಗಮಂಗಳು. ಪೊಱಪೊಣ್ಮದಿದ್ದಡೆ–ಹೊರಹೊಮ್ಮದಿದ್ದರೆ, ಕಂಗಳಶ್ರುಜಲಂಗಳು–ಆನಂದಕಣ್ಣೀರ್ಗಳು. ಸೂಸದಿದ್ದಡೆ–ಸುರಿಯದಿದ್ದರೆ. ನುಡಿಯಲ್ಲಿ–ಮಂತ್ರೋಚ್ಚರಣೆಯಲ್ಲಿ, ಗದ್ಗದಂಗಳು ಪೊಣ್ಮದಿದ್ದಡೆ–ನುಡಿತಡಂಬವಾಗದಿದ್ದರೆ, ಇಂತಿವಾಱುಗುಣಂಗಳುಂಟಾದರೆ ಪರಶಿವಲಿಂಗದ ಭಕ್ತಿಗಿದು[೨] ಲಕ್ಷಣವು ಎಂಬುದೀಗ ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ.

........................

೨ + ಚಿಹ್ನ (ಪ).

---

೩೮೧

**ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು ಅರಸಜೆಯದ ಬಿಟ್ಟಿಯಂತೆ ಮಾಡುವೆನು. ಎನ್ನ ತಾಗಿದ ಸುಖವ ಜಂಗಮಕ್ಕರ್ಪಿಸಲಜೆಯದ ಉಪಚಾರಿಯಾನು; ಸ್ಥಾವರ ಜಂಗಮವಜೆಯದ ಪೂಜಕ ನಾನು; ಮತ್ತೆ ನಾಚದೆ, ಕೂಡಲಸಂಗಮದೇವಾ, ಜಂಗಮವೆನ್ನ ಪ್ರಾಣಲಿಂಗವೆಂಬೆನು.**

I - - - - - - - - - - - - - - - - - - - - - - - - - - - - - - - - - - - - - - - -

ಅಷ್ಟವಿಧಾರ್ಚನೆ–ಎಂಟು ತರದ ಅರ್ಚನೆಯು, ಷೋಡಷೋಪಚಾರಂಗಳನು–ಅರ್ಘ್ಯಾದಿ ಪ್ರದಕ್ಷಿಣಾಂತ್ಯಮಾದ ಷೋಡಶ ಸತ್ಕಾರಂಗಳನು ಮಾಡುವೆನು–ಆನುಗೈವೆನು, ಅರಸಜೆಯದ

ಬಿಟ್ಟಿಯಂತೆ–ಲೋಕದಲ್ಲಿ ಅರಸಿನ ಅರಿಕೆಯಾಗಿ ಬಿಟ್ಟಿಯ ಮಾಡಿದರೆ ಇವನು ಮನಶ್ಶುದ್ಧವಾಗಿ ಧಾವತಿಯ ಮಾಡುತ್ತಾನೆಂದು ತನ್ನಲ್ಲಿ ಚಾಕರಿಯನಾದರೂ ಮಡಗಿಕೊಂಬುವನು. ಅಥವಾ ಹೆಚ್ಚಾಗಿ ಸಂಬಳವನಾದರೂ ಕೊಡುವನು. [೧]ಕೊಟ್ಟಲ್ಲಿ[೧] ಅವನಿಗೂ ಅವನ ಹೆಂಡಿರು ಮಕ್ಕಳಿಗೂ ಪರಿಣಾಮವಾಗುವುದು. ಅರಸಿನ ಅರಿಕೆಯಿಲ್ಲದೆ ಲಾವಕರು ಗುಲಾಮರು ಮಾಲದಾರರು ಚೋಪದಾರರು ಚೇಡೆದಾರರು ಚೆಟ್ಟಿಕಾರರು ಮೊದಲಾದಂಥವರು ಹಿಡಿದುಕೊಂಡು ಹೋಗಿ ಸಂಜೆತನಕ ಬಿಟ್ಟಿಯು ಮಾಡಿಸಿಕೊಂಡು ಸಂಜೆಗೆ ಬಿಟ್ಟುಕೊಟ್ಟಲ್ಲಿ ತಾ ತಂದಂಥ ರೊಟ್ಟಿಬುತ್ತಿಯನುಂಡುಕೊಂಡು ಚಾವಡಿ ಹೆಬ್ಬಾಗಿಲಗಳಲ್ಲಿ ಒರಗಿಕೊಂಡು ಬೆಳಗಾಗೆದ್ದು ಮನೆಗೆ ಹೋದಲ್ಲಿ ಆಯಾಸವೇ ಕೈದಟ್ಟುತ್ತಿಹುದು. ಹಾಂಗೆ; ಲಿಂಗಪೂಜೆಯ ಮಾಡುತ್ತ ಜಂಗಮ ಭಕ್ತಿಯ ಮಾಡಿದರೆ ಅರಸಿನ ಅರಿಕೆಯಾಗಿ ಬಿಟ್ಟಿಯ ಮಾಡಿದವನಿಗೆ ಸುಖವಾದ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರಕೊಂಬುತ್ತಿಹುದು. ಜಂಗಮ ಭಕ್ತಿ ಬಾಹ್ಯನಾಗಿ ಲಿಂಗಪೂಜೆಯ ಮಾಡಿದರೆ ಅರಸಿನ ಅರಿಕೆಯಿಲ್ಲದ ಬಿಟ್ಟಿಯ ಮಾಡಿದವನಿಗಾಯಾಸವಾದ ಹಾಂಗೆ ಕಿಂಚಿನ್ಮಾತ್ರ ಫಲಪದಂಗಳು ದೊರಕೊಂಡು ಭವದುಃಖವೇ ಉಂಟಾಗುತ್ತಿಹುದು.

ಎನ್ನ ತಾಗಿದ–ಎನ್ನ ತಟ್ಟಿದ, ಸುಖವ–[೨]ಸ್ತ್ರ[೨]ಕ್ಚಂದ [* ನಾದಿ] ಅಷ್ಟಭೋಗವನ್ನು, ಜಂಗಮಕ್ಕೆ–ಚರಲಿಂಗಕ್ಕೆ, ಅರ್ಪಿಸಲಱಿಯದ–ಸಮರ್ಪಣೆಯ ಮಾಡುವಂಥದನು ತಿಳಿಯದ, ಉಪಚಾರಿಯಾನು–ಬಾಹ್ಯೋಪಚಾರವಾಗಿ ನುಡಿವಂಥ ಬಣ್ಣಿಗೆ ಪ್ರಸಂಗವುಳ್ಳಾತ ನಾನು. ಸ್ಥಾವರ ಜಂಗಮ–ಸ್ಥಾವರಯೆಂದರೆ ಇಷ್ಟಲಿಂಗವು, ಜಂಗಮವೆಂದರೆ ಚರಲಿಂಗವು, ಒಂದೇ ಎಂದು ಅಱಿಯದ–ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳಾ ಚೈತನ್ಯವೆಂದು ತಿಳಿಯದ, ಪೂಜಕ ನಾನು–ಆರಾಧಿಸುವಾತ ನಾನು. ಮತ್ತೆ ನಾಚದೆ–ಜಂಗಮ ಭಕ್ತಿ ಬಾಹ್ಯನಾಗಿ ಲಿಂಗಪೂಜೆಯ ಮಾಡುವುದಕ್ಕೆ ಅಭಿಮಾನಿಸಿಕೊಳ್ಳದೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಜಂಗಮವೆನ್ನ ಪ್ರಾಣಲಿಂಗವೆಂಬೆನು–[೩]ಚರಲಿಂಗವೇ[೩] ಎನ್ನೊಡೆಯರು ಎನ್ನ ಕರ್ತರು ಎನ್ನ ಪ್ರಾಣದೊಲ್ಲಭರೆಂದು ಹೇಳುವೆನು.

..........................

೧–೧ x (ಕ). ೨–೨ ಸ (ಗ). ೩–೩ ಜಂಗಮವೇ (ಗ).

II- - - - - - - - - - - - - - - - - - - - - - - - - - - - - - - - - - - - - - - - - -

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು ಅರಸಱಿಯದ ಬಿಟ್ಟಿಯ ಮಾಡುವೆನು–ಪರಮಾತ್ಮ ಸ್ವರೂಪವಾದ ಪ್ರಾಣಲಿಂಗವೇ ಇಷ್ಟಲಿಂಗವಾಗಿ ಬಂದಿತ್ತು. ಜ್ಞಾನಾನಂದ ಜಲವೇ ಕ್ರಿಯಾಜಲವಾಗಿ ಬಂದಿತ್ತು. ಜ್ಞಾನಾನಂದ ಕುಸುಮವೇ ಕ್ರಿಯಾಕುಸುಮವಾಗಿ ಬಂದಿತ್ತು. ಇಂತೀ ಸಮರಸವಿಲ್ಲದೆ ಮೂಡುವಂಥಾದು ಅಪ್ರಯೋಜನವಾಯಿತ್ತು. ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - -

ಅರಸಱಿಯದ–ಪ್ರಾಣಲಿಂಗ ಸಂಬಂಧವನು ತಿಳಿಯದ, ಎನ್ನ ತಾಗಿದ–ಇಂದ್ರಿಯಂಗಳು ಸೋಂಕಿದಂಥ, ಸುಖವ–ವಿಷಯ ಸುಖವನ್ನು, ಜಂಗಮಕ್ಕರ್ಪಿಸಲಱಿಯದ–ಪ್ರಾಣಲಿಂಗಕ್ಕೆ ಸಮರ್ಪಣೆಯ ಮಾಡಲಱಿಯದಂಥಾ, ಸ್ಥಾವರ ಜಂಗಮವಱಿಯದ–ಲಿಂಗಜಂಗಮವೊಂದೆಯೆಂದು ತಿಳಿಯದಂಥ ಪೂಜಕ ನಾನು–ಭಿನ್ನ ಭಜನೆಯುಳ್ಳಾತ ನಾನು.

೩೮೨

**ಆವಿಗೆಯಲೊದಗಿದ ಕಪ್ಪಿನಂತೆ ಅಮೃತದೊಳಗಿರ್ದ ಸರ್ಪನ ತನುವಿನಂತೆ ಇರ್ದೆನಯ್ಯಾ ನಾನು ಹೊಱಗೆ ನುಂಪಾಗಿ. ಸಿಂಹಕ್ಕೊಲಿದ ಮದಕರಿಯಂತೆ ಆನು ಜಂಗಮಕ್ಕೊಲಿದೆನಯ್ಯಾ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಆವಿಗೆಯಲೊದಗಿದ ಕಪ್ಪಿನಂತೆ : ಆವಿಗೆಯಲಿ–ಘಟದಗ್ಧಾಲಯದಲ್ಲಿ ಒದಗಿದ–ಉತ್ಪತ್ಯವಾದ, ಕಪ್ಪಿನಂತೆ –ಭಾಂಡದ ಹಾಂಗೆಂಬಲ್ಲಿ ಭಾಂಡವೆಂಬುವಂಥದ್ದು ಹೊರಗೆ ನೋಡಿದರೆ ಮಿರಿಮಿರಿ ಮಿಂಚುವುದು. ಒಳಗೆ ನೋಡಿದರೆ ತರತರವಾಗಿ ಮಸಿಯನೇ ತುಂಬಿಕೊಂಡಿರುವುದು. ಹಾಂಗೆ: ಎನ್ನ ಬಹಿರಂಗದ ಲಲಾಟದ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿರ್ದರೆ ಬಹು ಪೂಜ್ಯವಾಗಿ ತೋರ್ಪುದು. ವಿಚಾರಿಸಿ ನೋಡಿದರೆ ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವೇ ಉಂಟಾಗಿರ್ಪುದು. ಅಮೃತದೊಳಗಿರ್ದ ಸರ್ಪನ ತನುವಿನಂತೆ–ಸರ್ಪನೆಂಬುವಂಥದು ಹೊರಗೆ ನೋಡಿದರೆ ನುಣ್ಣನಾಗಿರುವುದು. ಉದಕದೊಳಗಿದ್ದಲ್ಲಿ ನುಣ್ಣಗಾಗಿ ತಣ್ಣಗಾಗಿರುವುದು. ಒಳಗಿರುವಂಥ ವಿಷವನ್ನು ಬಿಟ್ಟಿತ್ತೆ? ಬಿಡದು. ಹಾಂಗೆ, ಉಪಾಧಿಕನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವನ್ನು ಧರಿಸಿಕೊಂಡಿದ್ದರೂ, ಅಂತರಂಗದಲ್ಲಿ ವಂಚನೆ ಉಪಾಧಿ ಕುಹಕಪ್ರಪಂಚೆಂಬ ಕಾಪಟ್ಯವೇ ಉಂಟಾಗಿರ್ಪುದು. ಇರ್ದೆನಯ್ಯಾ–ಆ ರೀತಿಯಾಗಿರ್ದೆನಯ್ಯಾ, ನಾನು–ಸಂಗನಬಸವೇಶ್ವರನು, ಹೊಱಗೆ–ಬಹಿರಂಗದಲ್ಲಿ, ನುಂಪಾಗಿ–⁽೧⁾ಸೊಂಪಾಗಿ⁽೧⁾ ಕೋಮಲತರವಾಗಿ.

ಸಿಂಹಕ್ಕೆ –ಕಂಠೀರವಕ್ಕೆ, ಒಲಿದ–ವಶಗತವಾದ, ಮದಕರಿಯಂತೆ–ಮದ್ದಾನೆಯ ಹಾಂಗೆ, ಆನು ಜಂಗಮಕ್ಕೊಲಿದೆನಯ್ಯಾ–ನಾನೇನಾದರೂ ಅವರ ಸತ್ಯಸದಾಚಾರವ ಕಂಡು ಭಕ್ತಿಯ ಮಾಡಿದೆನೆ? ಇಲ್ಲವು. ಅಥವಾ ಎನ್ನ ಸಹಜಭಾವದಿಂದಲಾದರೂ ಭಕ್ತಿಯ ಮಾಡಿದೆನೆ? ಇಲ್ಲವು. ಆ ಜಂಗಮಮೂರ್ತಿಗಳ ಗರ್ಜನೆ ದುಡುಕುದುಂಡಾಚಾರ ಕೋಳಾಟ ಕೊಂ⁽²⁾ದಾ⁽²⁾ಟ ಮೊದಲಾದವನ್ನು ಸೈರಿಸಲಾಱದೆ ಮಾಡಿದೆನು. ಕೂಡಲಸಂಗಮದೇವಾ– ಎಲೆ ಪರಶಿವಲಿಂಗವೆ

..........................

೧+ ಕೆಂಪಾಗಿ(ಕ). ೨–೨ ಡಾ (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಆವಗೆಯಲೊದಗಿದ ಕಪ್ಪಿನಂತೆ ಬ್ರಹ್ಮನುತ್ಪತ್ಯದ ಮಾಯಾಯೋನಿಯೆಂಬ ಕುಲಾಲನ ಕುಲಿಮೆಯಲಿ ಉಂಟಾದ ಅಜ್ಞಾನ ಸ್ವರೂಪವಾದ ಜೀವನ ಹಾಂಗೆ, ಅಮೃತದೊಳಗಿರ್ದ ಸರ್ಪನ ತನುವಿನಂತೆ ಇರ್ದೆನಯ್ಯಾ–ಶಿವಾನುಭಾವವೆಂಬ ಸುಧೆಯಲ್ಲಿ ಅಧಿಷ್ಠಿಸಿಕೊಂಡಿರ್ದ ಶಂಕಾವಿಷ⁽¹⁾ ಸಂಬಂಧವಾದ ಮಾಯಾ ಕಾಳೋಗರನ ದೇಹದ ಹಾಂಗೆ ಇರುತಿರ್ದೆನಯ್ಯಾ. ಹೊಱಗೆ ನುಂಪಾಗಿ ಸಿಂಹಕ್ಕೊಲಿದ ಮದಕರಿಯೆಂತೆ– ಬಾಹಿರದಲ್ಲಿ ತನುಮನಧನವು ಗುರುಲಿಂಗ

ಜಂಗಮವೆಂಬ ನಯನುಡಿವುಳ್ಳಾತನಾಗಿ ಮಹಾಜ್ಞಾನಿ ಜಂಗಮಕ್ಕೆ ಮಚ್ಚಿದ ಅಷ್ಟಮದಯುಕ್ತವಾದ ಜೀವನಹಾಂಗೆ, ಮುಂದಕ್ಕೆ ಕಾಣ ಬಂದರ್ಥ.

..........................

೩+ ಯ(ಜ).

III- - - - - - - - - - - - - - - - - - - - - - - - - - - - - - - - - - - - - - - - - - -

..........................

೪[ನುಂಪಾಗಿ–]೪ ಶಿವಲಾಂಛನದ ರಚನೆಯುಳ್ಳಾತನಾಗಿ

..........................

೪–೪ ಉಂಟಾಗಿ(ಟ,ಡ).

---

೩೮೩

**ಸ್ಥಾವರ ಜಂಗಮ ಒಂದೇಯೆಂದು ಇದಿರ ನುಡಿವೆ ನಾ ನುಡಿವುತಿರ್ಪೆ, ನಾನು ಸಹಜನಲ್ಲವಯ್ಯಾ! ಆನು ಸಮ್ಯಕ್ಕನಲ್ಲವಯ್ಯಾ! ಆನು ಉಭಯಸಂಗಿ ಎಂಬೆನು. ಈ ನುಡಿ ಸುಡದಿಹುದೆ ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - - - - -

ಸ್ಥಾವರ ಜಂಗಮ ಒಂದೇ ಎಂದು ಇದಿರ ನುಡಿವೆ : ಸ್ಥಾವರ– ಇಷ್ಟಲಿಂಗವ, ಜಂಗಮ–ಚರಲಿಂಗವು, ಒಂದೇಯೆಂದು – ಲಿಂಗವೇ ಜಂಗಮದಂಗ, ಜಂಗಮವೇ ಲಿಂಗದ ಪ್ರಾಣಕಳೆಯೆಂದು, ಇದಿರ ನುಡಿವೆ– ಭಕ್ತಮಾಹೇಶ್ವರರೊಂದಿಗೆ ವಾದಿಸುವೆನು. ನಾ ನಡೆವುತಿರ್ಪೆ– ಇಷ್ಟಲಿಂಗಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುತಿರ್ಪೆನು. ನಾನು ಸಹಜನಲ್ಲವಯ್ಯಾ– ಊರೊಳಗಿರಲಿ ಅಡವಿಯೊಳಗಿರಲಿ ಹತ್ತರ ಮಧ್ಯದಲ್ಲಿರಲಿ ಸಮರಸ ಭಾವದಿಂದ ಲಿಂಗಪೂಜೆಯ ಮಾಡುವಂಥದು ಎನ್ನಲ್ಲುಂಟಾಗಿಲ್ಲವಯ್ಯಾ. ಆನು ಸಮ್ಯಕ್ಕನಲ್ಲವಯ್ಯಾ: ಆನು – ಸಂಗನಬಸವೇಶ್ವರನು, ೧[ಸಮ್ಯಕ್ಕನಲ್ಲವಯ್ಯಾ–]೧ ಲೇಸಾಗಿ, ಅಂಗವೇ ಲಿಂಗದಲ್ಲಿ ಪ್ರಾಣವೇ ಜಂಗಮದಲ್ಲಿ ಕೂಡಲ್ಪಟ್ಟಾತನಲ್ಲವಯ್ಯಾ. ಆನು ಉಭಯಸಂಗಿಯೆಂಬೆನು–ನಾನು ಎರಡಾದ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಲ್ಪಟ್ಟಾತನೆಂದು ಹೇಳುವೆನು. ಈ ನುಡಿ ಸುಡದಿಹುದೆ: [ಈ–] ನಾನು ಭಿನ್ನವಿಟ್ಟುಕೊಂಡು ಲಿಂಗಪೂಜೆ ಜಂಗಮದಾಸೋಹವನ್ನು ಮಾಡುತ್ತೈದೇನೆಂದು ಹೇಳಿಕೊಂಬಂಥ, ನುಡಿ– ಪ್ರಸಂಗವು ಸುಡದಿಹುದೆ–ಅದೇ ಒಂದಗ್ನಿಯಾಗಿ ದಹಿಸದೆ ಬಿಟ್ಟಿತ್ತೆ? ಬಿಡದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ಸಂ (ಕ, ಗ).

---

**ಮಸಿಯನೇಸು ಕಾಲ [1]ತೊಳೆದಡೆಯು[1] ಬಿಳಿದಾಗಬಲ್ಲುದೆ [2]ಅಯ್ಯಾ[2], ಕರ್ಮಸ್ಥಿತಿ ಬೆನ್ನಬಿಡದು. ಅನಂತಕೋಟಿ ಸನ್ಮಾನ ಮಾಡಿದಡೆನು? [3]ಒಂದು[3] ನಿಮಿಷದ ಉದಾಸೀನ ಕೆಡಸಿತ್ತು. ಕೂಡಲಸಂಗಮದೇವ, ನಿಮ್ಮ ನಂಬಿಯು ನಂಬದ ಡಂಬಕ ನಾನಯ್ಯಾ!**

I - - - - - - - - - - - - - - - - - - - - - - - - - - - - - - - - - - - - - - - - - - - - - - - -

ಮಸಿಯನೇಸು ಕಾಲ ತೊಳೆದಡೆಯೂ ಬಿಳಿದಾಗಬಲ್ಲುದೆ ಅಯ್ಯಾ: ಮಸಿಯನು–ಇದ್ದಲಿಯನು, ಏಸುಕಾಲ–ಎಷ್ಟು ದಿವಸ ಪರಿಯಂತರವು ತೊಳೆದಡೆಯೂ–ಪ್ರಕ್ಷಾಲಿಸಿದರೆಯೂ, ಬಿಳಿದಾಗಬಲ್ಲುದೆ–ಧಾವಲ್ಯವಾದೀತೆ? ಆಗಲರಿಯದು. ಅಯ್ಯಾ–ಎಲೆ ಲಿಂಗವೆ, ಕರ್ಮಸ್ಥಿತಿ ಬೆನ್ನಬಿಡದು: ಕರ್ಮ–ಸಂಚಿತಾದಿ ಕರ್ಮತ್ರಯಂಗಳ, ಸ್ಥಿತಿ–ಇರುವಿಕೆಯು, ಬೆನ್ನಬಿಡದು–ಆತ್ಮನ ಒಡಲ ಕಚ್ಚಿ ಹೆರೆಹಿಂಗದೆ ಉಂಟಾಗಿರ್ಪುದು.

ಅನಂತಕೋಟಿ–ಅನೇಕ ಕೋಟಿ, ಸನ್ಮಾನ ಮಾಡಿದಡೇನು?–ಮಾನಮನ್ನಣೆಯಿಂದ ಲಿಂಗಪೂಜೆ ಜಂಗಮದಾಸೋಹವನನುಗೈದರೇನು, ಒಂದು ನಿಮಿಷದ ಉದಾಸೀನ–ಒಂದು ನಿಮಿಷಾರ್ಧನಿಮಿಷದ ಉದಾಸೀನ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡೂ ಕಾಣದ ಹಾಂಗೆ ಕೇಳಿ ಕೇಳದ ಹಾಂಗೆ ಉಪೇಕ್ಷತ್ವವ ಮಾಡಿಬಿಟ್ಟಂಥದ್ದು, ಕೆಡಿಸಿತ್ತು–ಮೊದಲು ಮಾಡಿದಂಥ ಲಿಂಗಪೂಜೆ ಜಂಗಮಭಕ್ತಿಯನ್ನು ನಾಶಮಾಡಿತ್ತು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ–ಗುರುಮುಖದಿಂದ ಬಂದ ಇಷ್ಟಮಹಾಲಿಂಗವನ್ನು ನಂಬಿಯೂ–ಈ ಲಿಂಗವೆ ಪ್ರಾಣ; ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು. [೧]ಈ ಲಿಂಗಹೋದರೆ ಈ ಲಿಂಗದೊಡನೆ ಪ್ರಾಣಕೊಟ್ಟೇನು.[೧] ಈ ಲಿಂಗವಲ್ಲದನ್ಯದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿಸಿಯೂ, ನಂಬದ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮವೇ ಸಾಕ್ಷಾತ್ಶಿವಸ್ವರೂಪವೆಂದು ವಿಶ್ವಾಸಿಸದ, ಡಂಬಕ ನಾನಯ್ಯಾ–ಹಿರೇತನದ ಬೂಟಕತ್ವವುಳ್ಳಾತ ನಾನಯ್ಯಾ

..........................

೧–೧ x (ಗ).

II - - - - - - - - - - - - - - - - - - - - - - - - - - - - - - - - - - - - - - - - - - - - - - - -

1–1 ಬೆಳಗಿದಡೇನು (ಚ, ಜ). 2–2 x (ಚ, ಜ). 3–3 x (ಚ, ಜ).

..........................

ಮಸಿಯನೇಸುಕಾಲ ಬೆಳಗಿದಡೇನು ಬಿಳಿದಾಗಬಲ್ಲುದೆ–ಅಜ್ಞಾನಸ್ವರೂಪವಾದ ಜೀವನು ಎಷ್ಟೋ ಕಾಲ ನಿರ್ಮಲಜ್ಞಾನಿಯಾಗಬೇಕೆಂದು ಶಿವಾನುಭಾವವನು ಬೋಧಿಸಿದರೆ ನಿರ್ಮಲಜ್ಞಾನಿಯಾಗಬಲ್ಲನೆ?. ಕರ್ಮಸ್ಥಿತಿ ಬೆನ್ನಬಿಡದು–ಸಂಚಿತಾದಿಕರ್ಮ ನಾರಾಯಣನ ದುರ್ಭೋಗಸ್ಥಿತಿ ಆತ್ಮನ ಬೆನ್ನಕಚ್ಚಿ ಹೆಜೆಹಿಂಗದು. ಅನಂತಕೋಟಿ ಸನ್ಮಾನವ ಮಾಡಿದಡೇನು?–ಅನೇಕ ಕೋಟಿ ಪೂಜ್ಯವಾದ ಜಂಗಮಕ್ಕೆ ಪೂಜೆಯ ಮಾಡಿದರೇನು?, ನಿಮಿಷದ ಉದಾಸೀನ

ಕೆಡಿಸಿತ್ತು-ಆ ಗುರುಲಿಂಗಜಂಗಮವು ಭಕ್ತಿಮಂದಿರಕ್ಕೆ ಬಿಜಯಂಗೆಯ್ದಲ್ಲಿ ಅವರು ಬಂದ ತತ್ಕಾಲ ಪ್ರೇಮವನರಿಯದಿದ್ದರೆ ಅನಂತಕಾಲಮಾಡಿದ ಭಕ್ತಿ ಎಲ್ಲವೂ ಹಾನಿಯಾಯಿತ್ತು. ಮುಂದಕ್ಕೆ ಕಾಣಬಂದರ್ಥ.

---

೩೮೫

**ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ! ಉಪ್ಪು ಅಪ್ಪುವಿನಲ್ಲದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ! ಕೂಡಲಸಂಗಮದೇವಾ, ಆನು ಮಾಡಿದೆನೆಂಬ ಕಿಚ್ಚು ಸಾಲದೆ?**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ-ಲೋಕದಲ್ಲಿ ತೈಲಿಕರಾದಂಥವರು ಗಾಣವನಾಡಬೇಕಾದರೆ ಎಳ್ಳು ಅಗಸಿ ಕುಶಿಬೆ ಮೊದಲಾದಂಥವನ್ನು ಹಾಕಿ ಸಾಯಂಕಾಲ ಪರಿಯಂತರ ಗಾಣವನಾಡಿದರೆ ಎಣ್ಣೆ ಬುರುವುದು. ಅದರೊಳಗೆ ಗಾಣದೆತ್ತಿನ ಹಿಂಡಿಯೆಂ[ಬು]ದು ತೈಲಪೂರಿತವಾದಂಥದು. ಅಷ್ಟಷ್ಟು ಹಿಂಡಿಯನ್ನು ತೆಗದುಕೊಟ್ಟಲ್ಲಿ ಅದರ ದಣಿವು ಪರಿಹಾರವಾಗುವುದು. ದೇಹಕ್ಕೆ ಸುಖವಾಗುವುದು. ಅದಲ್ಲದೆ ˹ಹಿಪ್ಪೆ˺ಬೀಜ ಹೊನ್ನೆಬೀಜ ಬೇವಿನಬೀಜ ಮೊದಲಾದವನ್ನು ಹಾಕಿ ಗಾಣವನಾಡಿದರೆ ಎಣ್ಣೆಯೇ ಹೊರಡುವುದಲ್ಲದೆ ತೈಲಪೂರಿತವಾದ ಹಿಂಡಿಯನೇನಾದರೂ ಹೊರಟಿತ್ತೆ? ಹೊರಡದು. ಗಾಣವನಾಡಿ ದಣಿದಂಥ ಎತ್ತಿಗೆ ಹುಲ್ಲು ಸೊಪ್ಪೆಯ ಹಾಕಿದಲ್ಲಿ ಚೈತನ್ಯವಾಗೆ ದುಃಖವುಂಟಾಗಿರ್ಪುದು ಹಾಂಗೆ ಲಿಂಗಪೂಜೆಯ ಮಾಡುತ್ತ ಜಂಗಮ ˹ದಾಸೋಹ˺ ಮಾಡಿದರೆ ಎಳ್ಳುಗಾಣವನಾಡಿದ ಎತ್ತಿಗೆ ಹೇಂಗೆ ಸುಖವಾಗುತ್ತಿಹುದೋ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರಕೊಳ್ಳುತ್ತಿಹುದು. ಅದಲ್ಲದೆ ಜಂಗಮಭಕ್ತಿ ಬಾಹ್ಯವಾಗಿ ಲಿಂಗಪೂಜೆಯ ಮಾಡಿದರೆ ˹ಹಿಪ್ಪಿ˺ಯ ಬೀಜ ಹೊನ್ನೆಬೀಜ ಬೇವಿನಬೀಜ ಮೊದಲಾದವನು ಗಾಣವನಾಡಿದ ಎತ್ತಿಗೆ ದುಃಖವುಂಟಾದ ಹಾಂಗೆ ಕಿಂಚಿನ್ಮಾತ್ರಫಲಪದಂಗಳನು ˹ದೊರಕೊಂಡು ಕಡೆಗೆ˺ ಭವದುಃಖವೇ ಉಂಟಾಗುತ್ತಿಹುದು, ಆಯಿತ್ತು-ಆ ರೀತಿಯಾಯಿತ್ತು, ಎನ್ನ ಭಕ್ತಿ-ನಾ ಮಾಡುವಂಥ ಭಿನ್ನಭಕ್ತಿಯು.

ಉಪ್ಪು. ಅಪ್ಪುವಿನಲ್ಲದ್ದಿ ಮೆಲಿದಂತಾಯಿತ್ತು-ಉದಕದಲ್ಲಿ ಕಡಲೆಕಾಳು ಗೋದಿಕಾಳು ಹೆಸರುಕಾಳು ಉದ್ದಿನಕಾಳು ಮೊದಲಾದವನ್ನು ನೆನೆಹಾಕಿದರೆ ನೆನೆದು ಮೆತ್ತಗಾಗುವವು. ಮೆಲಿದರೆ ಕ್ಷುಧೆಯಡಗಿ ತಂಪಾಗುವುದು. ಅದಲ್ಲದೆ ಕಲ್ಲುಪ್ಪು ಹಳಹಳಕಾಗೈತೆಂದು ಉದಕದೊಳಗೆ ನೆನೆಹಾಕಿ ಮೆಲಲಿಕ್ಕೆ ಹೋದರೆ ಕರಗಿ ನೀರಾಗಿ ಬಾಯಿಗೆ ಬರೇ ಉಪ್ಪಪ್ಪಾಗುವುದಲ್ಲದೆ ಕ್ಷುಧೆಯಡಗಿ ತಂಪಾದೀತೆ? ಆಗಲರಿಯದು. ಹಾಂಗೆ, ˹ಲಿಂಗಪೂಜೆಯ ಮಾಡುತ್ತ˺ ಜಂಗಮಭಕ್ತಿ ಮಾಡಿದರೆ ಕಡಲೆಕಾಳು ಗೋದಿಕಾಳು ಹೆಸರುಕಾಳು ಮೊದಲಾದವನು ಉದಕದೊಳಗೆ ನೆನೆಹಾಕಿ ತಗದುಕೊಂಡರೆ ಹಿತವಾದ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರಕೊಂಬುತ್ತಿಹುದು. ಜಂಗಮಭಕ್ತಿ ಬಾಹ್ಯವಾಗಿ ಲಿಂಗಪೂಜೆಯ ಮಾಡಿದರೆ ಉಪ್ಪು ಅಪ್ಪುವಿನಲ್ಲಿ ನೆನೆಹಾಕಿ ಮೆದ್ದರೆ ಹೇಂಗೆ ಹಿತವಾಗದೆ ಇರುತ್ತಿಹುದೋ ಹಾಂಗೆ ಕಿಂಚಿನ್ಮಾತ್ರ ಫಲಪದಂಗಳು ದೊರಕೊಂಡು ಭವದುಃಖವೇ ಉಂಟಾಗುತ್ತಿಹುದು, ಆಯಿತ್ತು-ಆ ರೀತಿಯಾಯಿತ್ತು, ಎನ್ನ ಭಕ್ತಿ-ನಾ ಮಾಡುವಂಥ ಭಿನ್ನಭಕ್ತಿಯು.

ಕೂಡಲಸಂಗಮದೇವಾ–ಎಲೇ ಪರಶಿವಲಿಂಗವೆ. ಆಣು ಮಾಡಿದೆನೆಂಬ–ನಾನು ಲಿಂಗಪೂಜೆ ಜಂಗಮದಾಸೋಹವನನುಗ್ಯೆದೆನೆಂದು ಹೇಳುವ, ಕಿಚ್ಚು–ಅಗ್ನಿಯು, ಸಾಲದೆ?–ಅಷ್ಟೇ ಸಾಲದೆ? ಅಷ್ಟೇ ಸಾಕು.

..........................

೧–೧ ಇಪ್ಪಿ (ಗ). ೨–೨ ಭಕ್ತಿ (ಗ). ೩–೩ ಪಡೆದುಕೊಂಡು (ಗ). ೪–೪ x (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - - - -

ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ–ನೈಷ್ಠೆಯೆಂಬ ತಿಲವಿಲ್ಲದ ಭಿನ್ನಭಕ್ತಿಯೆಂಬ ಬಡಿಸವನು ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದೆಂದು ನಟಿಸಿದ ಜೀವನ ಹಾಂಗೆ ವೃಥಾಯವಾಯಿತ್ತನ್ನ ಭಿನ್ನಭಕ್ತಿ. ಉಪ್ಪು ಅಪ್ಪುವಿನಲ್ಲಿ ಅದ್ದಿ ಮೆಲದಂತಾಯಿತ್ತನ್ನ ಭಕ್ತಿ–ಸದ್ಭಕ್ತಿಯೆಂಬಕ್ಷಾರವನು ಸಂಸಾರಂಬುಧಿಯಲ್ಲಿ ಮುಱುಗಿಸಿ ಸ್ವೀಕರಿಸಿದಂತಾಯಿತ್ತೆನ್ನ ಭಿನ್ನಭಕ್ತಿ. ಮುಂದಕ್ಕೆ ಕಾಣಬಂದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - - - -

ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ–ಎನ್ನ ಉದಾಸೀನ ಭಕ್ತಿಯು ಸ್ನೇಹರಸಪ್ರಾಪ್ತಿಯಿಲ್ಲದೆ ವ್ಯರ್ಥವಾಯಿತ್ತು. ಉಪ್ಪು ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತು ಎನ್ನ ಭಕ್ತಿ–ಜಡಕ್ರಿಯಾ ಕರ್ಮಭಕ್ತಿಯು ಮೋಕ್ಷಕ್ಕೆ ಕಾರಣವಾದ ಜ್ಞಾನಹೀನವಾಗಿ ಸಂಸಾರವಿಷಯರಸದೊಡನೆ ಕೂಡಿ ಹೋಯಿತ್ತು.

---

೩೮೬

**ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವ ಹಮ್ಮಿನಲ್ಲಿ ಬೆಂದೆನಯ್ಯಾ. ಗುರುವೆಂದಱಿಯದೆ ಲಿಂಗವೆಂದಱಿಯದೆ ಜಂಗಮವೆಂದಱಿಯದೆ ಆನು ಬೆಂದೆನಯ್ಯಾ ಕೂಡಲಸಂಗಮದೇವಾ, ಆನು ಮಾಡಿದುದೆಲ್ಲ ಬಱಿಯ ಉಪಚಾರವಯ್ಯಾ!**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಅಷ್ಟವಿಧಾರ್ಚನೆ–ಎಂಟು ತೆರದರ್ಚನೆಯು, ಷೋಡಶೋಪಚಾರವ–ಅರ್ಘ್ಯಾದಿ ಪ್ರದಕ್ಷಿಣಾಂತ್ಯವಾದ ಹದಿನಾರು ತೆರದ ಸತ್ಕಾರಂಗಳು, ಮಾಡುವ–ಅನುಗ್ಯೆವ, ಹಮ್ಮಿನಲ್ಲಿ–ಅಹಂಕಾರದಲ್ಲಿ, ಬೆಂದೆನಯ್ಯಾ–ದಹನವಾದೆನಯ್ಯಾ. ಗುರುವೆಂದಱಿಯದೆ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತಸ್ತಾನ ಸದ್ಭಾವವೆಂಬ ಚತುರ್ವಿಧ ಭಕ್ತಿಯಿಂದ ಗುರುಭಕ್ತಿಯ ಮಾಡುವಂಥದನ್ನು ತಿಳಿಯದೆ, ಲಿಂಗವೆಂದಱಿಯದೆ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪ[illegible] ಲಿಂಗಪೂಜೆಯ ಮಾಡುವಂಥದನು ತಿಳಿಯದೆ, ಜಂಗಮವೆಂದಱಿಯದೆ–ಪ್ರಾಣಜ್ಞಾನದಲ್ಲಿ ಜಂಗಮ ಸಂಬಂಧವ ಮಾಡಿಕೊಂಡು

ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳ ಕೊಟ್ಟು ಭಕ್ತಿಯ ಮಾಡೋ ನೆವದಿಂದ ಪ್ರಾಣಾದಿ ದ್ರವ್ಯ ಪದಾರ್ಥವನು ಜಂಗಮಕ್ಕೆ ಭಕ್ತಿಯ ಮಾಡುವಂಥದನ್ನು ತಿಳಿಯದೆ, ಆನು ಬೆಂದೆನಯ್ಯಾ: ಆನು–ಶರಣನು, ಬೆಂದೆನಯ್ಯಾ–ಸಮರಸ ಭಾವದಿಂದ ಗುರುಲಿಂಗಜಂಗಮದ ಭಕ್ತಿದಾಸೋಹವನ್ನು ಮಾಡುವಂಥದನ್ನು ತಿಳಿಯದೆ ಭೀನ್ನವಿಟ್ಟುಕೊಂಡು ಮಾಡುವಂಥ ಅಗ್ನಿಯಿಂದ ದಹನವಾದೆನಯ್ಯಾ. ಕೂಡಲಸಂಗಮದೇವಾ ಎಲೆ–ಪರಶಿವಲಿಂಗವೆ, ಆನು–ಶರಣನು, ಮಾಡಿದುದೆಲ್ಲ –ಗುರುಭಕ್ತಿ, ಲಿಂಗಪೂಜೆ ಜಂಗಮದಾಸೋಹವನನುಗೈದಂಥದೆಲ್ಲವು, ಬಜೆಯ ವ್ಯರ್ಥಸ್ಯವಾದ ಉಪಚಾರವಯ್ಯಾ–ಬಾಹ್ಯೋಪಚಾರವಾಗಿ ಮಾಡುವಂಥ ಡಂಬಕದ ಪೂಜೆಯಯ್ಯಾ.

---

೩೮೭

**ಎನ್ನಲ್ಲಿ ಭಕ್ತಿ ಸಾಸಿವೆಯ ಷಡ್ಭಾಗದನಿತಿಲ್ಲ: ಎನ್ನ ಭಕ್ತನೆಂದೆಂಬರು, ಎನ್ನ ಸಮಯಾಚಾರಿಯೆಂದೆಂಬರು! ನಾನೇನು ಪಾಪವ ಮಾಡಿದೆನೊ; ಬೆಳೆಯದ ಮುನ್ನವೆ ಕೊಯ್ವರೆ ಹೇಳಯ್ಯಾ! ಇಜೆಯದ ವೀರ! ಇಲ್ಲದ ʻಸೊಬಗನುʼ ಎಲ್ಲಾ ಒಡೆಯರು ಏಜೆಸಿ ನುಡಿವರು! ಎನಗಿದು ವಿಧಿಯೆ ಕೂಡಲಸಂಗಮದೇವಾ?**

I - - - - - - - - - - - - - - - - - - - - - - - - - - - - - - - - - - - - - - - - - -

ಎನ್ನಲ್ಲಿ ಭಕ್ತಿ ಸಾಸಿವೆಯ ಷಡ್ಭಾಗದನಿತಿಲ್ಲ; ಎನ್ನಲ್ಲಿ–ಸಂಗನಬಸವೇಶ್ವರನಲ್ಲಿ, ಭಕ್ತಿ–ಶಿವಾದ್ವೈತಭಕ್ತಿಯು, ಸಾಸಿವೆಯ ಷಡ್ಭಾಗದನಿತಿಲ್ಲ–ಎಲ್ಲಾ ಧಾನ್ಯಂಗಳೊಳಗೆ ಸಾಸಿವೆಕಾಳೆಂಬಂಥದು ಅತಿಸೂಕ್ಷ್ಮವಾಗಿಪ್ಪುದು. ಆ ಸಾಸಿವೆಯಕಾಳಿನ ಷಡ್ಭಾಗದೊಳಗೆ ಒಂದು ಭಾಗದಷ್ಟಾದರೂ ಎನ್ನಲ್ಲಿ ಉಂಟಾಗಿಲ್ಲವು. ಎನ್ನ ಭಕ್ತನೆಂದೆಂಬರು–ಎನ್ನ ನಿರ್ವಂಚಕ ಸದ್ಭಕ್ತನೆಂದು ಹೇಳುವರು. ಎನ್ನ ಸಮಯಾಚಾರಿಯೆಂದೆಂಬರು–ಎನ್ನಂಗಕ್ಕೆ ಲಿಂಗವೇ ಸಮಯಾಚಾರ ಪ್ರಾಣಕ್ಕೆ ಜಂಗಮೇ ಸಮಯಾಚಾರವೆಂದು ಹೇಳುವರು.

ನಾನೇನು ಪಾಪವ ಮಾಡಿದೆನೊ–ನಾನೇನು ದೋಷವನನುಗೈದೆನೊ ಬೆಳೆಯದ ಮುನ್ನವೆ ಕೊಯ್ವರೆ? ಹೇಳಯ್ಯಾ!–ಲೋಕದಲ್ಲಿ ಹಲಾಯುಧರುಗಳೇನಾದರೂ ಹದಿನೆಂಟು ಧಾನ್ಯಂಗಳನು ಬಿತ್ತಿದಲ್ಲಿ ಫಲಪೂರಿತವಾಗಿ ಬೆಳೆದ ಬಳಿಕ ಕೊಯ್ದರೆ ತಮಗೆ ದವಸವಾಗುವವು. ದನಕರುಗಳಿಗೆ ಮೇವಾಗುವುದು. ಅದಲ್ಲದೆ ಗೇಣುದ್ದ ಚೋಟುದ್ದ ಪೈರನ್ನು ಕೊಯ್ದರೆ ದವಸಬಾರದೆ, ದನಕರುಗಳಿಗೆ ಮೇವಾಗದೆ ವ್ಯರ್ಥಸ್ಯವಾಗಿಪ್ಪುದು, ಹಾಂಗೆ, ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡು ಹೋದ ಮೇಲೆ ಸ್ತೋತ್ರವ ಮಾಡಬೇಕಲ್ಲದೆ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯದಕಿಂದ ಮೊದಲೇ ಸ್ತೋತ್ರವ ಮಾಡಿದರೆ ಅಹಂಕಾರ ಹಿರೇತನ ಆತ್ಮತೇಜಸ್ಸು ಹೆಚ್ಚಿ ಭವಕ್ಕೆ ಹೋಗುವಂಥದೇ ಪ್ರಾಪ್ತಿಯಾಗುತ್ತಿಹುದಯ್ಯಾ.

ಇಜೆಯದ–ಯದ್ಧವ ಮಾಡದ, ವೀರ–ಪರಾಕ್ರಮಿಯು, ಇಲ್ಲದ–ತನ್ನಲ್ಲಿ ಪರಾಕ್ರಮತ್ತುವ ಉಂಟಾಗಿಲ್ಲದ, ಸೊಬಗನು–ರಣಾಗ್ರದೊಪ್ಪವನ್ನು, ಎಲ್ಲಾ ಒಡೆಯರು–ʻವಾಲ್ಮೀಕರುʼ ಏಜೆಸಿ–ಹೆಚ್ಚಿಸಿ, ನುಡಿವರು–ಕುರಿಯಹಿಂಡಿಗೆ ತೋಳಹೊಕ್ಕ ಹಾಂಗೆ ಹುಲ್ಲೆ ಹಿಂಡಿಗೆ ಹುಲಿಹೊಕ್ಕ ಹಾಂಗೆ ಆನೆ ಹಿಂಡಿಗೆ ಸಿಂಹಹೊಕ್ಕ ಹಾಂಗೆ ಸಿಂಹನಹಿಂಡಿಗೆ ಗಂಡಭೇರುಂಡಹೊಕ್ಕ ಹಾಂಗೆ ಈಚೆಯಿಂದ

ಆಚೆಗೆ ಕಡಕೊಂಬುತ್ತ ಹೋದ ಆಚೆಯಿಂದೀಚೆಗೆ ಕಡಕೊಂಬುತ್ತ ಬಂದನು. ಇವನು ಮಹಾಪರಾಕ್ರಮಿಯೆಂದು, ಏಜೆಸಿ-ಹೆಚ್ಚಿಸಿ, ನುಡಿವರು-ಹೇಳವರು. ಎನಗಿದು ವಿಧಿಯೆ-ಇದಕ್ಕೋಸ್ಕರವಾಗಿ ಕಡದಾಡಿ ಸತ್ತು ಹೋಗುವಂಥದು ಪ್ರಾಪ್ತಿಯೆ? ಕೂಡಲಸಂಗಮದೇವಾ-ಎಲೆ ²ಒಡೆಯನೆ² ಎಂಬ ದೃಷ್ಟೋಪಮಾನದ ಹಾಂಗೆ.

ಇಜೆಯದ-ಇಚ್ಛಾಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡದ, ವೀರ-ಉಪಾಧಿಕನು, ಇಲ್ಲದ-ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡುವಂಥದು ಉಂಟಾಗಿಲ್ಲದ, ಸೊಬಗನು ಭಕ್ತಿ ಸತ್ಕ್ರಿಯೆಯ ಒಪ್ಪವನ್ನು, ಎಲ್ಲಾ ಒಡೆಯರು-ಜಂಗಮಮೂರ್ತಿಗಳೆಲ್ಲರು, ಏಜೆಸಿ ನುಡಿವರು-ಇವನು ಜಂಗಮಕ್ಕೆ ತನುವ ಕೊಡುತ್ತೈದಾನೆ ಮನವ ಕೊಡುತ್ತೈದಾನೆ ಧನವ ಕೊಡುತ್ತೈದಾನೆಯೆಂದು, ಏಜೆಸಿ-ಹೆಚ್ಚಿಸಿ, ನುಡಿವರು-ಹೇಳುವರು. ಎನಗಿದು ವಿಧಿಯೆ: [ಎನಗಿದು-] ಇದಕ್ಕೋಸ್ಕರವಾಗಿ ಸಕಲಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿ ನಿರ್ಧನಿಕನಾಗುವಂಥದು, ವಿಧಿಯೆ?-ಪ್ರಾಪ್ತಿಯೆ? ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ವಾಲ್ಮೀಕಪ್ಪನ್ನೊ (ಗ). ೨-೨ ಪರಿಶಿವಲಿಂಗವೇ (ಗ).

II- - - - - - - - - - - - - - - - - - - - - - - - - - - - - - - - - - - - - - - -

1-1 ಸೊಬಗು ಹೇಳುವಂತೆ (ಚ, ಜ).

..........................

ಹಿಂದಕ್ಕೆ ಕಾಣಬಂದರ್ಥ. ಬೆಳೆಯದ ಮುನ್ನವೆ ಕೊಯ್ವರೆ? ಹೇಳಯ್ಯಾ !-ನಿರಹಂಭಾವ ನಿರ್ವಂಚನೆ ನಿರಹಂಕಾರ ಸಮರಸಭಕ್ತಿ ಶಿವಯೋಗ ಲಿಂಗೈಕ್ಯವೆಂಬ ಪೈರು ವರ್ಧನವಾಗುವುದಕ್ಕೆ ಮೊದಲೇ ಹೊಗಳತೆಯೆಂಬ ಶಸ್ತ್ರದಿಂದ ದೇದನಂಗೆಯ್ವರೆ? ನಿರೂಪಿಸಯ್ಯಾ.

ಇಜೆಯದ ವೀರ ಇಲ್ಲದ ಸೊಬಗು ಹೇಳುವಂತೆ-ತನುಮನಧನವು ಗುರುಲಿಂಗಜಂಗಮದೆಂಬ ನೆನಹಿನ ಶಸ್ತ್ರದಿಂದ ಆ ಗುರುಲಿಂಗಜಂಗಮದಿಚ್ಛೆಯನು ಹಿಂದೆ ಮಾಡಲರಿಯದ ಭಿನ್ನಭಕ್ತ ತನ್ನಲ್ಲಿ ಸಮರಸಭಕ್ತಿಯಿಲ್ಲದೆ ಸುಮ್ಮನೆ ನಾನು ಸಮರಸಭಕ್ತಿಯುಳ್ಳಾತನೆಂದು ಹೇಳುವುದು ಅಭಿಮಾನವೆ ಸರಿ. ಎಲ್ಲಾ ಒಡೆಯರು ಏಜೆಸಿ ನುಡಿವರು ! ಎನಗಿದು ವಿಧಿಯೆ?-ಬಸವೇಶ್ವರನು ತನುವ ಕೊಡುತಾನೆ ಧನವ ಕೊಡುತಾನೆ. ಇಂಥ ಭಕ್ತನೆಲ್ಲಿಲ್ಲ; ಹೀಂಗೆಂದುಬ್ಬಿಸಿ ವಚಿಸುವರು; ಹೀಂಗೆ ನುಡಿವಂಥಾದೇನು ನನಗೆ ಪ್ರಾಪ್ತಿಯೊ?

V- - - - - - - - - - - - - - - - - - - - - - - - - - - - - - - - - - - - - - - -

ಬೇಳೆಯದ ಮುನ್ನವೆ ಕೊಯ್ವರೆ ಹೇಳ-ಸಮರಸಭಕ್ತಿ ವರ್ಧನವಾಗುವುದಕ್ಕೆ ಮೊದಲೇ ದೇಹಾವಸಾನ ಪರ್ಯಂತರ ಪಾರವೆಯ್ದಿಸದೆ ಅವಾಂತರದಲ್ಲಿ ಭಕ್ತಿ ಕಂಟಕವ ಮಾಡುವರೆ.

---

## ೩೮೮

**ಎನ್ನವರೊಲಿದು ಹೊನ್ನಶೂಲಕ್ಕಿಕ್ಕಿದರೆನ್ನ ಹೊಗಳಿ, ಹೊಗಳಿ! ಎನ್ನ ಹೊಗಳತಿ[1][ಯೆ][1] ಎನ್ನ ಇಮ್ಮೈಗೊಂಡಿತ್ತಲ್ಲ! ಅಯ್ಯ, ನಿಮ್ಮ ಮನ್ನಣೆಯೆ ಮಸೆದಲಗಾಗಿ ತಾಗಿತ್ತಲ್ಲ! ಅಯ್ಯಯ್ಯೋ ನೊಂದೆನು, ಸೈರಿಸಲಾಱೆನು! ಕೂಡಲಸಂಗಮದೇವಾ, ನೀನೆನಗೊಳ್ಳಿದನಾದಡೆ, ಎನ್ನ ಹೊಗಳತೆಗೆ ಅಡ್ಡಬಾರ ಧರ್ಮಿ!**

..........................

1-1 ಗೆ (ಕ. ಗ).

I - - - - - - - - - - - - - - - - - - - - - - - - - - - - - - - - - - - - - - - -

ಎನ್ನವರೊಲಿದು ಹೊನ್ನಶೂಲಕ್ಕಿಕ್ಕಿದರೆನ್ನ ಹೊಗಳಿ, ಹೊಗಳಿ! : ಎನ್ನವರು-ಎನ್ನಂಶೀಭೂತರಾದ ಜಂಗಮಮೂರ್ತಿಗಳು, ಒಲಿದು-ಕೃಪೆಯಾಗಿ, ಹೊನ್ನಶೂಲಕಿಕ್ಕಿದರೆನ್ನ-ಅಹಂಕಾರ ಹಿರೇತನ ಆತ್ಮತೇಜಸ್ಸಿಗೊಳಗುಮಾಡಿದರೆನ್ನ, ಎನ್ನ ಹೊಗಳಿ ಹೊಗಳಿ!-ಸಂಗನಬಸವೇಶ್ವರನು ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡುತ್ಯೆದಾನೆಂದು ಸ್ತೋತ್ರವ ಮಾಡಿ ಮಾಡಿ, ಎನ್ನ ಹೊಗಳತಿ[ಯೆ]-ನೀನು ಮಾಡುವಂಥ ಸ್ತೋತ್ರವೆ, ಎನ್ನ-ನನ್ನ, ಇಮ್ಮೈಗೊಂಡಿತ್ತಲ್ಲ-ಅದೇ ಇಮ್ಮೈ ಕೀಚಿದ ಅಲಗಾಗಿ ಎದೆಯಲ್ಲಿ ನಟ್ಟು ಬೆನ್ನಿನಲ್ಲಿ ತಟ್ಟುಚ್ಚಿ ಮಾರು ಮೊನೆಗೊಂಡಿತ್ತಲ್ಲ. ಅಯ್ಯ-ಎಲೆ ಲಿಂಗವೆ, ನಿಮ್ಮ ಮನ್ನಣೆಯ-ನಿಮ್ಮ ಮಾನಮನ್ನಣೆಯೆ, ಮಸೆದಲಗಾಗಿ-ಅದೇ ಇಮ್ಮೈ ಕೀಚಿದ ಆಯುಧವಾಗಿ, ತಾಗಿತ್ತಲ್ಲ-ಎದೆಯಲ್ಲಿ ನಟ್ಟು ಬೆನ್ನಿನಲ್ಲಿ ತಟ್ಟುಚ್ಚಿತ್ತಲ್ಲ.

ಅಯ್ಯಯ್ಯೋ-ಅಕಟಕಟ, ನೊಂದೆನು-ಗಾಸಿಯಾದೆನು, ಸೈರಿಸಲಾಱೆನು-ಅದನು ತರಹರಿಸಿಕೊಂಡು ಸುಮ್ಮನಿರಲಾರೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ. ನೀನು-ಪರಶಿವಲಿಂಗವು. ಎನಗೆ-ಸಂಗನಬಸವೇಶ್ವರನಿಗೆ, ಒಳ್ಳಿದನಾದಡೆ-ಹಿತನಾಗಿ ತೆತ್ತಿಗನಾಗಿ ಆಪತ್ತಿಗನಾಗಿ ಸಹವಯನಾಗಿ ಇದ್ದಾತನಾದರೆ, ಎನ್ನ ಹೊಗಳತಿಗೆ-ಎನ್ನ ಹೊಗಳುವಂಥ ಸ್ತೋತ್ರಕ್ಕೆ, ಅಡ್ಡಬಾರ-ಯತಿಗೆ ಯತಿವುಂಟು ಭೂಪತಿಗೆ ಭೂಪತೆವುಂಟು ಇವನ ತಲೆಮೆಟ್ಟಿ ಹಾರುವರುಂಟು. ಇವನೇನ ಸ್ತೋತ್ರದ ಮಾಡುತ್ತಿದ್ದೀರೆಂದು ಬಿಡಿಸಿ ಕೊಳ್ಳಾ, ಧರ್ಮಿ-ಸದ್ಧರ್ಮಸ್ವರೂಪವಾದ ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - -

ಎನ್ನವರೊಲಿದು ಹೊನ್ನಶೂಲದಲಿಕ್ಕಿದರು-ಎಮ್ಮ ಶಿವಗಣಂಗಳು ಮಚ್ಚಿ ಭಕ್ತ್ಯಹಂಕಾರವೆಂಬ ದಾರ್ದಸಿಯಲ್ಲಿ ಹಾಕಿದರು. ಮುಂದಕ್ಕೆ ಕಾಣಬಂದರ್ಥ.

---

## ೩೮೯

**ಎನ್ನವರೆನಗೊಲಿದು ಹೊನ್ನ ಶೂಲಕ್ಕಿಕ್ಕಿದರಯ್ಯಾ ! ಅಹಂಕಾರಪೂರಾಯ ಗಾಯದಲ್ಲಿ ಆನೆಂತು ಬದುಕುವೆ ? ಆನೆಂತು ಜೀವಿಸುವೆ ? ಜಂಗಮವಾಗಿ ಬಂದು ಜಱಿದು ಶೂಲವನಿಳುಹಿ ಪ್ರಸಾದದ ಮದ್ದನಿಕ್ಕಿ, ಸಲಹು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನವರು–ಎನ್ನಂಶೀಭೂತರಾದ ಏಳುನೂರೆಪ್ಪತ್ತುಮರಗಣಂಗಳು ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳು, ಎನಗೆ–ನನಗೆ, ಒಲಿದು–ಕೃಪೆಯಾಗಿ, ಹೊನ್ನಶೂಲಕ್ಕಿಕ್ಕಿದರಯ್ಯಾ–ಅಹಂಕಾರ ಹಿರೇತನ ಆತ್ಮತೇಜಸ್ಸಿಗೊಳಗುಮಾಡಿ [೧]ಕಾಡಿ[೧]ದರಯ್ಯಾ. ಅಹಂಕಾರ–ನಾನು ನಾನೆಂಬ ಮೂಲ ಅಹಂಕಾರವೆಂಬ, ಪೂರಾಯ–ಪೂರಿತವಾದ, ಗಾಯದಲ್ಲಿ–ಪೆಟ್ಟಿನಲ್ಲಿ. ಆನೆಂತು ಬದುಕುವೆ–ಎನಗೆ ಕ್ರಿಯೆ ಹೇಂಗೆ ಅಳವಟ್ಟಿತ್ತು. ಆನೆಂತು ಜೀವಿಸುವೆ–ಎನಗೆ ಜ್ಞಾನ ಹೇಂಗೆ ಅಳವಟ್ಟಿತ್ತು. ಜಂಗಮವಾಗಿ–ಚರಲಿಂಗವಾಗಿ. ಬಂದು ಭಿಕ್ಷಕ್ಕೆಂದು ಬಿಜಯಂಗೈದು ಬಂದು, ಜಜಿದು–ನೀನೇನು [**] ಸಿರಿಯಾಳನ ಹಾಂಗೆ ಮಗನ ಕೊಟ್ಟೆಯೊ ದಾಸಿಮಯ್ಯನ ಹಾಂಗೆ ವಸ್ತುವ ಕೊಟ್ಟೆಯೊ ಎಂದು [೨]"ಜರೆ ಧಿಃಕ್ಕಾರೇ" ಯೆಂದು[೨] ಧಿಃಕ್ಕಾರವ ಮಾಡಿ, ಶೂಲವನು–ಮೂಲ ಅಹಂಕಾರವನು, ಇಳುಹಿ–ಕಡೆಗೆ ಮಾಡಿ, ಪ್ರಸಾದದ–ಶುದ್ಧಸಿದ್ಧಪ್ರಸಿದ್ಧಪ್ರಸಾದವೆಂಬ, ಮದ್ದನು–ಔಷಧವನು, ಇಕ್ಕಿ–ನೀಡಿ ಸಲಹು–ರಕ್ಷಣ್ಯವ ಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ x (ಕ). ೨–೨ x (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನವರೆನಗೊಲಿದು ಹೊನ್ನಶೂಲದಲಿಕ್ಕಿದರಯ್ಯಾ !–ಎಮ್ಮ ಶಿವಗಣಂಗಳು ಎಮಗೆ ಮಚ್ಚಿ ಸ್ತೋತ್ರಾಹಂಕಾರವೆಂಬ ದಾರ್ದಸಿಯಲ್ಲಿ ಹಾಕಿದರಯ್ಯಾ. ಮುಂದಕ್ಕೆ ಕಾಣಬಂದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - - - - - - -

[೩][ಅಹಮೆಂ][೩]ದೆಂಬ ಅಹಂಕಾರದ ಘಾಯದಿಂದ ನೊಂದೆ. ಜಂಗಮವಾಗಿ ಬಂದು ಜಜಿದು ಪ್ರಸಾದವನಿಕ್ಕಿ ಸಲಹೆಂಬುದೀ ವಚನದರ್ಥ.

.........................

೩–೩ ಅಹುದೆಂ (ತ).

---

೩೯೦

**ಎಡದ ಕೈಯಲು ಹಾಲಬಟ್ಟಲು ಬಲದ ಕೈಯಲು ಓಜುಗಟ್ಟಿಗೆ, ಆವಾಗ ಬಂದಾನೋ [೧]ಎ[೧]ಮ್ಮಯ್ಯ ಬಡಿದು ಹಾಲ ಕುಡಿಸುವ ತಂದೆ? ಸಾಕ್ಷಿ: "ದಂಡಕ್ಷೀರ[೨]ದ್ವಂದ್ವಹಸ್ತೋ[೨] । ಜಂಗ[೩]ಮೋ[೩] ಭಕ್ತಿಮಂದಿರಂ । ಅತಿ ಭ[೪]ಕ್ತಾ[೪] ಲಿಂಗಸಂತು[೫]ಷ್ಟಿಃ[೫] । ಅಪಹಾ[೬]ಸ್ಯಾದ್ಯ[೬]ಮದಂಡನಂ ॥" ಎಂದುದಾಗಿ, ಕೂಡಲಸಂಗಮದೇವಯ್ಯ ತಾನೆ ಭಕ್ತಿ ಪಥವ ತೋಱುವ ತಂದೆ!**

I--------------------------------------------------------------------

ಎಡದ ಕೈಯಲು-ವಾಮಹಸ್ತದಲ್ಲಿ, ಹಾಲಬಟ್ಟಲು-ಕ್ಷೀರದ ಬಟ್ಟಲನ್ನು ಪಿಡಿದುಕೊಂಡು, ಬಲದ ಕೈಯಲು-ದಕ್ಷಿಣ ಹಸ್ತದಲ್ಲಿ, ಓಜುಗಟ್ಟಿಗೆ-ಚುಳಿಕೆಯನ್ನು ಪಿಡಿದುಕೊಂಡು, ಬಡಿದು-ಆ ಚುಳಿಕೆಯಿಂದ ಸದೆಬಡಿದು, ಹಾಲಕುಡಿಸುವ ತಂದೆ-ಕ್ಷೀರವನ್ನು ಪಾನವ ಮಾಡಿಸುವಂಥ ಜನಕನು, ಆವಾಗ ಬಂದಾನೋ ಎಮ್ಮಯ್ಯ-ಆವಾಗ ಎಯ್ತಂದಹನೋ ಎಮ್ಮ ತಂದೆಯೆಂದು ಆ ಶಿಶುವು ತಮ್ಮ ತಂದೆಯು ಬರುವ ಭರವ ಇಚ್ಛೈಸುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ.

● ಎಡದ ಕೈಯಲು-ವಾಮಭಾಗದ [1]ಹಸ್ತದಲ್ಲಿ[1], ಹಾಲಬಟ್ಟಲು-ಅಮೃತಕುಂಭಸ್ವರೂಪವಾದ ಇಷ್ಟಲಿಂಗವ ಪಿಡಿದುಕೊಂಡು, ಬಲದ ಕೈಯಲು-ದಕ್ಷಿಣಹಸ್ತದಲ್ಲಿ, ಓಜುಗಟ್ಟಿಗೆ-ಸುಜ್ಞಾನವೆಂಬ ದಂಡವ ಪಿಡಿದುಕೊಂಡು, ಬಡಿದು-ಮನ ಮೊದಲಾದ ಸಕಲಕರಣಂಗಳನು ಸದೆಬಡಿದು, ಹಾಲು ಕುಡಿಸುವ-ಇಷ್ಟಲಿಂಗಸಂಬಂಧವ ಕರುಣಿಸಿಕೊಡುವ, ತಂದೆ-ಎನ್ನಾತ್ಮಜನಕನಾದಂಥ ಶ್ರೀಗುರುಮೂರ್ತಿಯು, ಆವಾಗ ಬಂದಾನೋ-ಆವಾಗ ಎಯ್ತಂದಹನೊ, ಎಮ್ಮಯ್ಯ-ಎನ್ನ ಜನಕನು.

॥ಗ್ರಂಥ॥ ಗುರುವಾಕ್ಯಕ್ಕೆ ಸದೃಶ್ಯವಾಗಿ ಹರವಾಕ್ಯವ ನಿರೂಪಿಸುತ್ತಿಹರು. ದಂಡಂ-ಸುಜ್ಞಾನವೆಂಬ ದಂಡವನು, ಕ್ಷೀರಂ-ಅಮೃತಕುಂಭಸ್ವರೂಪವಾದ ಇಷ್ಟಲಿಂಗವು, ದ್ವಂದ್ವಹಸ್ತೋ-ಜ್ಞಾನಕ್ರಿಯೆಯೆಂಬ ಉಭಯಹಸ್ತದಲ್ಲಿ ಪಿಡಿದುಕೊಂಡ, ಜಂಗಮೋ ಭಕ್ತಿಮಂದಿರಂ-ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬರಲು, ಅತಿಭಕ್ತ್ಯಾ-ಅತ್ಯಂತ ವಿಶ್ವಾಸದಿಂದ ಸಕಲಪದಾರ್ಥವ ನೀಡಿ ಸಂತುಷ್ಟಿಬಡಿಸಿದರೆ, ಲಿಂಗಸಂತುಷ್ಟಿಃ-ಆ ಭಕ್ತನಂಗದಲ್ಲಿ ಸಂಬಂಧವಾದ ಇಷ್ಟಲಿಂಗಕ್ಕೆ ಮಹಿಮಾಪದ ಚಿತ್ಕಲೆ ಹೆಚ್ಚುತ್ತಿಹುದು. ಅಪಹಾಸ್ಯಾತ್-ಇವರು ಬದುಕು ಮಾಡಲಾರದೆ ಬಾಳುವೆ ಮಾಡಲಾರದೆ ಹೆಂಡಿರ ಮಕ್ಕಳ ಸಲಹಲಾರದೆ ಬಹುರೂಪಗಾರನ ಹಾಂಗೆ ವೇಷವ ಧರಿಸಿಕೊಂಡು ದೇಶದ ಮೇಲೆ ಬಂದಹರೆಂದು ಹಾಸ್ಯವ ಮಾಡಿದರೆ, ಯಮದಂಡನಂ-ಯಮಶಿಕ್ಷೆಯಾಗುತ್ತಿಹುದು. ಎಂದುದಾಗಿ-ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಕೂಡಲಸಂಗಮದೇವಯ್ಯ ತಾನೆ-ಪರಶಿವಲಿಂಗವು ತಾನೆ, ಭಕ್ತಿಪಥವ-ಶಿವಾದ್ವೈತ ಭಕ್ತಿಮಾರ್ಗವ, ತೋಱುವ-ಅರುಹಿ ಕೊಡುವ, ತಂದೆ-ಎನ್ನಾತ್ಮಜನಕನಾದಂಥ ಪರಶಿವಲಿಂಗವು.

..........................

೧-೧ ಕರಸ್ಥಲದಲ್ಲಿ (ಗ).

II- - - - - - - - - - - - - - - - - - - - - - - - - - - - - - - - - - - - - - - - -

2-2 ದಯಾ ಹಸ್ತೋ (ತ, ಜ).

..........................

ಎಡದ ಕೈಯಲು ಹಾಲುಬಟ್ಟಲು-ಹೃದಯಲಿಂಗಾನುಭಾವ ಮುಖದ್ವಾವೆಂಬ ವಾಮಭಾಗದ ಪಾಣಿತಾಣದಲ್ಲಿರ್ದ ಸತ್ಕ್ರಿಯಾಮೃತಕ್ಷಾಶ್ರಯವಹ ಇಷ್ಟಲಿಂಗವು, ಬಲದ ಕೈಯಲು ಓಜುಗಟ್ಟಿಗೆ-ದಕ್ಷಿಣಹಸ್ತದಲ್ಲಿ ಶಿಕ್ಷಾದಂಡವು, ಆವಾಗಬಂದಾನೆಮ್ಮಯ್ಯ ಬಡಿದು ಹಾಲುಕುಡಿಸುವ ತಂದೆ?-

ಸಕಲ ಕರಣಂಗಳನು ಶಿಕ್ಷಿಸಿ ಸುಜ್ಞಾನಾಮೃತವನು ಕುಡುಹಿ೨ಸಿ೨ ಕೊಡುವ ಮಹಾನುಭಾವ ಗುರುಮೂರ್ತಿ ಯಾವಾಗ ಆಗತವಾದಾನೊ?

ಸಾಕ್ಷಿಃ ದಂಡಕ್ಷೀರ ದಯಾಹಸ್ತೋ-ಎಡದ ಕೈಯಲ್ಲಿ ಹಾಲ ಬಟ್ಟಲು ಬಲದ ಕೈಯಲ್ಲಿ ಶಿಕ್ಷಾ ದಂಡವ ಪಿಡಿದುಕೊಂಡು, ಜಂಗಮೋ ಭಕ್ತಿಮಂದಿರಂ-ಮಹಾಜ್ಞಾನಿ ಜಂಗಮವು ಶಿವಭಕ್ತರ ಗೃಹಕ್ಕೆ ಬಿಜಯಂಗೆಯ್ದಲ್ಲಿ, ಅತಿಭಕ್ತ್ಯಾ ಲಿಂಗ ಸಂತುಷ್ಟಿಃ-ಮಿಗಿಲಾದ ಭಕ್ತಿಯನು ಮಾಡಿದಲ್ಲಿ ಲಿಂಗವು ಸಂತೃಪ್ತಿಯಾಯಿತ್ತು. ಅಪಹಾಸ್ಯಾದ್ಯಮದಂಡನಂ-ಸಂತೃಪ್ತಿಯಾಗದಲ್ಲಿ ಯಮನ ಶಿಕ್ಷೆಯಹುದು. ಅದಲ್ಲದೆ ಆ ಜಂಗಮಕ್ಕೆ ಭಕ್ತಿಯನು ೩ಮಾಡಿ೩ ದೂಷಣೆಯ ಮಾಡಲು ಯಮನ ಶಿಕ್ಷೆಗೊಳಗಾಗಿಪ್ಪರು. ಎಂದುದಾಗಿ-ಹೀಂಗೆಂದು ಹರಗುರುವಾಕ್ಯಪ್ರಮಾಣಂಗಳಿಂದ ಹೇಳುತ್ತಿಹುದಾಗಿ, ಮುಂದಕ್ಕೆ ಕಾಣಬಂದರ್ಥ.

........................

೨-೨ X (ಚ). ೩-೩ X (ಚ).

III- - - - - - - - - - - - - - - - - - - - - - - - - - - - - - - - - - - - - - - - - -

........................

ಓಜುಗಟ್ಟಿಗೆ-ಶಿಕ್ಷಾದಂಡವು.

IV- - - - - - - - - - - - - - - - - - - - - - - - - - - - - - - - - - - - - - - - - -

1-1 ನ (ತ) 2-2 ದ್ವಯಾಹಸ್ತಂ (ತ). 3-3 ಮಂ (ತ). 4-4 ಕ್ತಿ (ತ). 5-5 ಷ್ಟಂ (ತ). 6-6 ಸ್ಕಂಯ (ತ).

........................

ದೇಹೇಂದ್ರಿಯಂಗಳ ಗುಣವ ಬಿಡಿಸಿ ಶಿಕ್ಷಾಗುರುವಾಗಿ, ಜ್ಞಾನಾಮೃತವನೆಱದು ಮೋಕ್ಷಗುರುವಾಗಿ ಇಂತಪ್ಪ ಜಂಗಮದಲ್ಲಿ ವಿಶ್ವಾಸವಿಲ್ಲದಿದ್ದರೆ ಯಮದಂಡನೆಯಂಬುದೀ ವಚನದರ್ಥ. "ದಂಡಕ್ಷೀರ ದಯಾಹಸ್ತೋ ಜಂಗಮೋ ಭಕ್ತಿಮಂದಿರಂ । ಅತಿಭಕ್ತ್ಯಾ ಲಿಂಗಸಂತುಷ್ಟಿರಪಹಾಸ್ಯಾದ್ಯಮದಂಡನಂ" ಎಂದುದಾಗಿ-ಜಂಗಮನು ಭಕ್ತನ ಮನೆಗೆ ಬಹರೆ. ಒಂದು ಕೈಯಲ್ಲಿ ಪ್ರಸಾದವು ಒಂದು ಕೈಯಲ್ಲಿ ಶಾಸ್ತಿಯು. ಈ ಎರಡ ಹಿಡಿದುಕೊಂಡು ಬಹನು. ಅತಿಭಕ್ತಿಯಂ ಮಾಡಿದಡೆ ಪ್ರಸಾದಮಂ ಕೊಡುವನು. ಅಪಹಾಸ್ಯವನಾಡಿದಡೆ ಯಮದಂಡನೆ ಇಕ್ಕುವನು ಎಂಬುದೀ ಗ್ರಂಥದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - -

ಎಡದ ಕೈಯಲ್ಲಿ ಹಾಲ ಬಟ್ಟಲು-ಕಾಯದ ವಾಮಭಾಗದ ಪಾಣಿತಳದಲ್ಲಿ ಪರಮಾಮೃತ ಸ್ವರೂಪವಾದ ಇಷ್ಟಲಿಂಗವು, ಬಲದ ಕೈಯಲ್ಲಿ ಓಜುಗಟ್ಟಿಗೆ-ಜ್ಞಾನಹಸ್ತದಲ್ಲಿ ಪ್ರಾಣಲಿಂಗವು.

**ಎನ್ನಾಪತ್ತು, ಸುಖದುಃಖವ ಇನ್ನಾರಿಗೆ ಹೇಳುವೆ ? ಶರಣಸ್ಥಲದವರಿಗೆ ಹೇಳಿದಡೆ ಮತ್ಸರ ! ಸವತಿ ಸಕ್ಕರೆ ಬೇವು ಬೆಲ್ಲವುಂಟೆ ? ಇನ್ನಾರಿಗೆ ಹೇಳುವೆ ? ಕೂಡಲಸಂಗಮದೇವಾ, ಜಂಗಮವಾಗಿ ಬಂದೆನ್ನ ಸೂತಕವ ಕಳೆಯಯ್ಯಾ**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನಾಪತ್ತು ಸುಖದುಃಖವ ಇನ್ನಾರಿಗೆ ಹೇಳುವೆ: ಎನ್ನಾಪತ್ತು–ಎನ್ನಾಧಿವ್ಯಾಧಿ ⁽ವಿಪತ್ತು,⁾ ಸುಖದುಃಖವ–ಸುಖ ಒಂದು ಕೋಟಾನು ಕೋಟಿ ದುಃಖ ಒಂದು ಕೋಟಾನು ಕೋಟಿಗಳನು, ಇನ್ನಾರಿಗೆ ಹೇಳುವೆ?–ಇನ್ನಾರ ಮುಂದೆ ಹೇಳಿಕೊಳಲಿ?. ಶರಣಸ್ಥಲದವರಿಗೆ ಹೇಳಿದಡೆ ಮತ್ಸರ, ಸವತಿ ಸಕ್ಕರೆ ಬೇವುಬೆಲ್ಲವುಂಟೆ?–ಭಕ್ತಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಗಳನು ಭಕ್ತಸ್ಥಲದವರ ಮುಂದೆ ಹೇಳಿದರೆ ಸಕ್ಕರಿ ಸಕ್ಕರಿ ಬೆರೆದ ಹಾಂಗೆ ಬೆಲ್ಲ ಬೆಲ್ಲ ಬೆರೆದ ಹಾಂಗೆ ಹಿತವಾಗಿರ್ಪುದು. ಅದಲ್ಲದೆ ಭಕ್ತಸ್ಥಲದವರು ತಮ್ಮರಿವು ಆಚರಣೆ ವಿಪತ್ತು ಸುಖದುಃಖಂಗಳನು ಮಾಹೇಶ್ವರ ಸ್ಥಲದವರ ಮುಂದೆ ಹೇಳಿದರೆ ಬೇವು ಬೆಲ್ಲದ ಹಾಂಗೆ ಸವತಿ ಮತ್ಸರದ ಹಾಂಗೆ ವೈರತ್ವವೇ ಉಂಟಾಗಿರ್ಪುದು. ಮಾಹೇಶ್ವರಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಮಾಹೇಶ್ವರಸ್ಥಲದವರ ಮುಂದೆ ಹೇಳೀದರೆ ಸಕ್ಕರಿಸಕ್ಕರಿ ಬೆರೆದ ಹಾಂಗೆ ಬೆಲ್ಲಬೆಲ್ಲ ಕೂಡಿದ ಹಾಂಗೆ ಹಿತವಾಗಿರ್ಪುದು. ಅದಲ್ಲದೆ ಮಾಹೇಶ್ವರ ಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಪ್ರಸಾದಿ ಸ್ಥಲದವರ ಮುಂದೆ ಹೇಳಿದರೆ ಬೇವು ಬೆಲ್ಲದ ಹಾಂಗೆ ಸವತಿ ಮತ್ಸರದ ಹಾಂಗೆ ವೈರತ್ವವೇ ಉಂಟಾಗಿರ್ಪುದು. ಪ್ರಸಾದಿಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಪ್ರಸಾದಿಸ್ಥಲದವರ ಮುಂದೆ ಹೇಳಿದರೆ ಸಕ್ಕರಿ ಸಕ್ಕರಿ ಕೂಡಿದ ಹಾಂಗೆ ಬೆಲ್ಲ ಬೆಲ್ಲ ಬೆರೆದಹಾಂಗೆ ಹಿತವಾಗಿರ್ಪುದು. ಅದಲ್ಲದೆ ಪ್ರಸಾದಿಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಪ್ರಾಣಲಿಂಗಿಸ್ಥಲದವರ ಮುಂದೆ ಹೇಳಿದರೆ ಬೇವು ಬೆಲ್ಲದ ಹಾಂಗೆ ಸವತಿ ಮತ್ಸರದ ಹಾಂಗೆ ವೈರತ್ವವೇ ಉಂಟಾಗಿರ್ಪುದು. ಪ್ರಾಣಲಿಂಗಿಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಪ್ರಾಣಲಿಂಗಿ ಸ್ಥಲದವರ ಮುಂದೆ ಹೇಳಿದರೆ ಸಕ್ಕರಿ ಸಕ್ಕರಿ ಕೂಡಿದ ಹಾಂಗೆ ಬೆಲ್ಲ ಬೆಲ್ಲ ಬೆರೆದಹಾಂಗೆ ಹಿತವಾಗಿರ್ಪುದು. ಅದಲ್ಲದೆ ಪ್ರಾಣಲಿಂಗಿಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಶರಣಸ್ಥಲದವರ ಮುಂದೆ ಹೇಳಿದರೆ ಬೇವು ಬೆಲ್ಲದ ಹಾಂಗೆ ಸವತಿ ಮತ್ಸರದ ಹಾಂಗೆ ವೈರತ್ವವೇ ಉಂಟಾಗಿರ್ಪುದು. ಶರಣಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಶರಣಸ್ಥಲದವರ ಮುಂದೆ ಹೇಳಿದರೆ ಸಕ್ಕರಿ ಸಕ್ಕರಿ ಕೂಡಿದ ಹಾಂಗೆ ಬೆಲ್ಲ ಬೆಲ್ಲ ಬೆರೆದ ಹಾಂಗೆ ಹಿತವಾಗಿರ್ಪುದು. ಅದಲ್ಲದೆ ಶರಣಸ್ಥಲದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಐಕ್ಯಸ್ಥಲದವರ ಮುಂದೆ ಹೇಳಿದರೆ ಬೇವು ಬೆಲ್ಲದ ಹಾಂಗೆ ಸವತಿ ಮತ್ಸರದ ಹಾಂಗೆ ವೈರತ್ವವೇ ಉಂಟಾಗಿರ್ಪುದು. ಐಕ್ಯಸ್ಥಲದವರಾದವರು ತಮ್ಮರಿವು ಆಚರಣೆ ಆಪತ್ತು ಸುಖದುಃಖಂಗಳನು ಐಕ್ಯಸ್ಥಲದವರ ಮುಂದೆ ಹೇಳಿದರೆ ಸಕ್ಕರಿ ಸಕ್ಕರಿ ಕೂಡಿದ ಹಾಂಗೆ ಬೆಲ್ಲ ಬೆಲ್ಲ ಬೆರೆದ ಹಾಂಗೆ ಹಿತವಾಗಿರ್ಪುದು. ಇನ್ನಾರಿಗೆ ಹೇಳುವೆ?–ಇನ್ನಾರ ಮುಂದೆ ಹೇಳಿಕೊಳಲಿ?

ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ಜಂಗಮವಾಗಿ–ಚರಲಿಂಗವಾಗಿ, ಬಂದು–ಭಿಕ್ಷಕ್ಕೆಂದು ಬಿಜಯಂಗೈದು ಬಂದು, ಎನ್ನ ಮನದ–ಎನ್ನ ಚಿತ್ತದ, ಸೂತಕವ–ಒಂದೊಂದು ಸ್ಥಲವೇ ಪರವಾಗಿ ಚರಿಸುವಂಥ ಸಂಕಲ್ಪ ವಿಕಲ್ಪವೆಂಬ ಭಿನ್ನಸೂತಕವನ್ನು, ಕಳೆಯಯ್ಯಾ–ನಷ್ಟವ ಮಾಡಯ್ಯಾ.

..........................

೧–೧ ರೋಗರುಜಿಗಳು (ಗ).

II - - - - - - - - - - - - - - - - - - - - - - - - - - - - - - - - - - - - - - - - - - - - -

ಹಿಂದಕ್ಕೆ ಕಾಣಬಂದರ್ಥ. ಸವತಿ ಸಕ್ಕರೆ ಬೇವು ಬೆಲ್ಲವುಂಟೆ? ಇನ್ನಾರಿಗೆ ಹೇಳುವೆ? ಕೂಡಲಸಂಗಮದೇವಾ, ಜಂಗಮವಾಗಿ ಬಂದು ಎನ್ನ ಮನದ ಸೂತಕವ ಕಳೆಯಯ್ಯಾ–ಸಮವೆಣ್ಣಿನ ಪ್ರೀತಿ, ಒಬ್ಬ ಗಂಡಗೆ ಇಬ್ಬರು ಹೆಂಡಿರಿದ್ದಲ್ಲಿ ನಾ ಗಂಡನೊಲಿಸಬೇಕು, ತಾ ಗಂಡನೊಲಿಸಬೇಕೆಂಬ ಸವತಿ ಮತ್ಸರವು ಹೇಂಗೆ ಹಾಂಗೆ, ಈ ಶರಣರು ನಾವು ಲಿಂಗವನೊಲಿಸಿಕೋಬೇಕು ತಾವು ಲಿಂಗವನೊಲಿಸಿಕೋಬೇಕೆಂಬರು. ಬಸವೇಶ್ವರನು ನಾವು ಲಿಂಗವನೊಲಿಸಿಕೋಬೇಕೆಂಬರು. ಮಂತ್ರಮಾರ್ಧುರ್ವವುಳ್ಳವರುಗಳಲ್ಲಿ ಕರಣ ಮಥನ ಕರ್ಕಶ ವೈರ ವರ್ಗವಿಲ್ಲ; ಕರಣ ಮಥನ ಕರ್ಕಶ ವೈರ ವರ್ಗವುಳ್ಳವರುಗಳಲ್ಲಿ ಮಂತ್ರಮಾಧುರ್ಯವಿಲ್ಲ. ಭಯಭಕ್ತಿ ಕರುಣಕಿಂಕುರ್ವಾಣವುಳ್ಳವರುಗಳಲ್ಲಿ ಕರಣಮಥಣ ಕರ್ಕಶವೈರವರ್ಗವಿಲ್ಲ; ಕರಣಮಥನ ಕರ್ಕಶವೈರವರ್ಗವುಳ್ಳವರುಗಳಲ್ಲಿ ಭಯಭಕ್ತಿ ಕರಣಕಿಂಕುರ್ವಾಣವಿಲ್ಲ. ಇನ್ನೇನು ಜೀವರುಗಳಿಗೆ ಹೇಳುವೆನೆ ಎಲೆ ಲಿಂಗವೆ, ನೀನು ಮಹಾಜ್ಞಾನಿ ಜಂಗಮವಾಗಿ ಬಂದು ಎನ್ನ ಮಾನಸದ ಹೊಲೆಯನು ಕಡೆಗೆ ಮಾಡಯ್ಯಾ.

---

## ೩೯೨

**ನಾನಾ ಸ್ಥಾನಂಗಳಲ್ಲಿ ಬಂದು ಕುಳ್ಳಿರ್ದುದು ತೆರಳುವುದೆ, ಅಯ್ಯಾ? [1]ಅದು[1] ಉಭಯ ಕುಳಕ್ಕಲ್ಲದೆ ತೆರಳದು. ಬೀದಿಯಲ್ಲಿ ಬಿದ್ದ ಶಿಶುವನು ಹೆತ್ತ ತಾಯಿ ಹತ್ತಿರೆ ಬಂದು ಎತ್ತುವಂತೆ ಎನ್ನ[2]ನಾಱು[2] ಜನ್ಮಕ್ಕೆ ತಂದು ಅಘೋರ ನರಕದಲ್ಲಿ[3]ಕ್ಕುವುದ[3] ನಾ ಬಲ್ಲೆನು. ಕೂಡಲಸಂಗಮದೇವಾ, ನಿಮ್ಮ ಹಂಗೇನು ? ಹಜೆಯೇನು ? ಆನು ಉಭಯ ಲಿಂಗಜಂಗಮದ ಮಱೆಹೊಕ್ಕು [4]ಎನ್ನ ಭವನಾಸ್ತಿಯಾಗಿ[4] ಬದುಕಿದೆನು.**

I - - - - - - - - - - - - - - - - - - - - - - - - - - - - - - - - - - - - - - - - - - - - -

ನಾನಾಸ್ಥಾನಂಗಳಲ್ಲಿ–ಸಪ್ತಜನ್ಮ ಮೊದಲಾದ ಅನೇಕ ಜನ್ಮಂಗಳಲ್ಲಿ, ಬಂದು–ಹುಟ್ಟಿಹುಟ್ಟಿ ಬಂದು, ಕುಳ್ಳಿರ್ದುದು–ಮಾಡಿಮಾಡಿ ಕೂಡಲಿಕ್ಕಿದಂಥ ದೋಷವು, ತೆರಳುವುದೆ?–ಬಿಡುಗಡೆಯಾಗಿ ಹೋಗುವುದೆ? ಅಯ್ಯಾ–ಎಲೆ ಲಿಂಗವೆ. ಅದು–ಮಾಡಿಮಾಡಿ ಕೂಡಲಿಕ್ಕಿದಂಥ ದೋಷವು, ಉಭಯಕುಳಕ್ಕಲ್ಲದೆ–ಎರಡಾದ ಲಿಂಗಪೂಜೆ ಜಂಗಮದಾಸೋಹಕ್ಕಲ್ಲದೆ, ತೆರಳದು–ಮಾಡಿಮಾಡಿ ಕೂಡಲಿಕ್ಕಿದಂಥ ದೋಷವು ಬಿಡುಗಡೆಯಾಗಿ ಹೋಗದು.

ಬೀದಿಯಲ್ಲಿ ಬಿದ್ದ ಶಿಶುವನು ಹೆತ್ತ ತಾಯಿ ಹತ್ತಿರ ಬಂದು ಎತ್ತುವಂತೆ ಎಂಬಲ್ಲಿ, ಒಬ್ಬಾನೊಬ್ಬ ಕೂಸಿನ ತಾಯಿಯಾದಂಥಾಕಿ ತನ್ನ ಶಿಶುವಿಂಗೆ ಬಾಲದೊಡಿಗೆಯನ್ನು ತೊಡಿಸಿ ಬೀದಿಬಾಜಾರದಲ್ಲಿ ಆಡೋದಕ್ಕೆ ಬಿಟ್ಟಿದ್ದಲ್ಲಿ ತಪ್ಪೆಜ್ಜಿಯನಿಕ್ಕಿ ಧುಪ್ಪೆಂದು ಬಿದ್ದಲ್ಲಿ ಅಯ್ಯ ! ನನ್ನ ಕಂದಾ, ಬಿದ್ದೆಯಾ? ಬಾಯೆಂದು ಎತ್ತಿಕೊಂಡು ಹೇಂಗೆ ಮುದ್ದಾಡುತ್ತಿಹಳೋ ಹಾಂಗೆ ಶಿವನು ತನ್ನಂಶವಾದಾತ್ಮನನ್ನು ಮರ್ತ್ಯಲೋಕದಲ್ಲಿ ದೇಹಸಂಬಂಧಿಯಾಗಿ ಹುಟ್ಟಿಸಿ ಸತ್ಯಸದಾಚಾರದಿಂದಾಚರಿಸಿ ಬನ್ನಿಯೆಂದು ಕಳಿಸಿಕೊಟ್ಟಿದ್ದಲ್ಲಿ ಆ ಆತ್ಮನು ಸಕಲಸಂಸಾರ ಪ್ರಪಂಚನೊಳಗಾಗಿ ದೇಹಭಾವದ ಮರವೆಯಿಂದ ತನ್ನ ನಿಜವನ್ನು ಮರೆದು ಅಜ್ಞಾನಿಯಾಗಿ ಭವದತ್ತ ಹೋದನಲಾಯೆಂದು ಅಂತರಂಗದಲ್ಲಿ ಜ್ಞಾನೋದಯವನಿತ್ತು ಬಹಿರಂಗದಲ್ಲಿ ಸಕಲ ಸಂಸಾರಪ್ರಪಂಚವ ನಷ್ಟವ ಮಾಡಿಬಿಟ್ಟು ತಾನೇ ಗುರುವಾಗಿ ಬಂದು ಲಿಂಗಾಂಗಸಂಬಂಧವನ್ನು ಕರುಣಿಸಿಕೊಟ್ಟು ತಮ್ಮ ಪಾದೋದಕಪ್ರಸಾದವನಿತ್ತು ರಕ್ಷಣ್ಯವ ಮಾಡುತ್ತಿರ್ದ ಕಾರಣ ಆ ಶಿಶುವಿನ ತಾಯಿ[ಗೆ] ತನ್ನ ಶಿಶುವಿನ ಮೇಲೆ ಎಷ್ಟೊಂದು ಮಮಕಾರವುಂಟಾಗಿಹುದೋ ಹಾಂಗೆ ಅಷ್ಟೊಂದು ಮರುಕತ್ವವು ಪರಶಿವಲಿಂಗವೆಂಬ ಜನನಿಯಲ್ಲಿ ಉಂಟಾಗಿರ್ಪುದು. ಎನ್ನನು–ಸಂಗನಬಸವೇಶ್ವರನನು, ಅಱುಜನ್ಮಕ್ಕೆ ತಂದು–ಷಡ್ವಿಧ ಜನ್ಮಂಗ¹ಳಿಗೆ¹ ಆಗುಮಾಡಿಕೊಂಡು ಬಂದು, ಅಘೋರ ನರಕದಲ್ಲಿಕ್ಕುವುದ–ಭಯಂಕರವಾದ ಸಕಲಪ್ರಪಂಚೆಂಬ ನಿರಯದಲ್ಲಿ ಮಡಗುವಂಥದನ್ನು, ನಾ ಬಲ್ಲೆನು–ನಾನು ತಿಳಿದಿಪ್ಪೆನು.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಹಂಗೇನು ಹಜೆಯೇನು–ನಿಮ್ಮ ಹಂಗೇ ಚತುರ್ವಿಧ ಫಲಪದಂಗಳು, ಆ ಚತುರ್ವಿಧ ಫಲಪದಂಗಲ ಪಡೆನುಭವಿಸಲೋಸ್ಕರವಾಗಿ ದೇಹವ ಧರಿಸಿಕೊಂಡು ಬಂದು ಇಹದಿಂದ ಪರಕ್ಕೆ ಪರದಿಂದ ಇಹಕ್ಕೆ ಎಡೆಯಾಡುವಂಥದನು ನಾ ತಿಳಿಯೆನು. ಉಭಯಲಿಂಗಜಂಗಮದ ಮಱೆಹೊಕ್ಕು–ಎರಡಾದ ಲಿಂಗಪೂಜೆ ಜಂಗಮದಾಸೋಹದ ಮಾಡಿ ಅವರ ಬೆನ್ನಬಿದ್ದು, ಎನ್ನ ಭವನಾಸ್ತಿಯಾಗಿ ಎನ್ನ–ಉತ್ಪತ್ಯವು ನಿಃಪತಿಯಾಗಿ, ಬದುಕಿದೆನು–ಕೃತಾರ್ಥನಾದೆನು.

..........................

೧–೧ ಳಲ್ಲಿ (ಗ).

II- - - - - - - - - - - - - - - - - - - - - - - - - - - - - - - - - - - - - - - - -

1–1 x (ಚ, ಜ). 2–2 ನರ (ಚ, ಜ). 3–3 ಕ್ಕಿದುದ (ಚ, ಜ). 4–4 x (ಚ, ಜ).

..........................

ನಾನಾಸ್ಥಾನಂಗಳಲ್ಲಿ ಬಂದು ಕುಳ್ಳಿದ್ದುದು ತೆರಳೂದೆ ಅಯ್ಯಾ? ಉಭಯ ಕುಳಕ್ಕಲ್ಲದೆ ತೆರಳದು– "ದೂರ್ವಾ ಪಿಪೀಲಿಕಾ ಪಕ್ಷಿ । ಜಲಸ್ಥಾ ಜಲ ಜಂತವಃ । ಚತುಷ್ಪಾತ್ ಮಾನವಾ ದೇವಾಃ । ಸಪ್ತಜನ್ಮ ಪ್ರಕೀರ್ತಿತಾಃ ।" ಎಂದುದಾಗಿ ಅನೇಕ ಜನ್ಮಸ್ಥಳಂಗಳಲ್ಲಿ ಹುಟ್ಟಿಹುಟ್ಟಿ ಬಂದು ಅಧಿಷ್ಠಿಸಿ ಕೊಂಡಿರ್ದುದು ತೊಲಗಿ ಹೋಗುವುದೆ? ಲಿಂಗಜಂಗಮವೆರಡರ ಭಕ್ತಿ ಕುಳಕ್ಕಲ್ಲದೆ ತೊಲಗಿಹೋಗದು.

ಬೀದಿಯಲ್ಲಿ ಬಿದ್ದ ಶಿಶುವನು ಹೆತ್ತ ತಾಯಿ ಹತ್ತಿರೆ ಬಂದು ಎತ್ತುವಂತೆ–ಲೌಕಿಕಾಚಾರ ಮಾರ್ಗದಲ್ಲಿ ಪತಿತವಾದ ಜ್ಞಾನಕಲಾತ್ಮನನು ಮಾತೃಸ್ಥಾನವಾದ ಚಿಚ್ಛಕ್ತಿಯು ಒತ್ತರಕ್ಕೆ ಬಂದು ತನ್ನಂಶದವನೆಂದು ನೆಗಹಿಕೊಂಡಳು. ಮತ್ತಂ, ವಂಚನೆ ಉದಾಸೀನ ಶಾಸ್ತ್ರಾಹಂಕಾರ ವೀಥಿಯಲ್ಲಿ ಪತಿತವಾದಾತ್ಮನನು ಮಾತೃಸ್ಥಾನವಾದಂಥ ಮಹಾನುಭಾವಗುರುಮೂರ್ತಿಯು ಒತ್ತರಕ್ಕೆ ಬಂದು ಊರ್ಜಿತವ ಮಾಡಿದನೆಂಬುದರ್ಥ. ಎನ್ನ ನರಜನ್ಮಕ್ಕೆ ತಂದು ಅಘೋರ ನರಕದಲ್ಲಿಕ್ಕಿದ್ದುದ ನಾನು ಬಲ್ಲೆ–ಆತ್ಮನ ಮಾನವಭವಕ್ಕೆ ತಂದು ಭಯಂಕರವಾದ ನಿರಯದಲ್ಲಿ ಹಾಕಿದುದ ನಾ ತಿಳಿದುಬಲ್ಲೆ.

ಕೂಡಲಸಂಗಮದೇವಾ, ನಿಮ್ಮ ಹಂಗೇನು? ಹಜೆಯೇನು? ಉಭಯಲಿಂಗಜಂಗಮದ ಮಱೆವೊಕ್ಕು ಬದುಕಿದೆನು–ಎಲೆ ಲಿಂಗವೆ ನಿಮ್ಮ ಫಲಪದಂಗಳ ವಾಂಛೆಯೇನು? ಇಹಪರಾದಿಗಳಿಗೆಡೆಯಾಡುವುದೇನು? ಎರಡನೆಯ ಶಿವಸ್ವರೂಪವಾದ ಲಿಂಗಜಂಗಮದ ಶರಣುಹೊಕ್ಕು ಕೃತಾರ್ಥನಾದೆನು.

III- - - - - - - - - - - - - - - - - - - - - - - - - - - - - - - - - - - - - - - - - - - - -

ಉಭಯ ಕುಳಕ್ಕಲ್ಲದೆ–ಲಿಂಗಪೂಜೆ ಜಂಗಮದಾಸೋಹಕ್ಕಲ್ಲದೆ.

IV- - - - - - - - - - - - - - - - - - - - - - - - - - - - - - - - - - - - - - - - - - - - -

1–1 x (ತ). 3–3 ಕ್ಕಿದುದ (ತ). 4–4 x (ತ).

.........................

ಹಲವು ಜನ್ಮಂಗಳಲ್ಲಿ ಮಾಡಿದ ಪುಣ್ಯಪಾಪಂಗಳು ಬಜೆದೆ ಅಳಿಯವು, ಸುಜ್ಞಾನ ಕ್ರಿಯೆಯಿಂದ ಅಳಿವುದು, ಜೀವಾತ್ಮರು ಮನುಷ್ಯಜನ್ಮ ಮೊದಲಾದ ಏಳು ಜನ್ಮಂಗಳಲ್ಲಿ ಪುಣ್ಯಪಾಪವನುಣುತ್ತಿಪ್ಪರು. ಶಿವಾಜ್ಞೆಯಿಂದಜೆದು ನಿವೃತ್ತಿಯ ಮಾಡಿದ ಶರಣನು, ಲಿಂಗದಿಂದಾದ ಹಂಗಿನ ಫಲಪದವ ಹಜೆದ, ಶರಣನು ಲಿಂಗಜಂಗಮವರೆಡರ ಮಱೆಯ ಹೊಕ್ಕು ಭವದ ಹಜೆದು ನಿತ್ಯನಾದನೆಂಬುದೀ ವಚನದ ಉಪ[೨][ಪದಂ][೨]ಗಳಿಗೇಕಾರ್ಥ ನಿರ್ವಚನ.

.........................

೨–೨ ದ್ರಂ (ತ).

V- - - - - - - - - - - - - - - - - - - - - - - - - - - - - - - - - - - - - - - - - - - - - -

ನಾನಾಸ್ಥಾನಂಗಳಲ್ಲಿ ಬಂದು–ಅನೇಕ ಜನ್ಮಂಗಳಲ್ಲಿ ಎಯ್ದಿ, ಕುಳ್ಳಿರ್ದುದು–ಸರ್ವಾಂಗದಲ್ಲಿ ಅಂಡಿಸಿಕೊಂಡಿರ್ದಂಥ ಕರ್ಮವು, ಉಭಯಕುಳಕ್ಕಲ್ಲದೆ–ಲಿಂಗಪೂಜೆ ಜಂಗಮದಾಸೋಹಕ್ಕಲ್ಲದೆ, ತೆರಳದು–ಹೋಗದು, ಬೀದಿಯಲ್ಲಿ–ಬಾಜಾರದಲ್ಲಿ. ಬಿದ್ದ–ಪತಿತವಾದ, ಶಿಶುವನು–ಮಗುವನು, ಹೆತ್ತತಾಯಿ–ಹಡೆದತಾಯಿ, ಹತ್ತಿರೆ ಬಂದು–ಸಮೀಪಕ್ಕೆ ಬಂದು, ಎತ್ತುವಂತೆ–ಅರೋಹಿಸಿಕೊಂಡು ಸಂರಕ್ಷಣೆಯ ಮಾಡುವ ಹಾಂಗೆ, ಜಡದೇಹೇಂದ್ರಿಯ ವಿಷಯಂಗಳಲ್ಲಿ ಪತಿತವಾದಾತ್ಮನ ಸದ್ಭಾವವೆಂಬ ಕರವ ಹಿಡಿದೆತ್ತಿ ಚಿನ್ಮಾತೆಯಾಗಿ ಬಂದು ಜನ್ಮಸಂಸಾರವ ನಷ್ಟವಮಾಡಿ ರಕ್ಷಿಸಯ್ಯಾ ಎಂಬುದರ್ಥ.

೩೯೩

**ಅಯ್ಯಾ, ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ; ಮೀನಜ ರೋಮಜ ಮಹಾಮುನಿಗಳ ಲಯವ ಮಾಡಿದುದ ನಾ ಬಲ್ಲೆನಾಗಿ, ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ; ನವಕೋಟಿ ಬ್ರಹ್ಮರಿಗೆ ಪ್ರಳಯವ ಮಾಡಿದುದ ನಾ ಬಲ್ಲೆನಾಗಿ. ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ; ದಶಕೋಟಿ ನಾರಾಯಣಗೆ ಮರಣವ ಮಾಡಿದುದ ನಾ ಬಲ್ಲೆನಾಗಿ. ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ; ಅನಂತಕೋಟಿ ರುದ್ರರಿಗೆ ಲಯವ ಮಾಡಿದುದ ನಾ ಬಲ್ಲೆನಾಗಿ. ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ; ಎನ್ನನೇಳೇಳು ಜನ್ಮಕ್ಕೆ ತಂದಲ್ಲಿ ಆನುಭಯ ಲಿಂಗಜಂಗಮದ ಮಱಿಹೊಕ್ಕು ಭವಂನಾಸ್ತಿಯಾಗಿ ಬದುಕಿದೆನಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ-ಲಿಂಗವನ್ನು ತನ್ನತ್ತಭಿಮುಖವ ಮಾಡಿಕೊಂಡು ಆ ಲಿಂಗದೊಡನೆ ಬಿನ್ನೈಸುವಂಥ ಬಿನ್ನಪವು, ಅಯ್ಯಾ-ಎಲೆ ಲಿಂಗವೆ, ನಿಮ್ಮ ದೇವರೆಂದು-ನಿಮ್ಮ ಪರಶಿವಲಿಂಗವೆಂದು, ನಂಬಿ-ವಿಶ್ವಾಸಿಸಿ, ಪೂಜಿಸಲಾಗದಯ್ಯಾ-ಭಿನ್ನವಿಟ್ಟುಕೊಂಡಾರಾಧಿಸಲಾಗದಯ್ಯಾ. ಮೀನಜ-ಮೀನಜನೆಂಬ ಮುನಿಗೆ ಮೈಯೆಲ್ಲ ಚಿಪ್ಪುಂಟು, ಅದರೊಳಗೊಂದು ಚಿಪ್ಪುದುರಿದರೆ ಬ್ರಹ್ಮವಿಷ್ಣ್ವಾದಿಗಳು ಸತ್ತು ಸತ್ತು ಹುಟ್ಟುತ್ತಿಹರು. ಅಂತಪ್ಪ ಮೀನಜಮುನಿಗೆ ಮೈಯೆಲ್ಲ ಚಿಪ್ಪುದುರಿದರೆ ಆ ಮೀನಜಮುನಿಗೊಂದು ಮರಣವೆನಿಸುವುದು. ರೋಮಜ-ರೋಮಜಮುನಿಗೆ ಮೈಯೆಲ್ಲ ರೋಮವುಂಟು. ಅದರೊಳಗೊಂದು ರೋಮ ಉದುರಿದಲ್ಲಿ ಬ್ರಹ್ಮ ವಿಷ್ಣು ಮೀನಜ ಮುನಿಗಳು ಸತ್ತು ಸತ್ತು ಹುಟ್ಟುತ್ತಿಹರು. ಅಂತಪ್ಪ ರೋಮಜ ಮುನಿಗೆ ಮೈಯೆಲ್ಲ ರೋಮ ಉದುರಿದರೆ ಆ ರೋಮಜಮುನಿಗೊಂದು ಮರಣವೆನಿಸುವುದು. ಆ ಮಹಾಮುನಿಗಳು ಏನೆಂದರಿಯರು. ಅಂತಪ್ಪ ಬ್ರಹ್ಮ ವಿಷ್ಣು ಮೀನಜ ರೋಮಜ ಮುನಿಗಳು ಸತ್ತು ಸತ್ತು ಹುಟ್ಟಿದರು; ಮಹಾಮುನಿಗಳು ಏನೆಂದು ಅರಿಯರು, ತಿಳಿಯರು. ಅಂತಪ್ಪ ಬ್ರಹ್ಮ ವಿಷ್ಣು ಮೀನಜ ರೋಮಜ ಮಹಾಮುನಿಗಳ, ಲಯವ ಮಾಡಿದುದ-ಮರಣಕ್ಕೊಳಗು ಮಾಡಿದಂಥದನು, ನಾನು ಬಲ್ಲೆನಾಗಿ-ನಾನು ಅರಿದು ಬಲ್ಲೆನಾಗಿ.

ಅಯ್ಯಾ-ಎಲೆ ಲಿಂಗವೆ, ನಿಮ್ಮ ದೇವರೆಂದು-ನಿಮ್ಮ ಪರಶಿವಲಿಂಗವೆಂದು, ನಂಬಿ-ವಿಶ್ವಾಸಿಸಿ, ಪೂಜಿಸಲಾಗದಯ್ಯಾ-ಭಿನ್ನವಿಟ್ಟುಕೊಂಡು ಆರಾಧಿಸಲಾಗದಯ್ಯಾ. ನವಕೋಟಿ ಬ್ರಹ್ಮರಿಗೆ-ಒಂಬತ್ತು ಕೋಟಿ ಅಜರುಗಳಿಗೆ, ಪ್ರಳಯವ ಮಾಡಿದುದು-ಮರಣಕ್ಕೊಳಗು ಮಾಡಿದಂಥದನು, ನಾ ಬಲ್ಲೆನಾಗಿ-ನಾನರಿದು ಬಲ್ಲೆನಾಗಿ. ಅಯ್ಯಾ-ಎಲೆ ಲಿಂಗವೆ, ನಿಮ್ಮ ದೇವರೆಂದು-ನಿಮ್ಮ ಪರಶಿವಲಿಂಗವೆಂದು, ನಂಬಿ-ವಿಶ್ವಾಸಿಸಿ, ಪೂಜಿಸಲಾಗದಂಯ್ಯಾ-ಭಿನ್ನವಿಟ್ಟು ಕೊಂಡಾರಾಧಿಸಲಾಗದಯ್ಯಾ, ದಶಕೋಟಿ ನಾರಾಯಣರಿಗೆ-ಹತ್ತುಕೋಟಿ ವಿಷ್ಣುಗಳಿಗೆ, ಮರಣವ ಮಾಡಿದುದ-ಮರಣಕ್ಕೊಳಗು ಮಾಡಿದಂಥದನ್ನು, ನಾ ಬಲ್ಲೆನಾಗಿ-ನಾನರಿದು ಬಲ್ಲೆನಾಗಿ. ಅಯ್ಯಾ-ಎಲೆ ಲಿಂಗವೆ, ನಿಮ್ಮ ದೇವರೆಂದು-ನಿಮ್ಮ ಪರಶಿವಲಿಂಗವೆನುತ್ತ, ನಂಬಿ-ವಿಶ್ವಾಸಿಸಿ, ಪೂಜಿಸಲಾಗದಯ್ಯಾ-ಭಿನ್ನವಿಟ್ಟುಕೊಂಡು ಆರಾಧಿಸಲಾಗದಯ್ಯಾ, ಅನಂತಕೋಟಿ ರುದ್ರರಿಗೆ-ಅನೇಕ ಕೋಟಿ ರುದ್ರರುಗಳಿಗೆ, ಲಯವ ಮಾಡಿದುದ-ಮರಣಕ್ಕೊಳಗುಮಾಡಿದಂಥದನು, ನಾ ಬಲ್ಲೆನಾಗಿ-ನಾನರಿದು ಬಲ್ಲೆನಾಗಿ.

ಅಯ್ಯಾ–ಎಲೆ ಲಿಂಗವೆ, ನಿಮ್ಮ ದೇವರೆಂದು–ನಿಮ್ಮ ಪರಶಿವಲಿಂಗವೆಂದು, ನಂಬಿ–ವಿಶ್ವಾಸಿಸಿ, ಪೂಜಿಸಲಾಗದಯ್ಯಾ–ಭಿನ್ನವಿಟ್ಟುಕೊಂಡು ಆರಾಧಿಸಲಾಗದಯ್ಯಾ, ಎನ್ನನು–ಸಂಗನ ಬಸವೇಶ್ವರನನ್ನು, ಏಳೇಳು ಜನ್ಮಕ್ಕೆ ತಂದಲ್ಲಿ–ಸಪ್ತವಿಧ ಜನ್ಮಂಗಳಲ್ಲಿ ಆಗುಮಾಡಿಕೊಂಡು ಬಂದಲ್ಲಿ, ಉಭಯ–ಎರಡಾದ, ಲಿಂಗಜಂಗಮದ ಮಱೆಹೊಕ್ಕು–ಲಿಂಗಪೂಜೆ ಜಂಗಮದಾಸೋಹವ ಮಾಡಿ ಮೊರಬಿದ್ದು, ಎನ್ನ ಭವಂ ನಾಸ್ತಿಯಾಗಿ–ಎನ್ನ ಉತ್ಪತ್ಯ ನಿಃಪತಿಯಾಗಿ, ಬದುಕಿದೆನಯ್ಯಾ–ಕೃತಾರ್ಥನಾದೆನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ. ಮೀನಜ ರೋಮಜ ಮುಹಾಮುನಿಗಳ ಲಯುವ ಮಾಡೂದ ನಾ ಬಲ್ಲೆನಾಗಿ–ಎಲೆ ಲಿಂಗವೆ, ನಿಮ್ಮ ದಿವ್ಯಕಾಂತಿಮೂರ್ತಿಸ್ವರೂಪವಾದ ವಸ್ತುವೆಂದು ವಿಶ್ವಾಸಿಸಿ ಅರ್ಚಿಸಲಾಗದಯ್ಯಾ. ಮೀನಜ ರೋಮಜ ಚಿಪ್ಪಜ ಅಷ್ಟಕುಂಟ ಮಹಾಮುನಿಗಳು ೩೩ಕೋಟಿ ದೇವತೆಗಳು ಲಯವಾಗಿ ಹೋಗುವಲ್ಲಿ ಅವನದೊಂದು ಹೊರೆ ಉಚ್ಚುವುದು. ಅವನದೊಂದು ಹೊರೆ ಉಚ್ಚಿಹೋದಲ್ಲಿ ಅವನಿಗೊಂದು ಮರಣವಾಗೂದು. ಮೀನಜನಿಗೆ ಮರಣವಾದಲ್ಲಿ ರೋಮಜನಿಗೊಂದು ಕೂದಲ ಕಳಚುವದು. ರೋಮಜನಿಗೊಂದು ಮರಣವಾದಲ್ಲಿ ಚಿಪ್ಪಜನದೊಂದು ಸೂಕ್ತಿ ಕಳಚಿ ಬೀಳುವದು. ಚಿಪ್ಪಜನಿಗೊಂದು ಮರಣವಾದಲ್ಲಿ ಅಷ್ಟಕುಂಟನದೊಂದು ಕುಂಟು ನೆಟ್ಟಗಾಗುವುದು. ಆ ಅಷ್ಟಕುಂಟನಿಗೊಂದು ಮರಣವಾದಲ್ಲಿ ಮಹಾಮುನಿಗೊಂದು ದಿನ. ಅಂತಾ ದಿನ ಮುನ್ನೂರರುವತ್ತು ಕೂಡಿದುದೆ ಒಂದು ವರುಷ. ಅಂತಾ ವರುಷ ನೂರುಕೂಡಲು ಮಹಾಮುನಿಗೆ ಮರಣ. ಇಂತಿವರುಗಳಿಗೆ ದೀರ್ಘಾಯುಷ್ಯವನು ಕೊಟ್ಟು ಹಿರಿದಾದ ಲಯವ ಮಾಡುವುದನು ನಾ ತಿಳಿದು ಬಲ್ಲೆನಾಗಿ ಮುಂದಕ್ಕೆ ಕಾಣಬಂದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ಮೀನಜ ರೋಮಜ ಮೊದಲಾದ ಋಷಿಯರುಗಳು ಬ್ರಹ್ಮ ವಿಷ್ಣು ರುದ್ರ ಮೊದಲಾದ ದೇವತೆಗಳು ಸತ್ತಾದ ಲಿಂಗವನೆ ಪೂಜಿಸಿ ಜನನಮರಣಕ್ಕೆ ಒಳಗಾದರು. ಸತ್ತುಚಿತ್ತಾದ ಲಿಂಗಜಂಗಮವ ಪೂಜಿಸಿ ನಿತ್ಯನಾದೆನೆಂಬುದೀ ವಚನದರ್ಥ.

---

೩೯೪

**ಲಿಂಗದರುಶನ ಕರಮುಟ್ಟಿ ಜಂಗಮದರುಶನ ಶಿರಮುಟ್ಟಿ. ಆವುದು ಘನವೆಂಬೆ? ಆವುದು ಕಿಱಿದೆಂಬೆ? ತಾಳಸಂಪುಟಕ್ಕೆ ಬಾರದ ಘನವ ಅರ್ಪಿಸಹೋದಡೆ, ಅರ್ಪಣ ಮುನ್ನವೆ ಇಲ್ಲ. ಗಮನ ನಿರ್ಗಮನವಾಯಿತ್ತು! ಈ ಉಭಯ ಭೇದವನಱಿಯರಾಗಿ, ಜಂಗಮವೇ ಲಿಂಗ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗದರುಶನ ಕರಮುಟ್ಟಿ–ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸಬೇಕಾದರೆ ವಾಮಹಸ್ತದ ಬುಡಕ್ಕೆ ದಕ್ಷಿಣ ಹಸ್ತವನ್ನು ಮಡಗಿ ನಮಸ್ಕರಿಸಬೇಕು. ಜಂಗಮದರುಶನ ಶಿರಮುಟ್ಟಿ–

ಜಂಗಮಭಕ್ತಿಯ ಮಾಡಿ ಜಂಗಮಕ್ಕೆ ನಮಸ್ಕರಿಸಬೇಕಾದರೆ ಹಣೆಮುಟ್ಟಿ ನಮಸ್ಕರಿಸಬೇಕು. ಆವುದು ಘನವೆಂಬೆ?–ಲಿಂಗವೇ ಶ್ರೇಷ್ಠ ಜಂಗಮವೇ ಸಾಮಾನ್ಯವೆಂದು ಹೇಳುವೆನೆ? ಹೇಳೆನು. ಆವುದು ಕಿಱಿದೆಂಬೆ?–ಜಂಗಮವೇ ಶ್ರೇಷ್ಠ ಲಿಂಗವೇ ಸಾಮಾನ್ಯವೆಂದು ಹೇಳುವೆನೆ? ಹೇಳೆನು. ತಾಳಸಂಪುಟಕ್ಕೆ ಬಾರದ–ತಾಲವ್ಯ ಮೂಲವ್ಯ ದಂತವ್ಯ ತುಟಿ ಕಟವಾಯಿ ರಸನೆಗಳಿಂದ ಸ್ತೋತ್ರವ ಮಾಡುವುದಕ್ಕೆ ಎಟಿಕ್ಕಬಾರದ, ಘನವ–ಅಧಿಕವಾದ ಲಿಂಗಜಂಗಮಕ್ಕೆ, ಅರ್ಪಿಸಹೋದಡೆ–ಭಿನ್ನವಿಟ್ಟುಕೊಂಡು ಸಕಲಪದಾರ್ಥವನ್ನು ಸಮರ್ಪಣೆಯ ಮಾಡುತ್ತ ಎಯ್ದಿದರೆ, ಅರ್ಪಣ ಮುನ್ನವೆ ಇಲ್ಲ: ಅರ್ಪಣ–ಭಿನ್ನವಿಟ್ಟುಕೊಂಡು ಸಮರ್ಪಣೆಯ ಮಾಡಿದಂಥ ಪದಾರ್ಥವು, ಮುನ್ನವೆ ಇಲ್ಲ–ಮೊದಲೇ ಉಂಟಾಗಿಲ್ಲವು.

ಗಮನ ನಿರ್ಗಮನವಾಯಿತ್ತು–ಜ್ಞಾನಕ್ರಿಯಾವಿಡಿದಾಚರಿಸುವಂಥ ಶರಣನು ಜ್ಞಾನಕ್ರಿಯೆಗಳಿಗತೀತವಾದ ಲಿಂಗದಲ್ಲಿ ಕೂಡಿ ಲಿಂಗವೇ ತಾನಾಗಿಪ್ಪನು. ಈ ಉಭಯಭೇದವನು–ಭಿನ್ನವಿಟ್ಟುಕೊಂಡು ಲಿಂಗಪೂಜೆ ಜಂಗಮದಾಸೋಹವನ್ನು ಮಾಡುವಂಥದನ್ನು, ಅಱಿಯರಾಗಿ–ತಿಳಿಯರಾಗಿ, ಜಂಗಮವೇ ಲಿಂಗ–ಜಂಗಮವೇ ಸಾಕ್ಷಾತ್ಶಿವಸ್ವರೂಪ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗದರುಶನ ಕರಮುಟ್ಟಿ–ಇಷ್ಟಲಿಂಗಕ್ಕೆ ದಕ್ಷಿಣಹಸ್ತ ಮುಟ್ಟಿ, ಅಷ್ಟವಿಧಾರ್ಚನೆ ಷೋಡಶೋಪಚಾರ ಪೂಜಾಕ್ರೀಗಳನು ಮಾಡಿ ವ್ಯಾಪ್ರದೃಷ್ಟಿ ಕುರಂಗದೃಷ್ಟಿ ಸಂಚಾರದೃಷ್ಟಿ ಭಯಂಕರದೃಷ್ಟಿ ಮೊದಲಾದ ಛತ್ತೀಸದೃಷ್ಟಿಗಳಿಲ್ಲದೆ ಅರೆವಿರಿದ ತಾವರೆಯೋಪಾದಿಯಲ್ಲಿ ಶ್ರೇ೧ಷ್ಠಾ೧ನಿಮಿಷ ದೃಷ್ಟಿಯಿಂದ ನಿರೀಕ್ಷಣೆಯ ಮಾಡೂದು. ಜಂಗಮ ದರುಶನ ಶಿರಮುಟ್ಟಿ–ಆ ಲಿಂಗದ ಪ್ರಾಣಕಳಾಚೈತನ್ಯ ಸ್ವರೂಪವಾದ ಜ್ಞಾನಿಜಂಗಮಕ್ಕೆ ಮಸ್ತಕ ಮುಟ್ಟಿ ನಮಸ್ಕರಿಸೂದು. ಮುಂದಕ್ಕೆ ಕಾಣಬಂದರ್ಥ.

.........................

೧–೧ + ನ (ಜ, ಜ).

III- - - - - - - - - - - - - - - - - - - - - - - - - - - - - - - - - - - - - - - - - - - - - -

ಕರಮುಟ್ಟಿ–ಕ್ರೀಯವು ಸೋಂಕಿ, ಲಿಂಗದರ್ಶನ–ಇಷ್ಟಲಿಂಗದ ಪೂಜೆಯು, ಶಿರಮುಟ್ಟಿ–ಜ್ಞಾನವು ಸೋಂಕಿ, ಜಂಗಮದರ್ಶನ–ಚರಲಿಂಗಮೂರ್ತಿಗಳ ಭಕ್ತಿದಾಸೋಹವು, ತಾಳಸಂಪುಟಕ್ಕೆ [ಬಾರದ]–ಕಾಗದ ಲೆಕ್ಕಣಿಕೆಗಳ ಬರಹಕ್ಕೆ ಬಾರದೆಯಿರ್ದಂಥ, ಘನ೨ವ–ಮಹಾ೨ಲಿಂಗಕ್ಕೆ, ಅರ್ಪಿಸಹೋದಡೆ–ಕ್ರಿಯಾರ್ಪಣವನು ಸಮರ್ಪಿಸಲಿಚ್ಛೈಸಿದರೆ, ಅರ್ಪಣವು ಮುನ್ನಿಲ್ಲ–ಸಮರ್ಪಣೆಯು ಮುನ್ನವೆ ಇಲ್ಲ. ಗಮನ–ಇಷ್ಟಲಿಂಗವು, ನಿರ್ಗಮನವಾಯಿತ್ತು–ಪ್ರಾಣಲಿಂಗವಾಯಿತ್ತು. ಮತ್ತಂ, ಗಮನ–ಜಂಗಮವು, ನಿರ್ಗಮನವಾಯಿತ್ತು–ಇಷ್ಟಲಿಂಗವಾಯಿತ್ತು.

.........................

೨–೨ x (ಟ).

IV- - - - - - - - - - - - - - - - - - - - - - - - - - - - - - - - - - - - - - - -

ವಾಙ್ಮನಕ್ಕೆ ಬಾರದ ಬ್ರಹ್ಮವೇ ಜಂಗಮವಾದ ಕಾರಣ [೩][ಶಿರಮುಟ್ಟಿ ನಮಸ್ಕಾರ].[೩] ವಾಕು ಮನಕ್ಕೆ ಬಂದ ಪರಂಜ್ಯೋತಿ ಲಿಂಗವು ಆ ಪರಮ ಲಿಂಗವಾದ ಕಾರಣ ಕರಮುಟ್ಟಿ ನಮಸ್ಕಾರ.[೪] ಅದು ಕಾರಣ ಜಂಗಮವೆ ಘನವೆಂಬುದೀ ವಚನದರ್ಥ.

.........................

೩–೩ x (ತ). ೪ + ಪರಕ್ಕೆ ಪರವು ಜಂಗಮವಾದ ಕಾರಣ ಶಿರಮುಟ್ಟಿ ನಮಸ್ಕಾರ (ತ).

---

೩೯೫

**[1]ಎಲ್ಲರಿಗಿಂದಲೂ[1] ಶಿವಭಕ್ತರೇ ಅಧಿಕ[2]ರು[2] ನೋಡಯ್ಯಾ; [3]ಇದಕ್ಕಧಿಕವಾಗಿ ಜಂಗಮವ ಕಂಡೆ. ಈ ದ್ವಿವಿಧವನೊಂದೇ ಎಂದು ನಂಬಿದೆ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಎಲ್ಲರಿಗಿಂದಲೂ ಶಿವಭಕ್ತರೇ ಅಧಿಕರು ನೋಡಯ್ಯಾ : ಎಲ್ಲರಿಗಿಂದಲೂ–ಬ್ರಹ್ಮ ವಿಷ್ಣ್ವಾದಿಗಳಿಗಿಂದಲೂ, ಶಿವಭಕ್ತರೇ–ಗುರುಕಾರುಣ್ಯವ ಹಡೆದು ಲಿಂಗಾಂಗ ಸಂಬಂಧಿಗಳಾಗಿ ಆಚರಿಸುವಂಥ ಹರಭಕ್ತರೆ, ಅಧಿಕರು ನೋಡಯ್ಯಾ–ಶ್ರೇಷ್ಠರು ಕಂಡಯ್ಯಾ. ಇದಕ್ಕಧಿಕವಾಗಿ–ಇದಕ್ಕೆ ಮಿಗಿಲಾಗಿ, ಜಂಗಮವ ಕಂಡೆ–ಜಂಗಮಮೂರ್ತಿಗಳನು ಅರಿದೆನು. ಈ ದ್ವಿವಿಧವನು–ಈ ಲಿಂಗಜಂಗಮವೆಂಬ ಉಭಯವನು. ಒಂದೇಯೆಂದು–ಏಕ ವಸ್ತುವೆನುತ್ತ, ನಂಬಿದೆ–ಇವರೇ ಸಾಕ್ಷಾತ್ಶಿವಸ್ವರೂಪರೆಂದು ವಿಶ್ವಾಸಿಸಿದೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - -

1–1 x (ತ). 2–2 + ರು (ತ). 3 + ಎಲ್ಲರಿಂದಲೂ (ತ).

.........................

ಸತ್ತು ಚಿತ್ತಾದ ಗುರುಲಿಂಗಕ್ಕೆ ಆನಂದವಾದ ಜಂಗಮವೇ ಒಡೆಯನು. ಇಂತಪ್ಪ ಲಿಂಗಜಂಗಮವ ನಂಬಿದ ಭಕ್ತನೇಕೋ ಅಧಿಕನೆಂಬುದೀ ವಚನದರ್ಥ.

---

೩೯೬

**ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ; ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ; ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ; ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ; ಈ ನಾಲ್ಕು ಮೂಲಸ್ಥಾನ. ನಾನಾಸ್ಥಾನಂಗಳ ಮುಟ್ಟದೆ ಜಂಗಮವೇ ಲಿಂಗವೆಂದು ನಂಬಿದೆ, ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - -

ಕೃತಯುಗದಲ್ಲಿ–ಒಂದನೆಯ ಯುಗದಲ್ಲಿ, ಕೇತಾರವೆಂಬ–ಹಿಮವತ್ಕೇತಾರೇಶ್ವರನೆಂಬ, ಮೂಲಸ್ಥಾನ–ಎಲ್ಲಾ ಲಿಂಗಗಳಿಗೆ ಮುಖ್ಯವಾದ ಘಟಿಕಾಸ್ಥಾನದ ಲಿಂಗವಾಗಿ ಸಾರಣೆಕಾರಣೆಗಳಿಂದ ಪೂಜಾಪುರಸ್ಕಾರಂಗಳಿಂದ ತೇರು ತಿರುನಾಳಂಗಳಿಂದ ಪಾತ್ರಪವಾಡಂಗಳಿಂದ ಅಂಗರಂಗವೈಭವ ಮೊದಲಾದವನ್ನು ಬರಮಾಡಿಸಿಕೊಂಡು ಧುಪದೀಪಾರತಿಗಳಿಂದ ಕಾಣಿಕೆಕಪ್ಪಗಳನು ತರಿಸಿಕೊಂಬುತ್ತ ಐವತ್ತಾರು ದೇಶದಿಂದ ಆವಾವ ಹೆಸರು ದೆಸೆ ಹಿಡಿದು ಕರೆಸಿಕೊಂಬುತ್ತ ಘಟಿಕಾಸ್ಥಾನದ ಲಿಂಗವಾಗಿ ಪೂಜಾಪುರಸ್ಕಾರವನ್ನು ಕೈಕೊಂಡೊಪ್ಪುತ್ತಿಹುದು. ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ; ತ್ರೇತಾಯುಗದಲ್ಲಿ–ಎರಡನೆಯ ಯುಗದಲ್ಲಿ, ವಾರಣಾಸಿಯೆಂಬ–ಕಾಶೀವಿಶ್ವನಾಥನೆಂಬ, ಮೂಲಸ್ಥಾನ–ಎಲ್ಲಾ ಲಿಂಗಂಗಳಿಗೆ ಮುಖ್ಯವಾದ ಘಟಿಕಾಸ್ಥಾನದ ಲಿಂಗವಾಗಿ ಸಾರಣೆಕಾರಣೆಗಳಿಂದ ಪೂಜಾಪುರಸ್ಕಾರಗಳಿಂದ ತೇರು ತಿರುನಾಳ ಪಾತ್ರಪವಾಡಂಗಳಿಂದ ಅಂಗರಂಗವೈಭವ ಮೊದಲಾದವನ್ನು ಕೈಕೊಂಡು ಒಪ್ಪುತ್ತ ಕಂಬಿಕಾವಡಿ ಕಾಯಿಕೋಲು ನಂದಿಕೋಲು ಮೊದಲಾದವನ್ನು ಬರಮಾಡಿಸಿಕೊಂಡು ಧೂಪದೀಪಾರತಿಗಳಿಂದ ಕಾಣಿಕೆಕಪ್ಪವನ್ನು ತರಿಸಿಕೊಂಬುತ್ತ ಐವತ್ತಾರು ದೇಶದಿಂದ ಆವಾವ ಹೆಸರು ದೆಸೆ ಹಿಡಿದು ಕರೆಸಿಕೊಂಬುತ್ತ ಘಟಿಕಾಸ್ಥಾನದ ಲಿಂಗವಾಗಿ ಪೂಜಾಪುರಸ್ಕಾರವನ್ನು ಕೈಕೊಂಡೊಪ್ಪುತ್ತಿಹುದು. ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ: ದ್ವಾಪರದಲ್ಲಿ–ಮೂರನೆಯ ಯುಗದಲ್ಲಿ, ವಿರೂಪಾಕ್ಷನೆಂಬ–ಹಂಪೆವಿರೂಪಾಕ್ಷೇಶ್ವರನೆಂಬ, ಮೂಲಸ್ಥಾನ–ಎಲ್ಲಾ ಲಿಂಗಂಗಳಿಗೆ ಮುಖ್ಯವಾದ ಘಟಿಕಾಸ್ಥಾನದ ಲಿಂಗವಾಗಿ ಸಾರಣೆಕಾರಣೆಗಳಿಂದ ಪೂಜಾಪುರಸ್ಕಾರಂಗಳಿಂದ ತೇರು ತಿರುನಾಳ ಪಾತ್ರವಪಾಡಂಗಳಿಂದ ಅಂಗರಂಗವೈಭವ ಮೊದಲಾದವನು ಕೈಕೊಂಡೊಪ್ಪುತ್ತ ಕಂಬಿಕಾವಡಿ ಕಾಯಿ ಕೋಲು ನಂದಿಕೋಲು ಮೊದಲಾದವನ್ನು ಬರಮಾಡಿಸಿಕೊಂಬುತ್ತ ಧೂಪದೀಪಾರತಿಗಳಿಂದ ಕಾಣಿಕೆಕಪ್ಪವನ್ನು ತರಿಸಿಕೊಂಬುತ್ತ ಐವತ್ತಾರು ದೇಶದಿಂದ ಆವಾವ ಹೆಸರು ದೆಸೆ ಹಿಡಿದು ಕರೆಸಿಕೊಂಬುತ್ತ ಘಟಿಕಾಸ್ಥಾನದ ಲಿಂಗವಾಗಿ ಪೂಜಾಪುರಸ್ಕಾರವನ್ನು ಕೈಕೊಂಡೊಪ್ಪುತ್ತಿಹುದು. ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ: ಕಲಿಯುಗದಲ್ಲಿ–ನಾಲ್ಕನೆಯ ಯುಗದಲ್ಲಿ, ಪರ್ವತವೆಂಬ–ಶ್ರೀಶೈಲಮಲ್ಲಿಕಾರ್ಜುನನೆಂಬ, ಮೂಲಸ್ಥಾನ–ಎಲ್ಲಾ ಲಿಂಗಂಗಳಿಗೆ ಮುಖ್ಯವಾದ ಘಟಿಕಾಸ್ಥಾನದ ಲಿಂಗವಾಗಿ ಸಾರಣೆಕಾರಣೆಗಳಿಂದ ಪೂಜಾಪುರಸ್ಕಾರಂಗಳಿಂದ ತೇರು ತಿರುನಾಳ ಪಾತ್ರಪವಾಡಂಗಳಿಂದ ಅಂಗರಂಗ ವೈಭವ ಮೊದಲಾದವನ್ನು ಕೈಕೊಂಡೊಪ್ಪುತ್ತ ಕಂಬಿಕಾವಡಿ ಕಾಯಿಕೋಲು ನಂದಿಕೋಲು ಮೊದಲಾದವನು ಬರಮಾಡಿಸಿಕೊಂಬುತ್ತ ಧೂಪದೀಪಾರತಿಗಳಿಂದ ಕಾಣಿಕೆಕಪ್ಪವನ್ನು ತರಿಸಿಕೊಂಬುತ್ತ ಐವತ್ತಾರು ದೇಶದಿಂದ ಆವಾವ ಹೆಸರು ದೆಸೆ ಹಿಡಿದು ಕರೆಸಿಕೊಂಬುತ್ತ ಎಲ್ಲಾ ಲಿಂಗಂಗಳಿಗೆ ಮುಖ್ಯವಾದ ಘಟಿಕಾಸ್ಥಾನದ ಲಿಂಗವಾಗಿ ಪೂಜಾಪುರಸ್ಕಾರವನ್ನು ಕೈಕೊಂಡೊಪ್ಪುತ್ತಿಹುದು.

ಈ ನಾಲ್ಕು–ಈ ಚತುರ್ವಿಧವು, ಮೂಲಸ್ಥಾನ–ಮುಖ್ಯವಾದ ಘಟಿಕಾಸ್ಥಾನಂಗಳಾಗಿ ಪೂಜೆಯ ಕೈಕೊಂಡೊಪ್ಪುತ್ತಿಹವು. ನಾನು–ಸಂಗನಬಸವೇಶ್ವರನು. ಆ ಸ್ಥಾನಂಗಳ ಮುಟ್ಟದೆ–ಇವು ಮೊದಲಾದ ಎಂಬತ್ತೆಂಟುಕೋಟಿ ಪುಣ್ಯತೀರ್ಥ ಪುಣ್ಯಕ್ಷೇತ್ರಂಗಳಿಗೆ ಹೋಗಿ ಎಣ್ಣೆಮಜ್ಜನವ ನೀಡಿಸಿ ಎಲೆಪೂಜೆಯನ್ನು ಕಟ್ಟಿಸಿ ಪರ್ವಪಾಡ್ಯಂಗಳನ್ನು ಮಾಡಿಸಿ ದಾನದಕ್ಷಿಣವನ್ನು ಕೊಟ್ಟು ಅಡ್ಡಡ್ಡ ಬಿದ್ದು ಆರಾಧಿಸದೆ, ಜಂಗಮವೆ ಲಿಂಗವೆಂದು–ಜಂಗಮಮೂರ್ತಿಗಳೇ ಸಾಕ್ಷಾತ್ಶಿವಸ್ವರೂಪರೆಂದು, ನಂಬಿದೆ–

ವಿಶ್ವಾಸಿಸಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿದೆನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ನಮ (ಕ).ಮನ (ಗ). ೨–೨ ನದ ಲಿಂಗವಾಗಿ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - - -

ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ–ಕೃತಯುಗವೆಂಬ ವರ್ತನಾಧರ್ಮದಲ್ಲಿ ಹಿಮವತ್ಕೇತಾರವೆಂಬ ಮೊದಲ ದೇವತಾ ತಾಣವಾಗಿ ಭೂಜನಾತ್ಮರುಗಳಿಂದೆ ವಂದನೆಯನ್ನು ಕೈಕೊಂಬುದಕ್ಕೆ ರಾಜನಾಗೊಪ್ಪುತ್ತಿಹುದು. ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ–ತ್ರೇತಾಯುಗವೆಂಬ ವರ್ತನಾಧರ್ಮದಲ್ಲಿ ಕಾಶೀಕ್ಷೇತ್ರವೆಂಬ ಮೊದಲ ದೇವತಾ ತಾಣವಾಗಿ ಸಮಸ್ತಾತ್ಮರುಗಳಿಂದೆ ನಮಸ್ಕಾರವನು ಕೈಕೊಂಬುದಕ್ಕೆ ಅರಸಾಗೊಪ್ಪುತ್ತಿಹುದು. ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ–ದ್ವಾಪರಯುಗವೆಂಬ ವರ್ತನಾಧರ್ಮದಲ್ಲಿ ಮೊದಲ ದೇವತಾ ತಾಣವಾಗಿ ಲೌಕಿಕಾತ್ಮರುಗಳಿಂದ ವಂದನೆಯನು ಕೈಕೊಂಬುದಕ್ಕೆ ಸಾರ್ವಭೌಮನಾಗೊಪ್ಪುತ್ತಿಹುದು. ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ–ಕಲಿಯುಗವೆಂಬ ವರ್ತನಾಧರ್ಮದಲ್ಲಿ ಶ್ರೀಶೈಲವೆಂಬ ಮೊದಲ ದೇವತಾ ತಾಣವಾಗಿ ಜಗಜೀವರುಗಳಿಂದೆ ನಮಸ್ಕಾರವನು ಕೈಕೊಂಬುದಕ್ಕೆ ಷಟ್ಚಕ್ರವರ್ತಿಯಾಗೊಪ್ಪುತ್ತಿಹುದು. ಈ ನಾಲ್ಕು ಮೂಲಸ್ಥಾನ ನಾನಾಸ್ಥಾನಂಗಳ ಮುಟ್ಟದೆ ಜಂಗಮವೆ ಲಿಂಗವೆಂದು ನಂಬಿದೆ ಕೂಡಲಸಂಗಮದೇವಾ–ಈ ಚತುರ್ವಿಧ ಸ್ಥಳ ಮುಖ್ಯವಾದ ಆಯಾಸ್ಥಳಕ್ಕೆ ಹರಿದುಹೋಗಿ ಆಯಾ ಲಿಂಗವನು ಮುಟ್ಟಿ ಮುಟ್ಟಿ ಪೂಜಾಕ್ರೀಗಳ ಮಾಡದೆ, ಮಹಾಜ್ಞಾನಿ ಜಂಗಮವೆ ಇಷ್ಟಮಹಾಲಿಂಗವೆಂದು ವಿಶ್ವಾಸಿಸಿದೆನೆಂಬುದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ನಾಲ್ಕು ಯುಗದಲ್ಲಿ ನಾಲ್ಕು ಲಿಂಗ ಮೊದಲಾದ ಲಿಂಗಗಳು ನಿಃಕಳೆಯಾದ ಕಾರಣ, ನಿಃಕಳೆಗೆ, ಪ್ರಾಣಕಳೆಯಾದ ಜಂಗಮವೇ ಅಧಿಕವೆಂಬುದೀ ವಚನದರ್ಥ.

---

೩೯೭

**ಭಕ್ತದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬರುತಿಪ್ಪನಾಗಿ, ಆಳ್ದನು ಬರಲು ಆಳು ಮಂಚದ ಮೇಲಿಪ್ಪುದು ಅದೇನು ಗುಣವೆ? ಹೇಳಾ. ಕೂಡಲಸಂಗಮದೇವಾ ಜಂಗಮರೂಪಾಗಿ ಸಂಗಯ್ಯ ಬಂದಾನೆಂದು ಎಂದೆಂದೂ ನಾನು ಮಂಚವನೇಱದ ಭಾಷೆ !**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತದೇಹಿಕ ದೇವನಪ್ಪ ದೇವನು : [ಭಕ್ತ–]ಭಕ್ತನಂಗವನ್ನೇ ತನ್ನ ದೇಹವ ಮಾಡಿಕೊಂಡು, ದೇಹಿಕ–ತಾನೆ ಚೈತನ್ಯಸ್ವರೂಪನಾದ, ದೇವನಪ್ಪ ದೇವನು–ಪರಮೇಶ್ವರನಪ್ಪ ಪರಮೇಶ್ವರನು, ಸದ್ಭಕ್ತರ–"ಲಿಂಗಭಕ್ತಾಶ್ಚ ಜಂಗಮಾಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳ, ಬಳಿಯಲ್ಲಿ–

ಅವರ ಬೆನ್ನಬಳಿವಿಡಿದು, ಬರುತಿಪ್ಪನಾಗಿ-ಎಯ್ದು ಬರುತ್ತಿಹನಾಗಿ, ಆಳ್ದನು-ಕರ್ತನಾದ ಜಂಗಮಮೂರ್ತಿಯು, ಬರಲು-ಭಿಕ್ಷಕ್ಕೆಂದು ಬಿಜಯಂಗೈದು ಬರಲು, ಆಳು-ಭೃತ್ಯನಾದ ಭಕ್ತನು, ಮಂಚದ ಮೇಲೆ-ಪರ್ಯಂಕದ ಮೇಲೆ, ಇಪ್ಪುದು-ಕುಳಿತುಕೊಂಡಿರುವುದು, ಅದೇನು ಗುಣವೆ?-ಅದೇನು ಭಕ್ತಿಸದ್ಗುಣವೆ?

ಹೇಳಾ-ನಿರೂಪಿಸಾ. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಜಂಗಮವಾಗಿ-ಜಂಗಮಸ್ವರೂಪವಾಗಿ, ಸಂಗಯ್ಯ ಬಂದಾನೆಂದು-ಸಂಗಮೇಶ್ವರನೇ ಬರುತ್ತೈದಾನೆಂದು. ಎಂದೆಂದೂ-ಆವಾವ ಕಾಲಕ್ಕೆ, ನಾನು-ಸಂಗನಬಸವೇಶ್ವರನು, ಮಂಚವನೇಱದ-ಪರ್ಯಂಕವ ಹತ್ತಬಾರದೆಂಬಂಥ, ಭಾಷೆ-ಪ್ರತಿಜ್ಞೆಯು.

---

೩೯೮

**ಜಂಗಮದ ಸನ್ನಿಧಿಯಲಾನು ವಾಹನವನೇಱಲಮ್ಮೆ : ಏಱಿದಡೆ ಭವ ಹಿಂಗದು. ಅದೇನು ಕಾರಣ? ಮುಂದೆ ಶೂಲವನೇಱುವ ಪ್ರಾಪ್ತಿಯುಂಟಾದ ಕಾರಣ! ಜಂಗಮ ಬರಲು ಇದಿರಾಸನದಲ್ಲಿ ಕುಳ್ಳಿರಲಮ್ಮೆ: ಕುಳಿತಡೆ ಭವ ಹಿಂಗದು. ಅದೇನು ಕಾರಣ? ಮುಂದೆ ಕಾಯ್ದಿಟ್ಟಿಗೆಯ ಮೇಲೆ ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ! ಜಂಗಮದ ಮುಂದೆ ದಿಟ್ಟತನದಲ್ಲಿ ಬೆರೆತು ನಿದಿರಲಮ್ಮೆ : ಇದ್ದಡೆ ಭವ ಹಿಂಗದು. ಅದೇನು ಕಾರಣ? ಮುಂದೆ ಹೆಡಗುಡಿಯ ಕಟ್ಟಿ ನಿಲ್ಲಿಸುವ ಪ್ರಾಪ್ತಿಯುಂಟಾದ ಕಾರಣ! ಇಂತೀ ಬಾಧೆಭವಂಗಳಲ್ಲಿ ಅಂಜುವೆನಯ್ಯಾ ನಿಮ್ಮವರ ಸುಳುಹು ನೀವೆಂದು ಭಾವಿಸಿ, ತೊತ್ತು ಭೃತ್ಯನಾಗಿರ್ಪೆನಯ್ಯಾ ಕೂಡಲ ಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಜಂಗಮದ ಸನ್ನಿಧಿಯಲ್ಲಿ-ಜಂಗಮಮೂರ್ತಿಗಳ ಸಮ್ಮುಖದಲ್ಲಿ, ನಾನು-ಸಂಗನಬಸವೇಶ್ವರನು, ವಾಹನವನೇಱಲಮ್ಮೆ-ಆನೆ ಕುದುರೆ ಅಂದಳ ಹಿಡಿತೇಜಿ ವೃಷಭಗಾಡಿ ಮೊದಲಾದವರ ಮೇಲೆ ಆರೋಹಣವಾಗುವುದಕ್ಕೆ, ಅಮ್ಮೆ-ಹೆದರುವೆನು. ಏಱಿದಡೆ ಭವ ಹಿಂಗದು-ಜಂಗಮಮೂರ್ತಿಗಳ ಕಂಡಾಕ್ಷಣಕ್ಕೆ ಆನೆ ಕುದುರೆ ಅಂದಳ ಹಿಡಿತೇಜ ವೃಷಭಗಾಡಿ ಮೊದಲಾದವನು ಇಳಿದು ಆ ಜಂಗಮಮೂರ್ತಿಗಳ ಅದರ ಮೇಲೆ ಮೂರ್ತವ ಮಾಡಿಸಿ ತಾನು ಕೆಳಗೆ ನಡೆದು ಹೋಗಬೇಕಲ್ಲದೆ ಬಂದರೆ ಬಂದಿದ್ದಾರೆಂದು ಬೆರೆತು ಕುಳಿಕೊಂಡದ್ದೇ ಉಂಟಾದರೆ, ಭವ-ಇದಕ್ಕೋಸ್ಕರವಾಗಿ ಭವಭವದಲ್ಲಿ ಹುಟ್ಟಿಹುಟ್ಟಿ ಬಂದು ದುಃಖಬಡುವಂಥದು, ಹಿಂಗದು-ಬಿಡದು. ಅದೇನು ಕಾರಣ-ಅದೇನು ನಿಮಿತ್ತಾರ್ಥ ಮೇಲೆ ಸ್ವಾಮಿಯೆಂದು ಬೆಸಗೊಂಡು ಕೇಳಿದರೆ, ಮುಂದೆ ಶೂಲವನೇಱುವ ಪ್ರಾಪ್ತಿಯುಂಟಾದ ಕಾರಣ : ಮುಂದೆ-ದೇಹಾಂತ್ಯಕಾಲಕ್ಕೆ ಕಾಲಾಗ್ನಿರುದ್ರನ ಭಟರು ಬಂದು ಹಿಡಿದುಕೊಂಡು ಹೋಗಿ ಎಲೆ ಧಗಡಿ ನೀನು ಜಂಗಮಮೂರ್ತಿಗಳ ಕಂಡಾಕ್ಷಣಕ್ಕೆ ಆನೆ ಕುದುರೆ ಅಂದಳ ಹಿಡಿತೇಜಿ ವೃಷಭಗಾಡಿ ಮೊದಲಾದವನು ಇಳಿದು ಅದರ ಮೇಲವರ ಮೂರ್ತವ ಮಾಡಿಸಿ ನೀನು ಕೆಳಗೆ ನಡೆದುಹೋಗಬೇಕು. ಆಗಲ್ಲಿ ಬಂದರೆ ಬಂದಿದ್ದಾರೆಂದು ಬೆರೆತು ಕುಳಿತುಕೊಂಡಿದ್ದೆಲ್ಲಾ ಈಗಿಲ್ಲಿ ಕುಳಿತುಕೋ ಬಾಯೆಂದು, ಶೂವನೇಱುವ-ಶೂಲದ ಮೇಲೆ ಕುಳ್ಳಿರಿಸುವ, ಪ್ರಾಪ್ತಿ-ಲಿಖಿತವು, ಉಂಟಾದ ಕಾರಣ-ಉಳ್ಳಾದ ನಿಮಿತ್ತ, ಅದು ಕಾರಣ, ಜಂಗಮದ

ಸಮ್ಮುಖದಲ್ಲಿ ಆನೆ ಕುದುರೆ ಅಂದಳ ಹಿಡಿತೇಜಿ ವೃಷಭಗಾಡಿ ಮೊದಲಾದವರ ಮೇಲೆ ಕುಳ್ಳಿರುವುದಕ್ಕೆ, ಅಮ್ಮೆ-ಹೆದರುವೆನು.

ಜಂಗಮ-ಜಂಗಮಮೂರ್ತಿಗಳ, ಬರಲು-ಭಿಕ್ಷಕ್ಕೆಂದು ಬಿಜಯಂಗೈದು ಬರಲು, ಇದಿರಾಸನದಲ್ಲಿ ಕುಳ್ಳಿರಲಮ್ಮೆ-ಲೋಡು ತಿವಾಸಿಗೆ ತೆಕ್ಕೆ ಗಿರ್ದೆ ಮೊದಲಾದವರ ಮೇಲೆ ಕುಳ್ಳಿರುವುದಕ್ಕೆ, ಅಮ್ಮೆ-ಹೆದರುವೆನು, ಕುಳಿತಡೆ ಭವಹಿಂಗದು-ಜಂಗಮಮೂರ್ತಿಗಳ ಕಂಡಾಕ್ಷಣಕ್ಕೆ ಲೋಡು ತಿವಾಸಿಗೆ ತೆಕ್ಕೆಗಿರ್ದೆ ಮೊದಲಾದವನು ಬಿಟ್ಟು ಕಡೆಗಿಳಿದು ಅವರನದರ ಮೇಲೆ ಮೂರ್ತವ ಮಾಡಿಸಿ. ತಾನು ಕೆಳಗೆ ಕುಳಿತಿರಬೇಕಲ್ಲದೆ ಬಂದರೆ ಬಂದಿದ್ದಾರೆಂದು ಬೆರೆತುಕೊಂಡು ಕುಳಿತಿದ್ದರೆ, ಭವ-ಇದಕ್ಕೋಸ್ಕರವಾಗಿ ಭವಭವದಲ್ಲಿ ಹುಟ್ಟಿಹುಟ್ಟಿ ಬಂದು ದುಃಖಂಬಡುವಂಥದು, ಹಿಂಗದು-ತೊಲಗದು. ಅದೇನು ಕಾರಣ-ಅದೇನು ನಿಮಿತ್ತಾರ್ಥವೆಲೆ ಸ್ವಾಮಿಯೆಂದು ಬೆಸಗೊಂಡು ಕೇಳಿದರೆ, ಮುಂದೆ ಕಾಯ್ದಿಟ್ಟಿಗೆಯ ಮೇಲೆ ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ : ಮುಂದೆ-ದೇಹಾಂತ್ಯಕ್ಕೆ ಕಾಲಾಗ್ನಿರುದ್ರನ ಭಟರು ಬಂದು ಹಿಡಿದುಕೊಂಡು ಹೋಗಿ ಧಗಡಿ ನೀನು ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡಾಕ್ಷಣಕ್ಕೆ ಲೋಡು ತಿವಾಸಿಗೆ ತೆಕ್ಕೆ ಗಿರ್ದೆ ಮೊದಲಾದವನು ಬಿಟ್ಟು ಕಡೆಗೆ ಇಳಿದು ಅವರನದರ ಮೇಲೆ ಮೂರ್ತವ ಮಾಡಿಸಿ ನೀನು ಕೆಳಗೆ ಕುಳಿತುಕೊಳ್ಳದೆ, ಬಂದರೆ ಬಂದಿದ್ದಾರೆಂದು ಬಿರ್ರನೆ ಬಿಗಿದುಕೊಂಡು ಕುಳಿತುಕೊಂಡಿದ್ದೆಯಲ್ಲಾ. ಅಲ್ಲಿ ಕುಳಿತುಕೊಂಡಿದ್ದ ಹಾಂಗೆ ಈಗಿಲ್ಲಿ ಕುಳ್ಳಿರು ಬಾಯೆಂದು, ಕಾಯ್ದು-ಕೆಂಪಗೆ ಕಾದ, ಇಟ್ಟಿಗೆಯ ಮೇಲೆ-ಇಟ್ಟಂಗಲ್ಲಿನ ಮೇಲೆ, ಕುಳ್ಳಿರಿಸುವ-ಕುಳಿತುಕೊಂಬಂಥದು, ಪ್ರಾಪ್ತಿ-ಲಿಖಿತವು, ಉಂಟಾದ ಕಾರಣ-ಉಳ್ಳುದಾದ ನಿಮಿತ್ತ. ಅದು ಕಾರಣ ಜಂಗಮದ ಇದಿರಲಿ ಲೋಡು ತಿವಾಸಿಗೆ ತೆಕ್ಕೆ ಗಿರ್ದೆ ಮೊದಲಾದವರ ಮೇಲೆ ಕುಳ್ಳಿರುವುದಕ್ಕೆ, ಅಮ್ಮೆ ಹೆದರುವೆನು.

ಜಂಗಮದ ಮುಂದೆ-ಜಂಗಮಮೂರ್ತಿಗಳ ಸಮ್ಮುಖದಲ್ಲಿ, ದಿಟ್ಟತನದಲ್ಲಿ-ದಿಂಡೆತನದಲ್ಲಿ, ಬೆರೆತು ನಿಂದಿರಲಮ್ಮೆ-ಬಿಕ್ಕೊಂಡು ನಿಲ್ಲುವುದಕ್ಕೆ ಹೆದರುವೆನು. ಇದ್ದಡೆ ಭವ ಹಿಂಗದು : [ಇದ್ದಡೆ-] ಜಂಗಮಮೂರ್ತಿಗಳು ಬರುವಂಥದನು ಕಂಡು ದಾರಿಬಿಟ್ಟು ವಾರೆಗೆ ನಿಂದಿರಬೇಕಲ್ಲದೆ ಬಂದರೆ ಬಂದಿದ್ದಾರೆಂದು ಬಿಕ್ಕೊಂಡು ಇದಿರಿಗೆ ನಿಂತುಕೊಂಡಿದ್ದರೆ, ಭವ-ಇದಕ್ಕೋಸ್ಕರವಾಗಿ ಭವಭವದಲ್ಲಿ ಹುಟ್ಟಿಹುಟ್ಟಿ ಬಂದು ದುಃಖಂಬಡುವಂಥದು, ಹಿಂಗದು-ತೊಲಗದು, ಅದೇನು ಕಾರಣ-ಅದೇನು ನಿಮಿತ್ತಾರ್ಥವಯ್ಯಾ ಸ್ವಾಮಿಯೆಂದು ಬೆಸಗೊಂಡು ಕೇಳಿದರೆ, ಮುಂದೆ ಹೆಡಗುಡಿಯ ಕಟ್ಟಿ ನಿಲ್ಲಿಸುವ : ಮುಂದೆ-ದೇಹಾಂತ್ಯಕ್ಕೆ ಕಾಲಾಗ್ನಿರುದ್ರನ ಭಟರು ಬಂದು ಹಿಡಿದುಕೊಂಡು ಹೋಗಿ ಎಲೆ ಧಗಡಿ ನೀನು ಜಂಗಮಮೂರ್ತಿಗಳ ಕಂಡಾಕ್ಷಣಕ್ಕೆ ದಾರಿಯ ಬಿಟ್ಟು ವಾರೆಗೆ ನಿಂತುಕೊಳಬೇಕು. ಆಗಲ್ಲಿ ಬಂದರೆ ಬಂದಿದ್ದಾರೆಂದು ಬೆರೆತು ನಿಂತುಕೊಂಡ ಹಾಂಗೆ ಈಗಿಲ್ಲಿ ನಿಲ್ಲಬಾಯೆಂದು, ಹೆಡಗುಡಿಯ ಕಟ್ಟಿ-ಎದೆ ಬಿರಿವ ಹಾಂಗೆ ಎರಡೂ ಕೈಯನ್ನು ಹಿಂದಕ್ಕೆ ಮುರಿದು ಕಟ್ಟಿ, ನಿಲ್ಲಿಸುವ-ನೆಟ್ಟಗೆ ನಿಲ್ಲಿಸುವ, ಪ್ರಾಪ್ತಿ-ಲಿಖಿತವು, ಉಂಟಾದ ಕಾರಣ-ಉಳ್ಳಾದ ನಿಮಿತ್ತ. ಅದು ಕಾರಣ ಜಂಗಮಮೂರ್ತಿಗಳ ಸಮ್ಮುಖದಲ್ಲಿ ಬೆರೆತುಕೊಂಡು ನಿಲ್ಲುವುದಕ್ಕೆ, ಅಮ್ಮೆ-ಹೆದರುವೆನು.

ಇಂತೀ ಬಾಧೆ-ಶೂಲವನೇರುವ ಬಾಧೆ, ಕಾಯ್ದಿಟ್ಟಿಗೆಯ ಮೇಲೆ ಕುಳ್ಳಿರಿಸುವ ಬಾಧೆ, ಹೆಡಗುಡಿಯ ಕಟ್ಟಿ ನಿಲ್ಲಿಸುವ ಬಾಧೆ ಬಂಧನಂಗಳಿಗೆ; ಭವಂಗಳಿಗೆ-ಉತ್ಪತ್ಯಂಗಳಿಗೆ, ಅಂಜುವೆನಯ್ಯಾ-

ಹೆದರುವೆನಯ್ಯಾ. ನಿಮ್ಮವರ–ನಿಮ್ಮ ಜಂಗಮಮೂರ್ತಿಗಳ, ಸುಳುಹು–ಸಂಚಾರವು, ನೀವೆಂದು ಭಾವಿಸಿ–ಪರಶಿವಲಿಂಗವು ನೀವೇ ಸಾಕ್ಷಾತ್ಕಾರವೆಂದರಿದು, ತೊತ್ತುಭೃತ್ಯನಾಗಿಪ್ಪೆನಯ್ಯಾ–ಭಯಭಕ್ತಿ ಭೃತ್ಯಾಚಾರವ ಮುಂದುಗೊಂಡು ಭಕ್ತಿಯ ಮಾಡುತಿಪ್ಪೆನಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೇ.

---

೩೯೯

**ಜಂಗಮವಿರಹಿತ ಲಿಂಗಾರ್ಚನೆ : ಓಡ ಬಿಲಲೆಱ್ದ ಜಲದಂತೆ. ಜಂಗಮಸನ್ನಿಹಿತ ಲಿಂಗಾರ್ಚನೆ: ಇದೇ ಭಕ್ತಿಗೆ ಪಥವಯ್ಯಾ. ಜಂಗಮಪ್ರಸಾದ ಭೋಗೋಪಭೋಗವು : ಎನಗಿದೇ ಲಿಂಗಾರ್ಚನೆ. ಬೇಱ್ ಮತ್ತೊಂದನಱಿದೆನಾದಡೆ ಕೂಡಲಸಂಗಮದೇವ ನರಕದಲ್ಲಿಕ್ಕುವ.**

I - - - - - - - - - - - - - - - - - - - - - - - - - - - - - - - - - - - - - - - -

ಜಂಗಮವಿರಹಿತ ಲಿಂಗಾರ್ಚನೆ–ಜಂಗಮಭಕ್ತಿಬಾಹ್ಯವಾಗಿ ಲಿಂಗಪೂಜೆಯ ಮಾಡಿದರೆ, ಓಡ ಬಿಲಲೆಱೆದ ಜಲದಂತೆ–ಗಚ್ಚುಗಾರಿಗಳಿಂದ ಕಲ್ಲಿನಿಂದ ಕಟ್ಟಿದಂಥ ಗಂಜುಗಳಲ್ಲಿ ಹೌತಖಾನಿಗಳಲ್ಲಿ ಹತ್ತೆಂಟು ಕೊಡ ಉದಕವನ್ನು ಹಾಕಿದರೆ ನಿಂತುಕೊಂಡು ಕಣ್ಣಿಗೆ ಸಾಕಾರವಾಗಿ ಕಾಣಬಂದಾವಲ್ಲದೆ ಎರೆಬೀಡಿನಲ್ಲಿ ಹತ್ತೆಂಟು ಕೊಡ ಉದಕವನ್ನು ಹಾಕಿದರೆ ಅಲ್ಲೇ ಇಮರಿಹೋಗುವುದಲ್ಲದೆ ನೀರು ನಿಂತುಕೊಂಡು ಕಣ್ಣಿಗೆ ಸಾಕಾರವಾಗಿ ಕಾಣಬಂದಾವೆ ? ಕಾಣಲರಿಯವು. ಹಾಂಗೆ ಜಂಗಮಭಕ್ತಿಯ ಮಾಡುತ್ತ ಲಿಂಗಪೂಜೆಯ ಮಾಡಿದರೆ ಗಚ್ಚಿನಿಂದ ಕಲ್ಲಿನಿಂದ ಕಟ್ಟಿದಂಥ ಗಂಜು ಹೌತಖಾನಿಗಳೊಳಗೆ ನೀರು ತುಂಬಿದರೆ ಕಣ್ಣಿಗೆ ಸಾಕಾರವಾಗಿ ಕಾಣಬಂದ ಹಾಗೆ ನಿತ್ಯವಾದ ನಿಜಮೋಕ್ಷವೇ ದೊರಕೊಂಬುತ್ತಿಹುದು. ಜಂಗಮಭಕ್ತಿಬಾಹ್ಯವಾಗಿ ಲಿಂಗಪೂಜೆಯ ಮಾಡಿದರೆ ಎರೆಬೀಡಿನಲ್ಲಿ ಹತ್ತೆಂಟು ಕೊಡ ಉದಕವ ನೀಡಿದ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲವು. ಜಂಗಮಸನ್ನಹಿತ ಲಿಂಗಾರ್ಚನೆ–ಜಂಗಮ ಸಹವಾಗಿ ಮಾಡುವಂಥ ಲಿಂಗಪೂಜೆಯು, ಇದೇ ಭಕ್ತಿಗೆ ಪಥವಯ್ಯಾ : ಇದೇ ಭಕ್ತಿಗೆ–ಇದೇ ಶಿವಾದ್ವೈತಭಕ್ತಿಗೆ, ಪಥವಯ್ಯಾ–ಮಾರ್ಗವಯ್ಯಾ. ಜಂಗಮಪ್ರಸಾದ–ಜಂಗಮಮೂರ್ತಿಗಳ ಶೇಷಪ್ರಸಾದವು, ಭೋಗೋಪಭೋಗವು–ಅಷ್ಟಭೋಗೋಪಭೋಗ ಮೊದಲಾದ ಎಪ್ಪತ್ತೆರಡು ವಿನಿಯೋಗಂಗಳಾಗಿಪ್ಪವು. ಎನಗಿದೇ ಲಿಂಗಾರ್ಚನೆ–ಎನಗಿದೇ ಲಿಂಗಪೂಜೆಯು. ಬೇಱ್ ಮತ್ತೊಂದನಱಿದೆನಾದಡೆ–ಅನ್ಯದೈವದ ಭಜನೆಯ ಮಾಡಬೇಕು ಅನ್ಯದೈವದ ಪ್ರಸಾದಸೇವನೆಯ ಮಾಡಬೇಕೆಂದು ಇಚ್ಛೈಸಿದೆನಾದರೆ, ಕೂಡಲಸಂಗಮದೇವ–ಪರಶಿವಲಿಂಗವು, ನರಕದಲ್ಲಿಕ್ಕುವ–ನಿರಯದಲ್ಲಿ ಹಾಕಿಬಿಡುವನು.

III- - - - - - - - - - - - - - - - - - - - - - - - - - - - - - - - - - - - - - -

ಓಡಬಿಲಲಿ–ಒಡೆದ ಗಡಿಗೆಯಲ್ಲಿ, ಎಱೆದ–ಮಜ್ಜನಕ್ಕೆರೆದ, ಜಲದಂತೆ–ಉದಕದ ಹಾಂಗೆ ಎನ್ನ ಭಕ್ತಿಯು ನಿರರ್ಥವಾಯಿತ್ತೆಂಬುದರ್ಥ.

IV- - - - - - - - - - - - - - - - - - - - - - - - - - - - - - - - - - - - - - -

ಲಿಂಗಕ್ಕೆ ಜಂಗಮವೇ ಒಡೆಯನಾದ ಕಾರಣ, ಆ ಜಂಗಮದ ಪ್ರಸಾದವೆ ಪರಮಾನಂದ, ಅದೇ ಲಿಂಗಾರ್ಚನೆ. ಆ ಜಂಗಮವಿಲ್ಲದೆ ಲಿಂಗಾರ್ಚನೆಯ ಮಾಡಿದರೆ ಒಡಲಪೊಕ್ಕ ಜಲದಂತೆಂಬುದೀ ವಚನದರ್ಥ.

---

### ೪೦೦

**[1]ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ? ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ? ಜಂಗಮವಿಲ್ಲದೆ ಲಿಂಗಾರ್ಚನೆಯ ಮಾಡಬಹುದೆ? ರೂಢಿಗೀಶ್ವರನ ಭೇದಿಸಬಹುದೆ? ಒಡಲಿಲ್ಲದ ನಿರಾಳಕರ್ತೃ ಕೂಡಲಸಂಗಮದೇವ ಜಂಗಮಮುಖ ಲಿಂಗವಾದನಾಗಿ, ಮತ್ತೊಂದನಱಿಯೆನಯ್ಯಾ.[1]**

I - - - - - - - - - - - - - - - - - - - - - - - - - - - - - - - - - - - - - - -

ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ–ಭಿತ್ತಿಪಟಂಗಳ ಮೇಲೆ ಗಜಾವಳಿ ಅಶ್ವಾವಳಿ ಮೃಗಾವಳಿ ಸ್ತ್ರೀಸಾಲು ಪುರುಷಸಾಲು ಮೊದಲಾದ ಅನೇಕ ಚಿತ್ತಾರವನು ಬರೆದರೆ ಸಾಕಾರವಾಗಿ ಕಣ್ಣಿಗೆ ಕಾಣಬಂದಾವಲ್ಲದೆ ಮನದಲ್ಲಿ ಬರೆಯಬೇಕೆಂದು ನೆನೆದರೆ ಸಾಕಾರವಾಗಿ ಕಣ್ಣಿಗೆ ಕಾಣಬಂದಾವೆ? ಬರಲರಿಯವು. ಹಾಂಗೆ ಆಧಾರ ಕರ್ತೃಸ್ವರೂಪವಾದ ಜಂಗಮಭಕ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ? ವಿಚಿತ್ರಮುಕ್ತಿಸ್ವರೂಪವಾದ ಲಿಂಗಪೂಜೆಯ ಮಾಡಿ ಲಿಂಗದ ಕರುಣದ ಹಡೆದೇನೆಂದರೆ ಅಶಕ್ಯವಾಗಿರ್ಪುದು. ಬಿತ್ತಿಬೆಳೆಯಬಹುದೆ ಧರೆಯಿಲ್ಲದೆ–ಭೂಮಿಯ ಮೇಲೆ ಹದಿನೆಂಟು ಧಾನ್ಯಂಗಳ ಬಿತ್ತಿ ಬೆಳೆದರೆ ಸಾಕಾರವಾಗಿ ಕಣ್ಣಿಗೆ ಕಾಣಬಂದಾವಲ್ಲದೆ ಮನದಲ್ಲಿ ಹದಿನೆಂಟು ಧಾನ್ಯಂಗಳ ಬಿತ್ತಿ ಬೆಳೆದೇನೆಂದರೆ ಕಣ್ಣಿಗೆ ಸಾಕಾರವಾಗಿ ಕಾಣಬಂದಾವೆ? ಬರಲರಿಯವು. ಹಾಂಗೆ, ಧರೆಯಿಲ್ಲದೆ–ಚಿತ್ಪೃಥ್ವೀಸ್ವರೂಪವಾದ ಜಂಗಮಭಕ್ತಿಯಿಲ್ಲದೆ, ಬಿತ್ತಿ ಬೆಳೆಯಬಹುದೆ–ಮುಕ್ತಿಫಲಸ್ವರೂಪವಾದ ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆದೇನೆಂದರೆ ಅಶಕ್ಯವಾಗಿಪ್ಪುದು. ಜಂಗಮವಿಲ್ಲದೆ–ಜಂಗಮಭಕ್ತಿಯಿಲ್ಲದೆ, ಲಿಂಗಾರ್ಚನೆಯ ಮಾಡಬಹುದೆ–ಲಿಂಗಪೂಜೆಯ ನನುಗೆಯ್ಯಬಹುದೆ, ರೂಢೀಗೀಶ್ವರನ–ಜಗತ್ಕರ್ತೃವಾದ ಪರಶಿವಲಿಂಗವನು, ಭೇದಿಸಬಹುದೆ–ಹುಡುಕಿದರೆ ಸಿಕ್ಕಾನೆ? ಸಿಗನು.

ಒಡಲಿಲ್ಲದ–ಪಂಚಭೂತಯುಕ್ತವಾದ ದೇಹಪ್ರಪಂಚಿನ ಸಾಕಾರವಿಲ್ಲದ, ನಿರಾಳ–ಅಡಿಮುಡಿ ಒಡಲು[೧][ಗಾಧ][೧]ವನ್ನು ಕಾಣಿಸಿಕೊಳ್ಳದೆ ಇದ್ದಂಥ ಕರ್ತೃ–ಪಂಚಕೃತ್ಯಂಗಳಿಗೊಡೆಯನಾದಂಥ, ಕೂಡಲಸಂಗಮದೇವ–ಪರಶಿವಲಿಂಗವು, ಜಂಗಮಮುಖ ಲಿಂಗವಾದನಾಗಿ–ಜಂಗಮವೇ ಮುಖ್ಯವಾದ ಶಿವಸ್ವರೂಪವ ತಾಳಿದವನಾಗಿ. ಮತ್ತೊಂದನಱಿಯೆನಯ್ಯಾ–ಜಂಗಮಭಕ್ತಿಬಾಹ್ಯನಾಗಿ ಲಿಂಗಪೂಜೆಯ ಮಾಡುವಂಥದನು, ಅಱಿಯೆನಯ್ಯಾ–ತಿಳಿಯೆನಯ್ಯಾ.

..............................

೧–೧ ಘಾತ (ಕ, ಗ).

II- - - - - - - - - - - - - - - - - - - - - - - - - - - - - - - - - - - - - - - - - - - - -

1–1 X (ಚ. ಜ).

..........................

ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ?–ಸದುಹೃದಯವೆಂಬ ಅಂತರಂಗವಿಲ್ಲದೆ ಮಂತ್ರಮುದ್ರೆಯನು ಅಂಕಿಸಬಹುದೇ?, ಬಿತ್ತಿಬೆಳೆಯಬಹುದೆ ಧರೆಯಿಲ್ಲದೆ ?–ಆಚಾರಾಂಗವೆಂಬ ಭೂಮಿಯಿಲ್ಲದೆ ಕ್ರೀಯನು ಸ್ಥಾಪಿಸಿ ಸರ್ವಾಚಾರ ಸಂಪತ್ತಿನಾಚರಣೆಯೆಂಬ ಪೈರುವನು ವರ್ಧನವ ಮಾಡಿಕೊಳಬಹುದೆ ?, ಜಂಗಮವಿಲ್ಲದೆ ಲಿಂಗಾರ್ಚನೆಯ ಮಾಡಬಹುದೆ?–ಚರಮೂರ್ತಿಗಳಿಲ್ಲದೆ ಭಕ್ತಿಯು ಮಾಡಬಹುದೆ?, ರೂಢಿಗೀಶ್ವರನ ಭೇದಿಸಬಹುದೆ?–ಜಗದೀಶ್ವರನಾದ ವಸ್ತುವನರಿಯಬಹುದೆ?, ಒಡಲಿಲ್ಲದ–ದೇಹವಿಲ್ಲದ. ನಿರಾಳಕರ್ತೃ ಕೂಡಲಸಂಗಮದೇವಾ–ಅಡಿಮುಡಿ ಒಡಲಾಘಾತವು ಕಾಣಬಾರದಿರ್ದಂಥ ಒಡೆತನವನುಳ್ಳ ಪರಶಿವಲಿಂಗವು, ಜಂಗಮಮುಖ ಲಿಂಗವಾದನಾಗಿ ಮತ್ತೊಂದನಿಜೆಯೆನಯ್ಯಾ–ಮಹಾಜ್ಞಾನಿಜಂಗಮದ ವಕ್ತ್ರವಾದನಾಗಿ ಮರಳಿ ಪ್ರಪಂಚನು ತಿಳಿಯೆ, ಅನ್ಯದೈವಂಗಳನು ತಿಳಿಯೆ, ಭಿನ್ನವಾರ್ತೆಯನು ತಿಳಿಯೆನಯ್ಯಾ.

IV- - - - - - - - - - - - - - - - - - - - - - - - - - - - - - - - - - - - - - - - - - - -

ಪರಬ್ರಹ್ಮವನಜೆದಡೆ ಪರಮಜ್ಞಾನವಿಲ್ಲದೆ ಅಜೆಯಬಾರದು. ಪರಮಜ್ಞಾನವಾದ ಜಂಗಮವಿಲ್ಲದೆ ಮಾಡಿದರೆ ಭಿತ್ತಿಯಿಲ್ಲದ ಚಿತ್ತಾರವಹುದೆಂಬುದೀ ವಚನದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - -

ಭಿತ್ತಿಹಿಯಿಲ್ಲದೆ–ಗೋಡೆಯಿಲ್ಲದೆ, ಚಿತ್ತಾರವ ಬರೆಯಬಹುದೆ–ಅಶ್ವಗಜಾವಳಿ ಮೃಗಲತಾವಳಿ ತರುಪಟ್ಟಾವಳಿ ಮೊದಲಾದವ ಬರೆಯಬಹುದೆ?, ಚಿತ್ರಿಕನು ಲೇಖನ ಮಾಡುವುದಕ್ಕಾಗದೆಂಬ ಹಾಂಗೆ ತನುತ್ರಯಂಗಳಿಲ್ಲದೆ ಲಿಂಗತ್ರಯಂಗಳ ಸಂಬಂಧಿಸುವದಕ್ಕಾಗದೆಂಬುದರ್ಥ. ಧರೆಯಿಲ್ಲದೆ–ಭೂಮಿಯಿಲ್ಲದೆ, ಬಿತ್ತಿ–ಮಾವು ಮಾದಳ ಗೋದುವೆ ಚಣಕ ಮೊದಲಾದವನು ಸ್ಥಾಪಿಸಿ ವರ್ಧನವ ಮಾಡುವುದಕ್ಕಾಗದೆಂಬ ಹಾಂಗೆ ಸತ್ಕ್ರಿಯಾಧಾರವಾದ ಜಂಗಮವಿಲ್ಲದೆ ಸರ್ವಾಚಾರವನ್ನು ವರ್ಧಮಾನವ ಮಾಡುವುದಕ್ಕಾಗದೆಂಬುದರ್ಥ.

---

೪೦೧

**ಸಮಯೋಚಿತದಲ್ಲಿ ಲಿಂಗಾರ್ಚನೆಯ ಮಾಡುತ್ತಿರ್ಪನಾಭಕ್ತನು. ಮಾಡಿದಡೆ ಮಾಡಲಿ ಮಾಡಿದಡೆ ತಪ್ಪೇನು? ಜಂಗಮದ ಶಬ್ದವ ಕೇಳಿ ಪ್ರಸಾದಕ್ಕೆ ಕೈದುಡುಕಿದಡೆ ಅದು ಪ್ರಸಾದವಲ್ಲ, ಕಿಲ್ಬಿಷವು! ಆ ಸಮಯೋಚಿತದಲ್ಲಿ ಬಂದ ಜಂಗಮದ ಶಬ್ದವ ಕೇಳಿ ಪ್ರಸಾದಕ್ಕೆ ಕೈದೆಗೆದಡೆ ಅದು ಪ್ರಸಾದ, ಲಿಂಗಕ್ಕೆ ಬೋನ. ಇದು ಕಾರಣ ಕೂಡಲಸಂಗಮದೇವಾ, ಇಂತಪ್ಪ ಸದಾಚಾರಿಗಳ ತೋಜಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಸಮಯೋಚಿತದಲ್ಲಿ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ವೇಳೆಯಲ್ಲಿ, ಲಿಂಗಾರ್ಚನೆಯ ಮಾಡುತ್ತಿರ್ಪನು–ಲಿಂಗಪೂಜೆಯನನುಗೈವುತ್ತಿರ್ಪನು, ಆ ಭಕ್ತನು–ಆ ಶಿವಭಕ್ತನು. ಮಾಡಿದಡೆ ಮಾಡಲಿ–ಅನುಗೆಯ್ದರೆ ಅನುಗೈಯಲಿ, ಮಾಡಿದಡೆ–ಅನುಗೈದರೆ, ತಪ್ಪೇನು–ಅಪರಾಧವೇನು. ಜಂಗಮದ ಶಬ್ದವ ಕೇಳಿ–ಜಂಗಮಮೂರ್ತಿಗಳ "ಲಿಂಗಾರ್ಪಿತ ಭಿಕ್ಷಾ" ಎಂಬ ಶಬ್ದವನಾಲಿಸಿ, ಪ್ರಸಾದಕ್ಕೆ ಕೈದುಡುಕಿದಡೆ–ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಹಸ್ತವನ್ನು ಹಾಕಿ ತೆಗೆದುಕೊಂಡನುಭವಿಸಿದರೆ, ಅದು ಪ್ರಸಾದವಲ್ಲ–ಅದು ಶಿವಪ್ರಸಾದವಲ್ಲ, ಕಿಲ್ಬಿಷ–ಹುಳುಗುಪ್ಪಿಗೆ ಸಮಾನವು. ಆ ಸಮಯೋಚಿತದಲ್ಲಿ–ತಾನು ಸಲಿಸುವಂಥ ವೇಳೆಯಲ್ಲಿ, ಬಂದ–ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ, ಜಂಗಮದ–ಜಂಗಮಮೂರ್ತಿಗಳ, ಶಬ್ದವ ಕೇಳಿ–"ಲಿಂಗಾರ್ಪಿತ ಭಿಕ್ಷಾ" ಎಂಬ ಶಬ್ದವನಾಲಿಸಿ, ಪ್ರಸಾದಕ್ಕೆ ಕೈದೆಗೆದಡೆ–ಕೇಳಿದಾಕ್ಷಣ ಹಸ್ತವನ್ನು ಅಂತರಿಸಿ ಸತಿಸುತಾದಿಗಳ ಕೊಟ್ಟು ಕಳುಹಿ ನಮಸ್ಕರಿಸಿ ಅಗ್ಗವಣಿಯ ಕೊಟ್ಟು ಹಾವುಗೆಯ ಕೊಟ್ಟು ಹಸ್ತಲಾಘವ ಕೊಟ್ಟು ಒಳೆಯಕ್ಕೆ ಕರಕೊಂಡು ಹೋಗಿ ಉನ್ನತಾಸನದಲ್ಲಿ ಕುಳ್ಳಿರಿಸಿ ಸಕಲಪದಾರ್ಥವನ್ನು ಹರಿವಾಣದಲ್ಲಿ ಗಡಣಿಸಿ ತಂದು ಮುಂದಿಟ್ಟಲ್ಲಿ ಅವರು ಮೂರು ವೇಳೆ ಐದು ವೇಳೆ ಏಳು ವೇಳೆ ಒಂಬತ್ತು ವೇಳೆ ಲಿಂಗಕ್ಕರ್ಪಿಸಿ ಅವರು ಒಂದು ಭೋಜ್ಯ ಎರಡು ಭೋಜ್ಯ ಮೂರು ಭೋಜ್ಯವ ಸಲಿಸಿದ ಬಳಿಕ ತಾನು ಹಸ್ತವನ್ನು ಹಾಕಿ ತೆಗೆದುಕೊಂಡರೆ, ಅದು ಪ್ರಸಾದ–ಅದು ಶಿವಪ್ರಸಾದವು, ಲಿಂಗಕ್ಕೆ ಬೋನ–ಶಿವನಿಗೆ ಸಮರ್ಪಣವು.

ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. ಇಂತಪ್ಪ ಸದಾಚಾರಿಗಳ ತೋಱಾ–ಜಂಗಮಮೂರ್ತಿಗಳ "ಲಿಂಗಾರ್ಪಿತ ಭಿಕ್ಷಾ" ಎಂಬ ಶಬ್ದವನ್ನು ಕೇಳಿದಾಕ್ಷಣಕ್ಕೆ ಹಸ್ತವನ್ನು ಅಂತರಿಸಿ ಸತಿಸುತಾದಿಗಳ ಕೊಟ್ಟುಕಳುಹಿಸಿ ನಮಸ್ಕರಿಸಿ ಅಗ್ಗವಣಿಯನ್ನು ಕೊಟ್ಟು ಹಾವುಗೆಯನ್ನು ಕೊಟ್ಟು ಹಸ್ತಲಾಘವ ಕೊಟ್ಟು ಒಳೆಯಕ್ಕೆ ಕರೆದುಕೊಂಡು ಹೋಗಿ ಉನ್ನತಾಸನದಲ್ಲಿ ಮೂರ್ತವ ಮಾಡಿಸಿ ಸಕಲಪದಾರ್ಥವನ್ನು ಹರಿವಾಣದಲ್ಲಿ ಗಡಣಿಸಿ ತಂದು ಮುಂದಿಟ್ಟಲ್ಲಿ ಅವರು ಮೂರು ವೇಳೆ ಐದು ವೇಳೆ ಏಳು ವೇಳೆ ಒಂಬತ್ತ ವೇಳೆ ಲಿಂಗಕ್ಕರ್ಪಿಸಿ, ಅವರು ಒಂದು ಭೋಜ್ಯ ಎರಡು ಭೋಜ್ಯ ಮೂರು ಭೋಜ್ಯವ ಸಲಿಸಿದ ಬಳಿಕ ತಾನು ಹಸ್ತವನ್ನು ಹಾಕಿ ತೆಗೆದುಕೊಂಡನುಭವಿಸುವ ಇಂತಿಪ್ಪ ಸತ್ಪಥಾಚಾರವುಳ್ಳ ನಿರ್ವಂಚಕಸದ್ಭಕ್ತರ, ತೋಱಾ–ನನಗವರ ದರುಶನವನ್ನು ಕಾಣಿಸಿಕೊಡಾ.

IV- - - - - - - - - - - - - - - - - - - - - - - - - - - - - - - - - - - - - - - - - - - - -

ಅಂಗಲಿಂಗಕ್ಕೆ ಜಂಗಮಕಳೆ ಚೈತನ್ಯವಾದ ಕಾರಣ, ಲಿಂಗಾರ್ಚನೆಯ ಮಾಡುವ ಭಕ್ತನು ಜಂಗಮ ಬಂದುದನಱಿದು ಲಿಂಗಾರ್ಚನೆಯ ಬಿಟ್ಟು ಜಂಗಮಕ್ಕೆ ಮಾಡಿದರೆ ಲಿಂಗಕ್ಕೆ ಬೋನವಹುದು ತನಗೆ ಪ್ರಸಾದವಹುದು, ಇಂತಪ್ಪ ಸದ್ಭಕ್ತರ ತೋಱಾ ಎಂಬುದೀ ವಚನದರ್ಥ.

---

**ಉತ್ತಮ ಮಧ್ಯಮ ಕನಿಷ್ಠವೆಂದು ಬಂದ ಜಂಗಮವ ನುಡಿದೆನಾದಡೆ ನೊಂದೆನಯ್ಯಾ ನಾನು, ಬೆಂದೆನಯ್ಯಾ ನಾನು. ಎನ್ನ ಕಿಚ್ಚು ಎನ್ನ ಸುಟ್ಟಿತ್ತು. ಸುಖಿಜಂಗಮ ಸಾಮಾನ್ಯಜಂಗಮವೆಂದುಂಟೆ, ಕೂಡಲಸಂಗಮದೇವಾ ನಿಮ್ಮ ಶರಣರಲ್ಲಿ?**

I - - - - - - - - - - - - - - - - - - - - - - - - - - - - - - - - - - - - - - - - - - - - -

ಉತ್ತಮ ಮಧ್ಯಮ ಕನಿಷ್ಠವೆಂದು : ಉತ್ತಮ–ಚೀನಿ ಚೀನಾಂಬರ ಪಟ್ಟಪಟ್ಟಾವಳಿ ತೋಪುಶಕಲಾತಿ ತುಪ್ಪಳವಾಸ ಮೊದಲಾದವನ್ನು ಹೊದ್ದುಕೊಂಡುಬಂದಲ್ಲಿ ಇವರು ಮಧ್ಯಮರೂ ಅಲ್ಲ ಕನಿಷ್ಠರೂ ಅಲ್ಲ, ದೊಡ್ಡ ದೊಡ್ಡ ದೊರೆಗಳ ಭಕ್ತಿಯಲ್ಲಿ ಇದ್ದಂಥವರು ಶ್ರೇಷ್ಠವಾದ ಜಂಗಮವೆಂದು, ಮಧ್ಯಮ–ತಿಳಿಗಾವಿ ಪಾವಡ ನಾಗಲಂಚಿಧೋತರ ದೊಡ್ಡದಡಿಧೋತರ ಸಣ್ಣಕಂಬಳಿ ಬಣ್ಣದಹಚ್ಚಡ ಮೊದಲಾದವನ್ನು ಹೊದ್ದುಕೊಂಡು ಬಂದಲ್ಲಿ ಇವರು ಉತ್ತಮರೂ ಅಲ್ಲ ಕನಿಷ್ಠರೂ ಅಲ್ಲ ನಾಡಿಗ ದೇಸಾಯಿಗಳ ಭಕ್ತಿಯಲ್ಲಿ ಇದ್ದಂಥವರು ಮಧ್ಯಮಪ್ರಕಾರವಾದ ಜಂಗಮವೆಂದು, ಕನಿಷ್ಠವೆಂದು–ಹೊನ್ನು–ಹೆಣ್ಣುಮಣ್ಣು ಚೀನಿಚೀನಾಂಬರ ಪಟ್ಟಪಟ್ಟಾವಳಿ ತೋಪುಶಕಲಾತಿ ತುಪ್ಪಳವಾಸ ಮೊದಲಾದವನ್ನು ಹುಲ್ಲುಕಡ್ಡಿಗೆ ಸಮಾನ[೧]ವ ಮಾಡಿ[೧] ಬೊದಡೆ ಬೋಳುಮಸ್ತಕವ ಮಾಡಿಕೊಂಡು ಬಂದಲ್ಲಿ ಇವರು ಉತ್ತಮರೂ ಅಲ್ಲ, ಮಧ್ಯಮರೂ ಅಲ್ಲ ಉಂಬುವುದಕ್ಕೆ ಅನ್ನವ ಕಾಣದೆ ಹೊದೆವುಡೋದಕ್ಕೆ ಅರಿವೆಯ ಕಾಣದೆ ವೇಷವ [೨]ಧರಿಸಿ[೨]ಕೊಂಡು ದೇಶ[೩]ದ ಮೇಲೆ[೩] ತಿರುಗುತ್ತೈದಾರೆ ಬಹುಕ್ಷೀಣವಾದ ಜಂಗಮವೆಂದು, ಬಂದ–ಭಿಕ್ಷಕ್ಕೆಂದು ಬಿಜಯಂಗೈದು ಬಂದ, ಜಂಗಮವ–ಚರಜಂಗಮವನು, ನುಡಿದೆನಾದಡೆ–ಹೀಗೆಂದು ಭಿನ್ನವಿಟ್ಟುಕೊಂಡು ನುಡಿದೆನಾದರೆ, ನೊಂದೆನಯ್ಯಾ ನಾನು–ದೂಷಣೆಯೆಂಬ ಅಗ್ನಿಯಿಂದ ಗಾಸಿಯಾದೆನಯ್ಯಾ ನಾನು, ಬೆಂದೆನಯ್ಯಾ ನಾನು–ಆ ದೂಷಣೆಯೆಂಬ ಅಗ್ನಿಯಿಂದ ದಹನವಾದೆನಯ್ಯಾ ನಾನು, ಎನ್ನ ಕಿಚ್ಚು–ನಾ ಮಾಡಿದ ದೂಷಣೆಯೆಂಬಂಥ ಅಗ್ನಿಯು, ಎನ್ನ ಸುಟ್ಟಿತ್ತು–ಎನ್ನ ಜನನಮರಣಂಗಳಲ್ಲಿ ತಂದು ಸಂಹರಿಸಿತ್ತು.

ಸುಖಿಜಂಗಮ ಸಾಮಾನ್ಯಜಂಗಮವೆಂದುಂಟೆ : ಸುಖಿಜಂಗಮ–ಸೋಸಿದ ಕಣಕದ ಕಡಬು ಬೆಣ್ಣೆಕಾಸಿದ ತುಪ್ಪ ಸಣ್ಣಕ್ಕಿಬೋನ ಮೊದಲಾದವನು ನೀಡಿದಲ್ಲಿ ಸ್ವಲ್ಪಸ್ವಲ್ಪವಾಗಿ ಸಲಿಸುತ್ತೈದಾರೆ, ಇವರು ಶ್ರೇಷ್ಠವಾದ ಜಂಗಮವು. ಸಾಮಾನ್ಯಜಂಗಮ–ನುಚ್ಚುಕಚ್ಚು ಮೊದಲಾದ ಶುಷ್ಕಾನ್ನ ಪದಾರ್ಥಂಗಳ ನೀಡಿದಲ್ಲ ಕುರುಡೆತ್ತಿಗೆ ಕರಡವೇ ಕೈಲಾಸವಾದ ಹಾಂಗೆ ಹಿಂದೆಮುಂದೆ ನೋಡದೆ ಮಕ್ಕಳುಮಱಿಗಳಿಗೆ ಉಳಗೊಡದ ಹಾಂಗೆ ನುಣ್ಣಗೆಲ್ಲ ಸವರಿ ಹಾಕಿಸಿಕೊಂಡುಂಡವನು. ಇವನು ಸಾಮಾನ್ಯವಾದ ಜಂಗಮವೆಂದು, ಉಂಟೆ–ಸುಖಿಜಂಗಮ ಸಾಮಾನ್ಯಜಂಗಮವೆಂದು ಜಂಗಮದಲ್ಲಿ ಎರಡು ಪ್ರಕಾರವುಂಟೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಲ್ಲಿ–ನಿಮ್ಮ ನಿರ್ವಂಚಕ ಸದ್ಭಕ್ತರುಗಳಲ್ಲಿ, ಸುಖಿಜಂಗಮ ಸಾಮಾನ್ಯ ಜಂಗಮವೆಂದು ಭಿನ್ನವಿಟ್ಟುಕೊಂಡು ಹೇಳುವಂಥ ಪ್ರಸಂಗವುಂಟಾಗಿದ್ದಿತ್ತೇ? ಇಲ್ಲವು.

..........................

೧–೧ ವಾಮಾ (ಗ). ೨–೨ ಮಾಡಿ (ಕ). ೩–೩ ವ (ಗ).

**ಲಾಂಛನವ ಕಂಡು ನಂಬುವೆ, ಅವರಂತರಂಗವ ನೀವೆ ಬಲ್ಲಿರಿ. ತೊತ್ತಿಂಗೆ ತೊತ್ತುಗೆಲಸವಿಲ್ಲದೆ ಅರಸರ ಸುದ್ದಿ ನಮಗೇಕಯ್ಯಾ? ರತ್ನಮೌಕ್ತಿಕದಚ್ಚು, ಕೂಡಲಸಂಗಮದೇವಾ ನಿಮ್ಮ ಶರಣರು.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಲಾಂಛನವ ಕಂಡು ನಂಬುವೆ : ಲಾಂಛನವ–ಶಿವಲಾಂಛನಸ್ವರೂಪವಾದ ಜಂಗಮಮೂರ್ತಿಗಳ, ಕಂಡು–ನೋಡಿ, ನಂಬುವೆ–ಇವರೇ ಸಾಕ್ಷಾತ್ಶಿವ ಸ್ವರೂಪರೆಂದು ವಿಶ್ವಾಸಿಸುವೆನು. ಅವರಂತರಂಗವ ನೀವೆ ಬಲ್ಲಿರಿ–ಅವರಂತರಂಗದಲ್ಲಿ ಏನು ಆಸೆ ಇರ್ಪುದೊ ನಿರಾಸೆ ಇರ್ಪುದೊ ಪ್ರಪಂಚು ಇರ್ಪುದೊ ನಿಃಪ್ರಪಂಚು ಇರ್ಪುದೊ ಜ್ಞಾನ ಇರ್ಪುದೊ ಅಜ್ಞಾನ ಇರ್ಪುದೊ ಎಂಬುವಂಥದನ್ನು, ನೀವೆ ಬಲ್ಲಿರಿ–ಪರಶಿವಲಿಂಗವೆ ನಿಮಗೇ ತಿಳಿದಿರುವುದು, ತೊತ್ತಿಂಗೆ ತೊತ್ತುಗೆಲಸವಲ್ಲದೆ ಅರಸರ ಸುದ್ದಿ ನಮಗೇಕಯ್ಯಾ : ತೊತ್ತಿಂಗೆ–ಕಸಮುಸುರಿಯನ್ನು ಮಾಡಿಕೊಂಡು ನೀರುನಿಡಿಯನ್ನು ತಂದುಕೊಂಡಿರುವಂಥ ಗೌಡಿಗೆ, ತೊತ್ತುಗೆಲಸವಲ್ಲದೆ–ಕಸಮುಸುರಿಯನ್ನು ಮಾಡಿಕೊಂಡು ನೀರುನಿಡಿಯನ್ನು ತಂದುಕೊಡುವಂಥ ಗೌಡಿ ಚಾಕರಿಯೆ ಉಂಟಾಗಿರಬೇಕಲ್ಲದೆ, ಅರಸರ ಸುದ್ದಿ ನಮಗೇಕಯ್ಯಾ–ದೊರೆಗಳು ಎಲ್ಲೈದಾರೆ? ಯಾವಲ್ಲೈದಾರೆ? ಯಾವ ಚಾವಡಿಯಲ್ಲಿ ಕುಳಿತುಕೊಂಡೈದಾರೆ? ಏನು ಕಾರಭಾರ ಮಾಡುತ್ತೈದಾರೆ? ಎಂದು ಕೇಳುವುದಕ್ಕೆ ಹೋದಲ್ಲಿ ಕಸಮುಸುರಿಯನ್ನು ಮಾಡಿಕೊಂಡು ನೀರುನಿಡಿಯನ್ನು ತಂದುಕೊಂಡಿರುವಂಥ ಗೌಡಿ ನೀನು, ಅಷ್ಟೊಂದು ಸುದ್ದಿ ನಿನಗೇಕಲೆ ತೊತ್ತು ಮುಂಡೇ ಎಂದು ಬಾಯ ಮೇಲೆ ಬಡಿಸಿ ಅಟ್ಟಿಬಿಡುತ್ತಿಹರು. ಹಾಂಗೆ, ತೊತ್ತಿಂಗೆ–ಭೃತ್ಯನಾದ ಭಕ್ತಂಗೆ, ತೊತ್ತುಗೆಲಸವಲ್ಲದೆ–ಭಯಭಕ್ತಿಭೃತ್ಯಾಚಾರದಿಂದ ಭಕ್ತಿಯನ್ನು ಮಾಡಿಕೊಂಡಿರುವಂಥದೆ ಉಂಟಾಗಿರಬೇಕಲ್ಲದೆ, ಅರಸರ ಸುದ್ದಿ ನಮಗೇಕಯ್ಯಾ–ಗುರುವಾದರೆ ಹೀಂಗಿರಬೇಕು, ಲಿಂಗವಾದರೆ ಹೀಂಗಿರಬೇಕು, ಜಂಗಮವಾದರೆ ಹೀಂಗಿರಬೇಕು ಮೇಲುಯುಕ್ತಿ ಮೇಲು ವಿಚಾರವ ಪರಾಮರಿಸುತ್ತೈದುವುದು ಏನು ಕಾರಣಕ್ಕಯ್ಯಾ?

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರು–ನಿಮ್ಮ ಜಂಗಮಮೂರ್ತಿಗಳು, ರತ್ನಮೌಕ್ತಿಕದಚ್ಚು–ರತ್ನವನು ಮೌಕ್ತಿಕವನು ಚಿನ್ನದಲ್ಲಿ ಹುದುಗೊಳಿಸಿ ಪದಕವನು ಮಾಡಿ ಉರದಲ್ಲಿ ಧರಿಸಿಕೊಂಡು ಎಲ್ಲಾ ಪದಕದ ಪ್ರಕಾಶ ಒಂದೇಯೆಂದು ತಿಳಿಯಬೇಕಲ್ಲದೆ ರತ್ನದ ಪ್ರಕಾಶ ಬೇರೆ ಮೌಕ್ತಿಕದ ಪ್ರಕಾಶ ಬೇರೆ ಪದಕದ ಪ್ರಕಾಶ ಬೇರೆಂದು ಹೇಳುವುದಕ್ಕಾದೀತೆ? ಆಗದು. ಹಾಂಗೆ, ಮೌಕ್ತಿಕದ ಹಾಂಗೆ ಲಿಂಗವು, ರತ್ನದ ಹಾಂಗೆ ಜಂಗಮವು, ಅಚ್ಚು–ಲಿಂಗಜಂಗಮದ ಏಕತ್ವವು, ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳೆಯೆಂದು ಹೇಳಬೇಕಲ್ಲದೆ ಲಿಂಗ ಬೇರೆ ಜಂಗಮ ಬೇರೆಂದು ಹೇಳುವುದಕ್ಕಾದೀತೆ? ಆಗದು.

IV- - - - - - - - - - - - - - - - - - - - - - - - - - - - - - - - - - - - - - - - - - - - -

ಚಂದ್ರಕಾಂತದಲ್ಲಿ ಒಳಗೊಂದು ಹೊಱಗೊಂದುಂಟೆ? ಇಲ್ಲ; ನೋಡಿದವನ ಪರಿಯಹುದಲ್ಲದೆ. ಹೇಗೆ ದೇಹೇಂದ್ರಿಯಂಗಳುಳ್ಳವ ನೋಡಿದರೆ ದೇಹೇಂದ್ರಿಯಂಗಳೆಂಬ ಹಾಂಗೆ ಇಹುದು. ಜಂಗಮದಲ್ಲಿ ಪರಂಜ್ಯೋತಿಲಿಂಗವೆಂದು ನಂಬು[ವು]ದೆಂಬುದೀ ವಚನದರ್ಥ.

---

## ೪೦೪

**ಆರಾರ ಮನದಲ್ಲಿ ಏನೇನಿಹುದೆಂದಱಿಯೆ. ಒಳ್ಳಿದರೆನೆಲಮ್ಮೆ, ಹೊಲ್ಲಹರೆನಲಮ್ಮೆ, ಶಿವಭಕ್ತರಾದ ಕಾರಣ ಜಂಗಮವೇ ಲಿಂಗ ಕೂಡಲಸಂಗಮದೇವಾ**

I ---------------------------------------------

ಆರಾರ ಮನದಲ್ಲಿ–ದೇವಭಕ್ತರ ಚಿತ್ತದಲ್ಲಿ, ಏನೇನಿಹುದೆಂದಱಿಯೆ : [ಏನೇನಿಹುದೆಂದು–] ಏನು ಆಸೆಯಿರ್ಪುದೊ ನಿರಾಸೆಯಿರ್ಪುದೊ ನಿರಾಸೆರ್ಯಿದೊ ಪ್ರಪಂಚಿರ್ಪುದೊ ನಿಃಪ್ರಂಪಚಿರ್ಪುದೊ ಜ್ಞಾನವಿರ್ಪುದೊ ಅಜ್ಞಾನವಿರ್ಪುದೊ ಎಂಬಂಥದನ್ನು, ಅಱಿಯೆ–ತಿಳಿಯೆನು. ಒಳ್ಳಿದರೆನಲಮ್ಮೆ–ಇವರು ಭಕ್ತಿಯುಳ್ಳವರು ಜ್ಞಾನವುಳ್ಳವರು ವೈರಾಗ್ಯವುಳ್ಳವರೆಂದು ಹೇಳಿಕೊಂಬುವುದಕ್ಕೆ, ಅಮ್ಮೆ–ಹೆದರುವೆನು. ಹೊಲ್ಲಹರೆನಲಮ್ಮೆ : [ಹೊಲ್ಲಹರೆನಲು–] ಇವರು ಆಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರೆಂದು ಹೇಳುವುದಕ್ಕೆ, ಅಮ್ಮೆ–ಹೆದರುವೆನು. ಶಿವಭಕ್ತರಾದ ಕಾರಣ–ಜ್ಞಾನೋದಯವಾಗಿ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಗಳಾಗಿ ಆಚರಿಸಲ್ಪಟ್ಟವರಾದ ನಿಮಿತ್ತ, ಜಂಗಮವೇ ಲಿಂಗ–ಚರಲಿಂಗವೇ ಸಾಕ್ಷಾತ್ಶಿವಸ್ವರೂಪು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- ---------------------------------------------

ಆರಾರ ಮನದಲ್ಲಿ ಏನೇನಿಹುದೆಂದಱಿಯೆ–ಆಯಾಯ ಜಂಗಮದ ಮನಸ್ಸಿನಲ್ಲಿ ಸಂಕಲ್ಪವಾಯಿತ್ತೆಂದು ತಿಳಿಯೆ, ವಿಕಲ್ಪವಾಯಿತ್ತೆಂದು ತಿಳಿಯೆ, ಮುಂದಕ್ಕೆ ಕಾಣಬಂದರ್ಥ.

---

## ೪೦೫

**ಸಂಗಸಹಿತ ಶರಣರು ಬಂದಡೆ ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು. ಹಾವು ನೇಣೆಂಬ ಭ್ರಾಂತುವುಳ್ಳನ್ನಕ್ಕ ನಾನೆಂತು ಭಕ್ತನಪ್ಪೆನು? ಅಂಗಲಿಂಗಸಹಿತವಾಗಿ ಬಂದಡೆ ಸಂಗಾ ನೀನೆಂದು ಕಾಂಬೆ. ಮತ್ತೆ ಮನದಲ್ಲಿ ಸಂದೇಹ ಹೊಳೆದಡೆ ಬೆಂದೆನಯ್ಯಾ ನಾನು, ಕೂಡಲಸಂಗಮದೇವಾ.**

I ---------------------------------------------

ಸಂಗಸಹಿತ–ಅಂಗಲಿಂಗಸಹವಾಗಿ, ಶರಣರು–ಗುರುಲಿಂಗಜಂಗಮಮೂರ್ತಿಗಳು, ಬಂದಡೆ–ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಎನ್ನ ಮನವು–ಸಂಗನಬಸವೇಶ್ವರನ ಚಿತ್ತವು, ನಂಬುವುದು–ಇವರೇ ಸಾಕ್ಷಾತ್ಶಿವಸ್ವರೂಪರೆಂದು ವಿಶ್ವಾಸಿಸುವುದು. ಎನ್ನ ಮನವು–ಸಂಗನಬಸವೇಶ್ವರನ ಚಿತ್ತವು, ನಚ್ಚುವುದು–ತನುಮನಧನಂಗಳೆಲ್ಲ ಅವರೊಡವೆ ಅವರ ಪದಾರ್ಥ ಅವರ ಸೊಮ್ಮೆಂದು ವಿಶ್ವಾಸಿಸುವುದು. ಹಾವು ನೇಣೆಂಬ–ಸರ್ಪರಜ್ಜುವೆಂಬುವರ್ಥ, ಅದಲ್ಲದೆ ಇವರು ಯಾವ ಕುಲದವರೋ? ಜಂಗಮವಾಗಿ ಬಂದೈದಾರೆ. ಇವರಿಗೆ ಭಕ್ತಿಮಾಡಿದರೆ ಮುಕ್ತಿಯಾಗುತ್ತೈತೋ ಇಲ್ಲವೋ ಎನಿಸುವ ಭ್ರಾಂತುವುಳ್ಳನ್ನಕ್ಕ–ಭ್ರಮವುಂಟಾಗಿರುವ ಪರಿಯಂತರವು; ನಾನೆಂತು ಭಕ್ತನಪ್ಪೆನು–ನಾನು ನಿರ್ವಂಚಕಸದ್ಭಕ್ತ ಹೇಂಗಾದೇನು, ಅಂಗಲಿಂಗಸಹಿತವಾಗಿ–ಅಂಗದ ಮೇಲೆ

ಶಿವಲಿಂಗಧಾರಣವಾಗಿ, ಬಂದಡೆ–ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಸಂಗಾ ನೀವೆಂದು ಕಾಂಬೆ–ಪರಶಿವಲಿಂಗವೇ ನೀವೆಂದರಿವೆ. ಮತ್ತೆ–ಪುನರಪಿಯಾಗಿ, ಮನದಲ್ಲಿ–ಚಿತ್ತದಲ್ಲಿ, ಸಂದೇಹ ಹೊಳೆದಡೆ–ಇವರಾವ ಕುಲದವರೋ ಜಂಗಮವಾಗಿ ಬಂದೈದಾರೆ ಇವರಿಗೆ ಭಕ್ತಿಯ ಮಾಡಿದರೆ ಮುಕ್ತಿಯಾಗುತ್ತೈತೋ ಇಲ್ಲವೋ ಎಂಬಂಥ ಸಂಕಲ್ಪ ಹುಟ್ಟಿದರೆ, ನಾನು ಬೆಂದೆನಯ್ಯಾ–ಆ ಸಂಕಲ್ಪವೆ ಒಂದಗ್ನಿಯಾಗಿ ದಹನವಾದೆನಯ್ಯಾ ಎಂಬುದರ್ಥ.

● ಸಂಗಸಹಿತ–ಸಮಯಾಚಾರಕ್ಕೆ ಜಂಗಮಮೂರ್ತಿಗಳ ಮಡಿಗಿಕೊಂಡು, ಶರಣರು–ಕಾಯಕದ ಶೀಲವಂತರು, ಬಂದಡೆ–ಕಾಯಕಕ್ಕೆ ಬಿಜಯಂಗೈದು ಬಂದರೆ, ಎನ್ನ ಮನವು–ಸಂಗನಬಸವೇಶ್ವರನ ಚಿತ್ತವು, ನಂಬುವುದು–ಇವರೇ ಸಾಕ್ಷಾತ್ತಿಸ್ವರೂಪರೆಂದು ವಿಶ್ವಾಸಿಸುವುದು. ಎನ್ನ ಮನವು–ಸಂಗನಬಸವೇಶ್ವರನ ಚಿತ್ತವು, ನಚ್ಚುವುದು–ತನುಮನಧನಂಗಳೆಲ್ಲ ಅವರೊಡವೆ ಅವರ ಪದಾರ್ಥ ಅವರ ಸೊಮ್ಮೆಂದು ವಿಶ್ವಾಸಿಸುವುದು. ಹಾವು ನೇಣೆಂಬ ಇವರಾವ ಕುಲದವರೋ ಕಾಯಕದ ಶೀಲವಂತರಾಗಿ ಬಂದೈದಾರೆ. ಇವರಿಗೆ ಕಾಯಕವ ಕೊಟ್ಟು ಭಕ್ತಿಯ ಮಾಡಿದರೆ ಮುಕ್ತಿಯಾಗುತ್ತೈತೋ ಇಲ್ಲವೋ ಎಂಬಂಥ, ಭ್ರಾಂತುವುಳ್ಳನಕ್ಕ–ಜೀವಭಾವದ ಭ್ರಮಣೆಯುಂಟಾಗಿರುವ ಪರಿಯಂತರವು, ನಾನೆಂತು ಭಕ್ತನಪ್ಪೆನು–ನಾನು ನಿರ್ವಂಚಕಸದ್ಭಕ್ತ ಹೇಂಗಾದೇನು. ಅಂಗಲಿಂಗಸಹಿತವಾಗಿ–ಸಮಯಾಚಾರಕ್ಕೆ ಜಂಗಮಮೂರ್ತಿಗಳ ಮಡಗಿಕೊಂಡು, ಬಂದಡೆ–ಕಾಯಕಕ್ಕೆ ಬಿಜಯಂಗೈದು ಬಂದರೆ, ಸಂಗಾ ನೀನೆಂದು ಕಾಂಬೆ–ಪರಿಶಿವಲಿಂಗವೆ ನೀವೆಂದರಿವೆನು. ಮತ್ತೆ–ಪುನರಪಿಯಾಗಿ ಇವರಿಗೆ ಭಕ್ತಿಯ ಮಾಡಿದರೆ ಮುಕ್ತಿಯಾದೀತೋ ಆಗದೋ ಎಂಬಂಥ ಸಂಕಲ್ಪ ಹುಟ್ಟಿದರೆ, ನಾನು ಬೆಂದೆನಯ್ಯಾ–ಆ ಸಂಕಲ್ಪವೇ ಒಂದಗ್ನಿಯಾಗಿ ದಹನವಾದೆನಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - -

ಹಿಂದಕ್ಕೆ ಕಾಣಬಂದರ್ಥ, ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಸದ್ಭಕ್ತನೆಂತಪ್ಪೆನು–ಶಂಕಾವಿಷಸಂಬಂಧವಾದ ಮನೋಸರೀಸೃಪನು ಮಾಯಾಪಾಶವೆಂಬ ವಿಭ್ರಮಣೆಯುಳ್ಳಾಗಿರುವ ಪರಿಯಂತರವು ನಾನು ಸದ್ಭಕ್ತನು ಹೇಗಾಗುವೆನು? ಮುಂದಕ್ಕೆ ಕಾಣಬಂದರ್ಥ.

---

೪೦೬

**ಕೆಂಡದಲ್ಲಿಟ್ಟಡೆ ಮೈ ಬೆಂದುದೆಂಬರು. ಕೆಂಡಿಟ್ಟವನ ಕೈ ಮುನ್ನವೆ ಬೆಂದುದು. ನಾ ನೊಂದೆನಯ್ಯಾ, ನಾ ಬೆಂದೆನಯ್ಯಾ. ಕೂಡಲಸಂಗನ ಶರಣರ ಕಂಡು ಕಾಣದಂತಡ್ಡ ಮುಖವಿಟ್ಟರೆ ನಾನಂದೇ ಬೆಂದೆನಯ್ಯಾ**

I - - - - - - - - - - - - - - - - - - - - - - - - - - - - - - - - - - - - - - - -

ಕೆಂಡದಲ್ಲಿಟ್ಟಡೆ ಮೈ ಬೆಂದುದೆಂಬರು–ಲೋಕದಲ್ಲಿ ಆತ್ಮರುಗಳು ಇವರು ಅವರ ಮನೆಗೆ ಹೋಗಿ ಉಂಡುಟ್ಟು ಉಡುಗೊರೆ ಹೊದ್ದು ಉತ್ಸಾಹದಿಂದ ಪರಿಣಾಮಿಸಿ ಅವರು ಇವರ ಮನೆಗೆ ಬಂದು ಉಂಡುಟ್ಟು ಉಡುಗೊರೆ ಹೊದ್ದು ಉತ್ಸಾಹದಿಂದ ಪರಿಣಾಮಿಸುವಲ್ಲಿ ಒಳ್ಳಿತ್ತಾಗಿರುವುದು. ಮಧ್ಯದಲ್ಲಿ ಆವುದಾನೊಂದು ಕೊಡುಕೊಂಬುವುದರಿಂದಾದರಾಗಲಿ ಒಂದು ಕಡಬಡ್ಡಿ ಸಾಲದಿಂದಾಗಲಿ

ಒಂದು ಹೆಣ್ಣುಗಂಡಿನಿಂದಲಾದರಾಗಲಿ ಒಂದು ನಂಟಾಚಾರದಿಂದಲಾದರಾಗಲಿ ಒಬ್ಬರಿಗೊಬ್ಬರು ಕೆಟ್ಟುಬಂದು ಇವರು ಅವರ ಮನೆಗೆ ಹೋಗದೆ ಅವರು ಇವರ ಮನೆಗೆ ಬಾರದೆ ಹೊರಹೊರಗಾಗಿದ್ದಲ್ಲಿ ಅದರೊಳಗೆ ಮತ್ತೊಬ್ಬನೊಂದಿಗೆ ಇದಕೇನು ಮಾಡಬೇಕೆಂದು ಕೇಳಿದಲ್ಲಿ, ಅದಕೇನು ಮಾಡೋದೈತೆ, ಇಂಗಳವ ತೆಗದುಕೊಂಡು ಒಗೆದರೆ ಸುಟ್ಟುಕೊಂಡು ಸತ್ತು ಹೋಗುವನೆಂದು ಹೇಳಿದಲ್ಲಿ, ಅವನ ಮಾತುಕೇಳಿ ಇಂಗಳವ ತೆಗೆದುಕೊಂಡು ಒಗೆದವನ, ಕೈ ಮುನ್ನವೆ ಬೆಂದುದು: [ಮುನ್ನವೆ–] ಅವನ ಮೈ ದಹನವಾಗುವುದಕ್ಕಿಂತ ಮೊದಲೇ, ಇಟ್ಟವನ ಕೈ–ಹಸ್ತವು, ಬೆಂದುದು–ದಹನವಾಗುವುದು. ಹಾಂಗೆ, ಒಬ್ಬ ಭಕ್ತನೇನಾದರೂ ಸಮಯಾಚಾರಕ್ಕೆ ಜಂಗಮಮೂರ್ತಿಗಳನು ಕೆಟ್ಟುಮಾಡಿಕೊಂಡು ಆಗಾಗ್ಗೆ ಸೂಚನೆ ಬಿನ್ನಹ ಗಟ್ಟಿಬಿನ್ನಹವನ್ನ ಮಾಡುತ್ತ ಮೃಷ್ಟಾನ್ನ ಪದಾರ್ಥವೆನ್ನು ನೀಡಿ ಸಂತುಷ್ಟಿಬಡಿಸುತ್ತ ಶಾಲು ಶಕಲಾತಿ ಸಣ್ಣಗಂಬಳಿ ಬಣ್ಣದಹಚ್ಚಡ ಮೊದಲಾದವನ್ನು ಕೊಟ್ಟು ಭಕ್ತಿಯ ಮಾಡುತ್ತ ಪಟ್ಟೆಮಂಚ ಲೇಪು ಸುಪ್ಪತ್ತಿಗೆಯ ಮೇಲೆ ಮಲಗಿಸಿಕೊಂಡು ಪರಿಣಾಮದಲ್ಲಿ ಮಡಗಿಕೊಂಡಿರುವ. ಹೀಂಗಿರುತ್ತಿದ್ದ ಹಾಂಗೆ ಅವರು ಮೊದಲಿನ ಹಾಂಗೆ ಸುಮ್ಮನಿರದೆ ಆ ಭಕ್ತನ ಭಕ್ತಿಪರೀಕ್ಷೆಯ ಮಾಡೋ ನೆವದಿಂದಲಾದರೂ ಆಗಲಿ [೧]ಅಥವಾ ಅಪೇಕ್ಷೆ[೧] ಮುಂದುಗೊಂಡಾದರಾಗಲಿ ತನುಮನಧನಂಗಳನು ಹಿಡಿವುತ್ತ ಬರುವರು. ಹಿಡಿವುತ್ತ ಬಂದಲ್ಲಿ ಇವರು ಮೊದಲು ಬಹು ವೈರಾಗ್ಯಪರರಾಗಿದ್ದವರು, ಈಗೇಕೆ ತನುಮನಧನಂಗಳನು ಇಚ್ಛೈಸುತ್ತೈದಾರೆ. ಇವರ ಉಪೇಕ್ಷವ ಮಾಡಿಬಿಡುವುದಕ್ಕುಪಾಯವೇನೆಂದು ಮತ್ತೊಬ್ಬ ಭಕ್ತನ ಕೇಳಿದಲ್ಲಿ ಅದಕ್ಕೆ ಮಾಡೋದೇನೈತೆ? ಸೂಚನೆ ಬಿನ್ನಹ ಗಟ್ಟಿಬಿನ್ನಹವನ್ನು ಮಾಡುವಂಥದನ್ನು ಬಿಟ್ಟುಕೊಟ್ಟರೆ ಅವರೇ ಬೇಸರವಾಗಿ ಹೋಗುತ್ತೈದಾರೆಂದು ಹೇಳಿದಲ್ಲಿ ಅವನ ಮಾತನ್ನು ಕೇಳಿ ಸೂಚನೆ ಬಿನ್ನಹ ಗಟ್ಟಿಬಿನ್ನಹವನ್ನು ಮಾಡುವಂಥದನು ಬಿಟ್ಟುಕೊಟ್ಟಂಥವನ, ಕೈ–ಅಂಗವು, ಮುನ್ನವೇ ಬೆಂದುದು–ಅವರ ಮನಸ್ಸು ಬೇಸರವಾಗದಕಿಂದ ಮೊದಲೇ ಇವನು ಸತ್ತುಹೋಗುತ್ತಿಹನು.

ನಾ ನೊಂದೆನಯ್ಯಾ–ನಾ ಗಾಸಿಯಾದೆನಯ್ಯಾ, ನಾ ಬೆಂದೆನಯ್ಯಾ–ಆ ಉಪೇಕ್ಷೆಯೆಂಬ ಅಗ್ನಿಯಿಂದ ದಹನವಾದೆನಯ್ಯಾ, ಕೂಡಲಸಂಗನ ಶರಣರ–ಜಂಗಮಮೂರ್ತಿಗಳ, ಕಂಡು–ತನ್ನ ಮನೆ ಮುಂದೆ ಹೋಗಿಬರುವಂಥದನು ನೋಡಿ, ಕಾಣದಂತಡ್ಡ ಮುಖವಿಟ್ಟರೆ–ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಅಡ್ಡ ಮೋರೆಯ ಹಾಕಿಕೊಂಡು ಸುಮ್ಮನಿದ್ದರೆ,[೨] ನಾನಂದೇ ಬೆಂದೆನಯ್ಯಾ–ಆ ಉಪೇಕ್ಷವೆಂಬ ಅಗ್ನಿಯಿಂದ ದಹನವಾದೆನಯ್ಯಾ.

..........................

೧–೧ ಅರ್ಥವ ಅಪೇಕ್ಷ (ಗ). ೨ + ನಾ ನೊಂದೆನಯ್ಯಾ_ನಾ ಗಾಸಿಯಾದೆನಯ್ಯಾ (ಕ, ಗ).

---

೪೦೭

**ಎಡದ ಕೈಯಲಿ ನಿಗಳವನಿಕ್ಕಿ ಬಲದ ಕೈಯ ಕಡಿದುಕೊಂಡಡೆ ನೋಯದಿಪ್ಪುದೆ? ಪ್ರಾಣವೊಂದಾಗಿ ದೇಹ ಬೇರೆಲ್ಲ! ಲಿಂಗವ ಪೂಜಿಸಿ ಜಂಗಮವನುದಾಸೀನವ ಮಾಡಿದಡೆ ಬೆಂದೆನಯ್ಯಾ ನಾನು, ಕೂಡಲಸಂಗಮದೇವಾ!**

I - - - - - - - - - - - - - - - - - - - - - - - - - - - - - - - - - - - - - - - - - - - - - - - -

ಎಡದ ಕೈಯಲ್ಲಿ–ವಾಮಹಸ್ತದಲ್ಲಿ, ನಿಗಳವನಿಕ್ಕಿ–ಬೆಳ್ಳಿಯ ಕಡಗ ಚಿನ್ನದ ಕಡಗ ಪಚ್ಚದ ಕಡಗ ರುದ್ರಕಂಕಣ ಮೊದಲಾದವನು ಹಾಕಿಕೊಂಡು, ಬಲದ ಕೈಯ ಕಡಿದುಕೊಂಡಡೆ–ಎರಡೂ ಹಸ್ತವನ್ನು ಸರಿಯಾಗಿ ಹಿಡಿದು ನೋಡಿದರೆ ಎಡದ ಕೈಯ ನೋಡಲು ಅಲಂಕಾರವಾಗಿಪ್ಪುದು, ಬಲದ ಕೈಯ ನೋಡಿದರೆ ಹಾಳಹಾಳ ಬಡಿವುದೆಂದು ಬಲದ ಕೈಯ ಕಡಿದುಕೊಂಡರೆ, ನೋಯದಿಪ್ಪುದೆ?–ದುಃಖವಾಗದೆ ಇದ್ದೀತೆ? ದುಃಖವಾಗುತ್ತಿಹುದು, ಪ್ರಾಣವೊಂದಾಗಿ: ಪ್ರಾಣ–ಹರಣವು, ಒಂದಾಗಿ–ಏಕವಾಗಿ, ದೇಹ ಬೇಜೆಲ್ಲ–ಅಂಗವು ಭಿನ್ನವಿಲ್ಲವು. ಪ್ರಾಣವನ್ನೇ ಚೈತನ್ಯವ ಮಾಡಿಕೊಂಡು ದೇಹವಿರ್ಪುದು. ದೇಹವನ್ನೇ ಅಂಗವ ಮಾಡಿಕೊಂಡು ಪ್ರಾಣವಿರ್ಪುದು. ಅದು ಕಾರಣ ದೇಹಕ್ಕೂ ಪ್ರಾಣಕ್ಕೂ ಬೇರಿಲ್ಲ, ಭಿನ್ನವಿಲ್ಲವೆಂಬ ಹಾಂಗೆ.

● ಎಡದ ಕೈಯಲಿ–ವಾಮಕರಸ್ಥಲದಲ್ಲಿ, ನಿಗಳವನ್ನಿಕ್ಕಿ–ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗವ ಪಿಡಿದುಕೊಂಡು ಪೂಜಿಸಿ ಆರಾಧಿಸುತಿರ್ದು, ಬಲದ ಕೈಯ ಕಡಿದುಕೊಂಡಡೆ–ಬಲದ ಕೈಯೆಂದರೆ ಜ್ಞಾನವು, ಅಂತಪ್ಪ ಜ್ಞಾನಸ್ವರೂಪವಾದ ಜಂಗಮಮೂರ್ತಿಗಳಿಗೆ ಉಪೇಕ್ಷವ ಮಾಡಿಬಿಟ್ಟರೆ ನೋಯದಿಪ್ಪುದೆ?–ಆ ಉಪೇಕ್ಷವೆಂಬ ಅಗ್ನಿಯಿಂದ ಗಾಸಿಯಾಗದೆ ಇದ್ದೀತೆ? ಗಾಸಿಯಾಗುತ್ತಿಹುದು.[೧] ಪ್ರಾಣ–ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮವು, ಒಂದಾಗಿ–ಏಕವಾಗಿ, ದೇಹ ಬೇಜೆಲ್ಲ–ಅಂಗವು ಭಿನ್ನವಾಗಿಲ್ಲವು. ಜಂಗಮವನ್ನೇ ಪ್ರಾಣವ ಮಾಡಿಕೊಂಡು ಲಿಂಗವಿರ್ಪುದು. ಲಿಂಗವನ್ನೇ [೨]ತನ್ನಂಗವ ಮಾಡಿಕೊಂಡು ಜಂಗಮವಿರ್ಪುದು.[೨] ಅದು ಕಾರಣ ಲಿಂಗಜಂಗಮಕ್ಕೆ ಬೇರಿಲ್ಲ, ಭಿನ್ನವಿಲ್ಲವು. ಲಿಂಗವ ಪೂಜಿಸಿ–ಆ ಜಂಗಮಕ್ಕಂಗವಾದಿಷ್ಟ ಮಹಾಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದರಾಧಿಸಿ, ಜಂಗಮನು–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳನು, ಉದಾಸೀನವ ಮಾಡಿದಡೆ–ಅವರ ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಉಪೇಕ್ಷವ ಮಾಡಿಬಿಟ್ಟರೆ, ನಾನು ಬೆಂದೆನಯ್ಯಾ–ಆ ಉಪೇಕ್ಷವೆಂಬ ಅಗ್ನಿಯಿಂದ ದಹನವಾದೆನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧+ ಅಯ್ಯ–ಎಲೆ ಲಿಂಗವೆ (ಕ, ಗ). ೨–೨ ತನ್ನಂತರಂಗವ ಮಾಡಿಕೊಂಡಿರ್ಪುದು (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - - - -

ಎಡದ ಕೈಯಲ್ಲಿ ನಿಗಳವನಿಕ್ಕಿ ಬಲದ ಕೈಯ ಕಡಿಕೊಂಡರೆ ನೋಯದಿಪ್ಪುದೆ?– [೩][ವಾಮ][೩] ಹಸ್ತದಲ್ಲಿರ್ದ ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಗಳನು ಮಾಡಿದಲ್ಲಿ ಇದೆ ಚೆಂದಾಗೈತೆ, ಜಂಗಮಭಕ್ತಿಯನೇನಮಾಡಬೇಕೆಂದು ಬಿಟ್ಟರೆ ಮನಸ್ಸಿಗೆ ದುಃಖ ಹುಟ್ಟದೆ ಇದ್ದೀತೆ? ಮುಂದಕ್ಕೆ ಕಾಣಬಂದರ್ಥ.

.........................................

೩–೩ ದಕ್ಷಿಣ (ಚ, ಜ).

೪೦೮

**ತನುವ ನೋಯಿಸಿ, ಮನವ ಬಳಲಿಸಿ ನಿಮ್ಮ ಪಾದವ ಹಿಡಿದವರೊಳರೆ? ಈ ನುಡಿ ಸುಡದಿಹುದೆ? ಕೂಡಲಸಂಗಮದೇವಾ, ಶಿವಭಕ್ತರ ನೋವೆ ಅದು ಲಿಂಗದ ನೋವು!**

I - - - - - - - - - - - - - - - - - - - - - - - - - - - - - - - - - - - - - - - - - - - - -

ತನುವ ನೋಯಿಸಿ–ಜಂಗಮಮೂರ್ತಿಗಳ ಕೊಂದು ಬಡಿದು ಗಾಸಿಯ ಮಾಡಿದಲ್ಲಿ, ಮನವ ಬಳಲಿಸಿ–ಆ ಜಂಗಮಮೂರ್ತಿಗಳ ಕೊಂದು ಬಡಿದು ಗಾಸಿಯ ಮಾಡಿದಲ್ಲಿ ಮನಸ್ಸಿಗೆ ದುಃಖಿತಟ್ಟುತಿಹುದು. ಅವರ ಮನಸನ್ನು ಆಯಾಸಂಬಡಿಸಿ, ನಿಮ್ಮ ಪಾದವ ಹಿಡಿದವರೊಳರೆ?– ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆದವರಿದ್ದಾರೆ? ಇಲ್ಲವು. ಈ ನುಡಿ ಸುಡದಿಹುದೆ? : [ಈ–] ಆ ಜಂಗಮಮೂರ್ತಿಗಳ ಕೊಂದು ಬಡಿದು ಗಾಸಿಯ ಮಾಡಿದರೇನಾಯಿತ್ತು? ಲಿಂಗಪೂಜೆಯ ಮಾಡಿದರೆ ಬಿಡುಗಡೆಯಾಗೋದಿಲ್ಲವೆ? ಎಂದು ಹೇಳುವಂಥ, ನುಡಿ–ಪ್ರಸಂಗವು, ಸುಡದಿಹುದೆ?–ಅದೇ ಬಂದ ಅಗ್ನಿಯಾಗಿ ದಹಿಸದೆ ಇದ್ದೀತೆ? ದಹಿಸುತ್ತಿಹುದೆಂಬ ದೃಷ್ಟೋಪಮಾನದ ಹಾಂಗೆ.

● ತನುವ ನೋಯಿಸಿ–ಅಂಗಸಂಬಂಧವಾದಿಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದರಾಧಿಸಿ, ಮನವ ಬಳಲಿಸಿ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳನು ಉಪೇಕ್ಷತ್ವವ ಮಾಡಿಬಿಟ್ಟುಕೊಟ್ಟು, ನಿಮ್ಮ ಪಾದವ ಹಿಡಿದವರೊಳರೆ?– ನಿಮ್ಮ ಪದಕಮಲಸ್ವರೂಪವಾದ ಇಷ್ಟಮಹಾಲಿಂಗದಲ್ಲಿ ಕೂಡಿರುವಂಥವರುಂಟಾಗಿದ್ದಾರೆ? ಇಲ್ಲವು. ಈ–ಜಂಗಮಮೂರ್ತಿಗಳ ಉಪೇಕ್ಷವ ಮಾಡಿಬಿಟ್ಟರೇನಾಯಿತ್ತು, ಇಷ್ಟಲಿಂಗವಿಲ್ಲವೆ? ಆ ಇಷ್ಟಮಹಾಲಿಂಗದಲ್ಲಿ ಕೂಡಿರುವಂಥವರುಂಟಾಗಿರ್ಪರೆಂದು ಹೇಳುವಂಥ, ನುಡಿ–ಪ್ರಸಂಗವು, ಸುಡದಿಹುದೆ? – ಅದೇ ಒಂದಗ್ನಿಯಾಗಿ ದಹಿಸದೆ ಬಿಟ್ಟಿತ್ತೇ? ದಹಿಸುತ್ತಿಹುದು. ಕೂಡಲಸಂಗಮದೇವಾ– ಎಲೆ ಪರಶಿವಲಿಂಗವೆ, ಶಿವಭಕ್ತರ–"ಲಿಂಗಭಕ್ತಾಶ್ಚ ಜಂಗಮಾಃ" ಯೆಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳ , ನೋವೇ–ದುಃಖವೆ–ಅದು ಶಿವನಿಗೆ ಗಾಸಿಯಾದ ಹಾಂಗಾಗಿ ಆಗ ಶಿವನು ಅವರಿಗೆ ಕೋಪಿಸಿ ಭವಕ್ಕೆ ಹಾಕಿಸಿಬಿಡುತ್ತಿಹನು.

---

೪೦೯

**ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ. ಆನು ಭಕ್ತ ಎನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದೊಡೆ, ನಿಮಗಾನು ದ್ರೋಹಿಯಯ್ಯಾ. ಕೂಡಲಸಂಗಮದೇವಾ, ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ : ಆತ್ಮಸ್ತುತಿ–ತನಗೊಬ್ಬರು ಕೊಂಡಾಡುವಂಥದು ಅದಲ್ಲದೆ ತನಗೆ ತಾನೇ ಕೊಂಡಾಡುವುದು. ನಾವು ಜ್ಞಾನಿಗಳು ಶಿವಸ್ವರೂಪಿಗಳು,

ಪರಬ್ರಹ್ಮಸ್ವರೂಪಿಗಳೆಂದು ಸ್ತೋತ್ರವ ಮಾಡಿಕೊಂಬಂಥದೇ ಆತ್ಮಸ್ತುತಿ, ಪರನಿಂದೆಯ–ಒಬ್ಬರನು ಆಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರೆಂದು ದೂಷಣೆಯ ಮಾಡುವಂಥದೇ ಪರನಿಂದೆ. ಈ ಆತ್ಮಸ್ತುತಿ ಪರನಿಂದೆಯನ್ನು, ಕೇಳಿಸದಿರಯ್ಯಾ–ಕಿವಿಗೊಟ್ಟಾಲಿಸದ ಹಾಂಗೆ ಮಾಡಯ್ಯಾ, ನಿಮ್ಮ ಧರ್ಮ–ಅದು ನಿಮ್ಮ ಕೃಪೆಯು. ಆನು ಭಕ್ತ–ನಾನು ನಿರ್ವಂಚಕ ಸದ್ಭಕ್ತನು, ಎನ್ನಲ್ಲಿ–ಸಂಗನಬಸವೇಶ್ವರನಲ್ಲಿ, ಲೇಸುಂಟೆಂದು–ನಾನು ಲಿಂಗಪೂಜೆ ಜಂಗಮದಾಸೋಹ ಮಾಡುತ್ತೈದೀನಿ ಎನ್ನಿಂದಲೇ ಲಿಂಗಜಂಗಮಕ್ಕೆ ಸುಖವಾಗುತ್ತೈತೆಂದ, ಪರಿಣಾಮಿಸಿದೊಡೆ–ಸಂತೋಷಿಸಿದೆನಾದರೆ, ನಿಮಗೆ–ಸ್ವಾಮಿಗಳಿಗೆ, ಆನು ದ್ರೋಹಿಯಯ್ಯಾ–ನಾನು ಅಪರಾಧಕನಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರ–ನಿಮ್ಮ ಜಂಗಮಮೂರ್ತಿಗಳ, ಲೇಸೆ–ಉಂಡುಟ್ಟು ಪರಿಣಾಮಿಸಿದಂಥ ಪರಿಣಾಮವೇ, ಎನ್ನ ಲೇಸಯ್ಯಾ–ಅದು ಎನ್ನ ಪರಿಣಾಮವಯ್ಯಾ.

II- - - - - - - - - - - - - - - - - - - - - - - - - - - - - - - - - - - - - - - - - - - -

ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ ನಿಮ್ಮ ಧರ್ಮ. ಆನು ಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದಡೆ ನಿಮಗಾನು ದ್ರೋಹಿಯಯ್ಯಾ–ಗುರುಲಿಂಗಜಂಗಮಕ್ಕೆ ನಾ ಭಕ್ತಿ ಮಾಡುತ್ತೈದೇನೆ; ಅವರು ಕೈಕೊಂಬುತ್ತೈದಾರೆ; ಅವರಿಗೆ ಎನ್ನಿಂದ ಸುಖವಾಗುತ್ತೈತೆ ಎಂಬ ಕಿಂಚಿತ್ತು ಅಹಂಕಾರದಿಂದ ಪರಿತೋಷಿಸಿದರೆ ಎಲೆ ಲಿಂಗವೆ ನಿಮಗಾನು ಅಪಕಾರಿಯಯ್ಯಾ.

IV- - - - - - - - - - - - - - - - - - - - - - - - - - - - - - - - - - - - - - - - - - - -

ನಾನು ಭಕ್ತನೆಂಬುದು ಅಜ್ಞಾನ; ಇದಿರ ನಿಂದೆಯ ಕೇಳೂದು ಅಜ್ಞಾನ; ಜಂಗಮದ ಸುಖವೆ ತನ್ನ ಸುಖವೆಂದಱಿಯದಿಪ್ಪುದಜ್ಞಾನವೆಂಬುದೀ ವಚನದರ್ಥ.

---

೪೧೧

**ನಡೆಯಲಱಿಯದೆ ನುಡಿಯಲಱಿಯದೆ ಲಿಂಗವ ಪೂಜಿಸಿ ಫಲವೇನು? ಅವರ ಸುಖವೆನ್ನ ಸುಖ, ಅವರ ದುಃಖವೆನ್ನ ದುಃಖ, ಕೂಡಲಸಂಗನ ಶರಣರ ಮನ ನೊಂದಡೆ ನಾನು ಬೆಂದೆನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ನಡೆಯಲಱೀಯದೆ–ಅಂಗವಾದದ್ದು ಲಿಂಗವಾದದ್ದು ಪೂಜಾರೂಪುವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸ ಕ್ರಿಯೆಯನ್ನು ತಿಳಿಯದೆ, ನುಡಿಯಲಱಿಯದೆ–ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವನು ತಿಳಿಯದೆ, ಲಿಂಗವ ಪೂಜಿಸಿ–ಗುರುಮುಖದಿಂದ ಬಂದ ಇಷ್ಟಮಹಾಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ, ಫಲವೇನು?–ಪ್ರಯೋಜನವೇನು.

ಅವರ ಸುಖವೆ–ಜಂಗಮಮೂರ್ತಿಗಳು ಉಂಡುಟ್ಟು ಪರಿಣಾಮಿಸಿದಂಥ ಪರಿಣಾಮವೆ, ಎನ್ನಸುಖ–ಅದೇ ಎನ್ನ ಪರಿಣಾಮವು, ಅವರ ದುಃಖವೇ–ಜಂಗಮಮೂರ್ತಿಗಳಿಗಾದಂಥ ವ್ಯಥೆಯೇ,

ಎನ್ನ ದುಃಖ–ಅದು ನನ್ನ ವ್ಯಥೆಯು. ಕೂಡಲಸಂಗನ ಶರಣರ–ಶಿವನ ಚಿತ್ಪ್ರಭಾಂಗಸ್ವರೂಪರಾದ ಜಂಗಮಮೂರ್ತಿಗಳ, ಮನನೊಂದಡೆ–ಅವರ ಮನ ಬೇಸರವಾದರೆ, ನಾನು ಬೆಂದೆನಯ್ಯಾ–ಅವರಿಗಾದಂಥ ವ್ಯಥೆಯೆಂಬ ಅಗ್ನಿಯಿಂದ ನಾನು ದಹನವಾದೆನಯ್ಯಾ.

---

೪೧೧

**ಬಂಜೆ ಬೇನೆಯನರಿಯದಂತೆ ಒಬ್ಬರೊಂದು ನುಡಿವಿರಿ ಕೇಳಿರಯ್ಯಾ. ಎನ್ನಾಯುಷ್ಯ ಎನ್ನ ಭವಿಷ್ಯ ಭಕ್ತರು ಕಂಡಯ್ಯಾ; ಎನ್ನಾಯುಷ್ಯ ಎನ್ನ ಭವಿಷ್ಯ ಪ್ರಮಥರು ಕಂಡಯ್ಯಾ; ಕೂಡಲಸಂಗನ ಶರಣರು ಮುಖಲಿಂಗಿಗಳಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಬಂಜೆ ಬೇನೆಯನರಿಯದಂತೆ ಒಬ್ಬರೊಂದು ನುಡಿವಿರಿ ಕೇಳಿರಯ್ಯಾ : ಬಂಜೆ ಬೇನೆಯನರಿಯದಂತೆ–ಲೋಕದಲ್ಲಿ ಗಂಡನುಳ್ಳಂಥ ಸ್ತ್ರೀಯಳೇನಾದರೂ ಚೊಚ್ಚಿಲ ಗರ್ಭಿಣಿಯಾಗಿ ನವಮಾಸ ಪೂರ್ಣೀಕರಿಸಿ ನವನಾರಸಂದೆಲ್ಲ ಇ೨ರಿ೨ತಿಕ್ಕಿ ಹಡೆಯಲಾರದೆ ಕಷ್ಟಬಡುತ್ತಿದ್ದಲ್ಲಿ ಅನುಚರ ಬಾಂಧವರುಗಳೆಲ್ಲ ಹೋಗಿ ನೋಡಿ, ಎಂದೂ ಹಡೆದಾಯಕಳಲ್ಲ, ಹೇಂಗಾಗುತ್ತೈತೋ ಎಂದು ಬೀದಿಬಾಜಾರದಲ್ಲಿ ಒಬ್ಬರಿಗೊಬ್ಬರು ಪ್ರಸಂಗಿಸುತ್ತ ಹೋಗುತ್ತಿದ್ದಲ್ಲಿ ಅಲ್ಲೊಬ್ಬ ಗೊಡ್ಡ ಸ್ತ್ರೀಯಳು ಹನ್ನೆರಡು ದೇವರಿಗೆ ಹರಕೆಯ ಮಾಡುತ್ತ ಕಂಡಕಂಡ ಪಾಣ್ಬ ಪರುಷರ ನೆರೆವುತ್ತಿದ್ದಲ್ಲಿ ಮಕ್ಕಳಾಗದೆ ಇರುವಳು. ಅವರಾಡುವಂಥ ಪ್ರಸಂಗವ ಕೇಳಿ ಬನ್ನಿರವ್ವಾ ಬನ್ನಿರಕ್ಕಾ ಎಂದು ಕರೆದು ಆ ಪ್ರಸಂಗವೇನೆಂದು ಕೇಳಿದಲ್ಲಿ ಇಂಥಾತನ ಸೊಸೆ ಇಂಥಾತನ ಮಗಳು ಇಂಥಾತನ ಸ್ತ್ರೀಯಳು ಹಡೆಯಲಾರದೆ ಬಹು ಕಷ್ಟಪಡುತ್ತೈದಾಳೆಂದು ಹೇಳಿದಲ್ಲಿ, ಶಿವನು ಮಕ್ಕಳು ಕೊಡುವುದು ಹೆಚ್ಚಲ್ಲದೆ ಹಡೆವುದು ಬಹು ಹೆಚ್ಚೆ? ಎಂದು ಹಾಸ್ಯವ ಮಾಡುವಂಥದೆ ತಿಳಿದಿಪ್ಪಳಲ್ಲದೆ ಹಡೆವಂಥಾ ದುಃಖವನ್ನು ಹಾಸ್ಯವ ಮಾಡಿ ನುಡಿವಂಥ ಗೊಡ್ಡಸ್ತ್ರೀಯಳಿಗೇನಾದರೂ ತಿಳಿಯಬಂದೀತೆ? ತಿಳಿಯಬಾರದ ಹಾಂಗೆ; ಒಬ್ಬರೊಂದು ನುಡಿವಿರಿ ಕೇಳಿರಯ್ಯಾ–ನಿರ್ವಂಚಕ ಸದ್ಭಕ್ತನೇನಾದರೂ ಒಬ್ಬ ಜಂಗಮಮೂರ್ತಿಯ ತನ್ನ ಸಮಯಾಚಾರಕ್ಕೆ ಮಡಗಿಕೊಂಡು ಅವರ ಗಳಗರ್ಜನೆ ದುಡುಕು ದುಂಡಾಚಾರ ಕೋಳಾಟ ಕೊಂ೨ದಾ೨ಟ ಮೊದಲಾದವರನ್ನು ಸೈರಿಸಿಕೊಂಡು ಭಕ್ತಿಯ ಮಾಡುತ್ತಿದ್ದಲ್ಲಿ ಎಡಬಲದಲ್ಲಿದ್ದಂಥ ಭಕ್ತಮಾಹೇಶ್ವರರು ನೋಡಿ ಈತ ಮಹಾಸದ್ಭಕ್ತನೈದಾನೆ ತನ್ನ ಮನೆಯಲ್ಲಿ ಸಮಯಾಚಾರಕ್ಕೆ ಜಂಗಮಮೂರ್ತಿಗಳ ಮಡಗಿ೨ಕೊಂಡು ಜಂಗಮ೨ಭಕ್ತಿಯ ಮಾಡುತ್ತೈದಾನೆ. ಮಾಡಿದರೆ ಮಾಡಬಹುದು. ಆ ಜಂಗಮದ ಗಳಗರ್ಜನೆ ದುಡುಕುದುಂಡಾಚಾರ ಕೋಳಾಟ ಕೊಂ೨ದಾ೨ಟ ಮೊದಲಾದವನ್ನು ಸೈರಿಸಿಕೊಂಡು ಭಕ್ತಿಯ ಮಾಡುವಂಥದು ಬಹು ದುರ್ಘಟವೆಂದು ಹೇಳಿದಲ್ಲಿ ಅದರೊಳಗೊಬ್ಬ ಉಪಾಧಿಕನು ಶಿವನು ಐಶ್ವರ್ಯವ ಕೊಡುವಂಥದು ದೊಡ್ಡದಲ್ಲದೆ ಆ ಜಂಗಮದ ಗಳಗರ್ಜನೆ ದುಡುಕು ದುಂಡಾಚಾರ ಕೋಳಾಟ ಕೊಂ೨ದಾ೨ಟ ಮೊದಲಾದವನ್ನು ತಡೆದುಕೊಂಡು ಭಕ್ತಿಯ ಮಾಡುವಂಥದು ದೊಡ್ಡದೆ? ಎಂದು ಹಾಸ್ಯವ ಮಾಡಿ ನುಡಿವಂಥದನೆ ಬಲ್ಲನಲ್ಲದೆ ಆ ನಿರ್ವಂಚಕ ಸದ್ಭಕ್ತನ ಹಾಂಗೆ ಜಂಗಮದ ಗಳಗರ್ಜನೆ ದುಡುಕು ದುಂಡಾಚಾರ

ಕೋಳಾಟ ಕೊಂ[೧]ದಾ[೧]ಟ ಮೊದಲಾದವನ್ನು ಸೈರಿಸಿಕೊಂಡು ಭಕ್ತಿಯ ಮಾಡುವಂಥದೇನಾದರೂ ತಿಳಿದಿಪ್ಪನೆ? ಅರಿಯನು. ಕೇಳಿರಯ್ಯಾ-ಆಲಿಸಿರಯ್ಯಾ.

ಎನ್ನಾಯುಷ್ಯ-ಎನ್ನ ಪರಮಾಯುಷ್ಯವು, ಎನ್ನ ಭವಿಷ್ಯ-ಎನ್ನ ಅಷ್ಟಭೋಗ ಅಷ್ಟಮಹದೈಶ್ವರ್ಯ[೫]ವೆಂಬ ಭಾಗ್ಯವು,[೫] ಭಕ್ತರು ಕಂಡಯ್ಯಾ- "ಲಿಂಗಭಕ್ತಾಶ್ಚ ಜಂಗಮಾಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳು ಕಾಣಯ್ಯಾ. ಎನ್ನಾಯುಷ್ಯ-ಎನ್ನ ಪರಮಾಯುಷ್ಯವು. ಎನ್ನ ಭವಿಷ್ಯ-ಎನ್ನ ಅಷ್ಟಭೋಗ ಅಷ್ಟಮಹಾದೈಶ್ವರ್ಯ[೫]ವೆಂಬ ಭಾಗ್ಯ[೫]ವು, ಪ್ರಮಥರು ಕಂಡಯ್ಯಾ- ಏಳೂನೂರೆಪ್ಪತ್ತಮರಗಣಂಗಳು ಕಾಣಯ್ಯಾ, ಕೂಡಲಸಂಗನ ಶರಣರು-ಜಂಗಮಮೂರ್ತಿಗಳು, ಮುಖಲಿಂಗಿಗಳಯ್ಯಾ-ಮುಖ್ಯವಾದ ಶಿವಸ್ವರೂಪಿಗಳಯ್ಯಾ.

..........................

೧-೧ ರ (ಕ). ೨-೨ ಡಾ (ಗ). ೩-೩ ಜೀಗಮಕೊಂಡು (ಗ). ೪-೪ x (ಗ). ೫-೫ x (ಗ).

---

## ೪೧೨

**ಬೇಱೂರಿಂದ ಬಂದ ಜಂಗಮವೇ ಲಿಂಗವೆಂದು ಕಂಡು, ಮನೆಯಲಿರ್ದ ಜಂಗಮವನುದಾಸೀನವ ಮಾಡಿದಡೆ ನಾನು ಬೆಂದೆನಯ್ಯಾ. ನಾನು ಬೆಂದ ಬೇಗೆಯನಱಿಯೆನಯ್ಯಾ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಬೇಱೂರಿಂದ ಬಂದ ಜಂಗಮವೇ ಲಿಂಗವೆಂದು ಕಂಡು : ಬೇಱೂರಿಂದ-ಆವುದಾನೊಂದು ದೂರದೇಶ ದೂರಗ್ರಾಮದಿಂದ, ಬಂದ-ಭಿಕ್ಷಕ್ಕೆಂದು ಬಿಜಯಂಗೈದು ಬಂದ, ಜಂಗಮವೇ-ಚರಜಂಗಮವನೇ, ಲಿಂಗವೆಂದು ಕಂಡು-ಇವರೇ ಸಾಕ್ಷಾತ್ಶಿವಸ್ವರೂಪರೆಂದು ಭಕ್ತಿಯ ಮಾಡುತ್ತ, ಮನೆಯಲಿರ್ದ ಜಂಗಮವನುದಾಸೀನವ ಮಾಡಿದಡೆ; ಮನೆಯಲ್ಲಿರ್ದ-ಸ್ವಯಗ್ರಾಮ ಸ್ವಯಮಂದಿರದಲ್ಲಿ ಲಿಂಗಪೂಜೆಯ ಮಾಡಿಕೊಂಡಿರುತಿರ್ದ, ಜಂಗಮನು-ಚರಲಿಂಗವನು, ಉದಾಸೀನವ ಮಾಡಿದಡೆ-ಬೆಟುಗನ ದೇಶಾಂತರ ಮಜ್ಜನಸಾಲಿ ಬು[೧]ಡಕೆಂ[೧]ಬುವ ಹಾಂಗೆ ಇವರೇನು ಒಂದು ದೇಶವನರಿಯರು ಕೋಶವನರಿಯರು ಎಂದು ನಮಸ್ಕಾರ ಬಿನ್ನಹ ಮಾಡುವಲ್ಲಿ ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಉಪೇಕ್ಷವ ಮಾಡಿಬಿಟ್ಟರೆ, ನಾನು ಬೆಂದೆನಯ್ಯಾ-ಆ ಉಪೇಕ್ಷವೆಂಬ ಅಗ್ನಿಯಿಂದ ನಾನು ದಹನವಾದೆನಯ್ಯಾ. ನಾನು ಬೆಂದ-ನಾನು ದಹನವಾದ, ಬೇಗೆಯನು-ಕಿಚ್ಚನ್ನು, ಅಱಿಯೆನಯ್ಯಾ-ತಿಳಿಯೆನಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ಡು ಕೊಂ (ಗ).

---

## ೪೧೩

**ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮವೆ ವಿಶೇಷವೆಂದು ಕಂಡು, ಕಂಥೆಬೊಂತೆ ಜಂಗಮ ಬಂದಡೆ ಹೀನವೆಂದು ಕಂಡೆನಾದಡೆ ಪಂಚಮಹಾಪಾತಕ! ಇದು ಕಾರಣ, ಅನ್ನ ವಸ್ತ್ರ ಧನ ಮಾಟದಲ್ಲಿ ಎರಡಾಗಿ ಕಂಡೆನಾದಡೆ ನಾಯಕನರಕದಲ್ಲಿಕ್ಕುವ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮವೆ ವಿಶೇಷವೆಂದು : ಉಟ್ಟು–ಚೀನಿ ಚೀನಾಂಬರ ಪಟ್ಟುಪಟ್ಟಾವಳಿ ತೋಪು ಶಕಲಾತಿ ತುಪ್ಪಳವಾಸ ನಾಗಲಂಚಿಧೋತ್ರ ದೊಡ್ಡದಡಿಧೋತ್ರ ಸಣ್ಣಗಂಬಳಿ ಬಣ್ಣದ ಹಚ್ಚಡ ಮೊದಲಾದವನ್ನು ಹೊದ್ದುಕೊಂಡು, ತೊಟ್ಟು–ಹಾರಹೀರಾವಳಿ ಉತ್ತರಿಕೆಸರಬಲ್ಲೆಸರ ಗುಂಡಿಸರ ಕಂಠಿಸರ ಕಂಠಮಾಲೆ ಮೋಹನಮಾಲೆಸರ ಚಂದ್ರಹಾರ ರುದ್ರಾಕ್ಷಿ ಪಾಂಚಸ್ಥವಡ ಚಿನ್ನದಕಡಗ ಬೆಳ್ಳಿಕಡಗ ಪಚ್ಚದಕಡಗ ವಜ್ರದ ಕಡಗ ರುದ್ರಕಂಕಣ ಮೊದಲಾದವನ್ನು ತೊಟ್ಟುಕೊಂಡು, ಪೂಜ್ಯವಾಗಿ–ಪಾಲಕಿಪದಸ್ಥರಾಗಿ, ಬಂದ–ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ, ಜಂಗಮನೆ–ಚರಜಂಗಮವೆ, ವಿಶೇಷವೆಂದು–ಬಹುಶ್ರೇಷ್ಠವಾಗಿ ಬಂದಥ ಜಂಗಮಮೂರ್ತಿಗಳೆಂದು, ಕಂಡು–ನೋಡಿ, ಕಂಥೆ–ಕಾವಿಕಂಥೆ ಕಾಟಿಕಂಥೆ ಏಕರಂಗಿಕಂಥೆ ಸುಳುವಿನಕಂಥೆಯು, ಬೊಂತೆ–ಹಳೆಕಂಬಳಿಗೆ ಹಳೆಹಳೆ ಅಂತುಗಳನು ಹೊಲಿದು ಹೊದ್ದುಕೊಂಡಂಥ, ಜಂಗಮ–ಈ ಕಂಥೆಬೊಂತೆ ಹೊದ್ದುಕೊಂಡ ಚರಜಂಗಮವು, ಬಂದಡೆ–ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಹೀನವೆಂದು ಕಂಡೆನಾದಡೆ–ಸಾಮಾನ್ಯವೆಂದರಿದೆನಾದರೆ, ಪಂಚಮಾಹಾಪಾತಕ!–ಐದನೆಯ ಪಾತಕವೇ ದೊರಕೊಂಬುತ್ತಿಹುದು.

ಇದು ಕಾರಣ–ಇದು ನಿಮಿತ್ತಾರ್ಥ, ಅನ್ನ ವಸ್ತ್ರ ಧನ ಮಾಟದಲ್ಲಿ ಎರಡಾಗಿ ಕಂಡೆನಾದಡೆ: ಅನ್ನ–ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮಕ್ಕೆ ಸಣ್ಣಕ್ಕಿಯ ಬೋನ ಬೆಣ್ಣೆಕಾಸಿದ ತುಪ್ಪ ಸೋಸಿದ ಗೋದಿಕಣದ ಕಡಬು ಕಜ್ಜಾಯ ಪರಡಿಪಾಯಸ ಹುಗ್ಗಿ ಹೋಳಿಗೆ ಮೊದಲಾದ ಮೃಷ್ಟಾನ್ನ ಪದಾರ್ಥವ ನೀಡಿ ಸಂತುಷ್ಟಿಬಡಿಸಿ, ಕಂಥೆಬೊಂತೆಯ ಹೊದ್ದುಕೊಂಡು ಬಂದ ಜಂಗಮಕ್ಕೆ ನುಚ್ಚುಕಚ್ಚು ಮೊದಲಾದ ಶುಷ್ಕಾನ್ನ ಪದಾರ್ಥಂಗಳ ನೀಡಿ ಸಂತುಷ್ಟಿಬಡಿಸಿ, ವಸ್ತ್ರ–ಉಟ್ಟುತೊಟ್ಟು ಪೂಜ್ಯವಾಗಿ ಬಂದಂಥ ಜಂಗಮಕ್ಕೆ ಶಾಲುಶಕಲಾತಿ ಸಣ್ಣಗಂಬಳಿ ಬಣ್ಣದ ಹಚ್ಚಡ ಮೊದಲಾದ ದಿವ್ಯದುಕೂಲಂಗಳನು ಕೊಟ್ಟು ಭಕ್ತಿಯ ಮಾಡಿ, ಕಂಥೆಬೊಂತೆಯ ಹೊದ್ದುಕೊಂಡು ಒಂದಂಥ ಜಂಗಮಕ್ಕೆ ದೊರಗುವಸ್ತ್ರ ಕಪ್ಪಟಂಗಳನ್ನು ಕೊಟ್ಟು ಭಕ್ತಿಯ ಮಾಡಿ, ಧನ–ಉಟ್ಟು ತೊಟ್ಟು ಪೂಜ್ಯವಾಗಿ ಬಂದಂಥ ಜಂಗಮಕ್ಕೆ ನೂರಾರು ವರಹವನ್ನು ಕೊಟ್ಟು ಭಕ್ತಿಯ ಮಾಡಿ, ಕಂಥೆಬೊಂತೆಯ ಹೊದ್ದುಕೊಂಡು ಬಂದ ಜಂಗಮಕ್ಕೆ ಚಕ್ಕಡಿಚೌಲವ ಕೊಟ್ಟು ಭಕ್ತಿಯ ಮಾಡಿ, ಮಾಟದಲ್ಲಿ–ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮಕ್ಕೆ ಅಡ್ಡಡ್ಡ ಬಿದ್ದು ನಮಸ್ಕರಿಸಿ ಕಂಥೆಬೊಂತೆಯ ಹೊದ್ದುಕೊಂಡು ಬಂದ ಜಂಗಮಕ್ಕೆ ಗೇಣು [೧][ಚೋಟು][೧] ತುದಿಗೈಯಿಂದ ನಮಸ್ಕಾರವನ್ನು ಮಾಡುವ, ಮಾಟದಲ್ಲಿ–ಭಿನ್ನಭಿಕ್ತಿ ಮಾಟದಿಂದ, ಎರಡಾಗಿ ಕಂಡೆನಾದಡೆ–ಹೀಂಗೆ ಜಂಗಮದಲ್ಲಿ ಭಿನ್ನವಿಟ್ಟುಕೊಂಡರಿದೆನಾದರೆ, ಕೂಡಲಸಂಗಮದೇವ–ಪರಶಿವಲಿಂಗವು, ನಾಯಕ ನರಕದಲ್ಲಿಕ್ಕುವ–ದೊರೆ ನಿರಯದಲ್ಲಿ ಹಾಕುತ್ತಿಹನು.

........................

೧-೧ ಚೋಟುಕಿ (ಕ), ಚೋಟಾಕಿ (ಗ).

---

೪೧೪

**ಅಡ್ಡ ದೊಡ್ಡ ನಾನಲ್ಲಯ್ಯಾ. ದೊಡ್ಡ ಬಸಿಱು ಎನಗಿಲ್ಲಯ್ಯಾ, ದೊಡ್ಡವರನಲ್ಲದೆ ನಿಮ್ಮವರು ಮನ್ನಿಸರಯ್ಯಾ, ಹಡೆದುಂಬ ಸೂಳೆಯಂತೆ ಧನವುಳ್ಳವರನಱಸಿಯಱಸಿ ಬೋಧಿಸಲು ಪ್ರಾರ್ಥಿಸಲು ಮುನ್ನ ನಾನಱಿಯನಯ್ಯಾ. ದೊಡ್ಡತನವೆನಗಿಲ್ಲಯ್ಯಾ, ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ, ಅನಾಥ ನಾನಯ್ಯಾ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಅಡ್ಡ ದೊಡ್ಡ ನಾನಲ್ಲಯ್ಯಾ-ಚೀನಿ ಚೀನಾಂಬರ ಪಟ್ಟೆಪಟ್ಟಾವಳಿ ತೋಪು ಶಕಲಾತಿ ತುಪ್ಪಳವಾಸ ಮೊದಲಾದವನ್ನು ಅಡ್ಡಡ್ಡಲಾಗಿ ಹಾಕಿಕೊಂಡು ಪೂಜ್ಯವಾಗಿ ಬಂದ ಜಂಗಮಕ್ಕೆ ಮಾನಮನ್ನಣೆಯಿಂದ ಭಕ್ತಿಯಮಾಡಿ ಕಂಥೆಬೊಂತೆ ಹೊದ್ದುಕೊಂಡುಬಂದ ಜಂಗಮಕ್ಕೆ ಉದಾಸೀನದಿಂದ ಭಕ್ತಿಯ ಮಾಡುವಾತ ನಾನಲ್ಲಯ್ಯಾ. ದೊಡ್ಡ ಬಸಿಱು ಎನಗಿಲ್ಲಯ್ಯಾ-ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಮನೆಯಳಗಿದ್ದಂಥ ಪದಾರ್ಥವ ನೀಡಿ ಕಳುಹೆಂದ್ಢೇಳಿ ಕಡೆಯಲ್ಲಿ ತಾನು ಬಂದು ಮೃಷ್ಟಾನ್ನವ ಮಾಡಿಸಿಕೊಂಡು ಏಕಾಂತಸ್ಥಾನದಲ್ಲಿ ಕುಳಿತುಕೊಂಡು ತಾನು ತನ್ನ ಹೆಂಡಿರು ಮಕ್ಕಳು ಸಹವಾಗಿ ಕಂಠ[೧] ಪರಿಯಂತರ ಯಥೇಷ್ಟವಾಗಿ ತೆಗೆದುಕೊಂಡು ಕಲಗಂಚಿನ ಬಾನೆಯೋಪಾದಿಯಲ್ಲಿ [೨]ದೊಡ್ಡ[೨] ಹೊಟ್ಟೆಯ ಮಾಡಿಕೊಂಡಿರುವಾತ ನಾನಲ್ಲಯ್ಯಾ. ನಿಮ್ಮವರು-ನಿಮ್ಮ ಉಪಾಧಿಕರು, ದೊಡ್ಡವರನಲ್ಲದೆ ಮನ್ನಿಸರಯ್ಯಾ-ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮಕ್ಕೆ ಮಾನಮನ್ನಣೆಯಿಂದ ಭಕ್ತಿಯ ಮಾಡುವರಲ್ಲದೆ ಕಂಥೆಬೊಂತೆಯ ಹೊದ್ದುಕೊಂಡು ಬಂದ ಜಂಗಮಕ್ಕೆ ಮಾನಮನ್ನಣೆಯಿಂದ ಭಕ್ತಿಯ ಮಾಡರಯ್ಯಾ.

ಹಡೆದು-ಒಬ್ಬರಿದೊಂದೊಸ್ತುವನ್ನು ಪಡೆದುಕೊಂಡು, ಉಂಬ-ಅನುಭವಿಸುವ, ಸೂಳೆಯಂತೆ-ಪಣ್ಯಾಂಗನೆಯ ಹಾಂಗೆ, ಧನವುಳ್ಳವರ-ದ್ರವ್ಯವುಂಟಾದವರ, ಅಱಸಿ ಅಱಸಿ-ನಾಡಿಗ ದೇಸಾಯಿ ಸೆಟ್ಟಿ ಚೌಧರಿ ಮೊದಲಾದವರ ಹುಡುಕಿ ಹುಡುಕಿ, ಬೋಧಿಸಲು-ನನ್ನ ಕಾಮಕಲಾ ಪ್ರೌಢಿಕೆಯ ನೀವು ಅರಿಯಬೇಕು, ನಿಮ್ಮ ಕಾಮಕಲಾ ಪ್ರೌಢಿಕೆಯ ನನಗರುಹಿಕೊಡಬೇಕೆಂದು ಏಕಾಂತ[೩]ಸ್ಥಾನ[೩]ದಲ್ಲಿ ಕುಳಿತುಕೊಂಡು ಹೇಳಲು, ಪ್ರಾರ್ಥಿಸಲು-ಕಾಮಚಕ್ರೇಶ್ವರನಂಥಾತನು ಶ್ರೀಕೃಷ್ಣಕಾರ್ತಿಕೇಯವೀರನಂಥಾತನು ಎಂದು ಕೊಂಡಾಡಲು, ಮುನ್ನ ನಾನಱಿಯೆನಯ್ಯಾ-ಮೊದಲೇ ನಾ ತಿಳಿಯೆನಯ್ಯಾ ಎಂಬುದರ್ಥ.

● ಹಡೆದುಂಬ-ಭಿನ್ನವಿಟ್ಟುಕೊಂಡಾರಾಧಿಸಿ ಭಿನ್ನಫಲಪದಂಗಳ ಪಡೆದನುಭವಿಸುವ, ಸೂಳೆಯಂತೆ-ಉಪಾಧಿಕನ ಹಾಂಗೆ, ಧನವುಳ್ಳವರನಱಸಿ ಒಳ್ಳೇ ಗುರುತರದಕ್ಷರಾಚಾರ್ಯರು ಗುರುಚರಮೂರ್ತಿಗಳು ಶಿವಾನುಭಾವಿಗಳು ಒಂಟಿಗಾರ ವಿರಕ್ತರುಗಳು ಯಾವ ದೇಶದಲ್ಲೈದಾರೋ

ಯಾವ ಗ್ರಾಮದಲ್ಲೈದಾರೋ ಯಾರ ಭಕ್ತಿಯಲ್ಲೈದಾರೋ ಎಂದು ರೊಟ್ಟಿ ಬುತ್ತಿಯನ್ನು ಕಟ್ಟಿಕೊಂಡು ಹೋಗಿ ಹುಡಕಿ ಅವರಿದ್ದಂಥ ಸ್ಥಾನಕ್ಕೆ ಹೋಗಿ, ಬೋಧಿಸಲು–ಸ್ವಾಮೀ ನಮ್ಮ ಬಿನ್ನಹ ಕೈಕೊಳ್ಳಬೇಕು. ನಿಮ್ಮ ಕುಮಾರನ ಬಿನ್ನಹ ಕೈಕೊಳ್ಳಬೇಕೆಂದು ಹೇಳಲು, ಪ್ರಾರ್ಥಿಸಲು– "ಜಂಗಮೋಜಗದಾರಾಧ್ಯೋ। ಜಂಗಮಶ್ಚ ಜಗತ್ಪತಿಃ। ಜಂಗಮಸ್ತು ಜಗತ್ಪೂಜ್ಯೋ। ಜಂಗತ್ಪಾವನ ಜಂಗಮಃ॥" ಎಂದು ಇವರು ಆದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿ ಕೊಟ್ಟಂಥವರು, ಅನಾದಿ ಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿ ಕೊಟ್ಟಂಥವರು, ಭಕ್ತವತ್ಸಲರು ಮುಕ್ತಿಪ್ರದಾಯಕರು ನಿರಂಜನಗಣಾಧೀಶ್ವರನ ಸಾಂಪ್ರದಾಯಕರೇ ಇವರೆಂದು ಸ್ತೋತ್ರವ ಮಾಡಲು, ಮುನ್ನ ನಾನಜಿಯೆನಯ್ಯಾ–ಮೊದಲೇ ನಾ ತಿಳಿಯೆನಯ್ಯಾ.

ದೊಡ್ಡತನವೆನಗಿಲ್ಲಯ್ಯಾ–ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮಕ್ಕೆ ಮಾನಮನ್ನಣೆಯಿಂದ ಭಕ್ತಿಯ ಮಾಡಿ ಕಂಥೆಬೊಂತೆಯ ಹೊದ್ದುಕೊಂಡು ಬಂದ ಜಂಗಮಕ್ಕೆ ಉಪೇಕ್ಷೆಯಿಂದ ಭಕ್ತಿಯ ಮಾಡುವಂಥದು ಎನ್ನಲ್ಲಿ ಉಂಟಾಗಿಲ್ಲವಯ್ಯಾ. ನಿಮ್ಮ ಪ್ರಮಥರಿಗೆ–ನಿಮ್ಮೇಳು ನೂರೆಪ್ಪತ್ತಮರಗಣಂಗಳಿಗೆ, ಅಂಜುವೆನಂಜುವೆ–ಹೆದರುವೆ ಹೆದರುವೆ. ಅನಾಥ ನಾನಯ್ಯಾ–ಮುಮುಕ್ಷಸ್ವರೂಪ ನಾನಯ್ಯಾ. ಮತ್ತಂ ಬಡವರಿಗೆ ಬಾಂಧವಸ್ವರೂಪ ನಾನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧+ಸ್ಥಾನ (ಕ). ೨–೨ x (ಗ). ೩–೩ ಸ್ಥಲ (ಕ).

---

೪೧೫

**ಕುದುರೆ ಸತ್ತಿಗೆಯವರ ಕಂಡಡೆ ಹೊರಳಿ ಬಿದ್ದು ಕಾಲ ಹಿಡಿವರಯ್ಯಾ; ಬಡ ಭಕ್ತರು ಬಂದಡೆ ಎಡೆಯಿಲ್ಲ ಅತ್ತ ಸನ್ನಿಯೆಂಬರು; ಎನ್ನೊಡೆಯ ಕೂಡಲಸಂಗಯ್ಯನವರ ತಡೆಗೆಡಹಿ ಮೂಗ ಕೊಯ್ಯದೆ ಮಾಣ್ಬನೆ?**

I - - - - - - - - - - - - - - - - - - - - - - - - - - - - - - - - - - - - - - - - - - -

ಕುದುರೆ ಸತ್ತಿಗೆಯವರ ಕಂಡಡೆ : [ಕುದುರೆ ಸತ್ತಿಗೆಯವರ–] ಕುದರೆಯನ್ನು ಹತ್ತಿಕೊಂಡು ಕೊಡೆಯನ್ನು ಹಿಡಿಸಿಕೊಂಡು ಬರುವಂಥ ಜಂಗಮಮೂರ್ತಿಗಳ, ಕಂಡಡೆ–ದರುಶನವಾದರೆ, ಬಿದ್ದು–ಬೀದಿಬಾಜಾರವೆನ್ನದೆ ಅಡ್ಡಡ್ಡ ಬಿದ್ದು, ಹೊರಳಿ–ಉತನಂಗೈದು, ಕಾಲ ಹಿಡಿವರಯ್ಯಾ–ಪಾದಕ್ಕೆ ನಮಸ್ಕಾರವ ಮಾಡಿ ಸ್ವಾಮೀ ನಮ್ಮೂರಿಗೆ ಬರಬೇಕು ತಮ್ಮೂರಿಗೆ ಬರಬೇಕು ನಮ್ಮ ಮನೆಗೆ ಬರಬೇಕು ತಮ್ಮ ಮನೆಗೆ ಬರಬೇಕೆಂದು ಬಿನ್ನಹ ಮಾಡುವರಯ್ಯಾ. ಬಡ ಭಕ್ತರು ಬಂದಡೆ–ಕಂಥೆ ಬೊಂತೆಯ ಹೊದ್ದಕೊಂಡಂಥ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಎಡೆಯಿಲ್ಲ ಅತ್ತ ಸನ್ನಿಯೆಂಬರು–ಇನ್ನೂ ನಮ್ಮ ಮನೆಯೊಳಗೆ ಪದಾರ್ಥವಾಗಿಲ್ಲ ಹೆಂಗಸರಿದ್ದರೆ ನೀರಿಗೆ ಹೋಗೈದಾರೆ, ನಿಮಗೆ ನೀಡುವುದಕ್ಕೆ ತೆರಪಿಲ್ಲ. ನಿಮಗೆ ನೀಡುವಂಥ ನಾಡಿಗ ದೇಸಾಯಿ ಸೆಟ್ಟಿ ಚೌಧರಿ ವ್ರತಶೀಲವಂತರ ಮನೆಗಳು ಮುಂದಕ್ಕೈದಾವೆ; ಹೋಗಿರಿಯೆಂದು

ಹೇಳುವರು. ಎನ್ನೊಡೆಯ–ಎನ್ನ ಕರ್ತನಾದಂಥ, ಕೂಡಲಸಂಗಯ್ಯನು–ಪರಶಿವಲಿಂಗವು ಅವರ–ಅಂತಪ್ಪ ಆಶಾಲಾಂಛನಿ ಉಪಾಧಿಕರನು, ತಡೆಗೆಡಹಿ–ಅಡ್ಡನೀಳವಾಗಿ ಹಾಕಿ, ಮೂಗ ಕೊಯ್ಯದೆ ಮಾಣ್ಬನೆ?–ವದನಕ್ಕೆ ಶೃಂಗಾರವಾದ ಘ್ರಾಣವನು ಕೃಂತಿಸದೆ ಬಿಟ್ಟಾನೆ? ಬಿಡನೆಂಬುದರ್ಥ.

ಮೂಗೆಂದರೆ–ಆಚಾರವು, ಅಂತಪ್ಪ ಆಚಾರವನ್ನೇ ಅಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕದೆ ಬಿಟ್ಟಾನೆ? ಬಿಡನು.

---

೪೧೬

**ದೂರದಿಂದ ಬಂದ ಜಂಗಮವ ಅಯ್ಯಗಳೆಂದು ಸಾರಿರ್ದ ಜಂಗಮವ ಪರಿಚಾರಕರೆಂಬ ಕೇಡಿಂಗೆ ನಾನು ಬೆಜಗಾದೆನಯ್ಯಾ. ಸಾರಿರ್ದವರೆಂದು ಬೇಱೆ ಮಾಡಿ ಕಂಡೆನಾದಡೆ ಕೂಡಲಸಂಗಮದೇವ ಸಿಂಗಾರದ ಮೂಗ ಹಲ್ಲುದೋರಲು ಕೊಯ್ಯದೆ ಮಾಣ್ಬನೆ?**

I - - - - - - - - - - - - - - - - - - - - - - - - - - - - - - - - - - - - - - - - - - - - -

ದೂರದಿಂದ ಬಂದ–ದೂರ ದೇಶ ದೂರ ಗ್ರಾಮದಿಂದ ಭಿಕ್ಷಕ್ಕೆಂದು ಬಿಜಯಂಗೈದು ಬಂದ, ಜಂಗಮವ–ಚರಜಂಗಮವನು, ಅಯ್ಯಗಳೆಂದು–ಇವರೇ ಸಾಕ್ಷಾತ್ಶಿವಸ್ವರೂಪಿಗಳೆಂದು, ಸಾರಿರ್ದ– "ಸಾರು ಸಮೀಪೇ" ಎಂದು ಸ್ವಯಗ್ರಾಮ ಸ್ವಯಮಂದರಿದಲ್ಲಿ ಲಿಂಗಪೂಜೆಯ ಮಾಡಿಕೊಂಡಿರ್ದಂಥ, ಜಂಗಮವ–ಚರಲಿಂಗವನು, ಪರಿಚಾರಕರೆಂಬ–ನಾವು ಹೋಗೆಂದಲ್ಲಿಗೆ ಹೋಗುತ್ತೈದಾರೆ ಬಾಯೆಂದಲ್ಲಿಗೆ ಬರುತ್ತೈದಾರೆ ಇವರು ನಮ್ಮ ನಾಲ್ವರ ಮನುಷ್ಯರೊಳಗೆ ಈತನೊಬ್ಬ. ಮನುಷ್ಯನೆಂದು ಹೇಳುವರ, ಕೇಡಿಂಗೆ–ಲುಕ್ಸಾನಕ್ಕೆ, ನಾನು–ಸಂಗನಬಸವೇಶ್ವರನು, ಬೆಜಗಾದೆನಯ್ಯಾ–ನಾಸಿಕದ ಮೇಲೆ ತರ್ಜನಿಯನ್ನು ಮಡಿಗಿಕೊಂಡು ಆಶ್ಚರ್ಯಂಬಟ್ಟೆನಯ್ಯಾ. ಸಾರಿರ್ದವರು–ಸ್ವಯಗ್ರಾಮ ಸ್ವಯಮಂದಿರದಲ್ಲಿ ಲಿಂಗಪೂಜೆಯ ಮಾಡಿಕೊಂಡಿದ್ದಂಥವರು, ದೂರಿರ್ದವರೆಂದು–ದೂರ ದೇಶ ದೂರ ಗ್ರಾಮದಲ್ಲಿದ್ದವರೆಂದು, ಬೇಱೆ ಮಾಡಿ ಕಂಡೆನಾದಡೆ–ಹೀಂಗೆ ಭಿನ್ನವಿಟ್ಟುಕೊಂಡರಿದೆನಾದರೆ, ಕೂಡಲಸಂಗಮದೇವ–ಪರಶಿವಲಿಂಗವು, ಸಿಂಗಾರದ ಮೂಗ–ವದನಕ್ಕೆ ಅಲಂಕಾರವಾಗಿರುವ ಘ್ರಾಣವನು, ಹಲ್ಲುದೋರಲು–ರದನಂಗಳು ಕುರುಹು ಕಾಣಿಸುವ ಹಾಂಗೆ, ಕೊಯ್ಯದೆ ಮಾಣ್ಬನೆ–ಕೃಂತಿಸದೆ ಬಿಟ್ಟಾನೆ? ಬಿಡನೆಂಬುದರ್ಥ.

● ಸಿಂಗಾರದ ಮೂಗ–ಆಚಾರಾಂಗವೆಂಬ ವದನಕ್ಕೆ ಅಲಂಕಾರವಾಗಿ ಒಪ್ಪುವಂಥ ಚಿತ್ಕರಣಂಗಳೆಂಬ ಘ್ರಾಣವನ್ನು, ಕೊಯ್ಯದೆ ಮಾಣ್ಬನೆ?–ಆ ಚಿತ್ಕರಣಂಗಳನು ಅಪಹರಿಸಿ ದುಷ್ಕರಣಂಗಳಿಗೊಳಗುಮಾಡಿ ಮಾನಭಂಗವ ಮಾಡಿ ಭವಕ್ಕೆ ಹಾಕದೆ ಬಿಟ್ಟಾನೆ? ಹಾಕುತ್ತಿಹನು.

---

೪೧೭

**ಹಿಡಿವೆಡೆಯನೆ ಕಾಸಿ ಹಿಡಿದ ಕೈ ಬೆಂದು ಮಿಡಮಿಡನೆ ಮಿಡುಕುವ ಮರುಳ ಮಾನವನೆ, ಬಡವನೆಂದೆನಬೇಡ ಲಾಂಛನಧಾರಿಯನು. [೧]ಕಡುಸ್ನೇಹದಿಂದವರ ಪೂಜಿಸುವುದು.[೧] ನಿಜವಡಗಿದ ರೂಪು ನಿರ್ವಯಲಸ್ಥಾನ, ನಡೆಲಿಂಗ ಜಂಗಮ[೨]ವೆ ಲಿಂಗ[೨] ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಹಿಡಿವೆಡೆಯನೆ ಕಾಸಿ-ಕಬ್ಬಿಣವನ್ನು ಕಾಸಿ ಹಿಡಿಯಬೇಕಾದರೆ ಇಕ್ಕಳದಿಂದ ಇರಿಕಿಸಿ ತಂಡಸದಿಂದ ಒತ್ತಿಹಿಡಿದು ಅಡ್ಡಗಲ್ಲಮೇಲಿಕ್ಕಿ ಚಮ್ಮಟಿಗೆಯಿಂದ ಬಡಿಯಬೇಕಲ್ಲದೆ ಹಿಡಿವಂಥ ಇಕ್ಕಳವನೆ, ಕಾಸಿ-ಕೆಂಪಗೆ ಕಾಸಿ, ಹಿಡಿವ-ಹಿಡಿವಂಥ, ಕೈ-ಹಸ್ತವು, ಬೆಂದು-ದಹನವ ಮಾಡಿಕೊಂಡು, ಮಿಡಮಿಡನೆ ಮಿಡುಕುವ-ಅತ್ಯಂತ ಸಿಡಿಮಿಡಿಗುಟ್ಟುವ, ಮರುಳಮಾನವನೆ-ಹುಚ್ಚುಮನುಜನೇ ಎಂಬ ದೃಷ್ಟೋಪಮಾನದ ಹಾಂಗೆ, ಹಿಡಿವೆಡೆಯನೆ-ನಿಜಮೋಕ್ಷವನ್ನು ದೃಢವಿಡಿದುಕೊಡುವಂಥ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬರಲು, ಕಾಸಿ-ಉಪೇಕ್ಷವ ಮಾಡಿಬಿಟ್ಟು ಅವರ ಮನ ಬೇಸರ ಹುಟ್ಟಿಸಿ, ಹಿಡಿದ-ಹಸ್ತದಲ್ಲಿ ಲಿಂಗವನು ದೃಢವಿಡಿದು ಲಿಂಗಪೂಜೆಯ ಮಾಡುವಂಥವನ, ಕೈ-ಅಂಗವು, ಬೆಂದು-ಉಪೇಕ್ಷವೆಂಬ ಅಗ್ನಿಯಿಂದ ದಹನವಾಗಿ, ಮಿಡಮಿಡನೆ ಮಿಡುಕುವ-ಅತ್ಯಂತ ವ್ಯಾಕುಲಗೊಂಬ, ಮರುಳ ಮಾನವನೆ-ಉಪಾಧಿಕವೆಂಬ ಹುಚ್ಚು ಮನುಷ್ಯನೆ, ಲಾಂಛನಧಾರಿಯನು-ಶಿವಲಾಂಛನಧಾರಿಯಾದ ಜಂಗಮಮೂರ್ತಿಗಳನು, ಬಡವರೆಂದೆನಬೇಡ-ಇವರಿಗೆ ಭಕ್ತಿಯ ಮಾಡಿದರೆ ಆ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಡಲಾರದಿದ್ದಂಥ ಅಶಕ್ತರೆಂದು ಹೇಳಬೇಡವು.

ಕಡುಸ್ನೇಹದಿಂದ-ಅತ್ಯಂತ ವಿಶ್ವಾಸದಿಂದ. ಅವರ-ಆ ಜಂಗಮಮೂರ್ತಿಗಳ, ಪೂಜಿಸುವುದು-ಆರಾಧಿಸುವುದು. ನಿಜವಡಗಿದ-ಐದು ವದನವೇ ಒಂದು ವದನದಲ್ಲಿ ಹತ್ತು ತೋಳುಗಳೇ ಎರಡು ತೋಳುಗಳಲ್ಲಿ ಹದಿನೈದು ನೇತ್ರಂಗಳೇ ಎರಡು ನೇತ್ರಂಗಳಲ್ಲಿ ಅಡಗಿಸಿಕೊಂಡು ಬಂದಂಥ ಜಂಗಮಮೂರ್ತಿಗಳ ಸ್ವಸ್ವರೂಪು, ನಿರ್ವಯಲಸ್ಥಾನ-ಸರ್ವಕಳಾವಿಶ್ರಾಂತಿಯ ಸ್ಥಾನವಾದ ಬ್ರಹ್ಮವೇ ತಾನಾಗಿಪ್ಪನು. ನಡೆ ಲಿಂಗ-ಲಿಂಗ ಮುಂತಾಗಿ ಆಚರಿಸುವುದು, ಜಂಗಮವೇ ಲಿಂಗ-ಜಂಗಮವೇ ಸಾಕ್ಷಾತ್ಶಿವಸ್ವರೂಪು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - - -

೧-೧ ಕಂಡು ನೇಹದಿಂದ ಅವರ ಪೂಜೆಯ ಮಾಡುವುದು (ಚ, ಜ). ೨-೨ x (ಚ, ಜ).

..........................

ಹಿಡಿವಡೆಯನೆ ಕಾಸಿ-ವಂಚನೆ ಉದಾಸೀನ ಅಹಂಕಾರ ದೂಷ್ಯಾಗ್ನಿಯಿಂದ ಕಾಹೇರಿಸಿ, ಹಿಡಿವ ಕೈ ಬೆಂದು-ಇಷ್ಟಲಿಂಗವನು ಭಿನ್ನವಿಟ್ಟು ಗ್ರಹಿಸುವ ಕುಚಿತ್ತವೆಂಬ ಹಸ್ತವು ದಹನವಾಗಿ, ಮಿಡಮಿಡನೆ ಮಿಡುಕುವ ಮರುಳ ಮಾನವನೆ-ಸಿಡಿಮಿಡಿಯಾಗುವ ಎಲೆ ಹುಚ್ಚು ಮನುಷ್ಯನೆ, ಬಡವರೆಂದೆನಬೇಡ-ನಿರ್ಧನಿಕರೆನಬೇಡ, ಲಾಂಛನಧಾರಿಯನು ಕಂಡು-ಕಾವಿಕಾಷಾಯಾಂಬರ ವಿಭೂತಿರುದ್ರಾಕ್ಷಿಯನು ತಳೆದುಕೊಂಡಿರುವ ಗುರುಲಿಂಗಜಂಗಮವನು ಸಾಕ್ಷಾತ್ಶಿವಸ್ವರೂಪವೆಂದು ನೋಡಿ, ಸ್ನೇಹದಿಂದವರ ಪೂಜೆ ಮಾಡೂದು-ಅತ್ಯಂತ ಪ್ರೀತಿಯಿಂದ ಆ ಗುರುಲಿಂಗಜಂಗಮವನು ಅರ್ಚನಾರ್ಪಣಾದಿಗಳಿಂದ ಆರಾಧನೆಯ ಮಾಡೂದು. ನಿಜವಡಗಿದ ರೂಪು ನಿರ್ವಯಲಸ್ಥಾನ-ಪಂಚಮುಖಲಲಾಟಲೋಚನ ಚಂದ್ರಕಲೆಯೆಂಬ ಸಹಜಸ್ವರೂಪವಂತರ್ಗತವಾಗಿ ಜಗಹಿತಾರ್ಥ ಕಾರಣವಾಗಿ ಬಂದ ಜಂಗಮಸ್ವರೂಪು ಸರ್ವಕಳಾವಿಶ್ರಾಂತಿಸ್ಥಾನವಾದ ನಿಃಕಲಲಿಂಗಸ್ಥಲವೆಂಬುದರ್ಥ. ನಡೆಲಿಂಗ ಜಂಗಮ ಕೂಡಲಸಂಗಮದೇವಾ-ಆ ಶರಣನ ಕ್ರಿಯಾಚರಣೆಯು ಇಷ್ಟಲಿಂಗಸ್ವರೂಪು, ಆ ಶರಣನ ಜ್ಞಾನಾಚರಣೆಯು ಪ್ರಾಣಲಿಂಗಸ್ವರೂಪು ಎಲೆ ಪರಶಿವನೆ.

IV- - - - - - - - - - - - - - - - - - - - - - - - - - - - - - - - - - - - - - - - - - - - - -

ಅನಾಮ ಅಖಂಡಿತವಾದ[ವ] ಜಂಗಮವೆಂದು ನಂಬೂದೆ ಆಚಾರ; ಬಡವನೆಂದು ಕಂಡರೆ ಕೆಡುವನೆಂಬುದೀ ವಚನದರ್ಥ.

---

೪೧೮

**ಹಾಲ ಕಂದಲು, ತುಪ್ಪದ ಚಟ್ಟಿಗೆ ಬೋಡ ಮುಕ್ಕಿನಬೇಡ. ಹಾಲು ಸಿಹಿ, ತುಪ್ಪ ಕಮ್ಮಗೆ : ಲಿಂಗಕ್ಕೆ ಬೋನ ! ಕೂಡಲಸಂಗನ ಶರಣರ ಅಂಗಹೀನರೆಂದಡೆ ನಾಯಕನರಕ !**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಹಾಲ ಕಂದಲು ತುಪ್ಪದ ಚೆಟ್ಟಿಗೆ ಬೋಡ ಮುಕ್ಕೆನಬೇಡ: ಹಾಲ ಕಂದಲು– ಹಾಲು ಕಾಸುವಂಥ ಬದಲು ಕಂಠವೆಲ್ಲ ಬೋಡನಾಗೈತೆ ಎಂದು ಹೇಳಬೇಡವು. ತುಪ್ಪದ ಚೆಟ್ಟಿಗೆ ಮುಕ್ಕೆನಬೇಡ– ತುಪ್ಪ ಕಾಸುವಂಥ ಚೆಟ್ಟಿಗೆಯು ಮುಕ್ಕನಾಗೈತೆ ಎಂದು ಹೇಳಬೇಡವು. ಹಾಲು–ಬೋಡಮಡಕೆಯೊಳಗೆ ಕಾಸಿದಂಥ ಕ್ಷೀರವು, ಸಿಹಿ–ಬಹುರೂಚಿಯಾಗಿರುತ್ತದೆ. ತುಪ್ಪ–ಮುಕ್ಕಚೆಟ್ಟಿಗೆಯಲ್ಲಿ ಕಾಸಿದಂಥ ಘೃತವು, ಕಮ್ಮಗೆ–ನಾಸಿಕಕ್ಕೆ ಘಮಘಮವೆಂದು ಪರಿಮಳಿಸುತ್ತಿವುದು. ಲಿಂಗಕ್ಕೆ ಬೋನ–ಸಣ್ಣಕ್ಕಿ ಬೋನವನು ಮಾಡಿ ಹಾಲು ತುಪ್ಪವ ನೀಡಿ ಲಿಂಗಕ್ಕೆ ನೈವೇದ್ಯವ ಹಿಡಿದರೆ ಇವು ಬೋಡಮಡಕೆಯಲ್ಲಿ ಕಾಸಿದಂಥ ಹಾಲು, ಇದು ಮುಕ್ಕಚೆಟ್ಟಿಗೆಯಲ್ಲಿ ಕಾಸಿದಂಥ ತುಪ್ಪವೆಂದು ಬಿಡುತ್ತೈತೇ? ಇಲ್ಲವೂ. ಹೇಂಗೆ ಸಮರ್ಪಣೆಯು ಮಾಡಿದರು ಸಮರ್ಪಿಕೊಳ್ಳುತ್ತಿಹುದು. ಕೂಡಲಸಂಗನಶರಣರ–ಶಿವನ ಚಿತ್ಪ್ರಭಾಂಗಸ್ವರೂಪರಾದ ಜಂಗಮಮೂರ್ತಿಗಳ, ಅಂಗಹೀನರೆಂದಡೆ–ದೇಹದಲ್ಲಿ ಕುಂದುಕೊರತೆಯುಳ್ಳವರೆಂದು ಹೇಳಿದರು, ನಾಯಕ ನರಕ–ದೊರೆ ನಿರಯವೇ ಸಂಭವಿಸುತ್ತಿಹುದು

II- - - - - - - - - - - - - - - - - - - - - - - - - - - - - - - - - - - - - - - - - - - - - -

ಹಾಲು ಕಂದಲು–ಜ್ಞಾನಾಮೃತಕ್ಕೆ ಸ್ಥಾನವಾದ ಭಕ್ತನಂಗವು, ತುಪ್ಪದ ಮಡಕೆಯು–ಮಹಾಜ್ಞಾನವೈರಾಗ್ಯವೆಂಬ ಆಜ್ಯಕ್ಕೆ ಸ್ಥಾನವಾದ ಮಾಹೇಶ್ವರನಂಗಾಚರಣೆಯನು, ಬೋಡು ಮುಕ್ಕೇನಬೇಡ–ಆಚಾರಿ ಅನಾಚಾರಿಗಳೆನಬೇಡ, ಹಾಲು–ಸಿಹಿ–ಜ್ಞಾನಭಕ್ತ್ಯಮೃತವು ಲಿಂಗಕ್ಕೆ ಮಾಧುರ್ಯವಾಗಿಪ್ಪುದು. ತುಪ್ಪ ಕಮ್ಮಗೆ–ಮಹಾಜ್ಞಾನವೈರಾಗ್ಯವೆಂಬ ಶಿಲಾಜ್ಯವು ಲಿಂಗಕ್ಕೆ ಸದ್ವಾಸನೆಯಾಗಿಪ್ಪುದು. ಲಿಂಗಕ್ಕೆ ಬೋನ–ಮಹಾಲಿಂಗಕ್ಕೆ ಓದನವಾಗಿಪ್ಪುದು. ಕೂಡಲಸಂಗನಶರಣರ ಅಂಗಹೀನರೆಂದಡೆ ನಾಯಕನರಕ–ಪರಶಿವಲಿಂಗದ ಪರಮೂರ್ತಿಗಳಾದ ಶಿವಶರಣರುಗಳ ಆಚಾರಿ ಅನಾಚಾರಿಗಳೆಂದರೆ ಅದಲ್ಲದೆ ಪಂಚಾಚಾರವಿಹೀನವಾದ ಪಂಚಮಹಾಪಾತಕವುಳ್ಳವರೆಂದರೆ ದೊರೆ ನಿರಯ ತಪ್ಪದೆಂಬುದರ್ಥ.

---

೪೧೯

**ಆಚಾರವನರಿಯಿರಿ, ವಿಚಾರವನರಿಯಿರಿ, ಜಂಗಮಸ್ಥಲ ಲಿಂಗ ಕಾಣಿರಣ್ಣಾ. ಜಾತಿಭೇದವಿಲ್ಲವಾಗಿ ಸೂತಕವಿಲ್ಲ, ಅಜಾತಂಗೆ ಕುಲವಿಲ್ಲ! ನುಡಿದಂತೆ ನಡೆಯದಿದ್ದಡೆ ಕೂಡಲಸಂಗಮದೇವ ಮೆಚ್ಚ ಕಾಣಿರಣ್ಣಾ.**

I - - - - - - - - - - - - - - - - - - - - - - - - - - - - - - - - - - - - - - - -

ಆಚಾರವನಜೆಯಿರಿ : [ಆಚಾರವನು–] ಅಂಗವಾದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಇಷ್ಟಲಿಂಗದ ಸತ್ಕ್ರಿಯಾಚಾರವನು, ಅಜೆಯಿರಿ–ತಿಳಿಯಿರಿ, ವಿಚಾರವನಜೆಯಿರಿ: [ವಿಚಾರವನು–] ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ ಪ್ರಾಣಲಿಂಗದ ಸುಜ್ಞಾನವನ್ನು, ಅಜೆಯಿರಿ–ತಿಳಿಯಿರಿ. ಜಂಗಮಸ್ಥಲ–ಜ್ಞಾನಜಂಗಮಸ್ಥಲವು, ಲಿಂಗ ಕಾಣಿರಣ್ಣಾ–ಸಾಕ್ಷಾತ್ಶಿವಸ್ವರೂಪು ಕಂಡಿರಣ್ಣಾ. ಜಾತಿಭೇದವಿಲ್ಲವಾಗಿ–ಜಂಗಮದಲ್ಲಿ ಆ ಜಾತಿಯವರು ಈ ಜಾತಿಯವರೆಂದು ಭಿನ್ನವಿಟ್ಟು ಹುಡುಕಲಿಲ್ಲಾಗಿ, ಸೂತಕವಿಲ್ಲ–ತನುವಿನಲ್ಲಿ ಪಂಚಸೂತಕಗಳು ನಾಸ್ತಿಯಾಗಿಪ್ಪವು. ಅಜಾತಂಗೆ–ಅಯೋನಿಸಂಭವರಾದಂಥ ಜಂಗಮಕ್ಕೆ, ಕುಲವಿಲ್ಲ–ಕುಲಸೂತಕ ನಾಸ್ತಿಯಾಗಿಪ್ಪುದು. ನುಡಿದಂತೆ–ಹೇಳಿಕೊಂಡ ಹಾಂಗೆ, ನಡೆಯದಿದ್ದಡೆ–ವಿಶ್ವಾಸವನು ಮುಂದುಗೊಂಡಾಚರಿಸಬೇಕು, ಆಚರಿಸದಿರ್ದರೆ; ಕೂಡಲಸಂಗಮದೇವ–ಪರಶಿವಲಿಂಗವು, ಮೆಚ್ಚ–ತಾ ಎಷ್ಟೊಂದು ಜಪತಪಾರಾಧನೆ ಕ್ರಿಯೆಗಳ ಮಾಡಿದರೂ ಮಮಕರಿಸಿಕೊಂಡು ನಿರ್ಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕೊಡಲೊಲ್ಲನು, ಕಾಣಿರಣ್ಣಾ–ಕಂಡಿರಣ್ಣಾ.

II- - - - - - - - - - - - - - - - - - - - - - - - - - - - - - - - - - - - - - - -

ಆಚಾರವನಜೆಯಿರಿ ವಿಚಾರವನಜೆಯಿರಿ–ಪಂಚಾಚಾರವನು ತಿಳಿಯಿರಿ, ಪಂಚಾಚಾರವಿಹೀನವಾದ ಪಂಚಮಹಾಪಾತಕದಲ್ಲಿ ವರ್ತಿಸೂದನು ತಿಳಿಯಿರಿ. ಮತ್ತಂ ಕ್ರಿಯಾಚಾರವಜೆಯಿರಿ, ಜ್ಞಾನಾಚಾರವನಜೆಯಿರಿ, ಮುಂದಕ್ಕೆ ಕಾಣಬಂದರ್ಥ.

III- - - - - - - - - - - - - - - - - - - - - - - - - - - - - - - - - - - - - - -

ಅಜಾತಂಗೆ–ಜನನರಹಿತವಾದ ಶ್ರೀ ಗುರುದೇವನ ಕರಕಮಲದಲ್ಲಿ ಉದಯವಾಗಲ್ಪಟ್ಟ ಶಿವಶರಣಂಗೆ.

IV- - - - - - - - - - - - - - - - - - - - - - - - - - - - - - - - - - - - - - -

ಜಂಗಮವೇ ಲಿಂಗವಾಗಿ ಜಾತಿಸೂತಕವಿಲ್ಲ, ಅಜಾತನೆಂದೇ ಕಾಬೂದು, ಇದೇ ಆಚಾರವೆಂಬುದೀ ವಚನದರ್ಥ.

---

## ೪೨೦

**ಸ್ಥಾವರಭಕ್ತಂಗೆ ಸೀಮೆಯಲ್ಲದ ಘನಲಿಂಗಜಂಗಮಕ್ಕೆ ಸೀಮೆಯುಂಟೆ? ಅಂಬುಧಿಗೆ ಸೀಮೆಯಲ್ಲದೆ ಹರಿವ ನದಿಗೆ ಸೀಮೆಯೆಲ್ಲಿಹುದೋ? ಭಕ್ತಂಗೆ ಸೀಮೆಯಲ್ಲದೆ ಜಂಗಮಕ್ಕೆ ಸೀಮೆಯುಂಟೆ? ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಸ್ಥಾವರಭಕ್ತಂಗೆ–ತ್ರಿವಿಧಪದಾರ್ಥವ ಹಿಡಿದು ಭಕ್ತಿಗೃಹವ ಕಟ್ಟಿ ಗುರುಲಿಂಗಜಂಗಮಕ್ಕೆ ಭಕ್ತಿಯ ಮಾಡುವಂಥ, ಭಕ್ತಂಗೆ–ಶಿವಭಕ್ತಂಗೆ, ಸೀಮೆಯಲ್ಲದೆ–ಶೀಲವ್ರತನೇಮಾಚಾರಂಗಳನು

ಕಟ್ಟುಮಾಡಿಕೊಂಡು ನಡೆದರೆ ನಡೆದಾವಲ್ಲದೆ, ಘನಲಿಂಗಜಂಗಮಕ್ಕೆ–ಅಧಿಕವಾದ ಮಹಾಲಿಂಗದಲ್ಲಿ ಕೂಡಲ್ಪಟ್ಟ ಚರಜಂಗಮಕ್ಕೆ, ಸೀಮೆಯುಂಟೇ–ಶೀಲವ್ರತನೇಮಾಚಾರಂಗಳನು ಕಟ್ಟುಮಾಡಿಕೊಂಡರೆ ನಡೆದಾವೇ? ನಡೆಯವು. ಅಂಬುಧಿಗೆ–ಸಮುದ್ರಕ್ಕೆ, ಸೀಮೆಯಲ್ಲದೆ–ಇಷ್ಟು ಗಾವುದ ಅಗಲವಾಗಿರಬೇಕು ಇಷ್ಟು ಗಾವುದ ಗುಂಭವಾಗಿರಬೇಕೆಂಬಂಥ ಮೇರೆ ಕಟ್ಟುಂಟಾಗಿರ್ಪುದಲ್ಲದೆ, ಹರಿವ–ಮನಕ್ಕೆ ಬಂದ ಹಾಂಗೆ ಚರಿಸುವ, ನದಿಗೆ–ತುಂಗಭದ್ರೆ ಮೊದಲಾದ ಹೊಳೆಗಳಿಗೆ, ಸೀಮೆಯಲ್ಲಿಹುದೊ–ಮಾಗಿಮಳೆಗಾಲದಲ್ಲಿ ಹೊಳೆಯಂಬಂಥದು ಎರಡೂ ದಡ ತುಂಬಿ ಸೂಸಿ ಹರಿವುದು, ವಸಂತಕಾಲಕ್ಕೆ ಹೊಳೆಯಲ್ಲ ಇಳಿದು ಟೊಂಕಮಟ್ಟ ಎದಿಮಟ್ಟ ಕಾಲುಹೊಳೆಯಾಗಿ ಚರಿಸುವುದಲ್ಲದೆ ಇಷ್ಟು ಗಾವುದ ನಿಡಿದಾಗಿ ಇಷ್ಟು ಗಾವುದ ಗುಂಭವಾಗಿರಬೇಕೆಂಬಂಥ ಮೇರೆ ಕಟ್ಟುಂಟಾಗಿದ್ದಿತ್ತೇ? ಇಲ್ಲವು. ಭಕ್ತಂಗೆ–ತ್ರಿವಿಧಪದಾರ್ಥವ ಹಿಡಿದು ಭಕ್ತಿಗೃಹವ ಕಟ್ಟಿ, ಭಕ್ತಿಯ ಮಾಡುವಂಥ ನಿರ್ವಂಚಕ ಸದ್ಭಕ್ತಂಗೆ, ಸೀಮೆಯಲ್ಲದೆ–ಶೀಲನೇಮವ್ರತನೇಮಾಚಾರಂಗಳನು ಕಟ್ಟುಮಾಡಿಕೊಂಡರೆ ನಡೆದಾವಲ್ಲದೆ, ಜಂಗಮಕ್ಕೆ–ಭಕ್ತಿಜ್ಞಾನವೈರಾಗ್ಯವಿಡಿದಾಚರಿಸುವಂಥ ಚರಜಂಗಮಕ್ಕೆ, ಸೀಮೆಯುಂಟೆ?–ಶೀಲವ್ರತನೇಮಾಚಾರಂಗಳನು ಕಟ್ಟುಮಾಡಿಕೊಂಡರೆ ನಡೆದಾವೆ? ನಡೆಯುವು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV- - - - - - - - - - - - - - - - - - - - - - - - - - - - - - - - - - - - - - - - - - -

ನಾನು ನೀನೆಂಬ ದ್ವೈತವಾದ ಭಕ್ತಂಗೆ ಸೀಮೆಯಲ್ಲದೆ. ನಾನು ನೀನೆಂಬುದು ಅಳಿದು ಅದ್ವೈತವಾದ ಜಂಗಮಕ್ಕೆ ಸೀಮೆಯಿಲ್ಲ ಎಂಬುದೀ ವಚನದರ್ಥ.

---

೪೨೧

**ಎತ್ತಿಕೊಳ್ಳಲೇಕೆ, ಮತ್ತಿಳುಹಲೇಕಯ್ಯಾ? ಧರಂಧುರಭಕ್ತಿಯ ಮಾಡಲೇಕಯ್ಯಾ? ಸ್ತುತಿಸಲೇಕೆ, ನಿಂದಿಸಲೇಕೆ? ಹೋಗಬಿಟ್ಟು ಜಂಗಮವ ಹಿಂದಾಡುವನ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - -

ಎತ್ತಿಗೊಳ್ಳಲೇಕೆ–ತನಗಸಾಧ್ಯವಾದ ಶೀಲವ್ರತನೇಮಾಚಾರಂಗಳನು ಕಟ್ಟುಮಾಡಿಕೊಂಬುದಂಥದು ಏನು ಕಾರಣಕ್ಕೆ, ಮತ್ತಿಳುಹಲೇಕಯ್ಯಾ–ಅರಿತಾದರೂ ಮರೆತಾದರೂ ಕಟ್ಟುಮಾಡಿಕೊಂಡ ಬಳಿಕ ದೇಹಾವಸಾನ ಪರಿಯಂತರ ಪಾರವೇಧಿಸುವ ಹಾಂಗೆ ಆಚರಿಸಬೇಕಲ್ಲದೆ ಮಧ್ಯದಲ್ಲಿ ಕೆಲವು ದಿವಸ ನಡೆಸಿ ಕೆಲವು ದಿವಸ ಬಿಟ್ಟು ಕೊಟ್ಟು ವ್ರತಭ್ರಷ್ಟನಾಗುವಂಥದೇನು ಕಾರಣಕ್ಕಯ್ಯಾ? ಧರಂಧುರಭಕ್ತಿಯ ಮಾಡಲೇಕಯ್ಯಾ?–ಕೆಲವು ದಿವಸ ಮಾಡಿ ಕೆಲವು ದಿವಸ ಬಿಟ್ಟುಬಿಡುವಂಥ ತೂಳಮೇಳದ ಭಕ್ತಿಯೇನು ಕಾರಣಕ್ಕಯ್ಯಾ?, ಸ್ತುತಿಸಲೇಕೆ–ಜಂಗಮಮೂರ್ತಿಗಳ ಮುಖದ ಮುಂದೆ ಕಂಡು ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ಜಂಗಮಮೂರ್ತಿಗಳನು ಮುಂದಕ್ಕೆ ಮೂರು ಹೆಜ್ಜೆಯ ಹೋಗಬಿಟ್ಟು, ನಿಂದಿಸಲೇಕಯ್ಯಾ–ಇವರು ಅಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರೆಂದು ದೂಷಣೆಯ ಮಾಡುವಂಥದೇನು ಕಾರಣಕ್ಕಯ್ಯಾ?. ಜಂಗಮವ–ಚರಲಿಂಗವನು,

ಹಿಂದಾಡುವನ–ಅವರ ಹೋಗಬಿಟ್ಟು ದೂಷಣೆಯ ಮಾಡುವಂಥ ಉಪಾಧಿಕನ, ಬಾಯಲ್ಲಿ–ಕವಳಿಕದಲ್ಲಿ, ಮೆಟ್ಟಿ–ಅಡ್ಡ ನೀಳವಾಗಿ ತುಳಿಸಿ, ಹುಡಿಯ ಹೊಯ್ಯದೆ ಮಾಣ್ಬನೆ–ಭವರೋಗವೆಂಬ ಬುಗ್ಗಿಯ ಹಾಕದೆ ಬಿಟ್ಬಾನೆ? ಬಿಡನು, ಕೂಡಲಸಂಗಮದೇವ–ಪರಶಿವಲಿಂಗವು.

..........................

೧+ಮೊಡಾಮೊಡಿಯಿಂದ (ಕ, ಗ). ೨–೨ ೪ (ಗ).

---

೪೨೨

**ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದಡೆ ಮೇಲೆ ಪಲ್ಲವಿಸಿತ್ತು ನೋಡಾ! ಲಿಂಗದ ಬಾಯಿ ಜಂಗಮನೆಂದು ಪಡಿಪದಾರ್ಥವ ನೀಡಿದಡೆ ಮುಂದೆ ಸಕಲಪದಾರ್ಥವನೀವನು. ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದಡೆ ನರಕ ತಪ್ಪದು, ಕಾಣಾ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆಱೆದಡೆ : ಮರಕ್ಕೆ–ಪಾದಪಕ್ಕೆ, ಬಾಯಿ–ವದನವು, ಬೇರೆಂದು–ಮೂಲವೆನುತ್ತ, ತಳಕ್ಕೆ–ಬುಡಕ್ಕೆ, ನೀರ ನೆಱೆದಡೆ–ಭೂಮಿಯನಗಿದು ಪಾತಿಯನ್ನು ಮಾಡಿ ಗೊಬ್ಬರ ಕೆಮ್ಮಣ್ಣನು ಹಾಕಿ ಹತ್ತೆಂಟು ಕೊಡ ಉದಕವನ್ನು ನೀಡಿದರೆ; ಮೇಲೆ ಪಲ್ಲಿವಿಸತ್ತು ನೋಡಾ: ಮೇಲೆ–ಪಾದಪಾಗ್ರದ ತುದಿಯಲ್ಲಿ, ಪಲ್ಲವಿಸಿತ್ತು–ಚಿಗಿತು ಎಲೆ ಹೂ ಕಾಯಿ ಹಣ್ಣಾಗಿ ಫಲವಾಗುತ್ತಿಹುದು, ನೋಡಾ–ಕಂಡಾ. ಲಿಂಗದ–ಗುರುಮುಖದಿಂ ಬಂದ ಇಷ್ಟಮಹಾಲಿಂಗಕ್ಕೆ, ಬಾಯಿ–ಮುಖವು, ಜಂಗಮವೆಂದು–ಚರಲಿಂಗವೆನುತ್ತ, ಪಡಿ–ದಿನಗಟ್ಟಲೆ ವರುಷಗಟ್ಟಲೆ ಅಳೆದಳೆದು ತೂಗಿಕೊಡುವಂಥ ಹತ್ತರ ಪಡಿ ಇಪ್ಪತ್ತರ ಪಡಿ ಮೂವತ್ತರ ಪಡಿ ನಾಲ್ವತ್ತರ ಪಡಿಯು, ಪದಾರ್ಥವ ನೀಡಿದಡೆ–ಘೃತಮುಖ್ಯವಾದ ಮೃಷ್ಟಾನ್ನ ಪದಾರ್ಥಂಗಳನು ಎಡೆಮಾಡಿದರೆ, ಮುಂದೆ–ದೇಹಾಂತ್ಯಕ್ಕೆ, ಸಕಲಪದಾರ್ಥವು–ತಾನೇನು ಬೇಡಿದಂಥ ಇಷ್ಟಾರ್ಥಸಿದ್ಧಿಯನ್ನು, ಈವನು–ಕರುಣಿಸಿ ಕೊಡುವನು. ಆ ಜಂಗಮನ–ಅಂತಪ್ಪ ಚರಲಿಂಗವನು, ಹರನೆಂದು ಕಂಡು–ಇವರೇ ಸಾಕ್ಷಾತ್ ಶಿವಸ್ವರೂಪರೆಂದರಿದು, ನರನೆಂದು ಭಾವಿಸಿದಡೆ–ಎಲ್ಲ ಮನುಷ್ಯರೊಳಗೆ ಇವನೊಬ್ಬ ಮನುಷ್ಯನೆಂದು ಕಂಡರೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನರಕ ತಪ್ಪದು–ನಿರಯವು ಸಂಭವಿಸುವಂಥದು ಹುಸಿಯದು, ಕಾಣಾ–ಕಂಡಾ.

---

೪೨೩

**ಆರಾಧನೆಯ ಮಾಡಿದಡೆ ಅಮೃತದ ಬೆಳಸು : ವಿರೋಧಿಸಿದಡೆ ವಿಷದ ಬೆಳಸು. ಇದು ಕಾರಣ ಲಿಂಗಜಂಗಮಕ್ಕಂಜಲೇಬೇಕು. ಸ್ಥಾವರಜಂಗಮಲಿಂಗ ಒಂದೇಯೆಂದಱಿದಡೆ ಕೂಡಲಸಂಗಮದೇವ ಶರಣಸನ್ನಿಹಿತನು.**

I - - - - - - - - - - - - - - - - - - - - - - - - - - - - - - - - - - - - - - - -

ಆರಾಧನೆಯ ಮಾಡಿದಡೆ–ಜಂಗಮಕ್ಕೆ ಸಕಲಪದಾರ್ಥವ ಕೊಟ್ಟು ಭಕ್ತಿಯ ಮಾಡಿದರೆ, ಅಮೃತದ ಬೆಳಸು–ನಿತ್ಯವಾದ ನಿಜಮೋಕ್ಷವೆಂಬ ಪೈರುವರ್ಧನವಾಗುತ್ತಿಹುದು. ವಿರೋಧಿಸಿದಡೆ–ಅವರಿಗೆ ಭಕ್ತಿಯ ಮಾಡದೇ ಅವರ ಕೂಡೆ ತಾನು ಹಗೆಯ ಕಟ್ಟಿಕೊಂಡರೆ, ವಿಷದ ಬೆಳಸು–ಕ್ಷ್ವೇಡವೆಂಬ ಪೈರು ವರ್ಧನವಾಗುತ್ತಿಹುದು. ಅದಲ್ಲದೆ ಜನನಮರಣೆಂಬ ಗೊಜಡವುಂಟಾಗುತ್ತಿಹುದು. ಇದು ಕಾರಣ–ಇದು ನಿಮಿತ್ತಾರ್ಥ, ಲಿಂಗಜಂಗಮಕ್ಕಂಜಲೇಬೇಕು–ಹೆದರಿಕೊಂಡು ಲಿಂಗಪೂಜೆ ಜಂಗಮದಾಸೋಹವ ಮಾಡಲೇಬೇಕು. ಸ್ಥಾವರ–ಇಷ್ಟಲಿಂಗವು, ಜಂಗಮ–ಚರಲಿಂಗವು, ಒಂದೇಯೆಂದ?ಜೆಡೆ–ಲಿಂಗವೇ ಜಂಗಮದಂಗೆ ಜಂಗಮವೆ ಲಿಂಗದ ಪ್ರಾಣಕಳೆಯೆಂದರಿದು ಸಮರಸಭಾವದಿಂದ ಲಿಂಗಪೂಜೆ ಜಂಗಮದಾಸೋಹವ ಮಾಡುವಂಥದನು ತಿಳಿದರೆ, ಕೂಡಲಸಂಗಮದೇವ–ಪರಶಿವಲಿಂಗವು, ಶರಣಸನ್ನಿಹಿತ–ಶೀವಶರಣರಲ್ಲಿ ಪರಿಪೂರ್ಣವಾಗಿ ನೆಲೆಗೊಂಡಿಪ್ಪನು.

II- - - - - - - - - - - - - - - - - - - - - - - - - - - - - - - - - - - - - - - - - - - - -

ಆರಾಧನೆಯ ಮಾಡಿದಡೆ ಅಮೃತದ ಬೆಳಸು–ಗುರುಲಿಂಗಜಂಗಮುವನರ್ಚಿಸಿದೊಡೆ ನಿತ್ಯತ್ವದ ಸುಖವೆಂಬ ಪೈರುಂಟಾಗುತ್ತಿಹುದು. ವಿರೋಧಿಸಿದಡೆ ವಿಷದ ಬೆಳಸು–ಆ ಗುರುಲಿಂಗಜಂಗಮದ ಕೂಡೆ ಮಥನಿಸಿದರೆ ನಂಜಿನ ದುಃಖ ಉಂಟಾಗುತ್ತಿಹುದು. ಇದು ಕಾರಣ–ಇದು ನಿಮಿತ್ತವು, ಲಿಂಗ–ಗುರುಕರುಣದಿಂ ಬಂದ ಇಷ್ಟಲಿಂಗವು, ಜಂಗಮಕ್ಕೆ ಅಂಜಲೇಬೇಕು–ಆ ಲಿಂಗದ ಪ್ರಾಣಕಳೆಯಾದ ಜ್ಞಾನಿಜಂಗಮಕ್ಕೆ ಭಯಂಬಡಲೇಬೇಕು. ಸ್ಥಾವರ ಜಂಗಮ–ಸ್ಥಾವರವೆಂದರೆ ಇಷ್ಟಲಿಂಗವು, ಜಂಗಮವೆಂದರೆ ಆ ಲಿಂಗದ ಪ್ರಾಣಕಳಾ ಚೈತನ್ಯವಾದ ಜ್ಞಾನಿಜಂಗಮವು; ಒಂದೇಯೆಂದಜೆದಡೆ–ಈ ಲಿಂಗಜಂಗಮವೆಂಬುಭಯವೇಕವೆಂದು ತಿಳಿದರೆ, ಕೂಡಲಸಂಗಮದೇವ ಶರಣಸನ್ನಿಹಿತನು–ಆ ಪರಶಿವಲಿಂಗವು ಶಿವಶರಣರುಗಳಂತರಂಗದಲ್ಲಿ ಕೂಟಸ್ಥವಾಗಿರ್ಪನೆಂಬುದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - -

ಆದಿಲಿಂಗ ಅನಾದಿಜಂಗಮವಾದ ಲಿಂಗಜಂಗಮಕ್ಕೆ ಮಾಡಿದರೆ ಪರಮಾನಂದಸುಸುಖವು; ವಿರೋಧಿಸಿದರೆ ಜನನಮರಣವೆಂಬುದೀ ವಚನದರ್ಥ.

---

೪೨೪

**ಹೊಸ್ತಿಲವ ಪೂಜಿಸಿ ಹೊಱಹೊಂಟುಹೋದ ಒಕ್ಕಲಗಿತ್ತಿಯೆಂತಾಯಿತೆನ್ನ ಭಕ್ತಿ. ಜಂಗಮವೆನ್ನೊಡೆಯರೆಂದು ಒಕ್ಕುದಕೊಂಡು ಉದಾಸೀನವ ಮಾಡಿದಡೆ ಇಹಲೋಕಕ್ಕೆ ದೂರ ಪರಲೋಕಕ್ಕೆ ದೂರ! ಕೂಡಲಸಂಗಮದೇವ ಅಘೋರ ನರಕದಲ್ಲಿಕ್ಕುವ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಹೊಸ್ತಿಲವ ಪೂಜಿಸಿ ಹೊಱಹೊಂಟುಹೋದ ಒಕ್ಕಲಗಿತ್ತಿಯೆಂತಾಯಿತೆನ್ನ ಭಕ್ತಿ–ಲೋಕದಲ್ಲಿ ಒಕ್ಕಲಗಿತ್ತಿಯೆಂಬಂಥವಳು ದೀವಳಿಗೆ ಶಿವಯೋಗ ಯುಗಾದಿ ಪಾಡ್ಯದ ತತ್ಕಾಲದಲ್ಲಿ ಹೊಸ್ತಿಲವ ಸಾರಿಸಿ ಹೆಂಡಿವುಂಡಿಯ ಮಾಡಿ ತಂಗಡಿ ಹೂವ ಮುಡಿಸಿ ಸಾಂಬ್ರಾಣಿಯನು ಸಮರ್ಪಿಸಿ

ದೇವರೆಂದಾರಾಧಿಸಿ ನಮಸ್ಕರಿಸಿ ಹಾಂಗೆ ನೈಷ್ಠೆಯಿಂದ ಇರಲಿಲ್ಲವು. ಈಚಿಲಿಂದಾಚಿಗೆ ಆಚಿಲಿಂದೀಚಿಗೆ ದಾಂಟಿಕೊಂಬುತ್ತ ತಿರುಗಾಡಿದಲ್ಲಿ ಆರಾಧಿಸಿದಂಥದೆಲ್ಲ ವ್ಯರ್ಥಸ್ಯವಾಗಿಪ್ಪುದು. ಆಯಿತ್ತು-ಆ ರೀತಿಯಾಯಿತ್ತು, ಎನ್ನ ಭಕ್ತಿ-ನಾ ಮಾಡುವಂಥ ಜಂಗಮಭಕ್ತಿಯು. ಜಂಗಮವ-ಚರಲಿಂಗವನು, ಎನ್ನೊಡೆಯರೆಂದು-ಎನ್ನ ಒಡೆಯರು ಎನ್ನ ಕರ್ತರು ಎನ್ನ ಪ್ರಾಣದೊಲ್ಲಭರೆಂದು, ಒಕ್ಕುದ ಕೊಂಡು-ಅವರೊಕ್ಕಮಿಕ್ಕಪ್ರಸಾದವನು ಪಡೆದನುಭವಿಸಿ, ಉದಾಸೀನವ ಮಾಡಿದಡೆ-ಜಂಗಮಮೂರ್ತಿಗಳ ಕಂಡೂ ಕಾಣದ ಹಾಂಗೆ ಕೇಳೀ ಕೇಳದ ಹಾಂಗೆ ಉಪೇಕ್ಷವ ಮಾಡಿಬಿಟ್ಟರೆ, ಇಹಲೋಕಕ್ಕೆ ದೂರ-ಇಹದ ಪ್ರಸಾದ ⌐ಭೋಗ⌐ಕ್ಕೆ ಎಟ್ಟುಗೊಳ್ಳನು. ಪರಲೋಕಕ್ಕೆ ದೂರ-ಪರದ ನಿಜಮೋಕ್ಷಕ್ಕೆ ಎಟ್ಟುಗೊಳ್ಳನು. ಕೂಡಲಸಂಗಮದೇವ-ಪರಶಿವಲಿಂಗವು, ಅಘೋರ ನರಕದಲ್ಲಿಕ್ಕುವ-ಭಯಂಕರವಾದ ನಿರಯದಲ್ಲಿ ಹಾಕಿಬಿಡುವನು.

..........................

೧-೧ x (ಗ).

---

೪೨೫

**ಲಿಂಗವ ಪೂಜಿಸಿ ಜಂಗಮವ ಕಂಡು ಉದಾಸೀನವ ಮಾಡಿದಡೆ, ಆ ಲಿಂಗಪೂಜಕರಿಗೆ ಮಾಡಿದ ಶಿವದೂತರ ದಂಡವೆಂಬುದ, ಲೋಕದ ಕರ್ಮಿಗಳಿಗೆ ಮಾಡಿದ ಯಮದೂತರ ದಂಡವೆಂಬುದ. ಇದು ಕಾರಣ ಲಿಂಗಜಂಗಮ ಒಂದೇಯೆಂದಱಿಯದವರ ಎನಗೆ ತೋಱದಿರಯ್ಯಾ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗವ ಪೂಜಿಸಿ-ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಜಂಗಮವ ಕಂಡು ಉದಾಸೀನವ ಮಾಡಿದಡೆ: ಜಂಗಮವ-ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳನು, ಕಂಡು-ನೋಡಿ, ಉದಾಸೀನವ ಮಾಡಿದಡೆ-ಉಪೇಕ್ಷವ ಮಾಡಿಬಿಟ್ಟರೆ, ಆ ಲಿಂಗಪೂಜಕರಿಗೆ-ಆ ಜಂಗಮಭಕ್ತಿ ಬಾಹ್ಯವಾಗಿ ಲಿಂಗಪೂಜೆಯ ಮಾಡುವಂಥ ಲಿಂಗಭಜಕರಿಗೆ, ಶಿವದೂತರ ದಂಡವೆಂಬುದು-ಕಾಲಾಗ್ನಿರುದ್ರನ ಭಟಾಳುಗಳು ಶಿಕ್ಷೆಯಂಬಂಥದನ್ನು, ಮಾಡಿದ-ಉಂಟುಮಾಡಿದರ್ಪನು. ಲೋಕದ ಕರ್ಮಿಗಳಿಗೆ-ಈ ಜಗತ್ತಿನಲ್ಲಿ ಇರುವಂಥ ಪಾಪಾತ್ಮರುಗಳಿಗೆ, ಯಮದೂತರ ದಂಡವೆಂಬುದು-ಯಮಗ ಭಟಾಳುಗಳ ಶಿಕ್ಷೆಯಂಬುವಂಥದನ್ನು, ಮಾಡಿದ-ಉಂಟುಮಾಡಿರ್ಪನು. ಇದು ಕಾರಣ-ಇದು ನಿಮಿತ್ತಾರ್ಥ, ಲಿಂಗಜಂಗಮ ಒಂದೇಯೆಂದಱಯದವರ-ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳಾಚೈತನ್ಯಸ್ವರೂಪವೆಂದು ವಿಶ್ವಾಸಿಸಿ ಲಿಂಗಪೂಜೆ ಜಂಗಮದಾಸೋಹವ ಮಾಡುವಂಥದನ್ನು ತಿಳಿದಿರಬೇಕು, ತಿಳಿಯದವರ ; ಎನಗೆ ತೋಱದಿರಯ್ಯ-ಎನಗವರ ದರುಶನವ ಕಾಣಿಸದಿರಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

---

## ೪೨೭

**ಜಂಗಮನಿಂದೆಯ ಮಾಡಿ, ಲಿಂಗವ ಪೂಜಿಸುವ ಭಕ್ತನ ಅಂಗವಣೆಯೆಂತೊ? ಶಿವಶಿವಾ ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು. ಗುರುವಿನ ಗುರು ಜಂಗಮ ಇಂತೆಂದುದು ಕೂಡಲಸಂಗನ ವಚನ.**

I - - - - - - - - - - - - - - - - - - - - - - - - - - - - - - - - - - - - - - - - - - -

ಜಂಗಮ–ಚರಲಿಂಗವನು, ನಿಂದೆಯ ಮಾಡಿ–ಇವರು ಆಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರೆಂದು ದೂಷಣೆಯ ಮಾಡಿ, ಲಿಂಗವ ಪೂಜಿಸುವ–ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುವ, ಭಕ್ತನ–ಶಿವಭಕ್ತನ, ಅಂಗವಣಿಯೆಂತೊ?–ಅವನ ಹೆಚ್ಚಿಗೆ ಹೇಂಗೋ, ಶಿವಶಿವಾಲಿಂಗವೇ ಲಿಂಗವೇ, ನಿಂದಿಸುವ–ದೂಷಣೆಯ ಮಾಡುವ, ಪೂಜಿಸುವ–ಆರಾಧಿಸುವ, ಪಾತಕವಿದ–ಪಂಚಮಹಾಪಾತಕವಿದನು, ಕೇಳಲಾಗದು–ಕಿವಿಗೊಟ್ಟಾಲಿಸಲಾಗದು. ಜಂಗಮ–ಚರಲಿಂಗವು, ಗುರುವಿನ ಗುರು–ಶ್ರೀಗುರುನಾಥನು ಜ್ಞಾನೋದಯುವಾಗಿ ಅಡಿಗೆರಗಿಬಂದ ಶಿಷ್ಯರಿಗೆ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನು ಕರುಣಿಸಿಕೊಡುವಲ್ಲಿ ದಕ್ಷಿಣಭಾಗದಲ್ಲಿ ಜಂಗಮಮೂರ್ತಿಗಳ ಮೂರ್ತವ ಮಾಡಿಸಿಕೊಂಡು ಅವರ ಪಾದೋದಕ ಪ್ರಸಾದವ ಪಡೆದುಕೊಂಡು, ತಾ ಇಷ್ಟಲಿಂಗಕ್ಕೆ ಸಮರ್ಪಿಸಿದಲ್ಲಿ ಆ ಇಷ್ಟಲಿಂಗಕ್ಕೆ ಮಹಿಮಾಪದ ಚಿತ್ಕಳೆ ಹೆಚ್ಚುತ್ತಿಹುದಾದ ಕಾರಣ ಗುರುವಿಂಗೆ ಗುರುವು ಜಂಗಮವೆಂದು, [ಇಂತೆಂದುದು–] ಹೀಂಗೆಂದು ಹೇಳುತ್ತಿಹುದು, ಕೂಡಲಸಂಗನ ವಚನ–ಪರಶಿವಲಿಂಗದ ವಾಕ್ಯಾನುಭಾವವು.

---

## ೪೨೮

**ಅರಸನ ಕಂಡು ತನ್ನ ಪುರುಷನ ಮಱೆದಡೆ ಮರ[1]ನೇಱೆ? ಕೈಯ ಬಿಟ್ಟಂತಾ[2]ಯಿತ್ತ[2]ಯ್ಯಾ. ಇಹಲೋಕಕ್ಕೆ, ದೂರ ಪರಲೋಕಕ್ಕೆ ದೂರ ! ನಮ್ಮ ಕೂಡಲಸಂಗಮದೇವ[3] ಜಂಗಮಮುಖಲಿಂಗವಾದ ಕಾರಣ!**

I - - - - - - - - - - - - - - - - - - - - - - - - - - - - - - - - - - - - - - - - - - -

ಅರಸನ ಕಂಡು ತನ್ನ ಪುರುಷನ ಮರಱೆದಡೆ–ಲೋಕದಲ್ಲಿ ಒಬ್ಬಾನೊಬ್ಬ ಬಡವಾತ್ಮನು ಸೌಂದರ್ಯವಾದ ಸ್ತ್ರೀಯಳನ್ನು ವಿವಾಹವಾಗಿರುವನು. ಒಂದಾನೊಂದು ದಿವಸ ಆ ಊರ ದೊರೆಯು ಸವಾರಿಹೋಗುತ್ತಿದ್ದಲ್ಲಿ ಈ ಸ್ತ್ರೀಯಳು ಅವನ ಚೆಲ್ವಿಕೆಯನ್ನು ನೋಡಿ, ಇವನ ಬದಿಯಲ್ಲಿದ್ದರೆ ಉಣಿಸ್ಯಾನೆ? ಉಡಿಸ್ಯಾನೆ? ಪರಿಣಾಮದಲ್ಲಿ ಮಡಗಿಕೊಂಡಿದ್ದಾನೆ? ಇಲ್ಲವೊ? ಆ ದೊರೆ ಬಲ್ಲಿದ್ದರೆ ಉಣಿಸ್ಯಾನು ಉಡಿಸ್ಯಾನು ಪರಿಣಾಮದಲ್ಲಿ ಮಡಿಗಿಕೊಂಡಿದ್ದಾನೆಂದು ಆ ದೊರೆಯು ಸವಾರಿ ಹೋಗಿಬಂದು ಏಕಾಂತಸ್ಥಾನದಲ್ಲಿ ಕುತಿಳುಕೊಂಡಿರುವಂಥ ವೇಳೆಯಲ್ಲಿ ಈ ಸ್ತ್ರೀಯಳು ಹೋದಲ್ಲಿ ನೀನಾರುಯೆಂತೆಂದು ಕೇಳುವ. ಸ್ವಾಮೀ ನಾ ಇಂಥಾತನ ಹೆಂಡತಿ ನಿಮ್ಮನಾಶ್ರಯಿಸಿಕೊಂಡಿರಬೇಕೆಂದು ಬಂದೆನೆಂದು ಹೇಳಿದಲ್ಲಿ ನೀನು ಗಂಡನ ಬಿಟ್ಟು ನಮ್ಮಲ್ಲಿಗೆ

ಬರಬಹುದೆ? ಎಂದು ಬಾಯಿಮೇಲೆ ಬಡಿಸಿ ಅಟ್ಟಿಸಿಬಿಡುತ್ತಿಹನು. ಆಗ ತಿರುಗಿ ಮನೆಗೆ ಬಂದಲ್ಲಿ ನೀನು ದೊರೆಯ ಕಂಡಂಥವಳು ನಿನ್ನ ಕೂಡ ಒಗತನ ಮಾಡುವಂಥದು ಬದ್ಧವೆ? ಎಂದು ಮೈಯನೆಲ್ಲ ಒಡೆಬಡಿದು ಸೀರೆ ಸೆರಗನ್ನು ಹರಿದು ಅಟ್ಟಿಸಿಬಿಡುತ್ತಿಹನು. ಹಾಂಗೆ, ಮರನೇ? ಕೈಯಬಿಟ್ಟಂತಾಯಿತ್ತಯ್ಯಾ–ಒಬ್ಬಾನೊಬ್ಬ ಬಡವಾತ್ಮನು ಕ್ಷುಧೆಯಡಸಿ ಮರವನ್ನು ಹತ್ತಿ ಕಾಯನ್ನು ಕಡಿಯಲಾರದೆ ಕೆಳಿಯಕ್ಕೆ ಇಳಿವುದಕ್ಕೆ ಶಕ್ತಿ ಸಾಲದೆ ನಡವಂತರದಲ್ಲೆ ಕಾಲುಜಾರಿ ಕಡಕೊಂಡು ಬಿದ್ದು ಕೈಕಾಲು ಮುರಿದುಕೊಂಡವನಿಗೆ ಹೇಂಗೆ ದುಃಖವಾಗುತ್ತಿಹುದೋ ಹಾಂಗೆ. ಇಹಲೋಕಕ್ಕೆ ದೂರ–ಈ ಊರೊಳಗಿರುವ ಗರತಿ [೧][ಗೃಹ][೧]ಸ್ಥರಿಗೆ ಎಟ್ಟುಗೊಳವು, ಪರಲೋಕಕ್ಕೆ ದೂರ–ಪರ ಊರೊಳಗಿರುವ ಗರತಿ [೧][ಗೃಹ][೧]ಸ್ಥರಿಗೆ ಎಟ್ಟುಗೊಳವು ಎಂಬ ದೃಷ್ಟೋಪಮಾನದ ಹಾಂಗೆ.

ಅರಸನ ಕಂಡು: ಅರಸನ–ಸ್ಥಾವರಲಿಂಗದ ಕೀರ್ತಿಯಶಸ್ಸನ್ನು, ಕಂಡು–ನೋಡಿ, ತನ್ನ ಪುರುಷನ–ಗುರು ಕರುಣಿಸಿಕೊಟ್ಟಂಥ ಇಷ್ಟಲಿಂಗವೇ ತನ್ನ ರಮಣನು. ಅಂತಪ್ಪ ತನ್ನ ರಮಣನಾದಂಥ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುವಂಥವನು, ಮರೆದಡೆ–ವಿಸ್ಮೃತಿಯನ್ನೈದಿಸಿ ಬಿಟ್ಟು ಧೂರ್ಜಟಿ ವಿರೂಪಾಕ್ಷ ಅರಣಾಚಲ ಗಂಗಾಧರೇಶ್ವರನೆಂಬ ಸ್ಥಾವ[ರ]ಲಿಂಗಗಳಿದ್ದೆಡೆಗೆ ಹೋಗಿ ಎಣ್ಣೆ ಮಜ್ಜನವ ನೀಡಿಸಿ ಎಲೆಪೂಜೆಯ ಕಟ್ಟಿಸಿ ಪರ್ವಪಾದ್ಯವನ್ನು ಮಾಡಿಸಿ ದಾನದಕ್ಷಿಣೆಯನ್ನು ಕೊಟ್ಟು ಅಡ್ಡಡ್ಡ ಬಿದ್ದು [೨]ನಮಸ್ಕರಿಸಿದರೆ,[೨] ಮರನೇ? ಕೈಯಬಿಟ್ಟಂತಾಯಿತ್ತಯ್ಯಾ–ಆ ಇಷ್ಟಲಿಂಗವು [೩][ನಾ][೩]ನೇ ಗತಿಯೆಂದು ಪೂಜೆಯ ಮಾಡುತ್ತೈದಾನೆ? ಇಲ್ಲವು, ಸ್ಥಾವರಲಿಂಗದ ಭಜನೆಯ ಮಾಡುತ್ತೈದಾನೆ. ನಾನು ಕರುಣಿಸಿ ಕೊಡುವಂಥ ಫಲಪದ ಇಷ್ಟಾರ್ಥಸಿದ್ಧಿಯನ್ನು ಆ ಸ್ಥಾವರಲಿಂಗವೆ ಕರುಣಿಸಿಕೊಟ್ಟಾವೆಂದು ಈ ಇಷ್ಟಲಿಂಗವು ಒಂದು ಫಲಪದವನ್ನು ಕರುಣಿಸಿಕೊಡಲೊಲ್ಲದೆ ಸುಮ್ಮನಿರುವುದು. ಆ ಸ್ಥಾವಲಿಂಗವೇನಾದರೂ ನಾನೆ ಗತಿಯೆಂದು ಭಜನೆಯ ಮಾಡುತ್ತೈದಾನೆ? ಇಲ್ಲವು, ಇಷ್ಟಲಿಂಗದ ಪೂಜೆಯ ಮಾಡುತ್ತೈದಾನೆ. ನಾ ಕರುಣಿಸಿಕೊಡುವಂಥ ಫಲಪದಂಗಳನು ಆ ಇಷ್ಟಲಿಂಗವು ಕೊಡಲಾರದೆ? ಎಂದು ಅದು ಒಂದು ಫಲಪದವನ್ನೂ ಕೊಡದೆ ಸುಮ್ಮನಿರುವುದು; ಹಾಂಗೆ. ಇಹಲೋಕಕ್ಕೆ ದೂರ–ಇಹದ ಪ್ರಸಾದ ಭೋಗಕ್ಕೆ ಎಟ್ಟುಗೊಳನು, ಪರಲೋಕಕ್ಕೆ ದೂರ–ಪರದ ನಿಜಮೋಕ್ಷಕ್ಕೆ ಎಟ್ಟುಗೊಳನು. ನಮ್ಮ ಕೂಡಲಸಂಗಮದೇವ–ಪರಶಿವಲಿಂಗವು, ಜಂಗಮಮುಖ ಲಿಂಗವಾದ ಕಾರಣ!–ಜಂಗಮವೆ ಮುಖ್ಯವಾದ ಕಾರಣ ಸಾಕ್ಷಾತ್ ಶಿವಸ್ವರೂಪವಾದ ನಿಮಿತ್ತ.

..........................

೧–೧ ಗುರು (ಕ, ಗ). ೨೨ ಆರಾಧಿಸಿದರೆ (ಗ). ೩–೩ ನೀ (ಕ, ಗ).

II- - - - - - - - - - - - - - - - - - - - - - - - - - - - - - - - - - - - - - - - - - -

1 + ನ (ಚ, ಜ). 2–2 ದೇನ (ಚ, ಜ). 3 + ಯ್ಯ (ಚ, ಜ).

..........................

ಅರಸನ ಕಂಡು–ಪರಮಾತ್ಮಸ್ವರೂಪವಾದ ಇಷ್ಟಲಿಂಗವೆಂಬ ರಾಜನ ನೋಡಿ, ತನ್ನ ಪುರುಷನ ಮರೆದಡೆ–ಆ ಲಿಂಗದ ಪ್ರಾಣಕಳಾಚೈತನ್ಯಸ್ವರೂಪವಾದ ಜ್ಞಾನಜಂಗಮ ಭಕ್ತಿಯನು

ವಿಸ್ಮೃತಿಯ ಮಾಡಿದೊಡೆ, ಮರನನೇಱಿ ಕೈಯ ಬಿಟ್ಟಂತಾದೆನಯ್ಯಾ-ದೇಹಭಾವವೆಂಬ ಅಧೋಮುಖ ವೃಕ್ಷವನಡರಿ ತನುಮನಧನವನು ಗುರುಲಿಂಗಜಂಗಮಕ್ಕೆ ಸಮರ್ಪಣೆಯ ಮಾಡುವ ಸುಚಿತ್ತವೆಂಬ ಹಸ್ತವನು ಮಾಣಿಸಿದೆನೆಂಬುದರ್ಥ. ಇಹಲೋಕಕ್ಕೆ ದೂರ-ಈ ಮರ್ತ್ಯಲೋಕಕ್ಕೆ ರಾಜ್ಯಾದಿಭೋಗಕ್ಕೆ ಅಸಮೀಪನು, ಪರಲೋಕಕ್ಕೆ ದೂರ-ಶಿವಲೋಕದ ಸಾಲೋಕ್ಯಾದಿಭೋಗಕ್ಕೆ ಅಸಮೀಪನು. ನಮ್ಮ ಕೂಡಲಸಂಗಮದೇವಯ್ಯ ಜಂಗಮಮುಖ ಲಿಂಗವಾದ ಕಾರಣ-ನಮ್ಮ ಸಂಬಂಧವಾದ ಪರಿಶಿವಲಿಂಗವು ಮಹಾಜ್ಞಾನಿಜಂಗಮವಕ್ತ್ರವು ಇಷ್ಟಲಿಂಗವಾದ ನಿಮಿತ್ತವು.

IV- - - - - - - - - - - - - - - - - - - - - - - - - - - - - - - - - - - - - - - - - -

ಪರಾಶಕ್ತಿಯೇ ಹೆಂಡತಿ, ಪರಬ್ರಹ್ಮವೇ ಗಂಡ. ಅಂತಪ್ಪ ಪರಬ್ರಹ್ಮವೆಂಬ ಜಂಗಮ. ಇಂತಪ್ಪ ಜಂಗಮವ ಬಿಟ್ಟು ಪರಾಶಕ್ತಿಯಾಗದ ಲಿಂಗವ ಹಿಡಿದರೆ ಇಹಪರವಿಲ್ಲಾ ಎಂಬುದೀ ವಚನದರ್ಥ.

---

೪೨೮

**ಜಂಗಮವಿಲ್ಲದ ಮಾಟ ಕಂಗಳಿಲ್ಲದ ನೋಟ, ಹಿಂಗಿತ್ತು ಶಿವಲೋಕ ಇನ್ನೆಲ್ಲಿಹುದಯ್ಯಾ. ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂದಂತೆ ಸಮಯೋಚಿತವನಱಿಯದೆ ಉದರವ ಹೊರೆವರ ನರಕದಲ್ಲಿಕ್ಕದೆ ಮಾಣ್ಬನೆ, ಕೂಡಲಸಂಗಮದೇವ.**

I- - - - - - - - - - - - - - - - - - - - - - - - - - - - - - - - - - - - - - - - - -

ಜಂಗಮವಿಲ್ಲದ ಮಾಟ : [ಜಂಗಮವಿಲ್ಲದ-] ಜಂಗಮಭಕ್ತಿಯಬಾಹ್ಯವಾದ, ಮಾಟ-ಕಂಡವರ ಕಂಡು ಭಿನ್ನವಿಟ್ಟುಕೊಂಡು ಮಾಡುವಂಥ ಪೂಜೆಯು, ಕಂಗಳಿಲ್ಲದ ನೋಟ-ಕಣ್ಣಿದ್ದಂಥವರೆ ಕನ್ನಡಿಯನ್ನು ಪಿಡಿದುಕೊಂಡು ತಮ್ಮ ಮುಖದಲ್ಲಿರುವ ⁽ಕಂದುಕಲೆ⁾ ಹಾವಭಾವ ⁽ಚಿತ್ರವಿಚಿತ್ರ⁾ ಮೊದಲಾದ ಬಹುರೂಪುಗಳನು ⁽ನೋಡಿಕೊಂಡರೆ⁾ ಕಂಡಾರಲ್ಲದೆ ಕಣ್ಣಿಲ್ಲದಂಥವರು ಕನ್ನಡಿಯನ್ನು ಪಿಡಿದುಕೊಂಡು ತಮ್ಮ ಮುಖದಲ್ಲಿರುವ ⁽ಕಂದುಕಲೆ⁾ ಹಾವಭಾವ ⁽ಚಿತ್ರವಿಚಿತ್ರ⁾ ಮೊದಲಾದ ಬಹುರೂಪುಗಳನು ನೋಡಿದರೆ ಕಂಡಾರೆ? ಕಾಣಲರಿಯರು. ಹಾಂಗೆ, ಜಂಗಮಭಕ್ತಿ ಮಾಡುತ್ತ ಲಿಂಗಪೂಜೆಯ ಮಾಡಿದರೆ ಕಣ್ಣಿದ್ದಾತ್ಮರು ಕನ್ನಡಿಯನ್ನು ಪಿಡಿದುಕೊಂಡು ತಮ್ಮ ಮುಖದಲ್ಲಿರುವ ಕಂದುಕಲೆ ಹಾವಭಾವ ಚಿತ್ರವಿಚಿತ್ರ ಮೊದಲಾದ ಬಹುರೂಪುಗಳ ನೋಡಿದರೆ ಕಂಡಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರಕೊಂಬುವುದು. ಜಂಗಮಭಕ್ತಿ ಬಾಹ್ಯವಾಗಿ ಲಿಂಗಪೂಜೆಯ ಮಾಡಿದರೆ ಕಣ್ಣಿಲ್ಲದಾತ್ಮರುಗಳು ಕನ್ನಡಿಯನ್ನು ಪಿಡಿದುಕೊಂಡು ತಮ್ಮ ಮುಖದಲ್ಲಿರುವ ಕಂದುಕಲೆ ಹಾವಭಾವ ವಿಲಾಸವಿಭ್ರಮ ಮೊದಲಾದ ಚಿತ್ರವಿಚಿತ್ರ ಬಹುರೂಪುಗಳ ನೋಡಿದರೆ ಕಾಣಬಾರದ ಹಾಂಗೆ ವ್ಯರ್ಥವಾಗಿರ್ಪುದು. ಹಿಂಗಿತ್ತು ಶಿವಲೋಕ : [ಶಿವಲೋಕ-] ಕೈಲಾಸದಲ್ಲಾಗುವಂಥ ನಿಜಮೋಕ್ಷವು, ಹಿಂಗಿತ್ತು-ತೊಲಗಿತ್ತು, ಇನ್ನೆಲ್ಲಿಹುದಯ್ಯಾ-ನಿತ್ಯವಾದ ನಿಜಮೋಕ್ಷ ಇನ್ನೆಂದಿಗೆ ದೊರಕೊಂಬುತ್ತಿಹುದಯ್ಯಾ.

ಲಿಂಗಕ್ಕೆ ಮಾಡಿದ-ಗುರುಲಿಂಗಜಂಗಮಕ್ಕೆಂದು ನೇಮಿಸಿ ಮಾಡಿದ, ಬೋನವ-ಪದಾರ್ಥವನು, ಸಿಂಬಕ ತಿಂದಂತೆ-ಮನೆಯೊಳಗಿದ್ದ ಗೌಡಿ ಗುಲಾಮರು ಕದ್ದುತಿಂದಲ್ಲಿ ದೇವತಾಕಾರ್ಯಕ್ಕೆ ಯೋಗ್ಯವಾಗದೆ ಹೇಂಗೆ ಉಚ್ಛಿಷ್ಟವಾಗುತ್ತಿಹುದೊ ಹಾಂಗೆ, ಜಂಗಮಭಕ್ತಿ ಬಾಹ್ಯವಾಗಿ ಲಿಂಗಪೂಜೆಯ ಮಾಡುವಂಥವನ ಅಂಗತತ್ವಪದಾರ್ಥಂಗಳೆಲ್ಲವೂ ಲಿಂಗದಲ್ಲಿ ಕೂಡುವುದಕ್ಕೆ ಯೋಗ್ಯವಾಗದೆ ಆ ಉಚ್ಛಿಷ್ಟವಾದ ಪದಾರ್ಥದ ಹಾಂಗೆ ವ್ಯರ್ಥಸ್ಯವಾಗಿರ್ಪುದು. ಸಮಯೋಚಿತವನರಿಯದೆ : [ಸಮಯೋಚಿತವನು-] ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ಸಮಯಕಾಲ ಉಚಿತ ಕಾಲವನ್ನು, ಅಱಿಯದೆ-ತಮ್ಮಲ್ಲಿದ್ದಂಥ ಪದಾರ್ಥವನ್ನು ನೀಡಿ ಸಂತುಷ್ಟಿಬಡಿಸುವಂಥದನ್ನು ತಿಳಿಯದೆ, ಉದರವ ಹೊರೆವರ-ಘಟರಕ್ಷಣ್ಯವ ಮಾಡಿಕೊಂಬವರ, ಕೂಡಲಸಂಗಮದೇವ-ಪರಶಿವಲಿಂಗವು, ನರಕದಲ್ಲಿಕ್ಕದೆ ಮಾಣ್ಬನೆ!-ನಿರಯದಲ್ಲಿ ಹಾಕದೆ ಬಿಟ್ಟಾನೆ? ಹಾಕುತ್ತಿಹನು.

..........................

೧-೧ x (ಕ). ೨-೨ x (ಗ). ೩-೩ x (ಕ).

II - - - - - - - - - - - - - - - - - - - - - - - - - - - - - - - - - - - - - - - - - - - - -

ಜಂಗಮವಿಲ್ಲದ ಮಾಟ-ಮಹಾಜ್ಞಾನಿಜಂಗಮಭಕ್ತಿಯಿಲ್ಲದ ಭಿನ್ನ ೪ಮಾಳಿಕೆಯು,೪ ಕಂಗಳಿಲ್ಲದ ನೋಟ-ಜ್ಞಾನದೃಷ್ಟಿಯಿಲ್ಲದ ನಿರೀಕ್ಷಣೆಯು, ಹಿಂಗಿತ್ತು ಶಿವಲೋಕವಿನ್ನೆಲ್ಲಿಯದಯ್ಯಾ-ಶಾಂಭವಲೋಕದ ಪದವಿಯು ಹೆರೆಸಾರಿತ್ತು, ಮುಂದೆತ್ತಳ ಮೋಕ್ಷವು. ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ-ಕೆಟ್ಟ ವಾಂಯಾ ಉಚ್ಛಿಷ್ಟವು ಸೋಂಕದಿರ್ದಂಥ ಶಿವಾರ್ಪಿತಕ್ಕೆಸಗಿದ ದ್ರವ್ಯವನು ಭಕ್ತಭೃತ್ಯನನುಭವಿಸಿದನೆಂಬುದರ್ಥ. ಸಮಯೋಚಿತವನಱಿಯದೆ-ಆ ಗುರುಲಿಂಗಜಂಗಮ ತಾತ್ಕಾಲವನು ತಿಳಿಯದೆ, ಉದರವ ಹೊರೆವವರ ನರಕದಲ್ಲಿಕ್ಕದೆ ಮಾಬನೆ ಕೂಡಲಸಂಗಮದೇವ-ಸುಮ್ಮನೆ ನಾಂ ಭಕ್ತರೆಂದು ಹೊಟ್ಟೆಹೊಱೆವ ಜೀವರುಗಳ ನಿರಯದಲ್ಲಿರಿಸದೆ ಬಿಡನೆಂಬುದರ್ಥ.

..........................

೪-೪ ಮಾಟವು (ಜ).

IV- - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗದ ಕಳೆ ಜಂಗಮವಾದ ಕಾರಣ ಜಂಗಮಕ್ಕೆ ಮಾಡುವುದೇ ಸದಾಚಾರ. ಜಂಗಮಕ್ಕೆ ಮಾಡದೆ ಉದರ ಹೊರೆವುದೆ ಅಜ್ಞಾನವೆಂಬುದೀ ವಚನದರ್ಥ.

---

## ೪೨೯

**ಲಿಂಗದಲ್ಲಿ ದಿಟವನಱಿಸುವಡೆ ಜಂಗಮವ ನೆಱೆ ನಂಬುವುದು : ನಡೆಲಿಂಗ, ನುಡಿಲಿಂಗ, ಮುಖಲಿಂಗವೆಂದು ನಂಬುವುದು.'ಯತ್ರ ಮಾಹೇಶ್ವರಾಸ್ತತ್ರ ಸನ್ನಿಹಿತ'ನಾಗಿ ಅಧರ ತಾಗಿದ ರುಚಿಯ ಉದರ ತಾಗಿದ ಸುಖವ ಉಂಬುಡುವ ಕೂಡಲಸಂಗಮದೇವ, ಜಂಗಮಮುಖದಲ್ಲಿ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗದಲ್ಲಿ ದಿಟವನಱಿಸುವಡೆ : ಲಿಂಗದಲ್ಲಿ–ಗುರುಮುಖದಿಂ ಬಂದ ಇಷ್ಟಮಹಾಲಿಂಗದಲ್ಲಿ, ದಿಟವನಱಿಸುವಡೆ–ಮಹಿಮಾಪದ ಚಿತ್ಕಲೆಯ ಹುಡುಕಬೇಕಾದರೆ, ಜಂಗಮವ ನೆಱೆ ನಂಬುವುದು: ಜಂಗಮವ–ಚರಲಿಂಗವನ್ನು, ನೆಱೆ–ಚೆನ್ನಾಗಿ, ನಂಬುವುದು–ಇವರೆ ಸಾಕ್ಷಾತ್ ಶಿವಸ್ವರೂಪಿಗಳೆಂದು ವಿಶ್ವಾಸಿಸುವುದು. ನಡೆಲಿಂಗ–ಅವರಾಚರಿಸುವಂಥ ಸತ್ಕ್ರಿಯಾಚಾರವೆಲ್ಲವು ಇಷ್ಟಲಿಂಗದಲ್ಲಿ ಕೂಡಿ ಇಷ್ಟಲಿಂಗಸ್ವರೂಪವಾಗಿಪ್ಪುದು. ನುಡಿಲಿಂಗ–ಅವರ ಶಿವತತ್ವಾನುಭಾವದ ಸಮ್ಯಕ್‌ಜ್ಞಾನಾಚಾರ ಪ್ರಸಂಗವೆಲ್ಲವೂ ಪ್ರಾಣಲಿಂಗದಲ್ಲಿ ಕೂಡಿ ಪ್ರಾಣಲಿಂಗಸ್ವರೂಪವಾಗಿರ್ಪುದು. ಮುಖಲಿಂಗವೆಂದು ನಂಬುವುದು : [ಮುಖಲಿಂಗವೆಂದು] ಮುಖ್ಯವಾದ ಶಿವಸ್ವರೂಪವೆಂದು, ನಂಬುವುದು–ವಿಶ್ವಾಸಿಸುವುದು.

ಯತ್ರಮಾಹೇಶ್ವರಾಸ್ತತ್ರ ಸನ್ನಿಹಿತನಾಗಿ : ಯತ್ರ–ಯಾವ ಸ್ಥಾನದಲ್ಲಿ, ಮಾಹೇಶ್ವರಾ–ವೀರಮಾಹೇಶ್ವರರಿರುತ್ತಿಹರೋ, ತತ್ರ–ಅಲ್ಲಿ, ಸನ್ನಿಹಿತನಾಗಿ–ಪರಮೇಶ್ವರನು ಪೂರ್ಣವಾಗಿ ನೆಲಸಿಪ್ಪನಾಗಿ, ಅಧರ ತಾಗಿದ ರುಚಿಯ : ಅಧರ–ಅವರ ರಸನೇಂದ್ರಿಯನು, ತಾಗಿದ–ತಟ್ಟಿದ, ರುಚಿಯ–ಷಡ್ರುಚಿಗಳ, ಉದರ ತಾಗಿದ ಸುಖವ : ಉದರ–ಅವರಂಗವನು, ತಾಗಿದ–ತಟ್ಟಿದ, ಸುಖವ–ಸ್ರಕ್ಚಂದ [*ನಾದಿ*] ಅಷ್ಟಭೋಗದ ಪರಿಣಾಮವನು, ಕೂಡಲಸಂಗಮದೇವ–ಪರಶಿವಲಿಂಗವನು, ಉಡುವ–ಸ್ರಕ್ಚಂದನ [* *] ಅಷ್ಟಭೋಗದ ಪರಿಣಾಮವನು, ಕೂಡಲಸಂಗಮದೇವ–ಪರಶಿವಲಿಂಗವು, ಜಂಗಮದ ಮುಖದಲ್ಲಿ–ಚರಲಿಂಗದ ವದನದಲ್ಲಿ, ಉಂಬುವ–ಮಧುರಾದಿ ಷಡ್ರುಚಿಪದಾರ್ಥಂಗಳನು ಆ ಜಂಗಮದ ಮುಖದಿಂದ ಅನುಭವಿಸುವನು. ಉಡುವ–ಸ್ರಕ್ಚಂದನ [* *] ವಸ್ತ್ರ ಕಪ್ಪಟಂಗಳ ಭೋಗವನ್ನು ಆ ಜಂಗಮದ ಮುಖದಿಂದ ಆಚ್ಛಾಸಿಸಿಕೊಳ್ಳುತಿಹನು.

---

೪೩೦

**ಜಂಗಮದ ಮನಭಾವದಲ್ಲಿ ಭಕ್ತನೆ ಭೃತ್ಯನೆಂದು, ಭಕ್ತನ ಮನಭಾವದಲ್ಲಿ ಜಂಗಮನೆ ಕರ್ತನೆಂದಿದ್ದ ಬಳಿಕ, ಬಂದಿತ್ತು ಬರದು ಹೋಯಿತ್ತೆಂಬ ಸಂದೇಹವಿಲ್ಲದಿರಬೇಕು . ಹೋಯಿತ್ತೆಂಬ ಗುಣವುಳ್ಳನ್ನಕ್ಕ ನಿಮಗೆ ದೂರ, ನಿಮ್ಮವರಿಗೆ ಮುನ್ನವೇ ದೂರ! ಶಿವಾಚಾರಕಲ್ಲಿಂದತ್ತತ್ತ ದೂರ! ಜಂಗಮದ ಹರಿದ ಹರಿವು, ಜಂಗಮದ ನಿಂದ ನಿಲವು ಜಂಗಮದ ಗಳಗರ್ಜನೆ, ಜಂಗಮದ ಕೋಳಾಟಕ್ಕೆ ಸೈರಿಸದಿದ್ದಡೆ ನೀನಂದೇ ಮೂಗು ಕೊಯ್ಯಿ ಕೂಡಲಸಂಗಮದೇವಾ!**

I - - - - - - - - - - - - - - - - - - - - - - - - - - - - - - - - - - - - - - - - - - - - -

ಜಂಗಮದ ಮನಭಾವದಲ್ಲಿ : ಜಂಗಮದ–ಚರಲಿಂಗದ, ಮನಭಾವದಲ್ಲಿ–ಕಾಯಕ ವಾಚಕ ಮಾನಸವೆಂಬ ತ್ರಿಕರಣಂಗಳಲ್ಲಿ, ಭಕ್ತನೆ–ಶಿವಭಕ್ತನೆ ಭೃತ್ಯನೆಂದು–ತನ್ನ ಸೇವಕನೆನುತ್ತ, ಭಕ್ತನ–ಶಿವಭಕ್ತನ, ಮನ ಭಾವದಲ್ಲಿ–ಮಾನಸ ವಾಚಕ ಕಾಯಕವೆಂಬ ತ್ರಿಕರಣಂಗಳಲ್ಲಿ, ಜಂಗಮನೆ–

ಚರಲಿಂಗವನ್ನು ಕರ್ತನೆಂದು–ಒಡದೆಯನೆಂದು, ಇದ್ದ ಬಳಿಕ–ಭಕ್ತನು ಭಕ್ತಿಯ ಮಾಡುತ್ತ ಜಂಗಮವು ಕೈಕೊಳುತ್ತ ಹೀಂಗಿದ್ದ ಮೇಲೆ, ಬಂದಿತ್ತು–ಈ ವರುಷ ಈ ಭಕ್ತನ ಮುಖದಿಂದ ಇಷ್ಟು ಹಚ್ಚಡ ಇಷ್ಟು ಧೋತ್ರ ಇಷ್ಟು ವಸ್ತ್ರ ಇಷ್ಟು ಕೊಡೆ ಇಷ್ಟು ಪಾದರಕ್ಷೆ ಆ ಭಕ್ತನಿಂದ ನಮಗೆ ಸಮರ್ಪಣೆಯಾದುದು, ಬಾರದು–ಈ ವರುಷ ಈ ಭಕ್ತನಿಂದ ಇಷ್ಟು ಹಚ್ಚಡ ಇಷ್ಟು ಧೋತ್ರ ಇಷ್ಟು ವಸ್ತ್ರ ಇಷ್ಟು ಕೊಡೆ ಪಾದರಕ್ಷೆ ನಮಗೆ ಸಮರ್ಪಣೆಯಾದುದು, ಬಾರದು–ಈ ವರುಷ ಈ ಭಕ್ತನಿಂದ ಇಷ್ಟು ಹಚ್ಚಡ ಇಷ್ಟು ಧೋತ್ರ ಇಷ್ಟು ವಸ್ತ್ರ ಇಷ್ಟು ಕೊಡೆ ಪಾದರಕ್ಷೆ ಮೊದಲಾದುವು ಜಂಗಮಕ್ಕೆ ಸಂದಿಹೋಯಿತ್ತೆಂಬ, ಸಂದೇಹವಿಲ್ಲದಿರಬೇಕು–ಸಂಕಲ್ಪವುಂಟಾಗಿಲ್ಲದೆ ಭಕ್ತ ಭಕ್ತಿಯ ಮಾಡತ್ತಿರಬೇಕು, ಜಂಗಮವು ಕೈಕೊಳ್ಳುತ್ತಿರಬೇಕು.

ಹೋಯಿತ್ತೆಂಬ–ಈ ವರುಷ ಎನ್ನಿಂದ ಇಷ್ಟು ಹಚ್ಚಡ ಇಷ್ಟು ಧೋತ್ರ ಇಷ್ಟು ವಸ್ತ್ರ ಇಷ್ಟು ಕೊಡೆ ಪಾದರಕ್ಷೆ ಸಂ^[ದು]^ ಚಾಗಿಯಾಗಿ ಹೋಯಿತ್ತೆನಿಸುವ, ಗುಣವುಳ್ಳನ್ನಕ್ಕ–ಈ ಸಂಕಲ್ಪ ಗುಣವುಂಟಾಗಿರುವ ಪರಿಯಂತರವು, ನಿಮಗೆ ದೂರ–ಲಿಂಗದಲ್ಲಿ ಕೂಡೋದಕ್ಕೆ ಎಟ್ಟುಗೊಳನು. ನಿಮ್ಮವರಿಗೆ ಮುನ್ನವೆ ದೂರ–ನಿಮ್ಮ ಪ್ರಮಥರಿಗೆ ಮೊದಲೇ ಎಟ್ಟುಗೊಳನು. ಶಿವಾಚಾರಕ್ಕೆ–ಲಿಂಗಾಚಾರಮಾರ್ಗವಿಡಿದಾಚರಿಸುವುದಕ್ಕೆ, ಅಲ್ಲಿಂದತ್ತತ್ತ ದೂರ–ಅದರಿಂದಾಚೆಗಾಚೆಗೆ ಎಟ್ಟುಗೊಳನು.

ಜಂಗಮದ ಹರಿದ ಹರಿವು–ಜಂಗಮಮೂರ್ತಿಗಳು ದೇಶಾಂತರ ಮಾಡುತ್ತ ಭಿಕ್ಷಕ್ಕೆಂದು ಬಿಜಯಂಗೈದು ಬಂದಂಥ ಚಮತ್ಕಾರವನ್ನು ಕಂಡಾಕ್ಷಣಕ್ಕೆ ನಮಸ್ಕರಿಸಿ ಭಕ್ತಿಬಿನ್ನಹವನ್ನು ಮಾಡಿ ಮಾನಮನ್ನಣೆಯಿಂದ ತಮ್ಮಲ್ಲಿದ್ದಂಥ ಪದಾರ್ಥವ ನೀಡಿ ಸಂತುಷ್ಟಬಡಿಸಿ ಕಳಿಸುವಂಥದನು, ಜಂಗಮದ ನಿಂದನಿಲವು–ಜಂಗಮಮೂರ್ತಿಗಳು ಐವತ್ತಾರು ದೇಶದಲ್ಲಿ ದಿಗ್ದೇಶಾಂತರ ಮಾಡಿಕೊಂಡು ದಣಿದು ಪೇಟೆ ಮನೆ ಪುರ ಪಟ್ಟಣ ಸ್ಥಾನಂಗಳಿಗೆ ಬಂದು ನೆಲ ನೀರು ಪತ್ರಿ ಪ್ರಸೂನಂಗಳಿಂದ ನಿರ್ಮವಾಗಿದ್ದಂಥ ಚೌಕಿ ಮಠಂಗಳಲ್ಲಿ ಹಾಸಿಕೊಂಡು ಓದುತ್ತ ಹಾಡುತ್ತ ಶಿವಾನುಭಾವವನ್ನು ಮಾಡುತ್ತ ಭಕ್ತಿ ಬಿನ್ನಹಗಳ ಕೈಕೊಂಬುತ್ತ ವರುಷಾರುತಿಂಗಳು ತಡೆದಲ್ಲಿ ಮೊದಲು ವೈರಾಗ್ಯಪರರಾಗಿ ಬಂದಿದ್ದರು, ಈಗಿಲ್ಲೇ ಜಗ್ಗೂರಿ ನಿಂತರೆಂದು ಉಪೇಕ್ಷವ ಮಾಡಿಬಿಡದೆ ನಾಲ್ಕಕ್ಕೂ ಎಂಟಕ್ಕೂ ಮಾನಮನ್ನಣೆಯಿಂದ ಭಕ್ತಿಬಿನ್ನಹವನ್ನು ಮಾಡುವಂಥ ನಿಲುಕಡೆಯನ್ನು, ಜಂಗಮದ ಗಳಗರ್ಜನೆ–ಜಂಗಮಮೂರ್ತಿಗಳ ಕಂಠಸ್ಥಾನದಲ್ಲಿ ಎಲೊ ತಲೊ ಗೋವ ಗುಲಾಮ ಎಂದು ಜರಿದು ಧಿಃಕರಿಸಿ ನುಡಿದರೆಯೂ ಇವರು ಅಂಬುತ್ತೈದಾರೆ ಆಡುತ್ತೈದಾರೆಯೆಂದು ಉಪೇಕ್ಷವ ಮಾಡಿ ಬಿಡದೆ ಮಾನಮನ್ನಣೆಯಿಂದ ಭಕ್ತಿಬಿನ್ನಹವ ಮಾಡುವುದು. ಜಂಗಮದ ಕೋಳಾಟಕ್ಕೆ ಸೈರಿಸದಿದ್ದಡೆ–ಜಂಗಮಮೂರ್ತಿಗಳು ಹತ್ತೆಂಟಕ್ಕೆ ಕೂಡಿಕೊಂಡು ಕುತ್ತಿಗೆಗೆ ಲಿಂಗವನ್ನು ಧರಿಸಿಕೊಂಡು ಕಡಿದಾಡುತಿದ್ದಲ್ಲಿ ತಾನು ಮಧ್ಯದಲ್ಲಿ ನಿಂತುಕೊಂಡು ನಮಸ್ಕರಿಸಿ ಸ್ವಾಮೀ ನಿಮಗೂ ಬೇಡಿ ನಿಮಗೂ ಬೇಡಿಯೆಂದು ಬಿಡಿಸಿ ಮಾನಮನ್ನಣೆಯಿಂದ ಭಕ್ತಿಬಿನ್ನಹವನ್ನು ಮಾಡಬೇಕಲ್ಲದೆ ಇವರು ಕಡಿದಾಡುತ್ತೈದಾರೆ ಬಡದಾಡುತ್ತೈದಾರೆಯೆಂದು ಮಾನಮನ್ನಣೆಯಿಂದ ಭಕ್ತಿಬಿನ್ನಹವನ್ನು ಮಾಡುವಂಥದನ್ನು ಉಪೇಕ್ಷವ ಮಾಡಿ ಬಿಟ್ಟುಕೊಟ್ಟೆನಾದರೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀನಂದೇ ಮೂಗು ಕೊಯ್ಯಿ : ನೀನು–ಪರಶಿವಲಿಂಗವು, ಅಂದೇ–ಆ ಕ್ಷಣದಲ್ಲೇ, ಮೂಗು ಕೊಯ್ಯಿ–ಆಚಾರಾಂಗವೆಂಬ ಘ್ರಾಣವನಪಹರಿಸಿ ಮಾನ ಭಂಗವ ಮಾಡಿ ಭವಕ್ಕೆ ಹಾಕಿಬಿಡು.

..........................

೧-೧ ದಿ (ಕ, ಗ).

---

೪೩೧

**ನಯನದಾಹಾರವ ಜಂಗಮವ ನೋಡಿಸುವೆನು, ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು, ಘ್ರಾಣದಾಹಾರವ ಜಂಗಮವ ವಾಸಿಸುವೆನು, ಜಿಹ್ವೆಯಾಹಾರವ ಜಂಗಮನುಣಿಸುವೆನು, ಕವಚದಾಹಾರವ ಜಂಗಮವ ಹೊದಿಸುವೆನು, ಅಧಿಕ ಪ್ರೇಮ ಪ್ರಣಮ್ಯ ಮಾಡುವೆನು, ಸಕಲ ಪದಾರ್ಥಂಗಳ ನೀಡುವೆನು, ಕೂಡಲಸಂಗಮದೇವಾ ನಿಮ್ಮ ಶರಣರಿಗೆ.**

I - - - - - - - - - - - - - - - - - - - - - - - - - - - - - - - - - - - - - - - - - -

ನಯನದಾಹಾರವ ಜಂಗಮವ ನೋಡಿಸುವೆನು : [ನಯನದಾಹಾರವ-] ನಯನೇಂದ್ರಿಯಕ್ಕೆ ಆಹಾರವಾದ ಚಿತ್ರವಿಚಿತ್ರ ಮೊದಲಾದ ಬಹು ರೂಪುಗಳನು ನೋಡಬೇಕಾದರೆ, ಜಂಗಮವ ನೋಡಿಸುವೆನು-ಜಂಗಮಮೂರ್ತಿಗಳಿಗೆ ಬಿನ್ನಹವ ಮಾಡಿ ಕರಕೊಂಡು ಬಂದು ಗದ್ದುಗೆಯ ಹಾಕಿ ಮೂರ್ತವ ಮಾಡಿಸಿ ಅವರು ನಿರೀಕ್ಷಣೆಯ ಮಾಡಿದ ಮೇಲೆ ಅವರ ಸಮೀಪದಲ್ಲಿ ಕುಳಿತುಕೊಂಡು ನಾ ನಿರೀಕ್ಷಣೆಯ ಮಾಡುವೆನು.

ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು-ಶ್ರವಣೇಂದ್ರಿಯಕ್ಕೆ ಆಹಾರವಾದ ನಾದಾದಿ ಶಬ್ದಂಗಳನು ಆಲಿಸಬೇಕಾದರೆ ಜಂಗಮವ ಕೇಳಿಸುವೆನು. ಆ ಜಂಗಮಮೂರ್ತಿಗಳಿಗೆ ಬಿನ್ನಹವ ಮಾಡಿ ಕರಕೊಂಡು ಬಂದು ಗದ್ದುಗೆಯ ಹಾಕಿ ಮೂರ್ತವ ಮಾಡಿಸಿ ಅವರು ಆಲಿಸಿದ ಮೇಲೆ ಅವರ ಸಮೀಪದಲ್ಲಿ ಕುಳಿತುಕೊಂಡು ನಾನಾಲಿಸುವೆನು.

ಘ್ರಾಣದಾಹಾರವ ಜಂಗಮವ ವಾಸಿಸುವೆನು-ಘ್ರಾಣೇಂದ್ರಿಯಕ್ಕೆ ಆಹಾರವಾದ ಚಂಪಕಾದಿ ಕುಸುಮ ಚಂದನಾದಿಗಂಧವನ್ನು ವಾಸಿಸಬೇಕಾದರೆ ಜಂಗಮವ ವಾಸಿಸುವೆನು. ಆ ಜಂಗಮಮೂರ್ತಿಗಳಿಗೆ ಬಿನ್ನಹವ ಮಾಡಿ ಕರಕೊಂಡು ಬಂದು ಗದ್ದುಗೆಯ ಹಾಕಿ ಮೂರ್ತವ ಮಾಡಿಸಿ ಮೊದಲವರಿಗೆ ವಾಸಿಸುವುದಕ್ಕೆ ಕೊಟ್ಟು ಅವರು ಘ್ರಾಣಿಸಿಕೊಟ್ಟಂಥ ಗಂಧಪ್ರಸಾದವನು ಕೈಕೊಂಡು ನಾ ವಾಸಿಸುವೆನು.

ಜಿಹ್ವೆಯಾಹಾರವ ಜಂಗಮವನುಣಿಸುವೆನು-ರಸನೇಂದ್ರಿಯಕ್ಕೆ ಆಹಾರವಾದ ಮಧುರಾದಿ ಷಡ್ರುಚಿಗಳನು ಸ್ವೀಕರಿಸಬೇಕಾದರೆ ಜಂಗಮನುಣಿಸುವೆನು. ಆ ಜಂಗಮಮೂರ್ತಿಗಳಿಗೆ ಬಿನ್ನಹವ ಮಾಡಿ ಕರಕೊಂಡು ಬಂದು ಗದ್ದುಗೆಯ ಹಾಕಿ ಮೂರ್ತವ ಮಾಡಿಸಿ ಮೊದಲವರಿಗೆ ಸಕಲಪದಾರ್ಥವ ಎಡೆ ಮಾಡಿ ಸಂತುಷ್ಟಬಡಿಸಿ, ಅವರೊಕ್ಕ ಮಿಕ್ಕ ಪ್ರಸಾದವ ನಾನು ಪಡೆದನುಭವಿಸುವೆನು.

ಕವಚದಾಹಾರವ ಜಂಗಮವ ಹೊದಿಸುವೆನು-ತ್ವಗೇಂದ್ರಿಯಕ್ಕೆ ಆಹಾರವಾದ[೧] ವಸ್ತ್ರಕಪ್ಪಟಾದಿಗಳನು ಆಚ್ಛಾದಿಸಕೊಳಬೇಕಾದರೆ ಜಂಗಮವ ಹೊದಿಸುವೆನು. ಆ ಜಂಗಮಮೂರ್ತಿಗಳಿಗೆ ಬಿನ್ನಹವ ಮಾಡಿ ಕರಕೊಂಡು ಬಂದು ಗದ್ದುಗೆಯ ಹಾಕಿ ಮೂರ್ತವ

ಮಾಡಿಸಿ ಮೊದಲವರಿಗೆ ಆಚ್ಛಾದಿಸಿಕೊಂಬುವುದಕ್ಕೆ ಕೊಟ್ಟು, ಅವರು ಉಟ್ಟು ಬಿಟ್ಟಂಥ ಬೀಳುಡಿಗೆಯನ್ನು ತೆಗೆದುಕೊಂಡು ನಾನು ಹೊದ್ದುಕೊಂಬುವೆನು.

ಅಧಿಕ ಪ್ರೇಮ ಪ್ರಣಮ್ಯ ಮಾಡುವೆನು : ಅಧಿಕ–ಶ್ರೇಷ್ಠವಾದ, ಪ್ರೇಮ–ಪ್ರೀತಿಯಿಂದ, ಪ್ರಣಮ್ಯ ಮಾಡುವೆನು–ನಮಸ್ಕರಿಸಿ ಸಕಲಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡುವೆನು. ಸಕಲಪದಾರ್ಥಂಗಳ ನೀಡುವೆನು–ಘೃತ ಮುಖ್ಯವಾದ ಸಮಸ್ತ ಷಡ್ರುಚಿ ಪದಾರ್ಥಂಗಳ ನೀಡಿ ಸಂತುಷ್ಟಿಬಡಿಸುವೆನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗೆ–ನಿಮ್ಮ ಜಂಗಮಮೂರ್ತಿಗಳಿಗೆ ಸಕಲ ಪದಾರ್ಥವ ನೀಡಿ ಸಂತುಷ್ಟಬಡಿಸಿ ಅವರೊಕ್ಕು ಮಿಕ್ಕ ಪ್ರಸಾದವನ್ನು ನಾನು ಪಡೆದನುಭವಿಸುವೆನೆಂಬ ದೃಷ್ಟೋಪಮಾನದ ಹಾಂಗೆ,

● ನಯನದಾಹಾರವ ಜಂಗಮವ ನೋಡಿಸುವೆನು–ನಯನೇಂದ್ರಿಯಕ್ಕೆ ಆಹಾರವಾದ ಚಿತ್ರವಿಚಿತ್ರ ಮೊದಲಾದ ಬಹುರೂಪುಗಳನು ನೋಡಬೇಕಾದರೆ ಜಂಗಮವ ನೋಡಿಸುವೆನು. ಅಂತರಂಗದ ಪ್ರಾಣಲಿಂಗವನ್ನೇ ನಯನೇಂದ್ರಿಯಲ್ಲಿ ನಿರೀಕ್ಷಣ ಸ್ವರೂಪವಾದ ಶಿವಲಿಂಗ ಸಂಬಂಧ ಮಾಡಿಕೊಂಡು ನಯನೇಂದ್ರಿಯ ಮುಖದಲ್ಲಿ ಬರುವ ರೂಪುಪದಾರ್ಥವನ್ನು ಶಿವಲಿಂಗಕ್ಕೆ ಸಮರ್ಪಿಸಿ ಆ ಶಿವಲಿಂಗಮುಖದಿಂದುಳುಮೆಯಾಗಿ ಬರಲ್ಪಟ್ಟ ರೂಪು ಪ್ರಸಾದವನ್ನು ನಾನು ಪಡೆದನುಭವಿಸುವೆನು.

ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು–ಶ್ರವಣೇಂದ್ರಿಯಕ್ಕೆ ಆಹಾರವಾದ ನಾದಾದಿ ಶಬ್ದಂಗಳನು ಕೇಳಬೇಕಾದರೆ ಜಂಗಮವ ಕೇಳಿಸುವೆನು. ಅಂತರಂಗದ ಪ್ರಾಣಲಿಂಗವನ್ನೇ ಶ್ರವಣೇಂದ್ರಿಯಲ್ಲಿ ಈಳನ ಸ್ವರೂಪವಾದ ಪ್ರಸಾದ ಲಿಂಗವಾಗಿ ಸಂಬಂಧವ ಮಾಡಿಕೊಂಡು ಶ್ರೋತ್ರೇಂದ್ರಿಯ ಮುಖದಲ್ಲಿ ಬರುವ ಶಬ್ದಪದಾರ್ಥವನ್ನು ಪ್ರಸಾದಲಿಂಗಕ್ಕೆ ಸಮರ್ಪಿಸಿ ಆ ಪ್ರಸಾದ ಲಿಂಗಮುಖದಿಂದುಳುಮೆಯಾಗಿ ಬರಲ್ಪಟ್ಟ ಶಬ್ದಪ್ರಸಾದವನು ನಾನು ಪಡೆದನುಭವಿಸುವೆನು.

ಘ್ರಾಣದಾಹಾರವ ಜಂಗಮವ ವಾಸಿಸುವೆನು–ಘ್ರಾಣೇಂದ್ರಿಯಕ್ಕೆ ಆಹಾರವಾದ ಚಂದನಾದಿ ಗಂಧಚಂಪಕಾದಿ ಕುಸುಮಂಗಳನು ವಾಸಿಸಬೇಕಾದರೆ ಜಂಗಮವ ವಾಸಿಸುವೆನು. ಅಂತರಂಗದ ಪ್ರಾಣಲಿಂಗವನ್ನೇ ಘ್ರಾಣೇಂದ್ರಿಯಲ್ಲಿ ಪಂಚಾಚಾರಸ್ವರೂಪವಾದ ಆಚಾರಲಿಂಗವಾಗಿ ಸಂಬಂಧವ ಮಾಡಿಕೊಂಡು ಘ್ರಾಣೇಂದ್ರಿಯ ಮುಖದಲ್ಲಿ ಬರು ಗಂಧಪದಾರ್ಥವನ್ನು ಆಚಾರಲಿಂಕ್ಕೆ ಸಮರ್ಪಿಸಿ ಆ ಆಚಾರಲಿಂಗಮುಖದಿಂದುಳುಮೆಯಾಗಿ ಬರಲ್ಪಟ್ಟ ಗಂಧಪ್ರಸಾದವನು ನಾನು ಪಡೆದನುಭವಿಸುವೆನು.

ಜಿಹ್ವೆಯಾಹಾರವ ಜಂಗಮವನುಣಿಸುವೆನು–ರಸನೇಂದ್ರಿಯಕ್ಕೆ ಆಹಾರವಾದ ಮಧುರಾದಿ ಷಡ್ರುಚಿಗಳನು ಸ್ವೀಕರಿಸಬೇಕಾದರೆ ಜಂಗಮವನುಣಿಸುವೆನು. ಅಂತರಂಗದ ಪ್ರಾಣಲಿಂಗವನ್ನೇ ಜಿಹ್ವೇಂದ್ರಿಯಲ್ಲಿ ಮಂತ್ರಮೂರ್ತಿಸ್ವರೂಪವಾದ ಗುರುಲಿಂಗವಾಗಿ ಸಂಬಂಧವ ಮಾಡಿಕೊಂಡು ಜಿಹ್ವೇಂದ್ರಿಮುಖದಲ್ಲಿ ಬರುವ ರುಚಿಪದಾರ್ಥವನ್ನು ಗುರುಲಿಂಗಕ್ಕೆ ಸಮರ್ಪಿಸಿ ಆ ಗುರುಲಿಂಗ ಮುಖದಿಂದುಳುಮೆಯಾಗಿ ಬರಲ್ಪಟ್ಟ ರುಚಿಪ್ರಸಾದವನ್ನು ನಾನು ಪಡೆದನುಭವಿಸುವೆನು.

ಕವಚದಾಹಾರವ ಜಂಗಮವ ಹೊದಿಸುವೆನು–ತ್ವಗೇಂದ್ರಿಯಕ್ಕೆ ಆಹಾರವಾದ ಮೃದ್ವಾದಿ ಸ್ಪರ್ಶನಂಗಳನು ಹೊದೆಯಬೇಕಾದರೆ ಜಂಗಮವ ಹೊದಿಸುವೆನು. ಅಂತರಂಗದ ಪ್ರಾಣಲಿಂಗವನ್ನೇ

ತ್ವಗೇಂದ್ರಿಯಲ್ಲಿ ಜಂಗಮಲಿಂಗವಾಗಿ ಸಂಬಂಧವ ಮಾಡಿಕೊಂಡು ತ್ವಗೇಂದ್ರಿಯ ಮುಖದಲ್ಲಿ ಬರುವ ಮೃದ್ವಾದಿ ಸ್ಪರ್ಶನಪದಾರ್ಥವನ್ನು ಜಂಗಮಲಿಂಗಕ್ಕೆ ಸಮರ್ಪಿಸಿ ಆ ಜಂಗಮಲಿಂಗದ ಮುಖದಿಂದುಳುಮೆಯಾಗಿ ಬರಲ್ಪಟ್ಟ ಸ್ಪರ್ಶನಪ್ರಸಾದವನ್ನು ನಾನು ಪಡೆದನುಭವಿಸುವೆನು.

ಅಧಿಕಪ್ರೇಮ ಪ್ರಣಮ್ಯ ಮಾಡುವೆನು : ಅಧಿಕ–ಬಹು ಶ್ರೇಷ್ಠವಾದ, ಪ್ರೇಮ–ವಿಶ್ವಾಸದಿಂದ. ಪ್ರಣಮ್ಯ ಮಾಡುವೆನು–ಸಮರಸಭಾವದಿಂದ ಪಂಚೇಂದ್ರಿಯಂಗಳನು ಪಂಚವಿಧಲಿಂಗಕ್ಕೆ ಸಮರ್ಪಣೆಯ ಮಾಡುವೆನು. ಸಕಲಪದಾರ್ಥಂಗಳ ನೀಡುವೆನು–ಪಂಚೇಂದ್ರಿಯಂಗಳಲ್ಲಿ ಬರಲ್ಪಟ್ಟ ಪಂಚವಿಷಯ ಪದಾರ್ಥಂಗಳನು ಪಂಚವಿಧಲಿಂಗಕ್ಕೆಡೆಮಾಡುವೆನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗೆ–ನಿಮ್ಮ ಪಂಚವಿಧಲಿಂಗಕ್ಕೆ ಎನ್ನ ಪಂಚೇಂದ್ರಿಯಂಗಳಲ್ಲಿ ಬರಲ್ಪಟ್ಟ ಪಂಚವಿಧವಿಷಯಪದಾರ್ಥಂಗಳನು ಸಮರ್ಪಿಸಿ ಪಂಚವಿಧಲಿಂಗಮುಖದಿಂದುಳುಮೆಯಾಗಿ ಬರಲ್ಪಟ್ಟ ಪಂಚವಿಧಪ್ರಸಾದವನ್ನು ನಾನು ಪಡೆದನುಭವಿಸುವೆನು.

..........................

೧+ ಮೃದ್ವಾದಿ (ಗ). ೨+ ವಾಗಿ (ಕ).

---

## ಭಕ್ತನ ಮಾಹೇಶ್ವರಸ್ಥಲ

I - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನ ಮಾಹೇಶ್ವರಸ್ಥಲ : ಭಕ್ತಸ್ಥಲದೊಳಗಣ ಮಾಹೇಶ್ವರಸ್ಥಲವ ನಿರೂಪಿಸುತ್ತಿಹರು.

---

**೪೩೨**

**ಎಂಬತ್ತು ನಾಲ್ಕು ಲಕ್ಷ ಮುಖದೊಳಗೆ ಒಂದೇ ಮುಖವಾಗಿ ಬಂದು ಬೇಡಿ ನೋಡೆನ್ನನು, ಕಾಡಿ ನೋಡೆನ್ನನು. ಬೇಡದಿರ್ದಡೆ ಅಯ್ಯಾ, ನಿಮಗೆ ಪ್ರಮಥರಾಣೆ! ನೀನಾವ ಮುಖದಲ್ಲಿ ಬಂದು ಬೇಡಿದಡೇನು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಎಂಬತ್ತು ನಾಲ್ಕು ಲಕ್ಷ ಮುಖದೊಳಗೆ–ಎಂಬತ್ತು ನಾಲ್ಕು ಲಕ್ಷ ಪ್ರಾಣಿಗಳಿಗೆ ಚೈತನ್ಯವಾಗಿರುವಾತ ನೀನು, ಅವರವರ ಮುಖದಲೆಲ್ಲ ಬಂದು ಬೇಡಬೇಡ. ಒಂದೇ ಮುಖವಾಗಿ ಬಂದು–ಒಂದೇ ಜಂಗಮರೂಪವ ಧರಿಸಿಕೊಂಡು ಬಂದು, ಎನ್ನನು–ನನ್ನನ್ನು, ಬೇಡಿ ನೋಡು–ಎಲೋ ಭಕ್ತ ತನು ಕೊಡು ಮನವ ಕೊಡು ಧನವ ಕೊಡು ಎಂದು ಒರೆದೊರೆದು ಕೇಳಿ ನೋಡು, ಎನ್ನನು–ನನ್ನನ್ನು, ಕಾಡಿನೋಡು–ಕೊಡದೆ ಇದ್ದಲ್ಲಿ ಆಣೆಯ ಕಟ್ಟಿ ಹಿಗ್ಗಾ ಮುಗ್ಗಾ ಎಳೆದಾಡಿ ಪೀಡಿಸಿ ನೋಡು.

ಬೇಡದಿರ್ದಡೆ–ಎಲೋ ಭಕ್ತ ತನುವ ಕೊಡು ಮನವ ಕೊಡು ಧನವ ಕೊಡು ಎಂದೊರೆದೊರೆದು ಕೇಳಿ ನೋಡದಿದ್ದರೆ, ಅಯ್ಯ–ಎಲೆ ಲಿಂಗವೆ, ನಿಮಗೆ–ಪರಶಿವಲಿಂಗಕ್ಕೆ, ಪ್ರಮಥರಾಣೆ!–ನಂದೀಶಾದಿ ಪ್ರಮಥಗಣಂಗಳ ಪಾದದ ಮೇಲಣ ಪ್ರತಿಜ್ಞೆಯು. ನೀನಾವ ಮುಖದಲ್ಲಿ ಬಂದು–ಜಡೆ ಮುಡಿ ಲೋಚು ಬೋಳು ದಿಗಂಬರ ನಿರ್ವಾಣ ಮೊದಲಾದ ಷಟ್ಪ್ರಕಾರವಾದ ವೇಷದೊಳಗಾವ ವೇಷವನಾದರೂ ಧರಿಸಿಕೊಂಡು ಬಂದು, ಬೇಡಿದಡೆ–ಎಲೋ ಭಕ್ತ ತನುವ ಕೊಡು ಮನವ ಕೊಡು ಎಂದು ಕೇಳಿದರೆ, ಈವೆನು–ಕೊಟ್ಟು ಭಕ್ತಿಯ ಮಾಡುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೩೩

**ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ; ಕುಂದಿದೆನಯ್ಯಾ ಎನ್ನ ನುಡಿಸುವರಿಲ್ಲದೆ; ಬಡವನಾದೆನಯ್ಯಾ ಎನ್ನ ತನುಮನಧನವ ಬೇಡುವರಿಲ್ಲದೆ, ಕಾಡುವ ಬೇಡುವ ಶರಣರ ತಂದು ಕಾಡಿಸು ಬೇಡಿಸು, ಕೂಡಲಸಂಗಮದೇವಾ.**

I---

ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ : [ಎನ್ನ ನೋಡುವರಿಲ್ಲದೆ–] ನಾನು ಮಾಡುವಂಥ ಭಕ್ತಿಯು ಉಪಾಧಿಯೋ ನಿರುಪಾಧಿಯೋ ಸಹಜ ಮಾಟವೋ ಎಂದು ನಿರೀಕ್ಷಣೆಯ ಮಾಡುವಂಥವರುಂಟಾಗಿಲ್ಲದೆ, ಕಂದಿದೆನಯ್ಯಾ– "ಕಂದು ಕಾಂತಿಗತೌ" ಎಂದು ಕಾಂತಿಗತವಾದೆನಯ್ಯಾ ಕುಂದಿದೆನಯ್ಯಾ ಎನ್ನ ನುಡಿಸುವರಿಲ್ಲದೆ : [ಎನ್ನ ನುಡಿಸುವರಿಲ್ಲದೆ–] ಎನ್ನ ಕೂಡ ಶಿವತತ್ವಜ್ಞಾನಾನಭವದ ಪ್ರಸಂಗವನಾಡುವರಿಲ್ಲದೆ ಕುಂದಿದೆನಯ್ಯಾ–"ಕುಂದುಕ್ಷಯೇ" ಎಂದು ಎಂಟು ಗೇಣಿನ ಶರೀರ ಏಳು ಗೇಣಾದೆನಯ್ಯಾ. ಬಡವಾದೆನಯ್ಯಾ ಎನ್ನ ತನುಮನವಧನವ ಬೇಡುವರಿಲ್ಲದೆ: ಎನ್ನ–ನನ್ನ, ತನುಮನಧನವ–ತನುಮನಧನಂಗಳನು, ಬೇಡುವರಿಲ್ಲದೆ–ಕೇಳುವಂಥರುಂಟಾಗಿಲ್ಲದೆ, ಬಡವಾದೆನಯ್ಯಾ–ಬಹಳ ಕೃಶನಾದೆನಯ್ಯಾ.

ಕಾಡುವ ಬೇಡುವ ಶರಣರ ತಂದು ಕಾಡಿಸು ಬೇಡಿಸು :ಬೇಡುವ–ಎಲೋ ಭಕ್ತ, ತನುವ ಕೊಡು ಮನವ ಕೊಡು ಧನವ ಕೊಡು ಎಂದು ಕೇಳುವ, ಕಾಡುವ–ತನುಮನಧಂಗಳನು ಕೊಡದೆಯಿದ್ದಲ್ಲಿ ಆಣೆಯ ಕಟ್ಟಿ ಹಿಗ್ಗಮುಗ್ಗಾ ಎಳೆದಾಡಿ ಪಾರುಮಾಡಿ ನೋಡುವ, ಶರಣರ ಜಂಗಮಮೂರ್ತಿಗಳ, ತಂದು ಆಗುಮಾಡಿಕೊಂಡು ಬಂದು, ಬೇಡಿಸು–ಎಲೋ ಭಕ್ತ ತನುವ ಕೊಡು ಮನವ ಕೊಡು ಧನವ ಕೊಡು ಎಂದು ಕೇಳಿಸು, ಕಾಡಿಸು–ತನುಮನಧನಂಗಳನು ಕೊಡದೆ ಇದ್ದಲ್ಲಿ ಆಣೆಯ ಕಟ್ಟಿ ಹಿಗ್ಗಾಮುಗ್ಗಾ ಎಳೆದಾಡಿ ಪಾರುಮಾಡಿ ನೋಡಿಸು, ಕೂಡಲಸಂಗಮದೇವಾ–ಎಲೈ ಪರಶಿವಲಿಂಗವೆ.

---

೪೩೪

**ವೇಷ ಅವಿಚಾರದಲ್ಲಿ ನಡೆಯಿತ್ತೆಂದು ಆಸುರದಲ್ಲಿ ಬೊಗಳುವ ಕುನ್ನಿ, ನೀ ಕೇಳಾ : ಹಜೆಯನೆ ದಾಸನ ವಸ್ತ್ರವ? ಉಣ್ಣನೆ ಚೆನ್ನಯ್ಯನ ಸಂಗಾತ? ಪರವಧುವ ಕೊಳ್ಳನೆ ಸಿಂಧು ಬಲ್ಲಾಳನ? ಬೇಡನೆ ಸಿರಿಯಾಳನ**

**ಮಗನ? ನಡೆವುದು ನುಡಿವುದು ಅವಿಚಾರವೆಂದು, ಭಾವ ವಿಭಾವವೆಂದು ಕಂಡೆನಾದಡೆ ತಪ್ಪೆನ್ನದು, ಮೂಗ ಕೊಯ್ಯಿ! ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ವೇಷ ಅವಿಚಾರದಲ್ಲಿ ನಡೆಯಿತ್ತೆಂದು : ವೇಷ–ಶಿವಲಾಂಛನಸ್ವರೂಪವಾದ ಜಂಗಮಮೂರ್ತಿಗಳು, ಅವಿಚಾರದಲ್ಲಿ–ಒಬ್ಬರ ಕೊಲ್ಲುತ್ತ ಬಡಿವುತ್ತ ಗರ್ಜಿಸುತ್ತ ದುಡುಕು ದುಂಡಾವೃತ್ತಿಯಿಂದ ಪರಧನ [* *] ತೆಗೆದಕೊಳ್ಳುತ್ತ ವಿಚಾರಬಾಹ್ಯತ್ವದಲ್ಲಿ, ನಡೆಯಿತ್ತೆಂದು–ಆಚರಿಸುತ್ತೈದಾರೆನುತ್ತ, ಆಸುರದಲ್ಲಿ–ಬಹು ಸಿಟ್ಟಿನಿಂದ, ಬೊಗಳುವ–ದೂಷಣೆಯ ಮಾಡುವ, ಕುನ್ನಿ ನೀ ಕೇಳಾ–ಸುನಿಗೆ ಸಮಾನವಾದೆಲೆ ಬಿಜ್ಜಳನೆ ನೀನಾಲಿಸಾ. ಹಜೆಯನೆ ದಾಸನ ವಸ್ತ್ರವ ? : ದಾಸನ–ಜಾಡರ ದಾಸಿಮಯ್ಯನ, ವಸ್ತ್ರವ?–ಹನ್ನೆರಡು ವರುಷ ನೆಯ್ದಂಥ ಪಂಚವಣ್ಣಿಗೆಯ ದೇವಾಂಗವನು, ಹಜೆಯನೆ?–ಯಾಚಿಸಿ ತೆಗೆದುಕೊಂಡು ಪಾತಾಳಲೋಕದ ಬಣ್ಣ ಪಾದಕ್ಕೆ ಸುತ್ತಿಕೊಂಡು ಮರ್ತ್ಯಲೋಕದ ಬಣ್ಣ ಮೈಗೆ ಸುತ್ತಿಕೊಂಡು ದೇವಲೋಕದ ಬಣ್ಣವನ್ನೇ ಮಸ್ತಕಕ್ಕೆ ಸುತ್ತಿಕೊಂಡು ಉಳಿದಾದುನೆಲ್ಲವ ಹರಿದು ಛಿದ್ರಛಿದ್ರವ ಮಾಡಿ ಹಾದಿಯವರಿಗಷ್ಟು ಬೀದಿಯವರಿಗಷ್ಟು ಕೊಟ್ಟು ಚಾಗಿಯ ಮಾಡನೆ? ಉಣ್ಣನೆ ಚೆನ್ನಯ್ಯನ ಸಂಗಾತ? : ಚೆನ್ನಯ್ಯನ ಸಂಗಾತ–ಮಾದಾರ ಚೆನ್ನಯ್ಯನ ಕೂಡ, ಉಣ್ಣನೆ?–ಅಂಬಕಳವನನುಭವಿಸಲಿಲ್ಲವೆ? ಪರವಧುವ ಕೊಳ್ಳನೆ ಸಿಂಧುಬಲ್ಲಾಳನ?: ಸಿಂಧುಬಲ್ಲಾಳನ–ಸಿಂಧುಬಲ್ಲಾಳರಾಯನೆಂಬ ಶಿವಶರಣನ, ಪರವಧುವ ಕೊಳ್ಳನೆ?–ಹನ್ನೆರಡು ವರುಷದ ಪಟ್ಟದಂಗನೆಯನ್ನು ತೆಗೆದುಕೊಳಲಿಲ್ಲವೆ? ಬೇಡನೆ ಸಿರಿಯಾಳನ ಮಗನ?–ಕಂಚಿಪಟ್ಟಣದ ಸಿರಿಯಾಳಸೆಟ್ಟಿಯ ಏಳುವರುಷದ ಕುಮಾರನಾದ ಚೀಲಾಳಯ್ಯನ ಯಾಚಿಸಿ ತೆದುಕೊಳಲಿಲ್ಲವೆ?

ನಡೆವುದು ಅವಿಚಾರ–ಚೆನ್ನಯ್ಯನೊಡನುಂಡಂಥದು ಬಿಜ್ಜಮಹಾದೇವಿಯರ ಕುಚಕ್ಷೀರಪಾನವ ಮಾಡಿದಂಥದು ಚೋಳಾದೇವಿಯ ಬಾಯತುತ್ತ ಸವಿದಂಥದು ಕೋಳೂರು ಕೊಡಗೂಸಿನ ಹಾಲು ಸವಿದಂಥದು ಅವಿಚಾರವು, ನುಡಿವುದು–ಬಲ್ಲಾಳನ ವಧುವ ಬೇಡಿದಂಥದು ಸಿರಿಯಾಳನ ಮಗನ ಬೇಡಿದಂಥದು ದಾಸಯ್ಯನ ವಸ್ತ್ರವ ಬೇಡಿದಂಥನು, ಅವಿಚಾರವೆಂದು–ಹೀಂಗೆಂದು, ಭಾವ–ಶಿವಸದ್ಭಾವಸ್ವರೂಪವಾದ ಜಂಗಮಮೂರ್ತಿಗಳನು, ವಿಭಾವವೆಂದು ಕಂಡೆನಾದಡೆ–ಭಿನ್ನಭಾವದೊಡನೆ ಕೂಡಿ ಚರಿಸುತ್ತೈದಾರೆಯೆಂದು ಹೇಳಿದೆನಾದರೆ, ತಪ್ಪೆನ್ನದು–ಅಪರಾಧವೆನ್ನದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಮೂಗ ಕೊಯ್ಯಿ–ಆಚಾರವೆಂಬ ಘ್ರಾಣವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡು.

III - - - - - - - - - - - - - - - - - - - - - - - - - - - - - - - - - - - - - - - - - - - - -

ಭಾವವಿಭಾವವೆಂದು–ಮನಸ್ಸು ನಿರ್ಮಲವಿಲ್ಲದವರೆಂದು.

---

೪೩೫

**ನೀನಿಕ್ಕಿದ ಬೀಯದಲ್ಲಿ ವಂಚನೆಯುಳ್ಳಡೆ ಸಂಗಾ, ನಿಮ್ಮ ತೊತ್ತುತನಕ್ಕೆ ದೂರನಯ್ಯಾ. ಕದ್ದುತಿಂದಡೆ ಕೈಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯಾ. ಒಡೆಯರು ಮನೆಗೆ ಬಂದಲ್ಲಿ ಓಸರಿಸಿದಡೆ ಹಿಡಿದು ಮೂಗ ಕೊಯ್ಯಿ, ಕೂಡಲಸಂಗಮದೇವಾ !**

I - - - - - - - - - - - - - - - - - - - - - - - - - - - - - - - - - - - - - - - - - - - - - - - - -

ನೀನಿಕ್ಕಿದ-ನೀನಾದಿಯಲ್ಲಿ ಕರುಣಿಸಿಕೊಟ್ಟಂಥ, ಬೀದಿಯಲ್ಲಿ-ಪದಾರ್ಥದೊಳಗೆ, ವಂಚನೆಯುಳ್ಳಡೆ-ವಂಚಿಸಿಕೊಳಬೇಕಂಥ ಮಾಜೋಬುದ್ಧಿವುಂಟಾಗಿದ್ದರೆ, ಸಂಗಾ-ಎಲೆ ಲಿಂಗವೆ, ನಿಮ್ಮ ತೊತ್ತುತನಕ್ಕೆ ದೂರನಯ್ಯಾ-ಲಿಂಗವೇ ಕರ್ತೃವಾಗಿ ನಾನೇ ಭೃತ್ಯನಾಗಿ ಕರ್ತೃಭೃತ್ಯಭಾವವನ್ನು ಮುಂದುಗೊಂಡಾಚರಿಸುವಂಥ ಭಕ್ತನೆಂಬ ಭೃತ್ಯತ್ವಕ್ಕೆ ಎಟ್ಟುಗೊಳನಯ್ಯಾ. ಕದ್ದು ತಿಂದಡೆ-ನೀನಾದಿಯಲ್ಲಿ ಕರುಣಿಸಿಕೊಟ್ಟಂಥ ಪದಾರ್ಥದೊಳಗೆ ಆವುದಾನೊಂದು ಪದಾರ್ಥವನ್ನು ಲಿಂಗಾರ್ಪಣವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸಿದರೆ, ಕೈಹಿಡಿದು-ಕೊರತೆಯನುಂಟುಮಾಡಿ, ಒಮ್ಮೆ-ಒಂದು ವೇಳೆ, ಬಡಿದು- ಮನ ಮೊದಲಾದ ಸಕಲಕರಣಂಗಳನು ಶಿವಾನುಭಾವವೆಂಬ ಒನಕೆಯಿಂದ ಹೋಳುಗಟ್ಟಿ, ತುಡುಗುಣಿತನವ ಬಿಡಿಸಯ್ಯಾ-ಸಕಲಪದಾರ್ಥವನ್ನು ಲಿಂಗಾರ್ಪಣವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸುವಂಥ ಜೀವನ ಬುದ್ಧಿಯ ವಿಸರ್ಜಿಸಯ್ಯಾ.

ಒಡೆಯರು-ಕರ್ತೃಸ್ವರೂಪಿಗಳಾದ ಜಂಗಮಮೂರ್ತಿಗಳು, ಮನೆಗೆ ಬಂದಲ್ಲಿ-ಭಕ್ತನ ಭಕ್ತಿಗೃಹಕ್ಕೆ ಬಿಜಯಂಗೈದು ಬಂದರೆ, ಓಸರಿಸಿದಡೆ-ತನುಮನ ಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದೆನಾದರೆ, ಹಿಡಿದು-ಎನ್ನ ಕೊರತೆಯನುಂಟುಮಾಡಿ, ಮೂಗ ಕೊಯ್ಯಿ-ಆಚಾರಾಂಗವೆಂಬ ಘ್ರಾಣವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

---

**೪೩೬**

**ದೇವನಿಂಥವನೆಂದು ತೋಱಿಕೊಡುವೆನು ಗಣಂಗಳಿಗೆ : ಬಲ್ಲಾಳನ ವಧುವ ಬೇಡಿದಾತನೀ ದೇವ!**
**ದೇವನಿಂಥವನೆಂದು ತೋಱಿಕೊಡುವೆನು ಗಣಂಗಳಿಗೆ : ದಾಸಿಮಯ್ಯನ ವಸ್ತ್ರವ ಬೇಡಿದಾತನೀ ದೇವ!**
**ದೇವನಿಂಥವನೆಂದು ತೋಱಿಕೊಡುವೆನು ಗಣಂಗಳಿಗೆ : ಸಿರಿಯಾಳನ ಮಗನ ಬೇಡಿದಾತನೀ ದೇವ!**
**ಕೂಡಲಸಂಗಮದೇವ ಜಂಗಮಮುಖ ಲಿಂಗವಾಗಿ ಬೇಡಿ ನೋಡುವ, ಕಾಡಿ ನೋಡುವ!**

I - - - - - - - - - - - - - - - - - - - - - - - - - - - - - - - - - - - - - - - - - - - - - - - - -

ದೇವನಿಂಥವನೆಂದು ತೋಱಿಕೊಡುವೆನು ಗಣಂಗಳಿಗೆ : ದೇವ-ದಿವ್ಯಕಾಂತಿಯ ಲಾವಣ್ಯವನುಳ್ಳ ಪರಶಿವಲಿಂಗವು, ಇಂಥವನೆಂದು-ಹೀಂಗಿದ್ದಾತನೆನುತ್ತ, ಗಣಂಗಳಿಗೆ-ಭಕ್ತಗಣಂಗಳಿಗೆ, ತೋಱಿಕೊಡುವೆನು-ಅರುಹಿಕೊಡುವೆನು. ಬಲ್ಲಾಳನ-ಸಿಂಧುಬಲ್ಲಾಳರಾಯನ, ವಧುವ-ಹನ್ನೆರಡುವರುಷದ ಪಟ್ಟದಂಗನೆಯುನ್ನು, ಬೇಡಿದಾತ-ಯಾಚಿಸಿ ತೆಗೆದುಕೊಂಡು ಸ್ವಯಲಿಂಗಪದವಿಯನ್ನು ಕರುಣಿಸಿ ಕೊಟ್ಟಾತ, ಈ ದೇವ-ಆ ದೇವವನೇ ಈ ಜಂಗಮವಾಗಿ ಬಂದಿರ್ಪನೆಂದರಿದು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೋ. ದೇವನಿಂಥವನೆಂದು : ದೇವ-ಪರಮೇಶ್ವರನು, ಇಂಥವನೆಂದು-ಹೀಂಗಿದ್ದಾತನೆನುತ್ತ, ಗಣಂಗಳಿಗೆ-ಭಕ್ತಗಣಂಗಳಿಗೆ, ತೋಱಿಕೊಡುವೆನು-ಅರುಹಿಕೊಡುವೆನು. ದಾಸನ-ಜಾಡರ ದಾಸಿಮಯ್ಯನ, ವಸ್ತ್ರವ-

ಹನ್ನೆರಡುವರುಷನೆಯ್ದಂಥ ಪಂಚವಣ್ಣಿಗೆ ದೇವಾಂಗವನು, ಬೇಡಿದಾತ–ಯಾಚಿಸಿ ತೆಗೆದುಕೊಂಡು ತವನಿಧಿ ಕರುಣಿಸಿ ಕೊಟ್ಟಾತ, ಈ ದೇವ–ಆ ದೇವನೆ ಈ ಜಂಗಮವಾಗಿ ಬಂದಿರ್ಪನೆಂದು ಅರಿದು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೋ. ದೇವ–ಪರಮೇಶ್ವರನು, ಇಂಥವನೆಂದು–ಹೀಂಗಿದ್ದಾತನೆನುತ್ತ, ಗಣಂಗಳಿಗೆ–ಭಕ್ತಗಣಂಗಳಿಗೆ. ತೋಜಿಕೊಡುವೆನು–ಅರುಹಿಕೊಡುವೆನು. ಸಿರಿಯಾಳನ–ಕಂಚಿಪಟ್ಟಣದ ಸಿರಿಯಾಳಶೆಟ್ಟಿಯ, ಮಗನ–ಏಳುವರುಷದ ಕುಮಾರನಾದ ಚೀಲಾಳಯ್ಯನ, ಬೇಡಿದಾತನು– ಯಾಚಿಸಿ ತೆಗೆದುಕೊಂಡು ಪ್ರಾಣಪ್ರಸಾದವನು ಕರುಣಿಸಿ ಕೊಟ್ಟಾತ, ಈ ದೇವ–ಆ ದೇವನೇ ಈ ಜಂಗಮವಾಗಿ ಬಂದಿರ್ಪನೆಂದರಿದು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೋ. ಕೂಡಲಸಂಗಮದೇವ–ಈ ಪರಶಿವಲಿಂಗವು, ಜಂಗಮ ಮುಖ ಲಿಂಗವಾಗಿ–ಜಂಗಮವೇ ಸಾಕ್ಷಾತ್ ಶಿವಸ್ವರೂಪವಾಗಿ, ಬೇಡಿಕೊಳ್ಳುವ–ಎಲೋ ಭಕ್ತಾ! ತನುವ ಕೊಡು ಮನವ ಕೊಡು ಧನವ ಕೊಡು ಎಂದು ಕೇಳಿ ನೋಡುವ, ಕಾಡಿ ನೋಡುವ–ತನುಮನಧನಂಗಳನು ಕೊಡದೆ ಇದ್ದಲ್ಲಿ ಆಣೆಕಟ್ಟಿ ಹಿಗ್ಗಾ ಮುಗ್ಗ ಎಳೆದಾಡಿ ಪಾರುಮಾಡಿ ನೋಡುವ.

---

೪೩೭

**ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ! ನಿಮ್ಮ ಶರಣರಿಗಲ್ಲದೆ ಮತ್ತೊಂದಜಿಯೆನು, ಕೂಡಲಸಂಗಮದೇವಾ.**

I-----------------------------------------------------------------------

ಹೊನ್ನಿನೊಳಗೊಂದೊರೆಯ–ಜಂಗಮಕ್ಕೆ ನೂರಾರು ವರಹವನ್ನು ಪಾದಗಾಣಿಕೆಯ ಕೊಡುವಲ್ಲಿ ಅದರೊಳಗೊಂದು ಹಾಗ ಬೇಳೆ ತೂಕ ಚಿನ್ನವನಾದರೆಯೂ, ಸೀರೆಯಳಗೊಂದೆಳೆಯ–ವಸ್ತ್ರಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವಲ್ಲಿ ಅದರೊಳಗೊಂದು ಗೇಣುದ್ದ ಚೋಟುದ್ದ ಅರಿವೆಯನಾದರೆಯೂ, ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ–ಇವತ್ತು ನನಗೆ ಬೇಕು, ನಾಳಿಂಗೆ ನನ್ನ ಹೆಂಡಿರುಮಕ್ಕಳಿಗೆ ಬೇಕೆಂದು ಇಚ್ಛೈಸಿ ಮಾಜೋ ಬುದ್ಧಿಯಿಂದ ಮಾಜಿಕೊಂಡೆನಾದರೆ, ನಿಮ್ಮಾಣೆ–ನಿಮ್ಮ ಪಾದದ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ!–ನಿಮ್ಮೇಳುನೂರೆಪ್ಪತ್ತಮರಗಣಂಗಳ ಮೇಲಣ ಪ್ರತಿಜ್ಞೆಯು. ನಿಮ್ಮ ಶರಣರಿಗಲ್ಲದೆ–ನಿಮ್ಮ ಜಂಗಮಮೂರ್ತಿಗಳಿಗಲ್ಲದೆ, ಮತ್ತೊಂದಜಿಯೆನು–ಅನ್ಯವಾದ ಷಡುದರುಶನದವರಿಗೆ ಕೊಟ್ಟು ಭಕ್ತಿಯ ಮಾಡೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೩೮

**ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವೆಲ್ಲವನು? ಕೋಳಿ ಒಂದು ಗುಟುಕು ಕಂಡಡೆ ಕೂಗಿ ಕರೆಯದೆ ತನ್ನ ಕುಲವೆಲ್ಲವನು? ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಆ ಕಾಗೆ ಕೋಳಿಗಿಂದ ಕರಕಷ್ಟ ನೋಡಾ, ಕೂಡಲಸಂಗಮದೇವಾ!**

I-----------------------------------------------------------------------

ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವೆಲ್ಲವನು : ಕಾಗೆ–ವಾಯಸನು, ಒಂದಗುಳ ಕಂಡಡೆ–ಅಂಗಳದಲ್ಲಿ ಒಂದು ರೊಟ್ಟಿ ಮುರುಕಾಗಲಿ ಬೋನದ ಕಣ್ಣಿಯನಾಗಲಿ ನೋಡಿದರೆ, ತನ್ನ ಬಳಗವೆಲ್ಲವನು–ತನ್ನ ಜಾತಿಯಷ್ಟನ್ನೂ, ಕರೆಯದೆ–ಕಾಕಾಯೆಂದು ಕರೆದುಕೊಂಡು ತಿಂಬೋದಿಲ್ಲವೆ? ತಿಂಬುತ್ತಿಹುದು. ಕೋಳಿ ಒಂದು ಗುಟುಕು ಕಂಡಡೆ : ಕೋಳಿ–ತಾಮ್ರಚೂಡನು, ಒಂದು ಗುಟುಕು ಕಂಡಡೆ–ಅಂಗಳದಲ್ಲಿ ಹದಿನೆಂಟು ಧಾನ್ಯಂಗಳನು ಒಣಗಲಿಕ್ಕೆ ಹಾದಿದಲ್ಲಿ ನೋಡಿ, ತನ್ನ ಕುಲವೆಲ್ಲವ–ತನ್ನ ಜಾತಿಯಷ್ಟನ್ನೂ, ಕೂಗಿ–ಕೊಕ್ಕೋಯೆಂದು ಕೂಗಿ, ಕರೆಯದೆ–ಕರೆದುಕೊಂಡು ತಿಂಬೋದಿಲ್ಲವೆ? ತಿಂಬುತ್ತಿಹುದು. ಶಿವಭಕ್ತನಾಗಿ–ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾದ ಹರಭಕ್ತನಾಗಿ, ಭಕ್ತಿಪಕ್ಷವಿಲ್ಲದಿದ್ದಡೆ–ಭಕ್ತನಾದ ಮೇಲೆ ತನ್ನ ಸಮಯಾಚಾರಕ್ಕೊಬ್ಬ ಜಂಗಮಮೂರ್ತಿಗಳನಾಯಿತ್ತಾದರೂ ಕಟ್ಟುಮಾಡಿಕೊಂಡು ಸಲಿಸಬೇಕು, ಅಲ್ಲದಿದ್ದರೆ ಮಕ್ಕಳ ಮರಿಗಳನಾದರೂ ಕೂಡಿಕೊಂಡು ಸಲಿಸಬೇಕು, ಅಲ್ಲದಿದ್ದರೆ ನೆಂಟರನೆಲ್ಲನಾದರೂ ಕೂಡಿಕೊಂಡು ಸಲಿಸಬೇಕು. ಇಂತಿವರೊಳಗಾರನಾದರೂ ಇಲ್ಲದೆ ತಾನೊಬ್ಬನೆ ಭೂತಪ್ರಾಣಿಯಾಗಿ ಅನುಭವಿಸಿದರೆ, ಆ ಕಾಗೆ ಕೋಳಿಗಿಂದ–ಆ ವಾಯಸ ತಾಮ್ರಚೂಡಗಿಂದಲೂ, ಕರಕಷ್ಟ ನೋಡಾ–ಅತ್ಯಂತ ಕ್ಷೀಣವು ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೩೯

**ಆವನಾದಡೇನು ಹೇಮವಿಲ್ಲದಂಗವಿಸಬಹುದೆ? ಕೊಡಲಿಲ್ಲವೆಂಬುದರಿಂದ ಸಾಯಲುಬಹುದು; ಸೈರಿಸಬಾರದು ಬೇಡುವರ ನೋಡಿನೋಡಿ ಈಯಲಿಲ್ಲದವನ ಜೀವನವದೇಕೆ, ಕೂಡಲಸಂಗಮದೇವಾ.**

I-----------------------------------------------------------------------

ಆವನಾದಡೇನು–ನೂರಾವೊಂದುಕುಲ ಹದಿನೆಂಟುಜಾತಿಯೊಳಗಾವ ಜಾತಿಯಲ್ಲಿ ಹುಟ್ಟಿದವನಾದರೇನು, ಹೇಮವಿಲ್ಲದಂಗವಿಸಬಹುದೆ?–ಎಂತಪ್ಪ ಕ್ಷೀಣಕುಲದವನಾದರೂ ಐಶ್ವರ್ಯವಂತನಾಗಿದ್ದಲ್ಲಿ ಅವನ ಹೇಂಗಾದರೂ ಆಶ್ರಯಿಸಿ ಅವನ ದ್ರವ್ಯವನ್ನು ತೆಗೆದುಕೊಳ್ಳಬೇಕಲ್ಲದೆ ಅವನ ಕುಲಸೂತಕವ ನೋಡಿ ಬಿಡುವುದಕ್ಕಾದೀತೇ? ಆಗದು. ಹಾಂಗೆ ನೂರಾವೊಂದುಕುಲ ಹದಿನೆಂಟುಜಾತಿಯಳಗಾವ ಕುಲದವನಾದರೇನು ಜ್ಞಾನೋದಯವಾಗಿ ಗುರುಕಾರುಣ್ಯವ ಪಡೆದು ಲಿಂಗಾಂಸಂಬಂಧಿಯಾಗಿ ಆಚರಿಸುತ್ತಿರ್ದ ಬಳಿಕ ಅವನು ಬಿನ್ನಹವನ್ನು ಮಾಡಿದರೆ ಕೈಕೊಳ್ಳಬೇಕಲ್ಲದೆ ಅವನ ಕುಲಸೂತಕವ ನೋಡಿ ಬಿಡುವುದಕ್ಕಾದೀತೆ? ಆಗದು. ಕೊಡಲಿಲ್ಲವೆಂಬುದಜಿಂದ–ದೇವಭಕ್ತರೊಳಗಾರಾದರೂ ಬಂದು ಒಂದು ವಸ್ತುವನ್ನು ಕೇಳಿದಲ್ಲಿ ಅಷ್ಟರೊಳಗಷ್ಟನಾದರೂ ಕೊಟ್ಟು ಕೊಟ್ಟು ಸಂತೋಷಬಡಿಸಬೇಕಲ್ಲದೆ ಇಲ್ಲವೆಂದು ದಾಂಟಿಸಬಹುದೆ? ಕೊಡುವುದಕ್ಕೇನು ಗತಿಯಿಲ್ಲವೆಂದು ದಾಂಟಿಸಿಬಿಡುವುದಕಿಂದಲೂ ಸಾಯಲುಬಹುದು–ಮರಣವಾಗಲುಬಹುದು, ಸೈರಿಸಬಾರದು–ಅದನ್ನು ತರಹರಿಸಿಕೊಂಡು ಸುಮ್ಮನಿರಲುಬಾರದು. ಬೇಡುವರ–ದೇವಭಕ್ತರೊಳಗಾರಾದರೂ ಬಂದು ಒಂದೊಸ್ತುವನ್ನು ಕೊಡೆಂದು ಕೇಳುವಂಥವರ, ನೋಡಿನೋಡಿ–

ಕಂಡುಕಂಡು, ಈಯಲಿಲ್ಲದವನ–ಅಷ್ಟರೊಳಗಷ್ಟನಾದರೂ ಕೊಟ್ಟು ಸಂತೋಷಬಡಿಸಬೇಕಲ್ಲದೆ ಕೊಡುವುದಕ್ಕೇನು ಗತಿಯಿಲ್ಲವೆಂದು ದಾಂಟಿಸಿ ಬಿಡುವನ, ಜೀವನವದೇಕೆ–ಅವನ ಬಾಳುವೆಯಿದ್ದು ಯಾತಕ್ಕೆ ಪ್ರಯೋಜನ? ಪ್ರಯೋಜನವಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೪೦

**ಹರಗಣಪಙ್ತೆಯ ನಡುವೆ ಕುಳ್ಳಿರ್ದು ನಾನು, ಒಡೆಯತನದ ನಾಯಿತೇಜವ ಹೊತ್ತುಕೊಂಡು, ಮಡದಿಯೆನ್ನಗಲೊಳಗೆ ಸಕಲ ದೇವಾನ್ನವ ಒಡೆಯರಿಗಿಂದಲೂ ಮಿಗಿಲಾ[ಗಿ]ಕ್ಕಲು ತೆಗೆದಿರಿಸಿದೆನು! ಈ ಪರಿಯನು ಆ[1][ಕಿಂ][1]ಗೆ ತೋಱಲು ಕಿಲ್ಮಿಷವಾದವು! ಕರುಣಿ ಚೆನ್ನಬಸವಣ್ಣಾ, ಮಱಿದು ಕೊಂಡೆನಾದಡೆ ಒಡೆಯ ಕೂಡಲಸಂಗಮದೇವ ಕೆಡಹಿ ನರಕದಲ್ಲಿಕ್ಕುವ!**

.........................

1-1 x (ಕ). ೦ (ಗ).

I - - - - - - - - - - - - - - - - - - - - - - - - - - - - - - - - - - - - - - - - - - - - -

ಹರಗಣಪಙ್ತೆಯ ನಡುವೆ–ಇತ್ತರದಲ್ಲಿ ಮೂರ್ತವ ಮಾಡಿಕೊಂಡಿರುವಂಥ ಭಕ್ತಮಾಹೇಶ್ವರರುಗಳ ಜವಳಪಙ್ತಿ ಮಧ್ಯದಲ್ಲಿ, ಕುಳ್ಳಿರ್ದು ಮೂರ್ತವ ಮಾಡಿಕೊಂಡಿರ್ದು, ನಾನು–ಸಂಗನಬಸವೇಶ್ವರನು, ಒಡೆಯತನದ–ಶ್ರೇಷ್ಠತನದ, ನಾಯಿತೇಜವ ಹೊತ್ತುಕೊಂಡು–ಜಿಗುಪ್ಸೆಸ್ವರೂಪವಾದ ಅಹಂಕಾರವ ತಳೆದುಕೊಂಡು, ಮಡದಿ–ಸತಿಯಳಾದ ಗಂಗಾಂಬಿಕೆಯು, ಎನ್ನಗಲೊಳಗೆ–ಎನ್ನ ಎಡೆಯಲ್ಲಿ, ಸಕಲ ದೇವಾನ್ನವ–ಸಮಸ್ತ ಘೃತಮುಖ್ಯವಾದ ಮೃಷ್ಟಾನ್ನಪದಾರ್ಥಂಗಳನು, ಒಡೆಯರಿಗಿಂದಲೂ–ಕರ್ತರಾದ ಜಂಗಮಮೂರ್ತಿಗಳಿಂದಲೂ, ಮಿಗಿಲಾಗಿಕ್ಕಲು–ಹೆಚ್ಚಾಗಿ ಒಂದು ಭೋಜ್ಯವನ್ನು ನೀಡಲು, ತೆಗೆದಿರಿಸಿದೆನು–ಎಡಬಲದಗಲವ ನೋಡಿ ಅವರಗಲೊಳಗಿದ್ದಷ್ಟು ಮಡಗಿಕೊಂಡು ಹೆಚ್ಚಾದುದನು ತೆಗೆದು ಅಡ್ಡಣಿಗೆಯ ಮೇಲೆ ಮಡಗಿದೆನು. ಈ ಪರಿಯ–ಈ ರೀತಿಯನ್ನು, ಆ[ಕಿಂ]ಗೆ–ನೀಲಲೋಚನೆಗೆ, ತೋಱಲು–ಅರುಹಿಕೊಡಲು, ಕಿಲ್ಮಿಷವಾದವು–ಹುಳುಗುಪ್ಪೆಯಾದವು. ಕರುಣಿ–ಕೃಪಾ[೧]ಪಾ[೧]ತ್ರನಾದಂಥ, ಚೆನ್ನಬಸವಣ್ಣಾ–ಎಲೆ ಚೆನ್ನಬಸವೇಶ್ವರನೆ, ಮಱಿದು–ಮೋಸದಿಂದ, ಕೊಂಡೆನಾದಡೆ–ಆತ್ಮಾರ್ಪಣವಾಗಿ ಅನುಭವಿಸಿದೆನಾದರೆ, ಒಡೆಯ–ಕರ್ತೃನಾದಂಥ, ಕೂಡಲಸಂಗಮದೇವ–ಪರಶಿವಲಿಂಗವು, ಕೆಡಹಿ–ಅಡ್ಡನೀಳವಾಗಿ ತುಳಿದು, ನರಕದಲ್ಲಿಕ್ಕುವ–ನಿಯದಲ್ಲಿ ಹಾಕಿಬಿಡುವನು.

...................................

೧–೧ ಪು (ಗ).

---

**ಆಲುತ್ತಲು ಹಜೆಯ ಹೊಯ್ಸಿ ಅಂಕವ ಮಾಡಿದೆನೆಲ್ಲರ ಕಂಡು! ಆನು ಬೇಡೆಂದಡೆ ಮಾಣೆ, ಕಲಿತನವ ಮಾಡಿದೆನೆಲ್ಲರ ಕಂಡು! ಅಲ್ಲಿ ಹೊತ್ತು ಹೋಯಿತ್ತು ಆಗಳೆಯೆಂದಡೆ ಆಸೆಮಾಡೆನು ಕೂಡಲಸಂಗಮದೇವಾ.**

I -----------------------------------------

ಆಲುತ್ತಲು–ಕೋಲಲೋಯೆಂದು ಕೂಗುತ್ತಲು, ಹಜೆಯ ಹೊಯ್ಸಿ–ಪಂಚಮಹಾವಾದ್ಯವ ನುಡಿಸಿ, ಎಲ್ಲರ ಕಂಡು–ಲೋಕದಲ್ಲಿ ಲಿಂಗಪೂಜೆಯ ಮಾಡುವಂಥ ಭಕ್ತಮಾಹೇಶ್ವರರುಗಳ ಮೇಲುಪಜ್ಞಿಯ ನೋಡಿ, ಅಂಕವ ಮಾಡಿದೆನು–ಪರಾಕ್ರಮವ ಮುಂದುಗೊಂಡು ಲಿಂಗಪೂಜೆಯ ಮಾಡುತಿಪ್ಪೆನು. ಆನು ಬೇಡೆಂದಡೆ–ನೀನು ಲಿಂಗಪೂಜೆ ಹೆಚ್ಚಾಗಿ ಬಹಳ ಹೊತ್ತು ಮಾಡಬೇಡ. ಆ ಲಿಂಗಪೂಜೆಯ ಮಾಡುತ್ತಿದ್ದಲ್ಲಿ ಜಂಗಮಮೂರ್ತಿಗಳು ಬಂದು ತನಮನಧನಂಗಳನು ಬೇಡುತ್ತೈದಾರೆಂದರೆ, ಮಾಣೆ–ಬಿಡೆನು; ಎಲ್ಲರ ಕಂಡು–ಲೋಕದಲ್ಲಿ ಲಿಂಗಪೂಜೆಯ ಮಾಡುತಿಪ್ಪೆನು. ಅಲ್ಲಿ–ಸ್ವಸ್ಥವಾಗಿ ಕುಳಿತುಕೊಂಡು ಲಿಂಗಪೂಜೆಯ ಮಾಡುತ್ತಿದ್ದಲ್ಲಿ, ಆಗಳೆ–ಆ ಕ್ಷಣದಲ್ಲಿಯೇ, ಹೊತ್ತುಹೋಯಿತ್ತೆಂದಡೆ–ಬಸವೇಶ್ವರನ ಅರಮನೆಯಲ್ಲಿದ್ದಂಥ ಬೊಕ್ಕಸದ ಜವಳಿಪೆಂಡೆ ಭಂಡಾರದ ದ್ರವ್ಯದ ಜಂಗಮಮೂರ್ತಿಗಳು ಸೂರಿಯೋ ಸೂರಿಯೋ ಎಂದು ಸೂರೆಮಾಡಿಕೊಂಡು ಹೋದರೆಂದು ಹೇಳಿದರೆ, ಆಸೆಮಾಡೆನು–ಎಲ್ಲಿಂದ ತೆಗೆದುಕೊಂಡು ಹೋದರು? ಯಾವಲ್ಲಿಂದ ಯಾವಲ್ಲಿಂದ ತೆಗೆದುಕೊಂಡು ಹೋದರು? ಎತ್ತ ಹೋದರು? ಯಾವ ಕಡೆಗೆ ಹೋದರು? ಎಂದು ಮಾರ್ಗಮಾರ್ಗಕ್ಕೆ ಕಾಪಿನಾಳುಗಳ ಕೊಟ್ಟು ಕಳುಹಿ ಹುಡುಕಿಸಿ ಪರಾಮರಿಸಬೇಕೆಂದು ಅಪೇಕ್ಷಂಬಡೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

I -----------------------------------------

ಆಲುತ್ತಲು ಹಜೆಯ ಹೊಯ್ಸಿ : ಬಿಡೋಬೋಹುದಪ್ಪಡೆಯ ಬಡಿಸಿ, ಅಂಕವ ಮಾಡಿದೆನೆಲ್ಲರ ಕಂಡು–ಎಲ್ಲ ಬಿರಿದಗಾರರ ನೋಡಿ ಬಿರಿದ ಕಟ್ಟಿದೆ; ಆನು ಬೇಡೆಂದಡೆ ಮಾಣೆ–ನಿನಗೆ ಬಿರಿದ ಬಿಡೋ ಎಂದರೆ ನಾನು ಬಿಡೆ, ಕಲಿತನವ ಮಾಡಿದೆನೆಲ್ಲರ ಕಂಡು–ಎಲ್ಲ ಯುದ್ಧವ ಮಾಡುವರ ನೋಡಿ ನಾನು ಯುದ್ಧವ ಮಾಡಿದೆ, ಅಲ್ಲಿ ಹೋಯಿತ್ತಾಗಳ ಎಂದಡೆ ಆಸೆ ಮಾಡೆನು–ಆ ಯುದ್ಧವ ಮಾಡುವಲ್ಲಿ ಜಗಳಕ್ಕೆ ಬಿಡುವತನಕಾ ಗಳೆ ಅಡ್ಡ ಹಿಡಿದಿರೊ ಬಿಡುವ ಸಮಯಕ್ಕೆ ಗಳೆ ತಗಿರೊ ಎಂದು ಆಗ ಪ್ರಾಣಕ್ಕೆ ಅಪೇಕ್ಷೆಬಡೆನು. ಮತ್ತಂ ಲಿಂಗಪೂಜಾಕ್ರೀಗಳ ಮಾಡುತ್ತ ಚಿನ್ನಿಗಾಳೆ ಮನ್ನೆಯಗಾಳೆ ಬುರುಗು ಜಾಗಟೆ ಡಮಾಮಿ ಮೊದಲಾದ ಮಂಗಳವಾದ್ಯವನು ಬಾರಿಸುತ್ತ, ಎಲ್ಲ ಭಕ್ತಿಯ ಮಾಡುವರ ನೋಡಿನೋಡಿ ಭಕ್ತಿಯ ಮಾಡಿದೆನು. ನಾನು ನಿನಗೇಕೆ ಭಕ್ತಿಬಿರಿದ ಬೇಡ ಬಿಡೋ ಎಂದರೆ ಬಿಡೆ. ಎಲ್ಲ ಭಕ್ತಿಯುಳ್ಳವರ ನೋಡಿ ಆನು ಭಕ್ತಿಯುದ್ದವ ಮಾಡಿದೆನು. ಭಕ್ತಿಪದಾರ್ಥವೆಲ್ಲವು ತೀರಿತ್ತು. ಇನ್ನಾರು ಭಕ್ತಿ ಮಾಡುವರಿಲ್ಲವೆಂದರೆ ಫಲಪದಂಗಳಿಗಾಪೇಕ್ಷೆಬಡೆನು.

## ೪೪೨

**ಭಕ್ತಿ ಸಂಭಾಷಣೆಯ ನುಡಿಯ ನುಡಿವೆ, ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ. ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ. ಒಂದು ಜವೆ ಕೊಱತೆಯಾದಡೆ ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತಿಸಂಭಾಷಣೆಯ ನುಡಿಯ ನುಡಿವೆ : ಭಕ್ತಿ–ಶಿವಾದ್ವೈತಭಕ್ತಿಯ, ಸಂಭಾಷಣೆಯ–ಶಿವತತ್ತ್ವಜ್ಞಾನಾನುಭಾವದ, ನುಡಿಯ–ಒಳ್ಳಿತ್ತಾದ ಪ್ರಸಂಗವನ್ನು, ನುಡಿವೆ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬೆನು; ನುಡಿದಂತೆ–ಹೇಳಿಕೊಂಡ ಹಾಂಗೆ, ನಡೆವೆ–ಆಚರಿಸುವೆನು. ನಡೆಯೊಳಗೆ–ಆಚರಣೆಯಲ್ಲಿ, ನುಡಿಯ–ಹೇಳಿಕೊಂಡಂಥ ಪ್ರಸಂಗವನ್ನು, ಪೂರೈಸುವೆ–ಐಕ್ಯಾವಸಾನ ಪರಿಯಂತರ ಪಾರವೈದಿಸುವೆ. ಮೇಲೆ–ಆಮೇಲೆ, ತೂಗುವ–ಪ್ರಮಾಣಿಸುವ, ತ್ರಾಸು–ತಕ್ಕಡಿಯು, ಕಟ್ಟಳೆ–ತೂಕದ ಗುಂಡು, ನಿಮ್ಮ ಕೈಯಲ್ಲಿ–ನಿಮ್ಮ ಹಸ್ತದಲ್ಲಿ, ಒಂದು ಜವೆ ಕಡಿಮೆಯಾದಡೆ–ಚಿನ್ನ ಬೆಳ್ಳಿಯ ನಗವನ್ನು ಮಾಡಿ ತ್ರಾಸದಲ್ಲಿಟ್ಟು ತೂಗುವಾಗ್ಗೆ ಜವೆಯಷ್ಟು ಹೆಚ್ಚಾದರೆ ಹಿಂದಕ್ಕೆ ಜಗ್ಗುವುದು ಜವೆಯಷ್ಟು ಕಡಿಮೆಯಾದರೆ ಮೇಲಕ್ಕೆ ಏಳುವುದು ಸರಿಯಾದರೆ ಸಮಾನವಾಗಿರುವುದು ಹಾಂಗೆ ಲಿಂಗವೇ ಶ್ರೇಷ್ಠ ಜಂಗಮವೇ ಸಾಮಾನ್ಯ, ಜಂಗಮವೇ ಶ್ರೇಷ್ಠ ಲಿಂಗವೇ ಸಾಮಾನ್ಯವೆಂದು ಭಿನ್ನವಿಟ್ಟುಕೊಂಡು ಲಿಂಗಪೂಜೆ ಜಂಗಮದಾಸೋಹವ ಮಾಡಿದೆನಾದರೆ, ಅದಲ್ಲದೆ, ಮೇಲೆ–ಕೈಲಾಸದಲ್ಲಿ, ತೂಗುವ–ಪ್ರಮಾಣಿಸುವ, ತ್ರಾಸು–ತಕ್ಕಡಿಯು, ಕಟ್ಟಳೆ–ತೂಕದ ಗುಂಡು, ನಿಮ್ಮ ಕೈಯಲ್ಲಿ–ಪರಶಿವಲಿಂಗದ ಗದ್ದುಗೆಯ ಮುಂದೆ ಉಂಟಾಗಿರ್ಪುದು. ಒಂದು ಜವೆ ಕೊರತೆಯಾದಡೆ–ನಾ ಮಾಡುವಂಥ ಭಕ್ತಿಯೊಳಗೊಂದು ಜವೆಯಷ್ಟು ಕಡಿಮೆಯಾದರೆ, ಎನ್ನನದ್ದಿ–ಎನ್ನ ಸಂಸಾರವಿಷಯ ಜಲದಲ್ಲಿ ಮುಳಿಗಿಸಿ ಬಿಟ್ಟು, ನೀನೆದ್ದು ಹೋಗು–ನಿನ್ನ ನೀ ತಪ್ಪಿಕೊಂಡು ವಿಲಕ್ಷಣವಾಗಿ ಹೋಗು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

## ೪೪೩

**ಓಡುವಾತ ಲೆಂಕನಲ್ಲವಯ್ಯಾ, ಬೇಡುವಾತ ಭಕ್ತನಲ್ಲವಯ್ಯಾ; ಓಡಲಾಗದು ಲೆಂಕನು, ಬೇಡಲಾಗದು ಭಕ್ತನು. ಓಡೆನಯ್ಯಾ ನಾನು ಬೇಡೆನಯ್ಯಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಓಡುವಾತ ಲೆಂಕನಲ್ಲವಯ್ಯಾ : ಓಡುವಾತ–ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟುವಾತ, ಲೆಂಕನಲ್ಲವಯ್ಯಾ–ಭೃತ್ಯನಾದ ಭಕ್ತನಲ್ಲವಯ್ಯಾ, ಬೇಡುವಾತ ಭಕ್ತನಲ್ಲವಯ್ಯಾ : [ಬೇಡುವಾತ–] ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುಯೆಂದು ಕೇಳುವಾತ, ಭಕ್ತನಲ್ಲವಯ್ಯಾ–ಶಿವಭಕ್ತನಲ್ಲವಯ್ಯಾ, ಓಡಲಾಗದು ಲೆಂಕನು : [ಓಡಲಾಗದು–] ತನುಮನಧನಂಗಳನ್ನು ವಂಚಿಸಿಕೊಂಡು

ಹಿಮ್ಮೆಟ್ಟಲಾಗದು, ಲೆಂಕನು–ಭೃತ್ಯನಾದಭಕ್ತನು; ಬೇಡಲಾಗದು–ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುಯೆಂದು ಕೇಳಲಾಗದು, ಭಕ್ತನು–ಶಿವಭಕ್ತನು. ನಾನು ನಿರ್ವಂಚಕ ಸದ್ಭಕ್ತನು, ಓಡೆನಯ್ಯಾ–ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟುವಾತನಲ್ಲವಯ್ಯಾ, ಬೇಡೆನಯ್ಯಾ–ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುಯೆಂದು ಕೇಳುವಾತನಲ್ಲವಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - -

ಓಡುವಾತ ಲೆಂಕನಲ್ಲ–ಗುರುಲಿಂಗಜಂಗಮದ ಭಕ್ತಿಗೆ ಓಸರಿಸಿ ಪಲಾಯನವಾಗುವಾತ ಭಕ್ತಿಭೃತ್ಯನಲ್ಲ. ಬೇಡುವಾತ ಭಕ್ತನಲ್ಲ–ತನುಮನಧನವ ತಾಯೆಂದು ಯಾಚಿಸುವಾತ ಜಂಗಮವಲ್ಲ. ಮತ್ತಂ ಕಾಳಗಕ್ಕೆ ಹಿಮ್ಮೆಟ್ಟಿ ಹಿಂದಾಗುವಾತ ಬಂಟನಲ್ಲ. ಫಲಪದಂಗಳನಿಚ್ಛೈಸುವಾತ ಸದ್ಭಕ್ತನಲ್ಲ. ಮುಂದಕ್ಕೆ ಕಾಣಬಂದರ್ಥ.

---

**೪೪೪**

**ಚಂದ್ರನ ಶೈತ್ಯದಲ್ಲಿ ಬೆಳೆವ ಕಾಯಕ್ಕೆ ಬೆಳದಿಂಗಳ ಬಯಸುವ ಹಂಗೇಕಯ್ಯಾ? ಶರಣರ [1]ಸಂಯೋಗದೊಳಿರ್ದು[1] ಶಿವನ ಬೇಡುವ ಹಂಗೇಕಯ್ಯಾ? ಕೂಡಲಸಂಗನ ಶರಣರು ಬಂದು ನಮ್ಮವನೆಂದಡೆ ಸಾಲದೆ ಅಯ್ಯಾ?**

I - - - - - - - - - - - - - - - - - - - - - - - - - - - - - - - - - - - - - - - - - - - - -

ಚಂದ್ರನ–ಪೌರ್ಣಮಿಚಂದ್ರನ, ಶೈತ್ಯದಲ್ಲಿ–ಅಮೃತಕಿರಣದ ಶೈತ್ಯದಲ್ಲಿ, ಬೆಳೆವ–ವರ್ಧನವಾಗುವ, ಕಾಯಕ್ಕೆ–ಜೊನ್ನವಕ್ಕಿಯ ಅಂಗಕ್ಕೆ, ಬೆಳದಿಂಗಳ ಬಯಸುವ ಹಂಗೇಕಯ್ಯಾ–ಅಷ್ಟಮಿ ಬೆಳದಿಂಗಳ ನವಮಿ ಬೆಳದಿಂಗಳ ಇಚ್ಛೈಸುವಂಥ ವಾಂಛೆಯು ಏನು ಕಾರಣಕ್ಕಯ್ಯಾ?, ಶರಣರ ಸಂಗದೊಳಿರ್ದು–ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ ಶಿವಾನುಭಾವದ ಕೇಳಿಕೆಯಲ್ಲಿ ಕೂಡಿರ್ದು, ಶಿವನ ಬೇಡುವ ಹಂಗೇಕಯ್ಯಾ?–ಪರಮೇಶ್ವರನು ನಮಗೆ ಕೃಪೆಯಾಗಿ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಟ್ಟಾನೋ? ಕೊಡನೋ? ಎಂಬಂಥ ವಾಂಛೆಯು ಏನುಕಾರಣಕ್ಕಯ್ಯಾ?, ಕೂಡಲಸಂಗನಶರಣರು–ಜಂಗಮಮೂರ್ತಿಗಳು, ಬಂದು–ಭಿಕ್ಷಕ್ಕೆಂದು ಬಿಜಯಂಗೈದುಬಂದು, ನಮ್ಮವನೆಂದಡೆ ಸಾಲದೆ : [ನಮ್ಮವನೆಂದಡೆ–] ನಮ್ಮ ಚಿದಂಶೀಭೂತನೆಂದು ಭಕ್ತಿಯ ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟರೆ, ಸಾಲದೆ–ಅಷ್ಟೇ ಸಾಲದೇ? ಅಷ್ಟೇ ಸಾಕು. ಅಯ್ಯಾ–ಎಲೆ ಲಿಂಗವೆ.

II-----------------------------------------------------------------------

1-1 ಸಂಗದಲ್ಲಿದ್ದು (ಚ, ಜ).

..........................

ಚಂದ್ರನ ಶೈತ್ಯದಲ್ಲಿ ಬೆಳೆವ ಕಾಯಕ್ಕೆ ಬೆಳದಿಂಗಳ ಬಯಸುವ ಹಂಗೇಕಯ್ಯಾ? ಶರಣರ ಸಂಗದಲ್ಲಿದ್ದು ಶಿವನ ಬೇಡುವ ಹಂಗೇಕಯ್ಯಾ?–ಪರಮ ಶಾಂತಿಜ್ಞಾನರೂಪವಾದ ಶಿವಾನುಭಾವಿಗಳ ಶಿವಾನುಭಾವಶೀತದಲ್ಲಿ ವರ್ಧನವಾಗುವ ಶರಣನ ಭಕ್ತಿಕಾಯಕ್ಕೆ ಸಂಕಲ್ಪಶಾಸ್ತ್ರವನು ವೃತ್ತಿಜ್ಞಾನಶಾಸ್ತ್ರವ ನಿಶ್ಚಯಿಸುವ ವಾಂಛೆ ಯಾತಕಯ್ಯಾ?, ಶರಣರ ಸಂಗದಲ್ಲಿದ್ದು ಶಿವನ ಬೇಡುವ ಹಂಗೇಕಯ್ಯಾ?–ಸಚ್ಚಿದಾನಂದಸ್ವರೂಪವಾದ ಗುರುಲಿಂಗಜಂಗಮದ ಇಚ್ಛಾಭತತ್ಸಂಗದಲ್ಲಿರ್ದು ಶಿವನ ಕುರಿತು ಫಲಪದಂಗಗಳ ಯಾಚಿಸುವ ವಾಂಛೆ ಯಾಕಯ್ಯಾ?, ಕೂಡಲಸಂಗನಶರಣರು ಬಂದು ತಮ್ಮವನೆಂದಡೆ ಸಾಲದೆ ಅಯ್ಯಾ–ಪರಶಿವಲಿಂಗದ ಪರಮಮೂರ್ತಿಗಳಾದ ಶಿವಶರಣರು ಬಂದು ತಮ್ಮಂಶೀಭೂತವಾದ ಜ್ಞಾನಕಲಾತ್ಮನೆಂದರೆ ಸಾಕೆಂಬುದರ್ಥ.

---

೪೪೫

**ದಾಸನ ವಸ್ತ್ರವ ಬೇಡದ ಮುನ್ನ ತವನಿಧಿಯನಿತ್ತಡೆ ನಿಮ್ಮ ದೇವರೆಂದೆಂಬೆ, ಸಿರಿಯಾಳನ ಮಗನ ಬೇಡದ ಮುನ್ನ ಕಂಚಿ ಪಟ್ಟಣವ ಕೈಲಾಸಕ್ಕೊಯ್ದಡೆ ನಿಮ್ಮ ದೇವರೆಂದೆಂಬೆ. ಬಲ್ಲಾಳನ ವಧುವ ಬೇಡದ ಮುನ್ನ ಸ್ವಯಲಿಂಗವ ಮಾಡಿದಡೆ ನಿಮ್ಮ ದೇವರೆಂದೆಂಬೆ. ದೇಹಿ ನೀನು, ವ್ಯಾಪಾರಿಗಳೆಮ್ಮವರು! ಬೇಡು ಕೂಡಲಸಂಗಮದೇವಾ, ಎಮ್ಮವರ ಕೈಯಲು!**

I - - - - - - - - - - - - - - - - - - - - - - - - - - - - - - - - - - - - - - - -

ದಾಸನ ವಸ್ತ್ರವ ಬೇಡದ ಮುನ್ನ : ದಾಸನ–ಜಾಡರ ದಾಸಿಮಯ್ಯನ, ವಸ್ತ್ರವ–ಹನ್ನೆರಡು ವರುಷ ನೆಯ್ದಂಥ ಪಂಚವರ್ಣಿಗೆಯ ದೇವಾಂಗವನ್ನು, ಬೇಡದ ಮುನ್ನ–ಯಾಚಿಸಿ ತೆಗೆದುಕೊಳ್ಳುವುದಕಿಂದ ಮೊದಲೇ, ತವನಿಧಿಯನಿತ್ತಡೆ–ಎಂದೆಂದಿಗೆ ಸವೆಯದಂತಹ ತವನಿಧಿಪ್ರಸಾದವ ಕರುಣಿಸಿಕೊಟ್ಟರೆ, ನಿಮ್ಮ ದೇವರೆಂದೆಂಬೆ–ನಿಮ್ಮ ಪರಶಿವಲಿಗವೆಂದು ಭಾವಿಸುವೆನು. ಮೊದಲು ಹನ್ನೆರಡು ವರುಷ ನೆಯ್ದಂಥ ಪಂಚವರ್ಣಿಗೆಯ ದೇವಾಂಗವನು ತೆಗೆದುಕೊಂಡು ಕಡೆಯಲ್ಲಿ ತವನಿಧಿಪ್ರಸಾದವ ಕರುಣಿಸಿಕೊಟ್ಟ ಕಾರಣ ನಿಮ್ಮ ಉಪಕಾರಕ್ಕೆ ಉಪಕಾರಿಯೆಂದು ಹೇಳುವೆನು. ಸಿರಿಯಾಳನ–ಕಂಚಿಪಟ್ಟಣದ ಸಿರಿಯಾಳಸೆಟ್ಟಿಯ, ಮಗನ–ಏಳುವರುಷದ ಕುಮಾರನಾದ ಚೀಲಾಳಯ್ಯನ, ಬೇಡದ ಮುನ್ನ–ಯಾಚಿಸಿ ತೆಗೆದುಕೊಳ್ಳುವುದಕಿಂದ ಮೊದಲೇ, ಕಂಚಿಪಟ್ಟಣವ–ಕಂಚಿಪುರವನ್ನು, ಕೈಲಾಸಕ್ಕೊಯ್ದಡೆ–ಕಾಯವೆರಸಿ ಕೈಲಾಸಕ್ಕೆ ತೆಗೆದುಕೊಂಡು ಹೋದರೆ, ನಿಮ್ಮ ದೇವರೆಂದೆಂಬೆ–ನಿಮ್ಮ ಪರಶಿವಲಿಂಗವೆಂದು ಭಾವಿಸುವೆನು. ಮೊದಲು ಏಳುವರುಷದ ಕುಮಾರನಾದ ಚೀಲಾಳಯ್ಯನ ತೆಗೆದುಕೊಂಡು ಕಡೆಯಲ್ಲಿ ಕಂಚಿಪಟ್ಟಣವನ್ನು ಕಾಯವೆರಸಿ ಕೈಲಾಸಕ್ಕೆ ತೆಗೆದುಕೊಂಡುಹೋದ ಕಾರಣ ನೀಮ್ಮ ಉಪಕಾರಕ್ಕೆ ಉಪಕಾರಿಯೆಂದು ಹೇಳುವೆನು. ಬಲ್ಲಾಳನ–ಸಿಂಧುಬಲ್ಲಾಳರಾಯನ, ವಧುವ–ಹನ್ನೆರಡು ವರುಷದ ಪಟ್ಟದಂಗನೆಯನ್ನು, ಬೇಡದ ಮುನ್ನ–ಯಾಚಿಸಿ ತೆಗೆದುಕೊಳ್ಳುದಕಿಂದ ಮೊದಲೇ, ಸ್ವಯಲಿಂಗವ ಮಾಡಿದಡೆ–ಸ್ವಯಲಿಂಗಪದವಿಯನ್ನು ಕರುಣಿಸಿಕೊಟ್ಟರೆ, ನಿಮ್ಮ ದೇವರೆಂದೆಂಬೆ–ನಿಮ್ಮ ಪರಶಿವಲಿಂಗವೆಂದು ಭಾವಿಸುವೆನು. ಮೊದಲು ಹನ್ನೆರಡು ವರುಷದ ಪಟ್ಟದಂಗನೆಯನ್ನು ತೆಗೆದುಕೊಂಡು ಕಡೆಯಲ್ಲಿ ತಿರುಣಾಮಲೆಯಲ್ಲಿ ಅರುಣಾಚಲೇಶ್ವರನೆಂಬ ಸ್ವಯಲಿಂಗಪದವಿಯನ್ನು ಕರುಣಿಸಿಕೊಟ್ಟ ಕಾರಣ ನಿಮ್ಮ ಉಪಕಾರಕ್ಕೆ ಉಪಕಾರಿಯೆಂದು ಹೇಳುವೆನು.

ದೇಹಿ ನೀನು-ಒಂದು ವಸ್ತುವನ್ನು ಕೊಡುಯೆಂದು ಕೇಳಲ್ಪಟ್ಟಾತ ನೀನು, ನಮ್ಮವರು-ನಮ್ಮ ಅರುವತ್ತುಮೂರು ಪುರಾತನರು, ವ್ಯಾಪಾರಿಗಳು-ಒಂದು ವಸ್ತುವನ್ನು ಕೊಟ್ಟು ಒಂದು ವಸ್ತುವನ್ನು ಹಡೆಯಲ್ಪಟ್ಟಂಥವರು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಎಮ್ಮವರ-ನಮ್ಮ ಅರುವತ್ತುಮೂರು ಪುರಾತನರ, ಕೈಯಲು-ಹಸ್ತಾಂತರದಿಂದಲು, ಬೇಡು-ಒಂದು ವಸ್ತುವನ್ನು ಕೊಡೆಂದು ಕೇಳಿಕೋ.

---

## ೪೪೬

**ಎಲ್ಲರೂ ವೀರರು, ಎಲ್ಲರು ಧೀರರು, ಎಲ್ಲರು ಮಹಿಮರು, ಎಲ್ಲರು ಪ್ರಮಥರು : ಕಾಳಗದ ಮುಖದಲ್ಲಿ ಕಾಣಬಾರದು, ಓಡುವ ಮುಖದಲ್ಲಿ ಕಾಣಬಹುದು! ನಮ್ಮ ಕೂಡಲಸಂಗನ ಶರಣರೆಲ್ಲರು ಧೀರರು ಉಳಿದವರೆಲ್ಲರು ಅಧೀರರು!**

I - - - - - - - - - - - - - - - - - - - - - - - - - - - - - - - - - - - - - - - - - - - -

ಎಲ್ಲರು-ಎಲ್ಲ ವಾಲ್ಮೀಕರು, ವೀರರು-ಬಹುಶೂರತ್ವವುಳ್ಳಂಥವರು, ಎಲ್ಲರು-ಎಲ್ಲ ವಾಲ್ಮೀಕರು, ಧೀರರು-ಅಲಗಿನ ಮೊನೆಗೆ ಹೆದರಿಕೊಳ್ಳದೆ ಯದ್ಧವ ಮಾಡುವಲ್ಲಿ ದಿಟ್ಟತನವುಳ್ಳಂಥವರು, ಎಲ್ಲರು-ಎಲ್ಲ ವಾಲ್ಮೀಕರು, ಮಹಿಮರು-ಬಿರುದು ಬಾವುಲಿಯುಳ್ಳಂಥವರು, ಎಲ್ಲರು-ಎಲ್ಲ ವಾಲ್ಮೀಕರು, ಪ್ರಮಥರು-ಪೂರ್ವಸಂತತಿಯುಳ್ಳಂಥವರು, ಕಾಳಗದ ಮುಖದಲ್ಲಿ ಕಾಣಬಾರದು-ರಣಾಗ್ರದ ವದನದಲ್ಲಿ[೧] ತಿಳಿಯಬಾರದು, ಓಡುವ ಮುಖದಲ್ಲಿ ಕಾಣಬಹುದು-ರಣಾಗ್ರವನ್ನು ಕಂಡಾಕ್ಷಣಕ್ಕೆ ಮುಂದಣಕಾಲ ಹಿಂದಕ್ಕಿಟ್ಟು ಹಿಡಿದ ಕತ್ತಿಯನ್ನು ಬಿಟ್ಟು ಮಣಕಾಲಮಂಡಿ ಒಡೆಯೋ ಸುದ್ದಿಯನರಿಯದೆ ಓಡಿಬರುವ ವದನದಲ್ಲಿ[೨] ತಿಳಿಯಬಹುದು. ನಮ್ಮ ಕೂಡಲಸಂಗನ ಶರಣರು-ಪೂರ್ವಸಂತತಿಯವರು, ಧೀರರು-ಅಲಗಿನ ಮೊನೆಗೆ ಹೆದರಿಕೊಳ್ಳದೆ ಯುದ್ಧವ ಮಾಡುವಂಥ ದಿಟ್ಟತನವುಳ್ಳವರು, ಉಳಿದವರೆಲ್ಲ-ಮಿಕ್ಕಿನ ವಾಲ್ಮೀಕರಷ್ಟೂ, ಅಧೀರರು-ಅಲಿಗನ ಮೊನೆಗೆ ಹೆದರಿಕೊಂಡು ಯುದ್ಧವ ಮಾಡಲಾರದೆ ಅಧೈರ್ಯವುಳ್ಳವರೆಂಬುದರ್ಥ.

ಎಲ್ಲರೂ-ಎಲ್ಲ ಭಕ್ತಿಸ್ಥಲದವರು, ವೀರರು-ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡಲ್ಪಟ್ಟಂಥವರು, ಎಲ್ಲ-ಎಲ್ಲ ಮಹೇಶ್ವರಸ್ಥಲದವರು, ಧೀರರು-ಮನದಲ್ಲಿ ಲಿಂಗಸಂಬಂಧದ ಮಾಡಿಕೊಂಡು ಲಿಂಗಪೂಜೆಯ ಮಾಡಲ್ಪಟ್ಟಂಥವರು, ಎಲ್ಲರು-ಎಲ್ಲ ಐಕ್ಯಸ್ಥಲದವರು, ಮಹಿಮರು-ಪ್ರಾಣಜ್ಞಾನದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡಲ್ಪಟ್ಟಂಥವರು, ಎಲ್ಲರು-ಎಲ್ಲ ಪ್ರಸಾದಿಸ್ಥಲದವರು, ಪ್ರಮಥರು-ಆತ್ಮಾಂಗದಲ್ಲಿ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯ ಮಾಡಲ್ಪಟ್ಟಂಥವರು, ಕಾಳಗದ ಮುಖದಲ್ಲಿ ಕಾಣಬಾರದು-ಚತುರ್ವಿಧ ಅಂಗದಲ್ಲಿ ಚತುರ್ವಿಧ ಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧ ಭಕ್ತಿವಿಡಿದಾಚರಿಸುವಲ್ಲಿ[೩] ತಿಳಿಯಬಾರದು. ಓಡುವ ಮುಖದಲ್ಲಿ ಕಾಣಬಹುದು-ಭಕ್ತನೆಂಬ ವೀರಮಾಸಾಳು ಇದ್ದೆಡೆಗೆ ಜಂಗಮವೆಂಬ ಮಹಾವೀರಮಾಸಾಳು ಬಂದು ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟುವಲ್ಲಿ[೪] ತಿಳಿಯಬಹುದು. ನಮ್ಮ ಕೂಡಲಸಂಗನ ಶರಣರು-

ನಿರ್ವಂಚಕಸದ್ಭಕ್ತರು, ಧೀರರು–ಚತುರ್ವಿಧ ಅಂಗದಲ್ಲಿ ಚತುರ್ವಿಧ ಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧಭಕ್ತಿವಿಡಿದಾಚರಿಸಿ ಶಿವನುಂಟುಮಾಡಿದ ಸಕಲಪ್ರಪಂಚವನ್ನು ಜಯಿಸುವಲ್ಲಿ ಬಹು ಸಾಮರ್ಥ್ಯವುಳ್ಳವರು. ಉಳಿದವರೆಲ್ಲರು–ಮಿಕ್ಕಿನ ಆಶಾಲಾಂಛನಿ ಉಪಾಧಿಗಳಷ್ಟೂ, ಅಧೀರರು–ಚತುರ್ವಿಧ ಅಂಗದಲ್ಲಿ ಚತುರ್ವಿಧ ಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧಭಕ್ತಿವಿಡಿದಾಚರಿಸಿ ಶಿವನುಂಟುಮಾಡಿದ ಸಕಲಪ್ರಪಂಚವನ್ನು ಜಯಿಸಲಾರದಿದ್ದಂಥ ಅಶಕ್ತರು.

..........................

೧ + ಬಂಟ–ಬಂಟನೆಂಬುವಂಥದು. ಅರಿಯಬಾರದು (ಕ, ಗ). ೨ + ಬಂಟ–ಬಂಟನೆಂಬಂಥದು, ಅರಿಯಬಹುದು (ಕ, ಗ). ೩ + ಭಕ್ತ–ಭಕ್ತನೆಂಬಂಥದನು, ಅರಿಯಬಾರದು (ಕ, ಗ). ೪ + ಭಕ್ತ–ಭಕ್ತನೆಂಬಂಥದನು, ಅರಿಯಬಹುದು (ಕ, ಗ).

---

## ೪೪೭

**ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ ಆಣೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ! ಪರವಧುವನು ಮಹಾದೇವಿಯೆಂಬೆ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ : ಎಲ್ಲಿ–ರಾಜಸಭೆ ದೇವಸಭೆಗಳಲ್ಲಿ ಕುಳಿತುಕೊಂಡಿದ್ದಲ್ಲಿ, ನೋಡಿದಡೆ–ರೂಪಲಾವಣ್ಯವನುಳ್ಳ, ಸ್ತ್ರೀಯಳ ನಿರೀಕ್ಷಣೆಯ ಮಾಡಿದರೆ, ಅಲ್ಲಿ–ನಿರೀಕ್ಷಣೆಯ ಮಾಡಿದಲ್ಲಿ, ಮನವೆಳಸಿದಡೆ–ಅಂಥ ಸ್ತ್ರೀಯಳು ನನಗಾಗಬೇಕೆಂದು ಇಚ್ಛೈಸಿದರೆ, ಆಣೆ–ಪ್ರತಿಜ್ಞೆಯು, ನಿಮ್ಮಾಣೆ–ನಿಮ್ಮ ಪಾದದ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ–ನಿಮ್ಮೇಳುನೂರೆಪ್ಪತ್ತಮರಗಣಂಗಳ ಪಾದದ ಮೇಲಣ ಪ್ರತಿಜ್ಞೆಯು. ಪರವಧುವನ್ನು–ಅನ್ಯಸ್ತ್ರೀಯಳನ್ನು, ಮಹಾದೇವಿಯೆಂಬೆ–ಪಾರ್ವತಿದೇವಿಯರಿಗೆ ಸಮಾನವೆಂದು ಹೇಳುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

## ೪೪೮

**ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗಂಜೆ! ಒಂದಕ್ಕಂಜುವೆ, ಒಂದಕ್ಕಳುಕುವೆ : ಪರಧನ ಪರಸ್ತ್ರೀಯೆಂಬೀ ಜೂಬಿಂಗಂಜುವೆ! ಮುನ್ನಂಜದ ರಾವಣನೇ ವಿಧಿಯಾದ? ಅದು ಕಾರಣ ಅಂಜುವೆ ನಾನಯ್ಯ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಹರಿವ ಹಾವಿಂಗಂಜೆ–ನಿಬ್ಬರದಿಂದ ಓಡಿಬಂದು ಕಚ್ಚಿ ವಿಷವನುಗುಳಿ ಪ್ರಾಣವ ಕೊಲ್ಲುವಂಥ ಸರ್ಪನ ಕಂಡರೆ ಶಿವನು ಕೊಟ್ಟಾಯುಷ್ಯ ಇರಲಿಕ್ಕೆ ಈ ಹುಳುಪ್ರಾಣಿಕೂಡೇನಾಗುತ್ತೈತೆ? ಕಚ್ಚಿದರೆ ಕಚ್ಚಲಿಯೆಂದು ಎದೆಗೊಟ್ಟು ದಿಟ್ಟತನವ ಮುಂದುಗೊಂಡಿರುವೆನಲ್ಲದೆ, ಅಂಜೆ–ಹೆದರಿಕೊಳ್ಳೆನು.

ಉರಿಯ ನಾಲಗೆಗಂಜಿ–ಏಳು ರಸನೆಯನು ಚಾಚಿಕೊಂಡು ಧಗಧಗ ಉರಿವಂಥ ಅಗ್ನಿಯಲ್ಲಿ ಕೈಕಾಲು ಕೈಕಟ್ಟಿ ಹಾಕುತ್ತೇನೆಂದರೂ ಶಿವನು ಕೊಟ್ಟ ಆಯುಷ್ಯ ಇರಲಿಕ್ಕೆ ಅದರಿಂದಲೇನಾಗುತೈತೆ? ಹಾಕಿದರೆ ಹಾಕಲಿಯೆಂದು ಎದೆಗೊಟ್ಟು ದಿಟ್ಟತನ ಮುಂದುಗೊಂಡಿರುವೆನಲ್ಲದೆ, ಅಂಜೆ–ಹೆದರಿಕೊಳ್ಳೆನು. ಸುರಗಿಯ ಮೊನೆಗಂಜೆ–ಅಲಗಿನ ಮೊನೆಯಿಂದ ತಿವಿತೈದಾನೆಂದರೆ ಶಿವನು ಕೊಟ್ಟ ಆಯುಷ್ಯವಿರಲಿಕ್ಕೆ ಅದರಿಂದಲೇನಾಗುತೈತೆ? ತಿವಿದರೂ ತಿವಿಯಲೆಂದು ಎದೆಗೊಟ್ಟು ದಿಟ್ಟತನವ ಮುಂದುಗೊಂಡಿರುವೆನಲ್ಲದೆ, ಅಂಜೆ–ಹೆದರಿಕೊಳ್ಳೆನು. ಒಂದಕ್ಕಂಜುವೆ–ಬಹಿರಂಗದಲ್ಲಿ ಭಯಂಬಡುವೆನು, ಒಂದಕ್ಕಳುಕುವೆ–ಅಂತರಂಗದಲ್ಲಿ ಹೆದರಿಕೊಂಬುವೆನು. ಪರಧನ–ಅನ್ಯದ್ರವ್ಯವೆಂಬ, ಪರಸ್ತ್ರೀ–ಅನ್ಯಸ್ತ್ರೀಯೆಂಬ, ಈ ಜೂಬಿಂಗೆ–ಈ ಕೋರೆ ಹುಳುವಿಂಗೆ, ಅಂಜುವೆ–ಹೆದರುವೆನು. ಮುನ್ನಂಜದ ರಾವಣನೇವಿಧಿಯಾದ : ಮುನ್ನ–ಮೊದಲು, ಅಂಜದ–ಹೆದರದ, ರಾವಣ–ದಶಕಂಠನು, ಏ ವಿಧಿಯಾದ–ಮನೆ ಮಾರು ಬದುಕು ಬಾಳುವೆ ಎಲ್ಲವ ಕಳಕೊಂಡು ರಾಮರ ಬಾಣಕ್ಕೆ ಗುರಿಯಾದನು. ಅದು ಕಾರಣ–ಅದು ನಿಮಿತ್ತಾರ್ಥ, ಅಂಜುವೆ ನಾನಯ್ಯಾ–ಹೆದರುವೆ ನಾನಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೪೯

**ಒಂದಕ್ಕೊಂಬತ್ತ ನುಡಿದು, ಕಣ್ಣು ಕೆಂಚಗ ಮಾಡಿ, ಗಂಡುಗೆದಱೆ ಮುಡುಹಿಕ್ಕಿ ಕೆಲೆವರ ಕಂಡಡಂಜುವೆ, ಓಸರಿಸುವೆ! ಓಡಿದನೆಂಬ ಭಂಗವಾದಡಾಗಲಿ: ನಮ್ಮ ಕೂಡಲಸಂಗನ ಶರಣರನುಭಾವವಿಲ್ಲದವರ ಹೊಲ ಮೇರೆಯ ಹೊದ್ದೆ, ಹೊಲನ ಬಿಟ್ಟೋಡುವೆನು!**

I----------------------------------------------------------------------

ಒಂದಕ್ಕೊಂಬತ್ತ ನುಡಿದು–ಅಜ್ಞಾನಿಗಳ ಕೂಡ ಮಾತುಕಥೆಪ್ರಸಂಗವನಾಡುವಾಗ ಒಂದು ಪ್ರಸಂಗಕ್ಕೆ ಒಂಬತ್ತ ನುಡಿದು, ಕಣ್ಣು ಕೆಂಚಗಮಾಡಿ–ಒಂದಾನೊಂದು ನಗರ ಹಣ್ಣಿನ ಹಾಂಗೆ ನಯನ ಕೆಂಪಗೆ ಮಾಡಿಕೊಂಡು, ಗಂಡುಗೆದಱೆ–ಕಾಳಗವ ಮಾಡುವ ಕಿರಾತನೋಪಾದಿಯಲ್ಲಿ ಮೈಯುಬ್ಬಿ ರೋಮಂಗಳು ನೆಟ್ಟಗೆ ನಿಗುರಿ ಮೀಸೆ ಹುರಿಗೈದು, ಮುಡುಹಿಕ್ಕಿ–ಎರಡುಭುಜವನ್ನು ತಟ್ಟಿಕೊಂಡು, ಕೆಲೆವರ–ಅಚ್ಚಾವಿಚ್ಚಿ ಬಾಯಿಗೆ ಬಂದ ಹಾಂಗೆ ದೂಷಣೆಯ ಮಾಡುವಂಥವರ, ಕಂಡು–ಅಂತಪ್ಪವರ ನೋಡಿ, ಅಂಜುವೆ–ಹೆದರುವೆನು. ಓಸರಿಸುವೆ–ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟುವೆನು. ಓಡಿದನೆಂಬ–ಪಲಾಯನವಾದನೆನಿಸುವ, ಭಂಗವಾದಡಾಗಲಿ–ಅವನಲ್ಲಿ ಕಳಂಕವಿದ್ದ ಕಡೆಯಿಂದಲೇ ಓಡಿನಷ್ಟೇ? ನಿಃಕಳಂಕನಾದರೆ ಎದೆಗೊಟ್ಟು ಜಯಿಸುವನೆಂಬ ಕೊರತೆ ಬಂದರೆ ಬರಲಿ, ನಮ್ಮ ಕೂಡಲಸಂಗನಶರಣರ–ನಮ್ಮ ಜಂಗಮಮೂರ್ತಿಗಳ, ಅನುಭಾವವಿಲ್ಲದವರ–ಶಿವಾನುಭಾವದ ಕೇಳಿಕೆಯುಂಟಾಗಿಲ್ಲದವರ, ಹೊಲ ಮೇರೆಯ ಹೊದ್ದೆ–ಅವರ ಅಂತಪ್ಪವರ, ಕಟ್ಟಿನ ಸೀಮೆ ಭೂಮಿಯ ತುಳಿಯೆನು. ಹೊಲನ ಬಿಟ್ಟೋಡುವೆನು–ಅವರ ಮೇರೆ ಕಟ್ಟಿನ ಭೂಮಿಯನ್ನು ವಿಸರ್ಜಿಸಿ ಪಲಾಯನವಾಗುವೆನು.

೪೫೦

**ಒಡೆಯರು ಬಂದಡೆ ಗುಡಿತೋರಣವ ಕಟ್ಟಿ, ನಂಟರು ಬಂದಡೆ ಸಮಯವಿಲ್ಲೆನ್ನಿ! ಅಂದೇಕೆ ಬಾರರು? ನೀರಿಂಗೆ ನೇಣಿಂಗೆ ಹೊಱಗಾದಂದು, ಸಮಯಾಚಾರಕ್ಕೆ ಒಳಗಾದಂದು. ಪರುಷಮುಟ್ಟಲು ಕಬ್ಬುನ ಹೊನ್ನಾಯಿತ್ತು : ಬಳಿಕ ಬಂಧುಗಳುಂಟೆ? ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಒಡೆಯರು-ಕರ್ತೃಸ್ವರೂಪಿಗಳಾದ ಭಕ್ತಮಾಹೇಶ್ವರರು, ಬಂದಡೆ-ನಮ್ಮ ಬಸವೇಶ್ವರಸ್ವಾಮಿಗಳು ಮಾಡುವಂಥ ಭಕ್ತಿಯನ್ನು ನೋಡಬೇಕೆಂದು ಎಯ್ದುಬಂದರೆ, ಗುಡಿತೋರಣವ ಕಟ್ಟಿ-ಗುಡಿಗುಡಾರ ರಾಯಡೇರೆ ಮೊದಲಾದವನ್ನು ಹೊಡದು, ತೋರಣವ-ತಳಿಗೆತೋರಣ ತಳಿರುತೋರಣ ಮಕರತೋರಣ ಮುಕುರತೋರಣ ಮೊದಲಾದವನ್ನು, ಕಟ್ಟಿ-ಬಂಧಿಸಿ, ನಂಟರು ಬಂದಡೆ-ಬಂಧುಗಳಾದ ವಿಪ್ರರುಗಳು ನಮ್ಮ ಬಸವಣ್ಣನು ಕಲ್ಯಾಣ ಪಟ್ಟಣದಲ್ಲಿ ಅಧಿಕಾರವ ಮಾಡುತ್ತೈದಾನೆ, ಕೊಟ್ಟಾನು ಕೊಂಡಾನುಯೆಂದು ಆಶಾನಿಮಿತ್ತವಾಗಲಿ ಅವಸರ ನಿಮಿತ್ತವಾಗಲಿ ಒಂದು ಪ್ರಸ್ತಪ್ರಯೋಜನ ನಿಮಿತ್ತದಿಂದಾದರಾಗಲಿ ಎಯ್ದುಬಂದರೆ, ಸಮಯವಿಲ್ಲೆನ್ನಿ-ಬಸವೇಶ್ವರಸ್ವಾಮಿಗಳು ಬಿಜ್ಜಳಾಂಕನ ಸಭೆಗೆ ಹೋಗೈದಾರೆ ಲಿಂಗಪೂಜೆಯ ಮಾಡುತ್ತೈದಾರೆ ಜಂಗಮಾರ್ಚನೆಯ ಮಾಡುತ್ತೈದಾರೆ ಪವಡಿಸಿಕೊಂಡೈದಾರೆ ಈಗ ಸಮಯವಿಲ್ಲೆಂದು ಆಚೆಗೆ ದಾಂಟಿಸಿ ಬಿಡಿರಿ.

ಅಂದೇಕೆ ಬಾರರು-ಅಂದು ನಮ್ಮವರಾದರೆ ಅಂದೇ ಬರುವರು. ಅಂದು ನಮ್ಮವರಲ್ಲದ ಕಾರಣ ಇಂದು ನಮ್ಮವರಲ್ಲವೆಂದು ಆಚೆಗೆ ದಾಂಟಿಸಿಬಿಡಿರಿ. ನೀರಿಂಗೆ-ಸ್ನಾನ ಮಾಡುವ ಉದಕಕ್ಕೆ, ನೇಣಿಂಗೆ-ಗೇಣುದ್ದ ಚೋಟುದ್ದ ಜನಿವಾರಕ್ಕೆ, ಹೊಱಗಾದಂದು-ವಿಲಕ್ಷಣವಾದಂದು, ಸಮಯಾಚಾರಕ್ಕೆ-ಸಂಗಮೇಶ್ವರನಿಂದ ಉಪದೇಶವನ್ನು ಹಡೆದು ಲಿಂಗಾಚಾರಮಾರ್ಗದಲ್ಲಿ ಕೂಡುವುದಕ್ಕೆ, ಒಳಗಾದಂದು-ಪ್ರಥಗಣಂಗಳ ಕವಳಿಗೆಗೆ ಯೋಗ್ಯವಾದಂದು, ಪರುಷ ಮುಟ್ಟಲು-ಪರುಷದ ಖಣಿ ಸೋಂಕಲು, ಕಬ್ಬುನ-ಕಾರ್ಬೊನ್ನು, ಹೊನ್ನಾಯಿತ್ತು-ಸುವರ್ಣವಾಯಿತ್ತು.

ಹಾಂಗೆ ಪರಮಪಾವನಪವಿತ್ರ ಸ್ವರೂಪವಾದ ಮಹಾಲಿಂಗವೇ ಗುರೂಪದೇಶದಿಂದ ಅಂಗದಲ್ಲಿ ಇಷ್ಟಲಿಂಗವಾಗಿ ಬಂದು ಸಂಬಂಧವಾಗಲು, ಕಬ್ಬುನ-ಅವಲೋಹಸ್ವರೂಪವಾದ ದೇಹವು, ಹೊನ್ನಾಯಿತ್ತು-ಆಚಾರಾಂಗಜ್ಞಾನಕಾಯವಾಯಿತ್ತು. ಬಳಿಕ-ಆಮೇಲೆ, ಬಂಧುಗಳುಂಟೆ-ಅಣ್ಣ ತಮ್ಮ ಚಿಕ್ಕಪ್ಪ ದೊಡ್ಡಪ್ಪ ಮೊದಲಾದ ಬಾಂಧವರೆಂದು ಹೇಳುವ ವಿಪ್ರರುಗಳುಂಟಾಗಿದ್ದರೆ? ಇಲ್ಲವು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

**ಒಡೆಯರಾಡುವ ಮಾತು ಕಡೆತನಕ ಕೇಳಿ, ಇದಿರು ಹೋಗಿ ಕಿಂಕಲನಾಗಿ ನಡುಗುತ್ತ ಬಿನ್ನಹವ ಮಾಡುವ ಸದ್ಭಕ್ತರ ತೋಱಯ್ಯಾ. ಒಡೆಯರಾಡುವ ಮಾತು ಕಂಡು ಕರದಲ್ಲಿ ಕಡೆಮೆಟ್ಟಿ ಬಾಯಿ ಘನವೆಂದು ಆಡುವನ ತೋಱದಿರಯ್ಯಾ! ಅವನ ಸಂಗದಲ್ಲಿರಿಸದಿರಯ್ಯಾ, ಅವನ ಸಹಪಙ್ತಿಯಲ್ಲಿ ಕುಳ್ಳಿರಿಸದಿರಯ್ಯಾ! ಕೂಡಲಸಂಗಮದೇವಾ, ನಿಮ್ಮ ಬೇಡುವುದಿದೊಂದೇ ವರವು.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಒಡೆಯರು–ರಕ್ಷಣ್ಯಕ್ಕೆ ಕರ್ತರಾದ ನಿರ್ವಂಚಕ ಸದ್ಭಕ್ತರುಗಳು, ಆಡುವ ಮಾತು–ಇಲ್ಲಿಗೆ ಹತ್ತೆಂಟು ಗಾವುದದಲ್ಲಿ ಗುರುಚರಮೂರ್ತಿಗಳು ಬಂದೈದಾರೆ. ಹೋಗಿ ಬಿನ್ನಹಮಾಡಿ ಕರಕೊಂಡು ಬಂದು ತಿಂಗಳು ಹದಿನೈದು ದಿವಸ ಮಡಗಿಕೊಂಡು ಭಕ್ತಿಬಿನ್ನಹವನ್ನು ಮಾಡು ಉಡುಗೊರೆ ಉತ್ಸವವನ್ನು ಹೊದಿಸಿ ಮಾನ ಮನ್ನಣೆಯಿಂದ ಕಳಿಸಿಕೊಡಬೇಕೆಂಬಂಥ ಪ್ರಸಂಗವನ್ನು, ಕಡೆತನಕ ಕೇಳಿ–ತುದಿ ಪರಿಯಾಂತರವನಾಲಿಸಿ, ಇದಿರು ಹೋಗಿ–ಅವರಿದ್ದ ಸ್ಥಾನಕ್ಕೆ ಇದಿರಾಗಿ ನಡೆದು ಹೋಗಿ, ಕಿಂಕಲನಾಗಿ– "ಚಕಿತಂ ಭಯ ಸಂಭ್ರಮ"ವೆಂದು ಭಯದೊಡನೆ ಕೂಡಲ್ಪಟ್ಟಾತನಾಗಿ, ನಡುಗುತ್ತ– "ನಡುಗು ಕಂಪನೇ"ಯೆಂದು ಗದಗದನೆ ಕಂಪಿಸುತ್ತ, ಬಿನ್ನಹವ ಮಾಡುವ–ಭಕ್ತಿಬಿನ್ನಹವ ಮಾಡಿ ಕರಕೊಂಡು ಬರುವಂಥ, ಸದ್ಭಕ್ತರ–ನಿರ್ವಂಚಕ ಸದ್ಭಕ್ತರ, ತೋಱಯ್ಯಾ–ಅವರ ದುರಶನವ ಕಾಣಿಸಯ್ಯಾ.

ಒಡೆಯರು–ಕರ್ತೃಸ್ವರೂಪಿಗಳಾವ ನಿರ್ವಂಚಕ ಸದ್ಭಕ್ತರುಗಳು, ಆಡುವ ಮಾತು–ಇಲ್ಲಿಗೆ ಹತ್ತೆಂಟು ಗಾವುದದಲ್ಲಿ ಗುರುಚರಮೂರ್ತಿಗಳು ಬಂದೈದಾರೆ ಬಿನ್ನಹವ ಮಾಡಿ ಕರಕೊಂಡು ಬಂದು ತಿಂಗಳು ಹದಿನೈದು ದಿವಸ ಮಡಗಿಕೊಂಡು ಭಕ್ತಿ ಬಿನ್ನಹವನ್ನು ಮಾಡಿ ಉಡುಗೊರೆ ಉತ್ಸವವನ್ನು ಮಾಡಿ ಮಾನಮನ್ನಣೆಯಿಂದ ಕಳಿಸಿಕೊಡಬೇಕೆಂದಾಡುವಂಥ ಪ್ರಸಂಗವನ್ನು, ಕಂಡು–ನೋಡಿ, ಕರದಲ್ಲಿ–ಕೈಯಲ್ಲಿ, ಕಡೆಮೆಟ್ಟಿ–ತಾಳು ತಾಳೆಂದು ನಿಂದರಿಸಿ, ಬಾಯಿ ಘನವೆಂದು–ತನ್ನ ಬಾಯನ್ನೇ ವೆಗ್ಗಳವ ಮಾಡಿಕೊಂಡು, ಆಡುವನ–ಈಗೊಬ್ಬ ಚರಮೂರ್ತಿಗಳು ಬಂದು ತಿಂಗಳು ಹದಿನೈದು ದಿವಸ ಹಾಸಿಕೊಂಡೈದಾರೆ ಅವರಿಗೆ ಭಕ್ತಿಬಿನ್ನಹವ ಮಾಡಿ ಉಡುಗೊರೆ ಉತ್ಸವವನ್ನು ಮಾಡಿ ಮಾನಮನ್ನಣೆಯಿಂದ ಕಳುಹಿಸಿಕೊಡಬೇಕಗುತ್ತೈತೆ. ಈಗವರಿಂದ ಕೆಲಸವೇನು ನಿಂತ್ಯೆತೆಂದು ಆಡುವಂಥ ಕಂಟಕಿ ಭಕ್ತನ, ತೋಱದಿರಯ್ಯಾ!–ಅವರ ದರುಶನವ ಕಾಣಿಸದಿರಯ್ಯಾ. ಅವನ–ಆ ಕಂಟಕಿ ಭಕ್ತನ, ಸಂಗದಲ್ಲಿರಿಸದಿರಯ್ಯಾ–ಅವನ ತತ್ಸಂಗದಲ್ಲಿ ಸ್ಥೈತಿರಿಸದಿರಯ್ಯಾ. ಅವನ–ಆ ಕಂಟಕಿ ಭಕ್ತನ, ಸಹಪಙ್ತಿಯಲ್ಲಿ ಕುಳ್ಳಿರಿಸಿದಿರಯ್ಯಾ–ಅವನೂ ತಾನೂ ಒಂದೇ ಪಂಙ್ತಿಯಲ್ಲಿ ಅನುಭವಿಸುವ ಹಾಂಗೆ ಮಾಡದಿರಯ್ಯಾ.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ–ನಿಮ್ಮ ಸ್ವಾಮಿಗಳ, ಬೇಡುವುದು–ಯಾಚಿಸುವಂಥದು, ಇದು ಒಂದೇ ವರವು–ನಾನೇನು ಫಲಪದ ಮುಕ್ತಿಯ ಬೇಡೋದಿಲ್ಲ. ಆ ಕಂಟಕಿ ಭಕ್ತನ ಸಹವಾಸದಲ್ಲಿರುವ ಹಾಂಗೆ ಮಾಡಬೇಡ. ಇಲ್ಲಿಗೆ ಹತ್ತೆಂಟು ಗಾವುದದಲ್ಲಿ ಗುರುಚರಮೂರ್ತಿಗಳು ಬಂದೈದಾರೆ ಅವರಿಗೆ ಬಿನ್ನಹಮಾಡಿ ಕರಕೊಂಡು ಬಂದು ತಿಂಗಳು ಹದಿನೈದು ದಿವಸ ಮಡಗಿಕೊಂಡು ಭಕ್ತಿಬಿನ್ನಹವನ್ನು ಮಾಡಿ ಉಡುಗೊರೆ ಉತ್ಸವವನ್ನು ಮಾಡಿ

ಮಾನಮನ್ನಣೆಯಿಂದ ಕಳುಹಿಸಿಕೊಡಬೇಕೆಂಬಂಥ ನಿರ್ವಂಚಕ ಸದ್ಭಕ್ತರುಗಳ ಸಹವಾಸದಲ್ಲಿರುವಂಥ ಇದೇ ಒಂದಿಷ್ಟಾರ್ಥಸಿದ್ಧಿಯನೇ ಕರುಣಿಸಿಕೊಡಿರೆಂದು ಯಾಚಿಸುವೆನು.

---

೪೫೨

**ಬಡ ಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ! ಮಾಲೆಗಾಱನೇಸು ಭಕ್ತನಾದಡೆಯೂ ಬಾವಿಯ ಬೊಮ್ಮನ ಹಂಗ ಬಿಡ! ಬಣಜಿಗನೇಸು ಭಕ್ತನಾದಡೆಯೂ ಒಟ್ಟಿಲ ಬೆನಕನ ಹಂಗ ಬಿಡ! ಕಂಚುಗಾಱನೇಸು ಭಕ್ತನಾದಡೆಯೂ ಕಾಳಿಕಾ ದೇವಿಯ ಹಂಗ ಬಿಡ! ನಾನಾವ ಹಂಗಿನವನಲ್ಲ, ನಿಮ್ಮ ಶರಣರ ಹಂಗಿನವ ನಾನಯ್ಯಾ, ಕೂಡಲಸಂಗಮದೇವಾ!**

I - - - - - - - - - - - - - - - - - - - - - - - - - - - - - - - - - - - - - - - - - - - -

'ಬಡ' ಹಾರುವ–ಬಡ ಬ್ರಾಹ್ಮಣನು, ಏಸು ಭಕ್ತನಾದಡೆಯೂ–ಎಷ್ಟು ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತನಾದರೆಯೂ, ನೇಣಿನ ಹಂಗ ಬಿಡ !–ಗೇಣುದ್ದ ಚೋಟುದ್ದ ಜನಿವಾರವನ್ನು ಜುಟ್ಟದಲ್ಲಾಗಲಿ ದೋತ್ರದಲ್ಲಾಗಲಿ ರುಮಾಲಸೆರಗಿನಲ್ಲಾಗಲಿ ಕಟ್ಟಿಕೊಂಡಿರುವಂಥ ವಾಂಛೆಯನು, ಬಿಡ–ಬಿಟ್ಟುಕೊಡನು. ಮಾಲೆಗಾಱ–ತಮ್ಮಡಿಗನು, ಏಸು ಭಕ್ತನಾದಡೆಯೂ–ಎಷ್ಟು ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತನಾದರೆಯೂ, ಬಾವಿಯ ಬೊಮ್ಮನ ಹಂಗ–ಬಾವಿಯ ಬುಡದಲ್ಲಿ ಒಂದು ಬೊಮ್ಮದೇವರ ಮಡಗಿಕೊಂಡು ಪ್ರಾತಃಕಾಲದಲ್ಲಿ ತೋಟಕ್ಕೆ ಹೋಗಿ ಸ್ನಾನವ ಮಾಡಿಕೊಂಡು ಮಡಿಯನ್ನು ಹೊದ್ದುಕೊಂಡು ಆ ಬಾವಿಯ ಬೊಮ್ಮನಿಗೆ ಅಭಿಷೇಕವ ನೀಡಿ ದೇವರೇ ಗಿಡಗಳು ಚಿಗುರುವ ಹಾಂಗೆ ಮಾಡು, ಗಿಡಗಳಿಗೆ ಹುಳುಹತ್ತದ ಹಾಂಗೆ ಮಾಡು, ವೆಗ್ಗಳವಾಗಿ ಕಾಯಿಹಣ್ಣುಫಲವಾಗುವ ಹಾಂಗೆ ಮಾಡು, ಕೊಳೆತು ಹುಳುತುಹೋಗುವ ಹಾಂಗೆ ಮಾಡಬೇಡ. ಹಣ್ಣು ಕಾಯಿ ಮೊದಲಾದವುಗಳ ನಿನಗೆ ಸಮರ್ಪಣೆಯ ಮಾಡುತ್ತೈದೇನೆಂದು ಅಡ್ಡಡ್ಡ ಬಿದ್ದು ಆರಾಧಿಸುವಂಥ ವಾಂಛೆಯನು, ಬಿಡ–ಬಿಟ್ಟುಕೊಡನು.

ಬಣಜಿಗ–ವಾಣಿಜನು, ಏಸು ಭಕ್ತನಾದಡೆಯೂ–ಎಷ್ಟು ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತನಾದರೆಯೂ, ಒಟ್ಟಿಲ ಬೆನಕನ ಹಂಗ–ಸಬರ ಸಿಂಬೆ ಬಲುಹುಗೂಟ ಹಗ್ಗಕಣ್ಣಿ ಕಡತ ಬಳಪ ಮೊದಲಾದವನ್ನು ಒಂದೇ ತಾವದಲ್ಲಿ ಕುಪ್ಪೆಯಿಟ್ಟು ಗಂಟೆ ಸರಪಳಿಗಳನ್ನು ಇಳಿಯಬಿಟ್ಟು ಹಣ್ಣುಕಾಯಿಗಳನ್ನು ಫಲಾವಳಿಗಳನ್ನು ಕಟ್ಟಿ ಚಿಗುಳಿ ತಂಬಿಟ್ಟು ನೆನಗಡಲಿ ಬಾಳೆಹಣ್ಣು ಮೊದಲಾದವನ್ನು ನೈವೇದ್ಯವ ಹಿಡಿದು ಜಂಗಮಾರಾಧನೆಯ ಮಾಡಿ, ದೇವರೇ ನಮ್ಮೆತ್ತುಗಳು ಅಲ್ಲಗಲ್ಲಿಗೆ ಸತ್ತುಹೋಗುವ ಹಾಂಗೆ ಮಾಡಬೇಡ. ನಮ್ಮ ಸರಕು ಸುಲಿಗೆ ಹೋಗಿ ಲುಕ್ಸಾನವಾಗದ ಹಾಂಗೆ ರಾಜಭಯ ಚೋರಭಯ ಅಗ್ನಿಭಯಗಳಿಂದ ಉಳಿಸು. ಸರಕು ಮಾರಿ ಇಮ್ಮಡಿ ಮುಮ್ಮಡಿ ಲಾಭ ಬರುವ ಹಾಂಗೆ ಮಾಡೆಂದು ಅಡ್ಡಡ್ಡ ಬಿದ್ದು ಆರಾಧಿಸುವಂಥ ವಾಂಛೆಯನು, ಬಿಡ–ಬಿಟ್ಟುಕೊಡನು.

ಕಂಚುಗಾಱನು–ಕಾಂಸಿಕನು, ಏಸು ಭಕ್ತನಾದಡೆಯೂ–ಎಷ್ಟು ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವುನುಳ್ಳ ಶಿವಭಕ್ತನಾದರೆಯೂ, ಕಾಳಿಕಾದೇವಿಯ ಹಂಗ–ಪ್ರಾತಃಕಾಲದಲೆದ್ದು

ಸ್ನಾನವ ಮಾಡಿಕೊಂಡು ಮಡಿಯನ್ನು ಹೊದ್ದುಕೊಂಡು ಚರಗಿಯೊಳಗೆ ಉದಕವನ್ನು ತುಂಬಿಕೊಂಡು ಗ್ರಾಮದ ಹೊರವಳಯದಲ್ಲಿರುವಂಥ ಕಾಳಿಕಾದೇವಿಯ ಗುಡಿಗೆ ಹೋಗಿ ಮಜ್ಜನವ ನೀಡಿ ಪ್ರಸೂನವ ಧರಿಸಿ ದೇವರೇ ನಮ್ಮ ನಗವು ಚೆಂದಾಗಿ ಇಳಿವಂತೆ ಮಾಡು. ಒಡೆದು ಲುಕ್ಸಾನವಾಗಿ ಕೆಡದಂತೆ ಮಾಡು. ರಾಜಭಯ ಚೋರಭಯ ಅಗ್ನಿಭಯ ಮೊದಲಾದವರುಗಳಿಂದ ಉಳಿಸು, ಮಾರಿ ಲಾಭ ಬರುವ ಹಾಂಗೆ ಮಾಡೆಂದು ಅಡ್ಡಡ್ಡ ಬಿದ್ದು ಆರಾಧಿಸುವಂಥ ವಾಂಛೆಯನು, ಬಿಡ–ಬಿಟ್ಟುಕೊಡನು. ನಾನು–ಸಂಗನಬಸವೇಶ್ವರನು, ಅವ ಹಂಗಿನವನಲ್ಲ–ಅವರ ಹಾಂಗೆ ಒಂದೊಂದು ದೈವವ ಕುರುಹಿಟ್ಟುಕೊಂಡು ಪೂಜಿಸುವಂಥ ವಾಂಛೆಯುಳ್ಳಾತನಲ್ಲವು. ನಿಮ್ಮ ಶರಣರ ಹಂಗಿನವ ನಾನಯ್ಯಾ–ನಿಮ್ಮ ಜಂಗಮಮೂರ್ತಿಗಳಿಗೆ ಬಿನ್ನಹಮಾಡಿ ಕರಕೊಂಡು ಬಂದು ಸಕಲಪದಾರ್ಥವ ಎಡೆಯಮಾಡಿ ಅವರ ಪಾದೋದಕ ಪ್ರಸಾದ ಸೇವನೆಯ ಮಾಡುವಂಥ ವಾಂಛೆಯುಳ್ಳಾತ ನಾನಯ್ಯಾ, ಕೂಡಲಸಂಗಮದೇವಾ!–ಎಲೆ ಪರಶಿವಲಿಂಗವೆ.

..........................

೧–೧ ನಿರ್ಧನಿಕನಾದಂಥ (ಗ).

II- - - - - - - - - - - - - - - - - - - - - - - - - - - - - - - - - - - - - - - - - - - -

..........................

1–1 + ಕಾಲ (ಚ,ಜ).

ಬಡಹಾರುವನೇಸುಕಾಲ ಭಕ್ತನಾಡದೆಯೂ ನೇಣಿನ ಹಂಗ ಬಿಡ !–ಕೃಶನಾದ ಬ್ರಾಹ್ಮಣ ಇಷ್ಟಲಿಂಗವ ಕಟ್ಟಿ ಎಷ್ಟು ಶಿವಭಕ್ತಿಯುಳ್ಳವನಾದರೂ ತನ್ನ ಜನಿವಾರವೇ ದೈವವೆಂಬುದ ಮಾಣ. ಮುಂದಕ್ಕೆ ಇದೇ ಮರಿಯಾದೆಯಲ್ಲಿ ಓದೂದು.

---

೪೫೩

**ಶ್ರೀವಿಭೂತಿ ರುದ್ರಾಕ್ಷಿ ಶಿವಲಿಂಗವಿದ್ದವರ ಲಿಂಗವೆಂಬೆ, ಇಲ್ಲದವರ ಭವಿಯೆಂಬೆ. ಕೂಡಲಸಂಗಮದೇವಾ, ಸದ್ಭಕ್ತರ ನೀವೆಂಬೆ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಶ್ರೀವಿಭೂತಿ : ಶ್ರೀ–ಐಶ್ವರ್ಯೋಪಲಕ್ಷಿತವಾದ, ವಿಭೂತಿ–ಶಿವನ ಮೈಕಾಂತಿಸ್ವರೂಪವಾದ ಚಿದ್ವಿಭೂತಿಯು, ರುದ್ರಾಕ್ಷಿ–ಚಿದ್ರುದ್ರಾಕ್ಷಿ ಮಣಿಗಳನು, ಶಿವಲಿಂಗವ–ಮಾಂಗಲ್ಯಸ್ವರೂಪವಾದ ಇಷ್ಟಮಹಾಲಿಂಗವು, ಇದ್ದವರ–ಬಹಿರಂಗದ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವನ್ನು ಧರಿಸಿಕೊಂಡಿದ್ದವರ, ಲಿಂಗವೆಂಬೆ–ಅವರೇ ಸಾಕ್ಷಾತ್ ಶಿವಸ್ವರೂಪವೆಂದು ಭಾವಿಸುವೆನು. ಇಲ್ಲದವರ–ಇವು ಮೊಲದಾದ ಭಕ್ತಿವೇಷವುಂಟಾಗಿಲ್ಲದವರ, ಭವಿಯೆಂಬೆ–ಭೂತದೇಹಿ ಭೂತಾತ್ಮರೆಂದು ಹೇಳುವೆನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಸದ್ಭಕ್ತರ– "ಲಿಂಗಭಕ್ತಾಶ್ಚ ಜಂಗಮಾಃ"ಯೆಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳನು, ನೀವೆಂಬೆ–ಪರಶಿವಲಿಂಗವೆಂದು ಭಾವಿಸುವೆನು.

೪೫೪

**ದೇವಸಹಿತ ಭಕ್ತನ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡೆನಾದೊಡೆ ನಿಮ್ಮಾಣೆ! ನಿಮ್ಮ ಪ್ರಮಥರಾಣೆ! ತಲೆದಂಡ! ತಲೆದಂಡ! ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನಱಸಿದಡೆ ನಿಮ್ಮ ರಾಣಿವಾಸದಾಣೆ!**

I - - - - - - - - - - - - - - - - - - - - - - - - - - - - - - - - - - - - - - - - - - - -

ದೇವಸಹಿತ ಭಕ್ತನ ಮನೆಗೆ ಬಂದಡೆ–ಸಮಯಾಚಾರದ ಜಂಗಮಮೂರ್ತಿಗಳು ಸಹವಾಗಿ ಕಾಯಕದ ಶೀಲವಂತರು ಭಕ್ತನ ಭಕ್ತಿಗೃಹಕ್ಕೆ ಕಾಯಕಕ್ಕೆಂದು ಬಿಜಯಂಗೈಯ್ದು ಬಂದರೆ, ಕಾಯಕವಾವುದೆಂದು ಬೆಸಗೊಂಡೆನಾದೊಡೆ–ಸೂಜಿಕಾಯಕದವರಾದರೆ ಸಿಂಪಿಗರು ದಬ್ಬಣಕಾಯಕದವರಾದರೆ ಬಣಜಿಗರು ಕನ್ನಡಿಕಾಯಕದವರಾದರೆ ನಾಯದರೆಂದು ಕಾಯಕವ ಕೊಡೋ ನೆವದಿಂದ ಅವರ ಕುಲಸೂತಕವ ನೋಡಬೇಕೆಂದು ಬೆಸಗೊಂಡು ಕೇಳಿದೆನಾದರೆ, ನಿಮ್ಮಾಣೆ!–ಸ್ವಾಮಿಗಳ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ! ನಿಮ್ಮರುವತ್ತುಮೂರು ಪುರಾತರ ಮೇಲಣ ಪ್ರತಿಜ್ಞೆಯು. ತಲೆದಂಡ! ತಲೆದಂಡ!–ತಲೆಯೆಂದರೆ ಜ್ಞಾನ. ಅಂತಪ್ಪ ಜ್ಞಾನವನಪಹರಿಸಿ ಮಾನಭಂಗವಮಾಡಿ ಭವಕ್ಕೆ ಹಾಕಿಬಿಡು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಭಕ್ತರಲ್ಲಿ–ಕಾಯಕದ ಶೀಲವಂತರಲ್ಲಿ, ಕುಲವನಱಸಿದಡೆ–ಇವರು ಆ ಕುಲದವರು ಈ ಕುಲದವರೆಂದು ಕುಲಸೂತಕವ ಹುಡುಕಿದರೆ, ನಿಮ್ಮ ರಾಣಿವಾಸದಾಣೆ!–ಅಮ್ಮನವರ ಮೇಲಣ ಪ್ರತಿಜ್ಞೆಯು.

೪೫೫

**ಲಿಂಗಾಂಗಿಗಳಲ್ಲದವರ, ನಿಮ್ಮ ಶರಣರ ಸಂಗದೊಳಗಿರದವರ ಕಂಡಡೆ ನಾ ನಾಚುವೆ. ಅವರ ನುಡಿ ಎನಗೆ ಸಮನಿಸದಯ್ಯಾ ಕೂಡಲಸಂಗಮದೇವಾ, ಅಲ್ಲಿ ನೀವಿಲ್ಲದ ಕಾರಣ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಲಿಂಗಾಂಗಿಗಳಲ್ಲದವರ–ಅಂಗದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡದವರ, ನಿಮ್ಮ ಶರಣರ ಸಂಗದೊಳಗಿರದವರ–ನಿಮ್ಮ ತ್ರಿವಿಧಲಿಂಗಾನುಭಾವಿಗಳಾದ ಶಿವಶರಣರ ಶಿವಾನುಭಾವದ ಗೋಷ್ಠಿಯಲ್ಲಿ ಕೂಡಿದವರ, ಕಂಡಡೆ–ದರುಶನವಾದರೆ, ನಾ ನಾಚುವೆ–ನಾನು ಅಭಿಮಾನಿಸಿಕೊಂಬುವೆನು. ಅವರ ನುಡಿ–ಅಂತಪ್ಪ ಅಜ್ಞಾನ ದುರ್ಗುಣಿಗಳಾಡುವಂಥ ಮಾತುಕಥೆ ಪ್ರಸಂಗವು, ಎನಗೆ ಸಮನಿಸದಯ್ಯಾ–ನನಗೆ ಕಿವಿಗೊಟ್ಟಾಲಿಸುವುದಕ್ಕೆ ಪ್ರೀತಿಯಾಗದಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಅಲ್ಲಿ–ಅಂತಪ್ಪವರಂಗಮನಪ್ರಾಣಂಗಳಲ್ಲಿ, ನೀವಿಲ್ಲದ ಕಾರಣ–ಇಷ್ಟಪ್ರಾಣಭಾವಲಿಂಗವಾಗಿ ನೆಲೆಗೊಳ್ಳದ ನಿಮಿತ್ತ.

## ೪೫೬

**ಶ್ರೀವಿಭೂತಿಯ ಪೂಸದವರ, ಶ್ರೀರುದ್ರಾಕ್ಷಿಯ ಧರಿಸದವರ, ನಿತ್ಯ ಲಿಂಗಾರ್ಚನೆಯ ಮಾಡದವರ, ಜಂಗಮವೇ ಲಿಂಗವೆಂದಱಿಯದವರ, ಸದ್ಭಕ್ತರ ಸಂಗದಲ್ಲಿರದವರ ಎನಗೆ ಒಮ್ಮೆ ತೋಱದಿರಯ್ಯಾ ಕೂಡಲಸಂಗಮದೇವಾ, ಸೆಱಗೊಡ್ಡಿ ಬೇಡುವೆನು.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಶ್ರೀವಿಭೂತಿಯ ಪೂಸದವರ : ಶ್ರೀ–ಐಶ್ವರ್ಯೋಪಲಕ್ಷಿತವಾದ, ವಿಭೂತಿಯ–ಚಿದ್ವಿಭೂತಿಯ, ಪೂಸದವರ–ಲಲಾಟ ಮೊದಲಾದ ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧರಿಸಬೇಕು. ಧರಿಸದೆ ಮಟ್ಟಿಮಣ್ಣ ಮೊದಲಾದ ಪಟ್ಟೆನಾಮವನಿಟ್ಟುಕೊಂಬಂಥವರ, ಶ್ರೀರುದ್ರಾಕ್ಷಿಯ ಧರಿಸಿದವರ : ಶ್ರೀ ಐಶ್ವರ್ಯೋಪಲಕ್ಷಿತವಾದ, ರುದ್ರಾಕ್ಷಿಯ–ಚಿದ್ರುದ್ರಾಕ್ಷಿಗಳನು, ಧರಿಸಿದವರ–ತತ್ತತ್‌ಸ್ಥಾನಕ್ಕೆ ಧಾರಣವ ಮಾಡಿಕೊಳ್ಳಬೇಕು. ಮಾಡಿಕೊಳ್ಳದೆ ನಾನಾ ವರ್ಣದ ಮಣಿಗಳನು ಕಟ್ಟಿಕೊಂಡಿರುವಂಥವರ, ನಿತ್ಯಲಿಂಗಾರ್ಚನೆಯ ಮಾಡದವರ–ತ್ರಿಕಾಲಂಗಳಲ್ಲಿ ಲಿಂಗಪೂಜೆಯ ಮಾಡಬೇಕು. ಲಿಂಗಪೂಜೆಯ ಮಾಡದೆ ಬ್ರಹ್ಮ ವಿಷ್ಣು ಇಂದ್ರ ಚಂದ್ರ ಸೂರ್ಯ ಮೊದಲಾದ ಸಕಲದೈವದ ಭಜನೆಯ ಮಾಡುವಂಥವರ, ಜಂಗಮವೇ ಲಿಂಗವೆಂದಱಿಯದವರ ಜಂಗಮವೇ ಸಾಕ್ಷಾತ್ ಶಿವಸ್ವರೂಪವೆಂದು ವಿಶ್ವಾಸಿಸಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಬೇಕು. ಮಾಡದೆ ಷಡುದರುಶನದವರಿಗೆ ಸಕಲ ಪದಾರ್ಥವ ಕೊಟ್ಟು ಭಕ್ತಿಯ ಮಾಡುವಂಥವರ, ಸದ್ಭಕ್ತರ ಸಂಗದಲ್ಲಿರದವರ–ಭಕ್ತರಾದರೆ ನಿರ್ವಂಚಕಸದ್ಭಕ್ತರ ಸಹವಾಸ ಜಂಗಮವಾದರೆ ಜ್ಞಾನ ಜಂಗಮಮೂರ್ತಿಗಳ ಸಹವಾದಲ್ಲಿರಬೇಕು. ಇಲ್ಲದವರ, ಎನಗೆ–ನನಗೆ, ಒಮ್ಮೆ–ಒಂದು ವೇಳೆಗೆ, ತೋಱದಿರಯ್ಯಾ–ಕಾಣಿಸದಿರಯ್ಯಾ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಸೆಱಗೊಡ್ಡಿ ಬೇಡುವೆನು–ನಾನೇನಾದರೂ ಫಲಪದ ಮುಕ್ತಿಯನ್ನು ಬೇಡೋದಿಲ್ಲ. ನಿರ್ವಂಚಕ ಸದ್ಭಕ್ತರ ಜ್ಞಾನ ಜಂಗಮಮೂರ್ತಿಗಳ ಸಹವಾಸದಲ್ಲಿರುವಂಥ ಇದೇ ಒಂದು ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡು ಎಂದು, ಸೆಱಗೊಡ್ಡಿ–ಆಚಾರವೆಂಬ ಸೆರಗಾಂತು, ಬೇಡುವೆನು–ಯಾಚಿಸುವೆನು.

II- - - - - - - - - - - - - - - - - - - - - - - - - - - - - - - - - - - - - - - - - - - - -

ವಿಭೂತಿ ರುದ್ರಾಕ್ಷಿಯ ಧರಿಸಿ ತ್ರಿಕಾಲಲಿಂಗಾರ್ಚನೆಯ ಮಾಡಿ, ಜಂಗಮವೇ ಲಿಂಗವೆಂದಱಿದು ಶರಣು ಹೊಕ್ಕು ಭಕ್ತಿಯ ಮಾಡುತ್ತ, ಸದ್ಭಕ್ತರ ಸಂಗದಲ್ಲಿರ್ದು ಭಕ್ತಿಪಥವ ಪಡೆದ ಭಕ್ತರೆ ಮುಕ್ತರು. ಅಂತಪ್ಪವರ ಕಂಡಾತನೆ ಕೃತಾರ್ಥ. ಇಲ್ಲದ ಅಜ್ಞಾನಿಗಳ ಮುಖವ ನೋಡಲಾಗದೆಂಬುದೀ ವಚನದ ತಾತ್ಪರ್ಯಾರ್ಥ.

---

## ೪೫೭

**ಕೂಪ[1]ರಿಗೆ ಹೇಳುವೆನು ಕುಳಸ್ಥಳಂಗಳೆಲ್ಲವ[2]ನು.[2] [3]ಕ್ರೂರರಿಗೆ[3] ಹೇಳಿ ನಾನೇವೆ[4] ಶಿವನೆ? ಕಱಲಭೂಮಿಯಲ್ಲಿ ಕಱೆದ ವೃಷ್ಟಿಯ ತೆಱನಂತೆ ಅವರೆತ್ತ ಬಲ್ಲರು ಎನ್ನ ಸುಖದುಃಖವ? ಅಂಗ[5]ತ[5]ವಿಲ್ಲದ**

**ಸಂಗವು 'ಅಳಲಿಲ್ಲದ' ಹುಯ್ಯಲಿನಂತೆ! ಇದು ಕಾರಣ, ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದೆ ಬಾಯಿದೆಱೆಯೆನು.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಕೂಪರಿಗೆ–ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿರುವಂಥವರಿಗೆ, ಕುಳಸ್ಥಳಂಗಳೆಲ್ಲವನು–ನೂರಾವೊಂದು ಕುಳಸ್ಥಳಂಗಳ ಅರಿವಾಚರಣೆ ಪ್ರಸಂಗವನ್ನು, ಹೇಳುವೆನು–ಬೋಧಿಸುವೆನು. ಕ್ರೂರರಿಗೆ–ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗಾಗಿ ಸಹವಯರಾಗಿಲ್ಲದಿದ್ದಂಥ ಕೆಟ್ಟವರಿಗೆ, ಶಿವತತ್ತ್ವವಳಿದು ಜೀವರಾದಂಥವರಿಗೆ, ಹೇಳಿ–ಬೋಧಿಸಿ, ನಾನೇವೆ–ನಾನೇನು ಮಾಡಲಿ, ಶಿವನೆ–ದುರಿತಧ್ವಂಸಿಯಾದ ದೇವನೆ, ಕಱಲಭೂಮಿಯಲ್ಲಿ ಕಱೆದ ವೃಷ್ಟಿಯ ತೆಱನಂತೆ–ಎರೆಭೂಮಿ ಮಡೆಭೂಮಿಯಲ್ಲಿ ಮಳೆ [೧]ಜಗಿ ಹೊಯ್ದರೆ[೧] ಕೆರೆಕುಂಟೆಗಳಿಗೆ ನೀರು ಬಂದು ಭೂಮಿ ತೊಯ್ದು ಹದನವಾಗುವುದು. ಹದಿನೆಂಟು ಧಾನ್ಯಂಗಳನು ಬಿತ್ತಿದರೆ ಬೆಳೆದು ಫಲವಾದಲ್ಲಿ ಸಕಲಾತ್ಮರುಗಳಿಗೆ ಸುಖವಾಗುವುದು. ಕರಲಭೂಮಿ ಸವಳುಭೂಮಿಯಲ್ಲಿ ಮಳೆ ಜಗ್ಗು ಹೊಯ್ದರೆ ಬಿದ್ದ ನೀರೆಲ್ಲ ಉರುಳಿ ಹೋಗಿ ಭೂಮಿ ನೆನೆಯದೆ ಪೈರು ಆಗದೆ ಎಂದಿನ ಹಾಂಗೆ ಬರೆ [೨]ಬೀಡೆ[೨] ಸೆಳೆದುಕೊಂಡಿರುವುದು. ಹಾಂಗೆ, ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿದ್ದಂಥ ಸತ್ಯಸದಾಚಾರಗಳಿಗೆ ನೂರಾವೊಂದು ಸ್ಥಳಕುಳಂಗಳ [೩]ಅರಿವಾ[೩]ಚರಣೆಯ ಪ್ರಸಂಗವನ್ನು ಬೋಧಿಸಿದರೆ ಎರೆಭೂಮಿ ಮಡೆಭೂಮಿಯಲ್ಲಿ ಮಳೆಗರೆದರೆ ಕೆರೆಕುಂಟೆಗೆ ನೀರು ಬಂದು ಭೂಮಿ ತೊಯ್ದು ಹದನವಾಗಿ ಹದಿನೆಂಟುಧಾನ್ಯಂಗಳನು ಬಿತ್ತಿದರೆ ಬೆಳೆದು ಫಲವಾಗಿದ್ದಲ್ಲಿ ಸಕಲಾತ್ಮರಿಗೆಷ್ಟೊಂದು ಸುಖವಾಗುತ್ತಿಹುದೋ ಹಾಂಗೆ, ಅವರು ಅಂಗವ ಮಾಡಿಕೊಂಡು ಶಿವಜ್ಞಾನಿಗಳಾಗಿ ಆಚರಿಸುವರು. ಬೋಧಿಸಿದವರಿಗೆ ಕೀರ್ತಿ ಬರುವುದು. ಅವರು ಶಿವಪಥಕ್ಕೆ ಸಲ್ಲುವರು. ಅದಲ್ಲದೆ ದುರಾಚಾರಿಗಳಿಗೆ ನೂರಾವೊಂದು ಸ್ಥಳಕುಳಂಗಳ ಅರಿವಾಚರಣೆಯ ಪ್ರಸಂಗವನ್ನು ಬೋಧಿಸಿದರೆ ಅವರು ಅಂಗವ ಮಾಡಿಕೊಳ್ಳದೆ ಮಾಯಾಮೋಹದ ಮರವೆಯಿಂದ ಅಜ್ಞಾನಿಗಳಾಗಿ ಆಚರಿಸುವರು. ಅವರು ಶಿವಪಥಕ್ಕೆ [೪]ಸಲ್ಲರು[೪] ಬೋಧಿಸಿದವರಿಗೆ ಕೀರ್ತಿಬಾರದೆ ಕರಲಭೂಮಿಯಲ್ಲಿ ಕರೆದ ವೃಷ್ಟಿಯ ತೆರನಂತೆ ವ್ಯರ್ಥವಾಗಿಪ್ಪುದು. ಅವರೆತ್ತ ಬಲ್ಲರೆನ್ನ ಸುಖದುಃಖವ? : ಎನ್ನ ಸುಖದುಃಖವ–ಎನ್ನ ಸುಖ ಒಂದು ಕೋಟ್ಯಾನು ಕೋಟಿ, ದುಃಖ ಒಂದು ಕೋಟ್ಯಾನು ಕೋಟಿಯನ್ನು, ಅವರೆತ್ತ ಬಲ್ಲರು?–ಅವರಾವ ಕಡೆಯಿಂದ ತಿಳಿದಿಪ್ಪರು? ಅರಿಯರು.

ಅಂಗತವಿಲ್ಲದ ಸಂಗವು–ಪುರುಷನಿಗೆ ಸ್ತ್ರೀಯಳೊಲಿದು ಸ್ತ್ರೀಯಳಿಗೆ ಪುರುಷನೊಲಿದು ಬಂದು ಏಕಾಂತಸ್ಥಾನದಲ್ಲಿ ರತಿಕೂಟವನ್ನು ಕೂಡಿದರೆ [೫]ಸೌಖ್ಯ[೫]ವಾಗಿದ್ದಿತ್ತಲ್ಲದೆ ಪುರುಷನಿಗೆ ಸ್ತ್ರೀಯಳೊಲಿಯದೆ ಸ್ತ್ರೀಯಳಿಗೆ ಪುರುಷನೊಲಿಯದೆ ಬಲಾತ್ಕಾರದಿಂದ ಹಿಡಿದುಕೊಳ್ಳಲಿಕ್ಕೆ ಹೋದಲ್ಲಿ ಗುಲ್ಲು ಮಾಡಿ ಅವನ ಮಾನಭಂಗವ ಮಾಡಿ ತಲೆಯ ಹೊಯ್ಸಿಬಿಡುತ್ತಿಹಳು ಹಾಂಗೆ; ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿದ್ದಂಥ ಸತ್ಯಸದಾಚಾರಿಗಳಿಗೆ ನೂರಾವೊಂದು ಸ್ಥಳಕುಳಂಗಳ [೫]ಅರಿವಾ[೫]ಚರಣೆಯ ಪ್ರಸಂಗವನ್ನು ಬೋಧಿಸಿದರೆ ಪುರುಷನಿಗೆ ಸ್ತ್ರೀಯಳೊಲಿದು ಸ್ತ್ರೀಯಳಿಗೆ ಪುರುಷನೊಲಿದು ಬಂದು ಏಕಾಂತಸ್ಥಾನದಲ್ಲಿ ರತಿಕೂಟವನ್ನು ಕೂಡಿದರೆ ಗೋಪ್ಯವಾಗಿದ್ದ ಹಾಂಗೆ ಅವರು ಅಂಗವ ಮಾಡಿಕೊಂಡು ಶಿವಜ್ಞಾನಿಗಳಾಗಿ ಆಚರಿಸುವರು. ಬೋಧಿಸಿದವರಿಗೆ

ಕೀರ್ತಿಬರುವುದು. ದುರಾಚಾರಿಗಳಿಗೆ ನೂರಾಒಂದು ಸ್ಥಳಕುಳಂಗಳ ಅರಿವಾಚರಣೆ ಪ್ರಸಂಗವನ್ನು ಬೋಧಿಸಿದರೆ ಅವರು ಅಂಗವ ಮಾಡಿಕೊಳ್ಳದೆ ಮಾಯಾಮೋಹದ ಮರವೆಯಿಂದ ಅಜ್ಞಾನಿಗಳಾಗಿ ಆಚರಿಸುವರು. ಬೋಧಿಸಿದವರಿಗೆ ಕೀರ್ತಿಬಾರದು, ಅಂಗತವಿಲ್ಲದ ಸಂಗದಂತೆ ವ್ಯರ್ಥವಾಗಿಪ್ಪುದು. ಅಳಲಿಲ್ಲದ ಹುಯ್ಯಲಿನಂತೆ !–ಒಬ್ಬಾನೊಬ್ಬ ದೊರೆ ಆಳುವಂಥ ದೇಶಕೋಶವನು ಅರಿರಾಯರ ದಂಡುಬಂದು ಹಾಳುಮಾಡುತ್ತಿದ್ದಲ್ಲಿ ಆ ಸುದ್ದಿ ದೊರೆ ಕೇಳಿ ರೊಚ್ಚೆದ್ದು ಚತುರಂಗ ಮಾರ್ಬಲವ ಕಟ್ಟಿಕೊಂಡು ತಾನೇ ಹೋಗಿ ಯುದ್ದಕ್ಕೆ ನಿಂತರೆ ನೋಡುವಂಥ ದೊರೆ ಮುಂದೆ ಕಡಿದಾಡಿ ಸಾಯಬೇಕಲ್ಲದೆ ಇನ್ನಾವಾಗೆಂದು ಪರಾಕ್ರಮತ್ವದಿಂದ ಯುದ್ಧವನು ಮಾಡುವರು; ಹುಯ್ಯಲನು ಜಯಿಸುವರು. ಅದಲ್ಲದೆ ದೊರೆಯೇನಾದರೂ ತನ್ನ ಪಟ್ಟಣದೊಳಗೆ ಕುಳಿತುಕೊಂಡು ಪ್ರಧಾನಿ ಗೌಡ ಕುಲಕರ್ಣಿ ದಳವಾಯಿ ಮೊದಲಾದವರ ಕಳಸಿಕೊಟ್ಟಲ್ಲಿ ಕಡಿದಾಡಿ ಮಡಿದರೆ ನೋಡುವಂಥ ದೊರೆಯೇ ಇಲ್ಲ. ಇಲ್ಲ್ಯಾರ ಮುಂದೆ ಸಾಯಬೇಕೆಂದು ನಿಂತು ಯುದ್ಧವನ್ನು ಮಾಡರು, ಹುಯ್ಯಲನು ಜಯಿಸರು. ಕಾಗೆಯ ಹಿಂಡಿಗೆ ಕೋಲು ಇಟ್ಟೋಪಾದಿಯಲ್ಲಿ ವ್ಯರ್ಥವಾಗಿರ್ಪುದು. ಹಾಂಗೆ, ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿದ್ದಂಥ ಸತ್ಯಸದಾಚಾರಿಗಳಿಗೆ ನೂರಾವೊಂದು ಸ್ಥಳಕುಳಂಗಳ ಅರವಾಚರಣೆ ಪ್ರಸಂಗವನ್ನು ಬೋಧಿಸಿದರೆ ದೊರೆಯಿದ್ದು ಚತುರಂಗಮಾರ್ಬಲವನ್ನು ತೆಗೆದುಕೊಂಡು ಯುದ್ಧಕ್ಕೆ ಹೋದಹಾಂಗೆ ಅವರ ಸಂಗವ ಮಾಡಿಕೊಂಡು ಶಿವಜ್ಞಾನಿಗಳಾಗಿ ಆಚರಿಸುವರು. ಬೋಧಿಸಿದವರಿಗೆ ಕೀರ್ತಿಬರುವುದು. ಅದಲ್ಲದೆ ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಸಹವಯರಾಗಿ ಇಲ್ಲದಿದ್ದಂಥ ದುರಾಚಾರಿಗಳಿಗೆ ನೂರಾವೊಂದು ಸ್ಥಳಕುಳಂಗಳ ಅರಿವಾಚರಣೆಯ ಪ್ರಸಂಗವನ್ನು ಬೋಧಿಸಿದರೆ ಅವರಂಗವ ಮಾಡಿಕೊಳ್ಳದೆ ಮಾಯಾಮೋಹದ ಮರವೆಯಿಂದ ಅಜ್ಞಾನಿಗಳಾಗಿ ಆಚರಿಸುವರಲ್ಲದೆ ಸುಜ್ಞಾನಿಗಳಾಗಿ ಆಚರಿಸರು, ಬೋಧಿಸಿದವರಿಗೆ ಕೀರ್ತಿಬಾರದು. ಅಳಲಿಲ್ಲದ ಹುಯ್ಯಲಿನಂತೆ ವ್ಯರ್ಥವಾಗಿರ್ಪುದು.

ಇದುಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗಲ್ಲದೆ ಬಾಯಿದೆಱೆಯೆನು–ನಿಮ್ಮ ಸತ್ಯ ಸದಾಚಾರವುಳ್ಳ ಜ್ಞಾನಕಲಾತ್ಮರಿಗೆ ನೂರಾವೊಂದು ಸ್ಥಳಕುಳಂಗಳ ಅರಿವಾಚರಣೆ ಪ್ರಸಂಗವನ್ನು ಬೋಧಿಸುವೆನಲ್ಲದೆ ದುರಾಚಾರಿಗಳಿಗೆ ನೂರಾವೊಂದು ಸ್ಥಳಕುಳಂಗಳ ಅರಿವಾಚರಣೆ ಪ್ರಸಂಗವನ್ನು ಜಿಹ್ವೆಯನ್ನು ತೆರೆದು ಬೋಧಿಸುವೆನೆ ? ಬೋಧಿಸೆನು.

..................................

೧–೧ ಕರೆದರೆ (ಗ). ೨–೨ ಬೀಟಿ (ಕ). ೩–೩ ಅರುಹು ಅರುಹು ಆ (ಕ). ೪–೪ ಸಲ್ಲುವರು (ಕ). ೫–೫ ಅರುಹು ಆ (ಕ). ಗೋಪ್ಯ (ಗ).

II--------------------------------------------------------------------

1 + ವ (ಚ, ಜ). 2– x (ಚ, ಜ). 3–3 ಕೂರದವರಿಗೆ (ಚ, ಜ). 4 + ನು (ಚ, ಜ). 5–5 x (ಚ, ಜ). 6–6 ಆಳಿಲ್ಲದ (ಚ, ಜ).

.........................

ಕೂಪರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವ–ಆತ್ಮಬಂಧು ಕೂರ್ಮಿಗಳಾದ ಮಹಾನುಭಾವಜಂಗಮಕ್ಕೆ ನೂರೊಂದು ಸ್ಥಳಕುಳಂಗಳೆಲ್ಲವನುಸುರುವೆನು, ಕೂರದವರಿಗೆ ಹೇಳಿ ನಾನೇವನು ಶಿವನೆ–ಕಷ್ಟನಿಷ್ಠುರೋಕ್ತಿಯನುಳ್ಳ ಜೀವರುಗಳಿಗೆ ನಾನೇನ ಮಾಡಲಿ ಪರಮೇಶ್ವರನೆ? ಕಱಲ ಭೂಮಿಯಲ್ಲಿ ಕಱೆದ ವೃಷ್ಟಿಯ ತೆರನಂತೆ–ಕರಣಮಥನಕರ್ಕಶವೈರವರ್ಗವನುಳ್ಳ ಕಲುಹೃದಯಶರೀರದಲ್ಲಿ ಸ್ರವಿಸಿದ ಶಿವಾನುಭಾವ ಸೋನೆಯೋಪಾದಿಯಲ್ಲಿ, ಅವರೆತ್ತ ಬಲ್ಲರೆನ್ನ ಸುಖದುಃಖವ–ಎನ್ನುಲ್ಲಾಸಕ್ಲೇಶವನವರಾವ ಕಡೆಯಲ್ಲಿ ತಿಳಿದುಬಲ್ಲರು.

ಅಂಗವಿಲ್ಲದ ಸಂಗವು ಅಳಿಲ್ಲದ ಹುಯ್ಯಲ್ಲಂತೆ: [ಅಂಗವಿಲ್ಲದ ಸಂಗವು–] ಆಚಾರಾಂಗವಿಲ್ಲದ ಇಷ್ಟಲಿಂಗದ ಸಂಪರ್ಕವು, [ಆಳಿಲ್ಲದ ಹುಯ್ಯಲಂತೆ–] ಆಚಾರಾಂಗವಿದ್ದರೆ ಇಷ್ಟಲಿಂಗದ ಸಂಪರ್ಕವುಂಟಾದೀತು. ಅದೇಯಿಲ್ಲ, ಇಷ್ಟಲಿಂಗದ ಸಂಪರ್ಕವೆಲ್ಲಿ[ಂದ] ಬಂದೀತು. ಮನಸ್ಸಿನಲ್ಲಿ ದುಃಖ ಹುಟ್ಟಿ ಕಣ್ಣಿಗೆ ನೀರತಂದು ಅತ್ತರೆ ಸರಿ; ಮನದಲ್ಲಿ ದುಃಖ ಹುಟ್ಟದೆ ಕಣ್ಣಿಗೆ ನೀರ ತಾರದೆ ಸುಮ್ಮನೆ ಅತ್ತರೆ ಅದರಲೇನಾಗುತ್ತೈತೆ? ಹಾಂಗೆ. ಮಹಾನುಭಾವ ಗುರುಮೂರ್ತಿಗಳಲ್ಲಿ ಶಿವಾನುಭಾವವನು ಬೆಸಗೊಂಬಲ್ಲಿ ತನ್ನ ಪೂರ್ವಾಪರಜ್ಞಾನದ ನೆನಹಿಲ್ಲದೆ ಸುಮ್ಮನೆ ಅಯ್ಯಾ ಅಯ್ಯಾ ಎಂದು ಕೇಳಿ ಏನ ಮಾಡಬೇಕು. ಇದು ಕಾರಣ ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದೆ ಬಾಯಿದೆಱೆಯೆನು–ಎಲೆ ಲಿಂಗವೇ ನಿಮ್ಮ ಶಿವಶರಣರುಗಳಿಗೆ ಜಿಹ್ವೆಯನು ಬಿಚ್ಚುವೆನಲ್ಲದೆ ಉಳಿದ ಜೀವರುಗಳಿಗೆ ಜಿಹ್ವೆಯನು ತೆರೆಯನೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - -

ಅಂಗತವಿಲ್ಲದ–ಸ್ತ್ರೀಯಳಿಲ್ಲದ, ಸಂಗ–ಕ್ರೀಡಾಸುಖವು.

---

೪೫೮

**ಒಡೆದೋಡು ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ : ಕೊಡು ದೇವಾ ಎನ್ನ ಕೈಯಲೊಂದು ಕಱೆಕೆಯನು. 'ಮೃಡದೇವಾ ಶರಣೆಂ'ದು ಭಿಕ್ಷಕ್ಕೆ ಹೋದಡೆ, ಅಲ್ಲಿ 'ನಡೆ ದೇವಾ'ಯೆಂದೆನಿಸು ಕೂಡಲಸಂಗಮದೇವಾ!**

I - - - - - - - - - - - - - - - - - - - - - - - - - - - - - - - - - - - - - - - - - - -

ಒಡೆದ–ಭಗ್ನವಾದ, ಓಡು–ಹುರಿಯುವ ಹಂಚು, ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ–ಎನ್ನ ಮನೆಯೊಳಗೆ ಚಿನ್ನ ಬೆಳ್ಳಿ ತಾಮ್ರ ಹಿತ್ತಾಳಿ ಕಂಚು ತಪೇಲಿ ಚರಿಗೆ ಕೊಡಪಾನ ಮೊದಲಾದವು ಇರುವ ಹಾಂಗೆ ಮಾಡಲ್ಲದೆ ಒಡಕಗಡಿಗೆ ಇಲ್ಲದ ಹಾಂಗೆ ಮಾಡಯ್ಯಾ. ಕೊಡು ದೇವಾ ಎನ್ನ ಕೈಯಲೊಂದು ಕಱೆಕೆಯನು: ಎನ್ನ ಕೈಯಲ್ಲಿ–ಎನ್ನ ಹಸ್ತದಲ್ಲಿ, ಒಂದು ಕಱೆಕೆಯನು–ಒಂದು ಕರಪಾತ್ರೆಯನ್ನು, ಕೊಡುದೇವಾ–ಈಯ್ಯೆ ದೇವಾ. ಮೃಡದೇವಾ ಶರಣೆಂ'ದು ಭಿಕ್ಷಕ್ಕೆ ಹೋದಡೆ : ಮೃಡದೇವಾ–ರಕ್ಷಣ್ಯಕರ್ತನಾದಲೆ ಪರಶಿವಲಿಂಗವೆ, ಶರಣೆಂದು–ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸಿ, ಭಿಕ್ಷಕ್ಕೆ ಹೋದಡೆ–ಜಂಗಮಮೂರ್ತಿಗಳು ಲಿಂಗಾರ್ಪಿತ ಭಿಕ್ಷಕ್ಕೆಂದು ಬಿಜಯಂಗೈದು ಬಂದರೆ, ಅಲ್ಲಿ 'ನಡೆದೇವಾ'ಯೆಂದೆನಿಸು : ಅಲ್ಲಿ–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು

ಬಂದಲ್ಲಿ, ನಡೆದೇವಾಯೆಂದೆನಿಸು–ಇನ್ನೂ ನಮ್ಮ ಮನೆಯಲ್ಲಿ ಪದಾರ್ಥವಾಗಿಲ್ಲ, ಹೆಂಗಸರಿದ್ದರೆ ನೀರಿಗೆ ಹೋಗೈದಾರೆ. ನಿಮಗೆ ನೀಡುವಂಥ ನಾಡಿಗ ದೇಸಾಯಿ ಸೆಟ್ಟಿ ಚೌದರಿ ವ್ರತಶೀಲವಂತರ ಮನೆಗಳು ಮುಂದಕ್ಕೈದಾವೆ ಹೋಗಿರೆಂದು ಹೇಳಿಸುವ ಹಾಂಗೆ ಮಾಡೆಂಬ ದೃಷ್ಟೋಪಮಾನದ ಹಾಂಗೆ.

● ಒಡೆದೋಡು ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ : ಒಡೆದ–ಶಿವತತ್ತ್ವಕ್ಕೆ ವಿಲಕ್ಷಣವಾದ, ಓಡು–ಅಜ್ಞಾನವು, ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ–ಎನ್ನಂತರಂಗದಲ್ಲಿ ಸಮರಸಜ್ಞಾನವಿರುವ ಹಾಂಗೆ ಮಾಡಲ್ಲದೆ ಅಜ್ಞಾನವಿಲ್ಲದಂತೆ ಮಾಡಯ್ಯಾ. ಕೊಡುದೇವಾ ಎನ್ನ ಕೈಯಲೊಂದು ಕಜಿಕೆಯನು : ಎನ್ನ ಕೈಯಲ್ಲಿ–ಎನ್ನ ಸುಚಿತ್ತವೆಂಬ ಹಸ್ತದಲ್ಲಿ, ಒಂದು ಕಜಿಕೆಯನು–ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗವನ್ನು, ಕೊಡುದೇವಾ–ಕರುಣಿಸಿ ಕೊಡುದೇವಾ. ಮೃಡದೇವಾ–"ಮೃಡಾಖ್ಯಂ ರಕ್ಷಣ್ಯಂ"ಮೆಂದು ರಕ್ಷಣ್ಯಕರ್ತನಾದಲೆ ಪರಶಿವಲಿಂಗವೆ, ಶರಣೆಂದು–ಆ ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ಅನಿಮಿಷದೃಷ್ಟಿಯಿಂದ ನಿರೀಕ್ಷಿಸಲು ಆ ಇಷ್ಟಲಿಂಗದ ಚಿತ್ಕಳೆಯೇ ನೇತ್ರವೆಂಬ ಸೂತ್ರವನೊಳಕೊಂಡು ದೃಷ್ಟಿಗ್ರಾಹ್ಯವಾಗಿ ಅದೇ ಮನಸಂಬಂಧವಾಗಿ ಮನವೆಂಬುದೀ ಪವನಸಂಬಂಧಿವಾಗಿ ಪವನವೆಂಬುದೀ ಪ್ರಾಣಸಂಬಂಧವಾಗಿ ಪ್ರಾಣದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡು, ಭಿಕ್ಷಕ್ಕೆ ಹೋದಡೆ–ಆ ಪ್ರಾಣಲಿಂಗವೇ ಷಡೇಂದ್ರಿಯಂಗಳಲ್ಲಿ ಬರಲ್ಪಟ್ಟ ಷಡ್ವಿಧವಿಷಯ ಪದಾರ್ಥಂಗಳನು ಷಡ್ವಿಧಲಿಂಗಕ್ಕೆ ಸಮರ್ಪಿಸಿ ಷಡ್ವಿಧಲಿಂಗಪ್ರಸಾದವನ್ನು ಪಡೆದನುಭವಿಸಲ್ಪಟ್ಟಾತನೆಂದು ಹೇಳಿಸು, ಕೂಡಲಸಂಗಮದೇವಾ!–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - -

ಒಡೆದೋಡು ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ–ಗುರುಭಕ್ತಿಭಿನ್ನವಾದ ಲಿಂಗಜಂಗಮದ ಭಕ್ತಿಗೆ ಓಸರಿಸಿ ಪಲಾಯನವಾಗುವುದು ಎನ್ನಂತರಂಗವೆಂಬ ಗೃಹದಲ್ಲುಂಟಾಗದ ಹಾಂಗೆ ಮಾಡು. ಕೊಡುದೇವಾ ಎನ್ನ ಕೈಯಲೊಂದು ಕಜಿಕೆಯನು–ಎನ್ನ ಸುಚಿತ್ತವೆಂಬ ಹಸ್ತದಲ್ಲಿ ಏಕವಾದ ಇಷ್ಟಲಿಂಗವೆಂಬ ⁽ಪ⁾ತ್ರೆಯನು ಈ ದೇವಾ. "ಮೃಡದೇವಾ ಶರಣೆಂ"ದು ಭಿಕ್ಷಕ್ಕೆ ಹೋದಡೆ–ರಕ್ಷಾಮಣಿಯಾದ ಎಲೆ ಪರಮೇಶ್ವರನೆ, ಓಂ ನಮಶ್ಶಿವಾಯೆಂದು ಭಿಕ್ಷಾಟನಕ್ಕೆಯ್ದಿದರೆ, ಮುಂದಕ್ಕೆ ಕಾಣಬಂದರ್ಥ.

.........................

೧–೧ ಪಾ (ಚ). ಈ ವಚನಕ್ಕೆ ಇನ್ನೊಂದು ಬಗೆಯ ಟೀಕೆ 'ಚ' ಪ್ರತಿಯಲ್ಲಿ ಮಾತ್ರವಿದ್ದು, ೪೯೧ ನೆಯ ವಚನದ ನಂತರ ಬರೆಯಲಾಗಿದ್ದ ಅದು ಕೆಳಗಿನಂತಿದೆ :

ಒಡೆದೋಡು–ನಿಷ್ಠೆಭಗ್ನವಾದ ಭೂತಕಾಯವು. ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ–ಇಷ್ಟಲಿಂಗದ ಸಾವಧಾನಮೂಲಸೂತ್ರವಾದಾಚಾರಂಗವೆಂಬ ಗೃಹದಲ್ಲಿ ⁽ಭೂತ⁾ ಪ್ರಕೃತಿಯಿಲ್ಲದ ಹಾಂಗೆ ಮಾಡಯ್ಯಾ. ಕೊಡುದೇವಾ, ಎನ್ನ ಕೈಯಲೊಂದು ಕಜಿಕೆಯನು–ಎನ್ನ ಸುಚಿತ್ತವೆಂಬ ಹಸ್ತದಲ್ಲಿ ಸರ್ವಾಚಾರವೆಂಬ ಸಂಪತ್ತಿನಾಚರಣೆಗೆ ಪಾತ್ರವಾದಿಷ್ಟಲಿಂಗವೆಂಬ ಕರಿಕೆಯನೀಯಲೆ ದಿವ್ಯಕಾಂತಿಸ್ವರೂಪವಾದ ಗುರುವೆ.

'ಮೃಡದೇವಾ ಶರಣೆಂ'ದು–ಆ ಇಷ್ಟಲಿಂಗದ ಚಿತ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಲು, ಆ ಸುಜ್ಞಾನರಕ್ಷಣಕರ್ತನಾದ ಚಿಲ್ಲಿಂಗಕ್ಕೆ ನಮಸ್ಕಾರವೆಂದು ಮಂತ್ರವನುಚ್ಚರಿಸಿ, ಭಿಕ್ಷಕ್ಕೆ ಹೋದಡೆ ಅಲ್ಲಿ 'ನಡೆ ದೇವಾ' ಎಂದೆನಿಸು ಕೂಡಲಸಂಗಮದೇವಾ–ರೂಪಿನೊಳಗಣ ರುಚಿಪದಾರ್ಥವನಾ ಚಿಲ್ಲಿಂಗಕ್ಕೆ ಸಮರ್ಪಣೆಯ ಮಾಡಲೆಯ್ದಿರೆ ಅವಿರಳಜ್ಞಾನ ಕ್ರೀವಿಡಿದಾಚರಿಸು ದೇವಾ ಎಂದೆನಿಸು.

..........................

೧–೧ ಆಯಾತ (ಚ).

---

೪೫೫

**ಭ'ವಿ'ರಹಿತ ಭಕ್ತನಾದ ಬಳಿಕ ಭಕ್ತಿಭಾಜನದಲ್ಲಿ ಮಾಡಿ ಭವಿಗಿಕ್ಕಲಾಗದಯ್ಯಾ, ಯುಕ್ತಿ ಶೂನ್ಯರಿಗೆ ಮುಂದೆ ಪ್ರಸಾದ ದೂರ, ಮುಕ್ತಿಯಿಲ್ಲ! ಮುಂದೆ ನಾಯ ಬಸುಱಲ್ಲಿ ಬಪ್ಪುದು ತಪ್ಪದು ಪೃಥ್ವಿಯೊಳಗೆ! ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದೆ, ಅನಾಚಾರಿಗಳಿಗೆಲ್ಲಿಹುದೋ?**

I - - - - - - - - - - - - - - - - - - - - - - - - - - - - - - - - - - - - - - - - - - - - -

ಭವಿವಿರಹಿತ ಭಕ್ತನಾದ ಬಳಿಕ : [ಭವಿ ವಿರಹಿತ–] ಭವಿಗಳೊಂದಿಗೆ ತನುವಿನ ಕೊಳುಕೊಡೆ ಮನದ ಕೊಳುಕೊಡೆ ಧನದ ಕೊಳುಕೊಡೆ ಅರ್ಚನಾರ್ಪಣಾಕ್ರಿಯೆಗಳನು ಮಾಡುವಂಥದನು ಬಿಟ್ಟು, ಭಕ್ತನಾದ ಬಳಿಕ–ಜ್ಞಾನೋದಯವಾಗಿ ಗುರುಕಾರುಣ್ಯವ ಹಡೆದು ಲಿಂಗಾಂಗ ಸಂಬಂಧಿಯಾಗಿ ಶಿವಭಕ್ತರೊಂದಿಗೆ ತನುವಿನ ಕೊಳುಕೊಡೆ ಮನದ ಕೊಳುಕೊಡೆ ಅರ್ಚನಾರ್ಪಣ ಕ್ರಿಯೆಗಳನು ಮಾಡಿ ಭಕ್ತನಾದ ಮೇಲೆ, ಭಕ್ತಿಭಾಜನದಲ್ಲಿ ಮಾಡಿ–ತಮ್ಮ ಮನೆಯೊಳಗಣ ಭಾಂಡಭಾಜನದಲ್ಲಿ ಮಾಡಿದಂಥ ಪದಾರ್ಥವನ್ನು, ಭವಿಗಿಕ್ಕಲಾಗದಯ್ಯಾ–ಭೂತದೇಹಿಗಳಾದ ಭವಿಜನಾತ್ಮರಿಗೆ ನೀಡಿ ಸಂತುಷ್ಟಿಬಡಿಸಲಾಗದಯ್ಯಾ. ಯುಕ್ತಿಶೂನ್ಯರಿಗೆ–ಭಕ್ತಿಭಾಜನದಲ್ಲಿ ಮಾಡಿದಂಥ ಪದಾರ್ಥವನ್ನು ಭವಿಜನಾತ್ಮರಿಗಿಕ್ಕಲಾಗದೆ? ಎಂದು ಹೇಳುವಂಥ ಜ್ಞಾನಬಾಹ್ಯರಿಗೆ, ಮುಂದೆ–ದೇಹಾಂತ್ಯಕ್ಕೆ, ಪ್ರಸಾದದೂರ–ಶಿವನಪ್ರಸನ್ನತ್ವಕ್ಕೆ ಎಟ್ಟುಗೊಳವು, ಮುಕ್ತಿಯಿಲ್ಲ!–ಮೋಕ್ಷವಿಲ್ಲವು.

ಮುಂದೆ–ಇನ್ನೊಂದು ಜನ್ಮಕ್ಕೆ, ನಾಯ ಬಸುಱಲ್ಲಿ–ಶುನಿಗರ್ಭದಲ್ಲಿ, ಬಪ್ಪುದು–ಹುಟ್ಟಿಹುಟ್ಟಿ ಬರುವಂಥದು, ತಪ್ಪದು–ವಾರ್ಯಾಗದು. ಪೃಥ್ವಿಯೊಳಗೆ ಜಗತ್ತಿನಲ್ಲಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗಲ್ಲದೆ–ಭಕ್ತಿಭಾಜನದಲ್ಲಿ ಮಾಡಿದಂಥ ಪದಾರ್ಥವನ್ನು ಭವಿಜನಾತ್ಮರುಗಳಿಗೆ ನೀಡಬಾರದೆಂಬಂಥದು ನಿಮ್ಮ ನಿರ್ವಂಚಕ ಸದ್ಭಕ್ತರಿಗಲ್ಲದೆ, ಅನಾಚಾರಿಗಳಿಗೆಲ್ಲಿಹುದೊ?–ಭಕ್ತಿಭಾಜನದಲ್ಲಿ ಮಾಡಿದಂಥ ಪದಾರ್ಥವನ್ನು ಭವಿಗಿಕ್ಕಲಾಗದೆ? ಎಂದು ಹೇಳುವಂಥ ಆಚಾರಭ್ರಷ್ಟರಿಗೆತ್ತಣದೊ? ಇಲ್ಲವು.

II- - - - - - - - - - - - - - - - - - - - - - - - - - - - - - - - - - - - - - - - - - - - -

1–1 ವ (ಚ, ಜ).

...............................

ಭವವಿರಹಿತ ಭಕ್ತನಾದ ಬಳಿಕ–ಅನಂತಭವಿತ್ವಕ್ಕೆ ಅವಕಾಶಸ್ಥಾನವಾದ ಭವಿಜನ್ಮವು ವಿಲಕ್ಷಣವಾಗಿ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾದ ಮೇಲೆ, ಭಕ್ತಿಭಾಜನದಲ್ಲಿ ಮಾಡಿ ಭವಿಗಿಕ್ಕಲಾಗದಯ್ಯಾ–ಶಿವಾದ್ವೈತಭಕ್ತಿಯೆಂಬ ಗಡಿಗೆಯಲ್ಲಿ ೧೮ ಧಾನ್ಯಾದಿಗಳಿಂದ ಶಾಕಪಾಕದ್ರವ್ಯವ ಮಾಡಿ, ಅಂಗದ ಮೇಲೆ ಲಿಂಗವಿಹೀನವಾದ ಭವಿಭಾಜನಾತ್ಮರುಗಳಿಗೆ ನೀಡಲಾಗದಯ್ಯಾ. ಯಕ್ತಿಶೂನ್ಯರಿಗೆ ಮುಂದೆ ಪ್ರಸಾದದೂರ–ಜ್ಞಾನವಿಹೀನರಾದವರಿಗೆ ಪುರಸ್ಸರದಲ್ಲಿ ಪ್ರಸಾದವು ಅಸಮೀಪವಾಗಿರ್ಪುದು, ಮುಕ್ತಿಯಿಲ್ಲ!–ಮೋಕ್ಷವಿಲ್ಲ. ಮುಂದಕ್ಕೆ ಕಾಣಬಂದರ್ಥ.

---

## ಭಕ್ತನ ಪ್ರಸಾದಿಸ್ಥಲ

I - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನ ಪ್ರಸಾದಿ–ಭಕ್ತಸ್ಥಲದೊಳಗಣ ಪ್ರಸಾದಿಸ್ಥಲವ ನಿರೂಪಿಸುತ್ತಿಹರು.

---

೪೬೦

**ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆನ್ನ ತನುಮನಧನವನಲಸದಂತೆ ಮಾಡಯ್ಯಾ, ತನು ದಾಸೋಹಕ್ಕೆ ಉಬ್ಬುವಂತೆ ಮಾಡು, ಮನ ದಾಸೋಹಕ್ಕೆ ಲೀಯವಹಂತೆ ಮಾಡು, ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ ನಿರಂತರ ಆಡಿ ಹಾಡಿ, ನೋಡಿ ಕೂಡಿ, ಭಾವಿಸಿ ಸುಖಿಸಿ, ಪರಿಣಾಮಿಸುವಂತೆ ಮಾಡು ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ–ಲಿಂಗವನ್ನು ತನ್ನತ್ತಭಿಮುಖವ ಮಾಡಿಕೊಂಡು ಆ ಲಿಂಗದೊಡನೆ ಬಿನ್ನೈಸುವಂಥ ಬಿನ್ನಪವು, ನಿಮ್ಮ ಶರಣರ–ನಿಮ್ಮ ಗುರುಲಿಂಗ ಜಂಗಮಮೂರ್ತಿಗಳ, ದಾಸೋಹಕ್ಕೆ–ಭಕ್ತಿದಾಸೋಹಕ್ಕೆ, ಎನ್ನ ತನುಮನಧನವ–ಎನ್ನ ತನುಮನಧನವೆಂಬ ತ್ರಿವಿಧಪದಾರ್ಥವ, ಅಲಸದಂತೆ ಮಾಡಯ್ಯಾ–ಅಲಸಿಕೆ ಆಗದ ಹಾಂಗೆ ಮಾಡಯ್ಯಾ.

ತನು ದಾಸೋಹಕ್ಕೆ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಸ್ಥಾನ ಸದ್ಭಾವವೆಂಬ ಚತುರ್ವಿಧ ಭಕ್ತಿಯ ಮಾಡೋ ನೆವದಿಂದ ತನು ಪದಾರ್ಥವ ಗುರುವಿಂಗೆ ಸಮರ್ಪಣೆಯ ಮಾಡುವುದಕ್ಕೆ, ಉಬ್ಬುವಂತೆ ಮಾಡು–ಒಂದು ಹೊರೆ ಎರಡು ಹೊರೆ ಮೂರು ಹೊರೆ ನಾಲ್ಕು ಹೊರೆ ಉಬ್ಬಿ ಹೆಚ್ಚುವಂತೆ ಮಾಡು. ಮನ ದಾಸೋಹಕ್ಕೆ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾ ಧಿಸುವ ನೆವದಿಂದ ಮನ ಪದಾರ್ಥವ ಲಿಂಗಕ್ಕೆ ಸಮರ್ಪಣೆಯ ಮಾಡುವಲ್ಲಿ, ಲೀಯವಹಂತೆ ಮಾಡು–ಆ ಲಿಂಗದಲ್ಲಿ ಮನ ತರಹರ ವಾಗುವ ಹಾಂಗೆ ಮಾಡು.

ಧನ–ಪ್ರಾಣಾದಿ ದ್ರವ್ಯಪದಾರ್ಥವು, ದಾಸೋಹಕ್ಕೆ–ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಅನ್ನೋದಕ್ಕೆ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು

ಭಕ್ತಿಯ ಮಾಡೋ ನೆವದಿಂದ ಪ್ರಾಣದ್ರವ್ಯ ಪದಾರ್ಥವ ಜಂಗಮಕ್ಕೆ ಸಮರ್ಪಣೆಯ ಮಾಡೋ ನೆವದಿಂದ, ಸವೆದು–ಸಮರ್ಪಣೆಯ ಮಾಡಿ, ನಿಮ್ಮ ಶರಣರ–ನಿಮ್ಮ ಗುರುಲಿಂಗಜಂಗಮಮೂರ್ತಿಗಳ, ಪ್ರಸಾದದಲ್ಲಿ–ಚಿತ್ಕಲಾಪ್ರಸಾದ ಸೇವನೆಯಲ್ಲಿ, ನಿರಂತರ–ಎಲ್ಲಾಗಳು, ಅಡಿ–ಸೂಚನೆಬಿನ್ನಹ ಮಾಡುವುದಕ್ಕೊಂದು ವೇಳೆ ಗಟ್ಟಿಬಿನ್ನಹ ಮಾಡುವುದಕ್ಕೊಂದು ವೇಳೆ ಕರಕೊಂಡು ಬರುವುದಕ್ಕೊಂದು ವೇಳೆ ಅಗ್ಗಣಿಯ ಕೊಡುವುದಕ್ಕೊಂದು ವೇಳೆ ಹಾವಿಗೆಯ ಕೊಡುವುದಕ್ಕೊಂದು ವೇಳೆ ಹಸ್ತಲಾಘವ ಕೊಡುವುದಕ್ಕೊಂದು ವೇಳೆ ಪದಾರ್ಥವ ಎಡೆ ಮಾಡುವುದಕ್ಕೊಂದು ವೇಳೆ, ಹೀಂಗೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆದಾಡಿ, ಹಾಡಿ– "ಪ್ರಸಾದಂ ಗಿರಿಜಾದೇವಿ ಸಿದ್ಧಕಿನ್ನರಗುಹ್ಯಕ ವಿಷ್ಣುಪ್ರಮುಖದೇವಾನಾಂ ಅಗ್ರಗಣ್ಯಮಗೋಚರಂ" ಎಂದು ಇರುವೆಗೆ ರುದ್ರಲೋಕವ ಕೊಟ್ಟಂಥದು ಬಿಬ್ಬಿಬಾಚಯ್ಯಗಳು ಗೊಬ್ಬೂರ ಸುಟ್ಟಂಥದು ಮರುಳಶಂಕರದೇವರು ಹನ್ನೆರಡುವರುಷ ಪರಿಯಂತರ ಪ್ರಸಾದ ಹೊಂಡದಲ್ಲಿ ಅಡಗಿರ್ದು ನಿತ್ಯವಾದ ನಿರ್ಮೋಕ್ಷವ ಕರುಣಿಸಿ ಕೊಟ್ಟಂಥದೆ ಈ ಪ್ರಸಾದವೆಂದು ಪ್ರಸಾದಮಹಿಮೆಯ ಸ್ತೋತ್ರವ ಮಾಡಿ, ನೋಡಿ–ನಿರೀಕ್ಷಣೆಯ ಮಾಡಿ, ಕೂಡಿ–ಆ ಪ್ರಸಾದಸೇವನೆಯಲ್ಲಿ ಬೆರೆದು, ಭಾವಿಸಿ–ನೆನೆದು, ಪರಿಣಾಮಿಸುವಂತೆ ಮಾಡು–ಸಂತೋಷಿಸುವ ಹಾಂಗೆ ಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೬೧

**ಹಾರುವ ಹಾರುವನಪ್ಪೆ ನಾನು ಸದ್ಭಕ್ತರೆನ್ನವರೆನ್ನವರೆಂದು, ಹಾರುವ ಹಾರುವನಪ್ಪೆ ನಾನು ಶರಣರೆನ್ನವರೆನ್ನವರೆಂದು, ಕೂಡಲಸಂಗನ ಶರಣರು ತಮ್ಮೊಕ್ಕುದನಿಕ್ಕಿ ಸಲಹುವರಾಗಿ.**

I - - - - - - - - - - - - - - - - - - - - - - - - - - - - - - - - - - - - - - - -

ಹಾರುವ ಹಾರುವನಪ್ಪೆ ನಾನು–ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳು ಏಳುನೂರೆಪ್ಪತ್ತುಮರಣಂಗಳು ಅರುವತ್ತು ಮೂರು ಪುರಾತರೊಳಗೆ ಹಾರುವ ಹಾರುವನೆಂದು ಆಡಿಸ್ಯಾಡುತ್ತಿದ್ದಲ್ಲಿ, ನಾನು–ಸಂಗನಬಸವೇಶ್ವರನು ಎಂತಪ್ಪ ಹಾರುವನೆಂದರೆ, ಸದ್ಭಕ್ತರೆನ್ನವರೆನ್ನವರೆಂದು : ಸದ್ಭಕ್ತರು. "ಲಿಂಗಭಕ್ತಾಶ್ಚ ಜಂಗಮಾಃ" ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳನು, ಎನ್ನವರೆನ್ನವರೆಂದು–ಎನ್ನ ಒಡೆಯರು ಎನ್ನ ಕರ್ತರು ಎನ್ನ ಪ್ರಾಣದೊಲ್ಲಭರು ಆವಾಗ ಭಿಕ್ಷಕ್ಕೆಂದು ಬಿಜಯಂಗೈದು ಬಂದಾರೋ ಆವಾಗವರ ಪಾದಾರ್ಚನೆಯ ಮಾಡೇನೋ ಆವಾಗವರ ಪಾದೋದಕಪ್ರಸಾದವ ಕರುಣಿಸಿಕೊಟ್ಟಾರೋ ಎಂದು, ಹಾರು– "ಹಾರು ಇಚ್ಛಾ" ಎಂಬ ಧಾತುವಿನಿಂದ ಇಚ್ಛೈಸಿಕೊಂಡಿರ್ಪ ನಾನು. ಶರಣರು–ಕಾಯಕದ ಶೀಲವಂತರು, ಎನ್ನವರೆನ್ನವರೆಂದು–ಎನ್ನ ಒಡೆಯರು ಎನ್ನ ಕರ್ತರು ಎನ್ನ ಪ್ರಾಣದೊಲ್ಲಭರು ಆವಾಗ ಕಾಯಕಕ್ಕೆಂದು ಬಿಜಯಂಗೈದು ಬಂದಾರೋ ಆವಾಗವರ ಕಾಯಕವನ್ನು ಕೊಟ್ಟು ಭಕ್ತಿಯ ಮಾಡೇನೋ ಎಂದು "ಹಾರು ಇಚ್ಛ" ಎಂಬ ಧಾತುವಿನಿಂದ ಇಚ್ಛೈಸಿಕೊಂಡಿರ್ಪ ನಾನು. ಕೂಡಲಸಂಗನ ಶರಣರು–ಜಂಗಮಮೂರ್ತಿಗಳು. ತಮ್ಮೊಕ್ಕುದನಿಕಿ–ತಮ್ಮ ಒಕ್ಕಮಿಕ್ಕ ಪ್ರಸಾದವನ್ನು ಕರುಣಿಕೊಟ್ಟು, ಸಲಹುವರಾಗಿ–ರಕ್ಷಣ್ಯವ ಮಾಡುವರಾಗಿ.

..........................

೧+ ಹಾರುವ ಹಾರುವನಪ್ಪೆ ನಾನು-ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಮೂರ್ತಿಗಳು ಏಳುನೂರೆಪ್ಪತ್ತಮರಗಣಂಗಳು ಅರುವತ್ತುಮೂರು ಪುರಾತರೊಳಗೆ ಹಾರುವ ಹಾರುವನೆಂದು ಆಡಿಸ್ಯಾಡುತಿದ್ದಲ್ಲಿ, ನಾನು-ಸಂಗನ ಬಸವೇಶ್ವರನು ಎಂತಪ್ಪ ಹಾರುವನೆಂದರೆ (ಕ, ಗ).

---

## ೪೬೨

**ಒಕ್ಕುದ ಮಿಕ್ಕುದನುಂಡು ಕಿವಿವಿಡಿದಾಡುವೆ : ಶರಣರ ಮನೆಯ ಲೆಂಗಿಯ ಡಿಂಗರಿಗ ನಾನು, ಕೂಡಲಸಂಗನ ಶರಣರ ಮನೆಯ ಭಕ್ತಿಯ ಮರುಳ ನಾನು.**

I - - - - - - - - - - - - - - - - - - - - - - - - - - - - - - - - - - - - - - - - - -

ಒಕ್ಕುದ ಮಿಕ್ಕುದನುಂಡು : ಒಕ್ಕುದ-ಅವರು ಸಲಿಸುವಾಗ ಹರಿವಾಣದ ಸುತ್ತಮುತ್ತ ಹೊರಸೂಸಿ ಚೆಲ್ಲಿದಂಥ ಒಕ್ಕಪ್ರಸಾದವು, ಮಿಕ್ಕುದ-ಅವರು ಸಲಿಸಲಾರದೆ ಭಾಂಡಭಾಜನದಲ್ಲಿ ಉಳಿದಂಥ ಮಿಕ್ಕಪ್ರಸಾದವನ್ನು, ಉಂಡು-ಅನುಭವಿಸಿ, ಕಿವಿವಿಡಿದಾಡುವೆ-ಬಲದ ಹಸ್ತದಿಂದ ಎಡದ ಕಿವಿಯ ಹಿಡಿದುಕೊಂಡು ಎಡದ ಹಸ್ತದಿಂದ ಬಲದ ಕಿವಿಯ ಹಿಡಿದುಕೊಂಡು ಎಡಕ್ಕೆ ಬಲಕ್ಕೆ ಹಿಂದಕ್ಕೆ ಮುಂದಕ್ಕೆ ನರ್ತಿಸಿನರ್ತಿಸಿ ಕೋಡಂಗಿಯಾಟನಾಡುವೆ. ಶರಣರ ಮನೆಯ-ನಿರ್ವಂಚಕ ಸದ್ಭಕ್ತರ ಭಕ್ತಿಮಂದಿರದಲ್ಲಿರುವಂಥ, ಲೆಂಗಿಯ-ಗುಲಾಮನ, ಡಿಂಗರಿಗೆ ನಾನು-ಅವನ ಕೈಕೆಳಗೆ ಹೇಳಿದ ಹಾಂಗೆ ಸೇವಾಸತ್ಕಾರಂಗಳ ಮಾಡಿಕೊಂಡಿರುವಂಥ ಭೃತ್ಯ ನಾನು. ಕೂಡಲಸಂಗನಶರಣರ-ಶಿವಶರಣರ, ಮನೆಯ-ಮಂದಿರದ, ಭಕ್ತಿಯ-ಶಿವಾದ್ವೈತಭಕ್ತಿಯ, ಮರುಳ ನಾನು-ಭಕ್ತಿವೇಷಧಾರಿಯಾನು.

---

## ೪೬೩

**ಗುರುಲಿಂಗಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು. ಆ ಭಾವವೇ ಮಹಾಪ್ರಸಾದವಾಗಿ ಎನಗೆ ಬೇಱೆ ಪ್ರಸಾದವೆಂಬುದಿಲ್ಲ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - -

ಗುರುಲಿಂಗಜಂಗಮದಿಂದ-ಸದ್ರೂಪವಾದ ಗುರು ಚಿದ್ರೂಪವಾದ ಲಿಂಗ ಆನಂದಸ್ವರೂಪವಾದ ಜಂಗಮದಿಂದ, ಪಾದೋದಕ-ಗುರುಪಾದೋದಕ ಲಿಂಗಪಾದೋದಕ ಜಂಗಮಪಾದೋದಕ, ಪ್ರಸಾದವಾಯಿತ್ತು-ಗುರುಪ್ರಸಾದ ಲಿಂಗಪ್ರಸಾದ ಜಂಗಮಪ್ರಸಾದವಾಯಿತ್ತು. ಆ ಭಾವವೇ-ಹೀಂಗೆಂದರಿವಂಥ ಶಿವಭಾವವೇ, ಮಹಾಪ್ರಸಾದವಾಗಿ-ಮಹಾಶಿವಪ್ರಸಾದವಾಗಿ, ಎನಗೆ-ನನಗೆ, ಬೇಱೆ-ಪೃಥಕ್ಕಾಗಿ, ಪ್ರಸಾದವೆಂಬುದಿಲ್ಲ-ಅನ್ಯದೈವದ ಭಜನೆಯ ಮಾಡಬೇಕು ಅನ್ಯದೈವದ ಪ್ರಸಾದಸೇವನೆಯ ಮಾಡಬೇಕೆಂಬಂಥದುಂಟಾಗಿಲ್ಲವು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - -

ಗುರುಲಿಂಗಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು-ಸದ್ರೂಪವಾದ ಗುರು ಚಿದ್ರೂಪವಾದ ಲಿಂಗ ಆನಂದರೂಪವಾದ ಜಂಗಮದಿಂದ ತೀರ್ಥಪ್ರಸಾದವಾಯಿತ್ತು. ಆ ಭಾವವೇ ಮಹಾಪ್ರಸಾದವಾಗಿ ಎನಗೆ ಬೇಜ಼ೆ ಪ್ರಸಾದವೆಂಬುದಿಲ್ಲ-ಹೀಂಗೆಂದರಿದಂಥ ಭಾವನೆಯೇ ಮಹಾಜ್ಞಾನ ಪ್ರಸಾದವಾಗಿ ಶರಣನಿಗೆ ಭಿನ್ನಶೇಷವೆಂಬುದಿಲ್ಲ.

---

೪೬೪

**ಅಹುದೆಂದಱಿಯೆ, ಅಗದೆಂದಱಿಯೆ, ಆದಿಪಥವ ತೋರಲರಿಯೆ, ಸತ್ಯವನಱಿಯೆ, ಸಹಜವನಱಿಯೆ, ಸಜ್ಜನಶುದ್ಧವ ಮುನ್ನವೆ ಅಱಿಯೆ! ನಿಮ್ಮ ಶರಣರ ಒಕ್ಕುದನುಂಡಿಪ್ಪೆನು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಅಹುದೆಂದಱಿಯೆ-ಚೆನ್ನಬಸವೇಶ್ವರನು ಬಸವಣ್ಣಾ ನಮಗೆ ಉಪದೇಶವಾಗೈತೋ ಇಲ್ಲವೋ ಎಂದು ಕೇಳಿದಲ್ಲಿ ನೀವು ಬಿಜ್ಜಳಾಂಕನ ಸಭೆಯಲ್ಲಿ ಅಕ್ಕ ನಾಮಗಮ್ಮನವರ ಗರ್ಭದಲ್ಲಿ ಇರಲಿಕ್ಕೆ ಎಡದ ಹಸ್ತವನ್ನು ಕುಕ್ಷಿಯ ಮೇಲೆ ಮಡಗಿದಂಥದ ಕ್ರಿಯಾದೀಕ್ಷೆಯಾಗಿ ಬಲದ ಹಸ್ತವನ್ನು ಮಸ್ತಕದ ಮೇಲೆ ಮಡಗಿದಂಥದೇ ವೇಧಾದೀಕ್ಷೆಯಾಗಿ ಕರ್ಣದಲ್ಲಿ ಮಾತಾಡಿಸಿದಂಥದೆ ಮಂತ್ರದೀಕ್ಷೆಯಾಗಿ ಹೀಂಗೆ ಮೂರೇಳು ಇಪ್ಪತ್ತೊಂದು ದೀಕ್ಷೆ ಆಗೈತೆಂದು ಹೇಳಿದಲ್ಲಿ ಹಾಂಗೆ ನಾಲ್ವೊಪ್ಪತ್ತು ಮರೆಯ ಬಿಟ್ಟು, ಬಸವಣ್ಣ ನಮ್ಮ ಲಿಂಗವು ಪಂಚಸೂತ್ರಪ್ರಮಾಣವಾಗೈತೋ ಇಲ್ಲವೋ ನೋಡೆಂದು ಕೈಯಲ್ಲಿ ಕೊಟ್ಟರೆ ನಿಮ್ಮ ಲಿಂಗವು ಪಂಚಸೂತ್ರಪ್ರಮಾಣವಾಗೈತೆ ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅಱಿಯೆ-ತಿಳಿಯೆನು. ಸಹಜವನಱಿಯೆ-ಕರಣಂಗಳಲ್ಲಿ ವೈರಾಗ್ಯ ಸಂಬಂಧವ ಮಾಡಿಕೊಂಡು ವೈರಾಗ್ಯಮೂರ್ತಿಗಳಾಗಿ ಆಚರಿಸು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅಱಿಯೆ-ತಿಳಿಯೆನು. ಸಜ್ಜನಶುದ್ಧವ-ಪಂಚಮಹಾಪಾತಕಂಗಳ ಬಿಟ್ಟು ಪಂಚಾಚಾರವಿಡಿದಾಚರಿಸು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಮನ್ನವೆ ಅಱಿಯೆ-ಮೊದಲೇ ತಿಳಿಯೆನು. ನಿಮ್ಮ ಶರಣರ-ನಿಮ್ಮ ಜಂಗಮಮೂರ್ತಿಗಳ, ಒಕ್ಕುದನುಂಡಿಪ್ಪೆನು-ಅವರೊಕ್ಕಮಿಕ್ಕಪ್ರಸಾದವನ್ನು ಪಡೆದನುಭವಿಸಿ ಅವರು ಹೇಳಿದ ಹಾಂಗೆ ಭಕ್ತಿಯ ಮಾಡಿಕೊಂಡಿಪ್ಪೆನಲ್ಲದೆ, ನಿಮ್ಮ ಲಿಂಗವು ಪಂಚಸೂತ್ರಪ್ರಮಾಣವಾಗೈತೆ ನಿಮ್ಮ ಲಿಂಗವು ಪಂಚಸೂತ್ರ ಪ್ರಮಾಣವಾಗಿಲ್ಲ ಚೆನ್ನಬಸವೇಶ್ವನೇ ಎಂದು ಬೋಧಿಸುವಂಥದನ್ನು, ಅಱಿಯೆ-ತಿಳಿಯೆನು ಎಂಬ ದೃಷ್ಟೋಪಮಾನದ ಹಾಂಗೆ,

ಅಹುದೆಂದಱಿಯೆ-ಒಂದು ವಸ್ತುವೆ ಗುರುಲಿಂಗಜಂಗಮವಾಗಿಪ್ಪುದೆಲೆ ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅಱಿಯೆ-ತಿಳಿಯೆನು. ಆಗದೆಂದಱಿಯೆ-ಒಂದು ವಸ್ತುವೆ ಗುರುಲಿಂಗಜಂಗಮವಾಗಿ ಬಂದಿಲ್ಲ ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅಱಿಯೆ-ತಿಳಿಯೆನು. ಆದಿಪಥವ ತೋಱಲಱಿಯೆ-ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯನ್ನು ಮಾಡು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅಱಿಯೆ-ತಿಳಿಯೆನು.

ಸತ್ಯವನರಿಯೆ-ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯನ್ನು ಮಾಡು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅರಿಯೆ-ತಿಳಿಯೆನು. ಸಹಜವನರಿಯೆ-ಪ್ರಾಣಜ್ಞಾನದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯನ್ನು ಮಾಡು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅರಿಯೆ-ತಿಳಿಯೆನು. ಸಜ್ಜನಶುದ್ಧವ ಮನ್ನವೆ ಅರಿಯೆ-ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡು ಚೆನ್ನಬಸವೇಶ್ವರನೇ ಎಂದು ಬೋಧಿಸವಂಥದನ್ನು, ಅರಿಯೆ-ತಿಳಿಯೆನು. ನಿಮ್ಮ ಶರಣರ ಗುರುಲಿಂಗಜಂಗಮಮೂರ್ತಿಗಳ, ಒಕ್ಕುದನುಂಡಿಪ್ಪೆನು-ಅವರೊಕ್ಕಮಿಕ್ಕಪ್ರಸಾದವನ್ನು ಪಡೆದನುಭವಿಸಿ ಅವರು ಹೇಳಿದ ಹಾಂಗೆ ಭಕ್ತಿಯ ಮಾಡಿಕೊಂಡಿಪ್ಪೆನಲ್ಲದೆ ಒಂದು ವಸ್ತುವೇ ಗುರುಲಿಂಗಜಂಗಮವಾಗಿ ಬಂದಿಪ್ಪುದೆಂದು ಒಂದು ವಸ್ತುವೇ ಗುರುಲಿಂಗಜಂಗಮವಾಗಿ ಬಂದಿಲ್ಲವೆಂದು ಬೋಧಿಸುವಂಥದನ್ನು, ಅರಿಯೆ-ತಿಳಿಯೆನು ಎಲೆ ಚೆನ್ನಬಸವೇಶ್ವನೇ ಎಂಬುದರ್ಥ.

ಅಹುದೆಂದರಿಯೆ-ಮಹಾಲಿಂಗವೆ ಗುರುವಿನ ದೀಕ್ಷಾತ್ರಯಂಗಳಿಂದ ಇಷ್ಟಪ್ರಾಣಭಾವವೆಂಬ ತ್ರಿವಿಧಲಿಂಗವಾಗಿ ಉದಯವಾಗಿ ಬಂದಿರ್ಪುದು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅರಿಯೆ-ತಿಳಿಯೆನು. ಆಗದೆಂದರಿಯೆ-ಮಹಾಲಿಂಗವೆ ಗುರುವಿನ ದೀಕ್ಷಾತ್ರಯಂಗಳಿಂದ ಇಷ್ಟ ಪ್ರಾಣಭಾವವೆಂಬ ತ್ರಿವಿಧಲಿಂಗವಾಗಿ ಉದಯವಾಗಿ ಬಂದಿಲ್ಲ ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು. ಅರಿಯೆ-ತಿಳಿಯೆನು. ಆದಿಪಥವ ತೋರಿಲರಿಯೆ-ತನುವಿನಲ್ಲಿ ಇಷ್ಟಲಿಂಗಸಂಬಂಧವ ಮಾಡಿಕೊಂಡು ಆ ಇಷ್ಟಲಿಂಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅರಿಯೆ-ತಿಳಿಯೆನು. ಸತ್ಯವನರಿಯೆ-ಮನದಲ್ಲಿ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಆ ಪ್ರಾಣಲಿಂಗಕ್ಕೆ ಮಂತ್ರಜ್ಞಾನ ಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅರಿಯೆ-ತಿಳಿಯೆನು. ಸಹಜವಬನರಿಯೆ-ಆತ್ಮಾಂಗದಲ್ಲಿ ಭಾವಲಿಂಗಸಂಬಂಧವ ಮಾಡಿಕೊಂಡು ಆ ಭಾವಲಿಂಗಕ್ಕೆ ವನೋರ್ಲಯ ನಿರಂಜನ ಪೂಜಾಕ್ರಿಯೆಗಳಿಂದಾರಾಧಿಸು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಅ?ಯೆ-ತಿಳಿಯೆನು. ಸಜ್ಜನಶುದ್ಧವ ಮುನ್ನವೆ ಅರಿಯೆ-ಅಂಗಪ್ರಾಣಾತ್ಮಂಗದಲ್ಲಿ ಇಷ್ಟಪ್ರಾಣಭಾವಲಿಂಗಸಂಬಂಧವ ಮಾಡಿಕೊಂಡು ಕ್ರಿಯಾಜ್ಞಾನ ಭಾವ ವಿಡಿದಾಚರಿಸು ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು, ಮುನ್ನವೆ ಅರಿಯೆ-ಮೊದಲೇ ತಿಳಿಯೆನು.

ನಿಮ್ಮ ಶರಣರ-ನಿಮ್ಮ ಅಂದರೆ ಗುರುಮೂರ್ತಿಗಳು, ಶರಣರೆಂದರೆ ಆ ಗುರುವಿನ ದೀಕ್ಷಾತ್ರಯಂಗಳಿಂದುದಯವಾದ ಇಷ್ಟಪ್ರಾಣಭಾವಲಿಂಗಗಳ, ಒಕ್ಕುದನುಂಡಿಪ್ಪೆನು-ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪುರುಚಿತೃಪ್ತಿಗಳನ್ನು ಇಷ್ಟಪ್ರಾಣಭಾವಲಿಂಗಂಗಳಿಗೆ ಸಮರ್ಪಿಸಿ ಆ ತ್ರಿವಿಧಲಿಂಗದ ಮುಖದಿಂದುಃಖಮಯವಾಗಿ ಬರಲ್ಪಟ್ಟ ಶುದ್ಧಶಿದ್ಧಪ್ರಸಿದ್ಧಪ್ರಸಾದವನ್ನು ಪಡೆದನುಭವಿಸಿ ಅವರು ಹೇಳಿದ ಹಾಂಗೆ ಭಕ್ತಿಯ ಮಾಡಿಕೊಂಡಿಪ್ಪೆನಲ್ಲದೆ ಆ ಮಹಾಲಿಂಗವು ಇಷ್ಟಪ್ರಾಣಭಾವಲಿಂಗವಾಗಿ ಬಂದಿಪ್ಪುದು, ಆ ಮಹಾಲಿಂಗವೇ ಇಷ್ಟಪ್ರಾಣಭಾವಲಿಂಗವಾಗಿ ಬಂದಿಲ್ಲ ಚೆನ್ನಬಸವೇಶ್ವರನೇ ಎಂದು ಬೋಧಿಸುವಂಥದನ್ನು. ಅರಿಯೆ-ತಿಳಿಯೆನು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ಭಾವಾಚಾರ (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - - - -

ಅಹುದೆಂದಱಿಯೆ-ನಾ ವಸ್ತುಸ್ವರೂಪವೆಂದು ತಿಳಿಯೆ, ಆಗದೆಂದಱಿಯೆ-ನಾ ವಸ್ತುಸ್ವರೂಪವಲ್ಲವೆಂದು ತಿಳಿಯೆ, ಆದಿಪಥವ ತೋಱಲಱಿಯೆ-ಮೋಕ್ಷಮಾರ್ಗವನರುಹಿಕೊಡಲು ತಿಳಿಯೆ, ಅದಲ್ಲದೆ ಆಗಮೋಕ್ತವಾದ ಕ್ರೀಯನಹುದೆಂದರಿಯೆ, ಆಗಮೋಕ್ತವಾದ ಕ್ರೀಯನಲ್ಲವೆಂದರಿಯೆ ಮತ್ತಂ ಮೋಕ್ಷವಾದೀತೆಂದರಿಯೆ ಮೋಕ್ಷವಾಗದೆಂದಱಿಯೆ ಮೊದಲಾದ ಇಷ್ಟಮಹಾಲಿಂಗದ ಮಾರ್ಗವನರುಹಿಸಿಕೊಡಲರಿಯೆ; ಸತ್ಯವನಱಿಯೆ-ಪಾರಮಾರ್ಥವಾದಾಚರಣೆಯನರಿಯೆ, ಸಹಜವಱಿಯೆ-ಯಾಥಾರ್ಥವಾದಾಚರಣೆಯನರಿಯೆ, ಸಜ್ಜನಶುದ್ಧವ ಮುನ್ನವೆ ಅಱಿಯೆ-ಸತ್ಪುರುಷಸಖತ್ವದ ಪವಿತ್ರವನು ಮೊದಲರಿಯೆ, ನಿಮ್ಮ ಶರಣರೊಕ್ಕುದನುಂಡಿಪ್ಪೆನು ಕೂಡಲಸಂಗಮದೇವಾ-ನಿಮ್ಮ ಸಂಬಂಧವಹ ಗುರುಲಿಂಗಜಂಗಮ ಒಕ್ಕಮಿಕ್ಕಪ್ರಸಾದ ವನನುಭವಿಸಿರ್ಪೆನೆಲೆ ಪರಶಿವಲಿಂಗವೆ.

---

೪೬೫

**ಒಂದುವನಱಿಯದ ಸಂದೇಹಿ ನಾನಯ್ಯಾ; ನಂಬಿಗೆಯಿಲ್ಲದ ಡಂಬಕ ನಾನಯ್ಯಾ; ನಿಮ್ಮ ನಂಬಿದ ಶರಣರ ಡಿಂಗರಿಗ ನಾನಯ್ಯಾ, ಕೂಡಲಸಂಗಮದೇವಾ.**

I- - - - - - - - - - - - - - - - - - - - - - - - - - - - - - - - - - - - - - - - - - - - - - - -

ಒಂದುವನಱಿಯದ-ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹದೊಳಗೊಂದನ್ನು, ಅಱಿಯದ-ತಿಳಿಯದ, ಸಂದೇಹಿ ನಾನು-ಮನೋಸಂಕಲ್ಪವುಳ್ಳಾತ ನಾನಯ್ಯಾ. ನಂಬಿಗೆಯಿಲ್ಲದ-ಒಂದು ವಸ್ತುವೇ ಗುರುಲಿಂಗಜಂಗಮವಾಗಿ ಬಂದಿಪ್ಪುದೆಂಬಂಥ ವಿಶ್ವಾಸವಿಲ್ಲದ, ಡಂಬಕ ನಾನಯ್ಯಾ-ಹಿರೇತನದ ಬೂಟಕತ್ವವುಳ್ಳಾತ ನಾನಯ್ಯಾ, ನಿಮ್ಮ-ಸ್ವಾಮಿಗಳ, ನಂಬಿದ-ವಿಶ್ವಾಸಿಸಿದ, ಶರಣರ-ಶಿವಶರಣರ, ಡಿಂಗರಿಗ ನಾನಯ್ಯಾ-ಅವರ ಭಕ್ತಿಗೃಹದಲ್ಲಿ ಸೇವಕವೃತ್ತಿಯ ಮಾಡಿಕೊಂಡಿರುವಂಥ ಭೃತ್ಯ ನಾನಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - - - - - -

ಒಂದುವನಱಿಯುದ ಸಂದೇಹಿ ನಾನಯ್ಯಾ-ಸರ್ವಾಚಾರಸಂಪತ್ತಿನಾಚರಣೆಯೊಳಗೊಂದಾಚರಣೆಯನು ತಿಳಿಯದ ಅನುಮಾನವುಳ್ಳ ಜೀವನು ನಾನಯ್ಯಾ.

---

## ೪೬೬

**ಆವನಾದಡೇನು ಶ್ರೀಮಹಾದೇವನ ನೆನೆವರ ಬಾಯ ತಂಬುಲವ ಮೆಲುವೆ, ಬೀಳುಡುಗೆಯ ಹೊದೆವೆ, ಪಾದರಕ್ಷೆಯ ಕಾಯ್ದು ಬದುಕುವೆ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - -

ಆವನಾದಡೇನು-ನೂರಾವೊಂದು ಕುಲ ಹದಿನೆಂಟು ಜಾತಿಯೊಳಗೆ ಯಾವ ಜಾತಿಯಲ್ಲಿ ಹುಟ್ಟಿದವನಾದಡೇನು, ಶ್ರೀಮಹಾದೇವನ-ಗುರುಕಾರುಣ್ಯವ ಹಡೆದು ಲಿಂಗಾಂಗ ಸಂಬಂಧಿಗಳಾಗಿ ಆಚರಿಸುವಂಥ ಶಿವಶರಣರುಗಳೆಂಬುದರ್ಥ. ಶ್ರೀಮಹಾದೇವನ-ಎಲ್ಲ ದೇವರಿಗೊಲ್ಲಭನಾದ ಪರಶಿವಲಿಂಗವನ್ನು, ನೆನೆವರ-ಲಿಂಗಧ್ಯಾನಲಿಂಗಸ್ಮರಣೆಯ ಮಾಡುವಂಥವರ, ಬಾಯತಂಬುಲವ ಮೆಲುವೆ-ಅವರ ರಸನೆಯಲ್ಲಿ ಮೆದ್ದು ಸುಪಕ್ವವಾದ ತಂಬುಲಪ್ರಸಾದವನ್ನು ಕೈಕೊಂಡನುಭವಿಸುವೆನು. ಬೀಳುಡಿಗೆಯ ಹೊದೆವೆ-ಅವರುಟ್ಟು ಬಿಟ್ಟಂಥ ಬೀಳುಡಿಗೆಯನ್ನು ಆಚ್ಛಾದಿಸಿಕೊಂಬುವೆ. ಪಾದರಕ್ಷೆಯ-ಅವರು ಒತ್ತಿ ಮೆಟ್ಟಿ ಜೋಗೈದು ಜಗ್ಗುದುಳಿವ ಚರಣರಕ್ಷೆಯನು, ಕಾಯ್ದು-ಎಲ್ಲಾದರೂ ಹೋದಾವಲಾಯೆಂದು ಕಾಯ್ದು ಉದ್ದಿ ಒರೆಸಿ ಜೋಪಾನವ ಮಾಡಿಕೊಂಡಿರ್ದು, ಬದುಕುವೆ-ಕೃತಾರ್ಥನಾಗುವೆ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - -

ಆವನಾದಡೇನು ಶ್ರೀಮಹಾದೇವನ ನೆನೆವನ ಬಾಯತಂಬುಲವ ಮೆಲುವೆ-[೧]ಅಂಬಷ್ಟಾದಿ[೧] ಕುಲಾಲಾಂತ್ಯಮಾದ ೧೮ ಜಾತಿಯೊಳಗಾವನಾದರೇನು ಐಶ್ವರ್ಯೋಪಲಕ್ಷಿತವಾದ ಪೂಜ್ಯವಾದ ದಿವ್ಯಕಾಂತಿಮೂರ್ತಿಯನು ಸ್ಮರಿಸುವನ ಜಿಹ್ವೆಯ ತಾಂಬೂಲವನು ಸ್ವೀಕರಿಸುವೆ. ಮುಂದಕ್ಕೆ ಕಾಣಬಂದರ್ಥ.

..........................

೧-೧ ಅಂಬಾದಿಷ್ಟಾಗಿ (ಜ).

---

## ೪೬೭

**ಬಿಡದೆ ಬಾಗಿಲ ಎಂಜಲನು ಕಾಯ್ದುಕೊಂಡಿರ್ಪೆನಯ್ಯಾ, ಕಿಂಕರನು. ಕಿಂಕರರ ಮನೆಯಲ್ಲಿ ಕಿಂಕಲವನು ಆನು ಹಾರಿಕೊಂಡಿಪ್ಪೆನಯ್ಯಾ ನಮ್ಮ ಕೂಡಲಸಂಗನಶರಣರ ಒಕ್ಕುದಮಿಕ್ಕುದನುಂಬ ಕಿಂಕರರ ಕಿಂಕರ ನಾನಯ್ಯಾ**

I - - - - - - - - - - - - - - - - - - - - - - - - - - - - - - - - - - - - - - - - -

ಬಿಡದೆ-ಎಡೆಬಿಡದೆ, ಬಾಗಿಲ-ಭಕ್ತಿದ್ವಾರದ ಕಡೆಬಾಗಿಲವ, ಎಂಜಲ-ಅವರೊಕ್ಕುಮಿಕ್ಕಂಥ ಎಂಜಲ ಪ್ರಸಾದವನ್ನು, ಕಾಯ್ದುಕೊಂಡಿರ್ಪೆನಯ್ಯಾ-ಆವಾಗ ಕರುಣಿಸಿಕೊಟ್ಟಾರೋ ಎಂದು ಇಚ್ಛೈಸಿಕೊಂಡಿರುವೆನು. ಅದಲ್ಲದೆ ಎಂ-ಆವುದಾನೊಂದು, ಜ-ಜಯಶೀಲವನುಳ್ಳ, ಲ-ಲಯಗಮನಂಗಳಿಗಾಲಯವಾಗಿ ಅನಂತಕೋಟಿ ಭುವನಬ್ರಹ್ಮಾಂಡಂಗಳನು ಉಂಟುಮಾಡಿಕೊಂಡು ವಿನೋದಿಸುವಂಥ ಪರಶಿವಲಿಂಗದ ಮಹತ್ವಾತಿಶಯವು ಆವಕಾಲಕ್ಕೆ ದೊರೆಕೊಂಡಿತ್ತೋ ಎಂದು

ಇಚ್ಛೈಸಿಕೊಂಡಿರ್ಪೆನಯ್ಯಾ. ಕಿಂಕರನು-ಭೃತ್ಯನು, ಕಿಂಕರರ ಮನೆಯಲ್ಲಿ-ನಿರ್ವಂಚಕಸದ್ಭಕ್ತರ ಭಕ್ತಿಮಂದಿರದಲ್ಲಿ, ಕಿಂಕಲವನು-ಸೇವಕತ್ವವನ್ನು, ಆನು-ಸಂಗನಬಸವೇಶ್ವರನು, ಹಾರಿಕೊಂಡಿಪ್ಪೆನಯ್ಯಾ-ಆವಾಗ ಕರುಣಿಸಿಕೊಟ್ಟಾರೋ ಎಂದು ಇಚ್ಛೈಸಿಕೊಂಡಿಪ್ಪೆನಯ್ಯಾ. ನಮ್ಮ ಕೂಡಲಸಂಗನಶರಣರ-ಶಿವನ ಚಿತ್ರಭಾಂಗಸ್ವರೂಪರಾದ ಜಂಗಮಮೂರ್ತಿಗಳ, ಒಕ್ಕುದ-ಅವರು ಸಲಿಸುವಾಗ್ಗೆ ಪರಿಪಾಣದ ಸುತ್ತಮುತ್ತ ಹೊರಸೂಸಿ ಚೆಲ್ಲಿದಂಥ ಒಕ್ಕಪ್ರಸಾದವನ್ನು, ಮಿಕ್ಕುದ-ಅವರು ಸಲಿಸಲಾರದೆ ಭಾಂಡಬಾಜನದಲ್ಲಿ ಉಳಿದಂಥ ಮಿಕ್ಕಪ್ರಸಾದವನ್ನು, ಉಂಬ-ಅನುಭವಿಸುವ, ಕಿಂಕರರ-ಭೃತ್ಯರ, ಕಿಂಕರ ನಾನಯ್ಯಾ-ಅವರ ಕೈಕೆಳಗೆ ಸೇವಕವೃತ್ತಿಯ ಮಾಡಿಕೊಂಡಿರುವಂಥ ಭೃತ್ಯ ನಾನಯ್ಯಾ.

---

೪೬೮

**ತೊತ್ತಿಂಗೇಕೆ ಲಕ್ಷಣ? ಬಂಟಂಗೇಕೆ ಆಚಾರ? ಆಗಮವೇಕೆ ಡಿಂಗರಿಗಂಗೆ? ಒಕ್ಕುದನುಂಬುವಂಗೇಕಯ್ಯಾ? ಕೂಡಲಸಂಗಮದೇವಾ ನಿಮ್ಮ ನಂಬುವುದೆ ಆಚಾರವಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ತೊತ್ತಿಂಗೆ-ಕಸಮುಸರಿಯನ್ನು ತೆಗೆದುಕೊಂಡು ನೀರುನಿಡಿಯನ್ನು ತಂದುಕೊಂಡಿರುವಂಥ ಗೌಡಿಗೆ, ಲಕ್ಷಣವೇಕಯ್ಯಾ-ಕಸಮುಸರಿಯನ್ನು ತೆಗೆದುಕೊಂಡು ಬಾಚಿ ಬೈತಲೆಯನ್ನು ತೆಗೆದುಕೊಂಡು ಕೊರೆದು ವಿಭೂತಿಯನ್ನು ಧರಿಸಿಕೊಂಡು ಕಮ್ಮೆಣ್ಣೆ ಕಸ್ತೂರಿ ಮೊದಲಾದ ತಿಲಕವನ್ನು ಇಟ್ಟುಕೊಂಡು ಒಳ್ಳೇ ಇಂಪಾಗಿ ನುಂಪಾಗಿ ಸೊಂಪಾಗಿ ಇರುವಂಥದು ಏನು ಕಾರಣಕ್ಕೆ? ಬಂಟಂಗೆ-ಕತ್ತಿಕೈದುವನ್ನು ಪಿಡಿದುಕೊಂಡು ಓಲೈಸುವಂಥ ಪಟುಭಟಂಗೆ, ಆಚಾರವೇಕೆ?-ಕತ್ತಿಕೈದುವನ್ನು ಪಿಡಿದುಕೊಂಡು ಓಲೈಸುವಂಥದೇ ಆಚಾರವಿಲ್ಲದೆ ಮತ್ತೊಂದು ಶೀಲವ್ರತನೇಮಾಚಾರಂಗಳನು ಕಟ್ಟು ಮಾಡಿಕೊಂಬುವಂಥದು ಏನು ಕಾರಣಕ್ಕೆ? ಡಿಂಗರಿಗಂಗೆ-ಅಟ್ಟೂಳಿಗ ಹರದೂಳಿಗವನ್ನು ಮಾಡಿಕೊಂಡಿರುವಂಥ ಪ್ರತಿಡಿಂಗರಿಗಂಗೆ, ಆಗಮವೇಕೆ-ಅವರು ಹೋಗೆಂದಲ್ಲಿಗೆ ಹೋಗಿ ಬಾ ಅಂದಲ್ಲಿಗೆ ಬರುವಂಥದೆ ಆಗಮವಲ್ಲದೆ ಮತ್ತೊಂದಾಗಮವನ್ನು ಕಟ್ಟುಮಾಡಿಕೊಂಬುವುದೇನು ಕಾರಣ್ಯಕ್ಕೆಂಬ ದೃಷ್ಟೋಪಮಾನದ ಹಾಂಗೆ.

ತೊತ್ತಿಂಗೆ-ಭೃತ್ಯನಾದ ಭಕ್ತಂಗೆ, ಲಕ್ಷಣವೇಕೆ-ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿಪ್ಪುದೇ ಲಕ್ಷಣವಲ್ಲದೆ ಓಲೆಕಾರನ ರೂಪು ರಾಹುತನ ರೂಪವನ್ನು ಧರಿಸಿಕೊಂಡಿರುವುದು ಏನು ಕಾರಣಕ್ಕೆ? ಬಂಟಂಗೆ-ಭೃತ್ಯನಾದ ಶಿವಭಕ್ತಂಗೆ, ಆಚಾರವೇಕೆ?-ಪಂಚಾಚಾರವಿಡಿದಾಚರಿಸುವಂಥದೇ ಆಚಾರವಲ್ಲದೆ ಮತ್ತೊಂದು ಆಚಾರವನ್ನು ಕಟ್ಟುಮಾಡಿಕೊಂಬುವಂಥದು ಏನು ಕಾರಣಕ್ಕೆ?, ಡಿಂಗರಿಗಂಗೆ-ಭೃತ್ಯನಾದ ಭಕ್ತನಿಗೆ, ಆಗಮವೇಕೆ?-ಶಿವಾಗಮಂಗಳಲ್ಲಿ ಹೇಳಿದ ಹಾಂಗೆ ಆಚರಿಸುವಂಥದೇ ಆಗಮವಲ್ಲದೇ ಮತ್ತೊಂದು ಭಿನ್ನಾಗಮವನ್ನು ಕಟ್ಟುಮಾಡಿಕೊಂಬುವಂಥದೇನು ಕಾರಣಕ್ಕೆ? ಒಕ್ಕುದನುಂಬುವಂಗೆ-ನಿಮ್ಮೊಕ್ಕುಮಿಕ್ಕಪ್ರಸಾದವನನುಭವಿಸುವಾತಂಗೆ, ಏಕಯ್ಯಾ-ಏನು ಕಾರಣಕ್ಕಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ನಂಬುವುದು-ನಿಮ್ಮ ವಿಶ್ವಾಸಿಸುವುದೆ, ಆಚಾರವಯ್ಯಾ-ಅದೇ ಶಿವಾಚಾರವಾಗಿಪ್ಪುದಯ್ಯಾ.

---

೪೭೯

**ತೊತ್ತಿಂಗೆ ಲಕ್ಷಣವೇಕಯ್ಯಾ? ಅವರೊಕ್ಕುದನುಂಡು ಮಿಕ್ಕುದ ಕಾಯ್ದುಕೊಂಡಿಪ್ಪುದು. ಸಾರೆ ಹೊರಸೇಕೆ? ಅವಳಿಗೆ ಮಾಱುತ್ತರವೇಕೆ? ಕೂಡಲಸಂಗನ ಶರಣರೊಡನೆ ಇದಿರುತ್ತರವೇಕೆ ಸಿಂಬಕಂಗೆ?**

I - - - - - - - - - - - - - - - - - - - - - - - - - - - - - - - - - - - - - - - - - - - - - -

ತೊತ್ತಿಂಗೆ-ಭೃತ್ಯನಾದ ಭಕ್ತಂಗೆ, ಲಕ್ಷಣವೇಕಯ್ಯಾ-ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡಿರಬೇಕಲ್ಲದೆ ಕಿರಾತನ ರೂಪು ಮಾಲದಾರನ ರೂಪವನ್ನು ಧರಿಸಿಕೊಂಡಿರುವುದೇನು ಕಾರಣಕ್ಕಯ್ಯಾ. ಅವರೊಕ್ಕುದನುಂಡು-ಜಂಗಮಮೂರ್ತಿಗಳು ಸಲಿಸುವಾಗ್ಗೆ ಎಡಬಲದಲ್ಲಿ ಚೆಲ್ಲಿ ಸೂಸುವಂಥದೆ ಅವರೊಕ್ಕಪ್ರಸಾದ, ಅದನನುಭವಿಸಿ; ಮಿಕ್ಕುದ-ಅವರು ಸಲಿಸಲಾರದೆ ಉಳಿದಂಥ ಹಪ್ಪಳ ಸಂಡಿಗೆ ಗೌಲಿ ಬಟಿವೆ ಶಾವಿಗೆ ಮೊದಲಾದಂಥವನು ಅವರೊಡನೆ ಅವರ ಪದಾರ್ಥ ಅವರಿಗೆ ಸಮರ್ಪಣೆಯಾಗಲಿಯೆಂದು ಮನೆಯೊಳಗಿಟ್ಟರೆ ಮುಗ್ಗುನಟ್ಟು ಕೆಟ್ಟುಹೋದಾವಲಾ ಎಂದು ಹಿತ್ತಲೊಳಗೆ ಮಡಿಪಾವಡವನ್ನು ಒಣಹರಹಿ ಶುನಿ ಮಾರ್ಜಾಲ ಮೊದಲಾದವು ಬಂದು ಮುಟ್ಟದ ಹಾಂಗೆ ಕಾಯ್ದುಕೊಂಡಿರುವುದು. ಅವಳಿಗೆ-ಭೃತ್ಯನಾದ ಭಕ್ತನಿಗೆ, ಸಾರೆ ಹೊರಸೇಕೆ-ಜಂಗಮಮೂರ್ತಿಗಳಿಗೆ ಪಟ್ಟಮಂಚ ಲೇಪು ಸುಪ್ಪತ್ತಿಗೆ ಮೊದಲಾದವನ್ನು ಹಾಸಿಕೊಟ್ಟು ಮಲಗಿಸಿ ತಾವೊಂದು ಹಳೆಯ ಕೋರಿಯಾಗಲಿ ಹರಕು ಚಾಪಿಯಾಗಲಿ ಕೆಳಗೆ ಹಾಸಿಕೊಂಡು ಅವರ ಪಾದದೆಸೆಯಲ್ಲಿ ಒರಗಿಕೊಳಬೇಕಲ್ಲದೆ ತಾನು ಅವರ ಸರಿಯಾಗಿ ಪಟ್ಟಮಂಚ ಲೇಪು ಸುಪ್ಪತ್ತಿಗೆಯ ಮೇಲೆ ಮಲಗಿಕೊಂಬುವುದೇನು ಕಾರಣಕ್ಕೆ, ಮಾಱುತ್ತರವೇಕೆ-ಉತ್ತರಕ್ಕೆ ಪ್ರತ್ಯುತ್ತರವ ಕೊಟ್ಟು ಪ್ರಸಂಗಿಸುವುದೇನು ಕಾರಣಕ್ಕೆ. ಕೂಡಲಸಂಗನ ಶರಣರೊಡನೆ-ಜಂಗಮಮೂರ್ತಿಗಳೊಂದಿಗೆ, ಸಿಂಬಕಂಗೆ-ಭೃತ್ಯನಾದ ಭಕ್ತಂಗೆ, ಇದಿರುತ್ತರವೇಕೆ-ಉತ್ತರಕ್ಕುತ್ತರವ ಕೊಟ್ಟು ಪ್ರಸಂಗಿಸುವುದೇನು ಕಾರಣಕ್ಕೆ.

---

೪೮೦

**ಪಾದೋದಕವ ಕೊಂಬೆ, ಪ್ರಸಾದವ ಕೊಂಬೆ, ಅರ್ಥಪ್ರಾಣಾಭಿಮಾನವ ನಿಮ್ಮದೆಂಬೆ! ರಾತ್ರಿಯಲೊತ್ತೆಯ ಕೊಂಬ ಪಾತಕದ ಸೂಳೆಯಂತೆ ಬಱೆಯ ಮಾತಿಂಗೊಲಿವನೇ ನಮ್ಮ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಪಾದೋದಕವ-ಗುರುಪಾದೋದಕ ಲಿಂಗಪಾದೋದಕ ಜಂಗಮಪಾದೋದಕವ, ಕೊಂಬೆ-ಅನುಭವಿಸುವೆನು. ಪ್ರಸಾದವ-ಗುರುಪ್ರಸಾದ ಲಿಂಗಪ್ರಸಾದ ಜಂಗಮಪ್ರಸಾದವ, ಕೊಂಬೆ-ಅನುಭವಿಸುವೆನು. ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ : ಅರ್ಥ-ತಾ ಗಳಿಸಿದಂಥ ದ್ರವ್ಯವು, ಪ್ರಾಣ-ಪ್ರಾಣಸಂಬಂಧವಾದ ಪುತ್ರರುಗಳು. ಅಭಿಮಾನ-[* ಅಭಿಮಾನ *]. ನಿಮ್ಮದೆಂಬೆ-ಗುರುಲಿಂಗಜಂಗಮದ ವಾರಕದೊಡವೆಯೆಂದು ಹೇಳುವನು. ರಾತ್ರಿಯಲೊತ್ತೆಯ ಕೊಂಬ ಪಾತಕದ ಸೂಳೆಯಂತೆ-ಒಬ್ಬಾನೊಬ್ಬ ವೇಶ್ಯಾಸ್ತ್ರೀಯಳೇನಾದರೂ ಪ್ರಾಯವೆಲ್ಲ ಹೋಗಿ ಮುಪ್ಪೇ

ಅವಶೇಷಿತವಾದಲ್ಲಿ ವಿಟಪುರುಷರು ಬಾರದೇ ಬಿದ್ದಲ್ಲಿ ತನ್ನ ತಲೆಗೆ ಮಸಿಅರಿವೆಯನ್ನು ಕಟ್ಟಿಕೊಂಡು ಎದೆಗೆರಡು ಟೆಂಗಿನ ಪರಟೆಯನ್ನು ಕಟ್ಟಿಕೊಂಡು ಮೋರೆಗೆ ಅರಿದಾಳವನ್ನು ಪೂಸಿಕೊಂಡು ಶುಭ್ರವಾದ ವಸ್ತ್ರಾಭವರಣವನ್ನಿಟ್ಟು ತೊಟ್ಟುಕೊಂಡು ಕೈಯಲೊಂದು ತನ ನಿಂಬೆಹಣ್ಣು ಪಿಡಿದುಕೊಂಡು ಧೂಳಸಂಜೆಯಲ್ಲಿ ಬೀದಿಬಾಜಾರಗುಂಟ ಹೋಗುತ್ತಿದ್ದಲ್ಲಿ ಬಂದಂಥ ವಿಟಪುರುಷರು ನೋಡಿ ಇವಳಿಗೆ ಒತ್ತೆಯೇನೆಂದು ಕೇಳುವರು. ಹೊನ್ನು ವರಹ ರೂಪಾಯಿಯೆಂದು ಹೇಳಿದಲ್ಲಿ ಆಗವರು ಹೊನ್ನು ವರಹ ರೂಪಾಯಿಯನ್ನು ಕೊಟ್ಟು ರಾತ್ರಿಕಾಲದಲ್ಲಿ ಬಂದು ಮೈಕೈಯನ್ನು ಹಿಡಿದು ನೋಡಿದಲ್ಲಿ ಮೈಕೈಯೆಲ್ಲ ಜರ್ಜರಿತವಾಗಿರಲು ಹಿಂಗೇಕೆ ನನ್ನ ಮೋಸಮಾಡಿದಿಯೆಂದು ಕೇಳಿದಲ್ಲಿ ಆಗ ನಿನ್ನ ಕೂಡ ಹೇಳಿದವರಾರು, ಈಗ ನಿನ್ನ ಬರಹೇಳಿದವರಾರೆಂದಾಡುವಳು. ಹಾಂಗೆ. ಬಚಿಯ ಮಾತಿಂಗೊಲಿವನೇ : ಬರಿಯ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳುವಂಥ ವ್ಯರ್ಥಸ್ಯವಾದ ಪ್ರಸಂಗಕ್ಕೆ, ಒಲಿವನೇ–ಕೃಪೆಯಾಗಿ ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೇ? ಕರುಣಿಸಿಕೊಡನು. ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು.

---

೪೭೧

**ಪಾತಕ ಮಹಾಪಾತಕವ ಮಾಡಿದವನು ಸದ್ಭಕ್ತರ ಮನೆಗೆ ಹೋಗಿ ಅವರೊಕ್ಕು ಮಿಕ್ಕ ಪ್ರಸಾದವನಾಯ್ದುಕೊಂಡುಂಡಡೆ, ಸಕಲಬ್ರಹ್ಮಹತ್ಯಾದಿ ಪಾತಕ ಪರಿಹಾರ ಒಮ್ಮೆ ಬೇಡಿಕೊಂಡುಂಡಡೆ! "ಪಾಕತೇತು ಮನಃ ಪ್ರಾಪ್ತೇ। ಶಿವಭಕ್ತ ಗೃಹಂ ವ್ರಜೇತ್॥ ಯಾಚಯೇದನ್ನಮಮೃತಂ। ತದ ಲಾಭೇ ಜಲಂ ಪಿಬೇತ್॥ ಎಂದುದಾಗಿ, ಇದು ಕಾರಣ ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರಿಗೆ 'ನಮೋ ನಮೋ' ಎಂಬೆನು.**

I - - - - - - - - - - - - - - - - - - - - - - - - - - - - - - - - - - - - - - - - - - -

ಪಾತಕ ಮಹಾಪಾತಕವ ಮಾಡಿದವನು : ಪಾತಕ–ಪರಧನ ಪರಸ್ತ್ರೀ ಪರದೈವ ಪರನಿಂದೆ ಪರಹಿಂಸೆಯೆಂಬಿವು ಸೂಕ್ಷ್ಮಪಂಚಮಹಾಪಾತಕವು, ಮಹಾಪಾತಕವ–ಬ್ರಹ್ಮಹತ್ಯೆ ಸುರಾಪಾನಸೇವನೆ ಗುರುದಾರಗಮನ ಸುವರ್ಣಸ್ತೇಯ ತತ್ಸಂಯೋಗಯೆಂಬ ಸ್ಥೂಲ ಪಂಚಮಹಾಪಾತಕಂಗಳನು, ಮಾಡಿದವನು–ಅನುಗೈದವನು, ಸದ್ಭಕ್ತರ– 'ಲಿಂಗಭಕ್ತಾಶ್ಚ ಜಂಗಮಾಃ' ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳ, ಮನೆಗೆ–ಮಂದಿರಕ್ಕೆ, ಹೋಗಿ–ಎಯ್ದುಹೋಗಿ, ಅವರೊಕ್ಕು ಮಿಕ್ಕ ಪ್ರಸಾದವನು–ಅವರೊಕ್ಕು ಮಿಕ್ಕ ಪ್ರಸಾದವನ್ನು, ಆಯ್ದುಕೊಂಡು–ನಖಾಗ್ರದಿಂದೆತ್ತಿಕೊಂಡು, ಉಂಡಡೆ–ಅನುಭವಿಸಿದರೆ, ಸಕಲ ಬ್ರಹ್ಮಹತ್ಯಾದಿ ಪಾತಕ–ಸಮಸ್ತ ಬ್ರಹ್ಮಹತ್ಯೆ ವೊದಲಾದ ಸ್ಥೂಲಪಂಚಮಹಾಪಾತಕ ಸೂಕ್ಷ್ಮಪಂಚಮಹಾಪಾತಕಂಗಳು, ಪರಿಹಾರ–ಬಿಡುಗಡೆಯಾಗುತ್ತಿಹುದು, ಒಮ್ಮೆ–ಒಂದು ವೇಳೆ, ಬೇಡಿಕೊಂಡು– "ಬೇಡುಯಾಚನೇ" ಎಂದು ಯಾಚಿಸಿಕೊಂಡು, ಉಂಡಡೆ–ಅನುಭವಿಸಿದರೆ, ಗ್ರಂಥ॥ ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು.

ಪಾತಕೇತು ಮನಃ ಪ್ರಾಪ್ತೇ : ಪಾತಕೇತ–ಸೂಕ್ಷ್ಮ ಪಂಚಮಹಾಪಾತಕ ಸ್ಥೂಲಪಂಚಮಹಾಪಾತಕಂಗಳೊಡನೆ, ಮನಃ ಪ್ರಾಪ್ತೇ–ಕೂಡಿರುವಂಥ ಆತ್ಮರುಗಳ, ಶಿವಭಕ್ತಾನಾಂ–

ನಿರ್ವಂಚಕಸದ್ಭಕ್ತರುಗಳು, ಗೃಹಂ–ಅವರ ಭಕ್ತಿಮಂದಿರಕ್ಕೆ, ವ್ರಜೇತ್–ಎಯ್ದುಹೋಗಿ, ಯಾಚಯೇದನ್ನಮಮೃತಂ–ಅನ್ನಪಾನಂಗಳು ಬೇಡಿಕೊಂಬುವುದು. ಬೇಡಿದಲ್ಲಿ ನ್ಯಾಯನೈಷ್ಠಿಯುಳ್ಳವರು ನಿಮ್ಮ ಅನ್ನವನ್ನು ನೀಡೋದಿಲ್ಲವೆಂದು ಹೇಳಿದಲ್ಲಿ, ತದಲಾಭೇ–ಹಾಂಗಾಯಿತ್ತಾದರೂ, ಜಲಂ ಪಿಬೇತ್–ಇಷ್ಟು ಉದಕವನಾದರೂ ನೀಡಿರಯ್ಯಾ ಎಂದು ಉದಕವನ್ನು ನೀಡಿಸಿಕೊಂಡು ಸಲಿಸಿದರೆ ಸೂಕ್ಷ್ಮ ಪಂಚಮಹಾಪಾತಕ ಸ್ಥೂಲ ಪಂಚಮಹಾಪಾತಕಂಗಳು ನಷ್ಟವಾಗಿ ಹೋಗುತ್ತಿಹವು. ಎಂದುದಾಗಿ–ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಇದು ಕಾರಣ–ಇದು ನಿಮಿತ್ಯಾರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಸದ್ಭಕ್ತರಿಗೆ– "ಲಿಂಗಭಕ್ತಾಶ್ಚ ಜಂಗಮಾಃ" ಎಂದು ನಿಮ್ಮ ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳಿಗೆ, ನಮೋನಮೋಯೆಂಬೆನು–ನಮಸ್ಕಾರ ನಮಸ್ಕಾರವೆಂದು ಸಾಷ್ಟಾಂಗನಮಸ್ಕಾರವ ಮಾಡುವೆನು.

---

೪೭೨

**ನಾನು ಹೊತ್ತ ಹುಳ್ಳಿಯ ಅಂಬಲಿಗೆ ಕೊಂಬುವರಿಲ್ಲ, ನೋಡಯ್ಯಾ ಆನು ನಿಮ್ಮ ಶರಣರ ಒಕ್ಕುದನುಂಡು ಬದುಕಿದೆನಯ್ಯಾ; ಮೇರುವ ಸಾರಿರ್ದ ಕಾಗೆ ಹೊಂಬಣ್ಣವಪ್ಪುದು ತಪ್ಪದು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - -

ನಾನು–ಸಂಗನಬಸವೇಶ್ವರನು, ಹೊತ್ತ–ಧರಿಸಿಕೊಂಡಿರುವಂಥ, ಹುಳ್ಳಿಯ–ಜಡಕಾಷ್ಟಸ್ವರೂಪವಾದ ದೇಹವನ್ನು, ಅಂಬಲಿಗೆ ಕೊಂಬುವರಿಲ್ಲ ನೋಡಯ್ಯಾ–ಶಾ[೧][ಲಿ][೧]ರಬ್ಬಳಿಗೆ ತೆಗೆದುಕೊಂಬುವರುಂಟಾಗಿಲ್ಲ ಕಂಡಯ್ಯಾ. ಆನು–ಸಂಗನಬಸವೇಶ್ವರನು, ನಿಮ್ಮ ಶರಣರ ಒಕ್ಕುದನುಂಡು–ನಿಮ್ಮ ಜಂಗಮಮೂರ್ತಿಗಳ ಒಕ್ಕ ಮಿಕ್ಕ ಪ್ರಸಾದವನ್ನು ಪಡೆದನುಭವಿಸಿ, ಬದುಕಿದೆನಯ್ಯಾ–ಕೃತಾರ್ಥನಾದೆನಯ್ಯಾ. ಮೇರುವ–ಮಹಾಮೇರುಪರ್ವತವನ್ನು, ಸಾರಿರ್ದ– "ಸಾರು ಸಮೀಪೇ" ಎಂದು ಸಮೀಪಸ್ಥವಾದ, ಕಾಗೆ–ಬಲಿಪುಷ್ಟನು, ಹೊಂಬಣ್ಣವಪ್ಪುದು–ಸಾವಿರ ಬಣ್ಣವನುಳ್ಳ ಸುವರ್ಣದ ಕಾಗೆಯಾಗುವಂಥದು–ತಪ್ಪದು–ಹುಸಿಯಾಗದು. ಅದಲ್ಲದೆ; ಮೇರುವ–ಚಿತ್ಕಲಾಪ್ರಸಾದವನ್ನು, ಸಾರಿರ್ದ–ಆತ್ಮಾಂಗದಲ್ಲಿ ಪ್ರಸಾದ ಸಂಬಂಧವ ಮಾಡಿಕೊಂಡನುಭವಿಸುವಂಥ, ಕಾಗೆ–ಪ್ರಸಾದಿಭಕ್ತನು, ಹೊಂಬಣ್ಣವಪ್ಪುದು–ಚಿತ್ಕಲಾಪ್ರಸಾಸ್ವರೂಪವಾಗುವಂಥದು, ತಪ್ಪದು–ಹುಸಿಯದು. ಮೇರುವ–ಅತ್ಯಂತ ಘನತೆಯನುಳ್ಳ, ಚಿದ್ಘನಲಿಂಗವನು, ಸಾರಿರ್ದ–ಆ ಚಿದ್ಘನಲಿಂಗವನ್ನೇ ಗುರುಮುಖದಿಂದ ಅಂಗದಲ್ಲಿ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಂಡಾಚರಿಸುವಂಥ, ಕಾಗೆ–ಪರಮಹಂಸಸ್ವರೂಪವಾದ ಶಿವಶರಣನು, ಹೊಂಬಣ್ಣವಪ್ಪುದು–ಆ ಚಿದ್ಘನಲಿಂಗಸ್ವರೂಪ ವಾಗುವಂಥದು, ತಪ್ಪದು–ಹುಸಿಯದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧–೧ ರೆ (ಕ), ರಿ (ಗ)

I - - - - - - - - - - - - - - - - - - - - - - - - - - - - - - - - - - - - - - - -

ಹಿಂದಕ್ಕೆ ಕಾಣಬಂದರ್ಥ. ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು ಕೂಡಲಸಂಗಮದೇವಾ-ಚಿತ್ತಿನ ಮಹದಂಕಾರವೆಂಬದ್ರಿಯನು ಸಮೀಪಸ್ಥವಾದ ಪ್ರಪಂಚಾತ್ಮನು ಚಿತ್ಪ್ರಕಾಶಜ್ಞಾನಿಯಾಗೂದು ವಾರಿಯಾಗದು, ಎಲೆ ಲಿಂಗವೆ.

III- - - - - - - - - - - - - - - - - - - - - - - - - - - - - - - - - - - - - - - - - - -

ನಾನು ಆತ್ಮನು, ಹೊತ್ತ-ತಳೆದಂಥ, ಹುಳ್ಳಿಯಂ-ಜ್ಞಾನಸಾರಹೀನವಾದ ದೇಹವೆಂಬ ಕೊರಡನು.

V- - - - - - - - - - - - - - - - - - - - - - - - - - - - - - - - - - - - - - - - - - - -

ನಾನು-ಆತ್ಮನು, ಹೊತ್ತ-ಧರಿಸಿದ, ಹುಳ್ಳಿಯ-ಚಿದ್ರಸವಿಹೀನವಾದ ದೇಹವೆಂಬ ಕೊರಡನು. ಅಂಬಲಿಗೆ-ಪರಮಾತ್ಮಸ್ವರೂಪವಾದ ಲಿಂಗಸಂಬಂಧಕ್ಕೆ, ವಿಕ್ರಯಿಸುವರಿಲ್ಲವೆಂಬುದೀಗ ನಾನು ಹೊತ್ತ ಹುಳ್ಳಿಯ ಅಂಬಲಿಗೆ ಕೊಂಬರಿಲ್ಲವೆಂಬುದರ್ಥ.

---

೪೭೩

**ಭವಭವದಲ್ಲಿ ನಿಮ್ಮ ಜಂಗಮವೆ ಶರಣರಯ್ಯ ಅವರುಂಡು ಮಿಕ್ಕುದನುಡುಗಿ, ಒಕ್ಕಪ್ರಸಾದವನಾಯ್ದು ಕೊಂಡುಂಬ ಮರುಳ [1]ನಾನಯ್ಯ[1]! ನಮ್ಮ ಕೂಡಲಸಂಗನ ಶರಣರ ರಿಣವ ನಾ ಹಿಂಗಲಾಱೆ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಭವಭವದಲ್ಲಿ-ಭವಯೆಂದರೆ ದೇಹ, ಭವಯೆಂದರೆ ಉತ್ಪತ್ಯ, ಅಲ್ಲಿ ದೇಹವ ಧರಿಸಿಕೊಂಡು ಹುಟ್ಟಿಹುಟ್ಟಿ ಬಂದಲ್ಲಿ, ನಿಮ್ಮ ಜಂಗಮವೆ-ನಿಮ್ಮ ಜಂಗಮಮೂರ್ತಿಗಳೆ, ಶರಣರಯ್ಯ-ರಕ್ಷಣ್ಯಕ್ಕೆ ಕರ್ತರಯ್ಯ. ಅವರುಂಡು-ಆ ಜಂಗಮಮೂರ್ತಿಗಳನುಭವಿಸಿ, ಮಿಕ್ಕುದ-ಅವರು ಸಲಿಸಲಾರದೇ ಭಾಂಡಭಾಜನದಲ್ಲಿ ಉಳಿಮೆಯಾದಂಥದೇ ಮಿಕ್ಕ ಪ್ರಸಾದ, ಒಕ್ಕ ಪ್ರಸಾದವನು-ಅವರು ಸಲಿಸುವಾಗ್ಗೆ ಹರಿವಾಣದ ಸುತ್ತಮುತ್ತ ಹೊರಸೂಸಿ ಚೆಲ್ಲಿದಂಥ ಒಕ್ಕ ಪ್ರಸಾದವನ್ನು, ಉಡುಗಿ-ಸೆಲ್ಲೇದ ಸೆರಗಿನಿಂದ ಗೂಡಿಸಿ ಗುಡ್ಡಿಯ ಮಾಡಿ, ಆಯ್ದುಕೊಂಡುಂಬ-ನಖಾಗ್ರದಿಂದೆತ್ತಿಕೊಂಡು ಮಿಕ್ಕ ಪ್ರಸಾದದಲ್ಲಿ ಸಮರಸವ ಮಾಡಿಕೊಂಡು ಅನುಭವಿಸುವಂಥ, ಮರುಳ ನಾನಯ್ಯ-ಭಕ್ತವೇಷಧಾರಿ ನಾನಯ್ಯ. ನಮ್ಮ ಕೂಡಲಸಂಗನ ಶರಣರ-ನಮ್ಮ ಜಂಗಮಮೂರ್ತಿಗಳ, ರಿಣವ-ಅವರ ಪಾದೋದಕ ಪ್ರಸಾದನನುಭವಿಸುವಂಥ ಸಾಲವನು, ನಾ ಹಿಂಗಲಾ?-ನಾನು ತೊಲಗಿಸಿಕೊಳಲಾರದೆ ಅವರ ಪದಕಮಲದಲ್ಲಿ ಭಕ್ತಿಯಲ್ಲಿ ಕೂಡಿರ್ಪೆನು.

I - - - - - - - - - - - - - - - - - - - - - - - - - - - - - - - - - - - - - - - - - - - -

1-1 ನಾನು (ಟ, ಡ).

.........................

ಮರುಳ ನಾನು-ಭಕ್ತ್ಯಾವೇಶವುಳ್ಳಾತ ನಾನು.

---

**ದಾ‍ ‍ ವರ್ಗದಲ್ಲಿಪ್ಪೆನು. ಶಿವಶರಣರ ಮನೆಯಲ್ಲಿ ಅವರೊಕ್ಕುದನುಂಡು ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ, ಕಾಲಮುಟ್ಟಲಮ್ಮವು; ಕಲ್ಪಿತ ತೊಡೆಯಿತ್ತು; ಎನ್ನ ಭವ[1]ಬಂಧನ ಹಿಂಗಿತ್ತು; [2]ಕರ್ಮ ನಿರ್ಮಳವಾಯಿತ್ತು! ಅವರ ತೊತ್ತಿನಾತೊತ್ತಿನ ಮಱುದೊತ್ತಿನ ಮಗನೆಂದು ಕೂಡಲಸಂಗಮದೇವ ಇತ್ತ ಬಾ ಎಂದೆತ್ತಿಕೊಂಡನು.**

I - - - - - - - - - - - - - - - - - - - - - - - - - - - - - - - - - - - - - - - - - - -

ದಾಸಿಯ ವರ್ಗದಲ್ಲಿಪ್ಪೆನು–ಹತ್ತೆಂಟು ಗೌಡಿಯರೊಳಗೆ ನಾನೊಬ್ಬ ಗೌಡಿಯಾಗಿರ್ಪೆನು, ಶಿವಶರಣರ–ಹರಶರಣರ, ಮನೆಯಲ್ಲಿ–ಭಕ್ತಿಮಂದಿರದಲ್ಲಿ, ಅವರೊಕ್ಕುದನುಂಡು–ಅವರು ಸಲಿಸುವಾಗ ಎಡ ಒಲದಲ್ಲಿ ಚೆಲ್ಲಿ ಸೂಸಿದಂಥ ಒಕ್ಕಪ್ರಸಾದವನನುಭವಿಸಿ, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ–ಅವರು ಸಲಿಸಲಾರದೆ ಉಳಿದಂಥಹವುಗಳ ಹಪ್ಪಳ ಸಂಡಿಗೆ ಗೌಲಿ ಬಟವಿ ಮೊದಲಾದಂಥವನು ಅವರೊಡನೆ ಅವರ ಪದಾರ್ಥ ಅವರಿಗೆ ಸಮರ್ಪಣೆಯಾಗಲೆಂದು ಹಿತ್ತಲೊಳಗೆ ಮುಡಿಪವಾಡವನ್ನು ಹಾಸಿ ಒಣ ಹರವಿ ಶುನಿ ಮಾರ್ಜಾಲ ಮೊದಲಾದುವು ಬಂದು ಮುಟ್ಟದ ಹಾಂಗೆ ಕಾಯ್ದುಕೊಂಡಿರುವ ನಿಮಿತ್ತ, ಕಾಲ ಮುಟ್ಟಲಮ್ಮವು: ಕಾಲ–ಅರಗಾಲ ಬರಗಾಲ.[ಮುಟ್ಟಲಮ್ಮವು–] ಸೋಂಕುವುದಕ್ಕೆ ಹೆದರುವವು. ಅದಲ್ಲದೆ ಯಮನ ಮರಣಬಾಧೆಗಳು ಸೋಂಕುವುದಕ್ಕೆ ಹೆದರಿಕೊಳುತ್ತಿಹವು. ಕಲ್ಪಿತ–ಬ್ರಹ್ಮ ಬರೆಯಲ್ಪಟ್ಟ ಅಕಾವಿವಿನಿಯೆಂಬ ಐದಕ್ಷರಂಗಳನ್ನು, ತೊಡೆಯಿತ್ತು–ದಟ್ಟಿಸಿತ್ತು. ಎನ್ನ ಭವ–ಬ್ರಹ್ಮನ ಸೃಷ್ಟಿಗೊಳಗಾಗಿ ದೇಹವ ಧರಿಸಿಕೊಂಡು ಎಲ್ಲ ಎಡೆಯಲ್ಲಿ ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ಯವು ಬಂಧನ–ಕಾಲ ಕಾಮ ಮಾಯಾವಾದಿಗಳ ಕೈಯಿಂದ ಶಿಕ್ಷಿಸಿಕೊಂಬಂಥ ಬಾಧತ್ವವು, ಹಿಂಗಿತ್ತು–ತೊಲಗಿತ್ತು. ಕರ್ಮ–ಸಂಚಿತಾದಿ ಕರ್ಮತ್ರಯಂಗಳು, ನಿರ್ಮಳವಾಯಿತ್ತು–ಸ್ವಚ್ಛವಾಯಿತ್ತು.

ಅವರ ತೊತ್ತಿನ–ಆ ಶಿವಶರಣರ ಕೈಕೆಳಗೆ ಸೇವಕಾವೃತ್ತಿಯ ಮಾಡಿಕೊಂಡಿರುವಂಥ ಒಂದನೆಯ ಗೌಡಿಯ, ಆ ತೊತ್ತಿನ–ಅವರ ಕೈಕೆಳಗೆ ಸೇವಕಾವೃತ್ತಿಯ ಮಾಡಿಕೊಂಡಿರುವಂಥ ಎರಡನೆಯ ಗೌಡಿಯ, ಮ?ದೊತ್ತಿನ–ಅವರ ಕೈಕೆಳಗೆ ಸೇವಕಾವೃತ್ತಿಯ ಮಾಡಿಕೊಂಡಿರುವಂಥ ಮೂರನೆಯ ಗೌಡಿಯ, ಮಗನೆಂದು–ಕುಮಾರನೆಂದು, ಕೂಡಲಸಂಗಮದೇವ–ಪರಶಿವಲಿಂಗವು, ಇತ್ತ ಬಾಯೆಂದು–ಇತ್ತತ್ತ ಬಾ ಮಗನೇಯೆಂದು, ಎತ್ತಿಕೊಂಡನು–ತನ್ನಲ್ಲೇಕಾರ್ಥವ ಮಾಡಿಕೊಂಡನು:

II- - - - - - - - - - - - - - - - - - - - - - - - - - - - - - - - - - - - - - - - - -

1+ದ (ಚ, ಜ). ೨+ಎನ್ನ (ಚ, ಜ).

........................

ದಾಸಿಯ ವರ್ಗದಲ್ಲಿಪ್ಪೆನು–ಭಕ್ತಿಚೇಷ್ಟೆಯಂಶದಲ್ಲಿರುವೆನು, ಶಿವಶರಣರ ಮನೆಯಲ್ಲಿ ಅವರೊಕ್ಕುದನುಂಡು ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ–ಲಿಂಗಶರಣರ ಗೃಹದಲ್ಲಿ ಅವರ ಹರಿವಾಣದ ಸುತ್ತ ಸೂಸಿ ಬೀಸರವಾದಂಥದನನುಭವಿಸಿ ಅವರುಣಲಾರದೆ ಅವಶೇಷಿತವಾದಂತದನಾಶ್ರಯಿಸಿ ಕೊಂಡಿರ್ಪ ನಿಮಿತ್ತವು, ಕಾಲ ಮುಟ್ಟಲಮ್ಮವು–ದಿನಕಾಲಕಲ್ಪಿತಂಗಳು ಸೋಂಕಲಮ್ಮವು, ಕಲ್ಪಿತ ತೊಡೆಯಿತ್ತು–ಬ್ರಹ್ಮನ ಬರಹವು ದಟ್ಟಿಸಿತ್ತು, ಎನ್ನ ಭವದ ಬಂಧನ ಹಿಂಗಿತ್ತು–ಎನ್ನ ಜನ್ಮದ ಸೆರೆಯು ಹೆರೆಸಾರಿ ಹೋಯಿತ್ತು, ಎನ್ನ ಕರ್ಮ ನಿರ್ಮಳವಾಯಿತ್ತು–ಆತ್ಮನ ಸಂಚಿತಾದಿ ದೋಷವು ನಷ್ಟವಾಯಿತ್ತು.

ಅವರ ತೊತ್ತಿನ ತೊತ್ತಿನ ಮಱುದೊತ್ತಿನ ಮಗನೆಂದು ಕೂಡಲಸಂಗಮದೇವ ಇತ್ತ ಬಾ ಎಂದೆತ್ತಿಕೊಂಡು–ಆ ಶಿವಶರಣರ ಇಚ್ಛಾಶಕ್ತಿಯ ಜ್ಞಾನಶಕ್ತಿಯ ಕ್ರಿಯಾಶಕ್ತಿಯ ಮತ್ತಂ ಚಿತ್ಶಕ್ತಿಯ ಪರಾಶಕ್ತಿಯ ಆದಿಶಕ್ತಿಯ ಚಿತ್ಪುತ್ರನೆಂದು ಪರಶಿವಲಿಂಗವು ಮೋಕ್ಷದತ್ತ ಸಮಾಗಮವಾಗಲು ನೆನಹಿಕೊಂಡನು.

---

೪೭೫

**ಜನ್ಮಕ್ಕೆ ಹೋಗಲೀಯದೆ, 'ಸೋಹಂ' ಎಂದೆನಿಸದೆ, 'ದಾಸೋಹಂ' ಎಂದೆನಿಸಯ್ಯ. ಲಿಂಗಜಂಗಮದ ಪ್ರಸಾದವ ತೋಱಿ ಬದುಕಿಸಯ್ಯಾ ಕೂಡಲಸಂಗಮದೇವಾ.**

I-----------------------------------------------------------------------

ಜನ್ಮಕ್ಕೆ ಹೋಗಲೀಯದೆ–ಸಪ್ತಜನ್ಮ ಮೊದಲಾದ ಅನೇಕಜನ್ಮಾಂತರಗತಿಗಳಲ್ಲಿ ಹುಟ್ಟಿಹುಟ್ಟಿ ಬರಗೊಡದೆ, 'ಸೋಹಂ' ಎಂದೆನಿಸದೆ–[೧]ನಾನೇ ಪರಬ್ರಹ್ಮವೆಂದೆನಿಸದೆ, 'ದಾಸೋಹಂ' ಎಂದೆನಿಸಯ್ಯಾ–[೨]ಗುರುಲಿಂಗಜಂಗಮದ ಭಕ್ತಿದಾಸೋಹ ಮಾಡಲ್ಪಟ್ಟಾತನೆಂದು ಹೇಳಿಸಯ್ಯಾ. ಲಿಂಗಜಂಗಮದ ಪ್ರಸಾದವ–ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವಂಥ ನಿಲುಕಡೆಯನ್ನು, ತೋಱಿ–ಅರುಹಿಕೊಟ್ಟು, ಬದುಕಿಸಯ್ಯಾ–ಕೃತಾರ್ಥವ ಮಾಡಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

..........................

೧+ ಸೋಹಂ ಸಾಹಾ (ಕ, ಗ). ೨+ ಸೋಹಂ ದಾಸೋಹಮೆಂದು (ಕ, ಗ).

---

೪೭೬

**ಕರ್ತರು ನಿಮ್ಮ ಗಣಂಗಳೆನ್ನ ತೊತ್ತುಮಾಡಿ ಸಲಹಿದ ಸುಖವು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯದಂತುಟಲ್ಲ. ಕೇಳಿರಯ್ಯ, ಕೂಡಲಸಂಗನ ಶರಣರು ತಮ್ಮೊಕ್ಕುದನಿಕ್ಕಿ ಸಲಹುವ ಸುಖವು.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಕರ್ತರು–ಒಡೆಯರು, ನಿಮ್ಮ ಗಣಂಗಳು–ನಿಮ್ಮ ಶಿವಗಣಂಗಳು, ಎನ್ನ ತೊತ್ತು ಮಾಡಿ–ಎನ್ನ ಭೃತ್ಯನ ಮಾಡಿ, ಸಲಹಿದ–ರಕ್ಷಣ್ಯವ ಮಾಡಿದ, ಸುಖವು–ಪರಿಣಾಮವು, ಸಾಲೋಕ್ಯ–"ಲೋಕೇನ ಸಹ ವರ್ತತ ಇತಿ ಸಾಲೋಕ್ಯಂ" ಎಂದು, ಈ ಲೋಕದಲ್ಲಿ ಶಿವನ ಕುರಿತು ಜಪತಪಾರಾಧನೆ ಕ್ರಿಯೆಗಳನು ಮಾಡಿ ಕಾಯವರೆರಸಿ ಕೈಲಾಸಕ್ಕೆ ಹೋಗಿ ಹಿಂದೆ ಹಿತ್ತಲು ಮುಂದೆ ರಾಜಂಗಳ ನವರಂಗ ತೊಟ್ಟಿ ಸುಳಿ ಮದನಕೈಲೋವೆಗಳಿಂದ ಅಲಂಕಾರವಾದ ಮಂದಿರವನ್ನು ಕಟ್ಟಿಕೊಂಡು ಅಮೃತ ಆಹಾರಿಗಳಾಗಿ ದಿವ್ಯಶರೀರಿಗಳಾಗಿ ಮಹಾತೇಜಸ್ಸುಳ್ಳವರಾಗಿ ಸೋಮಬೀದಿ ಸೂರ್ಯಬೀದಿಗಳಲ್ಲಿ ತಿರುಗಾಡುವಂಥದೆ ಸಾಲೋಕ್ಯಪದವಿಯು, ಸಾಮೀಪ್ಯ–"ಸಮೀಪೇ ವರ್ತತ ಇತಿ ಸಾಮೀಪ್ಯಂ" ಎಂದು ಶಿವನ ಸಮೀಪದಲ್ಲಿ ಕುಳಿತುಕೊಂಡು ಶಿವನ

ಒಡ್ಡೋಲಗವನ್ನು ನೋಡುವಂಥದೇ ಸಾಮೀಪ್ಯ ಪದವಿಯು, ಸಾರೂಪ್ಯ- "ರೂಪೇಣ ಸಹ ವರ್ತತ ಇತಿ ಸಾರೂಪ್ಯಂ" ಎಂದು ಶಿವನು ಆರ ರೂಪ ಧರಿಸಿಕೊಂಡೈದಾನೋ ತಾನೂ ಅದೇ ರೂಪವ ಧರಿಸಿಕೊಂಡಿರುವಂಥದೇ ಸಾರೂಪ್ಯ ಪದವಿಯು. ಸಾಯುಜ್ಯ- "ಯುಜ್ಯೇನ ಸಹವರ್ತತ ಇತಿ ಸಾಯುಜ್ಯಂ" ಎಂದು ನೀರಕ್ಷೀರನ್ಯಾಯದ ಹಾಂಗೆ ರುದ್ರಪಶುಪತಿಯ ಹಾಂಗೆ ಶಿವನರಮನೆಯೇ ತನ್ನರಮನೆ ತನ್ನರಮನೆಯೇ ಶಿವನರಮನೆ; ಶಿವನ ಬೊಕ್ಕಸವೇ ತನ್ನ ಬೊಕ್ಕಸ, ತನ್ನ ಬೊಕ್ಕಸವೇ ಶಿವನ ಬೊಕ್ಕಸ; ಶಿವನ ದೇಹವೇ ತನ್ನ ದೇಹ, ತನ್ನ ದೇಹವೇ ಶಿವನ ದೇಹ; ಶಿವನಾರೋ ತಾನಾರೋಯೆಂದು ಭಿನ್ನವಿಲ್ಲದೆ ಕೂಡಿರುವಂಥದೇ ಸಾಯುಜ್ಯಪದವಿಯು, ಅಂತುಟಲ್ಲ-ಇವು ಮೊದಲಾದ ಎರಡೆಂಬತ್ತುಕೋಟಿ ಅನಿತ್ಯಪದದಂತುಟಲ್ಲವು. ಕೇಳಿರಯ್ಯ-ಆಲಿಸಿರಯ್ಯ, ಕೂಡಲಸಂಗನ ಶರಣರ-ಜಂಗಮಮೂರ್ತಿಗಳು, ತಮ್ಮೊಕ್ಕುದನಿಕ್ಕಿ-ತಮ್ಮೊಕ್ಕಮಿಕ್ಕ ಪ್ರಸಾದವನ್ನು ಕರುಣಿಸಿಕೊಟ್ಟು, ಸಲಹುವ-ರಕ್ಷಣ್ಯವ ಮಾಡುವ, ಸುಖವು-ಪರಿಣಾಮವು.

---

## ಭಕ್ತನ ಪ್ರಾಣಲಿಂಗಿಸ್ಥಲ

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನ ಪ್ರಾಣಲಿಂಗಿಸ್ಥಲ-ಭಕ್ತಸ್ಥಲದೊಳಗಣ ಪ್ರಾಣಲಿಂಗಿಸ್ಥಲವ ನಿರೂಪಿಸುತ್ತಿಹರು.

---

೪೭೭

**ತೊತ್ತಿಂಗೆ ಬಲ್ಲಹನೊಲಿದಡೆ ಪದವಿಯ ಮಾಡದೇ ಮಾಣ್ಬನೆ ಅಯ್ಯ? ಜೇಡರ ದಾಸಯ್ಯಂಗೊಲಿದಾತ ಮತ್ತೊಬ್ಬ ದೇವನೇ ಅಯ್ಯ? ಮಾದಾರ ಚೆನ್ನಯ್ಯಂಗೊಲಿದಾತ ಮತ್ತೊಬ್ಬ ದೇವನೇ ಅಯ್ಯ? ಡೋಹಾರ ಕಕ್ಕಯ್ಯಂಗೊಲಿದಾತ ಮತ್ತೊಬ್ಬ ದೇವನೇ ಅಯ್ಯ? ತೆಲುಗ ಜೊಮ್ಮಯ್ಯಂಗೊಲಿದಾತ ಮತ್ತೊಬ್ಬ ದೇವನೇ ಅಯ್ಯ? ಎನ್ನ ಮನದ ಪಂಚೇಂದ್ರಿಯಂಗಳು ನಿಮ್ಮತ್ತಲಾದಡೆ ತನ್ನತ್ತ ಮಾಡುವ ಕೂಡಲಸಂಗಮದೇವ.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ತೊತ್ತಿಂಗೆ-ಕಸಮುಸುರೆಯನ್ನು ತೆಗೆದುಕೊಂಡು ನೀರು ನಿಡಿಯನ್ನು ತಂದುಕೊಂಡಿರುವಂಥ ಗೌಡಿಗೆ, ಬಲ್ಲಹ-ಪರಾಕ್ರಮಿಯಾದ ದೊರೆಯು, ಒಲಿದಡೆ-ಅವಳ ಮೇಲೆ ಮನಸಿಟ್ಟು ವಶಗತವಾದರೆ, ಪದವಿಯ ಮಾಡದೇ ಮಾಣ್ಬನೆ ಅಯ್ಯ?-ತನ್ನ ಐಶ್ವರ್ಯದೊಳಗರ್ಧ ಐಶ್ವರ್ಯವನ್ನು ಕೊಟ್ಟು ಅವಳ ಐಶ್ವರ್ಯವಂತಳ ಮಾಡದೆ ಬಿಟ್ಟಾನೆ? ಬಿಡನು. ಹಾಂಗೆ; ತೊತ್ತಿಂಗೆ-ಭೃತ್ಯನಾದ ಭಕ್ತಂಗೆ, ಬಲ್ಲಹ-ಕಾಲಕಾಮಮಾಯಾಪ್ರಪಂಚನ್ನು ಜಯಿಸುವಲ್ಲಿ ಪರಾಕ್ರಮಿಗಳಾದ ಜಂಗಮಮೂರ್ತಿಗಳು, ಒಲಿದಡೆ-ಕೃಪೆಯಾದರೆ, ಪದವಿಯ ಮಾಡದೇ ಮಾಣ್ಬನೆ ಅಯ್ಯ?-ನಿತ್ಯವಾದ ನಿಜಮೋಕ್ಷವ ಕರುಣಿಸಿಕೊಡದೆ ಬಿಟ್ಟಾನೆ? ಬಿಡನು. ಜೇಡರ ದಾಸಯ್ಯಂಗೆ-ಜೇಡರ ದಾಸಿಮಯ್ಯನೆಂಬ ಶಿವಶರಣಂಗೆ, ಒಲಿದಾತ-ಕೃಪೆಯಾಗಿ ನಿಮೋಕ್ಷವ ಕರುಣಿಸಿಕೊಟ್ಟಾತ, ಮತ್ತೊಬ್ಬ ದೇವನೇ ಅಯ್ಯ?-ಮತ್ತೊಬ್ಬ ಶಿವನೆ? ಅಲ್ಲವು. ಆ ದೇವನೇ ಈ ಜಂಗಮವಾಗಿ ಬಂದಿಪ್ಪನೆಂದು ವಿಶ್ವಾಸಿಸಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರಯ್ಯ.

ಮಾದಾರ ಚೆನ್ನಯ್ಯಂಗೆ–ಮಾದಾರ ಚೆನ್ನಯ್ಯನೆಂಬ ಸದ್ಭಕ್ತಂಗೆ, ಒಲಿದಾತ–ಕೃಪೆಯಾಗಿ ನಿಜಮೋಕ್ಷವನ್ನು ಕರುಣಿಕೊಟ್ಟಾತ; ಮತ್ತೊಬ್ಬ ದೇವನೇ ಅಯ್ಯ?–ಮತ್ತೊಬ್ಬ ಶಿವನೆ? ಅಲ್ಲವು. ಆ ದೇವನೇ ಈ ಜಂಗಮವಾಗಿ ಬಂದಿಪ್ಪನೆಂದರಿದು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರಯ್ಯ. ಡೋಹಾರ ಕಕ್ಕಯ್ಯಂಗೆ–ಡೋಹಾರ ಕಕ್ಕಯ್ಯನೆಂಬ ಶಿವಶರಣಂಗೆ, ಒಲಿದಾತ–ಕೃಪೆಯಾಗಿ ನಿಜಮೋಕ್ಷವನ್ನು ಕರುಣಿಕೊಟ್ಟಾತ; ಮತ್ತೊಬ್ಬ ದೇವನೇ ಅಯ್ಯ?–ಮತ್ತೊಬ್ಬ ಶಿವನೆ? ಅಲ್ಲವು. ಆ ದೇವನೇ ಈ ಜಂಗಮವಾಗಿ ಬಂದಿಪ್ಪನೆಂದರಿದು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರಯ್ಯ. ತೆಲುಗ ಜೊಮ್ಮಯ್ಯಂಗೆ–ತೆಲುಗ ಜೊಮ್ಮಯ್ಯನೆಂಬ ಶಿವಶರಣಂಗೆ, ಒಲಿದಾತ–ಕೃಪೆಯಾಗಿ ನಿಜಮೋಕ್ಷವನ್ನು ಕರುಣಿಕೊಟ್ಟಾತ; ಮತ್ತೊಬ್ಬ ದೇವನೇ ಅಯ್ಯ?–ಮತ್ತೊಬ್ಬ ಶಿವನೆ? ಅಲ್ಲವು. ಆ ದೇವನೇ ಈ ಜಂಗಮವಾಗಿ ಬಂದಿಪ್ಪನೆಂದರಿದು ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರಯ್ಯ. ಎನ್ನ ಮನದ–ಎನ್ನ ಮನಸಂಬಂಧವಾದ, ಪಂಚೇಂದ್ರಿಯಂಗಳು–ಐದಿಂದ್ರಿಯಂಗಳು, ನಿಮ್ಮತ್ತಲಾದಡೆ–ಪಂಚೇಂದ್ರಿಯಂಗಳು ಪಂಚವಿಧಲಿಂಗದಲ್ಲಿ ಸಾಮರಸ್ಯವಾದರೆ, ಕೂಡಲಸಂಗಮದೇವ–ಪರಶಿವಲಿಂಗವು, ತನ್ನತ್ತ ಮಾಡುವ–ಅಂತಪ್ಪ ಭಕ್ತನನ್ನು ತನ್ನೊಳಗೇಕಾರ್ಥವ ಮಾಡಿಕೊಳ್ಳುತ್ತಿಹನು.

II- - - - - - - - - - - - - - - - - - - - - - - - - - - - - - - - - - - - - - - - - - -

ತೊತ್ತಿಂಗೆ ಬಲ್ಲಹನೊಲಿದಡೆ ಪದವಿಯ ಮಾಡದೆ ಮಾಣ್ಬನೆ?–ಭಕ್ತಿಚೇಟಿಗೆ ಸರ್ವಾಚಾರ ಸಂಪತ್ತಿನಾಚರಣೆಯ ಬಲ್ಲತ್ವವನುಳ್ಳ ಲಿಂಗವು ಮಚ್ಚಿದರೆ, ತನ್ನ ಚಿದ್ಘನಲಿಂಗಪದವಿಯನ್ನು ಕೊಡುವನೆಂಬುದರ್ಥ. ಮುಂದಕ್ಕೆ ಕಾಣಬಂದರ್ಥ.

---

೪೭೮

**ಹೊಜಗೆ ಹೂಸಿ ನಾನೇವೆನಯ್ಯ? ಒಳಗೆ ಶುದ್ಧವಿಲ್ಲದನ್ನಕ್ಕ. ಮಣಿಯ ಕಟ್ಟಿ ನಾನೇವೆನಯ್ಯ? ಮನ ಮುಟ್ಟದನ್ನಕ್ಕ, ನೂಜಿನೋದಿ ನಾನೇವೆನಯ್ಯ? ನಮ್ಮ ಕೂಡಲಸಂಗಮದೇವರ ಮನಮುಟ್ಟಿ ನೆನೆಯದನ್ನಕ್ಕ.**

I - - - - - - - - - - - - - - - - - - - - - - - - - - - - - - - - - - - - - - - - - - -

ಹೊಜಗೆ ಹೂಸಿ–ಬಹಿರಂಗದಲ್ಲಿ ಲಲಾಟ ಮೊದಲಾದ ನಾಲ್ವತ್ತೆಂಟು ಸ್ಥಾನಂಗಳಲ್ಲಿ ವಿಭೂತಿಯ ಧರಿಸಿಕೊಂಡು, ನಾನೇವೆನಯ್ಯ–ನಾನೇನು ಮಾಡುವೆನಯ್ಯ, ಒಳಗೆ ಶುದ್ಧವಿಲ್ಲದನ್ನಕ್ಕ ?–ಅಂತರಂಗದ ಚಿದ್ವಿಭೂತಿಯೇ ಬಹಿರಂಗದಲ್ಲಿ ಕ್ರಿಯಾವಿಭೂತಿಯಾಗಿ ಬಂದಿಪ್ಪುದೆಂದರಿದು ಈ ವಿಭೂತಿಯನ್ನು ಧರಿಸಿಕೊಂಡಂಥವರಿಗೆ ಮಹದೈಶ್ವರ್ಯವಾಗುತ್ತೈತಂಬಂಥ ನೈಷ್ಠೆ ಇರಬೇಕು. ಇಲ್ಲದಿರುವ ಪರಿಯಂತರವು; ಮಣಿಯ ಕಟ್ಟಿ–ತತ್ತಸ್ಥಾನಂಗಳಲ್ಲಿ ರುದ್ರಾಕ್ಷಿಮಣಿಗಳನು ಬಂಧಿಸಿಕೊಂಡು, ನಾನೇವೆನಯ್ಯ–ನಾನೇನು ಮಾಡಲಯ್ಯ, ಮನಮುಟ್ಟದನ್ನಕ್ಕ ?–ಅಂತರಂಗದ ಚಿದ್ರುದ್ರಾಕ್ಷಿಯ ಬಹಿರಂಗದಲ್ಲಿ ಕ್ರಿಯಾರುದ್ರಾಕ್ಷಿಗಳಾಗಿ ಬಂದಿಪ್ಪವೆಂದರಿದು, ಈ ರುದ್ರಾಕ್ಷಿಯ ಧರಿಸಿಕೊಂಡಂಥವರಿಗೆ ಪಾಪಕ್ಷಯವಾಗುತ್ತೈತೆಂಬಂಥ ನೈಷ್ಠೆ ಇರಬೇಕು. ಇಲ್ಲದಿರುವ ಪರಿಯಂತರವು, ನಮ್ಮ ಕೂಡಲಸಂಗಮದೇವರ–ನಮ್ಮ ಪರಶಿವಲಿಂಗವನ್ನು, ಮನಮುಟ್ಟಿ ನೆನೆಯದನ್ನಕ್ಕ–ಅಂತರಂಗದ ಪ್ರಾಣಲಿಂಗವೇ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದೆಂದರಿದು ಈ ಲಿಂಗದಲ್ಲಿ ಮನಸ್ಸು

ಕೀಲೈಸಬೇಕು. ಕೀಲೈಸದಿರುವ ಪರಿಯಂತರವು, ನೂಜಿನೋದಿ–ಸಕಲ ವೇಗಾಗಮಶಾಸ್ತ್ರ ಪುರಾಣಂಗಳನು ಪಠಿಸಿ, ನಾನೇವೆನಯ್ಯ–ನಾನೇನು ಮಾಡುವೆನಯ್ಯ.

---

೪೭೯

**ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆನ್ನ ಮನವು, ಎಂತಯ್ಯ? ಎನಗಿನ್ನಾವುದು ಗತಿ? ಎಂತಯ್ಯ? ಎನಗಿನ್ನಾವುದು ಮತಿ? ಎಂತಯ್ಯ? ಹರಹರ ಕೂಡಲಸಂಗಮದೇವಾ, ಮನವ ಸಂತೈಸೆನ್ನ.**

I - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನ ಮನವು–ಎನ್ನ ಚಿತ್ತವು, ಸುಚಿತ್ತದಿಂದ–ನಿರ್ಮಲವಾದ ಮನಸ್ಸಿನಿಂದ, ನಿಮ್ಮ ನೆನೆಯಲೊಲ್ಲದು–ನಿಮ್ಮ ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಲೊಲ್ಲದು, ಎಂತಯ್ಯ?–ಹೆಂಗಯ್ಯ? ಎನಗಿನ್ನಾವುದು ಗತಿ?–ಇದರಿಂದೆನಗೆ ಕ್ರಿಯೆ ಹೇಂಗಳವಳಟ್ಟಿತ್ತು? ಎಂತಯ್ಯ?–ಹೇಂಗಯ್ಯ? ಎನ್ನಗಿನ್ನಾವುದು ಮತಿ?–ಇದರಿಂದೆನಗೆ ಜ್ಞಾನ ಹೇಂಗಳವಟ್ಟಿತ್ತು? ಎಂತಯ್ಯ?–ಹೇಂಗಯ್ಯ? ಹರ–ಭಕ್ತರುಗಳಿಗೆ ಕಂಠಕವನ್ನು ನಷ್ಟವ ಮಾಡಲ್ಪಟ್ಟಂಥ ದೇವನೆ, ಹರ–ಕಾಲಕಾಮಮಾಯಾ ತ್ರಿಪುರದಕ್ಷಾಧ್ವರದುರತಧ್ವಂಸಿಯಾದಂಥ ದೇವನೆ, ಎನ್ನ ಮನವ ಸಂತೈಸು–ಎನ್ನ ಮನಸ್ಸು ಲಿಂಗಧ್ಯಾನ ಲಿಂಗಸ್ಮರಣೆಯಲ್ಲಿ ತರಹರವಾಗುವಂತೆ ಮನೋವರ್ತನೆಯನ್ನು ನಷ್ಟವ ಮಾಡಿ ಉನ್ಮನಿ ಮನಸ್ಸಾಗಿ ಅಳವಡಿಸಿಕೊಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೮೦

**ಅಷ್ಟದಳ ಕಮಲವ ಸುತ್ತುವ ಜೀವನಾತ್ಮನ ಮೆಟ್ಟಿದ ದಳವನಜಿಯದೆ, ಆನು ಭಕ್ತನೆಂತೆಂಬೆ? ಆನು ಶರಣನೆಂತೆಂಬೆ? ಆನು ಲಿಂಗೈಕ್ಯನೆಂತೆಂಬೆ? ಕೂಡಲಸಂಗಮದೇವಾ, ಎನ್ನ ಮನವು ಸಮಾಧಾನವಾಗದನ್ನಕ್ಕ?**

I - - - - - - - - - - - - - - - - - - - - - - - - - - - - - - - - - - - - - - - - - - -

ಅಷ್ಟದಳ ಕಮಲವ ಸುತ್ತುವ–ಹೃದಯದ ಎಂಟೆಸಳುಗಳಲ್ಲಿ ಆವಾವ ದಳಪ್ರಕೃತಿಯೊಡನೆ ಕೂಡಿಚರಿಸುವಂಥ, ಜೀವಾತ್ಮನ ಮೆಟ್ಟಿದ ದಳವನಜಿಯದೆ–ಆ ಜೀವಾತ್ಮನ ಅಧಸ್ಸು ಮಾಡಿ ತುಳಿದಿರುವಂಥ ಅಧೋಮುಖವಾಗಿರುವ ಎಂಟೆಸಳುಗಳ 'ಪ್ರಕೃತಿಯೆಲ್ಲವ ನಷ್ಟವ ಮಾಡಿ ಊರ್ಧ್ವಮುಖವಾಗಿರುವಂಥ ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯವೆಂಬ ಚತುಃಕಮಲಕರ್ಣಿಕಾಕಂಜ ಮಧ್ಯದಲ್ಲಿ ನೆಲೆಗೊಂಡು ಅಚಲಾನಂದ ಪೂಜೆಯ ಕೈಕೊಂಡೊಪ್ಪುವಂಥ ಪರಶಿವಲಿಂಗದಲ್ಲಿ ತನ್ನ ಮನಸ್ಸನ್ನು ಸ್ವಸ್ಥಿರ ಮಾಡುವಂಥದನು ತಿಳಿದಿರಬೇಕು. ತಿಳಿಯದಿರುವ ಪರಿಯಂತರವು, ಆನು ಭಕ್ತನೆಂತೆಂಬೆ?–ನಾನು ತ್ರಿವಿಧಪದಾರ್ಥವನ್ನು ಹಿಡಿದು ಭಕ್ತಿಗೃಹವ ಕಟ್ಟಿ ಭಕ್ತಿಯ ಮಾಡುವಂಥ ಭಕ್ತಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನು. ಆನು ಶರಣನೆಂತೆಂಬೆ?–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ, ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಶರಣಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನು. ಆನು ಲಿಂಗೈಕ್ಯನೆಂತೆಂಬೆ?–ಶಿಖಿಕರ್ಪುರ ಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟಂಥ

ಐಕ್ಯಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನ್ನ ಮನವು–ಎನ್ನ ಚಿತ್ತವು, ಸಮಾಧಾನವಾಗದನ್ನಕ್ಕ?–ಲಿಂಗಧ್ಯಾನ ಲಿಂಗಸ್ಮರಣೆಯಲ್ಲಿ ತರಹರವಾಗಬೇಕು. ಆಗದಿರುವ ಪರಿಯಂತರವು ಇಂತೀ ಷಟ್‌ಸ್ಥಲದಾಚರಣೆಯುಳ್ಳಾತ ಹೇಗಾದೆನಯ್ಯ? ಆಗಲರಿಯೆನು.

..........................

೧+ದಳ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಅಷ್ಟದಳ ಕಮಲವ ಸುತ್ತುವ ಜೀವಾತ್ಮನ ಮೆಟ್ಟಿದ ದಳವನಜೆಯದೆ–ಹೃದಯದೆಂಟೆಸಳ ಕಂಜವನು ಬಳಸುವಾತ್ಮನು ಒಂದು ಸ್ಥಳದಲ್ಲಿ ಪುಣ್ಯ ಒಂದು ದಳದಲ್ಲಿ ಪಾಪ ಒಂದೊಂದು ದಳ ಪ್ರಕೃತಿವಿಡಿದು ಚರಿಸುವ ಜೀವನ ಪ್ರಕೃತಿಯನಧಸ್ಸು ಮಾಡು ತುಳಿದು ಊರ್ಧ್ವಮುಖವಾಗಿಪ್ಪ ಚತುರ್ದಳದಲ್ಲಿ ಅಚಲಿತವಾಗಿಪ್ಪ ಪರಮಾತ್ಮಲಿಂಗದಲ್ಲಿ ಕೂಡುವ ಭೇದವನು ತಿಳಿಯದೆ, ಮುಂದಕ್ಕೆ ಕಾಣಬಂದರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಅಷ್ಟದಳ ಕಮಲವ–ಹೃದಯವಧೋಮುಖವಾದಷ್ಟದಳ ಕಮಲದಲ್ಲಿ, ಸುತ್ತುವ–ಭ್ರಮಿಸುವ, ಜೀವಾತ್ಮನ–ಜೀವನ ದಳಪ್ರಕೃತಿಯನ್ನು, ಮೆಟ್ಟಿ–ಸತ್ಕ್ರಿಯಾಚರಣದಿಂದಧಸ್ಸು ಮಾಡಿ, ಅಧೋಮುಖವಾದಷ್ಟದಳಂಗಳಲ್ಲಿ ಊರ್ಧ್ವಮುಖವಾಗಿರ್ದ ಚತುಃಕಮಲದಲ್ಲಿರ್ದ ಪರಮಾತ್ಮನಲ್ಲಿ ಬೆರಸಿ ಬೆರಸಲಿಯದೆ ಎಂಬುದೀಗ ದಳವನಜೆಯದೆ, ಎನ್ನ ಮನವು–ಎನ್ನ ಮನಸ್ಸು, ಸಮಾಧಾನವಾಗದನ್ನಕ್ಕ?–ಸಂಕಲ್ಪ ವಿಕಲ್ಪವಳಿದು ಪ್ರಾಣಲಿಂಗದಲ್ಲಿ ತರಹರವಾಗನ್ನಕ್ಕ?

---

೪೮೧

**ನಾ ನಿಮ್ಮ ನೆನೆವನು, ನೀವೆನ್ನನಜೆಯಿರಿ. ನಾ ನಿಮ್ಮನೋಲೈಸುವೆನು, ನೀವೆನ್ನ ಕಾಣಿರಿ. ಆನೆಂತು ಬದುಕುವೆ, ಆನೆಂತು ಜೀವಿಸುವೆನಯ್ಯಾ? ಕೂಡಲಸಂಗಮದೇವಾ, ಎನಗೆ ನೀವೇ ಪ್ರಾಣ, ಗತಿ, ಮತಿ ನೋಡಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ನಾ ನಿಮ್ಮ ನೆನೆವೆನು : ನಾ–ವೇದಾಂತಿಯು, ನಿಮ್ಮ ನೆನೆವೆನು–"ಆತ್ಮಾನಾಂ ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಶ್ರುತಿಜ್ಞಾನ ಅರುಹಿನ ಬಲದಿಂದ ನಿರವಯಲ ಬ್ರಹ್ಮವನೇ ಕುರುಹಿಟ್ಟುಕೊಂಡು ಸ್ತೋತ್ರವ ಮಾಡುವೆನು. ನೀವು–ಪರಶಿವಲಿಂಗವು, ಎನ್ನನ?ಯಿರಿ–ಸ್ವಯಾಧೀನ ಮುಕ್ತನಲ್ಲದೆ ಪರಾಧೀನ ಮುಕ್ತನಲ್ಲದ ಕಾರಣ ನಿಮ್ಮ ಚಿದಂಗಸ್ವರೂಪವೆಂದು, ನೀವರಿಯರಿ– ನೀವು ತಿಳಿಯಿರಿ. ನಾ–ಸಿದ್ಧಾಂತಿಯು, ನಿಮ್ಮನೋಲೈಸುವೆನು–ಅಂಗ ಬೇರೆ ಲಿಂಗ ಬೇರೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾರಾಧಿಸುವೆನು, ನೀವು–ಪರಶಿವಲಿಂಗವು, ಎನ್ನ ಕಾಣಿರಿ–

ಪರಾಧೀನ ಮುಕ್ತನಲ್ಲದೆ ಸ್ವಯಾಧೀನ ಮುಕ್ತನಲ್ಲದ ಕಾರಣ ನಿಮ್ಮ ಚಿದಂಗಸ್ವರೂಪನೆಂದು, ನೀವೆನ್ನ ಕಾಣಿರಿ–ನೀವೆನ್ನನರಿಯಿರಿ.

ಆನೆಂತು ಬದುಕುವೆ–ಇದರಿಂದೆನಗೆ ಕ್ರಿಯೆ ಹೇಂಗಳವಟ್ಟಿತ್ತು, ಆನೆಂತು ಜೀವಿಸುವೆನಯ್ಯಾ–ಇದರಿಂದೆನಗೆ ಜ್ಞಾನ ಹೇಂಗಳವಟ್ಟಿತ್ತಯ್ಯ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನಗೆ–ನನಗೆ, ನೀವೇ ಪ್ರಾಣ–ಆತ್ಮಾಂಗದಲ್ಲಿ ಭಾವಲಿಂಗವಾಗಿ ನೆಲೆಗೊಂಡಿಪ್ಪಿರಿ, ನೀವೇ ಗತಿ–ತನುವಿನಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡಿಪ್ಪಿರಿ, ನೀವೇ ಮತಿ ನೋಡಯ್ಯಾ–ಮನದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡು ಗತಿ ಮತಿ ಚೈತನ್ಯಸ್ವರೂಪವಾಗಿಪ್ಪಿರಿ ಕಂಡಯ್ಯಾ.

---

೪೮೨

**ತಂದೆ ನೀನು, ತಾಯಿ ನೀನು; ಬಂಧು ನೀನು, ಬಳಗ ನೀನು. ನೀನಲ್ಲದೆನಗೆ ಮತ್ತಾರೂ ಇಲ್ಲವಯ್ಯ ಕೂಡಲಸಂಗಮದೇವಾ, ಹಾಲಲದ್ದು, ನೀರಲದ್ದು.**

I - - - - - - - - - - - - - - - - - - - - - - - - - - - - - - - - - - - - - - - - - - - - -

ತಂದೆ ನೀನು ತಾಯಿ ನೀನು : ತಂದೆ–ಎನ್ನ ಜನಕನು, ನೀನು–ಪರಶಿವಲಿಂಗವು, ತಾಯಿ–ಎನ್ನ ಜನನಿಯು, ನೀನು–ಪರಶಿವಲಿಂಗವು, ಬಂಧು–ಅಣ್ಣತಮ್ಮರುಗಳು, ನೀನು–ಪರಶಿವಲಿಂಗವು, ಬಳಗ–ಎನ್ನ ಕುಲಕುಟುಂಬವೆಲ್ಲ, ನೀನು–ಪರಶಿವಲಿಂಗವು. ಎನಗೆ–ನಿರ್ವಂಚಕ ಸದ್ಭಕ್ತನಿಗೆ, ನೀವಲ್ಲದೆ–'ತಂದೆ ತಾಯಿ ಬಂಧು ಬಳಗ ನೀವಲ್ಲದೆ,' ಪರಶಿವಲಿಂಗವಲ್ಲದೆ, ಮತ್ತಾರೂ ಇಲ್ಲವಯ್ಯ–ಅಂತಃಪುರ ಮತ್ತೊಬ್ಬ ಜನನಿ ಜನಕರುಗಳು ಉಂಟಾಗಿಲ್ಲ ಕಂಡಯ್ಯ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಹಾಲಲದ್ದು ನೀರಲದ್ದು–ಹಾಲಲದ್ದಿದರೂ ಒಳ್ಳೇದೇ ನೀರಲದ್ದಿದರೂ ಒಳ್ಳೇದೇ ಎಂಬ ದೃಷ್ಟೋಪಮಾನದ ಹಾಂಗೆ,

ತಂದೆ ನೀನು : ತಂದೆ–ತನುವಿನಲ್ಲಿ ಗುರುವಾಗಿ ನೆಲೆಗೊಂಡಿರುವಾತನು, ನೀನು–ನಿಃಕಲಬ್ರಹ್ಮವು, ತಾಯಿ ನೀನು : ತಾಯಿ–ಮನದಲ್ಲಿ ಲಿಂಗವಾಗಿ ನೆಲೆಗೊಂಡಿರುವಾತನು, ನೀನು–ನಿಃಕಲಬ್ರಹ್ಮವು, ಬಂಧು ನೀನು : ಬಂಧು–ಪ್ರಾಣಜ್ಞಾನದಲ್ಲಿ ಜಂಗಮವಾಗಿ ನೆಲೆಗೊಂಡಿರುವಾತನು. ನೀನು–ನಿಃಕಲಬ್ರಹ್ಮವು, ಬಳಗ ನೀನು : ಬಳಗ–ಆತ್ಮಾಂಗದಲ್ಲಿ ಚಿತ್ಕಲಾಪ್ರಸಾದವಾಗಿ ನೆಲೆಗೊಂಡಿರುವಾತನು, ನೀನು–ನಿಃಕಲಬ್ರಹ್ಮವು. ಎನಗೆ–ಶರಣನಿಗೆ, ನೀವಲ್ಲದೆ–ನಿಃಕಲಬ್ರಹ್ಮವಲ್ಲದೆ, ಮತ್ತಾರೂ ಇಲ್ಲವಯ್ಯ–ಬ್ರಹ್ಮವಿಷ್ಣ್ವಾದಿಗಳೊಳಗೆ ಮತ್ತೊಬ್ಬರುಂಟಾಗಿಲ್ಲವಯ್ಯ, ಕೂಡಲಸಂಗಮದೇವಾ– ಎಲೆ ಪರಶಿವಲಿಂಗವೆ, ಹಾಲಲದ್ದು–ಚತುರ್ವಿಧ ಅಂಗದಲ್ಲಿ ಚತುರ್ವಿಧ ಲಿಂಗಸಂಬಂಧವ ಮಾಡಿಕೊಂಡು ಚತುರ್ವಿಧ ಭಕ್ತಿವಿಡಿದಾಚರಿಸುವಂಥ ಆಚರಣೆ ಎನ್ನಲುಂಟಾಗಿದ್ದರೆ ಅಮೃತ ಕುಂಭಸ್ವರೂಪವಾದ ನಿಃಕಲಬ್ರಹ್ಮದಲ್ಲಿ ಸಾಮರಸ್ಯವ ಮಾಡು. ನೀರಲದ್ದು–ಚತುರ್ವಿಧ ಅಂಗದಲ್ಲಿ ಚತುರ್ವಿಧ ಲಿಂಗ ಸಂಬಂಧವ ಮಾಡಿಕೊಂಡು ಚತುರ್ವಿಧಭಕ್ತಿವಿಡಿದಾಚರಿಸುವಂಥ ಆಚರಣೆ ಎನ್ನಲುಂಟಾಗಿಲ್ಲದಿದ್ದರೆ ಭೌತಿಕ ಜಲದಲ್ಲಿ ಮುಳುಗಿಸಿ ಬಿಡು ಎಂಬ ದೃಷ್ಟೋಪಮಾನದ ಹಾಂಗೆ.

ತಾಯಿ ನೀನು : ತಾಯಿ–ಬಹಿರಂಗದಲ್ಲಿ ಕ್ರಿಯಾಮಾತೃಸ್ವರೂಪವಾದ ಇಷ್ಟಲಿಂಗವಾಗಿ ನೆಲೆಗೊಂಡಿರಲ್ಪಟ್ಟಾತನು, ನೀನು–ಮಹಾಲಿಂಗಮೂರ್ತಿಯು, ತಂದೆ ನೀನು : ತಂದೆ–ಅಂತರಂಗದಲ್ಲಿ ಜನಕಸ್ವರೂಪವಾಗಿ ನೆಲೆಗೊಂಡಿರಲ್ಪಟ್ಟಾತನು, ನೀನು–ಮಹಾಲಿಂಗಮೂರ್ತಿಯು, ಬಂಧು ನೀನು : ಬಂಧು–ಆತ್ಮಾಂಗದಲ್ಲಿ ಚಿದ್ಬಿಂದುಸ್ವರೂಪವಾದ ಭಾವಲಿಂಗವಾಗಿ ನೆಲೆಗೊಂಡಿರಲ್ಪಟ್ಟಾತನು, ನೀನು–ಮಹಾಲಿಂಗಮೂರ್ತಿಯು, ಬಳಗ ನೀನು ; ಬಳಗ–ಸರ್ವಾಂಗದಲ್ಲಿ ಪಾದೋದಕಸ್ವರೂಪವಾಗಿ ನೆಲೆಗೊಂಡರಿಲ್ಪಟ್ಟಾತನು, ನೀನು–ಮಹಾಲಿಂಗಮೂರ್ತಿಯು, ಎನಗೆ–ಜ್ಞಾನಕಲಾತ್ಮನಿಗೆ, ನೀವಲ್ಲದೆ–ತ್ರಿವಿಧ ಷಡ್ವಿಧಾಂಗದಲ್ಲಿ ತ್ರಿವಿಧ ಷಡ್ವಿವಿಧಲಿಂಗಸ್ವರೂಪವಾಗಿ ನೆಲೆಗೊಂಡಿರಲ್ಪಟ್ಟಾತನು ಮಹಾಲಿಂಗಮೂರ್ತಿಯುಲ್ಲದೆ, ಮತ್ತಾರೂ ಇಲ್ಲವಯ್ಯ–ದ್ವೈತಾದ್ವೈತಿಗಳೊಳಗೆ ಮತ್ತೊಬ್ಬರುಂಟಾಗಿಲ್ಲವಯ್ಯ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಹಾಲಲದ್ದು–ತ್ರಿವಿಧ ಷಡ್ವಿಧಾಂಗದಲ್ಲಿ ತ್ರಿವಿಧ ಷಡ್ವಿಧಲಿಂಗಸಂಬಂಧವ ಮಾಡಿಕೊಂಡು ತ್ರಿವಿಧ ಷಡ್ವಿಧ ಭಕ್ತಿವಿಡಿದಾಚರಿಸುವಂಥ ಆಚರಣೆ ಎನ್ನಲುಂಟಾಗಿದ್ದರೆ ಅಮೃತಕುಂಭಸ್ವರೂಪವಾದ ಮಹಾಲಿಂಗದಲ್ಲಿ ಸಾಮರಸ್ಯವ ಮಾಡು, ನೀರಲದ್ದು–ತ್ರಿವಿಧ ಷಡ್ವಿಧಾಂಗದಲ್ಲಿ ತ್ರಿವಿಧ ಷಡ್ವಿಧ ಲಿಂಗಸಂಬಂಧವ ಮಾಡಿಕೊಂಡು ತ್ರಿವಿಧ ಷಡ್ವಿಧ ಭಕ್ತಿವಿಡಿದಾಚರಿಸುವಂಥ ಆಚರಣೆ ಎನ್ನಲುಂಟಾಗಿದ್ದರೆ ಸಂಸಾರವಿಷಯ ಜಲದಲ್ಲಿ ಮುಳುಗಿಸಿ ಬಿಡು.

..........................

೧–೧ x (ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - -

ತಂದೆ ನೀನು– ಗುರುಮೂರ್ತಿ ನೀನು, ತಾಯಿ ನೀನು– ಮಾತೃಸ್ಥಾನವಾದ ಮಹಾನುಭಾವ ಜಂಗಮ ನೀನು, ಬಂಧು ನೀನು–ಅಂತರಂಗದ ಪ್ರಾಣಲಿಂಗವೆ ಬಹಿಷ್ಕರಿಸಿ ಗುರುಮುಖದಿಂದ ಬಂದ ಇಷ್ಟಲಿಂಗ ನೀನು, ಬಳಗ ನೀನು–೩,೬,೧೮,೩೬,೨೧೬ ಪರಿಪೂರ್ಣ ಲಿಂಗ ಸ್ವರೂಪ ನೀನು.

---

**೪೮೩**

**ಎನ್ನಾಪತ್ತು ಸುಖದುಃಖ ನೀವೇ ಕಂಡಯ್ಯ; ಎನಗೆ ಮತ್ತಾರೂ ಇಲ್ಲ, ಹರಹರ ನೀವೇ ಕಂಡಯ್ಯ ಎನ್ನ ಮಾತಾಪಿತನು ನೀನೇ ಕಂಡಯ್ಯ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನಾಪತ್ತು–ಎನ್ನಾಧಿವ್ಯಾಧಿ ವಿಪತ್ತುಗಳು, ಸುಖ–ಸುಖ ಒಂದು ಕೋಟ್ಯಾನುಕೋಟಿ. ದುಃಖ–ದುಃಖ ಒಂದು ಕೋಟ್ಯಾನುಕೋಟಿ, ನೀವೇ ಕಂಡಯ್ಯ–ಪರಶಿವಲಿಂಗವು ನೀವೇ ಕಾಣಯ್ಯ ಎನಗೆ ಮತ್ತಾರೂ ಇಲ್ಲ–ನನಗೆ ಮತ್ತೊಬ್ಬರುಂಟಾಗಿಲ್ಲವಯ್ಯ. ಹರ–ಭಕ್ತರುಗಳಿಗೆ ಬಂದಂಥ ಕಂಟಕಾದಿಗಳನು ನಷ್ಟವ ಮಾಡಲ್ಪಟ್ಟಂಥ ದೇವನೆ, ಹರ–ಕಾಲಕಾಮ ತ್ರಿಪುರ ದಕ್ಷಾಧ್ವರದುರಿತಧ್ವಂಸಿಯಾದಂಥ ದೇವನೆ, ನೀವೇ ಕಂಡಯ್ಯ–ಇಷ್ಟಲಿಂಗಸ್ವರೂಪವಾದಾತ ನೀವೇ

ಕಾಣಯ್ಯ. ಎನ್ನ ಮಾತಾ-ಬಹಿರಂಗದಲ್ಲಿ ಎನ್ನ ಮಾತೃಸ್ವರೂಪವಾದ ಇಷ್ಟಲಿಂಗವಾಗಿ ನೆಲೆಗೊಂಡಿರಲ್ಪಟ್ಟಾತನು, ಎನ್ನ ಪಿತನು-ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಿರಲ್ಪಟ್ಟಾತನು, ನೀನೇ ಕಂಡಯ್ಯ-ಪರಶಿವಲಿಂಗವು ನೀವೇ ಕಾಣಯ್ಯ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

---

೪೮೪

**ಎನ್ನ ಜನ್ಮವ[1]ನತಿಗಳೆದ[1]ನೀ ಧರ್ಮಿ, ಎನ್ನ ಜನ್ಮವ ತೊಡೆ[2]ದನೀ[2] ಧರ್ಮಿ, ಎನ್ನ ಭವಬಂಧನವ [3]ನಿಃ[3]ಕರಿಸಿದೆಯಾಗಿ, ಶಿವನೇ ಗತಿಮತಿಯೆಂದು ನಂಬಿದೆನಯ್ಯ. ಎನ್ನಷ್ಟಮದಂಗಳ ಸುಟ್ಟುರುಹಿದೆಯಾಗಿ, ಕಟ್ಟುಗ್ರದಿಂದ ನಿಮ್ಮ ಶ್ರೀಚರಣವ ಕಂಡೆ. ಶಿಷ್ಟಪ್ರತಿಪಾಲಕ, ನಿಮ್ಮ ನಂಬಿದೆ ಕರುಣಿಸು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನ ಜನ್ಮವ-ಸಪ್ತಜನ್ಮ ಮೊದಲಾದ ಅನೇಕ ಜನ್ಮಂಗಳಲ್ಲಿ ಹುಟ್ಟಿಹುಟ್ಟಿ ಬರುವಂಥ ಉತ್ಪತ್ಯವ, ಅತಿಗಳೆದನು-ಬೇರ್ಪಡಿಸಿದನು, ಆ ಧರ್ಮಿ-ಈ ಸದ್ಧರ್ಮಿಸ್ವರೂಪವಾದ ಇಷ್ಟಲಿಂಗದೇವನು, ಎನ್ನ ಜನ್ಮವ-ಸಪ್ತಜನ್ಮ ಮೊದಲಾದ ಅನೇಕಜನ್ಮಂಗಳಲ್ಲಿ ಹುಟ್ಟಿಹುಟ್ಟಿ ಬರುವಂಥ ಉತ್ಪತ್ಯವ, ತೊಡೆದನು-ನಷ್ಟವ ಮಾಡಿದನು. ಈ ಧರ್ಮಿ-ಈ ಸದ್ಧರ್ಮಸ್ವರೂಪವಾದ ಇಷ್ಟಲಿಂಗದೇವನು, ಎನ್ನ ಭವ-ನಾನು ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಹುಟ್ಟಿಹುಟ್ಟಿ ಬರುವಂಥ ಉತ್ಪತ್ಯ, ಬಂಧನವ-ಕಾಲಕಾಮಮಾಯಾದಿಗಳಿಂದ ಶಿಕ್ಷಿಸಿಕೊಂಬಂಥ ಬಾಧತ್ವವನ್ನು, ನಿಃಕರಿಸಿದೆಯಾಗಿ-ನಷ್ಟವ ಮಾಡಿಬಿಟ್ಟೆಯಾಗಿ, ಶಿವನೇ-ಪರಶಿವಲಿಂಗವೆ, ಗತಿಮತಿಯೆಂದು-ಗತಿಮತಿಚೈತನ್ಯವೆನುತ್ತ, ನಂಬಿದೆನಯ್ಯ-ವಿಶ್ವಾಸಿಸಿದೆನಯ್ಯ.

ಎನ್ನಷ್ಟಮದಂಗಳ-ಎನ್ನಂತರಂಗದ ಸಂಸ್ಥಿತಾದಿ ಅಷ್ಟಮದಂಗಳನು, ಸುಟ್ಟು-ಜ್ಞಾನಗ್ನಿಯಿಂದ ದಹಿಸಿ, ಉರುಹಿದೆಯಾಗಿ-ಆರಿಸಿಬಿಟ್ಟೆಯಾಗಿ, ಕಟ್ಟಗ್ರದಿಂದ-ಪರಿಪೂರ್ಣಜ್ಞಾನದಿಂದ, ನಿಮ್ಮ ಶ್ರೀಚರಣವ-ನಿಮ್ಮ ಕಾಂತಿವೆತ್ತಂಥ ಪದಕಮಲಂಗಳಲ್ಲಿ ಕೂಡಿರುವಂಥದನ್ನು, ಕಂಡೆ-ಅರಿದೆನು, ಶಿಷ್ಟ-ಮರೆಹೊಕ್ಕಂಥವರ, ಪ್ರತಿಪಾಲಕ-ರಕ್ಷಣ್ಯವ ಮಾಡಲ್ಪಟ್ಟಂಥ ದೇವನೆ, ನಿಮ್ಮ ನಂಬಿದೆ-ನಿಮ್ಮ ಪಾದಾರವಿಂದದ ಸೈಪವನಾಶ್ರಯಿಸಿದೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಕರುಣಿಸು-ಕೃಪೆಮಾಡು.

II- - - - - - - - - - - - - - - - - - - - - - - - - - - - - - - - - - - - - - - - - - - -

1-1 ತೊಡೆದಾತ (ಚ, ಜ). 2-2 ದಾತ (ಚ, ಜ). 3-3 ನೀ (ಚ, ಜ).

..........................

ಎನ್ನ ಜನ್ಮವ ತೊಡೆದಾತನೀ ಧರ್ಮಿ-ಆತ್ಮನ ಭವಾಳಿಯುನಲ್ಲಗಳದಾತ ಸದ್ಧರ್ಮದಿವ್ಯಕಾಂತಿಸ್ವರೂಪವಾದ ಇಷ್ಟಲಿಂಗವು, ಎನ್ನ ಜನ್ಮವ ತೊಡೆದಾತನೀ ಧರ್ಮಿ-ಆತ್ಮನ ಮನೋಪ್ರಕೃತಿಯ ನಷ್ಟವ ಮಾಡಿದಾತ ಸದ್ಧರ್ಮದಿವ್ಯಕಾಂತಿಸ್ವರೂಪ ಈ ಪ್ರಾಣಲಿಂಗವು. ಎನ್ನ ಭವಬಂಧನ ನೀಕರಿಸಿದೆಯಾಗಿ-ಆ ಪ್ರಾಣಲಿಂಗವೇ ಮಹಾನುಭಾವಜಂಗಮವಾಗಿ ಬಂದು ಶಿಕ್ಷಾಬೋಧೆಯಿಂದ ಸಕಲಕರಣಂಗಳನು ಶಿಕ್ಷಿಸಿ ಸುಜ್ಞಾನಾ[ಮೃ]ತವನು ಕುಡಿಹಿಕೊಟ್ಟು ಆತ್ಮನ

ಜನ್ಮದ ಸೆರೆಯನು ಧಿಕ್ಕಾರವ ಮಾಡಿದೆಯಾಗಿ, ಶಿವನೆ ಗತಿ[ಮತಿ]ಯೆಂದು ನಂಬಿದೆನಯ್ಯ-ಎಲೆ ಇಷ್ಟ ಲಿಂಗವೆ ಎಲೆ ಪ್ರಾಣಲಿಂಗವೆ ಎಲೆ ಮಹಾನುಭಾವಜಂಗಮವೆ ಗತಿಮತಿ ಚೈತನ್ಯವೆಂದು ವಿಶ್ವಾಸಿಸಿದೆನಯ್ಯ; ಮುಂದಕ್ಕೆ ಕಾಣಬಂದರ್ಥ.

---

೪೮೫

**ಭವರೋಗವೈದ್ಯನೆಂದು ನಾ ನಿಮ್ಮ ಮಱೆಹೊಕ್ಕೆ, ಭಕ್ತಿದಾಯಕ ನೀ ಕರುಣಿಸಯ್ಯ ಲಿಂಗತಂದೆ. ಜಯಜಯ ಶ್ರೀಮಹಾದೇವ ಜಯಜಯ ಶ್ರೀಮಹಾದೇವೆನ್ನುತ್ತಿಹುದೆನ್ನ ಮನವು, ಕೂಡಲಸಂಗಮದೇವಂಗೆ ಶರಣೆಂದಿತ್ತೆನ್ನ ಮನವು.**

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಭವರೋಗವೈದ್ಯನೆಂದು-ಜನ್ಮರುಜೆಗಳಿಗೆ ಭೇಷಜನೆನುತ್ತ, ನಾನು-ಸಂಗನಬಸವೇಶ್ವರನು, ನಿಮ್ಮ ಮಱೆಹೊಕ್ಕೆ-ನಿಮ್ಮ ಸತ್ಕ್ರಿಯಾಚಾರದ ಸೈಪವನು ಆಶ್ರೈಸಿದೆನು, ಭಕ್ತಿದಾಯಕ-ಶಿವಾದ್ವೈತಭಕ್ತಿಯನ್ನು ಕರುಣಿಸಿಕೊಡುವಾತನು, ನೀನು-ಪರಶಿವಲಿಂಗವು, ಕರುಣಿಸಯ್ಯ-ಕೃಪೆಮಾಡಯ್ಯ, ಲಿಂಗತಂದೆ-ಲಿಂಗಯ್ಯನೆಂಬಾತ್ಮಜನಕನೆ. ಜಯಜಯ-ಸರ್ವೋತ್ಕರ್ಷನಾಗು, ಸರ್ವೋತ್ಕರ್ಷನಾಗು, ಶ್ರೀಮಹಾದೇವ : ಶ್ರೀ-ಐಶ್ವರ್ಯೋಪಲಕ್ಷಿತವಾದ, ಮಹಾದೇವ-ಎಲ್ಲ ದೇವರಿಗೆ ವಲ್ಲಭನಾದಂಥ ದೇವನೆ, ಎನ್ನ ಮನವು-ಎನ್ನ ಚಿತ್ತವು, ಶ್ರೀಮಹಾದೇವೆನುತಿರ್ದುದು : ಶ್ರೀ-ಐಶ್ವರ್ಯೋಪಲಕ್ಷಿತವಾದ, ಮಹಾದೇವ-ಎಲ್ಲ ದೇವರಿಗೆ ವಲ್ಲಭನಾದಂಥ, [ಎನುತಿರ್ದುದು] ಪರಶಿವಲಿಂಗವೆಂದು ಸ್ತೋತ್ರವ ಮಾಡುತಿರ್ದುದು. ಕೂಡಲಸಂಗಮದೇವಂಗೆ-ಪರಶಿವಲಿಂಗಕ್ಕೆ, ಎನ್ನ ಮನವು-ಸಂಗನಬಸವೇಶ್ವರನ ಚಿತ್ತವು, ಶರಣೆಂದಿತ್ತು-ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುತ್ತಿದ್ದಿತ್ತು.

---

## ಭಕ್ತನ ಶರಣಸ್ಥಲ

I - - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನ ಶರಣಸ್ಥಲ-ಭಕ್ತಸ್ಥಲದೊಳಗಣ ಶರಣಸ್ಥಲವ ನಿರೂಪಿಸುತ್ತಿಹರು.

---

೪೮೬

**ಅಂಗೈಯೊಳಗಣ ಲಿಂಗವ ನೋಡುತ್ತ, ಕಂಗಳಶ್ರು ಕಡೆಗೋಡಿವರಿವುತ್ತ ಸುರಿವುತ್ತ ಎಂದಿರ್ಪೆನೂ? ಆ ನೋಟವೇ ಪ್ರಾಣವಾಗಿ ಎಂದಿರ್ಪೆನೂ? ಕೂಟವೇ ಪ್ರಾಣವಾಗಿ ಎಂದಿರ್ಪೆನೂ? ಎನ್ನಂಗವಿಕಾರದ ಸಂಗವಳಿದು, ಕೂಡಲಸಂಗಯ್ಯ, ಲಿಂಗಲಿಂಗವೆನುತ್ತ ಎಂದಿರ್ಪೆನೂ?**

I - - - - - - - - - - - - - - - - - - - - - - - - - - - - - - - - - - - - - - - - - - -

ಅಂಗ್ಯೆಯೊಳಗಣ ಲಿಂಗವ–ತನುವಿನ ವಾಮಭಾಗದ ಕರಸ್ಥಲದಲ್ಲಿ ನೆಲೆಗೊಂಡಿರುವ ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ, ನೋಡುತ್ತ–ಅನಿಮಿಷದೃಷ್ಟಿಯಿಂದ ನಿರೀಕ್ಷಣೆಯ ಮಾಡುತ್ತ, ಕಂಗಳಶ್ರು ಕಡೆಗೋಡಿವರಿವುತ್ತ–ಅಂತರಂಗದಲ್ಲಿ ಉಕ್ಕಿದ ಹರುಷಾನಂದ ಜಲಂಗಳು ಎರಡು ಲೋಷನಾಗ್ರದಲ್ಲಿ ಹೊರಸೂಸುತ್ತ, ಸುರಿವುತ್ತ–ಧಾರಾವೃಷ್ಟಿಯಾಗಿ ಪರಿತೋಷವಾಗುತ್ತ, ಎಂದಿರ್ಪೆನೊ?–ಲಿಂಗದಲ್ಲಿ ಆವ ಆವ ಕಾಲಕ್ಕೆ ಕೂಡಿರುವೆನೊ? ಕೂಟವೇ–ಆ ಲಿಂಗದಲ್ಲಿ ಕೂಡುವಂಥ ಸಮರಸವೇ, ಪ್ರಾಣವಾಗಿ–ಹರಣವಾಗಿ, ಎಂದಿರ್ಪೆನೊ?–ಲಿಂಗದಲ್ಲಿ ಆವ ಕಾಲಕ್ಕೆ ಕೂಡಿರುವೆನೊ? ಎನ್ನಂಗವಿಕಾರದ–ಎನ್ನ ತನುವಿನ ಮನ್ಮಥವಿಕಾರದ, ಸಂಗವಳಿದು–ಸಂಪರ್ಕವು ನಷ್ಟವಾಗಿಹೋಗಿ, ಕೂಡಲಸಂಗಯ್ಯ–ಪರಶಿವಲಿಂಗವೆ, ಲಿಂಗಲಿಂಗವೆನುತ್ತ–ಲಿಂಗಲಿಂಗವೆಂದು ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುತ್ತ, ಎಂದಿರ್ಪೆನೊ?–ಲಿಂಗದಲ್ಲಿ ಆವ ಕಾಲಕ್ಕೆ ಕೂಡಿರುವೆನೊ?

---

೪೮೭

**ಎದೆ ಬಿರಿವನಕ್ಕ, ಮನ ದಣಿವನಕ್ಕ, ನಾಲಗೆ ನಲಿನಲಿದಾಡುವನಕ್ಕ ನಿಮ್ಮ ನಾಮಾಮೃತವ ತಂದೆಱಿಸು ಕಂಡಯ್ಯಾ, ಎನಗೆನ್ನ ತಂದೆ! ಬಿರಿಮುಗುಳಂತೆನ್ನ ಹೃದಯ ನಿಮ್ಮ ಶ್ರೀಚರಣದ ಮೇಲೆ ಬಿದ್ದರಳುಗೆ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಎದೆ ಬಿರಿವನ್ನಕ್ಕ–ಎನ್ನಂಗವು ನಿಮ್ಮ ಸೇವಾಸತ್ಕಾರವ ಮಾಡಬೇಕೆಂಬ ಬಯಕೆಯೊಡನೆ ಕೂಡಿರ್ಪುದಲ್ಲದೆ ಸಾಕುಸಾಕೆಂಬುವ ಹಾಂಗೆ ದಣಿವು ಹುಟ್ಟುವ ಪರಿಯಂತರವು, ಮನ ದಣಿವನ್ನಕ್ಕ–ಮನಸ್ಸು ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಬೇಕೆಂಬ ಬಯಕೆಯೊಡನೆ ಕೂಡಿರ್ಪುದಲ್ಲದೆ ಸಾಕು ಸಾಕೆಂಬುವ ಹಾಂಗೆ ದಣಿವು ಹುಟ್ಟುವಪರಿಯಂತರವು ನಾಲಗೆ–ರಸನೆಯು, ನಲಿನಲಿದಾಡುವನ್ನಕ್ಕ–ಕಂದವೃತ್ತ ಗದ್ಯಪದ್ಯ ಪ್ರಬಂಧಗಳಿಂದ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಬೇಕೆಂಬ ಬಯಕೆಯೊಡನೆ ಕೂಡಿರ್ಪುದಲ್ಲದೆ ಸಾಕುಸಾಕೆಂಬುವ ಹಾಂಗೆ ದಣಿವು ಹುಟ್ಟುವ ಪರಿಯಂತರವು, ನಿಮ್ಮ ನಾಮಾಮೃತವ–ನಿಮ್ಮ ಅದ್ವಯ ಅಭಿಧಾನವಾದ ಪ್ರಣವ ಪಂಚಾಕ್ಷರಿಮಂತ್ರವೆಂಬ ಸುಧೆಯ, ತಂದು–ಆಗುಮಾಡಿಕೊಂಡು ಬಂದು, ಎರಿಸು ಕಂಡಯ್ಯಾ–ಅಂತರಂಗದಲ್ಲಿ ಪರಿತೋಷವ ಮಾಡು ಕಂಡಯ್ಯಾ, ಎನಗಯ್ಯಾ, ಎನಗೆನ್ನ ತಂದೆ !–ಎನ್ನಾತ್ಮ ಜನಕನಾದಂಥ ಎಲೆ ಪರಶಿವಲಿಂಗವೆ ಬಿರಿಮುಗುಳಂತೆ–ನಸುವಿಕಸನವಾದ ಕುಸುಮದೋಪಾದಿಯಲ್ಲಿ, ಎನ್ನ ಹೃದಯ–ಎನ್ನ ಹೃತ್ಕಮಲವು, ನಿಮ್ಮ ಶ್ರೀಚರಣದ ಮೇಲೆ–ನಿಮ್ಮ ಕಾಂತ್ತಿವೆತ್ತ ಪದಕಮಲ ಸ್ವರೂಪವಾದಿಷ್ಟಲಿಂಗದಲ್ಲಿ, ಬಿದ್ದು–ಸಂಬಂಧವಾಗಿ, ಅರಳುಗೆ–ವಿಕಸನವಾಗಲಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೭೭

**ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು, ಹಾಡಿ ನಾಲಗೆ ದಣಿಯದು, ಇನ್ನೇವೆನಿನ್ನೇವೆ? ನಾ ನಿಮ್ಮ ಕೈಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇವೆನಿನ್ನೇವೆ? ಕೂಡಲಸಂಗಮದೇವಾ ಕೇಳಯ್ಯಾ, ನಿಮ್ಮುದರವ ಬಗಿದಾನು ಹೋಗುವ ಭರವೆನಗೆ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಆಡಿ ಕಾಲು ದಣಿಯವು : [ಆಡಿ–] ಲಿಂಗಪೂಜೆಯ ಮಾಡುವೆ ನೆವದಿಂದ ಲಿಂಗಕ್ಕೆ ಪೂಜಾದ್ರವ್ಯಗಳ ನೆರಹಿಕೊಳ್ಳಬೇಕೆಂದು ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆದಾಡಿ, ಕಾಲು–ಚರಣವು, ದಣಿಯವು–ಮತ್ತೂ ಲಿಂಗಪೂಜೆಗೆ ಪೂಜಾದ್ರವ್ಯಗಳನೆರಹಿಕೊಳಬೇಕೆಂಬ ಬಯಕೆಯೊಡನೆ ಕೂಡಿರ್ಪುವಲ್ಲದೆ ಸಾಕುಸಾಕೆಂಬುವ ಹಾಂಗೆ ದಣಿವು ಹುಟ್ಟುವು. ನೋಡಿ–ಆ ಲಿಂಗಮೂರ್ತಿವಿಗ್ರಹವನ್ನು ಅನಿಮಿಷದೃಷ್ಟಿಯಿಂ ನಿರೀಕ್ಷಣೆಯ ಮಾಡಿ, ಕಣ್ಣು–ನಯನವು, ದಣಿಯವು–ಮತ್ತೂ ಲಿಂಗಮೂರ್ತಿವಿಗ್ರಹವನ್ನು ಅನಿಮಿಷದೃಷ್ಟಿಯಿಂ ನಿರೀಕ್ಷಣೆಯ ಮಾಡಬೇಕೆಂಬ ಬಯಕೆಯೊಡನೆ ಕೂಡಿರ್ಪುವಲ್ಲದೆ ಸಾಕುಸಾಕೆಂಬುವ ಹಾಂಗೆ ದಣಿವು ಹುಟ್ಟುವು. ಹಾಡಿ–ಕಂದ ವೃತ್ತ ಗದ್ಯ ಪದ್ಯ ಪ್ರಬಂಧಗಳಿಂದಾಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡಿ, ನಾಲಗೆ–ರಸನೆಯು, ದಣಿಯದು–ಮತ್ತೂ ಆ ಲಿಂಗದ ಮಹಿಮಾತಿಶಯವನೆತ್ತಿಕೊಂಡು ಸ್ತೋತ್ರವ ಮಾಡಬೇಕೆಂಬ ಬಯಕೆಯೊಡನೆ ಕೂಡಿರ್ಪುದಲ್ಲದೆ ಸಾಕುಸಾಕೆಂಬುವ ಹಾಂಗೆ ದಣಿವು ಹುಟ್ಟದು. ಇನ್ನೇವೆನಿನ್ನೇವೆ ?–ಇನ್ನೇನು ಮಾಡಲಿ? ಇನ್ನೇನು ಮಾಡಲಿ?

ನಾ ನಿಮ್ಮ ಕೈಯಾರೆ ಪೂಜಿಸಿ–ನಾ ಮನಶುದ್ಧವಾಗಿ ಆರಾಧಿಸಿ, ಮನವು–ಚಿತ್ತವು, ದಣಿಯಲೊಲ್ಲದು–ಮತ್ತೂ ಲಿಂಗಪೂಜೆಯ ಮಾಡಬೇಕೆಂಬ ಬಯಕೆಯೊಡನೆ ಕೂಡಿರ್ಪುದಲ್ಲದೆ ಸಾಕುಸಾಕೆಂಬುವ ಹಾಂಗೆ ದಣಿವು ಹಟ್ಟದು, ಇನ್ನೇವೆನಿನ್ನೇವೆ?– ಇನ್ನೇನು ಮಾಡಲಿ? ಇನ್ನೇನು ಮಾಡಲಿ? ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಎನ್ನ ವಾಕ್ಯವನು ಪರಾಕಿಲ್ಲದೆ ಆಲಿಸಯ್ಯಾ, ನಿಮ್ಮುದರವ ಬಗಿದು : ನಿಮ್ಮ ಎಂದರೆ ಚಿದ್ಘನಲಿಂಗವು, ಉದರ ಎಂದರೆ ಚಿತ್ತು, ಬಗಿದು–"ಬಗೆ ಇಬ್ಬಾಗೇ"ಯೆಂದು ವಿಭಾಗಿಸಿ ಹೊಗುವ ಚಿತ್ತಿನಲ್ಲಿ ತನ್ನಂಗ, ಚಿದ್ಘನಲಿಂಗದಲ್ಲಿ ತನ್ನ ಪ್ರಾಣವನ್ನು ಕೂಡಿ ಆ ಚಿತ್ತೇ ಅಂಗ, ಚಿದ್ಘನಲಿಂಗವೇ ಪ್ರಾಣವಾಗಿ, ಆನು–ಶರಣನು, ಹೊಗುವ–"ಹೊಗು ಪ್ರವೇಶೇ"ಯೆಂದು ಪ್ರವೇಶಿಯಾಗುವ, ಭರವೆನಗೆ–ಚಮತ್ಕಾರವೆನಗುಂಟಾಗಿರ್ಪುದು.

---

೪೭೮

**ಕಾಮ ಸಂಗ ನಿಸ್ಸಂಗವಾಗಿ ಇನ್ನಾವ ಸಂಗವನಜೆಯೆನಯ್ಯಾ. ಮಿಗೆ ಒಲಿದೆನಾಗಿ ಅಗಲಲಾರೆನು. ನಗೆಮೊಗದರಸಾ, ಅವಧಾರು, ಅವಧಾರು ಕೂಡಲಸಂಗಮದೇವಾ, ಬಗಿದು ಹೊಗುವೆನು ನಾ ನಿಮ್ಮ ಮನವನು.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಕಾಮಸಂಗ-ತನುವಿನ ಮನ್ಮಥವಿಕಾರದ ಕೂಟವು, ನಿಸ್ಸಂಗವಾಗಿ-ನಿಃಪತಿಯಾಗಿ, ಇನ್ನಾವ ಸಂಗವನರಿಯೆನಯ್ಯಾ-ಇನ್ನಾವ ಇಂದ್ರಿಯವಿಷಯ ಪ್ರಪಂಚಿನ ಕೂಟವನ್ನು ತಿಳಿಯೆನಯ್ಯಾ. ಮಿಗೆ-ಚೆನ್ನಾಗಿ, ಒಲಿದೆನಾಗಿ-ಮನಮುಟ್ಟಿ ಲಿಂಗಪೂಜೆಯ ಮಾಡಿದೆನಾಗಿ, ಅಗಲಲಾರೆನು-ಬಿಟ್ಟು ವಿಯೋಗವಾಗಲಾರೆನು. ನಗೆಮೊಗದರಸಾ-ದರಹಸಿತ ವದನವನುಳ್ಳ ಎಲೆ ಪರಶಿವಲಿಂಗವೆ, ಅವಧಾರು-ಎನ್ನ ವಾಕ್ಯವನ್ನು ಚೆನ್ನಾಗಿ ಆಲಿಸು, ಅವಧಾರು-ಎನ್ನ ವಾಕ್ಯವನ್ನು ಪರಾಕಾಗಿ ಆಲಿಸು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ. ನಿಮ್ಮ ಮನವೆಂದರೆ ನಿಃಕಲ ಬ್ರಹ್ಮವು, [೧][ನಾ][೧] ಎಂದರೆ ಚಿತ್ತು, ಬಗಿದೊಗುವೆ-ಚಿತ್ತಿನಲ್ಲಿ ತನ್ನಂಗ, ಚಿದ್ಘನಲಿಂಗದಲ್ಲಿ ತನ್ನ ಪ್ರಾಣವನ್ನು ಕೂಡಿ, ಬಗಿದು-ವಿಭಾಗಿಸಿ, ಹೊಗುವೆನು-ಚಿತ್ತು ಚಿದ್ಘನಲಿಂಗದಲ್ಲಿ ಕೂಡಿ "ಹೊಗು ಪ್ರವೇಶೇ"ಯೆಂದು ಪ್ರವೇಶವಾಗುವೆನು.

.........................

೧-೧ ನಿಮ್ಮ (ಕ, ಗ).

---

೪೯೦

**ನೋಡಿ ನೋಡಿ ಲಿಂಗಧ್ಯಾನವೆನ್ನ ಮನ, ರಾಗರಂಜನೆಯ ಉತ್ಪತ್ತಿಸ್ಥಿತಿಲಯ ನಿನಗೆಂದಾದುವು. ರಾಗರಂಜನೆಯ ಪೂಜೆ ಎನ್ನ ಮನವು, ಕೂಡಲಸಂಗಮದೇವಾ ಆಹಾ, ಎನ್ನ ಮನವು!**

I - - - - - - - - - - - - - - - - - - - - - - - - - - - - - - - - - - - - - - - - - - - - - -

ನೋಡಿ ನೋಡಿ ಲಿಂಗಧ್ಯಾನವೆನ್ನ ಮನ : ನೋಡಿ-ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದರ್ಚಿಸಿ ಕ್ರಿಯಾದೃಷ್ಟಿಯಿಂದ ನಿರೀಕ್ಷಣೆಯ ಮಾಡಿ, ನೋಡಿ-ಪ್ರಾಣಲಿಂಗಕ್ಕೆ ಮಂತ್ರಜ್ಞಾನ ಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸಿ ಜ್ಞಾನದೃಷ್ಟಿಯಿಂದ ನಿರೀಕ್ಷಣೆಯ ಮಾಡಿ, ಎನ್ನ ಮನ-ಎನ್ನ ಚಿತ್ತವು, ಲಿಂಗಧ್ಯಾನ-ಲಿಂಗಸ್ಮರಣೆಯೊಡನೆ ಕೂಡಿಪ್ಪುದು. ರಾಗ-ಫಲಪದಂಗಳ ಮೇಲಣ ಬಯಕೆಯ ಮುಂದುಗೊಂಡು, ರಂಜನೆಯ-ಅಡ್ಡಣಿಗೆ ಹರಿವಾಣ ಬಿಂದಿಗೆ ಪಾತೇಲಿ ಗೋಮುಖತಟ್ಟೆ ಅರ್ಘ್ಯತಟ್ಟೆ ಶ್ರೀರುದ್ರತಟ್ಟೆ ಗಂಟೆ ದರ್ಪಣ ಚಿನ್ನಕಾಳೆ ಮಾನ್ಯದಕಾಳೆ ಮೊದಲಾದ ಶಿವಪೂಜೆಯ ಉಪಚಾರಂಗಳ ಹರಹಿಕೊಂಡು ತಾಸು ಎರಡುತಾಸು ಬಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡುತ್ತಿಹುದು.[೧] ಉತ್ಪತ್ತಿಸ್ಥಿತಿಲಯ ನಿನಗೆಂದಾದುವು : ಉತ್ಪತ್ತಿ-ಬ್ರಹ್ಮನುತ್ಪತ್ಯವು, ಸ್ಥಿತಿ-ವಿಷ್ಣುವಿನ [೨][ಭೋಗ][೨]ವಿಸ್ಥಿತಿಯು, ಲಯ-ರುದ್ರನ ಲಯೋಧರ್ಮದ ಹೊಡೆಗಿಚ್ಚು, ನಿನಗೆಂದಾದುವು-ನಿನಗಾವಕಾಲಕ್ಕೆ ಉಂಟಾದವು? ನಿನಗುಂಟಾದವೆ? ನಿನಗುಂಟಾಗಿಲ್ಲವು. ನಿನಗೆ ಉಂಟಾಗಿಲ್ಲದ ಕಾರಣ ನಿನ್ನಂಗವಾದ ಶರಣನಿಗೆ ಉಂಟಾಗಿಲ್ಲವು.

ರಾಗ-ನಿಜಮೋಕ್ಷದ ಮೇಲಣ ಬಯಕೆ ಮುಂದುಗೊಂಡು, ರಂಜನೆಯ ಪೂಜೆ-ಅಡ್ಡಣಿಗೆ ಹರಿವಾಣ ಬಿಂದಿಗೆ ಪಾತೇಲಿ ಗೋಮುಖತಟ್ಟೆ ಅರ್ಘ್ಯತಟ್ಟೆ ಶ್ರೀರುದ್ರತಟ್ಟೆ ಮೊದಲಾದ ರಂಜನೆಯ ಪೂಜಾಕ್ರಿಯೆಗಳ ಹರಹಿಕೊಂಡು ತಾಸು ಎರಡುತಾಸು ಸಮರಸಭಾವದಿಂದ ತಾನು ತಾನಾಗಿ ಲಿಂಗಪೂಜೆಯ ಮಾಡುತ್ತಿಹುದು, ಎನ್ನ ಮನವು-ಎನ್ನ ಚಿತ್ತವು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಆಹಾ-ಐಶ್ವರ್ಯವು, ಎನ್ನ ಮನವು-ಎನ್ನ ಚಿತ್ತವು.

.........................

೧ + ಉತ್ಪತ್ತಿ–ಆ ಫಲಪದಂಗಳ ಪಡೆದನುಭವಿಸಬೇಕೆಂದು ದೇಹವ ಧರಿಸಿಕೊಂಡು ಹುಟ್ಟಿಬಂದರೆ (ಕ, ಗ). ೨–೨ ದುರ್ಭೋಗ (ಕ, ಗ).

---

೪೯೧

**ವಾರವೆಂದಜಿಯೆ, ದಿನವೆಂದಜಿಯೆ, ಏನೆಂದಜಿಯೆನಯ್ಯಾ. ಇರುಳೆಂದಜಿಯೆ, ಹಗಲೆಂದಜಿಯೆ, ಏನೆಂದಜಿಯೆನಯ್ಯಾ. ನಿಮ್ಮುವ ಪೂಜಿಸಿ ಎನ್ನುವ ಮರೆದೆನು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - -

ವಾರವೆಂದು–ಏಲು ವಾರದೊಳಗೆಲ್ಲ ವಾರವೂ ಶಿವನಿಂದುಂಟಾದ ವಾರವೆಂದು ತಿಳಿದು ಲಿಂಗಪೂಜೆಯ ಮಾಡುವೆನಲ್ಲದೆ ಇಂಥ ವಾರದಲ್ಲಿ ಲಿಂಗಪೂಜೆಯ ಮಾಡಬೇಕು ಇಂಥ ವಾರದಲ್ಲಿ ಲಿಂಗಪೂಜೆಯ ಮಾಡಬಾರದೆಂಬಂಥದನ್ನು, ಅರಿಯೆ–ತಿಳಿಯೆನು. ದಿನವೆಂದು–ಏಳು ದಿನಂಗಳೊಳಗೆ ಎಲ್ಲ ದಿನಂಗಳೂ ಶಿವನಿಂದುಂಟಾದ ದಿನವೆಂದರಿದು ಲಿಂಗಪೂಜೆಯ ಮಾಡುವೆನಲ್ಲದೆ ಇಂಥ ದಿನದಲ್ಲಿ ಲಿಂಗಪೂಜೆಯ ಮಾಡಬೇಕು ಇಂಥ ದಿನದಲ್ಲಿ ಲಿಂಗಪೂಜೆಯನು ಮಾಡಬಾರದೆಂಬಂಥದನು, ಅರಿಯೆ–ತಿಳಿಯೆನು. ಏನೆಂದು–ಇವು ಮೊದಲಾದ ದಿನಕಾಲ ಕಲ್ಪಿತಂಗಳನು, ಅರಿಯೆನಯ್ಯಾ–ತಿಳಿಯೆನಯ್ಯಾ.

ಇರುಳೆಂದಜಿಯೆ–ಇರುಳು ನಾಲ್ಕು ಜಾವ ಸ್ವಪ್ನ ಸುಷುಪ್ತಿಯಲ್ಲಿ ಮೈಮರೆದೊಳಗುವಂಥದನು ತಿಳಿಯದೆ ಆ ಇಷ್ಟಲಿಂಗವನ್ನು ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಪ್ರಾಣಲಿಂಗದ ಶಿವಯೋಗನಿದ್ರಾಮುದ್ರೆಯೊಡನೆ ಕೂಡಿಪ್ಪೆನು. ಹಗಲೆಂದರಿಯೆ–ಹಗಲು ನಾಲ್ಕು ಜಾವ ಷಟ್ಕೃಷಿ ಉದ್ದಿಮೆ ವ್ಯಾಪಾರಂಗಳನು ಮಾಡುವಂಥದನು ತಿಳಿಯದೆ ಆ ಪ್ರಾಣಲಿಂಗವನೆ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಇಷ್ಟಲಿಂಗದ ಸತ್ಕ್ರಿಯೆಯೊಡನೆ ಕೂಡಿಪ್ಪೆನು. ಏನೆಂದು–ಇವು ಮೊದಲಾದ ಕಾಲಕಲ್ಪಿತಂಗಳನು, ಅರಿಯೆನಯ್ಯಾ–ತಿಳಿಯೆನಯ್ಯಾ. ನಿಮ್ಮವ ಪೂಜಿಸಿ–ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ, ಎನ್ನುವ–ಎನ್ನಂಗದ ಹಸಿವು ತೃಷೆ ವ್ಯಸನಾದಿಗಳನ್ನು, ಮರೆದೆನು–ವಿಸ್ಮೃತಿಯನ್ನೈದಿಸಿಬಿಟ್ಟೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

೪೯೨

**ನಿಮ್ಮ ನೋಟವನಂತ ಸುಖ, ಕೂಟ ಪರಮಸುಖವಯ್ಯಾ. ಅಷ್ಟಕೋಟಿರೋಮಂಗಳು ಕಂಗಳಾಗಿ ನೋಡುತಿರ್ದೆನು. ಕೂಡಲಸಂಗಮದೇವಾ, ನಿಮ್ಮ ನೋಡಿ ನೋಡಿ ಮನದಲ್ಲಿ ರತಿಹುಟ್ಟಿ ನಿಮಿರ್ದವೆನ್ನ ಪುಳಕಂಗಳು.**

I - - - - - - - - - - - - - - - - - - - - - - - - - - - - - - - - - - - - - - - - - - - - -

ನಿಮ್ಮ ನೋಟವನಂತ ಸುಖ : ನಿಮ್ಮ ನೋಟವು-ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ಅನಿಮಿಷದೃಷ್ಟಿಯಿಂ ನಿರೀಕ್ಷಣೆಯ ಮಾಡುವಂಥದೆ ನಿಮ್ಮ ನೋಟ, ಅನಂತಸುಖ-ಅದೇ ಅನೇಕ ಪರಿಣಾಮವು, ಕೂಟ ಪರಮಸುಖವಯ್ಯಾ : ಕೂಟ-ಆ ಲಿಂಗದಲ್ಲಿ ಸಮರಸವಾಗುವಂಥದೆ ಕೂಟವು, ಪರಮಸುಖವಯ್ಯಾ-ಅದೇ ಪರಮಪರಿಣಾಮವಯ್ಯಾ. ಅಷ್ಟಕೋಟಿರೋಮಂಗಳು-ತನುವಿನ ಎಂಟು ಕೋಟಿ ರೋಮಕೂಪಂಗಳು, ಕಂಗಳಾಗಿ-ನೇತ್ರಂಗಳಾಗಿ, ನೋಡುತಿರ್ದೆನು-ಅನಿಮಿಷದೃಷ್ಟಿಯಿಂ ನಿರೀಕ್ಷಣೆಯ ಮಾಡುತಿರ್ದೆನು.

ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ನೋಡಿ ನೋಡಿ-ಆ ಇಷ್ಟಲಿಂಗವನ್ನು ಅನಿಮಿಷದೃಷ್ಟಿಯಿಂ ನಿರೀಕ್ಷಣೆಯ ಮಾಡಿ ಮಾಡಿ, ಮನದಲ್ಲಿ-ಚಿತ್ತದಲ್ಲಿ, ರತಿಹುಟ್ಟಿ-ಆ ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಉದಯಿಸಿ, ಎನ್ನ ಪುಳಕಂಗಳು-ತನುವಿನ ಎಂಟು ಕೋಟಿ ರೋಮಕೂಪಂಗಳು, ನಿಮಿರ್ದುವು-ನೆಟ್ಟಗೆ ನಿಗತುಕೊಂಡು ದಬ್ಬಳಾಕೃತಿಯನೈದಿಪ್ಪವು.

---

೪೯೩

**ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿ ತುಂಬಿ, ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳಗಾನು ತುಂಬಿ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ : ವಚನದಲ್ಲಿ-ವಾಕ್ಯದ ಕರಣದಲ್ಲಿ, ನಿಮ್ಮ ನಾಮಾಮೃತ-ಅದ್ವಯ ಅಭಿಧಾನವಾದ ಪ್ರಣವಪಂಚಾಕ್ಷರ ಮಂತ್ರವೆಂಬ ಸುಧೆಯನ್ನು, ತುಂಬಿ-ಭರಿತವಾಗಿ, ನಯನದಲ್ಲಿ-ನೇತ್ರದಲ್ಲಿ, ನಿಮ್ಮ ಮೂರುತಿ ತುಂಬಿ-ನಿಮ್ಮ ಮೂರ್ತಿವಿಗ್ರಹವನ್ನು ಭರಿತವಾಗಿ, ಮನದಲ್ಲಿ-ಚಿತ್ತದಲ್ಲಿ, ನಿಮ್ಮ ನೆನಹು ತುಂಬಿ-ನಿಮ್ಮ ಲಿಂಗಧ್ಯಾನ ಲಿಂಗಸ್ಮರಣೆಯನೇ ಭರಿತವಾಗಿ, ಕಿವಿಯಲ್ಲಿ-ಶ್ರೋತ್ರದಲ್ಲಿ, ನಿಮ್ಮ ಕೀರ್ತಿ ತುಂಬಿ-ನಿಮ್ಮ ಮಹಿಮಾತಿಶಯವಾದ ಕೀರ್ತಿವಿಶೇಷವನ್ನು ಭರಿತವಾಗಿ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಚರಣ[ಕಮಲದೊಳಗೆ-] ನಿಮ್ಮ ಕಾಂತಿವೆತ್ತ ಪದಕಮಲಸ್ವರೂಪವಾದಿಷ್ಟಲಿಂಗದ ಪೂಜೆಯಲ್ಲಿ, ಆನು ತುಂಬಿ : ಆನು-ಸಂಗನಬಸವೇಶ್ವರನು, ತುಂಬಿ-ಭರಿತನಾಗಿ.

II- - - - - - - - - - - - - - - - - - - - - - - - - - - - - - - - - - - - - - - - - - - - -

ವಚನದಲ್ಲಿ [ನಿಮ್ಮ] ನಾಮಾಮೃತ ತುಂಬಿ-ವಾಕ್ಯದಲ್ಲಿ ಅದ್ವಯಾಭಿದಾನವಾದ ಪಂಚಾಕ್ಷರಿಮಂತ್ರವು ಪೂರವಿಸಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ-ನೇತ್ರದಲ್ಲಿ ಶಿವಲಿಂಗದ ವಿಗ್ರಹವು ಪೂರವಿಸಿ, ಮನದಲ್ಲಿ ನಿಮ್ಮ ನೆನಹು ತುಂಬಿ-ಮಾನಸದಲ್ಲಿ ಪ್ರಾಣಲಿಂಗದ ಸ್ಮರಣೆಯು ಪೂರವಿಸಿ, ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ-ಶ್ರವಣದಲ್ಲಿ ಲಿಂಗದ ಯಶಸ್ಸು ಪೂರವಿಸಿ,

ಕೂಡಲಸಂಗಮದೇವಾ ನಿಮ್ಮ ಚರಣ[ಕಮಲ]ದೊಳಗಾನು ತುಂಬಿ–ಎಲೆ ಪರಶಿವಲಿಂಗವೆ ನಿಮ್ಮ ಪಾದಾರವಿಂದದಲ್ಲಿ ಶರಣನಡಗಿಯೆಂಬುದರ್ಥ.

---

೪೯೪

**ಅಡಿಗಡಿಗೆ ಲಿಂಗವನಡರಡರಿ ನೋಡಿ ನೋಡಿ ಕಂಗಳಲ್ಲಿ ಕಡೆಗೋಡಿವರಿದವೆನಗಯ್ಯ, ಎನ್ನ ಅಶ್ರುಜಲಂಗಳು. ಆಣೆಕಲ್ಲ ರೂಹಿನಂತೆ, ಅರಗಿನ ಪುತ್ಥಳಿಯಂತೆ ತನು ಪುಳಕಿತವಾದ ಬೆಮರಬಿಂದುಗಳೆಲ್ಲವನು ಕೂಡಲಸಂಗನ ದರುಶನ ಸ್ಪರುಶನದಿಂದ ಮನವೊಲಿದು ನೆರೆವ ಭರವನೇನ ಹೇಳುವೆನಯ್ಯ !**

I - - - - - - - - - - - - - - - - - - - - - - - - - - - - - - - - - - - - - - - -

ಅಡಿಗಡಿಗೆ–ಅಡಿಯೆಂದರೆ ಕ್ರಿಯೆ, ಮತ್ತಡಿಯೆಂದರೆ ಜ್ಞಾನ, ಲಿಂಗವನು–ಜ್ಞಾನಕ್ರಿಯೆಗಳಲ್ಲಿ ಇಷ್ಟಪ್ರಾಣಲಿಂಗವನು, ಅಡರಡರಿ–ಸಂಬಂಧವ ಮಾಡಿಕೊಂಡು ಸಂಬಂಧವ ಮಾಡಿಕೊಂಡು, ನೋಡಿ–ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ನಾಸಿಕಾಗ್ರದೃಷ್ಟಿಯಿಂ ನಿರೀಕ್ಷಣೆಯ ಮಾಡಿ, ನೋಡಿ–ಪ್ರಾಣಲಿಂಗಕ್ಕೆ ಮಂತ್ರಜ್ಞಾನ ಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸಿ ಸುಜ್ಞಾನದೃಷ್ಟಿಯಿಂದ ನಿರೀಕ್ಷಣೆಯ ಮಾಡಿ, ಎನ್ನ ಅಶ್ರುಜಲಂಗಳು–ಎನ್ನಂತರಂಗದಲ್ಲಿ ಉಕ್ಕಿದ ಹರುಷಾನಂದ ಜಲಂಗಳು, ಕಂಗಳಲ್ಲಿ–ಎರಡು ಲೋಚನಂಗಳಲ್ಲಿ, ಕಡೆಗೋಡಿವರಿದವೆನಗಯ್ಯ–ಹೊರಸೂಸಿ ಧಾರಾವೃಷ್ಟಿಯಾಗಿ ಅಂಕುರಿಸಿದವಯ್ಯ.

ಆಣೆಕಲ್ಲ ರೂಹಿನಂತೆ–ಪಯೋಧರೋಪಲವೆಂಬುವಂಥದು ನಾದಾಕಾಶದ [೧]ಜ[೧]ಲದಿಂದ ಗಟ್ಟಿಗೊಂಡು ಭೂಮಿಯ ಮೇಲೆ ಬಿದ್ದು ನೋಡ ನೋಡಲು ಕರಗಿ ನೀರಕೂಡಿ ನೀರಾಗಿ ಹರಿದುಹೋದಹಾಂಗೆ ಅಂಗವು ಇಷ್ಟಲಿಂಗದಲ್ಲಿ ಕೂಡಿರ್ಪುದು, ಅರಗಿನ ಪುತ್ಥಳಿಯಂತೆ–ಲಾಕ್ಷದ ಬೊಂಬೆಯನ್ನು ಅಗ್ನಿಗೆ ಹಿಡಿದಲ್ಲಿ ಕರಗಿ ಹೇಂಗೆ ಶೀತಲವಾಗುತ್ತಿಹುದೋ ಹಾಂಗೆ ಮನಸ್ಸು ಪ್ರಾಣಲಿಂಗದಲ್ಲಿ ಕೂಡಿರ್ಪುದು.[೨] ತನು ಪುಳಕಿತವಾದ–ಅಂಗದ ಅಷ್ಟ ಕೋಟಿ ರೋಮಂಗಳೆಲ್ಲ ನೆಟ್ಟಗೆ ನಿಗುತುಕೊಂಡು ದಬ್ಬಳಾಕೃತಿಯನೈದಿಪ್ಪವು. ಕೂಡಲಸಂಗನ ದರುಶನ ಸ್ಪರುಶನದಿಂದ–ಪ್ರಾಣಲಿಂಗಕ್ಕೆ ಮಂತ್ರಧ್ಯಾನ ಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸುವುದರಿಂದ, ಬೆಮರ ಬಿಂದುಗಳೆಲ್ಲವನು–ಅಂತರಂಗದಲ್ಲಿ ಉಕ್ಕಿದ ಹರುಷಾನಂದಜಲಂಗಳು ಎರಡು ಲೋಚನಾಗ್ರದಿಂದ ಧಾರಾವೃಷ್ಟಿಯಾಗಿ [೩][ಸು][೩]ರಿಸುವುದರಿಂದ, ಮನವೊಲಿದು–ಚಿತ್ತವಿಟ್ಟು, ನೆರೆವ–ಅಂಗವು ಇಷ್ಟಲಿಂಗದಲ್ಲಿ ಪ್ರಾಣವು ಪ್ರಾಣಲಿಂಗದಲ್ಲಿ ಕೂಡುವ, ಭರವನು–ಚಮತ್ಕಾರವನು, ಏನು ಹೇಳುವೆನಯ್ಯ–ಎಂತೆಂದು ನಿರೂಪಿಸುವೆನಯ್ಯ.

.........................

೧–೧ ಬ (ಗ). ೨ + ಕೂಡಲಸಂಗನ ದರುಶನ ಸ್ಪರುಶನದಿಂದ–ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದ ಮುಟ್ಟಿ ಮುಟ್ಟಿ ಪೂಜಿಸುವುದರಿಂದ, ಆರಾಧಿಸುವುದರಿಂದ (ಕ, ಗ). ೩–೩ ಕೂ (ಕ); ಕು(ಗ).

---

**ತಾಳಮಾನ ಸರಿಸಮನಱಿಯೆ, ಓಜೆಬಜಾವಣೆಯ ಲೆಕ್ಕವನಱಿಯೆ, ಅಮೃತಗಣ ದೇವಗಣವನರಿಯೆ, ಕೂಡಲಸಂಗಮದೇವಾ ನಿಮಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ.**

I - - - - - - - - - - - - - - - - - - - - - - - - - - - - - - - - - - - - - - - - - - - -

ತಾಳಮಾನ ಸರಿಸಮನಱಿಯೆ : [ತಾಳ–] ನಾನೇನಾದರೂ ಕವಿತ್ವವ ಮಾಡಬೇಕಾದರೆ ಶಿವಕೊಟ್ಟ ಜ್ಞಾನದಿಂದ ಮಾಡುವೆನಲ್ಲದೆ, ತಾಳ–ಅಡತಾಳ ತ್ರಿವಿಡೆ ರೂಪು ಸೀಸಕಪದ್ಯ ಅರ್ಧರೇಕು ಝಂಪಿಯ ತಾಳ ಮೊದಲಾದ ಸಮಸ್ತ ತಾಳದೊಳಗೊಂಡು ತಾಳವನಾದರೂ, ಇಷ್ಟು ಕವಿತ್ವವ ಮಾಡುವಂಥದನ್ನು, ಅಱಿಯೆ–ತಿಳಿಯೆನು. ಮಾನ–ರಾಜಸಭೆ ದೇವಸಭೆ ಮೊದಲಾದ ಸಮಸ್ತರಲ್ಲಿ ಪೂಜ್ಯವಾಗಿರಲೆಂದು ಕವಿತ್ವವ ಮಾಡುವಂಥದನ್ನು, ಅಱಿಯೆ–ತಿಳಿಯೆನು. ಸರಿಸಮನು–ನಾನು ಮಾಡುವಂಥ ಕವಿತ್ವವು ಒಂದಾನೊಂದು ರಸದಾಳಿಕಬ್ಬು. ಸುಲಿದಹಾಂಗೆ ಬಾಳೆಹಣ್ಣಿನೋಪಾದಿಯಲ್ಲಿ ಗಂಟು ಗೊಜಡೇನೂ ಇಲ್ಲದೆ ಬಾಲವೃದ್ಧರ ಜಿಹ್ವೆಗೆ ನೇರಿತ್ತಾಗಿರಲೆಂದು ಕವಿತ್ವವ ಮಾಡುವಂಥದನ್ನು, ಅಱಿಯೆ–ತಿಳಿಯೆನು. ಓಜೆ–ಎಲ್ಲರಲ್ಲಿಯೂ ಈ ನುಡಿ ಱೀವಿಯಾಗಿರಲೆಂದು ಕವಿತ್ವವ ಮಾಡುವಂಥದನ್ನು, ಅಱಿಯೆ–ತಿಳಿಯೆನು. ಬಜಾವಣೆಯ–ಮೂವತ್ತೆರಡುರಾಗ ಅರುವತ್ತನಾಲ್ಕು ಮಿಶ್ರಸಮಸ್ತಸ್ವರ ವಚನಂಗಳು ಯುಕ್ತವಾಗಿ ಕವಿತ್ವವ ಮಾಡುವಂಥದನ್ನು, ಅರಿಯೆ–ತಿಳಿಯೆನು. ಬಜಾವಣೆಯ–ಮೂವತ್ತೆರಡುರಾಗ ಅರುವತ್ತುನಾಲ್ಕು ಮಿಶ್ರಸಮಸ್ತಸ್ವರ ವಚನಂಗಳು ಯಕ್ತವಾಗಿ ಕವಿತ್ವವ ಮಾಡುವಂಥದನ್ನು, ಅಱಿಯೆ–ತಿಳಿಯೆನು. ಲೆಕ್ಕವನು–ಕಂದಕ್ಕೆ ಅಕ್ಷರ ಇಷ್ಟು ವೃತ್ತಕ್ಕೆ ಅಕ್ಷರ ಇಷ್ಟು ಗದ್ಯಕ್ಕೆ ಅಕ್ಷರ ಇಷ್ಟು ಪದ್ಯಕ್ಕೆ ಅಕ್ಷರ ಇಷ್ಟೆಂದು ಗಣನೆಯುಕ್ತವಾಗಿ ಕವಿತ್ವವ ಮಾಡುವಂಥದನ್ನು, ಅಱಿಯೆ–ತಿಳಿಯೆನು. ಅಮೃತಗಣ ದೇವಗಣವನು–ದೇವತೆಗಳ ಮೇಲೆ ಕವಿತ್ವವ ಮಾಡಬೇಕಾದರೆ ದೇವಗಣವಿಟ್ಟು ಕವಿತವ ಮಾಡಬೇಕು. ನರದೊರೆಗಳ ಮೇಲೆ ಕವಿತ್ವವ ಮಾಡಬೇಕಾದರೆ ಅಮೃತಗಣವಿಟ್ಟು ಕವಿತ್ವವ ಮಾಡಬೇಕು. ತಪ್ಪುಗಣ ಅರಸಮಾಸವಿಟ್ಟು ಕವಿತ್ವವ ಮಾಡಿದರೆ ಮಾಡಿದವರಿಗಾದರೂ ಅರಿಷ್ಟಬಡಿವುದು. ಅದು ಕಾರಣ ನಾನು ಅಮೃತಗಣ ದೇವಗಣವ[೧]ನಿಟ್ಟು[೧] ಕವಿತ್ವವ ಮಾಡುವಂಥದನು, ಅಱಿಯೆ–ತಿಳಿಯೆನು.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮಗೆ–ಪರಶಿವಲಿಂಗಕ್ಕೆ, ಕೇಡಿಲ್ಲವಾಗಿ–ನಾಶವಿಲ್ಲವಾಗಿ, ಆನು–ಸಂಗನಬಸವೇಶ್ವರನು, ಒಲಿದಂತೆ–ಮನಸಿಗೆ ಪ್ರೀತಿಯಾದ ಹಾಂಗೆ, ಹಾಡುವೆ–ಕಂದ ವೃತ್ತ ಗದ್ಯಪದ್ಯ ಪ್ರಬಂಧಗಳಿಂದಾ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುವೆನು.

..........................

೧–೧ ಬಿಟ್ಟು (ಕ).

II- - - - - - - - - - - - - - - - - - - - - - - - - - - - - - - - - - - - - - - - - - - -

ತಾಳಮಾನ ಸರಿಸವ ನಾನಱಿಯೆ–ಸಪ್ತ ತಾಳಂಗಳ ಪೂಜ್ಯವಾದ ನೇರಿತ್ತವನು ನಾ ತಿಳಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ–ಈ ಪತ್ರೆಗೆ ಈ ಫಲ ಈ ಪುಷ್ಪಕ್ಕೆ ಈ ಫಲ ಈ ಧೂಪಕ್ಕೀ ಫಲ ಈ ದೀಪಕ್ಕೀ ಫಲವೆಂದು ಗಣಿಸಿ ಗುಣಿಸಿ ಲಿಂಗಪೂಜಾಕ್ರೀಗಳ ಮಾಡುವ ಸಿದ್ಧಾಂತವನು ತಿಳಿಯೆ.

V- - - - - - - - - - - - - - - - - - - - - - - - - - - - - - - - - - - - - - - - - - - - -

ಓಜೆ ಬಜಾವಣೆಯ–ಒಡ್ಡು ಪ್ರಸ್ತಾರದ.

---

೪೯೬

**ವರಂ ಪ್ರಾಣಪರಿತ್ಯಾಗಶ್ಛೇದನಂ ಶಿರಸೋಽಪಿವಾ। ನತ್ವನಭ್ಯರ್ಚ್ಯ ಭುಂಜೀಯಾದ್ಭಗವಂತಂ ತ್ರಿಲೋಚನಂ॥ ಎಂದುದಾಗಿ, ದೇಹಧರ್ಮ ತಾನಾದಂತಾಗಲಿ, ಕೂಡಲಸಂಗಮದೇವರ ಪೂಜಿಸಿದಲ್ಲದೆ ನಿಲಲಾಱೆನು.**

I - - - - - - - - - - - - - - - - - - - - - - - - - - - - - - - - - - - - - - - - - - - - -

ವರಂ ಪ್ರಾಣಪರಿತ್ಯಾಗಶ್ಛೇದನಂ ಶಿರಸೋಽಪಿವಾ : ಶಿರ–ಮಸ್ತಕವು, ಛೇದನಂ–ಛೇದನವಾಗಿ ಹೋಗಿ, ಪ್ರಾಣ–ಹರಣವು, ಪರಿತ್ಯಾಗಃ–ಬಿಡುಗಡೆಯಾಗಿ ಹೋದರೂ, ವರಂ–ಬಹುಶ್ರೇಷ್ಠವು, ನತ್ವನಭ್ಯರ್ಚ ಭುಂಜೀಯಾತ್ ಭಗವಂತಂ ತ್ರಿಲೋಚನಂ : ಭಗವಂತಂ–ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳ, ತ್ರೀಲೋಚನಂ–ಸೋಮ ಸೂರ್ಯಾಗ್ನಿಗಳೇ ಲೋಚನವುಳ್ಳಂಥ ಪರಶಿವಲಿಂಗವನ್ನು, ೧ಅನಭ್ಯರ್ಚ್ಯ–ಪೂಜಿಸದೆ, ನ ಭುಂಜೀಯಾತ್–ಅನ್ನೋದಕಾದಿಗಳನ್ನು ಅನುಭವಿಸಲಾಗದು. ಎಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿದುದಾದ ಕಾರಣ, ದೇಹಧರ್ಮ–ಅಂಗದ ನಡಾವಳಿಯು, ತಾನಾದಂತಾಗಲಿ–ಕೀತು ಬಾತು ಕೊಳೆತು ಬಸ್ತುಹೊಂದರೂ ಹೋಗಲಿ, ಕೂಡಲಸಂಗಮದೇವರ–ಇಷ್ಟಮಹಾಲಿಂಗವನ್ನು, ಪೂಜಿಸಿದಲ್ಲದೆ–ಅಷ್ಟ ವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿದಲ್ಲದೆ, ನಿಲಲಾಱೆನು–ತರಹರಿಸಲಾರೆನು.

..........................

೧ + ನತ್ವ–ನಕಸ್ಕರಿಸದೆ (ಕ, ಗ)

---

೪೯೭

**ಸುರರು ಕಿನ್ನರರು ಕಿಂಪುರುಷರೆಂಬವರನಾರು ಬಲ್ಲರು? ಎನ್ನ ಚಿತ್ತವು ನಿಮ್ಮ ಮೇಲೆ ಲಿಂಗಯ್ಯಾ. ಎನ್ನ ಚಿತ್ತವು ನಿಮ್ಮ ಮೇಲೆ ಸಂಗಯ್ಯಾ. ಕೂಡಲಸಂಗದಮೇವಾ ಅನ್ಯವೆಂದುದೆ ನಾನಱಿಯೆನಯ್ಯ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಸುರರು–ಮೂವತ್ತುಮೂರುಕೋಟಿ ದೇವತೆಗಳು, ಕಿನ್ನರರು–'ಕಿಂಚಿತ್ ನರಃ ಕಿನ್ನರಃ' ಎಂದು ಮುಖವೇ ಪುರುಷಾಕಾರ ದೇಹವೇ ಮೃಗಾಕಾರವಾಗಿರುವಂಥವರೇ ಕಿನ್ನರ ದೇವತೆಗಳು, ಕಿಂಪುರುಷರು–"ಕಿಂಪುರುಷ ಕಿನ್ನರಃ" ಎಂದು ಮುಖವೇ ಮೃಗಾಕಾರ ದೇಹವೇ ಪುರುಷಾಕಾರವಾಗಿರುವಂಥವರೇ ಕಿಂಪುರುಷ ದೇವತೆಗಳು, ಎಂಬವರ–ಹೀಂಗೆಂದು ಹೇಳುವಂಥವರ, ಆರು ಬಲ್ಲರು ?–ಯಾರು ಅರಿದು ಬಲ್ಲರು?

ಎನ್ನ ಚಿತ್ತವು–ಎನ್ನ ಮನಸ್ಸು, ನಿಮ್ಮ ಮೇಲೆ–ನಿಮ್ಮ ಲಿಂಗಧ್ಯಾನ ಲಿಂಗಸ್ಮರಣೆಯೊಡನೆ ಕೂಡಿರ್ಪುದು. ಲಿಂಗಯ್ಯ–ಎಲೆಪರಶಿವಲಿಂಗವೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನ್ನ ಚಿತ್ತವು–ಎನ್ನ ಮನಸ್ಸು, ನಿಮ್ಮ ಮೇಲೆ–ನಿಮ್ಮ ಲಿಂಗಲಿಂಗಸಧ್ಯಾನ್ಮರಣೆಯೊಡನೆ ಕೂಡಿರ್ಪುದ ಸಂಗಯ್ಯಾ–ಎಲೆ ಪರಶಿವಲಿಂಗವೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಅನ್ಯವೆಂಬುದ–ಇತರ ದೈವದ ಭಜನೆಯ ಮಾಡಬೇಕೆಂಬಂಥದನು ನಾನಱಿಯೆನಯ್ಯಾ–ನಾ ತಿಳಿಯೆನಯ್ಯಾ.

---

೪೯೮

**ಮಂಡೆಯ ಬೋಳಿಸಿಕೊಂಡು ಗಂಡುದೊತ್ತುವೊಕ್ಕೆನಯ್ಯಾ. ಲಜ್ಜೆಗೆಟ್ಟಾದಡೂ ಲಿಂಗವನೊಲಿಸುವೆ, ನಾಣುಗೆಟ್ಟಾದಡೂ ಲಿಂಗವನೊಲಿಸುವೆ. ಕೆಲದ ಸಂಸಾರಿಗಳು ನಗುತಿರ್ದಡಿರಲಿ, ಕೂಡಲಸಂಗಮದೇವಂಗೆ ಶರಣುಗತಿವೊಕ್ಕೆನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಮಂಡೆಯ ಬೋಳಿಸಿಕೊಂಡು–ಪತ್ರಿ ಪುಷ್ಪವ ಎಡೆಮಾಡುವಲ್ಲಿ ಪದಾರ್ಥವ ಎಡೆಮಾಡುವಲ್ಲಿ ಗಡ್ಡ ಮಂಡೆಯ ಕೂದಲು ಜಳುಪಿಸಿ ಬಿದ್ದಾವಲಾಯೆಂದು ಗಡ್ಡ ಮಂಡೆಯ ಕೂದಲಗಳನ್ನು ವಪನಕ್ರಿಯೆಗಳ ಮಾಡಿಸಿಕೊಂಡು, ಗಂಡುದೊತ್ತುವೊಕ್ಕೆನಯ್ಯಾ–ಮೀಸೆಗೌಡಿ ಮೀಸೆಗುಲಾಮನಾಗಿ ಪರಾಕ್ರಮ ಮುಂದುಗೊಂಡು ಏಕಲಿಂಗನಿಷ್ಠಾಪರತ್ವವನ್ನು ಮುಂದುಮಾಡಿಕೊಂಡು ಲಿಂಗಪೂಜೆಯ ಮಾಡುತ್ತಿರ್ಪೆನು. ಲಜ್ಜೆಗೆಟ್ಟಾದಡೂ–ಕ್ರಿಯಾಭಿಮಾನವ ಹೋಗಲಾಡಿಸಿಕೊಂಡಾದರೂ, ಲಿಂಗವನೊಲಿಸುವೆ–ಲಿಂಗಪೂಜೆಯ ಮಾಡಿ ಲಿಂಗದ ಕರುಣವನ್ನು ಹಡೆದುಕೊಂಬುವೆನು. ನಾಣಗೆಟ್ಟಾದಡೂ–ಜ್ಞಾನಾಭಿಮಾನವ ಹೋಗಲಾಡಿಸಿಕೊಂಡಾದರೂ ಲಿಂಗವನೊಲಿಸುವೆ–ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆದುಕೊಂಬುವೆನು.

ಕೆಲದ ಸಂಸಾರಿಗಳು–ರಾಘವಾಂಕಯ್ಯಗಳ ಹಾಂಗೆ ಅನಿಮಿಷಯ್ಯಗಳ ಹಾಂಗೆ ನೀಲಲೋಚನೆಯಮ್ಮನವರ ಹಾಂಗೆ ಏಕಾಗ್ರಚಿತ್ತದಿಂದೆಚ್ಚತ್ತು ಲಿಂಗಪೂಜೆಯ ಮಾಡಿ ಏನು ? ಕಾಯವ ಧರಿಸಿ ಕೈಲಾಸಕ್ಕೆ ಹೋದಾನೋ, ಕೈಲಾಸವನ್ನು ಸೂರೆಗೊಂಡಾನೊ, ಏನೊ ? ಲಿಂಗದಲ್ಲಿ ನಿರ್ವಯಲಾಗಿ ನಿಜಸಮಾಧಿಯನ್ನು ಒಡಗೂಡಿ ಬೆರದಾನೋ ಏನೋ ? ಕಾಣಬಾರದೆಂದು ಎಡಬಲದಲ್ಲಿದ್ದ, ಕೆಲದ ಸಂಸಾರಿಗಳು–ಉಪಾಧಿಕರೆಂಬ ಗಾಂಪಧಾರಿಗಳು, ನಗುತ್ತಿರ್ದಡಿರಲಿ–ಗಹಗಹಿಸಿ ಹಾಸ್ಯೋಪಮಾನವ ಮಾಡಿದರೂ ಮಾಡಲಿ, ಕೂಡಲಸಂಗಮದೇವಂಗೆ–ಪರಶಿವಲಿಂಗಕ್ಕೆ, ಶರಣು–ಲಿಂಗಪೂಜೆಯ ಮಾಡಿ ಲಿಂಗಕೆ ನಮಸ್ಕರಿಸಿ, ಗತಿವೊಕ್ಕೆನಯ್ಯಾ–ಗತಿಮತಿಚೈತನ್ಯ ನೀನೆಂದು ಮೊರೆಬಿದ್ದಿಪ್ಪನಯ್ಯಾ.

---

೪೯೯

**ಎನಗೆ ನಿಮ್ಮ ನೆನಹಾದಾಗಲೇ ಉದಯ, ಎನಗೆ ನಿಮ್ಮ [1] ಮರಹಾದಾಗಲೇ ಅಸ್ತಮಾನ, ಎನಗೆ ನಿಮ್ಮ ನೆನಹವೇ ಜೀವನ. ಎನಗೆ ನಿಮ್ಮ ನೆನಹವೇ ಪ್ರಾಣ ಕಾಣಾ ತಂದೆ. [2]ಸ್ವಾಮಿ[2] ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ, ವದನದಲ್ಲಿ ಷಡಕ್ಷರಿಯ ಬರೆಯಯ್ಯಾ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಎನಗೆ ನಿಮ್ಮ ನೆನಹಾದಾಗಲೇ–[೧]ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಿದಾಗಲೇ, ಉದಯ–ಸೂರ್ಯೋದಯವಾಗುತ್ತಿಹುದು, ಎನಗೆ–ಶರಣನಿಗೆ, ನಿಮ್ಮ ಮಱಹಾದಾಗಲೇ–ನಿಮ್ಮ ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದನು ವಿಸ್ಮೃತಿಯನೈದಿಸಿ ಬಿಟ್ಟಾಗಲೇ, ಅಸ್ತಮಾನ–ಸಾಯಂಕಾಲವಾಗುತ್ತಿಹುದೆಂಬುದರ್ಥ. ಎನಗೆ–ಜ್ಞಾನಕಲಾತ್ಮನಿಗೆ, ನಿಮ್ಮ ನೆನಹಾದಾಗಲೇ–[೨]ಲಿಂಗಧ್ಯಾನ ಲಿಂಗಸ್ಮರಣೆಯ ಮಾಡಿದಾಗಲೇ, ಉದಯ–ಅಂತರಂಗದಲ್ಲಿ ಜ್ಞಾನೋದಯವಾಗುತ್ತಿಹುದು, ಎನಗೆ–ಜ್ಞಾನಕಲಾತ್ಮನಿಗೆ, ನಿಮ್ಮ ಮಱಹಾದಾಗಲೇ–[೨]ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದನ್ನು ವಿಸ್ಮೃತಿಯ ನೈನಿದಿಬಿಟ್ಟಾಗಲೇ, ಅಸ್ತಮಾನ–ಅಜ್ಞಾನ ಹುಟ್ಟುತ್ತಿಹುದು.

ಎನಗೆ–ಜ್ಞಾನಕಲಾತ್ಮನಿಗೆ, ನಿಮ್ಮ ನೆನಹವೇ–[೨]ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದೇ, ಜೀವನ–ಜೀವಚೈತನ್ಯವಾಗಿಪ್ಪುದು. ಎನಗೆ ಜ್ಞಾನಕಲಾತ್ಮನಿಗೆ. ನಿಮ್ಮ ನೆನಹವೇ–[೨]ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದೇ, ಪ್ರಾಣಾಕಾಣಾ–ಹರಣ ಚೈತನ್ಯವಾಗಿಪ್ಪುದು ಕಂಡಾ, ತಂದೆ–ಎನ್ನಾತ್ಮ ಜನಕನೆ. ಸ್ವಾಮಿ–ಎಲೆ ಕರ್ತನೇ, ಎನ್ನ ಹೃದಯದಲ್ಲಿ–ಎನ್ನಂತರಂಗದಲ್ಲಿ, ನಿಮ್ಮ ಚರಣದುಂಡಿಗೆಯನೊತ್ತಯ್ಯಾ–ನಿಮ್ಮ ಪದಕಮಲಸ್ವರೂಪವಾದ ಇಷ್ಟಲಿಂಗಸಂಬಂಧವ ಮಾಡಿಕೊಡಯ್ಯ. ವದನದಲ್ಲಿ–ರಸನೇಂದ್ರಿಯದಲ್ಲಿ, ಷಡಕ್ಷರಿಯ ಬರೆಯಯ್ಯಾ–ಷಡಕ್ಷರಮಂತ್ರಸಂಬಂಧವ ಮಾಡಿಕೊಡಯ್ಯ ಎಂಬುದರ್ಥ.

● ಎನಗೆ–ಶರಣನಿಗೆ, ನಿಮ್ಮ ನೆನಹಾದಾಗಲೇ–ನಿಮಗೆ ಜಗದ್ವೈಭವ ಲೀಲಾವಿನೋದ ನೆನಹುದೋರಿದಾಗ, ಉದಯ–ನಾನು ದೇಹವ ಧರಿಸಿಕೊಂಡು ಉತ್ಪತ್ಯವಾಗುತ್ತಿಹೆನು. ಎನಗೆ–ಶರಣನಿಗೆ, ನಿಮ್ಮ ಮಱಹಾದಾಗಲೇ–ನಿಮಗೆ ಜಗದ್ವೈಭವಲೀಲಾವಿನೋದದ ನೆನಹು ನಿಃಪತಿಯಾದಾಗ, ಅಸ್ತಮಾನ–ನಾನು ದೇಹವ ಬಿಡುತ್ತಿಹೆನು, ಎನಗೆ–ಶರಣನಿಗೆ, ನಿಮ್ಮ ನೆನಹವೇ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದೇ ಜೀವನ–ಜೀವಾತ್ಮನೆಂಬಂಗದಲ್ಲಿ ಇಷ್ಟಲಿಂಗಸಂಬಂಧವಾಗಿಪ್ಪುದು.

ಎನಗೆ–ಶರಣನಿಗೆ, ನಿಮ್ಮ ನೆನಹವೇ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದೇ, ಪ್ರಾಣಕಾಣಾ–ಪ್ರಾಣದಲ್ಲಿ ಪ್ರಾಣಲಿಂಗಸಂಬಂಧಿವಾಗಿಪ್ಪುದು ಕಂಡಾ, ತಂದೆ–ಎನ್ನಾತ್ಮ ಜನಕನೆ, ಸ್ವಾಮಿ–ಎಲೆ ಕರ್ತನೆ, ಎನ್ನ ಹೃದಯದಲ್ಲಿ–ಎನ್ನಾತ್ಮಾಂಗದಲ್ಲಿ, ನಿಮ್ಮ ಚರಣದುಂಡಿಗೆಯನೊತ್ತಯ್ಯಾ–ನಿಮ್ಮ ಚರಣಕಮಲಸ್ವರೂಪವಾದ ಭಾವಲಿಂಗಸವಂಬಂಧವ ಮಾಡಿಕೊಡಯ್ಯಾ, ವದನದಲ್ಲಿ–ಷಡೇಂದ್ರಿಯಂಗಳಲ್ಲಿ, ಷಡಕ್ಷರಿಯ ಬರೆಯಯ್ಯಾ–ಷಡಕ್ಷರ ಮಂತ್ರಸ್ವರೂಪವಾದ ಷಡ್ವಿಧಲಿಂಗಸಂಬಂಧವ ಮಾಡಿಕೊಡಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ,

........................

೧ + ನಿಮ್ಮ (ಕ, ಗ). ೨ + ನಿಮ್ಮ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಎನಗೆ ನಿಮ್ಮ ನೆನಹಾದಾಗಲೇ ಉದಯ–ಪ್ರಾಣಲಿಂಗಿಗೆ ಚಿದ್ಬಿಂದು ಉಕಾರ ಇಷ್ಟಲಿಂಗ ಕ್ರಿಯಾಗುರುವಿನ ಸ್ಮರಣೆವುಂಟಾದಾಗವೇ ಶ್ರೀಗುರುವಿನ ಕರಗರ್ಭವೆಂಬ ನಿರ್ಯೋನಿಯಲ್ಲಿ ಸಂಜನನವು. ಎನಗೆ ನಿಮ್ಮ ಮಱಹಾದಾಗಲೇ ಅಸ್ತಮಾನ–ಪ್ರಾಣಲಿಂಗಿಗೆ ನಿಮ್ಮ ಸ್ಮರಣೆ ನಿಷ್ಪತ್ತಿಯಾದಾಗವೇ ಶಿವತತ್ವಸ್ವರೂಪವಾದ ಜಂಗಮದಲ್ಲೇಕಾರ್ಥವು. ಎನಗೆ ನಿಮ್ಮ ನೆನಹವೇ ಜೀವ–ಪ್ರಾಣಲಿಂಗಿಗೆ ಚಿತ್ಕಲೆ ಮಕಾರ ಭಾವಲಿಂಗ ಜ್ಞಾನಗುರುವಿನ ಸ್ಮರಣೆಯೇ ಆತ್ಮಚೈತನ್ಯವು. ಎನಗೆ ನಿಮ್ಮ ನೆನಹವೇ ಪ್ರಾಣ ಕಾಣಾ ತಂದೆ–ಪ್ರಾಣಲಿಂಗಿಗೆ ಚಿನ್ನಾದಾಕಾರ ಪ್ರಾಣಲಿಂಗ ಶಿಕ್ಷಾಗುರುವಿನ ಸ್ಮರಣೆಯೇ ಹರಣ ಚೈತನ್ಯವು ನೋಡಾ ಒಡೆಯನಾದ ಗುರುಮೂರ್ತಿಯೇ. ಸ್ವಾಮಿ–ತ್ರಿವಿಧಲಿಂಗಾನುಭಾವಿಗಳೆಂಬ ಗುರುಸ್ವಾಮಿಗಳು, ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ–ನಿಜಾಂತರಂಗದಲ್ಲಿ ನಿಮ್ಮ ಕ್ರಿಯಾಜ್ಞಾನಭಾವಾಚರಣೆಯನುಳ್ಳ ಅಕಾಕ ಉಕಾರ ಮಕಾರಂಗಳೊಂದುಗೂಡಿದುದೇ ಓಂಕಾರ ಪ್ರಣವವು. ಆ ಓಂಕಾರ ಪ್ರಣವವನೆ ಮಹಾಲಿಂಗವಾಗಿ ಅಂಕಿಸಯ್ಯಾ. ವದನದಲ್ಲಿ ಷಡಕ್ಷರಿಯ ಬರೆಯಯ್ಯಾ ಕೂಡಲಸಂಗಮದೇವಾ–ಷಡೀಂದ್ರಿಯಂಗಳ ದ್ವಾರದಲ್ಲಿ ಷಡಕ್ಷರಿ ಮಂತ್ರವನೆ ಷಡ್ವಿಧವಾಗಿ ಲಿಖಿಸಯ್ಯಾ.

IV- - - - - - - - - - - - - - - - - - - - - - - - - - - - - - - - - - - - - - - - -

1 + ಚರಣ (ತ). 2–2 x (ತ).

..........................

ಜ್ಞಾನೋದಯದಿಂದ ಶಿವಾಪೇಕ್ಷೆಯ ಚಿಂತನೆವಿಡಿದು ಗುರೂಪಾವಸ್ಥೆಯ ಮಾಡಿ ಲಿಂಗವನಂಗದಲ್ಲಿ ಶಿವಮಂತ್ರವ ಜಿಹ್ವೆಯಲ್ಲಿ ಕರುಣಿಸಿ ಸಲಹೆಂದು ಬಿನ್ನೈಸಿದ ಶಿಷ್ಯನ ಬಿನ್ನಹವೆಂಬುದೀ ವಚನದ ತಾತ್ಪರ್ಯಾರ್ಥ.

---

೫೦೦

**ಎನ್ನ ಕಾಯವ ದಂಡಿಗೆಯ ಮಾಡಯ್ಯಾ. ಎನ್ನ ಶಿರವ ಸೋರೆಯ ಮಾಡಯ್ಯಾ. ಎನ್ನ ನರವ ತಂತಿಯ ಮಾಡಯ್ಯಾ. ಎನ್ನ ಬೆರಳು ಕಡ್ಡಿಯ ಮಾಡಯ್ಯಾ. ಬತ್ತೀಸರಾಗವ ಹಾಡಯ್ಯಾ, ಉರದಲೊತ್ತಿ ಬಾಜಿಸು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - -

ಎನ್ನ ಕಾಯವ ದಂಡಿಗೆಯ ಮಾಡಯ್ಯಾ : ಎನ್ನ ಕಾಯವ–ಎನ್ನ ದೇಹವನು, ದಂಡಿಗೆಯ ಮಾಡಯ್ಯಾ–ದಂಡಿಗೆ ಹೋಳವ ಮಾಡಿ ಅಳವಡಿಸಿ ಕೊಳ್ಳಯ್ಯಾ. ಎನ್ನ ಶಿರವ–ಎನ್ನ ಮಸ್ತಕವನ್ನು, ಸೋರೆಯ ಮಾಡಯ್ಯಾ–ಸೋರೆ ಬರುಡಿಯ ಮಾಡಿ ಅಳವಡಿಸಿಕೊಳ್ಳಯ್ಯಾ. ಎನ್ನ ನರವ–ಎನ್ನ ನಾಡಿಗಳನು, ತಂತಿಯ ಮಾಡಯ್ಯಾ–ಉಕ್ಕಿನ ತಂತಿ ಹಿತ್ತಾಳಿಯ ತಂತಿ ತಾಮ್ರದ ತಂತಿ ಪಟ್ಟುದಾರ ಪಂಚಲೋಹದ ತಂತಿಗಳಾಗಿ ಅಳವಡಿಸಿಕೊಳ್ಳಯ್ಯಾ. ಎನ್ನ ಬೆರಳು–ಎನ್ನಂಗುಲಿಗಳನು, ಕಡ್ಡಿಯ ಮಾಡಯ್ಯಾ–ಬಿರಡಿಗಳಾಗಿ ಅಳವಡಿಸಿಕೊಳ್ಳಯ್ಯಾ. ಬತ್ತೀಸರಾಗವ ಹಾಡಯ್ಯಾ–ಮೂವತ್ತೆರಡು ರಾಗ ಅಱುವತ್ತುನಾಲ್ಕು ಮಿಶ್ರಯುಕ್ತವಾದ ಸಮಸ್ತಸ್ವರವಚನಂಗಳಿಂದ ರಾಗರಚನೆಯನ್ನು ಪಾಡಯ್ಯಾ.

ಉರದಲೊತ್ತಿ–ಎದೆಯಮೇಲೆ–ಮಡುಗಿಕೊಂಡು, ಬಾಜಿಸು–ನುಡಿಸಯ್ಯ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನ ಕಾಯವ ದಂಡಿಗೆಯ ಮಾಡಯ್ಯಾ–ಎನ್ನಾಚರಾಂಗವನು ಅಷ್ಟಾಂಗಪ್ರಣೀತನಾಗಿ ನಮಸ್ಕರಿಸುವಲ್ಲಿ ಅದನೇ ದಂಡಿಗೆಯಾಗಿ ಅಳವಡಿಸಯ್ಯಾ. ಎನ್ನ ಶಿರವ ಸೋರೆಯ ಮಾಡಯ್ಯಾ–ಎನ್ನ ಮಸ್ತಕವನು ಜ್ಞಾನಪಾತ್ರೆಯ ಮಾಡಯ್ಯಾ. ಎನ್ನ ನರವ ತಂತಿಯ ಮಾಡಯ್ಯಾ–ಎನ್ನ ಕರಂಗಳನು ಪ್ರಣವಧ್ವಾನಕಾರ ತಂತ್ರಿಣಿಗಳ ಮಾಡಯ್ಯಾ. ಎನ್ನ ಬೆರಳಕಡ್ಡಿಯ ಮಾಡಯ್ಯಾ–ಎನ್ನ ಅಂಗುಲಿಗಳನೆ ಪರಮಕಾಷ್ಠಿಯ ಮಾಡಯ್ಯಾ. ಬತ್ತೀಸರಾಗವ ಹಾಡಯ್ಯಾ–೩೨ ನೇಮಕ್ರೀಗಳನೆ ಸ್ತೋತ್ರಂಗಳ ಮಾಡಯ್ಯಾ. ಉರದಲೊತ್ತಿ ಬಾರಿಸು ಕೂಡಲಸಂಗಮದೇವಾ–ಅಂತರಂಗವೆಂಬ ವಕ್ಷಸ್ಥಳದಲ್ಲಿ ಒತ್ತಿ ಹಿಡಿದು ಬಜಾವಣೆಯ ಮಾಡು ಎಲೆ ಪರಶಿವಲಿಂಗವೆ.

V- - - - - - - - - - - - - - - - - - - - - - - - - - - - - - - - - - - - - - - - - - - -

ಎನ್ನ ಕಾಯವ ದಂಡಿಗೆಯ ಮಾಡಯ್ಯಾ–ಎನ್ನ ಸ್ಥೂಲತನುವನು ಇಷ್ಟಲಿಂಗದ ಸಾವಧಾನಮೂಲಸೂತ್ರವಾದಾಚಾರಾಂಗವ ದಂಡಿಗೆಯಾಗಳವಡಿಸಯ್ಯಾ. ಎನ್ನ ಶಿರವ–ಎನ್ನ ಮಸ್ತಕವನು. ಎನ್ನ ಜ್ಞಾನಸ್ವರೂಪ ಪ್ರಣವಲಿಂಗಕ್ಕೆ, ಸೋರೆಯ ಮಾಡಯ್ಯಾ–ಸೂಕ್ಷ್ಮತನುವನು ಪಾತ್ರವಾಗಳವಡಿಸಯ್ಯಾ. ಎನ್ನ ನರವ ತಂತಿಯ ಮಾಡಯ್ಯಾ–ಎನ್ನ ದಶನಾಡಿಗಳನು ಸ್ವಾನುಭಾವಸೂತ್ರವಾಗಳವಡಿಸಯ್ಯಾ. ಎನ್ನ ಬೆರಳ ಕಡ್ಡಿಯ ಮಾಡಯ್ಯಾ–ದಶವಿಧಕಲ್ಯಾಣಗುಣ ಸಂಬಂಧವಾದಂಗುಳಿಗಳನು ಕಡ್ಡಿಯಾಗಳವಡಿಸಯ್ಯಾ. 'ಪಂಚಾಕ್ಷರಂ ಪಂಚಾಂಗುಲ್ಯಂ ಮಧ್ಯಪ್ರಣವ ಪೀಠಿಕಾ' ಎಂದು ಪಂಚಾಕ್ಷರ ಸಂಬಂಧವಾದ ಪಂಚಾಂಗುಲಿಗಳನು ಇಷ್ಟಲಿಂಗಕ್ಯಾಧಾರಪೀಠವಾಗಿಸಯ್ಯಾ. ಬತ್ತೀಸರಾಗವ ಹಾಡಯ್ಯಾ–ಮೂವತ್ತೆರಡು ಲಿಂಗಸಂಬಂಧವಾದ [೧][ಸ][೧]ರಸಜ್ಞಾನಾಚರಣೆಯನುಂಟು ಮಾಡಯ್ಯಾ. ಉರದೊಲತ್ತಿ ಬಾರಿಸು–ನಿಷ್ಠಾಹೃದಯವೆಂಬ ಧೈರ್ಯದಲ್ಲಿ ಚಿನ್ನಾದವನುಂಟುಮಾಡು.

........................

೧–೧ ನೀ (ಪ).

---

ಖ೦೧

**ಕುರುಳು ಬೆರಳು ಮುಡುಹು ಮುಂಬಲ್ಲ ಕೊಳ್ಳು; ನಿಜೆಯನಿಕ್ಕಿ ದಾಂಟಿದಡೆ ಅಂತೆನ್ನ ನಂಬಾ; ಪರಪುರುಷರ ಮುಖವ ನೋಡದಂತೆ ಮಾಡಾ; ಬಳಿಕ [1]ನೀನಿರಿಸಿದಂತಿರಿಸಾ[1]; ಎನ್ನುರದಲ್ಲಿ ಕೂಡಲಸಂಗಯ್ಯನೆಂದು ಬರೆಯಾ; [2]ಹರಿಬ್ರಹ್ಮಾದಿಗಳಿಗೆರಗದಂತೆ[2] [3]ಬಳಿನೀಜಿ[3]ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಕುರುಳು ಬೆರಳು ಮುಡುಹು ಮುಂಬಲ್ಲ ಕೊಳ್ಳು : ಕುರುಳು–ಲೋಕದಲ್ಲಿ ಸ್ತ್ರೀಪುರುಷರಿರ್ವರು ಒಂದಾನೊಂದು ಗಂಡಭೇರುಂಡಪಕ್ಷಿಯೋಪಾದಿಯಲ್ಲಿ ಪ್ರಾಣ ಒಂದಾಗಿ

ದೇಹವೆರಡಾಗಿ ಒಬ್ಬರಿಗೊಬ್ಬರು ಅಗಲದೆ ಕೂಡಿಪ್ಪರು. ಹೀಂಗಿರುತ್ತಿದ್ದ ಹಾಂಗೆ ಒಂದಾನೊಂದು ದಿವಸ ಆ ಪುರುಷನು ಊರುಕೇರಿಗೆ ಹೋಗಿ ಬರುವಂಥ ವೇಳೆಯಲ್ಲಿ ಆ ಸ್ತ್ರೀಯಳು ಮಿಂದು ಮಡಿಯನ್ನುಟ್ಟುಕೊಂಡು ಬಾಚಿ ಬೈತಲೆಯ ತೆಗೆದುಕೊಂಡು ಮಿಂಚಾಗಿದ್ದಲ್ಲಿ ಆ ಪುರುಷನು ನೋಡಿ ನೀನು ಪರಪುರುಷರ ಸಂಸರ್ಗವ ಮಾಡಿದ್ದೀಯೆಂದು ಕೇಳಿದಲ್ಲಿ, ನಾನು ಪರಪುರುಷರ ಸಂಸರ್ಗ ಮಾಡಿದ್ದೇ ಉಂಟಾದರೆ, [೧]ಮುಂದಲೆ ಕೊಯ್ಯಿ, ಬೆರಳು–ದಶಾಂಗುಲಿಗಳ ಛೇದಿಸಿ, ಮುಡುಹು–ಎರಡೂ ಭುಜವ ತುಂಡಿಸಿ, ಮುಂಬಲ ಕೊಳ್ಳಾ–ಮುಂದಲ ಹಲ್ಲು ಮುರಿಗುಟ್ಟು, ನಿಜೆಯನಿಕ್ಕಿ–ಉಟ್ಟ ಸೀರೆ ತೊಟ್ಟ ಕುಪ್ಪಸ [೨]ಇಟ್ಟೊಡವೆ[೨] ಒಂದೇ ಸ್ಥಾನದಲ್ಲಿ ಕುಂಪಿಯನಿಕ್ಕಿ, ದಾಂಟಿದಡೆ–ಈಚೆಲಿಂದಾಚೆಗೆ ಆಚೆಲಿಂದೀಚೆಗೆ ದಾಂಟಿದರೆ, ಅಂತೆನ್ನ–ಹಾಂಗಾದರೆನ್ನ, ನಂಬಾ–ಪತಿವ್ರತಾಂಗನೆಯೆಂದು ವಿಶ್ವಾಸಿಸು, ಪರಪುರುಷರ–ಅನ್ಯಪುರುಷರ, ಮುಖವ ನೋಡದಂತೆ–ವದನವನ್ನು ನಿರೀಕ್ಷಣೆಯ ಮಾಡದ ಹಾಂಗೆ, ಮಾಡು–ಅಂತಃಪುರದಲ್ಲಿ ಮಡಗಿ ದಾಸಿದೇರು ಕೊಜ್ಜೇರು ಜಾತಿಗೊಲ್ಲರು ಮೊದಲಾದರು ಕಾಯ್ದುಕೊಂಡಿರುವ ಹಾಂಗೆ ಮಾಡು. ಬಳಿಕ–ಆಮೇಲೆ, ನೀನಿರಿಸಿದಂತಿರಿಸಾ–ನೀನು ಉಂಬುತ್ತ ಉಡುವುತ್ತ ಸುಖಸಂತೋಷದಲ್ಲಿಟ್ಟರೂ ಒಳ್ಳೇದೆ, ನೀನು ಉಂಬುವುದಕ್ಕಲ್ಲದೆ ಉಡುವುದಕ್ಕಲ್ಲದೆ ದುಃಖದಲ್ಲಿಟ್ಟರೂ ಒಳ್ಳೇದೆ; ಎನ್ನುರದಲ್ಲಿ–ಎನ್ನ ತಾಳೆಯ ಮೇಲೆ, ಕೂಡಲಸಂಗಯ್ಯನೆಂದು ಬರೆಯಾ–ನಿಮ್ಮ ಮೂರ್ತಿವಿಗ್ರಹವನ್ನು ತಿದ್ದಿಸಾ. ಹರಿಬ್ರಹ್ಮಾದಿಗಳಿಗೆಜಿಗದಂತೆ–ಪರಪುರುಷರಿಗಿಚ್ಛೈಸದ ಹಾಂಗೆ, ಬಳಿನೀರೆಜೆಯಾ–ನಿಮ್ಮ ಚರಣಜಲವ ಸೇವಿಸುವೆನೆಂಬ ಲೋಕದ ದೃಷ್ಟೋಪಮಾನದ ಹಾಂಗೆ.

● ಕುರುಳು–ಆತ್ಮನೆಂಬ ಶಿರೋಜವು, ಬೆರಳು–ಇಂದ್ರಿಯಂಗಳು, ಮುಡುಹು–ವಿಷಯಂಗಳು. ಮುಂಬಲ್ಲ–ಕರಣಂಗಳು. ಕೊಳ್ಳ–ಆತ್ಮವಳಿದು ಚಿದಾತ್ಮನಾಗಿ ಇಂದ್ರಿಯಂಗಳಳಿದು ಲಿಂಗೇಂದ್ರಿಯಂಗಳಾಗಿ ವಿಷಯಂಗಳದು ಲಿಂಗವಿಷಯಂಗಳಾಗಿ ಕರಣಂಗಳದು ಲಿಂಗಕರಣಂಗಳಾಗಿ ಇವೆಲ್ಲ ನಿವೃತ್ತಿಯಾಗಿ ಅಳವಡಿಸಿಕೊಂಡಾಚರಿಸುವ ಹಾಂಗೆ ಮಾಡು. ನಿಜೆಯ–ಸತ್ಕ್ರಿಯಾಚಾರವೆಂಬ ನಿರಿಗೆಯನ್ನು, ಇಕ್ಕಿ–ಉಂಟುಮಾಡಿಕೊಂಡು, ದಾಂಟಿದಡೆ–ನೀನುಂಟುಮಾಡಿದ ಸಕಲಪ್ರಪಂಚವನ್ನು ಜಯಿಸಿದರೆ, ಅಂತು–ಹಾಂಗೆ, ಎನ್ನ–ನನ್ನ, ನಂಬಾ–ತನ್ನ ಚಿದಾಂಗಸ್ವರೂಪನೆಂದು ವಿಶ್ವಾಸಿಸಾ. ಪರಪುರುಷರ ಮುಖವ ನೋಡದಂತೆ–ಶಿವಾಚಾರಕ್ಕೆ ಬೇಕಾದ ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯ ಮಾಡದ ಹಾಂಗೆ, ಮಾಡಾ–ಲಿಂಗಪೂಜೆಯಲ್ಲಿ ಸೈತಿಡಾ. ಬಳಿಕ–ಆಮೇಲೆ, ನೀನಿರಿಸಿದಂತಿರಿಸ–ನೀನು ನಿಜಮೋಕ್ಷದಲ್ಲಿ ಸೈತಿಟ್ಟರೂ ಇಡು, ನೀನು ಸಕಲಪ್ರಪಂಚವೆಂಬ ಭವಾಂಬುಧಿಯಲ್ಲಿ ಸೈತಿಟ್ಟರೂ ಇಡು. ಎನ್ನುರದಲ್ಲಿ–ಎನ್ನಂಗದಲ್ಲಿ, ಕೂಡಲಸಂಗಯ್ಯನೆಂದು ಬರೆಯಾ–ಇಷ್ಟಲಿಂಗವನಳವಡಿಸಿ ಕೊಡಾ. ಹರಿಬ್ರಹ್ಮಾದಿಗಳಿಗೆಜಿಗದಂತೆ–ಬ್ರಹ್ಮವಿಷ್ಣ್ವಾದಿಗಳಿಗಿಚ್ಛೈಸದ ಹಾಂಗೆ, ಬಳಿನೀರೆಜೆಯಾ–ನಿನ್ನ ಜ್ಞಾನಾನಂದಜಲವನ್ನು ಪರಿತೋಷವ ಮಾಡಿಕೊಡಾ ಎಲೆ ಶ್ರೀಗುರುನಾಥನೇ.

........................

೧ + ಕುರುಳು (ಕ, ಗ). ೨–೨ ಬಿಟ್ಟುಡುವೆ (ಕ).

II- - - - - - - - - - - - - - - - - - - - - - - - - - - - - - - - - - - - - - - - -

1–1 ನೀನೆಹಗೆಯರಿಸಿದಂತೆ ಇರಿಸಾ (ಚ, ಜ). 2–2 ಹರಿಬ್ರಹ್ಮರಿಗೆ ಆಗದಂತೆ ಬರೆಯಾ (ಚ, ಜ). 3–3 'ಜ' ಪ್ರತಿಯ ವಚನದಲ್ಲಿ 'ಬಳಿನೀರನೆಜೆಯಾ' ಎಂಬ ಪಾಠವಿದೆ. ಆದರೆ ಅಲ್ಲಿಯ ಮತ್ತು 'ಚ' ಪ್ರತಿಯಲ್ಲಿಯ ಟೀಕೆಗಳಲ್ಲಿ ಮಾತ್ರ ಇದಕ್ಕೆ ಪ್ರತಿಯಾಗಿ 'ಬರೆಯಾ' ಎಂಬ ಪಾಠವಿದೆ.

..........................

ಕುರುಳು–ಕರಣಂಗಳು, ಬೆರಳು–ಇಂದ್ರಿಯಂಗಳು, ಮುಡುಹು–ಅಹಂಕಾರ ಮಮಕಾರಂಗಳು, ಮುಂಬಲ್ಲ ಕೊಳ್ಳು–ಕರಣಮಥನ ಕರ್ಕಶಂಗಳನಪ ಹರಿಸಿಕೊ, ನಿಜೆಯನಿಕ್ಕಿ ದಾಂಟಿದಡೆ ಅಂತನ್ನ ನಂಬಾ–ನೈಷ್ಠೆಯಂ ನಿರಿಯ ಹಾಕಿ ಲಂಗಿಸಿದರೆ ಹಾಂಗೆನ್ನ ನಚ್ಚ, ಪರಪುರುಷರ ಮುಖ ನೋಡದಂತೆ ಮಾಡಾ–ಅನ್ಯದೈವಂಗಳ ವಕ್ತ್ರವ ನಿರೀಕ್ಷಿಸದ ಹಾಂಗೆ ಮಾಡು. ಬಳಿಕ ನೀನೆಹಗೆಯಿರಿಸಿದಂತೆ ಇರಿಸಾ–ಆಮೇಲೆ ಲಿಂಗವೆಂಬ ಪುರುಷ ನೀನು, ಶರಣನೆಂಬ ಸತಿ ನಾನು. ನಿನ್ನಿಂದ ಬಿಟ್ಟು ದೈವತಾವರ್ತನೆಯ ವರ್ತಿಸಿದಡೆ ಹಿಂದೆ ಹೇಳಿದಂತದನಪರಿಹರಿಸಿಕೋ, ಅದೇನು ಅನ್ಯಥಾ ವರ್ತನೆಯಲ್ಲಿ ಇಲ್ಲವೆಯಾಯಿತ್ತೆ ಇಲ್ಲದಿರ್ದಡೆ ನೀ ಹೇಂಗೆ ಇರಿಸಿದಂತೆ ಇರಿಸು; ಎನ್ನುರದಲ್ಲಿ ಕೂಡಲಸಂಗಯ್ಯನೆಂದು ಬರೆಯಾ–ಎನ್ನ ವಕ್ಷಸ್ಥಲದಲ್ಲಿ ಮಹಾಲಿಂಗವೇ ಇಷ್ಟಲಿಂಗವು, ಆ ಇಷ್ಟಲಿಂಗವನೆ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಲಿಖಿಸಾ[೩] ಹರಿಬ್ರಹ್ಮರಿಗೆ ಆಗದಂತೆ ಬರೆಯಾ[೪]–ವಿಷ್ಣು ಅಜ ಮುಖ್ಯವಾದ ಜೀವರುಗಳಿಗೆ ವಶವಾಗದ ಹಾಂಗೆ ಲಿಖಿಸಾ[೫].

..........................

೩ + ಬ (ಚ). ೪ + ಯ (ಚ, ಜ). ೫ + ಕರಣಂಗಳಳಿದು ಲಿಂಗಕರಣಂಗಳಾಗಿಪ್ಪುವು–ಇಂದ್ರಿಯಂಗಳಳಿದು ಲಿಂಗೇಂದ್ರಿಯಗಳಾಗಿಪ್ಪವು, ಅಹಂಕಾರ ಮಮಕಾರಂಗಳಳಿದು ಸೋಹದಾಸೋಹವಾಗಿಪ್ಪವು–ಕರಣಮಥನ ಕರ್ಕಶಂಗಳಳಿದು ಮಂತ್ರಮಥನಂಗಳಾಗಿರ್ಪವು. ಅಪಹರಿಸಿಕೊ–ಸುರಚಿರಪಿಂಡಾದಿಜ್ಞಾನಶೂನ್ಯಾಂತಮಾದ ಸರ್ವಾಚಾರಸಂಪತ್ತಿನಾಚರಣೆಯನು ಹಾಕಿ ಮಾರ್ಗಕ್ರೀಯನೊಳಕೊಂಡರೆ ಹಾಂಗಾದರೆನ್ನನು ಚಿಚ್ಛಕ್ತಿಯ ಸ್ವರೂಪನೆಂದು ನಚ್ಚು (=ಚ್ಚ : 'ಚ' ಪ್ರತಿಯಲ್ಲಿಯ ಪಾಠ).

III- - - - - - - - - - - - - - - - - - - - - - - - - - - - - - - - - - - - - - - - -

ಕುರುಳು–ಪೂರ್ಣಜ್ಞಾನವು, ಬೆರಳು–ಕ್ರಿಯಾಚಾರವು, ಮುಡುಹು–ಸುಜ್ಞಾನವು, ಮುಂಬಲ್ಲ–ಪ್ರಕೃತಿವರ್ತನೆ ನಷ್ಟವಾದ ಚಿತ್ಕರಣಂಗಳನು, ಕೊಳ್ಳಾ–ಅಂಗೀಕರಿಸಾ, ನಿಜೆಯುಂ–ಸವಾಚಾರಸಂಪತ್ತಿನಾಚರಣೆಯ ನಿರುಗೆಯನು, ಇಕ್ಕಿ–ಲಿಂಗದಲ್ಲಿ ಸಂಬಂಧಿಸಿ, ದಾಂಟಿದಡೆ–ಪ್ರಪಂಚನುಲ್ಲಂಘಿಸಿದೊಡೆ 'ದಾತಾ ಭೋಕ್ತಾ ಸ್ವಯಂ ಶಿವಃ' ಎಂದುದಾಗಿ.

V- - - - - - - - - - - - - - - - - - - - - - - - - - - - - - - - - - - - - - - - -

ಕುರುಳು–ಚಿತ್ಕರಣಂಗಳು, ಬೆರಳು–ಇಂದ್ರಿಯಂಗಳು, ಮುಡುಹು–ಜ್ಞಾನವು, ಅಂತಃಕರಣಂಗಳನಂಗೀಕರಿಸಾ ಎಂಬುದೀಗ ಮುಂಬಲ್ಲ ಕೊಳ್ಳು ನಿಜೆಯುನಿಕ್ಕಿ–ಆಚಾರವನಂಗೀಕರಿಸಳವಡಿಸಿಕೊಂಡು, ದಾಂಟಿದಡೆ–ಸಕಲಪ್ರಪಂಚ ಲಂಘಿಸಿದರೆ.

೫೦೨

**ಕಂಡ ಕನಸು [1]ನಿಧಾನವ[1] ಕಂಡೆನಯ್ಯಾ, ಬಿಡಲಾರದ ನಿಧಾನವ ಕಂಡೆನಯ್ಯಾ, ಕೂಡಲಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಕಂಡ ಕನಸು–ಅಂತರಂಗದಲ್ಲಿ ಜ್ಞಾನೋದಯವಾಗಿ, ನಿಧಾನವ ಕಂಡೆನಯ್ಯಾ–ಬಳಸಬಾರದ ಕಡವರ ಸ್ವರೂಪವಾದಿಷ್ಟ ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುವಂಥದನು ತಿಳಿದೆನಯ್ಯಾ. ಬಿಡಲಾರದ ನಿಧಾನವ ಕಂಡೆನಯ್ಯಾ–ಆ ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧವ ಮಾಡಿಕೊಂಡು, ಆ ಪ್ರಾಣಲಿಂಗಕ್ಕೆ ಮಂತ್ರಧ್ಯಾನ ಜಪಸ್ತೋತ್ರನಿರ್ಗುಣ ಪೂಜಾಕ್ರಿಯೆಗಳಿಂದಾರಾಧಿಸುವಂಥದನ್ನು ತಿಳಿದೆನಯ್ಯಾ, ಕೂಡಲಸಂಗಯ್ಯನೆಂಬ ನಿಧಾನವ ಕಂಡು–ಆ ಪ್ರಾಣಲಿಂಗವನೇ ಆತ್ಮಾಂಗದಲ್ಲಿ ಭಾವಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಭಾವಲಿಂಗಕ್ಕೆ ಮನೋಲಯ ನಿರಂಜನಪೂಜಾಕ್ರಿಯೆಗಳಿಂದಾರಾಧಿಸುವಂಥದನ್ನು ತಿಳಿದು, ಬಿಡಲಾರೆನಯ್ಯಾ–ತ್ರಿವಿಧಾಂಗದಲ್ಲಿ ತ್ರಿವಿಧಲಿಂಗಸಂಬಂಧವ ಮಾಡಿಕೊಂಡು ತ್ರಿವಿಧಭಕ್ತಿವಿಡಿದಾಚರಿಸುವಂಥದನ್ನು ವಿಸರ್ಜಿಸಲಾರೆನಯ್ಯಾ.

IV- - - - - - - - - - - - - - - - - - - - - - - - - - - - - - - - - - - - - - - - - - -

1–1 ನಿಧಿನಿಧಾನವ (ತ).

..........................

ಕರಸ್ಥಲದ ಲಿಂಗದ ಕಳೆಯು ಭಾವಿಸಿನೋಡಲು, ಒಳಹೊರಗೆಲ್ಲ ಅಖಂಡ ಪರಿಪೂರ್ಣವಾಗಿರ್ದೆನೆಂದು ಬಸವಣ್ಣ ನಿರೂಪಿಸಿದನೆಂಬುದೀ ವಚನದ ತಾತ್ಪರ್ಯಾರ್ಥ.[೧]

..............................

೧. ಈ ವಚನ ಮತ್ತು ಟೀಕೆ ೧೬೫ನೆಯ ನಂಬರಿನ "ಎಲ್ಲರ ಗಂಡರ ಪರಿಯಂತಲ್ಲ" ಎಂಬ ವಚನ ಮತ್ತು ಟೀಕೆಯ ತರುವಾಯ ಬಂದಿದೆ. ಅಲ್ಲಿಯ ಟೀಕೆ ಹೀಗಿದೆ; "ಕರಸ್ಥಲದಲ್ಲಿರ್ದ ಲಿಂಗವನು ಚಿತ್ಕಳೆಯನು ಭಾವಿಸಿ ನೋಡಲು, ಭಾವವೇ ಗಟ್ಟಿಗೊಂಡು ಹೊರಗೆ ಒಳಹೊರಗೆ ಪರಿಪೂರ್ಣವಾಗಿ ಮೈಮರೆದು ಪರವಶನಾಗಿರ್ದೆನೆಂದು ಬಸವಣ್ಣ ನಿರೂಪಿಸಿದನೆಂಬುದೀ ವಚನದ ತಾತ್ಪರ್ಯಾರ್ಥ."

---

೫೦೩

**ಹೊನ್ನಹಾವುಗೆಯ ಮೆಟ್ಟಿದವನ, [1]ಮಿಡಿಮುಟ್ಟುವ[1] ಕೆಂಜೆಡೆಯವನ, [2]ಮೈಯೆಲ್ಲ[2] ವಿಭೂತಿಯ ಧರಿಸಿದ [3]ದೇ[3]ವನ, ಕರದಲ್ಲಿ ಕಪಾಲವ ಪಿಡಿದ [3]ದೇ[3]ವನ, ಅರ್ಧನಾರೀಶ್ವರನಾದ [3]ದೇ[3]ವನ, ಬಾಣನ ಬಾಗಿಲ ಕಾಯ್ದ [3]ದೇ[3]ವನ, ನಂಬಿಗೆ ಕುಂಟಣಿಯಾದ [3]ದೇ[3]ವನ, ಚೋಳಂಗೆ ಹೊನ್ನಮಳೆಯ ಕರೆದ [3]ದೇ[3]ವನ, ಎನ್ನ ಮನಕ್ಕೆ ಬಂದ [3]ದೇ[3]ವನ, ಸದ್ಭಕ್ತರ ಹೃದಯದಲ್ಲಿಪ್ಪ [3]ದೇ[3]ವನ, ಮಾಡಿದ ಪೂಜೆಯಲೊಪ್ಪುವ [3]ದೇ[3]ವನ, ಕೂಡಲಸಂಗಯ್ಯನೆಂಬ [3]ದೇ[3]ವನ.**

I - - - - - - - - - - - - - - - - - - - - - - - - - - - - - - - - - - - - - - - -

ಹೊನ್ನಹಾವುಗೆಯ ಮೆಟ್ಟಿದವನ–ಅಪಸ್ಮರನೆಂಬ ಭೂತನ ದಹಿಸಿದ ಚರಣದಲ್ಲಿ ಜ್ಞಾನಕೀಯೆಂಬ ಪಾವುಗೆರಡಾಗಿ ಮೆಟ್ಟಿದಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು, ಮಿಡಿಮುಟ್ಟುವ ಕೆಂಜಡೆಯವನ–ಮಸ್ತಕದಿಂದ ಹಿಮ್ಮಡ ಪರಿಯಂತರದಲ್ಲಿ ಜಗ್ಗಿ ಬೀಳುವ ಹವಳದ ಬಳ್ಳಿಗೆ ಸದೃಶವಾದ ಮೂರುವರೆಕೋಟಿ ಶೋಣಿತ ಜಡೆಗಳುಳ್ಳ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ಮೈಯೆಲ್ಲ ವಿಭೂತಿ ಧರಿಸಿದ ದೇವನ–ಕಾಲಕಾಮ ತ್ರಿಪುರವ ದಹಿಸಿದಂಥ ವಿಭೂತಿಯನೇ ಸರ್ವಾಂಗದಲ್ಲಿ ಉದ್ಧೂಳನವ ಮಾಡಿಕೊಂಡಂಥ ಪರಿಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ಕರದಲ್ಲಿ ಕಪಾಲವ ಪಿಡಿದ ದೇವನ–ಹಸ್ತದಲ್ಲಿ ಬ್ರಹ್ಮಕಪಾಲವ ಪಿಡಿದಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ಅರ್ಧನಾರೀಶ್ವರನಾದ ದೇವನ–ಅಜಹರಿಗಳ ಮಧ್ಯದಲ್ಲಿ ಪಾರ್ವತಿಸಹವಾಗಿ ಪ್ರತ್ಯಕ್ಷವಾದಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ಬಾಣನ ಬಾಗಿಲ ಕಾಯ್ದ ದೇವನ–ಬಾಣಾಸುರನ ಭಕ್ತಿಗೊಲಿದು ಬಾಗಿಲ ಕಾಯ್ದು ಸಹಸ್ರತೋಳು ಕರುಣಿಸಿಕೊಟ್ಟಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣ ಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ನಂಬಿಗೆ ಕುಂಟಣಿಯಾದ ದೇವನ–ಸೌಂದರಗಣಾಧೀಶ್ವರನಿಗೆ ಹಡಪವ ಹೊತ್ತು ನಡಪತಿಗನಾದಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ಚೋಳಂಗೆ ಹೊನ್ನ ಮಳೆಯ ಕರೆದ ದೇವನ–ಕರಿಕಾಲಚೋಳಂಗೆ ಸುವರ್ಣವೃಷ್ಟಿಗರೆಸಿದಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ಎನ್ನ ಮನಕ್ಕೆ ಬಂದ ದೇವನ–ಶಿವಪ್ರಿಯನಾಚಿಯರಿಗೆ ವಲ್ಲಭನಾದಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ಸದ್ಭಕ್ತರ ಹೃದಯದಲ್ಲಿಪ್ಪ ದೇವನ–ಪೂಸಲನೈನಾರ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡು ನಿರ್ಗುಣಪೂಜಾಕ್ರಿಯೆಗಳ ಕೈಕೊಂಡೊಪ್ಪುವಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು. ಮಾಡಿದ ಪೂಜೆಯಲೊಪ್ಪುವ ದೇವನ–ಕುಲಚ್ಚರಿಯರಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಕೈಕೊಂಡೊಪ್ಪುವಂಥ ಪರಶಿವಲಿಂಗವೇ ಎನ್ನ ರಮಣನೆಂದು ಶರಣಸತಿಯಳು ತನ್ನ ಲಿಂಗವೆಂಬ ರಮಣನ ಕುರುಹು ಹಿಡಿಯುತ್ತಿಹಳು, ಕೂಡಲಸಂಗಯ್ಯನೆಂಬ ದೇವನ–ಪರಶಿವಲಿಂಗವೆಂದು ಹೇಳುವಾತನ.

II- - - - - - - - - - - - - - - - - - - - - - - - - - - - - - - - - - - - - - - -

1–1 ಮಿಡಿ ಮುಟ್ಟಿದ (ಚ, ಜ). 2–2 ಮೈಯಲ್ಲಿ (ಚ, ಜ). 3–3 x (ಚ, ಜ).

..................................

ಹೊನ್ನ ಹಾವುಗೆಯ ಮೆಟ್ಟಿದವನ–ಆಸ್ತಿಕ್ಯಾಜ್ಞಾನ ಅವಧಿಜ್ಞಾನವೆಂಬ ಚರ್ಯಾಕ್ರೀಗಳನ್ನು ತುಳಿದಾತನ, ಮಿಡಿಮುಟ್ಟಿದ ಕೆಂಜೆಡೆಯವನ–ಚೈತನ್ಯ ಲಿಂಗಪ್ರಕಾಶವು ಸೋಂಕಿದ ಪ್ರಣವಮಂತ್ರಕಾರಣವುಳ್ಳಾತನ, ಮೈಯಲ್ಲಿ ವಿಭೂತಿ ಧರಿಸಿದವನ–ಚಿದಂಗದಲ್ಲಿ ಚಿದ್ಭಸ್ಮವನು ಪೂಸಿದವನ, ಕರದಲ್ಲಿ ಕಪಾಲವ ಪಿಡಿದವನ–ವಾಮಭಾಗದ ಪಾಣಿತಾಣದಲ್ಲಿ ಶುದ್ಧಜ್ಞಪ್ತಿಸ್ವರೂಪವಾದ ಇಷ್ಟಲಿಂಗವನು ಪರಿಗ್ರಹಿಸಿದವನ, ಅರ್ಧನಾರಿ[ಯಾ]ದವನ–ಚಿಚ್ಛಕ್ತಿವಲ್ಲಭನಾದವನ, ಬಾಣನ ಬಾಗಿಲ ಕಾಯ್ದುವನ–ಕಾಮನಿಂದ್ರಿಯದ್ವಾರನು ಆನಂದಪ್ರಕೃತಿಚಲನೆಗೆ ಎಡೆಗೊಡದವನ, ನಂಬಿಗೆ ಕುಂಟಣಿಯಾದವನ–ಗುರುಭಕ್ತಿಜ್ಞಾನಕಲಾತ್ಮನಾಗಿ ಸಮರಸಭಕ್ತಿಶಕ್ತಿಯರುಗಳಲ್ಲಿ ವರ್ತಿಸುವ ಲಿಂಗವೆಂಬ ಪುರುಷಂಗೆ ಶರಣನೆಂಬ ಸತಿಗೆ ಇರ್ವರಿಗೂ ಕೈಗೂಡಿಸಿ ಕೊಡುವುದಕ್ಕೆ ಅನುಗುಣಿಸಂಗಿಯಾದವನ, ಚೋಳಂಗೆ ಹೊನ್ನಮಳೆಯ ಕಱೆದವನ–ಸಕಲ ಕರ್ಮಾವಶೇಷಿತನಾದ ಜ್ಞಾನಕಲಾತ್ಮಂಗೆ ಚಿದ್ಬಿಂದು ವೃಷ್ಟಿಯನು ಸ್ರಪಿಸಿದವನ, ಎನ್ನ ಮನಕ್ಕೆ ಬಂದವನ–ಎನ್ನ ಮಾನಸಕ್ಕೆ ಮಂತ್ರಮೂರ್ತಿಯಾಗಿ ಬಿಜಯಂಗೈದವನ, ಸದ್ಭಕ್ತರ ಹೃದಯದಲ್ಲಿಪ್ಪವನ–ಚರಿಸಿ ಪರಾಪರಬೋಧಾರೂಪದಿಂವ ಹೊಱಿಯಲೋಸ್ಕರ ಸದ್ಭಕ್ತಶರಣಜನಂಗಳಂತರಂಗದಲ್ಲಿ ಪ್ರಾಣಲಿಂಗವಾಗಿಪ್ಪವನ, ಮಾಡಿದ ಪೂಜೆಯಲೊಪ್ಪುವನ–ಷಟ್ಸ್ಥಲಬ್ರಹ್ಮಿಗಳೆಸಗಿದ ಯಥಾಲಾಭ ಸಂತುಷ್ಟಕ್ರೀಗಳಲ್ಲಿ ಶೋಭಿಸುವನ, ಕೂಡಲಸಂಗಯ್ಯನೆಂಬವನ–ಪರಶಿವಲಿಂಗವೆಂಬವನ.

---

೫೦೪

**ಮನಕ್ಕೆ ಮನೋಹರವಲ್ಲದ ಗಂಡರು ಮನಕ್ಕೆ ಬಾರರು ಕೇಳವ್ವಾ ಕೆಳದಿ. ಪನ್ನಗಭೂಷಣನಲ್ಲದ ಗಂಡರು ಇನ್ನೆನಗಾಗದ [೧]ಮೊಱೆ[೧] ಕಂಡವ್ವಾ, ಕನ್ನೆಯರಂದಿನ ಕೂಟ, ಚಿಕ್ಕಂದಿನ ಬಾಳುವೆ, ನಿಮ್ಮಾಣೆಯಯ್ಯಾ ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - -

ಮನಕ್ಕೆ–ಶರಣಸತಿಯಳ ಚಿತ್ತಕ್ಕೆ, ಮನೋಹರವಲ್ಲದ–ಮನಸ್ಸಿಗೆ ಅತ್ಯಂತ ರಮಣೀಯವಲ್ಲದ, ಗಂಡರು–ಮೂವತ್ತಮೂರುಕೋಟಿ ದೇವತೆಗಳೆಂಬ ರಮಣದೇವತೆಯರು, ಮನಕ್ಕೆ–ಶರಣಸತಿಯರ ಚಿತ್ತಕ್ಕೆ, ಬಾರರು–[೧]ಎಯ್ದರು,[೧] ಕೇಳವ್ವಾ–ಆಲಿಸವ್ವಾ, ಕೆಳದಿ–ಚಿಚ್ಛಕ್ತಿಸ್ವರೂಪನಾದಂಥ ಶ್ರೀಗುರುನಾಥನೆ, ಪನ್ನಗ ಭೂಷಣನಲ್ಲದ–ಸರ್ಪಾಭರಣನಲ್ಲದಿದ್ದಂಥ, ಗಂಡರು–ಮೂವತ್ತುಮೂರುಕೋಟಿ ದೇವತೆಗಳೆಂಬ ರಮಣದೇವತೆಯರು, ಇನ್ನೆನಗಾಗದ ಮೊರೆ ಕಂಡವ್ವಾ–ಲೋಕದಲ್ಲಿ ಆಗೋ ಮೊರೆ ಆಗದ ಮೊರೆಯೆಂದು ಎರಡು ಪ್ರಕಾರ ಉಂಟು. ಅದು ಹೇಗೆಂದೊಡೆ ತಾಯ ಒಡ ಹುಟ್ಟಿದ ಅಣ್ಣನ ಮಕ್ಕಳು ತಮ್ಮನ ಮಕ್ಕಳು ಆಗುವ ಮೊಱೆ, ತಾಯ ಒಡಹುಟ್ಟಿದ ಅಕ್ಕನ ಮಕ್ಕಳು [೨][ತಂಗಿಯ][೨] ಮಕ್ಕಳು ಆಗದ ಮೊರೆ, ಹಾಂಗೆ ನಿಃಕಲ ಬ್ರಹ್ಮದಿಂದ ಚಿತ್ತುಪುಟ್ಟಿತ್ತು, ಮಹಾಲಿಂಗ ಪುಟ್ಟಿತ್ತು, ಮಾಯಾಶಕ್ತಿ ಪುಟ್ಟಿತ್ತು. ಆ ಚಿತ್ತಿನಿಂದ ಶರಣ ಪುಟ್ಟಿದ, ಮಹಾಲಿಂಗದಿಂದ ಇಷ್ಟಲಿಂಗ ಪುಟ್ಟಿತ್ತು, ಮಾಯಾಶಕ್ತಿಯಿಂದ ದೇವತಾದಿಗಳು ಪುಟ್ಟಿದವು. ಆ ಚಿದ್ಭಕ್ತಿಸ್ವರೂಪವಾದ ಶರಣನು ಆ ಮಹಾಲಿಂಗದ ಕುಮಾರನಾದ ಇಷ್ಟಲಿಂಗ[೩]ವನೇ[೩] ಆರಾಧಿಸಿ ಭಜನೆಯ ಮಾಡುವೆನಲ್ಲದೆ

ಮಾಯಾಪುತ್ರರಾದ ದೇವತಾದಿಗಳನಾರಾಧಿಸಿ ಭಜನೆಯ ಮಾಡುವೆನೆ? ಮಾಡನು. ಚಿಕ್ಕಂದಿನ ಬಾಳುವೆ–ಜ್ಞಾನೋದಯದಿಂದ ಗುರೂಪಾವಸ್ಥೆಯ ಮಾಡಿ ಅಂಗದಲ್ಲಿ ಇಷ್ಟಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುತ್ತಿಪ್ಪೆನು, ಕನ್ನೆಯಂದಿನ ಕೂಟ–ಭಕ್ತಿಪರಪಕ್ವತೆಯಿಂದ ಸಮರಸವಾಗಿ ಆ ಲಿಂಗದಲ್ಲಿ ಬೆರದಿಪ್ಪೆನು, ನಿಮ್ಮಾಣೆಯಯ್ಯಾ–ನಿಮ್ಮ ಪಾದದ ಮೇಲಣ ಪ್ರತಿಜ್ಞೆಯಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

.........................

೧–೧ ಪ್ರಿಯವಾಗರು (ಗ). ೨–೨ ತಮ್ಮನ (ಕ, ಗ). ೩–೩ ದ ಕುಮಾರನಾದ ಇಷ್ಟಲಿಂಗವೆ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - -

೧–೧ ಮೇರೆ (ಚ, ಜ).

.........................

ಮನಕ್ಕೆ ಮನೋಹರವಲ್ಲದ–ಮನಸ್ಸಿಗೆ ಮಂಜುಳಾಯಮಾನವಲ್ಲದ. ಗಂಡರು–ದ್ವೈತಾದ್ವೈತಕ್ಕೆ ಕರ್ತೃವಾದ ಭಿನ್ನಲಿಂಗಂಗಳೆಂಬ ಪುರುಷರು, ಮನಕ್ಕೆ ಬಾರರು ಕೇಳವ್ವಾ ಕೆಳದಿ–ಮನಸ್ಸಿನ ಪೂಜಾಕ್ರಿಯಾಸ್ತೋತ್ರಮಂತ್ರದ ನೆನಹಿಗೆ ಸೊಗಸರು. ಪನ್ನಗಭೂಷಣನಲ್ಲದ–ಹೃತ್ಕಮಲಪದ್ಮಪತ್ರದ ಸತ್ತ್ರಾಣವಜ್ಞಾನಾಲಂಕರಣನಲ್ಲದ, ಗಂಡರು–ದ್ವೈತಾದ್ವೈತಕ್ಕೆ ಕರ್ತೃವಾದ ಭಿನ್ನಲಿಂಗಗಳೆಂಬ ವಲ್ಲಭರು, ಇನ್ನೆನಗಾಗದ ಮೇರೆ ನೋಡವ್ವಾ–ಇಷ್ಟರ ಮೇಲೆ ಎನ್ನ ಪೂಜಾಕ್ರಿಯಾಸ್ತೋತ್ರಮಂತ್ರದ ನೆನಹಿಗೆ ಉದಿಸಿದ ಸೀಮೆಯ ಕಂಡಾ ಎಲೆ ಚಿಚ್ಛಕ್ತಿಸ್ವರೂಪವಾದ ಮಹಾನುಭಾವಗುರುವೆಯೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಯೊಡನೆ ಬಿನ್ನೈಸುತ್ತಿಹನು. ಕನ್ನೆಯಂದಿನ ಕೂಟ–ಜ್ಞಾನೋದಯವಾಗದೆ ದೇಹಸಂಬಂಧಿಯಾದಂದಿನ ಪ್ರಾಣಲಿಂಗದ ಸಮರಸವು, ಚಿಕ್ಕಂದಿನ ಬಾಳುವೆ–ಜ್ಞಾನೋದಯವಾಗಿ ಗುರುಕಾರುಣ್ಯ ಪಡೆದು ಲಿಂಗಾಂಗಸಂಬಂಧಿಯಾಗಿ ಜ್ಞಾನಕ್ರೀವಿಡಿದಾಚರಿಸುವ ಶರಣಸತಿ ಲಿಂಗಪತಿಯೆಂಬ ಬಾಳುವೆ, ನಿಮ್ಮಾಣೆಯಯ್ಯಾ ಕೂಡಲಸಂಗಮದೇವಾ–ಶರಣಸತಿ ಲಿಂಗವೇ ಪುರುಷನಾಗುಳ್ಳ ಇಷ್ಟಲಿಂಗವನೆ ಪೂಜಿಸುವೆನಲ್ಲದೆ ಇನ್ನು ಬೇರೆ ದ್ವೈತಾದ್ವೈತಕ್ಕೆ ಕರ್ತೃವಾದ ಭಿನ್ನಲಿಂಗಂಗಳನು ಪೂಜಿಸಿದರೆ ನಿಮ್ಮ ಮೇಲಣ ಪ್ರತಿಜ್ಞೆಯು.

V- - - - - - - - - - - - - - - - - - - - - - - - - - - - - - - - - - - - - - - - - - - -

ಪನ್ನಗಭೂಷಣನಲ್ಲದವರು–ಮನಃಕುಂಡಲಿಯ ವರ್ತನೆಯ ನಷ್ಟವ ಮಾಡಿ ಉನ್ಮನೀಸ್ವರೂಪವಾಗಿ ಸಂದವರು, ಇನ್ನೆನಗಾಗದ ಮೊರೆ–ಎನಗೆ ನೇರದ ದುರ್ವಿವೇಕವುಯೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಮಾತೃ ಸ್ಥಾನವಾದ ಜ್ಞಾನಶಕ್ತಿಯ ಕೂಡೆ ಹೇಳುವ ಪ್ರಶ್ನೆಯೆಂಬುದೀಗ ನೋಡವ್ವಾ, ಕನ್ನೆಯಂದಿನ ಕೂಟ–ನವವಿಧಭಕ್ತಿ ಸಂಬಂಧವು, ಚಿಕ್ಕಂದಿನ ಬಾಳುವೆ–ಶ್ರೀಗುರುವಿನ ಸುಜ್ಞಾನೋಪದೇಶದ ಲಿಂಗಾಂಗಸಂಬಂಧಾಚರಣೆಯು.

---

೫೦೫

**ಜಗವೆಲ್ಲಜೆಯಲೆನಗೊಬ್ಬ ಗಂಡನುಂಟು. ಆನು ಮುತ್ತೈದೆ ಆನು ನಿಟ್ಟೈದೆ, ಕೂಡಲಸಂಗಮದೇವನಂತಪ್ಪ ಎನಗೊಬ್ಬ ಗಂಡನುಂಟು**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಜಗವೆಲ್ಲಜೆಯಲು–ಬ್ರಹ್ಮಾಂಡವೆಲ್ಲ ಬಲ್ಲಹಾಂಗೆ, ಎನಗೊಬ್ಬ–ಶರಣಸತಿಯಳಿಗೊರ್ವ, ಗಂಡನುಂಟು–ಇಷ್ಟಲಿಂಗವೆಂಬ ರಮಣನುಂಟಾಗಿರುವನು. ಆನು ಮುತ್ತೈದೆ–ನಾನು ಮೋಕ್ಷಾಂಗನೆಯು. ಆನು ನಿಟ್ಟೈದೆ–ನಾನು ಸರ್ವಾಚಾರಸಂಪತ್ತಿನಾಚರಣೆ ಕ್ರಿಯೆಗಳುಳ್ಳಾಯಕಳು. ಕೂಡಲಸಂಗಮದೇವನಂತಪ್ಪ–ಪರಶಿವಲಿಂಗದೇವರಂತಪ್ಪ, ಎನಗೊಬ್ಬ ಗಂಡನುಂಟು–ಶರಣನೆಂಬ ಸತಿಯಳಿಗೊರ್ವ ಇಷ್ಟಲಿಂಗವೆಂಬ ರಮಣನುಂಟಾಗಿರ್ಪನು.

II- - - - - - - - - - - - - - - - - - - - - - - - - - - - - - - - - - - - - - - - - - - - - -

ಜಗವೆಲ್ಲಜೆಯಲು–ತನುತ್ರಯಸಂಬಂಧವಾದ ತತ್ತ್ವಕರಣಂಗಳೆಲ್ಲವು ತಿಳಿಯಲು, ಎನಗೊಬ್ಬ ಗಂಡನುಂಟು–ಪ್ರಾಣಲಿಂಗಿಗೆ ಇಷ್ಟಲಿಂಗವೆಂಬ ಪುರುಷನುಂಟು. ಆನು ಮುತ್ತೈದೆ–ನಾನು ಮೋಕ್ಷಾಂಗನೆಯು, ಆನು ನಿಟ್ಟೈದೆ–ನಾನು ಏಕಲಿಂಗನಿಷ್ಠಾಪರತ್ವವುಳ್ಳವಳು, ಕೂಡಲಸಂಗಯ್ಯನಂತಪ್ಪ ಎನಗೊಬ್ಬ ಗಂಡನುಂಟು–ಪರಶಿವಲಿಂಗದಂತಹ ಪ್ರಾಣಲಿಂಗಿಗೆ ಇಷ್ಟಲಿಂಗವೆಂಬ ಪುರುಷನುಂಟು.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಜಗವೆಲ್ಲಜೆಯಲು–ದೇಹಕರಣೇಂದ್ರಿಯಾದಿಗಳೆಂಬ ಜಗತ್ತೆಲ್ಲಜೆವ ಹಾಂಗೆ, ಎನಗೊಬ್ಬ ಗಂಡನುಂಟು–ಮಹಾಲಿಂಗವೇ ಇಷ್ಟಲಿಂಗವೆಂಬ ಪುರುಷನುಂಟು. ಆನು ಮುತ್ತೈದೆ–ನಾನು ಮೋಕ್ಷಾಂಗನೆಯು, ಆನು ನಿಟ್ಟೈದೆ–ನಾನು ಏಕಲಿಂಗ ನಿಷ್ಠಾವ್ರತವುಳ್ಳಾಯ[ಕ]ಳು.

---

೫೦೬

**ಸಂಸಾರವೆಂಬ ಶ್ವಾನನಟ್ಟಿ ಮೀಸಲ ಬೀಸರವ ಮಾಡದಿರಯ್ಯ. ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯ, ನೀವಲ್ಲದೆ ಮತ್ತೇನನಜೆಯೆನಯ್ಯ, ಕನ್ನೆಯಲ್ಲಿ ಕೈವಿಡಿದೆನು, ನಿಮ್ಮಲ್ಲಿ ನೆರೆದೆನು, ಮನ್ನಿಸು ಕಂಡು ಮಹಾಲಿಂಗವೆ, ಸತಿಯಾನು, ಪತಿ ನೀನಯ್ಯ. ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ ನೀನೆನ್ನ ಮನವ ಕಾಯ್ದಿಪ್ಪ ಗಂಡನು! ನಿಮಗೋತ ಮನವ ಅನ್ಯಕ್ಕೆ ಹರಿಸಿದೆಡೆ ನಿಮ್ಮಭಿಮಾನಕ್ಕೆ ಹಾನಿ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಸಂಸಾರವೆಂಬ–ಹೊನ್ನುಹೆಣ್ಣುಮಣ್ಣು ಮುಖ್ಯವಾದ ಸಕಲಸಂಸಾರಪ್ರಪಂಚವೆಂಬ, ಶ್ವಾನನಟ್ಟಿ–ಶುನಿಯನುಂಟು ಮಾಡಿ, ಮೀಸಲ–ಆಚಾರಾಂಗ ಉನ್ಮನಿಯ ಮನಸ್ಸನ್ನು, ಬೀಸರ ಮಾಡದಿರಯ್ಯ–ಭೂತಕಾಯ ಜಡಕಾಯವಾಗಿ ಸಕಲಸಂಸಾರಪ್ರಪಂಚಿನೊಡನೆಕೂಡಿ ಚರಿಸಿ ಭಿನ್ನವ ಮಾಡಿಸದಿರಯ್ಯ. ಎನ್ನ ಚಿತ್ತವು : ಎನ್ನ–ಶರಣಸತಿಯಳ, ಚಿತ್ತವು–ಮನಸ್ಸು, ನಿಮ್ಮ ಧ್ಯಾನವಯ್ಯ–ಲಿಂಗಧ್ಯಾನ ಲಿಂಗಸ್ಮರಣೆಯೊಡನೆ ಕೂಡಿರ್ಪುದಯ್ಯ, ನೀವಲ್ಲದೆ–ಲಿಂಗವೆಂಬ ರಮಣನಲ್ಲದೆ,

ಮತ್ತೇನನಱಿಯೆನಯ್ಯ–ಶಿವಾಚಾರಕ್ಕೆ ಬೇರಾವ ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚ ದೈವಂಗಳ ಭಜನೆಯ ಮಾಡುವಂಥದನು ತಿಳಿಯೆನಯ್ಯ, ಕನ್ನೆಯಲ್ಲಿ ಕೈವಿಡಿದೆನು–ಜ್ಞಾನೋದಯದಿಂದ ಗುರೋಪಾವಸ್ಥೆಯ ಮಾಡಿ ಗುರುಕಾರುಣ್ಯವ ಹಡೆದು ಅಂಗದಲ್ಲಿ ಇಷ್ಟಲಿಂಗವ ದೃಢವಿಡಿದುಕೊಂಡು ಲಿಂಗಪೂಜೆಯ ಮಾಡುತಿಪ್ಪೆನು. ನಿಮ್ಮಲ್ಲಿ ನೆರೆದೆನು–ಭಕ್ತಿಪರಿಪಕ್ವತೆಯಿಂದ ಲಿಂಗದಲ್ಲಿ ಕೂಡಿದೆನು. ಮನ್ನಿಸು ಕಂಡಾ–ಮನ್ನಣೆಯ ಮಾಡು ಕಂಡಾ, ಮಹಾಲಿಂಗವೆ–ಎಲೆ ಪರಶಿವಲಿಂಗವೆ, ಸತಿಯಾನು–ಶರಣನೆಂಬ ಸತಿಯಳಾನು, ಪತಿ ನೀನಯ್ಯ–ಲಿಂಗವೆಂಬ ರಮಣ ನೀನಯ್ಯ, ಮನೆಯೊಡೆಯ–ಗೃಹದ ಕರ್ತನಾದ ಯಜಮಾನನು, ಮನೆಯ ಕಾಯ್ದಿಪ್ಪಂತೆ–ಶುನಿಸೂಕರಾದಿಗಳು ಹೊಕ್ಕು ಗಡಿಗೆ ಮಡಿಕೆಗಳ ಮುಟ್ಟಿ ಉಚ್ಛಿಷ್ಟವಾಗಗುಡದೆ ಕಾಯ್ದುಕೊಂಡಿರ್ದ ಹಾಂಗೆ, ನೀನು–ಪರಶಿವಲಿಂಗವು, ಎನ್ನ ಮನವ–ಎನ್ನ ಶರಣಸತಿಯುಳ ಚಿತ್ತವ, ಕಾಯ್ದಿಪ್ಪ–ಉನ್ಮನಿಯು ಮನಸಾಗಿ ಅಳವಡಿಸಿಕೊಂಡಿರುವಂಥ, ಗಂಡನು–ಲಿಂಗವೆಂಬ ರಮಣನು, ನಿಮಗೆ–ಲಿಂಗಕ್ಕೆ, ಓತ–ವಶಗತವಾದ, ಮನವ–ಚಿತ್ತವನ್ನು, ಅನ್ಯಕ್ಕೆ ಹರಿಸಿದಡೆ–ಹಲವು ನೆನೆದು ಹಲವು ಭಾವಿಸಿ ಹಲವು ವರ್ತನೆಯೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋದರೆ, ನಿಮ್ಮ ಅಭಿಮಾನಕ್ಕೆ ಹಾನಿ–ನಿಮಗೆ ಕೊರತೆ ಬರುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

............................

೧ + ನಿಮ್ಮ (ಕ).

V- - - - - - - - - - - - - - - - - - - - - - - - - - - - - - - - - - - - - - - - - - - -

ನೀವಲ್ಲದೆ–ನವವಿಧಲಿಂಗಂಗಳಲ್ಲದೆ, ಕನ್ನೆಯಲ್ಲಿ–ನವವಿಧ ಭಕ್ತಿಯಲ್ಲಿ ಕೈವಿಡಿದೆನು–ಷಡ್ವಿಧಹಸ್ತಂಗಳಲ್ಲಿ ಷಡ್ವಿಧ ಲಿಂಗಗಳ ಪರಿಗ್ರಹಿಸಿದೆನು. ನಿಮ್ಮಲ್ಲಿ ನೆರೆದೆನು–ಆ ಷಡ್ವಿಧಲಿಂಗಂಗಳಲ್ಲಿ ಸಂಯೋ[ಗಿಸಿ]ದೆನು.

---

## ಭಕ್ತನ ಐಕ್ಯಸ್ಥಲ

I - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನ ಐಕ್ಯಸ್ಥಲ–ಭಕ್ತಸ್ಥಲದೊಳಗಣ ಐಕ್ಯಸ್ಥಲವ ನಿರೂಪಿಸುತ್ತಿಹರು.

---

೫೦೭

ನೀನೊಲಿಯುತ್ತೇ ಪುಣ್ಯ, ನೀನೊಲಿಯದುದೇ ಪಾಪ ಕಂಡಯ್ಯ. ಸಕಲಜಗದೊಳಗೆ ಅನುಸ್ಯೂತವಾಗಿಪ್ಪೆಯಯ್ಯ. ನೀನೊಲಿದವನೇ ನಿಮ್ಮನಱಿವನು. ಸಾಕ್ಷಿ : "ಪ್ರಸಾದಾದ್ದೇವತಾಭಕ್ತಿಃ ಪ್ರಸಾದೋ ಭಕ್ತಿ ಸಂಭವಃ । ಯಥಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ॥" ಎಂದುದಾಗಿ, ನೀನೊಲಿದವನೇ ಧನ್ಯ, ಜಗಕ್ಕೆ ಪಾವನ, ಕೂಡಲಸಂಗಮದೇವಾ.

I - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ನೀನೊಲಿಯಿತ್ತೇ–ನೀವಾರಂಗದಲ್ಲಿ ಕೃಪೆಯಾಗಿ ಇಷ್ಟಲಿಂಗವಾಗಿ ನೆಲೆಗೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಕೈಕೊಂಡೊಪ್ಪುವತ್ತಿದ್ದಿಯೋ, ಪುಣ್ಯ–ಆತನೇ ಸುಕೃತಸ್ವರೂಪನು. ನೀನೊಲಿಯದುದೇ–ನೀವಾರಂಗದಲ್ಲಿ ಕೃಪೆಯಾಗಿ ಇಷ್ಟಲಿಂಗವಾಗಿ ನೆಲೆಗೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಕೈಕೊಂಡೊಪ್ಪುವುದಿಲ್ಲವೋ, ಪಾಪ–ಅವನೇ ದೋಷಸ್ವರೂಪನು. ಸಕಲಜಗದೊಳಗೆ–ಸಮಸ್ತಜಗತ್ತಿನಲ್ಲಿ, ಅನುಸ್ಯೂತವಾಗಿಪ್ಪೆಯಯ್ಯ–ಪೂರ್ಣನೆನಿಸಿಪ್ಪೆಯಯ್ಯ. ನೀನೊಲಿದವನೇ–ನೀವಾರಂಗದಲ್ಲಿ ಕೃಪೆಯಾಗಿ ಇಷ್ಟಲಿಂಗವಾಗಿ ನೆಲೆಗೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಕೈಕೊಂಡೊಪ್ಪುತ್ತಿದ್ದಿಯೋ, ನಿಮ್ಮನಜಿವನು–ಅವನೇ ನಿಮ್ಮ ಸ್ವಸ್ವರೂಪವನು ತಿಳಿವನು. ॥ಗ್ರಂಥ॥ ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. [೧]ದೇವತಾಭಕ್ತಿಃ–ಶಿವಾದ್ವೈತಭಕ್ತಿಯು, ಪ್ರಸಾದಾತ್–ಶಿವನ ಅನುಗ್ರಹದಿಂದ, ಪ್ರಸಾದೋ–ಪ್ರಸಾದವು,[೧] ಭಕ್ತಿ ಸಂಭವಃ–ಶಿವಾದ್ವೈತಭಕ್ತಿಯಿಂದ ಹುಟ್ಟುತ್ತಿಹುದು. ಯಥಾ–ಹೇಂಗೆ, ಅಂಕುರತಃ–ಮೊಳಕೆ[೨]ಯಿಂದ,[೨] ತಥಾ–ಹಾಂಗೆ, ಬೀಜಂ–ಬಿತ್ತು ಉಂಟಾಗುತ್ತಿಹುದು, ಬೀಜತೋವಾ–ಬಿತ್ತುವಿನಿಂದ, ತಥಾ–ಹಾಂಗೆ, ಅಂಕುರಃ–ಮೊಳಕೆ ಉಂಟಾಗುತ್ತಿಹುದು, ಎಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ. ನೀನೊಳಿದವನೇ–ನೀವಾರಂಗದಲ್ಲಿ ಕೃಪೆಯಾಗಿ ಇಷ್ಟಲಿಂಗವಾಗಿ ನೆಲೆಗೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಕೈಕೊಂಡು ಒಪ್ಪುತ್ತಿದ್ದಿಯೋ, ಧನ್ಯ–ಆತನೇ ಕೃತಾರ್ಥನು, ಜಗಕ್ಕೆ ಪಾವನ–ಲೋಕಕ್ಕೆ ಪವಿತ್ರಸ್ವರೂಪನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

...........................

೧–೧ ಭಕ್ತಿ–ಶಿವಾದ್ವೈತ ಭಕ್ತಿಯಿಂದ, ಪ್ರಸಾದಾದ್ದೇವತಾ–ಶಿವನು ಪ್ರತ್ಯಕ್ಷವಾಗುತ್ತಿಹನು, ಪ್ರಸಾದೋ–ಶಿವನ ಪ್ರತ್ಯಕ್ಷತ್ವದಿಂದ (ಕ, ಗ). ೨–೨ ಉಂಟಾಗುತ್ತಿಹುದೋ (ಕ, ಗ).

---

## ೫೦೮

**ಅಷ್ಟವಿಧಾರ್ಚನೆ ಷೋಡಶೋಪಚಾರವ ಅಂದಂದಿನ ಕೃತ್ಯವನಂದಂದಿಗೆ ಆನು ಮಾಡಿ ಶುದ್ಧನಯ್ಯ. ಹಂಗುಹರಿಯಲಿಲ್ಲದ ಕಾರಣ, ಕೂಡಲಸಂಗಮದೇವಾ ನಿಃಫಲದಾಯಕನಾಗಿ ಆನು ಮಾಡಿ ಶುದ್ಧನಯ್ಯ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಅಷ್ಟವಿಧಾರ್ಚನೆ–ಎಂಟು ತೆರದರ್ಚನೆಯು, ಷೋಡಶೋಪಚಾರವ–ಅರ್ಘ್ಯಾದಿಪ್ರದಕ್ಷಿಣಾಂತ್ಯಮಾದ ಹದಿನಾರು ತೆರದ ಸತ್ಕಾರಂಗಳನು, ಅಂದಂದಿನ ಕೃತ್ಯವ–ಆಯಾಯ ಕಾಲದಲ್ಲಿ ಮಾಡುವಂಥ ಲಿಂಗಪೂಜಾದ್ರವ್ಯಂಗಳನು, ಅಂದಂದಿಗೆ–ಆಯಾ ಕಾಲಕ್ಕೆ, ಆನು ಮಾಡಿ–ಆನು ಅನುಗೈದು, ಶುದ್ಧನಯ್ಯ–ಕಡಲೆ ಮೆದ್ದು ಕೈತೊಳೆಯಲಿಲ್ಲವೆಂಬೋಪಾದಿಯಲ್ಲಿ ನಿರ್ಮಲಸ್ವರೂಪನಯ್ಯ. ಅದು ಹೇಗೆಂದರೆ, ಹಂಗು–ನಿಮ್ಮ ಹಂಗೇ ಚತುರ್ವಿಧ ಫಲಪದಂಗಳು, ಹರಿಯಲಿಲ್ಲದ ಕಾರಣ–ಆ ಚತುರ್ವಿಧ ಫಲಪದಂಗಳನು ಪಡೆದನುಭವಿಸಲೋಸ್ಕರ ಇಹದಿಂದ

ಪರಕ್ಕೆ ಪರದಿಂದ ಇಹಕ್ಕೆ ಎಡಯಾಟವಿಲ್ಲದ ನಿಮಿತ್ತ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಃಫಲದಾಯಕನಾಗಿ–ಫಲಪದರಹಿತವಾದ ನಿರ್ಮೋಕ್ಷವನ್ನು ಕರುಣಿಸಿಕೊಡಲ್ಪಟ್ಟಾತನಾಗಿ, ನಾನು ಮಾಡಿ–ನಾನನುಗೈದು, ಶುದ್ಧನಯ್ಯ–ನಿರ್ಮಲಸ್ವರೂಪನಯ್ಯ.

---

೫೦೯

**'ಮಾಟ ಕೂಟ, ಫಲಪ್ರಾಪ್ತಿ' ಎಂಬ ಮಾತು ಕೇಳಲಾಗದು, ಶಿವಶಿವಾ! ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು ಶ್ರೀಗುರುವು ಕೃಪೆಮಾಡಿ ಹೇಳಿದ ಕಾರಣ, ಅಲ್ಲಿ ಮಾಡುವವನೂ ಮಾಡಿಸಿಕೊಂಬುವವನೂ ನೀನೆ ಅಯ್ಯ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಮಾಟ–ತನು ಗುರುವಿಂಗೆ ಮನ ಲಿಂಗಕ್ಕೆ ಪ್ರಾಣದ್ರವ್ಯಪದಾರ್ಥವ ಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಂಥ ಭಕ್ತಿಮಾಟವು, ಕೂಟ–ತನು ಗುರುವಿನಲ್ಲಿ ಮನ ಲಿಂಗದಲ್ಲಿ ಪ್ರಾಣ ಜಂಗಮದಲ್ಲಿ ಕೂಡುವಂಥ ಕೂಟವು, ಫಲಪ್ರಾಪ್ತಿಯೆಂಬ–ಫಲಪದಂಗಳಂ ಪಡೆದನುಭವಿಸುತ್ತೈದಾರೆಂದು ಹೇಳುವ, ಮಾತು–ಪ್ರಸಂಗವನ್ನು, ಕೇಳಲಾಗದು–ಭಕ್ತಮಾಹೇಶ್ವರರು ಕಿವಿಗೊಟ್ಟು ಆಲಿಸಲಾಗದು, ಶಿವಶಿವಾ–ಲಿಂಗವೇ ಲಿಂಗವೇ, ನಿಮ್ಮ ಭಕ್ತರಿಗೆ–'ಲಿಂಗಭಕ್ತಾಶ್ಚ ಜಂಗಮಾಃ'ಯೆಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳಿಗೆ, ಮಾಡಿದೆನೆನ್ನದಿರೆಂದು–ನಾನು ಮಾಡಿದೆ ಇವರು ಕೈಕೊಂಡರು, ಸಲುವ ಪದಾರ್ಥವೆನ್ನದು, ಎನ್ನಿಂದಲೇ ಲಿಂಗಜಂಗಮಕ್ಕೆ ತೃಪ್ತಿಯಾಗುತ್ತೈತೆಯೆಂದು ಹೇಳದಿರಾ ಎಂದೆನುತ್ತ, ಶ್ರೀಗುರುವು–ಶ್ರೀಗುರುನಾಥನು, ಕೃಪೆಮಾಡಿ–ದಯಮಾಡಿ, ಹೇಳಿದ ಕಾರಣ–ಬೋಧಿಸಿದ ನಿಮಿತ್ಯ, ಅಲ್ಲಿ–ಭಕ್ತಿ ಮಾಡುವಲ್ಲಿ, ಮಾಡುವವನೂ–ದೇವನಾದದ್ದೂ ಭಕ್ತನಾದದ್ದೂ ಪದಾರ್ಥವಾದದ್ದೂ ಒಂದೇ ವಸ್ತುವೆಂದರಿದು ತಾನು ತಾನಾಗಿ ಸಮರಸಭಾವದಿಂದ ಮಾಡುವಂಥವರುಗಳೂ, ಮಾಡಿಸಿಕೊಂಬುವವನೂ–ಭಕ್ತ ಮಾಡುವ ಭಕ್ತಿಯನ್ನು ನಮ್ಮ ಸೊಮ್ಮೆಂದು ಸಮರ್ಪಿಸಿಕೊಂಬುವಂಥ ಭೂರುದ್ರ ಚರಲಿಂಗವೂ, ನೀನೆ–ಪರಶಿವಲಿಂಗವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III- - - - - - - - - - - - - - - - - - - - - - - - - - - - - - - - - - - - - - - - - -

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವೆ–ಸ್ವಯವೆ ಸರಿಯೆಂಬುದರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - -

ಪರಶಿವನು ತನ್ನ ಸ್ವಲೀಲೆಯಿಂದ ಲಿಂಗಾಂಗವೆರಡಾಗಿ ಭಕ್ತದೇವನೆಂದೆನಿಸಿ, ಮಾಡುವ ಮಾಡಿಸಿಕೊಳ್ಳುತ್ತಿಹ ಶಿವನೊಬ್ಬನೆಯೆಂದು ಗುರುಕರುಣದಿಂದಜಿದು, ಭಿನ್ನಭಾವವಳಿದ ಸದ್ಭಕ್ತರೆ ಮುಕ್ತರು. ಅಂತಲ್ಲದೆ ಅಜ್ಞಾನದಿಂದ ತನುಮನಧನಂಗಳು ತನ್ನವೆಂದು ತಾನು ಗುರುಲಿಂಗಜಂಗಮಕ್ಕೆ ಕೊಟ್ಟು ಫಲಪದವ ಪಡದೆನೆಂಬರೆಲ್ಲರೂ ಪರಿಭವಕ್ಕೆ ಬರುತ್ತಿಹರೆಂಬುದೀ ವಚನದ ತಾತ್ಪರ್ಯಾರ್ಥ.

---

**ಅಯ್ಯಾ ನಿಮ್ಮನುಭಾವದಿಂದೆನ್ನ ತನು ಹಾಳಾಯಿತ್ತು, ಅಯ್ಯಾ ನಿಮ್ಮನುಭಾವದಿಂದೆನ್ನ ಮನ ಹಾಳಾಯಿತ್ತು, ಅಯ್ಯಾ ನಿಮ್ಮನುಭಾವದಿಂದೆನ್ನ ಕರ್ಮ ಛೇದನವಾಯಿತ್ತು, ಅಯ್ಯಾ ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿಯೆಂಬ ಒಡವೆಯನು ದಿಟವಮಾಡಿ ತೋಱಿದರು ಕಾಣಾ, ಕೂಡಲಸಂಗಮದೇವಾ.**

| - - - - - - - - - - - - - - - - - - - - - - - - - - - - - - - - - - - - - - - - - - - - - -

ಅಯ್ಯಾ–ಎಲೆ ಲಿಂಗವೆ, ನಿಮ್ಮನುಭಾವದಿಂದೆನ್ನ–ನಿಮ್ಮ ಶಿವಾನುಭಾವವನು ಬೆಸಗೊಂಡು ಕೇಳುವುದರಿಂದ, ಎನ್ನ ತನು ಹಾಳಾಯಿತ್ತು–ಎನ್ನ ತನುಪ್ರಪಂಚ ನಷ್ಟವಾಗಿ ಹೋಯಿತ್ತು. ಅಯ್ಯಾ–ಎಲೆ ಲಿಂಗವೆ, ನಿಮ್ಮನುಭಾವದಿಂದೆನ್ನ–ನಿಮ್ಮ ಶಿವಾನುಭಾವವನು ಬೆಸಗೊಂಡು ಕೇಳುವುದರಿಂದ, ಎನ್ನ ಮನ ಹಾಳಾಯಿತ್ತು–ಎನ್ನ ಮನಪ್ರಪಂಚು ನಷ್ಟವಾಗಿ ಹೋಯಿತ್ತು. ಅಯ್ಯಾ–ಎಲೆ ಲಿಂಗವೆ, ನಿಮ್ಮನುಭಾವದಿಂದ–ನಿಮ್ಮ ಶಿವಾನುಭಾವವನು ಬೆಸಗೊಂಡು ಕೇಳುವುದರಿಂದ, ಎನ್ನ ಕರ್ಮ–ಎನ್ನ ಸಂಚಿತಾದಿಕರ್ಮತ್ರಯಂಗಳು, ಛೇದನವಾಯಿತ್ತು–ನಷ್ಟವಾದವಯ್ಯ. ಅಯ್ಯಾ–ಎಲೆ ಲಿಂಗವೆ, ನಿಮ್ಮವರು–ಗುರುಲಿಂಗಜಂಗಮಮೂರ್ತಿಗಳು, ಅಡಿಗಡಿಗೆ–ವೇಳೆವೇಳೆಗೆ, ಹೇಳಿ–ಬೋಧಿಸಿ, ಭಕ್ತಿಯೆಂಬ–ಶಿವಾದ್ವೈತಭಕ್ತಿಯೆಂದು ಹೇಳುವ, ಒಡವೆಯ ದ್ರವ್ಯವನು, ದಿಟವ ಮಾಡಿ–ನಿಶ್ಚಯ ಮಾಡಿ, ತೋಱಿದರು ಕಾಣಾ–ಕಾಣಿಸಿದರು ಕಂಡಾ ಎಂಬುದರ್ಥ.

● ಅಯ್ಯಾ–ಎಲೆ ಲಿಂಗವೆ, ನಿಮ್ಮನುಭಾವದಿಂದ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತ ಸ್ಥಾನ ಸದ್ಭಾವವೆಂಬ ಚತುರ್ವಿಧ ಭಕ್ತಿಯ ಮಾಡೋ ನೆವದಿಂದ ತನುಪದಾರ್ಥವನ್ನು ಗುರುವಿಗೆ ಸಮರ್ಪಿಸಿದುದರಿಂದ, ಎನ್ನ ತನು ಹಾಳಾಯಿತ್ತು–ಎನ್ನ ತನುಪ್ರಪಂಚು ನಷ್ಟವಾಗಿ ಆಚಾರಾಂಗ ಜ್ಞಾನಕಾಯವಾಗಿ ಅಳವಟ್ಟಿತ್ತಯ್ಯ. ಅಯ್ಯಾ–ಎಲೆ ಪರಶಿವಲಿಂಗವೆ, ನಿಮ್ಮನುಭಾವದಿಂದ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುವುದರಿಂದ, ಎನ್ನ ಮನಪದಾರ್ಥವ ಲಿಂಗಕ್ಕೆ ಸಮರ್ಪಣೆಯ ಮಾಡುವ ನೆವದಿಂದ; ಮನ ಹಾಳಾಯಿತ್ತು–ಮನೋಪ್ರಪಂಚು ನಷ್ಟವಾಗಿ ಉನ್ಮನಿಯ ಮನಸ್ಸಾಗಿ ಅಳವಟ್ಟಿತ್ತು. ಅಯ್ಯಾ–ಎಲೆ ಪರಶಿವಲಿಂಗವೆ, ನಿಮ್ಮನುಭಾವದಿಂದ–ಪ್ರಾಣ ಜ್ಞಾನದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವ ನೆವದಿಂದ, ಕರ್ಮಛೇದನವಾಯಿತ್ತು–ಎನ್ನ ಪ್ರಾಣನ ವರ್ತನೆಯಳಿದು ಚಿತ್ಪ್ರಾಣವಾಗಿ ಅಳವಟ್ಟಿತ್ತು. ಅಯ್ಯಾ–ಎಲೆ ಲಿಂಗವೆ, ನಿಮ್ಮವರು–ನಿಮ್ಮ ಗುರುಲಿಂಗಜಂಗಮಮೂರ್ತಿಗಳು ಅಡಿಗಡಿಗೆ–ವೇಳೆವೇಳೆಗೆ ಹೇಳಿ–ಶಿವಾನುಭಾವವನ್ನು ಬೋಧಿಸಿ, ಭಕ್ತಿಯೆಂಬ–ಶಿವಾದ್ವೈತಭಕ್ತಿಯೆಂದು ಹೇಳುವ, ಒಡವೆಯನು–ದ್ರವ್ಯವನ್ನು, ದಿಟವ ಮಾಡಿ–ನಿಶ್ಚಯವ ಮಾಡಿ, ತೊಱಿದರು ಕಾಣಾ–ಅರುಹಿಕೊಟ್ಟರು ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

---

**ಭಕ್ತನೆಂತೆಂಬೆನಯ್ಯ ಭವಿಸಂಗ ಬಿಡದನ್ನಕ್ಕ? ಮಾಹೇಶ್ವರನೆಂತೆಂಬೆನಯ್ಯ ಪರಸ್ತ್ರೀ ಪರಧನದಾಸೆ ಬಿಡದನ್ನಕ್ಕ? ಪ್ರಸಾದಿಯೆಂತೆಂಬೆನಯ್ಯ ಆಧಿವ್ಯಾಧಿ ನಷ್ಟವಾಗದನ್ನಕ್ಕ? ಪ್ರಾಣಲಿಂಗಿಯೆಂತೆಂಬೆನಯ್ಯ ಪ್ರಾಣ ಸ್ಥಿರವಾಗದನ್ನಕ್ಕ? ಶರಣನೆಂತೆಂಬೆನಯ್ಯ ಪಂಚೇಂದ್ರಿಯ ವಿಷಯ ನಾಸ್ತಿಯಾಗದನ್ನಕ್ಕ? ಐಕ್ಯನೆಂತೆಂಬೆನಯ್ಯ ಜನನಮರಣವಿರಹಿತವಾಗದನ್ನಕ್ಕ? ಇಂತಪ್ಪ ಭಾಷೆ ವ್ರತ ವೇಷ ನಿಯಮಂಗಳ ನಾನರಿಯೆನಯ್ಯ. ನಿಮ್ಮ ಶರಣರ ತೊತ್ತು ಭೃತ್ಯಾಚಾರವ ಮಾಡುವೆ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತನೆಂತೆಂಬೆನಯ್ಯ ಭವಿಸಂಗ ಬಿಡದನ್ನಕ್ಕ–ಭಕ್ತನಾದಬಳಿಕ ಭವಿಗಳೊಂದಿಗೆ ತನುವಿನ ಕೊಡುಕೊಳೆ ಮನದ ಕೊಡುಕೊಳೆ ಧನದ ಕೊಡುಕೊಳೆ ಅರ್ಚನಾರ್ಪಣಕ್ರಿಯೆಗಳನು ಮಾಡುವಂಥದು ನಷ್ಟವಾಗಬೇಕು. ನಷ್ಟವಾಗದೆ ಇರುವ ಪರಿಯಂತರ ತ್ರಿವಿಧ ಪದಾರ್ಥವನ್ನು ಹಿಡಿದು ಭಕ್ತಗೃಹವನ್ನು ಕಟ್ಟಿ ಭಕ್ತಿಮಾಡುವಂಥ ಭಕ್ತಿಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನಯ್ಯ. ಪರಸ್ತ್ರೀ–ಅನ್ಯಸ್ತ್ರೀಯಳು, ಪರಧನದ–ಅನ್ಯದ್ರವ್ಯದ ಮೇಲಣ, ಆಸೆ–ಅಪೇಕ್ಷೆಯು, ಬಿಡದನ್ನಕ್ಕ?–ನಷ್ಟವಾಗಬೇಕು. ನಷ್ಟವಾಗದೆ ಇರುವ ಪರಿಯಂತರ, ಮಾಹೇಶ್ವರನೆಂತೆಂಬೆನಯ್ಯ–ಅಷ್ಟಾವರಣವನ್ನೇ ಅಂಗವ ಮಾಡಿಕೊಂಡು ಪಂಚಾಚಾರವನ್ನೇ ಪ್ರಾಣವ ಮಾಡಿಕೊಂಡು ಏಕಲಿಂಗನಿಷ್ಠಾಪರನಾಗಿ ಆಚರಿಸುವಂಥ ಮಾಹೇಶ್ವರಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನಯ್ಯ. ಪ್ರಸಾದಿ ಎಂತೆಂಬೆನಯ್ಯ ಆಧಿವ್ಯಾಧಿ ನಷ್ಟವಾಗದನ್ನಕ್ಕ : ಪ್ರಸಾದಿಯಾದ ಬಳಿಕ, ಆಧಿ–ಮನೋಚಿಂತನೆಯು, ವ್ಯಾಧಿ–ಅಷ್ಟೋತ್ತರ ಶತವ್ಯಾಧಿಗಳು, ನಷ್ಟವಾಗದನ್ನಕ್ಕ–ನಿಃಪತಿಯಾಗಬೇಕು. ಆಗದೆ ಇರುವ ಪರಿಯಂತರವು, ಪ್ರಸಾದಿಯೆಂತೆಂಬೆನಯ್ಯ–ಸ್ಥೂಲಸೂಕ್ಷ್ಮಕಾರಣವೆಂಬ ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪು ರುಚಿತೃಪ್ತಿಗಳನ್ನು ಇಷ್ಟಪ್ರಾಣಭಾವಲಿಂಗಗಳಿಗೆ ಸಮರ್ಪಿಸಿ, ಆ ಇಷ್ಟಪ್ರಾಣಭಾವಲಿಂಗಂಗಳ ಮುಖದಿಂದುಳುಮೆಯಾಗಿ ಬರಲ್ಪಟ್ಟ ಶುದ್ಧಸಿದ್ಧಪ್ರಸಿದ್ಧ ಪ್ರಸಾದವನ್ನು ಪಡೆದನುಭವಿಸುವಂಥ ಪ್ರಸಾದಿಸ್ಥಲದಾಚರಣೆಯುಳ್ಳತನೆಂದು ಹೇಂಗೆ ಹೇಳುವೆನಯ್ಯ.

ಪ್ರಾಣಲಿಂಗಿ ಎಂತೆಂಬೆನಯ್ಯ ಪ್ರಾಣಸ್ಥಿರವಾಗದನ್ನಕ್ಕ? : ಪ್ರಾಣಲಿಂಗಿಯಾದ ಬಳಿಕ, [ಪ್ರಾಣಸ್ಥಿರವಾಗದನ್ನಕ್ಕ–] ಪ್ರಾಣವು ಪ್ರಾಣಲಿಂಗದಲ್ಲಿ ಸಾಮರಸ್ಯವಾಗಬೇಕು. ಆಗದಿರುವ ಪರಿಯಂತರವು, ಪ್ರಾಣಲಿಂಗಿ ಎಂತೆಂಬೆನಯ್ಯ–ಅಂಗ ಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗವ ಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರಿಯೆವಿಡಿದಾಚರಿಸುವಂಥ ಪ್ರಾಣಲಿಂಗಿಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನಯ್ಯ. ಶರಣನೆಂತೆಂಬೆನಯ್ಯ ಪಂಚೇದ್ರಿಯ ವಿಷಯ ನಾಸ್ತಿಯಾಗದನ್ನಕ್ಕ? : [ಪಂಚೇಂದ್ರಿಯ ವಿಷಯ ನಾಸ್ತಿಯಾಗದನ್ನಕ್ಕ?–] ಶರಣನಾದ ಮೇಲೆ ಪಂಚೇಂದ್ರಿಯ ವಿಷಯಂಗಳ ವರ್ತನೆ ಎಲ್ಲ ನಷ್ಟವಾಗಿ ಪಂಚವಿಧ ಲಿಂಗವಾಗಿ ಅಳವಡಬೇಕು. ಅಳವಡದೇ ಇರುವ ಪರಿಯಂತರ, ಶರಣನೆಂತೆಂಬೆನಯ್ಯ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ 'ಶರಣಸತಿ ಲಿಂಗಪತಿ' ಭಾವವಿಡಿದಾಚರಿಸುವಂಥ ಶರಣಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನಯ್ಯ. ಐಕ್ಯನೆಂತೆಂಬೆನಯ್ಯ ಜನನಮರಣ ವಿರಹಿತವಾಗದನ್ನಕ್ಕ?:[ಜನನಮರಣ ವಿರಹಿತವಾಗದನ್ನಕ್ಕ?] ಐಕ್ಯನಾದ ಬಳಿಕ ಜನನಮರಣಂಗಳ ವರ್ತನೆ ನಷ್ಟವಾಗಿ ಗುರುವಿನಲ್ಲಿ ಉತ್ಪತ್ಯ ಲಿಂಗದಲ್ಲಿ ಸ್ಥಿತಿ

ಪರತತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಡಬೇಕು. ಅಳವಡದೆ ಇರುವ ಪರಿಯಂತರ, ಐಕ್ಯನೆಂತೆಂಬೆನಯ್ಯ-ಶಿಖಿಕರ್ಪುರ ಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟ ಐಕ್ಯಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನಯ್ಯ.

ಇಂತಪ್ಪ ಭಾಷೆ : ಇಂತಪ್ಪ-ಭಕ್ತನಾದ ಮೇಲೆ ಭವಿಯ ಸಂಗ ಬಿಡಬೇಕೆಂಬ, ಮಾಹೇಶ್ವರನಾದ ಮೇಲೆ ಪರಸ್ತ್ರೀ ಪರಧನದಾಸೆ ನಷ್ಟವಾಗಬೇಕೆಂಬ, ಪ್ರಾಣಲಿಂಗಿಯಾದ ಮೇಲೆ ಪ್ರಾಣವನ್ನು ಪ್ರಾಣಲಿಂಗದಲ್ಲಿ ಸಾಮರಸ್ಯವ ಮಾಡಬೇಕೆಂಬ, ಶರಣನಾದ ಮೇಲೆ ಪಂಚೇಂದ್ರಿಯ ವಿಷಯಂಗಳ ವರ್ತನೆ ನಷ್ಟವಾಗಬೇಕೆಂಬ, ಐಕ್ಯನಾದ ಮೇಲೆ ಜನನ ಮರಣಂಗಳ ವರ್ತನೆಯನ್ನು ನಷ್ಟವ ಮಾಡಿ ಗುರುವಿನಲ್ಲಿ ಉತ್ಪತ್ಯ ಲಿಂಗದಲ್ಲಿ ಸ್ಥಿತಿಪರತತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಡಿಸಿಕೊಡಬೇಕೆಂಬ, ಭಾಷೆ-ಪ್ರತಿಜ್ಞೆಯು, ವ್ರತ-ಷಡ್ವಿಧವ್ರತವು, ವೇಷ-ಷಡ್ವಿಧವೇಷಂಗಳು, ನಿಯಮಂಗಳು-ಷಡ್ವಿಧಶೀಲವ್ರತನೇಮಾಚಾರಂಗಳು, ನಾನಱಿಯೆನಯ್ಯ-ನಾ ತಿಳಿಯೆನಯ್ಯ. ಅಘಟಿತಘಟಿತ-ಸಕಲವೇದಶಾಸ್ತ್ರಾಗಮ ಪುರಾಣಂಗಳಿಗೆ ಘಟಿಸಬಾರದೆ ಇದ್ದಂಥ, ವರ್ತಮಾನವ-ಭೂತಭವಿಷ್ಯವರ್ತಮಾನಂಗಳ, ನಾನಱಿಯೆನಯ್ಯ-ನಾ ತಿಳಿಯೆನಯ್ಯ. ನಿಮ್ಮ ಶರಣರ-ನಿಮ್ಮ ಜಂಗಮ ಮೂರ್ತಿಗಳಿಗೆ, ತೊತ್ತು ಭೃತ್ಯಾಚಾರವ ಮಾಡುವೆ-ಅವರೇ ಕರ್ತೃಗಳಾಗಿ ನಾನೇ ಭೃತ್ಯನಾಗಿ ಕರ್ತೃಭೃತ್ಯನ್ಯಾಯ ಮುಂದುಗೊಂಡು ಭಕ್ತಿಯನನುಗೈವುತಿಪ್ಪೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - -

ಆಧಿ-ಮನೋವ್ಯಥೆಯು, ವ್ಯಾಧಿ-ಅಷ್ಟೋತ್ತರ ಶತವ್ಯಾಧಿಯು.

---

೫೧೨

**ಅಭ್ಯಾಸವೆನ್ನ ವರ್ತಿಸಿತ್ತಯ್ಯ, ಭಕ್ತಿ ಸಾಧ್ಯವಾಗದು, ನಾನೇವೆನಯ್ಯ ? ಆನು ನಿಮ್ಮ ಮನಂಬೊಗುವನ್ನಕ್ಕ, ನೀವೆನ್ನ ಮನಂಬೊಗುವನ್ನಕ್ಕ ಕಾಯದ ಗುಣವ ಕಳೆದವರಿಗೆ ಶರಣೆಂಬೆ, ಕೂಡಲಸಂಗಮದೇವಾ.**

I------------------------------------------------------------------------

ಅಭ್ಯಾಸವು-ಭಿನ್ನಭಕ್ತಿ ಅಭ್ಯಾಸವು, ಎನ್ನ ವರ್ತಿಸಿತ್ತಯ್ಯ-ಎನ್ನ ಅವಗ್ರಹಿಸಿತ್ತಯ್ಯ, ಭಕ್ತಿ-ಶಿವಾದ್ವೈತಭಕ್ತಿಯು, ಸಾಧ್ಯವಾಗದು-ಸಿದ್ಧಿಸದು, ನಾನೇವೆನಯ್ಯ ?-ನಾನೇನು ಮಾಡಲಯ್ಯ ? ಆನು-ಶರಣನು, ನಿಮ್ಮ-ಸ್ವಾಮಿಗಳ, ಮನಂಬೊಗುವನ್ನಕ್ಕ-ನಿಮ್ಮಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳೋ ಪರಿಯಂತರವು, ನೀವು-ಲಿಂಗವು, ಎನ್ನ ಮನಂಬೊಗುವನ್ನಕ್ಕ-ಶರಣನ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳೋ ಪರಿಯಂತರವು, ಕಾಯದ ಗುಣವ ಕಳೆದವರಿಗೆ-ತನುವಿಗೆ ಭಿನ್ನಕ್ರೀ ಭಿನ್ನಜ್ಞಾನವ ನಷ್ಟವ ಮಾಡಿಬಿಟ್ಟು ಅಭಿನ್ನಕ್ರೀ ಅಭಿನ್ನಜ್ಞಾನವಾಗಿ ಅಳವಡಿಸಿಕೊಂಡಂಥ ಶಿವಶರಣರಿಗೆ, ಶರಣೆಂಬೆ-ನಮಸ್ಕಾರವೆಂದು ನಮಸ್ಕರಿಸುವೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

---

**ತನುಸಾರಾಯರ, ಮನಸಾರಾಯರ, ಜ್ಞಾನಸಾರಾಯರ ತೋಱಯ್ಯ ನಿಮ್ಮ ಧರ್ಮ. ಭಾವಸಾರಾಯರ, ಭಕ್ತಿ ಸಾರಾಯರ ತೋಱಯ್ಯ ನಿಮ್ಮ ಧರ್ಮ. ಕೂಡಲಸಂಗಮದೇವಾ, ನಿಮ್ಮನಱಯದ ಅವಗುಣಿಗಳ ತೋಱದಿರಯ್ಯ ನಿಮ್ಮ ಧರ್ಮ.**

I-----------------------------------------

ತನುಸಾರಾಯರ–ತನುವಿನಲ್ಲಿ ಶ್ರೇಷ್ಠವಾದ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿ ಮಾಡಲ್ಪಟ್ಟಂಥವರ, ಮನಸಾರಾಯರ–ಮನದಲ್ಲಿ ಶ್ರೇಷ್ಠವಾವ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಲ್ಪಟ್ಟಂಥವರ, ಜ್ಞಾನಸಾರಾಯರ–ಪ್ರಾಣಜ್ಞಾನದಲ್ಲಿ ಶ್ರೇಷ್ಠವಾದ ಜಂಗಮವ ಸಂಬಂಧವ ಮಾಡಿಕೊಂಡು ಜಂಗಮಭಕ್ತಿ ಮಾಡಲ್ಪಟ್ಟಂಥವರ, ತೋಱಯ್ಯ–ಅವರ ದರುಶನವನ್ನು ಕಾಣಿಸಿಕೊಡಯ್ಯ, ನಿಮ್ಮ ಧರ್ಮ–ಅದೇ ನಿಮ್ಮ ಕೃಪೆಯು. ಭಾವಸಾರಾಯರ–ಸರ್ವಾಂಗದಲ್ಲಿ ಶ್ರೇಷ್ಠವಾದ ಪಾದೋದಕ ಸಂಬಂಧವ ಮಾಡಿಕೊಂಡು ಪಾದೋದಕವ ಸೇವನೆಯ ಮಾಡಲ್ಪಟ್ಟಂಥವರ, ಭಕ್ತಿಸಾರಾಯರ–ಆತ್ಮಾಂಗದಲ್ಲಿ ಶ್ರೇಷ್ಠವಾದ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯು ಮಾಡಲ್ಪಟ್ಟಂಥವರ, ತೋಱಯ್ಯ–ಅವರ ದರುಶನವ ಕಾಣಿಸಯ್ಯ, ನಿಮ್ಮ ಧರ್ಮ–ಅದು ನಿಮ್ಮ ಕೃಪೆಯು.

ಕೂಡಲಸಂಗಮದೇವಾ–ಎಲೆ ಪರಿಶಿವಲಿಂಗವೆ, ನಿಮ್ಮನಱಯದ–ಪಂಚವಿಧ ಲಿಂಗಸಂಬಂಧವ ಮಾಡಿಕೊಂಡು ಪಂಚವಿಧ ಭಕ್ತಿವಡಿದಾತರಿಸುವಂಥದನ್ನು, [ನಿಮ್ಮನು–ನಿಮ್ಮನ್ನು], ಅಱಯದ–ತಿಳಿಯದ, ಅವಗುಣಿಗಳ–ಅಜ್ಞಾನ ದುರ್ಗುಣವನುಳ್ಳ ಆಶಾಲಾಂಛನಿ ಉಪಾಧಿಕರುಗಳ, ತೋಱದಿರಯ್ಯ–ಅವರ ದರುಶನವ ಕಾಣಿಸದಿರಯ್ಯ, ನಿಮ್ಮ ಧರ್ಮ–ಅದೇ ನಿಮ್ಮ ಕೃಪೆಯು.

II-----------------------------------------

ತನುಸಾರಾಯರ–ಅಂಗವನು ಗುರುವಿಂಗೆ ಸಮರ್ಪಿಸುವ ಶ್ರೇಷ್ಠಾಯಮಾನರ, ಮನಸಾರಾಯರ–ಮನವನ್ನು ಲಿಂಗಕ್ಕೆ ಸಮರ್ಪಿಸುವ ಶ್ರೇಷ್ಠಾಯಮಾನರ, ಜ್ಞಾನಸಾರಾಯರ ತೋಱಯ್ಯಾ ನಿಮ್ಮ ಧರ್ಮ–ಧನವನು ಜಂಗಮಕ್ಕೆ ಸಮರ್ಪಿಸುವ ಶ್ರೇಷ್ಠಾಯಮಾನರ ಕಾಣಿಸೆಲೆ ಸ್ವಾಮಿ ನಿಮ್ಮ ಪುಣ್ಯವು. ಭಾವಸಾರಾಯರ–ಆತ್ಮನ ಪ್ರಕೃತಿಯ ನಷ್ಟವ ಮಾಡಿ ಚಿದಾತ್ಮಸ್ವರೂಪವ ಮಾಡಿಕೊಂಡಾಚರಿಸುವ ಶ್ರೇಷ್ಠಾಯಮಾನರ, ಭಕ್ತಿಸಾರಾಯರ ತೋಱಯ್ಯಾ ನಿಮ್ಮ ಧರ್ಮ–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹದಲ್ಲಿ ಶ್ರೇಷ್ಠಾಯಮಾನರ ಕಾಣಿಸೆಲೆ ಸ್ವಾಮಿ ನಿಮ್ಮ ಪುಣ್ಯವು. ಕೂಡಲಸಂಗಮದೇವಾ ನಿಮ್ಮನಱಯದ ಅವಗುಣಿಗಳ ತೋಱದಿರಯ್ಯ ನಿಮ್ಮ ಧರ್ಮ–ಎಲೆ ಪರಶಿವಲಿಂಗವೆ ನಿಮ್ಮ ಸಂಬಂಧವಾದ ತ್ರಿವಿಧಲಿಂಗಾನುಭಾವಿಗಳ ಅರಿವಾಚರಣೆಯನರಿಯದ[೧] ಸಂಸಾರದ ಅನ್ಯಾಯ ಗುಣವುಳ್ಳವರ ಕಾಣಿಸದಿರಲೆ ಸ್ವಾಮಿ ನಿಮ್ಮ ಪುಣ್ಯವು.

............................

೧+ವನೆ (ಜ).

೫೧೪

**ಸಂಚಲವಿಲ್ಲದ ಭಕ್ತಿ, ವಂಚನೆಯಿಲ್ಲದ ಮಹಂತರ ತೋಱಾ. ತನುಶುಚಿ ಮನಶುಚಿಗಳ ತೋಱಾ.. ಇಂತಪ್ಪ ಶಿವಲಿಂಗೈಕ್ಯರ ತೋಱ ಬದುಕಿಸು, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಸಂಚಲವಿಲ್ಲದ ಭಕ್ತಿ–ತನ್ನ ಸಮಯಾಚಾರಕೊಬ್ಬ ಜಂಗಮೂರ್ತಿಗಳ ಮಡಿಗಿಕೊಂಡಿರ್ದಲ್ಲಿ [* ಅವರ ವಿಷಯದಲ್ಲಿ *] ಸಂಕಲ್ಪವಿಲ್ಲದ ಭಕ್ತಿ, ಅದೇ ಶಿವಾದ್ವೈತಭಕ್ತಿಯು. ವಂಚನೆಯಿಲ್ಲದ–ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ ವಂಚಿಸಿಕೊಳಬೇಕೆಂಬಂಥ ಮಾಜೋಬುದ್ಧಿ ಉಂಟಾಗಿಲ್ಲದ. ಮಹಂತರ–ಮಹಿಮಾಪದವನುಳ್ಳ ನಿರ್ವಂಚಕ ಸದ್ಭಕ್ತರುಗಳ, ತೋಱಾ–ಅವರ ದರುಶನವ ಕಾಣಿಸಾ. ತನುಶುಚಿಗಳ–ತನುವಿನಲ್ಲಿ ನಿರ್ಮಲಸ್ವರೂಪವಾದ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿ ಮಾಡಲ್ಪಟ್ಟವರ, ಮನಶುಚಿಗಳ–ಮನದಲ್ಲಿ ನಿರ್ಮಲ ಸ್ವರೂಪವಾದ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಲ್ಪಟ್ಟವರ, ತೋಱಾ.–ಅವರ ದುರಶನವ ಕಾಣಿಸಾ. ಇಂತಪ್ಪ–ಈ ಪ್ರಕಾರವಾದ, ಶಿವಲಿಂಗೈಕ್ಯರ–ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡಿ ಶಿಖಿಕರ್ಪುರ ಸಂಯೋಗವಾದ ಹಾಂಗೆ ಜಂಗಮದಲ್ಲಿ ಕೂಡಲ್ಪಟ್ಟ ಮಹಾಲಿಂಗೈಕ್ಯರ, ತೋರಷಿ–ಅರುಹಿಸಿಕೊಟ್ಟು, ಬದುಕಿಸು–ಕೃತಾರ್ಥವ ಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೫೧೫

**ಕಾಮಸಂಗವಳಿದು ಅನುಭಾವಸಂಗದಲ್ಲಿ ಉಳಿದವರನಗಲಲಾಱೆನು; ಶಿವಂಗೆ ಮಿಗೆಮಿಗೆ ಒಲಿದವರ ನಾನಗಲಲಾಱೆನು, ಕಾಣಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - - - - -

ಕಾಮಸಂಗವಳಿದು–ತನುವಿನ ಮನ್ಮಥವಿಕಾರದ ಕೂಟವು ನಷ್ಟವಾಗಿಹೋಗಿ, ಅನುಭಾವಸಂಗದಲ್ಲಿ–ತ್ರಿವಿಧಲಿಂಗಾನುಭಾವಿಗಳಾದ ಶಿವಶರಣರ ಶಿವಾನುಭಾವದ ಗೋಷ್ಠಿಯ ತತ್ಸಂಗದಲ್ಲಿ, ಉಳಿದವರನು–ಅವಶೇಷಿತವಾದವರನು, ಅಗಲಲಾಜೆನು–ಬಿಟ್ಟು ವಿಯೋಗವಾಗಲಾರೆನು; ಶಿವಂಗೆ–ಪರಮೇಶ್ವರಂತೆ, ಮಿಗೆಮಿಗೆ–ಚೆನ್ನಾಗಿ ಚೆನ್ನಾಗಿ, ಒಲಿದವರ–ಲಿಂಗದಲ್ಲಿ ಮನವಿಟ್ಟವರನು, ನಾನಗಲಲಾಜೆನು ಕಾಣಾ–ನಾನು ಬಿಟ್ಟು ವಿಯೋಗವಾಗಲಾರೆನು ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೫೧೬

**ಭಕ್ತಿರತಿಯ ವಿಕಳತೆಯ ಯುಕುತಿಯನೇನ ಬೆಸಗೊಂಬಿರಯ್ಯ ? ಕಾಮಿಗುಂಟೇ ಲಜ್ಜೆ ನಾಚಿಕೆ ? ಕಾಮಿಗುಂಟೇ ಮಾನಾಪಮಾನ ? ಕೂಡಲಸಂಗನ ಶರಣರಿಗೊಲಿದ ಮರುಳನನೇನ ಬೆಸಗೊಂಬಿರಯ್ಯ ?**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತಿ–ಶಿವಾದ್ವೈತಭಕ್ತಿ, ರತಿಯ–ಪ್ರೀತಿಯ, ವಿಕಳತೆಯ–ವಿಕಾರದ, ಯುಕುತಿಯನು–ಜ್ಞಾನವನು, ಏನ ಬೆಸಗೊಂಬಿರಯ್ಯ?–ಎಂತೆಂದು ಬೆಸಗೊಂಡು ಕೇಳುವಿರಯ್ಯ? ಕಾಮಿಗುಂಟೇ ಲಜ್ಜೆ ನಾಚಿಕೆ?–ಲೋಕದಲ್ಲಿ ಸ್ತ್ರೀಪುರುಷರಿಬ್ಬರೂ ರತಿಕೂಟವ ಕೂಡುವಾಗ್ಗೆ ನನ್ನ ಅವಯವಂಗಳ ಸ್ತ್ರೀಯಳು ಕಂಡಾಳು ಸ್ತ್ರೀಯಳ ಅವಯವಂಗಳ–ನಾ ಕಂಡೇನೆಂದು ಲಜ್ಜೆ ನಾಚಿಕೆಯ ನೋಡಿ ಬಿಡುತ್ತೈದಾನೆ? ಇಲ್ಲವು. ಕಾಮಿಗುಂಟೇ ಮಾನಾಪಮಾನ? ಪುರುಷನಿಗೆ ಸ್ತ್ರೀಯಳೊಲಿದು ಸ್ತ್ರೀಯಳಿಗೆ ಪುರುಷನೊಲಿದು ಬಂದು ಏಕಾಂತದಲ್ಲಿ ರತಿಕೂಟವ ಕೂಡುವಾಗ್ಗೆ ನನ್ನ ಬಹುಮಾನವ ಪುರುಷ ಕಂಡಾನು ಪುರುಷನ ಬಹುಮಾನವ ನಾ ಕಂಡೇನೆಂದು ಮಾನಾಪಮಾನ ನೋಡಿ ಬಿಡುತ್ತೈದಾಳೆ? ಇಲ್ಲವು. ಹಾಂಗೆ; ಕಾಮಿಗೆ–ಲಿಂಗದಲ್ಲಿ ಕೂಡಬೇಕು ಬೆರೆಯಬೇಕು ಎರಡಳಿದು ಒಂದಾಗಬೇಕೆಂಬಂಥ ಶಿವಾಪೇಕ್ಷೆಯನುಳ್ಳಂಥ ಶಿವಶರಣಂಗೆ, ಲಜ್ಜೆ ನಾಚಿಕಯುಂಟೆ?–ಕಾಯಾಭಿಮಾನ ಜೀವಾಭಿಮಾನ ಉಂಟಾಗಿದ್ದಿತ್ತೆ? ಇಲ್ಲವು. ಕಾಮಿಗೆ–ಲಿಂಗದಲ್ಲಿ ಕೂಡಬೇಕು ಬೆರೆಯಬೇಕು ಎರಡಳಿದು ಒಂದಾಗಬೇಕೆಂಬ ಮೋಕ್ಷಾಪೇಕ್ಷೆಯನುಳ್ಳ ಶಿವಶರಣಂಗೆ, ಮಾನಾಪಮಾನ ಉಂಟೆ?–ಪೂಜ್ಯಾಪೂಜ್ಯಂಗಳುಂಟಾಗಿದ್ದಾವೆ? ಇಲ್ಲವು. ಕೂಡಲಸಂಗನ ಶರಣರಿಗೆ–ಜಂಗಮಮೂರ್ತಿಗಳಿಗೆ, ಒಲಿದ–ವಶಗತವಾದ. ಮರುಳನ–ಭಕ್ತಿವೇಷಧಾರಿಯ, ಏನ ಬೆಸಗೊಂಬಿರಯ್ಯ–ಎಂತೆಂದು ಬೆಸಗೊಂಡು ಕೇಳುವಿರಯ್ಯ.

---

೫೧೭

**ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತ್ತಯ್ಯ. ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯ. 'ಇದಱ' ಸಂಗಸುಖದನುಭಾವವನು ಕೂಡಲಸಂಗಮದೇವ ತಾನೆ ಬಲ್ಲ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - - - -

ಇಂದು ಹುಟ್ಟಿದ ಕೂಸಿಂಗೆ : ಇಂದು–ಇವತ್ತು, ಹುಟ್ಟಿದ–ಉತ್ಪತ್ತ್ಯವಾದ, ಕೂಸಿಂಗೆ–ಅರ್ಭಕನಿಗೆ, ಇಂದೇ–ಇವತ್ತೇ, ಜವ್ವನವಾಯಿತ್ತಯ್ಯ–ವಯಸ್ಸು ಉಂಟಾಯಿತ್ತಯ್ಯ. ಆ ಕೂಸು–ಆ ಅರ್ಭಕನು, ಬೀದಿಯಲ್ಲಿ–ಬಾಜಾರದಲ್ಲಿ, ಒತ್ತೆಗೊಳಲು–ಒತ್ತೆ ಹಿಡಿಯಲು, ನಿಂದಿತ್ತಯ್ಯ–ಅಲ್ಲೇ ಸ್ಥಿರವಾಯಿತ್ತಯ್ಯ. ಇದಱ ಸಂಗಸುಖದನುಭಾವವನು–[ಸ್ವಸ್ತ್ರೀಯ]ಲ್ಲಿ ಅಪ್ಪಿ ಆಲಿಂಗಿಸಿ ರತಿಕೂಟವನ್ನು ಕೂಡುವಂಥ ಕೂಟವು ಸ್ವಭರ್ತೃವಾದ ಪುರುಷನಿಗೆ ಅರಿಯಬರುವುದಲ್ಲದೆ ಮಿಕ್ಕಿನ ಗಾಂಪಧಾರಿಗಳಾದ ಪಾಣ್ಬಪುರುಷರಿಗೆ ಅರಿಯಬಂದೀತೆ? ಬರಲರಿಯದು. ಕೂಡಲಸಂಗಮದೇವ ತಾನೆ ಬಲ್ಲ–ಎಲೆ ಪ್ರಭುಸ್ವಾಮಿಗಳೇ ಇನ್ನೊಂದು ವೇಳೆ ಬಿನ್ನಹ ಕೈಕೊಂಡು ಚಿತ್ತೈಸಯ್ಯ ಎಂಬ ದೃಷ್ಟೋಪಮಾನದ ಹಾಂಗೆ,

● ಇಂದುಯೆಂದರೆ ಚಂದ್ರ, ಚಂದ್ರನೆಂದರೆ ಜ್ಞಾನ, ಹುಟ್ಟಿದ-ಜ್ಞಾನೋದಯದಿಂದ ಗುರೂಪಾವಸ್ಥೆಯ ಮಾಡಿ ಗುರುಕಾರುಣ್ಯಮಂ ಪಡೆದು ಲಿಂಗಾಂಗಸಂಬಂಧಿಯಾಗಿ ಶ್ರೀಗುರುನಾಥನ ಕರಗರ್ಭದಲ್ಲಿ ಶಿವಲಿಂಗಪ್ರಾಣಿ ಶಿವಮಂತ್ರಶರೀರಿಯಾಗಿ ಉತ್ಪತ್ಯವಾದ, ಕೂಸಿಂಗೆ-ಶರಣನೆಂಬ ಅರ್ಭಕಂಗೆ, ಇಂದೇ-ಜ್ಞಾನೋದಯವಾದಾಗಲೇ, ಜವ್ವನವಾಯಿತ್ತಯ್ಯ-ಶಿವಾದ್ವೈತಭಕ್ತಿಯೆಂಬ ವಯಸ್ಸು ಉಂಟಾಗಿತ್ತಯ್ಯ. ಆ ಕೂಸು-ಆ ಶರಣನೆಂಬ ಶಿಶುವು, ಬೀದಿಯಲ್ಲಿ-ಇಂದ್ರಿಯಂಗಳೆಂಬ ಬಾಜಾರದಲ್ಲಿ, ಒತ್ತೆಗೊಳಲು-ನಿಜಾನಂದ ಶಿವಸುಕವನ್ನು ಒತ್ತೆಯ ಹಿಡಿಯಲು, ನಿಂದಿತ್ತಯ್ಯ-ಅಲ್ಲೇ ಸನ್ನದ್ಧವಾಯಿತ್ತಯ್ಯ. ಇದಱ-ಲಿಂಗಾಂಗ ಸಂಬಂಧಿಯಾದ ಶರಣನ, ಸಂಗಸುಖವ : ಸಂಗವೆಂದರೆ ಇಂದ್ರಯಂಗಳು, ಸುಖವೆಂದರೆ ವಿಷಯಂಗಳನು, ಅನುಭಾವವನು-ಶರಣನ ತ್ರಿವಿಧ ಷಡ್ವಿಧ ಅಂಗದಲ್ಲಿ ಬರಲ್ಪಟ್ಟ ತ್ರಿವಿಧ ಷಡ್ವಿಧ ಪದಾರ್ಥವನ್ನು ಕೈಕೊಂಡು ತ್ರಿವಿಧ ಷಡ್ವಿಧ ಪ್ರಸಾದವನ್ನು ಕರುಣಿಸಿಕೊಡಬೇಕಾದರೆ ಪರಶಿವಲಿಂಗಕ್ಕೆ ಅರಿಯಬರುವುದಲ್ಲದೆ ಮಿಕ್ಕಿನ ದ್ವೈತಾದ್ವೈತಿಗಳಿಗೆ ಅರಿವೆನೆಂದರೆ ಅಶಕ್ಯವಾಗಿರ್ಪುದು. ಕೂಡಲಸಂಗಮದೇವ ತಾನೆ ಬಲ್ಲ-ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡು ಪೂಜೆಗೊಳ್ಳಯ್ಯ; ಇಂಬುಗೊಳ್ಳಯ್ಯ.

........................

೧-೧ ಶಿಶುವಿನ (ಕ.ಗ).

II- - - - - - - - - - - - - - - - - - - - - - - - - - - - - - - - - - - - - - - - - - - - - -

ಇಂದು ಹುಟ್ಟಿದ ಕೂಸಿಂಗೆ-ಈ ದೇಹಸಂಬಂಧಿಯಾದಂದು ಜ್ಞಾನೋದಯವಾದ ಜ್ಞಾನಕಲಾತ್ಮಕನಿಗೆ, ಅದಲ್ಲದೆ ಅಕ್ಕನಾಗಾಂಬಿಕೆಯ ಚಿದ್ಗರ್ಭದಿಂದುಯವಾದ ಚೆನ್ನಬಸವೇಶ್ವರನೆಂಬ ಶಿಶುವಿಗೆ, ಇಂದೇ ಜವ್ವನವಾಗಯಿತ್ತಯ್ಯ-ಹುಟ್ಟುತ್ತಲೇ ಮರುಗದ ಗಿಡದೋಪಾದಿಯಲ್ಲಿ ಭಕ್ತಿಜ್ಞಾನ ವೈರಾಗ್ಯವು ವರ್ಧನವಾಯಿತ್ತಯ್ಯ. ಆ ಕೂಸು ಬೀದಿಯಲೊತ್ತೆಯಕೊಳ್ಳಲು ನಿಂದಿತ್ತಯ್ಯ-ಆ ಚೆನ್ನಬಸವೇಶ್ವರನೆಂಬ ಶಿಶುವು ಸರ್ವಾಚಾರಸಂಪತ್ತಿನಾಚರಣೆಯೆಂಬ ವೀಥಿಯಲ್ಲಿ ಭಕ್ತಿ ಪದಾರ್ಥವನು ಕೈಕೊಂಡು ಮಹಾನುಭಾವವನು ಬೋಧಿಸಲು ನೆಲಸಿತ್ತಯ್ಯ. ಇದರ ಸಂಗಸುಖದನುಭಾವವನು ಕೂಡಲಸಂಗಮದೇವ ತಾನೆ ಬಲ್ಲ-ಇಂತಿದರ ಸಂಪರ್ಕದ ಸೌಖ್ಯದ ಜ್ಞಾನಾನುಭಾವವನು ಪರಶಿವಲಿಂಗವು ತಾನೆ ಬಲ್ಲನೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - - -

1-1 ಇದಱಂಗ (ಟ, ಡ).

........................

ಇಂದು-ಈ ವರ್ತಮಾನ ಕಾಲದಲ್ಲಿ, ಹುಟ್ಟಿದ-ಶ್ರೀಗುರುಸ್ವಾಮಿಯ ಕರಗರ್ಭದಲ್ಲಿ ಉದಯವಾದ, ಕೂಸಿಂಗೆ-ಶಿಶುವಾದ ಜ್ಞಾನಕಲಾತ್ಮನಿಗೆ, ಇಂದೇ-ಈ ಶರೀರಸಂಬಂಧದಲ್ಲಿಯೇ, ಜವ್ವನವಾಯಿತ್ತಯ್ಯ-ನವವಿಧಭಕ್ತಿಯ ವರ್ಧನ ಉಂಟಾಯಿತ್ತಯ್ಯ. ಆ ಕೂಸು-ಶರಣಸತಿಯು, ಬೀದಿಯಲ್ಲಿ-ಸಕಲಕರಣಂಗಳ ವ್ಯಾಪಾರವನುಳ್ಳ ಚಿದಂಗವೆಂಬ ಬಾಜಾರದಲ್ಲಿ, ಒತ್ತೆಗೊಳಲು ನಿಂದಿತ್ತಯ್ಯ-ಸಕಲೇಂದ್ರಿಯ ಮುಖದಿಂದೆ ಬಂದ ವಿಷಯಪದಾರ್ಥಗಳನು ಲಿಂಗಕ್ಕೆ ಸಮರ್ಪಣೆಯ

ಮಾಡುವದಕ್ಕಭಿಮುಖವಾಗಿ ನೆಲಸಿತ್ತಯ್ಯ.ಇದರ–ಈ ಲಿಂಗಾಂಗಸಂಬಂಧ, ಸಂಗಸುಖದನುಭವವನು–ಸರಸಗ ಸಂಯೋಗದ ಭೋಗೋಪಭೋಗವನು, ಪರಶಿವಲಿಂಗಸ್ವರೂಪವಾದ ಶರಣರೇ ಬಲ್ಲರಲ್ಲದೆ ಮಿಕ್ಕಿನ ದ್ವೈತಾದ್ವೈತಮಾರ್ಗದ ಹಠಯೋಗಿಗಳರಿಯರು ಎಂಬುದೀಗ ಇದರಂಗ ಸುಖದನುಭಾವವನು ಕೂಡಲಸಂಗಮದೇವ ತಾನೇ ಬಲ್ಲನೆಂಬ ಶಬ್ದಕ್ಕರ್ಥ.

IV- - - - - - - - - - - - - - - - - - - - - - - - - - - - - - - - - - - - - - - - - - - - -

೧–೧ ಇದಜಿಂಗ (ತ)

..........................

ಜ್ಞಾನಚಂದ್ರನೆಂಬುದೀಗ ಇಂದು ಎಂಬ ಶಬ್ದಕ್ಕರ್ಥ. ಅಂತು ಜ್ಞಾನೋದಯವಾಗಿ ಗುರುವಿಂಗೆ ಶಿಷ್ಯನಾದನೆಂಬುದೀಗ ಇಂದು ಹುಟ್ಟಿದ ಕೂಸಿಂಗೆಯೆಂಬ ಶಬ್ದಕ್ಕರ್ಥ. ಅಂತಾದ ಶಿಷ್ಯನ ಜ್ಞಾನಕ್ಕೆ ಭಕ್ತಿ ಪಕ್ವವಾಯಿತ್ತೆಂಬುದೀಗ ಇಂದೇ ಜವ್ವನವಾಯಿತ್ತಯ್ಯಯೆಂಬ ಶಬ್ದಕ್ಕರ್ಥ. ಅಂತಾದ ಸದ್ಭಕ್ತಿಯಿಂದ ಶಿಷ್ಯನು ಶಿವಕ್ರಿಯಾಮಾರ್ಗದಲ್ಲಿ ನಿಂದು ಶಿವಾನಂದಸುಖವನೆವೊಚ್ಚತಗೊಂಬ ಶಿವಭಾವದಲ್ಲಿ ಇದ್ದಿತ್ತೆಂಬುದೀಗ ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಯೆಂಬ ಶಬ್ದಕ್ಕರ್ಥ. ಅಂತಪ್ಪ ಭಕ್ತ್ಯಂಗನೆಯ ಸರ್ವಾಂಗದಲ್ಲಿ ಲಿಂಗವೇ ನೆಲೆಗೊಂಡು ಭಕ್ತನ ಅಂಗಸುಖವೆಲ್ಲಾ ಲಿಂಗವೇ ಅಜಿದು ಭೋಗಿಸುತ್ತಿಹನೆಂಬುದೀಗ ಇದಜಿಂಗ ಸುಖದನುಭಾವವನು ಕೂಡಲಸಂಗಮದೇವ [ತಾ]ನೆ ಬಲ್ಲನೆಂಬ ಶಬ್ದಕ್ಕರ್ಥ.

V- - - - - - - - - - - - - - - - - - - - - - - - - - - - - - - - - - - - - - - - - - - - - -

ಇಂದು–ಶ್ರೀಗುರುದೇವನ ಕರಕಮಲದಲ್ಲಿ, ಹುಟ್ಟಿದ–ಉದಯವಾದ, ಕೂಸಿಂಗೆ–ಶಿಷ್ಯಂಗೆ, ಇಂದೇ ಜವ್ವನವಾಯಿತ್ತಯ್ಯ–ಈ ವರ್ತಮಾನಕಾಲದಲ್ಲಿಯೇ ನವವಿಧಭಕ್ತಿ ವರ್ಧನವಾಯಿತ್ತಯ್ಯ. ಇಂದು ಹುಟ್ಟಿದ–ವರ್ತಮಾನಕಾಲದಲ್ಲಿ ಜ್ಞಾನೋದಯವಾದ, ಕೂಸು–ಆ ಶಿಷ್ಯನು, ಬೀದಿಯಲ್ಲಿ–ಇಂದ್ರಿಯಗಳೆಂಬ ಬಾಜಾರದಲ್ಲಿ, [ಒತ್ತೆಗೊಳಲು–] ಸಂಬಂಧವಾದ ಲಿಂಗಂಗಳಿಗೆ ಪಂಚವಿಷಯಂಗಳ ಸಮರ್ಪಣೆಯ ಮಾಡಿ ಆ ಲಿಂಗಂಗಳ ಪ್ರಸಾದ ಸೇವನೆಯ ಮಾಡಲೋಸ್ಕರ, ನಿಂದಿತ್ತಯ್ಯ–ನಿರ್ಧಾರವಾಯಿತ್ತಯ್ಯ. ಇದರ–ಈ ಚಿದಾತ್ಮನ, ಸಂಗಸುಖದ–ಲಿಂಗಾಂಸಂಬಂಧದ ಪರಿಣಾಮದ, ಅನುಭಾವವನು–ಜ್ಞಾನಾನುಭಾವವನು, ಕೂಡಲಸಂಗಮದೇವ ತಾನೆ ಬಲ್ಲ–ಪರಶಿವಲಿಂಗ ತಾನೆ ತಿಳಿದಿರ್ಪನು.

---

ಶ೧೮

**ಸಕ್ಕರೆಯ ಕೊಡನ ತುಂಬಿ ಹೊಜಗೆ ಸವಿದಡೆ ರುಚಿಯುಂಟೆ ಅಯ್ಯ ? ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ [1]ಮಾಡದೆ[1] [2]ಅಕಟಕಟ[2] ಸಂಸಾರ ವೃಥಾ[3] ಹೋಯಿತ್ತಲ್ಲ ! ಅದೇತಜ ಭಕ್ತಿ ? ಅದೇತಜ ಯುಕ್ತಿ ? ಕೂಡಲಸಂಗಮದೇವಾ.**

I———————————————————————————————————

ಸಕ್ಕರೆಯ-ಚಿನ್ನಿಸಕ್ಕರಿ ರಾಯಪುಸಕ್ಕರಿ ಮಗದುಮ್ಮ ಸಕ್ಕರಿಯನ್ನು, ಕೊಡನ ತುಂಬಿ-ಭಾಂಡದಲ್ಲಿ ಭರಿತವ ಮಾಡಿ, ಹೊರಗೆ ಸವಿದಡೆ-ಬಾಹ್ಯದಲ್ಲಿ ಸ್ವೀಕರಿಸಿದರೆ, ರುಚಿಯುಂಟೆ ಅಯ್ಯ?-ಸ್ವಾದ ತಟ್ಟಿತ್ತೆ? ತಟ್ಟದಯ್ಯ. ಹಾಂಗೆ, ಸಕ್ಕರಿಯ-ಅಖಂಡ ಚಿದ್ರಸಸ್ವರೂಪವಾದ ಪ್ರಾಣಲಿಂಗವನ್ನು, ಕೊಡನ ತುಂಬಿ-ಆಚಾರಾಂಗವೆಂಬ ಭಾಂಡದಲ್ಲಿ ಭರಿತವ ಮಾಡಿಕೊಂಡು, ಹೊಱಗೆ ಸವಿದಡೆ-ಅಂತರಂಗದ ಪ್ರಾಣಲಿಂಗವೇ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದೆಂದರಿಯದೆ ಭಿನ್ನವಿಟ್ಟುಕೊಂಡಾರಾಧಿಸಿದರೆ, ರುಚಿಯುಂಟೆ ?-ನಿತ್ಯವಾದ ನಿಜಮೋಕ್ಷವ ದೊರಕೊಂಡಿತ್ತೆ ? ದೊರಕೊಳ್ಳದು, ಅಯ್ಯ?-ಎಲೆ ಲಿಂಗವೆ.

ತಕ್ಕೈಸಿ ಭುಜತುಂಬಿ-ಅಂತರಂಗದ ಪ್ರಾಣಲಿಂಗವೇ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದೆಂದರಿದು, ಭುಜತುಂಬಿ-ಭಕ್ತಿ ನೈಷ್ಠಿಗಳೆರಡು ಕೀಲಿಸಿ, [ಲಿಂಗ] ಸ್ಪರ್ಶನವ ಮಾಡದೆ-[ಪರಶಿವಲಿಂಗವನ್ನು] ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸದೆ, ಅಕಟಕಟ-ಅಯ್ಯಯ್ಯೋ.. ಸಂಸಾರ ವೃಥಾ ಹೋಯಿತ್ತಲ್ಲ-ದೇಹಸಂಸಾರ ವ್ಯರ್ಥಸ್ಯವಾಗಿ ಹೋಯಿತ್ತಲ್ಲ. ಅದೇತರ ಭಕ್ತಿ-ಅಂತರಂಗದ ಪ್ರಾಣಲಿಂಗವೇ ಬಹಿರಂಗದಲ್ಲಿ ಇಷ್ಟಲಿಂಗವಾಗಿ ಬಂದಿಪ್ಪುದೆಂದರಿಯದೆ ಭಿನ್ನವಿಟ್ಟುಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರದಿಂದಾರಾಧಿಸುವಂಥದು ಅದೇತರ ಕ್ರೀ? ಕ್ರೀಯೊಳಗಲ್ಲವು. ಅದೇತಱ ಯುಕ್ತಿ-ಇಷ್ಟಲಿಂಗದ ಚಿತ್ಕಳೆಯೇ-ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲಗೊಂಡಿಪ್ಪುದೆಂಬಂಥದನರಿಯದೆ ಪ್ರಾಣಲಿಂಗಕ್ಕೆ ಮಂತ್ರ೧[ಧ್ಯಾ]೧ನ. ಜಪಸ್ತೋತ್ರ ನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸುವಂಥದು ಅದೇತರ ಜ್ಞಾನ ? ಜ್ಞಾನದೊಳಗಲ್ಲವು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ಜ್ಞಾ (ಕ, ಗ).

II- - - - - - - - - - - - - - - - - - - - - - - - - - - - - - - - - - - - - - - - - - - -

೨-೨ ಅಕ್ಕಟಾ (ಚ, ಜ). ೩ + ಯ (ಚ, ಜ).

..........................

ಸಕ್ಕರೆಯು ಕೊಡನ ತುಂಬಿ ಹೊಱಗೆ ಸವಿದರೆ ರುಚಿಯುಂಟೆ?-ಮಂತ್ರಮಾಧುರ್ಯಸ್ವರೂಪವಾದ ೨ಪ್ರಾಣಲಿಂಗವನು೨ ದೇಹವೆಂಬ ಘಟದಲ್ಲಿ ಪೂರವಿಸಿ ಬಾಹಿರ್ದಲ್ಲಿ ಭಿನ್ನಕ್ರೀಯನಾಸ್ವಾದಿಸಿದರೆ ಸಮರಸಕ್ರೀಯೆಂಬ ಆಸ್ವಾದವಿದ್ದೀತೆ? ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ ಮಾಡದೆ-ತಬ್ಬಿ ಎರಡು ಬಾಹುಗಳು ಪೂರವಿಸಿ ಇಷ್ಟಲಿಂಗವನು ಮುಟ್ಟಿ ಮುಟ್ಟಿ ಪೂಜಾಕ್ರೀಗಳ ಮಾಡಿ ಶ್ರೇಷ್ಠಾನಿಮಿಷದೃಷ್ಟಿಯಿಂದ ನಿರೀಕ್ಷಿಸದೆ, ಅಕ್ಕಟಾ ಸಂಸಾರ ವೃಥಾಯ ಹೋಯಿತ್ತಲ್ಲಾ-ಅಯ್ಯೋ ಈ ದೇಹಸಂಸೃತಿಯು ಅಪ್ರಯೋಜನ ಪ್ರಾಪ್ತಿಗತವಾಯಿತ್ತಲ್ಲಾ. ಮುಂದಕ್ಕೆ ಕಾಣಬಂದರ್ಥ.

..........................

೨-೨ ಪ್ರಾಣಲಿಂಗದ (ಜ).

V- - - - - - - - - - - - - - - - - - - - - - - - - - - - - - - - - - - - - - - - - - -

೧-೧ ಮಾಡದಿದ್ದರೆ (ಪ).

.........................

ಸಕ್ಕರೆಯ ಕೊಡನ ತುಂಬಿ–ಅಂತರಂಗದಲ್ಲಿ ಮಾಧುರ್ಯಾಯಮಾನವಾದ ಪ್ರಾಣಲಿಂಗ ಪರಿಪೂರ್ಣವಾಗಿರುತ್ತದೆಯೆಂದು, ಹೊರಗೆ–ಬಹಿರಂಗದಲ್ಲಿ, [ಸವಿದರೆ–] ಅದ್ವೈತದಿಂದಾಚರಿಸಿದರೆ, ರುಚಿಯುಂಟೆ?–ಮಾಧುರ್ಯಾಯಮಾನವಾದ ಲಿಂಗೈಕ್ಯ ದೊರಕೊಂಡೀತೆ? ತಕ್ಕೈಸಿ–ಅಂತರಂಗದ ಪ್ರಾಣಲಿಂಗವನೆ ಗುರುಮುಖದಿಂದೆ ಅಂತರಂಗದಲ್ಲಿ ಧರಿಸಿಕೊಂಡು, ಭುಜತುಂಬಿ–ಸದ್ಭಾವಪೂರಿತವಾಗಿ, ಕಾಯದ ವಾಮಭಾಗದ ಕರಸ್ಥಲದಲ್ಲಿ ಪರಿಗ್ರಹಿಸಿ, ಲಿಂಗವ–ಇಷ್ಟಲಿಂಗವನು, ಸ್ಪರ್ಶನವ ಮಾಡದಿದ್ದರೆ–ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡದಿದ್ದರೆ.

---

## ೫೧೯

**ಕಾಳಿದಾಸಂಗೆ ಕಣ್ಣನಿತ್ತೆ, ಓಹಿಲಯ್ಯನ ನಿಜಪುರಕ್ಕೊಯ್ದೆ, ನಂಬಿ ಕರೆದಡೋ ಎಂದೆ, ತೆಲುಗ ಜೊಮ್ಮಯ್ಯಂಗೊಲಿದೆ, ದೇವಾ ಕೂಡಲಸಂಗಮದೇವಾ, ಎನ್ನನೇತಕ್ಕೊಲ್ಲಿರಯ್ಯ?**

I - - - - - - - - - - - - - - - - - - - - - - - - - - - - - - - - - - - - - - - - - - -

ಕಾಳಿದಾಸಂಗೆ–ಸಂಹಿತೆಯ ಕಾಳಿದಾಸಂಗೆ, ಕಣ್ಣನಿತ್ತೆ–ಒಂದು ನಯನವ ಸಮರ್ಪಿಸಿಕೊಂಡು ಒಕ್ಕಳ ನವಣೆಯಷ್ಟು ನಯನವ ಕರುಣಿಸಿಕೊಟ್ಟೆ, ಓಹಿಲಯ್ಯನ–ನಿಃಕುಂಭರಾಯನ ಪುತ್ರನಾದ ಓಹಿಲದೇವನ, ನಿಜಪುರಕ್ಕೊಯ್ದೆ–ನಿನ್ನ ಕೈಲಾಸಪುರಕ್ಕೆ ತೆಗೆದುಕೊಂಡು ಹೋದಿ, ನಂಬಿ–ಸೌಂದರ ಗಣಾಧೀಶ್ವರನು, ಕರೆದಡೆ–"ಸ್ತನ ಶಂಕರಾ" ಎಂದು ಸ್ತೋತ್ರವ ಮಾಡಿದರೆ, ಓ ಎಂದೆ–'ಓ' ಎಂದು ಪ್ರತಿಧ್ವನಿಯಗೊಟ್ಟು ನಂದಿಮುದ್ರೆ ಪಡಿಹೊನ್ನು ಕರುಣಿಕೊಟ್ಟೆ. ತೆಲುಗ ಜೊಮ್ಮಯ್ಯಂಗೆ–ತೆಲುಗ ಜೊಮ್ಮಯ್ಯನೆಂಬ ಶಿವಶರಣಂಗೆ, ಒಲಿದೆ–ಪ್ರಸನ್ನವಾಗಿ ನಿರ್ಮೋಕ್ಷವನ್ನು ಕರುಣಿಸಿಕೊಟ್ಟೆ, ದೇವಾ–ಎಲೆ ಒಡೆಯನೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II- - - - - - - - - - - - - - - - - - - - - - - - - - - - - - - - - - - - - - - - - - -

ಕಾಳಿದಾಸಂಗೆ ಕಣ್ಣನಿತ್ತೆ–ಕ್ರಿಯಾಭಕ್ತನಿಗೆ ಜ್ಞಾನದೃಷ್ಟಿಯನು ಕೊಟ್ಟೆ. ಓಹಿಲಯ್ಯನ ನಿಜಪುರಕ್ಕೊಯ್ದೆ–ಪ್ರಾಣಾವಧಾನ ಮಾನಸವನುಳ್ಳ ಪ್ರಾಣಲಿಂಗಿಯ ಲಿಂಗೈಕ್ಯ ಪಟ್ಟಣಕ್ಕೆ ತೆಗೆದುಕೊಂಡುಹೋದೆ. ನಂಬಿ ಕರೆದಡೆ ಓ ಎಂದೆ–ಶಿವಾನುಭಾವವನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ವಿಶ್ವಾಸಿಸಿ ಆಹ್ವಾನಿಸಿದರೆ ಚಿದ್ಬೋಧಾಮೂರ್ತಿಯಾಗಿ ಜ್ಞಾನಾನುಭಾವವನು ಬೋಧಿಸಿದೆ. ತೆಲಗು ಜೊಮ್ಮಯ್ಯಗೊಲಿದೆ ದೇವಾ–ನುಡಿ ತೊಡತೊಡಂಬೋಗಿ ಲಿಂಗಪೂಜಾಕ್ರೀಗಳ ಮಾಡುವ ಅಷ್ಟಸಾತ್ವಿಕವನುಳ್ಳ ಭಕ್ತನಿಗೆ ಮೆಚ್ಚಿದೆಲೆ ಲಿಂಗವೆ, ಮುಂದಕ್ಕೆ ಕಾಣಬಂದರ್ಥ.

---

೫೨೦

**ಪರಚಿಂತೆ ನಮಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ? ಕೂಡಲಸಂಗಯ್ಯ ಒಲಿದಾನೋ ಒಲಿಯನೋ ಎಂಬ ಚಿಂತೆ ಹಾಸಲುಂಟು, ಹೊದೆಯಲುಂಟು.**

I - - - - - - - - - - - - - - - - - - - - - - - - - - - - - - - - - - - - - - - -

ಪರಚಿಂತೆ ನಮಗೇಕಯ್ಯ– ೧ಪರರಾದವರನು೧ ಇವರಾಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರೆಂದು ದೂಷಣೆಯ ಮಾಡುವುದೇನು ಕಾರಣಕ್ಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ: ನಮ್ಮ–ಪರಮೇಶ್ವರನು ಕೃಪೆಯಾದಾನೋ ಆಗನೋ ಎಂಬ ಚಿಂತೆ–ವ್ಯಾಕುಲವು, [ನಮಗೆ] ಸಾಲದೆ–ನಮಗಷ್ಟೇ ಸಾಲದೆ? ಸಾಕು. ಕೂಡಲಸಂಗಯ್ಯ–ಪರಶಿವಲಿಂಗವು, ಒಲಿದಾನೋ–ಕೃಪೆಯಾಗಿ ನಿರ್ಮೋಕ್ಷವ ಕರುಣಿಸಿಕೊಟ್ಟಾನೋ, ಒಲಿಯನೋ ಎಂಬ–ಪ್ರಸನ್ನವಾಗಿ ನಿಜಮೋಕ್ಷವ ಕರುಣಿಸಿ ಕೊಡನೋ ಎನಿಸುವ, ಚಿಂತೆ–ವ್ಯಾಕುಲವು, ಹಾಸಲುಂಟು–ಬಹಿರಂಗದಲ್ಲಿ ಯಥೇಷ್ಟವಾಗಿ ಒಳವು, ಹೊದೆಯಲುಂಟು–ಅಂತರಂಗದಲ್ಲಿ ಯಥೇಷ್ಟವಾಗಿ ಒಳವು.

..........................

೧–೧ ಒಬ್ಬರನು (ಗ).

II- - - - - - - - - - - - - - - - - - - - - - - - - - - - - - - - - - - - - - - -

ಪರರ ಚಿಂತೆ ನಮಗೇಕಯ್ಯ–ಅನ್ಯರುಗಳ ವ್ಯಾಕುಳವು ನಮಗೇಣು ಕಾರಣ, ನಮ್ಮ ಚಿಂತೆ ನಮಗೆ ಸಾಲದೆ–ತಮ್ಮ ತಮ್ಮ ವ್ಯಾಕುಳವು ತಮಗೆ ಸಾಕಾಗದೆ, ಕೂಡಲಸಂಗಯ್ಯನೊಲಿದಾನೋ ಒಲಿಯನೋ ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು–ಪರಶಿವಲಿಂಗವು ಅಷ್ಟವಿಧಾರ್ಚನೆ ಷೋಡಶೋಪಚಾರ ಪೂಜಾಕ್ರೀಗಳನು ಕೈಕೊಂಡು ಆತ್ಮನಿಗೆ ಮಚ್ಚನೋ, ಆ ಪೂಜೆಯನು ಮಾಡದಿದ್ದರೆ ಮಚ್ಚನೋ ಎಂಬ ವ್ಯಾಕುಳವು ಕ್ರೀಯಲ್ಲಿ ಹರಹ ಉಂಟು, ಜ್ಞಾನದಲ್ಲಿ ಆಚ್ಛಾದಿಸಲುಂಟು.

V- - - - - - - - - - - - - - - - - - - - - - - - - - - - - - - - - - - - - - - -

ಹಾಸಲುಂಟು–ಸತ್ಕ್ರಿಯಾ ತಳ್ಪವುಂಟು, ಹೊದೆಯಲುಂಟು–ಜ್ಞಾನಾವರಣವುಂಟು.

---

೫೨೧

**ಕಣ್ಣ ಕೋಪಕ್ಕೆ ¹[ಮುಂದರಿಯದೆ]¹ ನುಡಿದು, ಮನಮಚ್ಚಿ ಮರುಳಾದೆ ನೋಡವ್ವ ! ಕೇಳು, ಕೇಳವ್ವ, ಕೆಳದಿ ಸಖಿಯರಿಲ್ಲದೆ ಸುಖವ ಬಯಸಿದಡೆ ದೊರಕೊಂಬುದೆ ಹೇಳಾ? ಎನ್ನ ಮುನಿಸು ಎನ್ನಲ್ಲಡಗಿತ್ತು, ಇನ್ನು ಬಾರಯ್ಯ ಕೂಡಲಸಂಗಮದೇವಾ.**

..........................

1–1 ಮುಂದುವರಿಯದೆ (ಕ, ಗ).

I - - - - - - - - - - - - - - - - - - - - - - - - - - - - - - - - - - - - - - - -

ಕಣ್ಣಕೋಪಕ್ಕೆ–ಶ್ರುತಜ್ಞಾನದ[೧]ರು[೧]ಹಿನ ಬಲದಿಂದ ನಿರವಯಬ್ರಹ್ಮವನೇ ಕುರುಹಿಟ್ಟಿಕೊಂಡು [೨]"[ಆತ್ಮೈವ][೨] ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವಂಥ ಆತ್ಮಜ್ಞಾನದೃಷ್ಟಿಯ ಉದ್ರೇಕಕ್ಕೆ, [೩][ಮುಂದರಿಯದೆ–][೩] ಇಷ್ಟಲಿಂಗದ ಪೂಜೆಯಿಂದಲ್ಲದೆ ಇಷ್ಟಾರ್ಥಸಿದ್ಧಿಯಾಗದೆಂಬಂಥ ಮೇಲು ವಿಚಾರವನ್ನು ತಿಳಿಯದೆ, ನುಡಿದು–[೨]"[ಆತ್ಮೈವ][೨] ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ವಚಿಸಿ, ಮನ–ವೇದಾಂತಿಯ ಮನಸ್ಸು, ಮಚ್ಚಿ–ನಿರಂತರಮಾರ್ಗದಲ್ಲಿ ಮಮಕರಿಸಿ, ಮರುಳಾದೆ ನೋಡವ್ವ–ಭ್ರಾಂತಳಾದೆ ಕಾಣವ್ವ, ಕೇಳು–ಆಲಿಸು, ಕೇಳವ್ವ–ಆಲಿಸವ್ವ, ಕೆಳದಿ–ಎಲೆ ಶ್ರೀಗುರುನಾಥನೆಂಬ ಜನನಿಯೆ, ಸಖಿಯರಿಲ್ಲದೆ–ಸಖಿರುಗಳಾದ ಚೆನ್ನಬಸವೇಶ್ವರಸ್ವಾಮಿಗಳ ಕರುಣವಿಲ್ಲದೆ, ಸುಖವ ಬಯಸಿದಡೆ–ಲಿಂಗಪೂಜೆಯ ಮಾಡಿ ಲಿಂಗದ ಕರುಣವನ್ನು ಹಿಡಿಯಬೇಕೆಂಬಂಥ ಪರಿಣಾಮವನ್ನು ಇಚ್ಛೈಸಿದರೆ, ದೊರಕೊಂಬುದೆ–ಸಿದ್ಧಿಸಿತ್ತೆ? ಸಿದ್ಧಿಸದು, ಹೇಳಾ–ನಿರೂಪಿಸಾ.

ಎನ್ನ ಮುನಿಸು–[೨]"[ಆತ್ಮೈವ][೨] ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವಂಥ ಸಿಟ್ಟು, ಎನ್ನಲ್ಲಿ–ವೇದಾಂತಿಯಲ್ಲಿ, ಅಡಗಿತ್ತು–ನಷ್ಟವಾಯಿತ್ತು, ಇನ್ನು ಬಾರಯ್ಯ ಕೂಡಲಸಂಗಮದೇವಾ–ಎಲೆ ಪ್ರಭುಸ್ವಾಮಿಗಳೆಂಬ ಪ್ರಾಣಲಿಂಗವೇ ಇನ್ನೊಂದು ವೇಳೆ ಗುರುಮುಖದಿಂದ ಬಹಿಷ್ಕರಿಸಿ ಅಂಗದ ಮೇಲೆ ಇಷ್ಟಲಿಂಗವಾಗಿ ಬಿಜಯಂಗೈದು ಬಂದು ಪೂಜೆಗೊಳ್ಳಿರಯ್ಯ ಎಂಬುದರ್ಥ.

● ಕಣ್ಣಕೋಪಕ್ಕೆ–ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದರ್ಚಿಸಿ ಅನಿಮಿಷದೃಷ್ಟಿಯಿಂದ ನಿರೀಕ್ಷಿಸುವಂಥ ಕ್ರಿಯಾದೃಷ್ಟಿ ಪರ್ಚುಗೆಯೆಂಬ ಉದ್ರೇಕಕ್ಕೆ, [ಮುಂದರಿಯದೆ–] ಜಂಗಮಭಕ್ತಿಬಾಹ್ಯವಾಗಿ ಲಿಂಗಪೂಜೆಯ ಮಾಡಿದರೆ ನಿಜಮೋಕ್ಷವಾಗೋದಿಲ್ಲವೆಂಬಂಥ ಮೇಲುಯುಕ್ತಿ ಮೇಲುವಿಚಾರವನ್ನು ತಿಳಿಯದೆ, ನುಡಿದು–ಕಾಯವೇ ಭಕ್ತ ಪ್ರಾಣವೇ ಜಂಗಮವೆಂದು ವಚಿಸಿ, ಮನ–ಸಿದ್ಧಾಂತಿಯ ಮನಸ್ಸು, ಮಚ್ಚಿ–ಲಿಂಗ ಪೂಜೆಯಲ್ಲಿ ಮಮಕರಿಸಿ, ಮರುಳಾದೆ–ಹುಚ್ಚಾದೆ, ನೋಡವ್ವ–ಕಂಡವ್ವ, ಕೇಳು–ಆಲಿಸು, ಕೇಳವ್ವ–ಆಲಿಸವ್ವ, ಕೆಳದಿ–ಎಲೆ ಶ್ರೀಗುರುನಾಥನೆಂಬ ಜನನಿಯೆ, ಸಖಿಯರಿಲ್ಲದೆ–ಸಖಿರುಗಳಾದ ದೀಕ್ಷಾಗುರುಮೂರ್ತಿಗಳ ಕರುಣವಿಲ್ಲದೆ, ಸುಖವ ಬಯಸಿದಡೆ–ಜಂಗಮಭಕ್ತಿಯನ್ನು ಮಾಡಿ ಜಂಗಮದ ಕೃಪೆಯನು ಹಡೆಯಬೇಕೆಂಬಂಥ ಪರಿಣಾಮವನ್ನು ಇಚ್ಛೈಸಿದರೆ, ದೊರಕೊಂಬುದೆ–ಘಟಿಸಿತ್ತೆ ? ಘಟಿಸದು, ಹೇಳಾ–ನಿರೂಪಿಸಾ.

ಎನ್ನ ಮುನಿಸು–ಅಂಗ ಬೇರೆ ಲಿಂಗ ಬೇರೆಯೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾರಾಧಿಸುವಂಥ, ಮುನಿಸು–ಸಿಟ್ಟು, ಎನ್ನಲ್ಲಿ–ಸಂಗನಬಸವೇಶ್ವರನಲ್ಲಿ, ಅಡಗಿತ್ತು–ಅಂತರಿಸಿತ್ತು, ಇನ್ನು ಬಾರಯ್ಯ ಕೂಡಲಸಂಗಮದೇವಾ–ಇಷ್ಟಲಿಂಗದ ಚಿತ್ಕಳೆಯೆ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳಯ್ಯ, ಇಂಬುಗೊಳ್ಳಯ್ಯ.

..........................

೧–೧ ರೂ (ಕ). ೨–೨ ಆತ್ಮಾನಾಂ (ಕ, ಗ). ೩–೩ ಮುಂದುವರಿಯದೆ (ಕ, ಗ).

II- - - - - - - - - - - - - - - - - - - - - - - - - - - - - - - - - - - - - - - - - -

ಕಣ್ಣಕೋಪಕ್ಕೆ ಮುಂದರಿಯದೆ ನುಡಿದು–ಜ್ಞಾನಭಕ್ತ್ಯಾಹಂಕಾರದುದ್ರೇಕಕ್ಕೆ ಮುಂದಾಗುವ ಮೋಕ್ಷವನು ತಿಳಿಯದೆ ವಚಿಸಿ, ಮನಮಚ್ಚಿ ಮರುಳಾದೆ ನೋಡವ್ವಾ ಕೇಳು–ಮಾನಸ ಬಲಿದು ಹುಚ್ಚಾಗಿ ವಿಕಳಳತೆಗೊಂಡೆ ನಿರೀಕ್ಷಸೆಲೆ ಮಾತೃಸ್ಥಾನವಾದ ಚಿಚ್ಛಕ್ತಿಯೆಂಬ ಸಾಹಿಳೆ ಲಾಲಿಸು.

ಕೇಳವ್ವ ಕೆಳದಿ ಸಖಿಯರಿಲ್ಲದೆ ಸುಖವ ಬಯಸಿದಡೆ ದೊರಕೊಂಬುದೆ ಹೇಳಾ–ಲಾಲಿಸಲೆ ಮಾತೃಸ್ಥಾನವಾದ ಚಿಚ್ಛಕ್ತಿಯೆಂಬ ಸಾಹಿಳೆ ಮಹಾನುಭಾವ ಗುರುಮೂರ್ತಿಗಳಿಲ್ಲದೆ ಶಿವಾನುಭಾವ [೪]ಪರಿಣಾಮವ[೪] ನಿಚ್ಛೈಸಿದರೆ ಪ್ರಾಪ್ತಿಯಾದೀತೆ? ನಿರೂಪಿಸಾ. ಎನ್ನ ಮುನಿಸು ಎನ್ನಲಡಗಿತ್ತು ಇನ್ನು [೫]ಬಾರಯ್ಯ[೫] ಕೂಡಲಸಂಗಮದೇವಾ–ಎನ್ನ ಜ್ಞಾನಭಕ್ತ್ಯಾಹಂಕಾರದುದ್ರೇಕವು ನನ್ನಲ್ಲಿಯೇ ಅಂತರ್ಗತವಾಯಿತ್ತು. ಇಷ್ಟರ ಮೇಲೆ ಅಂತರಂಗಕ್ಕೆ ಪ್ರಾಣಲಿಂಗವಾಗಿ ಆಗತವಾಗಯ್ಯಾ.

..........................

೪–೪ ಪರಮನ (ಜ). ೫–೫ ಬಾರದಯ್ಯ (ಚ).

V- - - - - - - - - - - - - - - - - - - - - - - - - - - - - - - - - - - - - - - - - - - - -

ಕಣ್ಣಕೋಪಕ್ಕೆ–ಜ್ಞಾನಕ್ಕೆ ರಜೋಗುಣವಾವರಿಸಲಾಗಿ, ಮುಂದರಿಯದೆ–ಉತ್ತರೋತ್ತರವಾದ ಸಮರಸಜ್ಞಾನವನು ತಿಳಿಯದೆ, ನುಡಿದು–ಇಷ್ಟ ಪ್ರಾಣಲಿಂಗಕ್ಕೆ ಹಿಂಗದೆ [ಸಂಗವ] ಮಾಡಿ ಪ್ರಸಂಗಿಸಿ, ಮನಮಚ್ಚಿ–ಮನಸ್ಸು ಫಲಪದಂಗಳಿಗೆ ಮಮಕರಿಸಿ, ಮರುಳಾದೆ ನೋಡವ್ವ–ಭ್ರಾಂತನಾದೆನೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಮಾತೆಯಾದ ಜ್ಞಾನಶಕ್ತಿಯ ಕೂಡೆ ಹೇಳುವ ಪ್ರಶ್ನೆಯು. ಸಖಿಯರಿಲ್ಲದೆ–ಕ್ರಿಯಾಶಕ್ತಿ ಜ್ಞಾನಶಕ್ತಿಯರಿಲ್ಲದೆ ಸುಖವ ಬಯಸಿದರುಂಟೆ–ಲಿಂಗೈಕ್ಯಾನಂದ ದೊರಕೊಂಡೀತೆ?

● ಕಣ್ಣಕೋಪಕ್ಕೆ–ಜ್ಞಾನಚಕ್ಷುವಿಗೆ ಅಧರ್ಮಕರ್ಮದಲ್ಲಿ ಕ್ರೋಧವಾವರಿಸಲಿಕ್ಕಾಗಿ, ಮುಂದರಿಯದೆ–ಮುಂದಾಗುವ ಫಲಪದಂಗಳ ತಿಳಿಯದೆ, ನುಡಿದೆನು–ಸ್ತೋತ್ರಮಂತ್ರಾದಿಗಳ ಮಾಡಿದೆನು. ಮನಮಚ್ಚಿ–ಮನಸ್ಸು ಇಷ್ಟಲಿಂಗದಲ್ಲಿ ಮಮಕರಿಸಿ, ಮರುಳಾದೆ–ಪ್ರಾಣಲಿಂಗದಲ್ಲಿ [೬]ಪರವಶವಾದೆನು.[೬] ಎನ್ನ ಕ್ರೋಧವು ಎನ್ನಲ್ಲಿಯೇ ನಷ್ಟವಾಯಿತ್ತೆಂಬುದೀಗ ಎನ್ನ ಮುನಿಸು ಎನ್ನಲ್ಲಿಯೆ ಅಡಗಿತ್ತು. ಇನ್ನು ಬಾರಯ್ಯ–ಕ್ರೋಧ ನಷ್ಟವಾದ ಮೇಲೆ ಎನ್ನಂತರಂಗಕ್ಕೆ ಬಿಜಯಂಗೆಯ್ಯಯ್ಯ.[೭]

..........................

೬ + ಎನ್ನ ಮುನಿಸು (ಪ). ೭ + ಶ್ರೀ ಮತ್ಷಟ್ಸ್ಥಲಾದ್ವೈತಪ್ರಮೋದಿತ ಶ್ರೀ ವೀರಮಾಹೇಶ್ವರ ಬಾಲೇಂದುಪುರದ ಹರೀಶ್ವರಶಾಂತವೀರೇಶ್ವರ ಚಿದ್ಗರ್ಭಸಂಭವ ಪರ್ವತಶಿವಯೋಗೀಶ್ವರ ವಿರಚಿತಮಪ್ಪ ಬಸವೇಶ್ವರದೇವರ ವಚನಸಾರಾರ್ಥ ಭಕ್ತಿಸ್ಥಲ (೧೫) ಹದಿನಯ್ದರೊಳ್ ಸಂಪೂರ್ಣಂ ॥ ಶ್ರೀ ॥ (ಪ).

---

೫೨೨

**ಲಜ್ಜೆಗೆಟ್ಟೆನು, ನಾಣುಗೆಟ್ಟೆನು, ಕುಲಗೆಟ್ಟೆನು, ಛಲಗೆಟ್ಟೆನು; ಸಂಗಾ, ನಿಮ್ಮ ಪೂಜಿಸಿ ಭವಗೆಟ್ಟೆನು ನಾನಯ್ಯ! ಕೂಡಲ ಸಂಗಮದೇವಯ್ಯಾ, ನಿಮ್ಮ ಮುಟ್ಟಿ ಮುಟ್ಟಿ ಹುಟ್ಟುಗೆಟ್ಟೆನು ನಾನಯ್ಯ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಲಜ್ಜೆಗೆಟ್ಟೆನು–ಕಾಯಾಭಿಮಾನವ ಹೋಗಲಾಡಿಸಿಕೊಂಡೆನು, ನಾಣುಗೆಟ್ಟೆನು–ಜೀವಾಭಿಮಾನವ ಹೋಗಲಾಡಿಸಿಕೊಂಡೆನು, ಕುಲಗೆಟ್ಟೆನು–ಕುಲಮದವ ನಷ್ಟವ ಮಾಡಿಕೊಂಡೆನು,

ಭಲಗೆಟ್ಟೆನು–ಭಲಮದವ ನಷ್ಟವ ಮಾಡಿಕೊಂಡೆನು. ಸಂಗಾ ನಿಮ್ಮ ಪೂಜಿಸಿ–ಇಷ್ಟಲಿಂಗವನು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಭವಗೆಟ್ಟೆನು ನಾನಯ್ಯ–ಸಂಸಾರಪ್ರಪಂಚುವ ನಷ್ಟವ ಮಾಡಿಕೊಂಡೆನು ನಾನಯ್ಯ. ಕೂಡಲಸಂಗಮ ದೇವಯ್ಯಾ–ಎಲೆ ಪರಶಿವಲಿಂಗವೆ, ನಿಮ್ಮ ಮುಟ್ಟಿ ಮುಟ್ಟಿ–ನಿಮ್ಮ ಮುಟ್ಟಿ ಮುಟ್ಟಿ ಆರಾಧಿಸಿ, ಹುಟ್ಟುಗೆಟ್ಟೆನು ನಾನಯ್ಯ–ಉತ್ಪತ್ಯವ ನಷ್ಟವ ಮಾಡಿಕೊಂಡೆನು ನಾನಯ್ಯ.

II- - - - - - - - - - - - - - - - - - - - - - - - - - - - - - - - - - - - - - - - - - - -

ಲಜ್ಜೆಗೆಟ್ಟೆನು–ಸ್ಥೂಲತನುವಿನ ವರ್ತನೆಯಳಿದೆನು, ನಾಣುಗೆಟ್ಟೆನು–ಸೂಕ್ಷ್ಮತನುವಿನ ವರ್ತನೆಯಳಿದೆನು, ಕುಲಗೆಟ್ಟೆನು–ಕಾರಣತನುವಿನ ವರ್ತನೆಯಳಿದೆನು, ಭಲಗೆಟ್ಟೆನು–ಪ್ರಾಣನ ಪ್ರಕೃತಿಯ ನಷ್ಟವ ಮಾಡಿದೆನು, ಸಂಗಾ ನಿಮ್ಮ ಪೂಜಿಸಿ ಭವಗೆಟ್ಟೆನು–ಎಲೆ ಲಿಂಗವೇ, ನಿಮ್ಮನರ್ಚಿಸಿ ಎನ್ನ ಜನ್ಮಸಂಸಾರ ನಷ್ಟವಾದೆನಯ್ಯಾ. ಮುಂದಕ್ಕೆ ಕಾಣಬಂದರ್ಥ.

---

೫೨೩

**ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು; ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದಡೆ ಒಳಗೆ ಕೆಚ್ಚಿಲ್ಲದಿರಬೇಕು. ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು; ಎನಗಿನ್ನಾವ ಭವವಿಲ್ಲ ಕಾಣಾ, ಕೂಡಲಸಂಗಮದೇವಾ.**

I - - - - - - - - - - - - - - - - - - - - - - - - - - - - - - - - - - - - - - - - - - -

ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು : ಮಾಡುವ–ತನುಮನಧನಂಗಳು ಕೊಟ್ಟು ಭಕ್ತಿಯ ಮಾಡುವ, ಭಕ್ತನ–ಶಿವಭಕ್ತನ, ಕಾಯ–ದೇಹ, ಬಾಳೆಯ ಕಂಬಂದಂತೆ–ರಂಭಾಸ್ತಂಭದೋಪಾದಿಯಲ್ಲಿ, [ಇರಬೇಕು–] ಅತ್ಯಂತ ಮೃದುತರವಾಗಿರಬೇಕು. ಮೆಲ್ಲಮೆಲ್ಲನೆ–'ಒಲ ಒಲ'ಕ್ಕೆ, ಹೊರೆಯೆತ್ತಿ ನೋಡಿದಡೆ–ಎತ್ತಿ ಸುಲಿಸುಲಿದು ನೋಡಿದ ಹಾಂಗೆಲ್ಲ ಪದರುಪದರೆ ಹೊರಟುಬರುತ್ತಿರಬೇಕು, ಮೇಲೆ–ಆಮೇಲೆ, ಆದ–ಉಂಟಾದ, ಫಲವ–ಹಣ್ಣನು, ನಮ್ಮವರು–ನಮ್ಮ ಜನನಿಜನಕರುಗಳು, ಬೀಜಸಹಿತ–ಮೂಲ ಅಹಂಕಾರಸ್ಥುಹವಾಗಿ, ನುಂಗಿದರು–ಅವಗ್ರಹಿಸಿದರು. ಎನಗಿನ್ನಾವ ಭವವಿಲ್ಲ–ಎನಗಿನ್ನಾವ ಉತ್ಪತ್ಯ ಉಂಟಾಗಿಲ್ಲವೆಂಬ ದೃಷ್ಟೋಪಮಾನದ ಹಾಂಗೆ,

● ಮಾಡುವ–ಇಚ್ಛಾಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡುವ, ಭಕ್ತನ–ನಿರ್ವಂಚಕ ಸದ್ಭಕ್ತನ, ಕಾಯ–ದೇಹವು, ಬಾಳೆಯ ಕಂಬಂದಂತೆ–ಬಹಿರಂಗದಲ್ಲಿ ಎಲೇ ಭಕ್ತಾ ತನುವ ಕೊಡುವ ಮನವ ಕೊಡು ಧನವ ಕೊಡುಯೆಂದು ಕೇಳಿದಲ್ಲಿ, ಇರಬೇಕು–ಕೇಳೀಕೇಳದ ಹಾಂಗೆಲ್ಲ ಕೊಟ್ಟು ಭಕ್ತಿಯ ಮಾಡುತ್ತಿರಬೇಕು. ಮೆಲ್ಲಮೆಲ್ಲನೆ–ಕ್ರಿಯೆವಿಡಿದಾಚರಿಸುತಿರ್ದ ಹಾಂಗೆ, ಹೊರೆಯೆತ್ತಿ ನೋಡಿದಡೆ–ಬಹಿರಂಗದಲ್ಲಿ ಎಲೇ ಭಕ್ತಾ ತನುವ ಕೊಡು ಮನವ ಕೊಡು ಧನವ ಕೊಡು ಎಂದು ಕೇಳಿಕೇಳಿ ನೋಡಿದರೆ, ಒಳಗೆ–ಅಂತರಂಗದಲ್ಲಿ, ಕೆಚ್ಚಿಲ್ಲದೆ–ಮೂಲ ಅಹಂಕಾರವೆಂಬ ಗಟ್ಟಿ ಇಲ್ಲದೆ ಇರಬೇಕು–ಕೇಳೀ ಕೇಳದ ಹಾಂಗೆ ಕೊಟ್ಟು ಭಕ್ತಿಯ ಮಾಡುತ್ತಿರಬೇಕು. ಮೇಲಾದ–ಶ್ರೇಷ್ಠವಾದ, ಫಲವ–ನಿಜಮೋಕ್ಷವೆಂಬ ಫಳವನ್ನು, ನಮ್ಮವರು–ನಮ್ಮ ಶಿವಶರಣರು, ಬೀಜಸಹಿತ–ಚಿದಹಂಕಾರ

ಸಹವಾಗಿ, ನುಂಗಿದರು-ಒಳಕೊಂಡರು. ಎನಗಿನ್ನಾವ ಭವವಿಲ್ಲ-ಎನಗಿನ್ನಾವ ಉತ್ಪತ್ಯ ಉಂಟಾಗಿಲ್ಲವು, ಕಾಣಾ-ಕಂಡಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

..........................

೧-೧ ವಲ್ಲವಲ್ಲ (ಕ).

II- - - - - - - - - - - - - - - - - - - - - - - - - - - - - - - - - - - - - - - - - - - - -

ಮಾಡುವ ಭಕ್ತನ ಕಾಯ ಬಾಳೆಯ ಕಂಬಂದಂತಿರಬೇಕು-ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹ ಮಾಡುವ ಸದ್ಭಕ್ತನ ದೇಹವು ರಂಭಾ ಸ್ತಂಭದ ಹಾಂಗೆ ಇರಬೇಕು. ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದಡೆ ಒಳಗೆ ಕೆಚ್ಚಿಲ್ಲದಿರಬೇಕು-ಶನೈ: ಶನೈ: ಎಂದು ಒಂದೊಂದು ಹೊರೆ ಎತ್ತಿ ನೋಡಿದಲ್ಲಿ ಮತ್ತೆ ಮತ್ತೆ ಹೊರೆಯೆದ್ದೆದ್ದು ಬರುತ್ತೈತೆ ಒಳಗೆ ಕೆಚ್ಚಿಲ್ಲದೆ ಹೇಂಗೆ, ಹಾಂಗೆ ಆ ಭಕ್ತನು ತನುವ ಬೇಡಿದರೆ ತನುವ ಕೊಡಬೇಕು ಮನವ ಬೇಡಿದರೆ ಮನವ ಕೊಡಬೇಕು ಧನವ ಬೇಡಿದರೆ ಧನವ ಕೊಡಬೇಕು. ಅಂತರಂಗದಲ್ಲಿ ೨ಕೇಣ೨ವಿಲ್ಲದಿರಬೇಕು. ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು-ಉತ್ತರವಾದ ಮೋಕ್ಷಪಕ್ಷವನು ನಮ್ಮ ಶಿವಗಣಂಗಳು ಚಿದಹಂಕಾರ ಬಿತ್ತು ಸಹವಾಗಿ ಒಳಕೊಂಡರು. ಎನಗಿನ್ನಾವ ಭವವಿಲ್ಲ ಕಾಣಾ ಕೂಡಲಸಂಗಮದೇವಾ-ಶರಣನಿಗೆ ಮುಂದಾವ ಜನ್ಮಸಂಸಾರದ ಭೀತಿಯಿಲ್ಲ ಕಂಡಾ ಎಲೆ ಲಿಂಗವೆ.

..........................

೨-೨ ಕೇಣಸ (ಚ).

---

## ೫೨೪

**ಜಂಗಮವ ಕೂಡಿಕೊಂಡು ಲಿಂಗಾರ್ಚನೆಯ ಮಾಡುವುದು ಲೇಸಯ್ಯ ಭಕ್ತಂಗೆ. ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡುವುದು ಅತಿ ಲೇಸಯ್ಯ ಜಂಗಮಕ್ಕೆ. ಜಂಗಮದ ಕರ್ತವ್ಯವೆ ಆ ಭಕ್ತಂಗೆ ದಾಸೋಹ! ಆ ಭಕ್ತನ ಕಿಂಕಲವೆ ಆ ಜಂಗಮಕ್ಕೆ ದಾಸೋಹ ! ಆ ಭಕ್ತನೊಳಗೆ ಆ ಜಂಗಮವಡಗಿ, ಆ ಜಂಗಮದೊಳಗೆ ಆ ಭಕ್ತನಡಗಿದ್ದುದ ಇದನೇನೆಂದು ಹವಣಿಸುವೆನಯ್ಯ, ಎರಡೊಂದಾದ ಘನವನೇನೆಂದುಪಮಿಸುವೆನಯ್ಯ, ತೆರಹಿಲ್ಲದ ಘನವ? ಇವೆರಡಕ್ಕೆಯೂ ಭವವಿಲ್ಲವೆಂದು, ಕೂಡಲ ಸಂಗಯ್ಯ ನಿಮ್ಮ ಶ್ರುತಿಗಳು ಹೇಳಿದವಾಗಿ, ನಿಮ್ಮ ಕೃಪೆಯೆನಗಾಯಿತ್ತಯ್ಯ.**

I - - - - - - - - - - - - - - - - - - - - - - - - - - - - - - - - - - - - - - - - - - - - -

ಜಂಗಮವ ಕೂಡಿಕೊಂಡು ಲಿಂಗಾರ್ಚನೆಯ ಮಾಡುವುದು ಲೇಸಯ್ಯ ಭಕ್ತಂಗೆ: ಜಂಗಮವ ಕೂಡಿಕೊಂಡು-ಜಂಗಮವನ್ನೇ ಪ್ರಾಣವ ಮಾಡಿಕೊಂಡು, ಲಿಂಗಾರ್ಚನೆಯ ಮಾಡುವುದು-ಲಿಂಗಪ್ರಜೆಯನನುಗ್ಯೆವಂಥದು, ಲೇಸಯ್ಯ-ಪರಿಣಾಮವಯ್ಯ, ಭಕ್ತಂಗೆ-ನಿರ್ವಂಚಕ ಸದ್ಭಕ್ತಂಗೆ. ಆ ಭಕ್ತನ-ಅನಿರ್ವಂಚಕ ಸದ್ಭಕ್ತನ, ಕೂಡಿಕೊಂಡು-ಅಂಗವ ಮಾಡಿಕೊಂಡು, ಲಿಂಗಾರ್ಚನಯ ಮಾಡುವುದು-ಲಿಂಗಪ್ರಜೆಯನನುಗ್ಯೆವುದು, ಅತಿ ಲೇಸಯ್ಯ-ಅತ್ಯಂತ ಪರಿಣಾಮವಯ್ಯ, ಜಂಗಮಕ್ಕೆ-ಜ್ಞಾನಜಂಗಮಕ್ಕೆ.

ಜಂಗಮದ ಕರ್ತವ್ಯವೇ ಆ ಭಕ್ತಂಗೆ ದಾಸೋಹ: [೧][ಜಂಗಮದ ಕರ್ತವ್ಯವೇ–] ಆ ನಿರ್ವಂಚಕ ಸದ್ಭಕ್ತನು ಮೋಡಾಮೋಡಿಯಿಚಿದ ಭಕ್ತಿಯ ಮಾಡುತ್ತಿದ್ದಲ್ಲಿ ಹೀಂಗಲ್ಲ ಹೀಂಗೆಂದು ಹೇಳಿ ಮಾಡಿಸುತ್ತಿದ್ದ ಕಾರಣ ಆ ಜಂಗಮದ ಕರ್ತವ್ಯವೇ, ಆ ಭಕ್ತಂಗೆ ಭಕ್ತಿದಾಸೋಹ : ಆ ಭಕ್ತಂಗೆ–ಆ ನಿರ್ವಂಚಕ ಸದ್ಭಕ್ತಂಗೆ ದಾಸೋಹ!–ಅದೇ ಭಕ್ತಿದಾಸೋಹವಾಗಿ ಅಳವಟ್ಟಿರ್ಪುದು.

ಆ ಭಕ್ತನ–ಆ ನಿರ್ವಂಚಕ ಸದ್ಭಕ್ತನ, ಕಿಂಕಲವೆ–ಅವರೇನಾದರೊಂದು ಪ್ರಸಂಗವ ಹೇಳಿದಲ್ಲಿ ಅಯ್ಯಾ ಹಸಾದ ಮಹಾಪ್ರಸಾದ'ವೆಂದು ಕರಚರಣವ ಜೋಡಿಸಿ ವಾಲೈಸುತಿರ್ದ ಕಾರಣ ಆ ಭಕ್ತನ ಕಿಂಕಲತ್ವವೇ, ಆ ಜಂಗಮಕ್ಕೆ ದಾಸೋಹ : ಆ ಜಂಗಮಕ್ಕೆ–ಆ ಜ್ಞಾನಜಂಗಮಕ್ಕೆ, ದಾಸೋಹ–ಅದೇ ಭಕ್ತಿದಾಸೋಹವಾಗಿ ಅಲವಟ್ಟಿರ್ಪುದು. ಆ ಭಕ್ತನೊಳಗೆ–ಆ ನಿರ್ವಂಚಕ ಸದ್ಭಕ್ತನ ಅಂತರಂಗದಲ್ಲಿ ಆ ಜಂಗಮವು–ಆ ಜ್ಞಾನಜಂಗಮಮೂರ್ತಿಯು ಅಡಗಿ–ಲೀನವಾಗಿ, ಆ ಜಂಗಮದೊಳಗೆ–ಆ ಜ್ಞಾನಜಂಗಮಮೂರ್ತಿಗಳ ಅಂತರಂಗದಲ್ಲಿ, ಆ ಭಕ್ತನಡಗಿದ್ದುದ : ಆ ಭಕ್ತ–ಆ ನಿರ್ವಂಚಕ ಸದ್ಭಕ್ತನು, ಅಡಗಿದ್ದುದ–ಲೀನವಾದುದ, ಇದನೇನೆಂದು ಹವಣಿಸುವೆನಯ್ಯ–ಇದನೆಂತೆಂದು ಒಪ್ಪವಿಟ್ಟು ಹೇಳುವೆನಯ್ಯ. ಎರಡೊಂದಾದ : [ಎರಡು–] ನಿರ್ವಂಚಕ ಸದ್ಭಕ್ತ, ಜ್ಞಾನಜಂಗಮಮೂರ್ತಿಗಳು, ಒಂದಾದ–ಏಕವಾದ, ಘನವ–ಅಧಿಕತ್ವವನ್ನು, ಏನೆಂದುಪಮಿಸುವೆನಯ್ಯ–ಎಂತೆಂದು ವಾಚ್ಯಕ್ಕೆ ತಂದು ಹೇಳುವೆನಯ್ಯ. ತೆರಹಿಲ್ಲದ–ನಿರ್ವಂಚಕಸದ್ಭಕ್ತ ಜ್ಞಾನಜಂಗಮಮೂರ್ತಿಗಳಿರ್ವರಿಗೂ ಭಿನ್ನವಿಲ್ಲದ, ಘನವ–ಅಧಿಕತ್ವವನ್ನು, ಇವರೆಡಕ್ಕೆಯೂ–ನಿರ್ವಂಚಕ ಸದ್ಭಕ್ತ ಜ್ಞಾನಜಂಗಮಮೂರ್ತಿಗಳಿಗೆಯೂ, ಭವವಿಲ್ಲವೆಂದು–ಉತ್ಪತ್ಯ ಉಂಟಾಗಿಲ್ಲವೆಂದು, ಕೂಡಲಸಂಗಯ್ಯ–ಎಲೆ ಪರಶಿವಲಿಂಗವೆ, ನಿಮ್ಮ ಶ್ರುತಿಗಳು–ನಿಮ್ಮ ವೇದವಾಕ್ಯಂಗಳು, ಹೇಳಿದವಾಗಿ–ನಿರೂಪಿಸಿದವಾಗಿ, ನಿಮ್ಮ ಕೃಪೆಯೆನಗಾಯಿತ್ತಯ್ಯ–ನಿಮ್ಮ ಕೃಪೆಯೆಂದರೆ ನಿಜಮೋಕ್ಷವು, ಆ ನಿಜ ಮೋಕ್ಷವೇ ಎನಗುಂಟಾಯಿತ್ತಯ್ಯ.

..........................

೧ + ಆ ಭಕ್ತನು (ಕ, ಗ).

---

೫೨೫

**ಹರಿವ ನದಿಯ ತೆರನ ಹೋಲಬಲ್ಲಡೆ ಭಕ್ತಿ; ಕೂಡಿ ಸಯದಾನವ [1]ನೀ[1]ಡಬಲ್ಲಡೆ ಭಕ್ತಿ. ನೀಡಿ [2]ಮಿಕ್ಕುದ[2] ಕಾಯ್ದುಕೊಂಡಿರಬಲ್ಲಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ!**

I - - - - - - - - - - - - - - - - - - - - - - - - - - - - - - - - - - - - - - - -

ಹರಿವ–ಮನಬಂದ ಪರಿಯಲ್ಲಿ ಚರಿಸುವ, ನದಿಯ–ತುಂಗಭದ್ರೆ ಮೊದಲಾದ ಹೊಳೆಗಳ, ತೆಱನ ಹೋಲಬಲ್ಲಡೆ–ಹೊಳೆಯಂಬಂಥದು ಕಾಲುವೆಯನ್ನು ತಗ್ಗು ತೆಗತೆಗದುಕೊಂಡು ಹೋದಹಾಂಗೆಲ್ಲ ಸಮಸ್ತ ಫಲಪೈರುಗಳಿಗೂ ಸಮಸ್ತ ಸಸಿವೃಕ್ಷಾದಿಗಳಿಗೂ ಸಮಸ್ತ ಪಶುಪಕ್ಷಿಪ್ರಾಣಿಗಳಿಗೂ ಹೇಂಗೆ ಉದಕವನ್ನು ಕೊಟ್ಟುಕೊಂಡು ಹೋಗುತ್ತಿಹುದೊ ಹಾಂಗೆ, ಜಂಗಮಮೂರ್ತಿಗಳು ಬಂದು ಎಲೋ ಭಕ್ತಾ ತನುವ ಕೊಡು ಮನವ ಕೊಡು ಧನವ ಕೊಡು

ಎಂದು ಒರೆದೊರೆದು ಕೇಳಿದಲ್ಲಿ ಅವರು ಕೇಳಿಕೇಳಿದ ಹಾಂಗೆ ಕೊಟ್ಟು ಭಕ್ತಿಯ ಮಾಡುತ್ತಿರಬಲ್ಲಡೆ, ಭಕ್ತಿ–ಅದೇ ಶಿವಾದ್ವೈತಭಕ್ತಿಯು. ಕೂಡಿ–ನಿರ್ವಂಚಕ ಸದ್ಭಕ್ತರ ಭಕ್ತಿಯಲ್ಲಿ ಬೆರೆದು, ಸಯದಾನವ ನೀಡಬಲ್ಲಡೆ : [ಸಯದಾನ–] ಅಕ್ಕಿ ಬೇಳೆ ಬೆಲ್ಲ ತುಪ್ಪ ಕಣಕ ಸಕ್ಕರಿ ಕಾಯಿ ಸೊಪ್ಪು ಮೊದಲಾದ ಸೋಪಸ್ಕಾರವನ್ನು ತೆಗೆದುಕೊಂಡು ಬಂದು ಪಾಕಪ್ರಯತ್ನಂಗಳಂ ಮಾಡಿ, ನೀಡಬಲ್ಲಡೆ–ಸಂತುಷ್ಟಿಬಡಿಸಬಲ್ಲರೆ, ಭಕ್ತಿ–ಅದೇ ಶಿವಾದ್ವೈತ ಭಕ್ತಿಯು.

ನೀಡಿ–ತನುಮನಧನಂಗಳನು ಎಡೆಮಾಡಿ, ಮಿಕ್ಕುದ–ಉಳಿದಂಥ ತನುಮನಧನಂಗಳ ಅವಸ್ಥಾತ್ರಯಂಗಳ ಭ್ರಾಮಕತ್ವದೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋದಹಾಂಗೆ, ಕಾಯ್ದುಕೊಂಡಿರಬಲ್ಲಡೆ–ನಿರ್ಮಲವಾದ ಆಚಾರಾಂಗ ಜ್ಞಾನಕಾಯ ಉನ್ಮನಿಯ ಮನಸ್ಸಾಗಿ ಅಳವಡಿಸಿಕೊಂಡಾಚರಿಸಬಲ್ಲರೆ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಕೂಡಿಕೊಂಡಿಪ್ಪ–ಅಂತಪ್ಪ ಭಕ್ತನ ತನ್ನಲ್ಲಿ ಏಕಾರ್ಥವ ಮಾಡಿಕೊಂಡಿಪ್ಪನು.

II- - - - - - - - - - - - - - - - - - - - - - - - - - - - - - - - - - - - - - - - - - - -

ಹರಿವ ನದಿಯ ತೆಜಿನ ಹೋಲಬಲ್ಲಡೆ ಭಕ್ತಿ–ಚರಿಸುವ ನೀರಿನಲ್ಲಿ ಕಾಲೆದ್ದಿದರೂ ಹಳೆಯ ರಗಟೆಯ ತೊಳೆದರೂ ಸುಮ್ಮನೆ ಹೇಂಗೆ ಇರುತ್ತೈತೆ ಹಾಂಗೆ, ಈ ಭಕ್ತನು ತನುವ ಬೇಡಿದರೆ ತನುವ ಕೊಡಬೇಕು ಮನವ ಬೇಡಿದರೆ ಮನವ ಕೊಡಬೇಕು ಧನವ ಬೇಡಿದರೆ ಧನವ ಕೊಡಬಲ್ಲರೆ ಶ್ರದ್ಧೆ. ಕೂಡಿ ಸಯದಾನವ ನೀಡಬಲ್ಲಡೆ ಭಕ್ತಿ–ಗುರುಲಿಂಗಜಂಗಮದಲ್ಲಿ ಬೆರೆದು ೧೮ ಧ್ಯಾನಾದಿಗಳ ಪಾಕವ ಮಾಡಿ ಎಡೆ ಮಾಡಬಲ್ಲರೆ ಶ್ರದ್ಧೆ. ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ–ಆ ಶಾಕಪಾಕದ್ರವ್ಯಂಗಳನೆಡೆಮಾಡಿ ಅವರುಣಲಾರದವಶೇಷಿತವಾದ ಪ್ರಸಾದವನಾಶ್ರಯಿಸಿಕೊಂಡಿರಬಲ್ಲಡೆ ನಮ್ಮ ಪರಶಿವಲಿಂಗವು ತನುಮನಾತ್ಮದಲ್ಲಿ ಬೆರೆದುಕೊಂಡಿರ್ಪನು.

IV- - - - - - - - - - - - - - - - - - - - - - - - - - - - - - - - - - - - - - - - - - - -

೧–೧ ಮಾ (ತ). ೨–೨ ಮಿಕ್ಕ ಸಯದಾನವ (ತ).

..........................

ಮನವೆಂಬುದೀಗ ಹರಿವ ನದಿಯೆಂಬ ಶಬ್ದಕ್ಕರ್ಥ. ಅಂತಪ್ಪ ಮನಸ್ಸು ಶಿವಭಕ್ತಿಯ ಮಾಡುವವರಿಗೆ ಫಲಪದಭೋಗಂಗಳ ಬಯಕೆಯ ಹುಟ್ಟಿಸಿ ಭವದತ್ತ ಕೆಡುಹುತ್ತಿಹುದು. ಅಂತಪ್ಪ ಮನಸ್ಸೇ ಮಾಯೆಯೆಂದಜಿದು. ಆ ಮನಸ್ಸಿನ ಬಯಕೆಯನಳಿದು ತನ್ನ ನಿಜವೆ ಪರಮಲಿಂಗವೆಂದಜಿದು ಭಿನ್ನಬುದ್ಧಿ ತೋರದಿಪ್ಪುದೆ ಭಕ್ತಿಯೆಂಬುದೀಗ ಹರಿವ ನದಿಯ ತೆಜಿನ ಹೋಲಬಲ್ಲಡೆ ಭಕ್ತಿಯೆಂಬ ಶಬ್ದಕ್ಕರ್ಥ. ಅಂತು ಪೂಜಿಸುವ ಪೂಜಿಸಿಕೊಂಬವೆರಡೂ ಒಂದೇ ಎಂಬ ಏಕಭಾವದಿಂದ ಲಿಂಗವು ತಾನೆಂಬ ಅದ್ವೈತಜ್ಞಾನವ ಕ್ರೀಯಿಂದ ಶಿವಾರ್ಪಣವ ಮಾಡಿ ತಾನೆಂಬಜಿವಡಗಿರಬಲ್ಲರೆ ಭಕ್ತಿಯೆಂಬುದೀಗ ಕೂಡಿ ಸಯದಾನವ ಮಾಡಬಲ್ಲಡೆ ಭಕ್ತಿಯಿಂದ ಶಬ್ದಕ್ಕರ್ಥ. ಅಂತು ತನುಕರಣಜ್ಞಾನಭಾವಂಗಳು ಮೊದಲಾದ ತನ್ನವೆಲ್ಲವ ಲಿಂಗಕ್ಕರ್ಪಿಸಿ ಲಿಂಗವೇ ಉಳಿದಿರ್ದ ಲಿಂಗದ ಉಳಿಮೆಯೊಳಗೆ ಅನ್ಯಭಾವ ಅಜ್ಞಾನಂಗಳ ಬೇರ್ಪಡಿಸಿಕೊಂಡು ತನ್ನತ್ತ ಕೂಡಲೀಯದೆ ಲಿಂಗಸಾವಧಾನ ಹಿಂಗದೆ ಇರಬಲ್ಲರೆ ಶರಣಂಗೆ ಲಿಂಗವು ಭಿನ್ನವಿಲ್ಲವೆಂಬುದೀಗ ನೀಡಿ ಮಿಕ್ಕ

ಸಯದಾನವ ಕಾಯ್ದುಕೊಂಡಿರಬಲ್ಲಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಯೆಂಬ ಶಬ್ದಕ್ಕರ್ಥ.೧

..........................

೧ + ಅಂತು ವಚನ ಮಂಗಳ ಮಹಾ ಶ್ರೀ ಶ್ರೀ ಶ್ರೀ. (ತ).

---

## ೫೨೬

**ಏನ ಮಾಡುವೆ ಎನ್ನ ಪುಣ್ಯದ ಫಲವು! ಶಾಂತಿಯ ಮಾಡಹೋದಡೆ[1] ಬೇತಾಳನಾಯಿತ್ತು. ಕೂಡಲಸಂಗಮದೇವರ ಪೂಜಿಸಿಹೆನೆಂದಡೆ ಭಕ್ತಿಯೆಂಬ ಮೃಗವೆನ್ನನಟ್ಟಿ ಬಂದು ನುಂಗಿ[2]ತ್ತಯ್ಯ.[2]**

I - - - - - - - - - - - - - - - - - - - - - - - - - - - - - - - - - - - - - - - - - - -

ಏನ ಮಾಡುವೆ–ಏನನುಗೈವೆನು, ಎನ್ನ ಪುಣ್ಯದ ಫಲವು–ಎನ್ನ ಸುಕೃತದೊಬ್ಬುಳಿಯು. ಶಾಂತಿಯ ಮಾಡಹೋದಡೆ–ಹಣ್ಣುಕಾಯಿ ಮೊದಲಾದಂಥವುಗಳನ್ನು ಭೂತಕ್ಕೆ ಆಹುತಿಯ ಕೊಡುತ್ತ ಎಯ್ದಿದರೆ, ಬೇತಾಳನಾಯಿತ್ತು–ಭೂಮಿಗೂ ಆಕಾಶಕ್ಕೂ ಕೀಲುಕೊಟ್ಟೋಪಾದಿಯಲ್ಲಿ ತನ್ನಂತೆ ಅವಗ್ರಹಿಸಿಕೊಂಡಿತ್ತು. ಅಂತುಮಲ್ಲದೆ, ಏನ ಮಾಡುವೆ–ಏನನುಗೈವೆನು, ಎನ್ನ ಪುಣ್ಯದ ಫಲವು–ಎನ್ನ ಸುಕೃತದೊಬ್ಬುಳಿಯು, ಶಾಂತಿಯ ಮಾಡಹೋದಡೆ–ವಂಚಿಸಿಕೊಳ್ಳದೇ ನಿರ್ವಂಚಕತ್ವದಿಂದ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುತ್ತ ಎಯ್ದಿದರೆ, ಬೇತಾಳನಾಯಿತ್ತು–ತನುಮನಧನಂಗಳ ಅವಲೋಹವೆಲ್ಲವಳಿದು ನಿತ್ಯವಾದ ಗುರುಲಿಂಗಜಂಗಮಸ್ವರೂಪವಾಯಿತ್ತು. ಕೂಡಲಸಂಗಮದೇವರ–ಇಷ್ಟಮಹಾಲಿಂಗವನ್ನು, ಪೂಜಿಸಿಹೆನೆಂದಡೆ–ಆರಾಧಿಸೇನೆಂದರೆ, ಭಕ್ತಿಯೆಂಬ–ಶಿವಾದ್ವೈತಭಕ್ತಿಯೆಂದು ಹೇಳುವ, ಮೃಗವು–ಎರಳೆಯು, ಎನ್ನನಟ್ಟಿ ಬಂದು–ಎನ್ನ ನೋಡಿಸಿಕೊಂಡು ಬಂದು, ನುಂಗಿತ್ತಯ್ಯ–ಒಳಕೊಂಡಿತ್ತಯ್ಯ.

II- - - - - - - - - - - - - - - - - - - - - - - - - - - - - - - - - - - - - - - - - - -

1 + ಕೊಡೆ (ಚ, ಜ). 2-2 ತು (ಚ, ಜ).

..........................

ಏನ ಮಾಡುವೆ ಎನ್ನ ಪುಣ್ಯದ ಫಲವು–ಆವ ಪ್ರಕಾರವ ಎಸಗುವೆನು ಎನ್ನ ಸುಕೃತದ ಪ್ರಯೋಜನವು. ಶಾಂತಿಯ ಮಾಡಹೋದಡೆ ಕೂಡೆ ಬೇತಾಳನಾಯಿತ್ತು–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವ ಮಾಡಲೆಯ್ದಿದರೆ ಒಡನೆ ಮಹಾಜ್ಞಾನವಾಯಿತ್ತು. ಕೂಡಲಸಂಗಮದೇವರ ಪೂಜಿಸಿಹೆನೆಂದಡೆ ಭಕ್ತಿಯೆಂಬ ಮೃಗವೆನ್ನನಟ್ಟಿ ಬಂದು ನುಂಗಿತ್ತು–ಪರಶಿವಲಿಂಗವನರ್ಚಿಸಿಹೆನೆಂದರೆ ಸಮರಸಭಕ್ತಿಯೆಂಬ ಮೃಗವು ಶರಣನ ತಗುಳಿ ಬಂದು ನಿರಹಂಭಾವ ಭಕ್ತಿಯನೊಳಕೊಂಡಿತ್ತೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - -

1 + ಕೂಡೆ (ಟ, ಡ).

..........................

ಶಾಂತಿಯ ಮಾಡಹೋದಡೆ–ಸತ್ಕ್ರೀಯಿಂದಾಚರಿಸುತ್ತ, ಹೋದರೆ, ಕೂಡೆ–ಒಡನೆ, ಬೇತಾಳನಾಯಿತ್ತು–ಪೂರ್ಣಜ್ಞಾನಸ್ವರೂಪವಾಯಿತ್ತು. ಮೃಗ–ವ್ಯಾಘ್ರನು.

---

೫೨೭

**ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ, ಲಿಂಗವೆಂಬ ಎಲೆಯಾಯಿತ್ತು. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು, ಆಚಾರವೆಂಬ ಕಾಯಾಯಿತ್ತು, [1]ನಿಃಪತಿ[1]ಯೆಂಬ ಹಣ್ಣಾಯಿತ್ತು. [1]ನಿಃಪತಿ[1]ಯೆಂಬ ಹಣ್ಣು [2]ತೊಟ್ಟು ಬಿಟ್ಟು[2] ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದೆತ್ತಿಕೊಂಡ.**

I - - - - - - - - - - - - - - - - - - - - - - - - - - - - - - - - - - - - - - - - - - - - - - - -

ಭಕ್ತಿಯೆಂಬ–ಶಿವಾದ್ವೈತಭಕ್ತಿಯೆಂಬ, ಪೃಥ್ವಿಯ ಮೇಲೆ–ಭೂಮಿಯ ಮೇಲೆ, ಗುರುವೆಂಬ ಬೀಜವಂಕುರಿಸಿ–ಮಹಾಲಿಂಗವೇ ಗುರುವಾಗಿ ಬಂದು ತನುವಿನಲ್ಲಿ ನೆಲೆಗೊಂಡಿಪ್ಪನು. ಲಿಂಗವೆಂಬ ಎಲೆಯಾಯಿತ್ತು–ಆ ಗುರುವಿನ ದೀಕ್ಷಾತ್ರಯಂಗಳಿಂದ ಇಷ್ಟಪ್ರಾಣಭಾವಲಿಂಗವೆಂಬ ಮೂರು ಪರ್ಣ ಉದಯವಾದವು. ಲಿಂಗವೆಂಬ ಎಲೆಯ ಮೇಲೆ–ಇಷ್ಟಪ್ರಾಣಭಾವಲಿಂಗವೆಂಬ ಮೂರು ಪರ್ಣ ಉದಯವಾದಷ್ಟಕ್ಕೆ, ವಿಚಾರವೆಂಬ ಹೂವಾಯಿತ್ತು–ಆ ಗುರುವಿನ ಕ್ರಿಯಾದೀಕ್ಷೆಯಿಂದ ಅಂಗದಲ್ಲಿ ಇಷ್ಟಲಿಂಗವೆಂಬ ಪ್ರಸೂನ ಉಂಟಾಯಿತ್ತು, ಆಚಾರವೆಂಬ ಕಾಯಾಯಿತ್ತು–ಆ ಗುರುವಿನ ಮಂತ್ರದೀಕ್ಷೆಯಿಂದ ಮನದಲ್ಲಿ ಪ್ರಾಣಲಿಂಗವೆಂಬ ಶಲಾಟು ಉಂಟಾಯಿತ್ತು. ನಿಃಪತಿಯೆಂಬ ಹಣ್ಣಾಯಿತ್ತು–ಆ ಗುರುವಿನ ವೇಧಾದೀಕ್ಷೆಯಿಂದ ಆತ್ಮಾಂಗದಲ್ಲಿ ಭಾವಲಿಂಗವೆಂಬ ಪಕ್ವಫಳ ಉಂಟಾಯಿತ್ತು. ನಿಃಪತಿಯೆಂಬ ಹಣ್ಣು–ತ್ರಿವಿಧ ಅಂಗದಲ್ಲಿ ತ್ರಿವಿಧ ದೀಕ್ಷೆಯಿಂದ ತ್ರಿವಿಧಲಿಂಗಸಂಬಂಧವ ಮಾಡಿಕೊಂಡು ತ್ರಿವಿಧಭಕ್ತಿವಿಡಿದಾಚರಿಸುವಂಥ ಶರಣನೆಂಬ ಪಕ್ವಫಳವು, ತೊಟ್ಟುಬಿಟ್ಟು ಕಳಚಿ–ಅಂಗಲಿಂಗವೆಂಬ ಮೂಲಬದ್ಧತ್ವವು ಉಗಚಿ, ಬೀಳುವಲ್ಲಿ–ಮಹಾಲಿಂಗದಲ್ಲಿ ಸಾಮರಸ್ಯವಾಗುವಲ್ಲಿ, ಕೂಡಲಸಂಗಮದೇವ–ಪರಶಿವಲಿಂಗವು, ತನಗೆ ಬೇಕೆಂದು–ತನಗಾಗಬೇಕೆಂದು, ಎತ್ತಿಕೊಂಡ–ತನ್ನಲ್ಲೇಕಾರ್ಥವ ಮಾಡಿಕೊಂಡನೆಂಬ ದೃಷ್ಟೋಪಮಾನದ ಹಾಂಗೆ,

● ಭಕ್ತಿಯೆಂಬ–ತ್ರಿವಿಧ ಷಡ್ವಿಧ ನಾಲ್ವತ್ತೆಂಟುತೆರದ ಭಕ್ತಿಯೆಂಬ, ಪೃಥ್ವಿಯ ಮೇಲೆ–ಚಿತ್ಪೃಥ್ವಿಸ್ವರೂಪವಾದ ಶರಣನ ಆಚಾರಾಂಗದಲ್ಲಿ, ಗುರುವೆಂಬ ಬೀಜವಂಕುರಿಸಿ–ನಿಃಕಲಬ್ರಹ್ಮದ ಸದ್ರೂಪವೇ ಗುರುವಾಗಿ ಬಂದು ತನುವಿನಲ್ಲಿ ನೆಲೆಗೊಂಡಿರ್ಪನು. ಲಿಂಗವೆಂಬ ಎಲೆಯಾಯಿತ್ತು–ನಿಃಕಲಬ್ರಹ್ಮದ ಚಿದ್ರೂಪವೇ ಲಿಂಗವಾಗಿ ಬಂದು ಮನದಲ್ಲಿ ನೆಲೆಗೊಂಡಿರ್ಪುದು. ಲಿಂಗವೆಂಬ ಎಲೆಯ ಮೇಲೆ–ನಿಃಕಲಬ್ರಹ್ಮದ ಚಿದ್ರೂಪವೇ ಲಿಂಗವಾಗಿ ಮನದಲ್ಲಿ ನೆಲೆಗೊಂಡಷ್ಟಕ್ಕೆ, ವಿಚಾರವೆಂಬ ಹೂವಾಯಿತ್ತು–ನಿಃಕಲಬ್ರಹ್ಮದ ಆನಂದವೇ ಜಂಗಮವಾಗಿ ಬಂದು ಪ್ರಾಣಜ್ಞಾನದಲ್ಲಿ ನೆಲೆಗೊಂಡಿರ್ಪನು. ಆಚಾರವೆಂಬ ಕಾಯಾಯಿತ್ತು–ನಿಃಕಲಬ್ರಹ್ಮದ ಪರಿಪೂರ್ಣತ್ವವೇ ಪಾದೋದಕವಾಗಿ ಬಂದು ಸರ್ವಾಂಗದಲ್ಲಿ ನೆಲೆಸಿಕೊಂಡಿರ್ಪುದು. ನಿಃಪತಿಯೆಂಬ ಹಣ್ಣಾಯಿತ್ತು–ನಿಃಕಲಬ್ರಹ್ಮದ ನಿತ್ಯತ್ವವೇ ಪ್ರಸಾದವಾಗಿ ಬಂದು ಆತ್ಮಾಂಗದಲ್ಲಿ ನೆಲೆಗೊಂಡಿರ್ಪುದು. ನಿಃಪತಿಯೆಂಬ ಹಣ್ಣು–

ಪಂಚವಿಧ ಅಂಗದಲ್ಲಿ ಪಂಚವಿಧ ಲಿಂಗಸಂಬಂಧವ ಮಾಡಿಕೊಂಡು ಪಂಚವಿಧ ಭಕ್ತಿವಿಡಿದಾಚರಿಸುವಂಥ ಶರಣನೆಂಬ ಪಕ್ವಫಳವು, ತೊಟ್ಟು ಬಿಟ್ಟು ಕಳಚಿ : ತೊಟ್ಟು ಬಿಟ್ಟು-ಅಂಗಲಿಂಗವೆಂಬ ಮೂಲಬದ್ಧತ್ವವನ್ನು, ಕಳಚಿ-ನಷ್ಟವ ಮಾಡಿ, ಬೀಳುವಲ್ಲಿ-ನಿಃಕಲಬ್ರಹ್ಮದಲ್ಲಿ ಸಾಮರಸ್ಯವಾಗುವಲ್ಲಿ, ಕೂಡಲಸಂಗಮದೇವ ಪರಶಿವಲಿಂಗವು, ತನಗೆ ಬೇಕೆಂದು-ಇಂತಪ್ಪ ಸದ್ಭಕ್ತ ತನಗಾಗಬೇಕೆಂದು, ಎತ್ತಿಕೊಂಡ-ತನ್ನಲ್ಲೇಕಾರ್ಥವ ಮಾಡಿಕೊಂಡನು.[೧]

..........................

೧ + ಇಂತೀ ಭಕ್ತಿಸ್ಥಲದ ವಚನ ಸಂಪೂರ್ಣ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ. (ಕ, ಗ).

II- - - - - - - - - - - - - - - - - - - - - - - - - - - - - - - - - - - - - - - - - - - - -

1–1 ನಿಷ್ಪತ್ತಿ (ಚ, ಜ). 2–2 x (ಚ, ಜ).

..........................

ಭಕ್ತಿಯೆಂಬ ಪೃಥ್ವಿಯ ಮೇಲೆ-ಶಿವಾದ್ವೈತಶ್ರದ್ಧೆಯೆಂಬ ಚಿದ್ಭೂಮಿಯ ಮೇಲೆ, ಗುರುವೆಂಬ ಬೀಜವಂಕುರಿಸಿ-ಆಚಾರ್ಯನೆಂಬ ಮೊಳೆದೋರಿ, ಲಿಂಗವೆಂಬ ಎಲೆಯಾಯಿತ್ತು-ಇಷ್ಟಲಿಂಗವೆಂಬ ಪರ್ಣವಾಯಿತ್ತು. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು-ಇಷ್ಟಲಿಂಗವೆಂಬ ಪರ್ಣದ ಮೇಲೆ ೩, ೬, ೯, ೧೮, ೩೬, ೨೧೬ ಪರಿಪೂರ್ಣಾಚರಣೆಯನರಿವಂಥ ವಿವೇಕವೆಂಬ ಕುಸುಮವಾಯಿತ್ತು. ಆಚಾರವೆಂಬ ಕಾಯಾಯಿತ್ತು-ಸರ್ವಾಚಾರಸಂಪತ್ತಿನಾಚರಣೆಯೆಂಬ ಫಲವಾಯಿತ್ತು. ನಿಷ್ಪತ್ತಿಯೆಂಬ ಹಣ್ಣಾಯಿತ್ತು-ಆಚರಣೆ ಮುಕ್ತಾಯವೆಂಬ ಪಕ್ವವಾಯಿತ್ತು. ನಿಷ್ಪತ್ತಿಯೆಂಬ ಹಣ್ಣು ಕಳಚಿಬೀಳುವಲ್ಲಿ-ಆ ನಿಷ್ಪತ್ತಿಯೆಂಬ ಪಕ್ವವು ಅಂಗಲಿಂಗವೆಂಬ ಮೂಲಬಂದವಳಿದು ಪತಿತವಾಗುವಲ್ಲಿ, ಕೂಡಲಸಂಗಮದೇವ ತನಗೆ ಬೇಕೆಂದೆತ್ತಿಕೊಂಡ-ಪರಶಿವಲಿಂಗವು ತನಗಂಗವಾಗಬೇಕೆಂದು ತನ್ನತ್ತ ನೆಗಹಿಕೊಂಡನೆಂಬುದರ್ಥ.

III- - - - - - - - - - - - - - - - - - - - - - - - - - - - - - - - - - - - - - - - - - - - -

1–1 ನಿಷ್ಪತ್ತಿ (ಟ, ಡ).

..........................

ನಿಷ್ಪತ್ತಿಯೆಂಬ-ಪರಮಕಾಷ್ಠೆಯಂಬ, ಹಣ್ಣು-ಮುಕ್ತಿಫಲವು, ತೊಟ್ಟ ಬಿಟ್ಟು-ಭಿನ್ನಭಾವವೆಂಬ ವೃಂತವು ಸಡಲಿ, ಕಳಚಿ ಬೀಳುವಲ್ಲಿ-ಆ ಚಿದಂಗವೆಂಬ ಮುಕ್ತಿಫಲವು ಲಿಂಗಸಂಬಂಧವಾಗುವಲ್ಲಿ, ಕೂಡಲಸಂಗಮದೇವ-ಪರಶಿವಲಿಂಗವು, ತನಗೆ ಬೇಕೆಂದೆತ್ತಿಕೊಂಡ-ನನ್ನ ಸಂಬಂಧವಾದಂಥಾದೆಂದು ತನ್ನೊಳಗೇಕಾರ್ಥವ ಮಾಡಿಕೊಂಡನು.[೨]

..........................

೨ + ಇಂತಿವು ಭಕ್ತಿಸ್ಥಲದ ನುಡಿಗಳು ಸಮಾಪ್ತಂ ಶ್ರೀ ಶ್ರೀ ಶ್ರೀ ಶ್ರೀ (ಟ, ಡ); + ಶಿವಾಯ ನಮಃ (ಟ).

❖❖

# ಅನುಬಂಧ : ೧

❖

## ಬಸವಣ್ಣನವರ ವಚನಗಳ ಟೀಕೆಯ ಅಂಕಿ-ಸಂಖ್ಯೆಗಳ ತೌಲನಿಕ ವಿವರಣೆ
## ವಚನಗಳ ಕ್ರಮಾನುಕ್ರಮಣಿಕೆ

| | I | II | III | IV | V |
|---|---|---|---|---|---|
| ೧ | ಉದಕದೊಳಗೆ ಬೈಚಿಟ್ಟ ಬಯ್ಕೆಯ | y | y | y | n |
| ೨ | ಕಾಳಿಯ ಕಂಕಾಳದಿಂದ ಮುನ್ನ | y | y | n | y |
| ೩ | ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ | y | y | y | y |
| ೪ | ಅಯ್ಯಾ, ಏಳೇಳು ಜನ್ಮದಲ್ಲಿ ಶಿವ | y | y | n | y |
| ೫ | ಅಯ್ಯಾ, ನಿಮ್ಮ ಶರಣನ ಮರ್ತ್ಯಕ್ಕೆ | y | n | n | y |
| ೬ | ಕರಿಘನ, ಅಂಕುಶ ಕಿಱಿದೆನ್ನಬಹುದೆ? | y | n | n | n |
| ೭ | ಭವ ಬಂಧನ ಭವ ಪಾಶವಾದ | y | y | Y | n |
| ೮ | ಸಂಸಾರ ಸಾಗರದ ತೆರೆಕೊಬ್ಬಿ | y | y | n | Y |
| ೯ | ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ | y | y | y | y |
| ೧೦ | ಇಲಿ ಗಡಹನೊಡ್ಡಿದಲ್ಲಿ ಇಪ್ಪಂತೆ | y | y | n | y |

---

* 'y' ಟೀಕೆಯಿದ್ದುದನ್ನು, 'n' ಟೀಕೆಯಿಲ್ಲದುದನ್ನು ಸೂಚಿಸುತ್ತವೆ.

೭೫, ೭೬, ೭೭ ಈ ಮೂರು ವಚನಗಳು 'ರುದ್ರಾಕ್ಷಿಸ್ಥಲ' ವೆಂಬ ಹೆಸರಿನಿಂದ I ನೆಯ ಟೀಕೆಯಲ್ಲಿ ಹೆಚ್ಚಿಗೆ ಸೇರಿದವುಗಳಾಗಿವೆ. ಇವು 'ಬಸವಣ್ಣನವರ ವಚನಗಳು'(ಕ.ವಿ.ವಿ. ಧಾರವಾಡ) ಗ್ರಂಥದ ೨ನೆಯ ಕಾಂಡದಲ್ಲಿ ೧೦೨೫, ೧೦೨೭, ೧೧೮೪ ನೆಯ ವಚನಗಳಾಗಿವೆ.

III ನೆಯ ಟೀಕೆಯಲ್ಲಿ ೮೩, ೮೪ ನೆಯ ವಚನಗಳು ಹಿಂದುಮುಂದಾಗಿದೆ. ೧೫೧ ನೆಯ ವಚನವು ೧೪೦ನೆಯ ವಚನಕ್ಕಿಂತ ಮೊದಲು ಬಂದಿದೆ.

V ನೆಯ ಟೀಕೆಯಲ್ಲಿ ೧೪ನೆಯ ವಚನವು ೧೧ನೆಯ ವಚನಕ್ಕಿಂತ ಮೊದಲು ಬಂದಿದೆ. ೨೯, ೩೧ನೆಯ ವಚನಟೀಕೆಗಳು ಹಿಂದುಮುಂದಾಗಿವೆ.

| | | | | | |
|---|---|---|---|---|---|
| ೧೧ | ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ | y | y | n | y |
| ೧೨ | ಶೂಲದ ಮೇಲಣ ಭೋಗವೇನಾದಡೆ | y | y | y | y |
| ೧೩ | ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯ | n | n | n | n |
| ೧೪ | ನಾನೊಂದು ನೆನೆದೊಡೆ ತಾನೊಂದ | n | n | n | n |
| ೧೫ | ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ | n | n | n | n |
| ೧೬ | ಕೊಡೆವಿಡೆಯೆ ಕುದುರೆಯ ದೃಢವುಳ್ಳ | y | y | n | y |
| ೧೭ | ಇಂದಿಂಗೆಂತೊ ನಾಳಿಂಗೆಂತೊ ಎಂದು | n | n | n | y |
| ೧೮ | ದಿಟಪುಟ ಭಕುತಿ ಸಂಪುಟ ನೆಲೆಗೊಳ್ಳದಾಗಿ | y | y | y | y |
| ೧೯ | ಅಸತ್ತು ಅಲಸಿದೆನೆಂದಡೆ ಮಾಣದು | y | n | n | y |
| ೨೦ | ಸಂಸಾರವೆಂಬ ಸರ್ಪ ಮುಟ್ಟಲು | n | n | n | n |
| ೨೧ | ಅಱಿಯದೆ ಜನನಿಯ ಜಠರದಲ್ಲಿ | n | n | y | n |
| ೨೨ | ಎಂದೊ, ಸಂಸಾರ ದಂದುಗ ಹಿಂಗುವುದು | n | n | y | n |
| ೨೩ | ಲೇಸ ಕಂಡು ಮನ ಬಯಸಿ ಬಯಸಿ | y | y | n | y |
| ೨೪ | ಮುನ್ನ ಮಾಡಿದ ಪಾಪ ಬೆನ್ನಬಿಡದನ್ನಕ್ಕ | n | n | n | n |
| ೨೫ | ಚಂದ್ರೋದಯಕ್ಕಂಬುಧಿ | n | n | n | n |
| ೨೬ | ಒಲೆ ಹೊತ್ತಿ ಉರಿದಡೆ ನಿಲಬಹುದಲ್ಲದೆ | y | n | n | n |
| ೨೭ | ಎನ್ನ ಗುಣಾವಗುಣವ ಸಂಪಾದಿಸುವೆ | n | n | n | n |
| ೨೮ | ಬೆದಕದಿರು ಬೆದಕದಿರು ಬೆದಕಿದಡೆ | n | n | n | n |
| ೨೯ | ಎನ್ನ ಚಿತ್ತವು ಅತ್ತಿಯ ಹಣ್ಣು | n | y | n | y |
| ೩೦ | ಎನ್ನ ನಡೆಯೊಂದು ಪರಿ ಎನ್ನ ನುಡಿ | n | n | n | n |
| ೩೧ | ಮುಂಗಯ್ಯ ಕಂಕಣಕ್ಕೆ ಕನ್ನಡಿಯ | y | y | n | y |
| ೩೨ | ಕೊಂಬಿನ ಮೇಲಣ ಮರ್ಕಟನಂತೆ | y | y | n | y |
| ೩೩ | ಮರನೇಱಿದ ಮರ್ಕಟನಂತೆ ಹಲವು | n | y | n | y |
| ೩೪ | ಅಂದಣವನೇಱಿದ ಸೊಣಗನಂತೆ | n | y | n | y |
| ೩೫ | ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗ | y | y | n | y |
| ೩೬ | ಒಂದು ಮೊಲಕ್ಕೆ ನಾಯತೊಂಬತ್ತು | n | n | n | y |
| ೩೭ | ದಂದುಗ ಬಿಡದು ಮನದ ಸಂದೇಹ | n | n | n | n |
| ೩೮ | ತನ್ನ ವಿಚಾರಿಸಲೊಲ್ಲದು ಇದಿರ | n | n | n | n |
| ೩೯ | ತನ್ನಿಚ್ಛೆಯ ನುಡಿದಡೆ ಮಚ್ಚುವುದೀ | n | n | n | n |
| ೪೦ | ಸುಡಲೀ ಮನವೆನ್ನನುಡುಹನ | n | n | n | n |
| ೪೧ | ವಚನದ ಹುಸಿಯ ನುಸುಳೆಂತು | n | n | n | n |
| ೪೨ | ಅಂಗದ ನೋಟವು ಸಿಂಗದ ಗಾತ್ರವು | y | y | y | n |
| ೪೩ | ವಿಕಳನಾದೆನು ಪಂಚೇಂದ್ರಿಯ ಧಾತು | n | n | n | n |

| | | | | | |
|---|---|---|---|---|---|
| ೪೪ | ಮುನಿದೆಯಾದಡೆ ಒಮ್ಮ ಜಜೀದಡೆ | n | n | n | n |
| ೪೫ | ನಾನೊಬ್ಬನು, ಸುಡುವರೈವರು | n | y | n | n |
| ೪೬ | ಆಸೆ ಆಮಿಷ ತಾಮಸ ಹುಸಿ ವಿಷಯ | n | n | n | n |
| ೪೭ | ಎಂತು ಶಿವಭಕ್ತಿಯನಾನುಪಮಿಸುವೆ | n | n | n | n |
| ೪೮ | ಕಾಯವಿಕಾರ ಕಾಡಿಹುದಯ್ಯಾ | n | n | n | n |
| ೪೯ | ಬಂದ ಯೋನಿಯನಱಿದು | n | n | n | n |
| ೫೦ | ಬೆಳೆಯದ ಭೂಮಿಯಲೊಂದು | y | y | y | n |
| ೫೧ | ವಿಷಯವೆಂಬ ಹಸರ ನನ್ನ ಮುಂದೆ | n | y | y | n |
| ೫೨ | ಕೆಸಱಲ್ಲಿ ಬಿದ್ದ ಬಡ ಪಶುವಿನಂತೆ | n | y | n | y |
| ೫೩ | ಬಡಪಶು ಪಂಕದಲ್ಲಿ ಬಿದ್ದಡೆ | y | y | y | y |
| ೫೪ | ಅಡವಿಯೊಳಗೆ ಹೊಲಬುಗೆಟ್ಟ ಪಶು | y | y | n | y |
| ೫೫ | ಸಮುದ್ರದೊಳಗಣ ಸಿಂಪಿನಂತೆ | y | y | n | y |
| ೫೬ | ಅಯ್ಯಾ ಅಯ್ಯಾ ಎಂದು ಕರೆ | n | n | n | n |
| ೫೭ | ನೀ ಹುಟ್ಟಿಸಿದಲ್ಲಿ ಹುಟ್ಟಿದೆ ನೀ ಕೊಂದಲ್ಲಿ | n | n | n | n |
| ೫೮ | ನರವಿಂಧ್ಯದೊಳಗೆನ್ನ ಹುಲುಗಿಳಿಯ | y | n | n | y |
| ೫೯ | ಅತ್ತಲಿತ್ತ ಹೋಗದಂತೆ ಹೆಳವನ | y | y | n | y |
| ೬೦ | ಎನ್ನ ವಾಮಕ್ಷೇಮ ನಿಮ್ಮದಯ್ಯಾ | n | y | n | y |
| ೬೧ | ಸಟೆಯಿಲ್ಲದಂತೆ, ಪ್ರಪಂಚುವಿಲ್ಲದಂತೆ | n | n | y | n |
| ೬೨ | ಇವನಾರವ ಇವನಾರವ ಇವನಾರವ | y | n | n | n |
| ೬೩ | ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ | n | n | y | n |
| ೬೪ | ಅಕಟಕಟಾ ಶಿವ ನಿನಗಿನಿತು ಕರುಣವಿಲ್ಲ | n | n | n | n |
| ೬೫ | ನರ ಕೂರಂಬಿನಲೆಚ್ಚ ಅವಂಗೊಲಿದೆ | y | n | n | n |
| ೬೬ | ನೇನೊಲಿದಡೆ ಕೊಱಡು ಕೊನರು | n | n | n | n |
| ೬೭ | ಮೇರು ಗುಣವನಱಸುವುದೆ ಕಾಗೆಯಲ್ಲಿ | y | n | n | n |
| ೬೮ | ಭವಭವದಲ್ಲಿ ಎನ್ನ ಮನವು ನೀವಲ್ಲದೆ | n | n | n | n |
| ೬೯ | ಆಶೆಯೆಂಬ ಪಾಶದಲ್ಲಿ ಭವಬಂಧನ | n | n | n | n |
| ೭೦ | ಮಡಕೆಯ ಮಾಡುವಡೆ ಮಣ್ಣೆ | y | n | n | n |
| ೭೧ | ನೋಡಿ ನೋಡಿ ಮಾಡುವ ನೇಮ | y | y | n | n |
| ೭೨ | ಗುರುವಚನದಿಂದಲ್ಲದೆ | y | y | y | y |
| ೭೩ | ಮುನ್ನ ಮಾಡಿದ ಪಾಪವೆಂತು | y | y | n | n |
| ೭೪ | ನೀರಿಂಗೆ ನೈದಿಲೆಯ ಶೃಂಗಾರ | y | n | n | n |
| ೭೫ | ಅಯ್ಯಾ ಎನಗೆ ರುದ್ರಾಕ್ಷಿಯೆ | n | n | n | n |
| ೭೬ | ಶ್ರೀ ರುದ್ರಾಕ್ಷಿಯ ಧರಿಸಿದಾತನ | n | n | n | n |

| | | | | | |
|---|---|---|---|---|---|
| ೭೭ | ಹಸ್ತಕಡಗ ಕೈಗಧಿಕ ನೋಡಾ | n | n | n | n |
| ೭೮ | ಕರಿ ಅಂಜುವುದು ಅಂಕುಶಕ್ಕಯ್ಯಾ! | n | n | n | n |
| ೭೯ | ಜಪತಪ ನಿತ್ಯನೇಮವೆನಗೆ ಉಪದೇಶ | n | y | n | n |
| ೮೦ | ಅಕಟಕಟಾ ಬೆಡಗು ಬಿನ್ನಾಣ | y | y | n | n |
| ೮೧ | ವಶ್ಯವ ಬಲ್ಲೆವೆಂದೆಂಬಿರಯ್ಯಾ | y | n | n | n |
| ೮೨ | ಭವ ಬಂಧನ ದುರಿತಂಗಳ ಗೆಲುವೊಡೆ | y | n | n | n |
| ೮೩ | ಎನ್ನ ಮನದಲ್ಲಿ ಮತ್ತೊಂದ | y | y | n | n |
| ೮೪ | 'ಓಂ ನಮಃ ಶಿವಾಯ'ವೆಂಬ | n | y | n | y |
| ೮೫ | ಬಿಳಿಯ ಕಜಿಕೆ ಕಣಿಗಿಲೆಲೆಯ | y | y | n | n |
| ೮೬ | ನಮ್ಮವರು ಬೆಸಗೊಂಡಡೆ ಶುಭ | y | y | n | y |
| ೮೭ | ಪಾತಕ ಶತಕೋಟಿಯನೊರೆಸಲು | n | y | n | n |
| ೮೮ | ಲಿಂಗದುಂಡಿಗೆಯ ಪಶುವಾನಯ್ಯಾ | y | y | n | y |
| ೮೯ | ನಮಃಶಿವಾಯ ನಮಃಶಿವಾಯ | n | y | n | n |
| ೯೦ | ಅಡ್ಡ ವಿಭೂತಿಯಿಲ್ಲದವರ ಮುಖ | n | n | n | y |
| ೯೧ | ಅಡ್ಡ ತ್ರಿಪುಂಡ್ರ ಮಣಿಮುಕುಟದ | n | n | n | y |
| ೯೨ | ಆರಾಧ್ಯ ಪ್ರಾಣಲಿಂಗವೆಂದಜೆದು | y | y | n | y |
| ೯೩ | ತಾಳಮರದ ಕೆಳಗೆ ಒಂದು ಹಾಲ | y | y | n | n |
| ೯೪ | ಸುಪಥಮಂತ್ರದುಪದೇಶವ | n | y | n | y |
| ೯೫ | ಕುಂಬಳದ ಕಾಯಿಗೆ ಕಬ್ಬುನದ | y | y | n | y |
| ೯೬ | ಸಗಣಿಯ ಬೆನಕಂಗೆ ಸಂಪಗೆಯರಳ | y | y | n | n |
| ೯೭ | ಕಬ್ಬುನದ ಕೊಡಗವ ಪರುಷ ಮುಟ್ಟಲು | y | y | n | y |
| ೯೮ | ತನುವಿನಲ್ಲೊಂದಿಟ್ಟು ಮನದಲ್ಲಿರದಿಟ್ಟಡೆ | y | n | n | n |
| ೯೯ | ಒಳಗೆ ಕುಟಿಲ, ಹೊಱಗೆ ವಿನಯ | Y | n | n | n |
| ೧೦೦ | ಮನೆಯೊಳಗೆ ಮನೆಯೊಡೆಯ | y | y | n | n |
| ೧೦೧ | ಓಡೆತ್ತ ಬಲ್ಲುದು, ಅವಲಕ್ಕಿಯ | y | y | n | y |
| ೧೦೨ | ಎನಿಸು ಕಾಲ ಕಲ್ಲು ನೀರೊಳ | y | y | n | n |
| ೧೦೩ | ಸಂತವಿದ್ದ ಮನೆಗೆ ಕೊಂತವ | y | y | n | y |
| ೧೦೪ | ಕೂಸುಳ್ಳ ಸೂಳೆ ಧನದಾಸೆಗೆ | y | y | n | y |
| ೧೦೫ | ಎರದೆಲೆಯಂತೆ ಒಳಗೊಂದು | Y | n | n | n |
| ೧೦೬ | ಭಕ್ತರ ಕಂಡಡೆ ಬೋಳಪ್ಪಿರಯ್ಯಾ | n | n | n | n |
| ೧೦೭ | ಗಂಡ ಶಿವಲಿಂಗದೇವರ ಭಕ್ತ | n | y | n | n |
| ೧೦೮ | ಹಾವಡಿಗನು ಮೂಕೊಱತಿಯು | y | y | n | y |
| ೧೦೯ | ಅಂಗದಿಚ್ಛೆಗೆ ಮದ್ಯ ಮಾಂಸವ | n | y | n | n |

| | | | | |
|---|---|---|---|---|
| ೧೧೦ ಶಿವಜನ್ಮದಲ್ಲಿ ಹುಟ್ಟಿ ಮದ್ಯ | n | n | n | n |
| ೧೧೧ ಅರ್ಥರೇಖೆ ಇದ್ದಲ್ಲಿ ಫಲವೇನು | y | n | n | n |
| ೧೧೨ ಗಂಡನ ಮೇಲೆ ಸ್ನೇಹವಿಲ್ಲದ | n | y | n | n |
| ೧೧೩ ಅವಳ ವಚನ ಬೆಲ್ಲದಂತೆ ಹೃದಯ | n | y | n | y |
| ೧೧೪ ಹಾದರಕ್ಕೆ ಹೋದಡೆ ಕಳ್ಳದಮ್ಮ | y | y | n | y |
| ೧೧೫ ಗಜೆ ತೋಜೆ ಗಂಡರೆಂಬವರ | y | y | n | y |
| ೧೧೬ ಅಳೆವುತ್ತ ಅಳೆವುತ್ತ ಬಳಲು | y | y | n | n |
| ೧೧೭ ಒಲೆಯ ಬೂದಿಯ ಬಿಲಿಯಲು | y | y | n | n |
| ೧೧೮ ಧರಣಿಯ ಮೇಲೊಂದು ಹಿರಿದಪ್ಪ | y | y | n | y |
| ೧೧೯ ನಂಬರು ನಚ್ಚರು ಬಜೆದೆ ಕರೆ | y | y | y | n |
| ೧೨೦ ಹುತ್ತವ ಬಡಿದಡೆ ಹಾವು ಸಾಯ | y | n | n | n |
| ೧೨೧ ಕಾಮವೇಕೊ ಲಿಂಗಪ್ರೇಮಿಯೆನಿಸುವಂಗೆ? | n | n | y | n |
| ೧೨೨ ಸಾರ ಸಜ್ಜನರ ಸಂಗಮ ಮಾಡುವುದು | y | n | n | n |
| ೧೨೩ ಹಸಿದು ಎಕ್ಕೆಯ ಕಾಯ ಮೆಲ | y | n | n | n |
| ೧೨೪ ಎಲವದ ಮರ ಪೂತು ಫಲ | y | n | n | n |
| ೧೨೫ ಬಚ್ಚಲ ನೀರು ತಿಳಿಯಾದಡೇನು | y | n | n | n |
| ೧೨೬ ಗಿಳಿವೋದಿ ಫಲವೇನು? ಬೆಕ್ಕುಬಹುದ | y | n | n | n |
| ೧೨೭ ಲೋಕದ ಡೊಂಕ ನೀವೇಕೆ | y | n | n | n |
| ೧೨೮ ಏತ ತಲೆಬಾಗಿದಡೇನು ಗುರುಭಕ್ತ | y | y | n | n |
| ೧೨೯ ಒಲವಿಲ್ಲದ ಪೂಜೆ ! ನೇಹವಿಲ್ಲದ | n | n | y | n |
| ೧೩೦ ಸ್ನೇಹ ತಪ್ಪಿದ ಠಾವಿನಲ್ಲಿ ಗುಣ | y | y | n | y |
| ೧೩೧ ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ | n | y | y | n |
| ೧೩೨ ಹಬ್ಬಕ್ಕೆ ತಂದ ಹರಕೆಯ ಕುಜೆ | y | y | y | y |
| ೧೩೩ ಹಾವಿನ ಬಾಯ ಕಪ್ಪೆ ಹಸಿದು | y | n | y | y |
| ೧೩೪ ಆರತವಡಗದು ಕ್ರೋಧ ತೊಲಗದು | n | n | y | n |
| ೧೩೫ ಹಾವು ತಿಂದವರ ನುಡಿಸಬಹುದು | n | n | n | n |
| ೧೩೬ ಅರೆಭಕ್ತರಾದವರ ನೆರೆ ಬೇಡ | n | n | n | n |
| ೧೩೭ ಸಾರಸಜ್ಜನರ ಸಂಗ ಲೇಸು ಕಂಡಯ್ಯ | y | n | y | n |
| ೧೩೮ ಹೊಲೆಯ ಹೊಲಬಿಗನಾದಡೆ | n | y | n | n |
| ೧೩೯ ದೂಷಕವನನೊಬ್ಬ ದೇಶವ ಕೊಟ್ಟಡೆ | y | n | n | n |
| ೧೪೦ ಪರುಷ ಮುಟ್ಟಿದ ಬಳಿಕ ಕಬ್ಬುನ | y | y | y | n |
| ೧೪೧ ಪಟ್ಟವ ಕಟ್ಟಿದ ಬಳಿಕ ಲಕ್ಷಣ | n | y | y | n |
| ೧೪೨ ದೇವಲೋಕ ಮರ್ತ್ಯಲೋಕವೆಂಬುದು | n | n | y | n |

| | | | | |
|---|---|---|---|---|
| ೧೪೩ ಕಟ್ಟಿದಿರಿನಲ್ಲಿ ಶಿವಭಕ್ತನ ಕಂಡು | n | n | y | n |
| ೧೪೪ ಆರಾರ ಸಂಗವೇನ ಮಾಡದಯ್ಯಾ | n | n | n | n |
| ೧೪೫ ಎಂತಹವನಾದಡೇನು, ಲಿಂಗಮುಟ್ಟದ | n | n | y | n |
| ೧೪೬ ಓದಿದಡೇನು ಕೇಳಿದಡೇನು ಶಿವಪಥ | n | n | y | n |
| ೧೪೭ ಹಾವಿನ ಡೊಂಕು ಹುತ್ತಕ್ಕೆ ಸಸಿನ | y | n | y | n |
| ೧೪೮ ಭಕ್ತನ ಮುಖದರ್ಪಣದಲ್ಲಿ ಲಿಂಗವ | n | n | y | n |
| ೧೪೯ ಭಕ್ತಿ ಎಂತಹುದಯ್ಯಾ? ದಾಸಯ್ಯ | n | n | y | n |
| ೧೫೦ ಮುನ್ನಿನವರು ಹೋದ ದಾರಿ | n | n | y | n |
| ೧೫೧ ದೇವನೊಳ್ಳಿದನೆಂದು ಮುಯ್ಯಾನ | n | n | y | n |
| ೧೫೨ ನೆಱ ನಂಬೋ ನೆಱ ನಂಬೋ | n | y | n | n |
| ೧೫೩ ಬಲ್ಲಿದರೊಡನೆ ಬವರವಾದೊಡೆ | n | n | n | n |
| ೧೫೪ ಗಿರಿಗಳ ಮೇಲೆ ಹಲವು ತರು | y | n | n | n |
| ೧೫೫ ಪರುಷದ ಹೊರೆಯಲ್ಲಿ ಕಬ್ಬುನ | y | n | y | n |
| ೧೫೬ ಗೀತವ ಬಲ್ಲಾತ ಜಾಣನಲ್ಲ | y | y | y | n |
| ೧೫೭ ಲೇಸೆನಿಸಿಕೊಂಡು ಐದು ದಿನ | n | n | n | n |
| ೧೫೮ ಮರ್ತ್ಯಲೋಕವೆಂಬುದು ಕರ್ತಾರ | n | n | y | n |
| ೧೫೯ ಶಿವಚಿಂತೆ ಶಿವಜ್ಞಾನವಿಲ್ಲದ | n | n | y | n |
| ೧೬೦ ಹೊತ್ತಾಱ ಎದ್ದು ಲಿಂಗದೇವನ | n | y | y | y |
| ೧೬೧ ವ್ಯಾಧನೊಂದು ಮೊಲನ ತಂದಡೆ | n | y | y | y |
| ೧೬೨ ಉತ್ಪತ್ತಿ ಶುಕ್ಲ-ಶೋಣಿತದಿಂದಾದ | n | n | y | n |
| ೧೬೩ ಮನವೆ ಸರ್ಪ ತನುವೆ ಹೇಳಿಗೆ | n | y | n | n |
| ೧೬೪ ನೆರೆ ಕೆನ್ನೆಗೆ ತೆರೆ ಗಲ್ಲಕೆ ಶರೀರ | n | n | n | n |
| ೧೬೫ ನೀರ ಬೊಬ್ಬುಳಿಗೆ ಕಬ್ಬುನದ | n | y | n | n |
| ೧೬೬ ಹಂಜರ ಬಲ್ಲಿತ್ತೆಂದು ಅಂಜದೆ | n | y | n | y |
| ೧೬೭ ಸಂಸಾರವೆಂಬುದೊಂದು ಗಾಳಿಯ | n | y | n | n |
| ೧೬೮ ಎಲೆ ಎಲೆ ಮಾನವಾ ಅಳಿಯಾಸೆ | n | n | n | n |
| ೧೬೯ ಎಂತಕ್ಕೆ ಎಂತಕ್ಕೆ ಹಡೆದ ಕಾಯ | n | y | n | y |
| ೧೭೦ ಶಕುನವೆಂದೆಂಬೆ ಅವಶಕುನ | n | n | n | n |
| ೧೭೧ ನಿಮಿಷಾರ್ಧ ನಿಮಿಷಂಭೋ | n | n | n | n |
| ೧೭೨ ಹರನೀವ ಕಾಲಕ್ಕೆ ಸಿರಿಯು | n | n | n | n |
| ೧೭೩ ಹೊಯ್ದಡೆ ಹೊಯ್ಗಳು ಕೈಯಮೇಲೆ | n | n | n | n |
| ೧೭೪ ಆದ್ಯರ ವಚನ ಪರುಷ ಕಂಡಯ್ಯಾ | n | y | n | n |
| ೧೭೫ ಹೊತ್ತಾಱ ಎದ್ದು ಅಗ್ಗವಣಿಯ | n | y | n | n |

| | | | | |
|---|---|---|---|---|
| ೧೭೬ ಅಚ್ಚುಗವೇಕಯ್ಯಾ ಸಂಸಾರದೊಳಗೆ | n | n | n | n |
| ೧೭೭ ಅಂದು ಇಂದು ಮತ್ತೊಂದೆನಬೇಡ | n | n | n | n |
| ೧೭೮ ಅಷ್ಟವಿಧಾರ್ಚನೆ ಷೋಡಶೋಪಚಾರವ | n | n | n | n |
| ೧೭೯ ಆಳಿಗೊಂಡಿಹರೆಂದು ಅಂಜಲದೇಕೆ | n | y | n | n |
| ೧೮೦ ಸುಪ್ರಭಾತ ಸಮಯದಲ್ಲಿ | n | n | n | n |
| ೧೮೧ ಅಂಕ ಕಳನೇಱಿ ಕೈಮಱೆದಿರ್ದಡೆ | y | n | n | n |
| ೧೮೨ ಅಡಿಹರಯ್ಯಾ ಪಾಡಿಹರಯ್ಯಾ | n | y | n | n |
| ೧೮೩ ಹೊಲಬುಗೊಂಡಱಿಸಲುಬೇಡ | n | n | n | n |
| ೧೮೪ ನಾದಪ್ರಿಯ ಶಿವನೆಂಬರು | n | n | y | n |
| ೧೮೫ ಹಸಿವಾದಡುಂಬುದನು ಸತಿಯ | n | n | n | n |
| ೧೮೬ ತನ್ನಾಶ್ರಯದ ರತಿಸುಖವನ್ನು | n | n | n | n |
| ೧೮೭ ಬಂಡಿ ತುಂಬಿ ಪತ್ರೆಯ ತಂದು | n | n | n | n |
| ೧೮೮ ಭಕ್ತನಾಗಿ ಲಿಂಗಜಂಗಮವ | n | y | y | n |
| ೧೮೯ ಭೂಮಿಯೊಳಗೆ ನಿಧಾನವಿದ್ದುದ | y | y | n | n |
| ೧೯೦ ಕನ್ನಡಿಯ ನೋಡುವ ಅಣ್ಣಗಳಿರಾ | n | n | y | n |
| ೧೯೧ ಗೀತವ ಹಾಡಿದಡೇನು ಶಾಸ್ತ್ರ | n | n | y | n |
| ೧೯೨ ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕೆ | n | n | n | n |
| ೧೯೩ ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು | n | n | y | n |
| ೧೯೪ ದ್ವೈತಾದ್ವೈತವನೋದಿ ಏನ | n | n | y | n |
| ೧೯೫ ಲಾಂಛನ ಹೊಱಗೆ ಬಂದಿರಲು | n | n | y | y |
| ೧೯೬ ಆಡುತ್ತ ಹಾಡುತ್ತ ಭಕ್ತಿಯ | n | n | y | n |
| ೧೯೭ ಕಲ್ಲನಾಗರ ಕಂಡಡೆ ಹಾಲನೆಱೆ | y | n | y | n |
| ೧೯೮ ನಾಗಂಗೆ ಹೊಸತನಹನಿಕ್ಕಿಹೆವೆಂಬರು | n | n | n | n |
| ೧೯೯ ಎಱೆದಡೆ ನೆನೆಯದು ಮಱೆದಡೆ | n | n | y | n |
| ೨೦೦ ಅಗ್ನಿಯಾಧಾರದಲ್ಲಿ ಕಬ್ಬುನ | n | n | n | n |
| ೨೦೧ ಭಾಂಡವ ತುಂಬಿದ ಬಳಿಕ | y | y | n | n |
| ೨೦೨ ಮಾಡಿ ನೀಡಿ ಲಿಂಗಜಂಗಮದ | n | n | n | n |
| ೨೦೩ ಉಂಡುದು ಬಂದೀತೆಂಬ | n | n | y | n |
| ೨೦೪ ಆಯುಷ್ಯವುಂಟು ಪ್ರಳಯವಿಲ್ಲೆಂದು | n | n | y | n |
| ೨೦೫ ತನುಮನಧನವ ಹಿಂದಿಕ್ಕಿಕೊಂಡು | n | y | y | n |
| ೨೦೬ ತನುಮನಧನವೆಂಬ ಮೂಱು | n | n | y | y |
| ೨೦೭ ಸರ್ವಭೂತಾತ್ಮನೆಂಬ ಮಾತಿನ | n | n | n | n |
| ೨೦೮ ಹಲವು ಮಣಿಯ ಕಟ್ಟಿ ಕುಣಿ | n | n | y | n |

| | | | | |
|---|---|---|---|---|
| ೨೦೯ ತನುವ ಕೊಟ್ಟು ಗುರುವನೊಲಿಸಬೇಕು | n | n | y | n |
| ೨೧೦ ಆಡಿದಡೇನು ಹಾಡಿದಡೇನು | n | n | y | n |
| ೨೧೧ ಶಾಸ್ತ್ರ ಘನವೆಂಬೆನೆ? ಕರ್ಮವ | n | n | y | n |
| ೨೧೨ ವೇದದಂತುಟಲ್ಲ, ಶಾಸ್ತ್ರದಂತುಟಲ್ಲ | n | y | n | n |
| ೨೧೩ ಮಾತಿನ ಮಾತಿನಲ್ಲಪ್ಪುದೇ ಭಕ್ತಿ? | n | n | y | n |
| ೨೧೪ ಹಾವಸೆಗಲ್ಲ ಮೆಟ್ಟಿ ಹರಿದು | y | y | y | y |
| ೨೧೫ ಭಕ್ತಿಯೆಂಬುದ ಮಾಡಬಾರದಯ್ಯಾ | n | n | y | n |
| ೨೧೬ ಹಲವು ಕಾಲ ಧಾವತಿಗೊಂಡು | n | n | n | y |
| ೨೧೭ ನಚ್ಚಿದೆನೆಂದಡೆ ಮಚ್ಚಿದೆನೆಂದಡೆ | n | n | y | n |
| ೨೧೮ ಕವಳುಗೋಲು ಹಿಡಿದು ಶ್ರವವ | y | n | n | n |
| ೨೧೯ ಅರ್ಥಪ್ರಾಣಾಭಿಮಾನದಲ್ಲಿ | n | n | y | n |
| ೨೨೦ ಹಸಿದು ಬಂದ ಗಂಡಂಗೆ ಉಣಲಿಕ್ಕದೆ | n | y | y | n |
| ೨೨೧ ಉದಯದ ಮಾಗಿಯ ಬಿಸಿಲು | y | n | y | n |
| ೨೨೨ ಬರಬರ ಭಕ್ತಿ ಅರೆಯಾಯಿತ್ತು | n | n | n | y |
| ೨೨೩ ಬಿದಿರಲಂದಣಮಕ್ಕು ಬಿದಿರಲ್ಲಿ | y | n | n | y |
| ೨೨೪ ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ | n | n | y | n |
| ೨೨೫ ಪಾಪಿಯ ಧನವು ಪ್ರಾಯಶ್ಚಿತ್ತ | n | n | y | n |
| ೨೨೬ ಬಲಿಯ ಭೂಮಿ, ಕರ್ಣನ ಕವಚ | n | n | n | n |
| ೨೨೭ ಹತ್ತು ಮತ್ತರ ಭೂಮಿ | n | n | n | n |
| ೨೨೮ ಅನವರತ ಮಾಡಿ ನೀಡಿಹೆನೆಂದು | n | y | y | n |
| ೨೨೯ ಕಾಲಾಗ್ನಿ ರುದ್ರನ ಮೇಳಾಪವ | y | n | n | n |
| ೨೩೦ ಹರಸಿ ಮಾಡುವುದು ಹರಕೆಯ | n | n | y | n |
| ೨೩೧ ಹಡೆದೊಡವೆ ವಸ್ತುವನು | n | n | y | n |
| ೨೩೨ ಓಡಲಾಱದ ಮೃಗವು ಸೊಣಗಂಗೆ | n | n | n | n |
| ೨೩೩ ಬಂದುದ ಕೈಕೊಳಬಲ್ಲಡೆ ನೇಮ | n | n | n | n |
| ೨೩೪ ಹಾಲನೇಮ ಹಾಲ ಕೆನೆಯ ನೇಮ | n | y | n | n |
| ೨೩೫ ಮಾಡಿ ಮಾಡಿ ಕೆಟ್ಟರು ಮನ | n | n | y | n |
| ೨೩೬ ಮಾಡಿದೆನೆಂಬುದು ಮನದಲ್ಲಿ | n | n | y | n |
| ೨೩೭ ಕಳಬೇಡ ಕೊಲಬೇಡ ಹುಸಿಯ | n | n | n | n |
| ೨೩೮ ಕೆಡು ನಡೆಯದೆ, ಕೆಡು ನುಡಿಯದೆ | n | n | Y | n |
| ೨೩೯ ಸ್ವಾಮಿಭೃತ್ಯ ಸಂಬಂಧಕ್ಕೆ ಆವುದು | n | n | Y | n |
| ೨೪೦ ಸತ್ಯವುಳ್ಳ ಭಾಂಡವ ತುಂಬು | y | y | y | n |
| ೨೪೧ ದೇವಲೋಕ, ಮರ್ತ್ಯಲೋಕವೆಂಬುದು | n | n | n | n |

| | | | | |
|---|---|---|---|---|
| ೨೪೨ ಪುಣ್ಯ ಪಾಪವೆಂಬುವು ತಮ್ಮ | n | n | y | n |
| ೨೪೩ ಏನಿ ಬಂದಿರಿ, ಹದುಳವಿದ್ದಿರೆ | n | n | y | n |
| ೨೪೪ ಭಕ್ತಿಯೆಂಬ ನಿಧಾನವ ಸಾಧಿಸು | n | y | y | n |
| ೨೪೫ ಸಂಸಾರದಲ್ಲಿ ಹುಟ್ಟಿ ಮತ್ತೊಂದ | y | n | n | n |
| ೨೪೬ ಕಂಡ ಭಕ್ತರಿಗೆ ಕೈಮುಗಿವಾತನೆ | n | n | y | n |
| ೨೪೭ ಇತ್ತ ಬಾರಯ್ಯಾ ಇತ್ತ ಬಾರಯ್ಯಾ | n | n | n | n |
| ೨೪೮ ಭಕ್ತ ಭಕ್ತನ ಮನೆಗೆ ಬಂದಡೆ | n | n | n | n |
| ೨೪೯ ದಯವಿಲ್ಲದ ಧರ್ಮವದೇನಯ್ಯಾ | n | n | n | n |
| ೨೫೦ ತನಗೆ ಮುನಿದವರಿಗೆ ತಾ | n | n | n | n |
| ೨೫೧ ಅರ್ಥಕ್ಕೆ ತಪ್ಪಿದಡೇನು ಪ್ರಾಣಕ್ಕೆ | n | n | y | n |
| ೨೫೨ ಭಕ್ತನು ಕಾಣದ ಠಾವಿನಲ್ಲಿ | n | n | n | n |
| ೨೫೩ ಕರಗಿಸಿ ಎನ್ನ ಮನದ ಕಾಳಿಕೆ | y | y | y | y |
| ೨೫೪ ವೇದಾದಿ ನಾಮ ನಿರ್ನಾಮಮಂ | n | n | n | n |
| ೨೫೫ ಅವರಿವರೆನ್ನದೆ ಚರಣಕ್ಕೆಱಗಲು | n | y | y | y |
| ೨೫೬ ನಡೆಯ ಕಂಡಾ ನಂಬಿ ನುಡಿ | n | n | n | n |
| ೨೫೭ ಇರಿಸಿಕೊಂಡು ಭಕ್ತರಾದರೆಮ್ಮವರು | n | n | n | n |
| ೨೫೮ ಮನಕ್ಕೆ ನಾಚದ ವಚನ ವಚನಕ್ಕೆ | n | n | n | n |
| ೨೫೯ ಇಲ್ಲವೆಯ ಮೇಲೆ ಕಂಚೊಡೆ | n | n | n | n |
| ೨೬೦ ಲಿಂಗವ ನಚ್ಚದೀ ಮನವು | n | n | y | n |
| ೨೬೧ ಅಶನ ಕುಂದದು ವ್ಯಸನ | n | y | y | n |
| ೨೬೨ ಕುದುರವನೇಸು ಕಾಲ | n | y | y | n |
| ೨೬೩ ಕಾಮಧೇನು ನಿಮ್ಮ ಸಾರಿರಲು | n | n | n | n |
| ೨೬೪ ದುರ್ವ್ಯಸನಿ ದುರಾಚಾರಿ | n | n | n | n |
| ೨೬೫ ಧೃತಿಗೆಟ್ಟು ಅನ್ಯರ ಬೇಡದಂತೆ | n | n | n | n |
| ೨೬೬ ಮತ್ತೊಂದ ಕಾಣದಂತೆ | n | n | y | n |
| ೨೬೭ ಮತಿ ಮಂದನಾಗಿ ಗತಿಯ | n | n | n | n |
| ೨೬೮ ಕಾಣದುದನೆಲ್ಲವ ಕಾಣಲಾಱೆ | n | y | n | n |
| ೨೬೯ ಕಾಣಬಹುದೆ ಪರುಷದ ಗಿರಿ | y | n | n | y |
| ೨೭೦ ಎಂತಕ್ಕೆ ಎಂತಕ್ಕೆ ನಾನು ದೇವ | y | n | n | n |
| ೨೭೧ ಅರಿಷಿಣವನೆ ಮಿಂದು ಹೊಂದೊಡಗೆ | y | n | n | y |
| ೨೭೨ ಉದಯಾಸ್ತಮಾನವೆನ್ನ ಬೆಂದ | n | y | n | n |
| ೨೭೩ ತಾಮಸ ಮುಸುಕಿ ಕಂಗಳ | n | n | y | y |
| ೨೭೪ ಏನಿದ್ದಡೇನಿದ್ದಡೊಲ್ಲದು | n | n | n | n |

| | | | | | |
|---|---|---|---|---|---|
| ೨೭೫ | ಬೆಲ್ಲವ ತಿಂದ ಕೋಡಗದಂತೆ | y | n | y | n |
| ೨೭೬ | ಒಡೆಯರ ಕಂಡಡೆ ಕಳ್ಳನಾಗ | n | n | y | n |
| ೨೭೭ | ಕೋಟಾನು ಕೋಟಿ ಜಪವ | n | n | y | n |
| ೨೭೮ | ಮನವೆ ನಿನ್ನ ಜನ್ಮದ ಪರಿಭವ | n | n | y | n |
| ೨೭೯ | ಸುರರ ಬೇಡಿದಡಿಲ್ಲ ನರರ | n | n | y | n |
| ೨೮೦ | ಆಡಿ ಅಳುಪದಿರಾ ಲೇಸ | n | n | n | n |
| ೨೮೧ | ಹೃದಯದಿ ಕತ್ತರಿ ತುದನಾಲಗೆ | n | n | n | n |
| ೨೮೨ | ಒಳ್ಳೆಯ ಮೈಲಾರನೊಳಗೆಲ್ಲ | n | n | n | n |
| ೨೮೩ | ಲೋಕೋಪಚಾರಕ್ಕೆ ಮಜ್ಜನ | n | n | y | n |
| ೨೮೪ | ಮನ್ನಜಕ್ಕೆಜೀವೆನಲ್ಲದೆ ಸಜ್ಜನ | n | n | y | n |
| ೨೮೫ | ಕೆಲಕ್ಕೆ ಶುದ್ಧನಾದೆನಲ್ಲದೆ ಎನ್ನ | n | n | y | n |
| ೨೮೬ | ಕುಲಮದಕ್ಕೆ ಹೋರಿ ಜಂಗಮ | y | n | n | n |
| ೨೮೭ | ಲಿಂಗದಲ್ಲಿ ಕಠಿಣವುಂಟೆ? | n | n | y | n |
| ೨೮೮ | ಲೌಕಿಕರ ಕಂಡು ಆಡುವೆ | n | n | n | n |
| ೨೮೯ | ಓತಿ ಬೇಲಿವರಿದಂತೆ ಎನ್ನ | y | y | n | y |
| ೨೯೦ | ಸತ್ಯಸಂಬಂಧ ಸ್ವಯವಾದ | n | n | y | n |
| ೨೯೧ | ಶಬ್ದ ಸಂಭಾಷಣೆಯ ನುಡಿಯ | n | n | y | n |
| ೨೯೨ | ಹಾಲ ತೊಱೆಗೆ ಬೆಲ್ಲದ | y | n | y | n |
| ೨೯೩ | ಜನ್ಮ ಹೊಲ್ಲೆಂಬೆನೆ ಜನ್ಮವ | y | n | y | n |
| ೨೯೪ | ಉಡುವಿನ ಭಾವದಲ್ಲಿ ಹಡೆದ | y | y | n | n |
| ೨೯೫ | ಬಸುಱ ಬಾಳುವೆಗೆ ನಿಮ್ಮಲ್ಲಿ | y | n | y | n |
| ೨೯೬ | ಮೂಗಕಂಡ ಕನಸಿನಂತಾಯಿತ್ತೆನ್ನ | n | n | n | n |
| ೨೯೭ | ಕಾಣಿಯ ಲೋಭ ಕೋಟಿಯ | n | n | y | n |
| ೨೯೮ | ಏನನೋದಿ ಏನ ಕೇಳಿ ಏನ | n | n | Y | n |
| ೨೯೯ | ಮುನ್ನೂಱಱುವತ್ತು ದಿನ | n | n | y | n |
| ೩೦೦ | ಶಬ್ದ ಸುಖಕ್ಕೆ ಮಚ್ಚಿ ಮಾತಿಂಗೆ | n | n | y | n |
| ೩೦೧ | ಅಂಕ ಓಡಿದಡೆ ತೆತ್ತಿಗಂಗೆ | n | n | y | n |
| ೩೦೨ | ಹೇಡಿ ಬಿರಿದ ಕಟ್ಟಿದಂತೆ | n | y | y | n |
| ೩೦೩ | ಅಚ್ಚ ಶರಣರು ನಿಮ್ಮ ನಿಚ್ಚ | n | n | y | n |
| ೩೦೪ | ಅಡುವುದಳವಟ್ಟಿತ್ತು ಹಾಡುವು | n | n | y | n |
| ೩೦೫ | ಒಡೆಯರಿಗೆ ಒಡವೆಯನೊಪ್ಪಿಸ | n | y | y | n |
| ೩೦೬ | ಹೊಱಸಿಕೊಂಡು ಹೋದ ನಾಯಿ | y | n | y | n |
| ೩೦೭ | ಎನ್ನ ಭಕ್ತನೆಂದೆಂಬರು ಎನ್ನ | n | y | y | n |

| | | | | |
|---|---|---|---|---|
| ೩೦೮ ಎನ್ನಲ್ಲಿ ಭಕ್ತಿ ಎಳ್ಳನಿತಿಲ್ಲ | y | y | y | n |
| ೩೦೯ ನೋಡುವವರುಳ್ಳಡೆ ಮಾಡುವೆ | n | y | y | n |
| ೩೧೦ ತನು ನಿಮ್ಮದೆಂಬೆ ಮನ | y | n | y | n |
| ೩೧೧ ಊರ ಸೀರೆಗೆ ಅಸಗ ತಡಬಡಿ | n | y | y | n |
| ೩೧೨ ಅರ್ಥಪ್ರಾಣಾಭಿಮಾನ ನಿಮ್ಮ | n | n | y | n |
| ೩೧೩ ನಾನು ನಿಮ್ಮ ಭಕ್ತಿಯಲ್ಲಿ | n | y | y | n |
| ೩೧೪ ಆದ್ಯರ ವಚನ ಪರುಷವೆಂಬೆನು | n | n | y | n |
| ೩೧೫ ಕಾಂಚನವೆಂಬ ನಾಯ ನಚ್ಚಿ | n | n | n | n |
| ೩೧೬ ಒಲಿದ ಗಂಡನೊಮ್ಮೆ ಒಲ್ಲದಿಪ್ಪ | n | n | y | y |
| ೩೧೭ ಕಾಣುತ್ತ ಕಾಣುತ್ತ ಕಡೆಗಣಿಸಿ | n | n | y | y |
| ೩೧೮ ಹಗೆಯಲ್ಲಿ ಬಿದ್ದವರ ಮೇಲೆ | n | y | n | y |
| ೩೧೯ ಸೋಲಬಲ್ಲರು ಅವರು | n | n | n | y |
| ೩೨೦ ಮಾತಿನಲ್ಲಿ ಶ್ರೋತ್ರಸುಖವ | n | n | y | n |
| ೩೨೧ ಬಾಣ ಮಯೂರನಂತೆ | n | n | n | n |
| ೩೨೨ ದಾಸಿದೇವ ತನ್ನ ವಸ್ತ್ರವನಿತ್ತ | n | n | y | n |
| ೩೨೩ ತ್ರಿವಿಧ ತ್ರಿವಿಧದಲ್ಲಿ ತಪ್ಪಿದ | n | n | y | n |
| ೩೨೪ ಎನ್ನ ತಪ್ಪು ಅನಂತಕೋಟಿ | n | n | n | n |
| ೩೨೫ ಅಡಿಗಡಿಗೆನ್ನ ಮನವ ಜಡಿದು | n | n | y | n |
| ೩೨೬ ಭಕ್ತಿವಿಶೇಷವ ಮಾಡುವೊಡೆ | n | y | n | y |
| ೩೨೭ ಮನೆ ನೋಡಾ ಬಡವರು ಮನ | n | n | n | n |
| ೩೨೮ ತತ್ವವನಱಿದಿಹೆನೆಂದು | n | y | y | n |
| ೩೨೯ ಆ ಮಿಹಿಲಾಳು ಭೋಜದೇವ | n | y | n | n |
| ೩೩೦ ಆನೆಯು ಆ ದಾರಿಯಲ್ಲಿ | n | n | y | n |
| ೩೩೧ ಆ ಕರಿಯಾಕೃತಿಯ ಸೂಕರನ | n | n | n | n |
| ೩೩೨ ಮೋಟನ ಮೌಳಿ ಮೂಕೊಱತಿ | n | n | n | n |
| ೩೩೩ ಮೂಗಿಲ್ಲದ ಮುಖಕ್ಕೆ ಶೃಂಗಾರವೆ? | n | n | n | n |
| ೩೩೪ ಮಾವಿನಕಾಯೊಳಗೊಂದು | n | y | n | n |
| ೩೩೫ ಮರದ ನೆರಳಲ್ಲಿರ್ದು ತನ್ನ | n | n | n | n |
| ೩೩೬ ಎನಗಿಂದ ಕಿಱಿಯರಿಲ್ಲ | n | n | y | n |
| ೩೩೭ ಆನು ಭಕ್ತನಲ್ಲಯ್ಯ ಆನು | n | y | n | n |
| ೩೩೮ ಡಂಬ ಡಳಹು ಎನ್ನದಯ್ಯಾ | n | n | y | n |
| ೩೩೯ ಚೆನ್ನ ಚಾರಮರಾಯರ ಬಂಟ | y | y | y | y |
| ೩೪೦ ಕಾಲಿಲೊದೆದು ಬಡಿದು ಜಡಿ | n | n | y | y |

| | | | | | |
|---|---|---|---|---|---|
| ೩೪೧ | ನಡೆವರಯ್ಯಾ ಒಡೆಯರು | n | n | y | y |
| ೩೪೨ | ಅರ್ಥಪ್ರಾಣಾಭಿಮಾನಕ್ಕೊಡೆಯರು | n | n | n | n |
| ೩೪೩ | ಅರ್ಚಿಸಲಱಿಯೆ ಪೂಜಿಸ | n | n | n | n |
| ೩೪೪ | ಅಪ್ಪನು ಡೋಹಾರ ಕಕ್ಕಯ್ಯನಾಗಿ | y | y | y | n |
| ೩೪೫ | ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ | y | y | n | n |
| ೩೪೬ | ಸೆಟ್ಟಿಯೆಂಬೆನೆ ಸಿರಿಯಾಳನ | y | n | n | y |
| ೩೪೭ | ಚೆನ್ನಯನ ಮನೆಯ ದಾಸನ | y | y | n | y |
| ೩೪೮ | ಸೂಳೆಗೆ ಹುಟ್ಟಿದ ಕೂಸಿನಂತೆ | y | n | n | n |
| ೩೪೯ | ಹರನು ಮೂಲಿಗನಾಗಿ | y | y | n | n |
| ೩೫೦ | ಅಪ್ಪನು ನಮ್ಮ ಮಾದಾರ | y | y | y | y |
| ೩೫೧ | ಭಕ್ತಿಯಿಲ್ಲದ ಬಡವ | y | n | y | y |
| ೩೫೨ | ಹಿರಿಯಯ್ಯ ಶ್ವಪಚಯ್ಯ | y | n | n | n |
| ೩೫೩ | ಎಮ್ಮ ತಾಯಿ ನಿಂಬವ್ವೆ | y | n | n | y |
| ೩೫೪ | ಎನಗಾರೂ ಇಲ್ಲ ಎನಗಾರೂ | y | n | n | n |
| ೩೫೫ | ಅಯ್ಯಾ ನಿಮ್ಮ ವಂಶವಳಿಯಲು | y | y | n | y |
| ೩೫೬ | ಕೈಯ ಬೋರಿಗೆ ಮಂಡೆಯ | y | y | n | y |
| ೩೫೭ | ಅರಸರ ಮನೆಯಲ್ಲಿ ಅರಸಿ | n | n | n | y |
| ೩೫೮ | ಅನುದಿನ ಮನಮುಟ್ಟಿ | n | n | n | y |
| ೩೫೯ | ಆನು ನಿಮ್ಮ ಶರಣರಿಗೆ | y | n | n | n |
| ೩೬೦ | ಕಾಮವ ತೊಱೆದಾತ | n | y | n | n |
| ೩೬೧ | ಕೀಳಾಗಲಲ್ಲದೆ | y | n | n | y |
| ೩೬೨ | ಬ್ರಹ್ಮಪದವಿಯನೊಲ್ಲೆ | y | n | y | n |
| ೩೬೩ | ಕಾಗೆ ವಿಷ್ಠಿಸುವ ಹೊನ್ನ ಕಳಸ | n | n | n | n |
| ೩೬೪ | ಆವಾವ ಭಾವದಲ್ಲಿ ಮಾಡಿ | n | n | y | n |
| ೩೬೫ | ಆಯತ ಸ್ವಾಯತದನುಭಾವವ | n | n | y | n |
| ೩೬೬ | ಚಕೋರಂಗೆ ಚಂದ್ರಮನ | y | n | n | n |
| ೩೬೭ | ಹೊಲಬುಗೆಟ್ಟ ಶಿಶು ತನ್ನ | y | n | y | n |
| ೩೬೮ | ಸೂರ್ಯನುದಯ ತಾವರೆಗೆ | y | n | y | n |
| ೩೬೯ | ಜಲವ ತಪ್ಪಿದ ಮತ್ಸ್ಯ ಬದುಕು | y | n | n | n |
| ೩೭೦ | ಅಯ್ಯಾ ನಿಮ್ಮ ಮಹಾವ್ರತಿ | n | n | y | n |
| ೩೭೧ | ಜಜ್ಜನೆ ಜರಿದೆನು ಸಜ್ಜನೆ | y | n | n | y |
| ೩೭೨ | ಕಂಡಡೆ ಮನೋಹರವಯ್ಯ | y | y | n | n |
| ೩೭೩ | ಅಂಗೈ ತಿಂದುದೆನ್ನ ಕಂಗಳು | y | n | n | y |

| | | | | | |
|---|---|---|---|---|---|
| ೩೭೪ | ಲಿಂಗವ ಪೂಜಿಸುತ್ತ ಜಂಗಮದ | n | n | y | n |
| ೩೭೫ | ಮನೆದೈವ ಕುಲದೈವ ಎನಗೆ | y | n | y | y |
| ೩೭೬ | ಗಿಳಿಯ ಹಂಜರವಿಕ್ಕಿ ಸೊಡರಿಂಗೆ | y | y | n | y |
| ೩೭೭ | ಅಡವಿಯೊಳಗೊಬ್ಬ ಕಡು | y | n | n | y |
| ೩೭೮ | ಇಂದೆನ್ನ ಮನೆಗೆ ಪ್ರಮಥರು | y | n | y | y |
| ೩೭೯ | ಸಾಸಿವೆಯ ಮೇಲೆ ಸಾಗರ | y | n | n | y |
| ೩೮೦ | ಮನ ಮನ ಬೆರಸಿದಲ್ಲಿ | n | n | n | y |
| ೩೮೧ | ಅಷ್ಟವಿಧಾರ್ಚನೆ ಷೋಡಶೋಪಚಾರ | y | y | n | n |
| ೩೮೨ | ಆವಿಗೆಯಲೊದಗಿದ ಕಪ್ಪಿನಂತೆ | y | y | n | n |
| ೩೮೩ | ಸ್ಥಾವರ ಜಂಗಮ ಒಂದೆ ಎಂದು | n | n | n | n |
| ೩೮೪ | ಮಸಿಯನೇಸು ಕಾಲ | y | n | n | n |
| ೩೮೫ | ಎಳ್ಳಿಲ್ಲದ ಗಾಣವನಾಡಿದ | y | n | n | y |
| ೩೮೬ | ಅಷ್ಟವಿಧಾರ್ಚನೆ ಷೋಡಶೋಪಚಾರ | n | n | n | n |
| ೩೮೭ | ಎನ್ನಲ್ಲಿ ಭಕ್ತಿ ಸಾಸವೆಯ | y | n | n | y |
| ೩೮೮ | ಎನ್ನವರೊಲಿದು ಹೊನ್ನಶೂಲ | y | n | n | n |
| ೩೮೯ | ಎನ್ನವರೆನಗೊಲಿದು ಹೊನ್ನ | y | n | y | n |
| ೩೯೦ | ಎಡದ ಕೈಯಲು ಹಾಲ | y | y | y | y |
| ೩೯೧ | ಎನ್ನಾಪತ್ತು ಸುಖದುಃಖವ | y | n | n | n |
| ೩೯೨ | ನಾನಾಸ್ಥಾನಂಗಳಲ್ಲಿ ಬಂದು | y | y | y | y |
| ೩೯೩ | ಅಯ್ಯಾ ಅಯ್ಯಾ ನಿಮ್ಮ | y | n | y | n |
| ೩೯೪ | ಲಿಂಗದರುಶನ ಕರಮುಟ್ಟಿ | y | y | y | n |
| ೩೯೫ | ಎಲ್ಲರಿಗಿಂದಲೂ ಶಿವಭಕ್ತರೇ | n | n | y | n |
| ೩೯೬ | ಕೃತಯುಗದಲ್ಲಿ ಕೇತಾರವೆಂಬ | y | n | y | n |
| ೩೯೭ | ಭಕ್ತದೇಹಿಕ ದೇವನಪ್ಪ ದೇವನು | n | n | n | n |
| ೩೯೮ | ಜಂಗಮದ ಸನ್ನಿಧಿಯಲಾನು | n | n | n | n |
| ೩೯೯ | ಜಂಗಮವಿರಹಿತ ಲಿಂಗಾರ್ಚನೆ | n | y | y | n |
| ೪೦೦ | ಭಿತ್ತಿಯಿಲ್ಲದೆ ಬರೆಯಬಹುದೆ | y | n | y | y |
| ೪೦೧ | ಸಮಯೋಚಿತದಲ್ಲಿ ಲಿಂಗಾರ್ಚನೆ | n | n | y | n |
| ೪೦೨ | ಉತ್ತಮ ಮಧ್ಯಮ ಕನಿಷ್ಠ | n | n | n | n |
| ೪೦೩ | ಲಾಂಛನವ ಕಂಡು ನಂಬುವೆ | n | n | y | n |
| ೪೦೪ | ಆರಾರ ಮನದಲ್ಲಿ ಏನೇನಿಹುದೆಂದು | y | n | n | n |
| ೪೦೫ | ಸಂಗಸಹಿತ ಶರಣರು ಬಂದಡೆ | y | n | n | n |
| ೪೦೬ | ಕೆಂಡದಲ್ಲಿಟ್ಟಡೆ ಮೈಯ್ಬೆಂದು | n | n | n | n |

| | | | | |
|---|---|---|---|---|
| ೪೦೭ ಎಡದ ಕೈಯಲ್ಲಿ ನಿಗಳವನಿಕ್ಕಿ | y | n | n | n |
| ೪೦೮ ತನುವ ನೋಯಿಸಿ ಮನವ | n | n | n | n |
| ೪೦೯ ಆತ್ಮಸ್ತುತಿ ಪರನಿಂದೆಯ | y | n | y | n |
| ೪೧೦ ನಡೆಯಲರಿಯದೆ ನುಡಿಯ | n | n | n | n |
| ೪೧೧ ಬಂಜೆ ಬೇನೆಯನರಿಯದಂತೆ | n | n | n | n |
| ೪೧೨ ಬೇಜೂರಿಂದ ಬಂದ ಜಂಗಮ | n | n | n | n |
| ೪೧೩ ಉಟ್ಟು ತೊಟ್ಟು ಪೂಜ್ಯವಾಗಿ | n | n | n | n |
| ೪೧೪ ಅಡ್ಡ ದೊಡ್ಡ ನಾನಲ್ಲಯ್ಯಾ | n | n | n | n |
| ೪೧೫ ಕುದುರೆ ಸತ್ತಿಗೆಯವರ | n | n | n | n |
| ೪೧೬ ದೂರದಿಂದ ಬಂದ ಜಂಗಮ | n | n | n | n |
| ೪೧೭ ಹಿಡಿವೆಡೆಯನೆ ಕಾಸಿ ಹಿಡಿವ | y | n | y | n |
| ೪೧೮ ಹಾಲು ಕಂದಲು ತುಪ್ಪದ | y | n | n | n |
| ೪೧೯ ಆಚಾರವನಜೆಯಿರಿ ವಿಚಾರ | y | y | y | n |
| ೪೨೦ ಸ್ಥಾವರ–ಭಕ್ತಂಗೆ ಸೀಮೆಯಲ್ಲದೆ | n | n | y | n |
| ೪೨೧ ಎತ್ತಿಕೊಳ್ಳಲೇಕೆ ಮತ್ತಿಳುಹ | n | n | n | n |
| ೪೨೨ ಮರಕ್ಕೆ ಬಾಯಿ ಬೇರೆಂದು | n | n | n | n |
| ೪೨೩ ಆರಾಧನೆಯ ಮಾಡಿದಡೆ | y | n | y | n |
| ೪೨೪ ಹೊಸ್ತಲವ ಪೂಜಿಸಿ ಹೋಜವಂಟು | n | n | n | n |
| ೪೨೫ ಲಿಂಗವ ಪೂಜಿಸಿ ಜಂಗಮವ | n | n | n | n |
| ೪೨೬ ಜಂಗಮ ನಿಂದೆಯ ಮಾಡಿ | n | n | n | n |
| ೪೨೭ ಅರಸನ ಕಂಡು ತನ್ನ ಪುರುಷನ | y | n | y | n |
| ೪೨೮ ಜಂಗಮವಿಲ್ಲದ ಮಾಟ | y | n | y | n |
| ೪೨೯ ಲಿಂಗದಲ್ಲಿ ದಿಟವನಜಿಸುವಡೆ | n | n | n | n |
| ೪೩೦ ಜಂಗಮದ ಮನ ಭಾವದಲ್ಲಿ | n | n | n | n |
| ೪೩೧ ನಯನದಾಹಾರವ ಜಂಗಮವ | n | n | n | n |
| ೪೩೨ ಎಂಬತ್ತನಾಲ್ಕು ಲಕ್ಷಮುಖದೊಳಗೆ | n | n | n | n |
| ೪೩೩ ಕಂದಿದೆನಯ್ಯಾ ಎನ್ನ ನೋಡುವ | n | n | n | n |
| ೪೩೪ ವೇಷ ಅವಿಚಾರದಲ್ಲಿ | n | y | n | n |
| ೪೩೫ ನೀನಿಕ್ಕಿದ ಬೀಯದಲ್ಲಿ | n | n | n | n |
| ೪೩೬ ದೇವನಿಂಥವನೆಂದು ತೋರೆ | n | n | n | n |
| ೪೩೭ ಹೊನ್ನಿನೊಳಗೊಂದೊರೆಯ | n | n | n | n |
| ೪೩೮ ಕಾಗೆ ಒಂದಗುಳ ಕಂಡಡೆ | n | n | n | n |
| ೪೩೯ ಅವನಾದಡೇನು ಹೇಮವಿಲ್ಲ | n | n | n | n |

| | | | | |
|---|---|---|---|---|
| ೪೪೦ ಹರಗಣಪಜ್ತಿಯ ನಡುವೆ | n | n | n | n |
| ೪೪೧ ಅಲುತ್ತಲು ಹರೆಯ | y | n | n | n |
| ೪೪೨ ಭಕ್ತಿಸಂಭಾಷಣೆಯ ನುಡಿಯ | n | n | n | n |
| ೪೪೩ ಓಡುವಾತ ಲೆಂಕನಲ್ಲವಯ್ಯ | y | n | n | n |
| ೪೪೪ ಚಂದ್ರನ ಶೈತ್ಯದಲ್ಲಿ ಬೆಳೆವ | y | n | n | n |
| ೪೪೫ ದಾಸನ ವಸ್ತ್ರವ ಬೇಡದ | n | n | n | n |
| ೪೪೬ ಎಲ್ಲರೂ ವೀರರು ಎಲ್ಲರೂ | n | n | n | n |
| ೪೪೭ ಎಲ್ಲಿ ನೋಡಿದಲ್ಲಿ ಮನ | n | n | n | n |
| ೪೪೮ ಹರಿವ ಹಾವಿಂಗಂಜೆ ಉರಿಯ | n | n | n | n |
| ೪೪೯ ಒಂದಕ್ಕೊಂಬತ್ತ ನುಡಿದು | n | n | n | n |
| ೪೫೦ ಒಡೆಯರು ಬಂದಡೆ | n | n | n | n |
| ೪೫೧ ಒಡೆಯರಾಡುವ ಮಾತು | n | n | n | n |
| ೪೫೨ ಬಡಹಾರುವನೇನು ಭಕ್ತ | y | n | n | n |
| ೪೫೩ ಶ್ರೀವಿಭೂತಿ ರುದ್ರಾಕ್ಷಿ | n | n | n | n |
| ೪೫೪ ದೇವಸಹಿತ ಭಕ್ತನ ಮನೆಗೆ | n | n | n | n |
| ೪೫೫ ಲಿಂಗಾಂಗಿಗಳಲ್ಲದವರ | n | n | n | n |
| ೪೫೬ ಶ್ರೀವಿಭೂತಿಯ ಪೂಸದವರ | n | n | y | n |
| ೪೫೭ ಕೂಪರಿಗೆ ಹೇಳುವೆನು ಕುಳ | y | y | n | n |
| ೪೫೮ ಒಡೆದೋಡು ಎನ್ನ ಮನೆಯ | y | n | n | n |
| ೪೫೯ ಭವವಿರಹಿತ ಭಕ್ತನಾದ | y | n | n | n |
| ೪೬೦ ಅಯ್ಯಾ ನಿಮ್ಮ ಶರಣರ | n | n | n | n |
| ೪೬೧ ಹಾರುವ ಹಾರುವನಪ್ಪೆ | n | n | n | n |
| ೪೬೨ ಒಕ್ಕುದ ಮಿಕ್ಕುದನುಂಡು | n | n | n | n |
| ೪೬೩ ಗುರುಲಿಂಗ ಜಂಗಮದಿಂದ | y | n | n | n |
| ೪೬೪ ಅಹುದೆಂದಡಜೆಯೆ ಆಗದೆಂದ | y | n | n | n |
| ೪೬೫ ಒಂದುವನಜೆಯದ ಸಂದೇಹಿ | y | n | n | n |
| ೪೬೬ ಆವನಾದಡೇನು ಶ್ರೀಮಹಾದೇವ | y | n | n | n |
| ೪೬೭ ಬಿಡದೆ ಬಾಗಿಲ ಎಂಜಲನು | n | n | n | n |
| ೪೬೮ ತೊತ್ತಿಂಗೇಕೆ ಲಕ್ಷಣ? | n | n | n | n |
| ೪೬೯ ತೊತ್ತಿಂಗೆ ಲಕ್ಷಣವೇಕಯ್ಯಾ | n | n | n | n |
| ೪೭೦ ಪಾದೋದಕವ ಕೊಂಬೆ | n | n | n | n |
| ೪೭೧ ಪಾತಕ ಮಹಾಪಾತಕವ | n | n | n | n |
| ೪೭೨ ನಾನು ಹೊತ್ತ ಹುಳ್ಳಿಯ | y | y | n | y |

| | | | | |
|---|---|---|---|---|
| ೪೭೩ ಭವಭವದಲ್ಲಿ ನಿಮ್ಮ ಜಂಗಮ | n | y | n | n |
| ೪೭೪ ದಾಸಿಯ ವರ್ಗದಲ್ಲಿಪ್ಪೆನು | y | n | n | n |
| ೪೭೫ ಜನ್ಮಕ್ಕೆ ಹೋಗಲೀಯದೆ | n | n | n | n |
| ೪೭೬ ಕರ್ತರು ನಿಮ್ಮ ಗಣಂಗಳು | n | n | n | n |
| ೪೭೭ ತೊತ್ತಿಂಗೆ ಬಲ್ಲಹನೊಲಿದಡೆ | y | n | n | n |
| ೪೭೮ ಹೊರಗೆ ಸೂಸಿ ನಾನೇವೆನಯ್ಯ | n | n | n | n |
| ೪೭೯ ಸುಚಿತ್ತದಿಂದ ನಿಮ್ಮ ನೆನೆಯ | n | n | n | n |
| ೪೮೦ ಅಷ್ಟದಳ ಕಮಲವ ಸುತ್ತುವ | y | n | n | y |
| ೪೮೧ ನಾ ನಿಮ್ಮ ನೆನೆವೆನು ನೀವೆನ್ನ | n | n | n | n |
| ೪೮೨ ತಂದೆ ನೀನು ತಾಯಿ ನೀನು | y | n | n | n |
| ೪೮೩ ಎನ್ನಾಪತ್ತು ಸುಖದುಃಖ | n | n | n | n |
| ೪೮೪ ಎನ್ನ ಜನ್ಮವನತಿಗಳೆದ | y | n | n | n |
| ೪೮೫ ಭವರೋಗವೈದ್ಯನೆಂದು | n | n | n | n |
| ೪೮೬ ಅಂಗೈಯೊಳಗಣ ಲಿಂಗವ | n | n | n | n |
| ೪೮೭ ಎದೆ ಬಿರಿವನ್ನಕ್ಕ ಮನ | n | n | n | n |
| ೪೮೮ ಆಡಿ ಕಾಲು ದಣಿಯವು | n | n | n | n |
| ೪೮೯ ಕಾಮಸಂಗ ನಿಸ್ಸಂಗವಾಗಿ | n | n | n | n |
| ೪೯೦ ನೋಡಿನೋಡಿ ಲಿಂಗಧ್ಯಾನವೆನ್ನ | n | n | n | n |
| ೪೯೧ ವಾರವೆಂದಱಿಯೆ ದಿನವೆಂದ | n | n | n | n |
| ೪೯೨ ನಿಮ್ಮ ನೋಟವನಂತಸುಖ | n | n | n. | n |
| ೪೯೩ ವಚನದಲ್ಲಿ ನಿಮ್ಮ ನಾಮಾಮೃತ | y | n | n | n |
| ೪೯೪ ಅಡಿಗಡಿಗೆ ಲಿಂಗವನಡರಡರಿ | n | n | n | n |
| ೪೯೫ ತಾಳಮಾನ ಸರಿಸವನಱಿಯೆ | y | n | n | y |
| ೪೯೬ ವರಂ ಪ್ರಾಣಪರಿತ್ಯಾಗಶ್ಛೇದನಂ | n | n | n | n |
| ೪೯೭ ಸುರರು ಕಿನ್ನರರು ಕಿಂಪುರುಷ | n | n | n | n |
| ೪೯೮ ಮಂಡೆಯ ಬೋಳಿಸಿಕೊಂಡು | n | n | n | n |
| ೪೯೯ ಎನಗೆ ನಿಮ್ಮ ನೆನೆದಾಗಲೇ | y | n | y | n |
| ೫೦೦ ಎನ್ನ ಕಾಯವ ದಂಡಿಗೆಯ | y | n | n | y |
| ೫೦೧ ಕುರುಳು ಬೆರಳು ಮುಡುಹು | y | y | n | y |
| ೫೦೨ ಕಂಡ ಕನಸು ನಿಧಾನವ | n | n | y | n |
| ೫೦೩ ಹೊನ್ನ ಹಾವುಗೆಯ | y | n | n | n |
| ೫೦೪ ಮನಕ್ಕೆ ಮನೋಹರವಲ್ಲದ | y | n | n | y |
| ೫೦೫ ಜಗವೆಲ್ಲಱಿಯಲೆನಗೊಬ್ಬ | y | n | n | y |

| | | | | | |
|---|---|---|---|---|---|
| ೫೦೬ | ಸಂಸಾರವೆಂಬ ಶ್ವಾನನಟ್ಟಿ | n | n | n | y |
| ೫೦೭ | ನೀನೋಲಿಯಿತ್ತೇ ಪುಣ್ಯ | n | n | n | n |
| ೫೦೮ | ಅಷ್ಟವಿಧಾರ್ಚನೆ | n | n | n | n |
| ೫೦೯ | ಮಾಟಕೂಟ ಫಲಪ್ರಾಪ್ತಿ | n | y | y | n |
| ೫೧೦ | ಅಯ್ಯಾ ನಿಮ್ಮನುಭಾವ | n | n | n | n |
| ೫೧೧ | ಭಕ್ತನೆಂತೆಂಬೆನಯ್ಯಾ | n | y | n | n |
| ೫೧೨ | ಅಭ್ಯಾಸವೆನ್ನ ವರ್ತಿಸಿತ್ತಯ್ಯ | n | n | n | n |
| ೫೧೩ | ತನು ಸಾರಾಯರ ಮನ | y | n | n | n |
| ೫೧೪ | ಸಂಚಲವಿಲ್ಲದ ಭಕ್ತಿ | n | n | n | n |
| ೫೧೫ | ಕಾಮ ಸಂಗವಳಿದು | n | n | n | n |
| ೫೧೬ | ಭಕ್ತಿರತಿಯ ವಿಕಳಯ | n | n | n | n |
| ೫೧೭ | ಇಂದು ಹುಟ್ಟಿದ ಕೂಸಿಂಗೆ | y | y | y | y |
| ೫೧೮ | ಸಕ್ಕರೆಯ ಕೊಡನ | y | n | n | y |
| ೫೧೯ | ಕಾಳಿದಾಸಂಗೆ ಕಣ್ಣನಿತ್ತೆ | y | n | n | n |
| ೫೨೦ | ಪರಚಿಂತೆ ನಮಗೇಕಯ್ಯ | y | n | n | y |
| ೫೨೧ | ಕಣ್ಣ ಕೋಪಕ್ಕೆ ಮುಂದಜಿಯದೆ | y | n | n | y |
| ೫೨೨ | ಲಜ್ಜೆಗೆಟ್ಟೆನು ನಾಣುಗೆಟ್ಟೆನು | y | n | n | n |
| ೫೨೩ | ಮಾಡುವ ಭಕ್ತನ | y | n | n | n |
| ೫೨೪ | ಜಂಗಮವ ಕೂಡಿಕೊಂಡು | n | n | n | n |
| ೫೨೫ | ಹರಿವ ನದಿಯ ತೆಱನ | y | n | y | n |
| ೫೨೬ | ಏನ ಮಾಡುವೆ ಎನ್ನ | y | y | n | n |
| ೫೨೭ | ಭಕ್ತಿಯೆಂಬ ಪೃಥ್ವಿಯ | y | y | n | n |

❖❖

# ಅನುಬಂಧ : ೨

❖

## ಬಸವಣ್ಣನವರ ವಚನಗಳ ಟೀಕೆಯ ಅಂಕಿ-ಸಂಖ್ಯೆಗಳ ತೌಲನಿಕ ವಿವರಣೆ
## ವಚನಗಳ ಅಕ್ಷರಾನುಕ್ರಮಣಿಕೆ

| | I | II | III | IV | V |
|---|---|---|---|---|---|
| | ಅ | | | | |
| ೩೦೧ | ಅಂಕ ಓಡಿದಡೆ ತೆತ್ತಿಗಂಗೆ | n | n | y | n |
| ೧೮೧ | ಅಂಕ ಕಳನೇರಿ ಕೈಮರೆದಿರ್ದಡೆ | y | n | n | n |
| ೪೨ | ಅಂಗದ ನೋಟವು ಸಿಂಗದ | y | y | y | n |
| ೧೦೯ | ಅಂಗದಿಚ್ಛೆಗೆ ಮದ್ಯಮಾಂಸವ | n | y | n | n |
| ೨೭೩ | ಅಂಗೈಯ ತಿಂದುದೆನ್ನ ಕಂಗಳು | y | n | n | y |
| ೪೮೬ | ಅಂಗೈಯೊಳಗಣ ಸೊಣಗನಂತೆ | n | n | n | n |
| ೩೪ | ಅಂದಣವನೇರಿದ ಸೊಣಗನಂತೆ | n | y | n | y |
| ೧೭೭ | ಅಂದು ಇಂದು ಮತ್ತೊಂದೆನಬೇಡ | n | n | n | n |
| ೮೦ | ಅಕಟಕಟಾ ಬೆಡಗು ಬಿನ್ನಾಣ | y | y | n | n |
| ೬೪ | ಅಕಟಕಟಾ ಶಿವ ನಿನಗಿನಿತು | n | n | n | n |
| ೨೦೦ | ಅಗ್ನಿಯಾಧಾರದಲ್ಲಿ ಕಬ್ಬುನ | n | n | n | n |
| ೩೦೩ | ಅಚ್ಚ ಶರಣರು ನಿಮ್ಮ ನಿಚ್ಚ | n | n | y | n |
| ೧೭೬ | ಅಚ್ಚುಗವೇಕಯ್ಯಾ ಸಂಸಾರ | n | n | n | n |
| ೩೪೩ | ಅರ್ಚಿಸಲರಿಯೆ ಪೂಜಿಸಲರಿಯೆ | n | n | n | n |
| ೩೭೭ | ಅಡವಿಯೊಳಗೊಬ್ಬ ಕಡು | y | n | n | y |
| ೫೪ | ಅಡಿವಯೊಳಗೆ ಹೊಲಬು | y | y | n | y |
| ೯೧ | ಅಡ್ಡ ತ್ರಿಪುಂಡ್ರ ಮಣಿ | n | n | n | n |

| | | | | | |
|---|---|---|---|---|---|
| ೪೧೪ | ಅಡ್ಡ ದೊಡ್ಡ ನಾನಲ್ಲಯ್ಯ | n | n | n | n |
| ೯೦ | ಅಡ್ಡ ವಿಭೂತಿಯಿಲ್ಲದವರ | y | y | n | y |
| ೪೯೪ | ಅಡಿಗಡಿಗೆ ಲಿಂವನಡರಡರಿ | n | n | n | n |
| ೩೨೫ | ಅಡಿಗಡಿಗೆನ್ನ ಮನವ ಜರಿದು | n | n | y | n |
| ೫೯ | ಅತ್ತಲಿತ್ತ ಹೋಗದಂತೆ ಹೆಳವನ | y | y | n | y |
| ೨೫೧ | ಅರ್ಥಕ್ಕೆ ತಪ್ಪಿದಡೇನು | n | n | y | n |
| ೩೧೨ | ಅರ್ಥ ಪ್ರಾಣಾಭಿಮಾನ ನಿಮ್ಮದೆಂಬೆ | n | n | y | n |
| ೩೪೨ | ಅರ್ಥ ಪ್ರಾಣಾಭಿಮಾನಕ್ಕೊಡೆಯ | n | n | n | n |
| ೨೧೯ | ಅರ್ಥ ಪ್ರಾಣಾಭಿಮಾನದಲ್ಲಿ | n | n | y | n |
| ೧೧೧ | ಅರ್ಥರೇಖೆ ಇದ್ದಲ್ಲಿ ಫಲ | y | n | n | n |
| ೨೨೮ | ಅನವರತ ಮಾಡಿ ನೀಡಿಹೆ | n | y | y | n |
| ೩೫೮ | ಅನುದಿನ ಮನಮುಟ್ಟಿ ಧನ್ಯ | n | n | n | n |
| ೩೪೪ | ಅಪ್ಪನು ಡೋಹಾರ ಕಕ್ಕಯ್ಯ | y | y | y | n |
| ೩೫೦ | ಅಪ್ಪನು ನಮ್ಮ ಮಾದಾರ | y | y | y | y |
| ೫೫೨ | ಅಭ್ಯಾಸವೆನ್ನ ವರ್ತಿಸಿತ್ತಯ್ಯ | n | n | n | n |
| ೫೬ | ಅಯ್ಯಾ ಅಯ್ಯಾ ಎಂದು | n | n | n | n |
| ೭೫ | ಅಯ್ಯಾ ಎನಗೆ ರುದ್ರಾಕ್ಷಿಯೆ | n | n | n | n |
| ೪ | ಅಯ್ಯಾ ಏಳೇಳು ಜನ್ಮದಲ್ಲಿ | y | y | n | y |
| ೩೭೦ | ಅಯ್ಯಾ ನಿಮ್ಮ ಮಹಾವ್ರತಿಗಳ | n | n | y | n |
| ೫೧೦ | ಅಯ್ಯಾ ನಿಮ್ಮನುಭಾವ | n | n | n | n |
| ೩೯೩ | ಅಯ್ಯಾ ಅಯ್ಯಾ ನಿಮ್ಮ | y | n | y | n |
| ೫ | ಅಯ್ಯಾ ನಿಮ್ಮ ಶರಣನ | y | y | n | n |
| ೪೬೦ | ಅಯ್ಯಾ ನಿಮ್ಮ ಶರಣರ | n | n | n | n |
| ೩೫೫ | ಅಯ್ಯಾ ನಿಮ್ಮ ವಂಶಾವಳಿ | y | y | n | y |
| ೩ | ಅಯ್ಯಾ ನೀನು ನಿರಾಕಾರವಾಗಿರ್ದಲ್ಲಿ | y | y | y | y |
| ೪೨೭ | ಅರಸನ ಕಂಡು ತನ್ನ ಪುರುಷನ | y | n | y | n |
| ೩೫೭ | ಅರಸರ ಮನೆಯಲ್ಲಿ ಅರಸಿ | n | n | n | y |
| ೨೭೧ | ಅರಿಸಿಣವನೆ ಮಿಂದು ಹೊಂದೊಡಿಗೆ | y | n | n | y |
| ೧೩೬ | ಅರೆಭಕ್ತರಾದವರ ನೆರೆ ಬೇಡ | n | n | n | n |
| ೨೧ | ಅರಿಯದೆ ಜನನಿಯ ಜಠರದಲ್ಲಿ | n | n | y | n |
| ೨೫೫ | ಅವರಿವರೆನ್ನದೆ ಚರಣಕ್ಕೆರಗಲು | n | y | y | y |
| ೧೧೩ | ಅವಳ ವಚನ ಬೆಲ್ಲದಂತೆ ಹೃದಯ | n | y | n | y |
| ೨೬೧ | ಅಶನ ಕುಂದದು ವ್ಯಸನ ಮಾಣದು | n | y | y | n |

| | | | | | |
|---|---|---|---|---|---|
| ೪೮೦ | ಅಷ್ಟದಳ ಕಮಲವ ಸುತ್ತುವ | y | n | n | y |
| ೩೮೧ | ಅಷ್ಟವಿಧಾರ್ಚನೆ ಷೋಡಶೋಪಚಾರ | y | y | n | n |
| ೫೦೮ | ಅಷ್ಟವಿಧಾರ್ಚನೆ ಷೋಡಶೋಪಚಾರ | n | n | n | n |
| ೧೭೮ | ಅಷ್ಟವಿಧಾರ್ಚನೆ ಷೋಡಶೋಪಚಾರ | n | n | n | n |
| ೩೮೬ | ಅಷ್ಟವಿಧಾರ್ಚನೆ ಷೋಡಶೋಪಚಾರ | n | n | n | n |
| ೪೬೪ | ಅಹುದೆಂದರಿಯೆ ಆಗದೆಂದರಿಯೆ | y | n | n | n |
| ೧೧೬ | ಅಳೆವುತ್ತ ಅಳೆವುತ್ತ ಬಳಲುವರಲ್ಲದೆ | y | y | n | n |
| | ಆ | | | | |
| ೩೩೧ | ಆ ಕರಿಯಾಕೃತಿಯ ಸೂಕರ | n | n | n | n |
| ೪೧೯ | ಆಚಾರವನರಿಯಿರಿ ವಿಚಾರವನರಿ | y | y | y | n |
| ೨೮೦ | ಆಡಿ ಅಳುಪದಿರಾ ಲೇಸುಮಾಡಿ | n | n | n | n |
| ೪೮೮ | ಆಡಿ ಕಾಲು ದಣಿಯವು ನೋಡಿ ಕಣ್ಣು | n | n | n | n |
| ೨೧೦ | ಆಡಿದಡೇನು ಹಾಡಿದಡೇನು | n | n | y | n |
| ೧೮೨ | ಆಡಿಹರಯ್ಯಾ ಪಾಡಿಹರಯ್ಯಾ | n | y | n | n |
| ೧೯೬ | ಆಡುತ್ತ ಹಾಡುತ್ತ ಭಕ್ತಿಯ | n | n | y | n |
| ೩೦೪ | ಆಡುವುದಳವಟ್ಟಿತ್ತು ಹಾಡುವುದಳ | n | n | y | n |
| ೪೦೯ | ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯ | y | n | y | n |
| ೩೧೪ | ಆದ್ಯರ ವಚನ ಪರುಷವೆಂಬೆನು | n | n | y | n |
| ೧೭೪ | ಆದ್ಯರ ವಚನ ಪರುಷ ಕಂಡಣ್ಣಾ | n | y | n | n |
| ೩೫೯ | ಆನು ನಿಮ್ಮ ಶರಣರಿಗೆ ಮಂಡೆಯ | y | n | n | n |
| ೩೩೭ | ಆನು ಭಕ್ತನಲ್ಲಯ್ಯ ಆನು ವೇಷ | n | y | n | n |
| ೩೩೦ | ಆನೆಯು ಆ ದಾರಿಯಲ್ಲಿ ಹೋಯಿ | n | n | y | n |
| ೩೨೯ | ಆ ಮಿಹಿಲಾಳು ಭೋಜದೇವ | n | y | n | n |
| ೩೬೫ | ಆಯತ ಸ್ವಾಯತದನುಭಾವ | n | n | y | n |
| ೨೦೪ | ಆಯುಷ್ಯವುಂಟು ಪ್ರಳಯವಿಲ್ಲೆಂದು | n | n | y | n |
| ೧೩೪ | ಆರತವಡಗದು ಕ್ರೋಧ ತೊಲ | n | n | y | n |
| ೪೨೩ | ಆರಾಧನೆಯ ಮಾಡಿದಡೆ | y | n | y | n |
| ೯೨ | ಆರಾಧ್ಯ ಪ್ರಾಣಲಿಂಗವೆಂದು | y | y | n | y |
| ೪೦೪ | ಆರಾರ ಮನದಲ್ಲಿ ಏನೇನಿಹುದೆಂ | y | n | n | n |
| ೧೪೪ | ಆರಾರ ಸಂಗವೇನೇನ ಮಾಡ | n | n | n | n |
| ೪೪೧ | ಆಲುತ್ತಲು ಹಳಿಯ ಹೊಯಿಸಿ | y | n | n | n |
| ೪೩೯ | ಆವನಾದಡೇನು ಹೇಮವಿಲ್ಲದಂಗ | n | n | n | n |
| ೪೬೬ | ಆವನಾದಡೇನು ಶ್ರೀ ಮಹಾದೇವನ | y | n | n | n |

| | | | | | |
|---|---|---|---|---|---|
| ೩೬೪ | ಆವಾವ ಭಾವದಲ್ಲಿ ಮಾಡಿ | n | n | y | n |
| ೩೮೨ | ಆವಿಗೆಯಲೊದಗಿದ | y | y | n | n |
| ೬೯ | ಆಶೆಯೆಂಬ ಪಾಶದಲ್ಲಿ | n | n | n | n |
| ೧೯ | ಆಸತ್ತು ಆಲಸಿದೆನೆಂದಡೆ | y | n | n | y |
| ೪೬ | ಆಸೆ, ಆಮಿಷ, ತಾಮಸ ಹುಸಿ | n | n | n | n |
| ೧೩೧ | ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ | n | y | y | n |
| ೧೭೯ | ಆಳಿಗೊಂಡಿಹರೆಂದು ಅಂಜಲದೇಕೆ? | n | y | n | n |
| | ಇ | | | | |
| ೧೭ | ಇಂದಿಂಗೆಂತೊ ನಾಳಿಂಗೆಂತೊ | n | n | n | y |
| ೫೧೭ | ಇಂದು ಹುಟ್ಟಿದ ಕೂಸಿಂಗೆ | y | y | y | y |
| ೨೭೮ | ಇಂದೆನ್ನ ಮನೆಗೆ ಪ್ರಮಥರು | y | n | y | y |
| ೨೪೭ | ಇತ್ತ ಬಾರಯ್ಯಾ, ಇತ್ತ ಬಾರಯ್ಯಾ | n | n | n | n |
| ೨೫೭ | ಇಜೆಸಿಕೊಂಡು ಭಕ್ತರಾದರು | n | n | n | n |
| ೨೫೯ | ಇಲ್ಲವೆಯ ಮೇಲೆ ಕಂಚೊಡೆದಂತೆ | n | n | n | n |
| ೧೦ | ಇಲಿ ಗಡಹನೊಡ್ಡಿದಲ್ಲಿ ಇಪ್ಪಂತೆ | y | y | n | y |
| ೬೨ | ಇವನಾರವ ಇವನಾರವ ಇವನಾರವ | y | n | n | n |
| | ಉ, ಊ | | | | |
| ೨೦೩ | ಉಂಡುದು ಬಂದೀತೆಂಬ | n | n | y | n |
| ೨೨೪ | ಉಂಬಾಗಳಿಲ್ಲೆನ್ನ ಉಡುವಾಗ | n | n | y | n |
| ೪೧೩ | ಉಟ್ಟು ತೊಟ್ಟು ಪೂಜ್ಯವಾಗಿ | n | n | n | n |
| ೨೯೪ | ಉಡುವಿನ ಭಾವದಲ್ಲಿ ಹಡೆದರೆಮ್ಮವರು | y | y | n | n |
| ೩೪೫ | ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ | y | y | n | n |
| ೪೦೨ | ಉತ್ತಮ ಮಧ್ಯಮ ಕನಿಷ್ಠವೆಂದು | n | n | n | n |
| ೧೬೨ | ಉತ್ಪತ್ತಿ ಶುಕ್ಲ ಶೋಣಿತದಿಂದ | n | n | y | n |
| ೧ | ಉದಕದೊಳಗೆ ಬೈಚಿಟ್ಟ ಬಯಕೆಯ | y | y | y | y |
| ೨೨೧ | ಉದಯದ ಮಾಗಿಯ ಬಿಸಿಲು | y | n | y | n |
| ೨೭೨ | ಉದಯಾಸ್ತಮಾನವೆನ್ನ ಬೆಂದ | n | y | n | n |
| ೩೧೧ | ಊರ ಸೀರೆಗೆ ಅಗಸ ತಡಬಡಿ | n | y | y | n |
| | ಎ | | | | |
| ೧೬೯ | ಎಂತಕ್ಕೆ ಎಂತಕ್ಕೆ ಹಡೆದ | n | y | n | y |
| ೨೭೦ | ಎಂತಕ್ಕೆ ಎಂತಕ್ಕೆ ನಾನು | y | n | n | n |
| ೧೪೫ | ಎಂತಹವನಾದಡೇನು? ಲಿಂಗವ | n | n | y | n |
| ೪೭ | ಎಂತು ಶಿವಭಕ್ತಿಯ ನಾನುಪಮಿ | n | n | n | n |

| | | | | | |
|---|---|---|---|---|---|
| ೨೨ | ಎಂದೊ ಸಂಸಾರದಂದುಗ ಹಿಂಗುವುದು | n | n | y | n |
| ೪೩೨ | ಎಂಬತ್ತನಾಲ್ಕು ಲಕ್ಷ ಮುಖದೊಳಗೆ | n | n | n | n |
| ೪೦೭ | ಎಡದ ಕೈಯಲಿ ನಿಗಳವನಿಕ್ಕಿ | y | n | n | n |
| ೩೯೦ | ಎಡದ ಕೈಯಲು ಹಾಲಬಟ್ಟಲು | y | y | y | y |
| ೪೨೧ | ಎತ್ತಿಕೊಳ್ಳಲೇಕೆ ಮತ್ತಿಳುಹಲೇಕಯ್ಯ | n | n | n | n |
| ೪೮೭ | ಎದೆ ಬಿರಿವನ್ನಕ್ಕ ಮನದಣಿವನ್ನಕ್ಕ | n | n | n | n |
| ೩೫೪ | ಎನಗಾರೂ ಇಲ್ಲ ಎನಗಾರೂ | y | n | n | n |
| ೩೩೬ | ಎನಗಿಂದ ಕಿಱಿಯರಿಲ್ಲ ಶಿವಭಕ್ತ | n | n | y | n |
| ೪೯೯ | ಎನಗೆ ನಿಮ್ಮ ನೆನಹಾದಾಗಲೇ | y | n | y | n |
| ೧೦೨ | ಎನಿಸುಕಾಲ ಕಲ್ಲು ನೀರೊಳ | y | y | n | n |
| ೫೦೦ | ಎನ್ನ ಕಾಯವ ದಂಡಿಗೆಯ | y | n | n | y |
| ೨೭ | ಎನ್ನ ಗುಣಾವಗುಣವ ಸಂಪಾದಿಸುವೆ | n | n | n | n |
| ೨೯ | ಎನ್ನ ಚಿತ್ತವು ಅತ್ತಿಯ ಹಣ್ಣು | n | y | n | y |
| ೪೮೪ | ಎನ್ನ ಜನ್ಮವನತಿಗಳೆದ ನೀ ಧರ್ಮಿ | y | n | n | n |
| ೩೨೪ | ಎನ್ನ ತಪ್ಪು ಅನಂತಕೋಟಿ ನಿಮ್ಮ | n | n | n | n |
| ೩೦ | ಎನ್ನ ನಡೆಯೊಂದು ಪರಿ ಎನ್ನ ನುಡಿ | n | n | n | n |
| ೩೦೭ | ಎನ್ನ ಭಕ್ತನೆಂದೆಂಬರು ನಿನ್ನ ಹೊಱಿ | n | y | y | n |
| ೮೩ | ಎನ್ನ ಮನದಲ್ಲಿ ಮತ್ತೊಂದನಱಿಯೆ | y | y | n | n |
| ೩೮೭ | ಎನ್ನಲ್ಲಿ ಭಕ್ತಿ ಸಾಸಿವೆಯ | y | n | n | y |
| ೩೦೮ | ಎನ್ನಲ್ಲಿ ಭಕ್ತಿ ಎಳ್ಳನಿತಿಲ್ಲ ಯುಕ್ತಿ | y | y | y | n |
| ೩೮೯ | ಎನ್ನವರೆನಗೊಲಿದು ಹೊನ್ನ ಶೂಲ | y | n | n | n |
| ೩೮೮ | ಎನ್ನವರೊಲಿದು ಹೊನ್ನ ಶೂಲ | y | n | n | n |
| ೬೦ | ಎನ್ನ ವಾಮಕ್ಷೇಮ ನಿಮ್ಮ | n | y | n | y |
| ೪೮೩ | ಎನ್ನಾಪತ್ತು ಸುಖದುಃಖ | n | n | n | n |
| ೩೯೧ | ಎನ್ನಾಪತ್ತು ಸುಖದುಃಖವನಿನ್ನಾರಿಗೆ | y | n | n | n |
| ೩೫೩ | ಎಮ್ಮ ತಾಯಿ ನಿಂಬವ್ವೆ | y | n | n | y |
| ೧೦೫ | ಎರದಲೆಯಂತೆ ಒಳಗೊಂದು | y | n | n | n |
| ೧೯೯ | ಎಱಿದಡೆ ನೆನೆಯದು ಮಱಿದಡೆ | n | n | y | n |
| ೧೨೪ | ಎಲವದ ಮರ ಪೂತು ಫಲವಾದ | y | n | n | n |
| ೩೯೫ | ಎಲ್ಲರಿಗಿಂದಲೂ ಶಿವನೆ | n | n | y | n |
| ೪೪೬ | ಎಲ್ಲರು ವೀರರು ಎಲ್ಲರು | n | n | n | n |
| ೪೪೭ | ಎಲ್ಲಿ ನೋಡಿದಡಲ್ಲಿ ಮನ | n | n | n | n |
| ೧೬೮ | ಎಲೆ ಎಲೆ ಮಾನವ ಅಳಿಯಾಸೆ | n | n | n | n |
| ೨೮೫ | ಎಳ್ಳಿಲ್ಲದ ಗಾಣವ ಎತ್ತಿನಂತಾ | y | n | n | y |

| | | | | | |
|---|---|---|---|---|---|
| | ಐ | | | | |
| ೧೨೮ | ಐತ ತಲೆಬಾಗಿದಡೇನು | y | y | n | n |
| ೨೯೮ | ಏನನೋದಿ ಏನ ಕೇಳಿ ಏನ | n | n | y | n |
| ೫೨೬ | ಏನಮಾಡುವೆ ಎನ್ನ ಪುಣ್ಯದ | y | y | n | n |
| ೨೭೪ | ಏನಿದ್ದಡೇನಿದ್ದಡೊಲ್ಲದು | n | n | n | n |
| ೨೪೩ | ಏನಿ ಬಂದಿರಿ ಹದುಳವಿದ್ದಿರೆ | n | n | y | n |
| | ಒ | | | | |
| ೪೪೯ | ಒಂದಕ್ಕೊಂಬತ್ತ ನುಡಿದು | n | n | n | n |
| ೩೬ | ಒಂದು ಮೊಲಕ್ಕೆ ನಾಯ | n | n | n | y |
| ೪೬೫ | ಒಂದುವನಜಿಯದ ಸಂದೇಹಿ | y | n | n | n |
| ೪೬೨ | ಒಕ್ಕುದ ಮಿಕ್ಕುದನುಂಡು | n | n | n | n |
| ೪೫೮ | ಒಡೆದೋಡು ಎನ್ನ ಮನೆಯ | y | n | n | n |
| ೨೭೬ | ಒಡೆಯರ ಕಂಡಡೆ ಕಳ್ಳನಾಗದಿರು | n | n | y | n |
| ೪೫೧ | ಒಡೆಯರಾಡುವ ಮಾತು ಕಡೆಪರಿ | n | n | n | n |
| ೩೦೫ | ಒಡೆಯರಿಗೆ ಒಡವೆಯನೊಪ್ಪಿಸಲಾರದೆ | n | y | y | n |
| ೪೫೦ | ಒಡೆಯರು ಬಂದಡೆ ಗುಡಿ ತೋರಣ | n | n | n | n |
| ೧೨೯ | ಒಲವಿಲ್ಲದ ಪೂಜೆ ಸ್ನೇಹವಿಲ್ಲದ | n | n | y | n |
| ೩೧೬ | ಒಲಿದ ಗಂಡನೊಮ್ಮೆ ಒಲ್ಲದಿಪ್ಪ | n | n | y | y |
| ೧೧೭ | ಒಲೆಯ ಬೂದಿಯ ಬಿಲಿಯಲು | y | y | n | n |
| ೨೬ | ಒಲೆ ಹೊತ್ತಿ ಉರಿದಡೆ ನಿಲಬಹುದಲ್ಲದೆ | y | n | n | n |
| ೯೯ | ಒಳಗೆ ಕುಟಿಲ ಹೊರಗೆ ವಿನಯನಾಗಿ | y | n | n | n |
| ೨೮೨ | ಒಳ್ಳೆಯ ಮೈಲಾರನೊಳಗೆಲ್ಲ | n | n | n | n |
| | ಓ | | | | |
| ೮೪ | 'ಓಂ ನಮಃ ಶಿವಾಯ'ವೆಂಬ | n | y | n | n |
| ೨೩೨ | ಓಡಲಾರದ ಮೃಗವು ಶ್ವಾನಂಗೆ | n | n | n | n |
| ೪೪೩ | ಓಡುವಾತ ಲೆಂಕನಲ್ಲವಯ್ಯಾ | y | n | n | n |
| ೧೦೧ | ಓಡೆತ್ತ ಬಲ್ಲುದು ಅವಲಕ್ಕಿಯ | y | y | n | y |
| ೨೮೯ | ಓತಿ ಬೆಲಿವರಿದಂತೆನ್ನ ಮನ | y | y | n | y |
| ೧೪೬ | ಓದಿದಡೇನು ಕೇಳಿದಡೇನು ಶಿವ | n | n | y | n |
| | ಕ | | | | |
| ೫೦೨ | ಕಂಡ ಕನಸು ನಿಧಾನವ ಕಂಡೆ | n | n | y | n |
| ೨೪೬ | ಕಂಡ ಭಕ್ತರಿಗೆ ಕೈಮುಗಿವಾತನೇ | n | n | y | n |
| ೩೭೨ | ಕಂಡಡೆ ಮನೋಹರವಯ್ಯ | y | y | n | n |

| | | | | | |
|---|---|---|---|---|---|
| ೪೩೩ | ಕಂದಿದೆನಯ್ಯಾ ಎನ್ನ ನೋಡುವ | n | n | n | n |
| ೧೪೩ | ಕಟ್ಟಿದಿರಿನಲ್ಲಿ ಶಿವಭಕ್ತನ ಕಂಡು | n | n | y | n |
| ೫೨೧ | ಕಣ್ಣಕೋಪಕ್ಕೆ ಮುಂದಜೆಯದೆ | y | n | n | y |
| ೪೭೬ | ಕರ್ತರು ನಿಮ್ಮ ಗಣಂಗಳು ಎನ್ನ | n | n | n | n |
| ೧೯೦ | ಕನ್ನಡಿಯ ನೋಡುವ ಅಣ್ಣಗಳಿರಾ | n | n | y | n |
| ೧೧ | ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ | y | y | n | y |
| ೯೭ | ಕಬ್ಬುನದ ಕೋಡಗವ ಪರುಷ | y | y | n | y |
| ೨೫೩ | ಕರಗಿಸಿ ಎನ್ನ ಮನದ ಕಾಳಿಕೆಯ | y | y | y | y |
| ೭೮ | ಕರಿ ಅಂಜುವುದು ಅಂಕುಶಕ್ಕಯ್ಯ | n | n | n | n |
| ೬ | ಕರಿಘನ ಅಂಕುಶ ಕಿಜಿದೆನ್ನ | y | n | n | n |
| ೧೯೭ | ಕಲ್ಲನಾಗರ ಕಂಡಡೆ ಹಾಲನೆಜಿ | y | n | y | n |
| ೨೧೮ | ಕವಳುಗೋಲು ಹಿಡಿದು ಶ್ರವವ | y | n | n | n |
| ೨೩೭ | ಕಳಬೇಡ ಕೊಲಬೇಡ ಹುಸಿಯ | n | n | n | n |
| ೩೧೫ | ಕಾಂಚನವೆಂಬ ನಾಯ ನಚ್ಚಿ | n | n | n | n |
| ೪೩೮ | ಕಾಗೆ ಒಂದಗುಳ ಕಂಡಡೆ ಕರೆ | n | n | n | n |
| ೩೬೩ | ಕಾಗೆ ವಿಷ್ಟಿಸುವ ಹೊನ್ನ ಕಳಸ | n | n | n | n |
| ೨೬೮ | ಕಾಣದುದನೆಲ್ಲವ ಕಾಣಲಾಜಿ | n | y | n | n |
| ೨೯೯ | ಕಾಣಬಹುದೆ ಪರುಷದ ಗಿರಿ ಅಂಧ | y | n | n | y |
| ೨೯೭ | ಕಾಣಿಯ ಲೋಭ ಕೋತಿಯ | n | n | y | n |
| ೩೧೭ | ಕಾಣುತ್ತ ಕಾಣುತ್ತ ಕಡೆಗಣಿಸಿ | n | n | y | y |
| ೨೬೩ | ಕಾಮಧೇನು ನಿಮ್ಮ ಸಾರಿರಲು | n | n | n | n |
| ೩೬೦ | ಕಾಮವ ತೊಜಿದಾತ ಹೇಮವ | n | y | n | n |
| ೪೮೯ | ಕಾಮಸಂಗ ನಿಸ್ಸಂಗವಾಗಿ ಇನ್ನಾವ | n | n | n | n |
| ೫೧೫ | ಕಾಮಸಂಗವಳಿದು ಅನುಭಾವ ಸಂಗ | n | n | n | n |
| ೧೨೧ | ಕಾಮವೇಕೊ ಲಿಂಗಪ್ರೇಮಿಯೆನಿಸುವಂಗೆ | n | n | y | n |
| ೪೮ | ಕಾಯವಿಕಾರ ಕಾಡಿಹುದಯ್ಯಾ | n | n | n | n |
| ೨೨೯ | ಕಾಲಾಗ್ನಿರುದ್ರನ ಮೇಳಾಪವ | y | n | n | n |
| ೩೪೧ | ಕಾಲಿಲೊದೆದು ಬಡಿದು ಜಡಿವ | n | n | y | y |
| ೫೧೯ | ಕಾಳಿದಾಸಂಗೆ ಕಣ್ಣನಿತ್ತೆ ಓಹಿಲಯ್ಯನ | y | n | n | n |
| ೨ | ಕಾಳಿಯ ಕಂಕಾಳದಿಂದ ಮುನ್ನ | y | y | n | y |
| ೩೬೧ | ಕೀಳಾಗಲಲ್ಲದೆ ಮೇಲಾಗಲೊಲ್ಲೆನು | y | n | n | y |
| ೯೫ | ಕುಂಬಳಕಾಯಿಗೆ ಕಬ್ಬುನದ | y | y | n | y |

| | | | | | |
|---|---|---|---|---|---|
| ೨೬೨ | ಕುದುರವನೇಸುಕಾಲ ತೊಳೆದಡೆ | n | y | y | n |
| ೪೧೫ | ಕುದುರೆ ಸತ್ತಿಗೆಯವರ ಕಂಡಡೆ | n | n | n | n |
| ೫೦೧ | ಕುರುಳು ಬೆರಳು ಮುಡಹು | y | y | n | y |
| ೨೮೬ | ಕುಲಮದಕ್ಕೆ ಹೋರಿ ಜಂಗಮ | y | n | n | n |
| ೪೫೭ | ಕೂಪರಿಗೆ ಹೇಳುವೆನು ಕುಳ ಸ್ಥಳ | y | y | n | n |
| ೧೦೪ | ಕೂಸುಳ್ಳ ಸೂಳೆ ಧನದಾಸೆಗೆ | y | y | n | y |
| ೩೯೬ | ಕೃತಯುಗದಲ್ಲಿ ಕೇತಾರವೆಂಬ | y | n | y | n |
| ೪೦೬ | ಕೆಂಡದಲ್ಲಿಟ್ಟಡೆ ಮೈ ಬೆಂದುದೆಂ | n | n | n | n |
| ೨೩೮ | ಕೆಡು ನಡೆಯದೆ ಕೆಡು ನುಡಿಯದೆ | n | n | y | n |
| ೨೮೫ | ಕೆಲಕ್ಕೆ ಶುದ್ಧನಾದೆನಲ್ಲದೆ ಎನ್ನ | n | n | y | n |
| ೫೨ | ಕೆಸಱಲ್ಲಿ ಬಿದ್ದ ಪಶುವಿನಂತೆ ಆನು | n | y | n | y |
| ೩೨ | ಕೊಂಬಿನ ಮೇಲಣ ಮರ್ಕಟ | y | y | n | y |
| ೩೫೬ | ಕೈಯಬೋರಿಗೆ ಮಂಡೆಯ ಮೇಲೆ | y | y | n | y |
| ೧೬ | ಕೊಡೆವಿಡೆಯೆ ಕುದುರೆಯ ಧೃಥ | y | y | n | y |
| ೨೭೭ | ಕೋಟಾನುಕೋಟಿ ಜಪವ ಮಾಡಿ | n | n | y | n |
| | ಗ | | | | |
| ೧೧೨ | ಗಂಡನ ಮೇಲೆ ಸ್ನೇಹವಿಲ್ಲದ ಸತಿ | n | y | n | n |
| ೧೦೭ | ಗಂಡ ಶಿವಲಿಂಗದೇವರ ಭಕ್ತ | n | y | n | n |
| ೧೧೫ | ಗಜೆತೋಜೆ ಗಂಡರೆಂಬವರ ಕಾಣೆ | y | y | n | y |
| ೧೫೪ | ಗಿರಿಗಳ ಮೇಲೆ ಹಲವು ತರುಮರಾದಿ | y | n | n | n |
| ೩೭೬ | ಗಿಳಿಯ ಹಂಜರವಿಕ್ಕಿ ಸೊಡರಿಂಗೆಣ್ಣೆಯ | y | y | n | y |
| ೧೨೬ | ಗಿಳಿವೋದಿ ಫಲವೇನು? ಬೆಕ್ಕು | y | n | n | n |
| ೧೫೬ | ಗೀತವ ಬಲ್ಲಾತ ಜಾಣನಲ್ಲ | y | y | y | n |
| ೧೯೧ | ಗೀತವ ಹಾಡಿದಡೇನು ಶಾಸ್ತ್ರಪುರಾಣ | n | n | y | n |
| ೪೬೩ | ಗುರುಲಿಂಗಜಂಗಮದಿಂದ ಪಾದೋದಕ | y | n | n | n |
| ೭೨ | ಗುರುವಚನದಿಂದಲ್ಲದೆ ಲಿಂಗವೆಂದೆನಿಸದು | y | y | y | y |
| | ಚ | | | | |
| ೪೪೪ | ಚಂದ್ರನ ಶೈತ್ಯದಲ್ಲಿ ಬೆಳೆವ ಕಾಯಕ್ಕೆ | y | n | n | n |
| ೯ | ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ | y | y | y | y |
| ೨೫ | ಚಂದ್ರೋದಯಕ್ಕಂಬುಧಿ ಹೆಚ್ಚುವ | n | n | n | n |
| ೩೬೬ | ಚಕೋರಂಗೆ ಚಂದ್ರಮನ ಬರವಿನ | y | n | n | n |
| ೩೩೯ | ಚೆನ್ನಚಾರಮರಾಯರ ಬಂಟ ನಾನಯ್ಯ | y | y | y | y |
| ೩೪೭ | ಚೆನ್ನಯನ ಮನೆಯ ದಾಸನ ಮಗನು | y | y | n | y |

| | | | | | |
|---|---|---|---|---|---|
| | ಜ, ಡ | | | | |
| ೪೩೦ | ಜಂಗಮದ ಮನ ಭಾವದಲ್ಲಿ | n | n | n | n |
| ೩೯೮ | ಜಂಗಮದ ಸನ್ನಿಧಿಯಲಾನು | n | n | n | n |
| ೫೨೪ | ಜಂಗಮವ ಕೂಡಿಕೊಂಡು ಲಿಂಗಾರ್ಚ | n | n | n | n |
| ೪೨೬ | ಜಂಗಮ ನಿಂದೆಯ ಮಾಡಿ ಲಿಂಗವ | n | n | n | n |
| ೩೯೯ | ಜಂಗಮ ವಿರಹಿತ ಲಿಂಗಾರ್ಚನೆ | n | y | y | n |
| ೪೨೮ | ಜಂಗಮವಿಲ್ಲದ ಮಾಟ ಕಂಗಳಿಲ್ಲದ | y | n | y | n |
| ೫೦೫ | ಜಗವೆಲ್ಲಜೆಯಲೆನಗೊಬ್ಬ ಗಂಡನುಂಟು | y | n | n | y |
| ೩೭೧ | ಜಜ್ಜನೆ ಜರಿದೆನು ಜಜ್ಜನೆ | y | n | n | y |
| ೨೯೩ | ಜನ್ಮ ಹೊಲ್ಲೆಂಬೆನೆ ಜನ್ಮವ | y | n | y | n |
| ೪೭೫ | ಜನ್ಮಕ್ಕೆ ಹೋಗಲೀಯದೆ ದಾಸೋಹ | n | n | n | n |
| ೧೫ | ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ | n | n | n | n |
| ೭೯ | ಜಪತಪ ನಿತ್ಯನೇಮವೆನಗೆ ಉಪದೇಶ | n | y | n | n |
| ೩೬೯ | ಜಲವ ತಪ್ಪಿದ ಮತ್ಸ್ಯ ಬದುಕುವದೆ | y | n | n | n |
| ೩೩೮ | ಡಂಬ ಡಳಹು ಎನ್ನದಯ್ಯಾ | n | n | y | n |
| | ತ | | | | |
| ೪೮೨ | ತಂದೆ ನೀನು ತಾಯಿ ನೀನು | y | n | n | n |
| ೩೨೮ | ತತ್ವವನಜೆದಿಹೆನೆಂದು ಮೃತ್ಯುವ | n | y | y | n |
| ೨೫೦ | ತನಗೆ ಮುನಿವವರಿಗೆ ತಾ ಮುನಿಯ | n | n | n | n |
| ೩೮ | ತನ್ನ ವಿಚಾರಿಸಲೊಲ್ಲದು ಇದಿರ | n | n | n | n |
| ೧೮೬ | ತನ್ನಾಶ್ರಯದ ರತಿಸುಖವನ್ನು | n | n | n | n |
| ೩೯ | ತನ್ನಿಚ್ಛೆಯ ನುಡಿದಡೆ ಮಚ್ಚುವದೀ | n | n | n | n |
| ೩೧೦ | ತನು ನಿಮ್ಮದೆಂಬೆ ಮನ ನಿಮ್ಮದೆಂಬೆ | y | n | y | n |
| ೨೦೫ | ತನುಮನಧನವ ಹಿಂದಿಕ್ಕಿಕೊಂಡು | n | y | y | n |
| ೨೦೬ | ತನುಮನಧನವೆಂಬ ಮೂಱು ಕತ್ತಿ | n | n | y | y |
| ೨೦೯ | ತನುವ ಕೊಟ್ಟು ಗುರುವನೊಲಿಸ | n | n | y | n |
| ೪೦೮ | ತನುವ ನೋಯಿಸಿ ಮನವ | n | n | n | n |
| ೯೮ | ತನುವಿನಲ್ಲೊಂದಿಟ್ಟು ಮನದ ತಿರ | y | n | n | n |
| ೫೧೩ | ತನು ಸಾರಾಯರ ಮನ ಸಾರಾಯರ | y | n | n | n |
| ೨೭೩ | ತಾಮಸ ಮುಸುಕಿ ಕಂಗಳ | n | n | y | y |
| ೯೩ | ತಾಳಮರದ ಕೆಳಗೆ ಒಂದು | y | y | n | n |
| ೪೯೫ | ತಾಳಮಾನಸರಿಸವನಜೆಯೆ | y | n | n | y |
| ೩೫ | ತುಪ್ಪದ ಸವಿಗೆ ಅಲಗ ನೆಕ್ಕುವ | y | y | n | n |

| | | | | | |
|---|---|---|---|---|---|
| ೪೭೭ | ತೊತ್ತಿಂಗೆ ಬಲ್ಲಹನೊಲಿದಡೆ | y | n | n | n |
| ೪೬೮ | ತೊತ್ತಿಂಗೇಕೆ ಲಕ್ಷಣ ಬಂಟಂಗೇಕೆ | n | n | n | n |
| ೪೬೯ | ತೊತ್ತಿಂಗೆ ಲಕ್ಷಣವೇಕಯ್ಯ | n | n | n | n |
| ೩೨೩ | ತ್ರಿವಿಧ ತ್ರಿವಿಧದಲ್ಲಿ ತಪ್ಪಿದ | n | n | y | n |
| | **ದ, ಧ** | | | | |
| ೩೭ | ದಂದುಗ ಬಿಡದು ಮನದ ಸಂದೇಹ | n | n | n | n |
| ೨೪೯ | ದಯವಿಲ್ಲದ ಧರ್ಮವದೇನಯ್ಯ | n | n | n | n |
| ೪೪೫ | ದಾಸನ ವಸ್ತ್ರವ ಬೇಡದ ಮುನ್ನ | n | n | n | n |
| ೩೨೨ | ದಾಸಿದೇವ ತನ್ನ ವಸ್ತ್ರವನಿತ್ತು | n | n | y | n |
| ೪೭೪ | ದಾಸಿಯ ವರ್ಗದಲ್ಲಿಪ್ಪೆನು | y | n | n | n |
| ೧೮ | ದಿಟಪುಟ ಭಕುತಿ ಸಂಪುಟ | y | y | y | y |
| ೨೬೪ | ದುರ್ವ್ಯಸನಿ ದುರಾಚಾರಿ | n | n | n | n |
| ೪೧೬ | ದೂರದಿಂದ ಬಂದ ಜಂಗಮವ | n | n | n | n |
| ೧೩೯ | ದೂಷಕನವನೊಬ್ಬ ದೇಶವ ಕೊಟ್ಟಡೆ | y | n | n | n |
| ೪೩೬ | ದೇವನಿಂಥವನೆಂದು ತೋರಿ ಕೊಡುವೆ | n | n | n | n |
| ೧೫೧ | ದೇವನೊಳ್ಳಿದನೆಂದು ಮುಯ್ಯಾನಲು | n | n | y | n |
| ೨೪೧ | ದೇವಲೋಕ ಮರ್ತ್ಯಲೋಕವೆಂಬುದು | n | n | n | n |
| ೧೪೨ | ದೇವಲೋಕ ಮರ್ತ್ಯಲೋಕವೆಂಬುದು | n | n | y | n |
| ೪೫೪ | ದೇವಸಹಿತ ಭಕ್ತನ ಮನೆಗೆ ಬಂದಡೆ | n | n | n | n |
| ೧೯೪ | ದ್ವೈತಾದ್ವೈತವನೋದಿ ಏನು ಮಾಡುವಿ | n | n | y | n |
| ೧೧೮ | ಧರಣಿಯ ಮೇಲೊಂದು ಹಿರಿದಪ್ಪ | y | y | n | y |
| ೨೬೫ | ಧೃತಿಗೆಟ್ಟು ಅನ್ಯರ ಬೇಡದಂತೆ | n | n | n | n |
| | **ನ** | | | | |
| ೧೧೯ | ನಂಬರು ನಚ್ಚರು ಬಚಿದೆ ಕರೆವರು | y | y | y | n |
| ೨೧೭ | ನಚ್ಚಿದೆನೆಂದಡೆ ಮಚ್ಚಿದೆನೆಂದಡೆ | n | n | y | n |
| ೨೫೬ | ನಡೆಯ ಕಂಡಾ ನಂಬಿ ನುಡಿಯ | n | n | n | n |
| ೪೧೦ | ನಡೆಯಲಜಿಯದೆ ನುಡಿಯಲಜಿಯದೆ | n | n | n | n |
| ೪೧ | ನಡೆವರಯ್ಯಾ ಒಡೆಯರು | n | n | y | y |
| ೮೯ | ನಮಃ ಶಿವಾಯ ನಮಃ ಶಿವಾಯ | n | y | n | n |
| ೮೬ | ನಮ್ಮವರು ಬೆಸಗೊಂಡಡೆ ಶುಭ | y | y | n | y |
| ೪೩೧ | ನಯನದಾಹಾರವ ಜಂಗಮದ | n | n | n | n |
| ೬೫ | ನರಕೂರಂಬಿನಲೆಚ್ಚವಂಗೊಲಿದ | y | n | n | n |

| | | | | | |
|---|---|---|---|---|---|
| ೫೮ | ನರವಿಂಧ್ಯದೊಳಗೆನ್ನ ಹುಲುಗಿಳಿಯ | y | n | n | y |
| ೧೯೮ | ನಾಗಂಗೆ ಹೊಸತಹನಿಕ್ಕಿಹೆವೆಂಬರು | n | n | n | n |
| ೧೮೪ | ನಾದಪ್ರಿಯ ಶಿವನೆಂಬರು | n | n | y | n |
| ೩೯೨ | ನಾನಾ ಸ್ಥಾನಂಗಳಲ್ಲಿ ಬಂದು | y | y | y | y |
| ೪೮೧ | ನಾ ನಿಮ್ಮ ನೆನೆವೆನು ನೀವೆನ್ನ | n | n | n | n |
| ೩೧೩ | ನಾನು ನಿಮ್ಮ ಭಕ್ತಿಯಲ್ಲಿ | n | y | y | n |
| ೪೭೨ | ನಾನು ಹೊತ್ತ ಹುಳ್ಳಿಯ ಹೊಱೆಯೆ | y | y | n | y |
| ೧೪ | ನಾನೊಂದ ನೆನೆದಡೆ ತಾನೊಂದ | n | n | n | n |
| ೪೫ | ನಾನೊಬ್ಬನು ಸುಡುವರ್ಯೆವರು | n | y | n | n |
| ೪೯೨ | ನಿಮ್ಮ ನೋಟವನಂತ ಸುಖ | n | n | n | n |
| ೧೭೧ | ನಿಮಿಷಾರ್ಧ ನಿಮಿಷಂ ಭೊ | n | n | n | n |
| ೪೩೫ | ನೀನಿಕ್ಕಿದ ಬೀಯದಲ್ಲಿ ವಂಚನೆ | n | n | n | n |
| ೬೬ | ನೀನೊಲಿದಡೆ ಕೊರಡು | n | n | n | n |
| ೫೦೭ | ನೀನೊಲಿಯಿತ್ತೇ ಪುಣ್ಯ | n | n | n | n |
| ೧೬೫ | ನೀರ ಬೊಬ್ಬುಳಿಗೆ ಕಬ್ಬುಣದ | n | y | n | n |
| ೭೪ | ನೀರಿಂಗೆ ನೈದಿಲೆಯ ಶೃಂಗಾರ | y | n | n | n |
| ೫೭ | ನೀ ಹುಟ್ಟಿಸಿದಲ್ಲಿ ಹುಟ್ಟಿದೆ | n | n | n | n |
| ೧೬೪ | ನೆರೆ ಕೆನ್ನೆಗೆ ತೆರೆ ಗಲ್ಲಕೆ ಶರೀರ | n | n | n | n |
| ೧೫೨ | ನೆಱೆ ನಂಬೋ ನೆಱೆ ನಂಬೋ | n | y | n | n |
| ೭೧ | ನೋಡಿ ನೋಡಿ ಮಾಡುವ ನೇಮ | y | y | n | n |
| ೪೯೦ | ನೋಡಿ ನೋಡಿ ಲಿಂಗಧ್ಯಾನವೆನ್ನ | n | n | n | n |
| ೩೦೯ | ನೋಡುವರುಳ್ಳಡೆ ಮಾಡುವೆ | n | y | y | n |
| | ಪ | | | | |
| ೧೪೧ | ಪಟ್ಟವ ಕಟ್ಟಿದ ಬಳಿಕ ಲಕ್ಷಣ | n | y | y | n |
| ೫೨೦ | ಪರಚಿಂತೆ ನಮಗೇಕಯ್ಯ ನಮ್ಮ | y | n | n | y |
| ೧೫೫ | ಪರುಷದ ಹೊರೆಯಲ್ಲಿ ಕಬ್ಬುನ | y | n | y | n |
| ೧೪೦ | ಪರುಷ ಮುಟ್ಟಿದ ಬಳಿಕ ಲೋಹ | n | y | y | n |
| ೪೭೧ | ಪಾತಕ ಮಹಾಪಾತಕವ | n | n | n | n |
| ೮೭ | ಪಾತಕ ಶತಕೋಟಿಯ ನೊರೆಸಲಾ | n | y | n | n |
| ೪೭೦ | ಪಾದೋದಕವ ಕೊಂಬೆ ಪ್ರಸಾದವ | n | n | n | n |
| ೨೨೫ | ಪಾಪಿಯ ಧನವು ಪ್ರಾಯಶ್ಚಿತ್ತ | n | n | y | n |
| ೨೪೨ | ಪುಣ್ಯ ಪಾಪವೆಂಬುವು ತಮ್ಮ | n | n | y | n |

| | | | | | |
|---|---|---|---|---|---|
| | ಬ | | | | |
| ೪೧೧ | ಬಂಜೆ ಬೇನೆಯನಜೆಯದಂತೆ | n | n | n | n |
| ೧೮೭ | ಬಂಡಿ ತುಂಬಿ ಪತ್ರೆಯ ತಂದು | n | n | n | n |
| ೪೯ | ಬಂದ ಯೋನಿಯನಜಿದು | n | n | n | n |
| ೨೩೩ | ಬಂದುದ ಕೈಕೊಳಬಲ್ಲಡೆ ನೇಮ | n | n | n | n |
| ೧೨೫ | ಬಚ್ಚಲ ನೀರು ತಿಳಿಯಾದಡೇನು | y | n | n | n |
| ೫೩ | ಬಡಪಶು ಪಂಕದಲ್ಲಿ ಬಿದ್ದಡೆ | y | y | y | y |
| ೪೫೨ | ಬಡ ಹಾರುವನೇಸು ಭಕ್ತನಾದಡೆ | y | n | n | n |
| ೨೨೨ | ಬರಬರ ಭಕ್ತಿಯರೆಯಾಯಿತ್ತು | n | n | n | y |
| ೨೨೬ | ಬಲಿಯ ಭೂಮಿ ಕರ್ಣನ ಕವಚ | n | n | n | n |
| ೧೫೩ | ಬಲ್ಲಿದರೊಡನೆ ಬವರವಾದಡೆ | n | n | n | n |
| ೨೯೫ | ಬಸುಜ ಬಾಳುವೆಗೆ ನಿಮ್ಮಲ್ಲಿ | y | n | y | n |
| ೩೨೧ | ಬಾಣ ಮಯೂರನಂತೆ ಬಣ್ಣಿಸ | n | n | n | n |
| ೪೬೭ | ಬಿಡದೆ ಬಾಗಿಲ ಎಂಜಲ ಕಾಯ್ದಿಪ್ಪೆ | n | n | n | n |
| ೨೨೩ | ಬಿದಿರಲಂದಣಮಕ್ಕು ಬಿದಿರೆ ಸತ್ತಿಗೆ | y | n | n | y |
| ೮೫ | ಬಿಳಿಯ ಕಜಿಕೆ ಕಣಗಿಲೆಲೆಯ | y | y | n | y |
| ೨೮ | ಬೆದಕದಿರು ಬೆದಕದಿರು ಹುರುಳಿಲ್ಲ | n | n | n | n |
| ೨೭೫ | ಬೆಲ್ಲವ ತಿಂದ ಕೋಡಗದಂತೆ | y | n | y | n |
| ೫೦ | ಬೆಳೆಯದ ಭೂಮಿಯಲೊಂದು | y | y | y | n |
| ೪೧೨ | ಬೇಜೂರಿಂದ ಬಂದ ಜಂಗಮವೆ | n | n | n | n |
| ೩೬೨ | ಬ್ರಹ್ಮ ಪದವಿಯನೊಲ್ಲೆ ವಿಷ್ಣು | y | n | y | n |
| | ಭ | | | | |
| ೩೯೭ | ಭಕ್ತ ದೇಹಿಕ ದೇವನಪ್ಪ | n | n | n | n |
| ೧೪೮ | ಭಕ್ತನ ಮುಖದರ್ಪಣದಲ್ಲಿ | n | n | y | n |
| ೧೮೮ | ಭಕ್ತನಾಗಿ ಲಿಂಗಜಂಗಮವ | n | y | y | n |
| ೨೫೨ | ಭಕ್ತನು ಕಾಣದ ಠಾವಿನಲ್ಲಿ | n | n | n | n |
| ೫೧೧ | ಭಕ್ತನೆಂತೆಂಬೆನಯ್ಯಾ ಭವಿಸಂಗ | n | y | n | n |
| ೨೪೮ | ಭಕ್ತ ಭಕ್ತನ ಮನೆಗೆ ಬಂದಡೆ | n | n | n | n |
| ೧೦೬ | ಭಕ್ತರ ಕಂಡಡೆ ಬೋಳರಪ್ಪಿರಯ್ಯಾ | n | n | n | n |
| ೧೪೯ | ಭಕ್ತಿ ಎಂತಹುದಯ್ಯಾ ದಾಸಯ್ಯ | n | n | y | n |
| ೪೪೨ | ಭಕ್ತಿ ಸಂಭಾಷಣೆಯ ನುಡಿಯೆ | n | n | n | n |
| ೩೫೧ | ಭಕ್ತಿಯಿಲ್ಲದ ಬಡವ ನಾನಯ್ಯಾ | y | n | y | y |
| ೨೪೪ | ಭಕ್ತಿಯೆಂಬ ನಿಧಾನವ | n | y | y | n |

| | | | | | |
|---|---|---|---|---|---|
| ೫೨೭ | ಭಕ್ತಿಯೆಂಬ ಪೃಥ್ವಿಯ ಮೇಲೆ | y | y | n | n |
| ೨೧೫ | ಭಕ್ತಿಯೆಂಬುದ ಮಾಡಬಾರದು | n | n | y | n |
| ೫೧೬ | ಭಕ್ತಿರತಿಯ ವಿಕಳತೆಯ | n | n | n | n |
| ೩೨೬ | ಭಕ್ತಿ ವಿಶೇಷವಾಗಿ ಮಾಡುವಡೆ | n | y | n | y |
| ೮೨ | ಭವ ಬಂಧನ ದುರಿತಂಗಳ | y | n | n | n |
| ೭ | ಭವ ಬಂಧನ ಭವ ಪಾಶ | y | y | y | n |
| ೬೮ | ಭವ ಭವದಲ್ಲಿ ಎನ್ನ | n | n | n | n |
| ೪೭೩ | ಭವ ಭವದಲ್ಲಿ ನಿಮ್ಮ | n | y | n | n |
| ೪೮೫ | ಭವರೋಗ ವೈದ್ಯನೆಂದು | n | n | n | n |
| ೪೫೯ | ಭವಿ ವಿರಹಿತ ಭಕ್ತನಾದ ಬಳಿಕ | y | n | n | n |
| ೨೦೧ | ಭಾಂಡವ ತುಂಬಿದ ಬಳಿಕ | y | y | n | n |
| ೪೦೦ | ಭಿತ್ತಿಯಿಲ್ಲದೆ ಬರೆಯಬಹುದೆ | y | n | y | y |
| ೧೮೯ | ಭೂಮಿಯೊಳಗೆ ನಿಧಾನವಿದ್ದುದ | y | y | n | n |
| | ಮ | | | | |
| ೪೯೮ | ಮಂಡೆಯ ಬೋಳಿಸಿಕೊಂಡು | n | n | n | n |
| ೩೧ | ಮುಂಗೈಯ ಕಂಕಣಕ್ಕೆ | y | y | n | y |
| ೨೮೪ | ಮಜ್ಜನಕ್ಕೆಱೆವೆನಲ್ಲದೆ | n | n | y | n |
| ೭೦ | ಮಡಕೆಯ ಮಾಡುವಡೆ ಮಣ್ಣೆ | y | n | n | n |
| ೧೫೮ | ಮರ್ತ್ಯಲೋಕವೆಂಬುದು ಕರ್ತಾರನ | n | n | y | n |
| ೨೬೭ | ಮತಿ ಮಂದನಾಗಿ ಗತಿಯ ಕಾಣದೆ | n | n | n | n |
| ೨೬೬ | ಮತ್ತೊಂದ ಕಾಣದಂತೆ ಮತ್ತೊಂದ | n | n | y | n |
| ೨೫೮ | ಮನಕ್ಕೆ ನಾಚದ ವಚನ | n | n | n | n |
| ೫೦೪ | ಮನಕ್ಕೆ ಮನೋಹರವಲ್ಲದ | y | n | n | y |
| ೩೮೦ | ಮನ ಮನ ಬೆರಸಿದಲ್ಲಿ | n | n | n | y |
| ೨೭೮ | ಮನವೆ ನಿನ್ನ ಜನ್ಮದ ಪರಭವವ | n | n | y | n |
| ೧೬೩ | ಮನವೇ ಸರ್ಪ ತನುವೇ ಹೇಳಿಗೆ | n | y | n | n |
| ೩೭೫ | ಮನೆದೈವ ಕುಲದೈವವೆನಗೆ | y | n | y | y |
| ೩೨೭ | ಮನೆ ನೋಡ ಬಡವರ | n | n | n | n |
| ೧೦೦ | ಮನೊಯೊಳಗೆ ಮನೆಯೊಡೆಯನಿದ್ದಾನೋ | y | y | n | n |
| ೪೨೨ | ಮರಕ್ಕೆ ಬಾಯಿ ಬೇರೆಂದು | n | n | n | n |
| ೩೩೫ | ಮರದ ನೆರಳಲ್ಲಿರ್ದು ತನ್ನ ನೆಳಲ | n | n | n | n |
| ೩೩ | ಮರನೇಱಿದ ಮರ್ಕಟನಂತೆ | n | y | n | y |
| ೩೮೪ | ಮಸಿಯನೇಸು ಕಾಲ ಬೆಳಗಿದಡೆ | y | n | n | n |

| | | | | | |
|---|---|---|---|---|---|
| ೫೦೯ | ಮಾಟ ಕೂಟ ಫಲಪ್ರಾಪ್ತಿಯೆಂಬ | n | y | y | n |
| ೨೩೬ | ಮಾಡಿದೆನೆಂಬುದು ಮನದಲ್ಲಿ | n | n | y | n |
| ೨೦೨ | ಮಾಡಿ ನೀಡಿ ಲಿಂಗ ಜಂಗಮದ | n | n | n | n |
| ೨೩೫ | ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ | n | n | y | n |
| ೫೨೩ | ಮಾಡುವ ಭಕ್ತನ ಕಾಯ | y | n | n | n |
| ೨೧೩ | ಮಾತಿನ ಮಾತಿನಲ್ಲಪ್ಪುದೇ ಭಕ್ತಿ | n | n | y | n |
| ೩೨೦ | ಮಾತಿನಲ್ಲಿ ಶ್ರೋತ್ರ ಸುಖವ | n | n | y | n |
| ೩೩೪ | ಮಾವಿನ ಕಾಯೊಳಗೊಂದು ಎಕ್ಕೆಯ | n | y | n | n |
| ೨೪ | ಮುನ್ನ ಮಾಡಿದ ಪಾಪ | n | n | n | n |
| ೭೩ | ಮುನ್ನ ಮಾಡಿದ ಪಾಪವೆಂತು | y | y | n | n |
| ೪೪ | ಮುನಿದೆಯಾದಡೆ ಒಮ್ಮೆ | n | n | n | n |
| ೧೫೦ | ಮುನ್ನಿನವರು ಹೋದ ದಾರಿ ಭಯ | n | n | y | n |
| ೨೯೯ | ಮುನ್ನೂಱಱುವತ್ತು ದಿನ ಶ್ರವವ | n | n | y | n |
| ೨೯೬ | ಮೂಗ ಕಂಡ ಕನಸಿನಂತಾಯಿತೆನ್ನ | n | n | n | n |
| ೩೩೩ | ಮೂಗಿಲ್ಲದ ಮುಖಕ್ಕೆ ಶೃಂಗಾರವೆ | n | n | n | n |
| ೬೭ | ಮೇರು ಗುಣವನಱಸುವುದೆ ಕಾಗೆಯಲ್ಲಿ | y | n | n | n |
| ೩೩೨ | ಮೋಟನ ಮೌಳಿ ಮೂಕೊಱತಿಯ | n | n | n | n |
| | ಲ | | | | |
| ೫೨೨ | ಲಜ್ಜೆಗೆಟ್ಟೆನು ನಾಣುಗೆಟ್ಟೆನು | n | n | n | n |
| ೪೦೩ | ಲಾಂಛನವ ಕಂಡು ನಂಬುಗೆ | n | n | y | n |
| ೧೯೫ | ಲಾಂಛನ ಹೊಱಗೆ ಬಂದಿರಲು | n | n | y | y |
| ೩೯೪ | ಲಿಂಗದರುಶನ ಕರಮುಟ್ಟಿ | y | y | y | n |
| ೨೮೭ | ಲಿಂಗದಲ್ಲಿ ಕಠಿಣವುಂಟೆ | n | n | y | n |
| ೪೨೯ | ಲಿಂಗದಲ್ಲಿ ದಿಟವನಱಸುವಡೆ | n | n | n | n |
| ೮೮ | ಲಿಂಗದುಂಡಿಗೆಯ ಪಶುವಾನಯ್ಯ | y | y | n | y |
| ೨೬೦ | ಲಿಂಗವ ನಚ್ಚದೀ ಮನವು | n | n | y | n |
| ೪೨೫ | ಲಿಂಗವ ಪೂಜಿಸಿ ಜಂಗಮವ | n | n | n | n |
| ೧೯೨ | ಲಿಂಗವ ಪೂಜಿಸಿದ ಬಳಿಕ | n | n | n | n |
| ೩೭೪ | ಲಿಂಗವ ಪೂಜಿಸುತ್ತ ಜಂಗಮದ | n | n | y | n |
| ೪೫೫ | ಲಿಂಗಾಂಗಿಗಳಲ್ಲದವರ | n | n | n | n |
| ೨೩ | ಲೇಸ ಕಂಡು ಮನಬಯಸಿ | y | y | n | y |
| ೧೫೭ | ಲೇಸೆನಿಸಿಕೊಂಡು ಐದು ದಿನ | n | n | n | n |
| ೧೨೭ | ಲೋಕದ ಡೊಂಕ ನೀವೇಕೆ ತಿದ್ದುವಿರಿ | y | n | n | n |
| ೨೮೩ | ಲೋಕೋಪಚಾರಕ್ಕೆ ಮಜ್ಜನಕ್ಕೆ | n | n | y | n |
| ೨೮೮ | ಲೌಕಿಕರ ಕಂಡು ಆಡುವೆ | n | n | n | n |

| | | | | | |
|---|---|---|---|---|---|
| | **ವ** | | | | |
| ೪೧ | ವಚನದ ಹುಸಿಯನುಸುಳಿಂತು | n | n | n | n |
| ೪೯೩ | ವಚನದಲ್ಲಿ ನಿಮ್ಮ ನಾಮಾಮೃತ | n | n | n | n |
| ೪೯೬ | ವರಂ ಪ್ರಾಣ ಪರಿತ್ಯಾಗಶ್ಚೇದನಂ | n | n | n | n |
| ೮೧ | ವಶ್ಯವ ಬಲ್ಲೆವೆಂದೆಂಬಿರಯ್ಯಾ | y | n | n | n |
| ೪೯೧ | ವಾರವೆಂದಱಿಯೆ ದಿನವೆಂದರಿಯೆ | n | n | n | n |
| ೧೬೧ | ವ್ಯಾಧನೊಂದು ಮೊಲನ ತಂದಡೆ | n | y | y | y |
| ೪೩ | ವಿಕಳನಾದೆನು ಪಂಚೇಂದ್ರಿಯ | n | n | n | n |
| ೫೧ | ವಿಷಯವೆಂಬ ಹಸರನೆನ್ನ ಮುಂದೆ | n | y | y | n |
| ೨೧೨ | ವೇದದಂತುಟಲ್ಲ ಶಾಸ್ತ್ರದಂತುಟಲ್ಲ | n | y | n | n |
| ೨೫೪ | ವೇದಾದಿ ನಾಮ ನಿರ್ನಾಮಮಂ | n | n | n | n |
| ೪೩೪ | ವೇಷ ಅವಿಚಾರದಲ್ಲಿ ನಡೆಯಿತೆಂದು | n | y | n | n |
| | **ಶ** | | | | |
| ೧೭೦ | ಶಕುನವೆಂದೆಂಬೆ ಅವಶಕುನವೆಂದೆಂಬೆ | n | n | n | n |
| ೩೦೦ | ಶಬ್ದ ಸುಖಕ್ಕೆ ಮಚ್ಚಿ | n | n | y | n |
| ೨೯೧ | ಶಬ್ದ ಸಂಭಾಷಣೆಯ ನುಡಿಯ | n | n | y | n |
| ೨೧೧ | ಶಾಸ್ತ್ರ ಘನವೆಂಬೆನೆ | n | n | y | n |
| ೧೫೯ | ಶಿವಚಿಂತೆ ಶಿವಜ್ಞಾನವಿಲ್ಲದ | n | n | y | n |
| ೧೧೦ | ಶಿವ ಜನ್ಮದಲ್ಲಿ ಹುಟ್ಟಿ | n | n | n | n |
| ೧೨ | ಶೂಲದ ಮೇಲಣ ವಿಭೋಗ | y | y | y | y |
| ೭೬ | ಶ್ರೀರುದ್ರಾಕ್ಷಿಯ ಧರಿಸಿದಾತನ | n | n | n | n |
| ೪೫೬ | ಶ್ರೀವಿಭೂತಿಯ ಪೂಸದವರ | n | n | y | n |
| ೪೫೩ | ಶ್ರೀವಿಭೂತಿ ರುದ್ರಾಕ್ಷಿಯಿದ್ದವರ | n | n | n | n |
| | **ಸ** | | | | |
| ೪೦೫ | ಸಂಗ ಸಹಿತ ಶರಣರು ಬಂದಡೆ | y | n | n | n |
| ೫೧೪ | ಸಂಚಲವಿಲ್ಲದ ಭಕ್ತಿ ವಂಚನೆಯಿಲ್ಲದ | n | n | n | n |
| ೧೦೩ | ಸಂತವಿದ್ದ ಮನೆಗೆ ಕೊಂತವ ತಂದಂತೆ | y | y | n | y |
| ೨೪೫ | ಸಂಸಾರದಲ್ಲಿ ಹುಟ್ಟಿ ಮತ್ತೊಂದ | y | n | n | n |
| ೧೩ | ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆ | n | n | n | n |
| ೫೦೬ | ಸಂಸಾರವೆಂಬ ಶ್ವಾನನಟ್ಟಿ | n | n | n | y |
| ೨೦ | ಸಂಸಾರವೆಂಬ ಸರ್ಪ ಮುಟ್ಟಲು | n | n | n | n |
| ೧೬೭ | ಸಂಸಾರವೆಂಬುದೊಂದು ಗಾಳಿಯ | n | y | n | n |
| ೮ | ಸಂಸಾರಸಾಗರದ ತೆರೆ ಕೊಬ್ಬಿ | y | y | n | y |

| | | | | | |
|---|---|---|---|---|---|
| ೫೧೮ | ಸಕ್ಕರೆಯ ಕೊಡನ ತುಂಬಿ | y | n | n | y |
| ೯೬ | ಸಗಣಿಯ ಬೆನಕಂಗೆ ಸಂಪಗೆಯ | y | y | n | n |
| ೬೧ | ಸಟೆಯಲ್ಲದಂತೆ ಪ್ರಪಂಚುವಿಲ್ಲದಂತೆ | n | n | y | n |
| ೨೪೦ | ಸತ್ಯವುಳ್ಳ ಭಾಂಡವ ತುಂಬುವುದಯ್ಯಾ | y | y | y | n |
| ೨೯೦ | ಸತ್ಯ ಸಂಬಂಧ ಸ್ವಯವಾದ ಭೃತ್ಯಾಚಾರ | n | n | y | n |
| ೪೦೧ | ಸಮಯೋಚಿತದಲ್ಲಿ ಲಿಂಗಾರ್ಚನೆಯ | n | n | y | n |
| ೫೫ | ಸಮುದ್ರದೊಳಗಣ ಸಿಂಪಿನಂತೆ | y | y | n | y |
| ೨೦೭ | ಸರ್ವಭೂತಾತ್ಮನೆಂಬ ಮಾತಿನ | n | n | n | n |
| ೧೩೭ | ಸಾರಸಜ್ಜನರ ಸಂಗ ಲೇಸು | y | n | y | n |
| ೧೨೨ | ಸಾರಸಜ್ಜನರ ಸಂಗವ ಮಾಡುವುದು | y | n | n | n |
| ೩೭೯ | ಸಾಸಿವೆಯ ಮೇಲೆ ಸಾಗರವರಿದಂತಾ | y | n | n | y |
| ೪೭೯ | ಸುಚಿತ್ತದಿಂದ ನಿಮ್ಮ ನೆನೆಯ | n | n | n | n |
| ೪೦ | ಸುಡಲೀ ಮನವೆನ್ನನುಡುಹನ | n | n | n | n |
| ೯೪ | ಸುಪಥ ಮಂತ್ರದುಪದೇಶವ ಕಲಿತು | n | y | n | y |
| ೧೮೦ | ಸುಪ್ರಭಾತ ಸಮಯದಲ್ಲಿ | n | n | n | n |
| ೨೭೯ | ಸುರರ ಬೇಡಿದಡಿಲ್ಲ ನರರ ಬೇಡಿದಡಿಲ್ಲ | n | n | y | n |
| ೪೯೭ | ಸುರರು ಕಿನ್ನರರು ಕಿಂಪುರುಷರೆಂಬವರ | n | n | n | n |
| ೩೬೮ | ಸೂರ್ಯನುದಯ ತಾವರೆಗೆ ಜೀವಾಳ | y | n | y | n |
| ೩೪೮ | ಸೂಳೆಗೆ ಹುಟ್ಟಿದ ಕೂಸಿನಂತೆ | y | n | n | n |
| ೩೪೬ | ಸೆಟ್ಟಿಯೆಂಬೆನೆ ಸಿರಿಯಾಳನ | y | n | n | y |
| ೩೧೯ | ಸೋಲಬಲ್ಲರು ಅವರು ಗೆಲಲರಿಯ | n | n | n | y |
| ೩೮೩ | ಸ್ಥಾವರಜಂಗಮವೊಂದೆಯೆಂದು | n | n | n | n |
| ೪೨೦ | ಸ್ಥಾವರ ಭಕ್ತಂಗೆ ಸೀಮೆಯಲ್ಲದೆ | n | n | y | n |
| ೧೩೦ | ಸ್ನೇಹತಪ್ಪಿದ ಠಾವಿನಲ್ಲಿ | y | y | y | n |
| ೨೫೯ | ಸ್ವಾಮಿಭೃತ್ಯ ಸಂಬಂಧಕ್ಕೆ | n | n | y | n |
| | ಹ | | | | |
| ೧೬೬ | ಹಂಜರ ಬಲ್ಲಿತ್ತೆಂದು ಅಂಜದೆ ಓದುವ | n | y | n | y |
| ೩೧೮ | ಹಗೆಯಲ್ಲಿ ಬಿದ್ದವರ ಮೇಲೆ | n | y | n | y |
| ೨೩೧ | ಹಡೆದೊಡವೆ ವಸ್ತುವನು | n | n | y | n |
| ೨೨೭ | ಹತ್ತುಮತ್ತರ ಭೂಮಿ | n | n | n | n |
| ೧೩೨ | ಹಬ್ಬಕ್ಕೆ ತಂದ ಹರಕೆಯ ಕುರಿ | y | y | y | n |
| ೧೯೩ | ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು | n | n | y | n |
| ೪೪೦ | ಹರಗಣ ಪಙ್ತಿಯ ನಡುವೆ ಕುಳ್ಳಿರ್ದು | n | n | n | n |

| | | | | | |
|---|---|---|---|---|---|
| ೧೭೨ | ಹರನೀವಕಾಲಕ್ಕೆ ಸಿರಿಯು ಬೆನ್ನಲಿ | n | n | n | n |
| ३೪೯ | ಹರನು ಮೂಲಿಗನಾಗಿ | y | y | n | n |
| ೨೩೦ | ಹರಸಿ ಮಾಡುವುದು ಹರಕೆಯ ದಂಡ | n | n | y | n |
| ೫೨೫ | ಹರಿವ ನದಿಯ ತೆರನ | y | n | y | n |
| ೪೪೮ | ಹರಿವ ಹಾವಿಂಗಂಜೆ | n | n | n | n |
| ೨೧೬ | ಹಲವು ಕಾಲ ಧಾವತಿಗೊಂಡು | n | n | n | y |
| ೨೦೮ | ಹಲವು ಮಣಿಯ ಕಟ್ಟಿ ಕುಣಿಕುಣಿ | n | n | y | n |
| ೭೭ | ಹಸ್ತಕಡಗ ಕೈಗಧಿಕ | n | n | n | n |
| ೧೨೩ | ಹಸಿದು ಎಕ್ಕೆಯ ಕಾಯ | y | n | n | n |
| ೨೨೦ | ಹಸಿದು ಬಂದ ಗಂಡಂಗೆ | n | y | y | n |
| ೧೮೫ | ಹಸಿವಾದಡುಂಬುದನು | n | n | n | n |
| ೧೧೪ | ಹಾದರಕ್ಕೆ ಹೋದಡೆ ಕಳ್ಳರಮ್ಮ | y | y | n | y |
| ೪೬೧ | ಹಾರು ಹಾರವನಪ್ಪೆ | n | n | n | n |
| ೨೯೨ | ಹಾಲ ತೊಱೆಗೆ ಬೆಲ್ಲದ ಕೆಸಱು | y | n | y | n |
| ೨೩೪ | ಹಾಲ ನೇಮ ಹಾಲ ಕೆನೆಯ ನೇಮ | n | y | n | n |
| ೪೧೮ | ಹಾಲು ಕಂದಲು ತುಪ್ಪದ ಮಡಿಕೆ | y | n | n | n |
| ೧೦೮ | ಹಾವಡಿಗನು ಮೂಕೊಱತಿಯು | y | y | n | y |
| ೨೧೪ | ಹಾವಸೆಗಲ್ಲ ಮೆಟ್ಟಿ ಹರಿದು | y | y | y | y |
| ೧೪೭ | ಹಾವಿನ ಡೊಂಕು ಹುತ್ತಕ್ಕೆ ಸಸಿನ | y | n | y | n |
| ೧೩೩ | ಹಾವಿನ ಬಾಯ ಕಪ್ಪೆ ಹಸಿದು | y | n | y | y |
| ೧೩೫ | ಹಾವು ತಿಂದವರ ನುಡಿಸಬಹುದ | n | n | y | n |
| ೪೧೭ | ಹಿಡಿವೆಡೆಯನೆ ಕಾಸಿ ಹಿಡಿದ | y | n | y | n |
| ೩೫೨ | ಹಿರಿಯಯ್ಯ ಶ್ವಪಚಯ್ಯ | y | n | n | n |
| ೬೩ | ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ | n | n | y | n |
| ೧೨೦ | ಹುತ್ತವ ಬಡಿದಡೆ ಹಾವು ಸಾಯ | y | n | n | n |
| ೨೮೧ | ಹೃದಯದಿ ಕತ್ತರಿ ತುದಿನಾಲಗೆಯ | n | n | n | n |
| ೩೦೨ | ಹೇಡಿ ಬಿರಿದ ಕಟ್ಟಿದಂತೆ | n | y | y | n |
| ೧೭೫ | ಹೊತ್ತಾಱೆ ಎದ್ದು ಅಗ್ಘವಣಿ | n | y | n | n |
| ೧೬೦ | ಹೊತ್ತಾಱೆ ಎದ್ದು ಲಿಂಗದೇವನ | n | y | y | y |
| ೫೦೩ | ಹೊನ್ನ ಹಾವುಗೆಯ ಮೆಟ್ಟಿದವನ | y | n | n | n |
| ೪೩೭ | ಹೊನ್ನಿನೊಳಗೊಂದೊರೆಯ | n | n | n | n |
| ೧೭೩ | ಹೊಯ್ದಡೆ ಹೊಯ್ಗಳು ಕೈಯಮೇಲೆ | n | n | n | n |
| ೪೭೮ | ಹೊಱಗೆ ಸೂಸಿ ಏವೆನಯ್ಯಾ | n | n | n | n |

| | | | | | |
|---|---|---|---|---|---|
| ೩೦೬ | ಹೊಱಿಸಿಕೊಂಡು ಹೋದ ನಾಯಿ | y | n | y | n |
| ೩೬೭ | ಹೊಲಬುಗೆಟ್ಟು ಶಿಶು ತನ್ನ ತಾಯ | y | n | y | y |
| ೧೮೩ | ಹೊಲಬುಗೊಂಡಱಿಸಲು ಬೇಡ | n | n | n | n |
| ೧೩೮ | ಹೊಲೆಯ ಹೊಲಬಿಗನಾದಡೆ | n | y | n | n |
| ೪೨೪ | ಹೊಸ್ತಲವ ಪೂಜಿಸಿ ಹೊಱವಂಟು | n | n | n | n |

❖❖

# ಅನುಬಂಧ : ೩

❖

## ಗಮನಾರ್ಹ ಪದಕೋಶ

**ದೇವಾಲಯ-ದೇವನಾಮ**

ಅರುಣಾಚಲ ೧೦೪i, ೧೧೪i, ೪೨೭i
ಅರುಣಾಚಲೇಶ್ವರ ೩೨೨i, ೪೪೫i
ಏಕಾಂಬ್ರೇಶ್ವರ ೧೫೧ i, ೧೫೫ i
ಕಪ್ಪಡಿಸಂಗಮೇಶ್ವರ ೫ i
ಕಾಳಿ (ಕಂಕಾಳ) ೨
ಗಂಗಾಧರೇಶ್ವರ ೧೦೪ i, ೧೧೪ i, ೪೨೭ i
ಜಟ್ಟಿಂಗ ೧೦೬ i, ೧೧೦ i, ೫೦೧ i, ೫೦೬ i
ತಿಮ್ಮ ೧೦೬ i, ೧೧೦ i, ೫೦೧ i, ೫೦೬ i
ತುಂಗಭದ್ರೆ ೧೪೭ i, ೫೨೫ i
ಧೂರ್ಜಟಿ ೧೦೪ i, ೧೧೪ i, ೪೨೭ i
ಬಸವಣ್ಣ ೯೦ i, ೯೫ i
ಬೀರ ೧೦೬ i, ೧೧೦ i, ೫೦೧ i, ೫೦೬ i
ಬೊಮ್ಮ ೧೦೬ i, ೧೧೦ i, ೫೦೧ i, ೫೦೬ i
ಬೌದ್ಧೇಶ್ವರ ೧೦೬ i
ಮಲ್ಲಿಕಾರ್ಜುನ ೯೦ i
ಮಲಯಾಚಲಪರ್ವತ ೧೪೪ i
ಮಸಣಿ ೧೦೭
ಮಾರಿ ೧೦೭
ಮೈಲಾರ ೨೮೨
ವಿರೂಪಾಕ್ಷ ೧೦೪ i, ೧೧೪ i, ೪೨೭ i
ವೀರಣ್ಣ ೯೦ i, ೯೫ i

**ವ್ಯಕ್ತಿನಾಮ**


ಅಕ್ಕನಾಗಮ್ಮ ೪೬೪ i
ಅಕ್ಕ ನಾಗಾಂಬಿಕೆ ೫೧೭ i i
ಅಗಸ್ತ್ಯ ಋಷಿಯು ೨೫ i
ಅನಾದಿ ವೃಷಭೇಶ್ವರ ೫ i
ಅನಿಮಿಷಯ್ಯ ೧೭೯ i, ೪೯೮ i
ಅರುವತ್ತುಮೂರು ಪುರಾತರುಗಳು ೩೭೦ i, ೩೭೧ i,
ಎಂ೭೨ i, ೩೭೩ i, ೪೪೫ i, ೪೫೪ i,
೪೬೧ i, ೪೬೧ i (ಪಾಠಾಂತರದಲ್ಲಿ)
ಅಮಿಹಿಲಾಳು ೩೯೯, ೩೯೯ i
ಆರೂಢ ಮಲ್ಲಯ್ಯ ೧೩೮ i
ಇಮ್ಮಡಿ ಮೊನೆಧರರಾಯ ೨೧೭ i, ೨೫೩ i
ಇಮ್ಮಡಿ ಮೊನೆವಿಡಿರಾಯ ೨೯೧ i
ಈರಣ್ಣ ೨೧೮ i
ಏಕೋರಾಮಿತಂದೆ ೩೫೦ i i i, ೨೫೦ v
ಏಳನೂರೆಪ್ಪತ್ತಮರಗಣಂಗಳು ೫ i, ೩೭೦ i, ೩೭೧
i, ೩೭೨ i, ೩೭೮ i, ೩೯೯ i, ೪೧೧ i,
೪೧೪ i, ೪೩೭ i, ೪೪೭ i, ೪೬೧ i,
೪೬೧ i (ಪಾಠಾಂತರದಲ್ಲಿ)
ಓಹಿಲಯ್ಯ (ಓಹಿಲದೇವ) ೫೧೯, ೫೧೯ i
ಕಟ್ಟಿಗೆಹಳ್ಳಿ ಸ್ವಾಮಿಗಳು ಪು. ೩ i i
ಕರ್ಣ ೨೨೬, ೨೬೫ i

ಸ್ಥಳನಾಮ



ಗ್ರಂಥನಾಮ

* ಇಲ್ಲಿಯ ಕನ್ನಡ ಅಂಕಿ ವಚನ ಸಂಖ್ಯೆಯನ್ನು, ರೋಮನ್ ಅಂಕಿ ವಚನಟೀಕೆಯ ಸಂಖ್ಯೆಯನ್ನು ಸೂಚಿಸುತ್ತವೆ.



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

**ಡಾ. ಎಂ.ಬಿ.ಪಾಟೀಲ**

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಮಾಜಿ ಗೃಹಸಚಿವರು, ಕರ್ನಾಟಕ ಸರ್ಕಾರ


**ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359